KARNATAKA STATE ARCHIVES

KARNATAKA
STATE
ARCHIVES

KARNATAKA
STATE
ARCHIVES

Roll No:142

ARS 34 APP 82

NAVAYUGA KANNADA WEEKLY

From 24:3:1949 Contd From Roll No. 141

ARS 34 APP 82

NAVAYUGA KANNADA
WEEKLY

From 24:3:1949 Contd From Roll No. 141

(ಅತಿಸಂಕುಚಿತ ಭಾವನೆಯಿಂದ) ತಮಗಾಗಿ ಬಳಸಿಕೊಳ್ಳುತ್ತಿದ್ದಾರೆ. ಒಬ್ಬರು 'ಸತ್ಯಾಗ್ರಹ'ವನ್ನು ತೆಗೆದುಕೊಂಡರೆ ಮತ್ತೊಬ್ಬರು 'ಉಪವಾಸ'ವನ್ನು ಉಪಯೋಗಿಸಿಕೊಳ್ಳುತ್ತಾರೆ! ತಮ್ಮಲ್ಲಿ ತುಂಬಿಕೊಂಡಿರುವ ತನ್ನತನವನ್ನೂ ಪರರಿಗೆ ಉಪದೇಶಿಸುತ್ತಾ, 'ಧರ್ಮೋದ್ಧಾರ'ದ ಹೆಸರನ್ನು ಇಟ್ಟುಕೊಳ್ಳುತ್ತಾರೆ! ಆದರೆ ಇವರು ಸಮಾಜೋನ್ನತಿಗೆ ಮೂಲಕಾರಣವಾದ ಹರಿಜನ ಸಮಾನತೆಗೆ ತಾವಾಗಿ ಮುಂದಾಗುವುದಿಲ್ಲವೇಕೋ ತಿಳಿಯದು.

ಪರಾನುಕರಣೆ ನಮ್ಮಲ್ಲಿ ಮಾತ್ರವಲ್ಲ-ಇಂಗ್ಲಿಷರಲ್ಲೂ ಇಲ್ಲವೆಂದಿಲ್ಲ. ಆಕರ್ಷಣೆಯಿದ್ದಲ್ಲಿ ಅವರ ಅನುಸರಣ ಇದ್ದೇ ಇದೆ! ಪಾಶ್ಚಾತ್ಯ ನಾಗರಿಕ ನಾರಿಯರು ಈಗೀಗ ಉಡುಗೆ-ತೊಡುಗೆಗಳಲ್ಲಿ ಭಾರತೀಯ ಮಹಿಳೆಯರನ್ನು ಅನುಕರಿಸುತ್ತಿರುವರೆಂಬುದು ಸುಳ್ಳಲ್ಲವಷ್ಟೆ? 'ನೆರೆಯ ಸಂಸ್ಕೃತಿಯನೆರೆ ನಮ್ಮದನ್ನು ಕೊಚ್ಚಿಕೊಂಡುಹೋಯಿತು-ಪರರ ಹಿಂಬಾಲಕರಾಗಿ ನಾವು ಹಾಳಾದೆವು' ಎಂದು ಮರುಗುವವರಿದ್ದರೆ ಅವರು ಕುಸುಲವಾಗಿ ಶೋಧಿಸಬೇಕು. ಆಗ ಅವರಿಗೆ ಕಟ್ಟಕಡೆಯ ತಮ್ಮ ಅಂಧಾನುಕರಣವಿಡಲೇ ಹಾಳಾದೆವೆಂದು ತೋರಿಯದಿರದು-

ಬ್ರಿಟಿಷರು ಇಂಗ್ಲೆಂಡಿನಲ್ಲಿ ನಮಗೆ ಸಂದೇಶವೀಯುತ್ತಿದ್ದರೂ, ಸಾಂಸ್ಕೃತಿಕ ಹಿತದೃಷ್ಟಿಯಲ್ಲಿ ಅದರಣೀಯರೇ ಮುಗ್ಧ ಮಂತ್ರ ಯುಗವನ್ನು ಅಳಿಸಿ ಯಂತ್ರ ಸಾಮರ್ಥ್ಯದಿಂದ ನಮ್ಮನ್ನು ಬಲಿಸಿದ ಕೀರ್ತಿ ಅವರಿಗೇ ಸಲ್ಲತಕ್ಕದ್ದು. ನಮ್ಮ ಖಜಾನೆ ಬರಿದಾದರೂ ಮೇಧಾಶಕ್ತಿ ಹಿರಿದಾಯಿತು.

ಎಲ್ಲಕ್ಕೂ ಒಂದಲ್ಲೊಂದು ರೀತಿಯ ಅಪವಾದ ಇಲ್ಲದಿಲ್ಲ. ಬೀಡಿ-ಸಿಗರೇಟು-ಮುಂತಾದ ದುರಭ್ಯಾಸಗಳು ಪರಕೀಯರಿಂದಲೇ ನಮ್ಮ ಹೆಗಲೇರಿತೇನೋ ನಿಜ. ವಿಶೇಷವಾದರೆ ಎಲ್ಲವೂ ಅಪಾಯಕರವೇ. ಆದರೆ ನಮ್ಮ ಆಯುಷ್ಯ ಸರಾಸರಿ 30 ವರ್ಷವಾಗುವುದಕ್ಕೆ ಈ ಅನುಕರಣವೇ ಕಾರಣವೆಂದು ವಾದಿಸುವುದು ಶುದ್ಧ ತಪ್ಪು. ನಿರಕ್ಷರತೆ-ದಾರಿದ್ರ್ಯ-ಸಮಾಜದ (ಬಾಲ್ಯ ವಿವಾಹ, ದುರ್ವ್ಯವಹಾರವೇ ಮೊದಲಾದ) ಅವ್ಯವಸ್ಥೆ, ಇವು ನಮ್ಮ ಆಯುಷ್ಯವನ್ನು ಗಿಡ್ಡ ಮಾಡಿದವು. ಇದು ಶತಸಿದ್ಧ!

ನೋಡಿ ನಮ್ಮ ನಾಡಿನಲ್ಲಿ 18 ಕೋಟಿ ಗೋಸಂಪತ್ತಿನಿಂದ ಪಡೆಯಬಹುದಾದ ಹಾಲನ್ನು ಜರ್ಮನಿಯಲ್ಲಿ ಕೇವಲ ಎರಡುವರೆ ಕೋಟಿಯಿಂದಲೇ ಗಳಿಸುತ್ತಾರಂತೆ! (Minoo Masani ಅವರ Our India ದಿಂದ) ಇದಕ್ಕೇನೂ ನಮ್ಮ ಪರಾನುಕರಣೆ ಕಾರಣವಲ್ಲವಷ್ಟೆ? ಗೋಮಾತೆಗೆ ನಾವು ಕುಂಕುಮವಿಟ್ಟು ಪೂಜಿಸುತ್ತೇವೆ, (ಸಾಯುವತನಕ) ಮುಟ್ಟಿ ವಂದಿಸುತ್ತೇವೆ. ಆದರೆ ಆವಳ ಹೊಟ್ಟೆಯ ಗೊಡವೆಯೇ ನಮಗೆ ಬೇಕಿಲ್ಲ. ಬೀದಿಗೋ ಬೈಲಿಗೋ ಹೋಗಿ ತಿಂದು ಬರುತ್ತಾ ಹಾಲು ಕೊಡುತ್ತಾಳೆ. ಕುರುಡು ಭಕ್ತಿ ಕಾಣಿಕೆಯನ್ನು ನಾವು ಸಲ್ಲಿಸುತ್ತೇವೆ. ಆಷ್ಟೆ! ಪರಕೀಯರು ಹೀಗಲ್ಲ. ಹೊಟ್ಟೆ ತುಂಬ ಆಹಾರವಿತ್ತು ವ್ಯತಿಕ್ರಿಕ ಹೋಳಿಸಿ ಪೋಷಿಸುತ್ತಾರೆ. ಕುಂದು ಕೊರತೆಗಳನ್ನು ಕಂಡು ಹಿಡಿದು ಉಪಚರಿಸುತ್ತಾರೆ (ಹಾಗೇನೋ ನಮ್ಮವರಲ್ಲಿ ಸಂಭವಿಸಿದರ ದೇವ್ವಗಳಿಗೆ ಹರಕೆ ಹೊತ್ತು ಕೇಳುವುದು ಸಂಪ್ರದಾಯ). ಪ್ರತ್ಯಕ್ಷ ಆಸಕ್ತಿಯಿಂದ ಆರಾಧಿಸುತ್ತಾರೆ. ಪರಿಸ್ಥಿತಿ ಹೀಗಿರುವಾಗ ನಮಗೆ ನಮ್ಮದೇ ಸಾಕೋ ಅಥವಾ ಒಂದು ಬದಲಾವಣೆ ಬೇಕೋ? ಎಂಬುದನ್ನು ನೀವೇ ಯೋಚಿಸಿರಿ. ಹೀಗೆ, ಒಂದಲ್ಲ-ಹಲವು ವಿಷಯಗಳಲ್ಲಿ ಬೇರೆಯವರನ್ನು ಹೋಲಿಸಿ ತಿದ್ದಿಕೊಳ್ಳಲಿಕ್ಕಿದೆ.

ಧಾರ್ಮಿಕ ಕ್ಷೇತ್ರವನ್ನು ಸುತ್ತಿ ನೋಡಿದರೂ, ಅಲ್ಲಿಯೂ ಪರಕೀಯ 'ಗಾಳಿ ಸೋಂಕು' ಮುತ್ತಿಕೊಂಡಿದೆ ಎಂತ ಊಹಿಸಲಿಕ್ಕೆ ಅವಕಾಶವಿದೆ? "ಸ್ವಧರ್ಮದಲ್ಲಿಯೇ ನಿರತರಾಗಿರಬೇಕು" ಎಂದು ಧರ್ಮ ಮಾತ್ರ ಸಾರುತ್ತಿದೆ. ಆಚರಿಸುವವರು ಬೆರಳೆಣಿಕೆಗೂ ದೊರೆಯಲಾರರು ಎನ್ನುವ ಸ್ಥಿತಿಗೆ ಇಂದು ನಾವು ಮುಟ್ಟಿರುವೆವು! ಬ್ರಾಹ್ಮಣರೇ ಹೋಟೇಲು ಮುಂತಾದ ಹೆಸರಿನಿಂದ ಪರ ಸೇವೆಗೆ ತಯಾರಾಗಿದ್ದಾರೆ! ಧರ್ಮವಚನದಲ್ಲಿ ಸೇವೆ ಶೂದ್ರನ ಕಾದಿಟ್ಟ ಹಕ್ಕು! ಇದನ್ನು ಬ್ರಾಹ್ಮಣ ಆಕ್ರಮಿಸಿದ. ಅಂತಯೇ ಶೂದ್ರ ಬೋಧಕ (Teacher) ನಾಗಲು ಮುಂದೆ ಬಂದ! ಧರ್ಮ ಧರ್ಮದಲ್ಲಿಯೇ ಉಳಿಯಿತು. ಹೀಗಾಗಲು ಇಂಗ್ಲಿಷರೇನೂ ಅಜ್ಞೆ ಹೊರಡಿಸಿರಲಿಲ್ಲ. ನಮ್ಮ ಮೇಧಾಶಕ್ತಿಯ ವಿಚಾರಪೂರಿತ ಹೊಸ ಬದಲಾವಣೆಯೋ ಇದು.

ಸಾವಿರಾರು ವರ್ಷ ಹಿಂದಿನ ನಮ್ಮ ಮಹಾ ಸಂಸ್ಕೃತಿ ಲೋಕ ಪೂಜ್ಯವೆಂಬುದು ನಿಜ. ಸರ್ವ ಪ್ರಥಮ ಸ್ವೀಕೃತವೂ ಹೌದು. ನಿರ್ವಿಕಾರತೆಯಿಂದ ಹೇಳುವುದಾದರೆ, 'ಕಾಲಕ್ಕೆ ತಕ್ಕ ಕೋಲ' ವೂ ಬೇಕು. ನಿನ್ನಿನ ಹುಡುಗ 'ಇಂದು ಯುವಕನಾಗಿ ನಾಳೆ ಮುದುಕನಾಗುವನು'. ಇಂದಿನ ಕಟ್ಟಳೆ ನಾಳೆ ಯಾರೂ ಆಚರಿಸದೇ ಆಳಿಯಲಿಕ್ಕೂ ಸಾಕು!—ತುಕ್ಕು ಹಿಡಿದುದನ್ನು ಸಾಣೆ ಕೊಟ್ಟು ಸ್ವಚ್ಛವಾಗಿರಿಸಿದರೆ ಆಗ ಮಾತ್ರವಷ್ಟು ಫಲಕಾರಿಯಾದೀತು!

ಎಷ್ಟೋ ದೂರದಿಂದ ಬಂದು ಇಲ್ಲಿಯೂ ಧರ್ಮ ಪ್ರಚಾರ ಮಾಡುತ್ತಾ, ಒಂದು ಸುಧೃಢವಾದ ಸಂಪ್ರದಾಯದಿಂದ ಜನತೆಯನ್ನು ತಮ್ಮತ್ತ ಸೆಳೆಯುತ್ತಿದ್ದಾರೆ ವಿಧರ್ಮೀಯರು. ನಮ್ಮ 'ಧರ್ಮ ಮೂರ್ತಿ'ಗಳು, ಮತ ಪ್ರಚಾರ ಮಾಡುವುದಿರಲಿ, ಇದ್ದ ಸಮಾಜವನ್ನಾದರೂ ಸಂಘಟಿಸಲು ಪ್ರಯತ್ನಿಸುತ್ತಾರೇನು? ಇಲ್ಲ. ತಮ್ಮ ಒಣ ಭಿನ್ನತೆಯನ್ನೇ ಮತ್ತಷ್ಟು ಬೆಳೆಸುತ್ತಿದ್ದಾರೆ!

ಸ್ವಾಮಿ ವಿವೇಕಾನಂದರು ಅಮೇರಿಕಾಕ್ಕೆ ಹೋದಾಗ ಅಲ್ಲಿನ ಅವರ ಭೂಷಣ ಮತ್ತು ಭಾಷಣ ಹೇಗಿತ್ತು? ನಮ್ಮ ಆಚಾರ-ವಿಚಾರಗಳನ್ನೆಲ್ಲಾ ಅವರು ತೋಡಿಕೊಂಡಿದ್ದರೆ ಅಲ್ಲಿ ಯಾರು ಕೇಳುತ್ತಿದ್ದರೋ! ವಿದೇಶಿಯರಿಗೇ ಸಮ್ಮತವಾದ ಅವರ 'ಆಧ್ಯಾತ್ಮಿಕ'... ಮೇಲೆ, ನಮ್ಮ ಸಮಾಜದಲ್ಲಿ, ಯಾಕೆ-ಕೇವು ಬ್ರಾಹ್ಮಣರಲ್ಲಿ ಆದೆಷ್ಟು ಭಿನ್ನಭಿಪ್ರಾಯ ಕೀರ್ತಿಶೇಷರಾಗಿ ಮೆರೆದವರೂ ಅವರಿಗೆ ಸನಾತನಿಗಳು ಕೊಟ್ಟ ಉಡುಗರೆ ಅದೆಷ್ಟು ದ! ನಮ್ಮ ಸಮಾಜ ಇನ್ನಾದರೂ ನಿವಾ... ನೆಯಿಂದ, ಹಳೆಯ ಅಸಹ್ಯವಾದ ಕೆಲವು ಆಚರಣೆಗಳನ್ನು ಮರೆಯಲಿ-ಆಗ ಧರ್ಮ ತನ್ನ ... ತಾನೇ ತಲೆಯೆತ್ತಿ ನಿಲ್ಲುತ್ತದೆ! ಹಾಗಾದರೆ ಜಗತ್ತೇ ಅದನ್ನು ಅನುಕರಿಸಲಿಕ್ಕೆ ಅವಕಾಶವಿದೆ.

......ಆರ್ಯನೀತಿ ಎಷ್ಟು ವಿಶಾಲವಾಗಿದೆ, 'ಪ್ರಪಂಚವೇ ಮನೆ-ಅಲ್ಲಿನ ಎಲ್ಲರೂ ಬಂಧು ಬಾಂಧವರು'-ಎನ್ನುತ್ತಿದೆ! 'ಪರರು' ಎಂಬುದೇ ಇದಕ್ಕಿಲ್ಲ! ಈ ಸ್ನೇಹಮಯ ಅಭಿಮಾನದಿಂದ ತಮಗೆ ಬೇಕಾದುದನ್ನು ಯಾರೂ ಹೆಕ್ಕಿ ತೆಗೆದುಕೊಳ್ಳಬಹುದು. ಆದರೆ ಕೆಡುಕನ್ನು ಮಾತ್ರ ಬಿಟ್ಟುಬಿಡಲೇಬೇಕು! ಶ್ರೀ ಕೃಷ್ಣ ಪರಮಾತ್ಮನ ಗೀತೋಪದೇಶವನ್ನು ನಾವು ಕೇಳಿಕೊಂಡು ಅನುಕರಿಸುತ್ತೇವೆ-ಅವನ ಲೀಲಾ ವಿಹಾರವನ್ನೂ ಅನುಸರಿಸುತ್ತೇವೆಯೇ? ಇಲ್ಲ. ಇದಕ್ಕೇನು ಕಾರಣ?-

ಶ್ರೀ. ವೆಂ. ಅಡಿಗ
'ಶ್ರೀಪ...

(೧ನೇ ಪುಟದಿಂದ)

ಸಂಖ್ಯಾಕರ ಹಿತಗಳನ್ನು ಪ್ರಕೃತ ಅ... ಕ್ಷಿಸಿರುವುದೂ ದೊಡ್ಡ ದೊಡ್ಡ ಉದ್ದಿಮೆದಾರರೇ ಮೊದಲಾದ ಶ್ರೀಮಂತ ವರ್ಗದ ಮನವೊಲಿಸುವ ಕೆಲಸ ನಡೆದಿರುವುದೂ ಸ್ಪಷ್ಟವಾಗುವದಿಲ್ಲವೆ? ಇದಕ್ಕೂ ಪದ್ಧತಿ ಪ್ರಕಾರ ಕಾರಣವಿದ್ದೇ ಇದೆ ಎಂಬುದನ್ನೂ, ಆದರೆ ಮನಸಿದ್ದರೆ ಮಾರ್ಗವೂ ಇದೆ ಎಂಬುದನ್ನೂ ಒಪ್ಪಿಕೊಳ್ಳೋಣ.

ಅಂತೂ ಒಂದು ವಿಷಯ ಸ್ಪಷ್ಟವಿದೆ. ರಾಷ್ಟ್ರಹಿತ ದೃಷ್ಟಿಯಿಂದ ಈ ಕಾಲದ ಅವಶ್ಯಕತೆಗಳಾವುವೆಂದು ತಮ್ಮ ಮನಸ್ಸಿಗೆ ತೋರುವುದೋ ಅವುಗಳನ್ನೇ ನಮ್ಮ ರಾಷ್ಟ್ರನಾಯಕರು ಅಂಗೀಕರಿಸಿಕೊಂಡಂತಿದೆ. ದುರ್ದೈವದ ಹಾಗೂ ಅತ್ಯಂತ ದುಃಖದ ವಿಷಯವೆಂದರೆ, ಅತ್ಯಧಿಕ ಸಂಖ್ಯಾಕ ಜನತೆಯ ಜೀವನ ಸಂಕಷ್ಟಗಳ ನಿವಾರಣೆಯು 'ಅವಶ್ಯಕ' ಪಟ್ಟಿಯಲ್ಲಿ ಪ್ರಥಮಸ್ಥಾನ ಪಡೆಯದಿರುವದು! ಹಾಗಾದರೆ ಜನಸಾಮಾನ್ಯರು ತಮ್ಮ ಅವಶ್ಯಕತೆಗಳಿಗೆ "ಕೂಡಲೇ ನಿವಾರಿಸಬೇಕಾದ ಭೀಕರ ಸಮಸ್ಯೆ"ಯ ಉಗ್ರರೂಪಕೊಟ್ಟು ಪ್ರದರ್ಶಿಸುವ ವರೆಗೆ ಕಾಯಬೇಕೆಂದೇ ನಾಯಕರ ಇಚ್ಛೆಯೆ?

ಇದು ಸರಿಯಲ್ಲ. ಇಂದು ಜನತೆಯಲ್ಲಿ ಹಬ್ಬುತ್ತಿರುವ ಅತೃಪ್ತಿಯು ಆಂದೋಲನವಾಗಿ ಮಾರ್ಪಡುವ ವರೆಗೆ ಕಾಯಬಾರದು. ಸರಕಾರದ ದೃಷ್ಟಿಕೋನವು ಸಕಾಲದಲ್ಲಿ ಸರಿಯಾದ ದಿಕ್ಕಿಗೆ ತಿರುಗಬೇಕಾದುದು ಅಗತ್ಯ.

ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 61 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು; ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3; ಸ್ಪೆಶಲ್ ರೂ. 5-, ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ]

Mrs P. DEVEE, F. DS (N. J.)
Tollygunge CALCUTTA
ಪ್ರಾತಿನಿಧ್ಯರು: ಶಹಾ ಕಂಪೆನಿ, ಮಂಗಳೂರು

ಹೊಸ ವರ್ಷದ ಶುಭಾಶಯ

ಠೇವಣಾತಿದಾರರಿಗೆ ಅತ್ಯಾಕರ್ಷಕ ದರದ ಬಡ್ಡಿ ಮತ್ತು ಭದ್ರತೆ

ಹದಿನೇಳು ವರ್ಷಗಳ ಪರಿಪಕ್ವ ಅನುಭವ

ನಿರಖು ಠೇವಣಾತಿ

ಮೂರು ತಿಂಗಳಿಗೆ	...	....	....	3%
ಆರು ,,	....	....	....	3¼%
ಹನ್ನೆರಡು ,,	....	....	....	3½%
ಇಪ್ಪತ್ತನಾಲ್ಕು ,,	....	....	...	4%
ಶಾಶ್ವತಿಯಾಗಿರುವ ಭಂಡವಾಳ	....	....	ರೂ.	4,91,000.
ಕ್ಷೇಮ ನಿಧಿ	....	....	,,	98,000.
ಒಟ್ಟು ವಹಿವಾಟು ಭಂಡವಾಳ	....	....	,,	40,65,000.

(ಸಾವಿರಕ್ಕೆ ಸರಿಯಾಗಿ)

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುವುವು.

ದಿ
ವಿಜಯ ಬೇಂಕ್ ಲಿಮಿಟೆಡ್
THE VIJAYA BANK, LIMITED.
H. O. MANGALORE.

**ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ-ಶಾಲೆಗಳಿಗೆ-
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿಪುಸ್ತಕಗಳು, ಫಾರ್ಮುಗಳೂ, ಎಲಿಮೆಂಟ್ ಪುಸ್ತಕ, ಕಾರಿಫಂಡು ಪುಸ್ತಕಗಳೂ ದೊರೆಯುತ್ತವೆ,**

ನವಯುಗ ಪ್ರೆಸ್, ಉಡುಪಿ

Regd. No M. 5618

24-3-1949

LICENCE No. 31
Licenced to Post without Prepayment

NAVAYUGA WEEKLY
POST BOX No 22 -- UDIPI, S. K

FOUNDER
Hon'ble Sri. A. B. Shetty
Health Minister Govt. of Madras

Telegram "Navayuga"

Estd 1921
ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯
ವಾರ ೩೦

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮುದರಾಸು ಸರಕಾರದ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 30

ಜನ ಶಕ್ತಿ-ಸ್ಥಾನ

...ಪ್ರಮುಗೆ ಕರ್ನಾಟಕ ಪ್ರಾಂತ್ಯರಚನೆಯಾಗಬೇಕು; ಹರಿಹಂಚಾಗಿ ಬಿದ್ದಿರುವ ಕರ್ನಾಟಕ ಭಾಗಗಳ ಏಕೀಕರಣವಾಗಬೇಕು. ಆದರೆ ಆ ಪ್ರಾಂತ್ಯರಚನೆಗೆ ಆಗಬೇಕಾದುದೆಲ್ಲವನ್ನೂ – ಏಕೀಕರಣದಂತೆಯೇ, ಸರ್ವೋಚ್ಚನ ಏಕಮತ ನಿರ್ಧಾರವನ್ನೂ – ಧಿಕ್ಕರಿಸುತ್ತಿರುವ ರಾಷ್ಟ್ರ ನಾಯಕರೇ ಮಾಡದಿರುವುದಿತ. ಹೊರತು ಆ ಪ್ರಯಾಸವನ್ನು ಅನುಭವಿಸುವದಕ್ಕೂ ಇಷ್ಟು ಮರಗಿಷ್ಟವಿಲ್ಲ!

ತಮಿಳು, ಆಂಧ್ರ, ಕರ್ನಾಟಕ, ಮಲಯಾಳೀ ಭಾಗಗಳ ಸಮ್ಮಿಶ್ರ ಕೂಟವಾಗಿ ಇಡೀ ರಾಷ್ಟ್ರದಲ್ಲೇ ಅತ್ಯಂತ ದೊಡ್ಡ ಪ್ರಾಂತ್ಯವಾಗಿರುವ ಮದ್ರಾಸು ಮತ್ತು ಸರ್ವಸಾಧಾರಣ ಅದೇ ಸ್ಥಿತಿಯಿರುವ ಮುಂಬಾಯಿ ಪ್ರಾಂತ್ಯಗಳಲ್ಲಿ ಅಗ್ರಗಣ್ಯ ಭಾಗವಾಗಿರುವ ಕನ್ನಡ ಪ್ರದೇಶಗಳ ಜನರಿಗೆ ಆಗುತ್ತಿರುವ ಅನಾನುಕೂಲತೆ, ಅಡಚಣೆಗಳನ್ನು ಅನುಭವಿಸುತ್ತಿರುವವರು ನಾವು; ಈ ಕಹಿ ಅನುಭವವು ಏಕೀಕರಣವಾಗಬೇಕೆಂಬುದನ್ನು ನಮಗೆ ಮುಂದಿಟ್ಟು ಮಾಡಿದ ಆದರೆ ನಮ್ಮೊಳಗಿರುವ ಭಿನ್ನಾಭಿಪ್ರಾಯಗಳು–ಕೋಮುವಾರು ಭಾವನೆಗಳು–ಮಾತಿನ ರೀತಿ, ಗುಣ ನಡತೆ, ಮನೋವೃತ್ತಿಗಳಲ್ಲಿರುವ ವ್ಯತ್ಯಾಸಗಳು–ನಿವಾರಣಗೊಳ್ಳದೆ ಭಾವಿ ಕರ್ನಾಟಕ ಪ್ರಾಂತ್ಯದೊಂದಿಗೆ ಅಸ್ತಿತ್ವದಲ್ಲಿ ಉಳಿದುಕೊಂಡರೆ, ಮುಂದಕ್ಕೂ ನಮ್ಮ ಅಡಚಣೆ, ಅನಾನುಕೂಲತೆಗಳು ನಿವಾರಣೆ ಹೊಂದಲಾರವೆಂಬುದನ್ನು ಈಗಿನದಕ್ಕಿಂತ ಬೇರೆ ಪಧಾನದ, ಆದರೆ ಇದಕ್ಕಿಂತಲೂ ಸಂಕೋಚರೂಪಿ, ಸಂಕಟದಾಯಕವಾದ ಅಡಚಣೆ, ಅನಾನುಕೂಲತೆಗಳಿಗೆ ನಾವು ಬಲಿಬೀಳಬೇಕಾಗುವುದೆಂಬುದನ್ನೂ ನಾವು ಅರಿತಿಲ್ಲ.

ಅಧಿಕಾರ ಸ್ಥಾನದಲ್ಲಿರುವವರಿಂದ ಹಿಡಿದು ಅನ್ಯರೆಲ್ಲರ ದೋಷಗಳನ್ನೆತ್ತಿ ಟೀಕಿಸಲು ನಮಗೆ–ಅಧಿಕಾರ ಸ್ಥಾನದಲ್ಲಿರುವವರಿಗೂ, ಇಲ್ಲದವರಿಗೂ ಎಲ್ಲರಿಗೂ–ತಿಳಿದಿದೆ! ಆದರೆ ನಮ್ಮಲ್ಲೇ ಇರುವ ಕುಂದುಕೊರತೆಗಳನ್ನು ನಾವರಿತಿಲ್ಲ; ಮಾತ್ರವಲ್ಲ, ನಾವು ಅನ್ಯರ ಕುರಿತು ಮಾಡುವ ಟೀಕೆಗಳನ್ನಾದರೂ ಕಾರ್ಯತಃ ತೋರಿಸುವ ರೀತಿ ನಮಗೆ ಗೊತ್ತಿಲ್ಲ. ಒಟ್ಟಿನ ಮೇಲೆ ನಾವು ಟೀಕಾ ಜೀವಿಗಳಾಗಿ, ಕಳ ಮಟ್ಟಕ್ಕಿಳಿದಿದ್ದೇವೆ ಹೊರತು ಬೇರೇನೂ ಆಗಿಲ್ಲ.

ಕ್ರಮ ಜೀವಿಗಳ ಹೆಸರಿನಿಂದ ಸಂಘ, ಸಂಘಟನೆಗಳಾಗಿರುವುವಾದರೆ, ಅವು ಒಂದಲ್ಲೊಂದು ರೀತಿಯ 'ಹೋರಾಟ ಪ್ರತಾಪ' ತೋರಿಸುವುದಕ್ಕಾಗಿ ಹೊರತು ರಚನಾತ್ಮಕ ಶಕ್ತಿ ಬೆಳವಣಿಗೆಗಾಗಿ ಅಲ್ಲ. ಎಲ್ಲಿಯಾದರೂ ಅಪರೂಪವಾಗಿ ಅಂತಹ ರಚನಾತ್ಮಕ ಸಂಘಟನೆಗಳು ನಡೆದಿದ್ದರೆ ಅವುಗಳ ಕಡೆಗೆ ಸರಕಾರ ಮತ್ತು, ಜನತೆಯ

(೧ನೇ ಪುಟ ನೋಡಿರಿ)

ಹಿಂದುಸ್ಥಾನ್ ಕೋ-ಆಪರೇಟಿವ್
ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್.
ಪ್ರಧಾನ ಕಾರ್ಯಾಲಯ: ಕಲ್ಕತ್ತ.

1948 ಇನ್ನೊಂದು ಯಶಸ್ವೀ ವರ್ಷ.
ಬರೇ 1948 ರ ವರ್ಷಾವಧಿಯಲ್ಲಿ ಮಾತ್ರವೇ ಪೂರ್ತಿಯಾದ
ಹೊಸ ವ್ಯವಹಾರವು 13 ಕೋಟಿಗೂ ಮಿಕ್ಕಿರುತ್ತದೆ.

ದಕ್ಷಿಣ ಕನ್ನಡದಿಂದ ಏಜನ್ಸಿ ಹಾಗೂ ಸ್ಪೆಶ್ಯಲ್ ಏಜನ್ಸಿಗಳಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಕೆ. ಎಸ್. ರಾಮಯ್ಯ,
ಬ್ರಾಂಚ್ ಮೆನೇಜರ್,
ಕೆಂಪೆಗೌಡ ರಸ್ತೆ, ಬೆಂಗಳೂರು ಸಿಟಿ

ಸಬ್ ಆಫೀಸು.—
ಹಂಪನಕಟ್ಟೆ, ಮಂಗಳೂರು

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ

ಪ್ರಧಾನ ಕಾರ್ಯಾಲಯ:–ಧಾರವಾಡ,
THE UNITED KARNATAK INSURANCE COMPANY, LIMITED.

ಮದ್ರಾಸ್ ಪ್ರಾಂತ್ಯದ ಎಸೆಂಬ್ಲಿಯಲ್ಲಿ 'ಗ್ರಾಂಟು' ನಿರ್ಣಯ.

ಮದ್ರಾಸ್ ಪ್ರಾಂತ್ಯಾಡಳಿತೆಯ ಬೇರೆ ಬೇರೆ ಇಲಾಖೆಗಳಿಗೆ 1949-50ನೇ ವರುಷದ ಆಯವ್ಯಯ ಪಟ್ಟಿಯನ್ವಯ ಗ್ರಾಂಟು ಮಂಜೂರು ಮಾಡುವ ಚರ್ಚೆಗಳು ಕಳೆದ ಕೆಲವು ದಿನಗಳಿಂದ ಮದ್ರಾಸ್ ಎಸೆಂಬ್ಲಿಯಲ್ಲಿ ನಡೆಯುತ್ತಿವೆ. ಈ ಬಜೆಟ್ ಚರ್ಚೆಯ ಅವಧಿಯು ಶಾಸನ ಸಭೆಗಳ ವರುಷದಲ್ಲೇ ವಿಶೇಷ ಒತ್ತಡದ ಸಮಯ; ಸವಿವರ ಚರ್ಚೆಗಳು ನಡೆಯುವ ಅತಿ ಮುಖ್ಯ ಕಾಲ; ಸರಕಾರೀ ಧೋರಣೆಯ ವಿಮರ್ಶೆ, ಟೀಕೆಗಳಾಗುವ-ಮಂತ್ರಿಗಳು ಎಲ್ಲವನ್ನೂ ಉತ್ತರಿಸಿ ಪಾಸಾಗಬೇಕಾಗಿರುವ- ಪರೀಕ್ಷೆಯ ಸಂಧಿಕಾಲ ಈ ಸಮಯವನ್ನು ಸಾಧಿಸಿ, ಇಂದಿನ ಮದ್ರಾಸ್ ಸರಕಾರದ ಆಹಾರ-ಆರೋಗ್ಯ-ವಿದ್ಯೆ-ಉದ್ದಿಮೆ- ಮುಂತಾದ ಧೋರಣೆಗಳ ಕುರಿತು ಹಲವು ಸದಸ್ಯರು ಉದಾತ್ತ ಸೂಚನೆಗಳಿಂದಾರಂಭಿಸಿ ವ್ಯಕ್ತಿ ಟೀಕೆಯವರೆಗೂ ವಿಮರ್ಶೆ ಮಾಡಿದ್ದಾರು; ಹಲವು ತೀಕ್ಷ್ಣ ವಾಗ್ಬಾಣಗಳನ್ನು ಹಾರಿಸಿದ್ದರು. ಪ್ರಾಂತ್ಯದಲ್ಲಿ ಹರಡಿರುವ ಬಹುಮುಖೀ ಭಾವನೆಗಳು ಈ ಸಂದರ್ಭದಲ್ಲಿ ಶಾಸನ ಸಭೆಯ ಮುಂದೆ ಬಂದಿದ್ದವೆನ್ನ ಬಹುದು.

ಸರಕಾರದ ಆಹಾರ ಧೋರಣೆ ಮತ್ತು ಆಹಾರ ಸ್ಥಿತಿ ಚಿತ್ರವನ್ನು ಆಹಾರ ಮಂತ್ರಿ ಡಾ. ಟಿ. ಯಸ್. ಯಸ್. ರಾಜನವರು ಸ್ಪಷ್ಟ ರೂಪದಲ್ಲಿ ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಮುಂದಿಟ್ಟಿದ್ದರು. ಆ ಕುರಿತು ನಡೆದ ಚರ್ಚೆಯಲ್ಲಿ ಅತ್ಯಾಗ್ರಹದ ಹಾಗೂ ಆವೇಶ ಸ್ವರೂಪದ ಮಾತುಗಳು ಕೇಳಿ ಬಂದಿದ್ದುವು. ಇಲಾಖೆವಾರಾಗಿ "ಗ್ರಾಂಟು" ಮಂಜೂರಾಗುವ ಪ್ರತಿ ಸಂದರ್ಭದಲ್ಲೂ ಸರಕಾರೀ ಧೋರಣೆ ಮತ್ತು ಕಾರ್ಯ ವಿಧಾನಗಳು ವಿಮರ್ಶಿಸಲ್ಪಟ್ಟಿದ್ದುವು.

ವೈದ್ಯಕೀಯ——ಸಾರ್ವಜನಿಕ ಆರೋಗ್ಯ

ಪ್ರಥಮತಃ 'ವೈದ್ಯಕೀಯ' ವಿಭಾಗದ ವೆಚ್ಚಕ್ಕಾಗಿ ರೂ.2,59,73,200ರ ಗ್ರಾಂಟು ಬೇಡಿಕೆಯ ಸೂಚನೆ ಮುಂದಿಡುತ್ತಾ ಆರೋಗ್ಯಮಂತ್ರಿ ಶ್ರೀ. ಎ. ಬಿ. ಸೆಟ್ಟರು ಸಂಬಂಧಪಟ್ಟ ವಿಷಯಗಳನ್ನೆಲ್ಲಾ ವಿವರಿಸಿ ಸುದೀರ್ಘ ಭಾಷಣವಿತ್ತರು. "ಪಾಶ್ಚಾತ್ಯ ರಾಷ್ಟ್ರಗಳ ಸ್ಥಿತಿಗತಿಗಳೊಡನೆ ಹೋಲಿಸಿದರೆ ನಮ್ಮ ಪ್ರಾಂತ್ಯದಲ್ಲಿರುವ ಡಾಕ್ಟರ ಮತ್ತು ವೈದ್ಯಕೀ ಅನುಕೂಲತೆಗಳ ಸಂಖ್ಯೆ ಮತ್ತು ಪರಿಮಾಣವು ಅಗತ್ಯವಿರುವದಕ್ಕಿಂತ ಎಷ್ಟೋ ಕಡಿಮೆಯಿದೆ. ಬಹುತೇಕವಾಗಿ ಎಲ್ಲಾ ಆಸ್ಪತ್ರೆಗಳಲ್ಲೂ ನಿಯಮಿತಸಂಖ್ಯೆಗಿಂತ ಹೆಚ್ಚಿಗೆ ರೋಗಿಗಳು ತುಂಬಿದ್ದಾರೆ. ಆಸ್ಪತ್ರೆಗಳ ಮಂಚಗಳ ಮತ್ತು ಚಿಕಿತ್ಸಕ ವರ್ಗದ ಸಂಖ್ಯೆ ಹೆಚ್ಚಿಸುವ ವಿಧಾನಗಳನ್ನು ಈ ಆಯವ್ಯಯ ಪಟ್ಟಿಯು ಒಳಗೊಂಡಿದೆ. ನಮ್ಮ ಕೆಲವು ವೈದ್ಯಕೀಯ ಸಂಸ್ಥೆಗಳು ಅಖಿಲ ಭಾರತದಲ್ಲೇ ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟಿರುವುದು ಹೆಗ್ಗಳಿಕೆಯ ವಿಷಯ. ಮೆಡಿಕಲ್ ಕಾಲೇಜಿಗೆ ಪ್ರವೇಶಯಾಚಿಸುವ ವಿದ್ಯಾರ್ಥಿಗಳ ಅರ್ಜಿಗಳು ಅಲ್ಲಿರುವ ಸ್ಥಳಾನುಕೂಲತೆಗೆಷ್ಟೋ ಮಿಕ್ಕಿವೆ. ಸದ್ಯಸ್ಥಿತಿಯಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವ ಅನುಕೂಲತೆಯಿಲ್ಲವಾದ್ದರಿಂದ ಇದ್ದ ಕಾಲೇಜುಗಳ ಅನುಕೂಲತೆ ವಿಸ್ತರಿಸುವ ಕೆಲಸಗಳು ನಡೆದಿವೆ. ಪ್ರಾಂತ್ಯದಲ್ಲಿ ಈಗಲೇ 13 'ಡಿಸ್ಪೆನ್ಸರಿ' ಗಳಿದ್ದು, ಹೆಚ್ಚಿಗೆ 8ನ್ನು ತೆರೆಯುವ ಸೂಚನೆಗಳು ಪರ್ಯಾಲೋಚನೆಯಲ್ಲಿವೆ. ಕ್ಷಯರೋಗ ಚಿಕಿತ್ಸೆಗಾಗಿ ತಂಬಾರಮ್ನಲ್ಲಿ ಹೊಸಕಟ್ಟಡಗಳನ್ನು ಕಟ್ಟಿಸಿ, ಹೆಚ್ಚಿನ 450 ರೋಗಿಗಳಿಗೆ ಪ್ರವೇಶ ಕೊಡಲಾಗುವಂತೆ ಮಾಡಲಾಗುವದು. ಅಲ್ಲದೆ ಕ್ಷಯ ಪಾಸಿಹೊಂದಿದವರ ವಸಾಹತೊಂದನ್ನು ಈ ವರುಷ ಹೊಸತಾಗಿ ಅಲ್ಲಿ ತೆರೆಯಲಾಗಿದೆ. ಪೆರುಂದರಾಯ ಸೆನಿಟೋರಿಯಮಿನಲ್ಲಿ ಹೆಚ್ಚಿಗೆ 62 ಮಂಚಗಳನ್ನು ಸೇರಿಸಲಾಗುವದಲ್ಲದೆ ತಂಜಾವೂರಿನಲ್ಲಿ ಒಂದು ಸೆನಿಟೋರಿಯಮ್ ತೆರೆಯಲು ನಿರ್ಣಯವಾಗಿದೆ. ಸಾರ್ವಜನಿಕ ಸಹಾಯದಿಂದ ದಕ್ಷಿಣ ಕನ್ನಡ, ಮಧುರಾ, ರಾಮನಾಡು, ನೆಲ್ಲೂರುಗಳಲ್ಲಿ ಕ್ಷಯ ಚಿಕಿತ್ಸಾಲಯಗಳನ್ನು ತೆರೆಯುವ ಸೂಚನೆಗಳಿವೆ" ಎಂದು ವಿವರಿಸಿದರು. ಅಂತೆಯೇ ಬಿ. ಸಿ. ಜಿ. ದಾಳಿ, ಮತ್ತು ಕುಷ್ಠರೋಗ ಚಿಕಿತ್ಸಾಲಯಗಳ ಪರಿಚಯವನ್ನು ಅಂಕೆ ಸಂಖ್ಯೆಗಳೊಡನೆ ಮಾಡಿ ಕೊಟ್ಟರು. ಬೇಗಮ್ ಅಮಿರುದ್ದೀನ್, ಡಾ. ಯಸ್. ಸುಬ್ರಹ್ಮಣ್ಯ ಅಯ್ಯರ್, ಅಬ್ದುಲ್ ಹಮೀದ್ ಖಾನ್, ಶ್ರೀಮತಿ ಲಕ್ಷ್ಮಿ ಭಾರತಿ, ರಾಘುಖಾನ್, ಡಿ. ವಿ. ರಾಮಸ್ವಾಮಿ, ಹಾಜಿ ಹುಸ್ಸೇನ್, ಮೈದಿನ್ ಕುಟ್ಟಿ, ಜಿ. ರಾಜಮನ್ನಾರ್ ಮೊದಲಾದವರ ಟೀಕೆ, ಸೂಚನೆಗಳಾದುವು. ಆರೋಗ್ಯ ಮಂತ್ರಿಗಳು ಉತ್ತರವಿತ್ತ ಮೇಲೆ ಗ್ರಾಂಟು ಮಂಜೂರಾಯಿತು.

'ಸಾರ್ವಜನಿಕ ಆರೋಗ್ಯ' ಖಾತೆಯ ವೆಚ್ಚಕ್ಕಾಗಿ ರೂಪಾಯಿ 1,00,17,900 ಗ್ರಾಂಟು ಬೇಡಿಕೆಯನ್ನು ಆ ಖಾತೆಯ ಮಂತ್ರಿ ಶ್ರೀ. ಎ. ಬಿ. ಸೆಟ್ಟರು ಮುಂದಿಟ್ಟರು. ಮಿಕ್ಕ ಪ್ರಾಂತ್ಯಗಳಿಗಿಂತ ಮದ್ರಾಸ್ ಪ್ರಾಂತ್ಯದ ಆರೋಗ್ಯ ಸ್ಥಿತಿ ಉತ್ತಮವಿದೆಯಾದರೂ ಇರಬೇಕಾದುದಕ್ಕಿಂತ ಎಷ್ಟೋ ಕೆಳಸ್ಥಿತಿಯಲ್ಲಿದೆಯೆಂದೂ ಆರೋಗ್ಯ ಖಾತೆಯ ಸರಕಾರ ಹೆಚ್ಚಿನ ಲಕ್ಷ್ಯವು ಮಲೇರಿಯಾ ಮೊದಲಾದ ಅಂಟುರೋಗಗಳ ನಿವಾರಣೆಯ ಕಡೆಗೇ ಇರಬೇಕಾಗಿದೆಯೆಂದೂ ವಿವರಿಸಿದರು. ಪ್ರಾಂತ್ಯದಲ್ಲಿ ಸಾವು ಪರಿಮಾಣ ಹೆಚ್ಚುತ್ತಿರುವುದು— ಹಳ್ಳಿಗಾಡುಗಳಿಗೆ ನೀರು ಸಂಬಂಧಿ ಕೊರತೆಯುಳಿದಿರುವುದೇ ಮುಂತಾದ ಹಲವು ಸಂಗತಿಗಳ ಕಡೆಗೆ ಸರಕಾರದ ಲಕ್ಷ್ಯವನ್ನೆಳೆದು ಡಾಜಪಮಲಾಯಿ, ಆರ್. ಸುಬ್ಬಯ್ಯರ್ ಆರ್. ಎ. ಅನಸ್ವಾಮಿ, ಎ. ಕಾಮೇಶ್ವರ ರಾವ್, ಮಹಮ್ಮದ್ ಇಸ್ಮಾಯಿಲ್, ಯಸ್. ನಾಗಪ್ಪ, ಕೆ. ಎಮ್. ... ಸಾಹೇಬ್, ಎ. ವಿ. ಕುಟ್ಟಿ ಮಾಲು ಅಮ್ಮ, ಡಾ| ಸುಬ್ರಹ್ಮಣ್ಯನ್, ಡಾ| ಟಿ ಯಸ್ ರಾಮಚಂದ್ರರಾವ್, ಕೆ. ಪೆರಿಯಸ್ವಾಮಿ ಗೌಂಡರ್, ಎನ್. ವೆಂಕಟ ಸುಬ್ಬಯ್ಯ ಮೊದಲಾದವರ ಟೀಕೆಗಳಾದುವು. ಆರೋಗ್ಯ ಮಂತ್ರಿಗಳು ಸಮರ್ಪಕ ಉತ್ತರವಿತ್ತಮೇಲೆ ಗ್ರಾಂಟು ಮಂಜೂರಾಯಿತು.

ಬೇಸಾಯ ವಿಭಾಗ

ಬೇಸಾಯ ಖಾತೆಯ ವೆಚ್ಚಕ್ಕಾಗಿ ರೂ. 1,36,22,000ರ ಗ್ರಾಂಟು ಬೇಡಿಕೆಯ ಸೂಚನೆ ಮುಂದಿಡುತ್ತಾ ಬೇಸಾಯ ಖಾತೆಯ ಮಂತ್ರಿ ಶ್ರೀ. ಕೆ. ಮಾಧವ ಮೆನನರು, ದೊಡ್ಡಪರಿಮಾಣದ ನೀರಾವರಿ ಯೋಜನೆಗಳನ್ನು ಕೈಕೊಳ್ಳದಿದ್ದರೆ ಈ ಪ್ರಾಂತ್ಯವನ್ನು ಆಹಾರದಮಟ್ಟಿಗೆ ಸ್ವಾವಲಂಬಿ ಪ್ರಾಂತ್ಯವಾಗಿ ಮಾರ್ಪಡಿಸುವದು ದುಸ್ಸಾಧ್ಯವೆಂಬುದನ್ನು ಒತ್ತಿ ಹೇಳಿದರು. ಅಂತ್ಯಭಾಗದಲ್ಲಿ 5.5 ಲಕ್ಷ ಟನ್ನುಗಳಷ್ಟು ಹೆಚ್ಚಿಗೆ ಅಕ್ಕಿ ಬೆಳೆಯುವಂತೆ ಮಾಡುವ 16 ಹಂಚಿಕೆಗಳನ್ನೊಳಗೊಂಡ ಪಂಚವಾರ್ಷಿಕ ಯೋಜನೆಯೊಂದನ್ನು 1947-48ರಂದ

ಅಮೃತಾಂಜನ

ತಲೆನೋವು, ಶೀತೋಷ್ಣ, ತಲೆಸುತ್ತು, ಭುಜನೋವು, ಹಲ್ಲುನೋವು, ಕೈಕಾಲುಗಳ ನೋವು, ಗಾಯಗಳು, ಜಾರುಕಟ್ಟುವದು, ಚೇಳು ಕುಟುಕು ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REDG

ಸುಳು ಕೆಡ್ಡಿ ಮುದ್ದುನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ರಿಂದ ೫ ತಿಂಗಳು ,, ,, ೨॥
೬ರಿಂದ ೯ ತಿಂಗಳು ,, ,, ೨॥।

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವುಟಗುಡ್ಡೆ, ಮಂಗಳೂರು.

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

'The Canara Bank Limited.

ESTD: 1906.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

—ಆಡಳಿತ ಸ್ಥಿತಿಗತಿ

ಪ್ರತಿ ಇಲಾಖೆಯ ಗತಿ ನಿರೂಪಣೆ.

1951–52ರ ವರೆಗಿನ ಅವಧಿಗಾಗಿ ಕೈಕೊಳ್ಳಲಾಗಿದೆಯೆಂಬುದನ್ನು ವಿವರಿಸಿದರು. ವೆಂಕಟರಾವ್ ಅಯ್ಯರ್, ಹಾಜಿ ಹುಸ್ಸೇನ್, ವೆಂಕಟ ರತ್ನಮ್, ಅಬ್ದುಲ್ ಮಜೀದ್, ಚಿದಂಬರಮ್ ಅಯ್ಯರ್, ಕೆ. ಭಾಷ್ಯಮ್, ಯಸ್. ಇಸ್ಮಾಯಿಲ್, ಪರಮಾನಂದ ನಾಯರ್, ರಫುದ್ದೀನ್ ಅನ್ಸಾರಿ, ಸುಬ್ಬಣ್ಣ ಗೌಂಡರ್, ಕುಮಾರ ಸ್ವಾಮಿ, ಪಳನಿ ಸ್ವಾಮಿ ಗೌಂಡರ್, ಸ್ವಾಮಿ ಸಹಜಾನಂದ ಮುಂತಾದವರ ಟೀಕೆ, ಸೂಚನೆಗಳಾದುವು. ಬೇನಾಯ ಮಂತ್ರಿಗಳು ಉತ್ತರವಿತ್ತರು. ಗ್ರ್ಯಾಂಟು ಬೇಡಿಕೆ ಮಂಜೂರಾಯಿತು.

ವಿದ್ಯಾವಿಭಾಗ

"ಶಿಕ್ಷಣ" ಖಾತೆಯ ವೆಚ್ಚಕ್ಕಾಗಿ ರೂ. 9,40,29,800ರ ಗ್ರ್ಯಾಂಟು ಯಾಚನಾ ಸೂಚನೆ ಮುಂದಿಡುತ್ತಾ ವಿದ್ಯಾಮಂತ್ರಿ ಶ್ರೀ ಟಿ. ಯಸ್. ಅವಿನಾಶಲಿಂಗಮ್ ಚೆಟ್ಟಿಯಾರರು ಶಿಕ್ಷಣ ಧೋರಣೆ ಮತ್ತು ಆ ಸಂಬಂಧದ ವಿದ್ಯಮಾನಗಳನ್ನು ವಿವರಿಸಿದರು: "ಪ್ರಚಲಿತ ಶಿಕ್ಷಣ ಕ್ರಮದಲ್ಲಿರುವ ದೋಷಗಳು ನಮಗೆ ಸುಪರಿಚಿತವಿವೆ. ಅದು ಪುಸ್ತಕಜ್ಞಾನವನ್ನಷ್ಟೆ ಕೊಡುವಂತಹದು; ಕಾರಕೂನ ಯಂತ್ರಗಳನ್ನು ನಿರ್ಮಿಸಿ ಹಾಕುವಂತಹದು-ಜನತೆಯ ಜೀವನೋಪಯೋಗಿ ಸಲಕರಣೆಗಳನ್ನು ಅದು ಒದಗಿಸಿ ಕೊಡುವದಿಲ್ಲ- ನಾಗರಿಕ ತರಬೇತಿ ಅದರಲ್ಲಿಲ್ಲ- ಮುಂತಾದ ದೂರುಗಳು ಸರ್ವಸಾಮಾನ್ಯ. ನಮ್ಮ ಜನತೆಯ ಹುಟ್ಟು ಪ್ರತಿಭೆಗನುಕೂಲವಾಗಿ ಈ ಶಿಕ್ಷಣ ಕ್ರಮವಿಲ್ಲವೆಂಬ ಕಡೆಗೆ ಹಲವು ಶಿಕ್ಷಣತಜ್ಞರು ನಮ್ಮ ಗಮನವನ್ನೆಳೆದಿದ್ದಾರೆ. ರಾಷ್ಟ್ರನಾಯಕರು ಈ ಕುರಿತು ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾ ಬಂದಿದ್ದರು; ಹಲವು ವಿದ್ಯಾಸಮಿತಿ, ಕಮಿಶನುಗಳೂ ಇದರಕ್ಕಾಗಿ ನೇಮಕಗೊಂಡಿದ್ದುವು. ಶಿಕ್ಷಣ ವಿಧಾನದ ಮುಖ್ಯವಿಷಯಗಳ ಸುಧಾರಣೆಯ ಸಂಬಂಧವಾಗಿ ಜನಾಭಿಪ್ರಾಯ ತಿಳಿಯಲು ನಮ್ಮ ಸರಕಾರ ಕೂಡಾ ಒಂದು ಪ್ರಶ್ನಾವಳಿಯನ್ನು ಪ್ರಕಟಿಸಿದ್ದಿತು. ಸರಕಾರದ ಪ್ರೇರಣೆಯಂತೆ 'ಸೆಕೆಂಡರಿ ಎಜ್ಯುಕೇಶನ್ ಬೋರ್ಡ್' ಈ ವಿಷಯಗಳನ್ನು ಪರ್ಯಾಲೋಚಿಸಿ 'ತಜ್ಞರ ಸಮಿತಿ' ಯೊಂದನ್ನು ನೇಮಿಸಿತು. ಈ ಸಮಿತಿಯು ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿ ತನ್ನ ಶಿಫಾರಸುಗಳನ್ನು ಇತ್ತಿತು. ಆ ಶಿಫಾರಸುಗಳು 'ಸೆಕೆಂಡರಿ ಎಜ್ಯುಕೇಶನ್ ಬೋರ್ಡಿ'ನಲ್ಲೂ ಆಮೇಲೆ ಪ್ರಾಂತಿಕ ಎಜ್ಯುಕೇಶನ್ ಎಡ್ವೈಸರಿ ಬೋರ್ಡಿನಲ್ಲೂ ಮಂಜೂರಾಗಿ, ವಿವಿಧ ವಿಷಯಗಳ 'ಸಿಲೆಬಸ್'ಗಳನ್ನು ತಯಾರಿಸಲು 27 ಕಮಿಟಿಗಳು ಕೆಲಸ ಮಾಡಿ, ಅವುಗಳ ತಯಾರಿಕೆಗಳೂ ಸೆ. ಎ. ಬೋರ್ಡ್ ಮತ್ತು ಎಡ್ವೈಸರಿ ಬೋರ್ಡುಗಳಲ್ಲಿ ಮಂಜೂರಾಗಿವೆ" ಎಂದು ವಿದ್ಯಾಮಂತ್ರಿಗಳು ಶಿಕ್ಷಣ ಪದ್ಧತಿಯ ಸುಧಾರಣಾ ಹಂಚಿಕೆಗಳನ್ನು ವಿವರಿಸಿದರು. ಸಮಾಜದ, ರಾಷ್ಟ್ರದ ಯೋಗ್ಯ ಸದಸ್ಯನಾಗುವಂತೆ ಮಾಡುವ ನಾಗರಿಕ ಶಿಕ್ಷಣ-ನಿಶ್ಚಿತ ಧೋರಣೆಯಾಗಿ ಸರಕಾರ ಕೈಕೊಂಡಿರುವ ಮೂಲಭೂತ ಶಿಕ್ಷಣ (Basic Education) ಕೈಗಾರಿಕೆ ಶಿಕ್ಷಣ-ಇತ್ಯಾದಿಗಳ ರೂಪರೇಷೆಗಳನ್ನೂ ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿರುವ ಕೊರತೆಗಳ ನಿವಾರಣೆ ಮತ್ತು ಶಾಲೆಗಳಲ್ಲಿ ಬರಬೇಕಾದ ಶಾಸ್ತ್ರೀಯ ಸಂಶೋಧನಾ ವಿಧಾನಗಳ ವ್ಯವಸ್ಥೆಯನ್ನೂ ತಿಳಿಸಿದರು. ವಿದ್ಯಾದಾನ ಕ್ಷೇತ್ರದಲ್ಲಿ ಕಳೆದ ಐದು ವರುಷಗಳಲ್ಲಿ ಕ್ರಮಶಃ ಆಗುತ್ತಾ ಬಂದಿರುವ ಪ್ರಗತಿಯ ಅಂಕೆ ಸಂಖ್ಯೆಗಳನ್ನು ಮುಂದಿಟ್ಟರು. ಹೀಗೆ ಪ್ರವರ್ಧಮಾನವಾಗುತ್ತಾ ಬಂದ ಮದ್ರಾಸ್ ಪ್ರಾಂತ್ಯದ ವಿದ್ಯಾದಾನ ಮಂದಿರಗಳ 1948-49ರ ಸಂಖ್ಯೆ ಹೀಗಿದೆ:-

ಎಲಿಮೆಂಟರಿ ಶಾಲೆಗಳ ಸಂಖ್ಯೆ 36, 668. ವಿದ್ಯಾರ್ಥಿಗಳ ಸಂಖ್ಯೆ 3, 820, 000; ವೆಚ್ಚ ರೂ. 5,87, 60, 800. ಸೆಕೆಂಡರಿ ಶಾಲೆಗಳು 1,041; ವಿದ್ಯಾರ್ಥಿಗಳು 493,729. ವೆಚ್ಚ 91,42,800. ಆರ್ಟ್ಸ್ ಮತ್ತು ಟ್ರೈನಿಂಗ್ ಕಾಲೇಜುಗಳು 68; ವಿದ್ಯಾರ್ಥಿಗಳು 38,000; ವೆಚ್ಚ ರೂಪಾಯಿ 38, 28,800. ಇಂಜಿನೀಯರಿಂಗ್ ಕಾಲೇಜುಗಳು 4; ವಿದ್ಯಾರ್ಥಿಗಳು 1656; ವೆಚ್ಚ 37,37,300. ಪ್ರಾಥಮಿಕ ವಿದ್ಯಾಕಾಂಕ್ಷಿಗಳ ಸಂಖ್ಯೆಯು 1944-45ರಿಂದ 1948-49ಕ್ಕೆ ಸುಮಾರು ನೇಕಡಾ 25ರಷ್ಟು ಹೆಚ್ಚಿರುವುದನ್ನು ಎತ್ತಿ ಹೇಳಿ ಸರಕಾರವು ಪ್ರಾದೇಶಿಕ ಭಾಷೆಗಳ ಪ್ರಗತಿಗೆ ಕೊಟ್ಟಿರುವ ಬೆಂಬಲ ಮತ್ತು ಅವಕಾಶಗಳನ್ನು ವಿದ್ಯಾಮಂತ್ರಿಗಳು ವಿವರಿಸಿದ್ದರು. ಜೀಗವಾ ಅಮಿರುದ್ದೀನ್, ಹಮೀದ್‌ಖಾನ್, ತಂಗಸ್ವಾಮಿ ನಾಡರ್, ರಾಝಾ ಖಾನ್, ಕುಮಾರನ್, ಡಬ್ಲ್ಯು. ಜೆ. ಫೆರ್ನಾಂಡಿಸ್, ಅನ್ವಾರ್, ಗೋವಿಂದ ಮೆನನ್, ಆರ್. ಸಿ. ಅನ್ಸಾರಿ, ಎಮ್. ಜೆ. ಸಾಮ್ಯುವೇಲ್, ಎಮ್ ಯಸ್. ಎ. ಮಜೀದ್, ಮುನಿಸ್ವಾಮಿ ಪಿಳ್ಳೆ, ಮಹಬೂಬ್ ಆಲಿ, ಎಲ್. ಸಿ. ನಾಯರ್, ಎಮ್. ಯಸ್. ಆಲಾವುಲ್ಲಾ, ಕಾಮೇಶ್ವರ ರಾವ್, ಮೊಯಿದಿನ್ ಕುಟ್ಟಿ, ದೇವನಾಯಕಯ್ಯ, ಮಹಿಮ್ ಶಮ್ನಾಡ್, ಹಾಜಿ ಅಬ್ದುಲ್ ಖಾದರ್ ಜಮಾಲಿ, ಇಸ್ಮಾಯಿಲ್‌ಖಾನ್ ಮೊದಲಾದವರಿಂದ ಸರಕಾರದ ವಿದ್ಯಾಧೋರಣೆ ಮತ್ತು ವಿಧಾನಗಳ ಕುರಿತು ಖಂಡನೆ, ವಿಮರ್ಶೆ, ಸೂಚನೆಗಳಾದುವು. ವಿದ್ಯಾಮಂತ್ರಿಗಳು ಸಮರ್ಪಕ ಉತ್ತರವಿತ್ತಮೇಲೆ 'ಗ್ರ್ಯಾಂಟು' ಮಂಜೂರಾಯಿತು.

ಮೂಲಾಧಿಕಾರಿಗಳ ವೆಚ್ಚ

"ಪ್ರಾಂತ್ಯದ ಅಗ್ರಾಧಿಪತಿಗಳ, ಮಂತ್ರಿಗಳ ಮತ್ತು ಮುಖ್ಯ ಕಾರ್ಯಾಲಯ ನೌಕರರ" ಸಂಬಳ ಇತ್ಯಾದಿಗಳಿಗಾಗಿ ರೂ. 49,95,600ರ ಗ್ರ್ಯಾಂಟು ಬೇಡಿಕೆಯ ಸೂಚನೆಯನ್ನು ಅರ್ಥಿಕ ಮಂತ್ರಿ ಮತ್ತು ಸಭಾ ನಾಯಕ ಶ್ರೀ ಬಿ. ಗೋಪಾಲರೆಡ್ಡಿಗಳು ಮುಂದಿಟ್ಟರು. '1948ನೇ ಸೆಪ್ಟೆಂಬರ್ 7ರಲ್ಲಿ ಪ್ರಾಂತ್ಯದ ಗವರ್ನರ್ ಹುದ್ದೆಗೇರಿದ್ದ ಭಾವನಗರದ ಮಹಾರಾಜರು ಇಷ್ಟರಲ್ಲೇ ಅತ್ಯಂತ ಜನಪ್ರೀತರಾಗಿದ್ದಾರೆ. ಸರಕಾರದಿಂದ ಅವ್ಯಕ್ತ ಪ್ರೇರಣೆ ಕೂಡಾ ಹೋಗದಿದ್ದರೂ ಅವರು ತಾವಾಗಿ ತನ್ನ ಮತ್ತು ತನ್ನ ಸಿಬ್ಬಂದೀ ಸಂಬಳ ಹಾಗೂ ವೆಚ್ಚಗಳನ್ನು ತಗ್ಗಿಸಿಕೊಂಡಿದ್ದಾರೆ. ಪದ್ಧತಿ ಪ್ರಕಾರ ಗವರ್ನರರ ಸಂಬಳ ತಿಂಗಳಿಗೆ ರೂ. 10000 ಇದ್ದುದು ಈಗ 5500 ಅಥವಾ ವರುಷಕ್ಕೆ 66000 ಮಾತ್ರವಿದೆ. ಗವರ್ನರ್ ಕಾರ್ಯಾಲಯದ ವೆಚ್ಚವು ವರುಷಕ್ಕೆ ರೂ. 1,12,000 ಇದ್ದುದು ಈಗ ಕೇವಲ ರೂಪಾಯಿ 56,000 ಮಾತ್ರವಿದೆ. ಗವರ್ನರರ ಮನೇ ನೌಕರ ವರ್ಗ, ವೈದ್ಯಕೀ ವೆಚ್ಚ ಮೊದಲಾದುವುಗಳಿಗೆ ವರ್ಷಾವಧಿ ರೂ. 6,58 ಲಕ್ಷ ತಗಲುತಿತ್ತು; ಈಗ ಅದು 2.58 ಲಕ್ಷಕ್ಕೆ ಇಳಿದಿದೆ. ರೂ. 1,94 ಲಕ್ಷವಿದ್ದ ಗವರ್ನರರ ಸಂಚಾರ ವೆಚ್ಚವೀಗ ರೂ. 1.75 ಲಕ್ಷವಾಗಿದೆ. 'ಗವರ್ನರ್, ಅವರ ನೌಕರ ಮಂಡಲಿ ಮತ್ತು ವೆಚ್ಚಗಳಿಗಾಗಿ ಪ್ರಾಂತ್ಯದ ಮೇಲೆ ಈ ತನಕ ರೂ. 12.63 ಲಕ್ಷಗಳ ವಾರ್ಷಿಕ ವ್ಯಯ ಬೀಳುತಿತ್ತು. 1949-50ನೇ ವರುಷದ ಈ ಆಯುವ್ಯಯ ಪಟ್ಟಿಯಲ್ಲಿ ಅದಕ್ಕಾಗಿ ಮೀಸಲಿಟ್ಟಿರುವುದು ರೂ. 7.37 ಲಕ್ಷ ಮಾತ್ರ. ಹೀಗಾಗಿ ಈ ಮೂಲಕ ಪ್ರಾಂತ್ಯಕ್ಕೆ 5.31 ಲಕ್ಷ ರೂಗಳು ಉಳಿದವು" ಎಂದು ಶ್ರೀ ಗೋಪಾಲರೆಡ್ಡಿಗಳು ಸ್ಥಿತಿ ನಿರೂಪಣೆಮಾಡಿದರು. ವಿರುದ್ಧ ಪಕ್ಷದ ನಾಯಕ ಪಿ. ಉಸ್ಮಾನ್, ಗೋಪಾಲ ಸ್ವಾಮಿ, ರಾಜಾ ಖಾನ್, ಅನ್ವಾರ್, ರುಕ್ಮಿಣಿ ಲಕ್ಷ್ಮೀಪತಿ, ತಾತಾಚಾರಿ, ಎಂ. ಎ. ಸಲಾಮ್, ಅಬ್ದುಲ್ ಮಜೀದ್, ಪೈಡಾ ವೆಂಕಟನಾರಾಯಣ, ಜೆ. ಫೆರ್ನಾಂಡಿಸ್ ಕಲ್ಲೂರಿ ಸತ್ಯನಾರಾಯಣ ರಾಜು, ಕೋಸಲ್‌ರಾಮ್, ವೆಂಕಟರಾಮಯ್ಯ ರೆಡ್ಡಿ, ರಾಘವ ಮೆನನ್, ಮೊದಲಾದವರು ಮದ್ರಾಸಿನ ಹಿಂದಿನ ಮಂತ್ರಿಗಳ ಆಡಳಿತೆಯ ರೀತಿನೀತಿಗಳನ್ನು ಕಠಿಣವಾಗಿ ಟೀಕಿಸಲು ಈ ಸಂದರ್ಭವನ್ನು ಉಪಯೋಗಿಸಿಕೊಂಡರು. ಜಾತೀಯತೆ, ಪಕ್ಷಪಾತತೆ ಮತ್ತು ದೌರ್ಬಲ್ಯದ ಆರೋಪಗಳು ಮಂತ್ರಿಗಳ ಮೇಲಾಗಿದ್ದುವು. ಸಭಾನಾಯಕ ಶ್ರೀ. ಗೋಪಾಲ ರೆಡ್ಡಿಗಳು ಸ್ಫೂರ್ತಿಯುಕ್ತವಾಗಿ ಸವಿವರವಾಗಿ ಉತ್ತರವಿತ್ತಮೇಲೆ ಗ್ರ್ಯಾಂಟುಬೇಡಿಕೆ ಮನ್ನಣೆ ಪಡೆಯಿತು.

ಉದಾತ್ತ ಲಾಭದಾಯಕ ಮಾರಾಟ

ನಮ್ಮ ಕಂಪನಿಯ ಮಾಲುಗಳನ್ನು ಜನಸಾಮಾನ್ಯರಲ್ಲೂ ಪ್ರಚಾರಗೊಳಿಸುವ ಸಲುವಾಗಿ ಹೊಸ ಬಂಗಾರದ ಒಡವೆಗಳನ್ನು (ತಾಜಾ ಬಂಗಾರಕ್ಕೆ ಸರಿಹೋಲುವ) ಮಾರಾಟ ಮಾಡಲು ನಿರ್ಧರಿಸಿರುವೆವು. 1 ಕಂಠೀಸರ, 4 ಬಳೆಗಳು, ಒಂದು ಜೊತೆ ಕಿವಿ ಬೆಂಡೆ ಮತ್ತು 2 ಉಂಗುರಗಳಿರುವ ಸ್ಯಾಂಪಲ್ ಪೆಟ್ಟಿಗೆ ಬೆಲೆ ರೂಪಾಯಿ 27/ ಇದ್ದಾಗ್ಯೂ ಖಾಲಿ ರೂಪಾಯಿ 6-8-0ಕ್ಕೆ ಇಳಿಸಲಾಗಿದೆ. ಸಮಾಧಾನಕರವಲ್ಲವೆಂಬುದಾದರೆ ಕೊಟ್ಟ ಹಣ ವಾಪಾಸು ಕೊಡಲಾಗುವುದು.

ಇಂದೇ ಆರ್ಡರು ಕೊಡಿರಿ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

House of Commerce 74, G. B. Road, (3082)
DELHI.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್. ಉಡುಪಿ

ಇತರ ಶಾಖಾ ಏಜೆನ್ಸಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದ ವಿಚಾರದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ವಿಷಯ.

ವಿಮಾ ಮಾಡಲಿಕ್ಕಾಗಲೀ, ಪ್ರತಿನಿಧಿ ನೇಮಕಕ್ಕಾಗಲೀ;
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಪ್ರೌಢಮತದಾರರ ಪಟ್ಟಿ

'ಶಾಸನ ಸಭಾಂಗಗಳ ವೆಚ್ಚಕ್ಕಾಗಿ ರೂ. 28,63,600ಕ್ಕೆ ನಿಶ್ಚಿತ ಬೇಡಿಕೆ ಮುಂದಿಡುತ್ತಾ ಅರ್ಥಮಂತ್ರಿ ಶ್ರೀ. ಬಿ. ಗೋಪಾಲರೆಡ್ಡಿಗಳ್ ಪ್ರಾಯಸ್ಥರೆಲ್ಲರ ಮತದಾರರಪಟ್ಟಿ ತಯಾರಿಯ ಮಟ್ಟಿಗೆ ನಡೆದ ಕಾರ್ಯಗಳನ್ನು ವಿವರಿಸಿದರು. ಈ ವರ್ಷಾಂತ್ಯದೊಳಗೆ ಪೂರ್ಣ ಪಟ್ಟಿ ತಯಾರಾಗುವದೆಂದು ತಿಳಿಸಿದರು. "ಇಡೀ ಪ್ರಾಂತ್ಯದಲ್ಲಿ 2 57 49, 356 ಮಂದಿ ಮತದಾರ ಪಟ್ಟಿಗೆ ಸೇರಿಸಲ್ಪಟ್ಟಿದ್ದಾರೆ. ಅಂದರೆ ಪ್ರಾಂತ್ಯದ ಒಟ್ಟು ಅಂದಾಜು ಸಂಖ್ಯೆಯ ಸೇಕಡಾ 48 ರಷ್ಟು ಜನ ಮತದಾರರಾದಂತಾಯಿತು. ಪ್ರತಿಯೊಂದು ಜಿಲ್ಲೆಯ ಜನಸಂಖ್ಯೆ ಮತ್ತು ಅಲ್ಲಿ ಮತದಾರರಾದವರ ದಾಮಾಷೆಯು ಮದ್ರಾಸ್ ನಗರದ ಸೇಕಡಾ 41.7 ರಿಂದಾರಂಭಿಸಿ ನೆಲ್ಲೂರು ಮತ್ತು ಕೃಷ್ಣಾ ಜಿಲ್ಲೆಗಳ ಸೇ. 51ರ ವರೆಗಿದೆ. (ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯ ನೂರರಲ್ಲಿ 48.2ರಷ್ಟು ಮಂದಿ ಮತದಾರರಾಗಿದ್ದಾರೆ.) ಈಗಿನ ಮತದಾರ ಪಟ್ಟಿಯು ಕೊನೆಯದಲ್ಲ, ಈ ಪ್ರಥಮ ಪಟ್ಟಿಯನ್ನು ಸಕಾಲದಲ್ಲಿ ಪ್ರಕಟಿಸಿ, ಆಕ್ಷೇಪಗಳನ್ನೂ ಬಿಟ್ಟು ಹೋದ ಹೆಸರುಗಳನ್ನೂ ಪಡಕೊಳ್ಳುವರೆ ಒಂದು ಅವಧಿ ನಿಶ್ಚಯಿಸಲಾಗುವದು. ಪ್ರೌಢ ಮತದಾರ ಪಟ್ಟಿ ತಯಾರಿಗೇನೇ ಸುಮಾರು ರೂ. 57 ಲಕ್ಷ ಖರ್ಚು ತಗಲಬಹುದೆಂದು ಅಂದಾಜಾಗಿದೆ" ಎಂದು ಶ್ರೀ ಬಿ. ಗೋಪಾಲರೆಡ್ಡಿಗಳು ವಿವರಿಸಿದರು. ವಿರುದ್ಧ ಪಕ್ಷದ ನಾಯಕ ಮಹಮ್ಮದ್ ಇಸ್ಮಾಯಿಲರ ಕಡಿತ ಸೂಚನೆ ಬಂತು. ಬೇಗಮ್ ಅಮಿರುದ್ದೀನ್, ಹಮೀದ್‌ಖಾನ್, ರಾಮಸ್ವಾಮಿ, ಅಬ್ದುಲ್ ಮಜೀದ್, ಎಲ್. ಸಿ. ಪಾಯಸ್, ಹಾಜಿ ಹುಸ್ಸೇನ್, ರಾಘೂಖಾನ್, ಮುನಿಸ್ವಾಮಿ ಪಿಳ್ಳೆ, ಆಸ್ವಾರ್, ಕೋಸಲರಾಮ್; ಚಿನ್ನಿ ಕಾರ್ಮಿಖಾನ್, ಮೊದಲಾದವರು ಈ ಯೋಜನೆಯ ರೀತಿನೀತಿಗಳನ್ನು ವಿಮರ್ಶಿಸಿ ಭಾಷಣವಿತ್ತರು. ಮಂತ್ರಿ ಶ್ರೀ ಗೋಪಾಲರೆಡ್ಡಿಗಳು ಸಮರ್ಪಕ ಉತ್ತರವಿತ್ತ ಮೇಲೆ ಬವರ ಬೇಡಿಕೆ ಮಾನ್ಯವಾಯಿತು.

ಇತರ ಗ್ರಾಂಟುಗಳು

ಜೈಲಾಡಳಿತೆಗಾಗಿ ರೂ. 81,46,600ರ ಗ್ರಾಂಟು ಬೇಡಿಕೆಯನ್ನು ಕಾನೂನು ಮಂತ್ರಿ ಶ್ರೀ ಮಾಧವ ಮೆನನರು ಮುಂದಿಟ್ಟದ್ದರು; 'ಅರಣ್ಯ ಖಾತೆ'ಯ ಸಂಬಂಧದ ವೆಚ್ಚಕ್ಕಾಗಿ ರೂ. 83; 25,100ರ ಬೇಡಿಕೆಯನ್ನು ಆ ಖಾತೆಯ ಮಂತ್ರಿಯೂ ಆಗಿರುವ ಶ್ರೀ ಮಾಧವ ಮೆನನರು ಇಟ್ಟಿದ್ದರು. 'ಜಿಲ್ಲಾ ಆಡಳಿತೆಗಳು ಮತ್ತಿತರ ಸರ್ವಸಾಮಾನ್ಯ' ವೆಚ್ಚಗಳಿಗಾಗಿ ರೂ. 5,37,77,000ರ ಬೇಡಿಕೆಯು ಉದ್ದಿಮೆಮಂತ್ರಿ ಶ್ರೀ. ಯಚ್. ಸೀತಾರಾಮ ರೆಡ್ಡಿಗಳಿಂದ ಬಂತು. 'ಸಪ್ಲಿಮೆಂಟರಿ ಗ್ರಾಂಟುಗಳಿಗಾಗಿ ಒಟ್ಟಿಗೆ ರೂ. 4,94,29,600ರ ಮಂಜೂರಾತಿಯನ್ನು ಅರ್ಥಮಂತ್ರಿ ಶ್ರೀ. ಬಿ. ಗೋಪಾಲ ರೆಡ್ಡಿಗಳು ಅಪೇಕ್ಷಿಸಿದರು. 'ಪೋಲೀಸ್' ವೆಚ್ಚದ ಬಾಬ್ತು ರೂ. 6,04,54000ರ ಬೇಡಿಕೆಯನ್ನು 'ಪ್ರಧಾನ ಮಂತ್ರಿಗಳ ಪರವಾಗಿ ಶ್ರೀ. ಬಿ. ಗೋಪಾಲ ರೆಡ್ಡಿಗಳೇ ಮುಂತಂದು, ಕಳೆದವರುಷ ಪೋಲೀಸರು ಕಾರ್ಯಗಳಲ್ಲಿ ಅಸಾಮಾನ್ಯಕಷ್ಟಗಳಿದ್ದುವೆಂದೂ, ಆದರೂ ಪೋಲೀಸ್ ಪಡೆಯು ಪರಿಣಾಮಕಾರಿ ಕಾರ್ಯ ಸಾಧಿಸಿದೆಯೆಂದೂ ಶ್ಲಾಘಿಸಿದರು. ಮಾರ್ಪಟ್ಟ ಪರಿಸ್ಥಿತಿಗನುಸಾರವಾಗಿ ತಮ್ಮ ರೀತಿನೀತಿಗಳನ್ನು ಬದಲಾಯಿಸಿಕೊಂಡು ಸಾರ್ವಜನಿಕರೊಡನೆ ಸಹಕರಿಸಿ ವರ್ತಿಸುವ ಸಂದರ್ಭಗಳನ್ನು ಪೋಲೀಸರಿಗೊದಗಿಸಲಾಗಿದೆಯೆಂದೂ ಮಂತ್ರಿಗಳೆಂದರು. ಎಲ್ಲಾ ಬೇಡಿಕೆಗಳ ಸಂಬಂಧವಾಗಿಯೂ, ಪದ್ಧತಿಪ್ರಕಾರ ಕಡಿತಸೂಚನೆಗಳು ಮುಂದೆ ಬಂದಿದ್ದವು. ಅವುಗಳ ಉದ್ದೇಶವು ಸ್ಥಿತಿ ವಿಮರ್ಶೆ ಮಾತ್ರವಾದ್ದರಿಂದ ಸಂಗತಿಯು ಸವಿವರ ಪರ್ಯಾಲೋಚನಾ ನಂತರ ಅವು ಹಿಂದೆಗೆಯಲ್ಪಟ್ಟುವು. ಗ್ರಾಂಟು ಬೇಡಿಕೆಗಳು ಮಂಜೂರಾದುವು. ಎಸೆಂಬ್ಲಿಯ 'ಬಜೆಟ್' ಅಧಿವೇಶನ ನಡೆದಿದೆ.

ವಿನಂತಿ

ನವಯುಗದ ಚಂದಾಹಣ ಬಾಕಿಯಾಗಿರುವವರು ದಯಮಾಡಿ ಅದನ್ನು ಕೂಡಲೇ ಕಳುಹಿಸಿಕೊಡಬೇಕಾಗಿಯೂ ಸಕಾಲದಲ್ಲಿ ಹಣಬಾರದಿದ್ದಲ್ಲಿ ನಾವು ಕಳುಹಿಸುವ ವಿ. ಪಿ. ಪಿ. ಯನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿಯೂ ಈ ಮೂಲಕ ವಿನಂತಿಸುತ್ತೇನೆ.

ಮೆನೇಜರ್.

ರಶ್ಯಕ್ಕಿದಿರಾಗಿ ಅಟ್ಲಾಂಟಿಕ್ ಕೂಟ!

ಭಾವೀ ಯುದ್ಧಕ್ಕೆ ತಯಾರಾಗುವ ಹೊರತು, ಯುದ್ಧಹೇತುಗಳನ್ನು ನಿವಾರಿಸುವ ಪ್ರಯತ್ನವಿಲ್ಲ– ಎಂಬುದೇ ಕಳೆದ ದಿನಗಳ ಸ್ಪಷ್ಟ ಸಂದೇಶ. ಲೋಕ ಶಾಂತಿಗಪಾಯಕರವಾಗಿ ತೋರುವ ತಂಟೆ ತಕರಾರುಗಳನ್ನು ಇತ್ಯರ್ಥಿಸುವ ಹೊಣೆ ಹೊತ್ತಿರುವ 'ಸಂಯುಕ್ತ ರಾಷ್ಟ್ರ ಸಂಘ' ಕೂಡಾ ಪ್ರಥಮ ಮಹಾಯುದ್ಧಾನಂತರ ಸ್ಥಾಪನೆಗೊಂಡಿದ್ದು, ಕಳೆದ ಮಹಾಯುದ್ಧದ ಮೊದಲು ಸವೆದು ಮಾಯವಾಗಿದ್ದ 'ಲೀಗ್ ಓಫ್ ನೇಶನ್ಸ್'ನ ಸ್ಥಾನಕ್ಕೇನೇ ಈಗ ಇಳಿಯುತ್ತಿದೆ. ಈಗ ಸಂಯುಕ್ತ ರಾಷ್ಟ್ರಸಂಘದಲ್ಲಿ ಆಂಗ್ಲೋ ಅಮೇರಿಕನರಿಗೇನೇ ಪ್ರಚಂಡ ಬಹುಮತವಿದೆ. ಭದ್ರತಾ ಕೌನ್ಸಿಲಿನ ಮುಂದೆ ಬರುವ ತನಗೆ ಸಂಬಂಧಿಸಿದ ವಿಷಯಗಳ ಕುರಿತು ತನ್ನ 'ವಿಶೇಷ ಮತ'ವನ್ನು ಬೇಕಾದಂತೆ ಉಪಯೋಗಿಸುವ ಅಧಿಕಾರವು ರಶ್ಯಕ್ಕಿರುವ ಒಂದೇ ಕಾರಣದಿಂದ ರಶ್ಯವೀವರೆಗೆ ಈ ಸಂಘದ ಸಂಬಂಧ ಕಡಿದುಕೊಂಡಿಲ್ಲವೆನ್ನಬಹುದು. ಸಂಯುಕ್ತ ರಾಷ್ಟ್ರಸಂಘದಲ್ಲಿ ಬಹುಮತವಿರುವ ಆಂಗ್ಲೋ ಅಮೇರಿಕನರೇ ಅದರ ನಿರರ್ಥಕತೆಯನ್ನು ಮನಗಂಡು, ಅಪಾಯ ನಿರೀಕ್ಷೆ ಅಥವಾ ಸ್ವರಕ್ಷಣಾ ಗುಂಪುಗಳನ್ನು ಕಟ್ಟಿಕೊಳ್ಳಲಾರಂಭಿಸಿರುವುದು ಭದ್ರತಾ ಕೌನ್ಸಿಲಿನ ನಿರರ್ಥಕತೆಯನ್ನು ಜಗಜ್ಜಾಹೀರುಗೊಳಿಸುವ ಸಂಗತಿ. ಅಂತೂ ಈಗ ಸ್ಪಷ್ಟವಾಗಿರುವ ವಿಷಯವಿಷ್ಟೇ: ರಶ್ಯ ಮತ್ತು ಆಂಗ್ಲೋ ಅಮೇರಿಕಾ ಪಕ್ಷಗಳ ಮೇಲಾಟವು ಇನ್ನೊಂದ ಮಹಾಯುದ್ಧದ ದಿಕ್ಕಿಗೇನೇ ಹೊರಳುತ್ತಿದೆ; ಭ್ರಾಂತ ಸಮಸ್ತ ಲೋಕದ ಎಲ್ಲಾ ರಾಷ್ಟ್ರಗಳೂ ಈ ಹೋರಾಟ ರಂಗದ ಗಡಿಯೊಳಗಾಗುವ ಅಪಾಯ ಒಡೆದು ಕಾಣುತ್ತಿದೆ.

ಪ್ರಪಂಚವು ಈಗ ಇದ್ದ ಸ್ಥಿತಿಯಲ್ಲೇ ಶಾಶ್ವತ ಶಾಂತಿಯನ್ನು ಹೊಂದೀತೆಂಬ ಆಶೆ ಪೂರ್ತಿ ಕಳೆದುಹೋಗುತ್ತಿದೆ. ಮಹಾಯುದ್ಧ ಎರಡಾದುದು ಮೂರಾದೀತೆಂಬ ಭೀತಿ ಅಂಟಿಕೊಳ್ಳುತ್ತಿದೆ!

ಲೋಕಸ್ಥಿತಿ

ಕಳೆದ ಎಂಟು ತಿಂಗಳುಗಳಿಂದ, ಒಳಗಿಂದೊಳಗೆ ಮಾತುಕತೆ ನಡೆಯುತ್ತಿದ್ದ 'ಉತ್ತರ ಅಟ್ಲಾಂಟಿಕ್ ಮೈತ್ರೀಕರಾರ್'ಕ್ಕೆ ಏಳು ರಾಷ್ಟ್ರಗಳು ಒಪ್ಪಿ ಆ ರಾಜಧಾನಿಗಳಿಂದ ಪ್ರಕಟಣೆ ಹೊರಟಿದೆ. ಹೀಗೆ ಸೂಡಿಕಟ್ಟಿದ ರಾಷ್ಟ್ರಗಳೆಂದರೆ ಬ್ರಿಟನು, ಅಮೇರಿಕ, ಫ್ರಾನ್ಸ್, ಬೆಲ್ಜಿಯಮ್, ಕೆನಡಾ, ಲಕ್ಸೆಂಬರ್ಗ್, ಹೊಲ್ಲೇಂಡ್. ಈ ಸಂಬಂಧದ ಕರಾರುಪತ್ರಕ್ಕೆ ಎಪ್ರಿಲ್ 4ರಲ್ಲಿ ವಾಶಿಂಗ್ಟನಿನಲ್ಲಿ ಸಹಿ ಹಾಕುವದೆಂದು ನಿಶ್ಚಯಿಸಲಾಗಿದೆ. ಉಳಿದ ಐದು ರಾಷ್ಟ್ರಗಳಿಗೆ– ನೋರ್ವೆ, ಡೆನ್ಮಾರ್ಕ್, ಐಸ್‌ಲೇಂಡ್, ಪೋರ್ಚುಗಲ್, ಇಟೆಲಿಗೆ– ಈ ಕೂಟದೊಳಗೆ ಸೇರಿಕೊಳ್ಳುವ ಆಮಂತ್ರಣ ಹೋಗಿದ್ದು, ಅವೂ ಜತೆಗೂಡುವವೆಂದು ನಿರೀಕ್ಷಿಸಲಾಗಿದೆ. ಯುರೋಪು ಅಥವಾ ಉತ್ತರ ಅಮೇರಿಕದ ಎಲ್ಲಿಯೇ ಆದರೂ ಆಕ್ರಮಣ ನಡೆದರೆ ಈ ರಾಷ್ಟ್ರಗಳು ಒಟ್ಟಾಗಿ ಹೋರಾಡುವವು– ಈ ಪೈಕಿ ಯಾವುದೇ ಒಂದರ ಮೇಲೆ ಧಾಳಿ ಬಂದರೆ ಪ್ರತಿಯೊಂದರ ಮೇಲೂ ಬಂದಂತೆ– ಪ್ರತಿಯೊಂದರ ಪ್ರಾದೇಶಿಕ ಸ್ಥಿರತೆ, ರಾಜಕೀಯ ಸ್ವಾತಂತ್ರ್ಯ, ಮತ್ತು ಒಳಭದ್ರತೆಯ ಮಟ್ಟಿಗೂ ಇವು ಒಟ್ಟಿಗೆ ಪರ್ಯಾಲೋಚಿಸುವವು– ಈ ಮೈತ್ರೀ ಕರಾರು 20 ವರುಷಗಳ ವರೆಗೆ ಅಸ್ತಿತ್ವದಲ್ಲಿರುವುದು. ಯುರೋಪಿನ ಯಾವ ರಾಷ್ಟ್ರವಾದರೂ ಈ ಮೈತ್ರೀಗುಂಪಿನಲ್ಲಿ ಸೇರಿಕೊಳ್ಳಬಹುದೆಂದೂ, ಇದು ರಕ್ಷಣೋದ್ದೇಶದ ಕಾರ್ಯ ಹೊರತು ಆಕ್ರಮಣೋದ್ದೇಶದಲ್ಲವೆಂದೂ ಇದರ ನಿರ್ಮಾಪಕರು ಲೋಕಕ್ಕೆ ಮುಂದಟ್ಟು ಮಾಡಿಕೊಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ರಶ್ಯದ ಪಕ್ಷಪಾತಿಗಳೆಲ್ಲರೂ ಈ ಕೂಟ ಹಂಚಿಕೆಯಿಂದ ಉರಿದು ಬಿದ್ದಿದ್ದಾರೆ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಸೌಂದರ್ಯದೊಡನೆ— ಸೌಲಭ್ಯವೂ ಬೇಕು!

ಇದಲ್ಲವೇ ನಿಮ್ಮ ಆಕಾಂಕ್ಷೆ?

ಹಾಗಾದರೆ ನೆನಪಿನಲ್ಲಿಟ್ಟುಕೊಳ್ಳಿರಿ—

ಸಕಾಲದಲ್ಲಿ— ಸುಲಭ ದರದಲ್ಲಿ— ಕಲಾಪೂರ್ಣವಾಗಿ ಮುದ್ರಿಸಿ ಕೊಡಬಲ್ಲ ಹೆಸರಾಂತ ಮಂದಿರವೆಂದರೆ

ಭಾರತ್ ಪ್ರಿಂಟರ್ಸ್

ಕೋಳದ ಪೇಟೆ, ಉಡುಪಿ.

ತಮ್ಮ ಮನಮೆಚ್ಚುವಂತೆ ಎಲ್ಲಾ ತರದ ಪ್ರಿಂಟಿಂಗ್– ಬ್ಯಾಂಡಿಂಗ್ ಕೆಲಸಗಳನ್ನು ಮಾಡಿಕೊಡುತ್ತೇವೆ.

BHARAT PRINTERS

KOLADAPET, UDIPI.

ಭಾರತ ಪಾಕಿಸ್ತಾನ್ ಸ್ನೇಹ ಸಂಬಂಧ.

ಇದೇ ರೀತಿ ಭೂಮಧ್ಯ ಸಮುದ್ರ ವಲಯ ಮತ್ತು ಶಾಂತಸಮುದ್ರ ವಲಯಗಳ ರಾಷ್ಟ್ರಗಳನ್ನೂ ರಕ್ಷಣಾ ಗುಂಪುಗಳಾಗಿ ಕಟ್ಟಿ ಹಾಕಲು ಬ್ರಿಟಿಷ್ ಮುತ್ಸದ್ದಿಗಳ ಮೂಲಕ ಬ್ರಿಟನ್ ಅಮೇರಿಕಗಳು ಪ್ರಯತ್ನಿಸುತ್ತಿವೆ. ಈ ಭಾಗದ ಅಂತಹ ರಚನೆಗೆ ಭಾರತವು ಆಮಂತ್ರಿಸಲ್ಪಡುವುದೂ ಭಾರತಕ್ಕಿದು ಪ್ರತ್ಯಕ್ಷ ಸಂಬಂಧಿಸಿದುದೂ ಖಂಡಿತ. ಇಷ್ಟರಲ್ಲೇ ಬ್ರಿಟಿಷ್ ರಾಜಕಾರಣಿಗಳು ಓಡಾಡ ಹತ್ತಿದ್ದಾರೆ. ಭಾರತದ ಸರಕಾರೀ ನಾಯಕರು, ಅಂತಹ ಹಂಚಿಕೆಯೊಳಗೆ ಸೇರಿಕೊಳ್ಳುವಂತಿಲ್ಲನೆಂದು ದೇಶದ ಜನತೆಗೆ ಆಶ್ವಾಸನೆ ಕೊಡುತ್ತಿರುವಂದೂ ಸ್ವತಂತ್ರ ಭಾರತಕ್ಕೆ ಸಂಬಂಧಿಸಿರುವ ಕ್ಷೇತ್ರಗಳ ಪ್ರಾಮುಖ್ಯ ಆಗುಹೋಗುಗಳ ಕುರಿತು ತಾವು ಅನಾಸಕ್ತಿಯಿಂದಿರಲು ಸಾಧ್ಯವಿಲ್ಲ. ಭೂಮಧ್ಯ ಸಮುದ್ರ, ಮತ್ತು ಶಾಂತಿ ಸಮುದ್ರ ಪ್ರದೇಶಗಳಲ್ಲೂ ಅಟ್ಲಾಂಟಿಕ್ ಗುಂಪಿನಂತಹ ಗುಂಪು ರಚನೆಗೊಂಡರೆ ರಶ್ಯಾ ಮತ್ತು ಅದರ ಹಿಂಬಾಲಕ ರಾಷ್ಟ್ರಗಳಿಗಾಗಿ ಭೂಲೋಕದ ಇಕ್ಕಡೆಗಳಲ್ಲೂ ಕೋಟೆಗಳಿದ್ದಂತಾಗುವದು. ರಶ್ಯವು ಯಾವುದೇ ಒಂದು ರಾಷ್ಟ್ರವನ್ನು ಇದಿರಿಸುವ ಬದಲಿಗೆ, ಮುಖಮಾಡಿದತ್ತ ರಾಷ್ಟ್ರಗುಂಪುಗಳನ್ನೇ ವಿರೋಧಿಸಬೇಕಾಗುವದು!

ಕಳೆದ ಮಹಾಯುದ್ಧದಂತೆ, ಬ್ರಿಟನು ಫ್ರಾನ್ಸು, ಅಮೇರಿಕ ಮುಂತಾದ ಮಿತ್ರರಾಷ್ಟ್ರಗಳು, ಯುದ್ಧವು ತಂತಮ್ಮ ಮನೆಬಾಗಿಲಿಗೇ ಅನುಕ್ರಮವಾಗಿ ಪ್ರತ್ಯಕ್ಷ ಬರುವವರೆಗೆ ಕಾಯುವ ಸಾವಕಾಶವು ತಪ್ಪಿ, ಮಿತ್ರಕೂಟದ ಯಾವ ಕಡೆ ತಾಗು ಬಿದ್ದರೂ ಸ್ವತಃ ತಮಗೆ ಬಿದ್ದಂತೆಂದು ಭಾವಿಸಿ ತಕ್ಷಣ ಕಾರ್ಯಕ್ಕಿಳಿಯುವಂತಾಗುವದು. ಈ ಸಂಭವಗಳನ್ನು ನಿರೀಕ್ಷಿಸಿಯೇ ಇರುವ ರಶ್ಯಾ ಮತ್ತು ಅದರ ಪಕ್ಷಪಾತಿ ರಾಷ್ಟ್ರಗಳ ಪ್ರತಿಕ್ರಿಯೆಗಳೇನು, ಎಂಬುದನ್ನು ಇನ್ನೂ ನೋಡಬೇಕಿದೆ. ತನ್ನ ಹಿಂಬಾಲಕ ರಾಷ್ಟ್ರಗಳಾದ ಪೋಲೆಂಡ್, ಬಲ್ಗೇರಿಯ, ಹಂಗೇರಿ, ಝೆಕೊಸ್ಲೊವೇಕಿಯ, ರುಮೇನಿಯಗಳ ಸಂಯುಕ್ತ ಹಾಗೂ ಪ್ರಚಂಡ ಕಮಿನ್‌ಫೋರ್ಮ್ ಸೇನೆಯನ್ನು ಮೊಲಟವರ ಖಾಸಗೀ ಮೇಲ್ವಿಚಾರಣೆಯಲ್ಲಿ ತಮ್ಮ ತಜ್ಞ ಸೇನಾನಿಗಳ ಕೈಕೆಳಗೆ ನಿರ್ಮಿಸುವ ಯೋಜನೆಯನ್ನು ರಶ್ಯದ ಸರಕಾರೀ ನಾಯಕರು ಕೈಕೊಂಡಿದ್ದಾರೆಂದು ವಾರ್ತೆ ಇದೆ.

ಚೈನದಲ್ಲಿ ಕಮ್ಯೂನಿಸ್ಟರು ಕೊನೆಯ ಪ್ರಮುಖ ಧಾಳಿಗೆ ತಯಾರಾಗುತ್ತಿದ್ದಾರೆ. ಅತ್ತ ಚೈನೀ ಸರಕಾರದ ಸೇನಾನಿಗಳೇ ಸಂಧಾನಕ್ಕೆ ಇದಿರುಬಿದ್ದ ಸುದ್ದಿಯಿದೆ. ಸ್ವಾಟೋವ್ ಬಂದರದ ಸ್ಥಳೀಯ ಸೇನಾನಾಯಕ ಸೇನೆಯ ಪ್ರಮುಖಾಧಿಕಾರಿಗಳನ್ನು ಬಂಧಿಸಿಟ್ಟು, ವ್ಯವಸ್ಥಾಧಿಕಾರವನ್ನು ಬಿಟ್ಟುಕೊಟ್ಟಿದ್ದಾನೆ. ಮಾರ್ಷಲ್ ಸ್ಟಾಲಿನರು ಈಗೀಗ ಚೈನದ ಕಮ್ಯೂನಿಸ್ಟ್ ಹೋರಾಟದ ಕುರಿತು ವಿಶೇಷಾಸಕ್ತಿವಹಿಸಿ, ನಿರೀಕ್ಷಿಸುತ್ತಿದ್ದಾರೆಂದು ತಿಳಿದುಬಂದಿದೆ. ಚೈನದ ಅಂತರ್ಯುದ್ಧವು ರಾಜಕೀಯ ಮಾನವಾಗ ಹಿಡಿದೆಂಬ ಅರಿವೀಗ ಪೂರ್ತಿ ಬೆಳೆದು ಹೋಗಿದೆ.

ಬರ್ಮಾದ ಯುದ್ಧವೂ ಭೀಕರರೀತಿಯಿಂದ ನಡೆದಿದೆ. ಬರ್ಮಾ ಸರಕಾರದ ಪರವಾಗಿ ಬ್ರಿಟನಿನ ಸಹಾಯಯಾಚನೆಯ ಸ್ವರ ಕೇಳಿಬರುತ್ತಿದೆ. ಬರ್ಮಾದ ಯುದ್ಧಗಲಭೆಯಲ್ಲಿದ್ದ ತಮ್ಮ ಜನರನ್ನು ಬ್ರಿಟನರು ವಿಮಾನಮೂಲಕ ಸಾಗಿಸುತ್ತಿದ್ದಾರೆ. ಬಂಡಾಯಗಾರ ಕರೆನರು ಶಸ್ತ್ರ ಕೆಳಗಿಟ್ಟು ಶರಣಾಬಂದರೆ; ಹಾಗೆಬಂದರೆ ಅವರ ಬೇಡಿಕೆಯಂತೆ, ನ್ಯಾಯಬದ್ಧ ಪ್ರತ್ಯೇಕಭಾಗವನ್ನು ಅವರಿಗೆ ವಿಂಗಡಿಸಿ ಕೊಡಲಾಗುವದು; ಮತ್ತು ಬಂಡಾಯಗಾರರನ್ನು ಅನಿರ್ಬಂಧವಾಗಿ ಬಿಡುಗಡೆ ಮಾಡಲಾಗುವದು- ಎಂದು ಬರ್ಮಾ ಸರಕಾರವು ಶಾಂತಿ ರಿಯಾಯತಿಯ ಸೂಚನೆ ಕೊಟ್ಟಿದ್ದಿತು. ಈ ಶರ್ತ ಪಾಲನೆಗೆ ರಂಗೂನಿಗೆ 15 ಮೈಲು ದೂರದ ಇನ್ಸೀನ್‌ನಲ್ಲಿರುವ ಬಂಡಾಯಗಾರರಿಗೆ ಮಾರ್ಚಿ 17ರ ವರೆಗೂ ಮಿಕ್ಕೆಡೆಗಳವರಿಗೆ ಮಾರ್ಚಿ 31ರ ವರೆಗೂ ಮಿತಿಯಕೊಡಲ್ಪಟ್ಟಿದ್ದಿತು. ಇನ್ಸೀನಿನ ಕಡೆಯವರಿಂದ ಅವಧಿ ಮುಗಿಯುವ ವರೆಗೆ ಉತ್ತರವೇ ಬಾರದ್ದರಿಂದ ಸರಕಾರವು ದೊಡ್ಡ ಪರಿಮಾಣದ ಧಾಳಿಯಾರಂಭಿಸಿದೆ.

ಮಿಕ್ಕ ಜಾಗತಿಕ ಘಟನಾ ತರಂಗಗಳಲ್ಲಿ ಬದಲಾವಣೆಗಳೇನೂ ಆಗಿಲ್ಲ.

ಭಾರತ-ಪಾಕಿಸ್ತಾನ

ಇಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಸಂಬಂಧವು ಇತ್ತೀಚಿಗೆ ಸುಧಾರಿಸುತ್ತಾ ಬಂದಿದೆ. ಎರಡು ರಾಷ್ಟ್ರಗಳ ನಾಯಕರೂ ಪರಸ್ಪರ ಮೈತ್ರಿಗೆ ವಿಶೇಷ ಪ್ರಾಮುಖ್ಯತೆಕೊಟ್ಟು ದೋಷಾರೋಪಣೆಗಳನ್ನು ಬಹುಮಟ್ಟಿಗೆ ತಗ್ಗಿಸಿಕೊಂಡಿದ್ದಾರೆ. ಕಾಶ್ಮೀರದಲ್ಲಿ ಜನಮತ ಸಂಗ್ರಹಾಧಿಕಾರಿಯ ನೇಮಕ ಮತ್ತು ಮುಂದಿನ ಕಾರ್ಯಕ್ರಮಗಳಲ್ಲಿ ಭದ್ರತಾ ಕೌನ್ಸಿಲಿನ ಕಾಶ್ಮೀರ ಸಮಿತಿ ಕೈಹಾಕಿದೆ. ಇಂಡೋನೇಶಿಯದ ಹೋರಾಟ, ಬರ್ಮಾದ ಅಂತಯುದ್ಧ ಮೊದಲಾದ ಸಮಸ್ಯೆಗಳಲ್ಲೂ ಇವೆರಡು ರಾಷ್ಟ್ರಗಳಿಗೆ ಸಮಾನಾಸಕ್ತಿ ಇದೆ. ಹೀಗೆ ಸಂಬಂಧ ಸುಗಮಗೊಳ್ಳುತ್ತಿರುವಾಗಲೂ ಪಾಕಿಸ್ತಾನವು ತನ್ನ ಮನೋವೃತ್ತಿಯನ್ನು ಪೂರ್ಣ ಬದಲಾಯಿಸಿಕೊಂಡಿಲ್ಲವೆಂಬುದಕ್ಕೆ ಕೆಲದಿವಸದ ಪಾಕಿಸ್ತಾನದ ಗಡಿನಾಡು ಪ್ರಾಂತಿಕ ಸರಕಾರವು ಹೊರಡಿಸಿರುವ ಒಂದು ಹೇಳಿಕೆಯಂತಹ ನಿದರ್ಶನಗಳು ದೊರೆತಿವೆ. 'ಗಡಿನಾಡು ಪ್ರಾಂತ್ಯದ ಪ್ರಧಾನಿ ಅಬ್ದುಲ್ ಕ್ವಯಾಮರನ್ನು ಕೊಲೆ ಮಾಡುವ ವಾಮ ಪೂರಿತ ಒಳಸಂಚೊಂದು ನಡೆದಿದೆ; ಆದರಲ್ಲಿ ಭಾರತ ಸರಕಾರದ ಕೈಯಿದೆ. ಗಡಿನಾಡಿನ ಕಾಂಗ್ರೆಸಿ ದಳದವರು ಭಾರತದೊಳಗೆ ಅವಿರತವಾಗಿ ಸುದ್ದಿ ಕಳುಹುತ್ತಿದ್ದಾರೆ' ಎಂಬುದೇ ಗಡಿನಾಡು ಸರಕಾರದ ಆರೋಪ. ಈ ಪ್ರಕಟಣೆಯಲ್ಲಿ ಭಾರತ ಸರಕಾರದ ಹೆಸರೆತ್ತಿಲ್ಲವಾದರೂ ಅರ್ಥ ಸ್ಪಷ್ಟವಿದೆ. ಪಾಕಿಸ್ತಾನವು ಮಾಡಿರುವ ಈ ಅಸತ್ಯಾರೋಪಕ್ಕಾಗಿ ಭಾರತವು ನಿಷೇಧ ಸೂಚಿಸಿದೆ. ಹಿಂದೀ ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರುರವರು ಈ ಸಂಬಂಧದ ಹೇಳಿಕೆ ಕೊಡುತ್ತಾ ದೇಶ ವಿಭಜನೆಯಾದಂದಿನಿಂದ ಗಡಿನಾಡಿನ ಕಾಂಗ್ರೆಸ್ ದಳ, ಅಥವಾ ಅದರ ನಾಯಕರೊಡನೆ ಯಾವ ಸಂಬಂಧವನ್ನೂ ಇಟ್ಟುಕೊಂಡಿಲ್ಲವೆಂದೂ, ಪಾಕಿಸ್ತಾನದ ಒಳವಿಷಯಗಳಲ್ಲಿ ಯಾವುದೇ ರೀತಿಯಿಂದ ಕೈ ಹಾಕಿದ್ದಿಲ್ಲವೆಂದೂ, ಆದರೆ ಭಾರತ ಸ್ವಾತಂತ್ರ್ಯದ ಧೀರ ಯೋಧರಾಗಿದ್ದ ಅಹಿಂಸಾನಿಷ್ಠೆಯ ಖಾನ್ ಸಹೋದರರು ಮತ್ತವರ ಅನುಯಾಯಿಗಳ ಮೇಲೆ ಇಂದು ಅಲ್ಲಿ ನಡೆದಿರುವ ಅತಿರೇಕ ದಬ್ಬಾಳಿಕೆಯು ತಮ್ಮಲ್ಲಿ ಅನುಕಂಪವನ್ನುಂಟುಮಾಡಿದೆಯೆಂದೂ ಸ್ಪಷ್ಟಪಡಿಸಿದ್ದಾರೆ. "ಬ್ರಿಟನರ ಆಶ್ರಯದಲ್ಲಿ ಭಾರತ ಪಾಕಿಸ್ತಾನಗಳೊಳಗೆ ಜತೆರಕ್ಷಣಾ ವ್ಯವಸ್ಥೆಮಾಡಿಕೊಳ್ಳುವ ಮಾತುಕತೆಗಳೂ ನಡೆದಿಲ್ಲ; ಅಂತೆಯೇ ಭಾರತ, ಪಾಕಿಸ್ತಾನ್, ಸಿಲೋನ್, ಮಲಯ, ಬ್ರಿಟನುಗಳ ಸಂಯುಕ್ತ ರಕ್ಷಣಾವ್ಯವಸ್ಥೆಯ ಹಂಚಿಕೆಯೂ ನಡೆದಿಲ್ಲ" ಎಂದು ಭಾರತ ಸರಕಾರದ ಅಭಿಪ್ರಾಯ ತಿಳಿದುಬಂದಿದೆ.

ಭಾರತದ ಪಶ್ಚಿಮ ಕರಾವಳಿ-ಕರಾಚಿ-ಬ್ರಿಟನುಗಳ ಮಧ್ಯದ ಸಂಚಾರ ಮಹಾಮಾರ್ಗದಲ್ಲಿ ಡಚ್ ಹಡಗಗಳಿಗೂ ಈ ಭಾಗಗಳವರ ಹಡಗ ಕಂಪೆನಿಯೆಂದಕ್ಕೂ ಸಂಚಾರ ಧಾಟಿಯಲ್ಲಿ ತೀವ್ರ ಸ್ಪರ್ಧೆಯಿದ್ದಿದೆ; ಇಕ್ಕಡೆಯವರೂ ಮೇಲಾಡುತ್ತಾ ಸಾಮಾನುಗಳ ಮೇಲಿನ 'ಚಾರ್ಜ'ನ್ನು ತಗ್ಗಿಸುತ್ತಿದ್ದಾರೆ.

ದಕ್ಷಿಣ ಭಾರತದಲ್ಲಿ ಈಗಲೂ ಫ್ರೆಂಚರ ಆಳಿಕೆಯಲ್ಲೇ ಇರುವ ಪಾಂಡಿಚೆರಿ ಮೊದಲಾದ ನಾಲ್ಕು ಭಾಗಗಳು ಭಾರತದೊಂದಿಗೆ ಸೇರಿಕೊಳ್ಳಬೇಕೋ, ಫ್ರೆಂಚರ ಕೈಕೆಳಗೇನೇ ಇರಬೇಕೋ ಎಂಬುದನ್ನು ಕೊನೆಯದಾಗಿ ನಿರ್ಣಯಿಸುವ ಜನಮತ ಸಂಗ್ರಹ ವ್ಯವಸ್ಥೆಗಾಗಿ ಫ್ರೆಂಚ್ ವಸಾಹತುಗಳ ಮುಖ್ಯ ಕಾರ್ಯಾಲಯ ಪಾಂಡಿಚೆರಿಯಲ್ಲಿ ಆ ವಸಾಹತುಗಳ ಮುನ್ಸಿಪಾಲಿಟಿ ಸದಸ್ಯರ ಸಭೆ ಜರಗಿದೆ. ಆ ಪ್ರಶ್ನೆಯನ್ನೇ ಕಣ್ಣಮುಂದಿಟ್ಟುಕೊಂಡು ಕಳೆದ ಒಕ್ಟೋಬರಿನಲ್ಲಿ ಪಾಂಡಿಚೆರಿ, ಕರಿಯಿಕಲ್ ಮತ್ತು ಯೆಮಾನ್‌ಗಳಲ್ಲಿ ಈಗಿನ ಮುನ್ಸಿಪಾಲಿಟಿ ಚುನಾವಣೆಗಳು ನಡೆದಿದ್ದುವು. ಆ ಚುನಾವಣೆಯು ಅಸಮಾಧಾನಕರವಿತ್ತಲ್ಲದೆ ಕರಿಕಾಲವು ಭಾರತಕ್ಕೆ ಪ್ರತಿಕೂಲವಾಗಿತ್ತು. ತನ್ನ ಕೆಲವು ಭೂತುಂಡುಗಳು ಇನ್ನೂ ವಿದೇಶದ ಕೈಯಲ್ಲಿರುವುದನ್ನು ಸ್ವತಂತ್ರ ಭಾರತವು ಸಹಿಸಲಾರದೆಂದು ಸ್ಪಷ್ಟವಾಗಿರುವುದರಿಂದ ಮುಂದಿನ ಜನಮತ ಸಂಗ್ರಹದ ಪರಿಣಾಮವೇನಾಗುವದೆಂಬುದನ್ನು ಎಲ್ಲರೂ ನಿರೀಕ್ಷಿಸುತ್ತಿದ್ದಾರೆ. 1949ನೇ ಡಿಸೆಂಬರ 11ರಲ್ಲಿ ಈ ಜನಮತ ಸಂಗ್ರಹ ಮಾಡುವ ನಿರ್ಧಾರವಾಗಿದೆ.

ನಿಮ್ಮ ತೃಪ್ತಿ ನಮ್ಮ ಗೌರವ

ಶ್ರೇಷ್ಠ

ಪ್ರಭಾತ ಚಾ ಮತ್ತು ಕಾಫಿ



PRABHAT

TEA & COFFEE (INDIA) Ltd.

COONOOR (Niligiris)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 23-3-1949 ರಿಂದ

2ನೇ ವಾರ—

ಸುರಭಿಯವರ

ಕನ್ನಡ ಚಿತ್ರ

ಭಕ್ತ ಕುಂಬಾರ

ಹೊನ್ನಪ್ಪಭಾಗವತರ್, ಲಕ್ಷ್ಮೀಬಾಯಿ, ರಾಘವೇಂದ್ರರಾವ್,

ಪಂಡರೀಬಾಯಿ, ಮುಂತಾದವರು.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 95/32 R E P. 15/1949.

ಅರ್ಜಿದಾರ. ಸೂರ್ಯನಾರಾಯಣ ಅಡಿಗಳ.

ಎದ್ರಿದು-ನಾಗಪ್ಪ ಉಪಾಧ್ಯ ಪೌತಿ ಕೂ. ೩. ಉಡುಪಿ ತಾಲ್ಲೂಕು ಕಾರ್ಕಳ ಗ್ರಾಮದಲ್ಲಿರುವ ನಾಗಪ್ಪ ಉಪಾಧ್ಯರ ಮಗ ೩ನೇ ಎದ್ರಿ ಗಣಪಯ್ಯ ಉಪಾಧ್ಯರಿಗೆ, ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಮೇಲಿನ ಡಿಕ್ರಿಯ ಅಮಲ್ದಾರಿ ಬಗ್ಗೆ ಅರ್ಜಿದಾರನು ಮೇಲಿನ ಅರ್ಜಿ ಹಾಕಿದ್ದು ಮಾಡಿದ್ದಾನೆ ಆದುದರಿಂದ ಅಮಲ್ದಾರಿ ಯಾಕೆ ನಡಿಸಕೂಡದು ಎಂಬ ಸಬಬು ತೋರಿಸಲಿಕ್ಕೆ ತಾ. 28-3-1949ಕ್ಕೆ ಮೇಲಿನ ಕೋರ್ಟಿನಲ್ಲಿ ತಮಗೆ ಇಟ್ಟಿರುತ್ತದೆ. ಆ ತಾರೀಕು ಯೋ ತಾವಾಗಲಿ ಅಕ್ಷೇಪಕರಾಗಲಿ ಸದ್ರಿ ದಿವಸ ಕೋರ್ಟಿನಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು ಎಂಬಸಂಗತಿ ಈ ಮೂಲಕ ತಿಳಿಯಪಡಿಸುತ್ತದೆ.

N. S. Parameshwaran.

Advocate for Petitioner.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

SEASON DEPOSITS

For Rs. 2,000/- and over are now accepted at all Offices of the Bank at the following rates:-

3 & 4 Months ... @ 2½ % p. a.
5 & 6 Months .... @ 2¾ % p. a.

ನವಯುಗ

ಗುರುವಾರ, [illegible]

ಆಹಾರ ಸ್ವಾವಲಂಬನೆ

"ನಮ್ಮ ಜನರು ಆಹಾರವಿಲ್ಲದೆ ಸಾಯುವಂತಾದರೂ ಸರಿಯೇ-ಇನ್ನೆರಡು ವರುಷಗಳ ನಂತರವೂ ಈಗಿನಂತೆ ಹೊರಗಿನಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವಂತಿಲ್ಲ"–ಎಂದು ಪ್ರಧಾನ ಮಂತ್ರಿ ಪಂಡಿತ ನೆಹರೂಗಳು ಇತ್ತೀಚೆಗೆ ಹೇಳಿದ್ದರು. ಇದೇ ತಾ. 19ರಲ್ಲಿ ಭಾರತ ಪಾರ್ಲಿಮೆಂಟಿನಲ್ಲಿ ಆಹಾರ ಮತ್ತು ಬೇಸಾಯ ಸಂಬಂಧದ ಗ್ರಾಂಟು ಬೇಡಿಕೆ ಮುಂದಿಡುತ್ತಾ ಭಾರತದ ಆಹಾರ ಮಂತ್ರಿ ಶ್ರೀ ಜೈರಾಮದಾಸ್ ದೌಲತರಾಮರೂ ಅದು ಸರಕಾರೀ ಧೋರಣೆಯೆಂಬುದನ್ನು ಸ್ಪಷ್ಟಪಡಿಸಿದ್ದಾರೆ. "ಎರಡು ವರುಷಗಳೊಳಗೆ ಆಹಾರದ ಮಟ್ಟಿಗೆ ಭಾರತವು ಸ್ವಾವಲಂಬಿಯಾಗಬೇಕೆಂದು ಭಾರತ ಸರಕಾರ ನಿರ್ಧರಿಸಿದೆ. ಜಳಗಳಿಲ್ಲವೂ ಸಾರ್ವತ್ರಿಕ ನಾಶಗೊಂಡು ಮಹತ್ವಾದ ಗಂಡಾಂತರವುಂಟಾಗಬೇಕು–ಇಲ್ಲವೇ 'ಆಹಾರ ಧಾನ್ಯಗಳ ಧೋರಣಾ ಸಮಿತಿ'ಯು ಶಿಫಾರಸಿನಂತೆ ಕೇಂದ್ರ ಸಂಗ್ರಹವೊಂದನ್ನು ಜಮಾಯಿಸಿಡುವಲ್ಲಿಗೆ ಬೇಕಬೇಕು–ಆ ವಿನಹ 1951ರ ನಂತರ ಯಾವುದೇ ಆಹಾರ ಧಾನ್ಯವನ್ನಾದರೂ ಪರದೇಶಗಳಿಂದ ತರಿಸಿಕೊಳ್ಳುವಂತಿಲ್ಲ"–ಎಂದು ಆಹಾರ ಮಂತ್ರಿಗಳ ಕಂಠೋಕ್ತ ಮಾತು. 'ಭಾರತೀಯ ಬೇಸಾಯ ಸಂಶೋಧನಾ ಸಂಸ್ಥೆ'ಯ ವಿದ್ಯಾರ್ಥಿಗಳಿಗೆ ಇದೇ ತಾ. 20ರಲ್ಲಿ ಭಾಷಣ ಮಾಡುತ್ತಾ ಪಂಡಿತ ನೆಹರೂಗಳು ಪುನಃ ಹೇಳಿದ್ದಾರೆ. "ಇಂದಿನ ತೀವ್ರ ಆಹಾರಾಭಾವವೆಂಬುದು ನಮಗಿರುವ ಮಹಾನುಕೂಲತೆಗಳಿಂದು ಮತ್ತು ಸ್ವತಃ ನಮ್ಮ ಅಸ್ತಿತ್ವಕ್ಕೇನೇ ಬಂದಿರುವ ಧಾಳಿಯೇ. ನಾವು ವಿದೇಶಗಳ ಆಹಾರ ಸರಬರಾಯನ್ನೇ ಅವಲಂಬಿಸಿಕೊಂಡಿದ್ದೇವೆ. ಮತ್ತು ಅವುಗಳಿಗಾಗಿ ಪ್ರತಿ ವರುಷವೂ ಕೋಟಿಗಟ್ಟಲೆ ಹಣ ಸುರಿಯುತ್ತಿದ್ದೇವೆ; ನಮ್ಮ ಆರ್ಥಿಕ ಭಂಡಾರಕ್ಕೆ ಬಿದ್ದಿರುವ ದೊಡ್ಡ ತೂತೆಂದರೆ ಇದು. ಇದನ್ನು ಇನ್ನೂ ಮುಂದುವರಿಸಲು ಸಾಧ್ಯವಿಲ್ಲ. ದುರ್ದೈವವಶಾತ್ ಲೋಕದ ಯಾವುದೇ ಕಡೆಯಲ್ಲಿ ಯುದ್ಧ ಸ್ಫೋಟಗೊಂಡರೆ, ಆಗ ಆಹಾರಕ್ಕಾಗಿ ಅನ್ಯ ದೇಶಗಳನ್ನು ಅವಲಂಬಿಸಿರುವ ನಮ್ಮ ನಾಡೇ ನಾಗಬೇಕು; ಆಹಾರಾಭಾವವು ಪಂಡಿತಜೀಯ ಅಂತಃಕರಣಾಗ್ನಿಯನ್ನೂ ಸ್ವಾಭಾವಿಕವಾಗಿ ಹಚ್ಚಿಸಿದೆ. 1948ನೇ ಇಸವಿಯೊಂದರಲ್ಲೇ ಸುಮಾರು 130 ಕೋಟಿ ರೂಪಾಯಿಗಳನ್ನು ಕೊಟ್ಟು ಭಾರತವು 28·4 ಮಿಲಿಯ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಹೊರಗಿನಿಂದ ತರಿಸಿಕೊಂಡಿದ್ದಿತು. ಅದಕ್ಕಾಗಿ 8 ಒಪ್ಪಂದಗಳನ್ನು ಪರದೇಶಗಳೊಡನೆ ಮಾಡಿಕೊಳ್ಳಬೇಕಾಗಿದ್ದಿತು. ಬ್ರಿಟಿಷ್ ಆಡಳಿತೆಯಿದ್ದ ಕಾಲದಿಂದಾರಂಭಿಸಿ ಈ ವರೆಗೂ "ನಮ್ಮ ರಾಷ್ಟ್ರದ ಭಂಡಾರ ಬರಿದಾಗುತ್ತಿದೆ" ಎಂದು ನಾವು ತೋರಿಸುತ್ತಾ ಬಂದಿದ್ದ ಮಿಕ್ಕೆಲ್ಲಾ ಅಂಶಗಳಿಗಿಂತ ಇದು ದೊಡ್ಡದು. ಇನ್ನೆರಡು ವರುಷಗಳೊಳಗೆ ದೇಶಕ್ಕೆ ಬೇಕಾಗುವಷ್ಟು ಆಹಾರ ದೇಶದಲ್ಲೇ ಬೆಳೆಯುವಂತೆ ಮಾಡಿ ಈ ದುಸ್ಥಿತಿಯನ್ನು ನಿವಾರಿಸಬೇಕೆಂಬ ಇಚ್ಛೆಯಿಂದ ಅಲ್ಲಲ್ಲಿ ಅಣೆಕಟ್ಟುಗಳನ್ನು–ಇತರ ನೀರಾವರಿ ಸೌಕರ್ಯಗಳನ್ನು–ಬಂಜರುಸ್ಥಳಗಳನ್ನು ಕೃಷಿವಲಯಗಳಾಗಿ ಮಾರ್ಪಡಿಸುವ ಪ್ರಯತ್ನಗಳನ್ನು ಸರಕಾರವು ಕೈಕೊಂಡಿದೆ. ಆದರೆ ದೊಡ್ಡದೊಡ್ಡ ಯೋಜನೆಗಳು ರಾಷ್ಟ್ರದ ಕೆಲವೇ ಭಾಗಗಳ ಮಟ್ಟಿಗೆ ಅನ್ವಯಿಸಬಲ್ಲವು ಹೊರತು ಪ್ರತಿಯೊಂದು ಹಳ್ಳಿಯ ಪ್ರತಿಯೊಬ್ಬ ರೈತನನ್ನೂ ಅಧಿಕ ಧಾನ್ಯೋತ್ಪತ್ತಿಗೆ ಪ್ರೇರೇಪಿಸಲಾರವು. ಸಾಗುವಳಿ ಸಾಧ್ಯವಿರುವ ಇಂಚು ನೆಲವೂ ಖಾಲಿಬೀಳದೆ ಕೃಷಿಯಾಗಬೇಕು–ಬೇಸಾಯಗಾರನ ಸರ್ವ ಲಕ್ಷ್ಯವೂ ಬೇಸಾಯದ ಕಡೆಗೇನೇ ಬೀಳುವಂತೆ ಅವನ ಸ್ಥಿತಿಗತಿಗಳನ್ನು ಸುಧಾರಿಸಬೇಕು. ಸಾಗುವಳಿದಾರನಿಗೇನೇ ಸಾಗುವಳಿ ಭೂಮಿಯ ಮಾಲಿಕತ್ವ ದೊರೆಯುವಷ್ಟು ದೊಡ್ಡ ಪ್ರೇರಣೆ ಮತ್ತು ಸಹಾಯ ಈ ಮಟ್ಟಿಗೆ ಬೇರೊಂದಿರಲಾರದು. ಆದರೆ ಅಂತಹ ಪುನರ್ವ್ಯವಸ್ಥೆ ಕಾರ್ಯದಲ್ಲಿ ಈ ನಿಶ್ಚಿತಾವಧಿಯೊಳಗೆ ಬಗೆಹರಿಸಲಾಗದಷ್ಟು ಕಂಟಕಗಳೇಳಬಹುದು; ಆದ್ದರಿಂದ ರೈತರ ಇಂದಿನ ಜೀವನಾವಶ್ಯಕತೆಗಳನ್ನಾದರೂ ಪೂರೈಸಿಕೊಡುವುದು–ಅವುಗಳ ಸದುಪಯೋಗಪಡಿಸಿಕೊಳ್ಳುವಂತೆಯೂ, ಅಧಿಕೋತ್ಪನ್ನ ಕಾರ್ಯವು ಸಾರ್ವತ್ರಿಕವಾಗಿ ಸಮಾನಪ್ರಗತಿ ಹೊಂದುವಂತೆಯೂ ಪ್ರತಿಯೊಂದೆಡೆಯ ಸಾಗುವಳಿದಾರರ ಸಂಘಟನೆಮಾಡುವುದು ಮೊದಲ ಕರ್ತವ್ಯ. ಸಾಗುವಳಿದಾರನ ಶಕ್ತ್ಯುತ್ಸಾಹಗಳ ಇಳಿತ ಭಂಗ ಪಸ್ಥಿತಿಯೋ, ಅವನ ಸಾಗುವಳಿ ಉತ್ಪನ್ನದ ಕೊರತೆ ಹೆಚ್ಚಳಗಳವೆಂಬುದನ್ನು ತಿಳಿದಿರಬೇಕು. ಪ್ರತೀ ಹಳ್ಳಿಯಲ್ಲಿ ಸಾಗುವಳಿ ಯೋಗ್ಯ ಬಂಜರುಭೂಮಿಯೆಷ್ಟಿದೆ? ಇರುವ ಸಾಗುವಳಿಯಿಂದಲೂ ಅಧಿಕ ಉತ್ಪನ್ನ ಪಡೆಯುವ ವಿಧಾನಗಳಾವುವು? ಎಂಬುದನ್ನು ಆ ಗ್ರಾಮದ ರೈತರಿಗಿಷ್ಟು ಸರಕಾರದ ಬೇಸಾಯ ತಜ್ಞರಂತಿರಲಾರರು. ಆದ್ದರಿಂದ ಸಾಗುವಳಿಗೆ ಮತ್ತು ಸಾಗುವಳಿದಾರನಿಗೆ ಬೇಕಾದುದೇನು, ಎಂಬುದನ್ನು ತಿಳಿಸುವ ಸಾಗುವಳಿದಾರ ಸಂಘಟನೆಯು ಪ್ರತಿ ಗ್ರಾಮದಲ್ಲೂ ನಡೆಯಲಿ; ಅವುಗಳ ಪರಿಶೀಲನೆಗೂ, ಅಗತ್ಯವಿದ್ದುದನ್ನೊದಗಿಸಿಕೊಡುವುದಕ್ಕೂ ಸರಕಾರೀ ಜನರಿರಲಿ, ಹಾಗಾದರೇನೇ ಈ ಆಹಾರ ಸ್ವಾವಲಂಬೀ ಯೋಜನೆ ನಿಸ್ಸಂದೇಹವಾಗಿ ಜಯಶೀಲವಾದೀತು.

ಎಸೆಂಬ್ಲಿ ಸ್ವಾರಸ್ಯಗಳು!

ಮದ್ರಾಸ್ ಎಸೆಂಬ್ಲಿಯಲ್ಲಿ ಆಹಾರ ಸಂಬಂಧದ ಚರ್ಚೆ ನಡೆದಿದ್ದಾಗ ಶ್ರೀ. ವಿ. ರಾಘವಯ್ಯ "ಸ್ವತಃ ನಾನೇ ಬ್ಲೇಕ್ ಮಾರ್ಕೆಟ್ ಅಕ್ಕಿಯಿಂದ ಜೀವಿಸುತ್ತಿದ್ದೇನೆ. ಕಳ್ಳ ಸಂತೇ ಅಕ್ಕಿಯಿಲ್ಲದೆ ಹಕ್ಕಿಗೇ ಧಾನ್ಯದಿಂದಲೇ ಬದುಕಿಕೊಂಡಿರುವವರು ಪ್ರಾಂತ್ಯದಲ್ಲಾರೂ ಇರಲಿಕ್ಕಿಲ್ಲ" ಎಂದು ಕಂಠೋಕ್ತ ಹೇಳಿ, "ಮಂತ್ರಿಗಳಾದರೂ ತಾವು ಹಾಗೆ ಮಾಡುತ್ತಿಲ್ಲವೆಂದು ಪ್ರಾಮಾಣಿಕವಾಗಿ ಹೇಳಬಲ್ಲರೇ?" ಎಂದು ಪ್ರಶ್ನಿಸಿ ಎಸೆಂಬ್ಲಿಯಲ್ಲೊಂದು ರೀತಿಯ ಭಾವಾಂದೋಲನವೆಬ್ಬಿಸಿದ್ದರು. ಆಹಾರ ಮಂತ್ರಿ ಡಾ| ಟಿ. ಯಸ್. ಯಸ್. ರಾಜನರು ಈ ಉದ್ಗಾರವನ್ನು ಆಕ್ಷೇಪಿಸಿ, "ಆ ಸದಸ್ಯರು ಎಸೆಂಬ್ಲಿಯ ಹೊರಗೆ ಈ ಮಾತುಗಳನ್ನು ಆಡುತ್ತಿದ್ದರೆ ಅವರು 'ನೇತಾಡಿಸಲ್ಪಡುತಿದ್ದರು'" ಎಂದು ವ್ಯಾಖ್ಯಾನ ಹೊಡೆದರು. ಈ ಕುರಿತು 'ವಿಧಿಬಿಂದು'ಗಳೆದ್ದಿದ್ದುದಲ್ಲದೆ ತರ್ಕ ವಿತರ್ಕಗಳೂ ನಡೆದವು.

ಂಂ ಂಂ

"ಗವರ್ನರರ ಸಂಬಳವೇ ಮೊದಲಾದ ಸರಕಾರೀ ವೆಚ್ಚಗಳ ಬೇಡಿಕೆಯನ್ನು ಎಸೆಂಬ್ಲಿಯಲ್ಲಿ ಮುಂದಿಡುತ್ತಾ ಸಭಾನಾಯಕ ಶ್ರೀ. ಬಿ. ಗೋಪಾಲರೆಡ್ಡಿಗಳು "ಭಾರತಶಾಸನದ ಸೆಕ್ಷನ್ 79 (1)ರ ಪ್ರಕಾರ ಗವರ್ನರರ ಸಂಬಳ ಮುಂತಾದುವುಗಳು ಸಭಾಚರ್ಚೆಗೆ ಒಳಪಡುವ ವಿಷಯಗಳಲ್ಲವೆಂಬುದನ್ನು ತಿಳಿದಿರಬೇಕು" ಎಂದು ಎಚ್ಚರಿಕೆಕೊಟ್ಟಾಗ ಹಲವು ಸದಸ್ಯರು ಎದ್ದುನಿಂತು "ಈ ಸೂಚನೆಯು ಸದಸ್ಯರ ಬುದ್ಧಿಮತ್ತೆಗೆ ಮಾಡಿದ ಅವಮಾನ"ವೆಂದು ಆಕ್ಷೇಪಿಸಿದ್ದರು, "ಅಧ್ಯಕ್ಷರು ಹುಕುಂಕೊಟ್ಟರೂ ಕೇಳದೆ ಕಳೆದ ವರುಷ ಕಮ್ಯೂನಿಸ್ಟ್ ಸದಸ್ಯನು ಈ ವಿಷಯದ ಕುರಿತು ಟೀಕೆ ಮುಂದುವರಿಸಿದ್ದರು" ಎಂದು ಶ್ರೀ ಗೋಪಾಲ ರೆಡ್ಡಿಗಳು ಹೇಳಿಕೊಂಡರೂ ಸದಸ್ಯರು ಅದಕ್ಕೆ ತಕ್ಕ ಉತ್ತರ ಕೊಟ್ಟು ಪ್ರತಿಭಟಿಸಿದರು.

ಂಂ ಂಂ

"ಒಂದು ಧೋರಣೆಯೆಂಬುದಿರುವ ಏಕಮಾತ್ರ ಮದ್ರಾಸ್ ಮಂತ್ರಿಯೆಂದರೆ ವಿದ್ಯಾಮಂತ್ರಿಗಳು. ಆದರೆ ಅವರಲ್ಲಿರುವ ದೋಷವೆಂದರೆ ಅವರು ಗಡಿಬಿಡಿಮಾಳರು"–ಎಂದು ಗ್ರಾಂಟು ಬೇಡಿಕೆಯ ಚರ್ಚೆಯ ವೇಳೆ ಮುಸ್ಲಿಂ ಪಕ್ಷದ ನಾಯಕ ಮಿ. ಮಹಮ್ಮದ್ ಇಸ್ಮಾಯಿಲರ ಟೀಕೆ. ಅದಕ್ಕೆ ವ್ಯಂಗ್ಯ ಉತ್ತರವಾಗಿ ಶ್ರೀ. ಬಿ. ಗೋಪಾಲ ರೆಡ್ಡಿಗಳೆಂದಿದ್ದರು; "ಧೋರಣೆ ಮತ್ತು ಗಡಿಬಿಡಿಯಿರುವುದಕ್ಕಿಂತ, ಧೋರಣೆಯಿಲ್ಲದ ಕಡಿಮೆ ಅಪರಾಧವನ್ನೆ ಮಂತ್ರಿಮಂಡಲ ಆರಿಸಿಕೊಂಡರೆ, ನಾನದನ್ನು ಆಕ್ಷೇಪಿಸಲಾರೆ".

ಂಂ ಂಂ

ಮದ್ರಾಸಿನಲ್ಲಿ ಮೊದಲಿನಿಂದಲೂ ಜಾರಿಯಲ್ಲಿರುವ, ಜಾತೀಯ ಪರಿಮಾಣಾನುಸಾರವಾಗಿ ನೌಕರಿ ಹಾಗೂ ಕಾಲೇಜುಗಳಲ್ಲಿ ಪ್ರವೇಶಕೊಡುವ ಕ್ರಮಕ್ಕಾಗಿ ಇಂದಿನ ಮದ್ರಾಸ್ ಸರಕಾರವು ಹೊರಗೂ ಎಸೆಂಬ್ಲಿಯೊಳಗೂ ತೀವ್ರ ಟೀಕೆಗೊಳಗಾಗಿದೆ. ಇದಕ್ಕಾಗಿ ಎಸೆಂಬ್ಲಿಯಲ್ಲಿ ಹಲವು ಸದಸ್ಯರ ತೀಕ್ಷ್ಣ ವಾಗ್ಬಾಣಗಳಾದುವು. ಶ್ರೀ ಬಿ. ಗೋಪಾಲರೆಡ್ಡಿಗಳು ಈ ಆರೋಪಗಳಿಗೆ ಉತ್ತರ ಕೊಡುತ್ತಾ, ಹೇಳಿದ್ದರು. "ಜಾರಿಯಲ್ಲಿರುವ ಜಾತೀಯ ಜಿ.ಓ. ಎಂಬುದು ನಮ್ಮ ದಕ್ಷಿಣ ಭಾರತ ಸಮಾಜದಲ್ಲಿ ಅಕ್ಕೆ ಬೇರೂರಿರುವ ಜಾತೀಯತೆಯ ಕಡೆಗೆ ಬಿದ್ದ ಲಕ್ಷ್ಯ ಮಾತ್ರವೆಂಬುದನ್ನರಿಯದೆ ಉತ್ತರ ಭಾಗದ ಜನರು ಪ್ರಾಮುಖ್ಯ ಮಂದಿಕೂಡಾ–ಆ ಕುರಿತು ಭಾವನಾವಂಚನೆಗೀಡಾಗಿದ್ದಾರೆ. ಜಾತೀಯತೆಯೆಂಬುದು ಸಮಾಜದಲ್ಲೇ ಇದೆ. ಸರಕಾರವು ಅದರ ಕಡೆಗೆ ದೃಷ್ಟಿ ಹಾಕದಿರಲು ಸಾಧ್ಯವಿಲ್ಲ."

ಂಂ ಂಂ

ಮದ್ರಾಸ್ ಎಸೆಂಬ್ಲಿ ಸಭೆಯು ವಿವಿಧ ರೀತಿಯ ಪೋಷಾಕುಗಳ 'ಬಗೆ ಬಣ್ಣದ ಉದ್ಯಾನ'ವೆಂಬಂತಿದೆ. ಚಲ್ಲಾಣ, ನಿಲುವಂಗಿ, ಉದ್ದ ಟೋಪಿಗಳ ಮುಸ್ಲಿಂ ಸದಸ್ಯರಿಂದಾರಂಭಿಸಿ, ಸೊಂಟದ ಕೆಳಗೊಂದು ಬೈರಾಸನ್ನಷ್ಟೇ ಸುತ್ತಿಕೊಂಡಿರುವ ಸನಾತನೀ ಬ್ರಾಹ್ಮಣ ಸದಸ್ಯರ ವರೆಗೂ ಅಲ್ಲಿ ಇದ್ದಾರೆ. "ಶಾಸನ ಸಭಾ ಸದಸ್ಯರಿಗೆ 'ಸಮ ಪೋಷಾಕು ಕ್ರಮ'ವನ್ನು ತಂದರಾಗದೇ?" ಎಂಬ ಪ್ರಶ್ನೆಗಳು ಎಸೆಂಬ್ಲಿಯ ಮುಂದೆ ಬಂದಿದ್ದವು. ದೇಶದ ಹೆಚ್ಚಿನ ಭಾಗವನ್ನು ತಿರಿದೇ ಪ್ರದರ್ಶಿಸುವ ಶ್ರೀ ಎ. ವೈದ್ಯನಾಥ ಅಯ್ಯರರನ್ನು ತೋರಿಸಿ, ಸವಾಲು ನಡೆದಾಗ "ನನ್ನ ಶರ್ಟಿಗಾಗುವಷ್ಟು ನೂಲನ್ನು ಪ್ರಶ್ನಿಸುವ ಸದಸ್ಯರು ಚರಕದಿಂದ ತೆಗೆದುಕೊಡುತ್ತಾರಾದರೆ ನಾನು ಶರ್ಟುಹಾಕಿಕೊಳ್ಳಲು ತಯಾರು" ಎಂದು ಶ್ರೀ. ಅಯ್ಯರೆಂದರು. ಎಸೆಂಬ್ಲಿ ಅಧ್ಯಕ್ಷರು ಈ ಮೊದಲೇ 'ಸದಸ್ಯರ ಸಮವಸ್ತ್ರನಿರ್ಬಂಧ'ದ ಕುರಿತು ಪಾರ್ಲಿಮೆಂಟ್ ಅಧ್ಯಕ್ಷರ ಅಭಿಪ್ರಾಯ ಕೇಳಿದ್ದರಂತೆ. ಅಂತಹ ಸಮಾನತಾನಿಯಮ ಜಾರಿಗೆ ಬಲ್ಲ

ವದು ಅಸಾಧ್ಯವೆಂದೂ, ಶುದ್ಧವಾದ, ಶೀಟಾದ ಯಾವ ಪ್ರೋತ್ಸಾಹಿಸಿಂದಾದರೂ ಸದಸ್ಯರು ಸಭೆಗೆ ಬರಬಹುದೆಂದೂ, ಸಭಾನಾಯಕ ಶ್ರೀ ಬಿ. ಗೋಪಾಲರೆಡ್ಡಿಗಳು ಹೇಳಿದ್ದಾಗಿ.

00 00

ಮದ್ರಾಸ್ ಎಸೆಂಬ್ಲಿಯ 'ಬಜೆಟ್ ಅಧಿವೇಶ'ನದ ಚರ್ಚೆಗಳಲ್ಲಿ ಹೆಚ್ಚಿನ ಟೀಕೆಗೊಳಗಾದ ಮಂತ್ರಿಗಳೆಂದರೆ ಅರ್ಥ ಮಂತ್ರಿ ಶ್ರೀ ಬಿ. ಗೋಪಾಲರೆಡ್ಡಿ ಮತ್ತು ವಿದ್ಯಾಮಂತ್ರಿ ಶ್ರೀ ಟಿ. ಎ. ಅವಿನಾಶಿಲಿಂಗಂ ಚೆಟ್ಟಿಯಾರರು. ಪ್ರಧಾನ ಮಂತ್ರಿಗಳ ಕಾರ್ಯಭಾರವೇನೂ ಅಷ್ಟೆ ಕಂಡು ಬಂದಿಲ್ಲ. ಸಭಾನಾಯಕನಾಗಿ ಪ್ರಧಾನಿಯ ಕರ್ತವ್ಯವನ್ನು ನಿರ್ವಹಿಸಿದ್ದ ಶ್ರೀ ಬಿ. ಗೋಪಾಲರೆಡ್ಡಿಗಳು ಅತೀವ ಉತ್ಸಾಹ ಮತ್ತು ಹಿಗ್ಗಿಕೆಯವರೆಂಬ ಭಾವನೆ ಮೂಡುವಂತೆ ಬಾಯಿ ಹಂಗಿಸುತ್ತಿದ್ದರು. ವಿದ್ಯಾ ಮಂತ್ರಿ ಶ್ರೀ ಅವಿನಾಶಿಲಿಂಗಂ ಚೆಟ್ಟಿಯಾರು ಅವಿವಾಹಿತ; "ಮದುವೆಯಾಗದ ಮಂತ್ರಿಗೆ ಮಕ್ಕಳ ಸ್ಥಿತಿಗತಿ ಹೇಗೆ ಗೊತ್ತಾಗಬೇಕು?" ಎಂಬಂತಹ ಮಾತುಗಳು ಕೂಡಾ ಚರ್ಚೆಯ ವೇಳೆ ಕೇಳಿ ಬಂದಿದ್ದವು.

00 00

ಮದ್ರಾಸ್ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷೀಯ ಸದಸ್ಯರ ವಾರ್ಷಿಕ ಮಹಾಸಭೆಯು ಇದೇ ಮಾರ್ಚ ತಾ. 31ಕ್ಕೆ ಮದ್ರಾಸಿನಲ್ಲಿ ಸೇರುವದೆಂದು ತಿಳಿದುಬಂದಿದೆ. ಬರುವ ವರುಷದ ನಾಯಕನ ಚುನಾವಣೆಯು ಆ ಸಭೆಯಲ್ಲೇ ನಡೆಯಲಿದೆ. ಈ ಬಾರಿ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ಬದಲಿಗೆ ಡಾ| ಸುಬ್ಬರಾಯನ್ ನಾಯಕನಾಗಿ ಆರಿಸಲ್ಪಡುವರೆಂದೂ, ಶ್ರೀ ಕಾಮರಾಜ ನಾಡಾರ್ ಮತ್ತು ಡಾ| ಸುಬ್ಬರಾಯನ್ ಏಕಭಿಪ್ರಾಯದಲ್ಲಿದ್ದು ಶ್ರೀ ಓಮಂದೂರರನ್ನು ಸ್ಪರ್ಧಿಸಲಿರುವರೆಂದೂ ಸುದ್ದಿ. ಡಾ| ಸುಬ್ಬರಾಯನ್ ಆರಿಸಲ್ಪಟ್ಟರೆ ಮುಂದಿನ ಮಂತ್ರಿಮಂಡಲದಲ್ಲಿ ಶ್ರೀ. ಟಿ. ಪ್ರಕಾಶಂ, ಶ್ರೀ ಕೆ. ಆರ್. ಕಾರಂತರೇ ಮೊದಲಾದವರು ಸೇರಿಕೊಳ್ಳಬಹುದೆಂದೂ ವಾರ್ತೆಯಿದೆ. ಆದರೆ ಇವೆಲ್ಲವೂ ಊಹಾಪೋಹಗಳು ಮಾತ್ರ!

Notice under order 21, rule 66 of C. P. C.

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ.

R. E. P. 382/1948

O. S. 383/1936

[illegible] —ಅರ್ಜಿದಾರ.

ಮತ್ತು

ಶ್ರೀನಿವಾಸ ಭಟ್ಟ, ಕುರುಗುಂಜ ರಾಮಭಟ್ರರ [illegible], ಉಡುಪಿ ತಾಲ್ಲೂಕು ಆರೂರುಗ್ರಾಮ —ಎದ್ರಿ.

ದಿಕ್ರಿ:—

ಮೇಲ್ಕಂಡ ವ್ಯಾಜ್ಯದ ಡಿಕ್ರಿ ಮೇಲೆ ಅರ್ಜಿದಾರನು ನಡ್ಸಿದ ಮೇಲಿನ ಅಮಲ್ದಾರಿಯಲ್ಲಿ ಜಪ್ತಾದ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಮುನ್ಸಿಫರು ಹಾಜರು ಮಾಡಿರುತ್ತಾರೆ. ಮುದರಿಂದ ವಿಕ್ರಯವಾಯಿಸ್ತಿಹಾರನ [illegible] ಗಳನ್ನು ನಿರ್ಣಯಿಸಲಿಕ್ಕೆ 1949ನೇ ಇಸ್ವಿ ಎಪ್ರಿಲು ತಿಂಗಳು 7ನೇ ತಾರೀಕು ನಿಶ್ಚಯಿಸಲಾಗಿಯದಂತ ನಿಮಗೆ ಇದರಿಂದ ತಿಳಿಸಲಾಗುತ್ತದೆ.

B. Vasudeva Rao

Councel for Petitioner.

ಉಡುಪಿ 22-3-49.

"ಮಕ್ಕಳಿಗೆ ಮದುವೆಯಾದ ಮೇಲೂ ಸಮಾಜ ಸೇವೆ ಬಿಡಬಾರದು"—ನೆಹರು.

ನವದಿಲ್ಲಿಯ 'ಲೇಡಿ ಇರ್ವಿನ್ ಕಾಲೇಜ'ನ ಸ್ನಾತಕರ ದಿನದ ಸಮಾರಂಭದಲ್ಲಿ ಇದೇ ತಾ. 20ರಲ್ಲಿ 'ಪದವಿದಾನ' ಭಾಷಣವೀಯುತ್ತ ಪಂಡಿತ ನೆಹರುಗಳು ವಿದ್ಯಾರ್ಥಿನಿಗಳಿಗೆ ಉಪದೇಶಿಸಿದರು: "ಓರ್ವ ಬ್ಬಳು ಮದುವೆಯಾದ ಮಾತ್ರಕ್ಕೆ ಸಮಾಜಕ್ಕಾಗಿ ತಾನು ಮಾಡಬೇಕಾದ ಕರ್ತವ್ಯಗಳನ್ನು ಮರೆಯಬೇಕೆಂದೇನು, ಅಥವಾ ಕಡೆಗಣಿಸಬೇಕೆಂದೇನು, ಎಂಬುದೇ ನನಗೆ ಮಂದಟ್ಟಾಗುವದಿಲ್ಲ. ಮದುವೆ ಮತ್ತು ಸಮಾಜ ಸೇವೆ, ಇವೆರಡು ಕಾರ್ಯಭಾರಗಳು ಜತೆಯಲ್ಲಿ ಸಾಗಲು ಸಂಪೂರ್ಣ ಸಾಧ್ಯವಿದೆ. ಮದುವೆಯೊಂದಿಗೆ ತಮ್ಮ ಸಾಮಾಜಿಕ ಜೀವನವು ಮುಕ್ತಾಯಗೊಂಡಿತೆಂದು ಹುಡುಗಿಯರು ಭಾವಿಸಿಕೊಳ್ಳಬಾರದೆಂದು ನೆನಸುತ್ತೇನೆ. ನಾವೆಲ್ಲರೂ ವಿಶೇಷ ಶ್ರಮಿಸಬೇಕಾಗಿರುವ ಕಾಲವಿದು. ನಿಮ್ಮ ಈ ಪಠಿಯೆಂಬುದು ಕಠಿಣ ಕಾರ್ಯಗಳಿಗೆ ದೂಡಲ್ಪಟ್ಟಿರುವ ಜನಾಂಗ. ಆದರಿಂದು ಆರೋಪಿಸಿದ್ದವಾದ ತಪ್ಪುಗಳಿಗೋಸ್ಕರ ಬಲಿಗೊಡಬೇಕಾಗುವಂತಹ ಕಠಿಣ ಶ್ರಮವೇನೂ ಅಲ್ಲ; ಬದಲಿಗೆ ನಮ್ಮ ಮನಸ್ಸಿಗೆ ಮೆಚ್ಚುಗೆಯಾಗುವ ಮತ್ತು ಪರಿಣಾಮ ಕೊಡುವ ಬಗೆಯ ಶ್ರಮ. ಅದೊಂದು ಅತ್ಯಂತ ಮನೋಹರ ಅನುಭವ. ಭಾರತವಿಂದು ಬದಲಾವಣೆಯ ಹಾಗೂ ಕ್ಲೇಶ ಹೆಚ್ಚಿನ ಅವಧಿಯನ್ನು ದಾಟುವುದರಲ್ಲಿದೆ. ಈ ಮಾರ್ಪಾಟಿತ ಸ್ಥಿತಿಗನುಗುಣವಾಗಿ ತಮ್ಮನ್ನು ಹೊಂದಿಸಿಕೊಳ್ಳಲು ಕೆಲವೇ ಮಂದಿಗೆ ಮಾತ್ರ ಸಾಧ್ಯವಾಗಿದೆ. ಹೀಗಾಗಿ ಈಗ ನಡೆದಿರುವ ಸಂಗತಿಗಳ ಮತ್ತು ಈಗಿನ ಜನತೆಯ ಮನೋವೃತ್ತಿಗಳ ನಡುವೆ ಅತಿ ವಿಸ್ತಾರವಾದ ಬಿರುಕು ಉಳಿದಿದೆ. ಇಂತಹ ಬಿರುಕಿನಿಂದ ಅಂತರಿಕ ಹಾಗೂ ಬಹಿರಂಗ ಅಡಿಮೇಲಾಗಬಹುದು. ಅದ್ದರಿಂದ ಮೂಲಭೂತ ಮುಖ್ಯ ವಿಷಯಗಳ ಅನುಭವಮಾಡಿಕೊಂಡು, ಅವುಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸಬೇಕಾದುದು ಅಗತ್ಯ. ಈ ಕಾಲದಲ್ಲಿ ಅತಿ ಮುಖ್ಯವಾದುದು ಮತ್ತು ಅತ್ಯವಶ್ಯದ್ದೆಂದರೆ ಕೆಲಸ—ಮತ್ತೂ ಮತ್ತೂ ಕೆಲಸ. ನಾನು ಹೆಚ್ಚಿಗೆ ಕೆಲಸಮಾಡದೆ ಹೆಚ್ಚೆಚ್ಚು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ನನ್ನ ಹಲವು ಮಿತ್ರರು ಎಷ್ಟೋವೇಳೆ ಉಪದೇಶಿಸುವರು. ಆದರೆ ನನಗಿಂತ ಹೆಚ್ಚಿನ ವಿಶ್ರಾಂತಿ ಮತ್ತು ರಜೆಗಳನ್ನು ಪಡೆಯುತ್ತಿರುವ ನನ್ನ ಶಾಲಾ-ಕಾಲೇಜು ಗಳ ಹಳೇಮಿತ್ರರ ಸ್ಥಿತಿಯೊಡನೆ ನನ್ನನ್ನು ಹೋಲಿಸಿನೋಡಿದಾಗ, ನಾನು ಸ್ವಂತ ಶಕ್ತಿಯಿಂದಲೂ, ಜೀವನವನ್ನು ಅನುಭೋಗಿಸುವ ಪಟ್ಟಿಗೂ ಅವರಿಗಿಂತ ಎಷ್ಟೋ ಉತ್ತಮಸ್ಥಿತಿಯಲ್ಲಿದ್ದೇನೆ ಎಂದು ನನಗನ್ನಿಸುತ್ತದೆ. ಅದ್ದರಿಂದ ಕೆಲಸವೆಂದರೆ ಹೆದರಬೇಡಿ; ರಾತ್ರಿಹಗಲು ದುಡಿಯಿರಿ. ಆದರೆ ಅಂತಹ ಕೆಲಸಮಾತ್ರ ಪರಿಪಕ್ವಬುದ್ಧಿ ಮತ್ತು ದೇಹದ ಮೂಲಕವೇ ಆಗಲಿ"

ಪ್ರಕಟಣೆ

'ನವಯುಗ' ಮತ್ತು 'ಅಂತರಂಗ' ಪತ್ರಿಕೆಗಳಿಗೆ ಚಂದಾದಾರರನ್ನು ಸೇರಿಸಲಿಕ್ಕೂ ಜಾಹೀರಾತುಗಳನ್ನು ಸಂಗ್ರಹಿಸಲಿಕ್ಕೂ ಶ್ರೀ. ಕೆ. ಆನಂದ ಶೆಟ್ಟರು ಅಧಿಕಾರ ಹೊಂದಿರುತ್ತಾರೆ. ಅವರಿಗೆ ಸರ್ವರೂ ಸಹಕಾರವೀಯಬೇಕಾಗಿ ವಿನಂತಿಸುತ್ತೇವೆ.

ಮೆನೇಜರ್,

'ನವಯುಗ'

ಮುಂಬಯಿ

ಶ್ರೀ ಭಗವತೀ ನೃತ್ಯಕಲಾ ಮಂದಿರ—ಇದರ 3ನೇ ವಾರ್ಷಿಕೋತ್ಸವವು ತಾ 15-3-49ರಲ್ಲಿ ಶ್ರೀ ಆರ್. ಡಿ. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮಾರಂಭದಲ್ಲಿ ಶ್ರೀ. ಬಿ. ಯಸ್. ನ್ಯಾಕ್ ಮೊದಲಾದವರು ಮಂದಿರದ ವಿಷಯದಲ್ಲಿ ಪ್ರೋತ್ಸಾಹಪೂರ್ವಕ ಸಲಹೆಗಳನ್ನು ಕೊಟ್ಟರು. ಅಧ್ಯಕ್ಷ ಭಾಷಣವಾದ ಮೇಲೆ ಸಂಗೀತ ನಡೆಯಿತು. ಶ್ರೀ. ಎ. ಬಿ. ತಪ್ಪ ಭಂಡಾರಮನೆಯವರು ಕೂಡಿದ ಸಭಿಕರಿಗೆ ಉಪಕಾರಸ್ಮರಣೆ ಮಾಡಿ ಸಭೆಯು ಕೊನೆಗೊಂಡಿತು.

ಶ್ರೀ ರಜಕ ಸಂಘದ— 12ನೇ ವಾರ್ಷಿಕ ಮಹಾಸಭೆಯು ತಾ 6-3-49ರಲ್ಲಿ ಸಂಘದ ಅಧ್ಯಕ್ಷ ಶ್ರೀಯುತ ಬಿ. ಕೆ. ಅರ್ಜುನರವರ ಸಭಾ ನೇತೃತ್ವದಲ್ಲಿ ಜರಗಲಾಯಿತು. ಸಂಘದ ಹಾಗೂ ಸಮಾಜದ ಉನ್ನತಿಯನ್ನು ಬಯಸಿ ಶ್ರೀಯುತರುಗಳಾದ ಪೂವಪ್ಪ ಕೆ. ಕುಂದರ್, ರಾಮ ಎ. ತಲಪಾಡಿ, ದೇವು ಯಸ್. ಸಾಲ್ಯಾನ್ ಮತ್ತು ನಾಗಪ್ಪ ಯಸ್. ಕುಂದರ್ ಇವರ ಭಾಷಣಗಳಾದುವು. ಅಧ್ಯಕ್ಷರು ಪಲವು ಹಿತ ಸೂಚನೆಗಳನ್ನಿತ್ತು ರಜಕ ಸಮಾಜದ ಉದ್ಧಾರಕ್ಕಾಗಿ ದುಡಿಯುತ್ತಿರುವ ಈ ಸಂಘಕ್ಕೆ ಪ್ರತಿಯೊಬ್ಬ ಜಾತಿ ಬಾಂಧವರು ತಮ್ಮ ಸಹಕಾರ ಸಹಾನುಭೂತಿಯನ್ನಿತ್ತು ಸಮಾಜ ಸುಧಾರಣೆಯ ಮಹತ್ತರದ ಕಾರ್ಯದಲ್ಲಿ ನಿರತರಾಗಬೇಕೆಂದು ವಿನಂತಿಸಿ ತನ್ನ ಸಂಸಾರದ ಭಾಷಣವನ್ನಿತ್ತರು.

ಉಡುಪಿ

ಆನೆಕಾಲು ರೋಗ ನಿವಾರಣಾ ಸಭೆಯು ತಾ 20ರಲ್ಲಿ ಮುನಿಸಿಪಲ್ ಮ್ಯೆಸ್ ಶಾಲೆಯಲ್ಲಿ ಡಾ| ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಆನೆಕಾಲು ರೋಗದ ಚಿಹ್ನೆಗಳು, ಕಾರಣಗಳು, ಮತ್ತು ಅದನ್ನು ತಡೆಗಟ್ಟುವ ಉಪಾಯಗಳ ಕುರಿತು ಅಧ್ಯಕ್ಷರು ಮಾತನಾಡಿದರು. ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಆರ್. ವೇಣುಗೋಪಾಲರಾಯರು ಸೊಳ್ಳೆಗಳನ್ನು ನಾಶಮಾಡುವ ವಿಧಾನಗಳ ಕುರಿತು ಮಾತನಾಡಿ ಡಿ. ಡಿ. ಟಿ. ಮತ್ತು 'Pyrethrum' ಪ್ರಯೋಗ ಪ್ರದರ್ಶನವಾಡಿದರು. ಮುನಿಸಿಪಲ್ ಕಮಿಶನರ್ ಶ್ರೀ ಬಾಲಗಂಗಾಧರನ್ ಅವರು ಬರುವ ಎಪ್ರಿಲ್ ತಿಂಗಳಾರಂಭದಿಂದ ಸೊಳ್ಳೆಗಳ ಉತ್ಪತ್ತಿಸ್ಥಾನಗಳನ್ನು ಡಿ. ಡಿ. ಟಿ. ಪ್ರಯೋಗದಿಂದ ನಾಶಮಾಡುವ ಏರ್ಪಾಡು ಮಾಡಲಾಗುವುದೆಂದು ತಿಳಿಸಿದರು. ಮನೆಗಳಿಗೆ ಡಿ. ಡಿ. ಟಿ. ಪ್ರಯೋಗ ಮಾಡುವ ಬಗ್ಗೆ ಒಂದು ಸಮಿತಿಯು ನಿರ್ಮಾಣವಾಯಿತು.

ಶ್ರೀ ಗುರುರಾಯರ ಪುಣ್ಯ ದಿನಾಚರಣೆಯು ತಾ 17ರಲ್ಲಿ ಶ್ರೀ ಕೃಷ್ಣಮಠದಲ್ಲಿ ಪರ್ಯಾಯ ಶ್ರೀ ಸೋದೆ ಸ್ವಾಮಿಗಳವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು.

ಜೋಳಿ ಉತ್ಸವ, ಜನತೆಯು ಅನೇಕ್ಷಿಸದಿರುವ ಸಮೊಲಿನಾ ವಿತರಣೆಯು ಬದಲಾಗಿ ಜನರು ಪ್ರೀತಿಸುವ ಕಡಿಮೆ ಬೆಲೆಯ ಜೋಳವು ಸೀದಾ ಅಂಗಡಿಗಳಲ್ಲಿ ದೊರೆಯುವಂತಾದರೆ ಬಡವರಿಗೂ ಸಾಮಾನ್ಯ ತರಗತಿಯವರಿಗೂ ತುಂಬಾ ಉಪಕಾರವಾದೀತು.

ಮಂಗಳೂರು

ಕರ್ನಾಟಕ ಪೊಲಿಟೆಕ್ನಿಕ್ ಶಾಲಾ ದಿನಾಚರಣೆಯು—ತಾ 19ರಲ್ಲಿ ಜಿಲ್ಲಾ ಕಲೆಕ್ಟರ್ ರಾವ್ ಸಾಹೇಬ್ ಎನ್. ಸಿ. ತಿರುಮಲಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಸ್ಥೆಯ ಪ್ರಧಾನಾಧಿಕಾರಿ ಪಿ. ಸತ್ಯರಸ್ನರಿಗಳ ಪಂದಿವಾಚನವಾದ ಮೇಲೆ ಅಧ್ಯಕ್ಷರು ಭಾಷಣವಾಗಲು ಶ್ರೀ ಎನ್. ಎಂ. ಅಡ್ಯಂತಾಯರು ಧನ್ಯವಾದಗಳನ್ನಿತ್ತರು.

ವಿದ್ಯಾರ್ಥಿನಿಯರಿಗೆ ಗ| ಕಾಲೇಜಿನಲ್ಲಿ ಪ್ರವೇಶಕೊಡುವ ಕುರಿತ ಸಾರ್ವಜನಿಕ ಸಭೆಯೊಂದ ತಾ 18ರಲ್ಲಿ ಗಣಪತಿ ಹೈಸ್ಕೂಲಲ್ಲಿ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿ ಗ| ಕಾಲೇಜಿಗೆ ವಿದ್ಯಾರ್ಥಿನಿಯರ ಪ್ರವೇಶಕ್ಕೆ ಕೆಲವು ನಿರ್ಬಂಧಗಳನ್ನು ಕಲ್ಪಿಸುವ ಸರಕಾರಿ ಹುಕುಮನ್ನು ಪರ್ಯಾಲೋಚಿಸಲಾಯಿತು. ಹಲವರ ಭಾಷಣಗಳಾಗಿ ಈ ಅನ್ಯಾಯದಿಂದ ನಮ್ಮ ಜಿಲ್ಲೆಗೆ ಕಷ್ಟವಾಗುತ್ತಿರುವ ಅದನ್ನು ಇಲ್ಲಗೆ ಅನ್ವಯಿಸಬಾರದಾಗಿ ನಿರ್ಣಯಿಸಿ ಆಂದೋಲನದ ಬಗ್ಗೆ ಒಂದು ಸಮಿತಿ ಏರ್ಪಟ್ಟಿತು.

ಸಹಕಾರಿ ಸಂಘಗಳಿಗೆ

ಮುನ್ಸಿಫ್ ಕೋರ್ಟುಗಳಿಗೆ—

ವರ್ತಕರಿಗೆ, ಶಾಲೆಗಳಿಗೆ—

ಬೇಕಾಗುವ ರಿಜಿಸ್ಟರುಗಳು,

ರಶೀದಿಪುಸ್ತಕಗಳು, ಫಾರ್ಮುಗಳೂ, ಎಕೌಂಟ್ ಪುಸ್ತಕ,

ಕಾರ್ಡುಗಳು, ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

'ಅಂತರಂಗ' ದಲ್ಲಿ ಅರಳಿದ ಪುಸ್ತಕಗಳು

ಗಾಳಿಯರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ ಅಥವಾ ರಝಾಕಾರಸುರಸಂಹಾರ	0	3	0
ಸೆರೆಯಾಳು (ನೀಳ್ಗತೆ, ಕುಲಕರ್ಣಿ ಬಿಂದುಮಾಧವ	0	4	0
ಗಾದೆಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ. ಹೆಗ್ಡೆ	0	3	0
ಕಾಂತಿಯ ಮಡಲಿನಲ್ಲಿ (ನೀಳ್ಗತೆ) ಪೆ. ಸು. ಭಟ್ಟ	0	3	0
ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ.	0	3	0
ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ)	0	3	0
ನನ್ನ ಹೆಂಡತಿ(ಕತೆಗಳು)ಮೊಳಗೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ (ಕತೆ) ಗಿರಿಬಾಲೆ	0	3	0

ಪ್ರತಿಗಳಿಗೆ ಬರೆಯಿರಿ.

ಅಂತರಂಗ ಕಾರ್ಯಾಲಯ, ಉಡುಪಿ

ದ. ಕನ್ನಡ

ಕುರ್ಕಾಲಿನ ಗ್ರಾಮಾಭಿವೃದ್ಧಿ ಕಾರ್ಯ.

ಇದೇ ತಾ. 20ನೇ ಅಪರಾಹ್ನ ಕುರ್ಕಾಲು ಗಿರಿಜಾ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಕುರ್ಕಾಲು ಕೊಆಪರೇಟಿವ್, ಪಂಚಾಯತ್ ಬೋರ್ಡು ಮತ್ತು ಗ್ರಾಮಸಂಘದ ಸಭೆಗಳು, ಗ್ರಾಮದಲ್ಲಿ ವಿವಿಧ ಯೋಜನಾ ಕಾರ್ಯಕ್ರಮಗಳನ್ನು ಸಹಕಾರ ಸಂಘದ ಮೂಲಕ ಜಾರಿಗೆ ತರುವರೆ ಅವುಗಳ ಅಧ್ಯಕ್ಷ ಶ್ರೀ ಕುರ್ಕಾಲು ಗಣಪಯ ಸೆಟ್ಟರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ಜರಗಿದವು. ಅಧಿಕ ಸಂಖ್ಯೆಯಲ್ಲಿ ನೆರೆದಿದ್ದ ಗ್ರಾಮ ಸಂಘದ ಸಭೆಯಲ್ಲಿ ಶ್ರೀ ಕೆ. ಗಣಪಯ ಸೆಟ್ಟರ ಮುನ್ನುಡಿ ಮತ್ತು ನಿವೇದನೆಗಳಾದುವು. ಶ್ರೀ ಕೆ. ಗಣಪಯ್ಯ ಸೆಟ್ಟರ ಶಾಲೋಚಿತವಾದ, ಸುಕ್ಕವರಿಗೂ ಮೇಲ್ಪಂಕ್ತಿಯಾಗಬಲ್ಲ ಗ್ರಾಮಸಂಘಟನಾ ಕಾರ್ಯವನ್ನು ಶ್ಲಾಘಿಸಿ ಮತ್ತು ರೈತರ ಸ್ಥಾನಮಾನ, ಆವಶ್ಯಕತೆ ಹಾಗೂ ಭವಿಷ್ಯಗಳನ್ನು ಪರ್ಣಿಸಿ ತಕ್ಕ ಸಲಹೆಗಳೊಡನೆ ಜಿಲ್ಲಾ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಮ್. ಕೃಷ್ಣಯ ಸೆಟ್ಟಿ, ಶ್ರೀ ಎಂ. ಪಿ. ಹೆಗ್ಡೆ, ಶ್ರೀ ಬಿ. ಗೋಪಾಲಕೃಷ್ಣ ಬಲ್ಲಾಳ ಮೊದಲಾದವರ ಭಾಷಣಗಳಾದುವು. ಸಂಘದ ಕಾರ್ಯಾಲಯಕ್ಕಾಗಿ ಅತ್ಯಗತ್ಯವಿರುವ ಭವನವನ್ನು ಕಟ್ಟಬೇಕೆನ್ನುವ-ಕಬ್ಬಿನ ಆಲೆಯೊಂದನ್ನು ಪಡೆಕೊಳ್ಳುವ-ಬೇಸಾಯಾಭಿವೃದ್ಧಿಗಾಗಿ ಬೀಜ, ಗೊಬ್ಬರ ಮತ್ತು ಅಗತ್ಯವುಳ್ಳ ಉಪಕರಣಗಳನ್ನು ತರಿಸುವ-ಸರಕಾರದಿಂದ ಸಹಾಯವಾಗಿದೊರೆತ ರೂ 75 ರೊಂದಿಗೆ ಸಂಘದ ಹಣವನ್ನೂ ಸೇರಿಸಿ ಗ್ರಾಮ ಲೈಬ್ರರಿ ತೆರೆಯುವ-ಮತ್ತಿತರ ನಿರ್ಣಯಗಳಾದುವು ಈ ಮಹಾಸಭೆಗೆ ಜಿಲ್ಲಾ ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್, ಜಿಲ್ಲಾ ಸೆಂಟ್ರಲ್ ಬೇಂಕಿನ ಅಧ್ಯಕ್ಷರೇ ಮೊದಲಾದವರಿಂದ ಸಂದೇಶಗಳು ಬಂದಿದ್ದುವು. ಕೊನೆಯಲ್ಲಿ ಶ್ರೀ. ಕೆ. ಗಣಪಯ ಸೆಟ್ಟರು ಧನ್ಯವಾದಗಳನ್ನಿತ್ತರು.

ಹೆಗ್ಗುಂಜೆ ಇದೇ ತಾ. 16ರಲ್ಲಿ ಹೆಗ್ಗುಂಜೆ ಗ್ರಾಮದ ಮಂದಾರ್ತಿಯಲ್ಲಿ ಒಂದು ಹೊಸ ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ಬೇರೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಶ್ರೀ ರಾಮಭಜನಾ ಮಂಡಳಿಯವರಿಂದ ಇದೇ ತಾ 11ರಲ್ಲಿ ಭಜನ ಸಪ್ತಾಹವು ಅತ್ಯಂತ ವಿಜೃಂಭಣೆಯಿಂದ ಜರಗಿತು.

ಮೂಡಬಿದ್ರೆ ಇಲ್ಲಿಯ ಬಾಲಿಕಾ ಪಾಠಶಾಲೆಯ ಪ್ರಥಮ ವಾರ್ಷಿಕೋತ್ಸವವು ತಾ 13ರಲ್ಲಿ ಮಂಗಳೂರು ಕೆನರಾ ಹೈಸ್ಕೂಲಿನ ಉಪಾಧ್ಯಾಯಿನಿಯರಾದ ಶ್ರೀಮತಿ ಮಾಯಾರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶಶಿಕಲಾ ಕಾಮತರಿಂದ ಸ್ವಾಗತ ಭಾಷಣ, ಶ್ರೀಮತಿ ಮೀರಾ ಕುಡ್ವರಿಂದ ವರದಿವಾಚನ, ಶ್ರೀಗಳಾದ ವಾಸುದೇವ ಪೈ, ನರಸಿಂಹಯ್ಯ, ಕೊಗ್ಗಣ್ಣ ಮಲ್ಯ, ಕೃಷ್ಣ ಗೋಪಾಲ್, ಭುಜಬಲಿ ಶಾಸ್ತ್ರಿ ಮತ್ತು ಶ್ರೀಮತಿ ಲಲಿತ, ಎಚ್. ದೇವರಾವ್ ಮೊದಲಾದವರ ಭಾಷಣಕಾರ್ಯಕ್ರಮಗಳಾದುವು, ಅಧ್ಯಕ್ಷೆಯವರು ಮುಕ್ತಾಯ ಭಾಷಣದಲ್ಲಿ ಸ್ತ್ರೀ ವಿದ್ಯಾಭ್ಯಾಸದ ಮಹತ್ವವನ್ನು ವಿವರಿಸಿ ಅದರ ಏಳಿಗೆಗಾಗಿ ಜನತೆಯು ನೀಡಬೇಕಾದ ಸಹಕಾರವನ್ನು ಸೂಚಿಸಿದರು. ವಿವಿಧ ವಿನೋದಾವಳಿ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಕುಂಬಳೆ ಈ ಫರ್ಕಕ್ಕೆ ಸೇರಿದ ೧೧ ಪ್ರಾಥಮಿಕ ಶಾಲೆಗಳಲ್ಲಿ ಬರುವ ಶಾಲಾವರುಷ ಬಾಸಿಕ್ ಶಿಕ್ಷಣವನ್ನು ಜಾರಿಗೆ ತರುವುದಾಗಿ ತಿಳಿದುಬರುತ್ತದೆ.

ಮಾಯಿಪಾಡಿ ಎಂಬಲ್ಲಿ ಸುರುವಾಗಲಿರುವ ಬೇಸಿಕ್ ತರಬೇತಿ ಶಾಲೆಯ ಕಟ್ಟಡದ ಕೆಲಸವು ಈಗ ಪ್ರಾರಂಭವಾಗಿರುತ್ತದೆ.

ಬೈಂದೂರು ತಾ. 8ರಲ್ಲಿ ಉಪ್ಪುಂದ ಅಮ್ಮನವರ ತಪ್ಪಲಿನಲ್ಲಿ ಶ್ರೀ ಬಿ. ಸುಬ್ಬಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಇಲ್ಲಿಯ ಕರ್ನಾಟಕ ಪರಿಶಾಂತ ಸಮಾಜದ ಮಹಾಸಭೆ ಜರಗಿತು. ಈ ಸಮಾಜದ ಒಂಭತ್ತು ವಿದ್ಯಾರ್ಥಿಗಳು ಹೈಸ್ಕೂಲು ಶಿಕ್ಷಣ ಪಡೆಯುವರೆ ಸಂಗ್ರಹಿಸಿದ ಹಣವನ್ನು ಶ್ರೀ ಸುಬ್ಬಣ್ಣ ಸೆಟ್ಟರು ಸಮಾಜದ ಕಾರ್ಯದರ್ಶಿಯರ ವಶ ಕೊಟ್ಟರು.



Approved firm by the Govt. of Mysore
Certified by the Agent of the Govt. of Cylone & Indian.

ಬಸ್ರೂರು ಬಸ್ರೂರು ಪರಮಹಂಸ ಪ್ರೌಢ ಪ್ರಾಥಮಿಕ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ತಾ 13ರಲ್ಲಿ ಕುಂದಾಪುರ ಸಬ್ ಕಲೆಕ್ಟರ್ ರಾವ್‌ಸಾಹೇಬ್ ಚಾರ್ಲ್ಸ್ ಜೋನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಬಹುಮಾನ ವಿತರಣೆಗಳಾದ ನಂತರ ಅಧ್ಯಕ್ಷರು ಈ ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿ ಶಾಲಾ ಮೆನೇಜರ್ ಶ್ರೀ ಸುಬ್ಬಣ ಹೆಗ್ಡೆಯವರ ಮತ್ತು ಅವರ ಸಹಪಾಟಿಗಳ ಅವಿಶ್ರಾಂತ ವಿದ್ಯಾಸೇವೆಯನ್ನು ಪ್ರಶಂಸಿಸಿದರು. ಬಳಿಕ ಶಾಲಾಮಕ್ಕಳ ವಿವಿಧ ವಿನೋದಾವಳಿಗಳಾದುವು.

ಮುಲ್ಕಿ ಫಿಶರೀಸ್ ಹಾ. ಎ. ಶಾಲೆಯ ನಿರಂಜನ ಸ್ಕೌಟ್‌ದಳದವರ ಕೇಂಪ್‌ಫಯರ್ ಕೊಂಡು ತಾ 9ರಲ್ಲಿ ಸ್ಥಳೀಯ ಪೋಸ್ ಮಾಸ್ತರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಡಾ। ಬಲ್ಲಾಳರು ಸ್ಕೌಟುದಳದ ಮಹತ್ವಿಕೆಯನ್ನೂ ಕಿದಿಯೂರು ಬಾಪೂಜಿ ರೋವರ್‍ಸ್ ದಳದ ನಾಯಕ ಶ್ರೀ. ಕೆ. ಆನಂದ ಶೆಟ್ಟರು ಸ್ಕೌಟುದಳದ ಪ್ರಯೋಜನ, ಕರ್ತವ್ಯ, ಹೆತ್ತವರ ಸಹಕಾರಗಳ ಕುರಿತೂ ಭಾಷಣವಿತ್ತರು.

ಮಂಗಳೂರು

ಮೂಲ್ಕಿರ ಯಾನೆ ಕುಲಾಲರ ಶ್ರೀ ರಾಮ ಸೇನಾ ಜಾತ್ಯಾಭ್ಯುದಯಸಂಘದ ವಾರ್ಷಿಕ ಮಹಾಸಭೆಯು ತಾ. 7-7-49 ರಲ್ಲಿ ಪೂರ್ವಾಹ್ನ 9 ಗಂಟೆಗೆ ಡಿಸ್ಟ್ರಿಕ್ಟ್ ಬೋರ್ಡು ಆಫೀಸು ಬಳಿಯಲ್ಲಿರುವ ಶ್ರೀ ದೇವಿಯ ದೇವಸ್ಥಾನದಲ್ಲಿ ಜರಗಲಿರುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಡಿಪ್ರೆಸ್ಡ್ ಕ್ಲಾಸಿನ ಕರ್ನಾಟಕ ಶಾಖೆಯನ್ನು ತಾ. 11ರಲ್ಲಿ ಕೂಡಿದ ದಲಿತ ವರ್ಗದ ಕಾರ್ಯಕರ್ತರ ಸಭೆಯಲ್ಲಿ ತೆರೆಯಲಾಯಿತು. ಶ್ರೀ. ಎಸ್. ಜಿ. ಸಾಲೆನ್ಸರು ಅಧ್ಯಕ್ಷತೆ ವಹಿಸಿದ್ದು ಅಖಿಲ ಭಾರತ ಡಿಪ್ರೆಸ್ಡ್ ಕ್ಲಾಸಸ್ ಲೀಗಿನ ಜತೆಕಾರ್ಯದರ್ಶಿಯಾದ ಶ್ರೀ ಇ. ಕಣ್ಣನ್ ಅವರು ದಲಿತ ವರ್ಗದವರ ಸಂಘಟನೆಯ ಕುರಿತು ಮಾತನಾಡಿದರು.

ಶ್ರೀ ಹೊಸಬೆಟ್ಟು ರಾಮರಾಯರು ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಧಿಕಾರಿಯಾಗಿ ನೇಮಕ ಹೊಂದಿರುವರು.

ಜಿಲ್ಲಾ ಕಲೆಕ್ಟರ್ ರಜೆಯ ಮೇಲಿರುವ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರರು ಎಪ್ರಿಲ್ ತಿಂಗಳ ಪ್ರಾರಂಭಕ್ಕೆ ತಮ್ಮ ಕೆಲಸಕ್ಕೆ ಹಾಜರಾಗುವರು. ಹಂಗಾಮಿ ಕಲೆಕ್ಟರ್ ಆಗಿರುವ ಮಿ। ಎನ್. ಸಿ. ಫೋರ್ಮಸರು ರೆವಿನ್ಯೂ ಬೋರ್ಡಿನ ಜತೆ ಕಾರ್ಯದರ್ಶಿಗಳಾಗಿ ಮದ್ರಾಸಿಗೆ ತೆರಳುವರು.

ಮುನಿಸಿಪಲ್ ಸಭೆಯು ಈಚೆಗೆ ಚೆಯರ್‌ಮೆನ್ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿ ದಿವಂಗತ ಶ್ರೀಮತಿ ಸರೋಜಿನಿ ನಾಯುಡು ಅವರ ಕುರಿತು ಸಂತಾಪಸೂಚಕ ನಿರ್ಣಯವಾಯಿತು. ಸಭಾಕಾರ್ಯವನ್ನು ಐದು ನಿಮಿಷ ಮುಂದುವರಿಸಲಾಯಿತು. ನಗರದೊಳಗೆ ನೀರಿನ ಸರಬರಾಯಿ ಮತ್ತು ಚರಂಡಿ ವ್ಯವಸ್ಥೆಗಳ ಸಂಬಂಧ ಬಡ್ಡಿಯಾದ ಎರಡು ಲಕ್ಷ ರೂಪಾಯಿಗಳ ನಿಧಿಯನ್ನು ಕೂಡಲೇ ಸರಕಾರಕ್ಕೆ ಒಪ್ಪಿಸಲು ಕೌನ್ಸಿಲು ಸಿದ್ಧವಿದೆಯಾಗಿಯೂ ನೀರಿನ ಸರಬರಾಯಿ ಸಂಬಂ ಅಗತ್ಯವುಳ್ಳ ಪೈಪ್ ಇತ್ಯಾದಿ ಸಲಕರಣಗಳನ್ನು ಸರಕಾರ ಕೂಡಲೇ ಒದಗಿಸತಕ್ಕದ್ದೆಂದೂ ಸರಕಾರಕ್ಕೆ ತಿಳಿಸುವ ನಿರ್ಣಯವಾಯಿತು.

ಶ್ರೀ ಭೀಮಸೇನ ಜೋಶಿಯವರ ಸಂಗೀತ ಕಚೇರಿಯು ತಾ. ೧೪ರಲ್ಲಿ ಶ್ರೀ ರಾಮಾಂಜನೇಯ ವ್ಯಾಯಾಮ ಶಾಲೆಯಲ್ಲಿ ಜರಗಿತು. ತಾ. 16ರಲ್ಲಿ ಬಿ. ಇ. ಎಮ್. ಹೈಸ್ಕೂಲಿನಲ್ಲಿಯೂ ಜೋಶಿಯವರ ಸಂಗೀತ ಕಚೇರಿಯು ನಡೆಯಿತು.

ಮಲ್ಲಿಕಾರ್ಜುನ ಮನ್ಸೂರ್-ಅವರ ಎರಡನೆ ಸಂಗೀತ ಕಚೇರಿಯು ಕೆನರಾ ಹೈಸ್ಕೂಲಿನ ಶ್ರೀ ಅಮ್ಮೆಂಬಳ ಸುಬ್ರಾಯಪೈ ಸ್ಮಾರಕ ಸದನದಲ್ಲಿ ತಾ. 13ರಲ್ಲಿ ಜರಗಿತು. ಅಂದಿನ ಅಧ್ಯಕ್ಷತೆ ವಹಿಸಿದ್ದ ರಾವ್ ಬಹದೂರ್ ಎಸ್. ಎಮ್. ಅಣ್ಣಂತಾಯರು ನಿರಾಮಕಾಲದಲ್ಲಿ ಗಾಯಕನ ಹಾಗೂ ತಬ್ಲಾವಾದಕರ ಕೌಶಲ್ಯವನ್ನು ಪ್ರಶಂಸಿಸಿ, ಸಂಗೀತದ ಮಹತ್ವವನ್ನು ವಿವರಿಸಿ ಭಾಷಣವಿತ್ತರು.

ಆಸ್ಥಾನ ಕವಿ ಪದವಿ--ದ. ಕ. ಜಿಲ್ಲೆಯ ಪ್ರಸಿದ್ಧ ಇತಿಹಾಸ ಸಂಶೋಧಕರೂ, ಕನ್ನಡ ಮಹಾಕವಿಗಳೂ ಉತ್ತಮ ಸಾಹಿತಿಗಳೂ ಆಗಿರುವ ಶ್ರೀ ಮಂಜೇಶ್ವರ ಗೋವಿಂದ ಪೈಗಳವರಿಗೆ ಮದ್ರಾಸು ಸರಕಾರವು ಕನ್ನಡ ಆಸ್ಥಾನ ಕವಿ ಪದವಿಯನ್ನು ಕೊಟ್ಟು ಗೌರವಿಸಿರುವರು. ಶ್ರೀಯುತರಿಗೆ ನಮ್ಮ ಅಭಿನಂದನೆಗಳು.

ದಸ್ತಗಿರಿ:-- ಎಂ. ಕೆ. ನಾರಾಯಣನ್ ಎಂಬ ಕಮ್ಯೂನಿಸ್ಟನ ದಸ್ತಗಿರಿಯಾಗಿದೆ. ರೈಲ್ವೆ ಮುಷ್ಕರ ಸಂಬಂಧವಾದ ಆಕ್ಷೇಪಕರ ಸಾಹಿತ್ಯವಿರುಗಳು ದೊರಕುವೆಂಬುದೇ ಕಾರಣ.

ಮುಂಬಯಿ ಕನ್ನಡಿಗರಲ್ಲಿ ವಿನಂತಿ

"ಅಂತರಂಗ"ದ ಸಂಚಾಲಕರಾದ ಶ್ರೀ ಕೆ. ಜಿ ಸೆಟ್ಟು, 'ಅಂತರಂಗ' ಮತ್ತು 'ನವಯುಗ' ಪತ್ರಿಕೆಗಳ ಪ್ರಚಾರಾರ್ಥವಾಗಿ ಮುಂಬಯಿಗೆ ಬಂದಿರುವರು. ಅವರಿಗೆ ಮುಂಬಯಿಯ ಕನ್ನಡಿಗರು ಎಂದಿನಂತೆ ತಕ್ಕ ಸಹಕಾರವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ವಿನಂತಿಸಿ ಕೊಳ್ಳುತ್ತೇವೆ — ಮೆನೇಜರ್, ನವಯುಗ

1949—50ರಲ್ಲಿ ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಹೂವಿನದರೊಂದು ಹೂಸಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾಗದದಲ್ಲಿ ಬರೆದು ರೂಪಾಯಿ 1 4 0 ಕಳುಹಿಸಿರಿ. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸಂಪಾದನೆಗಳು ಲಾಭ ನಷ್ಟಗಳು, ಮದುವೆ, ಮಂಗಳ, ಸಂತತಿ, ಕೇಸು ಮೊದಲಾದವುಗಳನ್ನು ಸೂಚಿಸುವೆವು. ಅಲ್ಲದೆ ದುಷ್ಟಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನೂ ಕೊಡಲಾಗುವುದು. ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು. ಟಪ್ಪಾಲುವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,
Raj Jyotshi
(N. Y U.) Jullundur City.

ತಮ್ಮಷ್ಟಕ್ಕೆ ತಾವು ಇಂಗ್ಲಿಷ್ ಕಲಿಯಲು ಅನುಕೂಲವಾದ

ಮುಲಭವಲ್ಲಿ ಇಂಗ್ಲಿಷ್

ಎಂಬ ಇಂಗ್ಲಿಷ್‌ಸ್ವಯಂಬೋಧಿನಿ. ಬೆಲೆ ರೂ. 1—8—0.

ಸರ್ವಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನವನ್ನು ವಿವರಿಸುವ

ಮನೆ ಮದ್ದು

ಎಂಬ ಗೃಹವೈದ್ಯ

ಬೆಲೆ ರೂ. 2-0-0 ಟಪ್ಪಾಲು ದ್ವಾರಾ ರೂ. 2-6-0

ಶಾಲೆ, ಕಾಲೇಜುಗಳ,
ಪಂಚಾಯತ ಬೋರ್ಡು, ಗ್ರಾಮ ಸಂಘಗಳ,
ಲೈಬ್ರರಿಗಳಿಗೆ
ಬೇಕಾಗುವ ಕರ್ನಾಟಕದ ಬೇರೆ ಬೇರೆ ಭಾಗಗಳ

ಕನ್ನಡ ಪುಸ್ತಕಗಳು

ಆಕರ್ಷಕ ದರದಲ್ಲಿ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ.

(೧೦ನೇ ಪುಟದಿಂದ)

ರ ಕನ್ನಂತೆ ನಿಂತುಹೋಗಿ ವಿವೇಕದಿಂದಲೇ ತೀರ್ಮಾನವಾಗಿ ಶಾಂತಿಯುಂಟಾಗಲು ತುಂಬಾ ಅವಕಾಶವಿರುತ್ತದೆ

5 ಅಳಿಯಸಂತಾನ ಬೀಲನ್ನು ತಂದವರ ಮುಖ್ಯ ಅಭಿಪ್ರಾಯವು ಕಾಲಸ್ಥಿತಿಗೆ ಸರಿಯಾಗಿ ಅಳಿಯಕಟ್ಟನ್ನು ದುರಸ್ತುಪಡಿಸಿ ಅಳಿಯಕಟ್ಟನ್ನಾಚರಿಸುವವರೆಲ್ಲರಿಗೂ ನ್ಯಾಯಕ್ಕೂ ನೀತಿಗೂ ಸರಿಯಾಗಿ ಹಕ್ಕುಗಳನ್ನು ಸ್ಥಾಪಿಸಿ ಕುಟುಂಬಗಳಲ್ಲಿ ಶಾಂತಿಯನ್ನುಂಟು ಮಾಡುವದಾಗಿರುತ್ತದೆ. ಆದರೆ (a) ಈಗ ಕುಟುಂಬದ ಆಸ್ತಿಗಳಲ್ಲಿ ಗಂಡಸರಿಗೂ ಹೆಂಗಸರಿಗೂ ಸರಿಸಮಾನವಾದ ಹಕ್ಕಿರುವದಾದರೂ ಗಂಡಸರಿಗೆ ಮಾತ್ರ ಜೀವಮಾನದ ವರೆಗಿನ ಹಕ್ಕು ಸ್ಥಾಪಿಸಿರುವದರಿಂದ ಸಂಪೂರ್ಣವಾದ ಇಚ್ಛಾನುಸಾರ ಹಕ್ಕು ಹೊಂದಲಿಕ್ಕೆ ಅರ್ಹರಾದ ಗಂಡಸರಿಗೆ ಶಾಶ್ವತವಾಗಿ ಜೀವಮಾನದ ಹಕ್ಕು ಮಾತ್ರ ಸ್ಥಾಪಿಸುವದನ್ನು ಸುಧಾರಣೆಯೆನ್ನಲು ಸಾಧ್ಯವಿಲ್ಲ. (b) ಇಡೀ ಭೂಲೋಕದಲ್ಲಿ ಗಂಡಸರಿಗಿರುವ ಪ್ರಾಮುಖ್ಯತೆಯನ್ನು ಕಡೆಗಣಿಸಿ ಹೆಂಗಸರಿಗಿಂತ ಕಡಿಮೆಯಸ್ಥಾನವನ್ನು ಗಂಡಸರಿಗೆ ಕೊಡುವದು ಯಾವನೀತಿ? ಇದು ನಮ್ಮ ಜಿಲ್ಲೆಯ ಕೇವಲ ೨ ಲಕ್ಷ ಜನರ ಪೈಕಿ ಅಲ್ಪಸಂಖ್ಯಾಕರಿಗೆ ಹೊರತು ಮಿಕ್ಕ ಎಲ್ಲಾ ಹಿಂದೂಗಳಿಗೆ

ಹಿಂದೂ ಕೋಡು ಮತ್ತು ಅಳಿಯಸಂತಾನ ಬೀಲು

ಹಾಸ್ಯಾಸ್ಪದವಾಗಿ ತೋರುವ ವಿಷಯವಾಗಿದೆ ಇದರ ಬದಲಿಗೆ ಗಂಡಸರಿಗೂ ಹೆಂಗಸರಿಗೂ ಏಕಸ್ಥಾನವನ್ನು ಕೊಟ್ಟು, ಅವರನ್ನು ಸರಿಸಮಾನರೆಂದು ವಿಧಿಸುವುದು ಯೋಗ್ಯವಾದ ನೀತಿಯಲ್ಲವೇ?

6 ಅಳಿಯಸಂತಾನ ಬೀಲಿನಲ್ಲಿ ವಿಧಿಸಿರುವ ಹಿಸಿದು ಕ್ರಮಗಳನ್ನು ಚಿಕ್ಕ ಸಾಧಾರಣ ಆಸ್ತಿಗಳನ್ನು ವಿಭಾಗಿಸುವಲ್ಲಿ ಜ್ಯಾರಿಗೆ ತರಲಿಕ್ಕೆ ಸಾಧ್ಯವೇ ಇರುವದಿಲ್ಲ. 50 ಜನ ಮೆಂಬರರು ಇರುವ ಕುಟುಂಬದಲ್ಲಿ ಒಬ್ಬನಿಗೆ 1/10 ನೇ, ಇನ್ನೊಬ್ಬನಿಗೆ 1/33ನೆ, ಮತ್ತೊಬ್ಬನಿಗೆ 7/25ನೆ ಹೀಗೆ ನಾನಾ ತರದ ಹಿಸೆಗಳನ್ನು ಯಾವ ರೀತಿಯಲ್ಲಿ ವಿಭಾಗಿಸಬೇಕು? ಯಾವ ರೀತಿಯಲ್ಲಿ ಪಟ್ಟಿ ತಯಾರಿಸಬೇಕು? ಕೋರ್ಟಿಗೆ ಹೋಗದೆ ಇದನ್ನು ತೀರ್ಮಾನಿಸಲು ಸಾಧ್ಯವಿದೆಯು? ಈ ಬೀಲು ಜಾರಿಗೆ ಬಂದಲ್ಲಿ ವ್ಯವಹರಣೆಯು ಕಡಿಮೆಯಾಗಿ ಶಾಂತಿ ಉಂಟಾಗುವ ಬದಲಿಗೆ ಪ್ರತಿ ಕುಟುಂಬವು ಕೋರ್ಟಿನ ಬಾಗಿಲಲ್ಲಿ ಕಾಯಬೇಕಾದ ಪ್ರಸಂಗ ಒದಗೀತೆಂಬುದು ಖಂಡಿತ.

7. ಅಳಿಯಸಂತಾನ ಬೀಲಿನ ಪ್ರಕಾರ ಈಗ ಜ್ಯಾರಿಯಲ್ಲಿರುವಂತಹ ಕರಾರುಗಳು, ಏನಾಡರ್ಗಳು ವಗೈರೆ ವಿಭಾಗ ಪತ್ರಗಳೋ ಅಥವಾ ಜೀವನಾಂಶದ ಕರಾರೋ ಏಂಬು ದನ್ನು ತೀರ್ಮಾನಿಸುವದು ಬಹಳ ಕಷ್ಟಸಾಧ್ಯವಾಗಿದೆ. ಈ ವಿಷಯವನ್ನು ಅದು ಕಂಡೋಕ್ತ ಮತ್ತು ಸುಲಭ ರೀತಿಯಿಂದ ಸ್ಪಷ್ಟಮಾಡದೆ ಇರುವದರಿಂದ ಕೋರ್ಟಿಗೆ ಹೋಗುವ ಸಂದರ್ಭ ಉಂಟಾಗುತ್ತದೆಂಬುದು ನಿಜ.

8. ಹಿರೇ ಹೆಂಗಸು ತನ್ನ ಸ್ವಂತ ಇಚ್ಛೆಯಿಂದಾಗಲಿ ಬೀಲಿನ ಶರ್ತಗಳಿಗನುಸರಿಸಿ ಇತರ ಮೆಂಬರರ ಪಾಲಿನ ತ್ಯಾಜ್ಯದಿಂದಾಗಲಿ ಆವಳಿಗೆ 50 ವರ್ಷ ಪ್ರಾಯವಾಗುವ ಪೂರ್ವವೇ ಪಾಲು ಪಡೆದಲ್ಲಿ ಆ ಪಾಲಿನ ಆಸ್ತಿಗೆ ಮುಂದಿನ ವಾರಿಸ್ದಾರರು ಯಾರು? ಅದು ಆವಳಿಗೆ ಇಚ್ಛಾನುಸಾರವೋ? ಪಾಲು ಪಡೆದ ನಂತರ ಮಕ್ಕಳು ಹುಟ್ಟಿದರೆ ಆ ಮಕ್ಕಳಿಗೆ ಯಾವ ಆಸ್ತಿಯಿಂದ ಹಿಸೆ ಸಿಕ್ಕತಕ್ಕದ್ದು? ಈ ಎಲ್ಲಾ ವಿಚಾರಗಳಿಗೆ ಬೀಲಿನಲ್ಲಿ ಉತ್ತರವೇ ಇಲ್ಲ.

9. ಈಗ ಮಂಜೂರಾಗಿರುವ ಅಳಿಯಸಂತಾನ ಬೀಲಿನ ಮುಖ್ಯ ಸಾರಾಂಶಗಳನ್ನು ನೋಡಿದರೆ ಇದು ಒಂದು ರಾಜಿ ಪಂಚ್ಯಾತಿಕೆಯಿಂದ ತತ್ಕಾಲದ ತೀರ್ಮಾನವಂತಲೇ ಕಂಡುಬರುತ್ತದೆ; ಹೊರತು ಶಾಶ್ವತವಾಗಿ ಜಾರಿಯಲ್ಲಿರತಕ್ಕ ಕಾನೂನೆಂದು ತೋರಿಬರುವದಿಲ್ಲ.

ಈ ಸಂದರ್ಭದಲ್ಲಿ ಇಡೀ ಹಿಂದೂಸ್ಥಾನಕ್ಕಾಗಿ ಜಾರಿಗೆ ಬರಲಿಕ್ಕಿರುವ ಹಿಂದೂ ಕೋಡು ಅಳಿಯಕಟ್ಟನ್ನಾಚರಿಸುವವರಿಗೆ ಅನ್ವಯಿಸಬೇಕೋ ಅಥವಾ ಅಳಿಯ ಸಂತಾನ ಬೀಲೇ ಜ್ಯಾರಿಗೆ ಬರಬೇಕೋ ಎಂಬ ವಿಷಯವನ್ನು ಪರಿಶೋಧಿಸಿ ಅಳಿಯಕಟ್ಟನ್ನಾಚರಿಸುವವರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಲೇ ಸೂಚಿಸುವಂಥಾದ್ದು ಅತೀ ಅವಶ್ಯವಿರುತ್ತದೆ. ಒಮ್ಮೆಗೆ ಜಾರಿಗೆ ಬಂದ ಕಾನೂನನ್ನು ದುರಸ್ತುಪಡಿಸುವುದೆಂದರೆ ಹೆಚ್ಚಿನ ಮಟ್ಟಿಗೆ ಅಸಾಧ್ಯವೆಂದು ಎಲ್ಲರಿಗೂ ತಿಳಿದ ವಿಷಯವೇ. ಈಗ ಹಿಂದೂ ಕೋಡಿನಿಂದ ನಮ್ಮನ್ನು ವಿರಹಿತಪಡಿಸಿದರೆ ಅದು ನಮಗೆ ಅನ್ವಯಿಸುವಂತೆ ಇನ್ನು ಮುಂದೆ ಜಾರಿಗೆ ತರುವದು ಅಸಾಧ್ಯವಾಗಿಯದೆ. ಅಥವಾ ಅಳಿಯಸಂತಾನ ಬೀಲು ಒಮ್ಮೆಗೆ ಜಾರಿಗೆ ಬಂದ ನಂತರ ನಮಗೆ ಹಿಂದೂ ಕೋಡು ಅನ್ವಯಿಸುವುದೆಂದಾದರೆ ಅದರಿಂದಲೂ ತುಂಬಾ ವ್ಯವಹರಣೆಗಳುಂಟಾಗಿ ಬಹಳ ಕಷ್ಟನಷ್ಟಗಳಾಗಲಿವೆ. ಆದುದರಿಂದ ಹಿಂದೂ ಕೋಡೇ ನಮಗೆ ಅನ್ವಯಿಸಬೇಕೆಂದು ಅಭಿಪ್ರಾಯಪಡುವವರೆಲ್ಲರೂ ಅಳಿಯಸಂತಾನ ಬೀಲು ಜಾರಿಗೆ ಬಾರದಂತೆಯೂ ಹಿಂದೂ ಕೋಡಿನಿಂದ ನಾವು ವಿರಹಿತರಾಗದಂತೆಯೂ ಸಾಧಿಸುವುದು ಅವಶ್ಯವಿದೆ.

FOR PROTECTION AND PROVISION, CONSULT
The most progressive life office;
THE NEW GUARDIAN OF INDIA
LIFE INSURANCE CO; LTD.
(United India Building) Post Box No. 142, Esplanade,
Head Office, **MADRAS**
CHAIRMAN:
The Hon'ble Mr. M. Ct. M. Chidambaram Chettiar Avl.
Low Expense Ratio; Moderate Premium Rates;
Prompt Claim Discharges, and efficiency of Management.
Branches & Representatives all over India.
Application for representation from influential persons invited,
The Organising Secretary,
MANGLORE BRANCH K. S. Rao, Road, HUMPANKATTA.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಾ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,—ಸೀಮೂತ್ರ, ಅನಕೋಶ, ಕಲಿಜಯಿ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18 ವಿ. ಪಿ. ಮಾಫಿ.

ಪ್ರಶಂಸನಾ ಪತ್ರ— ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ.
ಡಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬೊಂಬಾಯಿ ಸಾ. ಕಚೇರಿ:— ಲಕ ವಾಲಾ ಲಿಮಿಟೆಡ್, ೨೫, ಓಲ್ಡ್ ಹನುಮಾನ್ ಲೇನ್ ...

ಹಿಂದೂ ಕೋಡು ಮತ್ತು ಅಳಿಯಸಂತಾನ ಬೀಲು

ಲೇಖಕರು:- ಶ್ರೀ. ಬಿ. ಹರಿಯಣ್ಣ ಹೆಗ್ಡೆ ಬಿ.ಎ.ಬಿ.ಎಲ್, ಎಡ್ವಕೇಟ್, ಉಡುಪಿ.

ಹಿಂದೂಸ್ಥಾನದಲ್ಲಿರುವ ಕೋಟ್ಯಾಂತರ ಜನರಲ್ಲಿ ಅಳಿಯಕಟ್ಟನ್ನಾಚರಿಸುವವರೆಂದರೆ ಸುಮಾರು 5ಲಕ್ಷ ಜನರು ಮಾತ್ರ. ಅಖಿಲ ಹಿಂದೂಸ್ಥಾನದ ಹಿಂದುಗಳಿಗೆ ಒಂದೇ ಕ್ರಮದ ಕಾನೂನು ಜಾರಿಯಲ್ಲಿರತಕ್ಕದ್ದೆಂಬ ಉದ್ದೇಶದಿಂದಲೂ ಈಗಿನ ಕಾಲಸ್ಥಿತಿಗೆ ಅನುಕೂಲವಾದ ವ ಪಲ್ಲಟಿಗೂ, ನೀತಿಯುನ್ನುಂಟುಮಾಡುವ ಹಿಂದೂಕೋಡನ್ನು ಸರಕಾರೀ ಕಾರ್ಯಕ್ರಮವಾಗಿ ಭಾರತ ಪಾರ್ಲಿಮೆಂಟಿನಲ್ಲಿ ಮುಂದೆ ತಂದಿದ್ದಾರೆ. ಈ ತನ್ಮಧ್ಯೆ ಅಳಿಯಸಂತಾನಕಟ್ಟನ್ನು ಕಾಲಸ್ಥಿತಿಗೆ ಸರಿಯಾಗಿ ದುರಸ್ತುಪಡಿಸುವ ಉದ್ದೇಶದಿಂದ ತಯಾರಿಸಿದ ಅಳಿಯಸಂತಾನ ಮಸೂದೆಯು ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ಮಂಜೂರಾಗಿ ಗವರ್ನರ್ ಜನರಲರ ಒಪ್ಪಿಗೆಯನ್ನು ಕಾದಿದೆ. ಹಿಂದೂ ಕೋಡು ಸಿಲೆಕ್ಟ್ ಕಮಿಟಿಯವರು ಅಭಿಪ್ರಾಯಪಟ್ಟಂತೆ ನಮ್ಮ ಅಳಿಯಕಟ್ಟನ್ನಾಚರಿಸುವ ಜನರಿಗೆ ಕೂಡ ಅನ್ವಯಿಸುವ ರೂಪದಲ್ಲಿ ಈಗ ಪಾರ್ಲಿಮೆಂಟಿನಲ್ಲಿ ತರಲ್ಪಟ್ಟಿದೆ. ಹಿಂದೂ ಕೋಡು ಈಗ ಇರುವರೀತಿಯಲ್ಲಿ ಮಂಜೂರಾದರೆ ಅಳಿಯಸಂತಾನ ಬೀಲಿನ ಅವಶ್ಯವಿಲ್ಲವಾದ್ದರಿಂದ ಹಿಂದೂ ಕೋಡಿನ ಅಖೈರು ತೀರ್ಮಾನವಾಗುವ ತನಕ ಅಳಿಯಸಂತಾನ ಬೀಲಿಗೆ ಗವರ್ನರ್ ಜನರಲರು ಒಪ್ಪಿಗೆಕೊಡುವ ಸಂಭವ ಕಾಣುವದಿಲ್ಲ. ಒಂದುವೇಳೆ ಅಳಿಯಸಂತಾನ ಮಸೂದೆಗೆ ಈಗಲೇ ಒಪ್ಪಿಗೆ ಸಿಕ್ಕುವ ಸಂದರ್ಭವಲ್ಲಿ ಅಳಿಯಕಟ್ಟನ್ನಾಚರಿಸುವ ಜನರನ್ನು ಹಿಂದೂ ಕೋಡಿನಿಂದ ಬಿರಹಿತಪಡಿಸುವರೆಂಬುದು ನಿಸ್ಸಂದೇಹ. ಆದರೆ ಪ್ರಕೃತ ಅಳಿಯಸಂತಾನ ಬೀಲು ಜಾರಿಗೆಬಂದು ಸ್ವಲ್ಪಸಮಯದಲ್ಲಿಯೇ ಹಿಂದೂ ಕೋಡು ಅಳಿಯಸಂತಾನಿಗರಿಗೆ ಅನ್ವಯಿಸಿದರೆ ಅದರಿಂದ ತೊಡಕು ತೊಂದರೆಗಳುಂಟಾಗುವ ಸಂದರ್ಭಗಳು ಅನೇಕವಿರುತ್ತವೆ. ಅಳಿಯಸಂತಾನ ಬೀಲುಪ್ರಕಾರ ಕುಟುಂಬದ ಮೆಂಬರರಲ್ಲಿ ಹಕ್ಕುಸ್ಥಾಪಿತವಾಗಿ ವಿಭಾಗವಾದರೆ ಆ ನಂತರ ಜ್ಯಾರಿಗೆಬರುವ ಹಿಂದೂ ಕೋಡಿನ ಪ್ರಕಾರ ಎಲ್ಲಾ ಮೆಂಬರರಿಗೂ ಸಂಪೂರ್ಣವಾದ ಇಚ್ಛಾನುಸಾರ ಹಕ್ಕುಸ್ಥಾಪಿತವಾಗುವಂತಿದೆ. ಇದರಿಂದ ತಲೆಸರ್ತಿ ಮೇರೆಗೆ ಇಚ್ಛಾನುಸಾರ ಹಕ್ಕು ಪಡೆಯುವಬದಲಿಗೆ ತಲೆಸರ್ತಿ ಮತ್ತು ಬುಡಸರ್ತಿಯಿಂದ ಹೆಚ್ಚನಂಶನನ್ನು ಜೀವಾಂತ್ಯದ ಅನುಭೋಗದ ಬಗ್ಗೆ ಮಾತ್ರ ಅನುಭವಿಸುವವರಿಗೆ ಕೂಡ ಸಂಪೂರ್ಣಹಕ್ಕು ಸ್ಥಾಪಿತವಾದೀತೋ ಯೆಂಬ ಸಂಶಯಾಸ್ಪದವಾದ ಸಂದರ್ಭ ಒದಗುವಂತಿದೆ. ಅಥವಾ ಜೀವಾಂತ್ಯದವರೆಗೆ ಮಾತ್ರ ಇರುವ ಹಕ್ಕು ಹಿಂದೂ ಕೋಡಿನಿಂದ ಇಚ್ಛಾನುಸಾರವಾಗಲಾರದೆಂದು ಅಭಿಪ್ರಾಯಪಡುವಲ್ಲಿ ಹಿರಿಪಡೆದ ಗಂಡಸರಿಗೆ ಜೀವಾಂತ್ಯದ ವರೇಗೆ ಅನುಭವಿಸುವ ಹಕ್ಕು ಮಾತ್ರ ಮತ್ತು ಹಿರಿಪಡೆಯದ ಗಂಡಸರಿಗೆಸಹ ಜೀವಾಂತ್ಯದವರೆಗೆ ಅನುಭವಿಸುವ ಹಕ್ಕು ಮಾತ್ರ ಬರುವ ಹಾಗಿದೆ. ಈ ಎಲ್ಲಾ ಪರಿಸ್ಥಿತಿಗಳಲ್ಲಿ ಹಿಂದೂ ಕೋಡಿನ ಮತ್ತು ಅಳಿಯಸಂತಾನ ಬೀಲಿನ ಮುಖ್ಯಸಾರಾಂಶವನ್ನು ಆಲೋಚಿಸುವ ಅವಶ್ಯವಿರುತ್ತದೆ.

1 ಹಿಂದೂ ಕೋಡಿನ ಮುಖ್ಯ ವಿಚಾರಗಳೆಂದರೆ ವಾರೀಸು ಹಕ್ಕು ಮತ್ತು ವಿವಾಹದ ವಿಷಯಗಳು. ಈ ಕೋಡಿನ 87ನೇ ಪ್ರಕರಣದ ಪ್ರಕಾರ "ಈ ಕೋಡು ಜಾರಿಗೆ ಬರುವ ದಿವಸವೇ ಎಲ್ಲಾ ಅವಿಭಕ್ತ ಕುಟುಂಬಗಳು ವಿಭಕ್ತವಾಗಿ ಕುಟುಂಬದ ಆಸ್ತಿಗಳಲ್ಲಿ ಹಕ್ಕುಳ್ಳವರು ಅವರವರ ಅಂಶವನ್ನು ಪ್ರತ್ಯೇಕವಾಗಿಯೂ ಇಚ್ಛಾನುಸಾರವಾಗಿಯೂ ಹೊಂದುವರು." ಅಂದರೆ ಅಳಿಯಸಂತಾನದ ಅವಿಭಕ್ತ ಕುಟುಂಬಗಳಲ್ಲಿ ಈಗಿನ ಕಾನೂನು ಪ್ರಕಾರ ಗಂಡಸರು ಹೆಂಗಸರು ಹಿರಿಯರು ಕಿರಿಯರು ಎಂಬ ಭೇದವಿಲ್ಲದೆ ಎಲ್ಲರೂ ಕುಟುಂಬದ ಆಸ್ತಿಗಳಲ್ಲಿ ಸರಿಸಮಾನವಾದ ಹಕ್ಕುಳ್ಳವರಾಗಿರುವದರಿಂದ ಈ ಕೋಡು ಜಾರಿಗೆ ಬರುವ ದಿವಸವೇ ಪ್ರತಿಯೊಬ್ಬ ಮೆಂಬರನು, ಗಂಡಸು ಹೆಂಗಸು, ಹಿರಿಯರು ಕಿರಿಯರು ಎಲ್ಲರೂ ತಲೆಸರ್ತಿ ಪ್ರಕಾರ ಅವರವರ ಅಂಶವನ್ನು ಪ್ರತ್ಯೇಕವಾಗಿಯೂ ಇಚ್ಛಾನುಸಾರವಾಗಿಯೂ ಹೊಂದುವಲ್ಲಿ ಸಂದೇಹವಿರುವದಿಲ್ಲ. ಈ ವಿಷಯದಲ್ಲಿ ಯಾವ ತರದ ಸಂದೇಹಕ್ಕೂ ವ್ಯವಹಾರಕ್ಕೂ ಎಡೆ ಇರುವದಿಲ್ಲ. ಹಾಗೆ ಪಾಲಾದ ತರುವಾಯ, ಗಂಡಸರ ಆಸ್ತಿ ಅವರ ಕಾಲದ ನಂತರ ಅವರ ಹೆಂಡತಿ ಮಕ್ಕಳಿಗೂ ಹೆಂಗಸರ ಆಸ್ತಿ ಅವರವರ ಗಂಡು ಮಕ್ಕಳಿಗೂ ವಾರೀಸು ಹಕ್ಕುಪ್ರಕಾರ ಸಿಕ್ಕುವಂತೆ ಹಿಂದೂ ಕೋಡಿನ ಮುಖ್ಯ ತಾತ್ಪರ್ಯ. ಇದರಲ್ಲಿ ಗಂಡು ಹೆಣ್ಣೆಂಬ ಭೇದವಿಲ್ಲ. ಹಿಂದೂ ಕೋಡಿನ ವಾರೀಸುಹಕ್ಕಿನ ನಿಬಂಧನೆಗಳು ನ್ಯಾಯಕ್ಕೂ ನೀತಿಗೂ ಅನುಸರಿಸಿಇವೆ ಯೆಂಬುದು ಸರ್ವಸಮ್ಮತವಾದ ವಿಷಯ.

2 ಹಿಂದೂ ಕೋಡು ಈಗ ಇರುವ ರೀತಿಯಲ್ಲಿ ವ್ಯವಸಾಯದ ಭೂಮಿಗೆ ಅನ್ವಯಿಸುವದಿಲ್ಲವಾದ್ದರಿಂದ ಪ್ರಕೃತ ಅಳಿಯಸಂತಾನ ಬೀಲು ಜ್ಯಾರಿಗೆ ಬರುವದು ಉತ್ತಮವೆಂದು ಕೆಲವರ ಅಭಿಪ್ರಾಯವಿದೆ. ಆದರೆ ಈ ಅಭಿಪ್ರಾಯ ಸರಿಯಾದ್ದಲ್ಲ. ವ್ಯವಸಾಯದ ಭೂಮಿಯ ಕುರಿತು ಹಿಂದೂ ಕೋಡನ್ನು ಜಾರಿಗೆ ತರುವ ಅಧಿಕಾರವು ಪ್ರಾಂತಿಕ ಶಾಸನಸಭೆಗಳಿಗಿರುವದರಿಂದ ಹಿಂದೂ ಕೋಡು ಮಂಜೂರಾದ ಕೂಡಲೆ ಪ್ರಾಂತಿಕ ಸರಕಾರದವರು ವ್ಯವಸಾಯದ ಭೂಮಿಗೆ ಕೂಡ ಜಾರಿಗೆ ತರುವ ಏರ್ಪಾಡುಮಾಡದೆ ಇರಲಾರರು. ಅಳಿಯಸಂತಾನದವರಿಗೆ ಮಾತ್ರವಲ್ಲ, ಇಡೀ ಹಿಂದೂಸ್ಥಾನಕ್ಕೇನೇ ತೊಂದರೆಬರುವ ವಿಚಾರದಲ್ಲಿ ಪ್ರಾಂತಿಕಸರಕಾರದವರು ಕೇಂದ್ರ ಸರಕಾರದವರ ಅಭಿಪ್ರಾಯದಂತೆ ತಕ್ಕ ಜಾಗ್ರತೆ ತೆಗೆದುಕೊಳ್ಳದೆ ಇರುವಹಾಗಿಲ್ಲ.

3 ಹಿಂದೂ ಕೋಡಿನ ವಿವಾಹ ಪರಿಚ್ಛೇದವು ಅಳಿಯಕಟ್ಟನ್ನಾಚರಿಸುವವರಿಗೆ ಅನುಕೂಲವಾಗಿಯೇ ಇರುತ್ತದೆ. ಪರರಕ್ಕೆ ಕೊಟ್ಟಲ್ಲಿ ಅಂಥಾ ಮೊಬಲಗು ಹೆಂಡತಿಗೆ ಪ್ರಾಯಬರುವತನಕ ಆವಳ ಪ್ರಯೋಜನಕ್ಕಾಗಿ ಕಾದಿಟ್ಟು ಪ್ರಾಯ ಬಂದನಂತರ ಅವಳಿಗೆನೇ ಸಿಕ್ಕಬೇಕೆಂದು ನಮೂದಿಸಿರುವ ಪ್ರಕರಣವು ಈಗಿನ ಕಾಲಸ್ಥಿತಿಯಲ್ಲಿ ಹೆಚ್ಚಿನ ಅನುಕೂಲವೂ ಪ್ರಯೋಜನಕರವೂ ಆಗಿರುತ್ತದೆ.

4 ಮುಖ್ಯವಾಗಿ ಹಿಂದೂಕೋಡಿನ ಎಲ್ಲಾ ನಿಬಂಧನೆಗಳು ಬಹು ಸುಲಭರೀತಿಯಲ್ಲಿ ವಿದ್ಯಾವಂತರು ಮತ್ತು ಕಾನೂನು ಅರಿಯದವರು ಎಂಬ ಭೇದವಿಲ್ಲದೆ ಎಲ್ಲರಿಗೂ ಅರ್ಥವಾಗುವಂತಿರುವದರಿಂದ ಅಳಿಯಕಟ್ಟನ್ನಾಚರಿಸುವ ಕುಟುಂಬದಲ್ಲಿ ಈಗಿರುವ ಮನಃಕ್ಲೇಶ, ಜಗಳ, ವ್ಯವಹಾರಗಳು ಕಡಿ

(೯ನೇ ಪುಟ ನೋಡಿರಿ)

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

S. C, ನಂಬ್ರ 111/1949

ಯಲ್. ವೆಂಕಟಸ್ವಾಮಿ ಚೆಟ್ಟಿ– ವಾದಿ

ಮತ್ತು

ಯಲ್. ವಿ. ಕೆ. ಪರಿರಾಮ--ಪ್ರತಿವಾದಿ.

ಪ್ರತಿವಾದಿ- ಯಲ್. ವಿ. ಕೆ. ಪರಿರಾಮ, ಮಂಗ್ಳೂರು ಕೃಷ್ಣಾಪುರ ಕೊಡಿಯಾಲ ಬೈಲ ಗ್ರಾಮದಲ್ಲಿರುವವರಿಗೆ.

ಮೇಲ್ಕಂಡ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿಗೆ ಸಬ್ಸ್ಟಿಟ್ಯೂಟೆಡ್ ಸರ್ವಿಸ ನೋಟೀಸು ಹುಕುಂ ಆಗಿ ವ್ಯಾಜ್ಯವು ತಾರೀಕು 28-3-1949ಕ್ಕೆ ತಪ್ಸೀಲು ಬಗ್ಗೆ ಯಿಟ್ಟಿರುತ್ತದೆ. ಸದ್ರಿ ಪ್ರತಿವಾದಿಗೆ ಉದಾಹರಣೆಕೊಡುವದಿ ಯಿದ್ದರೆ ಸದ್ರಿ ತಾ. 28-3-49ಕ್ಕೆ ಹಗಲು 11 ಗಂಟೆಗೆ ಸದ್ರಿ ಯವರು ಖುದ್ದಾಗಿ ಯಾ ವಕೀಲದ್ವಾರ ವಾಗ್ಲಿ ಮೇಲ್ಕಂಡ ಕೋರ್ಟಿನಲ್ಲಿ ಹೇಳಿಕೊಳ್ಳದಿದ್ರೆ ವ್ಯಾಜ್ಯವು ಯೇಕಪಕ್ಷವಾಗಿ Ex-parte ಮಾಡ್ಸಿ ತೀರ್ಮಾನಿಸಲ್ಪಡುವದು. ತಿಳಿದಿರುವದು.

S. Gopalkrishna,

Advocate for Plaintiff-

Mangalore 19-3-1949

ಕಾರ್ಕಳ ಡಿ. ಮು ಕೋರ್ಟಿನಲ್ಲಿ

R. E. P. 430/48

O. S. 365/47

ಪದ್ಮಕ್ಕ ಶೆಡ್ತಿ—ಅರ್ಜಿದಾರಳು

ಮತ್ತು

1. ಬಿಜಿಲು ಶೆಡ್ತಿ, ತುಂಗಮ್ಮ ಶೆಡ್ತಿ ಮಗಳು, 2. ದೊಡ್ಡ ಶೆಡ್ತಿ, ಲಿಂಗಿ ಶೆಡ್ತಿ ಮಗಳು, 3. ಹರಿಯಪ್ಪ ಶೆಟ್ಟಿ, ಗಿರಿಯಮ್ಮ ಶೆಡ್ತಿ ಮಗ, ಉಡುಪಿ ತಾಲ್ಲೂಕು ಪಿಲಾರು ಗ್ರಾಮ-ಎದ್ರಿದು.

ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ,

ಸದ್ರಿ ಅಮಲ್ಜಾರಿಯಲ್ಲಿ ಎದ್ರಿರ ಕುಟುಂಬದ ಬಾಬ್ತು ಸ್ಥಿರಾಸ್ತಿ ಯೇಲಂ ಬಗ್ಗೆ ಅರ್ಜಿದಾರಳು ದಾಖಲ್ಲುಮಾಡಿದ ಇಸ್ತಿಹಾರು ಷರ್ತ ನಿರ್ಣಯದ ಬಗ್ಗೆ ಮತ್ತು ಸದ್ರಿ ಸ್ಥಿರಾಸ್ತಿ ಯೇಲಂ ಸಮಯ ಅರ್ಜಿದಾರಳಿಗೆ ಬಿಡ್ ವ ಸೆಟ್ ಆಫ್ ಪರ್ಮಿಶನ್ ಕೊಡಿಸಬೇಕಾಗಿ ಕೇಳಿ ದಾಖಲ್ಲುಮಾಡಿದ ಅರ್ಜಿಯ ಬಗ್ಗೆ ನಿಮ್ಮ ಆಕ್ಷೇಪವಿದ್ದರೆ ತಾ 8-4-1949ಕ್ಕೆ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರುಮಾಡತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿಕ್ಸ್ಯಮಾಡಿ ಸದ್ರಿ ಅಮಲ್ಜಾರಿ ಮುಂದರಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

ಎಂ. ಎಸ್. ಅಧಿಕಾರಿ

ಅರ್ಜಿದಾರಳಕಡೆ ವಕೀಲ,

Karkal 15-3-49

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿರೋಧಿ ಸಂವತ್ಸರದ (1949 - 1950)

ನವಯುಗ ಪಂಚಾಂಗ

ನಿತ್ಯ ಪಂಚಾಂಗವಲ್ಲದೆ ಸರ್ವರಿಗೂ ಉಪಯುಕ್ತವಾದ ಹಲವು ವಿಷಯ ಸಂಗ್ರಹಗಳಿವೆ.

ಮೇಷಾದಿ ದ್ವಾದಶ ರಾಶಿಯವರ ಧರ್ಮ ಭವಿಷ್ಯವಿದೆ.

ಪ್ರತಿ 1ಕ್ಕೆ 0-5-0. 25 ಪ್ರತಿಗಳಿಗೆ 6-4-0. 50 ಪ್ರತಿಗಳಿಗೆ 11-0-0. 100 ಪ್ರತಿಗಳಿಗೆ 20-0-0. ಒಂದು ಪ್ರತಿ ಬೇಕಾದವರು 0-6-0 ಸ್ಟಾಂಪು ಕಳಿಸಬೇಕು.

ಮೆನೇಜರ್, ನವಯುಗ ಪ್ರೆಸ್, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರೆಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ನೇರವಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYALMAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವಾಮೃತ ಎಂಬ ಸೂತಿಕಾ ರಸಾಯನ

ಆ ಔಷಧಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳಿಗೆ ಒಂದು ಬಾಳಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದಭೂಷಣ. ನಂ, 5 ಕೊಡಿಯಾಲಬೈಲು, ದ. ಕ

ಸ್ಟಾಕಿಸ್ಟರು. ಡಾ। ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಮಕ್ಕಳನ್ನು ಹಡೆಯುವುದು ಸಾಕು

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಶೂಲಿ ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲದಾಸ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಸುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುತ್ತದೆ. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಬೆಂಡೆಕಾಯಿ, ಒಳ್ಳೆಣ್ಣಿ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ..   ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಅಂತರಂಗ

ವಾರಕ್ಕೊಂದು ಪುಸ್ತಕದಂತೆ ಪ್ರತಿ ಮಂಗಳವಾರ ಉಡುಪಿಯಿಂದ ಹೊರಡುವ ವಿಶಿಷ್ಟ ವಾರಪತ್ರಿಕೆ.

ಸಂಪಾದಕರು

ಕೆ. ಎಚ್. ಶೆಟ್ಟಿ ಮತ್ತು ಎಂ. ವಿ ಹೆಗ್ಡೆ

ಸಂಚಾಲಕ.- **ಕೆ. ಜ ಶೆಟ್ಟಿ**

ಚಂದಾದಾರರಾಗಿ ಪ್ರೋತ್ಸಾಹಿಸಿರಿ!

ವಾರ್ಷಿಕ ಚಂದಾ ರೂ 6— - 0. ೬ ತಿಂಗಳಿಗೆ ರೂ 3— 0— 0.

ವಿವರಗಳಿಗೆ ಬರೆಯಿರಿ

ಅಂತರಂಗ ಕಾರ್ಯಾಲಯ, ಉಡುಪಿ.

ಜನ ಶಕ್ತಿ-ಸ್ಥಾನ

(೧ನೇ ಪುಟದಿಂದ)

ಲಕ್ಷ್ಯವು ಬೀಳಬೇಕಾದಷ್ಟು ಬೀಳುವದೂ ಇಲ್ಲ. ಎಷ್ಟೇ ದೂರಿದರೂ, ಯಾರು ಗೊಂದಲವೆಬ್ಬಿಸಿ ಮುಂಭಾಗಕ್ಕೆ ಬರುತ್ತಾರೋ ಅವರ ಕಡೆಗೆ ಬದ್ಧತೆ ವಿಧಾಯಕ ಕಾರ್ಯಮಗ್ನರಿರುವವರ ಕಡೆಗೆ ಬೀಳುವ ದೃಷ್ಟಿ ನಮ್ಮ ಸರಕಾರಕ್ಕಾಗಲೀ ಜನತೆಗಾಗಲೀ ಇಲ್ಲ.

ಇಂದು ದೇಶದಲ್ಲಿ ಅಲ್ಲಲ್ಲಿ ನಡೆದಿರುವ ಮುಷ್ಕರಗಳು, ಗೊಂದಲಗಳೆಂದರೆ ದೇಶದ ಕೈಕಾಲು, ಗಂಟುಮೂಳೆಗಳಲ್ಲಿದ್ದಿರುವ ನೋವು; ಅಂತಹ ದುರ್ಬುದ್ಧಿ ರಾಷ್ಟ್ರದ ಸೇವಾಳಾಗಿರುವ ರೈತವರ್ಗಕ್ಕೆ ಹುಟ್ಟುತ್ತಿದ್ದರೆ ಹೇಗಾಗುತ್ತಿತ್ತೆಂಬುದನ್ನು ಊಹಿಸಬೇಕು. —ನೋವು ಎದೆಯಲ್ಲೇ ಹುಟ್ಟಿದಂತಾಗುತ್ತಿತ್ತು; ಪ್ರಾಣಾಪಾಯದ ಭೀತಿವೊಳೆಯುತ್ತಿತ್ತು! ಆದರೆ ಮುಖ್ಯಾಮುಖ್ಯ ಅಂಗವಾವುವೇ ಇರಲಿ— ಅಲ್ಲಿ ಯಾತನೆಹುಟ್ಟಿಕೊಂಡರೆ ಚೇತನಹುಟ್ಟಿದಂತೇನೂ ಅಲ್ಲ. ಆದ್ದರಿಂದ ರೈತ ವರ್ಗಕ್ಕೆ-ದೇಶದ ಎದೆಗುಂಡಿಗೆಗೆ-ರೋಗ . ಬಡಿಯಲಿಲ್ಲವೆಂಬುದಕ್ಕಾಗಿ ಸ್ವತಃ ರೈತರೂ ಮಿಕ್ಕವರೂ ಸಮಾಧಾನಗೊಳ್ಳಬೇಕು.

ಇನ್ನಾದರೂ ಅಲ್ಲಿ ಆದಂ ಸೋಂಕು ತಾಗದಂತೆ ಮಾತ್ರವಲ್ಲ; ರಾಷ್ಟ್ರಕಾಯ ಪುಷ್ಟಿಗೊಂಡು ಬೆಳೆಯುವಂತೆ ಸಾಗುವಳೀದಾರ ಹಳ್ಳಿಗರಿಗೆ ಅವರ ಹಕ್ಕಿನ ರಕ್ಷಣೆ ದೊರೆಯಬೇಕು. ಈ ವರೆಗೂ ಸ್ವತಂತ್ರ ಭಾರತದ ಅಲ್ಲಲ್ಲಿ ವಿವಿಧ ರೀತಿಯ ಕಾಹಿಲೆಗಳು ಕಾಣಿಸಿಕೊಂಡುದರಿಂದ ಸ್ವಾಭಾವಿಕವಾಗಿ ಅವುಗಳ ಚಿಕಿತ್ಸೆಯ ಕಡೆಗೇನೇ ಸರ್ವ ಲಕ್ಷ್ಯ ಹರಿದಿದೆ; ರೋಗ ಗುಣವಾದ ಮೇಲೆಯೇ ದೇಹ ಪುಷ್ಟಿ ಸಾಧನೆಯೆಂಬ ಯೋಚನೆಯಿದೆ. ಆದರೆ ಅಂಗೋಪಾಂಗಗಳ ಈನೋವು ನಿವಾರಣಾವಶ್ಯ ಕಾರ್ಯಗಳಲ್ಲೇ ಮಗ್ನರಾಗಿ, ಎದೆ ಹೊಟ್ಟೆಯನ್ನ ನಿತ್ರಾಣಗೊಳ್ಳಲು ಬಿಟ್ಟರೆ ಅಪಾಯಕಾರಿ ಮಹಾರೋಗವನ್ನಾಹ್ವಾನಿಸಿದಂತೆಯೇ ಸರಿ! ಆದ್ದರಿಂದ ಮಿಕ್ಕವುಗಳ ಮಾತು ಹೇಗಿದ್ದರೂ, ರಾಷ್ಟ್ರ ಜೀವಾಳವಾಗಿರುವ ಹಳ್ಳಿಗಳ ಮಟ್ಟಿಗಂತೂ-ರೋಗ ಬಂದ ಮೇಲೆ ನಿವಾರಿಸುವ ಚಿಕಿತ್ಸೆ ಮಾಡಿಸುವದಕ್ಕಿಂತ, ನಿರೋಗಿಯಾಗಿ ಇಡುವ ಆರೈಕೆ ನೋಡುವದೇ ಅತ್ಯಗತ್ಯ.

ರೈತ ಸಂಘಟನೆಮಾಡಿ, ಹಳ್ಳಿಗರ ಏಕಕಂಠದ ಸ್ವರವು ಅಧಿಕಾರೀ ಮಾಲೆಗಳಲ್ಲಿ ಪ್ರತಿಧ್ವನಿಸುವಂತೆ ಮಾಡುವದೊಂದೇ ಇದಕ್ಕಿರುವ ಉಪಾಯ; ಎಲ್ಲಿಂದ ಯಾವ ಕಡೆಯಿಂದರೋಗ'ಕೊಡುವ ಅಜ್ಞಾನ, ಅಸಹಾಯ ಸ್ಥಿತಿಯಲ್ಲಿ ರೈತರಿದ್ದರೆ, ಅವರನ್ನು ಹಿಂದೆ-ಈದಿನ-ಇನ್ನು ಮುಂದೆ ಕೂಡಾ ನಿಜಕ್ಕೂ ಕೇಳುವವರಿಲ್ಲ. ಇನ್ನೊಬ್ಬರ ಕೆಲಸವನ್ನು ಮಾಡುವದಕ್ಕಾಗಿ ಯಾವುದೇ ವರ್ಗ, ಪಕ್ಷ, ಸ್ಥಾನ, ವ್ಯಕ್ತಿಲೋಕದಲ್ಲೇ ಇಲ್ಲವೆಂಬುದನ್ನು ತಿಳಿದಿರಬೇಕು.

ನಮ್ಮ ಜನತೆಯ ನಡುವೆ ಹರಡಿರುವ ಭಿನ್ನಾಭಿಪ್ರಾಯಗಳನ್ನು-ಭಿನ್ನ ಮಾರ್ಗಗಳನ್ನು-ಲೆಕ್ಕಿಸುತ್ತಾ ಹೋದರೆ ಬಹುಶಃ 1951ನೇ ಜನಗಣತಿಯ ಜುಮ್ಲಾ ಸಂಖ್ಯೆಗಿಂತ ಅದು ಬಹಳ ಕಡಿಮೆಯಾಗದು; ಆದರೆ ನಾವಿಂದು ಸ್ವತಂತ್ರರಾಗಿದ್ದೇವೆ, ಎಂಬುದೊಂದು ಎಲ್ಲರೂ ಒಪ್ಪುವ ವಿಷಯ. ಮುಂದೆ ಜನಮತದಿಂದಾರಿಸಲ್ಪಡುವ, ಇಂದು ಜನತಾ ವಿಶ್ವಾಸವನ್ನು ಆಧರಿಸಿರುವ-ಸರಕಾರವೇ ಸ್ವತಂತ್ರ ಭಾರತದ ಸ್ಥಿರಲು ಬದ್ಧವಿದೆ ಎಂಬುದರ ಕುರಿತೂ ಎರಡಭಿಪ್ರಾಯವಿರಲು ಸಾಧ್ಯವಿಲ್ಲ. ಅಂದ ಮೇಲೆ ವಿರೋಧಿಗಳು ಹೇಳುವಂತೆ ಅಧಿಕಾರದಲ್ಲಿರುವವರು 'ಸ್ವಾರ್ಥಿ'ಗಳೆಂಬುದನ್ನು ಕಿವಿಯ ಮೇಲೆ ಹಾಕಿಕೊಂಡರೂ, ಆ ಅಧಿಕಾರ ಸ್ವಾರ್ಥಕ್ಕಾಗಿಯಾದರೂ ಅವರು ಜನಮತವನ್ನು ಒಲಿಸದೆ ನಿರ್ವಾಹವಿಲ್ಲವೆಂಬುದನ್ನು ತಿಳಿದಿರಬೇಕು. ಒಂದೋ ಜನತೆಯ ಬೆಂಬಲವಿದೆಯೆಂದಾಗಬೇಕು; ಇಲ್ಲವೇ ಜನತೆಗೆ ಬೆಂಗೋಲಿಲ್ಲವೆಂದಾಗಬೇಕು—ಅಂತೂ ಜನತೆಯನ್ನಾಧರಿಸಿಕೊಂಡೇ ಹೊರತು ಬೇರಾವ ಬಲದಿಂದಲೂ ಸ್ವತಂತ್ರಭಾರತದ ಆಡಳಿತೆಯಿರಲಾರದು. ಆಡಳಿತಗಾರರು ಜನತೆಗೆ ಹೊಣೆಗಾರರೆಂದಮೇಲೆ, ಅವರ ಗುಣ ದೋಷಗಳಿಗೂ ಜನತೆಯೇ ಜವಾಬ್ದಾರಿ.

ಆದ್ದರಿಂದ ಜನತೆಗೆ ಆಗಬೇಕಾದುದಾಗಿಲ್ಲವಾದರೆ ಜನತೆಯದನ್ನು ಮಾಡಿಸಿಕೊಂಡಿಲ್ಲ; ಜನತೆಯ ಕೈಗಿಂದು ಸರ್ವಾಧಿಕಾರ ಬಂದಿಲ್ಲವಾದರೆ ಆ ನಿರ್ಣಯಾಧಿಕಾರಿ ಯೋಗ್ಯತೆಯನ್ನು ಜನತೆ ಗಳಿಸಿಕೊಂಡಿಲ್ಲ-ಎಂದರ್ಥ. ಜನ ಸಂಘಟನೆ ಮಾಡಿ, ಜನಮತ ಜಾಗ್ರತಗೊಳಿಸುವದೊಂದೇ ಈ ಕಾಲದ ಕರ್ತವ್ಯ.

ರೈತೋದ್ಧಾರ—ಕರ್ನಾಟಕ ಏಕೀಕರಣ-ಮತ್ತಿತರ ಅವಶ್ಯಕತೆಗಳ ಕುರಿತು ಮೇಲಿನ ನೀತಿಯನ್ನೇ ಅನುಸರಿಸೋಣ. ಜನತೆಯಿಂದು ಬೇಡಿಪಡೆಯುವ-ಅನುಯಾಯಿ-ಸ್ಥಾನದಲ್ಲಿಲ್ಲ. ಶಕ್ತಿಸಂಘಟನೆಯ ಮೂಲಕ ಬೇಕಾದುದನ್ನು ಮಾಡಿಸಿಕೊಳ್ಳುವ ಅಧಿಕಾರಿ ಸ್ಥಾನದಲ್ಲಿದೆ. ಆ ಸ್ಥಾನೋಚಿತ ಯೋಗ್ಯತೆ ಗಳಿಸಿಕೊಳ್ಳುವದೇ ಜನತೆಯ ಇಂದಿನ ಕರ್ತವ್ಯ.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

S. C. No. 58/49

ಕೆ. ವಿ ವಿಶ್ವನಾಥ ಶೆಟ್ಟಿ—ವಾದಿ

ಕೆ ಶಾಂತ ಭಂಡಾರಿ—ಪ್ರತಿವಾದಿ.

ಕಾಸರಗೋಡು ತಾಲೂಕು ಕೋಡಿಬೈಲ್ ಗ್ರಾಮದಲ್ಲಿರುವ ಮಂಜಪ್ಪ ಭಂಡಾರಿಗಳವರ ಮಗ ಕೆ. ಶಾಂತ ಭಂಡಾರಿಯವರಿಗೆ ತಿಳಿಯಪಡಿಸುವುದೇನೆಂದರೆ-

ವಾದಿಯು ಮೇಲಿನ ಕೋರ್ಟಿನಲ್ಲಿ ನಿಮ್ಮ ಮೇಲೆ ಮಾಡಿದ ಮೊಕದ್ದಮೆಯು ತಾ 31-3 49ನೇ ಗುರುವಾರ ದಿವಸ ತನಿಖೆಗೆ ಇಟ್ಟಿರುತ್ತದೆ ಆದಿವಸ ನೀವು ಈ ಕೋರ್ಟಿನ ಮುಂದೆ 11 ಗಂಟೆಗೆ ಸ್ವತಃ ಅಗಲೀ ಯಾ ವಕೀಲರ ಮುಖಾಂತರವಾಗಲೀ ಹಾಜರಾಗುವದರೆ ತಪ್ಪಿದಲ್ಲಿ ಸದರಿ ಸಂಗ್ರಹವನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

B. S. Achar

Vakil for Plaintiff

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

Form II ಲೈಸನ್ಸುದಾರನು ಅರ್ಹತೆಯುಳ್ಳ ವೈದ್ಯರ ಸಲಹೆಚೀಟಿನ ಮೇರೆಗೆ ಒಂದಾವರ್ತಿಗೆ 2 ಔನ್ಸಿಗೆ ಮೀರದಷ್ಟು ಬ್ರಾಂಡಿಯನ್ನು ಒಬ್ಬನಿಗೆ ಕೊಡಬಹುದು. ಒಂದಾವರ್ತಿಗೆ 1 ಬಾಟ್ಲಿಗೆ ಮೀರದಂತೆ ಎಷ್ಟೇ ಪ್ರಮಾಣದಲ್ಲಿ ಆಲ್ಕೊಹೋಲ್ ಮಿಶ್ರಿತವಾಗಿರುವ ಔಷಧಗಳನ್ನು ಯಾ ಔಷಧ ರೂಪದ ಮದ್ಯಗಳನ್ನು ಮಾರಬಹುದು.

ಫಾರಮ್ IIA ಲೈಸೆನ್ಸ್‌ದಾರನು ಈ ರೀತಿಯ ತಯಾರಿಕೆಗಳನ್ನು ನಿರಾತಂಕವಾಗಿ ಚಿಲ್ಲರೆಯಾಗಿ ಮಾರಬಹುದು. ಈ ರೀತಿಯ ಮಾರಾಟಕ್ಕೆ ಲೈಸೆನ್ಸ್‌ದಾರನಿಗೇನೇ ಕೊಡಬೇಕು ಯಾ ವೈದ್ಯರ ಸಲಹೆ ಚೀಟಿನ ಮೇರೆಗೇನೇ ಕೊಡಬೇಕೆಂಬ ಯಾವ ತರದ ನಿರ್ಬಂಧವೂ ಇರುವುದಿಲ್ಲ.

ಇದರಿಂದ ಮುಖ್ಯವಾಗಿ ತಿಳಿಯಬೇಕಾದ ವಿಷಯವಿಷ್ಟೆ: ವರ್ಷ 1ಕ್ಕೆ ರೂಪಾಯಿ 50 ಹಾಸಲು ಕೊಟ್ಟು ಲೈಸೆನ್ಸ್ ಪಡಕೊಂಡವರು ಯಾವದೇ ತರದ ತಯಾರಿಕೆಗಳನ್ನು ನಿರಾತಂಕವಾಗಿ ಚಿಲ್ಲರೆಯಾಗಿ ಮಾರಬಹುದು. ವರ್ಷ 1ಕ್ಕೆ ರೂಪಾಯಿ 25 ಹಾಸಲು ಕೊಟ್ಟು ಲೈಸೆನ್ಸು ಪಡಕೊಂಡವರು ಅರ್ಹತೆಯುಳ್ಳ ವೈದ್ಯರ ಸಲಹೆ ಚೀಟಿನ ಮೇರೆಗೆ ಒಂದಾವರ್ತಿಗೆ 1 ಬಾಟ್ಲಿಗೆ ಮೀರದಂತೆ ಅಂತಹ ತಯಾರಿಕೆಗಳನ್ನು ಮಾರಬಹುದು. ಆದರೆ ಈ ಎರಡೂ ಲೈಸೆನ್ಸ್‌ದಾರರಿಗೆ ಯಾವದೇ ತಯಾರಿಕೆಗಳನ್ನು ತಯಾರಿಸುವರೆ ಅನುಕೂಲತೆಗಳಿಲ್ಲ. ವರ್ಷ 1ಕ್ಕೆ ರೂಪಾಯಿ 10 ಹಾಸಲು ಕೊಟ್ಟು ಲೈಸನ್ಸು ಪಡಕೊಂಡವನು ಆಸವಾರಿಷ್ಟಗಳನ್ನು ಮಾತ್ರ ಮಾಡಿ ರೂಪಾಯಿ 25ರ ಲೈಸೆನ್ಸುದಾರರಿಗೂ, ರೂ. 10-0 ಲೈಸನ್ಸುದಾರರಿಗೂ ಯಾ ಆತನ ಸಲಹೆ ಚೀಟಿನ ಮೇರೆಗೆ ಕೂಡ ಮಾರಬಹುದು. ರೂಪಾಯಿ 1-0-0ರ ಲೈಸನ್ಸುದಾರನು ಆಸವಾರಿಷ್ಟಗಳನ್ನು ಮಾಡಿ ತನ್ನ ರೋಗಿಗಳಿಗೆ ಔಷಧವಾಗಿ ಕೊಡಬೇಕಲ್ಲದೆ ಮಾರುವರೆ ಅರ್ಹತೆಯುಳ್ಳ ಬೇರೊಬ್ಬ ವೈದ್ಯರ ಸಲಹೆ ಚೀಟು ಅಗತ್ಯವಿರುತ್ತದೆ. ಆದ ಕಾರಣ ವರ್ಷ 1ಕ್ಕೆ ಹೆಚ್ಚು ಹಾಸಲು ತೆರುವ ಲೈಸನ್ಸುದಾರರು ಅವು ಬೇರೆಸುವ ತಯಾರಿಕೆಗಳನ್ನು ನಿರಾತಂಕವಾಗಿ ಮಾರಲು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಯಾವುದೇ ತರದ ಹಾನಿಯನ್ನುಂಟು

ಮದ್ಯಪಾನನಿರೋಧ ಕಾನೂನು ಮತ್ತು ಆಯುರ್ವೇದ

Licence in Form III. A. Ayurvedic Pracitioners Licence

[ಲೇಖಕರು: ಶ್ರೀ. ಪಿ. ಜನಾರ್ದನನಾಯ್ಕರು, ಮೆ। ಡಾ। ಭ ವನೇಂದ್ರ ಪ್ರೊಡಕ್ಟ್ಸ್, ಲಿ.]

ಮಾಡದ ಆಯುರ್ವೇದಔಷಧಗಳತಯಾರಿಕೆಗೂ ಮಾರಾಟಕ್ಕೂ ಇಷ್ಟೊಂದು ನಿರ್ಬಂಧಗಳೇಕೆಂಬುದು ಯಾರಿಗೂ ತಿಳಿಯದ ಒಂದು ಸಮಸ್ಯೆಯಾಗಿದೆ. ಇನ್ನು ಇಲ್ಲಿ ಕಡೆಯದಾಗಿ ಒಂದು ಪ್ರತ್ಯೇಕ ತರದ ಲೈಸನ್ಸಿನ ವಿಷಯವಾಗಿ ವಿವರಿಸುತ್ತೇನೆ. ಇದು ಆಯುರ್ವೇದ ಔಷಧಗಳ ಸಮ್ಬಂಧವಿಲ್ಲದ ಲೈಸನ್ಸು. ಆದುದರಿಂದ ಅದರ ಶರ್ತಗಳನ್ನು ಕ್ರಮವಾಗಿ ವಿವರಿಸದೆ ಅದರಲ್ಲಿ ಕಂಡು ಬರುವ ಕೆಲವು ಮುಖ್ಯ ವಿಷಯಗಳನ್ನು ಮಾತ್ರ ವಾಚಕರ ಮುಂದಿಡುತ್ತೇನೆ.

ಫಾರ್ಮ್ III ಲೈಸನ್ಸ್ (Licence in Form III) ಇದು ವೈದ್ಯಕೀಯ ವೃತ್ತಿಯವರಿಗೆ ವೈದ್ಯಕೀಯ ಉಪಯೋಗದ ಬಗ್ಗೆ ಬ್ರಾಂಡಿಯನ್ನು ಇಟ್ಟುಕೊಳ್ಳುವರೆ ಕೊಡಲ್ಪಡುವ ಲೈಸನ್ಸು.

1 ಈ ಲೈಸನ್ಸಿಗೆ ಹಾಸಲು ನಮೂದಿಸಿಲ್ಲವಾದುದರಿಂದ ಇದು ಧರ್ಮಾರ್ಥ ಕೊಡಲ್ಪಡುವ ಲೈಸನ್ಸ್ ಆಗಿರಬಹುದೆ ?

2- ಬ್ರಾಂಡಿಯಲ್ಲಿ ಮಿಶ್ರಿತವಾಗಿರುವ ಆಲ್ಕೊಹಾಲಿನ ಪ್ರಮಾಣದ ಮೇಲೆ ತೆರಿಗೆಯನ್ನು ತೆರುವ ಪ್ರಸ್ತಾಪವೇ ಇದರಲ್ಲಿ ನಮೂದಿಸಿಲ್ಲವಾದುದರಿಂದ ಈ ಲೈಸನ್ಸುದಾರರು ಬಹುಶಃ ಈ ತೆರಿಗೆಯಿಂದ ವಿನಾಯಿತಿ ಗೊಂಡಿರುತ್ತಾರೆ.

3 ಬ್ರಾಂಡಿಯ ಮುಚ್ಚಿದಪಟ್ಟೆಗಳನ್ನು ಮಾತ್ರ ಜತನದಲ್ಲಿಟ್ಟುಕೊಳ್ಳಬೇಕಲ್ಲದೆ ಇತರ ಯಾವದೇ ತರದ ಲೆಖ್ಖಪತ್ರಗಳನ್ನು ಇಡಬೇಕೆಂಬ ನಿಯಮ ಇದರಲ್ಲಿರುವುದಿಲ್ಲ.

4 ಇಂತಿಷ್ಟೇ ಪ್ರಮಾಣದಲ್ಲಿ ಬ್ರಾಂಡಿಯನ್ನು ಸ್ವಾಧೀನದಲ್ಲಿಟ್ಟುಕೊಳ್ಳುವರೆ ಮಾತ್ರ ನಿರ್ಬಂಧವಿರುವುದಲ್ಲದೆ ಔಷಧ ರೂಪವಾಗಿ ಇಂತಿಷ್ಟೆ ಕೊಡಬೇಕೆಂಬ ನಿರ್ಬಂಧ ನಿರುವುದಿಲ್ಲ.

ಆದ ಕಾರಣ ಮೇಲ್ಗಡೆ ವಿವರಿಸಿದ ಎಲ್ಲಾ ಸಂಗತಿಗಳನ್ನು ಸರಿಯಾಗಿ ಪರಿಶೀಲಿಸಿದ್ದಲ್ಲಿ ಬ್ರಾಂಡಿ ಮತ್ತು ಇತರ ಮದ್ಯಗಳಿಗಿಂತ ಆಸವಾರಿಷ್ಟಗಳ ಮಾರಾಟಕ್ಕೆ ಹೆಚ್ಚಿನ ನಿರ್ಬಂಧಗಳನ್ನು ಹಾಕಿದ್ದು ಕಂಡು ಬರುತ್ತದೆ. ಆದುದರಿಂದ ಆಸವಾರಿಷ್ಟಗಳು ಬ್ರಾಂಡಿ ಮತ್ತು ಇತರ, ಎಷ್ಟೇ ಪ್ರಮಾಣದಲ್ಲಿ ಅಲ್ಕೊಹಾಲು ಮಿಶ್ರಿತವಾಗಿರುವ ಔಷಧ ರೂಪದ ಮದ್ಯಗಳಿಗಿಂತ ಹಾನಿಕರವಾದ ತಯಾರಿಕೆಗಳೆಂದು ನಮ್ಮ ಸರಕಾರದ ಅಭಿಪ್ರಾಯವಿರಬಹುದೆ ? ಅದರೆ ಪರ ಪ್ರಾಂತ್ಯಗಳಿಂದ ಆಸವಾರಿಷ್ಟಗಳನ್ನು ಆಮದು ಮಾಡಿ ವಿಕ್ರಯ ಮಾಡುವರೆ ತುಂಬಾ ಅನುಕೂಲತೆಗಳನ್ನು ಕಲ್ಪಿಸಿದ್ದನ್ನು ಮತ್ತು ನಮ್ಮ ಪ್ರಾಂತ್ಯದಲ್ಲಿಯೇ ತಯಾರಿಸಿ ಮಾರುವರೆ ನಿರ್ಬಂಧಗಳನ್ನು ಹೇರಿದ್ದನ್ನು ನೋಡಿದರೆ ಸರಕಾರದ ಧೋರಣವೇನೆಂಬುದನ್ನು ವಾಚಕರೇ ಊಹಿಸಬಹುದಲ್ಲವೆ?

ಮದ್ಯಪಾನ ನಿರೋಧ ಕಾನೂನಿನ ಮೇರೆಗೆ ಆಸವಾರಿಷ್ಟಗಳ ತಯಾರಿಕೆಗೆ ಮತ್ತು ಅವುಗಳ ಮಾರಾಟದ ಬಗ್ಗೆ ಆಗತ್ಯವಿರುವ ಲೈಸನ್ಸುಗಳ ವಿವರಣೆಯನ್ನೂ ನಿರ್ಬಂಧಗಳನ್ನೂ ಮತ್ತು ಬ್ರಾಂಡಿ ಯಾ ಇತರ ಮದ್ಯಗಳ ಮಾರಾಟಕ್ಕೆ ಅಗತ್ಯವಿರುವ ಲೈಸನ್ಸುಗಳ ವಿವರಣೆಯನ್ನೂ ಸವಲತ್ತುಗಳನ್ನೂ ಈವರೆಗೆ ವಿವರಿಸಿದ್ದಾಯಿತು. ಇವುಗಳಿಂದ ಮುಖ್ಯವಾಗಿ ತಿಳಿಯಬೇಕಾದ ವಿಷಯಗಳಿಷ್ಟೆ:-

1 ಸೇಕಡಾ 30ಕ್ಕೆ ಮೇಲ್ಪಟ್ಟು ಅಲ್ಕೊಹೋಲ್ ಕೂಡಿರುವ ಯಾ ಅಲ್ಕೊಹೋಲಿನಲ್ಲಿಯೇ ಔಷಧ ದ್ರವ್ಯಗಳನ್ನು ಯಾ ಇತರ ವಸ್ತುಗಳನ್ನು ಮಿಶ್ರ ಮಾಡಿ ತಯಾರಿಸಿದ ಔಷಧಗಳನ್ನಾಗಲೀ ಯಾ ಇತರ ತಯಾರಿಕೆಗಳನ್ನಾಗಲೀ ಪಾನನಿರೋಧ ಕಾನೂನಿನಿಂದ ವಿನಾಯಿತಗೊಳಿಸಿ ಸೇಕಡಾ ಹತ್ತಕ್ಕೆ ಮೇಲ್ಪಡದ ಪ್ರಮಾಣದಲ್ಲಿ ತಯಾರಿಕೆಯಲ್ಲಿಯೇ ಉತ್ಪನ್ನವಾಗುವ ಅಲ್ಕೊಹೋಲ್ ಮಿಶ್ರವಾಗಿರುವ ಆಸವಾರಿಷ್ಟಗಳ ತಯಾರಿಕೆಗೆ ಮತ್ತು ಮಾರಾಟಕ್ಕೆ ಇಷ್ಟೊಂದು ನಿರ್ಬಂಧಗಳೇಕೆ?

2 ಸೇಕಡಾ 30ಕ್ಕೂ ಮೇಲ್ಪಟ್ಟು ಅಲ್ಕೊಹೋಲ್ ಮಿಶ್ರವಾಗಿರುವ ತಯಾರಿಕೆಗಳನ್ನು ಮದ್ಯಯುಕ್ತ ಔಷಧಗಳೆಂದೂ ಯಾ ತಯಾರಿಕೆಗಳೆಂದೂ ಸೇಕಡಾ ಹತ್ತಕ್ಕೆ ಮೇಲ್ಪಡದ ಪ್ರಮಾಣದಲ್ಲಿ ಅಲ್ಕೊಹೋಲ್ ಮಿಶ್ರವಾಗಿರುವ ಆಸವಾರಿಷ್ಟಗಳನ್ನು ಔಷಧ ರೂಪದ ಮದ್ಯಗಳೆಂದೂ ಪರಿಗಣಿಸುವ ಉದ್ದೇಶವೇನು?

3 ಮದ್ರಾಸ್ ಪ್ರಾಂತ್ಯದ ಹೊರಗಿನ ಪ್ರದೇಶದಲ್ಲಿ ತಯಾರಾದ ಆಸವಾರಿಷ್ಟಗಳನ್ನಾಗಲೀ ಎಷ್ಟೇ ಪ್ರಮಾಣದಲ್ಲಿ ಆಲ್ಕೊಹೋಲ್ ಮಿಶ್ರವಾಗಿರುವ ಇತರ ಔಷಧರೂಪದ ಮದ್ಯಗಳನ್ನಾಗಲೀ ಜಿಲ್ಲಾ ಕಲೆಕ್ಟರರ ಪರ್ಮಿಟಿನ ಮೇರೆಗೆ ಇಲ್ಲಿಗೆ ಆಮದುಮಾಡಿ ಮಾರಾಟಮಾಡುವರೇ ಏನೊಂದೂ ನಿರ್ಬಂಧಗಳಿಲ್ಲದಿರುವಾಗ ಇದೇ ಪ್ರಾಂತ್ಯದೊಳಗೆ ಮಾತ್ರ ಆಸವಾರಿಷ್ಟಗಳನ್ನೂ ಕೂಡ ತಯಾರಿಸುವರೆ ಯಾ ಅವುಗಳನ್ನು ಮಾರುವರೆ ಈ ಕಾನೇಕತರದ ನಿರ್ಬಂಧಗಳೇಕೆ?

4 ಎಷ್ಟೇ ಪ್ರಮಾಣದಲ್ಲಿ ಆಲ್ಕೊಹೋಲ್ ಮಿಶ್ರವಾಗಿರುವ ಔಷಧಗಳನ್ನಾಗಲೀ, ಟಾನಿಕ್‌ಗಳನ್ನಾಗಲೀ ಯಾ ಇತರ ತಯಾರಿಕೆಗಳನ್ನಾಗಲೀ ಪಾನನಿರೋಧ ಪ್ರದೇಶದೊಳಗೆ ನಿರಾತಂಕವಾಗಿ ಮಾರಲನುಕೂಲತೆಗಳಿರುವಾಗ, ಅದೇ ಪ್ರದೇಶದಲ್ಲಿ ಬರೇ ಅಲ್ಪಪ್ರಮಾಣದಲ್ಲಿ ಆಲ್ಕೊಹೋಲ್ ಉತ್ಪನ್ನವಾಗುವ ಕೆಟಕೊಂಡಿರುವ ಯಾ ಅವಲೇಹಗಳನ್ನೇ ಹೋಲಿಕೊಂಡಿರುವ ಆಸವಾರಿಷ್ಟಗಳ ತಯಾರಿಕೆಗೆ ಮತ್ತು ಮಾರಾಟಕ್ಕೆ ನಿರ್ಬಂಧಗಳನ್ನು ಹೇರಿದ್ದು ನ್ಯಾಯವಾದ ಧೋರಣೆಯೇ? ಇದರಿಂದಾಗಿ ಮದ್ಯಪಾನ ಪ್ರತಿಬಂಧದ ಬದಲಾಗಿ ಆಸವಾರಿಷ್ಟಗಳ ಪ್ರತಿಬಂಧವೆಂದು ಹೇಳಿದರೆ ತಪ್ಪಾದೀತೇ?

ಉದಾಹರಣೆಗಾಗಿ: ಸೇಕಡಾ 30ರಷ್ಟು ಅಲ್ಕೊಹೋಲ ಮಿಶ್ರವಾಗಿರುವ 'ಟಾನಿಕ್ ಲಿ' ಎಂಬ ಔಷಧವೂ ಸೇಕಡಾ 37ಕ್ಕೆ ಮೇಲ್ಪಟ್ಟು ಅಲ್ಕೊಹೋಲ್ ಕೂಡಿರುವ 'ಡ್ರಾಕ್ಸಿಂಜ್' 'ಗರ್ಭರಾಜ್' ಮತ್ತು 'ಪ್ರಸವರಾಜ್' ಎಂಬೀ ತಯಾರಿಕೆಗಳೂ ಇಲ್ಲ ನಿರಾತಂಕವಾಗಿ ಮಾರಲ್ಪಡುವಾಗ, ಬರೇ ಅಲ್ಪಪ್ರಮಾಣದಲ್ಲಿ ಅಂದರೆ ಸೇಕಡಾ ಹತ್ತಕ್ಕೆ ಮೀರದಷ್ಟು ಅಲ್ಕೊಹೋಲ್ ಸೇರಿರುವ ಆಸವಾರಿಷ್ಟಗಳು ಮಾತ್ರ ನಿರ್ಬಂಧಿಸಲ್ಪಟ್ಟಿರುವುದು ನ್ಯಾಯಸಮ್ಮತವೇ?

ಈ ಎಲ್ಲಾ ವಿಷಯಗಳನ್ನು ಇನ್ನು ವಾಚಕರೇ ಸರಿಯಾಗಿ ಪರಿಶೀಲಿಸಿ ಮದ್ಯಪಾನ ಪ್ರತಿಬಂಧಕಾಜ್ಞೆಯ ಧೋರಣೆಯೇನೆಂಬುದನ್ನು ಗಮನಿಸಲಿ.

ಹೊಸ ವರ್ಷದ ಶುಭಾಶಯ

ಠೇವಣಾತಿದಾರರಿಗೆ ಅತ್ಯಾಕರ್ಷಕ ದರದ ಬಡ್ಡಿ ಮತ್ತು ಭದ್ರತೆ

ಹದಿನೇಳು ವರ್ಷಗಳ ಪರಿಪಕ್ವ ಅನುಭವ

ನಿರಖು ಠೇವಣಾತಿ

ಮೂರು ತಿಂಗಳಿಗೆ	...	....	....	3%
ಆರು ,,	....	....	....	3¼%
ಹನ್ನೆರಡು ,,	....	....	....	3½%
ಇಪ್ಪತ್ತ ನಾಲ್ಕು ,,	....	....	...	4%
ಪಾವತಿಯಾಗಿರುವ ಭಂಡವಾಳ	....	....	ರೂ.	4,91,000.
ಕ್ಷೇಮ ನಿಧಿ	....	....	,,	98,000.
ಒಟ್ಟು ವಹಿವಾಟು ಭಂಡವಾಳ	....	....	,,	40,65,000.

(ಸಾವಿರಕ್ಕೆ ಸರಿಯಾಗಿ)

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುವುವು.

ದಿ

ವಿಜಯ ಬೇಂಕ್ ಲಿಮಿಟೆಡ್

THE VIJAYA BANK, LIMITED.

H.. MANGALORE.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8- [ಪಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mis. P. DEVEE. P. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾಕಂಪನಿ, ಮಂಗಳೂರು

ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಹಕರ ನಡುವೆ ಸ್ಥಾಪಿತವಾಗಿ 61 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3018

31-3-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K.

FOUNDER.
Hon'ble Sri. A. B. Shetty
Health Minister Govt. of Madras

Telegram: "Navayuga"

Estd. 1921
ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯
ವಾರ ೩೧

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 31

ಹೀಗನ್ನಿಸುತ್ತದೆ:—

ಆಹಾರ ಧಾನ್ಯ, ವಸ್ತ್ರ, ಮತ್ತಿತರ ಜೀವನಾವಶ್ಯ ಸಾಮಾಗ್ರಿಗಳಿಗೆ ನಿಯಂತ್ರಣವಿರುವಂತೆಯೇ, ಅದೊಂದು ಮಿತಿಮೀರದಂತೆ-ಅದೊಂದು ಮಟ್ಟಕ್ಕಿಂತ ಸ್ವಲ್ಪವೇರದಂತೆ-ಪರಸ್ಪರ ಆಡುವ ಮಾತುಗಳಿಗೂ, ಕಿವಿಯಿಂದ ಕಿವಿಗೆ ಹರಡುವ ಸುದ್ದಿಗಳಿಗೂ ಕಠೋರ ರೀತಿಯ ನಿಯಂತ್ರಣ ಬರುವದು ಅಗತ್ಯವೆಂದು ಕಾಣುತ್ತದೆ.

ವಾದ ವಿವಾದಗಳಲ್ಲಿ ಕೈಹಾಕುವದನ್ನು, ಅಥವಾ ಜಗಳಗಂಟಿಕ್ಕುವ ... ಮನುಷ್ಯನನ್ನಾಗಿ ಮಾಡುವದೇ ಮೊದಲಾದವುಗಳನ್ನು ತಮ್ಮ ವೃತ್ತಿಯಾಗಿ ಮಾಡಿಕೊಂಡಿರುವವರ ಆ ಕಸಬಿನ ಮೇಲೆಯೂ ವೃತ್ತಿ ತೆರಿಗೆಗಳನ್ನು ಹೇರಲೇಬೇಕು ಅನ್ನಿಸುತ್ತದೆ.

ಯಾವುದಾದರೊಂದು ಸಭೆ, ಸಮ್ಮೇಲನದಲ್ಲಿ ಆದ ನಿರ್ಧಾರಗಳು ಅವು ಮಂಜೂರಾದ ತಾರೀಕಿನ ನಂತರದ ಹನ್ನೆರಡು ತಿಂಗಳುಗಳೊಳಗೆ ಜಾರಿಗೆ ಬಾರದೆ ಹೋದರೆ-ಅವುಗಳನ್ನು ಅಸ್ತಿತ್ವಕ್ಕೆ ತರುವ ಕೆಲಸವೇ ನಡೆದಿಲ್ಲವೆಂದು ಸಿದ್ಧವಾದರೆ-ಅಂತಹ ಸಭೆ, ಸಂಘಗಳನ್ನು ಬೇಕಾಯಿದೇಶೀರಗೊಳಿಸಿ ಅವುಗಳ ಕಾರ್ಯಕರ್ತರು ಮುಂದೆ ಐದು ವರುಷಗಳ ವರೆಗೆ ಯಾವನೇ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಬಹಿಷ್ಕಾರ ಹಾಕುವದು ವಾಸಿಯೆಂದು ತೋರುತ್ತದೆ.

ದೈಹಿಕ ರೋಗಗಳಂತೆಯೇ, ಅಸೂಯೆ, ಅಹಂಕಾರ, ತುಂಟತನ, ದುಸ್ಸ್ವರ್ಗ ಮುಂತಾದ ಮಾನಸಿಕ ರೋಗಗಳನ್ನೂ ಗುರ್ತಿಸಿ, ಅವುಗಳನ್ನು ಗುಣಪಡಿಸುವ ಮನಶ್ಶಾಸ್ತ್ರಜ್ಞ ಚಿಕಿತ್ಸಕರನ್ನು ಸರಕಾರವು ಕೊನೆಯ ಪಕ್ಷ ಊರಿಗೊಬ್ಬನಂತಾದರೂ ನೇಮಿಸಿ, ಎಲ್ಲರಿಗೂ ಕಡ್ಡಾಯವಾಗಿ ಪರೀಕ್ಷೆ ಮತ್ತು ಚಿಕಿತ್ಸೆ ನಡೆಸುವದಗತ್ಯವೆಂದು ತೋರುತ್ತದೆ.

ಕ್ರಮಬದ್ಧ ಶೋಧನೆಯ ಪರಿಣಾಮವಾಗಿ ಮಾನಸಿಕ ರೋಗಿಗಳೆಂದು ಖಚಿತವಾದವರ ಕೊರಳಿಗೆ 'ಅಹಂಕಾರವಿದೆ-ಅಪಾಯ' 'ಚಾಡೀ ರೋಗವಿದೆ-ಅಪಾಯ', ಈ ಮಾದರಿಯ ಬಿಲ್ಲೆಗಳನ್ನು ನೇತಾಡಿಸಿಬಿಟ್ಟು ಸಾರ್ವಜನಿಕ ನೆಮ್ಮದಿ ರಕ್ಷಣೆ ಮಾಡುವುದು ಅವಶ್ಯವೆಂದು ಕಾಣುತ್ತದೆ.

ಜನರಲ್ಲೀಗಲೂ ಬೇರೂರಿ ಉಳಿದುಕೊಂಡಿರುವ ಗುಲಾಮ ಮನೋವೃತ್ತಿ, ಪರಾವಲಂಬನೆ ಮತ್ತು ಪರನಿಂದೆಗಳನ್ನು ನಿರ್ಮೂಲಿಸುವ ದೇಶವ್ಯಾಪೀ ಚಳವಳಿಯೊಂದನ್ನು ಹೂಡುವ ಆವಶ್ಯಕತೆ ಒದಗಿದೆ ತೋರುತ್ತಿದೆ

ಪ್ರಾಂತ್ಯ ಹಾಗೂ ಕೇಂದ್ರ ಸರಕಾರದಲ್ಲಿ 'ಮಾನಸಿಕ ಮಂತ್ರಿ ಖಾತೆ'ಯೊಂದರ ಹೊಸ ನಿರ್ಮಾಣವಾಗುವದು ಅಗತ್ಯವನ್ನಿಸುತ್ತದೆ

ವರುಷಕ್ಕೊಮ್ಮೆ 'ಮಾನುಷತ್ವ' ಪರೀಕ್ಷೆಯೊಂದನ್ನೇರ್ಪಡಿಸಿ ಆ ಪರೀಕ್ಷೆಯಲ್ಲಿ ನಾಪಾಸಾಗುವವರನ್ನೇ ಆದರೂ, ಅವರ ಅಧಿಕಾರ, ಐಶ್ವರ್ಯ ಸ್ಥಿತಿ ಹೇಗಿದ್ದರೂ 'ಮೃಗ ವರ್ಗ'ಕ್ಕೆ ಸೇರಿಸುವದುತ್ತಮವೆಂದು ತೋರುತ್ತದೆ.

ಹಿಂದುಸ್ಥಾನ್ ಕೋ-ಆಪರೇಟಿವ್

ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಕಲ್ಕತ್ತ.

1948

ಇನ್ನೊಂದು ಯಶಸ್ವೀ ವರ್ಷ.

ಬರೇ 1948ರ ವರ್ಷಾವಧಿಯಲ್ಲಿ ಮಾತ್ರವೇ ಪೂರ್ತಿಯಾದ ಹೊಸ ವ್ಯವಹಾರವು **13** ಕೋಟಿಗೂ ಮಿಕ್ಕಿರುತ್ತದೆ.

ದಕ್ಷಿಣ ಕನ್ನಡದಿಂದ ಏಜನ್ಸಿ ಹಾಗೂ ಸ್ಪೆಶ್ಯಲ್ ಏಜನ್ಸಿಗಳಿಗಾಗಿ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಕೆ. ಎಸ್. ರಾಮಯ್ಯ,
ಬ್ರಾಂಚ್ ಮೆನೇಜರ್,
ಕೆಂಪೆಗೌಡ ರಸ್ತೆ, ಬೆಂಗಳೂರು ಸಿಟಿ

ಸಬ್ ಆಫೀಸು:—
ಹಂಪನಕಟ್ಟೆ, ಮಂಗಳೂರು

ನಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ

ಪ್ರಧಾನ ಕಾರ್ಯಾಲಯ:- ಧಾರವಾಡ,
THE UNITED KARNATAK INSURANCE COMPANY, LIMITED.

ಯುದ್ಧ ಸಿದ್ಧತೆ ಮಾಡುತ್ತಿರುವ ಅತಿ ಶ್ರೀಮಂತರಾಷ್ಟ್ರ ಅಮೆರಿಕ ಅಸಹ್ಯ ಅತೃಪ್ತಿಯಿಂದಿದೆ!

ಲೋಕವಿಂದು ಮೂರನೇ ಮಹಾ ಯುದ್ಧದ ದಿಕ್ಕುಹಿಡಿದಿದೆ ಎಂಬುದು ಸ್ಪಷ್ಟ; ಇನ್ನೊಂದು ಮಹಾಯುದ್ಧದ ಸಾಮೋಹ್ಯಾದಕ್ಕೊ ಹೇರುವಷ್ಟು ಪ್ರಪಂಚದ ಜನಸಾಮಾನ್ಯರು ಯುದ್ಧವಿಮುಖರಾಗಿದ್ದಾರೆ. ಆದರೆ ಯುದ್ಧದ ಪ್ರತ್ಯಕ್ಷ ಹಾನಿ ಯಾವುದಕ್ಕೂ ಒಳಗಾಗದೆ, ಯುದ್ಧ ಲಾಭಗಳನ್ನಷ್ಟೇ ಹೊಡೆಯುವ ಒಂದು ಅಲ್ಪವರ್ಗವು ಒಳಗಿಂದೊಳಗೆ ಯುದ್ಧವನ್ನು ಸ್ವಾಗತಿಸುತ್ತಿದೆ; ಯುದ್ಧನಿವಾರಣ ಗಡಕ್ಷುವುಳ್ಳ ಕಾರ್ಯವಾವುದೂ ಸಫಲವಾಗದಂತೆ ಅದು ಆತಂಕಿಸುತ್ತಿದೆ. ಈ 'ಧೂಮಕೇತು' ವರ್ಗದ ಕೈವಾಡೋಲಾಗದಂತೆ ತಡೆಯಬಲ್ಲುದಾವುದೂ ಪ್ರಕೃತ ತೋರಿಬರುವದಿಲ್ಲ. ಹೀಗಾಗಿ ಹತ್ತಿರ ಭವಿಷ್ಯದಲ್ಲೇ ಇನ್ನೊಂದು ಮಹಾಯುದ್ಧವು ಅನಿವಾರ್ಯವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆಟಂಬೋಂಬಿನಂತಹ ಅತ್ಯದ್ಭುತ ಧ್ವಂಸಾಯುಧಗಳತಯಾರಿಕೆ, ಕಳೆದ ಎರಡು ಮಹಾಯುದ್ಧಗಳಿಂದ ಪಡೆದಿರುವ ಅಪಾರ ಯುದ್ಧಾನುಭವ—ಇವುಗಳ ಬೆಸೆಯಿಂದಾಗಿ ಇನ್ನೊಂದು ಮಹಾಸಮರವು ಎಂತಹ ಭೀಕರಪ್ರಳಯವಾಗಿ ಪರಿಣಮಿಸಬಹುದೆಂಬುದನ್ನು ಊಹಿಸುವದು ಕಷ್ಟ. ಅಂತೆಯೇ ಆ ಯುದ್ಧದಲ್ಲಿ ಯಾವಪಕ್ಷ ವಿಜಯವಾದೀತೆಂಬುದನ್ನು ಊಹಿಸುವದಕ್ಕಿಂತಲೂ ಎಲ್ಲರೂ ಪೂರ್ಣ ಪತನಗೊಳ್ಳುವರೆಂದು ನಿರ್ಧರಿಸುವುದೇ ಉತ್ತಮ. "ಅಯ್ಯೋ! ನಾವು ಕಾಲದಲ್ಲಿ ಶಾಂತಿಪಾಲನೆಯ ಕಡೆಗಿನ ನಮ್ಮಪಾಲಿನ ಕರ್ತವ್ಯವನ್ನು ಮಾಡದೆ ಕೆಟ್ಟೆವಲ್ಲಾ!" ಎಂದು ಪ್ರತಿಯೊಂದು ರಾಷ್ಟ್ರದ ಜನತೆಯೂ ಈಗಿನ ಕಾಲವನ್ನು ಸ್ಮರಿಸುವಂತಾಗುವ ಅತಿ ಭೀಕರಘಟನೆಗಳು ಮುಂಬರುವ ಮಹಾಯುದ್ಧದ ದಿನಗಳಲ್ಲಿ ಕೊಂಡಿಕೊಂಡಿಯಾಗಿ ನಡೆಯುತ್ತಾ ಹೋಗುವದಂತೂ ಖಂಡಿತ.

ಇಲ್ಲಿ ವಿಚಾರಿಗಳೆಲ್ಲರನ್ನೂ ಅಶ್ಚರ್ಯಕ್ಕೀಡುಮಾಡುವ — "ಈ ಪ್ರಪಂಚವೇ ಪಾಪಿ!" ಎಂಬ ವೈರಾಗ್ಯಹರಿಸುವ— ವಿಷಯವೇಂದರೆ, ಇನ್ನೊಂದು ಲೋಕಘರ್ಷಣೆಯ ಅನಾಹುತ ರೂಪವು ಕಣ್ಣಮುಂದೆ ಸ್ಪಷ್ಟವಾಗಿ ಕಾಣುತ್ತಿರುವಾಗ, ಅದು ಮರೂಕ್ಷೀಭವಿಸದಂತೆ ಮಾಡುವ ಪ್ರಯತ್ನವೇಕೆ ನಡೆದಿಲ್ಲವೆಂಬುದೇ; ಆ ಯುದ್ಧವು ವಿಜ್ಞಾನ ಭೌತಶಾಸ್ತ್ರ ವಿಜಯದೊಡನೆ ಜಯವಸಾನಗೊಂಡೀತಲ್ಲದೆ, ಯಾವಕಡೆಗೂ ಜಯಕೊಡಲಾರದೆಂಬುದು ಖಂಡಿತವಿರುವಾಗ, ಅದಕ್ಕಾಗಿ ಇಂದಿನ ಮೇಲಾಟವೇಕೆ, ಎಂಬುದು ದಂಗು ಬಡಿಸುವ ಪ್ರಶ್ನೆ. ಯುದ್ಧಕ್ಕಿಳಿದ ಮೇಲೆ ಅದನ್ನು ಗೆಲ್ಲುವ ಗುರಿಯಿಟ್ಟುಕೊಂಡು, ಯಾವ ರೀತಿ ಇಕ್ಕಡೆಯವರು ತಮ್ಮ ಸರ್ವಶಕ್ತಿ ಮತ್ತು ಲಕ್ಷ್ಯವನ್ನು ಅದರಲ್ಲಿ ಹರಿಯಬಿಡುತ್ತಾರೋ ಅದೇ ರೀತಿಯ ನಿಷ್ಠೆಯನ್ನು ಈದಿನ ಶಾಂತಿರಕ್ಷಣೆಗಾಗಿ ತೋರಿಸಬಾರದೇಕೆಂಬುದೇ ಪ್ರಶ್ನೆ. ಮನುಷ್ಯನಲ್ಲಿ ದೇಶಾಭಿಮಾನಕ್ಕಿಂತ ಹೊಟ್ಟೆಗೆ ದಾನವಾಂದ ತುಂಬಿದೆ, ಎಂಬುದಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇರೆಸಿಗಲಾರದು.

ಅಮೇರಿಕ— ರಷ್ಯಾ

ಏಂತ ನದೀಯವರವನ್ನು ಕಡದಲು ಮುದ್ರಾನೆಗಳೆಂಬರಿ ಅನೇಕ ಮತ್ತು ರಷ್ಯಾ. ಕಳೆದೆರಡು ಮಹಾಯುದ್ಧಗಳಲ್ಲೂ ಅಮೆರಿಕವು ಪ್ರತ್ಯಕ್ಷ ಹೊಡೆತಕ್ಕೀಡಾದುದಿಲ್ಲ; ವೈಜ್ಞಾನಿಕ ಯುದ್ಧವೆಷ್ಟೇ ಬೆಳೆದರೂ ವಿಶಿಷ್ಟ ಸ್ಥಾನಮಾನ ಪಡೆದು ಯುರೋಪಿನಿಂದ ದೂರ ನಿಂತಿರುವ ಅಮೇರಿಕದ ನೆಲವನ್ನೇ ಪ್ರತ್ಯಕ್ಷ ರಣಕಣವಾಗಿ ಮಾರ್ಪಡಿಸುವ ಅನುಕೂಲತೆ ಈ ಮೊದಲಿರಲಿಲ್ಲ. ಅದು ತನ್ನ ಸೇನೆ ಮತ್ತು ಯುದ್ಧೋಪಕರಣಗಳನ್ನು ಬೇರೆ ದೇಶಗಳೊಳಗೆ ಹೊಗಿಸಿದ್ದಿತು-ಪ್ರತಿಯಾಗಿ ಪ್ರತ್ಯಕ್ಷ ಅಮೇರಿಕದೊಳಗೆ ಯಾರ ಸೇನೆಯೂ ನುಗ್ಗಿ ಬಂದುದಿಲ್ಲ. ಯುದ್ಧಾವಧಿಯಲ್ಲಿ ಲೋಕದ ಎಲ್ಲಾ ರಾಷ್ಟ್ರಗಳೂ ಪ್ರತ್ಯಕ್ಷಾಪ್ರತ್ಯಕ್ಷ ಹೊಡೆತಕ್ಕೀಡಾಗಿ ಆರ್ಥಿಕ, ಅಡಚಣೆಗೊಳಗಾಗುತ್ತಾ ಬಂದಂತೆ, ಪ್ರಮುಖೋದ್ಯಮಿ ಹಾಗೂ ಸುರಕ್ಷಿತ ರಾಷ್ಟ್ರ ಅಮೇರಿಕವು ಒಂದು ಪಕ್ಷವಹಿಸಿ, ಆ ಪಕ್ಷಕ್ಕೆ ಬೇಕಾಗುವ ಸಾಮಾಗ್ರಿ ಸಲಕರಣೆಗಳನ್ನು ಪೂರೈಸುತ್ತಾ ಬಂದು ಅತಿ ಸಮೃದ್ಧ ರಾಷ್ಟ್ರವಾಗಿ ಬೆಳೆದಿದ್ದಿತು. ಹೀಗಾಗಿ ಕಳೆದೆರಡು ಯುದ್ಧಗಳೂ ಭಂಡವಾಳಶಾಹಿ ಅಮೇರಿಕವನ್ನು ಇಮ್ಮಡಿ ಇಮ್ಮಡಿ ಬೆಳೆಯಿಸಿ ಬಿಟ್ಟಿದ್ದುವು. ಅವೆರಡು ಪ್ರಳಯಗಳಿಂದ ಪಾರಾಗಿ, ಮೂರನೇ ಪ್ರಳಯ ತಾಗುವ ಮೊದಲಿನ ಮಧ್ಯಗಡಿಯಾಗಿರುವ ಈ ದಿನದ ದೃಶ್ಯ ಅರ್ಥಗರ್ಭಿತವಿದೆ- ಕಳೆದೆರಡು ಯುದ್ಧಗಳ ಮುಂದಾಳುಗಳಾಗಿದ್ದ ಇಕ್ಕಡೆಯವರೂ ಮಾಯವಾಗಿ ಮುಂಬರುವ ಮೂರನೆಯದರ ಮುಂದಾಳುತ್ವ ಹೊಸಬರದಾಗಿ ನಿಂತಿದೆ! ಹಿಂದಿನೆರಡು ವ್ಯಾಜ್ಯ ಯಾ ಮೊಕದ್ದಮೆಗಳ ವಾದಿ-ಪ್ರತಿವಾದಿ, ಮುದ್ದೈ-ಮುದ್ದಾಲೆಯರು ಜರ್ಮನಿ ಮತ್ತು ಬ್ರಿಟನು. ಮೊದಲನೆಯದರಲ್ಲಿ ನೆಲಹಿಡಿದ ಜರ್ಮನಿ ಹಿಟ್ಲರನ ನಾಯಕತ್ವದಲ್ಲಿ ತಲೆಯೆತ್ತಿ ರಾಕ್ಷಸರೂಪದಿಂದ ಬೆಳೆದು ಎರಡನೆಯದರಲ್ಲಿ ನೆಲದೊಳಗೇನೇ ಹೂತುಹೋಯಿತು. ಬ್ರಿಟನು ಮೊದಲನೆಯ ವ್ಯಾಜ್ಯದಲ್ಲಿ ಕಷ್ಟನಷ್ಟವನುಭವಿಸಿದರೂ ತನ್ನ ವಿಸ್ತಾರ ಸಾಮ್ರಾಜ್ಯಕ್ಕೆ ಇನ್ನಷ್ಟು ಹೆಚ್ಚಿನ ಭೂಭಾಗವನ್ನು ಸೇರಿಸಿಕೊಳ್ಳಲು ಸಮರ್ಥವಾಗಿತ್ತು; ಎರಡನೆಯದರಲ್ಲಿ ಗೆದ್ದರೂ [ಎಲ್ಲವ... ಕಳಕೊಂಡಿತು. ಒಡನೆ ವ್ಯಾಜ್ಯಾತರ ಜರ್ಮನಿಗೊದಗಿದ್ದ ಗತಿಯೇ ಎ... ನೇ ವ್ಯಾಜ್ಯಾನಂತರ ಬ್ರಿಟನಿಗೊದಗಿ... ಅದರ ಅಂಗೋಪಾಂಗಗಳು ಕತ್ತರಿ... ಟ್ಟುವು. ಮುಂದಿನ ಮೂರನೇ ಯು... ಕ್ಕಾಗಿ ಈಗ ಬೆಳೆದು ಬಂದವುಗಳು ಧ... ವಾಳಬಲದಿಂದ ಅಮೇರಿಕ, ಕಮ್ಯೂ... ಮ್ ಬಲದಿಂದ ರಷ್ಯಾ. 'ಸೂರ್ಯ... ಮುಳುಗದಸಾಮ್ರಾಜ್ಯ' 'ಕಡಲರಾ... ಯಾಗಿದ್ದ ಮಹಾಬ್ರಿಟನ್ ಈಗ ಎ... ನೆಯ್ದರ್ಜೆಯ ರಾಷ್ಟ್ರವಾಗಿ ಅಮೇ... ಬೆನ್ನಹಿಂದೆ ಬಿದ್ದಿದೆ. ಯುದ್ಧಸೋತ... ಗತಿ ಜರ್ಮನಿಯದಾದರೆ ಗೆದ್ದವ... ಬ್ರಿಟನಿನದೇ! ಆದರೂ ಇನ್ನೊ... ಅತಿ ಭೀಕರ ಯುದ್ಧದ ಸಿದ್ಧತೆ... ಗುತ್ತಿದೆ ಅಮೇರಿಕ, ರಷ್ಯ... ಲಿಂದ. ಇದೇಕಾಗಿ ತೋರಿಬರುವ... ರಣಗಳಾವುವೂ ನ್ಯಾಯವಾದವುಗಳ... ಯುದ್ಧ ಸ್ಫೂರ್ತಿಯೆಂಬುದು ದುರ... ಸೇಮವಾದ್ದರಿಂದಲೇ 'ಇನ್ನೊಂದು ...ದ್ಧವೇಳುವ ಅಪಾಯ! ಬೇರಾವ ಕಾ... ಕ್ಕಾಗಿಯೂ ಅಲ್ಲ.

ಮೂರನೇ ಯುದ್ಧದ ಮುಂದಾ... ಳಾಗಲಿರುವ ಅಮೇರಿಕ ಮತ್ತು ರಷ್ಯಾಗ... ಅಂತಹ ದುಸ್ಸ್ಪರ್ಧೆ ಹುಟ್ಟಬೇಕಾ... ಅವುಗಳ ಒಳಗಿನ ಸ್ಥಿತಿ ಹೇಗಿದೆ? ಎರಡೂ ಲೋಕದ ಪ್ರಬಲರಾಷ್ಟ್ರಗ... ಈ ದಿನ ಅವೆರಡರ ಸ್ಥಾನಮಾನವೂ ಇ... ಲ್ಲಾ ರಾಷ್ಟ್ರಗಳಿಗಿಂತ ಪ್ರತ್ಯೇಕವಾ... ದು. ಅವೆರಡೂ ಅತಿ ಸಮೃದ್ಧ ರಾಷ್ಟ... ಗಳು; ಅಂತೆಯೇ ಅತ್ಯಂತ ಅತೃ... ರಾಷ್ಟ್ರಗಳು. ಅದ್ದರಿಂದಲೇ ಅವುಗಳ... ಗಿನ ದುಸ್ಸ್ಪರ್ಧೆ ದುಡುಟವಿದಲ್ಲದೆ!

ಅಮೇರಿಕಕ್ಕೆ ಭಂಡವಾಳ ಬಲ; ... ಕ್ಕೆ ಜನ ಬಲ. ಆದರೆ ಅಗ್ರಗ... ಶ್ರೀಮಂತ ರಾಷ್ಟ್ರ ಅಮೇರಿಕದಲ್ಲ... ರುವಷ್ಟು ಕೊಲೆ, ಸುಲಿಗೆ, ದರೋ... ಕಳ್ಳತನಗಳು ಬೇರೆಲ್ಲಿಯೂ ನಡೆಯು... ಲ್ಲ; ರಷ್ಯದ ದೊಡ್ಡ ಜನತೆಯೂ... ಮಹಾ ಯಂತ್ರವಾಗಿದೆ ಹೊರತು ಮಾ... ತೃತ್ವದ ಚುರುಕುತನ ಅಲ್ಲಿಲ್ಲ.

ಗ್ರೇಟ್ ಅಮೇರಿಕ

ಅಮೇರಿಕವೆಂದರೆ ರಷ್ಯದಂತೆ... ಹಲವು ಸಂಸ್ಥಾನಗಳ ಸೇರಿಡಿಯಾಗಿ... 'ಸಂಯುಕ್ತ ಸಂಸ್ಥಾನಗಳು'. ಸುಮಾ... 14 ಕೋಟಿ ಜನರುಳ್ಳ ರಾಷ್ಟ್ರ. ಸ್ಟ... ನರಂತಹ ಸರ್ವಾಧಿಕಾರಿ ಅವಕ್ಷಿನ... ರೂ, ಮಿಕ್ಕ ಪ್ರಜಾಪ್ರಭುತ್ವ ರಾಷ್ಟ್ರ... ಅಧ್ಯಕ್ಷನಿಗಿಂದ ವಿಶೇಷಾಧಿಕಾರ...

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಣೆಗಾರಿಕೆ ಪರಿಮಿತಿಗೊಳ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು	ನೂರಕ್ಕೆ ವರ್ಷಕ್ಕೆ	೨।
೪ರಿಂದ ೫ ತಿಂಗಳು	,, ,,	೨॥
೬ರಿಂದ ೯ ತಿಂಗಳು	,, ,,	೨॥।

ರೂ. ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವುಟ ಗುಡ್ಡೆ, ಮಂಗಳೂರು.

ಇತರ ಶಾಖೆಗಳು: -

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kanjoor,
Manager.

ಅಮೇರಿಕ ರಶ್ಯಗಳ ಸ್ಥಿತಿಮತಿ ಹೇಗೆ?

ಸಂಘಟಿತ ಜನಬಲವುಳ್ಳ ರಶ್ಯ ನಿರ್ಜೀವ ಯಂತ್ರದಂತಿದೆ!

ಅಮೇರಿಕವೇ ಇಡೀ ಪ್ರಪಂಚದಲ್ಲಿ ಮೊದಲನೆಯದೆಂಬುದು ನಿರ್ವಿವಾದ. ಅಲ್ಲಿ ಪ್ರತಿ 11½ ಸೆಕುಂದಗಳಿಗೊಂದರಂತೆ ಮಗು ಹುಟ್ಟುತ್ತಿದೆ; ಪ್ರತಿಯೊಂದು ಮಗುವೂ ಹುಟ್ಟುವಾಗಲೇ ಭಂಡವಾಳಗಾರನಾಗಿ ಹುಟ್ಟುತ್ತದೆ. ಲೆಕ್ಕ ಪ್ರಕಾರ ಅಮೇರಿಕದ ಪ್ರತಿ ಮಗುವೂ ಹುಟ್ಟುವಾಗಲೆ ತನ್ನ ಹೆಸರಿನಲ್ಲಿ 4000 ಡೋಲರುಗಳುಳ್ಳದ್ದು. ಆದರೆ ವ್ಯವಹಾರ ಜಗತ್ತಿನಲ್ಲಿ ಅಸಾಧ್ಯವೆಂದು ನಾವು ನಂಬುವಷ್ಟು ಕ್ರೂರವಾದ, ಅದ್ಭುತ ರೂಪದರ್ಶಕದಂಬರೀ ಕಥಾವಸ್ತುಗಳು ಪ್ರತ್ಯಕ್ಷ ನಡೆಯುತ್ತಿರುವುದು ಅಮೇರಿಕದಲ್ಲೇ. ಅಲ್ಲಿರುವಷ್ಟು ಅಜೇಯ ದರೋಡೆಗಾರರು—ಕಳಸಂಭೋಗ, ಶಿಶುಹತ್ಯೆ, ಮಾನ ಮಾನಭಂಗಗಳು— [illegible] ಸಾರಿ, ಎಂತಹ ರಕ್ಷಣಾವ್ಯವಸ್ಥೆಯನ್ನೂ ವಂಚಿಸಿ ಕೊಳ್ಳೆ ಸುಲಿಗೆ ನಡೆಸುವ ಅಸಾಧ್ಯ ತಂತ್ರಗಳು ಬೇರೆಲ್ಲಿಯೂ ಇಲ್ಲ. ಅಲ್ಲಿಯ ಜನತೆಯಷ್ಟು ಭಾವಾಂದೋಲನಗೊಳ್ಳುವವರು— ತಮ್ಮ ನಿತ್ಯಜೀವನದಲ್ಲಿ ಅಲ್ಲಿಯವರಷ್ಟು ಕಾನೂನುಗಳನ್ನು ಕಡೆಗಣಿಸುವವರು— ಬೇರಾವ ರಾಷ್ಟ್ರೀಯರೂ ಅಲ್ಲ. ಪ್ರಾಣವಿತ್ತಗಳ ಭೀತಿಯಿಂದ ಅಮೇರಿಕದ ಜನತೆಯಷ್ಟು ಗೊಂದಲಕ್ಕೀಡಾಗಿರುವವರು ಲೋಕದಲ್ಲೇ ಬೇರಿಲ್ಲ. ಇದೀಗ ಪ್ರಪಂಚಾಗ್ರಗಣ್ಯ ಶ್ರೀಮಂತ ಜನತೆ ಅಮೇರಿಕನರ ಸ್ಥಿತಿ. ಅಮೇರಿಕದ ತಪ್ಪಿತರ ಶೋಧಕ ಸಂಸ್ಥೆಯ ಲೆಕ್ಕಪ್ರಕಾರವೇ 1945ರಲ್ಲಿ 11,234 ಕೊಲೆಗಳು ಅಲ್ಲಿ ನಡೆದಿದ್ದುವು. 11,537 ಬಲಾತ್ಕಾರ ವ್ಯಭಿಚಾರಗಳು, 58,807 ಹಿಂಸಾತ್ಮಕ ದರೋಡೆಗಳು, 54,279 ಕನ್ನಗಾರಿಕೆಗಳು, 241,191 ಕಾರು ಕಳವುಗಳು, 865,531 ಕಳವುಗಳು ನಡೆದಿದ್ದುವು. ಒಟ್ಟಿಗೆ 1,565,511, ಅಂದರೆ ಅಲ್ಲಿಯ ನಿವಾಸಿಗಳಲ್ಲಿ ಪ್ರತಿ 90 ಜನರಿಗೊಂದರಂತೆ ತಪ್ಪಿತಗಳು ಅಲ್ಲಿ ನಡೆದಿದ್ದುವು. ಪ್ರತಿ 6 ಮಿನಿಟಿಗೊಬ್ಬನಿಗೆ ಹೊಡೆತ, ಇರಿತ, ಅಥವಾ ಬಲಾತ್ಕಾರದ ಮಾನಭಂಗವು ಅಲ್ಲಿ ಆಗುತ್ತಿದೆ; ಪ್ರತಿ 2 ಮಿನಿಟುಗಳಿಗೊಂದರಂತೆ ಕಾರುಗಳ ಕಳವು ಅಲ್ಲಿ ನಡೆದಿದೆ. ಪ್ರತಿ ರಾತ್ರಿಯೂ ಪ್ರತಿಯೊಂದು ಮಿನಿಟಿಗೊಂದರಂತೆ ಅಮೇರಿಕದ ಎಲ್ಲಿಯಾದರೂ ಕನ್ನ ಬೀಳುತ್ತಲೇ ಇದೆ. ವರುಷಕ್ಕೆ ಸರಾಸರಿ 22000 ಮಂದಿ ಅಮೇರಿಕನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರಲ್ಲದೆ, ಆತ್ಮಹತ್ಯೆಗೆ ಪ್ರಯತ್ನಿಸಿ ಸಫಲರಾಗದೆ ಉಳಿಯುವವರ ಸಂಖ್ಯೆ 100,000. ಈ ರೀತಿ ಇಡೀಲೋಕದಲ್ಲೇ ಅತಿಹೆಚ್ಚಿನ ಸಂಪತ್ತು ಮತ್ತು ಸಂಕಟಗಳಿಂದ ತುಂಬಿರುವ ಅಮೇರಿಕದ ಜನತೆಯೇ ತನ್ನ ಅಧ್ಯಕ್ಷ ಹಾಗೂ ಸರಕಾರವನ್ನು ಆರಿಸಿಕೊಳ್ಳುವವರು. ಐಶ್ವರ್ಯ ಮತ್ತು ಉದ್ವೇಗಭಾವನೆ ಇವುಗಳಲ್ಲಿ ಪ್ರತಿಯೊಂದೂ ಹೋರಾಟವನ್ನು ನಿರ್ಮಿಸ ವಂಥವುಗಳೇ; ಅವೆರಡೂ ಒಂದೇಕಡೆ ಜಮೆಯಿರುವ ಅಮೇರಿಕನರು ಇನ್ನೊಂದು ಮಹಾಯುದ್ಧಕ್ಕೆ ಹಾತೊರೆಯುವುದರಲ್ಲಿ ಆಶ್ಚರ್ಯವೇನೂ ಇಲ್ಲ

ಸೋವಿಯೆಟ್ ಯೂನಿಯನ್

ಈಗ ರಶ್ಯದತ್ತ ನೋಡೋಣ. 16 ರಿಪಬ್ಲಿಕ್‌ಗಳನ್ನೊಳಗೊಂಡ ಸಂಯುಕ್ತ ಕೇಂದ್ರವೇ ಸೋವಿಯೆಟ್ ಯೂನಿಯನ್. ಅತ್ತ ಮಧ್ಯ ಯುರೋಪು–ಇತ್ತ ಶಾಂತ ಸಮುದ್ರ ದಂಡೆಯ ವರೆಗೆ ವಿಸ್ತರಿಸಿರುವ ವಿಶಾಲ ಭೂಭಾಗವದು. ಸುಮಾರು 8,518,000 ಚದರ ಮೈಲು ವಿಸ್ತಾರವುಳ್ಳ ಸೋವಿಯೆಟಿನಲ್ಲಿ 20 ಕೋಟಿ ಜನರಿದ್ದಾರೆ. ಚೈನಾ ಮತ್ತು ಭಾರತವನ್ನು ಬಿಟ್ಟರೆ ಇಡೀ ಲೋಕದಲ್ಲೇ ಹೆಚ್ಚು ಸಂಖ್ಯೆಯಿರುವ ರಾಷ್ಟ್ರವೆಂದರೆ ರಶ್ಯ. ಚೈನವು ಎಷ್ಟೋ ವರುಷಗಳ ಅಂತಯುದ್ಧದಿಂದ ಒಡೆದು ಸಿಡಿದಿದೆ. ಎರಡು ಶತಮಾನಗಳ ಗುಲಾಮಗಿರಿಯಿಂದ ಈಗ ತಾನೇ ಬಿಡುಗಡೆಗೊಂಡಿರುವ ಭಾರತಕ್ಕೆ ಮುಂದೆ ಉಜ್ವಲ ಭವಿಷ್ಯವಿದೆಯಾದರೂ ಸದ್ಯಕ್ಕದು ಒದ್ದಾಟದಲ್ಲಿದೆ. ಹೀಗಾಗಿ ಈ ದಿನ ಇಡೀ ಪ್ರಪಂಚದಲ್ಲೇ ಅತಿ ದೊಡ್ಡ ಸಂಘಟಿತ ಜನಶಕ್ತಿಯ ರಾಷ್ಟ್ರವೆಂದರೆ ರಶ್ಯ. ರಶ್ಯಕ್ಕಿರುವ ಪ್ರಕೃತಿಜನ್ಯ ಅನುಕೂಲತೆ ಮತ್ತು ಸಾಮಗ್ರಿ ಸಂಪತ್ತು ಅಪಾರವಾದುದು. ಆದರೆ ಇಂತಹ ರಾಷ್ಟ್ರವು ಜನತೆಯ ಮತಿಸ್ಥಿತಿ ಸುಧಾರಣೆಯಲ್ಲಿ ಅಭಾಸಿಕ ರೀತ್ಯಾ ಪ್ರಗತಿಹೊಂದಬೇಕಾದಷ್ಟು ಈ ವರೆಗೂ ಹೊಂದಿಲ್ಲವೆನ್ನಬಹುದು. ಇದಕ್ಕೆ ಕಾರಣವಿದೆ ಭಾರತದಂತೆಯೇ ರಶ್ಯದಲ್ಲೂ ಜನತೆಯ ಅತ್ಯಧಿಕ ಸಂಖ್ಯಾತರು ಬೇಸಾಯಜೀವಿಗಳು. 1917ರ ಬೊಲ್ಶೆವಿಕ್ ಕ್ರಾಂತಿಯ ವರೆಗಿದ್ದ ಝಾರನ ಆಡಳಿತೆಯಲ್ಲಿ ಈ ಬೇಸಾಯಗಾರ ಜನತೆಯ–ನೇ. 95 ರಷ್ಟು ಜನರ–ಬುದ್ಧಿ ಅಥವಾ ಸ್ಥಿತಿ ಸುಧಾರಿಸುವ ಪ್ರಯತ್ನವೇನೂ ನಡೆದಿಲ್ಲ. ರಾಷ್ಟ್ರದ ಉದ್ದಿಮೆಗಳನ್ನು ಅಭಿವೃದ್ಧಿಗೊಳಿಸಿದರೆ, ಜನತೆಗೆ ವಿದ್ಯಾಬುದ್ಧಿಗಳನ್ನಿತ್ತು ನವನಾಗರಿಕರನ್ನಾಗಿ ಮಾರ್ಪಡಿಸಿದರೆ ತಮ್ಮ ನಿರಂಕುಶ ದುರಾಡಳಿತೆಗದು ಕುಠಾರವಾಗಿ ಪರಿಣಮಿಸೀತೆಂದು ಉದ್ದೇಶಪೂರ್ವಕವಾಗಿಯೇ ಝಾರ್ ಆಳರಸರು ರಶ್ಯದ ಅಗಾಧಶಕ್ತಿ ಸಲಕರಣೆಗಳ ಮತ್ತು ರಶ್ಯದಜನತೆಯ ಸಂಘಟನೆ, ಸುಧಾರಣೆಯನ್ನು ಮರೆತುಬಿಟ್ಟಿದ್ದರು. ಹೀಗಾಗಿ ಪ್ರಥಮ ಮಹಾಯುದ್ಧದ ಕಾಲದಲ್ಲಿ ರಶ್ಯದಲ್ಲಿದ್ದುದು ಮಧ್ಯಯುಗದ ಕಾಡುಜನರೇ ಹೊರತು ಇಪ್ಪತ್ತನೇ ಶತಮಾನದ ಪ್ರಾಪಂಚಿಕರಲ್ಲ. 1914ರ ಲೆಕ್ಕಪ್ರಕಾರ 1000ರಶ್ಯನರುಪೈಕಿ 813 ಮಂದಿ ರೈತರು, 126 ವ್ಯಾಪಾರಿಗಳು, 26 ರೈತಸೋಲ್ಜರರು, 17 ಘನಸಂತರು, 6 ಪಾದ್ರಿಗಳು ಇತ್ಯಾದಿ. 1917ರ ಕ್ರಾಂತಿಯಿಂದ ಬರ್ಬರ ಝಾರಾಡಳಿತೆಯನ್ನು ನಿರ್ನಾಮಗೊಳಿಸಿದ ಬೊಲ್ಶೆವಿಕ್ಸರು ರಶ್ಯದ ಉದ್ದಿಮೆಗಳನ್ನು ಆಮೂಲಾಗ್ರವಾಗಿ ಹಾಗೂ ತೀವ್ರಗತಿಯಿಂದ ಅಭಿವೃದ್ಧಿಗೊಳಿಸಲು ಸರ್ವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಈ ಪ್ರಗತಿ ಕಳೆದ 32 ವರುಷಗಳಿಂದ ಅವಿಶ್ರಾಂತವಾಗಿ ಸಾಗಿದೆ. "ಸೋವಿಯೆಟ್ ಯೂನಿಯನು ಕಮ್ಯೂನಿಸ್ಟ್ ಮತ್ತು ಉದ್ದಿಮೇ ರಾಷ್ಟ್ರ" ಆಗಬೇಕೆಂಬುದೇ ಅವರ ಪ್ರಥಮಮಂತ್ರ. ಈ ಗುರಿಸಿದ್ಧಿಗಾಗಿ ರಶ್ಯದ ಆರ್ಥಿಕ ಸಾಮಾಜಿಕ ತಳಗಟ್ಟು ಸಂಪೂರ್ಣ ಬದಲಾಗಿದೆ ಎಲ್ಲಾ ಆಸ್ತಿ ಮತ್ತು ಉತ್ಪನ್ನಗಳೂ ರಾಷ್ಟ್ರೀಕರಣಗೊಂಡವು; ಎಲ್ಲಾ ಕೆಲಸಗಾರರೂ ದಳವಾರಾಗಿ ಸಂಘಟಿಸಲ್ಪಟ್ಟರು; ಬೇಸಾಯ ಭೂವ್ಯವಸ್ಥೆ ಪೂರ್ಣ ಬದಲಾವಣೆಗೊಂಡಿತು; ಉತ್ಪನ್ನ ವೃದ್ಧಿಗಾಗಿ ಅನುಕ್ರಮವಾಗಿ 'ಪಂಚವಾರ್ಷಿಕ ಯೋಜನೆ'ಗಳು ಕೈಕೊಳ್ಳಲ್ಪಟ್ಟವು. ಒಟ್ಟಿನ ಮೇಲೆ, ಈಗ ಸೋವಿಯೆಟ್ ಯೂನಿಯನ್ ಅವಿಚ್ಛಿನ್ನ, ಅಖಂಡ, ಏಕರೂಪೀ ಯಂತ್ರವಾಗಿ ಕಾಣುತ್ತಿದೆ. ಬಹುತೇಕವಾಗಿ ಕೇವಲ ಭೂವ್ಯವಸಾಯ ರಾಷ್ಟ್ರವಾಗಿದ್ದ ರಶ್ಯವು, ಮೂವತ್ತೇ ವರುಷಗಳೊಳಗೆ ಇಡೀ ಪ್ರಪಂಚದ ಎರಡೋ ಮೂರೋ ಅಗ್ರಗಣ್ಯ ಕಾರ್ಖಾನೆ ರಾಷ್ಟ್ರಗಳಲ್ಲೊಂದಾಗಿ ರಾಜಿಸುತ್ತಿರುವುದು ನಿಜಕ್ಕೂ ಮಹತ್ವಾದ ಸಾಧನೆ. ಆದರೆ ಈ ಪ್ರಚಂಡ ಆಕಾರದೊಳಗಡೆಯ ನಿರ್ಜೀವತೆಯನ್ನು ಮರೆಯಲಾಗುವದಿಲ್ಲ. ಈ ಮಹಾ ಪ್ರಗತಿಸ್ತಂಭವೇರಿಸುವದಕ್ಕಾಗಿ ಅಲ್ಲಿಯ ಮನುಷ್ಯರನ್ನೆಲ್ಲಾ ಮುಕ್ಕಾಗಿ ಮಾರ್ಪಡಿಸಲಾಗಿದೆಯೆಂದರೆ ತಪ್ಪಾಗದು. ಅಲ್ಲಿ ಶ್ರಮಜೀವಿಗಳ ಜೀವವೂ ಅವರು ದುಡಿಯುವ ಯಂತ್ರಗಳ ಉಪಕರಣಗಳಷ್ಟೇ ಮಿಡುಕಲು ಸಾಧ್ಯವೆಂದು ಊಹಿಸಬಹುದು. 'ಸರಕಾರೀ ಘೋರಣೆ–ಸರಕಾರೀ ಮಹಾ ಯಂತ್ರ' ಎನ್ನುವದಕ್ಕಿಂತ ಭಿನ್ನವಾದ ಅಭಿಪ್ರಾಯ ಅಥವಾ ಅಸ್ತಿತ್ವವು ಅಲ್ಲಿಯ ರಾಜಕಾರಣಿಗಳಿಂದಾರಂಭಿಸಿ, ಯಾರೊಬ್ಬನಿಗೂ ಇಲ್ಲ. ಮನೆ ಸೇರದಂತೆ ಮನೆ ಮಂದಿಯನ್ನೇ ಮಾಡಿಗೆ ತುರುಕಿ ಸಮಸ್ತ [illegible] ಮನೋವಾರ್ತೆ.

ಕಳೆದ ಮಹಾಯುದ್ಧದಲ್ಲಿ ನಾಜೀ ಹೊಡೆತದಿಂದಾದ ಜಖಮನ್ನು ಕೂಡಾ ರಶ್ಯ ವಿಸ್ಮಯದಲ್ಲೇ ಬೆಟ್ಟದಂತ ಗುಣಪಡಿಸಿಕೊಂಡಿದೆ. ಮಾತ್ರವಲ್ಲ; ಕೆಲವು ವಿಭಾಗಗಳಲ್ಲಿ ಯುದ್ಧ ಪೂರ್ವದಲ್ಲಿದ್ದ ಸ್ಥಿತಿಗಿಂತ ಪ್ರಗತಿ ಪಡೆದಿದೆ. ಈ ಪುನರುತ್ಥಾನಕ್ಕಾಗಿ ರಶ್ಯವೀಗ ತನ್ನ ನಾಲ್ಕನೇ 'ಪಂಚವಾರ್ಷಿಕ'ಯೋಜನೆಯನ್ನು 1946ರಲ್ಲಾರಂಭಿಸಿ ನಡೆಸುತ್ತಿದೆ. ಅದು ವಿಜಯ ಮುಕ್ತಾಯಗೊಳ್ಳುವ 1950ರಲ್ಲಿ ವರುಷಕ್ಕೆ 250,000,000 ಟನ್ನುಗಳಷ್ಟು ಕಲ್ಲಿದ್ದಲು, 20,000 000ರಷ್ಟು ಉಕ್ಕು ರಶ್ಯದಲ್ಲಿ ಉತ್ಪನ್ನವಾಗಬಹುದೆಂಬ ನಿರೀಕ್ಷೆಯಿದೆ. ಹೀಗಾದರೂ, ಇದ್ದಲು ಅಮೇರಿಕದ ಉತ್ಪನ್ನದ ಸೇ. 40ರಷ್ಟು, ಉಕ್ಕು ಅಮೇರಿಕದ ಉತ್ಪನ್ನದ ಸೇ. 25ರಷ್ಟೇ ಆಗುವುದು. ಹಿಂದಿನಿಂದಲೂ ತಕ್ಕಮಟ್ಟಿಗೆ ಇಂದಿನ ಸ್ಥಿತಿಯಲ್ಲೇ ಇದ್ದ ಬ್ರಿಟನು ಅಮೇರಿಕಗಳ ಪ್ರಗತಿಯೊಂದಿಗೆ ಬೊಲ್ಶೆವಿಕ್ ರಶ್ಯವನ್ನು ಹೋಲಿಸುವದಕ್ಕಿಂತಲೂ ಝಾರನ ಕಾಲದ ರಶ್ಯದೊಡನೆ, ಕಮ್ಯೂನಿಸ್ಟ್ ರಶ್ಯವನ್ನು ಹೋಲಿಸಿದರೆ ಅಲ್ಲಿ ಆಗಿರುವ ಮಾರ್ಪಾಟವು ಅತ್ಯದ್ಭುತವಾಗಿ ಕಾಣುವದು. ಆದರೆ ದೊಡ್ಡ ಕೊರತೆಯೆಂದರೆ ಜನತೆಗೆ ಮನಸ್ಸೋಚಿತ ವಿಚಾರಸ್ವಾತಂತ್ರ್ಯ, ಮಾತು ಕೃತಿ ಸ್ವಾತಂತ್ರ್ಯವಿಲ್ಲದಿರುವುದೇ. ರಶ್ಯನುಯಾಯಿ ಕಮ್ಯೂನಿಸ್ಟರೊಡನೆ ಮಿಕ್ಕ ಪ್ರಗತಿಶೀಲ ಸಮತಾವಾದಿಗಳಿಗೆ ಭಿನ್ನಾಭಿಪ್ರಾಯವಿರುವುದು ಈ ಅಭಾವವಿರುವುದರಿಂದಲೇ.

ಅಂತೂ ಅಮೇರಿಕದ ಜನ ಗಾಳಿಪಟದಂತೆ ಹುಚ್ಚು ಹಾರಾಟದಲ್ಲಿದ್ದಾರೆ, ರಶ್ಯದ ಜನತೆ ಶಿಲಾಮೂರ್ತಿಗಳಂತೆ ಸ್ತಬ್ಧರಾಗಿದ್ದಾರೆ. ಎರಡೂ ವಿರುದ್ಧ ಸ್ಥಿತಿಗಳೊಳಗೆ ಹೊಂದಿಕೆ ಅಸಾಧ್ಯವೆಂಬುದರಿಂದಲೇ ಇನ್ನೊಂದು ಮಹಾ ಪ್ರಳಯಸೂಚನೆಯು ಗಾಳಿಬೀಸುತ್ತಿದೆ!

THE PROGRESSIVE
COMMERCIAL AND TECHNICAL INSTITUTE
(Opp. Municipal Bus Stand)
P. B. No. 8, UDIPI, S. K.

AFFORDS
UNIQUE OPPORTUNITY
TO
All those who aspire to qualify themselves
FOR
DIPLOMAS & CERTIFICATES
IN

Banking — Accountancy
Economics — Company & Mercantile Laws
Shorthand — Secretarial Practice
Typewriting — Drawing, Sketching
Surveying — Etc. Etc.

POSTAL TUITION - A Speciality.
Further Particulars can be had in person or by post.

U. Srinivasa Rao, B.A., B.E., Correspondent.
Pangal Govindrao, CERT. A.I.I.B., Manager & Headmaster.

ಯುದ್ಧಾಭಿಮುಖವಾಗಿ ಪ್ರಪಂಚದ ಹೆಜ್ಜೆ

ಪ್ರಾಪಂಚಿಕ ಸ್ಥಿತಿಗತಿಗಳು ಯಥಾಪ್ರಕಾರ ಸಾಗಿವೆ. ಇಂದಿನ ಪ್ರಕ್ಷುಬ್ಧ ವಾತಾವರಣದಲ್ಲಿ ತನ್ನ ಆರ್ಥಿಕಸ್ಥಿತಿಯನ್ನು ಭದ್ರಪಡಿಸಿಕೊಂಡು ಪ್ರಗತಿಪಥ ಹಿಡಿಯುವ ಪ್ರಯತ್ನದಲ್ಲಿ ಭಾರತವಿರುವಂತೆ ಕಾಣುತ್ತದೆ.

ಎಲ್ಲೆಡೆಯು ಎಲ್ಲಾ ಸಮಸ್ಯೆಗಳೂ ಬಹುಮಟ್ಟಿಗೆ ಇದ್ದಂತಿವೆ

ಲೋಕ ವಿದ್ಯಮಾನ

ಚೈನದಲ್ಲಿ ಬಂಡೆಡೆ ಕಮ್ಯೂನಿಸ್ಟ್ ಧಾಳಿ ಪ್ರಗತಿ ಪಡೆಯುತ್ತಿರುವಂತೆಯೇ ಇನ್ನೊಂದೆಡೆ ಸಂಧಾನ ಪ್ರಯತ್ನಗಳೂ ನಡೆಯುತ್ತಿವೆ. ಹೊಸತಾಗಿ ಮಂತ್ರಿಮಂಡಲ ರಚಿಸಿಕೊಂಡ ಹೋ ಯಿಂಗ್ ಚಿನ್ನರು ಕಮ್ಯೂನಿಷ್ಟರೊಡನೆ ಶಾಂತಿಯಾಚಿಸಿ, ಮಾತುಕತೆಗಾಗಿ ಐದು ಮಂದಿಯನ್ನು ನೇಮಿಸಬೇಕೆಂದೂ, ಸಂಭಾಷಣೆಯ ಸ್ಥಳ ಕಾಲಗಳನ್ನು ತಿಳಿಸಬೇಕೆಂದೂ ವಿಜ್ಞಾಪಿಸಿ ಕೊಂಡಿದ್ದರು. ಕಮ್ಯೂನಿಸ್ಟರು ಅದನ್ನು ಮನ್ನಿಸಿ ಐದು ಮಂದಿಯುಳ್ಳ ತಮ್ಮ ಪ್ರತಿನಿಧಿ ಮಂಡಲಿಯೊಂದನ್ನು ನೇಮಿಸಿದ್ದೇವೆಂದು ಘೋಷಿಸಿದ್ದಾರೆ. ಇದೇ ಎಪ್ರಿಲ್ ತಾ 1ರಿಂದ ಪೀಪಿಂಗಿನಲ್ಲಿ ಸಂಧಿ ಮಾತುಕತೆ ನಡೆಯುವದೆಂದು ಗೊತ್ತಾಗಿದೆ.

ಇಂಡೊನೆಶಿಯದಲ್ಲಿ, ಭದ್ರತಾ ಕೌನ್ಸಿಲಿನ ಶಾಂತಿ ನಿರ್ಧಾರಗಳಿಗೆ ವಿರುದ್ಧವಾಗಿ, ಇಲ್ಲಿಯ ರಿಪಬ್ಲಿಕನರನ್ನು ಕಡೆಗಣಿಸುತ್ತಾ ಬಂದಿರುವ ಡಚ್ಚರು ಈಗ ಭದ್ರತಾ ಕೌನ್ಸಿಲಿನ ತೀರ್ಮಾನದಂತೆ ರಿಪಬ್ಲಿಕನರೊಡನೆ ಹೊಸ ಮಾತುಕತೆಗಳಿಗೆ ತೊಡಗಲು ಒಪ್ಪಿಗೆ ಸೂಚಿಸಿದ್ದಾರೆ. ಇನ್ನಿದರ ಪರಿಣಾಮವೇನೇನಾಗುವದೆಂಬುದನ್ನು ನೋಡಲಿಕ್ಕಿದೆ.

1949-50ರ ವರ್ಷಕ್ಕಾಗಿ ಮಾರ್ಶಲ್ ಯೋಜನೆಯನ್ವಯದ ಸಹಾಯಪಲ್ಲಿ ಸಲು 6580 ಮಿಲಿಯ ಡೊಲರುಗಳನ್ನು ಪಟ್ಟಿಗೆ ಸೇರಿಸುವ ಮಸೂದೆಯು ಅಮೆರಿಕದ ಕಾಂಗ್ರೆಸಿನ ಮುಂದೆ ಬಂದು ಚರ್ಚೆ ನಡೆದಿದೆ. ಹೊಸ ಅಟ್ಲಾಂಟಿಕ್ ಒಪ್ಪಂದವು, ಅಮೆರಿಕ ರಾಜ್ಯಶಾಸನವನ್ನು ಒತ್ತಟ್ಟಿಗಿರಿಸಿ, ಯುದ್ಧ ಜಾಹೀರು ಮಾಡುವ ಅದರ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡಿದೆ ಎಂದು ಟೀಕೆಗಳಾಗಿವೆ.

ರಕ್ಷಣಾದೃಷ್ಟಿಯಿಂದ ಅಟ್ಲಾಂಟಿಕ್ ಕರಾರು ಕೂಟ ಕಟ್ಟಿಕೊಂಡಂತೆಯೇ, ಭೂಮಧ್ಯ ಸಮುದ್ರ ಮತ್ತು ಕೂಟ, ದೂರ ಪ್ರಾಚ್ಯ ಮೊದಲು ಕೂಟಗಳನ್ನೂ ರಚಿಸಿಕೊಳ್ಳುವ ಯೋಚನೆಗಳೀಗ ನಡೆಯುತ್ತಿವೆ. ಆದರೆ ಇನ್ನು ಇಂತಹ ಯಾವ ಕೂಟ ರಚನೆಯನ್ನೂ ಅಮೇರಿಕವು ಸಂಕಲ್ಪಿಸಿಲ್ಲವೆಂದೂ ಅದು ಇನ್ನೂ ಹೆಚ್ಚಿನ ಗುಂಪುಗಳಲ್ಲಿ ಭಾಗವಹಿಸುವದು ಅಸಂಭವವೆಂದೂ ತಿಳಿದು ಬಂದಿದೆ. ಆದರೆ ಮಧ್ಯಪೂರ್ವದ ರಾಷ್ಟ್ರಗಳಾದ ಗ್ರೀಸ್, ಟರ್ಕಿ ಮತ್ತು ಪರ್ಶಿಯಗಳ ಸ್ವಾತಂತ್ರ್ಯ ಹಾಗೂ ರಕ್ಷಣೆಯ ಕುರಿತು ತಮಗೆ ಅತಿ ಹೆಚ್ಚಿನ ಆಸಕ್ತಿಯಿದೆಯೆಂದು ಅಮೆರಿಕದ ಗೃಹಕಾರ್ಯದರ್ಶಿ ಮಿ. ಡೀನ್ ಅಚಿಸನ್ ಸ್ಪಷ್ಟಪಡಿಸಿದ್ದಾರೆ.

ಬರ್ಲಿನಿನಲ್ಲಿ ಈಗಲೂ ಬಗೆಹರಿಯದೆ ನಡೆದಿರುವ, ರಶ್ಯಾ ಮತ್ತು ಪಾಶ್ಚಾತ್ಯ ರಾಷ್ಟ್ರಗಳೊಳಗಿನ ದೀರ್ಘಾವಧಿಯ ವೈಮನಸ್ಯದಲ್ಲಿ ಪುನಃ ಲಕ್ಷ್ಯವನ್ನೆಳೆಯುವ ಹೊಸ ಚಲನೆ ಕಂಡುಬರುತ್ತಿದೆ. ರಶ್ಯನ್ 'ಮಾರ್ಕ'ಗಳನ್ನು ಬಹಿಷ್ಕರಿಸಿ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಕ್ಷೇತ್ರದಲ್ಲಿ ತಮ್ಮದೇ ಆದ ನಾಣ್ಯ ಚಲಾವಣಾ ಪದ್ಧತಿಯನ್ನು ಜಾರಿಗೆ ತಂದಿವೆ.

ಬರ್ಮಾದ ಯುದ್ಧವು ಅತಿ ಕಠೋರ ರೀತಿಯಿಂದ ಸಾಗಿದೆ. ಸರಕಾರೀ ಸೇನೆಗಳೀಗ ಅಪ್ರಮಾಣ ಯುದ್ಧ ಹೂಡಿ ಒಂದೊಂದೇ ಸ್ಥಳವನ್ನು ಬಂಡಾಯಗಾರರಿಂದ ಕಸಗೊಳ್ಳುತ್ತಿರುವ ವಾರ್ತೆ ಬಂದಿದೆ.

ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಸಮ್ಮೇಳನವು ಎಪ್ರಿಲ್ ತಾ. 23ರಿಂದ 10 ದಿನಗಳ ವರೆಗೆ ಲಂಡನಿನಲ್ಲಿ ಜರಗುವದೆಂದು ನಿಶ್ಚಯವಾಗಿದೆ. ಈ ಸಮ್ಮೇಳನದಲ್ಲಿ ಭಾರತ, ಕೆನಡಾ, ಆಸ್ಟ್ರೇಲಿಯ, ನ್ಯೂಜೀಲೆಂಡ್, ದಕ್ಷಿಣಾಫ್ರಿಕ, ಪಾಕಿಸ್ತಾನ್, ಸಿಲೋನ್ ಮತ್ತು ಬ್ರಿಟನು ಭಾಗಿಯಾಗುವಂತೆ ಆಮಂತ್ರಣಗಳು ಹೋಗಿವೆ. ಪಂಡಿತ ನೆಹರುಗಳು ಆಮಂತ್ರಣವನ್ನಂಗೀಕರಿಸಿರುವರು ಎಪ್ರಿಲ್ ಮೂರನೇ ವಾರದಲ್ಲಿ ಅವರು ಲಂಡನಿಗೆ ಹೋಗುವದು ನಿಶ್ಚಯವಾದಂತೆಯೇ. ಲಂಡನಿನ ಈ ಮಹತ್ವದ ಪ್ರಧಾನೀ ಸಮ್ಮೇಳನದಲ್ಲಿ, ಸಂಬಂಧಪಟ್ಟ ಹಲವು ಪ್ರಶ್ನೆಗಳು ತೀರ್ಮಾನಿಸಲ್ಪಡಲಿವೆಯಲ್ಲದೆ, ಕಳೆದ ಬಾರಿ ಲಂಡನ್ ಕೂಟದಲ್ಲಿ ಸಂಕಲ್ಪಿಸಿದ ಕಾರ್ಯಭಾಗಗಳನ್ನು ಪೂರ್ಣಗೊಳಿಸಲಾಗುವದು. ಭಾರತ ಕಾಮನ್‌ವೆಲ್ತ್ ಕೂಟದೊಳಗುಳಿಯುವದೋ, ಸಂಬಂಧ ಕಡಿದುಕೊಳ್ಳುವದೋ ಎಂಬ ಪ್ರಶ್ನೆಯೂ ಅಲ್ಲಿ ಚರ್ಚಿಸಲ್ಪಡಲಿದೆ. ಪಾಕಿಸ್ತಾನ್ ಪ್ರಧಾನಿಗಳು ಇದಕ್ಕೆ ಹೋಗುವರೋ, ಇಲ್ಲವೋ ಎಂಬುದು ಖಚಿತವಾಗಿಲ್ಲ.

ಭಾರತ—ಪಾಕಿಸ್ತಾನ

ಭಾರತ ಮತ್ತು ಪಾಕಿಸ್ತಾನಗಳೊಳಗಿನ ಸ್ನೇಹಸಂಬಂಧ ಬಿರುಸಾಗಿಯಾಗಬಹುದಾದಂಥ ಅತಿಮೇಳಸುವ ಘಟನೆಗಳಾಗುತ್ತಿವೆ, ಪಾಕಿಸ್ತಾನ್ ನಿರ್ಮಾಣಕ್ಕಾಗಿಯೂ, ಆ ನಿರ್ಮಾಣದ ಬೆನ್ನಲ್ಲಿ ಆ ಕಾಲದಲ್ಲಿ ಸಹಜವಾದ ಕಟುಭಾವನೆಗಳ ದೆಸೆಯಿಂದಲೂ ಭಾರತ ಮತ್ತು ಪಾಕಿಸ್ತಾನಗಳೊಳಗಿನ ವೈಮನಸ್ಯವು ತುತ್ತತುದಿಗೇರಿದ್ದಿತು. ಕಾಶ್ಮೀರ, ಹೈದರಾಬಾದು, ಜುನಾಗಡ್ ಮತ್ತು ಪಂಜಾಬಿನ ಇಕ್ಕಡೆಯ ಸರಹದ್ದು ದುರಂತಗಳು ಇವೆರಡು ರಾಷ್ಟ್ರಗಳಿಗೂ ಪರಸ್ಪರ ಪ್ರತ್ಯಕ್ಷ ಯುದ್ಧಕ್ಕೇಳುವಂತಹ ಪ್ರೇರಣೆಯನ್ನು ಹಲವು ಬಾರಿ ಕೊಟ್ಟಿದ್ದುವು. ಆದರೀ ಕಾಲವೀಗ ಕಳೆದಂತಿದೆ. ವಿಭಜನಾ ಸಹಜ ನೋವು, ಹುಣ್ಣುಗಳು ಈಗ ಮಾಸಿ, ಪರಸ್ಪರ ಸದ್ಭಾವನೆಯಿಂದ, ಸದ್ಬುದ್ಧಿಯ ನೆರೆಕರೆಯವರಾಗಿ ಬಾಳುವದು ವಾಸಿಯೆಂಬುದು ಇಕ್ಕಡೆಗೂ ಹೊಳೆತಿದೆ.

ಕಾಶ್ಮೀರವು ಭಾರತಕ್ಕೆ ಸೇರಬೇಕೋ, ಪಾಕಿಸ್ತಾನಕ್ಕೋ, ಎಂಬುದನ್ನು ಅಲ್ಲಿಯ ಜನಮತ ಸಂಗ್ರಹಿಸಿಯೇ ತಿಳಿಯತಕ್ಕದ್ದೆಂಬ ರಾಜೀಕರಾರಿನ ಶರ್ತಗಳಿಗನುಸಾರವಾಗಿ ಆ ಜನಮತ ಸಂಗ್ರಹಾಧಿಕಾರಿಯಾಗಿ, 1947ರ ವರೆಗೂ ಅಮೇರಿಕ ನೌಕಾಚಾಲಕ ಮಂಡಲಿಯ ಮುಖ್ಯಸ್ಥರಾಗಿದ್ದ ಎಡ್ಮಿರಲ್ ಚೆಸ್ಟರ್ ಡಬ್ಲ್ಯು. ನಿಮಿಟ್ಸರನ್ನು ನೇಮಿಸಲಾಗಿದೆಯೆಂದು ರಾಷ್ಟ್ರಸಂಘದ ಕಾರ್ಯದರ್ಶಿ ಟ್ರಿಗ್ವಿಲೀ ಪ್ರಕಟಿಸಿದ್ದಾರೆ.

ಭಾರತ ಪಾಕಿಸ್ತಾನಗಳ ಒಪ್ಪಿಗೆಯಿಂದ ಕಾಶ್ಮೀರ ಕಮಿಶನಿನವರು ಶಿಫಾರಸು ಮಾಡಿ ಭದ್ರತಾ ಕೌನ್ಸಿಲು ನಾಮಕರಣ ಮಾಡುವ ಈ ಮತ ಸಂಗ್ರಹಾಧಿಕಾರಿಯನ್ನು, ಇನ್ನು ಮತ್ತು ಕಾಶ್ಮೀರ ಸರಕಾರವೇ ಕ್ರಮಬದ್ಧ ನೇಮಕ ಮಾಡಿಕೊಳ್ಳಬೇಕು. ಆ ಅಧಿಕಾರಿಯು ತನ್ನ ಕಾರ್ಯಕ್ಕಗತ್ಯವುಳ್ಳ ಅಧಿಕಾರ ಮತ್ತು ಅನುಕೂಲತೆಗಳನ್ನೆಲ್ಲ ಜಮ್ಮು, ಕಾಶ್ಮೀರ ಸರಕಾರದಿಂದಲೇ ಪಡೆಯಬೇಕು. ತನಗೆ ಬೇಕಾಗುವ ಸಹಾಯಕರನ್ನು, ನೌಕರರನ್ನು ನೇಮಿಸಿಕೊಳ್ಳುವ ಅಧಿಕಾರವು ಎಡ್ಮಿರಲ್ ನಿಮಿಟ್ಸರಿಗಿದೆ. ಕಾಶ್ಮೀರದ ಇಕ್ಕಡೆಯ ಸೇನೆಯ ಸೇನೆಗಳೂ ಹೊರಟು ಹೋಗುವ ಕಾಲ ನಿರ್ಧರಿಸುವ- ಕಾಶ್ಮೀರ ಬಿಟ್ಟು ಹೋಗಿರುವ ಕಾಶ್ಮೀರಿಗಳನ್ನು ಒಳಕರೆದು, ಕಾಶ್ಮೀರ ಪ್ರವೇಶಿಸಿರುವ ಪರಕೀಯರನ್ನು ಹೊರಹಾಕು ಕಳುಹಿಸುವ ಕಾರ್ಯದಲ್ಲಿ ಕಾಶ್ಮೀರ ಸರಕಾರಕ್ಕೆ ನೆರವಾಗುವ- ಯಾವುದೇ ಸಮಸ್ಯೆಯನ್ನಾಗಲೀ ಕಾಶ್ಮೀರ ಕಮಿಶನಿನ ಅಭಿಮತ ಪಡೆದು ಇಚ್ಛೆಯಂತೆ ತೀರ್ಮಾನಿಸುವ ಮತಗಣನೆಯ ವ್ಯವಸ್ಥೆಯಿಂದ, ನಿಷ್ಪಕ್ಷಪಾತವಾಗಿ ನಡೆಯುವಂತೆ ನೋಡುವ-ಕಾರ್ಯಭಾರವು ಜನಮತಾಧಿಕಾರಿ ಎಡ್ಮಿರಲ್ ನಿಮಿಟ್ಸರ ಮೇಲಿದೆ. ಮತಸಂಗ್ರಹವಾದ ನೇಲೆ

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ-

REDG

ಹುಳುಕಡ್ಡಿ ಮುಲಾಮು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

NOTICE

It is hereby notified that the Registered Office of "**International Commercial Corporation Ltd., UDIPI**, (Principal Agents of "**United Karnatak Insurance Co., Ltd., DHARWAR**") has been shifted from Court Road to Tenkpet and installed at the Building just opposite to Karnatak Bank.

ನೋಟೀಸು

ಉಡುಪಿಯಲ್ಲಿರುವ "ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಧಾರವಾಡ"ದ ಪ್ರಧಾನ ಏಜಂಟರಾದ "ಇಂಟರ್ ನೇಶನಲ್ ಕಮರ್ಶಿಯಲ್ ಕೋರ್ಪೋರೇಶನ್ ಲಿಮಿಟೆಡ್"ರವರ ಕೇಂದ್ರ ಆಫೀಸನ್ನು ಕೋರ್ಟು ರಸ್ತೆಯ ಮಠಾರದಿಂದ ತೆಂಕಪೇಟೆಗೆ ಕರ್ನಾಟಕ ಬೇಂಕಿನ ಎದುರು ಪಾರ್ಶ್ವದಲ್ಲಿರುವ ಕಟ್ಟೋಣಕ್ಕೆ ಒಯ್ಯಲ್ಪಟ್ಟಿರುತ್ತದೆ.

UDIPI,
30-3-1949.

B. M. A. KINI,
Managing Director.

ನಿಮ್ಮ ತೃಪ್ತಿ ನಮ್ಮಗಿಂತ ಶ್ರೇಷ್ಠ

ಪ್ರಭಾತ ಚಾ ಮತ್ತು ಕಾಫಿ

PRABHAT

TEA & COFFEE (INDIA) Ltd.
COONOOR (Niligiris)

ಸಮಸ್ಯಾ ನಿವಾರಣೆಗೆ ಭಾರತದ ಪ್ರಯತ್ನ.

ಪರಿಣಾಮವನ್ನಿವರು ಕಾಶ್ಮೀರ ಸರಕಾರಕ್ಕೂ ಕಾಶ್ಮೀರ ಕಮಿಶನನಿಗೂ ತಿಳಿಸುವರು. ಕಾಶ್ಮೀರ ಕಮಿಶನು, ಎಲ್ಲವನ್ನೂ ಸಂಪೂರ್ಣ ಚುನಾವಣೆಯು ನ್ಯಾಯಬದ್ಧವಾಗಿದ್ದಿತೋ ಎಂಬ ಕುರಿತು ಭದ್ರತಾ ಕೌನ್ಸಿಲಿಗೆ ವರದಿಯೊಪ್ಪಿಸುವದು. ಎಡ್ಮಿರಲ್ ನಿಮಿಟ್ಸರು ಎಪ್ರಿಲ್ ಅಂತ್ಯ, ಅಥವಾ ಮೇ ಆದಿ ಭಾಗದಲ್ಲಿ ನವದಿಲ್ಲಿಗೆ ಬರಬಹುದೆಂದೂ, ಬಂದವರು ಜಮ್ಮು ಮತ್ತು ಕಾಶ್ಮೀರ ಪ್ರದೇಶಗಳಲ್ಲಿ ಸಂಚರಿಸಿ ಸಂಗತಿಗಳನ್ನೆಲ್ಲಾ ಕಣ್ಣಾರೆ ಕಂಡು ಆ ಮೇಲೆಯೇ ಜನಮತ ಸಂಗ್ರಹದ ಕಾರ್ಯಕ್ಕೆ ಕೈಯಿಕ್ಕುವರೆಂದೂ ತಿಳಿದು ಬಂದಿದೆ. ಪಾಕಿಸ್ತಾನ್ ಸರಕಾರವು ನಿಮಿಟ್ಸರ ನೇಮಕದ ಕುರಿತು ಸಮಾಧಾನ ಸೂಚಿಸಿ ಶ್ಲಾಘಿಸಿದೆ. ದಂಡಾಯಾಗಾರರ 'ಆಝಾದ್ ಕಾಶ್ಮೀರ್ ಸರಕಾರ'ಕ್ಕೆ ಸ್ಥಾನವಿದೆಯೇ 'ಆಝಾದ್ ಕಾಶ್ಮೀರ್ ಸೈನ್ಯ' ಬರ್ಖಾಸ್ತಾಗುವದು ಬೇಡವೇ ಎಂಬೆರಡು ಪ್ರಶ್ನೆಯು ಕುರಿತೇ ಈಗ ಇಕ್ಕಡೆಯವರೊಳಗೆ ವಿವಾದಗಳಿವೆ. ಕಾಶ್ಮೀರ ಕಮಿಶನಿನ 'ಉಪ ಸಮಿತಿ'ಯೊಂದು, ಆಝಾದ್ ಕಾಶ್ಮೀರ್ ಸರಕಾರದ ಅಧೀನವಿರುವ ಸ್ಥಳಗಳ ಸ್ಥಿತಿ ಪರೀಕ್ಷೆಗಾಗಿ ತಿರುಗಾಡಿಕೊಂಡು ಬಂದಿದೆ.

ಇತ್ತ ಪಾಕಿಸ್ತಾನದ ಗಡಿನಾಡು ಪ್ರಾಂತ್ಯದ ಪ್ರಧಾನ ಮಂತ್ರಿ ಖಾನ್ ಅಬ್ದುಲ್ ಕ್ವಯೂಮ್ ಖಾನರನ್ನು ಕೊಲೆಮಾಡುವ ಒಳಸಂಚೊಂದು ಅಲ್ಲಿಯ ಕೆಂಪಂಗೀ ದಳದವರಿಂದ ನಡೆದಿತ್ತೆಂದು ಸ್ಪಷ್ಟವಾಗಿಯೂ ಈ ಒಳಸಂಚಿನಲ್ಲಿ ಭಾರತದ ಕೈಯಿದೆಯೆಂಬ ಅರ್ಥ ಬರುವಂತೆಯೂ ಗಡಿನಾಡು ಸರಕಾರದ ಪ್ರಕಟಣೆಯೊಂದು ಹೊರಬಿದ್ದಿತು. ಈ ಆರೋಪವನ್ನು ಸಂಪೂರ್ಣವಾಗಿ ಅಲ್ಲಗಳೆದು ಭಾರತಸರಕಾರವು ಪಾಕಿಸ್ತಾನ್ ಸರಕಾರಕ್ಕೆ ನಿಷೇಧ ಸೂಚಿಸಿದ್ದಿತು. ಈಗ ಪಾಕಿಸ್ತಾನ್ ಸರಕಾರವು ಒಂದು ಪ್ರಕಟಣೆ ಹೊರಡಿಸುತ್ತಾ 'ಆ ಒಳಸಂಚಿನಲ್ಲಿ ಭಾರತದ ಕೈಯಿಲ್ಲ; ಮತ್ತು ಗಡಿನಾಡು ಸರಕಾರದ ಪ್ರಕಟಣೆಯ ಅರ್ಥ ಕೂಡಾ ಹಾಗಲ್ಲ' ಎಂದಿದೆ. ಪಾಕಿಸ್ತಾನ್ ಸ್ಥಾಪನಾನಂತರ ಗಡಿನಾಡಿನ ಕೆಂಪಂಗೀ ದಳದವರೊಡನೆ ತಾವಾವ ಸಂಬಂಧವನ್ನೂ ಇಟ್ಟುಕೊಂಡಿಲ್ಲವೆಂಬ ಭಾರತಸರಕಾರದ ಆಶ್ವಾಸನೆಯನ್ನು ತಾವು ನಂಬುತ್ತೇವೆ. ಆದರೆ ಕೆಂಪಂಗೀ ದಳ ಮತ್ತದರ ನಾಯಕರಾದ ಖಾನ್ ಸಹೋದರರ ಕುರಿತು ಪಂಡಿತ ನೆಹರುಗಳಾಡಿರುವ ಮಾತು ತಪ್ಪಭಿಪ್ರಾಯ ಹುಟ್ಟಿಸುವಂತಹದೂ ಕೆಂಪಂಗಿಯವರನ್ನು ಪ್ರೋತ್ಸಾಹಿಸುವಂತಹದೂ ಇರುವುದರಿಂದ ಆ ಕುರಿತು ತಾವು ತೀವ್ರ ನಿಷೇಧ ಸೂಚಿಸಿದ್ದೇವೆ—ಎಂದು ಪಾಕಿಸ್ತಾನದ ಪ್ರಕಟಣೆಯಲ್ಲಿದೆ.

ಭಾರತ ಪಾರ್ಲಿಮೆಂಟಿನಲ್ಲಿ

ಎರಡು ದಿವಸಗಳ ಚರ್ಚೆಯ ನಂತರ ಅರ್ಥ ಮಂತ್ರಿ ಡಾ. ಜೋನ್ ಮಥಾಯಿಗಳ ಸೂಚನೆಯಂತೆ 'ಹಣ ಕಾಸಿನ ಮಸೂದೆ'ಯನ್ನು ಒಂದು ಸಿಲೆಕ್ಟ್ ಕಮಿಟಿಗೊಪ್ಪಿಸುವ ನಿರ್ಧಾರವು ಭಾರತ ಪಾರ್ಲಿಮೆಂಟಿನಲ್ಲಾಗಿದೆ. ಆ ಕಮಿಟಿಯು ಮಾರ್ಚ್ 25ರೊಳಗೆ ತನ್ನ ವರದಿಯೊಪ್ಪಿಸಬೇಕೆಂಬ ಶರ್ತವಿದೆ. ಆವಶ್ಯಕ ಸಾಮಾಗ್ರಿಗಳ ಮೇಲಿನ ನಿಯಂತ್ರಣವನ್ನು 1950ನೇ ಮಾರ್ಚ್ 31ರ ವರೆಗಿನ ಒಂದು ವರುಷದ ವರೆಗೆ ವಿಸ್ತರಿಸುವ ಸಮ್ಮತಿಯು ಪಾರ್ಲಿಮೆಂಟಿನಿಂದ ಸರಕಾರಕ್ಕೆ ದೊರಕಿದೆ. ಸಕ್ಕರೆ ಉದ್ದಿಮೆಯು ಮೇಲೆ ಇನ್ನೂ ಒಂದು ವರುಷಗಳ ವರೆಗೆ ಸರಕಾರದ ಆಶ್ರಯವಿರಬೇಕೆಂಬ ನಿರ್ಣಯವಾಯಿತು. ಕೇಂದ್ರ ಸರಕಾರದ ಅಂಕೆಯೊಳಗೆ ಚಹಾ ಉದ್ದಿಮೆಯನ್ನು ಊರ್ಜಿತಗೊಳಿಸುವ ಮತ್ತು ಈವರೆಗಿದ್ದ 'ಮಾರ್ಕೆಟಿಂಗ್ ಬೋರ್ಡ್' ಬದಲಿಗೆ 'ಸೆಂಟ್ರಲ್ ಟೀ ಬೋರ್ಡ್' ಒಂದನ್ನು ಸ್ಥಾಪಿಸುವ, ಟೀರಫ್ತಿನ ಮೇಲೆ ಸುಂಕ ಹೇರುವ ನಿರ್ಣಯವಾಗಿದೆ. ಅಂತೆಯೇ ನಿರಾಶ್ರಿತರ ರಕ್ಷಣೆ ಮತ್ತು ವ್ಯವಸ್ಥೆ, ಆಕಾಶವಾಣಿ ಪದ್ಧತಿ ಸುಲಭಗಬೇಕಾದ ಸುಧಾರಣೆ, ಇತ್ಯಾದಿಗಳ ಕುರಿತೂ ಭಾರತ ಪಾರ್ಲಿಮೆಂಟಿನಲ್ಲಿ ಸವಿವರ ಪರ್ಯಾಲೋಚನೆಗಳಾಗಿವೆ. ವಿದೇಶೀ ಭಂಡವಾಳಗಳ ಮೇಲೆ ಯಾವ ವಕ್ರದೃಷ್ಟಿಯನ್ನೂ ಇಡದೆ, ಇಲ್ಲಿ ಕಾರ್ಖಾನೋದ್ಯಮಗಳಿಗೆ ಹಣ ಹಾಕುವ ವಿದೇಶೀಯರನ್ನು ಸುಸ್ವಾಗತಿಸುವೆವೆಂಬ ಸ್ಪಷ್ಟ ಆಶ್ವಾಸನೆಯನ್ನು ಎಪ್ರಿಲ್ ಆದಿಭಾಗದಲ್ಲಿ ಪಾರ್ಲಿಮೆಂಟಿನ ಮುಂದೆ ಪ್ರಧಾನಿ ನೆಹರುಗಳು ಜಾಹೀರು ಮಾಡಲಿರುವರೆಂದು ತಿಳಿದು ಬರುತ್ತದೆ.

ಅಮೇರಿಕದಲ್ಲಿ ಭಾರತ ರಾಯಭಾರಿಯಾಗಿದ್ದ ಶ್ರೀ ಬೆನಗಲ್ ರಾಮರಾಯರು ಅಲ್ಲಿಂದೀಗ ಮರಳಿರುವುದರಿಂದ ಅವರ ಸ್ಥಾನಕ್ಕೆ, ಈ ವರೆಗೆ ರಶ್ಯದಲ್ಲಿ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ನೇಮಿಸಲ್ಪಟ್ಟಿದ್ದಾರೆ.

ಭಾರತದ ನಾಲ್ಕೈದು ತುಂಡು ಭಾಗಗಳಲ್ಲಿ ಈಗಲೂ ಇರುವ ಫ್ರೆಂಚ್ ಮೇಲಧಿಕಾರವನ್ನು ಮುಕ್ತಾಯಗೊಳಿಸಿ ಅಖಂಡಭಾರತದೊಡನೆ ಅವುಗಳನ್ನು ಐಕ್ಯಗೊಳಿಸುವ ಬೇಡಿಕೆಗಳು ದೀರ್ಘಕಾಲದಿಂದ ಇವೆ. ಪ್ರತ್ಯಕ್ಷ ತನ್ನ ಭೂತುಣುಕುಗಳು ಇನ್ನೂ ಪರಾಧೀನತೆಯಲ್ಲಿರುವ ಅಸಹ್ಯಸ್ಥಿತಿಯನ್ನು ಸ್ವತಂತ್ರಭಾರತವೆಂದಿಗೂ ಒಪ್ಪದಾದರೂ ಅದಕ್ಕಾಗಿ ಫ್ರೆಂಚ್ ರಿಪಬ್ಲಿಕಿನೊಡನೆ ಘರ್ಷಣೆಗೀಳುವುದು ನ್ಯಾಯವಲ್ಲವೆಂಬ ಧೋರಣೆ ವಹಿಸಿದೆ. ಫ್ರೆಂಚ್ ಸರಕಾರವಾದರೂ ಈ ಕುರಿತು ಪುರಸ್ಕಾರಬುದ್ಧಿ ಪ್ರದರ್ಶಿಸದೆ ವ್ಯವಹಾರೋಚಿತವಾಗಿ ವರ್ತಿಸುವ ಸಿದ್ಧತೆ ಪ್ರದರ್ಶಿಸಿದೆ ಫ್ರೆಂಚ್ ವಸಾಹತುಗಳು ಭಾರತದೊಂದಿಗೆ ಮಿಲನಗೊಳ್ಳಬೇಕೋ ಬೇಡವೋ ಎಂಬುದನ್ನು ತಿಳಿದುಕೊಳ್ಳಲು ಬರುವ ಡಿಸೆಂಬರ 11ರಲ್ಲಿ ಅಲ್ಲಿಯ ಜನಮತ ಸಂಗ್ರಹಿಸಬೇಕೆಂದು ನಿರ್ಣಯವಾಗಿದೆ. ಈ ವರೆಗೂ ಆ ಭಾಗಗಳಲ್ಲಿ ಯಾವ ವಿಧದ ಜನ ಜಾಗ್ರತೀ ಚಳವಳವೂ ಹುಟ್ಟದಂತೆ ಕಠಿಣ ಪ್ರತಿಬಂಧಕಗಳಿದ್ದುವು; ಭಾರತದಂತಹ ಆಂತರಿಕ ಆದಲು ಬದಲಾವಣೆಗಳಿಗಾವುವಕ್ಕೂ ಈಡಾಗದ ಆ ಫ್ರೆಂಚ್ ವಸಾಹತುಗಳಲ್ಲಿ ಪ್ರಕೃತ ತುಸು ಹೆಚ್ಚಿನ ಜೀವನ ಸೌಕರ್ಯಗಳಿವೆ; ಮೇಲಾಗಿ ಅಲ್ಲಿ ಮತದಾರರಿರುವುದು ಅದೊಂದು ಮಿತಿಯ ಸಂಖ್ಯೆಯಲ್ಲಿ—ಸರಿಯಾದ ಚುನಾವಣಾ ಪ್ರಚಾರಕ್ಕೆ ಅವಕಾಶ ದೊರೆಯುವದು ಅಸಂಭವ. ಹೀಗಾಗಿ ಇಂದಿನ ಸ್ಥಿತಿಯಲ್ಲೇ ಪಾಂಡಿಚೇರಿ, ಮಾಹೆ, ಚಂದ್ರನಾಗೋರ್ ಮೊದಲಾದ ಫ್ರೆಂಚಾಡಳಿತದ ಭೂಖಂಡಗಳಲ್ಲಿ ಜನಮತ ಸಂಗ್ರಹಿಸಿದರೆ ಪರಿಣಾಮದ ಕುರಿತು ಖಂಡಿತ ಭರವಸೆಯಿಡಲಾಗುವದಿಲ್ಲ. ಆದ್ದರಿಂದಲೇ ಕಾಂಗ್ರೆಸ್ ಅಧ್ಯಕ್ಷ ಡಾ. ಪಟ್ಟಾಭಿಗಳು ತಾನು ಅಲ್ಲಿಯ ಜನಮತ ಸಂಗ್ರಹಕ್ಕೆ ವಿರುದ್ಧವಿರುವೆನೆಂದೂ ಭಾರತದ ಭಾಗಗಳಾದ ಅವುಗಳನ್ನು ಮರುಮಾತಿಲ್ಲದೆ ಭಾರತದೊಂದಿಗೆ ಸೇರಿಸಿ ಬಿಡುವದೊಂದೇ ನ್ಯಾಯವೆಂದೂ ವಾದಿಸಿದ್ದಾರೆ. ಈ ನಡುವೆ ಭಾರತ ಮತ್ತು ಈ ಫ್ರೆಂಚ್ ವಸಾಹತುಗಳೊಳಗಾಗಿದ್ದ 'ಕಸ್ಟಮ್ಸ್ ಒಪ್ಪಂದ'ದ ಅವಧಿಯು ಇದೇ ಮಾರ್ಚ್ 31ಕ್ಕೆ ಮುಗಿಯಲಿವೆ. ಆ ಒಪ್ಪಂದವನ್ನು ಪುನರುತ್ಥಾನಗೊಳಿಸದೆ ಎಪ್ರಿಲ್ 1ರಿಂದ ಫ್ರೆಂಚ್ ವಸಾಹತು ಮತ್ತು ಭಾರತಗಳೊಳಗಿನ ಆಮದು ರಫ್ತುಗಳಿಗೆ ಹಿಂದೀ ಸರಕಾರದ ಸುಂಕ ಮತ್ತು ನಿಯಂತ್ರಣಗಳು ಬೀಳಲಿವೆ. ಆ ಪೈಕಿ ಕಲ್ಕತ್ತಾದ ಸಮೀಪವಿದ್ದು ಭಾರತ ಭೂಭಾಗದಿಂದ ಆವರಿಸಲ್ಪಟ್ಟಿರುವ ಚಂದ್ರನಾಗೋರಿನ ಮಟ್ಟಿಗೆ ಮಾತ್ರ ಹಿಂದಿನಂತೆಯೇ ವಹಿವಾಟುಗಳು ನಡೆಯುವವು.

ಕನ್ನಡಿಗರಿಗೆ ಇಂದು ವಿಶೇಷಾಸಕ್ತಿಯ ಪ್ರಶ್ನೆಯಾಗಿರುವ ಭಾಷಾವಾರು ಪ್ರಾಂತ್ಯರಚನೆಯ ಕುರಿತು ರಂಪ್ಟ್ರದ ಹಾಗೂ ಕಾಂಗ್ರೆಸ್ ಅಧಿಪತಿಗಳೊಳಗೆ ವಿಚಾರ ವಿನಿಮಯ ನಡೆದಿದೆ. ಈ ರಚನೆಗೆ ಹಿಂದಿನಷ್ಟು ಉಗ್ರ ವಿರೋಧವನ್ನು ನೆಹರು, ಪಟೇಲರೀಗ ಪ್ರದರ್ಶಿಸುತ್ತಿಲ್ಲ. ಇದೇ ಎಪ್ರಿಲ್ ಏಳಕ್ಕೆ ನವದಿಲ್ಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸೇರಿದಾಗ ಈ ಸಂಬಂಧದ ಒಂದು ತೀರ್ಮಾನ ರೂಪುಗೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಜೈಪುರ್ ಕಾಂಗ್ರೆಸಿನಲ್ಲಿ ನೇಮಿಸಲ್ಪಟ್ಟ ಪಟ್ಟಾಭಿ, ನೆಹರು, ಪಟೇಲರುಳ್ಳ ಸಮಿತಿಯು ಅಲ್ಲಿ ತನ್ನ ವರದಿಯನ್ನೊಪ್ಪಿಸಲಿದೆಯೆಂದೂ ಕೇಂದ್ರೀಯ ಪಕ್ಷ ಯಾವುದಾದರೊಂದು ಮಧ್ಯಗಾಮೀ ವಿಧಾನವಾದರೂ ಅಲ್ಲಿ ನಿಶ್ಚಯಿಸಲ್ಪಡಬಹುದೆಂದೂ ನಿರೀಕ್ಷೆಯಿದೆ

1949—50ರಲ್ಲಿ ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂದು ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1-4-0 ಕಳುಹಿಸಿರಿ. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು, ಲಾಭ ನಷ್ಟಗಳು, ಮದುವೆ, ಮುಂಜಿ, ಸಂತತಿ, ತೇಜಿ ಮಂದಿ, ಸಮಯಾದಿಗಳನ್ನು ಸೂಚಿಸುವೆವು. ಅಲ್ಲದೆ ದುಷ್ಟ ಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನು ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು. ಟಪ್ಪಾಲು ವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,
Raj Jyotshi
(N. Y. U.) Jullundur City.

ತಮ್ಮಷ್ಟಕ್ಕೆ ತಾವು ಇಂಗ್ಲಿಷ್ ಕಲಿಯಲು ಅನುಕೂಲವಾದ
ದಿ| ಕೊರಡ್ಕಲ್ ಶ್ರೀನಿವಾಸರಾಯರ

ಸುಲಭ ಇಂಗ್ಲಿಷ್

ಎಂಬ ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ . ರೂ. 1—8—0.

ಸರ್ವಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ
ವಿಧಾನವನ್ನು ವಿವರಿಸುವ ದಾ| ಕೊರಡ್ಕಲ್ಲರ

ಮನೆ ಮದ್ದು

ಎಂಬ ಗೃಹವೈದ್ಯ
ಬೆಲೆ ರೂ. 2—0 ಟಪ್ಪಾಲು ದ್ವಾರಾ ರೂ. 2-6-0

ಶಾಲೆ, ಕಾಲೇಜುಗಳ,
ಪಂಚಾಯತ ಬೋರ್ಡ್, ಗ್ರಾಮ ಸಂಘಗಳ,
ಲೈಬ್ರರಿಗಳಿಗೆ
ಬೇಕಾಗುವ ಕರ್ನಾಟಕದ ಬೇರೆ ಬೇರೆ ಭಾಗಗಳ

ಕನ್ನಡ ಪುಸ್ತಕಗಳು

ಆಕರ್ಷಕ ದರದಲ್ಲಿ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ. ಉಡುಪಿ.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ- ಶಾಲೆಗಳಿಗೆ-
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿಪುಸ್ತಕಗಳು, ಫಾರ್ಮುಗಳೂ, ಎಕೌಂಟ್ ಪುಸ್ತಕ,
ಕುರಿಘಂಡು ಪುಸ್ತಕಗಳೂ
ದೊರೆಯುತ್ತವೆ.

THE

Canara Banking Corporation Ltd.

(Incorporated in India)

Estd: 1906.

HEAD OFFICE: UDIPI, S. I.

SEASON DEPOSITS

For Rs. 2,000/- and over are now accepted at all Offices of the Bank at the following rates:-

3 & 4 Months ... @ 2½ % p. a.

5 & 6 Months .... @ 2¾ % p. a.

ಸೋಮವಾರ, ಮಾರ್ಚಿ, ೨೧-೩-'೪೯

ನೀರಾವರಿ ಯೋಜನೆ

ಎಸೆಂಬ್ಲಿಯಲ್ಲಿ 1949-50ನೇ ವರುಷದ ಬಗ್ಗೆ, 'ನೀರಾವರಿ' ಖಾತೆಯ ಸಂಬಂಧದ ಬಜೆಟ್ ಬೇಡಿಕೆ ಮುಂದಿಡುತ್ತ, ಮದ್ರಾಸ್ ಪ್ರಾಂತ್ಯದ ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ. ಎಮ್. ಭಕ್ತವತ್ಸಲಮ್ ಇವರು ಪ್ರಾಂತ್ಯದಲ್ಲಿ ನಡೆದಿರುವ ನೀರಾವರಿ ಸಂಬಂಧದ ಕಾರ್ಯಕಲಾಪಗಳನ್ನು ಜಿಲ್ಲಾವಾರಾಗಿ ವಿವರಿಸಿದ್ದಾರೆ. "ದೊಡ್ಡ ದೊಡ್ಡ ನೀರಾವರೀ ಯೋಜನೆಗಳ ವಿನಹ ಪ್ರತಿಯೊಂದು ಜಿಲ್ಲೆಯಲ್ಲೂ ನೀರಾವರಿ ಕಾರ್ಯಗಳಿಗಾಗಿ ಒಂದೊಂದು ಕೋಟಿ ರೂಪಾಯಿಗಳಿಗೆ ಕಡಿಮೆಯಾಗದಷ್ಟನ್ನು ವ್ಯಯಿಸಬೇಕೆಂದು ಸರಕಾರದ ಆಶೆಯು" ಎಂಬ ಮಂತ್ರಿಗಳ ಮಾತು ದಕ್ಷಿಣ ಕನ್ನಡಿಗರಲ್ಲೂ ಭರವಸೆಯನ್ನು ಹುಟ್ಟಿಸುವಂತಹದು. ಸಾರ್ವಜನಿಕ ಕಾರ್ಯಖಾತೆಯ ಇಂದಿನ ಮಂತ್ರಿಗಳು ಪ್ರಕಾಶಂ ಮಂತ್ರಿಮಂಡಲದಲ್ಲೂ ಇದೇ ಖಾತೆಯನ್ನು ನಿರ್ವಹಿಸಿದ್ದವರು. ಆ ಕಾಲದಲ್ಲೊಮ್ಮೆ ದಕ್ಷಿಣ ಕನ್ನಡವನ್ನು ಸಂದರ್ಶಿಸಿ, ಇಲ್ಲಿ ಎಷ್ಟೋ ವರುಷಗಳಿಂದ ಹಾಳುಬಿದ್ದಿರುವ— ದುರಸ್ತಿಯಾದಲ್ಲಿ ಸಾಗುವಳಿ ಹಾಗೂ ಕೃಷಿಗೆ ನೀರನ್ನೊದಗಿಸಬಲ್ಲ— ಮದಗ, ಕೆರೆ, ಕಾಲುವೆಗಳು ಕೆಲವನ್ನು ಪ್ರತ್ಯಕ್ಷ ಕಂಡಿದ್ದರು. ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳು ನೀರಾವರಿ ದುರಸ್ತಿ ಅಥವಾ ರಚನಾ ಕಾರ್ಯದಲ್ಲಿ ಪ್ರಾಂತ್ಯದ ಮಿಕ್ಕ ಜಿಲ್ಲೆಗಳಿಗಿಂತ ಹೆಚ್ಚಾಗಿ ಕಡೆಗಣಿಸಲ್ಪಟ್ಟಿವೆ ಎಂಬ ದೂರು ಈ ಬಾರಿಯ ಎಸೆಂಬ್ಲಿ ಚರ್ಚೆಯಲ್ಲೂ ಈ ಕಡೆಯ ಪ್ರತಿನಿಧಿಗಳಿಂದ ಮುಂದೊಡ್ಡಿತ್ತು; ಇವೆರಡು ಜಿಲ್ಲೆಗಳು ಈ ಮಟ್ಟಿಗೆ ಹಿಂದುಬಿದ್ದಿವೆಯೆಂಬುವನ್ನು ಮಂತ್ರಿಗಳು ಕೂಡಾ ಒಪ್ಪಿಕೊಳ್ಳದೆ ನಿರ್ವಾಹವಿರಲಿಲ್ಲ. ಆದರೆ "ಹಾಗಾಗಲು ಮಲಬಾರು ಮತ್ತು ದಕ್ಷಿಣ ಕನ್ನಡಗಳ ಪರಿಸ್ಥಿತಿಯೇ ಕಾರಣ; ಹಿಂದಿನ ಆಡಳಿತೆಗಳಲ್ಲಾಗಿತ್ತು, ಬಂದಿದ್ದ ಅಡ್ಡಿಗಳಿಗೆ ಈಗಿನ ಸರಕಾರವು ಹೊಣೆಯಲ್ಲ" ಎಂದು ಶ್ರೀ. ಭಕ್ತವತ್ಸಲಂ ಬಿಟ್ಟಿದ್ದಾರೆ. ಗತಕಾಲದ ಆಗುಹೋಗುಗಳ ಕುರಿತು ವಾದವಿವಾದ ಅನಗತ್ಯ. ಇನ್ನು ಮುಂದಕ್ಕಾದರೂ ದಕ್ಷಿಣ ಕನ್ನಡ, ಮಲಬಾರು, ಮತ್ತು ಪ್ರಾಂತ್ಯದ ಎಲ್ಲಾ ಕಡೆಯ ನೀರಾವರೀ ಸುಧಾರಣೆಗಳು ಪರಿಣಾಮಕಾರಿಯಾಗಿ ಜಾರಿಗೆ ಬಂದಾವೆ ಎಂಬುದೇ ಈಗಿನ ಪ್ರಶ್ನೆ. "ಕಾಸರಗೋಡಿನ 'ತಿರಿಯಾರ' ಯೋಜನೆ'ಯು ವೆಚ್ಚದಾಯಿಯಿದ್ದರೂ ಅದಕ್ಕಾಗಿ ಅಂದಾಜು ಪಟ್ಟಿಯಲ್ಲಿ ರೂ. 3 ಲಕ್ಷವನ್ನು ಮೀಸಲಿಡಲಾಗಿದೆ. ಸುಮಾರು 300 ಎಕ್ರೆ ಜಮೀನಿಗೆ ನೀರನ್ನೊದಗಿಸುವ 'ಚಂದ್ರಮದಗು ಯೋಜನೆ'ಯೊಂದನ್ನು ಮಂಜೂರು ಮಾಡಿದ್ದೇವೆ. 'ಪಯಸ್ವಿನೀ ಯೋಜನೆ' ಸಮೇತ ಮಿಕ್ಕ ಹಲವು ನೀರಾವರಿ ಯೋಜನೆಗಳ ಶೋಧನೆಗಾಗಿ ಒಂದು ಸ್ಪೆಶ್ಯಲ್ ಮಂಡಲಿಯೀಗ ಕೆಲಸಮಾಡುತ್ತಿದೆ. ಈ ಮೊದಲು ಮಲಬಾರು ಮತ್ತು ದಕ್ಷಿಣ ಕನ್ನಡ, ಎರಡಕ್ಕೊಬ್ಬನೇ ಇಂಜಿನೀಯರನಿರುತ್ತಿದ್ದರೆ, ಈಗಿನ ಸರಕಾರವು ಶೋಧಕ ತಜ್ಞ ವರ್ಗವನ್ನಲ್ಲದೆ ಜಿಲ್ಲೆಗೊಬ್ಬನಂತೆ ಇಂಜಿನೀಯರನನ್ನೂ ನೇಮಿಸಿದೆ. ಅಂತೂ ದಕ್ಷಿಣ ಕನ್ನಡದ ನೀರಾವರಿ ಸೌಕರ್ಯಗಳನ್ನು ಸುಧಾರಿಸುವ ಮಟ್ಟಿಗೂ, ದ್ವಿತೀಯ ಮತ್ತು ತೃತೀಯ ಬೆಳೆಗಳಿಗೆ ನೀರೊದಗಿಸಲಾಗುವಂತೆ ಮಳೆ ನೀರನ್ನು ಸಂಗ್ರಹಿಸಿಡುವ ವ್ಯವಸ್ಥೆಯಲ್ಲೂ ಸರಕಾರವು ಸಾಧ್ಯವಿದ್ದುದನ್ನೆಲ್ಲಾ ಮಾಡುತ್ತಿದೆ ಎಂದು ನಾನು ಭರವಸೆ ಕೊಡುತ್ತೇನೆ" ಎಂದು ಸಾರ್ವಜನಿಕ ಕಾಮಗಾರಿ ಸಚಿವರಂದಿದ್ದಾರೆ. ಜೊತೆ ಕಾಲುವೆಗಳ ಸಣ್ಣ ಅಣೆಕಟ್ಟುಗಳು:— ಕೆರೆ ಮದಗಗಳ ದುರಸ್ತಿ— ಬಾವಿ, ಕೆರೆ ಅಗೆತ— ಮುಂತಾದ ಹಲವು ಸಣ್ಣ ಯೋಜನೆಗಳನ್ನು ಅಧಿಕ ಸಂಖ್ಯೆಯಲ್ಲಿ ಕೈಕೊಳ್ಳುವ ಅನುಕೂಲತೆಗಳೇ ದಕ್ಷಿಣ ಕನ್ನಡದಲ್ಲಿವೆ. ಸರಕಾರವೀಗ ನೇಮಿಸಿರುವ ಶೋಧಕ ಮಂಡಲಿಯು, ಇವೆಲ್ಲವುಗಳನ್ನೂ ಸರಿಯಾಗಿ ಶೋಧಿಸಿ ಅಂದಾಜು ಹಾಕುವದೆಂದೂ, ಬೇಗನೆ ಸರಕಾರವು ಅಗತ್ಯವುಳ್ಳ ಕಾರ್ಯಕ್ಕಿಳಿಯುವದೆಂದೂ ನಂಬುತ್ತೇವೆ. ಈ ಜಿಲ್ಲೆಯ ಪಾಲಿನ ಒಂದು ಕೋಟಿ ರೂಪಾಯಿಗಳಿಂದ, ಇಲ್ಲಿ ಗಣ್ಯ ಸುಧಾರಣೆಗಳಾಗಲು ಸಾಧ್ಯವಿದೆ. ಇದುವರೆಗಿನ ಅನುಭವದಿಂದ ನಮ್ಮಲ್ಲಿ ಉಂಟಾಗುತ್ತಿರುವ ಶಂಕೆಯೆಂದರೆ, ಸರಕಾರೀ ಹೇಳಿಕೆಯ ಮೂಲಕ ಮುಂದೆ ಬರುವ ಈ ಆವಶ್ಯಕ ಕಾರ್ಯಗಳು, ಅನಗತ್ಯ ವಿಳಂಬವಿಲ್ಲದೆ ಕಾರ್ಯರೂಪದಿಂದ ತೋರಿಬಂದಾವೆ?— ಎಂಬುದೇ. ಇನ್ನು ಎರಡೇ ವರುಷಗಳೊಳಗೆ ಭಾರತವು ಆಹಾರದ ಮಟ್ಟಿಗೆ ಸ್ವಾವಲಂಬಿಯಾಗಲೇಬೇಕು, ಎಂಬ ಭಾರತ ಸರಕಾರದ ಧ್ಯೇಯ ನಿರ್ಧಾರಕ್ಕನು…

ಶಾಸನಸಭಾ ಸವಾಲುಗಳು

ಎಸೆಂಬ್ಲಿ ಚರ್ಚೆಗಳಲ್ಲಿ ವಿನೋದ, ವಿಚಾರ, ಮತ್ತು ಕುತೂಹಲವನ್ನು ಕೆರಳಿಸುವ ವಿಶೇಷ ಘಟನೆಗಳು ಆಗಾಗ ಹುಟ್ಟಿಕೊಳ್ಳುವದು ಸಂಪ್ರದಾಯ. ಈ ಬಾರಿಯ ಮದ್ರಾಸ್ ಎಸೆಂಬ್ಲಿಯ ಬಜೆಟ್ ಚರ್ಚೆಗಳಲ್ಲಿ ಇಂತಹವು ಸಾಕಷ್ಟು ತೋರಿಬಂದಿವೆ. ಮಂತ್ರಿಗಳ ಸಂಬಳದ ಗ್ರಾಂಟಿನ ಚರ್ಚೆಯ ವೇಳೆ ಮಿ. ಅಬ್ದುಲ್ ಹಮೀದ್ ಖಾನ್ ಆರೋಪಿಸಿದ್ದರು: "ಮಂತ್ರಿಗಳ ಮತ್ತು ಕೆಲವು ಅಧೀಸರರ ಮೇಲೆ ಕಣ್ಣಿಡುವದಕ್ಕಾಗಿ ಪ್ರಧಾನ ಮಂತ್ರಿಗಳು ಸಿ. ಐ. ಡಿ. ಗಳನ್ನು ನೇಮಿಸುವ ಮೂಲಕ 'ಗೆಸ್ಟಪೊ' ವಿಧಾನವನ್ನಂಗೀಕರಿಸಿದ್ದಾರೆ. ಉಳಿದ ಮಂತ್ರಿಗಳ ಬೆನ್ನ ಹಿಂದೆಯೆ ಅವರಿಗೆ ಸಂಬಂಧಿಸಿದ ವಿಷಯಗಳನ್ನು ಕೇಳಿ, ಪ್ರಧಾನ ಮಂತ್ರಿಗಳು ಅವನ್ನು ಜಿಗುಪ್ಸೆಗೀಡುಮಾಡುತ್ತಾರೆ." ಆ ಮೇಲೆ ಪೋಲಿಸ್ ಡಿಪಾರ್ಟ್‌ಮೆಂಟಿನ ಗ್ರಾಂಟು ಸಂಬಂಧದ ಚರ್ಚೆಯ ವೇಳೆ ಪ್ರಧಾನ ಮಂತ್ರಿ ಶ್ರೀ ಓಮಂದೂರರು ಮೇಲಿನ ಆರೋಪವನ್ನು ಕಂಠೋಕ್ತವಾಗಿ ಅಲ್ಲಗಳೆದು ಹೇಳಿದ್ದರು. "ನನ್ನ ಮತ್ತಿತರ ಮಂತ್ರಿಗಳ ಸ್ನೇಹಸಂಬಂಧವು ಅತ್ಯುತ್ತಮವಿದೆ. ನನ್ನ ಯಾವನೇ ಅನುಯಾಯೀ ಮಂತ್ರಿಯ ಮೇಲೆ ಗುಪ್ತಪೋಲೀಸರ ಕಣ್ಣಿದೆಯೆಂಬುದು ತೀರಾ ತಪ್ಪುಮಾತು. ನನ್ನ ಮೇಲೆ ಹೇಗೋ ಹಾಗೆಯೇ ಇತರ ಮಂತ್ರಿಗಳ ಮೇಲೂ ಅವರ ದೇಹರಕ್ಷಣೆಗಾಗಿ ಕೆಲವು ಸ್ಪೆಶಲ್ ಬ್ರಾಂಚ್ ಪೋಲೀಸರು ನೇಮಿಸಲ್ಪಟ್ಟಿರುವುದು ನಿಜ. ಮಂತ್ರಿಗಳ ಜೀವನದ ಕುರಿತು ಅತಿಹೆಚ್ಚಿನ ಜಾಗ್ರತೆವಹಿಸಬೇಕೆಂದು ನಮಗೆ ಹಲವಾರು ವರದಿಗಳು ಬಂದುದರಿಂದಲೇ ಹೀಗೆ ಕಾವಲು ನೇಮಕವಾಗಿದೆ. ಅದು ತನಗೊಂದು ಅಡ್ಡಿಯೆಂದು ಭಾವಿಸುವ ಯಾವ ಮಂತ್ರಿಯಾದರೂ ಈ ಪಹರೆಯನ್ನು ವಿಸರ್ಜಿಸಿಕೊಳ್ಳಬಹುದು. ಇನ್ನು ಯಾವುದೇ ಅಧೀಸರನ ದೈನಿಕ ಕಾರ್ಯಗಳಲ್ಲಿ ಕೈಹಾಕುವ ಅಥವಾ ಸಿ. ಐ. ಡಿ ಗಳನ್ನಿಡುವ ಪ್ರಶ್ನೆಯೇ ಇಲ್ಲ. ಎಲ್ಲಾ ಅಧೀಸರರೂ ತಂತಮ್ಮ ಕೆಲಸವನ್ನು ಸೊಗಸಾಗಿ ಮತ್ತು ಯಥಾರ್ಥತೆಯಿಂದ ಮಾಡುವರೆಂಬುದೇ ನಮ್ಮ ವಿಶ್ವಾಸ. ಅವರ ಮೇಲೆ ಕಾವಲಿಡುವಷ್ಟು ಜನವಾಗಲೀ ಆ ಇಚ್ಛೆಯಾಗಲೀ, ಅಂತಹ ಆಗತ್ಯವಾಗಲೀ ನಮಗಿಲ್ಲ. ಯಾರಾದರೂ ಅಧೀಸರರ ಮೇಲೆ ಗುಪ್ತ ಕಾವಲಿದೆಯಾದರೆ, ಅದು ದುರಾಡಳಿತೆಯ ಖಾತ್ರಿ ಸುದ್ದಿ ಸಿಕ್ಕಿ 'ಸಿ ಬ್ರಾಂಚ್'ದಿಂದ ಬಿದ್ದಿಂಬಹುದು ಹೊರತು ಬೇರಲ್ಲ" ಪ್ರಧಾನ ಮಂತ್ರಿಗಳು ಮಾತಾಡಿದ ಮೇಲೆ ಮಿ. ಹಮೀದ ಖಾನ್ ಎದ್ದು: "ಡಾ. ಸುಬ್ಬರಾಯನ್ ಮತ್ತು ಗತಿಸಿದ ಡಾನಿಯೇಲ್ ಥೋಮಸರ ಮೇಲೆ ಕಣ್ಣಿಡುವಂತೆ ಗುಪ್ತ ಪೋಲೀಸರನ್ನಾಗ ಕೇಳಿದ್ದಿಲ್ಲವೆ?" ಎಂದು ವಿಚಾರಿಸಿದರು. "ಇದು ತಪ್ಪು ಹೇಳಿಕೆ. ನಾನು ಅಂತಹ ಯಾವ ಆಜ್ಞೆಯನ್ನೂ ಕೊಟ್ಟಿದ್ದಿಲ್ಲ. ಆ ಹೇಳಿಕೆಯನ್ನು ನಾನು ಅಲ್ಲಗಳೆಯುತ್ತೇನೆ" ಎಂದು ಪ್ರಧಾನ ಮಂತ್ರಿಗಳು ಮರುನುಡಿದರು. ಕೂಡಲೇ ಮಿ. ಹಮೀದ್ ಖಾನರು "ಪ್ರಧಾನ ಮಂತ್ರಿಗಳ ಹೇಳಿಕೆಯ ಮೇಲಿಂದ, ನನ್ನ ಆ ಮಾತನ್ನು ಹಿಂದೆಗೆಯುತ್ತೇನೆ" ಎಂದರು.

೦೦ ೦೦

ಸುಲಭ ಹಾಗೂ ಕೃತ್ರಿಮ ಉಪಾಯಗಳಿಂದಲೇ ಗುರಿಮುಟ್ಟಬೇಕೆಂಬ ಲಾಲಸೆ ಈಗ ಪ್ರಪಂಚದ ಸರ್ವ ವಿಭಾಗಗಳಲ್ಲೂ ಕಂಡುಬರುತ್ತಿದೆ. ವಿದ್ಯಾರ್ಥಿ ವರ್ಗ ಇದಕ್ಕೆ ಅಪವಾದವಾಗಲಾರದು. ಕಷ್ಟಪಟ್ಟು ಕಲಿತು ಪಾಸಾಗುವದಕ್ಕಿಂತ ಪರೀಕ್ಷಾಪತ್ರಗಳನ್ನು ಕಳ್ಳತನದಿಂದ ಪಡೆದು ಪಾಸಾಗುವ ಸುಲಭೋಪಾಯಪ್ರವೃತ್ತಿಯು ಈಗಿನ ವಿದ್ಯಾರ್ಥಿಗಳಲ್ಲಿ ಹೆಚ್ಚಿದಂತಿದೆ. ಕಳೆದ ವರುಷವೇ ಪರೀಕ್ಷಾಪತ್ರಗಳು ಕಳ್ಳಸೋರಾಟಗೊಂಡಿದ್ದುವು; ಈ ವರುಷ ಆ ರೋಗ ಮತ್ತಷ್ಟು ಬೆಳೆದಂತಿದೆ. ದೇಶದ ಹಲವು ಕಡೆಗಳಲ್ಲಿ ಪರೀಕ್ಷಾವಧಿಗೆ ಮೊದಲೇ ಪ್ರಶ್ನಾಪತ್ರ ಬಹಿರಂಗವಾಗಿದೆ. ತತ್ಪರಿಣಾಮವಾಗಿ ಈ ಬಾರಿಯ ಮದ್ರಾಸ್ ಯುನಿವರ್ಸಿಟಿ 'ಇಂಟರ್‌ಮಿಡಿಯೇಟ್' ಪರೀಕ್ಷೆಯನ್ನು ರದ್ದು ಮಾಡಬೇಕಾಯಿತು. ಮದ್ರಾಸ್ ಎಸೆಂಬ್ಲಿಯಲ್ಲಿ ಈ ಸಂಬಂಧವಾಗಿ ಚರ್ಚೆಗಳಾಗಿದ್ದುವು. 'ಇಂಟರ್‌ಮಿಡಿಯೇಟ್, ಬಿ. ಎ. [ಓನರ್ಸ್] ಬಿ. ಕೊಮ್, ಮತ್ತು ಬಿ. ಓ. ಯಲ್. ಪರೀಕ್ಷೆಗಳ ಪ್ರಶ್ನಾಪತ್ರಗಳು ಮುಂದಾಗಿ ಬಹಿರಂಗವಾದ, ಅವಸರದ ಸಾರ್ವಜನಿಕ ಪ್ರಾಮುಖ್ಯತೆಯ ವಿಷಯವನ್ನು ಚರ್ಚಿಸಲು ಸಭಾಕಾರ್ಯವನ್ನು ಮುಂದುವರಿಸಬೇಕೆಂಬ ನಿಲುವಳಿ ಸೂಚನೆಯೊಂದನ್ನು ಶ್ರೀ ಕೆ. ಟಿ. ಕೋಸಲರಾಮರು ತಂದಿದ್ದರು. ಇದಕ್ಕುತ್ತರವಾಗಿ ವಿದ್ಯಾಮಂತ್ರಿ ಶ್ರೀ ಅವಿನಾಶಲಿಂಗ ಚೆಟ್ಟಿಯಾರರಂದರು. "ಮದ್ರಾಸ್ ಶಾಸನ ಸಭೆಯ ಒಂದು ಶಾಸನ ಮೂಲಕ, ಯುನಿವರ್ಸಿಟಿಯೆಂಬುದು ಒಂದು ಸ್ವಾಯತ್ತ ಸಂಸ್ಥೆಯಿದೆ. ಸರಕಾರವು…

ಸ್ಪಷ್ಟ ಅಧಿಕಾರಗಳು ಅದಕ್ಕೆ ಕೊಡಲ್ಪಟ್ಟಿವೆ. ವಿಶ್ವವಿದ್ಯಾಲಯ ಕ್ಲಾಸುಗಳ ಪರೀಕ್ಷೆ ನಿರ್ವಹಿಸುವ ಹೊಣೆಗಾರಿಕೆಯು ಸಂಪೂರ್ಣವಾಗಿ ಆ ವಿಶ್ವವಿದ್ಯಾಲಯದ್ದೇ. ಪರೀಕ್ಷಾ ಪತ್ರಗಳು ಬಹಿರಂಗವಾದ ಕುರಿತು ವಿಶ್ವವಿದ್ಯಾಲಯಾಧಿಕಾರಿಗಳು ಸಂತಾಪಗೊಂಡಿದ್ದಾರೆಂದೂ, ಆ ಕುರಿತು ಸರಕಾರದಷ್ಟೇ ಆಸಕ್ತಿ ಅವರಿಗೂ ಇದ್ದೀತೆಂದೂ ನನಗೆ ಖಾತ್ರಿಯಿದೆ. ಅಪರಾಧಿಗಳನ್ನು ಗೊತ್ತುಹಚ್ಚಿ ದಂಡನೆಗೀಡುಮಾಡುವದಕ್ಕೂ, ಇನ್ನುಮುಂದೆ ಇಂತಹ ದುರಂತ ನಡೆಯದಂತೆ ನೋಡುವ ಮಟ್ಟಿಗೂ ಅವರು ಅಗತ್ಯವುಳ್ಳ ಕಾರ್ಯ ಕೈಕೊಳ್ಳುವರೆಂದೂ ನಾನು ನಂಬುತ್ತೇನೆ" ಮಂತ್ರಿಗಳ ಮಾತಿಗುತ್ತರವಾಗಿ ಶ್ರೀ ಕೋಸಲ್ರಾಮುರವರು: "ವಿಶ್ವವಿದ್ಯಾಲಯವು ಸ್ವತಂತ್ರವಿದ್ದರೂ ತಕ್ಕ ಸಂದರ್ಭ ಬಂದಾಗ ಅದರ ಕಾರ್ಯಗಳೊಳಗೆ ಕೈಹಾಕುವ ಸರಕಾರದ ಅಧಿಕಾರಕ್ಕೇನೂ ಚ್ಯುತಿಯಿಲ್ಲ. ಒಂದು ಮನೆಯಲ್ಲಿ ಹೆಂಡತಿ ಸ್ವತಂತ್ರಳು. ಆದರೆ ಅವಳು ತಪ್ಪುಮಾಡಿದಾಗ ಅವಳನ್ನು ಶಿಕ್ಷಿಸುವ ಅಧಿಕಾರವು ಗಂಡನಿಗಿದ್ದೇ ಇದೆ. ಸರಕಾರವು ಯುನಿವರ್ಸಿಟಿಗೆ ಗ್ರಾಂಟು ಕೊಡುತ್ತದೆ. ಅಂದ ಮೇಲೆ ಯುನಿವರ್ಸಿಟಿಯ ಮೆನೇಜ್‌ಮೆಂಟಿನವರು ತಪ್ಪು ಮಾಡಿದಾಗ ಅದನ್ನು ಪ್ರಶ್ನಿಸುವ ಅಧಿಕಾರವೂ ಸರಕಾರಕ್ಕಿದೆ." ಶ್ರೀ ಮಿ. ಹಮೀದ್ ಖಾನರು ವಿದ್ಯಾಮಂತ್ರಿಗಳು ಅವಿವಾಹಿತರೆಂಬುದರಿಂದ ವಿನೋದಕ್ಕಾಗಿ ಕೇಳಿದರು: "ಸದಸ್ಯರು ಹೇಳಿದ ಆ 'ಗಂಡ ಹೆಂಡತಿ' ನಿದರ್ಶನವು ಮಂತ್ರಿಗಳಿಗೆ ಅರ್ಥವಾಯಿತೇ ಎಂಬುದನ್ನು ನಾನು ತಿಳಿಯಬಹುದೆ?" (ನಗು)

oo oo

ಈ ಬಾರಿಯ ಮದ್ರಾಸ್ ಎಸೆಂಬ್ಲಿ ಅಧಿವೇಶನವು ಪ್ರಶ್ನೋತ್ತರಗಳ ಮಟ್ಟಿಗೆ ಒಂದು ಹೊಸ ದಾಖಲೆಯನ್ನು ನಿರ್ಮಿಸಿದೆ. ಮಾರ್ಚ ತಾ. 25ರಲ್ಲಿ ಉತ್ತರಿಸಲ್ಪಟ್ಟ ಕೊನೆಯ ಪ್ರಶ್ನೆಯ ನಂಬ್ರವೇ 1005 ಆಗಿತ್ತು. ಶ್ರೀಮತಿ ಸೀತಾ ಮಹಾಲಕ್ಷ್ಮಮ್ಮ ಎಂ. ಎಲ್. ಎ., ಅವರ ಸಂಬಂಧದ ಒಂದು ವಿಷಯದ ಮೇಲಿನ ಪ್ರಶ್ನೋತ್ತರಗಳೇ ತಾ. 25ರ ಸಭೆ ಸಮಯದ ಗಣ್ಯಭಾಗವನ್ನಾಕ್ರಮಿಸಿದ್ದವು. ಆ ಸಂಗತಿಯಿಷ್ಟೆ: ಶ್ರೀಮತಿ ಸೀತಾಮಹಾಲಕ್ಷ್ಮಮ್ಮ ಕೃಷ್ಣಾ ಜಿಲ್ಲೆಯಿಂದ ಮದ್ರಾಸ್ ಎಸೆಂಬ್ಲಿಗಾರಿಸಲ್ಪಟ್ಟವರು. ಅಲ್ಲಿಯ ಕಲೆಕ್ಟರರು ತನ್ನ ನೌಕರರೊಂದಿಗೆ ಆಹಾರಧಾನ್ಯ ಸಂಗ್ರಹಕ್ಕಾಗಿ ಗನ್ನಾವರಮ್ ತಾಲೂಕಿನ ಕೃಷ್ಣಾಪುರಮ್ ಗ್ರಾಮಕ್ಕೆ ಹೋಗಿದ್ದರು; ಆ ಹಳ್ಳಿಗರು ಕಲೆಕ್ಟರರ ಅಪೇಕ್ಷೆಯಂತೆ ಕೆಲವು ಧಾನ್ಯಗಳನ್ನು ಕೊಡಲೊಪ್ಪಿದರು. ಅಷ್ಟರಲ್ಲಿ ಶ್ರೀ. ಸೀತಾಮಹಾಲಕ್ಷ್ಮಮ್ಮ ತನ್ನ ಪತಿಯೊಂದಿಗೆ ಗ್ರಾಮಕ್ಕೆ ಬಂದರು; ಆ ಕೂಡಲೇ ತಾವು ಕೊಡುತ್ತೇವೆಂದಿದ್ದ ಧಾನ್ಯವನ್ನು ಕೂಡಾ ಗ್ರಾಮಸ್ಥರು ಕೊಡಲೊಪ್ಪಲಿಲ್ಲ; ಆ ಮಹಿಳಾಸದಸ್ಯೆ ಅಲ್ಲಿಂದ ಹೋದಮೇಲೆ ಗ್ರಾಮಸ್ಥರು ಪುನಃ ತಮ್ಮ ಧಾನ್ಯ ಸಂಗ್ರಹವನ್ನು ಕೊಡಲೊಪ್ಪಿದರು. ತಮ್ಮ ಆಹಾರ ಸಂಗ್ರಹ ಕಾರ್ಯವನ್ನು ಈ ಎಸೆಂಬ್ಲಿ ಸದಸ್ಯೆ ಆತಂಕಿಸುತಿದ್ದಾರೆಂದು ಕಲೆಕ್ಟರರು ನಾಗರಿಕ ಸರಬರಾಯಿ ಕಮಿಶನರರಿಗೆ ಬರೆಕೊಂಡರು; ಕಮಿಶನರ್ ಪ್ರಧಾನ ಮಂತ್ರಿಗಳಿಗೆ ತಿಳಿಸಿದರು. ಪ್ರಧಾನ ಮಂತ್ರಿಗಳು, ಹಾಗೆ ಮಾಡಬಾರದೆಂದು ಆ ಮಹಿಳಾ ಸದಸ್ಯೆಗೆ ಬರೆದರು; ತಾನು ಹಾಗೆ ಮಾಡಿದ್ದಿಲ್ಲವೆಂಬ ಅರ್ಥದ ಉತ್ತರ ಆ ಮಹಿಳಾ ಸದಸ್ಯೆಯಿಂದ ಬಂತು. ಈ ಸಂಬಂಧವಾಗಿ, ಎಸೆಂಬ್ಲಿ ಸದಸ್ಯರೆಲ್ಲಾ ಒಮ್ಮತದಿಂದ ಒಂದರ ಮೇಲೊಂದರಂತೆ ಸವಾಲು, ಅಷ್ಟು ಸವಾಲುಗಳನ್ನು ಛಡಾಯಿಸಿದ್ದರು. "ಓರ್ವ ಎಂ. ಎಲ್. ಎಯ ಮೇಲೆ ಕಲೆಕ್ಟರನೊಬ್ಬನ ವರದಿಯಂತೆ ಪ್ರಧಾನ ಮಂತ್ರಿಗಳು ಅಂತಹ ಆಕ್ಷೇಪ ಹೇರಿದುದು ಸದಸ್ಯರೆಲ್ಲರ ಸ್ವಾಭಿಮಾನದ ಮುಂದೆ ಬಿದ್ದಿರುವ ಪ್ರಶ್ನೆ. ಸಂಗತಿಯೇನೆಂಬುದನ್ನು ವಿಚಾರಿಸಿ ತಿಳಿಯದೆ ನೌಕರನೊಬ್ಬನ ಮಾತಿನಂತೆ ಸ್ವತಂತ್ರ ಸದಸ್ಯೆಯನ್ನು ವಿಚಾರಿಸಿದ್ದು ಸರಿಯೆ?" ಎಂದು ಅನುಯಾಯಿ ಸದಸ್ಯರುಗಳ ಸವಾಲು. "ಅದೇನೂ ಆಜ್ಞೆಯಲ್ಲ; ಪ್ರಧಾನ ಮಂತ್ರಿಗಳು ಮಾಡಿಕೊಂಡ ವಿಜ್ಞಾಪನೆ ಮಾತ್ರ; ಆ ಸಂಬಂಧದ ಕಾಗದ ಪತ್ರಗಳಾವುವೂ ಇಲ್ಲ; ಆ ಸದಸ್ಯರು ಮಾಡಿದ್ದು ಹೌದಾದರೆ, ಮಾತ್ರ "ಹಾಗೆ ಮಾಡಬೇಡಿ" ಎಂದು ಪ್ರಧಾನಿಗಳು ಪಕ್ಷನಾಯಕಸ್ಥಾನದಿಂದ ತನ್ನ ಪಕ್ಷದೋರ್ವ ಸದಸ್ಯೆಗೆ ತಿಳಿಸಿದ್ದರು."—ಎಂದು ಪ್ರಧಾನಿಗಳ ಪರವಾಗಿ ಶ್ರೀ. ಬಿ. ಗೋಪಾಲರೆಡ್ಡಿಗಳ ಉತ್ತರ.

oo oo

ಮದ್ರಾಸ್ ಶಾಸನಸಭಾ ಕಾರ್ಯರಂಗದಲ್ಲಿ ಒಡೆದು ಕಾಣುತ್ತಿರುವ ಒಂದು ಸಂಗತಿಯೆಂದರೆ ಪ್ರಧಾನಮಂತ್ರಿ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರು, ಎಸೆಂಬ್ಲಿಯಲ್ಲಿ ಹೆಚ್ಚಿನ ಚರ್ಚೆಗಳ ವೇಳೆ ಗೈರುಹಾಜರಿರುವುದು. ಈ ಕುರಿತು ಹಲವು ಸದಸ್ಯರಿಂದ ಹಲವು ವಿಧದ ಟೀಕೆಗಳು ಸಂದರ್ಭಾನುಸಾರ ನಡೆದಿದ್ದವು. ಸದಸ್ಯರಾರಾದರೂ ಖಾಸಗಿಯಾಗಿ ಪ್ರಧಾನ ಮಂತ್ರಿಗಳ ಕುರಿತು ಮಾತು ಹಾರಿಸಿದಾಗ, ಆ ಮಾತನ್ನೆತ್ತಿಕೊಂಡು ಉತ್ತರಿಸಲು ಬೇರಾವುದೋ ಒಂದು ಸಂದರ್ಭದಲ್ಲಿ ಪ್ರಧಾನಿಗಳು ಎಸೆಂಬ್ಲಿಯಲ್ಲಿ ಹಾಜರಾಗುತ್ತಾರೆ. ಹೀಗಾಗಿ ಪ್ರತ್ಯಕ್ಷ ಎಸೆಂಬ್ಲಿಗೂ ಪ್ರಧಾನಿಗೂ ಅಂತೆಯೇ ಪ್ರಧಾನಿಗಳಿಗಿದಿರಾಗಿಬರುವ ಮಾತಿಗೂ ಅದಕ್ಕೆ ಪ್ರತಿಯಾಗಿ ಪ್ರಧಾನಿಯಿಂದ ಹೋಗುವ ಮಾತಿಗೂ ನಡುವೆ ವಿಶಾಲ ಬಿರುಕು ಉಳಿಯುತ್ತದೆ. ಶ್ರೀ ಓಮಂದೂರರು ವ್ಯಕ್ತಿಶಃ ಅತ್ಯಂತ ಶುದ್ಧ ಗುಣನಡತೆಯವರು, ಕಾರ್ಯ ನಿಷ್ಠರು ಎಂಬ ಕುರಿತು ಭಿನ್ನಾಭಿಪ್ರಾಯವಿಲ್ಲ. ಆದರೆ ಒಂದು ವಿಶಾಲ ಪ್ರಾಂತ್ಯದ ನಾಯಕನಲ್ಲಿರಬೇಕಾದ ನಿಸ್ಸಂಕೋಚತೆ, ಅವರಲ್ಲಿಲ್ಲ. ಅವರು ಹಲವು ರೀತಿಯಿಂದ ಒಂದು ಸಮಸ್ಯೆಯಾಗಿದ್ದಾರೆ. ಇದರಿಂದ ಅಲ್ಲಸಲ್ಲದ ಅಪನಂಬಿಕೆಗಳಿಗೂ ಅವಕಾಶ ದೊರೆತಿದೆ. ಈ ದಿನ ಅಲ್ಲಿ ನಡೆಯಲಿರುವ ನಾಯಕ ಚುನಾವಣೆಯಲ್ಲಿ ಶ್ರೀ ಓಮಂದೂರರು.....?

ಉಡುಪಿ

ಕಾವ ಮತ್ತು ಜಾಣ ಪರೀಕ್ಷೆ

ಕನ್ನಡ ಸಾಹಿತ್ಯ ಪರಿಷತ್ತಿನವರು ಪ್ರತಿವರುಷ ನಡೆಸುವ ಕನ್ನಡ 'ಜಾಣ' ಮತ್ತು 'ಕಾವ' ಪರೀಕ್ಷೆಗಳು ಈ ವರುಷ ನಾಲ್ಕು ಬಾರಿ ಮುಂದುವರಿಸಲ್ಪಟ್ಟು ಈಗ ಬರುವ ಎಪ್ರಿಲ್ ತಾ. 8, 9, 10ಕ್ಕೆ ನಡೆಯುವದೆಂದು ಜಾಹೀರಾಗಿದೆ. ಶಾಲೆ, ಸಂಸ್ಕೃತ ಕಾಲೇಜುಗಳ ವಿದ್ಯಾರ್ಥಿಗಳಿಗಿದು ವರುಷಾವಧಿ ಪರೀಕ್ಷೆಯ ಅವಧಿಯೆಂಬುದು ಗೊತ್ತಿರುವ ಸಂಗತಿ. ದ. ಕ. ಜಿಲ್ಲೆಯಲ್ಲಿ 'ಜಾಣ' 'ಕಾವ' ಪರೀಕ್ಷೆಗಳಿಗೆ ಪರೀಕ್ಷಾರ್ಥಿಗಳನ್ನು ಕಳಿಸುವ ಏಕ ಮಾತ್ರ ಕೇಂದ್ರವಾದ ಉಡುಪಿಯವರು, ತಮ್ಮ ಶಾಲಾ ಕಾಲೇಜು ಪರೀಕ್ಷಾ ದಿನಗಳಲ್ಲೇ ಬಿದ್ದಿರುವ ಈ ಪರೀಕ್ಷೆಯನ್ನು ಮತ್ತೆ ಮುಂದುವರಿಸಬೇಕೆಂದು ಸಾಹಿತ್ಯ ಪರಿಷತ್ತನ್ನು ತಂತಿ ಮೂಲಕ ಕೇಳಿಕೊಂಡುದಕ್ಕೆ ಸಾಧ್ಯವಿಲ್ಲ ಎಂಬ ಉತ್ತರ ಬಂದಿದೆ. ನವಂಬರ್ ತಿಂಗಳಲ್ಲಿ ನಡೆಯುತಿದ್ದ ಈ ಪರೀಕ್ಷೆಗಳು ಬೇರೆ ಭಾಗಗಳವರ ಅನುಕೂಲತೆಗಾಗಿ ಎಪ್ರಿಲ್ ತಿಂಗಳವರೆಗೂ ಹಿಂದೆ ಬಿದ್ದವು; ಹೀಗೆ ಬಾರಿ ಬಾರಿಗೂ ಮುಂದುವರಿಸುದಕ್ಕೆ ಅನಿವಾರ್ಯವಾದ ಅಥವಾ ನ್ಯಾಯಯುಕ್ತವಾದ ಕಾರಣವಾವುದೂ ತೋರುವುದಿಲ್ಲ. ಅಂದ ಮೇಲೆ, ಸಾಹಿತ್ಯ ಪರಿಷತ್ತಿನವರು ದಕ್ಷಿಣ ಕನ್ನಡದ ಪರೀಕ್ಷಾರ್ಥಿಗಳ ವಿಜ್ಞಾಪನೆಯನ್ನು ಮನ್ನಿಸುವುದಕ್ಕಾಗಿ ಪರೀಕ್ಷೆಯನ್ನು ಇಂದೊಂದು ಬಾರಿ ಮುಂದುವರಿಸಿ, ದಕ್ಷಿಣ ಕನ್ನಡಿಗರ ಕೃತಜ್ಞತೆಗೂ, ನಿಷ್ಪಕ್ಷಪಾತಿಗಳೆಂಬ ಕೀರ್ತಿಗೂ ಪಾತ್ರರಾಗಬೇಕಲ್ಲವೆ? ಎಂದು ಸಂಬಂಧ ಪಟ್ಟವರು ಪ್ರಶ್ನಿಸುತ್ತಾರೆ.

ಕುಂದಾಪುರ ಶಿರೂರು ಗ್ರಾಮದ ಹರವಿನಕೋಣೆಯ ಗೋಪಾಲ ಕಾಮತ್ತರ ಮನೆ ಶೋಧಿಸಿ ಶರಾಬಿನ 86 ಬಾಟ್ಲಿಗಳು ಇದ್ದುದನ್ನು ಎಕ್ಸೈಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಬಿ. ರಾಮರಾಯರು ಪತ್ತೆಹಚ್ಚಿ ತಾ ೨೨ರಲ್ಲಿ ಅವರನ್ನು ಕೈವಶಪಡಿಸಿರುವರು. ಶರಾಬು ಬಾಟ್ಲಿಗಳು ಅವರ ಬಾಳೆ ತೋಟದಲ್ಲಿ ಹುಗಿದಿಡಲಾಗಿತ್ತೆಂದು ಹೇಳಲಾಗಿದೆ.

ಬಸ್ರೂರು. ಮಹತೋಭಾರ ಶ್ರೀ ಮಹಾಲಿಂಗೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಕಾಲಾವಧಿ ನಡೆಯುತಕ್ಕ ಉತ್ಸವಾದಿ ಕಾರ್ಯಕ್ರಮಗಳು ಎಪ್ರಿಲ್ ತಾ. 7ರಿಂದ ಪ್ರಾರಂಭವಾಗಿ ತಾ. 15ರಲ್ಲಿ ಯಾತ್ರೆ ಜಲೋತ್ಸವ, ನಗರೋತ್ಸವದೊಂದಿಗೆ ಮುಕ್ತಾಯವಾಗ

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. I. A. 70/49 O. S. 2/49

ವಾದಿ– ವೈ. ಕೃಷ್ಣಪ್ಪ ಸೆಟ್ಟಿ. ಇವರಿಂದ ಜನರಲ್ ಪವರ್ ಆಫ್ ಎಟರ್ನಿ ಪಡೆದವರು, ವೈ. ಸೂರಯ್ಯಣ್ಣ ಸೆಟ್ಟಿ.

ಪ್ರತಿವಾದಿಗಳು–ಕೇಶವಶೇರೆಗಾರ ಸಹಾ.

ಸದ್ರಿದಾವೆಯ 7ನೇ ಪ್ರತಿವಾದಿಗೆ ತಿಳಿಯಪಡಿಸುವದು. 7ನೇ ಪ್ರತಿವಾದಿ ಮಲ್ಲಯ್ಯ ಶ್ಯಾನೆ ರಾಮಚಂದ್ರ ಶೇರೆಗಾರ, ಮನೆ ಒಂದ ಚೇತಿಗಾರರ ಮನೆ, ಕುಂದಾಪುರ ತಾಲ್ಲೂಕು ಬ್ರಹ್ಮಾವರ ಗ್ರಾಮದ ವ್ಯಾಯಾಮದಿ, ಸದ್ರಿ ವಾದಿಯು ತನಗೆ ಬರತಕ್ಕ ಮೂಲಗೇಣಿ ಮತ್ತು ಖಾಲಿಗೇಣಿ ಕೂಡಾ ಒಟ್ಟು ರೂಪಾಯಿ 696-12-2ನ್ನು ಬರಮಾಡಿಕೊಳ್ಳುವರೇ ದಾಖಲುಮಾಡಿದ ಮೇಲಿನ ದಾವೆ ನಂ ಬ್ರಿ ನಿಮ್ಮನ್ನು ಸದ್ರಿ ದಾವೆಯಲ್ಲಿ 7ನೇ ಪ್ರತಿವಾದಿಯನ್ನಾಗಿ ಸೇರಿಸಿಕೊಳ್ಳಬೇಕೆಂತಲೂ ದಾಖಲು ಮಾಡಿದ ಮೇಲಿನ ಅರ್ಜಿ ಕೂಡಾ ತಾ. 5-4-49ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವಸ ಹಗ್ಗೆ 11ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty

Advocate for Plffs.

— ಪ್ರಕಟಣೆ —

ದಿ

ಬೊಂಬೇ ಸ್ಟೀಮರ್ ನೇವಿಗೇಶನ್ ಕಂಪೆನಿ ಲಿ.,

ಮಂಗಳೂರು ಲೈನು ಪೆಸೆಂಜರು ಸ್ಟೀಮರು ಸರ್ವಿಸುಗಳ ಟಿಕೇಟಿನ ದರಗಳನ್ನು ತಾ 1-4-49ರಿಂದ ಈ ಕೆಳಗಿನಂತೆ ಏರಿಸಲಾಗಿದೆ.

		ಕೆಬಿನ್	ಅಪ್ಪರ್ ಕ್ಲಾಸು	ಲೋವರ್ ಕ್ಲಾಸು
ಮಲ್ಪೆಯಿಂದ	ಬೊಂಬಾಯಿ:—	76 8 0	38 4 0	25 8 0
,,	ಮರ್ಮಗೋವಾ	55 2 0	27 9 0	18 6 0
,,	ಕಾರವಾರ	37 2 0	18 9 0	12 6 0
,,	ತದಡಿ (ಗೋಕರ್ಣ)	27 0 0	13 8 0	9 0 0
,,	ಕುಮಟಾ	20 4 0	10 2 0	6 13 0
,,	ಭಟ್ಕಳ	10 2 0	5 1 0	3 6 0
,,	ಮಂಗಳೂರು	9 0 0	4 8 0	3 0 0

ಹೆಚ್ಚಿನ ಮಾಹಿತಿಗಳಿಗೆ ಮಲ್ಪೆ ಸ್ಟೀಮರು ಏಜಂಟರಿಂದ ತಿಳಿಯಿರಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು **30—3—1949**ರಿಂದ

ಪ್ರಚಂಡ **3**ನೇ ವಾರ—

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

ಅವರಂತೆ ತಿಳಿಯಬಾರದು.

ಸುರಭಿಯವರ ವರುಷಗಟ್ಟಲೆಯ ಶ್ರಮವು ನೋಡುವವರೆಲ್ಲರ ಹರುಷದ ಚಿತ್ರವಾಗಿ ಇಂದು 3ನೇ ವಾರದ ಮೆಟ್ಟಲೇರಿದೆ.

ಕನ್ನಡ ಚಿತ್ರ

ಭಕ್ತ ಕುಂಬಾರ

ಮುಂದಿನ ಕಾಂಗ್ರೆಸು?

ಲೇಖಕ:— ಡಿ'ಸೋಜ

ಅಂದು ಬಿತ್ತಲ್ಪಟ್ಟ ಬೀಜವು ಸಸಿಯಾಗಿ, ಗಿಡವಾಗಿ ಮರವಾಗಿ ಇಂದು ಹೂಗಳಿಂದಲೂ ಮಿಡಿಗಳಿಂದಲೂ ತುಂಬಿದ ಈ ಕಾಂಗ್ರೆಸು ಎಂಬ ಮರ. ಒಂದು ಸಸಿಯು ಮರವಾಗುವ ವರೆಗೆ ಅದಕ್ಕೆ ಅಡ್ಡವಾಗಿ ಸಿಗುತ್ತಿರುವ ಕಠಿಣ ಪರಿಸ್ಥಿತಿಗಳು, ಅದು ಸರಿಯಾಗಿ ಬೆಳೆಯದಂತೆ ಅದರ ತಲೆಯನ್ನೇ ಒತ್ತಿಡುವ ಇತರ ಶಕ್ತಿಯುತ ಮರಗಳು, ಇವುಗಳನ್ನು ಸಹಿಸಿಕೊಂಡು, ಈ ತಡೆಗಳೆಲ್ಲವೂ ತನ್ನನ್ನು ಇನ್ನಷ್ಟು ಬಲಗೊಳಿಸಲಿಕ್ಕೋ ಎಂಬಂತೆ ಅತಿ ಬೇಗ ಹಾಗೂ ಅಧಿಕ ರಭಸದಿಂದ ಬೆಳೆಯುತ್ತಿದೆ ಇಂತಹ ಸಸಿ. ಇದೇ ರೀತಿ ಕಾಂಗ್ರೆಸು ಮರವಾಗಿ ಬೆಳೆದು ಹಿಂದೂ ದೇಶವೆಂಬ ಅತಿ ವಿಶಾಲವಾದ ಮೈದಾನಿಗೆ ನೆರಳನ್ನು ಕೊಡುತ್ತಿರುವುದು. ಇನ್ನು ಮುಂದಿನ ಕಾರ್ಯವೆಂದರೆ ಈ ನೆರಳನ್ನೂ ಫಲ ಪುಷ್ಪಗಳನ್ನೂ ಈ ಮರವನ್ನು ಬೆಳೆಸಿದವರಿಗೂ, ಇತರರಿಗೂ ಒದಗಿಸಿಕೊಡುವುದೂ ಆಗಿರುವುದಲ್ಲವೆ?

ಚರಿತ್ರೆಯಿಂದ ನಾವು ತಿಳಿಯುವುದಾದರೆ, ಮೊದಲು ರಾಜರೂ ಚಕ್ರವರ್ತಿಗಳೂ, ಸರ್ವಾಧಿಕಾರಿಗಳಾಗಿದ್ದರು. ಅವರಲ್ಲಿ ಕೆಲವರು ಒಳ್ಳೆಯವರೂ ಹಲವರು ದುರ್ಗುಣಗಳೂ ಮಂದ ಬುದ್ಧಿಯುಳ್ಳವರೂ ಆಗಿದ್ದರು. ಕಾಲ ಚಕ್ರವು ತಿರುಗಿದಂತೆ ಜನತಾ ಸಂಘಟನಾ ಶಕ್ತಿಯು ಬಲಗೊಂಡು, ರಾಜನನ್ನು ಅಧೀನರಾಗಿರುವಂತೆ ಮಾಡಿಬಿಟ್ಟಿತು. ಮೊದಲು ಮೊದಲು ಶ್ರೀಮಂತರೂ, ವ್ಯಾಪಾರಸ್ಥರೂ ಬಲಶಾಲಿಗಳಾಗಿದ್ದು, ತದನಂತರ ಮೆಲ್ಲನೆ ಮಧ್ಯಮ ವರ್ಗದವರಿಗೂ ಕ್ರಮವಾಗಿ ಬಡವರಿಗೂ ಕೂಲಿಗಾರರಿಗೂ ಈ ಘಟನಾ ಅಧಿಕಾರವು ಇಳಿಯಿತು. ಇವುಗಳೆಲ್ಲಾ ಮಾಧ್ಯಮವಾಗಿರುವುದು ಮತದಾನಪದ್ಧತಿ. ಜನತೆಯು ಈ ಮತದಾನಪದ್ಧತಿ ಎಂಬ ಆಯುಧದಿಂದಲೇ ತನಗೆ ಬೇಕಾದ ವಿಜಯವನ್ನು ಸಂಪಾದಿಸಿದೆ. ಆರಂಭದಲ್ಲಿ ಮತಗಳ ಬೆಂಬಲದಿಂದಲೇ ಅಧಿಕಾರಕ್ಕೆ ಬಂದು ತರುವಾಯ ಜನಮತಗಳನ್ನೇ ಧಿಕ್ಕರಿಸಿ ಸರ್ವಾಧಿಕಾರ ವಹಿಸಿರುವ ರಾಷ್ಟ್ರಗಳು ಇದ್ದು ಕಳೆದ ಯುದ್ಧದಲ್ಲಿ ಪರಾಜಯಗೊಂಡಿವೆ. ಇನ್ನು ಒಂದು ಪಂಗಡವು ರಾಜ್ಯವು ಯುದ್ಧದಿಂದ ದುರ್ಬಲಗೊಂಡಾಗ ದಂಗೆಯೆದ್ದು ಸರ್ವಾಧಿಕಾರವನ್ನು ಕೈಗೊಂಡು ಇತರರಿಗೂ ಅದೇ ದುರ್ಬುದ್ಧಿಯನ್ನು ಕೊಡುತ್ತಿದೆ. ಇದೇ ಮಾನ್ಯ ನೆರೆಯವರುಗಳೆಂದಂತೆ ಸಂಧಿ ಸಾಧಿಸುವ ವಾದ. ಸಾಮ್ಯರೀತಿಯಿಂದ ಶ್ರಮಜೀವಿಗಳ ಪಕ್ಷವು ಇಂದು ಇಂಗ್ಲಂಡಿನಲ್ಲಿ ಅಧಿಕಾರದಲ್ಲಿಲ್ಲವೇ?

ನಮ್ಮಲ್ಲಿ ಇಂದು ಜನತೆಯ ಜೀವನ ಮಟ್ಟದಲ್ಲಿ ತುಂಬಾ ಏರುತಗ್ಗುಗಳಿವೆ. ದೊಡ್ಡ ದೊಡ್ಡ ಕಾರ್ಖಾನೆಗಳು ವಿರಳ. ಹೆಚ್ಚಿನ ಜನರು ಸಣ್ಣ ಸಣ್ಣ ಹಿಡುವಳಿಯಿಂದ ಬೇಸಾಯಮಾಡಿ ಹಳ್ಳಿಗಳಲ್ಲಿ ಜೀವಿಸುತ್ತಾರೆ. ಅಲ್ಲದೆ ಅಸಂಖ್ಯಾತ ಜನರು ಅವಿದ್ಯಾವಂತರು. ನಗರ ಜೀವಿಗಳಲ್ಲಿ ಹಾಗೂ ವಿದ್ಯಾವಂತರಲ್ಲಿ ಆಧುನಿಕ ಸಂಸ್ಕೃತಿ ನೆಲೆನಿಂತಿರುವುದಾದರೆ ದೇಶದ ಹೆಚ್ಚಿನವರಲ್ಲಿ ತಮ್ಮ ಹಿಂದಿನ ಸಂಪ್ರದಾಯಗಳೂ ಹಳೆ ನಾಗರೀಕತೆಯೂ ಮನೆಮಾಡಿಕೊಂಡಿದ್ದು ಅವು ನವನಾಗರಿಕತೆಯನ್ನು ಶಂಕಿಸಿ ಶಂಕಿಸಿ ಸ್ವೀಕರಿಸುತ್ತವೆ.

ರಾಜಕೀಯದಲ್ಲಿ ಇಂದು ಕಾಂಗ್ರೆಸು ಅಧಿಕಾರದಲ್ಲಿದೆ. ಅದು ಅಧಿಕಾರದಲ್ಲಿರುವುದು ಅದರ ರಚನಾತ್ಮಕ ಕಾರ್ಯಗಳಿಗಾಗಿ. ಅನೇಕರ ತ್ಯಾಗ, ಸೇವೆ, ಉದಾತ್ತ ಧ್ಯೇಯಗಳಿಂದ ಕಾಂಗ್ರೆಸು ಜನಪ್ರಿಯವೂ ದೇಶವ್ಯಾಪಿಯೂ ಆಗಿದೆ. ಇದರಿಂದ ಸ್ವರಾಜ್ಯವನ್ನೂ ಪಡೆಯಿತು. ಇಷ್ಟರಿಂದ ಕಾಂಗ್ರೆಸಿನ ಕಾರ್ಯ ಪೂರ್ತಿಗೊಂಡಂತಾಗಿದೆಯೋ? ಅದು ಬರೇ ಒಂದು ಪಂಚಾಂಗ ಹಾಕಿದಂತಾಗಿದೆಯಲ್ಲವೇ? ಆ ಗೋಡೆಗಳ ಮಾಡು, ಉಳಿದ ಕೆಲಸಗಳೆಲ್ಲಾ ಇನ್ನು ಅದರ ಮೇಲೆ ಬಿದ್ದಿವೆ.

ಇಂದು ಜನತೆಗೆ ಸ್ವಾತಂತ್ರ್ಯ ದೊರಕಿದೆ. ಆರ್ಥಿಕ ಸ್ವಾತಂತ್ರ್ಯವು ಜನತೆಗೆ ಸಿಗಬೇಕಾದ ಮುಖ್ಯ ಸ್ವಾತಂತ್ರ್ಯ. ಜನತೆಯಲ್ಲಿ ಅದರಲ್ಲೂ ವಿದ್ಯಾರ್ಥಿಗಳಲ್ಲಿ ಎಲ್ಲರೂ ಸಮಾನರೆಂಬ ಭಾವನೆಯು ಮಿಂಚಿನ ವೇಗದಿಂದ ಹರಡುತ್ತಿವೆ. ಹಿಂದಿನ ಒಡೆಯ ಆಳುಗಳೆಂಬ ವಿಭಿಸುವ ಮನಸ್ಸು ಇಂದು ಸರ್ವರಿಗೂ ಸಮಾನತೆ ಇರಬೇಕೆಂದು ಆಲೋಚಿಸುತ್ತದೆ. ರಾಷ್ಟ್ರದಲ್ಲಿ ಎಲ್ಲೆಲ್ಲೂ ಆರ್ಥಿಕ, ನೈತಿಕ ಹಾಗೂ ಸಮಾಜಿಕ ಪುನರ್ರಚನೆಗಳು ಅತೀ ಮಹತ್ವದ ಕೆಲಸಗಳು. ಇಂದು ಕಾಂಗ್ರೆಸಿನ ಹೊಣೆಯು ಅತೀ ವಿಶಾಲವಾಗಿದೆ. ಹಿಂದೆ ಪರರಾಷ್ಟ್ರದೊಂದಿಗೆ ಹೋರಾಟ ಒಂದೇ ಕಾರ್ಯಕ್ಷೇತ್ರವಾಗಿದ್ದರೆ ಇಂದು ಅಸಂಖ್ಯಾತ ಕಾರ್ಯ ಕ್ಷೇತ್ರಗಳಿವೆ.

ಕಾಂಗ್ರೆಸು ಇಂದು ಶ್ರಮಜೀವಿಗಳ, ಕೃಷಿಕರ, ಕಾರ್ಮಿಕರ ಮನ ಒಲಿಸಬೇಕು; ಇಂದು ವಯಸ್ಕರಿಗೆ ಮತದಾನದ ಹಕ್ಕಿದೆ. ಇನ್ನೂ ರಾಜಕೀಯದ ಗಂಧ ಗಾಳಿ ಬೀಸದವರಿದ್ದಾರೆ. ಮತವೆಂದರೇನೆಂದು ತಿಳಿಯದವರಿದ್ದಾರೆ. ಆದುದರಿಂದ ಮುಂದುವರಿದ ಯಾವ ದೇಶಕ್ಕಿಂತಲೂ ನಮ್ಮಲ್ಲಿ ಪ್ರಚಾರ ಮಾಡಿ ಜನಮತ [Vote] ಪಡೆಯುವುದು ಕಾಂಗ್ರೆಸಿಗೆ ಕಷ್ಟವಾಗಿಲ್ಲವೇ? ಪರಕೀಯ ರಾಷ್ಟ್ರ ಒಂದರ ಇಷ್ಟ ಸಿದ್ಧಿಗಾಗಿ ಇಲ್ಲಿಯ ಬಡಜನರ ಹಿತಸಾಧನೆ ಎಂದು ತಮ್ಮ ಕಾರ್ಯ ನೆರವೇರಿಸಲು ಎಲ್ಲೆಲ್ಲಿ ಒಂದು ಪಕ್ಷದವರು ಪ್ರವೇಶಿಸಿದರೂ ಅಲ್ಲಲ್ಲಿ ಕಾಂಗ್ರೆಸು ಹೆಚ್ಚಿನ ಲಕ್ಷ್ಯ ಕೊಡಬೇಡವೆ? ಇಲ್ಲಿಯ ಕೃಷಿಕರ ಸಂಬಂಧವನ್ನು ಬಿಟ್ಟು ಬಿಟ್ಟು ಇಲ್ಲಿ ಇತರರಿಗೆ ಎಡೆಕೊಟ್ಟಲ್ಲಿ ಅಜ್ಞಾನಿಗಳಾದ ರೈತರು(ಪ್ರತ್ಯೇಕವಾಗಿ ಚಾಲಗೇಣಿಯವರು) ಅಂತಹವರ ಬಲೆಗೆ ಬಹು ಸುಲಭವಾಗಿ ಬೀಳಲಾರರೆ?

ಇಂದು ನಮ್ಮ ಜಿಲ್ಲೆಯ ಕಾಂಗ್ರೆಸು ಪಕ್ಷವು ಎಲ್ಲಿಯೂ ಒಂದು ಕೃಷಿಕರ ಸಂಘಟನಾ ಕೇಂದ್ರವನ್ನು ತೆರೆದಿಲ್ಲ. ಮದ್ರಾಸು ಎಸೆಂಬ್ಲಿಯಲ್ಲಿ ಕೂಡಾ ಕೃಷಿಕರ, ಅವರ ಕಷ್ಟಗಳ, ಅವರಿಗಾಗುವ ಅನ್ಯಾಯಗಳ ಕುರಿತು ಒಂದಿಷ್ಟು ಚರ್ಚೆ ನಡೆದುದು ತಿಳಿದು ಬಂದಿಲ್ಲ. ಕೃಷಿಕರ ಹಕ್ಕು ಬಾಧ್ಯತೆಗಳಿಗೆ ಈಗ ಶಾಸನ ಸಭೆಗಳಿಂದಲೂ ಮಂತ್ರಿಗಳಿಂದ, ಕಾಂಗ್ರೆಸು ಕಮಿಟಿಯವರಿಂದ ಸ್ವಲ್ಪ ಭರವಸೆ ದೊರೆತಿಲ್ಲ. ಕೃಷಿಕರ ಬೆಂಬಲದಿಂದಲೇ ಕಾಂಗ್ರೆಸು ಅಧಿಕಾರದಲ್ಲಿರಬಲ್ಲುದು. ಯಾಕೆಂದರೆ ನಮ್ಮ ದೇಶದಲ್ಲಿ ಶೇಕಡಾ 75 ಜನರು ಕೃಷಿಕರಲ್ಲವೆ?

ಪ್ರಚಾರ ಕಾರ್ಯವು ಕಾಂಗ್ರೆಸಿನ ಬೆನ್ನೆಲುಬಾಗಬೇಕು. ಇಂದು ಕಾಂಗ್ರೆಸಿನ ಪ್ರಚಾರವು ಏನೂ ಸಾಲದು. ಸರಕಾರಿ ನೌಕರನೊಬ್ಬನು ಪ್ರಚಾರ ನಡಿಸುವುದಕ್ಕಿಂತ ಜನತಾ ವಿಶ್ವಾಸ ಪಾತ್ರನು ಅದಕ್ಕೆ ಎಷ್ಟೋ ಉತ್ತಮನು. ಕಾಂಗ್ರೆಸು ಈಗಲೇ ಕೃಷಿಕರಿಗೆ ತಕ್ಕಷ್ಟು ಅವರ ಹಕ್ಕು ಬಾಧ್ಯತೆಗಳನ್ನು ನೆರವೇರಿಸಿ ಕೊಡುವ ಭರವಸೆ ಕೊಟ್ಟು, ಅದರಂತೆ ಮಂತ್ರಿಗಳಿಂದ ಶಾಸನ ಸಭೆಗಳಿಂದ ಅದನ್ನು ನೆರವೇರಿಸಿ ಕೊಡಬೇಕು. ಅಲ್ಲದೇ ಬರೇ 'ಹೆಚ್ಚಿಗೆ ಬೆಳೆಯಿಸಿರಿ' ಎಂದು ಸಾರುವುದು ಇಲ್ಲವೇ ನೀರಾವರಿಯಿಂದಲೇ ಆಹಾರ ಹೆಚ್ಚಿಸುವುದು ಅತೀ ಪ್ರಾಮುಖ್ಯವೆನ್ನಲಾಗುವುದಿಲ್ಲ. ತನ್ನ ನೆಲೆ ಶಾಶ್ವತವಾಗಿಲ್ಲದ ರೈತನನ್ನು ಉತ್ತಮ ಗೊಬ್ಬರ, ಕೃಷಿ ಸಾಧನ, ಇವುಗಳಿಂದಲೇ ಉದ್ಧಾರ ಮಾಡುವುದೆಂದಾದರೆ ಕುಸಿದು ಬೀಳುತ್ತಿರುವ ಗೋಡೆಗೆ ಮತ್ತೂ ಮತ್ತೂ ಸುಣ್ಣ ಬಳಿದಂತಾಗುವುದು.

ಪ್ರತಿ ಹಳ್ಳಿಹಳ್ಳಿಯಲ್ಲಿಯೂ ರೈತರ, ಕೂಲಿಕಾರರ ಸಭೆಗಳನ್ನು ಕರೆದು ಕಾಂಗ್ರೆಸಿನ ಧ್ಯೇಯ ಧೋರಣೆಗಳನ್ನು ಜನರಿಗೆ ವಿವರಿಸಬೇಕಾದುದು ಇಂದು ಅನಿವಾರ್ಯವಾದ ಕೆಲಸಗಳಲ್ಲೊಂದು. ಕಾಂಗ್ರೆಸು ಸರಕಾರವು ಮಾಡಿದ ಕೆಲಸ ಮತ್ತು ಅದು ಮುಂದೆ ಮಾಡಲಿರುವ ಕೆಲಸಗಳನ್ನು ವಿವರಿಸಬೇಕು. ಜನತೆಯಲ್ಲಿ ಆಶೆಗಳನ್ನು ಹುಟ್ಟಿಸಿ ಅದರಂತೆ ಅವರು ವರ್ತಿಸುವಂತೆ ಮಾಡಲು ಅನುಕೂಲಪಡಿಸಬೇಕು. ಯುದ್ಧಕಾಲದಲ್ಲಿ ಆಗಿನ ಸರಕಾರವು ಯುದ್ಧ ಪ್ರಚಾರಕ್ಕಾಗಿ ಎಷ್ಟು ಶ್ರಮಪಟ್ಟಿದೆ, ಅದೇ ರೀತಿ ಶಾಂತಿಕಾಲದಲ್ಲಿ ಸರಕಾರವು ಸರಿ ಪ್ರಚಾರ ಕಾರ್ಯ ಮಾಡುವುದು ಅತೀ ಅಗತ್ಯ.

ಇಂದು ನಮ್ಮನ್ನು ಬಹಳ ಕಷ್ಟಕ್ಕೀಡು ಮಾಡಿರುವ ಸಮಸ್ಯೆಗಳಲ್ಲಿ ಆಹಾರ ಅಭಾವವು ಒಂದು. ರೈತರ ಸಭೆಗಳನ್ನು ಕರೆದು ಹೆಚ್ಚು ಬೆಳೆಯಿಸುವಂತೆ ಪ್ರೇರೇಪಿಸುವುದು, ಹೆಚ್ಚಿಗೆ ಆಹಾರ ಬೆಳೆಯಿಸುವುದಕ್ಕೆ ತುಂಬಾ ಸಹಕಾರಿಯಾದೀತು. ಹಳ್ಳಿಗಳಲ್ಲಿ ಆಹಾರ ಬೆಳೆಯಿಸಲು ಯೋಗ್ಯವಾದ ಎಷ್ಟೋ ಹಡಿಲುಭೂಮಿ ಇದೆ. ರೈತರು ಮಳೆಗಾಲದಲ್ಲಿ ಅಗೆದು ಗದ್ದೆಗಳನ್ನು ಮಾಡುವನೆಂದರೆ ಮರುವರುಷವೇ ಅದಕ್ಕೆ ಧನಿಯು ಗೇಣಿ ಮಾಡುವನು. ಧನಿಯಾದರೆ ಎಲ್ಲೋ ಪೇಟೆಯಲ್ಲಿಯೋ ಪೇಟೆಯ ವೈಶಿಷ್ಟ್ಯದಲ್ಲೇ ಮಗ್ನನಾಗಿರುವನು, ಇದರಿಂದ ನಷ್ಟಪಡುವವರು ಸರ್ವರೂ. ಕಾಂಗ್ರೆಸು ಸಂಸ್ಥೆಯು ಇತ್ತ ಗಮನಿಸಿ ಬಡವನೇ ರೈತರಿಗೆ ನ್ಯಾಯವನ್ನು ದಯಪಾಲಿಸಿ ಆದಷ್ಟು ಹೆಚ್ಚು ಬೆಳೆಯಿಸುವಂತೆ ತಾನು ನಿರ್ಮಿಸಿದ ಸರಕಾರದಿಂದ ಯೋಗ್ಯ ಪ್ರೋತ್ಸಾಹ ಕೊಡಿಸುವುದೆಂದು ಆಶಿಸುತ್ತೇನೆ.

ಪ್ರಕಟಣೆ

'ನವಯುಗ' ಮತ್ತು 'ಅಂತರಂಗ' ಪತ್ರಿಕೆಗಳಿಗೆ ಚಂದಾದಾರರನ್ನು ಸೇರಿಸಲಿಕ್ಕೂ ಜಾಹೀರಾತುಗಳನ್ನು ಸಂಗ್ರಹಿಸಲಿಕ್ಕೂ ಶ್ರೀ. ಕೆ. ಆನಂದ ಶೆಟ್ಟರು ಅಧಿಕಾರ ಹೊಂದಿರುತ್ತಾರೆ. ಅವರಿಗೆ ಸರ್ವರೂ ಸಹಕಾರವೀಯಬೇಕಾಗಿ ವಿನಂತಿಸುತ್ತೇನೆ.

ಮೆನೇಜರ್,
'ನವಯುಗ'



pproved firm by the Govt. of Mysore
ertified by the Agent of the Govt. of
ylone & Indian.

ಪರಿಶುದ್ಧತೆಯ ಮತ್ತು ಇಷ್ಟಾರ್ಥಸಿದ್ಧಿಯ
ಪವಿತ್ರ ಚಿಹ್ನ

ಚೇರ್ಮನ್ — ಶ್ರೀ ಪ್ರಭಾಶಂಕರ ಆರ್. ಭಟ್ಟ್.
ಮ್ಯಾನೇಜಿಂಗ್ ಡಾಯರೆಕ್ಟರ — ಶ್ರೀ ಎಂ. ಸುಂದರ ರಾಮ ಶೆಟ್ಟಿ.


NAS-271

ಮಂಗಳೂರು
ಕೆ. ಪಿ. ಭವಾನಿಶಂಕರ ಶೆಟ್ಟಿ, ಮೆನೇಜರ್.
ಜಯಂತ್ ಬಿಲ್ಡಿಂಗ್, ಮೈದಾನ್ ರೋಡು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಉಡುಪಿ

ಮುನಿಸಿಪಲ್ ಕೌನ್ಸಿಲು ಮೀಟಿಂ

ಗು ತಾ. 26ರಲ್ಲು ಸಂಜೆ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಉಪಾಧ್ಯಕ್ಷರ ಹಾ| ಎ| ಶಾಲೆ ಕಟ್ಟಡದ ಬಗ್ಗೆ ರೂಪಾಯಿ 7000/- ಧನ ಸಹಾಯ ಪಡೆಯುವರೆ ಅರ್ಜಿ ಮಾಡಬೇಕೆಂದಾಯಿತು

ಅಪ್ಪರ್ ಡಿವಿಜನ್ ಮತ್ತು ಲೋವರ್ ಡಿವಿಜನ್ ಕ್ಲಾರ್ಕ್ ಎರಡು ಹುದ್ದೆಗಳು ಸೆಂಕ್ಷನ್ ಮಾಡಲಾದುವು. ಕೆಪ್ಟನ್ ಯು. ಅನಂತಯ್ಯನವರು ಲೈಬ್ರರಿಗೆ ಉಚಿತವಾಗಿ ಕೊಟ್ಟ 5 ಪುಸ್ತಕಗಳನ್ನು ಅಭಿನಂದನಾಪೂರ್ವಕ ಸ್ವೀಕರಿಸಲಾಯಿತು. ಉಡುಪಿ ಹಿಂದೂ ತರ ಸಂಸ್ಕಾರ ಸಮಿತಿಯ ವಿನಂತಿಯನ್ನು ಮನ್ನಿಸಿ ರೂಪಾಯಿ 60/- ಸಹಾಯಧನ ಕೊಡಬಹುದೆಂದಾಯಿತು. ಮುನಿಸಿಪಲ್ ಕೌನ್ಸಿಲು ಹಾಲಿಗೆ ಇಲೆಕ್ಟ್ರಿಕ್ ಜೋಡಣೆಯೊಂದನ್ನು ಹಾಕುವರೆ ರೂಪಾಯಿ 258 15-0 ವೆಚ್ಚ ಮಾಡಬಹುದೆಂದಾಯಿತು. ಪಾಂಗಾಳ ನಾಯಕ್ ಬೇಂಕ್ ಮತ್ತು ಗೋಕುಲನಿವಾಸದ ಮಧ್ಯಸ್ಥಳದಲ್ಲಿ ಮೂರು ಜಟಕಾಗಾಡಿಗಳು ತಂಗುವರೆ ಚಿಕ್ಕ ಜಟ್ಕಾಸ್ಟೇಂಡನ್ನು ಕಟ್ಟಬೇಕಾಗಿ ಸೂಚಿಸಿದ ಮಿ| ಆರ್. ಎ. ಸ್ವಾಮುನ್ನರ ನಿರ್ಣಯವು ಒಮ್ಮತದಿಂದ ಪಾಸಾಯಿತು.

ಮದ್ರಾಸು ಯೂನಿವರ್ಸಿಟಿ ಕಮಿ

ಶನ್ ಸದಸ್ಯರು ಇಲ್ಲಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿಚಾರ ವಿಮರ್ಶೆಯ ಮಾಡುವರೆ ಎಪ್ರಿಲ್ ಪ್ರಥಮವಾರದಲ್ಲಿ ಉಡುಪಿಗೆ ಬರಲಿರುವರು.

ಸ್ಕ್ಯಾಟ್ ಕ್ಯಾಂಪ್ ಫಾಯರ್ ಸ್ಥಳೀಯ ಮೊಡರ್ನ್ ಹಾ| ಎಲಿಮೆಂಟರಿ ಶಾಲಾ ವಠಾರದಲ್ಲಿ ತಾ 27ರಲ್ಲು ಆ ಶಾಲೆಯ ಅಶೋಕ ಬಾಲವೀರದಳದ ಶಿಬಿರಾಗ್ನಿ ಸಮಾರಂಭವು ಶ್ರೀ ಬಿ. ಸುಬ್ಬಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಿಕೆಯರ ನೃತ್ಯ, ಕೋಲಾಟಗಳಾದ ಬಳಿಕ ಶಾಲಾ ಮೆನೇಜರ್ ಶ್ರೀ ಕೆ ಜಗನ್ನಾಥ ನಾಯ್ಕರು ಕಾಲೋಚಿತ ಮಾತುಗಳನ್ನಾಡಿದರು. ಬಾಲವೀರ ದಳದ ಧ್ಯೇಯ, ತತ್ವಗಳನ್ನೆತ್ತಿ ಅಧ್ಯಕ್ಷರು ಭಾಷಣವಿತ್ತು ದಳಕ್ಕೆ ಶ್ರೇಯಸ್ಸನ್ನು ಕೋರಿದರು. ಬಳಿಕ ಬಾಲಚಮುಗಳ ಮತ್ತು ಬಾಲಚರುಗಳ ವಿವಿಧ ವಿನೋದಾವಳಿಗಳಾದುವು. ಕಿದಿಯೂರು ಬಾಪೂಜಿ ರೋವರ್ಸ್ ದಳದ ನಾಯಕರಾದ ಶ್ರೀ ಕೆ. ಅನಂದ ಸೆಟ್ಟರು ಈ ಶಾಲೆಯಲ್ಲಿ ಸ್ಕೌಟು ಚಳವಳಿ ಪ್ರಾರಂಭವಾಗುವಂತೆ ಉತ್ತೇಜನ ಕೊಟ್ಟಿದ್ದರು.

ಟೆಲಿಫೋನ್ ಈ ತಿಂಗಳ ಪ್ರಾರಂಭದಲ್ಲಿ ಟೆಲಿಫೋನ್ ಜೋಡಣೆಯ ಕೆಲಸವು ಮುಗಿದಾಗಿ ತಾ 25 ರಲ್ಲು ಅದರ ಆರಂಭೋತ್ಸವ ನಡೆಯಿತು. ಈ ಸಂಬಂಧ ಮದ್ರಾಸು ಪೋಸ್ಟ್‌ಮಾಸ್ಟರ್ ಜನರಲ್ ಶ್ರೀ ವಾಸುನಾಯ್ಕರು ಮದ್ರಾಸಿನಿಂದ ಫೋನ್ ಮೂಲಕ ಭಾಷಣ ಮಾಡಿದರು. ಡಾ| ಮಾಧವಪೈಗಳು ಸಹ ಮಾತನಾಡಿದರು. ಡಾ| ಎಸ್. ಆರ್ ಪೈಗಳು ಧನ್ಯವಾದಗಳನ್ನರ್ಪಿಸಿದರು.

ತಿದ್ದುಪಡಿ

ಕಳೆದ ಸಂಚಿಕೆಯ 10ನೆ ಪುಟದಲ್ಲಿ ಪ್ರಕಟವಾದ 'ಹಿಂದೂ ಕೋಡು ಮತ್ತು ಅಳಿಯ ಸಂತಾನ ಬಿಲು' ಎಂಬ ಲೇಖನದ ನಾಲ್ಕನೆ ಕಲಮಿನ 31 ಮತ್ತು 32ನೆ ಪಂಕ್ತಿಯಲ್ಲಿ "ಹೆಂಗಸರ ಆಸ್ತಿ ಅವರವರ ಗಂಡು ಮಕ್ಕಳಿಗೂ ಪಾಲೀಸು ಪಕ್ಕ್ಯಪ್ರಕಾರ ಸಿಕ್ಕುವಂತೆ ಹಿಂದೂ ಕೋಡಿನ ಮುಖ್ಯ ತಾತ್ಪರ್ಯ" ಎಂಬುದರಲ್ಲಿ 'ಗಂಡು ಮಕ್ಕಳಿಗೂ' ಎಂಬುದು ತಪ್ಪು, ಅದು 'ಗಂಡ ಮತ್ತು ಮಕ್ಕಳಿಗೂ' ಎಂದಾಗಬೇಕು. ಸಂ.

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 489/1948.

ವಾದಿ ಮುಂಡಿಲ ಗಣಪತಿ ಭಟ್ಟ, ಮಹಾಬಲೇಶ್ವರ ಭಟ್ರ ಮಗ. ಕೆದಿಲ ಗ್ರಾಮ. ಪುತ್ತೂರು ತಾಲೂಕು —ವಾದಿ.

1 ಮೊಯಿದು ಕುಟ್ಟಿಬ್ಯಾರಿ, ಕುಂಞಿಮೋಕ್ರೆ ಬ್ಯಾರಿ ಮಗ. 2 ಯಿಬ್ರಾಯಿ ಬ್ಯಾರಿ. 1ನೆ ಪ್ರತಿವಾದಿಯ ಮಗ — ಪ್ರತಿವಾದಿರು,

ಪುತ್ತೂರು ತಾಲ್ಲೂಕು ಕೆದಿಲ ಗ್ರಾಮದ ಬಾರಿಬೆಟ್ಟು ಎಂಬಲ್ಲಿರ್ಪವರು

ಸದ್ರಿ ಪ್ರತಿವಾದಿಗೆ—ವಂದನೇ ಪ್ರತಿವಾದಿಯು ನ್ಯಾಪೆಗೇಣಿ ಪಕ್ಕನ ಮೋಜೆ ಅನುಭವಿ ಬರುವ ಅಸ್ತಿಯು ಸ್ವಾಧೀನತೆಗೆವಾದಿಯು ಪ್ರತಿವಾದಿರ ಮೇಲೆ ಮಾಡಿದ ನೋಲಿನ ವ್ಯಾಜ್ಯವು ಮುಂದೆ ಬರುವ ತಾ 4-4-1949ಕ್ಕೆ ಈ ಕೋರ್ಟು ಮುಂದೆ ತಸ್ಕಿಗೆ ಯಿಟ್ಟಿದೆ. ಸದ್ರಿ ವ್ಯಾಜೆಯ ದಿವ್ಸ ಪ್ರತಿವಾದಿರು ಖುದ್ದು ಯಾ ವಕೀಲರ ಮುಖಾಂತ್ರ ಹಗ್ಲು 10 ಘಂಟೆಗೆ ಹಾಜರಾಗಿ ಉತ್ತರಿಸದಿದ್ದಲ್ಲಿ ವ್ಯಾಜ್ಯದ ಸ್ಥ ಪ್ರತಿವಾದಿರಿಗೆ ಶಿಸ್ತಾ ಮಾಡಿ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಯೀ ಮೂಲ್ಕ ಪ್ರಕಟಿಸೋಣಾಗ್ಯದೆ.

ತಾ. 14ನೇ ಮಾರ್ಚ, 1949 ಪುತ್ತೂರು.

((By order of Court)

H. Sanjeeva Shetty.

Advocate for Plff.

ಸಂರಕ್ಷಣೆ ಮತ್ತು ಉಳಿತಾಯ ವ್ಯವಸ್ಥೆಗಾಗಿ

ಹೆಸರಾಂತ ಪ್ರಗತಿಪರ ವಿಮಾ ಕಚೇರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

(ಯುನೈಟೆಡ್ ಇಂಡಿಯಾ ಬಿಲ್ಡಿಂಗ್) ಟಪ್ಪಾಲು ಪೆಟ್ಟಿಗೆ ನಂಬ್ರ 142

ಎಸ್ಪ್ಲನೇಡ್, ಮುಖ್ಯ ಕಾರ್ಯಾಲಯ, ಮದ್ರಾಸು

ಚೆಯರ್‌ಮೆನ್:

ದಿ ಒನರಬ್‌ಲ್ ಮಿ| ಎಮ್. ಸಿಟಿ ಎಮ್. ಚಿದಂಬರಂ ಚೆಟ್ಟಿಯಾರ್ ಅವರ್ಗಳ್.

ಇಳಿಮುಖದ ಖರ್ಚು; ಸಾಮಾನ್ಯ ಪ್ರೀಮಿಯಮ್ ದರಗಳು.

ಶೀಘ್ರ ಕ್ಲೈಮುಗಳ ಬಟ್ವಾಡೆ ಮತ್ತು ಸಮರ್ಥ ಆಡಳಿತೆ.

ಹಿಂದೂಸ್ಥಾನದಲ್ಲೆಲ್ಲಾ ಶಾಖಾ ಕಚೇರಿಗಳೂ ಪ್ರತಿನಿಧಿಗಳೂ ಇದ್ದಾರೆ.

ನುರಿತ ಅನುಭವೀ ಜನರಿಂದ ಕಂಪೆನಿಯ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು.

ಆರ್ಗನೈಜಿಂಗ್ ಸೆಕ್ರೆಟರಿ,

ಮಂಗಳೂರು ಶಾಖೆ: ಕೆ. ಎಸ್. ರಾವ್ ರಸ್ತೆ, ಹಂಪನಕಟ್ಟೆ.

ಬೆಂಗಳೂರು

ಶ್ರೀಮತಿ ಕಲ್ಯಾಣಮ್ಮನವರಿಗೆ

ಸತ್ಕಾರ— ಕಳೆದ ೩೦ ವರ್ಷಗಳಿಂದಲೂ ನಾಡು ನುಡಿಗಳಿಗಾಗಿ ಅವಿಶ್ರಾಂತ ಪರಿಶ್ರಮಿಸುತ್ತಿರುವ ಶ್ರೀಮತೀ ಆರ್. ಕಲ್ಯಾಣಮ್ಮ [ಸರಸ್ವತಿ ಮಾಸಪತ್ರಿಕೆಯ ಸಂಪಾದಿಕೆಯರು] ನವರನ್ನು ಮಹಾಜನರು ಸೇರಿ ಕಳೆದ ತಾ ೨೮ ರಂದು ನಿಧಿ ಸಮರ್ಪಣೆಮಾಡಿ ಗೌರವಿಸಿದರು. ಅದೇ ಸಂದರ್ಭದಲ್ಲಿ "ಸರಸ್ವತಿ" ಮಾಸಪತ್ರಿಕೆಯ ರೌಪ್ಯೋತ್ಸವ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಅನೇಕ ವರ್ಷಗಳಿಂದ ನಾಡಿನ ನುಡಿಯ ಸೇವೆಯಲ್ಲಿ ನಿರತರಾಗಿರುವುದಲ್ಲದೆ ಮಕ್ಕಳಕೂಟದ ಅಧ್ಯಕ್ಷರಾಗಿರುವ ಶ್ರೀಮತಿಯವರನ್ನು ಸಾರ್ವ ಸಂದರ್ಭದಲ್ಲಿ ಅಭಿನಂದಿಸುವುದಲ್ಲದೆ ಅವರ ಚಟುವಟಿಕೆಗಳು ಇನ್ನೂ ಹೀಗೆಯೇ ಅನೇಕ ಕಾಲ ನಿರ್ವಿಘ್ನವಾಗಿ ಸಾಗಲೆಂದು ಹಾರಯಿಕೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ಹಾರ್ಲಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1925ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ಹಾರ್ಲಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ಹಾರ್ಲಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ... ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ಹಾರ್ಲಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವೇಶಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲೆಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ಹಾರ್ಲಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸಿಹಿಮೂತ್ರ, ಅನರೋಗ, ಕಲ್ಲಿನ ರೋಗಗಳಲ್ಲಿ ಹಾರ್ಲಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವೇಶಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಹಸ್ತವಾತ, ಗಂಟಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ಹಾರ್ಲಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಶೇಖರಿಸಿದ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿವಾರಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ಹಾರ್ಲಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಬಂದರೆಯಲ್ಲ, ಈ ಹಾರ್ಲಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು ಹಲ್ಲಿನನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಹಾರ್ಲಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ಹಾರ್ಲಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ಹಾರ್ಲಿಂಗ್ ಟಿಲ್ಲಿ ಸ್ಪೆಷಲ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಸ್ಪೆಷಲ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ಹಾರ್ಲಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1 ... ಡಜನ್ ಶೀಸೆಗಳಿಗೆ ರೂ 18 ವಿ. ಪಿ. ಸಹಿತ.

ಪ್ರಶಂಸನಾ ಪತ್ರ—ನಾನು ನಿಮ್ಮ ಹಾರ್ಲಿಂಗ್ ಟಿಲ್ಲಿ ಆಯಿಲನ್ನು ಕಳೆದ ... ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರವೆಂದು ವೈದ್ಯರು ಬಿಟ್ಟಿರುವ ರೋಗಿಗಳನ್ನೂ ನಿಮ್ಮ ಹಾರ್ಲಿಂಗ್ ಟಿಲ್ಲಿ ಆಯಿಲಿನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲಿ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಥನ ಆಯುರ್ವೇದಿಕ್ ವೈದ್ಯರಾದ ಓ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ ಐ. ರೈಲ್ವೆ.

The Eclipse Distributing Agency,
Dahanu Road, B B & C. I Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ ನಾಲಾ ಲಿಮಿಟೆಡ್, ...

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಲಭವಾಗಿರುವುದು.

ನವಜೀವ. ತ. ಎಂಬ ಸೂತಿಕಾ ರಸಾಯನ

ಆ ಔಷಧಿಯ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಗೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದಭೂಷಣ. ನಂ, 5 ಕೊಡಿಯಾಲಬೈಲು, ದ ಕ

ಸ್ಟಾಕಿಸ್ಟರು. ಡಾ-1 ಎ ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಬಿಮ್ಮ ಸ್ನಾನ, ಊಟ, ಉಪಹಾರ, ಬ್ಯಾರೆಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara

ಕಲಿಯುಗ ಅಂತ್ಯವಾಯಿತು!

* ಸತ್ಯಯುಗದ ಸಿದ್ಧಾಂತ *

ಪುಸ್ತಕ ತಯಾರಾಗಿದೆ-

ಇದು ಕಗ್ಗತ್ತಲೆಯನ್ನು ಸೂರ್ಯನು ಹಾರಿಸಿದಂತೆ ಈಗ ಕಲಿಯುಗವೆಂಬ ಲೋಕದ ಅಜ್ಞಾನವನ್ನು ಓಡಿಸುವದು ಮತ್ತು ಈಗ ಕಲಿಯುಗವೇ ನಡೆಯುತ್ತದೆ ಎಂದು ಯಾರು ಯಾವ ರೀತಿಯಿಂದ ವಾದಿಸಿದರೂ ಅವರ ವಾದ ಖಂಡನೆಯ ಜವಾಬು ಈ ಪುಸ್ತಕ ಶೋಧಿಸಿದರೆ ಸಿಕ್ಕುವದು.

ಪುಸ್ತಕ ೧ಕ್ಕೆ ೧-೦-೦ ಟಪ್ಪಾಲು ಚಾರ್ಜು ಪ್ರತ್ಯೇಕ.

೩ ಪುಸ್ತಕ ಬೇಕಾದರೆ ಟಪ್ಪಾಲು ಚಾರ್ಜು ಇಲ್ಲ.

ವಿ. ಪಿ. ಮೂಲಕ ಕಳಿಸುವುದಿಲ್ಲ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾಗಿ ಕಮಿಶನ್ ಕೊಡುವದು.

ಏಜಂಟರು ಬೇಕಾಗಿದ್ದಾರೆ.

ವಿಳಾಸ:

ಹರಿರಾಮ ಜ್ಯೋತಿಷಿ,

ಕಾರ್ಕಳ ತಾಲೂಕು, ಕಲ್ಲಮುಂಡ್ಕೂರ ಪೋಸ್ಟ್, ದ. ಕ.

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿರೋಧಿ ಸಂವತ್ಸರದ (1949 - 1950)

ನವಯುಗ ಪಂಚಾಂಗ

ನಿತ್ಯ ಪಂಚಾಂಗವಲ್ಲದೆ ಸರ್ವರಿಗೂ ಉಪಯುಕ್ತವಾದ ಹಲವು ವಿಷಯ ಸಂಗ್ರಹಗಳಿವೆ.

ಮೇಷಾದಿ ದ್ವಾದಶ ರಾಶಿಯವರ ವರ್ಷ ಭವಿಷ್ಯವಿದೆ.

ಪ್ರತಿ 1ಕ್ಕೆ 0-5-0. 25 ಪ್ರತಿಗಳಿಗೆ 6-4-0. 50 ಪ್ರತಿಗಳಿಗೆ 11-0-0- 100 ಪ್ರತಿಗಳಿಗೆ 20 0 0. ಒಂದು ಪ್ರತಿ ಬೇಕಾದವರು 0-6-0 ಸ್ಟಾಂಪು ಕಳಿಸಬೇಕು.

ಮೆನೇಜರ್, ನವಯುಗ ಪ್ರೆಸ್, ಉಡುಪಿ.

ದ. ಕನ್ನಡ.

ಮೂಲ್ಕಿ ನಾಲ್ಕುಪಟ್ಟ ಮೊಗವೀರ ಸಂಘದ ಕಡೆಯಿಂದ ತೆರೆಯಲ್ಪಡುವ ವಿದ್ಯಾರ್ಥಿ ಭವನಕ್ಕೆ ಧನಸಹಾಯ ಮಾಡಿದವರ ಗೌರವಾರ್ಥವಾಗಿ ಸಸಿಹಿತ್ಲು ಬೋರ್ಡುಶಾಲೆಯ ಸರಸ್ವತಿ ನಾಟಕ ಮಂಡಳಿಯವರು 'ಮೃಥಿ ಚಾರಿಣಿಯಾರು?' ಎಂಬ ನಾಟಕವನ್ನು ತಾ. 13ರಲ್ಲಿ ಯಶಸ್ವಿಯಾಗಿ ಆಡಿದರು.

ಬಾರಕೂರು ಮಹತೋಭಾರ ಕೋಟಿಕೇರಿ ಶ್ರೀ ಪಂಚಲಿಂಗೇಶ್ವರ ಸ್ವಾಮಿಯ ರಥೋತ್ಸವ ಕಾರ್ಯಕ್ರಮಗಳು ಇದೇ ತಾ. 31ರಲ್ಲಿ ಪ್ರಾರಂಭವಾಗಿ ಏಪ್ರಿಲ್ ತಾ 7ಕ್ಕೆ ಅಂತ್ಯವಾಗುವುವು.

ಸುರತ್ಕಲ್ಲು ಮಂಗಳೂರಿನ ಶ್ರೀಹಂಸರಾಜಥಿಯೇಟರಿನವರ "ಬದುಕಿಗಾಗಿ ಸಾವು" ಎಂಬ ನಾಟಕವು ತಾ 19, 20ರಲ್ಲಿ ಅಭಿನಯಿಸಲ್ಪಟ್ಟಿತು.

ತಾ. 17ರಲ್ಲಿ ಇಲ್ಲಿಯ ಟೌನ್ ಹಾಲಿನಲ್ಲಿ ಶ್ರೀ ತ್ಯಾಗರಾಜ ಕೃಪಾಪೋಷಿತ ಸಂಗೀತ ಶಾಲೆಯ ಆಶ್ರಯದಲ್ಲಿ ಸಂಗೀತ ವಿದ್ವಾನ್ ಶ್ರೀ ಎ ಸುಬ್ಬರಾವ್ ಅವರ ಹಾಡುವಿಕೆ, ಶ್ರೀಗಬಾದ ಬಿ. ಕೃಷ್ಣಮೂರ್ತಿ ಮತ್ತು ರಾಮಾಚಾರ್ಯರ ಪಿಡ್ಲು, ಮೃದಂಗ ವಾದನಗಳಿಂದ ಕೂಡಿದ ಸಂಗೀತ ಕಚೇರಿಯೂ ಮನಡೆಯಿತು.

ಗಂಗೊಳ್ಳಿ-ಇಲ್ಲಿಯ ಸರಸ್ವತಿ ವಿದ್ಯಾಲಯದ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಕೆ. ಶ್ರೀನಿವಾಸರಾವ್, ಅವರು ಕೆಲವೇ ದಿನಗಳ ಕಾಯಿಲೆಯಿಂದಾಗಿ ತಾ. 18ರಲ್ಲಿ ಮುಂಜಾನೆ ಅಕಾಲ ಮೃತ್ಯುವಿಗೆ ತುತ್ತಾದ ರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಯುತರು ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಸಾಧಾರಣ ಹತ್ತು ವರುಷ ತನಕ ಅಧ್ಯಾಪಕರಿದ್ದು ನಂತರ ಗಂಗೊಳ್ಳಿ ಹೈಸ್ಕೂಲಿಗೆ ಸೇರಿ ಆ ಶಾಲೆಯ ಏಳಿಗೆಗಾಗಿ ಅವಿಶ್ರಾಂತ ಸೇವೆ ಸಲ್ಲಿಸಿದ್ದರು.

ಕುಂಬಳೆ ಕುಂಬಳೆ ಫಿರ್ಕಾ ದವಲಪ್‌ಮೆಂಟ್ ಕಮಿಟಿ ಸಭೆಯು ತಾ. ೩-೪-೪೯ರಲ್ಲಿ ಮೊಗ್ರಾಲಿನಲ್ಲಿ ಸೇರಲಿರುವುದು.

ತಾ. ೨೭ರಲ್ಲಿ ಎತ್ತಿನ ಗಾಡಿಯಲ್ಲಿ ಪರ್ಮಿಟಿಲ್ಲದೆ ಸಾಗಿಸುತ್ತಿದ್ದ ೨೫ ಮುಡಿ ಭತ್ತವನ್ನು ಇಲ್ಲಿನ ಫಿರ್ಕಾ ಸಪ್ಲೈಉದ್ಯೋಗಸ್ಥರು ಬೇಹಿನಿಂದ ಹಿಡಿದು ಆ ಕುರಿತು ಹೆಚ್ಚು ಅನ್ವೇಷಣೆ ನಡೆಸುತ್ತಾ ಬರುತ್ತಿರುವರು.

ಜಿಲ್ಲಾ ಸಪ್ಲೈ ಆಫೀಸರರು ಜ. ಕೆ. ಅಬ್ದುಲ್ ಗಫೂರ್ ಸಾಹೇಬರು ಮತ್ತು ಸಪ್ಲೈ ಉದ್ಯೋಗಸ್ಥರೂ ಹಳ್ಳಿಹಳ್ಳಿಗೆ ಹೋಗಿ ಮುಚ್ಚಾಗಿ ಇಕ್ಕ ಭತ್ತವನ್ನಿಟ್ಟುಕೊಂಡವರಿಂದ ಡಿಪೋಇಗೆ ಸಾಗಿಸುವ ಏರ್ಪಾಟು ಮಾಡುತ್ತಿರುವರು.

ಕಾರ್ಕಳ ಮಲೇರಿಯಾ ಹಾವಳಿಯನ್ನು ತಡೆಗಟ್ಟುವರೆ ಮಹಾಜನರು ಕೈಕೊಳ್ಳಬೇಕಾದ ಕಾರ್ಯಗಳ ಕುರಿತು ಪ್ರಚಾರ ಮಾಡುವ ಉದ್ದೇಶದಿಂದ ತಾ 24ರಲ್ಲಿ ಬೋರ್ಡು ಹಾ. ಎ| ಶಾಲೆಯಲ್ಲಿ ಸಾರ್ವಜನಿಕ ಸಭೆಜರುಗಿತ್ತು- ಜಿಲ್ಲಾ ಹೆಲ್ತ್ ಆಫೀಸರ್ ಶ್ರೀ ಕೆ. ರಾಮಚಂದ್ರರಾಯರೂ ಹೆಲ್ತ್ ಇನ್‌ಸ್ಪೆಕ್ಟರ್ ಶ್ರೀ ಆರ್, ವೇಣುಗೋಪಾಲರಾಯರೂ ಭಾಷಣಮಾಡಿದರು. ಡಿ. ಡಿ. ಟಿ ಪ್ರಯೋಗದ ಪ್ರದರ್ಶನವಾಯಿತ್ತು.

ಎಸ್. ವಿ. ಟಿ ಮಹಾಗಿಯರ ಹೈಸ್ಕೂಲು ವಾರ್ಷಿಕೋತ್ಸವವು ಏಪ್ರಿಲ್ ತಾ|೦ರಲ್ಲಿ ಶ್ರೀ ಬಿ ರಾಮರಾಯ ಸೆಟ್ಟಿ, ಬಿ. ಎ. ಎಲ್. ಟಿ ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 15, 1949

ಅಮ್ಮುಂಜೆ ಶ್ರೀಧರ ನಾಯಕ, ಅಮ್ಮುಂಜೆ ಪದ್ಮನಾಭ ನಾಯಕರ ಮಗ, ಉಡುಪಿ ಕಸಬೆ ಕಲ್ಸಂಕದ ಬಳಿಯಲ್ಲಿರುವವ —ಅರ್ಜಿದಾರ

ಅರ್ಜಿದಾರನ ಹಿರಿ ಸಹೋದರ ಮೃತ ಅಮ್ಮುಂಜೆ ರಾಘವೇಂದ್ರ ನಾಯಕರು ತಾ. 2-1-1947ರಲ್ಲಿ ರಿಜಿಸ್ಟ್ರಿ ಬರೆದಿಟ್ಟ ವಿಲುನಾಮೆ ಪ್ರಕಾರ ಸದ್ರಿ ಅಮ್ಮುಂಜೆ ರಾಘವೇಂದ್ರ ನಾಯಕರಿಗೆ ಬರತಕ್ಕ ಸಾಲಗಳನ್ನು ಮತ್ತು ಹೊರಬಾಕಿಗಳನ್ನು ವಸೂಲು ಪಡೆಯುವರೆ ತನ್ನ ಹೆಸರಿನಲ್ಲಿ Succession Certificate ಕೊಡಿಸಬೇಕೆಂತ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 6-4-1949ಕ್ಕೆ ಇಷೋರಾಗಿದೆ ಎಂತಲೂ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಖಿನ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದೆಂತಲೂ ಯಾವತ್ತೂ ಜನರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

K. Varadaraya Pai,

Advocate for Petitioner

Udipi- Dated 23-3-1949

ನೋಟೀಸು

ದ ಕ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ.

O. P 30, 1949

ಕೂಲು ಮಾ ಜಾರ್ಜ—ಪ್ಯಾನರ್.

ಕೂಸು ಪೂಜಾರ್ತಿ- ಅರ್ಜಿದಾರಳು.

ಮತ್ತು

ಸೇಸಮ್ಮ ಪೂಜಾರ್ತಿ ಕೂಡಾ — ಪ್ರತಿವಾದಿಗಳು

ಮೇಲೆ ಕಾಣಿಸಿದ ಮೈನರ್ ಕೂಲು ಪೂಜಾರ್ತಿಗೆ ಕೋರ್ಟು ಗಾರ್ಡಿಯನ್ ನೇಮಕ ಮಾಡಬೇಕೆಂತ ಪಗೈರ ಕೇಸ್ಸ ಅರ್ಜಿದಾರಳು ದಾಖಲ್ಲು ಮಾಡಿದ ಅರ್ಜಿಯು ತಾರೀಕು 20-4-1949ಕ್ಕೆ ಆಕ್ಷೇಪಕ್ಕೆ ಮುಟ್ಟದುತ್ತದೆ ಆದ್ದರಿಂದ ಸದ್ರಿ ಅರ್ಜಿಗೆ ಆಕ್ಷೇಪ ವುಳ್ಳವರು ಸದ್ರಿ, ಕೋರ್ಟುಮುಂದೆ ಸದ್ರಿ ತಾರೀಕಿಗೆ ಬೆಳಿಗ್ಗೆ ಗಂಟೆ 10 30ಕ್ಕೆ ಹಾಜರಾಗಿ ನಿಮ್ಮ ಆಕ್ಷೇಪವನ್ನು ಹಾಜರುಪಡಿಸತಕ್ಕದ್ದೆಂತಲೂ ಮೂಲಕ ತಿಳಿಸೋಣಾಗುತ್ತದೆ.

B. B. Shetty.

ಅರ್ಜಿದಾರಳ ಕಡೆ ಎಡ್ವೊಕೇಟ್.

ಮಂಗ್ಳೂರು, 22-3-1949.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S 187/194

R. E. P. 561/194

ದಿ. ಕೆನರಾ ಹಿಂದುಸ್ಥಾನ್ ಪರ್ಮನೆಂಟ್ ಫಂಡ್ ಬೆನಿಫಿಟ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಯಿದ್ದು ಇದರ ಕಡೆಯಿಂದ ರಿಕವರಿ ಆಫೀಸರ್ ಶ್ರೀ ಭಂಡಾರಿ —ಅರ್ಜಿದಾರ

ಮತ್ತು

A. ಭೋಜರಾಜ ಹೆಗ್ಡೆ—ಯಿವರೂ ಪುಟ್ಟಮ್ಮ ಸೆಟ್ಟಿ ಮಗ ಪೆರ್ಡೂರು ಗ್ರಾಮ ಎದುರುಪಕ್ಷ

ಇವರೊಳಗೆ-

ಜಡ್ಜ್‌ಮೆಂಟು ದೇಣಬಾರನಾದ ನಿಮಗೆ ಎದ್ರಿ ನಾಲೆ ಹೇಳೋದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರ ಸದರಿ ಡಿಕ್ರಿಯಲ್ಲಿ ಜಾರಿಯಲ್ಲಿ ಜಪ್ತಾದ ಸ್ಥಿರಾಸ್ತಿಗಳ ಮಾರಾಟದ ಬಗ್ಗೆ ಹಾಜರುಪಡಿಸಿದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1949ನೆ ಇಸ್ವಿ ಎಪ್ರೀಲು ತಿಂಗಳು 12ನೇ ತಾರೀಕು ನಿಶ್ಚಯಿಸೋಣಾಗಿಯದೆ ಎಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ

M. Damodar Kamath

Advocate for Petitioner.

ಉಡುಪಿ ದ. ಕನ್ನಡಾ

ತಾರೀಕು 25-3-49.

— ಮಕ್ಕಳನ್ನು ಹಡೆಯುವುದು ಸಾಕು —

ಅನಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಯ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ- ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಸಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:— ದಾವಣಗೇರಿ ಪ್ರೆಸ್, ಆರ್ ಎಲ್ ಕಮಲದಾಸ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿ ಕಟಿ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:— ಗದಗ:— ಗದಗ ಫಾರ್ಮಸಿ, ಹುಬ್ಬಳ್ಳಿ:— ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರೆ ಪ್ರೆಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಅಂತರಂಗ

ವಾರಕ್ಕೊಂದು ಪುಸ್ತಕದಂತೆ ಪ್ರತಿ ಮಂಗಳವಾರ ಉಡುಪಿಯಿಂದ ಹೊರಡುವ ವಿಶಿಷ್ಟ ವಾರಪತ್ರಿಕೆ.

ಸಂಪಾದಕರು

ಕೆ. ಎಚ್. ಶೆಟ್ಟಿ ಮತ್ತು ಎಂ ವಿ ಹೆಗ್ಡೆ

ಸಂಚಾಲಕ:- ಕೆ. ಜೆ ಶೆಟ್ಟಿ

ಚಂದಾದಾರರಾಗಿ ಪ್ರೋತ್ಸಾಹಿಸಿರಿ!

ವಾರ್ಷಿಕ ಚಂದಾ ರೂ 6—0—0. ೬ ತಿಂಗಳಿಗೆ ರೂ 3—0—0.

ವಿವರಗಳಿಗೆ ಬರೆಯಿರಿ

ಅಂತರಂಗ ಕಾರ್ಯಾಲಯ, ಉಡುಪಿ.

ಮಂಗಳೂರು

ರಾಜಕೀಯ ಸಂತ್ರಸ್ತರಿಗೆ ಭೂದಾನ ಮಾಡಲು ಸರಕಾರದಿಂದ ನೇಮಿಸಲ್ಪಟ್ಟ ಜಿಲ್ಲಾ ಸಲಹಾ ಸಮಿತಿಯ ಸಭೆಯು ಜಿಲ್ಲಾ ಕಲೆಕ್ಟರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು. ಶ್ರೀಗಳಾದ ಬಿ. ಎಸ್. ಸೂರಪ್ಪ ಶೆಟ್ಟಿ (ಕುಂದಾಪುರ) ಸಿದ್ದಲಿಂಗಪ್ಪ ಲಿಗ (ಕಾರ್ಕಳ) ವೀರಪ್ಪ ಸಾಲಿಯಾನ್ (ಉಡುಪಿ) ಸರ್ವೋತ್ತಮ ಪ್ರಭು (ಉಡುಪಿ) ರಾಘವೇಂದ್ರರಾವ್ (ಉಡುಪಿ) ಈ ಐವರಿಗೆ ಭೂದಾನ ಮಾಡಲು ನಿರ್ಧಾರವಾಯಿತು ನಾಲ್ಕು ಮಂದಿಗೆ ಈ ಮೊದಲು ಭೂದಾನ ಸಹಾಯ ದೊರೆತಿದೆ. ಭೂದಾನವನ್ನಪೇಕ್ಷಿಸಿ ಮಾಡಲಾದ ಅರ್ಜಿಗಳನ್ನು ಬೇಗನೆ ತೀರ್ಮಾನಿಸುವರೆ ಡೆಪ್ಯುಟಿ ಕಲೆಕ್ಟರ್ ಗ್ರೇಡಿನ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಶ್ರೀ ವಿವೇಕಾನಂದರ ದಿನಾಚರಣೆಯು ತಾ. 20ರಲ್ಲು ಸ್ಥಳೀಯ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಸೋಮನಾಥಾನಂದಜಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಆರ್. ಭಟ್ ಮೊದಲಾದವರ ಭಾಷಣಗಳಾದುವು. ಸ್ವಾಮಿ ನಿರ್ಮಲಾನಂದಜಿಯವರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಅದ್ವೈತ ವೇದಾಂತ— ಈ ವಿಷಯದಲ್ಲಿ ತಾ 24ರಲ್ಲು ಸ್ವಾಮಿ ಸೋಮನಾಥಾನಂದಜಿಯವರು ಉಪನ್ಯಾಸನಿತ್ತರು. ಡಾ। ಎಮ್. ಎಸ್. ಅಚ್ಯುತ ಶರ್ಮರು ಧನ್ಯವಾದಗಳನ್ನರ್ಪಿಸಿದರು

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 21/1949

ಅರ್ಜಿದಾರರು 1. ಅಬ್ದುಲ ರಹಿಮಾನ ಸಾಬ, 2. ಖತೀಜಾ 3. ಜೈರುನ್ನಿಸಾ. ನಕ್ವಾ ಮೀರಾಸಾಹೇಬರ ಮಕ್ಕಳು.

4. ಹಜಾ ಸಾದಾ ಸಾಧಾ ಮಹಮ್ಮದ ಸಾಹೇಬರ ಮಗಳು. ವ ನಕ್ವಾ ಮೀರಾಸಾಬರ ವಿಧವೆ.

5. ಮ್ಯಾನರ ಮಹಮ್ಮದ ಅಲಿ, 6. ಮ್ಯಾನರ ಮಹಮ್ಮದ ಗೌಸ, 7. ಮ್ಯಾನರ ಜೈನುಲ್ಲಾಬುದ್ದಿನ್, 8. ಮ್ಯಾನರ ಮಹಮ್ಮದ ಜಾಫರ್-ನಕ್ವಾ ಮೀರಾಸಾಹೇಬರ ಮಕ್ಕಳು. ಮೈನರು ಗಾರ್ಡಿಯನ್ ತಾಯಿ 4ನೇ ಅರ್ಜಿದಾರಳು.

ಕುಂದಾಪುರ ತಾಲ್ಲೂಕು ಗಂಗೊಳ್ಳಿ ಗ್ರಾಮದಲ್ಲಿರುವವರು.

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವುದೇನೆಂದರೆ:-

4ನೇ ಅರ್ಜಿದಾರಳ ಗಂಡ ವ ಮಕ್ಕಳ ತಂದೆ ನಕ್ವಾ ಮೀರಾಸಾಹೇಬರು ತಾರೀಕು 7 5-1947ರಲ್ಲು ಮೃತಪಟ್ಟಿರುವದಾಗಿಯೂ ಅವರಿಗೆ ಕಾವು ಪಾಂಡುರಂಗ ಭಾರದ್ವಾಜರಿಂದಲೂ, ಅವರಿಗೆ ಹೊಸೂರು ವಿಠಲ ಭಟ್ಟ, ಮಾನಸ ಕೃಷ್ಣ ವಿಠಲರಾಮ ಮುಂಜ ಕೂಡಾ ಇವರಿಂದ ಬರಬೇಕಾದ ಹಣಗಳ ಬಗ್ಗೆ ಅವರು ದಾವಾ ಮಾಡಿದ ಮುನ್ಸೀಫ ಕೋರ್ಟು O. S 39/1948ನೇ ದಾವೆಯ ಹಣಗಳನ್ನು ಪಡೆಯುವದೇ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಸದ್ರಿ ಅರ್ಜಿದಾರರು ಅರ್ಜಿ ಕೊಟ್ಟಿರುವದರಿಂದ ಅ ಅರ್ಜಿಯ ವಿಚಾರಣೆ ಬಗ್ಗೆ ಆಕ್ಷೇಪಣೆ ಇದ್ದರೆ 1-4-1949ನೇ ದಿವಸ ಕಾಲ 11 ಗಂಟೆಗೆ ಮುನ್ಸೀಫ ಕೋರ್ಟು ಮುಂದೆ ಹಾಜರಾಗಿ ವ್ಯಕ್ತಪಡಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ಮುಂದಿನ ವಿಚಾರಣೆ ನಡೆಯುತ್ತದೆ

K Raghunath Shenai
Pleader for Petitioners

ಮಂಗಳೂರು ಮುನಿಸಿಪಾಲಿಟಿ

ಯು ಮದ್ರಾಸು ಸರಕಾರದ ಸಲಹೆಯಂತೆ, ಅದರ ಗಡಿಯೊಳಗಿರುವ ಕಟ್ಟೋಣದ ಆದಿಸ್ಥಳ, ಅದಕ್ಕೆ ಲಗ್ತಿ, ಯಾ ಸಂಬಂಧಪಟ್ಟ ಸ್ಥಳ ಮತ್ತು ಕೃಷಿಯಬಗ್ಗೆ ಮಾತ್ರ ಉಪಯೋಗಿಸಲ್ಪಡುವ ಸ್ಥಳಗಳಲ್ಲದೆ ಇತರ ಸ್ಥಳಗಳ ಮೇಲೆ ಸಾಮಾನ್ಯತೆರಿಗೆ, ನೀರು ಮತ್ತು ನೀರ್ಗುದಾರಿ ತೆರಿಗೆ, ಶುಚಿಪಡಿಸುವ ತೆರಿಗೆ, ದೀಪದ ತೆರಿಗೆ ಮತ್ತು ವಿದ್ಯಾತೆರಿಗೆಗಳನ್ನು ಅನುಕ್ರಮವಾಗಿ ಸ್ಥಳದ ಮೌಲ್ಯದ ನೇಕಡಾ ¼, ¼, 1/16, 1/16, 1/8 ರಷ್ಟು ತೆರಬೇಕೆಂದು ಆಜ್ಞಾಪಿಸಿದೆ. ಎಪ್ರಿಲ್ ತಿಂಗಳಿಂದ ಈ ತೆರಿಗೆಯು ಜಾರಿಗೆ ಬರಲಿರುವುದು. ಈ ಮುಕುಮುಷ್ಠ ಕಾರ ಒಬ್ಬನಿಗೆ ಒಂದು ಎಕ್ರೆ ಭೂಮಿಯಿದ್ದು ಅದರ ಬೆಲೆ ರೂ. ಯ 1000/ ಎಂದಾದರೆ ಆತನು ಅರ್ಧ ವರ್ಷಕ್ಕೆ ಜುಮ್ಲಾ ರೂಪಾಯಿ 7-8-0 ತೆರಿಗೆ ಕೊಡಬೇಕಾಗುವುದು.

ಹರಿಜನರನ್ನು ಆಶ್ರಯಿಸುವುದು ಸರಿಯಲ್ಲ— ತಾ 21ರಲ್ಲಿ ಜಿಲ್ಲಾ ಆದಿದ್ರಾವಿಡ ಸಂಘದ ಆಶ್ರಯದಲ್ಲಿ ಸೂಟರ್ ಪೇಟೆ ಲೇಬರ್ ಶಾಲೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷಸ್ಥಾನವಹಿಸಿದ ಶ್ರೀ. ಎಸ್. ಎ. ಶಾಲೆನ್ನರು ಶಾಲೋಚಿತ ಭಾಷಣ ಮಾಡುತ್ತಾ ಹರಿಜನೋದ್ಧಾರ ಕಾರ್ಯವನ್ನು ಹರಿಜನರೇ ವಹಿಸಿ ಕಾರ್ಯ ಸಾಗಿಸಬೇಕು. ಪರರನ್ನು ಆಶ್ರಯಿಸಿಕೊಂಡಿರುವುದು ಸರಿಯಲ್ಲವೆಂದರು.

ಜಿಲ್ಲಾ ರಿಜಿಸ್ಟ್ರಾರ್ ಜಿಲ್ಲಾ ರಿಜಿಸ್ಟ್ರಾರ್ ಶ್ರೀ ಬಿ. ಪುರುಷೋತ್ತಮ, ಅವರು ರಜೆಯ ಮೇಲೆ ಹೋಗಿರುವುದರಿಂದ ಅವರ ಸ್ಥಾನದಲ್ಲಿ ಸಬ್‌ರಿಜಿಸ್ಟ್ರಾರ್ ಪು. ಸಿ. ಎಮ್. ಡಿ. ಸೋಜರು ಜಿಲ್ಲಾ ರಿಜಿಸ್ಟ್ರಾರರಾಗಿ ನೇಮಕ ಹೊಂದಿರುವರು.

ಶೋಚನೀಯ ನಿಧನ

ಹಿಂದುಸ್ಥಾನ ಕೆನ್ನಿಂಗ್ ಕಂಪನಿ (ನಮ್ಮ ಜಿಲ್ಲೆಯ ಪದವನೇ ಆದ, ಹಣ್ಣು ಹಂಪಲುಗಳನ್ನು ಕೆಡದ ಸಂಗ್ರಹಿಸುವ ಕೈಗಾರಿಕೆ ಸಂಸ್ಥೆಯ) ಕಾರ್ಯಕರ್ತರಲ್ಲಿ ಒಬ್ಬರಾದ ಶ್ರೀಯ. ಮುಕುಂದ ಭಟ್ಟರು ಈಚೆಗೆ ಒಂದೇ ದಿನದ ಅಸ್ವಸ್ಥಕ್ಕೆ ಗುರಿಯಾಗಿ ತಮ್ಮ ತರುಣ ಪ್ರಾಯದಲ್ಲಿಯೇ ಅಕಾಲ ನಿಧನ ಹೊಂದಿದುದು ವಿಷಾದಕರವಿದೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯಿರಲಿ

ಜಿಲ್ಲಾ ಕಲೆಕ್ಟರರ ಪ್ರಕಟಣೆ— ಗಣಿ ಬಕ್ಷಿ ಮತ್ತು ಸೂಚಿಸ ಲೈಸೆನ್ಸುಳ್ಳ ವ್ಯಾಪಾರಿಗಳು ಹೊಸವರುಷದ ಅರುತಿಂಗಳಿಗೆ ತಮ್ಮ ಲೈಸೆನ್ಸುಗಳಿಗೆ ಜೀವದಾನ ಬೇಕಾದಲ್ಲಿ ಎಪ್ರಿಲ್ ತಾ. 10ರೊಳಗಾಗಿ ನಿಯಮಿತ ಫಾರ್ಮಿನಲ್ಲಿ ಅರ್ಜಿಯನ್ನು ಬರೆದು ಕಳುಹಿಸಬೇಕು. ಅಂತೆಯೇ ಅದಕ್ಕೆ ಸಂಬಂಧಿಸಿದ ಹಣವನ್ನೂ ರವಾನಿಸಬೇಕು. ವ್ಯಾಪಾರಿಗಳು ಗಮನಿಸಬೇಕು.

'ಸುವಾಸಿನಿ' ಎಂಬ ಕರ್ನಾಟಕದ ಪ್ರಥಮ ಮಹಿಳಾ ಸಾಪ್ತಾಹಿಕದ ಪ್ರಾರಂಭೋತ್ಸವವು ಎಪ್ರಿಲ್ ತಾ 1ನೇ ಶುಕ್ರವಾರ ಸಂಜೆ 5½ ತಾಸಿಗೆ ಜರಗುವುದು.

ಋತುಸ್ರಾವ ನಿಂತಿತು

'ಕುಮಾರಿ' ಗುಳಿಗೆಗಳನ್ನು ಉಪಯೋಗಿಸಿದರೆ ಪದೇಪದೇ ಋತುಸ್ರಾವವಾಗುವುದು ನಿಲ್ಲುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸೇವಿಸಿದರೆ ಮುಂದಿನ ಪ್ರಾಪ್ತಿ ಗುಣವಾಗಿದೆ. ಬೆಲೆ, ರೂ 3; ಸ್ಪೆಶಲ್ ರೂ. 5; ಅಧಿಕಾಧಿಕ ಸ್ಪೆಶಲ್ ರೂ, ೧೦ (ವಿ. ಪಿ. ಖರ್ಚು ಬೇರೆ)

Mrs D. DEVLE, F. Ls. (N. J.)
Tollygunge CALCUTTA.

ರೈತರಿಗೆ ಸಲಹೆ-ಸಹಾಯ

ಆಹಾರ ಕೊರತೆಯನ್ನು ನಿವಾರಿಸುವ ಬಗ್ಗೆ ಪ್ರಾಂತಿಕ ಸರಕಾರವು ಕೇಂದ್ರ ಸರಕಾರದ ಸಹಾಯದಿಂದ ಅನೇಕ ಯೋಜನೆಗಳನ್ನು ತಯಾರಿಸಿ ಜಾರಿಗೆ ತಂದಿದೆ. ಹೀಗೆ ನೀರಿನ ಪಂಪು, ಯಂತ್ರಗಳ ಮೂಲಕ ಸಾಗುವಳಿ ಇತ್ಯಾದಿ ವಿಷಯಗಳಲ್ಲಿ ಬೇಸಾಯಗಾರರಿಗೆ ಸಹಾಯಕೊಡುವ ಉದ್ದೇಶದಿಂದ ಈ ಪ್ರಾಂತದ ಎಲ್ಲಾ ಜಿಲ್ಲೆಗಳಲ್ಲಿ ವ್ಯವಸಾಯಿಕ ಇಂಜನಿಯರಿಂಗ್ ಶಾಖೆಗಳನ್ನು ರಚಿಸಲಾಗಿದೆ. ಇಂಜಿನಿಯರಿಂಗ್ ಸುಪರ್‌ವ್ಯಾಸರರು, ಫೋರ್‌ಮೆನ್, ಅಸಿಸ್ಟೆಂಟ್ ಫೋರ್‌ಮೆನ್, ಡ್ರೈವರ್ ಮೊದಲಾದ ನೌಕರರ ಸಹಾಯದಿಂದ ಜಿಲ್ಲೆಯ ರೈತರಿಗೆ ಬೇಕಾದ ಸಹಾಯ ಸಲಹೆಗಳನ್ನು ಕೊಡುತ್ತಾರೆ. ಟ್ರಾಕ್ಟರ್ ಮೂಲಕ ಉಳುವುದು, ಬುಲ್‌ಡೋಸರ್ ಎಂಬ ನೆಲ ಸಮತಟ್ಟು ಮಾಡುವ ಯಂತ್ರ, ಎಣ್ಣೆ ಎಂಜಿನ್, ಪೆಟ್ರೋಲ್ ಪಂಪು ಸೆಟ್, ಇಲೆಕ್ಟ್ರಿಕ್ ಮೋಟರ್ ಪಂಪ್ ಸೆಟ್, ಪೈಪು ಇತ್ಯಾದಿಗಳನ್ನು ರೈತರಿಗೆ ಒದಗಿಸುವುದು, ಅವುಗಳು ಕೆಟ್ಟುಹೋಗಿದ್ದರೆ ಸರಿಪಡಿಸುವುದು ಮೊದಲಾದ ಕೆಲಸಗಳನ್ನು ಈ ಶಾಖೆಯವರು ನೋಡುತ್ತಾರೆ. ಹುಲು ತಗ್ಗುಗಳಿದ್ದು ಸಾಗುವಳಿಗೆ ಅಯೋಗ್ಯವಾದ ಭೂಮಿಯನ್ನು ಬುಲ್‌ಡೋಸರ್‌ಗಳ ಮೂಲಕ ಸಮಗೊಳಿಸಲಾಗುತ್ತದೆ. ಈ ಯಂತ್ರಗಳು ನೆಲವನ್ನು ಸಮತಟ್ಟಾಗಿ ಮಾಡುವುದಲ್ಲದೆ, ಸಾಧಾರಣಪುಟ್ಟಿನ ಮರಗಳನ್ನೂ ತೆಗೆಯುತ್ತವೆ. ಗಂಟೆಗೆ 7 ರೂಪಾಯಿಯ ಬಾಡಿಗೆಯಲ್ಲಿ ರೈತರಿಂದ ಬಾಡಿಗೆ ಪಡೆದು ಈ ಯಂತ್ರದಿಂದ ಕೆಲಸಮಾಡಲಾಗುತ್ತದೆ ಟ್ರಾಕ್ಟರ್‌ಗಳ ಮೂಲಕ ಆಳವಾಗಿ ಉತ್ತು, ಪಡಿಲುಬಿದ್ದು ಹಾಗೂ ತುಂಬ ಪೊದರುಗಳಿಂದ ತುಂಬಿದ ಭೂಮಿಯನ್ನು ಸಾಗುವಳಿಗೆ ಯೋಗ್ಯವನ್ನಾಗಿ ಮಾಡಲಾಗುತ್ತದೆ. ಟ್ರಾಕ್ಟರ್‌ನಿಂದ ಉಳುವುದರಿಂದ ಪೊದರುಗಳು ಬೇರು ಸಮೇತ ಕೀಳಲ್ಪಡುತ್ತವಲ್ಲದೆ, ಮಣ್ಣು ಮೆದುವಾಗುತ್ತದೆ. ಒಂದು ಎಕ್ರೆಯನ್ನು ಒಮ್ಮೆ ಉಳುವುದಕ್ಕೆ ರೈತರಿಂದ 5 ರೂಪಾಯಿಯ ಬಾಡಿಗೆ ಪಡೆದು ಟ್ರಾಕ್ಟರಗಳನ್ನು ಉಪಯೋಗಿಸಲಾಗುತ್ತದೆ.

ಸಾಗುವಳಿಗೆ ವಿದ್ಯುತ್ ಇಲಾಖೆಯವರು ವಿದ್ಯುತನ್ನು ಪೂರೈಸುತ್ತಿರುವ ಕಡೆಗಳಲ್ಲಿ ರೈತರು ಉಪಯೋಗಿಸಬೇಕಾದ ಇಲೆಕ್ಟ್ರಿಕ್ ಪಂಪು ಸೆಟ್‌ಗಳ ಗಾತ್ರವಾವುದು ಇತ್ಯಾದಿಗಳ ಕುರಿತು ವ್ಯವಸಾಯ ಶಾಖೆಯವರು ಸಲಹೆ ಕೊಡುತ್ತಾರೆ. ಮತ್ತು ಮೋಟರ್, ಪಂಪು ಸೆಟ್, ಸ್ಟಾರ್ಟರ್, ಸ್ವಿಚ್, ಪೈಪ್, ಫಿಟ್ಟಿಂಗ್ಸ್ ಹಾಗೂ ಇತರ ಸಲಕರಣೆಗಳನ್ನು ಒದಗಿಸುವ ಏರ್ಪಾಡು ಮಾಡುತ್ತಾರೆ. ವಿದ್ಯುತ್ ಪೂರೈಕೆ ಇಲ್ಲದ ಕಡೆಗಳಲ್ಲಿ ರೈತರ ಬಾವಿಗೆ ಯೋಗ್ಯವಾದ ಎಣ್ಣೆ ಇಂಜಿನುಗಳ ಕುರಿತು ಸಲಹೆ ಕೊಡಲಾಗುತ್ತದಲ್ಲದೆ, ಅವುಗಳನ್ನು ಒದಗಿಸುವ ಏರ್ಪಾಡೂ ಮಾಡಲಾಗುತ್ತದೆ. ರೈತರಿಗೆ ಎಣ್ಣೆ ಇಂಜಿನುಗಳಿಗೆ ಬೇಕಾದ ಎಣ್ಣೆಗಳನ್ನು ಕಂಪೆನಿಗಳಿಂದ ಪಡೆಯುವಲ್ಲಿಯೂ ಸಹಾಯ ಮಾಡಲಾಗುತ್ತದೆ. ಈ ಶಾಖೆಯವರು ಧರ್ಮಾರ್ಥವಾಗಿ ಇಂಜಿನು ಸೆಟ್‌ಗಳನ್ನು ಇಡುತ್ತಾರೆ ಹಾಗೂ ಆಗಿಂದಾಗ ಬಂದು ಪರೀಕ್ಷಿಸುತ್ತಾರೆ. ಹೊಸ ಬಾವಿ, ಕಾಲುವೆಗಳನ್ನು ಅಗೆಯುವದಕ್ಕೂ ಹಳೆ ಬಾವಿಗಳನ್ನು ದುರುಸ್ತಿ ಮಾಡುವುದಕ್ಕೂ ವಿದ್ಯುತ್ ಬೇಕಾದರೆ ಒದಗಿಸಲು ಯತ್ನಿಸಲಾಗುತ್ತದೆ. ವ್ಯವಸಾಯಿಕ ಯಂತ್ರ ಸಲಕರಣೆಗಳನ್ನು ಬಿಸಿಲು ಮಳೆಗಳಿಂದ ರಕ್ಷಿಸಲು ಮಾಡು ಕಟ್ಟುವುದಕ್ಕೆ ತಗಡುಗಳನ್ನು ಒದಗಿಸುವ ಏರ್ಪಾಡಿದೆ. ಮುರಸ್ತಿಗಳಿಂದಾಗಿ ಸುಮ್ಮನಿರುವ ಎಣ್ಣೆ ಇಂಜಿನುಗಳಿಗೆ ಬೇಕಾದ ಯಂತ್ರ ಭಾಗಗಳನ್ನು ಒದಗಿಸುವುದು, ದುರುಸ್ತಿ ಮಾಡುವುದು, ಇತರ ತಾಂತ್ರಿಕ ಸಲಹೆಕೊಡುವುದು, ಈ ಶಾಖೆಯವರ ಕೆಲಸವಾಗಿದೆ.

ಸೇಲಂ ಜಿಲ್ಲೆಯಲ್ಲಿ ಎರಡು ಎಗ್ರಿಕಲ್ಚರಲ್ ಇಂಜನಿಯರಿಂಗ್ ಸುಪರ್‌ವ್ಯಾಸರರಿಂದ ಕೂಡಿದ ಒಂದು ಶಾಖೆಯಿದೆ. ಈ ಶಾಖೆಯು 1948ರಲ್ಲಿ 5 ರೈತರ ಇಪ್ಪತ್ತೈದೂವರೆ ಎಕ್ರೆಗಳಷ್ಟು ಹಡಲು ಭೂಮಿಯನ್ನು ಸಮತಟ್ಟುಗೊಳಿಸಿ, ಸಾಗುವಳಿ ಯೋಗ್ಯವನ್ನಾಗಿ ಮಾಡಿದೆ. ಎರಡು ಟ್ರಾಕ್ಟರ್‌ಗಳು 110 ರೈತರ 804·20 ಎಕ್ರೆಗಳಷ್ಟು ಭೂಮಿಯನ್ನು ಉತ್ತಿವೆ. 2[illegible] ರೈತರಿಗೆ ಇಲೆಕ್ಟ್ರಿಕ್ ಮೋಟರ್‌ಗಳನ್ನೂ ಪಂಪು ಸೆಟ್‌ಗಳನ್ನೂ ಒದಗಿಸಲಾಗಿದೆಯಲ್ಲದೆ 301 ರೈತರಿಗೆ ಪಂಪುಗಳನ್ನು ಒದಗಿಸುವ ಏರ್ಪಾಡುಮಾಡಿದೆ. 74 ರೈತರಿಗೆ ಎಣ್ಣೆ ಇಂಜನುಗಳನ್ನೂ ಪಂಪು ಸೆಟ್‌ಗಳನ್ನೂ ಪೂರೈಸಿದೆ. 40 ರೈತರಿಗೆ ಸ್ಟಾರ್ಟರ್ ಸ್ವಿಚ್‌ಗಳನ್ನು, 64 ರೈತರಿಗೆ ಸಿಮೆಂಟನ್ನು, 34 ರೈತರಿಗೆ ತಗಡನ್ನು ಒದಗಿಸಿದೆ.

ಬರುವ ವರ್ಷದಲ್ಲಿ ಈ ಶಾಖೆಯು ತನ್ನ ಕಾರ್ಯಕಲಾಪಗಳನ್ನು ಇನ್ನಷ್ಟು ಭರದಿಂದ ನೆರವೇರಿಸಲು ಹಾಗೂ ಹೆಚ್ಚು ವಿಸ್ತಾರ ಭೂಮಿಗಳನ್ನು ಸಾಗುವಳಿ ಯೋಗ್ಯವನ್ನಾಗಿ ಮಾಡಲು ಆಶಿಸುತ್ತಾರೆ.

(ಮ. ಸ

Notice

In the court of the District Munsiff of Coondapur.

O. P. No. 31 of 1949.

Between:- U. Sheshagiri Rao, ... Petitioner.

and

1 Rajamma,
2 Ramachandra Rao-(Minor)
3 Mohan Rao, do
4 Narayana Rao, do
5 Chandra Shakara, do
6 Shanakara Rao, do
7 Vasantha Kumar, do
.... Respondents.

To, The respondents and others who are concerned.

Please take notice that the petitioner has filed the above petition for the issue of a succession certificate in his favour as manager of the joint Hindu family consisting of himself and respondents for collection of amounts due to Late Dr. Venkata Rao and also for the transfer of shares in his name with right to collect dividends declared from time to time which are standing in the name of his father Late Dr. U. Venkata Rao. The said petition stands posted to 14-4-1949 at 11 A.M. in the above court. Hence anybody having objection to the issue of the succession certificate in the name of the petitioner are requested to appear before the said court on the day and time specified above. Failing which a succession certificate will be issued in favour of the petitioner.

Sd. K. Ramappayya, B.A.B.L.
Advocate for petitioner.
Coondapur, 24-3-49.

ಹೊಸ ವರ್ಷದ ಶುಭಾಶಯ

ಠೇವಣಾತಿದಾರರಿಗೆ ಅತ್ಯಾಕರ್ಷಕ ದರದ
ಬಡ್ಡಿ ಮತ್ತು ಭದ್ರತೆ

ಹದಿನೇಳು ವರ್ಷಗಳ ಪರಿಪಕ್ವ ಅನುಭವ

ನಿರಖು ಠೇವಣಾತಿ

ಮೂರು ತಿಂಗಳಿಗೆ	...	....	....	3%
ಆರು ,,	....	....	....	3¼%
ಹನ್ನೆರಡು ,,	....	....	....	3½%
ಇಪ್ಪತ್ತು ನಾಲ್ಕು ,,	....	....	...	4%
ಪಾವತಿಯಾಗಿರುವ ಭಂಡವಾಳ	....	....	ರೂ.	4,91,000.
ಕ್ಷೇಮ ನಿಧಿ	....	....	,,	98,000.
ಒಟ್ಟು ವಹಿವಾಟು ಭಂಡವಾಳ	....	....	,,	40,65,000.

(ಸಾವಿರಕ್ಕೆ ಸರಿಯಾಗಿ)

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ.
ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ
ನಮ್ಮ ಶಾಖೆಗಳಿವೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು
ದಕ್ಷತೆಯಿಂದ ನಿರ್ವಹಿಸಲ್ಪಡುವುವು.

ದಿ
ವಿಜಯ ಬೇಂಕ್ ಲಿಮಿಟೆಡ್
THE VIJAYA BANK, LIMITED.
H.. MANGALORE.

BUY INDIAN' ENCOURAGE INDIAN INDUSTRY

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

Regd. No M. 3618 | 7-4-1949

LICENCE No. 31
Licensed to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER
Hon'ble Sri. A. B. Shetty
Health Minister Govt. of Madras

Telegram: "Navayuga"

Estd. 1921 ಸ್ಥಾಪನೆ

ನವಯುಗ

ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ | ವಾರ ೩೨
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು
Vol 29 No. 32

ಈ ಮದ್ರಾಸೀ ರೋಗ!

ಶ್ರೀ. ಪಿ. ಎಸ್. ಕುಮಾರಸ್ವಾಮಿ ರಾಜರು ಮದ್ರಾಸಿನ ಪ್ರಧಾನ ಮಂತ್ರಿಯಾದರು. 1946-47-48-49 ಅನುಕ್ರಮವಾಗಿ ಬಂದಂತೆಯೇ ಮದ್ರಾಸ್ ಪ್ರಾಂತ್ಯದ ಪಾಲಿಗೆ ಪ್ರಕಾಶಂ ಮಂತ್ರಿಮಂಡಲ–ಓಮಂದೂರು ಮಂತ್ರಿಮಂಡಲ–ಕುಮಾರಸ್ವಾಮಿ ಮಂತ್ರಿಮಂಡಲ ಒಂದೊಂದಾಗಿ ಬಂದುವು.

ಪ್ರಕಾಶಂ ಸರಕಾರ ಒಂದು ವರುಷ ಆಳಿದ್ದರೆ, ಓಮಂದೂರು ಸರಕಾರ ಎರಡು ವರುಷ ಆಳಿತು; ಈ ಪ್ರಗತಿಯನ್ನು ಧರಿಸಿ ಕುಮಾರಸ್ವಾಮಿ ಸರಕಾರಕ್ಕೆ ಮೂರು ವರುಷದ ಅವಧಿಯೆಂದರೂ ಅಷ್ಟರೊಳಗೆ ಹೊಸ ಶಾಸನಗಳನ್ವಯ ಚುನಾವಣೆಯಾಗಲಿರುವುದರಿಂದ ಈ ಬಾರಿಯದೇ ಕೊನೆಯದು ಎನ್ನಬಹುದು.

ಮರಣ ನಿರೀಕ್ಷೆಯೊಂದಿಗೇನೇ ಜನನ ಹೊಂದುವ ಮದ್ರಾಸಿನ 'ಮಂತ್ರಿಮಂಡಲ ರೋಗ'ವೊಮ್ಮೆ ಹೇಗಾದರೂ ನಿಂತು, ಬಾಳಲು ಬದ್ಧವಿರುವ ಸರಕಾರ ರಚನೆಯ ಕಾಲ ಬರಲಿ ಎಂದು ಎಲ್ಲರೂ ನಿರೀಕ್ಷಿಸುತಿದ್ದಾರೆ.

ಮದ್ರಾಸಿನ ಈ ರೋಗಕ್ಕೆ ಕಾರಣವೇನು? ಮದ್ರಾಸೀ ಮನೋವೃತ್ತಿ ಮತ್ತು ಮದ್ರಾಸಿನ ಸ್ಥಿತಿಗತಿ.

ಭಾರತದ ಅತ್ಯಂತ ದೊಡ್ಡ ಪ್ರಾಂತ್ಯ ಮದ್ರಾಸು. ನಿಜಕ್ಕೂ ಇದು ಒಂದು ಅಖಂಡ ಪ್ರಾಂತ್ಯವಲ್ಲ; ತಮಿಳು, ಆಂಧ್ರ, ಮಲೆಯಾಳಿ, ಕನ್ನಡವೆಂಬ ಚತುರ್ಹೋಳುಗಳನ್ನು ಕೂಡಿಸಿಟ್ಟು ಏಕಾಕಾರಕ್ಕೆ ತಂದಿರುವ ಒಂದು ಭಾಗ. ಅಲ್ಲಿ ಈ ಕಾರಣದಿಂದಲೇ ಬಿರುಕುಬೀಳಲು ಸಾಧ್ಯ.

ಭಿನ್ನ ಭಿನ್ನ ತುಂಡುಗಳ ಜೋಡಣೆಯಾಗಿರುವ ಈ ಅತಿದೊಡ್ಡ ಪ್ರಾಂತ್ಯವಿರುವದು ರಾಷ್ಟ್ರದ ತೆಂಕುಮೂಲೆಯಲ್ಲಿ; ದೇಶದ ಹೃದಯ–ಕೇಂದ್ರಾಧಿಕಾರ–ಇರುವದು ಬಡಗುಮೂಲೆಯಲ್ಲಿ. ಹೀಗಾಗಿ ಈ ಪ್ರಾಂತ್ಯಕ್ಕೆ ಕೇಂದ್ರ ನಾಯಕರ ಸಂಬಂಧ ದೂರದಿಂದಲೇ; ಇಲ್ಲಿಯವರ ಮೇಲೆ ಅಲ್ಲಿಯವರ ನಿಯಂತ್ರಣ ಕಡಿಮೆ.

ಮೂರನೆಯದಾಗಿ ರಾಷ್ಟ್ರದ ಮಿಕ್ಕ ಕಡೆಗಳಲ್ಲಿ ಹಿಂದೂ ಮುಸ್ಲಿಮ್ ವೈಷಮ್ಯ ಪ್ರಬಲಿಸಿದ್ದಾಗ ಕೂಡಾ ಇಲ್ಲಿ ವಿಶೇಷವಾಗಿದ್ದುದು ಬ್ರಾಹ್ಮಣ–ಬ್ರಾಹ್ಮಣೇತರ ಭಿನ್ನ ಭಾವ. 'ಹಿಂದೂ–ಮುಸ್ಲಿಂ' ವಿರೋಧದಂತೆ ಇದು ಜ್ವಲಿಸುತ್ತಿರದೆ, ಕೆಂಡವಾಗಿ ಒಳಗಿಂದೊಳಗೆ ಧಗ ಧಗಿಸುತ್ತಿರುವುದರಿಂದ ಅದನ್ನು ನಂದಿಸಿದಂತೆ ಇದನ್ನು ನಂದಿಸಲಿಕ್ಕೂ ಆಗುವಂತಿಲ್ಲ—ಆಗಿಲ್ಲ.

ನಾಲ್ಕನೆಯದಾಗಿ ಈ ಪ್ರಾಂತ್ಯದಲ್ಲಿ ಕಾಂಗ್ರೆಸಿಗಿರುವಂತಹ ಪ್ರಚಂಡ ಬಹುಮತ ಬೇರೆಲ್ಲಿಯೂ ಇಲ್ಲ. ಲಕ್ಷ್ಯಿಸಬೇಕಾದ ವಿರೋಧಿ ಪಕ್ಷವೆಂಬುದೇ ಇಲ್ಲಿಲ್ಲದ ದೆಸೆಯಿಂದ ಕಾಂಗ್ರೆಸ್ ಪಕ್ಷದೊಳಗೇನೇ ವಿರೋಧ ಪಕ್ಷಗಳು ಹುಟ್ಟಿಕೊಳ್ಳುತ್ತಿವೆ

ಕೊನೆಯದಾಗಿ ಸಾಮಾನ್ಯ ಮಟ್ಟಕ್ಕಿಂತ ಮಿಕ್ಕಿದ ವಿಶೇಷ ವ್ಯಕ್ತಿತ್ವವುಳ್ಳ ನಾಯಕರಾರೂ ಸ್ವೀಕೃತ ಈ ರಂಗದಲ್ಲಿಲ್ಲ; ಅದರೂ ಕ್ರಮಪ್ರಕಾರ ನಾಯಕನೊಬ್ಬನಿರಬೇಕಾಗುತ್ತದಾದ್ದರಿಂದ ಎಲ್ಲರೂ ನಾಯಕರಾಗಲು ಬಯಸುವವರೇ.

ಇವೆಲ್ಲ ಕಾರಣಗಳಿಂದ ಮದ್ರಾಸ್ ನಾಯಕತ್ವ ಆಗಾಗ ಬದಲಾಗುತ್ತಾ ಬಂದಿದೆ. ಪಕ್ಷ–ನೀತಿ–ಶಿಸ್ತು ನಿಯಮಗಳ ಬೆಲೆ ಇಲ್ಲಿ ತಗ್ಗಿದಂತೆ ಕಾಣುತ್ತದೆ. ತಪ್ಪನ್ನು ತಿದ್ದಿಕೊಳ್ಳುವ ಬದಲಿಗ ಸರಕಾರವನ್ನೇ ರದ್ದು ಮಾಡಿಕೊಳ್ಳುವ–ನಡತೆ ಬದಲಾಯಿಸುವಲ್ಲಿ ನಾಯಕನನ್ನೇ ಬದಲಾಯಿಸಿಕೊಳ್ಳುವ–ಆಟ ನಡೆದಿದೆ. ಪರಕೀಯಾಡಳಿತೆಯೊಡನೆ ಹೂಡಿದ್ದ ಹೋರಾಟ, ಇದಿರುಪಕ್ಷದೊಡನೆ ಇರಬೇಕಾಗಿದ್ದ ಮೇಲಾಟ, ಈ ದಿನ ಮದ್ರಾಸಿನ ಕಾಂಗ್ರೆಸ್ ಪಕ್ಷದೊಳಗಡೆಯಲ್ಲೇ ಸೇರಿಕೊಂಡಿವೆ. ಇದು ಅತ್ಯಂತ ಶೋಚನೀಯ.

ಇನ್ನಾದರೂ ಈ ದುರಂತ ನಾಟಕ ಮುಕ್ತಾಯ ಹೊಂದಬೇಕು. ಇನ್ನೊಂದು ಚುನಾವಣೆಯ ವರೆಗೆ ಇದ್ದುದರಲ್ಲೇ ಎಲ್ಲರೂ ಹೇಗಾದರೂ ಸುಧಾರಿಸಿಕೊಂಡು ಹೋಗಬೇಕು

ಈ ನಡುವೆ ಶಾಸನ ಸಭೆಗಳ ನಮ್ಮ ಪ್ರತಿನಿಧಿಗಳಲ್ಲೂ ಜನತೆಯಲ್ಲೂ ಇರುವ ಸಂಕುಚಿತ ಬುದ್ಧಿ, ಸ್ಥಾನಮಾನ ಲಾಲಸೆ, ದ್ವೇಷಾಸೂಯೆಗಳನ್ನು ನಿವಾರಿಸುವ ಕೆಲಸವಾಗುವುದು ಅಸಾಧ್ಯವೆ?

ಒಂದು ಜಾತಿ–ಪಂಗಡ–ಭಾಷಾಭಾಗಕ್ಕೆ ಪಕ್ಷಪಾತ ತೋರಿಸಿ ಸಮಾನನೀತಿಯನ್ನು ಮೀರುವದು ಈ ಸ್ವಾತಂತ್ರ್ಯಯುಗದಲ್ಲಿ ಎಂದೂ ಕ್ಷಮಾರ್ಹವಾಗದು. ಅದರಿಂದ ತಾತ್ಕಾಲಿಕ ಗುಣತೋರಿಬಂದರೂ ಕೊನೆಗೆ ದುಷ್ಪರಿಣಾಮವಾಗುವದು ಖಂಡಿತ. ಅದ್ದರಿಂದ ತನಗೇನಾದರೂ ವಿಶೇಷ ರಿಯಾಯಿತಿ ಕೊಟ್ಟರೆ ತನಗೇನೆ ದ್ರೋಹಬಗೆದಂತೆಂದು ಸಂಬಂಧಪಟ್ಟ ಜಾತಿ, ಪಂಗಡ, ಭಾಗಗಳವರೇ ವಿರುದ್ಧ ಚಳವಳ ಹೂಡಬಾರದೇಕೆ?

ಮಂತ್ರಿಮಂಡಲದ ಪತನೋತ್ಥಾನಗಳೆರಡರಲ್ಲೂ ಜನತೆಯ ಪಾಲಿಗೆ ಅಪಮಾನ, ಅಪಜಯ ಹೊರತು ಬೇರೇನೂ ಇಲ್ಲವೆಂದು ಭಾವಿಸಿ. ಇಂತಹ ದೌರ್ಬಲ್ಯಕ್ಕೆ ಅಷ್ಟ ಇನ್ನೆಂದಾದರೂ ತೋರಿಬಂದೊಡನೆ ಜನತೆಯು ಎಲ್ಲಾ ಕಡೆಯಿಂದಲೂ ಏಕಸ್ವರದಿಂದ ತಮ್ಮ ಪ್ರತಿನಿಧಿಗಳನ್ನು ಗದರಿಸಿಟ್ಟ ಬೇಕಾದುದು ಅಗತ್ಯವಲ್ಲವೇ?

ನಿಮ್ಮ ತೃಪ್ತಿ ನಮ್ಮ ಗೌರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ



PRVBHAT
TEA & COFFEE (INDIA) Ltd.
COONOOR (Nilgiris)

ಸೌಂದರ್ಯದೊಡನೆ-
ಸೌಲಭ್ಯವೂ ಬೇಕು!

ಇದಲ್ಲವೇ ನಿಮ್ಮ ಆಕಾಂಕ್ಷೆ?
ಹಾಗಾದರೆ ನೆನಪಿನಲ್ಲಿಟ್ಟುಕೊಳ್ಳಿರಿ—
ಸಕಾಲದಲ್ಲಿ— ಸುಲಭ ದರದಲ್ಲಿ— ಕಲಾಪೂರ್ಣವಾಗಿ
ಮುದ್ರಿಸಿ ಕೊಡಬಲ್ಲ ಹೆಸರಾಂತ ಮಂದಿರವೆಂದರೆ

ಭಾರತ್ ಪ್ರಿಂಟರ್ಸ್

ಕೋಳದ ಪೇಟೆ, ಉಡುಪಿ.
ತಮ್ಮ ಮನಮೆಚ್ಚುವಂತೆ ಎಲ್ಲಾ ತರದ ಪ್ರಿಂಟಿಂಗ್— ಬ್ಯಾಂಡಿಂಗ್
ಕೆಲಸಗಳನ್ನು ಮಾಡಿಕೊಡುತ್ತೇವೆ.

BHARAT PRINTERS
KOLADAPET, UDIPI.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— | ಪ್ರಧಾನ ಕಛೇರಿ: ಧಾರವಾಡ,
ಪೋಸ್ಟು ಬಾಕ್ಸ್ ನಂಬ್ರ 10. ಉಡುಪಿ. | THE UNITED KARNATAK INSURANCE COMPANY, LIMITED

ಓಮಂದೂರು ಆಡಳಿತ ಬರ್ಖಾಸ್ತಾಯಿತು!

ಇದೇ ಮಾರ್ಚಿ ತಾ. 29 ಮತ್ತು 31ನೇ ತಾರೀಕುಗಳಲ್ಲಿ ಮದ್ರಾಸಿನಲ್ಲಿ ನಡೆದ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಪಕ್ಷದ ಸಭೆಯು ಮದ್ರಾಸಿನ ಆಡಳಿತ ಸೂತ್ರವನ್ನು ಒಂದು ಕೈಯಿಂದ ಇನ್ನೊಂದು ಕೈಗೆ ವರ್ಗಾಯಿಸಿದೆ—ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರನ್ನು ನಾಯಕ ಸ್ಥಾನದಿಂದ ಇಳಿಸಿ ಶ್ರೀ ಪಿ. ಯಸ್. ಕುಮಾರ ಸ್ವಾಮಿ ರಾಜರನ್ನು ಆ ಸ್ಥಾನಕ್ಕೇರಿಸಿಕೊಂಡಿದೆ. ಹೊಸ ನಾಯಕ ರಾಜರು ತನ್ನ ಮಂತ್ರಿ ಮಂಡಲ ರಚನೆಯ ಆವಶ್ಯಕ ಕಾರ್ಯಗಳಲ್ಲೀಗ ತೊಡಗಿದ್ದಾರೆ. ಅಂತೂ ಮದ್ರಾಸಿಗರ ಪಾಲಿಗೆ, "ನಮ್ಮ ಮಂತ್ರಿಗಳು ಯಾರಾರು ?" "ಅವರ ಆಡಳಿತ ನೀತಿರೀತಿ ಹೇಗ್ಹೇಗೆ?" ಎಂಬ ಆತುರದ, ನಿರೀಕ್ಷೆಯ, ಉದ್ವೇಗದ ದಿನಗಳಿವು.

ಬದಲಾವಣೆಯ ಹಿನ್ನೆಲೆ

ಶ್ರೀ ಓಮಂದೂರರು ಉರುಳಿದುದೇಕೆ? ಶ್ರೀ ಕುಮಾರ ಸ್ವಾಮಿ ರಾಜಾ ಬಂದುದು ಹೇಗೆ? ಎಂಬ ಪ್ರಶ್ನೆಗಳಿಗೆ "ಮದ್ರಾಸ್ ಕಾಂಗ್ರೆಸಗರ ಚಂಚಲ ಬುದ್ಧಿಯಿಂದಾಗಿ" ಎಂಬುದೇ ಚುಟುಕು ಸಮರ್ಪಕ ಉತ್ತರ. ಮದ್ರಾಸಿನ ಕಾಂಗ್ರೆಸ್ ಶಾಸನ ಸಭಾ ಸದಸ್ಯರು, ಒಬ್ಬನಿಗೆ ಕಿರೀಟವಿಟ್ಟು ಚಂದ ನೋಡಿ ಕಣ್ತಣಿದೊಡನೆ ಎತ್ತಿಟ್ಟು ಸಿಗಿಡುವ ಮೂಲಕ, ನಾಯಕಕಿರೀಟದ ಚೆಂಡಿನಾಟವನ್ನೇ ಆಡುತ್ತಿರುವಂತೆ ಕಾಣುತ್ತಿದೆ. ತಮ್ಮ 'ನಾಯಕ ನಿರ್ಮಾಣ'ವೂ ಸ್ವತಂತ್ರ ಭಾರತದ 'ನವ ನಿರ್ಮಾಣಗಳ' ಪಂಗ್ತಿಗೆ ಸೇರುವಂತಹದೆಂಬಂತೆ ಅವರಲ್ಲಿ ಹಲವರು ವಿಶೇಷ ಹೆಗ್ಗಳಿಕೆ ಮತ್ತು ಹುರುಪ ಪೂರ್ವಕವಾಗಿಯೇ ಈ ಪರ್ಯಾಯೋತ್ಸವ ಜರಗಿಸಲು ಮುಂದಾಗುತ್ತಿರುವದು ತೀರಾ ಹಾಸ್ಯಾಸ್ಪದ!

ಕಳೆದ ಬಾರಿ ಚುನಾಯಿಸಲ್ಪಟ್ಟ ಕಾಂಗ್ರೆಸ್ ಶಾಸನ ಸಭಾ ಸದಸ್ಯರುಗಳ ಪ್ರಥಮ ಪರಿಚಯದೊಂದಿಗೇನೇ ಈ ಮೇಲಾಟ ಗುಣವೂ ಅವರಲ್ಲಿ ತೋರಿಬಂದಿದ್ದಿತು. ರಾಜಾಜಿಯ ಹೆಸರು ಅಲ್ಲಿರಲಿಲ್ಲ; ಅವರಿಗೆ ರಚನೆಯ ಮುಂದಾಳುವಾಗಿ ತೋರುತ್ತಿದ್ದ ಆಂಧ್ರಕೇಸರಿ ಶ್ರೀ ಟಿ. ಪ್ರಕಾಶಮರು ಪ್ರಧಾನಿಯಾಗುವ ಕುರಿತು ಕಾಂಗ್ರೆಸ್ ಅಧಿನಾಯಕರಿಗೆ ಇಷ್ಟವಿರಲಿಲ್ಲ. ರಾಜಾಜಿಯನ್ನೇ ನಾಯಕನಾಗಿ ಆರಿಸುವುದು ವರ್ಕಿಯೆಂಬರ್ಗದ ಸಲಹೆ ಅಧಿನಾಯಕರಿಂದ ಬಂತು; ಆ ಕಾಲದಲ್ಲಿ ಅದನ್ನು ಮನ್ನಿಸಿದವರು ಇಲ್ಲಿಯ ಕಾಂಗ್ರೆಸ್ ಪಕ್ಷದ ಅಲ್ಪ ಸಂಖ್ಯಾಕರು ಮಾತ್ರ. 'ರಾಜಾಜಿ ಬೇಡವೆಂದಿದ್ದರೆ ಇಬ್ಬರು ಮೂವರ ಹೆಸರುಗಳನ್ನು ನಮಗೆ ಸೂಚಿಸಿರಿ. ಆ ವ್ಯಕ್ತಿಯಂದಕ್ಕೆ ಬೆಟ್ಟಿಟ್ಟು ನಾವು ತೋರಿಸುತ್ತೇವೆ" ಎಂದು ಕಾಂಗ್ರೆಸ್ ಹೈಕಮಾಂಡ್ ಹೇಳಿದುದನ್ನೂ ಇಲ್ಲಿಯ ಕಾಂಗ್ರೆಸ್ ಪಕ್ಷ ಕಡೆಗಣಿಸಿತು. ಅಧಿನಾಯಕರದು ಕೇವಲ ಸಲಹೆ ಮಾತ್ರವಾಗಿದ್ದುದರಿಂದ, ಅದನ್ನಲ್ಲಗಳೆಯುವ ಅಧಿಕಾರ ಇಲ್ಲಿಯವರಿಗಿದ್ದಿತು. ಶ್ರೀ. ಟಿ. ಪ್ರಕಾಶಮರ ನಾಯಕತ್ವದಲ್ಲಿ ಮೊದಲು ಮಂತ್ರಿ ಮಂಡಲ ರಚನೆಯಾಯಿತು. ಆದರೆ ವರುಷ ತುಂಬುವ ಮೊದಲು ಕಾಂಗ್ರೆಸ್ ಪಕ್ಷದೊಳಗಡೆಯಲ್ಲೇ ಅವರ ಮೇಲೆ ಅವಿಶ್ವಾಸ ಹುಟ್ಟಿಕೊಂಡಿತು. ಇದು ಸೂಚನೆಯ ರೂಪದಿಂದ ಮುಂದೆ ಬಂದು ಪಕ್ಷದ ಸಭೆಯಲ್ಲಿ ಮಂಜೂರಾಯಿತು. ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ನಾಯಕನಾಗಿ ಆರಿಸಲ್ಪಟ್ಟರು. ಈ ಸಂಬಂಧವಾಗಿ ಎದ್ದಿದ್ದ ತೀವ್ರ ವಿವಾದಗಳ ದೆಸೆಯಿಂದ ಆಗಿನ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಗಳು ಸ್ವತಃ ಬಂದು ಕ್ರಮ ನಿಯಮ ಪಾಲನೆಗಾಗಿ ಮದ್ರಾಸಿನ ಕಾಂಗ್ರೆಸ್ ಪಕ್ಷದ ಚುನಾವಣಾ ಸಭೆಯನ್ನು ನಡೆಸಬೇಕಾಯಿತು. ಎರಡು ವರುಷ ಓಮಂದೂರು ಪರ್ಯಾಯ ನಡೆಯಿತು. ಮಧ್ಯದ ವರುಷಾವಧಿ ನಾಯಕ ಚುನಾವಣೆಯಲ್ಲಿ ಶ್ರೀ. ಟಿ. ಪ್ರಕಾಶಮರು ಓಮಂದೂರರನ್ನು ಸ್ಪರ್ಧಿಸಿದ್ದರೂ ಸೋತಿದ್ದರು. ಈ ಬಾರಿಯದು ಎರಡನೇ ವಾರ್ಷಿಕ ಚುನಾವಣೆ; ಇದಕ್ಕೆ ಉಮೇದ್ವಾರಿಯಾಗಿ ಓಮಂದೂರರನ್ನು ಎಬ್ಬಿಸಿ ನಿಲ್ಲಿಸುವಷ್ಟು ಬೆಂಬಲ ಕೂಡ ಅವರಿಗಿರಲಿಲ್ಲ; ಅವರು ನಿಲ್ಲಲೇ ಇಲ್ಲ.

ನಾದರರ ಕೈವಾಡ

ಮದ್ರಾಸಿನ ಎಸೆಂಬ್ಲಿ ಮತ್ತು ಕೌನ್ಸಿಲಿನ ಕಾಂಗ್ರೆಸ್ ಸದಸ್ಯರಿಗೆ ರಾಜಾಜಿನಾಯಕತ್ವ ಒಂದು ಕಾರಣಕ್ಕಾಗಿ ಒಗ್ಗದೆ ಹೋಗಿದ್ದಾಗ, ಪ್ರಕಾಶಂ ಧುರೀಣತ್ವ ಮತ್ತೊಂದು ಕಾರಣದಿಂದ ರುಚಿಸಿರಲಿಲ್ಲ. ಇವೆರಡಕ್ಕಿಂತ ಭಿನ್ನವಾದ ಬೇರೆ ಕಾರಣಕ್ಕಾಗಿಯೇ ಓಮಂದೂರು ನೇತೃತ್ವವೂ ಹಿಡಿಸದೆ ಹೋಯಿತು. ಓಮಂದೂರರು ಪ್ರಧಾನಿಯಾದ ಮೇಲೆ, ಶಾಸನಸಭಾ ಕಾರ್ಯಾನುಭವವಿದ್ದ ಡಾ। ಸುಬ್ಬರಾಯನರನ್ನು ತನ್ನ ಮಂಡಳಿಗಾರಿಸಿ ಕೊಂಡರು—ಆತನಕ ಎಸೆಂಬ್ಲಿ ಅಥವಾ ಕೌನ್ಸಿಲ್ ಸದಸ್ಯನಾಗಿರದ ಅವರಿಗಾಗಿ ಒಂದು ಸ್ಥಾನವನ್ನು ಖಾಲಿಮಾಡಿಸಿ ಒಳಗೆ ಕರಕೊಳ್ಳಲಾಯಿತು. ಆದರೆ ಕೆಲಕಾಲ ಕಳೆಯುವದರೊಳಗೆ ಓಮಂದೂರು–ಸುಬ್ಬರಾಯನರೊಳಗೆ ಅಭಿಪ್ರಾಯ ಭಿನ್ನತೆ ಹುಟ್ಟಿ ಸುಬ್ಬರಾಯನ್ ರಾಜಿನಾಮೆಯೊಪ್ಪಿಸಿದರು. ಈ ಸಂದರ್ಭದಲ್ಲೇ ಕಾಮರಾಜನಾದರ್ ಮತ್ತು ಓಮಂದೂರರೊಳಗೆ ಮನೋಮಾಲಿನ್ಯವುಂಟಾಗಿದ್ದಿತೆಂಬ ಸುದ್ದಿಯಿದೆ. ಅಂತೂ ಈ ಸಲ ಪ್ರತಿಯೊಂದು ಮಂತ್ರಿಮಂಡಲವನ್ನು ಕಡೆದ ಶಿಲ್ಪಿ ತಮಿಳುನಾಡು ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಹಾಗೂ ಓರ್ವ ಎಂ. ಎಲ್. ಎ. ಶ್ರೀ ಕಾಮರಾಜ ನಾದರರೆಂಬುದು ಸ್ಪಷ್ಟ. ಶ್ರೀ ನಾದರರು ಅಗಾಧ ಕಾರ್ಯ ಶಕ್ತಿಯುಳ್ಳ ಜನ ಆದೂ ಮಾತಿಲ್ಲದೆ ಮಾಡುತ್ತಾ ಹೋಗುವವರು. ರಾಜಾಜಿ ಈ ಬಾರಿ ಮದ್ರಾಸಿನ ರಾಜಕೀಯ ಗಗನದಲ್ಲಿ ತೋರಿಬಂದಂತೆ ಚಕ್ರವನ್ನಡ್ಡ ಹಿಡಿದವರು ಕಾಮರಾಜರೇ; ಆ ಸಂದರ್ಭದಲ್ಲಿ ಗಾಂಧಿಜೀ ನಾದರರ ಹೆಸರೆತ್ತಿ ಟೀಕಿಸಿದ್ದರು. ಆ ಮೇಲೆ ಪ್ರಕಾಶಮರನ್ನು ಉರುಳಿಸಿ ಓಮಂದೂರರನ್ನು ಏರಿಸುವ ಕೆಲಸವಾದುದೂ ಈ ಕೈಯಿಂದಲೇ; ಕೊನೆಗೆ ಓಮಂದೂರು ಪೀಠಕ್ಕೆಳಿಜಾರು ಮಾಡಿದ್ದೂ ನಾದರರೇ. ಹೀಗಾಗಿ ನಿರ್ದೇಶಕ ನಾದರರ ಮನೋರಂಗದಲ್ಲಾಗುವ ಬದಲಾವಣೆಗನುಸಾರವಾಗಿ ಮದ್ರಾಸಿನ ರಾಜಕೀಯ ನಾಟಕದಲ್ಲಿ ಅಂಕಕ್ಕೊಬ್ಬನಂತೆ ನಾಯಕ ಕಾಣಿಸಿಕೊಳ್ಳುತ್ತಿದ್ದಾನೆ. ಪ್ರತಿಭಾನ್ವಿತ ಕಾರ್ಯಕರ್ತ ಶ್ರೀ ನಾದರರು ಧನ, ಸ್ಥಾನ, ಕೀರ್ತಿಯ ಅಭಿಲಾಷೆ ಇಲ್ಲದವರು. ತನ್ನಿಚ್ಛೆಯ ಕಾರ್ಯವಾಗುವನ್ನು ಕಾಣಬೇಕು—ಅದನ್ನಷ್ಟೇ ಮಾಡಿ[illegible]ಲ್ಲಿ ಮಂತ್ರಿಗಳನ್ನು ತಾನು ನಿರ್ಮಿಸಿದರೂ—ಈ ಬಯಕೆಯೇ ಬಾಳುವೆಯಾಗಿರುವ ಜನ ನಾದರ್. ಅವರು ಮಾತು ಜಾಣ್ಮೆಯ ಪ್ರದರ್ಶನಕ್ಕಾಗುವವರಲ್ಲ; ಅಧಿಕಾರ ನಿರ್ವಹಣಕ್ಕೂ ಬರುವಂತಿಲ್ಲ; ಇವೆಲ್ಲವೂ ಬೇಕಾದವರ ಕೈಯಲ್ಲಿ ಆ 'ಬೇಕಾದವರು' ಮಾತ್ರ ತನ್ನ ಕೈಯಲ್ಲಿ—ಇದೇ ಕಾಮರಾಜರ ಕಲೆ. ಈ ಕಾರ್ಯವನ್ನ ಕಾಯವಾಗಿ ಧರಿಸಿಕೊಂಡಂತಿದ್ದಾರೆ ಶ್ರೀ ನಾದರರು. ತಮಿಳುನಾಡು ಕಾಂಗ್ರೆಸ್ ರಂಗದಲ್ಲಿ ಅವರ ಪ್ರಭಾವವು ಬಹು ಕಾಲದಿಂದ ಕ್ರಮವಾಗಿ ಬೆಳೆದು ಬಂದಿದೆ. ತಮಿಳುನಾಡಿನ ಎಲ್ಲಾ ಕಾಂಗ್ರೆಸ್ ಕಮಿಟಿಗಳಲ್ಲೂ ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಸಮಿತಿಯಲ್ಲೂ ತನ್ನ ಪಕ್ಷೀಯರನ್ನು ತುಂಬಿಸಿಕೊಳ್ಳಲು ನಾದರರು, ಸಮರ್ಥರಾದಾಗಲೇ ತನ್ನ ಆ ಮೇಲಿನ ಪ್ರಚಂಡ ವಿಜಯಗಳೆಲ್ಲಕ್ಕೂ ಕಾರಣವಾದ ಮೂಲ ವಿಜಯಗಳಿಸಿದ್ದರು. ಆ ಬಲದಿಂದ ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳಿಗೆ ತನ್ನ ಮೆಚ್ಚುಗೆಯವರು ಕಾಂಗ್ರೆಸು ಉಮೇದ್ವಾರರಾಗುವಂತೆ ಮಾಡಿದ್ದರು; ಪದ್ಧತಿಯಂತೆ ಕಾಂಗ್ರೆಸಿಗರೆಲ್ಲಾ ಗೆದ್ದು ಬಂದಾಗ ಮದ್ರಾಸಿನ ಶಾಸನ ಸಭೆಗಳಲ್ಲಿ ತಮಿಳುನಾಡು ಪ್ರತಿನಿಧಿಗಳಾಗಿ ಇದ್ದವರು ಶ್ರೀ ಕಾಮರಾಜ ನಾದರರ ಕಡೆಯವರೇ; ಮದ್ರಾಸಿನ ಶಾಸನ ಸಭಾ ಕಾಂಗ್ರೆಸ್ ಸದಸ್ಯರಲ್ಲಿ ಅಧಿಕ ಸಂಖ್ಯಾಕರು ತಮಿಳುನಾಡಿನವರು. ಮದ್ರಾಸ್ ಶಾಸನ ಸಭೆಗಳಲ್ಲಿ ಅತ್ಯಧಿಕ ಸಂಖ್ಯಾಕರು ಕಾಂಗ್ರೆಸಿಗರೇ. ಹೀಗಾಗಿ ಮದ್ರಾಸಿನ ಶಾಸನಸಭಾ ರಂಗದಲ್ಲೇ ಶ್ರೀ ಕಾಮರಾಜ ನಾದರರ ಕೈ ಮೇಲಾಗಿಹೋಯಿತು. ಅವರು ಆ [illegible]

ಪುತ್ತೂರು ಕೋ-ಓಪರೇಟಿವ್ ಸ್ಟೋರ್ಸ್, ಲಿಮಿಟೆಡ್

ನಂಬ್ರ L. 511, ಪುತ್ತೂರು.

ನೋಟೀಸು

ಈ ಸ್ಟೋರ್ಸಿನ ಮೆಂಬರರ ಮಹಾಸಭೆಯು ತಾ 15-4-49ನೆ ಶುಕ್ರವಾರ ಅಪರಾಹ್ನ ಘಂಟೆ 3ಕ್ಕೆ ಪುತ್ತೂರು ಸಹಕಾರಿ ಕಟ್ಟಡದಲ್ಲಿ ಜರಗುವುದು. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

ಪುತ್ತೂರು
ತಾ. 31-3-49.

M. V. Kolathaya.
ಗೌರವ ಕಾರ್ಯದರ್ಶಿ.

ಕಾರ್ಯಕ್ರಮ:—

1. 1947-48ನೆ ವರುಷದ ಆಡಿಟ್ ಸರ್ಟಿಫಿಕೇಟು.
2. 48-49ನೆ ವರುಷದ ಬಜೇಟು ಮಂಜೂರಾತಿ.
3. ಆಡಳ್ತೆ ಮೆಂಬರರ ಚುನಾವಣೆ.
4. S. C. C. C. ಬೇಂಕಿಗೆ, S. K. A. C. M. S. ಪುತ್ತೂರು ಡಿವಿಜನ್ ಮಹಾಳಿಪ್ರಿವೆನ್ಶನ್ ಸಹಕಾರಿ ಸಂಘ ಮತ್ತು ಪುತ್ತೂರು ಟೌನು ಬೇಂಕಿಗೆ ಈ ಸಂಸ್ಥೆಯ ಕಡೆಯಿಂದ ಪ್ರತಿನಿಧಿಗಳನ್ನು ಆರಿಸುವಿಕೆ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಕುಮಾರಸ್ವಾಮಿ ರಾಜಾ ಸರಕಾರ ಹುಟ್ಟಿತು!

ಳಸುತ್ತಾ, ಬೇಕಾದವರನ್ನು ಏರಿಸುತ್ತಾ ಬಂದರು. ಈ ವರೆಗೆ ನಡೆದುದಿಷ್ಟು.

ಈ ಚುನಾವಣೆಯ ಹಿಂಭಾಗ—

ಮಾರ್ಚ್ 29 ಮತ್ತು 31ರಲ್ಲಿ ಕಾಂಗ್ರೆಸ್ ಶಾಸನಸಭಾ ಸದಸ್ಯರ ಪಕ್ಷದ ವಾರ್ಷಿಕ ಮಹಾಸಭೆ ಸೇರಿ ಪದ್ಧತಿಪ್ರಕಾರ ನಾಯಕ ಚುನಾವಣೆ ನಡೆಯುವದೆಂದು ನಿಶ್ಚಯವಾಗುವ ಮೊದಲಿನಿಂದಲೂ ಉಮೇದ್ವಾರಿಗಳ ಹೆಸರುಗಳು ಕೇಳಬರುತ್ತಿದ್ದುವು; ಸದಸ್ಯರನ್ನು ಒಲಿಸಿಕೊಳ್ಳುವ ಕೆಲಸಗಳು ನಡೆದಿದ್ದುವು. ಚುನಾವಣೆ ಸಮೀಪಿಸುತ್ತಾದಂತೆ ವಿವಿಧ ಪಂಗಡಗಳ ಚಟುವಟಿಕೆಗಳಿಗೆ ಪ್ರಚಂಡತೆ ಬಂದಿದ್ದಿತು. ಮೊದಮೊದಲು ಹೆಚ್ಚಾಗಿ ಕೇಳಬರುತ್ತಿದ್ದ ಹೆಸರುಗಳೆಂದರೆ ಶ್ರೀ ಓಮಂದೂರರದು ಮತ್ತು ಡಾ: ಸುಬ್ಬರಾಯನರದು. ಡಾ| ಸುಬ್ಬರಾಯನರ ಉಮೇದ್ವಾರಿಕೆಗೆ ಶ್ರೀ. ಟಿ. ಪ್ರಕಾಶಂ, ತನ್ನ ಅನುಯಾಯಿಗಳಾದ ಬಹು ಸಂಖ್ಯಾಕ ಆಂಧ್ರ ಸದಸ್ಯರು ಮತ್ತು ಒಂದು ತಮಿಳು ಪಂಗಡ ಹಾಗೂ ಮಲಬಾರು, ದಕ್ಷಿಣಕನ್ನಡಗಳ ಸದಸ್ಯರೊಂದಿಗೆ ಬೆಂಬಲವಾಗಿ [illegible] ಡಾ| ಸುಬ್ಬರಾಯನ್ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟಂದಿನಿಂದ ಅವರ ಜತೆಯಲ್ಲಿದ್ದ ಶ್ರೀ ಕಾಮರಾಜ ನಾದರರು ಕೊನೆಯ ದಿನದ ವರೆಗೂ ಈ ಗುಂಪಿನಲ್ಲೇ ತೋರಿ ಬಂದಿದ್ದರು. ಶ್ರೀ ಓಮಂದೂರರು ಪುನಃ ನಾಯಕಸ್ಥಾನಕ್ಕೆ ಸ್ಪರ್ಧಿಸುವರೆಂದು ನಿರ್ಧಾರ ಪೂರ್ವಕ ಊಹಿಸಲಾಗಿತ್ತು. ಆದರೆ ಸದಸ್ಯರೊಳಗೆ ನಡೆದಿದ್ದ ವಿಚಾರಾಂದೋಲನಾ ತೆರೆಗಳು ಊಹಾಪೋಹೆಗಳನ್ನೂ ಹೆಸರುಗಳನ್ನೂ ಪಡಕ್ಕ ಸ್ಥಳಿಸುತ್ತಲೂ, ಸೇರಿಕೊಳ್ಳುತ್ತಲೂ ಇರುವ ದೃಶ್ಯ ಕಂಡುಬರುತಿತ್ತು. ಸ್ಪರ್ಧೆಗೆ ನಿಲ್ಲುವಷ್ಟು ಭದ್ರ ನೆಲೆ ಓಮಂದೂರರ ಕಾಲಡಿಯಲ್ಲಿಲ್ಲವೆಂಬುದು ಕೊನೆಕೊನೆಗೆ ನಿಚಿತವಾದಂತೆ ಕಾಣುತ್ತದೆ. ಶ್ರೀ ಬಿ. ಗೋಪಾಲ ರೆಡ್ಡಿಗಳಂತಹ ಓಮಂದೂರು ಮಂಡಲಿಯವರಿಗೆ ನಾಯಕತ್ವವು ತಮ್ಮ ವಿರುದ್ಧ ಪಾಳೆಯದವರ ಬಗಲೊಳಗೆ ಬೀಳದಂತೆ ನೋಡುವ ಹಂಬಲ ಹೆಚ್ಚಿತು. ಓಮಂದೂರರ ಬದಲಿಗೆ ಭಕ್ತವತ್ಸಲಮ್ ಹುರಿಯಾಳಾಗುವ ಸಿದ್ಧತೆ ನಡೆಯಿತು. ಅವಿರೋಧ ಸಮ್ಮತಿ ದೊರೆಯುವಂತಿದ್ದರೆ ಓಮಂದೂರು—ಅದಿಲ್ಲವಾದರೆ ಸ್ಪರ್ಧೆಗೆ ಭಕ್ತವತ್ಸಲಮ್, ಎಂಬುದೇ ಈ ಪಾಳೆಯದ ಮೊದಲ ನಿರ್ಧಾರವಿದ್ದಿತೆಂದು ನಂಬಬಹುದು. ನಾದರ್, ಪ್ರಕಾಶಂ ಬೆಂಬಲದಿಂದ ಡಾ| ಸುಬ್ಬರಾಯನರು ಎಂಬುದೇ ಎರಡನೇ ಪಂಗಡದ ನಿರ್ಣಯವಿದ್ದಿತು.

ತಾ. 29ರ ಸಭೆಯಲ್ಲಿ

ಮಾರ್ಚ ತಾ. 29ರಲ್ಲಿ ಪ್ರಸಿದ್ಧ ರಾಜಾಜೀ ಭವನದಲ್ಲಿ ಕಾಂಗ್ರೆಸ್ ಶಾಸನಸಭಾ ಸದಸ್ಯರ ಸಭೆ ಸೇರಿತು. ಪಕ್ಷನಾಯಕ ಹಾಗೂ ಪ್ರಧಾನ ಮಂತ್ರಿ ಶ್ರೀ ಓ. ಪಿ. ರಾಮಸ್ವಾಮಿ [illegible]

ಒಕ್ಕಟ್ಟು ಮತ್ತು ಒಮ್ಮತವನ್ನು ಬಯಸಿ ಆಗ್ರಹದ ವಿನಂತಿ ಮಾಡಿಕೊಂಡರು. ತಾನು ನಾಯಕನಾಗಿ ಸರಕಾರ ನಿರ್ವಹಿಸಲಾರಂಭಿಸಿದಂದಿನಿಂದ ಅದು ವರೆಗೆ ಮಾಡಿರುವ ಕಾರ್ಯಕಲಾಪಗಳನ್ನು ವಿವರಿಸಿ ಶ್ರೀ ಓಮಂದೂರರು ಅಂತಃಕರಣ ಪೂರ್ವಕ ವಿಜ್ಞಾಪಿಸಿಕೊಂಡರು: "ನೀವು ಎತ್ತಿಕೊಂಡಂತೆ ನಿಮ್ಮ ಸೇವೆ ಮಾಡುವ ಒಂದು ಸುಯೋಗವೆಂಬುದರಿಂದಲೇ ಪ್ರಧಾನ ಮಂತ್ರಿತ್ವವನ್ನು ನಾನು ಅಂಗೀಕರಿಸಿದ್ದೆ. ನನ್ನ ಕರ್ತವ್ಯಗಳನ್ನು ಪೂರೈಸುವದರಲ್ಲಿ ನನ್ನಿಂದ ಶಕ್ಯವಿದ್ದುದನ್ನೆಲ್ಲಾ ಮಾಡಿದ್ದೇನೆ. ಈ ದಿನ ಅದೇ ಸೇವಾ ಮನೋವೃತ್ತಿಯಿಂದ ನಿಮ್ಮೆದಿರು ನಿಂತಿದ್ದೇನೆ. ಇನ್ನು ನಿರ್ಧಾರ ಮಾಡುವ ಕೆಲಸ ನಿಮ್ಮ ಪಾಲಿಗೆ. ಜನತೆಯ ಪ್ರತಿನಿಧಿಗಳಾದ ನಾವು ನಮ್ಮ ಲಕ್ಷ್ಯವನ್ನು ಬೇರೆಡೆಗಳಿಂದ ಎಳೆದುಕೊಂಡು ಒತ್ತಾಯದಿಂದ ನಮ್ಮ ಮುಂದಿರುವ ಮಹತ್ವದ ಹೊಣೆಗಾರಿಕೆಗಳ ಹಾಗೂ ಕಾರ್ಯಭಾರಗಳ ಮೇಲೆ ನೆಡಬೇಕು. ನಮ್ಮ ಹಾದಿಗಳನ್ನು ಎಲ್ಲಾ ಒಕ್ಕಗಳಿಂದಲೂ ಕಾಳ ಶಕ್ತಿಗಳಡ್ಡಗಟ್ಟುತ್ತಿವೆ; ನಮ್ಮನ್ನು ವಿಭಾಗಿಸಿ ಹಾಕಿ ಪತನದತ್ತ ದೂಡಲು ದುಃಶಕ್ತಿಗಳ ಪ್ರಯತ್ನ ನಡೆದಿದೆ. ಒಕ್ಕಟ್ಟು ಮತ್ತು ದೃಢೈಕ್ಯತೆಯ ಅವಶ್ಯಕತೆ ಈಗ ಇರುವಷ್ಟು ಎಂದೂ ಇರಲಿಲ್ಲ. ಯಾವ ನಿಸ್ವಾರ್ಥ ಸೇವೆಗಾಗಿ ನಮ್ಮ ಚಿರಂಜೀವಿ ನಾಯಕ ಮಹಾತ್ಮಾ ಗಾಂಧಿಯವರು ಬದುಕಿದ್ದರೋ, ಕೆಲಸ ಮಾಡಿದ್ದರೋ, ಸತ್ತರೋ ಆ ಸೇವಾ ಸ್ಫೂರ್ತಿಯು, ಭಾರತದ ಮೂಕ ಜನತೆಯ ಮುಂದಿಯ ಜೀವನ ಮೂಲೆಯ ಕತ್ತಲೆಯನ್ನು ಬೆಳಗಿಸುತ್ತಾ, ನಮ್ಮ ಕಣ್ಣ ಮುಂದಿನ ಹಾದಿಯಲ್ಲಿ ಬೆಳಕು ಬೀರುತ್ತಾ ಸದಾ ಕಾಲ ನಮ್ಮೊಳಗೆ ನಂದಾದೀಪವಾಗಿ ಜ್ವಲಿಸುತ್ತಿರಬೇಕು. ನೀವು ಎರಡು ವಾರ್ಷಿಕಾವಧಿಗಳಲ್ಲಿ ನಾಯಕನಾಗಿ ನನ್ನನ್ನಾರಿಸಿಕೊಂಡಿರಿ. ನನ್ನ ಸಾಕ್ಷಿಯಾಗಿ ದೇವರನ್ನೂ, ನನ್ನ ಆದರ್ಶವಾಗಿ ಗಾಂಧಿಜೀಯನ್ನೂ ಇಟ್ಟುಕೊಂಡು ನನ್ನ ಶಿಕ್ಷಿಮೀರಿ ನಾನೀ ಜವಾಬ್ದಾರಿ ನಿರ್ವಹಿಸಲು ದುಡಿದಿದ್ದೇನೆ. ನನ್ನಲ್ಲಿ ಕುಂದು ಕೊರತೆಗಳಿವೆ; ಅವುಗಳ ಅರಿವು ಬೇರೆಲ್ಲರಿಗಿಂತ ಹೆಚ್ಚಾಗಿ ನನಗೇನೇ ಇದೆ. ದೈನಂದಿನ ಆಫೀಸ್ ಕೆಲಸಗಳ ಗೊಂದಲಕ್ಕೀಡಾಗಿ, ಉದ್ಯೋಗಗಳ ಒತ್ತಡದಲ್ಲಿ ಸಿಕ್ಕಿ, ಮತ್ತು ತಲ್ಲಣಗೊಳಿಸುವ ದೈಹಿಕ ಸ್ಥಿತಿಯಿಂದಾಗಿ, ನಾನು ಯಾರಿಗಾದರೂ ಅಸಂಬಂಧ ಮಾಡಿದುದಿದ್ದರೆ ಅದಕ್ಕಾಗಿ ಹೃತ್ಪೂರ್ವಕ ಪಶ್ಚಾತ್ತಾಪ ಪಡುತ್ತೇನೆ. ಈಗ ನಾನು ನಿಮ್ಮನ್ನು ಕೇಳಿಕೊಳ್ಳುವದೆಂದರೆ ನಮ್ಮ ಭಿನ್ನಾಭಿಪ್ರಾಯಗಳೆಂತಹವೇ ಇರಲಿ. ನಾವೀಗ ಒಕ್ಕಟ್ಟನ್ನು—ಎಂತಹ ಬೆಲೆ ತೆತ್ತಾದರೂ ಒಕ್ಕಟ್ಟನ್ನು—ಉಳಿಸಿಕೊಳ್ಳಬೇಕು. ಈಗಿನ ಪ್ರಶ್ನೆಯೆಂದರೆ ಗೆಲ್ಲುವವರಾರು, ಎಂಬುದಲ್ಲ; ಗೆಲ್ಲುವದಾವುದು ಎಂಬುದೇ. ಮುಂದಾಗುವವರಾರು ಎಂಬ ಪ್ರಶ್ನೆಯಿಲ್ಲಿಲ್ಲದೆ, ಮುಂದೆ ಹೋಗುವದಾವುದು ಎಂಬ ಸಮಾಲೋಚನೆ. ಕಾಂಗ್ರೆಸ್ ಅಧಿನಾಯಕರು ಬಾರಿಬಾರಿಗೂ ಬದಲಾವಣೆಯೆಂಬದನ್ನು ಬಯಸದೆ, ಒಕ್ಕಟ್ಟು ಮತ್ತು ದೃಢತೆಯ ಕುರಿತು ಅತುರಾಸಕ್ತಿ ತೋರಿಸಿದ್ದಾರೆ; ವಿವಿಧ ರಾಜಕೀಯಾಭಿಮತಗಳುಳ್ಳ ಜನತೆ ಕೂಡಾ ಹಾಗೆಯೇ. ಕಾಂಗ್ರೆಸಿನ ಪ್ರತಿಜ್ಞಾಬದ್ಧ ವಿರೋಧಿಗಳ ಹೊರತು ಯಾರೇ ಆದರೂ ಪ್ರಾಂತ್ಯದಲ್ಲಿ ಗೊಂದಲವೇಳಬೇಕೆಂದು ಬಯಸುವದಿಲ್ಲ. ಪಂಗಡ ಹಿತ, ಮತ್ತು ವ್ಯಕ್ತಿ ಹಿತಗಳೆಲ್ಲವನ್ನೂ ಸರ್ವರ ಸಮಾನಹಿತದೊಳಗೇನೇ ಎರಕಗೊಳಿಸಿಕೊಳ್ಳೋಣ. ಶ್ರೀಯುತ ಕಾಮರಾಜ ನಾದರ್, ಶ್ರೀಯುತ ಪ್ರಕಾಶಮ್ ಮತ್ತಿತರ ನಾಯಕರೊಡನೆ ನನ್ನ ಆಗ್ರಹದ ವಿಜ್ಞಾಪನೆಯಿಷ್ಟೆ: ನಾವು ನಮ್ಮ ವಿಭಾಗಗಳನ್ನು ಜೋಡಣೆ ಮಾಡಿಕೊಂಡು ಒಂದಾಗೋಣ. ಯಾಕೆಂದರೆ ವಿಭಾಗಿಸಲ್ಪಟ್ಟರೋ ನಾವು ಪತನಗೊಳ್ಳುವೆವು. ಮಂತ್ರಿಮಂಡಲದಲ್ಲಿ ಯಾವ ಬದಲಾವಣೆಗಳು, ಯಾವ ವಿಸ್ತರಣೆಗಳಾಗಬೇಕೋ, ಅವೆಲ್ಲವನ್ನೂ ರಾಷ್ಟ್ರಹಿತವನ್ನು ದೃಷ್ಟಿಪಥದಲ್ಲಿಟ್ಟುಕೊಂಡು ಪರಸ್ಪರ ಸಮ್ಮತಿಯಿಂದಲೇ ಮಾಡಿಕೊಳ್ಳಬಹುದು."

ಶ್ರೀ ಓಮಂದೂರರು ಮೇಲಿನ ವಿನಂತಿ ಮಾಡಿಕೊಂಡು ಮುಗಿಸಿದೊಡನೆಯೇ ಶ್ರೀ ಕೆ. ಆರ್. ಕಾರಂತರೆದ್ದು ಹೇಳಿದರು: "ಶ್ರೀ ರೆಡ್ಡಿಯಾರರು ತನ್ನ ಹೇಳಿಕೆಯು ವಾದಾತೀತವಾದುದೆಂದು ಹೇಳಿದರೂ, ವಾದಾಸ್ಪದವಾದ ಹಲವು ಮಾತುಗಳನ್ನವರು ಆಡಿದ್ದಾರೆ. ಈ ಸಂದರ್ಭದಲ್ಲಿ ಆ ಕುರಿತು ನಾವು ಚರ್ಚಿಗಿಳಿಯದಿದ್ದ ಮಾತ್ರಕ್ಕೆ, ನಾವದನ್ನು ಅಂಗೀಕರಿಸಿಕೊಂಡೆವೆಂಬ ಅರ್ಥ ಮಾಡಬಾರದು. ಆ ಹೇಳಿಕೆಗಳು ಪ್ರತಿಭಟಿಸದೆ ಬಿಡಲಾಗುವಂತಹವಲ್ಲ". ಆ ದಿನದ ಸಭೆಯಲ್ಲಿ ಬೇರೆ ಹೆಚ್ಚಿನ ಕಾರ್ಯಕ್ರಮಗಳಿಲ್ಲ.

ತಾನು ನಾಯಕ ಸ್ಥಾನಕ್ಕೆ ಉಮೇದ್ವಾರಿಯಾಗುವದಿಲ್ಲವೆಂದು ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರು ತಾ. 30ರಲ್ಲಿ ಜಾಹೀರು ಮಾಡಿದರು. "ಸದಸ್ಯರು ಭಿನ್ನಭಾವ ಬಿಟ್ಟು ಒಮ್ಮತದಿಂದ ನಾಯಕನನ್ನಾರಿಸಿಕೊಳ್ಳಬೇಕೆಂದೂ ಕಾಂಗ್ರೆಸ್ ಪಕ್ಷದೊಳಗಿನ ಪಂಗಡವಾದ ರಾಜಕೀಯ ಪಂಥಗಳು ಅಡಕಿತಗೆ ಆಕಾರವಿದ್ದು ಕಾಂಗ್ರೆಸ್ ಸಂಸ್ಥೆಯನ್ನು ಶಿಥಿಲಗೊಳಿಸುವವೆಂದೂ ನಾನು ನಿನ್ನೆಯ ಸಭೆಯಲ್ಲಿ ವಿನಂತಿಸಿಕೊಂಡೆ. ಅದಕ್ಕೆ ಮನ್ನಣೆ ದೊರೆತಂತಿಲ್ಲ. ಅದ್ದರಿಂದ ನಾನು ನಾಯಕಸ್ಥಾನದ ಉಮೇದ್ವಾರಿಕೆಯ ರಂಗದಿಂದ ನಿವೃತ್ತಿ ಹೊಂದಬಯಸುತ್ತೇನೆ. ನಾನು ನಿವೃತ್ತನಾದುದರ ಪರಿಣಾಮವಾಗಿ ಸರ್ವಸಮ್ಮತಿಯ ನಾಯಕ ಚುನಾವಣೆ ನಡೆಯುತ್ತದಾದರೆ ನಾನು ಕೃತಾರ್ಥ. ನಮ್ಮ ಪ್ರಾಂತ್ಯ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ [illegible] ಒಕ್ಕಟ್ಟಾಗಬೇಕೆಂದು ಪುನಃ ಸದಸ್ಯರನ್ನು ಆಗ್ರಹಪೂರ್ವಕ ಕೇಳಿಕೊಳ್ಳುತ್ತೇನೆ" ಎಂದವರು [illegible]

FOR PROTECTION AND PROVISION, CONSULT
The most progressive life office,
THE NEW GUARDIAN OF INDIA
LIFE INSURANCE CO., LTD.
(United India Building) Post Box No. 142, Esplanade.
Head Office, MADRAS
CHAIRMAN
The Hon'ble Mr M. Ct M. Chidambaram Chettiar Avl.
Low Expense Ratio, Moderate Premium Rates;
Prompt Claim Discharges, and efficiency of Management.
Branches & Representatives all over India.
Application for representation from influential persons invited,
The Organising Secretary,
MANGLORE BRANCH K. S Rao, Road, HUMPANKATTA

ದಿ ಕೆನರಾ ಬ್ಯಾಂಕ್, ಲಿಮಿಟೆಡ್
ಸ್ಥಾಪನೆ: ೧೯೦೬
(ಹೊಣೆಗಾರಿಕೆ ಪರಿಮಿತಗೊಳಿಸಲ್ಪಟ್ಟು ಇಂಡಿಯಾದಲ್ಲಿ ನೋಂದಾಯಿಸಲ್ಪಟ್ಟದ್ದು)
ಮುದ್ದತಿ ಠೇವುಗಳು
ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.
೬ ತಿಂಗಳು ನೂರಕ್ಕೆ ವರ್ಷಕ್ಕೆ [illegible]
೪ರಿಂದ ೫ ತಿಂಗಳು ,, ,, [illegible]
೬ರಿಂದ ೯ ತಿಂಗಳು ,, ,, [illegible]
ರೂ. ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.
ಹೆಡ್ ಆಫೀಸು: ಬಾವುಟಗುಡ್ಡೆ, ಮಂಗಳೂರು.
ಇತರ ಶಾಖೆಗಳು.
[illegible]
ಮುಲ್ಕಿ, ಕಾರ್ಕಳ, ಬಂಟ್ವಾಳ, [illegible]
The Canara Bank Limited.
ESTD: 1906

ಮದ್ರಾಸಿಗೆ ಮತ್ತೊಂದು ಸರಕಾರ

ನಾಯಕತ್ವದ ಚುನಾವಣಾರಂಗದಲ್ಲಿ ಮಿಂಚುವೇಗದ ಮಾರ್ಪಾಟುಗಳಾಗ ಹತ್ತಿದುವು. ಶ್ರೀ ಭಕ್ತವತ್ಸಲಮರ ಹೆಸರಿದ್ದ ಸ್ಥಾನದಲ್ಲಿ ಶ್ರೀ. ಪಿ. ಯಸ್. ಕುಮಾರಸ್ವಾಮಿರಾಜರ ಹೆಸರು ಮೂಡಿತು. ಶ್ರೀ ಕಾಮರಾಜ ನಾದರರು ಡಾ। ಸುಬ್ಬರಾಯನರ ಪಾಳಯದಿಂದ ಶ್ರೀ ಕುಮಾರಸ್ವಾಮೀ ಪಂಗ್ತಿಗೆ ಚಲಿಸಿದುದು ಗೋಚರಕ್ಕೆ ಬಂತು.

ತಾ. 31ರ ಚುನಾವಣಾಸಭೆ.

ಮದ್ರಾಸ್ ಪ್ರಾಂತ್ಯದ ಆಡಳಿತ ಶಿರಗಳನ್ನು ಬದಲಾಯಿಸಿದ ಕಾಂಗ್ರೆಸ್ ಪಕ್ಷದ ಸಭೆಯು ತಾ. 31ನೇ ಪೂರ್ವಾಹ್ನ ೧ಕ್ಕೆ ಮದ್ರಾಸಿನ ರಾಜಾಜಿ ಭವನದಲ್ಲಿ ಜರಗಿತು. ಇಬ್ಬರು ಉಮೇದ್ವಾರಿಗಳ ಇಷ್ಟದೆಯ ಪ್ರಯತ್ನವೆಷ್ಟಿತ್ತೆಂದರೆ, ಮದ್ರಾಸಿನ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಒಟ್ಟು 201 ಮಂದಿ ಕಾಂಗ್ರೆಸ್ ಸದಸ್ಯರ ಪೈಕಿ 196 ಮಂದಿಯೂ ಆದಿನ ಹಾಜರಿದ್ದರು. ಗೈರುಹಾಜರಿದ್ದ ಮೂವರಾದರೋ-ಕಾಂಗ್ರೆಸ್ ಕಾರ್ಯದರ್ಶಿತ್ವದ ರಾಯಭಾಹುಳ್ಯದಿಂದ ಢಿಲ್ಲಿಬಿಡಲಾಗದ ಶ್ರೀ ಕಳ. ವೆಂಕಟರಾಯರೊಬ್ಬರು; ಪಕ್ಷಾತೀತರಿರುವ ಎಸೆಂಬ್ಲಿ ಮತ್ತು ಕೌನ್ಸಿಲು ಅಧ್ಯಕ್ಷರುಗಳಿಬ್ಬರು. ಉಳಿದ ಎಲ್ಲರೂ ಬಂದಿದ್ದರು. ತನ್ನ ಕಾಯಿಲೆ ಮಂಚದಿಂದೆದ್ದು ಮಗಳು ಮತ್ತೊಬ್ಬ ಸಂಬಂಧಿಕನನ್ನಾಧರಿಸಿಕೊಂಡು ಶ್ರೀಮತಿ ಲಕ್ಷ್ಮೀ ಪತಿಯವರೂ, ಕಾರಿನಿಂದ ಇಳಿಸಲ್ಪಟ್ಟು ಅನ್ಯರ ತೋಳುಗಳಾಧಾರದಿಂದಲೇ ಮತ್ತೊಬ್ಬ ರೋಗಿ ಶ್ರೀ. ಶರ್ಮರೂ ಸಭೆಗೆ ಹಾಜರಾಗಿದ್ದರು. ಸಭಾಭವನದ ಹಾದಿ, ಅಕ್ಕಪಕ್ಕಗಳಲ್ಲಿ ಯಾರನ್ನೂ ಸುಳಿಯಲು ಬಿಡುತ್ತಿರಲಿಲ್ಲ. ಬಲವಾದ ಪೋಲೀಸು ಬಂದೋಬಸ್ತಿದ್ದಿತ. ಪತ್ರಿಕಾ ಪ್ರತಿನಿಧಿಗಳು ಮತ್ತು ಪಹರೇ ಪೋಲೀಸರ ಹೊರತು ಮಿಕ್ಕಾರಿಗೂ ಆ ಪಥಾರಕ್ಕೆ ಪ್ರವೇಶವಿಲ್ಲಿಲ್ಲ. ನಿಶ್ಚಿತಮುಹೂರ್ತ ೧೦ತಾಸಿಗೆ ಹತ್ತು ಮಿನಿಟಿರುವಾಗ ಸಭಾಧ್ಯಕ್ಷ ಶ್ರೀ ಓಮಂದೂರರ ಪ್ರವೇಶ. ಆ ಕೂಡಲೇ ಭವನದ ಬಾಗಿಲು ಮುಚ್ಚಿತು; ಪತ್ರಿಕಾಪ್ರತಿನಿಧಿಗಳಲ್ಲದೆ ಮಿಕ್ಕವರು ದೂರಕ್ಕಟ್ಟಲ್ಪಟ್ಟರು; ಸದಸ್ಯರೇ ಇರುವ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರಲ್ಲದೆ, ಆಂಧ್ರ, ಕೇರಳ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳೂ ಸಭೆಯಲ್ಲಿ ಹಾಜರಿದ್ದರು. ಸಭಾರಂಭವಾಯಿತು; ಆ ವರೆಗೂ ಇಕ್ಕಡೆಯವರ ಮತಸಂಗ್ರಹ ಪ್ರಯತ್ನಗಳು ನಡೆದಿದ್ದುವು.

ನಾಯಕ ಚುನಾವಣೆ

ನಾಯಕ ಶ್ರೀ ಓಮಂದೂರರ ಅಧ್ಯಕ್ಷತೆಯಲ್ಲಿ ತಾಸ. 9ಕ್ಕೆ ಸರಿಯಾಗಿ ಸಭಾರಂಭವಾದೊಡನೆ ಕಾರ್ಯದರ್ಶಿ ಶ್ರೀ ವೆಂಕಟಸ್ವಾಮಿ ನಾಯಿಡುಗಳು ಸಭಾನೋಟಿಸನ್ನು ಓದಿದರು. ಆ ಮೇಲೆ ನಾಯಕಸ್ಥಾನದ ಉಮೇದ್ವಾರೀ ನಾಮಪತ್ರಗಳಿಗೆ ಕರೆಬಂತು. ಪ್ರಥಮತಃ ಡಾ। ಸುಬ್ಬರಾಯನರ ಹೆಸರನ್ನು ಶ್ರೀ ನಾಚಿಯಪ್ಪ ಗೌಂಡರ್ ಸೂಚಿಸಿದರು. ಅದನ್ನು ಶ್ರೀ ಸಿ. ಪೆರುಮಲಸ್ವಾಮಿ ರೆಡ್ಡಿಯಾರರು ಅನುಮೋದಿಸಿದರು.

ಶ್ರೀ ಪಿ. ಯಸ್. ಕುಮಾರಸ್ವಾಮಿರಾಜರ ಹೆಸರನ್ನು ಶ್ರೀ ಎಮ್. ಭಕ್ತವತ್ಸಲಮ್ ಸೂಚಿಸಿ, ಶ್ರೀ ಬಿ. ಗೋಪಾಲ ರೆಡ್ಡಿಗಳು ಅನುಮೋದಿಸಿದರು.

ಕೂಡಲೇ ಮತದಾನ ಪತ್ರಗಳು ಸದಸ್ಯರಿಗೆ ಹಂಚಲ್ಪಟ್ಟವು. 50 ಮಿನಿಟುಗಳಲ್ಲಿ ಗುಪ್ತವಾಗಿ ವೋಟುಗಳು ಹಾಕಲ್ಪಟ್ಟು ಮುಗಿದೊಡನೆಯೇ ಮತಗಣನೆ ನಡೆಯಿತು. ಶ್ರೀ ಕೆ. ಆರ್. ಕಾರಂತ, ಮತ್ತು ಶ್ರೀ ಕೆ. ಮಾಧವ ಮೆನನರು ಮತಗಣಕರಾಗಿ ನೇಮಿಸಲ್ಪಟ್ಟರು. ಲೆಕ್ಕ ಮಾಡಿದಾಗ-

ಶ್ರೀ ಪಿ. ಯಸ್. ಕುಮಾರಸ್ವಾಮಿ ರಾಜಾ—105.

ಡಾ. ಪಿ. ಸುಬ್ಬರಾಯನ್—89.

ನಿರ್ಧರ್ಕವಾದುದು.-1

ಬಿದ್ದ ವೋಟುಗಳು ಜುಮ್ಲಾ—105.

ಹಾಜರಿದ್ದ 196 ಸದಸ್ಯರ ಪೈಕಿ ಉಮೇದ್ವಾರಿ ಶ್ರೀ. ಪಿ. ಯಸ್. ಕುಮಾರಸ್ವಾಮಿರಾಜಾ, ಡಾ। ಸುಬ್ಬರಾಯನ್.ಮತ್ತು ಶ್ರೀ ಮೋತಿನಾರಾಯಣ ರಾವ್-ಈ ಮೂವರು ಮತದಾನ ಮಾಡಿಲ್ಲವೆಂದು ತಿಳಿದುಬಂದಿದೆ.

ಕಾರ್ಯದರ್ಶಿ ಈ ಅಂಕೆಗಳನ್ನು ಓದಿ ಹೇಳಿದೊಡನೆ ಅಧ್ಯಕ್ಷ ಶ್ರೀ. ಓಮಂದೂರರು ಶ್ರೀ. ಪಿ. ಯಸ್. ಕುಮಾರಸ್ವಾಮಿ ರಾಜಾ ಆರಿಸಲ್ಪಟ್ಟರೆಂದು ಜಾಹೀರುಮಾಡಿದರು. ಆ ಮೇಲೆ ತನ್ನಾಸನವನ್ನು ನವನಾಯಕನಿಗೆ ಬಿಟ್ಟುಕೊಡುತ್ತಾ ಅವರ ಕೈ ಕುಲುಕಿ "ಈ ಭಾರ ಹೊರುವ ಬಲವನ್ನು ದೇವರು ನಿಮಗೆ ಅನುಗ್ರಹಿಸಲಿ" ಎಂದರು.

ನವನಾಯಕನ ವಿಜ್ಞಾಪನೆ.

ಆ ಮುಹೂರ್ತದಲ್ಲೇ ನಾಯಕನಾಗಿ ಮಾರ್ಪಟ್ಟ ಶ್ರೀ. ಪಿ. ಯಸ್. ಕುಮಾರಸ್ವಾಮಿರಾಜಾ ಪ್ರಥಮ ನಿವೇದನೆ ಮಾಡಿಕೊಂಡರು: "ಪಕ್ಷದ ನಾಯಕನಾಗಿ ನನ್ನನ್ನಾರಿಸಿದ ತಮಗೆ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳಿರಲಿ. ನಾನೀ ಸ್ಥಾನವನ್ನು ಪೂರ್ಣ ನಮ್ರತೆ, ಮತ್ತು ಅದರೊಂದು ಪರಿಮಾಣದ ಸಂಕೋಚನೊಡನೆಯೇ ಅಂಗೀಕರಿಸಿಕೊಳ್ಳುತ್ತೇನೆ. ಈ ಆರಿಸುವಿಕೆಯುಂಟಾದುದು ದುರ್ದೈವವಶಾತ್ ನಮ್ಮೀ ಪ್ರಾಂತ್ಯದಲ್ಲಿ ಪ್ರಚಲಿತವಿರುವ ವಿಲಕ್ಷಣ ಸಂಗತಿಗಳ ಆ ವಿದ್ಯಮಾನಗಳ ಅವ್ಯಕ್ತನಿರ್ವಾಣವೆಂದೇ ನಾನು ಭಾವಿಸುತ್ತೇನಲ್ಲದೆ, ದೊಡ್ಡ ಹಾಗೂ ಅಗಾಧ ಹೊಣೆಗಾರಿಕೆಗಳುಳ್ಳ ಈ ನಾಯಕತ್ವಕ್ಕೆ ಸಹಜವಾದ ಶಕ್ತಿಯೋಗ್ಯತೆಗಳು ನನ್ನಲ್ಲಿವೆ ಎಂದು ದೊರೆತ ಮನ್ನಣೆಯಿದು ಎಂದು ನೆನೆಸಲಾರೆ. ನನ್ನ ಮಿತಯೋಗ್ಯತೆಗಳ ಅರಿವು ನನಗಿದೆ. ನನ್ನ ಪೂರ್ವಾಧಿಕಾರಿಗಳಲ್ಲಿದ್ದ, ಅವರನ್ನು ಅವರೇರಿದ್ದ ಈ ಸ್ಥಾನಕ್ಕರ್ಹರನ್ನಾಗಿಮಾಡಿದ್ದ ಸದ್ಗುಣಗಳೂ ಸುಯೋಗ್ಯತೆಗಳೂ ನನ್ನಲ್ಲಿಲ್ಲವೆಂಬುದು ನನಗೆ ಸರಿಯಾಗಿ ತಿಳಿದಿದೆ. ನಾನು ಶ್ರೀ ಸಿ. ರಾಜಗೋಪಾಲಾಚಾರಿಯವರ ಸಂಸ್ಕಾರ, ಬುದ್ಧಿವಂತಿಕೆ, ಅಪಾರಾನುಭವ ಮತ್ತು ನಾಗರಿಕತೆಯುಳ್ಳವನೆಂದು ಬಡಾಯಿ ಹಾರಿಸುವಂತೆಯೂ ಇಲ್ಲ. ಅಥವಾ ಶ್ರೀ ಟಿ. ಪ್ರಕಾಶನರ ರಾಜಕೀಯ ಪ್ರಮಾದಿತ್ವ, ವಿಶಾಲಹೃದಯ ಮತ್ತು ಜನತಾ ಹಿಡಿತವುಳ್ಳವನೂ ಅಲ್ಲ. ಇಲ್ಲವೇ ಶ್ರೀ ಓ. ಪಿ. ರಾಮಸ್ವಾಮಿರೆಡ್ಡಿಯಾರರಿಗೆ ಆಡಳಿತ ಕಲೆಯಲ್ಲಿದ್ದ ಅಭೇದ್ಯತೆ, ನಿರ್ಧಾರ ಮತ್ತು ಧೃಢತೆ ಇರುವವನೂ ನಾನಲ್ಲ. ನಾನೀ ಹೊರೆ ಹೊರಲು ಒಪ್ಪಿಗೆ ಕೊಡುವಾಗ, ನನ್ನ ಇವೆಲ್ಲಾ ಲೋಪದೋಷಗಳನ್ನು ಗಣಿಸಿಕೊಳ್ಳುತ್ತಿದ್ದೇನೆ. ಆದರೆ, ನನ್ನಲ್ಲಿರುವ ಅಲ್ಪಶಕ್ತಿಯನ್ನೆಲ್ಲಾ ಉಪಯೋಗಿಸಿ, ನನ್ನ ಶಕ್ತಿ ಮೀರಿ ತಮ್ಮ ಹಾಗೂ ಪ್ರಾಂತ್ಯದ ಸೇವೆ ಮಾಡಿ, ತಾವು ನನ್ನ ಮೇಲಿಟ್ಟಿರುವ ಈ ಅಪಾರ ವಿಶ್ವಾಸವನ್ನು ಸಾರ್ಥಕಗೊಳಿಸಬಲ್ಲೆನೆಂಬ ಯಥಾರ್ಥ ಆಶೆಯಿಂದಲೇ ಇದನ್ನು ಅಂಗೀಕರಿಸಿದ್ದೇನೆ. ಪ್ರತಿಯೊಂದು ಪಂಗಡ ವಿಶ್ವಾಸವನ್ನೂ ಬೆಂಬಲವನ್ನೂ ಗಳಿಸಿಕೊಂಡ ಪಕ್ಷೈಕ್ಯತೆ ಮತ್ತು ಸಶಕ್ತ ನಾಯಕತ್ವವಿರಬೇಕಾದುದು ನಮ್ಮ ಪಕ್ಷತತ್ವಗಳ ಮತ್ತು ಮತದಾರರು ನಮ್ಮ ಮೇಲಿಟ್ಟ ವಿಶ್ವಾಸದಪೂರ್ತಿಕೆಗೆ ಅತ್ಯಾವಶ್ಯ. ರಾಷ್ಟ್ರದ ಶಾಂತಿ ಮತ್ತು ಭದ್ರತೆಗೆ ಅಪಾಯಬರುತ್ತಾ ಹಲವು ಭಿನ್ನವಿಚ್ಛಿನ್ನ ಶಕ್ತಿಗಳು ತಲೆಯೆತ್ತಿರುವಾಗ, ನಾವು ಒಮ್ಮತ್ಯದಿಂದ ಅವುಗಳನ್ನಿದಿರಿಸಬೇಕಾಗಿರುವ ಈ ಕಾಲದಲ್ಲಿ ಮೇಲಿನ ಸಂಗತಿಗಳ ಆವಶ್ಯವಿರುವಷ್ಟು ಬೇರೆಂದೂ ಇರಲಾರದೆನ್ನುತ್ತೇನೆ. ತಾವು ನನ್ನ ಮೇಲೆ ಹಾಕಿರುವ ಈ ಕಾರ್ಯಭಾರ ಹೊತ್ತು ವಿಜಯಪಥದಲ್ಲಿ ನಾನೆಲ್ಲಿ ವರೆಗೆ ಮುಂದೊತ್ತಬಲ್ಲೆನೋ ನನಗರಿಯದು ಆದರೆ, ಸುಭದ್ರ ತಳಹದಿ ಬಿದ್ದಿರುವ ನಮ್ಮ ತತ್ವಗಳು ವ್ಯಕ್ತ ಧೋರಣೆಗಳನ್ನಾಧರಿಸಿಯೇ ನಮ್ಮ ಕಾರ್ಯವಿಧಾನಗಳನ್ನು ನಿಲ್ಲಿಸಿಕೊಳ್ಳುವ ಪ್ರಯತ್ನದಲ್ಲಿ ಯಾನಾವ ಅಂಶವನ್ನೂ ಬಾಕಿ ಮಾಡುವಂತಿಲ್ಲವೆಂದು ತಮಗಾಶ್ವಾಸನೆ ಕೊಡುತ್ತೇನೆ. ಈ ಕೆಲಸದಲ್ಲಿ ತಮ್ಮ ಪೂರ್ಣ ಸಹಕಾರ ಮತ್ತು ಬೆಂಬಲ ದೊರೆಯುವದೆಂದು ನಂಬಿದ್ದೇನೆ. ನಾವೆಲ್ಲರೂ ಸಮ್ಮೇಳ ಸ್ಫೂರ್ತಿಯಿಂದ, ಪಕ್ಷದ ಶಿಸ್ತು ನಿಷ್ಠೆಯನ್ನವಲಂಬಿಸಿ ಕೆಲಸ ಮಾಡೋಣ. ಮುಂದಿರುವ ಹೊಣೆ ನಿರ್ವಹಣದಲ್ಲಿ ನನಗೆ ಎಲ್ಲಾ ಕಡೆಗಳಿಂದಲೂ ಪೂರ್ಣ ಬೆಂಬಲ ದೊರೆಯುವದೆಂದು ಆಶಿಸುತ್ತೇನೆ".

ಅಗಲಿದ ಧುರೀಣರಿಗಾಗಿ ಸಂತಾಪ ಸೂಚನೆ-ಅಪಾಯದಿಂದ ಪಾರಾದ ಸರ್ದಾರ್ ಪಟೇಲರಿಗೆ ಅಭಿವಂದನೆ-ನೊದಲಾದ ನಿರ್ಣಯಗಳಾದ ಮೇಲೆ ನವನಾಯಕ ಶ್ರೀ. ಪಿ. ಯಸ್. ಕುಮಾರಸ್ವಾಮಿರಾಜಾ, ಸಭೆಯ ಜೈಕಾರಗಳ ನಡುವೆ ಓಮಂದೂರು, ಗೋಪಾಲರೆಡ್ಡಿಗಳ ಜತೆಯಲ್ಲಿ ಪ್ರಧಾನ ಮಂತ್ರಿಗಳಿಗಾಗಿ ಇತ್ತ ಸರಕಾರೀ ಭವನ 'ಕೂವಮ್ ಹೌಸ್' ಪ್ರವೇಶಿಸಿ, ತನ್ನ ಮುಂದಿನ ಕಾರ್ಯಕ್ರಮಗಳ ಪರಿಚಯ ಮಾಡಿಕೊಂಡರು.

ಅಂದೇ ಮಧ್ಯಾಹ್ನ ಹಿಂದಿನ ಮತ್ತು ಇಂದಿನ ನಾಯಕರಿಬ್ಬರೂ ಗವರ್ನರರ ಭೇಟಿ ಪಡೆದರು. ಅಲ್ಲಿ ಶ್ರೀ. ಓ.ಪಿ.ರಾಮಸ್ವಾಮಿ ರೆಡ್ಡಿಯಾರರು ತನ್ನ ಮಂತ್ರಿ ಮಂಡಲದ ರಾಜೀನಾಮೆಯೊಪ್ಪಿಸಿದರು; ಶ್ರೀ. ಪಿ. ಯಸ್. ಕುಮಾರ ಸ್ವಾಮಿ ರಾಜರು ತಾನೇ ಪ್ರಧಾನಿಯಾಗಿ ಮಂತ್ರಿಮಂಡಲ ರಚಿಸಲೊಪ್ಪಿ ಕೆಲವು ದಿನಗಳ ಸಮಯ ಕೇಳಿದರು. ಆ ವರೆಗೆ ಓಮಂದೂರು ಮಂಡಲವು ಸರಕಾರ ನಡೆಸುವ ನಿರ್ಧಾರವಾಯಿತು.

ಮಂತ್ರಿಮಂಡಲ ರಚನೆಯ ಕುರಿತು ಹಲವರೊಡನೆ ವಿಚಾರ ವಿನಿಮಯ ನಡೆಸಿ ಕಾಂಗ್ರೆಸ್ ಅಧಿನಾಯಕರ ಅಭಿಮತ ಪಡೆಯಲು ಇದೇ ತಾ. ೨ರಲ್ಲಿ ಶ್ರೀ. ಪಿ. ಯಸ್. ಕುಮಾರ ಸ್ವಾಮಿ ರಾಜರು ಶ್ರೀ ಭಕ್ತವತ್ಸಲಮರೊಂದಿಗೆ ದಿಲ್ಲಿಗೆ ಹೊರಟು ಹೋಗಿದ್ದಾರೆ. ಮಾರುದಿನ ಶ್ರೀ ಕಾಮರಾಜ ನಾದರರು, ಅಂತೆಯೇ ಕಾಂಗ್ರೆಸ್ ಅಧ್ಯಕ್ಷ ಪ್ರೊ. ಎನ್. ಜಿ. ರಂಗರು ದಿಲ್ಲಿಗೆ ಹೋಗಿದ್ದಾರೆ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್. ಉಡುಪಿ

ಇವರ ಶಾಖಾ ಖಚೇರಿಗಳು:.

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರತಿನಿಧಿತ್ವ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.



Approved firm by the Govt. of Mysore
Certified by the Agent of the Govt. of Cylone & Indian

ಅಪಘಡಗಳನ್ನು ಗೆದ್ದವರು— ಪಟೇಲ್, ಜೈಪ್ರಕಾಶ್.



ಕಳೆದ ವಾರ ಭಾರತದ ಈರ್ವ ನಾಯಕರು ಎರಡು ಅಪಘಡಗಳಿಂದ ಪಾರಾದರು—ಸರ್ದಾರ್ ವಲ್ಲಭಭಾಯಿ ಮತ್ತು ಜೈಪ್ರಕಾಶ್ ನಾರಾಯಣ. ಸರ್ದಾರರು ವಿಮಾನ ಅಪಘಡಕ್ಕೊಳಗಾದರೂ ಯಾವ ಅಪಾಯಕ್ಕೂ ಈಡಾಗಲಿಲ್ಲ; ಆದರೆ ಕಾರಿನಡಿಗೆ ಬಿದ್ದ ಜೈಪ್ರಕಾಶ್ ನಾರಾಯಣರ ಕೈ ಜಜ್ಜಿ ಹೋಗಿದೆ. ಸರ್ದಾರ್ ಪಟೇಲರು ಸ್ವತಂತ್ರ ಭಾರತದ ಯಂತ್ರ ಸಾರಥಿಗಳಾಗಿದ್ದರೆ, ಜೈಪ್ರಕಾಶರು ನಾಳಿನ ಜನತಾ ರಾಜ್ಯದ ಮುಂದಾಳು ಸ್ಥಾನದ ಯೋಗ್ಯ ಉಮೇದ್ವಾರ. ಇಂದಿನ ಮತ್ತು ಮುಂದಿನ ನಾಯಕರಿಬ್ಬರ ಜೀವನ ಏಕಾವಧಿಯಲ್ಲಿ ಅಪಾಯಕ್ಕೊಳಗಾದುದಕ್ಕೂ ಅವರಿಬ್ಬರ ಮೇಲೆ ಅವುಗಳಿಂದಾದ ಪರಿಣಾಮಗಳಲ್ಲಿ ವ್ಯತ್ಯಾಸವಿದ್ದುದಕ್ಕೂ ಏನಾದರೂ ವಿಶೇಷಾರ್ಥವಿರಬಹುದೆ?

೦೦೦

ಜನವರಿ ತಾ 30ರಲ್ಲಿ 'ಮಹಾರಾಜಸ್ಥಾನ್ ಸಂಯುಕ್ತ ಕೇಂದ್ರ'ದ ಉದ್ಘಾಟನೆ ಮಾಡುವದಕ್ಕಾಗಿ ಜೈಪುರಕ್ಕೆ ಹೊರಡಲು ಭಾರತದ ಸಂಸ್ಥಾನ, ಗೃಹಸಚಿವ ಮತ್ತು ಉಪಪ್ರಧಾನ ಸರ್ದಾರ್ ಪಟೇಲರು ತಾ. 29ರಲ್ಲಿ ನವದಿಲ್ಲಿಯಲ್ಲಿ ವಿಮಾನ ಹತ್ತಿದ್ದರು. ಅವರೊಂದಿಗೆ ಮಗಳು ಮಣಿಬೆನ್ ಪಟೇಲ್, ಜೋಧ್‌ಪುರದ ಮಹಾರಾಜಾ ಮತ್ತು ಖಾಸಗೀ ಕಾರ್ಯದರ್ಶಿ ವಿ. ಶಂಕರ್ ಇದ್ದರು. ದಿಲ್ಲಿಯ ಪಾಲಂ ವಿಮಾನ ನಿಲ್ದಾಣದಿಂದ ಹೊರಟಾಗಲೇ ವಿಮಾನದ ಕುಲುಮೆ ಕಂಪಿಸುತ್ತಿರುವ ಮುನ್ಸೂಚನೆಯು ತೋರಿಬಂತು. ವಿಮಾನ ಸಾರಥಿತ್ವದ 'ಲೈಸನ್ಸ್' ಇರುವ ಜೋಧಪುರದ ಮಹಾರಾಜರು ಈ ಅಪಾಯ ಸೂಚನೆಯಿಂದ ಆಗ ಕಣ್ತೆರೆದು ಸಾರಥಿಯೊಡನೆ ಮಾತು ಆಡಿದರು, ವಿಮಾನವು ಹೊರಟ ನಿಲ್ದಾಣಕ್ಕೇನೇ ಮರಳಿ ಬಂತು, ಕೆಲವು ದುರಸ್ತಿ ನಡೆದ ಮೇಲೆ ಪುನಃ ಹೊರಟಿತು. ಅರ್ಧ ತಾಸಿನ ಆಕಾಶ ಸವಾರಿ ಮುಗಿದಿತ್ತು. ಅಷ್ಟರಲ್ಲಿ ವಿಮಾನದೊಂದು ಯಂತ್ರದ ಚಲನೆ ನಿಂತು ಹೋಯಿತು. ಆದರೆ ಆಗ ಜೈಪುರ ಸೇರಲು ಉಳಿದಿದ್ದುದು ಇನ್ನೆಂದು ಹದಿನೈದು ನಿಮಿಷಗಳ ಹಾದಿ ಮಾತ್ರ; ಹೇಗಾದರೂ ಹೋಗಿ ಜೈಪುರ ನಿಲ್ದಾಣದಲ್ಲಿ ತಂಗಬಹುದೆಂಬ ವಿಶ್ವಾಸವನ್ನು ಎಲ್ಲರೂ ಕಟ್ಟಿಕೊಂಡರು. ಬೇರೆ ಉಪಾಯವೂ ಇರಲಿಲ್ಲ. ಅವರಾಗ

ಗುಡ್ಡಗಾಡು ಪ್ರದೇಶಗಳಾಗಿದ್ದುದರಿಂದ ಜಲ್ಲಿ ಗಡಿಬಿಡಿಯಿಂದ ವಿಮಾನವಿಳಿಸುವದೆಂದರೆ ಮೃತ್ಯುವಿನೆಡೆಗೆ ಮಧ್ಯಕ್ಕೇನೇ ಎಂದರ್ಥ. ಆದರೆ ವಿಮಾನವು ಅಲ್ಲಿಯೇ ತೀವ್ರಗತಿಯಿಂದ ಕೆಳಗೆ ಬೀಳುತ್ತಿತ್ತು; ಈ ವಿಷಮಾವಧಿಯಲ್ಲಿ ವಿಮಾನದ ರೋಗ ಚಿಹ್ನೆಗಳನ್ನೆಲ್ಲಾ ಒಳಗಡೆಯಲ್ಲಿ ಜೋಧ್‌ಪುರದ ರಾಜರು ಸರ್ದಾರರಿಗೂ ಮತ್ತಿಬ್ಬರಿಗೂ ಹೇಳುತಿದ್ದರು. ಯಾನವು ಇಳಿಯುತಿದ್ದಾಗಲೇ ದಿಲ್ಲಿ ಮತ್ತು ಜೋಧ್‌ಪುರಕ್ಕೆ ಸುದ್ದಿ ಮುಟ್ಟಿಸೋಣವೆಂದು ಮಾಡಿದ ಪ್ರಯತ್ನಗಳೆಲ್ಲವೂ ನಿರರ್ಥಕವಾದುವು. ಆದರೆ ಸಾರಥಿಯ ಎದೆ ಮಾತ್ರ ಆ ವಿಮಾನ ಯಂತ್ರದಂತಿರಲಿಲ್ಲ; ಅದು ಅಚಲವಿತ್ತು. "ನಾನೀಗ ವಿಮಾನವನ್ನು ಗಜಕ್ಕನೆ ನಿಲ್ಲಿಸಲಿದ್ದೇನೆ; ಎಲ್ಲರೂ ಅವರವರ ಆಸನಗಳನ್ನು ಸುಭದ್ರವಾಗಿ ಅಪ್ಪಿಕೊಂಡಿರಬೇಕು" ಎಂದು ಸಾರಥಿ ಒಳಗಿರುವವರಿಗೆ ಎಚ್ಚರಿಕೆ ಕೊಟ್ಟ; ಕಲಹೊತ್ತಿನಿಂದ ಕೆಳಗಿನ ಹೊಳೆದಂಡೆಯ ಮೇಲೆಯೇ ನೋಟವಿಟ್ಟು ಅನುಸರಿಸಿಕೊಂಡು ಬಂದಿದ್ದ ಆತ ವಿಮಾನವನ್ನು ಆ ದಂಡೆಯ ಮೇಲೆ ಗಜಕ್ಕನೆ ಸೇರಿಸಿಬಿಟ್ಟ. ಆತ ನಿಲ್ಲಿಸಿಬಿಟ್ಟ ರೀತಿಯಾದರೋ ಎಷ್ಟೊಂದು ನಾಜೋಕಿನದ್ದೆಂದರೆ ಒಳಗಿದ್ದ ಯಾರಿಗೂ ಹಿಡಿದು ಕುಲುಕಿದಷ್ಟು ಕೂಡಾ ಕಂಪವಾಗಲಿಲ್ಲ. ಆದರೆ ಅದು ಬಡಿದ ತೀವ್ರತೆಯಿಂದ ಬೆಂಕಿ ಹಿಡಿಯಬಹುದೆಂಬ ನಿರೀಕ್ಷೆಯಿದ್ದುದರಿಂದ ಎಲ್ಲರೂ ದಡಬಡನೇ ವಿಮಾನದಿಂದ ಹಾರಿದರು. ಸುದೈವವಶಾತ್ ಬೆಂಕಿ ಕೂಡಾ ಏಳಲಿಲ್ಲ. ಕಾಡಿನ ನಡುವಿನ ಈ ಹೊಳೇ ಬದಿಯಲ್ಲಿ ಆ ಮುಸ್ಸಂಜೇ ಹೊತ್ತಿಗೆ ಜನಸಂಚಾರವೂ ಇರಲಿಲ್ಲ. ಕಲಹೊತ್ತಿನಲ್ಲಿ ಎಲ್ಲಿಂದಲೋ ಮೂಡಿ ಬಂದವನಂತೆ ಕುರುಬನೊಬ್ಬ ಕಾಣಿಸಿಕೊಂಡ. ಅವ ಹೋಗಿ ಮತ್ತೆ ನಾಲ್ವರನ್ನು ಕರೆದುಕೊಂಡು ಬಂದ. ಪಟೇಲರ ಕಾರ್ಯದರ್ಶಿ ಶಂಕರರು ಒಂದು ಚೀಟು ಬರೆದು ಅಲ್ಲಿಗೆ ಮೂರು ಮೈಲಿರುವ ಠಾಣೆಯ ಸರಕಾರೀ ಅಧಿಕಾರಿಗೆ ಮುಟ್ಟಿಸುವಂತೆ ಕೊಟ್ಟರು. ಅಷ್ಟರೊಳಗೆ ಸರ್ದಾರರು ಕಾಡಿನ ನಡುವೆ ಬಿದ್ದ ಸುದ್ದಿ ಆಸುಪಾಸಿನ ಹಳ್ಳಿಗಳಲ್ಲಿ ಹಬ್ಬಿತು. ಹಳ್ಳಿಗರು ಸಾಲುಗಟ್ಟಿ ಬರಹತ್ತಿದರು. ಒಬ್ಬ ಮಡಿಕೆ ತುಂಬಾ ಹಾಲನ್ನು ಹೊತ್ತುಕೊಂಡು ಬಂದ. ಈ ನಡುವೆ ಅಲ್ಲಿಯ ಇಬ್ಬರು ಗ್ರಾಮ ಜಟ್ಟಿಗಳು ಬಂದು ಸರ್ದಾರರೆದಿರು ಕುಸ್ತಿ ಹಿಡಿದು ತೋರಿಸಿದರು. ಕತ್ತಲೆ ಬಹಳವಾಗಿತ್ತು; ಈ ನಿರಾಶ್ರಿತ ಗುಂಪು ರಸ್ತೆ ಹಿಡಿಯೋಣವೆಂದು ಕಾಲ್ನಡಿಗೆಯಿಂದಲೇ ಕಾಡಿನಿಂದ ಹೊರಟಿತು. ಒಂದು ಬಾಗಾ ಮಾಡೋಣವೆಂದು ಸುತ್ತಾಡಿದರೆ ಹರುಕು ಮುರುಕು ಗಾಡಿಯೊಂದು ಸಿಕ್ಕಿತು; ಆದರೆ ಅದರ ಕತ್ತೆಯಂತಹ ಕುದುರೆ ಆ ಕಗ್ಗತ್ತಲೆಯಲ್ಲಿ ಸರ್ದಾರರೆದಿರು ಕಮ್ಯೂನಿಸ್ಟರಂತೆ ಹಠ ಹಿಡಿದು ಹೆಜ್ಜೆಯಿಡಲೊಪ್ಪಲಿಲ್ಲ. ಅಷ್ಟರೊಳಗೆ ದೈವದತ್ತ ಪ್ರಕಾಶವೆಂಬಂತೆ ಪ್ರಚಂಡ ಕಿರಣ ಪ್ರವಾಹ ಇವರಿದ್ದ ದಿಕ್ಕಿಗೆ ಬೀಳಹತ್ತಿತು. 'ಆಲ್ ಇಂಡಿಯಾ ರೇಡಿಯೋ'ದ ಉಪಕರಣಗಳನ್ನು ತುಂಬಿಸಿಕೊಂಡ ಮೋಟಾರು ಆ ಬೆಳಕನ್ನು ಚೆಲ್ಲುತ್ತಾ ಬರುತ್ತಿತ್ತು. ಅದು ಜೈಪುರಕ್ಕೆ ಹೊರಟಿದ್ದ ಗಾಡಿ. ಏನೋ ಆಫೀಸು ಕೆಲಸದಿಂದ ಶಹಾಪುರಕ್ಕೆ ಹೋಗಿದ್ದ 'ಮತ್ಸ್ಯ ಯೂನಿಯನ್'ನ ಆಡಳಿತಗಾರ ಶ್ರೀ ಕೆ. ಬಿ. ಲಾಲರು ಬರುತಿದ್ದಾಗ ಹಾದಿಯಲ್ಲೇ ಅವರನ್ನು ನಿಲ್ಲಿಸಿ "ನೆಹರು ಮತ್ತು ಪಟೇಲರಿಬ್ಬರೂ ಒ ಅಲ್ಲಿ ಕಾಡಿನಲ್ಲಿ ಬಿದ್ದಿದ್ದಾರೆ" ಎಂದೊಬ್ಬ ಸುದ್ದಿಬಿಟ್ಟ. ಶ್ರೀ. ಲಾಲರು ದಿಗಿಲುಬಿದ್ದು ವಿಚಾರಿಸಿದಾಗ ಆತ ತನ್ನ ಕೈಯಲ್ಲಿದ್ದ ಚೀಟಿ ತೋರಿಸಿದ. ಅದೇ ಶ್ರೀ ಶಂಕರ್ ಬರೆದುಕೊಟ್ಟ ಕಾಗದ ಚೂರು. ಲಾಲರಿಗೆ ಅಕ್ಷರದ ಗುರುತವಾಯಿತು. ಅವರು ಕೂಡಲೇ ಒಬ್ಬ ಡಾಕ್ಟರನ್ನು ಕರೆಕೊಂಡು ಮೋಟಾರು ಹತ್ತಿ ಸರ್ದಾರ್ ಸಂಗಡವನ್ನು ಹುಡುಕುವದಕ್ಕಾಗಿಯೇ ಬರುತಿದ್ದರು. ಹಾದಿಯಲ್ಲೇ ಅವರು ಸಿಕ್ಕಿದರೆಂದಾಯಿತು, ಎಲ್ಲರೂ ಆ ಮೋಟಾರು ಹತ್ತಿ ಸುರಕ್ಷಿತವಾಗಿ ಜೈಪುರ ಮುಟ್ಟಿದರು.

ಈ ನಡುವೆ ಜೈಪುರ ವಿಮಾನ ನಿಲ್ದಾಣದಲ್ಲಿ ಸರ್ದಾರರ ಆಗಮನವನ್ನು ಕಾಯುತಿದ್ದವರು ವಿಮಾನವನ್ನು ಕಾಣದೆ ಕಳವಳಗೊಂಡರು. ಶೋಧನೆಗೆ ವಿಮಾನಗಳು ಹೊರಟವು. ಸರಕಾರೀ ಭವನದಲ್ಲಿ ಗಾಯನ ನರ್ತನವೊಂದನ್ನು ನೋಡಲು ಕುಳಿತಿದ್ದ ರಾಜಾಜಿ, ನೆಹರುಗಳಿಗೆ ಈ ಸುದ್ದಿ ಮುಟ್ಟಿತು. ನವದಿಲ್ಲಿಯಲ್ಲಿ ಉದ್ವೇಗವೆದ್ದಿತು. ಅಲ್ಲಿಂದ ಹುಡುಕಾಟಕ್ಕಾಗಿ ವಿಮಾನಗಳು ಹಾರಾಟ ಕೈಕೊಂಡವು. ಜೈಪುರ ಮುಟ್ಟಿದೊಡನೆ ನೆಹರುಗಳಿಗೆ ಸರ್ದಾರರು ಟೆಲಿಫೋನ್ ಮೂಲಕ ಎಲ್ಲಾ ಕಥೆ ವರ್ಣಿಸುವಾಗ ಗಹಗಹಿಸಿ ನಗುತಿದ್ದರಂತೆ. ಸ್ವತಃ ವಿಚಾರಿಸಿದಾಗಲೂ "ನನ್ನ ಮಟ್ಟಿಗೆ ಆ ಅಪಘಡವೆಂಬುದು ಕೇವಲ ವಿವಿಧವಿನೋದಾವಳಿಯಂತಿತ್ತು" ಎಂದಿದ್ದರು ಸರ್ದಾರ್.

ಭಾರತದಲ್ಲಿ ಇದುವರೆಗಾದ ಸಂಸ್ಥಾನೀ ಸಂಯುಕ್ತಕೂಟಗಳಲ್ಲೆಲ್ಲ ಅತ್ಯಂತ ದೊಡ್ಡದಾದ—ಪುರಾತನ ಹಾಗೂ ಚರಿತ್ರೆ ಪ್ರಸಿದ್ಧಿಯ 15 ರಜಪೂತ ರಾಜ್ಯಗಳುಳ್ಳ—'ರಾಜಸ್ಥಾನ್ ಸಂಯುಕ್ತ ಸಂಸ್ಥಾನದ' ಉದ್ಘಾಟನೆಯನ್ನು ತಾ 30ರಲ್ಲಿ ನೆರವೇರಿಸಿ ಸರ್ದಾರರು ಆವೇಶದ ಭಾಷಣವಿತ್ತರು. ಅಲ್ಲಿಂದ ದಿಲ್ಲಿಗೆ ಮರಳಿ ತಾ. 31ರಲ್ಲಿ ಪಾರ್ಲಿಮೆಂಟ್ ಪ್ರವೇಶಿಸಿದಾಗ ಪಂಡಿತ ನೆಹರುಗಳು ಬಳಿಗೆ ಬಂದು ಸರ್ದಾರರಿಗೆ ಕೈಗೊಟ್ಟು ನಡೆಸುತ್ತಾ ಆಸನಕ್ಕೊಯ್ದ ದೃಶ್ಯವು ಹೃದಯಸ್ಪರ್ಶಿಯಾಗಿತ್ತು. ಇಡೀ ಪಾರ್ಲಿಮೆಂಟ್ ಆನಂದೋತ್ಸಾಹಾತಿರೇಕವಾದ ಸಂತಸವನ್ನು ಪ್ರಕಟಿಸಿ,

NOTICE

It is hereby notified that the Registered Office of "**International Commercial Corporation Ltd., UDIPI**, (Principal Agents of "**United Karnatak Insurance Co., Ltd., DHARWAR**") has been shifted from Court Road to Tenkpet and installed at the Building just opposite to Karnatak Bank.

ನೋಟೀಸು

ಉಡುಪಿಯಲ್ಲಿರುವ "ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಧಾರವಾಡ"ದ ಪ್ರಧಾನ ಏಜಂಟರಾದ "ಇಂಟರ್‌ನೇಶನಲ್ ಕಮರ್ಶಿಯಲ್ ಕೋರ್ಪೊರೇಶನ್ ಲಿಮಿಟೆಡ್"ರವರ ಕೇಂದ್ರ ಆಫೀಸನ್ನು ಕೋರ್ಟು ರಸ್ತೆಯ ಮಗ್ಗುಲಿನಿಂದ ತೆಂಕಪೇಟೆಗೆ ಕರ್ನಾಟಕ ಬೇಂಕಿನ ಎದುರು ಪಾರ್ಶ್ವದಲ್ಲಿರುವ ಕಟ್ಟಡಕ್ಕೆ ವರ್ಗಾಯಿಸಲಾಗಿರುತ್ತದೆ.

UDIPI
30–3–1948

B. M. L. KINI,
Managing Director.

THE
Canara Banking Corporation Ltd.
(Incorporated in India)
Estd: 1906
HEAD OFFICE: UDIPI, S. I.

SEASON DEPOSITS

For Rs. 2,000/- and over are now accepted at all Offices of the Bank at the following rates:-

3 & 4 Months ... @ 2½ % p. a.
5 & 6 Months .... @ 2¾ % p. a.

ಗುರುವಾರ, ಉಡುಪಿ, ೭-೪-'೪೯

ಹೀಗೇಕೆ?

ದಕ್ಷಿಣ ಭಾರತೀಯರ ಪಾಲಿನ ಅತ್ಯಂತ ಮುಖ್ಯ ವಿಷಯಗಳೆರಡರ ನಿರ್ಧಾರಗಳು ಇಷ್ಟರಲ್ಲೇ ಆಗಬೇಕು: ಭಾಷಾನ್ವಯ ಪ್ರಾಂತ್ಯ ರಚನೆಗೆ ಸಂಬಂಧಿಸಿದುದು ಮತ್ತು ಮದ್ರಾಸ್ ಮಂತ್ರಿ ಮಂಡಲದಲ್ಲಿ ಯಾರಾರೆಂಬುದು. ಇವೆರಡರ ಕೊನೆಯ ನಿರ್ಧಾರಗಳೂ ಈಗ ತಾನೇ ಡೆಲ್ಲಿಯಲ್ಲಾಗಿರಬಹುದಾದರೂ ಇದನ್ನು ಬರೆಯುವ ಮೊದಲು ಅವು ನಮ್ಮ ತಿಳುವಳಿಕೆಗೆ ಬಂದಿಲ್ಲ. ಆದರೆ ಆ ನಿರ್ಧಾರಪೂರ್ವದಲ್ಲಿ ತಿಳಿದು ಬಂದಿರುವ ಅಂಶಗಳು ವಿಚಾರಿಗಳಲ್ಲಿ-ನ್ಯಾಯ ಪಕ್ಷಪಾತಿಗಳಲ್ಲಿ-ನಿಜಕ್ಕೂ ಆತುರೋದ್ವೇಗವನ್ನು ಉಂಟು ಮಾಡುವಂತಹವಿವೆ.

ದರ್ ಸಮಿತಿಯ ವರದಿಯು ತೀರಾ ಅತೃಪ್ತಿಕರವೆಂದು ಖಚಿತವಾದುದರಿಂದಲೇ ಜೈಪುರ ಕಾಂಗ್ರೆಸು ಭಾಷಾನ್ವಯ ಪ್ರಾಂತ್ಯರಚನೆಯ ಪ್ರಶ್ನೆಯನ್ನು ಪರ್ಯಾಲೋಚಿಸಲು ಪಟ್ಟಾಭಿ-ನೆಹರು-ವಲ್ಲಭಾಯಿ ತ್ರಿಮೂರ್ತಿಗಳ ಸಮಿತಿಯನ್ನು ನೇಮಿಸಿದ್ದಿತು. ಆ ನೇಮಕದೊಂದಿಗೆ ಹಾಕಿದ್ದ ಶರ್ತ:- ಈ ಸಮಿತಿಯು ಮಾರ್ಚಿ 31ರೊಳಗೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ತನ್ನ ವರದಿಯನ್ನೊಪ್ಪಿಸತಕ್ಕದ್ದು. ವರದಿ ತಯಾರಿಗೆ ಅಂತಹ ಪ್ರಯಾಸವೇನೂ ಇಲ್ಲವಾದ್ದರಿಂದ ಅದು ನಿಶ್ಚಿತಾವಧಿಯೊಳಗೆ ತಯಾರಾಗಬಹುದು. ಇದೇ ತಾ. ೫ರಲ್ಲಿ ಮುಖ್ಯವಾಗಿ ಅದರ ಪರ್ಯಾಲೋಚನೆಗಾಗಿಯೇ ನವದೆಹಲಿಯಲ್ಲಿ ಸೇರುವ ಕಾರ್ಯಕಾರೀ ಸಮಿತಿಯಲ್ಲಿ ಆ ಸಂಬಂಧದ ತೀರ್ಮಾನವೂ ಆಗಬೇಕು. ಇವರೆಗೆ ತಿಳಿದು ಬಂದ ಪ್ರಕಾರ ಆಂಧ್ರ ಪ್ರಾಂತ್ಯವೊಂದಕ್ಕೇನೆ ಅಲ್ಲಿ ಅಸ್ತಿತ್ವ ಬೀಳುವಂತಿದೆ. ಒಂದು ಪ್ರಾಂತ್ಯದ ಆಡಳಿತೆಯಲ್ಲಿ ಮಾತ್ರ ಅದಲುಬದಲು ಮಾಡುವ ಅವಶ್ಯಕತೆ ಬೀಳುವ ಭಾಷಾವಾರ ಪ್ರಾಂತ್ಯಗಳನ್ನಷ್ಟೇ ಪ್ರಕೃತ ವಿಂಗಡಿಸಬಹುದು-- ಆಶ್ರಿತ ರಾಜ್ಯಗಳ ಅಸ್ತಿತ್ವಾಧಿಕಾರಗಳ ತಬ್ಬಲಿಗೆ ರಾಷ್ಟ್ರನಾಯಕರು ಕೈಹಾಕಿಯೇ ಇಲ್ಲ- ಎಂಬ ವಾದ ಡೆಲ್ಲಿಯಿಂದ ಕೇಳಿ ಬಂದಿದೆ. ಮುಖ್ಯ ಭಾಗಗಳವರಿಗೆ ನ್ಯಾಯ ಹುಟ್ಟಬಾರದೆಂಬುದಕ್ಕಾಗಿಯೇ ಈ ಕಾರಣವನ್ನು ಹೂಡಿದಿಸಿ ಆಂಧ್ರ ಪ್ರಾಂತ್ಯವನ್ನು ತೆಲುಗರ ಕೈಗಿಡುವ ಉಪಾಯವಿದು. ಕರ್ನಾಟಕ ಪ್ರಾಂತ್ಯವಾಗಬೇಕಾದರೆ ಬೊಂಬಾಯಿ-ಮದ್ರಾಸ್-ಮೈಸೂರು ಈ ಮೂರು ಆಡಳಿತೆಗಳಿಂದವನ್ನು ಕಡಿದು ತೆಗೆಯಲಿಕ್ಕಿದೆ; ಕೇರಳವಾಗಬೇಕಾದರೂ ಕೊಚ್ಚಿ, ತಿರುವಾಂಕೂರು ಮತ್ತು ಮದ್ರಾಸ್ ಆಡಳಿತೆಯಿಂದ ವಿಂಗಡಿಸಲಿಕ್ಕಿದೆ; ಮಹಾರಾಷ್ಟ್ರ ಪ್ರಾಂತ್ಯರಚನೆಗೆ ಕೂಡಾ ಬೊಂಬಾಯಿ ಮಧ್ಯಪ್ರಾಂತ್ಯಗಳ ಮೇಲೆ ಇದೇ ಶಸ್ತ್ರೀ ಪ್ರಯೋಗವಾಗಬೇಕು. ಆಂಧ್ರವಾದರೋ ಮದ್ರಾಸ್ ಪ್ರಾಂತ್ಯವೊಂದರಿಂದಲೇ ವಿಂಗಡಿಸುವಂತಹದು. ಅದೊಂದನ್ನು ಮಾಡಿಬಿಡೋಣ- ಆ ಮೇಲೆ ಕರ್ನಾಟಕ ಮತ್ತು ಕೇರಳ ಪ್ರಾಂತ್ಯವಾಗುವ ವರೆಗೆ ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳು ತಮಿಳುನಾಡಿನ ಜತೆಯಲ್ಲಿ ಜತೆ ಜಡೆಗಳಾಗಿ ನೇತಾಡಿಕೊಂಡಿದ್ದರಾಯಿತು -ತ್ರಿಮೂರ್ತಿ ಸಮಿತಿಯಿಂದ ವರದಿಮಾಡಲ್ಪಟ್ಟ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಿಂದ ಅಂಗೀಕಾರ ಹೊಂದಲಿರುವ ತೀರ್ಮಾನದ ಸಾರವಿದೆಂದು ಊಹಿಸಬಹುದು. ಡಾ। ಪಟ್ಟಾಭಿಗಳು ಕಾಂಗ್ರೆಸ್ ಅಧ್ಯಕ್ಷರಾಗಿ ಜೈಪುರ ಕಾಂಗ್ರೆಸಿನಲ್ಲಿ ಈ ತ್ರಿಮೂರ್ತಿ ಸಮಿತಿ ನೇಮಕಗೊಂಡಾಗಲೇ ಇಂತಹ ತೀರ್ಮಾನವಾಗಬಹುದೆಂದು ನಾವು ಪ್ರಕಟಿಸಿದ್ದೆವು. ಆದರೂ ಈ ಪಕ್ಷಪಾತ ನ್ಯಾಯವಲ್ಲ, ನಮ್ಮ ವಿಶ್ವಾಸಾರ್ಹ ಧುರೀಣರು ಹೀಗೆ ಮಾಡಲಾರರು-ಎಂದೀಗ ಕೂಡಾ ನಿರೀಕ್ಷಿಸಿಕೊಳ್ಳಬೇಕಾಗಿದೆ, ಆಶಿಸಬೇಕಾಗಿದೆ. ಪ್ರತ್ಯೇಕ ಪ್ರಾಂತ್ಯದ ಬೇಡಿಕೆಗೂ ಪಾಕಿಸ್ತಾನ್ ಬೇಡಿಕೆಗೂ ವ್ಯತ್ಯಾಸವೇ ಇಲ್ಲವೆಂಬಂತೆ ನೆಹರು, ವಲ್ಲಭಾಯಿಗಳು ಈ ಮೊದಲು ಕಾರಣಕೊಟ್ಟು ಹೇಳಿದ್ದರು; ಈಗ ತೆಲುಗು ಕ್ಷೇತ್ರದಂತೆ ಮಿಕ್ಕ ಭಾಷಾಭಾಗಗಳನ್ನು ವಿಂಗಡಿಸಲಾಗುವದಿಲ್ಲವೆಂಬುದಕ್ಕೂ ಕಾರಣ ಸಿದ್ಧೇ ಇದೆ. ಆದರೆ ನಮ್ಮ ನಾಯಕರು ಒಂದು ಪಕ್ಕಕ್ಕೆ ಜೋತುಬಿದ್ದು ಅಲ್ಲಿ ತಮ ಕೈಗೆ ದೊರೆಯುವ ಕಾರಣಗಳನ್ನಷ್ಟೇ ಹಿಡಿದುಕೊಳ್ಳುವ ಬದಲಿಗೆ, ತಾವು ನಿಲ್ಲಬೇಕಾದ ಕೇಂದ್ರಸ್ಥಾನದಲ್ಲೇ ನಿಲ್ಲುತ್ತಾರಾದರೆ, ಭಾಷಾವಾರಾಗಿ ಪ್ರಾಂತ್ಯ ರಚನೆಗಳದ ಮೇಲೆ ಆಂಧ್ರದಂತೆಯೇ ಕರ್ನಾಟಕ, ಕೇರಳ, ಮಹಾರಾಷ್ಟ್ರ ಪ್ರಾಂತ್ಯ ರಚನೆಗೂ ಬೇಕಾದಷ್ಟು ಕಾರಣಗಳು ದೊರೆಯುವದು ಖಂಡಿತ. ಪ್ರಮಾದಕ್ಕೊಳಗಾಗಿ ಹೊರತು, ಉದ್ದೇಶಪೂರ್ವಕವಾಗಿ ನಮ್ಮ ನಾಯಕರಿಂದ ಯಾವುದೇ ಭಾಗದ ಜನತೆಗೆ ಅನ್ಯಾಯ ಅಥವಾ ಪಕ್ಷಪಾತವಾಗಲಾರದೆಂಬ ಜನತೆಯ ವಿಶ್ವಾಸವು ಈ ಮಟ್ಟಿಗೂ ಕೆಡದಂತಾಗಲಿ--ಎಂದು ಹಾರೈಸುತ್ತೇವೆ.

ಮದ್ರಾಸಿನಲ್ಲಿ ಮತ್ತೊಂದು ಬಾರಿ ಹೊಸತಾಗಿ ಮೂಡುತ್ತಿರುವ ಸರಕಾರದ ಗತಿ ಏನನ್ನಬೇಕೋ ತಿಳಿಯುವದಿಲ್ಲ. ಆಗಾಗ ಒಬ್ಬೊಬ್ಬರಾಗಿ ಬರುವ 'ಏಜಂಟರು'ಗಳ ಮುಖದರ್ಶನದಂತಹ ಜಿಗುಪ್ಸೆ ತಾತ್ಸಾರಗಳೇ ಜನತೆಗೆ ಹುಟ್ಟುವಂತೆ ಅಷ್ಟು ಬಾರಿ-ಅಂತಹ ವಿಧಾನಗಳಿಂದ- ಮದ್ರಾಸಿನ ಬದಲಾವಣೆಗಳಾಗಿವೆ ಎಂಬುದು ಆ ತಬ್ಬಲಿತನ್ನ ಮಹಿಮೆಯಾರಿಗೂ ಮಂದಟ್ಟಾದಂತಿಲ್ಲ; ತಮ್ಮೀ ಅಡಿಮೇಲುಗಳ ಅರ್ಥವೇ ಆಗದ ಜನತೆಗೇನೇ ತಾವು ಹೊಣೆಗಾರರೆಂಬುದನ್ನು ಕೂಡಾ ಈ ಸ್ಪರ್ಧಾಳುಗಳು ಮರೆತಂತಿದೆ 'ಬರುವ — ಹೋಗುವ' ಸಂಪ್ರದಾಯವೇ. ಬಂದು ಬಿಟ್ಟ ಮೇಲೆ ಇನ್ನಿಬಾರಿಯ ಮಂತ್ರಿಗಳಾಗಿ ಯಾರೇ ಬರಲಿ, ಆ ಕುರಿತು ಜನತೆಯ ಆಸಕ್ತಿ ಅಷ್ಟಷ್ಟೆ! ಸಂಘಟಭಾವನೆಗಳ ಸಮಾಧಿಯನ್ನೇ ಧ್ವಜಕಟ್ಟೆಯಾಗಿ ಮಾಡಿ, ಐಕ್ಯಸ್ತಂಭದ ಮೇಲೆ ಕಾಂಗ್ರೆಸ್ ಧ್ವಜವೇರಿದರೂ ಅಲ್ಲಿ ಕಂಡುಬಂದದ್ದು ಮಾತ್ರ ಜನತೆಯ ಜೈಕಾರ ಕೇಳಿಬಂದೀತು. ಇದುವರೆಗಿನ ಲಕ್ಷಣಗಳಿಂದ ಅಂತಹ ಆಶೆಗವಕಾಶವಿಲ್ಲ. ಒಳಗುಂಪುಗಳೆಲ್ಲವನ್ನೂ ತೃಪ್ತಿಪಡಿಸಿ, ಅವುಗಳ ಅಸ್ತಿತ್ವಕ್ಕೆ ಮಂಜೂರಾತಿಕೊಡುವ ಪ್ರಯತ್ನವೇ ಸದ್ಯ ನಡೆದಿರುವಂತೆ ಕಾಣುತ್ತಿದೆ. ಹಾಗಾದಲ್ಲಿ ಈ ತನಕ ಕಾಂಗ್ರೆಸ್ ಪಕ್ಷದೊಳಗೆ ಮಾತ್ರವಿದ್ದ ಅಡ್ಡಗೋಡೆಗಳನ್ನು ಮಂತ್ರಿಮಂಡಲದೊಳಗಡೆಯಲ್ಲೂ ಎಬ್ಬಿಸಿಕೊಂಡಂತಾಗದೆ? ಇದುವರೆಗೆ ಮದ್ರಾಸಿನ ಕಾಂಗ್ರೆಸ್ ಶಾಸನಸಭಾ ಪಕ್ಷದೊಳಗಡೆಯಲ್ಲಿ ನಡೆದುದೆಲ್ಲವೂ ಸುಳ್ಳೆಂದೇ ಕಟ್ಟಿಕೊಂಡು, ಎಲ್ಲರೂ ಕೇವಲ ಕಾಂಗ್ರೆಸಿಗರೆಂಬ ಭಾವನೆಯಿಂದ, ಅವರ ವ್ಯಕ್ತಿ, ಯೋಗ್ಯತೆ ಮತ್ತು ಸಾಮರ್ಥ್ಯವನ್ನಷ್ಟೇ ಗಣಿಸಿ ಮಂತ್ರಿಗಳನ್ನಾರಿಸಿಕೊಳ್ಳುವದು ಅಸಾಧ್ಯವೆ? ಅಥವಾ ತಮ್ಮೀ ಬುದ್ಧಿಗಾಗಿ ಇತ್ತ ಜನತೆಯಿಂದ, ಅತ್ತ ಕಾಂಗ್ರೆಸ್ ಅಧಿನಾಯಕರಿಂದ ಇಷ್ಟೊ ಛೀ ಕೇಳಿದ ಮೇಲೂ, ಮದ್ರಾಸಿನ ಸೂತ್ರಚಾಲಕರಿಗಿದು ಅಗತ್ಯವೆಂದು ತೋರುವದಿಲ್ಲವೆ? ಹಾಗಿದ್ದರೆ ಇನ್ನು ಕಾರ್ಯಕ್ಕಿಳಿಯಬೇಕಾದುದು ಜನತೆಯ ಪ್ರತಿನಿಧಿಗಳಾಗಿ ಅಲ್ಲಿರುವ ಇವರಲ್ಲ- ಸ್ವತಃ ಜನತೆಯೇ! ನಿಜಕ್ಕೂ ಯಾವುದನ್ನು ಬದಲಾಯಿಸಬೇಕೋ ಅದನ್ನು ತಾವೇ ಮಾಡಿ ಮುಗಿಸಲು ಇನ್ನು ಮುಂದಕ್ಕಾದರೂ ಸಾರ್ವಜನಿಕರು ಹಿಂಜರಿಯಬಾರದೆಂಬುದನ್ನು ಸ್ವತಃ ಜನತೆಯೂ, ಹಿಂಜರಿಯಲಾರರೆಂಬುದನ್ನು ಆ ಜನತಾ ಪ್ರತಿನಿಧಿಗಳನ್ನಿಸುವವರೂ ತಿಳಿಯುವುದು ಅಗತ್ಯ. ಮದ್ರಾಸಿನ ಮುಕ್ಕಳಾಟ ಇಲ್ಲಿಗೇ ಮುಗಿದು, ಈ ಮುಹೂರ್ತದಿಂದ ಪ್ರೌಢಮುಖ ತೋರಿಬರಲಿ.

ಅಂತೂ ನಮ್ಮ ರಾಷ್ಟ್ರನಾಯಕರು ಮತ್ತು ಶಾಸನಸಭೆಗಳಲ್ಲಿರುವ ನಮ್ಮ ಪ್ರತಿನಿಧಿಗಳು ಸ್ಪಷ್ಟವಾಗಿ ತಿಳಿದಿರಬೇಕಾದ ಸಂಗತಿಯೊಂದಿದೆ. ಜನತೆಗಾಗಿ, ಜನಮತವನ್ನಾಧರಿಸಿ, ಜನಹಿತ ಸಾಧನೆಗಾಗಿಯೇ ತಾವಿದ್ದೇವೆ, ಕಾಂಗ್ರೆಸ್ ಸಂಸ್ಥೆಯಿದೆ ಹೊರತು ತಮಗಾಗಿ ಜನತೆಯಿಲ್ಲ ಎಂಬುದನ್ನವರು ಅರಿತಿರಬೇಕು. ಅದೇ ಕಾಲದಲ್ಲಿ ಜನತೆಯೂ ತನ್ನನ್ನು ತಾನರಿತುಕೊಳ್ಳಬೇಕು.

ಜಮೀನ್ದಾರೀ ರದ್ದತಿ

ಮದ್ರಾಸಿನ 'ಜಮೀನ್ದಾರೀ ಬರ್ಖಾಸ್ತು' ಮಸೂದೆಗೆ ಈಗತಾನೇ ಗವರ್ನರ್ ಜನರಲರ ಸಮ್ಮತಿ ದೊರೆತಿದೆ. ಜಮೀನ್ದಾರರಿಗೆ ಪರಿಹಾರ ಕೊಡುವ ಸಂಬಂಧದ ಕ್ರಮನಿಯಮಗಳನ್ನು ಮದ್ರಾಸ್ ಸರಕಾರವು ತಯಾರಿಸುತಿದ್ದು, ಅವು ಮಂಜೂರಾತಿಗಾಗಿ ಶಾಸನಸಭೆಗಳ ಮುಂದೆ ಬರಲಿವೆ. ರಾಷ್ಟ್ರದಲ್ಲಿ ಮುಂದಾಗಿ ಗವರ್ನರ್ ಜನರಲರ ಸಮ್ಮತಿಗಳಿಸಿದ ಜಮೀನ್ದಾರೀ ನಿರ್ಮೂಲನಾ ಮಸೂದೆಯೆಂದರೆ ಮದ್ರಾಸಿನದು. ಇದೇ ಮಾದರಿಯ ಬಿಹಾರಿನ 'ಎಸ್ಟೇಟುಗಳ ಬರ್ಖಾಸ್ತು' ಮಸೂದೆಯು ಅದರ ಕೆಲವು ಕಲಮುಗಳ ದುರಸ್ತಿಗಾಗಿ ಬಿಹಾರ್ ಶಾಸನ ಸಭೆಗೆ ವಾಪಾಸು ಮಾಡಲ್ಪಟ್ಟಿದೆ. ಬೊಂಬಾಯಿ ಪ್ರಾಂತ್ಯದಲ್ಲಿರುವ "ಭಗ್ದಾರಿ" "ನರ್ವದಾರಿ" ಪದ್ಧತಿಗಳನ್ನು ನಿರ್ಮೂಲಿಸುವ ಮಸೂದೆಯು ಬೊಂಬಾಯಿಯ ಎಸೆಂಬ್ಲಿಯಲ್ಲಿ ಇದೇ ತಾ 2ರಲ್ಲಿ ಮಂಜೂರಾಗಿದೆ. ಅಲ್ಲಿಯ ಜಮೀನ್ದಾರೀ ಬರ್ಖಾಸ್ತಿನ ಪ್ರಥಮ ಹಜ್ಜೆಯಿದು. ಸಂಯುಕ್ತ ಪ್ರಾಂತ್ಯದ ಜಮೀನ್ದಾರೀ ಪದ್ಧತಿಯನ್ನು ರದ್ದುಗೊಳಿಸುವ ಮಸೂದೆ ಅಲ್ಲಿಯ ಶಾಸನ ಸಭೆಯ ಮುಂದೆ ಜೂನ್ 27ರ ಸಭೆಯಲ್ಲಿ ಬರಲಿದೆ. ಗವರ್ನರ್ ಜನರಲರ ಸಮ್ಮತಿ ಪಡೆದ ಮದ್ರಾಸ್ ಮಸೂದೆಯು 2800 ಜಮೀನ್ದಾರೀ ಭೂಮಿಗಳನ್ನೂ 3500 ಇನಾಂ ಭೂಮಿಗಳನ್ನೂ ಸ್ವಾಧೀನಪಡಿಸಿಕೊಳ್ಳುವದು. ಅವುಗಳ ಒಟ್ಟು ವಿಸ್ತೀರ್ಣವು ಸುಮಾರು 14,000,000 ಎಕ್ರೆಗಳಿದ್ದು, ಅವುಗಳನ್ನು ವಶಪಡಿಸಿಕೊಂಡುದರ ಪರಿಹಾರಾರ್ಥವಾಗಿ ಸುಮಾರು ಹದಿನೇಳುವರೆ ಕೋಟಿ ರೂಪಾಯಿಗಳನ್ನು ಸಂಬಂಧಪಟ್ಟ ಜಮೀನ್ದಾರರು ಹಾಗೂ ಇನಾಮ್ದಾರರಿಗೆ ಕೊಡಬೇಕಾಗುವದು.

ಅಂತೂ ಮದ್ರಾಸ್ ಪ್ರಾಂತ್ಯವು ಮದ್ಯನಿಷೇಧ ಮತ್ತು ಜಮೀನ್ದಾರೀ ಬರ್ಖಾಸ್ತಿನ ಮಟ್ಟಿಗೆ ಮಿಕ್ಕ ಪ್ರಾಂತ್ಯಗಳಿಗಿಂತ ಮುಂದಿದೆ. ಜಮೀನ್ದಾರೀ ರದ್ದತಿಗೂ ದಕ್ಷಿಣ ಕನ್ನಡದಂತಹ ರ್ಯೋತ್ವಾರೀ ಪ್ರದೇಶಗಳಿಗೂ ಸಂಬಂಧವಿಲ್ಲವಾದರೂ ಅದು ನಿರ್ಮೂಲನಗೊಂಡಂತೆಯೇ, ಅನಗತ್ಯವಾಗಿ ಅತಿರೇಕ ಭೂಮಿಯು ಹೆಚ್ಚು ಯಾರಿಗೂ ಇರದಂತೆ ಮಾಡುವ ಶಾಸನವೂ ಬರಬಹುದೆಂಬುದನ್ನು ಎಲ್ಲರೂ ತಿಳಿದಿರತಕ್ಕದ್ದು.

ನವಯುಗದ ವಾಚಕರಲ್ಲಿ.

ನಮ್ಮೊಡನೆ ಪತ್ರವ್ಯವಹಾರ ಮಾಡುವಾಗ ಕೆಲವರು ತಮ್ಮ ಹೆಸರು ವಿಳಾಸ ಏನನ್ನೂ ಕೊಡದೆ ಬರೇ ಸಹಿ ಹಾಕಿ ಬಿಡುತ್ತಾರೆ; ಮಾತ್ರವಲ್ಲ, ನಮ್ಮಿಂದ ಉತ್ತರವನ್ನೂ ನಿರೀಕ್ಷಿಸುತ್ತಾರೆ. ಆದರೆ ನಾವು ಅಂತಹ ಪತ್ರಗಳಿಗೆ ತಕ್ಕ ಸಿಗಾ ಕೊಡುವುದು ಅಸಾಧ್ಯವಾದ್ದರಿಂದ ಪತ್ರವ್ಯವಹಾರ ಮಾಡುವಾಗ ಸಂಪೂರ್ಣ ಹೆಸರು ವಿಳಾಸ ಕೊಡಬೇಕಾಗಿ ಅಪೇಕ್ಷಿಸುತ್ತೇವೆ.

ಮೆನೇಜರ್,
ನವಯುಗ

1949ರಲ್ಲೇ ಯುದ್ಧ ಸ್ಫೋಟವಾದೀತೆ?

ಲೋಕ ಪರಿಸ್ಥಿತಿಯು ಸ್ಪಷ್ಟರೀತಿಯಿಂದ ಪಲ್ಲಟಗೊಳ್ಳುತ್ತಿರುವ ಈ ಕಾಲದಲ್ಲಿ ಭಾರತವು ಹಿಡಿಯುವ ಧೋರಣೆ ಮತ್ತು ಸ್ಥಾನವಾವುದೆಂಬುದು ಪ್ರಾಮುಖ್ಯವಿದೆ. ಅಮೇರಿಕ, ಬ್ರಿಟನ್, ಫ್ರಾನ್ಸ್, ನೆದರ್‌ಲೇಂಡ್ಸ್, ಬೆಲ್ಜಿಯಂ, ಲಕ್ಸಂಬರ್ಗ್, ಕೆನಡಾ ಮೊದಲಾದುವು ಸೇರಿ ಮಾಡಿಕೊಂಡ 'ಅಟ್ಲಾಂಟಿಕ್ ಒಡಂಬಡಿಕೆ' ಯೆಂಬುದು ರಶ್ಯದ ಮೇಲಿನ ಆಕ್ರಮಣೇಚ್ಛೆಯುದು ಹೊರತು ಸ್ವರಕ್ಷಣೆಯದಲ್ಲವೆಂದು ರಶ್ಯವು ಸಂಬಂಧಪಟ್ಟ ರಾಷ್ಟ್ರಗಳಿಗೆ ತನ್ನ ಸ್ಪಷ್ಟ ನಿಷೇಧವನ್ನು ಸೂಚಿಸಿದೆ. ಯುದ್ಧನಾಯಕ ಮತ್ತು ಸಮರಸ್ಫೂರ್ತಿಯ ಚರ್ಚಿಲ್ "ಯುದ್ಧವು ಅನಿವಾರ್ಯವೇನೂ ಅಲ್ಲ" ಎಂದಿದ್ದಾರಾದರೂ ರಶ್ಯವನ್ನು ಕೆಣಕಿ ಕೆರಳಿಸುವ ಮಾತುಗಳನ್ನಾಡಿದ್ದಾರೆ. 'ಕ್ರೆಮ್ಲಿನ್ನಿನ ಹದಿನಾಲ್ಕು ಮಂದಿ ಆಡಳಿತೆಗಾರರ ದೆಸೆಯಿಂದ ನಾವೀಗ ಹಿಟ್ಲರನಷ್ಟೇ ಕೇಡಿಬುದ್ಧಿಯವರನ್ನು, ಆದರೆ ಅವನಿಂತ ಅಜೇಯರಾದವರನ್ನು ಇದಿರಿಸಬೇಕಾಗಿದೆ. ಈ ಹದಿನಾಲ್ಕು ಮಂದಿಯು ತಮ್ಮ ಕಮ್ಯೂನಿಸ್ಟ್ ಚರ್ಚಿಗೆ ತಾವೇ ಧರ್ಮಾಧಿಕಾರಿಗಳಾಗಿದ್ದಾರೆ; ಅವರ ಏಜಂಟರು ಪ್ರತಿಯೊಂದು ರಾಷ್ಟ್ರದಲ್ಲೂ ಪಂಚಮ ದಳದವರಾಗಿ ಕೆಲಸ ಮಾಡುತಿದ್ದು, ತಮ್ಮ ಸ್ವದೇಶ ಬಂಧುಗಳ ಮೇಲೆ ತಮ್ಮ ಪೂರ್ಣಾಧಿಕಾರ ಸ್ಥಾಪಿಸುವ ದಿನ ಕಾಯುತಿದ್ದಾರೆ. ಚೈನಾ ಮತ್ತು ಭಾರತಗಳು ಕಮ್ಯೂನಿಸ್ಟ ಹತೋಟಿಯೊಳಗಿನ ಸಾಮ್ರಾಜ್ಯಗಳಾಗಿ ಮಾರ್ಪಟ್ಟಲ್ಲಿ 600 ಅಥವಾ 900 ಮಿಲಿಯ ಜನರಿಗೆ ಅಪಾರ ದುಃಖವನ್ನೂ ಅಂತ್ಯರಹಿತ ರಕ್ತ ಪ್ರವಾಹವನ್ನೂ ನಿರ್ಮಿಸುವದಂತೂ ಖಂಡಿತ" ಎಂದು ಚರ್ಚಿಲ್ಲರ ವಾಗ್ಬಾಣ. ಕಮ್ಯೂನಿಸಮಿನ ವಿನಾಶವೆಂಬುದು ಚರ್ಚಿಲ್ಲರಂಥವರ ವಿರೋಧದಿಂದಲ್ಲದೆ, ಸಮ್ಮತಿಯಿಂದಾಗುವಂತಹದಲ್ಲವೆನ್ನುತ್ತಾ ಕಮ್ಯೂನಿಸ್ಟರಂತೂ ತಮ್ಮ ಆಟಗಳನ್ನು ಯಥಾ ಪ್ರಕಾರ ಆಡುತಿದ್ದಾರೆ. ಫ್ರಾನ್ಸಿನ ವಸಾಹತಾದ ಇಂಡೋ-ಚೈನಕ್ಕೆ ಚೈನದ ಕಮ್ಯೂನಿಸ್ಟ್ ಸೇನೆಗಳು ನುಗ್ಗಿ ಅಲ್ಲಿಯ ಒಳ ಅಶಾಂತಿಯೀಗ ಗಣ್ಯ ಹೋರಾಟವಾಗಿ ಮಾರ್ಪಟ್ಟಿದೆ.

ಈ ವರುಷದಲ್ಲೇ ಯುದ್ಧ?

ಅಂತೂ ರಶ್ಯಾ ಮತ್ತು ಅಮೇರಿಕಾಂಗ್ಲ ಪಾಳಯಗಳ ಒಳಪಯಾಟುಗಳನ್ನು ಕಾಣುವಾಗ, ಇವೆರಡೂ ಸ್ಫೋಟಪೂರ್ವ ಜ್ವಾಲಾಮುಖಿಗಳಂತಿವೆ. ಉತ್ತರ ಅಟ್ಲಾಂಟಿಕ್ ಒಡಂಬಡಿಕೆ ಮಾಡಿಕೊಂಡ ಅಮೇರಿಕವು ಅಲ್ಲಿ ರಶ್ಯದ ಮುಂಭಾಗದಲ್ಲಿ ಬಲವಾದ ವ್ಯೂಹಕಟ್ಟುವ ಸಿದ್ಧತೆ ನಡೆಸುತ್ತಿದೆ. ಆ ವ್ಯೂಹವು ಭದ್ರಗೊಳ್ಳುವ ಮೊದಲೇ ಅದನ್ನು ಕದಬಡಿಯುವುದು ಸುಲಭವೆಂದೂ, ಹಾಗೆ ಮೊಳಕೆಯಲ್ಲೇ ಮುರಿಯದೆ ಬಿಟ್ಟರೆ ಮುಂದೆ ಮರವಾದಾಗ ಅದನ್ನು ಕಡಿದುರುಳಿಸುವುದು ಕಷ್ಟವೆಂದೂ ರಶ್ಯ ನೆನಸಿದೆ. ಆದ್ದರಿಂದ ಈ ವರುಷವೇ ಆ ಭಾಗದೊಳಗೆ ಕೆಂಪು ಸೇನೆ ನುಗ್ಗಬಹುದು-ಬಹುಶಃ ನೋರ್ವೆಯ ಮೇಲೆ. ಹಾಗಾದಲ್ಲಿ ಯುದ್ಧ 1949ರಲ್ಲೇ. ಆದರೆ ಇಕ್ಕಡೆಯವರೂ ಘರ್ಷಣೆಗಿಳಿಯಬೇಕಾದ ಅಂಶಗಳಿವೆ. ಇದುವರೆಗಿನ ಅಂದಾಜಿನಂತೆ, ಈ ಮೊದಲಿನ ಮಾದರಿಯ ಹೋರಾಟದ ಮಟ್ಟಿಗೆ ರಶ್ಯವೀಗಲೂ ತನ್ನಿದಿರು ಯಾರಿಗೂ ಅಂಜುವ ಸ್ಥಿತಿಯಲ್ಲಿಲ್ಲ. ಅದರ ಕಾಲ್ಬಲ ಮತ್ತು ವಿಮಾನಬಲ ನಿಜಕ್ಕೂ ಅಜೇಯವಾದುದು; ಭೌಗೋಲಿಕ ಭದ್ರತೆಯೂ ಅದಕ್ಕಿದೆ. ಆದರೆ ಮುಂದಿನದು ಆಟಂಬೋಂಬಿನ ಪ್ರಳಯಾವತಾರದ ಯುಗ. ಅಮೇರಿಕದ ಈ ಸಿಡಿಲುಕ್ಕಿಯ ಬೆಂಕಿಯ ಕುರಿತು ರಶ್ಯಾ ಯೋಚಿಸಲಿಕ್ಕಿದೆ. ಆದರೆ ನೆಲಮಾರ್ಗವಾಗಿ ಕೆಂಪು ಸೇನೆ ಮುಂದೊತ್ತಿ ಹೋಗಿ ಇದಿರುಗಡೆಯವರ ಕೇಂದ್ರ ಸ್ಥಳಗಳಿಗೆ ನುಗ್ಗಿಕೊಂಡರೆ, ಅಲ್ಲಿಂದ ಅವುಗಳನ್ನು ಹಿಮ್ಮೆಟ್ಟಿಸುವ ಕೆಲಸಕ್ಕೆ ಆಟಂ ಬೋಂಬು ಬೀಳಿಸುವಂತಿಲ್ಲ. ಮಾತ್ರವಲ್ಲ, ಸ್ವತಃ ಸೋವಿಯೆಟ್ ರಶ್ಯವು ವಿಸ್ತಾರ ಬಯಲು ಭೂಮಿಗಳುಳ್ಳದ್ದು; ತನ್ನ ಯುದ್ಧಕಾರ್ಖಾನೆಗಳನ್ನೂ, ಅವಶ್ಯಕ ಜನಸಾಮಗ್ರಿಗಳನ್ನೂ ಈ ಒಳಭಾಗಗಳಲ್ಲಿ ಜಮಾಯಿಸಿಟ್ಟುಕೊಳ್ಳುವ ಅನುಕೂಲತೆ ರಶ್ಯಕ್ಕಿದೆ. ಅಲ್ಲಿಗೂ ಹಾರಿಹೋಗಿ ಆಟಂಬೋಂಬು ಹಾಕುವದೇನೂ ಸುಲಭವಲ್ಲ. ಮೇಲಾಗಿ ಅಮೇರಿಕದಷ್ಟಲ್ಲವಾದರೂ, ಆಟಂ ಸಿದ್ಧತೆಯಲ್ಲಿ ರಶ್ಯವು ಈವರೆಗೂ ಕೈಕಟ್ಟಿ ಕುಳಿತಿದೆಯೆಂದು ಭಾವಿಸಲಾಗುವದಿಲ್ಲ. ಅಂತೂ ಈ ತಕ್ಕಡಿಯನ್ನು ಹಿಡಿದುಕೊಂಡು ಲೋಕದ ವಿರುದ್ಧ ಪಾಳಯಗಳೆರಡೂ ಇನ್ನೊಂದು ಯುದ್ಧದ ಕಾಲ, ವಿಧಾನಗಳನ್ನೀಗ ತೂಗಿ ನೋಡುತ್ತಿರುವಂತಿದೆ. ಅಮೇರಿಕವು ತನ್ನ ಅಟ್ಲಾಂಟಿಕ್ ಗುಂಪು ರಾಷ್ಟ್ರಗಳ ಸೇನಾವ್ಯೂಹ ಕಟ್ಟುತ್ತಿರುವಾಗ, ರಶ್ಯಕೂಡ ತನ್ನ ಹಿಂಬಾಲಕ ರಾಷ್ಟ್ರಗಳಾದ ಪೋಲೆಂಡ್, ಫಿನ್ಲೆಂಡ್, ಬಲ್ಗೇರಿಯಾ, ಹಂಗೇರಿ, ರುಮೇನಿಯ ಮೊದಲಾದುವುಗಳ ಸೇನೆಯನ್ನು ಕೂಡಿಕಟ್ಟಿ ಏಕಾಧಿಕಾರದೊಳಗೆ ಸಂಘಟಿಸುವ ಕೆಲಸದಲ್ಲಿದೆ. 1949ನೇ ಇಸವಿಯೊಂದು ಶಾಂತವಾಗಿ ದಾಟಿಹೋದರೆ ಆ ಮೇಲೆ ವಿಶ್ವಾಸಪೂರ್ವಕ ಶಾಂತಿಯ ಮಾತೆತ್ತಬಹುದೇನೋ!

ಭಾರತವೆತ್ತ?

ಈ ಸನ್ನಿವೇಶದಲ್ಲಿ ಇದೇ ತಿಂಗಳ ಮೂರನೇ ವಾರದಲ್ಲಿ ಲಂಡನಿನಲ್ಲಿ ಸೇರಲಿರುವ ವಸಾಹತು ಪ್ರಧಾನಿಗಳ ಸಮ್ಮೇಳನವು ಅತಿ ಪ್ರಾಮುಖ್ಯದ್ದೆಂಬುದು ನಿರ್ವಿವಾದ. ಭಾರತದ ಪ್ರಧಾನಮಂತ್ರಿ ಪಂಡಿತ ಜವಾಹರಲಾಲರು ಇದೇ ತಾ 17ರಲ್ಲಿ ಲಂಡನಿಗೆ ಹೊರಡಲಿರುವರೆಂದು ತಿಳಿದುಬಂದಿದೆ. ಸುಮಾರು 5 ಲಕ್ಷ ಮಂದಿ ಸೇರಿದ್ದ ಬಿಹಾರ್ ಪ್ರಾಂತಿಕ ರಾಜಕೀಯ ಪರಿಷತ್ತಿನಲ್ಲಿತ್ತ ಭಾಷಣದಲ್ಲೂ ಇದೇ ತಾ 3ರಲ್ಲಿ ಲಕ್ನೋವಿನ ಕಾಂಗ್ರೆಸಿಗರ ಸಭೆಯಲ್ಲೂ ನೆಹರುಗಳು ಈ ಕಡೆಗೆ ಸ್ಪಷ್ಟ ಪ್ರಕಾಶ ಚೆಲ್ಲಿದ್ದಾರೆ. "ನಮ್ಮ ಸ್ವಾತಂತ್ರ್ಯಕ್ಕಾವ ನಿಯಂತ್ರಣವೂ ಬೀಳದಂತೆ ನೋಡಿಕೊಂಡು, ನಮಗೆ ಲಾಭದಾಯಿಯುವಂತಹ ಮತ್ತು ಲೋಕ ಶಾಂತಿ ರಕ್ಷಣೆಗೆ ನೆರವಾಗುವಂತಹ ಅವಕಾಶ ಕಲ್ಪಿಸಿಕೊಡುವ ಒಂದು ರೀತಿಯ ಸಂಬಂಧವನ್ನು ನಾವು ಕಾಮನ್‌ವೆಲ್ತಿನೊಂದಿಗೆ ಇಟ್ಟುಕೊಳ್ಳಬಹುದು. ಲೋಕದ ಯಾವುದೇ ಪಕ್ಷ ಪಂಗಡದೊಳಗೆ ಸೇರಿಕೊಳ್ಳದೆ ದೂರವಿರತಕ್ಕದ್ದೆಂಬ ಭಾರತದ ನಿರ್ಧಾರವು ಎಂದಿನಂತೆ ಈಗಲೂ ಅಚಲವಿದೆ. ಆಕ್ರಮಣೇಚ್ಛೆಯ ಸೇನಾ ಒಪ್ಪಂದವಾವುದನ್ನಾದರೂ ಯಾವುದೇ ರಾಷ್ಟ್ರದೊಡನೆ ಮಾಡಿಕೊಳ್ಳುವ ಇಚ್ಛೆ ಭಾರತಕ್ಕಿಲ್ಲ. ಹೀಗಾಗಿ ನಾವು ಅಟ್ಲಾಂಟಿಕ್ ಒಪ್ಪಂದ ಅಥವಾ ಶಾಂತ ಸಾಗರ ವಲಯದೊಪ್ಪಂದಗಳಲ್ಲಿ ಸೇರಿಕೊಳ್ಳುವ ಪ್ರಶ್ನೆಯಿಲ್ಲ. ಭಾರತವು ಒಂದು ರಿಪಬ್ಲಿಕ್ ಆಗಬೇಕಾಗಿದೆ. ಕಳೆದ ಇಪ್ಪತ್ತು-ಇಪ್ಪತ್ತೈದು ವರುಷಗಳಿಂದ ನಾವು ಕಾಣುತ್ತಾ ಬಂದಿರುವ ಕನಸಿದು. ಈಗ ಕೂಡಾ ಕಾರ್ಯತಃ ನಾವು ಒಂದು ರಿಪಬ್ಲಿಕ್ ಆಗಿಯೇ ಇದ್ದೇವೆ. ನಮ್ಮ ಅಂತರಿಕ ಮತ್ತು ಹೊರರಾಜ್ಯಸಂಬಂಧದ ಕಾರ್ಯಕಲಾಪಗಳ ಮೇಲೆ ಯಾರ ಯಾವ ನಿಯಂತ್ರಣವೂ ಇಲ್ಲ"-ಎಂದು ನೆಹರುಗಳ ಸ್ಪಷ್ಟೀಕರಣ. "ನನ್ನನ್ನು ನೀವೆಲ್ಲರೂ ನಿಮ್ಮವ, ನಿಮ್ಮ ಜನ ಜವಾಹರಲಾಲನೆಂದು ತಿಳಿದುಕೊಳ್ಳಬೇಕಲ್ಲದೆ, ಭಾರತದ ಪ್ರಧಾನ ಮಂತ್ರಿಯೆಂದು ಲೆಕ್ಕಿಸಿಕೊಳ್ಳಕೂಡದು" ಎಂಬುದೇ ಜನತೆಯೊಡನೆ ಪಂಡಿತಜೀಯ ಬೇಡಿಕೆ.

ಮದ್ರಾಸ್ ಮಂತ್ರಿಮಂಡಲ

ಇದರ ಸದಸ್ಯರ ಹೆಸರು ಈಗತಾನೇ (ತಾ 6ನೇ ಅಪರಾಹ್ನ) ಘೋಷಿಸಲ್ಪಟ್ಟಿದೆ. ಶ್ರೀಗಳು—

ಪಿ. ಯಸ್. ಕುಮಾರಸ್ವಾಮಿ ರಾಜಾ (ಪ್ರಧಾನ ಮಂತ್ರಿ)
ಬಿ ಗೋಪಾಲ ರೆಡ್ಡಿ.
ಭಕ್ತವತ್ಸಲಮ್.
ಎ. ಬಿ ಶೆಟ್ಟಿ.
ಸೀತಾರಾಮ ರೆಡ್ಡಿ.
ಸಂಜೀವ ರೆಡ್ಡಿ.
ಚಂದ್ರಮೌಳಿ.
ಟಿ. ಯಸ್. ಯಸ್. ರಾಜನ್.
ಮಾಧವ ಮೆನನ್.
ಪರಮೇಶ್ವರನ್.

ತಿದ್ದುಪಡಿ—ಇದೇ ಸಂಚಿಕೆಯ 8ನೇ ಪುಟದಲ್ಲಿ ಪ್ರಕಟವಾದ "ವಿಜಯಬೇಂಕ್ ಲಿಮಿಟೆಡ್" ಕುಂದಾಪುರದ ಹರಾಜು ನೋಟೀಸಿನಲ್ಲಿ K. Naanyana Pai, Agent ಎಂದು ತಪ್ಪಾಗಿ ಅಚ್ಚಾಗಿದೆ. ಅದನ್ನು 'K. Narayana Shetty, Agent' ಎಂದು ತಿದ್ದಿ ಓದಬೇಕಾಗಿದೆ.

ಮಂಗಳೂರು

ವರ್ಷಾವಧಿ ಜಾತ್ರೆ-ಅತ್ತಾವರ ಶ್ರೀ ಅರಸು ಮುಂಡಿತ್ತಾಯ ದೈವದ ಸನ್ನಿಧಿಯಲ್ಲಿ ವರ್ಷಾವಧಿ ಜರಗತಕ್ಕ ಉತ್ಸವವು ಇದೇ ತಾ 2ರಲ್ಲಿ ಆರಂಭವಾಗಿ ತಾ 11ರ ತನಕ ನಡೆಯುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ನೋಟೀಸು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. 495/1948.

ನಾಗವೇಣಿ ಅಮ್ಮ ಸಹಾ —ವಾದಿರು.
ಪದ್ಮಾವತಿ ಸಹಾ .. ಪ್ರತಿವಾದಿರು.

1ನೇ ಪ್ರತಿವಾದಿ ಪದ್ಮಾವತಿ. ಪ್ರಾಯ ವರ್ಷ 52, ತಿಮ್ಮಯ್ಯನವರ ಹೆಂಡತಿ ಇವರು ಈಗ ಎಲ್ಲಿದ್ದಾರೆಂದು ತಿಳಿಯದ ಕಾರಣ ಗ್ರಾಮದ ಅಧಿಕಾರಿ ಎಂಬಲ್ಲಿ ರುತ್ತಾರೆ— —ಇವರಿಗೆ

ಈ ಮೂಲಕ ತಿಳಿಯಪಡಿಸುವದೇನೆಂದರೆ:-

ಪ್ರತಿವಾದಿ ಆಕ್ಷೇಪಣೆಯಾಗಿ ವಾದಿರ ಭೂಮಿಗೆ ನೀರು ಹಲ್ಲದಂತೆ ಅಗಿ ವಾದಿರಿಗೆ ಸಂಭವಿಸಿದ ನಷ್ಟದ ರೂ 300, ಕೋರ್ಟು ಖರ್ಚು ಬಡ್ಡಿ ಕೂಡಾ ತಮಗೆ ಪ್ರತಿವಾದಿರಿಂದ ಕೊಡಿಸಬೇಕೆಂತ ನಿಮ್ಮ ಮೇಲೆ ಕೊಡಾ ಮಾಡಿದ ಮೇಲಿನ ದಾವೆ ತಾ 12-4-49ಕ್ಕೆ ತನಿಖೆಗೆ ಇಟ್ಟಿರುವದರಿಂದ ಆ ಕುರಿತು ನಿಮಗೆ ಆಕ್ಷೇಪಗಳೇನಾದರೂ ಇದ್ದರೆ ಸದ್ರಿ ದಿನ ನೀವು ಸ್ವತಹ ಯಾ ವಕೀಲರ ಮುಖಾಂತರ ಕೋರ್ಟಿನ ಮುಂದೆ ಹಾಜರಾಗಿ ಉಪಪಾದಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

By order of the court.

M. Sadashiva Rao.

Pleader for Pltf.

Puttur 31-3-49

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 37/1949

ವಾದಿ ಗೋವಿಂದ

ಪ್ರತಿವಾದಿರು 1 ನಾರಾಯಣ. 2. ಲಕ್ಷ್ಮಿ ಆಚಾರ್ತಿ. 3 ನಾಗಮ್ಮ ಶೆಡ್ತಿ 4. ನೀಲು ಶೆಡ್ತಿ

ಕುಂದಾಪುರ ತಾಲ್ಲೂಕು ಮೂಡು ... ಗ್ರಾಮದ ಕೂಸಾಳಗುಡಿ ತೋಟದಲ್ಲಿರುವ ಅಣ್ಣಪ್ಪ ಆಚಾರಿ ಮಗ ನಾರಾಯಣ 1. ಈತನ ಹೆಂಡತಿ ಲಕ್ಷ್ಮಿ ಆಚಾರ್ತಿ 1. ಬಸರೂರು ಗ್ರಾಮದಲ್ಲಿರುವ ಪಟೇಲ್ ಮಂಜಯ್ಯ ಶೆಟ್ರ ಹೆಂಡ್ತಿ ನಾಗಮ್ಮ ಶೆಡ್ತಿ 1. ತೀರ್ಥಹಳ್ಳಿ ಗ್ರಾಮದಲ್ಲಿರುವ ತಂಕಬೈಲು ಮಂಜಯ್ಯ ಶೆಟ್ರ ಹೆಂಡ್ತಿ ನೀಲು ಶೆಡ್ತಿ 1. ಕೂಡಾ 4 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪ್ರತಿವಾದಿರರ ವಾರ್ಷಿಕ, ವ್ಯಾಜ್ಯ, ... ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 16-4-1949ನೇ ಸೋಮವಾರ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಕೋರ್ಟಿನ ಮುಂದೆ ಹಾಜರಾಗಿ ಪ್ರತಿಕೂಲ ಮಾಡಿಕೊಳ್ಳತಕ್ಕದ್ದು. ... ಈ ಮೂಲಕ ತಿಳಿಯಪಡಿಸಲಾಗಿದೆ

N S Parameshwariah

Advocate for Pltf.

Date 1-4-49, Coondapoor.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು 2-4-1949ರಿಂದ

ಕಾಮುಕ ಜಮೀನ್‌ದಾರನೊಬ್ಬನು ಕೃಷ್ಣ ಪರಮಾತ್ಮನ ಪರಮ ಭಕ್ತನಾದ ಕಥೆ.

ಭಕ್ತ ಹರಿದಾಸ್

ತ್ಯಾಗರಾಜ ಭಾಗವತರ್, ರಾಜಕುಮಾರಿ, ವಸಂತ ಕೋಕಿಲಮ್ ಮತ್ತಿನ್ನಿತರರು.

ಟಪ್ಪಾಲು ದರಗಳು ಇಳಿದವು

ಅಂಚೆಖಾತೆಯ ವರದಿ

ಎಪ್ರಿಲ್ ತಿಂಗಳ ತಾ ೧ರಿಂದ ದೇಶದ ಒಳ ಭಾಗದಲ್ಲಿ ವಿಮಾನಗಳಿಂದ ಸಾಗುವ ಟಪ್ಪಾಲು ಕಾರ್ಡು ಹಾಗೂ ಕವರುಗಳ ಮೇಲಣ ಹೆಚ್ಚಿನ ಚಾರ್ಜನ್ನು ಮನ್ನಾಮಾಡಲಾಗಿದೆ ಯೆಂದು ಟಪ್ಪಾಲುಖಾತೆಯು ತಾ ೩೧ರಂದು ಒಂದು ಪ್ರಕಟನೆ ಹೊರಡಿಸಿದೆ. ಈ ಬದಲಾವಣೆಗಳೆಲ್ಲ ಎಪ್ರಿಲ್ ತಿಂಗಳ ಒಂದನೇ ತಾರೀಕಿನಿಂದಲೇ ಬಳಕೆಗೆ ಬಂದಿವೆ. ಈ ಪ್ರಕಟಣೆಯ ತಾತ್ಪರ್ಯವೇನಂದರೆ:- ಟಪ್ಪಾಲಿನ ಪಂಕೆಯ ದರಗಳು ಕೂಡಲೇ ಬಳಕೆಗೆ ಬರುವವಿಷ್ಟು ಪತ್ರಗಳ ದರಗಳು ಕೊಡಲ್ಪಟ್ಟಿರುವ ಎಲ್ಲಾ ಒಳದೇಶಗಳ ಟಪ್ಪಾಲುಗಳನ್ನು ವಿಮಾನದಮೂಲಕ ಸಾಧ್ಯವಿದ್ದಲ್ಲೆಲ್ಲಾ ಸಾಗಿಸಲಾಗುವದಲ್ಲದೆ ಇನ್ಶೂರು ಮಾಡಿದ ವಸ್ತುಗಳನ್ನು ಮಾತ್ರ ಸಾಗಿಸಲಾಗುವುದಿಲ್ಲ. ಪುಸ್ತಕಗಳ ಪಾಕೇಟು, ರಜಿಸ್ಟರ್ಡ್ ಆದ ವರ್ತಮಾನ ಪತ್ರಿಕೆಗಳು, ಮನಿಯಾರ್ಡರು ಮೊದಲಾದವುಗಳನ್ನು ಎಂದಿನಂತೆ ಸಾಗಿಸಲಾಗುವದಲ್ಲವೆ ಏರ್ ಮೈಲಿನ ಬಗ್ಗೆ ಹೆಚ್ಚಿನ ಚಾರ್ಜು ಕೊಟ್ಟಲ್ಲಿ ವಿಮಾನ ಮೂಲಕ ಸಾಗಿಸಲಾಗುವುದು. ವಿಮಾನ ಮೂಲಕ ಪಾರ್ಸೆಲುಗಳನ್ನು ಸಾಗಿಸುವ ವಿಷಯದಲ್ಲಿ ಸರಕಾರವು ೧೯೪೯ನೇ ಜನವರಿ ೨೭ರಲ್ಲಿ ಹೊರಡಿಸಿದ ಪ್ರಕಟಣೆಯಂತೆ ಚಾರ್ಜು ಮಾಡಲಾಗುವುದು.

೧೯೪೯ನೇ ಎಪ್ರಿಲ್ ತಿಂಗಳ ಒಂದನೇ ತಾರೀಕಿನಿಂದ ಒಳಪ್ರದೇಶದಲ್ಲಿ ಚಲಾವಣೆಯಾಗುವ ಟಪ್ಪಾಲಿನ ದರಗಳು ಈ ರೀತಿಯಿವೆ, ಕಾಗದಗಳು_ಒಂದು ತೊಲೆಯನ್ನು ಮೀರದವುಗಳಿಗೆ_ಎರಡಾಣೆ. ಹೆಚ್ಚಿನ ಪ್ರತಿ ಒಂದು ತೊಲೆಗೆ ಒಂದಾಣೆ ಪ್ರತ್ಯೇಕ. ಪೋಸ್ಟು ಕಾರ್ಡಿಗೆ ಒಂಭತ್ತು ಪೈ. ಈ ದರಗಳು ಭಾರತದೊಳಗೆ ಚಲಾವಣೆಯಾಗುವ ಟಪ್ಪಾಲಿಗೆ ಮಾತ್ರ ಅನ್ವಯಿಸುವವಲ್ಲದೆ ಏಡನ್, ಸಿಲೋನು, ನೇಪಾಳ, ಪಾಕಿಸ್ಥಾನ ಮತ್ತು ಪೋರ್ಚುಗೀಸ್ ಭಾರತಗಳಿಗೂ ಕಳುಹಿಸುವ ಟಪ್ಪಾಲಿಗೆ ಅನ್ವಯಿಸುವುವು.

ಇತರ ವಿಮಾನ ಮೂಲಕ ಸಾಗಿಸಲ್ಪಡುವ ಟಪ್ಪಾಲಿನ ದರಗಳು ಮೊದಲಿನಂತಿವೆ. ಈಗಿರುವ ಆರ್ಧಾಣೆಯ ಟಪ್ಪಾಲು ಕಾರ್ಡುಗಳಿಗೆ ಟಪ್ಪಾಲು ಖಚೇರಿಗಳ ಮೇಲೆ ಕಾಲಾಣೆಯ ಇನ್ನೊಂದು ಸ್ಟೇಂಪನ್ನು ಹಚ್ಚಲಾಗುವದಲ್ಲದೆ ಕವರಿನ ಮೇಲೂ ಆರ್ಧಾಣೆಯ ಹೆಚ್ಚಿನ ಚೀಟನ್ನು ಹಚ್ಚಲಾಗುವುದು. ಈ ಏರ್ಪಾಡು ಹೊಸತಾಗಿ ಏರಿಕೆಯ ದರಗಳ ಕಾರ್ಡು ಹಾಗೂ ಲಕೋಟೆಗಳು ತಯಾರಾಗುವ ವರೆಗೆ ನಡೆಯುವುದು. ಈಗ ಎರಡೂ ಪಂಗಡದ ಸ್ಟಾಂಪು ಛಾಪಿಸಲ್ಪಟ್ಟ ವಿಮಾನದಲ್ಲಿ ಸಾಗಿಸಲ್ಪಡುವ ಲಕೋಟೆಗಳು ನಾಪಾಸು ತೆಗೆಯಲ್ಪಡುವವು. ಈಗ ಜಾರಿಯಲ್ಲಿದ್ದಂತೆ ವಿಮಾನಗಳಲ್ಲಿ ಹೋಗಬೇಕಾದ ಕವರುಗಳ ಮೇಲೆ ಗುರುತಿನ ನೀಲ ಬಣ್ಣದ ಚೀಟನ್ನು ಹಚ್ಚುವುದು ಅಗತ್ಯವಿಲ್ಲ. ಆದರೆ ಪರದೇಶಗಳಿಗೆ ಹೋಗಲಿರುವ ಟಪ್ಪಾಲುಗಳ ಮೇಲೆ ಇವುಗಳನ್ನು ಹಚ್ಚುವ ಅಗತ್ಯವಿದೆ.

ಮಂಜರಪಲ್ಕೆ: – ಇಲ್ಲಿ ಇದೇ ತಾ. 8, 9, 10 ಈ ಮೂರು ದಿವಸಗಳಲ್ಲಿ ಶ್ರೀಗಳಾದ ಮತ್ತು ಶಂಕರನಾರಾಯಣ ಕಾಮತ್, ವೀರಭದ್ರ ನಾಯ್ಕ, ಮಾಗೋಳಿ ಗೋವಿಂದ ಮೊದಲಾದ ಪ್ರಸಿದ್ಧ ಪಾತ್ರಧಾರಿಗಳ ಕೂಡುವಿಕೆಯಿಂದ ಶ್ರೀ ಮಾರ್ನಕಟ್ಟೆ ಮೇಳದ ದಶಾವತಾರ ಬಯಲಾಟಗಳಾಗುವವು. ಮಂಜರ ಪಲ್ಕೆ 'ಮಿತ್ರ ಸಮಾಜ'ದವರು ಸರ್ವರಿಗೂ ಸ್ವಾಗತ ಕೋರುತ್ತಾರೆ.

ನಿಮಗೆ ತಿಳಿದಿದೆಯೆ? ವಿವಾಹಿತರು ಹೆಚ್ಚುದಿನ ಬದುಕುವರು!

ವಿವಾಹಿತರು ಅವಿವಾಹಿತರಿಗಿಂತ ಹೆಚ್ಚು ಕಾಲ ಬದುಕುವರೆಂದು ಕ್ಲೀವ್‌ಲ್ಯಾಂಡ್‌ನ ಈರ್ವರು ಡಾಕ್ಟರುಗಳು ಸಂಶೋಧನೆ ನಡೆಸಿ ತೀರ್ಮಾನ ಮಾಡಿದ್ದಾರೆ. ಇಷ್ಟೇ ಅಲ್ಲದೆ ವಿವಾಹಿತರಿಗೆ ಮಾನಸಿಕ ಶಾರೀರಿಕ ತೊಂದರೆಗಳೂ, ಹೃದ್ರೋಗವೂ, ಕ್ಷಯ ಮುಂತಾದ ಭೀಕರ ರೋಗಗಳೂ ಅವಿವಾಹಿತರಿಗಿಂತ ಕಡಿಮೆ. ಆದ್ದರಿಂದ ಸರಕಾರ ಮತ್ತು ಸಮಾಜವು ಕೈಲಾದ ಮಟ್ಟಿಗೂ ಅವಿವಾಹಿತರಿಗೆ ವಿವಾಹವಾಗುವಂತೆ ಬಲಾತ್ಕಾರ ಮಾಡಲೇಬೇಕಾಗುತ್ತದೆ. ಎಂದು ಅವರು ಹೇಳಿದ್ದಾರೆ.

ಹೆಂಗುಸರೇ ಬಲಿಷ್ಠರು!

"ಗಂಡುಸು ಜೀವನದ ಪ್ರತಿಯೊಂದು ಘಟ್ಟದಲ್ಲಿಯೂ ಹೆಂಗುಸಿಗಿಂತ ಬಲಹೀನನು. ಅಲ್ಲದೆ ಗಂಡುಸರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ೧೯೧೦ ರಲ್ಲಿ ಹೆಂಗುಸರಿಗಿಂತ ೨೭ ಲಕ್ಷ ಮಂದಿ ಗಂಡುಸರು ಹೆಚ್ಚಾಗಿದ್ದರು. ಈಗ ೪ ಲಕ್ಷ ೧೮ ಸಾವಿರ ಮಂದಿ ಹೆಂಗಸರು ಹೆಚ್ಚಾಗಿದ್ದಾರೆ, ಇದು ಮುಂದುವರಿಯುತ್ತಾ ಹೋದರೆ ೧೯೭೦ರ ಹೊತ್ತಿಗೆ ಗಂಡುಸರಿಗಿಂತ ೧೯,೬೩,೦೦೬ ಮಂದಿ ಹೆಂಗುಸರು ಹೆಚ್ಚಾಗುವರು"- ಎಂಬುದಾಗಿ ಹಾರ್ವಾರ್ಡ್ ವೈದ್ಯ ವಿದ್ಯಾಲಯದ ವೈದ್ಯರು, ಒಂದು ವರದಿಯಲ್ಲಿ ತಿಳಿಸಿದ್ದಾರೆ.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು ತಾ ೩ರಲ್ಲು ಶ್ರೀ ಬಾಳ್ಕಟ್ಟುಬೀಡು ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಮತಿ ಸರೋಜಿನಿದೇವಿಯವರ ನಿಧನದ ಬಗ್ಗೆ ದುಃಖ ಸೂಚಿಸುವ ಮತ್ತು ವಿಮಾನ ಅಪಘಾತದಿಂದ ಪಾರಾದ ಸರ್ದಾರ್ ಪಟೇಲರಿಗೆ ದೀರ್ಘಾಯುಸ್ಸನ್ನು ಕೋರುವ ನಿರ್ಣಯಗಳಾದುವು. ರಾಷ್ಟ್ರೀಯವಾರದಲ್ಲಿ ಗಾಂಧಿ ಸ್ಮಾರಕ ನಿಧಿ ಸಂಗ್ರಹ ಮತ್ತು ಹರಿಜನೋದ್ಧಾರ ಕಾರ್ಯಕ್ರಮಗಳನ್ನು ಉಭಯಿಂದ ಸಾಗಿಸಬೇಕೆಂಬ ಠರಾವಾಯಿತು. ಮದ್ರಾಸು ಪ್ರಾಂತದಲ್ಲಿ ಆಗಾಗ ಮಂತ್ರಿಮಂಡಲವು ಬದಲಾಗುತ್ತಿರುವುದು ಪ್ರಾಂತದ ಅಭಿವೃದ್ಧಿಗೆ ತೊಡಕೆಂದೂ ಮತದಾರರು ಆರಿಸಿ ಕಳುಹಿಸಿದ ಸದಸ್ಯರು ತಂತಮ್ಮೊಳಗೆ ಅವಿಶ್ವಾಸ, ಅನೈಕ್ಯತೆಯಿಂದಿರುವುದು ರಾಷ್ಟ್ರಘಾತಕವೆಂದೂ ಈ ಸಭೆಯು ಅಭಿಪ್ರಾಯಪಟ್ಟಿತು

(೫ನೇ ಪುಟದಿಂದ)

ಪಟೇಲ್ ಚಿರಾಯುವಾಗಲಿ" ಎಂದು ಹಾಕಿದ ಜೈಘೋಷವು ರೋಮ ನಿಗುರಿಸುವಂತಹದಿತ್ತು. ಸರ್ದಾರರು ಪ್ರಾಣಾಪಾಯದಿಂದ ಪಾರಾದುದಕ್ಕಾಗಿ ದೇಶವೇ ಒಮ್ಮೆ 'ಬದುಕಿದೆ!' ಎಂದು ಸಮಾಧಾನದುಸಿರು, ಉದ್ಗಾರಗಳನ್ನೆಬ್ಬಿಸಿದೆ, ಬೊಂಬಾಯಿಯ ಶ್ರೀ. ಮಂಗಲ್‌ದಾಸ್ ಎಂಬ ಕಾಂಗ್ರೆಸಿಗರು ಸರ್ದಾರರ ವಿಮಾನಸಾರಥಿಗೆ 1000 ರೂ. ಬಹುಮಾನಕೊಡಲು ಮುಂದೆ ಬಂದಿದ್ದಾರೆ.

ಂಂ ಂಂ

ಇದೇ ತಾ. 1ರಲ್ಲಿ ಬಿಹಾರಿನ ಪಾಟ್ನಾ ಎಂಬಲ್ಲಿಂದ ತನ್ನ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯೊಂದಿಗೆ ಕಾರಿನಲ್ಲಿ ಹೊರಟಿದ್ದ ಶ್ರೀ ಜೈ ಪ್ರಕಾಶ್ ನಾರಾಯಣರವರು ಡಾಲ್ಟಂಗಂಜ್ ಎಂಬಲ್ಲಿಗೆ 10 ಮೈಲು ದೂರದಲ್ಲಿ ಬಂಡೆಯೊಂದಕ್ಕೆ ಸುತ್ತು ಕೆಗೆಯುತ್ತಿದ್ದಾಗ ಅಡಿಮೇಲಾಗಿ ಹೋಯಿತು. ಜೈ ಪ್ರಕಾಶ್ ಮತ್ತು ಪ್ರಭಾವತಿಯವರು ಕಾರಿನಡಿಯಲ್ಲಿ ಬಿದ್ದು ಜೈಪ್ರಕಾಶರ ಬಲತೋಳಿನ ಎಲುಬು ಮುರಿದಿದೆ. ಅವರ ಪತ್ನಿಯ ತಲೆಗೆ ಪೆಟ್ಟಾಯಿತು. ಅಲ್ಲಿಯೇ ಪ್ರಥಮ ಚಿಕಿತ್ಸೆ ನಡೆದು ಈಗ ಪಾಟ್ನಾ ಆಸ್ಪತ್ರೆಗೆ ತಂದು ಜೈಪ್ರಕಾಶರ ಎಲುಬು ಸಂದನ್ನು ಜಯಶೀಲವಾಗಿ ಜೋಡಿಸಲಾಗಿದೆ. ಶ್ರೀಮತಿ ನಾರಾಯಣರೂ ಗುಣಹೊಂದುತ್ತಿದ್ದಾರೆ.

In the Court of the Dt. Munsiff of Mangalore. O. S. 23/1949.

Mundiappu alias Thimmayu Raithi and others: Plaintiffs

and

Laxmi. Defendent.

To deft. Laxmi d/o Subba pujarthi, residing at Thenkabellur village of mangalore taluq.

Notice.

Please take notice that the above suit filed by plaintiffs for maintenance is posted to 20-4-1949 for trial. you are hereby directed to appear on that day at 11 A. M. in person or through an advocate failing which you will be declared exparte and the suit proceeded with

(By order)

Mangalore 31-3-1949.

B. Manjaya Hegde,
Advocate for Plaintiffs

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ-

O S. 94/48 R I.P 436/48.

ಯಾಪ್ತ್ರಿಯಮನ್ ಬ್ಯಾಂ ಅರ್ಜಿದಾರ ವೆಂಕಪ್ಪ ಹೆಂಗ್ಸು ಸಹಾ . ಎದುರು ಸದ್ರಿ ಅಮ್ಮಣ್ಣಿಯು 11ನೇ ಎದುರು ಕಾರ್ಕಳ ತಾಲ್ಕು ಅಳದಂಗಡಿ ಮಾಗಣೆ ನಾಲ್ಕೂರು ಗ್ರಾಮದ ಕುರೆಲ್ಯ ಎಂಬಲ್ಲಿರುವ ಸೋಮು ಹೆಂಗ್ಸಿನ ಮಗಳು ಸುಂದರಿ ಹೆಂಗ್ಸಿಗೆ ಈ ಮೂಲಕ ತಿಳಿಸುವದೇನೆಂದರೆ-

ಮೇಲ್ಕಂಡ ಅಮ್ಮಣ್ಣಿಯಲ್ಲಿ ಜಪ್ತಿ ಆದ ಆಸ್ತಿಗಳ ಕುರಿತು ಹಾಜರು ಪಡಿಸಿದ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆಯೂ, ಏಲಂ ಸಮಯ ಬಿಡ್ ವ set off ಪರ್ಮಿಶನ್ ಕೇಳಿ ಬರೆಕೊಂಡ ಅರ್ಜಿ ಕೂಡಾ ತಾ. 16 4-1949ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕೋರ್ಟು ಹುಕುಂ ಪ್ರಕಾರ

H. K. Gopalkrishna Rao,
ಅರ್ಜಿದಾರರ ಕಡೆಯ ವಕೀಲ್.

ಕಾರ್ಕಳ, 1 4.1949

The Vijaya Bank Ltd.. Coondapoor S. K.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— ನೀವು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ವಾ, ಬೆಳ್ಳಿಯ ಮತ್ತು ಸರಕಿನ ಈಡಿನ ಮೇಲೆ ಕೂಡಾ ಪಡಕೊಂಡ ಲೋನುಗಳ ಅಸಲು ಐವೇಜು ವಾ ಬಡ್ಡಿಯನ್ನು ಕೂಡಾ ಬಹಳ ಕಾಲ ಬಾಕಿಮಾಡಿಕೊಂಡಿರುವುದಲ್ಲದೆ, ನಿಮಗೆ ಕ್ರಮದಂತೆ ನೋಟೀಸು ವಗೈರೆ ಕೊಟ್ಟಾಗ್ಯೂ ನೀವು ಅಸಲು ವಾ ಬಡ್ಡಿಯನ್ನು ಪಾವತಿಮಾಡದೆ ಇನ್ನೂ ಬಾಕಿಮಾಡಿಕೊಂಡಿರುವುದರಿಂದ, ಸದ್ರಿ ನಿಮ್ಮ ಹೆಸರ ಲೋನುಗಳ ಅಸಲು ಐವೇಜನ್ನು ಬಡ್ಡಿಸಹಿತ ತಾರೀಕು 14-4-49ನೇ ಗುರುವಾರದೊಳಗೆ ಬೇಂಕಿಗೆ ಪಾವತಿ ಮಾಡುವರೆ ತಪ್ಪಿದಲ್ಲಿ ನಿಮ್ಮ ಬಾಬ್ತು ಲೋನಿನ ಆಭರಣಗಳನ್ನು ವಾ ಸರಕನ್ನು ತಾರೀಕು 20-4-49ನೇ ಬುಧವಾರ ಹಗಲು ಘಂಟೆ 3ಕ್ಕೆ ವಾ ಬೇಂಕಿಗೆ ಯುಕ್ತ ತೋರುವ ಮುಂದಿನ ಯಾವುದೇ ದಿನಗಳಲ್ಲಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡುವುದಲ್ಲದ, ಲೋನುಗಳ ಬಾಬ್ತು ಬೇಂಕಿಗೆ ಬರಾ ಅಸಲು ಬಡ್ಡಿ ಐವೇಜಿಗೆ ಏಲಂನಲ್ಲಿ ಹುಟ್ಟಿಬರುವ ಹಣವು ಕಡಿಮೆಯಾದ ಪಕ್ಷದಲ್ಲಿ, ನಿಮ್ಮ ಚರ ವಾ ಸ್ಥಿರಚರ ಸೊತ್ತುಗಳ ಜಪ್ತಿದ್ವಾರಿಯಿಂದ ವಸೂಲು ಮಾಡಿಕೊಳ್ಳಲಾದೀತು. ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ,	ಲೋನಿನ ಮೊಬಲಗು
480 / 45-6	ಕೆ. ಮಂಜುನಾಥಯ್ಯ, ಮಹಾಬಲೇಶ್ವರಯ್ಯರ ಮಗ, ಶ್ರೀ ಮಾತಾ ಯುನೈಟೆಡ್ ಕಮರ್ಶಿಯಲ್ & ಇಂಡಸ್ಟ್ರಿಯಲ್ ಏಜನ್ಸೀಸ್. ಲಿಮಿಟೆಡ್ ಕುಂದಾಪುರ.	150 - -
510 / 45-46	— ಡಿ — —	510 -
153 / 46-47	ಉ. ಮುತ್ತು ಶೇಟ್, ವೆಂಕಟ್ರಮಣ ಶೇಟರ ಮಗ, ಚಿನಿವಾರ, ಕುಂದಾಪುರ,	120 - -
921 / 46-7	ಕೆ. ಗಣಪತಿ ಶೇಟ್, ಪುಟ್ಟಪ್ಪ ಶೇಟರ ಮಗ, ಜುವೆಲ್ಲರ್, ಕುಂದಾಪುರ ಕಸಬಾ.	12452 - -
922 / 46-7	— ಡಿ - ಡಿ —	1635 - -

ಸರಕಿನ ಲೋನು.

1 / 47-8	ಕೆ. ಗಣಪತಿ ಶೇಟ್, ಪುಟ್ಟಪ್ಪ ಶೇಟರ ಮಗ, ಜುವೆಲ್ಲರ್, ಕುಂದಾಪುರ ಕಸಬಾ.	ಚಾಪೆಟ್ಟಿಗೆ, ಸಾಬೂನು ಕಬ್ಬಿಣದ ಮಂಚಿನರಿ ಮತ್ತು ಕಬ್ಬಿಣದ ಇತರ ಸಾಮಾನುಗಳು– 2380 - -

for The Vijaya Bank. Ltd.,
K. Naaayana Pai.
Agent Coondapor.

ಉಡುಪಿ

ಮುನಿಸಿಪಲ್ ಕೌನ್ಸಿಲು ಮೀಟಿಂಗು

ಕಳೆದ ತಾ 31ರಲ್ಲು ಚೆಯರ್‌ಮೆನ್ ಶ್ರೀ ಸಿ. ಉಪೇಂದ್ರ ಶ್ರೀನಿವಾಸನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಕೆಲವು ಸರಕಾರಿ ಹುಕುಮುಗಳು ರಿಕಾರ್ಡು ಮಾಡಲಾದುವು. ಮದ್ರಾಸಿನ ಪ್ರಾಂತಿಕ ಫಿಶರ್ಸ್ ಡೆವಲಪ್‌ಮೆಂಟ್ ಆಫೀಸರರೊಡನೆ 1949-50ರಲ್ಲು ಆಫೀಸಿಗೆ ಬೇಕಾಗುವ ಬಾಡಿ ವಸ್ತ್ರದ ಬಗ್ಗೆ ಕಮಿಶನರ್ ಕೊಟ್ಟ ಆರ್ಡರನ್ನು ಮನ್ನಿಸಲಾಯಿತು. ಬಸ್‌ಸ್ಟೇಂಡಿನಲ್ಲಿ ಪ್ಯಾಸೆಂಜರರ ಸೌಕರ್ಯಕ್ಕಾಗಿ ಇಟ್ಟಿರುವ ತೊಟ್ಟಿಗೆ ದಿನಾಲು ನೀರು ತುಂಬಿಸುವರೆ ತಿಂಗಳೊಂದರ ರೂಪಾಯಿ 3/-ರಂತೆ ಕೊಡಲೂ ಮುನಿಸಿಪಲ್ ಮಣೆಗಾರರಿಗೆ ಒಬ್ಬ ಪೇದೆಯ ಇನಮನ್ನು ಕೊಡಲೂ ಸೆಂಕ್ಷನ್ ಆಯಿತು. ಕುಂಜಿಬೆಟ್ಟು ಸ್ಮಶಾನದ ಕಟ್ಟಡಕ್ಕೆ ರೂಪಾಯಿ 2450/- ಮಂಜೂರಾಯಿತು. ಮುನಿಸಿಪಲ್ ಸಾರ್ವಜನಿಕ ಪಾಯಿಖಾನೆಗಳ ದುರಸ್ತಿ ಬಗ್ಗೆ ರೂಪಾಯಿ 220- ವೆಚ್ಚಮಾಡಬಹುದೆಂದಾಯಿತು.

ಹವಾಮಾನ ಸೆಕೆ ವಿಪರೀತವಿದೆ. ಕೆಲವೆಡೆ ಸ್ವಲ್ಪ ಸ್ವಲ್ಪ ಮಳೆ ಬಿದ್ದಿರುವುದು.

ರಾಮನವಮಿ ಅಲೆವೂರಿನ ಶ್ರೀ ರಾಮಮಂದಿರದಲ್ಲಿ ಕಾಲಂಪ್ರತಿಯೂ ಜರಗುವ ಶ್ರೀ ರಾಮನವಮಿ ಮಹೋತ್ಸವವು ಇದೇ ತಾ 7ರಲ್ಲು ಪ್ರಾರಂಭವಾಗಿ ತಾ 13ರಲ್ಲು ನಗರಮೆರವಣಿಗೆ, ವಸಂತೋತ್ಸವಾದಿಗಳಿಂದ ಕೊನೆಗೊಳ್ಳಲಿರುವುದು.

ಶ್ರೀ ಸೋದೆ ವಾದಿರಾಜಮಠದ

ಇಂಟೆರಿಮ್ ಟ್ರಸ್ಟಿಗಳಾದ ಶ್ರೀ ಯು. ಶ್ರೀಪತಿ ಆಚಾರ್ಯರು ತಮ್ಮ ಮಠದ ಹಾಗೂ ಇತರ ಮಠಗಳ ಸ್ಥಾಪನೆ, ಬೆಳವಣಿಗೆ ಮೊದಲಾದ ವಿಷಯಗಳನ್ನು ಸೂಚಿಸಿ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಆಕ್ಟಿನ ಒಕ್ಕಣೆಯಂತೆ ಮಠಗಳನ್ನು ಮುಸೂಡೆಗೊಳಪಡಿಸುವುದು ಸರಿಯಲ್ಲವೆಂದು ಸಿಲೆಕ್ಟ್ ಕಮಿಟಿಗೆ ಒಂದು ಮನವಿಯನ್ನು ಕಳುಹಿಸಿರುವರೆಂದು ತಿಳಿದುಬರುತ್ತದೆ.

ಕಲೆಕ್ಟರರ ಪ್ರಕಟಣೆ ಪುತ್ತೂರು, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳಲ್ಲಿಯ ರೈತರು ಎರಡನೆ ಬೆಳೆಯ ಅಕ್ಕಿಯನ್ನು ಎಸ್. ಕೆ. ಸಿ. ಸಿ. ಡಬ್ಲ್ಯು. ಸ್ಟೋರ್ಸ್ಸಿಯೂ ಅದರ ಶಾಖೆಗಳಿಗೆ ಒಪ್ಪಿಸುವ ಅವಧಿಯನ್ನು ಇದೇ ತಾ 15ರ ವರೆಗೆ ಮುಂದರಿಸಲಾಗಿದೆಯೆಂದು ಜಿಲ್ಲಾ ಕಲೆಕ್ಟರರ ಪ್ರಕಟಣೆ ಹೊರಟಿದೆ.

ಹಿಂದೂ ಶವ ಸಂಸ್ಕಾರ ಸಮಿತಿ

ಇದರ ಮಹಾಸಭೆಯು ಇದೇ ತಾ 10ನೆ ಆದಿತ್ಯವಾರ ಸಾಯಂಕಾಲ 5 ಗಂಟೆಗೆ ಪ್ರಭಾಕರ ಪ್ರೆಸ್ಸಿನ ಮಹಡಿಯಲ್ಲಿ ಜರಗಲಿರುವುದರಿಂದ ಸದಸ್ಯರೆಲ್ಲರೂ ದಯಮಾಡಿ ಬರಬೇಕೆಂದು ಸಂಬಂಧಪಟ್ಟವರು ಅಪೇಕ್ಷಿಸುತ್ತಾರೆ.

ರಾಮನವಮಿ ಪರೀಕ್ಷೆ— ಪದ್ಧತಿಯಂತೆ ಶ್ರೀ. ಅನಂತೇಶ್ವರ ದೇವಳದಲ್ಲಿ ರಾಮನವಮಿಯ ವರೆಗಿನ 9 ದಿನಗಳಲ್ಲಿ ಪರೀಕ್ಷೆ ನಡೆದಿದೆ.

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 62/1949

ಅಪ್ಪಯ್ಯ, ಮ್ಯಾನೇಜರ್-ರಕ್ಷಕ-ವೆಂಕಟ್ರಾಯ -ಅರ್ಜಿದಾರ

ಈಶ್ವರ ನಾಯಕ ಕೂಡಾ -ಎದ್ರಿರು, 1 ಈಶ್ವರ ನಾಯಕ, ತಿಮ್ಮಣ ನಾಯಕರ ಮಗ, 3 ರಾಮಣ ನಾಯಕ, 1ನೇಯವನ ಮಗ - ಪುತ್ತೂರು ತಾಲೂಕು ಕೇದು ಗ್ರಾಮದ ಪಂಜಿಕಲ್ಲು -ಇವರಿಗೆ.

ಅರ್ಜಿದಾರನು ಪಾಪರಾಗಿ ದಾವೆ ತರಲಿಕ್ಕೆ ಹುಕುಂ ಆಗಬೇಕಾಗಿ ಈ ಕೋರ್ಟಿಗೆ ಅರ್ಜಿಕೊಟ್ಟಿರುವದರಿಂದ ಆ ಅರ್ಜಿಯನ್ನು ನಿರಸ್ಕರಿಸುವರೆ ಕೋರ್ಟಿನವರಿಗೆ ಕಾರಣ ತೋರದಿರುವದರಿಂದ, ನೀವು ಯಾವದಾದರೂ ರುಜುವಾತು ತಂದರೆ ಅದನ್ನು ವಿಚಾರಿಸುವ ಬಗ್ಗೆ 1949ನೇ ಇಸವಿ ಏಪ್ರಿಲು 20ನೇ ತಾರೀಕು ನಿಶ್ಚೈಸಲ್ಪಟ್ಟಿದೆ-ಎಂತ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸಲಾಗಿದೆ.

B. Narayana Baliga B.A., B.L.
Adovocate for Petr.
Puttur, 24-3-49.

GOOD and CHEAP
Nilgiri & Anamalai Teas
are Available for sale
The Standard Tea Syndicate,
9/89, Sidha Naidu Lay-Out,
R. S. Puram, **Coimbatore.**

ಏಲಂ ನೋಟೀಸು.

ಕಾರ್ಕಳ ತಾಲೂಕು ಕಣಜಾರು ಗ್ರಾಮದಲ್ಲಿರುವ ಉಡುಪಿ ಶ್ರೀ ಅದಮಾರು ಮಠದ ಕಾಳೀಯಮರ್ದನ ಶ್ರೀ ಕೃಷ್ಣದೇವರ ಹೆಸರಲ್ಲಿ ದೇರೇಜಾದ ಬಾಬ್ತು ಈ ಕೆಳಗೆ ವಿವರಿಸಿದ ಸ್ಥಳಗಳಲ್ಲಿರುವ ಕಿರಾಲ್ ಬೋಗಿ ವಗೈರೆ ಮರಮಟ್ಟುಗಳನ್ನು ಕೆಳಗೆ ವಿವರಿಸಿದ ಪ್ರಕಾರ ಮೂರು ಪ್ಲಾಟುಗಳಾಗಿ ವಿಂಗಡಿಸಿ ಪ್ರತ್ಯಪ್ರತ್ಯೇಕವಾಗಿ ಇದೇ ಬರುವ ತಾರೀಕು 20-4-1949ನೆ ಬುಧವಾರ ದಿನ ಸಾಯಂಕಾಲ ಘಂಟೆ-3ಕ್ಕೆ ಉಡುಪಿ ಶ್ರೀ ಅದಮಾರು ಮಠದಲ್ಲಿ ಬಹಿರಂಗವಾದ ಹರಾಜ ಮೂಲಕ ವಿಕ್ರಯಿಸೋಣಾಗುತ್ತದೆ. ಉಮೇದುವಾರರು ಸದ್ರಿ ಸಮಯ ಬರಬೇಕಾಗಿ ಅಪೇಕ್ಷಿಸುತ್ತೇವೆ.

ಪ್ಲಾಟುಗಳ ವಿವರ.

	ಸ. ನಂ.		ಸ ಡಿ. ನಂ.	ಕಿಸಂ.	ವಿಸ್ತೀರ್ಣ. ಎ ಸೆಂಟ್ಸ್.
I	221	—	2	ಪುಂಜ	8—25
II	222	—	1	"	8—72
III	223	—	1	"	3—72
	186	—	2A	"	1—47
					22—16

P. Shripathi Rao
Agent, Sri Admar Mutt, Udidi. S. K.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

S. C. 25/1949

ಸೂರ್ಯಣ್ಣ ಸೆಟ್ಟಿ .ವಾದಿ

1 ಅಣ್ಣಯ್ಯ ಸೆಟ್ಟಿ, ಯೆಳಗೋಳಿ ರಾಮಯ್ಯ ಸೆಟ್ರ ಅಳಿಯ, 2 ಅಕ್ಕು ಸೆಟ್ಟಿ 1ನೇಯವನ ಹೆಂಡ್ತಿ ಮ ಸನ್ನಿ ಸೆಟ್ಟಿ ಮಗಳು. ಕಾರ್ಕಳ ತಾಲೂಕು ಶಿವಪುರ ಗ್ರಾಮದ ಆತೆಕಲ್ಲು ಮನೆ ಆಡಿಯಲ್ಲಿರುವವರು -ಪ್ರತಿವಾದಿಗಳು

ಸದ್ರಿ ಪ್ರತಿವಾದಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ.

ನೀವು ವಾದಿಯಿಂದ ರೂ. 150-8-0ನ್ನು ಸಾಲವಾಗಿ ಪಡೆದು ಆ ಬಗ್ಗೆ ತಾ. 27-3-48ರಲ್ಲು ಬರೆಕೊಟ್ಟ ಡಿಮಾಂಡು ಪ್ರಾಮಿಸರಿ ನೋಟಿನ ಪ್ರಕಾರ ಬಾಕಿ ಅಸಲು ಬಡ್ಡಿ ಮನೇಜು ಬರಮಾಡುವರೆ ವಾದಿಯು ಮಾಡಿದ ಸದ್ರಿ ದಾವೆಯು ತಾರೀಕು 14-4-1949ಕ್ಕೆ ತಪ್ಸಿಗೆ ಇಟ್ಟಿರುತ್ತದೆ. ಈ ಕುರಿತು ನಿಮಗೆ ಏನಾದರೂ ಆಕ್ಷೇಪ ಹೇಳುವುದಿದ್ದರೆ ಸದ್ರಿ ದಿನ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಸ್ಟೇಟುಮೆಂಟ್ ದಾಕಲು ಮಾಡತಕ್ಕದ್ದು. ತಪ್ಪಿದರೆ ಸದ್ರಿ ದಾವೆಯು ನಿಮ್ಮ ಗೈರುಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ

K. M. Hegde.
ವಾದಿಕಡೆ ವಕೀಲ್.
ಕಾರ್ಕಳ, ತಾ. 28-3-49.



ಜಗತ್ತಿನಲ್ಲೆಲ್ಲಾ ಸುಮಾರು ನೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವೇಶಿಸಿ ಅವುಗಳ ಮೂಲವನ್ನೇ ಕಿತ್ತು ಬಿಸುಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನಕೋಶ, ಕಲಿಜಯಿ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಶೇಖರಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮುಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ-ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-ವಿ ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲಾ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬನ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road. B B & C. I Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ್ಕವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2



ಮಂಗಳೂರು

ಹರಿಜನ ದಿನಾಚರಣೆ:—ಪತ್ರಿ ತಿಂಗಳ 30ನೆ ತಾರೀಕನ್ನು ಹರಿಜನ ದಿನವನ್ನಾಗಿ ಆಚರಿಸಬೇಕೆಂಬ ಸರಕಾರದ ಯೋಜನೆಯಂತೆ ಜಿಲ್ಲಾ ಹರಿಜನ ಅಧಿಕಾರಿಗಳಾದ ಶ್ರೀ ಸಿಂಟೋನರು ಜಿಲ್ಲಾ ಕಾಂಗ್ರೆಸ್ ಕಮಿಟಿ, ಜಿಲ್ಲಾ ಹರಿಜನ ಸೇವಕ ಸಂಘ ಮತ್ತು ಡಿ. ಸಿ. ಮಿಶ್ಯನಿನವರ ನೇತೃತ್ವದಲ್ಲಿ ಮಂಗಳೂರಿನ ಕೆಲವು ದೇವಸ್ಥಾನಗಳಿಗೆ ಹರಿಜನ ಪ್ರವೇಶ ಕಾರ್ಯವನ್ನಾಚರಿಸಿದರು. ಮಂಗಳೂರಿನ ಸಾಧಕಾಶ್ರಮದ 24 ಹರಿಜನ ವಿದ್ಯಾರ್ಥಿಗಳೂ ಡಾ। ಯು. ಪಿ. ಮಲ್ಯ, ಎಂ. ಎಲ್. ಎ., ಶ್ರೀಗಳಾದ ಕೆ. ಕೆ. ಶೆಟ್ಟಿ, ಎಸ್. ಎಸ್. ಶೆಟ್ಟಿ, ಡಾ। ಅಡಪ್ಪ ಕೆ. ಎಲ್. ಎನ್. ರಾವ್, ಮತ್ತು ಪಯ್ಯನೂರಿನ ಹರಿಜನಾಶ್ರಮದ ಸ್ವಾಮಿ ಆನಂದತೀರ್ಥರೇ ಮೊದಲಾದವರು ಕದ್ರಿ ಶ್ರೀ ಮಂಜುನಾಥ ದೇವಸ್ಥಾನಕ್ಕೂ ಶ್ರೀ ವೆಂಕಟ್ರಮಣ ದೇವಸ್ಥಾನ, ಗೋಕರ್ಣನಾಥ ದೇವಸ್ಥಾನ, ಕಾಂಡೇಶ್ವರದ ಶ್ರೀ ಮಹಾಲಿಂಗೇಶ್ವರ ಮತ್ತು ಮಂಗಳಾದೇವಿ ದೇವಸ್ಥಾನಗಳಿಗೂ ಹೋಗಿ ಬಂದರು.

ರಾಷ್ಟ್ರೀಯ ಉಳಿತಾಯ ಸಪ್ತಾಹವು:— ತಾ 21ರಿಂದ ತಾ 26ರ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಕೊನೆಯ ದಿನ ಸಾರ್ವಜನಿಕ ಸಭೆಯೊಂದು ಶ್ರೀ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎನ್. ಎಸ್. ಕಿಲ್ಲೆ, ಬಿ. ಎನ್. ಇದಿನಬ್ಬ ಮತ್ತು ಪಿ. ಸಾಲ್ದಾನ, ಅನರು ರಾಷ್ಟ್ರೀಯ ಉಳಿತಾಯದ ಕುರಿತು ಸಮಯೋಚಿತ ಮಾತುಗಳನ್ನಾಡಿದರು.

ಅಪರಾಧಿಕರ ಬಿಡುಗಡೆ ತಾ 21-5-1948ರಲ್ಲಿ ಕಮ್ಯೂನಿಸ್ಟ ನಾಯಕರಾದ ಎಸ್. ಎನ್ ಹೊಳ್ಳರನ್ನು ವೆಲ್ಲೂರು ಜೈಲಿಗೊಯ್ಯುವಾಗ ಮಂಜೇಶ್ವರದಲ್ಲಿ ಕಮ್ಯೂನಿಸ್ಟರ ತಂಡವೊಂದು ರೈಲುಹತ್ತಿ, ಪೋಲೀಸಿನವರಿಂದ ಕೋವಿ ಎಳೆದುಕೊಂಡು ಶ್ರೀ ಹೊಳ್ಳರನ್ನು ಬಲವಂತದಿಂದ ಎಳೆದುಕೊಂಡು ಹೋದರೆಂಬ ಆಪಾದನೆಯ ಮೇಲೆ ಬಂಧಿತರಾದ 17ಕ್ಕೂ ಮೇಲ್ಪಟ್ಟವರ ವಿಚಾರಣೆಯು ಕಳೆದ ತಾ 15ರಲ್ಲಿ ಸೆಶ್ಯನ್ಸ ಕೋರ್ಟಿನಲ್ಲಿ ಪ್ರಾರಂಭವಾಗಿ ತಾ 25ರ ತನಕ ನಡೆದು ಆ ದಿನ ತೀರ್ಮಾನಕೊಡಲಾಯಿತು. ಅಪರಾಧಿತರು ಇಂತಹವರೇ ಎಂದು ಗುರುತುನಿಶ್ಚಿ ರುಜುವಾತುಪಡಿಸುವುದು ಅಸಾಧ್ಯವಾದುದರಿಂದ ಅಪರಾಧಿತರ ಬಿಡುಗಡೆಯಾಯಿತು. ಪ್ರಾಸಿಕ್ಯೂಶನ್ ಕಡೆಯಿಂದ 30ಕ್ಕೂ ಮೇಲ್ಪಟ್ಟು ಸಾಕ್ಷಿಗಳ ವಿಚಾರಣೆಯಾಗಿದೆ.

ಮುನಿಸಿಪಲ್ ಸಭೆಯು ಕಳೆದ ತಾ 26ರಲ್ಲಿ ಜರಗಿತು. ಮುನಿಸಿಪಾಲಿಟಿಯು ವಸೂಲುಮಾಡಲು ಹೊರಟ ಖಾಲಿ ಸ್ಥಳಗಳ ಮೇಲಿನ ತೆರಿಗೆಯ ಕುರಿತು ಶ್ರೀ ಯು. ಸಿ. ಯಸ್. ಭಟ್ಟರು ಸರಕಾರಕ್ಕೂ, ಪತ್ರಿಕೆಗಳಿಗೂ ಬರೆದ ಕಾಗದವನ್ನು ಮುನಿಸಿಪಾಲಿಟಿಗೂ ಕಳುಹಿಸಿದ್ದುದನ್ನು ರಿಕಾರ್ಡು ಮಾಡಲಾಯಿತು. ಅದರಂತೆ ಈ ತೆರಿಗೆಯನ್ನು ತೆರಲು ವಿರೋಧಿಸಿ ಬರೆದುಕೊಂಡ ಮನವಿಗಳನ್ನು ರಿಕಾರ್ಡು ಮಾಡಲಾಯಿತು ಖಾಲಿ ಸ್ಥಳಗಳ ತೆರಿಗೆಯ ಕುರಿತಾಗಿ ಸರಕಾರದಿಂದ ಬಂದ ಇತ್ತೀಚಿಗಿನ ಹುಕುಮನ್ನೂ ರಿಕಾರ್ಡು ಮಾಡಲಾಯಿತು— ಬೊಕ್ಕಪಟ್ಣ ಶಾಲೆಯಲ್ಲಿ ತನ್ನ ತಂದೆ ಶ್ರೀ ಕೆ. ಎಲ್. ಶೇಟರ ಸ್ಮಾರಕವಾಗಿ ಒಂದು ಧ್ವಜಸ್ತಂಭವನ್ನು ನಿಲ್ಲಿಸಿಕೊಡುತ್ತೇನೆಂದು ಶ್ರೀ ಕೆ. ಸಂಜೀವ ಶೇಟರು ಬರೆಕೊಂಡ ಸೂಚನೆಯನ್ನು ಆಭಾರ ಪೂರ್ವಕ ಒಪ್ಪಲಾಯಿತು, ರೂಪಾಯಿ 1500/- ಬೆಲೆಯ ಒಂದು ಮೈಕ್ರೋಸ್ಕೋಪ್ ಬೇಕೆಂಬ ಮುನಿಸಿಪಲ್ ಹೆಲ್ತ್ ಆಫೀಸರರ ಕೇಳಿಕೆಯನ್ನು ಮನ್ನಿಸಲಾಯಿತು. ಮುನಿಸಿಪಾಲಿಟಿಯ ಎಲ್ಲಾ ನೌಕರರಿಗೂ ಇನ್ನೂ ಒಂದು ವರ್ಷ ಬಾಡಿಗೆ ಭತ್ತೆಯನ್ನು ಕೊಡಬೇಕೆಂದು ನಿರ್ಧಾರವಾಯಿತು. ಮಂಗಳೂರಿನ ನೀರಿನ ಸರಬರಾಯಿ ಯೋಜನೆಯ ಇನ್ಫಿಲ್ಟ್ರೇಶನ್ ಗೆಲರಿ ಸೆಕ್ಶನ್ ಬಾವಿಗಳಿಗಾಗಿ ರೂಪಾಯಿ 3,15,000/- ಬೇಕಾಗಿದೆ. ಆ ಕುರಿತು ಕೌನ್ಸಿಲಿನ ಅಭಿಪ್ರಾಯವನ್ನಪೇಕ್ಷಿಸಿದ ಸರಕಾರದ ಸೂಚನೆಗೆ, ಅರ್ಧಹಣವನ್ನು ಸರಕಾರವೂ ಉಳಿದ ಅರ್ಧಹಣವನ್ನು ನಗರ ಸಭೆಯೂ ಹಾಕುವಂತೆ ನಿರ್ಣಯವಾಯಿತು.

ಜೈಲಿನಿಂದ ಪರಾರಿ ಸಬ್ ಜೈಲಿನ ದ ಡಿ. ಸಿ. ಮಹಮ್ಮದ್ ಹುಸೈನ್ ಮತ್ತು ಸಿಲ್ವೆಸ್ಟರ್ ಡಿ. ಸೋಜಾ ಎಂಬ ಇಬ್ಬರು ಕೈದಿಗಳು ಇತ್ತೀಚಿಗೆ ಜೈಲಿನ ಕಿಟಕಿಯ ಕಬ್ಬಿಣದ ಸರಳುಗಳನ್ನು ಮುರಿದು ಪರಾರಿಯಾಗಿರುವರೆಂದು ವರ್ತಮಾನವಿದೆ.

ಕೌನ್ಸಿಲರ ಉಪಚುನಾವಣೆ ಮುನಿಸಿಪಾಲಿಟಿಯ 22ನೆ ವಾರ್ಡಿನಲ್ಲಿ ಖಾಲಿಬಿದ್ದ ಕೌನ್ಸಿಲರ ಸ್ಥಾನಕ್ಕೆ ಹೊಸ ಉಮೇದ್ವಾರರ ಅರ್ಜಿಗಳು ಇದೇ ತಾ 7 ಮತ್ತು 8ರಲ್ಲಿ ಸ್ವೀಕರಿಸಲ್ಪಟ್ಟು ಮತದಾನವು ಮೇ ತಿಂಗಳು ತಾ 18ರಲ್ಲಿ ನಡೆಯುವುದು.

ಮೋಟಾರ್ ಅಪಘಾತ- ಕಳೆದ ತಾ 29ರಲ್ಲಿ ಮಧ್ಯಾಹ್ನ ರುಜಾರಿಯೋ ಹೈಸ್ಕೂಲಿನ 5ನೆ ಫಾರಮಿನ ವಿದ್ಯಾರ್ಥಿ ಎಲೋಸಿಯಸ್ ಡಿಸೋಜ ಎಂಬಾತನೂ 5ನೇ ತರಗತಿಯ ವಿದ್ಯಾರ್ಥಿ ಬಾಲಕೃಷ್ಣ ಎಂಬಾತನೂ ಪಾಂಡೇಶ್ವರ ಕ್ರಾಸ್ ರೋಡಿನಲ್ಲಿ ಒಂದು ಕಾರಿನ ಅಪಘಾತಕ್ಕೆ ತುತ್ತಾಗಿ ಇಬ್ಬರೂ ವೆನ್‌ಲಾಕ್ ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆಯುತ್ತಿರುವರು.

ಟಪ್ಪಾಲು ಬಟವಾಡೆ ಇದೇ ತಾ ... ರಿಂದ ರೈಲು ಬಂಡಿಗಳ ಸಮಯವು ತಪ್ಪಿದುದರಿಂದ, ಇನ್ನು ಮುಂದೆ ಪೋಸ್ಟಾಫೀಸುಗಳಲ್ಲಿ ಕಾಗದವನ್ನು ಬಟವಾಡೆಮಾಡುವ (ಕಿಟಕಿ ಬಟವಾಡೆ) ಸಮಯವು ಹೆಡ್ ಆಫೀಸು—ಸಾಯಂಕಾಲ 6-45; ಕೊಡಿಯಾಲ್‌ಬೈಲು ಮತ್ತು ಕಂಕನಾಡಿ-ಸಾಯಂಕಾಲ 7 ಗಂಟೆಗೆ ಬದಲಾಯಿಸಲ್ಪಟ್ಟಿದೆ. ಮೈಲ್ ಬಂಡಿಗೆ ಹೋಗುವ ಟಪ್ಪಾಲನ್ನು ಪೋಸ್ಟಾಫೀಸುಗಳಲ್ಲಿ ಬೆಳಿಗ್ಗೆ 7-30 ರೊಳಗೆ ಪೋಸ್ಟುಮಾಡಿದರೆ, ಅದೇದಿನದ ಮೈಲಿನಲ್ಲಿ ಹೋಗುವುದು. ಪಾರ್ಸೆಲ್ ಕಾಗದಗಳು, ಪೋಸ್ಟಾಫೀಸು ಕಿಟಕಿ ಬಟವಾಡೆಯಾಗಿ, ಹೆಡ್ ಆಫೀಸಿನಲ್ಲಿ ಮಧ್ಯಾಹ್ನ 2 ಗಂಟೆಗೆ, ಕಂಕನಾಡಿ ಮತ್ತು ಕೊಡಿಯಾಲಬೈಲಲ್ಲಿ ಮಧ್ಯಾಹ್ನ 3 ಗಂಟೆಗೆ ದೊರೆಯುವವು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O. S. 32/1949

ಕಾಪ್ಪು ಬೂದಬೆಟ್ಟು-ಸ್ಪೆಶ್ಯಲ್ ಪವರ್ ಓಫ್ ಎಟೋರ್ನಿ ಹೋಲ್ಡರ y ಅಬ್ಬಾಣ ಶೆಟ್ಟಿ } ವಾದಿ

ಮತ್ತು

1) ... Universal Fire and General Insurance Co Ltd., Bombay—ಇದರ ... ಯೇಜಂಟ್ ಉಡುಪಿ ... ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ

ಪ್ರತಿವಾದಿಯು ವಾದಿಯಿಂದ ತಾ. 26-9-1947ನೇ ಕೇಲ್ ಎಗ್ರಿಮೆಂಟು ಮೂಲಕ ಪಡೆದ Buick M. V. No. B M X 5785-H. P 23 ಮೋಟಾರಿನ ಕ್ರಯದ ಬ್ಯಾಲೇನ್ಸ ಬಾಕಿ ರೂಪಾಯಿ 900, ಮತ್ತು ಅದರ ಮೇಲಿನ ತಾ. 5-12-47ರ ಉಪರ್ಯಾರ ಬಡ್ಡಿಯನ್ನು ವಸೂಲು ಮಾಡಿಕೊಳ್ಳುವರೆ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾರೀಕು 18-4-1949ಕ್ಕೆ ಇಟ್ಟದೆ ಆ ಕುರಿತು ನೀವು ಆದಿನ ಉದಯಹತ್ತರಿಂದ್ದಕ್ಕೆ ಸದ್ರಿ ದಿವಸ ಪೂರ್ವಾಹ್ನ 11ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಬಂದು ಹಾಜರಾಗಿ ಇತ್ಯರ್ಥ ಹೇಳಬೇಕು. ಕೂಡಲೇ... ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವ ದುಂಯಂತ ಈ ಮೂಲಕ ತಿಳಿಯಪಡಿಸಿರುವುದೆ.

K. Ramakrishna Rao
Vakil fr Plaintiff.

ಉಡುಪಿ— ತಾ. 1-4-1949



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ರ ಪಿನ್ನಿನ ... ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು. ಇಂದರೆ ಕೇವಲ ೪ ರೂಪಾಯಿಗಳಿಗೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ. ನಂ. 5 ಕೊಡಿಯಾಲಬೈಲು, ದ ಕ
ಸ್ಟಾಕಿಸ್ಟರು: ಡಾ। ಐ ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಜೈಶಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದಕೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ನೋಡಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ.

For up-to-date Lodging & Boarding

ROYAL MAHAL,

UDIPI, S. Kanara.

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿರೋಧಿ ಸಂವತ್ಸರದ (1949 - 1950)

ನವಯುಗ ಪಂಚಾಂಗ

ನಿತ್ಯ ಪಂಚಾಂಗವಲ್ಲದೆ ಸರ್ವರಿಗೂ ಉಪಯುಕ್ತವಾದ ಹಲವು ವಿಷಯ ಸಂಗ್ರಹಗಳಿವೆ.

ಮೇಷಾದಿ ದ್ವಾದಶ ರಾಶಿಯವರ ಧರ್ಮ ಭವಿಷ್ಯವಿದೆ.

ಪ್ರತಿ 1ಕ್ಕೆ 0-5-0. 25 ಪ್ರತಿಗಳಿಗೆ 6-4-0. 50 ಪ್ರತಿಗಳಿಗೆ 11-0-0. 100 ಪ್ರತಿಗಳಿಗೆ 20-0-0. ಒಂದು ಪ್ರತಿ ಬೇಕಾದವರು 0-6-0 ಸ್ಟಾಂಪು ಕಳಿಸಬೇಕು.

ಮೆನೇಜರ್, ನವಯುಗ ಪ್ರೆಸ್, ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜಗಳಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳಿನ ವಿಷಮುಂತಾದವು, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹಳುಕಡ್ಡಿ ಮುದ್ದನಿನ್ನಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹುರಪೀನವಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ— ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಎಲ್ ಎಲ್ ... ಕೆಮಿಸ್ಟ್, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕ್ಷಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ... ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಅಂತರಂಗ

ವಾರಕ್ಕೊಂದು ಪುಸ್ತಕದಂತೆ ಪ್ರತಿ ಮಂಗಳವಾರ ಉಡುಪಿಯಿಂದ ಹೊರಡುವ ವಿಶಿಷ್ಟ ವಾರಪತ್ರಿಕೆ.

ಸಂಪಾದಕರು

ಕೆ. ಎಚ್. ಶೆಟ್ಟಿ ಮತ್ತು ಎಂ. ವಿ ಹೆಗ್ಡೆ

ಸಂಚಾಲಕ:- ಕೆ. ಜೆ ಶೆಟ್ಟಿ

ಚಂದಾದಾರರಾಗಿ ಪ್ರೋತ್ಸಾಹಿಸಿರಿ!

ವಾರ್ಷಿಕ ಚಂದಾ ರೂ. 6—0 0. ೬ ತಿಂಗಳಿಗೆ ರೂ 3—0—0.

ವಿವರಗಳಿಗೆ ಬರೆಯಿರಿ

ಅಂತರಂಗ ಕಾರ್ಯಾಲಯ, ಉಡುಪಿ.

ದ. ಕನ್ನಡ.

ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವ ರಿ ದೇವಸ್ಥಾನದಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯು ಈ ಬಾರಿ ಇದೇ ತಾ 12ರಲ್ಲು ಪ್ರಾರಂಭವಾಗಿ ತಾ. 19ರ ತನಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಂದ ಕೊನೆಗೊಳ್ಳುವುದು.

ಧರ್ಮಸ್ಥಳ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಅವರ 60ನೇ ವರ್ಷ ಪ್ರಾಯದ ಈ ಕಾಲದಲ್ಲಿ ಗ್ರಂಥಕಾಣಿಕೆ ಕೊಡಲು ಈ ಮೊದಲೇ ನಿರ್ಧಾರವಾಗಿದ್ದು ಆ ಬಗ್ಗೆ ಸಂಭಾವನಾಸಮಿತಿ ಮತ್ತು ಸಂಪಾದಕ ಸಮಿತಿಗಳೆರಡು ಏರ್ಪಡಿಸಲ್ಪಟ್ಟಿವೆಯಷ್ಟೆ. ಈ ವರೆಗೆ ಪ್ರಕಟವಾಗದ, ಭಾಷಾಂತರವಲ್ಲದ ಆಯಾಯಾ ವಿಷಯದ ಪೂರ್ಣ ಪರಿಚಯವಿರುವ ½ ತಾವಿನ 12 ಪುಟಗಳಿಗೆ ಮೀರದ, ಸಾಹಿತ್ಯ, ಧರ್ಮ, ಕಲೆ, ವಿಜ್ಞಾನ, ರಾಜಕೀಯ ವಿಷಯಗಳ ಕುರಿತಾದ, ಸಂಶೋಧಕವೂ, ಸಂಗ್ರಾಹಕವೂ ಆದ ಲೇಖನಗಳನ್ನು ಅಖಿಲಕರ್ನಾಟಕದ ಉಮೇದ್ವಾರೀ ಲೇಖಕರು ಮೇ ತಿಂಗಳ ತಾ 15 ರೊಳಗಾಗಿ ತಲ್ಪುವಂತೆ ಶ್ರೀ ಡಿ. ಪುಟ್ಟಸ್ವಾಮಿ ಎಡ್ವೊಕೇಟ್, ವೀರಭವನ, ಮಂಗಳೂರು ಅವರ ವಿಳಾಸಕ್ಕೆ ಕಳುಹಿಸಬೇಕೆಂದು ಸಂಬಂಧಪಟ್ಟವರ ವಿನಂತಿಯಿದೆ

ಕೊಳ್ಳಿಬೈಲು ಇಲ್ಲಿಯ ಪ್ರಸಿದ್ಧ ಬಂಟಕುಟುಂಬದ ಯಜಮಾನರೂ, ಕಾಂಗ್ರೆಸ್ ಭಕ್ತರೂ ಆಗಿದ್ದ ಶ್ರೀ ರಾಮಣ್ಣ ಹೆಗ್ಡೆಯವರು ನನ್ನ 69ನೆ ಅವರ ವಯಸ್ಸಿನಲ್ಲಿ ಕಳೆದ ತಾ 29ರಲ್ಲು ಮಧ್ಯಾಹ್ನ ಪರಲೋಕವಾಸಿಗಳಾದರು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಇವರ ಅಗಲುವಿಕೆಯಿಂದುಂಟಾದ ಇವರ ಪತ್ನೀ ಪುತ್ರರ ದು:ಖದಲ್ಲಿ ಸಹಸಂತಾಪವನ್ನು ಸೂಚಿಸುವೆವು.

ಕುಂಬಳೆ-ಮಳೆಬಾರದ್ದರಿಂದ ಈ ವರುಷದ ಕೊಳಕೆ ಬೆಳೆ ಒಣಗಿ ಹೋಗುವಂತಿದೆ. ಕುಡಿಯುವ ನೀರಿಗೂ ತುಂಬಾ ಕಷ್ಟವಾಗಿದೆ.

ಕಾಸರಗೋಡು:—ತಾಲೂಕು ಕಚೇರಿ ವಠಾರದಲ್ಲಿ ಶ್ರೀ. ಎಂ ಉಮೇಶರಾಯರ ಅಧ್ಯಕ್ಷತೆಯಲ್ಲಿ ಹರಿಜನ ದಿನಾಚರಣೆಯು ಜರಗಿತು.

ಕಾರ್ಕಳ—ತಾ 30ರಂದು ಹರಿಜನ ದಿನಾಚರಣೆಯು ಯಥಾ ಸಾಂಗವಾಗಿ ಜರಗಿತು. ನೆರೆದವರಿಗೆ ಪಳರಿ ಅಕ್ಕಿ ಮದ ಹರಿಜನ ಬಾಲಕರು ಪಾನಕ ಹಂಚಿದ ಮೇಲೆ ಮೆರವಣಿಗೆಯಾಗಿ ಗಾಂಧಿ ಮೈದಾನದಲ್ಲಿ ಶ್ರೀ. ಬಿ ಪ್ರಾಮರಾಯ ಶೆಟ್ಟಿರ ಅಧ್ಯಕ್ಷತೆಯಲ್ಲಿ ಸಭೆಜರಗಿತು. ತಹಸೀಲ್ದಾರ್ ಗಣಪತಿ ಹೆಬ್ಬಾರು, ಡಿಪ್ಯುಟಿ ತಹಸೀಲ್ದಾರ್ ಶ್ರೀನಿವಾಸ್ ರಾವ್, ಎಂ. ಡಿ. ಅಧಿಕಾರಿ, ಕೆ. ವೆಂಕಟೇಶ ಪ್ರಭುಗಳ ಸಂದರ್ಭೋಚಿತ ಭಾಷಣಗಳಾಗಿ ಅಸ್ಪೃಶ್ಯತಾ ನಿವಾರಣೆಗಾಗಿ ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಿರ್ಣಯಿಸಲಾಯಿತು.

ಬಾರಕೂರು ಉಡುಪಿ ರೇಂಜಿನಿಂದ ವರ್ಗವಾಗಿ ಮಂಗಳೂರಿಗೆ ಹೋಗಲಿರುವ ಅಧ್ಯಾಪಕ ಹಿತಚಿಂತಕರೆನಿಸಿದ ಶ್ರೀ U. ಗೋಪಾಲ, B. A. L. T. ಡಿಸ್ಟ್ರಿಕ್ಟ ಇನ್ಸ್‌ಪೆಕ್ಟರ್ ಇವರನ್ನು ಅಧ್ಯಾಪಕ ಸಂಘದ ವತಿಯಿಂದ ಬೀಳ್ಕೊಳ್ಳುವ ಸಮಾರಂಭವು ತಾ 26-3 49ಲ್ಲು ಕೇಂದ್ರಶಾಲೆಯಲ್ಲಿ ಯಶಸ್ವಿಯಾಗಿ ಜರಗಿತು. ಸಭೆ, ಟೀಪಾರ್ಟಿ, ಗ್ರೂಪ್ ಫೋಟೊ ಇತ್ಯಾದಿ ಕಾರ್ಯಕ್ರಮಗಳಿದ್ದುವು; ಶ್ರೀಯುತರುಗಳಾದ H. ಸುಬ್ಬಣ್ಣ ಶೆಟ್ಟಿ (ಸಂಘದ ಕಾರ್ಯದರ್ಶಿ) ಬಿ ರಾಮಯ್ಯ ಶೆಟ್ಟಿ, ಯಂ. ಸುಬ್ಬಣ್ಣಯ್ಯ, ಮತ್ತು ... ಮಂಜುನಾಥ ಸೊಳ್ಳರು ಶ್ರೀಯುತರ ಆಡಳಿತ ವಿಚಕ್ಷಣತೆ, ಅಧ್ಯಾಪಕರ ಹಿತಚಿಂತನೆಗಳನ್ನು ಪ್ರಶಂಸಿಸಲು, ಅದಕ್ಕುತ್ತರವಾಗಿ, ಸದ್ರಿಯವರು, ಸಹೋದರ ಸಮಾನಭಾವದಿಂದಿರುವ ಇಲ್ಲಿಯ ಅಧ್ಯಾಪಕ ಬಂಧು ಭಗಿನಿಯರು ತಮ್ಮ ಕರ್ತವ್ಯಗಳನ್ನು ಆಳುಕು ಕಡೆಗಳಿಲ್ಲದೆ ನಡೆಯಿಸಿಕೊಂಡು, ತಮ್ಮ ಸಾರ್ವತ್ರಿಕ ಮೇಲ್ಮೆಯನ್ನೂ ಕನ್ನಡ ನಾಡಿನ ಸೇವೆಯನ್ನೂ ಮಾಡಬೇಕಾಗಿ ಬೋಧ ಪರವಾಗಿ ತಿಳಿಸಿದರು.

ನೋಟೀಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

S. C. S. ನಂಬ್ರ 9/49

ಸುಬ್ಬಣ್ಣ ಭಟ್ಟ, ಮಂಜರಪಟ್ಟು ಕೃಷ್ಣ ಭಟ್ಟ ಮಗ, ಉಡುಪಿ ತಾಲ್ಲೂಕು ಎಲ್ಲೂರು ಗ್ರಾಮ ದಲ್ಲಿರುವವ, ವಾದಿ

ಮತ್ತು

1 ರಾಧಮ್ಮ, ಅನಂತರಾಮ ಭಟ್ಟ ವಿಧವೆ. 2 ವೆಂಕಟಕೃಷ್ಣ (ಪ್ರಾಯಸ್ಥ) 1ನೇ ಪ್ರತಿವಾದಿಳ ಮಗ, ಉಡುಪಿ ತಾಲ್ಲೂಕು ಮಜೂರು ಗ್ರಾಮದ ಮಡಂಬು ಎಂಬಲ್ಲಿರುವವರು.

—ಪ್ರತಿವಾದಿರು

ಸದ್ರಿ 1ನೇ ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನಿಮ್ಮಗಂಡ ಮೃತಪಟ್ಟ ಅನಂತರಾಮ ಭಟ್ಟು ವಾದಿಯಿಂದ ಹೊಂದಿದ ನ್ಯಾಯವಾದ ಪ್ರತಿಫಲದ ರೂಪಾಯಿ 100,-ಕ್ಕೆ ವಾದಿಗೆ ಕಳೆದ ತಾರೀಕು 31-5-1943ರಲ್ಲು ಬರಕೊಟ್ಟ ದಿವಸಾಂಡ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಆವರೇಜಿನ ಪೈಕಿ ರೂಪಾಯಿ 25 ನ್ನು ಮಾತ್ರ ಕಳೆದ ತಾ. 29-12-45ರಲ್ಲು ವಾದಿಗೆ ಸಲ್ಲಿಕೊಟ್ಟು ಸದ್ರಿ ನೋಟಿನ ಹಿಂಬದಿಯಲ್ಲಿ ಬರಕೊಟ್ಟದ್ದಲ್ಲದೆ ಮಿಕ್ಕ ಏನ್ನನ್ನಾದರೂ ಅಸಲು ಬಡ್ಡಿ ಆವಜನ್ನು ಸಲ್ಲುಕೊಡದೆ ಮೃತಪಟ್ಟಿರುವದ್ರಿಂದ ವಾದಿಯು ಸದ್ರಿ ನೋಟಿನ ಅಸಲು ಬಡ್ಡಿ ಆವಜನ್ನು ಬರ ಮಾಡುವರೆ ನಿಮ್ಮಮೇಲೆ ರೂಪಾಯಿ 107-3 3 ಕ್ಕೆ ದಾವಾ ಹಾಕ್ಕೊಂಡಿ ಸದ್ರಿ ದಾವೆಯು ಮುಂದೀ ತಾರೀಕು 14 4-49ಕ್ಕೆ ತಪ್ಪಿಗೆ ಮುಟ್ಟಿರುವದ್ರಿಂದ ಸದ್ರಿ ದಿವಸ ಹಗಲು 11 ಘಂಟೆಗೆ ಕೋರ್ಟಿನಮುಂದೆ ನೀವು ಸ್ವತಹಾ, ಯಾ ವಕೀಲರ ಮುಖಾಂತರ ಹಾಜರು ಆಗಿ ನಿಮ್ಮ ಉತ್ತರವನ್ನು ಹಾಕ್ಕೊಳ್ಳಬೇಕು ತಪ್ಪಿದರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು. ತಿಳಿದಿರುವದು

ಕೋರ್ಟು ಅಪ್ಪಣೆ ಪ್ರಕಾರ ಪ್ರಕಟಿಸಿದ್ದು.

K V. Kamath

Advocate for Plaintiff

ವಿವಿಧ ಪಾತ್ರೆಗಳು

ಯಾವತರ್‍ಹ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಿಯರ್,

ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ರುಮೂರಾ' ಬಿಲ್ಲೆಗಳನ್ನು ಉಪಯೋಗಿಸಿದರೆ ಪಡೆತಕ್ಕ ಋತುಸ್ರಾವವಾಗುವುದು ಪತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3; ಸ್ಪೆಷಲ್ ರೂ. 5-; ಅಧಿಕಾಧಿಕ ಸ್ಪೆಷಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS. D. DEVEE. F Ds. (S. J.)

Tollygunge CALCUTTA.

ಸಾದರ ಸ್ವೀಕಾರ

ಜನ್ಮಭೂಮಿ: ಬೆಂಗಳೂರಿನಿಂದ ನೂತನವಾಗಿ ಹೊರಡಲಾರಂಭಿಸಿದ ಕನ್ನಡ ವಾರಪತ್ರಿಕೆ. ನವಯುಗಳಕಾರದ 8 ಪುಟಗಳು. ಹಿಂದೂಸಮಾಜ ಮತ್ತು ಸಂಸ್ಕೃತಿಯ ಕುರಿತು ಲೇಖನಗಳು ವಿಶೇಷವಾಗಿ ಪ್ರಕಟವಾಗುತ್ತವೆ. ಸಂಪಾದಕರು-ಶ್ರೀ ಆರ್. ಎಸ್. ನಾರಾಯಣ.

ಭವಿಷ್ಯವಾಣಿ: ಶ್ರೀ. ಎಸ್. ಕೃಷ್ಣರಾಯರ ಸಂಪಾದಕತ್ವದಲ್ಲಿ ಶ್ರೀ ಕೆ. ಗುರುರಾಜ ಆಚಾರ್ಯರ ಆಶ್ರಯದಲ್ಲಿ ಬೆಂಗಳೂರಿನಿಂದ ನೂತನವಾಗಿ ಹೊರಡಲಾರಂಭಿಸಿದ ಆಂಗ್ಲ ಕನ್ನಡ ಮಾಸಪತ್ರಿಕೆ. 'ನವಯುಗ'ಆಕಾರದ 40 ಪುಟಗಳು. ಬಿಡಿಪ್ರತಿ ಆರಾಣೆ. ಡಾ। ಎಮ್. ಎಸ್. ರಾವ್, ಎ. ಸಿ. ಸೀತಾರಾಮರಾವ್, ಗಿರಿಜಾ ಮೊದಲಾದವರ ಲೇಖನಗಳಿವೆ.

ನಾಗರಿಕ: ಶ್ರೀ ಎಸ್. ಕೆ. ಪೈಯವರ ಸಂಪಾದಕತ್ವದಲ್ಲಿ ಕುಮಟಾದಿಂದ ಪ್ರಕಟವಾಗುತ್ತಿರುವ ವಾರಪತ್ರಿಕೆಯ ಗಾಂಧಿ ಸ್ಮಾರಕ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದರಲ್ಲಿ ಶ್ರೀಗಳಾದ ಮಂಜೇಶ್ವರ ಗೋವಿಂದ ಪೈ, ಆರ್. ಕೆ. ಕುಲಕರ್ಣಿ, ಪಾ. ಸು. ಭಟ್ಟ, ಮೊದಲಾದವರ ಬರೆಹಗಳಿವೆ. ಸಂಪಾದಕರ ಪ್ರಯತ್ನವು ಶ್ಲಾಘನೀಯವಾದುದು.

ರಾಮರಾಜ್ಯ: ಶ್ರೀ ಎಚ್. ವಿ. ನರದರಾಜನ್, ಇವರ ಸಂಪಾದಕತ್ವದಲ್ಲಿ ಬೆಂಗಳೂರಿಂದ ಪ್ರಕಟವಾಗುತ್ತಿರುವ ಪಕ್ಷಪತ್ರಿಕೆ. 'ನವಯುಗ' ಆಕಾರದ 20 ಪುಟಗಳು. ಬೆಲೆ ಎರಡಾಣೆ. ಕಾಲೋಚಿತವಾದ ಲೇಖನಗಳು ಪ್ರಕಟವಾಗುತ್ತವೆ

ಹೈದರಾಬಾದು ಇಂದು: ಹೈದರಾಬಾದಿನ ಬುದ್ಧಿ ಖಾತೆಯ ಮುಖ್ಯಾಧಿಕಾರಿಗಳು ನೂತನವಾಗಿ ಹೊರಡಿಸಲಾರಂಭಿಸಿದ ಪಕ್ಷಪತ್ರಿಕೆ. ಸಂಸ್ಥಾನದ ರಾಜಧಾನಿ ಮತ್ತು ಜಿಲ್ಲೆಗಳಲ್ಲಿ ಸಂಬಂಧ ಕಲ್ಪಿಸಿ ಒಂದು ಭಾಗದ ಜನರಿಗೆ ಇನ್ನೊಂದು ಭಾಗದಲ್ಲಿ ಏನು ನಡೆದಿದೆ ಎಂಬುದನ್ನು ತಿಳಿಸುವುದಕ್ಕೂ ಸರಕಾರದ ರಚನೆ, ಕಾರ್ಯಕಲಾಪ ಮೊದಲಾದುವನ್ನು ತಿಳಿಸಿ ಜನರ ಆಸಕ್ತಿಯನ್ನು ಹೆಚ್ಚಿಸುವುದಕ್ಕೂ ಸಂಸ್ಥಾನದ ಹೊರಗಿದ ಜನರಿಗೆ ಹೈದರಾಬಾದಿನ ಪರಿಸ್ಥಿತಿಯನ್ನು ತಿಳಿಯಪಡಿಸುವುದಕ್ಕೂ ಈ ಪತ್ರಿಕೆಯು ಒಂದು ಸಾಧನವಾಗಿದೆ. ಒಳಗೂ ಹೊರಗೂ ಆಕರ್ಷಣೀಯವಾದ ಈ ಸಂಚಿಕೆಯ ಬೆಲೆ ... ಡಾಣೆ ಮಾತ್ರ.

ಪ್ರತಿನಿಧಿ: ಶ್ರೀ ಯು. ಎಸ್. ಶಿವ... ಮೂರ್ತಿಯವರ ಸಂಪಾದಕತ್ವದಲ್ಲಿ ... ರಿನಿಂದ ಹೊರಡುತ್ತಿರುವ ಪಾಕ್ಷಿಕ ಪತ್ರಿಕೆ ವಾಚನೀಯ ವಿಷಯಗಳಿಂದ ಕೂಡಿದ ... ಪತ್ರಿಕೆಯ ಬೆಲೆ ಮೂರಾಣೆ

ಸಾರ್ವಜನಿಕ: ಶ್ರೀ ಡಿ. ವಿ. ಗುಂಡಪ್ಪನವರ ಸಂಪಾದಕತ್ವದಲ್ಲಿ ನೂತನವಾಗಿ ಹೊರಡಲಾರಂಭಿಸಿದ ಬೆಂಗಳೂರಿನ ಗೋ... ಸಂಸ್ಥೆಯ ಆಂಗ್ಲ ಕನ್ನಡ ಪತ್ರಿಕೆ. ವಾರ್ಷಿಕ ಚಂದಾ ರೂಪಾಯಿ 3/- ಸಂಸ್ಥೆಯ ಸದಸ್ಯರಿಗೆ ಉಚಿತ. ಎರಡನೆ ಸಂಚಿಕೆಯಲ್ಲಿ 'Go Slow in Nationalisation--but go Well' 'Planned work for food' 'How to fight Corruption' ಅಗತ್ಯ ಹೊಸ ಸ್ವಪ್ನದ ವ್ಯವಸ್ಥೆ ಮೊದಲಾದ ಸಾರ್ವಜನಿಕ ಅಭಿರುಚಿಯ ಉತ್ತಮ ಲೇಖನಗಳಿವೆ.

ಉಡುಪಿ ಪಂಚಾಂಗ. ಕೆಲವು ವರ್ಷಗಳಿಂದ ಕೊಯಮುತ್ತೂರಿನ ರವಿ ಪ್ರಭಾ ಜ್ಯೋತಿಷಾಲಯದಿಂದ ಕ್ರಮಪ್ರಕಾರ ಪ್ರಕಟವಾಗುತ್ತಿರುವ ಶ್ರೀ ಉಡುಪಿ 'ವಿರೋಧಿ' ಸಂವತ್ಸರದ ಪಂಚಾಂಗ ಮಾಸಂಪ್ರತಿಯಾಗಿ ಸೂಚಿಸುವ ... ಭವಿಷ್ಯದೊಂದಿಗೆ ಪಂಚಾಂಗಗಳಲ್ಲಿರಬೇಕಾದ ಎಲ್ಲಾ ವಿಷಯ ಸಂಗ್ರಹಗಳೂ ಇವೆ. ಬೆಲೆ ಆರಾಣೆ.

ಶ್ರೀಪತಿಪಂಚಾಂಗ ಜಿಲ್ಲೆಯ ... ಭಾಗದಲ್ಲೂ ಮೈಸೂರು ಪ್ರದೇಶದಲ್ಲೂ ಜನರ ವಿಶ್ವಾಸವನ್ನು ಗಳಿಸಿರುವ ಶ್ರೀ ನರಸಿಂಹ ಅಡಿಗರ ವಿರೋಧಿ ಸಂವತ್ಸರದ ಪಂಚಾಂಗ ಇದರಲ್ಲಿಯೂ ವರ್ಷ ... ವಿದೆ. ಲೋಕ ವಿಚಾರವೆಂಬ ... ವಿಷಯ ಇದರಲ್ಲಿ ಸೇರಿಸಲ್ಪಟ್ಟಿದೆ. ... ಗದ ಬೆಲೆ ಎಂಟಾಣೆ

ಕ್ಯಾಲೆಂಡರುಗಳು: ಮೆಜೆಸ್ಟಿಕ್ ... ಉಡುಪಿ, ಇವರ ಎಪ್ರಿಲ್ 49ರಿಂದ ... 50ರ ವರೆಗಿನ ಸುಂದರವಾದ ಕ್ಯಾಲೆಂಡರು ವಿರೋಧಿ ಸಂವತ್ಸರದ ಶ್ರೀಪತಿ ಕ್ಯಾಲೆಂಡರ್ ಪಂಚಾಂಗವೂ ನಮ್ಮ ಹಸ್ತಗತವಾಗಿ...

ವರದಿಗಳು: ತೆಕ್ಕಟ್ಟೆ ಬಡವಿದ್ಯಾ... ಶಾಲೆ 1948ನೆ ಅಕ್ಟೋಬರ್ ಅಂತ್ಯದ ವರ್ಷದ ವರದಿ, ಪಣಂಬೂರು ಶ್ರೀ ರಾಮಧನ ವೈದ್ಯಶಾಲಾ ಸಂಘದ 1947-48ರ ವಾರ್ಷಿಕ ... ರಾಜ್ಯಾಲಯಮ ಗಾಡಾಲಾಕಾಲೇಜು, ... ಟಕ ಸಂಘ ವಿಜಯನಗರ, ಬೆಳಗಾಂವಿ ... 1948-49ರ ವರದಿ, ಮುಂಬಯಿಯ ... ಯಸ್ಮಾರಕ ಫಂಡು-ಇದರ 1948ರ ವರದಿ, ಮುಂಬಯಿಯ ಶ್ರೀ ರಜತಸಂಘದ 194... ವರದಿ, ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲಿನ 1948-49ರ ವರದಿಗಳನ್ನು ಸ್ವೀಕರಿಸಿದ್ದೇವೆ. ಎಲ್ಲವುಗಳಲ್ಲಿಯೂ ವರ್ಷದ ಕಾರ್ಯಕಲಾಪ, ಪ್ರಗತಿಗಳು ಸೂಚಿಸಲ್ಪಟ್ಟಿವೆ.

Notice

ಕುಂದಾಪುರ ತಾಲ್ಲೂಕು ಬಡಾಕೆರೆ ಗ್ರಾಮದಲ್ಲಿರುವ ಮಂಜಿ ಹೆಂಗ್ಸಿನ ಮಗ ದೇವಡಿಗ ಅಂತನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ-

ನಾನು 1947ನೇ ಇಸವಿ ಜೂನು ತಿಂಗಳ ಶುರುವಿನ ಲಾಗ್ಯಾತು ಎಳ್ಳೂರು ಗ್ರಾಮದ ಕಾಗ್ನೋಟಿಬೇಸದ ಮನೆ ಬುದ್ಧಿವಂತ ಶೆಟ್ಟಿರ ಅಳಿಯ ಸುಬ್ಬಯ್ಯ ಶೆಟ್ಟಿರ ಮನೆಯಲ್ಲಿ ಅವರ ವಳಗೆ ತಿಂಗಳು 1ರ ರೂಪಾಯಿ 20ರ ಸಂಬಳ ನಿಶ್ಚಯಿಸಿ ಕೆಲಸಕ್ಕೆ ನಿಂತಿದ್ದೆ. ಆ ಬಾಬ್ತು ಸಂಬಳದಲ್ಲಿ ಅವರಿಂದ ನನಗೆ ಆಗಾಗ್ಗೆ ಬಂದದ್ದು ಹೋಗ್ತ ನನಗೆ ತಾ. 16-3-49ರ ವರೆಗಿನ ಸಂಬಳದ ಬಾಬು ರೂಪಾಯಿ 304-0-0 ಮುನ್ನೂರ ನಾಲ್ಕು ಬರತಕ್ಕದ್ದು ಮತ್ತು ಸದ್ರಿ ಸುಬ್ಬಶೆಟ್ಟರು ಅವರ ಮಗನ ಮದುವೆ ಸಮಯ ನನ್ನಿಂದ ಎರವಾಗಿ ಪಡೆದ ಐನೂರು ರೂಪಾಯಿ 500-0-0 ಕ್ರಯ ಬಾಳುವ ಚಿನ್ನದ ಬಾಬ್ತು ಮಿಶ್ರಿಸರ ಒಂದು ಮತ್ತು ನನ್ನಿಂದ ಕರಾಣಿಗೆ ಪಡಕೊಂಡು ಹೋದ ಕರೆಯುವ ದನ 1 ಮತ್ತು ಅದರ ಬಾಬ್ತು ಕರಾಣೆ ಐವೇಜು ಸಹಾ ನನಗೆ ಬರತಕ್ಕದ್ದು ಇರುತ್ತದೆ. ಸದ್ರಿ ಸುಬ್ಬಶೆಟ್ಟರು ನನ್ನ ಹೆಂಡ್ತಿ ದುಗ್ಗು ಹೆಂಗ್ಸಿನ ಹೆಸರಿನಿಂದ ತಾಲ್ಲೋಕು ಅಣ್ಣಪ್ಪ ಶೆಟ್ಟರು ವಗ್ಗೈರೇರ ಮೇಲೆ ಒಂದು ಸಾಲ್ಸಿ ದಾವಾ ಮಾಡಿಸಿದ್ದರು. ಸದ್ರಿದಾವೆಯಲ್ಲಿ ನನ್ನ ಹೆಂಡ್ತಿಯು ಅವರ ಹೇಳಿಕೆಗೆ ಅನುಸರಿಸಿ ಸಾಧನೆ ಮಾಡಿ ವ್ಯವಹರಿಸಲಿಕ್ಕೆ ಕಬೂಲು ಪಡದೆಯಿದ್ದ ಸಂಗ್ತಿ ತಿಳದು, ಅವರು ನನ್ನ ಬಾಬ್ತು ಮೇಲೆ ಹೇಳಿದ ಲೆಕ್ಕಾಚಾರವನ್ನು ಕೊಟ್ಟು ಚುಕ್ತಾ ಮಾಡುವದಾಗಿ ನನಗೆ ನಂಬ್ಸಿ ನನ್ನಿಂದ ರಸೀದಿ ಬುಕ್ಕಿಂತ 15 ದಿವಸ ದ ಹಿಂದೆ 3 ಕಾಗ್ದಗಳ ಮೇಲೆ 4 ಹೆಬ್ಬೆಟ್ಟುಗಳನ್ನು ಪಡಕೊಂಡು ಹೋಗಿರುತ್ತಾರೆ. ಸದ್ರಿ ಸುಬ್ಬಶೆಟ್ಟರು ನನಗೆ ಬರತಕ್ಕ ಲೆಕ್ಕಾಚಾರ ವ ಸೊತ್ತುಗಳನ್ನು ಕೊಡದೆ ಸತಾಸುತ್ತಾ ಬಂದು ಕೇಳಿದ್ದಲ್ಲಿ, ನನ್ನ ಹೆಂಡ್ತಿ ಹೆಸರಲ್ಲಿ ದಾಕಲ್ಲ ಮಾಡ್ಸಿದ ದಾವೆಯನ್ನು ಅವಳು ವ್ಯವಹರಿಸಲಿಕ್ಕೆ ಕೂಡಿ ಬರುವದಿಲ್ಲವಾಗಿ ತಿಳಿದು ಬಂದದ್ದರಿಂದ ನಿನ್ನ ಲೆಕ್ಕಾಚಾರವನ್ನು ಕೊಡುವದಿಲ್ಲವಾಗಿ ಬಿಗಲು ಜವಾಬು ಹೇಳುತ್ತಾರೆ. ಅವರಿಂದ ಮೇಲೆ ಕಾಣ್ಸಿದ ಸೊತ್ತುಗಳು, ಹಣ ಬಡ್ಡಿ ಲೆಕ್ಕಾಚಾರ ನನಗೆ ಬರುವಂತಾದ್ದಿರುತ್ತದೆ ಈ ಬಗ್ಗೆ ಸದ್ರಿ ಸುಬ್ಬಯ್ಯಶೆಟ್ಟರಿಗೆ ರಿಜಿಸ್ಟರ್ ನೋಟೀಸು ಕೊಟ್ಟಿದ್ದೇನೆ. ಸದ್ರಿ ಸುಬ್ಬಯ್ಯ ಶೆಟ್ಟರು ನನ್ನಿಂದ ಮೋಸದಿಂದ ನಂಬ್ಸಿ ಪಡಕೊಂಡು ಹೋದ ಹೆಬ್ಬೆಟ್ಟುಗಳ ಆಧಾರದ ಮೇಲೆ ಅವರು ಯಾ ಅವರ ಕಡೆಯವರು ತಯಾರಿಸುವ ಯಾವ ರಿಕಾರ್ಡುಗಳು ನನಗೆ ಬಾಧಕವಾಗತಕ್ಕದ್ದಲ್ಲವೆಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೆ ಪ್ರಕಟಪಡಿಸಿರುತ್ತೇನೆ. ತಿಳಿದಿರುವದು.

ಈ ಎಡ ಹೆಬ್ಬೆಟ್ಟು,
ಅಂತನ ರುಜು.

ತಾರೀಕು, 29-3-1949 ಮೊಕ್ಕಾಂ, ಬಡಾಕೆರೆ.

ಹೊಸ ವರ್ಷದ ಶುಭಾಶಯ

ಠೇವಣಾತಿದಾರರಿಗೆ ಅತ್ಯಾಕರ್ಷಕ ದರದ ಬಡ್ಡಿ ಮತ್ತು ಭದ್ರತೆ

ಹದಿನೇಳು ವರ್ಷಗಳ ಪರಿಪಕ್ವ ಅನುಭವ

ನಿರಖು ಠೇವಣಾತಿ

ಮೂರು ತಿಂಗಳಿಗೆ	...	....	....	3 %
ಆರು ,,	....	....	....	3½ %
ಹನ್ನೆರಡು ,,	....	....	....	3¾ %
ಇಪ್ಪತ್ತ ನಾಲ್ಕು ,,	....	....	...	4 %
ಪಾವತಿಯಾಗಿರುವ ಭಂಡವಾಳ	....	....	ರೂ.	4,91,000.
ಕ್ಷೇಮ ನಿಧಿ	....	....	,,	98,000.
ಒಟ್ಟು ವಹಿವಾಟು ಭಂಡವಾಳ	....	....	,,	40,65,000.

(ಸಾವಿರಕ್ಕೆ ಸರಿಯಾಗಿ)

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುವುವು.

ದಿ
ವಿಜಯ ಬೇಂಕ್ ಲಿಮಿಟೆಡ್
THE VIJAYA BANK, LIMITED.
H. MANGALORE.

BUY INDIAN' ENCOURAGE INDIAN INDUSTRY'

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು ವಿಚಾರಿಸಿರಿ.

Edited, Printed & Published by K. H. ...

Regd. No M. 3618

14-4-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER
Hon'ble Sri. A. B. Shetty
Health Minister Govt. of Madras

Telegram "Navayuga"

Estd. 1921 ಸ್ಥಾಪನೆ



ವಾರ್ಷಿಕ ಚಂದಾ: 5—4—0
೬ ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ | ವಾರ 33

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 29 No. 33

ಈಗ ಹೇಗಿದ್ದೇವೆ?

[illegible] ಹದಿನೆಂಟು ತಿಂಗಳ ಸ್ವಾತಂತ್ರ್ಯದ ಅನುಭವವು ಹಿಂದೀ ಜನಸಾಮಾನ್ಯರಲ್ಲಿ ವಿಚಾರಾಂದೋಲನವನ್ನು-ಅವರ ಕಣ್ಣೆದುರೆ ಬಹುಮುಖೀ ಪ್ರಶ್ನೆಗಳನ್ನು-ಎಬ್ಬಿಸಿದೆ.

ಎರಡುಶತಮಾನಗಳ ಪರಾಡಳಿತೆಯಿಂದ ಸ್ವಾಭಾವಿಕವಾಗಿ ಜಿಗುಪ್ಸೆಗೊಂಡು, ಸರ್ವವನ್ನು ಬಲಿ ಕೊಟ್ಟಾದರೂ ಸ್ವಾತಂತ್ರ್ಯಗಳಿಸಬೇಕೆಂಬಷ್ಟು ಆತುರಿಸಿದ್ದ ಹಲವರಲ್ಲೀಗ ಅದರ ಹದಿನೆಂಟೇ ತಿಂಗಳ ಅನುಭೋಗದಿಂದ, 'ಅಕಾಲದಲ್ಲಿ ಸ್ವಾತಂತ್ರ್ಯ ಬಂದಿತೆ?' 'ನಾವು ಸ್ವಾತಂತ್ರ್ಯಕ್ಕೆ ಅರ್ಹರೇ?' ಎಂಬ ಸಂದೇಹ ಹುಟ್ಟುವಂತಾಗಿದೆ.

ಆದರೆ ಇಂತಹ ಶಂಕೆಗೆ ಅಜ್ಞಾನ-ಅಳುಕು ಹೃದಯ-ಅದೂರದೃಷ್ಟಿ ಕಾರಣವಲ್ಲದೆ ಬೇರಿಲ್ಲ.

ಮೊದಲನೆಯದಾಗಿ ಅತ್ಯುತ್ತಮ ನೀತಿಯ ಪರಕೀಯಾಡಳಿತೆಗಿಂತ ಕೀಳು ನೀತಿಯ ಸ್ವಕೀಯಾಡಳಿತೆ ವಾಸಿಯೆಂಬುದು ಮಾನವೋಚಿತ ಸಿದ್ಧಾಂತ. ಯಾವುದೇ ಪ್ರಾಣಿ ಪಕ್ಷಿಗಳು ಕೂಡಾ ಹೇಸುವ ಪಾರತಂತ್ರ್ಯವನ್ನು ಮನುಷ್ಯರಾದವರು ಯಾವ ಕಾರಣಕ್ಕೂ ಬಯಸುವಂತಿಲ್ಲ.

ಸ್ವಾತಂತ್ರ್ಯ ನಿರ್ವಹಣದಲ್ಲಿ ನಾವು ತಪ್ಪಿಬಿದ್ದಿದ್ದೇವಾದರೆ-ತತ್ಪರಿಣಾಮವಾಗಿ ಕಷ್ಟನಷ್ಟಗಳನ್ನನುಭವಿಸುತ್ತಿರುವೆವಾದರೆ—ಅದನ್ನು ತಿದ್ದಿಕೊಳ್ಳುವ ಕೆಲಸವಾಗಬೇಕೇ ಹೊರತು ಅನ್ಯತಂಬಲವಿರಬಾರದು.

ನಮ್ಮಲ್ಲಿ ಆಗಿರುವ ತಪ್ಪುಗಳೇನು? ಅವುಗಳಿಗೆ ಹೊಣೆಯಾರು? ಎಂಬುದನ್ನು ಯೋಚಿಸಿದರೆ, ಅವುಗಳಲ್ಲಿ ಹೆಚ್ಚಿನವು ಕಾಲೋಚಿತವಾದುವುಗಳು-ಅವುಗಳಿಗೆ ಕಾಲವೇ ಹೊಣೆ ಎಂದು ಖಚಿತವಾಗುವದು. ಈ ಸಂಕಟಯುಗದಲ್ಲೇ ನಮ್ಮ ಸ್ವಾತಂತ್ರ್ಯ ಹುಟ್ಟಿಕೊಂಡಿತಲ್ಲದೆ, ಸ್ವಾತಂತ್ರ್ಯದಿಂದಾಗಿ ಸಂಕಟಗಳು ಹುಟ್ಟಿದುದಲ್ಲವೆಂಬುದು ಸತ್ಯಸ್ಥಿತಿ.

"ಸ್ವರಾಜ್ಯ ದೊರೆತು ಇಷ್ಟಾಯಿತು!" ಎಂದು ನಾವು ತೋರಿಸುತ್ತಿರುವ ಆಹಾರ ದುಸ್ಥಿತಿ, ಹೊಸ ಹೊಸ ಸುಂಕ ತೆರಿಗೆಗಳು, ಪಕ್ಷ ಪಂಗಡ ಮೇಲಾಟಗಳು ಇತ್ಯಾದಿಗಳೆಲ್ಲವೂ ಶತಮಾನಗಳಿಂದ ಸ್ವತಂತ್ರವಿರುವ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಇರುವವುಗಳೇ. ಒಂದೊಮ್ಮೆಗೆ ಹೇಳಬಲ್ಲೂ ನಮ್ಮಲ್ಲಿ ಬ್ರಿಟಿಷ್ ಆಡಳಿತೆಯಿರುತ್ತಿದ್ದರೆ ಪರಿಸ್ಥಿತಿ ಇದಕ್ಕಿಂತ ವಿಷಮವಾಗುತ್ತಿತ್ತೇ ಹೊರತು ಉತ್ತಮವಾಗುತ್ತಿರಲಿಲ್ಲವೆಂಬುದಕ್ಕೆ ಆಧಾರಗಳಿವೆ.

ಜನಸಾಮಾನ್ಯರ ನಿತ್ಯಜೀವನದಲ್ಲಿ ಹೊಸ ಕಂಟಕಗಳಾಗಿ ಮೂಡಿರುವ ಎಲ್ಲವುಗಳಿಗೂ ಯುದ್ಧ ಸಹಜ ಪರಿಸ್ಥಿತಿಯಿಂದಾಗಿ ಮೂಡಿದ ಹಣದ ಅತಿ ಪ್ರಸರಣ, ಜೀವನಾವಶ್ಯ ಸಾಮಗ್ರಿಗಳ ಅಭಾವ ಮುಂತಾದುವುಗಳೇ ಕಾರಣ ಹೊರತು ಅಧಿಕಾರ ಬದಲಾವಣೆಯಲ್ಲ. ಈ ಸಂಕಟ ನಿವಾರಣೆಯ ಮಟ್ಟಿಗೆ ಸರಕಾರವು ಮಾಡಿದ ಕಾರ್ಯ ತೃಪ್ತಿಕರವೋ ಅತೃಪ್ತಿಕರವೋ ಎಂಬ ತರ್ಕದಿಂದಲೇ ಸರಕಾರದ ಯೋಗ್ಯತೆಯನ್ನು ಅಳೆಯಬೇಕಲ್ಲದೆ 'ಆ ಸಂಕಟವೂ ಈ ಸರಕಾರವೂ ಒಂದೇ' ಎಂಬಂತಹ ದುರ್ಭಾವನೆ ಸಲ್ಲದು.

ಬಹಳ ಎಚ್ಚರಿಕೆಯಿಂದ ಹಲವು ಸಮತಾವಾದಿ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಿದ ಇಂಗ್ಲೆಂಡಿನ ಕೂಲಿಗಾರ ಸರಕಾರಕ್ಕಾದರೂ ಈ ಬಾರಿ "ಜೀವನ ವೆಚ್ಚಾಧಿಕ್ಯದ ಬಜೆಟ್"ನ್ನೇ ತಯಾರಿಸುವ ಅವಶ್ಯಕತೆ ಬಿದ್ದಿದೆ. ತಗ್ಗಬಹುದೆಂದು ನಿರೀಕ್ಷಿಸಿದ್ದ ತೆರಿಗೆಗಳು ಆಹಾರ ಸಮೇತ ಹಲವು ವಿಷಯಗಳ ಮೇಲೆ ಹೆಚ್ಚಿಗೆ ಬಿದ್ದು ಬ್ರಿಟನಿನ ಇಂದಿನ ಸರಕಾರ ಟೀಕೆಗೊಳಗಾಗಿದೆ.

ನಮ್ಮ ಮದ್ರಾಸಿನಲ್ಲಿ- ಪೂರ್ವ ಪಂಜಾಬಿನಲ್ಲಿ-ಕಾಂಗ್ರೆಸ್ ಪಕ್ಷದೊಳಗೇನೇ ಪಂಗಡ ಪಾಳಯಗಳುಂಟಾಗಿ ಸರಕಾರ ಬದಲಾಗುವ ಆಟಗಳು ಕೂಡಾ ಅಪಯಶಸ್ಕರವಿದ್ದರೂ ಕ್ರಮಬದ್ಧವಾದವುಗಳೆಂಬುದನ್ನು ಮರೆಯಬಾರದು. ಸ್ಥಾನಮಾನ ಲಾಲಸೆ, ಸ್ವಾರ್ಥಗಳು ಜನಸಾಮಾನ್ಯರಲ್ಲಿ ಬೇರುಬಿಟ್ಟಿರುವಾಗ, ಅವು ಶಾಸನ ಸಭೆಗಳಲ್ಲಿರುವ ಜನ ಪ್ರತಿನಿಧಿಗಳಲ್ಲೂ ಪ್ರತಿಬಿಂಬಿಸಲು ಬದ್ಧವಿವೆ. ಸ್ವಾರ್ಥಕಾಂಡದ ಆದಿಭಾಗದಲ್ಲಿ-ಸ್ವಾತಂತ್ರ್ಯದ ಹೊಣೆಗಾರಿಕೆ ಜನತೆಗೆ ಸರಿಯಾಗಿ ಮನದಟ್ಟಾಗುವವರೆಗೂ—ಇಂತಹ, ಮತ್ಸರ ಸ್ಪರ್ಧೆಗಳು ನಡೆಯುವುದು ಸಂಭವನೀಯ.

ಸಿಖ್ಖರೊಂದು ಪಂಗಡದವರು ಸಿಖ್‌ಸ್ಥಾನ ಬೇಕೆಂದು ಚಳವಳಿಸುತಿದ್ದಾರೆ—ದಕ್ಷಿಣಭಾರತದಲ್ಲಿ ಕಮ್ಯುನಿಸ್ಟರುಗಳಾಗಿ ಬೆರೆತುಹೋಗಿರುವ ಭಾಷಾವಾರು ಭಾಗಗಳವರು ಪ್ರತ್ಯೇಕತೆಗಾಗಿ ಚಡಪಡಿಸುತಿದ್ದಾರೆ—ಬಿಹಾರಿನಲ್ಲಿರುವ ಬಂಗಾಳೀ ಮಾತಾಡುವ ಭಾಗಗಳವರು ಅಲ್ಲಿಯ ಸರಕಾರದಿದಿರು ಸತ್ಯಾಗ್ರಹವನ್ನೇ ಹೂಡಿದ್ದಾರೆ—ಇವೆಲ್ಲಾ ಸ್ವಹಿತ ಸಾಧನಾಂದೋಲನಗಳ ಗುರಿ, ಧೋರಣೆಗಳಲ್ಲಿ ವ್ಯತ್ಯಾಸವಿರಬಹುದು. ಆದರೆ ಲೋಕದ ಯಾವ ರಾಷ್ಟ್ರವೂ 'ಸತ್ಯರಾಜ್ಯ'ವಾಗಿಲ್ಲ, ಜನತೆಯ ಯಾವ ವರ್ಗವೂ ದೇವತೆಗಳಲ್ಲವಾದ್ದರಿಂದ ಇಂತಹ ಚಟುವಟಿಕೆಗಳು ತಲೆಯೆತ್ತಿದ ಮಾತ್ರಕ್ಕೇನೇ ಮಿತಿಮೀರಿ ದಿಗಿಲು ಬೀಳುವ ಅಗತ್ಯವಿಲ್ಲ. ಎಂತಹ ಆಂದೋಲನದಿಂದಾದರೂ ನ್ಯಾಯವನ್ನು ಪಡೆದು ತೆಗೆಯಲು ಸಾಧ್ಯವಿದೆ.

ಈ ಮಾದರಿಯ ಒಳ ರೋಗಗಳು ಘೋರ ಸ್ವರೂಪದಲ್ಲಿ ಇಂದು ಲೋಕದ ಪ್ರತಿಯೊಂದು ರಾಷ್ಟ್ರದಲ್ಲೂ ಇವೆ. ನಮ್ಮ ನೆರೆಯ ಪಾಕಿಸ್ತಾನದಲ್ಲೂ ಇವೆ. ಸಿಂಧ್ ಪ್ರಾಂತ್ಯದ ಪ್ರಧಾನ ಮಂತ್ರಿಯಾಗಿದ್ದ ಖುಹ್ರೋವನ್ನು ಪಾಕಿಸ್ತಾನ್ ಗವರ್ನರ್ ಜನರಲರು ಡಿಸ್‌ಮಿಸ್ ಮಾಡಿ ವಿಚಾರಣೆಗೊಳಪಡಿಸಿ ಮೂರು ವರುಷ ಯಾವುದೇ ಜವಾಬ್ದಾರೀ ಸ್ಥಾನಕ್ಕೆ ಬಾರದಂತೆ ನಿಷೇಧಿಸಬೇಕೆಂದು.. ಗಡಿನಾಡಿನ ಪ್ರಧಾನಮಂತ್ರಿ ಅಬ್ದುಲ್ ಕ್ಯುಯಾಮರ ಮೇಲೆ ಅಲ್ಲಿಯ ಶಾಸನ

[೧೦ನೇ ಪುಟ ನೋಡಿರಿ]

ನಮ್ಮ ತೃಪ್ತಿ ನಮ್ಮ ಗೌರವ
ಶ್ರೇಷ್ಠ
ಪ್ರಭಾತ ಚಹಾ ಮತ್ತು ಕಾಫಿ



PRVBHAT
TEA & COFFEE (INDIA) Ltd.
COONOOR (Nilgiris)

ಬಾಡಿಗೆಗೆ ಮನೆ ದೊರೆಯುತ್ತದೆ

ಉಡುಪಿ ಪೇಟೆಗೆ ಸಮೀಪ ಕೊಡಂಗ್ರಾಡಿಯಲ್ಲಿ ಉದ್ಯಾವರ ಚರ್ಚ್-ಅಲೆವೂರು ದಾರಿ ಬದಿ ನಾಲ್ಕನೆ ಫರ್ಲಾಂಗ್ ಕಲ್ಲಿನ ಬಳಿ ಅರ್ಧ ಎಕ್ರೆ ವಿಸ್ತೀರ್ಣದ ವಿಶಾಲ ಕಂಪೌಂಡಿನಲ್ಲಿ ಎರಡು ಬಾವಿ, ಎಂಟು ಕೋಣೆಗಳಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ಬಯಸುವವರು 'ಕ' c/o ನವಯುಗ' ಉಡುಪಿ, ಈ ವಿಳಾಸಕ್ಕೆ ಬರೆಯಿರಿ. ಇಲ್ಲವೆ ಮುಖತಃ ಮಾತನಾಡಬಹುದು.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,
ಪೋಸ್ಟ್ ಬಾಕ್ಸ್ ನಂ. 10, ಉಡುಪಿ
THE UNITED KARNATAK INSURANCE COMPANY

ಮದ್ರಾಸ್ ಮಂತ್ರಿಗಳ ಸನ್ನಿಧಿಗೆ ಭಗದತ್ತನ ಬಹಿರಂಗ ಪತ್ರಗಳು.

೧. ಮಾನ್ಯ ಪ್ರಧಾನ ಮಂತ್ರಿ ಶ್ರೀ. ಪಿ. ಯಸ್. ಕುಮಾರ ಸ್ವಾಮಿ ರಾಜಾ ಅವರಿಗೆ

ಹೊಸ ಶಿರಸ್ಸೇ,

ಕೈಯಿಂದ ಕೈಗೆ ಜಾರಿ, ಬೇರೆ ಬೇರೆ ಕೈಗಳನ್ನು ಮೇಲೆ ಮಾಡಿಸುತ್ತಾ ಮದ್ರಾಸಿನ ಅಧಿಕಾರ ಸೂತ್ರವು ತಮ್ಮ ಕೈಗೆ ಬಂದಿರುವ ಈ ಸಂದರ್ಭದಲ್ಲಿ ತಮಗೆ ಭಗದತ್ತನ ಹೃತ್ಪೂರ್ವಕ ಅಭಿವಂದನೆಗಳು. ಇದೇ ಏಪ್ರಿಲ್ ತಾ 6ನೇ ಬುಧವಾರ ಪ್ರಧಾನಮಂತ್ರಿಯಾಗಿ ತಾವು ಆಫೀಸ್ ಕೋಣೆಗೆ ಮೊದಲ ಹೆಜ್ಜೆಯಿಟ್ಟೊಡನೆ ಮಾಡಿಕೊಂಡ ಮೊದಲ ವಿಜ್ಞಾಪನೆಯೇ ಭಗದತ್ತನ ವರ್ಗದೊಷನೆ. ಮಾನ್ಯ ಪ್ರಧಾನರೇ; "ಸರಕಾರಕ್ಕೆ ಸಹಾಯಕವಾಗಿ ಸಹಕಾರ ಕೊಡಬೇಕೆಂದು ನಾನು ಮುಂದಾಗಿ ಪತ್ರಿಕೆಗಳನ್ನು ವಿನಂತಿಸಿಕೊಳ್ಳಬೇಕಾಗಿದೆ. ಸರಕಾರಕ್ಕೂ ಪತ್ರಿಕೆಗಳಿಗೂ ಇರುವ ಗುರಿಯೊಂದೇ–ಅದೇ ಜನತಾಸೇವೆ. ಯೋಗ್ಯವಾದ ಹಾಗೂ ಅನಾಸಕ್ತಿಯ ವಿಮರ್ಶೆಗಳಿಗೆ ಸರಕಾರದ ಸ್ವಾಗತವಿದ್ದಂತೆಯೇ ವಿನಾಶಕಾರೀ ದುರ್ಭಾವನೆಗಳನ್ನು ಶುದ್ಧೀಕರಿಸುವ ಕಾರ್ಯದಲ್ಲಿ ಸರಕಾರವು ಪತ್ರಿಕೆಗಳ ನೆರವನ್ನು ನಿರೀಕ್ಷಿಸುತ್ತಿದೆ. ನಾನು ಪತ್ರಿಕೆಗಳಿಂದ ಅಪೇಕ್ಷಿಸುವದೆಂದರೆ, ತುಸು ಸಹಾಯಾನುಭೂತಿಯಿಂದ, ಸ್ನೇಹದಿಂದಾಗಿ ನಮ್ಮೊಡನೆ ನಡೆದುಕೊಳ್ಳಬೇಕೆಂಬುದನ್ನೇ" ಎಂದ ತಮ್ಮ ಮುತ್ತಿನಂತಹ ಮಾತುಗಳು ಭಗದತ್ತನ ಹೃದಯದಲ್ಲಿ ಕೆತ್ತಲ್ಪಟ್ಟವು-ಬಹುಮಾನ ಪಟ್ಟ ಮಂತ್ರಿಗಳೇ-ಅವುಗಳ ಅಲಂಕಾರದಿಂದ ಈ ಭಗದತ್ತನ ವಿಶಾಲ ಹೃದಯವು ಪದಕರಂಜಿತವಾಗಿದೆ. ಆ ಹೃದಯದಿಂದ ಹೊರಟ ಸಹಾಯಕಾರಿ, ಸಹಾನುಭೂತಿಯ ಸ್ನೇಹ ಸೂಚನೆಗಳಿವು ಎಂಬುದನ್ನು ಮಾನ್ಯ ಪ್ರಧಾನಿಗಳು ಗಮನಿಸಬೇಕು.

ಬಹುಮಾನಪಟ್ಟ ಪ್ರಧಾನಿಗಳೇ. ತಾವು ನಾಯಕರಾಗಿ ಆರಿಸಲ್ಪಟ್ಟೊಡನೆ ಅತ್ಯಂತ ವಿನಯದಿಂದ 'ನನ್ನ ಪೂರ್ವಿಕರಾದ ರಾಜಾಜಿ-ಪ್ರಕಾಶಂ-ಓಮಂದೂರರ ಯೋಗ್ಯತೆಗಳಿಲ್ಲದವ ನಾನು' ಎಂದು ನಿವೇದಿಸಿಕೊಂಡಿದ್ದಿರಿ. ಭಗದತ್ತನು ಭರವಸೆಯಿಂದ ಹೇಳುತಿದ್ದಾನೆ-ಪ್ರಧಾನಿಗಳೇ, ಹಾಗಿಲ್ಲ. ತಮ್ಮ ಯೋಗ್ಯತೆಗಳನ್ನು ತಾವೆಷ್ಟೇ ಮರೆಮಾಡಿಕೊಂಡರೂ ಭಗದತ್ತನು ಅವುಗಳನ್ನು ಕಂಡಾಗಿದೆ. ಹೇಳಲೇ? ತಮ್ಮ ಪ್ರಾಯ 51-ತಾವು ರಾಮ್ನಾಡು ಜಿಲ್ಲೆಯ ರಾಜಪಾಲಯಮಿನವರು-1917ರಿಂದಲೂ ರಾಜಕೀಯ ರಂಗದಲ್ಲಿ ದುಡಿದವರು-ನಿಷ್ಠಾವಂತ ಕಾಂಗ್ರೆಸಿಗರು – ಹಲವು ವರುಷ ಶ್ರೀವಿಲ್ಲಿಪುತ್ತೂರು ತಾಲೂಕು ಕಾಂಗ್ರೆಸ್ ಕಮಿಟಿಯ ಮತ್ತು ಕೆಲವು ವರುಷ ರಾಮ್ನಾಡು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದವರು–ತಮಿಳುನಾಡು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಅ.ಭಾ. ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದವರು-ಕಾಂಗ್ರೆಸಿನ ಅಸಹಕಾರ ಮತ್ತು ಸತ್ಯಾಗ್ರಹ ಚಳವಳಿಗಳಲ್ಲಿ ಭಾಗವಹಿಸಿ ಜೈಲು ಕಂಡವರು-ರಾಮ್ನಾಡು ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ಆಗಿದ್ದಿರಿ–ಸಹಕಾರೀ ಸಂಸ್ಥೆಗಳಲ್ಲಿ ಗಣ್ಯಸ್ಥಾನ ಗಳಿಸಿದ್ದಿರಿ– 1934ರಲ್ಲಿ ಮೂರು ಜಿಲ್ಲೆಗಳ ಪರವಾಗಿ ಕೇಂದ್ರ ಎಸೆಂಬ್ಲಿ ಸದಸ್ಯನಾಗಿಯೂ ಚುನಾಯಿಸಲ್ಪಟ್ಟಿದ್ದಿರಿ–1937ರಿಂದ ಮದ್ರಾಸ್ ಎಸೆಂಬ್ಲಿ ಸದಸ್ಯನಾಗಿರುವಿರಿ– 1946—47ರಲ್ಲಿ ಪ್ರಕಾಶಂ ಮಂತ್ರಿಮಂಡಲಿಯಲ್ಲಿ ಜೇಸಾಯಮಂತ್ರಿಯಾಗಿಯೂ ಇದ್ದಿರಿ. ಇಷ್ಟೆಲ್ಲಾ ಇರುವ ತಾವು–ತಮ್ಮ ಮಟ್ಟಿಗೇನೇ ಹೇಳಿಕೊಳ್ಳಿ– ಈ ಬಾರಿ ಮದ್ರಾಸಿನ ಪ್ರಧಾನ ಮಂತ್ರಿಯಾದುದು ಹೆಚ್ಚಲ್ಲ. ಶ್ರೀ. ಬಿ. ಜಿ. ಖೇರರು ಬೊಂಬಾಯಿಯ ಪ್ರಧಾನ ಮಂತ್ರಿಯಾಗುವಾಗ ಹೇಗಿದ್ದವರು? ಅಥವಾ ಸ್ವತಂತ್ರಭಾರತದ ಸರಕಾರಗಳಲ್ಲೀಗ ದೊಡ್ಡ ದೊಡ್ಡ ಸ್ಥಾನಗಳಲ್ಲಿರುವ ಹಲವರು ಈ ಮೊದಲು ಎಲ್ಲೆಲ್ಲಿದ್ದವರು? ಆದ್ದರಿಂದ ತಮ್ಮ ಮಾತಿನಲ್ಲಿ ವಿನಯವೊಂದೇ ಇದೆ ಹೊರತು ಸ್ವನಿರ್ಮಿತ ಭಾವನೆಯಿಲ್ಲ—ಇರುವ ದೂರವಲ್ಲ ಎನ್ನುತಿದ್ದಾನೆ ಭಗದತ್ತ. ತಾವು "ನನ್ನಲ್ಲಿಲ್ಲ" ಎಂದು ಕೈ ಅಂಗಾತ ಹಿಡಿದ ರಾಜಾಜಿಯ ಜಾಣ್ಮೆ, ವಿಶಾಲಾನುಭವ, ನಾಗರಿಕತೆ– ಪ್ರಕಾಶಮರ ದೇಶಾಭಿಮಾನ, ಉದಾರ ಹೃದಯ,ಜನತಾ ಬೆಂಬಲ– ಓಮಂದೂರರ ಸಂಕಲ್ಪ ಶಕ್ತಿ, ದೃಢ ಧೋರಣೆ–ಇವೆಲ್ಲವನ್ನೂ ಆ ತ್ರಿಮೂರ್ತಿಗಳು ಎದ್ದು ಹೋಗುವಾಗ ಮದ್ರಾಸಿನ ಪ್ರಧಾನೀ ಪೀಠದಲ್ಲಿಳಿಸಿ ಹೋಗಿದ್ದರಿಂದೂ, ತಾವದನ್ನೇರಿದೊಡನೆಯೇ ಅವೆಲ್ಲವೂ ತಮಗಂಟಿಕೊಂಡಿರುವವೆಂದೂ ದೃಢವಾಗಿ ನೆನಸಿಕೊಳ್ಳಿ. ಸಾಲದುದಕ್ಕೆ ಕೇಂದ್ರ ಸರಕಾರದ ಆಹಾರ ಧಾನ್ಯ ಸರಬರಾಯಿಯಂತೆಯೇ, ಬಲಿದಾನೀ ಮಹಾತ್ಮನ ಸತ್ಯ, ಅಹಿಂಸೆ, ಸಮಾನತೆ, ಕ್ಷಮತೆಗಳೂ ಅಧಿಕ ಕೊರತೆಯಿದ್ದಲ್ಲಿಗೆ ಅಧಿಕಾಂಶಂಪಾನೆಯಾಗತಕ್ಕದ್ದೆಂಬ ತತ್ವಾನುಸಾರವಾಗಿ ಮದ್ರಾಸಿನ ಪಾಲಿಗೆ ಬಹಳ ಅಂಶ ಬಂದು ತಮ್ಮಲ್ಲಿ ಸೇರಿಕೊಂಡಿದೆಯೆಂದೂ ಭದ್ರವಾಗಿ ಗಟ್ಟಿಕೊಳ್ಳಿ. ಇವೆಲ್ಲವುಗಳ ಸಮ್ಮಿಶ್ರಣದಿಂದ ತಾವು ಮದ್ರಾಸ್ ಪ್ರಾಂತ್ಯವನ್ನು ಉಚ್ಚ ಮಟ್ಟಕ್ಕೇರಿಸಬಲ್ಲ ಆದರ್ಶ ಪ್ರಧಾನಿಯಾಗುವಿರೆಂಬ ಆತ್ಮ ವಿಶ್ವಾಸದಿಂದಲೇ ಕಾರ್ಯಕೈಕೊಳ್ಳಿರಿ. ಬಹುಮಾನಪಟ್ಟ ಪ್ರಧಾನರೇ; ನಾವು– ಮದ್ರಾಸ್ ಜನತೆ– ತಮ್ಮಿಂದ ಅಪೇಕ್ಷಿಸುವುದಿಷ್ಟನ್ನೇ. ಮದ್ರಾಸಿನ ಆ ಪೀಠದಲ್ಲಿ ಇಳಿಯುವ ಏರುವ ದೃಶ್ಯ ಕಂಡುಬರುವ ಬದಲಿಗೆ ಆ ಪೀಠವೇ ಮೇಲಿನ ಮಟ್ಟಕ್ಕೇರುವ ನೋಟ ತೋರಿ ಬಂದರೆ ನಾವು ಧನ್ಯರು. ತಾವಷ್ಟನ್ನು ಮಾಡಿ ಬಿಡಿ– ಮತ್ತೇನೇ ಬಂದರೂ, ಯಾರೆಷ್ಟು ದೂರಿದರೂ ನೋಡಿಕೊಳ್ಳೋಣವಂತೆ!

ಮಾನ್ಯ ಪ್ರಧಾನಿಗಳೇ, ಸಾರ್ವಜನಿಕ ಖಾತೆ ಮತ್ತು ಪೋಲೀಸು ಖಾತೆಯನ್ನು ತಾವು ತಮ್ಮ ಕೈಯಲ್ಲೇ ಇಟ್ಟುಕೊಂಡಿರುವಿರಿ ತಾನೆ! ಶಾಂತಿ ಮತ್ತು ವ್ಯವಸ್ಥಾಪಾಲನೆಯಲ್ಲಿ ಆ ಕೈ ಕಲ್ಪವೃಕ್ಷವಾಗಿ ಫಲ ಬಿಡಲಿ ಎಂದು ಬಯಸಿ, ತಮ್ಮ ಸಂಕಲ್ಪಕ್ಕೆ ಹನುಮಾನ ಶಕ್ತಿ ಮತ್ತು ಆಯುಷ್ಯವೊದಗಲೆಂದು ಹಾರೈಸುತ್ತಿರುವ

-ಭಗದತ್ತ

ಮಾನ್ಯ ಆಹಾರ ಮಂತ್ರಿ ಡಾ. ಟಿ. ಯಸ್. ಯಸ್. ರಾಜನ್ ಇವರಿಗೆ–

ಅನ್ನದಾತಾ,

ತಾವು, ಅನಾರೋಗ್ಯದ ನಿಮಿತ್ತ ಮಂತ್ರಿತ್ವದಿಂದ ನಿವೃತ್ತಿ ಹೊಂದಲು ಬಯಸಿದ್ದರೂ, ತಮ್ಮ ಪರಿಪಕ್ವಾನುಭವದ ನೆರವು ಬೇಕೇಬೇಕೆಂದು ಪ್ರಧಾನ ಮಂತ್ರಿಗಳು ಆಗ್ರಹಗೊಂಡಂತೆ ತಾವು ಈ ಬಾರಿಯು ಮಂಡಲಿಯಲ್ಲೂ ಸೇರಿಕೊಂಡುದನ್ನು ಕಂಡು ಭಗದತ್ತಗೆ ಮಹದಾನಂದವಾಗಿದೆ. ಮಾತ್ರವಲ್ಲ, ಆಹಾರಖಾತೆಯಂತೆಯೇ ಹಿಂದೂ ದೇವಾಲಯಗಳ ಸಂಬಂಧದ ಖಾತೆಯನ್ನೂ ತಾವೇ ವಹಿಸಿಕೊಂಡುದು ಮತ್ತಷ್ಟು ಚಕಿತೋದಾಯಿತು. ರಾಜಾಜೀ ಮಂತ್ರಿಮಂಡಲದಲ್ಲಿ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಸಚಿವರಾಗಿದ್ದವರು ತಾವು; ಈಗಿನ ಮಂತ್ರಿಮಂಡಲದ ಏಕಮಾತ್ರ ಬ್ರಾಹ್ಮಣ ಮಂತ್ರಿ ತಾವು ಓಮಂದೂರು ಮಂಡಲಿಯಲ್ಲಿ ಆಹಾರ ಮಂತ್ರಿಯಾಗಿದ್ದ ತಮ್ಮ ಆರೋಗ್ಯಕೆಡಲು, ತಾವು ಪ್ರಾಂತ್ಯದವರಿಗೆ ಕೊಟ್ಟ ಆಹಾರದ ಪರಿಣಾಮದಲ್ಲೇ ತಗ್ಗಿದುದರಲ್ಲಿ ಸೋಜಿಗವಿಲ್ಲ. ಈಗಲಂತೂ ಸರ್ವಸಾಮಾನ್ಯ ಜನರ ಬೊಜ್ಜೆಯಿದ್ದ

ಬೇಕಾಗಿದೆ

ಬಿಲ್ಲವರ ಯೂನಿಯನ್ ಶ್ರೀ ಗೋಕರ್ಣನಾಥ ಕ್ಷೇತ್ರ ಮಂಗಳೂರು, ಇವರಿಗೆ ಗ್ರಾಮ ಸಂಘಟನೆ, ಪ್ರಚಾರ ಕಾರ್ಯ ಇತ್ಯಾದಿ ಕಾರ್ಯ ನಡೆಸುವರೆ ಅನುಭವಸ್ಥ ಜವಾಬ್ದಾರಿ ಕೊಡತಕ್ಕ ಒಬ್ಬ ಯೋಗ್ಯ ಜನ ಬೇಗನೆ ಬೇಕಾಗಿದೆ.

ಉಮೇದ್ವಾರರು ಯೂನಿಯನಿನ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ತಾ. 10-5-49ರ ಒಳಗೆ ಬರೆಯುವುದು.

ಬಿ. ಆರ್. ಕರ್ಕೇರ, ಅಧ್ಯಕ್ಷ

... ಕಾರ್ಯದರ್ಶಿ.

ಸಂರಕ್ಷಣೆ ಮತ್ತು ಉಳಿತಾಯ ವ್ಯವಸ್ಥೆಗಾಗಿ
ಹೆಸರಾಂತ ಪ್ರಗತಿಪರ ವಿಮಾಕಚೇರಿ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
(ಯುನೈಟೆಡ್ ಇಂಡಿಯಾ ಬಿಲ್ಡಿಂಗ್) ಟಪ್ಪಾಲು ಪೆಟ್ಟಿಗೆ ನಂಬ್ರ 142
ಎಸ್ಪ್ಲನೇಡ್, ಮುಖ್ಯ ಕಾರ್ಯಾಲಯ, ಮದ್ರಾಸು.
ಚೆಯರ್‌ಮೆನ್:
ದಿ ಒನರಬ್ಲ್ ಮಿ| ಎಮ್. ಸಿಟಿ. ಎಮ್. ಚಿದಂಬರಂ ಚೆಟ್ಟಿಯಾರ್ ಅವರ್ಗಳ್.
ಇಳಿಮುಖದ ಖರ್ಚು; ಸಾಮಾನ್ಯ ಪ್ರೀಮಿಯಮ್ ದರಗಳು; ಶೀಘ್ರ ಕ್ಲೈಮುಗಳ ಬಟ್ವಾಡೆ ಮತ್ತು ಸಮರ್ಥ ಆಡಳಿತೆ.
ಹಿಂದೂಸ್ಥಾನದಲ್ಲೆಲ್ಲಾ ಶಾಖಾಕಚೇರಿಗಳೂ ಪ್ರತಿನಿಧಿಗಳೂ ಇದ್ದಾರೆ. ನುರಿತ ಅನುಭವೀ ಜನರಿಂದ ಕಂಪೆನಿಯ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು.
ಆರ್ಗನೈಜಿಂಗ್ ಸೆಕ್ರೆಟರಿ,
ಮಂಗಳೂರು ಶಾಖೆ: ಕೆ. ಎಸ್. ರಾವ್ ರಸ್ತೆ, ಹಂಪನಕಟ್ಟೆ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್
ಸ್ಥಾಪನೆ: ೧೯೦೬
[ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]
ಮುದ್ದತಿ ಠೇವುಗಳು
ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.
೬ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ರಿಂದ ೫ ತಿಂಗಳು ,, ,, ೨।।
ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.
ಹೆಡ್ ಆಫೀಸು: ಬಾವುಟ ಗುಡ್ಡೆ, ಮಂಗಳೂರು.
ಇತರ ಶಾಖೆಗಳು:—
ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.
The Canara Bank Limited.
ESTD: 1906.

ದವಾಗಿ ಭೂದೇವರುಗಳು ಬೊಬ್ಬಿಡುವಂತೆ ಮಾಡಿರುವ 'ಹಿಂದೂ ರಿಲೀಜಿಯಸ್ ಎಂಡೋಮೆಂಟ್' ಕಾನೂನಿನ ಚಾಲಕತ್ವವೂ ತಮ್ಮ ಕೈಗೆ ಬಂದಿದೆ. ಮಾನ್ಯ ಮಂತ್ರಿಗಳೇ, ಇಹ-ಪರವೆರಡರ ಸಾಧನೆಗಳೂ, ಅನ್ನದೇವರು-ಅನ್ಯದೇವರುಗಳ ಸಂಬಂಧದ ಅಧಿಕಾರಗಳೆರಡೂ, ಈಗ ತಮ್ಮೆರಡು ಕೈಗಳೊಳಗಾಗಿವೆ. ಜನತೆಯು ಆಹಾರ ಮತ್ತು ದೇವರುಗಳ ಆರಾಧನೆಯ ಮಟ್ಟಿಗೆ ತಾವು ಸುವ್ಯವಸ್ಥೆ ಮಾಡಿ ಹಾಕಿದರೆ ಮತ್ತೆ ತಮ್ಮ ಆರೋಗ್ಯದ ಕುರಿತು ತಾವು ಚಿಂತಿಸಲಿಕ್ಕೇನೇ ಇಲ್ಲ-ಜನರ ಆಶೆ, ದೇವರುಗಳ ಆಶೀರ್ವಾದವೇ ಅದನ್ನು ರಕ್ಷಿಸಿಕೊಡುವವೆಂದು ನಿವೇದಿಸಿಕೊಂಡು, ತಮಗೆ ದೀರ್ಘಾಯುರಾರೋಗ್ಯ ಕೋರುವ

— ಭಗದತ್ತ

ಮಾನ್ಯ ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ. ಎಂ. ಭಕ್ತವತ್ಸಲಮ್, ಅವರಿಗೆ—

ಕಾರ್ಯಕರ್ತರೇ,

ಅಂದಿನಿಂದೀವರೆಗೂ ಅಧಿಕಾರದ ಬೆನ್ನು ಬಿಡದವರೆಂದರೆ ತಾವೇ. ಪ್ರಕಾಶಂ ಮಂಡಳಿ-ಓಮಂದೂರು ಮಂಡಳಿ-ಕುಮಾರ ರಾಜಾ ಮಂಡಳಿ, ಈ ಮೂರೂ ಮಂಡಲೀಕರಿಗೂ ತಾವಿದ್ದೀರಿ; ಇದ್ದೀರಿ. ಧನ್ಯವಾದಗಳು. ಈ ಬಾರಿ ಸಾರ್ವಜನಿಕ ಕಾಮಗಾರಿ ಖಾತೆ ಮತ್ತು ಸುದ್ದಿ ಖಾತೆಗಳನ್ನು ತಾವು ನಿರ್ವಹಿಸುತ್ತಿರುವಿರಿ. ಹೆಚ್ಚೇನು ಹೇಳಬೇಕು? ಸರಕಾರ ಹೋಗಿ ಮತ್ತೊಂದು ಬರುವ ಮದ್ರಾಸಿನ ಸಂಪ್ರದಾಯಬದ್ಧ "ಸಾವು-ಹುಟ್ಟು"ಗಳ ಸುದ್ದಿ ಕಸ್ತು ಬಿಟ್ಟಂತೆ ಮಾಡಿರಿ. ತಾವಲ್ಲದ 'ಭಕ್ತವತ್ಸಲಮ್'ರು ಮಾತ್ರವಲ್ಲ, ನ್ಯಾಯ ವತ್ಸಲರು ಎಂದು ಪ್ರಾಂತ್ಯವಿಡೀ ಕೊಂಡಾಡುವ ಸುದ್ದಿ ತಮ್ಮ ಕಿವಿ ತುಂಬಾ ಬೀಳುವಂತೆ ಮಾಡಿಕೊಳ್ಳಿ-ಮೂರು ಬಾರಿ ಒಕ್ಕಲು ಬರುವಾಗ ಮೂವರೊಡನೆಯೂ ಬಂದಿರುವ ತಮಗೆ ಆ ಮನೆಯಲ್ಲಿ ಎಲ್ಲಿ ಯಾವ ದುರಸ್ತಿಯಾಗಬೇಕೆಂಬುದನ್ನು ಹೇಳಬೇಕೆಂದಿಲ್ಲವಷ್ಟೆ? ತಾವೀಬಾರಿ ಎಲ್ಲವನ್ನೂ ಸರಿಗೊಳಿಸುವಿರೆಂದು ಹಾರೈಸುತ್ತಿರುವ

— ಭಗದತ್ತ

ಮಾನ್ಯ ಅರ್ಥಮಂತ್ರಿ ಶ್ರೀ. ಬಿ ಗೋಪಾಲರೆಡ್ಡಿ, ಇವರಿಗೆ

ಭಂಡಾರಿಗಳೇ,

ಅಭಿವಂದನೆಗಳು. ಈ ಬಾರಿ ಅರ್ಥಖಾತೆಯೊಂದಿಗೆ, ವ್ಯಾಪಾರಸಂಬಂಧ ತೆರಿಗೆಗಳು—ಚುನಾವಣೆಗಳ—ಏಜೆನ್ಸಿಗಳ—ಮೋಟಾರು ಟ್ರಾನ್ಸ್‌ಪೋರ್ಟುಗಳ—ರಜಿಸ್ಟ್ರೇಶನ್‌ಗಳ ಖಾತೆಗಳೂ ತಮ್ಮ ಹೆಗಲ ಮೇಲೆ ಹೇರಲ್ಪಟ್ಟಿರುವುದನ್ನು ಕಂಡು ವಿಶೇಷ ಹುರುಪಿನಿಂದ ಹಾರಾಡುವವರೆಂದು ತಮ್ಮನ್ನು ಟೀಕಿಸುತ್ತಿದ್ದವರು ಕೂಡಾ ತಾವಿನ್ನು ಈ ವಿವಿಧ ಭಾರಗಳಿಂದ ಸಮಹೆಜ್ಜೆ ಇಡ ಹತ್ತುವಿರೆಂಬ ಆಶೆಯಿಟ್ಟುಕೊಂಡಿದ್ದಾರೆ. "ಆವೇಗಕ್ಕೆ ತಾನು ನಿಯಂತ್ರಣಬಿದ್ದಲ್ಲಿ ಮತ್ತೆಲ್ಲಾ ಸರಿ" ಎಂದು ಪತ್ರಿಕೆ ಬಟ್ಟೆಸ್ತೋರಿಸುತ್ತಿದ್ದವರು, ಈ ನಾಲ್ಕಾರು ಖಾತೆಗಳನ್ನು ಹೊತ್ತುಕೊಂಡ ತಮಗಾಗಿ ಈಗ ಬೇರೆ ಕಡಿವಾಣ ಹುಡುಕುತ್ತಿಲ್ಲ. ನೋಣಾಗಲಿ ನಮಗಿಂದು; ಒಂದು ಗುರಿ ಕಣ್ಣ ಮುಂದಿದೆಯಷ್ಟೆ! ಓಮಂದೂರರ ಅವಧಿಯಂತೆಯೇ ಕುಮಾರಸ್ವಾಮಿ ರಾಜರ ಕಾಲದ ಮಟ್ಟಿಗೂ ಎಸೆಂಬ್ಲಿ ನಾಯಕತ್ವ ತಮ್ಮ ಪಾಲಿಗೆ ತಾನೆ? ಇಷ್ಟರಿಂದ ತಮ್ಮನ್ನು ಸುದೈವಿಗಳೆನ್ನಲಡ್ಡಿಯಿಲ್ಲ. ಅಂತೆಯೇ ಘನಕಾರ್ಯಕರ್ತರು, ಪ್ರಾಂತ್ಯೋದ್ಧಾರಕರು ಎನ್ನಿಸಿಕೊಳ್ಳುವಿರೆಂದು ನಿರೀಕ್ಷಿಸುತ್ತಿರುವ

— ಭಗದತ್ತ

ಮಾನ್ಯ ಕಾನೂನು ಮಂತ್ರಿ ಶ್ರೀ ಕೆ. ಮಾಧವ ಮೆನನರಿಗೆ.

ಕಾನೂನುಕರ್ತಾ

ಕಾನೂನು, ಕೋರ್ಟುಗಳು, ರಾಜ್ಯದೇ ಸಂಬಂಧ, ಅರಣ್ಯ ಮತ್ತು ಬೇಸಾಯ ಖಾತೆಗಳನ್ನು ಅಂಗೀಕರಿಸಿಕೊಂಡಿರುವ ಮಾನ್ಯ ಮಂತ್ರಿಗಳೇ- ಹೇರೊಬ್ಬಿಟ್ಟಂತೆ ತಮ್ಮ ಕೈಗೂ ಬಂದಿರುವ ಖಾತೆಗಳ ಸಂಖ್ಯೆಯು ಪ್ರಾಥಮಿಕಶಾಲಾ ವಿದ್ಯಾರ್ಥಿಗಳಿಗೆ ಲೆಕ್ಕ ಮಾಡ ಕೊಡಲು ಸಾಕಾಗುವಷ್ಟಿದೆ. ಹೀಗೆ ಹಲವು ಕಂತೆಗಳು ಒಂದೊಂದೇ ಕಡೆ ಜೋಡಣೆಗೊಂಡಿರುವುದನ್ನು ಕಾಣುವಾಗ, ತಮ್ಮದೇ ಆದ ಖಾತೆಗಳ ಪೈಕಿ ಮಂತ್ರಿಗಳು ಒಂದು ಖಾತೆಯಲ್ಲಿ ತಲ್ಲೀನಗೊಂಡುಬಿಟ್ಟರೆ ಉಳಿದ ಖಾತೆಗಳೆಲ್ಲಾ ಕಥೆಗಳಾಗಿ ಉಳಿದುಕೊಳ್ಳಲಾರವೇ ಎಂಬೊಂದು ಸಂದೇಹ ಭಗದತ್ತನದು. ಆದರೆ ತಾವೆಲ್ಲರೂ ಕಾರ್ತವೀರ್ಯಾರ್ಜುನರ ಕೈಗಳುಳ್ಳವರೆಂದೂ ಏಕಕಾಲದಲ್ಲಿ ಎಲ್ಲಾ ಕಡೆಗಳಿಗೂ ಕೈಯಾಡಿಸಬಲ್ಲಿರೆಂದೂ ನಂಬುತ್ತೇನೆ. ಇನ್ನೂ ಹೇಳುವದಾದರೆ ಭಗದತ್ತನಂಥವರಿಗೆ ಈ ಲೆಕ್ಕಾಚಾರವೇ ಬೇಕಾಗಿಲ್ಲ; ಹಲವು ಖಾತೆಗಳಿಗೊಬ್ಬನಂತೆ ಮಂತ್ರಿಗಳು ತೋರಿಬರುವ ಮಾತು ಬಡಿ-ಸಂಗವಾಗಿ, ಪ್ರಗತಿಪರವಾಗಿ ತನ್ನಷ್ಟಕ್ಕೆ ಕೆಲಸವಾಗುತ್ತಾ ಹೋಗುತ್ತದಾದರೆ ಯಾವ ಖಾತೆಯಲ್ಲೂ ಯಾವ ಮಂತ್ರಿಯೂ ತೋರಿಬಾರದೆ ಹೋದರೂ ನಮಗೆ ಸಮಾಧಾನವೇ. ಕಾನೂನು-ಭಂಜಕ ಕಮ್ಯೂನಿಸ್ಟರು ಕಾಡುಗಳಲ್ಲಿ ಅಡಗಿ ಕುಳಿತು ಉಪದ್ರವಿಸುತ್ತಿರುವ ಮಲಬಾರು ಜಿಲ್ಲೆಯವರಾದ ತಮ್ಮ ಕೈಗೆ ಕಾನೂನು ಮತ್ತು ಕಾಡು ಖಾತೆಗಳೆರಡೂ ಬಂದುದಕ್ಕೊಂದು ಅರ್ಥವಿದೆ. ಹೇಗಿದ್ದರೂ ತಮ್ಮ ಮಾತಲ್ಲ-ಕಾರ್ಯವಾಗಲಿ ಎಂದು ನಿರೀಕ್ಷಿಸುತ್ತಿರುವ-

—ಭಗದತ್ತ

ಮಾನ್ಯ ಭೂಕಂದಾಯ ಮಂತ್ರಿ ಶ್ರೀ ಯುಚ್. ಸೀತಾರಾಮರೆಡ್ಡಿ ಇವರಿಗೆ-

ಭೂಧನಿಗಳೇ,

ತಮ್ಮ ಕೈಯಲ್ಲಿ ಭೂಕಂದಾಯ ಖಾತೆಯ ಜತೆಯಲ್ಲಿ ಉದ್ದಿಮೆ ಖಾತೆ ಮತ್ತು ಕೂಲಿಗಾರ ಖಾತೆ ನಿಂತಿವೆ. ಹೆಚ್ಚೇನು ಹೇಳಲಿ, ಎಲ್ಲರಿಗೆ ಹೇಳಿದ್ದೇ ತಮಗೂ. ತಾವೆಲ್ಲರೂ, ತಮ್ಮ ಅಧಿಕಾರ ವಿಧಾನಗಳೂ ನಮಗೆಲ್ಲರಿಗೂ ಪರಿಚಿತವಾದವುಗಳೇ. ಆದರೂ ಒಮ್ಮೆ ಇಳಿದು ಏರುವ ವ್ಯಾಯಾಮ ನಡೆಸಿದ್ದೀರಿ; ಕುಳಿತಲ್ಲಿ ಏನೋ ಚುಚ್ಚಿದಂತಾಗಿ, ಅದನ್ನು ಝಾಡಿಸಿ ಉದುರಿಸಿಕೊಳ್ಳೋಣವೆಂದೇ ತಾವು ಹಾಗೆ ಮಾಡಿದ್ದಿರಬೇಕು; ಏನಾದರೂ ತಪ್ಪು ತಡೆಗಳು, ದೋಷ ದೌರ್ಬಲ್ಯಗಳಿದ್ದಿದ್ದರೆ, ಅವುಗಳನ್ನು ಉದುರಿಸಿಕೊಂಡು, ಏನಾದರೂ ಸದ್ಗುಣ ಸುಯೋಗ್ಯತೆಗಳಿದ್ದಿದ್ದರೆ ಅವುಗಳನ್ನು -ಗಟ್ಟಿ ಹಿಡಿದುಕೊಂಡೇ ಇಳಿದು ಹತ್ತಿದಿರೆಂದು ನೆನಸುತ್ತೇನೆ. ಹೀಗೆ ತಮ್ಮಲ್ಲಾದ ಶುದ್ಧೀಕರಣ ಮುಂದಿನ ಎಲ್ಲಾ ಕಾಲಕ್ಕೂ ಸಾಕಾಗುವದೆಂದು ಕೂಡಾ ಹಾರೈಸುವ.

—ಭಗದತ್ತ

ಮಾನ್ಯ ವಿದ್ಯಾಮಂತ್ರಿ ಶ್ರೀ ಎ. ಬಿ. ಸೆಟ್ಟಿ, ಇವರಿಗೆ-

ವಿದ್ಯಾದಾತಾ,

ವಿದ್ಯಾಖಾತೆಯೊಂದಿಗೆ ಸಾರ್ವಜನಿಕ ಆರೋಗ್ಯ ಖಾತೆಯೂ ತಮ್ಮ ಪಾಲಿಗೆ ಬಂದಿದೆ. ಪ್ರಾಂತ್ಯದ ಜನತೆಯ ಬುದ್ಧಿ ಮತ್ತು ದೇಹದ ಆರೈಕೆ ನೋಡುವ ಹೊಣೆ ತಾವು ಹೊತ್ತಂತಾಯಿತು. ಮಾನ್ಯ ಮಂತ್ರಿಗಳೇ, ಪ್ರಧಾನಿಗಳು ತನ್ನ ಮಂಡಲಿಗೆ "ಕ್ಷೇತ್ರವಾರಾಗಿ ಮತ್ತು ಹಿತಸಂಬಂಧಗಳನ್ನು ಗಣಿಸಿ"ಯೇ ಸದಸ್ಯರನ್ನಾರಿಸಿ ಕೊಂಡರೆಂಬುದನ್ನು ಅವರ ಮಾತುಗಳಿಂದ ಊಹಿಸಲು ಬರುತ್ತದೆ. ದಕ್ಷಿಣ ಕನ್ನಡದ ಪರವಾಗಿ ತಮ್ಮನ್ನು ಸ್ಥಾನಕ್ಕಾರಿಸಿಕೊಂಡುದಾಗಿರಬೇಕು. ಆದರೆ ಮಾನ್ಯ ಮಂತ್ರಿಗಳೇ, 'ಸರ್ವರಿಗೂ ಸಮಪಾಲು' ತತ್ವಪಾಲನೆಗಾಗಿ, ನೇಮಕದ ಮಟ್ಟಿಗೆ ಕ್ಷೇತ್ರವಾರು ದೃಷ್ಟಿಯಿಟ್ಟುಕೊಂಡರೂ, ಮಂತ್ರಿಗಳಾದ ಮೇಲೆ ತಾವೆಲ್ಲರೂ ಪ್ರಾಂತ್ಯಾಧಿಪತಿಗಳೇ ಹೊರತು ಸ್ಥಳಾಧಿಪತಿಗಳಲ್ಲವೆಂಬುದು ಭಗದತ್ತನಿಗೆ ಗೊತ್ತಿದೆ.--ಬೇರೆ ಬೇರೆಡೆಗಳಿಂದ ಹಾಲು, ಜೇನು, ಸಕ್ಕರೆ, ತುಪ್ಪ ತಂದು ಮಿಶ್ರಮಾಡಿದ ಮೇಲೆ ಮತ್ತಾ ಮಧುವಿನಿಂದ, ಆಯಾಯಾ ಅಂಶಗಳನ್ನು ವಿಂಗಡಿಸಿ ತೋರಿಸಲಾಗದೆಂದು ನಾನು ಬಲ್ಲೆ; ಒಂದೆಡೆಯ ಮಣ್ಣು, ಮತ್ತೊಂದೆಡೆಯ ಕಲ್ಲು, ಬೇರೊಂದೆಡೆಯ ಕಬ್ಬಿಣ ಸೇರಿರುವ ಕಟ್ಟಡವು ಸಮಸ್ತ ಹಕ್ಕಿನ ಸಂಯುಕ್ತ ಕಟ್ಟಡವೇ ಹೊರತು, ಅಲ್ಲಿಯವರ ಮಣ್ಣು, ಇಲ್ಲಿಯವರ ಮಣ್ಣು ಅನ್ನಿಸುವದಿಲ್ಲವೆಂಬಷ್ಟು ಜ್ಞಾನ ಭಗದತ್ತನಿಗಿದೆ. ಮದ್ರಾಸಿನ ವಿದ್ಯೆ ಮತ್ತು ಆರೋಗ್ಯ ನಮ್ಮ ಕೈಯಲ್ಲಿದೆ ಎಂದು ನಾವು, ದಕ್ಷಿಣ ಕನ್ನಡಿಗರು ತಲೆ ಮತ್ತು ಮೈಯುಬ್ಬಿಸಿಕೊಂಡೆವಾದರೆ 'ಭೂಕಂದಾಯ ಮತ್ತು ಉದ್ದಿಮೆಯೇ ನಮ್ಮಲ್ಲಿದೆ' ಎಂದು ಬಳ್ಳಾರಿಯವರು ಕಾಲು ಕೆರೆದು ಹೂಂಕರಿಸಿಯಾರು; ಆಗ "ಹಾಂ! ನಮ್ಮ ಕೈ ನೋಡಿ- ಕಾನೂನು ಮತ್ತು ಜೈಲು ಹಿಡಿದುಕೊಂಡಿದ್ದೇವೆ" ಎಂದು ಮಲಬಾರಿನವರು ಬೆದರಿಸಬಹುದು. ಆಹಾರ ಮತ್ತು ಪೋಲೀಸನ್ನೇ ನಾವು ಹಿಡಿದುಕೊಂಡಿರುವಾಗ ಬೇರೆಯವರಿಂದ ಏನಾದೀತೆಂದು ತಮಿಳರೂ, ಹಣಕಾಸೇ ನಮ್ಮ ಕೈಯಲ್ಲಿರುವಾಗ, ಯಾರ ಹಂಗೇನೆಂದು ಆಂಧ್ರದವರೂ ನೆನಸಿಕೊಂಡರಾಯಿತು! ಆದ್ದರಿಂದ ಈ ಮಾದರಿಯ ಸ್ವಾಭಿಮಾನ ಯಾರಿಗೂ ಬೇಡವೆನ್ನುತ್ತೇನೆ. ಮಾನ್ಯ ಮಂತ್ರಿಗಳೇ, ಓಮಂದೂರು ಮಂಡಲಿಯಲ್ಲಿ, ಶಿಕ್ಷಣ ಮಂತ್ರಿಯಾಗಿದ್ದ ಶ್ರೀ. ಅವಿನಾಶ ಲಿಂಗಂಚೆಟ್ಟಿಯಾರು ಅವಿವಾಹಿತ ಮತ್ತು ಅವಸರಿ ಎಂಬುದರಿಂದ ಎಸೆಂಬ್ಲಿಯಲ್ಲಿ ಆಗಾಗ ಸಾಣೆಗೆ ಹಚ್ಚಲ್ಪಡುತ್ತಿದ್ದರು; ತಾವು ಇವಂಥಾ ಯೋಗ್ಯತೆಗಳ ಮಟ್ಟಿಗೆ ಶ್ರೀ ಚೆಟ್ಟಿಯಾರರ ಸರೀವಿರುದ್ಧವಿರುವವರಾದ್ದರಿಂದ ತಮಗೆ ಹಾಗಾಗಲಾರದೆಂದು ನಂಬುತ್ತೇನೆ. ಹಾಗಾದಲ್ಲಿ ತಮ್ಮ ವಿದ್ಯಾಖಾತೆಗೆ ಮಾತ್ರವಲ್ಲ--ತಮ್ಮ ಇನ್ನೊಂದು ಖಾತೆ ಸಾರ್ವಜನಿಕ ಆರೋಗ್ಯಕ್ಕೂ ಧಕ್ಕೆಬಿದ್ದೀತು!

ನೋಟೀಸು,

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
ಉಡುಪಿ ಡಿ. ಮು. ಕೋರ್ಟು S.C.536/1947
R. E. P. 68/1949.

ವಾದಿ—ದಿ. ಕೆನರಾ ಬ್ಯಾಂಕ್ ಇನ್ವೆಸ್ಟ್‌ಮೆಂಟ್, ಲಿಮಿಟೆಡ್.

ಪ್ರತಿವಾದಿ—೧ನೆ, ಶಂಕರ ಸೆಟ್ಟಿ ಯಾನೆ ಶಂಬು ಸೆಟ್ಟಿ.

೧. ಶಂಕರ ಸೆಟ್ಟಿ ಯಾನೆ ಶಂಬು ಸೆಟ್ಟಿ, ಶೀನಪ್ಪ ಸೆಟ್ರ ಮಗ. ಕುಂದಾಪುರ ತಾಲ್ಕು ಮುಣ್ಣಮಕ್ಕಿ ಗ್ರಾಮ. ಇವರಿಗೆ–

ಸದ್ರಿ ಅಪ್ಲಿಕ್ಯಾಶನಿನಲ್ಲಿ (1) ನಿಮ್ಮ ಮೇಲೆ ವಾರಂಟು ಯಾಕೆ ನಡಿಸಕೂಡದು ಎಂತ ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ಇದ್ದಲ್ಲಿ ತಾ 21-4-1949ನೇ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ [illegible] ತಪ್ಪಿದಲ್ಲಿ [illegible] ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ
K. Raghunath Shenai

ಪರಿಶುದ್ಧವಾದ ಸೇವೆಯ ಹೆಗ್ಗುರುತು
ತನ್ನ ಗುರುತಿಗೆ ತಕ್ಕಂತೆ "ಕ್ರೆಸೆಂಟ್" ಮಾನವ ಜಾತಿಗೆ ಪ್ರಮಾಣಿಕ ವಿಮಾ ಸೇವೆಯನ್ನು ಸಲ್ಲಿಸುತ್ತದೆ.
ಕ್ರೆಸೆಂಟ್ ಇನ್ಶೂರನ್ಸ್ ಕಂ. ಲಿ.
ಹಮಾಂಡ್ ಲೇನ್, ಫೋರ್ಟ್, ಮುಂಬಾಯಿ.
ಮಂಗಳೂರು
ಕೆ. ಸಿ. ಭವಾನಿಶಂಕರ ಶೆಟ್ಟಿ, ಮ್ಯಾನೇಜರ್.

ಮಾನ್ಯ ಮಂತ್ರಿಗಳೇ, ನಮ್ಮ ಪ್ರಾಂತ್ಯದ ಪ್ರೌಢ ವಯಸ್ಕರಲ್ಲಿ ನೇಕಡಾ 50ರಷ್ಟು ಮಂದಿಯಾದರೂ ಅಧ್ಯಾಪಕರು ಮತ್ತು ಔಷಧಿಗಾರರೇ ಇದ್ದಾರೆಂದು ಭಗದತ್ತನ ದಿಟ್ಟ ಅಂದಾಜು. ಪ್ರಾಂತ್ಯದಲ್ಲಿ ನಡೆಯುವ ಪರ್ಯಂತ್ಯ ತ್ಸವ, ವಿವಿಧ ವಿನೋದಾವಳಿಗಳ ಸೈಕಿ, ಸೇ. 75ರಷ್ಟಕ್ಕೆ ಶಾಲಾ ಕಾಲೇಜು ವಿದ್ಯಾ ಮಂದಿರಗಳವರದ್ದೇ. ಅಂದ ಮೇಲೆ ವಿದ್ಯೆ ಮತ್ತು ಆರೋಗ್ಯ ಮಂತ್ರಿಗಳಾದ ತಮಗೆ ಇನ್ನು ಎಷ್ಟೆಲ್ಲಾ ಏನೆಲ್ಲಾ ಗಂಟು ಬೀಳುವವೋ ಊಹಿಸುವದ ಸಾಧ್ಯ ಎಲ್ಲವನ್ನೂ ಖಂಡತುಂಡವಾಗಿ, ಬೇಗ ಬೇಗನೇ ಬಿಡಿಸಿಕೊಳ್ಳಲಾಗುವಂತೆ—ಮಾನ್ಯ ಮಂತ್ರಿಗಳೇ—ತಮ್ಮಲ್ಲಿ ಸಾಹಿತ್ಯದ ಪರಿಪಾಕವೂ, ಸಾಹಸಪ್ರವೃತ್ತಿ, ಹದಗೆಟ್ಟಿಯುದ್ಧಂತೆಯೇ ಹರಿತ ಕೂಡಾ, ಸಂಸ್ಕಾರದ ಮಟ್ಟದಲ್ಲೇ ಸಂಘಟನಾಶಕ್ತಿ, ತೂಕ ಕುಲಸೆಗಳಿರುವಂತೆ ಯೇ ಆಗತ್ಯ ಬಿದ್ದಲ್ಲಿ ತಿಳಿದೊತ್ತುವ ಎದೆಗಾರಿಕೆ ಸಹಾ,ತೋರಿಬರಲೆಂದು ಎಲ್ಲರಂತೆ ಆಶಿಸುತ್ತಿರುವ-

—ಭಗದತ್ತ

ಮಾನ್ಯ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ. ಕೆ. ಚಂದ್ರಮೌಳಿ ಅವರಿಗೆ—

ಸ್ವಾಮಿಗಳೇ,

ತಾವು ಜಿಲ್ಲಾ ಬೋರ್ಡ್, ನಗರಸಭೆ, ಪಂಚಾಯತ ಬೋರ್ಡ್ ಮುಂತಾದ ಸ್ಥಳೀಯ ಸಂಸ್ಥೆಗಳ ಆಡಳಿತೆಯ ಜತೆಯಲ್ಲಿ ಸಹಕಾರೀ ಖಾತೆಯನ್ನು ವಹಿಸಿಕೊಂಡಿರುವಿರಿ; ಈ ಸ್ಥಳೀಯ ಸಂಸ್ಥೆಗಳ ಸುಧಾರಣೆ, ಚುನಾವಣೆಗಳ ಮಾತು ಬಹುಕಾಲದಿಂದ ಕೇಳಿಬರುತ್ತಿದೆ. ತಾವು ಈ ಮೊದಲು ಅಲ್ಲಿದ್ದವರು. ಆಗ ತಕ್ಕ ಕೆಲಸಗಳೆಲ್ಲವೂ ಆಗಬೇಕಾದ ಹೊತ್ತಿನಲ್ಲೇ ಆಗಲಿ ಎನ್ನುವದಕ್ಕಿಂತ ಹೆಚ್ಚಿಗೆ ಈ ಸಂದರ್ಭದಲ್ಲಿ ಏನು ಹೇಳಲಿ? ತಮಗೆ ನಮ್ಮ ಅಭಿವಂದನೆಗಳನ್ನು ಕೊಡುತ್ತಾ, ಶೀಘ್ರವಾಗಿ ಕೆಲಸ ಮಾಡುತ್ತೀರೆಂಬ ಆಶೆಯನ್ನು ಯಾಚಿಸುತ್ತಿರುವ-

—ಭಗದತ್ತ

WANTED.

National High School, Barkur

Wanted from 1-6-'49 Canarese knowing (a) Graduate Assistants-Mathematics, Science, History-B.T. or L.T.-Salary scale Rs. 85-5-145. Graduates may also apply-Salary Rs. 65/- (b) Secondary Grade Assistants (c) Canarese Pundits' (IInd Grade (Oriental Tittle holder with Pundits' training preferred.) (d) Drawing Teacher (e) Spinning & Weaving Instructor-District Board Scales.

Dearness allowance at Govt. rates-provident fund facilities.

Higher initial salary for experienced teachers.

Apply before 30-4-'49 to Correspondent,

NATIONAL HIGH SCHOOL,

BARKUR (S. Kanara).

ಮಾನ್ಯ ಗ್ರಾಮಾಭಿವೃದ್ಧಿ ಮಂತ್ರಿ ಶ್ರೀ ಬಿ. ಪರಮೇಶ್ವರನ್ ಇವರಿಗೆ-

ಗ್ರಾಮೋದ್ಧಾರಕಾ,

ಹರಿಜನೋದ್ಧಾರ, ಗುಡಿ ಕೈಗಾರಿಕೆ, ಮೀನು ವ್ಯವಸಾಯ, ಖಾದ್ಯಾಭಿವೃದ್ಧಿ, ಖಾದಿ, ಸಿಂಕೋನಾ ಮೊದಲಾದುವುಗಳ ಕಾರ್ಯಭಾರ ತಮ್ಮ ಹೆಗಲ ಮೇಲೆ ಬಿದ್ದಿದೆ. ಹರಿಜನ ಮಂತ್ರಿಗಳಾದ ತಾವು ಕೇವಲ 34 ವರುಷದವರು. ಬಹುಶಃ ಭಾರತದಲ್ಲಿ ಮಂತ್ರಿಕಿರೀಟ ಹೊತ್ತವರ ಪೈಕಿ ಎಳೇ ಚಿಗುರು ತಲೆ ತಮ್ಮದೇ. ತಾವು ಸುಶಿಕ್ಷಿತರು; ಹರಿಜನ ಸಂಘ ಸಂಸ್ಥೆಗಳಲ್ಲಿ ದುಡಿದು ಅನುಭವವುಳ್ಳವರು. ಮಂತ್ರಿತ್ವಕ್ಕೆ ಮಾತ್ರ ಹೊಸಬರು. ತಮ್ಮನ್ನು ಅಭಿನಂದಿಸುತ್ತಾ, ತಾವು ಗ್ರಾಮೋದ್ಧಾರ ಮತ್ತು ಹರಿಜನೋದ್ಧಾರ ಕಾರ್ಯಗಳಲ್ಲಿ ಜಯಶೀಲರಾದರೆ, ಪ್ರಾಂತ್ಯದ ಬಾಳುವೆಯಂತೆಯೇ ಸ್ವತಃ ತಮ್ಮ ಭವಿಷ್ಯವನ್ನೂ ಭದ್ರಗೊಳಿಸಿದಂತಾಗುವದು ಎಂದು ನಿವೇದಿಸಿಕೊಳ್ಳುವ

—ಭಗದತ್ತ

ಮಾನ್ಯ ಪಾನನಿಷೇಧ ಮಂತ್ರಿ ಶ್ರೀ ಎನ್. ಸಂಜೀವರೆಡ್ಡಿ ಇವರಿಗೆ—

ಪಾನಾಂತಕಾ,

ಅಮಲುನಿರೋಧ ಮತ್ತು ಮನೆಗಳ ನಿರ್ಮಾಣಸಂಬಂಧ ಖಾತೆಗಳು ತಮ್ಮ ಕೈಸೇರಿವೆ. ತಾವೂ ಮಂತ್ರಿಮಂಡಲಿಗೆ ಹೊಸಬರು; ಈಗ ತಾನೇ 36 ತುಂಬಿ ಬರುವವರಾದರೂ, ಕಾಂಗ್ರೆಸ್ ರಂಗದಲ್ಲಿ ದುಡಿದವರು; ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆ ಕಂಡವರು, ಬಡವರ ಮನೆ ತೆಗೆಯುವ ಮದ್ಯಪಾನದ ನಿರೋಧ ಮತ್ತು ಕಡಿಮೆಯಿರುವ ಮನೆಗಳ ನಿರ್ಮಾಣ ಖಾತೆಗಳೆರಡನ್ನೂ ವಹಿಸಿದ್ದೀರಿ; ಅಂತೂ ನಮ್ಮ ಪ್ರಾಂತ್ಯದ 'ಮನೆಮಂತ್ರಿ'ಯಾಗಿದ್ದೀರಿ. ಮಾನ್ಯ ಸಂಜೀವರೆಡ್ಡಿಗಳೇ, ತಮ್ಮ ಅಧಿಕಾರಾವಧಿಯಲ್ಲಿ ಪ್ರಾಂತ್ಯದ ಎಲ್ಲೆಲ್ಲೂ ಅಮಲು ಜೀವನದ ಬದಲು ಸಂಜೀವನ-ರಸ್ತೇಬದಿ ಜೀವನದ ಬದಲು ಸಂಜೀವನ-ಬಂತೆಂದಾಗಲಿ, ಎಂದು ಹಾರೈಸುವ

—ಭಗದತ್ತ

ಸಮಷ್ಟಿಯಾಗಿ ಮದ್ರಾಸಿನ ನವ ಮಂತ್ರಿಮಂಡಲಿಗೆ-

ಹೊಸ ಸರಕಾರವೇ,

ತಮ್ಮ ಆಡಳಿತೆಯ ಆದಿ ಭಾಗದಲ್ಲೇ ಸಾರ್ವಜನಿಕರ ಪರವಾಗಿ, ಭಗದತ್ತನು(ಸವಿವರ ಯೋಚನೆ, ಯೋಜನೆಕೈಕೊಳ್ಳುವ ಹೊಣೆ ತಮ್ಮದೇ ಆದ್ದರಿಂದ ಇಲ್ಲಿ ಮೇಲಿಂದಮೇಲೆ) ನಿವೇದಿಸಿಕೊಳ್ಳುವ ಅಂಶಗಳಿಷ್ಟೇ:-

ತಾವೆಲ್ಲರೂ, ಕಾಂಗ್ರೆಸ್ ಕಾರ್ಯಕ್ರಮದಂತೆ ಆಡಳಿತೆ ನಿರ್ವಹಿಸಲು ನಮ್ಮ ಪ್ರತಿನಿಧಿಗಳಾಗಿ ಅಲ್ಲಿರುವಿರಿ; ಪರುಷಂಪ್ರತಿ ನಡೆವ 'ರೇಸ್'ನಲ್ಲಿ ಒಬ್ಬರನ್ನೊಬ್ಬರು ಹಿಂದೆ ಹಾಕಿ ಗೆಲ್ಲುವನಮ್ಮ ನಾಟಕಣೆಯ ಜೂಜಿನಕುದುರೆಗಳಾಗಿ ನಾವು—ಜನತೆ-ತಮ್ಮನ್ನಲ್ಲಿಗೆ ಕಳುಹಿದ್ದಲ್ಲ. ಆದ್ದರಿಂದ ಈ ವರೆಗಿದ್ದ ಪಂಗಡ ಸ್ಪರ್ಧೆಗಳ ಪ್ರಸ್ತಾಪ ಕೂಡಾ ಇನ್ನು ಏಳದಂತಾಗಲಿ. ತಾವಲ್ಲಿ ಒಳಪಾಳಯಗಳನ್ನು ಕಟ್ಟಿಕೊಂಡ ದೆಸೆಯಿಂದಾಗಿ, ಅವುಗಳನ್ನನುಸರಿಸಿಯೇ ಪ್ರಾಂತ್ಯದ ಸಾರ್ವಜನಿಕರಲ್ಲೂ ಪಕ್ಷ ಪಂಗಡಗಳಾಗಿವೆ ಎಂಬುದು ಲಕ್ಷ್ಯದಲ್ಲಿರಲಿ.

ತಾವು ಯಾವುದನ್ನು ಮತದಾರರ ಮುಂದಿಟ್ಟು ಚುನಾಯಿಸಲ್ಪಟ್ಟಿರುವಿರೋ ಆ ಕಾಂಗ್ರೆಸ್ ಚುನಾವಣಾ ಘೋಷಣೆಯಲ್ಲಿ ಅಡಕವಾಗಿರುವ ಕಾರ್ಯಕ್ರಮಗಳೆಲ್ಲವನ್ನೂ ತಮ್ಮ ಸರ್ವಶಕ್ತಿಯಿಂದ ಅಸ್ತಿತ್ವಕ್ಕೆ ತನ್ನಿರಿ. ಪಾನನಿಷೇಧ ಕಾರ್ಯಕ್ರಮವನ್ನು ಯಾವ ಮುತವರ್ಜಿಯಿಂದ ನಡೆಸಿದ್ದೀರೋ, ಅಷ್ಟೇ ಉತ್ಸಾಹದಿಂದ ರೈತರ ಹಿತಸಾಧಕ ಶಾಸನ-ಆಹಾರ ವಿತರಣಾ ಸುವ್ಯವಸ್ಥೆ-ಕಳ್ಳಸಂತೆ ಮತ್ತು ಅಧಿಕ ಸಂಗ್ರಹ ಹಾಗೂ ಎಲ್ಲಾ ವಿಧ ಭ್ರಷ್ಟಾಚಾರಗಳ ನಿರ್ಮೂಲನ-ಜನತಾ ಅಜ್ಞಾನ ಮತ್ತು ಅಶುತ್ತಿ ನಿವಾರಣೆ--ಇವನ್ನು ಮಾಡತೋರಿಸಿರಿ. ಇನ್ನು ಆರೇ ತಿಂಗಳುಗಳ ನಂತರ ಕಾಂಗ್ರೆಸ್ ಚುನಾವಣಾ ಘೋಷಣೆಯ ಒಂದು ಪ್ರತಿ ಮತ್ತು ತಾವು ಮಾಡಿದ, ಮಾಡಲಾರಂಭಿಸಿದ ಕಾರ್ಯಕಲಾಪಗಳ ಒಂದು ಪಟ್ಟಿಯನ್ನು ತನ್ನ ಮೇಜಿನಮೇಲಿಟ್ಟಾಗ ಭಗದತ್ತನಂಥವನಿಗೆ ಕೂಡಾ 'ಅದು ಯಾವುದು.. ಇದಾವುದು' ಎಂಬುದು ಥಟ್ಟನೆ ತಿಳಿಯಲಾರದಷ್ಟು ಸಾಮ್ಯತೆ ಅವೆರಡರೊಳಗಿರುವಂತಾಗಲಿ.

ಕಾಂಗ್ರೆಸ್ ಘೋಷಣೆಸಹ ಜನಸ್ವಾತಂತ್ರ್ಯ(?)ಗಳನ್ನು ಕ್ಷಿಪ್ರವಾಗಿ ಮಾಡಿರಿ. ತಾವು ನಿರ್ಧರಿಸಿದುದೆಲ್ಲವೂ ಒಂದಿಷ್ಟು ತಡೆ, ತಡವಿಲ್ಲದೆ ಕಾರ್ಯರಂಗದಲ್ಲಿ ನಿಜರೂಪದಿಂದ ತೋರಿಬರುವಂತೆ ಪ್ರಾಂತ್ಯವ್ಯಾಪೀ ನೌಕರಯಂತ್ರವನ್ನು ಶುದ್ಧೀಕರಿಸುವ, ಚುರುಕುಗೊಳಿಸುವ ಕೆಲಸ ಪ್ರಥಮತಃ ಆಗಲಿ.

ಪ್ರಗತಿವಾದಿಗಳು ಹಾಗೂ ನ್ಯಾಯಪಕ್ಷಪಾತಿಗಳೆಲ್ಲರೂ 'ಸೈ ಸೈ!' ಎನ್ನುವಂತೆ-ಪ್ರಾಂತ್ಯದ ಈ ಬಾರಿಯ ದಶಶಿರಸ್ಸುಗಳನ್ನು ತ್ರೇತಾಯುಗದ ದಶಶಿರನೊಡನೆ ಹೋಲಿಸುವ ತಮ್ಮ ಅಹಿತಚಿಂತಕರ ಬಾಯಿ ಮುಚ್ಚಿ ಹೃದಯಕವಾಟ ತೆರೆಯುವಂತೆ-ಜನಹಿತ ಸಾಧನೆಯನ್ನು, ಆದೊಂದನ್ನೇ, ಮಾಡಿರಿ. ಅನ್ಯಾಯಗಳನ್ನು ಕಿತ್ತೊಗೆಯುವದರಲ್ಲಿ, ನ್ಯಾಯವನ್ನು ಎತ್ತಿ ಹಿಡಿಯುವುದರಲ್ಲೂ ಔದಾರ್ಯ, ದಾಕ್ಷಿಣ್ಯ, ಪಕ್ಷಪಾತತೆ, ಮಾಂದ್ಯತೆ ಯಾವುದೂ ತೋರಬಾರದಿರಲಿ. ಜೈಹಿಂದ್! ಜೈ-ಹಿಂದ್!

—ಭಗದತ್ತ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ನೋಟ್ಲರಗಳ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,

Manager.

ತಾ 1—4—49ರಿಂದ ಹೊರಟಿದೆ!

ಸುಹಾಸಿನಿ

ಸಂಪಾದಿಕೆಯರು:

ಕೆ. ವಾರಿಜಾದೇವಿ, ಬಿ. ಮೋಹಿನಿದೇವಿ.

ಸ್ತ್ರೀಯರಿಂದ ಸ್ತ್ರೀಯರಿಗಾಗಿ ಹೊರಡುವ ಕರ್ನಾಟಕದ ಪ್ರಥಮ ಮತ್ತು ಏಕಮಾತ್ರ ಮಹಿಳಾ ಸಾಪ್ತಾಹಿಕ. ಸ್ವಲ್ಪವಾದರೂ ಓದುಬರಹ ತಿಳಿದ ಸ್ತ್ರೀಯರಿಗೆ, ಮನೆಯಲ್ಲಿ ಕುಳಿತಲ್ಲೇ ಇದು ಸ್ವಯಂ ಶಿಕ್ಷಕನಂತೆ, ಎಲ್ಲತರದ ತಿಳಿವನ್ನು ಕೊಡುವುದು.

೧, ಕಸೂತಿ ಕೆಲಸಮಾಡುವವರಿಗೆ, ಪ್ರತಿಯೊಂದು ಸಂಚಿಕೆಯಲ್ಲೂ ಹೊಸರೇಖಾ ಚಿತ್ರಗಳು (ಎಂಬ್ರಾಯ್ಡರಿ ಡಿಸಾಯಿನ್ಸ್) ಬರುವುವು ೨. ಪ್ರತಿಯೊಂದು ಸಂಚಿಕೆಯಲ್ಲಿ ಕತೆ, ೩. ಭೂಲೋಕದ ನಾನಾ ಭಾಗಗಳಲ್ಲಿರುವ ಸ್ತ್ರೀಯರ ನಡೆ-ನುಡಿಗಳು, ೪. ಪ್ರಸಿದ್ಧ ಪಟ್ಟಣಗಳ ಪರಿಚಯ, ಯಾತ್ರಾಕ್ಷೇತ್ರಗಳ ವಿವರ, ೫. ಸ್ತ್ರೀಯರ ದೇಹಾರೋಗ್ಯ, ಅವರ ನಾನಾ ಸಮಸ್ಯೆಗಳ ಚರ್ಚೆ, ೬, ಮಕ್ಕಳ ಶಿಕ್ಷಣ, ಮಕ್ಕಳ ಕಾಯಿಲೆಗಳಿಗೆ ಗೃಹವೈದ್ಯ, ಸ್ತ್ರೀಯರ ಸಾಮಾಜಿಕ ರುಜುವಾತುಗಳಿಗೆ ಉಪಶಮನ-ಇವೆಲ್ಲವೂ ಪ್ರಕಟವಾಗುವುವು. ೭ ಬಗೆಬಗೆಯ ತಿಂಡಿ, ಪದಾರ್ಥಗಳನ್ನು ತಯಾರಿಸುವ ವಿಧಾನಗಳು ಕೊಡಲ್ಪಡುವುವು. ೮ ಪ್ರಸಿದ್ಧ ಸ್ತ್ರೀಯರ ಚರಿತ್ರೆ, ಪ್ರಸಿದ್ಧ ಕವಿಗಳ ಮತ್ತು ಲೇಖಕರ ಪರಿಚಯ, ೯ ಭೂಲೋಕದ ಮತ್ತು ಆಕಾಶದೊಳಗಿನ ನಾನಾ ವೈಚಿತ್ರ್ಯಗಳು ವಿವರಿಸಲ್ಪಡುವುವು ೧೦ ಪ್ರತಿ ಸಂಚಿಕೆಯಲ್ಲಿಯೂ ಚಕ್ರಬಂಧ ಒಗಟುಗಳು ಪ್ರಕಟವಾಗುವುವು. (ಪ್ರವೇಶಧನವಿಲ್ಲದೆ ಬಹುಮಾನಗಳು ಕೊಡಲ್ಪಡುವುವು)

ಇನ್ನೂ ಇಲ್ಲಿ ವಿವರಿಸಲಾಗದಷ್ಟು ನೂರಾರು, ಸಾವಿರಾರು ವಿಷಯಗಳು ಬರುವುವು,

ಪ್ರತಿ ಸಂಚಿಕೆಯಲ್ಲೂ ಗಣ್ಯ ಕವಿ ಮೊಂದೂಗರ ಲೇಖನಗಳು! ಅನೇಕ ಚಿತ್ರಗಳು, ಬಿಡಿ ಪ್ರತಿಗೆ ಎರಡಾಣೆ. ಒಂದು ವರ್ಷಕ್ಕೆ ಅಂಚೆ ವೆಚ್ಚ ಸೇರಿ ರೂ 6-12-0 ಮಾತ್ರ. ಪ್ರತಿ ಶುಕ್ರವಾರ ಹೊರಡುತ್ತದೆ! ನಿಮ್ಮ ಚಂದಾ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳಿಸಿಕೊಡಿರಿ

ಸುಹಾಸಿನಿ ಪಬ್ಲಿಕೇಶನ್ಸ್ ಲಿಮಿಟೆಡ್, ಮಿಶನ್ ಸ್ಟ್ರೀಟ್, ಮಂಗಳೂರು

ಪ್ರಾಪಂಚಿಕ ಸ್ಥಿತಿಗತಿ

ಕಾಲಚಕ್ರದ ಉರುಳಾಟ--ಪ್ರಾಪಂಚಿಕ ಸ್ಥಿತಿಗತಿಗಳ ಪರ್ಯಾಯ--ಯಥಾಪ್ರಕಾರವಿದೆ. ಕೂಡಲೇ ತೀರ್ಮಾನ ಹೊಂದಬಲ್ಲ ಪ್ರಶ್ನೆಗಳಾವುವೂ ಲೋಕರಂಗದಲ್ಲಿ ಸದ್ಯಕ್ಕಿಲ್ಲವಾದ್ದರಿಂದ, ಕಳೆದ ದಿನಗಳಲ್ಲಿ ಪ್ರಪಂಚದ ಪಾಲಿನ ಯಾವ ವಿವಾದವೂ ಬಗೆಹರಿದಿಲ್ಲ; ಬದಲಾವಣೆಗೊಂಡುದೂ ಇಲ್ಲ. ಲೋಕದ ಅಶಾಂತಿ, ಅಸ್ಥಿರತೆ ಮತ್ತು ಇನ್ನೊಂದು ಮಹಾ ಘರ್ಷಣೆಯ ಸಂಭವದ ಭೀತಿ--ಎಲ್ಲವೂ ಇದ್ದಂತಿವೆ.

೦೦ ೦೦ ೦೦

ಚೈನದಲ್ಲಿ ಕಮ್ಯೂನಿಸ್ಟರು ರಣವಿಜಯಗಳಿಸುತ್ತಾ ಪುನಃ ಮುಂದುವರಿಸುತ್ತಿದ್ದಾರೆ. ಚೈನೀ ಸರಕಾರದ ರಾಜಧಾನಿ ನಾನ್ಕಿಂಗಿಗೆ ಹದಿನೈದೇ ಮೈಲು ಪೂರ್ವಕ್ಕಿರುವ, ಒಂದು ಪ್ರಮುಖ್ಯ ಯಾಂಗ್ಟ್ಸೆ ಹೊಳೆ ಸೇತುವೆ ಕಮ್ಯೂನಿಸ್ಟರ ವಶವಾಗಿದೆ. ಸರಕಾರ ಮತ್ತು ಕಮ್ಯೂನಿಸ್ಟರೊಳಗೆ ಪೀಪಿಂಗಿನಲ್ಲಿ ನಡೆಯುವದೆಂದು ನಿರ್ಧಾರವಾಗಿದ್ದ ಶಾಂತಿ ಮಾತುಕತೆ ನಿಶ್ಚಿತ ದಿನ ನಡೆಯಲಿಲ್ಲ--ಸಂಧಾನದಾಶೆ ಕೂಡ ಒಣಗಿ ಹೋಗಿದೆ.

ಬರ್ಮದಲ್ಲಿ ತಮಗೆ ಪ್ರತ್ಯೇಕ ರಾಜ್ಯಭಾಗವಪೇಕ್ಷಿಸಿ ಕರೆನ್ ಜನರು ಕೆಲ ಕಾಲದಿಂದ ಅಂತರ್ಯುದ್ಧ ನಡೆಸಿ ಪ್ರೋಮ್, ಮಂಡಲೆ, ಇನ್ಸೇನ್ ನಂತಹ ಪ್ರಾಮುಖ್ಯ ನಗರಗಳನ್ನು ವಶಪಡಿಸಿಕೊಂಡು ಬರ್ಮದ ಭವಿಷ್ಯವನ್ನೇ ಮಸುಕುಗೊಳಿಸಿದ್ದರಷ್ಟೆ? ಅವರ ಬೇಡಿಕೆಯು ಪ್ರತ್ಯೇಕ ಸ್ಥಾನವನ್ನು ಅವರಿಗೆ ವಿಂಗಡಿಸಿ ಕೊಡಲಾಗುವದೆಂದೂ, ಕರೆನ್ ಜನರು ಶಸ್ತ್ರಗಳನಿಟ್ಟು ಶರಣು ಬರಬೇಕೆಂದೂ ಬರ್ಮದ ಪ್ರಧಾನಿ ಥಾಕಿನ್ ನ್ಯೂಗಳು ಕೊನೆಯ ಶಾಂತಿ ಸೂಚನೆ ಮುಂದಿಟ್ಟುದನ್ನು ಕರೆನ್ ಜನರು ಪ್ರಥಮತಃ ಮನ್ನಿಸಲಿಲ್ಲ. ಕೊಟ್ಟ ಮಾಯಿದೆ ಮುಗಿದೊಡನೆ ಬರ್ಮಾ ಸರಕಾರವು ಹಲವು ಪ್ರಚಂಡ ದಾಳಿಗಳನ್ನು ಮಾಡಿ ಕರೆನ್ ಸೇನೆಗಳನ್ನು ಹೊಡೆದೋಡಿಸಹತ್ತಿತು. ಕೂಡಲೇ ಕರೆನ್ ರಾಷ್ಟ್ರೀಯ ಕೇಂದ್ರದ ಅಧ್ಯಕ್ಷ ಸಾ ಬಾ ಯು ಗಿ ಇವರು ತಮ್ಮ ಬಂಡಾಯವನ್ನು ಮುಕ್ತಾಯಗೊಳಿಸಿ, ಶಸ್ತ್ರ ಕೆಳಗಿಡುವಂತೆ ತನ್ನ ಸೈನಿಕರಿಗಾಜ್ಞಾಪಿಸಿದರು; ಅದರಂತೆ ಕರೆನ್ ಸೇನೆಯನ್ನು ನಿಶ್ಶಸ್ತ್ರಗೊಳಿಸಿ ಬರ್ಮಾ ಸೇನೆಗೆ ಶರಣುಗೊಳಿಸುವ ಸಮಾರಂಭಗಳ ಹಾಗೂ ಸೌಹಾರ್ದತಾ ಪ್ರದರ್ಶನಗಳ ಸಿದ್ಧತೆಗಳಾಗಿದ್ದುವು. ಆದರೆ ಕೊನೆಗೆ ಬಂದ ವಾರ್ತೆಯಂತೆ ಕರೆನರು ನಿಶ್ಚಿತಾವಧಿಯಲ್ಲಿ ಶರಣು ಬರಲೊಪ್ಪದ್ದರಿಂದ ಸರಕಾರೀ ಸೇನೆಗಳು ಇನ್ಸೇನ್ ಕ್ಷೇತ್ರದಲ್ಲಿ ಪುನಃ ದಾಳಿಯಾರಂಭಿಸಿವೆ. ಕೆಲವು ಶರ್ತಗಳ ಪಾಲನೆಯ ಸಂಬಂಧವಾಗಿ ಎದ್ದ ಮತಭೇದವೇ ಈ ಮರು ಹೋರಾಟಕ್ಕೆ ಕಾರಣವಾದ್ದರಿಂದ ಬರ್ಮದಲ್ಲಿ ಕರೆನ್ ಬಂಡಾಯವಿನ್ನು ಮುಗಿದಂತೆಯೇ.

೦೦ ೦೦ ೦೦

ಇಂಗ್ಲಾಂಡು ಅಮೇರಿಕಗಳ ಈ ಬಾರಿಯ ಆಯ-ವ್ಯಯ ಅಂದಾಜು ಪಟ್ಟಿಗಳಲ್ಲಿ ರಕ್ಷಣಾ ವೆಚ್ಚದ ಮೊತ್ತವು ಎಲ್ಲಕ್ಕಿಂತ ಮೊದಲು ಎದ್ದು ತೋರುತ್ತಿದೆ. ಬ್ರಿಟನಿನ ಖಜಾನೆ ಮಂತ್ರಿ ಸರ್. ಸ್ಟ್ಯಾಫೋರ್ಡ್ ಕ್ರಿಪ್ಸರು ಮುಂದಿಟ್ಟ ಈ ಸಲದ 'ಬಜೆಟ್'ನಲ್ಲಿ ರಕ್ಷಣಾವೆಚ್ಚವು 67,000000 ಪೌಂಡುಗಳಷ್ಟು ಹೆಚ್ಚಿದೆ. ಆಹಾರ ಪದಾರ್ಥಗಳ ಧಾರಣೆಯಿಳಿಸಿದುದು ಮತ್ತು ಅವುಗಳಿಗೆ ಕೊಡುವ ಸಹಾಯ ಪರಿಮಾಣಕ್ಕೆ ಮಿತಿಗಳನ್ನು ಹೇರಿದುದು, ಸ್ಪರ್ಧೆದ್ಯೂತಗಳ ಮೇಲೆ ತೆರಿಗೆ ಹೇರಿದುದೇ ಮೊದಲಾದುವು ಈ ಬಾರಿಯ ಬ್ರಿಟಿಷ್ ಬಜೆಟಿನ ಕೆಲವು ಮುಖ್ಯಾಂಶಗಳು.

ಅಮೇರಿಕದ ಈ ಬಾರಿಯ ಸೇನಾ ಬಜೆಟ್ ಅಂಕೆ ಕೂಡಾ ಯುದ್ಧೋತ್ತರ ಕಾಲದ ಅನನ್ಯ ದಾಖಲೆಯಾಗಿದೆ. 15,909,116,800 ಡೋಲರುಗಳ ಅಂದಾಜುಪಟ್ಟಿಯು ಈ ಬಾರಿ ತಯಾರಾಗಿದೆ. ಇದರ ಮುಖ್ಯಾಂಶ ವಿಮಾನಪಡೆಯ ಪಾಲಿಗೆ. ಈ ಮೊದಲು ಅಧ್ಯಕ್ಷ ಟ್ರುಮೇನರು ಕೇಳಿದ್ದ ಮೊತ್ತಕ್ಕಿಂತಲೂ ಹೆಚ್ಚಿಗೆ 500 ಮಿಲಿಯ ಡೋಲರುಗಳು ಈ ಬಜೆಟಿನಲ್ಲಿಡಲ್ಪಟ್ಟಿವೆ. ಇನ್ನೊಂದು ವರುಷದೊಳಗೆ ಯುದ್ಧವಾಗಲಾರದೆಂದು ಅಮೇರಿಕದ ಸರಕಾರೀ ಹಾಗೂ ಸೇನಾ ಪ್ರಮುಖರ ಭಾವನೆ. ಆದರೆ ಅಮೆರಿಕ ಧ್ಯಕ್ಷ ಟ್ರುಮೇನರು "ಲೋಕಶಾಂತಿಯನ್ನು ಉಳಿಸುವದಕ್ಕಾಗಿ ಆಟಂಬೋಂಬು ಪ್ರಯೋಗಿಸಲು ನಾನು ಹಿಂದೆ ಮುಂದೆ ನೋಡುವಂತಿಲ್ಲ" ಎಂದು ಮೊನ್ನೆತಾನೇ ಹೇಳಿದ್ದಾರೆ. "ಎರಡನೇ ಲೋಕಯುದ್ಧದನಂತರ ಅಮೇರಿಕವು ಮಾಡಿಕೊಂಡಿರುವ ರಕ್ಷಣಾ ಕರಾರುಗಳು ಇನ್ನೊಂದು ಯುದ್ಧವಾಗದಂತೆ ತಡೆಗಟ್ಟುವವೆಂದೂ, ಆಟಂ ಅಸ್ತ್ರಗಳನ್ನು ಅಮೇರಿಕವು ಪ್ರಯೋಗಿಸಲೇ ಬೇಕಾಗುವ ಕಾರಣಗಳನ್ನು ಮಜಾಪಡಿಸುವವೆಂದೂ ನನ್ನಾಶೆಯಿದೆ. ಎರಡನೇ ಜಾಗತಿಕ ಯುದ್ಧದ ಕೊನೆಯ ದಿವಸಗಳಲ್ಲಿ ಜಪಾನಿನ ಮೇಲೆ ಆ ಭೀಕರ ಮಹಾಯುಧವನ್ನು ಪ್ರಯೋಗಿಸಬೇಕೋ ಬೇಡವೋ ಎಂಬ ನಿರ್ಧಾರವನ್ನು ನಾನು ಮಾಡಬೇಕಾಗಿ ಬಂದಾಗ, ನಾನು ಅಧ್ಯಕ್ಷನಾಗಿ ಕೆಲವೇ ತಿಂಗಳುಗಳಾಗಿದ್ದುವು. ಕಡಿಮೆಯೆಂದರೂ 200000 ಅಮೇರಿಕನ್ ಸೈನಿಕರ ಮತ್ತು ಅದರ ಇಮ್ಮಡಿ ಸಂಖ್ಯೆಯ ಸೈಂಗಳ ಪ್ರಾಣಗಳನ್ನು ಮಾತ್ರ ಉಳಿಸಬಹುದೆಂಬ ನಂಬಿಕೆಯಿಂದಲೇ ಆಟಂಬೋಂಬನ್ನು ಹಾಕುವ ನಿರ್ಧಾರವನ್ನು ನಾನಾಗ ಮಾಡಿದ್ದೆ. ಅಂತಹ ನಿರ್ಧಾರವನ್ನು ಇನ್ನೊಮ್ಮೆ ಮಾಡುವ ಸಂದರ್ಭ ನನಗೆ ಬರಲಾರದೆಂದು ನಂಬುತ್ತೇನೆ. ಆದರೆ ಲೋಕಕಲ್ಯಾಣಕ್ಕೆ ಮತ್ತು ಲೋಕದ ಪ್ರಜಾಪ್ರಭುತ್ವ ರಾಷ್ಟ್ರಗಳ ಅಸ್ತಿತ್ವಕ್ಕೇನೇ ಗಂಡಾಂತರಬಂತೆಂದು ತೋರಿದಲ್ಲಿ, ಆ ನಿರ್ಧಾರವನ್ನು ಮತ್ತೊಮ್ಮೆ ಮಾಡಲು ನಾನು ಹಿಂಜರಿಯುವಂತಿಲ್ಲ" ಎಂದು ಟ್ರುಮೇನರ ಹೇಳಿಕೆ.

೦೦ ೦೦ ೦೦

ನವದಿಲ್ಲಿಯಲ್ಲಿ ಹಲವು ದಿನಗಳಲ್ಲಿ ನಡೆದು, ಪ್ರಾಮುಖ್ಯವಾದ ಹಲವು ಮಸೂದೆಗಳನ್ನು ತಯಾರಿಸಿ—ಭಾರತ ಸರಕಾರದ ಧೋರಣೆಯ ಕುರಿತು ಹಲವು ಸ್ಪಷ್ಟೀಕರಣಗಳನ್ನು ಪಡೆದು—ಆಯವ್ಯಯಪಟ್ಟಿಯನ್ನು ಮಂಜೂರು ಮಾಡಿಕೊಂಡು ಪಾರ್ಲಿಮೆಂಟ್ ಅಧಿವೇಶನ ವೀಗ ಮುಂದುವರಿಸಲ್ಪಟ್ಟಿದೆ. 'ಹಿಂದೂ ಕೋಡು' ಮಸೂದೆಯ ಚರ್ಚೆಯು ಮುಂದಿನ ಅಧಿವೇಶನದಲ್ಲಾಗಲಿದೆ.

ಭಾರತದಲ್ಲಿರುವ ವಿದೇಶೀ ಬಂಡವಾಳಗಳ ಸಂಬಂಧವಾಗಿ ಭಾರತದ ಪ್ರಧಾನ ಮಂತ್ರಿಗಳು ತನ್ನ ಸರಕಾರದ ಧೋರಣೆಯನ್ನು ಇದೇ ತಾ. 7ರಲ್ಲಿ ಪಾರ್ಲಿಮೆಂಟಿನಲ್ಲಿ ಜಾಹೀರು ಮಾಡಿ ಪರದೇಶಗಳಲ್ಲಿ ಆನಂದ ನಿರ್ಮಿಸಿದ್ದಾರೆ. "ಈಗ ಭಾರತದಲ್ಲಿರುವ ಪರದೇಶಗಳವರ ವಹಿವಾಟುಗಳ ಮೇಲೆ, ಅಂತಹ ಹಿಂದೀಯ ವಹಿವಾಟುಗಳ ಮೇಲಿರದ ಯಾವುದೇ ನಿರ್ಬಂಧಗಳನ್ನು ಅಥವಾ ನಿಯಂತ್ರಣಗಳನ್ನು ಹಾಕುವಂತಿಲ್ಲ. ಇಕ್ಕಡೆಗೂ ಹಿತಕರವಾಗುವ ಶರ್ತ ಕರಾರುಗಳ ಮೇಲೆ ಇನ್ನೂ ಹೆಚ್ಚಿನ ವಿದೇಶೀ ಬಂಡವಾಳಗಳು ಇಲ್ಲಿ ವಹಿವಾಟಿಗೆ ಬೀಳುವಂತೆ ಪ್ರೋತ್ಸಾಹಿಸುವ ನಮೂನೆಯಲ್ಲಿ ಭಾರತ ಸರಕಾರವು ತನ್ನ ಧೋರಣೆಯನ್ನು ರೂಪಿಸಿಕೊಳ್ಳುವದು. ಸರ್ವರಿಗೂ ಸಮಾನವಾಗಿರುವ ಶರ್ತಗಳಲ್ಲದೆ, ಬೇರಾವ ತಡೆಯನ್ನೂ ಹಾಕದೆ ವಿದೇಶೀ ಬಂಡವಾಳಗಳು ಲಾಭಸಂಪಾದನೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುವದು. ಎಂದಾದರೂ ಅಂತಹ ಪರದೇಶೀಯ ವಹಿವಾಟುಗಳನ್ನು ಕಡ್ಡಾಯವಾಗಿ ಸ್ವಾಧೀನಪಡಿಸಿಕೊಳ್ಳಬೇಕಾಗಿ ಬಂದರೆ, ಆಗ ಸರಕಾರೀ ಧೋರಣೆಯಂತೆ ಅವುಗಳಿಗೆ ನ್ಯಾಯವಾದ ಹಾಗೂ ಸರಿಸಮಾನ ಪರಿಹಾರ ಕೊಡಲಾಗುವದು." ಎಂದು ಪ್ರಧಾನ ಮಂತ್ರಿಗಳ ಆಶ್ವಾಸನೆ. ಪ್ರತ್ಯೇಕವಾಗಿ ಬ್ರಿಟಿಷ್ ಬಂಡವಾಳದ ಹೆಸರೆತ್ತಿ ಹೇಳದೇ ಉದ್ದಿಮೆಯ ಬೆಳವಣಿಗೆ ಬಯಸುವದು ಸರಕಾರೀ ಧೋರಣೆಯಾದರೂ ಬ್ರಿಟಿಷ್ ಬಂಡವಾಳದ ವಹಿವಾಟುಗಳಿಗೆ ಹಿಂದಿನಂತೆಯೇ ಇನ್ನೂ ಇಲ್ಲಿ ಸಂದರ್ಭಗಳಿವೆ ಎಂದಿದ್ದಾರೆ ನೆಹರು. ಈ ಆಶ್ವಾಸನೆಯಿಂದ ಅನೇಕ ದೇಶದ ಬಂಡವಾಳಗಾರು ಆನಂದಗೊಂಡಿದ್ದಾರೆ.

ಸರ್ದಾರ್ ಪಟೇಲರ ಆಮಂತ್ರಣದಂತೆ ಭಾರತದ ಪ್ರಾಂತಿಕ ಪ್ರಧಾನಮಂತ್ರಿಗಳ ಮತ್ತು ಆಪ್ತಿಕ ರಾಜ್ಯಗಳ ಪ್ರತಿನಿಧಿಗಳ ಸಮ್ಮೇಳನವು ತಾ 8-9ರಲ್ಲಿ ನವದಿಲ್ಲಿಯಲ್ಲಿ ನಡೆದು ಮುಗಿದಿದೆ. ರಾಷ್ಟ್ರದ ಆಂತರಿಕ ಸ್ಥಿತಿಗತಿಗಳ ಕುರಿತು ಅಲ್ಲಿ ಸವಿವರ ಚರ್ಚೆನಡೆದು ಕಾರ್ಯ ವಿಧಾನಗಳು ರೂಪಿಸಲ್ಪಟ್ಟವೆಂದು ತಿಳಿದುಬರುತ್ತದೆ. ಕರಬೇತಾದ ನೌಕರವರ್ಗದ ವಿಚಾರಣೆ... ಕಮ್ಯೂನಿಸ್ಟ್ ಮತ್ತು ಆರ್. ಯಸ್. ಯಸ್. ಕಂಟಕಗಳ ನಿವಾರಣೆ--ಇತ್ಯಾದಿ ವಿಷಯಗಳು ಅಲ್ಲಿ ಚರ್ಚಿಸಲ್ಪಟ್ಟಿವೆ. ಕಮ್ಯೂನಿಸ್ಟ್ ಚಳವಳಿ ಹಿಂದೆ ವಿದೇಶದ ಕೈಯಿರುವ ಸ್ಪಷ್ಟ ಚಿಹ್ನೆಗಳು ತೋರಿಬಂದಿರುವ ಕುರಿತು ಈ ಸಮ್ಮೇಳನದಲ್ಲಿ ಬಹು ಆತುರೋದ್ವೇಗದ ಪರ್ಯಾಲೋಚನ ನಡೆದಿದ್ದಿತು. ಆದರೆ ಭಾರತ ಸರಕಾರೀ ಧೋರಣೆಯು ಆ ವಿದೇಶೀ ವರ್ಚಸ್ಸಿಗೆ ತಡೆ ಹಾಕಿದೆ ಎಂಬುದು ಸಿದ್ಧವಾಯಿತು. ಆರ್. ಯಸ್. ಯಸ್. ಮಟ್ಟಿಗೆ ಬದಲಾವಣೆಗೊಳ್ಳುವದು ಅದರ ನಾಯಕರ ಕರ್ತವ್ಯವಿದೆ ಹೊರತು ಸರಕಾರೀ ಧೋರಣೆಯಲ್ಲಿನ ಬದಲಾವಣೆಯೂ ಇಲ್ಲವೆಂದಾಗಿದೆ.



Approved firm by the Govt. of Mysore
Certified by the Agent of the Govt. of Cylone & Indian.

ಬೇಕು

ಈ ಕೆಳಗೆ ನಮೂದಿಸಿದ ಕಂಪೆನಿಯಲ್ಲಿ ಕೆಲಸ ಮಾಡಲು ಆಫೀಸು ಸಹಾಯಕ (Office Assistant) ನೊಬ್ಬನು ಬೇಕು. ಕನಿಷ್ಠ S. S. L. C. ಪಾಸಾಗಿರಬೇಕು. ಆಫೀಸು ಕೆಲಸದ ಅನುಭವವಿದ್ದವರ ಅರ್ಜಿಗಳಿಗೆ ವಿಶೇಷ ಗಮನವೀಯಲಾಗುವುದು. ವೇತನ ಯೋಗ್ಯತಾನುಸಾರ. ಉಮೇದ್ವಾರರು ತಾವು ನಿರೀಕ್ಷಿಸುವ ತಲಬು ನಮೂದಿಸಿ, ಸ್ವಂತ ಬರಹದಲ್ಲಿ ಯೋಗ್ಯತಾ ಪತ್ರಿಕೆಗಳೊಂದಿಗೆ ಅರ್ಜಿ ಕಳುಹಿಸುವುದು.

K. Muddanna Shetty
Chairman,
Bharath Industrial &
Publishing Co., Ltd.,
Kaup, S. Kanara.

WANTED

For the **St. Mary's Secondary School, Shirva, Shirva Post (S. K.)**

1 A Trained Graduate to work as Ist Assistant.
2 Two Sec. Grade Trained Teachers.
3 A Hindi Pundit
4 A Phy. Edu. Instructor, Y. M. C. A. Higher Grade
5 A Drawing Master, Higher Grade

P. S: A combined Phy. Edu Instructor and Drawing Master would be preferred.

Apply to the MANAGER

6 ರೂಪಾಯಿ ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.
'ಅಂತರಂಗ' ಉಡುಪಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

SEASON DEPOSITS

For Rs. 2,000/- and over are now accepted at all Offices of the Bank at the following rates:-

3 & 4 Months ... @ 2½ % p. a.
5 & 6 Months .... @ 2¾ % p. a.

ಗುರುವಾರ, ಉಡುಪಿ, ೧೫-೪-'೫೪

ಭಾಷಾವಾರು ಪ್ರಾಂತ್ಯ ಹೇಗೆ?

ಕಳೆದ ವಾರದ ಸಂಚಿಕೆಯಲ್ಲಿ ನಾವು ಮುಂದಾಗಿ ಪ್ರಸ್ತಾಪಿಸಿದಂತೆ, ಭಾಷಾವಾರು ಪ್ರಾಂತ್ಯಗಳ ರಚನೆಯ ಕುರಿತು ನೆಹರೂ-ವಲ್ಲಭಾಯಿ-ಪಟ್ಟಾಭಿ ತ್ರಿಮೂರ್ತಿ ಸಮಿತಿಯಿಂದ ತಯಾರಿಸಲ್ಪಟ್ಟು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಿಂದ ಅಂಗೀಕರಿಸಲ್ಪಟ್ಟಿರುವ ವರದಿಯು ಕನ್ನಡಿಗರಲ್ಲಿ ತೀವ್ರ ನಿರಾಶೆಯನ್ನು ನಿರ್ಮಿಸಿದೆ; ಇದು ಸ್ವಾಭಾವಿಕ. ಕೇರಳ ಮತ್ತು ಮಹಾರಾಷ್ಟ್ರದವರೂ ಕನ್ನಡಿಗರಷ್ಟೇ ಚಿಂತೆಗೀಡಾಗಿದ್ದಾರೆ; ಆಂಧ್ರದವರಾದರೂ ಪೂರ್ಣ ಸಮಾಧಾನಗೊಂಡಿಲ್ಲ. ಭಾಷಾವಾರು ಪ್ರಾಂತ್ಯರಚನೆಯ ಪ್ರಶ್ನೆಯನ್ನು ಕಾಂಗ್ರೆಸ್ ಅಧಿನಾಯಕರು ಕಾಣಬೇಕಾದಷ್ಟು ಸದ್ಭಾವನೆಯಿಂದ ಕಾಣುತ್ತಿಲ್ಲವೇಕೆ? ಈ ಕಾರ್ಯದಲ್ಲಿ ಅವರು ತಾವಾಗಿ ಮಾಡಬೇಕಾಗಿರುವುದನ್ನು ಮಾಡುತ್ತಿಲ್ಲವೇಕೆ? ಎಂಬುದೇ ಭಾಷಾವಾರು ಭಾಗಗಳವರ ಸಂತಾಪಕ್ಕೆ ಕಾರಣ. ಈ ಮಟ್ಟಿಗೂ ನಮ್ಮ ರಾಷ್ಟ್ರನಾಯಕರಲ್ಲಿ ಯಾವುದೇ ದುರುದ್ದೇಶ ಅಥವಾ ದುರ್ಭಾವನೆಯು ಕ್ಷಿಪೇಟಿಡ ನಿಸ್ಸಂದೇಹ; ಆದರೆ ಭಾರತದ ಸ್ವಾತಂತ್ರ್ಯ ಸ್ಥಾಪನಾ ಕಾಲದಲ್ಲಿ ಕೆಲವು ಪ್ರತ್ಯೇಕತಾಂದೋಲನಗಳ ಬಿಸಿ ಸ್ಪರ್ಶಮಾಡಿ ಕೈಸುಡಿಸಿಕೊಂಡ ಅವರಿಗೆ ಭಾಷಾವಾರು ಪ್ರಾಂತ್ಯರಚನೆಯಂತಹ ಘೋಷಾ ಪ್ರಶ್ನೆಗಳ ಕುರಿತೂ ಹೆದರುವದೊಂದೇ ಅಭ್ಯಾಸವಾಗಿ ಹೋದಂತಿದೆ. ಇದು ಅನಗತ್ಯ; ಶೋಚನೀಯ. ರಾಷ್ಟ್ರನಾಯಕರ ಕುರಿತು ಇಂತಹ ಕಸಿಕರವನ್ನು ಅತಿಭಾವನೆಯನ್ನಿಲ್ಲ ಹುಟ್ಟಿಸುತ್ತಿದೆ ಆ ವರದಿ.

“ಭಾಷಾವಾರು ಪ್ರಾಂತ್ಯಗಳ ರಚನೆಯ ಪ್ರಶ್ನೆಯನ್ನು ಕೆಲವು ವರುಷಗಳ ಮಟ್ಟಿಗೆ ಮುಂದೂಡಬೇಕಾದುದು ಅಗತ್ಯ. ಆ ಕಾಲ ಬರುವಾಗ ಮಿಕ್ಕ ಪ್ರಾಂತ್ಯಗಳಿಗಿಂತ ಮೊದಲು ಆಂಧ್ರ ಪ್ರಾಂತ್ಯ ನಿರ್ಮಾಣ ಕಾರ್ಯವನ್ನೆತ್ತಿಕೊಳ್ಳಬೇಕು.” ಎನ್ನುತ್ತಿದೆ ತ್ರಿಮೂರ್ತಿವರದಿ. ಮೈಸೂರು ಈಗಿನಂತೆ ಸಂಸ್ಥಾನವಾಗಿರದೆ, ಕರ್ನಾಟಕ ಪ್ರಾಂತ್ಯದೊಡನೆ ತಾದಾತ್ಮ್ಯಗೊಳ್ಳುವ ಮೂಲಕ ಪ್ರಾಂತಿಕ ಭಾಗವಾಗಿ ಮಾರ್ಪಟ್ಟಾಗಲೇ ಕರ್ನಾಟಕ ಪ್ರಾಂತ್ಯರಚನೆಯಾಗತಕ್ಕದ್ದೆಂದು ಆ ಸಮಿತಿ ತೀರ್ಮಾನಿಸಿದೆ. ಕೇರಳಕ್ಕೂ ಇದೇ ಅದೃಷ್ಟ; ಕೊಚ್ಚಿ, ತಿರುವಾಂಕೂರು ಸಂಸ್ಥಾನಗಳು, ಪ್ರತ್ಯೇಕ ಸಂಸ್ಥಾನಗಳಾಗಿರದೆ ಕೇರಳದಲ್ಲಿ ಐಕ್ಯಗೊಂಡಾಗಲೇ ಐಕ್ಯ ಕೇರಳರಚನೆ. ಮರಾಠೀ ಮಾತಾಡುವ ವಿದರ್ಭ ಮತ್ತು ನಾಗಪುರ ಕ್ಷೇತ್ರಗಳು ಅಖಂಡ ಮಹಾರಾಷ್ಟ್ರದೊಳಗೆ ಸೇರಿಕೊಳ್ಳಲು ಸಮ್ಮತಿಸುತ್ತವಾದರೆ, ಕನ್ನಡ ಮರಾಠೀ ಅಂತರ್ಮಿಲನಗೊಂಡಿರುವ ಭಾಗಗಳ ಮಟ್ಟಿಗೆ ಕನ್ನಡಿಗರೊಡನೊಂದು ಒಪ್ಪಂದಮಾಡಿಕೊಂಡು ಮಹಾರಾಷ್ಟ್ರ ಪ್ರಾಂತ್ಯರಚನೆಯಾಗಬಹುದು. ಆದರೆ, ಈ ನೆಲೆಯಲ್ಲಿ ಹೆಚ್ಚಿನ ಪರಿಮಾಣದ ಏಕಾಭಿಮತವುಳ್ಳ, ಅತಿಹೆಚ್ಚಿನ ಭಾಗಗಳು ಒಂದೇ ಪ್ರಾಂತ್ಯದೊಳಗಿರುವ ಆಂಧ್ರ ಪ್ರಾಂತ್ಯದ ಬೇಡಿಕೆಯೊಂದನ್ನು ಮಿಕ್ಕವುಗಳಿಗಿಂತ ಪ್ರತ್ಯೇಕಿಸಿ ಕಾಲಬಂದಾಗ ಮುಂದಾಗಿ ಇದೊಂದರ ಯೋಚನೆ ಮತ್ತು ರಚನೆಯನ್ನು ಕೈಕೊಳ್ಳಲಾಗುವದು-ಎಂದು ತ್ರಿಮೂರ್ತಿ ಸಮಿತಿ ನಿರೂಪಿಸಿದೆ. ಬೊಂಬಾಯಿ ಪ್ರಾಂತ್ಯವು ವಿಭಾಗಿಸಲ್ಪಟ್ಟು, ಮಹಾರಾಷ್ಟ್ರ ಹುಟ್ಟಿಕೊಳ್ಳುವ ಕಾಲ ಬಂತೆಂದರೆ, ರಾಷ್ಟ್ರದ ಮುಖ್ಯ ನಗರ, ಹೆಬ್ಬಾಗಿಲು, ಮತ್ತು ಅಂತರ್ಭಾಷೀಯ ಮಹಾ ಕೇಂದ್ರವಾಗಿರುವ ಬೊಂಬಾಯಿಯನ್ನು ಯಾವ ಭಾಷಾವಾರು ಪ್ರಾಂತ್ಯದೊಳಗೂ ಸೇರಿಸದೆ ಭಿನ್ನಕ್ಷೇತ್ರವಾಗಿ ಪ್ರತ್ಯೇಕಾಡಳಿತೆಯಲ್ಲಿ ವಿಂಗಡಿಸಲಾಗುವದು- ಆದರೆ ಮದ್ರಾಸ್ ಪ್ರಾಂತ್ಯವು ವಿಭಜಿಸಲ್ಪಟ್ಟು ಆಂಧ್ರಪ್ರಾಂತ್ಯವಾಗುವಾಗ ಮದ್ರಾಸ್ ನಗರದ ಆಶೆಯನ್ನು ಆಂಧ್ರರು ಬಿಟ್ಟುಬಿಡಬೇಕು; ಅದೊಂದು ಪ್ರತ್ಯೇಕಾಡಳಿತೆಯಲ್ಲಿರುವುದಸಾಧ್ಯವಾದ್ದರಿಂದ ಅದು ತಮಿಳುಪ್ರಾಂತ್ಯದ ಪಾಲಿನದಾಗುವದು; ಉತ್ತರ ಭಾರತದ ಪ್ರಾಂತ್ಯದ ಗಡಿಗಳನ್ನು ಭಾಷಾವಾರು ಹೊಂದಿಕೆಗಾಗಿ ಬದಲಾಯಿಸಲು ಸದ್ಯಕ್ಕೆ ಸಾಧ್ಯವಿಲ್ಲ, ಎಂಬುದು ಆ ವರದಿಯಲ್ಲಿರುವ ಇತರ ಮುಖ್ಯಾಂಶಗಳು. “ಈಗ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿದಲ್ಲಿ, ಇಷ್ಟರಲ್ಲೇ ಅತಿರೇಕ ಭಾರದಿಂದ ಕುಸಿದುಹೋಗುವ ಆಡಳಿತ ಯಂತ್ರದಮೇಲೆ ಇನ್ನಷ್ಟು ದೊಡ್ಡಹೊರೆ ಬೀಳಲಿದೆ. ನೂತನ ಭಾಷಾವಾರು ಪ್ರಾಂತ್ಯಗಳು ಆಡಳಿತ ಅನಾನುಕೂಲತೆ ಮತ್ತು ಆರ್ಥಿಕ ದೌರ್ಬಲ್ಯವುಳ್ಳವುಗಳಾಗುವವು; ಪ್ರಾಯಶಃ ಅಲ್ಲಿ ಹಣಕಾಸಿನ ಕೊರತೆ ಮತ್ತು ಜನಜೀವನ ಮಟ್ಟದಲ್ಲಿ ಇಳಿತವುಂಟಾಗಲಿದೆ. ಕೆಲವು ಸರಹದ್ದುಗಳಲ್ಲಿ ಆ ಭಾಷೆ, ಈ ಭಾಷೆಯವರು ಸಮ್ಮಿಶ್ರವಾಗಿದ್ದು ಅವುಗಳನ್ನಾವ ಕಡೆಗೆ ಸೇರಿಸುವದೆಂಬ ಪ್ರಶ್ನೆಬರುವಾಗ ದುರ್ಭಾವನೆಗಳು, ದ್ವೇಷಾಸೂಯೆಗಳು ಹುಟ್ಟಿಕೊಳ್ಳಲು ಬದ್ಧವಿವೆ; ಅತ್ತ ರಾಜ್ಯಗಳನ್ನು ಏಕೀಕರಣಗೊಳಿಸುತ್ತಿರುವ ಈ ಕಾಲದಲ್ಲೇ ಪ್ರಾಂತ್ಯಗಳನ್ನು ತುಂಡರಿಸುವ ಧೋರಣೆ ವಹಿಸುವದು ಸೊಗಸಲ್ಲ. ಇವೆಲ್ಲಾ ಕಾರಣಗಳಿಂದ ಭಾರತದ ಕಷ್ಟಾರ್ಜಿತ ಸ್ವಾತಂತ್ರ್ಯಕ್ಕೆ ಧಕ್ಕೆಬೀಳುವ ಅಪಾಯವಿದೆ. ಸಂಗತಿ ಹೀಗಿದ್ದರೂ ಯಾವುದೇ ಕ್ಷೇತ್ರದಲ್ಲಿ ಭಾಷಾವಾರು ಪ್ರಾಂತ್ಯದ ಬೇಡಿಕೆಯು ಸಬಲ ಮತ್ತು ಸರ್ವವ್ಯಾಪಿಯಾಗಿದ್ದಲ್ಲಿ, ಅಂತೆಯೇ ಅದು ರಾಷ್ಟ್ರೈಕ್ಯಕ್ಕಪಾಯವೊಡ್ಡುವಂತಹದು ಮತ್ತು ಬೇರೊಂದು ವಿರೋಧೀ ಭಾವನೆಯನ್ನು ಸ್ಪರ್ಧಿಸುವದಕ್ಕಾಗಿ ಹುಟ್ಟಿದುದು ಆಗಿರದಿದ್ದರೆ, ಒಂದು ಪ್ರಜಾಸತ್ತಾ ಸರಕಾರವು ಅಂತಹ ಬೇಡಿಕೆಯನ್ನು ಮನ್ನಿಸದೆ ನಿರ್ವಾಹವಿಲ್ಲ. ಅನ್ಯಭಾಷೆಯ ಬಹುಸಂಖ್ಯಾತ ಭಾಗಗಳೊಡನೆ ಸೇರಿಕೊಂಡು ಕಷ್ಟನಷ್ಟಗಳನ್ನನುಭವಿಸುತ್ತಿರುವ ಕರ್ನಾಟಕ ಮತ್ತು ಕೇರಳ ಪ್ರಾಂತ್ಯಗಳ ರಚನಾ ಬೇಡಿಕೆಗಳು ಪ್ರೋತ್ಸಾಹಕ್ಕರ್ಹವಿವೆ ಎಂಬುದು ನಿಜ. ಆದರೆ ಕೇರಳ ಮತ್ತು ಕರ್ನಾಟಕ ಪ್ರಾಂತ್ಯಗಳ ರಚನೆಯೆಂಬುದು ಈ ಹೊಸ ಪ್ರಾಂತ್ಯಗಳ ಗಣ್ಯ ಭಾಗಗಳಾಗಲಿರುವ ಸಂಬಂಧಪಟ್ಟ ಸಂಸ್ಥಾನಗಳ ಸಮ್ಮಿಲನದಿಂದ ಮಾತ್ರ ಸಾಧ್ಯ. ಅದಕ್ಕಾಗಿ ಸದ್ಯದ ಪ್ರಾಂತಿಕ ಭಾಗಗಳನ್ನು ಸಂಸ್ಥಾನಗಳೊಡನೆ ಮಿಲನಗೊಳಿಸುವದಲ್ಲ; ತದ್ವಿರುದ್ಧ ಗತಿಹಿಡಿದೇ ಆ ಕೆಲಸವಾಗಬೇಕು, ಅರ್ಥಾತ್ ಸಂಬಂಧಪಟ್ಟ ಸಂಸ್ಥಾನಗಳು ಪೂರ್ಣ ಮಾಯವಾಗಿ ಪ್ರಾಂತ್ಯವಾಗಿ ಮಾರ್ಪಡಬೇಕು, ಹಾಗಾಗುವ ವರೆಗೆ- ಮೈಸೂರು, ಕೊಚ್ಚಿ, ತಿರುವಾಂಕೂರು 'ಸಂಸ್ಥಾನ'ಗಳೆಂಬವು ಅಂತರ್ಧಾನವಾಗುವವರೆಗೆ—ಕೇರಳ ಮತ್ತು ಕರ್ನಾಟಕ ಪ್ರಾಂತ್ಯರಚನೆಗೆ ಕಾಯಬೇಕಾಗುತ್ತದೆ. ಆ ಸಂಸ್ಥಾನಗಳ ಪ್ರಜೆಗಳನ್ನು ಒಲಿಸಿಕೊಂಡರೆ ಇದು ಸುಲಭದಲ್ಲಾಗುವದು”- ಎಂಬ ಮನನೀಯಾಂಶಗಳು ಕಾಂಗ್ರೆಸ್ ಸಮಿತೀ ತೀರ್ಮಾನದಲ್ಲಿವೆ. ಪ್ರಥಮತಃ ಎಲ್ಲಿಯೂ ಯಾವುದೇ ವಿಧದ ಕಲಹ, ಕಹಿಭಾವನೆಯೇಳದಂತೆ, ಪ್ರಶ್ನಾತೀತ ತೆಲುಗು ಭಾಷಾಭಾಗಗಳನ್ನಷ್ಟೇ ಪ್ರತ್ಯೇಕ ಪ್ರಾಂತ್ಯವಾಗಿ ವಿಂಗಡಿಸಬೇಕು; ಅನ್ಯ ಭಾಷೆಗಳವರ ವಾದವಿರುವ ಭಾಗಗಳನ್ನು ಪ್ರಕೃತ ಸ್ಪರ್ಶಿಸದೆ ಹಾಗೆಯೇ ಬಿಡಬೇಕು- ಅಥವಾ ಅಲ್ಲಿಯವರ ಸಮ್ಮತಿಪಡೆದು ಹೇಗೂ ಮಾಡಬಹುದು. ಕೊನೆಗೆ ಯೋಗ್ಯಕಾಲಬಂದಾಗ ಶಾಶ್ವತಪ್ರಾಂತಿಕ ಗಡಿಗಳನ್ನು ಹಾಕಿಕೊಳ್ಳಬಹುದು:- ಎಂಬ ನಿರ್ದೇಶ ಅಲ್ಲಿದೆ. ಆ ಕೊನೆಯ ತೀರ್ಮಾನದ ಕಾಲಬರುವಾಗ ಹೈದರಾಬಾದು ಕೂಡಾ ಭಾಷಾವಾರಾಗಿ ವಿಂಗಡಿಸಲ್ಪಡುವಂತಹದೆಂಬ ಅಭಿಪ್ರಾಯವು ವರದಿಯಲ್ಲಿ ಅಂತರ್ಗತವಾಗಿದೆ.

ಅಂತೂ, ಮದ್ರಾಸ್ ನಗರದ ಸುದ್ದಿಬಿಟ್ಟು, ತಮಿಳರು, ಕನ್ನಡಿಗರೊಡನೆ ವಿವಾದವಿರುವ ಭಾಗಗಳ ಪ್ರಶ್ನೆಯನ್ನು ಕಡೆಗೆ ನೋಡಿಕೊಳ್ಳೋಣವೆಂದು ಅಮಾನತಿಟ್ಟು, ತೆಲುಗರು ನಾಳೆಯೇ ಆಂಧ್ರ ಪ್ರಾಂತ್ಯ ಪಡೆಯಬಹುದು; ವಿದರ್ಭ, ನಾಗಪುರ ಕ್ಷೇತ್ರಗಳವರನ್ನೊಲಿಸಿಕೊಂಡು, ಕನ್ನಡಿಗರೊಡನೆ ವಿವಾದವಿರುವ ಸರಹದ್ದು ಸ್ಥಳಗಳ ಪ್ರಶ್ನೆಯನ್ನು ಕಾದಿಟ್ಟು ಮರಾಠರೂ ಮರುದಿನವೇ ಮಹಾರಾಷ್ಟ್ರ ಪ್ರಾಂತ್ಯ ಕಟ್ಟಬಲ್ಲರು. ಅಂತೆಯೇ 'ಮೈಸೂರು ಸಂಸ್ಥಾನ'ವೆಂಬ ಹೆಸರೇ ಉಜ್ಜಿಹೋಗಿ, 'ಕರ್ನಾಟಕ ಪ್ರಾಂತ್ಯ'ದೊಳಗಡೆಯಲ್ಲಿ ಮಿಕ್ಕ ಜಿಲ್ಲೆಗಳೊಂದಿಗೆ ಮೈಸೂರು ಜಿಲ್ಲೆಗಳ ಹೆಸರೂ ಕೂಡಿಕೊಳ್ಳುವಂತೆ ಮಾಡಬಲ್ಲವರಿದ್ದರೆ ಕರ್ನಾಟಕ ಪ್ರಾಂತ್ಯ-ಕೊಚ್ಚಿ, ತಿರುವಾಂಕೂರುಗಳು ಅಳಿಸಿಹೋಗಿ ಕೇರಳ ಮಾತ್ರ ತೋರಿಬರುತ್ತದಾದರೆ ಕೇರಳ ಪ್ರಾಂತ್ಯ ಕೂಡಾ—ಬೇಗ ಆಗಲಡ್ಡಿಯಿಲ್ಲ. ಆದರೆ ಆಗಬಲ್ಲುವೆ? ಪ್ರಾಂತಿಕ ಭಾಗಗಳನ್ನು ಒಟ್ಟುಗೂಡಿಸಿದಷ್ಟು ಸುಲಭದಲ್ಲಿ ಸಂಸ್ಥಾನಗಳ ಅಸ್ತಿತ್ವವನ್ನೇ ಅಳಿಸಿಬಿಡುವದು ಸಾಧ್ಯವೆ? ಸರ್ದಾರ್ ವಲ್ಲಭಾಯಿಗಳು ಮನಸ್ಸುಮಾಡಿದರೆ ಮಾತ್ರ ಅದು ನಿಜಕ್ಕೂ ಸುಲಭ. ಆದರೆ ಅವರಿಗಾ ಇಚ್ಛೆಯಿಲ್ಲ; ಅವರಾ ಕೆಲಸಮಾಡದೆ ಮೈದೆಗೆಯುತಿದ್ದಾರೆ, ಎಂಬುದೇ ಕೇಂದ್ರನಾಯಕರ ಮೇಲೆ ಭಾಷಾವಾರು ಭಾಗಗಳವರ ದೂರು. ಅವರೇಕಾಗಿ ಹಿಂಜರಿಯುತ್ತಿರುವರೋ ಅರ್ಥವಾಗುವದಿಲ್ಲ. ಭಾಷಾವಾರು ಪ್ರಾಂತ್ಯಗಳ ಆರ್ಥಿಕ, ಆಡಳಿತ ಸ್ಥಿತಿಗತಿ ಚಿತ್ರವು ಹಲವು ಬಾರಿ ಸ್ಪಷ್ಟಮಾಡಲ್ಪಟ್ಟಿರುವಾಗ, ಇನ್ನೂ ಆ ಕುರಿತು ಕೇಂದ್ರನಾಯಕರು ಅಪನಂಬಿಕೆ ಇಟ್ಟುಕೊಳ್ಳುವದು, ಆರೋಪಿಸುವುದು ಸರಿಯಲ್ಲ. ಆದ್ದರಿಂದ ನಮ್ಮ ನಾಯಕರು ತಮ್ಮ ಮನೋವೃತ್ತಿ ಬದಲಾಯಿಸಬೇಕು. “ಕರ್ನಾಟಕದೊಡನೆ ಮೈಸೂರು ಲೀನಗೊಳ್ಳುವಂತೆ ಕೇಂದ್ರನಾಯಕರು ಒತ್ತಾಯಿಸಬೇಕು.” ಎಂಬ ಕನ್ನಡಿಗರ ಇಂದಿನ ಬೇಡಿಕೆಯನ್ನು ಮನ್ನಿಸಿ ಕರ್ನಾಟಕ ಪ್ರಾಂತ್ಯರಚನೆ ನೆರವೇರಬೇಕು.

ಅತ್ತ ಕೇಂದ್ರನಾಯಕರನ್ನು ವಿಜ್ಞಾಪಿಸಿಕೊಂಡಂತೆಯೇ, ಇತ್ತ ಕಾರ್ಯರಂಗದಲ್ಲಿ ಕನ್ನಡಿಗರು ಸ್ವತಃ ಮಾಡಬೇಕಾದುದು ಉಳಿದಿದೆ, ಎಂಬ ಕಡೆಗೆ ಈ ತನಕ ಸಾಕಷ್ಟು ಲಕ್ಷ್ಯಬಿದ್ದಂತಿಲ್ಲ. ಕರ್ನಾಟಕದೊಂದಿಗೆ ಮೈಸೂರು ತಾದಾತ್ಮ್ಯಗೊಳ್ಳುವಂತೆ ಮಾಡಲು ಮೈಸೂರು ಮಹಾರಾಜರು ಅಥವಾ ಅಲ್ಲಿಯ ಅಧಿಕಾರೀ ವರ್ಗ ಮುಂದಾಗಲೊಪ್ಪದಿದ್ದರೆ ಅವರ ಹಂಗಿಲ್ಲ. ಮೈಸೂರಿನ ಜನತೆ ಸಮ್ಮತಿಸಿದರಾಯಿತು ಎಂಬುದು ತ್ರಿಮೂರ್ತಿ ವರದಿಯಿಂದ ಸ್ಪಷ್ಟವಾಗಿದೆ. ಇದೊಂದರಿಂದಾಗಿ ಸಂತೋಷಿಸಬೇಕು. ಈಗ ಮೈಸೂರು ಜನತೆಯ ನಡುವೆ ಬಲವಾದ ಏಕೀಕರಣ ಪ್ರಚಾರ ಕಾರ್ಯಕೈಕೊಳ್ಳುವದೊಂದೇ ಮುಖ್ಯವಲ್ಲವೆ? ಕರ್ನಾಟಕ ಏಕೀಕರಣ ಸಂಘ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ, ಹಾಗೂ ಮೈಸೂರಿನ ಮತ್ತು ಮೈಸೂರೇತರ ಏಕೀಕರಣವಾದಿಗಳೆಲ್ಲರೂ ಈಗಿಂದೀಗಲೇ ಮೈಸೂರಿನ ಜನಮತವನ್ನೊಲಿಸುವ ಕೆಲಸಕ್ಕೆ ನಡುಬಗಿಯಬಾರದೇಕೆ? ಮೈಸೂರು ಪ್ರಜೆಗಳಿಗೆ ಬೇಕಾದುದನ್ನು ಮೈಸೂರರಸರು ಮಾಡಲೊಲ್ಲರೆಂದು ತೋರಿದಾಗ, ಕೇಂದ್ರನಾಯಕರು ಅವರನ್ನು ಒತ್ತಾಯಿಸಲೇ ಬೇಕಾಗುವದು; ಆದ್ದರಿಂದ ಈಗ ಮೈಸೂರಿನಲ್ಲಿ ಪ್ರಚಾರ ಪ್ರಾರಂಭಿಸಲಿ.

“ತೋಟಿ ಶೃಂಗಾರ, ಒಳಗೆ ಗೋಳಿಸೊಪ್ಪು”?

ಭಾರತದ ಇಂದಿನ ಆಡಳಿತ ವಿದ್ಯಮಾನಗಳನ್ನು ನೋಡುವಾಗ, ಸ್ವತಂತ್ರ ಭಾರತವು ಲೋಕದ ಗಣ್ಯರಾಷ್ಟ್ರವಾಗ ಸ್ವಕೀಯರ ಗೌರವಾಭಿವಂದನೆಗಳನ್ನು ಪಡೆಯುವಂತೆಯೂ ಅಂತರ್ರಾಷ್ಟ್ರೀಯ ಸ್ಥಾನಮಾನಗಳಿಸುವಂತೆಯೂ ಮಾಡಬೇಕೆಂಬ ಕುರಿತು ನಮ್ಮ ರಾಷ್ಟ್ರನಾಯಕರು ಪ್ರಯತ್ನಿಸುತ್ತಿರುವುದು ಕಾಣುತ್ತಿದೆ; ಆದರೆ ಅಷ್ಟೇ ಪರಿಮಾಣದ ಆತುರ ಮತ್ತು ಕಾರ್ಯಭರ ಜನಸಾಮಾನ್ಯರ ಜೀವನ ಮಟ್ಟವೇರಿಸುವ ಕಾರ್ಯಗಳಲ್ಲಿ, ಆರ್ಥಿಕ ಸಾಮಾಜಿಕ ಸ್ಥಿತಿ ಬದಲಾವಣೆಯಂಗದಲ್ಲಾಗಲೀ ಕಂಡುಬಾರದಿರುವುದು ತೋರಿಕೆಯು ಈಗೀಗ ಸ್ಪಷ್ಟವಾಗುತ್ತಾ ಬಂದಿರುವ ಕೆಲವು ಸ್ಥಿತಿಗತಿಗಳು ಗಮನಾರ್ಹವಿವೆ.

ಸ್ವತಂತ್ರರಾದೆವೆಂಬ ಅಭಿಮಾನ, ಆನಂದಕ್ಕಿಂತ ಹೆಚ್ಚಿನದಾವುದೂ ಜನತೆಯ ಅನುಭವಕ್ಕೆ ಬಾರದ ರೀತಿಯಲ್ಲಿ ರಾಷ್ಟ್ರದೊಳಗಿನ ಆಡಳಿತ ವಿಧಾನ ಮತ್ತು ಸ್ಥಿತಿ ಮೊದಲಿನದ್ದೇ ಇದೆ. ಕಾಲದುದಕ್ಕೂ ಜನಸಾಮಾನ್ಯರ ನಿತ್ಯ ಜೀವನವನ್ನು ಪ್ರಯಾಸಕರಗೊಳಿಸುವ ಆಹಾರಾಭಾವ, ಆವಶ್ಯಕ ವಸ್ತುಗಳ ವಿಶೇಷ ಧಾರಣೆ, ಜಾತಿ ಪಂಗಡಗಳ ಒಳ ವೈಷಮ್ಯ ಸಾಕಷ್ಟು ಹೆಚ್ಚಿವೆ. ಆಡಳಿತಗಾರರು ಬೇಡುವ ಮುಷ್ಕರಗಳನ್ನೂ ಆಂದೋಲನಗಳನ್ನೂ ನಿರ್ಮೂಲಿಸುವುದರಲ್ಲಿ ನಮ್ಮ ಸರಕಾರಗಳು ತೋರುವ ಸ್ಪಷ್ಟ ಧೋರಣೆ, ಖಂಡತುಂಡ ವರ್ತನೆಗಳು ಜನರ ನಿತ್ಯ ಜೀವನ ಸುಧಾರಣೆಯ ಮಟ್ಟಿಗೆ ಕಂಡುಬರುವುದಿಲ್ಲ.

ಆದರೆ ಪರದೇಶಗಳ ರಾಯಭಾರಿಗಳ ನೇಮಕ, ಅವರ ಆಗಮನ ನಿರ್ಗಮನಗಳ ಭರವು ಸಾಕಷ್ಟಿದೆ. ಇಂಡೋನೇಶಿಯಾ, ಬರ್ಮಾ ಹೋರಾಟಗಳಂಥವುಗಳ ಅತ್ಯಾಸಕ್ತಿ ತೋರಿಸುವುದು—ಆ ಸಂಬಂಧದ ಸಮ್ಮೇಳನಗಳನ್ನು ಕರೆಯುವ—ಲೋಕಶಾಂತಿಯ ದೊಡ್ಡ ದೊಡ್ಡ ತತ್ವಗಳನ್ನು ಘೋಷಿಸುವುದೇ ಮುಂತಾದ ಬಹಿಷ್ಕಾರ್ಯಗಳಿಂದ ಲೋಕಮಾನ್ಯರೂ ನಮ್ಮ ಧುರೀಣರು ಚಡಪಡಿಸುವಂತಿದೆ. ಸಂಯುಕ್ತ ರಾಷ್ಟ್ರಸಂಘದ ಕಾರ್ಯರಂಗದಲ್ಲೂ ನಮ್ಮ ಪ್ರತಿನಿಧಿಗಳ ಭಾವ ಸಾಕಷ್ಟು ತೋರಿಬರುತ್ತಿದೆ. ಇನ್ನೂ ಆಗಬೇಕಾದವುಗಳೇ; ಸ್ವತಂತ್ರ ರಾಷ್ಟ್ರ ಸರಕಾರವು ಇಷ್ಟಗಳನ್ನು ಸಾಧಿಸಿ ದಷ್ಟು ಸುಲಭದಲ್ಲಿ ಒಳಗಿನ ಸ್ಥಿತಿ ಸುಧಾರಣೆಮಾಡುವ ಸಾಧ್ಯವೆಂಬುದೂ ನಿಜವೇ. ಆದರೆ ಊರಿಗೆ ಉಪಕಾರಿಯಾಗಿ ಬೀಡಾದಂತೆಯೇ ಮನೆಗೆ ಮಾರಿಯಾಗಬಾರದೆಂಬುದೇ ಸ್ವಾತಂತ್ರ್ಯದ ಮೂಲತತ್ತ್ವ. ಕಲಿಯೆತ್ತಿದ ಹೊಸ ಆದರ್ಶಗಳನ್ನು ರೂಢಿಸಿಕೊಂಡಷ್ಟೇ ರಭಸದಿಂದ, ಜನತೆಗೆ ಪಾರಂಪರ್ಯವಾಗಿ ಬಂದಿರುವ ದುರ್ಗತಿಗಳನ್ನೂ ಸ್ವತಂತ್ರ ಸರಕಾರವು ನಿವಾರಿಸಬೇಕಾಗಿದೆ; ಆ ಮಟ್ಟಿಗೆ ಕ್ಷಿಪ್ರಗತಿ—ಆ ಮಟ್ಟಿಗೆ ಮುಂದ ಹೆಜ್ಜೆ ಸಾಧ್ಯವಲ್ಲ.

oo oo oo

ಜನಹಿತಕಾರೀ ಪ್ರಾಮುಖ್ಯ ಬದಲಾವಣೆಗಳನ್ನು ಅಪೇಕ್ಷಿಸಿದಾಗಲೆಲ್ಲಾ “ಅವಕ್ಕಿಂತಲೂ ಪ್ರಾಮುಖ್ಯವಾದ ಅವಸರದ ಬೇರೆ ಕಾರ್ಯಗಳಿರುವುದರಿಂದ ಪ್ರಕೃತ ಉಪಟಳಕೊಡಬೇಡಿ” ಎಂಬ ಉಪದೇಶ ರಾಷ್ಟ್ರನಾಯಕರಿಂದ ಬರುತ್ತಿದೆ. ಆದರೀ ದಿನಗಳಲ್ಲಿ, ನಮ್ಮ ಧುರೀಣರನ್ನು ಸಿಕ್ಕಿಸಿ ಹಾಕಿರುವ ಅಗಾಧ ಸಮಸ್ಯೆ ಯಾವುದೂ ತೋರುವದಿಲ್ಲ. ಸಂಸ್ಥಾನಗಳನ್ನು ಪ್ರಾಂತ್ಯಗಳೊಂದಿಗೆ ಅಂತರ್ವಿಲೀನಗೊಳಿಸುವ, ಹಲವನ್ನು ಏಕಕೇಂದ್ರವಾಗಿ ಕೂಡಿಕಟ್ಟುವ ಕೆಲಸ ಸಾಕಷ್ಟು ಸುಲಭದಲ್ಲೇ ಮುಗಿಯುತ್ತಾ ಬಂದಿದೆ. ಈ ಸಂಸ್ಥಾನಗಳ ಉತ್ತಮಾಡಳಿತೆಗಾಗಿ ಸಲಹೆಗಾರರನ್ನು ನೇಮಿಸುವ ವ್ಯವಸ್ಥೆ ಕೂಡಾ ಆಗಿದೆ; ರಾಜರುಗಳ ಭವಿಷ್ಯ ಮತ್ತು ಅವರಿಗೆ ಕೊಡತಕ್ಕ ವರ್ಷಾಶನಗಳು ಕೂಡಾ ನಿರ್ಧರಿಸಲ್ಪಟ್ಟಿವೆ. ಹೈದರಾಬಾದ್ ಕಂಟಕ ಮುಗಿದು ಹಲವು ತಿಂಗಳುಗಳಾದುವು. ಕಾಶ್ಮೀರದಲ್ಲಿ, ತನ್ನ ಕೈಗೊಂಬೆ ‘ಅಝಾದ್ ಕಾಶ್ಮೀರ್’ ಸರಕಾರದ ಆಶ್ರಯದಲ್ಲಿ ಸೇನೆಗಳನ್ನೂ ಗುಡ್ಡಗಾಡು ಪಠಾಣರನ್ನೂ ಇಟ್ಟುಕೊಂಡು ಪಾಕಿಸ್ತಾನವು ಕಾಶ್ಮೀರ ಸಂಬಂಧದ ಶಾಂತಿ ಕರಾರು ಶರ್ತಗಳನ್ನು ಭಂಗಿಸುತ್ತಿದೆಯಾದರೂ ಅದಕ್ಕಾಗಿ ಭಾರತ ಸರಕಾರ ಹೆದರಬೇಕಾಗಿಲ್ಲ. ‘ಅಝಾದ್ ಕಾಶ್ಮೀರ ಸೇನೆ ಸಂಪೂರ್ಣ ಬರ್ಖಾಸ್ತಾಗಿ, ಕಾಶ್ಮೀರೇತರರು ಒಬ್ಬನುಳಿಯದೆ ಹೊರಗಟ್ಟಲ್ಪಟ್ಟು, ಜಮ್ಮು ಮತ್ತು ಕಾಶ್ಮೀರದ ಪ್ರತಿಯೊಂದಿಂಚಿನಲ್ಲೂ ಶಾಂತತೆ ಸ್ಥಾಪನೆಯಾದವಿನಹ ಜನಮತ ಸಂಗ್ರಹವಿಲ್ಲ, ಎಂಬ ತಮ್ಮ ಹಠವನ್ನು ಭಾರತ ಸರಕಾರವೂ ಶೇಖ್ ಅಬ್ದುಲ್ಲಾ ಸರಕಾರವೂ ಕೊನೆಯವರೆಗೂ ಗಟ್ಟಿ ಹಿಡಿದರೆ, ಅಲ್ಲಿ ಪ್ರಮಾದಕ್ಕವಕಾಶ ದೊರೆಯದು. ಕಾಶ್ಮೀರ ಸಮಿತಿ ಸದಸ್ಯರು ಈಗಲೇ ಇಕ್ಕಡೆಯವರೊಡನೆ ಪರ್ಯಾಲೋಚನೆ ನಡೆಸುತ್ತಿದ್ದಾರೆ; ಸಂಯುಕ್ತ ರಾಷ್ಟ್ರ ಸಂಘದ ಸೇನಾ ಪರಿಶೀಲನಗಾರರು ಬಂದಿದ್ದಾರೆ. ಜನಮತ ಸಂಗ್ರಹ ಧಿಕಾರಿ ನೇಮಿಸಲ್ಪಟ್ಟಿದ್ದು ಅವರು ಸದ್ಯದಲ್ಲೇ ಬರಲಿದ್ದಾರೆ. ಅಂತೂ ಎಷ್ಟೇ ಒದ್ದಾಟವಿದ್ದರೂ ಕಾಶ್ಮೀರದ ಪ್ರಶ್ನೆಗೆ ಇನ್ನು ಶಾಂತವಿಧಾನಗಳಿಂದಲೇ ತೀರ್ಮಾನಕೊಂಡುವ ಭವಿಷ್ಯವಿರುವಂತೆ ಕಾಣುತ್ತಿದೆ.

oo oo oo

ರಾಷ್ಟ್ರದಲ್ಲಿ ಮುಷ್ಕರಗಳ ಮಾತು ಬಹಳ ಕೇಳಿ ಬಂದಿತ್ತು-ಬರುತ್ತಿದೆಯಾದರೂ ಮುಷ್ಕರಗಳ ಸಂಖ್ಯೆ 1948ರಲ್ಲೇ ತಗ್ಗಿದ್ದು 1949ರಿಂದ ಅವು ಇನ್ನಷ್ಟು ಕಡಿಮೆಯಾಗಿವೆ. 1947ರ ಅಂತ್ಯಭಾಗದಲ್ಲಿ ಒಮ್ಮೆಯೇ ರಾಷ್ಟ್ರದಾದ್ಯಂತ ಮುಷ್ಕರ ರೋಗ ಹಬ್ಬಿಕೊಂಡಂತೆ ತೋರಿದ್ದಿತು. ಆದರೆ 1948ರ ಮುಷ್ಕರ ಸಂಖ್ಯೆ ಹಿಂದಿನ ವರುಷಕ್ಕಿಂತ ಕಡಿಮೆ; ಕಾರ್ಖಾನೋದ್ಯಮಗಳಲ್ಲಿ ಮಾಲಕ-ಮಜೂರರೊಳಗೆ ಹಿಂದಿನಷ್ಟು ವೈಷಮ್ಯಗಳಿರಲಿಲ್ಲ; 1948ರ ಕೆಲಸದ ದಿನಗಳು 1947ಕ್ಕಿಂತ ಎಷ್ಟೋ ಹೆಚ್ಚಿಗೆ. ಇವುಗಳ ಪರಿಣಾಮವಾಗಿ ಯುದ್ಧಪೂರ್ವ ವರುಷಗಳಿಗಿಂತ ಸುಮಾರು ನೂ. 15ರಷ್ಟು ಹೆಚ್ಚಿನ ಉತ್ಪನ್ನವು 1948ರಲ್ಲಿ ಕಾರ್ಖಾನೋದ್ಯಮಗಳಲ್ಲಾಗಿದೆ. 1949ರಲ್ಲಿ ಈ ಪರಿಮಾಣವು ಮತ್ತಷ್ಟು ಹೆಚ್ಚುವದೆಂಬ ನಿರೀಕ್ಷೆಯಿದೆ. ವಿದೇಶೀ ಬಂಡವಾಳಗಾರರಿಗೆ ಕೊಟ್ಟ ಆಶ್ವಾಸನೆಯಿಂದಾಗಿ, ಇನ್ನು ಅಮೇರಿಕ, ಬ್ರಿಟನ್ನುಗಳವರ ಉದ್ದಿಮೆಗಳು ಇಲ್ಲಿ ಹುಟ್ಟಬಹುದೆಂದೂ, ಹಿಂದೀ ಉದ್ದಿಮೆಗಳಿಗೆ ಅವುಗಳೊಡನೆ ಸ್ಪರ್ಧಿಸುವದು ಅಸಾಧ್ಯವಾಗಿ ಹಾಗೆಯೇ ಮುಂದೊತ್ತಿದರೆ ಕಾಲಕ್ರಮೇಣ ಭಾರತವು ಅಮೇರಿಕದ ಮಾರ್ಕೆಟಾಗಬಹುದೆಂದೂ ದೂರದರ್ಶಿಗಳು ಶಂಕೆಗೊಳ್ಳುವಂತಾಗಿದೆ. ಕೆಲವು ವಾರಗಳ ಮೊದಲು ಅಮೇರಿಕದ ‘ಎಕ್ಸ್‌ಪೋರ್ಟ್–ಇಂಪೋರ್ಟ್’ ಬ್ಯಾಂಕಿನಿಂದ ಭಾರತಸರಕಾರವು 76,000,000 ಡಾಲರುಗಳ ಸಾಲ ಕೇಳಿದ್ದಿತು. ಅದನ್ನು ಮಂಜೂರುಮಾಡಲು ಅಮೇರಿಕ ಸರಕಾರವಿನ್ನೂ ತಯಾರಾಗಿದೆ ಎಂದು ತಿಳಿದುಬರುತ್ತದೆ. ಅಂತೆಯೇ ಹಿಂದೀ ಸರಕಾರವು ಅಂತರ್ರಾಷ್ಟ್ರೀಯ ಬ್ಯಾಂಕಿನಿಂದ ಅಪೇಕ್ಷಿಸಿರುವ 200ರಿಂದ 300 ಮಿಲಿಯ ಡಾಲರುಗಳ ವರೆಗಿನ ಸಾಲವೂ ದೊರೆಯುವಂತೆ ಅಮೇರಿಕವು ಸಹಾಯಮಾಡಲಿದೆಯಂತೆ.

ತನ್ನ ಒಳಗಡೆಯಲ್ಲಿ ತನ್ನ ಉದ್ದಿಮೆಗಳನ್ನು ಬಲಪಡಿಸುವ ಧ್ಯೇಯವೊಂದನ್ನೇ ಇಟ್ಟುಕೊಂಡು, ‘ರಾಷ್ಟ್ರೀಕರಣ’ದ ಸೊಲ್ಲು—ಅವ್ಯವಹಾರ್ಯ ಗುಲ್ಲು’ ಎಂಬ ಭಾವನೆಯಿಂದ ಭಾರತ ಸರಕಾರವು ಖಾಸಗೀ ಬಂಡವಾಳಗಾರರಿಂದಲೂ ಉದ್ದಿಮೆ ಕ್ಷೇತ್ರದಲ್ಲಿ ಭರದಿಂದ ಕಾರ್ಯಮಾಡಿಸುತ್ತಿದೆ. ಬಹುತೇಕವಾಗಿ ದ್ವಿತೀಯ ಯುದ್ಧಾಂತ್ಯಕಾಲದಲ್ಲೇ ಆರಂಭವಾದ ಭಾರತದ ‘ನಾಗರಿಕ ಆಕಾಶ ಸಂಚಾರ’ ವಿಧಾನವು ಬೆಳೆದು ಈಗ 7 ಕಂಪೆನಿಗಳಿವೆ. ಅವೀಗ 22,092 ಮೈಲುದ್ದದ ನಾಗರಿಕ ವಿಮಾನ ಸರ್ವಿಸುಗಳನ್ನಿಟ್ಟಿವೆ, ಅಂತೆಯೇ 3 ಸಾಗರೋತ್ತರ ಸರ್ವಿಸುಗಳನ್ನು ನಡೆಸುತ್ತಿವೆ. ಒಳಗಡೆಯ ಸರ್ವಿಸು ವಿಮಾನಗಳು ಕಳೆದ ವರುಷ 13,50‥,000 ಮೈಲುಗಳ ಹಾರಾಟಮಾಡಿದ್ದುವೆಂದೂ 342,000ಕ್ಕೂ ಮಿಕ್ಕಿದಷ್ಟು ಜನರನ್ನು ಹೊರದೇಶಗಳಿಗೆ ಹೊತ್ತಿದ್ದುವೆಂದೂ ಪ್ರಕಟವಾಗಿದೆ. ನಾಗರಿಕ ಗಗನ ಸಂಚಾರಾಭಿವೃದ್ಧಿ ಸಂಬಂಧದ ವೆಚ್ಚಕ್ಕಾಗಿ ಭಾರತ ಸರಕಾರವು ತನ್ನ 1949–50 ಬಜೆಟಿನಲ್ಲಿ 192 ಲಕ್ಷವನ್ನಿಟ್ಟಿದೆಯಲ್ಲದೆ, ಮಾಲ್ಕಟ್ಟದ ವಿಮಾನ ನಿಲ್ದಾಣ ರಚನೆಯ ಪ್ರಯತ್ನ ಕೈಕೊಂಡಿದೆ. ಸರ್ವಿಸು ವಿಮಾನಗಳ ಮಟ್ಟಿಗೆ ಇಷ್ಟರಲ್ಲೇ ಭಾರತವು ಪ್ರಪಂಚದಲ್ಲಿ ನಾಲ್ಕನೇ ಸ್ಥಾನಗಳಿಸಿದೆ.

ಈ ರೀತಿ ಸ್ವತಂತ್ರ ಭಾರತದ ಹೆಬ್ಬಾಗಿಲ ಶೃಂಗಾರ ತೋರಿಬರುತ್ತಿರುವಾಗ, ಅದರ ಪಾಕಗೃಹವು ತಾಂಬಿಗುಬ್ಬಿಯಂತೆ—ಶ್ರಮಜೀವಿಗಳ ಜನಸಾಮಾನ್ಯರ ಜೀವನಮಟ್ಟ ಮೇಲೇರುತ್ತಿರುವ ಗಮ್ಯಕಲನವೂ ಕಂಡುಬರುವದಿಲ್ಲವೇಕೆ?

ನವಯುಗದ ವಾಚಕರಲ್ಲಿ.

ನಮ್ಮೊಡನೆ ಪತ್ರವ್ಯವಹಾರ ಮಾಡುವಾಗ ಕೆಲವರು ತಮ್ಮ ಹೆಸರು ವಿಳಾಸ ಇನ್ನೂ ಕೊಡದೆ ಬರೇ ಸಹಿ ಹಾಕಿ ಬಿಡುತ್ತಾರೆ; ಮಾತ್ರವಲ್ಲ, ಸ್ವಂತ ಉತ್ತರವನ್ನೂ ನಿರೀಕ್ಷಿಸುತ್ತಾರೆ. ಆದರೆ ನಾವು ಅಂತಹ ಪತ್ರಗಳಿಗೆ ಲಕ್ಷ್ಯ ನೀಡಲು ಕೊಡುವುದು ಅಸಾಧ್ಯವಾದ್ದರಿಂದ ಪತ್ರವ್ಯವಹಾರ ಮಾಡುವಾಗ ಸಂಪೂರ್ಣ ಹೆಸರು ವಿಳಾಸ ಬರೆಯಬೇಕಾಗಿ ಅಪೇಕ್ಷಿಸುತ್ತೇವೆ.

ಮ್ಯಾನೇಜರ್,
ನವಯುಗ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು **14–4–1949**ರಿಂದ

ಫಿಲ್ಮಿಸ್ತಾನದವರ

ಅಪೂರ್ವ ಕಾಣಿಕೆ.

ದೋ–ಭಾಯಿ

ಉಲ್ಲಾಸ್, ಕಾಮಿನಿ ಕೌಶಲ್

ನಿರೀಕ್ಷಿಸಿರಿ—

ಪ್ರಭಾತ್ ಚಿತ್ರ:–ಸೀತಾಸ್ವಯಂವರ (ಶಾಹು ಮೋದಕ್, ಕಮಲಾ ಕೋಟ್ನಿಸ್)

ಸಿಟಿಡೆಲ್ ಚಿತ್ರ:–ಜ್ಞಾನಸುಂದರಿ (ಚಿನ್ನಪ್ಪ, ಎಮ್. ವಿ. ರಾಜಮ್ಮ)

ಮತ್ತು ಕನ್ನಡ ಚಿತ್ರ:–ದಸರಾ

ಶ್ರೀ ಎಂ. ವಿ. ಹೆಗ್ಡೆಯವರು ಬರೆದ

ನವೀನ ಯಕ್ಷಗಾನ ನಾಟಕಗಳು

ಪದ–ಅರ್ಥಸಹಿತ

ಸ್ವರಾಜ್ಯ ವಿಜಯ

ಹಿಟ್ಲರ್, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪಟೇಲ್, ಗಾಂಧಿ, ಅಜಾದ್, ಕೃಪಲಾನಿ, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರವರ್ಗ.

ಬೆಲೆ ಬರೇ 0 8 0

ಹೈದರಾಬಾದ್ ವಿಜಯ

[illegible], ನೆಹರು, ಪಟೇಲ್, ರಜ್ವಿ, ನಿಜಾಮ್, ಲಾಯಿಕ್ ಅಲಿ, ರಾಜೇಂದ್ರ ಚೌಧರಿ ಮೊದಲಾದವರೇ ಇದರ ಪಾತ್ರವರ್ಗ.

ಬೆಲೆ 0 3 0

ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ,

ಇಲ್ಲಿ ದೊರೆಯುತ್ತವೆ.

ಕರ್ನಾಟಕಕ್ಕೆ ವಿಶ್ವ ವಿದ್ಯಾಲಯ. ಮುಂಬಯಿ ಶಾಸನ ಸಭೆಯಲ್ಲಿ ಮಸೂದೆಯ ಮಂಡನೆ

ಕರ್ನಾಟಕ ಜನತೆಯು ಆಶ್ಯಗಕ್ಕದ ಬೇಡಿಕೆಯಾದ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಮುಂಬಯಿ ಸರಕಾರದ ಪ್ರಧಾನ ಮಂತ್ರಿ ಶ್ರೀ ಬಿ. ಜಿ. ಖೇರರು ಒಂದು ಮಸೂದೆಯನ್ನು ಶಾಸನ ಸಭೆಯಲ್ಲಿ ಇದೇ ತಾ ೩ರಲ್ಲಿ ಮಂಡಿಸಿದರು.

ಶ್ರೀ ಖೇರರು ಮಸೂದೆಯನ್ನು ಮಂಡಿಸುತ್ತಾ-ಪ್ರದೇಶಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ತತ್ವವನ್ನು ಬಹಳ ದಿನಗಳ ಹಿಂದೆ ಮನ್ನಿಸಲಾಗಿತ್ತು. 1920ರಲ್ಲಿ ಸ್ಯಾಡ್ಲರ ಸಮಿತಿ ಹಾಗೂ ಸಟಿಲವಾಡ ಸಮಿತಿಗಳು ಪ್ರದೇಶಿಕ ವಿಶ್ವವಿದ್ಯಾಲಯಗಳನ್ನು ಮಾಡಿದಯಲ್ಲದೆ ಕರ್ನಾಟಕ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಇರಾದೆಯಿಂದ ನ್ಯಾಯಮೂರ್ತಿ ಎಸ್. ಎಸ್. ಲೋಕೂರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಲಾಯಿತು.

ಈಗ ಮಂಡಿಸಲಾದ ಕರ್ನಾಟಕ ವಿಶ್ವವಿದ್ಯಾಲಯದ ಮಸೂದೆಯು ೧೯೪೮ರ ಪೂನಾ ವಿಶ್ವವಿದ್ಯಾಲಯದ ಮಸೂದೆಯನ್ನು ಹೋಲುತ್ತದೆ. ಈ ವಿಶ್ವವಿದ್ಯಾಲಯದಲ್ಲಿ ಬೋಧ ಭಾಷೆಯು ಯಾವುದಾಗಬೇಕೆಂಬುದಾಗಿ ಈಗ ನಿರ್ಧರಿಸುವುದು ಕಷ್ಟವಾದುದು. ಹಿಂದಿಯು ರಾಷ್ಟ್ರಭಾಷೆಯೆಂದು ನಿರ್ಧರಿಸಲ್ಪಡುವ ತನಕ ಇಂಗ್ಲಿಷ್ ಬೋಧ ಭಾಷೆಯಾಗಿರಲಿ ಎಂದು ಹಲವರ ಅಭಿಪ್ರಾಯವಾಗಿರುತ್ತದೆ. ಆಂಗ್ಲಭಾಷೆಯು ನನ್ನನ್ನು ಹಾಳುಮಾಡಿದೆ ಯೆಂಬದಾಗಿ ಅವರ ಮತ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡವೇ ಬೋಧೆ ಭಾಷೆಯಾಗತಕ್ಕದೆಂದು ಲೋಕೂರ ಸಮಿತಿಯು ಶಿಫಾರಸು ಮಾಡಿದೆ. ಸರಕಾರವು ಈ ವಿಷಯದಲ್ಲಿ ಯಾವ ನಿರ್ಧಾರವನ್ನೂ ಮಾಡಿರುವುದಿಲ್ಲ. ಈ ನಿಮಿತ್ತವಾಗಿ ನಿರ್ಮಿಸಲಾದ ಸರ್. ರಾಧಾಕೃಷ್ಣನ್ನರವರ ಅಧ್ಯಕ್ಷತೆಯ ಸಮಿತಿಯು ಈ ವಿಚಾರ ಬೇಗನೆ ನಿರ್ಣಯ ಕೊಡಲಿದೆ.

ಈ ಕರ್ನಾಟಕ ವಿಶ್ವವಿದ್ಯಾಲಯವು ತಾನೆ ಕಾಲೇಜುಗಳನ್ನು ನಡೆಸಲಾರದು, ಮನ್ನಣೆ ಕೊಡುವ ವಿಶ್ವವಿದ್ಯಾಲಯವು ಮಾತ್ರ ಆಗುವುದು. ಮುಂಬಯಿ ಗವರ್ನರರು ಈ ವಿಶ್ವವಿದ್ಯಾಲಯದ ಕುಲಪತಿಗಳಾಗುವಲ್ಲದೆ ಸಂಬಳದ ಮೇಲೆ ಉಪಕುಲಪತಿಗಳೊಬ್ಬರನು ನೇಮಕಮಾಡಲಾಗುವುದು

ಕರ್ನಾಟಕ ವಿಶ್ವವಿದ್ಯಾಲಯವು ಧಾರವಾಡದಲ್ಲಾಗುವುದು ಎಂದು ತಿಳಿದುಬರುತ್ತದೆ.

1949–50ರಲ್ಲಿ ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂದು ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1-4-0 ಕಳುಹಿಸಿರಿ. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು ಲಾಭ ನಷ್ಟಗಳು, ಮದುವೆ, ಮುಂಜಿ, ಸಂತತಿ, ತೇಜಿ ಮಂದಿ, ಸಮಯಾದಿಗಳನ್ನು ಸೂಚಿಸುವೆವು ಅಲ್ಲದೆ ದುಷ್ಟಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನು ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು ಟಪ್ಪಾಲು ವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,
Raj Jyotshi
(N. Y. U.) Jullundur City.

ಉಡುಪಿ

ಮದ್ರಾಸು ಯುನಿವರ್ಸಿಟಿ ಇನ್ಸ್‌ಪೆಕ್ಷನ್ ಕಮಿಟಿಯ ಮೆಂಬರರಾದ ರಾವ್ ಸಾಹೇಬ್ ಆರ್. ಕೃಷ್ಣಮೂರ್ತಿ, ಪಚಿಯಪ್ಪಾಸ್ ಕಾಲೇಜಿನ ಪ್ರಿನ್ಸಿಪಾಲ್, ಶ್ರೀ ಕೆ. ನರಸಿಂಗರಾವ್, ಎಸೋಸಿಯೇಟ್ ಪ್ರೊಫೆಸರ್, ಕ್ರಿಶ್ಚಿಯನ್ ಕಾಲೇಜು, ಶ್ರೀ ಜಿ. ಆರ್. ನಾರಾಯಣ ಅಯ್ಯರ್, ಪ್ರಿನ್ಸಿಪಾಲ್ ಮಹಾರಾಜಾ ಕಾಲೇಜು, ಎರ್ನಾಕುಳಂ, ಶ್ರೀ ಕೆ. ಎಸ್. ಯು. ನಾಯರ್, ಪ್ರಿನ್ಸಿಪಾಲ್, ಗವರ್ನಮೆಂಟ್ ವಿಕ್ಟೋರಿಯಾ ಕಾಲೇಜು, ಪಾಲ್ಘಾಟ್ ಮತ್ತು ಶ್ರೀ ದೇವರಾಜ, ಜಿ, ಪಾವುಲ್, ಲೆಕ್ಚರರ್, ಅಮೇರಿಕನ್ ಕಾಲೇಜು, ಮಧುರೆ. ಇವರು ಇದೇ ತಾ 11ರಲ್ಲಿ ಉಡುಪಿಯಲ್ಲಾಗಲಿರುವ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು ಕಟ್ಟಡದ ಸ್ಥಳ, ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುವರೆ ಉಡುಪಿಗೆ ಆಗಮಿಸಿದರು. ಕಾಲೇಜು ಕಟ್ಟಡಕ್ಕೆ ಸಂಬಂಧಿಸಿದ ಕೆಲವು ಸ್ಥಳಗಳನ್ನು ನೋಡಿದರು. ಸಂಜೆ ಮುನಿಸಿಪಲ್ ಮ್ಯೆನ್ ಶಾಲೆಯಲ್ಲಿ ಮುನಿಸಿಪಲ್ ಚೇಯರ್‌ಮೆನ್ ಶ್ರೀ ಪಿ ಉಪೇಂದ್ರ ಶ್ರೀನಿವಾಸ ನಾಯ್ಕರು ಮಾನ್ಯ ಅತಿಥಿಗಳಿಗೆ ಚಹಾ ಸತ್ಕಾರವನ್ನಿತ್ತು ಗೌರವಿಸಿದರು. ಕುಂದಾಪುರ ಡಿವಿಜನಿಗೆ ಉಡುಪಿ ಕೇಂದ್ರದಲ್ಲಿ ಕಾಲೇಜು ಸ್ಥಾಪಿಸಲ್ಪಡಬೇಕಾದುದು ಅತ್ಯಾವಶ್ಯಕವೆಂದೂ ಸೂಚಿಸಿದರು. ರಾವ್ ಸಾಹೇಬ್ ಆರ್. ಕೃಷ್ಣಮೂರ್ತಿಯವರು ತನಗೂ ತನ್ನ ಗೆಳೆಯರಿಗೂ ಕೊಟ್ಟ ಸತ್ಕಾರಕ್ಕಾಗಿ ಆಭಾರ ಸೂಚಿಸಿ, ಕಾಲೇಜು ಸ್ಥಾಪನೆಗೆ ಪೂರ್ವ ಸಿದ್ಧತೆಯಾಗಿ ಬೇಕಾಗುವ ಹಣ, ಕಟ್ಟಡ, ವಿದ್ಯಾರ್ಥಿಗಳ ಸಂಖ್ಯೆ, ಆಟದ ಸ್ಥಳ ಮೊದಲಾದ ಶರ್ತಗಳಿವೆಯೆಂದೂ ಅವನ್ನು ಉಡುಪಿಯ ಉದಾರಿ ಜನತೆ, ಬೇಂಕುಗಳು ಪೂರೈಸುವರೆ ಮುಂದು ಬಂದರೆ ಕಾಲೇಜುಸ್ಥಾಪನಾ ಕಾರ್ಯವು ಸುಲಭಸಾಧ್ಯವಾಗುವುದೆಂದೂ, ಕುಂದಾಪುರ ಡಿವಿಜನಿನ ಮಕ್ಕಳ ಪ್ರೌಢ ಶಿಕ್ಷಣಕ್ಕಾಗಿ ಕಾಲೇಜಿನ ಆವಶ್ಯಕತೆ ಯಿರುವುದನ್ನು ತಾವೂ ಮನಗಂಡಿರುವೆವೆಂದೂ ಆದ್ದರಿಂದ ಬೇಕಾಗುವ ವಿಪುಲ ಹಣವನ್ನು ಒಡನೆ ಒದಗಿಸಿರೆಂದೂ ಹೇಳಿದರಲ್ಲದೆ ಮುನ್ಸಿಪಾಲಿಟಿಯವರು ಕಾಲೇಜು ಆಗುವ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಮ್ಯೆನ್‌ಶಾಲಾ ಕಟ್ಟಡವನ್ನು ಬಿಟ್ಟುಕೊಡಲು ಒಪ್ಪಿರುವರೆಂದೂ ಇದು ಶುಭಚಿಹ್ನೆಯೆಂದೂ ಹೇಳಿದರು. ಸೆನೆಟ್ ಮೆಂಬರ್ ಶ್ರೀಮತಿ ಲೀಲಾಬಾಯಿ ಕಾಮತರು ಉಡುಪಿಯಲ್ಲೇ ಶೀಘ್ರವಾಗಿ ಕಾಲೇಜ್ ಆಗುವ ಅಗತ್ಯವನ್ನು ವಿವರಿಸಿ ಆಭಾರ ಸೂಚಿಸಿ ಕನ್ನಡದಲ್ಲಿ ಮಾತನಾಡಿದ್ದನ್ನು ಶ್ರೀ. ಟಿ. ವೈ. ಪೈಗಳು ಇಂಗ್ಲಿಷಿನಲ್ಲಿ ಭಾಷಾಂತರಿಸಿ ಹೇಳಿದರು. ಕಮಿಶನ್ ಸದಸ್ಯರು ಉಡುಪಿಗೆ ಒಲಿದ ಚಿಹ್ನೆ ತೋರುವುದರಿಂದ ಬರುವ ಜೂನಿನಲ್ಲೇ ಕಾಲೇಜಾಗುವ ಸಂಭವವಿದೆ. ಮುನಿಸಿಪಲ್ ಕ್ಷೇತ್ರದೊಳಗೆನೇ ಕಾಲೇಜು ಕಟ್ಟಡವಾದರೆ ಜನಂಗೆ ತುಂಬಾ ಅನುಕೂಲವಾದೀತು.

ವರ್ಗಾವರ್ಗಿ ಇಲ್ಲಿಯ ಜನಪ್ರೀತ ಸಬ್ ಪೋಸ್ಟ್ ಮಾಸ್ತರ್ ಶ್ರೀ ಬಿ. ಕೆ. ಬಾಳಿಗರು ಕಾಸರಗೋಡಿನ ಸಬ್ ಪೋಸ್ಟ್ ಮಾಸ್ತರರಾಗಿಯೂ ಅಲ್ಲಿಯ ಶ್ರೀ ಶೇಷಗಿರಿರಾಯರು ಇಲ್ಲಿಯ ಸಬ್ ಪೋಸ್ಟ್ ಮಾಸ್ತರರಾಗಿಯೂ ಪರಸ್ಪರ ವರ್ಗಾಯಿಸಲ್ಪಟ್ಟಿದ್ದಾರೆ. ಇಲ್ಲಿಯ ಪೋಲೀಸು ಡಿಪ್ಯುಟಿ ಸುಪರಿಂಟೆಂಡೆಂಟ್ ಶ್ರೀ ಪಿ. ಕೆ. ನಾರಾಯಣನ್ ನಾಯರರು ಮಧುರೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇವರ ಸ್ಥಾನಕ್ಕೆ ಪಿ. ಕೆ. ವಿ. ಮಹಮ್ಮದ್ ಬಂದಿರುವರು.

ನೀರಿನ ಅಭಾವ! ಧೂಳಿನ ಪ್ರಭಾವ:– ದಿನೇ ದಿನೇ ಜಾಸ್ತಿಯಾಗುತ್ತಲಿದೆ. ಕೆಲವು ರಸ್ತೆಗಳಿಗಂತೂ ಕ್ರಮವಾಗಿ ನೀರು ಹಾಕುವುದು ತೋರಿಬರುವುದಿಲ್ಲ. ವಿಶೇಷ ಜನ, ವಾಹನ ಸಂಚಾರವಿರುವ ಸಂತೆಕಟ್ಟೆಯಿಂದ ರಥಬೀದಿಗೆ ಹೋಗುವ ಪದುಬೀಟ ರಸ್ತೆಯುದ್ದಕ್ಕೆ ಧೂಳಿನ ಹಾವಳಿ ಸಾಕಷ್ಟಿದೆ. ಮುನಿಸಿಪಾಲಿಟಿಯವರು ಈ ಕಡೆ ಗಮನ ಕೊಡಬೇಕಾದುದು ಅತ್ಯಾವಶ್ಯಕ.

ಸುಲಭ ದರದಲ್ಲಿ
ಲಗ್ನ ಪತ್ರಿಕೆಗಳು
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ.

ತಮ್ಮಷ್ಟಕ್ಕೆ ತಾವು ಇಂಗ್ಲಿಷ್ ಕಲಿಯಲು ಅನುಕೂಲವಾದ
ಡಾ| ಕೊರಡ್ಕಲ್ ಶ್ರೀನಿವಾಸರಾಯರ
ಸುಲಭದಲ್ಲಿ ಇಂಗ್ಲಿಷ್
ಎಂಬ ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1–8–0.

ಸರ್ವಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನವನ್ನು ವಿವರಿಸುವ ಡಾ| ಕೊರಡ್ಕಲ್ಲರ
ಮನೆ ಮದ್ದು
ಎಂಬ ಗೃಹವೈದ್ಯ ಬೆಲೆ ರೂ. 2-0-0

ಶಾಲೆ, ಕಾಲೇಜುಗಳ,
ಪಂಚಾಯತ ಬೋರ್ಡ್, ಗ್ರಾಮ ಸಂಘಗಳ,
ಲೈಬ್ರರಿಗಳಿಗೆ
ಬೇಕಾಗುವ ಕರ್ನಾಟಕದ ಬೇರೆ ಬೇರೆ ಭಾಗಗಳ
ಕನ್ನಡ ಪುಸ್ತಕಗಳು
ಆಕರ್ಷಕ ದರದಲ್ಲಿ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೋಕರ್ಣ ಸಮುದ್ರದಲ್ಲಿ ಗೆದಗಿಸವರ ಹೆಣಗಳು!

ನಿಗೂಢ ಕೊಲೆಯ ಸುಳಿವು

ಕಲ್ಲುಕಟ್ಟಿ ಸಮುದ್ರದಲ್ಲಿ ಒಗೆದ ಹೆಣಗಳು ಕೆಲ ದಿನಗಳ ಹಿಂದೆ ಗೋಕರ್ಣದ ಸಮುದ್ರ ತೇಲಿಬಂದು ದಂಡೆಗೆ ಹತ್ತಿದ್ದರಿಂದ ಆ ಜನರ ನಿಗೂಢ ಕೊಲೆಯಾಗಿರಬೇಕೆಂದು, ಜನರಲ್ಲಿ ನಾನಾತರದ ತರ್ಕವಿತರ್ಕ ನಡೆದಿತ್ತು. ಆದರೆ ಆ ಹೆಣಗಳ ಮೇಲಿಂದ ಅವು ಯಾವ ಊರಿನ ಜನರು ಹೆಣಗಳೆಂಬದೂ ತಿಳಿಯದಂತಾಗಿತ್ತು.

ಆದರೆ ಪೋಲೀಸರು ಈ ಶವಗಳ ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ವಿಷಪ್ರಯೋಗಮಾಡಿ ಅವರನ್ನೆಲ್ಲ ಕೊಂದು ಸಮುದ್ರದಲ್ಲಿ ಒಗೆದಿರಬೇಕೆಂದು ಪರೀಕ್ಷೆ ನಡೆಸಿದ ಡಾಕ್ಟರರು ಅಭಿಪ್ರಾಯಪಟ್ಟದ್ದರಿಂದ ಜವಾಬ್ದಾರಿಯುತ ಶೋಧ ನಡೆಸಲು ಅಲ್ಲಿ ಮಲ್ಲಾಪುರದಿಂದ ಹುಬ್ಬಳ್ಳಿಯ ವರೆಗಿನ ಮೂರನೇ ವರ್ಗದ ರೇಲ್ವೆ ತಿಕೇಟುಗಳು ಸಿಕ್ಕಿದ್ದವು ಕಂಡುಬಂದಿತ್ತೆಂದೂ ಈ ತಿಕೇಟುಗಳಿಂದ ಸಮುದ್ರದಲ್ಲಿ ತೇಲಿಬಂದ ಅಜ್ಞಾತ ಪ್ರೇತಗಳ ಹೆಚ್ಚಿನ ವಿವರಗಳು ಮಲ್ಲಾಪುರ–ಗದಗ ಇಲ್ಲಿ ದೊರೆಯಬಹುದೆಂದು ಹೆಚ್ಚಿನ ವಿಚಾರಣೆಗೆ ಪೋಲೀಸರು ಗದಗಿಗೆ ಬಂದು ಪ್ರಯತ್ನಿಸಲು ಅವರು ಕೊಲೆಯಾದ ಜನರು ಗದಗಿನವರೆಂದು ತಿಳಿದು ಬಂದಿದೆಯೆಂದೂ ಈಗ ಗೊತ್ತಾಗಿದೆ. ಈ ನಿಗೂಢ ಕೊಲೆಯ ಹೆಚ್ಚಿನ ಶೋಧ ನಡೆದಿದ್ದು ವಿವರಗಳು ಇನ್ನೂ ಹೊರಬಿದ್ದಿಲ್ಲ.

(ಸಂ. ಕ)

ಮಂಗಳೂರು.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ:–ಯು ತಾ. 13ನೇ ಬುಧವಾರ ಸಾಯಂಕಾಲ 5 ಗಂಟೆಗೆ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದಲ್ಲಿ ನೆರವೇರಿತು. ನೂತನವಾಗಿ ಕಟ್ಟಲ್ಪಟ್ಟಿರುವ ವಿದ್ಯಾರ್ಥಿನಿ ಭವನದ ಹೊಸ ಕಟ್ಟೋಣದ ಪ್ರವೇಶ ಸಮಾರಂಭವು ಜಿಲ್ಲಾ ಕಲೆಕ್ಟರ್ ಶ್ರೀ ಯಸ್. ಎಲ್. [illegible] ವಾರರ ಅಧ್ಯಕ್ಷತೆಯಲ್ಲಿ ಅಂದೇ ಸಂಜೆ 4 ಗಂಟೆಗೆ ನೆರವೇರಿತ್ತೆಂದೂ ತಿಳಿದು ಬರುತ್ತದೆ. ವಿವರವನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

ಸರ್ಕಸ್ ಪ್ರದರ್ಶನ:– ದ. ಕನ್ನಡ ಜಿಲ್ಲಾ ಹೆಲ್ತ್ ಲೀಗಿನವರ ಉತ್ತಮ ತಂಡ ಸರ್ಕಸ್ ಪ್ರದರ್ಶನವೊಂದು ತಾ 2, 3, 4, ರಲ್ಲಿ ಕೇಂದ್ರ ಮೈದಾನಿನಲ್ಲಿ ನಡೆಯಿತೆಂದು ತಿಳಿದು ಬರುತ್ತದೆ.

ಓದಲೇ ಬೇಕಾದ ಪುಸ್ತಕಗಳು
ಶ್ರೀ. ಕೆ. ಕೆ. ಶೆಟ್ಟರ
ಪ್ರೇಮ ವಿಜಯ
(ಸಾಮಾಜಿಕ ನಾಟಕ)
ಬೆಲೆ ರೂ 1–0–0
ವ್ಯಭಿಚಾರಿಣಿ ಯಾರು
(ಸಾಮಾಜಿಕ ನಾಟಕ)
ಬೆಲೆ ರೂ 1–0–0
ವಿವಿಧ ಕತೆಗಾರರ
ಪ್ರೇಮ ಪ್ರವಾಹ
(ಕಥಾ ಸಂಕಲನ)
ಬೆಲೆ ರೂ 0–8–0
ಸಿಗುವಸ್ಥಳ
ನವಭಾರತ ಬುಕ್ ಡಿಪೊ,
ಉಡುಪಿ.

ಮಂಗಳೂರು

ತಿದ್ದುಪಡಿ:—ಕಳೆದ ನಮ್ಮ ಸಂಚಿಕೆಯಲ್ಲಿ ಪ್ರಕಟವಾದ ದೇವಾಲಯ ಪ್ರವೇಶ ಸುದ್ದಿಯಲ್ಲಿ ಡಾ|| ಯು. ಪಿ. ಮಲ್ಯರ ಹೆಸರು ಸೇರಿಹೋಗಿದೆ. ಡಾ|| ಮಲ್ಯರು ದೇವಾಲಯ ಪ್ರವೇಶವಾಗುವಾಗ ಮಂಗಳೂರಲ್ಲಿರಲಿಲ್ಲ. ತಪ್ಪಿಗಾಗಿ ವಿಷಾದಿಸುವೆವು. ಸಂ. ನ.

ಸತ್ಕಾರಕೂಟ:—ಹೈದರಾಬಾದಿನ ವೆಟರ್ನರಿ ಸರ್ಜನರಾಗಿದ್ದು ಹೆಸರಾಂತ ಸಂಸ್ಥೆಯ ಸರಕಾರದಿಂದ ವಿದೇಶ ವೇತನ ಪಡೆದು ಇಂಗ್ಲೆಂಡಿಗೆ ಹೋಗಿ ಬೆಕ್ಟೀರಿಯೋಲೋಜಿಯಲ್ಲಿ ಪಿ ಎಚ್. ಡಿ. ಪದವಿ ಪಡೆದು ಹಿಂತಿರುಗಿದ ಡಾ|| ಕೆ. ಪದ್ಮನಾಭ ಸೆಟ್ಟರನ್ನು ಈಚೆಗೆ 'ನವೋದಯ' ಕಾರ್ಯಾಲಯದಲ್ಲಿ ಸತ್ಕಾರಕೂಟದಿಂದ ಸನ್ಮಾನಿಸಲಾಯಿತು, ನಗರದ ಹಲವು ಗಣ್ಯರು ಭಾಗವಹಿಸಿದ್ದರು.

ಬಿಹಾರು ಸರಕಾರದ ಡಿವಿಜನಲ್ ವೆಲ್‌ಫೇರ್ ಆಫೀಸರರಾದ ಶ್ರೀ ಜಯದೇವದಾಸರು ಈಚೆಗೆ ಮಂಗಳೂರಿಗೆ ಬಂದಿದ್ದರು. ಇವರು ದಕ್ಷಿಣ ಭಾರತದಲ್ಲಿ ಹರಿಜನ ಅಭಿವೃದ್ಧಿ ಕಾರ್ಯವು ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದನ್ನು ತಿಳಿಯಲು ಬಂದವರಾಗಿರುತ್ತಾರೆ. ಮೂಡುಬಿದ್ರೆಯ ಕಸೋರಿ ಲೇಬರ್ ಶಾಲೆ, ಅಲಂಗಾರ್ ಲೇಬರ್ ಶಾಲೆ, ಕಾರ್ಕಳದ ಶಬರಿ ಆಶ್ರಮ ಮೊದಲಾದ ಹರಿಜನ ಕೇಂದ್ರಗಳನ್ನು ಸಂದರ್ಶಿಸಿದರು. ಮಂಗಳೂರು ಹರಿಜನ ಕೇಂದ್ರಗಳನ್ನು ನೋಡಿದರು. ಇವರ ಸಂಚಾರದಲ್ಲಿ ಜಿಲ್ಲಾ ಹರಿಜನ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಿ. ಜಿ. ಪಿಂಟೊ, ಕೆ. ಎಲ್. ಎನ್. ರಾವ್ ಮೊದಲಾದವರಿದ್ದರು.

ತ್ರಿಮೂರ್ತಿ ಸಮಿತಿಯ ವರದಿಯ ಕುರಿತು ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜಿ. ಜಿನರಾಜ ಹೆಗ್ಗಡೆಯವರು ತನ್ನದೊಂದು ಹೇಳಿಕೆಯಲ್ಲಿ ತ್ರಿಮೂರ್ತಿ ಸಮಿತಿಯ ವರದಿಯು ಕನ್ನಡಿಗರಿಗೆ ನಿರಾಶಾಜನಕವಿದೆ ಎಂದು ಹೇಳಿದ್ದಾರೆ. ತ್ರಿಮೂರ್ತಿ ಸಮಿತಿಯು ಮೈಸೂರು ಮತ್ತು ಹೈದರಾಬಾದಿನ ಕುರಿತು ಮೌನವಾಗಿ ಮೂಕನಾಗಿದೆ. ಬಗ್ಗೆ ನಾವವರನ್ನು ಅಭಿನಂದಿಸಬೇಕು. ಈ ಬೆಳಕನ್ನು ಈ ವರೆಗೆ ಕಾಣದ ನಮ್ಮ ಗೆಳೆಯರು ತಮ್ಮ ಧೋರಣೆಯನ್ನು ಇನ್ನಾದರೂ ಬದಲಿಸುವರೆಂದು ಆಶಿಸುವೆವು.

The Vijaya Bank Ltd.
Udipi.
ದಿ. ವಿಜಯಾ ಬೇಂಕ್ ಲಿಮಿಟೆಡ್,
ಉಡುಪಿ.
ನೋಟೀಸು

ಮಂಗಳೂರು ತಾಲೂಕು ಬಲ್ಕುಂಜೆ ಗ್ರಾಮದ ಗುಡ್ಡ ಸೆಟ್ರಮನೆ ವಿಟ್ಠಲ ಗುಡ್ಡ ಸೆಟ್ಟಿ ಎಂಬವರು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಸಾಲ ರೂಪಾಯಿ 50|- ನ್ನು ಅವಧಿ ತೀರಿದರೂ ಮರುಪಾವತಿ ಮಾಡದೆ ಬಡ್ಡಿ ಸಮೇತ ಬಾಕಿ ಮಾಡಿಕೊಂಡಿರುವುದರಿಂದ ಮತ್ತು ಈ ಬಗ್ಗೆ ಕೊಟ್ಟ ರಿಜಿಸ್ಟ್ರ ನೋಟೀಸು ಮೇಲಿನವರು ಸ್ವೀಕರಿಸದಿರುವ ಕಾರಣ ಸಹಿತವಾಗಾಸು ಬಂದಿರುವುದರಿಂದ ಈ ಮೂಲಕ ಜಾಹೀರು ಮಾಡಿಕೊಳ್ಳುವುದೇನೆಂದರೆ, ಸದ್ರಿ ನಗಗಳನ್ನು ತಾ. 23-4-49ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಏಲಂ ಅದೇ ದಿವಸ ಸಂಪೂರ್ಣವಾಗದಿದ್ದರೆ ಬೇಂಕಿಗೆ ಯುಕ್ತ ಕಂಡ ದಿನಕ್ಕೆ ಮುಂದುವರಿಸಲಾದೀತು, ತಿಳಿದಿರುವುದು.

K. Sheenappa Rai,
Agent, udipi
Office of the Bnnk udipi 11-4-49

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಳಿಯ ಸಭೆಯು ತಾ 7ರಲ್ಲಿ ಶ್ರೀ ಅಮ್ಮೆಂಬಳ ಕೃಷ್ಣರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪಾಣೆಮಂಗಳೂರಲ್ಲಿ ಎಪ್ರಿಲ್ ತಿಂಗಳ ಕೊನೆಯಲ್ಲಿ ಜರಗಲಿರುವ ರಾಜಕೀಯ ಪರಿಷತ್ತಿನ ಕುರಿತು ಈ ವರೆಗಾದ ಕೆಲಸಗಳ ಮಾಹಿತಿಯನ್ನು ಶ್ರೀ ಕೆ. ಕೆ. ಸೆಟ್ಟರು ಕೊಟ್ಟರು. ಶ್ರೀಗಳಾದ ಕೆ. ಟಿ. ಭಾಷ್ಯಂ, ಪಿ. ಜಿ. ಬೇರ್, ಸುಚೇತಾ ಕೃಪಾಲಿನಿ ಮೊದಲಾದವರನ್ನು ಪರಿಷತ್ತಿಗೆ ಆಮಂತ್ರಿಸಬೇಕೆಂಬ ನಿರ್ಣಯವಾಯಿತು.

ದ. ಕ. ಒಟೊಮೋಬೈಲ್ ಯೂನಿಯನ್ನಿನ ಸಭೆ ಈಚೆಗೆ ಜರಗಿದಾಗ, ಇಂಡಸ್ಟ್ರಿಯಲ್ ಟ್ರೈಬ್ಯೂನಲ್‌ನವರು ಕೊಟ್ಟ ಎವಾರ್ಡುಗಳನ್ನು ಸರಕಾರದವರು ನ್ಯಾಯವೆಂಬುದಾಗಿ ನಿರ್ಣಯಿಸುವರೆ ಮಂಜೂರು ಮಾಡಿದ ಮುಸೂದೆಯಂತೆ, ಮುಷ್ಕರ ಹೂಡುವುದರ ಕುರಿತು ಮತ ತೆಗೆಯುವುದನ್ನು ಹಿಂದೆಹಾಕಬೇಕಾಗಿ ನಿರ್ಣಯವಾಯಿತು.

ಕಳವಿಗಾಗಿ ಕೇಡಿ ಗುಡ್ಡೆ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಿಂದ ಕಳೆದ ವರ್ಷ ಎಪ್ರಿಲ್ ತಿಂಗಳಲ್ಲಿ ಕಳವಾದ ಕಾಣಿಕೆ ಡಬ್ಬಿ, ಆರತಿ ಇತ್ಯಾದಿಗಳನ್ನು ಪಡಕೊಂಡ ಆರೋಪದ ಮೇಲೆ ಕೋಟೆಕಣಿ ಇದಿನಬ್ಬಾರಿಗೆ ಎರಡು ವರ್ಷ ಕಠಿಣ ಸಜೆ ಮತ್ತು ಜೈಲಿನಿಂದ ಬಂದು ಒಂದು ವರ್ಷದ ಪೋಲೀಸರ ಜಾಗ್ರತೆಯ ನೋಟಕ್ಕೆ ಒಳಗಾಗಿರುವಂತೆ ವಿಧಿಸಲಾಗಿದೆ.

ಸತ್ಕಾರಕೂಟ ಮೊಗವೀರ ಲೇಬರ್ ಯೂನಿಯನ್ ಮಂಗಳೂರು, ಇದರ ಆಶ್ರಯದಲ್ಲಿ ಇದರ ಅಧ್ಯಕ್ಷರೂ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯೂ ಆಗಿದ್ದು ಈಗತಾನೇ ಗೌರವ ಬೆಂಚ್ ಮೆಜಿಸ್ಟ್ರೇಟರಾಗಿರುವ ಶ್ರೀ ಎಚ್. ಕೆ. ತಿಂಗಳಾಯರಿಗೂ, ದ. ಕ. ಮೊಗವೀರ ಮಹಾಜನ ಸಂಘದ ನೂತನ ವರ್ಷದ ಅಧ್ಯಕ್ಷ ಶ್ರೀ ಎಮ್. ಕೆ. ಬಸಪ್ಪನವರಿಗೂ ಫಿಶರೀಸ್ ಅಸಿಸ್ಟೆಂಟ್ ಡೈರೆಕ್ಟರರಾಗಿದ್ದು ಈಚೆಗೆ ನಿವೃತ್ತರಾದ ಶ್ರೀ ಎನ್. ಬಿ. ಕೆಮ್ಮಾರು, ಈ ಮೂವರು ಮಹನೀಯರಿಗೆ ಶ್ರೀ ಬಿ. ಮೋನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಈಚೆಗೆ ಒಂದು ಸಂತೋಷ ಕೂಟ ಏರ್ಪಡಿಸಿ ಸತ್ಕಾರ ನೀಡಲಾಯಿತು.

ಜಿಲ್ಲಾ ಬೋರ್ಡ್ ಚುನಾವಣೆ: ಈಗ ಇದ್ದ ಮತದಾರ ಪಟ್ಟಿಗಳನ್ನೇ ಉಪಯೋಗಿಸಿ ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳನ್ನು ನಡೆಸಲು ಮದ್ರಾಸ್ ಸರಕಾರವು ನಿರ್ಣಯ ಮಾಡಿರುತ್ತದಷ್ಟೆ. ಆದರಂತೆ ಹೊಸತಾಗಿ ಚುನಾಯಿಸಲ್ಪಡುವ ಸದಸ್ಯರು ಬರುವ ಜುಲಾಯಿ ತಾ 2ಕ್ಕೆ ಅಧಿಕಾರಕ್ಕೆ ಬರುವಂತಾಗಬೇಕೆಂದು ಸರಕಾರದವರು ಪ್ರಕಟಿಸಿರುತ್ತಾರೆ.

ಮಾನ್ಯ ಮಂತ್ರಿ ಶಾಂತೇಶನಂದವರು (ಕೇಂದ್ರ) ಕಣ್ಣಾನೂರಿನಿಂದ ತಾ 21ಕ್ಕೆ ಬಂದು ಕೆನರಾ ಚೇಂಬರ್ ಒಫ್ ಕಾಮರ್ಸಿನ ವಾರ್ಷಿಕ ದಿನದ ಅಧ್ಯಕ್ಷತೆ ವಹಿಸಿ ಮಂಗಳೂರು, ಮಲ್ಪೆ ಬಂದರುಗಳನ್ನು ಸಂದರ್ಶಿಸಿ, ಕೆನರಾ ವರ್ಕ್‌ಶೋಪಿನ ಹೊಸ ಶಾಖೆಯನ್ನು ತೆರೆದು ತಾ 23ನೇ ಬೆಳಿಗ್ಗೆ ಮಡಿಕೇರಿ, ಬೇಲೂರು, ಹಳೆಬೀಡುಗಳನ್ನು ನೋಡಿಕೊಂಡು ಮೈಸೂರಿಗೆ ತೆರಳುವರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಪಾರ ಮಳಿಗೆ,
ರಥಬೀದಿ, ಉಡುಪಿ

ಋತುಃಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಬಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 5- [ವಿ. ಪಿ. ಖರ್ಚು ಪ್ರತ್ಯೇಕ]

Mis. P. DEVEE, L. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ಹಾರ್ಲೆಮ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ಹಾರ್ಲೆಮ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರ ಮಾಡಲ್ಪಟ್ಟಿದೆ.



ನಮ್ಮ ಹಾರ್ಲೆಮ್ ಟಿಲ್ಲಿ ಹಾರ್ಲೆಮರ್ ತೈಲವನ್ನು ಸ್ವಲ್ಪ ಸಮಯ ಸೇವಿಸಿದವರಿಗೆ ಉಪಯೋಗಪಡಿಸಲ್ಪಡುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ಹಾರ್ಲೆಮ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಸುಡುವಂತೆ ಶುದ್ಧ ವನಸ್ಪತಿಗಳ ಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ಹಾರ್ಲೆಮ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರರೋಗ, ಬಹುಮೂತ್ರ, ಸೀಮೂತ್ರ, ಆನೆಕೋಲ, ಕಲಿಜೆಯ ರೋಗಗಳಲ್ಲಿ ಹಾರ್ಲೆಮ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ಹಾರ್ಲೆಮ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವುದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾಗುವುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ಹಾರ್ಲೆಮ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ತಲೆನೋವು ನೆಗಡಿಯಿಂದಲೇ ಆಗಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಲಿ ಚಿಂತೆಯಿಲ್ಲ, ಈ ಹಾರ್ಲೆಮ್ ಟಿಲ್ಲಿ ತೈಲದಿಂದ ಮಾತ್ರ ಗುಣವಾಗುವದು. ಹಲ್ಲುನೋವು, ಹುಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಹಾರ್ಲೆಮ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ಹಾರ್ಲೆಮ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸುಲುಗಳಿಗೆ ರೂ 42-0-0 ವಿ. ಪಿ. ಸಹಿತ ಹಾರ್ಲೆಮ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ಹಾರ್ಲೆಮ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18 ವಿ. ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ಹಾರ್ಲೆಮ್ ಟಿಲ್ಲಿ ಆಯಿಲನ್ನು ಕಳೆದ ೩೦ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲಾ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ನಿರಾಕರಿಸಿದ ರೋಗಿಗಳನ್ನೂ ನಿಮ್ಮ ಹಾರ್ಲೆಮ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಮನೆಯಲ್ಲಿ ಇಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಹಾನು ರೋಡು, ಬಿ. ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly

ಬೊಂಬಾಯಿ, ಸ್ಟಾಕಿಸ್ಟರು:—ಅಕ್ಷ ವಾಲಾ ಲಿಮಿಟೆಡ್, ೨೧. ...

[೧ನೇ ಪುಟದಿಂದ]

ಸಭಾ ಸದಸ್ಯರು ಕಠಿಣ ಟೀಕೆಗಳನ್ನು ಮಾಡಿದ್ದಾರೆ. ಗಡಿಯ ಅಫ್ಘಾನಿಸ್ಥಾನದಲ್ಲಿ ಪಾಕಿಸ್ಥಾನ್ ಧೋರಣೆಯ ವಿರುದ್ಧ ಪ್ರದರ್ಶನಗಳಾಗುತ್ತಿವೆ; ಗಡಿನಾಡ ಪ್ರಾಂತ್ಯ ಮತ್ತು ಅದರ ಸಂಬದ್ಧಿನ ಗುಡ್ಡ ಕಾಡು ಪ್ರದೇಶಗಳು ಪಾಕಿಸ್ಥಾನದವರಿಗೆ ಕಾದ ಕಾವಲಿಯಂತಾಗಿವೆ.

ಒಟ್ಟಿನಮೇಲೆ ಪಾಕಿಸ್ಥಾನಸಮೇತ ಭಾರತದ ನಾಯಕರಿಗೂ ಅವರವರ ಅನುಯಾಯಿಗಳಿಗೂ ಈ ಮೊದಲು ದೊರೆತಿದ್ದುದು ಆಂದೋಲನ ತರಬೇತಿ ಹೊರತು ಆಡಳಿತ ಶಿಕ್ಷಣವಲ್ಲ. ಸ್ವಾತಂತ್ರ್ಯ ಹೋರಿಗಳು ಗಾಂಧಿಜೀಯ ನಾಯಕತ್ವದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆಯೂ, ಪಾಕಿಸ್ಥಾನ್‌ವಾದಿಗಳು ಮಿ. ಜಿನ್ನಾ ನಾಯಕತ್ವದಲ್ಲಿ ಕಾಂಗ್ರೆಸಿನೊಡನೆಯೂ ಹೋರಾಡಲಿಕ್ಕೆ ಮಾತ್ರ ಕಲಿತಿದ್ದರು. ಈಗ ಒಕ್ಕಡೆಯವರ ತಲೆಯ ಮೇಲೂ ಹೊಣೆಯ ಹೊರೆ ಬಿದ್ದುದರಿಂದ ಅದನ್ನು ಹೊರುವುದಕ್ಕೂ ಕಲಿಯಬೇಕಾಗಿದೆ. ಹೀಗೆ ಕಲಿಯುವಾಗ ಸ್ವಭಾವಿಕವಾಗಿ ತಪ್ಪುಗಳಾದರೂ ಕಲಿತು ಸರಿಗೊಳ್ಳಲು ಅವರು ಬದ್ಧರಿದ್ದಾರೆ.

ಅಂತೂ ಇಂದಿನ ಸ್ವಾತಂತ್ರ್ಯವು ಅವಸರದಲ್ಲಿ, ಅಕಾಲದಲ್ಲಿ, ಅಥವಾ ಅಯೋಗ್ಯರಿಗೆ ದೊರೆತುದೇನೂ ಅಲ್ಲ; ಆಪತ್ಕಾಲದಲ್ಲಿ ದೊರೆಯಿತು, ಅಷ್ಟೇ. ಈ ಆಪತ್ತಿಗಂಜಿಯೇ ಬ್ರಿಟಿಷರು ಅಧಿಕಾರಬಿಟ್ಟು ದುದನ್ನು ಊಹಿಸಿದರೆ, ಇಂದಿನ ಕಷ್ಟನಷ್ಟಗಳೆಲ್ಲವೂ ಸ್ವರಾಜ್ಯದ ಆದಿಭಾಗಕ್ಕೆ ಸಹಜವಿರುವಂತೆಯೇ ಸ್ವರಾಜ್ಯ ಸಾಧನೆಗೆಂಬುದೂ ಮುಂದಿಟ್ಟಾಗುವದು. ಆದ್ದರಿಂದ ಅವುಗಳನ್ನು ಹೆಗ್ಗಳಿಕೆಯಿಂದ ಎದುರಿಸಬೇಕಾದುದು ಸದ್ಯ ಜನತೆಯ ಮುಂದಿರುವ ಮಾರ್ಗ.

ತಪ್ಪು ತಡೆ, ದೋಷ ದೌರ್ಬಲ್ಯಗಳತ್ತ ತೋರಿಸಿ, ಟೀಕಿಸುವುದಲ್ಲೇ ಆತ್ಮಾನಂದ ಹೊಂದುವ ಅಭ್ಯಾಸವನ್ನು ಜನತೆ ಸಾಧ್ಯವಿದ್ದಷ್ಟು ಕಡಿಮೆಮಾಡಿಕೊಳ್ಳಬೇಕು. ತಪ್ಪುಗಾರರೆಂದು ತೋರಿಸಲು ಸದ್ಯ ಕೈಗೆ ದೊರೆತವರು ಅವುಗಳ ಮೂಲ ಹೊಣೆಗಾರರು ತಾವೇ ಎಂಬುದನ್ನು ಸಾರ್ವಜನಿಕರು ತಿಳಿದುಕೊಳ್ಳಬೇಕು. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಸಂಘಟನೆಯಿಂದ ತಿದ್ದುಪಾಟುಗಳಿಗೆ ಸಹಕರಿಸಿ, ತಮ್ಮ ಪ್ರತಿನಿಧಿಗಳನ್ನು ಸದ್ದಾರಿ ಹಿಡಿಸುವ ಯೋಗ್ಯತೆ ಜನತೆಯಲ್ಲಿ ಬರಬೇಕು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಒಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ದ. ಕನ್ನಡ

ಗಂಗೊಳ್ಳಿ:—ಭಾರತ ದ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿಯ ವಿಮಾದಾರರಾಗಿದ್ದು ಸ್ವರ್ಗಸ್ಥರಾದ ಶ್ರೀ ಮಂಜುನಾಥ ಹೆಬ್ಬಾರರ ವಿಮಾಹಣವನ್ನು ಸ್ವರ್ಗಸ್ಥರ ಪತ್ನಿ, ರುಕ್ಮಿಣಿಯಮ್ಮನವರಿಗೆ ಸಂದಾಯಮಾಡುವ ಸಮಾರಂಭವು ತಾ 4-4-49 ರಲ್ಲಿ ಡಾ। ಕೆ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಪಡುಕೋಣೆ ಶಾಲೆಯಲ್ಲಿ ಜರಗಿತು. ಪ್ರಧಾನ ವಿಮಾ ಏಜಂಟರಾದ ಉಡುಪಿಯ ಇಂಟರ್ ನೇಶನಲ್ ಕಮರ್ಶಿಯಲ್ ಕೋರ್ಪರೇಶನಿನವರೂ ವಿಮಾ ಕಂಪೆನಿಯ ಪರವಾಗಿ ಶ್ರೀಗಳಾದ ಬಿ ಎಸ್. ನರಸಿಂಗರಾವ್, ಎಂ. ಚಂಕರನಾರಾಯಣರಾವ್ ಇವರೂ ಈ ಸಂದರ್ಭದಲ್ಲಿ ವಿಶೇಷಆಸಕ್ತಿ ವಹಿಸಿದ್ದರು. ಭಾಷಣ, ಉಪಹಾರ ಸತ್ಕಾರಗಳಿದ್ದವು.

ನೀಲಾವರ ಮಹಿಷಮರ್ದಿನಿ ದೇವ

ಉಡುಪಿಗೆ ಹೋಗಬೇಕು! ಅದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಯಾರಿಗಾಗಿ ಈ ಸೀರೆಯನ್ನುಡಲಿ?

"ಏನು ಮೇಯು ತ್ತಿರುವವು ಗಂಡು ಬೀರಿಗಳುಗಳು"?

"ಒಬ್ಬಳಿಗಿಂತ ಒಬ್ಬಳು ಹೆಚ್ಚು"

●

ಗಿರಿಬಾಲೆ ಯುವರ

ಮು ಖ ಪ ಟ ವನ್ನು

ಓದಿರಿ.

ಊರ ಬಾಯಿ ಕಟ್ಟಿದರೂ ಜನರ ಬಾಯಿ ಕಟ್ಟಲು ಸಾಧ್ಯವಿಲ್ಲ ಎಂಬುದನ್ನು 'ಅಂತರಂಗ'ದ ಈ ಪ್ರಕಟಣೆಯಿಂದ ತಿಳಿಯಿರಿ.

ಜನರೆಲ್ಲರೂ ಸುಖದ ದಾರಿಯನ್ನು ಹುಡುಕುತ್ತಾರೆ.

ಅಂಥವರಿಗಾಗಿ **ಸುಖದ ದಾರಿ** ಪ್ರಕಟವಾಗಿದೆ

'ಅಂತರಂಗ' ದಲ್ಲಿ ಅರಳಿದ ಪುಸ್ತಕಗಳು

ಗಣ್ಯರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ ಅಥವಾ ರಝ್ವಿಕಾರಸುರಸಂಹಾರ	0	3	0
ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ	0	4	0
ಗಾದೆಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ (ನೀಳ್ಗತೆ) ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ)	0	3	0
ನನ್ನ ಹೆಂಡತಿ(ಕತೆಗಳು)ಮಾಳಗೋಡ ನಾರಾಯಣ ಹೆಗಡೆ	0	3	0
ಸುಕಾಂತ (ಅನುವಾದಿತ ಕತೆ) ನೀ. ಚ. ಹಿತ್ತಲಮನಿ	0	3	0

ಪ್ರತಿಗಳಿಗೆ ಬರೆಯಿರಿ.

ಅಂತರಂಗ ಕಾರ್ಯಾಲಯ, ಉಡುಪಿ.

ಸ್ಥಾನದಲ್ಲಿ ವಾಡಿಕೆಯಂತೆ ಜರಗುವ ರಥೋತ್ಸವವು ತಾ 12ರಲ್ಲಿ ಪ್ರಾರಂಭವಾಗಿ ತಾ 1೫ರ ವರೆಗೆ ಜರಗಲಿರುವುದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಗಂಗೊಳ್ಳಿ:—ಇದೇ ತಾ 4ರಲ್ಲು ಗಂಗೊಳ್ಳಿ ಹಾಕಿ ಮಿಣಸಾಹಿಡಿಯಲಿಕ್ಕೆ ಹೋದವೊಬ್ಬ ... ಮುಸ್ಲಿಂ ಯುವಕನು ಆಕಸ್ಮಿಕ ಒಳಗಾಗಿ ಮರಣಹೊಂದಿರುವನು.

ಫಿರ್ಕಾ ಡೆವಲಪ್‌ಮೆಂಟ್ ಕಮಿಟಿಯ ಸಭೆಯು ತಾ 9ರಲ್ಲಿ ಮೊಗ್ರಾಲ್ ಮಿಕ್ಸೆಡ್ ಶಾಲಾ ಕಟ್ಟಡದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರರ ಅಧ್ಯಕ್ಷತೆಯಲ್ಲಿ ಜರಗಿತು. ಒಂದೊಂದು ನುನೆಯವರಿಂದ ಸಾ... ಗ್ರಾಮಸೇವಾ ಸಂಘಕ್ಕೆ ನಿಧಿ ಕೂಡಿಸಿ ಆ ಹಣವನ್ನು ... ಯಲ್ಲಿ ಹೆಚ್ಚು ವೃದ್ಧಿ ಇರುವವರಿಗೆ ... ತೋರಿಸಿಕೊಡುವುದಕ್ಕೂ, ಫಿರ್ಕಾ ಅಭಿವೃದ್ಧಿ ಕೆಲಸವನ್ನು ಜನತೆಗೆ ತಿಳಿಸುವಂತೆ ಪ್ರಕಟಿಸುವ ಕಾರ್ಯಕ್ಕೂ ಮೊಗ್ರಾಲ್ ಕಡಪಿನಲ್ಲಿ ಜಂಗಲ್ ಇಡುವುದಕ್ಕೂ ಮೊದಲಾದ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕಾದಾಯಿತು.

ಮಹಾಜಿ ಜಿಲ್ಲಾ ಬೋರ್ಡಿನ ಮೆಂಬರ್ ಶ್ರೀ ಕೆ. ಗುಂಡಣ್ಣನವರು ಕಾಸರಗೋಡಿನ ... ಬೆಂಚ್ ಮೆಜಿಸ್ಟ್ರೇಟರಾಗಿ ನೇಮಕ ಹೊಂದಿರುವರು.

ಪುತ್ತೂರು:—ಹಿಂದೂ ಕೋಡು ... ಸೂದಿಗೆ ವಿರೋಧ ವ್ಯಕ್ತಪಡಿಸುವ ಬಗ್ಗೆ ಪುತ್ತೂರಲ್ಲಿ ಈಚೆಗೆ ಶ್ರೀ ಕೆ. ನಂಜಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀ ಪಿ. ಕೆ. ಗೋವಿಂದಭಟ್ಟರು ಮಸೂದೆಯಲ್ಲಿರುವ ಕ್ರಾಂತಿಕಾರಿ ಒಲವುಗಳನ್ನೂ ಅದರಿಂದ ಹಿಂದೂ ಸಮಾಜದ ಮೇಲಾಗುವ ಪರಿಣಾಮವನ್ನೂ ವಿವರಿಸಿದರು. ಶ್ರೀಗಳಾದ ಕೆ. ವೆಂಕಪ್ಪಯ್ಯ, ಕೆ. ಪದ್ಮಯ್ಯ, ಸುಳ್ಯ ಪಠಪ್ಪ ರೈ, ಕಾಸಿನಭಟ್, ಸಿ. ಎಲ್. ವೆಂಕಟ್ರಮಣಯ್ಯ ಇವರಿಂದ ಕೂಡಿದ ಹಿಂದೂ ಕೋಡು ವಿರೋಧ ಸಮಿತಿಯು ರಚಿಸಲ್ಪಟ್ಟು ಇದೇ ತಾ 1೩ರಲ್ಲು ಅಪರಾಹ್ನ 2½ಗಂಟೆಗೆ ಪುತ್ತೂರಲ್ಲಿ ಈ ಬಗ್ಗೆ ಜನಾಭಿಪ್ರಾಯವನ್ನು ಪಡೆಯುವುದಕ್ಕಾಗಿ ಒಂದು ಸಮ್ಮೇಳನವನ್ನು ಕರೆಯುವುದೆಂದು ನಿರ್ಧರಿಸಲಾಯಿತು. ಪರಿಷತ್ತಿನ ಅಧ್ಯಕ್ಷತೆ ವಹಿಸಲು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಕೆ. ಎಲ್. ... ಗಭೂಷಣ ಭಟ್ಟರನ್ನು ಕೇಳಿಕೊಳ್ಳಲಾಗಿದೆ.

Notice.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

S. C. 21/194೯

ತೌಡಪೂಜಾರಿ — ವಾದಿ

1. ಸೋಮು ಹೆಂಗಸು,ಪದ್ದು ಹೆಂಗಸಿನ ಮಗಳು 2. ಸೋಮು ಪೂಜಾರಿ-ಒಬ್ಬಪೂಜಾರಿ ಅಳಿಯ-1ನೇಯವಳು ಕಾರ್ಕಳ ತಾಲ್ಲೂಕು ಬೆಳಂಜೆ ಗ್ರಾಮದಲ್ಲಿಯೂ 2ನೇಯವನು ಸದ್ರಿ ತಾಲ್ಲೂಕು ನಾಲ್ಕೂರು ಗ್ರಾಮದ ಮಜ್ಜೋಣಿ ಬೈಲಿನಲ್ಲಿಯೂ ವಾಸಿಸುತ್ತಾರೆ.

— ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:

ನಿಮ್ಮ ಮೇಲೆ ಚಾಲಗೇಣಿ ಗೇಣಿಬಾಕಿ ಸಹ ಸಾಲು ರೀತಿ ವಾದಿಯು ದಾಖಲುಮಾಡಿದ ಸದ್ರಿ ದಾವೆಯು ನಿಮ್ಮ ಹಾಜ್ರಾತಿಗೆ ತಾ 20-4-1949ಕ್ಕೆ ಇಟ್ಟದೆ. ಆದ್ದರಿಂದ ಸದ್ರಿ ದಾವೆಯಲ್ಲಿ ನಿಮ್ಮ ಕಡೆಯಿಂದ ಉದಾಸೀನವಿದ್ದ್ರೆ ಸದ್ರಿ ಕೋರ್ಟು ಮುಂದೆ ಸದ್ರಿ ದಿನ ಪೂರ್ವಾಹ್ನ 10ಗಂಟೆಗೆ ಹಾಜ್ರಾಗಿ ಜವಾಬು ಮಾಡಲು ತಪ್ಪಿದರೆ ನಿಮ್ಮನ್ನು ಎಕ್ಸಪಾರ್ಟಿ ಮಾಡಿ ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)

(Sd) **H. P. A. Jain**

ಅಖಂಡ ಕರ್ನಾಟಕದ ರಚನೆ ಹಿಂದುಳಿಯಬೇಕೆ?

ಲೇಖಕ-ಶ್ರೀ ಕೆ. ಎಸ್. ನಾಯಕ್, ಕೆನರಾ ಬ್ಯಾಂಕಿಂಗ್ ಕೋಪೊರೇಶನ್, ಲಿ. ಉಡುಪಿ.

ಇದೀಗ ಹೊರಬಿದ್ದ ತ್ರಿಮೂರ್ತಿ ಸಮಿತಿಯ ವರದಿಯಿಂದಾಗಿ ಎಚ್ಚೆತ್ತ ಕನ್ನಡಿಗನ ಏಕೀಕರಣ ಮಂತ್ರವು ಅರಣ್ಯರೋದನದಂತಾಯಿತು. ಅಖಂಡ ಕರ್ನಾಟಕದ ಕಹಳೆಯನ್ನು ಊದಿದ ಕನ್ನಡಿಗರಲ್ಲಿ ಕೊಂಚ ನಿರುತ್ಸಾಹಕ್ಕೆ ಈ ವರದಿಯು ಎಡೆಕೊಟ್ಟಿದೆ. ಈ ವರದಿಯು ಆ ಮೂವರು ಧುರೀಣರ ಸಂಘಟನಾಶಕ್ತಿಯನ್ನು ಮತ್ತು ಭಾಷಾವಾರು ಪ್ರಾಂತ್ಯಗಳಲ್ಲಿ ಅವರಿಗಿರುವ ವಿಶ್ವಾಸವನ್ನೇನೋ ವ್ಯಕ್ತಪಡಿಸುತ್ತದಾದರೂ ಕನ್ನಡನಾಡ ಏಕೀಕರಣವನ್ನು ಮುಂದೂಡಿದುದರಿಂದ ಅಲ್ಲಿದ ಭಾವನೆಗಳು ಕುಗ್ಗಲು ಅವಕಾಶವಾದಂತಾಗಿದೆ. ದಾರ್ ಸಮಿತಿಯು ಭಾಷಾವಾರು ಪ್ರಭುತ್ವಕ್ಕೆ ಕೊಡಲಿಯಿಟ್ಟಿತ್ತಾದರೂ ಈ ಮುಖಂಡರು ಭಾಷಾವಾರು ಪ್ರಾಂತ್ಯರಚನೆಗೆ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿದುದು ಶ್ಲಾಘನೀಯ.

ಪ್ರಾಂತ್ಯವಾರು ಸಂಕಾರದ ವಿಷಯದಲ್ಲಿ ದಕ್ಷಿಣ ಹಿಂದುಸ್ತಾನದಲ್ಲಿರುವಷ್ಟು ಜನಬೆಂಬಲವು ಉತ್ತರಭಾಗದಲ್ಲಿಲ್ಲವೆಂದು ಮನಗಂಡ ತ್ರಿಮೂರ್ತಿಗಳು ಆಂಧ್ರಪ್ರಾಂತ್ಯಕ್ಕೆ ಮಾತ್ರ ಬೆಂಬಲವಿತ್ತು ಕನ್ನಡನಾಡ ಐಕ್ಯತೆಗೆ ಪುರಸ್ಕಾರವೀಯದೆ ಆಂಧ್ರಪ್ರಾಂತ್ಯ ರಚನೆಯಾಗಿ ಅದರ ಪರಿಣಾಮವನ್ನು ತುಲನಾತ್ಮಕ ದೃಷ್ಟಿಯಿಂದ ಅಳೆದು ಉಳಿದ ಪ್ರಾಂತ್ಯಗಳ ರಚನಾ ಪ್ರಶ್ನೆಯನ್ನು ಪರಿಶೀಲಿಸುವ ವಿಚಾರವು ಅತೀ ಅತೃಪ್ತಿಕರ.

ಶತಮಾನಕ್ಕೂ ಮೀರಿ ಪರಕೀಯರ ಅಂಕುಶಕ್ಕೆ ಲೀನವಾದ ದೇಶ, ಪ್ರಜಾಪ್ರಭುತ್ವ ರಾಷ್ಟ್ರವಾಗಿ ಸರಕಾರ ಯೋಜನೆಯನ್ನು ತಯಾರಿಸುವಾಗ ಎಡರುಗಳು ಬಂದೇ ಬರುತ್ತವೆ. ಸಂಭಾಷೆ, ಸಂಸ್ಕೃತಿ ಮತ್ತು ಜನ ಜೀವನವನ್ನು ಅನುಸರಿಸಿದ ನಮಗೆ ಪ್ರಾಂತೀಕರಣವಾಗುವಾಗ ತೊಡಕುಗಳು ಬಂದೇ ಬರುತ್ತವೆ. ಆದರೆ ವಿಶಾಲ ಭಾವನೆ ಮತ್ತು ದೃಷ್ಟಿಯಿಂದ ಕಾರ್ಯದಲ್ಲಿ ತೊಡಗಿ ಬದ್ಧಕಂಕಣರಾಗಿ ಮುಂದೆ ಹೋದರೆ ಜಟಿಲ ಪ್ರಶ್ನೆಗಳನ್ನು ಸಡಿಲಿಸಿ ಕಬ್ಬಿಣದ ಗೂಟಿನ ರೀತಿ ನಿಂತಿರುವ ಮೈಸೂರು ಕರ್ನಾಟಕ ಒಕ್ಕೂಟದ ಪ್ರಶ್ನೆಯನ್ನು ಜಾಣಾಕ್ಷತನದಿಂದ ಬಿಡಿಸಿ ಸುಂದರ ನಾಡ ಕಲ್ಪನೆಯ ಕನ್ನಡಿಗನ ಹಲವಾರು ವರುಷಗಳ ಕೋರಿಕೆಯನ್ನು ಮನ್ನಿಸಬಹುದು. ದೇಶದಲ್ಲಿಯ ಎಷ್ಟೋ ಚಿಕ್ಕ ದೊಡ್ಡ ಸಂಸ್ಥಾನಗಳು ಒಕ್ಕೂಟಕ್ಕೆ ಸೇರಿರುವಾಗ ಮೈಸೂರು ಲೀನವಾಗುವುದು ರಾಜಕೀಯ ದೃಷ್ಟಿಯಲ್ಲಿ ನೈಸರ್ಗಿಕವಾದುದು. ಈ ಪ್ರಶ್ನೆಯನ್ನು ಬಗೆಹರಿಸಲು ರಾಜನೀತಿ ಪ್ರವೀಣರಾದ ಸರ್ದಾರ ಪಟೇಲರಿಗೆ ಕಷ್ಟವಾಗದು. ಇವರು ಎಂದಿನ ಹಾಗೆ ನಾನಾಗಿ ಈ ಪ್ರಶ್ನೆಯನ್ನು ಸುಲಭವಾಗಿ ಬಿಡಿಸಬಹುದು. ಮೈಸೂರಲ್ಲಿ ಅರಮನೆಯ ರಾಜ್ಯಭಾರ ಪದ್ಧತಿ ಮಾಯವಾದ ಈ ಸಮಯದಲ್ಲಿ ಈ ಸಂಸ್ಥಾನವು ಪ್ರತ್ಯೇಕವಾಗಿ ನಿಲ್ಲಲು ಸಾಧ್ಯವಿಲ್ಲ. ಆಂಧ ಬಳಿಕ ಅಖಂಡ ಸುಂದರ ಕರ್ನಾಟಕದ ನಿರ್ಮಾಣಕ್ಕೆ ಸಹಕಾರವೀಯುವುದು ಅವಶ್ಯಕವಾಗಿದೆ.

ದೇಶವು ದಾಸ್ಯದಿಂದ ಪಾರಾಗಿ ವರುಷ ಒಂದಾದರೂ ನಮ್ಮ ಆರ್ಥಿಕಸ್ಥಿತಿಯು ಉತ್ತಮಗೊಂಡಿಲ್ಲ. ಅನ್ನದ ಸಮಸ್ಯೆ ಬಗೆಹರಿಯಲಿಲ್ಲ. ಕೂಲಿಕಾರರ ಜೀವನ ಮಟ್ಟ ಏರಿದ್ದಿಲ್ಲ. ಪ್ರಯಾಣಸೌಕರ್ಯ, ನೀರಾವರಿ ಯೋಜನೆಗಳು ರೂಪಹೊಂದಿ ಭಾರತವು ಪ್ರಜೆಗಳ ಉಳಿತಾಯದ ಮಟ್ಟವನ್ನು ಏರಿಸಿ ವ್ಯಯವನ್ನು ತಗ್ಗಿಸಲು ಹಲವು ವರುಷಗಳು ಹೋಗಬಹುದು. ನೀರಿನ ಸರಬರಾಯಿ ಕಾರ್ಯಗಳು ಪಕ್ವಕ್ಕೆ ಬಾರದೆ ಕೃಷಿ ವೃದ್ಧಿಯಾಗದು. ಆಹಾರ ಪದಾರ್ಥಗಳು ಹೆಚ್ಚಬೇಕಾದರೆ ನಮ್ಮ ನದಿಗಳು ರೈತನ ಕೈವಶವಾಗಬೇಕು. ಈಗ ಕೇಂದ್ರೀಕರಿಸಲ್ಪಟ್ಟ ಕೇಂದ್ರ ಸರಕಾರದ ಹಲವಾರು ಯೋಜನೆಗಳ ಕನಸು ನನಸಾಗಲು ಹತ್ತಾರು ವರುಷಗಳು ಉರುಳಲೇಬೇಕು. ತ್ರಿಮೂರ್ತಿಗಳ ಪ್ರಕಟಣೆ ಪ್ರಕಾರ ಆರ್ಥಿಕ ಮುಗ್ಗಟ್ಟಿನ ಈ ಸಮಯದಲ್ಲಿ ಪ್ರಾಂತ್ಯ ನಿರ್ಮಾಣವು ಮುಖ್ಯವಲ್ಲವೆಂಬ ಸೂಚನೆಯು ಎದ್ದು ಕಾಣುತ್ತದೆಯಾದರೂ ಆಂಧ್ರ ಪ್ರಾಂತ್ಯದ ರಚನೆ ಬೇಗನಾಗಬಹುದುಯೆಂಬ ಅಭಿಪ್ರಾಯವಿದೆ. ಈ ಸೂಚನೆಯು ಕನ್ನಡಿಗರಿಗೆ ಸಮಾಧಾನವೀಯದು.

ಸರಕಾರ ಭದ್ರತೆ ಮತ್ತು ಸಾಮ್ರಾಜ್ಯ ವಿಸ್ತಾರಕ್ಕಾಗಿ ರಚಿತವಾದ ನಮ್ಮ ಪ್ರಕೃತದ ಪ್ರಾಂತ್ಯಗಳು ಇಂದು ಸ್ವಾತಂತ್ರ್ಯ ಸಿಕ್ಕಿ ಉನ್ನತ ಹೊಸರೀತಿಯಲ್ಲಿ ಸ್ವತಂತ್ರರೂಪವನ್ನು ತಾಳಲೇಬೇಕು. ಇಂದು ಭಾರತದಲ್ಲಿ ಏಕಭಾಷಾ ಕೊರತೆಯಿದ್ದು ಇಂದಿನ ರೀತಿಯಲ್ಲಿ ಸುಧಾರಣೆಮಾಡಿ ಪ್ರಾಂತೀಯ ಸರಕಾರರಚನೆಗೆ ಎಚ್ಚೆತ್ತ ಪ್ರಜೆಗಳ ಬೆಂಬಲವು ಕಡಿಮೆಯಾಗುತ್ತದೆ. ಈ ಕಬ್ಬಿಣದ ಕಡಲೆಯು ತ್ವರಿತದಲ್ಲಿ ಪುಡಿಯಾಗಲು ಭಾಷಾವಾರು ಪ್ರಾಂತ್ಯರಚನೆಯೆ ತಕ್ಕ ವಿಧಾನ.

ದಕ್ಷಿಣ ಭಾರತದ ರಾಜ್ಯಭಾರ ಪದ್ಧತಿಯು ಅರಮನೆಯ ಪರಿಪಾಲನೆಯು ಭಳಕಿನಿಂದ ಬೆಳೆದುದು ಇಂಗ್ಲಿಷರ ಆಳ್ವಿಕೆಯಲ್ಲಿ ಮುಸುಕಿನಲ್ಲಿದ್ದು ಈಗ ಬೆಳಕಿಗೆ ಬಂದು ತಾಂಡವವಾಡುತ್ತಿದೆ. ವಿಸ್ತಾರ ಸಾಹಿತ್ಯ, ಸಂಸ್ಕೃತಿ, ಲಲಿತಕಲೆ ಮತ್ತು ಜನಬೆಂಬಲವನ್ನು ಪಡೆದ ಭಾಷಾಭಕ್ತರು ಎಚ್ಚೆತ್ತ ಈ ದಿನದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ಮುಂದೆ ಹಾಕಿದರೆ ಸರಕಾರ ನಡೆಯಿಸಲು ಸುಲಭವಾಗದು. ನಮ್ಮ ಪ್ರಾಂತ್ಯದಲ್ಲಿ ಭಾಷಾಭೂತದ ಗೊಂದಲವು ಇದ್ದಂತೆ ಉತ್ತರ ಭಾರತದಲ್ಲಿ ಇಲ್ಲ. ಈ ಬೆಮ್ಮದ ಸ್ವಭಾವದಿಂದಾಗಿ ಮೂರು ವರುಷಗಳಲ್ಲಿ ೭ ಮಂತ್ರಿಮಂಡಳಗಳು ಉರುಳಿ ಮೂರನೆ ಮಂಡಳವು ರಚಿತವಾಗಿ ಸರಕಾರೀ ಯೋಜನೆಗಳಲ್ಲಿ ಭೇದ ಅಭಿಮತವಿದ್ದು ಪ್ರಾಂತ್ಯಾಭಿವೃದ್ಧಿಗೆ ತೊಡಕಾಗುತ್ತಿದೆ. ದೇಶದ ಐಕ್ಯತೆಯ ದೃಷ್ಟಿಯಿಂದ ಮತ್ತು ಆರ್ಥಿಕ ಮೇಲ್ಮೆಗಾಗಿ ಏಕಭಾಷೆಯ ಕೊರತೆಯಿರುವ ಈ ಸಮಯದಲ್ಲಿ ಅಂತಃಕಲಹ, ಅಧಿಕಾರಲಾಲಸೆ ಮತ್ತು ಸ್ವಪ್ರತಿಷ್ಠೆ ಮಾಯವಾಗಿ ಜನಜೀವನ ಮಟ್ಟವು ಏರಬೇಕಾದರೆ ಅತೀತ್ವರಿತದಲ್ಲಿ ಭಾಷಾವಾರು ಪ್ರಾಂತ್ಯರಚನೆಯಾಗಲೇ ಬೇಕು.

ಆಂಗ್ಲಭಾಷೆಯ ಮೇಲೆ ನಮಗಿದ್ದ ಅಭಿಮಾನವು ತಗ್ಗಿ ಹಾಯಿಗಾದಿಯ ಮೇಲೆ ಭಕ್ತಿ ಹುಟ್ಟಿದ ಈ ವೇಳೆಯಲ್ಲಿ ಹಿಂದೆ ಮೂಲೆಪಾಲಾದ ನುಡಿಗೆ ಪ್ರಾಧಾನ್ಯ ಬರಬೇಕಾಗಿದೆ. ನಮ್ಮ ಮನೆ ಭಾಷೆಯು ಸರಕಾರಿ ಮತ್ತು ವ್ಯವಹಾರಿಕವಾಗಲೇಬೇಕು. ಹೀಗಾದರೇನೆ ಸರಕಾರವು ಜನಾದರಣೀಯವಾಗುವುದು. ಈ ರಾಜನೀತಿಯು ಭಾಷಾ ಕಲಹಗಳಿರುವ ದಕ್ಷಿಣ ಭಾರತದಲ್ಲಿ ಫಲಕಾರಿಯಾಗಲೇಬೇಕು. ಈ ತತ್ವವು ಬಳಕೆಗೆ ಬಂದು ಬೇಗನೆ ಪ್ರಾಂತ್ಯ ಪುನರ್ಘಟನೆಯಾದರೆ ಕಲಹವು ಮಾಯವಾಗಿ ಐಕ್ಯತೆಗೆ ಸಾಧನವಾಗಬಲ್ಲುದು. ಈ ಪ್ರಶ್ನೆಯನ್ನು ಕೂಡಲೆ ಬಿಡಿಸಿದರೆ ಸರಕಾರಸೂತ್ರವು ತಡೆಯಿಲ್ಲದೆ ಆರ್ಥಿಕ ಸುಧಾರಣೆಗೆ ನೆರವು ಮಾಡಬಲ್ಲುದು, ಪ್ರಾಂತ್ಯಗಳು ಸಹಕಾರವೀಯದೆ ಕೇಂದ್ರಕ್ಕೆ ಭಾರತದ ಆರ್ಥಿಕಸ್ಥಿತಿಯನ್ನು ಸುಧಾರಿಸಲು ಅಶಕ್ಯವಾಗುವುದು. ಪ್ರಾಂತಿಕ ಸುಧಾರಣೆಯಿಂದಾಗಿ ಭಾರತದ ಅಭ್ಯುದಯವಾಗಬೇಕಾದ ಈ ಕಾಲದಲ್ಲಿ ಪ್ರಕೃತದ ಪ್ರಾಂತ್ಯಗಳು ದಕ್ಷಿಣದಮಟ್ಟಿಗೆ ಫಲಕಾರಿಯಾಗಿ ಕಾರ್ಯವನ್ನು ಮಾಡಲಾರವು. ಆದುದರಿಂದ ನಾಡ ಏಕೀಕರಣವು ತ್ವರಿತದಲ್ಲಿ ಆಗಲೇಬೇಕಾಗಿದೆ.

ಡೆಪ್ಯೂಟಿ ಕಮರ್ಶಿಯಲ್ ಟೇಕ್ಸ್ ಆಫೀಸರರ ಪ್ರಕಟಣೆ

ಶ್ರೀ ಎ. ಪಿ. ಗಣಪತಿ, ಡೆಪ್ಯೂಟಿ ಕಮರ್ಶಿಯಲ್ ಟೇಕ್ಸ್ ಆಫೀಸರ್, ಉಡುಪಿ. ಅವರ ಪ್ರಕಟಣೆಯ ಸಾರಾಂಶ ಹೀಗಿದೆ:

ತಾ. 31-3-49ಕ್ಕೆ ಅಂತ್ಯವಾಗುವ ವರುಷದ ಒಟ್ಟು ಹಾಗೂ ನೆಟ್ ವಹಿವಾಟುಗಳ (Turnover) ವಿವರದ ಪಟ್ಟಿಯನ್ನು ನಿರ್ದಿಷ್ಟ 'ಎ' ಫಾರ್ಮಿನಲ್ಲಿ ಪೂರ್ಣ ಬರೆದು ತಾ. 1-5-49ರೊಳಗಾಗಿ ಸಬ್ಡಿವಿಜನಲ್ ಆಫೀಸಿಗೆ ರವಾನಿಸತಕ್ಕದ್ದು.

1949-50ನೆ ವರ್ಷದ ಬಗ್ಗೆ ರಿಜಿಸ್ಟ್ರೇಶನ್ ಫೀಸು ರೂಪಾಯಿ 6/- ಪಾವತಿಮಾಡಿ ಸರ್ಟಿಫಿಕೇಟನ್ನು ಮೇಲೆ ಸೂಚಿಸಿದ ರಿಟರ್ನಿನೊಂದಿಗೆ ಲಗ್ತೀಕರಿಸತಕ್ಕದ್ದು.

1948-49ನೆ ವರ್ಷದ ಬಗ್ಗೆ ವಿಧಿಸೋಣಾದ ದರದಲ್ಲಿಯೇ ಹೊಸದರಗಳು ನಿರ್ಧರಿಸಲ್ಪಡುವ ತನಕ ಪ್ರತಿತಿಂಗಳ ಟೇಕ್ಸನ್ನೂ ಕೊಡತಕ್ಕದ್ದು.

ವಿ. ಸೂ.: ಆಸಕ್ತ ಸ್ಟೇಟ್‌ಮೆಂಟುಗಳನ್ನಾಗಲೀ ಅಥವಾ ಸಕಾಲದಲ್ಲಿ ರಿಟರ್ನುಗಳನ್ನೂ ರಿಜಿಸ್ಟ್ರೇಶನ್ ಫೀಸನ್ನೂ ಕೊಡದಿದ್ದಲ್ಲಿ ಸೇಲ್ಸ್‌ಟೇಕ್ಸ್ ಕಾನೂನಿಗನುಸಾರವಾಗಿ ಜುಲುಮಾನೆ ವಗೈರೆ ಶಿಕ್ಷೆಗೊಳಗಾಗಬೇಕಾದೀತು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಶೇಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀನಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:— ದಾವಣಗೇರಿ ಪ್ರೆಸ್, ಆರ್ ಎಲ್ ಶಮಲದಾನಿ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:— ಗದಗ:— ಗದಗ ಫಾರ್ಮಸಿ, ಹುಬ್ಬಳ್ಳಿ:— ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆ ನೋವು, ಘಾಯಗಳು, ಜಾರುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REDG

ಎಲ್ಲಾ ಕಡೆ ಅಂಗಡಿಗಳಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಮೈಸೂರು ಕರ್ನಾಟಕದಲ್ಲಿ ವಿಲೀನ ವಾಗಲಿ.

ಮಹಾರಾಜರು ಸಿಂಹಾಸನ ತ್ಯಾಗಮಾಡಲಿ. ಧಾರವಾಡ ನಾಗರಿಕರ ಒಮ್ಮತದ ನಿರ್ಣಯ.

ಧಾರವಾಡ.೨೬...“ಮೈಸೂರು ಸಂಸ್ಥಾನವು ಕರ್ನಾಟಕದಲ್ಲಿ ವಿಲಯನಹೊಂದುವಂತೆ ಒಂದುಸ್ಥಾನ ಸರಕಾರವು ಉಪಾಯ ಕೈಕೊಳ್ಳಬೇಕು;ಮೈಸೂರಿನ ಶ್ರೀ ಮನ್ಮಹಾರಾಜರವರು ತಾವಾಗಿಯೇ ಸ್ವತಂತ್ರೋತ್ಸವದಿಂದ ಸಿಂಹಾಸನತ್ಯಾಗ ಮಾಡಬೇಕು.’ ಎಂಬಾಶಯದ ಗೊತ್ತುವಳಿ ಇಲ್ಲಿ ನಗರಸಭೆಯು ಅಟ್ಟದ ಮೇಲೆ ತಾ. ೨೫-೩-೧೯೪೯ನೇ ದಿನ ಸೇರಿದ ಸಾರ್ವಜನಿಕ ಸಭೆಯಲ್ಲಿ ಸ್ವೀಕೃತವಾಯಿತು.

ಧಾರವಾಡ ತಾಲೂಕ ಕಾಂಗ್ರೆಸ ಸಮಿತಿಯ ನೇತೃತ್ವದಲ್ಲಿ ಈ ಸಭೆಯು ಸೇರಿದ್ದಿತು. ನಗರಾಧ್ಯಕ್ಷ ಶ್ರೀ. ಎಸ್. ಎಸ್. ಮಟ್ಟಿಯವರು ಅಧ್ಯಕ್ಷಸ್ಥಾನದಲ್ಲಿದ್ದರು. ಸಭಾಭವನವು ತುಂಬಿದ್ದಿತು.

ಶ್ರೀಗಳಾದ ದ. ಬ. ಕರಮರಕರ, ಎಂ. ಎಸ್. ಕೇಸರಿ ವಕೀಲ, ತಾಲೂಕ ಕಾಂಗ್ರೆಸ ಕಮಿಟಿ ಅಧ್ಯಕ್ಷ ಶಂಕರ ಕಾತರ್ಕೊಟಿ, ಕಾರ್ಯದರ್ಶಿ ನರಸಿಂಹ ದಾಬಡೆ, ಬಸವರಾಜ ಕಟ್ಟಿಮನಿ ಮೊದಲಾದವರು ಭಾಷಣಮಾಡಿ ಗೊತ್ತುವಳಿಗೆ ಬೆಂಬಲ ಕೊಟ್ಟರು. ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕೃತವಾಯಿತು.

ಗೊತ್ತುವಳಿಯು ಒಕ್ಕಣಿಕೆ ಇಂತಿರುತ್ತದೆ:

“ಭಾರತದಲ್ಲಿಯ ಎಲ್ಲ ಸಣ್ಣ ದೊಡ್ಡ ಸಂಸ್ಥಾನಗಳನ್ನು ಸಂಪೂರ್ಣವಾಗಿ ವಿಲೀನಗೊಳಿಸುವ ಕೇಂದ್ರ ಸರಕಾರದ ಧೋರಣೆಗೆ ಧಾರವಾಡ ನಾಗರಿಕರ ಈ ಸಭೆಯು ತನ್ನ ಹೃತ್ಪೂರ್ವಕ ಬೆಂಬಲವನ್ನು ಕೊಡುತ್ತದೆ. ಇದೇ ಪ್ರಗತಿಪರ ಧೋರಣೆಯನ್ನು ಸಕಲ ಸಂಸ್ಥಾನಗಳಿಗೂ ಅನ್ವಯಿಸಿ ಹೈದರಾಬಾದ, ಮೈಸೂರ, ತಿರುವಾಂಕೂರ ಮೊದಲಾದ ಎಲ್ಲ ಸಂಸ್ಥಾನಗಳನ್ನೂ ಕೂಡಲೇ ಭಾರತದಲ್ಲಿ ವಿಲೀನಗೊಳಿಸುವದು ಅತ್ಯಂತ ಅವಶ್ಯವಿದೆ. ಸಂಸ್ಥಾನಾಧೀಶರಾದರೂ ಕಾಲಮಾನಕ್ಕನುಸರಿಸಿ ಈ ಕಾರ್ಯದಲ್ಲಿ ಸಂಪೂರ್ಣ ಸಹಕಾರ ನೀಡಿ ಅತ್ಯಂತ ಔದಾರ್ಯದಿಂದಲೂ ಸ್ವಸಂತೋಷದಿಂದಲೂ ತಮ್ಮ ಅಧಿಕಾರವನ್ನು ತ್ಯಾಗ ಮಾಡಬೇಕೆಂದು ಈ ಸಭೆಯು ಅವರಿಗೆ ಅತ್ಯಂತ ನಮ್ರವಾಗಿ ಬಿನ್ನವಿಸಿಕೊಳ್ಳುತ್ತದೆ.”

“ಈ ವಿಷಯದಲ್ಲಿ ಕ. ಪ್ರಾ. ಕಾಂ. ಕ.ಯ ಅಧ್ಯಕ್ಷರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರೂ ಆದ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ತಾ.7-3-49 ನೇಯ ದಿನಾಂಕಕ್ಕೆ ಕಲಬುರ್ಗಿಯಲ್ಲಿ ಸೇರಿದ 12ನೇಯ ಕರ್ನಾಟಕ ಏಕೀಕರಣ ಪರಿಷತ್ತಿನಲ್ಲಿ ಪಾಸಾದ ‘ಮೈಸೂರು ಸಂಸ್ಥಾನವು ವಿಲೀನವಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರ ಸರಕಾರವನ್ನು ಬಿನ್ನವಿಸುವ’ ಗೊತ್ತುವಳಿಗೆ ಈ ಸಭೆಯು ತನ್ನ ಸಂಪೂರ್ಣ ಬೆಂಬಲನೀಡುವದಲ್ಲದೆ ಮೈಸೂರು ಹೈದರಾಬಾದ ಸಂಸ್ಥಾನಗಳನ್ನು ಸಹ ವಿಲೀನಗೊಳಿಸಿ ಏಕೀಕರಣವು ಕೂಡಲೆ ಕಾರ್ಯಸಿದ್ಧಿಯಾಗುವಂತೆ ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ಬೇಡಿಕೊಳ್ಳುತ್ತದೆ.

ಗೊತ್ತುವಳಿಯ ಪ್ರತಿಯನ್ನು ಮುಖ್ಯಮಂತ್ರಿ ಪಂ ಜವಾಹರಲಾಲರಿಗೆ ಕಳಿಸಿಕೊಡಲಾಗಿದೆ.

(ಎಸ್. ಎಸ್. ಮಟ್ಟಿ)

ನಗರಾಧ್ಯಕ್ಷ ಮತ್ತು ಧಾರವಾಡ ನಾಗರಿಕರ ಸಾರ್ವಜನಿಕ ಸಭೆಯ ಅಧ್ಯಕ್ಷ.

GOOD and CHEAP
Nilgiri & Anamalai Teas
are Available for sale
The Standard Tea Syndicate.
, Sidha Naidu Lay-Out,
Puram, Coimbatore.

ಸಾದರ ಸ್ವೀಕಾರ

ಸುವಾಸಿನಿ–(ಕರ್ನಾಟಕದ ಪ್ರಥಮ ಮಹಿಳಾ ಸಪ್ತಾಹಿಕ) ಪ್ರಥಮ ಸಂಚಿಕೆ. ಸಂಪಾದಿಕೆಯರು ಶ್ರೀಮತಿಯರಾದ ಕೆ. ವಾರಿಜಾದೇವಿ ಮತ್ತು ಬಿ. ಮೋಹಿನಿದೇವಿ. ಕ್ರೌವುನ್ ೧/೨ ಆಕಾರದ ೧೬ ಪುಟಗಳು. ವಾ: ಚಂ. ೬-೦೨-೦ ಬಿಡಿ ಪ್ರತಿ ೦-೨-೦ ಕಾರ್ಯಾಲಯ ಬಿ. ಎಂ. ಹೈಸ್ಕೂಲು ರೋಡು, ಮಂಗಳೂರು. ನೂತನ ಸಹವ್ಯವಸಾಯಿ ಪತ್ರಿಕೆಗೆ ಶುಭವನ್ನೂ ಸ್ವಾಗತವನ್ನೂ ಕೋರುವೆವು.

ಜ್ಞಾನರತ್ನ–ಶ್ರೀ ಸದ್ಗುರು ಆಧಿವೇದಾಂತ್ಯ ಗ್ರಂಥಮಾಲೆ, ಕಲ್ಲೂರು-ಇವರ ಪ್ರಕಟಣೆ. ಶ್ರೀ ಸಾಧು ರಾಜೇಂದ್ರಸ್ವಾಮಿಗಳು ಬರೆದುದು. ಕ್ರೌನ್ ೧/೮ ಆಕಾರದ ೪೮ ಪುಟ. ಬೆಲೆ ೧ರೂ. ವೇದಾಂತ ವಿಚಾರವನ್ನು ಗುರು ಶಿಷ್ಯ ಸಂಭಾಷಣೆಯ ಧಾಟಿಯಲ್ಲಿ ಬರೆದ ಪುಸ್ತಕ.

ಆರ್ಯಸಮಾಜವೆಂದರೇನು:—(ಪ್ರಥಮಭಾಗ) ಸದ್ಧರ್ಮ ಪ್ರಚಾರಕ ಗ್ರಂಥಮಾಲೆ ಮಂಗಳೂರು, ಇವರ ಪ್ರಕಟಣೆಯ ದ್ವಿತೀಯ ಮುದ್ರಣ. ಬೆಲೆ ೦-೪-೦ ಬರೆದುದು ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿ. ಪುಸ್ತಕದ ಹೆಸರು ಸೂಚಿಸುವಂತೆ ವಿಷಯ ಮಂಡನವಿದೆ.

ಜಗಜ್ಜ್ಯೋತಿ ಗಾಂಧಿ–ಸಂಪಾದಕರು ಶ್ರೀ ಎಂ. ಪದ್ಮನಾಭ ಮಲ್ಯ, ಪ್ರಕಾಶಕರು ಮಾನ್ಯ ಜ್ಞಾನೋದಯಸಮಿತಿ. ಬೇಳ. ಕುಂಬಳೆ. ದ. ಕ. ಪುಟ ಕ್ರೌನ್ ೧/೮ ಆಕಾರದ ೪೨. ಬೆಲೆ ೦-೧೦-೦ ಬಾಪುವಿನ ಕುರಿತು ಹಲವರು ಬರೆದ ಕವನ--ಲೇಖನಗಳ ಸಂಕಲನ. ಶ್ರೀ. ಗೋವಿಂದ ಪೈ, ಶ್ರೀ ಶಿವರಾಮ ಕಾರಂತರವರ ಮುನ್ನುಡಿಯೂ ಇದೆ.

ಸತ್ಯಯುಗದ ಸಿದ್ಧಾಂತ ಶ್ರೀ ಹರಿರಾಮ ಜೋಶಿ, ಪ್ರೊ॥ ಕಲ್ಲಮುಂಡ್ಕೂರು. ಕಾರ್ಕಳ ತಾಲೂಕು, ಇವರು ಬರೆದು ಪ್ರಕಟಿಸಿದ್ದು. ಕ್ರೌನ್ ೧/೮ ಆಕಾರದ ೩೭ ಪುಟ. ಬೆಲೆ ೧/ ರೂ. ಈಗ ನಡೆಯುವುದು ಕಲಿಯುಗವಲ್ಲ-ಸತ್ಯಯುಗವೆಂದು ಬರೆದ ಒಂದು ಪುಸ್ತಕ.

ವಿರೋಧಿ ಸಂವತ್ಸರದ ಶಾಸ್ತ್ರಸಿದ್ಧ ಶ್ರೀ ಕೃಷ್ಣ ಪಂಚಾಂಗ ಶ್ರೀ. ಕರಿಂಕ ಕೃಷ್ಣಬನ್ನಿತ್ತಾಯ ಮತ್ತು ಶ್ರೀ. ಮರಕೂರ ರಾಮಚಂದ್ರಾಚಾರ್ಯ, ಜ್ಯೋತಿಷ ಶಿರೋಮಣಿ. ಇವರು ಸಂಪಾದಿಸಿ ಶ್ರೀ. ಯಮರ್ಾಂ ಜಿಶಂಕರ ಜೋಯಿಸರಿಂದ ಪರಿಶೋಧಿತವಾಗಿ ಪ್ರಕಟಿತವಾಗಿದೆ. ಶ್ರೀ ಕೆ. ಕೃಷ್ಣಬನ್ನಿತ್ತಾಯ, ವಿಟ್ಲ. ದ. ಕ. ಇವರಲ್ಲಿಂದ ಪಡೆಯಬಹುದು. ಬೆಲೆ ೭ ಆಣೆ. ಕೇತಕಾರ ಸಿದ್ಧಾಂತದಂತೆ ಪ್ರಕಟವಾಗುವ ಈ ಪಂಚಾಂಗ ಪ್ರೋತ್ಸಾಹ ಯೋಗ್ಯವಾಗಿದೆ.

ಸರಸ್ವತಿ:-[ರಜತ ಮಹೋತ್ಸವ ಸಂಚಿಕೆ] ಸಂಪಾದಿಕೆ. ಶ್ರೀಮತಿ ಆರ್. ಕಲ್ಯಾಣಮ್ಮ, ಪುಟಗಳು: ಕ್ರೌನ್ ೪ ಆಕಾರದ 24+73+40 ಬೆಲೆ ?

‘ಸರಸ್ವತಿ’ ಮಾಸಪತ್ರಿಕೆಯು ಕಳೆದ 25 ವರ್ಷಗಳಿಂದ ಪ್ರಕಟವಾಗುತ್ತಿದ್ದು ಇದೀಗ ರಜತೋತ್ಸವವನ್ನು ಆಚರಿಸಿ ಆ ಸಂದರ್ಭದಲ್ಲಿ ಸುಂದರವಾದ ರಜತೋತ್ಸವ ಸಂಚಿಕೆಯನ್ನು ಪ್ರಕಟಿಸಿರುವುದು ಅತ್ಯಂತ ಆನಂದದ ವಿಚಾರ. ಕನ್ನಡ ಜನತೆಯಲ್ಲಿ ಮಾತೃಭಾಷೆಯ ಅಭಿರುಚಿಯು ಲೋಪವಾಗಿದ್ದ ಹಿಂದಿನ ಕಾಲದಲ್ಲಿ ರೂಪತಾಳಿದ ಈ ಪತ್ರಿಕೆಯು ಇದಿರಾದ ಎಡರು ತೊಡರುಗಳಿಗೆ ಬಾಗದೆ ಮುಂದೆ ಸಾಗಿರುವುದು, ಇದು ಸಂಪಾದಕಿಯಲ್ಲಿರುವ ಕರ್ತವ್ಯ ನಿಷ್ಠೆಯನ್ನೂ ಧೈರ್ಯಸಾಹಸವನ್ನೂ ವ್ಯಕ್ತಪಡಿಸುವುದು. 25 ವರ್ಷಗಳ ದೀರ್ಘಕಾಲದಲ್ಲಿ ಸರಸ್ವತಿಯು ನಾಡಿನ ಹಲವು ತರದ ಲೋಪದೋಷಗಳನ್ನು ನಿವಾರಿಸಲು ಹೆಣಗಾಡಿದೆ, ಹೋರಾಡಿ ಜಯಶಾಲಿಯಾಗಿದೆ.

ಈ ರಜತ ಮಹೋತ್ಸವ ಸಂಚಿಕೆಯು ಒಳಗೂ ಹೊರಗೂ ಸುಂದರವಾಗಿದೆ. ಮೈಸೂರು ಶ್ರೀ ಮಜ್ಜಯ ಚಾಮರಾಜ ಒಡೆಯರ್ ಬಹದ್ದೂರ್, ಗವರ್ನರ್ ಜನರಲ್ ಶ್ರೀ. ಸಿ. ರಾಜಗೋಪಾಲಾಚಾರಿ, ಸರ್. ಮಿರ್ಜಾ ಎಂ. ಇಸ್ಮಾಯಿಲ್, ಸರ್. ಎಂ. ವಿಶ್ವೇಶ್ವರಯ್ಯ, ಶ್ರೀ. ಆಲೂರು ವೆಂಕಟರಾವ್ ಮೊದಲಾದವರ ಶುಭ ಸಂದೇಶಗಳಿಂದಲೂ ‘ಗಿರಿಬಾಲೆ’ ಬಿ. ಎಸ್. ಸುಬ್ಬಮ್ಮ, ಗೌರಾದೇವಿ, ಕನಕಮ್ಮ, ಮಂದಾಕಿನಿ ಬಾಯಿ, ತಿರುಮಲ ತಾತಾಚಾರ್ಯ ಶರ್ಮ, ಸರಸ್ವತಿ ದೇವಿ ಗೌತಮ, ಕೆ. ವಿ. ಸುಬ್ಬರಾವ್, ಮೊದಲಾದ ಲೇಖಕ, ಲೇಖಕರ ಬರಹಗಳಿಂದಲೂ ಹಲವಾರು ಚಿತ್ರಗಳಿಂದಲೂ ಸಂಚಿಕೆಯು ಕೂಡಿದೆ. ವಾಚನೀಯವೂ ಸಂಗ್ರಾಹ್ಯವೂ ಆಗಿದೆ. ಸಂಪಾದಕಿಯರ ಪ್ರಯತ್ನವು ಕೊಂಡಾಡತಕ್ಕುದೂ ಪ್ರೋತ್ಸಾಹನೀಯವೂ ಆಗಿದೆ.

ಬಂಟ್ಸ್ ಕೋ-ಓಪರೇಟಿವ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್ ಮುಂಬೈ:-ಇದರ ತಾ 22-2-48ರಿಂದ 30-6-48ರ ವರೆಗಿನ ಆಡಳಿತ ಸಮಿತಿಯ ಲಾಭದಾಯಕ ವರದಿಯು ನಮ್ಮ ಹಸ್ತಗತವಾಗಿದೆ- ಸೊಸೈಟಿಯು ಅಲ್ಪಾವಧಿಯಲ್ಲಿ ಅಭಿವೃದ್ಧಿಗೊಂಡು ಲಾಭಕರವಾಗಿ ನಡೆಯುತ್ತಿರುವುದು ಅಭಿನಂದನೀಯವಿದೆ. 4-10-48ರಲ್ಲಿ ಜರಗಿದ ಮಹಾ ಸಭೆಯಲ್ಲಿ 48-49ರ ಬಗ್ಗೆ ಶ್ರೀ. ಕೃಷ್ಣ ಎಚ್. ಶೆಟ್ಟಿಯವರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು. ಶ್ರೀಗಳಾದ ಕೃಷ್ಣ ಕೆ. ಶೆಟ್ಟಿ, (ಉಪಾಧ್ಯಕ್ಷ) ಮಲ್ಲಾಡಿ ನಾರಾಯಣ ಸಿ. ಶೆಟ್ಟಿ (ಕಾರ್ಯದರ್ಶಿ) ಎ. ಬೋಜ ಶೆಟ್ಟಿ, ಕೆ. ವೆಂಕಪ್ಪ ಶೆಟ್ಟಿ, ವೀರಪ್ಪ ಪಿ. ಶೆಟ್ಟಿ, ಸಿಂಬೂರು ಕೃಷ್ಣ ಎ. ಶೆಟ್ಟಿ, ಬಳ್ಳೆ ರಾಮಣ್ಣ ಶೆಟ್ಟಿ, ನಂದ್ಯಪ್ಪ ಎಂ. ಶೆಟ್ಟಿ, ಕೃಷ್ಣ ಎಚ್. ಶೆಟ್ಟಿ, ಪಿ. ಭೋಜ ಶೆಟ್ಟಿ, ಕಾಂತಪ್ಪ ವಿ. ಶೆಟ್ಟಿ, ಎಚ್ಚಣ್ಣ ಶೆಟ್ಟಿ, ಇವರು ಆಡಳಿತ ಕಮಿಟಿಗೆ ಆರಿಸಲ್ಪಟ್ಟಿದ್ದಾರೆ. ಶ್ರೀಗಳಾದ ಮಹಾಬಲ ಶೆಟ್ಟಿ, ವಾಸು ಅಚ್ಚಣ್ಣ ಶೆಟ್ಟಿ, ಬಾಬು ಎಸ್. ಶೆಟ್ಟಿ, ಇವರು ಕಂಟ್ರೋಲ್ ಕಮಿಟಿಗೂ, ಡಾ| ಎಸ್. ವಿ. ಅಡ್ಯಂತಾಯ, ಶ್ರೀಗಳಾದ ಕೆ. ವಿಟ್ಠಲ ಶೆಟ್ಟಿ, R. A. ಬಿ. ಎಸ್. ಶೆಟ್ಟಿ, B. A. L L. B. ಇವರು ಸಿಂಡಿಕ್ಯೂಟ್ ಆಗಿಯೂ ಆರಿಸಲ್ಪಟ್ಟಿದ್ದಾರೆ, ಪರಸ್ಪರ ಸಹಕಾರಕ್ಕಾಗಿ ಜನ್ಮತಾಳಿದ ಈ ಸಂಸ್ಥೆಯು ಇನ್ನಷ್ಟು ಅಭಿವೃದ್ಧಿಗೊಂದು ಜಯಶೀಲವಾಗಿ ಕೀರ್ತಿಗಳಿಸಲೆಂದು ಹಾರ್ದಿಕವಾಗಿ ಹಾರೈಸುತ್ತೇವೆ.

ಸ್ವೀಕಾರ

1 ಸುಲಭಚಿಕಿತ್ಸೆ (ಪಂಡಿತ ತಾರಾನಾಥರು)
2 ಮಹೇಂದ್ರಜಾಲ (ನವಗಿರಿನಂದ)
3 ಸೈತಾನ್ (A. V. Pai)
4 ಕರ್ಣಸಿರಾಟ [ಮುಂಲಿ]
5 ಸಾರಸ್ವತ ಸಮಾಜ [ಕೇಶವ ಕೃಷ್ಣ ಕುಡುವ]
6 ಬಾಸೂ ವಿರ್ತನ [ಮೈಸೂರು ಆಕಾರವಾಣಿ]
7 ಗಾಂಧೀ ಸೂತ್ರಗಳು [ಪ್ರಾ ಡಿ. ಎಸ ರವಾ]
8 ಕೀಚಕ [ಜಿ. ಪಿ. ರಾಜರತ್ನಂ]
8 ಮಹ ಭ್ರಾಂತಸಾ: [,,]
9 ರನ್ನನ ರಸಘಟ್ಟ [,,]
10 ಸರಿಮರೆಯ ಮಾತುಕತೆ [ಸಿ. ಆರ್]
[ವಿಮರ್ಶೆ ಯಥಾವಕಾಶವಾಗಿ]

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ, 5 ಕೊಡಿಯಾಲಬೈಲು, ದ ಕ

ಸ್ಟಾಕಿಸ್ಟರು. ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-
Swadeshi Oushadhi Bhandara (Regd-)
KUNJAL P. O. Brahmavar, S K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
‘ಮಹಾಜನ’
ಕಾಸರಗೋಡು
ಇವರ ತಯಾರಿಕೆಗಳನ್ನು ವಿಚಾರಿಸಿರಿ.

Printed & Published by K. H. Shetty at the Navayuga Press Udipi, S. India.

Regd. No M. 5016

LICENCE No. 31
Licenced to Post without Prepayment

NAVAYUGA WEEKLY

POST BOX No. 22 -- UDIPI, S. K

FOUNDER
Hon'ble Sri A B Shetty
Education Minister, Govt. of Madras

Telegram: "Navayuga"

ನವಯುಗ

Estd. 1921
ಸ್ಥಾಪನೆ

ವಾರ್ಷಿಕ ಚಂದಾ. 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ ವಾರ 34
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ವಿದ್ಯಾಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು
Vol 29 No. 34

ಅಂದು-ಇಂದು

ಪಂಡಿತ ಜವಾಹರಲಾಲರು ತನ್ನ ಆತ್ಮಕಥೆಯಲ್ಲಿ ಕಂಡಿದ್ದ ಸ್ವತಂತ್ರಭಾರತದ ಕನಸನ್ನು, ಈಗೊಮ್ಮೆ ನೋಡಿಕೊಳ್ಳುತ್ತಾದರೆ ಅದು 'ಅವನೋ-ಬೇರೊಬ್ಬನೋ?' ಎಂಬ ಅನುಮಾನ ಸ್ವತಃ ಅವರಿಗೇನೇ ಮೂಡುವಷ್ಟು ವ್ಯತ್ಯಾಸ ಅಂದಿನ ಮತ್ತು ಇಂದಿನ ನೆಹರೂ ಧೋರಣೆಯಲ್ಲಿ ಕಾಣುತ್ತಿದೆ.

"ನನ್ನ ಕೈಯಲ್ಲಿ ಅಧಿಕಾರವಿರುತ್ತಿದ್ದರೆ ಕಪ್ಪು ಸಂತೆ ಮಾಡುವವರನ್ನು ಫಾಶಿಗೆ ಏರಿಸ್ತಿದ್ದೆ" ಎಂದು ಕಳೆದ ಯುದ್ಧ ಕಾಲದಲ್ಲಂದಿದ್ದ ಪಂಡಿತ ನೆಹರೂಗಳ ಕೈಯಲ್ಲೇ ಈಗ ಅಧಿಕಾರವಿದೆ; ದೇಶ ತುಂಬಾ ಕಪ್ಪು ಸಂತೆಯೂ ಹಬ್ಬಿದೆ.

"ವಸಾಹತ ಸಂಬಂಧ ಕಡಿದ ಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆಯ ಗುರಿ ಇನ್ನಿಲ್ಲ" ಎಂದು 1929ರ ಲಾಹೋರು ಕಾಂಗ್ರೆಸಿನಲ್ಲಿ ನಿರ್ಧಾರ ಮಾಡಿಸಿದ್ದ ಪಂಡಿತ ನೆಹರೂಗಳು, 20 ವರುಷಗಳ ನಂತರ ಈಗತಾನೇ 'ಪೂರ್ಣ ಸ್ವಾತಂತ್ರ್ಯ ಮತ್ತು ಸರಿಸಮಾನತೆಯ ವಸಾಹತು ಸಂಬಂಧ ವುಳಿಸಿಕೊಳ್ಳುವುದು ಇಕ್ಕಡೆಗೂ ಹಿತಕರ'ವೆನ್ನುತ್ತಾ ಒಡ[illegible]ಕ್ಕಾಗಿಯೇ ಲಂಡನಿಗೆ ಹೊರಟಿದ್ದಾರೆ.

ನಿಮ್ಮ ತೃಪ್ತಿ ನಮ್ಮ ಗೌರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ



PRABHAT
TEA & COFFEE (INDIA) Ltd.
COONOOR (Nilgiris)

ಬ್ರಿಟಿಷ್ ಆಡಳಿತೆಯಿರುವಾಗ, ಆ ನೌಕರಶಾಹಿಯನ್ನು ಖಂಡಿಸುತ್ತಾ, ಬಿಳಿ ಜನರ ಸಂಬಳ ವೇತನಗಳಿಗಾಗಿ ಭಾರತದ ಸಂಪತ್ತು ಸೂರೆಯಾಗುತ್ತಿದೆ, ಎಂದು ಘೋಷಿಸಿದ್ದ ಅಂದಿನ ಚಳವಳಿಗಾರ ಮುಖಂಡರೇ ಇಂದಿನ ಅಧಿಕಾರಿಗಳಾಗಿ "ಅನುಭವಸ್ಥ ಬಿಳಿಜನ ವರ್ಗವು ಬಿಟ್ಟು ಹೋಗಿರುವುದರಿಂದ ಆಡಳಿತ ನಿರ್ವಹಣೆಕ್ಕೆ ಬೇಕಾದಷ್ಟು ಯೋಗ್ಯ ನೌಕರವರ್ಗ ನಮ್ಮಲ್ಲಿಲ್ಲ" ಎಂದು ಮೊರೆಯಿಡುವುದು ಕೇಳಬರುತ್ತಿದೆ.

ವ್ಯಾಪಾರಿಗಳಾದ ಬ್ರಿಟಿಷರು ತಮ್ಮ ಸ್ವಾರ್ಥಕ್ಕಾಗಿ ಭಾರತವನ್ನು ತಮ್ಮ ಮಾರ್ಕೆಟಾಗಿ ಮಾಡಿಕೊಂಡಿರುವರೆಂದೂ, ಇದರಿಂದಾಗಿಯೇ ರಾಷ್ಟ್ರದ ಸರ್ವಸಂಪತ್ತು ಶೋಷಣೆಯಾಗುತ್ತಿದೆಯೆಂದೂ ಸ್ವಾತಂತ್ರ್ಯಹೋರಾಟದ ಆ ಕಾಲದಲ್ಲಿ ಅವ್ಯಾಹತ ರೀತಿಯ ಪ್ರಚಾರಗಳು ನಡೆದಿದ್ದುವು. ಗಾಂಧೀಜಿಯ ಚರಖ, ಗುಡಿಕೈಗಾರಿಕೆಗಳನ್ನವಲಂಬಿಸಿ ಪಾಶ್ಚಾತ್ಯರ ಯಂತ್ರಜಾಲವನ್ನೇ ಹರಿದೊಗೆಯಬೇಕೆಂಬ ಮಂತ್ರಘೋಷಣೆ ಆಗಿದ್ದುವು; ಬ್ರಿಟಿಷ್ ಬಂಡವಾಳದಿಂದಾಗುತ್ತಿರುವ ಅನಾಹುತಗಳ ವರ್ಣನೆ ಅತಿಯಾಗಿ ನಡೆದಿದ್ದುವು. ಆದರೀಗ ಸ್ವಾತಂತ್ರ್ಯದೊರೆತು ಒಂದೂವರೆ ವರುಷ ತುಂಬಿದ ಮಾತ್ರ; ಭಾರತದ ಪ್ರಧಾನಿ—ದೇಶಾಭಿಮಾನ, ಸ್ವಾಭಿಮಾನದ ಅಗ್ರಗಣ್ಯಪ್ರಧಾನಿ—ಪಂಡಿತ ಜವಾಹರಲಾಲರು ವಿದೇಶೀ ಬಂಡವಾಳಗಳನ್ನು ಮುಖ್ಯತಃ ಬ್ರಿಟಿಷ್ ಬಂಡವಾಳವನ್ನು ಸ್ವಾಗತಿಸಿ, ಸ್ವತಂತ್ರಭಾರತ ಪಾರ್ಲಿಮೆಂಟಿನಲ್ಲೇ ಅಭಯದಾನಮಾಡಿದ್ದಾರೆ.

ಬ್ರಿಟಿಷ್ ಆಡಳಿತೆಗೆ ನಿದರ್ಶನಗಳಾಗಿ ಯಾವುದನ್ನು ಆ ಕಾಲದಲ್ಲಿ ತೋರಿಸಲಾಗುತ್ತಿತ್ತೋ, ಆ ಬಂಧನ, ಶಿಕ್ಷೆ, ಪ್ರತಿಬಂಧ ದಬ್ಬಾಳಿಕೆಗಳನ್ನು ಈ ಕಾಲದಲ್ಲೂ ಸ್ವತಂತ್ರಭಾರತ ಸರಕಾರಗಳೂ ಅಸ್ತಿತ್ವದಲ್ಲಿಡಬೇಕಾಗಿ ಬಂದಿದೆ.

"ಜನತೆಯೊಡನೆ ಹೃದಯಸಂಬಂಧವಿಲ್ಲದ ರಾಷ್ಟ್ರದ್ರೋಹಿಗಳಿಗೆ ಹುದ್ದೆ ಬಿರುದುಗಳ ರೊಟ್ಟಿಚೂರು ಚೆಲ್ಲಿ, ಅವರನ್ನು ಕಟ್ಟಿಕೊಂಡು ಬ್ರಿಟಿಷ್ ಸರಕಾರವು ಭಾರತದಲ್ಲಿ ತನ್ನಾಟವಾಡುತ್ತಿದೆ" ಎಂದು ಆ ಕಾಲದಲ್ಲಿ ದೂರುದೂಷಣೆಗಳಾಗಿದ್ದುವು. ಆದರೆ ಕಾಂಗ್ರೆಸ್ ರಾಜ್ಯದೀ ಕಾಲದಲ್ಲೂ "ಸಮರ್ಥರು, ಅನುಭವಸ್ಥರು ಮತ್ತು ಯೋಗ್ಯರು" ಎಂಬ ಕಾರಣದಿಂದ ಅಂತಹ ಹಲವು ವ್ಯಕ್ತಿಗಳೇ ಮುಖ್ಯ ಅಧಿಕಾರಸ್ಥಾನಗಳಲ್ಲಿ ರಾಜಿಸುತಿದ್ದಾರೆ.

ಮೂರನೆಯವರಾದ ತಮ್ಮ ಆಡಳಿತೆಯನ್ನು ಅಡಿಮೇಲು ಮಾಡುವ ಕಡೆಗೆ ಜನರ ಲಕ್ಷ್ಯ ಬೀಳಬಾರದೆಂಬುದಕ್ಕಾಗಿ ಬ್ರಿಟಿಷರೇ ಇಲ್ಲಿ ಹಿಂದೂಮುಸ್ಲಿಂ ವೈಷಮ್ಯಗಳನ್ನು ನಿರ್ಮಿಸುತಿದ್ದರೆಂಬ ಬ್ರಿಟಿಷ್ ಆಡಳಿತೆಯ ಕಾಲದ ಜಾತೀಗೊಂದಲಗಳ ಕುರಿತು ತೀರ್ಮಾನಿಸಲಾಗಿತ್ತು. ಆದರೆ ಬ್ರಿಟಿಷರು ಅಧಿಕಾರ ತ್ಯಾಗ ಮಾಡಲು ತಯಾರಾದಂದಿನಿಂದ ಅಧಿಕಾರ ಬಿಟ್ಟುಹೋದ ಒತ್ತಿನಕಾಲದವರೆಗೂ ರಾಷ್ಟ್ರದಲ್ಲಿ ನಡೆದಷ್ಟು ಭೀಕರ ಹಿಂದೂ ಮುಸ್ಲಿಂ ಬಂಡಾಯಗಳು ಹಿಂದೆಂದೂ ನಡೆದಿರಲಿಲ್ಲ.

ಇನ್ನು ಸಾಮಾನ್ಯ ಜನರ ಸ್ಥಿತಿಗತಿಯು ಗುಲಾಮಗಿರಿಯ ಆ ಕಾಲಕ್ಕಿಂತ ಸ್ವಾತಂತ್ರ್ಯದ ಈ ಕಾಲದಲ್ಲಿ ಸುಧಾರಿಸಿದುದೆಷ್ಟು—ಎಂಬ ಪ್ರಶ್ನೆಗೆ ಉತ್ತರ ಕೊಡಲಿಕ್ಕಿಲ್ಲ. ಕೂಡಲೇ ಏಳುವ ಪ್ರಶ್ನೆ—ಈ ಸ್ವಾತಂತ್ರ್ಯದ ಬೆಲೆ ಮತ್ತು ನೆಲೆ ಯಾವುದು?

ಸ್ವತಃ ಸ್ವಾತಂತ್ರ್ಯವೇ ಅಮೂಲ್ಯವಾದುದು, ಬೆಲೆ ಕಟ್ಟಲಾಗದಷ್ಟು ಅಮೋಘವಾದುದು.

ಸಸಿಯನ್ನು ನೆಡುವಾಗ ಮತ್ತು ನೆಟ್ಟ ಬೆನ್ನಲ್ಲಿ ಅಗೆಯುವ, ಅಡಿಮೇಲುಮಾಡುವ, ಗೊಬ್ಬರ ಹಾಕುವ, ನೀರೆರೆಯುವ ಪ್ರಯಾಸವೇ ಇದೆ ಹೊರತು ಫಲ ತಿನ್ನುವ ಭಾಗ್ಯ ಅಸ್ವಾಭಾವಿಕ. ಈಗತಾನೇ ಬೇರುಬಿಡುತ್ತಿರುವ ಸ್ವಾತಂತ್ರ್ಯ ಕಲ್ಪವೃಕ್ಷದ ಮಟ್ಟಿಗೂ ಈ ಮಾತು ಅನ್ವಯಿಸುತ್ತದೆ.

ಬ್ರಿಟಿಷ್ ಜನರು ಶತಮಾನಗಳಿಂದ ಲೋಕವನ್ನು ಆಳಿ ಅನುಭವ, ಅರ್ಹತೆಗಳಿದ್ದವರು; ಅಂಥವರ ಆಡಳಿತೆಯಲ್ಲಿ ಕೆಲವು ವಿಶೇಷ ಯೋಗ್ಯತೆಗಳು ತೋರಿಬರುವದು ಸ್ವಾಭಾವಿಕ. ಭಾರತೀಯರು ಎರಡು ಶತಮಾನಗಳಲ್ಲಿ ಪರದಾಸ್ಯದಲ್ಲಿದ್ದವರು; ಅಂಥವರ ಸ್ವಾಡಳಿತೆಯ ಆದಿಭಾಗದಲ್ಲಿ ಕೆಲವು ದೋಷಗಳು ತೋರಿಬರುವುದೂ ಸಹಜವೇ.

ದೀರ್ಘಾವಧಿ ಗುಲಾಮಗಿರಿಯಲ್ಲಿದ್ದ ಜನತೆಗೆ ಸ್ವಭಾವೋಚಿತವಾದ ಅಜ್ಞಾನ, ಅಭಿಲಾಷೆ ಪರಾವಲಂಬನಬುದ್ಧಿ ಭೀರುತೆಯೆಲ್ಲ ಮಾಯವಾಗುವವರೆಗೆ, ಅವರ ಅಧಿಕಾರದಲ್ಲಿಯೂ ಅವುಗಳ ಛಾಯೆ ತೋರಿ ಬರಲು ಬದ್ಧವಿದೆ.

ಜನತೆಯು ಸರಕಾರದ ಆಡಳಿತೆಯೊಡನೆ ಹೋರಾಡಿದ್ದಂತೆಯೇ ಸ್ವೀಯ ದೌರ್ಬಲ್ಯಗಳೊಡನೆಯೂ ಹೋರಾಡಿ ಸವರಿಸಿಕೊಳ್ಳುವದೊಂದೇ ಇದಕ್ಕಿರುವ ಹಾದಿ.

ಮನೆ ಬಾಡಿಗೆಗೆ ದೊರೆಯುತ್ತದೆ

ಉಡುಪಿ ಪೇಟೆಗೆ ಸಮೀಪದ ಕೊರಂಗ್ರಪಾಡಿಯಲ್ಲಿ ಉದ್ಯಾವರ ಚರ್ಚ್-ಅಲೆವೂರು ದಾರಿ ಬದಿ ನಾಲ್ಕನೆ ಫರ್ಲಾಂಗ್ ಕಲ್ಲಿನ ಒಳ ಅರ್ಧ ಎಕ್ರೆ ವಿಸ್ತೀರ್ಣದ ವಿಶಾಲ ಕಂಪೌಂಡಿನಲ್ಲಿ ಎರಡು ಬಾವಿ, ಎಂಟು ಕೋಣೆಗಳಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ಬಯಕೆ ಉಳ್ಳವರು 'ಕ' c/o 'ನವಯುಗ' ಉಡುಪಿ, ಈ ವಿಳಾಸಕ್ಕೆ ಬರೆಯಿರಿ. ಇಲ್ಲವೆ ಮುಖತಃ ಮಾತನಾಡಬಹುದು.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED

ಇಂದಿನ ಮಂತ್ರಿಗಳ ಕುರಿತು—

ಮುಂದಿನ ಚರಿತ್ರಕಾರನ ಡೈರಿಯಲ್ಲಿ ನಮೂದಿಸಲ್ಪಡಬಹುದಾದ ಅಂಶಗಳು

(R. K. Narayan, ಇವರ HINDU ಪತ್ರಿಕೆಯ ವ್ಯಂಗ್ಯ ಲೇಖನದ ಅನುವಾದ)

1947ರ ನಂತರದ ದಶವರ್ಷಾವಧಿಯಲ್ಲಿ ರಾಷ್ಟ್ರದಲ್ಲೆಲ್ಲಾ ಮಂತ್ರಿಗಳು ತುಂಬಿ ಹೋಗಿದ್ದರು. ಯಾವುದಾದರೊಂದು ನಿಶ್ಚಿತ ಸಮಯ ಅಥವಾ ಸ್ಥಳದಲ್ಲಿ ಪ್ರಜೆಗಳಿಗಿಂತ ಹೆಚ್ಚಾಗಿ ಮಂತ್ರಿಗಳೇ ಇದ್ದಿರಬಹುದೆಂಬುದು ಸಂಭವನೀಯ. ಹಿಂದಿನ ತಲೆಮಾರೊಂದರಿಂದ ಕೈವರ್ತಿಸಿಕೊಡಲ್ಪಟ್ಟ ಅದೊಂದು ಸಂಪ್ರದಾಯದ ಪಾಲನೆಗಾಗಿಯೇ ಹೀಗಾದುದಿರಬೇಕು. ಸುಮಾರು 200 ಬಿ. ಸಿ. ಆ ಕಾಲದಲ್ಲಿ ರಾಷ್ಟ್ರದೊಂದು ಭಾಗವಾಗಿ 'ಲಿಚ್ಛಾವಿ ರಿಪಬ್ಲಿಕ್' ಎಂಬುದಿತ್ತೆಂದೂ ತನ್ನಲ್ಲಿ 999 ರಾಜರು (ಅಥವಾ 9999 ?) ಇದ್ದಾರೆಂಬ ಒಡೆಯಿಯನ್ನದು ಹಾರಿಸಬಲ್ಲುದಾಗಿತ್ತೆಂದೂ ತಿಳಿದುಬರುತ್ತದೆ. ದಾಖಲೆಗಳಿಂದ ನಮಗೆ ತಿಳಿದು ಬರುವಂತೆ ಅಲ್ಲಿದ್ದ ಜನಸಂಖ್ಯೆ 1000 (ಅಥವಾ 10000?) ಮಾತ್ರವಾದುದರಿಂದ ಈ ಎಲ್ಲಾ ರಾಜರು ಆಳಲಿಕ್ಕಿದ್ದುದು ಕೇವಲ ಒಬ್ಬನನ್ನೇ ಎಂದು ನಾವು ನಿರ್ಣಯಿಸಬೇಕಾಗುತ್ತದೆ. ಈ ಪರಂಪರಾಗತ ಸಂಪ್ರದಾಯ ಪಾಲನೆಗಾಗಿಯೇ ರಾಷ್ಟ್ರವು ಮಂತ್ರಿಗಳನ್ನು ಅಧಿಕಸಂಖ್ಯೆಯಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದಿತು. ಇಷ್ಟೆಲ್ಲಾ ಮಂತ್ರಿಗಳು ಏನು ಕೆಲಸ ಮಾಡುತಿದ್ದರು ಎಂಬುದನ್ನು ಇಲ್ಲಿ ವರ್ಣಿಸಲು ನಮ್ಮಿಂದ ಸಾಧ್ಯವಿಲ್ಲ. ಆ ಕಾಲದ ಒಂದು ವಿಶೇಷ ಸಮಸ್ಯಾತ್ಮಕ ಸಂಗತಿಯಾಗಿದ್ದುದೆಂದರೆ "ಖಾತೆ ರಹಿತ ಮಂತ್ರಿ"ತ್ವಗಳು. ಅಂದರೆ ಅದೇನಿರಬಹುದು? ಈ ಕುರಿತು ಏನನ್ನಾದರೂ ಹೇಳಲಾಗದಷ್ಟು ನಾವು ಕೈಕೊಂಡಿರುವ ಸಂಶೋಧನೆಗಳು ಈವರೆಗೂ ಅಪೂರ್ಣವಿವೆ. ಆದ್ದರಿಂದ ಈಗ ನಾವು ಸರ್ವ ಸಾಮಾನ್ಯವಾಗಿ ಮಂತ್ರಿಗಳ ಬಗೆಗೇನೇ ಹೊರಳೋಣ.

ಚಾರಿತ್ರಿಕ ದಾಖಲೆಗಳ ನಮ್ಮ ಇಲಾಖೆಯ ಸಂಗ್ರಹಾಲಯಗಳಲ್ಲಿ ಹಲವು ಟನ್ನುಗಳಷ್ಟು ವರ್ತಮಾನಪತ್ರಿಕೆಗಳ ತುಂಡುಗಳು ತುಂಬಿವೆ; ಅವೆಲ್ಲವೂ ಆ ಕಾಲದ ಮಂತ್ರಿಗಳ ಭಾಷಣಗಳು ಬಂದಿದ್ದ ವಾರ್ತಾಪತ್ರಿಕಾ ತುಂಡುಗಳು. ಅವುಗಳನ್ನು ನೋಡಿ, ಆ ಕಾಲದಲ್ಲಿ ಪ್ರತಿಯೊಬ್ಬ ಮಂತ್ರಿಯೂ ಎಷ್ಟು ವಿಧದ ಭಾಷಣಗಳನ್ನು ಕೊಡಬೇಕಾಗಿತ್ತೆಂಬುದನ್ನು ಗ್ರಹಿಸಿ ನಾವು ಚೋದ್ಯಗೊಂಡಿದ್ದೇವೆ. ನಮ್ಮೀ ಕಾಲಮಾನದಲ್ಲಿ ನಮ್ಮ ಮಂತ್ರಿಗಳಾರು, ಅವರೇನು ಮಾಡುತಿದ್ದಾರೆ, ಎಂಬ ವಿಷಯಗಳು ನಮಗೆ ತಿಳಿದಿರುವುದಾದರೂ ತೀರಾ ಕಡಿಮೆ. ಅವರು ತೆಪ್ಪಗೆ ತಮ್ಮ ಕಾಗದ ಪತ್ರಗಳ ಮೇಲೆ ತಲೆಬಿದ್ದುಕೊಂಡು, ಆಫೀಸು ಬಾಗಿಲು ಹಾಕಿ ಕುಳಿತು ತಮ್ಮ ರಾಷ್ಟ್ರದ ಜೀವನ ಮತ್ತು ಕಲ್ಯಾಣವನ್ನು ರೂಪಿಸುತ್ತಿರುವಂತೆ ಕಾಣುತ್ತದೆ. ಅವರು ಕಾರ್ಯಮಗ್ನರಿರುವದರಿಂದ ಬಹಿರಂಗಕ್ಕೆ ಬೀಳುವರೆಂದು ನಿರೀಕ್ಷಿಸಲಾಗುವದಿಲ್ಲ; ಆದರೆ ಆ ಕಾಲದಲ್ಲಿ ಪ್ರತೀ ಮಧ್ಯಾಹ್ನ, ಸಾಯಂಕಾಲ ಮತ್ತು ರಾತ್ರಿಯಲ್ಲಿಯೂ ಸಾರ್ವಜನಿಕ ಸಭೆಗಳಲ್ಲಿ ಮಂತ್ರಿಗಳ ಭಾಷಣವಿರುವದನ್ನು ನಿರೀಕ್ಷಿಸಲಾಗಿತ್ತು. ಅವರಾದರೋ ವಿವಿಧ ವಿಷಯಗಳ ಮೇಲೆ ಮಾತುಗಳನ್ನು ಛಡಾಯಿಸುತಿದ್ದರು. ಇಲ್ಲಿಬ್ಬನ ಭಾವಚಿತ್ರ ಅನಾವರಣ ಮಾಡಿ ವೈಜ್ಞಾನಿಕ ಮಹಾತ್ಮೆಯನ್ನು ವಿವರಿಸಿ ಭಾಷಣ ಮಾಡಿದ; ಅಲ್ಲಿ ಮತ್ತೊಬ್ಬ ಮಂತ್ರಿ ಒಂದು ಸೇತುವೆಯನ್ನು ತೆರೆದು ಸೇತುವೆ ಲಕ್ಷಣಗಳನ್ನು ವಿವರಿಸಿದ. ಮತ್ತೊಂದೆಡೆಯಲ್ಲಿ ಬೇರೊಬ್ಬ ಸಚಿವೋತ್ತಮ ಪತ್ರಿಕಾ ಸಂಪಾದಕರ ಸಮ್ಮೇಳನದೊಳಗೆ ಧಾವಿಸಿ, ಪತ್ರಿಕೆಗಳನ್ನು ನಡೆಸುವ ವಿಧಾನಗಳ ಕುರಿತು ಅವರಿಗೆ ಹಿತೋಪದೇಶಕೊಟ್ಟ. ಇನ್ನು ವಿದ್ಯೆ, ಶಿಸ್ತು, ಅರಣ್ಯ ಸರಂಜಾಮು, ದಕ್ಷಿಣಾಫ್ರಿಕ, ರಸ್ತೆತಿರುಗೆಗಳು, ಆಟ ಓಟಗಳ ಆವಶ್ಯಕತೆ-ಇತ್ಯಾದಿ ಎಲ್ಲವುಗಳಲ್ಲೂ ಅವರು ಮುಂತೋರಿ ಬರುತ್ತಿದ್ದರು. ಯಾವದೊಂದು ಮನಷ್ಯಜೀವಿಯಾದರೂ ತನ್ನೊಂದು ತಲೆಬುರುಡೆಯಲ್ಲಿ ಇವೆಲ್ಲಾ ಜ್ಞಾನಗಳನ್ನು ಹುದುಗಿಸಿಟ್ಟುಕೊಳ್ಳುವದು ಹೇಗೆ ಎಂದು ನಾವೆಲ್ಲರೂ ದಂಗುಬಡೆಯುವ ರೀತಿಯಲ್ಲಿ ಅವರೆಲ್ಲರೂ ಬಹುಮುಖೀ ಪ್ರತಿಭೆಗಳನ್ನು ಪ್ರದರ್ಶಿಸುತಿದ್ದರು. ಅಷ್ಟುಮಾತ್ರವೇನು, ಸಾಮೂಹಿಕವಾಗಿಯೂ ಅವರೆಂತಹ ಸ್ಥಿರಪ್ರಜ್ಞೆ ತೋರಿಸಿಬಿಡುತ್ತಿದ್ದರು! ಬಜೆಟ್, ಆಹಾರ, ಕಾನೂನು, ವ್ಯವಸ್ಥೆ ಇತ್ಯಾದಿಗಳ ಕುರಿತು ಏನನ್ನಾದರೂ ಗೊಣಗುವುದರಿಂದಲೇ ಅವರು ತೃಪ್ತರಾಗುತಿದ್ದಿಲ್ಲ; ಆಗಿನ ಮಂತ್ರಿಗಳಲ್ಲೊಬ್ಬರ ಸ್ವಂತ ಮಾತನ್ನೇ ಉದಾಹರಿಸುವುದಾದರೆ ತಮ್ಮ ಆಡಳಿತೆಯ ಅವಧಿಯಲ್ಲೇ ಪ್ರತಿಯೊಬ್ಬ ನಾಗರಿಕನೂ "ಒಂದು ಆಕಾರಕ್ಕೆ ತಳ್ಳಲ್ಪಡಬೇಕು" ಎಂದು ಅವರು ಆಶಿಸುತಿದ್ದರು. ಪ್ರತಿಯೊಬ್ಬ ನಾಗರಿಕನೂ ಓರ್ವ ಸಜ್ಜನ, ಒಬ್ಬ ನಾಜೂಕಿನ ಜನ, ಓರ್ವ ಪರಿಶುದ್ಧ ಜನ, ಒಬ್ಬ ವಿರಕ್ತನಾಗಬೇಕು; ಎಂಟು ಔನ್ಸ್ ಆಹಾರ ಮತ್ತು ಹತ್ತು ಯಾರ್ಡ್ ವಸ್ತ್ರಕ್ಕಿಂತ ಹೆಚ್ಚಿನ ಬಯಕೆ ಯಾವುದೂ ಇಲ್ಲದ ಮನುಷ್ಯ ಅವನಾಗಬೇಕು. ನಾಗರಿಕರು ಅಬದ್ಧ ರಾಗೂ ಪಾಪಪೂರಿತ ವರ್ಚಸ್ಸಿಗೆ ಬಲಿಬೀಳದ ದೂರವಿರಬೇಕೆಂದು ಮಂತ್ರಿಗಳು ಆಗ್ರಹಗೊಂಡಿದ್ದರು. ಒಡತಿಯ ದಯಾರ್ದ್ರ ಹಿಡಿತದೊಳಗಿನ ಒಂದು ಎಳೇ ಮಗುವಾದರೂ, ಆ ಕಾಲದ ಈ ನಾಗರಿಕರಿಗಿಂತ ಹೆಚ್ಚಿನ ಸಾಕಣೆಗೊಳಗಾಗುವಂತಿಲ್ಲ. ಪೋಷಾಕನ್ನು ಹೇಗೆ ತೊಡಬೇಕು-ವಸ್ತಿಯಲ್ಲಿ ಹೇಗೆ ನಡೆಯಬೇಕು-ಮೊದಲೇ ತುಂಬಿರುವ ತನ್ನ ಬಸ್ಸಿನೊಳಗೆ ಮಹಿಳೆಯರು ಪ್ರವೇಶಿಸಿದಾಗ ಹೇಗೆ ವರ್ತಿಸಬೇಕು-ರೇಡಿಯೋ ಕೇಳುವ ವಿಧಾನ-ಚಿತ್ರ ನೋಡುವ ರೀತಿ, ಇವೆಲ್ಲಾ ವಿಷಯಗಳಲ್ಲೂ ಪ್ರಜೆಗಳಿಗೆ ಉಪದೇಶ ದೊರೆಯುತಿತ್ತು.

ಇವರೆಲ್ಲರೂ, ತಮ್ಮ ಜನತೆಯ ಮೇಲಿನ ಯಥಾರ್ಥ, ತೀರ್ಥರೂಪ ಸಮಾನ ಗೌರವದಿಂದ ಹುರುಪುಗೊಂಡ ಅತಿಮಾನವರು ಎಂಬ ಕುರಿತು ಎಳ್ಳಷ್ಟಾದರೂ ಸಂದೇಹವಿರಬಲ್ಲುದೆ? ಈ ಕುರಿತು ಆಶ್ಚರ್ಯವೇನೂ ಇಲ್ಲ. ಇವರೆಲ್ಲರೂ ಅಶೋಕ, ಬುದ್ಧ ಮತ್ತು ಪ್ಲೇಟೋ ನಂತಹ ಸತ್ಪುರುಷರ ಸ್ಫೂರ್ತಿಯಿಂದಲೇ ಮುಂದೊತ್ತಿದವರು. ಸುಜೀವನದ ಮೂಲತತ್ವಗಳನ್ನು ನಮೂದಿಸಿದ ನೂರಾರು ಲಿಪಿಗಳನ್ನು ಅಶೋಕನು ಕಲ್ಲುಗಳಲ್ಲಿ ಕೊರೆಯಿಸಿಹಾಕಿದ್ದ; ತಮ್ಮ ವಶ ರೇಡಿಯೋ, ಸುದ್ದಿ ಕಚೇರಿ ಮತ್ತು ವರ್ತಮಾನ ಪತ್ರಿಕೆಗಳಿಲ್ಲದಿರುತಿದ್ದರೆ ಈ ಮಂತ್ರಿಗಳು ಕೂಡಾ ಕಲ್ಲು ಕಂಭಗಳಾಗಿ ರೂಪಿಸಲ್ಪಡುತ್ತಿದ್ದರು.

ನಮಗೆ ತೋರಿಬರುತ್ತಿರುವಂತೆ, ಪ್ರತಿಯೊಬ್ಬ ಮಂತ್ರಿಯೂ ಘೋಷಿಸಿರುವ "ಮಾಡಬೇಕಾದವುಗಳು" ಮತ್ತು "ಮಾಡಕೂಡದವುಗಳು" ಎಷ್ಟೋ ಇರುವುದರಿಂದ, ಸರ್ವಸಾಮಾನ್ಯ ನಾಗರಿಕನು ಎಷ್ಟೋವೇಳೆ ರಸ್ತೇ ಮಧ್ಯದಲ್ಲೇ ತಬ್ಬಿಬ್ಬಾಗಿ ನಿಂತುಬಿಡಬೇಕಾಗಿ ಬಂದಿತ್ತು. ಸಂಗತಿಯನ್ನು ಸ್ಪಷ್ಟಪಡಿಸುವದಕ್ಕಾಗಿ ಮಂತ್ರಿಗಳು ಬಗೆಬಗೆ ಶಾಸನ ಸಭೆಗಳನ್ನು ಕರೆಯುತಿದ್ದರು. ಅದೊಂದು ಪೂರ್ವತಯಾರೀ ಯಂತ್ರ. ಮಂತ್ರಿಗಳು ಅದರ ಒಂದು ಬಾಯಿಯಲ್ಲಿ 'ಮಸೂದೆ' ಎಂಬುದನ್ನು ಮಾಡಿ ಹಾಕಿದರಾಯಿತು- ಅದು ಇನ್ನೊಂದು ಬಾಯಿಯಿಂದ 'ಕಾನೂನು' ಆಗಿ ಹೊರಬೀಳುತ್ತಿತ್ತು. ಆ ಮೇಲೆ ಅದರ ವಿರುದ್ಧ ಹೋಗುವ ಎದೆಗಾರಿಕೆ ಯಾರಿಗೂ ಇರುತಿದ್ದಿಲ್ಲ. ಲೆಜಿಸ್ಲೇಟಿವ್ ಎಸೆಂಬ್ಲಿ ಅಧಿವೇಶನಗಳು ನಡೆಯುತ್ತಿರುವಾಗಲೆಲ್ಲಾ, ತಮ್ಮ ದೇಶಬಂಧುಗಳಿಗೆ ಸಾಕಷ್ಟು ವಿನೋದವನ್ನುಣಿಸಿ, ಅವರ ಸ್ಫೂರ್ತಿಯನ್ನು ಉ[illegible]ಸಿಕೊಡುವದು ಮಂತ್ರಿಗಳ ಪಾಲಿಗೆ ಬಂದಿದ್ದ ಮುಖ್ಯ ಕೆಲಸವಾಗಿತ್ತು. ತಮ್ಮ ಪರಿಹಾಸ್ಯ ಮತ್ತು ವಿನೋದವಾಣಿಗಳಿಂದ ಈ ಮಂತ್ರಿಗಳು ಸಭೆಯಲ್ಲಿ ಎಡೆಬಿಡದ ನಗೆಯ ಚೀರಾಟಗಳನ್ನು ಎಬ್ಬಿಸುತಿದ್ದರು. ಒಂದೇ ಒಂದು ದಿನದ ಅಧಿವೇಶನದ ಒಂದು ಪತ್ರಿಕಾವರದಿಯಲ್ಲಿ "ನಗೆ" ಎಂಬುದು ಅರುವತ್ತೊಂಭತ್ತು ಬಾರಿ ಅಚ್ಚಾಗುವದಿತ್ತು. ಸಾರ್ವಜನಿಕರೂ ಈ ಸಂದರ್ಭವನ್ನು ಅತ್ಯುತ್ಸಾಹದಿಂದ ಕಾಯುವಂತೆ ತೋರುತಿತ್ತು. ಪರಿ[illegible] ವಿವಿಧ ರೂಪದ ಪ್ರಶ್ನೆಗಳನ್ನು ಇದಿರಿಸಬೇಕಾದ ಸಂದರ್ಭವು ಮಂತ್ರಿಗಳಿಗಿದ್ದೇ; ಮತ್ತವರಾದರೋ ಅಪ್ಪಣೆದಾರರ, ಸಂ[illegible] ಮೇಲೆ ಗದಲ ವಿಮರ್ಶಕ ಉ[illegible]

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ರಿಂದ ೫ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: **ಬಾವಟೆ ಗುಡ್ಡೆ, ಮಂಗಳೂರು.**

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

FOR PROTECTION AND *PROVISION, CONSULT*

The most progressive life office;

THE NEW GUARDIAN OF INDIA

LIFE INSURANCE CO., LTD.

(United India Building) Post Box No. 142, Esplanade,

Head Office, MADRAS.

CHAIRMAN.

The Hon'ble Mr. M. Ct. M. Chidambaram Chettiar Avl.

Low Expense Ratio; Moderate Premium Rates;

Prompt Claim Discharges, and efficiency of Management.

Branches & Representatives all over India.

Application for representation from influential persons invited,

The Organising Secretary,

MANGLORE BRANCH K. S. Rao, Road, HUMPANKATTA.

ರ್ಗಗಳನ್ನು ಛಡಾಯಿಸಿಬಿಡುತ್ತಿದ್ದರು. ಅದೆಂದರೆ ಸಮಾಸೋದ್ಯೋಗಿ ಬವೇರೀಜನವನ್ನಿತ್ತ "Quiz Programme"ವಿಧಾನವನ್ನೇ ಅನುಸರಿಸುವಂತಹದು.

ಆ ಕಾಲದ ಮಂತ್ರಿಗಳ ಪಾಲಿಗೆ ಅತಿ ದೊಡ್ಡ ಚಿಂತೆಯಾಗಿದ್ದುದೆಂದರೆ ಮತ್ತು ಎಂಬು ಕಾಣುತ್ತದೆ. ತಮ್ಮ ಪೂರ್ವಿಕಾಧಿಕಾರಿಯಿಂದ ವಾರೀಸುಪ್ರಕಾರ ಬಂದ ಹಲವು ಸಾಲಿಸೋಲಗಳು ಇವರ ತಲೆಯ ಮೇಲೆ ಬಿದ್ದಿದ್ದುವು; ತಮ್ಮ ರಾಷ್ಟ್ರದ ಉತ್ಪನ್ನವನ್ನು ಹೆಚ್ಚಿಸುವ ವಿಧಾನಗಳನ್ನು ಅವರು ಕಂಡುಕೊಳ್ಳಬೇಕಾಗಿತ್ತು. ಹೀಗಾಗಿ ತಮ್ಮ ಹೃದಯದಲ್ಲಿ ವೇದನೆಯನ್ನು ತುಂಬಿಕೊಂಡೇ ಮನಸ್ಸಿಲ್ಲದ ಮನಸ್ಸಿನಿಂದ ಅವರು ಹಲವು ಪಥದ ತೆರಿಗೆ ವಿಧಾನಗಳನ್ನು ಶೋಧಿಸಿದ್ದರು. ಆ ರಾಷ್ಟ್ರದಲ್ಲಿ ಒಂದು ಅವಧಿಯಲ್ಲಿ 76 ಪಥದ ತಲೆತೆರಿಗೆಗಳು ಇದ್ದುವೆಂದು ಹೇಳಲಾಗಿದೆ. ಅವುಗಳ ಪೈಕಿ ಕೆಲವು ರಸ್ತೆಗಳಲ್ಲಿ ಮಂದಚಾರಿಗಳು ತಮ್ಮ ಕೈಗಳನ್ನು ಬೀಸಿಕೊಂಡು ಹೋಗುವುದಕ್ಕೆ ತೆರಿಗೆ—ತದ್ವಿರುದ್ಧವಾಗಿ ಇನ್ನು ಕೆಲವು ರಸ್ತೆಗಳಲ್ಲಿ ತಮ್ಮ ಕೈಗಳನ್ನು ಎಸೆಯುವುದರಿಂದ ಅಥವಾ ಬೆನ್ನ ಹಿಂದೆ ಇಟ್ಟುಕೊಂಡು ಹೋಗುವುದಕ್ಕೆ ತೆರಿಗೆ, ಇತ್ಯಾದಿಗಳಿದ್ದುವು. ಮುಖ್ಯಸ್ಥನೇ ಶತಮಾನದ ಮಂತ್ರಿಯು, ತನ್ನ ಹೊಸ ತೆರಿಗೆ ಸೂಚನೆಯನ್ನು ಮುಂದಿಡುವಾಗ ಬಹಳ ಕಣ್ಣೀರಿನಿಂದ ಒದ್ದೆಯಾಗುತ್ತಿದ್ದ. ಆ ಸಂದರ್ಭದಲ್ಲಿ ಆತನು ಮಾಡುತ್ತಿದ್ದ ಭಾಷಣವು ಉಬ್ಬುಕ್ಕಿದಯಗಳನ್ನು ಕರಗಿಸಿ ಬಿಡುತ್ತಿತ್ತು. ಊಟದ ವಿನಸ್ಸಿನದ ರಾಮಾಡುವಾಗ ಅಥವಾ ಕೊಂಡುಕೊಂಡಾಗ, ಇಲ್ಲವೇ ಸಿನೆಮಾ ನೋಡಿದರೆ ಅಥವಾ ಗಾಯನ ಕೇಳಿದರೆ, ಅತಿ ಏನನ್ನಾದರೂ ಉತ್ಪಾದಿಸಿದರೆ ಅಥವಾ ಸೋಮಾರಿಯಾಗಿದ್ದರೆಂತೂ ಅವ ಏನೇ ಮಾಡಿದರೂ ಹೀಗಿದ್ದರೂ ಒಂದೊಂದು ತೆರಿಗೆ ಕೊಡಲೇಬೇಕಾಗಿತ್ತು. ಆದರೆ ಇದು ತಮ್ಮ ಸ್ವಂತ ಹಿತಕ್ಕಾಗಿ ಎಂದು ತಿಳಿದಿದ್ದ ಜನರಾದರೋ ಇವೆಲ್ಲವನ್ನೂ ಉದ್ಯೋತ್ಸಾಹದಿಂದ ಅಂಗೀಕರಿಸಿಕೊಳ್ಳುತ್ತಿದ್ದರು.

ಎಲ್ಲೆಲ್ಲೂ ಬದಲಾವಣೆಗಳನ್ನು ಮಾಡುವ ಕುರಿತು ಮಂತ್ರಿಗಳು ವಿಶೇಷಾಸಕ್ತಿ ವಹಿಸುತ್ತಿದ್ದರು. ತನ್ನ ಕೈಗೆ ಏನೇ ಬಂದಿರಲಿ, ಅದೆಲ್ಲವನ್ನೂ ಪ್ರತಿಯೊಬ್ಬ ಮಂತ್ರಿಯೂ ಸಂಪೂರ್ಣವಾಗಿ ಒಪ್ಪರ್

ಸ್ತ್ರಪಡಿಸಿಕೊಳ್ಳುತ್ತಿದ್ದ. ರಾಷ್ಟ್ರವು ಸ್ವಚ್ಛ ಸ್ಲೇಟಿನಂತೆ ಎಲ್ಲವನ್ನೂ ಪೂರ್ಣ ಹೊಸತಾಗಿ ಪ್ರಾರಂಭಿಸಬೇಕೆಂದೇ ಅವರೆಲ್ಲರ ಬಯಕೆಯಿದ್ದಿತು. ಶಾಲಾ ವಿದ್ಯಾರ್ಥಿಯು ಹೊಸ ಹೊಸ ವಿಷಯಗಳನ್ನು ಕಲಿತುಕೊಳ್ಳಲು ತನ್ನ ಸಮಯದ ಬಹು ಭಾಗವನ್ನು ಕಳೆಯಬೇಕಾಗಿದ್ದಿತು; ಮತ್ತಷ್ಟೇ ಸಮಯವನ್ನು ಆತ ಹಳೇ ವಿಷಯಗಳನ್ನು ಮರೆತುಬಿಡುವುದಕ್ಕೆ ವ್ಯಯಿಸಬೇಕಾಗಿದ್ದಿತು. ಎಷ್ಟೆಷ್ಟೋ ಬದಲಾವಣೆಗಳು ಬಂದಿದ್ದುವು. ತತ್ಪರಿಣಾಮವಾಗಿ ಸಾಮಾನ್ಯ ನಾಗರಿಕನು, ಒಂದು ವಿಷಯವನ್ನು ಹಳೇ ಮರ್ಜಿಯಲ್ಲಿ ಮಾಡಬೇಕೋ ಹೊಸ ಮರ್ಜಿಯಲ್ಲೋ ಎಂಬುದನ್ನು ತಿಳಿಯಲಾರದೆ ಮಧ್ಯ ದಾರಿಯಲ್ಲೇ ತುಸ ತಬ್ಬಿಬ್ಬಾಗಿ ನಿಲ್ಲಬೇಕಾಗಿ ಬರುತಿತ್ತು. ಇವೆಲ್ಲ ಗಲಿಬಿಲಿಗಳ ನಿವಾರಣೆಗಾಗಿ, ರಾಷ್ಟ್ರದಲ್ಲಾಗಿರುವ ಎಲ್ಲಾ ಬದಲಾವಣೆಗಳ ಸರಿಯಾದ ದಾಖಲೆಗಳನ್ನಿಟ್ಟು, ಅವುಗಳನ್ನು ಸಾರ್ವಜನಿಕರ ಮುಂದಿಡುವ 'ಬದಲಾವಣಾ ಮಂತ್ರಿ'ಗಳನ್ನು ಕೆಲವು ಪ್ರಾಂತ್ಯಗಳಲ್ಲಿ ನೇಮಿಸಲಾಗಿತ್ತೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಒಬ್ಬ ಮಂತ್ರಿಯೊಮ್ಮೆ ಹೇಳಿದ್ದ: "ರಾಷ್ಟ್ರವು ಒಂದು ಸ್ವಿಚ್‌ಬೋರ್ಡ್ (ವಿದ್ಯುತ್‌ಗುಂಡೀ ಹಲಗೆ). ನಾನು ಸ್ವಿಚ್ ಮುಚ್ಚುತ್ತಾ, ಬಿಚ್ಚುತ್ತಾ, ನನಗಿಷ್ಟವಿದ್ದಂತೆ ತಂತೀ ಜೋಡಣೆಯನ್ನು ಮಾಡಿಸಿಕೊಳ್ಳುವವನಿದ್ದೇನೆ. ಅಮೂಲಾಗ್ರ ಬದಲಾವಣೆಯೆಂಬುದು ನಮ್ಮ ಜನ್ಮಸಿದ್ಧ ಹಕ್ಕು. ಎಂತಹ ಪರಿಸ್ಥಿತಿಯಲ್ಲಾದರೂ ನಾವು ಆದರಲ್ಲಿ ಒಂದೇ ಒಂದಿಂಚನ್ನೂ ಬಿಟ್ಟುಕೊಡಲಾರೆವು. ಪ್ರಯೋಗ ಮತ್ತು ಕಷ್ಟ ನಷ್ಟಗಳ ಅನುಭೋಗವಿನಹ ಯಾವ ಪ್ರಗತಿಯೂ ಸಾಧ್ಯವಿಲ್ಲ" ಈ ಮಾತುಗಳನ್ನು ಕೇಳಿದ ಜನತೆ ದಸೋದ್ಗಾರ,ಚಪ್ಪಾಳೆಗಳ ಜೈಕಾರ ಕೊಟ್ಟಿದ್ದಿತು; ಕಾರಣ ತಮ್ಮ ಮಂತ್ರಿಗಳೆಂದರೆ ತಮ್ಮ ಹಿತಚಿಂತನೆ ಮತ್ತು ಸುಖ ಧನಗಳ ವಾರೀಸುಬದ್ಧರಕ್ಷಕರು ಎಂಬ ಕುರಿತು ಜನರು ಯಾವ ಕ್ಷಣದಲ್ಲಾದರೂ ಸಂದೇಹಪಟ್ಟದಿಲ್ಲ.

ಡಾ। ಪಟ್ಟಾಭಿ ಹಾರಿಸಿದುದು ಹುಸಿ ಗುಂಡೆ?

ಭಾಷಾವಾರು ಪ್ರಾಂತ್ಯ ರಚನಾ ಸಂಬಂಧದ ವರದಿ ತಯಾರಿಸಿದ್ದ ತ್ರಿಮೂರ್ತಿ ಸಮಿತಿಯಲ್ಲಿದ್ದ ಕಾಂಗ್ರೆಸ್ ಅಧ್ಯಕ್ಷ, ಆಂಧ್ರ ಪ್ರಾಂತ್ಯ ರಚನಾ ಪ್ರವಾದಿ ಡಾ। ಪಟ್ಟಾಭಿ ಸೀತಾರಾಮಯ್ಯ ಒಬ್ಬರು ದೆಸೆಯಿಂದ ಕೂಡಲೇ ಭಾಷಾವಾರು ಪ್ರಾಂತ್ಯ ರಚನೆಯಾಗಬಹುದೆಂಬ ಆಶೆಯನ್ನು ಆದಿ ಭಾಗದಲ್ಲಿ ಹೆಚ್ಚಿನವರು ಕಟ್ಟಿಕೊಂಡಿದ್ದರು; ಡಾ। ಪಟ್ಟಾಭಿಗಳ ಕಡೆಗಿದ್ದ ಈ ಆಶಾ ದೃಷ್ಟಿಗೀಗ ಕತ್ತಲೆ ಕವಿದಂತಾಗಿದೆ; ಆ ವರದಿಯಲ್ಲಿ ತೋರುವ ಆಂಧ್ರ ಪಕ್ಷಪಾತತೆಗೆ ಮಾತ್ರ ಡಾ। ಪಟ್ಟಾಭಿಗಳು ಕಾರಣರಿರಬಹುದೆಂಬ ದೂರು ವಿ.ಕ್ಕ ಭಾಷಾಭಾಗಗಳಿಂದ ಕೇಳಬರುತ್ತಿದೆ. ಬುದ್ಧಿವಂತಿಕೆಗೆ ಹೆಸರಾದ ದಕ್ಷಿಣ ಭಾರತೀಯರ ಅಗ್ರಗಣ್ಯ ಪಂಗ್ತಿಯಲ್ಲಿರುವವರು ಡಾ। ಪಟ್ಟಾಭಿಗಳು. ಭಾಷಾವಾರು ಸಂಬಂಧದ ವರದಿಯನ್ನು ಢಿಲ್ಲಿಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಮಂಜೂರುಮಾಡಿಸಿ, ಬೊಂಬಾಯಿಗೆ ಬಂದಿದ್ದ ಅವರು ಅಲ್ಲಿ ಆ ಕುರಿತು ಮಾಡಿದ್ದ ಸ್ಪಷ್ಟೀಕರಣದಲ್ಲಿ ವಿಚಾರಣೀಯ ಹಾಗೂ ವಿವಾದಾರ್ಹ ಅಂಶಗಳಿದ್ದುವು:

"ಕೆಲವು ವರ್ತಮಾನ ಪತ್ರಿಕೆಗಳು ತಳಬರಿಸಿಕೊಟ್ಟಿರುವಂತೆ ಭಾಷಾವಾರು ಪ್ರಾಂತ್ಯರಚನೆಯನ್ನು ಹಿಂದೆ ಹಾಕುವ ನಿರ್ಧಾರವದಲ್ಲ ಆ ವರದಿಯಲ್ಲಿ ರಾಷ್ಟ್ರದ ಸ್ಥಿತಿಗತಿ ನಿರೂಪಣೆಯು ಮತ್ತು ಕಾರ್ಯ ಪ್ರವೃತ್ತಿಯ ಎರಡು ಭಾಗಗಳಿವೆ, ಈ ಕಾರ್ಯವಾಹೀ ಭಾಗವು ಅತ್ಯಂತ ಸ್ಪಷ್ಟವಿದೆ" ಎನ್ನುತ್ತಾ ಅವರು ಎಲ್ಲಾ ಭಾಗಗಳವರನ್ನೂ ಸಮಜಾಯಿಸುವ ಮಾತುಗಳನ್ನಾಡಿದ್ದರೆ. ಆ ವೇಳೆ ತಾನೆಂದರೆ ಆಂಧ್ರದ ಹಿತಚಿಂತಕನಾಗಿರದೆ ಸರ್ವ ಭಾಷಾ ಭಾಗಗಳ ಉದ್ಧಾರಕನೆಂಬಂತೆ ತನ್ನ ಪರಿಚಯ ಮಾಡಿ ಕೊಡುತ್ತಾ ಹೇಳಿದ್ದರು: "ನಾನು ಆಂಧ್ರ ಪ್ರಾಂತ್ಯವೊಂದಕ್ಕಾಗಿಯೇ ಹೋರಾಡುತ್ತಿದ್ದವನಲ್ಲ. ಸರ್ದಾರ್ ಪಟೇಲ್, ಶ್ರೀ ಮುನ್ಷಿ ಅಥವಾ ಡಾ। ಅಂಬೇಡ್ಕರರು ನನಗೆ ಆಂಧ್ರ ಪ್ರಾಂತ್ಯ ಕೊಡುತ್ತೇವೆಂದು ಮುಂದೆ ಬಂದಾಗಲೆಲ್ಲಾ 'ಬೇಡ; ಧನ್ಯವಾದಗಳು. ನಾನು ಭಾಷಾವಾರು ಪ್ರಾಂತ್ಯಗಳ ಒಂದು ಚಳವಳವನ್ನು ನಡೆಸುವವ. ಆ ಪೈಕಿ ಸಣ್ಣ ಸಂಗತಿಯೊಂದನ್ನು ಸ್ವೀಕರಿಸಿಕೊಂಡು ಆ ಚಳವಳವನ್ನು ನಿಲ್ಲಿಸಿಕೊಳ್ಳಲಾರೆ" ಎಂದು ನಿರಾಕರಿಸಿದ್ದೆ. ನಮ್ಮದು ಒಂದು ದಳಿತವರ್ಗದ ಚಳವಳ ಅಥವಾ ಹಿಂದುಳಿದ ವರ್ಗದವರ ಚಳವಳವೇನೂ ಅಲ್ಲ. ನಾವು, ಆಂಧ್ರರು ತಮಿಳರೊಡನೆ ಅತ್ಯಂತ ಸ್ನೇಹಾಚಾರದಿಂದಿದ್ದೇವೆ. ನಾನು ಭಾಷಾವಾರು ಪ್ರಾಂತ್ಯಗಳಿಗಾಗಿ 1929 ರಿಂದಲೂ ಹೋರಾಡುತ್ತಾ ಬಂದಿದ್ದೇನೆ. ಅಂತಹದನ್ನು ಈಗ ಬಿಟ್ಟುಕೊಡಲಾರೆ. ಆಂಧ್ರ ಪ್ರಾಂತ್ಯದ ಮಟ್ಟಿಗೆ ಮುಂದೊತ್ತಿರಿ ಎಂದು ಮದ್ರಾಸ ಮತ್ತು ಕರ್ನಾಟಕದ ನನ್ನ ಕೆಲವು ಸ್ನೇಹಿತರು ನನಗೆ ಅನುಮತಿ ಕೊಟ್ಟ ನಂತರವೇ ನಾನಾ ವರದಿಗೆ ಸಹಿ ಹಾಕಿದುದು."

ಆದರೆ, ಆಂಧ್ರಪ್ರಾಂತ್ಯವೊಂದರ ರಚನೆಗೆ ಮುಂದೊತ್ತಿರೆಂದು ಡಾ। ಪಟ್ಟಾಭಿಗಳಿಗೆ ಹೇಳಿದ್ದ ಕರ್ನಾಟಕದ ಧುರೀಣರು ಯಾರೆಂಬುದೇ ಈ ವರೆಗೂ ಗೊತ್ತಾಗಿಲ್ಲ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ವಿ. ಡಿ. ಮಾಗಡಿಯವರು ಎಲ್ಲರನ್ನೂ ವಿಚಾರಿಸಿ ಹೇಳಿಕೆಯಿತ್ತಿದ್ದಾರೆ: "ಆಂಧ್ರ ಪ್ರಾಂತ್ಯಕ್ಕಾಗಿ ಮುಂದೊತ್ತಿರಿ, ಎಂದು ಡಾ। ಪಟ್ಟಾಭಿಗಳಿಗೆ ಹೇಳಿದ್ದ ಕರ್ನಾಟಕದ ಪ್ರಮುಖರಾರನ್ನೂ ಕಂಡು ಹಿಡಿಯಲು ನನ್ನಿಂದಾಗಿಲ್ಲ. ಅಂಥವರ ಹೆಸರೇನೆಂದು ಡಾ। ಪಟ್ಟಾಭಿಗಳೇಕೆ ಹೇಳಲಿಲ್ಲವೋ ತಿಳಿಯದು. ಹೇಳುತ್ತಿದ್ದರೆ ತಮ್ಮ ಹೆಸರಾಂತ ನಾಯಕರ ಕುರಿತು ಕನ್ನಡಿಗರು ತಪ್ಪಭಿಪ್ರಾಯ ಕಟ್ಟಿಕೊಳ್ಳುವದು ತಪ್ಪುತ್ತಿತ್ತು".

ಹಾಗಾದರೆ ಡಾ। ಪಟ್ಟಾಭಿಗಳು ಬಾಯುಪಚಾರಕ್ಕಾಗಿ ಆ ಮಾತು ಹಾರಿಸಿದುದೆ? ಡಾ। ಪಟ್ಟಾಭಿಗಳಂಥವರು........ ಕಾಂಗ್ರೆಸ್ ಅಧ್ಯಕ್ಷರು!

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್. ಉಡುಪಿ

ಇವರ ಶಾಖಾ ಕಛೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುಪತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಬೇಕು

ಈ ಕೆಳಗೆ ನಮೂದಿಸಿದ ಕಂಪೆನಿಯಲ್ಲಿ ಕೆಲಸ ಮಾಡಲು ಆಫೀಸು ಸಹಾಯಕ (Office Assistant) ನೊಬ್ಬನು ಬೇಕು. ಕನಿಷ್ಠ S. S L C. ಪಾಸಾಗಿರಬೇಕು. ಆಫೀಸು ಕೆಲಸದ ಅನುಭವವಿದ್ದವರ ಅರ್ಜಿಗಳಿಗೆ ವಿಶೇಷ ಗಮನವೀಯಲಾಗುವುದು. ವೇತನ ಯೋಗ್ಯತಾನುಸಾರ. ಉಮೇದ್ವಾರರು ತಾವು ನಿರೀಕ್ಷಿಸುವ ಪಗಾರವನ್ನು ನಮೂದಿಸಿ, ಸ್ವಂತ ಬರಹದಲ್ಲಿ ಯೋಗ್ಯತಾ ಪತ್ರಿಕೆಗಳೊಂದಿಗೆ ಅರ್ಜಿ ಕಳುಹಿಸುವುದು.

K Muddanna Shetty
Chairman,
Bharath Industrial &
Publishing Co., Ltd.,
Kaup, S. Kanara.

ಚೈನ, ಬರ್ಮಾ, ಇಂಡೋನೇಶಿಯ, ಅಲ್ಲಿಯ ಸ್ಥಿತಿಯೇ ಕಾಶ್ಮೀರದಲ್ಲೂ!

ಹೇಳಿದ್ದನ್ನೇ ಹೇಳಬೇಕಾಗಿದೆ...ಲೋಕವಿದ್ಯಮಾನ ಯಥಾಸ್ಥಿತಿ! ಇಡೀ ಪ್ರಪಂಚದಿದಿರು ದೊಡ್ಡ ಪ್ರಶ್ನಾರ್ಥಕಚಿಹ್ನೆ ಮೂಡಿಸಿರುವ ರಶ್ಯಾ-ಅಮೆರಿಕ ಸ್ಪರ್ಧೆ ಅಚಲವಿದೆ. ಅಲ್ಲಲ್ಲಿಯ ರಂಗಗಳಲ್ಲಿ ತಾತ್ಕಾಲಿಕ ನವೀನತೆಗಳು ತೋರಿಬಂದಿವೆ; ಒಟ್ಟಿನ ಮೇಲೆ ಲೋಕದಗತಿ ಹಿಂದಿನದೇ. ಭದ್ರತೆ, ಭರವಸೆಯ ಪ್ರಕಾಶಗಳೇನೂ ಬಿದ್ದಿಲ್ಲ; ಅನಿಶ್ಚಿತತೆ, ಅನುಮಾನಗಳ ಕತ್ತಲೆಯೇ ಕವಿದುಕೊಂಡಿದೆ.

ಯುರೋಪಿನಲ್ಲಿ

ಜರ್ಮನಿಯ ರಾಜಧಾನಿ ಬರ್ಲಿನಿನಲ್ಲಿ ಅಮೇರಿಕ, ಬ್ರಿಟನ್, ಫ್ರಾನ್ಸ್‌ಗಳಿಗೂ ರಶ್ಯಕ್ಕೂ ದೀರ್ಘಾವಧಿಯಿಂದ ನಡೆಯುತ್ತಿರುವ ತಿಕ್ಕಾಟದ ಕುರಿತು ಇತ್ತೀಚೆಗೆ ಹೊಸ ಸುದ್ದಿಗಳೇನೂ ಬಾರದೆ ಅದು ಅಲ್ಲಿಯೇ ಥಂಡಾಗಿಟ್ಟಿದಂತಿತ್ತು. ಆದರೀಗ ಪುನಃ ಅಲ್ಲಿಂದ ಬಿಸಿ ವಾರ್ತೆಗಳು ಬರಹತ್ತಿವೆ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಪಾಲಿನ ಕ್ಷೇತ್ರಗಳ ಆಡಳಿತವನ್ನು ಸಂಘಟಿಸಿಕೊಳ್ಳುತ್ತಿರುವುದು - ಅಮೇರಿಕದ ಕ್ಷೇತ್ರದೊಳಗಿದ್ದ 'ಫೋನ್' ಸಂಬಂಧವನ್ನು ಕಡಿದುಕೊಂಡು ಅಮೇರಿಕದ ಆಕಾಶವಾಣಿಯ ಕಂಠವೊತ್ತಿ ಹಿಡಿಯಲು ರಶ್ಯವು ಪ್ರಯತ್ನಿಸುತ್ತಿರುವುದು- ಮತ್ತಿತರ ತಿಕ್ಕಾಟಗಳೆದ್ದಿರುವುದು ಕಂಡುಬರುತ್ತಿದೆ.

ಅಮೇರಿಕದ ಪ್ರಜಾಪ್ರತಿನಿಧಿ ಸಭೆಗಳಲ್ಲಿ 'ಮಾರ್ಶಲ್ ಯೋಜನೆ'ಯನ್ವಯ ಹಣ ಸಹಾಯ ಕೊಡುವ ಕುರಿತು ಚರ್ಚೆ, ನಿರ್ಣಯಗಳಾಗುತ್ತಿವೆ. ಇತ್ತೀಚೆಗೆ 12 ರಾಷ್ಟ್ರಗಳಲ್ಲಾದ ಉತ್ತರ ಅಟ್ಲಾಂಟಿಕ್ ಒಪ್ಪಂದವು ಶಾಂತಿ ಸಾಧನೆಯ ಏಕಮಾತ್ರ ಹೆಜ್ಜೆಯೆಂಬ ಶಿಫಾರಸಿನೊಡನೆ ಅಧ್ಯಕ್ಷ ಟ್ರೂಮೇನರು ಅಮೇರಿಕದ ಸಿನೆಟ್‌ಗೊಪ್ಪಿಸಿ ಅದು ಮಂಜೂರಾಗಿದೆ.

ಬ್ರಿಟನಿನಲ್ಲಿ ಅಧಿಕಾರದಲ್ಲಿರುವ ಕೂಲಿಗಾರ ಪಕ್ಷದ ಸಭೆಯಲ್ಲಿ ರಾಷ್ಟ್ರೀಕರಣದ ದ್ವಿತೀಯ ಹೆಜ್ಜೆಯಾಗಿ ವಿಮಾ ಸಂಸ್ಥೆಗಳು, ಸಕ್ಕರೆ ಕಾರ್ಖಾನೆಗಳು, ಸಿಮೆಂಟ್, ನೀರು ಸರಬರಾಯಿ ಮತ್ತೆಲ್ಲ ಯೋಗ್ಯ ಖನಿಜ ಸಂಪತ್ತುಗಳನ್ನೂ ರಾಷ್ಟ್ರೀಕರಣಗೊಳಿಸಬೇಕೆಂಬ ನಿರ್ಣಯವಾಗಿದೆ. ಈ ಸಂಬಂಧವಾಗಿ ಪಂಚವಾರ್ಷಿಕ ಯೋಜನೆಯೊಂದು ರೂಪಿಸಲ್ಪಟ್ಟಿದ್ದು, ಅದು ಬರುವ ಜೂನ್ ತಿಂಗಳಲ್ಲಿ ಸೇರಲಿರುವ ಕೂಲಿಗಾರ ಪಕ್ಷದ ವಾರ್ಷಿಕ ಸಮ್ಮೇಳನದಲ್ಲಿ ಮಂಜೂರಾಗಬೇಕು; ಬರುವ ವರುಷ ನಡೆಯಲಿರುವ ಇಂಗ್ಲಾಂಡಿನ ಸಾರ್ವತ್ರಿಕ ಚುನಾವಣೆಯಲ್ಲಿ ಪುನಃ ಕೂಲಿಗಾರ ಪಕ್ಷವೇ ಗೆದ್ದರೆ ಆಗ ಈ ರಾಷ್ಟ್ರೀಕರಣ ಜಾರಿಗೆ ಬರಲಿದೆ.

ಪೆಲೆಸ್ತೈನಿನಲ್ಲಿ ಯೆಹೂದಿಗಳ ಇಸ್ರಾಯೇಲ್ ಸರಕಾರವು ನೆರೆಯ ಅರಬ್ ರಾಷ್ಟ್ರಗಳೊಡನೆಯೂ ಇತರ ರಾಷ್ಟ್ರಗಳೊಡನೆಯೂ ಸಂಬಂಧ, ಒಪ್ಪಂದಗಳನ್ನು ಮಾಡಿಕೊಳ್ಳುತ್ತಾ ಬಲಗೊಳ್ಳುತ್ತಿದೆ. ಅಂಬರ ಪ್ರತಾಪ ಅಲ್ಲೀಗ ತಣ್ಣಗಾದಂತಿದೆ.

ಚೈನಾ—ಬರ್ಮಾ

...ಸ್ಫೋಟ ತೋರಿಬಂತು. ಸುಮಾರು ಮೂರು ತಿಂಗಳಿಂದ ಹುಸಿ ಸ್ತಬ್ಧವಾದಂತಿದ್ದ ಯುದ್ಧವನ್ನು ಚಿಯಾಂಗ್ ಸರಕಾರೀ ಸೇನೆಯೊಮ್ಮೆ ಬಿಸಿಗೊಳಿಸಿಬಿಟ್ಟಿತು. ಅಧಿಕಾರ ನಿವೃತ್ತಿ ಹೊಂದಿದಂತಿದ್ದು ತನ್ನ ಹಳ್ಳಿಗೆ ಹೋಗಿ ನೆಲಸಿದ್ದ ಚಿಯಾಂಗ್ ಕೈಶೇಕರ ಆಜ್ಞೆಯಂತೆ ಸರಕಾರೀ ಸೇನೆಗಳು ಧಾಳಿ ಹೂಡಿ ಯಾಂಗ್ಟ್ಸೀ ಹೊಳೆಯ ಒಂದೆರಡು ಸೇತುವೆಗಳನ್ನು ಕಮ್ಯೂನಿಸ್ಟರ ಕೈಯಿಂದ ಕಸಗೊಂಡು ಸುಟ್ಟು ಬಿಟ್ಟಿತು. ಆದರಿದು ತಾತ್ಕಾಲಿಕ ವಿಜಯವಿದ್ದು ಬೆನ್ನಲ್ಲೇ ಕಮ್ಯೂನಿಸ್ಟ್ ಸೇನೆಗಳು ಆ ಸೇತುವೆಗಳನ್ನು ಮರುವಶಪಡಿಸಿಕೊಂಡಿವೆ. ಇತ್ತ ಬದಲಿ ಅಧ್ಯಕ್ಷ ಲೀಟ್ಸುಂಗ್ ಜೆನ್, ಇವರ ಪ್ರತಿನಿಧಿಗಳು ಕಮ್ಯೂನಿಸ್ಟರೊಡನೆ ಪೀಕಿಂಗಿನಲ್ಲಿ ಸಂಧಾನ ಮಾತುಕತೆಗೆ ತೊಡಗಿ ಅದರ ಪ್ರಥಮಾಂಕವನ್ನು ಮುಗಿಸಿ ಮರಳಿದ್ದಾರೆ. ಚೈನದ ರಾಷ್ಟ್ರೀಯ ಸರಕಾರಕ್ಕೆ ಇನ್ನು ಮುಂದೆ ಅಮೇರಿಕವು ಯಾವ ಸಹಾಯವನ್ನೂ ಕೊಡುವಂತಿಲ್ಲವೆಂದು ಜಾಹೀರಾಗಿದೆ.

ಇತ್ತ ಬರ್ಮದಲ್ಲಿ ಒಮ್ಮೆ ಶಸ್ತ್ರ ಕೆಳಗಿಡಲೊಪ್ಪಿದ್ದ ಕರೆನ್ ಬಂಡಾಯಗಾರರು ಬೆನ್ನಲ್ಲೇ ಆ ಒಪ್ಪಂದ ಮುರಿದು ಪುನಃ ದಂಗೆಯಾರಂಭಿಸಿ ಅಲ್ಲೀಗ ಹೋರಾಟ ನಡೆದಿದೆ. ಈ ನಡುವೆ ಪಂಡಿತನೆಹರುಗಳ ಆಹ್ವಾನದಂತೆ ಬರ್ಮದ ಪ್ರಧಾನಮಂತ್ರಿ ಥಾಕಿನ್‌ನ್ಯೂ ಡಿಲ್ಲಿಗೆ ಬಂದು ಪಂಡಿತ ನೆಹರುರವರೊಡನೆಯೂ, ಅಲ್ಲಿಂದ ಕರಾಚಿಗೆ ಹೋಗಿ ಮಿ. ಲಿಯಾಖತ್ ಅಲಿಯವರೊಡನೆಯೂ ಬರ್ಮದ ಸ್ಥಿತಿಗತಿ ನಿವೇದಿಸಿಕೊಂಡು, ಸಹಾಯ ಯಾಚಿಸಿ "ನಾನು ಕೇಳಿದ್ದೆಲ್ಲಾ ದೊರೆಯಿತು." ಎಂಬ ಸಮಾಧಾನ ಪ್ರದರ್ಶಿಸಿ ಮರಳಿದ್ದಾರೆ. ಕರೆನ್ ಬಂಡಾಯಗಾರರು ತಿರುಗಿ ಬೀಳಲು ಕಮ್ಯೂನಿಸ್ಟ್ ಪ್ರಭಾವವೇ ಕಾರಣವೆಂಬಹುದೆಂಬ ಶಂಕೆಯೆದ್ದಿದೆ. ಭಾರತವು ಮಧ್ಯಸ್ಥಿಕೆ ವಹಿಸಿ ಬರ್ಮದ ಅಂತರ್ಯುದ್ಧವನ್ನು ಕೊನೆಗೊಳಿಸಬೇಕೆಂಬ ಆಕಾಂಕ್ಷೆಗಳು ತೋರಿಬಂದಿವೆ. ಲಂಡನಿನಲ್ಲಿ ನೆರೆಯಲಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲೂ ಬರ್ಮದ ಪ್ರಶ್ನೆ ಚರ್ಚಿಸಲ್ಪಡುವದೆಂದು ತಿಳಿದುಬಂದಿದೆ.

ಇಂಡೋನೇಶಿಯದಲ್ಲಿ ಅಲ್ಲಿಯ ರಿಪಬ್ಲಿಕನ್ ಮತ್ತು ಡಚ್ಚರೊಳಗೆ ದೀರ್ಘಾವಧಿಯಿಂದ ನಡೆಯುತ್ತಿರುವ ಹೋರಾಟದ ತೀರ್ಮಾನಕ್ಕಾಗಿ ರಾಷ್ಟ್ರಸಂಘವು ಮಾಡುತ್ತಾ ಬಂದ ಪ್ರಯತ್ನ-ಇವುಗಳಿಗೀಗ ಹೊಸ ರೂಪ ಬಂದಂತಿದೆ. ಅಲ್ಲೊಂದು ತೀರ್ಮಾನಕ್ಕೆ ಬರುವಂತೆ ಡಚ್ಚರ ಮೇಲೆ ಅಮೇರಿಕ ಮತ್ತು ಬ್ರಿಟನು ಒತ್ತಾಯ ತರುತ್ತಿವೆ. ಇಂಡೋನೇಶಿಯದಲ್ಲಿರುವ ಸಂಯುಕ್ತ ರಾಷ್ಟ್ರಸಂಘದ ಕಮಿಶನಿನ ಆಶ್ರಯದಲ್ಲಿ ಡಚ್ ಮತ್ತು ಇಂಡೋನೇಶಿಯಾ ರಿಪಬ್ಲಿಕನ್ ಪ್ರತಿನಿಧಿಗಳೊಳಗೆ ಸಂಧಾನ ಮಾತುಕತೆಗಳು ನಡೆಯುತ್ತಿವೆ.

ಕಾಶ್ಮೀರದಲ್ಲೇನು?

ಭದ್ರತಾ ಕೌನ್ಸಿಲಿನ ಕಾಶ್ಮೀರ ಕಮಿಶನಿನ ಸದಸ್ಯರು ಇಲ್ಲಿದ್ದು ಇಕ್ಕಡೆಗಳವರೊಡನೆ ಮಾತುಕತೆ ನಡೆಸುತ್ತ ಎಲ್ಲಾ ಸಂಗತಿಯ ಅವಲೋಕನೆಗಾಗಿ ವೀಕ್ಷಕ ಸೇನಾದರ್ಶಕರು ಬಂದಿರುವಾಗ-ಮತ್ತು ದಂಡನಾಡಳಿತಾಧಿಕಾರಿ ಎಡ್ಮಿರಲ್ ನಿಮಿಟ್ಸರು ಸದ್ಯದಲ್ಲೇ ಬರಲಿರುವಾಗ ಪಾಕಿಸ್ತಾನ್ ಕಡೆಯವರು ಸಂಧಾನಶರ್ತಗಳನ್ನು ಮುರಿದು ಆಕ್ರಮಣ ನಡೆಸಹತ್ತಿದ್ದಾರೆ. ಎರಡು ದಿಸೆಯಿಂದಾಗಿ ಕಾಶ್ಮೀರದ ವಾತಾವರಣವು ಪ್ರಕ್ಷುಬ್ಧವಾಗಿದೆ. ಗುಂಡೆಸೆತ ಮುಕ್ತಾಯದ ಒಪ್ಪಂದದಂತೆ ಇಕ್ಕಡೆಯವರ ಮಧ್ಯದ ಸೇನಾಗೆರೆ, ಮತ್ತು ಯಾವ ಕಡೆಯವರೂ ಇರಬಾರದಂತಹ ಮಧ್ಯವರ್ತೀ ಸ್ಥಳಗಳು ನಿಶ್ಚಯಿಸಲ್ಪಟ್ಟಿದ್ದುವು. ಆದರೆ ಪಾಕಿಸ್ತಾನ್ ಸೈನಿಕರು ಈ ಶರ್ತಗಳನ್ನು ಮುರಿದು ಕಾಶ್ಮೀರದ ಉರಿ, ಗುರೆಝ್, ಮತ್ತು ಚಿತ್ರಾಲ್ ಪ್ರದೇಶಗಳೊಳಗೆ ನುಗ್ಗಿ ಆಕ್ರಮಿಸಿಕೊಂಡು ನಿಂತಿದ್ದಾರೆ. ಜನವರಿ 1ರಲ್ಲಿ ಹೋರಾಟ ನಿಲ್ಲುವಾಗ ಪಾಕಿಸ್ತಾನ್ ಸೈನಿಕರಿದ್ದಲ್ಲಿಂದೀಗ ಹಲವೆಡೆಗಳಲ್ಲಿ ಮುಂದೊತ್ತಿ ಬಂದಿದ್ದಾರೆ. ಆದರೆ ಭಾರತದ ಸೈನಿಕರು ಮಾತ್ರ ಶಾಂತಿ ಶರ್ತಗಳನ್ನು ನಿಷ್ಠೆಯಿಂದ ಪಾಲಿಸಿ, ನಿಂತಲ್ಲಿಂದ ಕದಲಿಲ್ಲ. ಹೊರಗಿನವರಾರೂ ಇರದೆ, ಇಕ್ಕಡೆಯ ಸೇನೆಗಳೂ ಸ್ಪರ್ಶಿಸದೆ ಖಾಲಿಯಿರಬೇಕೆಂದು ನಿರ್ಧರಿಸಲ್ಪಟ್ಟಿದ್ದ ಹತ್ತಿಪ್ಪತ್ತು ಮನೆಗಳಿರುವ ಹಳ್ಳಿಗಳಿಗೆ ಗುಡ್ಡಗಾಡುಗರು ಪಠಾಣರು ಸಹಸ್ರ ಸಂಖ್ಯೆಯಲ್ಲಿ ಬಂದುಸೇರಿಕೊಂಡು ಭಾರತದ ವಿರುದ್ಧ ಉದ್ರೇಕಕರ ಪ್ರದರ್ಶನಗಳನ್ನು ನಡೆಸಹತ್ತಿದ್ದಾರೆ. ಶಾಂತಿ ಶರ್ತ ವಿರುದ್ಧವಾಗಿ ಪಾಕಿಸ್ತಾನದ ಹೊಸ ಹೊಸ ಸೈನ್ಯಗಳೂ ಶಸ್ತ್ರಾಸ್ತ್ರಗಳೂ ಹಿಂಭಾಗದಲ್ಲಿ ಸಂಗ್ರಹವಾಗುತ್ತಿವೆ. ಆಗಾಗ ಪಾಕಿಸ್ತಾನೀ ಧಾಳಿಗಾರರು ಸರಹದ್ದು ಗ್ರಾಮಗಳ ಮೇಲೆ ಬಿದ್ದು ಕೊಳ್ಳೆ, ದರೋಡೆ ನಡೆಸುತಿದ್ದಾರೆ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಖಾದ್ಯಗಳಿಂದ ಕೂಡಿದ ಮೇಲ್ದರ್ಜೆಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ತಾ 1—4—49ರಿಂದ ಹೊರಟಿದೆ!

ಸುವಾಸಿನಿ

ಸಂಪಾದಿಕೆಯರು:
ಕೆ. ಪಾರಿಜಾತದೇವಿ, ಬಿ. ಮೋಹಿನಿದೇವಿ.

ಸ್ತ್ರೀಯರಿಂದ ಸ್ತ್ರೀಯರಿಗಾಗಿ ಹೊರಡುವ ಕರ್ನಾಟಕದ ಪ್ರಥಮ ಮತ್ತು ಏಕಮಾತ್ರ ಮಹಿಳಾ ಸಾಪ್ತಾಹಿಕ. ಸ್ವಲ್ಪವಾದರೂ ಓದುಬರಹ ತಿಳಿದ ಸ್ತ್ರೀಯರಿಗೆ, ಮನೆಯಲ್ಲಿ ಕುಳಿತಲ್ಲೇ ಇದು ಸ್ವಯಂ ಶಿಕ್ಷಕನಂತೆ, ಎಲ್ಲತರದ ತಿಳಿವನ್ನು ಕೊಡುವುದು.

೧. ಕಸೂತಿ ಕೆಲಸ ಮಾಡುವವರಿಗೆ, ಪ್ರತಿಯೊಂದು ಸಂಚಿಕೆಯಲ್ಲಿ ಹೊಸರೇಖಾಚಿತ್ರಗಳು (ಎಂಬ್ರಾಯಿಡರಿ ಡಿಸಾಯಿನ್ಸ್) ಬರುವುವು ೨. ಪ್ರತಿಯೊಂದು ಸಂಚಿಕೆಯಲ್ಲಿ ಕತೆ, ೩. ಭೂಲೋಕದ ನಾನಾ ಭಾಗಗಳಲ್ಲಿರುವ ಸ್ತ್ರೀಯರ ನಡೆ-ನುಡಿಗಳು, ೪. ಪ್ರಸಿದ್ಧ ಪಟ್ಟಣಗಳ ಪರಿಚಯ, ಯಾತ್ರಾಕ್ಷೇತ್ರಗಳ ವಿವರ, ೫. ಸ್ತ್ರೀಯರ ದೇಹಾರೋಗ್ಯ, ಅವರ ನಾನಾ ಸಮಸ್ಯೆಗಳ ಚರ್ಚೆ, ೬. ಮಕ್ಕಳ ಶಿಕ್ಷಣ, ಮಕ್ಕಳ ಕಾಯಿಲೆಗಳಿಗೆ ಗೃಹವೈದ್ಯ, ಸ್ತ್ರೀಯರ ನಾನಾ ಕಿರುಕುಳಗಳಿಗೆ ಉಪಶಮನ-ಇವೆಲ್ಲವೂ ಪ್ರಕಟವಾಗುವುವು. ೭ ಬಗೆ ಬಗೆಯ ತಿಂಡಿ, ಪದಾರ್ಥಗಳನ್ನು ತಯಾರಿಸುವ ವಿಧಾನಗಳು ಕೊಡಲ್ಪಡುವುವು. ೮ ಪ್ರಸಿದ್ಧ ಸ್ತ್ರೀಯರ ಚರಿತ್ರೆ, ಪ್ರಸಿದ್ಧ ಕವಿಗಳ ಮತ್ತು ಲೇಖಕರ ಪರಿಚಯ, ೯ ಭೂಲೋಕದ ಮತ್ತು ಆಕಾಶದೊಳಗಿನ ನಾನಾ ವೈಚಿತ್ರ್ಯಗಳು ವಿವರಿಸಲ್ಪಡುವುವು ೧೦ ಪ್ರತಿ ಸಂಚಿಕೆಯಲ್ಲಿಯೂ ಚಕ್ರಬಂಧ ಒಗಟುಗಳು ಪ್ರಕಟವಾಗುವುವು. (ಪ್ರವೇಶಧನವಿಲ್ಲದೆ ಬಹುಮಾನಗಳು ಕೊಡಲ್ಪಡುವುವು)

ಇನ್ನೂ ಇಲ್ಲಿ ವಿವರಿಸಲು ಸ್ಥಳಸಾಲದ ನೂರಾರು, ಸಾವಿರಾರು ವಿಷಯಗಳು ಬರುವುವು,

ಪ್ರತಿ ಸಂಚಿಕೆಯಲ್ಲೂ 16ಕ್ಕೆ ಕಡಿಮೆಯಾಗದ ಲೇಖನಗಳು! ಅನೇಕ ಚಿತ್ರಗಳು. ಬಿಡಿಸಂಚಿಕೆಗೆ ಎರಡಾಣೆ-ಒಂದು ವರ್ಷಕ್ಕೆ ಅಂಚೆ ವೆಚ್ಚಸೇರಿ ರೂ 6-12-0 ಮಾತ್ರ. ಪ್ರತಿ ಶುಕ್ರವಾರ ಹೊರಡುತ್ತದೆ. ನಿಮ್ಮ ಚಂದಾ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳಿಸಿಕೊಡಿರಿ

ಸುವಾಸಿನಿ ಪಬ್ಲಿಕೇಶನ್ಸ್ ಲಿಮಿಟೆಡ್, ಮಿಶ್ಯನ್ ಹೈಸ್ಕೂಲ್, ಮಂಗಳೂರು

ಕಾಶ್ಮೀರದ ಶಾಂತಿ ಮುರಿದು ಕಾದಾಡಿ ಗೆಲ್ಲಲು ಪಾಕಿಸ್ತಾನವು ನಡುಬಿಗಿದು ಎದ್ದಿರುವುದೆ?

ಹಲವರು ಸಾವು ನೋವುಗಳಿಗೆ ಬಲಿಯಾದರು. ಜನವರಿ 1ರಿಂದ ಜಮ್ಮು ಪ್ರಾಂತ್ಯವೊಂದರಲ್ಲೇ ಇಂತಹ 80 ಆಕ್ರಮಣಗಳನ್ನು ಪಾಕಿಸ್ತಾನಿಗಳು ನಡೆಸಿದ್ದಾರೆಂದು ತಿಳಿದುಬಂದಿದೆ. ಇವೆಲ್ಲಾ ಸಂಗತಿಗಳನ್ನೂ ಭಾರತ ಸರಕಾರವು, ಸೇನಾದರ್ಶಕರ ಅವಗಾಹನೆಗೆ ತಂದಿದೆಯಲ್ಲದೆ ಕಾಶ್ಮೀರ ಕಮಿಶನಿಗೆ ಮತ್ತು ಪಾಕಿಸ್ತಾನಕ್ಕೆ ತನ್ನ ನಿಷೇಧ ಸೂಚನೆ ಮಾಡಿದೆ. ಈ ಕರಾರು ಭಂಗಗಳಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿ ಶಾಂತಿ ಪಾಲಿಸದಿದ್ದರೆ, ಮುಂದೆ ಸಹಿಸಿ ನಿಲ್ಲುವುದಸಾಧ್ಯವೆಂಬ ಎಚ್ಚರಿಕೆಯು ಭಾರತ ಸರಕಾರದಿಂದ ಹೋಗಿದೆ. ಕಾಶ್ಮೀರ ಕಮಿಶನಿನವರು ಇತ್ತಡೆಯವರೊಡನೆ ಎಲ್ಲವನ್ನೂ ವಿಚಾರಿಸಿಕೊಂಡು ತಿಕ್ಕಾಟ ಮುಕ್ತಾಯದ ಒಂದು ಹಂಚಿಕೆ ತಯಾರಿಸಿ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳಿಗೆ ಕಳಿಸಿದ್ದಾರೆ. ಭಾರತದ ಪೂರ್ವ ಪಂಜಾಬು ಮತ್ತು ಪಾಕಿಸ್ತಾನದ ಪಶ್ಚಿಮ ಪಂಜಾಬುಗಳ ಮಧ್ಯ ಗಡಿ ಕ್ಷೇತ್ರಗಳಲ್ಲೂ ಪಾಕಿಸ್ತಾನ್ ಧಳಿಗಾರರು ಆಗಾಗ ನುಗ್ಗಿ ಒಂದು ಅಲ್ಲಿಯ ಮಂತ್ರವಾದ ಕಡಿಹೋಗಿದೆ. ಇತ್ತೀಚೆಗಂತೂ ಪಾಕಿಸ್ತಾನದ ಕಳ್ಳ ಹೊಡೆತವು ಪ್ರತ್ಯಕ್ಷ ಹೋರಾಟದ ರೂಪಕ್ಕೆ ತಿರುಗಿದಂತಿದೆ. ಇದೇ ತಾ. 11ರಲ್ಲಿ ಜಮ್ಮು ಹತ್ತಿರ ಮುಂಭಾಗ ದುಂಡು ಕ್ಷೇತ್ರವನ್ನು ಕಾವಲು ನಡೆಸುತ್ತಿದ್ದ ಹಿಂದೀಸೇನೆಯ ಮೇಲೆ ಪಾಕಿಸ್ತಾನ್ ಸೈನಿಕರು ಗುಂಡು ಹಾರಿಸಿದ್ದರು; ಅಂದೇ ಮತ್ತೊಂದೆಡೆ ಕ್ರಮವಿರುದ್ಧವಾಗಿ ನುಗ್ಗಿಹೋಗಿ ಒಂದೂರನ್ನು ಆಕ್ರಮಿಸಿಕೊಂಡಿದ್ದರು.

ಪಾಕಿಸ್ತಾನದ ಗುರಿಯೇನು?

ಕಾಶ್ಮೀರದಲ್ಲಿ ಜನಮತ ಸಂಗ್ರಹಿಸಿದರೆ ಅದರ ಅಡೆ ತಡೆಗಿಲ್ಲವೆಂಬುದನ್ನರಿತೇ ಭಾರತ ಸರಕಾರವೂ, ಶೇಖ್ ಅಬ್ದುಲ್ಲಾ ಸರಕಾರವೂ ಅಲ್ಲಿಯ ಜನಮತಸಂಗ್ರಹವನ್ನು ಹಿಂಡೆಹಾಕುವ ದುಷ್ಪ್ರಯತ್ನಗಳನ್ನು ಮಾಡುತ್ತಿವೆ, ಎಂದು ಪಾಕಿಸ್ತಾನದ ಆರೋಪ. ಆದರೆ ಶುದ್ಧಶಾಂತ ವಾತಾವರಣದಲ್ಲಿ ಸ್ಪಷ್ಟವಾಗುವ ಕಾಶ್ಮೀರದ ಜನಮತವನ್ನು ಮನ್ನಿಸಲು ತಾವು ಸದಾಸಿದ್ಧರೆಂದು ಭಾರತ ಸರಕಾರವೂ, ಕಾಶ್ಮೀರ ಸರಕಾರವೂ ಅಂದಿನಿಂದಿದುವರೆಗೂ ಹೇಳುತ್ತಾ ಬಂದಿವೆ. "ಕಾಶ್ಮೀರದ ಪ್ರಜೆಗಳೇ ಇರುವ ಪಾಕಿಸ್ತಾನದ ಸೂತ್ರದ ಗೊಂಬೆಗಳಾದ ಬಂಡುಗಾರ 'ಆಝಾದ್ ಕಾಶ್ಮೀರ್' ಸರಕಾರದ ಸೈನ್ಯಗಳನ್ನು ಬರ್ಖಾಸ್ತುಗೊಳಿಸದೆ ಈ ಕಾರ್ಯದಲ್ಲಿ ಹೆಜ್ಜೆ ಮುಂದಿಡುವದಸಾಧ್ಯ. ಕಾಶ್ಮೀರೇತರ ಬಂಡಾಯಗಾರರೆಲ್ಲರೂ ಹೊರಗಟ್ಟಲ್ಪಟ್ಟು, ಕಾಶ್ಮೀರದಿಂದ ಓಡಿಹೋಗಿರುವವರೆಲ್ಲರೂ ಮರಳಿ ಬಂದು ಕಾಶ್ಮೀರದ ಪ್ರತಿಯೊಂದಿಂಚು ನೆಲದಲ್ಲೂ ಶಾಂತಿ ಸುವ್ಯವಸ್ಥೆ ಸ್ಥಾಪನೆಯಾಗದೆ ಜನಮತ ಸಂಗ್ರಹ ನಡಿಸಲು ಸಾಧ್ಯವಿಲ್ಲ" ಎಂದು ಭಾರತ ಮತ್ತು ಕಾಶ್ಮೀರ ನಾಯಕರ ನ್ಯಾಯಬದ್ಧ ಹಠ. ಆದರೆ ಆ ಕುರಿತು ಪಾಕಿಸ್ತಾನವು ಅನುಚಿತ ದುರಾಗ್ರಹ ಪ್ರದರ್ಶಿಸಿದೆಯಲ್ಲದೆ, ಇಕ್ಕಡೆಯ ಸೇನಾಧಿಕಾರಿಗಳು ನಿಶ್ಚಯಿಸಿದ ಗಡಿಗಳನ್ನು ತನ್ನ ಸೈನಿಕರಿಂದ ದಾಟಿಸಿ ಉದ್ದೇಶಪೂರ್ವಕವಾಗಿ ವಾತಾವರಣವನ್ನು ಕದಡಿಸಿದೆ. ಶಾಂತಿಯಾದ ವೇಳೆಯೂ ಈ ಕಷ್ಟವೇಕೆಂದು ಬಾನು ಹಿಡಿದಿದ್ದ ಅಲ್ಲಿಯ ಕೆಲವು ಹಿಮಾವರಿತ ಗುಡ್ಡ ಶಿಖರಗಳಿಂದ ತನ್ನ ಸೈನಿಕರನ್ನು ಭಾರತ ಸರಕಾರ ಹಿಂದೆಗೆದುದ್ದಿತ್ತು. ಬೆನ್ನಲ್ಲೇ ಪಾಕಿಸ್ತಾನ್ ಸೈನಿಕರು ಅವುಗಳಲ್ಲಿ ತಳವೂರಿ ನಿಂತಿದ್ದಾರೆ. ಹೀಗೆ ಪಾಕಿಸ್ತಾನವು ಬೇಕೆಂದೇ ಮೈಮೇಲೆ ಬೀಳುತ್ತಿರುವುದನ್ನೂ ಹಿಂಗಡೆಯಲ್ಲಿ ಅದು ನಡೆಸುತ್ತಿರುವ ಪ್ರಬಲ ಸಿದ್ಧತೆಗಳನ್ನೂ ನೋಡಿದರೆ ಕಾಶ್ಮೀರದ ನಿರ್ಣಯವು ಹೋರಾಟದಿಂದಲ್ಲದೆ ಶಾಂತಿಯಿಂದಾಗಲಾರದೆಂದೋ, ಆಗಬಾರದೆಂದೋ ಅದರ ಸಂಕಲ್ಪವಿದ್ದಿರಬೇಕು. ಸಂಧಾನದ ಜಿಡುಕಿನಿಂದ ತನಗೆ ದೊರೆತಿರುವ ಸಮಯ ಮತ್ತು ಅನುಕೂಲತೆಗಳನ್ನು ಉಪಯೋಗಿಸಿಕೊಂಡು ಸಂದರ್ಭ ಬಂದೊಡನೆ ದೊಡ್ಡ ಹೊಡೆತ ಕೊಟ್ಟೇ ಕಾರ್ಯ ಸಾಧಿಸಿಕೊಳ್ಳುವ ಬಯಕೆ ಅದಕ್ಕಿದ್ದಿರಬೇಕು. ಆದರೆ ಯಾವ ವಿದ್ಯಮಾನವನ್ನಾದರೂ ಇದಿರಿಸುವ ಸಿದ್ಧತೆಯಲ್ಲೇ ಭಾರತ ಸರಕಾರವೂ ಇದೆ. ಇದೇ ತಾ. 16ರಲ್ಲಿ ಪತ್ರಿಕಾಪ್ರತಿನಿಧಿಗಳ ಮುಂದೆ ಶೇಖ್ ಅಬ್ದುಲ್ಲಾರಂತೂ ತಮ್ಮ ಧೋರಣೆಯನ್ನು ಸ್ಪಷ್ಟಪಡಿಸಿದ್ದಾರೆ; "ಜಮ್ಮು ಕಾಶ್ಮೀರಗಳ ಶಾಂತಿಸ್ಥಿತಿ ಸರಹದ್ದುಗಳಲ್ಲಿ ಪಾಕಿಸ್ತಾನವು ನಡೆಸಿರುವ ಆಕ್ರಮಣಗಳ ಕುರಿತು ಭಾರತ ಮತ್ತು ಕಾಶ್ಮೀರ ಅತ್ಯಂತ ಸ್ವಸ್ಥಿಯಿಂದ ತೆಪ್ಪಗೆ ಕುಳಿತುಕೊಳ್ಳುವಂತಿಲ್ಲ. ಪರಿಸ್ಥಿತಿಯನ್ನು ಕೆಡಿಸುವ ಇಚ್ಛೆಯಿಲ್ಲದೆ ಭಾರತವು ಶಾಂತಿ ಶರ್ತುಗಳೆಲ್ಲವನ್ನೂ ಕಠಿಣ ನಿಷ್ಠೆಯಿಂದ ಪಾಲಿಸಿಕೊಂಡು ಬಂದಿದೆ. ಆದರೆ ಈ ಸಣ್ಣ ದುರಂತಗಳು ಸಾಲುಗಟ್ಟಿ ನಡೆಯುತ್ತಾಹೋದರೆ ಮುಂದೆ ಹೇಗಾದೀತೆಂಬುದನ್ನು ಹೇಳಲು ಸಾಧ್ಯವಿಲ್ಲ. ತಾವು ಭಾರತದೊಂದಿಗೆ ಸೇರಬೇಕೋ ಪಾಕಿಸ್ತಾನದೊಂದಿಗೋ ಎಂಬ ಸ್ವತಂತ್ರ ನಿರ್ಧಾರ ಮಾಡತಕ್ಕವರು ಕಾಶ್ಮೀರದ ಜನತೆಯೇ. ಇತ್ತಲೂ ಮಹಾರಾಷ್ಟ್ರಗಳಿಂದಾವರಿಸಲ್ಪಟ್ಟಿರುವ ಕಾಶ್ಮೀರವು ಸ್ವತಂತ್ರವಾಗಿ ನಿಲ್ಲುವುದಸಾಧ್ಯ. ಪಾಕಿಸ್ತಾನವು ಗಡಿನಾಡು ಪ್ರಾಂತ್ಯದಲ್ಲಿ ಮಾಡಿದಂತೆಯೇ ಕಾಶ್ಮೀರದಲ್ಲೂ ಗೊಂದಲ ಮತ್ತು ಜಾತೀಯ ದ್ವೇಷಾಗ್ನಿಯನ್ನು ಪ್ರಜ್ವಲಗೊಳಿಸಿ ತನ್ನ ಕಾರ್ಯಸಾಧಿಸಿಕೊಳ್ಳುವ ಹವಣಿಕೆಯಲ್ಲಿದೆ. ಆದರೆ ಇಲ್ಲಿ ಈ ದುಷ್ಪ್ರಯತ್ನಗಳು ಸಂಭವಗೊಳ್ಳಲು ಬದ್ಧವಿವೆ." ಎಂದು ಶೇಖ್ ಅಬ್ದುಲ್ಲಾರ ಸ್ಪಷ್ಟವಚನ. ಕಾಶ್ಮೀರದ ಮಹಾರಾಜರು ಸಿಂಹಾಸನ ತ್ಯಾಗಮಾಡಬೇಕೆಂಬ ತನ್ನ ಹಿಂದಿನ ಸೂಚನೆಯನ್ನು ಸಮರ್ಥಿಸಿಕೊಂಡು ತನ್ನ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಮಾಡಿರುವ ಸಾಮಾನ್ಯ ಜನತೆಯ ಉದ್ಧಾರ ಕಾರ್ಯಗಳನ್ನೆಲ್ಲ ಶೇಖ್ ಅಬ್ದುಲ್ಲಾ ವಿವರಿಸಿದ್ದಾರೆ.

ಪೂ. ಪಂಜಾಬ್ ಸರಕಾರ

ಪೂರ್ವ ಪಂಜಾಬ್ ಪ್ರಾಂತ್ಯಕ್ಕೆ ಮದ್ರಾಸಿನ ರೋಗವೇ ತಾಗಿಕೊಂಡಿದೆ. ಸ್ವಾತಂತ್ರ್ಯ ಹೋರಾಟ ಯುಗದಲ್ಲಿ ಅಖಿಲ ಭಾರತದ ನಾಯಕರನ್ನು ನಿರ್ಮಿಸಿ ಮುಂದೊಡ್ಡಿದ್ದ ಬಂಗಾಳ ಮತ್ತು ಪಂಜಾಬುಗಳೆರಡರ ಒಳಸ್ಥಿತಿಯೂ ಈಗ ಸಮಾಧಾನಕರವಾಗಿಲ್ಲ. ದೇಶ ವಿಭಜನೆಯು ಪಂಜಾಬು ಮತ್ತು ಬಂಗಾಳಾ ಪ್ರಾಂತ್ಯಗಳಲ್ಲಾದುದರಿಂದ, ಆ ಸೀಳಾಟದ ನೋವೇ ಇದಕ್ಕೆ ಕಾರಣವೆನ್ನಬಹುದು. ಪಶ್ಚಿಮ ಭಾಗವು ಪಾಕಿಸ್ತಾನಕ್ಕೆ ಹೋಗಿ ಭಾರತದ ಪಾಲಿಗೆ ದೊರೆತ ಪೂರ್ವ ಪಂಜಾಬು ಪ್ರಾಂತ್ಯದಲ್ಲಿ ನಾಯಕತ್ವಸ್ಥಿರವಾಗಿ ನಿಲ್ಲದಂತಾಗಿದೆ. ಅದು ಬದಲಾಗುತ್ತಾ ಹೋಗಿ ಕೊನೆಗೆ ಶ್ರೀ ಗೋಪೀಚಂದ ಭಾರ್ಗವರು ಬಹುಮತದಿಂದ ನಾಯಕನಾಗಿ ಆರಿಸಲ್ಪಟ್ಟು ಸರಕಾರ ರಚಿಸಿದ್ದರು; ಆದರೆ ಮೂರೇವಾರಗಳಲ್ಲಿ ಅವರು ನಾಯಕತ್ವ ಬಿಡಬೇಕಾಗಿ ಇತ್ತೀಚೆಗೆ ಶ್ರೀ ಭೀಮಸೇನ ಸಚಾರರು ಬಹುಮತದ ನಾಯಕರಾದರು. ಮಂತ್ರಿಮಂಡಲ ರಚನೆಗಾಗಿ ಕಾಂಗ್ರೆಸ್ ಅಧಿನಾಯಕರ ಸಲಹೆ ಕೇಳಲು ದಿಲ್ಲಿಗೆ ಹೋದಾಗ "ಕಾಂಗ್ರೆಸಿನ ಎಲ್ಲಾ ಪಂಗಡಗಳಿಗೂ ಪ್ರತಿನಿಧಿಯ ಮಂಡಲಿ ರಚಿಸಬೇಕು; ಆದರಲ್ಲಿ ಶ್ರೀ ಸಚಾರರು ಕೂಡಿ ಅವರ ಸಮರ್ಥಕರು ನಾಲ್ವರುಂದಿ; ಹರಿಜನ ಸದಸ್ಯರಲ್ಲಿ ಹೆಚ್ಚಿನವರ ಬೆಂಬಲವುಳ್ಳ ಓರ್ವ ಹರಿಜನ, ಮತ್ತು ಶ್ರೀ ಸಚಾರರನ್ನು ವಿರೋಧಿಸಿದ ಶ್ರೀ ಭಾರ್ಗವರ ಪಕ್ಷೀಯರಿಬ್ಬರು ಇರಬೇಕು; ಉಪಮಂತ್ರಿಗಳಿರಬೇಕೆಂದಿಲ್ಲ." ಎಂದು ಮುಖ್ಯವಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ನಿರ್ದೇಶಿಸಿದ್ದಿತು. ಶ್ರೀ ಸಚಾರರು ಅದಕ್ಕೊಪ್ಪಿದ್ದರೂ ತಾನು ಮತ್ತು ತನ್ನ ಪಕ್ಷದ ಇತರ ನಾಲ್ವರು ಮಂತ್ರಿಗಳ ಸ್ವೀಕರಿಸಿಕೊಂಡು ಅಧಿಕಾರ ವಹಿಸಿಕೊಂಡರಲ್ಲದೆ, ಉಪಪ್ರಧಾನಿಗಳನ್ನೂ ನೇಮಿಸಿಕೊಂಡರು. ಕಾಂಗ್ರೆಸ್ ಅಧಿನಾಯಕರು ಈ ಕುರಿತು ಕಠಿಣ ಧೋರಣೆ ವಹಿಸಿ ತಮ್ಮ ಸೂಚನೆಯಂತೆ ವರ್ತಿಸಬೇಕೆಂದು ಶ್ರೀ ಭೀಮಸೇನ ಸಚಾರರನ್ನು ಒತ್ತಾಯಿಸಿದ್ದಾರೆ; ಸಚಾರ್ ಸಚಿವ ಮಂಡಲಿಯ ಭವಿಷ್ಯವು ಬಿಕ್ಕಟ್ಟಿನಲ್ಲಿದೆ. ಇತ್ತ ಹರಿಜನ ಸಚಿವನನ್ನು ಚುನಾಯಿಸಿ ಕೊಡುವಂತೆ ಶ್ರೀ ಸಚಾರರ ಎಂಟೇ ಮಂದಿಯಿರುವ ಹರಿಜನ ಸದಸ್ಯರ ಸಭೆಯನ್ನು ಇದೇ ತಾ. 18ಕ್ಕೆ ದಿಲ್ಲಿಯಲ್ಲಿ ಕರೆದಿದ್ದರು. ಆ ಪೈಕಿ ಆರು ಮಂದಿ ಒಟ್ಟಾಗಿ ಶ್ರೀ ಪೃಥ್ವಿಸಿಂಗ್ ಅಝಾದರನ್ನು ತಮ್ಮ ಪರವಾಗಿ ನೇಮಿಸಿಕೊಳ್ಳುವಂತೆ ಪ್ರಧಾನಿಗಳನ್ನು ಬಲಪಡಿಸಿ ಕೇಳಿಕೊಂಡಿದ್ದಾರೆ. ನವದಿಲ್ಲಿಯಲ್ಲಿ ಕಾಂಗ್ರೆಸ್ ಅಧಿನಾಯಕರು ಮತ್ತು ಪಂಜಾಬಿನ ವಿವಿಧ ಪ್ರಮುಖರೊಳಗೆ ಮಾತುಕತೆಗಳು ನಡೆದಿವೆ. ಶ್ರೀ ಸಚಾರರು ಅಧಿನಾಯಕರ ಸಲಹಾಧೀನರಾಗುವ ಸಂಭವ ಕಾಣುತ್ತಿದೆ. ಮದ್ರಾಸಿನಲ್ಲಿ ಇಂತಹ ಬಿಕ್ಕಟ್ಟೇ ಎದ್ದಿದ್ದಾಗ, ಆದನ್ನು ತೀರ್ಮಾನಿಸುವ ಗೊಡವೆಗೆ ಹೋಗದ ಕಾಂಗ್ರೆಸ್ ಅಧಿನಾಯಕರು ಪೂರ್ವ ಪಂಜಾಬಿನ ಮಟ್ಟಿಗೆ ಇಂತಹ ಆಗ್ರಹ ತೊಡಲು ಕಾರಣವೆಂದರೆ- ಆ ಪ್ರಾಂತ್ಯವು ಗಡಿಯಲ್ಲಿ ಧರ್ಮಾಂಧ ಪಾಕಿಸ್ತಾನದತ್ತಿನ ಪ್ರಾಂತ್ಯ; ಭಾರತದ ರಾಜಧಾನಿ ದಿಲ್ಲಿಗೂ ಕಾಶ್ಮೀರಕ್ಕೂ ಹೋಗಿ ಕೊಂಡಿದ್ದು ರಕ್ಷಣೆಯ ಪ್ರಾಮುಖ್ಯತೆಯುಳ್ಳವನೆಲೆ. ಇಲ್ಲಿಯ ಆಡಳಿತೆಯು ದುರ್ಬಲ ಅಥವಾ ಚಂಚಲಗೊಂಡಿದ್ದರೆ ಅದು ಅಖಿಲಭಾರತದ ಪಾಲಿನ ಮಂಗಳ ಕರ್ನ್ನು ನಿರ್ಮಿಸಬಹುದು; ಆದ್ದರಿಂದಲೇ ರಾಷ್ಟ್ರನಾಯಕರು ಪೂರ್ವ ಪಂಜಾಬು ಸರಕಾರ ರಚನೆಯ ಕುರಿತು ವಿಶೇಷ ಆಸಕ್ತಿವಹಿಸಿದ್ದಾರೆ.

ಇತ್ತ ವಿಂಧ್ಯಪ್ರದೇಶ ಸಂಸ್ಥಾನಗಳ ಒಕ್ಕೂಟದ ಮಂತ್ರಿಮಂಡಲದ ಇಕ್ಕಡೆಯವರೊಳಗೆ ತಿಕ್ಕಾಟವೆದ್ದು, ಎರಡು ಕಡೆಯವರೂ ಪರಸ್ಪರ ಆರೋಪಗಳನ್ನು ಹೊರಿಸಿಕೊಂಡಿರುವುದರಿಂದ ಭಾರತ ಸರಕಾರವು ಆ ಮಂತ್ರಿಮಂಡಲವನ್ನು ರದ್ದುಪಡಿಸಿ ಆಡಳಿತವನ್ನು ತಾನೇ ವಹಿಸಿಕೊಂಡಿದೆ. ಕಾಲಕ್ರಮೇಣ ಈ ಸಂಸ್ಥಾನಿಕ ಭಾಗಗಳನ್ನು ಮಧ್ಯ ಪ್ರಾಂತ್ಯ ಮತ್ತು ಸಂಯುಕ್ತ ಪ್ರಾಂತ್ಯಗಳೊಳಗೆ ಸೇರಿಸಿಬಿಡಲಾಗುವದೆಂದು ತಿಳಿದುಬರುತ್ತದೆ.

ಉತ್ತಮ

ಉಪಾಹಾರ ಮಂದಿರ—

ವೀರ ಭಾರತ ವಿಶ್ರಾಂತಿ ಗೃಹ

(ನ್ಯೂ ಯೂನಿಯನ್ ಮಿಲ್ಲಿನ ಎದುರು)

ಡಿಲಿಸ್ಲೆ ರೋಡು

ಬೊಂಬಾಯಿ 13

ಕಡಿಮೆ ಮೊತ್ತದ ವಿಮೆಮಾಡಬೇಕೆಂದಿದ್ದರೆ

ಅಧಿಕ ಸವಲತ್ತಿನ ವಿಮೆ ಪಡೆಯಬೇಕೆಂದಿದ್ದರೆ

ದಿ

ನ್ಯೂ ಕರ್ನಾಟಕ ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಉಡುಪಿ

ಇವರೊಡನೆ ವಿಚಾರಿಸಿರಿ!

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscriped	Rs. 20,00,000.
Capital Paid Up.	Rs. 19,99,800.
Reserves	Rs. 8,90,000

Banking business of every description transacted.

ಗುರುವಾರ, ಉಡುಪಿ, ೨೧-೪-'೪೯

ಗಾಂಧೀನಿಧಿ.

ಈ ತಿಂಗಳಾಂತ್ಯಕ್ಕೆ- ಗಾಂಧಿಜೀಯನ್ನು ನಾವು ಕಳಕೊಂಡು ಹದಿನೈದು ತಿಂಗಳು ಪೂರ್ಣಗೊಳ್ಳುವಾಗ- ಗಾಂಧೀ ಸ್ಮಾರಕ ರಾಷ್ಟ್ರೀಯ ನಿಧಿ ಸಂಗ್ರಹವನ್ನು ಪೂರ್ಣಗೊಳಿಸಬೇಕೆಂದು ಆ ನಿಧಿಯ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ನಿರ್ಧರಿಸಿದ್ದಾರೆ; ಆ ಕಾರ್ಯವನ್ನು ಭರದಿಂದ ಮುಂದೊತ್ತುವದಕ್ಕಾಗಿ, ತನ್ನ ಅನಾರೋಗ್ಯವನ್ನು ಲಕ್ಷ್ಯಿಸದ ದೇಶಸಂಚಾರವನ್ನು ಕೂಡಾ ಕೈಕೊಂಡಿದ್ದಾರೆ. ಈ ಬಾರಿಯ ರಾಷ್ಟ್ರೀಯ ವಾರದಲ್ಲಿ ದೇಶದಲ್ಲೆಲ್ಲಾ ಈ ನಿಧಿಸಂಗ್ರಹದ ಕಡೆಗೆ ವಿಶೇಷ ಲಕ್ಷ್ಯ ಬಿದ್ದಿದೆ; ಕೆಲಸವು ವ್ಯವಸ್ಥೆಯಿಂದ ಮತ್ತು ದೃಢವಾಗಿ ಮುಂದೂತ್ತಿದೆ. ಬಾಪೂಜಿಯ ಶ್ರಾದ್ಧ ದಿನದ ಮೊದಲೇ ಈ ನಿಧಿ ಸಂಗ್ರಹಕ್ಕೆ ಸ್ತಿವಾರ ಬಿದ್ದಿತ್ತು- ಮಹಾತ್ಮರ ಸ್ಮಾರಕಕ್ಕಾಗಿ, ಅವರ ತತ್ವಗಳ ಪ್ರಚಾರಕ್ಕಾಗಿ, ಹಣದ ಬೇಡಿಕೆಯೊಂದು ಸುವಾರ್ತೆಯಂದೂ ಕಾಲು ವರುಷದಿಂದ ಸಾರ್ವಜನಿಕರ ಮುಂದಿದೆಯೆಂದಾಯಿತು. 'ಪ್ರತಿಯೊಬ್ಬನೂ ಕೊನೆಯ ಪಕ್ಷ ತನ್ನ ಹತ್ತು ದಿನಗಳ ಉತ್ಪನ್ನವನ್ನು ಈ ನಿಧಿಗೆ ಅರ್ಪಿಸಲಿ' ಎಂದು ಡಾ| ರಾಜೇಂದ್ರ ಪ್ರಸಾದರು, ಒಂದು ಅಂದಾಜನ್ನು ಕೂಡಾ ತಿಳಿಸಿದ್ದರು. ಆದರೂ ಇತ್ತೀಚೆಗಿನ ಅವರ ಹೇಳಿಕೆಯ ಮೇಲಿಂದ, ಈ ನಿಧಿಗಾದ ಜಮೆಯು ಸಮಾಧಾನಕರವಲ್ಲ ಎಂದು ತಿಳಿದುಬಂದಿದೆ. ಹೀಗಾಗಲು ಕಾರಣವೇನು? ತನ್ನ ಜೀವನದ ಪ್ರತಿಯೊಂದು ಕ್ಷಣವನ್ನೂ-ಕೊನೆಗಾ ಜೀವವನ್ನೇ—ತಮಗಾಗಿ ಕೊಟ್ಟಿದ್ದ ಬಾಪೂಜಿಯ ಋಣದ ಅಲ್ಪಾಂಶವನ್ನು ಈ ರೀತಿಯಿಂದಾದರೂ ಸಂದಾಯಿಸಲು ಭಾರತೀಯರು ಸಿದ್ಧರಿಲ್ಲವೆ? ಅಥವಾ ಮಹಾತ್ಮರ ತತ್ವ ಹಾಗೂ ಕಾರ್ಯಕ್ರಮಗಳು ಇನ್ನು ಪ್ರಚಾರವಾಗುವ ಆವಶ್ಯಕತೆ ಇಲ್ಲವಾದ್ದರಿಂದ, ಅದಕ್ಕಾಗಿ ವಿನಿಯೋಗವಾಗಲಿರುವ ಈ ನಿಧಿಯ ಕುರಿತು ಇಂತಹ ಅನಾಸಕ್ತಿಯೆ? ಎಂದೂ ಅಲ್ಲ; ಎಷ್ಟಕ್ಕೂ ಅಲ್ಲ. ಗಾಂಧೀನಿಧಿ ಪೂರ್ಣಗೊಳ್ಳುವಾಗ ಅದು, ನಮ್ಮ ಕಾಲದ ಲೋಕೈಕ ಮಹಾ[illegible]

[illegible]ದ್ದಾಗುವದೆಂಬುದು ನಿಸ್ಸಂದೇಹ. ಅದರ ಸಂಗ್ರಹಾವಧಿಯಲ್ಲಿ ಆ ಕುರಿತು ಸಾರ್ವಜನಿಕರು ಸಾಕಷ್ಟು ಉತ್ಸಾಹ ಪ್ರದರ್ಶಿಸಿಲ್ಲವಾದರೆ, ಕಾಲದ ಬಿಸಿಯಿಂದ ಆ ಹುರುಪು ಅವರಲ್ಲಿ ಒಣಗಿಹೋಗಿರುವುದೇ ಅದಕ್ಕೆ ಕಾರಣ, ಹೊರತು ಗಾಂಧೀನಿಧಿಯ ಮಟ್ಟಿಗೆ ಮಾತ್ರ ಹೀಗಲ್ಲ. ಬದಲಿಗೆ ಎಂತಹ ದುಸ್ಥಿತಿಯಿದ್ದರೂ, ಬಾಪೂಜಿ ಸ್ಮಾರಕಕ್ಕೆ ಶಕ್ತ್ಯಾನುಸಾರ ತಮ್ಮ ಕಾಣಿಕೆ ಸಲ್ಲಿಸಬೇಕೆಂದು ಸಾಮಾನ್ಯರು ಚಡಪಡಿಸುತ್ತಿರುವುದು ಗೋಚರಿಸುತ್ತಿದೆ. ಅತಿ ಪ್ರಸರಣವು ತುದಿಮುಟ್ಟಕ್ಕೇರಿದ್ದ ಕಳೆದ ದಿನಗಳಲ್ಲೂ, ಅದು ಇಳಿಮುಖವಾಗುತ್ತಿರುವ ಈ ಕಾಲದಲ್ಲೂ ಅತಿರೇಕ ಹಣ ಓಡಾಡುತ್ತಿದ್ದ-ಓಡಾಡುತ್ತಿರುವ-ಕೈಗಳ ವರ್ಗವೇ ಬೇರೆ. ಜನಸಾಮಾನ್ಯರಿಗೆ ಅಂದೂ ಅಡಚಣೆ ತಪ್ಪಿರಲಿಲ್ಲ; ಈಗಲಂತೂ ಜೀವನಾವಶ್ಯ ಸಾಮಾಗ್ರಿಗಳ ಧಾರಣೆಯು ಇನ್ನಷ್ಟು ಏರಿರುವಾಗ ಶ್ರಮಜೀವಿ ಸಾಮಾನ್ಯರ ಉತ್ಪನ್ನವೇನೂ ಆ ಪರಿಮಾಣದಲ್ಲೇರಿಲ್ಲ; 'ದುಡ್ಡಿನ ಏರುಪಾಟು' ಕಡಿಮೆಯಾಗಿ ಕೈ ಕಟ್ಟಿದಂತಾಗಿದೆ. ಇಂಥವರು ಪಕ ಗಾಂಧೀನಿಧಿಗೆ ತಮ್ಮ 'ಹತ್ತು ದಿನಗಳ ಗಳಿಕೆ'ಯಾಗಿ ಸಮರ್ಪಿಸಲು ಇರುವದೆಂದರೆ ಅಡಚಣೆ, ಅಭಾವಗಳೇ! ಮೊನ್ನೆ ಕಾನ್ಪುರನವಳಿಲ್ಲಯಲ್ಲಿ ಗಾಂಧೀ ಸ್ಮಾರಕ ನಿಧಿಗಾಗಿ ರಾಜೇಂದ್ರ ಪ್ರಸಾದರ ಕೈಗೆ ರೂ. 5,07,51,151ರ ಚೆಕ್ಕನ್ನು ಕೊಟ್ಟ ಭಾಂತದ 2200 ಮಂದಿ ಪ್ರಮುಖ ಉದ್ದಿಮೇದಾರರು ತೋರಿಸಿದ ಈ ಮಾದರಿಯ 'ಗಾಂಧೀಭಕ್ತಿ'ಯನ್ನು ಮಿಕ್ಕವರು ತೋರಿಸುವದಸಾಧ್ಯ. ಆ ಸಂದರ್ಭದಲ್ಲಿ ಉದ್ದಿಮೇದಾರರನ್ನು ಸಂಬೋಧಿಸುತ್ತಾ ಸರ್ದಾರ್ ಪಟೇಲರಾಡಿದ ಮಾತುಗಳಲ್ಲೇ ಆ ಬಂಡವಾಳಗಾರ ವರ್ಗಕ್ಕೂ ಜನಸಾಮಾನ್ಯರಿಗೂ ಇರುವ ವ್ಯತ್ಯಾಸವು ಒಡೆದುತೋರಿದೆ: "ನಿಧಿಗಳ ಸಂಗ್ರಹವೆಂಬುದು ತುಲನಾತ್ಮಕವಾಗಿ ಸುಲಭದ ಕೆಲಸ. ನಿಜವಾದ ಕಾರ್ಯಭಾರವು ನಿಮ್ಮ ಹಾಗೂ ನಮ್ಮೆಲ್ಲರ ಮುಂದೆ ಇನ್ನೂ ಉಳಿದಿದೆ. ಅದೆಂದರೆ ನಮ್ಮ ಜನತೆಯ ಜೀವನ ಮಟ್ಟವನ್ನು ಮೇಲೇರಿಸುವದೇ". ಗಾಂಧೀನಿಧಿಯ ವಿನಿಯೋಗ ಗುರಿಯೂ ಇದೇ; ಗಾಂಧೀನಿಧಿ ದಾನಕ್ಕೆ ಸಾಮಾನ್ಯ ಜನತೆಯ ಕೈ ಸಾಕಷ್ಟು ಉದ್ದವಾಗಿ ಮುಂದೆ ಬಾರದಿರಲು ಕಾರಣವೂ ಇದೇ; ನಮ್ಮ ಸರಕಾರದ ಹಾಗೂ ಸರ್ವರ ಮುಂದಿರಬೇಕಾದ ಮೊದಲ ಪ್ರಶ್ನೆಯೇ ಇದು!

ಸಂಗತಿ ಹೀಗಿದ್ದರೂ, ಸ್ಥಿತಿಗತಿಗನುಸಾರವಾಗಿ ತಮ್ಮ ಶಕ್ತಿಮೀರಿ ಗಾಂಧೀ [illegible] ಸರ್ವರೂ ಬ[illegible]

ಮನನೀಯ ಮಾತುಗಳು

"ಇನ್ನು 5 ವರುಷಗಳಲ್ಲಿ ಜನಜೀವನದ ಮಟ್ಟವನ್ನು ಸೇ. 33ರಷ್ಟು,15ವರುಷಗಳಲ್ಲಿ ಸೇ. 100ರಷ್ಟು ಏರಿಸಲು ಸಾಧ್ಯವಿದೆ, ಎಂದು ನೀವೆಂದಿದ್ದೀರಿ. ನೀವು ನಾವೆಲ್ಲರೂ ಮಾಡಬೇಕಾದ ಕೆಲಸವಿದು. ನಾವೆಲ್ಲರೂ ಒಟ್ಟಿಗೆ ಕುಳಿತು ಈ ಕುರಿತು ಒಂದು ಯೋಜನೆ ತಯಾರಿಸಬೇಕಾದುದು ಅಗತ್ಯ. ನಮ್ಮ ನೆರೆಯ ರಾಷ್ಟ್ರಗಳ ಸ್ಥಿತಿಗತಿಗಳ ಕಡೆಗೊಮ್ಮೆ ನೋಡಿಕೊಂಡು ನಮಗೂ ಅದೇ ಗತಿ ಬಾರದಂತೆ, ತಮ್ಮ ನೋಪಾಯಗಳನ್ನು ಕೈಕೊಳ್ಳೋಣ. ನಾವು ತತ್ಕಾಲದಲ್ಲಿ ಕಾರ್ಯಪ್ರವೃತ್ತರಾಗದಿದ್ದರೆ, ಪರಿಸ್ಥಿತಿ ನಮ್ಮ ಕೈಮೀರಿ ಹೋಗಬಹುದು; ಗಂಡಾಂತರವು ನಮ್ಮನ್ನಾವರಿಸಿಕೊಳ್ಳಬಹುದು"–5ಕೋಟಿ ರೂ.ಗಳಿಗೂ ಮಿಕ್ಕಿದ ನಿಧಿಯನ್ನು ಗಾಂಧೀ ನಿಧಿಗೊಪ್ಪಿಸಿದ ಪ್ರಮುಖ ಉದ್ದಿಮೇದಾರರ ಸಮಿತೀ ಸಭೆಯಲ್ಲಿ ಇದೇ ತಾ. 16ರಲ್ಲಿ ಸರ್ದಾರ್ ಪಟೇಲರುಪದೇಶ.

"10ದಿನಗಳ ನಿವ್ವಳ ಆದಾಯವನ್ನು ಗಾಂಧೀ ನಿಧಿಗೆ ಅರ್ಪಿಸಬೇಕೆಂಬ ನಿಯಮಾನುಸಾರ 1947ರ ಸಂಘಟಿತ ಉದ್ದಿಮೆಯ ಹತದಿನಗಳ ನಿವ್ವಳ ಮುನಾಫೆ ಸುಮಾರು ಒಂದೂವರೆ ಕೋಟಿ ರೂಪಾಯಿಯಾಗುವದು. ಆದರೂ ಉದ್ದಿಮೇದಾರರ 5ಕೋಟಿ ರೂ. ಗಳಾದರೂ ಇದಕ್ಕೆ ಬೀಳಬೇಕೆಂದು ಸರ್ದಾರ್ ಪಟೇಲರ ಬಯಕೆಯಿದ್ದುದರಿಂದ ನಮ್ಮ ಸಮಿತಿ ಅಷ್ಟನ್ನು ಸಂಗ್ರಹಿಸಿದೆ; ಇದು ಸುಮಾರು ಒಂದು ತಿಂಗಳದ್ದಾಗುವದು. ಇನ್ನೂ ಕೊನೆಯ ಪಕ್ಷ 50 ಲಕ್ಷವಾದರೂ ಹೆಚ್ಚಿಗೆ ಜಮೆಯಾಗಬಹುದು"–ದೊಡ್ಡ ಉದ್ದಿಮೇದಾರರ ಪರವಾಗಿ ಗಾಂಧಿನಿಧಿಗೆ 5ಕೋಟಿ ರೂ.ಗಳ ಚೆಕ್ ಸಮರ್ಪಿಸುತ್ತಾ ಶ್ರೀ ಕಸ್ತೂರಿಭಾಯಿ ಲಾಲ್ ಭಾಯಿಗಳ ನಿವೇದನ.

"ಪ್ರತಿಯೊಬ್ಬ ಮುಸ್ಲಿಮನೂ ಒಪ್ಪಂದ ಮತ್ತು ಕರಾರುಗಳನ್ನು ಅಕ್ಷರಶಃ ಪಾಲಿಸಲು ಬದ್ಧನಿದ್ದಾನೆಂಬುದೇ ಇಸ್ಲಾಮಿನ ಬೋಧನೆ. ಯುದ್ಧ ಮುಕ್ತಾಯ ಒಪ್ಪಂದದ ಶರ್ತ ಭಂಗಮಾಡಿದ ಪಾಕಿಸ್ತಾನವು ಇಸ್ಲಾಮಿಗೆ ದ್ರೋಹವನ್ನು ಸಾಧಿಸಿದೆ. ಪಾಕಿಸ್ತಾನಕ್ಕೀಗ ತನ್ನ ಆಂತರಿಕ ಬಾಬ್ತುಗಳನ್ನು ಮರೆಮಾಡಿಕೊಳ್ಳಬೇಕಾಗಿದೆ. ಕಾಶ್ಮೀರದ ಗುಂಡು ಹಾರಾಟ ನಿಂತ ಮೇಲೆ, ಪಶ್ಚಿಮ ಪಂಜಾಬಿನ ಮಂತ್ರಿಮಂಡಲದ ಬಿಕ್ಕಟ್ಟು, ಗಡಿನಾಡು ಪ್ರಾಂತ್ಯ ಮತ್ತು ಸಿಂಧಿನಲ್ಲಿ ಕೂಡಾ ಗೊಂದಲ, ಮುಂತಾದ ಗಂಭೀರ ಸಮಸ್ಯೆಗಳನ್ನು ದ್ಭವಿದ್ದಾರೆ; ಅದು ತನ್ನ ರಾಷ್ಟ್ರದ ಪಾಗ ಅತ್ಯದ ಉದ್ಧಾರಕನಿಗೆ ತಾನು ಚಿರಋಣಿಯೆಂಬ ಸೂಚನೆಯಾಗಿ ಪ್ರತಿಯೊಬ್ಬನೂ ಕೊಡಬೇಕಾದ. ಯಾರೂ ಪಿಥಟ್ಯವಾದ ಮಾತ್ರ, ಅದೊಂದು ದಾನವಲ್ಲ—ಇದೊಂದು ಉಚಿತವಾದ ಕರ್ತವ್ಯಪಾಲನೆ. ಈ ತಿಂಗಳಾಂತ್ಯಕ್ಕೆ ಆ ಕರ್ತವ್ಯ ಪಾಲನಾವಧಿ ಮುಗಿದುಹೋದರೆ ಮತ್ತೆ ಪಶ್ಚಾತ್ತಾಪ ಪಡಬೇಕಾದೀತು. ಅದ್ದರಿಂದ ಪ್ರತಿಯೊಬ್ಬನೂ ನಿಶ್ಚಿತಾವಧಿಯೊಳಗೆ 'ಗಾಂಧೀ ಸ್ಮಾರಕ ರಾಷ್ಟ್ರೀಯ ನಿಧಿ'ಗೆ ತನ್ನ ಪಾಲನ್ನು ತಪ್ಪದೆ ಸಮರ್ಪಿಸಲಿ ಎನ್ನುತ್ತೇವೆ.

ಪಾಕಿಸ್ತಾನವಿದಿರಿಸಬೇಕಾಗಿ ಬಂದಿದೆ. ಗಡಿನಾಡಿನಲ್ಲಿ ಪಾಕಿಸ್ತಾನ್ ಚಳವಳಿ ಬಲಗೊಳ್ಳುತ್ತಿದೆ; ಜನತೆಯ ಲಕ್ಷ್ಯವನ್ನು ಈ ಚಳವಳಿದಿಂದ ತಪ್ಪಿಸಿ ಬೇರೆ ಕಡೆಗೆ ತಿರುಗಿಸುವದಕ್ಕಾಗಿ, ಕಾಶ್ಮೀರ ಯುದ್ಧವನ್ನು ಜೀವಂತವಿಡುವ ಬಯಕೆ ಪಾಕಿಸ್ತಾನದ್ದು. ಕಾಶ್ಮೀರದನ್ಯಾಯಬದ್ಧ ಸ್ವತಂತ್ರ ಮತದಾನದಲ್ಲಿ ತಾನು ಜಯಿಸಿಯೇನೆಂಬ ಭರವಸೆ ಪಾಕಿಸ್ತಾನಕ್ಕಿಲ್ಲ. ಕಾಶ್ಮೀರಿಗಳೀಗ ತೀರಾ ಜಾಗೃತಿಗೊಂಡಿದ್ದಾರೆ. ಮಧ್ಯಯುಗದ ಪಾಕಿಸ್ತಾನೀ ರಥದ ಚಕ್ರಕ್ಕೆ ತಮ್ಮನ್ನು ತಾವೇ ಕಟ್ಟಿಹಾಕಿಕೊಳ್ಳಲು ಅವರು ತಯಾರಿಲ್ಲ. ಹೀಗಾಗಿ ಪಾಕಿಸ್ತಾನವೀಗ ಹೋರಾಟಕ್ಕಾಗಿ ಚಡಪಡಿಸುತ್ತಿದೆ; ಸೇನಾ ನಿರ್ಧಾರದಿಂದಲೆ ಬಗೆಹರಿಸುತ್ತಿದೆ"–ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ಕಾರ್ಯದರ್ಶಿ ಮೌಲಾನಾ ಸಯ್ಯದರು ಅಲ್ಲಿಯ ಕಾರ್ಯಕರ್ತರ ಸಭೆಯಲ್ಲಿ.

"ಭಾರತವು ಆಶ್ಚರ್ಯಗಳನ್ನು ನಿರ್ಮಿಸುತ್ತಿದೆ. ಬಹುಶಃ ಮಾನವ ಚರಿತ್ರೆಯಲ್ಲೇ ಅತಿದೊಡ್ಡದಾದ ಅಧಿಕಾರ ಬದಲಾವಣೆಯಿಂದೆದ್ದ ಮಹಾ ಸಮಸ್ಯೆಗಳೆಲ್ಲವನ್ನೂ ಅದು ಶಕ್ತ್ಯುತ್ಸಾಹ, ದೃಢನಿರ್ಧಾರ ಮತ್ತು ಶ್ಲಾಘನೀಯ ವಿಜಯದೊಂದಿಗೆ ಬಿಡಿಸಿಕೊಳ್ಳುತ್ತಿದೆ. ಯಾರಿಗಾದರೂ ಕೂಡಲೇ ಹೊಳೆಯುವ ವಿಷಯವೆಂದರೆ ಭಾರತವು ಉತ್ಸಾಹದಿಂದ ಕಾಂಗ್ರೆಸ್ ಪಕ್ಷದ ಬೆನ್ನು ಹಿಡಿದಿದೆ ಎಂಬುದು. ಅದರ ನಾಯಕರಾದ ಪಂಡಿತನೆಹರು ಮತ್ತು ಸರ್ದಾರ್ ಪಟೇಲರ ಮೇಲೆ ಇಡೀ ದೇಶಕ್ಕೆ ಗೌರವ ಮತ್ತು ವಿಶ್ವಾಸವಿದೆ. ಇವರಿಬ್ಬರು ತಲೆ ಮತ್ತು ಭುಜಗಳಿಂಗ, ಮಿಕ್ಕ ಯಾರೊಬ್ಬನಿಗಿಂತಲೂ ಎತ್ತರದಲ್ಲಿದ್ದಾರೆ. ಅವರು ಪರಸ್ಪರ ನಿಕಟ ಬಾಂಧವ್ಯದಿಂದ ದುಡಿಯುತಿದ್ದಾರೆ; ಒಬ್ಬನಿಗಿನ್ನೊಬ್ಬ ಸಹವರ್ತಿಯಾಗಿದ್ದಾರೆ. ಪ್ರಧಾನ ಮಂತ್ರಿ ನೆಹರು ಭಾವನಾವಾದಿ; ಸ್ಫೂರ್ತಿ ನಿರ್ಮಿಸುವ ಯೋಗ್ಯತೆ ಮತ್ತು ವಿಶಾಲ ಮನೋವೃತ್ತಿಯುಳ್ಳ ಜನ. ಪಟೇಲರಾದರೋ ಸಶಕ್ತ ಆಡಳಿತೆಗಾರ; ಘೋರಣೆಗಳನ್ನು ಕ್ಷಿಪ್ರವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಬಲ್ಲವರು. ಇವರಿಬ್ಬರೂ ರಾಷ್ಟ್ರಹಿತಕ್ಕಾಗಿ ತಮ್ಮನ್ನು ತಾವರ್ಪಿಸಿಕೊಂಡ ಸಾಚಿತ್ವದಿಂದು, ದಣಿವ್ರಹಿತ ಕೆಲಸಗಾರರೆಂದು ಕೀರ್ತಿ ಪಡೆದವರು. ನಾನು ಇವರಿಬ್ಬರೊಡನೆಯೂ ಸುದೀರ್ಘವಾಗಿ ಸಂಭಾಷಣೆ ನಡೆಸಿದ್ದೇನೆ. ಇಂಗ್ಲೆಂಡಿನ ಉಚ್ಚ ಶಿಕ್ಷಣವು ಕೂಡ ಬಲ್ಲ ಸುಸ್ವಭಾವಿಗಳೆಲ್ಲವೂ. ಹೊಳೆಯುತ್ತಿರುವ ಸುಸಂಸ್ಕೃತ ಮನುಷ್ಯ ನೆಹರು. ಪಟೇಲರು ಹೆಚ್ಚು ಮುದುಕ; ಮಾತುಕತೆಯ ವೇಳೆ ನಿಧಾನ ಮತ್ತು ನಿಶ್ಚಿತಾಭಿಪ್ರಾಯದವರಂತಿದ್ದಾರೆ. ಸಹಜವಾಗಿ ಅವರು ತನ್ನ ಡ್ರೆಸ್, ನಡತೆಗಳಲ್ಲಿ ಶುದ್ಧ ಹಿಂದೀಯನಿದ್ದಾರೆ. ಅವರ ಆ ಮೌನ, ಅದರ ದರಗು ಪ್ರಕೃತಿಯ ಹಿಂದೆ ಮಹಾಶಕ್ತಿ ಭಂಡಾರ ಹುದುಗಿದೆ ಎಂಬ ಭಾವನೆ ಥಟ್ಟನೆ ಹೊಳೆಯುತ್ತದೆ."–ಭಾರತವನ್ನು ಇತ್ತೀಚೆಗೆ ತಿರುಗಾಡಿದ "ರೋಟರ್ಸ್" ಪ್ರತಿನಿಧಿ ಮಂಡಲಿಯಲ್ಲಿದ್ದ ರೋಟರ್ಸ್ ಡೈರೆಕ್ಟರ್ ಮಾ. ಮೆಲ್ಕೋಮ್ ಜೆ. ಗ್ರಹಮರು ಪಟ್ಟಿಸಿರುವ ಶಾಘನೆ.

ಭಾರತವನ್ನು ಸಂಪೂರ್ಣವಾಗಿ ಧರ್ಮಾತೀತ ರಾಷ್ಟ್ರವಾಗಿಡುವ ಕುರಿತು ನಾವು ಮಾಡುವ ಕಾರ್ಯದ ಪರಿಮಾಣವೇ ಭಾರತದ ಪ್ರಗತಿ ಪರಿಮಾಣವೆಂದು ನನಗೆ ಮನದಟ್ಟಾಗಿದೆ. ಹಾಗೆಂದರೆ ಜನರಲ್ಲಿ ನೈತಿಕತೆ ಅಥವಾ ಧಾರ್ಮಿಕತೆಯೆಂಬುದೇ ಇರಬಾರದೆಂಬ ಅರ್ಥವಲ್ಲ. ಇದರ ಅರ್ಥವೆಂದರೆ ಧರ್ಮವು ಸಂಪೂರ್ಣ ಸ್ವತಂತ್ರವಿರುವಾಗ, ರಾಷ್ಟ್ರವು ತನ್ನೊಳಗೆ ವಿವಿಧ ಧರ್ಮಗಳನ್ನೂ ಸಂಸ್ಕೃತಿಗಳನ್ನೂ ತುಂಬಿಕೊಂಡಿದ್ದು, ಅವೆಲ್ಲವುಗಳಿಗೂ ರಕ್ಷಣೆ ಮತ್ತು ಸಂದರ್ಭಗಳನ್ನು ಒದಗಿಸುತ್ತಿರಬೇಕು; ಮತ್ತು ಮೂಲಕ ಸಹನೆ, ಸಹಕಾರಗಳ ವಾತಾವರಣ ನಿರ್ಮಾಣವಾಗಬೇಕು. ಯಾವುದೇ ಪಂಗಡ ಅಥವಾ ಭಾಷೆಯ ಜಾತೀಯತೆಯನ್ನಾದರೂ ಸಹಿಸಬಾರದೆಂಬುದೇ ನಾವೀಗ ಕಲಿತಿರುವ ಪಾಠ"- ಲಕ್ನೋವಿನಲ್ಲಿ ತಾ 16ರಲ್ಲಿ ಸೇರಿದ್ದ 'ಜಮಾಯತ್ ಉಲ್ ಉಲೆಮಾಹಿಂದ್' ಸಮ್ಮೇಳನಕ್ಕೆ ಪಂಡಿತ ನೆಹರೂರವರು ಕಳುಹಿದ್ದ ಸಂದೇಶ.

"ನನ್ನ ಅಭಿಪ್ರಾಯ ಪ್ರಕಾರ ಈ ಕೆಳಗಿನ ಮೂರು ನೀತಿ ಸೂತ್ರಗಳನ್ನು ಅವಲಂಬಿಸಿಯೇ ವಕೀಲೀ ಉದ್ಯೋಗದ ಮೇಲ್ಪಟ್ಟ ಸಾಧನೆ: "ನಿನಗೆ ನೀನು ನಿರ್ವಂಚಕನಾಗಿರು" "ನಿನ್ನ ಕಕ್ಷಿಗಾರನಿಗೆ ನೀನು ನಿರ್ವಂಚಕನಾಗಿರು." "ಕೋರ್ಟಿಗೆ ನೀನು ನಿರ್ವಂಚಕನಾಗಿರು." ಈ ಪೈಕಿ ಮೊದಲನೆಯದು ಸ್ವತಃ ಅವನಿಗೆ ಮತ್ತು ಅವನ ಮನಸ್ಸಾಕ್ಷಿಗೆ ಸಂಬಂಧಿಸಿದುದು; ಎರಡನೆಯದು ಉದ್ಯೋಗದಲ್ಲಿರಬೇಕಾದ ಉದ್ದೇಶ ಶುದ್ಧತೆಗೆ ಸಂಬಂಧಪಟ್ಟಿದೆ. ಒಂದು ಕೇಸಿಗೆ ಸಂಬಂಧಪಟ್ಟ ಸಂಗತಿಗಳೆಲ್ಲವನ್ನೂ ಸಂಗ್ರಹಿಸಿದಾಗ ತಮ್ಮ ಕಕ್ಷಿಗಾರ ಗೆಲ್ಲಲಾರನೆಂದು ತೋರಿದರೆ ಆತ ತಮ್ಮನ್ನು ನೇಮಿಸಲಿ, ಇಲ್ಲದಿರಲಿ, ಅದನ್ನು ಸ್ಪಷ್ಟವಾಗಿ ಆತನಿಗೆ ಹೇಳಿ ಬಿಡುವದು ವಕೀಲರ ಕರ್ತವ್ಯವಿದೆ. ಆ ಮೂಲಕ ಅವರು ಜನರನ್ನು ಅವಾಂತರದಿಂದ ಮತ್ತು ನಿರರ್ಥಕ ವೆಚ್ಚದ ದಾವೆಗಳಿಂದ ಪಾರು ಮಾಡಬಹುದು. ಮೂರನೇ ನೀತಿ ಸೂತ್ರವು, ವಕೀಲರು ಕಾನೂನು ಮತ್ತು ನ್ಯಾಯಪಾಲನಾಡಳಿತೆಯ ಅಂತರ್ಗತಭಾಗವೆಂಬ ಮೂಲಸ್ಥಿತಿಯನ್ನೇ ಆಧರಿಸಿ ನಿಂತಿದೆ. ಕಾನೂನು ಪ್ರಕಾರ ನ್ಯಾಯಪೂರ್ಣವಾದ ಒಂದು ತೀರ್ಮಾನಕ್ಕೆ ಬರಲಾಗುವಂತೆ ಕೋರ್ಟಿಗೆ ಸಹಾಯ ಮಾಡಬೇಕಾದುದು ವಕೀಲರ ಕರ್ತವ್ಯ. ಈ ವರ್ತನಾನಿಯಮದ ಕಡೆಗೆ ಅಮಾನ್ಯತೆ ತೋರಿಸುತ್ತಿರುವುದು ಇತ್ತೀಚೆಗೆ ಗೋಚರಿಸುತ್ತಿದೆ. ಆದರೆ ಈ ಯುಗ ಅಗ್ರಭಾಗದಲ್ಲಿರುವ ಪೈಕಿ ಗವರ್ನರ್ ಜನರಲರಿಂದಾರಂಭಿಸಿ ಹೆಚ್ಚಿನವರು ವಕೀಲರು. ಯಥಾರ್ಥ ವಕೀಲೀ ಉದ್ದಿಮೆಯಲ್ಲಿ ಅವರು ತರಬೇತು ಪಡೆದುದರಿಂದಲೇ ಹಾಗಾದರು. ರಾಷ್ಟ್ರಶಿಲ್ಪಿ ಮಹಾತ್ಮಾ ಗಾಂಧಿ-ಅವರ ಸತ್ಯದ ಜಾಗತಿಕ ಪ್ರವಾದಿ- ಶಾಂತಿಪ್ರೇಮಿ ಮತ್ತು ಶೋಧಕ-ಸ್ವಾತಂತ್ರ್ಯದ ಅಗ್ರಗಣ್ಯ ಯೋಧರಲ್ಲೊಬ್ಬ- ಸರ್ವ ಉದಾರ ಮೂರ್ತಿ- ಮಾನವ ಜನಾಂಗದ ಒಕ್ಕಟ್ಟಿನ ಪ್ರವಾದಿ- ವಕೀಲನಾಗಿದ್ದವರು. ಇದೀಗ ಆದರ್ಶ ವಕೀಲಿತನ!"- ಮದ್ರಾಸಿನ ಎಡ್ವೊಕೇಟ್ ಸಂಸ್ಥೆಯ ವಜ್ರೋತ್ಸವ ಸಮಾರಂಭದಲ್ಲಿ ಭಾರತದ ಚೀಫ್ ಜಸ್ಟಿಸ್ ಸರ್. ಹೀರಾಲಾಲ್ ಕಾನಿಯಾ ಅವರು ವಕೀಲರಿಗಿತ್ತ ಉಪದೇಶ.

WANTED

for the Hindu High School Shirva, Shirva Post, S. K-

1) Three L. T's or B. T's- History Science and Mathamatics Graduates may also apply

2) One Trained Kannada Pandith.

3) one qualified spinning and Weaving Instructor.

Apply to correspondent.

ಮದ್ರಾಸ್ ಎಸೆಂಬ್ಲಿಯಲ್ಲಿ ಮಾಜೀ ಮಂತ್ರಿಗಳ ಹೇಳಿಕೆ

ಹೊಸ ಮಂತ್ರಿ ಮಂಡಲ ರಚನಾ ನಂತರದ ಮೊದಲನೇ ಮದ್ರಾಸ್ ಎಸೆಂಬ್ಲಿ ಅಧಿವೇಶನವು ಇದೇ ತಾ. 18 ರಲ್ಲಿ ಪ್ರಾರಂಭಿಸಿದೆ. ಆರಂಭ ದಿನದ ಆಕರ್ಷಣೀಯ ವಿದ್ಯಮಾನವೆಂದರೆ ಓಮಂದೂರು ಮಂಡಲಿಯಲ್ಲಿದ್ದು, ಕುಮಾರ ಸ್ವಾಮೀ ರಾಜಾ ಮಂಡಲಿಯಲ್ಲಿಲ್ಲದಿರುವ ಶ್ರೀ ಟಿ. ಯಸ್. ಅವಿನಾಶ ಲಿಂಗಂ ಚೆಟ್ಟಿಯಾರ್ ಮತ್ತು ಶ್ರೀ ವಿ. ಕೂರ್ಮಯ್ಯನವರ ಹೇಳಿಕೆಗಳು. ತಾ. 18ರಲ್ಲಿ ಪ್ರಶ್ನೋತ್ತರಗಳಾದೊಡನೆ ಕಾರ್ಯಕ್ರಮದಂತೆ ಅಧ್ಯಕ್ಷರು ಮಾಜೀಮಂತ್ರಿ ಶ್ರೀ ಅವಿನಾಶ ಲಿಂಗಂ ಚೆಟ್ಟಿಯಾರರನ್ನು ಭಾಷಣಕ್ಕೆ ಆಮಂತ್ರಿಸಿದರು.

ಅಡ್ಡಿ ಆಕ್ಷೇಪಗಳು

ಆ ಕೂಡಲೇ ಶ್ರೀ. ಎ. ರಾಮೇಶ್ವರ ರಾಯರೆದ್ದು "ಈ ಹೇಳಿಕೆಗಿದು ಯೋಗ್ಯ ಸಮಯವಲ್ಲ. ಹೊಸ ಮಂತ್ರಿಮಂಡಲದ ರಚನೆ ಇನ್ನೂ ಪೂರ್ಣಗೊಂಡಿಲ್ಲ; ಆ ಮಂಡಲಿಯಿನ್ನೂ ವಿಸ್ತಾರಗೊಳ್ಳಬಹುದು. ಪ್ರಾಯಶಃ ನಾವು ಶ್ರೀ ಅವಿನಾಶ ಲಿಂಗಂ ಚೆಟ್ಟಿಯಾರರನ್ನು ಪುನಃ ಮಂತ್ರಿಮಂಡಲದಲ್ಲಿ ಕಾಣುವಂತಾಗಬಹುದು. ಆದ್ದರಿಂದ ಶ್ರೀ. ಅವಿನಾಶಲಿಂಗಂ ಚೆಟ್ಟಿಯಾರರು ರಾಜೀನಾಮೆ ಕೊಟ್ಟಿದ್ದ ಮಂತ್ರಿಯೋ ಅಥವಾ 'ಹಿಂದೆ ಹಾಕಲ್ಪಟ್ಟ' ಮಂತ್ರಿಯೋ ಎಂಬುದನ್ನು ತಿಳಿಯಲು ಆಜ್ಞೆ ಬೇಡುತ್ತೇನೆ" ಎಂದರು. ಅವರ ಕೊನೆಯ ವಾಕ್ಯವು ಸಭೆಯಲ್ಲಿ ನಗೆಯನ್ನೆಬ್ಬಿಸಿತು. ಅಧ್ಯಕ್ಷ ಶ್ರೀ. ಜೆ. ಶಿವ ಷಣ್ಮುಗಂ ಪಿಳ್ಳೆಯವರು "ಈ ದಿನದವರೆಗೆ ಶ್ರೀ. ಅವಿನಾಶಲಿಂಗಂ ಚೆಟ್ಟಿಯಾರರು ತನ್ನ ಮಂತ್ರಿತ್ವಕ್ಕೆ ರಾಜೀ ಕೊಟ್ಟವರಿದ್ದಾರೆ" ಎಂದರು. ಆಗ ಶ್ರೀ ಪಿ. ನಟೇಶನರೆದ್ದು "ಇಡೀ ಮಂತ್ರಿಮಂಡಲವೇ ರಾಜಿನಾಮೆ ಕೊಟ್ಟಿದ್ದಿತು. ರಾಜಿಯಿತ್ತ ಒಬ್ಬ ಮಂತ್ರಿಯನ್ನು ಹೇಳಿಕೆ ಕೊಡಲು ಬಿಟ್ಟರೆ, ಉಳಿದವರಲ್ಲಿ ಪ್ರತಿಯೊಬ್ಬನೂ ಹಾಗೆ ಮಾಡಬಹುದು" ಎಂದರು. "ನಿಜಕ್ಕೂ" ಎಂದು ಅಧ್ಯಕ್ಷರಂದರೊಪ್ಪಿಗೆ ಸೂಚಿಸಿದರು. ಹೊಸಮಂತ್ರಿ ಸಮಿತಿ ರಚಿಸಲ್ಪಟ್ಟಿರುವಾಗ ರಾಜಿಕೊಟ್ಟ ಮಂತ್ರಿಯೊಬ್ಬನು ವ್ಯಕ್ತಿಶಃ ತನ್ನ ಹೇಳಿಕೆ ಕೊಡುವ ಅಗತ್ಯವಿಲ್ಲವೆಂಬುದೇ ತನ್ನ ಅಭಿಮತವೆಂದರು ಶ್ರೀ ನಟೇಶನ್. ಅದಕ್ಕುತ್ತರವಾಗಿ ಅಧ್ಯಕ್ಷರು ಪ್ರಕಾಶಂ ಮಂಡಲಿ ರಾಜಿಕೊಟ್ಟ ಮೇಲೆ ಶ್ರೀ ಪ್ರಕಾಶಮರು ಹೇಳಿಕೆಯಿತ್ತಿದ್ದರೆಂದರು. ಮತ್ತು ಶ್ರೀ ಅವಿನಾಶಲಿಂಗಂ ಚೆಟ್ಟಿಯಾರರನ್ನು ಭಾಷಣಮಾಡುವಂತೆ ಹೇಳಿದರು. ಶ್ರೀ ಚೆಟ್ಟಿಯಾರರು ತನ್ನ ಹೇಳಿಕೆಯನ್ನೋದುತ್ತಿದ್ದು ಮೇಲಿಂದ ಮೇಲೆ ಸಭೆಯ ಅಡ್ಡಮಾತುಗಳೇಳುತ್ತಿದ್ದುವು. ಶ್ರೀ ಸ್ವಾಮಿನಾಥನರು ಒಂದು 'ವಿಧಿ ಬಿಂದು'ವನ್ನೆತ್ತಿ "ಶ್ರೀ ಚೆಟ್ಟಿಯಾರರು ತನ್ನ ರಾಜೀನಾಮೆಯ ಕಾರಣಗಳನ್ನು ವಿವರಿಸುವರೆಂದು ನಾವು ನಿರೀಕ್ಷಿಸಿದ್ದರೆ, ಅವರು ವಿದ್ಯೆಯ ಕುರಿತು ಲೆಕ್ಚರ್ ಹೊಡೆಯುತ್ತಿದ್ದಾರೆ"ಎಂದರು. ಅವರಿಗೆ 'ಓರ್ಡರ್, ಓರ್ಡರ್' ಎಂದೂ ಮತ್ತೊಂದು ವಿಧಿಬಿಂದು ವನ್ನೆತ್ತಲು ಎದ್ದುನಿಂತ ಶ್ರೀ ಚೆನ್ನಾಕಾರಿಯಾರರ ಕಡೆಗೆ ದೃಷ್ಟಿಯನ್ನೇ ಹಾಕದೆಯೂ ಅಧ್ಯಕ್ಷರು ಶ್ರೀ ಚೆಟ್ಟಿಯಾರರ ಹೇಳಿಕೆಗೆ ಮೈಗಾವಲು ನಡಿಸಿ ಗುರಿಮುಟ್ಟಿಸಿದರು. ಅವರ ಭಾಷಣಾಂತ್ಯದಲ್ಲಿ, ಆ ಕುರಿತು ಚರ್ಚೆಗಾಸ್ಪದ ಕೊಡಬೇಕೆಂದು ಮಿ. ಅಬ್ದುಲ್ ಹಮೀದ್ ಖಾನ್ ಕೇಳಿಕೊಂಡರೂ ಅಧ್ಯಕ್ಷರೊಪ್ಪಲಿಲ್ಲ.

ಚೆಟ್ಟಿಯಾರ್, ಕೂರ್ಮಯ್ಯ

ಈ ಇಬ್ಬರು ಮಾಜೀ ಮಂತ್ರಿಗಳೂ ತಂತಮ್ಮ ಭಾಷಣದಲ್ಲಿ ತಾವು ಅಧಿಕಾರದಲ್ಲಿದ್ದಾಗ ಮಾಡಿದ್ದ ಕಾರ್ಯಗಳನ್ನೇ ಮುಖ್ಯವಾಗಿ ವಿವರಿಸಿದ್ದರು. ಹಳೇ ಮಂಡಲಿಯಲ್ಲಿದ್ದ ಏಳು ಮಂದಿ ಹೊಸ ಮಂಡಲಿಗೂ ಆರಿಸಲ್ಪಟ್ಟಿರುವಾಗ, ಉಳಿದ ನಾಲ್ವರು 'ಅಯೋಗ್ಯ'ರೆಂಬುದಕ್ಕಾಗಿ ಹಿಂದಿಡಲ್ಪಟ್ಟರೋ ಎಂಬ ಅನುಮಾನವಾರಲ್ಲೂ ಇರಬಾರದೆಂಬುದೇ ಅವರ ಹೇಳಿಕೆಗಳ ಮುಖ್ಯೋದ್ದೇಶವೆಂದು ತೋರುತ್ತದೆ. ಶ್ರೀ ಅವಿನಾಶಲಿಂಗಂ ಚೆಟ್ಟಿಯಾರರು 'ರಾಷ್ಟ್ರ ಪಿತನ ಶಿಕ್ಷಣ ನಿರ್ದೇಶಗಳನ್ನು ಕಾರ್ಯಗತಗೊಳಿಸುವ ಗುರಿಯಿಟ್ಟುಕೊಂಡು ತಾನು ಶಿಕ್ಷಣ ರಂಗದಲ್ಲಿ ಮಾಡಿದ್ದ ಸುಧಾರಣೆಗಳೆಲ್ಲವನ್ನೂ ನಿವೇದಿಸಿ ಕೊಂಡಿದ್ದರು. "ಯಾವುದೇ ವ್ಯಕ್ತಿ ಅಥವಾ ಪಂಗಡದ ಮೇಲೆ ನನಗಾವ ದುರ್ಭಾವನೆಯೂ ಇಲ್ಲ; ದೂರೂ ಇಲ್ಲ. ಅಧಿಕಾರ ಸ್ಥಾನವು ಜನತಾ ಸೇವೆಗೆ ಹೊಸ ಸಂದರ್ಭಗಳನ್ನೊದಗಿಸುತ್ತದೆಂಬುದು ನಿಜ; ಅಲ್ಲಿ ನಾನಿರಲಿ, ಬೇರೆ ಯಾರೇ ಇರಲಿ, ಅದು ಅಗಣ್ಯ. ನಾವೆಂದರೆ ಅಖಿಲ ರಾಷ್ಟ್ರ ಜೀವನದಲ್ಲಿ ಸಮುದ್ರದಲ್ಲಿ ಹನಿಗಳಿದ್ದಂತೆ. ಸ್ವತಂತ್ರ ಭಾರತದ ಸುಯೋಗ್ಯ ನಾಗರಿಕರಾಗುವಂತಹ ಶಿಕ್ಷಣವನ್ನು ಮಕ್ಕಳಿಗೊದಗಿಸುವುದು ಹೇಗೆಂಬುದೊಂದೇ ಇಲ್ಲಿ ಮುಖ್ಯವಾದುದು"ಎಂದರು.

ಜಿಲ್ಲೆಯಲ್ಲಿ ಮಾನ್ಯ ಕೆ. ಸಂತಾನಂ ರವರ ಕಾರ್ಯಕ್ರಮ

ಭಾರತ ಸರಕಾರದ ರೈಲು ಮತ್ತು ಟ್ರಾನ್ಸ್‌ಪೋರ್ಟ್ ಉಪಸಚಿವರಾದ ಶ್ರೀ ಕೆ. ಸಂತಾನಂರವರು ತಾ. 21ನೇ ಗುರುವಾರ ಬೆಳಿಗ್ಗೆ 8-55 ಗಂಟೆಗೆ ರೈಲಿನಲ್ಲಿ ಮಂಗಳೂರಿಗೆ ಆಗಮಿಸಿ ಮಿರಾಜ್‌ಕಾರ್ ಬಂಗ್ಲೆಗೆ ಬಂದು ವಿಶ್ರಾಂತಿ. 10-15 ಗಂಟೆಗೆ ಸಿ.ಪಿ.ಸಿ.ಯ ಸಭಾಭವನದಲ್ಲಿ ಪತ್ರಿಕೋದ್ಯೋಗಿಗಳಿಂದ ಸ್ವಾಗತ. ಅನಂತರ ಉಪಾಹಾರ ಮತ್ತು ವಿಶ್ರಾಂತಿ. ಮಧ್ಯಾಹ್ನ 1 ಗಂಟೆಯಿಂದ 3-30 ತನಕ ಮಿರಾಜ್‌ಕಾರ್ ಬಂಗ್ಲೆಯಲ್ಲಿ ಭೇಟಿ. 4 ಗಂಟೆಗೆ ಮರೋಳಿಯಲ್ಲಿ ಕೆನರಾ ವರ್ಕ್‌ಶೋಪಿನ ಕಾರ್ಖಾನೆ ಮತ್ತು ಸರ್ವೀಸ್ ಬಾಸಿನ ಉದ್ಘಾಟನೆ. 5-30ಕ್ಕೆ ಬಂದರ ಸಂದರ್ಶನ, 7ಕ್ಕೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆ. ರಾತ್ರಿ ಶ್ರೀ ವಿ. ಎಸ್. ಕುಡ್ವರಿಂದ ಭೋಜನ. ತಾ 22ಕ್ಕೆ ಕರಾವಳಿ ಮಾರ್ಗವಾಗಿ 8 ಗಂಟೆಗೆ ಮೂಲ್ಕಿ, 8-45ಕ್ಕೆ ಪಡುಬಿದ್ರಿ, ಕಟಪಾಡಿಗಾಗಿ 10 ಗಂಟೆಗೆ ಉಡುಪಿಗೆ ಆಗಮನ, ಮತ್ತು ಅಲ್ಲಿಯ ಕಾರ್ಯಕ್ರಮ ತೀರಿಸಿ 2½ ಗಂಟೆಗೆ ಮಾಳ್ವೆ ಬಂದರ ಸಂದರ್ಶಿಸಿ ಸುಬ್ಬರಾಯನ್ ಮಾರ್ಗವಾಗಿ ಕಲ್ಯಾಣಪುರಕ್ಕೆ ತೆರಳಿ 3-15ಕ್ಕೆ ಕಾರ್ಕಳಕ್ಕೆ ಪ್ರಯಾಣ. ಅಲ್ಲಿ ಉಪಾಹಾರ ಮುಗಿಸಿ 4-30ಕ್ಕೆ ಮೂಡಬಿದ್ರೆಗೆ ಆಗಮನ, ಅಲ್ಲಿಂದ 5-15ಕ್ಕೆ ಹೊರಟು ಮಂಗಳೂರಿಗೆ ಬಂದು ವಿಶ್ರಾಂತಿ, ರಾತ್ರಿ 7 ರಿಂದ ಕೆನರಾ ಚೇಂಬರ್ ಅಫ್ ಕಾಮರ್ಸಿನ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸುವರು.

ತಾ 23ನೇ ದಿನ ಬೆಳಿಗ್ಗೆ 7 ಗಂಟೆಗೆ ಮಂಗಳೂರಿಂದ ಪಾಣೆಮಂಗಳೂರಿಗೆ ಹೋಗಿ ಸ್ವಾಗತ ಪಡೆದು 8-30 ಗಂಟೆಗೆ ಪುತ್ತೂರಿಗೆ ತೆರಳಿ ಸತ್ಕಾರ. ಅಲ್ಲಿಂದ ಮಡಿಕೇರಿಗೆ ಪ್ರಯಾಣ.

F/o ಫ್ಲಾಯಿಂಗ್ ಆಫೀಸರ್ ಶ್ರೀ. ವಿ. ಪ್ರಭಾಕರ ಹೆಗ್ಡೆ—ಇವರನ್ನು ಇಂಡಿಯಾ ಸರಕಾರವು ತನ್ನ ವೈಮಾನಿಕ ತರಬೇತಿಯ ಹೊಸ ಯೋಜನೆಯ ಸಂಬಂಧ ಇಂಗ್ಲೆಂಡಿನಲ್ಲಿ ವಿಶೇಷ ಟ್ರೈನಿಂಗ್ ಪಡೆಯುವ ಬಗ್ಗೆ ಆರಿಸಿರುವುದರಿಂದ ಶ್ರೀ ಹೆಗ್ಡೆಯವರು ಇದೇ ತಾ 20ಕ್ಕೆ ಇಂಗ್ಲೆಂಡಿಗೆ ತೆರಳುವರೆಂದೂ ಗೊತ್ತಾಗಿದೆ. ಇಂಡಿಯಾದಿಂದ ಈ ಸ್ಥಾನಕ್ಕೆ ಆರಿಸಲ್ಪಟ್ಟ ಕೆಲವೇ ಮಂದಿಯಲ್ಲಿ ಇವರು ಕರ್ನಾಟಕ ಮತ್ತು ಮದ್ರಾಸ್ ಪ್ರಾಂತ್ಯದಲ್ಲಿ ಮೊದಲಿಗರು. ಇವರು ದಕ್ಷಿಣ ಕನ್ನಡ ಜಿಲ್ಲೆಯ [illegible] ಶ್ರೀ [illegible] ಅಳಿಯ [illegible].

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮೈಸೂರಲ್ಲಿ ವರ್ಷಕ್ಕೊಮ್ಮೆ ದಸರಾ

ಉಡುಪಿಯಲ್ಲಿ ಎರಡು ವರುಷಕ್ಕೊಮ್ಮೆ ಪರ್ಯಾಯ.

ಆದರೆ ಅನಿರೀಕ್ಷಿತವಾಗಿ

ತಾ. 23-4-49ನೇ ಶನಿವಾರ ಉಡುಪಿಯಲ್ಲೊಂದು

ವಿಶೇಷ ಜಾತ್ರೆ.

ದಸರಾ (ಕನ್ನಡದಲ್ಲಿ)

ಶ್ರೀಧರ್, ಸಾಮಾಯ್ಯ, ಆರಾಧ್ಯ, ಸರಸ್ವತಿ, ನಗೇಶ

ಅಲ್ಲದೆ ನಮ್ಮೂರ ನಟ ನಟಿಯರ ಸಹಕಾರ

ಬರುವ ಚಿತ್ರ—

ಸಿಟಿಡೆಲ್‌ನವರ:- ಜ್ಞಾನ ಸುಂದರಿ

ಉಡುಪಿ

ಮುನ್ಸಿಪಲ್ ಕೌನ್ಸಿಲಿನ ಸಭೆಯು ತಾ 16ರಲ್ಲಿ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ರಸ್ತೆಗಳಿಗೆ ಕ್ರೀಡಾಂಗಣಗಳೇ ಮೊದಲಾದುವುಗಳಿಗೆ ಮಹಾತ್ಮಾಗಾಂಧಿಯವರ ಹೆಸರನ್ನಿಡಬೇಕಾಗಿ ಸೂಚಿಸಿದ ಸ-ಕಾರಿ ಆರ್ಡರನ್ನು ರಿಕಾರ್ಡು ಮಾಡಲಾಯಿತು. ಬ್ರಹ್ಮಗಿರಿಯಲ್ಲೊಂದು ಸಂತೆಮಾರ್ಕೆಟನ್ನೇರ್ಪಡಿಸುವರೆ ಮೂಡನಿಡಂಬೂರು ಗ್ರಾಮದ ಸರ್ವೆ ನಂಬ್ರ 79,18 ಸ್ಥಳವನ್ನು ಮುನಿಸಿಪಾಲಿಟಿಗೆ ಕೊಡುವಂತೆ ಜಿಲ್ಲಾ ಕಲೆಕ್ಟರನ್ನು ಕೇಳಿಕೊಳ್ಳಬೇಕೆಂದಾಯಿತು. ಮೆಟರ್ನಿಟಿ ಕೇಂದ್ರದಲ್ಲಿ ಒಂದು ವರ್ಷದೊಳಗಿನ ಮಕ್ಕಳಿಗೆ ಧರ್ಮಾರ್ಥ ಹಾಲನ್ನೀಯುವರೆ ರೂಪಾಯಿ 450 ಸ್ಯಾಂಕ್ಷನ್ ಮಾಡಲಾಯಿತು. ಸೂಳ್ಳಿಕಟ್ಟ ನಿರ್ಮಾಣಕ್ಕಾಗಿ ರೂಪಾಯಿ 1500 ಸ್ಯಾಂಕ್ಷನ್ ಮಾಡಲಾಯಿತು. ಉಡುಪಿಯಲ್ಲಿ ಸ್ಥಾಪಿಸಬೇಕೆಂದಿರುವ ಕಾಲೇಜು ಕಟ್ಟಡಗಳನ್ನು ಮಾಡುವ ಕಾಲೇಜು ಕಮಿಟಿಯು ಅಪೇಕ್ಷಿಸಿದಲ್ಲಿ ತಾತ್ಕಾಲಿಕವಾಗಿ ಮುನಿಸಿಪಲ್ ಹೈಸ್ಕೂಲ್ ಕಟ್ಟಡವನ್ನು ಕಾಲೇಜು ಕಮಿಟಿಯು ಉಪಯೋಗಿಸಲು ನಗರಸಭೆಯು ತಯಾರಿದೆಯೆಂದೂ, ಎಲ್ಲಾ ವಿಧದ ಸಹಕಾರವನ್ನೀಯಲು ಕೌನ್ಸಿಲು ಸಿದ್ಧವಿದೆಯೆಂದೂ ಕೌನ್ಸಿಲಿನ ಒಮ್ಮತದ ನಿರ್ಧಾರವಾಯಿತು. ರಸ್ತೆ, ಬಸ್ ದುರಸ್ತಿ ಬಗ್ಗೆ ವೆಚ್ಚಗಳನ್ನು ಸ್ಯಾಂಕ್ಷನ್ ಮಾಡಲಾಯಿತು.

ಕ್ರಿಶ್ಚಿಯನ್ ಹೈಸ್ಕೂಲಿನ ವರ್ಧಂತಿ ಮತ್ತು ಸುವರ್ಣೋತ್ಸವಗಳು:— ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ವರ್ಧಂತಿಯು ತಾ 18ರಲ್ಲಿ ಸಂಜೆ ಮುನಿಸಿಪಲ್ ಕಮಿಶನರ್ ಶ್ರೀ ಬಾಲಗಂಗಾಧರನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾ ಪ್ರಾರ್ಥನೆ ಮಾಡಿದ ಬಳಿಕ ಶಾಲಾ ಹೆಡ್ಮಾಸ್ಟರ್ ಶ್ರೀ ಎ ಎಸ್. ಕಾರಟರು ಅಭಿವೃದ್ಧಿ ಸೂಚಕ ಶಾಲಾ ವರದಿಯನ್ನೋದಿದರು. ವರದಿಯಲ್ಲಿ ಶಾಲೆಯೊಡನೆ ಜನತೆಯ ಸಹಕಾರ ಪ್ರೋತ್ಸಾಹಗಳನ್ನು ಅಪೇಕ್ಷಿಸಲಾಗಿತ್ತು. ಶ್ರೀ. ಎ. ರಾಮಮೋಹನರಾಯರು ಶಾಲಾ ಸ್ವಸ್ತಿವಾಚನ ಮಾಡಿದರು. ಬಳಿಕ ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯೂ ಆಯಿತು. ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಶಾಲೆಯ ಅಭಿವೃದ್ಧಿಯನ್ನು ಕೊಂಡಾಡಿದರು, ಸದ್ಯದ ವಿದ್ಯಾಇಲಾಖೆಯ ನೂತನ ಯೋಜನೆಯನ್ನು ವಿವರಿಸಿ ಅದು ಸರ್ವಮಾನ್ಯವಾಗುವುದು ಎಂದು ಹೇಳಿದರು. ಶಾಲೆಯು ಮುಂದಕ್ಕೂ ಸರ್ವಾಂಗ ವೃದ್ಧಿಗೆ ಒಳಗಾಗಲೆಂದೂ ಉಡುಪಿಯ ಜನತೆಯು ಸಹಕಾರವನ್ನೀಯಲೆಂದೂ ಬಯಸಿದರು. ನಂತರ ಶಾಲಾಮಕ್ಕಳು 'ಪರಿವರ್ತನ' ಎಂಬ ನಾಟಕವನ್ನು ಅಭಿನಯಿಸಿದರು.

1898ರಲ್ಲಿ ಸ್ಥಾಪಿತವಾದ ಈ ಹೈಸ್ಕೂಲಿನ ಸುವರ್ಣೋತ್ಸವವು ತಾ 19ರಿಂದ 22ರ ತನಕ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು. ಸ್ವಾರಂಭದ ದಿನ (ತಾ 19)ರಾತ್ರಿಯಲ್ಲಿ ಸಜ್ಜುಗೊಳಿಸಲ್ಪಟ್ಟ ವಿದ್ಯಾ ವಸ್ತು ಪ್ರದರ್ಶನವು ಮುನ್ಸಿಪಲ್ ಕಮಿಶನರ್ ಶ್ರೀ ಬಾಲಗಂಗಾಧರನವರಿಂದ ಉದ್ಘಾಟಿಸಲ್ಪಟ್ಟಿತು. ಶಾಲಾ ಮುಖ್ಯಾಧ್ಯಾಪಕ ಶ್ರೀ. ಎ. ಎಸ್. ಕಾರಟರು ಸ್ವಾಗತಭಾಷಣ ಮಾಡಿ ವಿದ್ಯಾ ವಸ್ತು ಪ್ರದರ್ಶನದ ಮಹತ್ವವನ್ನು ವಿವರಿಸಿದರು. ರಾತ್ರಿ ಶಾಲಾ ಬಾಲಕರಿಂದ 'ಬಜದ್ದೂರ್ ಗಂಡ' ನಾಟಕಾಭಿನಯ ನಡೆಯಿತು.

ತಾ 20ರಲ್ಲಿ ಹಳೆಯ ವಿದ್ಯಾರ್ಥಿಗಳ ಪಂದ್ಯಾಟಗಳೂ ಸಭೆ, ನಾಟಕಾಭಿನಯವೂ ನಡೆಯಿತು. (ಉಳಿದ ದಿನಗಳ ವಿವರ ಬರುವ ವಾರ)

ಶ್ರೀ ವಾಣಿ ಸಿನೆಮಾ ಥಿಯೇಟರಿನ ಉದ್ಘಾಟನೆ— ಶ್ರೀ ವಾಣಿ ಲಿಮಿಟೆಡ್, ಉಡುಪಿ ಇವರು ಪಳಕಾಡಿನಲ್ಲಿ ನಿರ್ಮಿಸಿರುವ 'ಶ್ರೀ ವಾಣಿ ಸಿನೆಮಾ ಥಿಯೇಟರಿ'ನ ಉದ್ಘಾಟನೆಯು ಇದೇ ತಾ. 18ನೇ ಅಪರಾಹ್ನ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ರಾವ್‌ಸಾಹೇಬ್ ಬಿ. ಸಿ. ಜೋನ್ಸ್, ಇವರಿಂದ ಸಂಭ್ರಮಪೂರ್ವಕ ನಡೆಯಿತು. ಪೂಜೆ, ಪ್ರಾರ್ಥನೆಗಳಾದ ಮೇಲೆ ಸಂಸ್ಥೆಯ ಚೆಯರ್‌ಮೆನ್ ವಕೀಲ್ ಮಿ। ಜಿ. ಸಿ. ರೇಗೊ, ಅವರು ಸ್ವಾಗತ ಭಾಷಣವಿತ್ತು ಈ ಸಂಚಾರೀ ಚಿತ್ರ ಪ್ರದರ್ಶಕ ಸಂಸ್ಥೆಯ ಕಾರ್ಯಕಲಾಪಗಳನ್ನು ವಿವರಿಸಿದರು. ಶ್ರೀ। ಆರ್. ಆರ್. ಕುಂಜೂರರ ಶುಭಾಶಂಸೆಯ ಭಾಷಣವಾಯಿತು. ರಾವ್ ಸಾಹೇಬ್ ಜೋನ್ಸ್, ಅವರು ಉದ್ಘಾಟನಾ ಭಾಷಣವೀಯುತ್ತ ಈ ಥಿಯೇಟರಿನ ಉಚ್ಚ ವರ್ಗದ ಉಪಕರಣ, ಸಲಕರಣೆಗಳನ್ನು ಪ್ರಶಂಸಿಸಿ, ಸಾರ್ವಜನಿಕರು ಪ್ರೋತ್ಸಾಹಿಸಬೇಕೆಂದು ಕೋರಿದರು. ಆ ಮೇಲೆ 'ಭಕ್ತ ಜನಾ' ಚಿತ್ರ ಪ್ರದರ್ಶಿಸಲ್ಪಟ್ಟಿತು.

ಕೆಮ್ಮಣ್ಣು:— ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಸಂಬಂಧವಾಗಿ ಚೈತ್ರ ಶುದ್ಧ ಪಾಡ್ಯದಿಂದ ಚತುರ್ದಶಿಯವರೆಗಿನ ಹದಿನಾಲ್ಕು ದಿನಗಳಲ್ಲಿ ಬ್ರಹ್ಮಕಲಶಾಧಿವಾಸ ಮುಂತಾದ ವಿವಿಧೋತ್ಸವ ಕಾರ್ಯಕ್ರಮಗಳು ಸಂಭ್ರಮದಿಂದ ಜರಗಿದುವು

ಯಾರಿಗಾಗಿ ಈ ಸೀರೆಯನ್ನುಡಲಿ?

"ಏನು ಪೆರಿಯ ತ್ತಾರವಪ್ಪಾ ಗಂಡು ಬೀರಿಗಳು"?

"ಒಬ್ಬಳಿಗಿಂತ ಒಬ್ಬಳು ಹೆಚ್ಚು"

ಗಿರಿಬಾಲೆ ಯವರ ಪುಣ್ಯಫಲ ವನ್ನು ಓದಿರಿ.

ಅಂಥ ಬಾಯಿ ಕಟ್ಟಿದರೂ ಜನರ ಬಾಯಿ ಕಟ್ಟಲು ಸಾಧ್ಯವಿಲ್ಲ ಎಂಬುದನ್ನು 'ಅಂತರಂಗ'ದ ಈ ಪ್ರಕಟಣೆಯಿಂದ ತಿಳಿಯಿರಿ.

ಜನರೆಲ್ಲರೂ ಸುಖದ ದಾರಿಯನ್ನು ಹುಡುಕುತ್ತಾರೆ.

ಅಂಥವರಿಗಾಗಿ **ಸುಖದ ದಾರಿ** ಪ್ರಕಟವಾಗಿದೆ

'ಅಂತರಂಗ' ದಲ್ಲಿ ಅರಳಿದ ಪುಸ್ತಕಗಳು

ಗರ್ಳಾರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ ಅಥವಾ ರಝಾಕಾರಸುರಸಂಹಾರ	0	3	0
ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ	0	4	0
ಗಾಡಿಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ ನೀಳ್ಗತೆ) ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ)	0	3	0
ನನ್ನ ಹೆಂಡತಿ(ಕತೆಗಳು)ಮಾಳಗೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ (ನೀಳ್ಗತೆ) ಗಿರಿಬಾಲೆ	0	3	0
ಸುಖದದಾರಿ (ಅನುಭವ) ಕೆ. ಎ. ದೇವದಾಸ	0	3	0
ಸುಕಾಂತ (ಅನುವಾದಿತ ಕತೆ) ವೀ. ಜಿ- ಹಿತ್ತಲಮನಿ	0	3	0
ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ	0	3	0

ಅಂತರಂಗ ಕಾರ್ಯಾಲಯ, ಉಡುಪಿ.

ವಿಜ್ಞಾಪನೆ

'ನವಯುಗ' ಮತ್ತು 'ಅಂತರಂಗ' ವಾರಪತ್ರಿಕೆಗಳ ಪ್ರತಿನಿಧಿಗಳಾಗಿ ಶ್ರೀ ಕೆ. ಜಗನ್ನಾಥ ಸೆಟ್ಟಿ ಬಿ. ಎ. ಎಲ್. ಟಿ. ಯಲ್ಲಿಯೂ ಶ್ರೀ ಕೆ. ಆನಂದ ಸೆಟ್ಟಿಯರು ಉಡುಪಿ ತಾಲೂಕಿನಲ್ಲಿಯೂ ಸಂಚರಿಸುತ್ತಿದ್ದಾರೆ. ಮಹಾಜನರು ಚಂದಾದಾರರಾಗಿ, ಜಾಹೀರಾತು ಇತರರನ್ನೂ ಸೇರಿಸಿ ಅವರಿಗೆ ಸಕಲ ಸಹಕಾರವನ್ನು ಕೊಡುವಂತೆ ವಿನಂತಿಸುತ್ತೇವೆ.

ವಿಶಿಷ್ಟ ನಗರಸಭೆಯೊಂದು ತಾ 19ರಲ್ಲಿ ಚೆಯರ್ ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಇದೇ ತಾ 22ರಲ್ಲಿ ಉಡುಪಿಗೆ ಬರಲಿರುವ ಕೇಂದ್ರ ಸರಕಾರದ ರೈಲ್ವೆ ಇಲಾಖಾ ಮಂತ್ರಿ ಶ್ರೀ ಕೆ. ಸಂತಾನಮ್ ಅವರಿಗೆ ನಗರ ಸಭೆಯ ಮಾನಪತ್ರ ವೀಯಬೇಕೆಂದು ನಿರ್ಧಾರವಾಯಿತು. ಮಾನ್ಯ ಮಂತ್ರಿಗಳು ಅಂದು ಬೆಳಿಗ್ಗೆ ಉಡುಪಿಗೆ ಬಂದು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆತಿಥ್ಯವನ್ನು ಸ್ವೀಕರಿಸಿ, ಮಲ್ಪೆ ಬಂದರವನ್ನು ಸಂದರ್ಶಿಸುವರು. ಮಧ್ಯಾಹ್ನ ಭೋಜನವಾದ ಬಳಿಕ ನಗರ ಸಭೆಯ ಮಾನಪತ್ರವನ್ನು ಸ್ವೀಕರಿಸಿ ಕಾರ್ಕಳ, ಮೂಡುಬಿದ್ರೆ ಮಾರ್ಗವಾಗಿ ಮಂಗಳೂರಿಗೆ ತೆರಳುವರು.

ದಕ್ಷಿಣಕನ್ನಡ ಜಿಲ್ಲಾ ರಾಜಕೀಯ ಪರಿಷತ್ತು

ಪಾಣೆಮಂಗಳೂರಲ್ಲಿ ತಾ. ೩೦-೪-೪೯ ತಾ ೧ ಮತ್ತು ೨-೫-೪೯ರಲ್ಲಿ— ಬಾಬು ರಾಜೇಂದ್ರಪ್ರಸಾದ್, ರಾಷ್ಟ್ರಪತಿ ಡಾ। ಪಟ್ಟಾಭಿ, ಶ್ರೀಮತಿ ಸುಚೇತ ಕೃಪಲಾನಿ ಮಾನ್ಯಮಂತ್ರಿ ಶ್ರೀ. ಗೋಪಾಲರೆಡ್ಡಿ, ಮಾನ್ಯ ಮೈಸೂರು ಮಂತ್ರಿ ಶ್ರೀ ಕೆ। ಸಿ। ರೆಡ್ಡಿ, ಮತ್ತು ಮದ್ರಾಸಿನ ಪ್ರಧಾನಮಂತ್ರಿ ಶ್ರೀ ಕುಮಾರಸ್ವಾಮಿ ರಾಜರೇ ಮೊದಲಾದವರು ಅಧ್ಯಕ್ಷರು ಉದ್ಘಾಟಕರಾಗಿ ಆಮಂತ್ರಿಸಲ್ಪಟ್ಟಿದ್ದಾರೆ.

ಕೃಷಿಕಿಥಾಯಕ ಕಾರ್ಯಕರ್ತರ ಮತ್ತು ರಾಜಕೀಯ ಸಂಸ್ಥೆಗಳ ಪರಿಷತ್ತುಗಳೂ ಈ ಸಂದರ್ಭದಲ್ಲಿ ನಡೆಯಲಿವೆ. ಮಾತ್ರವಲ್ಲದೆ ಕೃಷಿ ಮತ್ತು ಕೈಗಾರಿಕಾ ಪ್ರದರ್ಶನದ ಏರ್ಪಾಡು ನಡದಿದೆ.

ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸುವವರು ಶ್ರೀ। ಯಚ್, ನಾರಾಯಣ ರಾವ್, ಜಿಲ್ಲಾ ಕೊಂಗ್ರೆಸ್ ಕಮಿಟಿ ಆಫೀಸು ಮಂಗಳೂರು, ಇವರಿಗೆ ಬರೆಕೊಳ್ಳಬಹುದು.

ಕೊಂಗ್ರೆಸ್ಸಿನ ಅಧೀನ ಕಲ್ಪಿಸುವ ಮತ್ತು ಮಾಡಲಿಚ್ಛಿಸುವ ಜಿಲ್ಲೆಯ ಕೃಷಿಕ ಸಂಘಗಳವರೂ ತಮ್ಮ ಪ್ರತಿನಿಧಿಗಳ ಹೆಸರುಗಳನ್ನು ಕಾಂಗ್ರೆಸ್ ಕಮಿಟಿಗೆ ಕಳುಹಿಸಬೇಕು. ಪರಿಷತ್ತಿನಲ್ಲಿ ಭಾಗವಹಿಸಲೆಳಸುವ ರಾಜಕೀಯ ಸಂಸ್ಥೆಗಳೂ ಕಾಂಗ್ರೆಸ್ ಕಾರ್ಯಕರ್ತರೂ ತಮ್ಮ ಹೆಸರುಗಳನ್ನು ಮುಂಚಿತವಾಗಿ ಜಿಲ್ಲಾ ಕೊಂಗ್ರೆಸ್ ಕಮಿಟಿಗೆ ತಿಳಿಸಬೇಕು.

ಸ್ವಾಗತ ಸಮಿತಿ, ಜಿಲ್ಲಾ ರಾಜಕೀಯ ಪರಿಷತ್ತು, ಪಾಣೆಮಂಗಳೂರು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಮಂಗಳೂರು

ಏಣಗುಡ್ಡೆ— ತಾ 17-4-49ನೇ ಆದಿತ್ಯವಾರ ಏಣಗುಡ್ಡೆ ಶ್ರೀ ದುರ್ಗಾಪರಮೇಶ್ವರಿ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವ ಜರಗಿತು. ಉಡುಪಿ ರೇಂಜ್ ಶಾಲೆಗಳ ಪರೀಕ್ಷಾ ಕರ್ತರಾದ ಶ್ರೀ. ಟಿ. ಲಕ್ಷ್ಮೀನಾರಾಯಣ ರಾವ್ ಬಿ. ಎ. ಎಲ್. ಟಿ. ಯವರು ಅಧ್ಯಕ್ಷರಾಗಿದ್ದರು. ಶಾಲಾ ಬಾಲಕರಿಂದ 'ಇತ್ತಿದ ಕೊಟಬೆನ್ನಯ' ಎಂಬ ತುಳು ನಾಟಕವೂ, ಬಾಲಕಿಯರಿಂದ 'ರುಕ್ಮಾಂಗದ' ಸಂಗೀತ ನಾಟಕವೂ ಹಳೇ ವಿದ್ಯಾರ್ಥಿಗಳಿಂದ 'ಕಾಲದ ಹಿಮೆ' ಎಂಬ ತುಳು ನಾಟಕವೂ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟು ನಂತರ ಶಾಲಾ ವ್ಯವಸ್ಥಾಪಕರು ಧನ್ಯವಾದವನ್ನರ್ಪಿಸ ಜನಗಣಮನ ಹಾಡಿ ಸಭೆ ಮುಕ್ತಾಯವಾಯಿತು.

ಕುಂದಾಪುರ:— ತಾಲೂಕಿನ ರೈತ ಮಹಾಸಭೆಯೊಂದು ತಾ 30ನೇ ಶನಿವಾರ ಸೈಂಟ್‌ಮೆರಿಸ್ ಹಾ। ಎ। ಶಾಲೆಯಲ್ಲಿ ಜರಗಲಿರುವುದು.

ಕಲ್ಲಮುಂಡ್ಕೂರು— ಅಕ್ಕಿ ರಿಕ್ವಿಜಿಶನ ನೆವನದಿಂದ ಬಡರೈತರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ ಎಂದೂ ಇದರಿಂದ ರೈತರು ತುಂಬ ಕಂಗೆಟ್ಟಿರುವರೆಂದೂ ಬಡ ರೈತರು ಬರೆಯುತ್ತಾರೆ.

ಮಂಗಳೂರು

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ನೂತನ ಕಟ್ಟಡದ ಉದ್ಘಾಟನೆ

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಆಶ್ರಯದಲ್ಲಿ ನಡೆಯಿಸಲ್ಪಡುವ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಇದೇ ತಾ 13ರಲ್ಲು ಸಂಜೆ ಲಾಲ್ ಬಾಗಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈಯವರಿಂದ ನೆರವೇರಿಸಲ್ಪಟ್ಟಿತು.

ಬಾಲಿಕೆಯರಿಂದ ಪ್ರಾರ್ಥನೆಯಾದ ಬಳಿಕ ಸಂಘದ ಅಧ್ಯಕ್ಷರಾದ ರಾ। ಬ। ಕೆ. ಟಿ. ಆಳ್ವರು ಸಂಘದ ಕಾರ್ಯಕಲಾಪಗಳನ್ನು ಸವಿಸ್ತಾರವಾಗಿ ಹೇಳಿದರು. ಸಂಘವು 1907-1908ರಲ್ಲಿ ಹಲವಾರು ಉದ್ದೇಶಗಳ ಸಫಲತೆಗಾಗಿ ಸ್ಥಾಪಿಸಲ್ಪಟ್ಟಿತು. ಈ ಸಂಘವು ನಾಡವ ವಿದ್ಯಾರ್ಥಿಗಳ ಹಿತಚಿಂತನೆಗಾಗಿಯೂ ವಿದ್ಯಾರ್ಥಿಗಳಿಗೆ ಉಳಕೊಳ್ಳಲು ವಸತಿ ಗೃಹ ಮೊದಲಾದ ಸೌಕರ್ಯಗಳನ್ನು ಒದಗಿಸಿಕೊಡುವ ಉದ್ದೇಶದಿಂದಲೂ 1908ರಲ್ಲಿ ಒಂದು ವಿದ್ಯಾರ್ಥಿ ವಸತಿಗೃಹದ ಕಾರ್ಯವನ್ನು ಕೈಗೊಳ್ಳಲಾಯಿತು. ಕಂಗಲಪಾಡಿಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಗೃಹವೆಂಬ ಹೊಸ್ಟೆಲನ್ನು ಸ್ಥಾಪಿಸಿತು. ಇದೇ ರೀತಿಯಲ್ಲಿ ಜಿಲ್ಲೆಯ ಕಾಸರಗೋಡು ತಾಲೂಕು ಹೊರತು ಇತರ ತಾಲೂಕು ಕೇಂದ್ರಗಳಲ್ಲಿ ಒಂದೊಂದು ವಸತಿಗೃಹ ಸ್ಥಾಪಿಸಲಾಯಿತು. ಸಂಘದ ಕಡೆಯಿಂದ ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಸುಮಾರು 13,000|- ರೂಪಾಯಿಗಳಷ್ಟು ಸಹಾಯಧನ ಕೊಡಲ್ಪಟ್ಟಿದೆ. 1941ನೆ ಇಸವಿಯಲ್ಲಿ ವಿದ್ಯಾರ್ಥಿನಿಯರ ಸೌಕರ್ಯಕ್ಕಾಗಿ ಒಂದು ವಿದ್ಯಾರ್ಥಿನಿ ಭವನವನ್ನು ಸ್ಥಾಪಿಸುವ ಕಾರ್ಯವನ್ನು ಕೈಗೊಂಡು ಅದಕ್ಕಾಗಿ ಧನಸಹಾಯವೆತ್ತಲಾರಂಭಿಸಿತು. ಮಾನ್ಯ ಸರಕಾರವು ಲಾಲ್‌ಬಾಗಿನಲ್ಲಿಯ ನಾಲ್ಕು ಎಕ್ರೆ ಸ್ಥಳವನ್ನು ಕಟ್ಟಡಕ್ಕಾಗಿ ಬಿಟ್ಟುಕೊಟ್ಟಿತು. ಇದರಲ್ಲಿ ಎರಡು ಎಕ್ರೆ ಸ್ಥಳವು ಧರ್ಮಾರ್ಥವಾಗಿಯೂ ಉಳಿದ ಎರಡು ಎಕ್ರೆ ಸ್ಥಳವು ಎಕ್ರೆಗೆ ಎರಡು ಸಾವಿರದಂತೆ ಕ್ರಯದ ಮೇಲೆಯೂ ದೊರೆಯಿತು. ಈ ಬಗ್ಗೆ ಸಂಘವು ಸರಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸುವುದು. ವಿದ್ಯಾರ್ಥಿನಿ ಭವನದ ಶಂಕು ಸ್ಥಾಪನೆಯು ತಾ|18-12-47 ರಲ್ಲಿ ಲಿವಿನ್ಸ್ ಬೋರ್ಡು ಸದಸ್ಯರಾದ ಶ್ರೀ ವಿ. ಎಸ್. ಕುಡ್ವರಿಂದ ನಡೆಸಲ್ಪಟ್ಟಿತು. ಹಲವರು ಸಹಾಯವಿತ್ತ ಸಾಧಾರಣ ಒಂದು ಲಕ್ಷ ರೂಪಾಯಿ ಈಗಾಗಲೇ ಖರ್ಚುಮಾಡಲ್ಪಟ್ಟಿದೆ. ಕಟ್ಟಡವು ಸಂಪೂರ್ಣವಾಗಬೇಕಾದರೆ ಇನ್ನು ಒಂದು ಲಕ್ಷ ರೂಪಾಯಿಗಳಷ್ಟು ಬೇಕಾಗಿರುವುದರಿಂದ ಮಹಾಜನರು ಉದಾರ ಮನಸ್ಸಿನಿಂದ ಸಹಾಯ ಮಾಡಬೇಕಾಗಿದೆ ಎಂಬುದೇ ರಾ। ಬ। ಆಳ್ವರ ಭಾಷಣದ ತಿರುಳು.

ಶ್ರೀ ರಾಮಕೃಷ್ಣ ಮಠದ ಶ್ರೀ ಸ್ವಾಮಿ ನಿರ್ಮಲಾನಂದಜೀಯವರು ಸಂಸ್ಥೆಯನ್ನು ಆಶೀರ್ವದಿಸುತ್ತ ಈ ಸಂಘಕ್ಕೆ ಜನತೆಯ ಉದಾರದಾನಗಳು ಇನ್ನೂ ಹೆಚ್ಚಾಗಿ ಬರುವಂತಾಗಲೆಂದು ಪ್ರಾರ್ಥಿಸಿದರು. ರಾ। ಸಾ। ರಂಗನಾಥ ಪೂಂಜರು ಶ್ರೀಗಳಾದ ಎ. ಬಿ. ಶೆಟ್ಟಿ, ರೆ। ಫಾ। ಜೆ. ಎ. ಬಿ ಕ್ಯೊಯ್ಲೊ, ಡಾ। ಕೆ. ಎಮ್. ರೈ, ಕೆ. ಸುಬ್ಬಯ್ಯ ಶೆಟ್ಟಿ, ಎಸ್. ಅಂತಣ್ಣ ಶೆಟ್ಟಿ, ಮೊದಲಾದವರಿಂದ ಬಂದ ಶುಭಸಂದೇಶಗಳನ್ನು ಓದಿದರು.

ಈ ವಿದ್ಯಾರ್ಥಿನಿ ಭವನದಲ್ಲಿದ್ದುಕೊಂಡು ವಿದ್ಯಾಭ್ಯಾಸಂಗಮಾಡಿ ಹೊರಪ್ರಯಾಣ ಬೆಳೆಸಲಿರುವ ವಿದ್ಯಾರ್ಥಿನಿಯರು ಈ ಸಂಸ್ಥೆಗೂ, ಸಂಘಕ್ಕೂ ಶಾಶ್ವತವಾದ ಕೀರ್ತಿಯನ್ನು ತರಲೆಂದು ಶ್ರೀ ಕೈಯವರು ಆಶಿಸಿದರು. ಕಟ್ಟೋಣ ಕಂಟ್ರಾಕ್ಟರ್ ಶ್ರೀ ಎಮ್. ಶೇಷಪ್ಪಾಲರಿಗೆ ಪದಕವೊಂದನ್ನು ಕಲೆಕ್ಟರರ ಮೂಲಕ ಕೊಡಿಸಿದ ನಂತರ ಶ್ರೀ ಕೆ. ಸದಾನಂದ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು. ಲಘು ತಿಂಡಿತೀರ್ಥಗಳ ಉಪಚಾರವಾದ ನಂತರ 'ಜನಮನಗಣ' ಹಾಡಲ್ಪಟ್ಟಿತು. ಸಂಜೆ ಏಳುಗಂಟೆಗೆ ಇದೇ ನೂತನ ಕಟ್ಟಡದಲ್ಲಿ ಸಂಘದ ಮಹಾಸಭೆಯು ದ. ಕ. ಜಿಲ್ಲೆಯ ಬಂಟಸಮಾಜದ ಮಹಿಳೆಯರಲ್ಲಿ ಪ್ರಥಮ ಸ್ನಾತಕಿ (graduate) ಯಾದ ಶ್ರೀಮತಿ ಶಾಂಭವಿ. ಆರ್. ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ರಾ। ಬ। ಕೆ. ಟಿ. ಆಳ್ವರು ಅಧ್ಯಕ್ಷರ ಪರಿಚಯ, ಗುಣಗಾನ ಮಾಡಿದ ನಂತರ ಕಾರ್ಯದರ್ಶಿ ಶ್ರೀ ಕೆ. ಎಸ್. ಹೆಗ್ಡೆಯವರು ಪ್ರಗತಿ ಪರಸೂಚಕ ವರದಿಯನ್ನೋದಿದರು. ಸಂಘದ ಕೋಶಾಧಿಕಾರಿ ಶ್ರೀ ವಿಠಲಪೂಂಜರು ಸಂಘದ ಆದಾಯ ವೆಚ್ಚಗಳ ಸವಿಸ್ತಾರ ವರದಿಯನ್ನೊಪ್ಪಿಸಿದರು. ಬಡ ವಿದ್ಯಾರ್ಥಿ ಫಂಡಿನ ಕಾರ್ಯದರ್ಶಿ ಶ್ರೀ ದಾಸಣ್ಣ ಆಳ್ವರು ಆ ಫಂಡಿನ ವರದಿಯನ್ನೋದಿದರು. ಕಾರ್ಯ ನಿರ್ವಾಹಕ ಮಂಡಳಿಯ ಸದಸ್ಯರ ಆಯ್ಕೆ, ಸಂಸಾರವು ತಲೆದೋರುವ ಒಕ್ಕಲು-ಹಿತ ಮಸೂದೆಯ ಕುರಿತು ಸಲಹೆಗಳನ್ನೀಯುವ ಕಮಿಟಿಯ ರಚನೆ ಮತ್ತಿತರ ಠರಾವುಗಳಾದೊಡನೆ ಅಧ್ಯಕ್ಷೆಯರು ಸ್ತ್ರೀವಿದ್ಯಾಭ್ಯಾಸ, ವರದಕ್ಷಿಣೆ ಮೊದಲಾದ ಹಲವಾರು ಸಂದರ್ಭೋಚಿತ ವಿದಾಯಕ ಸೂಚನೆಗಳಿಂದ ಕೂಡಿದ ಭಾಷಣವನ್ನೋದಿದರು.

ಕುಂಬಳೆ:—ತಾ. 15ರಂದು ಸುಭಾರಿನ ಕ್ಷೇತ್ರೋತ್ಸವ ಸ್ಥಳದಲ್ಲಿ ಕೃಷಿಕಾರ್ಯಾಭಿವೃದ್ಧಿ ಸಮಿತಿಯವರು ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ತಹಸಿಲ್ದಾರ್ ಶ್ರೀ. ಬಿ. ಗಣೇಶನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬಿ. ಎಸ್. ಕಕ್ಕಿಲ್ಲಾಯರು ಪ್ರದರ್ಶನದ ಉದ್ಘಾಟನೆ ಮಾಡಿದರು.

ಕೃಷಿಕಾರ್ಯಾಭಿವೃದ್ಧಿಗೆ ಸಂಬಂಧಪಟ್ಟ ಎಡನಾಡು ಗ್ರಾಮದ ಗ್ರಾಮಸೇವಕರು ಮಧುರೆಯ ಕಲ್ಲುಪಟ್ಟಿ ಎಂಬಲ್ಲಿ 2 ತಿಂಗಳ ತರಬೇತು ಪಡೆದು ತಾ. 11ರಂದು ಹಿಂದೆ ಬಂದಿರುವರು.

ಮಂದಾರ್ತಿ—ಗೋವೆ ಮತಸ್ಥರ ಸುಧಾರಣೆ:—ಗೋವೆ ಮತಸ್ಥರ (ಕುಡುಬಿಜಾತಿಯ) ಸಾಧಾರಣಾ ಸಭೆಯು ತಾ|13-4-49ರಂದು ಶ್ರೀ ಮಂದಾರ್ತಿ ಐಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ। ಹೆಗ್ಗುಂಜೆ ಪಟೇಲ್ ಗಣಪಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ। ಎಸ್. ನಾರಾಯಣ ಹೆಗ್ಡೆ ಮತ್ತು ಶ್ರೀ। ಎಚ್. ನರಸಿಂಹ ಶೆಟ್ರು ಸುಧಾರಣೆಯ ಕುರಿತು ಭಾಷಣವಿತ್ತ ಮೇಲೆ ಹೆಗ್ಗುಂಜೆ, ಶೀರೂರು, ಬಿಲ್ಲಾಡಿ, ಸುರಾಲು ಮತ್ತು ಕುದಿ ಈ ಐದು ಗ್ರಾಮಗಳ ಕುಡುಬಿ ಜಾತಿಯವರು ಸುಧಾರಣೆಗೆ ಒಪ್ಪಿ, ಪ್ರಥಮವಾಗಿ ತಮ್ಮ ತಮ್ಮ ಮಣಿಸರಗಳನ್ನು ಕಿತ್ತೊಗೆದು, ಕುಪ್ಪಸತೊಟ್ಟು ಸೆರಗುಹಾಕಿ ಶೀರೆಯುಡುವುದಾಗಿ ಒಪ್ಪಿದರು. ಉಳಿದ ಗ್ರಾಮದವರೂ ಬೇಗನೆ ಈ ಕುರಿತು ನಿರ್ಧಾರಕ್ಕೆ ಬರುವುದಾಗಿ ಭರವಸೆಯಿತ್ತರು. ಅಂದಿನ ಸಭೆಗೆ ಬಂದ ನೂರಾರು ಮಂದಿ ಕುಡುಬಿಜಾತಿಯ ಸ್ತ್ರೀಯರು ಕುಪ್ಪಸತೊಟ್ಟು, ಸೆರಗುಹಾಕಿ ಶೀರೆಯುಟ್ಟು, ಸಂತೋಷಾರ್ಥವಾಗಿ ಬೇಂಡ್‌ವಾದ್ಯಗಳ ಮೆರವಣಿಗೆಯಿಂದ ಶ್ರೀ ಮಂದಾರ್ತಿ ದೇವಸ್ಥಾನಕ್ಕೆ ಹೋದ ದೃಶ್ಯವು ಪ್ರೇಕ್ಷಣೀಯವಿತ್ತು.

ಈ ಜಾತಿಯವರ ಮಹಾಸಭೆಯು ಪುನಃ ಉಳಿದವರ ಸುಧಾರಣೆಗಾಗಿ ತಾ.14-5-49 ನೇ ಶನಿವಾರ ದಿವಸ ಅದೇ ಸ್ಥಳದಲ್ಲಿ ಜರಗಲಿದೆ.

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸಿಮ್ನಾನ, ಊಟ, ಉಪಹಾರ, ಬ್ಯೆರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದಕೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖಶಾಂತಿಗಳ ಮೂಲ ಕಾರಣವಾದ

ಹಾರ್ಲೆಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ಹಾರ್ಲೆಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ನಮ್ಮ ಹಾರ್ಲೆಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ ಔಷಧಿ' ಎಂದು ಕರೆಯಲ್ಪಡುತ್ತಿದೆ. ಹಾರ್ಲೆಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಡುತ್ತಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯಾ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ಹಾರ್ಲೆಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನಕೋಶ, ಕಲಿಜೆಯ ರೋಗಗಳಲ್ಲಿ ಹಾರ್ಲೆಂಗ್ ಟಿಲ್ಲಿ ತೈಲವು ಸಿಡ್ಮಿಕ್ ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಹೊಟ್ಟೆನೋವು, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ಹಾರ್ಲೆಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಹಿಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವುದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ಹಾರ್ಲೆಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಬಂದಿದ್ದಲ್ಲಿ, ಈ ಹಾರ್ಲೆಂಗ್ ಟಿಲ್ಲಿ ತೈಲದಿಂದ ಮಾತ್ರ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಹಾರ್ಲೆಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ಹಾರ್ಲೆಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ಹಾರ್ಲೆಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ಹಾರ್ಲೆಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18. ವಿ ಪಿ ಹೊರತು.

ಪ್ರಶಂಸನಾ ಪತ್ರ—ನಾನು ನಿಮ್ಮ ಹಾರ್ಲೆಂಗ್ ಟಿಲ್ಲಿ ಆಯಿಲನ್ನು ಕಳೆದ ಅನೇಕ ವರ್ಷಗಳಿಂದ ನಾನಾ ವಿಧವ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲಾ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ನಿರ್ಧರಿಸಿದ ರೋಗಿಗಳನ್ನೂ ನಿಮ್ಮ ಹಾರ್ಲೆಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲಾ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಸಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಇತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ್ಷ್ಮಣಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2

ಮಂಗಳೂರು

ದೇವಾಂಗ ಸಮಾಜ ಸೇವಾ ಸಂಸ್ಥಾಪವಾರ್ಷಿಕೋತ್ಸವವು 24-4-49ನೇ ಆದಿತ್ಯವಾರ ಬೆಳಿಗ್ಗೆ 10ಗಂಟೆಗೆ ಕುಂಬಳೆಯ ಶ್ರೀ ಭಗವತೀ ಕ್ಷೇತ್ರದಲ್ಲಿ ಸಬ್‌ರಿಜಿಸ್ಟ್ರಾರ್ ಶ್ರೀ ... ನಾರಾಯಣರ ಅಧ್ಯಕ್ಷತೆಯಲ್ಲಿ ಜರಗುವದು.

ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಂಘ ...ಉಡುಪಿ ಶಾಖೆಯ ಪ್ರಥಮ ವಾರ್ಷಿಕ ಮಹಾಸಭೆಯು ತಾ 8-5-1949ನೇ ರವಿವಾರ ಪೂರ್ವಾಹ್ನ ಘಂಟೆ 8ಕ್ಕೆ ಮಹಾ ಸಭೆಯ ಅಧಿವೇಶನ ಸಮಾರಂಭವು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಅಪರಾಹ್ನ ಘಂಟೆ ...30ಕ್ಕೆ ಉಡುಪಿ ಕಾಡಬೆಟ್ಟು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿರುವುದು. ರಾತ್ರಿ ಘಂಟೆ 9ಕ್ಕೆ ಉಡುಪಿಯ ಯಕ್ಷಗಾನ ಕಲಾ ಮಂಡಳಿಯವರಿಂದ "...ರಾಜಸೂಯಯಜ್ಞ"ವೆಂಬ ತಾಳಮದ್ದಲೆಯು ನಡೆಯಲಿರುವುದು. ಸರ್ವರಿಗೂ ಸ್ವಾಗತವಿದೆಯೆಂದು ಸಮಿತಿಯ ಕಾರ್ಯದರ್ಶಿ ಶ್ರೀ. ಬಿ. ಚಿಕ್ಕಯ್ಯನವರು ತಿಳಿಸುತ್ತಾರೆ.

ಸೈಕಲ್ ಪ್ರವಾಸ:—ಜಿಲ್ಲಾ ಪ್ರವಾಸವನ್ನು ಸೈಕಲಿನಲ್ಲಿ ಕೈಕೊಂಡಿರುವ ಮಂಗಳೂರು ಒಲಂಪಿಕ್ಸ್ ಸ್ಕಾಟುದಳದವರು ಕಿಂಗ್ ಸ್ಕೌಟ್ ಶ್ರೀ. ಸತ್ಯಪಾಲರ ನಾಯಕತ್ವದಲ್ಲಿ ತಾ 7-4-49ರಿಂದ ಪುತ್ತೂರು, ಬಂಟ್ವಾಳ, ಮೂಡುಬಿದ್ರೆ, ಕಾರ್ಕಳ ಈ ಕಡೆಯಲ್ಲಾ ತಿರುಗಿ ತಾ. 10-4-49ಕ್ಕೆ ಉಡುಪಿಗೆ ಬಂದು ಮುಟ್ಟಿ, ಬಾಲಕರು ಎಲ್ಲಾ ಕಡೆಗಳ ಬಾಲವೀರ, ಮತ್ತು ಮರಿವಣಳದವರಿಗೆ ಉತ್ತಮ ಸಲಹೆಯನ್ನು ಕೊಡುತ್ತಾ, ತಾ 13-4-49ರಲ್ಲಿ ತಮ್ಮ ಮುಂದಿನ ಪ್ರವಾಸವನ್ನು ಕೈಕೊಂಡಿರುವರು. ಈ ಬಾಲವೀರರು ಕೈಕೊಂಡ ಸಾಹಸವು ಸ್ತುತ್ಯ.

ಜಾಲಿಯನ್ ವಾಲಾ ಬಾಗ್ ದಿನವು ಇದೇ ತಾ 13ರಲ್ಲಿ ನಗರ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಗಣಪತಿ ಹೈಸ್ಕೂಲಿನ ... ಸಭಾಭವನದಲ್ಲಿ ಆಚರಿಸಲ್ಪಟ್ಟಿತು.

...ಸೆಂಟ ರಾಷ್ಟ್ರೀಯ ಬಾಲಿಕಾ ...ಶಾಲೆಯಲ್ಲಿ ವಸಂತೋತ್ಸವವು ಇದೇ ತಾ 9ಮತ್ತು 10ರಲ್ಲಿ ಶ್ರೀಮತಿ ಎ. ಬಿ. ಎಚ್. ಡಿಕ್ಸನ್ (ಮಂಗಳೂರಿನ ಸೇವಾ ಸಮಾಜದ ಅಧ್ಯಕ್ಷ) ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಮ್. ವೆಂಕಟೇಶ ಪೈಗಳು ಸ್ವಾಗತ ಭಾಷಣಮಾಡಿದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸ್ತ್ರೀವಿದ್ಯಾಭ್ಯಾಸದ ಕುರಿತು ಮಾತಾಡಿದರು. ತತ್ಪೂರ್ವದಲ್ಲಿ ಈ ಶಾಲೆಯ ಹಳೇ ವಿದ್ಯಾರ್ಥಿ ಸಂಘದ ವಸಂತ ಪ್ರೇಮಿ ಮಂಡಳಿಯು ನಡೆಸಿದ ಜಿಲ್ಲಾ ವಾಳ್ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದ ಕುಮಾರಿ. ಎಸ್. ಹಿರಣ್ಮಯಿಗೆ ರೋಲಿಂಗ್ ಕಪ್ಪನ್ನೂ, ಇನ್ನೊಂದು ಕಪ್ಪನ್ನೂ ಅಧ್ಯಕ್ಷರ ಹಸ್ತದಿಂದ ಕೊಡಿಸಲಾಯಿತು. ಡಾ। ಎಮ್. ವೆಂಕಟೇಶ ಪೈಗಳು ಅಭಿನಂದಿಸಿದ ಬಳಿಕ ಅಧ್ಯಕ್ಷರೂ ಅತಿಥಿಗಳೂ "ಅದೃಷ್ಟ ಪುಷ್ಪ"ವೆತ್ತಲು ಹೋದರು. ಬಳಿಕ ವಿದ್ಯಾರ್ಥಿನಿಯರ ವಿನೋದಾವಳಿಗಳಾದುವು. ಮರುದಿನ ಹಳೇ ವಿದ್ಯಾರ್ಥಿಗಳಿಂದ 'ಲಕ್ಕಿಲಕ್ಸ್' ಎಂಬ ನಾಟಕವೂ ಇಂದಿನ ವಿದ್ಯಾರ್ಥಿಗಳಿಂದ 'ಭಾರತದ ಸಂದೇಶ'ವೆಂಬ ನಾಟಕವೂ ಅಭಿನಯಿಸಲ್ಪಟ್ಟಿತು. ಶ್ರೀ ಎಮ್. ವೆಂಕಟೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲಾ ಅಧ್ಯಾಪಕ ಸಂಘದ ಮಹಾ ಸಭೆಯು ಈಚೆಗೆ ಶ್ರೀ ಎಮ್. ಎಸ್. ಪೀತಾಂಬರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರು ಸಂಘದ ಕಾರ್ಯಕಲಾಪಗಳ ವರದಿಯನ್ನೋದಿದರು. ಮಹಾಸಭೆಯ ಮುಂದೆ ಬಂದ ಠರಾವುಗಳ ತತ್ವಾರ್ಥವನ್ನು ಒಪ್ಪಿಕೊಂಡು ಭಾಷಾಶುದ್ಧಿಗಾಗಿ ಅವುಗಳನ್ನು ಸಂಘದ ಕಾರ್ಯಸಮಿತಿಗೊಪ್ಪಿಸಲಾಯಿತು. ಖಾಸಗಿ ಶಾಲೆಗಳಲ್ಲಿ ಅಧ್ಯಾಪಕರಿಗಾಗುವ ಕಷ್ಟಗಳ ದೆಸೆಯಿಂದಾಗಿ ಎಲ್ಲಾ ಶಾಲೆಗಳನ್ನು ಸರಕಾರವು ತನ್ನ ಆಡಳಿತಗೊಳಪಡಿಸಿಕೊಳ್ಳಬೇಕೆಂಬ ನಿರ್ಣಯಕ್ಕೆ ಮನ್ನಣೆ ದೊರೆಯಲಿಲ್ಲ. ನೂತನ ವರ್ಷಕ್ಕೆ

ಓದುಗರ ಓಲೆಗಳು

(ಸಾರ್ವಜನಿಕ ಉಪಯೋಗಾರ್ಹವಾದ ನಮ್ಮ ಓದುಗರ ಸಂಕ್ಷೇಪ ಓಲೆಗಳನ್ನು ಈ ವಿಭಾಗದಲ್ಲಿ ಪ್ರಕಟಿಸಲಾಗುವುದು. ಸಂ. ನ.)

E S. L C. ಪರೀಕ್ಷೆ—ಪ್ರಶ್ನ

ರೆ। ಫಾ। ಡಬ್ಲ್ಯು. ಎಸ್. ಸಿಕೇರಾರವರು ಅಧ್ಯಕ್ಷರಾಗಿಯೂ ಶ್ರೀ ಯು. ಶ್ರೀನಿವಾಸ ಕಿಣಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ದುಃಖವಾರ್ತೆ—ಶ್ರೀ ಅಂಬ್ಲೆಲು ಭೋಜರಾಯರ ಏಕಮಾತ್ರ ಪುತ್ರರಾದ ಅಂಬ್ಲೆಲು ಗುರುರಾಜರಾವ್, ಬಿ ಎಸ್. ಸಿ, ಅವರು ಇದೇ ತಾ 9ರಲ್ಲಿ ತನ್ನ 24 ನೇ ತರುಣವಯಸ್ಸಿನಲ್ಲಿ ಬೊಂಬಾಯಿಯಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನ ಕೋರುವೆವು.

ಪತ್ರ, ಮತ್ತು ತಿದ್ದುವಿಕೆ—E S L. C. ಪಬ್ಲಿಕ್ ಪರೀಕ್ಷೆಯ ಫಲಿತಾಂಶವು ಹೆಚ್ಚು ಕಡೆಗಳಲ್ಲಿ ಉತ್ತಮವಾಗಿರುವುದಿಲ್ಲ, ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅದಕ್ಕೇನು ಕಾರಣವಿರಬಹುದು? ಇತರ ಸರಕಾರಿ ಪರೀಕ್ಷೆಗಳು ಯಾವ ರೀತಿಯಲ್ಲಿ ಜರಗುತ್ತವೆ? ಯಾವ ಉಪಾಧ್ಯಾಯರಿಗೆ ಆಯಾ ಕ್ಲಾಸುಗಳಿಗೆ ಕಲಿಸುವ ಯೋಗ್ಯತೆಯಿದೆಯೊ ಅವರಿಗೇನೇ ಪ್ರಶ್ನಾಪತ್ರಗಳನ್ನು ತಯಾರಿಸುವ ಸುಯೋಗವೂ ಇದೆ. ಆದರೆ ಹಾಯರ್ ಎಲಿಮೆಂಟರಿ ಕ್ಲಾಸುಗಳಿಗೆ ಕಲಿಸುವ ಉಪಾಧ್ಯಾಯರೇ ಪ್ರಶ್ನಾಪತ್ರಿಕೆಗಳನ್ನು ತಯಾರಿಸುವರೇ? ಅದಿಲ್ಲವಾದರೂ ಚಿಂತಿಲ್ಲ. ಈ ವರ್ಷ ಪ್ರಶ್ನಾಪತ್ರಿಕೆಗಳೇನೂ ಅಷ್ಟು ಕಠಿಣವಾಗಿದ್ದಿಲ್ಲ. ಪ್ರಮುಖ್ಯ ಕಾರಣವು ಬೇರೆ, ಉತ್ತರಪತ್ರಿಕೆಗಳಿಗೆ ವ್ಯಾಲ್ಯುಮಾರ್ಕ್ ಕೊಡುವುದು. ಈ ಯೋಗ್ಯತೆಯು ಆ ಕ್ಲಾಸುಗಳನ್ನು ನಡೆಸುತ್ತಿರುವ ಅಧ್ಯಾಪಕರಿಗೆ ಮಾತ್ರ ಇದೆ. ಆ ಮಕ್ಕಳ ಜ್ಞಾನದ ಹಾಗೂ ಭಾಷಾ ಪರಿಮಿತಿಯ ಮಟ್ಟದ ಸ್ಪಷ್ಟ ಅನುಭವ ವ ಅಂದಾಜು ಆ ಉಪಾಧ್ಯಾಯರಿಗೆ ಮಾತ್ರ ಇರುತ್ತದೆ. ಹೆಚ್ಚು ವಿದ್ಯಾಯೋಗ್ಯತೆಯುಳ್ಳವರು ಆ ಪತ್ರಿಕೆಗಳಿಗೆ ಬೆಲೆಕಟ್ಟಲು ಅನರ್ಹರು ಎಂದರೆ ಅತಿಶಯೋಕ್ತಿಯಲ್ಲ. ಕಡಿಮೆ ವೇತನದಲ್ಲಾದರೂ ದುಡಿದು ದೇಶಸೇವೆಮಾಡುತ್ತಿರುವ ಪ್ರಾಮಾಣಿಕರಾದ ಹಾಯರ್ ಎಲಿಮೆಂಟರಿ ಶಾಲಾ ಸೆಕೆಂಡರಿ ಗ್ರೇಡ್ ಅಧ್ಯಾಪಕರು ಪರೀಕ್ಷಾ ಪತ್ರಗಳನ್ನು ತಿದ್ದುವ ಕೆಲಸದಲ್ಲಿ ಅಪ್ರಾಮಾಣಿಕರಾಗಬಲ್ಲರೆ??

ಪಡುಬಿದ್ರಿ ದೇವರ ಅಮ್ಮಸರಸ್ವತಿ ಆಚಾರ್ತಿ—ಇಂದಿಗೆ ಸಾಧಾರಣ ಹದಿನಾಲ್ಕು ವರುಷಗಳಿಂದ ದೇವರ ಆಮ್ಮನ ಮನೆಗೆ ಬರುವ ಭಕ್ತವೃಂದಾದಿಗಳ ಸಂಖ್ಯೆ ಎಷ್ಟು ಎಂದೂ ಬಂದವರಲ್ಲಿ ಎಷ್ಟು ಮಂದಿಗೆ ಪ್ರಯೋಜನಸಿಕ್ಕಿದೆ ಎಂದೂ ಹೇಳಲು ಬರುವುದಿಲ್ಲ ಬಡವರು, ಬಲ್ಲಿದರು, ವಿದ್ಯಾವಂತರು, ಅವಿದ್ಯಾವಂತರೆಲ್ಲರೂ ಬಂದು ದೇವದರ್ಶನ ತೆಗೆದುಕೊಂಡು ಕಟ್ಟಕಡೆಗೆ ತನ್ನ ಕೆಲಸವಾಗದೆ ಹಿಂದಿರುಗಿ ಹೋದವರೇ ಹೆಚ್ಚುಮಂದಿ. ಸಾಯುವ ಕಾಲವಲ್ಲದಿದ್ದರೂ ಅಮ್ಮನ ಭಕ್ತರಲ್ಲಿ ಕೆಲವರು ದೇವರ ಸಾನ್ನಿಧ್ಯವನ್ನು ಅಮ್ಮನಿಗಿಂತ ಮೊದಲೇ ಪಡೆದರು. ಅವರವರ ಕರ್ಮಾನುಸಾರಕ್ಕೆ ಸರಿಯಾಗಿ ಕಾಲವು ಮುಂದುವರಿಯುತ್ತದೆ. ಯಾವ ದೇವರನ್ನು ನಂಬಿದರೂ ಪ್ರಯೋಜನವಿಲ್ಲ ವೆಂಬುದು ಸಿದ್ಧಾಂತ. ಈಗ ಸರಸ್ವತಿ ಭಕ್ತರು ದೇವರ ಧ್ಯಾನದೊಂದಿಗೆ ಹೋಟೇಲಿನ ವತ್ತಿ ಕೊಪ್ಪರದ ಧ್ಯಾನವನ್ನು ತನ್ನ ಕಂಟೀನದಲ್ಲಿ ಮಾಡುತಿದ್ದಾಳೆ ಎಂದು ಹೇಳಿದರೆ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ? ಬಂದವರಿಂದ ಗ್ಲಾಸುಗಳನ್ನು ತೆಗೆದುಕೊಳ್ಳುವುದಿಲ್ಲವಾದರೆ ಬಂದವರಲ್ಲಿ ಅನೇಕರು ಬಹಳ ಕಷ್ಟದಿಂದ ತಮ್ಮ ಮನೆಯನ್ನು ಸೇರುತ್ತಾರೆ. ಇದು ಆಶ್ಚರ್ಯ!

ತನ್ನ ಬಲಗೈ ಬಂಟನಾದ ಕಂಕನಾಡಿಯ ಅನಂತಾಚಾರಿಯ ಹೆಸರಲ್ಲಿ ಚಾಅಂಗಡಿಯ ಕೊಪ್ಪರದ ವಹಿವಾಟವೂ ಸಾಗುತ್ತಿಲ್ಲವೆ? ಆಕೆಗೆ ವಿಶೇಷವಾಗಿ ಸಿಗುವ ಚಿಮಿಣಿ ಎಣ್ಣೆ ಆಕೆ ರೇಶನು ದುರುಪಯೋಗವಾಗುವುದಿಲ್ಲವೆ?

ಕರ್ಮಾನುಸಾರವು ಯಾರನ್ನೂ ಬಿಟ್ಟಿರಿಲ್ಲ ಆದುದರಿಂದ ಜನರಾರೂ ಬಲಿಬೀಳದಿರುವಂತೆ ವಿನಂತಿ.

ಪಿ. ರಾಮರಾವ್.

WANTED

Applications are invited for the following posts in the Manipal High School, MANIPAL

1. One B T., with Science as Optional.
2. One B. T., with History & Ceography as Optional
3. One Secondary Grade Trained Teacher.
4. One Y M. C. A Higher Grade Trained Teacher
5. One Drawing Teacher with Higer Grade Certificate.
6. One fully qualified Hindi Teacher.
7. One Kannada Pandit.
8. Qualified Wood-work Teacher.

The scale of pay will be that of Local Boards with usual Dearness Allowance. Applications should reach the Correspondet by the 15th May, 1949

12—4—49.

Dr. T M A Pai,
Correspondent.
Manipal High School, Manipal, S. K.

ತಮ್ಮಷ್ಟಕ್ಕೆ ತಾವು ಇಂಗ್ಲಿಷ್ ಕಲಿಯಲು ಅನುಕೂಲವಾದ ದಿ। ಕೊರಡ್ಕಲ್ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

ಎಂಬ ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.

ಸರ್ವಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನವನ್ನು ವಿವರಿಸುವ ಡಾ। ಕೊರಡ್ಕಲ್ಲರ

ಮನೆ ಮದ್ದು

ಎಂಬ ಗೃಹವೈದ್ಯ ಬೆಲೆ ರೂ. 2-0-0

ಶಾಲೆ, ಕಾಲೇಜುಗಳ,
ಪಂಚಾಯತ ಬೋರ್ಡು, ಗ್ರಾಮ ಸಂಘಗಳ,
ಲೈಬ್ರರಿಗಳಿಗೆ
ಬೇಕಾಗುವ ಕರ್ನಾಟಕದ ಬೇರೆ ಬೇರೆ ಭಾಗಗಳ

ಕನ್ನಡ ಪುಸ್ತಕಗಳು

ಆಕರ್ಷಕ ದರದಲ್ಲಿ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

'ಅಂತರಂಗ'ಕ್ಕೆ
6 ರೂಪಾಯಿ
ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.
'ಅಂತರಂಗ' ಉಡುಪಿ.



Approved firm by the Govt. of Mysore

ಮತಸ್ಥಾಪನೆಗಳ ಸಂಕಷ್ಟವು ಮತ್ತು ನಿವಾರಣೋಪಾಯ—ಕಳೆದ ಫಸಲಿನವರೆಗೆ ದಕ್ಷಿಣ ಕನ್ನಡಾ ಜಿಲ್ಲೆಯ ಆಯಾಯ ಗ್ರಾಮದಲ್ಲಿಯೇ ಗ್ರಾಮದ ಹಸ್ತವಸೂಲಿ ವ್ಯವಹಿಸಿಂದಲೇ ಗ್ರಾಮ ಉದ್ಯೋಗಸ್ಥರು ಮತಸ್ಥಾಪನೆಗಳಿಗೆ ತಸದೀಕು ಬಟವಾಡೆ ಮಾಡತಕ್ಕ ನಿಯಮವಿದ್ದು ಏಪ್ರಿಲ್ ತಿಂಗಳಲ್ಲಿ ಬಟ್ವಾಡೆ ಆಗುತ್ತಿತ್ತು. ಆದರೆ ಚಾಲ್ತಿ 1358ನೇ ಫಸಲಿಯಲ್ಲಿ ಆ ನಿಯಮವು ಮನ್ನಾವಾಗಲು ಕಾರಣವಾಗಿದೆ. ಇನ್ನು ತಸದೀಕು ಯಾವರೀತಿಯಿಂದ, ಯಲ್ಲಿಂದ, ಮತ್ತು ಯಾರಿಂದ ಸ್ಥಾಪನೆಗಳ ಟ್ರಸ್ಟಿಗಳು ಪಡೆಯಬೇಕೆಂಬ ಕುರಿತು ಯಾವ ಒಂದು ಹುಕ್ಮುಂಗಳು ಟ್ರಸ್ಟಿಗಳಿಗೆ ಇನ್ನೂ ಬಂದಿಲ್ಲ. ಗ್ರಾಮ ಉದ್ಯೋಗಸ್ಥರನ್ನು ಕೇಳಿದರೆ ತಾಲೂಕು ಖಜಾನೆಯಿಂದಲೇ ತಾಲ್ಲೂಕು ಆಫೀಸರಂ ಮುಖೇನ ಟ್ರಸ್ಟಿಗಳು ಪಡೆಯಬೇಕಾಗಿ ಹೇಳುತ್ತಾರೆ. ಆ ಪ್ರಕಾರ ಪಡೆಯುವ ಪಕ್ಷದಲ್ಲಿ ಮತಸ್ಥಾಪನೆಗಳೆಲ್ಲಾ ಬಹು ಕಷ್ಟನಷ್ಟಗಳನ್ನು ಹೊಂದಲಿಕ್ಕೂ ತಾಲೂಕು ಉದ್ಯೋಗಸ್ಥರಿಗೂ ದೀರ್ಘವಾದ ಪತ್ರವ್ಯವಹಾರಗಳು ನಡಿಸಬೇಕಾಗಿ ಬಂದು ರಿಕಾರ್ಡು ಕೆಲ್ಸಗಳು ಜಾಸ್ತಿ ಆಗುವ ಸಂಬಂಧ ಇನಿಳಂಬಕ್ಕೂ ಕಾರಣವಾಗುತ್ತದೆ. ಸ್ಥಾಪನೆಗಳ ಟ್ರಸ್ಟಿಗಳು ದೋಣಿ ಕಡವಿಗೂ, ಬಸ್ಸಿಗೂ, ಕಾಫಿತಿಂಡಿ ವ ಊಟದ ಹೋಟೆಲುಗಳಿಗೂ ಹಣವನ್ನು ವ್ಯಯಪಡಿಸಿ ತಾಲೂಕು ಆಫೀಸಿನಲ್ಲಿ ತಕ್ಕಕಾಲ ನಿರೀಕ್ಷಣೆ ಮಾಡದ ಕಾದುನಿಲ್ಲುವ ಅಗತ್ಯ ಬೀಳುತ್ತದೆ. ತಕ್ಕಕಾಲದಲ್ಲಿ ತಸದೀಕು ಸಿಕ್ಕದೆ ಸ್ಥಾಪನೆಗಳ ವಿನಿಯೋಗಗಳನ್ನು ತಕ್ಕಂತೆ ನಿರಾತಂಕವಾಗಿ ನಡಿಯಗೊಡಿಸಲಿಕ್ಕೆ ಟ್ರಸ್ಟಿಗಳಿಗೆ ಕಷ್ಟವಾಗುವದು.

ಇದನ್ನೆಲ್ಲಾ ಸರಕಾರದವರು ಲಕ್ಷ್ಯಕ್ಕೆ ತಂದುಕೊಂಡು ಈ ವರೇಗೆ ತಸದೀಕು ಬಟ್ವಾಡೆ ಆಗುತ್ತಿದ್ದಂತೆ ಆಯಾಯ ಗ್ರಾಮಗಳಲ್ಲಿಯೇ ಗ್ರಾಮಉದ್ಯೋಗಸ್ಥರ ಮುಖಾಂತರವಾಗಿ ಮತಸ್ಥಾಪನೆಗಳಿಗೆ ತಸದೀಕು ಬಟ್ವಾಡೆ ಆಗುವಂತೆ ತಕ್ಕ ಏರ್ಪಾಡು ಮಾಡುವರೇ?

—ಒಬ್ಬ ಟ್ರಸ್ಟಿ.

ಹೀಗೇಕೆ? ಸುಮಾರು 150 ವರ್ಷಗಳಿಂದಲೂ ಪರರ ಆಳ್ವಿಕೆಗೆ ಒಳಪಟ್ಟಿದ್ದ ಭಾರತ ದೇಶವನ್ನು ಅನೇಕ ಮಹನೀಯರು ದೇಶಹಿತಕ್ಕಾಗಿ ತಮ್ಮ ಸರ್ವಸ್ವವನ್ನೂ ಧಾರೆಎರೆದು ಅನೇಕ ಅಮೂಲ್ಯ ಪ್ರಾಣಗಳನ್ನು ಕೂಡಾ ಧಾರೆಎರೆದು ಒಂದೂವರೆ ವರ್ಷಗಳ ಕೆಳಗೆ ದಾಸ್ಯಸಂಕಲೆಯಿಂದ ಬಿಡಿಸಿ ಸ್ವತಂತ್ರ ದೇಶವನ್ನಾಗಿ ಮಾರ್ಪಡಿಸಿದರು.

ಈ ಕೊಂಚಕಾಲದೊಳಗಾಗಿ ದೇಶದ ಕೆಲವು ಅಮೂಲ್ಯ ಪ್ರಾಣರತ್ನಗಳು ಇಹಲೋಕವನ್ನು ತ್ಯಜಿಸಿದುವು. ಅಲ್ಲಲ್ಲಿ ಕೋಮುವಾರು ವೈಷಮ್ಯಗಳು ತಲೆದೋರಿದುವು. ಸ್ವಾರ್ಥ ಸಾಧಿಸಲೆತ್ನಿಸಿದ ಕೆಲ ಚಿಕ್ಕ ದೇಶಗಳು ಭಾರತಕ್ಕೆ ಇದಿರಾಗಿ ನಿಂತು ಕಾದಾಡಿ ಅನೇಕ ಪ್ರಾಣಹಾನಿಗೂ, ಧನಹಾನಿಗೂ ಕಾರಣವಾದುವು.

ಇಷ್ಟೆಲ್ಲಾ ತೊಂದರೆಗಳು ಎದುರಾದರೂ ಅವುಗಳನ್ನೆಲ್ಲಾ ಮೂಲೆಗೊತ್ತುತ್ತಾ, ಪವಿತ್ರ ಹಿಂದೂದೇಶವು ಪ್ರಪಂಚದ ಇತರ ಎಲ್ಲಾ ದೇಶಗಳಿಗೂ ಮಾದರಿಯಾಗಿ ನಿಲ್ಲಬಹುದೆಂಬ ಭರವಸೆಯನ್ನು ಕೊಡುತ್ತಾ ಬರುವುದು ನೋಡಿದರೆ, ಭಾರತದೇಶ ಮಾತ್ರವೇ ಅಲ್ಲದೆ ಪ್ರತಿಯೊಬ್ಬ ಭಾರತೀಯನೂ ಭಾಗ್ಯವಂತನೆನ್ನಬೇಕಾಗಿದೆ.

ಆದರೆ ಇತ್ತೀಚೆಗೆ ದೇಶದ ಮೂಲೆ ಮೂಲೆಗಳಲ್ಲಿ ಕಂಡುಬರುವ ಕೆಲವು ವಿಚಾರಗಳನ್ನು ನೋಡಿದರೆ ಭಾರತದ ಭಾವೀ ಬೆಳವಣಿಗೆಯು ಹೇಗೆ ನಿಲ್ಲುತ್ತದೋ ಎಂಬ ಸಂಶಯಕ್ಕೆ ಆಸ್ಪದವಾಗುತ್ತದೆ.

ಕೆಲವು ವರ್ಷಗಳಹಿಂದೆ ಯಾವ ಕಾಂಗ್ರೆಸ್ ಸಂಸ್ಥೆಯನ್ನು ಅತೀ ಪವಿತ್ರವಾದುದೆಂದು ಬಹುಪಕ್ಷ ಜನರು ಕೊಂಡಾಡುತ್ತಿದ್ದರೋ ಅದೇ ಪವಿತ್ರ ಸಂಸ್ಥೆಯನ್ನು ಇಂದು ಜನರು ಜರೆಯುತ್ತಿರುವರು. ಜನರು ಬಂದುವೇಳೆ ಕಾನೂನು ಭಯಕ್ಕಾಗಿ ಬಹಿರಂಗವಾಗಿ ಜರೆಯಲು ಬೆದರುತ್ತಿರುವುದಾದರೂ, ಅಲ್ಲಲ್ಲಿ ಚಿಕ್ಕ ಚಿಕ್ಕ ಕೂಟಗಳಲ್ಲಿ ಜರೆದುಮಾತನಾಡುತ್ತಿರುವುದನ್ನು ದಿನವಹಿ ಕೇಳಬಹುದು. ಹೀಗಾಗಲು ಕಾರಣವೇನಿರಬಹುದು? ಕಾಂಗ್ರೆಸಿನಿಂದ ಸ್ಥಾಪಿತವಾದ ಮಂತ್ರಿಮಂಡಲವು ಕ್ರಮವಾಗಿ ಕೆಲಸಮಾಡದುದಿರಬಹುದೆ? ತಮ್ಮ ಸರ್ವಸ್ವವೂ ದೇಶದ ಹಿತಕ್ಕಾಗಿ ಎಂದು ದುಡಿಯುತ್ತಿದ್ದ ನಾಯಕಮಣಿಗಳು ಇಂದು ಸ್ವಾರ್ಥ ಸಾಧಿಸುತ್ತಿರಬಹುದೆ? ಕಾಂಗ್ರೆಸಿನ ಮುಖಂಡರೆನ್ನಿಸಿಕೊಂಡಿದ್ದ ಕೆಲವರು ತಮ್ಮ ಉದ್ಯೋಗಗಳಿಗೆ ರಾಜಿನಾಮೆ ಕೊಡುತ್ತಿರುವುದರ ಪರಿಣಾಮವೆ? ಇಲ್ಲದಿದ್ದರೆ ಅಲ್ಲಲ್ಲಿ "ಸಾಕಪ್ಪಾ ಈ ಕಾಂಗ್ರೆಸ್ ಸರಕಾರ" ಎಂಬಿತ್ಯಾದಿ ನಿಟ್ಟುಸಿರುಗಳೇಕೆ? "ಇನ್ನು ಮುಂದಕ್ಕೆ ಹೇಗೆ ಕಾಂಗ್ರೆಸ್ ಮಂತ್ರಿಮಂಡಲವಾಗುತ್ತದೆ, ನೋಡೋಣ" ಎಂಬ ಮಾತುಗಳೇಕೆ? "ಕಾಂಗ್ರೆಸಿನ ಹೆಸರು ಹೇಳಿ ಕಾಳಸಂತೆ ವ್ಯಾಪಾರ ಮಾಡುತ್ತಾರೆ" ಎಂಬ ಉದ್ಗಾರಗಳೇಕೆ?

ಈ ರೀತಿಯ ಮಾತುಗಳನ್ನು ದಿನಂಪ್ರತಿ ಕೇಳುತ್ತಿದ್ದರೂ ನಿಜವಾದ ದೇಶಪ್ರೇಮಿಯು ಮನಕರಗಿಸಿಕೊಳ್ಳಬೇಡವೆ? ಭಾರತದಲ್ಲಿ ಕಾಂಗ್ರೆಸಿಗಿಂತ ಉಚ್ಚ ಸಂಸ್ಥೆ ಇನ್ನೊಂದು ಯಾವುದಿದೆ? ಏಕೆ, ಪ್ರಪಂಚವೇ ಕಾಂಗ್ರೆಸಿನ ಧ್ಯೇಯಗಳಿಗೆ ತಲೆಬಾಗುವುದಿಲ್ಲವೆ? ಇಷ್ಟಿದ್ದರೂ ಈ ಬಗ್ಗೆ ಆಕ್ಷೇಪಗಳಿರಲು ಕಾರಣವೇನೆ? ಮುಖಂಡರು ಈ ಕಡೆಗೆ ಗಮನಕೊಡಲಿ.

ಡ|ಪಿ ಎಸ್. ರೈ. ತಾಸೀಕೆರೆ.

ದ. ಕನ್ನಡ

ಜಿಲ್ಲಾ ವಾಣಿಜ್ಯಸಂಘದ ಸಭೆ. ಕಳ್ಳಸಂತೆ ನಿವಾರಣೆ ಮಸೂದೆಯ ಕುರಿತು ಸಮಾಲೋಚನೆ

ಕಳೆದ ತಾ॥ ರಲ್ಲಿ ಮಂಗಳೂರಿನ ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಶ್ರೀ। ಸಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಸಂಘದ ಸದಸ್ಯರ ಒಂದು ಸಭೆ ಮೊಳ್ಯಂದ ಮಸೂದೆಯ ವಿಚಾರಕ್ಕಾಗಿ ನೆರೆದಿತ್ತು. ಶ್ರೀ॥ ಕೆ. ಕೇಶವ ಶೆಟ್ಟಿ, ಆವರು ಈ ಮಸೂದೆಯನ್ನು ಜಾರಿಗೆ ತರಬಯಸಿದ ಸರಕಾರದ ನಿರ್ಧಾರದ ವಿರುದ್ಧ ಮಾತಾಡಿದರು; ಕಳ್ಳಸಂತೆ ನಿರ್ಮೂಲನ ಮಾಡುವ ಮಸೂದೆ ಬೇಕು. ಆದರೆ ಈ ಬಿಲ್ಲು ಅಧಿಕಾರಿಗಳಿಗೆ ಕೊಡುವ ಅಧಿಕಾರ ವಿಪರೀತವಾಯಿತೆಂದರು. ಈ ಸಂಘ ಕಳ್ಳಸಂತೆ ನಿರ್ಮೂಲನದ ಉಪಾಯಗಳನ್ನೂ ಈ ಮಸೂದೆಯಲ್ಲಿ ತಿದ್ದುಪಡಿಗಳನ್ನೂ ಸೂಚಿಸಬೇಕು; ಇಂಥ ವಾಣಿಜ್ಯ ಸಂಘಗಳ ಒಂದು ಕಾನ್ಫರೆನ್ಸ್ ನೆರೆಯಿಸಬೇಕು ಎಂದರು. ಅಧ್ಯಕ್ಷರು "ಕಳ್ಳಸಂತೆಗೆ ಬರೇ ವ್ಯಾಪಾರಿಗಳೇ ಕಾರಣರಲ್ಲ; ಇತರರೂ ಕಾರಣರು. ಬಹಳ ಕಷ್ಟಪಟ್ಟು ಅಧಿಕಾರಕ್ಕೆ ಬಂದಂಥ ಮಂದಿಯಿಂದ ಇಂಥ ಮಸೂದೆ ಹೊರಟದ್ದು ವಿಚಿತ್ರ" ಎಂದರು; ಸರಕಾರಕ್ಕೆ ಈ ಕುರಿತು ಒಂದು ಮೆಮೊರೆಂಡಮ್ ಇತ್ಯಾದಿಗಳನ್ನು ಒಪ್ಪಿಸುವ ವಿಚಾರದಲ್ಲಿ ಒಂದು ನಿರ್ಣಯವಾಯಿತು.

ಮೂಡಬಿದ್ರೆ:—ಇಲ್ಲಿಯ ಪುರಜನರೂ ಎಲ್ಲಾ ಮಠಗುಡಿಯ ಅಧಿಕಾರಿಗಳೂ ತಾ 14-4-49ನೇದಿನ ಸಭೆಸೇರಿ ಇನ್ನುಮುಂದೆ ಕೋಳಿ ಮೊದಲಾದ ಮೂಕಪ್ರಾಣಿಗಳನ್ನು ಬಲಿ ಕೊಡುವುದನ್ನು ಸರ್ವಸಮ್ಮತಿಯಿಂದ ನಿಲ್ಲಿಸಿರುವರು. ಭಕ್ತಜನರು ಸಾತ್ವಿಕಪೂಜೆಯನ್ನು ನಡೆಸಿ ಶ್ರೀದೇವಿಯ ಕೃಪೆಗ ಪಾತ್ರರಾಗಬೇಕಾಗಿ ಮನವಿ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ಒಂದು ಕಮಿಟಿಯು ಏರ್ಪಟ್ಟಿದೆ.

ನಡೂರು:—ತಾ 14 4 49ರಂದು ಗ್ರಾಮಸ್ಥರ ಸಭೆಸೇರಿ ಗ್ರಾಮಸ್ಥರ ಕಲಾಕೃತಿಗಳನ್ನು ಸಂರಕ್ಷಿಸುವುದಕ್ಕೂ ಗ್ರಾಮಾಭಿವೃದ್ಧಿಯನ್ನು ಸಾಧಿಸುವುದಕ್ಕೂ 'ಗ್ರಾಮಾಭ್ಯುದಯ' ಎಂಬ ವ್ಯವಹಾರ ಸಮಿತಿ ಕಾರ್ಯವೊಂದನ್ನು ತೆರೆಯಬೇಕೆಂದು ನಿರ್ಣಯಿಸಲಾಯಿತು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ದಂತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡಿಮುಂತಾದ ಎಲ್ಲಾ ರೋಗಳಿಗೂ ಸಿದ್ಧೌಷಧ-

REGD

ಎಲ್ಲಾ ಕಡೆ ಮದ್ದು ವಸ್ತುಗಳಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

1949–50ರಲ್ಲಿ ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂದು ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1-4-0 ಕಳುಹಿಸಿ. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು, ಲಾಭನಷ್ಟಗಳು, ಮದುವೆ, ಮುಂಜಿ, ಸಂತತಿ, ನೌಕರಿ ಮುಂದಿ, ಸಮಯಾದಿಗಳನ್ನು ಸೂಚಿಸುವೆವು. ಅಲ್ಲದೆ ದುಷ್ಟಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನೂ ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ತೃಪ್ತಿಯಾಗುವುದು ಟಪ್ಪಾಲು ವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,

Roj jyotshi

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಚನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಶಮಲದಾಸ ಕೆಮಿಸ್ಟ, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಗಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

ಆರ್ಥಿಕ ದೃಷ್ಟಿಯಲ್ಲಿ ಬ್ಯಾಂಕುಗಳ ಸೇವೆ.

ಸ್ವತಂತ್ರಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ವಾಣಿಜ್ಯಸಂಸ್ಥೆಗಳ ಕಾರ್ಯವು ಅತೀ ಮಹತ್ವದ್ದಾಗಿದೆ. ರಾಷ್ಟ್ರೀಯ ಉತ್ಪತ್ತಿಯನ್ನು ಹೆಚ್ಚಿಸಲು ವಾಣಿಜ್ಯಸಂಸ್ಥೆಗಳು ಹಲವಾರು ಮುಖದಿಂದ ಇಂದು ಮುಕ್ತಹಸ್ತವಾಗಿ ಸೇವೆಸಲ್ಲಿಸಬೇಕಾಗಿದೆ. ಸಾಮಾನ್ಯ, ಮಧ್ಯಮ ಮತ್ತು ಕಾರ್ಮಿಕವರ್ಗದ ಅಲ್ಪಸ್ವಲ್ಪ ಉಳಿತಾಯವನ್ನು, ಚಾಲ್ತಿ, ಮುದ್ದತಿ ಮತ್ತು ಅವಧಿ ಠೇವುಗಳ ರೂಪದಲ್ಲಿ ಬ್ಯಾಂಕುಗಳಲ್ಲಿ ಇಡಲು ಪ್ರೇರೇಪಿಸಿ ಕೃಷಿಕರಿಗೆ ಮತ್ತು ವ್ಯಾಪಾರ ವ್ಯವಹಾರದಲ್ಲಿ ಕೊಡುಕೊಳ್ಳುವಿಕೆಯ ಕಾರ್ಯ ಪ್ರವೃತ್ತವಾಗಬೇಕು.

ಭಾರತ ಪಾಕಿಸ್ತಾನ ವಿಭಜನಾಕಾಲದಲ್ಲಿ ಜನರು ಮಾನ ಮತ್ತು ಪ್ರಾಣಂಗಳಿಗಾಗಿ ಧಾವಿಸುವಾಗ ರೊಕ್ಕದ ಭದ್ರತೆಗೆ ಬ್ಯಾಂಕಿಂಗ್ ಸಂಸ್ಥೆಗಳು ತಮ್ಮ ಯಾವತ್ತೂ ಶಾಖೆಗಳ ಮೇಲೆ ಡ್ರಾಫ್ಟು ಮತ್ತು ಚೆಕ್ಕುಗಳ ಸ್ವೀಕೃತಿಯಲ್ಲದೆ, ಠೇವಣಾತಿದಾರರು ತಮ್ಮ ಠೇವುಗಳನ್ನು ವರ್ಗಾಯಿಸಲು ಸೌಕರ್ಯವನ್ನು ಕಲ್ಪಿಸಿಕೊಟ್ಟವು. ದೇಶ ವಿಚ್ಛೇದದ ಸಂಧಿಕಾಲದಲ್ಲಿ ಕೊಟ್ಟ ಸಾಲಗಳನ್ನು ವಸೂಲಿ ಮಾಡಲು ಅಸಾಧ್ಯವಾಗಿ ವಾಣಿಜ್ಯ ಸಂಸ್ಥೆಗಳು ಬಹಳ ನಷ್ಟಹೊಂದಿವೆ. 1947ರ ವಿಭಜನಾಪೂರ್ವದ ಭಾರತದಲ್ಲಿ ಬ್ಯಾಂಕುಗಳ 5890 ಶಾಖೆಗಳಿದ್ದು, ಅವುಗಳ ಪಾವತಿಯಾದ ಬಂಡವಾಳವು ರೂ 720,930,000 ಮತ್ತು ಠೇವುಗಳು ರೂ 10,346,700,000 ಯಿದ್ದುದು ವಿಭಾಗ ದುರಂತದಿಂದ ಅವುಗಳ ಶಾಖೆಗಳು 5675ಕ್ಕೆ ಇಳಿಮುಖವಾದವು. ಠೇವುಗಳು ರೂ 10,054,700,000ಕ್ಕೆ ಜಾರಿದುವು. ವರುಷದ ಅಂತ್ಯದಲ್ಲಿ ಶಾಖೆಗಳೇನೋ ಏರಿದವಾದರೂ ವಾಣಿಜ್ಯ ಸಂಸ್ಥೆಗಳು ಕೋಟ್ಯಂತರ ರೂಪಾಯಿಗಳ ನಷ್ಟಹೊಂದಿದುವಲ್ಲದೆ ಪಶ್ಚಿಮದಲ್ಲಿ ದುಡಿಯುವ ನೂರಾರು ಕೆಲಸಗಾರರ ಸಂಹಾರವೂ ಆಯಿತು. ಈ ರೀತಿಯಲ್ಲಿ ನಮ್ಮ ಬ್ಯಾಂಕುಗಳು ಅಸಾಧಾರಣ ತ್ಯಾಗವನ್ನು ಮಾಡಿ ಮಹಾಸಂಕಷ್ಟದಿಂದ ಪಾರಾಗಿ ಇಂದು ಸೇವಾ ಕಾರ್ಯವನ್ನು ಕೈಕೊಟ್ಟಿವೆ.

ಪ್ರಕೃತ ಉದ್ಯಮಗಳ ರಾಷ್ಟ್ರೀಕರಣಕ್ಕೆ ಮತ್ತು ನರಳುವ ಕಾರ್ಮಿಕವರ್ಗದ ಸಂತುಷ್ಟಿಗೆ ಬ್ಯಾಂಕುಗಳ ಸಹಕಾರವು ಬೇಕಾಗಿದೆ. ನಾಡಸರ್ವಾಂಗ ಪುನರುಜ್ಜೀವನ ಕಾರ್ಯದಲ್ಲಿ ಪ್ರೋತ್ಸಾಹವಿತ್ತು ಉತ್ಪಾದನೆಯನ್ನು ಹೆಚ್ಚಿಸಿ ಜೀವನಾವಶ್ಯಕತೆಯನ್ನು ನೀಗಿಸಿ ಜೀವನಸ್ತರವನ್ನು ಹೆಚ್ಚಿಸಲು ಮತ್ತು ಭಾರತದ ಆಯಾತ ನಿರ್ಯಾತವನ್ನು ಏರಿಸಲು ವ್ಯಾಪಾರಿ ಸಂಸ್ಥೆಗಳೊಡನೆ ಬ್ಯಾಂಕುಗಳು ಸಹಕರಿಸಬೇಕಾಗಿದೆ.

ದೇಶದ ಸ್ವಾತಂತ್ರ್ಯದ ಜೊತೆಗೆ ವಿಭಜನೆಯು ಅನಿವಾರ್ಯದಿಂದಾಗಿ ಹೊಸಹೊಸ್ಮದ ಬಿಕ್ಕಟ್ಟು, ಜಾತೀಯತೆ ಕಲಹ, ತತ್ಪರಿಣಾಮದಿಂದ ಎದ್ದ ನಿರಾಶ್ರಿತರ ಪ್ರಶ್ನೆ, ಆಹಾರದ ಕೊರತೆ, ಸ್ವಾರ್ಥಪ್ರೇರಿತ ರಾಜಕೀಯ ಪಕ್ಷಗಳ ಚಳವಳಿ, ಇವುಗಳೊಡನೆ ದ್ವಿತೀಯ ಮಹಾಯುದ್ಧದ ಫಲವಾಗಿ ಉದ್ಭವಿಸಿದ ಜಾಗತಿಕ ಅಶಾಂತಿ ಮುಂತಾದವುಗಳನ್ನು ದೂರ ಅಟ್ಟಿ ಸುವ್ಯವಸ್ಥೆ, ಸುಖಶಾಂತಿ ದೇಶದಲ್ಲಿ ಸ್ಥಾಪಿಸಲು ವಾಣಿಜ್ಯಸಂಸ್ಥೆಗಳು ದುಡಿಯಬೇಕಾದ ಸಮಯವಿದು.

ಅತೀ ವೇಗದ ಹಿರಿಯೋಲಗದಿಂದ ಶಾಸನವಾಗಿ ಹೊರಬೀಳಲಿರುವ ಬ್ಯಾಂಕಿಂಗ್ ಭದ್ರತಾ ಮಸೂದೆಯನ್ನು ತುಲನೆಮಾಡಿದರೆ ಪರಿಶೀಲನಾ ಸಮಿತಿಯಿಂದ ತಿದ್ದುಪಡಿ ಹೊಂದಿದ ಈ ಮಸೂದೆಯ 21ನೆ ಪ್ರಕರಣವು ವಾಣಿಜ್ಯ ಸಂಸ್ಥೆಗಳ ಕ್ಷೇತ್ರ ವಿಸ್ತರಣೆಗೆ ಕಡಿವಾಣದಂತೆ ಆಗಿದೆ. ಈ ಪ್ರಕರಣದಲ್ಲಿ ಉಲ್ಲೇಖಿಸಿದಂತೆ ಬ್ಯಾಂಕುಗಳ ಭಾವಿ ವ್ಯವಹಾರ ಧೋರಣೆಯನ್ನು ರಿಸರ್ವ್ ಬ್ಯಾಂಕು ನಿರ್ಧರಿಸುವುದು, ವಾಣಿಜ್ಯ ಸಂಸ್ಥೆಗಳ ಸಾಲಕೊಡೋಣ, ಬಡ್ಡಿಯದರ ಮುಂತಾದವುಗಳಲ್ಲಿ ನಿಯಂತ್ರಣವಿಡುವ ಸೂಚನೆಕೊಡಲು ರಿಸರ್ವ್ ಬ್ಯಾಂಕಿಗೆ ಅಧಿಕಾರಕೊಡಲಾಗಿದೆ. ಸಂಸ್ಥೆಗಳ ಅಧಿಕೃತ ಸ್ವೀಕೃತ ಮತ್ತು ಪಾವತಿ ಬಂಡವಾಳಗಳ ವಿಚಾರದಲ್ಲಿ ಮಾಡಿದ ತಿದ್ದುಪಡಿಗಳು ಗಮನಾರ್ಹವಾಗಿವೆ. ವಾಣಿಜ್ಯ ಸಂಸ್ಥೆಗಳ ಹುದ್ದೇದಾರರ ಗೌರವ ಪ್ರತಿಷ್ಠೆಗಳ ವಿಷಯದಲ್ಲಿ ಮತ್ತು ಲಾಭಾಂಶ ವಿತರಣೆಯ ಬಗ್ಗೆ ರಚಿಸಿದ ನಿಯಮಾವಳಿಗಳು ಅತೀ ಶ್ಲಾಘನೀಯ. ಸಾಲನಿಯಂತ್ರಣದ ಅಂಶದಲ್ಲಿ ಕೇಂದ್ರಸಂಸ್ಥೆಯು ಅನುಮತಿಯಿಂದ ಕೈಹಾಕಿದರೆ ಈ ಮಸೂದೆಯು ಬ್ಯಾಂಕಿಂಗ್ ಸಂಸ್ಥೆಗಳ ಬೆಳವಣಿಗೆಗೆ ಸಹಾಯವಾಗುವಲ್ಲಿ ಸಂದೇಹವಿಲ್ಲ. ಸ್ವೇಚ್ಛಾವರ್ತನೆಯಿಂದ ಠೇವಣಾತಿದಾರರ ಹಣವನ್ನು ಹೊರಹಾಕದಂತೆ ನೇರವಾದ ಮತ್ತು ಹಿತವಾದ ಮಾರ್ಗದಲ್ಲಿ ನಡೆಯುವರೆ ಬ್ಯಾಂಕುಗಳಿಗೆ ಸೂಚನೆಯಿತ್ತಲ್ಲಿ ಈ ಮಸೂದೆಯು ಫಲಕಾರಿಯಾಗಬಹುದು.

ಭಾರತವು ಬೆಳೆದು ಸ್ವಾವಲಂಬಿಯಾಗಿ ಬಾಳುವ ಭದ್ರವಾದ ಆರ್ಥಿಕ ವ್ಯವಸ್ಥಾರಚನೆಯಲ್ಲಿ ಬ್ಯಾಂಕಿಂಗ್ ಸಂಸ್ಥೆಗಳ ಸೇವೆಯು ಬಹಳವಾಗಬೇಕು.

ಕೆ. ಎನ್. ನಾಯಕ್.

ಕರ್ನಾಟಕ ತೃತೀಯ ಮಲೆನಾಡು ಪರಿಷತ್ತು ಸುಬ್ರಮಣ್ಯದಲ್ಲಿ ಮೇ ತಿಂಗಳ 3ನೇ ಹಪ್ತೆಯಲ್ಲಿ ಜರಗುವುದು.

ನೊನ್ನೆ ತಾ. 12-4-49ರಲ್ಲಿ ಸುಬ್ರಮಣ್ಯದಲ್ಲಿ ಪುತ್ತೂರು ವಕೀಲರು ಶ್ರೀ ಬೆಳ್ತಂಗಡಿ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಸುಬ್ರಮಣ್ಯದ ಹತ್ತಾರು ಗ್ರಾಮಗಳ ಪ್ರಮುಖ ಜನರು ಈ ವರ್ಷದ ಮಲೆನಾಡು ಪರಿಷತ್ತನ್ನು ಸುಬ್ರಮಣ್ಯದಲ್ಲಿ ಜರಗಿಸುವ ಕುರಿತಾಗಿ ತಕ್ಕ ವ್ಯವಸ್ಥೆ ಮಾಡಲು ಒಟ್ಟುಕೂಡಿದ್ದರು.

ಸುಮಾರು 25ಮಂದಿ ಪ್ರಮುಖರಿಂದ ಕೂಡಿದ ಒಂದು ಕಾರ್ಯಕಾರೀ (ಸ್ವಾಗತ) ಸಮಿತಿಯು ಚುನಾಯಿಸಲಾಯಿತು. ಶ್ರೀ ಕೆ. ವಿ. ಗೌಡರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೆ. ವ್ಯಾಸರಾಯರನ್ನು (ದೇಗುಲದ ಅಭಿವೃದ್ಧಿ ಅಧಿಕಾರಿಗಳು) ಕಾರ್ಯದರ್ಶಿಯರಾಗಿಯೂ ದೇಗುಲದ ಮನೇಜರರಾದ ಶ್ರೀ. ಬಿ ರಾಘವೇಂದ್ರರಾಯರನ್ನು ಕೋಶಾಧಿಕಾರಿಗಳನ್ನಾಗಿಯೂ, ಆರಿಸಿದುದಲ್ಲದೆ ಇತರ ಕೆಲವು ಅಧಿಕಾರಿಗಳನ್ನು ನೇಮಿಸಲಾಯಿತು. ಪರಿಷತ್ತು ಸೇರುವ ಸ್ಥಳ ಚಪ್ಪರದ ವ್ಯವಸ್ಥೆ, ಊಟೋಪಚಾರ ವ್ಯವಸ್ಥೆ. ಮುಂತಾದುವುಗಳ ನಿಷ್ಕರ್ಷೆಯಾದುದಲ್ಲದೆ, ಪರಿಷತ್ತಿನ ಸಮಯ, ವಾಹನ ಸೌಕರ್ಯ, ಅನ್ನಸಾಮಗ್ರಿ ಸಂಗ್ರಹ, ಧ್ವನಿವಾಹಕ ಉಪಕರಣಗಳು, ಅಧ್ಯಕ್ಷರ ಯೋಜನೆ, ಬೇರೆ ಬೇರೆ ಸಂಕಾರದ ಅಧಿಕಾರಿಗಳನ್ನು ಬರಮಾಡುವುದು, ಎಂತಾದ ಬಾಹ್ಯಚಟುವಟಿಕೆಗಳನ್ನು ವ್ಯವಸ್ಥೆಗೊಳಿಸುವುದಾಗಿ ನಿಶ್ಚೈಸಲಾಯಿತು.

ಈ ಪರಿಷತ್ತಿನ ಅಧಿವೇಶನಕ್ಕೆ ಸುಮಾರು ಮೂರು ಸಾವಿರ ರೂಪಾಯಿ ಖರ್ಚುತಗಲಬಹುದೆಂದು ಅಂದಾಜು ಹಾಕಲಾಗಿ ಹಣಸಂಗ್ರಹಕ್ಕೆ ತಕ್ಕ ವ್ಯವಸ್ಥೆ ಮಾಡಲಾಯಿತು. ರೂ 25ಕ್ಕೆ ಕಮ್ಮಿ ಆಗದಷ್ಟು ಕೊಡುವವರನ್ನು ಪೋಷಕ ವರ್ಗವೆಂದೂ, ರೂಪಾಯಿ 10ಕ್ಕೆ ಕಮ್ಮಿ ಆಗದಷ್ಟು ವಂತಿಗೆ ಕೊಡುವವರನ್ನು ಸ್ವಾಗತ ಸಮಿತಿಯ ಸದಸ್ಯರೆಂದೂ ಗಣಿಸಲಾಗುವುದು.

ಮಲೆನಾಡು ಸುಧಾರಣೆಯ ಮಹತ್ಕಾರ್ಯದಲ್ಲಿ ಪರಿಷತ್ತುಗಳ ಭಾಗವು ಬಹಳ ಮುಖ್ಯವಾಗಿದೆ. ಜನತೆಯ ಮನಸ್ಸನ್ನು ಈ ಕಡೆಗೆ ತಿರುಗಿಸುವುದಕ್ಕೂ, ಅಧಿಕಾರಿಗಳ ಲಕ್ಷ್ಯವನ್ನು ಸೆಳೆಯುವುದಕ್ಕೂ ಅಧಿಕಾರಿಗಳಿಗೂ ಜನತೆಗೂ ಪರಸ್ಪರ ಸಮ್ಮೇಲನ ಹೊಂದಿಸುವುದಕ್ಕೂ ಇಂತಹ ಪರಿಷತ್ತುಗಳು ಆವಶ್ಯವಾಗಿವೆ. ಕರ್ನಾಟಕ ಮಲೆನಾಡು ಸುಧಾರಣೆಯ ಕಾರ್ಯವು ಇನ್ನೂ ಆರಂಭವಾಗಿಲ್ಲವೆನ್ನಬಹುದು. ಆದ್ದರಿಂದ ಮಲೆನಾಡಿನವರಿಗೂ ಮಲೆನಾಡೇತರ ಜನತೆಯೂ ತ್ರಿಕರಣಪೂರ್ವಕವಾಗಿ ಈ ಪರಿಷತ್ತುಗಳಲ್ಲಿ ಭಾಗವಹಿಸಬೇಕೆಂದು ನಾವು ಬಹಳ ನಮ್ರರಾದರೂ ನಿಶ್ಚಯಾತ್ಮಕವಾಗಿ ಕೇಳಿಕೊಳ್ಳುತ್ತೇವೆ. ಸರಕಾರವೂ ಈ ಕಡೆಗೆ ತನ್ನ ಲಕ್ಷ್ಯಹರಿಸಿ ತನ್ನ ಕರ್ತವ್ಯ ಮಾಡಿ ನಿಜನಾಡಿನ ಸಂಕಟ ನಿವಾರಿಸಲಿ.

ಜನತೆಯು ಮುಂದಿನ ಪ್ರಕಟನೆಗಳನ್ನು ಗಮನಿಸಿ ಯಾವತ್ತೂ ಸಹಕಾರವೀಯಬೇಕೆಂದು ಕರ್ನಾಟಕದ ಮಲೆನಾಡು ಸುಧಾರಣಾ ಸಂಘದ ಅಧ್ಯಕ್ಷ ಶ್ರೀ. ಎಂ. ಎಸ್. ... ಯವರು ಪ್ರಾರ್ಥಿಸುತ್ತಾರೆ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಕಹಾಕಂಪನಿ, ಮಂಗಳೂರು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸು ಸುಲಭವಾಗಿರುವುದು.

ನವಜೀವಾಮೃತು ಎಂಬ ಸೂತಿಕಾ ರಸಾಯನ



ಆ ಔಷಧದ 3 ಬಾಟ್ಲಿಗಳು ಹೆಚ್ಚು ಕಡಿಮೆ 40 ದಿವಸಗಳಿಗೆ ಬರುವುದು. ಅಂದರೆ ಕೇವಲ ... ರೂಪಾಯಿಗಳೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ. ನಂ. 5 ಕೊಡಿಯಾಲಬೈಲು, ದ. ಕ.
ಸ್ಟಾಕಿಸ್ಟರು. ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY'

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಕರವಾದುದೆಂದು, ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

RIGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು ವಿಚಾರಿಸಿರಿ.

ವಿವಿಧ ಪಾತ್ರೆಗಳು



ಯಾವತ್ತೂ ... ದ ಬೆಳ್ಳಿ, ... ಹಿತ್ತಾಳೆ, ... ಮೊದಲಾದ ... ಳ ವಿವಿಧ ... ಗಳೂ ಸಾಮಾ... ಗಳೂ ರಖಂ ...
ಯಾ ಚಿಲ್ಲರೆಯಾಗಿಯೂ ದೊರೆಯು...
ಕಲ್ಮಂಜೆ ವ್ಯಾಸಾಚಾರ್ಯ...
ರಥಬೀದಿ, ಉಡುಪಿ.

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI. S. K

FOUNDER:
Hon'ble Sri. A. B. Shetty
Education Minister, Govt. of Madras

Telegram:
"Navayuga"

Estd.
1921
ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ.
5—4—0

6 ತಿಂಗಳಿಗೆ
3—0—0

ಬಿಡಿಪ್ರತಿಗೆ
0—2—0

ವರ್ಷ ೨೯
ವಾರ 35

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದ್ರಾಸು ಸರಕಾರದ ವಿದ್ಯಾಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 29
No. 35

ಈ ಪ್ರಶ್ನೆಗಳು—

●

ರೈತ ಕೂಲಿಗಾರರೇ ಮೊದಲಾದವರಿಗೆ ಪ್ರಚೋದನೆ, ದಾಂಬೋರೀಘಟನೆಗಳನ್ನು ಕೊಟ್ಟು ಅವರನ್ನು ಅಡ್ಡಹಾದಿ ಹಿಡಿಯಿಸಿ, ದುಷ್ಕೃತ್ಯಗಳನ್ನು ಮಾಡಿಸುತ್ತಿದ್ದಾರೆಂಬ ದಕ್ಕಾಗಿ ಕಮ್ಯೂನಿಸ್ಟರ ಆಟಗಳನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ನಿಲ್ಲಿಸಲಾಯಿತು; ಕಮ್ಯೂನಿಸ್ಟರ ಧ್ಯೇಯ ಧೋರಣೆಗಳು ವಿಘಾತುಕವಿವೆ ಎಂಬುದೊಂದೇ ಇದಕ್ಕೆ ಕಾರಣವಲ್ಲದೆ ರೈತ ಕೂಲಿಗಾರರ ಸ್ಥಿತಿ ಸುಧಾರಣೆಯಾದದ್ದು ಮೇಲ್ನೋಟದಲ್ಲಿಯೆಂದಾಗಲೀ, ಅವರ ಸಂಘಟನಾ ಅನಿವಾರ್ಯತ್ವವೆಂದಾಗಲೀ ಜನತೆ ಹಾಗು ಕಾಂಗ್ರೆಸ್ಸಿಗರೂ ಕೇಳಬಾರದು— ಅಂದ ಮೇಲೆ ಈ ಶ್ರಮಜೀವಿಗಳು ಅಡ್ಡಹಾದಿ ಹಿಡಿಯದಂತೆ ತಡೆದಂತೆಯೇ ಸದ್ದಾರಿ ಹಿಡಿಯುವಂತೆ ಮಾಡುವ ಕೆಲಸವೂ ಆಗಲೇಬೇಕಲ್ಲವೆ? ಕಮ್ಯೂನಿಸ್ಟ್ ಹಿಡಿತದಿಂದ ಬಿಡಿಸಿದ ಅವರನ್ನು ಕಾಂಗ್ರೆಸ್ ಹಾದಿಯಲ್ಲಿ ನಡೆಯಿಸಿ ಕೊಂಡು ಹೋಗುವ ಸಂಘಟನಾ ಕಾರ್ಯ ವಾವುದೂ ಕಾಂಗ್ರೆಸಿಗರಿಂದ ನಡೆಯುತ್ತಿಲ್ಲವೇಕೆ?

ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ, ಅಧಿಕಾರವು ಯಾವುದೊಂದು ಪಕ್ಷಕ್ಕೂ ಕಾಯಂ ಹಕ್ಕಿನದಲ್ಲವೆಂಬುದನ್ನೂ, ಅದೇ ರೀತಿ ಭಾರತದ ಅಧಿಕಾರವು ಎಂದೆಂದಿಗೂ ಕಾಂಗ್ರೆಸಿನದೇ ಆಗಿ ನಿಂತೀತೆಂಬ ಭರವಸೆಯಿಲ್ಲವೆಂಬುದನ್ನೂ ಎಲ್ಲರಿಗಿಂತ ಹೆಚ್ಚಾಗಿ ಕಾಂಗ್ರೆಸಿಗರರಿತುಕೊಳ್ಳಬೇಕಿತ್ತು; ಆದರೆ ಈಗಿನ ಅಧಿಕಾರವು ಕಾಂಗ್ರೆಸ್ ಪಕ್ಷದ್ದಾಗಿರುವುದರಿಂದಲೇ ತಾವೆಲ್ಲರೂ ಅಧಿಕಾರಸಂಪನ್ನರು—ಗುರಿ ಮುಟ್ಟಿದವರು—ಎಂಬ ಆತ್ಮತೃಪ್ತಿ, ಕೇರಕಾರವು ಕಾಂಗ್ರೆಸ್ ಕೆಲಸಗಾರರಲ್ಲಿ ತೋರಿಬರುತ್ತಿರುವುದು ಕಾರ್ಯಪಟುತ್ವ ಕುಂದುಬರುತ್ತಿದೆಯೆ? ಈ ರೀತಿ ಸೇವೆ ಮತ್ತು ತ್ಯಾಗದಿಂದ ಈ ಮೊದಲು ಕಾಂಗ್ರೆಸ್ ಸಂಸ್ಥೆಯು ಗಳಿಸಿಟ್ಟಿದ್ದ ಪ್ರಭಾವ ಮತ್ತು ಕೀರ್ತಿಯನ್ನು ಇಂದಿನ ಕಾಂಗ್ರೆಸಿಗರು ವ್ಯಯಿಸುತ್ತಾ 'ಕುಳಿತುಣ್ಣುವ' ಸೋಮಾರಿಗಳಾಗಿದ್ದರೆ, ಅದೆಷ್ಟೂ ಪೂರ್ತಿ ಬರಿದಾಗಿ ಮುಂದಿನ ಸುಸಂದರ್ಭವು ಅನ್ಯ ಪಕ್ಷೀಯರದಾಗುವ ಕಾಲಬರಲಾರದೆ?

ಕಾಂಗ್ರೆಸಿನ ಸ್ಥಾನ ಮಾನವೇರಿಸುವ ಮಟ್ಟಿಗೆ ನೆಹರು, ಪಟೇಲರಂತಹ ಕೆಲವೇ ಮಂದಿ ಅಗ್ರಗಣ್ಯ ನಾಯಕರಿಂದಾದಷ್ಟು ಕೆಲಸ ಮಿಕ್ಕೆಲ್ಲರಿಂದ ಒಟ್ಟಿಗೆ ಆಗಿದೆಯೋ ಯಾರೂ ಚಿರಂಜೀವಿಗಳಲ್ಲ— ಸಂಪೂರ್ಣರೂ ಅಲ್ಲವೆಂದಮೇಲೆ ಕೇವಲ ಕೈಬೆರಳೆಣಿಕೆಯ ಪುಢಾರಿಗಳನ್ನವಲಂಬಿಸಿಕೊಂಡು ನಿಂತ ಒಂದು ಸಂಸ್ಥೆಯ ಮತ್ತು ಒಂದು ರಾಷ್ಟ್ರದ ಭವಿಷ್ಯತ್ತು ಆ ಕೆಲವರ ಮುಂದಿಯ ಕಾಲಾನಂತರ ಹೇಗಾದೀತು? ಒಳಗಡೆಯಲ್ಲಿ ಬಿರುಕುಬಿದ್ದು, ಕುಸಿದು, ಚಿಲ್ಲಾಪಿಲ್ಲಿಯಾಗುವ ಅಪಾಯವಿಲ್ಲವೆ?

ಸ್ವಾತಂತ್ರ್ಯವಾದಿ ಪಥದಲ್ಲಿದ್ದ ಅಗಾಧ ಕಡಿವಕಂಟೆಗಳನ್ನು ಜಯಶೀಲವಾಗಿ ಕಡೆ ಹಾಯಿಸಿ ರಾಷ್ಟ್ರವನ್ನು ನೆಹರು ಪಟೇಲರಂಥವರ ಮೂಲಕ ಕಾಂಗ್ರೆಸು ಮುನ್ನಡೆಯಿಸಿ ತಂದಿದೆ ಎಂಬುದು ಖಂಡಿತ; ಅದು ಆನಂದದ ಹಾಗೂ ಹೆಮ್ಮೆಯ ವಿಷಯ. ಆದರೆ ಇದುವರೆಗಾಗಿರುವ ಇವೆಲ್ಲಾ ಮಹತ್ಕಾರ್ಯಗಳನ್ನೂ ಜನತೆಯಲ್ಲಿ ಅತ್ಯಧಿಕ ಸಂಖ್ಯೆಯ ಪತ್ರಿಕೆಗಳಿಂದ ಮತ್ತು ಪ್ರದರ್ಶನ ವೈಭವಗಳಿಂದ ಮಾತ್ರ ಅಂತಃಕೊಳ್ಳುವಂತಾಗಿದೆ ಹೊರತು, ಅವರ ಪ್ರತ್ಯಕ್ಷ ಅನುಭೋಗಾನುಭವಕ್ಕೆ ಸ್ವಾತಂತ್ರ್ಯದ ಸುಫಲವೇನಾದರೂ ದೊರೆತಿದೆಯೆ? ಈ ಪರಿಗದು ಅಸಾಧ್ಯವಾದದರಿಂದ, ಬೇಡ—ಜನಸಾಮಾನ್ಯರಿಗದನ್ನು ಒದಗಿಸುವದಕ್ಕಾಗಿ ಆರಂಭಿಸಲ್ಪಟ್ಟಿರುವ ಆರ್ಥಿಕ ಸಾಮಾಜಿಕ ಬದಲಾವಣೆ ಯೋಜನೆಗಳೇನಾದರೂ ಈಗ ಕಣ್ಣು ಮುಂದಿವೆಯೆ? ನಮ್ಮ ಸರಕಾರಗಳು ಮಾಡಿರುವ—ಮಾಡುತ್ತಿರುವ—ಮಾಡಲು ಯೋಚಿಸಿರುವ ಮಹತ್ಕಾರ್ಯವೆಂಬವುಗಳೆಲ್ಲವೂ ವಿದೇಶಸಂಬಂಧ, ಮಹಾಜನ ಸಂಬಂಧ, ಸಂಸ್ಥಾನಗಳ ಬರ್ಖಾಸ್ತು, ದೊಡ್ಡ ಉದ್ದಿಮೆಗಳಿಗೆ ಪ್ರೋತ್ಸಾಹ, ಇತ್ಯಾದಿ ರೂಪಗಳಲ್ಲಿವೆ ಹೊರತು ಜನಸಾಮಾನ್ಯರ ನಿತ್ಯಜೀವನ ಸುಧಾರಣೆಯ ರಂಗದಲ್ಲೇನಾದರೂ ಇವೆಯೆ?

ಪಂಡಿತ ನೆಹರುಗಳಿಂದಾರಂಭಿಸಿ, ಪ್ರಾಂತಿಕ ಮಂತ್ರಿಗಳ ವರೆಗಿನ ಎಲ್ಲಾ ಅಧಿಕಾರಿಗಳಲ್ಲೂ ತಮ್ಮ ಮೇಲೆ ಜನತೆಯ ವಿಶ್ವಾಸವು ಅಚಲವಿದೆ, ಆ ಬಲದಿಂದ ತಾವು ಮಾಡಿದ್ದೆಲ್ಲಾ ಮನ್ನಿಸಲ್ಪಡುತ್ತದೆ, ಎಂಬೊಂದು ಅಹಂಮನ್ಯತೆಯಿರುವುದು ಒಡೆದು ತೋರುತ್ತಿಲ್ಲವೆ? ಹೀಗಾಗಿ, ವಿರೋಧಿಪಕ್ಷ ಕಾಲುವೆಯಲ್ಲಿ ಬೆಂದು, ವಿಚಾರ ಸೂಚಕ್ಕೆ ಡಲ್ಪಡುವ ಯೋಗವೇ ನಮ್ಮ ಸಂಕಟಾ

ಇದೇ 1—4—49ರಿಂದ ಹೊರಟಿದೆ!

ಸುವಾಸಿನಿ

ಸಂಪಾದಿಕೆಯರು:
ಕೆ. ವಾರಿಜಾದೇವಿ, ಬಿ. ಮೋಹಿನಿದೇವಿ.

ಸ್ತ್ರೀಯರಿಂದ ಸ್ತ್ರೀಯರಿಗಾಗಿ ಹೊರಡುವ ಕರ್ನಾಟಕದ ಪ್ರಥಮ ಮತ್ತು ಏಕಮಾತ್ರ ಮಹಿಳಾ ಸಾಪ್ತಾಹಿಕ. ಸ್ವಲ್ಪವಾದರೂ ಓದುಬರಹ ತಿಳಿದ ಸ್ತ್ರೀಯರಿಗೆ, ಮನೆಯಲ್ಲಿ ಕುಳಿತಲ್ಲೇ ಇದು ಸ್ವಯಂ ಶಿಕ್ಷಕನಂತೆ, ಎಲ್ಲ ತರದ ತಿಳಿವನ್ನು ಕೊಡುವುದು.

೧. ಕಸೂತಿ ಕೆಲಸ ಮಾಡುವವರಿಗೆ, ಪ್ರತಿಯೊಂದು ಸಂಚಿಕೆಯಲ್ಲೂ ಹೊಸರೇಖಾಚಿತ್ರಗಳು (ಎಂಬ್ರಾಯ್ಡರಿ ಡಿಸಾಯಿನ್ಸ್) ಬರುವುವು ೨. ಪ್ರತಿಯೊಂದು ಸಂಚಿಕೆಯಲ್ಲಿ ಕತೆ, ೩. ಭೂಲೋಕದ ನಾನಾ ಭಾಗಗಳಲ್ಲಿರುವ ಸ್ತ್ರೀಯರ ನಡೆ–ನುಡಿಗಳು, ೪. ಪ್ರಸಿದ್ಧ ಪಟ್ಟಣಗಳ ಪರಿಚಯ, ಯಾತ್ರಾಕ್ಷೇತ್ರಗಳ ವಿವರ, ೫. ಸ್ತ್ರೀಯರ ದೇಹಾರೋಗ್ಯ, ಅವರ ನಾನಾ ಸಮಸ್ಯೆಗಳ ಚರ್ಚೆ, ೬. ಮಕ್ಕಳ ಶಿಕ್ಷಣ, ಮಕ್ಕಳ ಕಾಯಿಲೆಗಳಿಗೆ ಗೃಹವೈದ್ಯ, ಸ್ತ್ರೀಯರ ನಾನಾ ಕಿರುಕುಳಗಳಿಗೆ ಉಪಶಮನ- ಇವೆಲ್ಲವೂ ಪ್ರಕಟವಾಗುವುವು. ೭ ಬಗೆಬಗೆಯ ತಿಂಡಿ, ಪದಾರ್ಥಗಳನ್ನು ತಯಾರಿಸುವ ವಿಧಾನಗಳು ಕೊಡಲ್ಪಡುವುವು. ೮ ಪ್ರಸಿದ್ಧ ಸ್ತ್ರೀಯರ ಚರಿತ್ರ, ಪ್ರಸಿದ್ಧ ಕವಿಗಳ ಮತ್ತು ಲೇಖಕರ ಪರಿಚಯ. ೯ ಭೂಲೋಕದ ಮತ್ತು ಆಕಾಶದೊಳಗಿನ ನಾನಾ ವೈಚಿತ್ರ್ಯಗಳು ವಿವರಿಸಲ್ಪಡುವುವು. ೧೦ ಪ್ರತಿ ಸಂಚಿಕೆಯಲ್ಲಿಯೂ ಚಕ್ರಬಂಧ ಒಗಟುಗಳು ಪ್ರಕಟವಾಗುವುವು. (ಪ್ರವೇಶಧನವಿಲ್ಲದೆ ಬಹುಮಾನಗಳು ಕೊಡಲ್ಪಡುವುವು)

ಇನ್ನೂ ಇಲ್ಲಿ ವಿವರಿಸಲು ಸ್ಥಳಸಾಲದ ನೂರಾರು, ಸಾವಿರಾರು ವಿಷಯಗಳು ಬರುವುವು.

ಪ್ರತಿ ಸಂಚಿಕೆಯಲ್ಲೂ 16ಕ್ಕೆ ಕಡಿಮೆಯಾಗದ ಲೇಖನಗಳು! ಅನೇಕ ಚಿತ್ರಗಳು. ಬಿಡಿಸಂಚಿಕೆಗೆ ಎರಡಾಣೆ. ಒಂದು ವರ್ಷಕ್ಕೆ ಅಂಚೆ ವೆಚ್ಚ ಸೇರಿ ರೂ 6-12-0 ಮಾತ್ರ. ಪ್ರತಿ ಶುಕ್ರವಾರ ಹೊರಡುತ್ತದೆ; ನಿಮ್ಮ ಚಂದಾ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳಿಸಿಕೊಡಿರಿ

ಸುವಾಸಿನಿ ಪಬ್ಲಿಕೇಶನ್ಸ್ ಲಿಮಿಟೆಡ್, ಮಿಶ್ಶನ್ ಹೈಸ್ಕೂಲ್, ಮಂಗಳೂರು

ನಿಮ್ಮ ತೃಪ್ತಿ ನಮ್ಮ ಗೌರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Niligiris)

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಕೆಟ್ಟಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:- ಧಾರವಾಡ,

THE UNITED KARNATAK INSURANCE CMPANY, LIMITED

ನಾಯಕರಿಗೆ ತಪ್ಪಿಹೋಗಿದೆ ಎಂಬುದು ಖಂಡಿತವಲ್ಲವೆ?

ಸ್ವಾತಂತ್ರ್ಯ ಹೋರಾಟದ ಆ ಕಾಲದಲ್ಲಿ ನಮ್ಮ ನಾಯಕರು ವಿದೇಶೀಯರ ಟೀಕೆ ಮತ್ತು ವಿಮರ್ಶೆಗಳಿಗೂ ಸ್ವದೇಶೀ ಬಂಧುಗಳ ಶ್ಲಾಘನೆ ಮತ್ತು ಗೌರವಾದರಗಳಿಗೂ ಪಾತ್ರರಾಗಿದ್ದರು; ಸ್ವಾತಂತ್ರ್ಯ ದೊರೆತ ಈ ಕಾಲದಲ್ಲಿ--ನಮ್ಮ ನಾಯಕರು ಪರದೇಶೀಯರ ಮುಕ್ತಕಂಠದ ಶ್ಲಾಘನೆಗಳಿಗೂ ಸ್ವದೇಶೀಯರ ದುಃಖದ ಮಾತು ಮತ್ತು ಟೀಕೆಗಳಿಗೂ ಗುರಿಯಾಗಿದ್ದಾರೆ. ದೇಶದ ಸ್ವಾತಂತ್ರ್ಯಕ್ಕೆ ದೇಶದ ಜನತೆಯ ಉದ್ಧಾರವೊಂದೇ ಮುಖ್ಯ ಗುರಿಯಲ್ಲದೆ ವಿದೇಶೀಯರ ಶ್ಲಾಘನೋದ್ಗಾರವಲ್ಲ ಎಂಬುದನ್ನು ಲಕ್ಷ್ಯದಲ್ಲಿಟ್ಟರೆ ಇಂದಿನ ಪರಿಸ್ಥಿತಿಯಿಂದ ನಾವು ಸಮಾಧಾನಗೊಳ್ಳುವಂತಿದೆಯೆ?

ನಿಜಕ್ಕೂ ಈ ವರೆಗಿನ ನಮ್ಮ ಸ್ವಾತಂತ್ರ್ಯದ ಗತಿಯೆಂದರೆ, ಅದು ಪರಕೀಯರ ಕೈಯಿಂದ ಬಿಟ್ಟು ಸ್ವಕೀಯರ ಕೈಗೆ—ಬಿಳಿ ಕೈಗಳಿಂದ ಕಪ್ಪು ಕೈಗಳಿಗೆ—ಬಂದಿದೆ. ಅದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕೈಯಿಂದ ಜಾರಿ ಹಿಂದೀ ಮೇಲ್ವರ್ಗ (ಧಂಡನಾಳಗಾರ ವರ್ಗ?) ದ ಕೈ ಸೇರಿದುದು ಅಲ್ಲಿಂದ ದಾಟಿ ಜನತಾ ರಂಗದತ್ತ ಈ ವರೆಗೆ ಬಂದಿಲ್ಲ; ಅದನ್ನಿತ್ತ ಇಳಿಸುವ ಕೆಲಸ ಕೂಡಾ ಸಾಕಷ್ಟು ರಭಸವಾಗಿ [illegible]ದಿಲ್ಲ. ಇಂದಿನ ಅನಿಶ್ಚಿತ, ಅಸ್ಥಿರ [illegible] ವಾತಾವರಣದಲ್ಲಿ ಹೊಸ ಸ್ವಾತಂತ್ರ್ಯದ ಬಲವನ್ನೂ, ರಾಷ್ಟ್ರದ ಉತ್ಪನ್ನಗಳನ್ನೂ ಹೆಚ್ಚಿಸಿ ಕೊಂಡು ಗಟ್ಟಿ ಮಾಡಿಕೊಳ್ಳುವದೊಂದೇ ಈಗಿನ ಕರ್ತವ್ಯವಲ್ಲದೆ, ಈ ಅವಧಿಯಲ್ಲೇ ಸಾಮಾಜಿಕ-ಆರ್ಥಿಕ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ಎಲ್ಲವನ್ನೂ ತಲೆಮೊಗಚಿ ಹಾಕಿಕೊಳ್ಳುವದು ಅಪಾಯಕರವೆಂಬ ನಾಯಕರ ಮನೋವೃತ್ತಿಯು ಅರ್ಥವಾಗುವಂತಹದೇ. ಆದರೆ ಇದ್ದ ಸ್ಥಿತಿಯನ್ನೇ ಇನ್ನಷ್ಟು ಭದ್ರಪಡಿಸಿಕೊಂಡಲ್ಲಿ, ಸ್ವಾತಂತ್ರ್ಯದ ತಿರುಳಾದ ಜನಸಾಮಾನ್ಯರ ಅಧಿಕಾರ ಮತ್ತು ಅಭಿವೃದ್ಧಿ ಸಾಧನೆಯು ಮತ್ತೆ ಯಾವ ಕಾಲಕ್ಕೂ ಕಷ್ಟವಾಗದೆ? ನಾಳೆ ಬದಲಾಯಿಸಬೇಕಾದ ಸ್ಥಿತಿಯನ್ನು ಇಂದು ಭದ್ರಪಡಿಸಿಕೊಳ್ಳುವದು ಯಾವ ದೃಷ್ಟಿಯಿಂದಾದರೂ ಹಿತಕರವೆ?

ಒಟ್ಟಿನ ಮೇಲೆ ಭಾರತದ 'ಮೂಕ ಮಿಲಿಯಮಂದಿ' ಈಗಲೂ ಮೂಕ ಮಂದಿಯಾಗಿಯೇ ಇದ್ದಾರೆ. ಇನ್ನೂ ದೀರ್ಘ ಕಾಲದವರೆಗೂ ಹಾಗೆಯೇ ಇರಬೇಕಾದೀತು—ಎಂಬ ಭೀತಿ ಈಗ ಹುಟ್ಟುತ್ತಿಲ್ಲವೆ? ಅಧಿಕಾರ ವಹಿಸಿದವರು ತಮ್ಮ ಅವಸರದ ಕಾರ್ಯವೆಂದು ಇದ್ದ ಸ್ಥಿತಿಯನ್ನೇ ಬಲಪಡಿಸುತ್ತಿರುವಾಗ—ಸಮಾಜವಾದಿಗಳು, ಸಮಾನತಾವಾದಿಗಳ ಪೈಕಿ ಕೆಲವರಲ್ಲಿ ಅನ್ಯೋದ್ದೇಶ, ದುರುದ್ದೇಶಗಳೂ ಇನ್ನು ಕೆಲವರಲ್ಲಿ ದೌರ್ಬಲ್ಯ, ಮತ್ತು ಕೇವಲ ಬಾಯಿಬಲವೂ ತೋರಿಬರುತ್ತಿರುವಾಗ—ಜನತೆಯ ಕ್ಷಿಪ್ರ ಉದ್ಧಾರದ ಆಶೆಯೆಲ್ಲಿದೆ?

WANTED

for the Hindu High School Shirva, Shirva Post- S- K-

1, Three L. T's or B. T's- History Science and Mathamatics Graduates mayalso apply,

2) One Trained Kannada Pandith

3) one qualified spinning and

ಡಾ| ಪಟ್ಟಾಭಿಗಳ ತೀರ್ಪನ್ನು—

ಇಡೀ ಬಳ್ಳಾರಿಯನ್ನು ನುಂಗುವ ಯತ್ನ!

ರಾಷ್ಟ್ರಪತಿ ಡಾ| ಪಟ್ಟಾಭಿಗಳು ಹಿಂದೀ ರಾಜಕಾರಣಿಗಳ ಪೈಕಿ ವಿಶೇಷ ಬುದ್ಧಿವಂತರಾದವರ ಗುಂಪಿಗೆ ಸೇರಿದವರು; ಆದರೆ ಅವರ ಚಾತುರ್ಯ ತೋರಿಬಂದಷ್ಟು ಶುದ್ಧ ಹೃದಯ, ವಿಶಾಲಮನೋವೃತ್ತಿಯು ಪರಿಚಯ ಜನತೆಗಾಗಿಲ್ಲ. ಜನರು ದರೋ ವಿಶಾಲಹೃದಯಿಗಳನ್ನು ಮೆಚ್ಚಿದಷ್ಟು ವಿಶೇಷ ಬುದ್ಧಿವಂತರನ್ನು ಮೆಚ್ಚುವದಿಲ್ಲ; ಚಾತುರ್ಯದ ಜತೆಗೂಡಿ ಬೆಳೆಯುವ ಗುಣವೆಂದರೆ ಕುಯುಕ್ತಿ ಹೊರತು ಯಥಾರ್ಥತೆಯಲ್ಲವೆಂಬುದೇ ಅನುಭವಸಿದ್ಧ ನಂಬಿಕೆ. ಡಾ| ಪಟ್ಟಾಭಿ ಸೀತಾರಾಮಯ್ಯನವರು ವಿಶೇಷ ಚತುರನೆಂಬ ಕೀರ್ತಿಗಳಿಸಿದ ಪರಿಮಾಣದಲ್ಲೇ ನಿರ್ವಂಚಕೋದಾರಿಯೆಂಬ ಕುರಿತು ವಿಶ್ವಾಸಕಳಕೊಂಡಂತಿದೆ. ಅವರ ವಾಗ್ಮಿತೆ-ಕಾರ್ಯಪಟುತ್ವ-ಉದ್ಯಮ ಜಾಣ್ಮೆ - ಲೇಖನಿ, ಇವೆಲ್ಲವೂ ಮೇಲ್ಮಟ್ಟದವು. ಆದಿ ಕಾಲದಲ್ಲಿ ಆಂಧ್ರರ ಅನನ್ಯ ನಾಯಕನೇ ಪಟ್ಟಾಭಿ ಕಾಂಗ್ರೆಸಿನ ಸುವರ್ಣೋತ್ಸವ ಸಂದರ್ಭದಲ್ಲಿ ಅದರ ಚರಿತ್ರೆ ಬರೆವ ಲೇಖನಿಯು ಕಾಂಗ್ರೆಸ್ ಸಂಸ್ಥೆಯಿಂದಲೇ ಡಾ| ಪಟ್ಟಾಭಿಗಳ ಕೈಗೆ ಕೊಡಲ್ಪಟ್ಟಿದ್ದಿತು. ಎಂತಹ ಜಡುಪಿನ ವಿಷಯವನ್ನಾದರೂ ಬಿಡಿಸಿ ಎಸಳೆಸಲಾಗಿ ತೋರಿಸಬಲ್ಲ ಪ್ರತಿಭೆ ಅವರಲ್ಲಿದೆ; ಆದರೆ ಅದೇಕೋ—ಇವೆಲ್ಲಾ ಯೋಗ್ಯತೆಗಳೂ ಕೇವಲ ವಸ್ತುಸ್ಥಿತಿ ಮತ್ತು ನ್ಯಾಯದ ಪನ್ನು ಹಿಡಿದೇ ಮುಂದೊತ್ತಿಯಾವೆಂಬ ವಿಶ್ವಾಸ ಮೂಡಿಲ್ಲ; ಅವರ ತಲೆಗೆ ದೊರೆತಿರುವ ಉಡುಗೊರೆ ಹೃದಯಕ್ಕೆ ಸಿಕ್ಕಿಲ್ಲ. ಅವರು ರಾಷ್ಟ್ರದ ಹಿರಿಯ ಕಾಂಗ್ರೆಸಿಗರಲ್ಲೊಬ್ಬರು; ತನ್ನ ತಾರುಣ್ಯದಿಂದಲೂ ರಾಜಕೀಯದಲ್ಲಿ ದುಡಿದು, ಕಾಂಗ್ರೆಸಿನ ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಆದಿಯಿಂದ ಅಂತ್ಯದವರೆಗೂ ಯೋಧನಾಗಿದ್ದು, ಹಣ್ಣಾದವರು. ಆದರೆ ಈ ಬಾರಿಯ ರಾಷ್ಟ್ರಪತಿಗದ್ದುಗೆ ದೊರೆಯುವ ವರೆಗೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯತ್ವಕ್ಕಿಂತ ಹೆಚ್ಚಿನ ಜವಾಬ್ದಾರಿ ಸ್ಥಾನಕ್ಕೇರಲು ಅವರಿಂದಾಗಿರಲಿಲ್ಲ; ಈ ಸಲ ಕೂಡಾ ಅವಿರೋಧವಾಗಿ ಆ ಅಗ್ರಪೀಠ ಅವರಿಗೆ ದೊರೆತುದಲ್ಲ. ಕಾಂಗ್ರೆಸ್ ಸಂಸ್ಥೆಗಿಂತ ಹೆಚ್ಚಾಗಿ ಜನತೆಯ ಲಕ್ಷ್ಯವನ್ನೆಳೆಯುವ ಕಾಂಗ್ರೆಸ್ ಸರಕಾರಗಳಿರುವ ಈ ಕಾಲದಲ್ಲಿ ಡಾ| ಪಟ್ಟಾಭಿ ಕಾಂಗ್ರೆಸ್ ಅಧ್ಯಕ್ಷನಾಗಿ ಆರಿಸಲ್ಪಟ್ಟದೇನೂ ಹೆಚ್ಚಲ್ಲ--ಜನತೆಯ ಮುಖ್ಯಾಶ್ರಯವಾಗಿ ಕಾಂಗ್ರೆಸ್ ಸಂಸ್ಥೆಯೊಂದೇ ಇರುತಿದ್ದರೆ ಈಗ ಕೂಡಾ ಡಾ| ಪಟ್ಟಾಭಿಗಳು ಹೇಗಾಗುತ್ತಿದ್ದರೋ ಹೇಳುವದಸಾಧ್ಯ. ಇದು ಡಾ| ಪಟ್ಟಾಭಿ [illegible] ವೈಶಿಷ್ಟ್ಯವೆನ್ನಬೇಕು.

ಪಟ್ಟಾಭಿ ಧೋರಣೆ.

ನೆಹರೂ, ವಲ್ಲಭಭಾಯಿ, ಪ್ರಸಾದರಂತವರ ಹೃದಯವನ್ನು ಅರಿತಂತೆ ಡಾ| ಪಟ್ಟಾಭಿಗಳ ಮನಸ್ಸನ್ನು ತಿಳಿಯುವದೆಂದರೆ ಸಾರ್ವಜನಿಕರಿಂದಾಗದ ಮಾತು. ಅವರು ರಾಷ್ಟ್ರಪತಿಯಾದ ಮೇಲೆ ಪ್ರದರ್ಶಿಸಿದ ಮನೋವೃತ್ತಿಯೇ ಇದಕ್ಕೊಂದು ನಿದರ್ಶನ. ಹೇಗಾದರೂ ಮಾಡಿ ಆಂಧ್ರ ಪ್ರಾಂತ್ಯವನ್ನು ರಚಿಸಬೇಕೆಂಬ ಛಲತೊಟ್ಟವರು ಡಾ| ಪಟ್ಟಾಭಿಗಳು. ಅವರು ಕಾಂಗ್ರೆಸ್ ಅಧ್ಯಕ್ಷ ಗಾದಿಗೇರುವ ಮೊದಲೇ ಭಾಷಾವಾರು ಪ್ರಾಂತ್ಯಗಳ ರಚನಾ ಸಂಬಂಧದ ಸರ್ವ ವಿಷಯಗಳ ಪರಿಶೀಲನೆಗಾಗಿ ದಾರ್ ಸಮಿತಿ ನೇಮಕಗೊಂಡಿದ್ದಿತು. ಈ ಕಾಲದಲ್ಲಿ ನವ ಪ್ರಾಂತ್ಯ ರಚನೆಗಳಿಯುವ ಕುರಿತು ನೆಹರು, ವಲ್ಲಭಭಾಯಿಗಳು ಬದ್ಧ ವಿರೋಧಭಾವ ತಟ್ಟಿಕೊಂಡಿದ್ದಾರೆಂಬುದು ಖಚಿತವಾಗಿದ್ದಿತು. ದಾರ್ ಸಮಿತಿಯ ವರದಿಯೂ, ನೆಹರು ವಲ್ಲಭಭಾಯಿಗಳ ಧೋರಣೆಯೂ ಭಾಷಾವಾರು ಪ್ರಾಂತ್ಯರಚನಾ ಮುಂದಾಳುಗಳಲ್ಲಿ ತೀವ್ರ ನಿರಾಶೆಯನ್ನು ಉಂಟುಮಾಡಿದ್ದಿತು; ಅವರ ಪೈಕಿ ಅಗ್ರಗಣ್ಯನೇ ಡಾ| ಪಟ್ಟಾಭಿ. ಅಂದಮೇಲೆ ಜೈಪುರ ಕಾಂಗ್ರೆಸಿನಲ್ಲಿ ಭಾಷಾವಾರು ಪ್ರಾಂತ್ಯರಚನಾ ಪ್ರಶ್ನೆಯು ಪರಿಶೀಲನೆಗಾಗಿ ನೆಹರೂ-ವಲ್ಲಭಭಾಯಿ--ಪಟ್ಟಾಭಿಗಳ ತ್ರಿಮೂರ್ತಿ ಸಮಿತಿ ನೇಮಿಸಲ್ಪಟ್ಟಾಗ ಅದರ ಪೈಕಿ ಮೊದಲಿನ ಇಬ್ಬರು ಮತ್ತು ಕೊನೆಯ ಒಬ್ಬ ಸದಸ್ಯರೊಳಗೆ ತೀವ್ರ ಭಿನ್ನಾಭಿಪ್ರಾಯಗಳೇಳಬಹುದೆಂದು ಎಲ್ಲರೂ ಸಹಜವಾಗಿ ನಿರೀಕ್ಷಿಸಿದ್ದರು; ಈ ಹೊಣೆಯರಿತ ಪ್ರಮುಖರು ಅಭಿನ್ನಾಭಿಪ್ರಾಯಗಳನ್ನು ಸದ್ಭಾವನೆಯಿಂದಾಗಿ ಮಾಡಿತೋರಲು ಬಿಡಲಿ ರಾದರೂ ಒಮ್ಮತದ ತೀರ್ಮಾನವಾಗುವ ಬಗೆ ಹೇಗೆಂಬ ಪ್ರಶ್ನೆಯಿದ್ದಿತ್ತು. ಆದರೆ ಡಾ| ಪಟ್ಟಾಭಿಗಳ ಸ್ವಕಾರ್ಯ ಸಾಧನೆ

ಸಂರಕ್ಷಣೆ ಮತ್ತು ಉಳಿತಾಯ ವ್ಯವಸ್ಥೆಗಾಗಿ

ಹೆಸರಾಂತ ಪ್ರಗತಿಪರ ವಿಮಾಕಚೇರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

(ಯುನೈಟೆಡ್ ಇಂಡಿಯಾ ಬಿಲ್ಡಿಂಗ್) ಟಪ್ಪಾಲು ಪೆಟ್ಟಿಗೆ ನಂಬ್ರ 142

ಎಸ್ಪ್ಲನೇಡ್, ಮುಖ್ಯ ಕಾರ್ಯಾಲಯ, ಮದ್ರಾಸು.

ಚೆಯರ್ಮೆನ್:

ದಿ ಒನರಬ್ಲ್ ಮಿ| ಎಮ್. ಸಿಟಿ ಎಮ್. ಚಿದಂಬರಂ ಚೆಟ್ಟಿಯಾರ್ ಅವರ್ಗಳ್.

ಇಳಿಮುಖದ ಖರ್ಚು; ಸಾಮಾನ್ಯ ಪ್ರೀಮಿಯಮ್ ದರಗಳು;

ಶೀಘ್ರ ಕ್ಲೈಮುಗಳ ಬಟ್ವಾಡೆ ಮತ್ತು ಸಮರ್ಥ ಆಡಳಿತೆ.

ಹಿಂದೂಸ್ಥಾನದಲ್ಲೆಲ್ಲಾ ಶಾಖಾಕಚೇರಿಗಳೂ ಪ್ರತಿನಿಧಿಗಳೂ ಇದ್ದಾರೆ.

ನುರಿತ ಅನುಭವೀ ಜನರಿಂದ ಕಂಪೆನಿಯ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು.

ಆರ್ಗನೈಜಿಂಗ್ ಸೆಕ್ರೆಟರಿ,

ಮಂಗಳೂರು ಶಾಖೆ: ಕೆ. ಎಸ್. ರಾವ್ ರಸ್ತೆ, ಹಂಪನಕಟ್ಟೆ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ರಿಂದ ೫ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವಟೆ ಗುಡ್ಡೆ, ಮಂಗಳೂರು.

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರು, ಕುಂದಾಪುರ, ಗಂಗೊಳ್ಳಿ, ಉಡಿಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906

ಪಟ್ಟಾಭಿಗಳೇ ಮುರಿಯುವರೆ?

ಕನ್ನಡಿಗರ ಕಣ್ಣಿಗೆ ಮಂಕು ಬೂದಿ!

ಚಾತುರ್ಯವನ್ನು ಮತ್ತೊಮ್ಮೆ ತೋರಿಸೂ ಸುತ್ತಾ ತ್ರಿಮೂರ್ತಿ ಸಮಿತಿಯು ಒಮ್ಮತದ ತೀರ್ಮಾನವೇ ಪ್ರಕಟಗೊಂಡಿತು. ಎಲ್ಲಕ್ಕಿಂತ ಮೊದಲು ಆಂಧ್ರಪ್ರಾಂತ್ಯವೊಂದನ್ನು ರಚಿಸಿ, ಮಿಕ್ಕ ಭಾಷಾವಾರು ಪ್ರಾಂತ್ಯಗಳ ಪ್ರಶ್ನೆಯನ್ನು ಹಿಂದಕ್ಕೆ ಸರಿಸಿಬಿಡುವ--ತನ್ನ ಕೆಲಸವೊಂದನ್ನು ಅವಸರದಿಂದ ಮುಗಿಸಿಕೊಂಡು ಮಿಕ್ಕವರ ಕಾರ್ಯದಲ್ಲಿ ಸಾವಧಾನತೆ ತೋರಿಸುವ--ಬುದ್ಧಿವಂತಿಕೆಯನ್ನು ಡಾ। ಪಟ್ಟಾಭಿಗಳು ಅದರಲ್ಲಿ ಪ್ರದರ್ಶಿಸಿದ್ದಾರೆ. ಕರ್ನಾಟಕ-ಕೇರಳ-- ಮಹಾರಾಷ್ಟ್ರಗಳವಂತೆಯೇ, ತೆಲುಗು ಪ್ರಾಂತ್ಯರಚನೆಗೂ ಕೆಲವು ಶರ್ತಗಳು, ನಿರ್ಬಂಧಗಳು ಬಿದ್ದಿರುವವಾದರೆ ಹಾಗಾಗಲು ಕಾರಣ ನೆಹರು ವಲ್ಲಭಾಯಿಗಳು; ಆ ಭಾಗಗಳಿಗಿಂತ ಬೇಗನೇ ಮತ್ತು ಸುಲಭದಲ್ಲಿ ಆಂಧ್ರ ಪ್ರಾಂತ್ಯ ರಚನೆಯಾಗುವ ಅನುಕೂಲತೆ ದೊರೆತಿರುವುದು ಡಾ। ಪಟ್ಟಾಭಿಗಳ ಪ್ರಯತ್ನದಿಂದಲೇ. ಆಂಧ್ರ ಪ್ರಾಂತ್ಯ ರಚನೆ ಮತ್ತು ಮಿಕ್ಕ ಭಾಷಾ ಭಾಗಗಳ ಪ್ರತ್ಯೇಕೀಕರಣದ ಬಗ್ಗೆ ತ್ರಿಮೂರ್ತಿ ವರದಿಯಲ್ಲಿನ ಮಾಡಿಸಲ್ಪಟ್ಟಿರುವಂಥಾ ವ್ಯತ್ಯಾಸಗಳಿರುವುದು ನಿಜವಾದರೂ, ಒಮ್ಮೆ ಭಾಷಾವಾರು ಪ್ರಾಂತ್ಯರಚನೆಗಳಿದ ಮೇಲೆ,ಮಾತ್ರ ಈ ವ್ಯತ್ಯಾಸಗಳನ್ನು ಗಣಿಸಿ ಪಕ್ಷಪಾತ ಮಾಡುವದಕ್ಕಿಂತ ಎಲ್ಲವನ್ನೂ ಒಮ್ಮೆಗೇ ಸಾಂಗಗೊಳಿಸುವದು ಹಿತವೆಂಬುದು ಸ್ವತಃಸಿದ್ಧ. ಆದರೆ ಡಾ। ಪಟ್ಟಾಭಿಗಳಿದ್ದರು—ತ್ರಿಮೂರ್ತಿ ವರದಿ 'ಬಾಯಿ ನೋಡಿ ಬಾ ಎನ್ನುವ' ಪಂಕ್ತಿಭೇದ ತೋರಿಸಿತು.

ಆ ಮೇಲಿನ ವರ್ತನೆ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಿಂದ ತಮ್ಮ ವರದಿಯು ಅಂಗೀಕಾರವಾಡಿಸಿಕೊಂಡ ಮೇಲೆ ಡಾ। ಪಟ್ಟಾಭಿಗಳೀಗ ಆದಷ್ಟು ಬೇಗನೇ ಆಂಧ್ರ ಪ್ರಾಂತ್ಯವೊಂದನ್ನು ಕಟ್ಟಹಾಕುವ ಪ್ರಯತ್ನದಲ್ಲಿದ್ದಾರೆ. ಆ ಕುರಿತು ಮತ್ಸರ ಪಡುವವರಿಲ್ಲ; ಆಂಧ್ರದೊಂದಿಗೇನೇ ತಮ್ಮ ಪ್ರಾಂತ್ಯವೂ ಆಗಬೇಕೆಂದೇ ಕರ್ನಾಟಕ, ಕೇರಳ, ಮಹಾರಾಷ್ಟ್ರಗಳವರ ಆತುರ ಹೊರತು, ಆಂಧ್ರರಿಂತ ತಮ್ಮದಾಗಿಕೊಳ್ಳದೆ ಅವರದಾಗಕೂಡದು'ಎಂಬ ಹಠವೇನೂ ಇಲ್ಲ. ಇನ್ನೂ ಹೇಳುವುದಾದರೆ ಕೇವಲ ಸ್ಥಿತಿಗತಿಯನ್ನಾಧರಿಸಿ, ನಿಷ್ಪಕ್ಷಪಾತವಾಗಿ ಕೆಲಸವಾಗುತ್ತವಾದರೆ ಒಂದೆರಡು ವರುಷಗಳ ಹಿಂದು-ಮುಂದಿನ ವ್ಯತ್ಯಾಸಕ್ಕಾಗಿ ಕುದಿಯುವವರಾರೂ ಇಲ್ಲ. ಆದರೆ ರಾಷ್ಟ್ರಪತಿ-ಅಖಿಲ ಭಾರತದ ಸರ್ವಭಾಗಗಳವರನ್ನೂ ಸಮಾನತೆಯಿಂದ ಕಾಣಬೇಕಾದ ಅಗ್ರಪೀಠಾರೂಢ-ಡಾ। ಪಟ್ಟಾಭಿಗಳ ಹೇಳಿಕೆಗಳು ಇಂತಹ ನಿರ್ಮಲವಾತಾವರಣದ ನಿರ್ಮಾಣಾನುಕೂಲವಿಲ್ಲದಿರುವದು ಅತ್ಯಂತ ಶೋಚನೀಯ. ತನ್ನ ದೃಷ್ಟಿತುಂಬಿರುವ ಆಂಧ್ರಪ್ರಾಂತ್ಯ ರಚನೆಗಾಗಿ ಡಾ। ಪಟ್ಟಾಭಿಗಳು ವಹಿಸಿತಿಯನ್ನು ವಿಹಯೋಗಸಗೊಳಿಸುವದಕ್ಕೂ, ಹೊಸನಿರ್ಮಾಣ ಮಾಡುವದಕ್ಕೂ, ತೀರ್ಮಾನ ಸೂತ್ರಗಳನ್ನು ಮೀರಿ ಹೆಜ್ಜೆಯಿಡುವದಕ್ಕೂ ಸಿದ್ಧರೆಂಬುದರ ನಿದರ್ಶನಗಳು ತೋರಿಬಂದಿವೆ. ನವದಿಲ್ಲಿಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆ ಮುಗಿಸಿ. ಬೊಂಬಾಯಿಗೆ ಬಂದೊಡನೆಯೇ ಡಾ। ಪಟ್ಟಾಭಿಗಳು ತ್ರಿಮೂರ್ತಿ ವರದಿಯನ್ನು ಸಮರ್ಥಿಸಿಕೊಟ್ಟ ಹೇಳಿಕೆಯು ಅವರ ವಾದಪ್ರತಿಭೆಯ ಉತ್ತಮ ದಾಖಲೆ; ಎಲ್ಲಾ ಭಾಷಾವಾರು ಭಾಗಗಳವರ ಮನೋವೇದನೆಗಳಿಗೂ ಅವರು ಪರಿಹಾಮಕಾರೀ ಲೇಪ ಹಚ್ಚಿದ್ದರು. ಆದರೆ ರಾಜಕೀಯ ಮುಂದಾಳು ಓರ್ವನಿಗೆ ವಸ್ತುಸ್ಥಿತಿಗೆ ತನ್ನಿಚ್ಛೆಯ ಬಣ್ಣ ಬಳಿದು ತೋರಿಸುವ ಅಧಿಕಾರವಿದೆ ಹೊರತು, ಅದನ್ನು ಬದಲಾಯಿಸಿ ಮುಂದಿಡುವ ಹಕ್ಕಿಲ್ಲವೆಂಬುದನ್ನು ಅವರು ಮರೆತಂತಿದೆ. "ನಾವು ಆಂಧ್ರರು, ತಮಿಳರೊಡನೆ ಅತ್ಯಂತ ಸ್ನೇಹಾಚಾರದಿಂದಿದ್ದೇವೆ" ಎಂದು ಡಾ। ಪಟ್ಟಾಭಿಗಳೆಂದುದು ಸತ್ಯಸ್ಥಿತಿಯೇ? ಇದು ಸತ್ಯವೆಂದಾದರೆ "ಮದ್ರಾಸ್ ಪ್ರಾಂತ್ಯದ ಕಾಂಗ್ರೆಸ್ ಶಾಸನಸಭಾ ಸದಸ್ಯರೊಳಗೀಗ ಪೂರ್ಣ ಒಕ್ಕಟ್ಟಿದೆ" ಎಂದರೂ ಸಲ್ಲುತ್ತದಷ್ಟೆ? "ನಾನು ಕೇವಲ ಆಂಧ್ರಪ್ರಾಂತ್ಯ ರಚನೆಗಾಗಿ ನಡುಬಿಗಿದವನಲ್ಲ; ಅದೊಂದನ್ನಷ್ಟೇ ಕೊಟ್ಟುಬಿಡುತ್ತೇವೆಂದು ಸರ್ದಾರ್ ಪಟೇಲರೋ, ಮುನ್ಷಿಗಳೋ ಮುಂದೆ ಬಂದಾಗಲೆಲ್ಲಾ "ಊಹೂಂ; ಬೇಡ. ನಾನು ನನ್ನ ಮಟ್ಟಿನ ಪಾಲನ್ನಷ್ಟು ಹೊಡೆದು ಬಿಡಲು ಹೋರಾಡುವವನಲ್ಲ" ಎಂದಿದ್ದೆ. ಈ ಬಾರಿ ಕರ್ನಾಟಕದ ಮತ್ತು ಮಹಾರಾಷ್ಟ್ರದ ನನ್ನ ಕೆಲವು ಸ್ನೇಹಿತರು ಹೆದರಿಬೆದರಿಸಿದ್ದರಿಂದ ಮಾತ್ರ ಆಂಧ್ರ ಪ್ರಾಂತ್ಯ ರಚನೆಗೆ ಮುಂದಾಗಿದ್ದೇನೆ" ಎಂದ ಡಾ। ಪಟ್ಟಾಭಿಗಳ ಮಾತಿನಿಂದಂತೂ ಕರ್ನಾಟಕದ ಎಲ್ಲೆಲ್ಲೂ ? ? ? ? ಚಿಹ್ನೆಗಳು ಮೂಡಿ ನಿಂತಿವೆ. "ಡಾ। ಪಟ್ಟಾಭಿಗಳಿಗೆ ಅಂತಹ ಸಮ್ಮತಿ ಕೊಟ್ಟ ಕನ್ನಡಿಗರಾದರೂ ಯಾರು?" ಎಂದಷ್ಟೇ ಶೋಧ ನಡಿಸಿದರೂ ಈ ವರೆಗೆ ಪತ್ತೆಯಾದಂತಿಲ್ಲ. ಆ ತನ್ನ ಮಿತ್ರರ ಹೆಸರನ್ನು ರಾಷ್ಟ್ರಪತಿಗಳು ಆಗ ಎಂತೂ ಹೇಳಲಿಲ್ಲ; ಆ ಕುರಿತು ವಿಚಾರಣೆ ನಡೆದಿದೆ ಎಂದು ತಿಳಿದು ಬಂದ ಮೇಲೂ ಹೇಳುವ ಗೊಡವೆಗೆ ಹೋಗಿಲ್ಲ. ಮಹಾರಾಷ್ಟ್ರರಂಗದಲ್ಲೂ ಇದೇ ಪ್ರಶ್ನೆ ಸುಳಿಯುತ್ತಿರಬೇಕು. "ಆಂಧ್ರವೊಂದನ್ನೇ ಎತ್ತಿಕೊಡಲು ನಾನು ಮುಂದಾದುದು ಯಾವ ದಿನ?" ಎಂದು ಸರ್ದಾರ್ ಪಟೇಲರಂಥವರೂ ತಲೆ ತುರಿಸಿಕೊಂಡು ಯೋಚಿಸುತಿದ್ದಾರೇನೋ! ಹಾಗಾದರೆ....? 'ಬೇರಾವ ಪ್ರಾಂತಿಕ ಏಕೀಕರಣಕ್ಕಿಂತಲೂ ಮುಂದಾಗಿ ಡಾ। ಪಟ್ಟಾಭಿ ಮತ್ತು ಅವರ ಮಾನಸಪ್ರಾಕ್ತಿಯ ಏಕೀಕರಣವಾಗಬೇಕು'-ಎಂಬ ವಾದ ಮುಂದೆಬರಲಾರದೆ?

ಮದ್ರಾಸಿನಲ್ಲಿ ಹಾಕಿದ ಹಂಚಿಕೆ.

ಕೂಡಲೇ ಆಂಧ್ರ ಪ್ರಾಂತ್ಯರಚನೆಯನ್ನು ಆರಂಭಿಸಿಬಿಡಬೇಕೆಂದು ಸಂಕಲ್ಪಿಸಿ ಡಾ। ಪಟ್ಟಾಭಿಗಳು ಮದ್ರಾಸಿಗೆಬಂದು ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಕೆ. ಕಾಮರಾಜನಾದರ್ ಮತ್ತು ಪ್ರಧಾನಮಂತ್ರಿ ಶ್ರೀ ಪಿ. ಯಸ್. ಕುಮಾರಸ್ವಾಮಿರಾಜಾ, ಇವರೊಡನೆ ಮಾತುಕತೆ ನಡೆಯಿಸಿ ಒಂದು ಹಂಚಿಕೆ ತಯಾರಿಸಿದ್ದರು. ಇದೇ ತಾ 20ರಲ್ಲಿ ಈ ಹಂಚಿಕೆಗೆ ಆಕಾರಕೊಟ್ಟು ತಾ 21ನೇ ಮುಂಜಾನೆ ಪತ್ರಿಕಾ ಪ್ರತಿನಿಧಿಗಳನ್ನು ಆಮಂತ್ರಿಸಿ, ಅದನ್ನೆಲ್ಲಾ ವಿವರಿಸಿದ್ದರು; ಅಂದೇ ಅಪರಾಹ್ನ ಸೇರಲಿದ್ದ ಕಾಂಗ್ರೆಸ್ ಶಾಸನಸಭಾ ಸದಸ್ಯರ ಸಭೆಯಲ್ಲಿ ಡಾ। ಪಟ್ಟಾಭಿಗಳು ಸ್ವತಃ ಹಾಜರಿದ್ದು, ತನ್ನೀ ಕಾರ್ಯವನ್ನು ಮಾಡಿಸಿಕೊಳ್ಳುವರೆಂದು ನಿಶ್ಚಯವಾಗಿತ್ತು. ಆದರೆ ತಾ. 21ರಲ್ಲಿ ಮದ್ರಾಸಿನ ರಾಜಾಜೀ ಭವನದಲ್ಲಿ ಕಾಂಗ್ರೆಸ್ ಪಕ್ಷೀಯರ ಸಭೆ ಸೇರುವ ಮೊದಲು ಆ ಭವನಕ್ಕೆ ಬಂದು ಡಾ। ಪಟ್ಟಾಭಿಗಳು ಸಭಾರಂಭದ ಮೊದಲೇ "ನನಗೆ ಬೇರೆ ಕೆಲಸವಿದೆ; ಇಲ್ಲಿ ನನ್ನ ಹಾಜರಿಯ ಆಗತ್ಯ ತೋರುವುದಿಲ್ಲ" ಎಂದು ಹೊರಟು ಹೋಗಿದ್ದರು. ಕಾಂಗ್ರೆಸಿಗರ ಸಭೆಯು ಪಟ್ಟಾಭಿ ಹಂಚಿಕೆಯ ಆಂಧ್ರ ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ಚರ್ಚೆಗೆತ್ತಿಕೊಳ್ಳಲೇ ಇಲ್ಲ. ಹಾವು 'ನಿಕಟ ಮೈತ್ರಿ'ಯಿಂದಿರುವ ತಮಿಳು ಸದಸ್ಯರ ನಡುವೆ ತಮ್ಮ 'ಅಮೂಲ್ಯ ಹಂಚಿಕೆ'ಯ ಗತಿಯೇನಾಯಿತೆಂಬುದು ಡಾ। ಪಟ್ಟಾಭಿಗಳಿಗೇನೇ ಗೊತ್ತು! ಅವರು ತಯಾರಿಸಿದ ಕಾರ್ಯಕ್ರಮ ಹೀಗಿದ್ದಿತು: "1947ನೇ ತಾತ್ಕಾಲಿಕ ನಿಯಮಾನ್ವಯ ಸ್ವೀಕಾರ ಮಾಡಲ್ಪಟ್ಟಿದ್ದ 1935ನೇ ಭಾರತ ಶಾಸನದ 290ನೇ ಸೆಕ್ಷನಿನಂತೆ ಆಂಧ್ರಪ್ರಾಂತ್ಯವೊಂದನ್ನು ರಚಿಸಲಗತ್ಯವುಳ್ಳ ಕಾರ್ಯ ಕೈಕೊಳ್ಳಬೇಕೆಂದು ಮದ್ರಾಸಿನ ಪ್ರಧಾನಮಂತ್ರಿಗಳನ್ನು ಕೇಳಿಕೊಳ್ಳುವ ಠರಾವು ಕಾಂಗ್ರೆಸ್ ಶಾಸನಸಭಾ ಸದಸ್ಯರ ಸಭೆಯಲ್ಲಾಗಬೇಕು. ಹಾಗೆ ರಚಿಸಲ್ಪಡುವ ಆಂಧ್ರ ಪ್ರಾಂತ್ಯದ ಸ್ವರೂಪವು ಆ ಠರಾವಿನಲ್ಲಡಕವಾಗಿರಬೇಕು. ಈಗಿನ ಚಿತ್ತೂರು, ನೆಲ್ಲೂರು, ಗುಂಟೂರು, ಕೃಷ್ಣಾ, ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ, ವಿಶಾಖಪಟ್ಣ, ಕಡಪಾ, ಕರ್ನೂಲು, ಅನಂತಪುರ, ಬಳ್ಳಾರಿ—ಈ 11 ಜಿಲ್ಲೆಗಳನ್ನೊಳಗೊಂಡ ಪ್ರಾಂತ್ಯವೇ ಆಂಧ್ರ. ಕರ್ನಾಟಕ ಪ್ರಾಂತ್ಯವಾಗುವಾಗ, ಮೇಲಿನ ಜಿಲ್ಲೆಗಳ ಪೈಕಿ ಬಳ್ಳಾರಿ ಜಿಲ್ಲೆಯ ಆದೋನಿ, ರಾಯದುರ್ಗ ಮತ್ತು ಆಲೂರು ತಾಲೂಕುಗಳನ್ನು ಮಾತ್ರವಿಟ್ಟುಕೊಂಡು ಉಳಿದ ಎಲ್ಲಾ ತಾಲೂಕುಗಳನ್ನು ಕರ್ನಾಟಕ ಪ್ರಾಂತ್ಯಕ್ಕೆ ಬಿಟ್ಟುಕೊಡಬೇಕು." ಮದ್ರಾಸ್ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷವು ಮೇಲಿನ ನಿರ್ಣಯವನ್ನು ಮಾಡಿದೊಡನೆ ಮದ್ರಾಸ್ ಮಂತ್ರಿಮಂಡಲವು ಅದಕ್ಕನುಸಾರವಾಗಿ ನಿರ್ಣಯ ಮಾಡಿ ಭಾರತದ ಪ್ರಧಾನ ಮಂತ್ರಿಗಳಿಗೆ ಕಳಿಸಿ, ಭಾರತ ಸರಕಾರ ಶಾಸನದ 290ಸೆಕ್ಷನಿನಂತೆ ಗವರ್ನರ್ ಜನರಲರು ಆಂಧ್ರ ದೇಶವನ್ನು ಪ್ರತ್ಯೇಕ ಪ್ರಾಂತವಾಗಿ ಘೋಷಿ

ನಿನ್ನ ಮಾರ್ಗದರ್ಶನ ಓ-ಚಂದ್ರಮನೇ

ಕಗ್ಗತ್ತಲೆಯಲ್ಲಿ ದಿಕ್ಕುಕಾಣದ ನಾವಿಕರಿಗೆ ನಿನ್ನ ದರ್ಶನವು ಧೈರ್ಯಕೊಡುವುದು. ಅದೇ ಪ್ರಕಾರ 'ಕ್ರೆಸೆಂಟ್'ದಲ್ಲಿ ಇಳಿಸಿದ ವಿಮೆಯು ಭದ್ರತೆಯು ಮತ್ತು ಪರಿಹಾರದ ಆಶ್ವಾಸನದಿಂದ ಮಾನವನಿಗೆ ಸಂಕಟ ಕಾಲದಲ್ಲಿ ಚಿತ್ತಸ್ವಾಸ್ಥ್ಯವನ್ನು ಕೊಡುವದು.

ಚೇರ್ಮನ್ - ಶ್ರೀ ಪ್ರಭಾಶಂಕರ ಆರ್. ಭಟ್.
ಮ್ಯಾನೇಜಿಂಗ್ ಡಾಯರೆಕ್ಟರ - ಶ್ರೀ ಎಂ. ಸುಂದರ ರಾಮ ಶೆಟ್ಟಿ.

ಕ್ರೆಸೆಂಟ್ ಇನ್ಶೂರನ್ಸ್

KVS 270

ಮಂಗಳೂರು
ಕೆ. ಪಿ. ಭವಾನಿಶಂಕರ ಶೆಟ್ಟಿ, ಎಜ್ಯುಕೇಟಿವ್ ಮೆನೇಜರ್.
ಜಯಂತ್ ಬಿಲ್ಡಿಂಗ್, ಮೈದಾನು ರಸ್ತೆ.

ಮಾಡುವಂತೆ ಕೇಳಿಕೊಂಡರಾಯಿತು. ಗಾದಲ್ಲಿ 1950ನೇ ಎಪ್ರಿಲಿಗೇನೇ ಪ್ರತ್ಯೇಕಾಂಧ್ರ ಮಂತ್ರಿ ಮಂಡಲ ರಚನೆ ಗೊಳ್ಳಬಹುದು; ಅಥವಾ ಆಂಧ್ರ ಪ್ರಾಂತ್ಯವು ಮಿಕ್ಕ ಪ್ರಾಂತ್ಯಗಳ ಪಟ್ಟಿಯಲ್ಲಿ ಮೂದಿಸಲ್ಪಟ್ಟು, ಮುಂದಿನ ಮಹಾ ಚುನಾವಣಾನಂತರವೇ ಅಲ್ಲಿಯ ಪ್ರತ್ಯೇಕ ಆಡಳಿತೆಯಾರಂಭಿಸಲೂಬಹುದು. ಕೂಡಲೇ ಆಂಧ್ರ ಪ್ರಾಂತ್ಯವಾಗಬೇಕೆಂಬುದಕ್ಕಾಗಿ ಮದ್ರಾಸ್ ನಗರದ ಮೇಲಿನ ಆಂಧ್ರರು ತಮ್ಮ ಪೂರ್ಣ ಹಕ್ಕನ್ನು ಬಿಟ್ಟು ಕೊಡುತ್ತಾರೆ—ಎಂಬುದೇ ಡಾ. ಪಟ್ಟಾಭಿಗಳು ಮದ್ರಾಸಿನಲ್ಲಿ ಹೇಳಿದ ಸಾರ.

ಕನ್ನಡಿಗರು ಕಣ್ತೆರೆಯಲಿ!

ಡಾ। ಪಟ್ಟಾಭಿಗಳ ಈ ಬಲೆಯು ಹರಡದಂತೆ ಕನ್ನಡಿಗರು ಸಕಾಲದಲ್ಲಿ ಎಚ್ಚರಗೊಳ್ಳಬೇಕಾಗಿದೆ. ಪಟ್ಟಾಭಿಗಳ ಪಟ್ಟಿಯಲ್ಲಿ ಬಂದಿರುವ ಮಿಕ್ಕ ಹತ್ತು ಜಿಲ್ಲೆಗಳ ಮಾತು (ಇಲ್ಲಿಯೂ ಕೆಲವೆಡೆ ಕನ್ನಡಿಗರ ಹಕ್ಕಿನ ಪ್ರಶ್ನೆಯಿದೆ) ಹಾಗಿರಲಿ—ಇಡೀ ಬಳ್ಳಾರಿಯನ್ನು ಈಗ ಆಂಧ್ರಕ್ಕೆ ಸೇರಿಸಿಕೊಳ್ಳಲು ಅವರು ಮುಂದಾಗಿರುವುದಾದರೂ ಯಾವ ಆಧಾರದಿಂದ? ಅವರು ಎಂದೆಂದಿಗೂ ಆಂಧ್ರರವೆಂದು ಹೇಳುವ ಬಳ್ಳಾರಿಯ ಆದೋನಿ, ರಾಯದುರ್ಗ, ಆಲೂರು ತಾಲೂಕುಗಳಾದರೂ ಆಂಧ್ರ ಪ್ರಾಂತ್ಯಕ್ಕೆ ಸೇರತಕ್ಕವುಗಳೆ? ಈ ಭಾಗಗಳ ಕುರಿತು ಕನ್ನಡಿಗರ ವಾದವಿಲ್ಲವೇ, ಎಂಬುದಕ್ಕಿಂತ ಹೆಚ್ಚಿನ ವಿಸ್ತರಿಸಿ ಹೇಳುವ ಅಗತ್ಯವೇ ಇಲ್ಲಿಲ್ಲ. ಡಾ. ಪಟ್ಟಾಭಿಗಳೇ ಒಪ್ಪಿರುವಂತೆ ಕರ್ನಾಟಕ ಪ್ರಾಂತ್ಯವಾಗುವಾಗ ಅದಕ್ಕೆ ಬಿಟ್ಟು ಕೊಡಲ್ಪಡುವ ಬಳ್ಳಾರಿಯ ಇತರ ನಾಲ್ಕೋ ಐದೋ ತಾಲೂಕುಗಳನ್ನೂ ಈಗ ಆಂಧ್ರಕ್ಕೆ ಸೇರಿಸಿಕೊಳ್ಳುವುದಾದರೂ ಯಾವ ಶುದ್ಧೀಕರಣಕ್ಕಾಗಿ? ಅವುಗಳನ್ನು ಡಾ. ಪಟ್ಟಾಭಿಗಳು ಕೇಳುವುದಾವ ಹಕ್ಕಿನಿಂದ? "ಯಾವ ತರದ ವಾದ ವಿವಾದ, ಕಹಿಭಾವನೆಯೇಳುವ ಪಕ್ಷಾವಕಾಶವೊದಗದಂತೆ, ಪ್ರಶ್ನಾತೀತ ಶುದ್ಧ ಭಾಷಾವಾರು ಭಾಗಗಳನ್ನು ಮಾತ್ರ ಸೇರಿಸಿಕೊಂಡು ಈಗ ಭಾಷಾವಾರು ಪ್ರಾಂತ್ಯವಾಗಬೇಕು. ಯೋಗ್ಯ ಕಾಲ ಬಂದಾಗ ವಿವಾದವಿರುವ ಗಡಿಗಳ ಸಂಬಂಧವಾಗಿ, ಕೊನೆಯ ತೀರ್ಮಾನ ಮಾಡಿಕೊಂಡು ಶಾಶ್ವತ ಗಡಿಗಳನ್ನು ಹಾಕಿಕೊಂಡರಾಯಿತು"—ಎಂಬುದೇ ಡಾ। ಪಟ್ಟಾಭಿಗಳೂ ಒಬ್ಬನಾಗಿದ್ದ ತ್ರಿಮೂರ್ತಿ ಸಮಿತಿ ವರದಿಯ ನಿರೂಪಣೆ. ವರದಿಯಲ್ಲಿ ಹಾಗೆ ಬರೆದ ಡಾ। ಪಟ್ಟಾಭಿಗಳೇ ಕಾರ್ಯದಲ್ಲಿ ವಿವಾದವಿರುವ ಭಾಗಗಳನ್ನು ಮಾತ್ರವಲ್ಲ-ವಿವಾದಾತೀತ ಪರಭಾಷಾ ಭಾಗಗಳನ್ನೂ ಆಂಧ್ರದೊಳಗೆ ಸೇರಿಸಿಕೊಂಡೇ ಪ್ರಾಂತ್ಯ ಕಟ್ಟುವ ಉದ್ಯುಕ್ತತೆಯನ್ನು ಪ್ರಕಟಪಡಿಸುತ್ತಿದ್ದಾರೆ. ಇಡೀ ಬಳ್ಳಾರಿ ಜಿಲ್ಲೆಯ ಮಾತು ಹಾಗಿರಲಿ; ಕನ್ನಡಿಗರು ಪೂರ್ಣ ಒಪ್ಪಿಗೆ ಕೊಡದ ಆದೋನಿ, ರಾಯದುರ್ಗ, ಆಲೂರು ತಾಲೂಕುಗಳ ಹೆಸರುಗಳನ್ನಾದರೂ ಈಗಿನ ತನ್ನ ಆಂಧ್ರಪ್ರಾಂತ್ಯದ ಹೆಸರಿನೊಂದಿಗೆ ಎತ್ತುವ ಅಧಿಕಾರ ಡಾ। ಪಟ್ಟಾಭಿಗಳಿಗಿಲ್ಲ—ಪಟ್ಟಾಭಿ, ನೆಹರು, ... ಮುಂತಾದ ಸಾತ...

ಪ್ರಾಪಂಚಿಕ ಸ್ಥಿತಿಗತಿಗಳಲ್ಲಿ ಅನಿರೀಕ್ಷಿತವಾದುದೇನೂ ನಡೆದಿಲ್ಲ; ಆದರೆ ಕೆಲವು ಘಟನೆಗಳು ನಿರ್ಧಾರಾತ್ಮಕ ಸ್ಪಷ್ಟಾಕಾರಕ್ಕೆ ಮಾರ್ಪಟ್ಟಿವೆ. ಅವುಗಳಲ್ಲಿ, ಚೈನದ ರಾಷ್ಟ್ರೀಯ ಸರಕಾರಕ್ಕೆ ಮುಕ್ತಾಯ ಹೊಡೆತ ಕೊಡಲು ಕಮ್ಯೂನಿಸ್ಟ್ ಸೇನೆ ಧಾಳಿ ಪ್ರಾರಂಭಿಸಿ ರಾಜಧಾನಿ ನಾನ್ಕಿಂಗನ್ನು ಆಕ್ರಮಿಸಿಕೊಂಡಿರುವುದೂ, ವಸಾಹತುಗಳೊಡನೆ ಭಾರತದ ಸಂಬಂಧ ನಿರ್ಣಯಿಸಲು ಲಂಡನಿನಲ್ಲೀಗ ಸಮ್ಮೇಳನ ಸೇರಿರುವುದೂ ಮುಖ್ಯ. ಮಿಕ್ಕ ಆಗುಹೋಗುಗಳು ಬಹುಮಟ್ಟಿಗೆ ಯಥಾಸ್ಥಿತಿಯಲ್ಲಿವೆ. ಅತ್ತ ಚೈನವು ಕಮ್ಯೂನಿಸ್ಟ್ ಆಗಿ ಮಾರ್ಪಡುತ್ತಿರುವಾಗ ಇತ್ತ ಭಾರತವು ವಸಾಹತು ಸಂಬಂಧವಿಟ್ಟುಕೊಂಡರೂ 'ರಿಪಬ್ಲಿಕ್' ಆಗಿರಲು ತಯಾರಾಗಿರುವಾಗ, ಏಸಿಯಾದ ಮೇಲಿನ ಪಾಶ್ಚಾತ್ಯ ವರ್ಚಸ್ಸು ಪೂರ್ತಿ ಕಳೆದು ಹೋದಂತೆಯೇ. ಭಾವೀ ಸಂಭವಗಳು ಹೇಗಿದ್ದರೂ ಇದೊಂದು ವಿಷಯವೀಗ ಸ್ಪಷ್ಟವಾಗಿದೆ.

ಚೈನಾ ಸಮರ

ಚೈನಾ ಸರಕಾರದ ರಾಜಧಾನಿ ನಾನ್ಕಿಂಗಿನ ಮುಂಭಾಗದ ಪ್ರಸಿದ್ಧ ಯಾಂಗ್ಟ್ಸೀ ಹೊಳೆ ದಡದ ವರೆಗೆ ಧಾವಿಸಿಬಂದಿದ್ದ ಕಮ್ಯೂನಿಸ್ಟ್ ಸೇನೆಗಳು ಅಲ್ಲಿ ಕೆಲಕಾಲದಿಂದ ತಳವೂರಿ ನಿಂತಿದ್ದುವು; ಒಂದೆರಡು ಸಂಕತಿರಗಳನ್ನು ವಶಪಡಿಸಿಕೊಂಡಿದ್ದುವು. ಯುದ್ಧವು ಈ ಅಂತಸ್ಸಿಗೆ ಮುಟ್ಟಿದ ನಂತರವೇ ಚಿಯಾಂಗ್ ಕೈಶೇಕರು ಅಧಿಕಾರ

ರಾಷ್ಟ್ರಪತಿ ಪಟ್ಟಾಭಿಗಳು ಇಂತಹ ಆತ್ಯಾಕೆಯನ್ನು ವ್ಯಕ್ತಪಡಿಸಿದುದು ಅವರ ಸ್ಥಾನ ಘನತೆಗೆ ಹೇಳಿಸಿದುದೆ? ಅಖಿಲ ಕರ್ನಾಟಕವು, ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳವರು ತಮ್ಮ ಮೇಲೆ ಅಡ್ಡ ಹಾದಿಯಿಂದಾಗುತ್ತಿರುವ ಈ ಆಕ್ರಮಣವನ್ನು ಪ್ರಬಲವಾಗಿ ಪ್ರತಿಭಟಿಸಬೇಕಾದುದು ಅಗತ್ಯ.

ಚೈನಾ ಸರಕಾರಕ್ಕೆ ಪ್ರಾಣಾವಧಿ ಹೊಡೆತ!

ನಿವೃತ್ತಿಪಡೆದ ದೇಶ ಹಾಕಿ ತನ್ನ ಹಳ್ಳಿಗೆ ಹೋಗಿ ಕುಳಿತಿದ್ದರು; ತಾತ್ಕಾಲಿಕಾಧ್ಯಕ್ಷರು ಹೊಸ ಮಂತ್ರಿಮಂಡಲ ರಚಿಸಿಕೊಂಡು ಕಮ್ಯೂನಿಸ್ಟರೊಡನೆ ಸಂಧಾನ ವಹಿವಾಟು ನಡೆಸಿದ್ದರು. ಆದರೆ ಚಿಯಾಂಗರು ಮರೆಯಲ್ಲಿ ಕುಳಿತು ಶಸ್ತ್ರಚ್ಛೆಗೆ ವಿರೋಧವಾದ ಕಾರ್ಯವಾವುದೂ ನಡೆಯದಂತೆ ಕೈಯ್ಯಾಡಿಸುತ್ತಲೇ ಬಂದಿದ್ದರು. ಒಮ್ಮೆ ಸ್ವತಃ ಚಿಯಾಂಗರ ಆಜ್ಞಾನುಸಾರವಾಗಿ ಚೈನದ ಸರಕಾರೀ ಸೇನೆಗಳು ಧಾಳಿ ನಡಿಸಿ, ಯಾಂಗ್ಟ್ಸೀ ಸಂಕಗಳೊಂದೆಂಡನ್ನು ಕಮ್ಯೂನಿಸ್ಟ್ ಕೈಯಿಂದ ಕಸಗೊಂಡಿದ್ದುವು. ಆದರೆ ಅದರ ಬೆನ್ನಲ್ಲೇ ಪರಿಸ್ಥಿತಿ ವಿಷಮಗೊಂಡಿತು. ಯಾಂಗ್ಟ್ಸೀ ಹೊಳೆ ದಾಟಿ ಮುಂದೆ ಬರುವ ಮತ್ತು ಚೈನದ ಸರಕಾರೀ ಸೇನೆಗಳ ಮೇಲ್ವಿಚಾರಣೆ ನೋಡುವ ಅಧಿಕಾರ ತಮ್ಮದಾಗಬೇಕೆಂದು ಮುಂತಾಗಿ ಕಮ್ಯೂನಿಸ್ಟರು ಕೊನೆಯ ಶರ್ತಗಳನ್ನು ಮುಂದಿಟ್ಟು, ಅವುಗಳ ಅಂಗೀಕಾರಕ್ಕೆ ಎಪ್ರಿಲ್ ತಾ 20 ಹಿಡಿಯುವ ಮಧ್ಯರಾತ್ರಿ ವರೆಗಿನ ಮೂರು ದಿನಗಳ ಅವಧಿ ಕೊಟ್ಟಿದ್ದರು. ಚೈನಾ ಸರಕಾರವು ಈ ಶರ್ತಗಳನ್ನು ನಿರಾಕರಿಸಿ, ಮರು ಸೂಚನೆಗಳನ್ನು ಮುಂದಿಡಲು ಹವಣಿಸಿತು. ಆದರೆ ಕಮ್ಯೂನಿಸ್ಟರು ಬೇರಾವುದನ್ನೂ ಗಣಿಸದೆ ತಾ 20ರಿಂದ ಕೊನೆಯ ಪ್ರಚಂಡ ಧಾಳಿಯಾರಂಭಿಸಿದರು; 21ರಲ್ಲೇ ವಾಯುವೇಗದಿಂದ ಯಾಂಗ್ಟ್ಸೀ ಹೊಳೆ ದಾಟಿದರು; ಹೊಳೆ ದಡದ ಸರಕಾರೀ ರಕ್ಷಣಾ ವ್ಯೂಹವು ಕಮ್ಯೂನಿಸ್ಟ್ ಬಿಸಿಗೆ ಅರಗಿನ ಗೋಡೆಯಂತೆ ಕರಗಿ ಹೋಯಿತು. ರಾಜಧಾನಿ ನಾನ್ಕಿಂಗಿನೊಳಗೆ ತಾ. 23ನೇ ಮುಂಜಾನೆ ಕಮ್ಯೂನಿಸ್ಟ್ ಸೇನೆಯು ನೆರೆನುಗ್ಗಿ ಬರುವ ವೇಳೆಯಲ್ಲೇ ಸರಕಾರದ ತಾತ್ಕಾಲಿಕ ಅಧ್ಯಕ್ಷ ಮತ್ತಿತರ ಅಧಿಕಾರಿಗಳು ಅಲ್ಲಿಂದ ಪರಾರಿಯಾಗಿದ್ದರು; ಜನತೆಯು ಅವರ ನಿವಾಸಗಳನ್ನು ಲೂಟಿಮಾಡಿದ್ದರು. ಸರಕಾರೀ ಕಾರ್ಯಾಲಯಗಳೆಲ್ಲವೂ ಖಾಲಿಬಿದ್ದಿದ್ದುವು. ನಾನ್ಕಿಂಗ್—ಶಾಂಘಾಯಿ ಕ್ಷೇತ್ರದ ರೈಲ್ವೇ ಕೇಂದ್ರ ಮತ್ತಿತರ ಆಯಕಟ್ಟಿನ ಸ್ಥಳಗಳನ್ನೆಲ್ಲಾ ಕಮ್ಯೂನಿಸ್ಟರು ವಶಪಡಿಸಿಕೊಂಡಿದ್ದಾರೆ; ನಾನ್ಕಿಂಗಿನಂತೆಯೇ ಶಾಂಘಾಯಿಯೂ ಆತಂಕ ವಿನಹಾ ಕಮ್ಯೂನಿಸ್ಟ್ ಕರಗತವಾಗುತ್ತಿದೆ. ಹಿಂಗಡೆಯಲ್ಲಿ ಜನರಲಿಸಿಮೋ ಚಿಯಾಂಗ್ ಕೈಶೇಕ್, ತಾತ್ಕಾಲಿಕಾಧ್ಯಕ್ಷ ಲೀ ಟ್ಸುಂಗ್ ಜೆನ್ ಮತ್ತಿತರ ಪ್ರಮುಖರೊಳಗೆ ಪರ್ಯಾಲೋಚನೆ ನಡೆದು ಕೊನೆಯವರೆಗೂ ಹೋರಾಡುವ ನಿರ್ಣಯವಾಗಿರುವದೆಂದು ತಿಳಿದುಬರುತ್ತದೆ. ಈ ನಡುವೆ ಬ್ರಿಟಿಷರನ್ನು ಉದ್ರೇಕಿಸುವ ಕೃತ್ಯವೊಂದು ಕಮ್ಯೂನಿಸ್ಟರಿಂದ ನಡೆಯಿತು. ಯಾಂಗ್ಟ್ಸೀ ಹೊಳೆಯ ಇಬ್ಬದಿಗಳಲ್ಲಿ ಇಕ್ಕಡೆಯ ಸೇನೆಗಳು ನಿಂತು ಹೋರಾಟವಾಗುತಿದ್ದಾಗ, ಆ ಹೊಳೆಯಲ್ಲಿ ಹಾದುಹೋಗುತಿದ್ದ ಬ್ರಿಟಿಷ್ ಹಡಗವೊಂದಕ್ಕೆ ದಡದ ಕಮ್ಯೂನಿಸ್ಟ್ ಗುಂಡುಗಳು ಬಿದ್ದು ಅದರ ಕಮಾಂಡರ್ ಸಮೇತ 17 ಮಂದಿ ನೌಕರರು ಮಡಿದರೆಂದೂ 20 ಮಂದಿಗೂ ಮಿಕ್ಕಿ ತೀವ್ರ ಜಖಮುಗಳಾಗಿವೆಯೆಂದೂ ಪ್ರಕಟವಾಗಿದೆ. ಈ ಹಡಗದ ರಕ್ಷಣೆಗೆ ಬಂದ ಮತ್ತೊಂದು ಬ್ರಿಟಿಷ್ ಹಡಗದ ಮೇಲೂ ಗುಂಡಿನ ಮಳೆ ಬಿತ್ತು. ಯಾವ ರಕ್ಷಣಾ ಹಂಚಿಕೆಯನ್ನೂ ನಡೆಯಗೊಡದೆ ಕಮ್ಯೂನಿಸ್ಟರು ಉದ್ದೇಶಪೂರ್ವಕವಾಗಿ ಮೇಲಿಂದ ಮೇಲೆ ಬ್ರಿಟಿಷ್ ಹಡಗಗಳಿಗೆ ಹೊಡೆದರೆಂದು ತಿಳಿದು ಬಂದಿದೆ. ಬ್ರಿಟಿಷ್ ಸರಕಾರವು ಈ ಕುರಿತು ಕಮ್ಯೂನಿಸ್ಟರಿಗೆ ನಿಷೇಧಸೂಚನೆ ಮಾಡಿದೆ. ಈ ಕುರಿತು ಬ್ರಿಟಿಷ್ ಭಾವನೆಯೆಷ್ಟು ಕೆರಳಿದೆ ಎಂಬುದರ ಒಂದು ನಿದರ್ಶನ ಲಂಡನಿನ ಒಂದು ಸಭೆಯಲ್ಲಿ ತೋರಿಬಂತು. ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಪೊಲ್ಲಿಟ್ಟರು ಒಂದು ಸಭೆಯಲ್ಲಿ ಭಾಷಣ ಮಾಡುತಿದ್ದಾಗ ಯಾಂಗ್ಟ್ಸೀ ಹೊಳೆಯಲ್ಲಿ ಸತ್ತ ಬ್ರಿಟಿಷ್ ನೌಕಾವಾಲನೊಬ್ಬನ ತಂದೆ ವೇದಿಕೆಗೆ ಹತ್ತಿ ಅವರ ಕೈಗೆ ಒಂದು ಹಗ್ಗವನ್ನೂ "ಯಾಂಗ್ಟ್ಸೀಯಲ್ಲಿ ಸತ್ತ ಹುಡುಗರ ಪೈಕಿ ಓರ್ವನ ತಂದೆಯಿಂದ" ಎಂದು ಬರೆದ ಒಂದು ಚೀಟಿಯನ್ನೂ ಕೊಟ್ಟ. ಕೂಡಲೇ ಆ ಕಮ್ಯೂನಿಸ್ಟ್ ಭಾಷಣಗಾರನ ಮೇಲೆ ಸಭಿಕರ ಸಿಟ್ಟು ಪ್ರಜ್ವಲಿಸಿ ಅವರು ವೇದಿಕೆಗೆ ನುಗ್ಗಿ ಅಲ್ಲಿದ್ದ 'ಕೆಂಪು ಧ್ವಜ'ವನ್ನು ಸುಟ್ಟುಹಾಕಿ ಭಾಷಣಗಾರನನ್ನು ಮುತ್ತಿ ಹೊಡೆಯುವುದರಲ್ಲಿರುವಾಗ ಪೋಲೀಸರು ಮೈಗಾವಲಾಗಿ ನಿಂತು ರಕ್ಷಿಸಬೇಕಾಯಿತು. ಇತ್ತ ಚೈನದಲ್ಲಿ ಯಾಂಗ್ಟ್ಸೀ ಹೊಳೆಯ 850 ಮೈಲು ... 10ಲಕ್ಷ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!
ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.
ವುಡ್‌ಲ್ಯಾಂಡ್ಸ್, ಉಡುಪಿ
WOODLANDS, UDIPI.
Brahmins Boarding & Lodging
Sadananda Rao, Kunjoor,
Manager.

ಕಡಿಮೆ ಮೊತ್ತದ ವಿಮೆಮಾಡಬೇಕೆಂದಿದ್ದರೆ—
ಅಧಿಕ ಸವಲತ್ತಿನ ವಿಮಾ ಏಜನ್ಸಿ ಬೇಕೆಂದಿದ್ದರೆ—
ದಿ
ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಉಡುಪಿ
... ಸಿ!

ಲಂಡನ್ ಕೂಟದಲ್ಲಿ ಪಂಡಿತ ನೆಹರುಗಳು.

ಕಮ್ಯೂನಿಸ್ಟ್ ಸೈನಿಕರು ಪ್ರಚಂಡ ರೀತಿಯಿಂದ ಬೌಡಿಡ ತಿದ್ದಾರೆ. ನಾಸ್ಕಿಂಗಿನಲ್ಲಿ ಅರಾಜಕತೆ ವ್ಯಾಪಿಸಿದೆ; ಸೂರೆ, ಸುಲಿಗೆ, ಕೊಲೆಯ ನರ್ತನ ಅವಾಂತ ವೆದ್ದಿದೆ. ಒಳ ಕ್ಷೇತ್ರಗಳಲ್ಲೂ ಕಮ್ಯೂನಿಸ್ಟ್ ಗೊಂಬೆಗಳ ಚಟುವಟಿಕೆ ಹೆಚ್ಚಿವೆ.

ಬರ್ಮಾ ಯುದ್ಧ ನಡೆದಿದೆ. ಕರೆನ್ ಬಂಡಾಯಗಾರರೂ ಕಮ್ಯೂನಿಸ್ಟರೇ ಮೊದಲಾದ ಸರಕಾರೀ ವಿರೋಧಿಗಳೂ ಈಗ ಒಕ್ಕಟ್ಟಾಗಿ ಹೋರಾಟ ಕೊಡುತ್ತಿರುವಂತಿದೆ. ಇಂಡೋನೇಶಿಯಾ ಮೊದಲಾದ ಇತರ ಸಮಸ್ಯೆಗಳು ಬಹುಮಟ್ಟಿಗೆ ಇದ್ದಂತಿವೆ.

ಲಂಡನಿನಲ್ಲಿ ನೆಹರು

ಇತ್ತ ಭಾರತದ ಪಾಲಿನ ಮೂಲ ಪ್ರಶ್ನೆಯೊಂದನ್ನು ನಿರ್ಧರಿಸಿ ಬರಲು ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಲಂಡನಿಗೆ ಹೋಗಿ ಮಹಾಜಹತು ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ. ಮುಖ್ಯವಾಗಿ ರಿಪಬ್ಲಿಕ್ ಭಾರತಕ್ಕೂ ಮಹಾಜಹತು ರಾಷ್ಟ್ರಗಳಿಗೂ ಸಂಬಂಧ ಜೋಡಣೆ ಕಲ್ಪಿಸುವದಕ್ಕಾಗಿ, ಇಂಗ್ಲಂಡ್, ಕೆನಡಾ, ಆಸ್ಟ್ರೇಲಿಯ, ನ್ಯೂಜೀಲೇಂಡ್, ದಕ್ಷಿಣಾಫ್ರಿಕ, ಸಿಲೋನ್, ಪಾಕಿಸ್ತಾನ್, ಭಾರತ—ಈ ಎಂಟು ರಾಷ್ಟ್ರ ಪ್ರಧಾನ ಮಂತ್ರಿಗಳ ಕೂಟ ಮೊನ್ನೆ ಲಂಡನಿನಲ್ಲಿ ನಡೆಯಿತು. ಈ ಸಮ್ಮೇಳನಕ್ಕಾಗಿ ಪಂಡಿತ ನೆಹರುಗಳು ವಿದೇಶ ಸಂಬಂಧ ಖಾತೆಯ ಕಾರ್ಯದರ್ಶಿ ಸರ್. ಗಿರಿಜಾಶಂಕರ್ ಬಾಜ್‌ಪಾಯಿ ಮತ್ತು ತಮ್ಮ ಖಾಸಗೀ ಕಾರ್ಯದರ್ಶಿ ಶ್ರೀ ಎಮ್. ಓ. ಮಥಾಯಿಗಳೊಂದಿಗೆ ತಾ. 19ನೇ ಪೂರ್ವಾಹ್ನ 7.45ಕ್ಕೆ ನವದಿಲ್ಲಿಯ ವಿಲ್ಲಿಂಗ್ಡನ್ ನಿಲ್ದಾಣದಲ್ಲಿ ಸ್ಪೆಶಲ್ ವಿಮಾನವೇರಿದ್ದರು. ಗವರ್ನರ್ ಜನರಲ್ ರಾಜಾಜಿ, ಪಟೇಲ್, ಪ್ರಸಾದ್ ಮತ್ತಿತರ ಮಂತ್ರಿ ಪ್ರಮುಖರು ಪ್ರಧಾನಿಯನ್ನು ಬೀಳ್ಕೊಡಲು ನಿಲ್ದಾಣದಲ್ಲಿ ನೆರೆದಿದ್ದರು. ವಿಮಾನವು ಬೊಂಬಾಯಿಯ ಸಾಂತಾಕ್ರೂಝ್ ನಿಲ್ದಾಣದಲ್ಲಿಳಿಯುವಾಗ ಅಲ್ಲಿಯೂ ಬೊಂಬಾಯಿ ಪ್ರಧಾನಿ ಶ್ರೀ ಖೇರ್, ಮೇಯರ್ ಶ್ರೀ ಯಸ್. ಕೆ. ಪಾಟೀಲ್ ಮತ್ತಿತರ ಪ್ರಮುಖರೂ ಜನಸಂದಣಿಯೂ ಸ್ವಾಗತಕ್ಕೆ ತಯಾರಿದ್ದರು. ಅಲ್ಲಿಂದ ಜುಹು ಸಮುದ್ರ ದಂಡೆಗೆ ಹೋಗಿ ಅಪರಾಹ್ನವನ್ನು ತನ್ನ ಅತಿ ಪ್ರೀತಿಯ ಅರಬ್ಬೀ ಸಮುದ್ರದ ಈ ಜಾಗದಲ್ಲಿ ಕಳೆದರು; ಆ ಮೇಲೆ ಗವರ್ನರರ ಅತಿಥಿಯಾಗಿದ್ದು ಅಂದೇ ರಾತ್ರಿ ವಿಮಾನ ನಿಲ್ದಾಣಕ್ಕೆ ಹೊರಟರು. ಆ ಹನ್ನೊಂದು ಘಂಟೆ ಕಳೆದ ರಾತ್ರಿ ಹೊತ್ತಿನಲ್ಲೂ ಮಲಬಾರ್ ಹಿಲ್ಲಿನಿಂದ ಸಾಂತಾಕ್ರೂಝ್ ವಿಮಾನ ನಿಲ್ದಾಣದ ವರೆಗಿನ ಹನ್ನೆರಡು ಮೈಲುದ್ದಕ್ಕೂ ಸಾಲುಗಟ್ಟಿ ಜನಸಂದಣಿ ನಿಂತಿದ್ದು, ತೆರೆದ ಕಾರಿನಲ್ಲಿ ಹೋಗುತ್ತಿದ್ದ ಪಂಡಿತಜೀಗೆ ಜೈಕಾರ ಹಾಕುತಿತ್ತು. ನಿಲ್ದಾಣದಲ್ಲಿಯೂ ಪ್ರಚಂಡ ಜನಸಂದಣಿ ನೆರೆದಿದ್ದಿತು. ರಾತ್ರಿ 11-50ಕ್ಕೆ ನೆಹರೂ ವಿಮಾನ ಲಂಡನಿಗಾಗಿ ನಿಲ್ದಾಣಬಿಟ್ಟಿತು. "ನಾನು ಈ ಮೊದಲೇ ಘಟನಾ ಸಮಿತಿ, ಕಾಂಗ್ರೆಸ್ ಅಧಿವೇಶನ ಮತ್ತಿತರ ಕಡೆಗಳಲ್ಲಿ ವಿವರಿಸಿರುವಂತೆ ಮತ್ತು ನನಗೆ ದೊರೆತಿರುವ ನಿರ್ದೇಶ ಹಾಗೂ ನಮ್ಮ ಪ್ರೇರೇಪಕ ತತ್ವಗಳಿಗನುಸಾರವಾಗಿ ವರ್ತಿಸಲು ಬದ್ಧನಿದ್ದೇನೆ. ಭಾರತವು ಸರ್ವಸ್ವತಂತ್ರ 'ರಿಪಬ್ಲಿಕ್' ಆಗಿರಬೇಕು; ಹಾಗಿದ್ದು ಪರಸ್ಪರ ಹಿತಕಾರೀ ಮಹಾಜಹತು ಸಂಬಂಧವಿಟ್ಟುಕೊಳ್ಳಬಹುದು. ಆ ಕೂಟದ ಯಾವ ಪಾಳಯದೊಳಗೂ ಸೇರಿಕೊಳ್ಳದೆ ಲೋಕಶಾಂತಿ ಸಾಧನೆಯ ಪ್ರಯತ್ನ ಮಾಡಬೇಕೆಂಬುದೇ ನಮ್ಮ ನಿಶ್ಚಿತ ಹಾದಿ"—ಎಂದು ಪಂಡಿತ ನೆಹರು ತನ್ನ ಕಾರ್ಯೋದ್ದೇಶ ಕುರಿತು ಬೊಂಬಾಯಿಯಲ್ಲಿ ಹೇಳಿದ್ದರು.

ಪಂಡಿತಜೀಯನ್ನು ಹೊತ್ತುಕೊಂಡ 'ಮಲಬಾರ್ ಪ್ರಿನ್ಸೆಸ್' ವಿಮಾನವು ಬಸ್ರಾ ಮತ್ತು ಕೈರೋದಲ್ಲಿಳಿದು ಅಲ್ಲಿಯವರ ಆ ಮುಹೂರ್ತದ ಹಾರ್ದಿಕ ಸ್ವಾಗತ ಸ್ವೀಕರಿಸಿ, ತಾ20ನೇ ರಾತ್ರಿ9-45ಕ್ಕೆ ಲಂಡನಿನಲ್ಲಿಳಿಯಿತು. ಅಲ್ಲಿ ಮಹಾಜಹತು ಕಾರ್ಯದರ್ಶಿ ಮಿ. ನೋಯೆಲ್ ಬೇಕರ್, ಭಾರತದ ಹೈಕಮಿಶನರ್ ಶ್ರೀ ಕೃಷ್ಣ ಮೆನನ್ ಮತ್ತಿತರರಿಂದ ಪಂಡಿತಜೀ ಸ್ವಾಗತಿಸಲ್ಪಟ್ಟರು. ತಮ್ಮ ಹೊತ್ತಿಗೆ ಇತರ ಮಹಾಜಹತುಗಳ ಮಾನ್ಯ ಅತಿಥಿಗಳೆಲ್ಲರೂ ಲಂಡನಿಗಾಗಮಿಸಿದ್ದರು. ಕ್ರಮಬದ್ಧ ಮಹಾಜಹತು ಪ್ರಧಾನೀ ಸಮ್ಮೇಳನದ ಪೂರ್ವ ಪೀಠಿಕೆಯಾಗಿ ಬ್ರಿಟಿಷ್ ಪ್ರಧಾನ ಮಂತ್ರಿ ಮಿ. ಕ್ಲೆಮೆಂಟ್ ಅಟ್ಲಿಗಳು ವಿವಿಧ ಮಹಾಜಹತುಗಳ ಪ್ರಧಾನಿಗಳೊಡನೆ ಪ್ರತ್ಯ ಪ್ರತ್ಯೇಕವಾಗಿ ಖಾಸಗೀ ಪರ್ಯಾಲೋಚನೆ ನಡೆಸಿದ್ದರು. ತನ್ನ ಭೇಟಿಗಾಗಿಯೇ ಲಂಡನಿಗೆ ಬಂದಿದ್ದ ಲೋರ್ಡ್ ಮೌಂಟ್ ಬೇಟನರೊಡನೆಯೂ, ಕ್ರಿಪ್ಸ್, ಮತ್ತು ಬೇರೆ ಮಹಾಜನಗಳ ನಾಯಕರೊಡನೆಯೂ ನೆಹರೂ ಭೇಟಿಯಾಗಿ ತಾ 21ನೇ ಅಪರಾಹ್ನ ನೆಹರೂ—ಅಟ್ಲಿ ಖಾಸಗೀ ಮಾತುಕತೆ ನಡೆಯಿತು. ಆ ಮೇಲೆ ಎಲ್ಲಾ ಅತಿಥಿಗಳಿಗೂ ಬ್ರಿಟಿಷ್ ಪ್ರಧಾನಿ ಅಟ್ಲಿಗಳ ಸಂಭ್ರಮದ ಸತ್ಕಾರ ಊಟವಿತ್ತಿತು. ಅಂದೇ ಇಂಗ್ಲೆಂಡಿನ ರಾಜರಾಣಿಯರು ತಮ್ಮ ಬಕ್ಕಿಂಗ್ಹಾಮ್ ಅರಮನೆಯಲ್ಲಿ ಮಹಾಜಹತು ಪ್ರಧಾನಿಗಳ ಸತ್ಕಾರಕ್ಕಾಗಿ ಇತರ ಸಂಬಂಧಿಕರನ್ನು ಆಮಂತ್ರಿಸಿ 30 ಮಂದಿಯ ಔತಣಕೂಟವನ್ನಿತ್ತರು. ತಾ 22ರಲ್ಲಿ ಮತ್ತೊಮ್ಮೆ ನೆಹರೂ—ಅಟ್ಲಿಗಳೊಳಗೆ ಸುದೀರ್ಘ ಸಂಭಾಷಣೆ ನಡೆಯಿತು ತಾ. 22ರಲ್ಲಿ ಲಂಡನಿನ ಸರಕಾರೀ ಕಾರ್ಯಾಲಯ 10. ಡೌನಿಂಗ್ ಸ್ಟ್ರೀಟಿನಲ್ಲಿ ಕಾಮನ್‌ವೆಲ್ತ್ ನಾಯಕರ ಕ್ರಮಬದ್ಧ ಸಮ್ಮೇಳನವು ಗುಪ್ತವಾಗಿ ಜರಗಿತು. ಅದು ಎರಡು ತಾಸು ನಡೆದ ಮೇಲೆ, ಬ್ರಿಟನ್, ಆಸ್ಟ್ರೇಲಿಯ, ನ್ಯೂಜೀಲೇಂಡು, ಪಾಕಿಸ್ತಾನ್, ಸಿಲೋನುಗಳ ಪ್ರಧಾನಿಗಳು ಮಾತ್ರವಿದ್ದ ಎರಡನೇ ಸಮ್ಮೇಳನ ಜರಗಿತು. ಕಳೆದ ಬಾರಿಯಂತೆ ಈ ಸಲವೂ ವಾರಾಂತ್ಯದ ವಿಶ್ರಾಂತಿಗಾಗಿ ಪಂಡಿತ ನೆಹರುಗಳು ತಾ 22ರಲ್ಲಿ ಮೌಂಟ್‌ಬೇಟನ್ ದಂಪತಿಗಳ ಹಳ್ಳೀ ನಿವಾಸ 'ಬ್ರೋಡ್‌ಲೇಂಡ್ಸ್'ಗೆ ಹೋಗಿ ಬಂದರು. ನಿಧಾನಾತ್ಮಕ ಮಹಾಜಹತು ಸಮ್ಮೇಳನವು ತಾ 25ನೇ ಸೋಮವಾರ ಲಂಡನಿನಲ್ಲಿ ಪುನಃ ಪ್ರಾರಂಭಿಸಿದೆ. ಅಲ್ಲಿ ಆಲೋಚಿಸಲ್ಪಡಲಿರುವ ಮುಖ್ಯ ಸಮಸ್ಯೆಯೆಂದರೆ 'ರಿಪಬ್ಲಿಕ್' ಭಾರತವು 'ಕಾಮನ್‌ವೆಲ್ತ್' ಸಂಬಂಧವಿಟ್ಟುಕೊಳ್ಳುವಂತೆ ಮಾಡುವ ವಿಧಾನವಾವುದೆಂಬುದೇ. 'ಬ್ರಿಟಿಷ್ ಕಾಮನ್‌ವೆಲ್ತ್' ಎಂದಿರುವ ಹೆಸರಿನಲ್ಲಿ 'ಬ್ರಿಟಿಷ್' ಭಾಗವನ್ನು ತೊಡೆದು ಹಾಕಬೇಕು—ಕಾಮನ್‌ವೆಲ್ತ್ ಕೂಟದಲ್ಲಿ ಭಾರತದಂತಹ 'ರಿಪಬ್ಲಿಕ್' ಭಾಗಗಳೂ ಸಹಭಾಗಿಗಳಾಗುವ ಅನುಕೂಲತೆಗಾಗಿ ಆ ಕೂಟದ ನಿಬಂಧನೆಗಳಲ್ಲಿ ತಿದ್ದುಪಡಿಯಾಗಬೇಕು—ರಿಪಬ್ಲಿಕನ್ ಕ್ಷೇತ್ರಗಳು ಬ್ರಿಟಿಷ್ ರಾಜರ ಸಾರ್ವಭೌಮಾಧಿಕಾರವನ್ನು ಒಪ್ಪಿಕೊಳ್ಳುವಂತಿಲ್ಲ; ಆದರೆ ಈ ಗುಂಪಿನ ಪ್ರಥಮ ನಾಗರಿಕನೆಂದೋ, ತದನುಸಾರವಾದ ಇತರ ಗೌರವಗಳನ್ನೋ ಕೊಡಲು ತಯಾರಿವೆ—ಮುಂತಾದ ಸೂಚನೆಗಳು ಭಾರತದ ಪರವಾಗಿ ನೆಹರುಗಳಿಂದ ಬಂದಿವೆ ಎಂಬ ಊಹೆಯಿದೆ. ಎಲ್ಲಾ ವಿಷಯಗಳೂ ಕೂಲಂಕುಷವಾಗಿ ಪರ್ಯಾಲೋಚಿಸಲ್ಪಟ್ಟು ಈ ವಾರಾಂತ್ಯದೊಳಗೆ ಮಹಾಜಹತು—ಭಾರತ ಸಂಬಂಧದ ನಿರ್ಧಾರ ತಿಳಿದು ಬರಬಹುದು. ಕಳೆದ ಅಕ್ಟೋಬರಿನಲ್ಲಿ ಮಹಾಜಹತು ಪ್ರಧಾನಿಗಳ ಪ್ರಥಮ ಸಮ್ಮೇಳನವು ಲಂಡನಿನಲ್ಲಿ ಜರಗಿದ್ದಿತ; ಈ ಎರಡನೇ ಕೂಟ ಸೇರುವ ಮೊದಲು ನಾಲ್ವರು ಬ್ರಿಟಿಷ್ ತಜ್ಞರು ಇವೆಲ್ಲಾ ಮಹಾಜಹತುಗಳಿಗೂ ಬಂದು ಇದರ ಪೂರ್ವಪೀಠಿಕೆಯ ಮಾತುಕತೆ ನಡೆಸಿ ಹೋಗಿದ್ದರು. ಆಗ್ನೇಯ ಮತ್ತು ಮಧ್ಯಪೂರ್ವ ರಾಷ್ಟ್ರಗಳಲ್ಲಿ ಹಬ್ಬಿರುವ ಕಮ್ಯೂನಿಸ್ಟ್ ಹಾವಳಿಯನ್ನು ಜಯಶೀಲವಾಗಿ ಪ್ರತಿಬಂಧಿಸುವ ಸಂಘಟಿತ ಉಪಾಯ ಶೋಧನೆಗಾಗಿ ಸಂಬಂಧಪಟ್ಟ ರಾಷ್ಟ್ರಗಳ ಸೇನಾ ತಜ್ಞರ ಕೂಟವೂ ಲಂಡನಿನಲ್ಲಿ ಜರಗಲಿದೆಯೆಂದು ತಿಳಿದು ಬರುತ್ತದೆ.

ವಿನಂತಿ

'ನವಯುಗ' ಮತ್ತು 'ಅಂತರಂಗ' ವಾರಪತ್ರಿಕೆಗಳ ಪ್ರತಿನಿಧಿಗಳಾಗಿ ಶ್ರೀ ಕೆ. ಜಗನ್ನಾಥ ಸೆಟ್ಟರು ಮುಂಬಯಿಯಲ್ಲಿಯೂ ಶ್ರೀ ಕೆ. ಆನಂದ ಸೆಟ್ಟರು ಉಡುಪಿ ತಾಲೂಕಿನಲ್ಲಿಯೂ ಸಂಚರಿಸುತ್ತಿದ್ದಾರೆ. ಮಹಾಜನರು ಚಂದಾದಾರರಾಗಿ ತಾವು ಸೇರಿ ಇತರರನ್ನೂ ಸೇರಿಸಿ ಅವರಿಗೆ ಸಕಲ ಸಹಕಾರವನ್ನು ಕೊಡುವಂತೆ ವಿನಂತಿಸುತ್ತೇನೆ.

ಮೆನೇಜರ್.

'ಅಂತರಂಗ' ದಲ್ಲಿ ಅರಳಿದ ಪುಸ್ತಕಗಳು

ಗಳ್ಳರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ ಅಥವಾ ರಝಾಕಾರಸುರಸಂಹಾರ	0	3	0
ಸರಿಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ	0	4	0
ಗಾಡಿಯ ಗಾಂಧಿ (ಸೂಕ್ಷ್ಮಪರಿಚಯ) ಎಂ ವಿ. ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ (ನೀಳ್ಗತೆ) ಪ. ಸು ಭಟ್ಟ	0	3	0
ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ)	0	3	0
ನನ್ನ ಹೆಂಡತಿ (ಕತೆಗಳು) ಪಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ (ನೀಳ್ಗತೆ) ಗಿರಿಬಾಲೆ	0	3	0
ಸುಖದ ದಾರಿ (ಅನುಭವ) ಕೆ. ಎ. ದೇವದಾಸ	0	3	0
ಸುಕಾಂತ (ಅನುವಾದಿತ ಕತೆ) ಪೀ. ಜಿ. ಹಿತ್ತಲಮನಿ	0	3	0
ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ (ನೀಳ್ಗತೆ) ಕು ಸೇವಕ	0	3	0

ಅಂತರಂಗ ಕಾರ್ಯಾಲಯ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ತಪ್ಪಿ ಋತುಸ್ರಾವವಾಗುವುದು ಹೊಟ್ಟೆ ನೋವಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು ವಿಚಾರಿಸಿರಿ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಬಗೆಯಾಗಿ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಕರ್ ಮ್ಯಾನುಫ್ಯಾಕ್ಚರರ್ಸ್,

THE

Canara Banking Corporation Ltd.

(Incorporated in India)

Estd: 1906.

HEAD OFFICE: **UDIPI, S. I.**

Capital Authorised	Rs. 25,00,000.
Capital Issued & Subscribed	Rs. 20,00,000.
Capital Paid Up.	Rs. 19,99,800
Reserves	Rs. 8,90,000

Banking business of every description transacted.

ಗುರುವಾರ, ಉಡುಪಿ, ೨೧-೪-'೪೮

ಸಂಸ್ಥಾನೀ ವಾತಾವರಣ

ಬ್ರಿಟಿಷರು ಭಾರತದ ಅಧಿಕಾರ ಬಿಟ್ಟು ಹೋಗುವಾಗ, ಯಾವ ಸ್ಪಷ್ಟ ತೀರ್ಮಾನವನ್ನೂ ಕೊಡದೆ ಸಮಸ್ಯೆಗಳಾಗಿ ಎದ್ದು ನಿಲ್ಲುವಂತೆ ಮಾಡಿಟ್ಟಿದ್ದ ಭಾರತದೊಳಗಿನ 500ಕ್ಕೂ ಮಿಕ್ಕಿದ ಸಂಸ್ಥಾನಗಳ ಒಗಟನ್ನು ಸರ್ದಾರ್ ಪಟೇಲರು ಬಿಡಿಸಿಕೊಂಡ ರೀತಿಯು ಸ್ವತಂತ್ರಭಾರತದ ಅಮೂಲ್ಯ ಸಾಧನೆಯೆಂಬುದು ನಿಜ. ಆದರೆ ಮನಃಕ್ರಾಂತಿಯು, ಮುಖ್ಯ ಕಾರಣಗಳಲ್ಲಿ 'ಸಂಸ್ಥಾನೀ ಸ್ವಭಾವ'ವೂ ಒಂದೆನ್ನಬಹುದು. ಹಿಂದಿನಿಂದಿದುವರೆಗೂ ಪರಾವಲಂಬನೆಯೊಂದೇ ಆಶ್ರಿತರಾಜರ ಹುಟ್ಟುಗುಣ. ಬ್ರಿಟಿಷ್ ಸಿಂಹಾಸನದ ಆಶ್ರಯವು ಖಾಯಮವಾಗಿರುವತನಕ, ಜನತಾ ಸ್ಫೂರ್ತಿಯ ಕಡೆಗೆ ಪೂರ್ಣ ತಾತ್ಸಾರವೊಂದನ್ನೇ ತೋರಿಸುತ್ತಾ, ಬಂದಿದ್ದವರು ಈ ಆಶ್ರಿತ ರಾಜರು; ಭಾರತಕ್ಕೆ ಸ್ವಾತಂತ್ರ್ಯದೊರೆತ ಮರುದಿನವೇ ಈ ಹೃದಯರಹಿತ ಯಂತ್ರಗಳೊಳಗೆ ದೇಶಾಭಿಮಾನ ತುಂಬಿಬಂದು ಅವೆಲ್ಲವೂ ಕೇಂದ್ರಾಧಿಕಾರಕ್ಕೆ ತಲೆಬಾಗಿದವೆಂದಾಗಲೀ, ತಮ್ಮ ಸಂಸ್ಥಾನಗಳಲ್ಲಿ ಪ್ರಜಾಧಿಕಾರ ದಾನಮಾಡಿದವೆಂದಾಗಲೀ ಊಹಿಸುವದು ಅಸಾಧ್ಯ. ಭಾರತದ ಅಧಿಕಾರಾಶ್ರಯ ಹೋಯಿತು ಬ್ರಿಟಿಷ್, ಅಥವಾ ಅನ್ಯ ಆಧಾರವಾವುದೂ ಇನ್ನು ತಮಗಿಲ್ಲವೆಂದು ಸ್ಪಷ್ಟವಾದ ಮೇಲೆಯೇ ಅನಿವಾರ್ಯವಾಗಿ ಅವು ಸರ್ದಾರರೆದುರು ಸಾಧುಪ್ರಾಣಿಗಳಾದುವು; ತಾವು ಯಾರನ್ನು ಅವಲಂಬಿಸಿರಬೇಕೋ ಅವರ ಆಜ್ಞೆಯಂತೆ ವರ್ತಿಸುವ ಅಂದಿನ ವಿಧೇಯತೆಯನ್ನೇ ಇಂದೂ ಪ್ರದರ್ಶಿಸಿದುವು!

ಆಶ್ರಿತರಾಜರ ಮನೋವೃತ್ತಿ ಹೀಗಿದ್ದರೆ, ಸಂಸ್ಥಾನೀ ಜನತೆಯೂ ವಿಸ್ತೃತ ಭಾರತೀಯರಷ್ಟು ಸ್ವಾಭಿಮಾನಿ, ಸ್ವಾತಂತ್ರ್ಯಾಭಿಮಾನಿಗಳಲ್ಲವೆಂಬುದು ವಸ್ತುಸ್ಥಿತಿ. ಭಾರತೀಯ ಹೃದಯದಲ್ಲಿ ಸ್ವಾತಂತ್ರ್ಯ ಯೋಧತ್ವವನ್ನು ಆವಾಹನೆ ಮಾಡಿದ್ದ ತನ್ನ ಸ್ವಾತಂತ್ರ್ಯ ಹೋರಾಟಗಳಾವುದೂ ಸಂಸ್ಥಾನಗಳ ಗಡಿಯೊಳಗೆ ಪ್ರವೇಶಿಸ [illegible] ತ್ರ್ಯ ಹೋರಾಟ ತರಬೇತಿ ಸಂಸ್ಥಾನಗಳ ಪ್ರಜೆಗಳಿಗೆ ದೊರೆತಿಲ್ಲ. 'ಆಳುವ ಮಹಾ ಪ್ರಭು'ಗಳ ಕಡೆಗಿನ ಅವರ ಗುಲಾಮ ಮನೋವೃತ್ತಿಯು ಎಂದೂ ಅಲುಗಾಡಿದ್ದಿಲ್ಲ. ಹೀಗಾಗಿ ಭಾರತದ ಆಶ್ರಿತ ರಾಜರು ಮತ್ತವರ ಪ್ರಜೆಗಳಲ್ಲಿ ಕಾಲೋಚಿತ ಕ್ಷಾತ್ರತೇಜಸ್ಸು ಮೂಡದಂತಾಗಿತ್ತು; ಇಂದಿನ ಪರಿವರ್ತನಾಂದೋಲನಗಳು ಈ ತೇಜಸ್ಸನ್ನು ಕ್ಷೇತ್ರಗಳಲ್ಲಿ ಬೆಳಗಿಸಿದ್ದರೂ ಈಗ ಕೂಡಾ ಸ್ವಾಭಿಮಾನ, ಸ್ವಾತಂತ್ರ್ಯಾಭಿಮಾನ ಪ್ರದರ್ಶನದ ಮಟ್ಟಿಗೆ ಅವರು ಹಿಂದಿದ್ದಾರೆಂಬುದನ್ನು ಒಪ್ಪಬೇಕು.

ಈ ದುಸ್ಥಿತಿಯ ದುಷ್ಪರಿಣಾಮವನ್ನು ಇಂದು ಕನ್ನಡಿಗರು ಅನುಭವಿಸಬೇಕಾಗಿ ಬಂದಿದೆ. ಮೈಸೂರಿನ ಪ್ರತ್ಯೇಕತೆ—'ಸಂಸ್ಥಾನ"ವೆಂಬ ಸ್ಥಾನ—ಸಂಪೂರ್ಣ ಖಾಯಮ್ಮಾಗಿ, ಅದು ಅಖಿಲ ಕರ್ನಾಟಕದೊಡನೆ ಸೇರಿಹೋಗದೆ ಕರ್ನಾಟಕ ಪ್ರಾಂತ್ಯವಾಗಲಾರದೆಂಬ ಶರ್ತ ಬಿದ್ದಿದೆ. ಆ ಶರ್ತವು ನಮೂದಿಸಲ್ಪಟ್ಟಿದ್ದ 'ತ್ರಿಮೂರ್ತಿ ಸಮಿತಿಯ ವರದಿ'ಯ ಒಕ್ಕಣೆಯೂ ರಾಷ್ಟ್ರದ ಸ್ಥಿತಿಗತಿಗಳೂ, ಭಾರತದ ರಾಜಮಹಾರಾಜತ್ವಗಳೆಲ್ಲವೂ ಪೂರ್ಣ ಮಾಯವಾಗುವ ಕಾಲ ದೂರವಿಲ್ಲವೆಂಬುದನ್ನು ಸ್ಪಷ್ಟಪಡಿಸಿವೆ. ದೇಶದಲ್ಲಿ ರಾಜಮುಕುಟಗಳ ಚಿಹ್ನೆಯೇ ಎಲ್ಲಿಯೂ ಕಂಡುಬಾರದ ಕಾಲವನ್ನು ಈಗಿನವರು ತಮ್ಮ ಆಯುಷ್ಯದಲ್ಲೇ ಕಾಣುವಂತಾದೀತು—ಹೆಚ್ಚೆಂದರೆ, ಮುಕುಟಹೊತ್ತ ಇಂದಿನ ತಲೆಗಳೊಮ್ಮೆ ಉರುಳಿದ ನಂತರ, ಮತ್ತಾ ಕಿರೀಟ ವರ್ಗೀಕರಣವಿರಲಾರದೆಂಬುದಂತೂ ಖಂಡಿತ. ಇಂತಹ ಭವಿಷ್ಯವನ್ನು ಊಹಿಸಿ, ಆ ಕೀರ್ತಿಯು ಕಾಲದ್ದಾಗುವ ಬದಲಿಗೆ ಸ್ವತಃ ತಮ್ಮದೇ ಆಗಲಿ, ಎಂದು ಅಧಿಕಾರ ತ್ಯಾಗಕ್ಕೆ ಮುಂದೆ ಬಂದು 'ಕರ್ನಾಟಕ ಪ್ರಾಂತ್ಯಪಿತ'ನೆನ್ನಿಸಲು ಮೈಸೂರು ಮಹಾರಾಜರಂತೂ ತಯಾರಿಲ್ಲ; ಅಲ್ಲಿಯ ಪ್ರಜೆಗಳು ಕೂಡಾ 'ಆಳುವ ಮಹಾ ಪ್ರಭು'ಗಳನ್ನು ಇಳಿಸಿಕೊಳ್ಳಲು ಸಿದ್ಧರಿರುವಂತಿಲ್ಲ. ಇದೀಗ ಸಂಸ್ಥಾನವನ್ನು ಆಳಿಸಲ್ಪಡುವವರ ಮನೋವೃತ್ತಿ! ಸಂಗತಿ ಹೀಗಿರುವಾಗ ಮೈಸೂರನ್ನು ಕರ್ನಾಟಕದೊಂದಿಗೆ ವಿಲೀನಗೊಳಿಸುವ ಕೆಲಸವು ಸರ್ದಾರ್ ಪಟೇಲರಿಂದಲ್ಲದೆ ಅನ್ಯರಿಂದಾಗದು. ಆದರೆ, ಅಖಿಲಭಾರತದ ಸಂಸ್ಥಾನಗಳ ಪೈಕಿ ಸರ್ದಾರ್ ಪಟೇಲರೀವರೆಗೂ ಯಾವ ವಿಧದಿಂದಲೂ ಸ್ಪರ್ಶಿಸದೆ ಬಿಟ್ಟಿರುವ ಒಂ

ಸಿ. ನೆನ್ನೆನ ಒಂದು ಹೇಳಿಕೆಯ ಮೇಲಿಂದ, 'ಇನ್ನು ಹತ್ತು ವರುಷಗಳ ವರೆಗೆ ಮೈಸೂರಿನ ಗೊಡವೆಗೆ ತಾವು ಹೋಗಬಾರದೆಂದೇ ಸರ್ದಾರರು ನಿರ್ಧರಿಸಿದ್ದಾರೆಂದು ಊಹಿಸಬೇಕಾಗುತ್ತದೆ. ಅವರ ಇಚ್ಛೆ ಹಾಗಿದ್ದರೂ, ತಾವು 'ಸಿಂಹಾಸನ ಕೆಳಕೆಡಹಿ ಕರ್ನಾಟಕ ಪ್ರಾಂತ್ಯದೊಂದಿಗೆ ತಾದಾತ್ಮ್ಯಗೊಳ್ಳಲಿಚ್ಛಿಸುತ್ತೇವೆ' ಎಂದು ಮೈಸೂರು ಜನತೆಯಿಂದ ಹೇಳಿಸುವವರಿದ್ದರೆ, ಸರ್ದಾರ್ ಪಟೇಲರು ಅದನ್ನು ಮಾಡಿಸಲೇಬೇಕಾಗುವದು. ಆದರೆ ಮೈಸೂರಿನವರ ಮನೋವೃತ್ತಿ ತದ್ವಿರುದ್ಧವಿದೆ; ಅದನ್ನು ಬಗ್ಗಿಸಿ ಸಮಮಟ್ಟಕ್ಕೆ ತರುವ ಕಾರ್ಯ ಮಾಡುವವರಿಲ್ಲ. ಮೈಸೂರರಸರಿಗೆ ಮಾತ್ರವಲ್ಲ; ಮೈಸೂರು ಜನತೆಗೂ ಬೇಡವಾಗಿರುವ ಕೆಲಸವೊಂದನ್ನು ಸರ್ದಾರ್ ಪಟೇಲರು ಮಾಡಲಿಕ್ಕಿಲ್ಲವೆಂಬುದಕ್ಕಾಗಿ ಅವರನ್ನು ದೂರುವ ಹಕ್ಕು ಕನ್ನಡಿಗರಿಗಿಲ್ಲ. ಸಂಸ್ಥಾನೀ ಹಳೇ ಮನೋವೃತ್ತಿಯ ದುಷ್ಪರಿಣಾಮವನ್ನು ಕನ್ನಡಿಗರು ಈ ರೀತಿ ಅನುಭವಿಸಬೇಕಾಗಿ ಬಂದಿದೆ.

ಅತ್ತ ಕೇರಳದ ತಿರುವಾಂಕೂರು, ಕೊಚ್ಚಿ ಸಂಸ್ಥಾನಗಳ ಒಕ್ಕೂಟ ರಚನೆಗೆ ಅಸ್ತಿವಾರ ಬಿದ್ದಿರುವಂತೆಯೇ ಈಗ ಒಂದು ವಿಶೇಷ ವಾರ್ತೆ ಕೇಳಿಬಂದಿದೆ. 'ತನ್ನ ಸಂಸ್ಥಾನವು ಪದ್ಮನಾಭಸ್ವಾಮಿ ದೇವರ ಹಕ್ಕಿನದು, 'ಪದ್ಮನಾಭ ದಾಸ'ನಾದ ತಾನು ತನ್ನ ಒಡೆಯನನ್ನು ಹಿಂದೆ ಹಾಕಿ ತಿರುವಾಂಕೂರು ಕೊಚ್ಚಿ ಒಕ್ಕೂಟದ 'ರಾಜ ಪ್ರಮುಖ'ನಾಗಲಾರೆ—ತನಗಿಂತ ಕಿರಿಯ ಕೊಚ್ಚಿ ರಾಜರು ಹಾಗಾಗುವದಕ್ಕೂ ಒಪ್ಪಲಾರೆ'-ಎಂದು ತಿರುವಾಂಕೂರು ಮಹಾರಾಜರು ವೈದಿಗೆಗೆ ನಿಂತ ಸುದ್ದಿಯಿದ್ದಿದೆ. ಇದರ ಪರಿಣಾಮವೇನು—ಐಕ್ಯ ಕೇರಳ ರಚನೆಗದು ಅನುಕೂಲವೋ, ಪ್ರತಿಕೂಲವೋ-ಎಂಬುದನ್ನು ನೋಡಲಿಕ್ಕಿದೆ. ಆದರೆ ಸಂಸ್ಥಾನೀ ಮನೋವೃತ್ತಿ ಎತ್ತ ಸ್ಥಿತಿಗತಿ ವೈಚಿತ್ರ್ಯಗಳಲ್ಲಿ ಇದೂ ಒಂದೆನ್ನಬೇಕು.

ಕರ್ನಾಟಕ ಅಥವಾ ಕೇರಳ ಪ್ರಾಂತ್ಯಗಳ ರಚನೆಯ ಮಾತು ಹೇಗೂ ಇರಲಿ, ಸಂಸ್ಥಾನಗಳ ರಾಜಪ್ರಜೆಗಳಲ್ಲಿರುವ ಅಪ್ರಗತಿಕ ಧೋರಣೆ, ಅಂಧಾಚಾರನಿಷ್ಠ, ಮಧ್ಯಕಾಲೀನ ಮನೋವೃತ್ತಿಗಳು ಸ್ವತಂತ್ರ ಭಾರತದ ಪ್ರಗತಿಶೀಲತೆಗೆ ಅಪಮಾನಕರ, ಅಪಾಯಕಾರಿಗಳೆಂಬುದನ್ನು ದಯಾ ನಮ್ಮ ಕೇಂದ್ರ ನಾಯಕರೂ ಜನತೆಯೂ ತಿಳಿದಿರಬೇಕು. ಇಂದು ಕೂಡಾ ಸಂಸ್ಥಾನೀ ವಾತಾವರಣವೇ ಸ್ವತಂತ್ರಭಾರತದ ದುರ್ಬಲಭಾಗವಾಗಿದೆ ಎಂಬುದನ್ನು ಮನಗಂಡು ಅದನ್ನು ಸುಧಾರಿಸುವ ಹೊಣೆ ಹೊತ್ತವರು ಕೂಡಲೇ ಕಾರ್ಯಪ್ರವೃತ್ತ [illegible]

ಮದ್ರಾಸ್ ಮಂತ್ರಿಮಂಡಲಿಯಲ್ಲಿ—

ಶ್ರೀ. ಪಿ. ಪೆರುಮಾಳಸ್ವಾಮಿ ರೆಡ್ಡಿಯಾರ್ ಎಂ. ಎಲ್. ಸಿ. ಇವರು, ಮದ್ರಾಸ್ ಮಂತ್ರಿಮಂಡಲಕ್ಕೆ ಹೊಸತಾಗಿ ನೇಮಕಗೊಂಡು ಇದೇ ತಾ. 23ರಲ್ಲಿ ಪ್ರತಿಜ್ಞಾಬದ್ಧರಾದರು. ಈ ಮೊದಲೇ ಹತ್ತು ಮಂದಿಯಿದ್ದ ಆ ಮಂಡಲಿಯ ಸಂಖ್ಯೆಯೀಗ 11ಕ್ಕೇರಿದೆ. ಪ್ರಥಮತಃ ದಶಮುಖಗಳನ್ನಾರಿಸಿಕೊಂಡಾಗ ಪ್ರಧಾನಿ ಶ್ರೀ. ಪಿ. ಯಸ್. ಕುಮಾರಸ್ವಾಮಿ ರಾಜರು ತಾನಿನ್ನೂ ನಾಲ್ಕು ಅಥವಾ ಐದುಮಂದಿಯನ್ನು ಹೆಚ್ಚಿಗೆ ಸೇರಿಸಿಕೊಳ್ಳಲಿರುವೆನೆಂದು ಜಾಹೀರು ಮಾಡಿದ್ದರು. ಡಾ। ಸುಬ್ಬರಾಯನರ ಉಮೇದ್ವಾರಿಕೆಯನ್ನು ಸಮರ್ಥಿಸಿದ್ದ ಇದಿರುವಾದಿ ಪಾಳಯದಿಂದ ಈ ಹೆಚ್ಚಿನ ಮಂತ್ರಿಗಳನ್ನಾರಿಸಿಕೊಂಡು ಮದ್ರಾಸ್ ಕಾಂಗ್ರೆಸ್ ಪಕ್ಷದ ಒಗ್ಗಟ್ಟನ್ನು ಸಾಧಿಸಬೇಕೆಂಬ ಉತ್ಕಟೇಚ್ಛೆ ಪ್ರಧಾನ ಮಂತ್ರಿಗಳಲ್ಲಿರುವಂತಿದೆ. ಆ ಕುರಿತು ತೆರೆಯಮರೆಯಲ್ಲಿ ಮಾತುಕತೆಗಳೂ ನಡೆದಿವೆ, ಎಂದು ತಿಳಿದುಬಂದಿದೆ. ಈಗಲೂ ನಾನಾ ಊಹಾಪೋಹಗಳು ಸುಳಿದಾಡುತ್ತಿವೆ; ಹೊಸ ನೇಮಕಗಳಲ್ಲಿ ಡಾ. ಸುಬ್ಬರಾಯನ್, ಶ್ರೀ ಕೆ. ಆರ್. ಕಾರಂತ್, ಶ್ರೀ ಟಿ. ವಿಶ್ವನಾಥನರ ಬರುವದೆಂಬ ಮಾತು ಕೇಳಿ ಬರುತ್ತಿದೆ. ಕೆಲವು ಉಪಮಂತ್ರಿಗಳನ್ನು ನೇಮಿಸಿಕೊಳ್ಳುವ ಆಲೋಚನೆಯಿದೆಯೆಂಬುದೂ ಪ್ರಧಾನ ಮಂತ್ರಿಗಳ ಮಾತಿನಿಂದ ಸ್ಪಷ್ಟ. ಇವೆಲ್ಲಾ ಕೆಲಸ ಪೂರ್ಣಗೊಂಡಾಗ ಮಂತ್ರಿಗಳ ಖಾತೆಗಳ ಪುನರ್ವಿತರಣೆಯಾಗಲಿದೆ. ಅಂತೂ ಮದ್ರಾಸಿನಲ್ಲಿ ಮಂತ್ರಿಮಂಡಲಗಳನ್ನು ಉರುಳಿಸಿಕೊಂಡಷ್ಟು ಸುಲಭದಲ್ಲಿ ರಚಿಸಿಕೊಳ್ಳಲಾಗುವದಿಲ್ಲ—ಈ ಬಾರಿಯ ಸರಕಾರ ರಚನೆ ಇನ್ನೂ ಪೂರ್ಣಗೊಂಡಿಲ್ಲ.

ಅಸೆಂಬ್ಲಿಯಲ್ಲಿ ಸವಾಲು

ಮದ್ರಾಸ್ ಮಂತ್ರಿಮಂಡಲಿ ಬದಲಾವಣೆಯ ಸಂಬಂಧದ ವಿಚಾರಣೆಯು ಅಸೆಂಬ್ಲಿಯಲ್ಲೂ ಆಗಿದ್ದಿತು. ಕಳೆದವಾರ ಮಾಜೀ ಮಂತ್ರಿಗಳಾದ ಶ್ರೀ. ಟಿ. ಯಸ್. ಅವಿನಾಶಲಿಂಗಂ ಚೆಟ್ಟಿಯಾರ್ ಮತ್ತು ಶ್ರೀ ಕೂರ್ಮಯ್ಯನವರ ನಿವೇದನೆಗಳಾದ ಮರುದಿನ ವಿರುದ್ಧ ಪಕ್ಷದ ನಾಯಕ ಮಿ. ಮಹಮ್ಮದ್ ಇಸ್ಮಾಯಿಲ್ ಪ್ರಶ್ನೆಯೆತ್ತಿದರು: "ಇಂತಹ ಕಾರಣಗಳಿಗಾಗಿಯೇ ಮಂತ್ರಿಮಂಡಲದ ಬದಲಾವಣೆಯಾಯಿತು ಎಂಬುದನ್ನು ಕೇಳಿ ತಿಳಿಯುವ ಹಕ್ಕು ಈ ಸಭೆಗಿದೆ. ಈ ಮೊದಲು ನಡೆದಿದ್ದ ಇಂತಹ ಪ್ರಯತ್ನಗಳ ಪರಿಣಾಮವೇನೇ ಆಗಿದ್ದರೂ ಈ ಪ್ರಾಂತ್ಯವನ್ನಾಳಬೇಕೆಂಬ ಹೊಸ ಮಂತ್ರಿಮಂಡಲದ ಪ್ರಯತ್ನಗಳಿಗೆ ನಾನು ವಿಜಯ ಹಾರೈಸುತ್ತೇನೆ. ಹೊಸ ಮಂಡಲಿಯ ಹೆಚ್ಚಿನವರು ಈ ಸಭೆಗೆ ಸಂಯಾದ ಪರಿಚಯವುಳ್ಳ ಹಳೇ ರಕ್ಷಕರೇ. ಆದರಮೇಲೆ ನಿಜಕ್ಕೂ ನಡೆದುದೇನೆಂಬುದನ್ನು ನನಗೀಗ ತಿಳಿಯಬೇಕಾಗಿದೆ. ಹಿಂದಿನ ಪ್ರಧಾನಿಗಳು ನಾಯಕ ಚುನಾವಣೆಯ ಸುಮಾರು ಮೂರು ತಿಂಗಳುಗಳ ಮೊದಲೇ ತಾನು ರಾಜೀನಾಮೆ ಕೊಡುವ ಅಭಿಪ್ರಾಯ ಸೂಚಿಸಿದ್ದರು. ಆದರೆ ನಾಯಕ ಚುನಾವಣೆಯ ಮೊದಲದಿನ, ಹೈಕಮಾಂಡಿನ ಹೆಸರು ಹೇಳಿ ಮಂತ್ರಿಮಂಡಲದಲ್ಲಿ ಯಾವ ಬದಲಾವಣೆಯನ್ನೂ ಮಾಡಬಾರದೆಂದು ಅವರೇ ಪಕ್ಷದ ಸದಸ್ಯರೊಡನೆ ವಿಜ್ಞಾಪಿಸಿಕೊಂಡಿದ್ದರು. ಪಕ್ಷದ ಒಂದು ಗುಂಪಿನ ಸದಸ್ಯರಿಗೂ ಮತ್ತೊಂದು ಗುಂಪಿನ ಸದಸ್ಯರಿಗೂ ಇದ್ದ

ನೆರೆ ರಾಷ್ಟ್ರಗಳ ಕಡೆಗೆ ಪಾಕಿಸ್ತಾನದ ವರ್ತನೆ.

ಭಿನ್ನಾಭಿಪ್ರಾಯದಿಂದಲೇ ಈ ಬದಲಾವಣೆ ಬಂತು. ಆ ಭಿನ್ನಾಭಿಪ್ರಾಯವಾವುದು-ಆ ಬದಲಾವಣೆ ಯಾಕಾಗಿ-ಎಂಬುದನ್ನು ನಾನೀಗ ತಿಳಿಯಬಲ್ಲೆನೇ. ತೀರ್ಮಾನಿಸಲ್ಪಟ್ಟ ಬದಲಾವಣೆಯೂ ಇಲ್ಲವೆಂದು ಯಾಕೆ ಪ್ರಧಾನಿಗಳೆಂದಿದ್ದಾರೆ. ಹಾಗಾದರೆ ಮಂತ್ರಿತ್ವ ಬದಲಾವಣೆಯೇಕಾಗಿ?" ಎನ್ನುತ್ತಾ ತನ್ನ ಮಂಡಲಿಸಿದ ಸ್ವರವನ್ನು ಆರಿಸಿಕೊಳ್ಳುವ ವೇಳೆ ಹೊತ್ತ ಪ್ರಧಾನ ಮಂತ್ರಿಗಳು ಆ ಸಂಬಂಧವಾಗಿ ಕಾಂಗ್ರೆಸ್ ಹೈಕಮಾಂಡಿನ ಅಭಿಪ್ರಾಯ ಕೇಳಿಕೊಳ್ಳದೆ ಮುಂದುವರಿಸಲಿಲ್ಲವಂದೂ, ಹಾಗಾದರೆ ಈ ಮಂತ್ರಿಮಂಡಲವು ಯಾರಿಗೆ ಹೊಣೆ ಎಂದೂ ಪ್ರಶ್ನಿಸಿದರು. ಮಂತ್ರಿಗಳ ಆರಿಸುವಿಕೆಯು ಪ್ರಧಾನಿಗಳದ್ದೇ-ಬೇರೆಯವರದೆಂಬ ಪತ್ರಿಕಾ ವಾರ್ತೆಗಳನ್ನೂ ಪ್ರಸ್ತಾಪಿಸಿ ಪ್ರಾಂತ್ಯದ ಹಿತದೃಷ್ಟಿಯಿಂದ ಇವೆಲ್ಲಾ ವಿಷಯಗಳನ್ನು ತಿಳಿದುಕೊಳ್ಳುವ ಹಕ್ಕು ಎಸೆಂಬ್ಲಿ ಸದಸ್ಯರಿಗೆ ಮಾತ್ರವಲ್ಲ, ಸಾರ್ವಜನಿಕರಿಗೂ ಇದೆ ಎಂದರು.

ಈ ಸಂಬಂಧದ ವಾಗ್ವಾದ

ಮಿ. ಮಹಮ್ಮದ್ ಇಸ್ಮಾಯಿಲರ ವಿಚಾರದ ಮೇಲೆ ಏನಾದರೂ ಹೇಳಿಕೆ ಕೊಡಲಿಚ್ಛಿಸುವಿರೋ, ಎಂದು ಅಧ್ಯಕ್ಷರು ಶ್ರೀ ಬಿ. ಗೋಪಾಲರೆಡ್ಡಿಗಳನ್ನು ಕೇಳಿದಾಗ ಅವರು ತಾನೇನೂ 'ಹೇಳಿಕೆ ಕೊಡಬೇಕೋ ಬೇಡವೋ' ಎಂಬುದು ತನಗೆ ತಿಳಿಯದು; ಮಾಜೀ ಪ್ರಧಾನ ಮಂತ್ರಿಗಳೇ ಒಂದು ಹೇಳಿಕೆಕೊಡಲೂ ಬಹುದು" ಎಂದರು. ಆಗ ಮಿ. ಮಹಮ್ಮದ್ ಇಸ್ಮಾಯಿಲರು "ಇಲ್ಲೀಗ ಮಾಜೀ ಪ್ರಧಾನಿಗಳು ಸ್ವಂತ ಹೇಳಿಕೆ ಕೊಡುವ ಪ್ರಶ್ನೆಯಿಲ್ಲ. ಹಳೇ ಮಂತ್ರಿಮಂಡಲವು ರದ್ದು ಮಾಡಲ್ಪಟ್ಟು ಹೊಸ ನಾಯಕನ ಚುನಾವಣೆಯಾಗಿ ಹೊಸ ಮಂತ್ರಿಮಂಡಲ ರಚನೆಯಾಗಿದೆ" ಎಂದರು. ಕೂಡಲೇ ಶ್ರೀ. ಬಿ. ಗೋಪಾಲರೆಡ್ಡಿಗಳ ಉತ್ತರ ಬಂತು: "ಕಾಂಗ್ರೆಸ್‌ಪಕ್ಷದ ಒಳ ಸಂಗತಿಗಳ ಕುರಿತು ಸದ್ದಿಲ್ಲದ ಹಕ್ಕು ವಿರುದ್ಧ ಪಕ್ಷದ ನಾಯಕರಿಗಿಲ್ಲ. ವರುಷಂಪ್ರತಿ ನಾಯಕ ಚುನಾವಣೆ ನಡೆಸುವ ಕ್ರಮವು ಪಕ್ಷದ ಘಟನೆಯಲ್ಲೇ ಇದ್ದು ಅದಕ್ಕನುಸಾರವಾಗಿ ನಾವು ಚುನಾವಣೆಗಳನ್ನು ನಡೆಸಿದ್ದೇವೆ. ನಮ್ಮದು ಯಾವ ಮಾದರಿಯ ಘಟನೆ ನಾವು ಚುನಾವಣೆಗಳನ್ನು ನಡೆಸುವುದಾರು ತಿಂಗಳಿಗೊಮ್ಮೆಯೋ, ಅಥವಾ ವರುಷಕ್ಕೊಂದು ಬಾರಿಯೋ ಅಲ್ಲವೇ ಮೂರು ವರುಷಗಳಿಗೊಂದು ಸಲವೋ ಎಂದು ಕೇಳುವ ಅಗತ್ಯ ವಿರುದ್ಧ ಪಕ್ಷದ ನಾಯಕರಿಗಿಲ್ಲ." ಈ ಎಂತು

ಚರ್ಚೆ ನಡೆಸಲು ತಾನಿಲ್ಲಿ ಅಸ್ಪದ ಕೊಡಲಾರೆನೆಂದು ಅಧ್ಯಕ್ಷರು ಮಧ್ಯದಲ್ಲೇ ತಿಳಿಸಿದಾಗ ಪ್ರವೀಣ ಮಿ. ಮಹಮ್ಮದ್ ಇಸ್ಮಾಯಿಲರು, ಸಂಗತಿಯನ್ನು ಸ್ಪಷ್ಟೀಕರಿಸಿದರು. "ಸಭಾನಾಯಕರು (ಶ್ರೀ ರೆಡ್ಡಿ) ಪ್ರಶ್ನೆಯನ್ನು ಜಾರಿಸಿಕೊಳ್ಳಲಿಚ್ಛಿಸುವುದನ್ನು ನೋಡುತ್ತಾರೆ. ಕಾಂಗ್ರೆಸ್ ಪಕ್ಷದ ಹಕ್ಕುಗಳನ್ನು ನಾನಿಲ್ಲಿ ಪ್ರಶ್ನಿಸಿದ್ದೇ ಇಲ್ಲ ಆದರೆ ಮಂತ್ರಿಮಂಡಲ ಬದಲಾವಣೆಯಾದುದು ಹೇಗೆ ಎಂಬುದನ್ನು ಎಸೆಂಬ್ಲಿಗೆ ತಿಳಿಯಬೇಕಾಗಿದೆ". ಪುನಃ ಶ್ರೀ ಗೋಪಾಲರೆಡ್ಡಿಗಳೆಂದರು: "ಅದನ್ನು ತಿಳಿಯುವ ಹಕ್ಕು ಇದಿರುಪಕ್ಷದ ನಾಯಕರಿಗಿಲ್ಲ. ಮುಸ್ಲಿಂ ಲೀಗ್ ಪಕ್ಷದ ಎಂಟು ಮಂದಿ ಸದಸ್ಯರು ಇತ್ತೀಚೆಗೆ ಅದನ್ನು ಬಿಟ್ಟುಹೋಗಿದ್ದಾರೆ. ಆದರೆ ನನಗಾಗಲೀ ನನ್ನ ಪಕ್ಷಕ್ಕಾಗಲೀ ಅದೆಲ್ಲಾವ ಕೆಲಸವೂ ಇಲ್ಲ. ಅದೇರೀತಿ ಕಾಂಗ್ರೆಸ್ ಪಕ್ಷವು ಮಂತ್ರಿಮಂಡಲಿಯನ್ನು ಬದಲಾಯಿಸಿಕೊಂಡುದೇಕೆ ಎಂಬುದನ್ನು ತಿಳಿಯುವ ಅಧಿಕಾರ ವಿರುದ್ಧ ಪಕ್ಷದ ನಾಯಕನಿಗಿಲ್ಲ"--ಅಧ್ಯಕ್ಷರು ಬೇರೆವಿಷಯದ ಕಡೆಗೆ ಹೊರಳಿ ಚರ್ಚೆಯನ್ನಲ್ಲಿಗೇ ಮುಗಿಸಿಬಿಟ್ಟರು.

ಈ ಮೊದಲು ತಾತ್ಕಾಲಿಕವಾಗಿ ಜಾರಿ ಮಾಡಲ್ಪಟ್ಟಿದ್ದು ಮಾಯಿದೆ ಮುಗಿಯುತ್ತ ಬಂದಿದ್ದ ಎಲ್ಲ ಶಾಸನಗಳನ್ನ ಊರ್ಜಿತದಲ್ಲಿಡುವ ತಿದ್ದುಪಡಿ ಶಾಸನವು ಈ ಬಾರಿಯ ಎಸೆಂಬ್ಲಿಯಲ್ಲಾಯಿತು; ಹಲವು ಮುಖ್ಯ ವಿಷಯಗಳ ಕುರಿತು ಪ್ರಶ್ನೋತ್ತರಗಳು ನಡೆದಿದ್ದುವು.

ಕಾಶ್ಮೀರದಲ್ಲಿ ಸಂಧಾನ ಶರ್ತಗಳನ್ನು ಮುರಿದು ಪಾಕಿಸ್ತಾನವು ನಡೆಸಿರುವ ಮತ್ತು ನಡೆಸುತ್ತಿರುವ ಆಕ್ರಮಣಗಳ ಕುರಿತು ಭಾರತ ಸರಕಾರವು ಪಾಕಿಸ್ತಾನಕ್ಕೂ ಸಂಯುಕ್ತ ರಾಷ್ಟ್ರಸಂಘದ ಕಾಶ್ಮೀರ ಕಮಿಶನಿಗೂ ನಿಷೇಧಗಳನ್ನು ಸೂಚಿಸಿದ್ದಿತ್ತಷ್ಟೆ. ಇದನ್ನಲ್ಲಗಳೆದು, ಸಣ್ಣಪುಟ್ಟ 'ಸಂಧಾನ ಭಂಗ ಕೃತ್ಯಗಳು ಇತ್ತಡೆಗಳಿಂದಲೂ ನಡೆದಿವೆ-ಆದುದರಿಂದ ಭಾರತವೇ ಮೂಲಾಪರಾಧಿ ಎಂಬರ್ಥದ ಹೇಳಿಕೆಯನ್ನು ಪಾಕಿಸ್ತಾನ್ ಸರಕಾರವು ಕೊಟ್ಟದ್ದಿತು. ಕಾಶ್ಮೀರ ಕಮಿಶನು ಈ ಕುರಿತು ವಿಚಾರಣೆ ನಡೆಸಿ 'ಹೋರಾಟ ಮುಗಿಸುವ ಶರ್ತಗಳಿಗೆ ಗಂಭೀರ ದ್ರೋಹಗಳಾವುವೂ ಆಗಿಲ್ಲ' ವೆಂದು ತೀರ್ಮಾನಿಸಿರುವುದು ತಿಳಿದು ಬಂದಿದೆ. 'ಕಾಶ್ಮೀರ ಕಮಿಶನಿನ ಸೇನಾ ಸಲಹೆಗಾರ ಲೆಫ್ಟಿನೆಂಟ್ ಜನರಲ್ ಡೆಲ್ವೋಯಿಯವರಿಗೆ ಕದನ ವಿರಾಮಭಂಗದ ದೂರುಗಳು ಭಾರತ ಮತ್ತು ಪಾಕಿಸ್ತಾನವೆಂಬ ಕಡೆಗಳ ಮಿಲಿಟರಿ ಅಧಿಕಾರಿಗಳಿಂದಲೂ ಬಂದಿವೆ ಆದರೆ ತಾನು ನಡೆಸಿದಾಗ ಅವೇನೂ ಅಷ್ಟೊಂದು ಗಂಭೀರ ಸಂಗತಿಗಳಲ್ಲವೆಂದು ಸಿದ್ಧವಾಗಿದೆ. ಎರಡೂ ವಿಷಯ ಮಿಲಿಟರಿ ಜಾಗಗಳನ್ನೂ ಸ್ಥಳೀಯ ಸೇನಾಧಿಗಳೇ ಸಮಾಧಾನಕರವಾಗಿ ತೀರ್ಮಾನಿಸಿಕೊಂಡಿದ್ದರು; ಉಳಿದ ಎರಡು ವಿವಾದಗಳು ಕಾರ್ಯಾಚರಣೆಗಾಗಿ ಸೇನಾ ಸಲಹೆಗಾರರಿಗೊಪ್ಪಿಸಲ್ಪಟ್ಟಿದ್ದುವು. ಇಕ್ಕಡೆಯ ಸರಕಾರಗಳ ಸಶಸ್ತ್ರ ಸೇನೆಗಳು ರಾಷ್ಟ್ರಸಂಘದ ಸೇನಾ ಸಲಹೆಗಾರರಿಗೆ ಮತ್ತು ಸೇನಾ ನೋಟಗಾರರಿಗೆ ಅತ್ಯಮೂಲ್ಯ ಸಹಾಯ ಸಹಕಾರ ಸಲ್ಲಿಸಿದ್ದುವು'-ಎಂದು ಕಾಶ್ಮೀರ ಕಮಿಶನಿನವರ ಅಭಿಪ್ರಾಯ. ಆದರೆ ಈಗಲೂ ಭಾರತದ ಗಡಿವಲಯಗಳಲ್ಲಿ ಪಾಕಿಸ್ತಾನಿಗಳ ಧಾಳಿಗಳು ನಡೆದೇ ಇವೆ. ಪೂರ್ವ ಸಂಸ್ಥಾನದ ಮೇಲೆ ನಡೆದ ಧಾಳಿಯಲ್ಲಿ 12 ಜನರು ಸತ್ತರೆಂದು ತಿಳಿದು ಬಂದಿದೆ. ಕಾಶ್ಮೀರ ಕಮಿಶನಿನವರೀಗ ಸಂಧಾನ ಸೂಚನೆಗಳ ಕುರಿತು ದೆಹಲಿಯಲ್ಲಿ ಪಾಕಿಸ್ತಾನ್ ಪ್ರತಿನಿಧಿಗಳೊಡನೆ ಮಾತುಕತೆ ನಡೆಸುತ್ತಿದ್ದಾರೆ.

ಪಾಕಿಸ್ತಾನದ ಕಂಟಕ

ಪಾಕಿಸ್ತಾನದ ವಾಯವ್ಯ ಸರಹದ್ದಿನ ಪ್ರಾಂತ ಧೋರಣೆಯು ನಲವಾಗಿ ಭಾರತದ ಗಡಿಯಲ್ಲಿ ಅವಾಂತರಗಳಾಗುತ್ತಿರುವಂತೆಯೇ ಪಾಕ್-ಅಫ್ಘಾನ್ ಸ್ಥಾನಗಳ ಸರಹದ್ದುಗಳಲ್ಲೂ ಕಠಿಣ ಘರ್ಷಣೆಗಳಿದ್ದು ಅವೆರಡು ರಾಷ್ಟ್ರಗಳಲ್ಲಿ ಮನೋಮಾಲಿನ್ಯತೆಯುಂಟಾಗಿದೆ. ಖಾನ್ ಸಹೋದರರನ್ನು ಯತ್ರವನ್ನು ಮಸ್ಸಿಸದ ಗಡಿನಾಡು ಪ್ರಾಂತ್ಯದ ಪಠಾಣರ ಮೇಲೆ ಪಾಕಿಸ್ತಾನವು ದಬ್ಬಾಳಿಕೆ ಕೈಗೊಂಡಿರುವುದನ್ನೂ, ಪಠಾಣರಿಗೆ ಸ್ವನಿರ್ಧಾರದ ಹಕ್ಕನ್ನು ಕೊಡದಿರುವುದನ್ನೂ ಅಫ್ಘಾನಿಸ್ತಾನ್ ಸರಕಾರವು ನಿಷೇಧಿಸಿದೆ. ಅಲ್ಲಿ ಪಾಕಿಸ್ತಾನದ ವಿರುದ್ಧವಾಗಿ ಅಫ್ಘಾನರ ಪ್ರದರ್ಶನಗಳಾಗುತ್ತಿವೆ. ಗಡಿನಾಡು ಪ್ರಾಂತ್ಯದ ದಬ್ಬಾಳಿಕೆಯನ್ನು ನಿಲ್ಲಿಸಿ, ಪಠಾಣರಿಗೆ ತಾವಾವ ಸ್ಥಾನ ಹೊಂದಬೇಕೆಂದು ನಿರ್ಧರಿಸುವ ಹಕ್ಕನ್ನು ಪಾಕಿಸ್ತಾನವು ಕೊಡದಿದ್ದರೆ ಅಫ್ಘಾನಿಸ್ತಾನವು ಈ ಕುರಿತು ಸಂಯುಕ್ತರಾಷ್ಟ್ರ ಸಂಘಕ್ಕೆ ದೂರುಕೊಡಲು ತಯಾರಿದೆ. ರಕ್ತ, ಸಂಸ್ಕಾರ ಮತ್ತು ಆರ್ಥಿಕ ಭೌಗೋಲಿಕ ದೃಷ್ಟಿಯಿಂದ ಗಡಿನಾಡ ಪಠಾಣರು ಅಫ್ಘಾನರಿಗೇ ಹೊರತು ಪಾಕಿಸ್ತಾನಕ್ಕೂ ಅವರಿಗೂ ಯಾವ ಸ್ವಾಭಾವಿಕ ಸಂಬಂಧವೂ ಇಲ್ಲವೆಂದು ಅಫ್ಘಾನರ ಹೇಳಿಕೆ. ಸರಹದ್ದು ಗುಡ್ಡಗಾಡುಗಳಲ್ಲಿ ಪಾಕಿಸ್ತಾನವೀಗ ನಡೆಸುತ್ತಿರುವ ಆಕಾಶಧಾಳಿಯು ಅವರನ್ನು ಮತ್ತಷ್ಟು ಕೆರಳಿಸಿದೆ. "ಈ ಆಕ್ರಮಣವು ಇನ್ನೂ ಮುಂದುವರಿದರೆ, ಅಸಾಧ್ಯ ಪರಿಣಾಮಗಳೇಳಬಹುದು. ಅತಿ ದೊಡ್ಡ ಸ್ವತಂತ್ರಾಭಿಮಾನಿಗಳಾದ ಪಠಾಣರು ಪಾಕಿಸ್ತಾನದ ನೊಗಕ್ಕೆ ಕಟ್ಟಿ ಹಾಕಲ್ಪಡಲು ಎಷ್ಟಕ್ಕೂ ಒಪ್ಪಲಾರರು" ಎಂದು ಅಮೇರಿಕದಲ್ಲಿ ಅಫ್ಘಾನಿ ರಾಯಭಾರಿಯಾಗಿರುವ ಮಿ. ನಯೀಮ್ ನುಡಿದಿದ್ದಾರೆ.

ಬಾಬು ರಾಜೇಂದ್ರ ಪ್ರಸಾದರು—ಗಾಂಧೀ ಸ್ಮಾರಕನಿಧಿಯ ಸಂಗ್ರಹೋದ್ದೇಶದಿಂದ ದಕ್ಷಿಣಭಾರತ ಸಂಚಾರ ಕೈಕೊಂಡಿದ್ದು ಈ ತಿಂಗಳಾಂತ್ಯದ ದಿನಗಳಲ್ಲಿ ಕರ್ನಾಟಕದ ಕೆಲವು ಭಾಗಗಳನ್ನು ಸಂದರ್ಶಿಸುತ್ತಿದ್ದಾರೆ.

ಕಾರ್ಕಳ:—ಮದ್ರಾಸ ಮಂತ್ರಿ ಸಂತಾನಮರು ತಾ. 22ರಲ್ಲು ಸಂಜೆ ಕಾರ್ಕಳಕ್ಕೆ ಬಂದಾಗ ಅವರಿಗೆ ಸ್ಥಳೀಯ ಎಸ್. ವಿ. ಟಿ. ಹಾಲಿನಲ್ಲಿ ಕೂಡಿದ ಸಾರ್ವಜನಿಕರ ಸಮಕ್ಷಮ ಭಿನ್ನವತ್ತಳೆಯೊಂದು ಅರ್ಪಿಸಲಾಯಿತು. ಕೇಂದ್ರ ಸರಕಾರದ ಪರಿಸ್ಥಿತಿ, ಜನತೆಯ ಬೇಡಿಕೆಗಳು ಮೊದಲಾದ ವಿಷಯಗಳಲ್ಲಿ ಮಂತ್ರಿಗಳು ಆಲೋಚಿತ ಮಾತುಗಳನ್ನಾಡಿ ಅಸ್ಪೃಶ್ಯತಾ ನಿವಾರಣೆ, ಹಿಂದೀ ಭಾಷೆಯ ಜ್ಞಾನದ ಅವಶ್ಯಕತೆಯನ್ನು ಸೂಚಿಸಿದರು. ಶ್ರೀ ಕೆ. ವೆಂಕಟೇಶ ಪ್ರಭುಗಳು ಮದ್ರಾಸ ಮಂತ್ರಿಗಳ ಸಂಚಯನಮಾಡಿಕೊಟ್ಟರು.

ಪುತ್ತೂರು:—ತಾ 23ರಲ್ಲಿ ಮಡಿಕೇರಿಗೆ ಪ್ರಯಾಣವಾಗಲಿದ್ದ ಮದ್ರಾಸ ಮಂತ್ರಿ ಸಂತಾನಮರು ಅಂದು ಬೆಳಗ್ಗೆ ಹತ್ತು ಗಂಟೆಯ ಸಮಯಕ್ಕೆ ಪುತ್ತೂರಿಗೆ ಬಂದು ಅಲ್ಲಿಯ ಸಹಕಾರಿ ಕಟ್ಟಡದಲ್ಲಿ ಏರ್ಪಡಿಸಿದ್ದ ಸಭೆಗೆ ಹಾಜರಾದರು. ಪುತ್ತೂರು ಎಂಬ ಹೆಸರನ್ನು ಬದಲಾಯಿಸಬೇಕೆನ್ನುವ, ಪುತ್ತೂರುಗೊಂದು ರೈಲ್ವೆ ಬಿಟ್ಟು ವಿಜ್ಞಪ್ತಿ ಸ್ಥಾಪಿಸಬೇಕೆನ್ನುವ ಬಗ್ಗೆ ಮಂತ್ರಿಗಳಿಗೊಂದು ಮನವಿ ಕೊಡಲಾಯಿತು. ಶ್ರೀ. ಕೆ. ಸಂತಾನಮರು ಪರಿಶೀಲಿಸುವುದಾಗಿ ಉತ್ತರವಿತ್ತರೆಂದು ತಿಳಿದುಬರುತ್ತದೆ.

ಉಡುಪಿ

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 23ನೇ ಆದಿತ್ಯವಾರ ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಶಾಲಾ ಮುಖ್ಯೋಪಾಧ್ಯಾಯರಿಂದ ವರದಿ ವಾಚನ, ಬಹುಮಾನವಿತರಣೆಗಳಾದಮೇಲೆ, ಶ್ರೀ ಕೆ. ಪ್ರಭಾಕರ ಪೈಗಳಿಂದ ಶಾಲಾ ಸ್ವಸ್ತಿವಾಚನವಾದ ಮೇಲೆ ಶ್ರೀಯುತ ಕೆ. ಶ್ರೀಪತಿ ಆಚಾರ್, ಕೆ. ಜಗನ್ನಾಥ ನಾಯಕರು ಭಾಷಣಗಳನ್ನಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲಾ ಸಂಬಂಧವಾಗಿ ಸರ್ವರ ಕರ್ತವ್ಯಗಳೇನೆಂಬುದನ್ನು ತಿಳಿಸಿದರು. ಕೊನೆಗೆ ಶಾಲಾ ಬಾಲಿಕೆಯರು, ಬಾಲಕರು ಮತ್ತು ಅಧ್ಯಾಪಕರಿಂದ ನಾಟಕ, ನೃತ್ಯ ಮತ್ತು ವಿವಿಧ ವಿನೋದಾವಳಿಗಳ ಪ್ರದರ್ಶನಗಳಾದುವು. ಅಧ್ಯಾಪಕರುಗಳಿಗೆ ಬಹುಮಾನ ವಿತರಣೆಯಾಗಿ ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನಿತ್ತರು.



Approved firm by the Govt. of Mysore
Certified by the Agent of the Govt. of India

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತ ಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

ತಮಿಳು ಚಿತ್ರಗಳಲ್ಲಿ ಪ್ರಥಮ ಶ್ರೇಣಿಯನ್ನು ಪಡೆದಿರುವ
ಅತ್ಯುತ್ತಮ ಆದರಣೀಯ ತಮಿಳು ಚಿತ್ರ.
ಜ್ಞಾನ ಸುಂದರಿ
ಎಸ್. ವಿ. ರಾಜಮ್ಮ ಮತ್ತು ಚೆನ್ನಪ್ಪ.
ತಾರೀಕು 27—4—1949 ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಉಡುಪಿಯಲ್ಲಿ ಮಾನ್ಯ ಸಂತಾನಮರು

ಕೇಂದ್ರ ಸರಕಾರದ ರೈಲ್ವೆ ಖಾತೆಯ ಉಪಮಂತ್ರಿಗಳಾದ ಶ್ರೀ. ಕೆ. ಸಂತಾನಮರು ಇದೇ ತಾ 22ರಲ್ಲಿ ಪೂರ್ವಾಹ್ನ ಜಿಲ್ಲಾ ಕಲೆಕ್ಟರ್, ಶ್ರೀ ಎಸ್. ಆರ್. ಕೈವಾರ್, ಡಾ। ಯು. ಪಿ. ಮಲ್ಯ, ಎಮ್. ಎಲ್. ಎ, ಶ್ರೀ. ವಿ. ಎಸ್. ಕುಡುವ ಮೊದಲಾದವರೊಂದಿಗೆ ಕರಾವಳಿ ಮಾರ್ಗದ ಸೃಷ್ಟಿ ಸೌಂದರ್ಯಗಳನ್ನು ನೋಡುತ್ತಾ ಉಡುಪಿಗೆ ಆಗಮಿಸಿ ಸೀದಾ ಕಾಂಗ್ರೆಸ್ ಕಮಿಟಿ ಕಾರ್ಯಾಲಯಕ್ಕೆ ಬಂದರು. ಕಾಂಗ್ರೆಸ್ ಸಮಿತಿ ಅಧ್ಯಕ್ಷ, ಮುನಿಸಿಪಲ್ ಚೆಯರ್‌ಮೆನ್, ಮಲ್ಪೆ ಬಂದರ ಸಮಿತಿಯ ಪ್ರಮುಖರೇ ಮೊದಲಾದವರು ಮಂತ್ರಿಗಳನ್ನು ಸ್ವಾಗತೀಕರಿಸಿದರು. ಮಾನ್ಯ ಮಂತ್ರಿಗಳ ಪರಿಚಯವನ್ನು ಡಾ। ಯು. ಪಿ. ಮಲ್ಯರು ಆಮಂತ್ರಿತ ಜನತೆಗೆ ಮಾಡಿಕೊಟ್ಟ ಬಳಿಕ ಸರ್ಕಲ್ ಕಾಂಗ್ರೆಸ್ ಕಮಿಟಿಯ ಪರವಾಗಿ ಪ್ರೆಸಿಡೆಂಟ್ ಶ್ರೀ. ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಗಡೆಯವರು ಶ್ರೀ ಸಂತಾನಮರಿಗೆ ಒಂದು ಮನವಿಯನ್ನರ್ಪಿಸಿದರು. ಅದರಲ್ಲಿ ಕಾಂಗ್ರೆಸ್ ಕೆಲಸದಲ್ಲಿ ಉಡುಪಿಯು ಪ್ರಥಮ ಹೆಜ್ಜೆಯನ್ನಿಟ್ಟಿತ್ತೆಂದೂ, ಮಂಗಳೂರು–ಉಡುಪಿಗೆ ರೈಲ್ವೆ ಲೈನಿನ ಆವಶ್ಯಕತೆ, ಸಂಕಸೇತುವೆಗಳಾಗಬೇಕೆನ್ನುವ, ಮಲ್ಪೆ ಬಂದರವು ಪ್ರಬುದ್ಧ ಬಂದರಾಗಲು ಅತಿ ಹೆಚ್ಚಿನ ಯೋಗ್ಯತೆಯುಳ್ಳದ್ದೆನ್ನುವ ಪ್ರಾಮುಖ್ಯ ವಿಷಯಗಳಿದ್ದುವು. ಅಂತೆಯೇ ಶ್ರೀ. ಟಿ.ಎ. ಪೈಗಳು ಮಲ್ಪೆ ಬಂದರ ಸಮಿತಿಯ ಪರವಾಗಿ ಅರ್ಪಿಸಿದ ಮನವಿಯಲ್ಲಿಯೂ ಬಹುತೇಕ ರೈಲ್ವೆಲೈನು, ಕಲ್ಯಾಡಿ ಸಂಕ, ಮಲ್ಪೆ ಬಂದರದ ಯೋಗ್ಯತೆಗಳು ನಮೂದಿಸಲ್ಪಟ್ಟಿವೆ. ಪ್ರಸ್ತುತ ಮಾನ್ಯ ಮಂತ್ರಿಗಳು ಪ್ರಥಮತಃ ಕಾಂಗ್ರೆಸ್ ಸಮಿತಿಯ ಮನವಿಗೆ ಉತ್ತರವೀಯುತ್ತಾ ಸಾರ್ವಜನಿಕ ಸಭೆಯ ಏರ್ಪಾಡು [illegible]ಕ್ಕಾಗಿ ತುಂಬ ಬೇಸರಪಟ್ಟರು. ರಾಜಕೀಯ ಸ್ಥಿತಿಯನ್ನೆತ್ತಿ ಮಾತನಾಡುತ್ತಾ ಕಾಂಗ್ರೆಸ್ ಕಮಿಟಿಯು ಕಾಂಗ್ರೆಸ್ ಪ್ರಚಾರ ಕಾರ್ಯವನ್ನು ಹುರುಪಿನಿಂದ ಮಾಡಬೇಕಾಗಿದೆ. ಹಾಗೆ ಮಾಡಿದರೇನೇ ಕಾಂಗ್ರೆಸ್ ದ್ರೋಹಿ ಸಂಸ್ಥೆಗಳ ಆಟವನ್ನು ನಿಲ್ಲಿಸಲು ಸಾಧ್ಯವಿದೆ ಎಂದರು. ಕಾಂಗ್ರೆಸ್ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳ ಸ್ಥಿತಿಗತಿಗಳನ್ನು ಜನಸಾಮಾನ್ಯರಿಗೂ ತಿಳಿಸಪಡಿಸುವುದು ಕಾಂಗ್ರೆಸ್ ಜನರ ಕರ್ತವ್ಯವೆಂದರು. ಕಾಂಗ್ರೆಸ್ ಮಂತ್ರಿ ಮಂಡಲಗಳಲ್ಲಿ ಕೆಲವೆಡೆ ಒಮ್ಮತವಿಲ್ಲದಿರುವುದು ಕಾಲೋಚಿತವಲ್ಲವೆಂದರು. ಕಾಲಕ್ರಮದಲ್ಲಿ ರೈಲ್ವೆ ಸೌಕರ್ಯಗಳು ಸಿಗಲು ಸಾಧ್ಯವಿದೆಯೆಂದರು.

ಪ್ರಬುದ್ಧ ಬಂದರದ ಕುರಿತು ಮಾತನಾಡುತ್ತಾ ಆ ವಿಷಯ ತೀರ್ಮಾನವೀಯಲು ತಾನು ನ್ಯಾಯಾಧೀಶನಲ್ಲವೆಂದರು. ಮಂಗಳೂರವರಿಗೂ ಜಯವಾಗಲೆಂದು ಹೇಳಿದಂತೆ ಉಡುಪಿಗೂ ಜಯವಾಗಲೆಂದು ಹೇಳುತ್ತೇನೆ. ಅಂತೂ ಕೇಂದ್ರ ಸರಕಾರದ ಕಡೆಯಿಂದ ನೇಮಿಸಲ್ಪಟ್ಟ ಸಮಿತಿಯ ವರದಿ ಮೇಲೆ ಕೊನೆಯ ನಿರ್ಧಾರವು ಹೊಂದಿಕೊಂಡಿದೆ ಎಂದರು. ಚಹಾ ಸತ್ಕಾರವಾದನಂತರ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ. ಕೆ. ನರಹರಿ ಕಾಮತರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಮಂತ್ರಿಗಳು ಮಲ್ಪೆ ಬಂದರಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಪರಿಶೀಲಿಸಿದರು. ನಂತರ ಶ್ರೀಕೃಷ್ಣ ಮಠವನ್ನು ಸಂದರ್ಶಿಸಿದರು.

ಮಧ್ಯಾಹ್ನ ಎರಡೂವರೆ ಗಂಟೆಗೆ ಮುನಿಸಿಪಲ್ ಮೈನ್ ಶಾಲೆಯಲ್ಲಿ ನಗರಸಭೆಯ ಕಡೆಯಿಂದ ಮಾನ್ಯ ಮಂತ್ರಿಗಳಿಗೆ ಮಾನಪತ್ರ ಕೊಡಲಾಯಿತು. ನಗರ ಸಭಾಧ್ಯಕ್ಷ ಶ್ರೀ. ಪಿ. ಉಪೇಂದ್ರ ಶ್ರೀನಿವಾಸ ನಾಯಕ್, ಮುನಿಸಿಪಲ್ ಕಮಿಶನರ್ ಶ್ರೀ. ವಿ ಬಾಲಗಂಗಾಧರನ್ ಮೊದಲಾದವರು ಮಾನ್ಯ ಮಂತ್ರಿಗಳನ್ನು ಸ್ವಾಗತೀಕರಿಸಿದರು. ನಗರದ ಹಲವು ಅಗ್ರ ಮಹನೀಯರು ಸಭಾಮಂಟಪದಲ್ಲಿ ಹಾಜರಿದ್ದರು. ಉಡುಪಿಯ ಮಹತ್ವ, ರೈಲ್ವೆ, ಮಲ್ಪೆ ಬಂದರವನ್ನು ಪ್ರಬುದ್ಧ ಬಂದರವನ್ನಾಗಿ ಆರಿಸಲು ಅದಕ್ಕಿರುವ ಯೋಗ್ಯತೆ ಮೊದಲಾದ ಸಂಕ್ಷಿಪ್ತವಾದರೂ ಮಹತ್ವದ ವಿಷಯಗಳುಳ್ಳ ಮಾನಪತ್ರವನ್ನು ಚೆಯರ್‌ಮೆನ್ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ಮಾನ್ಯ ಮಂತ್ರಿಗಳಿಗೆ ಒಪ್ಪಿಸಿದರು. ನಗರ ಸಭೆಯ ಆಭಾರವನ್ನು ಮನ್ನಿಸುತ್ತಾ ಮಾನ್ಯ ಮಂತ್ರಿಗಳು ಕೇಂದ್ರ ಸರಕಾರದ ಅಡಚಣೆಗಳನ್ನು ವಿವರಿಸಿದರು. ರೈಲ್ವೆ ಮಾರ್ಗದ ಸರ್ವೆ ಕಾರ್ಯ, ಸಂಕಗಳ ಯೋಜನೆ ಇವೆಲ್ಲ ಕೇಳಿಕೆಗಳು ನ್ಯಾಯವಾದುವೆಂದೂ ಅವುಗಳ ಪರಿಶೀಲನೆ ಶಾಂತ ವಾತಾವರಣದಲ್ಲಾಗಬಹುದೆಂದೂ ಸೂಚಿಸಿದರು. ಆಯಾಯ ಸ್ಥಳದವರು ಆಯಾಯ ಸ್ಥಳದ ಬಂದರವನ್ನು ಮಹಾ ಬಂದರವನ್ನಾಗಿ ಮಾಡಬೇಕೆಂದು ಕೇಳಿಕೊಂಡಿರುವರು. ಈ ಪ್ರಶ್ನೆಯ ಕೊನೆಯ ತೀರ್ಮಾನವು ಆ ಬಗ್ಗೆ ರಚಿಸಲ್ಪಟ್ಟ ಕಮಿಟಿಯ ವರದಿಯನ್ನವಲಂಬಿಸಿಯದೆ. ಅಂತೂ ಕೇವಲ ರಾಷ್ಟ್ರದ ಹಿತದೃಷ್ಟಿಯಿಂದಲೇ ಈ ತೀರ್ಮಾನವಾಗಲಿರುವುದೆಂದು ಭರವಸೆಯಿತ್ತರು. ಮುನಿಸಿಪಲ್ ಕೌನ್ಸಿಲರ್ ಶ್ರೀ. ಯು. ವಾಸುದೇವ ಪ್ರಭುಗಳು ಧನ್ಯವಾದಗಳನ್ನರ್ಪಿಸಿದ ಬಳಿಕ ಮಾನ್ಯ ಮಂತ್ರಿಗಳು ಮಂಗಳೂರಿಗೆ ಪ್ರಯಾಣ ಬೆಳೆಸಿದರು.

ಸುವರ್ಣೋತ್ಸವ—ಇಲ್ಲಿಯ ಕ್ರಿಶ್ಚಿಯನ್ ಹೈಸ್ಕೂಲಿನ ಸುವರ್ಣೋತ್ಸವ ಕಾರ್ಯಕ್ರಮದಂತೆ ತಾ 20ರಲ್ಲಿ ಹಳೆಯ ವಿದ್ಯಾರ್ಥಿಗಳ ದಿನಾಚರಣೆಯು ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಕೆ. ಎಲ್. ಐತಾಳರು ಕಾಲೋಚಿತ ಮಾತುಗಳನ್ನಾಡುತ್ತಾ ವರ್ಷಂಪ್ರತಿಯೂ ಸ್ಕೂಲ್‌ಡೇಸಮಾರಂಭದ ಕಾಲದಲ್ಲಿ ಹಳೆಯ ವಿದ್ಯಾರ್ಥಿಗಳ ದಿನಾಚರಣೆಯೂ ಜರಗುವಂತಾಗಬೇಕೆಂದು ಸೂಚಿಸಿದರು. ಆ ಬಗ್ಗೆ ಶ್ರೀ.ಯು.ಪಿ. ಶೆಣೈಯವರ ಸಂಚಾಲಕತ್ವದಲ್ಲಿ ಹಳೆ ವಿದ್ಯಾರ್ಥಿ ಸಂಘ ಸ್ಥಾಪನೆಯಾಗಬೇಕೆಂದು ನಿರ್ಧಾರವಾಯಿತು. ರಾತ್ರಿ ಹಳೆ ವಿದ್ಯಾರ್ಥಿಗಳು 'ಪ್ರೇಮ ವಿಜಯ'ವೆಂಬ ನಾಟಕವನ್ನು ಅಭಿನಯಿಸಿದರು.

ತಾ 21ರಲ್ಲಿ ವಿದ್ಯಾರ್ಥಿಗಳ ರಕ್ಷಕರ ದಿನಾಚರಣೆಯು ಎಡ್ವೊಕೇಟ್ ಶ್ರೀ. ಪಿ. ಪಾಂಡುರಂಗ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಲೀಲಾಬಾಯಿ ಕಾಮತರು, ವಿದ್ಯಾರ್ಥಿಗಳ ರಕ್ಷಕರ ಸಂಘದ ಹಾಗೂ ಅವರ ಕಡೆಯಿಂದ ಶಾಲಾ ಸಹಾಯಾರ್ಥವಾಗಿ ಬಾಲಿಕಾ ನಿಧಿಯ ಸ್ಥಾಪನೆಯ ಆವಶ್ಯಕತೆಯ ಕುರಿತಾಗಿ ಮಾತನಾಡಿದರು. ರಾತ್ರಿ ಶಾಲಾ ಬಾಲಿಕೆಯರಿಂದ 'ರಾಷ್ಟ್ರಭಕ್ತಿ' ನಾಟಕ ಪ್ರದರ್ಶನವಾಯಿತು.

ತಾ 22ರಲ್ಲಿ ಶಾಲೆಯ ಸುವರ್ಣ ಮಹೋತ್ಸವವು ಕುಂದಾಪುರ ಸಬ್ ಕಲೆಕ್ಟರ್ ರಾವ್ ಸಾಹೇಬ್ ಚಾರ್ಲ್ಸ ಜೋನ್ಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಎ. ಎಸ್. ಕಾರಟರು ಶಾಲೆಯು ಐವತ್ತು ವರುಷಗಳಲ್ಲಿ ವಿದ್ಯಾಕ್ಷೇತ್ರದಲ್ಲಿ ಮಾಡಿದ ಸೇವೆಯನ್ನೊಳಗೊಂಡ ವರದಿಯನ್ನೋದಿದರು. ಬಳಿಕ ಡಾ। ಪಿ. ಇ. ಬಾರ್ಕರ್ ಡಾ। ಎಸ್. ಆರ್. ಪೈ, ಡಾ। ಕೆ. ಎಲ್. ಐತಾಳ್, ಜನಾಬ್ ಎಮ್. ಡಿ. ಉಸ್ಮಾನ್, ಶ್ರೀ. ಬಿ. ಶ್ಯಾಮರಾಯ ಶೆಟ್ಟಿ ಮೊದಲಾದವರು ಸುವರ್ಣೋತ್ಸವ ಸ್ಮಾರಕ ಭಾಷಣಗಳನ್ನು ಮಾಡಿದರು. ನಂತರ ಅಧ್ಯಕ್ಷರಿಂದ ಬಹುಮಾನ ವಿತರಣೆಯಾಯಿತು. ಶಾಲೆಯ ಹೆಡ್ ರೂಬಿನ್ ಐಮನ್ನರಿಗೂ ಹಳೆವಿದ್ಯಾರ್ಥಿಗಳ ಪರವಾಗಿ ಒಂದು ನಿಧಿ ಕೊಡಲಾಯಿತು. ಅಧ್ಯಕ್ಷರು ತನ್ನ ಮುಕ್ತಾಯಭಾಷಣದಲ್ಲಿ 'ಪ್ರೀತಿ ಮತ್ತು ಸೇವೆ'ಯ ಧ್ಯೇಯವನ್ನೆತ್ತಿ ಮಾತನಾಡಿ, ಸರ್ವರೂ ಅದೇ ಧ್ಯೇಯವನ್ನು ಪಾಲಿಸಬೇಕಾಗಿ ವಿನಂತಿಸಿದರು. ವಿವಿಧ ವಿನೋದಾವಳಿಗಳಾದ ಬಳಿಕ ಶಾಲಾ ಉಪಾಧ್ಯಾಯ ವೃಂದದವರು 'ವೀರರಾಣಿ ಬೆಳವಡಿ ಮಲ್ಲಮ್ಮ' ನಾಟಕವನ್ನಭಿನಯಿಸಿದರು. ನಾಟಕ ನೋಡಲು ಪ್ರತಿದಿನವೂ ಜನಸಂದಣಿಯು ಕಿಕ್ಕಿರಿದು ನೆರೆದಿತ್ತು.

ಕಾಂಗ್ರೆಸ್ ಕಮಿಟಿ ಸಭೆಯು ತಾ 20ರಲ್ಲಿ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸೂಚನೆಯಂತೆ ಉಡುಪಿ ತಾಲೂಕಿನಲ್ಲಿ 20 ಕಾಂಗ್ರೆಸ್ ವಿಲೇಜ್ ಪಂಚಾಯತ ಸರ್ಕಲುಗಳನ್ನು ಆರಿಸಲಾಯಿತು. ಈ ಸರ್ಕಲುಗಳಿಗೆ ಕಾರ್ಯಕರ್ತರನ್ನು ಆರಿಸುವರೆ ಶ್ರೀಗಳಾದ ಬಿ. ಕೃಷ್ಣಯ್ಯ ಹೆಗ್ಡೆ, ಕೆ.ನರಹರಿ ಕಾಮತ್, ಬಿ. ಸದಾಶಿವ ಹೆಗ್ಡೆ ಮತ್ತು ರಘುರಾಮ ಹೆಗ್ಡೆಯವರುಳ್ಳ ಉಪಕಮಿಟಿಯು ನೇಮಕವಾಯಿತು.

ಹಿಂದೀ ಪರೀಕ್ಷೆಯ ಫಲಿತಾಂಶ ಉಡುಪಿ ರಾಷ್ಟ್ರಭಾಷಾ ಶಿಕ್ಷಣ ಶಿಬಿರದಿಂದ ಹಿಂದೀ ಪರೀಕ್ಷೆಗೆ (ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ) ಕುಳಿತುಕೊಂಡ 15 ವಿದ್ಯಾರ್ಥಿಗಳೆಲ್ಲರೂ ಪ್ರಥಮ ಮತ್ತು ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿರುವುದು ಸ್ತುತ್ಯವಿದೆ.

WANTED

F0r the S. V. S. High School, Katapadi, S. K.

from 1-6-49

2 L. Ts (i. Maths & Physical Science ii. Natural Science & Physical Science)

One II Grade Kannada Pandit

One Qualified Manual Training Instructor for Weaving.

Pay and D. A. according to Local Board Scales. Higher Start for experience.

Apply before 15-5-49

P. Ramadas Nayak,

Head Master & Correspondent.

26-4-49

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No 424/1949

R. I. A. Nos. 32&354/1949

ನಾಗಪ್ಪ ಹೆಗ್ಡೆ–ಅರ್ಜಿದಾರ

ಮತ್ತು

ನಾಗಯ್ಯ ಹೆಗ್ಡೆ ಕೂಡಾ–ಯೆದ್ರಿರು

ಯವರೊಳಗೆ

1. ನಾಗಯ್ಯ ಹೆಗ್ಡೆ, ಕಾಳು ಹೆಗಡೆ ಮಗಾ. 2. ಅನಂತ ನಾಯ್ಕ, ಬಾಲುನಾಯ್ಕನ ಮಗಾ. ಕಾರ್ಕಳ ತಾಲೂಕು ಮುದ್ರಾಡಿ ಗ್ರಾಮದಲ್ಲಿರುವವರು–

ಸದ್ರಿ 1-5ನೇ ಯೆದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ, ಕಾರ್ಕಳ ಡಿ. ಮು. ಕೋರ್ಟು ಕ್ರಮನಂಬ್ರ 424/1946ನೇ ಡಿಕ್ರಿಯ ವಾದಿ ಲಕ್ಷ್ಮೀನಾರಾಯಣ ಭಟ್ಟನು ಆತನ ಸದ್ರಿ ಡಿಕ್ರಿ ಹಕ್ಕನ್ನು ಅರ್ಜಿದಾರ ನಾಗಪ್ಪ ಹೆಗ್ಡೆರಿಗೆ ಕಳೆದ ತಾ 29-10-1948ರಲ್ಲಿ ರಿಜಿಸ್ಟ್ರಿ ಮೂಲಕ ಟ್ರಾನ್ಸ್‌ಫರ್ ಮಾಡಿಕೊಟ್ಟಿರುವದ್ರಿಂದ ಸದ್ರಿ ಅರ್ಜಿದಾರನನ್ನು ಸದ್ರಿ ಡಿಕ್ರಿಯಲ್ಲಿ ಸಪ್ಲಿಮೆಂಟು 2ನೇ ವಾದಿಯನ್ನಾಗಿ ರೆಕಾರ್ಡಿನಲ್ಲಿ ಸೇರಿಸಿಕೊಂಡು ಆ ಪ್ರಕಾರ ಪ್ಲೈಂಟು, ವ. ಪ್ರಿಲಿಮಿನರಿ ಡಿಕ್ರಿಯನ್ನು ಕೂಡಾ ದುರುಸ್ತು ಪಡಿಸಬೇಕಾಗಿಯೂ, ಸದ್ರಿ ಟ್ರಾನ್ಸ್‌ಫರು ದಸ್ತೈವಜನ್ನು ಮಂಜೂರು ಮಾಡುವಂತೆಯೂ, ಸದ್ರಿ ಪ್ರಿಲಿಮಿನರಿ ಡಿಕ್ರಿಯಿಂದ ಕೋರುವ ಅಸ್ತಿ ಮಾರಾಟದಿಂದ ಸದ್ರಿ ಡಿಕ್ರಿ ಋಣವೇಜನ್ನು ಬರಮಾಡಿಕೊಳ್ಳುವರೆ ಅರ್ಜಿದಾರನ ಗುಣಕ್ಕೆ ಫೈನಲ್ ಡಿಕ್ರಿ ಕೊಡಿಸಬೇಕಾಗಿಯೂ ವಗೈರೆ ಅರ್ಜಿದಾರನು ದಾಖಲ್ಲು ಮಾಡಿದ ಸದ್ರಿ ಅರ್ಜಿಗಳು ನಿಮ್ಮ ಹಾಜರ್ರಾತಿಬಗ್ಗೆ ತಾ 16-6-1949ಕ್ಕೆ ಯಿಡೋಣಾಗಿಯದೆ. ಅದ್ರಿಂದ ನೀವು ಸದ್ರಿ ತಾ 16-6-1949ನೇ ದಿನ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸದ್ರಿ ವ್ಯವಹರಣೆಗಳಲ್ಲಿ ಹಿನ್ನಾಮಾಡಿ ನಿಮ್ಮ ಮೇಲೆ ಕೂಡಾ ಫೈನಲ್ ಡಿಕ್ರಿ ಕೊಡೋಣಾಗುವದು.

I. N. Nayak.
Pleader for Pltf.

ಮೊಕ್ಕಾಂ. ಕಾರ್ಕಳ
ತಾ 23—4—1949

ದ. ಕನ್ನಡ

ಕುಂಬಳೆ:—ಗ್ರಾಮಾಭಿವೃದ್ಧಿ ಆಫೀಸರ್ ಶ್ರೀ. ಕೆ. ಯಂ. ಬಾಬುಶೆಟ್ಟರು ತಿರುಪೂರಿಗೆ ಎರಡು ವಾರಗಳ ತರಬೇತಿಗಾಗಿ ಹೋಗಿದ್ದಾರೆ.

ಕಳನಾಡಿನಲ್ಲಿ ಒಂದು ರೈಲ್ವೆಸ್ಟೇಶನ್ ತೆರೆಯುವಂತೆ ಕೇಂದ್ರ ರೈಲ್ವೆಖಾತೆಯ ಉಪಮಂತ್ರಿ ಶ್ರೀ.ಕೆ. ಸಂತಾನಂರಿಗೆ ಆಸುಪಾಸಿನ ಗ್ರಾಮಸ್ಥರ ಮನವಿಯೊಂದು ಅರ್ಪಿಸಲ್ಪಟ್ಟಿದೆ.

20ನೇ ಸಮಸ್ತ ಕೇರಳಸಾಹಿತ್ಯ ಪರಿಷತ್ತಿನ ಸಮ್ಮೇಳನವು ತಾ 23ರಲ್ಲಿ ನೀಲೇಶ್ವರದ ಕುಟ್ಟಿಮತ್ತ್ ನಗರಿಯಲ್ಲಿ ಆರಂಭವಾಗಿದೆ.

(೧ನೇ ಪುಟದಿಂದ)

ಶ್ರೀ. ಸಂತಾನಮರು ತಮಗಿತ್ತ ಗೌರವಕ್ಕಾಗಿ ಆಭಾರ ಸೂಚಿಸಿದರು. 'ದಿಲ್ಲಿ ಮಂಗಳೂರಿಗೆ ದೂರವೆನ್ನುತ್ತೀರಿ. ಆದರೆ ಮಂಗಳೂರು ದಿಲ್ಲಿಗೆ ದೂರವಿಲ್ಲ; ನಿಮ್ಮವರಾದ ಶ್ರೀ. ಯು. ಶ್ರೀನಿವಾಸ ಮಲ್ಯರೂ, ಶ್ರೀ. ಬೆನಗಲ್ ಶಿವರಾಯರೂ ಕಾನ್. ಎಸೆಂಬ್ಲಿಯಲ್ಲಿದ್ದು ಈ ಜಿಲ್ಲೆಯ ಹಿತರಕ್ಷಣೆ ಮಾಡುತ್ತಿದ್ದಾರೆ' ಎಂದರು.

ದೇಶದ ಹಲವು ಕಠಿನ ಸಮಸ್ಯೆಗಳನ್ನು ಮಂತ್ರಿಗಳು ಸಭೆಯ ಮುಂದಿರಿಸಿ ದೇಶದ ಆರ್ಥಿಕ ವಿದ್ಯಮಾನಗಳನ್ನು ಪುನರುಜ್ಜೀವನಗೊಳಿಸುವ ಆವಶ್ಯಕತೆಯ ಕುರಿತು ವಿವರಿಸಿದರು. ಇಂತಹ ವಾಣಿಜ್ಯ ಸಂಘಗಳು ಈ ಪುನರುಜ್ಜೀವನ ಕಾರ್ಯದಲ್ಲಿ ತಕ್ಕ ಭಾಗವಹಿಸಬೇಕೆಂದರು.

ಪ್ರಬುದ್ಧ ಬಂದರದ ಕುರಿತು ಮಾತನಾಡುತ್ತಾ 'ಅದಕ್ಕಾಗಿ ಏರ್ಪಡಿಸಲ್ಪಟ್ಟ ಸಮಿತಿಯ ಶಿಫಾರಸಿನಂತೆ ವರ್ತಿಸಲಾಗುವುದು; ರೈಲ್ವೆ ವಿಸ್ತರಣೆಗಾಗಿ ಪ್ರಯತ್ನಿಸಲಾಗುವುದು. ಕನ್ಯಾಕುಮಾರಿಯಿಂದ ಒಂದು ಹೆದ್ದಾರಿಯಾಗುತ್ತಿದೆ. ಕೆಲವೊಂದು ವರ್ಗದ ನೀರಾವರಿ ಕಾಮಗಾರಿಗಳ 'ಸರ್ವೆ' ನಡೆಯುತ್ತಿರುವಲ್ಲಿ ಅದರ ಪ್ರಯೋಜನ ಈ ಜಿಲ್ಲೆಗೂ ಕೂಡಲೇ ದೊರಕಿಸುವ ಯತ್ನ ನಡೆಯುವುದು. ವಿದ್ಯುಚ್ಛಕ್ತಿಯ ಸರಬರಾಯಿ ವಿಷಯದಲ್ಲೊಂದು ಮಸೂದೆ ತಯಾರಾಗಿದ್ದು, ಅದನ್ನು ವಿಸ್ತಾರವಾಗಿ ಶೀಘ್ರದಲ್ಲೆ ಅನ್ವಯಿಸಲಾಗುತ್ತದೆ' ಎಂದು ಹೇಳಿ ಭಾಷಾವಾರು ಪ್ರಾಂತ್ಯರಚನೆಯ ಸಂಬಂಧ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮಾಡಿದ ನಿರ್ಣಯದಂತೆ, ಪ್ರಕೃತ ಈ ಜಿಲ್ಲೆಗೆ ಆ ರಚನೆಯ ಕುರಿತಾದ ಭೀತಿ ಬೇಡವೆಂದರು. ಖಾಸಗಿ ಉದ್ದಿಮೆಗಳಲ್ಲಿ ದೇಶಾಭಿಮಾನವೂ, ರಾಷ್ಟ್ರೀಯ ಸ್ಫೂರ್ತಿಯೂ ಇರಬೇಕಾದುದು ಅತ್ಯಾವಶ್ಯಕವೆಂದು ಕೊನೆಯದಾಗಿ ಹೇಳಿದರು.

ಭೋಜನ ಕಾಲದಲ್ಲಿ 'ನಮ್ಮದೇಶ' ಎಂಬುದರ ಕುರಿತು ಶ್ರೀ. ಎ. ಎಸ್. ಕುಡ್ವರೂ 'ನಮ್ಮ ವಾಣಿಜ್ಯ ಸಂಘ' ಎಂಬುದರ ಕುರಿತು ಶ್ರೀ. ಎನ್. ರಾಮರಾಯರೂ, ಡಾ। ಕೆ. ಆರ್. ಕಿಣಿಅವರೂ (ಉತ್ತರಿಸಿದವರು) 'ನಮ್ಮ ಅತಿಥಿಗಳು' ಎಂಬುದರ ಕುರಿತು ಶ್ರೀ. ಬಿ. ವೈಕುಂಠ ಬಾಳಿಗರೂ, ಮಾನ್ಯ ಶ್ರೀ. ಕೆ. ಸಂತಾನಂ ಅವರೂ (ಉತ್ತರಿಸಿದವರು) ಚುರುಕು ಭಾಷಣ ಮಾಡಿದರು. ವಾಣಿಜ್ಯ ಸಂಘದ ಜತೆ ಕಾರ್ಯದರ್ಶಿ ಶ್ರೀ. ಪಿ. ಆರ್. ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರಲ್ಲಿ ಮಂತ್ರಿ ಶ್ರೀ. ಸಂತಾನಮರು.

ಕೇಂದ್ರ ಸರಕಾರದ ರೈಲ್ವೆ ಮತ್ತು ಸಾರಿಗೆ ಖಾತೆಯ ಉಪಮಂತ್ರಿಗಳಾದ ಶ್ರೀ. ಕೆ. ಸಂತಾನಮರು ಇದೇ ತಾ 21ರಲ್ಲಿ ಬೆಳಗ್ಗೆ ಮಂಗಳೂರಿಗೆ ಬಂದರು. ರೈಲ್ವೆ ನಿಲ್ದಾಣದಲ್ಲಿ ಅವರನ್ನು ಜಿಲ್ಲಾ ಕಲೆಕ್ಟರ್ ಶ್ರೀ. ಎಸ್. ... ಕೈವಾರ್, ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ. ಸತ್ಯವಾಗೀಶ್ವರ ಅಯ್ಯರ್, ಮಂಗಳೂರು ನಗರ ಸಭಾಧ್ಯಕ್ಷ ಶ್ರೀ. ಎ. ಸಿ. ಫಾಯಸ್ ಮೊದಲಾದವರು ಸ್ವಾಗತಿಸಿದರು. ಕಾಂಗ್ರೆಸ್ ಸೇವಾದಳದವರು ಮಂತ್ರಿಗಳಿಗೆ ಗೌರವ ರಕ್ಷೆಯನ್ನು ಸಲ್ಲಿಸಿದರು. ಮಂತ್ರಿಗಳ ಜತೆಯಲ್ಲಿ ಪಾರ್ಲಿಮೆಂಟಿನಲ್ಲಿ ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿರುವ ಶ್ರೀ. ಯು. ಶ್ರೀನಿವಾಸ ಮಲ್ಯರೂ ಬಂದಿದ್ದರು. ಮಾನ್ಯ ಮಂತ್ರಿಗಳಿಗೆ ಕಾಂಗ್ರೆಸ್, ಕಾಸರಗೋಡು ಮೊದಲಾದ ಸ್ಥಳಗಳ ... ಮನವಿಗಳನ್ನು ಅರ್ಪಿಸಲಾಗಿತ್ತು. ಮಂತ್ರಿಗಳು ಬರುವಾಗ ಉಳ್ಳಾಲ ಸಂಕದ ಹತ್ತಿರ ರೈಲನ್ನು ನಿಲ್ಲಿಸಿ ಸಂಕವನ್ನು ಇತರ ವಾಹನಗಳೂ ಹೋಗುವಂತೆ ವಿಶಾಲಗೊಳಿಸುವ ಸಾಧ್ಯಾಸಾಧ್ಯತೆಗಳನ್ನು ಸ್ವತಃ ಪರೀಕ್ಷಿಸಿದರು. ಸ್ಥಳೀಯ ಪತ್ರಿಕೋದ್ಯೋಗಿಗಳು ಮಾನ್ಯ ಮಂತ್ರಿಗಳಿಗೆ ಚಹಾ ಸತ್ಕಾರವನ್ನಿತ್ತು ಗೌರವಿಸಿದರು. ಮಂತ್ರಿಗಳು ಪತ್ರಿಕೋದ್ಯಮದ ಕುರಿತು ಮಾತನಾಡುತ್ತಾ 'ಚಿಕ್ಕಪುಟ್ಟ ಪತ್ರಿಕೆಗಳೇ ಜನತೆಯ ಅಭಿಪ್ರಾಯವನ್ನು ಎತ್ತಿ ಹಿಡಿದು ಅವರ ಪ್ರೀತಿಯನ್ನು ಸಂಪಾದಿಸಿವೆ. ಪತ್ರಿಕೋದ್ಯೋಗಿಗಳು ಯಾವಾಗಲೂ ನಿರ್ಭಯರಾಗಿ ಟೀಕೆ ನಡೆಸಬೇಕು. ಅದೇ ಸಮಯದಲ್ಲಿ ಟೀಕೆಗಳು ನಿಧಾಯಕವಾಗಿ ತಪ್ಪುದಾರಿ ಹಿಡಿಯುವವರನ್ನು ಸರಿದಾರಿಗೆ ಎಳೆಯುವಂತಹುಗಳಾಗಿರಬೇಕೆಂದರು. (ಮಾನ್ಯ ಮಂತ್ರಿಗಳೂ ಕೆಲಕಾಲ 'ಇಂಡಿಯನ್ ಎಕ್ಸ್‌ಪ್ರೆಸ್' ಸಂಪಾದಕರಾಗಿದ್ದವರು.)

ಮಂಗಳೂರಿನಿಂದ ಎರಡು ಮೈಲು ದೂರದಲ್ಲಿ ಮರೋಳಿ ಎಂಬಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ಕೆನರಾ ಕಾರ್ಯಶಾಲೆಯ ಪ್ರವೇಶ ಸಮಾರಂಭವನ್ನು ಸಂಜೆ ಮಾನ್ಯ ಮಂತ್ರಿಗಳು ನೆರವೇರಿಸಿದರು. ಧ್ವಜಾರೋಹಣ, ರಾಷ್ಟ್ರಗೀತೆಗಳಾದ ಬಳಿಕ ಕಾರ್ಯಶಾಲೆಯ ಮೆನೇಜಿಂಗ್ ಡೈರೆಕ್ಟರ್ ಶ್ರೀ. ವಿ. ಎಸ್. ಕುಡ್ವರು ಮಂತ್ರಿಗಳನ್ನು ಸ್ವಾಗತೀಕರಿಸಿ ಕಂಪೆನಿಯ ಪೂರ್ವ ಇತಿಹಾಸವನ್ನೂ ಮುಂದಿನ ಧ್ಯೇಯ ಗೊತ್ತು ಗುರಿಯನ್ನೂ ವಿವರಿಸಿದರು. ಸಂದೇಶ ವಾಚನದ ಬಳಿಕ ಶ್ರೀಗಳಾದ ಎಸ್. ನರಸಪ್ಪಯ್ಯ, ಎಸ್. ಎಮ್. ಅದ್ಯಂತಾಯರೇ ಮೊದಲಾದವರು ಜಿಲ್ಲೆಯ ಹಲವು ಸಂಕಷ್ಟಗಳನ್ನು ಮಂತ್ರಿಗಳ ಮುಂದಿಟ್ಟರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಇಂತಹ ಚಿಕ್ಕಪುಟ್ಟ ಕಾರ್ಯಶಾಲೆಗಳು ಜಾಸ್ತಿಯಾಗಬೇಕು, ಅಲ್ಲದೆ ಇವೇ ಮುಂದಕ್ಕೆ ದೊಡ್ಡವುಗಳಾಗಬೇಕು ಎಂದರು. ಈ ಕಾರ್ಯಶಾಲೆಯಲ್ಲಿ ಮೋಟಾರಿನ ವಿಭಾಗಗಳು ಮಾತ್ರವಲ್ಲದೆ ರೈಲ್ವೆ ಮೊದಲಾದ ಇತರ ಸಾರಿಗೆಗಳ ಭಾಗಗಳನ್ನು ತಯಾರಿಸುವಂತೆಯೂ ಆಗಬೇಕೆಂದು ಹೇಳಿ ಕಾರ್ಯಶಾಲೆಗೆ ಯಶಸ್ಸನ್ನು ಕೋರಿದರು. ಉಪಹಾರದೊಂದಿಗೆ ಈ ಸಮಾರಂಭ ಕೊನೆಗೊಂಡಿತು.

ತದನಂತರ ಮಾನ್ಯ ಮಂತ್ರಿಗಳು ಮಂಗಳೂರು ಬಂದರ ಪರಿಶೀಲನೆಗಾಗಿ ಸಮುದ್ರತೀರಕ್ಕೆ ಹೋಗಿ ವಿದ್ಯಮಾನಗಳೆಲ್ಲವನ್ನೂ ಪರಿಶೀಲಿಸಿದರು. ಬಳಿಕ ಕೇಂದ್ರ ಮೈದಾನಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಮಂತ್ರಿಗಳು ಭಾಷಣವಿತ್ತರು. ಮಹಾತ್ಮರ ಅಹಿಂಸಾತ್ಮಕ ಚಳವಳಿಯ ಪ್ರಭಾವ, ಮಹಾತ್ಮರ ಕೊಲೆಯ ಕಾರಣಗಳು, ರೈಲ್ವೆ ಮುಷ್ಕರದ ಬೆದರಿಕೆ, ಈಗ ದೊರೆತಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಜನರು ಕೈಕೊಳ್ಳಬೇಕಾದ ಕಾರ್ಯಕ್ರಮ ಮೊದಲಾದ ಪ್ರಚಲಿತ ವಿಷಯಗಳನ್ನೆತ್ತಿ ಮಾತನಾಡಿದರು. ದ. ಕ. ಜಿಲ್ಲೆಯ ಕುರಿತು ಮಾತನಾಡುತ್ತಾ ಈ ಜಿಲ್ಲೆಗೆ ರೈಲ್ವೆ ಸಂಬಂಧ ಅತಿ ಕಡಿಮೆ ಎಂಬುದನ್ನು ಒಪ್ಪಿದರು. ಕೆಲವು ಸಮಯ ತಾಳ್ಮೆಯನ್ನು ವಹಿಸಿದರೆ ಈ ಜಿಲ್ಲೆಯ ಕೋರಿಕೆಗಳನ್ನು ಪೂರೈಸಲು ಪ್ರಯತ್ನಿಸಲು ಸಾಧ್ಯವಿದೆಯೆಂದರು. ಮೈಸೂರು-ಬೆಂಗಳೂರಿಗಾಗಿ ಮಂಗಳೂರಿನಿಂದ ಮದ್ರಾಸಿಗೆ ಒಂದು ರೈಲ್ವೆ ಕೆಲವೇ ವರುಷಗಳಲ್ಲಿ ಆಗಲಿದ್ದು ಅದರಿಂದ ದ. ಕ. ಜಿಲ್ಲೆಗೆ ಹೆಚ್ಚಿನ ಪ್ರಯೋಜನವಾಗಬಹುದೆಂದರು. ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರದ ವಿಚಾರ ಮಾತನಾಡುತ್ತಾ ಕಲ್ಲಿಕೋಟೆ, ತಲಚೇರಿ, ಮೊದಲಾದ ಕಡೆಗಳಿಂದಲೂ ಮನವಿಗಳು ಬಂದಿವೆ ಅಂತೆಯೇ ಮಂಗಳೂರು ಮನವಿಯೂ ಇದೆ. ನಿಮ್ಮಂತೆಯೇ ಮಂಗಳೂರು ಪ್ರಬುದ್ಧ ಬಂದರಾದರೆ ನನಗೂ ಸಂತೋಷ ಆದರೆ ಈ ಪ್ರಶ್ನೆಯನ್ನು ಕೇಂದ್ರ ಸರಕಾರವು ನೇಮಿಸಿದ ಸಮಿತಿಯು ನಿರ್ಧರಿಸಲಿಕ್ಕಿರುವುದು. ಅದನ್ನೆಲ್ಲರೂ ಒಪ್ಪಬೇಕಾಗಿದೆ, ಎಂದರು. ಈ ಮಹಾಸಭೆಗೆ ಮುನಿಸಿಪಲ್ ಚೆಯರ್‌ಮೆನ್ ಶ್ರೀ. ಎಲ್. ಸಿ. ಪಾಯಸರು ಅಧ್ಯಕ್ಷತೆವಹಿಸಿದ್ದರು.

ರಾತ್ರಿ ಸಿ. ಪಿ. ಸಿ. ಕಂಪೆನಿಯ ಅತಿಥಿಗೃಹದಲ್ಲಿ ಮಾನ್ಯ ಮಂತ್ರಿಗಳಿಗೆ ಔತಣ ಸಮಾರಂಭ ನಡೆಯಿತು. ಮರುದಿನ ಬೆಳಗ್ಗೆ ಮೂಲ್ಕಿ, ಪಡುಬಿದ್ರೆ ಮಾರ್ಗವಾಗಿ ಉಡುಪಿಯ ಕಾರ್ಯಕ್ರಮವನ್ನು ಪೂರೈಸಿ ಕಾರ್ಕಳ, ಮೂಡುಬಿದ್ರೆ ಮಾರ್ಗವಾಗಿ ಮಂಗಳೂರಿಗೆ ಸಂಜೆ ಬಂದು ದ. ಕ. ಜಿಲ್ಲಾ ವಾಣಿಜ್ಯ ಸಂಘದ ವಾರ್ಷಿಕ ಮಹೋತ್ಸವದ ಅಧ್ಯಕ್ಷತೆ ವಹಿಸಿದರು. ಈ ಸಮಾರಂಭವು ಕೆನರಾ ಹೈಸ್ಕೂಲಿನಲ್ಲಿ ವಿದ್ಯುದ್ದೀಪಗಳಿಂದಲಂಕೃತವಾದ ವಠಾರದಲ್ಲಿ ಜರಗಿತು. ಜಿಲ್ಲೆಯ ಹಾಗೂ ಪರವೂರ ಆಮಂತ್ರಿತ ಸ್ತ್ರೀಪುರುಷರನೇಕರು ಈ ಸಮಾರಂಭಕ್ಕೆ ಚಿತ್ತೈಸಿದ್ದರು.

ಶ್ರೀಮತಿ ಲೀಲಾಬಾಯಿ ಬಾಳಿಗರಿಂದ ರಾಷ್ಟ್ರಗೀತೆ ಹಾಡಲ್ಪಟ್ಟನಂತರ ಜಿಲ್ಲಾ ವಾಣಿಜ್ಯ ಸಂಘದ ಅಧ್ಯಕ್ಷರಾದ ಶ್ರೀ. ವಿ. ಎಸ್. ಕುಡ್ವರು ಸ್ವಾಗತ ಭಾಷಣಮಾಡಿದರು. 'ಮಂಗಳೂರು ಮತ್ತು ಶಿವಮೊಗ್ಗ ಹಾಸನಗಳು ರೈಲ್ವೆಲ್ಯಾನುಗಳಿಂದ ಜೋಡಿಸಲ್ಪಡಲಿ. ಜಿಲ್ಲೆಗೆ ವಿದ್ಯುಚ್ಛಕ್ತಿ ಸರಬರಾಯಿ ಬೇಗನೆ ಬರಲಿ' ಎಂದೆಲ್ಲಾ ಭಾಷಣದಲ್ಲಿ ಹೇಳಲಾಗಿತ್ತು. ಬಳಿಕ ಈ ಸಮಾರಂಭಕ್ಕೆ ಶುಭವನ್ನು ಕೋರಿಬಂದ ಸಂದೇಶಗಳ ಪಠನವಾಯಿತು. ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ. ಕೆ. ಸದಾನಂದ ಹೆಗ್ಡೆಯವರು ತಮ್ಮ ಭಾಷಣದಲ್ಲಿ ಈ ಜಿಲ್ಲೆಯ ಕೆಲವೊಂದು ಅತ್ಯಗತ್ಯ ಅವಶ್ಯಕತೆ, ರಸ್ತೆ ಸೇತುವೆ, ಸಂಕ ಇತ್ಯಾದಿ ವಿಷಯಗಳನ್ನೆತ್ತಿ ಪ್ರಸ್ತಾಪಿಸಿ ಈ ಜಿಲ್ಲೆಗೆ ಆಗ ಬೇಕಾದುದು ಸಕಾಲದಲ್ಲಿ ಆಗಲಿಲ್ಲವೆಂದು ಒತ್ತಿ ಹೇಳಿದರು.

(೩ನೇ ಪುಟ ನೋಡಿರಿ)

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯವಾಚಕರೇ.............

ನಾನು ಒಬ್ಬ ಸಾಧಾರಣ ಮನುಷ್ಯ—ದುರದೃಷ್ಟವಶಾತ್ ನನ್ನ ಮಿತಿಮೀರಿದ ಕಾಮುಕ ಜೀವನವು ಅತಿ ಬೇಗನೆ ನರಗಳ ದೌರ್ಬಲ್ಯ ... ಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಹೃದಯನಾದವೂ ಜಾಸ್ತಿಯಾಯಿತು. ಬಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತ ... ಬರುವುದಕ್ಕೆ ಬೇಜಾರೆನಿಸಿತು. ನನ್ನ ಈ ದುಃಖಕರವಾದ ಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿ ... —ಆದರೆ ನಾನೆಂತು ಅದನ್ನು ತಿಳಿಸುವುದು? ಗುಟ್ಟಾಗಿಸಾವಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀ... ನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲ ... ಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ...ವಾರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು (ಸನ್ಯಾಸಿ) ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆ ... ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಷ್ಟದಿಂದ ಮಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ...ಸುವಂತೆ ಬಲಾತ್ಕರಿಸಿತು. ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ...ದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎರಡು ಔಷಧಿಗಳನ್ನು ದಯಪಾಲಿಸಿ ...:— ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಪಿಸುವುದಕ್ಕೆ ಅವರು ಹೇಳಿದಂತೆ ಗಿಡಮೂಲಿಕೆಗಳನ್ನು ಹುಡುಕಿ ತಂದು ಅವರೆದುರಿನ... ಆ ಎರಡು ಔಷಧಿಗಳನ್ನು ತಯಾರಿಸಿದೆನು. ಆನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಪ್ರಿಯವಾಚಕರೇ! ನಾನು ... ಕ್ಕವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ... ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೨೧ ದಿವಸಗಳಲ್ಲಿ ... ಸಾಧಿಸಿದೆನು. ನುತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿದಿನವೂ ೪ ಸೇರುಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳ... ಲ್ಲವನಾದೆನು. ಕಣ್ಣುಗಳ ಹೊಳಪು ಬಂತು. ಒಂದು ತರಹಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ... ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ... ಪ್ರಯೋಗಿಸಿ ಅದರಿಂದ ಮಹತ್ವ ಗುಣವನ್ನು ಕಂಡುದುದಲ್ಲದೆ ಅದಕ್ಕಿಂತ ಬೇರೆ ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನುಪಯೋಗಿಸಿ ನಿರಾಶರಾಗಿರುವವರು ಇದನ್ನು ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಅದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. 5-0-0

ಹೊರಗೆ ಲೇಪಿಸುವ ತೈಲಕ್ಕೆ:— ೨೧ ದಿವಸಕ್ಕೆ ರೂ. 5-8-0

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು.

ಈ ಔಷಧಿಯು "ಕುಷ್ಟ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು. (ತೈಲವು ಚರ್ಮದ ಸುಕ್ಕನ್ನು ಹುಟ್ಟಿಸುವುದಿಲ್ಲ.)

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ: —

[೧] ಡಾ. ಕೆ. ಜಿ. ಮಟ್ಟತ್ತಾಲ್, ಕೊಚನವರು ಬರೆಯುತ್ತಾರೆ:—ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೂ, ವೃದ್ಧರಿಗೂ ಪ್ರಯೋಗಿಸಿ ಅದರ ಶಕ್ತಿದಾಯಕ ಕೆಲಸವನ್ನು ಮೆಚ್ಚಿದ್ದೇನೆ.

[೨] ಡಾ. ಜೇಪಿಯರ್ ಕುರುಪ ನೇರಿ, ಕುಂಬಲಾಂಗಿಯವರು ಬರೆಯುತ್ತಾರೆ:—ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನುಂಟುಮಾಡಿವೆ.

[೩] ಮ್ಯಾನೇಜರ್, "ಮೈ ಮ್ಯಾಗಜೈನ್" ಮದ್ರಾಸು, ಬರೆಯುತ್ತಾರೆ:—ನಾನು ದಾರ್-ಉಲ್-ಷಫಾ-ಗೋಲಿಯಾನ, ಬಟಾಲದವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ಮಾನವನಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ, ಲೆಕ್ಕವಿಲ್ಲದಷ್ಟು ಸಾವಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು.

ಮಾತ್ರೆ:—ಈ ಔಷಧಿಗಳು ಯಾವ ತೊಂದರೆಯನ್ನು ಮಾಗುವ ಪದಾರ್ಥಗಳನ್ನೂ ಹೊಂದಿಲ್ಲ. ಮತ್ತು ಇದನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ವಾಪಸ್ಸು ಮಾಡಲಾಗುವುದು.

ನಿಮ್ಮ ಆರ್ಡರನ್ನು ಇವರಿಗೆ ಕಳುಹಿಸಿರಿ:—

The Manager,

DAR-UL-SHAFA GOLIAN (Regd) (N. Y. U.) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಷಫಾ-ಗೋಲಿಯಾನ (ರಿಜಿಸ್ಟರ್ಡ್) (N.Y.U) ಬಟಾಲ [ಪಂಜಾಬ್]

ಮಂಗಳೂರು

ವಾರ್ಷಿಕ ಜಿಲ್ಲಾ ಸಮ್ಮೇಳನ— ಅಖಿಲಭಾರತ ಅಂಚೆ ಜವಾನ ಮತ್ತು ಕೆಳತರಗತಿಯ ನೌಕರರ ಸಂಘದ 3ನೇ ವಾರ್ಷಿಕ ಜಿಲ್ಲಾ ಸಮ್ಮೇಳನವು ತಾ 15-49ನೇ ಆದಿತ್ಯವಾರ ಬೆಳಿಗ್ಗೆ 10 ಘಂಟೆಗೆ ಹೆಡ್ ಪೋಸ್ಟ್ ಆಫೀಸಿನ ಮಹಡಿಯಲ್ಲಿ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಎಲ್ಲರೂ ಬರಬೇಕೆಂದೂ ಅಧ್ಯಕ್ಷ ಶ್ರೀ. ಬಿ. ಎಸ್. ಭಾಸ್ಕರ ರೈಗಳು ವಿನಂತಿಸುತ್ತಾರೆ.

ಪಾಣೆಮಂಗಳೂರಲ್ಲಿ ಜರಗಲಿರುವ ರಾಜಕೀಯ ಪರಿಷತ್ತು ಮುಂದುವರಿಸಲ್ಪಟ್ಟು ಮೇ ತಿಂಗಳ 10, 11, ಮತ್ತು 12ಕ್ಕೆ ಜರಗುವುದೆಂದು ಗೊತ್ತಾಗಿದೆ.

ಒಟ್ಟಿ-ಮೊಬೈಲ್ ವರ್ಕರ್ಸ್ ಯೂನಿಯನಿನ— ಕಾರ್ಯಕಾರಿ ಮಂಡಳದ ಸಭೆಯು ತಾ 17ರಲ್ಲಿ ಜರಗಿ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ನವರು ಕೊಟ್ಟ ಎವಾರ್ಡನ್ನು ಮಾಲಕರು ಇನ್ನೂ ಜಾರಿಗೆ ತರಲೊಪ್ಪದ ಸಮಸ್ಯೆಯನ್ನು ಯೋಗ್ಯ ರೀತಿಯಲ್ಲಿ ಬಗೆಹರಿಸುವ ಬಗ್ಗೆ ಯೂನಿಯನಿನ ಪ್ರತಿನಿಧಿಯೊಬ್ಬರನ್ನು ಮದ್ರಾಸಿಗೆ ಕಳಿಸುವ ನಿರ್ಧಾರವಾಗಿದೆ

ಬೋಳೂರು ಕರ್ನಾಟಕ ನಾಟಕ ಸಭೆಯ— ವಾರ್ಷಿಕೋತ್ಸವವು ತಾ 17ರಲ್ಲಿ ಶ್ರೀ. ಟಿ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು, ಕಾರ್ಯದರ್ಶಿ ಶ್ರೀ. ಬಿ. ಹರಿಶ್ಚಂದ್ರ ಆಚಾರ್ ವರದಿ ಓದಿದರು, ಶ್ರೀಗಳಾದ ಕೆ. ಕೃಷ್ಣರಾವ್, ಎಸ್. ನರಸಪ್ಪಯ್ಯನವರ ಮತ್ತು ಅಧ್ಯಕ್ಷರ ಭಾಷಣಗಳಾಗಿ ವಿವಿಧ ವಿನೋದಾವಳಿ, ಜತೆಕಾರ್ಯದರ್ಶಿ ಶ್ರೀ ಬಿ. ನಾಗೇಶರಾಯರಿಂದ ಧನ್ಯವಾದಗಳಾದುವು.

ಬೋಳಾರ ಮ್ಯುನ್ಸಿಪಲ್ ಹುಡುಗರ ಶಾಲೆಯ ನೂತನ ಕಟ್ಟಡದ ಪ್ರವೇಶ ಸಮಾರಂಭವು ತಾ 19ರಲ್ಲಿ ಮ್ಯುನ್ಸಿಪಲ್ ಚೆಯರ್‌ಮ್ಯಾನ್ ಬಿ. ಎಲ್. ಸಿ. ನಾಯಕರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮುಖ್ಯೋಪಾಧ್ಯಾಪಕ ಶ್ರೀ. ಬಿ. ರಾಮಯ್ಯ ಶೆಟ್ಟರ ವಾರ್ಷಿಕ ಇತಿಹಾಸ ನಿರೂಪಣೆಯಾದಮೇಲೆ ಶ್ರೀ. ಕೆ. ಕೆ. ಶೆಟ್ರ ಉಪನ್ಯಾಸ, ಮಕ್ಕಳ ವಿವಿಧ ವಿನೋದಾವಳಿಗಳಾದುವು. ಅಧ್ಯಕ್ಷರ ಸಂದರ್ಭೋಚಿತ ಭಾಷಣವಾಗಿ, ಕಂಟ್ರಾಕ್ಟರ್ ಶ್ರೀ. ಕೆ. ಎಸ್. ಶೆಟ್ಟರಿಗೆ ಸುವರ್ಣ ಪದಕ ಕೊಡಲಾಯಿತು.

ಮಿಶ್ಯನ್ ಹೈಸ್ಕೂಲಿನ ಹಳೆಯ ವಿದ್ಯಾರ್ಥಿ ಸಂಘ— ದ ವಾರ್ಷಿಕೋತ್ಸವವು ತಾ 17ರಲ್ಲಿ ರಾ| ಬ| ಎನ್. ಎಂ. ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು,

ನಾಟ್ಯಕಲಾ ಪ್ರದರ್ಶನ— ಶ್ರೀ. ಯು. ಎಸ್. ಕೃಷ್ಣರಾವ್ ಮತ್ತವರ ಶಿಷ್ಯರ ನಾಟ್ಯಕಲಾ ಪ್ರದರ್ಶನವೊಂದು ತಾ 18ರಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ. ಎಸ್. ಆರ್. ಕೈವಾರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಅಧ್ಯಕ್ಷರು ಶ್ರೀ. ಕೃಷ್ಣರಾಯರ ನಾಟ್ಯಕಲಾ ಸೇವೆಯನ್ನು ಪ್ರಶಂಸಿಸಿ ಬಂದುಪವನನ್ನು ಪಾಂತೋಷಕವಾಗಿತ್ತರು. ಶ್ರೀ. ಎನ್. ಎಸ್. ಕಿಲ್ಲೆಯವರು ಧನ್ಯವಾದವನ್ನರ್ಪಿಸಿದರು.

ಭಾವಚಿತ್ರ ಅನಾವರಣ ಸಮಾರಂಭ— ಕೆನರಾ ವಾಣಿಜ್ಯ ಸಂಘದಅಧ್ಯಕ್ಷರಾಗಿದ್ದ ದಿವಂಗತ ಶ್ರೀ. ಮಡೀಲ್ ಅಣ್ಣಪ್ಪನಾಯಕ್ ಮತ್ತು ದಿವಂಗತ ಶ್ರೀ. ಕಸ್ತೂರಿ ನಾಗೇಶಪ್ಪೈ ಇವರಿಬ್ಬರ ಭಾವಚಿತ್ರಗಳ ಅನಾವರಣವು ತಾ 20ರಲ್ಲಿ ಶ್ರೀ ಬಿ. ವೈಕುಂಠ ಬಾಳಿಗರಿಂದ ಮಾಡಲ್ಪಟ್ಟಿತು. ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ. ವಿ. ಎಸ್. ಕುಡ್ವರ ಸ್ವಾಗತ ಭಾಷಣವಿತ್ತು. ಶ್ರೀ. ಎಂ. ರಾಘವೇಂದ್ರ ಪೈಗಳ ಉಪನ್ಯಾಸ, ಶ್ರೀ. ಪಿ. ಆರ್. ಶೆಣೈಗಳ ವಂದನೆ, ಉಪಾಹಾರವಾಗಿ ಸಭಾಂತ್ಯವಾಯಿತು.

ದ. ಕನ್ನಡ

ಹಿರಿಯಡ್ಕ:— ಶ್ರೀ ವೀರಭದ್ರ ದೇವಸ್ಥಾನದ ರಥೋತ್ಸವವು ವಾಡಿಕೆಯಂತೆ ತಾ 12-5-49ರಿಂದ 17-5-49ರ ತನಕ ಜರಗಲಿರುವುದೆಂದೂ ಎಲ್ಲರೂ ಬಂದು ದೇವತಾಕಾರ್ಯವನ್ನು ನೆರವೇರಿಸಿಕೊಟ್ಟು ಗಂಧಪ್ರಸಾದ ಸ್ವೀಕರಿಸಬೇಕೆಂದೂ ಟ್ರಸ್ಟಿ ಶ್ರೀ. ಎ. ಜಗಜ್ಜೀವ ಆಳ್ವರು ಅಪೇಕ್ಷಿಸುತ್ತಾರೆ.

ಮಜೂರು ಕರಂದಾಡಿ— ಶ್ರೀರಾಮ ಪ್ರಾಥಮಿಕ ಶಾಲಾ ವರ್ಧಂತಿಯು ತಾ 7-4-49ರಲ್ಲಿ ಶ್ರೀ. ಯು. ಮಹಾಲಿಂಗ ಶೆಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು.

ಸುಬ್ರಹ್ಮಣ್ಯ:— ಶ್ರೀ. ಸಂಪುಟ ನರಸಿಂಹ ಸ್ವಾಮಿ ಮಠದಲ್ಲಿ ಮಹೋತ್ಸವವು ವಾಡಿಕೆಯಂತೆ ತಾ 10-5-49ರಿಂದ 13-5-49ರ ತನಕ ಜರಗುವುದು.

ಕರ್ನಾಟಕ ತೃತೀಯ ಮಲೆನಾಡು ಪರಿಷತ್ತು ತಾ 17-5-49ಕ್ಕೆ ಜರಗುವುದು. ಪರಿಷತ್ತಿನ ಉದ್ಘಾಟನೆಯನ್ನು ಶ್ರೀ. ಕೆ. ಆರ್. ಕಾರಂತರು ಮಾಡುವರು. ಅಧ್ಯಕ್ಷತೆ ವಹಿಸುವಂತೆ ಕೊಡಗು ಜಿಲ್ಲಾ ಜಡ್ಜರಾದ ಶ್ರೀ. ... ಸ್. ಮುದ್ದಪ್ಪನವರನ್ನು ಕೇಳಿಕೊಳ್ಳಲಾಗಿದೆ. ಪ್ರದರ್ಶನದ ಬಗ್ಗೆ ಸಹಕಾರವೀಯುವಂತೆ ಸರಕಾರವನ್ನು ವಿನಂತಿಸಲಾಗಿದೆ. ಪರಿಷತ್ತು ಯಶಸ್ವಿಯಾಗುವಂತೆ ಸುತ್ತುಮುತ್ತಲಿನವರು ಸಹಕರಿಸಬೇಕೆಂದೂ ಉದಾರ ಹಸ್ತದಿಂದ ಧನಸಹಾಯ ಮಾಡಬೇಕೆಂದೂ ಅಪೇಕ್ಷಿಸಲಾಗಿದೆ.

ಅಜೆಕಾರು:— ಸಹಕಾರಿ ಸ್ಟೋರಿನ ಮಹಾಸಭೆಯು ತಾ 7-5-49ಕ್ಕೆ ಮಧ್ಯಾಹ್ನ 2ಗಂಟೆಗೆ ಜರಗಲಿರುವುದು.

ಬೆಳ್ವಾರೆ ಹುತಾತ್ಮಾರಿನ ವಿದ್ಯಾರ್ಥಿ ... ಕ ಕೂಟದವರು 'ಸುಭಾಸ ದಿಗ್ವಿಜಯ' ... ಬ ಯಕ್ಷಗಾನ ಬಯಲಾಟವನ್ನು ... 18-4-49ರಲ್ಲಿ ಬೋರ್ಡ ಹಾ. ಪ್ರಾ. ಶಾಲೆಯಲ್ಲಿ ಸ್ಥಳೀಯ ಅಜಿರ್ಲ ಮಹಾಲಿಂಗೇಶ್ವರ ದೇವಳದ ಜೀರ್ಣೋದ್ಧಾರದ ಸಹಾಯಾರ್ಥವಾಗಿ ಆಡಿತೋರಿಸಿದರು.

ಸುರತ್ಕಲ್ ಆಗ್ನೇಯ ಕರಿಯ ಶಾಲೆಯ ಮಾಸಿಕ ಹಬ್ಬವು ತಾ 16ರಲ್ಲಿ ಶ್ರೀ. ... ಗೋಪಾಲ ವಾಸ್ತರರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಹಳೆನಾಡ.— ಇಲ್ಲಿಯ ನೇತಾಜಿ ಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ 22-4-49ರಲ್ಲಿ ಶ್ರೀ. ಕೊಬ್ಬಲು ಸೂರಪ್ಪ ಶೆಟ್ರು ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಾರ್ಥನೆ, ಸ್ವಾಗತ ಭಾಷಣ, ಸ್ವಸ್ತಿವಾಚನ, ಬಹುಮಾನ ವಿತರಣೆ ನಡೆದ ತರುವಾಯ ಶ್ರೀಗಳಾದ ಶ್ರೀ. ಎಚ್. ಕೋಟಿಯಣ್ಣ ಶೆಟ್ಟಿ ಮತ್ತು ಕೆ. ತೇಜಪ್ಪ ಹೆಗ್ಡೇರ ಸಂದರ್ಭೋಚಿತ ಭಾಷಣಗಳಾದುವು. ಸಭಾಂತ್ಯದಲ್ಲಿ ಕಾಲೋಚಿತ ಬೋಧಪ್ರದ ಭಾಷಣಾನಂತರ ಶಾಲಾ ಮಕ್ಕಳಿಂದ ವಿವಿಧ ವಿನೋದಗಳೂ "ಪತಿತ ಚಕ್ರವರ್ತಿ" ಎಂಬ ನಾಟಕವೂ 'ಸ್ವರಾಜ್ಯ ವಿಜಯ' ಎಂಬ ಯಕ್ಷಗಾನ ನಾಟಕವೂ ಅಭಿನಯಿಸಲ್ಪಟ್ಟಿತು. ಮುಖ್ಯೋಪಾಧ್ಯಾಯರು ಆಭಾರಸೂಚಿಸಿದರು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವೆಲ್ಲಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ



ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾರ್ನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ ಔಷಧಿ' ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವೇಶಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿಲ್ಪಟ್ಟಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯಾ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರರೋಗ, ಬಹುಮೂತ್ರ, ಸೀಮೂತ್ರ, ಅನರೋಗ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವೇಶಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿವಾರಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ, ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0 ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಫ್ಯಾಮಿಲಿ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ ಒಂದು ಡಜನ್ ಫ್ಯಾಮಿಲಿ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0 ಡಜನ್ ಶೀಸೆಗಳಿಗೆ ರೂ. 18. ವಿ. ಪಿ. ಮಾಫಿ.

ಪ್ರಶಂಸನಾ ಪತ್ರ— ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎದುರಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸಾತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಬೊಂಬಾಯಿ ಸ್ಟಾಕಿಸ್ಟರು:— ಲಕ್ಷ್ಮಾವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ಸಾರ್ವಜನಿಕ ಆರೋಗ್ಯ

ವೈದ್ಯಕೀಯ ಆರೋಗ್ಯ ಸೇವೆಯು ಪ್ರತಿಯೊಬ್ಬನಿಗೂ ದೊರೆಯಬೇಕು.

ಮಾನ್ಯ ಮಂತ್ರಿ ಶ್ರೀ. ಎ ಬಿ ಶೆಟ್ಟಿ, ಮದ್ರಾಸು.

ದೇಶದ ರಕ್ಷಣೆ ಕಾಯಿದೆ-ಕ್ರಮಗಳ ಪರಿಪಾಲನೆ-ಇಷ್ಟೇ ಸರಕಾರದ ಕೆಲಸವಾಗಿದ್ದ ಕಾಲವು ಬಹಳ ಹಳೆಯದಲ್ಲ. ಯುದ್ಧವು ಪ್ರಾರಂಭವಾಗಿ ದೇಶದ ಆರ್ಥಿಕ ಪರಿಸ್ಥಿತಿಯು ತಲೆಕೆಳಗಾಗುವ ವರೆಗೆ ಜನರನ್ನು ಸಾಕುವ ಭಾರವು ಸರಕಾರಕ್ಕಿದ್ದಿಲ್ಲ. ಇಂದಿನ ಪರಿಸ್ಥಿತಿಯೇ ಬೇರೆ. ಈಗಿನ ಕಾಲದ ಪ್ರತಿಯೊಂದು ದೇಶದ ಸರಕಾರವೂ ತನ್ನ ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗಿದೆ. ಅವರ ಜೀವನ ಮಟ್ಟವನ್ನು ಸುಧಾರಿಸುವುದನ್ನೇ ಗುರಿಯಾಗಿ ಇಟ್ಟುಕೊಂಡಿದೆ. ದೇಶದ ಪ್ರತಿಯೊಂದು ಮಗುವಿಗೂ ಸಾಕಷ್ಟು ಶಿಕ್ಷಣ ದೊರೆಯಬೇಕು. ವೈದ್ಯಕೀಯ ಮತ್ತು ಆರೋಗ್ಯ ಸೇವೆಯು ಪ್ರತಿಯೊಬ್ಬನಿಗೂ ದೊರೆಯಬೇಕು. ನಿರುದ್ಯೋಗದ ಮಾತೇ ಮಾಯವಾಗಬೇಕು. ಪ್ರತಿಯೊಬ್ಬ ಕೆಲಸಗಾರನಿಗೂ ಜೀವನಕ್ಕೆ ಸಾಕಾಗುವಷ್ಟು ವೇತನ ದೊರೆಯಬೇಕು. ಹೆಚ್ಚೇಕೆ? ಜೀವನಕ್ಕೆ ಮೂಲಾಧಾರವಾದ ಪ್ರತಿಯೊಂದೂ ಸಿಗಬೇಕು.

ಇಂತಹ ಸುದಿನವು ಬರಬೇಕಾದರೆ ದೇಶದ ಉತ್ಪಾದಕ ಶಕ್ತಿಯು ಹೆಚ್ಚದೆ ನಿರ್ವಾಹವೇ ಇಲ್ಲ. ಉತ್ಪಾದಕ ಶಕ್ತಿ, ಜನತೆಯ ಸಂಪತ್ತು, ಸುಖ, ಇವೆಲ್ಲವೂ ಜನರ ಶರೀರ ಮನಸ್ಸುಗಳ ಆರೋಗ್ಯದ ಮೇಲೆಯೇ ಹೆಚ್ಚಾಗಿ ಅವಲಂಬಿಸಿಕೊಂಡಿವೆ ಯೆಂಬುದನ್ನು ಯಾರೂ ಮರೆಯಬಾರದು. ಜನರನ್ನು ರೋಗಗಳಿಗೆ ತುತ್ತಾಗದಂತೆ ಮಾಡಿ ಮೃತ್ಯುವಿನ ಬಾಯಿಯಿಂದ ತಪ್ಪಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ರೋಗಗಳನ್ನೂ ಗಾಯ ಮೊದಲಾದವುಗಳನ್ನೂ ಗುಣಪಡಿಸಲು ಆಸ್ಪತ್ರೆಗಳನ್ನು ಸ್ಥಾಪಿಸಬೇಕು ಡಾಕ್ಟರರನ್ನು ಒದಗಿಸಬೇಕು.

ನಮ್ಮ ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದರೂ ಅದನ್ನು ಅನುಭವಿಸಿ ಆದರೆ ಸವಿಯಿಂದ ಆನಂದಪಡುವ ಪರಿಸ್ಥಿತಿಯು ನಮಗಿನ್ನೂ ದೊರೆತಿಲ್ಲ. ಬಡತನ, ಅಜ್ಞಾನ, ರೋಗಗಳನ್ನು ಎಲ್ಲೆಲ್ಲೂ ಕಾಣುತ್ತಿದ್ದೇವೆ. ಇತರ ದೇಶಗಳೊಡನೆ ಹೋಲಿಸಿ ನೋಡಿದರೆ ನಮ್ಮ ದೇಶದಲ್ಲಿ ಒಬ್ಬನ ಸರಾಸರಿ ಆದಾಯವು ಅತಿ ಕಮ್ಮಿಯಾಗಿದೆ. ವಿದ್ಯಾಭ್ಯಾಸದ ಕುರಿತು ಹೇಳುವುದಾದರೆ ನಮ್ಮ ದೇಶದ ಓದುಬರಹ-ಬಲ್ಲವರ ಸಂಖ್ಯೆ ಬೆರಳೆಣಿಕೆಯಲ್ಲಿದೆ. ನಮ್ಮ ಪ್ರಾಂತದಲ್ಲಿ ಓದುಬರಹ ಬಲ್ಲವರೆಂದರೆ ನೂರಕ್ಕೆ ಹದಿಮೂರು ಮಂದಿ. ಶಾಲೆಗೆ ಹೋಗುವ ವಯಸ್ಸಿನ ಮಕ್ಕಳ ಸಂಖ್ಯೆಯಲ್ಲಿ ಅರ್ಧಾಂಶಕ್ಕೆ ಪ್ರಾಥಮಿಕ ವಿದ್ಯಾಭ್ಯಾಸ ದೊರೆಯಬೇಕಾಗಿದೆ.

ಮರಣ ಸಂಖ್ಯೆ, ಆಯುಸ್ಸಿನ ಪರಿಮಿತಿ, ರೋಗಗಳ ಸಂದರ್ಭಗಳು ಇವನ್ನೆಲ್ಲಾ ಪರಿಶೀಲಿಸಿದರೆ ನಮ್ಮ ಜನರ ಆರೋಗ್ಯ ಪರಿಸ್ಥಿತಿಯು ಚೆನ್ನಾಗಿ ಗೊತ್ತಾಗುವುದು. ಜೀವನಕ್ಕೆ ಮುಖ್ಯಾಧಾರವಾದ ಆಹಾರ ಇತ್ಯಾದಿಗಳು ಸರಿಯಾಗಿ ದೊರೆಯದೆ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸಿ ಜನತೆಯು ಶಾರೀರಿಕ ಹಾಗೂ ಮಾನಸಿಕ ಯೋಗ್ಯತೆಯನ್ನು ಹೊಂದುವುದೆಂದರೆ ಸಾಧ್ಯವೇ ಇಲ್ಲ. ಜನರು ಆರೋಗ್ಯದಿಂದಿರಬೇಕಾದರೆ ಮುಖ್ಯವಾಗಿ ವಾಸಕ್ಕೆ ಯೋಗ್ಯವಾದ ಮನೆಗಳಿರಬೇಕು. ಕುಡಿಯಲು ಶುಚಿಯಾದ ನೀರು, ಸರಿಯಾದ ಪೌಷ್ಟಿಕ ಆಹಾರ, ಶುಚಿತ್ವ, ಯೋಗ್ಯವಾದ ವೃತ್ತಿ, ಆರೋಗ್ಯ, ತಿಳುವಳಿಕೆ, ವಿಹಾರ-ವಿಶ್ರಾಂತಿಗಳಿಗೆ ತಕ್ಕ ಅನುಕೂಲತೆಗಳು ಇವೆಲ್ಲಾ ಅತ್ಯಾವಶ್ಯಕಗಳು.

ನಮ್ಮ ಜನರಲ್ಲಿ ಹೆಚ್ಚಿನವರಿಗೆ ವಾಸಕ್ಕೆ ಯೋಗ್ಯವಾದ ಮನೆಗಳಿಲ್ಲ. ಸುಖವಾಗಿ ಜೀವನ ನಡೆಸಲು ತಕ್ಕ ಅನುಕೂಲತೆ ಇಲ್ಲ. ನಾವು ಸಾಮಾಜಿಕ ಪರಿಸ್ಥಿತಿಯಲ್ಲಿ ಕೆಳಗಿಳಿದಂತೆ ರೋಗಗಳೂ ಮರಣ ಸಂಖ್ಯೆಯೂ ಹೆಚ್ಚು ಹೆಚ್ಚು ಮೇಲೇರುವುದು ಸಹಜವಾಗಿದೆ. ಜೀವನ ಮಟ್ಟವು ಅತಿ ಕೆಳಗಿನ ತರಗತಿಯಲ್ಲಿರುವ ಬಡಜನರಲ್ಲಿ ರೋಗಗಳು ಬಿಡಾರಮಾಡಿಕೊಂಡಿವೆ. ಮರಣ ಸಂಖ್ಯೆಯೂ ಮಿತಿಮೀರಿದೆ. ಬಡ ಕುಟುಂಬಗಳ ಉದ್ಧಾರವೇ ಜನತೆಯ ಆರೋಗ್ಯ ಸುಧಾರಣೆಯ ಸರಿಯಾದ ರೀತಿಯೆನ್ನಬಹುದು. ಬಡವರಿಗೆ ವಾಸಕ್ಕೆ ಯೋಗ್ಯವಾದ ಮನೆಗಳೂ, ಪುಷ್ಟಿಕರವಾದ ಆಹಾರವೂ ದೊರೆಯಬೇಕು. ತಾಯ್ತನದ ರಕ್ಷಣೆ-ಶಿಶು ಪೋಷಣೆಗಳ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಬಡ ಕೆಲಸಗಾರರ ಯೋಗಕ್ಷೇಮಗಳನ್ನು ನೋಡಿಕೊಳ್ಳಲು ತುಂಬ ಪ್ರಯತ್ನಿಸಬೇಕು.

ಜನರು ಆರೋಗ್ಯದಿಂದಿರಬೇಕಾದರೆ ಶುಚಿಯಾದ ನೀರು ಸಾಕಷ್ಟು ಇರಬೇಕು. ವಾಂತಿಭೇದಿ, ಸನ್ನಿಪಾತ, ನಾರುಹುಣ್ಣು ಮೊದಲಾದ ನೀರಿಂದ ಉಂಟಾಗುವ ರೋಗಗಳ ಹಾವಳಿಯುಳ್ಳ ನಮ್ಮ ದೇಶದಲ್ಲಿ ನೀರಿನ ಪೂರೈಕೆಗೆ ಅಗ್ರಸ್ಥಾನ ಸಲಬೇಕು. ಎಲ್ಲಿ ದಕ್ಕಂತಲೂ ಜನರಿಗೆ ನಿರ್ಮಲವಾದ ಕುಡಿಯುವ ನೀರು ದೊರೆಯುವಂತಾಗುವುದು ಅತಿ ಮುಖ್ಯವಾಗಿದೆ. ಮದರಾಸು ಸರಕಾರವು ಹಳ್ಳಿಗಳಿಗೆ ನೀರನ್ನೊದಗಿಸುವುದಕ್ಕಾಗಿ ಬಂದು ಕೋಟಿ ರೂಪಾಯಿಗಳನ್ನು ವಿಶೇಷ ನಿಧಿಯಾಗಿ ಇರಿಸಿದೆ.

ಹತ್ತು ವರುಷಗಳ ಅವಧಿಯಲ್ಲಿ ಪ್ರತಿ ಹಳ್ಳಿಗೂ ಕುಡಿಯುವ ನೀರನ್ನೊದಗಿಸಲು ನಿಶ್ಚಯವಾಗಿದೆ. ಮುನ್ಸಿಪಾಲಿಟಿಗಳಿಗೂ ಇತರ ಪಟ್ಟಣಗಳಿಗೂ ಸುರಕ್ಷಿತವಾದ ನಿರ್ಮಲ ನೀರನ್ನೊದಗಿಸುವ ಯೋಜನೆಯೂ ಇದೆ. ಇದು ಇಪ್ಪತ್ತು ವರುಷಗಳ ಅವಧಿಯಲ್ಲಿ ಪೂರ್ತಿಯಾಗಬಹುದು.

ಆಹಾರದ ಕೊರತೆಯೂ ನಮ್ಮ ಜನರನ್ನು ಎಡೆಬಿಡದೆ ಪೀಡಿಸುತ್ತಿದೆ. ಈಗಿನ ಪರಿಸ್ಥಿತಿಯಂತೆ ಜನರಿಗೆ ದೇಹಪೋಷಣೆಗೆ ಸಾಕಷ್ಟು ಆಹಾರ ದೊರೆಯುತ್ತಿಲ್ಲ. ಇದರಿಂದ ಮಕ್ಕಳ ದೇಹದ ಬೆಳವಣಿಗೆ ಹಾಗೂ ಮನೋವಿಕಾಸಕ್ಕೆ ತುಂಬ ಹಾನಿ ಇದೆ. ಅಲ್ಲದೆ ಯುವಕರಲ್ಲೂ ವೃದ್ಧರಲ್ಲೂ ತಲೆದೋರುತ್ತಿರುವ ಅನೇಕ ತರದ ಅನಾರೋಗ್ಯ ಪರಿಸ್ಥಿತಿಗಳಿಗೆ ಆಹಾರದ ಕೊರತೆಯೇ ಮುಖ್ಯ ಕಾರಣವಾಗಿದೆ. ಪುಷ್ಟಿಕರವಾದ ಆಹಾರವು ರೋಗಗಳನ್ನು ತಡೆದು ಆರೋಗ್ಯವಂತರಾಗಿ ಬಾಳಲು ಅತ್ಯಾವಶ್ಯಕವಾಗಿದೆ.

ಜನರ ಆಹಾರದ ಮಟ್ಟವನ್ನು ಏರಿಸುವುದೆಂದರೆ ಅದೊಂದು ದೊಡ್ಡ ಆರ್ಥಿಕ ಸಮಸ್ಯೆಯೇ ಆಗಿದೆ. ಜನರಲ್ಲಿ ಉತ್ತಮ ಆಹಾರವನ್ನು ಉಪಯೋಗಿಸಲು ಸಾಕಷ್ಟು ಹಣವಿರಬೇಕು ಹೆಚ್ಚೇಕೆ ? ಬಡತನವನ್ನು ನಿರ್ಮೂಲಮಾಡಬೇಕು. ಇಂತಹ ಕಠಿಣ ಸಮಸ್ಯೆಯನ್ನು ಬಗೆಹರಿಸಬೇಕಾದರೆ ನಾವು ಬೇಸಾಯಕ್ಕೇ ಶರಣು ಹೋಗಬೇಕಾಗಿದೆ. ನಮ್ಮ ಬೇಸಾಯ ಪದ್ಧತಿಯು ಪುರಾತನ ಕಾಲದಿಂದ ನಡೆದು ಬಂದ ಸಂಪ್ರದಾಯದಂತೆ ಸಾಗುತ್ತಿದೆ.

ಬೆಳೆಬಾರದಿದ್ದರೆ ನಮ್ಮ ಅದೃಷ್ಟವನ್ನು ಹಳಿಯುತ್ತೇವೆ. ಇಂತಹ ಪರಿಸ್ಥಿತಿಯು ಹೋಗಬೇಕು. ಆಧುನಿಕ ರೀತಿಯಿಂದ ಶಾಸ್ತ್ರೀಯವಾದ ಬೇಸಾಯ ಕ್ರಮವನ್ನು ಕೈಕೊಳ್ಳಬೇಕು. ಜಾನುವಾರು ಪೋಷಣೆ-ತೋಟಗಾರಿಕೆ ಇತ್ಯಾದಿಗಳನ್ನು ಸುಧಾರಿಸಬೇಕು. ಆಗ ನಮಗೆ ಬೇಕಾದ ಉತ್ತಮ ಆಹಾರ ಸಾಮಗ್ರಿಗಳು ದೊರೆಯುವುದರಲ್ಲಿ ಸಂಶಯವಿಲ್ಲ.

ಶಿಶುಗಳಿಗೂ ಎಳೆ ಮಕ್ಕಳಿಗೂ ಪುಷ್ಟಿಕರವಾದ ಆಹಾರದೊರೆಯಬೇಕಲ್ಲದೆ ಗರ್ಭಿಣಿ ಸ್ತ್ರೀ ಮೊಲೆಕೊಡುವ ತಾಯಿ, ತರುಣ ತರುಣಿಯರೆಂದು ಪ್ರತಿಯೊಬ್ಬರಿ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪ, ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಜುಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕವಳಿಕಾಯಿ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ಸಂಜುಡೇಸ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜದಲ್ಲು ವೇದನೆಗಳಿಗೂ ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ-

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಗೂ ಶರೀರ ಪೋಷಣೆಗೆ ಬೇಕಾದ ಪೌಷ್ಟಿಕ ಆಹಾರ ಸಿಗಲೇಬೇಕು. ಈ ವಿಷಯದಲ್ಲಿ ವಿಶೇಷ ಗಮನ ಕೊಡಬೇಕಾಗಿದೆ. ಜನರಿಗೆ ಪೋಷಕ ಸಾಮಗ್ರಿಗಳ ಕುರಿತು ತಕ್ಕ ತಿಳುವಳಿಕೆಯನ್ನುಂಟುಮಾಡಲು ಸರಕಾರವು ಪೋಷಣಾಧಿಕಾರಿಗಳನ್ನು (Nutrition officers) ನೇಮಿಸಿದೆ. ಇವರು ಪ್ರತಿ ಜಿಲ್ಲೆಯಲ್ಲಿ ಪೌಷ್ಟಿಕವಾದ ಆಹಾರವನ್ನು ಅವರವರ ಅನುಕೂಲಕ್ಕೆ ತಕ್ಕಂತೆ ಒದಗಿಸಿಕೊಳ್ಳುವಂತೆ ಹೇಳಿಕೊಡುವುದಕ್ಕಾಗಿ ಸಪ್ಪದಲ್ಲೇ ಸಂಚರಿಸಲಿರುವರು.

ಆಹಾರದ ಕೊರತೆಯನ್ನು ಹೋಗಲಾಡಿಸುವ ಉದ್ದೇಶದಿಂದಲೇ ಸರಕಾರವು "ಹೆಚ್ಚು ಬೆಳೆಸುವ ಯೋಜನೆ"ಯನ್ನು 1944ರಲ್ಲೇ ಪ್ರಾರಂಭಿಸಿದೆ. ಇದರಿಂದ ಅನೇಕ ಜಮೀನುಗಳು ಬೇಸಾಯಕ್ಕೆ ಬಂದುವು. ನೀರಾವರಿ ಯೋಜನೆಗಳೂ ಬಾವಿ ತೋಡುವುದಕ್ಕೆ ಧನ ಸಹಾಯ ಕೊಡುವ ಯೋಜನೆಗಳೂ ಇದಕ್ಕೆ ಹೆಚ್ಚಿನ ಅನುಕೂಲವಾದುವು. ಈ ರೀತಿಯಲ್ಲಿ ಮುಂದುವರಿದು ಪ್ರಾಂತವನ್ನು ಆಹಾರದ ಮಟ್ಟಿಗೆ ಸ್ವಯಂಪೂರ್ಣವಾಗಿ ಮಾಡಲು ಪ್ರಯತ್ನಿಸಲಾಗುತ್ತಿದೆ. 1949-50ರ ಆಯವ್ಯಯ ಪಟ್ಟಿಯಲ್ಲಿ ಹೆಚ್ಚು ಆಹಾರ ಬೆಳೆಸುವ ಉದ್ದೇಶದಿಂದ ಚಿಕ್ಕ ನೀರಾವರಿ ಯೋಜನೆಗಳಿಗಾಗಿ ರೂ. 70 ಲಕ್ಷ, ಹೊಸ ಬಾವಿ ತೋಡುವುದಕ್ಕಾಗಿ ರೂ. 130 ಲಕ್ಷ ಒದಗಿಸಲಾಗಿದೆ.

ಆಹಾರದ ಕೊರತೆಯಂತೆ ಮನೆಗಳ ಅಭಾವವೂ ಒಂದು ದೊಡ್ಡ ಸಮಸ್ಯೆಯಾಗಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪರಿಸ್ಥಿತಿಯು ತೀರಾ ಕಠಿಣವಾಗಿದೆ. ಯುದ್ಧದ ಪರಿಣಾಮವಾಗಿ ಹೊಸ ಮನೆಗಳು ಕಟ್ಟಲ್ಪಡದೆ ಜನರಿಗೆ ಬೇಕಷ್ಟು ಮನೆಗಳೇ ಇಲ್ಲದಾಯಿತು. ಬಡವರು ವಾಸಿಸುತ್ತಿರುವ ಮನೆಗಳಲ್ಲಿ ಹೆಚ್ಚಿನವು ಮನುಷ್ಯವಾಸಕ್ಕೆ ಯೋಗ್ಯವಾಗಿಲ್ಲ. ಒಂದು ಕುಟುಂಬಕ್ಕೆ ಸಾಕಾಗುವಷ್ಟು ಸ್ಥಳವುಳ್ಳ ಮನೆಗಳಲ್ಲಿ ಅನೇಕ ಕುಟುಂಬಗಳು ವಾಸಿಸಬೇಕಾಗಿದೆ. ಹೀಗೆ ಜನರು ಒತ್ತೊತ್ತಾಗಿ ವಾಸಮಾಡುವುದರಿಂದ ಆರೋಗ್ಯಕ್ಕೆ ಹೆಚ್ಚಿನ ಹಾನಿಯಾಗುತ್ತಿದೆ. ಇದಕ್ಕಾಗಿ ಮದರಾಸು ಸರಕಾರವು 1947ರಲ್ಲಿ ಪಟ್ಟಣಗಳಲ್ಲಿ ಮನೆಕಟ್ಟುವ ಸಂಘಗಳನ್ನು ಏರ್ಪಡಿಸುವ ಕಾರ್ಯಕ್ಕೆ ಕೈಹಾಕಿತು. ಈಗಾಗಲೇ ಸ್ಥಾಪಿತವಾಗಿದ್ದ 130 ಸಂಘಗಳಲ್ಲದೆ 92 ಸಹಕಾರಿ ಗೃಹನಿರ್ಮಾಣ ಸಂಘಗಳನ್ನು ಸ್ಥಾಪಿಸಲಾಯಿತು. ಶೇಕಡಾ 3½%ರ ದರದ ಬಡ್ಡಿಯಲ್ಲಿ 20 ವರುಷಗಳಲ್ಲಿ ಹಿಂದೆಕೊಡಬೇಕಾದ ಶರತ್ತಿನ ಮೇರೆಗೆ ಸರಕಾರವು ಸಾಲಕೊಟ್ಟು ಈ ಸಂಘಗಳಿಗೆ ಸಹಾಯ ಮಾಡುತ್ತಿದೆ. ಇದಕ್ಕಾಗಿ 1949-50ರ ಆಯವ್ಯಯ ಪಟ್ಟಿಯಲ್ಲಿ ಒಂದುಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಲಾಗಿದೆ. ಮನೆಕಟ್ಟಲು ಬೇಕಾದ ಕಬ್ಬಿಣ, ಉಕ್ಕು, ಸಿಮೆಂಟ್, ಮರ ಇವನ್ನು ನಿಯಂತ್ರಿತವಾದ ಬೆಲೆಗೆ ಸಿಗುವಂತೆ ಮಾಡಲಾಗುತ್ತಿದೆ.

ಪ್ಲೇಗ್, ವಾಂತಿಭೇದಿ, ಸಿಡುಬು ಮೊದಲಾದ ಸಾಂಕ್ರಾಮಿಕ ರೋಗಗಳ ಹಾವಳಿಯನ್ನು ಹತೋಟಿಗೆ ತರುವುದರಲ್ಲೂ ಬಾರದಂತೆ ತಡೆಯುವುದರಲ್ಲೂ ಆರೋಗ್ಯ ಸಿಬಂದಿಯು ಎಂದಿನಂತೆ ಕೆಲಸಮಾಡುತ್ತಿದೆ. ಅಂಟುವ ರೋಗಗಳಲ್ಲಿ ಮಲೇರಿಯವು ಅತ್ಯಂತ ಹಾನಿಕರವಾದುದು. ಪ್ರತಿ ಜಿಲ್ಲೆಯಲ್ಲೂ ಇದರ ಹಾವಳಿ ಇದೆ. ಇದರ ದುಷ್ಟತನ ಅಡಗಿಸುವ ಉದ್ದೇಶದಿಂದ ಈಗ ಸುಮಾರು 26 ಮಲೇರಿಯಾ ನಿರೋಧಕ ಕೇಂದ್ರಗಳು ಪ್ರಾಂತದ ಬೇರೆಬೇರೆ ಕಡೆಗಳಲ್ಲಿ ಕೆಲಸಮಾಡುತ್ತಿವೆ. ಸೊಳ್ಳೆಗಳನ್ನು ನಾಶಮಾಡುವುದಕ್ಕಾಗಿ ಡಿ. ಡಿ. ಟಿ. ಯನ್ನು ಮನೆಗಳಿಗೆ ಸಿಂಪಡಿಸುವುದು ಹೆಚ್ಚಿನ ಪರಿಣಾಮಕಾರಿಯಾಗಿ ಕಂಡುಬಂದಿದೆ.

ಕ್ಷಯರೋಗವು ಇನ್ನೊಂದು ಭಯಂಕರ ವ್ಯಾಧಿಯಾಗಿ ಜನರನ್ನು ಪೀಡಿಸುತ್ತಿದೆ. ಇದನ್ನು ತಡೆಯದಿದ್ದರೆ ನಮ್ಮ ಜನಶಕ್ತಿಯೇ ಕುಂದಿಹೋಗುವುದರಲ್ಲಿ ಸಂಶಯವಿಲ್ಲ. ಕ್ಷಯರೋಗಿಗಳ ಚಿಕಿತ್ಸೆಗಾಗಿ ಆಸ್ಪತ್ರೆಗಳಲ್ಲೂ ಆರೋಗ್ಯ ಕೇಂದ್ರಗಳಲ್ಲೂ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಲಾಗುತ್ತಿದೆ. ಕ್ಷಯರೋಗಕ್ಕೆ ತುತ್ತಾಗುವವರಲ್ಲಿ ಹೆಚ್ಚಿನವರು ಮಕ್ಕಳು ಮತ್ತು ಸ್ತ್ರೀಯರು. ಅಂತೂ ಚಿಕ್ಕಂದಿನಲ್ಲೇ ಹೆಚ್ಚಾಗಿ ಅಂಟಿಕೊಳ್ಳುವ ವ್ಯಾಧಿ ಇದು. ಆದುದರಿಂದ ಮಕ್ಕಳನ್ನೂ ಯುವಕರನ್ನೂ ಈ ರೋಗಕ್ಕೆ ತುತ್ತಾಗದಂತೆ ಮಾಡಲು ಮದನಪಳ್ಳಿಯಲ್ಲೂ ಮದರಾಸು ನಗರದಲ್ಲೂ ಬಿ. ಸಿ. ಜಿ. ದ್ರಾವಣ ಹಾಕಲು ಪ್ರಾರಂಭವಾಗಿದೆ. ಇದರಿಂದ ಕ್ಷಯರೋಗದ ಹಾವಳಿಯು ನಿಲ್ಲಬಹುದೆಂದು ಆಶಿಸಲಾಗಿದೆ.

ನಮ್ಮ ಪ್ರಾಂತದಲ್ಲಿ ಹಬ್ಬಿರುವ ಮಹಾವ್ಯಾಧಿಗಳಲ್ಲಿ ಕುಷ್ಠ ರೋಗವು ಮತ್ತೊಂದು. ಕೆಲವು ಹಳ್ಳಿಗಳಲ್ಲಿ ಇದು ಅತ್ಯಂತ ಪ್ರಬಲವಾಗಿದೆ. ಇದರ ಪರಿಹಾರಕ್ಕಾಗಿ ಸರಕಾರವು ಹೆಚ್ಚಿನ ಆಸಕ್ತಿ ತೆಗೆದುಕೊಳ್ಳುತ್ತಿದೆ.

ರೋಗಗಳನ್ನು ನಿರ್ನಾಮಗೊಳಿಸಬೇಕಾದರೆ ವೈದ್ಯಕೀಯಪರಿಹಾರವೂ ಅತ್ಯಾವಶ್ಯಕ. ರೋಗಿಗಳನ್ನು ಚಿಕಿತ್ಸೆ ಮಾಡಲು ಸಾಕಷ್ಟು ಡಾಕ್ಟರರಿಲ್ಲ. ಆದುದರಿಂದ ವೈದ್ಯ ವಿದ್ಯಾಭ್ಯಾಸದ ಅಭಿವೃದ್ಧಿಯು ಅನಿವಾರ್ಯವಾದ ವಿಷಯವಾಗಿದೆ. ಆದುದರಿಂದ ಸರಕಾರವು ಮದರಾಸಿನ ಸ್ಟಾನ್ಲೀ ಮೆಡಿಕಲ್ ಕಾಲೇಜ್, ಇಂಡಿಯನ್ ಮೆಡಿಸಿನ್ ಕಾಲೇಜ್ ಮತ್ತು ವಾಲ್ತೆರ್ ಇವನ್ನೂ ವಿಶಾಖಪಟ್ಟಣದಲ್ಲಿರುವ ಆಂಧ್ರ ಮೆಡಿಕಲ್ ಕಾಲೇಜನ್ನೂ ವಿಸ್ತರಿಸಲಾಗುತ್ತಿದೆಯಲ್ಲದೆ ಸುಧಾರಿಸಲೂ ಯತ್ನಿಸಲಾಗುತ್ತದೆ. ಈ ವರ್ಷ 30 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ. ಬರುವ ವರ್ಷ ಇನ್ನೂ 53 ಕೇಂದ್ರಗಳನ್ನು ತೆರೆಯಲಾಗುವದು.

ನಮ್ಮ ಪ್ರಾಂತ್ಯದ ಕೆಲವು "ರೂರಲ್ ಡಿಸ್ಪೆನ್ಸರಿ"ಗಳು ಡಾಕ್ಟರರು ದೊರಕದೆ ಮುಚ್ಚಲ್ಪಟ್ಟಿವೆ. ಆದುದರಿಂದ ಇಂತಹ ಡಿಸ್‌ಪೆನ್ಸರಿಗಳಲ್ಲಿ ಕೆಲಸಮಾಡುವ ಡಾಕ್ಟರರಿಗೆ ಕೊಡಲ್ಪಡುವ ಧನಸಹಾಯವನ್ನು ಬರುವ ತಿಂಗಳಿಂದ ಹೆಚ್ಚಿಸಲಾಗುವುದು. ಔಷಧಗಳ ಪೂರೈಕೆಗೂ ಹೆಚ್ಚು ಹಣ ಕೊಡಲಾಗುವುದು. ಕೆಲವು ಸರಕಾರಿ ಆಸ್ಪತ್ರೆಗಳಲ್ಲಿ ರೋಗಿಗಳನ್ನು ಹೆಚ್ಚಾಗಿ ಸೇರಿಸಿಕೊಳ್ಳಲು ಹಾಸಿಗೆಗಳನ್ನು ಹೆಚ್ಚಿಸಲಾಗುವುದು. ಹೆಚ್ಚಿನ ಸಿಬಂದಿಯನ್ನೂ ನೇಮಿಸಲಾಗುವುದು. ಪ್ರತಿಯೊಂದು ಜಿಲ್ಲೆಯಲ್ಲೂ ತಾಲೂಕು ಆಸ್ಪತ್ರೆಗಳಲ್ಲಿ ಒಂದನ್ನು ಸುಧಾರಿಸಲು ಆಯವ್ಯಯ ಪಟ್ಟಿಯಲ್ಲಿ ಅನುಕೂಲತೆ ಕಲ್ಪಿಸಲಾಗಿದೆ. ಉತ್ತಮ ಕೆಲಸ ನಡೆಸುತ್ತಿರುವ ದೇಶೀಯ ವೈದ್ಯ ಸಂಸ್ಥೆಗಳಿಗೆ ಧನಸಹಾಯ ಕೊಡುವ ಅಭಿಪ್ರಾಯವೂ ಇದೆ.

ನಮ್ಮ ಪ್ರಾಂತದಲ್ಲಿ ಸಾರ್ವಜನಿಕರ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸುವುದು ಅತ್ಯಗತ್ಯದ ವಿಷಯವಾಗಿದೆ. ಈ ವರೆಗೆ ಲಕ್ಷಿಸಲ್ಪಡದ ಹಳ್ಳಿಗಳಿಗೆ ವೈದ್ಯಕೀಯ ಪರಿಹಾರ ಹಾಗೂ ಆರೋಗ್ಯ ಸೇವೆಗಳನ್ನು ವಿಸ್ತರಿಸುವುದು ಇನ್ನಷ್ಟು ಅವಶ್ಯವಾದುದೆಂದು ಬೇರೆ ಹೇಳಬೇಕಾಗಿಲ್ಲ. ಹಳ್ಳಿ ಹಳ್ಳಿಗಳಿಗೂ ವೈದ್ಯಕೀಯ ಪರಿಹಾರ ದೊರೆಯಬೇಕಿದ್ದರೆ ಅತಿ ವಿಸ್ತಾರವಾದ ಆಡಳಿತೆಯ ಕಾರ್ಯವು ಸಾಗಬೇಕಾಗಿದೆ. ಇದಕ್ಕಾಗಿ ಹೆಚ್ಚಿನ ಹಣವೂ ಬೇಕಾಗಿದೆ. ನಮ್ಮ ದೇಶದ ಒಟ್ಟು ಆದಾಯದಲ್ಲಿ ಶೇಕಡಾ 15 ರಷ್ಟಾದರೂ ವೈದ್ಯಕೀಯ ಹಾಗೂ ಆರೋಗ್ಯ ಸಂಬಂಧವಾದ ಕಾರ್ಯಕಲಾಪಗಳಿಗಾಗಿ ವೆಚ್ಚಮಾಡಬೇಕೆಂದು ಭೋರ್ ಕಮಿಟಿಯು ಶಿಫಾರಸು ಮಾಡಿದೆ. ಈಗ ನಾವು ನಮ್ಮ ಪ್ರಾಂತದಲ್ಲಿ ಶೇಕಡಾ 6 ರಷ್ಟು ಮಾತ್ರ ವೆಚ್ಚಮಾಡುತ್ತಿದ್ದೇವೆ. ನಾವು ನಮ್ಮ ಉತ್ಪತ್ತಿಯನ್ನು ಹೆಚ್ಚಿಸಿ, ಸರ್ವತೋಮುಖವಾದ ಆರೋಗ್ಯ ಸೇವೆಯನ್ನು ಕಲ್ಪಿಸಲು ಹೆಚ್ಚಿನ ಹಣ ವೆಚ್ಚಮಾಡಬೇಕಾಗಿದೆ. ಪರಿಣಾಮಕಾರಿಯಾದ ಆರೋಗ್ಯ ಸುಧಾರಣೆಯ ಕಾರ್ಯಕ್ರಮವು ಜನರ ಉತ್ಪಾದಕ ಶಕ್ತಿಯನ್ನು ಹೆಚ್ಚಿಸಿ ನಮ್ಮ ರಾಷ್ಟ್ರೀಯ ಆದಾಯದ ಮಟ್ಟವನ್ನು ಏರಿಸೀತು.

ಆರೋಗ್ಯ ಇಲಾಖೆಯೊಡನೆ ಜನತೆಯು ಸಹಕರಿಸುವುದು ಅತ್ಯಾವಶ್ಯಕವಾಗಿದೆ. ಶಾಲೆಗಳಲ್ಲಿ ಮಕ್ಕಳಿಗೆ ಆರೋಗ್ಯ ಶಿಕ್ಷಣ ದೊರಕಿದರೆ ಮಾತ್ರ ಸಾಲದು. ಪ್ರೌಢ ವಯಸ್ಕರಿಗೂ ಆರೋಗ್ಯ ಸಂಬಂಧ ಶಿಕ್ಷಣ ದೊರೆಯಲೇ ಬೇಕು. ಆರೋಗ್ಯ ಪ್ರಚಾರ ವಿಷಯದಲ್ಲಿ ಆಕಾಶವಾಣಿ, ಚಲಚ್ಚಿತ್ರವೇ ಮೊದಲಾದ ಎಲ್ಲಾ ಬಗೆಯ ಆಧುನಿಕ ರೀತಿಗಳನ್ನೂ ಉಪಯೋಗಿಸಬೇಕಾಗಿದೆ. ಜನರಲ್ಲಿ ಆರೋಗ್ಯವಂತರಾಗಿ ಜೀವಿಸಲು ಬೇಕಾದ ತಿಳುವಳಿಕೆಯನ್ನುಂಟುಮಾಡಿ, ಜನರು ಆರೋಗ್ಯಸೂತ್ರಕ್ಕೆ ಸರಿಯಾಗಿ ಜೀವಿಸುವಂತೆ ಮಾಡಬೇಕು. ಮಲಮೂತ್ರಗಳನ್ನು ಕಂಡಕಂಡಲ್ಲಿ ವಿಸರ್ಜಿಸಿ, ನೆಲಜಲಗಳನ್ನು ಕೊಳಕುಮಾಡದಂತೆಯೂ, ಆಹಾರಸಾಮಗ್ರಿಗಳನ್ನು ಬೇಕಿಮಾಡಿ ಕೆಡಿಸದಂತೆಯೂ ಎಚ್ಚರ ಹುಟ್ಟಿಸಬೇಕು. ತಿಂಡಿತಿನಸುಗಳನ್ನು ಧೂಳು ನೊಣಗಳಿಗೆ ತುತ್ತಾಗುವಂತೆ ಮಾಡುವುದು, ಸೊಳ್ಳೆಗಳು ಹುಟ್ಟುವ ಕೊಳೆನೀರಿನ ಹೊಂಡಗಳನ್ನು ತೆರೆದಿಡುವುದು ಇತ್ಯಾದಿಗಳನ್ನು ನಿಲ್ಲಿಸಲು ಯತ್ನಿಸಬೇಕು. ಉಪಾಧ್ಯಾಯರೂ ತಂದೆತಾಯಿಗಳೂ ತಮ್ಮ ಮಕ್ಕಳು ಶುಚಿಯಾಗಿರುವಂತೆ ಆದರ್ಶವ್ಯಕ್ತಿಗಳಾಗಬೇಕು. ಶಾಲಾ ಕಟ್ಟಡ, ಬಯಲು ಇತ್ಯಾದಿಗಳ ವಾತಾವರಣವನ್ನು ಶುಚಿಯಾಗಿರಿಸಬೇಕು. ಸಾರ್ವಜನಿಕರು ಸರಕಾರದೊಡನೆ ಸಹಕರಿಸಿದರೆ ಸರಕಾರದ ಪ್ರಯತ್ನಗಳೆಲ್ಲಾ ಫಲಕಾರಿಗಳಾಗಿ ಪ್ರಾಂತ್ಯದ ಆರೋಗ್ಯ ಪರಿಸ್ಥಿತಿಯು ಸುಧಾರಿಸುವುದರಲ್ಲಿ ಸಂದೇಹವಿಲ್ಲ.

(ಮದ್ರಾಸು ಬಾನುಲಿ)

ಉತ್ತಮ

ಉಪಾಹಾರ ಮಂದಿರ

ವೀರ ಭಾರತ ವಿಶ್ರಾಂತಿ ಗೃಹ

(ನ್ಯೂ ಯೂನಿಯನ್ ಮಿಲ್ಲಿನ ಎದುರು)

ಡಿಲಿಸ್ಲೆ ರೋಡು

ಬೆಂಗಳೂರು 13

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಆ ಔಷಧಿನ ಎರಡು ಬಾಟ್ಲಿಗಳು ಹೆಚ್ಚು ಕಡಿಮೆ 40 ದಿವಸಗಳಿಗೆ ಬರುವದು. ಕ್ರಯ ಕೇವಲ 4 ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ. ನಂ. 5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು. ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

1949–50ರಲ್ಲಿ ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂದು ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1-4-0 ಕಳುಹಿಸಿರಿ. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು ಲಾಭ ನಷ್ಟಗಳು, ಮದುವೆ, ಮುಂಜಿ, ಸಂತತಿ, ತೇಜಿ ಮಂದಿ, ಸಮಯಾದಿಗಳನ್ನು ಸೂಚಿಸುವೆವು. ಅಲ್ಲದೆ ದುಷ್ಟ ಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನು ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು ಟಪ್ಪಾಲು ವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,

Roj jyotshi

(N. R U-) Jullundur City.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

No M. 5618
LICENCE No. 31
...to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER:
Hon'ble Sri A. B. Shetty
Education Minister, Govt. of Madras

ನವಯುಗ

...ಗ್ರಾಮ'
"...ayuga"
...td.
...921
...ನೆ

ವಾರ್ಷಿಕ ಚಂದಾ:
5—4—0
6 ತಿಂಗಳಿಗೆ
3—0—0
ಬಿಡಿಪ್ರತಿಗೆ
0—2—0

...ರ್ಷ 29
36
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ವಿದ್ಯಾಮಂತ್ರಿ ಶ್ರೀ. ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು
Vol. 29
No. 36

...ಾಂಧಿಜೀ ಈಗೊಮ್ಮೆ ಬಂದು ನೋಡಿದರೆ-

...ವಾದಿ ಕಮ್ಯೂನಿಸ್ಟರಿಂದಾರಂ...ಸಮಾನಾಭಿಲಾಷಿ ಸಾಮ್ರಾಜ್ಯ...ಣಿಯ ವರೆಗಿನ ಎಲ್ಲರೂ ತನ್ನ... ಉಚ್ಚರಿಸುತ್ತಿರುವುದನ್ನೂ ತಂ...ರ್ಥ ಸಾಧನೆಗಾಗಿ ಅದನ್ನು ...ಗಿಸುತ್ತಿರುವುದನ್ನೂ ಕಂಡು, ...ಸರಿನ ಎಲ್ಲಾ ಕಶ್ಮಲಗಳೂ ಕಾ...ವೆ" ಎಂದು ಕೂಡಲೇ ಜಾಹೀ...ರಾರು.

...ಮತ್ತು ಪೋಲೀಸಿಲ್ಲದ ಶಾಂತಿ ...ಅಸುಖ, ಅತೃಪ್ತಿಯ ಛಾಯೆ ಇರದ ರಾಮರಾಜ್ಯ—ಸ್ಥಾಪನೆ ...ಗೋಸ್ಕರ ತಾನು ಗಳಿಸಿಕೊಟ್ಟ ರಾಷ್ಟ್ರದ ಹೆಚ್ಚಿನ ಉತ್ಪತ್ತಿ ಬಹುಭಾಗವನ್ನು ಸೈನ್ಯ, ...ರ್, ಅಸುಖ, ಅತೃಪ್ತಿಯೇ ವ್ಯಾ...ಪಿಸುವುದನ್ನು ಕಂಡ ಅವರ ಬಾ...ದ ಮತ್ತೊಮ್ಮೆ 'ಬ್ರಿಟಿಷ್ ರಾಜ್' ...ನಿಟ್ಟುಸಿರಿನೊಂದಿಗೆ ಹೊರ...

...ಶೀ ಭಂಡವಾಳಗಳ ಅನುಕೂಲತೆ ಸಾಕಾಗಲಾರದೆಂದು ವಿದೇಶೀ ಭಂಡವಾಳಗಳನ್ನೂ ಆಮಂತ್ರಿಸಿ ಯಾಂತ್ರಿಕೋದ್ಯಮಗಳನ್ನು ಅಭಿವೃದ್ಧಿ ಪಡಿಸಿ ತನ್ನ ಚರಕದ ಮಟ್ಟಿಗೆ 'ಚರಕಾ ಜಯಂತಿ'ಗಳನ್ನಷ್ಟೇ ಆಚರಿಸುತ್ತಿರುವ ತನ್ನ ದೇಶ ಬಂಧುಗಳ ಕಪಟ ನಿವಾರಣೆಗಾಗಿ ಮತ್ತೊಮ್ಮೆ 'ಅನಿಶ್ಚಿತಾವಧಿಯ ಅನಶನವ್ರತ' ಕೈಕೊಳ್ಳಬಹುದು.

ತಾನು ಕಲಿಸಿದ 'ಮಾಡುವೆ ಇಲ್ಲವೆ ಮಡಿಯುವೆ' ರಣಸೊಲ್ಲು ಈಗ ಬೇಕು ಬೇಕಾದವರ ಬಾಯಿಯಿಂದೆಲ್ಲಾ, ಸ್ವಾರ್ಥ ಸಾಧನೆ 'ಮಾಡುವೆ ಇಲ್ಲವೇ ಮಡಿಯುವೆ' ಎಂಬರ್ಥದಲ್ಲಿ ಉಪಯೋಗವಾಗುತ್ತಿರುವುದನ್ನು ಕಂಡು ಈ ಕುಚ್ಯಾಟಗಳನ್ನು "ಕಳೆಯುವೆ ಇಲ್ಲವೇ ಅಳಿಯುವೆ" ಎಂಬ ಹೊಸ ಚಳವಳವನ್ನೇ ಆರಂಭಿಸಿಯಾರು.

ತಾನು ಉಚ್ಚ ಗುರಿಸಿದ್ಧಿಗಾಗಿ, ಉತ್ತಮಾದರ್ಶ ಸಾಧನೆಗಾಗಿ ಕಲಿಸಿದ್ದ 'ಕಾಯಿದೇಭಂಗ ಸತ್ಯಾಗ್ರಹ' 'ಅನ್ನ ಸತ್ಯಾಗ್ರಹ'ಗಳು 'ಸಂಬಳಭತ್ತೆ ಸತ್ಯಾಗ್ರಹ' 'ಸಂಪಾದನಾ ಸತ್ಯಾಗ್ರಹ' 'ಉದ್ಯೋಗಾನ್ವೇಷಿ ಉಪವಾಸ' 'ಉಪದ್ರವಕಾರೀ ಉಪವಾಸ'ಗಳಾಗಿ ಮಾರ್ಪಟ್ಟಿರುವುದನ್ನು ಕಂಡು, ಈ ರೋಗನಿವಾರಣೆಗಾಗಿ 21 ದಿನಗಳ ಉಪವಾಸ ಕೈಕೊಂಡು ಆ ಅವಧಿಯಲ್ಲಿ "ಸತ್ಯಾಗ್ರಹ—ದುರಾಗ್ರಹ" ಎಂಬ ಗ್ರಂಥವನ್ನು ಸರ್ವರಿಗೂ ಅರ್ಥವಾಗುವ ಶೈಲಿಯಲ್ಲಿ ಬರೆದು ಧರ್ಮಾರ್ಥ ಪ್ರಕಟಿಸಿಯಾರು.

ಭಾರತದ ಅಧಿನಾಯಕರು ಕೂಡಾ ತಮ್ಮ ಪ್ರತಿಯೊಂದು ಭಾಷಣಾವಸರದಲ್ಲೂ ತನ್ನ ನಾಮೋಚ್ಚಾರ ಮಾಡುತ್ತಿರುವುದನ್ನೂ, ಭಾರತ ಸರಕಾರದ ಕುಲದೇವತೆ—ದಿಗ್ದರ್ಶಕ ಧ್ರುವತಾರೆ—ತಾನಾಗಿರುವುದನ್ನೂ, ಆದರೆ ತನ್ನ ತತ್ವಗಳಿಗೆ ಮಾತ್ರ ಧೃಢಲಕ್ಷ್ಯ ದೊರೆಯದೆ ಅವು ಅಡ್ಡಾಡುತ್ತಿರುವುದನ್ನೂ ಕಂಡು "ಎಲ್ಲರಿಗೂ ನಾನೇ ದೈವವಾದರೆ ನನ್ನ ತತ್ವಗಳಿಗೇಕೀ ದುರ್ದೈವ" ಎಂದು ಚಿಂತಿಸುತ್ತಾ ಆತ್ಮಶೋಧನೆಗಾಗಿ ವಾರದಲ್ಲೊಂದು ದಿನದ ಬದಲಿಗೆ ಐದು ದಿನಗಳ ಮೌನವ್ರತ ಮಾಡಬಹುದು.

ದೇಶದಲ್ಲಿ ಜಾತೀಯ ಗಲಭೆ ನಿಂತರೂ, ಎಲ್ಲರ ಹೃದಯದಲ್ಲೂ ಜಾತೀಯತೆಯು ಒಂದಲ್ಲೊಂದು ರೂಪದಲ್ಲಿ ನೆರೆಹೊರೆ ಬೆಳೆಯುತ್ತಿರುವುದನ್ನು ಕಂಡು ತನ್ನ ಜಾತೀಯ ಐಕ್ಯತಾ ಪ್ರಯತ್ನದ ಬದಲಿಗೆ 'ನಿರ್ಜಾತೀ ಚಳವಳ' ಹೂಡುವುದೇ ಗತಿಯೆಂದು ಅದನ್ನಾರಂಭಿಸಬಹುದು.

ಬ್ಲ್ಯಾಕ್ ಮಾರ್ಕೆಟ್ ಅಂಗಡಿ, ಅಡ್ಡಹಾದಿಗಳ ರಸ್ತೆ, ಬಡವರನ್ನು ಸುಲಿಯುವ ಭವನಗಳಲ್ಲೆಲ್ಲಾ ತನ್ನ ಹೆಸರಿನ ಬೋರ್ಡು ಮತ್ತು ತನ್ನ ಭಾವಚಿತ್ರಗಳು ಪುಷ್ಪದೀಪಾಲಂಕೃತವಾಗಿ ನೇತಾಡುತ್ತಿರುವುದನ್ನು ಕಂಡು, ತಾನು ಹುಟ್ಟಲೇ ಬಾರದಿತ್ತು ಎಂಬಷ್ಟು ತಾಪದಿಂದ, ಗಾಂಧಿ-ಬೀದಿಗಳೇನೇ ಹೃದಯವೇದನೆಯನುಭವಿಸಿಯಾರು.

ಈ ರೀತಿ ತನ್ನೆಲ್ಲಾ ಕಾರ್ಯ—ಸಂದೇಶಗಳೂ ತಿರುಗಾ ಮುರುಗಾ ಆಗಿರುವ ಈ ಕ್ಷೇತ್ರವೇ ತನ್ನದಲ್ಲವಾದ್ದರಿಂದ ತಾನು ಮತ್ತೊಮ್ಮೆ ಬಂದದ್ದೇ ತಪ್ಪು ಎನ್ನುತ್ತಾ ಮತ್ತೊಮ್ಮೆ ಗೋಡ್ಸೆಯನ್ನು ಕಾಯದೇನೇ ಬಂದಂತೆ ಹೊರಟುಹೋಗಬಹುದು!

ತಾ 1—4—49ರಿಂದ ಹೊರಟಿದೆ!

ಸುಹಾಸಿನಿ

ಸಂಪಾದಿಕೆಯರು:

ಕೆ. ವಾರಿಜಾದೇವಿ, ಬಿ. ಮೋಹಿನಿದೇವಿ.

ಸ್ತ್ರೀಯರಿಂದ ಸ್ತ್ರೀಯರಿಗಾಗಿ ಹೊರಡುವ ಕರ್ನಾಟಕದ ಪ್ರಥಮ ಮತ್ತು ಏಕಮಾತ್ರ ಮಹಿಳಾ ಮಾಸಪತ್ರಿಕೆ. ಸ್ವಲ್ಪವಾದರೂ ಓದುಬರಹ ತಿಳಿದ ಸ್ತ್ರೀಯರಿಗೆ, ಮನೆಯಲ್ಲಿ ಕುಳಿತಲ್ಲೆ ಇದು ಸ್ವಯಂ ಶಿಕ್ಷಕನಂತೆ, ಎಲ್ಲತರದ ತಿಳಿವನ್ನು ಕೊಡುವುದು.

೧. ಕಸೂತಿ ಕೆಲಸ ಮಾಡುವವರಿಗೆ, ಪ್ರತಿಯೊಂದು ಸಂಚಿಕೆಯಲ್ಲಿ ಹೊಸರೀತಿಯ ಚಿತ್ರಗಳು (ಎಂಬ್ರಾಯ್ಡರಿ ಡಿಸಾಯ್ನ್) ಬರುವುವು ೨. ಪ್ರತಿಯೊಂದು ಸಂಚಿಕೆಯಲ್ಲಿ ಕತೆ. ೩. ಭೂಲೋಕದ ನಾನಾ ಭಾಗಗಳಲ್ಲಿರುವ ಸ್ತ್ರೀಯರ ನಡೆ-ನುಡಿಗಳು, ೪. ಪ್ರಸಿದ್ಧ ಪಟ್ಟಣಗಳ ಪರಿಚಯ, ಯಾತ್ರಾಕ್ಷೇತ್ರಗಳ ವಿವರ, ೫. ಸ್ತ್ರೀಯರ ದೇಹಾರೋಗ್ಯ, ಅವರ ನಾನಾ ಸಮಸ್ಯೆಗಳ ಚರ್ಚೆ, ೬. ಮಕ್ಕಳ ಶಿಕ್ಷಣ, ಮಕ್ಕಳ ಕಾಯಿಲೆಗಳಿಗೆ ಗೃಹವೈದ್ಯ, ಸ್ತ್ರೀಯರ ನಾನಾ ತರಹ ಕಳಗಳಿಗೆ ಉಪದೇಶ-ಇವೆಲ್ಲ ಪ್ರಕಟವಾಗುವುವು. ೭ ಬಗೆ ಬಗೆಯ ತಿಂಡಿ, ಪದಾರ್ಥಗಳನ್ನು ತಯಾರಿಸುವ ವಿಧಾನಗಳು ಕೊಡಲ್ಪಡುವುವು. ೮ ಪ್ರಸಿದ್ಧ ಸ್ತ್ರೀಯರ ಚರಿತ್ರ, ಪ್ರಸಿದ್ಧ ಕವಿಗಳ ಮತ್ತು ಲೇಖಕರ ಪರಿಚಯ, ೯ ಭೂಲೋಕದ ಮತ್ತು ಆಕಾಶದೊಳಗಿನ ನಾನಾ ವೈಚಿತ್ರ್ಯಗಳು ವಿವರಿಸಲ್ಪಡುವುವು ೧೦ ಪ್ರತಿ ಸಂಚಿಕೆಯಲ್ಲಿಯೂ ಚಿತ್ರಬಂಧ ಒಗಟುಗಳು ಪ್ರಕಟವಾಗುವುವು. (ಪ್ರವೇಶಧನವಿಲ್ಲದೆ ಬಹುಮಾನಗಳು ಕೊಡಲ್ಪಡುವುವು)

ಇನ್ನೂ ಇಲ್ಲಿ ವಿವರಿಸಲು ಸ್ಥಳಸಾಲದ ನೂರಾರು, ಸಾವಿರಾರು ವಿಷಯಗಳು ಬರುವುವು, ಪ್ರತಿ ಸಂಚಿಕೆಯಲ್ಲೂ ಹಿಕ್ಕೆ ಕಡಿಮೆಯಾಗದ ಲೇಖನಗಳು! ಅನೇಕ ಚಿತ್ರಗಳು. ಬಿಡಿ ಸಂಚಿಕೆಗೆ ಎರಡಾಣೆ. ಒಂದು ವರ್ಷಕ್ಕೆ ಅಂಚೆ ವೆಚ್ಚಸೇರಿ ರೂ 6-12-0 ಮಾತ್ರ. ಪ್ರತಿ ಶುಕ್ರವಾರ ಹೊರಡುತ್ತದೆ! ನಿಮ್ಮ ಚಂದಾ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳಿಸಿಕೊಡಿರಿ

ಸುಹಾಸಿನಿ ಪಬ್ಲಿಕೇಶನ್ಸ್, ಲಿಮಿಟೆಡ್, ಮಿಶ್ಯನ್ ಹೈಸ್ಕೂಲ್, ಮಂಗಳೂರು

...ತೃಪ್ತಿ ನಮ್ಮ ಗೌರವ
ಶ್ರೇಷ್ಠ
...ಭಾರತ ಚಾ ಮತ್ತು ಕಾಫಿ

...RABHAT
...& COFFEE (INDIA) Ltd.
...NOOR (Nilgiris)

...ಗೂಡಿಸಲಿಕ್ಕೂ ಪ್ರಾತಿನಿಧ್ಯ ವಹಿಸಲಿಕ್ಕೂ

ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:- ಧಾರವಾಡ,

THE UNITED KARNATAKA INSURANCE CMPANY, LIMITED.

ಭಾರತವು ಸರ್ವಸ್ವತಂತ್ರ ಜನತಾ ರಾಜ್ಯ

ಸ್ವತಂತ್ರಭಾರತವು 'ರಿಪಬ್ಲಿಕ್' ಆದ ಮೇಲೂ ರಾಷ್ಟ್ರಗಳ ಕಾಮನ್‌ವೆಲ್ತಿನ ಸಂಪೂರ್ಣ ಹಾಗೂ ಸಮಾನ ಸದಸ್ಯನಾಗಿ ಉಳಿಯುವದೆಂಬ ನಿರ್ಣಯವು ಲಂಡನಿನಲ್ಲಿ ಕಳೆದವಾರ ಸೇರಿದ್ದ ಕಾಮನ್‌ವೆಲ್ತ್ ಪ್ರಧಾನಮಂತ್ರಿಗಳ ಸಮ್ಮೇಳನದಲ್ಲಾಗಿದೆ. ಸ್ವತಂತ್ರಭಾರತವು ಅಪೇಕ್ಷಿಸಿದ್ದ ಸ್ಥಾನವಿದೇ; ಲಂಡನಿಗಾಗಿ ವಿಮಾನಹತ್ತುವ ಮೊದಲು ಪಂಡಿತ ನೆಹರುಗಳು ಬೊಂಬಾಯಿಯಲ್ಲಾಡಿದ್ದ ಮಾತುಗಳ ಸಾರವೇ ಇದು.

ಈ ಬಾರಿಯ ಕಾಮನ್‌ವೆಲ್ತ್ ಪ್ರಧಾನೀ ಸಮ್ಮೇಲನವು ಲಂಡನಿನಲ್ಲಿ ಕರೆಯಲ್ಪಟ್ಟದ್ದುದು 'ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಸದಸ್ಯನಾಗಿ ಉಳಿಯುವ" ವಿಧಾನಶೋಧನೆಗಾಗಿಯೇ.

ಒಂದು ಸಾರ್ವಭೌಮಾಧಿಕಾರೀ ರಿಪಬ್ಲಿಕ್ ರಾಷ್ಟ್ರವು ಬ್ರಿಟಿಷ್ ಸಿಂಹಾಸನದ ಕಡೆಗೆ ರಾಜನಿಷ್ಠೆ ಕಟ್ಟಿಕೊಂಡಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ಕೂಟದೊಳಗೆ ಸೇರಿಕೊಂಡಿರುವುದು ಹೇಗೆ ಎಂಬ ಪ್ರಶ್ನೆ ಮುಂದೆ ಬಂದಿದ್ದುದು ಮಾತ್ರವಲ್ಲ-ಇಂತಹ ಜೋಡಣೆ ಅವ್ಯವಹಾರ್ಯ, ಅಸಾಧ್ಯವೆಂಬ ಮನೋಭಾವಗಳೂ ಪ್ರಕಟವಾಗಿದ್ದುವು. ಲಂಡನಿನಲ್ಲಿ ಈ ಕುರಿತು ನಡೆದ ಮಾತುಕತೆಗಳ ವೇಳೆಯಲ್ಲೂ ಹಲವು ಆಕ್ಷೇಪಾತಂಕಗಳು ಬಂದಿದ್ದುವೆಂದು ತಿಳಿದು ಬರುತ್ತದೆ. ಆದರೆ ಕಾಮನ್‌ವೆಲ್ತ್-ಭಾರತಗಳೊಳಗಿನ ಬೆಸುಗೆ ಬಿಟ್ಟುಹೋಗ ಬಾರದೆಂಬ ಆತುರವು ಉದಮ್ಯವಿದ್ದುದರಿಂದ ಕಾಮನ್‌ವೆಲ್ತ್ ಪ್ರಧಾನಿಗಳೊಳಗೆ ಐದು ದಿನಗಳ ವರೆಗೆ ನಡೆದ ಚರ್ಚೆಗಳು ಸತ್ಫಲಕೊಟ್ಟುವು. ಈ ತನಕವಿಲ್ಲದಿದ್ದ, ಸರ್ವರಿಗೂ ಸಮಾಧಾನಕರವಾದ, ಒಂದು ಸಂಬಂಧ ಜೋಡಣೆಯಾಯಿತು.

ಭಾವೀ ಸಂಬಂಧ ಶರ್ತಗಳು

ಲಂಡನ್ ನಿರ್ಧಾರದ ತಾತ್ಪರ್ಯ ಹೀಗಿದೆ:-- ಭಾರತವು 'ರಿಪಬ್ಲಿಕ್" ಆಗಿ ಮಾರ್ಪಟ್ಟ ಮೇಲೂ ರಾಷ್ಟ್ರಗಳ ಸಮಾನ ಸೌಭಾಗ್ಯಕೂಟ (ಕಾಮನ್‌ವೆಲ್ತ್ ಒಫ್ ನೇಶನ್ಸ್)ದಲ್ಲಿ ಸಂಪೂರ್ಣತೆಯ ಹಾಗೂ ಸಮಾನತೆಯ ಸದಸ್ಯನಾಗಿ ನಿಲ್ಲುವದು.

ಸದ್ಯ ಕಾಮನ್‌ವೆಲ್ತಿನ ಶಿರಸ್ಸಾಗಿರುವ ಬ್ರಿಟಿಷ್ ರಾಜರು ಇನ್ನು ಮುಂದೆ ಈ 'ಸದಸ್ಯರಾಷ್ಟ್ರಗಳ ಸ್ವತಂತ್ರ ಸಹಕಾರತ್ವದ ಸಂಕೇತ'ವಾಗಿ ಮಾತ್ರ ಇರುವರು.

ಬೇರೆ ಕಾಮನ್‌ವೆಲ್ತ್ ರಾಷ್ಟ್ರಗಳೆಲ್ಲವೂ ಪದ್ಧತಿ ಪ್ರಕಾರ ಬ್ರಿಟಿಷ್ ಸಿಂಹಾಸನದ ಕಡೆಗೆ ರಾಜನಿಷ್ಠೆ ಕಟ್ಟಿಕೊಂಡಿರುವಾಗ ಆ ನಿಷ್ಠೆಯನ್ನು ಬಿಟ್ಟುಕೊಟ್ಟ ಸ್ವತಂತ್ರ ಭಾರತ ಕೂಡಾ ಈ ಕೂಟದಲ್ಲಿ ಸರಿಸಮಾನ ಪಾಲುಗಾರನಾಗಿರುವುದು. ಭಾರತವು ಬ್ರಿಟಿಷ್ ರಾಜರನ್ನು ಈ ಕೂಟ ಸಂಕೇತವಾಗಿ ಮಾತ್ರಗಣಿಸುತ್ತದಲ್ಲದೆ ಈ ವರೆಗಿನಂತೆ 'ಭಾರತದ ರಾಜ'ನಾಗಿ ಇನ್ನು ಗಣಿಸುವದಿಲ್ಲ.

ಭಾರತದ ಭಾವೀ ಚುನಾಯಿತ-ಅಧ್ಯಕ್ಷನು ಬ್ರಿಟಿಷ್ ರಾಜರ ಪ್ರತಿನಿಧಿಯಾಗಿರದೆ ಹಿಂದೀ ಜನತೆಯ ಸಾರ್ವಭೌಮಾಧಿಕಾರದ ದ್ಯೋತಕನಾಗಿದ್ದು, ಜನತಾ ಸಾರ್ವಭೌಮಾಧಿಕಾರವನ್ನೇ ಸೂಚಿಸುವವನಾಗಿರುವನು. ರಾಯಭಾರಿಗಳ ನೇಮಕ, ಅಂತರರಾಷ್ಟ್ರೀಯ ಕರಾರು ಶರ್ತಗಳಿಗೆ ಸಹಿ, ಇತ್ಯಾದಿಗಳೆಲ್ಲವೂ ಇನ್ನುಮುಂದೆ ಭಾರತದ ಅಧ್ಯಕ್ಷನ ಹೆಸರಿನಿಂದಲೇ ನಡೆಯುವವಲ್ಲದೆ ಈವರೆಗಿನಂತೆ ಬ್ರಿಟಿಷ್ ರಾಜರ ಹೆಸರಿನಿಂದಲ್ಲ.



ಇವರಿನ್ನು ಭಾರತದ 'ರಾಜ' ಅಲ್ಲ, ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರಗಳ ಸ್ವತಂತ್ರ ಸಹಕಾರದ ಸಂಕೇತ ಮಾತ್ರ.

ಇದರ ಹಿನ್ನೆಲೆ—

ಭಾರತದ ಘಟನಾಸಮಿತಿಯು, ಸ್ವತಂತ್ರಭಾರತದ ರಾಜ್ಯಾಂಗರಚನೆಯ ಪೀಠಿಕಾವಿಭಾಗದಲ್ಲಿ 'ಸ್ವತಂತ್ರ ಸಾರ್ವಭೌಮಾಧಿಕಾರೀ ರಿಪಬ್ಲಿಕ್" ಆಗುವುದೇ ತನ್ನ ಸ್ಥಾನವೆಂದು ಸ್ಪಷ್ಟಪಡಿಸಿಕೊಂಡಿದೆ. ಭಾರತದ ಇಂದಿನ ಸ್ಥಾನವು ಈ ನಿರ್ಧಾರದಂತಿಲ್ಲ. 1947ನೆ ಅಗೋಸು 15ರಲ್ಲಿ ಭಾರತಕ್ಕೆ ದೊರೆತಿರುವ ಸ್ವಾತಂತ್ರ್ಯವೆಂಬುದು ಪ್ರಶ್ನಾತೀತವಾದುದು; ಸಂಪೂರ್ಣವಾದುದು. ತನಗೆ ಇಚ್ಛೆತೋರಿದಾಗ ಬ್ರಿಟನು ಮತ್ತು ಕಾಮನ್‌ವೆಲ್ತಿನ ಸಂಬಂಧವನ್ನು ಕಡಿದುಕೊಳ್ಳುವ ಸ್ವಾತಂತ್ರ್ಯವು ಅದಕ್ಕಾಮೂಲಕ ಕೊಡಲ್ಪಟ್ಟಿದ್ದಿತು, ಆದರೆ ವಸ್ತುತಃ ಜಾರಿಗೆ ಬಂದಿರುವದು ವಸಾಹತು ಸ್ವರಾಜ್ಯ (ಡೊಮಿನಿಯನ್ ಸ್ಟೇಟಸ್) ಮಾತ್ರ. ಭಾರತದ ಜನತಾ ಜೊತೆಗಾರ ಮಂತ್ರಿಮಂಡಲದ ಅಭಿಮತಕ್ಕನುಸಾರವಾಗಿಯೇ ಗವರ್ನರ್ ಜನರಲ್, ಮತ್ತು ಗವರ್ನರುಗಳೇ ಮುಂತಾದವರ ನೇಮಕಗಳಾಗುವದಾದರೂ, ಅದೀವರೆಗೆ ನಡೆದಿರುವದು ಬ್ರಿಟಿಷ್‌ರಾಜರ ಹೆಸರಿನಿಂದಲೇ. ವಸಾಹತು ಸ್ವರಾಜ್ಯಾಧಿಕಾರವಿರುವ ಕಾಮನ್‌ವೆಲ್ತಿನ ಎಲ್ಲಾ ರಾಷ್ಟ್ರಗಳಲ್ಲೂ ಇದೇ ರೀತಿ. ಆದರೆ ಭಾರತವು ತಾನು ರಿಪಬ್ಲಿಕ್ ಆಗುವೆನೆಂದು ನಿರ್ಧರಿಸಿಕೊಂಡಿದೆ; ರಿಪಬ್ಲಿಕ್ ರಾಷ್ಟ್ರದಲ್ಲಿ ಜನತೆಯದೇ ಸಾರ್ವಭೌಮಾಧಿಕಾರ ಹೊರತು, ನಾಮ ಮಾತ್ರಕ್ಕಾದರೂ ಅದಕ್ಕೊಂದು ಮೇಲಧಿಕಾರವಿರಕೂಡದು. ಈಗಿನ ನಿರೀಕ್ಷೆಯಂತೆ ರಿಪಬ್ಲಿಕ್ ಭಾರತದ ನವರಾಜ್ಯಾಂಗಶಾಸನವು ಬರುವ ಆಗೋಸ್ತು 15ರೊಳಗೆ ಘಟನಾಸಮಿತಿಯಲ್ಲಿ ಪೂರ್ಣಗೊಂಡು ಅಸ್ತಿತ್ವಕ್ಕೆ ಬರಬಹುದು ಆಗ ಬ್ರಿಟಿಷ್ ರಾಜನಿಷ್ಠೆ ವಹಿಸಿರುವ ಕಾಮನ್‌ವೆಲ್ತ್ ರಾಷ್ಟ್ರಗಳಂತೆ ಭಾರತವು ಸಂಪೂರ್ಣ ಭಿನ್ನರಾಷ್ಟ್ರವೆನ್ನಿಸಿ, ಆ ಪಂಕ್ತಿಯಿಂದ ಇದು ಪ್ರತ್ಯೇಕವಾಗುವದು. ಹೀಗಾದಲ್ಲಿ ಭಾರತಕ್ಕೆ ಕಾಮನ್‌ವೆಲ್ತ್ ಸಂಬಂಧವು ತಪ್ಪಿಹೋದಂತೆ ಆ ಮೂಲಕ ದೊರೆಯುತ್ತಿರುವ ಸೌಕರ್ಯಗಳೂ ತಪ್ಪಿಹೋಗುವವು. ಕಾಮನ್‌ವೆಲ್ತಿನಿಂದ ಭಾರತದಂತಹ ಪ್ರಬಲ ರಾಷ್ಟ್ರವು ಹೊರಗಾದರೆ ಅಷ್ಟು ಅದು ದುರ್ಬಲಗೊಳ್ಳುವದು. ಇಂತಹ ನಷ್ಟವೊದಗದಂತೆ ಮಾಡುವದಕ್ಕಾಗಿಯೇ ಈ ಬಾರಿ ಎಲ್ಲಾ ಕಾಮನ್‌ವೆಲ್ತ್ ದೇಶಗಳ ಪ್ರಧಾನಿಗಳ ಸಮ್ಮೇಳನವನ್ನು ಲಂಡನಿನಲ್ಲಿ ಕೂಡಿಸಲಾಗಿತ್ತು. ಆ ಸಂಬಂಧವಲ್ಲೊಂದು ತೃಪ್ತಿಕರ ಒಡಂಬಡಿಕೆಯೂ ಹುಟ್ಟಿತು.. ಭಾರತ, ಪಾಕಿಸ್ತಾನ್, ಸಿಲೋನಗಳು ಸ್ವತಂತ್ರವಾದ ನಂತರ ಪ್ರಥಮವಾಗಿ ಕಳೆದವರುಷ ಒಕ್ಟೋಬರಿನಲ್ಲಿ ಈ ವಸಾಹತು ಪ್ರಧಾನಿಗಳ ಸಮ್ಮೇಳನ ಜರಗಿದ್ದಿತು. ಆ ವರೆಗೂ 'ಬ್ರಿಟಿಷ್ ಕಾಮನ್‌ವೆಲ್ತ್"ಎಂದು ಕರೆಯಲ್ಪಡುತಿದ್ದ ಈ ಗುಂಪನ್ನು ಬರೇ 'ಕಾಮನ್‌ವೆಲ್ತ್'ಎಂದು ಕರೆಯಬೇಕೆಂಬ ಅಭಿಮತವು ಆ ಸಮ್ಮೇಳನದಲ್ಲಿಯೇ ಮಾನ್ಯತೆ ಪಡೆದಿದ್ದು, ಈ ಬದಲಾವಣೆಯ ಕುರಿತು ದಾಖಲೆಯಲ್ಲೇನೂ ಮಾಡದಿದ್ದರೂ, ಲಂಡನಿನ ಎಲ್ಲಾ ಅಧಿಕೃತ ಪ್ರಕಟಣೆಗಳಲ್ಲೂ 'ಬ್ರಿಟಿಷ್'ಪದವು ಉಪಯೋಗಿಸಲ್ಪಡದೆ ಕೇವಲ 'ಕಾಮನ್‌ವೆಲ್ತ್'ನ್ನು ಮಾತ್ರ ಉಲ್ಲೇಖಿಸಲಾಗುತ್ತಿದೆ. ಈ ಸಲ, ಮುಖ್ಯವಾಗಿ ರಿಪಬ್ಲಿಕ್ ಭಾರತ ಮತ್ತು ಈ ಕಾಮನ್‌ವೆಲ್ತ್‌ಗಳೊಳಗಿನ ಸಂಬಂಧ ನಿರ್ಣಯಿಸುವದಕ್ಕಾಗಿಯೇ ಪ್ರಧಾನಿಗಳ ಕೂಟ ಸೇರಿದ್ದರೂ ಅದಕ್ಕನುಗುಣವಾಗಿ ಅಲ್ಲಿ ಕಾಮನ್‌ವೆಲ್ತಿನ ಸ್ಥಾನವೂ ಸ್ಪಷ್ಟೀಕರಣ ಪಡೆದಿದೆ.

ಬಂದ ಬದಲಾವಣೆ-

ಕಾರ್ಯಕ್ಷೇತ್ರದ ಮಟ್ಟಿಗೆ ಪೂರ್ಣ ಸ್ವತಂತ್ರಾಧಿಕಾರವುಳ್ಳ ಇಂದಿನ ಸ್ವರಾಜ್ಯಾಡಳಿತೆಯ ಭಾರತದ ಸ್ಥಾನಮಾನಗಳಿಗಿಂತ ಭಿನ್ನವಾದ ಒಂದು ನೆಲೆಗೆ ಮುಂದಿನ ರಿಪಬ್ಲಿಕ್ ಭಾರತವನ್ನು ಸೇರಿಸಬಹುದಂತಹ ಮಾರ್ಪಾಟವಾವುದೂ ಈ ಕಾ

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.

(Established 1934)

Chairman. Mr. M CT M. Chidambaram Chettyar

A Policy in this progressive Life Office is a good investment, its Agency is a valuable business connection.

MANGALORE BRANCH.
K. S. R. Road,
Hampankatta, Mangalore.

HEAD OFFICE:
United India Life Bldg.,
P. B No. 142, MADRAS.

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೬ ತಿಂಗಳು ನೂರಕ್ಕೆ ವರ್ಷಕ್ಕೆ ೨।

೭ರಿಂದ ೧೨ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವಟೆ ಗುಡ್ಡೆ, ಮಂಗಳೂರು.

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

-ಆಗ ಕೂಡ ಕಾಮನ್‌ವೆಲ್ತಿನ ಪೂರ್ಣ ಸದಸ್ಯ

...ನಡೆದಿಲ್ಲವೆನ್ನಬಹುದು. ಬ್ರಿಟಿಷ್ ರಾಜನಿಷ್ಠೆಯನ್ನು ಕಳಚಿಕೊಳ್ಳುವ ನಿರ್ಧಾರ ಮಾಡುವ ಅಧಿಕಾರವು ಭಾರತಕ್ಕೆ ಇಂದೇ ಇದೆ, ಎಂಬುದು ಲಂಡನ್ ನಿರ್ಧಾರದಿಂದ ಸ್ಪಷ್ಟ; ಈ ಅಧಿಕಾರವು 1947ನೇ ಆಗೋಸ್ತು 15ರಲ್ಲೇ ಭಾರತಕ್ಕೆ ಬಂದಿದ್ದುದರಿಂದಲೇ. ಅದು ತಾನು ರಿಪಬ್ಲಿಕ್ ಎಂದು ನಿರ್ಧರಿಸಿಕೊಳ್ಳುವಂತಾಯಿತು. ಅದು ರಿಪಬ್ಲಿಕ್ ಆದರೂ ಕಾಮನ್‌ವೆಲ್ತಿನೊಳಗೆ ಪೂರ್ಣ ಸಹಭಾಗಿತ್ವ ಪಡೆದು ನಿಲ್ಲುವಂತೆ ಭಾರತವನ್ನು ಒಡಂಬಡಿಸುವ ಕಾರ್ಯ ಲಂಡನಿನಲ್ಲಾಯಿತು. ಈಗ ಕೂಡಾ ಸ್ವತಂತ್ರ ಭಾರತದ ಸ್ವಂತ ಅಥವಾ ಹೊರದೇಶ ಸಂಬಂಧ ಕಾರ್ಯಗಳ ಪೂರ್ಣಾಧಿಕಾರವು ಭಾರತ ಸರಕಾರದ್ದೇ. ಹೀಗಾಗಿ ಲಂಡನ್ ನಿರ್ಧಾರವು ಅಧಿಕಾರರಂಗದಲ್ಲಾವ ಬದಲಾವಣೆಯನ್ನೂ ತಂದಿಲ್ಲ; ಆದರೆ ಭಾವನಾರಂಗದಲ್ಲಿ— ಗೌರವಕ್ಷೇತ್ರದಲ್ಲಿ— ನಿಜಕ್ಕೂ ಮಹತ್ವದ ಮಾರ್ಪಾಟವಿದು. ಸ್ವರಾಜ್ಯ ಪೂರ್ವದಲ್ಲಿ ಬ್ರಿಟಿಷ್ ಮಂತ್ರಿಮಂಡಲದ ಸಲಹೆಯನ್ನನುಸರಿಸಿ ಬ್ರಿಟಿಷ್ ಚಕ್ರವರ್ತಿಗಳು ಭಾರತದ ಗವರ್ನರ್ ಜನರಲ್ ಗವರ್ನರರೇ ಮೊದಲಾದವರನ್ನು ನೇಮಿಸುತ್ತಿದ್ದರು; ಸ್ವರಾಜ್ಯಾನಂತರ ಭಾರತ ಮಂತ್ರಿಮಂಡಲದ ಸಲಹೆಯಂತೆ ಆ ನೇಮಕಗಳನ್ನು ಮಾಡುತ್ತಾ ಬಂದಿದ್ದಾರೆ; ಅಂತೂ ಕಾರ್ಯತಃ ಮಾಡತಕ್ಕವರೇನೋ ಬದಲಾಗಿದ್ದಾರಾದರೂ, ಆ ನೇಮಕಗಳಾಗುತ್ತಿರುವುದು ಅಂದೂ ಇಂದೂ ಬ್ರಿಟಿಷ್ ರಾಜರ ಹೆಸರಿನಿಂದಲೇ. ಭಾರತವು ರಿಪಬ್ಲಿಕ್ ಆದೊಡನೆಯೇ ಭಾರತ ಸರಕಾರದ ಯಾವುದೇ ಆಜ್ಞೆ, ಜಾಹೀರುನಾಮೆ, ನೇಮಕ, ಕರಾರು, ದಾಖಲೆಗಳಲ್ಲಾದರೂ ಬ್ರಿಟಿಷ್ ರಾಜಮುದ್ರೆ ಬೀಳುವಂತಿಲ್ಲ. ಇದುವರೆಗೆ ಬ್ರಿಟಿಷ್ ರಾಜರ ಸಹಿಯಿಂದಾಗುತ್ತಿದ್ದುದೆಲ್ಲವೂ ಇನ್ನು ಮುಂದೆ ಭಾರತದ ಕೇಂದ್ರಾಧ್ಯಕ್ಷರ ಸಹಿಯಿಂದಾಗಲಿದೆ. ಈ ತನಕವೂ ಬ್ರಿಟಿಷ್ ರಾಜರ ಜನ್ಮೋತ್ಸವ ಮುಂತಾದ ದಿನಾಚರಣೆಗಳನ್ನು ಭಾರತವು ಆಚರಿಸುತ್ತಾ ಬಂದಿದೆ—ಇದೊಂದು ಅಧೀನ ರಾಜ್ಯವಾಗಿರುವುದರಿಂದ. ಇನ್ನು ಮುಂದೆ ಅಂತಹ ಆಚರಣೆ, ಅನುಯಾಯಿತ್ವ ಪ್ರದರ್ಶನವಾವುದನ್ನೂ ಭಾರತವು ಮಾಡುವಂತಿಲ್ಲ. ಭಾರತವು ರಿಪಬ್ಲಿಕ್ ಆಗುವ ದಿನದ ಒಳಗೆ ಇಂಗ್ಲಂಡಿನ ರಾಜಶ್ರೀಯಾದರೂ ಇಲ್ಲಿಗೆ ಆಗಮಿಸಿದರೆಂದರೆ, ಇಲ್ಲಿಯ ಸರಕಾರವು ತಮ್ಮ ಸ್ವಂತ ಮಕುಟಧಾರಿ ಬಂದನೆಂದೇ ಭಾವಿಸಿ ರಾಜಯೋಗ್ಯ ಗೌರವಗಳನ್ನು ಸಲ್ಲಿಸಬೇಕು. ಆದರೆ ರಿಪಬ್ಲಿಕ್ ಭಾರತಕ್ಕವರು ಬಂದಲ್ಲಿ ಪರದೇಶೀ ರಾಜನೊಬ್ಬನಿಗೆ ಕೊಡುವ ಆತಿಥ್ಯವನ್ನಲ್ಲದೆ, ಬೇರಾವ ವಿಧೇಯತೆಯನ್ನೂ ಇಲ್ಲಿಯ ಸರಕಾರ ತೋರಿಸಬೇಕಿಲ್ಲ. ಕೇಂದ್ರಭಾರತದ ಅಧ್ಯಕ್ಷರು ತನ್ನ ಸರಿಸಮಾನ ಶಿರಸ್ಸೊಂದು ತನ್ನ ...ಕ್ಷಿಗೆ ಬಂತೆಂಬ ಭಾವನೆಯಿಂದ ಅವರನ್ನು ಅತಿಥಿಯಾಗಿ ಇಟ್ಟು ತಾನು ಆತಿಥ್ಯಕೊಡುವವನಾಗಿ ಇದ್ದರಾಯಿತು. ಈ ರೀತಿ ಬ್ರಿಟಿಷ್ ಸಿಂಹಾಸನದೊಡನೆ ಭಾರತ ಇದುವರೆಗಿಟ್ಟುಕೊಂಡಿರುವ ಛಾಯಾಮಾತ್ರ ನಿಷ್ಠೆ ಕೂಡಾ ಈ ಹೊಸವ್ಯವಸ್ಥೆಯ ಮೂಲಕ ಕಳೆದುಹೋಗಿದೆ; ಬ್ರಿಟಿಷ್ ರಾಜರನ್ನು ನಾಮಮಾತ್ರಕ್ಕಾದರೂ ನಮ್ಮ ರಾಜನಲ್ಲ. ಭಾರತವು ಜನತೆಯ ಸಾರ್ವಭೌಮಾಧಿಕಾರ ಬದ್ಧ ರಿಪಬ್ಲಿಕ್.

ಸಂಕೇತ ಚಿಹ್ನೆ

ಹೀಗೆ ಪೂರ್ಣ ಸ್ವತಂತ್ರಗೊಳ್ಳುವ ಭಾರತವು ಬ್ರಿಟಿಷ್ ರಾಜರನ್ನು ಒಂದು ಸಂಕೇತವಾಗಿ ಗೌರವಿಸುವ ರಂಗವೊಂದಿದೆ. ಅದೆಂದರೆ ಕಾಮನ್‌ವೆಲ್ತಿನ ಇತರ ಸದಸ್ಯರಾಷ್ಟ್ರಗಳಂತೆಯೇ ಭಾರತವೂ ಈ 'ಸದಸ್ಯರಾಷ್ಟ್ರಗಳ ಸ್ವತಂತ್ರಕೂಟದೊಂದು ಸಂಕೇತ'ವಾಗಿ ಮಾತ್ರ. ಐಕ್ಯ ಸದಸ್ಯ ರಾಷ್ಟ್ರಗಳು ರಾಜನಿಷ್ಠೆಯನ್ನು ಕಟ್ಟಿಕೊಂಡು ವಿದೇಶ ಸಂಬಂಧ ಮತ್ತು ಪ್ರಮುಖ್ಯ ನೇಮಕಗಳೇ ಮೊದಲಾದುವುಗಳನ್ನು ರಾಜರ ಹೆಸರಿನಿಂದಲೇ ನಡೆಯಿಸುವಾಗ, ಭಾರತವು ಅವೆಲ್ಲವನ್ನೂ ತನ್ನ ಚುನಾಯಿತಾಧ್ಯಕ್ಷನ ಮೂಲಕ ಜರಗಿಸಲಿದೆ; ಆದರೆ ಕಾಮನ್‌ವೆಲ್ತ್ ಕೂಟ ಸಂಬಂಧಗಳಲ್ಲಿ ಐಕ್ಯವುಗಳಂತೆಯೇ ರಾಜರನ್ನು "ಗೌರವ ಸಂಕೇತ"ವಾಗಿ ಭಾರತವೂ ಗಣಿಸಲಿದೆ. ಇಲ್ಲಿ ವ್ಯತ್ಯಾಸವೆಂದರೆ, ಇಂಗ್ಲಂಡ್, ನ್ಯೂಜೀಲೇಂಡ್, ಕೆನಡಾ, ದಕ್ಷಿಣಾಫ್ರಿಕ, ಆಸ್ಟ್ರೇಲಿಯ, ಪಾಕಿಸ್ತಾನ್, ಸಿಲೋನುಗಳು ತಮ್ಮೆಲ್ಲಾ ಮುಖ್ಯ ರಾಜ್ಯವಹಿವಾಟುಗಳಲ್ಲಿ ಬ್ರಿಟಿಷ್ ರಾಜಮುದ್ರೆಯನ್ನು ಉಪಯೋಗಿಸುವಾಗ ಭಾರತವು ತನ್ನ ಸ್ವಂತ ಮುದ್ರೆಯನ್ನೇ ಉಪಯೋಗಿಸಲಿದೆ; ಆದರೆ ಅವೆಲ್ಲವುಗಳ ಸಂಯುಕ್ತ ಕಟ್ಟಡಕ್ಕೆ ಬ್ರಿಟಿಷ್ ಮಕುಟವು ಕಳಶವಾಗಿ ನಿಲ್ಲಲಿರುವುದರಿಂದ ಆ ಕಟ್ಟಡದ ಒಂದು ಭಾಗವಾದ ಭಾರತಕ್ಕೂ ಆ ಮಕುಟವು ಹಾಗೆಯೇ ಕಾಣಿಸಬೇಕಾದುದು ಅನಿವಾರ್ಯ. ಈ ವ್ಯವಸ್ಥೆಯಿಂದಾಗಿ ಭಾರತವು ತನ್ನ ರಿಪಬ್ಲಿಕ್ ಸ್ಥಾನಕ್ಕೆ ಸಂಕೋಚವನ್ನೂ ಹಾಕಿಕೊಳ್ಳದೆ, ಅದೇ ಕಾಲದಲ್ಲಿ ಕಾಮನ್‌ವೆಲ್ತ್ ಸದಸ್ಯತ್ವವನ್ನೂ ಉಳಿಸಿಕೊಂಡಿದೆ; ಪೂರ್ಣ ಸ್ವಾತಂತ್ರ್ಯದ ಸ್ವಾಭಿಮಾನ ಮತ್ತು ಕಾಮನ್‌ವೆಲ್ತ್ ಸಹಭಾಗಿತ್ವದ ಸರ್ವಾನುಕೂಲತೆ, ಇವೆರಡನ್ನೂ ಸಂಪಾದಿಸಿಕೊಂಡಿದೆ. ಇದುವರೆಗೆ ಕಾಮನ್‌ವೆಲ್ತ್ ರಾಷ್ಟ್ರಗಳ ಶಿರಸ್ಸಾಗಿದ್ದ ರಾಜರು, ಇನ್ನು ಮುಂದೆ ಆ ರಾಷ್ಟ್ರಗಳೊಳಗಿನ ಸ್ವತಂತ್ರ ಸಂಕೇತ ಮಾತ್ರವಾಗಿ ಉಳಿಯುವಂತಾದುದೂ ಭಾರತದ ಧೋರಣೆಯ ದೆಸೆಯಿಂದಲೇ ಎಂಬುದನ್ನು ಮರೆಯಬಾರದು. ಮಹಾ ಮಹಾ ಘಟನೆಗಳನ್ನು ಗರ್ಭದಲ್ಲಿಟ್ಟುಕೊಂಡಿರುವ ಭವಿಷತ್ಕಾಲದಲ್ಲಿ ಭಾರತವು ತನ್ನಿಚ್ಛೆಯಂತೆ ವರ್ತಿಸುವಾಗ ಇನ್ನಾವ ಕಾರ್ಯಕ್ಕೂ ಬ್ರಿಟಿಷ್ ರಾಜರ ಸಹಿಯನ್ನ ಕೂಡಾ ಪಡೆಯುವ ಅವಶ್ಯಕತೆಯಿಲ್ಲವಾದ್ದರಿಂದ ಭಾವೀ ಜಾಗತಿಕ ಕಾರ್ಯಕಲಾಪಗಳ ಮಟ್ಟಿಗೆ ಭಾರತದ ಕೈ ಅತಂಕರಹಿತವಾಯಿತು; ಇದು ಮಹತ್ವದ ವಿಷಯ.



ಲಂಡನ್ ಪರಿಷತ್ತಿನ ಕೀರ್ತಿಶ್ರೀ: ರಿಪಬ್ಲಿಕ್ ಭಾರತಕ್ಕೆ ಕಾಮನ್‌ವೆಲ್ತ್ ಸದಸ್ಯತ್ವವನ್ನೂ ಸಂಪಾದಿಸಿದ ನಾಯಕ-

ನೆಹರೂ ವಿಜಯ.

ರಿಪಬ್ಲಿಕ್ ಭಾರತವು ಕಾಮನ್‌ವೆಲ್ತಿನಲ್ಲಿರುವಂತೆ ಮಾಡುವ ಅಸಾಮಾನ್ಯ ಕಾರ್ಯಾಲೋಚನೆಗಾಗಿಯೇ ಸೇರಿದ್ದ ಕಾಮನ್‌ವೆಲ್ತ್ ಪ್ರಧಾನಿಗಳ ಈ ಬಾರಿಯ ಸಮ್ಮೇಳನದಲ್ಲಿ ಸಹಜವಾಗಿ ಎಲ್ಲರ ಲಕ್ಷ್ಯವೂ ಪಂಡಿತ ನೆಹರುಗಳ ಮೇಲೆಯೇ ಬಿದ್ದಿತ್ತು. ಆಕರ್ಷಕ ವ್ಯಕ್ತಿ ಪಂಡಿತಜೀ ಈ ದೆಸೆಯಿಂದ ಸರ್ವಪ್ರಥಮ ಪ್ರಾಮುಖ್ಯತೆಯನ್ನೂ ಅಲ್ಲಿ ಗಳಿಸಿದ್ದರು. ನೆಹರುಗಳ ವಿಶಾಲ ಮನೋವೃತ್ತಿ ಮತ್ತು ವಿಶೇಷ ವ್ಯಕ್ತಿತ್ವ ವಿನಹ ಈ ನವ ವ್ಯವಸ್ಥೆಯಾಗುವದೂ ಅಸಾಧ್ಯವಿದ್ದಿತೆನ್ನಬಹುದು. ಅಲ್ಲಿ ಇಂದಿನ ನಿರ್ಧಾರಕ್ಕೆ ದ್ವಿಮುಖೀ ಆಕ್ಷೇಪಗಳಿದ್ದುವು. ನ್ಯೂಜೀಲೇಂಡ್, ಆಸ್ಟ್ರೇಲಿಯ, ದಕ್ಷಿಣಾಫ್ರಿಕ ಮೊದಲಾದ ರಾಷ್ಟ್ರಗಳ ಬ್ರಿಟಿಷ್ ರಕ್ತ ಸಂಬಂಧೀ ಪ್ರಮುಖರಿಗೆ ಬ್ರಿಟಿಷ್ ರಾಜರ ಸ್ಥಾನವನ್ನು ಯಾವ ರೀತಿಯಿಂದಾದರೂ ತಗ್ಗಿಸಲಿಷ್ಟವಿರಲಿಲ್ಲ; ಸಮ್ಮೇಳನ ಸೇರುವ ಮೊದಲೇ ಅವರು ಈ ಸಂಬಂಧವಾಗಿ ಆಕ್ಷೇಪಗಳನ್ನು ಸೂಚಿಸಿದ್ದರು. 'ಪ್ರತ್ಯೇಕಿಸ್ತಾನ ಬಿಡಿಯುವ ಭಾರತದೊಡನೆ ಸಮಾನರಕ್ಷಣಾವ್ಯವಸ್ಥೆಗಾಗಿ ಒಂದು ಒಮ್ಮತಕ್ಕೆ ಬರುವುದು ಕಷ್ಟ—ಇಂತಹ ಅರೆ ಮನಸ್ಸಿನ ಸದಸ್ಯರನ್ನು ಹೊರಗೆ ಹಾಕಿದರೆ ತಾವು ಕಾಮನ್‌ವೆಲ್ತಿನೊಂದಿಗೆ ಪೂರ್ಣ ಸಹಭಾಗಿಯಾಗಿರಲು ತಯಾರು'—ಎಂದು ಪಾಕಿಸ್ತಾನದ ಪ್ರಧಾನಿ ಮಿ. ಲಿಯಾಖತ್ ಆಲೀಖಾನರೂ ಹಠಹಿಡಿದಿದ್ದರೆಂದು ತಿಳಿದುಬರುತ್ತದೆ. ಆದರೆ ಬ್ರಿಟಿಷ್ ಪ್ರಧಾನಿ ಅಟ್ಲೀಗಳು ಭಿನ್ನ ಚಿಂತಕರೊಡನೆ ಪ್ರತ್ಯ ಪ್ರತ್ಯೇಕವಾಗಿ ಸಂಭಾಷಿಸಿ ಸಮಾಜಾಯಿಸಿದ್ದರು; ಐದು ಬಾರಿ ಎಲ್ಲಾ ಪ್ರಧಾನಿಗಳ ಗುಪ್ತ ಸಮ್ಮೇಳನ ಜರಗಿ ಕೊನೆಯಲ್ಲೇ ಈ ನಿರ್ಧಾರವಾಗಿದ್ದಿತು. ರಕ್ಷಣಾ ವ್ಯವಸ್ಥೆಗಾಗಿ ಭಾರತ ಪಾಕಿಸ್ತಾನಗಳು ಒಮ್ಮತಕ್ಕೆ ಬರುವ ಆವಶ್ಯಕತೆಯನ್ನೂ ಗಡಿಯಲ್ಲಿ ಅಫ್ಘಾನಿಸ್ಥಾನ್ ಪಾಕಿಸ್ಥಾನಗಳೊಳಗೆ ನಡೆದಿರುವ ಘರ್ಷಣೆಯ ಅಪಾಯವನ್ನೂ ಬ್ರಿಟನಿನ ವಿದೇಶಮಂತ್ರಿ ಮಿ. ಬೆವಿನ್‌ರೂ ಮಿ. ಲಿಯಾಖತ್ ಆಲೀಖಾನರಿಗೆ ಮುಂದಿಟ್ಟು ಮಾಡಿದರೆಂದು ತಿಳಿದುಬರುತ್ತದೆ. ವಿಶಾಲಭಾವನೆ ಧೋರಣೆಗಳ ನೆಹರೂ ವ್ಯಕ್ತಿತ್ವವು ಎಲ್ಲಾ ಅವಿಶ್ವಾಸ, ದುರ್ಭಾವನೆಗಳನ್ನೂ ಶುದ್ಧೀಕರಿಸಿ, ವಾತಾವರಣವನ್ನು ತಿಳಿಗೊಳಿಸಿತು. ಭಾರತದ ಪ್ರಾಮುಖ್ಯತೆಯನ್ನರಿತ ಬ್ರಿಟಿಷ್ ಮುತ್ಸದ್ದಿಗಳು ತಮ್ಮ ಹೃದಯ ಕವಾಟಗಳನ್ನು ಪೂರ್ತಿ ತೆರೆದು ನೆಹರೂ ಸೂಚನೆಗಳನ್ನು ಸ್ವಾಗತಿಸಿಕೊಂಡರಲ್ಲದೆ, ಮಿಕ್ಕವರಿಂದಲೂ ಅಂತಹ ಸ್ವಾಗತವನ್ನ ಕೊಡಿಸಿದರು. ಆರನೇ ದಿನದ ಗುಪ್ತಾಧಿವೇಶನದಲ್ಲಿ "ಈ ಕೂಟವು ಸೇನಾಪಾಳೆಯವಾಗಿರದೆ ಕೇವಲ ಶಾಂತಿ ಸಾಧಕವಾಗಿರಬೇಕು" ಎಂಬುದನ್ನು ಸ್ಪಷ್ಟಪಡಿಸಿ ಪಂಡಿತ ನೆಹರೂಗಳಿತ್ತ ಭಾಷಣವು ಎಲ್ಲರ ಹೃದಯದಲ್ಲೂ ತನ್ನ ಮೊಹರನ್ನೊತ್ತಿತು. ಕಟ್ಟಕಡೆಗೆ ಸಮ್ಮೇಳನಭಾಗಿ ಪ್ರಧಾನಿಗಳೆಲ್ಲರೂ ಒಟ್ಟಿಗೆ ಬಕ್ಕಿಂಗ್ಹಾಮ್ ಅರಮನೆಗೆ ಹೋಗಿ ರಾಜರಿಗೆ ಈ ಬದಲಾವಣೆಯ ಸಂಬಂಧದ ಸಲಹೆಕೊಟ್ಟು, ಬರುವ ಸಮಾರಂಭ ಜರಗಿತು.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬ್ಯಾಂಕಿನ ಸೇವೆಯು ಜರೂರಾತಿಯದು. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬ್ಯಾಂಕು ಅಗಾಧ ಪ್ರಯತ್ನವನ್ನು ಮಾಡಿದೆ. ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪ್ಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತಃ ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದುಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.
ಜನರಲ್ ಮೆನೇಜರ್

ಪಂಡಿತ ನೆಹರುಗಳ ವಿಜಯ ಯಾತ್ರೆ!

ಅಯರ್ಲೆಂಡಿನಲ್ಲಿ

ಲಂಡನ್ ಸಮ್ಮೇಳನದ ಉದ್ಯೋಗ ಕೇಂದ್ರ ಮತ್ತು ಉತ್ಸವಮೂರ್ತಿಯಾಗಿದ್ದ ಪಂಡಿತ ನೆಹರುಗಳು ತಮ್ಮಲ್ಲಿಗೆ ಬಂದು ಹೋಗಬೇಕೆಂದು ಅಯರ್ಲೆಂಡ್ ಮತ್ತು ಸ್ವಿಜರ್ಲೆಂಡು ಸರಕಾರಗಳು ಆಮಂತ್ರಿಸಿದ್ದುವು. ಈ ಆಹ್ವಾನವನ್ನು ಮನ್ನಿಸಿ ಪಂಡಿತಜೀ ಎಪ್ರಿಲ್ ತಾ. 28ರಲ್ಲಿ ಅಯರ್ಲೆಂಡಿನ ರಾಜಧಾನಿ ಡಬ್ಲಿನಿಗೆ ಐದು ತಾಸುಗಳ ಭೇಟಿಕೊಟ್ಟರು. ಲಂಡನಿನಿಂದ ಹಾರಿದ ಅವರ ವಿಮಾನವು ಡಬ್ಲಿನಿನಲ್ಲಿ ತಳವೂರುವಾಗ ಸ್ವಾಗತಿಸಲು ಐರಿಷ್ ಪ್ರಧಾನಿ ಕೋಸ್ಟೆಲೋ, ಮಾಜಿ ಪ್ರಧಾನಿ ಡಿ ವೆಲೆರಾ ಮತ್ತಿತರ ನಾಯಕರು ನಿಲ್ದಾಣದಲ್ಲಿ ಹಾಜರಿದ್ದರು. ಜನಸಂದಣಿ ನೆರೆದು ಗೌರವಾಹ್ವಾನಕೊಟ್ಟಿತು. ಅಯರ್ಲೆಂಡ್ ಪಾರ್ಲಿಮೆಂಟ್ ಸಭೆಗೆ ಹಾಜರಾಗಿ, ಅಲ್ಲಿ ಚರಿತ್ರಾಪೂರ್ವ ರೀತಿಯಿಂದ ಗೌರವಿಸಲ್ಪಟ್ಟರು. ಐರಿಷ್ ಪ್ರಧಾನಿಗಳ ಔತಣ ಸತ್ಕಾರ, ಐರಿಷ್ ಅಧ್ಯಕ್ಷರ ಸನ್ಮಾನ ಸ್ವೀಕರಿಸಿದರು. ಇತ್ತೀಚೆಗೆ ಬ್ರಿಟಿಷ್ ಸಿಂಹಾಸನದ ನಾಮಮಾತ್ರ ಸಂಬಂಧವನ್ನೂ ಕಡಿದುಕೊಂಡು ಸಂಪೂರ್ಣ ಪ್ರತ್ಯೇಕವಾಗಿರುವ ಅಯರ್ಲೆಂಡು, ಸ್ವಾತಂತ್ರ್ಯ ಹೋರಾಟದ ಆ ಕಾಲದಲ್ಲೂ ಭಾರತದೊಡನೆ ನಿಕಟ ಹೃದಯ ಸಂಬಂಧ ಪ್ರದರ್ಶಿಸಿದ್ದ ದೇಶ. ಐರಿಷ್ ನಾಯಕ ಡಿವೆಲೆರಾರು ಸ್ವಾಭಿಮಾನದ ಮಟ್ಟಿಗೆ ನೆಹರುಗಳ ದ್ವಿಪ್ರತಿಯಂತಿದ್ದವರು; ವಿದ್ಯಾರ್ಥಿದಸೆಯಲ್ಲಿ ಅಯರ್ಲೆಂಡನ್ನು ಕಂಡಿದ್ದ ಪಂಡಿತಜೀ ಆ ಮೇಲದನ್ನು ಸಂದರ್ಶಿಸಿದುದು ಇದೀಗ ಪ್ರಥಮ ಬಾರಿ. ಈ ಬಾರಿಯ ಐದೇ ತಾಸುಗಳ ಭೇಟಿಯಿಂದ ಪಂಡಿತ ಜವಾಹಿರಲಾಲರು ಅಲ್ಲಿಯ ಜನತೆ ಹಾಗೂ ಅಧಿಕಾರೀ ವರ್ಗದ ಹೃದಯವನ್ನು ಎಷ್ಟೊಂದು ಆಕರ್ಷಿಸಿಕೊಂಡರೆಂದರೆ, ಐರಿಷ್ ಅಧಿಕಾರಿಗಳು ನೆಹರೂ ವ್ಯಕ್ತಿತ್ವವನ್ನು ಬಾಯಿಬಿಟ್ಟು ಶ್ಲಾಘಿಸಿ, ಪದ್ಧತಿವಿರುದ್ಧವಾಗಿ ಅದರ ಪ್ರಚಾರಕರಾಗಿ ಮಾರ್ಪಟ್ಟಂತಿದೆ. ಡಬ್ಲಿನಿನಲ್ಲಿ ದ್ವಾರಿಗ ತನ್ನನ್ನು ಸ್ವಾಗತಿಸಿದ ಅಲ್ಲಿಯ ಹಿಂದೀ ವಿದ್ಯಾರ್ಥಿಗಳಿಗೆ ಭಾಷಣವೀಯುತ್ತಾ ನೆಹರುಗಳೆಂದರು: "ಭಾರತದಲ್ಲಿ ಕ್ಷಿಪ್ರ ಬದಲಾವಣೆಗಳಾಗುತ್ತಿವೆ. ಭಾರತವು ಇಬ್ಭಾಗವಾದ ದುರ್ದೈವೀ ಸ್ಥಿತಿ ಅಲ್ಲಿರುವುದು ನಿಜ; ಅದೊಂದು ದುರ್ದೈವವೆಂದು ನಾನು ಕಂಠೋಕ್ತವಾಗಿಯೇ ಹೇಳುತ್ತಿದ್ದೇನೆ. ಎಷ್ಟೆಷ್ಟೋ ಸಂಕಟಗಳು ಮತ್ತು ಕೆರಳಿಸುವ ಕೆಲವು ಘಟನೆಗಳು ಇದ್ದರೂ ಕೂಡಾ ಭಾರತವು ಈ ಕಾಲದಲ್ಲಿ ವಿಶೇಷ ಶಕ್ತಿ ಸಂಚಲನಾ ರಾಷ್ಟ್ರವಾಗಿದೆ; ಈ ಶಕ್ತಿಸ್ಫುರಣೆಯಿಂದ ಕೆಲವೊಮ್ಮೆ ತಪ್ಪುಗಳಾಗುವವಷ್ಟು ಅದರ ಶಕ್ತಿಸ್ಫೋಟ ಹೆಚ್ಚಿದೆ. ಆದರೆ ಉಪಾಯವಿಲ್ಲ. ಹೇಗೇನೇ ಆದರೂ ಮುಂಭಾವಿಸುವುದು ಬೇಕು; ಜನ-ಧನ ಸಂಪಾದಿಸಿಕೊಂಡಂತೆ ನಾವು ಪ್ರಮಾದಗಳನ್ನು ತಿದ್ದಿಕೊಳ್ಳಬಲ್ಲೆವು. ಅಖಿಲ ಏಷ್ಯವೇ ಇಂದು ಅತ್ಯಂತ ಕ್ಷಿಪ್ರಗತಿಯ ಬದಲಾವಣೆ ಹೊಂದುತ್ತಿದೆ. ಡಬ್ಲಿನಿನಲ್ಲಿರುವ ಎಲ್ಲಾ ಹಿಂದೀ ವಿದ್ಯಾರ್ಥಿಗಳೂ ತಾವು ಭಾರತದ ರಾಯಭಾರಿಗಳೆಂಬುದನ್ನು ನೆನಪಿಡಬೇಕು. ನೀವು ಸದ್ಭಾವನೆಗಳನ್ನು ನಿರ್ಮಿಸುವಿರೋ ಅಥವಾ ದುರ್ಭಾವನೆಯನ್ನೋ-ಹೊರದೇಶಗಳಲ್ಲಿ ಭಾರತದ ಘನತೆಯನ್ನು ನೀವು ಹೆಚ್ಚಿಸುವಿರೋ,ತಗ್ಗಿಸುವಿರೋ-ಎಂಬುದು ನಿಮ್ಮನ್ನೇ ಅವಲಂಬಿಸಿದೆ. ಎಲ್ಲಾ ರಾಷ್ಟ್ರಗಳೊಡನೆ, ಆದರ ಒಳ್ಳೆ ಅಯರ್ಲೆಂಡಿನೊಡನೆ ನಾವು ಮೈತ್ರಿಯಿಂದಿರಲಿಚ್ಛಿಸುತ್ತೇವೆ. ನಾವಿಬ್ಬರೂ ಒಬ್ಬರನ್ನೊಬ್ಬರು ಮೆಚ್ಚುತ್ತೇವೆ; ಒಬ್ಬರೊಡನೊಬ್ಬರು ಸಹಾನುಭೂತಿ ಪಡುತ್ತೇವೆ; ಪರಸ್ಪರ ಅತ್ಯಂತ ಮೈತ್ರೀ ಭಾವದಿಂದಿದ್ದೇವೆ. ಇಲ್ಲಿಗೆ ಬರುವ ಪ್ರತಿಯೊಬ್ಬ ಭಾರತೀಯನೂ ಆ ಸ್ನೇಹವನ್ನು ಬಲಗೊಳಿಸಬೇಕು; ತನ್ನಿಂದ ಸಾಧ್ಯವಿದ್ದಷ್ಟು ಸ್ನೇಹಾದರ ತೋರಿಸಬೇಕು".

ಯಾವ ವಿಧದ ಅನುಮಾನ ಅಥವಾ ಅವಮಾನತು ಬುದ್ಧಿಯ ಅಂಶವೂ ಇರದ ಪರಿಶುದ್ಧ ಮನಸ್ಸಿನ ಅಪೂರ್ವ ಸ್ವಾಗತವು ಪಂಡಿತ ನೆಹರುಗಳಿಗೆ ಅಯರ್ಲೆಂಡಿನಲ್ಲಿ ದೊರೆಯಿತು. ಕ್ಷಣ ಕ್ಷಣವೂ ಮಹತ್ವವುಳ್ಳ ಐದು ತಾಸುಗಳ ಅವಧಿಯಲ್ಲಿ ಐರಿಷ್ ಹೃದಯ ಸೂರೆಗೊಂಡು ಪಂಡಿತಜೀ ಲಂಡನಿಗೆ ಮರಳಿದರು.

ಸ್ವಿಜರ್ಲೆಂಡಿಗೆ

ತಾ. 29ರಲ್ಲಿ ಬಕ್ಕಿಂಗಾಮ್ ಅರಮನೆಯಲ್ಲಿ ಮತ್ತೊಮ್ಮೆ ಬ್ರಿಟಿಷ್ ರಾಜರ ಭೇಟಿ ಪಡೆದಬಳಿಕ, ಲಂಡನಿಗೆ 30 ಮೈಲು ದೂರದಲ್ಲಿರುವ ಜಗತ್ಪ್ರಸಿದ್ಧ ನಾಟಕಕಾರ--92 ವರುಷ ಪ್ರಾಯದ ಐರಿಷ್ ಮುದುಕ--ಜೋರ್ಜ್ ಬರ್ನಾರ್ಡ್ ಶಾರ ನಿವಾಸಕ್ಕೆ ಹೋಗಿ ಅಲ್ಲಿ ಅವರೊಡನೆ ಎರಡು ತಾಸು ಮಾತಾಡಿ ಬಂದರು. ವಾರಾಂತ್ಯದಲ್ಲಿ ಪುನಃ ಮೌಂಟ್‌ಬೇಟನ್ ದಂಪತಿಗಳ ಹಳ್ಳೀನಿವಾಸ 'ಬ್ರೋಡ್ ಲೇಂಡ್ಸ್'ಗೆ ಹೋಗಿ ವಿಶ್ರಾಂತಿಪಡೆದು ಲಂಡನಿಗೆ ಮರಳಿ ಬ್ರಿಟಿಷ್ ಪ್ರಧಾನಿ ಆಟ್ಲಿ, ವಿದೇಶಮಂತ್ರಿ ಬೆವಿನ್, ಕಾಮನ್‌ವೆಲ್ತ್ ಸಂಬಂಧ ಶಾಖಾ ಕಾರ್ಯದರ್ಶಿ ನೋಯೆಲ್ ಬೇಕರರೊಡನೆ ಮಾತುಕತೆ ನಡೆಸಿದರು.

ಇದೇ ತಾ 3ನೇ ಮಂಗಳವಾರ ಸ್ಪೆಶ್ಯಲ್ ವಿಮಾನ ಹತ್ತಿ ಪಂಡಿತ ಜವಾಹಿರಲಾಲರು ಸ್ವಿಜರ್ಲೆಂಡಿಗೆ ಹೋಗಿರುವರೆಂದು ತಿಳಿದುಬರುತ್ತದೆ. ಅಲ್ಲಿ ಎರಡು ದಿನ ನಿಲ್ಲಲಿರುವರು. ಸ್ವಿಸರ್ಲೆಂಡಿನ ಸರಕಾರೀ ಸ್ವಾಗತಗಳನ್ನು ಸ್ವೀಕರಿಸುವಲ್ಲದೆ, ಅಲ್ಲಿಯ ಪ್ರಸಿದ್ಧ ಸ್ಥಳಗಳಿಗೆ ಭೇಟಿ ಕೊಡುವರು. ನಿಲ್ದಾಣದಲ್ಲಿ ಸ್ವಿಸ್ ಅಧಿಕಾರಿಗಳು ಹಾಜರಿದ್ದು ಸ್ವಾಗತಿಸಿ ರಾಜಧಾನಿ ಬೆರ್ನ್‌ಯ ಹೊರವಲಯ ಲೋನ್‌ನಲ್ಲಿರುವ ಸುಶೋಭಿತ ಭವನಕ್ಕೆ ಪಂಡಿತರನ್ನು ಕರೆದೊಯ್ಯುವ ಸಿದ್ಧತೆ ನಡೆದಿದೆ. ಸ್ವಿಸ್ ಪಾರ್ಲಿಮೆಂಟ್ ಭವನದಲ್ಲಿ ಫೆಡರಲ್ ಮಂತ್ರಿ ಮಂಡಳದ ಸ್ವಾಗತ-ಅಲ್ಲಿಯ ಚರಿತ್ರಾರ್ಹ ಪಟ್ಟಿವಿಲ್ಲೆ ಭವನದಲ್ಲಿ ಸರಕಾರೀ ಗೌರವ ಸಮಾರಂಭ-ಬೆರ್ನ್‌ಯ ಶ್ರೀಮಂತ ಸಲೆ 'ಬ್ರೆಡ್ ಬಾಸ್ಕೆಟ್'ನ ಸುತ್ತಾಟ-ಸ್ವಿಸ್ ಪಾರ್ಲಿಮೆಂಟ್ ಸದಸ್ಯರು ಮತ್ತೆಲ್ಲಾ ಅಧಿಕಾರೀ ಪ್ರಮುಖರನ್ನೊಳಗೊಂಡ ಸರಕಾರೀ ಸ್ವಾಗತ ಸಭೆ-ಎಲ್ಲೆವೂ ಅರಮನೆ ಹೊಟೆಲಿನಲ್ಲಿ ಮಹೋತ್ಸವ-ಇತ್ಯಾದಿ ಕಾರ್ಯಕ್ರಮಗಳು ಸ್ವಿಜರ್ಲೆಂಡಿನಲ್ಲಿ ಪಂಡಿತಜೀಯನ್ನು ಕಾದಿವೆ. ಅಂತೆಯೇ ತನ್ನ ಸಹಧರ್ಮಿಣಿ ಕಮಲಾ ನೆಹರು ದಹನವಾದ ಸ್ಥಳ ಲಾಸನ್ನೆಯನ್ನು ಪಂಡಿತಜೀ ಸಂದರ್ಶಿಸಲಿದ್ದಾರೆ. ಹಿಂದೀ ಕಲಾ ಪ್ರದರ್ಶನವೊಂದನ್ನು ನೋಡಿಕೊಂಡು ಮೇ 4ನೇ ಅಪರಾಹ್ನ ಕಾರುಹತ್ತಿ ಬೆರ್ನ್‌ಯಿಂದ ಜಿನೇವಾಕ್ಕೆ ಬಂದು, ಅಂದೇ ರಾತ್ರಿ ಅಲ್ಲಿಂದ ವಿಮಾನವೇರಿ, ಬೊಂಬಾಯಿಗೆ ಹೊರಡಲಿದ್ದಾರೆ.

ಪ್ರತಿಧ್ವನಿಗಳು

ರಿಪಬ್ಲಿಕ್ ಭಾರತವನ್ನು ಕಾಮನ್‌ವೆಲ್ತಿನಲ್ಲಿ ನಿಲ್ಲಿಸಿಇಡುವ ನಿರ್ಧಾರವು ಎಲ್ಲೆಡೆಗಳಲ್ಲೂ ಮಾರ್ದನಿಸಿದೆ. ಬ್ರಿಟಿಷ್ ಪತ್ರಿಕೆಗಳಿಂದ, ಮುತ್ಸದ್ದಿಗಳಿಂದ, ಅಮೇರಿಕ ಮತ್ತು ಸಂಗಡಿಗರೆಲ್ಲರಿಂದಲೂ ಸಹಜವಾಗಿ ಈ ಹೊಸವ್ಯವಸ್ಥೆಗೆ ಸುಸ್ವಾಗತ ದೊರೆತಿದೆ "ಈ ನಿರ್ಧಾರವು ಧೀರತನದ್ದು ಮತ್ತು ಮಹತ್ವದ್ದಿದೆ. ಪರಸ್ಪರ ಸೌಹಾರ್ದತೆ ಮತ್ತು ಮೈತ್ರಿಯೊಂದೇ ಈ ಸಹಭಾಗಿತ್ವವು ಬಾಳಿಬರುವಂತೆ ಮಾಡಬಲ್ಲುದು. ನಾವೆಲ್ಲರೂ ಈ ಭಾವನೆಯಿಂದಲೇ ಈ ಸಹಭಾಗಿತ್ವವನ್ನು ಸುಗಮಗೊಳಿಸುವೆವೆಂದಾಶಿಸೋಣ" ಎನ್ನುತ್ತಾ ಉಪ ಪ್ರಧಾನಿ ಸರ್ದಾರ್ ಪಟೇಲರು ಪ್ರಧಾನಿ ನೆಹರುಗಳ ಕಾರ್ಯವನ್ನು ಕೊಂಡಾಡಿದ್ದಾರೆ. "ದೇಶ ವಿಭಜನಾನಂತರ ನಡೆದ ದೊಡ್ಡತಪ್ಪೆಂದರೆ ಇದು. ಬ್ರಿಟನಿನ ಸಂಬಂಧ ಕಡಿದುಕೊಳ್ಳಬೇಕೆಂದು ಭಾರತವು 20 ವರ್ಷ ಪೂರ್ವದಲ್ಲಿ ಮಾಡಿದ್ದ ನಿರ್ಣಯಕ್ಕೆ ಇದು ವಿರುದ್ಧ. ಇಲ್ಲಿ ಬ್ರಿಟಿಷ್ ಹಂಚಿಕೆಗೆದ್ದಿತು ಹೊರತು ಭಾರತ ಪ್ರಧಾನಿಗಳು ಜಯಿಸಿಲ್ಲ"-ಎಂದು ಸಮತಾವಾದಿ ನಾಯಕ ಜೈಪ್ರಕಾಶ್ ನಾರಾಯಣರೆಂದಿದ್ದಾರೆ. "ನನಗಿದರ ಅರ್ಥವಾಗಿಲ್ಲ; ಬ್ರಿಟಿಷ್ ರಾಜರು ಕಾಮನ್‌ವೆಲ್ತಿನ ಸಂಕೇತವಾಗಿರುವರೆಂದರೇನು, ಎಂಬ ಅರ್ಥವಿವರಣೆಯಾಗಬೇಕು"—ಎಂದು ಕಾಂಗ್ರೆಸ್ ಅಧ್ಯಕ್ಷ ಡಾ। ಪಟ್ಟಾಭಿಗಳ ಮಾತು.

ಕಾಮನ್‌ವೆಲ್ತ್ ಸಮ್ಮೇಳನದ ನಿರ್ಧಾರವು ಸಮಾಧಾನಕರವೆನ್ನುತ್ತಾ ಪಾಕಿಸ್ತಾನ್ ಪ್ರಧಾನಿ ಮಿ ಲಿಯಾಖತ್ ಅಲೀಖಾನರು ತನ್ನೊಂದು ಅಂತರ್ವೇದನೆಯನ್ನು ಲಂಡನಿನಲ್ಲಿಯೇ ತೋಡಿಕೊಂ

BUY INDIAN' ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD



Highly perfumed and medicated, worth using daily by one and all, keeps hair black and relieves head. ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ನಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು,ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ,ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಜಾಗತಿಕ ಸ್ಥಿತಿಗತಿ

ಹಿದ್ದಾರೆ. ನೆಹರೂ ವ್ಯಕ್ತಿಶಃ ಮತ್ತು ನೆಹರೂ ಸರಕಾರಕ್ಕೆ ದೊರೆತ ಜಯ ತನಗೆ ಮತ್ತು ತನ್ನ ಸರಕಾರಕ್ಕೆ--ಭಾರತಕ್ಕೆ ದೊರೆತ ಪ್ರಾಮುಖ್ಯತೆ ಪಾಕಿಸ್ತಾನಕ್ಕೆ---ಲಂಡನಿನಲ್ಲಿ ದೊರೆಯಲಿಲ್ಲವೆಂಬ ಸಂತಾಪವು ಮಿ. ಲಿಯಾಖತರ ಮಾತುಗಳಿಂದ ತೋರುತಿದೆ. "ಪಾಕಿಸ್ತಾನಕ್ಕೇನು ಮಾಡಿದರೂ ದಕ್ಕುತ್ತದೆ ಎಂಬಂತಹ ಭಾವನೆಯು ಕಾಮನ್‌ವೆಲ್ತ್ ರಾಷ್ಟ್ರಗಳಲ್ಲೂ ಬ್ರಿಟನಿನಲ್ಲೂ ಇರುವುದನ್ನು ಕಂಡು ನಾನು ಸಂಕಟಗೊಂಡಿದ್ದೇನೆ. ಪಾಕಿಸ್ತಾನವೆಂದರೆ ಅನಿವಾರ್ಯ ಮತ್ತು ಕಸರಿನಿಂದ ಮೆತ್ತಿದ ಜನರಿರುವ ರಾಷ್ಟ್ರವೇನೂ ಅಲ್ಲ; ಆ 80,000,000 ಜನರು ಎಲುಬು ಮಾಂಸಗಳುಳ್ಳವರೇ; ತಮ್ಮ ನರನಾಡಿಗಳಲ್ಲಿ ಅತ್ಯಂತ ಸತ್ವಶಾಲಿ ರಕ್ತ ಹರಿದಾಡುತ್ತಿರುವವರೇ!" ಎಂದು ಎಚ್ಚರಿಕೆ ಕೊಟ್ಟಿದ್ದಾರೆ ಪಾಕಿಸ್ತಾನ್ ಪ್ರಧಾನ ಮಂತ್ರಿ. ಭಾರತವು ರಿಪಬ್ಲಿಕ್ ಆಗುವದರಿಂದ ತಮ್ಮೊಳಗಿನ ಸಂಬಂಧಕ್ಕಾವ ಚ್ಯುತಿಯೂ ಬರಲಾರದೆಂದೂ, ಕಾಶ್ಮೀರದ ಹೋರಾಟ ಮುಕ್ತಾಯದ ನಂತರ ಭಾರತ ಪಾಕಿಸ್ತಾನ್ ಸಂಬಂಧ ಸುಧಾರಿಸಿದೆಯೆಂದೂ ಆದರೆ ಕಾಶ್ಮೀರದ ಪ್ರಶ್ನೆಯು ಸಮಾಧಾನಕರ ತೀರ್ಮಾನ ಹೊಂದುವವರೆಗೆ ಈ ಸಂಬಂಧವನ್ನು ಸಸ್ನೇಹಕ್ರಿಯೆಂದರದು ಕಪಟವಾದೀತೆಂದೂ ಲಿಯಾಖತರ ಮಾತು.

ಲಂಡನ್ ನಿರ್ಧಾರದ ಕಡೆಗೆ ದ್ವೇಷ ಕಿಡಿ ಕಾರಿರುವುದೆಂದರೆ ರಶ್ಯವೊಂದೇ. ಅವರ 'ಪ್ರಾವ್ಡಾ' 'ರೆಡ್‌ಫ್ಲೀಟ್' ಮುಂತಾದ ಪತ್ರಿಕಾ ಲೇಖನಗಳು ಮತ್ತು ಆಕಾಶವಾಣಿ ಘೋಷಣೆಗಳು ಮಾಡಿರುವ ಆರೋಪದ ಸಾರವಿದು:- "ಅಟ್ಲಾಂಟಿಕ್ ಒಪ್ಪಂದಕ್ಕೆ ಪೂರಕವಾಗಿ ಶಾಂತಸಮುದ್ರ ವಲಯ ಒಪ್ಪಂದ ಮಾಡುವ ಮುಖ್ಯ ಉದ್ದೇಶದಿಂದ ಅಮೇರಿಕದ ಪ್ರೇರಣೆ ಮತ್ತು ಬ್ರಿಟನಿನ ನಾಯಕತ್ವದಲ್ಲಿ ಇದು ನಡೆದಿದೆ. ಭಾರತವು 'ರಿಪಬ್ಲಿಕ್' ಎಂಬುದು ಆಗ್ನೇಯ ಏಶ್ಯಾದಲ್ಲಿ ಆಂಗ್ಲೋ ಅಮೇರಿಕಾ ನವ ವಸಾಹತುಶಾಹಿ ನಡೆಯುವಂತೆ ಈ ರಿಪಬ್ಲಿಕನ್ನು ಮಾರ್ಪಡಿಸಿ, ಲಾಭಹೊಂದುವದಕ್ಕಾಗಿ ಆಂಗ್ಲೋ-ಇಂಡಿಯ ನಾಯಕರು ಹೂಡಿರುವ ಹಂಚಿಕೆಮಾತ್ರ. ಆಂಗ್ಲೋ ಅಮೇರಿಕನರ ಆಕ್ರಮಣ ಧೋರಣೆಗನುಗುಣವಾಗಿ ಒಂದು ಸೇನಾ ಗುಂಪನ್ನು ಅಲ್ಲಿ ಕಟ್ಟಿ ಹಾಕಬೇಕೆಂದೇ ಈ ಒಡಂಬಡಿಕೆಯಾಗಿದೆ"

ಇಂತಹ ಟೀಕೆಗೆ ಸ್ಪಷ್ಟ ಉತ್ತರವನ್ನು ಪಂಡಿತ ನೆಹರೂಗಳು ಇದೇ ತಾ 29ರಲ್ಲಿ ಲಂಡನಿನಲ್ಲಿ ಇತ್ತಿದ್ದಾರೆ "ಲಂಡನ್ ಜಾಹೀರನಾಮೆಯಲ್ಲಿ ಮುಚ್ಚುಮರೆಯೆಂಬುದೇನೂ ಇಲ್ಲ. ನಾವು ಬ್ರಿಟಿಶ್‌ಗೊಂಬೆಗಳಲ್ಲ. ಹಾಗೆಂದು ಯಾವ ಜನರಾದರೂ ನೆನೆಸುತ್ತಾರಾದರೆ ಅವರು ಅಸಂಬದ್ಧ ನಿರ್ಮಾಪಕರೇ ಸರಿ. ಸೇನಾ ಸಂಬಂಧದಲ್ಲಾಗಲೀ ಇನ್ನಾವುದರಲ್ಲೇ ಆಗಲೀ ಬಾಧಕವಾಗುವುದಕ್ಕೂ ಕಟ್ಟುಬಿದ್ದಿಲ್ಲ. ಇಲ್ಲಿ ಆಗಿರುವ ಏಕಮಾತ್ರ ಹೊಂದಿಕೆಯೆಂದರೆ ಕಾಮನ್‌ವೆಲ್ತ್ ಸದಸ್ಯರು ಪರಸ್ಪರ ಪರ್ಯಾಲೋಚಿಸಿಕೊಳ್ಳಬೇಕೆಂಬುದೇ"-ಎಂದಿದ್ದಾರೆ ಪಂಡಿತಜೀ.

ಜಾಗತಿಕ ರಂಗದ ನೋಟವು ಎಂದಿನಂತೆ ಅತಿಗಂಭೀರವಾಗಿದೆ. ಹೋರಾಟ ಕ್ಷೇತ್ರಗಳ ಪೈಕಿ ಯಾವುದೂ ಶಾಂತವಾಗಿಲ್ಲ; ಎಲ್ಲಿ ಹಿಡಿಯ ಜ್ವಾಲೆಗೂ ಹೊಸ ನಾಲಿಗೆ ಹುಟ್ಟುತ್ತಿದೆ!

೦೦೦

ಚೈನದಲ್ಲಿ ಚಿಯಾಂಗ್-ಕೈ-ಶೇಕ್ ಆಡಳಿತೆಯ ಮುಕ್ತಾಯ ಈಗ ಮುಂದೆ ನಡೆಯುತ್ತಿದೆ. ರಾಜಧಾನಿ ನಾನ್ಕಿಂಗ್ ಪತನಗೊಂಡ ಬೆನ್ನಲ್ಲೇ ಚೈನದ ಎದೆಗುಂಡಿಗೆಯಂತಿರುವ ಶಾಂಘಾಯಿ ಬಂದರವು ಕಮ್ಯೂನಿಸ್ಟರ ಕೈವಶವಾಗುವದೆಂದು ನಿರೀಕ್ಷಿಸಲಾಗಿತ್ತು. ಆದರೆ ಅದರ ರಕ್ಷಣೆಗಾಗಿ ಸುಮಾರು ಒಂದು ತಿಂಗಳ ಅನುಪಮ ಪ್ರಯತ್ನಗಳನ್ನು ಸರಕಾರೀ ಸೇನಾನಿಗಳು ಮಾಡಿದ್ದು, ಅಲ್ಲಿಯೇ ತಮ್ಮ ಕೊನೆಗಾಲದ ಸರ್ವ ಸಾಹಸಗಳನ್ನೂ ಪ್ರದರ್ಶಿಸಲು ಸಿದ್ಧರಾಗಿ ನಿಂತಿರುವುದರಿಂದ ಅದೀವರೆಗೂ ಮುಹೂರ್ತ ಕಾಯುತ್ತಾ ಉಳಿದಿದೆ. ಕಮಾಂಡರ್ ಜನರಲ್ ಚೆನ್ ಟಾ ಚಿಂಗ್ ಎಂಬ 49ರ ವಯಸ್ಸಿನ ಶೂರ ಸೇನಾಪತಿಯು ಶಾಂಘಾಯಿಯಲ್ಲಿ ಕಮ್ಯೂನಿಸ್ಟರಿದಿರು ಸ್ಟಾಲಿನ್ ಗ್ರಾಡ್ ಹೋರಾಟ ಕೊಡಲು ಅಭೇದ್ಯ ರಕ್ಷಣಾ ವ್ಯೂಹಗಳನ್ನು ರಚಿಸಿಕೊಂಡು ಕಟಿ ಬಿಗಿದು ನಿಂತಿದ್ದಾನೆ. ಕ್ಯಾಂಟನ್ ಸಮೇತ ಅಖಿಲ ಚೈನದ ಆಧ್ಯತ್ಮವೇ ಶಾಂಘಾಯಿ. ಹೋರಾಟದ ಪರಿಣಾಮವನ್ನು ಅವಲಂಬಿಸಿದೆ. ಈಗ ಆ ನಗರದ ಕಡೆಗೆ ಕಮ್ಯೂನಿಸ್ಟ್ ಸೇನೆಗಳು ನಾನ್ಕಿಂಗ್ ಮತ್ತು ಹಾಂಗ್ಚೋ, ಇವೆರಡು ದಿಕ್ಕುಗಳಿಂದ ನುಗ್ಗಿ ಬರುತ್ತಿವೆ. ಈ ಎರಡು ಕಡೆಗಳ ರೈಲ್ವೇ ಮಾರ್ಗವಾಗಿ ಶಾಂಘಾಯೀ ಸರಕಾರೀ ಸೇನೆಗಳ ಸಂಚಾರ ನಿಂತು ಬಹುದಿಂಗಳಾಗಿದೆಯಾದರೂ, ಅವು ದೀರ್ಘಾವಧಿ ಕಮ್ಯೂನಿಸ್ಟರನ್ನು ತಡೆಗಟ್ಟಬಲ್ಲೆವೆಂಬ ಆತ್ಮವಿಶ್ವಾಸವು ಅಲ್ಲಿಯ ಸೇನಾನಿಗಿದೆ. ಯಾಂಗ್ಟ್ಸೀ ಹೊಳೆ ದಾಟಿದ ಸುಮಾರು 5 ಲಕ್ಷ ಕಮ್ಯೂನಿಸ್ಟ್ ಸೇನೆಗಳಂತೂ ಮೂರು ಮುಖಗಳಾಗಿ ಚೈನಾದ ಕೇಂದ್ರ ಕ್ಷೇತ್ರವಾದ ಸುಮಾರು 60 ಸಾವಿರ ಚದರ್ ಮೈಲನ್ನು ವಿಸ್ತೀರ್ಣಸ್ಥಳವನ್ನು ಮಹಾಪೂರದಂತೆ ಆವರಿಸಿಕೊಂಡು ಬರುತ್ತಿವೆ; ಶಾಂಘಾಯಿಯೀಗ ಈ ಪ್ರವಾಹಕ್ಕಭಿಮುಖವಾಗಿದೆ.

೦೦೦

ಬರ್ಲಿನಿನಲ್ಲಿ ದೀರ್ಘಕಾಲದಿಂದಿರುವ ರಶ್ಯಾ ಮತ್ತು ಅಮೇರಿಕ, ಬ್ರಿಟನ್, ಫ್ರಾನ್ಸುಗಳೊಳಗಿನ ಘರ್ಷಣೆಯೀಗ ಸುಖಕರ ಬದಲಾವಣೆ ಹೊಂದುವ ಸಂಭವ ಮೂಡಿದೆ. ಸುಮಾರು ಹತ್ತು ತಿಂಗಳಿಂದ ಪಾಶ್ಚಾತ್ಯ ರಾಷ್ಟ್ರಗಳ ಪಾಲಿನ ಬರ್ಲಿನ್ ಕ್ಷೇತ್ರದೊಳಗೆ ಯಾವುದೂ ನೆಲಮಾರ್ಗವಾಗಿ ಸಾಗದಂತೆ ರಶ್ಯವು ಹಾಕಿದ್ದ ಪ್ರಬಲ ದಿಗ್ಬಂಧನಗಳನ್ನು ಕೂಡಲೇ ರದ್ದುಪಡಿಸಲಾಗುವದೆಂದು ರಶ್ಯದ ಸೋವಿಯಟ್ ಸುದ್ದಿ ಅಧಿಕಾರಿಯೇ ಹೇಳಿದ್ದಾನೆಂಬ ವಾರ್ತೆಯಿದೆ. ಅದಕ್ಕೆ ಅಧಿಕೃತವಾಗಿ ತಮಗೇನೂ ತಿಳಿದುಬಂದಿಲ್ಲವಾದ್ದರಿಂದ ಈ ಕುರಿತು ಪಾಶ್ಚಾತ್ಯ ರಾಷ್ಟ್ರಗಳವರಿಗೆ ಇನ್ನೂ ವಿಶ್ವಾಸ ಹುಟ್ಟಿಲ್ಲ. ಆದರೂ ಬರ್ಲಿನ್ ಸಂಬಂಧದ ಮುಖ್ಯ ಸಮಸ್ಯೆಗಳ ಕುರಿತು ತಕ್ಕ ಮಟ್ಟಿನ ತೀರ್ಮಾನಗಳಾಗಿ ಮುಂದಿನ ಬರ್ಲಿನ್ ದಿಗ್ಬಂಧನ ತಪ್ಪಿ ಹೋಗಬಹುದೆಂದೂ ಅದನ್ನನುಸರಿಸಿ ಮೇ ತಾ 15ರಲ್ಲಿ ರಶ್ಯಾ, ಬ್ರಿಟನ್, ಅಮೇರಿಕ, ಫ್ರಾನ್ಸುಗಳ ಚತುರ್ರಾಷ್ಟ್ರೀಯ ಪರ್ಯಾಲೋಚನಾ ಸಭೆಯು ಪ್ಯಾರಿಸಿನಲ್ಲಿ ಸೇರಬಹುದೆಂದೂ ನಂಬಲಾಗಿದೆ.

೦೦ ೦೦ ೦೦

ಬರ್ಮಾದ ಹೋರಾಟವು ಯಥಾಪ್ರಕಾರ ಸಾಗಿದೆ. ಪ್ರಾಮುಖ್ಯ ರಂಗೂನ್--ಮಾಂಡಲೇ ರೈಲ್ವೇ ಲೈನಿನ ಆಯಕಟ್ಟು ಸ್ಥಳದಲ್ಲಿ ಕರೇನ್ ಬಂಡಾಯಗಾರರು ಭಾರಿ ಹೊಡೆಬಲವಾದ ಹೋರಾಟ ನಡೆಯಿತು. ಮಧ್ಯ ಬರ್ಮಾದ ರೈಲ್ವೇನಗರ ಪ್ಯಾಮೆನಾನ್ ಬಂಡಾಯಗಾರರ ವಶವಾಗಿದೆ. ಉತ್ತರ ಬರ್ಮಾದಲ್ಲಿದ್ದ ಸರಕಾರೀ ಸೇನೆಗಳೀಗ ಆ ಕಡೆಗೆ ಧಾವಿಸುತ್ತಿವೆ ಅಂತೂ ಬರ್ಮಾದ ಹೋರಾಟವು ಏಕಪ್ರಕಾರವಾಗುತ್ತಿದೆ. ಒಮ್ಮೆ ಅಲ್ಲಿ ಆದ ಸಂಧಾನವು ಪುನರ್ ಜೀವಗೊಳ್ಳುವ ಸಂಭವ ತೋರುವದಿಲ್ಲ. ಕರೇನ್ ಬಂಡಾಯಗಾರರೊಡನೆ ಕಮ್ಯೂನಿಸ್ಟರು ಕೂಡಿಕೊಂಡ ವಾರ್ತೆಯಿರುವಂತೆಯೇ ಕಮ್ಯೂನಿಸ್ಟ್ ಸೇನೆ ಮತ್ತು ಕರೇನ್ ಜನರ ಸೇನೆಗಳೊಳಗೆ ಹೋರಾಟ ನಡೆದಿರುವ ಸುದ್ದಿಯೂ ಇದೆ.

೦೦೦

ಇಂಡೋನೇಶಿಯದಲ್ಲಿ ಡಚ್ ಸಾಮ್ರಾಜ್ಯವಾದಿ ಸರಕಾರದೊಡನೆ ಇಂಡೋನೇಶಿಯ ರಿಪಬ್ಲಿಕನರು ನಡೆಸುತ್ತಿರುವ ಸ್ವಾತಂತ್ರ್ಯ ಯುದ್ಧವೂ ಬಹು ಕಾಲದಿಂದಿರುವ ಜಾಗತಿಕ ಸಮಸ್ಯೆಗಳಲ್ಲೊಂದು. ಅಲ್ಲಿಯ ಜಗಳವನ್ನು ಸಂಯುಕ್ತ ರಾಷ್ಟ್ರ ಸಂಘವು ಎತ್ತಿಕೊಂಡು ಅಂದಿನಿಂದೀವರೆಗೆ ಬಹು ವಿಧದ ಸಂಧಾನ ಪ್ರಯತ್ನಗಳು ನಡೆದಿರುವವಾದರೂ ತೀರ್ಮಾನ ಸಾಧ್ಯವಾಗಿಲ್ಲ. ಕಾಶ್ಮೀರ ಕೈಗೊಂಡು ಕಮಿಶನನ್ನು ಕಳುಹುವ ಮೊದಲೇ ಸಂಯುಕ್ತ ರಾಷ್ಟ್ರಸಂಘವು ಇಂಡೋನೇಶಿಯ ಕೈಕೊಂಡು ಶಾಂತಿಸಾಧಕ ಕಮಿಶನನ್ನು ಕಳುಹಿಸಿತ್ತು. ಆ ಕಮಿಶನಿನ ವರದಿಯಂತೆ ಎಪ್ರಿಲ್ 11ರ ವರೆಗಿನ ಅಲ್ಲಿಯ ಪರಿಸ್ಥಿತಿಯೆಂದರೆ ಆ ರಾಷ್ಟ್ರದ ನಗರಗಳು ಮತ್ತು ರಸ್ತೆಗಳು ಮಾತ್ರ ಡಚ್ಚರ ಸ್ವಾಧೀನದಲ್ಲಿವೆ. ಹಳ್ಳಿ ವಲಯಗಳೆಲ್ಲವೂ ಹೆಚ್ಚಾಗಿ ರಿಪಬ್ಲಿಕನರ ವಶದಲ್ಲೇ ಇವೆಯಲ್ಲದೆ, ಡಚ್ಚರು ಹಿಡಿದಿರುವ ಕೆಲವು ಕ್ಷೇತ್ರಗಳಲ್ಲೂ ರಿಪಬ್ಲಿಕನ್ ಸೇನಾನೆಲೆ ನಾಟಿದೆ. ಅಲ್ಲಲ್ಲಿ ಗೆರಿಲ್ಲಾ ಹೋರಾಟಗಳೂ ಪ್ರತ್ಯಕ್ಷ ಯುದ್ಧಗಳೂ ನಡೆದಿವೆ.

೦೦ ೦೦ ೦೦

ಕಾಶ್ಮೀರದ ಕುರಿತು ಭಾರತ ಪಾಕಿಸ್ತಾನಗಳೊಳಗೊಂದು ಸಂಧಾನ ಒಪ್ಪಂದ ಮಾಡಲು ಜಾಗತಿಕ ಸಂಘದ ಕಾಶ್ಮೀರ ಕಮಿಶನಿನವರು ಕೊನೆಯ ಸೂಚನೆಗಳನ್ನು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳಿಗೆ ಕೊಟ್ಟಿದ್ದಾರೆ. ಇದೇ ತಾ. 7ರಲ್ಲಿ ಪಂಡಿತ ನೆಹರೂಗಳು ಡಿಲ್ಲಿಗೆ ಬಂದ ನಂತರವೇ ಭಾರತ ಸರಕಾರವು ತನ್ನ ಉತ್ತರವನ್ನು ಕಳುಹಲಿದೆಯೆಂದೂ ತಾ. 29ರಲ್ಲಿ ಭಾರತದಿಂದ ಲಂಡನಿಗಾಗಿ ವಾಶಿಂಗ್ಟನ್ನಿಗೆ ಹೊರಟ ಶ್ರೀಮತಿ ವಿಜಯಲಕ್ಷ್ಮಿಯವರ ಮೂಲಕ ಕಾಶ್ಮೀರ ಕಮಿಶನಿನ ಸೂಚನಾ ಪ್ರತಿಯೊಂದು ಲಂಡನಿನಲ್ಲೇ ಪಂಡಿತನೆಹರೂಗಳಿಗೆ ದೊರೆತಿದೆಯೆಂದೂ ತಿಳಿದು ಬರುತ್ತದೆ. ಭಾರತ ಸರಕಾರವು ಈ ಶಾಂತಿ ಸೂಚನೆಗಳನ್ನು ಅಂಗೀಕರಿಸಿಕೊಳ್ಳುವದು ಅಸಂಭವ. 'ಯಾವುದೇ ಒಂದು ಒಡಂಬಡಿಕೆಯಾಗಬೇಕಾದರೂ ಮುಂದಾಗಿ, 'ಆಝಾದ್ ಕಾಶ್ಮೀರ' ನಾಮಾಂಕಿತ, 25000 ಸೈನಿಕರುಳ್ಳ 32 ಸೇನಾದಳಗಳನ್ನು ಬರ್ಖಾಸ್ತುಪಡಿಸಬೇಕು; ಕಾಶ್ಮೀರಕಂದರ ಮತ್ತು ಪಹಾಡು ರಸ್ತೆಗಳ ರಕ್ಷಣೆಗಾಗಿ ಆ ಕಂದರದ ಉತ್ತರಗಡಿಯ ಪರ್ವತ ವಲಯದ ಆಯಕಟ್ಟಿನ ಸ್ಥಳಗಳಲ್ಲಿ ಹಿಂದೀ ಸೇನೆ ನಿಲ್ಲಬೇಕು'-ಎಂಬ ಭಾರತ ಸರಕಾರದ ಮೂಲಶರ್ತವು ಕಾಶ್ಮೀರ ಕಮಿಶನಿನ ಸೂಚನೆಗಳಲ್ಲಿ ಮನ್ನಿಸಲ್ಪಟ್ಟಿಲ್ಲವೆಂದು ತಿಳಿಯಲಾಗಿದೆ.

THE GENERAL INVESTMENT TRUST LTD.

(Incorporated in India. Liability of Shareholders Limited)

Regd Office. KADEKAR. UDIPI, S. K.

24th April, 1949.

NOTICE

The Register of Members and Transfer Books of the Trust will remain closed from the 1st May, 1949 to 21st May, 1949 (both days inclusive).

(By authority of the Board)

T. Ramesh U. Pai,



Approved firm by the Govt. of Mysore
Certified by the Agent of the Govt. of

THE
Canara Banking Corporation Ltd.
(Incorporated in India)
Estd: 1906
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscriped	Rs. 20,00,000.
Capital Paid Up	Rs. 19,99,800.
Reserves	Rs. 8,90,000

Banking business of every description transacted.

ನವಯುಗ

ಗುರುವಾರ, ಉಡುಪಿ, ೫-೫-'೪೯

ಆಹಾರ ಸ್ವಾವಲಂಬನೆ

ಏಪ್ರಿಲ್ ತಾ. 30ರಲ್ಲಿ ನವದಿಲ್ಲಿಯಲ್ಲಿ ಸೇರಿದ ಭಾರತದ ಪ್ರಾಂತಿಕ ಆಹಾರ ಮತ್ತು ಬೇಸಾಯ ಮಂತ್ರಿಗಳ ಸಮ್ಮೇಳನದಲ್ಲಿ ಮಾತಾಡುತ್ತಾ ಲೋರ್ಡ್ ಬೋಯ್ಡ್ ಓರ್, ಅವರು ಹೊರಗೆಡಹಿದ ಅಭಿಪ್ರಾಯಗಳು ವಿಚಾರಣೀಯವಾಗಿವೆ. ಲೋರ್ಡ್ ಬೋಯ್ಡ್ ಓರ್, ಆಹಾರ ಮತ್ತು ಬೇಸಾಯ ಸಂಸ್ಥೆಯ ಮಾಜಿ ನಿರ್ದೇಶಕಾಧ್ಯಕ್ಷರು; ಆಹಾರ ಸ್ವಾವಲಂಬನೆಯ ತಮ್ಮ ತ್ರೈವಾರ್ಷಿಕ ಯೋಜನೆಯ ಕುರಿತು ಸಲಹೆ ಕೇಳುವುದಕ್ಕಾಗಿಯೇ ಭಾರತ ಸರಕಾರವು ಅವರನ್ನು ದಿಲ್ಲಿಗೆ ಕರೆಯಿಸಿಕೊಂಡಿದ್ದಿತು. "ಆಹಾರ ಸ್ವಾವಲಂಬನೆಗಾಗಿ ಭಾರತ ಸರಕಾರವು ಕೈಕೊಂಡ ವಿಧಾನಗಳು ಸರಿಯಿವೆ. ಭಾರತವು ಕಳೆದ 18 ತಿಂಗಳುಗಳಲ್ಲಿ ಹಲವು ಅದ್ಭುತಗಳನ್ನು ನಿರ್ಮಿಸಿದೆ. ಎಲ್ಲರೂ ಕಠಿಣ ಶ್ರಮ ತೆಗೆದುಕೊಂಡಲ್ಲಿ, 1951ರಲ್ಲಿ ನಾಲ್ಕೂವರೆ ಮಿಲಿಯಗಳಷ್ಟು ಅಧಿಕ ಆಹಾರ ಧಾನ್ಯ ಉತ್ಪನ್ನವಾಗಬೇಕೆಂಬ ಗುರಿಯನ್ನೆಂತೂ ಮೀರಿ ಹೋಗಬಹುದು" ಎಂಬ ಅವರ ಶ್ಲಾಘನೆಯು ತಮ್ಮ ಸರಕಾರ ಮತ್ತು ಭವಿಷ್ಯದ ಕಡೆಗೆ ಭಾರತೀಯರ ಭರವಸೆಯನ್ನು ಹೆಚ್ಚಿಸುವಂತಹದಿದೆ. "ಈ ಗುರಿಮುಟ್ಟಲಾಗುವ ಯೋಜನೆಗಳನ್ನು ದೇಶದ ಆದ್ಯಂತ ಹರಡಿರುವ ಭಿನ್ನ ಭಾಷೆ, ಭಿನ್ನ ರೀತಿಯ ಒಕ್ಕಲುತನಗಳಿಗೊಳಗಾಗಿರುವ 30 ಮಿಲಿಯ ಸಾಗುವಳಿದಾರರಿಗೆ ತಾಗಿಸುವುದು ಹೇಗೆಂಬುದೇ ಮೂಲ ಪ್ರಶ್ನೆ. ಆದರೆ ಎಲ್ಲರೂ ಕಠಿಣವಾಗಿ ದುಡಿದರೆ ಮತ್ತು ಜನತೆ ಹಾಗೂ ಸರಕಾರವು ಕಾರ್ಯ ತಲ್ಲೀನತೆಗೊಂಡರೆ ಈ ಯೋಜನೆಗಳು ಅಸ್ತಿತ್ವಕ್ಕೆ ಬರಬಲ್ಲುವು. ಭಾರತವು ಸ್ವಾತಂತ್ರ್ಯ ಸಂಪಾದಿಸಿಕೊಂಡುದನ್ನು ಮತ್ತು ಅದಕ್ಕೊಂದು ಸುಭದ್ರ ಸರಕಾರವಿರುವುದನ್ನು ಕಾಣುವಾಗ ಅದು ಜನತೆಯ ಪಾಲಿನ ಅತಿ ದೊಡ್ಡ ಯಶಸ್ಸೆಂದು ನನಗನ್ನಿಸುತ್ತಿದೆ. ಇದರಿಂದ, ರಾಜಕೀಯ ಸುಸ್ಥಿರತೆಯ ನಂತರ ಅವರು ತಮ್ಮ ಅತ್ಯವಸರದ ಆಹಾರ ಸ್ವಾವಲಂಬನಾ ಯೋಜನೆಗಳನ್ನು ಮುಂದೊತ್ತಬಹುದೆಂಬುದು ಸ್ವತಃಸಿದ್ಧ. 1951ರ ಈ ಗುರಿಮುಟ್ಟಿದ ನಂತರ ಕರ್ತವ್ಯವಾಗಿ, ಇಂಗ್ಲಾಂಡು ಅಥವಾ ಅಮೇರಿಕದ ಮಟ್ಟಕ್ಕೆ ಬರುವಂತೆ ಇಲ್ಲಿಯ ಜನತೆಯ ಜೀವನ ಮಟ್ಟವನ್ನು ಮೇಲೇರಿಸುವ ದೀರ್ಘಾವಧಿ ಯೋಜನೆಗಳನ್ನು ಕೈಕೊಳ್ಳಬೇಕು. ಲೋಕದ ಜನ ಸಂಖ್ಯೆ ಹೆಚ್ಚುತ್ತಿದೆ; ಅದನ್ನು ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ. ಇಂಗ್ಲಾಂಡು, ಅಮೇರಿಕಗಳಲ್ಲಿ ಕೂಡಾ ಜನತೆಯ ಅಧಿಕ ಸಂಖ್ಯಾಕರು ಹೊಟ್ಟೆಗೆ ಸಾಕಷ್ಟಿಲ್ಲದವರೇ. ಜನತೆಯ ಹಸಿವೆ, ಬಡತನ ಮತ್ತು ದುಃಖ ಸಂಕಟಗಳೇ ಕಮ್ಯೂನಿಸಮಿನ ಮೂಲಾಧಾರ. ಕಮ್ಯೂನಿಸ್ಟರು ಆಗ್ರಹಪೂರ್ವಕ ಕೇಳುತ್ತಿರುವ ಮಾದರಿಯ ಯೋಜನೆಗಳನ್ನು ಸ್ವತಂತ್ರ ಪ್ರಜಾಪ್ರಭುತ್ವಗಳು ಕೈಕೊಳ್ಳಬಲ್ಲುವೇ ಎಂಬುದು ಈಗಿನ ಪ್ರಶ್ನೆ. ನಿಜಕ್ಕೂ ಹಾಗೆಮಾಡಲು ಸಾಧ್ಯವಿದೆ. ಹಾಗೆ ಮಾಡುವುದಸಾಧ್ಯವೆನ್ನುವವರು ಬೇಸಾಯ ವಿಜ್ಞಾನದಿಂದ ಏನೆಲ್ಲಾ ಸಾಧ್ಯವೆಂಬುದನ್ನೇ ತಿಳಿಯದವರು. ಭಾರತೀಯರು ತಾವೊಂದು ಹೋರಾಟ ಮಧ್ಯದಲ್ಲಿದ್ದೇವೆ— ನಿಜಕ್ಕೂ ಅವರು ಅದರಲ್ಲಿ ಇದ್ದಾರೆ— ಎಂದು ನೆನಸುತ್ತಾರಾದರೆ ಅವರು ಉದ್ಯೋಗಕ್ಕೆ ಮನಸ್ಸುಮಾಡಲಿ" ಎಂದು ತನ್ನೆಲ್ಲಾ ವ್ಯವಹಾರಿಕ ಜ್ಞಾನದ ಬಲದಿಂದ ಲೋರ್ಡ್ ಲೋಯ್ಡ್ ಓರ್ ಒತ್ತಿ ಹೇಳಿದ್ದಾರೆ. ಈ ನಿರ್ದೇಶಗಳ ಕುರಿತು ವರ್ಣನೆ ಅನಗತ್ಯ. ಲೋಕದ ಹೆಚ್ಚಿನ ಸರಕಾರಗಳಂತೆ ಭಾರತ ಸರಕಾರದ ಕಣ್ಮುಂದೆಯೂ ತನ್ನ ಪ್ರಬಲ ವೈರಿ ಮತ್ತು ಭವಿಷ್ಯತ್ಕಾಲದ ಗಂಡಾಂತರವಾಗಿ ನಿಂತಿರುವುದೆಂದರೆ ಕಮ್ಯೂನಿಸಮ್; ಆದಕ್ಕಾಗಿ ಕಮ್ಯೂನಿಸ್ಟರನ್ನು ದಂಡಿಸಿದ ಮಾತ್ರದಿಂದಲೇ ತೃಪ್ತಿಪಡದೆ, ಅವರ ಆಟಗಳಿಗೆ ಮೂಲ ಕಾರಣವಾದ ಬಡತನದ ನಿವಾರಣೆಗೆ ಪ್ರಯತ್ನಿಸಬೇಕಾದುದು ಸರಕಾರದ ಮೊದಲ ಕರ್ತವ್ಯ. ಪ್ರಥಮತಃ ಅನ್ನ, ಬಟ್ಟೆ, ಮನೆಯ ಸುವ್ಯವಸ್ಥೆ ಬರಬೇಕಾಗಿರುವುದರಿಂದ 1951ರೊಳಗಿನ ಆಹಾರ ಸ್ವಾವಲಂಬನಾ ಯೋಜನೆಯು—ಜತೆಯಲ್ಲೇ ಸಾಮಾನ್ಯ ರೈತರ ಸ್ಥಿತಿಸುಧಾರಣತ್ತಾ ಸಾಗಿಬಂದರೆ—ಅದೊಂದು ಪ್ರಾಮುಖ್ಯ ಹೆಜ್ಜೆಯೆಂಬುದು ನಿಸ್ಸಂದೇಹ. ಅದರ ರೀತಿ ಗತಿಗಳ ವಿವರವಿನ್ನೂ ಸಾಕಷ್ಟು ತಿಳಿದುಬಂದಿಲ್ಲ; ತಾವು ಸಲಹೆ ಕೇಳುವುದಕ್ಕಾಗಿಯೇ ತರಿಸಿಕೊಂಡ ಲೋರ್ಡ್ ಲೋಯ್ಡ್ ಓರ್ ಅವರು ಕೊಟ್ಟ ಮೇಲಿನ ಸಲಹೆಗಳು ಕಾರ್ಯರೂಪೀ ಮನ್ನಣೆ ಹೊಂದುವವೆಂದು ನಂಬುತ್ತೇವೆ.

ಪರಿಣಾಮಕಾರಿ ಮಾತುಗಳು

"ಈಗಿನ ಸ್ಥಿತಿಯಲ್ಲಿ ಹಿಂದೂ ಕೋಡು ಮಸೂದೆಗೆ ನನ್ನ ಬೆಂಬಲದ ಆಶ್ವಾಸನೆ ಕೊಡಲು ನನಗೆ ಸಾಧ್ಯವಿಲ್ಲವೆಂಬುದನ್ನು ನಾನು ನಿವೇದಿಸಿಕೊಳ್ಳಬೇಕಾಗಿದೆ. ರಾಷ್ಟ್ರದ ಶಾಸನ ಸಭೆಯಾಗಿಯೂ ಕೆಲಸ ಮಾಡುತ್ತಿರುವ ಇಂದಿನ ಘಟನಾ ಸಮಿತಿಯು ಈ ಮಸೂದೆಯನ್ನು ಮುಂತರುವಂತೆ ರಾಷ್ಟ್ರವಾವ ದಾಯಸವನ್ನೂ ಆಜ್ಞೆ ಕೊಟ್ಟದಿಲ್ಲ"—ಏಪ್ರಿಲ್ 29ರಲ್ಲಿ ಮದ್ರಾಸಿನ ವಿವಿಧ ಮಹಿಳಾ ಸಂಸ್ಥೆಗಳತ್ತ ಮಾನಪತ್ರಕ್ಕೆ ಉತ್ತರ ಕೊಡುತ್ತಾ, ಬಾಬು ರಾಜೇಂದ್ರ ಪ್ರಸಾದರು.

"ಈ ನವವ್ಯವಸ್ಥೆಗೆ ಸಂಬಂಧಿಸಿದ ಹಲವು ಪ್ರಶ್ನೆಗಳು ಉತ್ತರಿಸಲ್ಪಡದೆ ಬಾಕಿಯಿವೆ. ಕೆಲವಂತೂ ಈಗ ಅಂದಾಜು ಸಿಗದಂತಹ ಪ್ರತಿಕೂಲ ವಿದ್ಯಮಾನಗಳ ಪರಿಣಾಮವನ್ನೇ ಕೊಡುವುದು ಸಂಭವನೀಯ. ಹೇಗಿದ್ದರೂ ಭಾರತವು ಕಾಮನ್‌ವೆಲ್ತಿನೊಳಗಿರಬೇಕೆಂಬುದೇ ಪ್ರತಿಯೊಬ್ಬನ ಬಯಕೆಯೆಂಬುದು ನಿಸ್ಸಂದೇಹ. ನನ್ನೆಲ್ಲಾ ಸ್ನೇಹಿತರಿಗೂ ನಾನು ಹೇಳುವುದೆಂದರೆ: ರಾಜ್ಯ, ರಾಷ್ಟ್ರಗಳೊಡನೆ ನಾವೀಗ ವಹಿಸಿರುವ ಈ ಲೋಕವ್ಯಾಪೀ ಒಕ್ಕಟ್ಟು ಭಾವನೆಯು ವ್ಯವಹಾರಿಕ ಹಾಗೂ ಪರಮಾವಧಿ ವಿಜಯಿಯಾಗುವಂತೆ ಸರ್ವಶಕ್ತಿಯಿಂದ ಪ್ರಯತ್ನಿಸುವದು ನಮ್ಮೆಲ್ಲರ ಕರ್ತವ್ಯವಿದೆ"—ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ, ರಿಪಬ್ಲಿಕ್ ಭಾರತದ ಕಾಮನ್‌ವೆಲ್ತ್ ಸಂಬಂಧದ ವರದಿ ಮುಂದೆ ಬಂದಾಗ ವಿರುದ್ಧಪಕ್ಷದ ನಾಯಕ ಚರ್ಚಿಲ್.

"ಗತಕಾಲದಲ್ಲಿ ಹಿಂದೂ ಸಮಾಜವು ಹರಿಜನರಿಗೆ ಮಹಾಪರಾಧಗಳನ್ನು ಮಾಡಿದೆ. ನಾವು ಈಗ ಮಾಡುತ್ತಿರುವದು ಆ ತಪ್ಪನ್ನು ತಿದ್ದಿಕೊಳ್ಳುವ ಪ್ರಯತ್ನ ಮಾತ್ರ. ನಾವು ಜಯಿಸಬೇಕಾದರೆ ಈ ಭಾವನೆಯಿಂದಲೇ ದುಡಿಯಬೇಕು. ನಾವೀ ಮೂಲಕ ಮೆಹನತ್ತಿನಿಂದ ಅವರಿಗೆ ಉಪಕಾರಮಾಡಲು ಹೊರಟಿದ್ದೇವೆಂದು ಭಾವಿಸಿಕೊಳ್ಳಕೂಡದು. ಈ ಮಾದರಿಯ ಕೆಲಸದಿಂದ ನಾವಾರನ್ನೂ ನಮ್ಮ ಹಂಗೀಕರನ್ನಾಗಿ ಮಾಡಿಕೊಳ್ಳುವುದಿಲ್ಲ. ಕೇವಲ ನಮ್ಮ ಸ್ವಂತ ಕಾರ್ಯವನ್ನಷ್ಟೇ ಮಾಡುತಿದ್ದೇವೆ"-ಮದ್ರಾಸಿನಲ್ಲಿ 'ಗಾಂಧಿ ಮಂಟಪ'ದ ಕೆಸರು ಕಲ್ಲು ಹಾಕುತ್ತಾ ಬಾಬು ರಾಜೇಂದ್ರ ಪ್ರಸಾದ್.

"ಬರೋಡದ ಮಹಾರಾಜರು ಈ ಮೂಲಕ, ಅಸಾಮಾನ್ಯ ತ್ಯಾಗ, ಧೈರ್ಯ ಮತ್ತು ಮಹಾ ಸತ್ಸಂಕಲ್ಪವನ್ನು ತೋರಿಸಿದ್ದಾರೆ. ಆದರಿಂದಾಗಿ ಶತಮಾನಗಳಿಂದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಜೋಡಣೆಯಿರುವ ಜನರು ಒಂದುಗೂಡಿ, ಕಾರ್ಯಾಧಿಕ್ಯಗೊಂಡು, ಯಾವ ನಡುಬೇಲಿಯೂ ಇಲ್ಲದೆ ಸರ್ವರ ಸಮಾನ ಹಿತಕ್ಕಾಗಿ ದುಡಿಯುವಂತಾಯಿತು"—ಬರೋಡ ಸಂಸ್ಥಾನವನ್ನು ಬೊಂಬಾಯಿ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವ ಸಮಾರಂಭವನ್ನು ಉದ್ಘಾಟಿಸುತ್ತಾ, ಇದೇ ತಾ. 1ರಲ್ಲಿ ಬರೋಡದಲ್ಲಿ ಬೊಂಬಾಯಿ ಪ್ರಧಾನಮಂತ್ರಿ ಶ್ರೀ. ಬಿ. ಜಿ. ಖೇರ್.

"ಈಗ ನಿಮ್ಮ ಭವಿಷ್ಯವು ಭಾರತ ಮಹಾಹಿತಿನ ಸ್ವಾಧೀನಕ್ಕೊಪ್ಪಿಸಲ್ಪಟ್ಟಿದೆ. ಅದರ ಕೈಯಲ್ಲಿ ನಿಮ್ಮ ಹಿತಸಂಬಂಧಗಳು ಸುಕ್ಷೇಮ ಹಾಗೂ ಉಜ್ವಲವಾಗಿರುವವೆಂದು ನನಗೆ ಖಾತ್ರಿಯಿದೆ. ನಾನು ನಿಮ್ಮನ್ನು ಹಾಗೂ ನಿಮ್ಮ ಭವಿಷ್ಯವನ್ನು ಇನ್ನಷ್ಟು ಬಲಶಾಲಿ ಕೈಗಳಿಗೀಗ ಕೊಡುತ್ತಿರುವುದರಿಂದ ಒಂದು ದೊಡ್ಡ ಹೊರೆ ಹಾಗೂ ಜವಾಬ್ದಾರಿಯಿಂದ ತಪ್ಪಿದೆನೆಂಬ ತೃಪ್ತಿ ನನಗಿದೆ; ನಾನೀಗ ಹೊಣೆಗಾರಿಕೆ ಬಿಟ್ಟುಕೊಡುತ್ತಿರುವೆನಾದರೂ ನೀವು ನನ್ನ ಹಾಗೂ ನನ್ನ ಪೂರ್ವಿಕರ ಮೇಲಿಟ್ಟಿದ್ದ ಗೌರವ ಪ್ರೇಮಗಳ ರೇಷ್ಮೆದಾರವು ನನ್ನನ್ನು ನಿಮ್ಮೊಂದಿಗೆ ಸದಾ ಕಾಲಕ್ಕೂ ಕಟ್ಟಿ ಹಾಕಲಿದೆ"-ತನ್ನ ಸಂಸ್ಥಾನವನ್ನು ಬೊಂಬಾಯಿ ಪ್ರಾಂತ್ಯದೊಂದಿಗೆ ವಿಲೀನಗೊಳಿಸುವ ಮುಹೂರ್ತದಲ್ಲಿ ಬರೋಡದ ಮಹಾರಾಜಾ ಪ್ರತಾಪಸಿಂಗ್ ಗಾಯಕವಾಡರು ತನ್ನ ಪ್ರಜೆಗಳಿಗಿತ್ತ ವಿದಾಯ ಸಂದೇಶ.

"ಬರೋಡವು ಕೆಲವೊಂದು ವಿಷಯಗಳಲ್ಲಿ ಪ್ರಾಗತಿಕ, ಇನ್ನು ಕೆಲವು ವಿಧಾನದಿಂದ ಅಪ್ರಾಗತಿಕವನ್ನಿಸಿದೆ. ಈ ವಿಲೀನೀಕರಣದಿಂದಾಗಿ ಸದ್ಯ ಕೆಲವು ಸಂಕಷ್ಟಗಳನ್ನು ಅನುಭವಿಸಬೇಕಾಗಿ ಬಂದರೆ ಬರೋಡದ ಜನರು ಹೆದರಬಾರದು. ಬೊಂಬಾಯಿ ಪ್ರಾಂತಿಕ ಎಸೆಂಬ್ಲಿಯಲ್ಲಿ ಮತ್ತು ಪ್ರಾಂತಿಕಾಡಳಿತೆಯಲ್ಲಿ ತನಗೆದೊರೆವ ಪಾಲನ್ನು ಬರೋಡವು ಸರಿಯಾದ ರೀತಿಯಿಂದ ಉಪಯೋಗಿಸಿಕೊಂಡರೆ ಅಲ್ಲಿಯವರು ಹೆಚ್ಚಿನ ಪ್ರಗತಿಹೊಂದಲಿದ್ದಾರೆ"-ಬರೋಡದ ವಿಲೀನೀಕರಣೋತ್ಸವ ಸಂದರ್ಭದಲ್ಲಿ ಸರ್ದಾರ್ ಪಟೇಲರು ರವಾನಿಸಿದ್ದ ಸಂದೇಶ.

"ಕಮ್ಯೂನಿಸಮಿನ ನಿರ್ಮಾಣ ನಿರತವಾಗಿರುವಾಗಲೇ ಸೋವಿಯೆಟ್ ಜನತೆಯು, ಅಮೇರಿಕದ ಆಡಳಿತ ಪಂಗಡಗಳು ಸ್ಫೋಟಗೊಳಿಸುತ್ತಿರುವ ಒಂದು ಹೊಸ ಯುದ್ಧದ ಅಪಾಯವನ್ನೆಂದಿಗೂ ಮರೆಯಬಾರದು. ಉತ್ತರ ಅಟ್ಲಾಂಟಿಕ್ ಒಡಂಬಡಿಕೆಯೆಂಬುದು ಶಾಂತಿಗೆ ಬಿದ್ದ ಮಹತ್ತ್ವದ ಧಕ್ಕೆ. ಸೋವಿಯೆಟ್ ಸಶಸ್ತ್ರ ಸೈನಿಕರು ರಕ್ಷಣಾ ಕಾವಲಿಗೆ ಕಣ್ಣಿಗೆಣ್ಣೆಯಿಟ್ಟು ಕಾಯುತ್ತಿರಬೇಕು"— ಮೇ ದಿನಾಚರಣೆಯ ಸಂಬಂಧವಾಗಿ ಮೋಸ್ಕೋದ 'ರೆಡ್ ಸ್ಕ್ವಾಯರ್'ನಲ್ಲಿ ನಡೆದ 10 ಲಕ್ಷಕ್ಕೂ ಮಿಕ್ಕಿದ ಜನರ 'ಪೆರೇಡ್'ನಲ್ಲಿ ಓದಲ್ಪಟ್ಟ ರಶ್ಯದ 'ದಿನದಾಣತಿ' (ಓರ್ಡರ್ ಓಫ್ ದಿ ಡೇ)ಯಲ್ಲಿ.

ಕಾರ್ಕಳ:—ಇಲ್ಲಿಯ ಎಸ್. ಯು. ಬಿ ಹಾ|ಇ|ಶಾಲೆಯ ವರ್ಧಂತಿ ಸಮಾರಂಭವು ಕಳೆದ ತಾ 24ರಲ್ಲು ಶ್ರೀ ಆರ್. ಹರಿಶೆಟ್ಟ್ಯೆ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಶ್ರೀನಿವಾಸ ಹೆಗ್ಡೆಯವರಿಂದ ವಂದಿವಾಚನವಾದ ಬಳಿಕ ಶ್ರೀ ಕೆ. ಶ್ರೀನಿವಾಸರಾಯರು ಶಾಲೆಯ ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷರ ಕಾಲೋಚಿತ ಭಾಷಣ, ಮಕ್ಕಳ ವಿವಿಧ ವಿನೋದಾವಳಿಗಳಾದ ನಂತರ ವಂದೇ ಮಾತರಂ ಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ವಿಶೇಷ ಸಂಗತಿ:-

ಸಾಮಾನ್ಯ ಜನತೆಯ ಅಭಿರುಚಿಯು ಕೌತುಕ, ರಮ್ಯತೆಗಳ ಕಡೆಗೇನೇ ಇರುತ್ತದೆ. ಪದ್ಧತಿ ವಿರುದ್ಧ ಕಾರ್ಯದ ಅಥವಾ ಹಣದ ದುರ್ವಿನಿಯೋಗದ ಕಥೆಗಳನ್ನು ಕೇಳುವದರಲ್ಲೇ ಜನತೆಗೆ ವಿಶೇಷಾಸಕ್ತಿ. ತುಲನಾತ್ಮಕವಾಗಿ ನೋಡುವದಾದರೆ ಇಂದು ನಿಜಾಮರ ಸಂಪತ್ತಿಗಾಗಲೀ ಗೋಡ್ಸೆ, ರಜ್ವಿಗಳಂಥವರ ಕಥೆಗಳಿಗಾಗಲೀ ಹೆಚ್ಚಿನ ಪ್ರಾಮುಖ್ಯತೆಯಿಲ್ಲ. ಆದರೆ ತಮ್ಮ ಇಂದಿನ ಪ್ರಾಮುಖ್ಯ ಸಂಗತಿಗಳ ಶ್ರವಣದತ್ತ ಕಿವಿಯರಳಿಸುವದಕ್ಕಿಂತ ಹೆಚ್ಚಾಗಿ ಸಾಮಾನ್ಯ ಜನರು ಮೇಲಿನವರ ವ್ಯಕ್ತಿಗತ ವಿಷಯಗಳ ಕಡೆಗೆ ನಿಗುಂಪಿಲ್ಲುತ್ತಾರೆ. ಅದಕ್ಕನುಗುಣವಾಗಿ ಅಲ್ಲಿ ಸ್ವಾರಸ್ಯದ ಸಂಗತಿಗಳೂ ತೋರಬರುತ್ತಿವೆ.

ನಿಜಾಮರ ಉಂಬಳೀದಾನ ವ್ಯವಸ್ಥೆ

ಹೈದರಾಬಾದ್ ನಿಜಾಮರು ತನ್ನ ಮಗ ಮತ್ತು ಕುಟುಂಬಿಕರಿಗಾಗಿ ಮೂರು ಉಂಬಳೀ 'ಟ್ರಸ್ಟ್'ಗಳನ್ನು ನಿರ್ಮಿಸುತ್ತಿದ್ದಾರೆಂದು ತಿಳಿದು ಬಂದಿದೆ: ತನ್ನ ಎರಡನೆ ಮಗ ರಾಜಕುವರ ಮೋಝ್ಝಾಮ್ ಝಹಾನ ಹೆಸರಲ್ಲಿ 2 ಕೋಟಿ ರೂಪಾಯಿಗಳ ಟ್ರಸ್ಟ್ ಒಂದನೆಯದು—ತನ್ನ ಸೊಸೆ, ಬಿರಾರಿನ ರಾಜಕುವರಿ ಮತ್ತಿಕೆಯ ಇಬ್ಬರು ಮಕ್ಕಳ ಹೆಸರಿಗೆ 2 ಕೋಟಿ ರೂ.ಗಳ ಟ್ರಸ್ಟ್ ಎರಡನೆಯದು—ತನ್ನನ್ನೇ ಆಶ್ರಯಿಸಿರುವ ಸಾಹೇಬ್‌ಝಾದಾರು, ಮುರ್ಸಾದ್‌ಝಾದರೇ ಮೊದಲಾದ ರಾಜಕುಟುಂಬದ ಸದಸ್ಯರುಗಳಿಗಾಗಿ 6 ಕೋಟಿ ರೂಪಾಯಿಗಳ ಟ್ರಸ್ಟ್ ಮೂರನೆಯದು.

ರಾಜ್ಯದ ರಕ್ಷಣೆ ನೋಡಲು ಬೇರೆ ಯಾವರು ಒಂದಿರುವಾಗ ತನ್ನನ್ನೇ ನಂಬಿರುವ ತನ್ನ ಕುಟುಂಬಕ್ಕೆ ಮುಂದಿನ ವ್ಯವಸ್ಥೆ ಮಾಡಿಡುವ ಕಾರ್ಯವನ್ನು ನಿಜಾಮರು ಮರೆತಾರೆ?

ಕಾಸಿಮ್‌ರಜ್ವಿ 5 ಲಕ್ಷ ಹೊಡೆದಿದ್ದ!

ಹೈದರಾಬಾದಿನಲ್ಲಿ ಲಾಯಕ್ ಅಲಿ ಮಂತ್ರಿ ಮಂಡಲ ಮಾಡಿದ್ದ ವಂಚನೆಗಳನ್ನೆಲ್ಲಾ ಶೋಧಿಸಿ, ಅವುಗಳನ್ನು ಕಳೆಚಾಕುವ ಕಾರ್ಯದಲ್ಲೀಗ ಅಲ್ಲಿಯ ಸೇನಾಡಳಿತೆ ನಿರತವಾಗಿದೆ. ಈ ವರೆಗಿನ ಶೋಧನೆಯಿಂದ ತಿಳಿದುಬಂದಂತೆ ಲಾಯಕ್‌ಅಲಿ ಮಂತ್ರಿ ಮಂಡಲವು 'ನಿಜಾಮ್ ನಿಧಿ'ಯಿಂದ ರಝಾಕಾರ್ ನಾಯಕ ಕಾಸಿಮ್ ರಜ್ವಿಗೆ 5 ಲಕ್ಷ ರೂ.ಗಳನ್ನು ಕೊಟ್ಟಿದ್ದಿತ್ತು. ಅಂತೆಯೇ ಹೈದರಾಬಾದ್ ಸೇನಾ ನಾಯಕ ಮೇ. ಜ. ಎಲ್ ಎಂಡ್ರೂಸರಿಗೂ, ಕರಾಚಿಯಲ್ಲಿದ್ದ ಹೈದರಾಬಾದಿನ ಏಜಂಟ್ ಜನರಲನೂ 41 ಲಕ್ಷ ರೂ.ಗಳಿಗೂ ಮಿಕ್ಕಿ ವ್ಯಯಿಸಿದ್ದ. ಪಾಕಿಸ್ತಾನದ ಓರ್ವ ಮಂತ್ರಿಯ ಸಂಬಂಧಿಕನಿಗೂ ಮತ್ತೊಂದು ಸಂಸ್ಥೆಗೂ ಲಾಯಕ್‌ಅಲಿ ಸರಕಾರವು ರೂ. 20 ಲಕ್ಷಕ್ಕೂ ಮಿಕ್ಕಿ ಕೊಟ್ಟಿದ್ದಿತು. ಈಗ ಮನೇ ಬಂಧನದಲ್ಲಿರುವ ಲಾಯಕ್‌ಅಲೀ ಸಮಿತಿಯ ಓರ್ವ ಮಂತ್ರಿಯು ಸರಕಾರದಿಂದ ಪಡೆದಿದ್ದ ರೂ. 25000ವನ್ನು ಮರಳಿ ಕೊಡಬೇಕೆಂದು ಚೌಧರಿ ಸರಕಾರ ನೋಟೀಸು ಕೊಟ್ಟಿದೆ. ಒಂದು ಇಂಗ್ಲಿಷ್ ದಿನಪತ್ರಿಕೆಯನ್ನು ನಡೆಸುವುದಕ್ಕಾಗಿ ಅವರಿಗೆ ಆ ಹಣವನ್ನು ಕೊಡಲಾಗಿತ್ತಂತೆ. ಅದೇರೀತಿ ಒಂದು ತೆಲುಗು ಪತ್ರಿಕೆ, ಮತ್ತೊಂದು ನ್ಯೂಸ್ ಏಜನ್ಸಿ ನಡೆಸುವುದಕ್ಕಾಗಿ ಬೇರೊಬ್ಬ ಪತ್ರಿಕಾಮಾಲಿಕನಿಗೆ ಲಾಯಕ್ ಅಲೀ ಸರಕಾರ ಕೊಟ್ಟಿದ್ದ ರೂ 3 ಲಕ್ಷದ ಸಾಲದ ಮರುಪಾವತಿಗಾಗಿಯೂ ಇಂದಿನ ಸರಕಾರದ ನೋಟಿಸು ಹೋಗಿದೆ. ಇಂತಹ ವಹಿವಾಟುಗಳು ಬೇರೆ ಕೆಲವಿವೆ.

ಆ ಕಾಲದ ಹೈದರಾಬಾದ್ ಭಂಡಾರವೆಂದರೆ ನಂದರಾಯನ ಒಡುಕಿನಂತಿತ್ತು!

ಗೋಡ್ಸೆ ಮತ್ತಿತರರ ಅಪ್ಪೀಲು ತನಿಖೆ

ಗಾಂಧೀ ಕೊಲೆಮೊಕದ್ದಮೆಯ ಅಪಾದಿತರಾದ ನಾಥೂರಾಮ್ ಗೋಡ್ಸೆ, ನಾರಾಯಣ ಡಿ ಆಪ್ಟೆ, ಮದನಲಾಲ್ ಪಾಹ್ವಾ, ವಿಷ್ಣು ಆರ್. ಕರ್ಕರೆ, ಗೋಪಾಲ ಗೋಡ್ಸೆ, ಡಾ। ಪರಚುರೆ ಇವರ ಅಪ್ಪೀಲು ವಿಚಾರಣೆಯು ಇದೇ ತಾ 2ರಿಂದ ಪೂರ್ವ ಪಂಜಾಬ್ ಹೈಕೋರ್ಟಿನಲ್ಲಿ ಶ್ರೀ. ಜಸ್ಟೀಸ್ ಎಸ್. ಎಸ್. ಭಂಡಾರಿ, ಶ್ರೀ. ಜಸ್ಟೀಸ್ ಅಚ್ರುರಾಮ್, ಶ್ರೀ. ಜಸ್ಟೀಸ್ ಜಿ.ಡಿ. ಖೋಸ್ಲಾ ಇವರ ಮುಂದೆ ಆರಂಭಿಸಿದೆ. ಪ್ರಥಮಾರೋಪಿ ಗೋಡ್ಸೆ ಸ್ವತಃ ವಾದಿಸಲಿದ್ದಾನೆ. ಮಿಕ್ಕ ಐವರು ಆರೋಪಿಗಳ ಪರವಾಗಿ ವಕೀಲರಿದ್ದಾರೆ. ಹೈಕೋರ್ಟಿನ ತುಂಬಾ ಬಲವಾದ ಪೋಲೀಸು ಬಂದೋಬಸ್ತಿದೆ. ಈ ವಿಚಾರಣೆಗಾಗಿ ಗೋಡ್ಸೆಯನ್ನು ಅಂಬಾಲಾದಿಂದ ಸಿಮ್ಲಾಕ್ಕೆ ತಂದುದು ವಿಶೇಷರೀತಿಯ ಶಸ್ತ್ರ ಪೋಲೀಸು ಪಹರೆಯಿಂದಲೇ.

ತೀರ್ಪು ಏನಾಗುವದೋ ನೋಡಬೇಕು!

ಅಭಿವಂದನೆಗಳು.

ಇದೇ ತಾ. 1ರಲ್ಲಿ ಮಂಗಳೂರಲ್ಲಿ ಜರಗಿದ ನನ್ನ ವಿವಾಹ ಸಮಾರಂಭಕ್ಕೂ, ಇದೇ ತಾ- 3ರಲ್ಲಿ ನನ್ನ ಉಡುಪಿ ಮನೆಯಲ್ಲಿ ಜರಗಿದ ಸತ್ಕಾರಕೂಟಕ್ಕೂ ನನ್ನ ಸವಿನಯ ಆಮಂತ್ರಣವನ್ನು ಮನ್ನಿಸಿ ಚಿತ್ತೈಸಿದ ಮತ್ತು ಉಡುಗೊರೆ ಇತ್ಯಾದಿಗಳನ್ನಿತ್ತು ಹರಸಿದ ಎಲ್ಲಾ ಬಂಧುಮಿತ್ರರಿಗೂ ನಾನು ಈ ಮೂಲಕ ನನ್ನ ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತೇನೆ.

ಯು. ಕೃಷ್ಣರಾಜ ತಂತ್ರಿ,
ರೇಶನ್ ಎಂಕ್ವಯರಿ ಆಫೀಸರ್,
ಉಡುಪಿ, ತಾ. 4—5—49

ಉಡುಪಿ ಕಾಲೇಜು ಕಮಿಟಿ.

ತಾರೀಕು 3-5-49ನೇ ಸಾಯಂಕಾಲ ಮುಕುಂದ ನಿವಾಸದಲ್ಲಿ ಕಾಲೇಜು ಕಮಿಟಿಯ ಮೀಟಿಂಗು ಡಾ। ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ನೆರೆದಾಗ, ಶ್ರೀ. ಟಿ. ಎ. ಪೈಗಳು ಕಾಲೇಜಿನ ಅಂಗೀಕಾರವಿಷಯದಲ್ಲಿ ವಿಶ್ವವಿದ್ಯಾಲಯದಿಂದ ಬಂದ ಪತ್ರವನ್ನೂ ತಾನು ಮುಖತಃ ಭೇಟಿಯಾಗಿ ತಿಳಿದುಬಂದ ವಿಚಾರವನ್ನೂ ವಿವರಿಸಿ ಹೇಳಿದರು— ಉಡುಪಿಗೊಂದು ಕಾಲೇಜಿನ ಅವಶ್ಯಕತೆ ಇದೆ ಎಂದು ಇಲ್ಲಿಗೆ ಬಂದ ವಿಶ್ವವಿದ್ಯಾಲಯ ಸಮಿತಿಯ ವರದಿಯೂ ವಿಶ್ವವಿದ್ಯಾನಿಲಯದಿಂದ ತೋರಿಬರುತ್ತಿರುವ ಹೃತ್ಪೂರ್ವಕ ಸಹಾನುಭೂತಿಯೂ ಸ್ತುತ್ಯ. ಪ್ರಕೃತ ಉಡುಪಿಯ ಎ. ಎಲ್. ಎನ್. ರಾವ್ ಮುನ್ಸಿಪಲ್ ಶಾಲೆಯಲ್ಲಿ ಕಾಲೇಜನ್ನು ಪ್ರಾರಂಭಿಸಲು ಅಗತ್ಯವಿರುವ ಕಟ್ಟೋಣದ ಬದಲಾವಣೆ, ಮೇಜು ಕುರ್ಚಿಗಳ ಸರಬರಾಯಿ ಇವೇ ಮೊದಲಾದ ಕಾರ್ಯನಿರ್ವಾಹಕ್ಕೆ ಒಂದು ಉಪಸಮಿತಿಯನ್ನು ನಿರ್ಮಿಸಲಾಯಿತು. ಲೈಬ್ರೆರಿಯನ್ನು ರೂ 5000/-ವನ್ನು ಈಗ ಕೊಟ್ಟು ಇನ್ನು ರೂ 5000ವನ್ನು 5 ಕಂತಿನಿಂದ ದಾನವಾಗಿ ಕೊಡಬಲ್ಲ ಮಹನೀಯರ ಹೆಸರಲ್ಲಿ ಸಜ್ಜುಗೊಳಿಸಬೇಕೆಂದು ನಿರ್ಣಯವಾಯಿತು. ಅಂತೆಯೇ ರೂ 6000/-ಕೊಡುವ ಮಹನೀಯರ ಅಭಿಪ್ರಾಯದಂತೆ ಅವರ ಇಚ್ಛಿತರ ಹೆಸರನ್ನು ಹೊಸತಾಗಿ ಕಟ್ಟುವ ಕಾಲೇಜು ಕಟ್ಟಡದ ಯಾವುದೇ ಬ್ಲಾಕುಗಳಲ್ಲಿ ಕೆತ್ತಿಸಿಡುವ ವ್ಯವಸ್ಥೆಯನ್ನು ಅವರು ಇಚ್ಛಿಸಿದಲ್ಲಿ ಮಾಡಬೇಕೆಂದು ನಿರ್ಣಯವಾಯಿತು. ಈಗಾಗಲೇ ರೂ 6000/-ಕ್ಕೆ ಕಮ್ಮಿ ಕೊಟ್ಟ ಮಹನೀಯರು ಕಡಿಮೆಬಿದ್ದ ಅಂಶವನ್ನು ತೆತ್ತು ಈ ಪ್ರಯೋಜನವನ್ನು ಹೊಂದಿಕೊಳ್ಳಬಹುದೆಂದಾಯಿತು. ಕಟ್ಟೋಣದ ಬಗ್ಗೆ ನಗದಿಯಿಂದಾಗಲೀ ಅಥವಾ ಮರಮಟ್ಟು, ಹಂಚು ವಗೈರೆ ಕೊಟ್ಟಲ್ಲಿ ಅದನ್ನು ಸ್ವೀಕರಿಸಿ ಆ ಬಗ್ಗೆ ಒಂದು ಪ್ರತ್ಯೇಕ "ಕಟ್ಟೋಣ ನಿಧಿ" ಯನ್ನು ತೆರೆಯಬೇಕೆಂದೂ ನಿರ್ಣಯವಾಯಿತು. ವಿಶ್ವವಿದ್ಯಾಲಯದಿಂದ ಕಾಲೇಜಿನ ಅಂಗೀಕಾರಕ್ಕೆ ಹಾಕಿದ ಶರ್ತಗಳನ್ನು ಪೂರೈಸಲು ಕಮಿಟಿಯು ಸಿದ್ಧವಿರುವುದೆಂಬುದನ್ನು ಸೂಚಿಸುವ ಠರಾವನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕೆಂದು ನಿಶ್ಚಯವಾಯಿತು.

ಉಡುಪಿ ಮುನ್ಸಿಪಲ್ ಶಾಲೆಗಳ ಸಂಯುಕ್ತ ವರ್ಧಂತ್ಯುತ್ಸವವು— ತಾ 28-4-49ರಿಂದ ತಾ 1-5-49ರ ವರೆಗೆ ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಗಿ ನೆರವೇರಿತು. ಪ್ರಥಮದಿನ ಅಪರಾಹ್ನ ಶ್ರೀಯುತ ವಾಸುದೇವ ಪ್ರಭುಗಳ ಅಧ್ಯಕ್ಷತೆಯಲ್ಲಿ ವಿದ್ಯಾ ಪ್ರಚಾರ ಸಭೆಯು ಮೈನ್ ಶಾಲೆ (ಎ, ಎಲ್. ಎನ್, ರಾವ್ ಶಾಲೆ)ಯಲ್ಲಿ ಸೇರಿ ಶ್ರೀಗಳಾದ ಎ. ಜೆ. ಆಳ್ವ, ಟಿ. ರಮೇಶ ಪೈ, ಆರ್. ಆರ್. ಕುಂಜೂರು, ಡಾ। ಸಿ. ರಾಘವೇಂದ್ರ ನಾಯಕರ ಮತ್ತು ಅಧ್ಯಕ್ಷರ ಭಾಷಣಗಳಾಗಿ ಮೈನ್ ಶಾಲಾ ಬಾಲಬಾಲಕಿಯರ ವಿವಿಧ ವಿನೋದಾವಳಿಗಳಾದುವು. ಎರಡನೇ ದಿನ ಪೂರ್ವಾಹ್ನ ಅದೇ ಶಾಲೆಯಲ್ಲಿ ಶಾಲಾ ಬಾಲಕ ಬಾಲಕಿಯರ ಸಂಗೀತ, ಭಾಷಣ, ಕಸೂತಿ ಸ್ಪರ್ಧೆಗಳೂ ಅಪರಾಹ್ನ ಬೋರ್ಡ್ ಹೈಸ್ಕೂಲಿನ ಆಟದ ಬಯಲಲ್ಲಿ ಆಟ, ಪಂದ್ಯಾಟಗಳೂ ನಡೆದುವು. ಮೂರನೇ ದಿನ ಪೂರ್ವಾಹ್ನ ಮೈನ್ ಶಾಲೆಯಲ್ಲೇ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ವಿದ್ಯಾವಸ್ತು ಪ್ರದರ್ಶನವನ್ನು ಉದ್ಘಾಟಿಸಿ, ಭಾಷಣವಿತ್ತರು. 'ಲಕ್ಕೀಡಿಪ್ಸ್' ಇದ್ದಿತು. ಅಪರಾಹ್ನ ಅಜ್ಜರಕಾಡಿಗೆ ಮಕ್ಕಳ ಮೆರವಣಿಗೆಯಾಗಿ ಅಲ್ಲಿ ಸಾಮೂಹಿಕ ಡ್ರಿಲ್ ನಡೆಯಿತು. ಕೊನೆಯ ದಿನ ಆಯಾ ಶಾಲೆಗಳಲ್ಲಿ ಮಕ್ಕಳಿಗೆ ತಿಂಡಿ ವಿತರಣೆ ನಡೆಯಿತು. ಅಪರಾಹ್ನ ಉಡುಪಿ ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ನಗರಾಧ್ಯಕ್ಷ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಉತ್ಸವ ಸಮಿತಿ ಕಾರ್ಯದರ್ಶಿ ಶ್ರೀ. ಎ. ಸಿ. ಮನೋರಮ, ಅವರು ವರದಿಯೋದಿದರು. ಬಹುಮಾನ ವಿತರಣೆಯಾದ ಬಳಿಕ ಶ್ರೀಗಳಾದ ಟಿ. ಎಲ್. ರಾವ್, ಎ. ಎಸ್ ಕಾರಂತ್, ಕೆ. ವಿಟ್ಠಲ ಶೆಟ್ಟಿಯವರ ಭಾಷಣಗಳಾಗಿ ಅಧ್ಯಕ್ಷರು ತಮ್ಮ ಭಾಷಣವನ್ನೋದಿದರು. ವಿವಿಧ ಶಾಲೆಗಳವರ ಫೇನ್ಸಿಡ್ರೆಸ್, ಗಾನ, ನೃತ್ಯ, ಲೇಝಿಮ್, ಸೀತಾ ವನವಾಸ ನಾಟಕ, ಇತ್ಯಾದಿಗಳು ಪ್ರದರ್ಶಿಸಲ್ಪಟ್ಟು, ಅಭಿನಯಗಾರರಿಗೆ ಬಹುಮಾನಗಳು ದೊರೆತವು. ಈ ವರ್ಧಂತ್ಯುತ್ಸವದ ಸಂಚಾಲಕ ಮುನ್ಸಿಪಲ್ ಕೌನ್ಸಿಲರ್ ಶ್ರೀ ವಿ. ಬಾಲಗಂಗಾಧರನ್, ಇವರು ಧನ್ಯವಾದಗಳನ್ನಿತ್ತರು.

ಜಿಲ್ಲಾ ಆಹಾರ ಪರಿಷತ್ತು

ಸುಬ್ರಹ್ಮಣ್ಯದಲ್ಲಿ ತಾ 12-5-49ರಲ್ಲಿ ಜರಗುವ ತೃತೀಯ ಕರ್ನಾಟಕ ಮಲೆನಾಡು ಪರಿಷತ್ತಿನ ಸಮಯ ಅಪರಾಹ್ನ ಘಂಟೆ 5ರಿಂದ 7ರ ವರೆಗೆ ಜಿಲ್ಲಾ ಆಹಾರ ಪರಿಷತ್ತು ಜರಗಿಸುವುದಾಗಿ ನಿಶ್ಚಯವಾಗಿರುತ್ತದೆ. ಕಾಂಗ್ರೆಸು ಕಮಿಟಿಯವರೂ, ಕೆಲಸಗಾರರೂ, ಆಹಾರ ಕೊರತೆಯಲ್ಲಿ ಕಾಳಜಿಯುಳ್ಳ ಯಾವತ್ತೂ ಮಹನೀಯರೂ ಮತ್ತು ಸಂಸ್ಥೆಗಳೂ ಈ ಪರಿಷತ್ತಿನಲ್ಲಿ ಭಾಗವಹಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ಮಲೆನಾಡು ಸುಧಾರಣೆಯು ಆಹಾರದ ಕೊರತೆಯನ್ನು ನಿವಾರಿಸಲು ತುಂಬಾ ಸಹಕಾರಿಯಾಗಬಹುದಾದ ಕಾರಣ ಈ ಎರಡು ಪರಿಷತ್ತುಗಳನ್ನು ಜತೆಯಲ್ಲಿ ಕೂಡಿಸುವ ಯುಕ್ತತೆಯು ಮಿತ್ರರಿಗೂ ನಮಗೂ ಕಂಡು ಬಂದಿದೆ. ಹಾಗೂ ಒಂದು ಪರಿಷತ್ತು ಜರಗಿಸುವುದೆಂದರೆ ಒಂದು ದೊಡ್ಡ ಜವಾಬ್ದಾರಿಕೆ. ಹೀಗಿರುವಾಗ ಒಂದೇ ಪ್ರಯತ್ನದ ಫಲವಾಗಿ ಎರಡು ಕೆಲಸಗಳನ್ನೂ ಸಾಧಿಸುವದು ಸುಲಭವೆಂದು ಗ್ರಹಿಸಿಕೊಂಡು ಈ ಜಿಲ್ಲಾ ಆಹಾರ ಪರಿಷತ್ತು ಅದೇ ಸಮಯ ಸುಬ್ರಮಣ್ಯದಲ್ಲಿ ಸೇರಿಸುವುದರಿಂದ ಆಹಾರ ಬೆಳೆಯುವ, ಬೆಳೆಸಲು ಸಾಧ್ಯವಿರುವ ಪ್ರದೇಶಗಳನ್ನು ಬೆಳೆಸದೆ ತಿನ್ನುವ ಮಹಾಶಯರು ನೋಡಬೇಕೆಂಬುದೂ ಒಂದು ಉದ್ದೇಶವಾಗಿದೆ.

ಸಾರ್ವಜನಿಕರು ಈ ಎರಡೂ ಪರಿಷತ್ತುಗಳಲ್ಲಿ ಭಾಗವಹಿಸುವಂತೆ ವಿನಂತಿ.

ಎಮ್ ಎನ್. ಭಿಡೆ,
ಅಧ್ಯಕ್ಷ,
ಕರ್ನಾಟಕ ಮಲೆನಾಡು ಸುಧಾರಣಾ ಸಂಘ.
ಮಂಗಳೂರು.

ಕುಂಬಳೆ:—ಕೋಟೆಪುರದ ಎರಡೂವರೆ ಫೀಟು ಉದ್ದವಿರುವ 54 ವರ್ಷ ಪ್ರಾಯದ ಅಯೋಬಲ್ ರಾವ್ ಎಂಬವರು ತಾ 30ರಲ್ಲಿ ಸ್ಥಳೀಯ ಎಚ್. ಇ. ಶಾಲಾ ಕಟ್ಟಡದಲ್ಲಿ ಹಲವು ಹಾಸ್ಯ ವಿನೋದಗಳನ್ನು ಪ್ರದರ್ಶಿಸಿದರು.

Navayuga Enterprise Ltd.
Regd. Office. PALUKOTE, UDIPI.
(Incorporated in India)

NOTICE

The Register of members and share transfer books of the Company will remain closed from the 15th May, 1949 to 5th June 1949 (both days inclusive).

(By Order of the Board)
K. H. Shetty,
Managing Director.

ತಾರೀಕು 4—5—1949ರಿಂದ
2ನೇ ವಾರ
ಸಿಟಿಡೆಲ್ ನವರ
ಜ್ಞಾನ ಸೌಂದರಿ
ಟಿ. ಆರ್. ಮಹಲಿಂಗಮ್, ಎಮ್. ವಿ. ರಾಜಮ್ಮ ಮತ್ತಿತರರು
ಲಲಿತ ಮತ್ತು ಪದ್ಮಿನಿಯರ ನೃತ್ಯ-
ಬರುವ ಚಿತ್ರ:- ರೆಹನಾ ಮತ್ತು ಅಶೋಕಕುಮಾರ್ ನಟಿಸಿರುವ ಫಿಲ್ಮಿಸ್ಥಾನ ಕೃತಿ- ಸಾಜನ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವ್ರದು
The Moolky Bank Ltd.,
Moolky, S K

ಪತ್ರವ್ಯವಹಾರ

ಅನುಕರಣಪ್ರಿಯರಿಗೆ

ಶ್ರೀ ಅದಮಾರು ಮಠದ ಸ್ವಾಮಿಗಳವರಾದ ಶ್ರೀ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರು ಅನುಕರಣೆಯನ್ನು ಬಿಡಬೇಕೆಂಬ ಅರ್ಥದ ಒಂದು ಪಾವನ ಸಂದೇಶವನ್ನು "ನವಯುಗ"ದ ತಾ 10-2-1949ರ ಸಂಚಿಕೆಯಲ್ಲಿ ಪ್ರಕಟಿಸಿದ್ದು ತಾ 17-3-49ರ ಸಂಚಿಕೆಯಲ್ಲಿ ಅಪಕ್ವ ಬುದ್ಧಿಯ ನಿತ್ಯರೊಬ್ಬರು "ಲೇಖ ಪ್ರಕಟವಾದರೆ ಸಾಕು" ಎಂಬ ಖ್ಯಾತಿ ಕಾಮನೆಯಿಂದ ಶ್ರೀಗಳವರ ಸಂದೇಶಕ್ಕೆ ಉತ್ತರವೆಂದು ಭಾವಿಸಿಕೊಂಡು ಒಂದು ಲೇಖನ ಪ್ರಕಟಿಸಿದ್ದಾರೆ. ಎರಡೂ ಲೇಖನಗಳನ್ನು ಓದಿದ ಒಬ್ಬ ಸಹೃದಯಿಗೆ ತೋರಿದ ಕೆಲವು ಮಾತನ್ನು ಇಲ್ಲಿ ಹೇಳಿದೆ.

ಅಡಿಗರು ಶ್ರೀಗಳವರ ಲೇಖನದಲ್ಲಿ ಬರೆದಿರುವ ಯಾವ ಅಂಶಗಳನ್ನೂ ಸರಿಯಾಗಿ ನೋಡಿಲ್ಲ; ಅರ್ಥವನ್ನೂ ಮಾಡಿಕೊಂಡಿಲ್ಲ. ಇಲ್ಲವಾದರೆ ಇಂಥ ಬಾಲಭಾವನೆಗಳನ್ನು ಪ್ರಕಟಿಸುತ್ತಿರಲಿಲ್ಲವೆಂದು ಕನಿಕರವುಂಟಾಗುತ್ತದೆ.

ಒಂದು ದೇಶದ ಜನತೆಯ ಅಭ್ಯುನ್ನತಿಯು ಆ ಜನತೆಯ ಶೀಲ-ಸಂಸ್ಕಾರಗಳ ಮಟ್ಟವನ್ನು ಹೊಂದಿರುತ್ತದೆ. ಈ ಶೀಲ-ಸಂಸ್ಕಾರಗಳನ್ನು ಆ ದೇಶದ ಚರಿತ್ರೆ ಸಂಸ್ಕೃತಿಗಳು ತಿಳಿಸಬಲ್ಲಂಥವು. ಯಾವ ವ್ಯಕ್ತಿಗೆ ತನ್ನ ಸಂಸ್ಕೃತಿಯಲ್ಲಿ ಸ್ವಾಭಿಮಾನವಿಲ್ಲವೋ ಅಂಥ ಬಡಪಾಯಿ ಜಡನೂ ಮೂಢನೂ ಆದಾನು. ಅವನನ್ನು ಪಡೆದ ದೇಶ ಒಬ್ಬ ನಿರುಪಯೋಗಿ ಮೂರ್ಖ ಜಂತುವಿನ ಜನನಕ್ಕೆ ಹೇತುವಾದ ಹಾಗಾದೀತು, ಅಷ್ಟೆ! ನಮ್ಮ ಹಿಂದೂ ದೇಶಕ್ಕೆ ಒಂದು ಉದಾತ್ತವಾದ ಧರ್ಮವೂ ವಿಶಾಲವಾದ ಸಂಸ್ಕೃತಿಯೂ ಉಜ್ವಲವಾದ ಪರಂಪರೆಯೂ ಇದೆ. ನಮ್ಮ ದೇಶದ ಹಿಂದಿನ ಚರಿತ್ರೆ, ಈ ಕಲ್ಪನೆಯ ನೆಲಗಟ್ಟಿನಿಂದಲೇ ಸುಪ್ರೋಜ್ವಲವಾಗಿದೆ. ಲೋಕವನ್ನೇ ಬಂಧು ಭಾವನೆಯಿಂದ ಕಾಣಬೇಕೆಂಬ ವಿಶಾಲ ತಂತ್ರವನ್ನು ಬೋಧಿಸಿದ ವೇದವಾಣಿ 'ಮ್ಲೇಂಛಭಾಷೆಯಿಂದ ಮಾತಾಡಬಾರದು' ಎಂದೇ ಬೋಧಿಸಿದೆ. "ಉತ್ತಮ ಜನರು ಹಿರಿಯರು ಆಚರಿಸಿದಂತೆ ಆಚರಿಸು" ಎಂದು ಸಾರಿದೆ. "ಪರಧರ್ಮ" ಎಂಬುದೇ ಇಲ್ಲವೆಂದು ಭಾವಿಸುವುದು 'ಬ್ರಿಟಿಷರ ಸರ್ವಮತದಿಂ ನಡೆ ಕಲಿತದ್ದು .....ಸಹಿಷ್ಣುತೆಯೋ ಸಹಿ ಪರಮತ ಭೇದ ಬುದ್ಧಿ ಭ್ರಾತೀಭಾವ ನಿಜ ಸತ್ಯ ಸಹೃದಯೋನುರಾಗ:......' ಎಂದು ಹೇಳುವಾಕೆಯ ಮಂದ ಪ್ರತಿಭೆಯ ವಾಸನೆಯೂ ಇದ್ದೀತು!

ವಿವೇಕಾನಂದರ ಹೆಸರನ್ನುಚ್ಚರಿಸಿ ಏನೋ ನಾಲ್ಕು ಪಂಕ್ತಿ ಬರೆಯಲು ಪ್ರಯತ್ನಿಸಲಾಗಿದೆ. ವಿವೇಕಾನಂದರು ಅಮೇರಿಕಾದಲ್ಲಿ ನಿಂತು ಕ್ರಿಶ್ಚಿಯನ್ ತತ್ವವನ್ನೇನೂ ಪ್ರಶಂಸಿಸಿ ಭಾಷಣವಿತ್ತ ಹಾಗೆ ಗೊತ್ತಿಲ್ಲ. ಅವರು ಅಲ್ಲಿ ಹಿಂದೂ ಧರ್ಮವನ್ನೇ ಹಾಡಿ ಹೊಗಳಿದ್ದು. ನಮ್ಮ ಧರ್ಮದ ಮೇಲೆ, ಸಂಸ್ಕೃತಿಯ ಮೇಲೆ ಅಭಿಮಾನವಿರಬೇಕೆಂದು ಹೇಳಿದ ಶ್ರೀಗಳ ಸಂದೇಶದ ಸಮರ್ಥನೆಯೇ ವಿವೇಕಾನಂದರ ಆಚರಣೆಯಿಂದ ಸಿದ್ಧವಾಗುವುದಲ್ಲವೇ? ವಿವೇಕಾನಂದರ ಕುರಿತು ಭಿನ್ನಾಭಿಪ್ರಾಯ ಪಟ್ಟವರಿದ್ದರೆ ಶ್ರೀಗಳ ಸಂದೇಶದ ಮೇಲೆ ಭಿನ್ನಾಭಿಪ್ರಾಯಪಟ್ಟ ಅಡಿಗರ ಬುದ್ಧಿಯು ಸರಿ ಆಗಲೂ ಇದ್ದಿರಬಹುದು. ಅದಕ್ಕೆ ಯಾರು ಹೊಣೆ?

ಅಡಿಗರು ತನ್ನ ಲೇಖನವನ್ನು ಸ್ವಲ್ಪ ಲಂಬಿಸುವ ಉದ್ದೇಶದಿಂದ 18ಕೋಟಿ ಗೋಗಳನ್ನಿಳಿದು ತಂದಿದ್ದಾರೆ! ಸ್ವಧರ್ಮಾಭಿಮಾನವನ್ನು ಪ್ರಚೋದಿಸುವ ಶ್ರೀಗಳ ಸಂದೇಶವು ಗೋಪಾಲನೆಯ ಸುಧಾರಣೆಯನ್ನೇನೂ ನಿರಾಕರಿಸುವುದಿಲ್ಲ.

ಬ್ರಾಹ್ಮಣರು ಇತರ ವೃತ್ತಿಗೆ ಇಳಿದಿಲ್ಲವೇ? ಎಂದೇನೋ ಅಡಿಗರು ಅತ್ತಿದ್ದಾರೆ. ಅದು ತಪ್ಪು ಎಂದೇ ಶ್ರೀಗಳ ಸಂದೇಶದ ಸಾರವಾಗಿರುವಾಗ ಅಡಿಗರು ಆ ಮಾತನ್ನು ಆಡುವ ಪ್ರಮೇಯ ಬರಬಾರದಿತ್ತು.

ಉಡುಗೆ-ತೊಡುಗೆ-ಬೀಡಿ-ಸಿಗರೇಟು ಸೇವನೆ-ಮುಂತಾದ ವಿಚಾರಗಳಲ್ಲಿ ನಯವಿದರೆಲ್ಲರೂ ಶ್ರೀಗಳ ಸಂದೇಶದ ಅಭಿಪ್ರಾಯವನ್ನು ಅನುಮೋದಿಸುವಾಗ ಅಡಿಗರಿಗೆ ಅವುಗಳಲ್ಲಿ ಆಗ್ರಹವಿದ್ದರೆ ಅದಕ್ಕೆ ವಿವೇಕಿಗಳ ಪ್ರತೀಕಾರವಿಲ್ಲ!.

ಶ್ರೀಗಳವರು ಅನುಕರಣೆ ಸ್ವಾಭಿಮಾನಕ್ಕೆ ವಿಘ್ನಕಾರಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಡಿಗರಿಗೆ ಅನುಕರಣೆಯಲ್ಲಿ ಛಲವಿದ್ದರೆ ಅದು ಅಡಿಗರ ದೌರ್ಭಾಗ್ಯವೇ ಸರಿ! ತಪ್ಪನ್ನು ತಪ್ಪೆಂದೇ ಹೇಳುವಾಗ-ಆ ತಪ್ಪನ್ನು ಸರಿಯೆಂದು ವಾದಿಸುವುದು ಒಂದೋ ಅಜ್ಞಾನದ ಲಕ್ಷಣ—ಅಥವಾ ಉನ್ಮಾದ ದೋಷ. ಹೀಗಾಗಿ ಆ ಲೇಖನದ ಕೆಲವು ಅಭಿಪ್ರಾಯಗಳು ಅರ್ಥಾರ್ಥ ಸಂಬಂಧವಿಲ್ಲದಂಥವು.

ಧರ್ಮಾವಿರೋಧವಾದ ಯಾವ ಬದಲಾವಣೆಯೂ ಸ್ವಾಗತಾರ್ಹವೇ. ನಮ್ಮತನವನ್ನೇ ಮರೆಯಿಸುವ ಹಾದಿಯಷ್ಟೇ ತ್ಯಾಜ್ಯ. ಇದು ಶ್ರೀಗಳ ಸಂದೇಶದ ಸಾರಾರ್ಥವಾಗಿರುವಾಗ ವಾದಿ ಅಡಿಗರು ಕಾರು-ಗೇರು ಸಂಪತ್ತು-ವಿವೇಕಾನಂದ-ಉಪವಾಸ-ಮುಂತಾದ ನೂರಾರು ಶಬ್ದಗಳೊಡನೆ ನೇತಾಡಿದ್ದನ್ನು ಕಂಡು ತುಂಬಾ ಕನಿಕರವುಂಟಾಯಿತು.

—ಒಬ್ಬ ವಿಮರ್ಶಕ

ಉಡುಪಿ

ಕೌನ್ಸಿಲು ಮೀಟಿಂಗು ಉಡುಪಿ ಮುನ್ಸಿಪಲ್ ಕೌನ್ಸಿಲ್ ಸಭೆಯು ಕಳೆದ ತಾ 30ರಲ್ಲು ಚೆಯರ್‌ಮೆನ್ ಶ್ರೀ. ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುನ್ಸಿಪಲ ಥಕ್ಕರ್ ಬಾಪಾ ವಿದ್ಯಾಲಯಕ್ಕೆ ರೂ 25-ಸಹಾಯಧನ ಕೊಡಲು ನಿರ್ಧಾರವಾಯಿತು. ಮೂಡನಿಡಂಬೂರು ಗ್ರಾಮದ ಸರ್ವೆ ನಂಬ್ರ 72/3ರ ಸ್ಥಳದಲ್ಲಿ ತನ್ನ ಗಂಡ ದಿವಂಗತ ಶ್ರೀ ಎಮ್. ವೆಂಕೋಬಾಚಾರ್ಯರ ಹೆಸರಿನಲ್ಲಿ 'ಪಾರ್ಕ್' ಕಟ್ಟಿಸುವುದಾದರೆ ಆ ಬಗ್ಗೆ ತಾನು ರೂ 1000/- ಕೊಡುವೆನಾಗಿ ಶ್ರೀಮತಿ ಕಮಲಾಕ್ಷಿ ಅಮ್ಮನವರು ಬರೆದ ಪತ್ರ ಓದಲ್ಪಟ್ಟಿತು. ಜಾಸ್ತಿ ಹಣ ಕೊಡುವಂತೆ ಶ್ರೀಮತಿಯವರನ್ನು ಪುನಃ ವಿನಂತಿಸಬೇಕೆಂದಾಯಿತು. ಹಣಯಡಿ ವಾರ್ಡಿನ ಭೂತದೋಣಿಯನ್ನು ಅಗಲ ಮಾಡಲು ರೂಪಾಯಿ 410- ಖರ್ಚು ಮಾಡಬಹುದೆಂದಾಯಿತು.

ವರ್ಗಾವರ್ಗಿ:—ಇಲ್ಲಿ 2-3 ವರ್ಷಗಳಲ್ಲಿ ಶಾಲಾ ಸೀನಿಯರ್ ಡಿಪ್ಟಿ ಇನ್ಸ್‌ಪೆಕ್ಟರಾಗಿ ಸರ್ವಜನ ಪ್ರಿಯರೂ ಉಪಾಧ್ಯಾಯರ ಬಂಧುವೂ ಆಗಿದ್ದ ಶ್ರೀ ಕೆ. ಗೋಪಾಲ್ ಅವರು ಇತ್ತೀಚಿಗೆ ಮಂಗಳೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಅವರ ಸ್ಥಾನಕ್ಕೆ ಸ್ಥಳೀಯ ಟ್ರೈನಿಂಗ್ ಶಾಲೆಯ ಅಧ್ಯಾಪಕರಾಗಿದ್ದ ಶ್ರೀ. ಟಿ. ಎಲ್. ರಾಯರು ನೇಮಕ ಹೊಂದಿದ್ದಾರೆ.

ಹವಾಮಾನ:—ಇತ್ತೀಚಿಗೆ ಸೆಖೆಯು ಅತಿ ವಿಶೇಷವಾಗಿದೆ. ಆಗಾಗ ಮಳೆಯ ಮೋಡವಾಗುತ್ತಿದೆ. ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಮಳೆಯೂ ಬಿದ್ದಿರುವುದು. ಎಲ್ಲೆಲ್ಲಿಯೂ ನೀರಿನ ಕೊರತೆಯುಂಟಾಗಿ ಜನರು ಪೇಚಾಟಕ್ಕೀಡಾಗಿದ್ದಾರೆ.

ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ಮಾರಾಟ ಸಂಘ, ಪುತ್ತೂರು.

ನೋಟೀಸು

ಈ ಸಂಘದ ಬರುವ ಮಹಾಸಭೆಯನ್ನು ತಾರೀಕು 22-5-49ರಲ್ಲು ಆದಿತ್ಯವಾರ ಅಪರಾಹ್ನ 3 ಗಂಟೆಗೆ ಪುತ್ತೂರು ಸಹಕಾರಿ ಟೌನ್ ಬೇಂಕಿನ ಮಹಡಿಯಲ್ಲಿ ಜರಗಿಸುವುದಾಗಿ ನಿರ್ಣಯಿಸಿಯದೆ. ಎಲ್ಲಾ ಮೆಂಬರರು ಹಾಜರಾಗಬೇಕಾಗಿ ವಿನಂತಿ. ಕಾರ್ಯಕ್ರಮವನ್ನು ಕೆಳಗೆ ಕಾಣಿಸಲಾಗಿದೆ.

ವಿ. ಸೂ:— ಸಂಘದ ಪ್ರತಿನಿಧಿಗಳು ಆಯಾ ಸಂಘದ ಮಹಾಸಭೆ, ಡೈರೆಕ್ಟರರ ಅಥವಾ ಪಂಚಾಯತ ಸಭೆಯ ನಿರ್ಣಯದ ಮಂಜೂರು ನಕಲನ್ನು ಮುಂದಾಗಿ ಕಳಿಸಿಕೊಡಬೇಕು. ಅಥವಾ ಬರುವಾಗ್ಯೆ ಅವರೊಡನೆ ತಂದು ಹಾಜರುಪಡಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಕಾರ್ಯಕ್ರಮ

1. 1947-48 ನೇ ವರುಷದ ಬಾಬ್ತು ಡಿಪ್ಯುಟಿ ರಿಜಿಸ್ಟ್ರಾರರ ಆಡಿಟು ಸರ್ಟಿಫಿಕೇಟು ಮತ್ತು ಆಡಳಿತ ಮಂಡಳಿಯ ವರದಿ.
2. 1948 49ನೇ ವರುಷದ ಬಾಬ್ತು ದುರಸ್ತಿಪಡಿಸಿದ ಆಯ ವ್ಯಯದ ಪಟ್ಟಿ ಮತ್ತು 1949-50ರ ಬಾಬ್ತು ಅಂದಾಜು ಆಯವ್ಯಯದ ಪಟ್ಟಿ.
3. ಮಂಗಳೂರು ಶಾಖೆ ಮತ್ತು ಕೆಲವು ಮುಚ್ಚಿದ ಶಾಖೆಗಳಿಗೆ ಬರಬೇಕಾದ ಕೆಟ್ಟ ಸಾಲಗಳ ಪೈಕಿ ರೂ 3959-5-7ನ್ನು ಲೆಕ್ಕದಿಂದ ವಜಾ ಬರೆಯುವಂತೆ ಶಿಫಾರಸು ಮಾಡಿದ ಆಡಳಿತ ಮಂಡಳಿಯವರ ನಂಬ್ರ 50 27-4-48ನೇ ನಿರ್ಣಯ.

(ಅಪ್ಪಣೆ ಪ್ರಕಾರ,
Sd ಪಿ. ಲಕ್ಷ್ಮೀನಾರಾಯಣ ರಾವ್,
ಕಾರ್ಯದರ್ಶಿ
ಮಂಗಳೂರು ತಾ 28-4-49

ವಿಚಿತ್ರ ಹವೆ: ಮಳೆಯ ಮೋಡಗಳು ಕವಿದಿದ್ದರೂ ಮಳೆಬೀಳದಿಲ್ಲವಾದುದರಿಂದ ಸೆಕೆ ವಿಪರೀತ ಜಾಸ್ತಿಯಾಗಿದೆ. ಪರಿಣಾಮವಾಗಿ ಅಲ್ಲಲ್ಲಿ ವಿಷಮಜ್ವರ, ಸಿಡುಬು, ಕಾಲರ, ಕೋಟಲೆ ಮೊದಲಾದ ರಾಹಿಲೆಗಳಿಗೆ ಆಶ್ರಯ ದೊರೆತಿದೆ.

1949-50ರಲ್ಲು ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂದು ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1-4-0 ಕಳುಹಿಸಿರಿ. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು, ಲಾಭ ನಷ್ಟಗಳು, ಮದುವೆ, ಮುಂಬಡ್ತಿ, ಸಂತತಿ, ತೇಜಿ ಮಂದಿ, ಸಮಯಾದಿಗಳನ್ನು ಸೂಚಿಸುವೆವು. ಅಲ್ಲದೆ ದುಷ್ಟ ಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನು ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು. ಟಪ್ಪಾಲು ವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,
Roj jyotshi
(N. R. U-) Jullundur City.

NOTICE

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. I. A. No. 359 of 1949. O. P. No. 30 of 1948.

ಸಿಂಡಿ. ಶೆಡ್ತಿ-ಕಟಪಾಡಿ ವೀರಯ್ಯ ಸೆಟ್ರ ಮಗಳು, ಉಡುಪಿ ತಾಲ್ಲೂಕು ಕೋಟೆ ಗ್ರಾಮದ ಕೋಟೆಬೀಡಿನಲ್ಲಿ ಇರುವವಳು. — .ಅರ್ಜಿದಾರಳು.

ಅರ್ಜಿದಾರಳ ಮಗ ಮೃತಪಟ್ಟ K. B. ಸದಾಶಿವ ಸೆಟ್ರಿಗೆ ಹೊರಗಿನಿಂದ ಬರತಕ್ಕ ಸಾಲಗಳ ವಸೂಲಿ ಕುರಿತು Succession certificate ಅಪೇಕ್ಷಿಸಿ ಕೊಟ್ಟ ಸದ್ರಿ O. P. No. 30 of 48ನೇ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರಳಿಗೆ ಕೊಡಲ್ಪಟ್ಟ ಸರ್ಟಿಫಿಕೇಟನ್ನು ಈ ಕೆಳಗೆ ಕಾಣಿಸಿದ ಸೊತ್ತಿನ ಮಟ್ಟಿಗೆ Extension ಮಾಡಿ ಕೊಡಬೇಕಾಗಿ ಅರ್ಜಿದಾರಳು ಕೊಟ್ಟ ಸದ್ರಿ R. I. A. No. 359 of 1949ನೇ ಅರ್ಜಿಯು ತಾರೀಕು 8-6-1949ಕ್ಕೆ ತನಿಖೆಗೆ ಇಡಲ್ಪಟ್ಟಾಗಿಯದೆ. ಈ ಕುರಿತು ಯಾರಾದರೂ ಆಕ್ಷೇಪಿಸುವವರು ಇದ್ದರೆ ಸದ್ರಿ ತಾರೀಕಿನ ದಿವಸ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ತನ್ನ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸೋಣಾಗಿಯದೆ.

ಸದ್ರಿ ಮೇರೆಗೆ ಅಪೇಕ್ಷಿಸಿದ Extension of Certificateಗೆ ಕಾರಣವಾದ ಸೊತ್ತಿನ ವಿವರ.

S. N.	Name of debtor.	Value of the Security	Description and date of instrument by which it is secured
1	The Pangal Nayak Bank Ltd., Katapadi	Jewels weighing 9-5/16 tholas and worth about Rs. 950/. Less Principal of the loan of Rs. 750/- and interest thereon	Jewel L. No. 755/48 dated 7-5-1948 of the said Bank for Rs. 750/- and thereon.

Udipi,
Dated 25-4-49.

K. J. Ballal.
Vakil for Petitioner.

ಕಡಿಮೆ ಮೊತ್ತದ ವಿಮೆ ಮಾಡಬೇಕೆಂದಿದ್ದರೆ—
ಅಧಿಕ ಸವಲತ್ತಿನ ವಿಮೆ ಪಡೆಯಬೇಕೆಂದಿದ್ದರೆ—
ದಿ
ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಉಡುಪಿ
ಇವರೊಡನೆ ವಿಚಾರಿಸಿರಿ!

ಮಂಗಳೂರು.

ಅಖಿಲ ಭಾರತ ಸಮಾಜಸೇವಾ ದಿನಾಚರಣೆಯಸಲುವಾಗಿ ಸಾರ್ವಜನಿಕ ಸಭೆಯೊಂದು ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಶೈವಾರರ ಅಧ್ಯಕ್ಷತೆಯಲ್ಲಿ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ವಠಾರದಲ್ಲಿ ಜರಗಿತು. ಅಧ್ಯಕ್ಷರ ಪೂರ್ವ ಪೀಠಿಕಾ ಮಾತುಗಳಾದ ನಂತರ ಶ್ರೀ ಕೆ. ಎಲ್. ಎನ್ ರಾಯರು ಮದ್ರಾಸಿನಲ್ಲಿ ಕಳೆದ ದಸಂಬರ ತಿಂಗಳಲ್ಲಿ ಜರಗಿದ ಸಮಾಜಸೇವಾ ಪರಿಷತ್ತಿನ ಕಾರ್ಯಕಲಾಪಗಳನ್ನೂ ನಿರ್ಣಯಗಳನ್ನೂ ತಿಳಿಸಿದರು. ಶ್ರೀಗಳಾದ ವೆಂಕಟೇಶಪ್ಪ ನವರು ದ. ಕ. ಜಿಲ್ಲೆಯ ಅನಾಥಾಲಯಗಳ ಕುರಿತೂ, ಬಿ ಮೋಹನರಾಯರು ಜಿಲ್ಲಾ ಕ್ಷೇಮನಿಧಿಯವರು ಕಟ್ಟಲಿರುವ ಕ್ಷಯರೋಗದ ಆಸ್ಪತ್ರೆಯ ಕುರಿತೂ ಭಾಷಣವಿತ್ತರು. ಬಳಿಕ ರೆ. ಫಾ। ಕೊಯ್ಲೊ, ಶ್ರೀಗಳಾದ ಸಿ. ಆರ್. ಪೂಂಜ, ಎನ್. ಎಸ್. ಕಿಲ್ಲೆ, ಎಮ್. ಕೃಷ್ಣಸೆಟ್ಟಿ, ಡಾ। ಎ. ಎಫ್. ಕೊಯ್ಲೊ, ಶ್ರೀಮತಿಗಳಾದ ಶಾರದಾ ತಳವಾರ್, ಶಾಂಭವೀ ಪೂಂಜ, ಮೇರಿ ಬ್ರಿಟೊ ಮೊದಲಾದವರು ಬೇರೆಬೇರೆ ವಿಷಯಗಳ ಮೇಲೆ ಮಾತನಾಡಿದರು. ಸಭಾಂತ್ಯದಲ್ಲಿ ಅಧ್ಯಕ್ಷರು ಭಾಷಣಗಾರರಿಗೆ ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲಾ ನಿಷಿದ್ಧ ಭಾರತೀಯ ವೈದ್ಯ ಸಂಘದವಾರ್ಷಿಕ ಮಹಾಸಭೆಯು ಕಳೆದ ತಾ 24ರಲ್ಲು ಸ್ಯಾಂಟ್ ಜೊಸೆಫ್ಸ್ ಫಾರ್ಮಸಿಯಲ್ಲಿ ಜರಗಿತು. ವೈ। ಕೆ ಶಿವಪ್ಪ ಪಂಡಿತರ ಆತ್ಮಕ್ಕೆ ಶಾಂತಿಯನ್ನು ಕೋರಿದ ಬಳಿಕ ವರದಿ ಓದಲ್ಪಟ್ಟಿತು. ಹೊಸ ವರುಷಕ್ಕೆ ವೈದ್ಯರುಗಳಾದ ಶ್ರೀ ಎಸ್. ಕೆ. ವೇಕರನ್ನರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಪಾಂಗಾಳ ಲಕ್ಷ್ಮೀನಾರಾಯಣನಾಯ್ಕರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಸಿ. ಅಗ್ನಿಸ್ವರನ್ನು ಖಜಾಂಚಿಯವರನ್ನಾಗಿಯೂ ಶ್ರೀ ಎಂ. ವೆಂಕಪ್ಪಯ್ಯ ಮತ್ತು ಶ್ರೀ ಎಮ್. ಆರ್. ಜೋಶಿ ಇವರನ್ನು ಜತೆಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲ್ಪಟ್ಟಿತು. ಗಾಂಧಿ ನೇಶನಲ್ ಮೆಮೋರಿಯಲ್ ಫಂಡಿಗೆ ಸಂಘದ ಪರವಾಗಿ ನೆರೆದಿದ್ದ ಸದಸ್ಯರಿಂದ ರೂ. 51-ಸಂಗ್ರಹಿಸಲಾಯಿತು.

ವಿಮಾನ ನಿಲ್ದಾಣದ ರಚನೆ ವಾಣಿಜ್ಯ ಸಂಘದವರು ಭಾರತ ಸಂಕಾರದೊಡನೆ ಮಂಗಳೂರಲ್ಲಿ ವಿಮಾನ ನಿಲ್ದಾಣ ರಚನೆಮಾಡುವ ವಿಷಯವನ್ನು ಕೇಳಿದಾಗ ಮಂಗಳೂರಲ್ಲಿ ವಿಮಾನ ನಿಲ್ದಾಣವನ್ನು ಕಟ್ಟುವರೆ ಅಂದಾಜು ಪತ್ರವು ಸಿದ್ಧವಾಗುತ್ತಿದೆ ಯೆಂಬುದಾಗಿ ಸರಕಾರದಿಂದ ಉತ್ತರ ಬಂದಿರುವುದಾಗಿ ತಿಳಿದು ಬರುತ್ತದೆ.

ಆರ್. ಎಸ್. ಎಸ್. ಚಳವಳದಲ್ಲಿ *ಶಿಕ್ಷೆಗೆ ಗುರಿಯಾದ 12 ಮಂದಿ ಆರ್. ಎಸ್. ಎಸ್. ನವರು ಕಳೆದ ತಾ 26ರಲ್ಲು ಇಲ್ಲಿಯ ಸಬ್‌ಜೈಲಿನಿಂದ ಬಿಡುಗಡೆಹೊಂದಿರುವರು.*

ಗಾಂಧಿ ಸ್ಮಾರಕನಿಧಿಗೆದಕ್ಷಿಣಕನ್ನಡ ಜಿಲ್ಲೆಯಿಂದ ಈ ತನಕ 1,22,199 ರೂಪಾಯಿ ಸಂಗ್ರಹವಾಗಿದೆ ಎಂದು ತಿಳಿದುಬರುತ್ತದೆ.

ದಂಡನೆ:— ಹಾಲು ನೀರಿನ ಬೆಂಕಿಯ ಆರೋಪದ ಸಂಬಂಧ ಕುಲಶೇಖರ ಸಂಕಪ್ಪ ಸೆಟ್ಟಿಗೆ ರೂ 60 , ಅದೇ ಗ್ರಾಮದ ಬಾಸಿ ಲೋಬೋನ ರೂ 50-. ನೀರುಮಾರ್ಗದ ಗಂಗು ಹೆಂಗಸಿಗೆ ರೂ 75 , ಜುಲ್ಮಾನೆಯನ್ನು ಸಬ್ ಮೆಜಿಸ್ಟ್ರೇಟ್ ಶ್ರೀ ಎಮ್ ಸಿ. ಮಾಚೆನರು ವಿಧಿಸಿರುವರು.

ಮದ್ಯವಿಧಿಗಳ ಅತಿಕ್ರಮದ ಆರೋಪಅಶೋಕಾರಿಷ್ಟ, ದಶಮೂಲಾರಿಷ್ಟ ಮೊದಲಾದ ಆಸವ ಅರಿಷ್ಟಗಳ-ಲೈಸೆನ್ಸು ಪಡೆಯದೆ ತಮ್ಮ ವೈದ್ಯಶಾಲೆಯಲ್ಲಿರಿಸಿ ಕೊಂಡಿದ್ದರೆಂದು ಕೋಟೆಕಾರಿನ ಮೈಂದಪ್ಪ ವೈದ್ಯರ ಮೇಲೂ ಅದೇ ಆರೋಪದ ಮೇಲೆ ಕೋಟೆಕಾರ್ ರಾಮಪಂಡಿತರ ಮೇಲೂ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಮೈಂದಪ್ಪ ವೈದ್ಯರಿಗೆ ರೂ 30-ಮತ್ತು ರಾಮಪಂಡಿತರಿಗೆ ರೂ 60-ಜುಲ್ಮಾನೆ ವಿಧಿಸಲ್ಪಟ್ಟಿತು

ತೂಕದ ಅಳತೆಯಲ್ಲಿ ತಾರತಮ್ಯ ಹೆಚ್ಚುಕಡಿಮೆ ತೂಕ ಅಳತೆಗಳ ಕಾಯಿದೆ ಮೇರಿಗೆ 1 ಕ್ಲಾಸ್ ಬೆಂಚ್‌ಕೋರ್ಟಿನಲ್ಲಿ ಬಂದರದ ಮುಕುಂದ ಪೈಗಳಿಗೆ ರೂ 12- ಮತ್ತು ಸುರತ್ಕಲ್ಲಿನ ಶೀನಭಂಡಾರಿಗೆ ರೂ 15- ಜುಲ್ಮಾನೆ ವಿಧಿಸಲಾಯಿತು.

ಕವತ್ತಾರಿನಲ್ಲಿ ಮೂವರ ಕೈದು ಮೂಲ್ಕಿ ಕವತ್ತಾರು ಗ್ರಾಮದಲ್ಲಿ ಕಳೆದ ತಾ 16ರಲ್ಲು ಡುಮಿಂಗೋ ಫೆರ್ನಾಂಡೀಸ್ ಎಂಬಾತನ ಕೊಲೆಯ ಸಂಬಂಧ ಅಲ್ಲಿಯ ಬ್ರಾಜ ಲೀಗೋರಿ, ಆತನ ಹೆಂಡತಿ ಮತ್ತು ಮಗಳನ್ನು ಮೂಲ್ಕಿ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ವಿ. ವೆಂಕೋಜಿರಾವ್ ಅವರು ಕೈದು ಮಾಡಿರುತ್ತಾರೆ.

ನಿಧನಮಂಗಳೂರಿನ ಪ್ರಸಿದ್ಧ ಸಾಹುಕಾರರಲ್ಲೊಬ್ಬರಾಗಿದ್ದ ಶ್ರೀ ಬಿ. ಪಾಂಡುರಂಗರಾವ್ ಅವರು ಕೆಲವು ದಿವಸಗಳ ಹಿಂದೆ ಹೃದ್ರೋಗದಿಂದ ಆಕಸ್ಮಿಕ ನಿಧನ ಹೊಂದಿದರೆಂದ ತಿಳಿಸಲು ವಿಷಾದಿಸುವೆವು

ನೀರಿನ ಅಭಾವನಗರದ ಹಲವು ಕಡೆಗಳಲ್ಲಿ ತೋರಿಬರುತ್ತದೆ. ಮೈಲು, ಅರ್ಧಮೈಲು ದೂರದಿಂದ ನೀರು ತರುವ ಪರಿಸ್ಥಿತಿಯುಂಟಾಗಿದೆ

ತಿದ್ದುಪಡಿ:— ತಾ 14-4-49ರ ನಮ್ಮ ಸಂಚಿಕೆಯ 9ನೆ ಪುಟದ 3ನೆ ಕಲಮಿನಲ್ಲಿ ಪ್ರಕಟವಾದಂತೆ ಮೊಗವೀರ ಲೇಬರ್ ಯೂನಿಯನ್ ಮಂಗಳೂರು ಇದರ ಆಶ್ರಯದಲ್ಲಿ 'ಸತ್ಕಾರಕೂಟ'ವು ನಡೆಯಲಿಲ್ಲವೆಂದೂ ಈ ಯೂನಿಯನ್ನಿನ ಅಧ್ಯಕ್ಷರು ಶ್ರೀ ಎಚ್. ಲೈ. ತಿಂಗಳಾಯರಲ್ಲವೆಂದೂ ಯೂನಿಯನ್ ಸ್ಥಾಪಿತವಾದಂದಿನಿಂದ ಶ್ರೀ ಜೆ ಎ. ಪುತ್ರನ್ ಅವರೇ ಅಧ್ಯಕ್ಷರಾಗಿರುವರೆಂದೂ ಮೊಗವೀರ ಲೇಬರ್ ಯೂನಿಯನಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

WANTED

Applications are invited from Secondary Grade Trained Male Teachers, to fill up two permanent vacancies in the Hindu Higher Elementary School, Kalliyanpur. Candidates with Scouting or Physical Training Certificates will be given preference. Starting Pay Rs. 45/-per month, with usual allowances.

K. Krishnaraya Baliga,
Correspondent,
Hindu Higher Elementary
school, Kallianpur (S. K)
Kallianpur, 27-4-49

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ದರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao Kunjoor.
Manager.

ಋತುಸ್ರಾವ ನಿಂತಿತು

'ಕುಮಾರಿ' ದಿಲ್ಲೆಗಳನು ಉಪಯೋಗಿಸಿದರೆ ಪಡೆತಪ್ಪಿ ಋತುಸ್ರಾವವಾಗುವುದು ಸಕಾಲಕ್ಕೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾಧಾರಣ ಮಂದಿಗೆ ಮಾತ್ರ ಗುಣವಾಗಿದೆ- ಬೆಲೆ, ರೂ 3 ; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಖರ್ಚು ರಹಿತ ಪ್ರತ್ಯೇಕ]

Mis. D. DEVEE, P. 03 (N. J.)
Tollygunge CALCUTTA
ಸ್ಟಾಕಿಸ್ಟರು: ಪ್ರಕಾಶ್ ಕಂಪೆನಿ ಮಂಗಳೂರು



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಬಲ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಸಕಲಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವೇಶಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವೇಶಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷಪಾತ, ಗೂರಲು ಕ್ಷಯ. ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮೊಳಕಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಗುಳ್ಳು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8 0 ವಿ. ಪಿ ಬೇರೆ. ಡಜನ್ ಶೀಸೆಗಳಿಗೆ ವಿ. ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಬೇರೆ ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60 0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1 8 0 ಡಜನ್ ಶೀಸೆಗಳಿಗೆ ರೂ. 18 ವಿ ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ಬಿಟ್ಟಿರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲಿನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly

ಬೊಂಬಾಯಿ ಸ್ಟಾಕಿಸ್ಟರು:—ಲಕ್ಷ್ಮಾವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2

ದ ಕನ್ನಡ

ಕಿನ್ನಿಗೋಳಿ. ವಸಂತ ಸಾಹಿತ್ಯೋತ್ಸವವು—೧೯-೪-೪೯ರಂದು ಕರ್ನಾಟಕ ಉತ್ಸವದ ಸುಸಂಧಿಯಲ್ಲಿ ಸ್ಥಳೀಯ ಶಾಲಾ ಭವನದಲ್ಲಿ ಕಿನ್ನಿಗೋಳಿ ಕರ್ನಾಟಕ ಸಂಘದವತಿಯಿಂದ ಶ್ರೀ. ಕೆ ಎಸ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಕಾರ್ಯದರ್ಶಿಗಳು ಉತ್ಸವ ನೆರವೇರಿಸುವುದರ ಉದ್ದೇಶವನ್ನು ಸ್ಪಷ್ಟೀಕರಿಸಿದರು. ಶ್ರೀ. ಕೆ. ಶ್ರೀನಿವಾಸ ಉಡುಪರು "ಪ್ರಜಾಧರ್ಮ"ದ ಕುರಿತೂ ಶ್ರೀ. ಕೆ. ಆರ್. ಉಡುಪರು "ಏಕೀಕರಣ"ದ ಕುರಿತೂ ಮಾತಾಡಿದರು. ಶ್ರೀ ಕೆ ಎಸ್. ಉಡುಪರು "ಅಮೇರಿಕಾದ ಜನಜೀವನ"ದ ಕುರಿತು ಮಾತಾಡುತ್ತಾ ಅಲ್ಲಿನ ಸಾಮಾಜಿಕ ವಿಚಾರ, ರಾಜಕೀಯ ತಿಳಿವು, ಸಾಂಸ್ಕೃತಿಕೋನ್ನತಿ, ಸಾಹಿತಿಕಅಭಿವೃದ್ಧಿ ಇವೆಲ್ಲವನ್ನೂ ಚರ್ಚಿಸಿ "ನಾವು ಭಾರತೀಯರೆಷ್ಟು ಅಮೇರಿಕಾದವರನ್ನರಿತಿದ್ದೇವೋ ಅಷ್ಟು ನಮ್ಮನ್ನು ಅಮೇರಿಕದವರರಿತಿಲ್ಲ. ಇದಕ್ಕೆ ಕಾರಣ ನಮ್ಮ ಕುರಿತಾದ ಅಲ್ಲಿನ ಅಜ್ಞಾನ. ಉದಾಹರಣೆಗಾಗಿ ಒಂದುಬಾರಿ ಮುಂಬಾಯಿಗೊಂದು ತಂತಿ ಬಿಡಲು ನಾನು ಹೋದಾಗ ಅಲ್ಲಿನ ಪ್ರಸಿದ್ಧ ಪೋಸ್ಟುಮಾಸ್ಟರರು "ಮುಂಬಾಯಿಯೆಂದರೆ ಈಜಿಪ್ಟ್ ದೇಶದ ನಗರವಲ್ಲ" ಅಂದ ಇದರಿಂದ ನಮ್ಮ ಪ್ರಚಾರ ಅಲ್ಪಷ್ಟು ಸೂಕ್ಷ್ಮತರದ್ದಿದೆಎಂದು ತಿಳಿಯಬಹುದು." ಮೊದಲಾಗಿ ರಸವತ್ತಾಗಿ ಭಾಷಣ ಮಾಡಿದರು. ಮಧ್ಯೆ ಮಧ್ಯೆ ಕಾವ್ಯವಾಚನ, ಕೊಳಲುವಾದನ ಮೊದಲಾದುವುಗಳಿದ್ದುವಲ್ಲದೆ ಅಧ್ಯಕ್ಷರ ಭಾಷಣದ ನಂತರ "ಗಂಡುಗೊಡಲಿ" ನಾಟಕವಾಗಿ ಕಾರ್ಯದರ್ಶಿ ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪರು ಧನ್ಯವಾದವನ್ನರ್ಪಿಸಿದ ಬಳಿಕ ಕಾರ್ಯಕ್ರಮ ಮುಕ್ತಾಯವಾಯಿತು.

ಪಂಜ:—ಇಲ್ಲಿಯ ಪ್ರಗತಿ ಕೂಟದ ವರ್ಧಂತಿಯು ತಾ 23-4-49ರಲ್ಲು ಶ್ರೀ ಕೆ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಾಹಿತ್ಯಸಭೆ, ಭಜನೆ ಇದಾದ ಬಳಿಕ "ಪಾದುಕಾ ಪಟ್ಟಾಭಿಷೇಕ" ಎಂಬ ನಾಟಕವು ಅಭಿನಯಿಸಲ್ಪಟ್ಟಿತು, ಮರುದಿನ ಯಕ್ಷಗಾನ ಕಲಾನಿಧರಿಂದ "ಶಾಕುಂತಳಾ" ಎಂಬ ಯಕ್ಷಗಾನ ನಾಟಕವು ಅಭಿನಯಿಸಲ್ಪಟ್ಟಿತು.

ಬೈಲೂರು:—ಇಲ್ಲಿಯ ಗಾಂಧಿ ಸ್ಮಾರಕ ಸಂಘದ ವತಿಯಿಂದ ನಡಿಯುವ ಗಾಂಧಿ ಕ್ಲಬ್ಬಿನಲ್ಲಿ ತಾ 22-4-49ರಲ್ಲಿ ಕೇಂದ್ರ ಸರಕಾರದ ಮಾನ್ಯ ಮಂತ್ರಿಗಳಾದ ಕೆ. ಸಂತಾನಂ ಇವರು ತಮ್ಮ ದಿವ್ಯ ಹಸ್ತದಿಂದ ಪುಸ್ತಕಾಲಯವನ್ನು ತೆರೆದು ಅದಕ್ಕೆ ಶುಭಾಶಯವನ್ನು ಕೋರಿದರು.

ಹೆಜಮಾಡಿ:—ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು ತಾ 23-4-49ರಲ್ಲಿ ರಾ। ಬ। ಶ್ರೀ ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಬಾಲಕಿಯರ "ಸತಿ ಅನಸೂಯೆ" ಎಂಬ ನಾಟಕವೂ ಬಾಲಕರ "ಬಭ್ರುವಾಹನ ಕಾಳಗ" ಎಂಬ ಯಕ್ಷಗಾನ ನಟನೆಯೂ, ವೀರದಳದವರ "ಪಂಡಿತ ಸಭೆ" ಎಂಬ ಪ್ರಹಸನವೂ ಬೇರೆ ಹಲವು ವಿವಿಧ ವಿನೋದಾವಳಿಗಳೂ ಸಭಿಕರ ಮನಸ್ಸನ್ನು ಆಕರ್ಷಿಸುವಂತಿದ್ದುವು.

ಕಡಂದಲೆ—ಬೋರ್ಡು ಹಾ। ಎ। ಶಾಲಾ ವಾರ್ಷಿಕ ಉತ್ಸವವು ತಾ 23-4-46ರಲ್ಲು ಶ್ರೀ ಕೆ. ಸದಾನಂದ ಹೆಗ್ಡೆ M. A. B. L ಗವರ್ನಮೆಂಟ್ ಪ್ಲೀಡರ್ ಮತ್ತು ಪಬ್ಲಿಕ್ ಪ್ರೊಸಿಕ್ಯೂಟರರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್, ಶ್ರೀ ದೇಜು ಉಚ್ಚಿಲ್, ಮೂಡಬಿದ್ರೆ ಹೈಸ್ಕೂಲು ಕನ್ನಡ ಪಂಡಿತ ಶ್ರೀ. ಕಾಂತರೈ, ಮುಂಡ್ಕೂರು ಶಾಲಾ ಅಧ್ಯಾಪಕ ಶ್ರೀ ಬಿ. ಯಸ್. ಕಡಂದಲೆ ಇವರು ಶಾಲಾ ಅಭ್ಯುದಯವನ್ನು ಕೋರಿ ಭಾಷಣವಿತ್ತರು ಅಧ್ಯಕ್ಷರು ಬೋಧಪರ ಭಾಷಣವಿತ್ತು ಬಡವಿದ್ಯಾರ್ಥಿ ಫಂಡಿಗೆ ರೂ. 25ನ್ನು ಸಹಾಯವಾಗಿಕೊಟ್ಟರು.

ಬಸ್ರೂರು—ಇಲ್ಲಿಯ ಬಿ. ಇ. ಎಂ. ಎಯಿಡೆಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ 24ರಲ್ಲು ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಬಿ. ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಆರ್. ಎ. ಕಲ್ಯಾಣ ಅವರು ವರದಿವಾಚನಮಾಡಿದರು. ಬಹುಮಾನ ವಿತರಣೆಯಾದ ಬಳಿಕ ಕುಂದಾಪುರ ಹೈಸ್ಕೂಲು ಹೆಡ್ಮಾಸ್ಟರ್ ಶ್ರೀ ಬಿ. ಸದಾಶಿವರಾಯರು ಶಾಲೆಯ ಶ್ರೇಯಃಪ್ರಾರ್ಥನೆ ಮಾಡಿದರು. ಸಭಿಕರ ಪರವಾಗಿ ಶ್ರೀ ವಕ್ವಾಡಿ ನಾರಾಯಣ ಸೆಟ್ಟರು ಭಾಷಣವಿತ್ತ ಬಳಿಕ ಶಾಲಾ ಮಕ್ಕಳಿಂದ "ಸ್ವರಾಜ್ಯವಿಜಯ" ಯಕ್ಷಗಾನ ಕಾಲಕ್ಷೇಪವಾಯಿತು, ತದನಂತರ ಶಾಲಾ ಹಳೆವಿದ್ಯಾರ್ಥಿಗಳೂ ಅಧ್ಯಾಪಕ ವೃಂದವವರೂ ಸೇರಿ "ಬಡತನದ ಭೂತ" ವೆಂಬ ನಾಟಕವನ್ನಭಿನಯಿಸಿದರು, ಶ್ರೀ ಉಪ್ಪೂರು ಜಗನ್ನಾಥ ಸೆಟ್ಟರ ವಿನೋದವು ಪ್ರೇಕ್ಷಣೀಯವಿತ್ತು.

ಕಾರ್ಕಳ ಡಿ ಮು. ಕೋರ್ಟಿನಲ್ಲಿ.

O. S No 64/1949

ಭಾಗೀರಥಿ ಅಂಮ — ವಾದಿಳು

ಮತ್ತು

1. ಸೇಸಿ ಶೆಡ್ತಿ 2. ಸುಬ್ಬಯ್ಯ ಶೆಟ್ಟಿ 3. ನರ್ಸಿ ಶೆಟ್ತಿ — ಪ್ರತಿವಾದಿರು

ಯವರೊಳಗೆ

1 ಕಾರ್ಕಳ ತಾಲ್ಲೂಕು ಹಿರ್ಗಾನ ಗ್ರಾಮದ ಕಣಲೆ ಎಂಬಲ್ಲಿರುವ ಚಂದಯ್ಯ ಶೆಟ್ರ ಸಹೋದರ ಸೇಸಿ ಶೆಡ್ತಿರಿಗೆ-

2 ಸದ್ರಿ ಹಿರ್ಗಾನ ಗ್ರಾಮದ ಕಣಲೆ ಎಂಬಲ್ಲಿರುವ ಚಂದಯ್ಯ ಶೆಟ್ರ ಅಳಿಯ ಕೆ. ಸುಬ್ಬಯ್ಯ ಶೆಟ್ರಗೆ..

3 ಸದ್ರಿ ಹಿರ್ಗಾನ ಗ್ರಾಮದ ಕಣಲೆ ಎಂಬಲ್ಲಿರುವ ಮೋನು ಶೆಟ್ರರ ಮಗಳು ನರ್ಸಿ ಶೆಟ್ತಿಂಗೆ-

ಸದ್ರಿ ವಾದಿಳು ಮೇಲಿನ ಕೋರ್ಟಿನಲ್ಲಿ ತನಗೆ ಬರತಕ್ಕ ಕಳೆದ ವ್ಯಯವ ಸರ್ವಜಂಗಮ ಸಂಪತ್ತುಗಳ ಬಾಬ್ತು ಮೂಲಗೇಣಿ ವಗೈರೆ ರೂಪಾಯಿ 333-6-3 ಬರಮಾಡಿಕೊಳ್ಳುವರೆ ದಾಖಲ್ಲು ಮಾಡಿರುವ ಸದರಿ ದಾವೆಯು ಇದೇ ಬರುವ ತಾರೀಕು 14-6-1949ಕ್ಕೆ ನಿಂಮ ಹಾಜರಾತಿ ಬಗ್ಗೆ ಇಡೋಣಾಗಿಯದೆ. ಆ ದಿವಸ ನೀವು ಸದರಿ ಕೋರ್ಟಿನ ಮುಂದೆ 10ಗಂಟೆಗೆ ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ನಿಂಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ಸದರಿ ದಾವೆಯನ್ನು ನಿಂಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿಯದೆ.

ಕಾರ್ಕಳ ತಾ23-4-49 } D Venkatesh Bhat. ವಾದಿಳ ಕಡೆ ವಕೀಲ್.

WANTED

for the Hindu High School Shirva, Shirva Post. S. K.

1) Three L. T.'s or B. T.'s- History Science and Mathamatics Graduates mayalso apply,

2) One Trained Kannada Pandith.

3) one qualified spinning and weaving Instructor.

Apply to correspondent,

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ— ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲದಾಸ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ಸಡುಸೋಯು.ವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಸ್ಮಾಲಕೋಜ್ ನಂಬ್ರ 45/1949

ಮಹಾಬಲ ಶೆಟ್ಟಿ—ವಾದಿ.

ಮತ್ತು

ಶ್ಯಾಮರಾಯ ಶೆಟ್ಟಿ-ಸಂಕು ಶೆಟ್ರ ಮೊಮ್ಮಗ, ಮಂಗ್ಳೂರು ತಾಲ್ಲೂಕು ತಾಳಿಪಾಡಿ ಗ್ರಾಮದ ಮೂಡ್ರಗುತ್ತಿನಲ್ಲಿರುವವ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದ್ರೆ:-

ನೀವು ವಾದಿಗೆ ತಾರೀಕು 7-7-1946ಕ್ಕೆ ಬರಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ವ್ಯವೇಜುಗಳನ್ನು ಬರಮಾಡಿಕೊಳ್ಳುವ ಬಗ್ಗೆ ವಾದಿಯು ನಿಂಮ ಮೇಲೆ ಮಾಡಿದ ಮೇಲಿನ ದಾವಾ ನಿಂಮ ಹಾಜರಾತಿ ಬಗ್ಗೆ ತಾರೀಕು 22-6-1949ಕ್ಕಿಟ್ಟದೆ. ನೀವು ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿಗೆ ಹಾಜರಾಗತಕ್ಕದ್ದು. ತಪ್ಪಿದರೆ ನಿಂಮನ್ನು ಶಿವಾಯಿ ಮಾಡಲಾದೀತು ಎಂತ ಈ ಮೂಲಕ ತಿಳಿಸಿರುತ್ತದೆ.

By order of the court

N. Mohandas Adyanthaya
Advocate for Plaintiff.
Camp Karkala, Dated25-4-1949

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 10/1949

ಶಾಂತು ಅತಿಕಾರಿ—ವಾದಿ

ಮತ್ತು

ಅಮ್ಮುತಾವತಿ ಕೂಡ— ಪ್ರತಿವಾದಿರು.

ಈ ದಾವೆಯ 3ನೇ ಪ್ರತಿವಾದಿಳಾದ ಕಾರ್ಕಳ ತಾಲೂಕು ಹಿರ್ಗಾನ ಗ್ರಾಮದ ಕಣಲೆ ಎಂಬಲ್ಲಿರುವ ಕಣಲೆ ಸುಬ್ಬ ಸೆಟ್ಟರ ಹೆಂಡತಿ ಲಿಂಗಿ ಶೆಡ್ತಿರಿಗೆ.

ಮೇಲಿನ ದಾವೆಯು ಮೇಲಿನ ಕೋರ್ಟಿನಲ್ಲಿ ತಾರೀಕು 16-6-1949ಕ್ಕೆ ತನ್ಕಿಗೆ ಇಟ್ಟಿರುವುದರಿಂದ ಆದರಲ್ಲಿ ನಿಮಗೇನಾದರೂ ಉದಹರಿಸುವುದಿದ್ದರೆ ನೀವು ಆ ದಿವ್ಸ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ದಾವೆಯಲ್ಲಿ ನಿಮ್ಮನ್ನು ಎಕ್ಸ್ ಪಾರ್ಟಿಮಾಡಿ ತೀರ್ಮಾನಿಸಲಾದೀತು. ತಿಳಿದಿರಲಿ.

(ಕೋರ್ಟು ಹುಕುಂ ಪ್ರಕಾರ)

ಬೈಕಾಡಿ ವಾಸುದೇವ ರಾವ್,
ವಾದಿಕಡೆ ಎಡ್ವೊಕೇಟ್.

ಕಾರ್ಕಳ, ತಾ. 26-4-1949

ಈ ಕುರಿತು ತಾ. 13-4-49ರಲ್ಲಿ ಉಡುಪಿ ತಾಲೂಕು ಮಂದರ್ತಿಯಲ್ಲಿ ಸಭೆಯು ನಡೆದು ಅನೇಕ ಸುಧಾರಕ ಮಹಾಶಯರ ಸೂಕ್ತ ಸಲಹೆಯೊಂದಿಗೆ ಅದೆ ನಿರ್ಣಯವನ್ನು ನೋಡಿ ತುಂಬಾ ಸಂತೋಷವಾಗುತ್ತದೆ. ಈ ವಿಚಾರವಾಗಿ ನನಗೆ ತೋರಿದ ಒಂದೆರಡು ಮಾತುಗಳನ್ನು ಆ ಜಾತಿಯವರ ಮೇಲ್ಮೆಗಾಗಿ ಶ್ರಮ ವಹಿಸುವವರ ಅವಗಾಹನೆಗೆ ತರಲು ಇಚ್ಛಿಸುತ್ತೇನೆ.

ಗೋವೆ ಮತಸ್ಥರು ಯಾನೆ ಕುಡುಬಿ ಜನಾಂಗದ ಸುಧಾರಣೆ

ಕುಡುಬಿ ಜನಾಂಗದವರು ಬಹುತೇಕವಾಗಿ ದಕ್ಷಿಣಕನ್ನಡ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲೂಕಿನಲ್ಲಿ ಹೆಚ್ಚಾಗಿ ವಾಸಿಸುತ್ತಾರೆಂಬುದು ಕಂಡುಬರುತ್ತದೆ. ಅಲ್ಲದೆ ಇವರು ಮುಖ್ಯವಾಗಿ ಬೇಸಾಯ ಕಸಬಿನಿಂದಲೇ ಜೀವಿಸುವವರಿದ್ದಾರೆ. ಜಮೀನು ವ್ಯವಸಾಯದಲ್ಲಿ ಈ ಜನಾಂಗದವರು ತುಂಬಾ ಆಸಕ್ತಿಯುಳ್ಳವರೂ, ಶ್ರಮಜೀವಿಗಳೂ ಆಗಿರುತ್ತಾರೆ. ಇವರಲ್ಲಿ ಓದುಬರಹ ತಿಳಿದವರೇ ವಿರಳ. ಇತ್ತೀಚೆಗೆ ಕೆಲವರು ಸ್ವಲ್ಪಮಟ್ಟಿನ ವಿದ್ಯಾಭ್ಯಾಸವನ್ನು ಕಲಿತು ಮುಂದುವರಿಯುತ್ತಲಿದ್ದಾರೆ.

ಮುಖ್ಯವಾಗಿ ಈ ಜನಾಂಗದವರು ಪುರಾತನ ಪದ್ಧತಿಯನ್ನು ಚಾಚೂ ತಪ್ಪದೆ ಅನುಸರಿಸಿಕೊಂಡು ಬರುತ್ತಾ ಇದ್ದಾರೆ ಅದರಲ್ಲಿಯೂ ಇವರ ಹೆಂಗಸು ಮಕ್ಕಳ ಉಡಿಗೆ ತೊಡಿಗೆಗಳು ತೀರ ವಿಲಕ್ಷಣವಾಗಿರುತ್ತವೆ, ಸುಧಾರಣೆಯಲ್ಲಿಯೂ ಹಿಂದುಳಿದಿರುತ್ತಾರೆ. ಈ ಮತಸ್ಥರು ತುಂಬಾ ಸತ್ಯವಂತರೂ ನಿಷ್ಕಪಟಿಗಳೂ ಆಗಿರುತ್ತಾರೆ. ಜಮೀನು ವ್ಯವಸಾಯದಲ್ಲಿ ಮುಂತವರಲ್ಲೆಲ್ಲಾ ಈ ಜನಾಂಗದವರೇ ಮೊದಲಿಗರೆನ್ನಬಹುದು. ಕೆಲವು ವರುಷಗಳ ಹಿಂದಿನ ಒಂದು ವಿಚಾರ:-ಈ ಜನಾಂಗದವರ ಒಂದು ದೊಡ್ಡ ಸಂಸಾರವು ಸೂರಾಲು ಎಂಬಲ್ಲಿ ಜಮೀನು ವ್ಯವಸಾಯ ವೃತ್ತಿಯಿಂದ ಜೀವಿಸುತ್ತಾ ಇದ್ದರಂತೆ. ಮನೆಯಲ್ಲಿ ತುಂಬಾ ಜನರು ವಾಸಮಾಡುತ್ತಾ ಇದ್ದ ಸಂಸಾರ. ಇದೇ ಕಾಲದಲ್ಲಿ ಜಮೀನು ಕಂದಾಯವನ್ನು ವಿಮರ್ಶೆಮಾಡುವ ಸರಕಾರಿ ಅಧಿಕಾರಿಗಳು, ಈ ಗ್ರಾಮಕ್ಕೆ ಬಂದವರು ಈ ಸಂಸಾರದ ಹಿರೇ ಮೊಂಬರನನ್ನು ಕಂಡು ವಿಚಾರಿಸಿ "ನಿಮ್ಮ ಮನೆಯಲ್ಲಿ ಎಷ್ಟು ಜನರು ವಾಸವಾಗಿದ್ದೀರಿ" ಎಂಬದಾಗಿ ಕೇಳಿದರಂತೆ:-ಆಗ ಅದಕ್ಕೆ ಯಜಮಾನ ನಾವು ಬ್ಬನು ಉತ್ತರವಾಗಿ ಮನೆಯಲ್ಲಿ ಇರುವರ ಪೈಕಿ ಅನೇಕರು ಕೆಲಸಗಳಿಗೆ ಹೋಗಿರುವರಾಗಿಯೂ ಜನಸಂಖ್ಯೆ ತನಗೆ ಸರಿಯಾಗಿ ತಿಳಿಯದು ಎಂತಲೂ ನಿವೇದಿಸಿಕೊಂಡು, ಅವಶ್ಯಪಡಿಸಿದರೆ, ಮನೆಯವರೆಲ್ಲರೂ ಊಟಮಾಡುವ ಬಟ್ಟಲುಗಳನ್ನು ತೋರಿಸುವೆನೆಂಬದಾಗಿ ಹೇಳಿ ಅಧಿಕಾರಿಗಳ ಸಮಕ್ಷಮ ಬಟ್ಟಲುಗಳ ರಾಶಿಯನ್ನು ತಂದುಹಾಕಿದನಂತೆ. ಅವುಗಳನ್ನು ಎಣಿಕೆಮಾಡುವಲ್ಲಿ ಒಂದು ನೂರಕ್ಕೂ ಮೇಲ್ಪಟ್ಟು ಇದ್ದುವಂತೆ.

ಇದನ್ನು ನೋಡಿ ಅಧಿಕಾರಿಗಳು ಆಶ್ಚರ್ಯಪಟ್ಟು ಇಷ್ಟು ದೊಡ್ಡ ಸಂಸಾರವು ಈ ತಾಲೂಕಿನಲ್ಲಿಯೇ ಇಲ್ಲವೆಂದು ಮನಗಂಡು ಈ ಸಂಸಾರದವರು ಮಾಡುವ ಸಾಗುವಳಿಗೆ, ಕಂದಾಯವನ್ನು ಜಾಸ್ತಿಮಾಡದೆ ಹಿಂದೆ ಇದ್ದಂತೆಯೇ ಇರುವಂತೆ ಶಿಫಾರಸು ಮಾಡುತ್ತೇವಾಗಿ ಹೇಳಿಹೋದರಂತೆ. ಈ ಮನೆಯ ಯಜಮಾನನ ಹೆಸರು ದುಡ್ಡನಾಯ್ಕ ಎಂಬುದು ನೆನಪಿಗೆ ಬರುತ್ತದೆ. ಇದನ್ನು ನೋಡಿದರೆ ಈ ಜನಾಂಗದವರ ಒಗ್ಗಟ್ಟು ಎಷ್ಟರ ಮಟ್ಟಿಗೆ ಇರುತ್ತದ ಎಂಬುದು ವ್ಯಕ್ತವಾಗುತ್ತದೆ. ಆದರೆ ಈ ಜನಾಂಗದವರು ಈಗಿನ ಸುಧಾರಣೆಯ ಕಾಲದಲ್ಲಿ, ಇನ್ನೂ ಪುರಾತನ ಕಟ್ಟುಕಟ್ಟಳೆಗಳಿಗೆ ಬಲಿಬಿದ್ದು ಅದನ್ನೇ ಅನುಸರಿಸುತ್ತಾ ಬರುತ್ತಿರುವುದು ಶೋಚನೀಯ.

ಈಗ ಅನೇಕ ಸುಧಾರಕ ಮಹಾಶಯರ ಪ್ರಯತ್ನದಿಂದ, ಸಭೆಗಳನ್ನು ನಡೆಸಿ, ಈ ಜನಾಂಗದಲ್ಲಿರುವ ಮೂಢ ಪದ್ಧತಿ, ಅಂಧಮನೋವೃತ್ತಿ ಇವುಗಳನ್ನು ನಿವಾರಿಸ, ನಂತರ ಇವರಿಗೆ ಬೋಧಿಸಿ, ಇವರ ಉನ್ನತಿಗಾಗಿ ಪ್ರಯತ್ನಿಸುತ್ತಿರುವುದು ತುಂಬಾ ಸಂತೋಷದ ಸಂಗತಿ. ಇದಕ್ಕೆ ಪ್ರತಿಬಬ್ಬ ಸುಸಂಸ್ಕೃತ ನಾಗರಿಕನ ಬೆಂಬಲವು ಆಗತ್ಯವಿರುತ್ತದೆ. ಈ ರೀತಿ ಪ್ರಯತ್ನ ಪಡುವಲ್ಲಿ ಈ ಗೋವೆ ಮತಸ್ಥ ಜನಾಂಗವು ಒಂದು ಮಾದರಿಯ ಜನಾಂಗವಾಗುವುದರಲ್ಲಿ ಸಂದೇಹವೇ ಇಲ್ಲ. ಕಾರಣ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವುದರಲ್ಲಿ ಈ ಜನಾಂಗದವರು ತುಂಬಾ ಆಸಕ್ತಿಯುಳ್ಳವರಾಗಿರುತ್ತಾರೆ.

ಆದ್ದರಿಂದ ಮುಂದೆ ನಡೆಯುವ ಇವರ ಸಭೆಗಳಲ್ಲಿ ಈ ಜನಾಂಗದವರು ಭಾಗವಹಿಸುವಂತೆ ಇವರಿಗೆ ಜಮೀನು ಸಾಗುವಳಿಗೆ ಕೊಟ್ಟ ಧನಿಗಳು ವಿಶಾಲದೃಷ್ಟಿಯಿಂದ ಪ್ರೋತ್ಸಾಹವನ್ನು ಕೊಟ್ಟು, ಈ ಜನಾಂಗದ ಉನ್ನತಿಗಾಗಿ ಶ್ರಮವಹಿಸುವವರಿಗೆ ತಮ್ಮ ಉದಾರ ಸಹಕಾರವನ್ನು ಕೊಡುವುದಲ್ಲದೆ, ಈ ಜನಾಂಗದವರ ಒಂದು ಸಂಘವನ್ನೇ ಏರ್ಪಡಿಸಿ, ಅನುಕೂಲ ಪಡಿಸಿ ಕೊಡುವುದು ಮುಂದಾಳುಗಳ ಪವಿತ್ರ ಕರ್ತವ್ಯವಾಗಿರುತ್ತದೆ

ಈ ಜನಾಂಗದವರ ಸುಧಾರಣೆಯ ಕುರಿತು ತಾ. 15-9-49ರಲ್ಲಿ ಪುನಃ ಮಂದಾರ್ತಿಯಲ್ಲಿ ಸಭೆಯು ನಡೆಯತಕ್ಕದ್ದಿರುತ್ತದೆ. ಈ ಸಭೆಗೆ ಸುಧಾರಕ ಪ್ರೋತ್ಸಾಹಕರೆಲ್ಲರೂ ತಮ್ಮ ಸರಹದ್ದಿನಲ್ಲಿರುವ ಈ ಜನಾಂಗದವರೆಲ್ಲರನ್ನೂ ಈ ಸಭೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ, ಸಭೆಯು ಯಶಸ್ವಿಯಾಗಿ ಜರಗುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ಮೇಲಾಗಿ ಈ ಸಭೆಯಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಪತ್ರಿಕೋದ್ಯೋಗಿಗಳು ಸಹಾ, ಸಹಕರಿಸುವಲ್ಲಿ ಇನ್ನೂ ಈ ಸಭೆಗೆ ಮೆರಗುಕೊಟ್ಟಂತೆ ಆಗುತ್ತದೆ. ಮಂದಾರ್ತಿ ಎಂಬುದು ಬಾರಕೂರಿಗೆ (ಪುರಾತನ ಪ್ರಸಿದ್ಧ ಸ್ಥಳಕ್ಕೆ) ಬರೇ ಎರಡು ಮೈಲುಫಾಸಲೆಯಲ್ಲಿರುತ್ತದೆ. ಮೋಟಾರು ಮೂಲಕ ಬ್ರಹ್ಮಾವರಕ್ಕೆ ಬಂದು ಅಲ್ಲಿಂದ ಸಮೀಪವಿರುವ ಬಾರಕೂರು ಮೂಲಕ ಮಂದಾರ್ತಿಗೆ ಹೋಗಬಹುದು.

....ಜಯ್ ಹಿಂದ್...

ತೀರ್ಥಹಳ್ಳಿ ತಾ. 25-4-49.

ಗೋವೆ ಮತಸ್ಥರ ಹಿತಚಿಂತಕ.

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯ ವಾಚಕರೇ...............

ನಾನು ಒಬ್ಬ ಸಾಧಾರಣ ಮನುಷ್ಯ-ದುರದೃಷ್ಟವಶಾತ್ ನನ್ನ ಮಿತಿಮೀರಿದ ಕಾಮುಕ ಜೀವನವು ಅತಿ ಬೇಗನೆ ನರಗಳ ದೌರ್ಬಲ್ಯಕ್ಕೆ ಳಿಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಹೃದಯನಾದವೂ ಜಾಸ್ತಿಯಾಯಿತು. ಬಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತದಿಂದಿರುವುದಕ್ಕೆ ಬೇಜಾರೆನಿಸಿತು. ನನ್ನ ಈ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಆದರೆ ನಾನೆಂತು ಅದನು, ತಿಳಿಸುವುದು? ಗುಟ್ಟಾಗಿಸಾಸಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲದಂತಾಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪೇಶಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು (ಸನ್ಯಾಸಿ) ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಷ್ಟದಿಂದ ಸಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ತಿಳಿಸುವಂತೆ ಬಲಾತ್ಕರಿಸಿತು. ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎರಡು ಔಷಧಿಗಳನ್ನು ದಯಪಾಲಿಸಿದರು:—ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಪಿಸುವುದಕ್ಕೆ ಅವರು ಹೇಳಿದಂತೆ ಗಿಡಮೂಲಿಕೆಗಳನ್ನು ಹುಡುಕಿ ತಂದು ಅವರೆದುರಿನಲ್ಲಿಯೇ ಆ ಎರಡು ಔಷಧಿಗಳನ್ನು ತಯಾರಿಸಿದೆನು. ಅನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಪ್ರಿಯವಾಚಕರೇ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೨೧ ದಿವಸಗಳಲ್ಲಿ ಸಂಪಾದಿಸಿದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿದಿನವೂ ೪ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲವನಾದೆನು. ಕಣ್ಣುಗಳ ಹೊಳಪು ಬಂತು. ಒಂದು ತರಹದ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು. ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅದರಿಂದ ಮಹತ್ತ ಗುಣವನ್ನು ಕಂಡುದುದಲ್ಲದೆ ಅದಕ್ಕಿಂತ ಬೇರೆ ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನು ಪ್ರಯೋಗಿಸಿ ನಿರಾಶರಾಗಿರುವವರು ಇದನ್ನು ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಅದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. 5-0-0

ಹೊರಗೆ ಲೇಪಿಸುವ ತೈಲಕ್ಕೆ:- ೨೧ ದಿವಸಕ್ಕೆ ರೂ. 5-8-0

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು.

ಈ ಔಷಧಿಯು "ಕುಷ್ಟ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು. (ತೈಲವು ಚರ್ಮದ ಸೊಕ್ಕನ್ನು ಹುಟ್ಟಿಸುವುದಿಲ್ಲ.)

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ: –

[೨] ಡಾ. ಕೆ. ಜಿ. ಮಟ್ಟಿತ್ತಾಲ್, ಕೊಟನವರು ಬರೆಯುತ್ತಾರೆ:—ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೂ, ವೃದ್ಧರಿಗೂ ಪ್ರಯೋಗಿಸಿ ಅದರ ಶಕ್ತಿದಾಯಕ ಕೆಲಸವನ್ನು ಮೆಚ್ಚಿದ್ದೇನೆ.

[೩] ಡಾ. ಜೇವಿಯರ್ ಕುರುವ ಸೇರಿ, ಕುಂಬಲಾಂಗಿಯವರು ಬರೆಯುತ್ತಾರೆ:— ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನುಂಟುಮಾಡಿವೆ.

[೪] ಮ್ಯಾನೇಜರ್, "ನ್ಯೂ ಮ್ಯಾಗಜೈನ್" ಮದ್ರಾಸು ಬರೆಯುತ್ತಾರೆ:–ನಾನು ದಾರ್-ಉಲ್-ಷಫಾ-ಗೋಲಿಯಾನ, ಬಟಾಲರವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ಮಾನವನಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ, ಲೆಕ್ಕವಿಲ್ಲದಷ್ಟು ಸಾವಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು

ಸೂಚನೆ:—ಈ ಔಷಧಿಗಳು ಯಾವ ತೊಂದರೆಯನ್ನು ಮಾಡುವ ಪದಾರ್ಥಗಳನ್ನೂ ಹೊಂದಿಲ್ಲ ಮತ್ತು ಇದನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ವಾಪಸ್ಸು ಮಾಡಲಾಗುವದು.

ನಿಮ್ಮ ಆರ್ಡರನ್ನು ಇವರಿಗೆ ಕಳುಹಿಸಿರಿ.

The Manager

DAR-UL-SHAFA GOLIAN (Regd) (N. Y. U) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಷಫಾ-ಗೋಲಿಯಾನ (ರಿಜಿಸ್ಟರ್) (N.Y U) ಬಟಾಲ [ಪಂಜಾಬ್]

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿ.

ತ್ರಿಮೂರ್ತಿ ಸಮಿತಿಯ ವರದಿ-ಅನಂತರ

ತ್ರಿಮೂರ್ತಿ ಸಮಿತಿಯ ವರದಿಯು ಕರ್ನಾಟಕ ಅತ್ಯಂತ ತೀವ್ರವಾಗಿ ಟೀಕಿಸಲ್ಪಟ್ಟಿವೆ ಎಂಬುದು ಆಶ್ಚರ್ಯದ ವಿಷಯವಲ್ಲ. ವರದಿಯು, ಅಸಮಾಧಾನಗೊಂಡ ಕನ್ನಡಿಗರಿಗೆ ಯಾವ ಸಹಾಯವನ್ನೂ ಮಾಡದೆ, ಮದ್ರಾಸು ಸರಕಾರದಲ್ಲಿ ಹೆಚ್ಚಿನ ಪ್ರಾತಿನಿಧ್ಯವಿರುವ ಆಂಧ್ರರನ್ನು ಸಂತಯಿಸ ಹೋಗಿದೆ. ಆಂಧ್ರದಂತೆಯೇ ಸ್ಟೈಮಸ್ ಕವಿಷಯನ್ನು ನಿಷೇಧಿಸಿ, ಕಾಂಗ್ರೆಸಿಗೆ ಸಂಪೂರ್ಣ ಬೆಂಬಲವಿತ್ತ ಕನ್ನಡಿಗರು ತಮಗೆ ಪ್ರತ್ಯೇಕ ಪ್ರಾಂತ್ಯ ಬೇಕಿದ್ದರೆ ಇನ್ನೂ ಪ್ರಬಲವಾದ ಚಳವಳ ನಡೆಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಬಯಸಿದೆಯೆಂಬುದು ಈಗ ಸ್ಪಷ್ಟವಾದಂತಾಗಿದೆ. ಕರ್ನಾಟಕ ಪ್ರಾಂತ ರಚನೆಗೆ [illegible]ರ ನೆಹರು ಸಮಿತಿಯು ಇತ್ತ ಬೆಂಬಲ, ಕನ್ನಡಿಗರನ್ನು ಇಂದಿನ ಸಂಕಷ್ಟಗಳಿಂದ ಪಾರು ಮಾಡಲು ಯೋಗ್ಯ ಕ್ರಮಗಳನ್ನು ಕೈಕೊಳ್ಳಬೇಕೆಂಬ ದಾರ್ ಸಮಿತಿಯ ವರದಿ, ಇವೆಲ್ಲದೆ ಪ್ರತ್ಯೇಕ ಪ್ರಾಂತದ ಬಗ್ಗೆ ಕನ್ನಡಿಗರ ತೀವ್ರ ಬೇಡಿಕೆ. ಇವೆಲ್ಲ ತ್ರಿಮೂರ್ತಿ ಸಮಿತಿಯ ಮೇಲೆ ಯಾವ ಪರಿಣಾಮವನ್ನು ಮಾಡಿದಂತೆಯೂ ತೋರುವುದಿಲ್ಲ

ಕಾಂಗ್ರೆಸು ಈ ಮೊದಲು ಕೊಟ್ಟ ಭರವಸೆಗಳನ್ನೆಲ್ಲ ಗಾಳಿಗೆ ತೂರಿ, ನಮ್ಮ ಮೂಲ ಹಕ್ಕುಗಳನ್ನೇ ಅಲ್ಲಗಳೆಯುವ ತ್ರಿಮೂರ್ತಿ ಸಮಿತಿಯ ಈ ವರದಿಗೆ ನಾವು ಬೆಂಬಲ ನೀಡುವುದು ಸಾಧ್ಯವೇ ಇಲ್ಲ. ಆಂಧ್ರ ಪ್ರಾಂತವು ಕೂಡಲೇ ರಚಿಸಲಬಹುದಾಗಿದ್ದಲ್ಲಿ ಕ. ಪ್ರಾಂತವನ್ನೂ ರಚಿಸಲು ಸಾಧ್ಯವಿದೆ. ಮೈಸೂರು ವಿಲೀನವಾಗುವ ವರೆಗೆ ಕಾದು ಕುಳಿತುಕೊಳ್ಳಬೇಕಾಗಿಲ್ಲ. ಒಂದು ವರ್ಷದ ಹಿಂದೆ ಮೈಸೂರು ಲೀನವಾಗುವ ಪ್ರಶ್ನೆಯೇ ಇದ್ದಿಲ್ಲ. ಅಥವಾ ೧೯೪೮ನೆಯ ಇಸವಿಯಲ್ಲಿ ಜೈಪುರದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ನಿರ್ಣಯವನ್ನು ಸ್ವೀಕರಿಸುವಾಗಲೂ ಈ ಪ್ರಶ್ನೆ ಬಂದಿಲ್ಲ. ಒಕ್ಕೂಟ ಪ್ರದೇಶದಲ್ಲಿರುವ ಕನ್ನಡ ಪ್ರದೇಶಗಳನ್ನೆಲ್ಲಾ ಒಂದುಗೂಡಿಸಿ ಪ್ರತ್ಯೇಕ ಪ್ರಾಂತವನ್ನು ರಚಿಸಲು ಸಾಧ್ಯವಿದೆ. ಇದರಿಂದ ಮುಂದೆ ಮೈಸೂರಿನ ವಿಲೀನಕ್ಕೂ ಸಹಾಯಕವಾದಂತಾಗುವುದು.

ಪ್ರಾಂತಗಳನ್ನು ರಚಿಸುವಾಗ ಗಡಿಗಳಲ್ಲಿ ಕಲಹಗಳುಂಟಾಗುತ್ತವೆ ಎಂಬ ಮಾತಿನಲ್ಲಿ ಹುರುಳಿಲ್ಲ. ಆಂಧ್ರ ಕಾಂಗ್ರೆಸಿಗೆ ಸೇರಿದ ಜಿಲ್ಲೆಗಳನ್ನು ಸೇರಿಸಿ ಆಂಧ್ರ ಪ್ರಾಂತವನ್ನು ರಚಿಸಲು ಸಾಧ್ಯವಿದ್ದರೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸಿಗೆ ಸೇರಿದ ಪ್ರದೇಶಗಳನ್ನು ಸೇರಿಸಿ ಕರ್ನಾಟಕ ಪ್ರಾಂತವನ್ನು ರಚಿಸಲು ಸಾಧ್ಯವಿದೆ. ಗಡಿ ಪ್ರಶ್ನೆಯ ಕುರಿತು ಸಂಬಂಧಪಟ್ಟ ಕಾಂಗ್ರೆಸ್ ಸಮಿತಿಗಳಿಗೆ ಪರಸ್ಪರ ಸಮಾಲೋಚನೆಯಿಂದ ಇತ್ಯರ್ಥಿಸಲು ಸಾಧ್ಯವಾಗದಿದ್ದರೆ, ಕಾಂಗ್ರೆಸ್ಸಿನ ಅಧ್ಯಕ್ಷರು ಒಂದು ಪಂಚಾಯತಿಯನ್ನು ನೇಮಿಸಬಹುದು. ಇವನ್ನೆಲ್ಲ ಬಿಟ್ಟು ಕಾಂಗ್ರೆಸ್ ವರಿಷ್ಠರು ನಾವು ಇನ್ನೂ ಚಳವಳವನ್ನು ನಡೆಸಬೇಕೆಂದು ಹೇಳುತ್ತಾರೆ. ಪ್ರತ್ಯೇಕ ಪ್ರಾಂತರಚನೆಯ ಬಗ್ಗೆ ನಮ್ಮ ಕೇಳಿಕೆಯನ್ನು ಸಮರ್ಥಿಸುವ ಸಮಯದಲ್ಲಿಯೇ ಇನ್ನೂ ಪ್ರಬಲವಾದ ಚಳವಳವನ್ನಪೇಕ್ಷಿಸುವುದರ ಅರ್ಥವೇನೆಂದು ತಿಳಿಯದು. ಇದರ ಅರ್ಥ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ನಾವು ನಮ್ಮ ಪಾತ್ರವನ್ನು ವಹಿಸುವುದು ಬೇಡವೆಂದೇ? ನಾವು ಕಳೆದ ೩೦ ವರ್ಷಗಳಿಂದ ಪ್ರತ್ಯೇಕ ಪ್ರಾಂತ ರಚನೆಗಾಗಿ ಚಳವಳ ನಡೆಸುತ್ತಿದ್ದೇವೆ, ತ್ರಿಮೂರ್ತಿ ಸಮಿತಿಯು ರಚನೆಯಾದೊಡನೆಯೇ ಕಾಂಗ್ರೆಸ್ ವರಿಷ್ಠರು ಇನ್ನು ಚಳವಳದ ಅಗತ್ಯವಿಲ್ಲವೆಂದು ಹೇಳತೊಡಗಿದರು. ಈಗ ಚಳವಳವು ಇನ್ನೂ ಜೋರಾಗಿ ಸಾಗಬೇಕೆಂದು ಹೇಳುತ್ತಾರೆ. ತ್ರಿಮೂರ್ತಿ ಸಮಿತಿಯ ವರದಿಯನ್ನೋದಿದಾಗ ಕಾಂಗ್ರೆಸಿಗೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ಕೊಡುವ ಇಷ್ಟವಿದ್ದಂತೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯಕ್ಕೆ ತಾಗಿಕೊಳ್ಳದೆ ಕರ್ನಾಟಕದ ಜನತೆಯ ಪರವಾಗಿ ನಿಲ್ಲುವುದೆಂದು ನಂಬಲಾಗಿದೆ. ಕರ್ನಾಟಕಪ್ರಾಂತ್ಯ ರಚನೆಯ ಕುರಿತಾಗಿ ಕಾರ್ಯಕಾರೀ ಸಮಿತಿಯು ತನ್ನ ನಿರ್ಣಯವನ್ನು ಪುನರ್ವಿಚಾರಿಸದಿದ್ದಲ್ಲಿ ಮಂತ್ರಿಮಂಡಲ, ಶಾಸನ ಸಭೆಗಳಲ್ಲಿರುವ ಕನ್ನಡಿಗರನ್ನು ಹಿಂದೆ ಕರೆಸಿಕೊಳ್ಳುವ ಅಸಂತೋಷಕರವಾದ ನಿರ್ಧಾರಕ್ಕೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯನ್ನು ಒತ್ತಾಯಿಸಿದಂತಾಗುತ್ತದೆ. ತ್ರಿಮೂರ್ತಿ ಸಮಿತಿಯ ವರದಿಯನ್ನು ನಿಷೇಧಿಸಲು ಮತ್ತು ಕನ್ನಡಿಗರಿಗೆ ತಮ್ಮ ಗುರಿಯನ್ನು ಸಾಧಿಸಲು ಇನ್ನೊಂದೇ ದಾರಿ ಉಳಿದಿದೆ. ಕರ್ನಾಟಕದಲ್ಲಿ ಹೊಸ ಚುನಾವಣೆಯನ್ನು ನಡೆಸುವುದೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಅಪೇಕ್ಷಿಸಿದಂತೆ ನಾವು ಹೂಡಬಹುದಾದ ಚಳವಳ. ಇತರ ಕ್ರಮಬದ್ಧವಾದ ಕ್ರಮಗಳೆಲ್ಲವೂ ವಿಫಲವಾಗಿವೆ. ಕರ್ನಾಟಕಕ್ಕೆ ಇನ್ನೂ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ. ನಮ್ಮ ಸಂಕಷ್ಟಗಳು ಇಂದು ಮಿತಿಮೀರಿವೆ. ಇಂದಿನ ಅಸಹಾಯಕ ಪರಿಸ್ಥಿತಿಯಲ್ಲಿ ನಮ್ಮಲ್ಲೆ ಹಲವು ದುಷ್ಟ ಶಕ್ತಿಗಳು ಹುಟ್ಟಿಕೊಂಡು, ಇನ್ನೂ ಪರಿಸ್ಥಿತಿಯು ಹೀಗೆ ಇದ್ದರೆ, ಕರ್ನಾಟಕವನ್ನು ಚುಟುಕು ಚೂರಾಗಿ ಮಾಡುವುದರಲ್ಲಿ ಸಂಶಯವಿಲ್ಲ. ಹೀಗಾದರೆ ಕರ್ನಾಟಕವು ಮುಂದೆ ಏಳುವಂತೆಯೇ ಇಲ್ಲ.

ಕಾಂಗ್ರೆಸ್ ಅಧ್ಯಕ್ಷರೂ ತ್ರಿಮೂರ್ತಿ ಸಮಿತಿಯ ಸದಸ್ಯರಲ್ಲೊಬ್ಬರೂ ಆದ ಪಟ್ಟಾಭಿಯವರು ಕೂಡ ಅಚ್ಚ ಕನ್ನಡ ಜಿಲ್ಲೆಯಾದ ಬಳ್ಳಾರಿಯ ಮೇಲೆ ತಮ್ಮ ಕೈಹಾಕಿದ್ದಾರೆ. ನೀಲಗಿರಿಯಲ್ಲಿ ತಮಿಳರ ಪ್ರಭಾವ ಹೆಚ್ಚುತ್ತಿದೆ. ಕೊಯಮುತ್ತೂರು, ಸೇಲಮ್, ಅನಂತಪುರಗಳಲ್ಲಿರುವ ಕನ್ನಡ ಭಾಗಗಳೂ ಅಂತೇನೆ. ಡಾ। ಪಟ್ಟಾಭಿಯವರು ಮದ್ರಾಸಿನಲ್ಲಿ ತಾವು ಇತ್ತ ಹೇಳಿಕೆಯೊಂದರಲ್ಲಿ ಒಕ್ಕೂಟ ಕರ್ನಾಟಕದಲ್ಲಿ ಒಟ್ಟಿಗೆ ೮ ಜಿಲ್ಲೆಗಳಿರುವುವೆಂದು ಹೇಳಿದ್ದಾರೆ. ಇದರಿಂದ ಡಾ॥ ಪಟ್ಟಾಭಿಯವರಿಗೆ ಮತ್ತು ಅವರ ಸಹೋದ್ಯೋಗಿಗಳಿಗೆ ಕರ್ನಾಟಕದ ಬಗ್ಗೆ ಇದ್ದ ತಪ್ಪು ತಿಳುವಳಿಕೆಯು ಸ್ಪಷ್ಟವಾದಂತಾಗುವುದು. ದಾರ್ ಸಮಿತಿಯ ವರದಿಯಲ್ಲಿ ಬಳ್ಳಾರಿಯನ್ನು ಆಂಧ್ರ ಪ್ರಾಂತದಲ್ಲಿ ಸೇರಿಸುವುದಕ್ಕೆ ಯಾವ ಆಧಾರವೂ ಇಲ್ಲ. ಕನ್ನಡಿಗರು ಬದುಕಿ ಬಾಳಬೇಕೆಂದಿದ್ದರೆ, ಅವರ ಗೆಳೆಯರೆಂದು ಕರೆಯಲ್ಪಡುವವರು ನಿಧಾನವಾಗಿ ಅವರಿಗೆ ಗೋರಿ ಕಟ್ಟಿಕೊಂಡು ಬರುತ್ತಿರುವುದನ್ನು ನೋಡಿಯೂ ಸುಮ್ಮನೆ ಕುಳಿತುಕೊಂಡರಾಗದು. ಇದರಿಂದ ನಮ್ಮ ಸಂಕಷ್ಟಗಳು ಇನ್ನೂ ಹೆಚ್ಚುವುದು ಖಂಡಿತ.

ಬಳ್ಳಾರಿಯನ್ನು ಆಂಧ್ರ ಪ್ರಾಂತದಲ್ಲಿ ಸೇರಿಸುವ ಡಾ। ಪಟ್ಟಾಭಿಯವರ ಯೋಜನೆಯನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳೂ, ಇನ್ನೂ ಅನೇಕ ಮುಖಂಡರೂ ಖಂಡಿಸಿದ್ದಾರೆ. ಬಳ್ಳಾರಿಯ ಮೇಲೆ ಡಾ। ಪಟ್ಟಾಭಿಯವರು ಕೈಹಾಕಿದುದು ತ್ರಿಮೂರ್ತಿ ಸಮಿತಿಯ ವರದಿಗೆ ತೀರ ವಿರೋಧವಾಗಿದೆ. ಚರ್ಚಾಸ್ಪದವಾದ ಪ್ರದೇಶವನ್ನು ಹೊಸ ಪ್ರಾಂತದಲ್ಲಿ ಸೇರಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ತ್ರಿಮೂರ್ತಿಗಳ ವರದಿಯಲ್ಲಿ ಹೇಳಲಾಗಿದೆ.

ಬಳ್ಳಾರಿಯ ಪೂರ್ವದ ಮೂರು ತಾಲೂಕುಗಳನ್ನು ಶಾಶ್ವತವಾಗಿ ಆಂಧ್ರ ಪ್ರಾಂತಕ್ಕೆ ಸೇರಿಸಬೇಕೆಂಬ ಡಾ। ಪಟ್ಟಾಭಿಯವರ ಕೇಳಿಕೆಗೆ ಮೂಲವೇ ಇಲ್ಲ. ಆ ತಾಲೂಕುಗಳ ಜನತೆಯ ಅಭಿಪ್ರಾಯವನ್ನು ತಿಳಿಯದೆ ಅವುಗಳ ಮೇಲೆ ಕೈಹಾಕುವುದಕ್ಕೆ ಪಕ್ಷ ರಾಜಕೀಯವೆಂದು ಹೇಳುತ್ತಾರೆ. ಕಳೆದ ವರ್ಷ ಈ ಮೂರು ತಾಲೂಕುಗಳ ಜನರು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಾವು ಕರ್ನಾಟಕ ಪ್ರಾಂತವನ್ನೇ ಸೇರುವೆವೆಂದು ಅವಿರೋಧವಾದ ನಿರ್ಣಯವನ್ನು ಸ್ವೀಕರಿಸಿದ್ದರು. ಬಳ್ಳಾರಿಯ ಯಾವುದೇ ಭಾಗವನ್ನು ಕೂಡ ಭಾವೀ ಆಂಧ್ರ ಪ್ರಾಂತದಲ್ಲಿ ಸೇರಿಸಬೇಕೆಂಬ ಕೇಳಿಕೆಯಲ್ಲಿ ಯಾವ ನ್ಯಾಯವೂ ಇರುವುದಿಲ್ಲ. ಡಾ। ಪಟ್ಟಾಭಿಯವರ ಮಾತುಗಳು ಘರ್ಷಣೆಗೆ ಎಡೆಯನ್ನು ಕೊಡುತ್ತವೆ. ಬಳ್ಳಾರಿಯನ್ನು ಆಂಧ್ರ ವಿಶ್ವವಿದ್ಯಾನಿಲಯಕ್ಕೆ ಸೇರಿಸುವ ಯೋಜನೆಯನ್ನು ಬಳ್ಳಾರಿಯ ಜನತೆ ವಿರೋಧಿಸಿದುದು ಎಲ್ಲರಿಗೂ ತಿಳಿದಿದೆ; ಕಾಂಗ್ರೆಸ್ ಅಧ್ಯಕ್ಷರ ಇಂದಿನ ಯೋಜನೆಯನ್ನೂ ಬಳ್ಳಾರಿಯ ಕನ್ನಡಿಗರು ಅದೇ ರೀತಿ ತೀವ್ರವಾಗಿ ವಿರೋಧಿಸುವರೆಂಬುದರಲ್ಲಿ ಸಂಶಯವಿಲ್ಲ.

ಆದುದರಿಂದ ಕರ್ನಾಟಕ ಪೂರ್ವಗಡಿಯ ಪ್ರಶ್ನೆಯು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತು ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳೊಳಗೆ ಅನ್ಯೋನ್ಯ ಸಮಾಲೋಚನೆಯಿಂದ ಅಥವಾ ಸ್ವತಂತ್ರವಾದೊಂದು ನ್ಯಾಯಾಲಯದಿಂದ ಬಗೆಹರಿಸಲ್ಪಡಬೇಕು. ಮಹಾತ್ಮಾ ಗಾಂಧಿಯವರ ಸಲಹೆಗನುಗುಣವಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ನಿಜಲಿಂಗಪ್ಪನವರು ಕರ್ನಾಟಕ-ಆಂಧ್ರ ಗಡಿ ಪ್ರಶ್ನೆಯನ್ನು ಬಗೆಹರಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಿದ್ದರು. ಇದೇ ರೀತಿಯ ಸಮಿತಿಯನ್ನು ನೇಮಿಸುವಂತೆ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯನ್ನೂ ಕೇಳಿಕೊಂಡಿದ್ದರು. ಆದರೆ ಎ. ಪಿ. ಸಿ. ಸಿ. ಯು ಯುಕ್ತವಾದ ಕ್ರಮವನ್ನು ಕೈಕೊಳ್ಳಲು ಅಸಮರ್ಥವಾಯಿತು. ಇಂದಾದರೂ ಈ ಕಾರ್ಯಕ್ಕೆ ಸಮಯ ಮೀರಿ ಹೋಗಿಲ್ಲ.

"ಬಳ್ಳಾರಿ ಜಿಲ್ಲೆಯನ್ನು ತಾತ್ಕಾಲಿಕವಾಗಿ ಆಂಧ್ರ ಪ್ರಾಂತದಲ್ಲಿ ಸೇರಿಸಿಕೊಳ್ಳಬೇಕು, ಆ ಮೇಲೆ ಅದನ್ನು ಬೇರ್ಪಡಿಸ ಬಹುದು" ಎಂಬ ಮಾತಿನಲ್ಲಿ ಹುರುಳಿಲ್ಲ. ಬದಲಾಗಿ ಈ ಜಿಲ್ಲೆಯನ್ನು ಮದ್ರಾಸು ಪ್ರಾಂತದಲ್ಲೇ ಇರಗೊಡಿಸಬಹುದು. ಅಥವಾ ತಮ್ಮ ಬಂಧುಗಳು ಅಧಿಕ ಸಂಖ್ಯೆಯಲ್ಲಿರುವ ಮುಂಬಯಿ ಪ್ರಾಂತದಲ್ಲಿ ಸೇರಿಸಬಹುದು. ಆಂಧ್ರಕ್ಕೆ ಮಾತ್ರ ಪ್ರತ್ಯೇಕ ಪ್ರಾಂತವನ್ನು ಕೊಡುವುದನ್ನು ಅಥವಾ ಆಂಧ್ರದಲ್ಲಿ ಕರ್ನಾಟಕದ ಭಾಗಗಳನ್ನು ಸೇರಿಸುವುದನ್ನು ಕನ್ನಡಿಗರು ಎಂದಿಗೂ ಸಹಿಸಲಾರರು ಎಂಬುದನ್ನು ನೆನಪಿನಲ್ಲಿಡತಕ್ಕದ್ದು.

ಇನ್ನು ಮೈಸೂರಿನ ವಿಚಾರ ಒಂದು ಮಾತು. ಈ ವರೆಗೆ ಸಂಯುಕ್ತ ಕರ್ನಾಟಕದಲ್ಲಿ ಆಸಕ್ತಿಯಿದ್ದ ಮೈಸೂರ ಕಾಂಗ್ರೆಸಿಗರು ಇಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯಿಂದಲೇ ಬೇರ್ಪಡಲು ಯತ್ನಿಸುತ್ತಿದ್ದಾರೆ. ಇದು ಗಂಡಾಂತರಪ್ರಾಯವಾದ ಮಾರ್ಗವಾಗಿದೆ. ಮೈಸೂರು ಕಾಂಗ್ರೆಸಿಗರ ಈ ಬೇಡಿಕೆಗೆ ಕಾಂಗ್ರೆಸ್ ವರಿಷ್ಠರು ಸಮ್ಮತಿಯಿತ್ತಲ್ಲಿ ಸಂಯುಕ್ತ ಕರ್ನಾಟಕವು ಕನಸಾಗಿಯೇ ಉಳಿಯುವುದು. ಇದೇ ರೀತಿಯ ಇನ್ನೂ ಹಲವು ರಾಷ್ಟ್ರಘಾತುಕ ಮನೋವೃತ್ತಿಗಳು ನಮ್ಮ ನಾಡೊಳಗೇ ಬೆಳೆದು ಬರುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆಲ್ಲ ಪ್ರಾಂತರಚನೆಯನ್ನು ಮುಂದೂಡಿರುವುದೇ ಕಾರಣವಾಗಿದೆ.

ಕಾಂ. ಕಾರ್ಯಕಾರೀ ಸಮಿತಿಯು ನಮ್ಮ ಚಿಂತಾಜನಕ ಪರಿಸ್ಥಿತಿಯನ್ನು ಸರಿಯಾಗಿ ಮನಸ್ಸಿಗೆ ತೆಗೆದುಕೊಳ್ಳುತಿದ್ದಲ್ಲಿ ಮತ್ತು ಸ್ವತಂತ್ರ ಭಾರತದಲ್ಲಿ ಭಾಷೆ, ಸಂಸ್ಕೃತಿಗಳ ಅಡಿಗಲ್ಲಿನಿಂದ ರಚಿಸಲ್ಪಟ್ಟ ಬಲವಾದ ಸ್ವಾಯತ್ತ ಕರ್ನಾಟಕವು ಇರಬಯಸಿದಲ್ಲಿ ಅವರು ಕೂಡಲೇ ಕರ್ನಾಟಕ ಪ್ರಾಂತವು ರಚಿಸಲ್ಪಡಬೇಕೆಂದು ಶಿಫಾರಸು ಮಾಡುತಿದ್ದರು. ಆದರೆ ಅವರು ಹಾಗೆ ತಿಳಿಯದಿದ್ದುದಕ್ಕಾಗಿ ನಾವು ವಿಷಾದಿಸಬೇಕಾಗಿದೆ; ಮತ್ತು ಅದನ್ನು ಪ್ರತಿಭಟಿ ಬೇಕಾಗಿದೆ.

(ಅಖಿಲ ಕರ್ನಾಟಕ ಏಕೀಕರಣ ಸಂಘ ಅಧ್ಯಕ್ಷರಾದ ಶ್ರೀ. ಕೆ. ಬಿ. ಜಿನರಾಜ ಹೆಗ್ಗ ಯವರು ಕಾಂಗ್ರೆಸ್ ಅಧ್ಯಕ್ಷ ಡಾ। ಪಟ್ಟಾ ಸೀತಾರಾಮಯ್ಯನವರಿಗೆ ಬರೆದ ಪತ್ರದಿಂ

ಉತ್ತಮ
—ಉಪಾಹಾರ ಮಂದಿರ
ವೀರ ಭಾರತ ವಿಶ್ರಾಂತಿ ಗೃಹ
(ನ್ಯೂ ಯೂನಿಯನ್ ಮಿಲ್ಸಿನ ಎದುರು)
ಡಿಲಿಸ್ಲೆ ರೋಡು
ಬೊಂಬಾಯಿ 13

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಲಭವಾಗಿರುವುದು.
ನವಜೀವಾತು ಎಂಬ
ಸೂತಿಕಾ ರಸಾಯನ

೬ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳಿಗೆ ಒಂದು ಬಾಳಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ ವಿ ಶಾಸ್ತ್ರಿ, ಆಯುರ್ವೇದಭೂಷಣ, ನಂ, 5 ಕೊಡಿಯಾಲಬೈಲು, ದ ಕ
ಸ್ಟಾಕಿಸ್ಟರು. ಡಾ। ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ವಿವಿಧ ಪಾತ್ರೆಗಳು

ಯಾವತ್ತೂ
ದ ಬೆಳ್ಳಿ, ತಾ
ಹಿತ್ತಾಳೆ, ಕಂ
ಮೊದಲಾದು
ಳ ವಿವಿಧ ಪಾ
ಗಳೂ ಸಾಮಾ
ಗಳೂ ರಖಂ
ಯೂ ಚಿಲ್ಲರೆಯಾಗಿಯೂ ದೊರೆಯುತ
ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

Regd. No M. 3618

LICENCE No. 31
Licenced to Post without Prepayment

NAVAYUGA WEEKLY

POST BOX No. 22 -- UDIPI, S. K

12-5-1949

FOUNDER
Hon'ble Sri A. B. Shetty
Education Minister, Govt. of Madras

Telegram:
"Navayuga"

Estd.
1921
ಸ್ಥಾಪನೆ

ನವಯುಗ

ವಾರ್ಷಿಕ ಚಂದಾ:
5—4—0
6 ತಿಂಗಳಿಗೆ
3—0—0
ಬಿಡಿಪ್ರತಿಗೆ
0—2—0

ವರ್ಷ ೨೯
ವಾರ 37

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ವಿದ್ಯಾಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 37

ನೆಹರು ವಲ್ಲಭಾಯಿಗಳಿಂದಾಗಿ—

ಭಾರತದ ಯಾವ ಮೂಲೆಯಲ್ಲಿರುವ ಹಿಂದೀಯನ ಲಕ್ಷ್ಯವಾದರೂ ಸ್ಥಳೀಯ ಅಥವಾ ಪ್ರಾಂತೀಯ ಸರಕಾರಗಳ ಕಡೆಗಿಂತ ಹೆಚ್ಚಾಗಿ, ಕೇಂದ್ರ ಸರಕಾರದತ್ತ ಬಿದ್ದು ರಾಷ್ಟ್ರದ ಅದ್ಯಂತವೂ ಏಕ ರಾಷ್ಟ್ರೀಯತಾ ಭಾವನೆಯು ಬಲಗೊಂಡುದು ನೆಹರು ಪಟೇಲರಾಳ್ವಿಕೆಯಿಂದಲೇ.

ಪ್ರಾಂತಿಕ ಸರಕಾರಗಳ ಪಾಲಿನ ಅಧಿಕಾರಗಳಾಗಿ ಈಗ ಉಳಿದಿರುವವುಗಳಲ್ಲಿ ಹೆಚ್ಚಿನಂಶವು, ಈಗ ತಯಾರಾಗುತ್ತಿರುವ ನವಸಂವಿಧಾನ ಶಾಸನದನ್ವಯ ಕೇಂದ್ರ ಸರಕಾರದ ವಶವಾಗುತ್ತಿದೆ; ನೆಹರು, ವಲ್ಲಭಾಯಿಗಳ ಆಡಳಿತೆಯೊಡನೆ ಪ್ರಾಂತಿಕಾಡಳಿತೆಗಳನ್ನು ತುಲನೆ ಮಾಡಿ ನೋಡಿಯೇ ಎಲ್ಲಾ ಪ್ರಾಂತ್ಯಗಳವರೂ ಈ ಬದಲಾವಣೆಯನ್ನು ಸ್ವಾಗತಿಸುತಿದ್ದಾರೆ. ಪ್ರಾಂತಿಕ ಮಂತ್ರಿಗಳಿಂದ ಹಿಡಿದು ಸರ್ವಸಾಮಾನ್ಯ ರಾಜಕಾರಣಿಗಳ ವರೆಗಿನ ಎಲ್ಲರನ್ನೂ ಒಂದಲ್ಲೊಂದು ವಿಧದ ಜಾತೀಯ, ಪ್ರಾಂತೀಯ ಸಂಕುಚಿತ ಸ್ವಾರ್ಥ ಹಿಡಿದುಕೊಂಡಿರುವಾಗ, ಇವೆಲ್ಲವುಗಳ ಮೇಲಾಟ ಹೋರಾಟಗಳಿಂದ ಭಾರತದಲ್ಲಿ ಬಿರುಕು, ಒಳ ಛಿದ್ರಗಳು ಹುಟ್ಟಿಕೊಳ್ಳಲು ಬದ್ಧವಿದ್ದರೂ ಅವುಗಳನ್ನು ಅಗಲಕ್ಕೆ ಅರಳಲು ಬಿಡದೆ ಭದ್ರವಾಗಿ ಒಂದುಗೂಡಿಸಿ ಹಿಡಿದಿರುವದೆಂದರೆ ನೆಹರು ವಲ್ಲಭಾಯಿ ವಜ್ರ ಮುಷ್ಟಿಗಳೇ.

ಪಂಡಿತ ನೆಹರುಗಳ ಉಚ್ಚ ನಾಗರಿಕತೆ, ನಿರ್ದೋಷಿ ನಿರ್ವಂಚಕ ಸ್ವಭಾವ, ಜಾಗತಿಕ ಬಂಧು ಭಾವನೆಯಿಂದಾಗಿ ಈ ನಾಯಕನಂತೆಯೇ ಇವನ ಹಿಂದಿರುವ ರಾಷ್ಟ್ರವೂ ಎಂಬ ನಂಬಿಕೆಯಿಂದ ಲೋಕದ ಎಲ್ಲಾ ರಾಷ್ಟ್ರಗಳೂ ಸ್ವತಂತ್ರ ಭಾರತವನ್ನು ಗೌರವ ದೃಷ್ಟಿಯಿಂದ ಕಾಣುವಂತಾಗಿದೆ.

ಸರ್ವ ರೀತಿಯಿಂದಲೂ ಸಾಮಾನ್ಯ ಜನತೆಯದಾಗುವ ಕಾಲ ಬರಬೇಕು-ಬಂದೇ ಬರುವದು-ಎಂಬ ಆಶೆ ಕಟ್ಟಿಕೊಂಡಿರುವ ಪ್ರಗತಿಶೀಲರೆಲ್ಲರೂ 'ಈ ಮುಂದ ಹೆಜ್ಜೆಗೂ ಕಾಣಬರಬೇಕು' ಎಂಬ ವಿಶ್ವಾಸದಿಂದ ಭಾರತ ಸರಕಾರದ ಹೆಜ್ಜೆಗಳನ್ನು ಲೆಕ್ಕಿಸುತ್ತಿರುವುದು ಪಂಡಿತ ನೆಹರುಗಳಿರುವ ದೆಸೆಯಿಂದಲೇ; ಅಲ್ಪಸಂಖ್ಯಾಕರು, ಆಶ್ರಯ ಹೀನರೆಲ್ಲರೂ ಯಾರೆಷ್ಟೇ ದುಡುಕಿದರೂ ತಮಗನ್ಯಾಯವಾಗಲಾರದೆಂಬ ಧೈರ್ಯದಿಂದಿರುವುದು ಪಂಡಿತ ನೆಹರುಗಳಿದ್ದಾರೆಂದೇ.

ನೆಹರುಗಳಂತಹ ತಿಳಿಮನಸ್ಸಿನ ರಾಜಕಾರಣಿಯು, ಲೋಕದ ಇಂದಿನ ಹೋರಾಟನಿರತ ಪಾಳಯಗಳಲ್ಲೊಂದರ ನಾಯಕನಾಗಿರುತ್ತಿದ್ದರೆ, ಅಥವಾ ಜಾಗತಿಕ ಸಂಘದ ಸೂತ್ರಧಾರಿಯಾಗಿರುತ್ತಿದ್ದರೆ, ಲೋಕ ವಾತಾವರಣದಲ್ಲಿ ಇಂದು ಕವಿದಿರುವ ಮಬ್ಬು ತೊಲಗಿ ಹೋಗುತ್ತಿತ್ತು.

ಸ್ವಾತಂತ್ರ್ಯದಾದಿ ಭಾಗದ ಅಗ್ನಿ ಪರೀಕ್ಷೆಯ ಅವಧಿಯಲ್ಲಿ ರಾಷ್ಟ್ರದಲ್ಲೆದ್ದ ಒಂದೊಂದೇ ಗಂಡಾಂತರವು ಸ್ವಾತಂತ್ರ್ಯದ ಹಸಿಮಣ್ಣ ಅಸ್ತಿವಾರವನ್ನು ಕುಸಿದು ಹಾಕವಷ್ಟು ಬಲವತ್ತರವಿದ್ದಾಗ, ಕಬ್ಬಿಣದ ಕಟ್ಟಾಗಿ ಅದನ್ನು ಸುಭದ್ರಗೊಳಿಸಿಟ್ಟುದು ಸರ್ದಾರ್ ಪಟೇಲರ ಧೋರಣೆಯೇ

ಬ್ರಿಟಿಷರು ಹೋಗುವ ದಿನದ ವರೆಗೂ "ಜನಮತ"ವೆಂಬುದೊಂದು ಈ ರಾಷ್ಟ್ರದಲ್ಲಿದೆ ಎಂಬುದನ್ನೇ ತಿಳಿಯದಂತಿದ್ದ ಐನೂರಕ್ಕೂ ಮಿಕ್ಕಿದ ಸಂಸ್ಥಾನಾಧೀಶರಲ್ಲಿ, ಯಾರಿಗೆ ಯಾವ ಚಿಕಿತ್ಸೆ ಬೇಕೆಂಬುದನ್ನರಿತು, ಎಲ್ಲರ ರೋಗಗಳನ್ನೂ ಏಕ ಕಾಲದಲ್ಲಿ ಗುಣ ಮಾಡಬಲ್ಲ ಯೋಗ್ಯತೆಯಿದ್ದವರು ಸರ್ದಾರ್ ಪಟೇಲರೇ.

ಕಿರೀಟವೇ ತಲೆಯಾಗಿ ಇದ್ದ-ಬ್ರಿಟಿಷರೇ ಊರುಗೋಲಾಗಿದ್ದ-ಮಿಕ್ಕ ಪ್ರಪಂಚವನ್ನೇ ಕಣ್ತೆರೆದು ನೋಡದಿದ್ದ-ಆಶ್ರಿತರಾಜರಿಗೆ ಅಂಕುಶ ಮತ್ತು ಆಶ್ರಯವೆರಡನ್ನೂ ತೋರಿಸಿ, ಕಾಠಿಣ್ಯತೆ ಕರುಣೆಯೆರಡನ್ನೂ ಪ್ರದರ್ಶಿಸಿ, ಸಾಧುಗೊಳಿಸಿ ಕೇಂದ್ರನೊಗಕ್ಕೆ ಹೆಗಲೊಡ್ಡುವಂತೆ ಮಾಡಿದ ಚರಿತ್ರಾಪೂರ್ವ 'ಸರ್ಕಸ್ ವೀರ' ನಿಜಕ್ಕೂ ಸರ್ದಾರರು.

ಸರ್ದಾರ್ ಪಟೇಲರಂತಹ ಸಂಘಟನಾಶಕ್ತಿ, ಕಾರ್ಯಬಲವುಳ್ಳ ನಾಯಕನೊಬ್ಬನು ಹಿಂದೀ ಆಶ್ರಿತರಾಜರಿಗೆ ದೊರಕುತಿದ್ದರೆ, ಭಾರತದ ಸಂಸ್ಥಾನಗಳೆಲ್ಲವೂ ತಮ್ಮೊಳಗೊಂದುಗೂಡಿ, ತಾವೊಂದು ಪ್ರತ್ಯೇಕ ಕೇಂದ್ರ ರಚಿಸಿಕೊಳ್ಳುವಂತಾಗುತಿತ್ತು. ಹಾಗಾಗುತಿದ್ದರೆ, ಹಿಂದುಸ್ಥಾನ, ಪಾಕಿಸ್ಥಾನಗಳ ಜತೆಯಲ್ಲಿ ಮೂರನೆಯ ರಾಜಸ್ಥಾನವೊಂದು ಹುಟ್ಟಿಕೊಳ್ಳುತಿತ್ತು. ಇವು ಮೂರೂ ಬಹುವಿಟ್ಟಿಗೆ ಬಂಡವಾಳವನ್ನಿಸಿ ಭಾರತದ ಪ್ರಾಮುಖ್ಯತೆಯು ಸಂಪೂರ್ಣ ಕಳೆದು ಹೋಗುತಿತ್ತು; ಆ ಗಂಡಾಂತರ ನಿವಾರಿಸಿ ಬಿಟ್ಟವರು ಸರ್ದಾರರೇ.

ರಾಷ್ಟ್ರದೊಳಗಿನ ಐಕ್ಯತಾ ಭಾವನೆಗೆ, ಹೃದಯ ಶುದ್ಧಿಗೆ, ಭವಿಷ್ಯದ ಭರವಸೆಗೆ ಮತ್ತು ಪ್ರಾಪಂಚಿಕ ಗೌರವ ಸಂಪಾದನೆಗೆ ನೆಹರೂ ವ್ಯಕ್ತಿತ್ವ ಕಾರಣವಾಯಿತು. ಜಾತೀಯ ದ್ವೇಷಾಸೂಯೆಗಳು ಸರ್ವ ವ್ಯಾಪಿಯಾಗಿರುವಾಗ, ಹೊಸತಾಗಿ ಸ್ವತಂತ್ರಗೊಂಡ ಭಾರತವು ಹೇಗೆ ವರ್ತಿಸುವುದೋ ಎಂದು ಲೋಕ ನಿರೀಕ್ಷಿಸುತಿದ್ದಾಗ ಭಾರತವು ಈ ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡುದು ನೆಹರೂ ನಾಯಕತ್ವದಿಂದಲೇ.

ರಾಷ್ಟ್ರ ಸ್ವಾತಂತ್ರ್ಯದ ಭದ್ರತೆಗೆ, ಸುವ್ಯವಸ್ಥೆಗೆ ಮತ್ತು ಮಹಾಮಹಾ ಗಂಡಾಂತರಗಳ ನಿವಾರಣೆಗೆ ಸರ್ದಾರ್ ವ್ಯಕ್ತಿತ್ವ ಕಾರಣವಾಯಿತು. ಸಂಸ್ಥಾನಗಳ ಸಂಬಂಧ ಸಮಸ್ಯೆಯು ಅಜೇಯ ಕಂಟಕವಾಗಿ ಮುಂದೆನಿಂತಾಗ, ಒಳಗಡೆ ಒಂದೊಂದೇ ಪ್ರಶ್ನೆ ಮೊಸಳೆಯಂತೆ ತಲೆಯೆತ್ತಿದಾಗ ಅವೆಲ್ಲಾ ತಡೆ ಬೇಲಿಗಳನ್ನೂ ನೆಲಸಮಮಾಡಿ ಸ್ವಾತಂತ್ರ್ಯವನ್ನು ನಿಲ್ಲಿಸಿಟ್ಟುದು ಸರ್ದಾರರ ಕಾರ್ಯಪಟುತ್ವವೇ.

ಸ್ವಾತಂತ್ರ್ಯದಿಯ ಸಂಧಿ ಕಾಲದಲ್ಲಿ ನೆಹರು, ಪಟೇಲರಂತಹ ನಾಯಕರದೊರೆತುದು ಭಾರತದ ಸೌಭಾಗ್ಯಗಳಲ್ಲಿ ದೊಡ್ಡದು.

ಈ ವರೆಗೆ ಇವರಿಬ್ಬರಿಂದಾದ ಕೆಲಸ ಪೂರ್ಣ ಸಮಾಧಾನಕರ; ಆದರೆ ಭಾರತ ಸ್ವಾತಂತ್ರ್ಯದಿಂದ ಆಗಬೇಕಾದುದೆಲ್ಲವೂ ಈ ವರೆಗಾಗಿಲ್ಲ. ಅದುದೆಲ್ಲವೂ ಅವಸರದ ತಾತ್ಕಾಲಿಕ ಕೆಲಸಗಳು-ಶಾಶ್ವತ ಕಾರ್ಯಗಳು ಇನ್ನು ಆಗಬೇಕು. ಅವು ನೆಹರು, ವಲ್ಲಭಾಯಿಗಳಿಂದಲೇ ಆಗುವಂತಹವಲ್ಲ. ಮುಖ್ಯವಾಗಿ ಜನತೆಯೇ ಮಾಡಬೇಕು.

ಸ್ವತಂತ್ರ ರಾಷ್ಟ್ರವು, ನಿಜಕ್ಕೂ ಜನಾಧಿಕಾರಿ ರಾಷ್ಟ್ರವಾಗುವಂತೆ ಅದರ ಧ್ಯೇಯ, ಧೋರಣೆ, ಕಾರ್ಯಕ್ರಮಗಳನ್ನು ರೂಪಿಸುವ ಮುಂದಿನ ಹೊಣೆಯು ತನ್ನದೆಂದು ಜನತೆ ತಿಳಿದುಕೊಳ್ಳಬೇಕು. ಆದರ್ಶನಿಷ್ಠೆಯುಳ್ಳ ಯೋಗ್ಯತೆ, ಶಕ್ತಿ ಸಾಹಸಗಳನ್ನು ಪ್ರದರ್ಶಿಸಬೇಕು.

ನಿಮ್ಮ ತೃಪ್ತಿ ನಮ್ಮ ಗೌರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Niligiris)

ವಿಮೆಮಾಡಲಿಕ್ಕೆ ಯಾ ಪ್ರತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಪಟ್ಟಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAKA INSURANCE CMPANY, LIMITED.

• ಮಲಯದಲ್ಲಿ ಹಿಂದೀ ತರುಣ • ಗಣಪತಿಯನ್ನು ಫಾಶಿಗೆ ಕೊಟ್ಟರು! •

ಭಾರತ ಮತ್ತು ಬ್ರಿಟನುಗಳೊಳಗಿನ ಮೈತ್ರಿಯನ್ನು ಊರ್ಜಿತದಲ್ಲಿಡುವ ಕಾಮನ್‌ವೆಲ್ತ್ ಸಂಬಂಧದ ನಿರ್ಧಾರವು ಲಂಡನಿನಲ್ಲಾದ ಬೆನ್ನಲ್ಲೇ, ಆ ಸದ್ಭಾವನೆಯನ್ನು ಮಸಕುಗೊಳಿಸಿ ದುರ್ಭಾವನೆಯನ್ನೊಮ್ಮೆಗೇ ಪ್ರಜ್ವಲಗೊಳಿಸುವ ಒಂದು ದುರಂತವು ಮಲಯದಲ್ಲಿ ನಡೆಯಿತು. 24 ವರುಷದ ತಮಿಳು ತರುಣ ಪಾನ್ ಮಲಯಾ ಟ್ರೇಡ್ ಯೂನಿಯನ್ ಫೆಡರೇಶನಿನ ಹಿಂದಿನ ಅಧ್ಯಕ್ಷ-ಶ್ರೀ ಎ. ಗಣಪತಿಯನ್ನು ಅಲ್ಲಿಯ ಕುಲಾಲಾ ಲಂಪುರ್ ಎಂಬ ಸ್ಥಳದಲ್ಲಿ ಗುಟ್ಟಿನಿಂದ ಗಲ್ಲಿಗೇರಿಸಿ ಕೊಂದರು. ಮರಣ ಶಿಕ್ಷೆ ಹೊಂದಲು ಆವನಮೇಲಿದ್ದ ಆರೋಪವೆಂದರೆ ಆತ ಒಂದು ರಿವಾಲ್ವರ್ ಮತ್ತು ಆರು ಮದ್ದು ಗುಂಡುಗಳನ್ನು ಹಿಡಿದುಕೊಂಡಿದ್ದನೆಂಬುದೇ! ರಿವಾಲ್ವರ್ ಹಿಡಿದುಕೊಂಡ ಮಾತ್ರಕ್ಕೇನೇ ಹಗ್ಗಕ್ಕೆ ಕುತ್ತಿಗೆ ನೀಡಾಡಿಸಿಕೊಂಡ ಕಥೆಯು ಕಾಡುಜನರ ಚರಿತ್ರೆಯಲ್ಲಿ ಹೊರತು ಕಾನೂನು ಬದ್ಧ ಆಡಳಿತೆಯಲ್ಲಿ ನೋಡಲು ದೊರೆಯುವಂತಿಲ್ಲ. ಅದರಲ್ಲೂ ಈ ಮರಣವನ್ನು ತಪ್ಪಿಸುವದಕ್ಕಾಗಿ ಭಾರತ ಸರಕಾರವು ಸ್ವತಃ ಕೈ ಹಾಕಿ ತನ್ನ ಪಾಲಿನ ಎಲ್ಲಾ ಕರ್ತವ್ಯಗಳನ್ನು ಮಾಡಿದರೂ ಬೆಲೆ ಬಾರದೆ ಹೋದುದು ಮತ್ತಷ್ಟು ಆತುರದಾಯೀ ಸಂಗತಿ.

ಗಣಪತಿಯ ಫಾಶಿಯಿಂದ ಅಖಿಲ ಭಾರತವು ಉದ್ವೇಗಗೊಂಡಿದೆ; ವಾತಾವರಣ ಕೆರಳಿದೆ; ಭಾರತ ಸರಕಾರವು ಗಭೀರ ಚಿಂತನೆಗೀಡಾಗಿ ಮುಂದಿನ ಕಾರ್ಯಯೋಜನೆಮಾಡುತ್ತಿದೆ.

ಬಲಿಬಿದ್ದ ಗಣಪತಿ

ಮಲಯದಲ್ಲಿ ಫಾಶಿಗೇರಿಸಲ್ಪಟ್ಟ ಶ್ರೀ. ಎ. ಗಣಪತಿ ತಮಿಳು ನಾಡಿನ ತಂಜಾವೂರು ಜಿಲ್ಲೆಯ ಮತ್ತುಪೇಟೆ ಬಳಿಯ ಕೀಲಕಾಡು ಎಂಬಲ್ಲಿ ಹುಟ್ಟಿದವ. ಹುಡುಗಪ್ರಾಯದಲ್ಲೇ ಮಲಯಕ್ಕೆ ಹೋಗಿ ಅಲ್ಲಿ ನಗರವಾಸಿಯಾಗಿದ್ದಿರಬೇಕು. ಅಲ್ಲಿಯ ಕೂಲಿಗಾರ ಸಂಘಗಳ ಪಾನ್-ಮಲಯಾನ್ ಸಂಯುಕ್ತ ಸಂಸ್ಥೆಯ ಅಧ್ಯಕ್ಷನಾಗಿದ್ದು ಬಹುಕನಿಂದ ಕೆಲಸಮಾಡಿದ್ದ; ಈಗ ಆ ಸಂಸ್ಥೆಯು ಬೇಕಾಯದೇಶೀರವಾಗಿದೆ. ಅಂದಿನಿಂದ ಸುಮಾರು ಐದು ತಿಂಗಳು ಆತ ಕಾಣೆಯಾಗಿದ್ದ. ತಲೆಮರೆಸಿಕೊಂಡು ಮಲಯದ ಕಾಡುಗಳಲ್ಲಿ ಸುಳಿದಾಡುತಿದ್ದನೆಂದು ತಿಳಿದು ಬಂದಿದೆ. ಆತನ ದಸ್ತಗಿರಿ, ವಿಚಾರಣೆ, ಮರಣದಂಡನೆಯ ತೀರ್ಮಾನ ಇವೆಲ್ಲವೂ ಮಾರ್ಚ್ ತಿಂಗಳ ಅಂತ್ಯದ ವರೆಗೂ ಗುಟ್ಟಾಗಿದ್ದುವು. ಕೊನೆಗೆ ಬೆಳಕಿಗೆ ಬಿದ್ದ ಸಂಗತಿಗಳಿಂದ ತಿಳಿದು ಬಂದುದಿಷ್ಟೇ: ಮಾರ್ಚ್ ತಾ 1ರಲ್ಲಿ ಮಲಯದ ಸೆಲಂಗಾರಿನ ರಾವಂಗ್ ಎಂಬಲ್ಲಿ ರಸ್ತೇ ಬದಿಯ ರಬ್ಬರ್ ಮರವೊಂದರ ಕೆಳಗೆ ಗಣಪತಿ ಕುಳಿತಿದ್ದ. ಸ್ಪೆಶ್ಯಲ್ ಪೋಲೀಸು ದಳವು ಅವನನ್ನು ದಸ್ತಗಿರಿ ಮಾಡಿತೆಂದು, ಇಬ್ಬರು ಜಡ್ಜರ ಸಮ್ಮುಖದಲ್ಲಿ ಗುಪ್ತ ವಿಚಾರಣೆ ನಡೆದು ಅವನನ್ನು ಫಾಶಿಗೇರಿಸಿ ಕೊಲ್ಲಬೇಕೆಂಬ ತೀರ್ಪು ಮಾರ್ಚ್ ತಾ. 15ರಲ್ಲಾಯಿತು. ಈ ಶಿಕ್ಷೆಯ ವಿರುದ್ಧ ಮಲಯದ ಫೆಡರಲ್ ಕೋರ್ಟಿಗೆ ಅಪ್ಪೀಲು ಮಾಡಲ್ಪಟ್ಟು ಅದು ಎಪ್ರಿಲ್ 1ರಲ್ಲಿ ಡಿಸ್‌ಮಿಸ್ ಆಯಿತು. ಆ ನಂತರವೇ ಈ ಕಥೆ ಆದಿಯಿಂದ ಅಂತ್ಯದ ವರೆಗೆ ಒಮ್ಮೆಗೇ ಪ್ರಕಟಗೊಂಡುದು. ಮರಣದಂಡನೆ ವಿಧಿಸಲ್ಪಟ್ಟೊಡನೆ ಮಲಯದಲ್ಲಿ ಭಾರತದ ಪ್ರತಿನಿಧಿಯಾಗಿರುವ ಶ್ರೀ ಜೆ. ಎ. ಥಿವಿಯವರು ಗಣಪತಿಯನ್ನು ಫಾಶಿಗೆ ಕೊಡುವುದನ್ನು ತಪ್ಪಿಸುವ ಸರ್ವಯತ್ನಗಳನ್ನೂ ಮಾಡಿದ್ದರು. ಗಣಪತಿಯ ಮೇಲಿನ ಆರೋಪದ ಮುಂದಿನ ವಿಚಾರಣೆಯಾಗುವ ವರೆಗೆ ಮರಣದಂಡನೆಯನ್ನು ಜಾರಿಮಾಡದಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಆಗ್ರಹಪೂರ್ವಕ ಕೇಳಿಕೊಳ್ಳಲು ಭಾರತ ಸರಕಾರವು ಮಲಯದಲ್ಲಿರುವ ತನ್ನ ಪ್ರತಿನಿಧಿ ಥಿವಿಯವರನ್ನು ಕೇಳಿಕೊಂಡಿತ್ತು. ಬ್ರಿಟಿಷ್ ಸರಕಾರವನ್ನು ಈ ಕುರಿತು ಒತ್ತಾಯಿಸುವಂತೆ ಲಂಡನಿನಲ್ಲಿರುವ ತಮ್ಮ ಹೈ ಕಮಿಶನರ್ ಶ್ರೀ ಕೃಷ್ಣ ಮೆನನರಿಗೂ ನಿರ್ದೇಶಿಸಿದ್ದಿತು.

ತಾವು ಈ ಸಂಬಂಧದ ತನಿಖೆ ನಡೆಸಿ ತಿಳಿಸುವೆವೆಂದು ಬ್ರಿಟಿಷ್ ಸರಕಾರದಿಂದ ಭಾರತ ಹೈಕಮಿಶನರ್ ಶ್ರೀ ವಿ. ಕೆ. ಕೃಷ್ಣ ಮೆನನರಿಗೆ ಭರವಸೆ ದೊರೆತಿದ್ದಿತು. ಅದೇ ರೀತಿ ಬ್ರಿಟಿಷ್ ಸರಕಾರದಿಂದ ಸಿಂಗಾಪುರದಲ್ಲಿರುವ ಅಧಿಕಾರಿಗಳಿಗೆ ಅವಸರದ ತಂತಿಗಳೂ ಹೋಗಿದ್ದುವೆಂದು ತಿಳಿದುಬರುತ್ತದೆ. ಅತ್ತ ಮಲಯದಲ್ಲಿರುವ ಭಾರತ ಪ್ರತಿನಿಧಿ ಥಿವಿಯವರಾದರೂ ಥಿಲ್ಲಿ ಮತ್ತು ಲಂಡನಿಗೆ ಮೇಲಿಂದ ಮೇಲೆ ಸಂಗತಿ ನಿರೂಪಣೆ ಮಾಡಿಕೊಂಡಿದ್ದರು. ಇದೇ ತಾ. 2ರಲ್ಲಿ ಸೆರೆಮನೆಯಲ್ಲಿ ಮತ್ತೊಂದೇ ದಿನದ ಆಯುಷ್ಯವುಳ್ಳದಿದ್ದ ಗಣಪತಿಯನ್ನು ಸ್ವತಃ ಕಂಡು ಮಾತಾಡಿದ್ದರು. ಆ ದಿನವೇ ತನ್ನ ಕೊನೆಯ ಪ್ರಯತ್ನವಾಗಿ ಮಲಯದಲ್ಲಿ ಫೆಡರಲ್ ಕಾರ್ಯದರ್ಶಿ ಸರ್. ಎ. ನ್ಯೂಬೋಲ್ಡರೊಡನೆ ಗಣಪತಿಯ ಪ್ರಾಣದಾನದ ದಯೆಯನ್ನೂ ಯಾಚಿಸಿದ್ದರು. ಸೆಲಂಗಾರಿನ ಪ್ರಧಾನ ಮಂತ್ರಿಗಳ ಮುಂದೆ ತಾನೇ ಬೇಡಿಕೆಯನ್ನು ಇಡುವೆನೆಂದು ನ್ಯೂಬೋಲ್ಡರು ಥಿವಿಗಳಿಗೆ ಆಶ್ವಾಸನೆ ಕೊಟ್ಟಿದ್ದರು. ಇಷ್ಟಿದ್ದರೂ ಇದೇ ತಾ. 4ರಲ್ಲಿ ಗಣಪತಿಯನ್ನು ಗಲ್ಲಿಗೇರಿಸಿಯೇ ಬಿಟ್ಟರು.

ತೀವ್ರ ನಿಷೇಧ

ಗಣಪತಿಯನ್ನು ಗಲ್ಲಿಗೇರಿಸಿದ ಮರುದಿನವೇ ಭಾರತ ಸರಕಾರವು ತನ್ನ ತೀವ್ರ ನಿಷೇಧವನ್ನು ಬ್ರಿಟಿಷ್ ಸರಕಾರಕ್ಕೆ ಸೂಚಿಸುವಂತೆ ಲಂಡನಿನಲ್ಲಿರುವ ತನ್ನ ಹೈಕಮಿಶನರಿಗೆ ತಿಳಿಸಿತು. ಅದಕ್ಕನುಸಾರವಾಗಿ ಶ್ರೀ. ವಿ. ಕೆ. ಕೃಷ್ಣಮೆನನರು ತಾ. 6ರಲ್ಲಿ ಬ್ರಿಟಿಷ್ ವಸಾಹತು ಕಚೇರಿಗೆ ಹೋಗಿ ಭಾರತ ಸರಕಾರದ ಬಲವಾದ ನಿಷೇಧವನ್ನು ಮುಟ್ಟಿಸಿದರೆಂದು ತಿಳಿದು ಬಂದಿದೆ. ಭಾರತದಲ್ಲೆಲ್ಲಾ ಈ ಕುರಿತು ಸಂತಾಪ ಹುಟ್ಟಿಕೊಂಡಿದೆ. 'ಒಂದು ರಿವಾಲ್ವರ್ ಹಿಡಿದುಕೊಂಡ ಮಾತ್ರಕ್ಕೇನೇ ಮಲಯದಲ್ಲಿರುವ ಓರ್ವ ಎಳೇ ಭಾರತೀಯನನ್ನು ಅಲ್ಲಿಯ ಬ್ರಿಟಿಷ್ ಅಧಿಕಾರಿಗಳು ಗಲ್ಲಿಗೇರಿಸಿ ಬಿಟ್ಟರು. ಸ್ವಲ್ಪ ತಡೆಯಿರೆಂದು ಭಾರತ ಸರಕಾರವು ಮೇಲಿಂದ ಮೇಲೆ ಕೇಳಿಕೊಂಡರೂ ಕಿವಿಯ ಮೇಲೆ ಹಾಕಿಕೊಳ್ಳದೆ ಕೆಲಸ ಜಾರಿಮಾಡಿಬಿಟ್ಟರು'-ಎಂಬುದರಿಂದ ಹಿಂದೀಯರ-ವಿಶೇಷತಃ ಮದ್ರಾಸ್ ಪ್ರಾಂತೀಯರ-ರಕ್ತ ಕುದಿಯುತ್ತಿದೆ. ತಾ. 4ರಲ್ಲಿ ಫಾಶಿಗೇರಿದ ಗಣಪತಿಯನ್ನು, ತಾ. 2ರಲ್ಲಿ ಅಲ್ಲಿಯ ಭಾರತ ರಾಯಭಾರಿ ಶ್ರೀ ಜೆ. ಎ. ಥಿವಿಯವರು ಮದು ಸೆರೆಮನೆಯಲ್ಲಿ ಭೇಟಿಯಾದಾಗ ಗಣಪತಿಯು ತಾನು ಪೂರ್ಣ ನಿರಪರಾಧಿಯೆಂದು ಆಗ್ರಹಪಟ್ಟು ಹೇಳಿಕೊಂಡಿದ್ದ. "ಕೂಲಿಗಾರರು ತಮ್ಮ ಹಕ್ಕು ಬಾಧ್ಯತೆಗಳನ್ನು ಸಂಪಾದಿಸಿಕೊಳ್ಳಲಿಕ್ಕಿರುವ ಒಂದೇ ಒಂದು ದಾರಿಯೆಂದರೆ ಕಮ್ಯೂನಿಸಮ್ ಎಂದೇ ನನ್ನ ನಂಬಿಕೆ. ಆದರೆ ಯಾವುದೇ ವಿಧದ ಹಿಂಸಾಚರಣೆಗಾದರೂ ನಾನು ಬದ್ಧ ವಿರೋಧಿ. ನಾನೀ ವರೆಗಾವ ಹಿಂಸೆಯನ್ನೂ ಮಾಡಿದ್ದಿಲ್ಲ. ನಾನು ನಾಲ್ಕೈದು ತಿಂಗಳು ಕಾಡಿನಲ್ಲಿ ಸುಮ್ಮಗೆ ಸುತ್ತಾಡುತಿದ್ದೆ. ಆಗ ನನ್ನ ಆತ್ಮಸಂರಕ್ಷಣೆಗಾಗಿ ರಿವಾಲ್ವರ್ ಹಿಡಿದುಕೊಂಡಿದ್ದೆ. ಈ ಅವಧಿಯ ಹೆಚ್ಚಿನ ಕಾಲ ನಾನು ಕಾಹಿಲೆಯಲ್ಲೇ ಇದ್ದೆ. ಇನ್ನು ತಲೆ ಮರೆಸಿಕೊಂಡಿರುವುದು ಬೇಡವೆಂದು ರಿವಾಲ್ವರ್ ಮತ್ತು ಸ್ವತಃ ನನ್ನನ್ನೇ ಅಧಿಕಾರಿಗಳಿಗೊಪ್ಪಿಸಿಕೊಂಡು, ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ನಾನಾಗ ಕಾಡುಬಿಟ್ಟು ಹೊರಗೆ ಬಂದಿದ್ದೆ. ಹಾಗೆ ಬರುವಾಗ ಮಲಯದಲ್ಲಿರುವ ಈ ಕಠಿಣ ಶಾಸನದ ಸಂಗತಿಯೇ ನನಗೆ ಗೊತ್ತಿರಲಿಲ್ಲ. ಪೋಲೀಸರು ಹಿಡಿಯಲು ಬಂದಾಗ ನಾನಾವ ಅಡ್ಡಿಯನ್ನೂ ಮಾ

ಉತ್ತಮ

—ಉಪಾಹಾರ ಮಂದಿರ

ವೀರ ಭಾರತ ವಿಶ್ರಾಂತಿ ಗೃಹ

(ನ್ಯೂ ಯೂನಿಯನ್ ಮಿಲ್ಲಿನ ಎದುರು)

ಡಿಕಿಸ್ಲೆ ರೋಡು

ಸಿಂಗಾಪುರ 13

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು, ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ರಿಂದ ೫ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು, ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವಟೆ ಗುಡ್ಡೆ, ಮಂಗಳೂರು.

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

1949—50ರಲ್ಲಿ ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂದು ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1-4-0 ಕಳುಹಿಸಿ. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು, ಲಾಭ ನಷ್ಟಗಳು, ಮದುವೆ, ಮುಂಜಿ, ಸಂತತಿ, ತೇಜಿ ಮಂದಿ, ಸಮಯಾದಿಗಳನ್ನು ಸೂಚಿಸುವೆವು. ಅಲ್ಲದೆ ದುಷ್ಟ ಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನು ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು ಟಪ್ಪಾಲು ವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,

Roj jyotshi

(N. R. U-) jullundur City.

• ರಿವಾಲ್ವರ್ ಹಿಡಿದಿದ್ದನೆಂದೇ • • ಭಾರತವನ್ನು ಗಣಿಸದೆ ಈ ಶಿಕ್ಷೆ! •

ಡಲಿಲ್ಲ"ಎಂದು ಗಣಪತಿ ಕೊನೆಯ ಆತ್ಮನಿವೇದನೆ ಮಾಡಿಕೊಂಡಿದ್ದ. ಆದರೆ ಅವನನ್ನು ಪಾಶಿಗೆ ಕೊಡಿಸಿದ ಪ್ರೊಸಿಕ್ಯೂಶನ್ ಕಥೆಯೇ ಬೇರೆ. ಪಾಶಿಯ ದಿನವೇ ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಆ ಕುರಿತು ಕಮ್ಯೂನಿಸ್ಟ್ ಸದಸ್ಯ ಪಿ. ಪಿರಾಟಿನ್ ಇವರ ಪ್ರಶ್ನೆಗೆ ಉತ್ತರ ಕೊಡುತ್ತಾ ವಸಾಹತು ಉಪಕಾರ್ಯದರ್ಶಿ ಡಾವಿಡ್‌ರೀಸ್ ವಿಲ್ಲಿಯಮ್ಸ್ ಅಂದಿದ್ದರು: "ತಲೆಮರಿಸಿಕೊಂಡಿದ್ದ ಈ ಮನುಷ್ಯನನ್ನು ಮಾರ್ಚ ತಾ 1ರಲ್ಲಿ ಪೋಲೀಸ್ ದಳವೊಂದು ಪತ್ತೆಹಚ್ಚಿ ಹಿಡಿಯಲು ಹೋದಾಗ ಆತ ಉರುಹಾಟಕ್ಕೆಳೆಂತು ತನ್ನ ಬೆಲ್ಟಿನಲ್ಲಿ ತೂಗಾಡಿಸಿಕೊಂಡಿದ್ದ ರಿವಾಲ್ವರನ್ನು ತೆಗೆದಿದ್ದ. ಸ್ವಲ್ಪ ಹೋರಾಟವಾದ ಮೇಲೆ ಆತನ ಕೈವು ನಿಂತು ಸೆರೆಬಿದ್ದ; ಅವನ ರಿವಾಲ್ವರನ್ನು ನೋಡುವಾಗ ಅದರೊಳಗೆ ಆರು ಮದ್ದು ಗುಂಡುಗಳು ತುಂಬಿದ್ದುವು. ಮಲಯದ ಎಮರ್ಜೆನ್ಸಿ ಕಾಯಿದೆಯನ್ವಯ ಅವನ ಮೇಲೆ ಚಾರ್ಜ್ ಹಾಕಲ್ಪಟ್ಟು ವಿಚಾರಣೆ ನಡೆಯಿತು. ಓರ್ವ ಯುರೋಪಿಯನ್, ಮತ್ತೋರ್ವ ಭಾರತೀಯ ಎಸ್ಸೆಸರರಿದ್ದರೂ ಅವನನ್ನು ಪೂರ್ಣಪರಾಧಿಯೆಂದು ಗಣಿಸಿ ತೀರ್ಪುಕೊಟ್ಟರು. ಅಪ್ಪೀಲು ಕೋರ್ಟಿಗೆ ಮಾಡಿದ ಅಪ್ಪೀಲು ಡಿಸ್‌ಮಿಸ್ ಆಯಿತು. ಅವನಿಗೆ ಪ್ರಾಣದಾನ ಮಾಡುವ ವಿಶೇಷಾಧಿಕಾರವುಳ್ಳ ಸೆಲಂಗೋರಿನ ಸುಲ್ತಾನರು ಇವನ ಕುರಿತು ದಯೆದಾನ ಮಾಡಲು ನಿರಾಕರಿಸಿದರು. ಅವನನ್ನು ಈ ದಿನ ಮುಂಜಾನೆ ಗಲ್ಲಿಗೇರಿಸಲಾಯಿತು"

ಅತ್ತ ಪಾರ್ಲಿಮೆಂಟಿನಲ್ಲಿ ಬ್ರಿಟಿಷ್ ಸರಕಾರದ ಪರವಾಗಿ ಮೇಲಿನ ಹೇಳಿಕೆ ಹೊರಬಿದ್ದಿರುವಾಗ, ಇತ್ತ ನವದಿಲ್ಲಿಯಲ್ಲಿ ಅದೇ ದಿನವೇ ಹೊರಟ ಭಾರತ ಸರಕಾರದ ವಿದೇಶ ಸಂಬಂಧ ಖಾತೆಯ ಪ್ರಕಟಣೆ ಹೀಗೆಂದಿತು: "ಮಲಯದ ಎಮರ್ಜೆನ್ಸಿ ಕಾಯಿದೆಗಳೇನೇ ಇರಲಿ; ಗಣಪತಿಯನ್ನು ಪಾಶಿಗೆ ಕೊಟ್ಟಿದ್ದು ಪರಿಸ್ಥಿತಿ ಮೀರಿ ಮಿಕ್ಕಿದ ವಿಶೇಷ ಕೃತ್ಯವೆಂದೇ- ಭಾರತ ಸರಕಾರವು ಕಠೋರವಾಗಿ ಭಾವಿಸುತ್ತಿದೆ. ಮತ್ತು ಗಣಪತಿಯ ಮೇಲೆ ಜಾರಿಯಾದ ಈ ಮರಣ ಶಿಕ್ಷೆಯನ್ನು ಗಾಢವಾಗಿ ಖಂಡಿಸುತ್ತದೆ"

ಮಲಯದ ಯಮಶಾಸನ

ಭಾರತ ಸರಕಾರ ಮತ್ತು ಬ್ರಿಟಿಷ್ ಸರಕಾರಗಳು ಮೇಲಿನಂತೆ ವಾದಿ-ಪ್ರತಿವಾದಿಗಳಾಗಿ ನಿಂತಿವೆ. ಕಾಮನ್‌ವೆಲ್ತಿನೊಳಗೆ ರಿಪಬ್ಲಿಕ್ ಭಾರತವು ಸಮಾನ ಹಾಗೂ ಸಂಪೂರ್ಣ ಸದಸ್ಯನಾಗಿ ನಿಲ್ಲುವ ನಿರ್ಣಯವಾದ ಬೆನ್ನಲ್ಲೇ ಭಾರತ ಸರಕಾರವು ಬ್ರಿಟಿಷ್ ಸರಕಾರಕ್ಕೆ ಬಲವಾಗಿ ನಿಷೇಧ ಸೂಚನೆ ಮಾಡಬೇಕಾಗಿ ಬಂದುದು ಸೊಗಸಾಗಿ ತೋರುವುದಿಲ್ಲ. 'ಆಯುಧ ಹಿಡಿದೊಡನೆ ಅಂತ್ಯ'ವೆಂಬ ಕಠೋರ ಶಾಸನ-ಭಾರತ ಸರಕಾರವು ಸಕಾಲದಲ್ಲಿ ಬಾಯಿಹಾಕಿದ್ದರೂ ಕೇಳದೆ ಅದರ ಪ್ರಜೆಯೊಬ್ಬನನ್ನು ನೇತಾಡಿಸಿ ಕೊಂದುದು- ಈ ಕುರಿತು ಪರೀಕ್ಷಿಸಿ ತಿಳಿಸುತ್ತೇವೆ, ಎಂದು ಬ್ರಿಟಿಷ್ ಅಧಿಕಾರಿಗಳ ಆಶ್ವಾಸನೆಯಿದ್ದಂತೆಯೇ ಈ ಕೃತ್ಯ ನಡೆದುಹೋದುದು-ಇವೆಲ್ಲಾ ನಿಜಕ್ಕೂ ದಂಗುಬಡಿಸುವ ವಿದ್ಯಮಾನಗಳು. ಮಲಯದ ಸ್ಥಿತಿ ಮತ್ತದರ ಸ್ಥಾನ ವೈಶಿಷ್ಟ್ಯವೇ ಈ ಸೋಜಿಗವನ್ನು ನಿರ್ಮಿಸಿದೆ. ಲೋಕ ಪ್ರಸಿದ್ಧ ರಬ್ಬರ್ ತೋಟ ಭೂಮಿಯಾಗಿರುವ ಮಲಯದ ಬ್ರಿಟಿಷ್ ಹಾಗೂ ಚೈನೀ ತೋಟ ಮಾಲಕರ ಅಪ್ರಾಗತಿಕ ಧೋರಣೆ ಹಾಗೂ ಅತ್ಯಾಚಾರಗಳನ್ನು ಸಹಿಸಲಾರದೆ ಅಲ್ಲಿಯ ತೋಟದ ಕೆಲಸಗಾರರು ಕೆಲಕಾಲದಿಂದ ಅಸಾಧ್ಯ ಬಂಡಾಯ ಹೂಡಿದ್ದರು. ಅದರಲ್ಲಿದ್ದುದು ಕಮ್ಯೂನಿಸ್ಟರ ಕೈವಾಡ ಮತ್ತು ನಾಯಕತ್ವ. ಈ ಬಂಡಾಯಾಗ್ನಿಯಲ್ಲಿ ಮಲಯದ ಮಾಲಿಕರ ಹಲವು ಪ್ರಾಣ ಸೊತ್ತುಗಳು ಕರಟಿ ಹೋಗಿದ್ದುವು; ಅಲ್ಲಿ ಮೇಲಧಿಕಾರ ನಿರ್ವಹಿಸುತ್ತಿರುವ ಬ್ರಿಟಿಷರು ಉಗ್ರ ಧೋರಣೆ ವಹಿಸಿ ಈ ಬಂಡಾಯಗಾರರನ್ನು ಕಠೋರ ರೀತಿಯಿಂದ ಸದೆಬಡಿಯಹತ್ತಿದುದರಿಂದ ಇತ್ತೀಚೆಗೆ ಅದರ ಜ್ವಾಲೆಯೇನೋ ಹಿಂದಿನಷ್ಟು ಜ್ವಲಿಸುತ್ತಿರುವುದು ಕಾಣಿಸುತ್ತಿಲ್ಲ. ಈ ಸ್ಮಶಾನ ಶಾಂತಿಗೆ ಕಾರಣ ಅಲ್ಲಿ ಜಾರಿಗೆ ಬಂದಿರುವ 'ಎಮರ್ಜೆನ್ಸಿ ಶಾಸನ'ಗಳೇ. ಈ ಶಾಸನಗಳನ್ವಯ ಕೋವಿ, ಮದ್ದುಗುಂಡು ಮೊದಲಾದ ಶಸ್ತ್ರಾಸ್ತ್ರಗಳನ್ನು ಸ್ವಾಧೀನವಿಟ್ಟುಕೊಂಡವರಿಗೂ ಮರಣದಂಡನೆ ವಿಧಿಸಬಹುದು. ಅಲ್ಲಿ ಮೊದಲಿನಿಂದಿರುವ ಯಾವುದೇ ಶಾಸನವನ್ನಾದರೂ ಅಲ್ಲಿರುವ ಬ್ರಿಟಿಷ್ ಹೈಕಮಿಶನರ್ ತನಗೆ ಸರಿತೋರಿದಂತೆ ಬದಲಾಯಿಸಬಹುದು; ರದ್ದು ಮಾಡಬಹುದು. ಯಾವುದೇ ಮೊಕದ್ದಮೆ ಅಥವಾ ದಾವೆಗಳನ್ನು ಗುಪ್ತವಾಗಿ ನಡೆಸಬಹುದು. ಇಂತಹ ಸಾಕ್ಷ್ಯಗಳನ್ನೇ ವಿಚಾರಿಸಬೇಕು—ಇಂತಹ ಕೋರ್ಟೇ ವಿಚಾರಿಸಬೇಕು—ಇಂತಹ ಶಿಕ್ಷೆಯನ್ನೇ ಕೊಡಬೇಕು, ಎಂದು ತನ್ನಿಚ್ಛೆಯಂತೆ ಬ್ರಿಟಿಷ್ ಹೈಕಮಿಶನರ್ ಶಾಸನ ವಿಧಿಸಬಹುದು. ಅರ್ಥಾತ್ ಮಲಯದಲ್ಲಿರುವ ಬ್ರಿಟಿಷ್ ಹೈಕಮಿಶನರನು ಅಲ್ಲಿ ಜಾರಿಯಲ್ಲಿರುವ ವಿಶೇಷ ಶಾಸನಗಳನ್ವಯ ಅಲ್ಲಿರುವ ಯಾರಿಗೇ ಆದರೂ ಏನನ್ನೇ ಆದರೂ ಮಾಡಬಲ್ಲ ಯಮಸದೃಶನೇ ಸರಿ! ಈ ವಿಶೇಷ ಶಾಸನಕ್ಕೇನೇ ಹಿಂದೀ ಎಳೆತರುಣ ಗಣಪತಿಯನ್ನು ಬಲಿಕೊಡಲಾಯಿತು. ಪದ್ಧತಿಯಂತೆ ಅಲ್ಲೊಂದು ಅಪ್ಪೀಲು ಕೋರ್ಟಿದೆ. ಇಲ್ಲಿ ಮರಣದಂಡನೆಗೊಳಗಾದವರಿಗೆ ಪ್ರಾಣದಾನ ಮಾಡುವ ವಿಶೇಷಾಧಿಕಾರವು ಇಲ್ಲಿಯ ಗವರ್ನರ್ ಜನರಲರಿಗಿರುವಂತೆಯೇ ಸೆಲಂಗೋರಿನಲ್ಲಾದ ಈ ಮರಣದಂಡನೆಯನ್ನು ರದ್ದುಪಡಿಸಿ ಜೀವವುಳಿಸುವ ಅಧಿಕಾರವು ಅಲ್ಲಿಯ ಸುಲ್ತಾನನಿಗಿದೆ. ಆದರೆ ಗಣಪತಿಯ ಪರವಾಗಿ ನಡೆದ ಅಪ್ಪೀಲನ್ನು ಅಲ್ಲಿಯ ಅಪ್ಪೀಲುಕೋರ್ಟು ಎಪ್ರಿಲ್ 1ರಲ್ಲೂ, ಅವನ ಪ್ರಾಣದಾನಕ್ಕಾಗಿ ಬಂದ ಬೇಡಿಕೆಯನ್ನು ಅಲ್ಲಿಯ ಸುಲ್ತಾನನು ತನ್ನ ಕೌನ್ಸಿಲಿನೊಡನೆ ಯೋಚಿಸಿ ಎಪ್ರಿಲ್ 23ರಲ್ಲೂ ಡಿಸ್‌ಮಿಸ್ ಮಾಡಿಬಿಟ್ಟರು, ಮೇ 4ರಲ್ಲಿ ಗಣಪತಿಯ ಪ್ರಾಣ ತೆಗೆದರು-ಹಗ್ಗಕ್ಕೆ ನೇತಾಡಿಸಿ!

ಭಾರತ ಸರಕಾರದ ಸೂಚನೆಯನ್ನು ಅಲಕ್ಷ್ಯಿಸಲಾರದೆ ಸಂಗತಿಯ ಸಮಾಲೋಚನೆ ನಡೆಸಲು ಲಂಡನಿನಲ್ಲಿರುವ ಬ್ರಿಟಿಷ್ ಸರಕಾರವು ಮನಸ್ಸು ಮಾಡಿದ್ದಿರಬೇಕು; ಆದರೆ ಮಲಯದಲ್ಲಿರುವ ಬ್ರಿಟಿಷ್ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಆ ಕಡೆಗೆ ಗಮನವನ್ನೇ ಕೊಡಲಿಲ್ಲವೆಂದೂಹಿಸಬಹುದು. ಘಟನಾತ್ಮಕವಾಗಿ ಮಲಯದ ಇಂತಹ ಮನೇ ವಾರ್ತೆಯೊಳಗೆ ಕೈಹಾಕುವ ಅಧಿಕಾರವು ಬ್ರಿಟನಿಗಿಲ್ಲವೆಂದು ಸೂಚಿಸಲ್ಪಟ್ಟಿದೆ. ಆದರೆ ಈ ಹತ್ಯಾಸಂಸರದ ಆಗುಹೋಗುಗಳು ಬ್ರಿಟಿಷ್ ಸರಕಾರದ ಕಣ್ಣು ತೆರೆಯಿಸಿವೆ; ಬ್ರಿಟನಿನ ವಸಾಹತು ಸಂಬಂಧ ಕಚೇರಿಯು ಈ ಸಂಬಂಧದ ಅಧಿಕಾರ ಮತ್ತು ಸಂಗತಿಗಳನ್ನು ವಿಚಾರಿಸಿಕೊಳ್ಳುತ್ತಿದೆ.

ಇಷ್ಟೊಂದು ಶನಿಕರುಹೇರಿಕೆಯಿಂದ, ಆದರೆ ಭಾರತೀಯರ ಕಣ್ಣು ತೆರೆಯಿಸುವ ವಿಧಾನದಿಂದ-ಪ್ರಾಣ ಬಲಿದಾನಕೊಟ್ಟ ಗಣಪತಿಯ ಹೇಳಿಕೆಯೇ ನಿಜವಿರಬಹುದೆಂದು ನ್ಯಾಯ ಪಕ್ಷಪಾತಿಗಳಿಗನ್ನಿಸಲಾರದೆ? ಕಾನೂನಾಗಿ ವಶವಾಗುವ ಇಚ್ಛೆಯಿಂದಲ್ಲದೆ ಬೇರಾವ ದುರುದ್ದೇಶವೂ ಆತನಿಗಿದ್ದಿದ್ದರೆ ಅಷ್ಟು ಸಮಯ ಅಡಗಿಕೊಂಡಿದ್ದ ಆತ, ರಸ್ತೆಬದಿಗೆ ಬಂದು ರಬ್ಬರ್‌ವೃಕ್ಷದ ನೆರಳಿನಲ್ಲೇಕೆ ಕುಳಿತುಕೊಳ್ಳುತ್ತಿದ್ದ? 'ರಿವಾಲ್ವರ್ ಇದ್ದವನಿಗೆ ಮರಣ'ವೆಂಬ ಯಮನಿಯಮದ ತಿಳುವಳಿಕೆ ಆತನಿಗಿರುತ್ತಿದ್ದರೆ, ಅವ ಯಾರಿಗೂ ಗುಂಡುಹಾರಿಸದೆ, ತನಗೆ ತಾನೇ ಮೃತ್ಯುವನ್ನಾಮಂತ್ರಿಸಿಕೊಳ್ಳುವವನಂತೆ ಅದನ್ನು ಹಿಡಿದು ಸ್ವಸ್ಥ ಕುಳಿತುಕೊಳ್ಳುತ್ತಿದ್ದನೆ? ಆದರೆ ಇದನ್ನೆಲ್ಲಾ ವಿಚಾರಿಸುವವರಾರು? ಇನ್ನು ಮಾಡುವುದಾದರೂ ಏನು? ಮಲಯದ ಆ ಮೃತ್ಯುಶಾಸನಕ್ಕೆ ಎಷ್ಟು ಮಂದಿ ನಿರಪರಾಧಿಗಳು ಬಲಿಯಾದರೋ! ಗಣಪತಿಯ ಆಯುಷ್ಯವು ಹೇಳಿದರೂ ಕೇಳುವವರಿಲ್ಲದೆ ಮುಗಿದುಹೋಯಿತು. ಮಲಯದಲ್ಲಿ ಇನ್ನೊಬ್ಬ ಹಿಂದೀ ತರುಣನ ಕಂಠಕ್ಕೂ ಗಣಪತಿಯಂತೆಯೇ ಪಾಶಿಗೊಕ್ಕೆ ಕಾದಿದೆ ಎಂದು ತಿಳಿದುಬರುತ್ತದೆ. ಈ 20 ವರುಷದ ಭಾರತೀಯ ಯುವಕನ ಹೆಸರು ಸಾಂಬಶಿವನ್. ಇವನ

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯ ಜರೂರಾತಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತಃ ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ವಿಧಾನವಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ.

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದು ಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.
ಜನರಲ್ ಮೆನೇಜರ್

ಮೇಲಿನ ಆರೋಪವೂ ಅದೇ—'ಲೈಸೆನ್ಸ್ ಇಲ್ಲದ ರಿವಾಲ್ವರ್ ಮತ್ತು ಜೀವಂತಗುಂಡುಗಳನ್ನಿಟ್ಟುಕೊಂಡುದು'. ಇವನಿಗೂ ಗಣಪತಿಯಂತೆಯೇ ಮರಣದಂಡನೆಯು ತೀರ್ಪು ಕೆಲಕಾಲಕ್ಕೆ ಮೊದಲೇ ಆಗಿದ್ದು, ಈಗ ಆ ಸಂಬಂಧದ ಅಪ್ಪೀಲು ಸೆಲಂಗೋರ್ ಸುಲ್ತಾನನ ಮುಂದೆ ಬಿದ್ದುಕೊಂಡಿದೆ. ಗಣಪತಿ ಮತ್ತು ಈ ಸಾಂಬಶಿವನ್ ಇವರೊಳಗಿನ ಶಿಕ್ಷೆಗಳ ಏಕಮಾತ್ರ ವ್ಯತ್ಯಾಸವೆಂದರೆ ಗಣಪತಿಯ ಮಟ್ಟಿಗೆ ವಿಚಾರಣಕರ್ತರೆಲ್ಲರೂ ಏಕಮತದಿಂದಿದ್ದರು; ಸಾಂಬಶಿವನ್ ನಿರಪರಾಧಿಯೆಂದು 'ಜ್ಯೂರಿ'ಗಳು ಅಭಿಪ್ರಾಯಪಟ್ಟರೂ ಜಡ್ಜ ಅದನ್ನು ಕಡೆಗಣಿಸಿ ಮರಣಶಿಕ್ಷೆ ವಿಧಿಸಿದ್ದ. ಭಾರತ ಸರಕಾರವು ಸಾಂಬಶಿವನ್ ಸಂಬಂಧವಾಗಿಯೂ ಬ್ರಿಟಿಷ್ ಸರಕಾರವನ್ನು ಅಗ್ರಹ ಪೂರ್ವಕ ಕೇಳಿಕೊಳ್ಳಲಿದೆ. ಇನ್ನೇನಾಗುವುದೋ ನೋಡಬೇಕು. ಸಿಂಗಾಪುರದ ಟ್ರೇಡ್ ಯೂನಿಯನ್ನುಗಳ ಫೆಡರೇಶನಿನ ಅಧ್ಯಕ್ಷನಾಗಿದ್ದ ಕಳೆದ ವರುಷದ ಮೇ ತಿಂಗಳಿಂದ ತಲೆಮರೆಸಿಕೊಂಡಿದ್ದ ಮತ್ತೊರ್ವ ಭಾರತೀಯ ಶ್ರೀ. ಪಿ. ವೀರಸೇನನ್ ಎಂಬವರು ಇದೇ ತಾ. ೩ರಲ್ಲಿ ಒಂದು ಗೊರಿಲ್ಲಾ ರಾಜ್ಯದಿಂದ ಮತ್ತೊಂದೆಡೆಗೆ ಜಾರಿಹೋಗುತ್ತಿದ್ದಾಗ ದಟ್ಟಾರಣ್ಯವೊಂದರಲ್ಲಿ ಘೂರ್ಖಾಸೇನಾದಳವು ಅವರನ್ನು ಗುಂಡಿಟ್ಟು ಕೊಂದು ಹಾಕಿದೆ.

ಸಂತಾಪಧ್ವನಿ

ಮಾನವ ಪ್ರಾಣವನ್ನು ಕಸಕ್ಕಿಂತ ಕಡೆಯಾಗಿ ಗಣಿಸಿ, ಕೇವಲ ಲೈಸನ್ಸಿಲ್ಲದ ರಿವಾಲ್ವರ್ ಹಿಡಿದ ತಪ್ಪಿಗಾಗಿ ಎಳೇ ರಕ್ತದ ಹಿಂದೀ ತರುಣನ ಜೀವತೆಗೆದ ವಾರ್ತೆಯು ಭಾರತೀಯರಿಗೆ ಸಿಡಿಲಿನಂತೆ ಒಡಿದಿದೆ; ಮದ್ರಾಸಿನಲ್ಲಂತೂ ಶೋಕ ಜ್ವಾಲಾಮುಖಿ ಸ್ಫೋಟಗೊಂಡಿದೆ. ಲೋಕದ ವಿಚಾರವಂತ ಹಾಗೂ ಮಜೂರ ಹಿತಚಿಂತಕ ವರ್ಗವು ಈ ಕೃತ್ಯವನ್ನು ಕಟುವಾಗಿ ಟೀಕಿಸುತ್ತಿದೆ. ಹಲವರ ಬಾಯಿಯಿಂದ ವಾಗ್ಝರಿ ಹಾರಿದೆ:-

"ಮಲಯಾದಲ್ಲಿರುವ ಭಾರತೀಯ ಅಧಿಕಾರಿಗಳು ಸೂಚಿಸುತ್ತಾ ಬಂದ ನಿಷೇಧಗಳನ್ನು ಪೂರ್ಣ ಕಡೆಗಣಿಸಿ, ಭಾರತದ ಓರ್ವ ಪುತ್ರನನ್ನು ಫಾಶಿಗೆ ಕೊಟ್ಟುಬಿಟ್ಟ ಮಲಯಾದ ಬ್ರಿಟಿಷ್ ಏಜಂಟರು ಭಾರತಕ್ಕೆ ಮಹದನ್ಯಾಯ ಮಾಡಿದ್ದಾರೆ. ಹೊರವಲಯಗಳಲ್ಲಿರುವ ಭಾರತೀಯರ ಹಿತಸಂಬಂಧಗಳಿಗೆ ಬಹಳವಾಗಿ ಸಂಬಂಧಿಸಿರುವಂತಹ ಅತಿ ಗಂಭೀರ ಸಂಗತಿಯಿದು. ಕಾಮನ್‌ವೆಲ್ತ್ ಪ್ರಧಾನೀ ಸಮ್ಮೇಳನದ ಬೆನ್ನಲ್ಲೇ ಅದರ ಸತ್ಪರಿಣಾಮಗಳನ್ನು ಹಾಳು ಮಾಡುವ ಅಪ್ರಬುದ್ಧ ಕೆಲಸ ನಡೆದುದು ಆಶ್ಚರ್ಯಕರ"-ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾದರ್.

"ನಾವು ಕಾಮನ್‌ವೆಲ್ತಿನ ಕುರಿತು ಮಿತಿಮೀರಿದ ವಿಶ್ವಾಸವಿಡಬಾರದೆಂಬ ಎಚ್ಚರಿಕೆಯಿದು—ಗಣಪತಿಯ ಫಾಶಿ"—ಕಾಂಗ್ರೆಸ್ ಅಧ್ಯಕ್ಷ ಡಾ। ಪಟ್ಟಾಭಿ.

"ಗಣಪತಿಯನ್ನು ಫಾಶಿಗೆಕೊಟ್ಟ ವಿಧಾನವು ಭಾರತ ಸರಕಾರವನ್ನು ತೀರಾ ತಳಮಳಗೊಳಿಸಿದೆ. ಅವನನ್ನು ಪ್ರತ್ಯಕ್ಷ ಕೊಲ್ಲುವ ಮೊದಲು ಆ ಸಂಬಂಧದ ವಿಚಾರಣೆಯ ಅಂಶವಾವುದೂ ಬಾಕಿಯುಳಿಯದಂತೆ ಮಲಯಾದ ಅಧಿಕಾರಿಗಳು ನೋಡುವರೆಂದು ಭಾರತ ಸರಕಾರವು ನಿರೀಕ್ಷಿಸಿದ್ದಿತು"— ಸಿಂಗಾಪುರ, ಸೈಗೋನ್, ಹಾಂಗ್‌ಕಾಂಗ್, ರಂಗೂನುಗಳಿಗೆ ಭೇಟಿಕೊಟ್ಟು ಈಗತಾನೇ ಮರಳಿರುವ ಭಾರತದ ಉಪ ವಿದೇಶಮಂತ್ರಿ ಡಾ। ಬಿ. ವಿ. ಕೇಸ್ಕರ್.

"ಮೇ ತಾ॥೪ರಲ್ಲಿ ಗಣಪತಿಯನ್ನು ಗಲ್ಲಿಗೇರಿಸಿ, ಆ ಮರುದಿನ ವೀರಸೇನನನ್ನು ತುಂಡರಿಸಿ ಮಲಯಾದ ಬ್ರಿಟಿಷ್ ಅಧಿಕಾರಿಗಳು ಮಾಡಿದ ಕೊಲೆಯನ್ನು ತೀವ್ರವಾಗಿ ನಿಷೇಧಿಸುತ್ತೇವೆ. ಮಲಯಾದ ಬ್ರಿಟಿಷ್ ಅಧಿಕಾರಿಗಳು ಅಲ್ಲಿಯ ಕೆಲಸಗಾರರ ಮೇಲೆ ಮಾಡುತ್ತಿರುವ ಅತ್ಯಾಚಾರಗಳು ನಮಗೆ ದೀರ್ಘಕಾಲದಿಂದ ವೇದ್ಯವಿದ್ದು, ಎಲ್ಲಾ ಸರಕಾರಗಳಿಂದಲೂ ಮನ್ನಿಸಲ್ಪಟ್ಟಿರುವ ಮಾನವನ ಮೂಲಭೂತಹಕ್ಕುಗಳಿಗೆ ಇಂತಹ ಭೀಕರ ದ್ರೋಹವಾಗುತ್ತಿರುವುದನ್ನು ನಾವು ಪ್ರತಿಭಟಿಸುತ್ತಾ ಬಂದಿದ್ದೇವೆ"—ಟ್ರೇಡ್ ಯೂನಿಯನ್ನಿನ ಜಾಗತಿಕ ಫೆಡರೇಶನಿನ ಪ್ಯಾರಿಸ್ ಮುಖ್ಯಾಲಯದಿಂದ.

"ಈ ಫಾಶಿ ಖಂಡನೀಯ. ಒಂದು ಅವಧಿಯ ಶಿಕ್ಷೆವಿಧಿಸುತ್ತಿದ್ದರೆ ಸಾಕಾಗುತ್ತಿತ್ತು. ಈ ಮರಣಶಿಕ್ಷೆಯನ್ನು ಜಾರಿಮಾಡಿದ್ದರಿಂದ ಏನಾದರೂ ಲಾಭವಾಗುವ ಬದಲಿಗೆ ಕೆಲವಂಶ ನಷ್ಟವೇ ಆಯಿತೆಂದು ನನಗನ್ನಿಸುತ್ತಿದೆ"-ಬ್ರಿಟಿಷ್ ಲೇಬರ್ ಸದಸ್ಯ ಮಿ. ಸೊರೆನ್‌ಸನ್.

"ಗಣಪತಿಯ ಫಾಶೀ ವಾರ್ತೆಯಿಂದ ಪ್ರತಿಯೊಬ್ಬ ಭಾರತೀಯನೂ ಕಂಪನಕ್ಕೀಡಾಗಿದ್ದಾನೆ. ಅವನಿಗಾದ ಮರಣತೀರ್ಪನ್ನು ಲೋಕಪ್ರಾಮುಖ್ಯ ವಾರ್ತಾಸಂಸ್ಥೆಗಳು ಕೂಡಾ ಸಕಾಲದಲ್ಲಿ ಪ್ರಕಟಿಸಲಿಲ್ಲವೇಕೆಂಬುದೇ ಒಂದು ಸೋಜಿಗ. ಭಾರತಕ್ಕೀಸುದ್ದಿ ಬೇಗನೇ ಬರುತ್ತಿದ್ದರೆ ಆ ಬರ್ಬರ ನ್ಯಾಯದ ವಿರುದ್ಧವಾಗಿ ರಾಷ್ಟ್ರವೆಬ್ಬಿಸುವ ಪ್ರತಿಕ್ರಿಯೆಯ ದೆಸೆಯಿಂದ ಆ ಫಾಶಿ ತಪ್ಪುವಂತಾಗುತ್ತಿತ್ತು. ಪಂಡಿತನೆಹರುಗಳು ಈ ಪ್ರಶ್ನೆಯನ್ನೆತ್ತಿಕೊಂಡು ಲೋಕ ಪಂಕ್ತಿಯಲ್ಲಿ ಭಾರತದ ಘನತೆಯನ್ನುಳಿಸಲು ಅಗತ್ಯವಿರುವದನ್ನೆಲ್ಲಾ ಮಾಡುವರೆಂದು ನಾನು ನಂಬುತ್ತೇನೆ"-ಕಾಂಗ್ರೆಸ್ ಕಾರ್ಯದರ್ಶಿ ಕಲಾ ವೆಂಕಟರಾವ್.

"ವಿದೇಶೀಯರ ದೃಷ್ಟಿಯಲ್ಲಿ ಭಾರತೀಯನ ಪ್ರಾಣವೆಂಬುದು ತೀರಾ ಅಗ್ಗದ ವಸ್ತುವಾಗಿದೆ ಎಂಬುದನ್ನು ಮಲಯದಲ್ಲಿ ಗಣಪತಿಗಾದ ಫಾಶಿ ಮತ್ತು ವೀರಸೇನನಿಗಿಟ್ಟ ಗುಂಡಿನಿಂದ ವ್ಯಕ್ತವಾಗುತ್ತದೆ"-ನಾಗಪುರದ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಸುರೇಶ್ ಗಂಗರ್ಡೆ.

"ಬ್ರಿಟಿಷ್ ಸರಕಾರವು ತನ್ನ ವಸಾಹತು ಖಾತೆಯ ಮೂಲಕ, ಗಣಪತಿಯ ಫಾಶಿಯನ್ನು ಮುಂದಿನ ವಿಚಾರಣೆಗಾಗಿ ಕೆಲವೇ ದಿನಗಳ ಮಟ್ಟಿಗಾದರೂ ಹಿಂದೆ ಹಾಕಿಸಲು ನಿರಾಕರಿಸಿ, ಭಾರತ ಸರಕಾರಕ್ಕೆ ಮಹತ್ತಾದ ಅವಮಾನ ಮಾಡಿದೆ"-ಸಂಯುಕ್ತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಕಾರ್ಯದರ್ಶಿ ಮೃಣಾಲ್ ಕಾಂತಿ ಘೋಷ್.

"ಇದೊಂದು ಅತಿಶಯರೂಪದ ರಾಜಕೀಯ ಬದ್ಧ ಕೊಲೆಯಾಗಿದೆ. ಪಂಜಾಮುತಃ ಬ್ರಿಟಿಷ್ ಸರಕಾರದ ಮತ್ತು ಅದರ ಕೈಗೊಂಬೆಗಳಾಗಿರುವ ಮಲಯಾದ ಕೆಫ್ಟನ್ ಹಾಗೂ ಚೈನೀಯ ಭಂಡವಾಳಗಾರರ ವಿರುದ್ಧ ಜನತೆಯನ್ನು ಉದ್ರೇಕಗೊಳಿಸಲು ಬದ್ಧವಿದೆ"—ಲಂಡನಿನ 'ಡೈಲಿ ವರ್ಕರ್ಸ್' ಪತ್ರಿಕೆ.

"ತರುಣ ಮಜೂರ ಮುಖಂಡ ಹಾಗೂ ಮಲಯದ ಟ್ರೇಡ್ ಯೂನಿಯನುಗಳ ಸಂಘಟನಾಕರ್ತ ಗಣಪತಿಯ ಫಾಶೀ ವಾರ್ತೆಯಿಂದ ಅಖಿಲ ಭಾರತಕ್ಕೆ ಸಿಡಿಲೆರಗಿದಂತಾಗಿದೆ. ಉಜ್ವಲ ಭವಿಷ್ಯವಿದ್ದ ಎಳೇ ಜೀವವೊಂದನ್ನು ಮಲಯದ ಅಧಿಕಾರಿಗಳು ಕೊಲೆ ಮಾಡಿಬಿಟ್ಟರು. ಭಾರತ ಸರಕಾರದ ಮಾತಿಗೆ ಕೂಡಾ ಬೆಲೆ ದೊರೆಯದೆ ಹೋಯಿತು"—ಹಿಂದ್ ಮಜದೂರ್ ಸಭೆಯ ಕಾರ್ಯದರ್ಶಿ ಅಶೋಕ ಮೆಹತಾ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:-

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್. ಉಡುಪಿ.

ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಪ್ರಾಪಂಚಿಕ

ಕಳೆದ ವಾರ ಪ್ರಾಪಂಚಿಕರಂಗದೊಳಗೆ ನಡೆದಲ್ಲಿ ಒಂದೆರಡು ಗಣ್ಯ ಬದಲಾವಣೆಗಳಾಗಿವೆ; ಒಟ್ಟಿನ ಮೇಲೆ ಇಡೀ ವಾತಾವರಣಕ್ಕೆ ಹೊಸ ಬೆಳಕನ್ನು ಬೀರುವಂತಹದೇನೂ ಆಗಿಲ್ಲ. ಬರ್ಲಿನಿನಲ್ಲಿ ಸುಮಾರು ಹದಿನೈದು ತಿಂಗಳಿಂದ ಇರುವ ಬಿಕ್ಕಟ್ಟು-ಇಂಡೋನೇಶಿಯದಲ್ಲಿ ಸಾಧಾರಣ ಅಷ್ಟೇ ದೀರ್ಘಾವಧಿಯಿಂದ ನಡೆದಿರುವ ಹೋರಾಟ-ಇವೆರಡೂ ಸುಖಾಂತ್ಯಗೊಳ್ಳುವ ಸ್ಪಷ್ಟ ಚಿಹ್ನೆಗಳು ಮೂಡಿವೆ; ಆ ಮಂಗಳಾಚರಣೆಯ ಕೆಲಸ ಬಾಕಿಯಿದೆ. ಚೈನಾ, ಬರ್ಮಾ, ಕಾಶ್ಮೀರ ಮತ್ತಿತರ ಪ್ರಶ್ನೆಗಳು ಬಹು ಮಟ್ಟಿಗೆ ಇದ್ದಂತಿವೆ. ಎಲ್ಲವನ್ನೂ ಗಾಢವಾಗಿ ವಿಚಾರಿಸಿ ನೋಡುವಾಗ, ಮೇಲಾಟನಿರತ ರಾಷ್ಟ್ರಗಳಲ್ಲಿ ಪರಸ್ಪರ ದ್ವೇಷಾಸೂಯೆ ಕುಂಬಿದ್ದು, ಅದು ಮತ್ತಷ್ಟು ಪಚ್ಚೆ ತಾಳುಕಹತ್ತಿರುವದಾದರೂ ಇನ್ನೊಂದು ಮಹಾಯುದ್ಧವನ್ನು ಸ್ವತಃ ಆಹ್ವಾನಿಸುವ ಎದೆಗಾರಿಕೆ ಸದ್ಯಕ್ಕೆ ಯಾವಕಡೆಯವರಿಗೂ ಇಲ್ಲವೆಂದು ತೋರುತ್ತದೆ. ಆದರೇ ನಂಜುಮಿಶ್ರಿತ ಸ್ಪರ್ಧೆಯು ಬೆಳೆಯುತ್ತಾ ಹೋದರೆ, ಇನ್ನೊಂದು ಯುದ್ಧವು ಅನಿವಾರ್ಯವಾಗುವ ಗಡಿಗೆ ಅವು ಮುಟ್ಟಲಾರವೇ ಎಂಬ ಪ್ರಶ್ನೆಯಿದೆ.

೦೦ ೦೦

ನಿರೀಕ್ಷಿಸಿದಂತೆ ಚೈನದ ಅದೃಷ್ಟ ನಿರ್ಣಾಯಕ ಶಾಂಘಾಯಿ ಕಾಳಗವೀಗ ಅತಿ ಬಿರುಸಿನಿಂದ ನಡೆಯುತ್ತಿದೆ. ಸರಕಾರವು ತನ್ನೀ ಹೃದಯ ಪ್ರದೇಶದಲ್ಲೇ ತನ್ನ ಕೊನೆಯ ಪ್ರಯತ್ನ ಮಾಡಬೇಕೆಂಬ ಇಚ್ಛೆಯಿಂದ ಅಲ್ಲಿ ಅನುಕ್ರಮ ರಕ್ಷಣಾ ವ್ಯೂಹಗಳನ್ನು ರಚಿಸಿಕೊಂಡು ಪರಮಾವಧಿ ಸಿದ್ಧತೆಗಳನ್ನು ಮಾಡಿ ಸಮರ ಹೂಡುತ್ತಿದೆ. ಈಗ ಬರುತ್ತಿರುವ ವಾರ್ತೆಯಂತೆ ಕಮ್ಯೂನಿಸ್ಟ್ ಸೇನೆಗಳು ಶಾಂಘಾಯಿ ಹೊರಸುತ್ತಿನ 130 ಮೈಲು ಸುತ್ತಳತೆಯ ರಕ್ಷಣಾವ್ಯೂಹವನ್ನು ಇಷ್ಟರಲ್ಲೇ ಭೇದಿಸಿ ಒಳನುಗ್ಗಿವೆ; ನಗರದ ಅಂಚಿನ ಕೆಲವು ಸ್ಥಳಗಳಲ್ಲಿ ಸರಕಾರೀ ಸೇನೆಗಳು ದೃಢವಾಗಿ ನಿಂತು ಹೋರಾಡುತ್ತಿವೆ. ಅತ್ತ ಬ್ರಿಟಿಷ್ ಅಂಕೆಯಲ್ಲಿರುವ ಅಂತರ್ರಾಷ್ಟ್ರೀಯ ನಗರ ಹಾಂಗ್‌ಕಾಂಗಿನಲ್ಲಿ ಕಮ್ಯೂನಿಸ್ಟ್ ಗೊರಿಲ್ಲಾಗಳ ಹಾವಳಿ ಇಷ್ಟರಲ್ಲೇ ತೋರ ಹತ್ತಿದೆ. ಇಲ್ಲಿ ಇಬ್ಬರು ಬ್ರಿಟಿಷ್ ಪೋಲೀಸ್ ಇನ್ಸ್ಪೆಕ್ಟರರು ಮತ್ತೊರ್ವ ಚೈನೀ ಪತ್ತೇದಾರಿಯ ಕೊಲೆಯಾಗಿ ನಗರದ ಜನತೆ ಕಮ್ಯೂನಿಸ್ಟ್ ಧಾಳಿಯ ಭಯಜ್ವರ ಪೀಡಿತರಾಗಿದ್ದಾರೆ. ನಗರದ ರಕ್ಷಣೆಗಾಗಿ ಬ್ರಿಟಿಷರು ಪಶ್ಚಿಮ ಸೇನೆಗಳನ್ನಲ್ಲಿಗೆ ರವಾನಿಸಿದ್ದಾರೆ, ಮಲಯದಿಂದ ಬ್ರಿಟಿಷ್ ವಿಮಾನ ಪಡೆಗಳೂ ಅಲ್ಲಿಗೆ ಧಾವಿಸಿವೆ. ಚೈನದ ಸರಕಾರೀ ಸೇನಾ ಪ್ರತಿಭಟನೆಗಳನ್ನು ಮೂಲೆಗೊತ್ತುತ್ತಾ ಎರಡು ಮುಖಗಳಾಗಿ ಒಂದೇ ಸವನೆ ತಮ್ಮ ಸೇನೆಯನ್ನು ಮುನ್ನುಗ್ಗಿಸಿ ಅತ್ತ ಇಂಡೋಚೈನಾ, ಇತ್ತ ಬರ್ಮಾದವರೆಗೂ ಧಾವಿಸಿ ಅಲ್ಲಿಯ ಕಮ್ಯೂನಿಸ್ಟ್ ಸೇನೆಗಳಿಗೆ ಬೆಂಬಲವಾಗಬೇಕೆಂದು ಚೈನೀ ಕಮ್ಯೂನಿಸ್ಟರು ಸಂಕಲ್ಪಿಸಿದಂತಿದೆ.

೦೦ ೦೦

ಸುಮಾರು ಹದಿನೈದು ತಿಂಗಳಿಂದ ಅಮೇರಿಕ, ಇಂಗ್ಲಂಡು, ಫ್ರಾನ್ಸುಗಳ ಪಾಲಿನ ಬರ್ಲಿನ್ ಕ್ಷೇತ್ರಕ್ಕೆ ನೆಲಮಾರ್ಗವಾಗಿ ಯಾವುದೂ ಹೋಗದಂತೆ ರಶ್ಯವು ಹಾಕಿದ್ದ ಕಠಿಣ ದಿಗ್ಬಂಧನ ಮತ್ತದಕ್ಕೆ ಪ್ರತಿಯಾಗಿ ಪಾಶ್ಚಾತ್ಯ ರಾಷ್ಟ್ರಗಳೂ ಹೇರಿದ್ದ ಪ್ರತಿ ಕಂಟಕೆಯು ಈ ವಾರದಲ್ಲಿ ಮುಕ್ತಾಯಗೊಳ್ಳುವದೆಂದು ರಶ್ಯ, ಅಮೇರಿಕ, ಇಂಗ್ಲಾಂಡು, ಫ್ರಾನ್ಸುಗಳು ಇದೇ ತಾ॥ ೫ರಲ್ಲಿ ತಂತಮ್ಮ ರಾಜಧಾನಿಗಳಿಂದ

ಸ್ಥಿತಿಗತಿ ಸಿಂಹಾವಲೋಕನ

ಏಕಕಾಲದಲ್ಲಿ ಜಾರೀ ಮಾಡಿರುವುದು ಅತಿ ಮುಖ್ಯ ವಿಷಯ. 1948ನೇ ಮಾರ್ಚ್ 1ರಿಂದ ರಶ್ಯವು ಬರ್ಲಿನಿನಲ್ಲಿ ಹಾಕಿದ್ದ ದಿಗ್ಬಂಧನವು ಇದೇ ಮೇ ತಾ. 12ನೇ ತಾರೀಕಿಗೆ ರದ್ದಾಗಲಿದೆ. ಬರ್ಲಿನ್ ಹಾಗೂ ಜರ್ಮನಿಯ ಸಂಬಂಧದ ಎಲ್ಲಾ ವಿವಾದಗಳ ಕುರಿತು ತೀರ್ಮಾನಿಸಿಕೊಳ್ಳಲು ಇದೇ ಮೇ ತಾ 23ಕ್ಕೆ ಪ್ಯಾರಿಸಿನಲ್ಲಿ ಮೇಲಿನ ಚತುರ್ರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಳನ ಸೇರಲಿದೆ. ಸುಮಾರು ಒಂದೂವರೆ ವರುಷದಿಂದ ಬರ್ಲಿನ್ ವಾತಾವರಣವು ಯಾವ ಮುಹೂರ್ತದಲ್ಲೂ ಇನ್ನೊಂದು ಮಹಾಯುದ್ಧವನ್ನು ಸ್ಫೋಟಗೊಳಿಸುವ ಅರೆಜಾಗ್ರತ ಜ್ವಾಲಾಮುಖಿಯ ರೂಪದಲ್ಲಿದ್ದಿತು. ರಶ್ಯವು ತನ್ನ ಕ್ಷೇತ್ರದೊಳಗಿನ ಪಾಶ್ಚಾತ್ಯ ವಲಯಗಳ ಮೇಲೆ ಹೇರಿದ್ದ ಕಠಿಣ ನಿರ್ಬಂಧ—ಇದಕ್ಕೆ ಪ್ರತಿಯಾಗಿ ತಮ್ಮ ಕ್ಷೇತ್ರದ ಜನರಿಗೆ ಬೇಕಾಗುವ ಸರಬರಾಯಿ ಮಾಡಲು ಪಾಶ್ಚಾತ್ಯ ರಾಷ್ಟ್ರಗಳು ಅತಿ ವೆಚ್ಚದಿಂದ ವಿಮಾನ ಸಂಚಾರವನ್ನೇ ಚಲಾಯಿಸುತ್ತಿದ್ದುದು—ಆ ಕಾದ ಕಾವಲಿಯಂತಹ ಸಂದಿಗ್ಧದಲ್ಲಿ ಆ ಕಡೆ, ಈ ಕಡೆಗಳಲ್ಲಿ ಮುಖಾಮುಖಿಯಾಗಿ ರಶ್ಯಾ ಮತ್ತು ಇತರ ವಿರುದ್ಧ ಪಾಳಯಗಳಿದ್ದುಕೊಂಡು ಪರಸ್ಪರ ಕೆಂಡಗಣ್ಣಿನಿಂದ ಕಾಯುತ್ತಿದ್ದುದು—ಈ ಸನ್ನಿವೇಶಗಳ ನಡುವೆ ಯುದ್ಧ ಕಿಡಿ ಹೊತ್ತಿಕೊಳ್ಳುವದು ಅತ್ಯಂತ ಸುಲಭವಿದ್ದಿತು. ಅಂತಹ ಗಂಡಾಂತರವೀಗ ಒಮ್ಮೆ ತಪ್ಪಿಹೋದುದಕ್ಕಾಗಿ ಎಲ್ಲರೂ ಸಮಾಧಾನದುಸಿರು ಬಿಡಬಹುದು. ಅಂತೆಯೇ ಪ್ರಮುಖ ರಾಷ್ಟ್ರಗಳೊಳಗೆ ಎಂತಹ ಎದೆಗುದಿಯಿದ್ದರೂ ತಮ್ಮ ಭವಿಷ್ಯವನ್ನೇ ಕೆಡಿಸುವ ಮಹಾ ಘರ್ಷಣೆಯೇಳದಂತೆ ಜಾಗ್ರತೆ ನೋಡುವ ಬುದ್ಧಿ ಅವಕ್ಕಿದೆ ಎಂಬುದು ಇದರಿಂದ ವ್ಯಕ್ತವಾಗಿದೆ.

oo oo

ಇಂಡೋನೇಶಿಯದಲ್ಲಿ ಡಚ್ಚರ ವಿರುದ್ಧವಾಗಿ ಅಲ್ಲಿಯ ರಿಪಬ್ಲಿಕನರು ದೀರ್ಘಾವಧಿಯಿಂದ ನಡೆಸುತ್ತಿರುವ ಸ್ವಾತಂತ್ರ್ಯ ಹೋರಾಟವು ಸಮಾಧಾನಕರ ರೀತಿಯಿಂದ ಶಾಂತಗೊಳ್ಳುವ ಸ್ಥಿತಿ ಬಂದಿದೆ. ಅಲ್ಲಿಯ ಹೋರಾಟಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಕೌನ್ಸಿಲು ಪರ್ಯಾಲೋಚಿಸಿ, ಕೆಲವು ನಿರ್ದೇಶಗಳೊಂದಿಗೆ ಒಂದು 'ಕಮಿಶನನ್ನು" ಕಳುಹಿ ಕೊಟ್ಟಿದ್ದಿತು. ಈ ಜಾಗತಿಕ ಸಂಘದ ಕಮಿಶನಿನ ಆಶ್ರಯದಲ್ಲಿ ಡಚ್ ಹಾಗೂ ರಿಪಬ್ಲಿಕನ್ ಪ್ರತಿನಿಧಿಗಳ ರಾಜೀ ಮಾತುಕತೆಗಳು ಸುಮಾರು ಒಂದು ತಿಂಗಳಿಂದ ನಡೆದಿದ್ದು ಈಗ ಇಕ್ಕಡೆಯವರೂ ಒಂದು ತೀರ್ಮಾನಕ್ಕೊಪ್ಪಿದ್ದಾರೆ. ಆ ನಿರ್ಧಾರದಂತೆ ಜೋಗ್ಜಕರ್ತಾ ಕ್ಷೇತ್ರದಲ್ಲಿ ರಿಪಬ್ಲಿಕನ್ ಸರಕಾರವನ್ನು ಮರುಸ್ಥಾಪಿಸಬೇಕು; ಕಳೆದ ದಶಂಬರ್ 17ರಿಂದ ಡಚ್ಚರು ಸೆರೆಯಲ್ಲಿಟ್ಟಿರುವ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಡಬೇಕು; ಸ್ವತಂತ್ರ ಇಂಡೋನೇಶಿಯಾ ಫೆಡರೇಶನನ್ನು ಸ್ಥಾಪಿಸುವ ಗುರಿಯಿಟ್ಟುಕೊಂಡು, ಅದರ ವ್ಯವಸ್ಥೆಗಾಗಿ ಒಂದು ದುಂಡುಮೇಜು ಸಮ್ಮೇಳನದ ವ್ಯವಸ್ಥೆಯಾಗಬೇಕು. ಮೇಲಿನ ಶಾಂತಿ ತೀರ್ಮಾನಗಳಿಂದ ರಿಪಬ್ಲಿಕನರಿಗೆ ಪ್ರಥಮ ನ್ಯಾಯ ದೊರೆತಂತಾಗಿದೆ; ಅಲ್ಲಿಯ ಹೋರಾಟವೂ ಕೂಡಲೇ ನಿಲ್ಲಬೇಕಾಗಿದೆ. ಮುಂದಿನ ಶಾಶ್ವತ ವ್ಯವಸ್ಥೆಯು ಪರ್ಯಾಲೋಚನಾ ಸಂದರ್ಭದಲ್ಲಿ ಹೇಗಾಗುವದೆಂಬುದನ್ನು ಮಾತ್ರ ನೋಡಲಿಕ್ಕಿದೆ.

oo oo

ಬರ್ಮಾದ ಯುದ್ಧಗತಿ ಯಥಾಪ್ರಕಾರ ಇದೆ. ಮಂಡಲೆ ಕ್ಷೇತ್ರದಲ್ಲಿ ಸರಕಾರೀ ವಿರೋಧಿ ಸೇನೆಗಳು ಪ್ರಬಲ ಧಾಳಿಸಿದ್ಧತೆ ನಡೆಸುತ್ತಿರುವಂತಿದೆ; ಈ ವಿವಿಧ ಪಾಳಯದಲ್ಲಿ ಕರೆನ್ ಬಂಡಾಯಗಾರರು, ಶ್ವೇತಪಟ್ಟೀದಳ, ಕಮ್ಯೂನಿಸ್ಟರೆಂಬ ವರ್ಗಭೇದಗಳಿದ್ದು ಅವುಗಳೊಳಗೇನೇ ಪರಸ್ಪರ ಏಕಮತವಿದ್ದಂತಿಲ್ಲ. ಆದರೂ ಇವರೆಲ್ಲರೂ ಬರ್ಮಾ ಸರಕಾರದ ವಿರೋಧಿಗಳೇ. ಇದುವರೆಗಿನ ಪರಿಸ್ಥಿತಿಗಿಂತಲೂ ವಿಶೇಷಾತುರದಿಂದ ನೋಡಬೇಕಾದುದು ಭಾವೀ ಬರ್ಮಾದ ಆಗುಹೋಗುಗಳ ಕಡೆಗೆ. ಆಗ್ನೇಯ ಏಸ್ಯಾದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳುವ ಮೊದಲೇ ಇಡೀ ಕ್ಷೇತ್ರವನ್ನು ತಾವು ಹಿಡಿದುಕೊಳ್ಳಬೇಕೆಂಬ ಅವಸರದಿಂದ ಚೈನದ ಕಮ್ಯೂನಿಸ್ಟ ಸೇನೆಯೀಗ ಮುಂದೊತ್ತುತ್ತಿದೆ. ಬರ್ಮಾದ ಗಡಿತನಕ ಅದು ಬರಬೇಕಾದರೆ ಅವಧಿ ಹಿಡಿಯಬಹುದು; ಆದರೂ ಅಲ್ಲಿಯ ಕಮ್ಯೂನಿಸ್ಟ್ ಪ್ರವಾಹದ ಒತ್ತಡದಿಂದ ಬರ್ಮಾದ ಗಡಿಕಟ್ಟೆಯು ಕೊಚ್ಚಿಹೋಗುವ ಗಂಡಾಂತರವು ಒಂದಲ್ಲೊಂದು ದಿನ ಮೂಡುವದು ಸಂಭವನೀಯ. ಆ ಮೊದಲೇ ಒಳಗಿನ ಕಂಟಕವನ್ನು ನಿವಾರಿಸಿಕೊಳ್ಳಬೇಕೆಂದು ಬರ್ಮಾದ ಸರಕಾರವು ಕಾಮನ್‌ವೆಲ್ತ್ ರಾಷ್ಟ್ರಗಳ ಸಹಾಯ ಯಾಚಿಸಿದೆ ಎಂದು ತಿಳಿದು ಬರುತ್ತದೆ. ರಂಗೂನಿನಲ್ಲಿರುವ ಬ್ರಿಟನ್, ಭಾರತ, ಪಾಕಿಸ್ತಾನ್ ರಾಯಭಾರಿಗಳೊಂದಿಗೆ ಬರ್ಮೀಯ ಸರಕಾರೀ ನಾಯಕರು ಈ ಕುರಿತು ಮಾತುಕತೆ ನಡೆಸಿದ್ದಾರೆ.

oo oo

ಕಳೆದ ದಿನಗಳಲ್ಲಿ ಭಾರತದ ಪಾಲಿನ ಗಣ್ಯ ಘಟನೆಯಾಗಿ ಆಕರ್ಷಿಸಿರುವದೆಂದರೆ ಪ್ರಧಾನಮಂತ್ರಿ ಪಂಡಿತ ನೆಹರೂಗಳ ಗೆಲುವಿನ ಆಗಮನ. ಕಾಮನ್‌ವೆಲ್ತ್ ಸಮ್ಮೇಳನ ಸಂಬಂಧದ ಎಲ್ಲಾ ಕಾರ್ಯಗಳನ್ನೂ ಮುಗಿಸಿ ಪಂಡಿತ ಜವಾಹರಲಾಲರು ಲಂಡನಿನಿಂದ ಸ್ವಿಸರ್ಲೇಂಡಿಗೆ ಹಾರಿ, ಅಲ್ಲಿ ಮೂರು ದಿನವಿದ್ದು ಸ್ವಿಸ್ ಸರಕಾರದ ಸನ್ಮಾನ್ಯ ಅತಿಥಿಯಾಗಿ ಅತಿ ಸಂಭ್ರಮದ ಸ್ವಾಗತ ಸತ್ಕಾರ ಪಡೆದಿದ್ದರು. ಅನ್ಯಾದೃಶ ಪ್ರಕೃತಿ ಸೌಂದರ್ಯದ ನೆಲೆ 'ಆಲ್ಪ್ಸ' ಪರ್ವತ ಶಿಖರಗಳನ್ನು ಹತ್ತಿ ನೋಡಿದ್ದರು. ರಾಜಧಾನಿ ಬೆರ್ನೆಯಲ್ಲಿ ಪತ್ರಿಕಾ ಕೂಟದಲ್ಲಿ ಮಾತಾಡುತ್ತಾ "ಇನ್ನು ಆರೇ ತಿಂಗಳುಗಳೊಳಗೆ ಭಾರತವು ರಿಪಬ್ಲಿಕ್ ಆಗಲಿದೆ. ಲಂಡನ್ ಸಮ್ಮೇಲನದ ಪರಿಣಾಮಗಳ ಕುರಿತು ನಾನು ಸಮಾಧಾನಗೊಂಡಿದ್ದೇನೆ. ಭಾವೀ ಭಾರತವು ಇತರ ರಾಷ್ಟ್ರಗಳೊಡನೆ ಮೈತ್ರಿಯುಳ್ಳ ಪೂರ್ಣ ಸ್ವತಂತ್ರ ಸಾರ್ವಭೌಮಾಧಿಕಾರೀ ರಿಪಬ್ಲಿಕ್ ಆಗುವದು" ಎಂದು ಸ್ಪಷ್ಟಪಡಿಸಿದರು. ಆಫ್ರಿಕದ ವರ್ಣದ್ವೇಷವನ್ನು ಖಂಡಿಸಿ, ಅಲ್ಲಿ ಘರ್ಷಣೆಯ ಅಪಾಯವಿದೆ ಎಂದು ಕಂಠೋಕ್ತ ಎಚ್ಚರಿಕೆ ಕೊಟ್ಟರು. ಜನೆವದಲ್ಲಿ ಅಂತರ್ರಾಷ್ಟ್ರೀಯ ರೆಡ್‌ಕ್ರಾಸ್ ಅಧ್ಯಕ್ಷರ ಸತ್ಕಾರಕೂಟ ಪಡೆದು, ಬೆಲ್ಜಿಯಮ್ ರಾಜಾ ಲಿಯೋಪೋಲ್ಡರೊಡನೆ ಮಾತುಕತೆ ನಡೆಸಿದರು. ತಾ. 5ನೇ ರಾತ್ರಿ ಬೊಂಬಾಯಿಗಾಗಿ ಜನೇವಾದಲ್ಲಿ ವಿಮಾನ ಹತ್ತಿ ಹೊರಟರು. ತನ್ನ ದೀರ್ಘಾವಧಿಯ ಸ್ನೇಹಿತ ಮತ್ತು ಈಜಿಪ್ಟಿನಲ್ಲಿ ಸ್ವತಂತ್ರ ಭಾರತದ ಪ್ರಥಮ ರಾಯಭಾರಿಯಾಗಿದ್ದು ಕಳೆದ ಫೆಬ್ರವರಿಯಲ್ಲಿ ಕೈರೋದಲ್ಲಿ ಮಡಿದಿದ್ದ ಡಾ| ಸಯ್ಯದ್ ಹುಸ್ಸೇನರ ಗೋರಿಯನ್ನು ಸಂದರ್ಶಿಸುವದಕ್ಕಾಗಿ ತಾ. 6ರಲ್ಲಿ ಕೈರೋದಲ್ಲಿಳಿದು 15 ಮೈಲು ಕಾರಿನಲ್ಲಿ ಹೋಗಿ ಹುಸ್ಸೇನ್ ಸಮಾಧಿಗೆ ಪುಷ್ಪಹಾರ ಸಮರ್ಪಿಸಿ ಬಂದು, ಪುನಃ ಆಕಾಶಗಾಮಿಯಾದರು.

ತಾ 6ನೇ ರಾತ್ರಿ 11-25 ಘಂಟೆಗೆ ಪಂಡಿತಜೀಯ ವಿಮಾನವು ಬೊಂಬಾಯಿಯಲ್ಲಿಳಿಯುವಾಗ ಸಾಂತಾಕ್ರೂಝ್ ನಿಲ್ದಾಣದಲ್ಲಿ ಬೊಂಬಾಯಿಯ ಪ್ರಧಾನಿ ಖೇರ್, ಗೃಹಮಂತ್ರಿ ಮೊರಾರ್ಜಿ ದೇಸಾಯಿ, ನೆಹರೂ ಪುತ್ರಿ ಇಂದಿರಾ ಗಾಂಧಿ, ನೆಹರೂ ತಂಗಿ ಕೃಷ್ಣಹಠೀ ಸಿಂಗ್, ಗವರ್ನರರ ಎ.ಡಿ.ಸಿ, ತಾತಾ ದಂಪತಿಗಳು, ಬೊಂಬಾಯಿಯ ಮೇಯರ್ ಎಸ್. ಕೆ. ಪಾಟೀಲ್, ಬೊಂಬಾಯಿಯ ಚೀಫ್ ಜೋಕಿಮ್ ಆಳ್ವ ಮತ್ತಿತರ ಪ್ರಮುಖರೂ ಜನಸಂದಣಿಯೂ ಸ್ವಾಗತಕ್ಕೆ ಕಾದಿದ್ದರು. ವೃದ್ಧತೆಯ ಆಕರ್ಷಣೀಯ ಶೈಲಿಯಿಂದ, ನಗುಮೊಗದ ವಂದನೆ ಕೊಡುತ್ತಾ ಎಲ್ಲರ ಕೈಕುಲುಕಿ, ಮಗಳು ಮತ್ತು ತಂಗಿಯನ್ನು ಆಲಿಂಗಿಸಿ, ಎಳೇ ಮಕ್ಕಳ ಸರಳತೆಯಿಂದ ತನ್ನ ಸಂಚಾರ ಕಥೆಗಳನ್ನು ಹೇಳಿಕೊಂಡರು. ಸ್ವಿಸ್ ಸರಕಾರವು ಮಿಠಾಯಿ ಮತ್ತು ಚೊಕೊಲೇಟುಗಳು ತುಂಬಿದ್ದ ದೊಡ್ಡ ಗೋಣಿಯೊಂದನ್ನೇ ನೆಹರೂಗಳಿಗೆ ಉಡುಗೊರೆಯಾಗಿ ವಿಮಾನದಲ್ಲಿ ಹೇರಿದ್ದಿತಂತೆ. ಅದರೊಂದಿಗೆ ಸುಂದರ ಪುಷ್ಪಗಳ ಮೂಟೆಯನ್ನೂ ಕೊಟ್ಟಿದ್ದಿತು. ಆದರೆ ಹೊರ ದೇಶಗಳಿಂದ ಹೂ ತರಬಾರದೆಂದು ಭಾರತ ಸರಕಾರದ ನಿರ್ಬಂಧವಿರುವುದರಿಂದ ಪ್ರಧಾನಿ ನೆಹರೂಗಳು ಹೂವನ್ನು ಬಿಟ್ಟು ತಿಂಡೀ ಗೋಣಿಯನ್ನು ಮಾತ್ರ ತಂದಿದ್ದರು. ಡಿಲ್ಲಿಯಿಂದ ಹೋಗುವಾಗ ಪಂಡಿತ ನೆಹರೂಗಳು ಮಾವಿನ ಹಣ್ಣುಗಳನ್ನೊಯ್ದಿದ್ದರು. ಲಂಡನಿನ ಸ್ನೇಹಿತರು ಅವುಗಳನ್ನು ಬಹಳವಾಗಿ ಮೆಚ್ಚಿದ್ದರಂತೆ. ಅವರಲ್ಲಿ ಕೆಲವರು ಈ ವರೆಗೆ ತಮ್ಮ ಜೀವಮಾನದಲ್ಲೇ ಮಾವಿನ ಹಣ್ಣನ್ನು ಕಂಡವರಲ್ಲವಂತೆ. ಜೋರ್ಜ್ ಬರ್ನಾರ್ಡ್‌ಶಾರ ಭೇಟಿಗೆ ಹೋದಾಗ ಅವರಿಗೂ ಪಂಡಿತಜೀ ಮಾವಿನ ಹಣ್ಣುಗಳನ್ನು ಕೊಟ್ಟಿದ್ದರು. ಬೊಂಬಾಯಿ ನಿಲ್ದಾಣದಲ್ಲಿ ಪತ್ರಿಕಾವಾಲರ ಪ್ರಶ್ನೆಗೆ "ನಾನು ಮರಳಿಬಂದೆ; ಬಹಳ ಸಂತೋಷವಾಗುತ್ತಿದೆ" ಎಂದಷ್ಟೇ ಹೇಳಿದರು. "ತಮ್ಮ ಪ್ರಯಾಣದ ಕುರಿತು ಏನಾದರೂ ಮಾತಾಡಿ" ಎಂದು ಬಾತ್ಮೀದಾರನೊಬ್ಬನು ಒತ್ತಾಯಿಸಿದಾಗ "ಮಾತುಗಳು ಬಹಳ ಅಪಾಯಕಾರಿಯಾದವುಗಳು. ಅಷ್ಟು ಐಂದ್ರಜಾಲೀ [illegible]" ಎಂದು ಬಿಟ್ಟರು.

(೬ನೇ ಪುಟ ನೋಡಿರಿ)



ಮಂಗಳೂರು
ಕೆ. ಪಿ. ಭವಾನಿಶಂಕರ ಶೆಟ್ಟಿ, ಮೆನೇಜರ್.
ಜಯಂತ್ ಬಿಲ್ಡಿಂಗ್, ಮೈದಾನ್ ರಸ್ತೆ.

UDIPI MUNICIPALITY, UDIPI

Sealed tenders will be received by the Commissioner Udipi Municipality, Udipi at his office till 1. 0 p. m, on 18-5-1949 for the maintenance of road works for 1949-50 ammounting to Rs 14,070/- Tender forms and other information may be obtained from the Municipal office during office hours on working days

Municipal Office, Udipi, Dated 6-5-1949.

Sd. V. Balagangadharn, Commissioner.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI. S. I.

Capital Authorised	Rs. 25,00,000.
Capital Issued & Subscribed	Rs. 20,00,000.
Capital Paid Up.	Rs. 19,99,800.
Reserves	Rs. 8,90,000

Banking business of every description transacted.

ಗುರುವಾರ, ಉಡುಪಿ, ೧೨-೫-'೪೯

ದ. ಕ. ಜಿಲ್ಲಾ ರಾಜಕೀಯ ಪರಿಷತ್ತು.

ಇದೇ ತಿಂಗಳ ತಾ. 22 ಮತ್ತು 23ರಲ್ಲಿ ಪಾಣೆಮಂಗಳೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಸಮ್ಮೇಲನ—ಹುತ್ತದರ ಅಂಗಗಳಾಗಿ ಕೃಷಿಕರ ಹಾಗೂ ವಿಧಾಯಕ ಕಾರ್ಯಕರ್ತರ ಸಮ್ಮೇಲನಗಳು ಜರಗುವವೆಂದು ಪ್ರಕಟವಾಗಿದೆ. ಇಂತಹ ಸಮ್ಮೇಲನಗಳು ಉತ್ಸವ ಗಾಂಭೀರ್ಯವನ್ನು ಪ್ರದರ್ಶಿಸುವಷ್ಟು ಉದ್ಯೋಗಶೀಲತೆಯನ್ನು ಪ್ರದರ್ಶಿಸುವಂತಿಲ್ಲವೆಂಬುದು ಇದುವರೆಗಿನ ಅನುಭವ. ಆದರೆ ಈ ಮಾತು ಕೇವಲ ನಮ್ಮ ಜಿಲ್ಲಾ ರಾಜಕೀಯ ಸಮ್ಮೇಲನಕ್ಕೆ ಮಾತ್ರ ಅನ್ವಯಿಸದೆ ನಮ್ಮ ಎಲ್ಲಾ ಸಭೆ,ಸಮಾರಂಭ,ಪ್ರದರ್ಶನಗಳ ಮಟ್ಟಿಗೂ ಇದ್ದದ್ದೇ. ಹಲವು ವರುಷಗಳ ನಂತರ, ಜಡತ್ವ ತುಂಬಿದ್ದರೂ ಪ್ರತಿಕೂಲರಹಿತ ವಾತಾವರಣದಲ್ಲಿ ಸೇರಲಿರುವ ದ.ಕ. ಜಿಲ್ಲಾ ರಾಜಕೀಯ ಸಮ್ಮೇಲನವು ಈ ಸಂಪ್ರದಾಯವನ್ನು ಮುರಿದು, ಜಿಲ್ಲೆಯಲ್ಲೆಲ್ಲಾ ನವ ಚೇತನ ಪ್ರವಾಹವನ್ನು ಹರಿಯಿಸುವ ಉಗಮ ಸ್ಥಾನವಾಗಿ ಪರಿಣಮಿಸಲಿ ಎಂದು ಹಾರೈಸಬೇಕಾಗಿದೆ.

ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಒಂದೆಡೆ ಕಲೆತು, ಪರಸ್ಪರ ವಿಚಾರ ವಿನಿಮಯ ನಡೆಸಿ, ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಿಕೊಳ್ಳುವ ಸುಸಂದರ್ಭವನ್ನೊದಗಿಸುವುದೇ ರಾಜಕೀಯ ಸಮ್ಮೇಲನದಿಂದಾಗುವ ಮುಖ್ಯ ಉಪಕಾರ. ದ. ಕ. ಜಿಲ್ಲೆಯವರಿಗೆ ಈ ಸುಯೋಗ ಒದಗದೆ ಹಲವು ವರುಷಗಳು ಸಂದಿವೆ. ಜಿಲ್ಲೆಯ ರಾಜಕೀಯ ವಾತಾವರಣದ ಮೇಲಿಂದ, ಇಂತಹ ಒಂದು ಸಮ್ಮಿಳಿತ ಪರ್ಯಾಲೋಚನೆಯ ಅವಶ್ಯಕತೆಯು ಒಡೆದು ತೋರುತ್ತಿದೆ. ಹೀಗಾಗಿ ಪಾಣೆಮಂಗಳೂರಿನ ಸಮ್ಮೇಲನವು ಅಪೂರ್ವ ಪರಿಣಾಮಶೀಲತೆಯೇ ಅವಶ್ಯವೂ ಇದೆ. ಅದನ್ನು ಜಯಶೀಲಗೊಳಿಸುವದು ಹಾಗೂ ಸಾರ್ಥಕಗೊಳಿಸುವದು ದಕ್ಷಿಣ ಕನ್ನಡಿಗರ ಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಪರಿಷತ್ತಿನ ಸೂತ್ರಧಾರಿಗಳು ಮತ್ತು ಸಹಭಾಗಿಗಳು ಜಿಲ್ಲೆಯ ಪರಿಸ್ಥಿತಿ ಹಾಗೂ ತಮ್ಮ ಕರ್ತವ್ಯಗಳನ್ನು ದೃಷ್ಟಿಪಥದಲ್ಲಿಟ್ಟುಕೊಂಡರೆ ಪರಿಷತ್ತು ಪರಿಣಾಮಕಾರಿಯಾಗುವದು ನಿಸ್ಸಂದೇಹ. ಸಮ್ಮೇಲನಕ್ಕೆ ಶಾಶ್ವತರೂಪವೇನೂ ಇಲ್ಲ. ಅದೊಂದು ಸಂಸ್ಥೆಯಲ್ಲ--ಪರ್ಯಾಲೋಚನಾ ಕೂಟ ಮಾತ್ರ. ಅಲ್ಲಿ ಆಗುವ ನಿರ್ಧಾರಗಳು ಕಾರ್ಯರೂಪದಲ್ಲಿ ಕಂಡುಬರಬೇಕಾದರೆ ಕಾಂಗ್ರೆಸ್ ಸಮಿತಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರೇ ಅವುಗಳನ್ನು ರಂಗಕ್ಕಿಳಿಸಬೇಕು. ಮಿಕ್ಕ ಕಡೆಗಳವರಂತೆ-ಸ್ವಾಮರ್ಶೆಯ ಮಟ್ಟಿಗೆ ನಿಷ್ಠುರತೆಯಿರಬೇಕೆಂಬ ನೀತಿಗನುಸಾರವಾಗಿ ಹೇಳುವದಾದರೆ, ಬೇರೆಡೆಗಳವರಿಗಿಂತಲೂ ಹೆಚ್ಚಾಗಿ-ಇಲ್ಲಿಯ ಕಾಂಗ್ರೆಸಿಗರಲ್ಲಿ ಆಲಸ್ಯ ಮೈತುಂಬಿ ಹೋಗಿದೆ; ಕಾರ್ಯಾಸಕ್ತಿ ಏನೇನೂ ಸಾಲದು. ಸತ್ಯಸ್ಥಿತಿಯನ್ನು ತಿಳಿದೋ ತಿಳಿಯದೆಯೋ,— ತಾವು ಕೆಲಸ ಮುಗಿಸಿ ವಿರಾಮ ಸುಖಕ್ಕೆ, ಅಥವಾ ಅಧಿಕಾರಾನುಭೋಗ ಸ್ಥಿತಿಗೆ ಸೇರಿಕೊಂಡವರೆಂಬ ಆತ್ಮತೃಪ್ತಿಯೇ ಹೆಚ್ಚಿನ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಕಂಡುಬರುತ್ತಿದೆ. ಇಲ್ಲಿಯೂ ಕಳ್ಳಸಂತೆಯವರು, ಆರ್. ಎಸ್. ಎಸ್, ಕಮ್ಯೂನಿಸ್ಟರಂಥವರು ಪ್ರಬಲಿಸುವಂತೆ ಅವರ ದುಷ್ಟಟಿಗಳಿಗೆ ಅವಕಾಶ ವೊದಗಿಸಿಕೊಟ್ಟ ಆರೋಪವು ಇಲ್ಲಿಯ ಕಾಂಗ್ರೆಸಿಗರ ಹೃದಯಕ್ಕಲ್ಲವಾದರೂ ಸ್ವಭಾವಕ್ಕೆ ತಾಗಬಲ್ಲುದು. ಸಾರ್ವಜನಿಕ ರಂಗದಲ್ಲಿ ಅಂತಹ ಕಂಟಕಗಳನ್ನು ಇದಿರಿಸಿ ನಿರ್ಮೂಲಿಸುವ ಹೊಣೆ ಹೊತ್ತವರು ಮುಖ್ಯತಃ ಕಾಂಗ್ರೆಸಿಗರು. ಅವರೀ ಹೊಣೆಯನ್ನು ಸರಿಯಾಗಿ ನಿರ್ವಹಿಸಿಲ್ಲ. ಹೀಗೆನ್ನುವಾಗ ಕಾಂಗ್ರೆಸ್ ಕಾರ್ಯಕರ್ತರಿಗಿರುವ ತೊಂದರೆಗಳನ್ನು ಮರೆಯಲಾಗುವದಿಲ್ಲ. ಸ್ವಾತಂತ್ರ್ಯ ಹೋರಾಟಗಳಲ್ಲಿ ತಮ್ಮನ್ನು ತಾವು ಮರೆತು ಕಷ್ಟನಷ್ಟಗಳನ್ನನುಭವಿಸಿದ ಮಾದರಿಯಲ್ಲೇ ಇಂದಿನ ವಿಧಾಯಕ ಕಾರ್ಯಕ್ಷೇತ್ರದಲ್ಲೂ ಕೆಲಸಗಾರರು ಸಂಪೂರ್ಣ ತ್ಯಾಗಜೀವಿಗಳಾಗಬೇಕೆಂದು ನಿರೀಕ್ಷಿಸುವದು ತಪ್ಪು. ಈ ಕಾಲದಲ್ಲಿ ಅದೊಂದು ಮಿತಿಯೊಳಗಿನ ನಿಸ್ವಾರ್ಥ ಸೇವೆಯನ್ನಷ್ಟೇ ಜನರಿಂದ ಅಪೇಕ್ಷಿಸಲು ಸಾಧ್ಯ. ಕೊನೆಯ ಪಕ್ಷ 'ದುಡಿಯುವದಕ್ಕಾಗಿ ಉಣ್ಣುವ' ಹಕ್ಕಾದರೂ ಅವರಿಗಿದೆ. ಆದರೆ ಕಾಂಗ್ರೆಸಿನ ವಿಧಾಯಕ ಕಾರ್ಯಕರ್ತರಾಗಿ, ದಿನವಿಡೀ ದುಡಿಯುವ ಕೆಲಸಗಾರರನ್ನು ಪ್ರೋತ್ಸಾಹಿಸಲು ಅವರ ಹೊಟ್ಟೆ ಪಾಡಿನ ವ್ಯವಸ್ಥೆ ಕೂಡಾ ಸಮ್ಯಕ್ಕಲ್ಲಿ ತೋರುವುದಿಲ್ಲ. ಮಿಕ್ಕ ಸಂಸ್ಥೆಗಳಲ್ಲಿರುವಂತೆ ಕಾಂಗ್ರೆಸ್ ಕಾರ್ಯಕ್ಕಾಗಿಯೇ ಮೀಸಲಿಟ್ಟ ಜನರಾಗಲಿ, ಸಂಘಟನಾ ವ್ಯವಸ್ಥೆಗಳಾಗಲಿ ಇಲ್ಲಿಲ್ಲ. ಹೀಗಾಗಿ, ತಮ್ಮ ಅನುಕೂಲತೆ ಹಾಗೂ ಅವಕಾಶವನ್ನು ನೋಡಿಕೊಂಡು, ಕೆಲವು ಪರಂಪರಾಗತ ಕಾರ್ಯಕ್ರಮಗಳ ಆಚರಣೆಗಾಗಿ ಮುಂದಾಗುವವರನ್ನೇ ಆಧರಿಸಿ ಇರಬೇಕಾಗಿದೆ ಇಂದಿನ 'ಕಾಂಗ್ರೆಸ್' ಎಂಬುದೆಲ್ಲವೂ. ನಿಜಕ್ಕೂ ಹೀಗಿರಬೇಕೆಂದಿಲ್ಲ. ಕಾಂಗ್ರೆಸಿಗನುಕೂಲವಿರುವ ಕಾಲವಿದು; ಸಂಗ್ರಹ ಹಾಗೂ ಸಂಘಟನೆಗಳಿದಲ್ಲಿ ಸಾಕಷ್ಟು ಧನ ಜನ ಬೆಂಬಲವು ಕಾಂಗ್ರೆಸಿಗೆ ದೊರೆಕೀತೆಂಬುದು ನಿಸ್ಸಂದೇಹ. ಉತ್ಸಾಹಿ ಹಾಗೂ ಜನಪ್ರಿಯ ಕಾರ್ಯಕರ್ತರೇ ಇಂದು ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧಿಕಾರಸ್ಥಾನದಲ್ಲಿದ್ದಾರೆ. ಅಂದಮೇಲೆ, ಮಾರ್ಗವಿದೆ--ಮನಸ್ಸಿಲ್ಲವೆನ್ನೋಣವೆ? ಹಾಗೆನ್ನಿಸಿಕೊಳ್ಳಕೂಡದು. ಜಿಲ್ಲೆಯಲ್ಲೆಲ್ಲಾ ನವಚೇತನವೆಬ್ಬಿಸುವ ಕಾರ್ಯಕ್ರಮಗಳಿಗೆ ಪಾಣೆಮಂಗಳೂರು ಪರಿಷತ್ತಿನಲ್ಲಿ ಅಸ್ತಿವಾರ ಬೀಳಬೇಕು. 'ಇದು ಕಾಂಗ್ರೆಸ್ ಸಂಸ್ಥೆಯ ಕೆಲಸ— ಸಮ್ಮೇಲನದ್ದಲ್ಲ' ಎಂಬಂತಹ ಆಕ್ಷೇಪಗಳಾವುವೂ ಈಗ ಬೇಕಾಗಿಲ್ಲ. ಆ ಸಮಿತಿಯೇ ವಿಕಾಸಗೊಂಡು ಈ ಸಮ್ಮೇಲದವಾಗುತ್ತಿದೆ. ಹೆಚ್ಚಿನವರು ನೆರೆಯುವ ಈ ಸುಸಂದರ್ಭವನ್ನು ಉತ್ಸವಾಡಂಬರದಲ್ಲಿ ಕಳೆಯದೆ ಉದ್ಯೋಗದತ್ತ ಲಕ್ಷ್ಯಕೊಡಬೇಕಾದುದು ಅಗತ್ಯ.

'ಪರಿಷತ್ತು' ಎಂದ ಮೇಲೆ ಅದರ ಕಾರ್ಯಕ್ರಮಗಳನ್ನು, ಅದು ಮಾಡಲಿರುವ ಮುಖ್ಯ ನಿರ್ಧಾರಗಳನ್ನು ಮುಂದಾಗಿ ಊಹಿಸಲು ಸಾಧ್ಯವಿದೆ. ಅವೆಲ್ಲವೂ ಇದ್ದ ಹಾದಿಯನ್ನೇ ಹಿಡಿದಾವು. ದಕ್ಷಿಣ ಕನ್ನಡದ ವಾತಾವರಣದಲ್ಲಿ ಹೆಚ್ಚಿನಂಶ ಅವ್ಯಕ್ತವಾಗಿ–ಅಂತರ್ಗಾಮಿಯಾಗಿ–ಆದರೆ ಆಳಕ್ಕೂ ಹಬ್ಬಿರುವ ಬೇಯ ಜಾತೀಯತೆ; ದೂರದ ಮೂಲೆಯಾಗಿರುವ ಈ ಜಿಲ್ಲೆಯು ಇಂದಿನ ಕಾಂಗ್ರೆಸ್ ಸರಕಾರಗಳಿಂದಲೂ ಕಡೆಗಣಿಸಲ್ಪಟ್ಟಿರುವ ದುಸ್ಥಿತಿ; ಆಹಾರ ಸಂಕಷ್ಟ; ಕರ್ನಾಟಕ ಪ್ರಾಂತ್ಯ ರಚನೆ–ಇತ್ಯಾದಿಗಳ ಕಡೆಗೆ ಸಮ್ಮೇಲನದ ಲಕ್ಷ್ಯ ಬೀಳಬೇಕಾದುದು ಸ್ವಾಭಾವಿಕ. ರಾಜಕೀಯ ಸಂತ್ರಸ್ತರಿಗೆ ಸರಕಾರವು ಜಾಹೀರುಮಾಡಿರುವ ಭೂದಾನದ ವ್ಯವಸ್ಥೆಯಂತಹ ಇತರ ಪ್ರಶ್ನೆಗಳೂ ಅದರ ಮುಂದಿವೆ. ಒಂದು ಜಿಲ್ಲೆಯ ಜನಮತಕ್ಕೆ ರೂಪಕೊಟ್ಟು ಮುಂದಿಡುವ ಕೆಲಸ ಸಣ್ಣದಲ್ಲ. ಪ್ರಜಾಧಿಕಾರದ ಈ ಕಾಲದಲ್ಲಿ ಅದಕ್ಕೆ ಬೆಲೆಬರಬೇಕಾದುದೂ ಸಹಜವೇ. ಆದರೆ, ಅದರ ಬೆನ್ನುಹಿಡಿದು ಕಾರ್ಯದೊತ್ತಡ ಬೀಳದಿದ್ದರೆ–"ಸಭೆ ಸಮ್ಮೇಳನಗಳನ್ನು ನೆರೆಯಿಸಿ, ಒಂದಷ್ಟು ನಿರ್ಣಯಗಳನ್ನು ಮಂಜೂರು ಮಾಡಿಸಿ, ಕೈಕಟ್ಟಿ ಕುಳಿತುಕೊಂಡರಾಯಿತು" ಎಂಬ ವಾಡಿಕೆಯ ಮಾತಿಗೆ ಮತ್ತೊಂದು ಸಾಕ್ಷ್ಯಮಾತ್ರ ದೊರೆಕಿತಾದರೆ—ಈ ಪರಿಷತ್ತೂ ಉತ್ಸವಗಳ ವರ್ಗಕ್ಕೆ ಸೇರಿಹೋದೀತು; ನಾಳೆಯೂ ನಮ್ಮ ಅನುಭವಕ್ಕೆ ಸಿಗುವ ಸತ್ಪರಿಣಾಮಗಳನ್ನು ಅದು ಕೊಡದಂತಾದೀತು. ಕಾಂಗ್ರೆಸಿಗರ ಕೆಲಸ ಬಾಕಿಯುಳಿದಿದೆ; ಕಾಂಗ್ರೆಸಿನ ವಿರೋಧಿಗಳ ಹಾಗೂ ನಿಂದಕರ ಸಂಖ್ಯೆಯೀಗ ಹೆಚ್ಚಿದೆ; ಇಂತಹ ಸಂದರ್ಭದಲ್ಲಿ ಜಿಲ್ಲೆಯಲ್ಲೆಲ್ಲಾ ಸದ್ಭಾವನೆ ಮತ್ತು ಗೆಳೆತನ ಹುಟ್ಟಿಸಬಲ್ಲ, ಕಾರ್ಯನಿಷ್ಠೆ ನಿರ್ಮಿಸಬಲ್ಲ ಕೆಲಸವಾದರೇನೇ ಈ ಸಮ್ಮೇಲನ ಸಾರ್ಥಕ. ಕಾಂಗ್ರೆಸಿನ ಆಶ್ರಯದಲ್ಲಿ ಇದೀಗ ಪ್ರಥಮ ಬಾರಿ ಜಿಲ್ಲಾ ರೈತ ಪರಿಷತ್ತು ಸೇರಲಿದೆ. ಈ ಜಿಲ್ಲೆಯಲ್ಲೇ ಪರಿಗೂ ಕಡೆಗಣಿಸಲ್ಪಟ್ಟಿರುವ ಪ್ರಾಮುಖ್ಯ ವಿಷಯವೆಂದರೆ ರೈತ ಸಂಘಟನೆ; ಮದ್ರಾಸ್ ಪ್ರಾಂತ್ಯದಲ್ಲಿ, ಆಗದೆ ಇನ್ನೂ ಬಾಕಿ ಬಿದ್ದಿರುವ ಮುಖ್ಯ ಸುಧಾರಣೆಯೆಂದರೆ ರೈತಾಪಿ ಹಿತ ಸಾಧನೆ. ಪಾಣೆಮಂಗಳೂರಿನ ಪರಿಷತ್ತು ಇವೆರಡಕ್ಕೂ ಅಸ್ತಿವಾರ ಹಾಗೂ ಮಾರ್ಗದರ್ಶನ ಮಾಡಿ ಕೊಡುವದೆಂದು ನಿರೀಕ್ಷಿಸಬಹುದೆ?

ಪಾಣೆಮಂಗಳೂರಿನ ದ. ಕ. ಜಿಲ್ಲಾ ರಾಜಕೀಯ ಪರಿಷತ್ತು ಎಲ್ಲಾ ದೃಷ್ಟಿಯಲ್ಲೂ ಜಯಶಾಲಿಯಾಗಲಿ–ದಕ್ಷಿಣಕನ್ನಡಿಗರು ಉತ್ಸಾಹ ಹಾಗೂ ಕರ್ತವ್ಯ ಬುದ್ಧಿಯಿಂದ ಸಹಭಾಗಿಗಳಾಗಿ ಅದನ್ನು ಜಯಶೀಲಗೊಳಿಸಲಿ, ಎಂದು ಹಾರೈಸುತ್ತೇವೆ.

ಉಡುಪಿ

ಸಳೇಲ್ ಕಾಂಗ್ರೆಸ್ ಕಮಿಟಿ ಸಭೆಯು ತಾ 5ರಲ್ಲು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಪಾಣೆಮಂಗಳೂರಲ್ಲಿ ಜರಗುವ ಜಿಲ್ಲಾ ರಾಜಕೀಯ ಪರಿಷತ್ತಿಗೆ ಪ್ರತಿನಿಧಿಗಳನ್ನೂ ಉಡುಪಿ ತಾಲೂಕಿನ ಕಾಂಗ್ರೆಸ್ ಗ್ರಾಮಪಂಚಾಯತುಗಳಿಗೆ ಸದಸ್ಯರನ್ನೂ ಆರಿಸಲಾಯಿತು.

ಕುಲಾಲ ಸಮಾಜೋದ್ಧಾರಕ ಸಮಿತಿಯ ವಾರ್ಷಿಕ ವರ್ಧಂತಿ ಸಭೆಯು ತಾ 8ರಲ್ಲಿ ಮೊಡರ್ನ್ ಹಾ. ಎ. ಶಾಲೆಯಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮೌನ ಪ್ರಾರ್ಥನೆಯ ನಂತರ ಶ್ರೀ. ಯು. ಕಾಂತಪ್ಪನವರು ಸಮಿತಿಯ ವರದಿಯನ್ನೋದಿದರು. ಸಭೆಯಲ್ಲಿ ಕೆಲವರ ಭಾಷಣಗಳಾದ ನಂತರ ಅಧ್ಯಕ್ಷರು ಕುಲಾಲ ಸಮಾಜದಲ್ಲಿ ಆಗಬೇಕಾದ ಸುಧಾರಣೆಗಳನ್ನು ವಿವರಿಸುತ್ತಾ ಸಮಾಜದ ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ವಿದ್ಯಾಪ್ರಚಾರವು ಕೂಡಲೇ ಆಗಬೇಕಾಗಿದೆ ಎಂದರು. ಅಂದು ಪೂರ್ವಾಹ್ನ ಸಮಿತಿಯ ಮಹಾಸಭೆಯು ಶ್ರೀ. ಯು. ಕಾಂತಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರುಷದ ಚುನಾವಣೆ ನಡೆಯಿತು.

ವರ್ಗಾವರ್ಗಿ—ಸ್ಥಳೀಯ ಸರಕಾರಿ ಆಸ್ಪತ್ರೆಯ ಲೇಡಿ ಡಾಕ್ಟರಾಗಿದ್ದ ಶ್ರೀಮತಿ ಕೆ. ಕಾವು ಎಲ್. ಎಂ. ಪಿ. ಯವರು ಕಾರ್ಕಳಕ್ಕೆ ವರ್ಗಾಯಿಸಲ್ಪಟ್ಟಿರುವರು. ಇವರ ಸ್ಥಾನಕ್ಕೆ ಕಾಸರಗೋಡಿನಿಂದ ಶ್ರೀಮತಿ ಮೂಕಾಂಬು, ಎಂ. ಬಿ. ಬಿ. ಎಸ್. ಅವರು ಬಂದಿರುವರು.

ಮಳೆ:—ಶನಿವಾರ ರಾತ್ರಿ ಚೆನ್ನಾಗಿ ಮಳೆಬಿದ್ದಿರುವುದು. ಗಾಳಿಗೆ ಅಲ್ಲಲ್ಲಿ ಮರಗಳು ಬಿದ್ದು ಇಲೆಕ್ಟ್ರಿಕ್ ಮತ್ತು ಟೆಲಿಫೋನ್ ತಂತಿಯರುಗಳು ತುಂಡಾಗಿ ಒಂದೆರಡು ದಿನ ಅವ್ಯವಸ್ಥೆಯುಂಟಾಗಿತ್ತು.

ಕಾಲೇಜಿಗೆ ಸಹಾಯ:-ಉಡುಪಿಯಲ್ಲಾಗುವ ಕಾಲೇಜಿನ ಬಗ್ಗೆ ಕಾಲೇಜು ಕಮಿಟಿಯ ಉಪಸಮಿತಿಯವರಿಗೆ ಈ ಕೆಳಗಿನ ಮಹನೀಯರು ಮೇಜು, ಕುರ್ಚಿ, ಇತ್ಯಾದಿಗಳನ್ನು ಕೊಟ್ಟು ಸಹಾಯಮಾಡುವೆವು ಎಂದು ವಾಗ್ದಾನಮಾಡಿದುದನ್ನು ಉಪಸಮಿತಿಯವರು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿರುವುದಲ್ಲದೆ, ನಗರವಾಸಿಗಳೂ ಈ ಮಹನೀಯರಿಗೆ ಚಿರಋಣಿಗಳೆಂದು ಹೇಳಬಹುದು.

ದ್ವಿ. ಮೋನಪ್ಪ ಹೆಗ್ಡೆ 5ಮೇಜು. ನಾರಾಯಣ ಶೆಟ್ಟಿ 4 ಮೇಜು. ಆರ್. ಎಸ್. ಉಪಾಧ್ಯಾಯರು 18 ಕುರ್ಚಿ. ಜನಮೂಹಾರ್ಲ್ಲಿ 3 ಕುರ್ಚಿ. ಎಚ್. ರತ್ನಾಕರ ಶೆಟ್ಟಿಯವರು 2ಕಪಾಟು. ಎ. ಬಚ್ಚನಾರಕಾಲರು 1 ಕಪಾಟು

…ಪೇರ ಹೆಗ್ಡೇರು 3 ಡೆಸ್ಕ್, ಶ್ರೀನಿವಾಸ …ಸೋಮಯಾಜರು 10 ಬೆಂಚು, ಆಲಂಗಾರ್ …ರಾಜರಾಜ ಹೆಗ್ಡೇರು 5 ಬೆಂಚು, ಕೊರಗ …ಟ್ಟಿ 5 ಬೆಂಚು, ಕಾಳಪ್ಪ ಶೆಟ್ಟಿ 5 ಬೆಂಚು, …ಚ್. ಸುಬ್ರಾಯ ಪ್ರಭುಗಳು 5 ಬೆಂಚು, …ನ್ನಂಜೆ ವಿಠಲಶೆಟ್ಟಿ 5 ಬೆಂಚು, ಬೈಲೂರು …ವಿಠಲಶೆಟ್ಟಿ 5 ಬೆಂಚು, ಎಸ್. ಹಿರಿಯಣ್ಣ …ಗ್ಡೆರು 1 ಪ್ಲೇಟುಪೋರ್ಮ್, ಟಿ. ಎನ್. …ಳುನಂಬಿಯಾರ್ 1 ಪ್ಲೇಟುಪ್ಲೋರ್ಮ್, …ಸ್. ಆರ್. ಸೋಮಯಾಜರು 1 ಕರಿಹ …ಗೆ. ಎಚ್. ಸುಬ್ರಾಯ ಪೈಗಳು 1 ಕರಿಹ …ಗೆ. ಬಿ. ವಿಠಲರಾಯರು 1 ಕರಿಹಲಗೆ, …ನ್ನು ಬೇಕಾಗುವ ಸಾಮಾನುಗಳೆಂದರೆ ಬೆಂಚುಗಳು, 35 ಡೆಸ್ಕುಗಳು, 1 ಪ್ಲೇಟ್ …ರ್ಮ್, 1 ಕಪಾಟು. ಉದಾರ ಹೃದಯಿ…ಳು ಇವನ್ನು ದಾನವಾಗಿ ಶೀಘ್ರದಲ್ಲಿಯೇ …ಡಬಹುದೆಂದು ಭರವಸೆ ಇದೆ.

ಕಡಿಯಾಳೀ:— ಮಹಿಷಮರ್ದಿನಿ ದೇವಸ್ಥಾನದಲ್ಲಿ ತಾ 3ರಿಂದ ನಗರ ಭಜನೆ ಪ್ರಾರಂಭವಾಗಿದ್ದು ತಾ 15ಕ್ಕೆ ಮಂಗಲೋತ್ಸವ …ರಗಲಿದೆ. ಮುಂದೆ ಪ್ರತಿ ಶುಕ್ರವಾರವೂ …ಜನೆ ಜರಗಲಿರುವುದು.

ಶ್ರೀಕೃಷ್ಣ ದೇವಾಲಯದ ಭೋಜನ ಶಾಲೆಗೆ ಬೆಂಕಿ:— ಉಡುಪಿ ಶ್ರೀಕೃಷ್ಣ ದೇವರ ಸುಪ್ರಸಿದ್ಧ ಭೋಜನಶಾಲೆಯು …ಮೇ ತಾ 11 ಹಿಡಿಯುವ ರಾತ್ರಿ ಸುಟ್ಟು ಹೋಯಿತು. ರಾತ್ರಿ ಸುಮಾರು 2 ತಾಸಿಗೆ …ದೇವಾಲಯದ ಅಪಾಯಸೂಚಕ ನಗಾರಿ ಕೇಳಿ ಜನರು ನೆರೆದು ಬಂದಾಗ ಪಾಕಗೃಹ ಉರಿಯುತ್ತಿತ್ತು, ದೊಡ್ಡ ರಥದ ಶೃಂಗಾರ …ಸಾಮಗ್ರಿಗಳು, ಪಾತ್ರೆಪರಡಿ ಇತ್ಯಾದಿಗಳು …ದರೊಳಗಿದ್ದುವೆಂದು ತಿಳಿದು ಬಂದಿದೆ. ಉಡುಪಿಯ ಅಗ್ನಿಶಾಮಕ(ಫಯರ್ ಸ್ಟೇಶನ್) …ದಳದವರು ಧಾವಿಸಿಬಂದು ಅಗ್ನಿ ನಂದಿಸುವ …ಪ್ರಯತ್ನ ಮಾಡಿದರು. ಆದಿಯಲ್ಲೇ …ಬಲಿಸಿದ ಬೆಂಕಿ ಭೋಜನಶಾಲೆಗೂ ಹಿಡಿದು …ಡೆಲ್ಲಾ ಸುಟ್ಟುಹೋಯಿತು. ಅದಕ್ಕೆ …ತ್ತಾಗಿ ಶ್ರೀಕೃಷ್ಣ ದೇವಾಲಯ, ಗೋಶಾಲೆ, …ಟ್ಟಿನೇ ರಥ ಇತ್ಯಾದಿಗಳಿರುವುದರಿಂದ, ಬಂ… ನೀರ ಬಂಡಿಯು ಚಲನೆ ನಿಂತರೂ ಅಗ್ನಿ…ಶಾಮಕ ದಳದವರೂ, ಊರ ಹಲವರೂ …ಶೇಷ ಪ್ರಯತ್ನಪಟ್ಟು ಪೈಪ್ ಹಾಗೂ ಪಾತ್ರೆ…ಯಿಂದ ಬೆಂಕಿಯನ್ನಲ್ಲಿಗೇ ನಂದಿಸಿದರು. …ಗ್ನಿ ಶ್ರೀಕೃಷ್ಣ ಮಂದಿರಾಭಿಮುಖವಾಗಿ …ಉರಿಯುತ್ತಿದ್ದಾಗ ಅಪಾಯವನ್ನು ಲೆಕ್ಕಿಸದೆ …ಮಾಡನ್ನು ಹತ್ತಿ ಅದರ ಶಮನ ಪ್ರಯತ್ನ …ಮಾಡಿದ್ದ ಕೆಲವರ ಸಾಹಸ ಶ್ಲಾಘನೀಯವಿದೆ. ಉಡುಪಿಯ ಇತ್ತೀಚೆಗಿನ ಚರಿತ್ರೆಯಲ್ಲೇ ದೊಡ್ಡದಾದ ಈ ಬೆಂಕಿಯಿಂದ …ರೂ. 50 ಸಾವಿರಕ್ಕೂ ಮಿಕ್ಕಿ ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆ.

(೨ನೇ ಪುಟದಿಂದ)

ಆ ರಾತ್ರಿ ಸರಕಾರೀ ಭವನದಲ್ಲಿದ್ದು …, 7ನೇ ಮುಂಜಾನೆ ಮಗಳು ಇಂದಿರಾ …ಮತ್ತು ಮೊಮ್ಮಕ್ಕಳು, ಖಾಸಗೀ ಕಾರ್ಯದರ್ಶೀ ಎಮ್. ಓ. ಮಥಾಯಿ, ಢಿಲ್ಲಿಯಲ್ಲಿ ಸೇರಲಿರುವ ಗವರ್ನರರ ಸಮ್ಮೇಳನಕ್ಕಾಗಿ ಹೊರಟಿದ್ದ ಬೊಂಬಾಯಿ ಗವರ್ನರ್ ರಾಜಾ ಮಹಾರಾಜಾ ಸಿಂಗ, ಇವರೊಂದಿಗೆ ತನ್ನ ಸ್ಪೆಶ್ಯಲ್ ವಿಮಾನದಲ್ಲಿ ಪಂಡಿತ ನೆಹರುಗಳು ಬೊಂಬಾಯಿಯಿಂದ ಢಿಲ್ಲಿಗೆ ಹಾರಿದರು. ಢಿಲ್ಲಿಯಲ್ಲಿ ಮಧ್ಯಾಹ್ನದ …ಬಿಸಿಲು 110 ಡಿಗ್ರಿಗೆ ಸಮೀಪವಾಗಿ ಸುಡುತ್ತಿದ್ದರೂ ಅಧಿಕಾರಿ ಅನಧಿಕಾರೀ ಪ್ರಮುಖರೂ ಸಾರ್ವಜನಿಕರೂ ಅಧಿಕ ಸಂಖ್ಯೆಯಿಂದ ನೆರೆದು ತಮ್ಮ ದಿಗ್ವಿಜಯೀ ನಾಯಕನನ್ನು ಜೈಕಾರಗಳಿಂದ ಸ್ವಾಗತಿಸಿಕೊಂಡರು. ರಾಜಧಾನಿಯಲ್ಲಿದ್ದ ಮಂತ್ರಿಗಳು ಅಲ್ಲಿ ಬಂದಿದ್ದರಲ್ಲದೆ ಗವರ್ನರ್ ಜನರಲರು ಒಂದು ಅಭಿವಂದನಾಪತ್ರ …ಮೇತ ತನ್ನ ಮಿಲಿಟರಿ ಕಾರ್ಯದರ್ಶಿ…

…ಯನ್ನು ಕಳುಹಿಕೊಟ್ಟಿದ್ದರು. ಅಲ್ಲಿ ಸೇನಾದಳದ ಗೌರವ ವಂದನೆ ಸ್ವೀಕರಿಸಿದರು. ದೊಡ್ಡ ಹೊಣೆಯೊಂದನ್ನು ಹೊತ್ತುಕೊಂಡು ಆದಿನ ಬಿಟ್ಟಿದ್ದ ತನ್ನ ಕಾರ್ಯಾಲಯವನ್ನು— ಆ ಹೊಣೆಯನ್ನು ಜಯಶೀಲವಾಗಿ ನಿರ್ವಹಿಸಿಕೊಂಡ ಹೆಗ್ಗಳಿಕೆಯೊಡನೆ ಮರಳಿ ಪ್ರವೇಶಿಸಿದರು.

oo oo

ಪಂಡಿತ ನೆಹರುಗಳು ಇನ್ನೊಂದು ಪ್ರಾಮುಖ್ಯ ಪಯಣ ಕೈಕೊಳ್ಳಲಿದ್ದಾರೆ. ಅದು ಅಮೆರಿಕಾಧ್ಯಕ್ಷ ಟ್ರುಮೇನರ ಆಮಂತ್ರಣದಂತೆ ಅಮೇರಿಕಕ್ಕೆ. ಟ್ರುಮೇನರ ಆಮಂತ್ರಣವು ಎರಡು ತಿಂಗಳ ಮೊದಲೇ ಬಂದಿತ್ತು. "ಈ ವರುಷಾಂತ್ಯ ಭಾಗದಲ್ಲಿ ಅಮೆರಿಕಕ್ಕೆ ಬನ್ನಿ" ಎಂದೇ ಅಧ್ಯಕ್ಷ ಟ್ರುಮೇನರ ಆಹ್ವಾನವಿದ್ದಿತು. ಬರುವ ಒಕ್ಟೋಬರ್ ಆದಿಭಾಗದಲ್ಲಿ ವಾಷಿಂಗ್ಟನಿಗೆ ಹೋಗಿ, ಆ ಮೇಲೆ ಮೂರುವಾರ ಅಮೆರಿಕದಲ್ಲೆಲ್ಲಾ ಪಂಡಿತಜೀ ಸಂಚರಿಸುವರೆಂದು ಗೊತ್ತಾಗಿದೆ. ರಿಪಬ್ಲಿಕ್ ಭಾರತಕ್ಕೆ ಆದಿಭಾಗದಲ್ಲಿ ಅಮೇರಿಕದ ಸಲಕರಣೆ ಸಹಾಯಗಳು ಬೇಕಾಗಬಹುದಾದ್ದರಿಂದ ನೆಹರು—ಟ್ರುಮೇನರೊಳಗೆ ಭಾರತ-ಅಮೆರಿಕಗಳೊಳಗಿನ 'ಕೊಡಕೊಂಡ'ದ ಮಾತುಕತೆಗಳಾಗಲಿವೆ. ನೆಹರುಗಳ ಆ ಭೇಟಿಯು ಲೋಕ ಪ್ರಾಮುಖ್ಯತೆ ಪಡೆಯುವುದು ಖಂಡಿತ.

ಭಾರತವು ಬಿಡಿಸುತ್ತಿರುವ ಸಂಸ್ಥಾನೀ ಸಮಸ್ಯೆ

ಸಂಸ್ಥಾನಗಳ ಸಂಬಂಧದ ಪ್ರಶ್ನೆಗಳು ಇನ್ನೂ ಭಾರತ ಸರಕಾರದ ಮುಂದೆ ಉಳಿದಿವೆ. ಕಾಶ್ಮೀರವೊಂದನ್ನು ಬಿಟ್ಟರೆ ಉಳಿದ ಎಲ್ಲಾ ಸಂಸ್ಥಾನಗಳ ಸಂಬಂಧದ ಪ್ರಾಮುಖ್ಯ ಹಾಗೂ ಮೊದಲಿನ ಕೆಲಸ ಈಗ ಮುಗಿದಂತೆಯೆ. ಆದರೂ ಯಾವ ಸಂಸ್ಥಾನದಮಟ್ಟಿಗೂ ಶಾಶ್ವತ ವ್ಯವಸ್ಥೆ ಪೂರ್ಣಗೊಂಡಿಲ್ಲವೆನ್ನಬಹುದು. ಕಾಶ್ಮೀರದ ಪ್ರಶ್ನೆಯಂತೂ ತೀರ್ಮಾನಗೊಂಡಿಲ್ಲ; ಸದ್ಯದಲ್ಲೇ ಅಲ್ಲೊಂದು ತೀರ್ಮಾನವಾಗುವುದೂ ಅಸಾಧ್ಯ. ಮಾತ್ರವಲ್ಲ, ಒಂದು ತೀರ್ಮಾನವಾಗುವ ಮೊದಲು ಆ ಹಾದಿಯಲ್ಲಿ ಇನ್ನೂ ಕೆಲವು ಕಂಟಕಗಳನ್ನು ಬಲವಾಗಿ ತುಳಿಯಬೇಕಾಗಿಬರುವುದೂ ಸಂಭವನೀಯ.

ಕಾಶ್ಮೀರದ ಸಂಧಾನ ಸಮಸ್ಯೆ

ಜಾಗತಿಕ ಸಂಘದ ಕಾಶ್ಮೀರ ಕಮಿಶನಿನವರು ಭಾರತ ಮತ್ತು ಪಾಕಿಸ್ತಾನಗಳೊಳಗಿನ ಕೊನೆಯ ಒಪ್ಪಂದ ಶರ್ತಗಳನ್ನು ತಯಾರಿಸಿ ಎಪ್ರಿಲ್ 28ರಲ್ಲಿ ಇವೆರಡು ಸರಕಾರಗಳಿಗೂ ರವಾನಿಸಿದ್ದರು; ಮತ್ತು ಆ ತಾರೀಕಿನಿಂದ ಒಂದು ವಾರದೊಳಗೆ ಉತ್ತರ ಕೊಡಬೇಕೆಂದು ಕೇಳಿಕೊಂಡಿದ್ದರು. ಈ ಅವಧಿಯಲ್ಲಿ ಭಾರತ ಮತ್ತು ಪಾಕಿಸ್ತಾನ್ ಪ್ರಧಾನಿಗಳಿಬ್ಬರೂ ಲಂಡನಿನಲ್ಲಿದ್ದರು. ಮೇಲಾಗಿ ಗಾಢ ವಿಚಾರ ನಡೆಸುವ ಅಂಶಗಳೂ ಈ ಶಾಂತಿಸೂಚನೆಗಳಲ್ಲಿವೆ. 'ಕಾಶ್ಮೀರದಲ್ಲಿರುವ 'ಆಝಾದ್ ಕಾಶ್ಮೀರ್' ನಾಮಾಂಕಿತ ಬಂಡಾಯಗಾರ ಸರಕಾರದ ಸೈನ್ಯವನ್ನು ಬರ್ಖಾಸ್ತುಪಡಿಸದೆ ಬೇರಾವ ಮಾತೂ ಮುಂದೆಬರಲಾರದು' ಎಂಬ ಭಾರತ ಸರಕಾರದ ವಾದಕ್ಕೆ ಮಾನ್ಯತೆ ದೊರೆತಿಲ್ಲವೆಂಬ ವಾರ್ತೆಯಿರುವುದರಿಂದ ಭಾರತವಂತೂ ಈ ಕುರಿತು ಹೆಚ್ಚಿನ ಯೋಚನೆ ಮಾಡಲಿಕ್ಕಿದೆ. ಹೀಗಾಗಿ ತಾವು ಉತ್ತರಕೊಡುವ ಅವಧಿಯನ್ನು ಹೆಚ್ಚಿಸಬೇಕೆಂದು ಭಾರತದ ಮತ್ತು ಪಾಕಿಸ್ತಾನದ ಎರಡೂ ಸರಕಾರಗಳು ಕೇಳಿಕೊಂಡಿದ್ದುವು. ಕಾಶ್ಮೀರ ಕಮಿಶನು ಅದಕ್ಕೊಪ್ಪಿಗೆ ಸೂಚಿಸಿದೆ. ಕಾಶ್ಮೀರ ರಂಗದಲ್ಲಿ ಶರ್ತ ಮೀರಿ ಸ್ಥಳಾಕ್ರಮಣವಮಾಡುವ ಪಾಕಿಸ್ತಾನದ ಆಟಗಳಿನ್ನೂ ನಡೆದಿವೆ. ಕಾಶ್ಮೀರದ ಕುರಿತು ಪಾಕೀಸ್ತಾನಿಗಳಲ್ಲೆಲ್ಲಾ ಕೃತಕ ವಿಶ್ವಾಸ ಹುಟ್ಟಿಸುವ ನೂತನ ಪ್ರಚಾರಗಳ ಹಂಚಿಕೆಯೂ ಅಲ್ಲಿ ನಡೆದಿದೆ. ಒಂದು ನಿದರ್ಶನ ಇಲ್ಲಿದೆ. ಲಾಹೋರಿನ 'ಸಿವಿಲ್ ಎಂಡ್ ಮಿಲಿಟರಿ ಗಝೆಟ್'ನ ನವಢಿಲ್ಲಿ ಬಾತ್ಮಿದಾರನು ಆ ಪತ್ರಿಕೆಗೆ ಕೊಟ್ಟ ಈ ಕೆಳಗಿನ ಅರ್ಥಪೂರ್ಣ ಸುದ್ದಿಯೊಂದನ್ನು ಅದು ತನ್ನ ಮೇ 5ರ ಸಂಚಿಕೆಯಲ್ಲಿ ಪ್ರಕಟಿಸಿದ್ದಿತು:-"ಲಂಡನಿಗೆ ಹೋದಲ್ಲಿ ಭಾರತ ಮತ್ತು ಪಾಕಿಸ್ತಾನದ ಪ್ರಧಾನ ಮಂತ್ರಿಗಳಿಗೆ, ಕಾಶ್ಮೀರದ ಪ್ರಶ್ನೆಯ ಒಂದು ತೀರ್ಮಾನ ಸಲಹೆಯನ್ನು ಅಲ್ಲಿಯ ಅಧಿಕಾರಿಗಳು ಕೊಟ್ಟಿದ್ದಾರೆ. ಅದೆಂದರೆ ಕಾಶ್ಮೀರದ ಜನಮತ ಸಂಗ್ರಹ ಪ್ರಶ್ನೆಯನ್ನೇ ನಜಾತಪಡಿಸಿ, ಕಾಶ್ಮೀರದಲ್ಲೀಗ ಇಕ್ಕಡೆಯವರು ಹಿಡಿದುಕೊಂಡಿರುವ ಭಾಗಗಳನ್ನು ಆಧರಿಸಿ ಕಾಶ್ಮೀರವನ್ನು ಎರಡುಕಡೆಗಳವರಿಗೆ ವಿಭಾಗಿಸಿ ಕೊಡುವುದು. ಈ ನಿರ್ಧಾರವು ಲಂಡನಿನಲ್ಲಾಗಿದ್ದು ಭಾರತ—ಪಾಕಿಸ್ತಾನ್ ಪ್ರಧಾನ ಮಂತ್ರಿಗಳು ಸ್ವದೇಶಗಳಿಗೆ ಮರಳಿ ತಂತಮ್ಮ ಮಂತ್ರಿ ಮಂಡಲಗಳೊಡನೆ ಪರ್ಯಾಲೋಚಿಸಿದ ನಂತರ ಅದು ಪ್ರಕಟವಾಗಲಿದೆ." ಈ ಸುದ್ದಿ ಪ್ರಕಟವಾದುದೇ ತಡ, ಇಡೀ ಪಾಕಿಸ್ತಾನವೇ ಉದ್ವೇಗಗೊಂಡಿತು. ಪಾಕಿಸ್ತಾನದ ಎಲ್ಲಾ ಭಾಷೆಯ ಎಲ್ಲಾ ಪತ್ರಿಕೆಗಳೂ 'ವಿಶ್ವಾಸಘಾತ' ಎಂಬ ತಲೆಬರೆಹದಡಿಯಲ್ಲಿ ಜತೆ ಸಂಪಾದಕೀಯವನ್ನು ಪ್ರಕಟಿಸಿ 'ಇಂತಹ ವಿಭಜನೆಗೊಪ್ಪಿದರೆಂಬ ಅಬದ್ಧ ವಾರ್ತೆ ಪ್ರಕಟಿಸಿದುದು ಪಾಕಿಸ್ತಾನಕ್ಕಪಮಾನಕರ; ರಾಷ್ಟ್ರದ್ರೋಹ; ಪತ್ರಿಕಾ ಧರ್ಮಚ್ಯುತಿ' ಎಂದೆಲ್ಲಾ ಕಠೋರವಾಗಿ ಟೀಕಿಸಿದುವು. ಕೂಡಲೇ ಸುದ್ದಿ ಪ್ರಕಟಿಸಿದ 'ಸಿವಿಲ್ ಮತ್ತು ಮಿಲಿಟರಿ ಗಝೇಟ್' ಪತ್ರಿಕಾ ಸಂಪಾದಕನು ಆ ಪ್ರಮಾದಕ್ಕಾಗಿ ಕ್ಷಮೆಯಾಚಿಸಿ, ಭಾರತದ ಅಪಪ್ರಚಾರದಿಂದ ವಂಚಿಸಲ್ಪಟ್ಟ ತನ್ನ ನವಢಿಲ್ಲೀ ಬಾತ್ಮೀದಾರನು ತನ್ನ ಪದ್ಧತಿವಿರುದ್ಧವಾಗಿ ತಪ್ಪುಮಾಡಿದನೆಂದೂ, ಸಂಪಾದಕ ಮಂಡಳಿಯ ಹಿರಿಯರಿಲ್ಲಾ ಗೈರುಹಾಜರಿದ್ದುದರಿಂದ ಅದು ಪ್ರಕಟಗೊಂಡ ಅಪರಾಧವಾಯಿತೆಂದೂ ಹೇಳಿಕೊಂಡಿದ್ದಾನೆ. "ಇದು ಬೇಜವಾಬ್ದಾರೀ ಮಕ್ಕಳಾಟ-ಅದರ ಬೇಕೆಂದೇ ಹೂಡಿರುವ ಒಂದು ಆಟ" ಎಂದು ನವಢಿಲ್ಲಿಯ ಅಧಿಕಾರೀ ವರ್ಗವೀ ಘಟನೆಯನ್ನು ಅಪಹಾಸ್ಯ ಮಾಡಿದೆ

ಹೈದರಾಬಾದ್ ಪ್ರಶ್ನೆ?

ರಜ್ವೀ ಹೈದರಾಬಾದ್-ನಿಜಾಮೀ ಹೈದರಾಬಾದ್ ಎಂದೋ ಅಂತರ್ಧಾನಗೊಂಡು, ನವೀನ ಹೈದರಾಬಾದ್ ಉದಯವಾಗುತ್ತಿರುವ ಈ ಕಾಲದಲ್ಲೂ ಪಾಕಿಸ್ತಾನದ ವಿದೇಶ ಮಂತ್ರಿ ಸರ್. ಝಫರುಲ್ಲಾಖಾನರು ಹಳೇ ಹೈದರಾಬಾದಿನ ಸ್ವಪ್ನ ಕಾಣುವದನ್ನು ಬಿಟ್ಟಿಲ್ಲ. 'ಹೈದರಾಬಾದ್ ಪ್ರಶ್ನೆ'ಯ ಕುರಿತು ಚರ್ಚಿಸಲು ಭದ್ರತಾ ಕೌನ್ಸಿಲಿನ ಸಭೆಯೊಂದು ಸೇರಬೇಕೆಂದು ಲೇಕ್ ಸಕ್ಸೆಸಿನಲ್ಲಿ ಅವರು ಭದ್ರತಾ ಕೌನ್ಸಿಲಿನ ಅಧ್ಯಕ್ಷರನ್ನು ಕೇಳಿಕೊಂಡಿದ್ದರು. ತನ್ನ ಬಿನ್ನಹವನ್ನು ಕೌನ್ಸಿಲ್ ಸದಸ್ಯರಲ್ಲರಿಗೂ ವಿತರಣೆಮಾಡಿ ಆಟವಾಡಿದ್ದರು. ಈ ಪ್ರಶ್ನೆ ಸತ್ತು ಹೋಗಿರುವುದರಿಂದ ಆ ಕೊಳೆತ ಶವವನ್ನು ಎತ್ತಿಕೊಳ್ಳಲು ಹೇಸಿ ಭದ್ರತಾ ಕೌನ್ಸಿಲ್ ಸದಸ್ಯರು ಸರ್. ಝಫರುಲ್ಲಾರ ಸೂಚನೆಯನ್ನು ಕಡೆಗಣಿಸಿದ್ದಾರೆ. ಹೈದರಾಬಾದಿನ ಮುಸ್ಲಿಂ ನಾಯಕರೇ 'ಝಫರುಲ್ಲಾ ಭ್ರಮೆ'ಗಾಗಿ ಅಪಹಾಸ್ಯಮಾಡಿದ್ದಾರೆ. "ಸರ್. ಝಫರುಲ್ಲಾರದ್ದು ಟೋಪ್ಯನಗಾರಿಯಸ್ವರ" ಎಂದು ಹೈದರಾಬಾದ್ ಮುಸ್ಲಿಂ ಪ್ರಮುಖ ಮನ್ಸೂರ್ ಅಹಮ್ಮದ್ ಖಾನರೆಂದಿದ್ದಾರೆ. ಇತ್ತ ಹೈದರಾಬಾದಿನ ಆಡಳಿತೆಯ ಕುರಿತು ಸಲಹೆಕೊಡಲು ಅಲ್ಲಿಯ ಕಾಂಗ್ರೆಸು ಸಲಹೆಗಾರ ಸಮಿತಿಯೊಂದನ್ನು ನೇಮಿಸಬೇಕೆಂಬ ಸೇನಾಪತಿಯ ಕೊಡುಗೆಯು ಹೈದರಾಬಾದ್ ಕಾಂಗ್ರೆಸಿಗರಿಗೆ ಸಮಾಧಾನಕರವಾಗಿ ಕಂಡಿಲ್ಲ. ಕೊನೆಯಪಕ್ಷ ಮಂತ್ರಿಮಂಡಲದಲ್ಲಿ ಕೆಲವು ಸ್ಥಾನಗಳನ್ನಾದರೂ ಕಾಂಗ್ರೆಸಿಗರಿಗೆ ಕೊಡಬೇಕೆಂಬ ವಾದ ಮುಂದೆ ಬಂದಿದೆ. ಈ ಸಂಬಂಧವಾಗಿ ಸದಾರ್ರ್ ಪಟೇಲರ ವರೆಗೂ ಹೈದರಾಬಾದ್ ಕಾಂಗ್ರೆಸಿಗರ ದೂರು ಹೋಗಿದೆ.

ಭೋಪಾಲದ ಆಡಳಿತೆಯನ್ನು ಭಾರತ ಸರಕಾರವೀಗ ತನ್ನ ಕೈಗೆ ತೆಗೆದುಕೊಂಡಿದೆ.

English copies of
MADRAS ALIYASANTHANA ACT of 1949
are available.
Price 0 12-0 per copy
NAVAYUGA PRESS, UDIPI.
ಮದ್ರಾಸು ಅಳಿಯ ಸಂತಾನ ಕಾನೂನಿನ ಇಂಗ್ಲಿಷ ಪ್ರತಿಗಳು ದೊರೆಯುತ್ತವೆ.
ಬೆಲೆ 0 12 0
ನವಯುಗ ಪ್ರೆಸ್, ಉಡುಪಿ.



ಮಂಗಳೂರು

ಮದ್ರಾಸು ಅಳಿಯ ಸಂತಾನ ಕಾನೂನಿಗೆ ಗವರ್ನರ್ ಜನರಲರ ಸಮ್ಮತಿಯು ತಾ. 13-4-49ರಲ್ಲಿ ದೊರಕಿದ್ದು ಅದು ಒಡನೆ ಜಾರಿಗೆ ಬರುವುದು.

ದ. ಕ. ಜಿಲ್ಲಾ ರಾಜಕೀಯ ಪರಿಷತ್ತು ಪಾಣೆಮಂಗಳೂರಲ್ಲಿ ಇದೇ ತಾ 22 ಮತ್ತು 23ರಲ್ಲು ಜರುಗಲಿದೆಯೆಂದು ಪ್ರಕಟವಾಗಿದೆ. ತಾ 22ನೆ ಸಂಜೆಗಂಟೆಗೆ ಪರಿಷತ್ತಿನ ಬಹಿರಂಗ ಅಧಿವೇಶನವು ಧಾರವಾಡದ ಪ್ರಸಿದ್ಧ ಮುಖಂಡರೂ ಕೇಂದ್ರ ಎಸೆಂಬ್ಲಿಯ ಮಾಜಿ ಸದಸ್ಯರೂ ಗಣನೀಯ ಬರಹಗಾರರೂ ಆದ ಶ್ರೀ. ಡಿ. ಪಿ. ಕರಮರಕರರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾ 23ರಲ್ಲು ವಿಧಾಯಕ ಕಾರ್ಯಕರ್ತರ ಸಮ್ಮೇಳನವು ಪ್ರಸಿದ್ಧ ವಿಧಾಯಕ ಕಾರ್ಯಕರ್ತರೂ, ಬೊಂಬಾಯಿಯ ಮತ್ತು ಕೇಂದ್ರ ಸರಕಾರದ ಖಾದಿ ಮತ್ತು ಗೃಹ ಕೈಗಾರಿಕೆಗಳ ಸಲಹೆಗಾರರೂ ಆದ ಶ್ರೀ. ಕೆ. ಎ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಜಿಲ್ಲಾ ಕೃಷಿಕ ಪರಿಷತ್ತಿನ ಅಧ್ಯಕ್ಷತೆಯನ್ನು ಶ್ರೀ. ಕೆ. ಆರ್. ಕಾರಂತರು ವಹಿಸಲಿರುವರು.

ಜಿಲ್ಲಾ ಪೋಸ್ಟ್‌ಮೇನ್ ಮತ್ತು ಕೆಳತರಗತಿಯ ನೌಕರರ ಸಂಘದ ಮಹಾಸಭೆಯು ತಾ 1ರಲ್ಲು ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಆ ದಿನ ಬೆಳಗ್ಗೆ ಶ್ರೀ. ಬಿ. ರಾಘವೇಂದ್ರ ಬಾಳಿಗರಿಂದ ಧ್ವಜವಂದನೆಯೂ ಆಯಿತು. ನಂತರ ವಿಷಯ ನಿಯಾಮಕ ಸಭೆ ಸೇರಿತು. ಮಧ್ಯಾಹ್ನದ ಬಹಿರಂಗ ಅಧಿವೇಶನದಲ್ಲಿ ಶ್ರೀ. ಬಿ. ಎಸ್. ಭಾಸ್ಕರ ರೈಗಳು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘಟಿಯವರು ಮುಷ್ಕರ ಹೂಡುವುದಕ್ಕಿಂತ ಘಟನಾತ್ಮಕ ರೀತಿಯಲ್ಲಿಯೇ ಮುಂದುವರಿಯುವುದು ಒಳ್ಳೆಯದೆಂದರು. ಬಳಿಕ ಶ್ರೀಗಳಾದ ಬಿ. ಗಂಗಾಧರ ದಾಸ್, ಎಚ್. ಭೀಮರಾವ್, ಪಿ. ಮರಿಯಪ್ಪಯ್ಯ, ಬಿ. ರಾಘವೇಂದ್ರ ಬಾಳಿಗ ಮತ್ತು ಕಲ್ಯಾಣಿ ಡಿ. ಸೆಟ್ಟಿ ಇವರ ಭಾಷಣಗಳಾದುವು, ಬಳಿಕ ಗಾಂಧೀಜಿ, ಸರೋಜಿನಿದೇವಿ, ಸಪ್ರು ಮೊದಲಾದವರ ನಿಧನದ ಬಗ್ಗೆ ದುಃಖಸೂಚಿಸಲಾಯಿತು. ಕುಂದಾಪುರ, ಮಂಜೇಶ್ವರ, ಪುತ್ತೂರು ಮುಂತಾದ ಸ್ಥಳಗಳಲ್ಲಿ ಪೋಸ್ಟ್‌ಮ್ಯಾನುಗಳನ್ನು ಹೆಚ್ಚಿಸಬೇಕು. ಉಪ್ಪಿನಂಗಡಿಯಲ್ಲಿ ಒಂದು ಟೆಲಿಗ್ರಾಫ್ ಆಫೀಸಾಗಬೇಕು. ಪೋಸ್ಟ್‌ಮ್ಯಾನರು ಖಾಯಂ ಆಗಿ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೂ, ಅವರನ್ನು ಹಿಂದಕಳುಹಿಸದೆ ತೇರ್ಗಡೆ ಹೊಂದುವ ವರೆಗೆ ಸಮಯ ಕೊಡಬೇಕು, ಇತ್ಯಾದಿ ಕೇಳಿಕೆಗಳನ್ನೊಳಗೊಂಡ ನಿರ್ಣಯಗಳಾದುವು. ಹೊಸ ನಿಯಮದ ಬಗ್ಗೆ ಸಾವಧಾನವಾಗಿ ಸಭಾಂತ್ಯವಾಯಿತು.

ಜಿಲ್ಲಾ ಆಹಾರ ಸಮಿತಿಯ ಹೊಸ ಸದಸ್ಯರು ಜಿಲ್ಲಾ ಕಲೆಕ್ಟರ್ (ಅಧ್ಯಕ್ಷ), ಜಿಲ್ಲಾ ಸರಬರಾಯಿ ಅಧಿಕಾರಿ (ಕಾರ್ಯದರ್ಶಿ) ಜಿಲ್ಲಾ ಕೃಷಿ ಅಧಿಕಾರಿ, ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್, ಕುಂದಾಪುರ, ಮಂಗಳೂರು, ಪುತ್ತೂರು ವಿಭಾಗಗಳ ರೆವಿನ್ಯೂ ಅಧಿಕಾರಿಗಳು, ಜಿಲ್ಲೆಯ ಎಮ್. ಎಲ್. ಎ ಮತ್ತು ಎಮ್. ಎಲ್. ಸಿ ಯವರು, ಜಿಲ್ಲಾ ಆರೋಗ್ಯಾಧಿಕಾರಿ, ಪಶುವೈದ್ಯಾಧಿಕಾರಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಮತ್ತು ಜಿಲ್ಲಾ ಇಂಜಿನಿಯರ್, ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಎಚ್. ವಿ. ಆಡಪ್ಪ, ಜೆ. ಪಿ. ಸಿ. ಸಿಕೇರಾ, ವಿ. ಎಸ್. ಕುಡ್ವಾ, ಎಸ್. ಜಿ. ಸಾಲಿನ್ಸ, ಮೋರಿಬ್ರಿಟ್ಟೊ, ಮೊಳಹಳ್ಳಿ ಶಿವರಾವ್ ಮತ್ತು ಕೆ. ಪಿ. ಎನ್. ದಾಸ್.

ಸಮಿತಿಯ ಪ್ರಥಮ ಸಭೆಯು ತಾ 2ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ. ಎಸ್. ಆರ್. ಕೈವಾರರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಜಿಲ್ಲೆಯ ಆಹಾರ ಪರಿಸ್ಥಿತಿಯನ್ನೆಲ್ಲಾ ವಿವರಿಸಿದ ನಂತರ ಚರ್ಚೆ ನಡೆಯಿತು. ಇಪ್ಪತ್ತು ಸಾವಿರ ಟನ್ನುಗಳಷ್ಟು ಅಕ್ಕಿ ಹೊರಗಿನಿಂದ ಬರಬೇಕಾಗಿದೆ ಎಂದು ಅಂದಾಜು ಮಾಡಲಾಗಿದೆ.

ಶ್ರೀ. ಕೆ. ಆರ್. ಕಾರಂತರು ಈಗಿನ ಅಕ್ಕಿ ಭತ್ತ ಸಂಗ್ರಹಗಳಿಂದಾಗಿ ರೈತರಲ್ಲಿ ನಿರಾಶೆಯುಂಟಾಗಿದೆ ಎಂದರಲ್ಲದೆ ಗೇಣಿ ಒಕ್ಕಲುಗಳ ಹತ್ತಿರ ದನಿಗೆ ಕೊಡತಕ್ಕ ಮತ್ತು ಕೃಷಿಯ ಖರ್ಚಿಗಿಟ್ಟು ಉಳಿದುದನ್ನು ಮಾತ್ರ ತೆರಬೇಕೆಂದು ಹೇಳಿ ಇದನ್ನೇ ಸರಕಾರಕ್ಕೆ ತಿಳಿಸಬೇಕೆಂದರು. ಅದನ್ನು ಸಮಿತಿಯು ಒಪ್ಪಿತು. ಶ್ರೀ. ಕಾರಂತರ ಸೂಚನೆ ಮೇರೆಗೆ ಅವಲಕ್ಕಿಯ ಮೇಲಿನ ನಿಯಂತ್ರಣ ತೆಗೆಯಬೇಕೆಂದು ಸರಕಾರವನ್ನು ಕೇಳಲಾಯಿತು. ಅವಲಕ್ಕಿ ತಯಾರಿಸುವವರಿಗೆ ಲೈಸನ್ಸು ಕೊಟ್ಟು ಕಾರ್ಡುಗಳ ಮೂಲಕ ಅವರಿಗೆ ಭತ್ತವನ್ನು ಪೂರೈಸಬೇಕೆಂದು ನಿರ್ಣಯವಾಯಿತು. ಇದಕ್ಕಾಗಿ ಮೂರುವರೆ ಸಾವಿರ ಟನ್ ಭತ್ತ ಪ್ರತ್ಯೇಕಿಸಿಡಬೇಕೆಂದೂ ಕೇಳಲಾಯಿತು.

ಪ್ರತಿಬಂಧಕಾಜ್ಞೆ:—ಮೇ ದಿನಾಚರಣೆ ಸಂಬಂಧವಾಗಿ ನಗರದಲ್ಲಿ ಶಾಂತಿಭಂಗವಾದೀತೆಂದು ಈ ತಿಂಗಳ ಪ್ರಥಮವಾರದ ವರೆಗೆ 144ನೇ ಪ್ರಕರಣವನ್ನು ಮೆಜಿಸ್ಟ್ರೇಟರು ಜ್ಯಾರಿಮಾಡಿದ್ದರು.

ಜಿಲ್ಲಾ ಗಾಂಧೀಸ್ಮಾರಕ ನಿಧಿ ಸಮಿತಿಯ ಸಭೆಯು ಈಚೆಗೆ ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ. ಜಿಲ್ಲೆಗೊಂದು ಆಧುನಿಕ ಉಪಕರಣಗಳ ಕ್ಷಯರೋಗ ಆಸ್ಪತ್ರೆ ಬೇಕಾಗಿದೆ. ಇದಕ್ಕೆ ಒಂಬತ್ತು ಲಕ್ಷ ವೆಚ್ಚವಾಗಲುವ ಕಟ್ಟಡದ ಆಧಾರಾಂಶವನ್ನು ಸಾರ್ವಜನಿಕರು ಕೊಟ್ಟರೆ, ಮದ್ರಾಸು ಸರಕಾರವು ಮುನ್ನೂರು ಎಕ್ರೆ ಸ್ಥಳವನ್ನೂ ಉಳಿದ ಕಟ್ಟಡದ ವೆಚ್ಚವನ್ನೂ ರೂಪಾಯಿ 64,000/- ವಾರ್ಷಿಕ ವೆಚ್ಚವನ್ನೂ ತಾನು ವಹಿಸುವುದಾಗಿ ಭರವಸೆಕೊಟ್ಟಿದೆ. ಆದ್ದರಿಂದ ಗಾಂಧಿ ಸ್ಮಾರಕ ನಿಧಿಯಿಂದ ಜಿಲ್ಲೆಗೆ ಬರುವ ಹಣವನ್ನೆಲ್ಲಾ ಈ ಆಸ್ಪತ್ರೆಗೆ ಉಪಯೋಗಿಸಿ ಗಾಂಧೀಜಿಯ ಹೆಸರನ್ನಿಡಬೇಕೆಂದು ಜಿಲ್ಲಾ ಹಾಗೂ ನಗರ ಸಮಿತಿಯು ನಿರ್ಣಯ ಮಾಡಿತಲ್ಲದೆ ತಾಲೂಕು ಸಮಿತಿಗಳಿಗೆ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ತಾ 14ರಲ್ಲು ಸೇರುವ ಸಮಿತಿಯ ಸಭೆಯಲ್ಲಿ ಈ ವಿಚಾರವು ಚರ್ಚಿಸಲ್ಪಡುವುದು

ಮೂರನೆಬೆಳೆಯ ಭತ್ತವ ಅಕ್ಕಿ ಒಪ್ಪಿಸುವ ಅವಧಿ ತಾ 15-6-49ರೊಳಗಾಗಿ ಮೂರನೆ ಬೆಳೆಯ ಉಳಿತಾಯ ಅಕ್ಕಿ ವ ಭತ್ತವನ್ನು ದ. ಕ. ಜಿಲ್ಲಾ ಕೋಅಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ಸಿಗಾಗಲೀ ಅದರ ಶಾಖೆಗಳಿಗಾಗಲೀ ಒಪ್ಪಿಸಬೇಕಾಗಿ ಜಿಲ್ಲಾ ಕಲೆಕ್ಟರರು ಪ್ರಸಿದ್ಧಿ ಪಡಿಸಿರುವರು. ಈ ಅವಧಿಯೊಳಗಾಗಿ ಪಾವತಿಮಾಡದಿದ್ದರೆ ಬೆಲೆಯಲ್ಲಿ ಕಡಿತ ಮಾಡಲಾಗುವುದು. ಜೂನ್ ತಾ 19ರಿಂದ 25ರೊಳಗಾಗಿ ಒಪ್ಪಿಸಿದ ಅಕ್ಕಿಮುಡಿಯ ಮೇಲೆ ನಾಲ್ಕಾಣೆ ಕಡಿತ; ಅಂತೆಯೇ ಭತ್ತಮುಡಿಯ ಮೇಲೆ ಎರಡಾಣೆ ಕಡಿತ. ಜೂನ್ 26ರಿಂದ ಜುಲೈ 2ರೊಳಗಾಗಿ ಪಾವತಿ ಮಾಡಿದರೆ ಅಕ್ಕಿ ಮುಡಿಯಲ್ಲಿ ಹತ್ತಾಣೆ ಕಡಿತ, ಭತ್ತವಾದರೆ ಐದಾಣೆ ಕಡಿತ. ಜುಲೈ 3ರ ನಂತರ ಒಪ್ಪಿಸಿದ ಅಕ್ಕಿಮುಡಿಗೆ ರೂಪಾಯಿ ಒಂದರಂತೆಯೂ ಭತ್ತ ಮುಡಿಯೊಂದರ ಎಂಟಾಣೆಯಂತೆಯೂ ಕ್ರಯದಲ್ಲಿ ಕಡಿತವಿದೆ. ಇಲಾಖಾ ಅಧೀಸರರಿಂದ ಸಂಗ್ರಹಿಸಲ್ಪಟ್ಟ ಅಕ್ಕಿ ಮುಡಿಗೆ ರೂಪಾಯಿ ಒಂದರಂತೆಯೂ ಭತ್ತಮುಡಿಗೆ ಎಂಟಾಣೆಯಂತೆಯೂ ಬೆಲೆಯಲ್ಲಿ ಕಡಿತ ಮಾಡಲಾಗುವುದು.

ದ. ಕನ್ನಡ

ಉಜಿರೆ ಶ್ರೀ. ಸಿದ್ಧವನ ಗುರುಕುಲ ಸಂಸ್ಕೃತ ಶಾಲೆಯ ವರ್ಷಂತಿಯುತ್ಸವವು ಇದೇ ತಾ 15ರಲ್ಲಿ ಶ್ರೀ. ಪಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕಣಂತೂರು ಶ್ರೀ. ತೋಡ ಕುಕ್ಕಿನಾರದೈವದ ವರ್ಷಾವಧಿ ಉತ್ಸವವು ಇದೇ ತಾ 11ರಲ್ಲು ಪ್ರಾರಂಭವಾಗಿ ಐದು ದಿವಸಗಳ ತನಕ ನಡೆಯಲಿರುವುದು.

ಕೋಟೇಶ್ವರ ಸ್ಥಳೀಯ ಪ್ರೌಢ ಪ್ರಾಥಮಿಕ ಶಾಲೆಯ ಬೆಳ್ಳಿ ಹಬ್ಬವು ತಾ 1ರಲ್ಲು ಶಿವಮೊಗ್ಗೆಯ ಪೌರ ಸಭಾಧ್ಯಕ್ಷರಾದ ಶ್ರೀ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ಶಾಲೆಯ ಹಳೆ ವಿದ್ಯಾರ್ಥಿಗಳ ದಿನಾಚರಣೆಯು ತಾ 2ರಲ್ಲು ಶ್ರೀ. ಟಿ. ಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಎಸ್. ಉರಾಳ್, ಟಿ. ಎಲ್. ಉಡುಪ ಮೊದಲಾದವರ ಭಾಷಣಗಳಾದುವು. ತಾ 8ರಲ್ಲು ಕನ್ನಡ ವಸಂತೋತ್ಸವವು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಹೊಸಬೆಟ್ಟು ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಶಿವರಾಮ ಕಾರಂತರು 'ಕರ್ನಾಟಕ ಏಕೀಕರಣದ' ವಿಷಯದಲ್ಲೂ ಕೆ. ಸೂರ್ಯನಾರಾಯಣ ಅಡಿಗರು 'ಹಿಂದೂ ಕೋಡು ಮಸೂದೆ' ವಿಷಯದಲ್ಲೂ, ಕೆ. ವಿ. ಪುರಾಣಿಕರು 'ಇಂದಿನ ಸಾಹಿತಿಗಳು' ಎಂಬೀ ವಿಷಯದಲ್ಲೂ ಚಲೋ ಭಾಷಣವಿತ್ತರು. ಸಂಗೀತ, ನಾಟಕ, ಯಕ್ಷಗಾನ, ಮೊದಲಾದ ಜನಮನ ರಂಜನ ಕಾರ್ಯಕ್ರಮಗಳಿದ್ದುವು.

ಕೋಟೇಶ್ವರ ಶಾಲಾ ರಜತೋತ್ಸವ ದಿನವೇ ಕುಂದಾಪುರ ತಾಲೂಕು ಬೋರ್ಡ್ ಎಲಿಮೆಂಟರಿ ಶಾಲಾ ಟೀಚರ್ಸ್ ಯೂನಿಯನ್ನಿನ ಮಹಾ ಸಭೆಯು ಕುಂದಾಪುರ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಬಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಹೆಜಮಾಡಿ ಸ್ಥಳೀಯ ಗವರ್ನಮೆಂಟ್ ಫಿಶರೀಸ್ ಹಾ। ಪ್ರಾ। ಶಾಲಾ ವರ್ಷಂತ್ಯುತ್ಸವವು ತಾ 1ರಲ್ಲು ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ವರ್ಷಂತ್ಯುತ್ಸವದ ಸಲುವಾಗಿ ಏರ್ಪಡಿಸಲಾಗಿದ್ದ ವಿದ್ಯಾವಸ್ತು ಪ್ರದರ್ಶನವನ್ನು ಅಧ್ಯಕ್ಷರು ತೆರೆದರು. ಶಾಲಾ ಮಕ್ಕಳಿಗೆ ತಿಂಡಿ ಹಂಚಲಾಯಿತು. ಶಾಲಾ ... ಲಕರು 'ರಾಮರಾಜ್ಯವಿಯೋಗ' ಎಂಬ ಕನ್ನಡ ನಾಟಕವನ್ನು ಅಭಿನಯಿಸಿದರು.

ಮದ್ರಾಸ್ ಅಳಿಯ ಸಂತಾನ ಮಸೂದೆಯು ಅಮಲಿಗೆ ಬರುವ ಮುನ್ನ ದ. ಕ ಜಿಲ್ಲೆಯಲ್ಲಿ ಪ್ರಥಮ ವಿಭಾಗ ಕಾರ್ಯಾಚರಣೆ:—ಅಳಿಯ ಕಟ್ಟಿನ ಬಂಟ ಸಮಾಜದ 131 ಜನರಿರುವ ಬ್ರಹ್ಮಾವರ ದೊಡ್ಡಹಾಡಿ ಮನೆಯಲ್ಲಿ ಮದ್ರಾಸ್ ಅಳಿಯ ಸಂತಾನ ಮಸೂದೆಯ ಅನ್ವಯ ಸದ್ರಿ ಮನೆಯ ಆಸ್ತಿಯನ್ನು, ಅರ್ಥಕವರು, ಅರ್ಧೇಜನ, ಸರ್ತಿಯಿಂದ ಎಲ್ಲಾ ಪ್ರಾಯಸ್ಥ ಮೆಂಬರರ ಐಕ್ಯ ಸಮ್ಮೇಳನದಲ್ಲಿ ಮೂರು ಕವರುಗಳಾಗಿ ತಾವೇ ವಿಭಾಗಿಸಿಕೊಂಡು ಇದೇ ತಾರೀಕು 2-5-49ರಂದು ಸದ್ರಿ ಮನೆಯಲ್ಲೇ ಬ್ರಹ್ಮಾವರ ರಿಜಿಸ್ಟ್ರಾರರು ರಿಜಿಸ್ಟ್ರಿಯನ್ನು ಮುಗಿಸಿದರು. ಈ ವರ್ಗದ ಕುಟುಂಬದ ಐಕ್ಯತೆಯ ಸ್ಮಾರಕವಾಗಿ ಗ್ರೂಪ್ ಫೋಟೊ ತೆಗೆಯಲಾಯಿತು.

ಗುಡ್ಡೆ ಅಂಗಡಿ ಕುಂದಾಪುರ ತಾಲೂಕು ನಾಡಗ್ರಾಮದ ಪಡುಕೋಣೆಯಲ್ಲಿ ತೆರೆಯಲಿರುವ ಬೋರ್ಡ್ ಹಾ। ಪ್ರಾ। ಶಾಲಾ ಬಿಲ್ಡಿಂಗಿನ ಸಹಾಯಾರ್ಥವಾಗಿಯೂ ಅಂತೆಯೇ ಹಳನಾಡು ನೇತಾಜಿ ಹಾ। ಪ್ರಾ। ಶಾಲೆಯ ಸಹಾಯಾರ್ಥವಾಗಿಯೂ ಕಳೆದ ತಾ 27ರಲ್ಲು 'ಶ್ರೀಕೃಷ್ಣಲೀಲಾ' ಸಂಗೀತ ನಾಟಕವನ್ನೂ ತಾ 1ರಲ್ಲು 'ಬಡತನದ ಭೂತ' ಎಂಬ ನಾಟಕವನ್ನೂ ಕಲಾ ಪ್ರೇಮಿಗಳು ಜಯಶೀಲರಾಗಿ ಅಭಿನಯಿಸಿದರು. ಶ್ರೀಗಳಾದ ಎಮ್. ಶಂಕರನಾರಾಯಣ ರಾವ್, ಬಿ. ರಾಮಕೃಷ್ಣ ಹೆಬ್ಬಾರ್, ವೆಂಕಪ್ಪ ಸೆಟ್ಟಿ, ಮಹಾಬಲ ಸೆಟ್ಟಿ, ಸೂರಪ್ಪ ಸೆಟ್ಟಿ, ಮೊದಲಾದವರು ಶಾಲಾ ಕಟ್ಟಡದ ಬಗ್ಗೆ ತುಂಬಾ ಶ್ರಮಪಡುತ್ತಿರುವರು.

THE CATHOLIC BANK Ltd., KALLIANPUR

ಏಲಂ ನೋಟೀಸು

ಉಡುಪಿ ತಾಲೂಕು ಬ್ರಹ್ಮಾವರ ಭದ್ರಗಿರಿಯಲ್ಲಿರುವ ರಂಗ ಆಚಾರ್ಯರ ಮಗ ಶ್ರೀ B. ವಾಸುದೇವ ಆಚಾರ್ಯರು ಚಿನ್ನಾಭರಣದ ಈಡಿನ ಮೇಲೆ ಈ ಬ್ಯಾಂಕಿನಿಂದ ಪಡೆದ ಸಾಲದ ರೂಪಾಯಿ 1450/- (G. L. No. 22/812; ತಾ. 15-1-1947) ಈಗ ಬಾಕಿಯಿರುವ ಅಸಲು ರೂಪಾಯಿ 780/- ಮತ್ತು ಈವರೇಗಿನ ಬಡ್ಡಿಯನ್ನು ರಿಜಿಸ್ಟರ್ಡ್ ನೋಟೀಸು ಕೊಟ್ಟಾಗ್ಯೂ ಮರುಪಾವತಿ ಮಾಡದೇಯಿರುವುದರಿಂದ, ಸದರೀಯವರಿಗೆ ಈ ಮೂಲಕ ತಿಳಿಸುವುದೇನೆಂದ್ರೇ ಸದರೀಯವರು ಈಡಿಟ್ಟಿರುವ ನಗಗಳನ್ನು ತಾ. 28-5-'49ನೇ ಶನಿವಾರ ಮಧ್ಯಾಹ್ನ ಗಂಟೆ 12-30ಕ್ಕೆ ಯಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವುದು.

Kallianpur, 5-5-1949.

S. Rebello,
Agent.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ
ನಡಿಯುವ ಚಿತ್ರ ಫಿಲ್ಮಿಸ್ಥಾನದವರ
ಸಾಜನ್
ದಿಗ್ದರ್ಶನ—ಕಿಶೋರ್ ಸಾಹು
ಅಭಿನಯ ರೆಹನಾ ಮತ್ತು ಅಶೋಕ ಕುಮಾರ್

ತಾರೀಕು 13—5—1949ರಿಂದ ರಂಜಕಮಲ ಚಿತ್ರ
ಶಾಂತಾರಾಮರ ತಯಾರಿಕೆ ಮತ್ತು ದಿಗ್ದರ್ಶನ
ಮುತವಾಲಾ ಶಾಯರ್
ರಾಮಜೋಶಿ
ಮನಮೋಹನ್ ಕೃಷ್ಣಾ ಮತ್ತು ಹಂಸಾ

ಬರುವುದು ಸುಭದ್ರಾ (ಹಿಂದಿ)
ಶಾಂತಾ ಆಪ್ಟೆ, ಪ್ರೇಮ್ ಅದೀಬ್, ಈಶ್ವರಲಾಲ್, ಯಾಕೂಬ್, ಮೀನಾಕ್ಷಿ ಮೊದಲಾದವರು.

WANTED

Three Secondary grade trained teachers for the Modern Higher Elementary School, Udipi.

Apply Sharp.

Manager.

..'ಧರ್ಮ' ಎಂದರೆ ತುಂಬ ಹರಿಯುತ್ತಿರುವ ನದಿಯ ನೀರು. ಅದು ಯಾವನ ಕಟ್ಟುಪ್ಪಾಗಂಟೂ ಅಲ್ಲ. ಅನ್ಯಾಯವನ್ನೆಲ್ಲಾ ನಿರ್ಮೂಲಿಸಿಬಿಟ್ಟು ಸತ್ಯದ ಸಂಭಿಕ್ಷೆಯನ್ನು ಬೆಳೆಸುವುದೇ ಅದರ ಕೆಲಸ. ವಿವೇಕಿಯಾದವರು, ಸನಾತನತೆಯ ಶುದ್ಧ ಹೃದಯದ ಪ್ರಶಾಂತತೆಯ ಪರಿಪೂರ್ಣ ಮನಸ್ಸಿನಿಂದ ಶೋಧಿಸುತ್ತಾ ಅವುಗಳನ್ನು ವಿಮರ್ಶಿಸಿಯೇ ಆಚರಿಸುತ್ತಾರೆ. ಜನಸಾಮಾನ್ಯರು ಒಪ್ಪುವಂತೆ ಜಗತ್ತಿನ ಹಿತಕ್ಕಾಗಿ ದುಡಿಯುತ್ತಾರೆ!

ಆದರೆ ದುಷ್ಟರ ಮನೋಭಾವ ಹೀಗಲ್ಲ. ಅವರಿಗೆ ತಾವು ಆಡಿದುದನ್ನು ಯಾರೂ ಎದುರಿಸಬಾರದು; ಕಣ್ಣು ಮುಚ್ಚಿಕೊಂಡೇ ಅವರನ್ನು ಅನುಸರಿಸಬೇಕು! ಧರ್ಮದ ಡಾಂಭಿಕ ಬಲೆಯನ್ನು ಬೀಸಿ ಸ್ವಹಿತವನ್ನು ಜಾಗರೂಕರಾಗಿ ಕಾದುಕೊಳ್ಳುವರು! ಅಂದರೆ ತನಗೆ ಬೇಕಾದುದನ್ನು ಧರ್ಮದ ಮಹಾ ಆಗರದಿಂದ ಹೆಕ್ಕಿ ತೆಗೆದುಕೊಂಡು, ಶ್ರೀಮದ್ಗಾಂಭೀರ್ಯದ ಸಹಾಯದ ಮೇಲೆ, ಎತ್ತಿ ಹಿಡಿದು ಸಾಧಿಸಿಕೊಳ್ಳುವರು!

ಅಂತಹರು (ತಮ್ಮ ಬೇಳೆಯನ್ನೇ ಬೇಯಿಸುವ ದುರುದ್ದೇಶದ ಘನತೆಗಾಗಿ) ಯಾವ ರೀತಿಯ ವರ್ತನೆಯನ್ನು ಮಾಡುವುದಕ್ಕೂ ಹೇಸುವುದಿಲ್ಲ. ಸುಳ್ಳನ್ನು ಕಲ್ಪಿಸಿ ಆಡುವುದೇ ಅವರ ಸ್ವಭಾವ! ತಾವು ಹೇಳಿದುದೆಲ್ಲಾ ಧರ್ಮ, ಹಾಗೇ ಮಾಡಿದುದೆಲ್ಲಾ ಆಚಾರಗಳೆಂದು ಅವರು ತೋರಿಸಿಕೊಳ್ಳುತ್ತಾರೆ! ಯಾರಾದರೂ ಅವರ ಹಾದಿಯ ತಪ್ಪು ಒಪ್ಪು

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಪತ್ರವ್ಯವಹಾರ

...ಧರ್ಮದ ವಿರೂಪ...?

[ಶ್ರೀ. ನೆಂ. ಅಡಿಗ. 'ಶ್ರೀಪತಿ']

ಗಳನ್ನು ವಿಚಾರಿಸಹತ್ತಿದರೆ ಅವರೇನೂ ಅದಕ್ಕೆ ಸಮಾಧಾನಕೊಟ್ಟು ಪ್ರತಿಪಾದಿಸುವುದಿಲ್ಲ– ಬದಲಿಗೆ ತಮ್ಮ ಆಸುರೀ ಸಂಪತ್ತಿನ ಪ್ರಭಾವವನ್ನೆಲ್ಲಾ ಹೊರಗೆ ತೋಡಿಬಿಡುತ್ತಾರೆ! ಆದರೆ ಅವರು ಯಾವರೀತಿಯ ವೇಷವನ್ನು ತೊಟ್ಟುಕೊಂಡರೂ ವಿಚಾರಪರರು ಅದರ ಯಥಾರ್ಥತೆಯನ್ನು ಕಂಡುಹಿಡಿಯಬಲ್ಲರು.

ವಿದ್ಯೆ, ವಿನಯವನ್ನು ಪರಿಪಾಲಿಸುತ್ತದೆ. ಅಂತೆಯೇ ಬ್ರಹ್ಮಚರ್ಯವೇ ಮೊದಲಾದ (ಮಾನಸಿಕ, ಮತ್ತು ದೈಹಿಕ) ತಪಸ್ಸು ಪ್ರಸನ್ನತೆಯನ್ನು ವೃದ್ಧಿಗೊಳಿಸುತ್ತದೆ. ಅದರಿಂದಲೇ ಸಹಜವಾದ ಜ್ಞಾನೋದಯವಾಗಿ ವಿಶ್ವಪ್ರೇಮ ಅಂಕುರಿಸಲಿದೆ. ಆದರೆ ಸಿಟ್ಟು, ಅಹಂಕಾರ, ಅತ್ಯಾಚಾರ, ಇತ್ಯಾದಿ ದುರ್ಗುಣಗಳನ್ನು ಕಟ್ಟಿಕೊಂಡು ಎಷ್ಟು ಧರ್ಮಶಾಸ್ತ್ರಗಳನ್ನು 'ಗಿಳಿ ಪಾಠ' ಮಾಡಿದರೂ ಉಪಯೋಗವಿಲ್ಲ. ಅವರು ತಾವು ಕೆಟ್ಟು, ಅನ್ಯರನ್ನೂ ಮೋಸಗೊಳಿಸುತ್ತಾರೆ.

"ಯಸ್ಯನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ
ತಸ್ಯ ಕರೋತಿ ಕಿಂ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣಂ
ಕಿಂ ಕರಿಷ್ಯತಿ॥"

ಅಂದರೆ, ಯಾವನಿಗೆ ಸ್ವತಃ ವಿಚಾರಶಕ್ತಿಯಿರುವುದಿಲ್ಲವೋ ಅವನಿಗೆ ಶಾಸ್ತ್ರವೇನು ಮಾಡೀತು? ಕಣ್ಣಿಲ್ಲದವನಿಗೆ ಕನ್ನಡಿಯಿಂದ ಯಾವ ಪ್ರಯೋಜನವಾದೀತು? ಈ ವಿಷಯವನ್ನು ನಿಜಕ್ಕೂ ಶೋಧಿಸಿಯೇ ಬೋಧಿಸಿದ್ದಾರೆ–ಎಲ್ಲರೂ ಕುರುಡುನಂಬಿಕೆಯನ್ನು ಬಿಟ್ಟು ಬಿಟ್ಟು, ವಿವೇಕದ ಕಣ್ಣಿನಿಂದ ಧರ್ಮವನ್ನು ಒರೆದುನೋಡಿ, ತಮ್ಮ ಸಮಾಜಕ್ಕೆ ಮತ್ತು ಸಮಸ್ತ ಜಗತ್ತಿಗೇ ಕಲ್ಯಾಣಕರವಾಗಿ ವರ್ತಿಸಬೇಕು ಎಂಬುದೇ ಜ್ಞಾನಿಗಳು ಉಪದೇಶಿಸುತ್ತಿರುವ ಮೂಲಮಂತ್ರವಾಗಿದೆ.

.. ನೋಡಿ–'ಕಂಡುದು ಆಡಿದರೆ ಕೆಂಡದಂಥಾ ಕೋಪ' ಎಂಬುದು ಸುಳ್ಳಲ್ಲ–'ಹರನು ಕರಣಿಗೆ ಕಾರಣ'ವೆಂಬ ತಲೆಬರಹದಡಿಯಲ್ಲಿ ನಾನು ತಮ್ಮ ಮುಂದೆ ನಿವೇದಿಸಿಕೊಂಡುದು ವೇದ್ಯವಿದೆಯಷ್ಟೆ? ಇದಕ್ಕೆ ಪ್ರತಿರೂಪವಾಗಿ, 'ವಿಮರ್ಶಕ' ಎಂಬ ಸೋಗಿನಿಂದ ಸಭ್ಯತೆಯ ಗಡಿಯನ್ನೂ ದಾಟಿ, ತಮಗೆ ತೋರಿಬಂದುದನ್ನೆಲ್ಲಾ ಹಾಡಿಕೊಂಡರು! ಅಲ್ಲವೆ? ನಿಜವಾದ ವಿಮರ್ಶಕರಿದ್ದರೆ ಎಲ್ಲವನ್ನೂ ವಿವೇಚಿಸಿ, ತಮ್ಮ ಅಭಿಪ್ರಾಯವನ್ನು ಮಾತ್ರ ಸೂಚಿಸುತ್ತಿದ್ದರು. ಆದರೆ ಅವರು ಹಾಗೆ ಮಾಡಲಿಲ್ಲ- ಪಕ್ಷಭೇದವಾಗಿ ವಿಷಯಾಂತ್ರವಾದ ವಂಚನೆಯ ನೀತಿಯಿಂದ ತಮ್ಮಲ್ಲಿ ತುಂಬಿಕೊಂಡಿರುವುದನ್ನೇ ಹೊರಗೆಡಹಿದರು. ಇರಲಿ.

ಉಡುಪಿಯ'ಧರ್ಮಬೋಧ' ಎಂಬ ಮಾಸಪತ್ರಿಕೆಯಲ್ಲಿ "ಮಂಜೇಶ್ವರ" ಇವರು, ನನ್ನ ಅದೇ ಲೇಖನವನ್ನು ವಿರೋಧಿಸಿ, ಆರ್ಯನೀತಿಯ ವಿಚಾರದಲ್ಲಿ ತುಸು ಧೂಳೆಬ್ಬಿಸಿದ್ದಾರೆ. ನೋಡಿ. ನಮ್ಮ ಪೂರ್ವಿಕರು...ಧರ್ಮವು ಎಂದೂ ಇದ್ದಂತೆ ಇರಬಾರದು ಎಂಬುದನ್ನು (ಜ್ಞಾನದೃಷ್ಟಿಯಿಂದ) ತಿಳಿದುಕೊಂಡೇ ಅದನ್ನು ಕ್ರಮವಾಗಿ ವಿಭಾಗಿಸಿದ್ದರಷ್ಟೆ? ಕೃತಯುಗ ಮತ್ತು ಕಲಿಯುಗದ ಧರ್ಮವನ್ನು ಏಕರೂಪವೆಂದು ಅವರೇನು ಸಮರ್ಥಿಸಿದ್ದಾರೆಯೋ? ಇಲ್ಲ. "ಕಲಿಯುಗ ಐದುಸಾವಿರ ವರ್ಷ ಕಳೆಯುತ್ತಲೇ ವರ್ಣ ಸಾಂಕರ್ಯವುಂಟಾಗುವುದು" ಎಂದು ಮೊದಲೇ ತಿಳಿಸಿದ್ದರು! ಮೇಲಾಗಿ ಕಲಿಯುಗದಲ್ಲಿ,......ಪಶುಯಜ್ಞ...ಸನ್ಯಾಸ,.....ಮೊದಲಾದ ಐದು ಆಚರಣೆಗಳನ್ನು ನಿಷೇಧಿಸಲು ಸ್ವತಃ ಅವರೇ ನಿರ್ದೇಶಿಸಿದ್ದಾರೆ! (ಅಶ್ವಾಲಂಭಂ ಗವಾಲಂಭಂ ಸನ್ಯಾಸಂ ಪಲಪೈತೃಕಂ, ದೇವರೇಣ ಸುತೋತ್ಪತ್ತಿಃ ಕಲೌ ಪಂಚ ವಿವರ್ಜಯೇತ್) ಹಾಗಾದರೆ ಧರ್ಮದಲ್ಲಿನ [ತುಕ್ಕು ಹಿಡಿದು ಅಸಹ್ಯವಾಗಿರುವ] ಕೆಲವು ಅಂಶಗಳನ್ನು ಕಾಲಕ್ಕೆ ತಕ್ಕಂತೆ ಸುಧಾರಿಸಿಕೊಳ್ಳಬೇಕೆಂದೇ ಆಗಲಿಲ್ಲವೆ? ಧರ್ಮವು ಏಕರೂಪವೋ ಅಥವಾ ನಾನಾರೂಪವೋ ಎಂಬುದನ್ನು ದಯವಿಟ್ಟು ಸ್ವಲ್ಪ ವಿಚಾರಿಸಿನೋಡಿ.

ಮಳೆಗಾಲದಲ್ಲಿ ಮಾಡಬೇಕಾದ ನಿಯಮಗಳನ್ನೇ ವಸಂತಕಾಲದಲ್ಲಿಯೂ ಅನುಸರಿಸಬೇಕು ಎಂದರೆ ಅದು ವಿಚಿತ್ರವಲ್ಲವೆ? ಏನೇ ಆಗಲಿ, ವಿಚಾರಪರರು ಇದನ್ನು ಹೇಗೂ ಒಪ್ಪಿಕೊಳ್ಳಲಾರರು. ಅವರು ತಮ್ಮ ಪ್ರಕೃತಿದತ್ತವಾದ ಸಾತ್ವಿಕ ಮೇಧಾಶಕ್ತಿಯಿಂದ ಶೋಧಿಸಿಕೊಂಡೇ ಕಾಲೋಚಿತವಾಗಿ ಆಚರಿಸುತ್ತಾರೆ.

"...ಮ್ಲೇಂಛಾಹಿ ಯವನಾಸ್ತೇಷು
ಸಮ್ಯಕ್ ಶಾಸ್ತ್ರಂ ಪ್ರತಿಷ್ಠಿತಂ।
ಋಷಿವತ್ತೇಪಿ ಪೂಜ್ಯಂತೇ ....."

'ವಿಧನಿರ್ಣಯದಲ್ಲಿಯೂ ನಮ್ಮಂತೆಯೇ ಸರಿಯಾಗಿ ಶಾಸ್ತ್ರಹೇಳಲ್ಪಟ್ಟಿದೆ. ಅದು ಕೂಡಾ ಮಾನ್ಯವು...' ಎಂದು ಸನಾತನ ಧರ್ಮಾಚಾರ್ಯರೇ ಹೇಳಿದ್ದಾರೆ! ಹಾಗೇ ಆದರು ಗ್ರೀಕರೇ ಮೊದಲಾದ ಪರಕೀಯರ ವಿಜ್ಞಾನವನ್ನು ಕೆಲವು ವಿಷಯದಲ್ಲಿ ಸ್ವೀಕರಿಸಿದ್ದುದು ಈ ವಿಮರ್ಶಕರಿಗೆ ಪ್ರಮಾದವಶದಿಂದ ಮರೆಯಾಗಿರಬಹುದು. ಅದಕ್ಕೆ ಯಾರೇನು ಮಾಡಲಿ?

ಸೋದರರಲ್ಲಿ ಪಾಲಾಗುವುದು ಎಲ್ಲಿಯೂ ಇದ್ದುದೇ. ಹಾಗಾದಮೇಲೆ ದ್ವೇಷಕಟ್ಟಿಕೊಳ್ಳಬೇಕೆಂದಿಲ್ಲ- ಎಲ್ಲರೂ ಪರಸ್ಪರ ಸ್ನೇಹದಿಂದ ಸ್ವತಂತ್ರರಾಗಿ ಬಾಳಬಲ್ಲರು. ಅಲ್ಲಲ್ಲಿನ ಸಾಂಸ್ಕೃತಿಕ ದೃಷ್ಟಿಯಮೇಲೆ ಸ್ವರಾಜ್ಯವ

ಅಮೃತಾಂಜನ

ತಲೆನೋದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆ ನೋವು,ಘಾಯಗಳು, ಚಾಚಿಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ,ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರು ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ ಔಷಧಿ' ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲೆಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲೆಜಿಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾಕ್ಷವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ,ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರೆಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವವರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ.ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವವು. ಹಲ್ಲುನೋವು, ಮಕ್ಕಳಹೊಟ್ಟೆನೋವು,ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು,ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರೆಸರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಬೇರೆ- ಒಂದುಡಜನ್ ಡ್ರೆಸರ್ ಬಾಟ್ಲಿಗಳಿಗೆ ರೂ. 60-0-0 ವಿ.ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18. ವಿ ಪಿ.ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ, ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ನ್ನು ಸ್ಥಾಪಿಸಿಕೊಳ್ಳುತ್ತಾರೆ. ಆದರಿಂದ ಎಲ್ಲರೂ ಬಂಧುಬಾಂಧವರಂತೆ ವರ್ತಿಸುವುದಕ್ಕೆ ತೊಂದರೆಯೇನು? ಯಾವ ನ್ಯಾಯವಂತನೂ ಇದನ್ನು ವಿರೋಧಿಸಲಾರನು!

ಸ್ವದೇಶಾಭಿಮಾನವನ್ನು ಬಿಡಬೇಕೆಂದು ಯಾರೂ ಹೇಳುವುದಿಲ್ಲ. ಆದರೆ ಸ್ವದೇಶ, ಸ್ವಧರ್ಮಾಭಿಮಾನಗಳ ವೇಷದಿಂದ (ಸಂಕುಚಿತ) ಸ್ವಾಭಿಮಾನವನ್ನು ಕಾದುಕೊಳ್ಳುವುದು ಉಚಿತವಲ್ಲವೆಂದು ದೂರದರ್ಶಿಗಳು ಒತ್ತಿ ಹೇಳುತ್ತಾರೆ ಅಷ್ಟೆ!

ಮಗುವನ್ನು ಮುದ್ದಿಸುವ ಮೊದಲು ಅದರ ಹಸಿವೆಯನ್ನು ತಣಿಸಿಕೊಳ್ಳಬೇಕು. ಧರ್ಮಾಚರಣೆಯ ಮುನ್ನ ಶರೀರವನ್ನು ಕಾಪಾಡಿಕೊಳ್ಳಬೇಕು. ಅದೂ ಅಲ್ಲದೆ 'ಪಾಪನೇ ಪರಪೀಡನೆ' ಎಂಬುದು ಎಲ್ಲರಿಗೂ ತಿಳಿದೇ ಇದೆ. ಹೀಗೆಂದ ಮೇಲೆ ಗೋರಕ್ಷಣೆಯ ಕುರಿತು ಇನ್ನೇನು ಹೇಳಲಿಕ್ಕಿದೆ? ಆದರೆ ಒಂದು; ಇಹ ಮತ್ತು ಪರದ ಎರಡೂ ಸುಖಗಳನ್ನು ಸಾಧಿಸಿಕೊಳ್ಳಬೇಕೆಂದು, ಗೋವುಗಳನ್ನು ಸಂರಕ್ಷಿಸುತ್ತಾ ಒದ್ದಾಡುವವರು, ಎರಡೂ ದೋಣಿಗೆ ಕಾಲಿಟ್ಟು ಯಾನಮಾಡುವವರಂತೆ ಆಗಬಾರದು'

"ತಮಗೇ ಇಲ್ಲದುದನ್ನು ಗೋವುಗಳಿಗೆ ಹೇಗೆ ಹಾಕುವುದು"? ಎಂದು ವಿಮರ್ಶಕರು ಬೊಬ್ಬಿಟ್ಟಿದ್ದಾರೆ-ಹಾಗಾದರೆ ಹಿಂಡಿ, ಹುಲ್ಲು ಮೊದಲಾದ ಪಶುಗಳ ಆಹಾರವನ್ನು ಮನುಷ್ಯರೂ ತಿನ್ನುತ್ತಾರೆಂದಾಯಿತು. ಇದೊಂದು ಹೊಸಶೋಧಿತ ವಿಚಾರ .'

ಕೊನೆಯದಾಗಿ ಅವರು '(ದಪ್ಪ ಸಿದ್ಧ) ಪಾಪ್ರಾಣಾಯಾಮ' ಮಾಡತೊಡಗಿದರು. ಅದನ್ನು ವಿರೋಧಿಸುವುದು ನನ್ನ ಧರ್ಮವಲ್ಲ-ಅವರು ಹಾಗೇ ಮಾಡಿಕೊಳ್ಳುತ್ತಾ ಇರಲಿ'

ನಮಿಪಿದರೆಲ್ಲರೂ ಶ್ರೀ ಶ್ರೀಗಳು (10-2-'49ರ ಸಂಚಿಕೆಯಲ್ಲಿ) ಹೊರಡಿಸಿದ್ದ ಸಂದೇಶವನ್ನು ಅನುಮೋದಿಸಿದ್ದಾರಂತೆ! ಇದು ಅಸಂಬಂಧೀಯ ವಿಮರ್ಶಕರೊಬ್ಬರ ಕೂಗು' ಇದುವರೆಗೆ, ಯಾವ ನಯವಿದರೂ ಯಾವ ನಯವಿದ ಪತ್ರಿಕೆಯಲ್ಲಿಯೂ ಅನುಮೋದಿಸಿದ್ದು ಕಾಣುವುದಿಲ್ಲ. ಬಹುಶ ಅವರು ಶ್ರೀ ಶ್ರೀಗಳಿಗೆ ಪತ್ರಮುಖೇನ ತಿಳಿಸಿದ್ದಿರ ಬಹುದು. ಆದರೆ ಅದನ್ನೂ ತಿಳಿಯಕೊಂಡು ಬರೆಯ ಹೊರಟ ಈ ವಿಮರ್ಶಕರು ಯಾರಾಗಿರಬಹುದು!

ವಿಮರ್ಶಕರು ಒಂದು ಪ್ಲೋಕವನ್ನು ಕಟ್ಟಿ ಅದಿ ತಮ್ಮ ಮುಖಕ್ಕೇ ಮಸಿಬಡಿದುಕೊಂಡರು ಎನ್ನಬಹುದು ಅವರೆಂದುದು ನನಗಲ್ಲ; ನಾನೆಲ್ಲಿ? ಸ್ವಾಮಿ ವಿವೇಕಾನಂದರೇ ಮೊದಲಾದವರು ಘೋಷಿಸಿದ ಗೀತೋಪನಿಷತ್ತುಗಳ ಅಮೂಲ್ಯ ತತ್ವಗಳಿಗೇ! ಇಂಥಾ ಪಾಪಪೂರಿತ ವಿಷಜ್ವಾಲೆಯನ್ನು ಹೊತ್ತುಕೊಂಡ ಆ ವಿಮರ್ಶಕರು ಎಷ್ಟು ಭಾರವುಳ್ಳವರೋ'

"ಹಿರಿಯರು ಆಚರಿಸಿದಷ್ಟನ್ನೇ ಅನುಸರಿಸಬೇಕು; ಒಂದು ಹೆಜ್ಜೆಯೂ ಮುಂದಿಡಬಾರದು" ಎಂದು ವೇದ ಅನುಶ್ರುತಿ ಎಂಬುದು ನಿಜವಾಗಿದ್ದರೆ, ನಮ್ಮ ಹಿಂದಿನ ಚರಿತ್ರೆಯು ಬಂದೇಬಗೆಯಾಗಿರುತ್ತಿತ್ತು. ಆದಿಲ್ಲ! ಬಂದೋ, ಸ್ವಸಾಮರ್ಥ್ಯದಿಂದ ಮುಂದರಿದ ವಿಭೂತಿ ಪುರುಷರೆಲ್ಲರೂ ವೇದವಾಣಿಯನ್ನು ಅತಿಕ್ರಮಿಸಿ, ವಿರೋಧಿಸಿದವರಾಗಿರಬೇಕು! ಅಲ್ಲವೆ?

ಸ್ವಾಮಿ ವಿವೇಕಾನಂದರು ಅಮೇರಿಕಾದಲ್ಲಿ ಅನ್ಯಭಾಷೆಯಿಂದಲೇ ಮಾತಾಡಿದ್ದರೆಂಬುದು ಎಲ್ಲರೂ ತಿಳಿದ ವಿಷಯ. ನಮ್ಮ ವಿಮರ್ಶಕರು ಇದನ್ನೂ ವಿರೋಧಿಸಿದ್ದಾರೆ! ವಿವೇಕಾನಂದರ ಕುರಿತು ಭಿನ್ನಾಭಿಪ್ರಾಯಪಟ್ಟವರ ಸಾಲಿಗೆ ಇವರನ್ನೂ ಸೇರಿಸಿಬಿಡಲು ಸಂಶಯ ಉಂಟೇ?

ನಿರ್ಮಲತ್ವ, ಮತ್ತು ಅರಿವು (Purity & wisdom) ಉಳ್ಳವರು ಯಾವ ಪರಕೀಯ ಶಾಸ್ತ್ರವನ್ನು ನೋಡಿದರೇನು? ಯಾವ ಅನ್ಯಭಾಷೆಯನ್ನು ಕಲಿತರೇನು? ನಮ್ಮ ಧರ್ಮದ ಅಮೋಘ ತತ್ವವನ್ನು ಮರೆಯುತ್ತಾರೆಯೋ? ಎಂದೂ ಇಲ್ಲ!

ಈ ಅಪಕ್ವ ಬುದ್ಧಿಯ 'ಧರ್ಮಬಂಧು' ಏನನ್ನೂ ವಿಚಾರಿಸದೆ ಏನೇನೋ ಹೇಳಿಕೊಂಡಿರುವುದನ್ನು ನೋಡುವಾಗ್ಗೆ, ತುಂಬಾ ವ್ಯಸನವಾಗುತ್ತದೆ ಶ್ರೀಕೃಷ್ಣ ಪರಮಾತ್ಮನು ಸಾರಿಸಾರಿ ಹೇಳಿದ ಸತ್ಯ ಮತ್ತು ಸಹನೆಯ ಶೀಲವು ಇವರು ಹೊಕ್ಕ ಕಡೆಯಲ್ಲಿ ಇರಲಿಕ್ಕಿಲ್ಲವೆಂದು ಅನ್ನಿಸುತ್ತದೆ!

ಆ ವಿಮರ್ಶಕರಿಗೆ ಧೈರ್ಯವೂ ಪೌರುಷವೂ ಇರುವುದಾದರೆ, ತಮ್ಮ ನಿಜವಾದ ಹೆಸರನ್ನು ಕೊಟ್ಟುಬಿಟ್ಟು, ಇಂದೇ 'ನವಯುಗ'ದಲ್ಲಿ ವಾದಕ್ಕಿಳಿಯಲಿ-ಧರ್ಮವನ್ನೆಲ್ಲಾ ಕಡೆದು ನೋಡುವ. ಪ್ರಿಯ ಓದುಗರಾದರೂ ಅದರ ಮರ್ಮವನ್ನು ಅರಿತುಕೊಳ್ಳುವಂತಾಗಲಿ! ಆಗದೆ?

ಆದರೆ ಆ ವಿಮರ್ಶಕರು ಅವರದೇ ಆದ ಯಾವದೇ ಪತ್ರಿಕೆಯಲ್ಲಿ ಪಕ್ಷಪಾತದಿಂದ ಎಷ್ಟು ಹೇಳಿಕೊಂಡರೂ, ಅದನ್ನು ಇನ್ನು ಮುಂದೆ ವಿವೇಚಿಸಬೇಕಾಗಿಲ್ಲ- ವಿವೇಚಿಸುವುದೂ ಇಲ್ಲ-ಅಂದರೆ ಅಕ್ಕಿಯಲ್ಲಿ ಬಂದಕಲ್ಲನ್ನು ಹೆಕ್ಕಿತೆಗೆಯಬಹುದು. ಅನ್ನವಾದ ಮೇಲೆ; ಅಲ್ಲಲ್ಲ-ಗಂಜಿ ಆದನಂತರ ಅದನ್ನು ಹುಡುಕಿ ಉಗುಳುವುದು ನಾಲಿಗೆಯ ಕೆಲಸವಷ್ಟಲ್ಲ!

ನಾವು ಇಂತಹ ಹೀನಸ್ಥಿತಿಯಲ್ಲಿರುವಾಗ ನಮ್ಮ ಗತವೈಭವವನ್ನು ತಲೆಎತ್ತಿ ಕೇಳುವುದಕ್ಕೂ ನಮಗೆ ಅಧಿಕಾರವಿರಲಿಕ್ಕಿಲ್ಲ ವಿಶಾಲಭಾವನೆಯು ನಮ್ಮ ಪೂರ್ವಿಕರೆಲ್ಲಿ ! ಸಂಕುಚಿತ ಆಚರಣೆಯ ನಾನೆಲ್ಲಿ ..? ತುಸು ಯೋಚಿಸಿನೋಡಿರಿ!

ತರುಣ ಬಂಧುಗಳೇ, ಮಹನೀಯರೇ, ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಧರ್ಮಗಳನ್ನು [ಅನರ್ಥಗಳನ್ನು] ನಿರ್ಮೂಲಿಸಲು ಒಂದಾಗುವ- ಲೇಖನ ಭಾಷಣಗಳಿಂದ, ಲೋಕಪೂಜ್ಯವಾದ ನಮ್ಮ ಮಹಾ ಸಂಸ್ಕೃತಿಯನ್ನು ಪುನಃ ಬೆಳಗಿಸಲು ಪ್ರಯತ್ನಿಸುವ- ಗೊಡ್ಡು ನಂಬಿಕೆಯಿಂದ ಅಡ್ಡಹಾದಿ ಹಿಡಿದಿರುವ ಬಂಧುಗಳಲ್ಲಿ ತಿದ್ದಿಕೊಳ್ಳುವಂತೆ ವಿನಂತಿಸುವ- ಪುಲುಸಾದ ಬೆಳೆಯ ನಡುವೆ ಅದಾಗಿ ಬೆಳೆದುಕೊಂಡ ಕಳೆಯನ್ನು ಕಿತ್ತೊಗೆಯದೆ ಹಾಗೇ ಬಿಟ್ಟರೆ ಅದು ಇಡೀ ಬೆಳೆಯನ್ನೇ ಹಾಳುಮಾಡೀತು. .'

ನಾವು ಹಾಗೆಮಾಡಿ ನಮ್ಮ ಕರ್ತವ್ಯವನ್ನು ಸಾಂಗಗೊಳಿಸಿದರೆ, ಧರ್ಮದಲ್ಲಿನ ವಿರೂಪವಾಗಿರುವ ಕೆಲವು ಅಂಶಗಳು ತೊಳೆದು ಹೋಗಿ ಮೊದಲಿನಂತೆ ಸ್ವರೂಪವಾಗಲಿದೆ' ಯಾರು (ವಿಚಾರ ಮಾಡಿಕೊಂಡು) ಧರ್ಮದಲ್ಲಿರುತ್ತಾರೋ ಅವರನ್ನು ಅದು ಸದಾ ಕಾಪಾಡುತ್ತದೆ! ಆದರೆ ಸ್ವತಃ ಕುರಿಗಳಂತೆ ಮೂಢತನದಿಂದ ತೂಗಿ ನೋಡದೇ ಆಚರಿಸಿದ್ದರೆ ಧರ್ಮವಾದರೂ ಏನು ಮಾಡುವುದು......?

'......ಧರ್ಮೋ ರಕ್ಷತಿ ರಕ್ಷಿತಃ'

ಕಡಿಮೆ ಮೊತ್ತದ ವಿಮೆಮಾಡಬೇಕೆಂದಿದ್ದರೆ—
ಅಧಿಕ ಸವಲತ್ತಿನ ವಿಮೆ ವಿಜನ್ನಿಬೇಕೆಂದಿದ್ದರೆ—
ದಿ
ನ್ಯೂ ಕರ್ನಾಟಕ ಪ್ರಾವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಉಡುಪಿ
ಇವರೊಡನೆ ವಿಚಾರಿಸಿ!

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!
ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.
ವುಡ್‌ಲ್ಯಾಂಡ್ಸ್, ಉಡುಪಿ
WOODLANDS, UDIPI.
Brahmins Boarding & Lodging
Sadananda Rao, Kunjoor,
Mânager.

BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL
ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.
REGD TRADE MARK
Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI, S. Kanara.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಂಜಿ ವ್ಯಾಪಾರಿಯರ್,
ರಥಬೀದಿ, ಉಡುಪಿ

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪದೆಪದೆ, ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. ೯- [ವಿ. ಪಿ. ಹಸ್ಸೇಲಡಾಕ ಪ್ರತ್ಯೇಕ]
MIS D. DEVEE, F. Ds (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು



Approved firm by the Govt. of Mysore
Certified by the Agent of the Govt. of Cylone & Indian.

ದಕ್ಷಿಣ ಕನ್ನಡ

ಫಲಿಮಾರು:– ಸ್ಥಳೀಕ ಬೋ. ಹಾ. ಎ. ಶಾಲಾ ವರ್ಧಂತ್ಯುತ್ಸವವು 1-5-49ರಲ್ಲಿ ಮಂಗಳೂರಿನ ನಗರ ಸಭಾಧ್ಯಕ್ಷ ಶ್ರೀ. ಎಲ್. ಸಿ. ಪಾಯ್ಸ್‌ರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ. ಅದಮಾರು ಮತ್ತು ಫಲಿಮಾರು ಮಠಾಧಿಪತಿಗಳು ಚಿತ್ತೈಸಿ ಸಂಸ್ಥೆಗೆ ಶ್ರೇಯಸ್ಸನ್ನು ಕೋರಿದರು. ವಿವಿಧ ಕಾರ್ಯಕ್ರಮಗಳು ನೆರವೇರಿದ ಮೇಲೆ ಅಧ್ಯಕ್ಷರು ತಮ್ಮ ಅಸ್ಖಲಿತ ವಾಣಿಯಿಂದ ಸೇರಿದ್ದ ಪ್ರಚಂಡ ಜನಸ್ತೋಮವನ್ನುದ್ದೇಶಿಸಿ ಒಂದು ತಾಸಿನವರೆಗೆ ಭಾಷಣವಿತ್ತು ಇದೊಂದು ಹೈಸ್ಕೂಲಾಗಿ ಮಾರ್ಪಡುವಂತೆ ತಾನು ಪ್ರಯತ್ನಿಸುವದಾಗಿ ಭರವಸೆಯನ್ನು ಕೊಟ್ಟು ತನಗುಂಟಾದ ಆನಂದವನ್ನು ವ್ಯಕ್ತಗೊಳಿಸಿದರು. ಬಳಿಕ 'ಪಾದುಕಾ ಪಟ್ಟಾಭಿಷೇಕ'ವೆಂಬ ಸಂಗೀತ ನಾಟಕವು ಬಾಲಕಿಯರಿಂದಲೂ 'ಮರ್ಜಿ' ಎಂಬ ತುಳು ಪ್ರಹಸನವು ಬಾಲಕರಿಂದಲೂ ಪ್ರೇಕ್ಷಣೀಯವಾಗಿ ಅಭಿನಯಿಸಲ್ಪಟ್ಟಿತು. ಶ್ರೀ ಬಿ. ಬಾಬುರಾಯರು ತನ್ನ ಸ್ವಂತವೆಚ್ಚದಿಂದ ಸುಮಾರು ಸಾವಿರ ಮಕ್ಕಳಿಗೆ ಮಿಠಾಯಿ ಲಾಡುಗಳನ್ನು ಹಂಚುವ ಏರ್ಪಾಡು ಮಾಡಿದುದು ಸ್ತುತ್ಯ.

ಮಣಿಪುರ:— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ 27-4-49ರಲ್ಲಿ ಶಾಲಾ ಡಿಪ್ಯುಟಿ ಇನಸ್ಪೆಕ್ಟರ್ ಶ್ರೀ ಟಿ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಕೆ. ನಾರಾಯಣ ಶೆಟ್ರು ಶಾಲಾ ವರದಿಯನ್ನು ಓದಿದರು. ಬಹುಮಾನ ವಿತರಣೆ, ವಿವಿಧ ವಿನೋದಾವಳಿಗಳು, ಸಭಿಕರ ಮತ್ತು ಅಧ್ಯಕ್ಷರ ಭಾಷಣ, ಧನ್ಯವಾದಗಳಾಗಿ ಸಭಾಂತ್ಯವಾಯಿತು.

ಕಾಸರಗೋಡು:— ಹರಿಜನ ದಿನಾಚರಣೆ ಸಂಬಂಧ ತಾ 30ರಲ್ಲು ಇಲ್ಲಿಯ ಮಲ್ಲಿಕಾರ್ಜುನ ದೇವಸ್ಥಾನದ ಬಳಿ ಸಾರ್ವಜನಿಕ ಸಭೆಯೊಂದು ಶ್ರೀ ಬಿ. ಎಸ್. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಗಣೇಶ್, ಮಹಾಬಲ ನಾಯಕ್, ಕೆ. ಶಂಕರ ಮೊದಲಾದವರು ಭಾಷಣವಿತ್ತರು. ರಾತ್ರಿ ಹರಿಕಥಾ ಕಾಲಕ್ಷೇಪವಿತ್ತು.

ಇಲ್ಲಿಯ ಎಡಿಶನಲ್ ಮುನ್ಸಿಫ್ ಕೋರ್ಟು ಸೆಕೆಕಾಲದ ರಜೆ ಮುಗಿದ ಬಳಿಕ ಜೂನ್ 4ರಲ್ಲು ಕಾಂಞಂಗಾಡಿನಲ್ಲಿ ತೆರೆಯಲ್ಪಡುವುದಾಗಿ ತಿಳಿದು ಬರುತ್ತದೆ.

ಬಂಟರ ಯಾನೆ ನಾಡವರ ಸಂಘ, ಬೊಂಬಾಯಿ:— ಈ ಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾ 24ನೇ ಆದಿತ್ಯವಾರ ಘಂಟೆ 4ಕ್ಕೆ ಕುಮ್ಮಾ ಸ್ಟ್ರೀಟಿನ ಶಾಲಾ ಮಕಾನದಲ್ಲಿ ಜರಗಿತು. ಡಾ (ಕೆಪ್ಟನ್) ಕೆ. ರಾಜಗೋಪಾಲ ಶೆಟ್ರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯದರ್ಶಿಗಳು ಗತಮಹಾಸಭೆಯ ಮಿನಿಟ್ಸ್ ಓದಿದ ನಂತರ ಸಂಘದ ಹನ್ನೊಂದನೆ ವಾರ್ಷಿಕ ವರದಿಯನ್ನು ಓದಿದರು. ಸಭೆಯು ಅದನ್ನು ಮಂಜೂರು ಮಾಡಿತು. ನಂತರ ಹೊಸವರ್ಷಕ್ಕೆ ಶ್ರೀ ಯಸ್. ಸಂಜೀವ ಶೆಟ್ರು ಪ್ರೆಸಿಡೆಂಟರಾಗಿಯೂ, ಶ್ರೀ ಸಿಂಜೂರು ಕೃಷ್ಣಯ ಶೆಟ್ರು ವೈಸ್ ಪ್ರೆಸಿಡೆಂಟರಾಗಿಯೂ, ಶ್ರೀ ಯಚ್. ಮಹಾಬಲ ರೈ ಪ್ರಧಾನ ಕಾರ್ಯದರ್ಶಿಯಾಗಿಯೂ, ಶ್ರೀ ಪಿ. ಮಹಾಬಲ ಶೆಟ್ರು ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟರು. ಹಲವು ಮೆಂಬರರ ಮತ್ತು ಅತಿಥಿಗಳ ಭಾಷಣಗಳಾದ ನಂತರ, ಕಾರ್ಯದರ್ಶಿಗಳ ಅಭಿವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯವಾಚಕರೇ..............

ನಾನು ಒಬ್ಬ ಸಾಧಾರಣ ಮನುಷ್ಯ-ದುರದೃಷ್ಟವಶಾತ್ ನನ್ನ ಮಿತಿಮೀರಿದ ಕಾಮುಕ ಜೀವನವು ಅತಿ ಬೇಗನೆ ನರಗಳ ದೌರ್ಬಲ್ಯ ಕ್ಕೆಳೆಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಹೃದಯದ ನೋವೂ ಜಾಸ್ತಿಯಾಯಿತು. ಬಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತದಿಂದಿರುವುದಕ್ಕೆ ಬೇಜಾರೆನಿಸಿತು. ನನ್ನ ಈ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಆದರೆ ನಾನೆಂತು ಅದನ್ನು ತಿಳಿಸುವುದು? ಗುಟ್ಟಾಗಿ ಸಾವಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲದಂತಾಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪಶಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು (ಸನ್ಯಾಸಿ) ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಷ್ಟದಿಂದ ಮಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ತಿಳಿಸುವಂತೆ ಬಲಾತ್ಕರಿಸಿತು. ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎರಡು ಔಷಧಿಗಳನ್ನು ದಯಪಾಲಿಸಿದರು:—ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಪಿಸುವುದಕ್ಕೆ ಅವರು ಹೇಳಿದಂತೆ ಗಿಡಮೂಲಿಕೆಗಳನ್ನು ಹುಡುಕಿ ತಂದು ಅವರೆದುರಿನಲ್ಲಿಯೇ ಆ ಎರಡು ಔಷಧಿಗಳನ್ನು ತಯಾರಿಸಿದೆನು. ಅನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಪ್ರಿಯವಾಚಕರೇ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೨೧ ದಿವಸಗಳಲ್ಲಿ ಸುಧಾರಿಸಿದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿದಿನವೂ ೪ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲವನಾದೆನು. ಕಣ್ಣುಗಳ ಹೊಳಪು ಬಂತು. ಒಂದು ತರಹ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು. ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅದರಿಂದ ಮಹತ್ತ ಗುಣವನ್ನು ಕಂಡುದುದಲ್ಲದೆ ಅದಕ್ಕಿಂತ ಬೇರೆ ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನು ಉಪಯೋಗಿಸಿ ನಿರಾಶರಾಗಿರುವವರು ಇದನ್ನು ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಅದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. 5-0-0

ಹೊರಗೆ ಲೇಪಿಸುವ ತೈಲಕ್ಕೆ:– ೨೧ ದಿವಸಕ್ಕೆ ರೂ. 5-8-0

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು.

ಈ ಔಷಧಿಯು "ಉಷ್ಣ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು. (ತೈಲವು ಚರ್ಮದ ಸೊಕ್ಕನ್ನು ಹುಟ್ಟಿಸುವುದಿಲ್ಲ.)

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ: –

[೨] ಡಾ. ಕೆ. ಜೆ. ಮಟ್ಟಿತ್ವಾಲ್, ಕೊಚಿನವರು ಬರೆಯುತ್ತಾರೆ: ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೂ, ವೃದ್ಧರಿಗೂ ಪ್ರಯೋಗಿಸಿ ಅದರ ಶಕ್ತಿದಾಯಕ ಕೆಲಸವನ್ನು ಮೆಚ್ಚಿದ್ದೇನೆ.

[೨] ಡಾ. ಜೇಹಿಯರ್ ಕುಮುಸ ಸೇಠ, ಕುಂಬಲಾಂಗಿಯವರು ಬರೆಯುತ್ತಾರೆ:— ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನುಂಟುಮಾಡಿವೆ.

[೩] ಮ್ಯಾನೇಜರ್, "ಮೈ ಮ್ಯಾಗಜೈನ್" ಮದ್ರಾಸು ಬರೆಯುತ್ತಾರೆ:–ನಾನು ದಾರ್-ಉಲ್-ಷಫಾ-ಗೋಲಿಯಾನ, ಬಟಾಲರವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ಮಾನವರಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ. ಲೆಕ್ಕವಿಲ್ಲದಷ್ಟು ಸಾವಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು.

ಷರತ್ತು:—ಈ ಔಷಧಿಗಳು ಯಾವ ತೊಂದರೆಯನ್ನು ಮಾಡುವ ಪದಾರ್ಥಗಳನ್ನೂ ಹೊಂದಿಲ್ಲ. ಮತ್ತು ಇದನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ವಾಪಸ್ಸು ಮಾಡಲಾಗುವದು.

ನಿಮ್ಮ ಆರ್ಡರನ್ನು ಇವರಿಗೆ ಕಳುಹಿಸಿರಿ.—

The Manager,

DAR-UL-SHAFA GOLIAN (Regd.) (N. Y. U.) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಷಫಾ-ಗೋಲಿಯಾನ (ರಿಜಿಸ್ಟರ್ಡ್) (N.Y.U) ಬಟಾಲ [ಪಂಜಾಬ್]

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 40/1949

ಕೊರಗ ಶೆಟ್ಟಿ—ವಾದಿ

ಮತ್ತು

ನಾರಾಯಣ ಶೆಟ್ಟಿ ಕೂಡಾ–ಪ್ರತಿವಾದಿರು.

ಇವರೊಳಗೆ.

1ನೇ ಪ್ರತಿವಾದಿ:- ನಾರಾಯಣ ಶೆಟ್ಟಿ-ಅಂತಯ್ಯ ಶೆಟ್ರ ಮಗ- ಕಾರ್ಕಳ ತಾಲ್ಲೂಕು ನೀರೆ ಬೈಲೂರು ಗ್ರಾಮಸ್ಥ- ಹಾಲಿ Laxmi Hindu Hotel Velji Gandhichal Lal Bagh, Arther Road, Bombay City ಯಂಬಲ್ಲಿರುವವ. ಯಿವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:-

ಹಾಲಿ ಮೃತಪಟ್ಟಿರುವ ಮೃತ ದೇಜು ಚಂದಯ ಶೆಟ್ರು ತಾರೀಕು. 27-7-1947ರಲ್ಲು ಬರೆದಿಟ್ಟ ವೀಲುನಾಮೆ ಪ್ರಕಾರ ನೀವು ದೇಜು ಚಂದುಶೆಟ್ರಿಂದ ಬಾಡಿಗೆಗೆ ಪಡೆದು ಈ ವರೇಗೂ ಅನುಭವಿಸಿಕೊಂಡು ಬರುವ ಮೋಲ್ಕಂಡ 'ಲಕ್ಷ್ಮಿ ಹಿಂದೂ ಹೋಟೆಲ್'ನ ಸಮಸ್ತ ಚರ ಸೊತ್ತುಗಳಿಗೂ ಗುಡ್ ವಿಲ್‌ಗಳಿಗೂ 3ನೇ ಪ್ರತಿವಾದಿ ಮಹಾಬಲ ಶೆಟ್ಟಿ, 4ನೇ ಕಮಲ ಶೆಡ್ತಿ ಮತ್ತು 5ನೇ ಮ್ಯಾನೇಜರ್ ದಂಬು ಸಹಾ ಹಕ್ಕುದಾರರಾಗಿದ್ದು ಆ ಪ್ರಕಾರ ತಿಂಗಳುವಂದರ ರೂಪಾ 65-0-0ರಂತೆ ನಿಮ್ಮಿಂದ ಬರಬೇಕಾದ ತಾ. 1-9-1947ರಿಂದ 1-2-1949ರ ವರೇಗಿನ ಬಾಡಿಗೆಯನ್ನು ವಸೂಲುಮಾಡುವ ಹಕ್ಕನ್ನು ಸದ್ರಿ 3, 4ನೇ ಪ್ರತಿವಾದಿರು ಸ್ವತಹಾ ಮತ್ತು 5ನೇ ಪ್ರತಿವಾದಿಯ ಗಾರ್ಡಿಯನರಾಗಿ ಸಹಾ ವಾದಿಗೆ ತಾ. 5-1-1949ರಲ್ಲು ನ್ಯಾಯವಾದ ಪ್ರತಿಫಲಕ್ಕೆ ಟ್ರಾನ್ಸಫರ ಮಾಡಿಕೊಟ್ಟಂತೆ ಸದ್ರಿ ಬಾಡಿಗೆಯ ಅಸಲು ಬಡ್ಡಿ ಖ್ಯಾವೇಜುಗಳನ್ನು ನಿಮ್ಮಿಂದ ಬರಮಾಡಿಕೊಳ್ಳುವರೆ ನಿಂಮು ಸಂಬಂಧಿಕರೂ ನಿಮ್ಮ ಸಂಗಡ ಸದ್ರಿ ಹೋಟೆಲಿನಲ್ಲಿ ಸ್ವಾಧೀನಾನುಭೋಗದಲ್ಲಿರುವವರೂ ಆದ 2ನೇ ಪ್ರತಿವಾದಿಯನ್ನು ಸೇರಿಸಿ ಮೋಲ್ಕಂಡ ದಾವೆಯನ್ನು ವಾದಿಯು ಮಾಡಿರುತ್ತಾನೆ. ಆ ಕುರಿತು ಆಕ್ಷೇಪವೇನಾದರೂ ಯಿದ್ದರೆ ಮೋಲ್ಕಂಡ ದಾವೆಯು ಯಿಟ್ಟಿರುವ ತಾರೀಕು 6-6-49ನೇ ದಿನ್ನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬಹುದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao

Vakil for Plaintiff.

ಉಡುಪಿ. ತಾ. 2-5-1949

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಸ್ವೀಕಾರ—ವಿಮರ್ಶೆ

ಪೊಳಲಿಪುರ ಮಹಾತ್ಮೆಯನ್ನು ಜಿಲ್ಲೆಯಲ್ಲಿ ಪ್ರಸಿದ್ಧವಾದ ಪೊಳಲಿಯ ಸ್ಥಳ ಮಹಾತ್ಮೆಯನ್ನು ವಿವರಿಸುವ ಗ್ರಂಥ. ಬರೆದವರು ಶ್ರೀ. ಎಸ್. ಎ. ಶೀನಪ್ಪ ಹೆಗ್ಡೆ, ಪೊಳಲಿ ಅವರು. ಪೊಳಲಿಯ ರಾಜರಾಜೇಶ್ವರೀ ಕ್ಷೇತ್ರದ ಪೌರಾಣಿಕ ಐತಿಹಾಸಿಕ ಕಥೆ-ಇತಿಹಾಸಗಳನ್ನು ಸಮಗ್ರವಾಗಿ ತಿಳಿಗನ್ನಡದಲ್ಲಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಪ್ರಥಮ ದ್ವಿತೀಯ ಭಾಗಗಳ ಮೂಲವೆಂದು ಹೇಳಿರುವ ಸಂಸ್ಕೃತದ ಮೂಲವನ್ನು ಕೊಡದೆ ಇದ್ದುದು ಅಷ್ಟು ಒಳ್ಳೆಯದಲ್ಲ. ಮೂರನೆಯ ಭಾಗದ ಚಾರಿತ್ರಿಕ ಸತ್ಯವನ್ನು ಇತಿಹಾಸಾವಲೋಕನ ಸಮರ್ಥರು ಇನ್ನಷ್ಟು ಹೇಳಬೇಕಾಗಿದೆಯೆಂದೆನಿಸುವುದು. ಪುಸ್ತಕದಲ್ಲಿಯ ವಿಷಯ ವಿವರಣೆಯಲ್ಲಿ ತೋರಿದ ದೃಷ್ಟಿ-ನಿಂತ ನಿಲುವು-ವಿಚಾರಕ್ಕೆ ಮತ್ತು ವಿಮರ್ಶೆಗೆ ಹೊಂದಿಕೆಯಾದೀತೋ ಎಂದು ಅನುಮಾನವಾಗುತ್ತದೆ. ಪುಟ ಕ್ರೌನ್ ೧|೮ ಆಕಾರದ ೧೭೪. ಬೆಲೆ ೩-೮-೦. ಬೇಕಾದವರು ಎಸ್. ಎ. ಶೀನಪ್ಪ ಹೆಗ್ಡೆ, ಪೊಳಲಿ. ಬೆಳ್ಳೂರು P. O. ದ. ಕ. ಇವರಿಗೆ ಬರೆಯಬಹುದು.

ಪಡುವಣ ಕರ್ನಾಟಕ ಗ್ರಂಥಮಾಲೆ ಗೋಕರ್ಣ- ಇವರ ಪ್ರಕಟಣೆ. ಕಥಾಸಂಗ್ರಹ. ಬರೆದವರು ಶ್ರೀ ಪ. ಸು. ಭಟ್ಟ. ಉತ್ತರ ಕನ್ನಡ ಜಿಲ್ಲೆಯ ಕೆಲವು ಜೀವನ ಚಿತ್ರಗಳನ್ನು ಇಲ್ಲಿ ಜೀವಂತವಾಗಿ ಚಿತ್ರಿಸಲಾಗಿದ್ದು ಈ ತರುಣ ಬರೆಹಗಾರರ ಭವಿಷ್ಯದಲ್ಲಿ ತುಂಬ ಭರವಸೆಯನ್ನು ಉಂಟುಮಾಡುವಂತಿದೆ. ಬೆಲೆ ೮-೧೦-೦ ಆಣೆ.

ಜೀವನ ಮತ್ತು ಕತೆಗಳು—ಆರ್ಯರ ಹಳ್ಳಿ ಸ್ಮಾರಕ ಸಮಿತಿ, ಕಾರ್ಗೋಡು, ಇವರು ಪ್ರಕಟಿಸಿದ ಕಾರ್ಯಹಳ್ಳಿ ಸ್ಮಾರಕ ಗ್ರಂಥ ಪುಟ ಕ್ರೌನ್ ೧|೮ ಆಕಾರದ ೨೧೨ ಬೆಲೆ ೨-೦-೦

ದಕ್ಷಿಣ ಕನ್ನಡದ ಒಬ್ಬ ಉದೀಯಮಾನ ಲೇಖಕರಾಗಿದ್ದು ಅಕಾಲ ಮೃತ್ಯುವಿಗೆ ತುತ್ತಾದ ಶ್ರೀ. ಕಾರ್ಯಹಳ್ಳಿ ರಾಮಕೃಷ್ಣ ರಿಟ್ಟರು ಕನ್ನಡಕ್ಕೆ ಸಲ್ಲಿಸಿದ ಸ್ಮರಣೀಯ ಸೇವೆಯ ಚಿರಸ್ಮಾರಕವೆಂದು ಅವರ ಗೆಳೆಯರು ಕೆಲವರು ಕೂಟವಾಗಿ ಕಲೆತು ಸದ್ಯ ಈ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಮೊದಲಿಗೆ ನಾಲ್ವರು ಬರೆದ ರಾ. ಕೃ. ಅವರ ಜೀವನ ಪರಿಚಯವೂ ಉಳಿದ ಪುಟದಲ್ಲಿ 'ರಾ. ಕೃ' ಬರೆದ ಎಂಟು ಕತೆಗಳೂ ಇವೆ. ಈ ಎಂಟೂ ಕತೆಗಳೂ ಈ ಮೊದಲೆ ಕನ್ನಡದ ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಜನಮೆಚ್ಚುಗೆಯನ್ನು ಪಡೆದಿವೆ. ಸಮಿತಿಯವರ ಯತ್ನ ಶ್ಲಾಘ್ಯವಾಗಿದ್ದು ಕನ್ನಡದ ಸೋದರರು ಅವರಿಗೆ ಬೆಂಬಲನೀಡಿ-'ರಾ. ಕೃ' ಅವರ ಉಳಿದ ಗ್ರಂಥಗಳೂ ಬೆಳಕಿಗೆ ಬರುವಂತೆ ಸಹಾಯ ಮಾಡಬೇಕಾದ್ದು ಅವಶ್ಯ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸ. ಸುಲಭವಾಗಿರುವುದು.

ನವಜೀವಾಂತು ಎಂಬ

ಸೂತಿಕಾ ರಸಾಯನ



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಳಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ, 5 ಕೊಡಿಯಾಲಬೈಲು, ದ ಕ

ಸ್ಟಾಕಿಸ್ಟರು ಡಾ. ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ— ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಚುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಬಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಸೆರೆಮನೆಯ ಮಾತುಕತೆ—ಬಿಂದ್ ಕಿತಾಬ್ಸ್ ಲಿಮಿಟೆಡ್, ಬೆಂಗಳೂರು, ಅವರು ಪ್ರಕಟಿಸಿದ್ದು. ಪುಟ ೧೨೮. ಬೆಲೆ ೧ ೬ ೦

ಭಾರತದ ಗವರ್ನರ್ ಜನರಲ್ ಶ್ರೀ ರಾಜಗೋಪಾಲಾಚಾರ್ಯರು ಸೆರೆಯಲ್ಲಿದ್ದಾಗ ಇತರ ರಾಜಕೀಯ ಕೈದಿಗಳಿಗೆ-ನಾನಾ ವಿಚಾರ್ಗಳಲ್ಲಿ ಹೇಳಿದ ವಿಷಯಗಳ ಸಂಗ್ರಹ. ರಾಜಾಜಿಯವರ ಪ್ರತಿಭೆ ವಿಶ್ವತೋಮುಖವಾದದ್ದು, ಪ್ರಪಂಚದ ನಾನಾ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ವ್ಯಕ್ತಗೊಳಿಸಿದ ಅಮೂಲ್ಯ ಅಭಿಪ್ರಾಯಗಳ ಈ ಸುಂದರ ಸಂಗ್ರಹವು ತಿಳಿಯಾದ ಕನ್ನಡದಲ್ಲಿ ಶ್ರೀ ಗರುಡ ಶ್ರೀನಿವಾಸನ್ ಅವರಿಂದ ಅನುವಾದಿಸಲ್ಪಟ್ಟು ಸುಂದರವಾಗಿ ಪ್ರಕಟವಾಗಿದೆ. ಪ್ರತಿಯೊಬ್ಬನೂ ಸಂಗ್ರಹಿಸತಕ್ಕುದಾದ ಒಳ್ಳೆಯ ವಿಚಾರಧಾರೆ.

ಬಾಲಕರ ಸಂಪೂರ್ಣ ಗಣಿತ ಕೋಶ ಸಂಪಾದಕರು ಶ್ರೀ ವಾಸುದೇವರಾವ್ ಶಿಬ್ರೂರ್‌ಕರರು. ಪ್ರಕಾಶಕರು ಸ್ವತಂತ್ರಭಾರತ ಬುಕ್ ಕಂಪೆನಿ, ಕೋಟೆ ಮುಂಬಾಯಿ. ಬೆಲೆ ೮ ಆಣೆ. ಪ್ರಸ್ತಾವನೆಯಲ್ಲಿ "ಮುಂಬಾಯಿ ಮದ್ರಾಸ್ ಸ್ಟೇಟುಗಳ ಪ್ರಾಂತದ ಕನ್ನಡ ಜಿಲ್ಲೆಗಳಲ್ಲಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸಾಕಷ್ಟು ಅಗ್ಗಿ ಕೋಷ್ಟಕಗಳು ದೊರೆಯದಿರುವುದರಿಂದ ಈ ಪುಸ್ತಕವನ್ನು ಪ್ರಕಟಿಸಿರುತ್ತೇವೆ" ಎಂದು ಬರೆದ್ದಾರೆ ನಮ್ಮ ಜಿಲ್ಲೆಯಲ್ಲಿ ಒಂದಾಣೆಗೆ ಹೇರಳ ಮಗ್ಗಿ ಕೋಷ್ಟಕಗಳು ದೊರೆಯುವಾಗ ಈ ಪುಸ್ತಕದ ಬೆಲೆ ತುಂಬಾ ಹೆಚ್ಚಾಗಿದೆಯೆಂದು ಇಲ್ಲಿಯವರು ನಿಸ್ಸಂದೇಹವಾಗಿ ಭಾವಿಸಿಯಾರು

ಚಿತ್ರಗುಪ್ತ—ಬೆಂಗಳೂರಿನಿಂದ ಹೊಸತಾಗಿ ಹೊರಟ ವಾರಪತ್ರಿಕೆಯ ಪ್ರಥಮ ಸಂಚಿಕೆ. ಕ್ರೌನ್ ಅರ್ಧ ಆಕಾರದ ೨೦ ಪುಟಗಳು ವಾ. ಚಂ. ೬ ಬಿಡಿಪ್ರತಿ ೨ಆಣೆ. ಸಂಪಾದಕರು ಶ್ರೀಗಳಾದ ಎಂ. ಎಸ್. ಭಾರದ್ವಾಜ್ ಬಿ. ಎ. ಪ್ರಕಾಶಕರು ಶ್ರೀ. ಬಿ ಕೃಷ್ಣ, ಬಿ. ಎ. ಬಿ. ಟಿ. ಪಬ್ಲಿಶರ್ಸ್ & ಎಡ್ವರ್ಟೈಸರ್ಸ್, ಲಿಮಿಟೆಡ್ 184, ಚಾಮರಾಜ ಪೇಟೆ ಬೆಂಗಳೂರು. ಸಮಯೋಚಿತ ವಿಚಾರಗಳಿಂದಲೂ ಒಳ್ಳೆಯ ಮುದ್ರಣದಿಂದಲೂ ಪತ್ರಿಕೆ ಚೆನ್ನಾಗಿದೆ. ಈ ನೂತನ ಬಂಧುವಿಗೆ ಸ್ವಾಗತವನ್ನೂ ಗೆಲವನ್ನೂ ಕೋರುತ್ತೇವೆ.

ಜಯಕರ್ನಾಟಕ—ಧಾರವಾಡದಿಂದ ಪ್ರಕಟವಾಗುವ ಈ ವಾರ ಪತ್ರಿಕೆಯ ಬಸವ ಜಯಂತಿ ವಿಶೇಷ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿದ್ದೇವೆ. ಕ್ರೌನ್ ಅರ್ಧದ ಆಕಾರದ ೨೪ಪುಟಗಳು, ಬೆಲೆ ೬ಆಣೆ. ಯುಗಪ್ರವರ್ತಕ ಬಸವಣ್ಣನವರ ಜೀವನ-ಸಂದೇಶಗಳ ಕುರಿತಾದ ಬರಹಗಳೂ ನಿತ್ಯದ ಸಂಚಿಕೆಗಳಲ್ಲಿಯ ಕತೆಲೇಖನಗಳೂ ಇದ್ದು ಸಂಚಿಕೆ ಚೆನ್ನಾಗಿದೆ.

ಪ್ರಕಾಶ(ಉಡುಪಿಯ ಮಾಸಪತ್ರಿಕೆ)- ಯುಗಾದಿ ಸಂಚಿಕೆ, ಶ್ರೀ. ಯು. ವ್ಯಾಸರಾಯರ ಸಂಪಾದಕತ್ವದಲ್ಲಿ ನಡೆಯುತ್ತಿರುವ ಈ ಪತ್ರಿಕೆ ಒಳ್ಳೆಯ ಬರಹಗಾರರ ಒಳ್ಳೆಯ ಬರಹಗಳನ್ನು ಸಂಗ್ರಹಿಸಿ ಈ ಯುಗಾದಿ ಸಂಚಿಕೆಯನ್ನು ಒಪ್ಪಿಸಿದೆ. ಸಂಚಿಕೆ ಚೆನ್ನಾಗಿದ್ದು ಸಂಗ್ರಾಹ್ಯವಾಗಿದೆ. ಸಂಪಾದಕರ ಸಾಹಸ ಸ್ತುತ್ಯವಾಗಿದೆ.

ಬೆಳಕು ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿಯವರು ಪ್ರಕಟಿಸುತ್ತಿರುವ ವಾರಪತ್ರಿಕೆಯ ಯುಗಾದಿ ಸಂಚಿಕೆ. ಸಂಪಾದಕರು, ಶ್ರೀ ಕೆ. ಆರ್. ಲಿಂಗಪ್ಪ ಬಿ. ಎ. ಎಲ್. ಎಲ್. ಬಿ. ವಯಸ್ಕರಲ್ಲಿ ಶಿಕ್ಷಣ ಸಂಸ್ಕಾರಗಳನ್ನು ಹೆಚ್ಚಿಸಲು ಶ್ರಮಿಸುತ್ತಿರುವ ಈ ಸಮಿತಿಯವರು ತಮ್ಮ ವಾರಪತ್ರಿಕೆಯನ್ನು ಯುಗಾದಿಯ ವೇಳೆಗೆ ವಿಶೇಷ ಸಂಚಿಕೆಯಾಗಿ ಪ್ರಕಟಿಸಿದ್ದಾರೆ. ಸಂಚಿಕೆಯ ವಿಷಯಗಳು ಚೆನ್ನಾಗಿದ್ದು ಸಂಪಾದಕರ ಹಾಗೂ ವಯಸ್ಕರ ಶಿಕ್ಷಣ ಸಮಿತಿಯವರ ಕಾರ್ಯಶ್ಲಾಘ್ಯವಾಗಿದೆ.

IN THE COURT OF THE DISTRICT MUNSIFF OF MANGALORE

O. S. No. 72/49

Between

1. Rao Bahadur K. T. Alwa.
2. K. Devappa Shetty,

-Plaintiffs.

and

Gangu Shetty -Defendent.

To,

Defendent Gangu Shetty, brother of Dooma Shetty, residing in Yellamogar of Mudashedde village. Mangalore Taluq.

Notice is hereby given that the Plaintiffs above-named filed the above suit for recovering the arrears of rent, interest and costs of suit with interest against the said Defendent and that the suit is posted to 14-6-1949 for hearing and also ordered substituted service notice to defendent. If the Defendent does note appear in the said Court on 14 6 1949 at 11 A. M. either in person or by Pleader to file written statement if any, the suit will be decided ex-parte.

(B O.)

K. Devappa Shetty,

2nd Plaintiff.

S. Gopalkrishna,

Advocate for Plaintiffs.

Mangalore 29-4-1949.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618

19-5-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER:
Hon'ble Sri. A. B. Shetty
Education Minister, Govt. of Madras

Telegram:
"Navayuga"

Estd.
1921
ಸ್ಥಾಪನೆ.



ವಾರ್ಷಿಕ ಚಂದಾ:
5—4—0
6 ತಿಂಗಳಿಗೆ
3—0—0
ಬಿಡಿಪ್ರತಿಗೆ
0—2—0

ವರ್ಷ ೨೯
ವಾರ 38

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ವಿದ್ಯಾಮಂತ್ರಿ ಶ್ರೀ. ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 38

ಇವೆಲ್ಲಾ ಅಭಿಮಾನದ ಪ್ರಶ್ನೆಗಳು—

ಅಹಿಂಸಾ ಪ್ರವಾದಿ ಗಾಂಧಿಜೀಯ ತತ್ವಗಳಿಂದಲೇ ಲೋಕಕ್ಕೆ ವಿಮೋಚನೆಯೆಂದು ಸಾರುತ್ತಿರುವ ಪಂಡಿತ ಜವಾಹರಲಾಲರೇ ಅತ್ಯಭಿಮಾನಿ; ಮುಂಗೋಪಿ. ನವದಿಲ್ಲಿಯಲ್ಲೊಮ್ಮೆ ಗಾಂಧಿಜೀ ಉಪವಾಸ ಕುಳಿತಿದ್ದಾಗ ಹೊರಗೆ ಗುಂಪುಕೂಡಿ 'ಗಾಂಧಿಜೀಯವರು ಸತ್ತುಹೋಗಲಿ' ಎಂದು ಬೊಬ್ಬಿಡುತಿದ್ದ ಹಿಂದೂವಾದಿಗಳನ್ನು ಪಂಡಿತ ನೆಹರುಗಳು ಓಡಿಸಿಕೊಂಡು ಹೋಗಿದ್ದರು. ಮತ್ತೊಮ್ಮೆ ಕೊಲೆ ಕೊಳ್ಳೆಗಾಗಿ ಸೇರಿದ್ದ ಜಾತೀಯ ಪುಂಡರ ತಂಡದ ಮೇಲೆ ತಾನು ಏಕಾಕಿಯಾಗಿ ಬಿದ್ದು ಅವರ ಆಯುಧಗಳನ್ನು ಕಸಿಕೊಂಡಿದ್ದರು. ಕಳೆದ ವರುಷ ನವದಿಲ್ಲಿಯಲ್ಲಿ ಸೇರಿದ್ದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಪ್ರೇಕ್ಷಕರು ಗಲಭೆ ಮಾಡಿದರೆಂದು ಅಧ್ಯಕ್ಷ ಗಾದಿಯಿಂದಿಳಿದು ಬಂದು, ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಪಿಳಿ ಪಿಳಿ ನೋಡುತಿದ್ದಂತೆಯೇ ಕುರ್ಚಿಯನ್ನೆತ್ತಿ ಗಲಭೆಗಾರರನ್ನು ಹೊಡೆಯಲು ಮುಂದಾಗಿದ್ದರು. ಪಂಡಿತ ನೆಹರುಗಳ ಇಂತಹ ಉದ್ರೇಕಸ್ವಭಾವವು ಅಸಹ್ಯವೆನ್ನಿಸಿದರೂ ಅದು ಕೇವಲ ಅಭಿಮಾನದ ದ್ಯೋತಕ. ಅಪರಾಧ, ಅನಾಚಾರ, ಅಜ್ಞಾನಗಳಿದಿರಲ್ಲಿ ಮಾತ್ರ ಕೆರಳುವವರು. ಅವಮಾನ ಮುಂಚುಧಾಳಿ ಅನ್ಯಾಯದ ಮೇಲೇನೇ ಅದ್ದರಿಂದ ಅದು ಕ್ಷಮಾರ್ಹವಷ್ಟೇ ಅಲ್ಲ, ಗೌರವಾರ್ಹವೆನ್ನಿಸಿದೆ.

ಮಲಯದಲ್ಲಿ ಪಾಶಿಗೇರಿದ ಗಣಪತಿಗಿಂತಲೂ ಕನಿಕರಾರ್ಹ ರೀತಿಯಿಂದ ಕೊಲೆಯಾದವರು ವಿದೇಶಗಳಲ್ಲೂ ಭಾರತದಲ್ಲೂ ಇದ್ದಾರೆ. ಆದರೂ ಗಣಪತಿಯ ಪಾಶಿಯು ಭಾರತೀಯರ ಅಂತಃಕರಣವನ್ನು ಕದಡಿದಷ್ಟು ಬೇರಾವುದೂ ಕದಡಿಲ್ಲ. ವಿದೇಶೀ ಆಡಳಿತೆಯೊಂದು ಓರ್ವ ಹಿಂದೀಯನ ಪ್ರಾಣವನ್ನು ಇಷ್ಟು ತಾತ್ಸಾರ ಮಾಡಿ ಹಿಂಡಿದುದು ಭಾರತದ ಅಭಿಮಾನಕ್ಕೆ ಕೊಟ್ಟ ಹೊಡೆತವಾದ್ದರಿಂದಲೇ ಹೀಗಾಯಿತು. ಇಲ್ಲಿರುವುದು ಒಂದು ಪ್ರಾಣದ ಪ್ರಶ್ನೆಯಲ್ಲ---ರಾಷ್ಟ್ರೀಯ ಅಭಿಮಾನದ ಪ್ರಶ್ನೆ.

'ಭಾರತವು ರಿಪಬ್ಲಿಕ್ ಆದಮೇಲೂ ಕಾಮನ್‌ವೆಲ್ತ್ ಸದಸ್ಯನಾಗಿ ಉಳಿಯುವದು; ಈ ಸ್ವತಂತ್ರರಾಷ್ಟ್ರಗಳ ಸಹಕಾರೀ ಕೂಟದ 'ದ್ಯೋತಕ'ವಾಗಿ— ಪ್ರಥಮ ನಾಗರೀಕನಾಗಿ— ಬ್ರಿಟಿಷ್ ರಾಜನನ್ನು ಭಾರತವು ಗಣಿಸುವದು' ಎಂದು ಲಂಡನಿನ ಕಾಮನ್‌ವೆಲ್ತ್ ಪ್ರಧಾನೀ ಸಮ್ಮೇಳನ ನಿರ್ಧರಿಸಿದೆ. ಈ ಹೊಸವ್ಯವಸ್ಥೆಯು ಒಂದು ಗೌರವಪಾಲನೆಗಾಗಿ ಹೊರತು ಬೇರಿಲ್ಲ. ಕೇವಲ ವ್ಯವಹಾರ ದೃಷ್ಟಿಯಿಂದ ನೋಡುವುದಾದರೆ-ಭಾರತವು ರಿಪಬ್ಲಿಕ್ ಆದ ಕೂಡಲೇ ಕಾಮನ್‌ವೆಲ್ತಿನ ನಾಮಮಾತ್ರ ಗೊಣಸೂ ಇಲ್ಲದೆ ಬ್ರಿಟನ್ ಮತ್ತಿತರ ರಾಷ್ಟ್ರಗಳೊಡನೆ, ಅಮೇರಿಕವು ಬ್ರಿಟನಿನೊಂದಿಗಿಟ್ಟುಕೊಂಡಿರುವಂತಹ ಮೈತ್ರೀ ಕರಾರುಗಳನ್ನು ಮಾಡಿಕೊಂಡು ಸ್ನೇಹಾಚಾರವುಳಿಸಿಕೊಳ್ಳಬಹುದಿತ್ತು. ಅಂತೆಯೇ ಬ್ರಿಟಿಷ್ ರಾಜನ ಹೆಸರಿನಿಂದ ನೇಮಕ ಹೊಂದುವ ಗವರ್ನರ್ ಜನರಲನ ಬದಲಿಗೆ ಹಿಂದೀ ಜನತೆಯು ಸಾರ್ವಭೌಮಾಧಿಕಾರಕ್ಕಾಧೀನನಾದ ಅಧ್ಯಕ್ಷನನ್ನು ನಿರ್ಮಿಸಿಕೊಳ್ಳುವ ರಿಪಬ್ಲಿಕ್ ಭಾರತದೊಡನೆ ಬ್ರಿಟನು ಕೂಡಾ ಇಂದಿನ ಕಾಮನ್‌ವೆಲ್ತ್ ಸಂಬಂಧದ ಬದಲು ವಿದೇಶೀ ಮೈತ್ರಿ ಸಂಬಂಧವನ್ನಷ್ಟೇ ಬಯಸಬಹುದಿದ್ದಿತು. ಆದರೂ ಇದುವರೆಗಿರುವ ಹೆಸರನ್ನೂ—ಪರಂಪರಾಗತ ಮರ್ಯಾದೆಯನ್ನೂ—ನಾವು ಮಾತ್ರಕ್ಕಾದರೂ ಉಳಿಸಿಕೊಳ್ಳುವದಕ್ಕಾಗಿಯೇ, 'ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಸದಸ್ಯ'ಎಂಬ ಈ ಹೊಸವ್ಯವಸ್ಥೆ. ಕಾರ್ಯರಂಗದಲ್ಲಿ ಈ ವ್ಯವಸ್ಥೆ ಮತ್ತು 'ವಿದೇಶೀ ಮೈತ್ರಿಕರಾರು" ವ್ಯವಸ್ಥೆಯೊಳಗೆ ಏನೂ ವ್ಯತ್ಯಾಸವಿಲ್ಲವಾದರೂ ಭಾವೈಕ್ಯತೆಯ ಸಾಧನೆಗೆ ಅದಕ್ಕಿಂತ ಇದು ಹೆಚ್ಚಿನದು.

ತುಲನಾತ್ಮಕವಾಗಿ ನೋಡುವದಾದರೆ, ಹೈದರಾಬಾದಿನ ರಾಜ—ಪ್ರಜೆಗಳು ಭಾರತಕ್ಕೆ ಹೇಗೋ ಕಾಶ್ಮೀರದ ರಾಜಪ್ರಜೆಗಳು ಪಾಕಿಸ್ಥಾನಕ್ಕೆ ಹಾಗೆ, ಹೈದರಾಬಾದಿನಲ್ಲಿ ಅಧಿಕಸಂಖ್ಯೆಯ ದುರ್ಬಲ ಹಿಂದೂ ಪ್ರಜೆಗಳಿಗೆ ಮುಸ್ಲಿಂ ರಾಜನಿದ್ದರೆ, ಕಾಶ್ಮೀರದ ಅಧಿಕಸಂಖ್ಯಾಕ ದುರ್ಬಲ ಮುಸ್ಲಿಂ ಪ್ರಜೆಗಳಿಗೆ ಹಿಂದೂ ರಾಜನಿದ್ದ. ಹೈದರಾಬಾದ್ ಎಲ್ಲೆಡೆಗಳಿಂದಲೂ ಭಾರತದಿಂದ ಸುತ್ತುಗಟ್ಟಲ್ಪಟ್ಟದ್ದರೆ ಕಾಶ್ಮೀರವು ಹೆಚ್ಚಾಗಿ ಪಾಕಿಸ್ಥಾನಕ್ಕೇನೇ ತಾಗಿಕೊಂಡಿದೆ. ಪಂಜಾಬು ಇಬ್ಭಾಗವಾಗಿ ಆದರಪೂರ್ವ ಪಂಜಾಬು ಭಾರತಕ್ಕೆದೊರೆತುದರಿಂದಲೇ ಭಾರತಕ್ಕೂ ಕಾಶ್ಮೀರಕ್ಕೂ ಭೂಸಂಬಂಧವುಂಟಾಯಿತು; ಆದಿಭಾಗದಲ್ಲಿ ಹೆಚ್ಚೆನಂದ ಭಾರತಕ್ಕೆ ಹೈದರಾಬಾದಿದ್ದಂತೆ ತನಗೇನೇ ಹೊಂದಿಕೊಂಡಿದ್ದ ಕಾಶ್ಮೀರದ ಕುರಿತು ಪಾಕಿಸ್ತಾನವು ನ್ಯಾಯಪ್ರಕಾರ ವರ್ತಿಸಿ, ಅಲ್ಲಿಯ ಜನಮತದಂತೆ ಅದರ ಅದೃಷ್ಟನಿರ್ಮಿಸಲು ಮುಂದಾಗುತಿದ್ದರೆ ಆ ಕಾಲದಲ್ಲಿ ಭಾರತವು ಸಂತೋಷಪೂರ್ವಕ ಒಪ್ಪುತಿತ್ತು. ಆದರೆ ಪಾಕಿಸ್ತಾನವು ದುರಭಿಮಾನದಿಂದ ಆಕ್ರಮಣವನ್ನೇ ಪ್ರೇರೇಪಿಸಿತು; ಕೊನೆಯ ಗಳಿಗೆಯಲ್ಲಿ ಕಾಶ್ಮೀರದ ರಾಜರು ಶರಣುಬಂದರೂ ಕಿವಿಗೊಡದ ಭಾರತ ಸರಕಾರವು, ಶೇಕ್ ಅಬ್ದುಲ್ಲಾರ ಮೂಲಕ ಅಲ್ಲಿಯ ಜನತೆಯು ತನ್ನ ಆಶ್ರಯ ಮತ್ತು ಸಹಾಯಯಾಚಿಸಿದ ಮೇಲೆಯೇ ಅಲ್ಲಿಗೆ ಸೇನೆಕಳುಹಿಸಬೇಕಾಗಿ ಬಂತು. ಆದಿಭಾಗದಲ್ಲಿ ಪಾಕಿಸ್ತಾನವು ಅಂತಹ ದುರಭಿಮಾನವನ್ನೂ ಆ ಮೇಲೆ ಭಾರತವು ಅನಿವಾರ್ಯವಾಗಿ ಸ್ವಾಭಿಮಾನವನ್ನೂ ಪ್ರದರ್ಶಿಸಿದ್ದರಿಂದಲೇ ಕಾಶ್ಮೀರದಲ್ಲಿ ಅಂತಹ ದೀರ್ಘಾವಧಿಯ ಸಮರನಡೆಯಿತು—ಭಾರತ ಸರಕಾರವು ಅಲ್ಲಿ ಹೇರಳ ಧನ, ಜನ ಸುರಿಯಬೇಕಾಯಿತು. ಈ ಅಭಿಮಾನದ ಪ್ರಶ್ನೆ ಮುಂದೆ ಬಾರದಿರುತಿದ್ದರೆ, ಇನ್ನು ಆಗಲಿರುವ ಜನಮತ ಸಂಗ್ರಹವು ಅಂದೇನಡೆದು ಎಷ್ಟೋ ಜನಧನ ಹಾನಿಯನ್ನು ಉಳಿಸಬಹುದಿತ್ತು.

ಲಾಭನಷ್ಟ, ಉಚಿತಾನುಚಿತತೆಯ ದೃಷ್ಟಿಯಿಂದ ಮಾಡಬಾರದುದನ್ನು ಕೂಡಾ ಅಭಿಮಾನವು ಮಾಡಿಸುತ್ತಿದೆ.

ನಿಮ್ಮ ತೃಪ್ತಿ ನಮ್ಮಗೌರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Niligiris)

English copies of
MADRAS
ALIYASANTHANA ACT
of 1949
are available.
Price 0-12-0 per copy
NAVAYUGA PRESS,
UDIPI.

ಮದ್ರಾಸು ಅಳಿಯ ಸಂತಾನ
ಕಾನೂನಿನ ಇಂಗ್ಲಿಷ್
ಪ್ರತಿಗಳು ದೊರೆಯುತ್ತವೆ.
ಬೆಲೆ 0-12 0
ನವಯುಗ ಪ್ರೆಸ್, ಉಡುಪಿ.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAKA INSURANCE CMPANY LIMITED

Regd. No M. 3618

19-5-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER:
Hon'ble Sri. A. B. Shetty
Education Minister, Govt. of Madras

Telegram:
"Navayuga"

ನವಯುಗ

ವಾರ್ಷಿಕ ಚಂದಾ:
5—4—0

6 ತಿಂಗಳಿಗೆ
3—0—0

ಬಿಡಿಪ್ರತಿಗೆ
0—2—0

Estd.
1921
ಸ್ಥಾಪನೆ.

ವರ್ಷ ೨೯
ವಾರ 38

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮಂದರಾಸು ಸರಕಾರದ ವಿದ್ಯಾಮಂತ್ರಿ ಶ್ರೀ. ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 38

ಇವೆಲ್ಲಾ ಅಭಿಮಾನದ ಪ್ರಶ್ನೆಗಳು—

ಅಹಿಂಸಾ ಪ್ರವಾದಿ ಗಾಂಧೀಜಿಯು ತತ್ವಗಳಿಂದಲೇ ಲೋಕಕ್ಕೆ ವಿಮೋಚನೆಯೆಂದು ಸಾರುತ್ತಿರುವ ಪಂಡಿತ ಜವಾಹರಲಾಲರೇ ಅತ್ಯಭಿಮಾನಿ; ಮುಂಗೋಪಿ. ನವದಿಲ್ಲಿಯಲ್ಲೊಮ್ಮೆ ಗಾಂಧೀಜಿ ಉಪವಾಸ ಕುಳಿತಿದ್ದಾಗ ಹೊರಗೆ ಗುಂಪುಕೂಡಿ 'ಗಾಂಧೀಜಿಯವರು ಸತ್ತುಹೋಗಲಿ' ಎಂದು ಬೊಬ್ಬಿಡುತ್ತಿದ್ದ ಹಿಂದೂವಾದಿಗಳನ್ನು ಪಂಡಿತ ನೆಹರೂಗಳು ಓಡಿಸಿಕೊಂಡುಹೋಗಿದ್ದರು. ಮತ್ತೊಮ್ಮೆ ಕೊಲೆ ಕೊಳ್ಳೆಗಾಗಿ ಸೇರಿದ್ದ ಜಾತೀಯ ಪುಂಡರ ತಂಡದ ಮೇಲೆ ತಾನು ಏಕಾಕಿಯಾಗಿ ಬಿದ್ದು ಅವರ ಆಯುಧಗಳನ್ನು ಕಸಕೊಂಡಿದ್ದರು. ಕಳೆದ ವರುಷ ನವದಿಲ್ಲಿಯಲ್ಲಿ ಸೇರಿದ್ದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಪ್ರೇಕ್ಷಕರು ಗಲಭೆ ಮಾಡಿದರೆಂದು ಅಧ್ಯಕ್ಷ ಗಾದಿಯಿಂದಿಳಿದು ಒಂದು, ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಟಿಳಿ ಪಿಳಿ ನೋಡುತ್ತಿದ್ದಂತೆಯೇ ಕುರ್ಚಿಯನ್ನೆತ್ತಿ ಗಲಭೆಗಾರರನ್ನು ಹೊಡೆಯಲು ಮುಂದಾಗಿದ್ದರು. ಪಂಡಿತನೆಹರೂಗಳ ಇಂತಹ ಉದ್ರೇಕಸ್ವಭಾವವು ಅಸಹ್ಯವೆನ್ನಿಸಿದರೂ ಅದು ಕೇವಲ ಅಭಿಮಾನದ ದ್ಯೋತಕ. ಅವರು ಅನಾಚಾರ, ಅಜ್ಞಾನಗಳೆದುರಲ್ಲಿ ಮಾತ್ರ ಕೆರಳುವವರು. ಅವರ ಮುಂಗೋಪಗಳು ಅನ್ಯಾಯದ ಮೇಲೇನೇ ಆದ್ದರಿಂದ ಅದು ಕ್ಷಮಾರ್ಹವಷ್ಟೇ ಅಲ್ಲ, ಗೌರವಾರ್ಹವೆನ್ನಿಸಿದೆ.

ಮಲಯದಲ್ಲಿ ಪಾತಿಗೇರಿದ ಗಣಪತಿಗಿಂತಲೂ ಕನಿಕರಾರ್ಹ ರೀತಿಯಿಂದ ಕೊಲೆಯಾದವರು ವಿದೇಶಗಳಲ್ಲೂ ಭಾರತದಲ್ಲೂ ಇದ್ದಾರೆ. ಆದರೂ ಗಣಪತಿಯ ಪಾತಿಯು ಭಾರತೀಯರ ಅಂತಃಕರಣವನ್ನು ಕದಡಿದಷ್ಟು ಬೇರಾವುದೂ ಕದಡಿಲ್ಲ. ವಿದೇಶೀ ಆಡಳಿತೆಯೊಂದು ಓರ್ವ ಹಿಂದೀಯನ ಪ್ರಾಣವನ್ನು ಇಷ್ಟು ತಾತ್ಸಾರ ಮಾಡಿ ಹಿಂಡಿದುದು ಭಾರತದ ಅಭಿಮಾನಕ್ಕೆ ಕೊಟ್ಟ ಹೊಡೆತವಾದ್ದರಿಂದಲೇ ಹೀಗಾಯಿತು. ಇಲ್ಲಿರುವುದು ಒಂದು ಪ್ರಾಣದ ಪ್ರಶ್ನೆಯಲ್ಲ---ರಾಷ್ಟ್ರೀಯ ಅಭಿಮಾನದ ಪ್ರಶ್ನೆ.

'ಭಾರತವು ರಿಪಬ್ಲಿಕ್ ಆದರೂ ಕಾಮನ್‌ವೆಲ್ತ್ ಸದಸ್ಯನಾಗಿ ಉಳಿಯುವದು; ಈ ಸ್ವತಂತ್ರರಾಷ್ಟ್ರಗಳ ಸಹಕಾರೀ ಕೂಟದ 'ದ್ಯೋತಕ'ವಾಗಿ— ಪ್ರಥಮ ನಾಗರೀಕನಾಗಿ— ಬ್ರಿಟಿಷ್ ರಾಜರನ್ನು ಭಾರತವು ಗಣಿಸುವದು' ಎಂದು ಲಂಡನಿನ ಕಾಮನ್‌ವೆಲ್ತ್ ಪ್ರಧಾನೀ ಸಮ್ಮೇಳನ ನಿರ್ಧರಿಸಿದೆ. ಈ ಹೊಸವ್ಯವಸ್ಥೆಯು ಒಂದು ಗೌರವಪಾಲನೆಗಾಗಿ ಹೊರತು ಬೇರಿಲ್ಲ. ಕೇವಲ ವ್ಯವಹಾರ ದೃಷ್ಟಿಯಿಂದ ನೋಡುವುದಾದರೆ-ಭಾರತವು ರಿಪಬ್ಲಿಕ್ ಆದ ಕೂಡಲೇ ಕಾಮನ್‌ವೆಲ್ತಿನ ನಾಮಮಾತ್ರ ಗೌರವಸೂಚಕ್ಕಿಲ್ಲದೆ ಬ್ರಿಟನ್ ಮತ್ತಿತರ ರಾಷ್ಟ್ರಗಳೊಡನೆ, ಅಮೇರಿಕವು ಬ್ರಿಟನಿನೊಂದಿಗಿಟ್ಟುಕೊಂಡಿರುವಂತಹ ಮೈತ್ರೀ ಕರಾರುಗಳನ್ನು ಮಾಡಿಕೊಂಡು ಸ್ನೇಹಾಚಾರವುಳಿಸಿಕೊಳ್ಳಬಹುದಿತ್ತು- ಅಂತೆಯೇ ಬ್ರಿಟಿಷ್ ರಾಜನ ಹೆಸರಿನಿಂದ ನೇಮಕ ಹೊಂದುವ ಗವರ್ನರ್ ಜನರಲನ ಬದಲಿಗೆ ಹಿಂದೀ ಜನತೆಯು ಸಾರ್ವಭೌಮಾಧಿಕಾರಕ್ಕಾಧೀನನಾದ ಅಧ್ಯಕ್ಷನನ್ನು ನಿರ್ಮಿಸಿಕೊಳ್ಳುವ ರಿಪಬ್ಲಿಕ್ ಭಾರತದೊಡನೆ ಬ್ರಿಟನು ಕೂಡಾ ಇಂದಿನ ಕಾಮನ್‌ವೆಲ್ತ್ ಸಂಬಂಧದ ಬದಲು ವಿದೇಶೀ ಮೈತ್ರಿ ಸಂಬಂಧವನ್ನಷ್ಟೇ ಬಯಸಬಹುದಿದ್ದಿತು. ಆದರೂ ಇದುವರೆಗಿರುವ ಹೆಸರನ್ನೂ—ಪರಂಪರಾಗತ ಮರ್ಯಾದೆಯನ್ನೂ--ನಾಮಮಾತ್ರಕ್ಕಾದರೂ ಉಳಿಸಿಕೊಳ್ಳುವದಕ್ಕಾಗಿಯೇ, 'ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಸದಸ್ಯ'ಎಂಬ ಈ ಹೊಸವ್ಯವಸ್ಥೆ. ಕಾರ್ಯರಂಗದಲ್ಲಿ ಈ ವ್ಯವಸ್ಥೆ ಮತ್ತು 'ವಿದೇಶೀ ಮೈತ್ರಿಕರಾರು" ವ್ಯವಸ್ಥೆಯೊಳಗೆ ಏನೂ ವ್ಯತ್ಯಾಸವಿಲ್ಲವಾದರೂ ಭಾವೈಕ್ಯತೆಯ ಸಾಧನೆಗೆ ಅದಕ್ಕಿಂತ ಇದು ಹೆಚ್ಚಿನದು.

ತುಲನಾತ್ಮಕವಾಗಿ ನೋಡುವದಾದರೆ, ಹೈದರಾಬಾದಿನ ರಾಜ— ಪ್ರಜೆಗಳು ಭಾರತಕ್ಕೆ ಸೇರ್ಗೋ ಕಾಶ್ಮೀರದ ರಾಜಪ್ರಜೆಗಳು ಪಾಕಿಸ್ತಾನಕ್ಕೆ ಹಾಗೆ. ಹೈದರಾಬಾದಿನಲ್ಲಿ ಅಧಿಕಸಂಖ್ಯೆಯ ದುರ್ಬಲ ಹಿಂದೂ ಪ್ರಜೆಗಳಿಗೆ ಮುಸ್ಲಿಂ ರಾಜನಿದ್ದಿದ್ದರೆ, ಕಾಶ್ಮೀರದ ಅಧಿಕಸಂಖ್ಯಾಕ ದುರ್ಬಲ ಮುಸ್ಲಿಂ ಪ್ರಜೆಗಳಿಗೆ ಹಿಂದೂ ರಾಜನಿದ್ದ. ಹೈದರಾಬಾದ್ ಎಲ್ಲೆಡೆಗಳಿಂದಲೂ ಭಾರತದಿಂದ ಸುತ್ತುಗಟ್ಟಲ್ಪಟ್ಟದ್ದರೆ ಕಾಶ್ಮೀರವು ಹೆಚ್ಚಾಗಿ ಪಾಕಿಸ್ತಾನಕ್ಕೇನೇ ತಾಗಿಕೊಂಡಿದೆ. ಪಂಜಾಬು ಇಬ್ಭಾಗವಾಗಿ ಆದರಪೂರ್ವ ತುಂಡು ಭಾರತಕ್ಕೆದೊರೆತುದರಿಂದಲೇ ಭಾರತಕ್ಕೂ ಕಾಶ್ಮೀರಕ್ಕೂ ಭೂಸಂಬಂಧವುಂಟಾಯಿತು; ಆದಿಭಾಗದಲ್ಲಿ ಹೆಚ್ಚಿನಂತ ಭಾರತಕ್ಕೆ ಹೈದರಾಬಾದಿದ್ದಂತೆ ತನಗೇನೇ ಹೊಂದಿಕೊಂಡಿದ್ದ ಕಾಶ್ಮೀರದ ಕುರಿತು ಪಾಕಿಸ್ತಾನವು ನ್ಯಾಯಪ್ರಕಾರ ವರ್ತಿಸಿ, ಅಲ್ಲಿಯ ಜನಮತದಂತೆ ಅದರ ಅದೃಷ್ಟನಿರ್ಮಿಸಲು ಮುಂದಾಗುತಿದ್ದರೆ ಆ ಕಾಲದಲ್ಲಿ ಭಾರತವು ಸಂತೋಷಪೂರ್ವಕ ಒಪ್ಪುತಿತ್ತು. ಆದರೆ ಪಾಕಿಸ್ತಾನವು ದುರಭಿಮಾನದಿಂದ ಆಕ್ರಮಣವನ್ನೇ ಪ್ರೇರೇಪಿಸಿತು;ಕೊನೆಯ ಗಳಿಗೆಯಲ್ಲಿ ಕಾಶ್ಮೀರದ ರಾಜರು ಶರಣುಬಂದರೂ ಕಿವಿಗೊಡದ ಭಾರತ ಸರಕಾರವು, ಶೇಕ್ ಅಬ್ದುಲ್ಲಾರ ಮೂಲಕ ಅಲ್ಲಿಯ ಜನತೆಯು ತನ್ನ ಆಶ್ರಯ ಮತ್ತು ಸಹಾಯಯಾಚಿಸಿದ ಮೇಲೆಯೇ ಅಲ್ಲಿಗೆ ಸೇನೆಕಳುಹಿಸಬೇಕಾಗಿ ಬಂತು. ಆದಿಭಾಗದಲ್ಲಿ ಪಾಕಿಸ್ತಾನವು ಅಂತಹ ದುರಭಿಮಾನವನ್ನೂ ಆ ಮೇಲೆ ಭಾರತವು ಅನಿವಾರ್ಯವಾಗಿ ಸ್ವಾಭಿಮಾನವನ್ನೂ ಪ್ರದರ್ಶಿಸಿದ್ದರಿಂದಲೇ ಕಾಶ್ಮೀರದಲ್ಲಿ ಅಂತಹ ದೀರ್ಘಾವಧಿಯ ಸಮರನಡೆಯಿತು-ಭಾರತ ಸರಕಾರವು ಅಲ್ಲಿ ಹೇರಳ ಧನ, ಜನ ಸುರಿಯಬೇಕಾಯಿತು. ಈ ಅಭಿಮಾನದ ಪ್ರಶ್ನೆಮುಂಚೆ ಬಾರದಿರುತಿದ್ದರೆ, ಇನ್ನು ಆಗಲಿರುವ ಜನಮತ ಸಂಗ್ರಹವು ಅಂದೇನಡೆದು ಎಷ್ಟೋ ಜನಧನ ಹಾನಿಯನ್ನು ಉಳಿಸಬಹುದಿತ್ತು.

ಲಾಭನಷ್ಟ, ಉಚಿತಾನುಚಿತತೆಯ ದೃಷ್ಟಿಯಿಂದ ಮಾಡಬಾರದುದನ್ನು ಕೂಡಾ ಅಭಿಮಾನವು ಮಾಡಿಸುತ್ತಿದೆ.

ನಿಮ್ಮ ತೃಪ್ತಿ ನಮ್ಮ ಗೌರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ



PRABHAT
TEA & COFFEE (INDIA) Ltd.
COONOOR (Niligiris)

English copies of
MADRAS ALIYASANTHANA ACT of 1949
are available.
Price 0-12-0 per copy
NAVAYUGA PRESS, UDIPI.

ಮಂದ್ರಾಸು ಅಳಿಯ ಸಂತಾನ
ಕಾನೂನಿನ ಇಂಗ್ಲಿಷ್
ಪ್ರತಿಗಳು ದೊರೆಯುತ್ತವೆ.
ಬೆಲೆ 0-12 0
ನವಯುಗ ಪ್ರೆಸ್, ಉಡುಪಿ.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಬ್ರಿಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAKA INSURANCE CMPANY, LIMITED.

◎ ಪಂಡಿತಜಿಯೊಡನೆ ◎
◎ 5000 ಮೈಲುಗಳು ◎

ನಾನು ನನ್ನ ಹದಿನಾರನೇ ವಯಸ್ಸಿನಿಂದಲೂ ಲೋಕಸಂಚಾರ ಮಾಡಿದವನಿದ್ದೇನೆ. ವಿವಿಧ ಜನರನ್ನು ನೋಡಿದ್ದೇನೆ; ವಿವಿಧ ವಿಷಯಗಳನ್ನು ಕಂಡಿದ್ದೇನೆ. ನನ್ನಲ್ಲಿ ಹುಟ್ಟು ಮೂಲವಾಗಿ ಬಂದಿರುವ, ಸಾಧಾರಣತೆಯ ಅನೊಂದು ವಿನೋದ ಭಾವನೆಯ ಮೂಲಕ ರಾಜರ, ಅಂತೆಯೇ ಬಡಪಾಯಿಗಳ ಚಲನ ವಲನಗಳನ್ನೂ ನಾನು ಅವಲೋಕಿಸಿದುದಿದೆ. ಆದರೆ, ಒಬ್ಬ ಪ್ರಧಾನ ಮಂತ್ರಿಯು ತಯನ ಮಂಚವೇರುವ ಅಸಾಮಾನ್ಯ ನೋಟವನ್ನು ನಾನು ಅನುಭವಿಸಿದುದು ಕೇವಲ ಇತ್ತೀಚೆಗೆ.

ಪಯಣ ಸಿದ್ಧತೆ

ಆಕಾಶ ಸಂಚಾರವು ನನಗೇನೂ ಹೊಸತಲ್ಲ. ಆದರೆ ಐದು ತಾಸುಗಳಿಗೂ ಮಿಕ್ಕಿ ನಾನೆಂದೂ ಹಾರಾಡಿರಲಿಲ್ಲ. ಇಪ್ಪತ್ತೇಳು ತಾಸು ಹಿಡಿಯುವ ಈ ಪ್ರಯಾಣದ ಸಂಭವವು ನನ್ನ ಎದೆಯಲ್ಲಿ ಸ್ವಲ್ಪ ಬಿಸಿ ಹುಟ್ಟಿಸಿತು. ಇದಲ್ಲದೆ, ಬೇಗ ಪಾದಿ ಹಿಡಿಯುವ ಪ್ರಶ್ನೆಯೇ ಇಲ್ಲವೆಂದು ಖಚಿತವಾದ ಮೇಲೆ, ನನ್ನ ಆಸ್ತಿ ಭೂಮಿಗಳ ವಿನಿಯೋಗ ವಿಧಾನಗಳನ್ನು ಸೂಚಿಸುವ, ಮತ್ತು ಮಿತ್ರರಿಗೆ ನನ್ನ ಕೊನೆಯ ಮಾತುಗಳನ್ನು ತಿಳಿಸುವ ಮೃತ್ಯುಪತ್ರವೊಂದನ್ನು ಅವಸರದಿಂದ ಬರೆದಿಟ್ಟೆ. ಅವೆಲ್ಲಕ್ಕೂ ಲಕ್ಷ್ಯಪೂರ್ವಕವಾಗಿ ಮುದ್ರೆಮಾಡಿ, ಯೋಗ್ಯ ಸ್ನೇಹಿತನೊಬ್ಬನ ವಶಕ್ಕೊಪ್ಪಿಸಿದೆ. ಆ ಮೇಲೆ ನನ್ನನ್ನು ಕಾದಿರುವ ಭವಿಷ್ಯವು ಏನಿದ್ದರೂ ಅದನ್ನಿದಿರುಗೊಳ್ಳಲು, ನನ್ನಷ್ಟಕ್ಕೆ ನಾನು ಸಾಧ್ಯವಿದ್ದಷ್ಟು ತಯಾರಾದೆ. ನನ್ನ ಈ ಲಂಡನ್ ಪ್ರಯಾಣದಲ್ಲಿ ಸಹ ಸಂಚಾರಕರಾಗಿ ಭಾರತದ ಪ್ರಧಾನ ಮಂತ್ರಿಗಳೂ ಇರುವರೆಂದು ನನಗೆ ಕೊನೆಗೆ ತಾನೇ ತಿಳಿದು ಬಂತು. ನಾನದರಿಂದ ಹಿಗ್ಗಿದೆನೋ ಕುಗ್ಗಿದೆನೋ ನನಗರಿಯದು. ಅವರ, ಮತ್ತು ಮೂಲಕ ನನ್ನ ಜೋಪಾನಕ್ಕಾಗಿ ಎಲ್ಲಾ ವಿಧದ ವ್ಯವಸ್ಥೆಗಳನ್ನೂ ಅಲ್ಲಿ ಮಾಡುವರೆಂದು ನನಗೆ ತಿಳಿದಿತ್ತು. ಆದರೆ ಪ್ರಾಯಶಃ ನನ್ನ ಬ್ಯಾಗುಗಳನ್ನೆಲ್ಲಾ ಅಡಿಮೇಲು ಮಾಡಿ ನಾನೆಲ್ಲಿಯಾದರೂ ಬಾಂಬು ಹಿಡಿದುಕೊಂಡಿರುವೆನೋ ಎಂಬುದಕ್ಕಾಗಿ ನಖಶಿಖಾಂತ ನನ್ನ ದೇಹಜಡ್ತಿಯೂ ನಡೆಯಬಹುದೆಂಬುದನ್ನು ಊಹಿಸಿ ನನ್ನ ಮನಸ್ಸು ನೊಂದಿತು. ನನ್ನ ಕುರಿತು ನಾನು ಹಂಬಲಿಸುವ ಅಗತ್ಯವೇ ಇರಲಿಲ್ಲ. ನನ್ನ ಜೀವಮಾನದಲ್ಲೇ ಇದೀಗ ಪ್ರಥಮ ಬಾರಿ ಮನೇ ವ್ಯಸನರೋಗ ನನ್ನನ್ನು ತಾಗಿಕೊಂಡಿತ್ತೆಂದು ಒಪ್ಪುವೆನಾದರೂ ನಾನು ಮದ್ರಾಸಿನಿಂದ ಬೊಂಬಾಯಿಗೆ ಸುಖಪ್ರಯಾಣ ಬೆಳೆಸಿದೆ. ಬೊಂಬಾಯಿಯಲ್ಲಾದರೋ ಪದ್ಧತಿಯ ಕಸ್ಟಮ್ಸ್ ಪರಿಶೀಲನೆ ಹೊರತು ಹೆಚ್ಚಿನ ಜಡ್ತಿಯಾವುದೂ ನಡೆಯಲಿಲ್ಲ. ಭಾರತವನ್ನು ಬಿಡುವಾಗಲೇ ಬೆಚ್ಚಗಿನ ಯುರೋಪಿಯನ್ ಪೋಷಾಕುಗಳನ್ನು ತೊಟ್ಟುಕೊಂಡಿರಬೇಕಾದುದೇನೋ ಅಗತ್ಯವೇ. ಯಾಕೆಂದರೆ ಪ್ರಯಾಣಿಕನಿಗೆ ಈ ಪ್ರಯಾಣದ ಅಂತ್ಯದಲ್ಲಿ ವಿನಹ ಮಧ್ಯದಲ್ಲಿ ತನ್ನ ಬ್ಯಾಗನ್ನು ತೆರೆಯುವ ಸಂದರ್ಭ ದೊರೆಯುವಂತಿಲ್ಲ. ಅಲ್ಲಿ ಹೀಥ್ರೋಲಿನ ನಡುಕ ಬರಿಸುವ ಹಿಮಭರಿತ ಹವೆಯಲ್ಲಿಳಿಯುವಾಗವ್ಯರಕ್ಷಣೆಗಾಗಿ ಒಂದು ಲಿನೆನ್ ಬುಶ್ ಕೋಟು ಮಾತ್ರವಿದ್ದರೆ ಸಹಿಸುವಂತಿಲ್ಲ. ಎಪ್ರಿಲ್ ತಿಂಗಳಲ್ಲಿ ಸಹ ಬೊಂಬಾಯಿಯು ಸೆಖೆ ಹೆಚ್ಚಿರುವ ಸ್ಥಳ; ಅಲ್ಲಿ ವಿಮಾನಹತ್ತುವ ಮೊದಲು ಸುಂಕದಕಟ್ಟೆಯ ಹಾಗೂ ವಿದೇಶ ಪಯಣಕ್ಕೆ ಸಂಬಂಧಿಸಿದ ಅಧಿಕಾರಿಗಳ ತನಖೆಗೊಳಗಾಗಿ ಸುಮಾರು ಎರಡು ತಾಸುಗಳ ವರೆಗೆ ಕಾದು ನಿಂತಾಗ, ನನ್ನ ಮೈಯ್ಯ ಮಧುರ ಹನಿಗಳನ್ನು ಸಾಕಷ್ಟು ಕಳಕೊಂಡಿದ್ದೆ.

ನೆಹರೂ ಆಗಮನ

ವಿಶೇಷ ಘನವಂತರ—ನೆಹರೂ ಮತ್ತವರ ಸಂಗಡಿಗರ—ಆಗಮನ ನಿರೀಕ್ಷೆಯಿಂದ ನಮ್ಮನ್ನು ಸುಮಾರು ಒಂದು ತಾಸಿನ ವರೆಗೆ ದೊಡ್ಡಿಯಂತಹ ಸ್ಥಳದಲ್ಲಿ ಕೂಡ ಹಾಕಿದ್ದರು. ಅದೇನೂ ನಮ್ಮ ಪಾಲಿಗೆ ವಿಶೇಷ ಹಿಗ್ಗುವ ಸ್ಥಿತಿಯಾಗಿರಲಿಲ್ಲ; ಆದರೆ ಸ್ನೇಹಿತರನ್ನು ಬೀಳ್ಕೊಳ್ಳುವ ದುಃಖದಿಂದ ನಮ್ಮ ಕಷ್ಟದು ಪಾರುಮಾಡಿತು. ಕಾರಣ ಆ ಹೊತ್ತಿನಲ್ಲಿ ಅವರೆಲ್ಲಾ ಉಪಾಯವಿಲ್ಲದೆ ಜನಜಂಗುಳಿಯ ಮಧ್ಯೆ ಸಿಕ್ಕಿಕೊಂಡು ಮಾಯವಾಗಿದ್ದರು. ಅಷ್ಟರಲ್ಲಿ ಪಂಡಿತಜೀ, ಮೂಡು ತೆರೆದಿಟ್ಟ ಕಾರಿನಲ್ಲಿ ನೆಟ್ಟಗೆ ನಿಂತುಕೊಂಡೇ ಆಗಮಿಸಿದರು; ಕಾರು ಸೀದಾ ವಿಮಾನದ ಸನಿಹಕ್ಕೆ ಧಾವಿಸಿತು. ಅಲ್ಲೀನೋ ಆ ಸ್ಥಳವನ್ನೆಲ್ಲಾ ಪ್ರಕಾಶಮಾನಗೊಳಿಸುತ್ತಾ ಹಲವು ಆರ್ಕ್ ಲೇಂಪುಗಳಿದ್ದುವು. ಆದರೆ ಅಲ್ಲಿ ನಡೆಯುತ್ತಿದ್ದುದೇನು ಎಂಬುದಾವುದನ್ನೂ ಸರಿಯಾಗಿ ನೋಡಲು ನನ್ನಿಂದಾಗಿರಲಿಲ್ಲ. ಕಾರಣವೆಂದರೆ, ಆ ತ್ವೈತ್ಸ್ಕರ ಮತ್ತು ಅತ್ಯಗಲದ ಹಾಗೂ ಅತ್ಯಂತ ಕರ್ತವ್ಯನಿಷ್ಠೆಯ ಬೊಂಬಾಯಿ ಪೋಲಿಸ್ ಅಫೀಸರನೊಬ್ಬನು ನನ್ನ ಮುಂಗಡೆಯಲ್ಲಿ ನಿಂತಿದ್ದ; ಅವನು ತನ್ನ ಮುಖತಿರುಗಿಸಿ ನನ್ನನ್ನೊಮ್ಮೆಯೂ ನೋಡಿದ್ದಿಲ್ಲವಾದರೂ, ಹೇಗೋ ಏನೋ, ಅಲ್ಲಿಯ ದೃಶ್ಯದತ್ತ ಇಣುಕಬೇಕೆಂದು ನಾನು ಪ್ರಯತ್ನಿಸಿದಷ್ಟು ಸಲವೂ, ಕನ್ನಡಿಯೊಳಗಿನ ಬಿಂಬದಂತೆ ಯಥಾಪ್ರತಿ ನನಗಿದಿರಾಗುತ್ತಾ ಅತ ನನ್ನನ್ನು ಅಡ್ಡಗಟ್ಟಿದ್ದ. ಒಂದಷ್ಟು ವಕ್ರವಾಗಿ ಹೇಳುವುದಾದರೆ, ಪಂಡಿತಜೀ ಆಗ ನಗರದ ವಿಧವಿಧದ ಘನವಂತರ ಕೈಕುಲುಕುತ್ತಿದ್ದರು. ಆ ಮೇಲೆ ವಿಶೇಷ ಎಚ್ಚರಿಕೆಯೇನನ್ನೂ ಕೊಡದೆ ನಮ್ಮನ್ನು ಆ ದೊಡ್ಡಿಯಿಂದ ಹೊರಬಿಟ್ಟರು; ನಾವು ನಮ್ಮ ಆಕಾಶಯಾನ—ಒಂದು ಗಣನೀಯ ಸುಂದರಸೃಷ್ಟಿ—'ಮಲಬಾರ್ ಪ್ರಿನ್ಸೆಸ್'ನ ಬಾಲದೆಡೆಯ ಮೆಟ್ಟಲುಗಳನ್ನು ಹತ್ತಿದೆವು. ಯಾರಿಗೆ ಯಾವ ಸೀಟು ಎಂಬ ಜಗಳವನ್ನು ತೀರ್ಮಾನಿಸಿಕೊಳ್ಳುವರೆ ಕೆಲಸ ಬಹಳವಾಯಿತು; ಆದರೆ ನಾವೆಲ್ಲಾ ಇದ್ದಂತೆ ಸ್ಥಾನಬದ್ಧರಾದೆವು. ನಯವಿದರು ಹಾಗೂ ನಿಷ್ಠಾವಂತರಾದ ವಿಮಾನ ನೌಕರರನ್ನೆಲ್ಲಾ ಪಂಡಿತಜೀಗೆ ಪರಿಚಯ ಮಾಡಿಕೊಟ್ಟ ಮೇಲೆ, ಪಂಡಿತಜೀ ಮೇಲೆ ಬಂದು, ನನಗೆ ತೀ… ಸಮೀಪದ ತನ್ನ ಸೀಟಿನಲ್ಲಿ ಸ್ವಸ್ಥ ಕ… ತುಕೊಂಡರು. ಮಿಕ್ಕ ಪ್ರಪಂಚದ ಸಂ… ಧವನ್ನೇ ಕಡಿದುಕೊಂಡು ನಾವಲ್ಲಿ … ಬಿದ್ದೆವು. ವಿಮಾನದ ನಾಲ್ಕು ದೊ… ಮೋಟಾರುಗಳು ಘೂಂಕರಿಸಹತ್ತಿದು… ಹಾರಾಟಾರಂಭ ಮುಹೂರ್ತಕ್ಕಾಗಿ ನಾ… ಸಾಂತಾಕ್ರುಝ್‌ನ ಬಿಡುಗಡೇ ನೆಲವ… ಬಗ್ಗಿ ಈಕ್ಷಿಸಿದೆವು.

ಆ ನೋಟ

ರಾತ್ರಿಕಾಲದ ವಿಮಾನ ಹಾರಾ… ನಿಜಕ್ಕೂ ನೋಡತಕ್ಕ ದೃಶ್ಯ. ಆದರೆ… ದೃಶ್ಯವು ವಿಮಾನದೊಳಗಡೆಯ ನೋ… ಕ್ಕಿಂತಲೂ ನೆಲದಲ್ಲಿ ನಿಂತು ನೋಡ… ರಲ್ಲೇ ಹೆಚ್ಚು ಚೆಂದವಿದೆ. ವಿಮಾ… ಮುಂಗಿನಲ್ಲೊಂದು, ಮತ್ತದರ ಎ… ರೆಕ್ಕೆಗಳಲ್ಲೆರಡು, ಇರುವ ಮೂರು … ಪ್ರಭೆಯ 'ಸರ್ಚ್‌ಲೈಟು'ಗಳು ಮುಂ… ಗದ ಇಡೀ ಪಥವನ್ನೇ ಪ್ರಕಾಶಮಾನ… ಳಿಸುತ್ತವೆ. ಮೋಟಾರುಗಳು ಚೇತನಗೆ… ಡು, ಬ್ರೇಕುಗಳು ಹಿಡಿದುಕೊಂಡಿದ… ವಿಮಾನವೊಮ್ಮೆ ಬಲವಾಗಿ ಕಂಪಿ… ತ್ತಾ ಮುಹೂರ್ತಮಾತ್ರ ಶಂಕಿಸುತ್ತ… ಕೂಡಲೇ 'ಬ್ರೇಕು' ಸಡಿಲಾಗಿ, ಎಂಜಿ… ಗಳು ಸರ್ವಬಲಹಾಕಿ ಗದ್ದಲ ಮಾಡುತ್ತಿ… ಎಂದು ನೀವು ನೆನಸಲಾಗುವಂತೆ … ಹೆಚ್ಚಿನ ಘರ್ಜನೆಯೇರಿಸುತ್ತವೆ. … ಸಾವಧಾನವಾಗಿ ಆದರೆ ಕ್ರಮಶಃ … ತೀವ್ರವಾಗಿ ದೊಡ್ಡ ಯಂತ್ರವು ಮುಂ… ವಿಸಹತ್ತುತ್ತದೆ. ಕೆಲವೇ ನಿಮಿಷಗಳ… ಗೆ, ಮುಂಭಾಗದ ಬೆಳಕನ್ನು ತೆರೆಯುತ… ಮುಚ್ಚುತ್ತಾ, ಹಾರಾಡುವ ಕೊಕ್ಕರೆಯ… ತೆ ತನ್ನ ಕಾಲುಗಳನ್ನು ಹೊಟ್ಟೆಯ… ಯಲ್ಲಿ ಮುದುಡಿಸಿಕೊಂಡು, ಮ… ನ್ನು ಮುಂಚಾಚಿಕೊಂಡು ಯಾನ… ಆಕಾಶದೊಳಗೆ ಹಾರ ಹತ್ತುತ್ತದೆ. ಮಲಬಾರ್ ಪ್ರಿನ್ಸೆಸ್‌ನ ಒಳಗಡೆಯ… ದ್ದಾಗ ನಮಗೆ ಇದೆಲ್ಲಾ ಸರಿಯಾಗಿ ತಿ… ರಿರಲಿಲ್ಲ. ಒಂದು ಅಥವಾ ಎರಡು ಕ್ಷಣ… ವರೆಗೆ ಹಿಂದುಳಿವುದರ ನೋಟವಿತ್ತು; … ಮೇಲೆ ಬೊಂಬಾಯಿಯ ದೀಪಗಳು ನಮ… ಕೆಳಗಡೆ ಮಿಣುಕುತ್ತಿರುವುದು ತೋರಿ…

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ರಿಂದ ೫ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವಟೆ ಗುಡ್ಡೆ, ಮಂಗಳೂರು.

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡಿಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

ಉತ್ತಮ

—ಉಪಾಹಾರ ಮಂದಿರ

ವೀರ ಭಾರತ ವಿಶ್ರಾಂತಿ ಗೃಹ

(ನ್ಯೂ ಯೂನಿಯನ್ ಮಿಲ್ಲಿನ ಎದುರು)

ಡಿಲಿಸ್ಲೆ ರೋಡು

ಬೊಂಬಾಯಿ 13

1949 – 50ರಲ್ಲಿ ನಿಮ್ಮ ಅದೃ… ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂ… ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ … ರು ಮತ್ತು ವಿಳಾಸವನ್ನೂ ಒಂದು ಕಾ… ನಲ್ಲಿ ಬರೆದು ರೂಪಾಯಿ 1-4-0 ಕಳುಹಿ… ರಿ, ಮುಂದಿನ ಹನ್ನೆರಡು ತಿಂಗಳುಗ… ನೀವು ಅನುಭವಿಸುವ ಸುಖದುಃಖಗ… ಲಾಭ ನಷ್ಟಗಳು, ಮದುವೆ, ಮುಂಜಿ, ಸ… ಕಿ, ತೇಜಿ ಮಂದಿ, ಸಮಯಾದಿಗಳನ್ನು … ಚಿಸುವೆವು. ಅಲ್ಲದೆ ದುಷ್ಟ ಗ್ರಹಗಳ ಪೀ… ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ… ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದ… ಖಾತ್ರಿಯಾಗುವುದು ಟಪ್ಪಾಲು ವೆಚ್ಚ ಪ್ರತ… ಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,

Roj jyotshi

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕಾಗಿ ಲಂಡನಿಗೆ ಹೊರಟಿದ್ದ ಪಂಡಿತ ಜವಾಹಿರಲಾಲರೊಂದಿಗೆ ಬೊಂಬಾಯಿಯಿಂದ ಲಂಡನಿನ ವರೆಗೆ ಪ್ರಯಾಣ ಮಾಡುವ ಸುಯೋಗವು ಪತ್ರಿಕೋದ್ಯಮಿ ಯುಚ್. ಸಿ. ವಿಲ್ಲರರಿಗೆ ದೊರೆತಿದ್ದಿತು. ಅವರು HINDU ಪತ್ರಿಕೆಯಲ್ಲಿ ಬರೆದಿದ್ದ ಅನುಭವಗಳನ್ನಿಲ್ಲಿ ಅನುವಾದಿಸಿ ಕೊಡಲಾಗಿದೆ.

ಅವೂ ಬೇಗನೆ ಮಾಯವಾದುವು. ಅರೇಬಿಯನ್ ಸಮುದ್ರದ ಮೇಲ್ಭಾಗದಲ್ಲಿ ನಾವು ಮೇಲೆ ಮೇಲೆ ಹಾರಿದಂತೆ, ಮತ್ತೆ ನಮ್ಮ ನೋಟಕ್ಕೆ ಹೊರಗಿನದಾವುದೂ ಬೀಳಲಿಲ್ಲ. ನಾವು ನೋಡುತಿದ್ದುದೆಂದರೆ ವಿಮಾನ ಕೆಂಗಣ್ಣ ಹೊಳಪು; ಅಡಿಭಾಗದಲ್ಲಿ ಬಿಸಿಯೇರಿ ಉರಿಯುತ್ತಿರುವ ಎಂಜಿನು, ಅದರ ಟೋಪಿ ಮತ್ತು ಕೆಳಗಡೆ ಖಾಲಿ ಕಪ್ಪುಮಾತ್ರ.

ವಿಮಾನದೊಳಗಡೆಯಲ್ಲಿ

ಆಧುನಿಕ ವ್ಯಾಪಾರೀ ವಿಮಾನದೊಳಗಡೆ, ಸಾಧ್ಯವಿದ್ದಮಟ್ಟಿಗೆ ಪ್ರಯಾಣಿಕರ ಸೌಕರ್ಯಕ್ಕೆ ಬೇಕಾದುದೆಲ್ಲವೂ ಇರುತ್ತವೆ. ಹೀಗಿದ್ದರೂ, ಇವೆಲ್ಲವೂ ಸ್ಥಳಾನುಕೂಲತೆಯನ್ನು ಹೊಂದಿಕೊಂಡೇ ಇರಬೇಕಾಗಿದೆ. ನಮ್ಮನ್ನು ಸಮ್ಮೇತ ಎಲ್ಲಾ ವಸ್ತುಗಳನ್ನೂ, ಎಷ್ಟು ಸಾಧ್ಯವೋ ಅಷ್ಟು ಒತ್ತಿ ಬಿಗಿದು ಅಲ್ಲಿ ಕೂಡಿಡಲಾಗುತ್ತದೆ. ತುಂಡಿಕನೆಹರುಗಳು ಸುದೀರ್ಘ ವಿಮಾನ ಪ್ರಯಾಣದ ಮಟ್ಟಿಗೆ ಹಳೇಕ್ಕೆ. ನನಗೆ ಮಾತ್ರ ದಿಗಂತಸಮವಾಗಿ ಹಿಂಭಾಗಕ್ಕೆ ವಾಲಿದ್ದ ಮೆತ್ತನೆಯ ಕುರ್ಚಿಯಲ್ಲಿ ಕುಳಿತಿದ್ದರೂ, ಅಕ್ಷದ್ದ ಸ್ಥಳಕ್ಕೆ ಸರಿಯಾಗಿ ಸ್ವಸ್ಥವಾಗಿ ಹೊಂದಿಕೊಳ್ಳುವುದು ಬಹಳ ಕಷ್ಟವಾಯಿತು. ಆಗ ಮಧ್ಯರಾತ್ರಿ ಕಳೆಯುತ್ತಾ ಬಂದಿತ್ತು. ಆದ್ದರಿಂದ ಸಾಧ್ಯವಿದ್ದಷ್ಟು ನಿದ್ರೆಯನ್ನು ಮಾಡುವ ಕೆಲಸ ನಮ್ಮ ಮ್ಯಮೇಲೆ ಬಂತು. ಪಂಡಿತಜೀ ಮತ್ತು ಅವರ ಅನುಯಾಯಿ ವಿದೇಶ ಸಂಬಂಧಖಾತೆಯ ಮಂತ್ರಿ, ಅವರಿಬ್ಬರಿಗೂ ಮಲಗುವ ಕೊಟಡೀ ವ್ಯವಸ್ಥೆಗಳಿದ್ದುದರಿಂದ ಅವು ತಯಾರಾದುವು. ಪ್ರಥಮತಃ ನನ್ನ ತಲೆಯ ಮೇಲ್ಗಡೆಯಲ್ಲೇ 'ಸೀಲಿಂಗಿ'ನ ಒಂದು ಭಾಗವೇರಿದಂತಾದುದನ್ನು, ಆ ಮನೋಹರವ್ಯಕ್ತಿ ವಿಮಾನ ಆತಿಥ್ಯಕಾರಿಣಿ ಮತ್ತು ಅವಳ ಅನುಯಾಯಿಯು ವಿಮಾನದ ಜೇರೆನಾಲಿಗೆ ತೂಗಿಸಿದರು. ಅದರಾಚೆಗಡೆ ಮಲಗುವ ಸಾಮಾನಿನ ಚಿಕ್ಕಮಂಚ, ಕಾರ್ಖಾಪ್ರಕಾರದ ಒಂದು ಖಾಸಗೀದೀಪ, ಮತ್ತು ಪರದೆಗಳು ಇದ್ದುವು. ಪ್ರಯಾಣದಲ್ಲಿ ವಿಶೇಷ ಗಡಬಡವಾಗಿ ಮಲಗಿದ ಜನ ಹಾರಬೀಳದಂತೆ ತಡೆಯುವ ದೊಡ್ಡ ತೊಗಲಪಟ್ಟಿಯೂ ಅಲ್ಲಿತ್ತು. ಅಷ್ಟುಹೊತ್ತಿಗೆ ಪಂಡಿತಜೀ ತನ್ನ ಚಿಕ್ಕ, ಹಾಗೂ ಅಚ್ಚುಕಟ್ಟಾದ ಸ್ನಾನಗೃಹಕ್ಕೆ ಹೋಗಿ, ಸ್ನಾನ ತೀರಿಸಿ ಶಿವಾರ್ಣಸಿಂಹಿತರಾಗಿ ಮರಳಬಂದರು. ಪಂಡಿತಜೀಯು ಕೋಣೆಯ ಮುಂಗಡೆ ಉಕ್ಕಿನ ಒಂದು ಏಣಿಯು ನಿಲ್ಲಿಸಲ್ಪಟ್ಟಿದ್ದು, ಆತಿಥ್ಯಕಾರಿಣಿ ಮತ್ತವಳ ಸಹಾಯಕ ಮನುಷ್ಯ ಅದನ್ನು ಗಟ್ಟಿ ಹಿಡಿದುಕೊಂಡಂತೆ ಪಂಡಿತಜೀ ಜಾಗರೂಕತೆಯಿಂದ ಮೇಲೆ ಹತ್ತಿದರು. ಆ ಆಚ್ಛಾದಿತ ಪಾದಗಳು ಪರದೆಯೊಳಗೆ ನುಸುಳುತ್ತಿರುವ ನೋಟ ನನ್ನ ಕಣ್ಣಿಗೆ ಬಿತ್ತು. ಆಗಲೇ ಭಾರತದ ಪ್ರಧಾನ ಮಂತ್ರಿಯು ನಮ್ಮ ಆತಿಥ್ಯಕಾರಿಣಿಯಿಂದ, ಸಜ್ಜಾಗಿ ಮಲಗಿಸಲ್ಪಟ್ಟು, ಚರ್ಮದ ಪಟ್ಟಿಯಿಂದ ಸುತ್ತಲ್ಪಟ್ಟು ನಿದ್ರೆಗೆ ಸಂದರು. ಸ್ವಲ್ಪ ಹೊತ್ತಿನ ವರೆಗೆ ಅವರ ಮಂಚದ ಬೆಳಕು ಉರಿಯುತಿತ್ತು; ಆದರೆ ಮತ್ತೆ ಅಲ್ಲಿ ಕತ್ತಲೆ ಕವಿದಿತ್ತು. ಸಲೂನು ದೀಪಗಳೂ ನಂದಿದುವು; ನನ್ನ ಜತೆ ಪ್ರಯಾಣಿಕರು ಒಬ್ಬೊಬ್ಬರಾಗಿ ತೂಕಡಿಸಹತ್ತಿದರು. ನಾನು ನನ್ನ ಕಿಟಕಿಯಿಂದ ಮತ್ತೊಮ್ಮೆ ಬಿಸಿಯಂತ್ರದ ಮಂದ ಪ್ರಕಾಶವನ್ನು ಇಣಕಿದೆ. ಕೊನೆಗೆ ನಾನೂ ಆ ಅಜೇಯ ಆಲಸ್ಯ ಹಾಗೂ ನಾನು ಕಳೆದ ಆ ದೀರ್ಘ ಮತ್ತು ಶ್ರಮದಾಯಿ ದಿನದ ಪರಿಣಾಮಕ್ಕೊಳಗಾದೆ.

ಪ್ರಯಾಣ ಪಥದಲ್ಲಿ

ನಾನೆದ್ದುದು ಆರು ತಾಸುಗಳನಂತರ. ಕಣ್ಣುಬಿಟ್ಟು ನೋಡುವಾಗ ಯಾವುದೋ ಒಂದು ದೊಡ್ಡ ಹೊಳೇಮುಖದ ಹೊಯಿಗೇ ವಲಯದ ಮೇಲ್ಗಡೆಯಲ್ಲಿ ತಗ್ಗಾಗಿ ನಾವು ಹಾರಾಡುತಿದ್ದಂತೆ ತೋರಿತು. ನಾವೀಗ ಎಲ್ಲಿದ್ದೇವೆ ಎಂಬುದನ್ನು ಜ್ಞಾಪಿಸಿಕೊಳ್ಳುವುದರಲ್ಲಿ ನಾನಿರುವಾಗಲೇ, ಥಂಡಾ ಹಿಡಿದ ಇರಾಕೀ ಮುಂಜಾನೆಯ ಬೆಳಕಿನಲ್ಲಿ ಬಸ್ರಾ ನಿಲ್ದಾಣದಲ್ಲೀಗ ಇಳಿಯುತ್ತಿರುವುದರಿಂದ ತಂತಮ್ಮ ರಕ್ಷಣಾ ಬೆಲ್ಟುಗಳನ್ನು ಭದ್ರಪಡಿಸಿ ಕೊಳ್ಳಬೇಕೆಂಬ ಸೂಚನೆ ನಮಗೆ ಬಂತು. ಆ ನಿಲ್ದಾಣದಲ್ಲಿಳಿದೆವು. ಇಷ್ಟೇ ಬಣ್ಣದ, ತರುಣನೊಬ್ಬನು ನಯವಾಗಿ ನಮ್ಮ ಪಾಸ್‌ಪೋರ್ಟುಗಳನ್ನು ಕೇಳಿ ಪಡಕೊಂಡ ಬಳಿಕ ನಾವು ನಿಲ್ದಾಣದಲ್ಲಯೇ ಕ್ಷೌರ ಮತ್ತು ಮುಖಮಜ್ಜನ ಮಾಡಿಕೊಂಡೆವು. ಅಲ್ಲಿ ಪ್ರಧಾನ ಮಂತ್ರಿಗಳನ್ನು ಅಭಿನಂದಿಸಲು ಬಂದವರಾರೂ ಕಂಡುಬರಲಿಲ್ಲ. ಫಲಾಹಾರಕ್ಕೆ ಕುಳಿತಲ್ಲಿ ನಾನು ಅವರೊಡನೆ ಮಾತಾಡಿದೆ. ಬಹಳ ಅಗಲಮೂಗುಗಳದ್ದ—ಒಬ್ಬರಕೆಲಸಕ್ಕೆನೊಬ್ಬರು ವಿಶೇಷ ಅಡ್ಡ ಬರುವಂತೆ ತೋರುತ್ತಿದ್ದ ಪರಿಚಾರಕರು ಅಲ್ಲಿ ನಮಗೆ ತಿಂಡಿ ಸರಬರಾಯಿಮಾಡಿದ್ದರು. ತುಸು ಹೊತ್ತಿನಲ್ಲಿ ಹಿಂದೀಯರು ಕೆಲವರು ಅಲ್ಲಿಗೆಬಂದು ಪಂಡಿತಜೀಗೆ ಪುಷ್ಪಮಾಲೆ ಹಾಕಿದರು. ವರಾಂಡದಲ್ಲಿ ಕುಳಿತುಕೊಂಡು ಪಂಡಿತಜೀ ಅವರೊಂದಿಗೆ ಸುಮಾರು ಹದಿನೈದು ಮಿನಿಟು ಮಾತಾಡಿದರು. ಪಂಡಿತಜೀಯ ಆಗಮನದ ದಿನದ ಕುರಿತು ಅಲ್ಲಿ ತಪ್ಪಭಿಪ್ರಾಯ ಹರಡಿತ್ತೆಂದೂ, ಕೆಲವು ಪ್ರಮುಖಜನರು ಆ ಮೊದಲದಿನದ ಮುಂಜಾನೆಯಲ್ಲೇ ಪಂಡಿತರ ಆಗಮನ ನಿರೀಕ್ಷೆಯಿಂದ ನಿಲ್ದಾಣದಲ್ಲಿ ಕಾದುನಿಂತು ಹೋಗಿದ್ದರೆಂದೂ ತಿಳಿದುಬಂದಿದೆ. ನಿದ್ದೆಯ ಅಂಶವನ್ನೂ ಉಳಿದಿದ್ದ ಮತ್ತು ಕಾಲುಗಳಲ್ಲಿ ಮಡಚಿದ ಒತ್ತಡ ಯಾತನೆಯುಳಿದಿದ್ದ ನಾವು ಕೊನೆಗೆ ಮತ್ತೊಮ್ಮೆ ನಮ್ಮ ವಿಮಾನವೇರಿ ಆ ನೀಲಾಕಾಶದಲ್ಲಿ ತೇಲಿಹೋದೆವು. ಪಸಂದಾಗಿ ತನಖಿಮಾಡಲ್ಪಟ್ಟ ನಮ್ಮ ಪಾಸ್‌ಪೋರ್ಟುಗಳು, ಸದಾ ಉತ್ಸಾಹ ಮತ್ತು ಸೊಬಗಿನಿಂದ ರಂಜಿಸುತಿದ್ದ ವಿಮಾನಾತಿಥ್ಯಕಾರಿಣಿಯಿಂದ ನಮಗೆ ಮರಳಿ ದೊರೆತವು. ಆ ವೇಳೆ ನಾವು ತಲಪಬೇಕಾಗಿದ್ದುದು ಕೈರೋದಲ್ಲಿ; ಆಗ ನಾವು ಮೆತ್ತಗೆ ಹರಡಿದ್ದ ಬಿಳೀಮೋಡ ಶರಧಿಯ ಮೇಲ್ಭಾಗದಲ್ಲಿ ಸವಾರಿ ಮಾಡುತಿದ್ದೆವು. ನಮ್ಮ ಕೆಳಗಡೆಯಲ್ಲಿ ತಿರುಗುತ್ತಿರುವ ಭೂಗೋಲದಿಂದ ನಾವು, ಪೂರ್ಣ ಪ್ರತ್ಯೇಕಗೊಂಡಿರುವಂತೆ ತೋರಿತು. ಅಂತಹ ಮನಾಕರ್ಷಕ ಚಲನ ವಲನವೇನೂ ಅಲ್ಲಿರಲಿಲ್ಲ. ಎರಡು ಅಪಾರತೆಗಳ ಮಧ್ಯದ ನಮ್ಮದೇ ಆದ ಚಿಕ್ಕ ಚೊಕ್ಕ ಪ್ರಪಂಚದಲ್ಲಿ ನಾವು ತೂಗಾಡುತಿದ್ದೆವಷ್ಟೆ. ಅಲ್ಲೇ ಇರುವುದರಲ್ಲಿ ಸೊಗಸಿತ್ತು; ಆದರೆ ಸ್ವಲ್ಪ ಹೊತ್ತಿನಲ್ಲೇ ನಮ್ಮ ಕೆಳಗಡೆಯಲ್ಲಿ ಮತ್ತೊಮ್ಮೆ ಮರುಭೂಮಿ ಕಾಣಿಸಿಕೊಂಡಿತು; ಆಲ್ಪ್ಸ್ ಪರ್ವತಗಳ ವಿಹಂಗಮ ನೋಟದೊಡನೆ ನೈಲ್‌ನದಿಯನ್ನು ದಾಟಿ ತುಸು ಹೊತ್ತಿನಲ್ಲೇ ಕೈರೋದ ಮೇಲ್ಛಾವಣಿಯಾಗಿ ಹರಡಿದ್ದ ಆ ಕಠೋರ ಹಿಮಗಾಳಿಯೊಳಗೆ ನಮ್ಮ ತಲೆ ತುರುಕಿಸಿದೆವು.

ಆ ಪ್ರಕೃತಿ ಸೌಂದರ್ಯ.

ನನಗೆ ಛಳಿ ಬಹಳವಾಗಿ ಹಿಡಿದುಹೋಗಿತ್ತು; ಕೊನೆಗಲ್ಲಿಯ ಅಮೋಘ ಊಟ ಮತ್ತು ಪ್ರಧಾನ ಮಂತ್ರಿಗಳ ಚಲನವಲನದ ನೋಟಕೂಡಾ ಹಾಗೆಯೇ ಆಯಿತು. ಅಲ್ಲಿ ಬಹಳ ಮಂದಿ ಸೇರಿದ್ದ ಇಜಿಪ್ಟಿನ ಅಧಿಕಾರಿಗಳೆಲ್ಲ ಛಳಿ ಹಿಡಿದವರಂತೆಯೂ ನಿರಾಸಕ್ತರಂತೆಯೂ ತೋರಿದರು; ಹಳೇ ಮರ್ಜಿಯ ಉದ್ದ ಹಾಗೂ ಹಾಸ್ಯಾಸ್ಪದ ಗವನುಗಳನ್ನು ತೊಟ್ಟುಕೊಂಡಿದ್ದ ಕೆಲಮಂದಿ ಕೆಲಸಗಾರರ ಹೊರತು ಬೇರೆ ಜನರಾರೂ ಅಲ್ಲಿರಲಿಲ್ಲ. ನನ್ನ ಆಯಕಟ್ಟಿನ ಸಲೂನಿಗೆ ಮರಳಿ ಬಂದು ಆಕಾಶದ ಆ ನನ್ನ ಚಿಕ್ಕ ಪ್ರಪಂಚದಲ್ಲಿ ಪುನಃ ಸ್ಥಾಪನೆಗೊಂಡಾಗ ನನಗಾನಂದವಾಯಿತು. ಅತಿ ಬೇಗನೆ ನಾವು ಭೂಮಧ್ಯ ಸಮುದ್ರವನ್ನು ದಾಟಿದೆವು. ವಿಮಾನ ನೌಕರರು ಕೈರೋದಲ್ಲಿ ಬದಲಾಗಿದ್ದರು. ಇಟಲಿಯ ಅಂಗುಷ್ಠ ಪ್ರದೇಶವನ್ನು ಈಗ ದಾಟುತ್ತಿದ್ದೇವೆಂದು ನಮ್ಮ ಹೊಸ ಕೇಪ್ಟನನು ನಮಗೆ ತಿಳಿಸಿದ. ಒಂದು ಭೂಪಟದಂತೆ ಅದು ನಮ್ಮ ಕೆಳಗಡೆಯಲ್ಲಿ ಹರಡಿದ್ದಿತು. ಅಡಿಭಾಗದ ಆ ಅಮೋಘ ದೃಶ್ಯವು ಪಂಡಿತ ನೆಹರೂಗೆ ಮತ್ತು ನಿಜಕ್ಕೂ ಎಲ್ಲರ ಮನಸ್ಸಿಗೆ ಬಹಳವಾಗಿ ಹಿಡಿಯಿತು. ಅಲ್ಲೊಮ್ಮೆ ಇಲ್ಲೊಮ್ಮೆ ಕೊರ್ಸಿಕಾದ ಕಾಡು ಪರ್ವತಗಳ ಮತ್ತು ಹಿಮಾಚ್ಛಾದಿತ ಉನ್ನತ ಆಲ್ಪ್ ಶಿಖರಗಳ ನೋಟ. ಪಂಡಿತ ನೆಹರೂಗಳು ಕಿಟಕಿಯಿಂದ ಕಿಟಕಿಗೆ ಚಲಿಸುತ್ತಾ, ನಾವು ಮೇಲ್ಭಾಗದಲ್ಲಿದ್ದ ಆ ಕಾಡುಭೂಮಿಯನ್ನು ಪರೀಕ್ಷಿಸಿ ನೋಡುತ್ತಿದ್ದರು. ಅವರು ಕುಳಿತಿದ್ದುದು ವಿಮಾನದ ಬಲಭಾಗದ ಬದಿಯಲ್ಲಿ. ಅಲ್ಲಿ ಕುಳಿತುಕೊಂಡರೆ ಅವರ ಸ್ವಂತ ಕಿಟಕಿಯಿಂದಲೇ ಎಲ್ಲಾ ಸಂಗತಿಗಳೂ ಸಾಕಷ್ಟು ತೋರಿಬರುತಿದ್ದುವು. ಆದರೂ ನನ್ನ ತಲೇಮೇಲಿಂದ ಬಗ್ಗಿ, ನನ್ನ ಕಿಟಕಿಯಿಂದಲೂ ಅವರು ಹೊರಗಿಣುಕಲಾಗುವಂತೆ, ನಾನು ಆಗಾಗ ನನ್ನ ಆಸನದಲ್ಲಿ ಕೆಳಗಡೆಗೊತ್ತಿ ತಗ್ಗಿ ಕುಳಿತುಕೊಳ್ಳಬೇಕಾಗುತಿತ್ತು.

ಭಾರತದಿಂದ ಬ್ರಿಟನ್ನಿಗೆ ಆಕಾಶ ಪ್ರಯಾಣವೆಂಬುದು ವಿಶೇಷ ಚಿತ್ತಾಕರ್ಷಕ ಸಂಗತಿ. ಆದರೆ ಆ ದೃಶ್ಯಮಾತ್ರದಿಂದಲೇ ಕೊಟ್ಟ ಹಣ ಬಂತೆನ್ನಬೇಕು. ಪರ್ವತ ಪಮಾಣೀಯತೆ, ಶಿಖರಗಳ ಎತ್ತರ, ಬಯಲುಗಳ ವಿಸ್ತಾರದ ಕುರಿತು ಲಕ್ಷ್ಯಪೂರ್ವಕವಾದ ಒಂದೆರಡು ಮಾತುಗಳನ್ನಾಡುವದಕ್ಕಿಂತ ಹೆಚ್ಚಿಗೆ ಮಾಂಸಗೊಳ್ಳದಷ್ಟು ದೂರದ ಮತ್ತು ಉದ್ದದ ಪಯಣಗಳನ್ನು ನಾನು ಮಾಡಿದ್ದೇನೆ. ಹೀಗಿದ್ದರೂ ಆಲ್ಪ್ಸ್ ಪರ್ವತಗಳ ಮೇಲ್ಗಡೆಯ ಹಾರಾಟವೆಂಬುದ

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯು ಜರೂರಾತಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ. ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತಃ ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕನಿಷ್ಠ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ.

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದುಕೋಟಿ ರೂಪಾಯಿಗಳ ನಿಹಿನಾಮೆ

ಟಿ. ಎ. ಪೈ.

ಜನರಲ್ ಮೆನೇಜರ್

ಕರ್ನಾಟಕ ಏಕೀಕರಣವೇ ಕನ್ನಡ ಜನತೆಯ ಮುಖ್ಯ ಧ್ಯೇಯ!

ಅಂತೆಯೇ ಜನ ಸಾಮಾನ್ಯರ ಸೇವೆಯೇ ಸುಧಾರಿವರ ಮುಖ್ಯ ಗುರಿ!

ಬ್ರೊಂಕಾಸ್ಟ್ರಾ ಕ್ಯೂರಾ

ಇದು ಎಂತಹ ಭಯಂಕರ ಆಸ್ತಮಾ, ಉಬ್ಬಸ, ಶ್ವಾಸ, ಕಾಸಗಳನ್ನು ತಕ್ಷಣವೇ ಗುಣಪಡಿಸುವ ಅದ್ಭುತ ಶಕ್ತಿವರ್ಧಕ ಟಾನಿಕ್.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ ವಿಚಾರಿಸಿ:

ದಕ್ಷಿಣ ಭಾರತದ ಪ್ರಮುಖ ವಿತರಣಕರ್ತರು:—

ಯು. ಐ. ಬಿ. ಬಿ. ಎಂಡ್ ಕಂಪೆನಿ,

ಪೋಸ್ಟ್ ಬೋಕ್ಸ್ ನಂಬ್ರ 38, ರೋಯಲ್ ಮಹಾಲ್, ಉಡುಪಿ, ದ ಭಾ.

ನನ್ನಿಂದ ಮರೆಯಲಾಗದಂತಹ ಸಂಗತಿಯಾಗಿತ್ತು. ಸುತ್ತುವರಿದ ನೋಟ ಮತ್ತು ಒಬ್ಬನಿಗಳೆಡೆಯಿಂದ ನಮ್ಮ ಕಡೆಗೆ ಚಾಚಿ ನಿಂತಿದ್ದ ಅತ್ಯಂತ ದೊಡ್ಡ ಬಿರುಸು ಬಂಡೆಗಳ ಸಾಲು ಸಾಲೇ ಅಲ್ಲಿತ್ತು; ಅಲ್ಲಲ್ಲಿ ಕಡಿದಾದ ಬಂಡೆಗಳ ಅಥವಾ ಪರ್ವತ ಶಿಖರಗಳ ಪಕ್ಕದಡಿಯಲ್ಲಿ, ಎಳೇ ಯುವತಿಯ ವದನದಂತೆ ಶುಭ್ರ ಹಾಗೂ ಕಳಂಕ ರಹಿತವಾದ ಹಿಮದ ಹೊದಿಕೆಯು ಇಲ್ಲಿಂದಲ್ಲಿ ವರೆಗೂ ಪೂರ್ತಿ ಮುಚ್ಚಿಹೋದ ರಮಣೀಯ ದೃಶ್ಯ; ಬೇರೊಂದೆಡೆ ಪರ್ವತ ಬೆಟ್ಟಾಳಿಗಳ ಮಧ್ಯದಲ್ಲಿ ನುಸುಳಿಕೊಳ್ಳುತ್ತಾ ಒಮ್ಮೆಲಿಗೆ ಬೀಳುವ ಚಂಚಲ ಕಿರಿಪ್ರವಾಹ. ಒಂದು ಸಲ ಒಂದು ಸಣ್ಣ ಹಳ್ಳಿಯ ಜನರ ಚಲನವಲನಗಳು ನಮಗಲ್ಲಿ ತೋರಿಬಂದುವು. ತಮ್ಮ ಸಂಪತ್ತುಗಳಾದ ಆಡುಕುರಿಗಳ ಆರೈಕೆಮಾಡುತ್ತಾ ಅಲ್ಲಿ ವಾಸಿಸುತ್ತಿರುವವರ ಜೀವನವು ನಮ್ಮನ್ನು ಕೌತುಕಗೊಳಿಸಿತು. ಅವರು ತಮ್ಮ ಆಶ್ಚರ್ಯವನ್ನೆ ಮರೆತುಬಿಟ್ಟಿರಬಹುದೆ? ಅಥವಾ, ಆ ಪರ್ವತವಲಯದ ಸುದೀರ್ಘ ಜೀವನಾಂತ್ಯದಲ್ಲಿಯೂ ತಮ್ಮೀ ಅಲ್ಪ ಜೀವನದ ಸುಖಸ್ವಪ್ನವನ್ನೇ ಅವರು ಅನುಭವಿಸುತ್ತಿರಬಹುದೆ?

ಅಷ್ಟರಲ್ಲಿ ಅಕಸ್ಮಾತ್ತಾಗಿ ನಮ್ಮ ಕೆಳಗಡೆ ವಿಸ್ತಾರ ಜಲರಾಶಿ ತೋರಿಬಂತು. ನಾವು 12 ಸಾವಿರ ಅಡಿ ತಗ್ಗಿಗೆ ಜಿನೇವದ ಮೇಲ್ಗಡೆ ಸುತ್ತುತಿರುಗುತ್ತಾ ಇಳಿಯುತ್ತಿದ್ದೆವು. ಒಂದುದಿನ ನಾನೊಬ್ಬ ಸ್ಪೈಕ್ಲಿಸ್ಟನನ್ನು ಕೇಳದೇಹೋಗಿದೆ—ಸಾಕಷ್ಟು ಸರಾಗವಾಗಿ ಫ್ರೆಂಚ್ ಮಾತಾಡಲುಬಾರದ ನನಗೆ ಆ ಭಾಷೆಯಲ್ಲೇ ಮಾತಾಡಬೇಕಾದ ಅನಿವಾರ್ಯವಾಗುವ ಸಂದರ್ಭಗಳಲ್ಲಿ ನಾನು ಬಾಯಿತೆರೆಯುವಾಗಲೆಲ್ಲಾ ನನ್ನ ಬಾಯಿಯಿಂದ ಉರ್ದು ಭಾಷೆಯೇ ಹೊರಬೀಳಲು ಕಾರಣವೇನು ಎಂದು ಅವನನ್ನು ವಿಚಾರಿಸಿ ತಿಳಿಯಬೇಕಾಗಿದೆ—ಅಲ್ಲಿಯ ವಿಮಾನ ಪ್ರಯಾಣಿಕರಿಗಾಗಿ ಇರುವ ಟಿಕೆಟ್ಟುಗೃಹದ ಹೊರಗಡೆಯಲ್ಲಿ ಪಂಡಿತಜೀಯ ಬೆನ್ನುಹಿಡಿದು ಹೋಗದಂತೆ ನನ್ನನ್ನು ತಡೆದಿಟ್ಟ ಪಹರೆಗಾರನು ತನ್ನ ಫ್ರೆಂಚ್ ಭಾಷೆಯಿಂದ ನನ್ನೊಡನೆ ಸಮರ್ಥಕವಾಗಿ ಮಾತಾಡಿದಾಗ ಆ ಸಂದರ್ಭದಲ್ಲಿ ನನ್ನ ಬಾಯಿಂದ ಉರ್ದುವಿನ ಹೊರತು ಬೇರೆ ಭಾಷೆಯೇ ಹೊರಡದಾಯಿತು. ಇದರಿಂದಾಗಿ ನನ್ನ ಕೆಲಸ ಆಗದೆ ಹೋಯಿತು.

ಪಯಣದ ಕೊನೆ

ಅಲ್ಲಿಯ ನನ್ನಊಟವು ತನ್ನ ಪ್ರಯಾಣದ ತುತ್ತತುದಿಮುಟ್ಟುವ ಮೊದಲೇ ನಾವು ನಮ್ಮ ಲಂಡನ್ ಪಯಣದ ಕೊನೆಯ ಅಂಕದಲ್ಲಿದ್ದೆವು. ಕಡೆಯ ಬಾರಿ ಸ್ವಚ್ಛ ಮಾಡಿಕೊಳ್ಳೋಣವೆಂದು ನಾನು ಸ್ನಾನಗೃಹಕ್ಕೆ ಪ್ರವೇಶಿಸುತ್ತೇನೆ— ಪಂಡಿತಜೀ ಕೂಡಾ ಅಲ್ಲಿದ್ದಾರೆ! ಮದ್ರಾಸಿನ ಓರ್ವ ಚಿಕ್ಕ ಹುಡುಗ, ಪಂಡಿತಜೀಯ ಹಸ್ತಪ್ರತಿಯನ್ನು ತರುವ ಕೆಲಸವನ್ನು ನನಗೊಪ್ಪಿಸಿದ್ದುದು ಆಗ ಥಕ್ಕನೆ ನೆನಪಾಯಿತು. ಈ ಮಾದರಿಯ ಕೆಲಸಗಳನ್ನು ನಾನು ವಹಿಸಿಕೊಂಡಿದ್ದುದು ಇದುಪ್ರಥಮ ಸಲವೇನೂ ಅಲ್ಲ; ಅದು ನನಗೆಲ್ಲಕ್ಕೂ ಮೆಚ್ಚುಗೆಯ ಕೆಲಸವಾಗಿರಲಿಲ್ಲವೆಂದು ಒಪ್ಪುತ್ತೇನೆ. ಯಾರಾದರೂ ದೊಡ್ಡ ಮನುಷ್ಯರೊಡನೆ, ವಿಶ್ವಪ್ರಪಂಚದ ಆಗುಹೋಗುಗಳ ಕುರಿತು ಅಥವಾ ತಾತ್ವಿಕ ವಿಷಯಗಳ ಕುರಿತು ಒಂದರ್ಧ ಘಂಟೆ ಸಂಭಾಷಿಸಿದ ಪತ್ರಿಕೋದ್ಯಮಿಯೊಬ್ಬನ, ಕೊನೆಗೆ ಅವರಕೈಬರಹ ಯಾಚಿಸುವ ದೌರ್ಬಲ್ಯ ಪ್ರದರ್ಶನದೊಡನೆ ಆ ಸಂಭಾಷಣೆಯನ್ನು ಅಂತ್ಯಗೊಳಿಸುವದು ಅಸಹ್ಯವೇಸರಿ. ಆಗ ಅಂಥವನು ಅಗಾಧ ವಿಷಯಗಳ ಪ್ರಬುದ್ಧ ಬುದ್ಧಿವಂತಿಕೆಯ ಸ್ಥಾನದಿಂದ ಹುಡುಗಾಟಿಕೆಯ ಅಭಿಲಾಷೆಗಳನ್ನು ಪೂರೈಸಿಕೊಳ್ಳುವ, ನಾಯಕ ಭಕ್ತಿಭ್ರಮೆ ಹಿಡಿದ ಸಣ್ಣಹುಡುಗನ ಸ್ಥಾನಕ್ಕೆ ಇಳಿಜಾರುತ್ತಾನೆ. ಆದರೂ ಇಂತಹದಕ್ಕೆ 'ಆಗುವದಿಲ್ಲ' ಎಂದು ಹೇಳಿಬಿಡುವ ಅಭ್ಯಾಸ ಇನ್ನೂ ನನಗಾಗಿಲ್ಲ. ಕರವಸ್ತ್ರದಿಂದ ತನ್ನ ಮುಖವೊರಸಿಕೊಳ್ಳುತ್ತಿದ್ದಂತೆಯೇ ಪಂಡಿತನೆಹರುಗಳು ನನ್ನ ವಿಜ್ಞಾಪನೆಯನ್ನು ಸ್ವೀಕರಿಸಿದರು. ಅವರಾಗ ಪುಳಕೋತ್ಸಾಹ ಮತ್ತು ಹರ್ಷಚಿತ್ತದಿಂದಿದ್ದರು. "ಏನಡ್ಡಿ, ಆಗಬಹುದು" ಎಂದು ಅವರೆಂದಾಗ ನನ್ನ ಹೆಗಲಮೇಲೆ ಆ ವರೆಗೂ ಕುಳಿತಿದ್ದ ಅಷ್ಟೊಂದು ಹಗುರವೇನೂ ಅಲ್ಲದ ಒಂದೆ ಹೊರೆಯಿಳಿಯಿತು. ಇಷ್ಟು ಹೊತ್ತಿಗೆ ಆ ಕೈಬರೆಹವು ಮದ್ರಾಸಿನ ನನ್ನ ಹುಡುಗ ಸ್ನೇಹಿತನ ಕೈಸೇರಿರಬೇಕು.

ಇಂಗ್ಲಿಷ್ ಕಾಲುವೆಯನ್ನು ಸೇರುವ ಮೊದಲೇ ನಾನು ಪಂಡಿತಜೀಯೊಡನೆ ಕಡೇ ಮಾತುಗಳನ್ನು ಆಡಿದುದು ಮಾತ್ರವಲ್ಲ; ಅಸ್ವಚ್ಛನಾಗಿ ಅವು ಕೆಟ್ಟುಹೋದರೂ ಅವರ ಒಂದೋ ಎರಡೋ ಭಾವಚಿತ್ರಗಳನ್ನೂ ತೆಗೆಯಲು ಸಮರ್ಥನಾದೆ. ನಾವೀಗ ಇಂಗ್ಲೆಂಡಿನ ಕರಾವಳಿಯನ್ನು ಸೇರುತ್ತಿದ್ದೇವೆಂದು ಆಗಲೇ ಕೆಪ್ಟನ್ ತಿಳಿಸಿದ. ಆಗ ಪೂರ್ಣ ಕತ್ತಲಾಗಿತ್ತು; ನಾವು ಬ್ರಿಟನನ್ನು ದಾಟಿ ಹೋಗುತಿದ್ದಂತೆ ಕಲಾಪೂರ್ಣ ವಿದ್ಯುದ್ದೀಪಾಲಂಕಾರದಿಂದ ಅದು ರಂಜಿಸುವ ದೃಶ್ಯ ತೋರಿತು. ರಾಜಧಾನಿಯನ್ನು ನಾವು ಮುಟ್ಟುತ್ತಿದ್ದಂತೆ ನಮ್ಮ ಭದ್ರತಾ ಬೆಲ್ಟುಗಳನ್ನು ಬಿಗಿಪಡಿಸಿಕೊಂಡೆವು. ಒಂದರ ಹಿಂದೊಂದು ಮೆರವಣಿಗೆಯಾಗಿ ಹೋಗುತ್ತಿರುವ ಅಸಂಖ್ಯಾತ ಕಾರುಗಳ ಲೈಟುಗಳೊಂದಿಗೆ ರಸ್ತೇದೀಪ ಪಂಕ್ತಿಗಳ ಮೇಲ್ಭಾಗದಲ್ಲಿ ನಾವು ಸುಮಾರು ಅರ್ಧಘಂಟೆ ಹಾರಾಡಿರಬಹುದೆಂಬುದರಿಂದ, ಇದೀಗ ಪ್ರಥಮ ಬಾರಿ ನನಗಾ ನಗರದ ವಿಸ್ತಾರವು ಮನಸ್ಸಿಗೆ ಹೊಳೆಯಿತು. ಹೀಥ್ರೋವಿನ ಮಹಾಲಂಡನ್ ಹೊಸ ನಿಲ್ದಾಣದಲ್ಲಿ ನಾವು ಇಳಿದಾಗ ಅಲ್ಲಿ ಹೆಚ್ಚಿಗೆ ನೋಡಲಾಗಲಿಲ್ಲ. ಇಳಿದ ಮರುಕ್ಷಣದಲ್ಲೇ ಪಂಡಿತ ನೆಹರುಗಳು, ಅವರನ್ನೇ ಕಾಯುತ್ತಿದ್ದ ಜನಸಂದಣಿಯನಡುವೆ ಸೇರಿಹೋದರು. ಹಸ್ತಲಾಘವಗಳ ಮತ್ತು ಫೋಟೋಗ್ರಾಫರರು ಚೆಲ್ಲುವ ಪ್ರಕಾಶಗಳ ಮಹಾಂದೋಲನವೇ ನಡೆದಿತ್ತು. ನಡುಕಬರಿಸುವ ಲಂಡನಿನ ಆ ಥಂಡಾಹವೆಯಲ್ಲಿ ನಾನು ಪ್ರಧಾನಮಂತ್ರಿಗಳ ಬೆನ್ನುಹಿಡಿದು, ನನ್ನ ದೇಶವೀಗ ನನಗೇನನ್ನು ಕೊಡಲಿದೆಯೋ ಅದನ್ನೆದಿರುಗೊಳ್ಳಲು ಮುಂಧಾವಿಸಿದೆ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಭಾರತದ ಭಂಡಾರ—

ಅವ್ಯವಹಾರ್ಯ ಆರ್ಥಿಕ ಧೋರಣೆಯಿಂದ ಸ್ಥಿತಿ ಕೆಟ್ಟಿದೆ.

ಒಂದು ರಾಷ್ಟ್ರದ ರಾಜಕೀಯ ಮತ್ತು ಆರ್ಥಿಕಸ್ಥಿತಿಯ ಹೊರರೂಪವನ್ನಷ್ಟೇ ಸಾಮಾನ್ಯ ಜನರು ಪರಿಚಯಮಾಡಿಕೊಳ್ಳಬಲ್ಲರಲ್ಲದೆ, ಒಳಗಿನ ಗೂಢ ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವದು ಅವರಿಂದ ಅಸಾಧ್ಯ. ಮಾತು ಮತ್ತು ಆಡಂಬರಗಳ ಮೇಲಿನಿಂದಲೇ ನಿಜಸ್ವಭಾವ ಮತ್ತು ಸ್ಥಿತಿಯನ್ನು ನಿರ್ಣಯಿಸುವದು ಕಷ್ಟವೆಂಬ ಮಾತು ಒಬ್ಬವ್ಯಕ್ತಿಯ ಕುರಿತು ಹೇಗೋ ಹಾಗೆಯೇ ಒಂದು ರಾಷ್ಟ್ರಕ್ಕೂ ಅನ್ವಯಿಸುತ್ತದೆ. ಭಾರತದ ಭವಿಷ್ಯವು ಭದ್ರವಿದೆಯಾದರೂ ಸಾಮಾನ್ಯರ ತಿಳುವಳಿಕೆಗೆ ಬಾರದ ಗೂಢ ಅಲ್ಲಿದೆ ಎಂಬುದನ್ನು ಮರೆಯಬಾರದು. ಹೊಸತಾಗಿ ದೊರೆತ ಸ್ವಾತಂತ್ರ್ಯ ಮತ್ತಾದಸೆಯಿಂದೆದ್ದ ವಿಶೇಷ ನಷ್ಟಗಳ ದೆಸೆಯಿಂದ ಭಾರತ ಸರಕಾರದ ಭಂಡಾರವಿಂದು ಯಾವ ಸ್ಥಿತಿಯಲ್ಲಿದೆ ಎಂಬುವದರ ಸಾಮಾನ್ಯ ಜ್ಞಾನವಾದರೂ ಜನತೆಗಿರಬೇಕಾದುದು ಅಗತ್ಯ. ಪುನರ್‍ರಚನೆ ಹಾಗೂ ಪುಷ್ಟೀಕರಣಕ್ಕಾಗಿ ಸ್ಥಾಪನೆಗೊಂಡಿರುವ ಅಂತರ್‍ರಾಷ್ಟ್ರೀಯ ಬೇಂಕಿನ ಪ್ರತಿನಿಧಿಗಳು ಇತ್ತೀಚಿಗೆ ಭಾರತಕ್ಕೆ ಬಂದು ಎಲ್ಲವನ್ನು ಪರಿಶೀಲಿಸಿ ಭಾರತ ಸರಕಾರಕ್ಕೆ ಕೊಟ್ಟಿರುವ ಎಚ್ಚರಿಕೆಯು ಕಣ್ಣುತೆರೆಯಿಸುವಂತಹದಿದೆ. ಹಿಂದೀ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು, ತಮ್ಮ ಹಣಕಾಸಿನ ಧೋರಣೆಗಳನ್ನು ಆರ್ಥಿಕ ನೀತಿಯನ್ನಾಧರಿಸಿ ಕೈಕೊಳ್ಳದೆ ರಾಜಕೀಯ ಹಾಗೂ ತಾತ್ವಿಕ ದೃಷ್ಟಿಯಿಂದ ರೂಪಿಸುತ್ತಿದ್ದು, ಅವುಗಳ ಸ್ಥಿರತೆಯ ಬಗ್ಗೆ ತಮಗೆ ಭರವಸೆಯಿಲ್ಲವೆಂಬ ಅಭಿಪ್ರಾಯವನ್ನು ಅಂತರ್‍ರಾಷ್ಟ್ರೀಯ ಪರಿಶೋಧಕರು ಸೂಚಿಸಿರುವರೆಂದು ತಿಳಿದುಬರುತ್ತದೆ.

ಭಾರತವು ತನ್ನ ದೊಡ್ಡ ಪರಿಮಾಣದ ಉದ್ದಿಮೆಗಳಿಗಾಗಿ, ಡೋಲರು ಸಾಲಗಳನ್ನು ಯಾಚಿಸಿ, ಅಂತರ್‍ರಾಷ್ಟ್ರೀಯ ಬೇಂಕಿಗೆ ಅರ್ಜಿಹಾಕಿದ್ದಿತು. ಸಾಲಕೊಡುವ ಗಿರಾಕಿಯ ಸ್ಥಿತಿ ಹೇಗಿದೆಯೆಂದು ನೋಡಿಕೊಳ್ಳಬೇಕಷ್ಟೆ? ಅದಕ್ಕಾಗಿ ಭಾರತದ ಈ ಉದ್ದಿಮೆ ಯೋಜನೆಗಳ ಯೋಗ್ಯತೆಯೊಂದಿಗೆ, ಭಾರತದ ಆರ್ಥಿಕ ಸ್ಥಿತಿಗತಿಗಳನ್ನೂ ತಿಳಿದುಕೊಂಡು ಬರಲಿಕ್ಕಾಗಿಯೇ ಆ ಬೇಂಕು ತನ್ನೀ ಪ್ರತಿನಿಧಿಗಳನ್ನು ಕಳುಹಿಸಿದ್ದಿತು. ಈ ಪ್ರತಿನಿಧಿಗಳ ಕೆಲಸ ಅಂತರ್‍ರಾಷ್ಟ್ರೀಯ ಬೇಂಕಿಗೆ ತಮ್ಮ ಅಭಿಪ್ರಾಯವನ್ನು ತಿಳಿಸುವದೊಂದೇ. ಆದರೂ, ಅವೇಕೋ, ಅವರು ಭಾರತ ಸರಕಾರಕ್ಕೆ ಬುದ್ಧಿ ಹೇಳುವ ಕರ್ತವ್ಯವೂ ತಮ್ಮ ಪಾಲಿಗಿದೆ ಎಂದು ನೆನಸಿಕೊಂಡು ಅದನ್ನೂ ಮಾಡಿದ್ದಾರೆ. ಅವರು ಎತ್ತಿಹೇಳಿರುವ ಕೆಲವು ವಿಷಯಗಳು ವಿಚಾರಾರ್ಹವಿವೆ.

ಭಾರತದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಆರ್ಥಿಕ ಧೋರಣೆಗಳಲ್ಲಿ ಪರಸ್ಪರ ಹೊಂದಿಕೆಯ ಸಾಮ್ಯತೆಯಿಲ್ಲದಿರುವುದರ ಕಡೆಗೆ ಈ ತಜ್ಞರು ಭಾರತ ಸರಕಾರದ ಲಕ್ಷ್ಯವನ್ನೆಳೆದಿದ್ದಾರೆ. ಉಪ್ಪಿನ ಸುಂಕ ರದ್ದತಿ, ಪಾನನಿಷೇಧ ಮತ್ತು ಕೆಲವು ಪ್ರಾಂತ್ಯಗಳ ಜಮೀನ್ದಾರೀ ಬರ್ಖಾ-
ಸ್ತು ಧೋರಣೆ ಮುಂತಾದುವುಗಳಿಂದಾ
ಎದ್ದಿರುವ ಆರ್ಥಿಕ ಅಸ್ತವ್ಯಸ್ತತೆಯನ್ನವ
ತೋರಿಸಿದ್ದಾರೆಂದು ತಿಳಿದುಬಂದಿದೆ. ಭಾ
ರತದ ಭಂಡಾರವು ತೀವ್ರಗತಿಯಿಂದ ಬ
ದಾಗುತ್ತಿರುವ ಮತ್ತೊಂದು ವಿಷಯ
ಅವರ ಮನಸ್ಸಿಗೆ ವಿಶೇಷ ನಾಟಿದಂತಿ
ಬ್ರಿಟನಿನಲ್ಲಿರುವ ತನ್ನ ಸ್ಟರ್ಲಿಂಗ್ ಉ
ತಾಯವನ್ನು ಭಾರತವೀಗ ಭರದಿಂದ ವ್ಯ
ಮಾಡುತ್ತಿದೆ- ಮಾತ್ರವಲ್ಲ, ಅದರ ನಗ
ಉಳಿತಾಯ ಕೂಡಾ ತೀವ್ರ ಗತಿಯಿಂ
ಕ್ಷೀಣಿಸುತ್ತಿದೆ. ರಾಷ್ಟ್ರ ವಿಭಜನೆಯಾ
ಭ ಕಾಲದಲ್ಲಿ ಭಾರತದ ಪಾಲಿನ ನಗ
ಜಮೆ 300 ಕೋಟಿ ರೂಪಾಯಿಗಳಿದ
ವು. ಅದು ಪ್ರಚಲಿತ ಆರ್ಥಿಕ ವರುಷ
ಆದಿ ಭಾಗದಲ್ಲೇ 170 ಕೋಟಿಗೆ ಬ
ದು ನಿಂತಿದೆ; ಬಜೆಟ್ ಅಂದಾಜಿನಂ
ಈ ವರುಷದ ಅಂತ್ಯಕ್ಕೆ ಅಲ್ಲಿ ಕೇವಲ 7
ಕೋಟಿಗಳು ಮಾತ್ರ ಉಳಿಯಲಿವೆ. ದೊ
ಡ್ಡ ಉದ್ದಿಮೆಗಳಿಗೆ ಗೂಟ್ಟಿರುವ ರಿಯಾ
ಯಿತಿ, ಮತ್ತು ಅತಿ ಪ್ರಸರಣ ನಿರೋಧ
ವಿವಿಧೋಪಾಯಗಳಾವುದರಿಂದಲೂ ಈ
ರೆಗೆ ಮೂಲಧನ ಕ್ಷಯಿಸದಂತೆ ಮಾ
ಲು ಆಗಿಲ್ಲ. ಇವೆಲ್ಲಾ ವಿಷಯಗಳು
ಅಂತರ್‍ರಾಷ್ಟ್ರೀಯ ಬೇಂಕು ಪ್ರತಿನಿಧಿಗ
ಮೆದುಳುಗಳೊಳಗೆ ಕೀಟಗಳಂತೆ ಕೊ
ಯುತ್ತಿರುವುದರಿಂದ ಇನ್ನು ಬೇಂಕಿನಿಂ
ಭಾರತಕ್ಕೆ ಸಾಲ ದೊರೆಯುವುದು ಹೇಗೋ

ಪರಂಪರಾಗತ ಸ್ಥಿತಿಯನ್ನೇ ಊರ್ಜಿ
ತದಲ್ಲಿಡುವ ಸುತ್ತ ಕೆಲವು ಅವ್ಯವಹಾ
ರ್ಯ ತತ್ವಗಳನ್ನೆತ್ತಿಕೊಳ್ಳುವ ಆಸಕ್ತಿಯ
ಬದಲಿಗೆ, ಸುದೃಢ ವ್ಯವಸ್ಥೆಯಿಂದ ಉದ್ದಿ
ಮೆಗಳ ರಾಷ್ಟ್ರೀಕರಣವನ್ನು ಭಾರತ ಸರ
ಕಾರವು ಕೈಕೊಳ್ಳುತಿದ್ದರೆ ಸ್ಥಿತಿ ಬೇರಾಗು
ತ್ತಿರಲಿಲ್ಲವೇ ಎಂಬ ಪ್ರಶ್ನೆಯೇಳುತ್ತಿದೆ
ಆ ಕಾಲದಲ್ಲಿ ಗಾಂಧಿಜೀ ಸ್ವಾತಂತ್ರ್ಯ
ಹೋರಾಟದ ಪ್ರಥಮಾಂಗವಾಗಿ ಮು



ಶ್ರೀ ಕೊರಡ್ಕಲ್
ಶ್ರೀನಿವಾಸ
ರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ಸೀದಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೩/-

ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ ಪ್ರೆಸ್, ಉಡುಪಿ.

-ಬರಿದಾಗುತ್ತಾ ಸಾಗಿದೆ?

ಸ್ವಕಾರ್ಯಸಾಧಕರ ಬದಲಿಗೆ ಅರ್ಥತಜ್ಞರ ಸಲಹೆ ಪಡೆಯಲಿ!

ದೊಡ್ಡಿದ್ದ ಉಪ್ಪಿನ ಸುಂಕ ರದ್ಧತಿಯನ್ನು ಭಾರತ ಸರಕಾರ ಸಾಧಿಸಿದೆ. ಮಾತ್ರವಲ್ಲ, ಈಗ ತಯಾರಾಗುತ್ತಿರುವ ನವರಾಜ್ಯಾಂಗ ಶಾಸನದಲ್ಲೂ ಉಪ್ಪಿನಸುಂಕದರದ್ಧತಿಯು ಉಲ್ಲೇಖಿಸಲ್ಪಟ್ಟಿದ್ದು, ಅದು ಕೊನೆಯು ಸ್ವಷ್ಟಾಕಾಂಕ್ಷೆಬರುವ ಮೊದಲೇ ತಿದ್ದುಪಡಿಯಾಗದಿದ್ದರೆ ಮುಂದಕ್ಕಾದರೂ ಈ ಸುಂಕವನ್ನು ಹೇರಲು ಸಾಧ್ಯವಿಲ್ಲ. ಬಡವರ ಹೆಸರು ಹೇಳ ರದ್ದಾಗಿರುವ ಉಪ್ಪಿನಸುಂಕದಿಂದ ಭಾರತ ಸರಕಾರಕ್ಕೆ ವರುಷವೊಂದಕ್ಕೆ 10ಕೋಟಿ ರೂಪಾಯಿ ನಷ್ಟವಾದರೂ ಬಡವನ ಉಪ್ಪಿನ ಬೆಲೆ ನಿಜಕ್ಕೂ ತಗ್ಗಿಲ್ಲ. ಗಾಂಧಿಜೀಯ ಇನ್ನೊಂದು ತತ್ವ ಪಾನನಿಷೇಧವನ್ನು ಜಾರಿಗೆ ತಂದುದರಿಂದ ಪ್ರಾಂತಿಕಸರಕಾರಗಳಿಗೆ ಇಷ್ಟರಲ್ಲೇ ಒಟ್ಟಿಗೆ ರೂ. 18 ಕೋಟಿಗಳಷ್ಟು ನಷ್ಟವಾಗಿದ್ದು, ಇನ್ನು ಮುಂದಿನ ನಿಷೇಧಗಳಿಂದ ಪುನಃ ಇಷ್ಟೇವೊತ್ತ ಕಡಿಮೆಯಾಗಲಿದೆ. ಜೀವನಾವಶ್ಯಕಗಳ ಬೆಲೆಯು ಯುದ್ಧಾನಂತರ ನೇಕಡಾ 300ರಷ್ಟು ಏರಿದ್ದರೂ ಭೂಕಂದಾಯವು ಕಳೆದ ಒಂದು ದಶಮಾನಕ್ಕೂ ಹಿಂದಿನ ಕಾಲದಲ್ಲಿದ್ದಷ್ಟೇ ಈಗಲೂ ಇದೆ, ಎಂಬುದು ಹಲವರ ಕಣ್ಣಿಗೆ ಹೊಡೆಯುತ್ತಿದೆ! ಭಾರತ ಸರಕಾರದಿಂದ ನೇಮಕಗೊಂಡಿದ್ದ ಕೆಲವು ಕಮಿಟಿ, ಕಮಿಶನುಗಳು ಭೂಕಂದಾಯವನ್ನು ಹೆಚ್ಚಿಸುವ ಶಿಫಾರಸುಗಳನ್ನು ಮಾಡಿದ್ದರೂ, ಈ ವರೆಗೆ ಆ ಗೊಡವೆಗೆ ಹೋದವರಿಲ್ಲ. ದೊಡ್ಡ ದೊಡ್ಡ ಜಮೀನ್ದಾರರು, ವರ್ಗದಾರರು ಸರಕಾರಗಳಲ್ಲಿರುವುದರಿಂದಲೂ, ಸರ್ವವ್ಯಾಪೀ ಕಂದಾಯಗಾರರ ಮನಸ್ಸನ್ನು ನೋಯಿಸಿದಲ್ಲಿ ತಮ್ಮ ಪಕ್ಷಕ್ಕೆ ಹಾನಿಯಿದೆ ಎಂಬ ರಾಜಕೀಯಮುಂಜಾಗ್ರತೆಯಿಂದಲೂ ಹೀಗಾಯಿತೆಂದು ಕೆಲವರು ದೂರುತಿದ್ದಾರೆ.

ಹೇಗಿದ್ದರೂ ಭಾರತ ಸರಕಾರವೀಗ ಆರ್ಥಿಕರಂಗದಲ್ಲಿ ವಿಶೇಷ ರೀತಿಯ ಕಾರ್ಯಕ್ಕೆಕೈಕೊಳ್ಳದೆ ವಿಧಿಯಿಲ್ಲ. ಕೇಂದ್ರ,ಪ್ರಾಂತಿಕ ಸರಕಾರಗಳೊಳಗೆ ಪರ್ಯಾಲೋಚನೆ ನಡೆದು ಕೇಂದ್ರ ಮತ್ತು ಪ್ರಾಂತಗಳ ಏಕರೂಪೀ ಆರ್ಥಿಕಯೋಜನೆಯು ರೂಪಿಸಲ್ಪಡುವದು ಸಂಭವನೀಯ. ಪ್ರಾಂತಿಕ ಸರಕಾರಗಳಿಂದ ಪೂರ್ಣಸಹಕಾರ ದೊರೆಯದೆಹೋದರೆ, ಅವು ಕೇಂದ್ರದ ಸಹಾಯವಿಲ್ಲದೇನೇ ತಮ್ಮ ಆರ್ಥಿಕ ಆಯವ್ಯಯಗಳನ್ನು ತಾವೇ ಬಾಯಿಗೂಡಿಸಿಕೊಳ್ಳಬೇಕಾಗಿ ಬರಬಹುದು. ಕೇಂದ್ರ ಸರಕಾರವು ತಾನು ನಿಯೋಜಿಸಿರುವ ಉದ್ಯಮಗಳನ್ನು ಇನ್ನೂ ಮುಂದೊತ್ತಲಿಚ್ಛಿಸುತ್ತದಾದರೆ, ತಾನು ಪ್ರೋತ್ಸಾಹಿಸುತ್ತಿರುವ ದೊಡ್ಡ ಉದ್ಯಮೀಮಾಲರಿಂದ ಅವುಗಳಿಗೆ ಸಾಕಷ್ಟು ಸಹಾಯ ದೊರಕದೆಹೋದರೆ, ಆಗ ಅಪ್ರತ್ಯಕ್ಷ ತೆರಿಗೆಗಳನ್ನು ಹೇರುವ ಮೂಲಕವೇ ಅದು ತನ್ನ ಆಯವನ್ನು ಹೆಚ್ಚಿಸಿಕೊಳ್ಳುವದು ಅನಿವಾರ್ಯವಾಗುವದು. ಈಗಲೇ ತೆರಿಗೆ ಹೆಚ್ಚಾಯಿತೆಂಬ ಗೋಣಗಾಟ ಎಲ್ಲೆಲ್ಲೂ ಕೇಳಬರುತ್ತಿರುವಾಗ ಇದರ ಪರಿಣಾಮ ಹೇಗಾದೀತೆಂಬುದನ್ನು ಊಹಿಸಬಹುದು.

ಅಂತೂ ಸ್ವತಂತ್ರಭಾರತ ಸರಕಾರವು ರಾಜಕೀಯ ರಂಗದಲ್ಲಿ ಪಡೆದಂತಹ ಯಶಸ್ಸನ್ನು ಆರ್ಥಿಕರಂಗದಲ್ಲಿ ಪಡೆದಿಲ್ಲವೆಂಬುದು ಮೇಲ್ನೋಟಕ್ಕೆ ತೋರುವಿಕೆಯಂತೆಯೇ ಒಳನೋಟ ಬೀರಿದಾಗಲೂ ಸ್ಪಷ್ಟವಾಗುವ ಸಂಗತಿ. ಅಮೇರಿಕದಂತಹ ಭಂಡವಾಳಶಾಹೀ ವಿಧಾನಗಳ ತಜ್ಞರು ತಮ್ಮ ಧೋರಣೆ ಮತ್ತು ಜ್ಞಾನಾನುಗುಣವಾಗಿ ಇದಕ್ಕೆ ಎಂತಹ ಶವನೋಪಾಯಗಳನ್ನು ಸೂಚಿಸಿದರೂ ರಾಷ್ಟ್ರದ ಪ್ರಚಲಿತ ಆರ್ಥಿಕ ಅಸ್ತಿವಾರವನ್ನೇ ಬದಲಾಯಿಸಿ, ಉದ್ಯಮಗಳ ರಾಷ್ಟ್ರೀಕರಣ ಮಾಡುವ ದೊಂದೇ ಮುಖ್ಯೋಪಾಯವೆನ್ನಬೇಕು. ಇಲ್ಲಿ ಹಿಂದೀ ಸರಕಾರವು ಸಮತಾವಾದಿ ಅರ್ಥತಜ್ಞರ ಸಲಹೆಯಂತೆ ವರ್ತಿಸಬೇಕಲ್ಲದೆ, ಇದುವರೆಗೆ ಮಾಡುತ್ತಾ ಬಂದಿರುವಂತೆ ಕೆಲ ಮಂದಿ ದೊಡ್ಡ ಉದ್ಯಮೀಮಾಲರ ಉಪದೇಶಾನುವರ್ತಿಯಾಗುವದಲ್ಲ. ರಾಜಕೀಯಪ್ರೊಂದಕ್ಕೇನೆ ತಮ್ಮ ಜೀವನವನ್ನು ಮೀಸಲಿಟ್ಟಿದ್ದ ನೆಹರು, ವಲ್ಲಭಾಯಿಗಳಂತಹ ನಾಯಕರಿಗೆ ಒಂದು ರಾಷ್ಟ್ರದ ಆರ್ಥಿಕಾಭಿವೃದ್ಧಿ ಸಾಧಿಸುವಷ್ಟು ಅರ್ಥ ಶಾಸ್ತ್ರಾನುಭವವಿರುವದು ಅಸಾಧ್ಯವೆಂಬುದನ್ನು ಒಪ್ಪಬೇಕು; ಅವರಿಗೆ ದೊರೆಯುವ ಅನುಭವವಾದರೋ ಭಂಡವಾಳಗಾರರಿಂದಲೇ ಎಂದಮೇಲೆ ಪ್ರಮಾದಗಳಾಗುವದು ಸಂಭವನೀಯ. ಭಾರತ ಸರಕಾರವು ಈ ಕುರಿತು ಸಕಾಲದಲ್ಲಿ ಎಚ್ಚರಗೊಳ್ಳಬೇಕಾದುದು ಅಗತ್ಯ.

Notice

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

O S. 35/1949.

ಗುಲಾಬಿ —ವಾದಿ.

ಪದ್ಮಾವತಿ. ಪಟ್ಟ ಶೆಟ್ಟಿ ಪದ್ಮನಾಭ ಶೆಟ್ಟಿ ವಿಧವೆ ಕಾರ್ಕಳ ತಾಲ್ಲೂಕು ಪುತ್ತಿಗೆ ಗ್ರಾಮದ ಮೂಡಬಿದ್ರಿಯಲ್ಲಿ — ಪ್ರತಿವಾದಿಳು.

ಕೋರ್ಟು ಹುಕುಂ ಪ್ರಕಾರ ಪ್ರತಿವಾದಿಗೆಯೂ ಮೂಲಕ ತಿಳಿಸುವುದೇನೆಂದ್ರೆ: ವಾದಿಯು ನಿಮ್ಮ ಮೇಲೆ ಜೀವನಾಂಶ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 17-6-49ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಃ ಯಾ ವಕೀಲರ ದ್ವಾರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು, ತಿಳಿದಿರಲಿ.

(Sd) **V. Ravi Raj**, Advocate for Plff.

ಪುತ್ತೂರು, ತಾ. 24-4-49.

ಮನನೀಯ ಮಾತುಗಳು

“ಭಾರತದ ಆಧ್ಯಾತ್ಮಿಕ ಯಶಸ್ಸನ್ನೆ ನಿಮ್ಮ ತಲೆಮಾರಿನಲ್ಲೂ ಜೀವಂತವಾಗಿರುವಂತೆ ಮಾಡಿದವರು ರಮಣ ಮಹರ್ಷಿಗಳು. ಹಿಂದಿನ ಕಾಲಗಳಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಮತ್ತಿತರ ಸನ್ಯಾಸಿಗಳು ಮಾಡಿದ್ದಂತೆ, ಇವರು ತನ್ನದೇ ಆದ ಹಾದಿಯಿಂದ ಭಾರತದ ಹೆಸರು ಲೋಕದಲ್ಲೆಲ್ಲಾ ಹರಡಿರುವ ಚತುರ ಹಾಗೂ ಅಂತರ್ರಾಷ್ಟ್ರೀ ಜನರಿಂದ ಗೌರವಿಸಲ್ಪಡುವಂತೆ ಮಾಡಿದ್ದಾರೆ”—ರಮಣ ಮಹರ್ಷಿಗಳಿಗೆ ಸಂಬಂಧಿಸಿದ ಪಾತಾಳಲಿಂಗಂ ದೇವಸ್ಥಾನವನ್ನು ತೆರೆಯುತ್ತಾ ಗವರ್ನರ್ ಜನರಲ್ ರಾಜಾಜಿ ಇದೇ ತಾ. 14ರಲ್ಲಿ ತಿರುವಣ್ಣಾಮಲೆಯಲ್ಲಾಡಿದ ಮಾತು.

“ಯುರೋಪಿನಲ್ಲಿ ಸ್ಟಾಲಿನರಿರುವಂತೆ ಏಶ್ಯಾದಲ್ಲಿರುವ ವಿಶೇಷ ಸಮರ್ಥ, ಚುರುಕು ಬುದ್ಧಿಯುಳ್ಳ ಮತ್ತು ಹೆಚ್ಚಿನ ಜ್ಞಾನಿ ಮನುಷ್ಯನೆಂದರೆ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹಿರಲಾಲರು”—ಲೋಕಪ್ರಸಿದ್ಧ ನಾಟಕಕರ್ತ ಮತ್ತು ಟೀಕಾಕಾರ ಜೋರ್ಜ್ ಬರ್ನಾರ್ಡ್‌ಶಾರ ಅಭಿಪ್ರಾಯ.

“ಸರ್. ಝಫರುಲ್ಲಾರು ಸತ್ಯ ಕಾಡು ಕುರಿಯನ್ನು ಚಾಟಿಯಿಂದ ಹೊಡೆದೆಬ್ಬಿಸಲು ನೋಡುತಿದ್ದಾರೆ”—ಹೈದರಾಬಾದಿನ ಪ್ರಶ್ನೆಯನ್ನು ಭದ್ರತಾ ಕೌನ್ಸಿಲಿನಲ್ಲಿ ಪುನಃ ಎತ್ತಬೇಕೆಂದು ಒದ್ದಾಡುತ್ತಿರುವ ಸರ್. ಝಫರುಲ್ಲಾರ ಕುರಿತು ಹೈದರಾಬಾದ್ ಕಾಂಗ್ರೆಸ್ ನಾಯಕ ಸ್ವಾಮಿ ರಮಾನಂದ ತೀರ್ಥರ ವ್ಯಾಖ್ಯಾನ.

“ಎಂತಹ ಪರಿಸ್ಥಿತಿಯಲ್ಲಾದರೂ ಎಂದಿಗೂ ಕಾಶ್ಮೀರದ ವಿಭಜನೆಗೆ ಭಾರತವು ಒಪ್ಪುವದಿಲ್ಲ. ಅವಿಭಜಿತ ಕಾಶ್ಮೀರವು ಭಾರತದೊಂದಿಗೆ ಜೋಡಣೆಗೊಳ್ಳುವುದರಿಂದಲೇ ಸಮಸ್ಯೆ ಪರಿಹಾರವಾಗಬೇಕು. ಅವಿಭಾಗಿತ ಕಾಶ್ಮೀರ ಎನ್ನುವಾಗ, ಧಾಳಿಯ ಮೊದಲಿದ್ದ ಅಖಿಲ ಕಾಶ್ಮೀರ ಪ್ರದೇಶವೆಂದೇ ನನ್ನ ಅಭಿಪ್ರಾಯ”—ಜಮ್ಮು ಮತ್ತು ಕಾಶ್ಮೀರದ ಯುವಕ ಸಮ್ಮೇಲನದ ಶಿಷ್ಟಮಂಡಲಿಗೆ ಭಾರತ ಸರಕಾರದ ಟ್ರಾನ್ಸ್‌ಪೋರ್ಟ್ ಮಂತ್ರಿ ಶ್ರೀ. ಎನ್. ಜಿ. ಅಯ್ಯಂಗಾರರ ಆಶ್ವಾಸನೆ.

“ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ನಿಯೋಜಿತ ಜನಮತ ಸಂಗ್ರಹದ ನಿಷ್ಪಕ್ಷಪಾತತೆಗಾಗಲೀ, ಸ್ವಾತಂತ್ರ್ಯಕ್ಕಾಗಲೀ ಭಂಗವೊಡ್ಡುವ ಯಾವ ಶರ್ತಕ್ಕೂ ಪಾಕಿಸ್ತಾನವೆಂದಿಗೂ ಒಪ್ಪುವಂತಿಲ್ಲ”—ಪಾಕಿಸ್ತಾನಕ್ಕೆ ಮರಳುತ್ತಿರುವ ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು ಬಗ್ದಾದಿನಲ್ಲಿ ಕೊಟ್ಟ ಹೇಳಿಕೆ.

“ಮಂತ್ರಿಗಳಲ್ಲಿ ಮತ್ತು ಸರಕಾರೀ ಅಧಿಕಾರಿಗಳಲ್ಲೇ ದೊಡ್ಡ ಪರಿಮಾಣದ ಲಂಚಗುಳಿ ದುರ್ನಡತೆ ವ್ಯಾಪಿಸಿಕೊಂಡಿದೆ ಎಂದು ನಾನು ಹೇಳಬಲ್ಲೆ. ಕಾರ್ಯನಿಷ್ಠೆಯ ಯೋಗ್ಯತೆ ಕೂಡಾ ಕೆಲಮಂದಿ ಇಳಿಮುಖವಾಗಿದೆ”—ಇದೇ ತಾ 13ರಲ್ಲಿ ಪತ್ರಿಕಾವಾಲರೊಬ್ಬರ ಪ್ರಶ್ನೆಗಳಿಗುತ್ತರ ಕೊಡುತ್ತಾ ನವದೆಹಲಿಯಲ್ಲಿ ಬಾಬು ರಾಜೇಂದ್ರ ಪ್ರಸಾದರ ಸ್ಪಷ್ಟ ಮಾತು.

“ನಮಗೆ ತಿಳಿದಿರುವಂತೆ ಭಾರತವೀಗ ರಾಷ್ಟ್ರಗಳ ಗುಂಪಿನಲ್ಲಿ ಸ್ವತಂತ್ರ ರಾಷ್ಟ್ರವಾಗಿ ನಿಂತಿದೆ. ಸದ್ಯದಲ್ಲೇ ಜನತಾಭಿಪ್ರಾಯದಂತೆ ಅದು ಸ್ವತಂತ್ರ ಸಾರ್ವಭೌಮಾಧಿಕಾರೀ ರಾಷ್ಟ್ರವಾಗಲಿದೆ. ನಮ್ಮೀ ಆಶಾ ಸಾಫಲ್ಯವನ್ನು ತಂದ ರಾಷ್ಟ್ರೀಯ ಸಂಗ್ರಾಮವನ್ನು ಪ್ರೇರಿಸಿ, ನಡೆಸಿದ್ದವರು ನಮ್ಮ ಮಹಾ ನಾಯಕ ಮಹಾತ್ಮ ಗಾಂಧಿಯವರು. ಅವರು ಸತ್ಯ ಮತ್ತು ಅಹಿಂಸೆಯ ಪ್ರವಾದಿಯಾಗಿದ್ದರು. ಸ್ವಾತಂತ್ರ್ಯ ಮತ್ತು ಶಾಂತಿಯೇ ಅವರ ಮುಖ್ಯೋದ್ದೇಶವಾಗಿತ್ತು. ನಮ್ಮ ರಾಷ್ಟ್ರವು ಶಾಂತ ವಿಧಾನಗಳಿಂದಲೇ ಸ್ವಾತಂತ್ರ್ಯ ಹೊಂದುವಂತೆ ಅವರು ನೆರವಾದರು. ಒಂದು ಜನತೆಯನ್ನಿಸುವಂತೆ ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ತತ್ವಗಳು ಮತ್ತು ವಿಧಾನಗಳೇ ನಮ್ಮ ವಿದೇಶ ಸಂಬಂಧ ಧೋರಣೆಯಲ್ಲೂ ತೋರಿಬರುವದು ಸ್ವಾಭಾವಿಕ. ಇಡೀ ಪ್ರಪಂಚದಲ್ಲಿ ಪ್ರಜಾಸತ್ತಾ ಸ್ವಾತಂತ್ರ್ಯವು ಬಾಳಿ ಬದುಕುವಂತೆ ಮಾಡಬೇಕೆಂಬುದೇ ನಮ್ಮಗುರಿ. ಏಶ್ಯಾದ ಕೆಲವು ಜನರು ಇನ್ನೂ ಅಧೀನಪ್ರಜೆಗಳಾಗಿದ್ದಾರೆ; ಆದರೆ ಸ್ವಾತಂತ್ರ್ಯಪ್ರೇಮದಿಂದ ಎಚ್ಚತ್ತಿದ್ದಾರೆ. ಅವರು ಕೂಡಾ ಕೂಡಲೇ ತಮ್ಮ ಗುರಿಮುಟ್ಟಬೇಕೆಂದು ನಾವು ಆಶಾರದಿಂದಿದ್ದೇವೆ. ಭಾರತ-ಅಮೇರಿಕಗಳೊಳಗಿನ ಸ್ನೇಹಬಂಧನವನ್ನು ಬಿಗುಪಡಿಸಲು ಸರ್ವಪ್ರಯತ್ನ ಮಾಡತ್ತೇವೆ”—ಇದೇ ತಾ. 12ರಲ್ಲಿ ಅಮೇರಿಕಾಧ್ಯಕ್ಷ ಟ್ರುಮೇನರ ಮುಂದೆ ತನ್ನ ರಾಯಭಾರಿ ಅಧಿಕಾರಪತ್ರಗಳನ್ನು ಮುಂದಿರಿಸುತ್ತಾ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ನಿವೇದನೆ.

“ಪ್ರಜಾಸತ್ತಾ ಸ್ವಾತಂತ್ರ್ಯವು ಬಾಳಿ ಬರುವಂತೆ ಶಾಂತಿಗಾಗಿ ಒದ್ದಾಡುವದೇ ಭಾರತದ ಉದ್ದೇಶವೆಂದು ತಾವು ಸರಿಯಾದ ರೀತಿಯಿಂದ ಹೇಳಿಕೊಂಡಿರುವಿರಿ. ಅಮೇರಿಕದ ಜನತೆಯು ತಮ್ಮ ಇಡೀ ಚರಿತ್ರೆಯಲ್ಲೇ ಅತ್ಯಂತ ಪ್ರೀತಿಯಿಂದಾಗಿ ಎತ್ತಿಕೊಂಡಿರುವ, ಮತ್ತದನ್ನು ಹೊಂದುವದಕ್ಕಾಗಿ ತಮ್ಮ ಸಂಪತ್ತನ್ನೂ ಸ್ವತಃ ತಮ್ಮನ್ನೂ ಹೇರಳವಾಗಿ ಅರ್ಪಿಸಿಕೊಂಡಿರುವ, ಎಲ್ಲಕ್ಕಿಂತ ಹೆಚ್ಚಿನದಾದ ಉದ್ದೇಶವೆಂದರೆ ಇದೇ. ನಾವಿಬ್ಬರೂ ಈ ಉನ್ನತ ಉದ್ದೇಶದ ಸಹಭಾಗಿಗಳು ಎಂಬುದೇ, ನಮ್ಮಿಬ್ಬರ ಚಿರಮೈತ್ರೀ ಸಂಬಂಧವನ್ನು ಇನ್ನಷ್ಟು ಬಿಗುಗೊಳಿಸಿ ನಮ್ಮಿಬ್ಬರನ್ನೂ ಮತ್ತಷ್ಟು ಸಮೀಪಕ್ಕೆಳೆಯುವಂತಹದಿದೆ”—ಹಿಂದೀ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿಯವರ ನಿವೇದನೆಗೆ ಪ್ರತಿಯಾಗಿ ಅಮೇರಿಕಾಧ್ಯಕ್ಷ ಟ್ರುಮೇನರ ನಿವೇದನೆ.

ಕಡಿಮೆ ಮೊತ್ತದ ವಿಮೆಮಾಡಬೇಕೆಂದಿದ್ದರೆ—
ಅಧಿಕ ಸವಲತ್ತಿನ ವಿಮಾ ಏಜನ್ಸಿ ಬೇಕೆಂದಿದ್ದರೆ—
ದಿ
ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಉಡುಪಿ
ಇವರೊಡನೆ ವಿಚಾರಿಸಿ!

THE

Canara Banking Corporation Ltd.

(Incorporated in India)

Estd: 1906.

HEAD OFFICE: UDIPI, S. I.

Capital Authorised	Rs. 25,00,000.
Capital Issued & Subscriped	Rs. 20,00,000.
Capital Paid Up.	Rs. 19,99,800
Reserves	Rs. 8,90,000

Banking business of every description transacted.

ನವಯುಗ

ಗುರುವಾರ, ಉಡುಪಿ, ೧೯-೫-೪೯

ಈ ಅಪಾಯಕ್ಕೇನು?

ಇನ್ನು ಮೂರು ತಿಂಗಳುಗಳೊಳಗೆ ಅಖಿಲ ಚೈನಾದಲ್ಲಿ ಕಮ್ಯುನಿಸ್ಟ್ ಸರಕಾರವು ಸುದೃಢ ಸ್ಥಾಪನೆಗೊಳ್ಳಬಹುದು; ಇಂಗ್ಲೆಂಡು ಮೊದಲಾದ ರಾಷ್ಟ್ರಗಳು ಕಮ್ಯೂನಿಸ್ಟ್ ಸರಕಾರಕ್ಕೆ ಮಾನ್ಯತೆಕೊಡಬಹುದು; ಈ ಅವಧಿಯ ಮಟ್ಟಿಗೆ ಹೆಚ್ಚು ಕಡಿಮೆಯಾದರೂ ಅದೃಷ್ಟದ ಮಟ್ಟಿಗೆ ಪ್ರತಿಮಾತಿಲ್ಲ. ಜನಸಂಖ್ಯೆಯಲ್ಲಿ ಇಡೀ ಪ್ರಪಂಚದಲ್ಲೇ ಮೊದಲನೆಯದಾದ ಚೈನವು ಕೆಂಬಣ್ಣವಾದಾಗ ಅದರ ಹೊಳಪು ಏಷ್ಯಾದ ಮೇಲೆಲ್ಲಾ ಹರಡದೆ ಹೋಗದು. ಏಷ್ಯದ ಪ್ರಾಮುಖ್ಯ ರಾಷ್ಟ್ರವೆಂಬ ಗೌರವವನ್ನು ಇಷ್ಟರಲ್ಲೇ ಸಂಪಾದಿಸಿದ್ದು, ನಿಜಕ್ಕೂ ಏಷ್ಯಾನಾಯಕನೆನ್ನಿಸುವ ಭವಿಷ್ಯವುಳ್ಳ ಭಾರತವು 'ಮುಂದೇನು?' ಎಂಬ ಕುರಿತು ಗಾಢ ಚಿಂತನೆ ಮಾಡಬೇಕಾಗಿದೆ. ಕಮ್ಯೂನಿಸ್ಟ್ ಚೈನವು ರಶ್ಯಕ್ಕೆರಡನೆಯದಾಗಿ ಗಣಿಸಲಾಗುವ ಕೆಂಪು ರಾಷ್ಟ್ರವಾಗಿ ತನ್ನ ವರ್ಚಸ್ಸನ್ನು ಬೀರಲಿದೆ. ಏಷ್ಯದಲ್ಲಂತೂ ಅದರ ಪ್ರಭಾವವು ಅಜೇಯವಾಗಲಿದೆ. ಚೈನಾ ರಂಗದಲ್ಲಿ ಅವಕಾಶ ಸಂಪಾದಿಸಿಕೊಂಡು ಅಲ್ಲಿಯ ಕಮ್ಯೂನಿಸ್ಟ್ ದಳಗಳು ಇಂಡೋಚೈನಾ ಮತ್ತು ಬರ್ಮದ ಗಡಿವರೆಗೆ ಮುಂದೊತ್ತಿ, ಅಲ್ಲಿರುವ ತಮ್ಮವರಿಗೆ ನೆರವಾಗಬಹುದೆಂದು ಊಹಿಸಲಾಗಿದೆ. ಬರ್ಮದ ಬಂಡಾಯಗಾರ ಪಾಳೆಯದ ಸರಿಯಾದ ಅಂದಾಜು ದೊರೆತಿಲ್ಲ. ಈ ವರೆಗೂ ಅಲ್ಲಿ ಮುಖ್ಯವಾಗಿ 'ಕರೆನ್' ಜನರ ಹೆಸರೇ ಕೇಳಬರುತ್ತಿದೆ. ಆದರೂ ಕಮ್ಯೂನಿಸ್ಟ್ ದಳಗಳು ಅಲ್ಲಿ ಹೋರಾಡುತ್ತಿರುವದನ್ನು, ಸಮರಕ್ಕಿಂತ ಹೆಚ್ಚಾಗಿ ಅವರ ಸಂಚು ಹಂಚಿಕೆಗಳು ನಡೆದಿರುವದನ್ನೂ ಮರೆಯಲಾಗುವದಿಲ್ಲ. ಒಮ್ಮೆ ಒಂದು ರಾಜೀ ತೀರ್ಮಾನಹೊಂದಿ ಶಮನಾಭಿಮುಖವಾಗಿದ್ದ ಬರ್ಮದ 'ಕರೆನ್ ಬಂಡಾಯ'ವು ಪುನಃ ಪ್ರಜ್ವಲಿಸಲು ಕಮ್ಯೂನಿಸ್ಟ್ ಕೈವಾಡವೂ ಒಂದು ಕಾರಣವೆನ್ನಬಹುದು. ಇಂದು ಬರ್ಮದಲ್ಲಿ ಈ ಸ್ಥಿತಿಯಲ್ಲಿರುವ ಕಮ್ಯೂನಿಸ್ಟರೇ ನಾಳೆ ಅಲ್ಲಿ ಏಕ್ಕೆಲ್ಲವನ್ನೂ ತುಳಿದೊತ್ತಿ ಪ್ರಮುಖ ಪ್ರತಿವಾದಿಗಳಾಗಿ ಮುಂದಾಗುವದು ಸಂಭವನೀಯ. ಹೀಗೆಯಲ್ಲಿ ಚೈನೀ ಕಮ್ಯೂನಿಸ್ಟ್ ಪ್ರವಾಹ ಬಂದು ಸೇರಿಕೊಳ್ಳುವಾಗಿನ ಬರ್ಮಾದ ಕಮ್ಯೂನಿಸ್ಟ್ ನೆರೆಯನ್ನು, ಕಾಮನ್‌ವೆಲ್ತ್ ರಾಷ್ಟ್ರಗಳು ಸಹಾಯವಾಗಿ ಕಳುಹುವ ಹೊರಮಣ್ಣ ಬಲದಿಂದಲೇ ಬರ್ಮಾ ಸರಕಾರವು ಅಡ್ಡಗಟ್ಟಬಲ್ಲುದೆಂದು ಆಶಿಸುವದಕ್ಕಿಂತಲೂ, ಚೈನದ ಗತಿ ಬರ್ಮಕ್ಕೂ ಒದಗಬಹುದೆಂದು ನಿರೀಕ್ಷಿಸುವುದರಲ್ಲೇ ಜಾಣ್ಮೆಯಿದೆ. ಆಗ ಭಾರತದ ನೆರಮನೆಯಿಂದಾರಂಭಿಸಿ, ತುದೀ ಸರಹದ್ದಿನ ವರೆಗೂ ಕಮ್ಯೂನಿಸ್ಟರ ಕೈ ಹೊರತು ಬೇರಾರ ಆಟವೂ ತೋರಬಾರದು; ಏಷ್ಯಾದ ಬಹುಭಾಗವು ಕೆಂಪು ವಲಯವಾಗಿ ಮಾರ್ಪಡುವ ಕಾಲ ಬಹಳ ದೂರವಿಲ್ಲ. ಚೈನಾದ ಸ್ಥಿತಿಯನ್ನು ಕಂಡೇ ಜಪಾನಿನಿಂದ ತಮ್ಮ ಸೇನಾಘೇರೆಗಳನ್ನು ಕೀಳುವ ಯೋಚನೆಯೀಗ ಅಮೆರಿಕನರ ತಲೆಯಲ್ಲಿ ಸುತ್ತಹತ್ತಿದೆ. ಅಖಿಲ ಏಷ್ಯವೇ ಹೊರಗೂ ಒಳಗೂ ಬಿಸಿಯೇರುತ್ತಾ ಕೆಂಪುಗೊಳ್ಳುತ್ತಿದೆ. 'ಏಷ್ಯಾದ ಘನತೆ-ಏಷ್ಯಾದ ಭದ್ರತೆ-ಏಷ್ಯಾದ ಐಕ್ಯತೆ'ಯ ಸೊಲ್ಲುಗಳನ್ನು ಪಠಿಸುತ್ತಾ, ಆ ಮೂಲಕ ಜಾಗತಿಕ ರಂಗದಲ್ಲಿ ಏಷ್ಯಾದ ಪ್ರಮುಖ ವಕ್ತಾರನಾಗಿರುವ-ನಾಳೆ ಏಷ್ಯ ನಾಯಕನಾಗುವ ಯೋಗ್ಯತೆಯುಳ್ಳ-ಭಾರತವು, ಏಷ್ಯಾದಲ್ಲಿ ನಡೆದಿರುವ ಈ ಕ್ರಾಂತಿಕಾರಿ ಹಾಗೂ ಅದೃಷ್ಟ ನಿರ್ಮಾಪಕ ಬದಲಾವಣೆಯನ್ನು ತಡೆಗಟ್ಟಬಲ್ಲುದೆ? ಸಾಧ್ಯವಿಲ್ಲ. ಆ ರಾಷ್ಟ್ರಗಳಲ್ಲೀಗ ನಡೆದಿರುವದು ಆಯಾಯ ರಾಷ್ಟ್ರದ ಜನತೆಯ ಆಂದೋಲನವೇ; ಅಂತರ್ಯುದ್ಧಗಳಲ್ಲಿ ಕೈಹಾಕುವ ಹಕ್ಕು ಅನ್ಯರಿಗಿಲ್ಲ. ಬಹುಸಂಖ್ಯಾಕ ಸಾಮಾನ್ಯ ಜನತೆಯ ಅತೃಪ್ತಿಯೊಂದೇ ಈ ಆಂದೋಲನಗಳಿಗೆ ಆಧಾರ. ಭಾರತವಾದರೋ, ಈ ಕುರಿತು ಮಾಡತಕ್ಕ ಕೆಲಸ ಮತ್ತು ತಾನಿದರಿಂದ ಕಲಿಯಬೇಕಾದ ಪಾಠವೊಂದಿರುವುದಾದರೆ ಅದು ಜನತೆಯ ಅತೃಪ್ತಿ ನಿವಾರಣೆ. "ನಮ್ಮ ನೆರಮನೆಗಳಿಗೆ ಹಿಡಿದಿರುವ ಬೆಂಕಿಯನ್ನು ಕಂಡಾದರೂ ನಾವು ಜಾಗರೂಕತೆ ವಹಿಸೋಣ" ಎಂದು ನಮ್ಮ ನಾಯಕರೂ ಒತ್ತಿ ಹೇಳುತ್ತಿದ್ದಾರೆ. ಆದರೆ ಅಂತಹ ಶಮನೋಪಾಯಗಳೇನಾದರೂ ಕಂಡುಬರುತ್ತಿವೆಯೆ? ಕಮ್ಯೂನಿಸ್ಟರನ್ನು ಬಂಧಿಸಿಟ್ಟು, ಅವರ ಚಳವಳವಾವ ರೂಪದಲ್ಲೂ ಎಲ್ಲಿಯೂ ತಲೆಯೆತ್ತದಂತೆ ಬಲವಾಗಿ ಒತ್ತಿಟ್ಟ ಮಾತ್ರಕ್ಕೆ ಕೆಲಸವಾಗದು. ಧನಲಾಲಸೆ ಮತ್ತು ಧನಿಕ ಪಕ್ಷಪಾತತೆಯನ್ನು ಕಣ್ಣೆದಿರಲ್ಲೇ ಕಂಡೂ, ಅಸಹ್ಯ ಕಷ್ಟನಷ್ಟಗಳನ್ನು ಸ್ವತಃ ತಮ್ಮ ಜೀವನದಲ್ಲಿ ಅನುಭವಿಸಿಯೂ ಕೆರಳದ ಜನಸಾಮಾನ್ಯರ, ಶ್ರಮಜೀವಿಗಳ, ಮನಸ್ಸೇ ಕಮ್ಯೂನಿಸಮಿನ ಮೂಲಾಧಾರ. ಹೀಗೆ ಸಂತಾಪೋದ್ರೇಕಗೊಂಡ ಮನಸ್ಸು ಬೆದರಿಕೆಯಿಂದ ಶಮನಹೊಂದುವಂತಿಲ್ಲ. ಇಲ್ಲಿ ಅತಿ ಜಾಗರೂಕತೆಯಿಂದ ವಿಂಗಡಿಸಿನೋಡಿ ನ್ಯಾಯಶೋಧನೆ ಮಾಡುವ ಅಂಶವಿದೆ. ಮಾನವೋಚಿತ ಆವಶ್ಯಕತೆಗಳು ಕೂಡಾ ಎಟಕದ ಶ್ರಮಜೀವಿಗಳ ಮನಸ್ಸು ಕ್ಷೋಭೆಗೊಳ್ಳುವದು--ತಮ್ಮೀ ದುಸ್ಥಿತಿನಿವಾರಣೆಗಾಗಿ ಅವರು ಚಡಪಡಿಸುವದು-ಸ್ವಾಭಾವಿಕ ಹೊರತು ತಪ್ಪಲ್ಲ. ಅದು, ಅನ್ಯೋನ್ಯ ದ್ವೇಷ ಮತ್ತು ಪಾಶವಿಕ ಹಿಂಸಾತ್ಮಕ ವಿಧಾನಗಳುಳ್ಳ 'ಕಮ್ಯೂನಿಸಮ್' ಆಗಿ ಮಾರ್ಪಟ್ಟಾಗಮಾತ್ರ ಶಿಕ್ಷಾರ್ಹವಾಗುವದು. ಆ ದುಸ್ಥಿತಿಯು ಈ ದುರ್ವಿಧಾನವನ್ನು ಸುಲಭದಲ್ಲಿ ಆವಾಹನೆ ಮಾಡಿಕೊಳ್ಳುವಂತಹದಾದ್ದರಿಂದಲೇ ಇಂದು ಪೀಡಿತರ ನಡುವೆ ಕಮ್ಯೂನಿಸಮ್ ತೀವ್ರಗತಿಯಿಂದ ಹಬ್ಬುತ್ತಿದೆ; ಸಂಕಟದಿಂದೇಳುವ ಜಾಗ್ರತಿ—ಕಮ್ಯೂನಿಸ್ಟರಿಂದೇಳುವ ಕ್ಷೋಭೆ, ಇವೆರಡರೊಳಗಿನ ವ್ಯತ್ಯಾಸವನ್ನೇ ಹೆಚ್ಚಿನ ಸಂದರ್ಭಗಳಲ್ಲಿ ಮರೆತುಬಿಟ್ಟು ಎರಡಕ್ಕೂ ಒಂದೇ ವಿಧದ ಸಂಭಾವನೆ ದೊರೆಯುತ್ತಿದೆ. ಇಂತಹ ಮನೋವೃತ್ತಿಯು ಕಮ್ಯೂನಿಸಮ್ ಬೆಂಕಿಗೆ ಬೀಸುವ ಗಾಳಿಯೇ ಹೊರತು ಅದನ್ನು ನಂದಿಸುವ ನೀರಲ್ಲ. ಆದ್ದರಿಂದ ಜನಸಾಮಾನ್ಯರ ದುಸ್ಥಿತಿ ಮತ್ತು ಕಮ್ಯೂನಿಸಮ್ ಇವೆರಡನ್ನೂ ಪ್ರತ್ಯೇಕಿಸಿ ನೋಡಬೇಕು; ಅವೆರಡೂ ಭಿನ್ನವಾದುವುಗಳು ಮಾತ್ರವಲ್ಲ; ಪರಸ್ಪರ ವಿರೋಧಿಗಳೆಂದು ಗಣಿಸಿ, ಪರಸ್ಪರ ವಿರುದ್ಧ ವಿಧಾನಗಳಿಂದಲೇ ಅವೆರಡನ್ನೂ ನಿರ್ಮೂಲಿಸಬೇಕು. ಕಮ್ಯೂನಿಸ್ಟರ ಪರಕೀಯ ಭಾವನೆ ಮತ್ತು ಹಿಂಸಾತ್ಮಕ ಕೃತ್ಯಗಳನ್ನು ನಿರ್ದಾಕ್ಷಿಣ್ಯವಾಗಿ ನಿರ್ಮೂಲಿಸುವಂತೆಯೇ ಶ್ರಮಜೀವಿ ಜನಸಾಮಾನ್ಯರ ಸಂಕಷ್ಟ ಅಜ್ಞಾನ, ದುಸ್ಥಿತಿಗಳನ್ನೂ ನಿರ್ಮೂಲನಗೊಳಿಸಬೇಕು. ನ್ಯಾಯಬದ್ಧ ಸರ್ವಸಮತೆಯ ಜನತಾರಾಜ್ಯ ಸ್ಥಾಪನೆಯಾಗಿ ಆ ಮೂಲಕ ಜನಸಾಮಾನ್ಯರ ಸಂಕಟನಿವಾರಣೆಗೊಂಡಿತೆಂದರೆ, ಆಗಲೇ ಕಮ್ಯೂನಿಸ್ಟ ಆಶ್ರಯ, ಆಧಾರಗಳು ಪೂರ್ಣ ತಪ್ಪಿಹೋಗುವವು. ಭಾರತ ಸರಕಾರದ ಘೋಷಣೆ ಮತ್ತು ಜನತಾ ರಂಗದ ಚಳವಳಿಗಳು ಈ ಕಡೆಗೆ ಮುಖ ತಿರುಗಿಸದಿದ್ದಲ್ಲಿ, ಏಷ್ಯವನ್ನೆಲ್ಲಾ ವ್ಯಾಪಿಸಿ ಭಾರತದ ಸರಹದ್ದಿನಲ್ಲೇ ಸಪ್ಪಳಮಾಡುತ್ತಿರುವ ಕಮ್ಯೂನಿಸ್ಟ್ ಬಿರುಗಾಳಿಯ ಒತ್ತಡವು ಇಲ್ಲಿಗೂ ಬೀಳಬಹುದು; ಎಷ್ಟೇ ನಂದಿಸಿದರೂ ಒಳಗಿಂದೊಳಗೆ ಧಗಧಗಿಸುತ್ತಿರುವ ಇಲ್ಲಿಯ ಕಿಡಿಗಳನ್ನೂ ಅದು ಪ್ರಜ್ವಲಗೊಳಿಸಬಹುದು. ಆದ್ದರಿಂದ ಕಾಲವಿರುವ ಮೊದಲೇ ಭಾರತ ಸರಕಾರ ಮತ್ತು ಜನತೆಯು ಈ ಸಂಬಂಧದ ಕೆಲಸ ಮುಗಿಸಿಕೊಳ್ಳುವದಗತ್ಯವೆಂದು ಒತ್ತಿ ಹೇಳಬೇಕಾಗಿದೆ.

ಪ್ರಚಲಿತ ಸ್ಥಿತಿಯನ್ನೇ ಭದ್ರಗೊಳಿಸಿ ಆ ಮೂಲಕವೇ ಪ್ರಗತಿಸಾಧಿಸಬೇಕೆನ್ನುವ ತಮ್ಮ ಧೋರಣೆಯನ್ನು ನಮ್ಮ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳು ತಿದ್ದಿಕೊಂಡು, ಸಾಮಾನ್ಯಜನತೆಯ ಅಭಿವೃದ್ಧಿ ಸಾಧನೆಯ ಆರ್ಥಿಕ ಸಾಮಾಜಿಕ ಬದಲಾವಣೆಗಳನ್ನು ನಿಸ್ಸಂಕೋಚವಾಗಿ ಕೈಕೊಳ್ಳಬೇಕು. ನಮ್ಮಲ್ಲೀಗಲೂ ಎಲ್ಲಾ ರಂಗಗಳಲ್ಲೂ ಯಾರ ಪ್ರಭಾವವು ಹಬ್ಬಿರುವದೋ ಆ ಸಂಪ್ರದಾಯವಾದಿ ಶ್ರೀಮಂತ, ಆಚಾರವಂತ ವರ್ಗವು ಈ ಅಪಾಯ ಸೂಚನೆಯಿಂದಲೇ ಬುದ್ಧಿ ಬದಲಾವಣೆಗೊಳ್ಳಬೇಕು. ಇಲ್ಲವಾದರೆ ತಾವು ಮಾಡಬಿಟ್ಟುದನ್ನು ಮಾಡಿಸುವ ಕಾಲ ದೂರವಿಲ್ಲವೆಂಬುದನ್ನು ಅವರು ತಿಳಿದಿರುವದು ಅಗತ್ಯ.

ಕೆನರಾ ಬ್ಯಾಂಕ್ ಲಿಮಿಟೆಡ್.

ಈ ಬೇಂಕು 1948ರಲ್ಲು ಎಲ್ಲಾ ಕಾರ್ಯಕ್ಷೇತ್ರಗಳಲ್ಲೂ ಅಭಿವೃದ್ಧಿಯನ್ನು ತೋರಿಸಿಯದೆ. ವರದಿ ವರುಷವು ವಿಷಮ ಪರಿಸ್ಥಿತಿಯಲ್ಲಿದ್ದಾಗ್ಯೂ ಈ ಬೇಂಕಿನ ಠೇವಣಾತಿಗಳು ಏರಿಕೆಯಲ್ಲಿದ್ದುದು ಜನತೆಗೆ ಈ ಬೇಂಕಿನ ಮೇಲಿರುವ ವಿಶ್ವಾಸ, ನಂಬುಗೆಗಳನ್ನು ಎತ್ತಿ ಹೇಳತಕ್ಕದ್ದಾಗಿದೆ. ಠೇವಣಾತಿಯ ಮೊತ್ತವು 6.0 ಕೋಟಿಗೇರಿತು. ವಸೂಲಿ ಬಿಲ್ಲುಗಳ ಹಣ ರೂ. 49·06 ಲಕ್ಷಕ್ಕೆ ಮುಟ್ಟಿತು.

ಆಸ್ತಿಯ ವಿಭಾಗದಲ್ಲಿ ಸರಕಾರಿ ಕಾಗದಪತ್ರಗಳಲ್ಲಿ ತೊಡಗಿಸಿದ ನಿಕ್ಷೇಪನಿಧಿಯ ಮೌಲ್ಯವು ರೂ. 2.41 ಕೋಟಿ. ಗತ ವರುಷದಲ್ಲಿ ಬೇಂಕಿಗೆ 4·27ಲಕ್ಷ ಲಾಭವಾಗಿತ್ತು. ವರದಿ ವರುಷದಲ್ಲಿ 6 25ಲಕ್ಷ ಲಾಭ ದೊರೆತುದು ಕಂಪೆನಿಯ ಪ್ರಗತಿಯನ್ನು ಪ್ರಸಿದ್ಧಿಸುತ್ತದೆ. ಬೇಂಕಿನ ಸುವರ್ಣ ಮಹೋತ್ಸವವು ಬೇಗನೆ ಜರಗಲಿರುವುದರಿಂದ ಆ ಬಗ್ಗೆ "ಪಾಲುದಾರರಿಗೆ ಸುವರ್ಣ ಮಹೋತ್ಸವದ ಬೋನಸ್" ಎಂಬ ಖಾತೆಯನ್ನು ಪ್ರಾರಂಭಿಸಿ ಅದಕ್ಕೆ ಈಗಲೇ ರೂಪಾಯಿ 3000 ವರ್ಗಾಯಿಸಲ್ಪಟ್ಟಿದೆ.

ಬೇಂಕಿನ ಡೈರೆಕ್ಟರರು ಬೇಂಕಿನ ಪ್ರಗತಿಪರ ಅಭಿವೃದ್ಧಿಗಾಗಿ ದುಡಿಯುತ್ತಿರುವುದು ಅಭಿನಂದನೀಯವಿದೆ. ಸುಭದ್ರವಾದ ತಳಹದಿಯ ಮೇಲೆ ನಿಂತಿರುವ ಈ ಬ್ಯಾಂಕು ಸರ್ವಾದರಣೀಯವಾಗಿ ಬಾಳಿ ಬೆಳಗಲೆಂದೇ ನಮ್ಮ ಹಾರೈಕೆ

NOTICE.

Notice having been given of the loss of policy No. 27458 issued by this company on the life of late Mr. Y. Nainappa of Padubidri a duplicate policy will be issued unless any objection is lodged with us within one month from the date hereof.

Managing Director.
The Warden Insurance Co.,Ltd.
Sir Phirozeshah Mahta Road,
Fort, BOMBAY. 15-5-49

ತಾರೀಕು 19—5—1949ರಿಂದ

ಸುಭದ್ರ (ಹಿಂದಿ)

ಶಾಂತಾಆಪ್ಟೆ, ಪ್ರೇಮ ಅದಿಬ್, ಈಶ್ವರಲಾಲ್, ಮುಂತಾದವರು.

ಅನಂತರ: ಸೊಬಗಿನ ಸೂರ್ಯ್ಯ.

ಕಾಜಲ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

'ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಅಕ್ಷರಶಃ ಪಾಲಿಸಲಾಗಿದೆ'

ಕಾಮನ್‌ವೆಲ್ತ್ ನಿರ್ಣಯದ ಕುರಿತು ಘಟನಾ ಸಮಿತಿಯಲ್ಲಿ ನೆಹರೂಗಳ ನಿವೇದನೆ

ಭಾರತದ ಘಟನಾ ಸಮಿತಿ ಸಭೆಯು ಮೇ ತಾ 16ರಲ್ಲಿ ನವದಿಲ್ಲಿಯಲ್ಲಿ ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಆರಂಭಿಸಿತು. ಸದಸ್ಯರೆಲ್ಲರೂ ಎದ್ದು ನಿಂತು ಶ್ರೀಮತಿ ಸರೋಜಿನೀ ನಾಯಿಡುಗಳ ನಿಧನಕ್ಕಾಗಿ ದುಃಖಸೂಚನೆ ಮಾಡಿದರು. ಕೆಲವು ಮಾತುಗಳಲ್ಲಿ ಅಧ್ಯಕ್ಷ ಪ್ರಸಾದರು "ನಾವು ಸಾಧ್ಯವಿದ್ದಷ್ಟು ತ್ವರೆಯಿಂದ ಕೆಲಸ ಮುಂದೊತ್ತಬೇಕು. ಬರುವ ಆಗಸ್ಟ್ 15ರ ಸ್ವಾತಂತ್ರ್ಯ ದಿನೋತ್ಸವದ ಮೊದಲೇ ನಾವು ನಮ್ಮ ಕೆಲಸ ಮುಗಿಸಿಕೊಳ್ಳಬೇಕೆಂದು ನನ್ನಾಶೆಯಿದೆ; ನಾನು ಅದಕ್ಕಾಗಿಯೇ ಪ್ರಯತ್ನ ಮಾಡುತ್ತೇನೆ. ಅದರ ಪ್ರಾಮುಖ್ಯ ವಿಷಯಗಳ ಚರ್ಚೆಗಳಿಗೆ ತಡಿತ ಹಾಕಲಾರೆನೆಂದು ಆಶ್ವಾಸನೆ ಕೊಡುತ್ತೇನೆ" ಎಂದರು. ಆ ಮೇಲೆ ಲಂಡನಿನಲ್ಲಾದ ಕಾಮನ್‌ವೆಲ್ತ್ ಸಂಬಂಧ ಘೋಷಣೆಯನ್ನು ಅಂಗೀಕರಿಸಿಕೊಳ್ಳುವ ನಿರ್ಣಯವನ್ನು ಪಂಡಿತ ನೆಹರುಗಳು ಮಂಡಿಸುತ್ತಾ ಸುಮಾರೆಂದು 50 ಮಿನಿಟುಗಳ ವರೆಗೆ ಅರ್ಥಪೂರ್ಣ ಹಾಗೂ ಹೃದಯಸ್ಪರ್ಶೀ ಭಾಷಣ ಮಾಡಿದರು.

ನೆಹರೂ ಭಾಷಣಸಾರ.

ಲಂಡನ್ ಘೋಷಣೆಯ ಹಿಂದೆ ಗುಪ್ತವಾದುದೂ ಇಲ್ಲ. ಅದು ಯಾವ ವಿಧದಿಂದಲೂ ಭಾರತದ ಸಾರ್ವಭೌಮಾಧಿಕಾರಕ್ಕೆ ಕುಂದು ತಯೊಡ್ಡುವಂತಹದಲ್ಲ. ನಾನಲ್ಲಿ ಸಂಧಾನ ಸಭೆಗೆ ಹೋದಾಗ ನಮ್ಮ ಸಂಯೋಜನ ಮುಂದೆ ಇಟ್ಟಿದ್ದಾಗ ಸುಮಾರು 19 ವರುಷಗಳಿಗೆ ಮೊದಲು ರಾವಿ ನದಿಯ ತೀರದಲ್ಲಿ ಆ ವರ್ಷಾರಂಭಕ್ಕೆ ನಾವು ಮಾಡಿದ್ದ ಪ್ರತಿಜ್ಞೆಯ ನೆನಪು ನನಗಿತ್ತು. ಕಷ್ಟ ಹಾಗೂ ಕಂಟಕಗಳ ಮಧ್ಯದಲ್ಲೂ ಆ ಮೇಲಿನ ಪ್ರತಿ ಜನವರಿ 26ರಲ್ಲೂ ಆ ಪ್ರತಿಜ್ಞೆಯ ಪುನರುಚ್ಚಾರವಾಗುತ್ತಿದ್ದುದೂ ಸ್ಮರಣೆಯಲ್ಲಿತ್ತು. ಅಂತೆಯೇ ಈ ಸಭೆಯ ಮುಂದೆ ನಾನು ಧ್ಯೇಯ ಘೋಷಣಾ ಠರಾವನ್ನು, ಇದೇ ಸ್ಥಳದಲ್ಲಿ ತಾಕೆಂದು ನಾನು ಮಂಡಿಸಿದ್ದರ ನೆನಪೂ ನನಗೆ ಇಲ್ಲಿತ್ತು. ಆ ಠರಾವಿಡು ವರುಷ ಐದು ತಿಂಗಳುಗಳ ಹಿಂದೆ ನಮ್ಮ ರಿಪಬ್ಲಿಕ್ ಅಥವಾ ಸ್ವತಂತ್ರ ಸರಕಾರದ ಮಾದರಿಯನ್ನು ನಾವು ಸ್ಪಷ್ಟವಾಗಿ ಒಪ್ಪಿಸಿದ್ದೆವು. ಕೊನೆ ವಿಷಯವು ಜೈಪುರ ಕಾಂಗ್ರೆಸಿನ ಮುಂತು. ಭಾರತದ ಗೌರವ, ಘನತೆ, ಸ್ವಾತಂತ್ರ್ಯದ ಜೋಪಾಸನೆ ಮತ್ತು ನಮ್ಮ ಪ್ರತಿಜ್ಞೆಯನ್ನು ಪರಿಪಾಲಿಸುವಂತೆಯೇ ...

... ಗಿ ಹೊಂದಿಕೊಳ್ಳುವ ಸಮಸ್ಯೆಯು ನನ್ನಂತೆಯೇ ಹಲವರ ಬುದ್ಧಿಯಲ್ಲಿ ಆಂದೋಲನವೆಬ್ಬಿಸಿದ್ದಿತು. ಕಾಮನ್‌ವೆಲ್ತಿನೊಡನೆ, ಅಥವಾ ಇತರ ಯಾವುದೇ ಸಂಗಡದೊಡನೆ ನಾವು ಮಾಡಿಕೊಳ್ಳುವ ಒಡಂಬಡಿಕೆಯಿಂದ ಎಂತಹ ಮತ್ತೆಷ್ಟೇ ದೊಡ್ಡ ಪ್ರಯೋಜನವಿದ್ದ ಪಕ್ಷದಲ್ಲೂ, ಅದನ್ನು ಹೊಂದುವದಕ್ಕಾಗಿ ನಮ್ಮ ಪ್ರತಿಜ್ಞೆಯ ಒಂದು ಕೊಮವನ್ನಾದರೂ ಕಳಕೊಳ್ಳಕೂಡದೆಂಬುದನ್ನು ನಾನು ಸ್ಪಷ್ಟ ಮಾಡಿಕೊಂಡಿದ್ದೆ. ಯಾಕೆಂದರೆ ತನ್ನ ಜಾಹೀರು ತತ್ವಗಳ ಸಂಬಂಧದಲ್ಲೂ ಸಡಿಲುವರ್ತನೆವಹಿಸಿ ಕಾಲಬಂದಂತೆ ಆಟವಾಡುವ ಯಾವ ರಾಷ್ಟ್ರವೂ ಪ್ರಗತಿಹೊಂದಲಾರದು. [ಉತ್ಸಾಹಧ್ವನಿ]. ನಾನು ನಮ್ಮ ಮೂಲಠರಾಯವನ್ನು ಅಕ್ಷರಶಃ ಪಾಲಿಸಿದ್ದೇನೆಂದು ಅಂತಃಕರಣಪೂರ್ವಕವಾಗಿ ನಿಮ್ಮ ಮುಂದೆ ನಿವೇದಿಸಿಕೊಳ್ಳುತ್ತೇನೆ.

ನಾವು ಏಕಾಕಿಯಾಗಿರಲಾರೆವು

ಕಾಮನ್‌ವೆಲ್ತಿನೊಳಗೆ ಉಳಿಯಲು ನಿರ್ಧರಿಸಿದ್ದರಿಂದ, ಆಸ್ವಾದ ನಮ್ಮ ನೆರೆರಾಷ್ಟ್ರಗಳಿಂದ ನಾವು ಬೇರೆ ಹೋಗುವಂತಾಯಿತೆಂದು, ಅಥವಾ ಲೋಕದ ಇತರ ದೊಡ್ಡ ರಾಷ್ಟ್ರಗಳೊಡನೆ ಸಹಕರಿಸುವದು ನಮಗಿನ್ನು ಕಷ್ಟವಾಯಿತೆಂದು ಕೆಲವರ ಭಾವನೆಯಿದೆ. ಆದರೆ ಇತರ ರಾಷ್ಟ್ರಗಳ ಮೈತ್ರೀಸಾಧನೆಯು, ನಾವು ಬೇರಾವುದೇ ಸ್ಥಿತಿಯಲ್ಲಿರುವುದಕ್ಕಿಂತಲೂ ಕಾಮನ್‌ವೆಲ್ತಿನಲ್ಲಿರುವುದರಿಂದಲೇ ಸುಲಭವಾದೀತೆಂದು ನಾನು ನೆನಸುತ್ತೇನೆ. ಹೀಗನ್ನುವದು ತಪ್ಪು ವಿಲಕ್ಷಣವಾಗಿದೆಯಾದರೂ ನಾನು ಹೀಗನ್ನುತ್ತೇನೆ. ಈ ವಿಷಯದ ಕುರಿತು ನಾನು ಬಹಳ ಯೋಚನೆಮಾಡಿದ್ದೆ. ಇತರ ರಾಷ್ಟ್ರಗಳೊಡನೆ ನಾವು ಕೈಕೊಳ್ಳುವ ಸಹಕಾರ ಅಥವಾ ಮೈತ್ರೀ ಸಂಬಂಧಗಳಿಗೆ ಕಾಮನ್‌ವೆಲ್ತ್ ಅಡ್ಡ ಬರುವಂತಿಲ್ಲ.

ಕಾಮನ್‌ವೆಲ್ತಿನ ಸಂಬಂಧವನ್ನು ಕಡಿದುಕೊಂಡಲ್ಲಿ ನಾವಾಗ ಸಂಪೂರ್ಣವಾಗಿ 'ನಮ್ಮ ಮಟ್ಟಿಗೆ ನಾವು' ಆಗುವೆವು. ನಾವು ಹಾಗಿರಲು ಸಾಧ್ಯವಿಲ್ಲ. ಪರಿಸ್ಥಿತಿಯ ಒತ್ತಡದಿಂದ ನಾವು ಒಂದಲ್ಲೊಂದು ಪಕ್ಷ ಹಿಡಿಯಬೇಕಾಗುವದು; ಕೂಟಕ್ಕೆ ಸೇರಿಯುವ ವ್ಯವಹಾರದಲ್ಲಿಯೇ ಸೇರಾಗುವದು ಅರ್ಥಾತ್ ನಾವು ಆಗ, ಈಗಿನದಕ್ಕಿಂತಲೂ ಹೆಚ್ಚಿನ ಸಂಬಂಧಗಳಿಗೆ ಕಟ್ಟುಬೀಳಬೇಕಾಗುವದು. ಈ ದೃಷ್ಟಿಯಲ್ಲಿ ಅನ್ಯರಾಷ್ಟ್ರಗಳೊಡನೆ ಸಂಬಂಧ ಮಾಡಿಕೊಳ್ಳುವ ಮತ್ತು ಇತರ ರಾಷ್ಟ್ರಗಳನ್ನು ಪರಸ್ಪರ ಹಿತಭಾವನಾ ಜೋಡಣೆಯಿಂದ ಒಂದುಗೂಡಿಸಬಲ್ಲ ...

ವರ್ಣದ್ವೇಷೀ ಧೋರಣೆ

"ವರ್ಣದ್ವೇಷ ಹರಡುವ ಮತ್ತು ನಮಗೆ ಆಕ್ಷೇಪಕರವಾದ ಇತರ ಸಂಗತಿಗಳೂ ನಡೆದಿರುವ ಕಾಮನ್‌ವೆಲ್ತಿನೊಂದಿಗೆ ನೀವು ಹೇಗೆ ಕೂಡಿಕೊಳ್ಳಬಲ್ಲಿರಿ?" ಎಂದು ನನ್ನನು ಹಲವುಬಾರಿ ಪ್ರಶ್ನಿಸಲ್ಪಟ್ಟಿದ್ದೇನೆ. ಇದು ಯಥಾರ್ಥಪ್ರಶ್ನೆ; ನಮ್ಮ ಯೋಚನೆಯೆಡೆಯಲ್ಲಿ ಚುಚ್ಚುತ್ತಿರುವ ವಿಷಯ ಆದರಿದು ಏಳುವಂತಹ ಪ್ರಶ್ನೆಯೇ ಅಲ್ಲ. ನಾವು ಒಂದು ರಾಷ್ಟ್ರದೊಡನೆ ಅಥವಾ ಒಂದು ರಾಷ್ಟ್ರಗುಂಪಿನೊಡನೆ ಸಂಬಂಧವಿಟ್ಟುಕೊಂಡ ಮಾತ್ರಕ್ಕೆ ನಾವು ಅವರ ಇತರ ಧೋರಣೆಗಳನ್ನೂ ಅಂಗೀಕರಿಸಿದೆವೆಂಬ ಅರ್ಥವಲ್ಲ; ಅವರು ಮಾಡುವ ಕೆಲಸಕ್ಕೆ ನಾವೂ ಕಟ್ಟುಬಿದ್ದವರೆಂದು ಅದರ ತಾತ್ಪರ್ಯವಲ್ಲ. ವಸ್ತುತಃ ಲೋಕದ ವಿವಿಧಭಾಗಗಳಲ್ಲಿ ನಮ್ಮ ದೇಶಬಂಧುಗಳು ಈ ವರ್ಣದ್ವೇಷದ ವಿರುದ್ಧ ಹೋರಾಟಗಳನ್ನೀಗಲೂ ನಡೆಸುತಿದ್ದಾರೆ. ಭಾರತವು ಮುಂದೊಡ್ಡಿರುವ, ದಕ್ಷಿಣಾಫ್ರಿಕದಲ್ಲಿರುವ ಹಿಂದೀಯರ ಸ್ಥಾನಮಾನದ ಸವಾಲೇ ಈಗ ಸಂಯುಕ್ತ ರಾಷ್ಟ್ರಸಂಘದ ಮುಂದಿರುವ ಮುಖ್ಯ ಪ್ರಶ್ನೆಗಳಲ್ಲೊಂದಾಗಿದೆ. ನಿನ್ನೆಯಷ್ಟೇ ಸಂಯುಕ್ತ ರಾಷ್ಟ್ರಸಂಘದ ಅಧಿವೇಶನವು ದಕ್ಷಿಣಾಫ್ರಿಕದ ಹಿಂದೀಯರ ಕುರಿತು ಮಂಡಿಸಲಾಗಿದ್ದ ಠರಾವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಿ, ಆ ಸಂಬಂಧವಾಗಿ ನಮ್ಮ ಪ್ರತಿನಿಧಿಗಳು, ಮತ್ತು ದಕ್ಷಿಣಾಫ್ರಿಕವೊಂದನ್ನು ಬಿಟ್ಟು ಉಳಿದ ಎಲ್ಲಾ ರಾಷ್ಟ್ರದ ಪ್ರತಿನಿಧಿಗಳು ವಹಿಸಿದ್ದ ಕಾರ್ಯಧೋರಣೆಗೆ ನನ್ನ ಹಾಗೂ ನನ್ನ ಸರಕಾರದ ಪರವಾಗಿ ನಾನು ಗೌರವ ಸಲ್ಲಿಸಬಯಸುವೆನು? ವರ್ಣದ್ವೇಷದ ವಿರೋಧವಾಗಿಯೂ ದಬ್ಬಾಳಿಕೆಗೊಳಗಾಗಿರುವ ರಾಷ್ಟ್ರೀಯರ ಉದ್ಧಾರಕ್ಕಾಗಿಯೂ ಹೋರಾಡುವದು ನಮ್ಮ ವಿದೇಶ ಸಂಬಂಧ ಧೋರಣೆಯ ಮೂಲಸ್ತಂಭಗಳಲ್ಲೊಂದೆಂಬುದನ್ನು ನಾವು ನಾರಿ ನಾರಿ ಹೇಳಿದ್ದೇವೆ. ಕಾಮನ್‌ವೆಲ್ತಿನ ...

... ಲ್ಲಿ ಉಳಿದುಕೊಳ್ಳುವದರಿಂದ ನಾವು ಪ್ರಶ್ನೆಯ ಸಂಬಂಧದಲ್ಲಿ ವಿಧೇಯರಾಗಿ ನೆ ವಹಿಸುವೆವೇನು? ನಾವು ಕಾಮನ್‌ವೆಲ್ತಿನೊಳಗಿನ ಒಂದು ಸಾಹಚರ್ಯಕ್ಕಾಗಿದ್ದು ಕೂಡಾ ದಕ್ಷಿಣಾಫ್ರಿಕದ ಭಾರತೀಯರ ಪ್ರಶ್ನೆ ಮತ್ತಿತರ ಪ್ರಶ್ನೆಗಳನ್ನೆತ್ತಿಕೊಂಡು ಹೋರಾಡುತ್ತಾ ಬಂದಿದ್ದೇವೆ.

ಪರಸ್ಪರ ಸಮಾನಹಿತಕಾರಿ

ಅದು ನಮಗೂ, ಲೋಕದಲ್ಲೆಲ್ಲಾ ಶಾಂತಿ ದೊರೆಯಬೇಕೆಂದು ಹಾರೈಸುವ ಇತರ ತತ್ವಗಳಿಗೂ ಪ್ರಯೋಜನಕಾರಿಯೆಂದು ಕಂಡುಬಂದುದರಿಂದಲೇ ನಾವು ಕಾಮನ್‌ವೆಲ್ತನ್ನು ಸೇರಿಕೊಳ್ಳುತ್ತಿದ್ದೇವೆ. ಇದು ಪ್ರಯೋಜನಕಾರಿಯೆಂದು ತೋರಿದ್ದರಿಂದಲೇ ಕಾಮನ್‌ವೆಲ್ತಿನ ಇತರ ರಾಷ್ಟ್ರಗಳು ನಮ್ಮನ್ನಲ್ಲಿ ಕೂಡಿಕೊಳ್ಳಲಿಚ್ಛಿಸಿದವು. ಕಾಮನ್‌ವೆಲ್ತ್ ರಾಷ್ಟ್ರಗಳೆಲ್ಲಕ್ಕೂ ಹಿತಕಾರಿಯೆಂದು ಪರಸ್ಪರ ತಿಳಿದುಕೊಂಡುದರಿಂದಲೇ ಅವೆಲ್ಲವೂ ಒಂದುಗೂಡಿದವು. ಆದರೆ ಅದೇ ಕಾಲದಲ್ಲಿ ಪ್ರತಿಯೊಂದು ರಾಷ್ಟ್ರವೂ ತನಗೆ ಸರಿದೋರುವ ಹಾದಿಯನ್ನೇ ತಾನು ಹಿಡಿಯುತ್ತದೆಂಬುದು ಅಲ್ಲಿ ಸುಸ್ಪಷ್ಟ ಮಾಡಲ್ಪಟ್ಟಿದ್ದಿತು. ನಾವು ಹಿಡಿಯುವ ಹಾದಿಯು ಈ ಕಾಮನ್‌ವೆಲ್ತ್ ಸಂಬಂಧವೇ ಕಡಿದು ಬೀಳುವಲ್ಲಿಗೂ ಬರಬಹುದು. ಸರಿ. ಆಗ ಅದು ಕಡಿದು ಹೋಗುತ್ತದೆ. ಈ ವಿಷಯವು ಅಲ್ಲಿಗೇ ಅಂತ್ಯಗೊಳ್ಳುತ್ತದೆ. ಆದರೆ, ಎಷ್ಟೋ ವಿನಾಶಕ ಶಕ್ತಿಗಳು ಕಾರ್ಯಪ್ರವೃತ್ತವಾಗಿರುವ, ಎಷ್ಟೋ ವೇಳೆ ನಾವು ಯುದ್ಧದ ಬಾಯಿಗೇನೇ ಬಿದ್ದಂತೆ ತೋರುತ್ತಿರುವ ಇಂದಿನ ಜಗತ್ತಿನಲ್ಲಿ, ಯಾರೊಡನಾದರೂ ಸಂಬಂಧಕಡಿದುಕೊಳ್ಳುವ ಕೆಲಸ ಪ್ರೋತ್ಸಾಹಾರ್ಹವಲ್ಲವೆಂದೇ ನನ್ನ ಅಭಿಪ್ರಾಯ. ಯಾವುದೇ ಇರಲಿ, ಅದರ ಕೆಟ್ಟ ಭಾಗಗಳನ್ನು ಒಡೆದುಹಾಕೋಣ, ನಮ್ಮ ಪ್ರಗತಿಪಥದಲ್ಲಿ ಅಡ್ಡಬರುವ ಯಾವುದನ್ನೇ ಆದರೂ ಒಡೆದುಹಾಕೋಣ, ಆದರೆ, ಈ ಲೋಕದಲ್ಲಿ ಕೇಡಿಗಿಂತ ಹೆಚ್ಚಾಗಿ ಹಿತವನ್ನು ಮಾಡಬಲ್ಲ ಸಾಧನ ಯಾವುದೇ ಇದ್ದರೆ ಅಂತಹ ಸಹಕಾರವು ಮಾತ್ರ ಬಾಳಿಡದಂತೆ ನೋಡಬೇಕು.'

ಅಳಿಯ ಸಂತಾನ ಕಾನೂನಿನ

ಕನ್ನಡ ಪ್ರತಿಗಳು

ತಯಾರಾಗುತ್ತಿವೆ.

ಪ್ರತಿ ಒಂದರ ಬೆಲೆ 0-6-0

ಪ್ರತಿಬೇಕಾದವರು ಅಂಚೆವೆಚ್ಚ ಸಹಿತ 0-9-0 ಕಳುಹಿಸಿ ಮುಂದಾಗಿ ಬರೆದುಕೊಳ್ಳಬಹುದು.

ನವಯುಗ ಪ್ರೆಸ್, ಉಡುಪಿ.

ಉಡುಪಿ

ಮುನಿಸಿಪಲ್ ಸಭೆಯು ತಾ 14ರಲ್ಲಿ ಚೆಯರ್‌ಮೆನ್ ಶ್ರೀ. ಪಿ. ಉಪೇಂದ್ರ ಶ್ರೀನಿವಾಸನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲವು ಸರಕಾರಿ ಜಿ. ಓ. ಗಳು ರಿಕಾರ್ಡು ಮಾಡಲ್ಪಡುವು. ಖಾಲಿ ಸ್ಥಳವೆಂದು ಪರಿಗಣಿಸಿ ಸೂಕ್ತ ಸ್ಕೇಲಿನಂತೆ ತೆರಿಗೆ ವಸೂಲಿ ಮಾಡಿದುದನ್ನು ವಾಪಾಸು ಕೊಡಬೇಕಾಗಿಯೂ ಇಲ್ಲವಾದರೆ ದಾವಾ ದಾಖಲು ಮಾಡುವೆನಾಗಿಯೂ ಸೂಚಿಸಿ ಬರೆದ ಓರ್ವ ತೆರಿಗೆದಾರರ ಅರ್ಜಿ ಓದಲ್ಪಟ್ಟಿತು. ಆ ಕುರಿತು ಕೆಲವು ಅನುಭವ ಪಡೆಯಲು ಸರಕಾರಕ್ಕೆ ಬರೆಕೊಳ್ಳಬೇಕೆಂದು ನಿರ್ಧಾರವಾಯಿತು.

ಶಾಲಾ ವರ್ಧಂತಿಕಾಡುಬೆಟ್ಟು ಮೊಡರ್ನ್ ಹಾ॥ ಎ॥ ಶಾಲಾ ವರ್ಧಂತಿಯು ತಾ 13ರಲ್ಲಿ ಶ್ರೀ. ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥನಾಯ್ಕರು ಸ್ವಾಗತ ಭಾಷಣ ಮಾಡಿ ಶಾಲಾ ಚರಿತ್ರೆಯನ್ನು ವಿವರಿಸಿದ ನಂತರ ಶಾಲಾ ಹೆಡ್ಮಾಸ್ತರ್ ಶ್ರೀ ರಾಮಕೃಷ್ಣಯ್ಯನವರು ಶಾಲಾ ವರದಿಯನ್ನೋದಿದರು ಶ್ರೀಗಳಾದ ಯು. ಯಸ್. ಕಾಮತ್, ಕೆ. ಎಸ್. ಉಪಾಧ್ಯಾಯರ ಭಾಷಣ, ಪಾರಿತೋಷ ವಿತರಣ, ಅಧ್ಯಕ್ಷರ ಕೊನೆಯ ಮಾತುಗಳಾಗಿ ವಿವಿಧ ವಿನೋದಾವಳಿಗಳು ಜಯಶೀಲವಾಗಿ ನಡೆದುವು ಅಷ್ಟರಲ್ಲಿ ಮಳೆಬಂದುದರಿಂದ ಸಮಾರಂಭವು ಆದಿತ್ಯವಾರಕ್ಕೆ ಮುಂದುವರಿಯಿತು. ಆ ದಿನ 'ಪಾದುಕಾ ಪಟ್ಟಾಭಿಷೇಕ'ನಾಟಕವು ಸೊಗಸಾಗಿ ಅಭಿನಯಿಸಲ್ಪಟ್ಟು ಶ್ರೀ. ಒ. ಸುಬ್ಬಯ್ಯ ಹೆಗ್ಡೆಯರಿಂದ ಬಹುಮಾನ ವಿತರಣೆ, ಮೆನೇಜರ್ ಶ್ರೀ. ಕೆ ಜಗನ್ನಾಥ ನಾಯ್ಕರಿಂದ ಧನ್ಯವಾದಾರ್ಪಣಗಳಾದುವು.

ಮಳೆ:—ತಾ 16ನೇ ಸೋಮವಾರ ರಾತ್ರಿಯೂ ಧಾರಾಳ ಮಳೆಬಿದ್ದಿರುವುದು, ವಿಶೇಷ ಸಿಡಿಲ್ಮಿಂಚೂ ಇತ್ತು.

ವಿವಾಹ ಸಮಾರಂಭಗಳು ಇದೇ ತಾ 13ರಲ್ಲಿ ರಾತ್ರಿ 10-30ಕ್ಕೆ ವಕೀಲ್ ಶ್ರೀ ಪಿ. ವಿ. ಆಚಾರ್ಯರ ಪುತ್ರಿ ಶ್ರೀಮತಿ ಸುಶೀಲೆಯನ್ನು ಪಾವಂಜೆ ಶ್ರೀ ಮುರಾರಿರಾಯರ ಪುತ್ರ ಶ್ರೀಮಾನ್ ಜಲರಾಮರಾಯರು ವಿವಾಹವಾದರು. ಈ ಶುಭ ಸಮಾರಂಭವು ಶ್ರೀ ಆಚಾರ್ಯರ ಮನೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಶ್ರೀ ಕೊಚ್ಚಿಕಾರ್ ಪದ್ಮನಾಭಪೈಗಳ ಪುತ್ರ ಶ್ರೀಮಾನ್ ಕೆ. ಮೋಹನದಾಸರು ಶ್ರೀ ಉಪೇಂದ್ರ ಅನಂತ ಪೈಗಳ ಪುತ್ರಿ ಶ್ರೀಮತಿ ಲೀಲಾಬಾಯಿಯನ್ನು ಇದೇ ತಾ 17ರಲ್ಲಿ ರಾತ್ರಿ 9-57ಕ್ಕೆ ಮಣಿಪಾಲದ ವಧುವಿನ ಮನೆಯಲ್ಲಿ ಪಾಣಿಗ್ರಹಣ ಮಾಡಿಕೊಂಡರು. ಕಲ್ಯಾಣೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಮಂಗಳೂರು

ಮಂಗಳೂರು ನಗರ ಸಭೆಯು ಈಚೆಗೆ ಶ್ರೀ. ಎಲ್. ಸಿ ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ರಸ್ತೆಗಳಿಗೆ ಹಾಗೂ ಸಾರ್ವಜನಿಕ ಕಟ್ಟಡಗಳಿಗೆ ಮಹಾತ್ಮಾ ಗಾಂಧಿಯವರ ಹೆಸರಿಡಬಾರದೆಂದು ಸೂಚಿಸಿದ ಸರಕಾರಿ ಆರ್ಡರನ್ನು ರಿಕಾರ್ಡು ಮಾಡಲಾಯಿತು. ನಿರುದ್ಯೋಗ ನಿವಾರಣೆಗಾಗಿ ಉಪಯೋಗಿಸುವ ಸಾಹಿತ್ಯಗಳ ಬಗ್ಗೆ ರೂ. 178000ನ್ನು ಮಂಜೂರು ಮಾಡಲಾಯಿತು. ಇಲಿಗಳ ನಾಶಕ್ಕಾಗಿ ರೂಪಾಯಿ 160ರ 'ಸೈನೋಗೇಸ್' ತೆಗೆದುಕೊಳ್ಳುವರೆ ನಿರ್ಧಾರವಾಯಿತು.

ಮಾನ್ಯ ಚಂದ್ರಮೌಳಿಯವರ ಆಗಮನ:—ಮದ್ರಾಸು ಸರಕಾರದ ಸ್ಥಳೀಯ ಆಡಳಿತೆ ಮಂತ್ರಿಗಳಾದ ಶ್ರೀ ಚಂದ್ರಮೌಳಿಯವರು ತಾ 12ರಲ್ಲಿ ಮಂಗಳೂರಿಗೆ ಬಂದರು, ಸ್ಥಳೀಯ ಕಾಂಗ್ರೆಸ್ ಮಂದಿಯೂ ಸಂಬಂಧಪಟ್ಟ ಅಧಿಕಾರಿಗಳೂ ಅವರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿದರು. ತಾ 13ರಲ್ಲಿ ಅವರು ಕುಂದಾಪುರಕ್ಕೆ ಹೋಗಿ ಅಲ್ಲಿಯ ಸಹಕಾರಿ ಕಟ್ಟಡದ ರಚನಾ ಯೋಜನೆಯನ್ನು ಪರಿಶೀಲಿಸಿದರು. ತಾ 15ರಲ್ಲಿ ಅವರು ಮದ್ರಾಸಿಗೆ ಹಿಂದಿರುಗಿದರು.

ದ. ಕನ್ನಡಕ್ಕೆ ಹೊಸಯೋಜನೆಗಳು ಮದ್ರಾಸ್ ಮಂತ್ರಿ ಮಂಡಲ ಸ್ಥಾಯಿ ಆರ್ಥಿಕ ಸಮಿತಿಯವರು ಈ ಜಿಲ್ಲೆಗಾಗಿ ಈ ಕೆಳಗಿನ ಯೋಜನೆಗಳನ್ನು ಶಿಫಾರಸು ಮಾಡಿರುವರು. ಮುಲ್ಕಿರಸ್ತೆಯ ಕಲ್ಮಾಡಿ ಸಂಕದ ದುರಸ್ತಿಗಾಗಿ ರೂಪಾಯಿ 1,80,000 ಜೋಗಿನಿಂದ ವಿದ್ಯುಚ್ಛಕ್ತಿಯ ಸರಬರಾಯಿಗಾಗಿ 66 ಕಿಲೊವೊಲ್ಟಿನ 'ಟ್ರಾನ್ಸ್‌ಮಿಷನ್ ಲೈನು.' ಇದು ಪ್ರಥಮತಃ ಈ ಜಿಲ್ಲೆಯ ಉಡುಪಿಗೆ, ನಂತರ ಮಂಗಳೂರು, ಕುಂದಾಪುರಕ್ಕೆ.

ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸಂಯುಕ್ತ ಜನಾಂಗಗಳ ವಿನಂತಿಯೊಂದು ಪ್ರಕಟವಾಗಿದ್ದು ಇಂಡಿಯಾ ಸರಕಾರವೂ ಇದರಲ್ಲಿ ಭಾಗವಹಿಸಲು ನಿರ್ಧರಿಸಿದೆ. ಆದಕ್ಕಾಗಿ ಅಖಿಲ ಭಾರತ, ಪ್ರಾಂತಿಕ, ಜಿಲ್ಲಾ ಸಮಿತಿಗಳು ಏರ್ಪಡಲಿವೆ, ಮಕ್ಕಳಿಗೂ ಗರ್ಭಿಣಿಯರಿಗೂ ಅವರ ಸಂಕಷ್ಟ ನಿವಾರಣೆಗಾಗಿ ಸಹಾಯ ಮಾಡುವುದಕ್ಕಾಗಿ ಧನ ಸಂಗ್ರಹಿಸಲಾಗುವುದು.

ಈ ಸಂಬಂಧದ ಒಂದು ಸಮಿತಿಯನ್ನು ದ. ಕ. ಜಿಲ್ಲೆಗಾಗಿ ರಚಿಸಲು ಕಳೆದ ತಾ 7ರಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಮತ್ತು ಪುರಪ್ರಮುಖರ ಸಭೆಯೊಂದು ಕಲೆಕ್ಟರರ ಕಚೇರಿಯಲ್ಲಿ ಸೇರಿತ್ತು. ಕಲೆಕ್ಟರರು ಈ ಸಭೆಯ ಉದ್ದೇಶವನ್ನು ವಿವರಿಸಿದ ಬಳಿಕ ಒಂದು ಸಮಿತಿಯ ರಚನೆಯಾಯಿತು, ಇದರಲ್ಲಿ ಶ್ರೀಮತಿ ಎಸ್. ಆರ್. ಕೈವಾರ್ (ಅಧ್ಯಕ್ಷೆ) ಶ್ರೀಗಳಾದ ಪಿ, ಆರ್. ಆರ್. ಪೂಂಜ, ವಿ. ಎಸ್. ಕುಡ್ವ (ಕಾರ್ಯದರ್ಶಿಯರು) ಇರುವರು.

ಜಿಲ್ಲಾ ಬೋರ್ಡು ಚುನಾವಣೆ ದ. ಕ. ಜಿಲ್ಲಾಬೋರ್ಡು ಚುನಾವಣೆಯು ಬರುವ ಆಗೋಸ್ತು ತಿಂಗಳಿಗೆ ಮುಂದುವರಿಸಲ್ಪಟ್ಟಿದೆ. ಚುನಾವಣೆಯು ಆಗೋಸ್ತು ತಿಂಗಳ ಕೊನೆಯಲ್ಲಿ ನಡೆದು ಸಪ್ಟಂಬರ ಆರಂಭದಲ್ಲಿ ಹೊಸಬೋರ್ಡು ರಚಿತವಾಗಲಿರುವುದೆಂದು ಪ್ರಕಟವಾಗಿದೆ

ಕ್ಷಯರೋಗ ನಿವಾರಣಾ ಕೇಂದ್ರದ ಸಂದರ್ಶನ ಮಂಗಳೂರಿನಿಂದ ಐದು ಮೈಲು ದೂರದಲ್ಲಿರುವ ಮೂಡು ಶೆಡ್ಡೆಯಲ್ಲಿ ಸಾಧಾರಣ 270 ಎಕ್ರೆ ವಿಸ್ತಾರವುಳ್ಳ ಸ್ಥಳದಲ್ಲಿ ಒಂದು ಕ್ಷಯರೋಗ ನಿವಾರಣಾ ಆಸ್ಪತ್ರೆಯನ್ನು ರಚಿಸುವ ಯೋಜನೆಯೊಂದು ತಯಾರಾಗುತ್ತಿದೆ. ಈ ಸಂದರ್ಭದಲ್ಲಿ ಪ್ರಾಂತೀಯ ಕ್ಷೇಮಾಭಿವೃದ್ಧಿ ನಿಧಿಯ ದ. ಕ. ಜಿಲ್ಲಾ ಮತ್ತು ಮಂಗಳೂರುನಗರದ ಶಾಖೆಗಳ ಸದಸ್ಯರಲ್ಲಿ ಹಲವರು ಕಳೆದ ತಾ 7ರಲ್ಲಿ ಒಂದು ಸ್ಪೆಶಲ್ ಬಸ್ಸಿನಲ್ಲಿ ಹೋಗಿ ಆ ಸ್ಥಳವನ್ನು ಸಂದರ್ಶಿಸಿ ಅಲ್ಲಿ ಒಂದು ಸಭೆ ಜರಗಿಸಿದರು. ಜಿಲ್ಲಾ ಶಾಖೆಯ ಅಧ್ಯಕ್ಷ ಡಾ॥ ಯು. ಪಿ. ಮಲ್ಯರು ಅಧ್ಯಕ್ಷತೆ ವಹಿಸಿದ್ದರು. ಈ ರೋಗವು ಜಿಲ್ಲೆಯಲ್ಲಿ ಹೆಚ್ಚುತ್ತಾ ಇರುವುದರಿಂದ ಈ ಆಸ್ಪತ್ರೆಯ ಕಾರ್ಯವನ್ನು ಕ್ಷಿಪ್ರದಲ್ಲಿಯೇ ಕೈಕೊಳ್ಳುವುದು ಅಗತ್ಯವೆಂಬುದನ್ನು ಜಿಲ್ಲಾ ಕಲೆಕ್ಟರರೂ ಶಾಖೆಯ ಉಪಾಧ್ಯಕ್ಷರೂ ಆದ ಶ್ರೀ. ಎಸ್. ಆರ್. ಕೈವಾರರು ತಿಳಿಸಿದರು. ಈ ಯೋಜನೆಯ ಕಾರ್ಯಕ್ರಮವನ್ನು ಮುಂದುವರಿಸುವ ಬಗ್ಗೆ ಆಡಳಿತೆ ರಚನಾ ಮತ್ತು ಹಣ ಸಂಗ್ರಹ ಉಪಸಮಿತಿಗಳನ್ನು ನಗರದ ಹಲವು ಮಹನೀಯರನ್ನೊಳಗೊಂಡು ನೇಮಿಸಲಾಯಿತು.

ನೋಟೀಸು.

ಉಡುಪಿ ತಾಲ್ಲೂಕು ತೆಂಕನಿಡಿಯೂರು ಗ್ರಾಮದಲ್ಲಿರುವ ಬೇಚಪೂಜಾರಿ ಅಳಿಯ ಜಬ್ಬ ಪೂಜಾರಿಯು ಸಮ್ಮಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ: ನಮ್ಮ ಕುಟುಂಬಕ್ಕೆ ಮೋಸಕೊಡಬೇಕೆಂಬ ದುರಾಶೆಯಿಂದ ನಮ್ಮ ಕುಟುಂಬದ ಹಕ್ಕಿನ ತೆಂಕನಿಡಿಯೂರು ಗ್ರಾಮದಲ್ಲಿರುವ ಸ್ಥಿರಾಸ್ತಿಯನ್ನು ನನ್ನ ಮಾವ ಸದ್ರಿ ಬೇಚಪೂಜಾರಿಯು ದುರ್ಬೋಧನೆಗೆ ಒಳಪಟ್ಟು, ನನ್ನ ಅಜ್ಜಿ ತುಕ್ರು ಪೂಜಾರ್ತಿಯು ಪರಾಧೀನಮಾಡುವ ಆಲೋಚನೆಯಲ್ಲಿರುವದಾಗಿ ನಾನು ತಿಳಿಯುತ್ತೇನೆ. ನಮ್ಮ ಕುಟುಂಬಕ್ಕೆ ಎಷ್ಟನ್ನಾದರೂ ಸಾಲವಗೈರೆಯಿಲ್ಲಾ; ಮತ್ತು ಸದ್ರಿ ಆಸ್ತಿಗಳನ್ನು ಪರಾಭಾರೆಮಾಡುವ ಅವಶ್ಯವೂ ಯಿಲ್ಲಾ. ಆದಕಾರಣ ಸದ್ರಿ ಆಸ್ತಿ ಕುರಿತು ನನ್ನ ಅಜ್ಜಿಯು ಬರಕೊಡಬಹುದಾದ ಕ್ರಯಸಾಧನ, ಯಾ, ಯಿತರ ಯಾವತ್ತೂ ದಸ್ತಾವೇಜುಗಳು ನನ್ನ ಮೇಲಾಗಲಿ, ನನ್ನ ಕುಟುಂಬದ ಮೇಲಾಗಲಿ ಬದ್ಧೀಕರಿಸತಕ್ಕವುಗಳಲ್ಲವೆಂಬ ಸಂಗ್ತಿಯನ್ನು ಸಮ್ಮಂಧಪಟ್ಟವರಿಗೆ ಯೀ ಮೂಲಕ ಕೃತಪಡಿಸಿದ್ದೇನೆ-

ಜಬ್ಬ ಪೂಜಾರಿ ರುಜು

ಮೊಕ್ಕಾಂ: ತೆಂಕನಿಡಿಯೂರು.
ತಾರೀಖು. 17-5-1949

ನೋಟೀಸು.

ಕುಂದಾಪುರತಾಲ್ಕು ಮರವಂತೆ ಗ್ರಾಮದ ಕಾಮಕೆರೆ ದೇವಡಿಗರ ಜಾತಿ ಚಿಕ್ಕಿ ಹೆಂಗ್ಸಿನ ಮಗ ರಾಮನು ಈ ಮೂಲ್ಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದ್ರೆ:-ನನ್ನ ಕುಟುಂಬದ ಮೆಂಬರಳಾದ ಕಾವೇರಿ ಹೆಂಗ್ಸಿನ ಮಗಳು ಗುರುವಮ್ಮ ಎಂಬವಳು ಇತ್ತೀಚೆಗೆ ಬುದ್ಧಿ ಭ್ರಮೆಕೆಟ್ಟು ಆತಳ ಮಗಳಾದ ಮೈನರ ಮರ್ಲಿಯು ಆರೈಕೆ ನೋಡದೆ, ಬೇರೆ ಜನರದುರ್ಬೋಧನೆಗೆ ವ ಮೋಹಕ್ಕೆ ವಳಪಟ್ಟು ಈಗ ಹಾಲೀ ಜ್ಯಾರಿಗೆ ಬಂದಿರುವ ಅಳಿಯಸಂತಾನ ಬಿಲ್ಲುಪ್ರಕಾರ ಅವಳ ಮತ್ತು ಅವಳ ಮೈನರ ಮಗಳ ಕೂಡಾ ಕವಂಗೆ ಸಿಗತಕ್ಕ ಕುಟುಂಬದ ಆಸ್ತಿ ಮೇಲಣ ಹಕ್ಕನ್ನು ಆತಳ ಮಗಳಾದ ನನ್ನ ಆರೈಕೆ ವ ಸಂರಕ್ಷಣೆಯಲ್ಲಿ ಹಾಲೀ ಇರುವ ಮೈನರ ಮರ್ಲಿಗ ಮೋಸಮಾಡುವ ಇರಾದೆ ವ ಇಚ್ಛೆಯಿಂದ ಸುಳ್ಳು ವ ಕಲ್ಪನೆ ಪ್ರತಿಫಲಗಳನ್ನು ಕಾಣದೆ ಪರಾಧೀನ ಮಾಡುವ ಇರಾದೆಯಲ್ಲಿದ್ದಾಳೆ ಎಂದು ನಾನು ತಿಳಿಯುತ್ತೇನೆ. ಹಾಗೆ ಪರಾಧೀನ ಮಾಡಲು ಆತಳಿಗೆ ಹಕ್ಕಿಲ್ಲ. ಅಂತಹ ಪರಾಧೀನವು ಮೈನರ ಮರ್ಲಿ ಕವರಿಗೆ ಬಾಧಿಸತಕ್ಕದ್ದಲ್ಲ. ವ, ಅಸಿಂಧುವಾದ್ದು ಎಂತ ಸದ್ರಿ ಮೈನರ ಮರ್ಲಿ ಗಾರ್ಡಿಯನ ಆಗಿ ವ ಆತಳ ಕುಟುಂಬದ ಹಾಲೀ ಯಜಮಾನನಾಗಿ ಸಹಾ ನಾನು ಈ ಮೂಲ್ಕ ತಿಳಿಯಪಡಿಸುತ್ತೇನೆ. ತಿಳಿದಿರಿ. ತಾ 14-5-49. ಕುಂದಾಪುರ.

× ರಾಮನ ರುಜು.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ಸ್ನಾನ, ಊಟ, ಉಪಹಾರ, ಬೈರ್‍ಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

'ಅಂತರಂಗ'ಕ್ಕೆ
6 ರೂಪಾಯಿ
ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.
'ಅಂತರಂಗ' ಉಡುಪಿ.

ಓದಲೇ ಬೇಕಾದ ಪುಸ್ತಕಗಳ
ಶ್ರೀ. ಕೆ. ಕೆ. ಶೆಟ್ಟರ
ಪ್ರೇಮ ವಿಜಯ
(ಸಾಮಾಜಿಕ ನಾಟಕ)
ಬೆಲೆ ರೂ 1—0—0
ವ್ಯಭಿಚಾರಿಣಿ ಯಾರು
(ಸಾಮಾಜಿಕ ನಾಟಕ)
ಬೆಲೆ ರೂ 1—0—0
ವಿವಿಧ ಕತೆಗಾರರ
ಪ್ರೇಮ ಪ್ರವಾಹ
(ಕಥಾ ಸಂಕಲನ)
ಬೆಲೆ ರೂ 0—8—0
ಸಿಗುವಸ್ಥಳ
ನವಭಾರತ ಬುಕ್ ಡಿಪ್ಪೊ,
ಉಡುಪಿ.

ದ. ಕನ್ನಡ

ಮಂಜನಾಡಿ:— ಇಲ್ಲಿನ ಬೋರ್ಡ ಎ ಲಿಮೆಂಟರೀ ಶಾಲೆಯ ಮಕ್ಕಳ ಪ್ರವಾಸಸ್ಪೊಂ ದು ತಾ 3-5-49ರಲ್ಲಿ ಏರ್ಪಡಿಸಲ್ಪಟ್ಟಿತ್ತು.

ಕಿದಿಯೂರು:—ತಾ. 8-5 49ರಿಂದ ತಾ. 14-5-49ರ ವರೇಗೆ ಕಿದಿಯೂರು ಹಿ ರಿಯ ವಿದ್ಯಾರ್ಥಿ ಸಂಘದ ವೀರವಿಠ್ಠಲ ಭಜನಾ ಮಂಡಳಿಯ ಸಪ್ತಾಹವು ಯಶಸ್ವಿಯಾಗಿ ವಿ ಜೃಂಭಣೆಯಿಂದ ಜರಗಿತು.

ಮಲ್ಪೆ:—ಇದೇ ತಾ 3ರಿಂದ 5ರತನಕ ಮಲ್ಪೆಯ ಸಾರ್ವಜನಿಕರಿಂದ ಮೂರು ದಿನ ಗಳ ಪರಿಯಂತ ಹರಿಕಥಾ ಕಾಲಕ್ಷೇಪವು ಕ್ರ ಮವಾಗಿ ಶ್ರೀ ಗೋವಿಂದದಾಸ್ ಕೆರೆಮಠ, ಶ್ರೀ ರಾಮದಾಸ್ ಸಾಮಗ, ಮಲ್ಪೆ ಮತ್ತು ಶ್ರೀ ಪದ್ಮನಾಭಾಚಾರ್ ಉಡುಪಿ ಇವರುಗ ಳಿಂದ ಬಲು ಸುರಸವಾಗಿ ಜರಗಿಸಲ್ಪಟ್ಟಿತು.

ಇದೇ ತಾ 4ರಲ್ಲಿ ಇಲ್ಲಿಯ ಸಮುದ್ರ ಕರಾ ವಳಿಯಲ್ಲಿ ಒಂದು ಹೆಣವು ತೇಲಿಕೊಂಡು ಬಂ ದು ಬಿದ್ದಿರುವುದೆಂದೂ ಈತನ ಗುರುತು ಇನ್ನೂ ಪತ್ತೆಯಾಗಿಲ್ಲವೆಂದೂ ಪೋಲೀಸರು ಮುಂದಿನ ಕಾರ್ಯಕ್ರಮವನ್ನು ಕೈಕೊಂಡಿರುವ ರೆಂದೂ ತಿಳಿದು ಬರುತ್ತದೆ.

ಬ್ರಹ್ಮಾವರ:—ಉಪ್ಪಿನಕೋಟೆ ಕೊ ಸ್ಮೊಪೊಲಿಟನ್ ಹುಡುಗಿಯರ ಶಾಲೆಯ ಹೆ ತ್ತವರ ಕೂಟದ ಸಭೆಯು ಇದೇ ತಾ 12ರಲ್ಲು ಶಾಲಾವಠಾರದಲ್ಲಿ ಶ್ರೀ ಬಿ. ಪಿ. ಮಾಧವರಾ ಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆ ನೇಜರ್ ರಾ ಫಾ। ಕೋಶಿ ನೊದಲಾದವರ ಭಾಷಣಗಳಾದ ಬಳಿಕ ಮಕ್ಕಳ ವಿವಿಧ ವಿ ನೋದಾವಳಿಗಳಾದುವು.

ಚಾಪಂತಾರು ಸೇತುವೆ ದುರಸ್ತಿ

ಈಗ್ಗೆ ಮದ್ರಾಸು ಸರಕಾರವು ರೂಪಾಯಿ 5,000/-ಸ್ಯಾಂಕ್ಷನ್ ಮಾಡಿದ್ದರೂ ಕೆಲಸವು ಇನ್ನೂ ಪ್ರಾರಂಭವಾಗದಿದ್ದ ಪಕ್ಷ ವಿಷಾದ ಸೂಚಿಸಿ ದುರಸ್ತಿ ಕೆಲಸವನ್ನು ಬೇಗನೆ ಕೈ ಕೊಂಡು ಹೆಚ್ಚಿನ ಬೆಳೆ ಬೆಳೆಸಲು ಅನುಕೂ ಲತೆಗಳನ್ನು ಒದಗಿಸಿಕೊಡಬೇಕಾಗಿ ಗ್ರಾಮ ದ ಮನವಿಯೊಂದು ಜಿಲ್ಲಾ ಕಲೆಕ್ಟರರಿಗೂ ಮದ್ರಾಸು ಸರಕಾರಕ್ಕೂ ಕಳುಹಲಾಗಿದೆ.

ಮಂಜೇಶ್ವರ:— ಶ್ರೀಮದನಂತೇಶ್ವರ ಹಾ ಯಿ ಶಾಲೆಯ ವರ್ಧಂತ್ಯುತ್ಸವವು ತಾ- ರಲ್ಲು ಶ್ರೀ ಎಂ. ಕೇಶವರಾವ್, ಬಿ. ಎ. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ವಿವಿಧ ವಿನೋದಾವಳಿಗಳಾದ ನಂತ ರ ಅಧ್ಯಕ್ಷರು ಭಾಷಣಮಾಡುತ್ತಾ ಮಂಜೇ ಶ್ವರಕ್ಕೆ ಹೈಸ್ಕೂಲಿನ ಆವಶ್ಯಕತೆಯನ್ನು ಸೂಚಿಸಿ ಈ ಕಾರ್ಯವು ಜಯಶೀಲವಾಗು ವಂತೆ ಜನರು ಮುಂದಾಗಬೇಕೆಂದರು.

ಬಳ್ಳಾರಿ:— ನಿಖಿಲ ಕರ್ನಾಟಕ ಆಯು ರ್ವೇದ ಮಹಾ ಮಂಡಲದ ಸ್ಥಾಯೀ ಸಮಿ ತಿಯ ಸಭೆಯು ತಾ 8ರಲ್ಲು ಬಳ್ಳಾರಿ ತಾರಾ ನಾಥ ಆಯುರ್ವೇದ ವಿದ್ಯಾಪೀಠದಲ್ಲಿ ವೈದ್ಯ ಗುರು ಡಾ। ಆ। ಹಲಸೀಕರ್, ಹುಬ್ಬಳ್ಳಿ ಅ ವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ಠರಾ ವುಗಳು ಮಂಜೂರು ಮಾಡಲಾದುವು-

1) ಸರಕಾರವು ಅಸಮಾಂಜಸ್ಯಗಳನ್ನು ಮದ್ಯ ಗಳೆಂದು ನಂಬಿ ಅವುಗಳ ಮೇಲೆ ನಿಯಂತ್ರ ಣ ಹೇರಿದ್ದು ಸಮಂಜಸವಲ್ಲ. ಆಸವಾರಿಷ್ಟ ಗಳು ಮದ್ಯಗಳಲ್ಲ, ಅವು ಅತ್ಯುಪಯುಕ್ತವಾ ದ ಋಷಿಪ್ರಣೀತ ವೇದೋಕ್ತ ಔಷಧಿಗಳು. ಆದ್ದರಿಂದ ನಿಯಂತ್ರಣವನ್ನು ವಾಪಾಸು ತೆಗೆದುಕೊಂಡು ಆಯುರ್ವೇದೋಕ್ತ ಔಷಧಿಗಳಿ ಗೆ ಪ್ರೋತ್ಸಾಹ ಕೊಡಬೇಕು.

2) ಮದ್ರಾಸು ಸರಕಾರದಿಂದ ಮಾನ್ಯತೆ ಯನ್ನು ಪಡೆದಿರುವ ತಾರಾನಾಥ ಆಯುರ್ವೇ ದ ವಿದ್ಯಾಪೀಠದ ಸ್ನಾತಕರಿಗೆ ಮುಂಬಯಿ ಪ್ರಾಂತದಲ್ಲಿ ವೈದ್ಯಕೀ ವ್ಯವಸಾಯವನ್ನು ಮಾಡಲು ಮುಂಬಯಿ ಸರಕಾರವು ಮಾನ್ಯ ತೆ ಕೊಡಬೇಕು.

3) ಮುಂಬಯಿ ಕರ್ನಾಟಕದಲ್ಲಿಯಾಗ ಲೀ ಮದ್ರಾಸು ಕರ್ನಾಟಕದಲ್ಲಿಯಾಗಲೀ ಇ ಷ್ಟರವರೆಗೆ ಆಯುರ್ವೇದ ಕಾಲೇಜನ್ನು ಸ್ಥಾಪಿಸಲಿಲ್ಲ. ರಾಷ್ಟ್ರಕ್ಕೆ ಆರೋಗ್ಯದಾನವನ್ನು ಮಾಡುವ ವೈದ್ಯರ ವಂಶವೃಕ್ಷವು ಅಳಿದು ಹೋಗುತ್ತಲಿದೆ. ಆದ್ದರಿಂದ ಕರ್ನಾಟಕ ಪ್ರಾಂ ತದಲ್ಲಿ ಯೋಗ್ಯ ಅಂತಸ್ತಿನ ಆಯುರ್ವೇದ ಕಾಲೇಜನ್ನು ಸ್ಥಾಪಿಸಬೇಕು.

ಬೈಂದೂರು— ಬೈಂದೂರು ಬೋರ್ಡ್ ಹೈಸ್ಕೂಲ ವಿದ್ಯಾರ್ಥಿಗಳ ಅನುಕೂಲತೆ ಬ ಗ್ಗೆ ಬರುವ ಜೂನು ತಿಂಗಳ ಪ್ರಥಮ ವಾರದಲ್ಲಿ 'ಬೈಂದೂರು ಬೋರ್ಡ್ ಹೈಸ್ಕೂಲ ಹೊಸ್ಟೆಲ್' ತೆರೆಯಲ್ಪಡುವುದು. ಹೊಸ್ಟೆಲಿಗೆ ಸೇರಲು ಇಚ್ಛಿಸುವವರು ಸದ್ರಿ ಹೊಸ್ಟೆಲ್ ಸುಪರಿಂಟೆಂಡೆಂಟ್, ಟಿ. ಶಂಕರ ರಾವ್, ಹೆ ಡ್ಮಾಸ್ತರ ಇವರಿಗೆ ತಾ. 31-5-49ರೊಳಗೆ ತಿಳಿಸತಕ್ಕದ್ದೆಂದು ಹೈಸ್ಕೂಲ ಕಮಿಟಿ ಕರ ಸ್ಪಾಂಡೆಂಟ ಶ್ರೀ. ಎಡ್ತಾರೆ ಮಂಜಯ್ಯ ಶೆಟ್ಟಿ ಎಡ್ವಕೇಟ ತಿಳಿಸುತ್ತಾರೆ.

ಕುಂಬಳೆ- ಇಲ್ಲಿಯ ಫಿರ್ಕಾಭಿವೃದ್ಧಿ ಕ ಮಿಟಿಯ ಸಭೆಯು ತಾ 14ರಲ್ಲಿ ಪುತ್ತೂರು ರೆವಿನ್ಯೂ ಡಿವಿಜನಲ್ ಅಫೀಸರ್ ಜನಾಬ್ ಎಸ್. ಎ ಕರೀಮ್ ಸಾಹೇಬರ ಅಧ್ಯಕ್ಷತೆ ಯಲ್ಲಿ ಸೇರಿತು. 1949 50ನೆ ಇಸವಿಯಲ್ಲಿ ಜ್ಯಾರಿಗೆ ತರಬೇಕಾದ ಕಾರ್ಯಕ್ರಮಗಳ ಕುರಿತು ಸರಕಾರಿ ಹುಕುಮಿಗೆ ಅನುಸರಿಸಿ ಜಿಲ್ಲಾ ಅಫೀಸರುಗಳು ತಯಾರಿಸಿದ ವರದಿಗ ಳು ಸಭೆಯ ಮುಂದಿಡಲ್ಪಟ್ಟವು.

ಕುಂದಾಪುರ

ಮಾನ್ಯಮಂತ್ರಿ ಚಂದ್ರಮೌಳಿ

ಯವರು—ತಾ 13ರಲ್ಲು ಸಾಧಾರಣ 12ತಾಸಿ ಗೆ ಕುಂದಾಪುರಕ್ಕೆ ಬಂದಾಗ ಸರ್ಕಲ್ ಕಾಂ ಗ್ರೆಸ್ ಕಮಿಟಿಯವರೂ, ಪುರಜನರೂ, ಸರ ಕಾರ ಅಧಿಕಾರಿಗಳೂ ಅವರನ್ನು ಸ್ವಾಗತಿಸಿದ ರು. ಸಂಜೆ ಕುಂದಾಪುರ ಪಂಚಾಯತ ಬೋ ರ್ಡ್ ಆಫೀಸಿನಲ್ಲಿ ಮಂತ್ರಿಗಳಿಗೆ ಬೋರ್ಡಿನ ವೈಸ್ ಪ್ರೆಸಿಡೆಂಟರಾದ ಮಿ। ಸಿರಿಲ್ ಫೆರ್ನಾಂ ಡೀಸರು ಮಾನಪತ್ರವನ್ನಿತ್ತರು. ಬಳಿಕ ಹೌ ಸ್ ಬಿಲ್ಡಿಂಗ್ ಸೊಸೈಟಿ ಪರವಾಗಿ ಊರ ಪ್ರಮುಖರು ಮಂತ್ರಿಗಳೊಡನೆ ಮಾತುಕತೆ ನಡಿಸಿದರು. ಆ ಮೇಲೆ 5ಗಂಟೆಗೆ ಮಾನ್ಯ ಮಂತ್ರಿಗಳು ಹೈಸ್ಕೂಲು ವಠಾರದಲ್ಲಿ ಕೂ ಡಿದ ಮಹಾಸಭೆಯ ಮುಂದೆ ಭಾಷಣಮಾಡಿ ದರು. ಸರ್ಕಲ್ ಕಾಂಗ್ರೆಸ್ ಕಮಿಟಿ ಕಡೆ ಯಿಂದ ಶ್ರೀ ಎನ್. ಎಸ್. ಪರಮೇಶ್ವರಯ್ಯ ನವರು ಮಂತ್ರಿಗಳಿಗೆ ಮಾನಪತ್ರವಿತ್ತರು. ಶ್ರೀ ವೈ. ಮಂಜಯ್ಯ ಸೆಟ್ಟರು ಧನ್ಯವಾದಗಳ ನ್ನರ್ಪಿಸಿದರು. 6ಗಂಟೆಗೆ ಮಾನ್ಯಮಂತ್ರಿಗ ಳು ಜಿಲ್ಲಾಧಿಕಾರಿಗಳೊಡನೆ ಕೂಡಿಕೊಂಡು ಗಂಗೊಳ್ಳಿಗೆ ಹೋದರು. ಅಲ್ಲಿ ಶ್ರೀ ಯಜ್- ಲಕ್ಷ್ಮಿನಾರಾಯಣ ಕಾಮತರೇ ಮೊದಲಾದವ ರು ಮಂತ್ರಿಗಳಿಗೆ ಸ್ವಾಗತವಿತ್ತರು. ಒಳ್ಳೆ ಮುಹ ಮಂದೆ ನರಗೆ ಮಂತ್ರಿಗಳು ಹೋಗಿ ಪುನಃ ಕುಂದಾಪುರಕ್ಕೆ ಮರಳಿಬಂದರು. ರಾತ್ರಿ 9 ತಾಸಿಗೆ ಮಾನ್ಯಮಂತ್ರಿ ಮತ್ತು ಜಿಲ್ಲಾ ಮು ಖ್ಯಾಧಿಕಾರಿಗಳು ಸತ್ಕಾರಕೂಟದಲ್ಲಿ ಭಾಗವ ಹಿಸಿ ಸಮಯೋಚಿತ ಮಾತುಗಳನ್ನಾಡಿದರು.

ತಾ 14ರಲ್ಲು ಬೆಳಿಗ್ಗೆ ಕುಂದಾಪುರ ಕ್ಲಬ್ಬಿನ ಲ್ಲಿ ಕುಂದಾಪುರ ಕೋಪರೇಟಿವ್ ಸ್ಟೋರ್ಸ್ಸಿನ ವರ ಸತ್ಕಾರವನ್ನು ಸ್ವೀಕರಿಸಿ 9 ಗಂಟೆಗೆ ಕೋಟೇಶ್ವರಕ್ಕೆ ಮಾನ್ಯಮಂತ್ರಿಗಳು ಆಗ ಮಿಸಿ ಅಲ್ಲಿಯವರ ಮಾನಪತ್ರ, ಸತ್ಕಾರಾದಿ ಗಳನ್ನು ಸ್ವೀಕರಿಸಿ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಪ್ರಯಾಣ ಬೆಳೆಸಿದರು-

ಖುಷ್ಕಸ್ವಪ್ನ ನಿಂತಿತು

'ಕುಮಾರ್' ಬಿಲ್ಲೆಗಳನು ಉಪಯೋ ಗಿಸಿದರೆ ಹದಿನಾಲ್ಕು ಋತುಸ್ರಾವವಾಗುವ ಸೆ ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬ ಹುದು, ಯಾವ ಬಾಧಕವೂ ಯಿಲ್ಲ. ಸಾವಿ ರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs B. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು: ರಹಾಕಂಪೆನಿ, ಮಂಗಳೂರು

ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.



Approved firm by the Govt. of Mysore Certified by the Agent of the Govt. of Cylone & Indiac.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನಸುಖ
ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿ ಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿ ಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀ ಮೂತ್ರ, ಅನಕೋಶ, ಕರುಳಿಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂ ಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿವಾರಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂ ದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ-ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆ ನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇವರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2 8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42 0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಸರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ ಒಂದುಡಜನ್ ಡ್ರಸರ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18. ವಿ ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ನಿರ್ಧರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಮನೆ ಯಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಸಿರಸಿ ಅ. ಭಾ. ಅಡಿಕೆ ಪರಿಷತ್ತಿನಲ್ಲಿ

ಶ್ರೀ ದಿವಾಕರರ ಉದ್ಘಾಟನಾ ಭಾಷಣದ ಸಾರ.

ಬಾಲ್ಯದಲ್ಲಿ ನನ್ನ ತಂದೆತಾಯಿಗಳು ನನ್ನ ಬಚ್ಚಬಾಯಿಯಲ್ಲಿ ಒಂದು ಚಿಮುಟಿಗೆ ಅಡಿಕೆ ಪುಡಿಯನ್ನು ಮೊದಲು ಹಾಕಿದ ದಿನದಿಂದಲೇ ಪೂಗಿ ಸೇವನೆಯ ಅಲ್ಪ ಪರಿಚಯವು ನನಗಾಗಿರಲಿಕ್ಕೆ ಬೇಕು. ನನ್ನ ಅನ್ನದ ರುಚಿಯೆಲ್ಲ ಅಳಿದುಹೋಗಿ ಪ್ರತಿಯೊಂದು ಪದಾರ್ಥವು ಕಹಿಯೆನಿಸುತ್ತಿದ್ದ ಕೊನೆಯ ದಿನಗಳಲ್ಲಿ ಒಂದು ಚಿಮುಟಿಗೆಯಷ್ಟು ಮಸಾಲೆಯಡಿಕೆ ಪುಡಿಯೇ ನನಗೆ ಸೌಖ್ಯವನ್ನು ಕೊಟ್ಟರೂ ಕೊಟ್ಟೀತು. ನಾನೇನೂ ನಿಯಮಿತವಾಗಿ ಅಡಿಕೆ ತಿನ್ನುವ ಚಟದವನಲ್ಲ; ಅಥವಾ ಈ ಬೆಟ್ಟದ ಗಟ್ಟಿ ಹೆಣ್ಣಿನ ಒನಪು ಒಯ್ಯಾರಗಳನ್ನು ಧಿಕ್ಕರಿಸುವಷ್ಟು ವಿಷಯಾವ್ಯಕ್ತ ಕೌತೂಹಲನೂ ಅಲ್ಲ, ವೇದಾಭ್ಯಾಸಜಡನೂ ಅಲ್ಲ. ಸಾಮಾನ್ಯ ಮಾನವನಂತೆ ಬಡಬಗ್ಗರ ಅಳವಿನಲ್ಲಿರುವ ನಿರಪಾಯಕರ ಚಿಕ್ಕಪುಟ್ಟ ವಿಲಾಸಗಳಿಂದಾಗುವ ಲಾಭಗಳಲ್ಲಿ ನನಗೆ ನಂಬಿಗೆಯಿದೆ. ಎಳೆವಳ್ಳಿಯಿಂದ ಆಗ ಳಿಗೆಗೇ ತೆಗೆದ ಕೋಮಲವಾದ ವೀಳ್ಯದೆಲೆಯ ಹಸಿರುಡಿಗೆಯನ್ನುಟ್ಟಾಗಂತೂ ವಿಶೇಷವಾಗಿ ಈ ವಧುವಿನ ಸಂಗಸುಖವನ್ನು ಆಗಾಗ್ಗೆ ಭೋಗಿಸಿ ಆನಂದಪಟ್ಟಿದ್ದೇನೆ. ಸುಣ್ಣದ ಒಂದು ಗೆರೆ, ಒಂದು ಲವಂಗ, ಏಲಕ್ಕಿಯ ಕೆಲ ಕಾಳುಗಳು, ಅಡಿಕೆಯ ಎರಡು ಹೋಳುಗಳು, ಕಾಚಿನ ಒಂದು ಕಣ, ಎರಡು ವೀಳ್ಯದೆಲೆಗಳು ಇವುಗಳನ್ನೆಲ್ಲ ಕೂಡಿಸಿ ಅಗಿದು ತಿಂದರೆ ಬರುವ ರುಚಿಯ ಸಾಮರಸ್ಯದ ಮುಂದೆ ಸಂಗೀತವಾದ್ಯಗಳ ಸುಂದರ ಮೇಳವು ತಲೆತಗ್ಗಿಸದಿದ್ದರೂ ಅದರ ಅನುಕರಣವನ್ನಾದರೂ ಮಾಡಲೇಬೇಕಾಗುವದು. ಆದರೆ ಅನೇಕ ಸಲ ದುಷ್ಟಸಂಗದಿಂದ ಸದಭಿರುಚಿಯು ಹಾಳಾಗುವದು; ಮತ್ತು ಸಜ್ಜನರು ಕೂಡ ನೀತಿಗೆಡುವರು. ಪ್ರಯುಕ್ತ ತಂಬಾಕು ಈ ದೃಷ್ಟಿಯಲ್ಲಿ ಬರುವ ಇಂತಹ ಖಳನಾಯಕನಂತಿದೆಯೆಂದು ಹೇಳಬಹುದು. ಇವು ಜನರಿಗೆ ಸೌಜನ್ಯ, ಸ್ವಚ್ಛತೆ, ಆರೋಗ್ಯಗಳ ಎಲ್ಲ ನಿಯಮಗಳನ್ನು ನಿರಾಕರಿಸಿ ಬಾಯಲ್ಲಿಯ ಶ್ರೇಷ್ಠಪಾಚಕದ್ರವ್ಯವಾದ ಜೊಲ್ಲನ್ನು ಪಿಚಿ ಪಿಚಿ ಸಿಕ್ಕ ಸಿಕ್ಕಲ್ಲಿ ಉಗುಳಹಚ್ಚುವನು. ಬಹಾರು ರೂಪಗಳನ್ನು ಧರಿಸಿ ನಟಿಸುವ ಮತ್ತು ಸಾವಿರಾರು ಜನರನ್ನು ತನ್ನ ಮೋಹಪಾಶದಲ್ಲಿ ಕೆಡಹಿ ಅವರ ದೇಹಾರೋಗ್ಯವನ್ನು ಹಾಳು ಮಾಡುವ ಈ ಕಂಬಣ್ಣದ ಪಿಶಾಚಿಯೊಂದಿರದಿದ್ದರೆ ತಾಂಬೂಲ ಸೇವನವು ಅತ್ಯಂತ ಗೌರವದ ಹಾಗೂ ಸಭ್ಯತೆಯ ಚಟವಾಗುತ್ತಿದ್ದಿತು. ಇದಲ್ಲದೆ ಇದರ ಸೇವನದಿಂದ ಆರೋಗ್ಯದಾಯಕವಾದ ಪದಾರ್ಥವನ್ನು ತಿಂದು ಮುಖಶುದ್ಧಿಯನ್ನು ಮಾಡಿಕೊಳ್ಳುವದಲ್ಲದೆ ಆಧುನಿಕ ಅಭಿರುಚಿಯ ಅಂಗನೆಯರು ತುಟಿಬಣ್ಣದ ಕಡ್ಡಿಗಳಿಗೆ ವೆಚ್ಚಮಾಡುತ್ತಿರುವ ಹೇರಳ ಹಣವನ್ನು ಉಳಿಸಿಕೊಳ್ಳಬಹುದು

ಅಡಿಕೆಯ ಔಷಧಿ ಉಪಯೋಗವನ್ನು ಕುರಿತು ಇಲ್ಲವೆ ಅದರ ಪಾಚಕ ಗುಣಗಳ ಬಗೆಗೆ ಹೇಳಲು ನಾನೇನೂ ಅಧಿಕಾರಿಪುರುಷನಲ್ಲ ಆದರೂ ಆಯುರ್ವೇದದಲ್ಲಿ ಅದಕ್ಕೊಂದು ಸ್ಥಾನವುಂಟೆಂಬುದನ್ನು ಬಲ್ಲೆನಲ್ಲದೆ ಇತರ ಮೂಲಿಕೆಗಳೊಡನಾಗಲಿ ಅಥವಾ ಅದೊಂದನ್ನೇ ಆಗಲಿ ವೈದ್ಯರು ಔಷಧಕ್ಕಾಗಿ ಉಪಯೋಗಿಸುವರೆಂಬುದನ್ನು ಅರಿತಿರುವೆ. ಅದು ಮುಖಶುದ್ಧಿಯನ್ನು ಮಾಡುತ್ತದೆ; ಪಾಚಕರಸವನ್ನು ಅಭಿವೃದ್ಧಿಗೊಳಿಸುತ್ತದೆ. ಮತ್ತು ಪಾಚಕದ್ರವ್ಯದಂತೆ ಕೆಲಸಮಾಡುತ್ತದೆ. ವಿಶಿಷ್ಟರೂಪದಲ್ಲಿ ವಿಶಿಷ್ಟ ಪ್ರಮಾಣದಲ್ಲಿ ಅದನ್ನು ತೆಗೆದುಕೊಂಡರೆ ಚೆನ್ನಾಗಿ ಮಲಶುದ್ಧಿಯೂ ಆಗುತ್ತದೆ. ಸೌಮ್ಯಸ್ವರೂಪದ ಉತ್ತೇಜಕದಂತೆ ಅದು ಉತ್ಸಾಹವನ್ನಿತ್ತು ಆ ಮಟ್ಟಿಗೆ ಏಕಾಗ್ರತೆಗೆ ನೆರವಾಗಬಲ್ಲದು. ಇವು ಅದರ ಸಾಮಾನ್ಯ ಔಷಧಿಯ ಉಪಯೋಗಗಳು. ಅದರ ಆಹಾರ ಸತ್ವದ ಬಗೆಗೆ ನನಗೇನೂ ಜ್ಞಾನವಿಲ್ಲ. ಸಂರಕ್ಷಕ ಆಹಾರದಂತೆ ಅದರ ಉಪಯೋಗವೇನಾದರೂ ಇರುವದೋ ಇಲ್ಲವೋ ನಾನರಿಯೆ. ಇವೆಲ್ಲ ಸಂಶೋಧನೆಗೆ ಯೋಗ್ಯ ವಿಷಯಗಳು.

ಅಡಿಕೆಯ ಪ್ರಶ್ನೆಗೆ ಇನ್ನೊಂದು ಮುಖವಿದೆ. ಹಿಂದುಸ್ಥಾನದಲ್ಲಿ ಅದರ ಉಪಯೋಗವು ಸಾರ್ವತ್ರಿಕವಾಗಿ ಪ್ರಾಚೀನ ಕಾಲದಿಂದಲೂ ಇದೆಯೆಂದೆನ್ನಬಹುದು. ಜಾತಿ, ಮತ, ಪಂಥ, ಧರ್ಮ, ವಯಸ್ಸು, ಗಂಡು, ಹೆಣ್ಣು, ದಕ್ಷಿಣ, ಉತ್ತರ, ಪಶ್ಚಿಮ, ಪೂರ್ವ, ಎಂಬ ಭೇದಗಳನ್ನು ಎಣಿಸದೆ ಎಲೆಯೊಡನಾಗಲಿ ಇಲ್ಲವೆ ಎಲೆ ಇಲ್ಲದೆಯಾಗಲಿ ಅಡಿಕೆಯನ್ನು ತಿನ್ನುವದು ಸ್ವಭಾವವೇ ಆಗಿದೆ. ಹಿಂದೀಯರ ರೀತಿ ನೀತಿಗಳ ಬಗ್ಗೆ ಬರೆಯುವವರಾರೂ ಅಡಿಕೆಯ ಉಲ್ಲೇಖನವನ್ನು ಮಾಡದೆ ಬರೆಯಲಾರರು. ಅಡಿಕೆಯನ್ನು ತಿನ್ನುವ ಚಟವು ಸಮತಾ ಪದ್ಧತಿಯ ಚಟವೆಂದೆನ್ನಬಹುದು. ಯಾಕೆಂದರೆ ಅದನ್ನು ಅರಸರೂ ಅಂಗೀಕರಿಸುವರು; ಆಳೂ ತಿನ್ನುವನು. ಅದು ಪವಿತ್ರತೆಯ ದ್ಯೋತಕವೂ ಆಗಿದೆ. ಧಾರ್ಮಿಕ ವಿಧಿಗಳಲ್ಲಾಗಲಿ ಪೂಜೆ ಪುರಸ್ಕಾರಗಳಲ್ಲಾಗಲಿ ಒಂದಿಲ್ಲೊಂದು ರೂಪದಲ್ಲಿ ಅದು ಬಾರದೆ ಗತಿಯಿಲ್ಲ.

ಅಡಿಕೆಯ ಉದ್ದಿಮೆ ವ್ಯವಹಾರದಲ್ಲಿ ತೊಡಗಿದವರ ಸಂಖ್ಯೆ ೩೦ ಲಕ್ಷಕ್ಕೆ ಮಿಕ್ಕಿದೆ. ವರ್ಷದಲ್ಲಾಗುವ ಅಡಿಕೆಯ ವ್ಯವಹಾರವು ೩೦ ಕೋಟಿ ರೂಪಾಯಿಗಳಷ್ಟಿದೆ. ಈ ಉದ್ದಿಮೆಯ ಆರ್ಥಿಕ ವ್ಯವಸ್ಥೆಯಲ್ಲಿ ಸ್ಥಿತ್ಯಂತರಗಳಾದರೆ ಅದರ ಪರಿಣಾಮವು ೧ ಕೋಟಿ ಜನರ ಜೀವನದ ಮೇಲೆ ಆಗದೆ ಹೋಗದು ಎಂದು ನನ್ನ ಕೇಳಿಕೆಯಲ್ಲಿದೆ. ಈ ಅಂಕಿ ಅಂಶಗಳಲ್ಲಿ ಕೆಲವು ಹೆಚ್ಚು ಕಡಿಮೆ ಆಗಬಹುದು. ಕೆಲವು ಅಂಕಿಗಳ ಸಂಬಂಧದಲ್ಲಿ ಮತಭೇದಕ್ಕೂ ಎಡೆ ಇರಬಹುದು. ಆದರೆ ಇದರಿಂದ ನಿರ್ವಿವಾದವಾಗಿ ಒಡೆದು ಕಾಣುವ ಒಂದು ಅಂಶವೆಂದರೆ ಈ ಉದ್ದಿಮೆಯಲ್ಲಿ ತೊಡಗಿದವರ ಸಂಖ್ಯೆ ಸಣ್ಣದಲ್ಲೆಂಬುದೇ ಆಗಿದೆ. ಇದರಲ್ಲಿ ತೊಡಗಿದವರು ನನ್ನಂತೆ ಜೀವನ ಸಾಗಿಸುವಂತೆ ನೋಡಿಕೊಳ್ಳುವ ಹೊಣೆಯು ಈ ರಾಷ್ಟ್ರದ ನಾಗರಿಕರಾದ ನಮ್ಮೆಲ್ಲರ ಮೇಲೆಯೂ ಇದೆ. ಅಡಿಕೆಯ ಉತ್ಪತ್ತಿ ಹಾಗೂ ಅದನ್ನು ಪೇಟೆಗೆ ಕಳಿಸಲು ಯೋಗ್ಯವಾಗುವಂತೆ ಹದಗೊಳಿಸುವ ಇತರ ಕೃತಿಗಳು ನಡೆಯುವದು ನಿಬಿಡವಾದ ಅರಣ್ಯ ಮಧ್ಯದಲ್ಲೆಂಬುದು ಈ ಉದ್ದಿಮೆಯ ವಿಷಯದಲ್ಲಿ ಮಹತ್ವದ ಅಂಶ. ಅಲ್ಲಿ ವಾಸಿಸುವ ಜನರಿಗೆ ಜೀವನ ಸೌಕರ್ಯಗಳಿಲ್ಲ. ಆಧುನಿಕ ಜೀವನದ ಸೌಕರ್ಯಗಳಂತೂ ಮೊದಲೇ ಇಲ್ಲ. ಹೀಗಾಗಿ ಈ ಪ್ರದೇಶಗಳಲ್ಲಿ ವಾಸಿಸುವ ಜನರು ಹಿಂದುಳಿದವರಾಗಿರುವರು' ನಾವು ಈ ಪ್ರದೇಶಗಳನ್ನು ಹಿಂದುಳಿದ ಪ್ರದೇಶಗಳೆಂದೇ ನೋಡಬೇಕಾಗುವದು,

ಜನರ ಬೇಡಿಕೆ ಪೂರೈಸುವಷ್ಟು ಅಡಿಕೆಯ ಉತ್ಪತ್ತಿ ಹಿಂದುಸ್ಥಾನದಲ್ಲಿ ಆಗುವದಿಲ್ಲ. ಪರದೇಶಗಳಿಂದ ಪ್ರತಿ ವರ್ಷ ೧೨ ಲಕ್ಷ ಮಣ ಅಡಿಕೆಯು ಆಯಾತ ಮಾಡಬೇಕಾಗುವದು. ಸಿಂಗಾಪೂರ, ಮಲಯಾ ಮೊದಲಾದ ಕಡೆಗಳಲ್ಲಿ ಅಡಿಕೆಯು ವಿಪುಲವಾಗಿ ಕಾಡಿನಲ್ಲಿ ಬೆಳೆಯುವದು. ಅಲ್ಲಿ ಅದನ್ನು ಹರಿದು ಸಂಗ್ರಹಮಾಡಿದಾರುವ ಮಟ್ಟಿಗೆ ಅದರ ಉತ್ಪಾದನವೆಚ್ಚ ಮಾತ್ರ. ಹೀಗಾಗಿ ಅಲ್ಲಿಯ ಅಡಿಕೆಯನ್ನು ಹಿಂದುಸ್ಥಾನದಲ್ಲಿ ಅಗ್ಗದರದಿಂದ ಮಾರಾಟ ಮಾಡಲು ಅವರಿಗೆ ಶಕ್ಯವಾಗಿರುವದು. ಆಯಾತ ಮಾಡಿದ ಅಡಿಕೆಯು ಹಿಂದುಸ್ಥಾನದಲ್ಲಿ ಬೆಳೆಯುವ ಅಡಿಕೆಯಷ್ಟು ಒಳ್ಳೇ ತರಗತಿಯದಲ್ಲ. ಅದನ್ನು ಆಯಾತ ಮಾಡುವದರಿಂದ ಅದು ಇಲ್ಲಿಯ ಅಡಿಕೆಯ ಬೆಲೆಯನ್ನು ಅದರ ಉತ್ಪಾದನ ವೆಚ್ಚಕ್ಕಿಂತಲೂ ಕಡಿಮೆ ಮಟ್ಟಕ್ಕೆ ಇಳಿಸಲು ಸಮರ್ಥವಾಗಿದೆ. ನಮ್ಮಲ್ಲಿಯ ಅಡಿಕೆಯ ಉದ್ದಿಮೆಯ ದುರ್ದೈವವು ಇಲ್ಲಿಂದಲೇ ಆರಂಭವಾಗುವದು. ಹಿಂದುಸ್ಥಾನ ಸರಕಾರದವರು ಅಡಿಕೆಗೆ ಹೇರಿದ ಭಾರವಾದ ಕರವನ್ನು ರದ್ದುಗೊಳಿಸಿದ್ದರಿಂದ ಸಹಜವಾಗಿಯೂ ಈ ಉದ್ದಿಮೆಗೆ ಪರಿಹಾರ ದೊರೆತಂತಾಗಿದೆ. ಆದರೆ ಇಷ್ಟರಿಂದಲೇ ಈ ಉದ್ದಿಮೆಯು ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಿದೆ ಎಂದು ಹೇಳಲಿಕ್ಕಾಗದು. ಈ ಉದ್ದಿಮೆಯು ಭದ್ರವಾಗಬೇಕಿದ್ದರೆ ಅಡಿಕೆ ಉದ್ದಿಮೆಯಲ್ಲಿ ತೊಡಗಿದವರೂ ಜನಸಾಮಾನ್ಯರೂ ಸರಕಾರದವರೂ ಇನ್ನೂ ಮಹತ್ವದ ಕೆಲವು ಕ್ರಮಗಳನ್ನು ಕೈಕೊಳ್ಳುವದು ಅವಶ್ಯವಿದೆ.

ಈ ಪ್ರಶ್ನೆಯನ್ನು ಸಂಪೂರ್ಣ ರಾಷ್ಟ್ರೀಯ ದೃಷ್ಟಿಯಿಂದಲೂ ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಸಮಗ್ರ ದೃಷ್ಟಿಯಿಂದಲೂ ನಾನು ನೋಡಬಯಸಿರುವೆ. ಯಾವುದಾದರೊಂದು ಯೋಜನೆಮಾಡಿ ಈ ಉದ್ದಿಮೆಗೆ ತಾತ್ಕಾಲಿಕವಾಗಿ ಹೆಚ್ಚು ಹಣ ದೊರೆಯುವಂತಾದ ಇಷ್ಟರಿಂದಲೆ ನನಗೆ ಸಮಾಧಾನವೆನಿಸದು. ಅಗ್ಗದರದಿಂದ ಕೀಳು ತರಗತಿಯ ಅಡಿಕೆಯನ್ನು ವಿದೇಶಗಳಿಂದ ಆಯಾತ ಮಾಡುವದನ್ನು ನಿಲ್ಲಿಸಿ ನಮ್ಮ ದೇಶಕ್ಕೆ ಸಾಕಷ್ಟು ಅಡಿಕೆ ಇಲ್ಲಿಯೇ ಬೆಳೆಯುವಂತೆ ಈ ಉದ್ದಿಮೆಯನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಲು ಯೋಗ್ಯಕ್ರಮ ಕೈಕೊಳ್ಳಬೇಕು. ಆ ಉದ್ದಿಮೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುವದಲ್ಲದೆ ಉದ್ದಿಮೆಯಲ್ಲಿ ತೊಡಗಿದ ಜನರ ಹಿಂದುಳಿದ ಪರಿಸ್ಥಿತಿ ಹಾಗೂ ಆ ಪ್ರದೇಶಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸಲು ಯೋಗ್ಯ ಕ್ರಮ ಕೈಕೊಳ್ಳುವದು ಅಗತ್ಯವಿದೆ. ಬೇನೆಬೇಸರಿಕೆ, ಸಾರಿಗೆ, ಶಿಕ್ಷಣ ಇವು ಅಲ್ಲಿಯ ಅತಿ ಮಹತ್ವದ ಸಮಸ್ಯೆಗಳಾಗಿವೆ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL



ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

RLGD.

Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

Taranath Ayurveda Vidyapeetha Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ

S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ

ತಾರಾನಾಥ ವಿದ್ಯಾಪೀಠ ಬಳ್ಳಾರಿ.

P. O. ಸಂಗನಕಲ್ ಬಳ್ಳಾರಿ.



ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮ. ದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಕರ್ನಾಟಕ ಮಲೆನಾಡು ಪರಿಷತ್ತು

ತೃತೀಯ ಕರ್ನಾಟಕ ಮಲೆನಾಡು ಪರಿಷತ್ತು ಶ್ರೀ. ಸುಬ್ರಹ್ಮಣ್ಯ ಕ್ಷೇತ್ರದ ಪರಿಸರದಲ್ಲಿ ವಿದ್ಯುದ್ದೀಪಗಳಿಂದಲಂಕೃತವಾದ ಮಂಟಪದಲ್ಲಿ ಕೊಡಗಿನ ಜಿಲ್ಲಾ ಜಡ್ಜರಾದ ಶ್ರೀ ಎನ್. ಮಾದ್ದಪ್ಪನವರ ಅಧ್ಯಕ್ಷತೆಯಲ್ಲಿ ತಾ 12ರಲ್ಲಿ ಯಶಸ್ವಿಯಾಗಿ ಜರಗಿತು. ಸುಮಾರು ಎಂಡೂವರೆ ಸಾವಿರ ಪ್ರತಿನಿಧಿಗಳೂ ಪ್ರೇಕ್ಷಕರೂ ಬಂದಿದ್ದರು.

ಸಭಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಸ್ವಾಗತಾಧ್ಯಕ್ಷರಾದ ಶ್ರೀ. ಕೆ. ವಿ. ಗೌಡರು ಅಧ್ಯಕ್ಷರನ್ನೂ ಅತಿಥಿಗಳನ್ನೂ ಸ್ವಾಗತಿಸಿ ಮಲೆನಾಡಿನವರ ಸಂಕಷ್ಟಗಳನ್ನು ಮಹಾ ಸಭೆಯ ಮುಂದಿಡುತ್ತಾ ಈ ಸಮ್ಮೇಳನವು ಆ ಕುರಿತು ಹೆಚ್ಚಿನ ಮಾರ್ಗದರ್ಶಕವಾದೀತೆಂದು ಆಶಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಾವು ಅಚ್ಚ ಮಲೆನಾಡಿನವರೆಂದು ಹೇಳಿ ಬಳಿಕ ಮಲೆನಾಡಿನ ಗತವೈಭವ, ಮಲೆನಾಡಿನ ಜೀವನ, ಇಂದಿನ ಪರಿಸ್ಥಿತಿ, ಆಗಬೇಕಾದ ಸುಧಾರಣೆಗಳು ಇತ್ಯಾದಿಗಳನ್ನು ತಿಳಿಸುತ್ತಾ ಹೀಗೆಂದರು.

"ಮಲೆನಾಡಿನ ಪೂರ್ವದ ಸ್ಥಿತಿ ನಮ್ಮಲ್ಲಿ ಬಹುಮಂದಿಗೆ ತಿಳಿದಿರಲಾರದು. ಒಂದೆರಡು ಶತಮಾನಗಳ ಹಿಂದೆ ಮಲೆನಾಡು ಅತಿ ವೈಭವದಲ್ಲಿ ಬಾಳುತ್ತಿತ್ತು. ಆ ಕಾಲದ ಸಂಪತ್ತು, ಜನಸಂಖ್ಯೆ, ಕೀರ್ತಿ ಎಲ್ಲವೂ ಇಂದು ಅಳಿದು ಹೋಗಿದೆ. ಪರಕೀಯರು ಆಳತೊಡಗಿದಂದಿನಿಂದ ಮಲೆನಾಡಿನ ವೈಭವ ಮಾಯವಾಗಿದೆ. ಮಲೆನಾಡಿಗರನ್ನು ಆಳುವುದು ಕಷ್ಟವೆಂದು ಅವರನ್ನು ತಮ್ಮ ಶತ್ರುಗಳೆಂದೇ ಭಾವಿಸಿ, ಪೇಟೆ ಪಟ್ಟಣಗಳನ್ನು ಬೆಳೆಸಿದರು.

ಇಂದು ಹಳ್ಳಿಯ ಜೀವನ ನಿಕೃಷ್ಟವಾಗಿದೆ. ಹಳ್ಳಗುಡ್ಡೆಗಳ ನಡುವೆ ಒಂಟಿ ಮನೆಗಳ ಜೀವನ; ಗ್ರಾಮಗಳಲ್ಲಿ ರಸ್ತೆಗಳಿಲ್ಲ, ಶಾಲೆಗಳಿಲ್ಲ, ಆಸ್ಪತ್ರೆಗಳಿಲ್ಲ, ಹೀಗಾಗಿ ಭೂತಬಲಿಗಳಿಂದಲೇ ರೋಗ ಗುಣವಾಗಬೇಕಾಗಿದೆ.

ಇಲ್ಲಿ ರಿಜರ್ವ್ ಕಾಡುಗಳನ್ನು ನೋಡಿದರೆ ಇವನ್ನು ಪಟ್ಟಣಗಳಿಗಾಗಿಯೇ ಕಾದಿದ್ದಂತೆ ಕಾಣುತ್ತದೆ. ಇದರ ಕಾನೂನು ಬಹಳ ಕಠಿನ. ನಮಗೆ ಸ್ವಾತಂತ್ರ್ಯ ಸಿಕ್ಕಿ ಈಗ ಸುಮಾರು ಎರಡು ವರ್ಷಗಳಾದರೂ ಮಲೆನಾಡು ರೈತನ ಕಷ್ಟಗಳು ಸರಕಾರದ ಗಣನೆಗೆ ಬಂದಂತೆ ಕಾಣುವುದಿಲ್ಲ" ಎಂದು ಹೇಳುತ್ತಾ ಮಲೆನಾಡಿನವರ ಪರಮ ಶತ್ರುವಾದ ಮಲೇರಿಯಾವನ್ನು ಓಡಿಸುವಲ್ಲಿ ಕೇಂದ್ರ ಹಾಗೂ ಪ್ರಾಂತಿಕ ಸರಕಾರ ಕೈಗೊಂಡ ಕಾರ್ಯಕ್ಕೆ ಅಭಿನಂದಿಸಿ ಅದಿನ್ನೂ ಭರದಿಂದ ಸಾಗಬೇಕೆಂದರು.

ಮುಂದೆ ಮಲೆನಾಡಿಗರ ಕರ್ತವ್ಯವನ್ನು ವಿವರಿಸುತ್ತಾ ಸರಕಾರದಿಂದ ಸರ್ವ ಸಹಾಯವನ್ನು ಪಡೆಯಬೇಕೆಂದರು. "ಈಗ ಜಾರಿಯಲ್ಲಿರುವ ನಮ್ಮ ಕಾನೂನುಗಳು ಗಿದ್ದಲು ಹಿಡಿದ ಹಳೆಯ ಯಂತ್ರಗಳಂತಿವೆ. ನಮ್ಮ ನೌಕರರು ರೈತರ ಸುಖಕ್ಕಾಗಿ ತಾವು ಶ್ರಮಿಸಬೇಕೆಂದು ತಿಳಿದಿಲ್ಲ. ಕೆಲವು ಪುಟ್ಟ ಉದ್ಯೋಗಸ್ಥರು ಅನೇಕ ವೇಳೆ ಬಡರೈತನಿಗೆ ಉಪದ್ರವ ಕೊಡುತ್ತಾರೆಂಬುದು ನನಗೂ ತಿಳಿದಿದೆ. ನೌಕರರನ್ನು ಹಿಂಕೆಯಲ್ಲಿಡುವ ಭಾರವು ನಮ್ಮದು. ನಾವು ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಕಮಿಟಿಮಾಡಿ ಸರಕಾರದೊಡನೆಯೂ ನೌಕರರೊಡನೆಯೂ ಹೇಗೆ ವರ್ತಿಸಬೇಕೆಂದು ತೀರ್ಮಾನಿಸಿಕೊಳ್ಳಬೇಕು" ಎಂದರು. ಕೊನೆಯಲ್ಲಿ ಜಾತೀಯತೆಯ ಕುರಿತು ಮಾತನಾಡುತ್ತಾ ಇದನ್ನು ಹೋಗಲಾಡಿಸದಿದ್ದರೆ ಗಳಿಸಿದ ಸ್ವಾತಂತ್ರ್ಯವು ಶೀಘ್ರದಲ್ಲೇ ಮಾಯವಾಗುವುದೆಂದರು.

ನಂತರ ರಾವ್ ಬಹದೂರ್ ಗಿರಿಯಪ್ಪನವರು ಪರಿಷತ್ತನ್ನು ಉದ್ಘಾಟನೆಮಾಡಿದ ಬಳಿಕ ಕರ್ನಾಟಕ ಮಲೆನಾಡುಸಂಘಧವರದಿಯನ್ನು ಅಧ್ಯಕ್ಷ ಶ್ರೀ.ಎಮ್.ಎಸ್. ಭಿಡೆಯವರು ಸಭೆಯ ಮುಂದಿಟ್ಟರು. ಬಳಿಕ ಕರ್ನಾಟಕ ಮಲೆನಾಡು ಸುಧಾರಣಾ ಸಂಘದ ಘಟನೆ, ಮಲೆನಾಡಿಗೆ ಸಂಬಂಧಪಟ್ಟ ನಿರ್ಣಯಗಳು ಪಾಸಾದುವು.

ಮಧ್ಯಾಹ್ನ ಶ್ರೀಗಳಾದ ಎಲ್. ಸಿ. ಪಾಯಸ್, ಸಾರ್ವಜನಿಕ ಅರೋಗ್ಯಖಾತೆಯ ಅಸಿಸ್ಟಂಟ್ ಡ್ಯಾರೆಕ್ಟರ್, ಮೇಜರ್ ಸಿ. ಬಿ. ಕರಿಯಪ್ಪ, ಐ. ಸಿ. ಸುಬ್ಬಯ್ಯ, ಯು. ಬಸಪ್ಪ, ಕೆ. ಆರ್. ಕಾರಂತ್, ಕಾಳಪ್ಪ, ಕೆ. ಜಿ. ಎಸ್.ಭಂಡಾರಿ ಮತ್ತು ಶ್ರೀಮತಿ ನೋರಿ ಬ್ರಿಟೋರವರ ಭಾಷಣಗಳಾದುವು. ಮಲೆನಾಡು ಪರಿಷತ್ತಿನ ಅಂಗವಾಗಿ ಜಿಲ್ಲಾ ಆಹಾರ ಪರಿಷತ್ತು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ತಮ್ಮ ಪ್ರಾರಂಭಿಕ ಭಾಷಣದಲ್ಲಿ ಎಲ್ಲಿಯೂ ಇಲ್ಲದಿರುವ ಅವಮಾನಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ಸಂಗ್ರಹ ಆಗುತ್ತಿದೆ ಎಂದರಲ್ಲದೆ ಜಾಲಗೇಣಿ ಒಕ್ಕಲುಗಳ ಗೇಣಿಯನ್ನು ಉಳಿತಾಯವೆಂದು ಲೆಕ್ಕಿಸದೆ ಅವರ ಖರ್ಚಿಗೆ ಬೇಕಾಗುವಷ್ಟನ್ನು ಬಿಟ್ಟು ಉಳಿದುದನ್ನು ಮಾತ್ರ ಸಂಗ್ರಹಿಸಬೇಕೆಂದರು.

ಶ್ರೀಗಳಾದ ಕೆ.ಎಸ್. ನಾರಾಯಣರಾವ್, ಕಾಶಿನಾಥ ಭಟ್, ರಾ. ಬ. ಗಿರಿಯಪ್ಪ, ಬಿ. ಮಂಗೇಶರಾವ್, ಕೆ. ಗೋವಿಂದಯ್ಯ, ಐತಪ್ಪರೈ, ಎಸ್. ಎಮ್. ಪಿ. ಕಾಮತ್, ಸಿ. ಕೆ. ಪದ್ಮಯ್ಯ ಗೌಡ, ಕೆ. ಉಪಾಲಪ್ಪ ಗೌಡ, ಮುಲ್ಲರ್ ಸಾಬ್ರೈನ್, ಕೃಷ್ಣಭಟ್ ಮೊದಲಾದವರು ಕಂಟ್ರೋಲಿನಿಂದಾದ ಸಂಕಷ್ಟಗಳನ್ನು ವಿವರಿಸಿದರು.

ಹಳ್ಳಿಗಳಿಂದ ಹೊರಗೆ ಹೋಗದ ಹಾಗೆ ನಿರ್ಬಂಧ ಹಾಕಿ ಸರಕಾರಕ್ಕೇ ಅಕ್ಕಿ ಮಾರುವಂತೆ ನಿರ್ದಿಷ್ಟ ಬೆಲೆಯನ್ನು ವ್ಯಕ್ತಪಡಿಸಬೇಕು. ಇದು ಆಗದಿದ್ದರೆ ಜಿಲ್ಲಾ ಆಹಾರ ಸಮಿತಿಯ ರಚನಾವಿನಂತೆಸ್ಥಾಪಿಸಬೇಕು. ಈಗಿನ ಅಕ್ಕಿ ಧಾರಣೆ ಹೆಚ್ಚಾಯಿತು. ಅದನ್ನು ಹನ್ನೆರಡು ರೂಪಾಯಿಗೆ ಇಳಿಸಬೇಕು ಇತ್ಯಾದಿ ನಿರ್ಣಯಗಳಾದುವು.

ಪರಿಷತ್ತಿನ ಅಂಗವಾಗಿ ಪುತ್ತೂರಿನ ಎಂಟಿಮಲೇರಿಯಾ ಯೂನಿಟಿನವರು ಏರ್ಪಡಿಸಿದ ಪ್ರದರ್ಶನವನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೃಪಾಕರರು ಉದ್ಘಾಟಿಸಿದರು.

ಓದುಗರ ಓಲೆಗಳು

೧

ದ. ಕ. ಜಿಲ್ಲಾ ಎಕ್ಸ್ಟ್ರಾ ಡಿಪಾರ್ಟ್‌ಮೆಂಟಲ್ ಪೋಸ್ಟಲ್ ಸರ್ವೀಸಿನವರ ಅವಗಾಹನೆಗೆ:—

ಪ್ರಿಯ ಬಂಧುಗಳೇ: ನಮ್ಮಲ್ಲಿ ಸೇಕರು ಅಂಚೆಖಾತೆಯ ಕೆಳ ನವುಕರರ ಯೂನಿಯನ್ ಮೆಂಬರರಾಗಿ ಸೇರಿಕೊಂಡಿದ್ದೇವಷ್ಟೇ: ನಮಗೆ ಈ ಯೂನಿಯನಿಂದ ಪ್ರಯೋಜನ ಸಿಕ್ಕಲಿಲ್ಲವೆಂಬುದು ಪ್ರತಿ ಒಬ್ಬರೂ ತಿಳಿದ ವಿಷಯವೇ ಆಗಿದೆ. ಆದರೆ ನಮ್ಮ ನೆರೆ ಜಿಲ್ಲೆಯವರಾದ ಮಲಬಾರಿನವರು. "South Indian Extra Departmental Postal Union" ಎಂತ ಕರೆಯಲ್ಪಟ್ಟ ಸದ್ರಿ ಯೂನಿಯನಿಗೆ ಮೆಂಬರರಾಗಿ E. D. ಪೋಸ್ಟಲ್ ಸರ್ವೀಸಿನ ಎಲ್ಲಾ ಜನರು ಸೇರಬೇಕಾಗಿ ಜಿಲ್ಲಾವಾರು ಪತ್ರಮೂಲಕ ತಿಳಿಸಿದಂತೆ, ಅಂಚೆ ಇಲಾಖಾ ಕೆಳ ನವುಕರರ ಯೂನಿಯನಿಗೆ ಸೇರಿ ಮೆಂಬರರಾದವರು, ಕೂಡಲೆ ಅದಕ್ಕೆ ರಾಜಿಕೊಟ್ಟು E. D. ಪೋಸ್ಟಲ್ ಯೂನಿಯನಿಗೆ ಸೇರಬೇಕಾಗಿಯೂ ಮಲಬಾರು ಜಿಲ್ಲೆಯವರು ಮಾಡುವ ಪ್ರಯತ್ನಕ್ಕೆ ಯೋಗ್ಯ ಮಹನೀಯರ ಬೆಂಬಲವಿರುವುದರಿಂದ ಮದ್ರಾಸು E. D. ಪೋಸ್ಟಲ್ ಯೂನಿಯನಿಗೆ ನಮ್ಮ ಜಿಲ್ಲೆಯವರಾದ ನಾವೆಲ್ಲರೂ ಮೆಂಬರರಾಗಿ ಸೇರಬೇಕಲ್ಲದೆ, ನಮ್ಮ ಜಿಲ್ಲೆಯಲ್ಲಿ ಅದರ ಒಂದು ಬ್ರಾಂಚನ್ನು ತೆರೆಯುವಂತೆ ಸಂಬಂಧಪಟ್ಟ ಯೂನಿಯನಿನವರಿಗೆ ಬರೆಕೊಂಡು ನಮ್ಮಗಳ ಕಷ್ಟ ನಿವಾರಣೆಯಾಗುವಂತೆ ಪ್ರಯತ್ನಿಸಬೇಕಾಗಿ ಅಪೇಕ್ಷಿಸುವ

E. D. B. P. M.

೨

ಬಡ ಉಪಾಧ್ಯಾಯರ ಮೇಲೆ ಇನ್ನೂ ಖಾಸಗಿಶಾಲಾ ಮೆನೇಜರರ ದಬ್ಬಾಳಿಕೆಯೇ?

ಪ್ರಜಾ ಸರಕಾರವು ಅಧಿಕಾರ ವಹಿಸಿದಂದಿನಿಂದ ಬೇರೆ ಖಾತೆಗಳಲ್ಲಿ ತೋರಿದಂತೆಯೇ ನಮ್ಮ ವಿದ್ಯಾ ಖಾತೆಯಲ್ಲಿಯೂ ಹಲವಾರು ಸುಧಾರಣೆಗಳು ತಲೆದೋರಿ ಬಡ ಖಾಸಗಿ ಶಾಲಾ ಉಪಾಧ್ಯಾಯರು ಹೆಚ್ಚಿನ ಹಕ್ಕು ಭಾಧ್ಯತೆಗಳನ್ನು ಅನುಭವಿಸಿ ತಮ್ಮ ಮನೋವೇದನೆಯ ಹೆಚ್ಚಿನಾಂಶವನ್ನು ಹಗುರ ಪಡಿಸಿಕೊಳ್ಳುವುದಾಯಿತು.

ಆದರೆ ಸರಕಾರವು ಇಷ್ಟು ದಯಾಮಯಿಯಾಗಿದ್ದರೂ, ಅಲ್ಲಲ್ಲಿ ಕೆಲವು ಖಾಸಗಿಏಯ್ಡೆಡ್ ಶಾಲಾ ಮೆನೇಜರರು ಇನ್ನೂ ತಮ್ಮ ಶಾಲಾ ಉಪಾಧ್ಯಾಯರನ್ನು ತಮ್ಮ ಗುಲಾಮರನ್ನಾಗಿ ಇಡಲು ಪ್ರಯತ್ನ ನಡೆಯುತ್ತಾ ಇದೆ. ಗ್ರಾಂಟು ಸಿಕ್ಕಿದುದನ್ನು ಕ್ರಮವಾಗಿ ಪಾವತಿಮಾಡದೆ ಉಪಾಧ್ಯಾಯರನ್ನು ರಶೀದಿಗಾಗಿ ಬಲಾತ್ಕರಿಸುವುದು; ಕೊಡಲು ಸಮ್ಮತಿಸದಿದ್ದಲ್ಲಿ ತಮ್ಮ ಮನೆಯಿಂದ ಎಷ್ಟೋ ದೂರವಿರುವ ತನ್ನ ಆಡಳಿತ ಒಳಗಾಗಿರುವ ಬೇರೆ ಶಾಲೆಗಳಿಗೆ ಅಕಸ್ಮಾತ್ ವರ್ಗಾಯಿಸುವುದು; ಅದೂ ವರ್ಷಾವಧಿ ರಜೆಗೆ ½ ವಾರವಿರುವಾಗಲೇ ಅವರನ್ನು ವರ್ಗಾಯಿಸಿದರೆ ಸದ್ರಿ ಉಪಾಧ್ಯಾಯರಿಗೆ ಅಲ್ಲಿಗೆ ಹೋಗಿ ಬರಲು ಸಾಧ್ಯವಿಲ್ಲವೆಂದು ಮೊದಲೇ ಗೊತ್ತಿದ್ದು ಅವರ ರಜೆಯ ಸಂಬಳವನ್ನು ಮೋಸಪಡಿಸುವ ದುರುದ್ದೇಶ. ಇಂಥಾ ಅನ್ಯಾಯ, ದಬ್ಬಾಳಿಕೆ–ಇನ್ನೂ ನಡೆಯುತ್ತಿರುವುದಾದರೆ, ಬಡ ಉಪಾಧ್ಯಾಯರ ಗತಿಏನು? ಶಾಲೆಯಲ್ಲಿ ಶಿಕ್ಷಣ ಶಿಸ್ತುಗಳು ಹೇಗೆ ಸಾಧ್ಯವಾದೀತು? ಬಡ ಉಪಾಧ್ಯಾಯರು ದುಡಿದ ಹಣವನ್ನು ತಾನು ಸರಕಾರದಿಂದ ಪಡೆದು, ಅದನ್ನು ತನ್ನ ಖಾಸಗಿ ವಹಿವಾಟಿಕ್ಕೆ ವಿನಿಯೋಗಿಸಿ ತನ್ನ ಮನೆ ಬದುಕುಗಳನ್ನು ಮುಂದುವರಿಸಿ, ಬಡ ಉಪಾಧ್ಯಾಯರನ್ನು ತಿಂಗಳುಗಟ್ಟಲೆ ಕಾದಿರಿಸುವುದು–ಇದು ಎಂಥಾ ಪೈಶಾಚಿಕ ವರ್ತನೆ! ಸರಕಾರವು ಇದನ್ನು ವಿಚಾರಿಸಿ, ಉಪಾಧ್ಯಾಯರ ಗೋಳನ್ನು ಸಕಾಲದಲ್ಲಿ ನೀಗಬಾರದೇಕೆ?

ಹಿತಚಿಂತಕ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 95/49. O. S. 493/39.

ಶ್ರೀಧರರಾವ್–ವಾದಿ, ಅರ್ಜಿದಾರ

ಸೊಮ್ಮು ಶೆಡ್ತಿ ಸಹಾ–ಪ್ರತಿವಾದಿರು, ಎದ್ರಿರು.

1 ಸೊಮ್ಮು ಶೆಡ್ತಿ, ಶೇಶಿ ಶೆಡ್ತಿ ಮಗಳು 2 ದಾರಪ್ಪ ಶೆಟ್ಟಿ, 4 ಅಂಣಪ್ಪ ಶೆಟ್ಟಿ, 5 ಗಣಪಯ್ಯ ಶೆಟ್ಟಿ; 1ನೇ ಎದ್ರಿಳ ಮಕ್ಕಳು. 6 ವೆಂಕಮ್ಮ ಶೆಡ್ತಿ, 7 ರಾಮಯ್ಯ ಶೆಟ್ಟಿ, ಚಿಕ್ಕಮ್ಮ ಶೆಡ್ತಿ ಮಕ್ಕಳು.

1ರಿಂದ 5ನೇ ವರೇಗಿನವರು ಕೆದೂರು ಗ್ರಾಮದಲ್ಲಿಯೂ 6-7ನೇಯವರು ಕೆದೂರು ಗ್ರಾಮದಲ್ಲಿಯೂ ಇರುತ್ತಾರೆ.

ಸದ್ರಿ ಡಿಕ್ರಿ ಸಮಾಧಾನಾತರನಾಗಿ ನಡ್ಸಿದ ಮೋಬ್ಲಂಡ ಅಮ್ಲುಜಾರಿ ಮತ್ತು ಆದ್ರಲ್ಲಿ 2 ರಿಂದ 7ನೇ ವರೇಗಿನ ಎದ್ರಿಂಗೆ ವಾರಂಟು ಯಾಕೆ ಕೊಡಿಸಕೂಡದು ಎಂಬ ಸಬಬು ತೋರಿಸುವ ಬಗ್ಗೆ ತಾ 21–6–49ಕ್ಕೆ ಅಪ್ಪೆರೆ ಕಸ್ಸಿಗೆ ಯಿಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿನ್ನ ಹಗ್ಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿದೆ.

G. Sanjiva Rao.
Vakil for Petitioner.

Kundapur, Date 22-4-49.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S K.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಹೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ.   ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:–ಬಾಗಲಕೋಟೆ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ಸಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ಶೀವಣಸಿದ್ಧಪ್ಪ ಶಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ಬೇಕಾಗಿದ್ದಾರೆ

ಇಬ್ಬರು ಸೆಕಂಡರಿ ಗ್ರೇಡ್ ತರಬೇತಿ ಆದ ಉಪಾಧ್ಯಾಯರು ಮತ್ತು ಒಬ್ಬರು ಹಾ. ಎ. ಗ್ರೇಡ್ ತರಬೇತಿ ಹೊಂದಿದ ಉಪಾಧ್ಯಾಯಿನಿಯರು.

ಮೆನೇಜರ್,
ಬೆಳ್ಳೆ ಚರ್ಚ್ ಹಾ. ಎ. ಶಾಲೆ,
ಮೂಡುಬೆಳ್ಳೆ ಪೋಸ್ಟ್

ಹಲವು ಜನರು ಆಶಿಸುತ್ತಿದ್ದ, ಕೆಲವು ಜನರು ವಿರೋಧಿಸುತ್ತಿದ್ದ ಅಳಿಯ ಸಂತಾನ ಬೀಲು ಹೇಗೂ ಬಂದಂತಾಯಿತು. ಇಂದ ಮೇಲೆ ಇನ್ನು ಅದನ್ನು ಟೀಕಿಸಿ ಯಾವ ಪ್ರಯೋಜನವೂ ಇಲ್ಲ. ಆದರೆ ನಾವು ಮುಂದೇನು ಮಾಡತಕ್ಕದ್ದು ಎಂಬುದನ್ನು ಆಲೋಚಿಸಬೇಕಾಗಿದೆ.

ಈ ತನಕ ಅಳಿಯ ಸಂತಾನ ಆಚರಿಸಿಕೊಂಡು ಬರುವವರಿಗೆ ಯಾವ ತರದ ಒಂದು ನಿಜವಾದ ಹಕ್ಕೂ ಇರಲಿಲ್ಲ. ಇದರಿಂದ ಕೋರ್ಟುಗಳಲ್ಲಿ ಬಹಳ ಅನಾವಶ್ಯ ವ್ಯಾಜ್ಯಗಳುಇದ್ದು, ಇಡೀ ನಮ್ಮ ಸಮಾಜವನ್ನೇ ಕೋರ್ಟಿನ ಬಳಿ ತಂದು ಹಾಕಿರುವುದು. ಆದಕ್ಕೊಂದು ರೀತಿಯನ್ನು, ಯಾ, ದಾರಿಯನ್ನು ತೋರಿಸಿದರೆ ವ್ಯವಹಾರಗಳು ಕಡಿಮೆಯಾದೀತೆಂಬ ಭರವಸೆಯಿಂದ ಈ ಬೀಲನ್ನು ತರಲಾಗಿದೆ ಮತ್ತು ಇದು ಅದರ ಮುಖ್ಯ ಉದ್ದೇಶವೂ ಆಗಿದೆ.

ರೀತಿ, ಯಾ, ದಾರಿಯನ್ನು ತೋರಿಸಿರುವುದು ಈ ಬೀಲಿನಲ್ಲಿ ಮಾತ್ರವಲ್ಲದೆ, ಉದ್ದೇಶವನ್ನು ಪಡೆಯಬೇಕಾದರೆ ಇನ್ನೂ ಕೋರ್ಟೇ ಗತಿಯಾಗಿರುವುದು. ಈ ವಿಚಾರದಲ್ಲಿ, ಬೀಲಿನ ಕಮಿಟಿಯವರೊಡನೆ ಒಂದು ಆರ್ಬಿಟ್ರೇಶನ್ ಬೋರ್ಡು (Arbitration Board) ಯಾ ಮುನಸೀಫರ್‌ಗಳ ಯಾ ಜಡ್ಜರುಗಳ ಒಂದು ಬೇಂಚು(A Bench of Munsifs Or Judges)ಗಳನ್ನು ಸ್ಥಾಪಿಸಿ ಈ ಮೂಲಕ ಈ ನವ ಸುಧಾರಣೆಯನ್ನು ಜಾರಿಗೆ ತರುವಂತೆಯೂ ಅಪ್ಪೀಲಿಗೆ ಆಸ್ಪದ ಕೊಡದಂತೆಯೂ ಮಾಡುವಂತೆ ಮಾಡಿ, ತೀರ್ಮಾನಿಸಬೇಕಾಗಿ ಕೇಳಿಕೊಂಡಿದ್ದೆ. ಅದಕ್ಕೆ ಅವರು ಒಪ್ಪಿದ್ದರು, ಆದರೆ ಬೀಲಿನಲ್ಲಿ ಈ ವಿಚಾರವನ್ನು ಕಾಣಿಸಲಿಲ್ಲ. ಕೋರ್ಟಿನ ದಾರಿಯನ್ನೇ ಕಾಣಿಸಿರುವರಲ್ಲದೆ ಬೇರೆ ಏನೂ ಇಲ್ಲ. ಇನ್ನು ಈ ವಿಚಾರದಲ್ಲಿ ಯೋಚಿಸಿ ಪ್ರಯೋಜನವಿಲ್ಲ ಮತ್ತು ನಮ್ಮ ಕೆಲಸವಾಗದು.

ಹೀಗಾದುದರಿಂದ ನಮ್ಮ ಮುಖಂಡರ ಜವಾಬ್ದಾರಿಯು ಹೆಚ್ಚಿಗೆಯಾಗಿರುವುದು. ಯಾಕೆಂದರೆ ವ್ಯಾಜ್ಯ ವ್ಯವಹಾರಗಳನ್ನು ಕಡಿಮೆ ಮಾಡಲು ತಂದ ಬೀಲೇ, ವ್ಯವಹಾರದ ಬೀಜವನ್ನು ಬಿತ್ತಿದಂತಿದೆ. ಹಲವರು ಹಲವು ಕಡೆಯಿಂದ ಕೋರ್ಟುಗಳು ಯಾವಾಗ ಆರಂಭವಾಗುವುವೆಂದು ಕಾಯುತ್ತಿರುವರು. ಕೆಲವರು ಸುಮುಹೂರ್ತಗಳನ್ನು ಹುಡುಕುತ್ತಿರುವರು. ಅಲ್ಪಸಂಖ್ಯಾತರು ನ್ಯಾಯದಲ್ಲಿ ತೀರುವುದೋ, ಇಲ್ಲವಾದರೆ ಕೋರ್ಟಿಗೆ ಹೋಗುತ್ತೇವೆಂದು ಗದರಿಸುತ್ತಿರುವರು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. 480/48,

ಬತಪ್ಪ ಗೌಡ ಕೂಡಾ ... ... ವಾದಿರು.

ಎದ್ರಿ

ಪುಕ್ರ ಗೌಡ ಕೂಡಾ — ಪ್ರತಿವಾದಿರು,

5. 8. 9. 10ನೇ ಪ್ರಾ॥ರು

6. ಪೋನಪ್ಪ, ಚೋಮ ಗೌಡನ ಮ್ಯಾನರ ಮಗ, 8. ಅಣ್ಣಪ್ಪ, 9. ಮಲ್ಲಲಿಂಗ, 10. ರುಮುಂಜ, ಮೃತ ಕೃಷ್ಣಪ್ಪ ಗೌಡರ ಮ್ಯಾನರ ಮಕ್ಕಳು- ಮ್ಯಾನರರು. ಗಾರ್ಡಿಯನ್, 2ನೇ ಪ್ರಾ॥ ಬಟಿಯಪ್ಪ ಗೌಡ, ಬಡಗನ್ನೂರು ಗ್ರಾಮ, ಮಟ್ಟುರುಕೋಡು.

ಪುತ್ತೂರು ತಾಲೂಕು — ರೀಗೆ

ವಾದಿರು ಮಾಡಿದ ಮೋಲಿನ ಹಿಡೆ ವ್ಯಾಜ್ಯವು (ಮೌಲ್ಯ ರೂ-2077-8-0) ತಾ॥ 6-49 ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆಗಳಿದ್ದರೆ ನೀವು ಆ ದಿನ ಬೆಳಿಗ್ಗೆ ಘಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉಪಸ್ಥಿತಿಸಲಾಶಪ್ಪಿಟ್ಟಿ ನಿಮ್ಮನ್ನು ಬಿಟ್ಟು ಮಾಡಿ ತೀರ್ಮಾನಿಸಲಾದೀತೆಂತ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

(sd) **H. Pundarik Bhat**

Pleader for *Pleffs.*

ಪುತ್ತೂರು. 8-4-49.

ಅಳಿಯ ಸಂತಾನ ಬೀಲು

ನಮ್ಮ ಮುಖಂಡರ ಜವಾಬ್ದಾರಿ. ಜನತೆಯ ಕರ್ತವ್ಯ

ಬರೆದವರು: ಡಾ॥ ಕೆ ಕೆ ಹೆಗ್ಡೆ, ಎಂ ಬಿ ಬಿ.ಎಸ್. ಮಂಗಳೂರು.

ಈ ವಾತಾವರಣದ ಮಧ್ಯೆ ನಾವು ಸುಮ್ಮನೆ ಪ್ರೇಕ್ಷಕ ವರ್ಗಕ್ಕೆ ಸೇರಿದವರಂತೆ ವರ್ತಿಸುವುದು ಸರಿಯಲ್ಲ. ಯಾವುದಾನರೂಂಬು ವಿಧದಿಂದ ನಮ್ಮ ಸಮಾಜವನ್ನು ವ್ಯವಹಾರದೆಯೊಂಬ ಪಿಶಾಚಿಯ ಬಾಯಿಯಿಂದ ತಪ್ಪಿಸತಕ್ಕದ್ದು. ಈ ಕಾರಣದಿಂದ ಕೆಳಗಡೆ ಕೆಲವು ಸೂಚನೆಗಳನ್ನು ಕಾಣಿಸಿರುವೆನು. ಅವುಗಳನ್ನು ನಮ್ಮ ಮುಖಂಡರು ಗಣನೆಗೆ ತಂದು ತಕ್ಕ ರೀತಿಯಲ್ಲಿ ವರ್ತಿಸುವರಾಗಿ ನಂಬುತ್ತೇನೆ.

ಈಗ ಪ್ರತಿಯೊಂದು ಕುಟುಂಬವು ತನ್ನ ವ್ಯವಸ್ಥೆಯನ್ನು ಪಂಚಾಯಿತಿ ಮೂಲಕ ತೀರಿಸಲು ಅತಿ ಸುಲಭವಾಗಿರುವುದು. ಯಾಕೆಂದರೆ, ನಮ್ಮ ಬೀಲು ಬೇಕಾದ ರೀತಿಯನ್ನು ಅತಿ ವಿವರವಾಗಿ ಕಾಣಿಸಿರುವುದು. ಹೀಗಿರುವಲ್ಲಿ ಬೀಲು ಪ್ರಕಾರ ಪಂಚಾಯಿತಿದಾರರಿಗೆ ಇತ್ಯರ್ಥಮಾಡುವರೆ ಅನುಕೂಲವು ಇರುವುದು ಸಂಬಂಧ ಪಟ್ಟವರಿಗೆ ಒಪ್ಪಿಗೆ ಕೊಡುವರೆ ಯಾವ ಹೆದರಿಕೆಯೂ ಇರುವುದಿಲ್ಲ. ಅಂದ ಮೇಲೆ ಪಂಚಾಯಿತಿ ಮೂಲಕ ತಮ್ಮ ತಮ್ಮ ವ್ಯವಸ್ಥೆಯನ್ನು ಮಾಡಿಸಿಕೊಳ್ಳುವರೆ ಸರ್ವರಿಗೂ ಸಮ್ಮತವಿರುವುದೆಂದು ಹೇಳಿದರೆ ತಪ್ಪಾಗಲಾರದು.

ಈ ಪಂಚಾಯಿತಿಯನ್ನು ಫಲಕಾರಿಯಾಗಿ ಮಾಡುವ ರೀತಿ ಹ್ಯಾಗೆ ಎಂದು ಆಲೋಚಿಸತಕ್ಕದ್ದು. ಅದಕ್ಕಾಗಿ ಪ್ರತಿಯೊಂದು ತಾಲೂಕುಗಳಲ್ಲಿ ಒಂದೊಂದು ಪಂಚಾಯಿತಿದಾರರ ಕಮಿಟಿ (A Panel of Arbitrators) ಯನ್ನು ನಿರ್ಮಿಸತಕ್ಕದ್ದು. ಈ ಕಮಿಟಿಯು ಮಾನ್ಯ ವಕೀಲರಿಂದಲೂ ಅನುಭವವಿದ್ದ ಪಂಚಾಯಿತಿದಾರರಿಂದಲೂ ಕೂಡಿದ್ದಾಗಿರಬೇಕು. ಇದರ ಸಂಖ್ಯೆ ಹತ್ತು ಯಾ ಹನ್ನೆರಡು ಯಾ ಹೆಚ್ಚಿಗೆಯಾಗಿರಬಹುದು. ಈ ರೀತಿಯಲ್ಲಿ ಆರು ತಾಲೂಕಿನಲ್ಲಿ ಆರು ಕಮಿಟಿಯನ್ನು ಮಾಡತಕ್ಕದ್ದು. ನಂತರ ನಮ್ಮ ಇಡೀ ಜಿಲ್ಲೆಗೆ ಕೆಲವೇ ಅಥ್ಯ ಮಹನೀಯರಿಂದ ಕೂಡಿದ ಒಂದು ಕೇಂದ್ರ ಅಳಿಯ ಸಂತಾನ ಪಂಚಾಯಿತಿ ಬೋರ್ಡು(Central Aliyasanthana Panchayat Board)ನ್ನು ಸ್ಥಾಪಿಸಬೇಕು. ಇದರಲ್ಲಿ ಪ್ರತಿಯೊಂದು ತಾಲೂಕಿಗೆ ಸೇರಿದವರಿದ್ದರೆ ಉತ್ತಮ. ಇಲ್ಲದಿದ್ದರೆ ಆವಶ್ಯವಿದ್ದಲ್ಲಿ ಬೇಕಾದ ಮೆಂಬರರನ್ನು ಸೇರಿಸುವ (Co-opt. ಮಾಡುವ) ಹಕ್ಕಿರಬೇಕು.

ಹೀಗೆ ಮಾಡಿದ ನಂತರ, ಯಾವನೇ ಒಬ್ಬ ಮೆಂಬರನು, ಯಾ ಮೆಂಬರರು ತನ್ನ ಹಕ್ಕನ್ನು ಸ್ಥಾಪಿಸಬೇಕೆಂದು ಉದ್ದೇಶಿಸಿದಾಗ, ಅದನ್ನು ರಾಜಿಯಿಂದ ಇತ್ಯರ್ಥ ಮಾಡಲು ಯತ್ನಿಸಬೇಕು. ಪಂಚಾಯಿತಿದಾರರನ್ನು ತಾಲೂಕು ಕಮಿಟಿಯಿಂದ (Panel ನಿಂದ) ಆರಿಸಬಹುದು, ಯಾ ಅಗತ್ಯಕಂಡಲ್ಲಿ ಬೇರೆಯವರನ್ನೂ ಸೇರಿಸಬಹುದು. ಈ ಯತ್ನ ಫಲಿಸದಿದ್ದರೆ, ಆತನು ಯಾ ಆಕೆಯು ಕೇಂದ್ರ ಅಳಿಯಸಂತಾನ ಪಂಚಾಯಿತಿ ಬೋರ್ಡಿಗೆ (Central Aliyasanthana Panchayat Board.) ಅರ್ಜಿಹಾಕತಕ್ಕದ್ದು. ಈ ಅರ್ಜಿಯನ್ನು ಸದ್ರಿ ಕಮಿಟಿಯವರು ಪರಿಶೀಲಿಸಿ, ತಮ್ಮ ಪೈಕಿ ಯಾರಾದರೂ ಒಬ್ಬರನ್ನು ಯಾ ಬೇರೆಯವರನ್ನಾದರೂ ಕಮಿಟಿಯ ಪರವಾಗಿ ಕಳುಹಿಸಿ, ತಕ್ಕ ಉಪದೇಶ ಯಾ ಬೋಧನೆಕೊಟ್ಟು ಕುಟುಂಬಿಕರನ್ನು ಪಂಚಾಯಿತಿಗೆ ಒಪ್ಪಿಸತಕ್ಕದ್ದು. ಈ ಕಾರ್ಯವು ನೋಡುವಾಗ, ಬಹು ಕಷ್ಟಸಾಧ್ಯವೆಂದು ಕಾಣಬಹುವಾದರೂ ಇದಕ್ಕೆ ತುಂಬಾ ಬೆಂಬಲವಿರುವುದರಿಂದ ಸುಲಭವಾಗುವುದೆಂದು ನನ್ನ ನಂಬಿಕೆ.

ಕೇಂದ್ರ ಕಮಿಟಿಯ ಕೆಲಸವು ಹೆಚ್ಚಿನ ಪ್ರಮಾದ್ದಾಗಿದ್ದರೂ ಬೇಕಾದಲ್ಲಿ ಬೇರೆ ಸದಸ್ಯರನ್ನು ಸೇರಿಸಿ ಸುಲಭ ಮಾಡಿಕೊಳ್ಳಬಹುದು. ಈ ಕಮಿಟಿಯ ಮೆಂಬರರು ಅನುಭವಸ್ಥರೂ, ಯೋಗ್ಯರೂ, ಮುಖಂಡರೂ, ಸಮಾಜ ಸೇವೆಯಲ್ಲಿ ಮನಸ್ಸಿದ್ದವರೂ ಆಗಬೇಕು. ಇಂತಹ ವ್ಯಕ್ತಿಗಳು ನಮ್ಮ ಸಮಾಜದಲ್ಲಿ ಬಹುಮಂದಿ ಇರುವರು. ಇವರು ಮುಂದೆ ಬಂದು, ತಮ್ಮ ಜವಾಬ್ದಾರಿಯು ಈ ಕಾರ್ಯವನ್ನು ಕೈಕೊಂಡು, ಸಮಾಜವನ್ನು ಉದ್ಧರಿಸಿ ಜನರ ಪ್ರೀತಿಯನ್ನು ಸಂಪಾದಿಸಲು ಮುಂದಾಗುವರೆಂದೂ, ಇನ್ನುಳಿದವರು ತಮ್ಮ ಕರ್ತವ್ಯವೆಂದು ಭಾವಿಸಿ, ತಕ್ಕ ಬೆಂಬಲವನ್ನೀಯುವರೆಂದೂ ಆಶಿಸಬಹುದೆ?

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.

(Established 1934)

Chairman: **Mr. M. CT. M Chidambaram Chettyar**

A Policy in this progressive Life Office is a good investment; its Agency is a valuable business connection.

MANGALORE BRANCH: K. S. R. Road, Hampankatta, Mangalore.

HEAD OFFICE: United India Life Bldg, P. B No. 142, MADRAS.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೇಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕೆ:—ಹೆರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಚಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್ ಎಲ್ ಕಮಲಪಾಪ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮಾಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಆ ಔಷಧಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ. ನಂ, 5 ಕೊಡಿಯಾಲಬೈಲು, ದಕ್ಷಿಣ ಕನ್ನಡ

ಸ್ಟಾಕಿಸ್ಟರು. ಡಾ॥ ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಅಳಿಯ ಸಂತಾನ ಕಾನೂನಿನ ಇಂಗ್ಲಿಷ್ ಪ್ರತಿಗಳಿಗೆ ನವಯುಗ ಪ್ರೆಸ್, ಉಡುಪಿ ಇವರಿಗೆ ಬರೆಯಿರಿ

WANTED

Three Secondary grade trained teachers for the Modern Higher Elementary School, Udipi.

Apply Sharp.

Manager.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618 | 26-5-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER
Hon'ble Sri. A. B. Shetty
Education Minister, Govt. of Madras

Telegram "Navayuga"

Estd. 1921 ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ. 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ | ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ | Vol 29
ವಾರ 39 | ಮದರಾಸು ಸರಕಾರದ ವಿದ್ಯಾಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು | No. 39

ಕಸಗೊಳ್ಳಲ್ಪಡುವುದನ್ನು ಕೈಯೆತ್ತಿ ಕೊಟ್ಟರಾಗದೆ?

ಗಾಂಧಿಜೀಯ ನಾಯಕತ್ವದಲ್ಲಿ ಕಾಂಗ್ರೆಸು ಮಾಡಿದ್ದ ಸೇವೆ, ತ್ಯಾಗ, ಧೈರ್ಯ ಸಾಹಸಗಳ ರಾಶಿಯು ಭಾರತ ಸರಕಾರದ ಗಾದಿ ಭಂಡವಾಳಕ್ಕಿಂತಲೂ ಶೀಘ್ರಗತಿಯಿಂದ ಜೀರ್ಣವಾಗುತ್ತಿದೆಯೆಂದೂ ಹೀಗೆಯೇ ವೆಚ್ಚವಾಗಿದರೆ ಅದು ಖಾಲಿಯಾಗುವ ಕಾಲಬರುವದು ಖಂಡಿತವೆಂದೂ ತಿಳಿದುಕೊಂಡು ಕಾಂಗ್ರೆಸಿಗರು ಸಕಾಲದಲ್ಲಿ ಕಾಲೋಚಿತ ಕಾರ್ಯಗಳ ಮೂಲಕ ಅದನ್ನು ಪುನಃ ತುಂಬಿಸುತ್ತಾ ಹೋಗುವದು ಅಗತ್ಯವಲ್ಲವೆ?

ಭಾರತದ ವಿವಿಧ ರಾಜಕೀಯ ಪಕ್ಷಗಳ ಪೈಕಿ ಈ ದುಷ್ಕಾಲದ ದುಸ್ಥಿತಿಗಳನ್ನು ತಮ್ಮ ಸ್ವಂತಧ್ಯೇಯ ಸಾಧನೆಗಾಗಿ ಉಪಯೋಗಿಸಿಕೊಳ್ಳಬಲ್ಲ ವಿಶೇಷಾನುಕೂಲತೆ ಮತ್ತು ಅದಕ್ಕನುಗುಣವಾದ ಕಾರ್ಯರೀತಿಯಿರುವವರು ಕಮ್ಯೂನಿಸ್ಟರೆಂಬುದನ್ನೂ, ಅಕ್ಕಪಕ್ಕದಲ್ಲಿ ಏರುತ್ತಿರುವ ಕಮ್ಯೂನಿಸ್ಟ್ ನೆರೆಯಿಂದಾಗಿ ಒಂದಲ್ಲೊಂದು ಕಾಲದಲ್ಲಿ ಭಾರತದ ಒಳಗಡೆಯಲ್ಲೂ ಉಬ್ಬರ ಉಂಟಾಗುವ ಅಪಾಯವಿದೆಯೆಂಬುದನ್ನೂ ಎಲ್ಲರೂ ತಿಳಿದಿರುವುದು ಬೇಡವೆ?

ಕಮ್ಯೂನಿಸ್ಟರ ಹಿಂಸಾತ್ಮಕ ವಿಧಾನಗಳು, ಅನಾಗರಿಕ ಆಚರಣೆಗಳು, ದೇಶದ್ರೋಹಿ ಪರಾನುಕರಣೆಗಳು ಪರಮಾವಧಿ ಖಂಡನೀಯವಿದ್ದರೂ ಬಹುಸಂಖ್ಯಾತ ಶ್ರಮಜೀವಿಗಳೊಡನೆ ಅವರಿಟ್ಟುಕೊಳ್ಳುತ್ತಿರುವ ಆತ್ಮೀಯತೆಯೇ ಅವರ ಪ್ರಾಬಲ್ಯಕ್ಕೆ ಆಧಾರವೆಂಬುದನ್ನರಿತು, ಆ ಜನಸಾಮಾನ್ಯರ ಆತ್ಮೀಯರು ತಾವಾಗುವಂತಹ ಕಾರ್ಯಮಾಡಲು ಮಿಕ್ಕವರಿಗೇನಂತೆ?

ಈಗಿನಂತೆಯೇ ಪ್ರತಿಯೊಂದು ರಾಷ್ಟ್ರದಲ್ಲೂ ಕಮ್ಯೂನಿಸ್ಟರು ಪ್ರಬಲಿಸುತ್ತಾ ಹೋದರೆ ಇನ್ನು ಹತ್ತು ವರುಷಗಳೊಳಗೆ ಪ್ರಪಂಚದಲ್ಲೇ ಕಮ್ಯೂನಿಸಮ್ ತನ್ನಂತೆ ಸ್ಥಾಪನೆಗೊಳ್ಳಬಹುದಾದ್ದರಿಂದ ಯಾರೇನೆಂದರೂ ಪ್ರಕೃತ ರಶ್ಯವು ಯುದ್ಧವನ್ನಪೇಕ್ಷಿಸುತ್ತಿಲ್ಲವೆಂದೂ, ಆದರೆ ರಶ್ಯದ ಈ ಅಂತರ್ಗಾಮೀ ವ್ಯಪಸನೆಯನ್ನು ತಡೆಗಟ್ಟಬಲ್ಲ ಕಾರ್ಯವೆಂಬುದೂ ಜನತಾರಂಗದಲ್ಲಿಲ್ಲದ ಅಮೇರಿಕದಂತಹ ರಾಷ್ಟ್ರಗಳಿಗೆ ಮಾತ್ರ ಈ ಕಮ್ಯೂನಿಸ್ಟ್ ಅಪಾಯ ನಿವಾರಣೆಗಾಗಿ ಯುದ್ಧವೊಂದೇ ಗತಿಯೆಂಬುದನ್ನೂ ತಿಳಿದುಕೊಂಡರೆ ಭಾವೀ ಯುದ್ಧಾಪರಾಧಿಗಳಾರಾಗಬಹುದೆಂಬುದು ವೇದ್ಯವಾಗುವದಿಲ್ಲವೆ?

ಎಲ್ಲಾ ರಾಷ್ಟ್ರದಲ್ಲೂ ಅತ್ಯಧಿಕ ಸಂಖ್ಯಾಕ ಜನತೆಯು ಒಂದಲ್ಲೊಂದು ವಿಧದ ಸಮಾಜವಾದವನ್ನು ಬಯಸುತ್ತಿರುವಾಗ—ಆ ಬಯಕೆ ಈಡೇರದಲ್ಲಿ ಮಾತ್ರ ಯಾವ ರಾಷ್ಟ್ರಕ್ಕೂ ಕಮ್ಯೂನಿಸ್ಟ್ ರಾಹು ಸೋಂಕುವದು ಅಸಾಧ್ಯವಿರುವಾಗ—ಜನಪ್ರತಿನಿಧಿಗಳೆನ್ನಿಸುವ ನಾಯಕರು ಜನತೆಯ ಈ ಅವಶ್ಯಕತೆಯನ್ನು ಪೂರೈಸಿಕೊಡುವ ಮೂಲಕ ತಮ್ಮ ಕರ್ತವ್ಯ, ಕಮ್ಯೂನಿಸ್ಟ್ ಅಪಾಯ ನಿವಾರಣೆ, ಲೋಕಶಾಂತಿ ಸ್ಥಾಪನೆ, ಇವನ್ನೊಮ್ಮೆಗೇ ಸಾಧಿಸಬಾರದೇಕೆ?

ಗತ ಆಗುಹೋಗುಗಳ ಸ್ಮರಣೆ ಮತ್ತು ಭಾವೀಸುಖ ಸಂಭವ ನಿರೀಕ್ಷೆಯಿಂದ ಇಂದಿನ ಕಷ್ಟನಷ್ಟಗಳನ್ನು ಸಹಿಸಿಕೊಂಡಿರುವ ಭಾರತೀಯರೆಲ್ಲರೂ, ಲೋಕದ ಇತರ ರಾಷ್ಟ್ರಗಳವರಂತೆಯೇ ತಮ್ಮ ತೀರಾ ಸನಿಹದ ಭವಿಷ್ಯದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಕಾದಿರುವ ಅಪಾಯವೆಂದರೆ ಕಮ್ಯೂನಿಸಮ್ ಎಂಬುದನ್ನು ತಿಳಿದು ಈ ಚಿಕಿತ್ಸಾತೀತ ರೋಗತಟ್ಟದಂತೆ ಈಗಲೇ ಆರೋಗ್ಯರಕ್ಷಣೆ ಮಾಡಿಕೊಳ್ಳುವದಗತ್ಯವಲ್ಲವೆ?

ಇಂದು ಸುಂಕತೆರಿಗೆ ತೆರಲು, ಜನತೆಗಾಗಿ ಒಂದಿಷ್ಟು ತ್ಯಾಗಮಾಡಲು ಹಿಂಜರಿಯುತ್ತಿರುವ ದೊಡ್ಡ ದೊಡ್ಡ ಉದ್ದಿಮೇದಾರರೂ, ಒಕ್ಕಲು ಹಿತಸಾಧನೆಯ ಸಣ್ಣಪುಟ್ಟ ಬದಲಾವಣೆಗಳಿಗೆ ಕೂಡ ಒಲ್ಲೆನ್ನುತ್ತಿರುವ ಭೂಮಾಲಿಕರೂ ನಾಳೆ ಕಮ್ಯೂನಿಸಮ್ ಬಂದರೆ ತಮ್ಮನ್ನು ಕಾದಿರುವ ವಿಧಿಯನ್ನು ಈಗಲೇ ತಮ್ಮ ಮಾರ್ಗದರ್ಶೀ ನಕ್ಷತ್ರವಾಗಿ ಇಟ್ಟುಕೊಂಡು ವರ್ತಿಸಿದರೆ ಲೇಸಾಗದೆ?

ಧರ್ಮಾಧಿಕಾರಿ ಸ್ಥಾನ, ನೀಚೋಚ್ಚ ಜಾತಿಭೇದ, ಸಂಪ್ರದಾಯಗಳ ಮಾನಮನ್ನಣೆ—ಇತ್ಯಾದಿಗಳನ್ನು ಕಟ್ಟಿಕೊಂಡು, ಅವುಗಳ ರೂಪಮಾತ್ರ ಬದಲಾವಣೆಯ ಸೂಚನೆ ಬಂದರೂ ತಮ್ಮ ಸರ್ವಶಕ್ತಿಯನ್ನು ಉಪಯೋಗಿಸಿ ಬೊಬ್ಬೆ ಹಾಕುವವರು ಅವುಗಳ ಅಸ್ತಿವಾರವನ್ನೇ ಅಡಿಮೇಲು ಮಾಡಿಹಾಕುವ ಕಮ್ಯೂನಿಸಮ್ ಬಂದರೆ....ಆಗ ತಾವೇನೂ ಮಾಡಲಿಕ್ಕಿಲ್ಲವೆಂಬುದನ್ನು ಊಹಿಸಿ, ಮಾಡಲೇ ಬೇಕಾದುದನ್ನು ಈಗಲೇ ಮಾಡುವದಗತ್ಯವಲ್ಲವೆ?

ಇನ್ನು ಮುಂದಿನ ಯಾವ ಆಂದೋಲನವೇ ಇರಲಿ—ಅದು ಬ್ರಿಟಿಷರಾಡಳಿತ ಕಾಲದ ಕಾಂಗ್ರೆಸ್ ಚಳವಳದಂತೆ ಕಾಂಗ್ರೆಸ್ ಜನ ಮತ್ತು ಬಿಳಿಜನರೊಳಗಿನ 'ಹೋರಾಟ' ದಂತಿರದೆ ಆಗಿಂದಾಗಲೇ ತಮ್ಮ ಅದೃಷ್ಟವನ್ನು ಬದಲಾಯಿಸಿಬಿಡುವಂತಹದಾಗುವದೆಂದೂ ಆದ್ದರಿಂದ ಇರಸ್ತಿಕೆ ಬೇಕಾದರೆ ತಾವಿನ್ನು ಪ್ರೇಕ್ಷಕರಾಗಿರದೆ ಸ್ವತಃ ಮಾಡುವವರಾಗಬೇಕೆಂದೂ ಡಿಲ್ಲಿಯ ಪೀಠದಲ್ಲಿರುವವರಂತೆಯೇ ಹಳ್ಳಿಯ ಮೂಲೆಯಲ್ಲಿರುವವರೂ ತಯಾರಾಗುವದು ಅಗತ್ಯವಲ್ಲವೆ?

ಕಾಲವು ಕಸಗೊಳ್ಳುವದು ಖಂಡಿತವೆಂದಿರುವ ಎಲ್ಲವನ್ನೂ ತಾವಾಗಿ ಕೈಬಿಟ್ಟು, ಆ ಮೂಲಕ ಬಲಾತ್ಕಾರಕ್ಕೆ ಬಲಿಬೀಳುವ ಅಪಮಾನ, ಆಘಾತ, ಅಪಜಯಗಳನ್ನು ನಿವಾರಿಸಿಕೊಳ್ಳುವದು ಜಾಣರ ಲಕ್ಷಣವಲ್ಲವೇನು? ಆದ್ದರಿಂದ ಕಾಲಕ್ಕಾಹುತಿಯಾಗುವಂತಹದು ತಮ್ಮಲ್ಲೇನಿದೆ, ಎಂಬುದನ್ನು ಪ್ರತಿಯೊಂದು ವರ್ಗದವರೂ ಪ್ರತಿಯೊಬ್ಬನೂ ನೋಡಿಕೊಂಡು, ಸ್ವಶೋಧನೆಮಾಡಿಕೊಂಡು, ಅವೆಲ್ಲವನ್ನೂ ತಾವಾಗಿ ಸಮರ್ಪಣೆಮಾಡಿ ಶಾಂತ ಮತ್ತು ಸುಭದ್ರ ಭವಿಷ್ಯವನ್ನು ನಿರ್ಮಿಸಿಕೊಳ್ಳಬಾರದೇಕೆ?

ನಿಮ್ಮ ತೃಪ್ತಿ ನಮ್ಮ ಗೌರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Nilgiris)

English copies of
MADRAS ALIYASANTHANA ACT of 1949
are available.
NAVAYUGA PRESS, UDIPI
ಮದ್ರಾಸು ಅಳಿಯ ಸಂತಾನ ಕಾನೂನಿನ ಇಂಗ್ಲಿಷ್ ಪ್ರತಿಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:—ಧಾರವಾಡ,
THE UNITED KARNATAKA INSURANCE CMPANY. LIMITED

ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಸದಸ್ಯನಾಗಿ ಉಳಿಯಬೇಕೆಂಬ ಲಂಡನ್ ನಿರ್ಧಾರವನ್ನು ಕಳೆದ ವಾರ ಭಾರತದ ಘಟನಾ ಸಮಿತಿಯು ಅಂಗೀಕರಿಸಿಕೊಂಡಿತು. ನೆಹರೂ ನಿರ್ಮಿತ ಈ ವ್ಯವಸ್ಥೆಯು ಭಾರತದ ಅತ್ಯಧಿಕ ಸಂಖ್ಯಾಕರಿಗೆ ಸ್ವೀಕಾರಾರ್ಹವಿದೆ ಎಂಬುದು ನಿಸ್ಸಂದೇಹವಾದರೂ, ವಿಚಾರಾರ್ಹ ರೀತಿಯ ವಿರೋಧವು ಅದಕ್ಕಿದ್ದಿತೆಂಬುದನ್ನು ಅಲಕ್ಷ್ಯಿಸಬಾರದು. ಸಮಾಜವಾದಿಗಳು, ಕಮ್ಯೂನಿಸ್ಟರು, ಹಿಂದೂ ಮಹಾಸಭೆಯವರೇ ಮೊದಲಾದ ಕಾಂಗ್ರೆಸೇತರ ಪಕ್ಷಗಳವರು ಈ ವ್ಯವಸ್ಥೆಗೆ ವಿರೋಧ ವ್ಯಕ್ತಪಡಿಸಿದ್ದಾರೆ; ಲೇಪರಹಿತ ಮನಸ್ಸಿನ ಪಕ್ಷರಹಿತ ಚಿಂತಕರು ಕೆಲವರೂ ಸಂದೇಹವ್ಯಕ್ತಪಡಿಸಿದ್ದಾರೆ. ಆದರೆ ರಾಷ್ಟ್ರಗಳಲ್ಲಿ ತೋರಿಬರುವಷ್ಟು ಅಸಮ್ಮತಿ ಕೂಡಾ ಈ ವ್ಯವಸ್ಥೆಗೆ ಘಟನಾ ಸಮಿತಿಯಲ್ಲಿ ಮುಂದೆ ಬರಲಿಲ್ಲವೆನ್ನಬಹುದು. ಕಾರಣವೆಂದರೆ, ನೆಹರುಗಳು ಸೂಚನೆ ತರುವಾಗ ಕಾಂಗ್ರೆಸ್ ಪಕ್ಷೀಯರಾರೂ ಘಟನಾ ಸಮಿತಿ ಸಭೆಯಲ್ಲಿ ತಿದ್ದುಪಡಿ ಸೂಚನೆ ಮುಂದಿಡಬಾರದೆಂದು ಕಾಂಗ್ರೆಸ್ ಘಟನಾ ಸಮಿತಿ ಸದಸ್ಯರ ಪಕ್ಷದ ಸಭೆಯು ನಿರ್ಧಾರ ಮಾಡಿದ್ದಿತು. ಕಾಂಗ್ರೆಸೇತರರಾದ ಒಬ್ಬಿಬ್ಬರು ಸದಸ್ಯರು ತಿದ್ದುಪಡಿ ಸೂಚಿಸಿ, ಲಂಡನ್ ವ್ಯವಸ್ಥೆಯನ್ನು ಖಂಡಿಸಿ ಮಾತಾಡಿದರೂ ಸಹಜವಾಗಿ ಫಲ ಬರಲಿಲ್ಲ. ಅಂತೂ ಘಟನಾ ಸಮಿತಿಯ ಮನ್ನಣೆಯಿಂದಾಗಿ 'ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಕೂಟದೊಳಗಿರಬೇಕು' ಎಂಬ ಮುಖ್ಯಾಂಶವು ಭಾರತದ ಶಾಶ್ವತ ರಾಜ್ಯಾಂಗದೊಳಗೆ ಸೇರಿಕೊಂಡಿತು.

ಭಾರತವು ಮಾಡಿಕೊಂಡ ಈ ನವ ಒಪ್ಪಂದವನ್ನು ಕಟ್ಟುಗ್ರವಾಗಿ ವಿರೋಧಿಸುತ್ತಿರುವ ಏಕಮಾತ್ರ ರಾಷ್ಟ್ರವೆಂದರೆ ರಶ್ಯಾ. ಭಾರತದ ಪೂರ್ಣ ಸ್ವಾತಂತ್ರ್ಯದ ನಂ. 1ನೇ ವೈರಿಯೂ, ಬ್ರಿಟಿಷ್ ಕೂಲಿಗಾರ ಸರಕಾರವು ಮಾಡಿದ್ದೆಲ್ಲಾ ಟೊಳ್ಳು ಎಂದು ತೋರಿಸುವ ಚಟವುಳ್ಳವರೂ ಆದ ಚರ್ಚಿಲ್ಲರು ಬ್ರಿಟಿಷ್ ಕಾಮನ್ಸ್ ಸಭೆಯಲ್ಲೂ, ಹೊರಗಡೆಯಲ್ಲೂ ಈ ಹೊಸ ವ್ಯವಸ್ಥೆಗೆ ಬೆಂಬಲ ಕೊಟ್ಟು ಇದನ್ನು ಜಯಶೀಲಗೊಳಿಸಲು ತ್ರಿಕರಣಪೂರ್ವಕವಾಗಿ ದುಡಿಯುವ ಆಶ್ವಾಸನೆಯಿತ್ತಿರುವುದರೊಂದಿಗೆ, ರಶ್ಯದ ಆಕ್ಷೇಪಗಳನ್ನೂ ತುಲನೆ ಮಾಡಿ ನೋಡುವಾಗ, ಈ ಮಟ್ಟಿಗೆ ಭಾರತವಿನ್ನು ವಿಶೇಷ ಜಾಗರೂಕತೆಯಿಂದ ಹೆಜ್ಜೆಯಿಡಬೇಕಾದ ಅಗತ್ಯವಿದೆಯೆಂದು ಹೊಳೆಯುತ್ತದೆ.

ಭಾವೀ ಸಂಭವಗಳೇನು?

“ರಶ್ಯದ ವಿರುದ್ಧವಾಗಿ ಆ ಕಡೆಯಲ್ಲಿ

ಶಾಂತ ಸಮುದ್ರ ವಲಯಕ್ಕಾಗಿ ಭಾರತ ಸಮೇತ ಸೇನಾಕೂಟ?

ಅಟ್ಲಾಂಟಿಕ್ ಒಪ್ಪಂದ ಮಾಡಿಕೊಂಡಂತೆ ಈ ಕಡೆಯಲ್ಲಿ ಶಾಂತಸಮುದ್ರ ವಲಯ ಸೇನಾ ಒಪ್ಪಂದವೊಂದನ್ನು ಮಾಡಿಕೊಳ್ಳುವದಕ್ಕಾಗಿಯೇ ಈ 'ಕಾಮನ್‌ವೆಲ್ತ್ ವ್ಯವಸ್ಥೆ'ಯೆಂದು ರಶ್ಯವು ಬಾಯಿಬಿಟ್ಟು ಹೇಳಿದೆ. ಪಂಡಿತ ಜವಾಹಿರಲಾಲರು, ಇದು ನಿರಾಧಾರವಾದ ಆರೋಪವೆನ್ನುತ್ತಾ “ಭಾರತವು ಅಂತಹ ಯಾವ ಒಪ್ಪಂದದಲ್ಲೂ ಭಾಗಿಯಾಗಲಾರದು” ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ ಭಾವೀ ಸಂಭವಗಳ ಕುರಿತು ಆಳವಾಗಿ ವಿಚಾರಿಸುವಾಗ ಬ್ರಿಟನ್ ಮತ್ತಿತರ ಪಕ್ಷಪಾತಿ ಕಾಮನ್‌ವೆಲ್ತ್ ರಾಷ್ಟ್ರಗಳ ನಾಯಕರು, ಅಂತಹ ಒಂದು ರಕ್ಷಣಾ ಒಮ್ಮೈತ್ರ್ಯ ದೃಷ್ಟಿಯಿಂದಲೇ ಈ ಪ್ರಯತ್ನ ಮಾಡಿದ್ದರೆಂಬುದು ಒಡೆದು ತೋರುತ್ತಿದೆ. ಪಂಡಿತ ನೆಹರುಗಳಂದಂತೆ, ಭಾರತವು ಕೊನೆಯ ಮುಹೂರ್ತದ ವರೆಗೂ ಯಾವುದೇ ಯುದ್ಧ ಪ್ರವೃತ್ತ ಪಂಗಡದೊಳಗೆ ಸೇರಿಕೊಳ್ಳಲು ನಿರಾಕರಿಸಬಹುದು. ಆದರೂ ಅದನ್ನೊಂದು ಪಾಳಯ ಹಿಡಿಸುವ ಪರಿಸ್ಥಿತಿಯೊದಗಬಾರದೆಂದಿಲ್ಲ; ಮೇಲಾಗಿ ಭಾರತದ ಭಾವನೆಯಿರುವಂತೆಯೇ ಇತರ ಕಾಮನ್‌ವೆಲ್ತ್ ರಾಷ್ಟ್ರಗಳ ಭಾವನೆಯಿಲ್ಲ; ಭಾರತದ ಮೂಲಭೂತ ತತ್ವಗಳಾದ ಸ್ವರಕ್ಷಣೆ ಮತ್ತು ಶಾಂತಿರಕ್ಷಣೆಗಾಗಿಯೇ ಅದೊಂದು ನೊಗಕ್ಕೆ ಹೆಗಲೊಡ್ಡಬೇಕಾಗಿ ಬರಲೂಬಹುದು. ಆಗ ಅದರ ಪಾಲಿಗೆ ಯಾವುದಾದರೊಂದು ಹೊಸ ಸಂಬಂಧಕ್ಕಿಂತ ಮುಂದಾಗಿ ತಾನು ಕಟ್ಟಿಕೊಂಡ ಕಾಮನ್‌ವೆಲ್ತ್ ಸಂಬಂಧವೇ ಸೇನಾನೊಗವಾಗಿ ಮಾರ್ಪಡುವದು ಸಂಭವನೀಯ. ಈ ಸ್ಥಿತಿಯನ್ನು ಅನಿವಾರ್ಯಗೊಳಿಸುವ ಕಾರ್ಯಗಳೀಗ ನಡೆಯುತ್ತಿರುವುದೂ ಗೋಚರಿಸುತ್ತಿದೆ. ನಿದರ್ಶನಕ್ಕಾಗಿ ಆಸ್ಟ್ರೇಲಿಯಾವು ಭಾರತದ ಕುರಿತು ವಹಿಸಿರುವ ಸಮಾಸಕ್ತಿಯನ್ನು ನೋಡಬಹುದು. ಶಾಂತ ಸಮುದ್ರ ವಲಯದಲ್ಲಿದ್ದರೂ ಈ ತನಕ ಭಾರತದ ಆಗುಹೋಗುಗಳ ಕಡೆಗೆ ವಿಶೇಷ ಪ್ರಾಮುಖ್ಯತೆಯನ್ನು ಕೊಡದಿದ್ದ ಆಸ್ಟ್ರೇಲಿಯದ ಪತ್ರಿಕೆಗಳಲ್ಲೂ ರೇಡಿಯೋದಲ್ಲೂ ಈಗ ಭಾರತದ ಸುದ್ದಿಯೇ ಸುದ್ದಿ! ಅಟ್ಲಾಂಟಿಕ್ ಒಪ್ಪಂದದಂತಹ ಒಂದು ಶಾಂತ ಸಮುದ್ರವೊಪ್ಪಂದವಾಗುವದೆಂದೂ ಭಾರತವು ಅದರಲ್ಲಿ ಖಂಡಿತವಾಗಿ ಸೇರಿಕೊಳ್ಳುವದೆಂದೂ ಶ್ವೇತವರ್ಣೀಯರಾದ ಆಸ್ಟ್ರೇಲಿಯಾನರು ಇಷ್ಟರಲ್ಲೇ ದೃಢವಾಗಿ ನಂಬಿದ್ದಾರೆ. ಆ ನಂಬುಗೆಗನುಸಾರವಾಗಿ, ನಿಕಟ ಸಂಬಂಧವನ್ನು ನಿರ್ಮಿಸಿಕೊಳ್ಳೋಣವೆಂದೇ ಭಾರತದ ಕುರಿತು ಇಂತಹ ಆಸಕ್ತಿ ಪ್ರದರ್ಶಿಸುತ್ತಿದ್ದಾರೆ. ಅಮೇರಿಕವು ಅಟ್ಲಾಂಟಿಕ್ ಒಡಂಬಡಿಕೆಯ ನಾಯಕತ್ವವನ್ನು ವಹಿಸಿದ್ದಂತೆ ಬ್ರಿಟನು ಶಾಂತ ಸಮುದ್ರವಲಯದ ಒಪ್ಪಂದಕರ್ತನ ಸ್ಥಾನದಲ್ಲಿದೆ. ಆದರೆ ಮುಖ್ಯವಾಗಿ ಭಾರತದ ಸಹಕಾರದಿಂದ ಆದರ ಕಾರ್ಯಕ್ಕೀವರೆಗೆ ಅನುಕೂಲವೊದಗಿಲ್ಲ; ಅಂತಹ ಅನುಕೂಲಸ್ಥಿತಿ ನಿರ್ಮಾಣ ಪ್ರಯತ್ನವಷ್ಟೇ ನಿಧಾನವಾಗಿ ನಡೆದಿದೆ. ಚೀನಾ ಸರಹದ್ದು ದಾಟಿ ಕಮ್ಯೂನಿಸ್ಟ ಪ್ರವಾಹ ಏಸ್ಯಾದ ಇತರ ಕಡೆಗಳಿಗೆ ಪ್ರವಹಿಸದಂತೆ ತಡೆಗಟ್ಟುವದು ಹಾಗೂ ಏಸ್ಯಾದಲ್ಲಿ ಐರೋಪ್ಯವರ್ಚಸ್ಸನ್ನು ಉಳಿಸುವದೇ ಈ ಶಾಂತವಲಯೊಪ್ಪಂದದ ಧ್ಯೇಯವೆಂಬುದು ಸ್ಪಷ್ಟ.

ಹಿಂದೀ ಜನಬಲದ ಆವಶ್ಯಕತೆ

“ಶಾಂತ ಸಮುದ್ರವು ಐರೋಪ್ಯರ ಕೊಳ” “ಪೂರ್ವ ಏಸ್ಯಾವು ಪಶ್ಚಿಮ ಯುರೋಪಿನ ಮುಖ್ಯ ನಿಲ್ದಾಣ” ಎಂಬಂತಹ ಮಾತುಗಳನ್ನು ಇಂದು ಕೂಡಾ ಜನರಲ್ ಮೇಕರ್ಥರರಂತಹ ಹೊಣೆಯುಳ್ಳ ಅಮೇರಿಕನ್ ಸೇನಾನಿಗಳು ಹಾಗೂ 'ಟೈಮ್ಸ್'ನಂತಹ ಪ್ರಾಮುಖ್ಯ ಬ್ರಿಟಿಷ್ ಪತ್ರಿಕೆಗಳು ನಿಸ್ಸಂಕೋಚವಾಗಿ ಉಚ್ಚರಿಸುತ್ತಿವೆ. ಇದು ಅಸಂಬದ್ಧವಲ್ಲವೆಂದಾದರೆ ರಶ್ಯದ ಆರೋಪವೂ ನಿರಾಧಾರವೆನ್ನಿಸುವಂತಿಲ್ಲ. ಪಶ್ಚಿಮ ಯುರೋಪು ಮತ್ತು ಅಮೇರಿಕದ ಈ ದುರಾಕಾಂಕ್ಷೆಯಲ್ಲಿ ಭಾರತವು ಸಹಭಾಗಿಯಾಗುವದೆಂಬ ಭಾವನೆ ಮತ್ತು ನಿರೀಕ್ಷೆ ಇಷ್ಟು ಬಲವಾಗಿರುವುದು ಹಿತಕರವಲ್ಲ. “ಪರಸ್ಪರ ವಿರುದ್ಧ ಪಾಳಯಗಳ ಪೈಕಿ ಯಾವಾವ ಕಡೆಗೂ ಸೇರುವಂತಿಲ್ಲ; ಲೋಕಶಾಂತಿ ಸಾಧಕ ತಾಟಸ್ಥ್ಯ ಮತ್ತು ಎಲ್ಲಾ ರಾಷ್ಟ್ರಗಳ ಕಡೆಗೆ ಮೈತ್ರಿಯನ್ನಲ್ಲದೆ ಬೇರಾವ ಧೋರಣೆಯನ್ನೂ ವಹಿಸುವಂತಿಲ್ಲ” ಎಂದು ಪ್ರತಿಯೊಂದು ಸಂದರ್ಭದಲ್ಲೂ ಹೇಳುತ್ತಾ ಬಂದಿರುವ ಪಂಡಿತ ನೆಹರುಗಳ ಮಾತಿನಲ್ಲಿ ವಿಶೇಷ ಹುರುಳಿಲ್ಲವೆಂದೇ ರಶ್ಯಾ ಮತ್ತಿತರ ಪಕ್ಷಪಾತಿಗಳಂತೆ ಪಾಶ್ಚಾತ್ಯ ರಾಷ್ಟ್ರಗಳೂ ಭಾವಿಸಿಕೊಂಡಂತಿದೆ.

ಭಾರತದ—

ಭಾವನೆ ಹೇಗಿದ್ದರೂ ಭಾರತವೀಗ ಹಿಡಿದಿರುವ ಹಾದಿಯು ಅದನ್ನೀ ಕಡೆಗೆ ತಪ್ಪದೆ ಕೊಂಡೊಯ್ಯಬಲ್ಲುದೆಂದು ಅವರ ವಿಶ್ವಾಸ. ಈ ವಿಶ್ವಾಸವನ್ನು ದೃಢಪಡಿಸುವ ಸಂಗತಿಗಳೂ ನಡೆದಿವೆ. ಬರ್ಮದ ಅಂತರ್ಯುದ್ಧದಲ್ಲಿ ಬರ್ಮಾ ಸರಕಾರಕ್ಕೆ ಸಹಾಯ ಕೊಡಲು ಭಾರತ, ಪಾಕಿಸ್ತಾನ ಮತ್ತಿತರ ಕಾಮನ್‌ವೆಲ್ತ್ ರಾಷ್ಟ್ರಗಳು ಮುಂದಾಗಿವೆ; ಈ ಕೆಲಸದ ಪುಡಾರಿತ್ವ ಭಾರತದ್ದೇ; ಇಲ್ಲಿ ಇದಿರುವಾದಿಗಳೆಂದರೆ ಕಮ್ಯೂನಿಸ್ಟರೇ. ಭಾರತದ ಈ ಹೆಜ್ಜೆ ಕೊನೆಯಗುರಿಮುಟ್ಟುವ ವರೆಗೂ ಮುಂದುವರಿಯುವದು ಬ್ರಿಟನ್ ಮತ್ತು ಅಮೇರಿಕಗಳಿಗೆ ಬೇಕಾಗಿದೆ. ಯಾಕೆಂದರೆ ಏಸ್ಯಾದಲ್ಲಿ ನಡೆಯುವ ರಶ್ಯದಿದಿರ ಘರ್ಷಣೆಯಲ್ಲಿ ತಮಗೆ ಮುಖ್ಯವಾಗಿ ಬೆಂಬಲವಾಗಬಲ್ಲ ರಾಷ್ಟ್ರವೆಂದರೆ ಭಾರತವೆಂದು ಅವರಿಗೆ ತಿಳಿದಿದೆ. ಆಸ್ಟ್ರೇಲಿಯ, ನ್ಯೂಜೀಲೇಂಡಿನಂಥವುಗಳು ತಮ್ಮ ಎಲ್ಲಾ ಆಕಾಶ, ಜಲಬಲಗಳನ್ನು ಕೊಡಬಹುದು—ಫಿಲಿಪ್ಪಾಯಿನ್ಸ್, ದಕ್ಷಿಣಕೊರಿಯಾದಂತಹವು ಪ್ರತ್ಯಕ್ಷ ಸಹಾಯಕ್ಕೆ ಬರಬಹುದು—ಬರ್ಮಾ, ಮಲಯಾ, ಇಂಡೊನೇಶಿಯಾದಂಥವುಗಳಿಗೆ ತಮ್ಮ ಪಾಡೇ ತಮಗೆ ಹೆಚ್ಚಾಗಿದೆ. ಹೀಗಾಗಿ ಇವೆಲ್ಲವುಗಳಿಂದ ದೊರಕುವ ಸಹಾಯವು ಒಂದು ಮಹಾಸಮರಕ್ಕೆ ಸಾಕಾಗುವಂತಹದಲ್ಲ. ಇಂಗ್ಲಾಂಡಿನ ಶಕ್ತಿ ಮತ್ತು ಜನಬಲ ತೀರಾ ಕುಸಿದುಹೋಗಿದೆ. ಏಸ್ಯಾದ ಸಮರಕ್ಕೆ ಬೇಕಾಗುವ ಸೇನಾಬಲವನ್ನೊದಗಿಸುವ ಸಾಮರ್ಥ್ಯವುಳ್ಳವುಗಳೆಂದರೆ ಭಾರತ ಮತ್ತು ಪಾಕಿ

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ರಿಂದ ೫ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವುಟ ಗುಡ್ಡೆ, ಮಂಗಳೂರು.

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡಿಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

Nambiar's

ARYA VAIDYA SALA

UDIPI

ideal House for Ayurvedic Treatment.

— T. N. Kelu Nambiar,

ಉತ್ತಮ

—ಉಪಾಹಾರ ಮಂದಿರ

ವೀರ ಭಾರತ ವಿಶ್ರಾಂತಿ ಗೃಹ

(ನ್ಯೂ ಯೂನಿಯನ್ ಮಿಲ್ಲಿನ ಎದುರು)

ಡಿಲಿಸ್ಲೆ ರೋಡು

ಬೊಂಬಾಯಿ 13

ಆದ್ದರಿಂದಲೇ ಭಾರತವು ರಿಪಬ್ಲಿಕ್ ಆದರೂ ಅದು ಕಾಮನ್‌ವೆಲ್ತ್ ಕೂಟ ಬಿಡದಂತೆ ಪ್ರಯತ್ನಿಸಲಾಯಿತು; ಇನ್ನು ಅದನ್ನು ಕೊನೆಯ ವರೆಗೂ ತಮ್ಮೊಡನೆ ಕರೆದೊಯ್ಯುವ ವಿಶೇಷ ಪ್ರಯತ್ನಗಳು ವ್ಯಕ್ತಾವ್ಯಕ್ತವಾಗಿ ನಡೆದಾವು. ಆಸ್ಯಾದಲ್ಲೀಗಲೂ ಅಡಿಯಾಳು ಜನರಿರಬಹುದು. ಆದರೆ ಇಲ್ಲಿಯ ಪಾಶ್ಚಾತ್ಯ ಪ್ರಭಾವದ ಮುಸುಕು ಪೂರ್ಣ ಜಾರಿ ಹೋಗಿ ಈಗ ಒಂದೆರಡೆಡೆ ಸಿಕ್ಕಿಕೊಂಡಂತುಳಿದಿದೆ ಹೊರತು ಬೇರಿಲ್ಲ. ಆ ಸ್ಥಾನವನ್ನೀಗ ಕಮ್ಯೂನಿಸ್ಟ್ ಕೆಂಪು ಸೆರಗು ಆವರಿಸುತ್ತಾ ಬರುತ್ತಿರುವಾಗ ಆಸ್ಯಾದ ರಾಷ್ಟ್ರಗಳಲ್ಲಿ 'ಸ್ವರಾಷ್ಟ್ರೀಯತೆ'ಯನ್ನು ಹುರಿದುಂಬಿಸಿ, ಬಲಗೊಳಿಸಿಯೇ ಬ್ರಿಟಿಸ್ ಅಮೆರಿಕಗಳು ಅದನ್ನು ತಡೆದಿಡಬೇಕಲ್ಲದೆ ಬೇರೆ ಕೈಯಿಲ್ಲ. ಆದ್ದರಿಂದಲೇ ಈ ಒದ್ದಾಟ!

ಇದು ಸಾಧ್ಯವೆ?

ಆದರೆ ಅಟ್ಲಾಂಟಿಕ್‌ನಲ್ಲಿ ಹಾಯಿ ಹಾಸಿದ ಯುಕ್ತಿ ಶಾಂತಸಮುದ್ರದಲ್ಲಿ ಮುಳುಗಿ ಹೋಗಲಾರದೇ, ಎಂಬ ಪ್ರಶ್ನೆಯಿದೆ. ಮೊದಲನೆಯದಾಗಿ ಶಾಂತ ಸಮುದ್ರವಲಯದ ರಕ್ಷಣಾ ಒಡಂಬಡಿಕೆ, ಮತ್ತು ದಕ್ಕ ...ಸಾಧ್ಯವಾದ ರಕ್ಷಣಾ ವ್ಯವಸ್ಥೆ ಮಾಡಿಕೊಳ್ಳುವದೇನೂ ಸುಲಭದ ಕೆಲಸವಲ್ಲ. ಅಟ್ಲಾಂಟಿಕ್ ರಾಷ್ಟ್ರಗಳಿಗಿಂತ ಎಷ್ಟೋ ದೊಡ್ಡದಾದ ಕ್ಷೇತ್ರವಿದು. ಇಡೀ ಪ್ರಪಂಚದ ಸುಮಾರು ಅರೆವಾಸಿಯಷ್ಟು ಜನರು

ಕಾಶ್ಮೀರ ಹೈದರಾಬಾದುಗಳಲ್ಲಿ ಭಾರತದಿದಿರ ಪಥವಾವುದು?

ಅಧ್ಯಕ್ಷ ಟ್ರೂಮೇನರು ಇವೆಲ್ಲಾ ವಿಷಯಗಳ ಕುರಿತು ಪರ್ಯಾಲೋಚನೆ ನಡೆಸಬಹುದು. ಹೀಗೆ ಆಂಗ್ಲೋ ಅಮೆರಿಕಾನರು ಹಲವು ತಡೆ, ಶಂಕೆಗಳ ನಡುವೆ ಸಿಕ್ಕಿಕೊಂಡು ಯೋಚನಾಂದೋಲನವನ್ನೇ ನಡೆಸುತ್ತಿರುವಾಗ, ಅತ್ತ ಕಮ್ಯೂನಿಸ್ಟರು ಚೈನವನ್ನು ಕಬಳಿಸಿ, ಒತ್ತಿನ ಇಂಡೋಚೈನವನ್ನು ಮಣಿಗಿಸಿ, ಜಾವಾ ನು ಅಸ್ಟ್ರೇಲಿಯಗಳ ತೇಜಸ್ಸನ್ನು ಅಪಹರಿಸಿ, ಬರ್ಮಾದ ವರೆಗೂ ಬಂದುಬಿಟ್ಟರೆ, ಆ ಮೇಲೆ ಆಂಗ್ಲೋ ಅಮೆರಿಕನರ ಆಕಾಂಕ್ಷೆಗಳೆಲ್ಲವೂ ನಿರಾಶೆಗಳಾಗಿ ಪರಿಣಮಿಸದೆ ವಿಧಿಯಿಲ್ಲ. ಭಾರತವೂ ಈ ಹೊಸ ಪರಿಸ್ಥಿತಿಗನುಗುಣವಾಗಿ ತನ್ನ ಧೋರಣೆ ತಿದ್ದಿಕೊಳ್ಳುವದು ಅನಿವಾರ್ಯವಾಗಬಹುದು. ಮುಂದೆ ಏನೆಲ್ಲಾ ನಡೆಯುವವೋ—ಆತುರದಿಂದ ಕಾಯಬೇಕಾಗಿದೆ.

× × ×

ಭವಿಷತ್ಕಾಲದಲ್ಲಿ ಭಾರತವು ಹಿಡಿಯಬೇಕಾಗಿ ಬರುವ ಅಷ್ಟಾದಿಯ ಪ್ರಶ್ನೆ—ಕವಲೊಡೆದ ವಿದೇಶೀ ಸಂಬಂಧ ಸಮಸ್ಯೆ—ಹಾಗಿದ್ದರೆ, ಪರದೇಶಗಳ ಕೈ ಚಾಚಿಯಾಡುವರೆ ಇನ್ನೂ ಅವಕಾಶವುಳಿದಿರುವ ಒಂದೆರಡು ಗೃಹ ಸಮಸ್ಯೆಗಳೂ ಅವರ ಪಾಲಿಗುಳಿದಿವೆ; ಕಾಶ್ಮೀರದ ಭವಿಷ್ಯ ನಿರ್ಧಾರ ಸಂಬಂಧದ ವಿವಾದ ಮತ್ತು ಹೈದರಾಬಾದಿನ ಕುರಿತು ಅನಗತ್ಯವಾಗಿ ಭದ್ರತಾ ಕೌನ್ಸಿಲಿನಲ್ಲಿ ಬಂದಿರುವ ಕುತರ್ಕ. ಒಂದು ರಾಷ್ಟ್ರದ ರಾಜಕಾರಣದಲ್ಲಿ—ಅದರಲ್ಲೂ ಭಾರತದಂತಹ ನವೋದಿತ ಸ್ವಾತಂತ್ರ್ಯದ ದೇಶದಲ್ಲಿ—ಇಂತಹ ತೊಂದರೆಗಳಿರುವುದು ಸಹಜವೇ. ಅವುಗಳನ್ನು ಬಿಡಿಸಿಕೊಳ್ಳುವ ಸ್ಪಷ್ಟ ಹಾದಿಗಳು ಭಾರತದ ಕಣ್ಣ ಮುಂದಿವೆ; ಆವಶ್ಯಗತ್ಯವುಳ್ಳ ಶಕ್ತಿ ಯೋಗ್ಯತೆಗಳೂ ಭಾರತದಲ್ಲಿವೆ. ಆದರೆ ಆದಿಕಾಲದಿಂದಲೂ ಭಾರತವು ವಂಚಿಸಲ್ಪಟ್ಟಷ್ಟು ಸೋಲಿಸಲ್ಪಟ್ಟಿದ್ದಿಲ್ಲ; ಕಾಶ್ಮೀರ, ಹೈದರಾಬಾದುಗಳಂತಹ ಪ್ರಶ್ನೆಗಳಲ್ಲೂ ವಂಚನೆಯನ್ನು ಹೋಲುವ ಅಧಿಕಪ್ರಸಂಗಗಳು ಮುಂದೆ ಬಂದಿರುವವೆಂಬುದೇ ಇಲ್ಲಿ ಶೋಚನೀಯ ವಿಷಯ.

ಶೇಕ್ ಅಬ್ದುಲ್ಲಾರ ಹೇಳಿಕೆ

ಕಾಶ್ಮೀರವು ಭಾರತಕ್ಕೆ ಸೇರಬೇಕೋ ಪಾಕಿಸ್ತಾನಕ್ಕೋ ಎಂಬುದನ್ನು ಅಲ್ಲಿಯ ಜನಮತಸಂಗ್ರಹಿಸಿಯೇ ನಿರ್ಧರಿಸಬೇಕೆಂದು ಖಚಿತವಾಗಿ, ಮಧ್ಯಸ್ಥಗಾರರಾಗಿ ಭದ್ರತಾಕೌನ್ಸಿಲಿನ ಕಾಶ್ಮೀರ ಕಮಿಶನಿನವರು ಕೆಲಸಮಾಡುತಿದ್ದಾರೆ—ಜನಮತ ಸಂಗ್ರಹಾಧಿಕಾರಿಯ ನೇಮಕ ಕೂಡಾ ಆಗಿದೆ. ಕಾಶ್ಮೀರದ ಮಹಾರಾಜರ ಮತ್ತವರ ಸ್ಥಾನದಮೇಲೆ ಯಾವ ವಿಶ್ವಾಸವೂ ಇರದ ಭಾರತ ಸರಕಾರವು ಕಾಶ್ಮೀರವನ್ನು ತನ್ನದಾಗಿ ಸೇರಿಸಿಕೊಂಡು, ಹಿಂದೀ ತೆರಿಗೆದಾರನ ಹೇರಳ ಹಣವನ್ನೂ ಹಿಂದೀ ಸೈನಿಕರನ್ನೂ ಅಲ್ಲಿ ವ್ಯಯ, ಕ್ಷಯಗೊಳಿಸಿರುವುದು ಶೇಕ್ ಅಬ್ದುಲ್ಲಾರ ನಾಯಕತ್ವದ ಕಾಶ್ಮೀರೀ ಜನತೆಗಾಗಿಯೇ. ಸಂಗತಿ ಹೀಗಿರುವಾಗ ಈ ಸಂಧಿಕಾಲದಲ್ಲೇ ಶೇಕ್ ಅಬ್ದುಲ್ಲಾರು ಓರ್ವ ಬ್ರಿಟಿಷ್ ಪತ್ರಿಕಾ ಪ್ರತಿನಿಧಿಗೆ ಕೆಲಕಾಲದ ಹಿಂದೆ ಕೊಟ್ಟಿದ್ದ ಹೇಳಿಕೆಯೊಂದು ಪ್ರಕಟವಾಗಿ ಭಾರತದ ಎಲ್ಲೆಡೆಗಳಲ್ಲೂ ಆಶ್ಚರ್ಯ, ಜಗುಪ್ಸೆಗಳನ್ನೆಬ್ಬಿಸಿದ್ದಿತು. ಹೈದರಾಬಾದಿನ ನಿಜಾಮರು ಅಂದು ಹೇಳಿದ್ದಂತೆ 'ಕಾಶ್ಮೀರವು ಸ್ವತಂತ್ರವಾಗಬೇಕು' ಎಂದು ಶೇಕ್ ಅಬ್ದುಲ್ಲಾರು ಹೇಳಿದರೆಂಬುದೇ ಆ ಸುದ್ದಿ. ಈ ವಾರ್ತೆ ಪ್ರಕಟವಾದೊಡನೆಯೇ ಶೇಕ್ ಅಬ್ದುಲ್ಲರು ದಿಲ್ಲಿಗಾಗಮಿಸಿ, ಭಾರತ ಪ್ರಮುಖರೊಡನೆ ಪರ್ಯಾಲೋಚಿಸಿ, ಎಲ್ಲಾ ಶಂಕೆ ಸಂದೇಹಗಳನ್ನೂ ನಿವಾರಿಸುವ ಸ್ಪಷ್ಟ ಹೇಳಿಕೆಯೊಂದನ್ನಿತ್ತಿದ್ದಾರೆ. "ಕಾಶ್ಮೀರವು ಭಾರತದೊಂದಿಗೆ ಜೋಡಣೆಗೊಳ್ಳುವ ಸಂಬಂಧವು ಯಾವ ವಿಧದಲ್ಲೂ ಕೃತಕವಾಗಿರದೆ ಸ್ವಾಭಾವಿಕ ಮತ್ತು ಅನಿವಾರ್ಯವೇ ಇದೆ. ಸ್ವತಂತ್ರ ಕಾಶ್ಮೀರದ ಯೋಚನೆಯೇನೋ ರಮ್ಯವಿರಬಹುದು. ಆದರೆ ಮಿತಾನುಕೂಲತೆಯುಳ್ಳ ಕಾಶ್ಮೀರದಂತಹ ಸಣ್ಣ ರಾಷ್ಟ್ರವು ಸ್ವತಂತ್ರವಾಗಿರುವದು ವ್ಯವಹಾರ್ಯವೆ? ಅದರ ನೆರೆಯ ರಾಷ್ಟ್ರಗಳು ಅದರ ಸ್ವಾತಂತ್ರ್ಯವನ್ನು ಸಂತೋಷದಿಂದ ಮನ್ನಿಸುವಂತಿದೆಯೆ? ಕಾಶ್ಮೀರವು ಸ್ವತಂತ್ರವೆಂದು ನಾಮಮಾತ್ರ ಘೋಷಣೆಮಾಡಿಬಿಟ್ಟಲ್ಲಿ ಯಾವುದಾದರೂ ಕ್ರೂರ ಹಾಗೂ ಸಶಕ್ತ ರಾಷ್ಟ್ರಕ್ಕೆ ನಾವದನ್ನು ಬಲಿಕೊಡುವಂತಾಗದೆ? ಆದ್ದರಿಂದ ಹಿಂದಿನಮಾತು ಹೇಗಿದ್ದರೂ ಈಗಲೂ ಸ್ವತಂತ್ರ ಕಾಶ್ಮೀರವನ್ನು ನಾವು ಚಿಂತಿಸುತ್ತಿದ್ದೇನೆಂದು ನೆನಸುವದು ಹಾಸ್ಯಾಸ್ಪದ. ಜಾತ್ಯಾತೀತ ಪ್ರಜಾಸತ್ತಾಧಿಕಾರದ ಸ್ಥಾಪನೆ ಮತ್ತು ಮಾನವನಿಂದ ಮಾನವನಿಗಾಗುತ್ತಿರುವ ಸುಲಿಗೆಯ ನಿವಾರಣೆಯ ಧ್ಯೇಯ ಧೋರಣೆಗಳ ಆಯಕಟ್ಟನ್ನಾಧರಿಸಿಯೇ ನಾವು ಭಾರತದ ಜನತೆಯೊಡನೆ ಸ್ನೇಹ ಮತ್ತು ಸಂಬಂಧವನ್ನಿಟ್ಟುಕೊಂಡವರು. ಈ ಧ್ಯೇಯ ತತ್ವಾನುಸರಣೆಯ ದೆಸೆಯಿಂದಲೇ ನಾವು ಅಂದಿನಿಂದೀವರೆಗೂ ಮುಸ್ಲಿಂ ಲೀಗ್ ತತ್ವಗಳನ್ನೂ, ಒಂದು ಕಾಲ್ಪನಿಕ ರಾಷ್ಟ್ರವಾದ ಪಾಕಿಸ್ತಾನವನ್ನೂ ಇದಿರಿಸಿ ಹೋರಾಡುತ್ತಾ ಬಂದಿದ್ದೇವೆ. ನಮ್ಮದು ಮುಸ್ಲಿಂ ಬಹುಸಂಖ್ಯಾಕ ರಾಜ್ಯವಾಗಿದ್ದರೂ ಭಾರತದೊಂದಿಗೆ ಸೇರಿಕೊಂಡಿದ್ದೇವೆ. ಭಾರತ ಮತ್ತು ಪಾಕಿಸ್ತಾನಗಳು ಹಿಂದೂ ಮುಸ್ಲಿಂ ಅಧಿಕಸಂಖ್ಯೆಯನ್ನಾಧರಿಸಿ ಕ್ಷೇತ್ರವಾರಾಗಿ ರಾಷ್ಟ್ರವನ್ನು ಇಬ್ಭಾಗಿಸಲೊಪ್ಪಿದಾಗ ಕೂಡಾ ಕಾಶ್ಮೀರವು ಜಾತ್ಯಾತೀತ ಪ್ರಜಾಸತ್ತೆಯನ್ನೇ ದೃಢವಾಗಿ ಎತ್ತಿಹಿಡಿದಿದ್ದಿತು. ಮಾತ್ರವಲ್ಲ, ಪಾಕಿಸ್ತಾನವು ಕಾಶ್ಮೀರದ ಮೇಲೆ ಧಾಳಿ ನಡೆಯಿಸಿ, ಇಲ್ಲಿಯ ಆಡಳಿತ ಯಂತ್ರವು ಸಂಪೂರ್ಣ ಕುಸಿದು ಬಿದ್ದಂತಾಗಿದ್ದ—ಪಾಕಿಸ್ತಾನದೊಡನೆ ಸೇರಿಕೊಳ್ಳಲು ನಾವು ಮನಸ್ಸು ಮಾಡುತ್ತಿದ್ದರೆ ನಮ್ಮನ್ನು ಹಾಗೆ ಮಾಡದಂತೆ ತಡೆಯಬಲ್ಲ ಶಕ್ತಿಯೇ ಪ್ರಪಂಚದಲ್ಲಿರದಿದ್ದ—ಆ ಕಾಲದಲ್ಲಿ ನಾವು ಪಾಕಿಸ್ತಾನವನ್ನು ಸೇರಲು ನಿರಾಕರಿಸಿದ್ದೆವು. ಆ ಮೂಲಕ ಕಾಶ್ಮೀರದ ದೈಹಿಕ ಹಾಗೂ ಆತ್ಮಿಕ ಪತನವನ್ನು ತಪ್ಪಿಸಿದುದಷ್ಟೇ ಅಲ್ಲ—ಮಹಾತ್ಮಾ ಗಾಂಧಿ

-ಪಥದಲ್ಲಿ

ವಲಯದಲ್ಲಿದ್ದಾರೆ. ಮೇಲಾಗಿ ಇಲ್ಲಿ ರಾಷ್ಟ್ರಗಳು, ಅಲ್ಲಿಯ ರಾಷ್ಟ್ರಗಳಿಗಿಂತ ಚ್ಚಿನ ಆರ್ಥಿಕ ರಾಜಕೀಯ ದುರವಸ್ಥೆ ಲ್ಲಿವೆ. ಇಂತಹ ದುಸ್ಥಿತಿ ನಿವಾರಣೆಯಾ ರಕ್ಷಣಾ ಒಪ್ಪಂದ ಫಲಕಾರಿಯಾಗ; ಇದುವರೆಗಾವ ಭಾಗಕ್ಕೂ ದೊರೆಕಿರ ಷ್ಟು ದೊಡ್ಡ ಪರಿಮಾಣದ ಆರ್ಥಿಕ ಾಯ ದೊರೆಯದೆ ಈ ದುಸ್ಥಿತಿ ಾರಣೆಯಾಗದು. ಈ ಅಭೂತಪೂರ್ವ ಾಯವನ್ನು ಕೊಡಬೇಕಾದ ರಾಷ್ಟ್ರ ಮೇರಿಕ. ಆಸ್ಯಾ ರಾಷ್ಟ್ರಗಳಿಗೂ ಮಾ ಲ್ ಯೋಜನೆಯಂತಹ ಸಹಾಯ ಯೋಜನೆ ನಿರ್ಮಿಸುವ ಪ್ರಸ್ತಾಪವನ್ನು ಅಧ್ಯಕ್ಷ ಟ್ರೂಮೇನರು ಮಾಡಿದು; ಆದರೆ ಆ ಕುರಿತು ಹೆಜ್ಜೆಮುಂದಿಡ ಅಮೆರಿಕವು ನಿಜಕ್ಕೂ ಹೆದರುತ್ತಿದೆ. ದ ಚಿಯಾಂಗ್ ಕೈಷೇಕ್ ಸರಕಾರಕ್ಕೆ ಯಕೊಟ್ಟು ಕೈಸುಡಿಸಿಕೊಂಡ ಬಿಸಿ ಈಗ ಅಮೆರಿಕದ ಹೃದಯವನ್ನೂ ುತ್ತಿದೆ. ಈತನಕ ಮಿಕ್ಕೆಲ್ಲಾ ಭಾಗಗ ಕೊಟ್ಟ ಜುಮ್ಲಾ ಸಹಾಯಕ್ಕಿಂತ ನ ಮೊತ್ತವು ಚಿಯಾಂಗರಿಗೆ ಅಮೆ ಂದ ಹೋಗಿತ್ತು. ಅದೆಲ್ಲವೂ ಚಿಯಾಂ ಸರಕಾರದೊಡನೆ ಮುಳುಗುತ್ತಿದೆ. ಅಖಿಲ ಆಸ್ಯಾದ ಭದ್ರತೆಗಾಗಿ ಆ ಸಹಾಯಯೋಜನೆ ಕೈಕೊಳ್ಳುವ ಣೆಯು ಅಮೆರಿಕಕ್ಕೆ ಛಳಿಬಿಡಿಸಿರ. ಆದರೂ ರಶ್ಯಕ್ಕೆದುರಾಗಿ ಆಸ್ಯಾ ಟಿ ಕಟ್ಟಬೇಕೆಂಬ ಆಶೆಯೂ ಅದ

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯು ಜರೂರಾತಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ. ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತ: ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ.

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದು ಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.

ಜನರಲ್ ಮೆನೇಜರ್

ಕರ್ನಾಟಕ ಏಕೀಕರಣವೇ ಕನ್ನಡ ಜನತೆಯ ಮುಖ್ಯ ಧ್ಯೇಯ!

ಅಂತೆಯೇ ಜನ ಸಾಮಾನ್ಯರ ಸೇವೆಯೇ ಸುಧಾರವತ ಮುಖ್ಯ ಗುರಿ!

ಬ್ರೋಂಕಾಸ್ಮಾ ಕ್ಯೂರಾ

ಇದು ಎಂತಹ ಭಯಂಕರ ಅಸ್ತಮಾ, ಉಬ್ಬಸ, ಶ್ವಾಸ, ಕಾಸಗಳನ್ನು ತಕ್ಷಣವೇ ಗುಣಪಡಿಸುವ ಅದ್ಭುತ ಶಕ್ತಿವರ್ಧಕ ಟಾನಿಕ್.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ ವಿಚಾರಿಸಿ:—

ದಕ್ಷಿಣ ಭಾರತದ ಪ್ರಮುಖ ವಿತರಣಕರ್ತರು:—

ಯು. ಐ. ಬಿ. ಬಿ. ಎಂಡ್ ಕಂಪೆನಿ

ಮಾಡಲು ಕಾಶ್ಮೀರ ಕಮಿಶನ್ನಿನಿಂದಾಗದೆ ಹೋದರೆ, ಮತ್ತು ಭಾರತಕೇಂದ್ರದೊಂದಿಗೆ ಜೋಡಣೆಗೊಳ್ಳದಂತೆ ಹಾಗೂ ಜಾತ್ಯಾತೀತ ರಾಜ್ಯವಾಗಿರದಂತೆ ಕಾಶ್ಮೀರವು ಆತಂಕಿಸಲ್ಪಟ್ಟರೆ, ಅಂತಹ ಸಂದರ್ಭದಲ್ಲಿ ಕಾಶ್ಮೀರದ ಸ್ವತಂತ್ರಸ್ಥಾನಸಾಧನೆಯೊಂದು ನಾನಾ ಕಾಲದಲ್ಲಿ ಸೂಚಿಸಿದ್ದಿರಬಹುದಲ್ಲದೆ ಬೇರಿಲ್ಲ”- ಎಂಬುದೇ ಶೇಕ್ ಅಬ್ದುಲ್ಲಾರಮಾತು.

ಭಾರತದ ಕಡೆಗಿನ ಶೇಕ್ ಅಬ್ದುಲ್ಲಾರ ನಿಷ್ಠೆ, ಪಾಕಿಸ್ತಾನದ ಕಡೆಗೆ ಅವರಿಗಿರುವ ಜಿಗುಪ್ಸೆ, ಸಂದೇಹಾತೀತ. ಅವರ ಯಥಾರ್ಥತೆಯು ಪ್ರಶ್ನಾತೀತ. ಅವರ ಕೊನೆಯ ಹೇಳಿಕೆಯಂತೂ ಎಲ್ಲಾ ಶಂಕೆಗಳನ್ನೂ ತುಂಡರಿಸಿ ಚೆಲ್ಲ ಬಲ್ಲ ರಾಮಬಾಣ. ಹೀಗಿದ್ದರೂ ಪರಿಸ್ಥಿತಿಯು ಶೇಕ್ ಅಬ್ದುಲ್ಲಾರ ಹೃದಯದಾಳದಲ್ಲಿ ಒಂದು ಕೊರಗನ್ನು ನಿರ್ಮಿಸಿರಬಹುದು- ಅವರ ಮೆದುಳಿನ ಒಂದು ಮೂಲೆಯಲ್ಲಿ ಸ್ವತಂತ್ರ ಕಾಶ್ಮೀರದ ಚಿಂತನೆ ಹುದುಗಿರಬಹುದು ಎಂದು ಊಹಿಸಿದರೆ ತಪ್ಪಾಗದು. ಭಾರತ ಸರಕಾರವು ಕಮ್ಯೂನಿಸ್ಟ್ ಚಟುವಟಿಕೆಗಳನ್ನು ಹತ್ತಿಕ್ಕಿರುವಂತೆ, ಕಾಶ್ಮೀರದಲ್ಲಿ ಅಧಿಕಾರದಲ್ಲಿರುವ ಶೇಕ್ ಅಬ್ದುಲ್ಲಾ ಸರಕಾರವು ಅಲ್ಲಿ ಪಾಕಿಸ್ತಾನ ಪಕ್ಷಪಾತಿಗಳ ಆಟವಾವುದೂ ನಡೆಯದಂತೆ ಈ ವರೆಗೆ ದಮನಿಸಿಟ್ಟಿರಬಹುದು. ಆದರೆ ಜಾಗತಿಕಸಂಘದ ಜನಮತಸಂಗ್ರಹಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಇಕ್ಕಡೆಯವರಿಗೂ ಪೂರ್ಣ ಪ್ರಚಾರಾಧಿಕಾರ ದೊರೆಯುವ ಚುನಾವಣೆಯಲ್ಲಿ ಕಾಶ್ಮೀರದ ಮುಸ್ಲಿಂ ಬಹುಸಂಖ್ಯೆ ಹೇಗೆ ವಾಲೀತೋ ಹೇಳುವದಸಾಧ್ಯ. 'ಇಸ್ಲಾಮ್ ಅಪಾಯದಲ್ಲಿದೆ!' ಎನ್ನುತ್ತ ಖುರಾನ್ ಹಿಡಿದು ಕೇಳಲು ಬರುವವರಿಗಲ್ಲದೆ, ಇದಿರುಕಡೆಯವರಿಗೆ ವೋಟು ಕೊಟ್ಟು 'ಧರ್ಮದ್ರೋಹಿ' ಎನ್ನಿಸಲು ಅಜ್ಞ ಮುಸಲ್ಮಾನ ಎಂದಿಗೂ ತಯಾರಿಲ್ಲ- ಈ ವಿಲಕ್ಷಣ ಭ್ರಾಂತಿಯು ಧರ್ಮಾಂಧತೆಯನ್ನಲ್ಲದೆ, ನವಯುಗದ ಯಾವಪ್ರಕಾಶವನ್ನೂ ಅರಿಯದಸಾಮಾನ್ಯ ಮುಸಲ್ಮಾನನಲ್ಲಿ ಹೊರತು ಪ್ರಪಂಚದ ಬೇರಾವ ಜನತೆಯಲ್ಲೂ ಗೋಚರಿಸುವಂತಹದಲ್ಲ. ಹೀಗಿರುವಾಗ ಸ್ವಧರ್ಮೀಯ ಪಾಕಿಸ್ತಾನಕ್ಕೆ ಪ್ರತಿಯಾಗಿ ವಿಧರ್ಮೀಯ ಭಾರತದೊಡನೆ ಸೇರಿಕೊಳ್ಳಲೊಪ್ಪುವಂತೆ ಮುಸ್ಲಿಂ ಮತದಾರರನ್ನು ಒಲಿಸುವ ಕಾರ್ಯವು ಶೇಕ್ ಅಬ್ದುಲ್ಲಾರಂಥವರಿಗೆ ಕೂಡಾ ಕಬ್ಬಿಣದ ಕಡಲೆ ಜಗಿಯುವಷ್ಟು ಪ್ರಯಾಸಕರ ತೋರಿದರೆ ತಪ್ಪಿಲ್ಲ. ಇಂಥವರಿದಿರು ಭಾರತವನ್ನಿಡುವದಕ್ಕಿಂತ 'ಸ್ವತಂತ್ರ ಕಾಶ್ಮೀರ'ವನ್ನಿಟ್ಟರೆ ಪಾಕಿಸ್ತಾನವನ್ನು ಗೆಲ್ಲುವದು ಸುಲಭವಾಗದೇ, ಎಂಬ ಯೋಚನೆ ಅವರ ತಲೆಗೆ ಹೊಳೆದಿರಬಹುದು. ಗಡಿನಾಡಿನ ಪೊರಗು ಪಠಾಣರನ್ನು ಹದಕ್ಕೆ ತಂದು 'ಗಡಿನಾಡಿನ ಮುಕುಟರಹಿತ ರಾಜ'ನಾಗಿ ಮೆರೆದಾಡಿದ್ದ ಖಾನ್ ಅಬ್ದುಲ್ ಗಫರ್ ಖಾನರು ಕೂಡಾ ರಾಷ್ಟ್ರ ವಿಭಜನೆಯ ಕಾಲದಲ್ಲಿ ಮಾಡಿದ್ದೇನು? ತನ್ನದು 'ಪಠಾಣಿಸ್ಥಾನ'ದ ಬೇಡಿಕೆಯೆನ್ನುತ್ತಾ 'ಭಾರತಕ್ಕೋ ಪಾಕಿಸ್ತಾನಕ್ಕೋ' ಎಂಬೆರಡೇ ಹಾದಿಯಿದ್ದ ಆ ಚುನಾವಣೆಯಲ್ಲಿ ಭಾಗವಹಿಸದೆ ಹಿಂದೆ ಬಿದ್ದುದಲ್ಲವೆ? ಸ್ವಧರ್ಮವೊಂದೇ ಸರ್ವಸ್ವವಾಗಿರುವ ಮುಸ್ಲಿಂ ಬಹುಸಂಖ್ಯಾತರಿರುವ ಕ್ಷೇತ್ರದಲ್ಲೆಲ್ಲಾ ಇದೇ ಗತಿ! ಆದ್ದರಿಂದಲೇ ಕಾಶ್ಮೀರ ರಂಗದಲ್ಲೂ ಒಮ್ಮೆ ಸಂದೇಹ ಕತ್ತಲೆ ಕವಿಯಿತು. ಈಗ ಶೇಕ್ ಅಬ್ದುಲ್ಲಾ ಪುನಃ ಸ್ಪಷ್ಟ ಪ್ರಕಾಶ ಚೆಲ್ಲಿದ್ದಾರೆ. ಸಂಸ್ಕೃತಿ ಮತ್ತು ಪದ್ಧತಿ ಹೇಗಿದ್ದರೂ, ಕಾಶ್ಮೀರವು ಅವೆಲ್ಲವನ್ನೂ ಹುಸಿಗೊಳಿಸಿ ಭಾರತದೊಂದಿಗೆ ಶಾಶ್ವತವಾಗಿ ಕೂಡಿಕೊಂಡು ಹೊಸ ದಾಖಲೆ ನಿರ್ಮಿಸುವದೆಂದಾಶಿಸೋಣ.

ಇನ್ನು ಭದ್ರತಾ ಕೌನ್ಸಿಲಿನಲ್ಲಿ ಪುನಃ ತರ್ಕಕ್ಕೆ ತೊಡಗಿರುವ 'ಹೈದರಾಬಾದ್ ಪ್ರಶ್ನೆ'ಯ ಮಾತು. ಈ ಚರ್ಚೆಯು ಭದ್ರತಾ ಕೌನ್ಸಿಲಿಗೆ 'ಕೆಲಸವಿಲ್ಲದ ಬಡಗಿ'ಯ ಸ್ಥಾನವನ್ನು ಕೊಟ್ಟುದೆ ಹೊರತು ಹೈದರಾಬಾದಿಗಾವ ಹೊಸ ಸ್ಥಾನವನ್ನೂ ಸಂಪಾದಿಸಿಕೊಡುವಂತಿಲ್ಲ. ಹೈದರಾಬಾದ್ ಕಾಂಗ್ರೆಸ್ ನಾಯಕ ಸ್ವಾಮಿ ರಮಾನಂದರಂದಂತೆ "ಸತ್ತ ಕುದುರೆಯನ್ನು ಚಾಟಿಯಿಂದ ಹೊಡೆದೆಬ್ಬಿಸುವ" ಅಲ್ಲಿಯ ಪ್ರಯತ್ನಕ್ಕಾಗಿ ನಕ್ಕರೆಸಾಕು- ಬೇರೆ ವಿಮರ್ಶೆ ಅನಗತ್ಯ.

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ

S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ
ತಾರಾನಾಥ ವಿದ್ಯಾಪೀಠ ಬಳ್ಳಾರಿ
P. O. ಸಂಗನಕಲ್ ಬಳ್ಳಾರಿ.

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:	ಕೇಂದ್ರ ಕಾರ್ಯಾಲಯ:
ಕೆ. ಎಸ್. ರಾವ್. ರೋಡು, ಹಂಪನಕಟ್ಟೆ, ಮಂಗಳೂರು.	"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಲಭವಾಗಿರುವುದು.

ನವಜೀವಾತು ಎಂಬ

ಸೂತಿಕಾ ರಸಾಯನ



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ ಶಾಸ್ತ್ರಿ, ಆಯುರ್ವೇದ ಭೂಷಣ. ನಂ, ೫ ಕೊಡಿಯಾಲಬೈಲು, ದ ಕ

ಸ್ಥಾಪಿಸ್ಥರು. ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜದಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಚೈನೀ ಕೆಂಪು

ಪ್ರಪಂಚದ ಹೋರಾಟ ರಂಗಗಳಲ್ಲೀಗ ಅದೃಷ್ಟ ನಿರ್ಣಾಯಕ ಅತಿ ಮುಖ್ಯ ಘಟನೆಗಳು ನಡೆದಿವೆ—ಶಾಂಘಾಯಿ ಹೋರಾಟ, ಬರ್ಮಾ ಹೋರಾಟಗಳು ಇಡೀ ಜಗತ್ತಿನ ಭವಿಷ್ಯದಲ್ಲಿ ಸ್ಪಷ್ಟವಾದ ಮುದ್ರೆಯನ್ನೊತ್ತುವಂತಹವಿವೆ; ಏಷ್ಯಾದ ಅದೃಷ್ಟದಲ್ಲೇ ಕೈಯಾಡಿಸುವಂತಹವಿವೆ. ಮೊನ್ನೆ ತಾನೇ ಊಹೆ ಮಾತ್ರವಾಗಿದ್ದ 'ಬರ್ಮಾದ ಗಡಿಗೂ ಚೈನೀ ಕಮ್ಯೂನಿಸ್ಟರು ಬರಬಹುದು' ಎಂದಿದ್ದುದು ಇಷ್ಟರಲ್ಲೇ 'ಬಂದರು' ಎಂಬಂತಾದುದು ಅತಿಮುಖ್ಯ ಸಂಗತಿ.

ಯುರೋಪಿನಲ್ಲಿ

ಬರ್ಲಿನಿನ ದಿಗ್ಬಂಧನ ರದ್ದಾಗಿ, ಆ ಸಂಬಂಧದ ಸವಿವರ ರಾಜೀ ಒಪ್ಪಂದ ನಿರ್ಮಿಸಲು ರಶ್ಯಾ, ಅಮೆರಿಕ, ಇಂಗ್ಲೆಂಡು, ಫ್ರಾನ್ಸುಗಳ ವಿದೇಶ ಮಂತ್ರಿಗಳು ಇದೇ ತಾ 23ರಲ್ಲಿ ಪ್ಯಾರಿಸಿನಲ್ಲಿ ಸಮ್ಮೇಳನ ಸೇರಿದ್ದಾರೆ. ಈ ನಡುವೆ ಪಶ್ಚಿಮ ಬರ್ಲಿನಿನ ರೈಲ್ವೇ ಕೆಲಸಗಾರರು ಮುಷ್ಕರ ಹೂಡಿ, ಹಿಂಸಾಚರಣೆಗಿಳಿದು ರಶ್ಯನ್ ಅಧಿಕಾರಿಗಳ ಮೇಲೆ ಬಿದ್ದು, ಮತ್ತು ರಶ್ಯನ್ ಪೋಲೀಸ್ ಮತ್ತು ಈ ಕೆಲಸಗಾರರೊಳಗೆ ಹೋರಾಟ ನಡೆದ ವಾರ್ತೆಗಳು ಬರುತ್ತಿವೆ. ಪಶ್ಚಿಮ ಬರ್ಲಿನಿನ ಕಾನೂನುಬದ್ಧ ನಾಣ್ಯದ ಮೂಲಕವೇ ಆ ಭಾಗದ ಕೆಲಸಗಾರರಿಗೆ ಸಂಬಳ ದೊರೆಯಬೇಕೆಂಬ ಕೆಲಸಗಾರರ ಬೇಡಿಕೆಯನ್ನು ರಶ್ಯದ ಅಧಿಕಾರಿಗಳು ಮನ್ನಿಸದಿದ್ದುದು ಈ ಮುಷ್ಕರಕ್ಕೆ ಹೇತುವೆಂದು ತಿಳಿದುಬರುತ್ತದೆ. "ಪ್ಯಾರಿಸಿನಲ್ಲಿ ನಡೆದಿರುವ ಚತುರ್ರಾಷ್ಟ್ರೀಯ ವಿದೇಶ ಮಂತ್ರಿಗಳ ಸಮ್ಮೇಳನವನ್ನು ನಿರ್ಫಲಗೊಳಿಸಲು ವಿದೇಶೀಯರು ಗಾಳಿ ಹಾಕಿ ಎಬ್ಬಿಸಿರುವ ಮುಷ್ಕರವಿದು"ಎಂದು ರಶ್ಯನರ ಹೇಳಿಕೆ.

ರಶ್ಯ-ಅಮೇರಿಕಗಳೊಳಗಿನ ಪೈಪೋಟಿಯೆನ್ನಬಹುದಾದ ಗ್ರೀಸಿನ ಅಂತರ್ಯುದ್ಧವು ದೀರ್ಘಾವಧಿಯಿಂದ ನಡೆದಿದ್ದು, ಅಲ್ಲಿಯ ಸರಹದ್ದು ಶಾಂತಿ ಪಾಲನೆ ಮಾಡುವದು ಅಸಾಧ್ಯವೆಂದಾಗಿದೆ. ಗ್ರೀಸಿನ ಸಮ್ಮಿಶ್ರ ಸರಕಾರದ ವಿರುದ್ಧವಾಗಿ ಬಂಡಾಯವೆದ್ದವರಿಗೆ, ಆಶ್ರಯ ಮತ್ತು ಸಹಾಯವನ್ನು ರಶ್ಯದ ಸೂತ್ರಧಾರಿತ್ವದಲ್ಲಿರುವ ನೆರೆಯ ಅಲ್ಬೇನಿಯ ಮತ್ತು ಬಲ್ಗೇರಿಯಗಳು ಕೊಡುತ್ತಿವೆ; ಗ್ರೀಸ್ ಸರಕಾರಕ್ಕೆ ಅಮೇರಿಕದ ಸಹಾಯದೊರೆಯುತ್ತಿದೆ. ಗ್ರೀಸ್ ಮತ್ತು ಅದರ ಉತ್ತರಗಡೆಯ ಆ

ಟ್ರೇನಿಯಾ, ಬಲ್ಗೇರಿಯಗಳೊಳಗಿನ ಸರಹದ್ದು ಸಂಬಂಧದಲ್ಲಿ ರಾಜೀ ಮಾಡಬೇಕೆಂದು ನೇಮಿಸಲ್ಪಟ್ಟಿದ್ದ ಸಮಿತಿಯು ಆ ಕಾರ್ಯದಲ್ಲಿ ಪರಾಭವಗೊಂಡಿತೆಂದು ಸಂಯುಕ್ತ ರಾಷ್ಟ್ರಸಂಘಕ್ಕೆ ವರದಿಯಾಗಿದೆ. ಸಂಯುಕ್ತ ರಾಷ್ಟ್ರಸಂಘವನ್ನು ಬಿಟ್ಟೀ ಗ್ರೀಸ್ ಪ್ರಶ್ನೆಯನ್ನು ಇತ್ಯರ್ಥಿಸಿಕೊಳ್ಳೋಣವೆಂಬ ರಷ್ಯದ ಆಹ್ವಾನವನ್ನು ಅಮೇರಿಕವು ನಿರಾಕರಿಸಿದೆ.

ಶಾಂಘಾಯಿ ಮುತ್ತಿಗೆ

ಇತ್ತ ಚೈನೀ ಸರಕಾರದ ಅಂತಿಮ ಪ್ರಯತ್ನವಾದ ಶಾಂಘಾಯಿ ಹೋರಾಟವು

ತ್ತಿಗೆಯೊಳಗಿದೆ; ಸರಕಾರೀ ರಕ್ಷಣಾವ್ಯೂಹಗಳು ಕೊನೆಯ ಮುಹೂರ್ತದ ವರೆಗೂ ಅಚಲವಾಗಿ ನಿಂತು ಹೋರಾಟಕೊಡುವ ಪಂಥತೊಟ್ಟಿದ್ದು, ಆಗಾಗ ಕಮ್ಯೂನಿಸ್ಟ್ ಸೇನೆಗಳಿಗೆ ಪರಾಭವವೊದಗಿದೆಯಾದರೂ ಕ್ರಮಶಃ ಎಲ್ಲಾ ಆಯಕಟ್ಟಿನ ಸ್ಥಳಗಳೂ ಕೆಂಪು ಸೇನೆಯ ಹಸ್ತಗತವಾಗುತ್ತಿದೆ. ಚೀನಾ ಸರಕಾರದ ವಿಮಾನಬಲವೂ ಅಲ್ಲೀಗ ಚಲ್ಲಾಪಿಲ್ಲಿಯಾಗಿದೆ ಅಂತೂ ಶಾಂಘಾಯಿಯಲ್ಲೀಗ, ಚೀನೀ ರಾಷ್ಟ್ರೀಯ ಸರಕಾರದ ಜೀವತಂತುವು ಕೆಂಪು ಹಸ್ತದಿಂದ ಒತ್ತಲ್ಪಟ್ಟು ಕಡಿದು ಹೋಗುವ ಕಠಿಣ ದೃಶ್ಯ ಕಾಣಸುತ್ತಿದೆ.

ಯಿಸಿದೆ. ನಿರೀಕ್ಷಿಸಿದ್ದ ಅಪಾಯ ನಿಜಕ್ಕೂ ಬಂದು ಬಡಿಯುತ್ತಿದೆ. ಬರ್ಮಾದೊತ್ತಿನ ಚೈನಾದ ಯುನ್ನಾನ್ ಪ್ರಾಂತ್ಯದಲ್ಲಿ ಬಲವಾದ ಕಮ್ಯೂನಿಸ್ಟ್ ಪಡೆಗಳು ಇತ್ತ ಧಾವಿಸಿಬರುತ್ತಿವೆ. ಬರ್ಮದೊಳಗಿನ ಕಾಚಿನ್ ಸಂಸ್ಥಾನದೊಳಗೆ ಪ್ರವೇಶಿಸುವ ಶೈಲಿಹೊಳೆ ಬಯಲಿನ ಕಡೆಗೆ ಕಮ್ಯೂನಿಸ್ಟ್ ಸೇನೆ ನುಗ್ಗಿಬರುತ್ತಿದೆಯೆಂದೂ ಸರಹದ್ದಿನಲ್ಲಿ ಅದನ್ನಿದಿರಿಸಿನಿಲ್ಲಲು ಕಾಚಿನ್ ಸೇನೆಗಳು ತಯಾರಾಗಿವೆಯೆಂದೂ ತಿಳಿದು ಬರುತ್ತದೆ. ಇತ್ತ ಬರ್ಮದ ಒಳಗಡೆಯು ಲ್ಲಾದರೋ ಪರಿಸ್ಥಿತಿ ಸುಧಾರಿಸದೆ ಕೆಡುತ್ತಾ ಬಂದಿದೆ. ಮಧ್ಯ ಬರ್ಮದ ಡ್ಯಾಕೂ-

--ಸೇನೆ ಬರ್ಮದ ಕಡೆಗೆ ನುಗ್ಗುತ್ತಿದೆ!

ಅತ್ಯಂತ ಬಿರುಸಾಗಿ ನಡೆದಿದೆ. ಕಮ್ಯೂನಿಸ್ಟ್ ಸೇನಾ ಶರಧಿಯು ಚೈನದ ಈ ಹೃದಯ ಪ್ರದೇಶದ ಮೇಲೆ ಒಲವಾದ ಪ್ರಳಯ ತೆರೆಗಳನ್ನಪ್ಪಳಿಸುತ್ತಾ ಸುತ್ತಲೂ ಆವರಿಸಿಕೊಂಡಿದೆ; ಅಲ್ಲಿಯ ದೃಶ್ಯವು ಅಂದಿನ 'ಸ್ಟಾಲಿನ್‌ಗ್ರಾಡ್' ಸಮರದ ದ್ವಿಪ್ರತಿಯಾಗಿದೆ. ಕಮ್ಯೂನಿಸ್ಟರ ಪ್ರಚಂಡ ಕತ್ತರೀಧಾಳಿಯ ಮೊನೆಯು ಇತ್ತಡೆಯಿಂದ ಆಳಕ್ಕೂ ನಾಟುತ್ತಾ ಬರುತ್ತಿದ್ದು, ನಗರದೊಳಗಿನ ಎಲ್ಲಾ ವಹಿವಾಟುಗಳೂ ಪೂರ್ತಿ ನಿಂತುಹೋಗಿ, ಬೆಂಕಿಯ ತಾಂಡವವೊಂದೇ ನಡೆದಿದೆ. ಜಗತ್ತಿನ ನಾಲ್ಕನೇ ಮಹಾನಗರ—60 ಲಕ್ಷ ಜನರು ವಾಸಿಸುತ್ತಿರುವ ದೊಡ್ಡ ವ್ಯಾಪಾರೀಬಂದರ—ಶಾಂಘಾಯಿಯು ಮೇ 11ರಿಂದ ಕಿವಿ

ಕಾರುವ ಕಬ್ಬಿಣದ ಕೋಟೆಯಂತಹ ಮು

ಅಲ್ಲಿಯ ಕೆಲಸ ಮುಗಿದು ಬ್ರಿಟಿಷ್ ಆಡಳಿತೆಯಲ್ಲಿರುವ ಅಂತರ್ರಾಷ್ಟ್ರೀಯ ನಗರ ಹೊಂಗ್‌ಕೋಂಗಿನೆಡೆಗೆ ಕಮ್ಯೂನಿಸ್ಟ್ ದಳ ಧಾವಿಸುವಾಗ ಹೇಗಾದೀತೆಂಬುದೇ ಮುಂದಿನ ಆತುರದ ಪ್ರಶ್ನೆ. ಆದರ ರಕ್ಷಣೆಗಾಗಿ ಬ್ರಿಟನರು ಹೆಚ್ಚಿನ ಆಕಾಶಪಡೆ ಮತ್ತು ಸೇನೆಗಳನ್ನು ಸರಬರಾಯಿ ಮಾಡಿಕೊಂಡಿರುವಾಗ ಕಮ್ಯೂನಿಸ್ಟರು ಹಠತೊಟ್ಟು ನುಗ್ಗಿದರೆ ಅಲ್ಲೇನಾಗುವದೋ ನೋಡಲಿಕ್ಕಿದೆ.

ಬರ್ಮಾದ ಗಡಿಯಲ್ಲಿ

ಇತ್ತ ಚೈನದ ಕಮ್ಯೂನಿಸ್ಟ್ ಸೇನೆ ಬರ್ಮದ ಗಡಿಗೆ ನುಗ್ಗಿಬಂದ ವಾರ್ತೆಯು ಬರ್ಮದ ಮತ್ತು ಭಾರತದ ಕಿವಿಯಲ್ಲಿ ಸಿಡಿಲಾಗಿ ಗುಡುಗಿದೆ; ಕಣ್ಣಲ್ಲಿ ಮಿಂಚುಹೊಳೆ

ಟೂಂಗೂ ಕ್ಷೇತ್ರದಲ್ಲಿ 'ಕರೆನ್ ರಾಜ್ಯ' ಸ್ಥಾಪನೆಗೊಂಡಿತೆಂದು ಕರೆನ್ ಬಂಡಾಯಗಾರರುಘೋಷಿಸಿ, ಆ ವಲಯದಲ್ಲಿಅಧಿಕಾರ ಸ್ಥಾಪನೆಮಾಡಹತ್ತಿದ್ದಾರೆ. ಬರ್ಮದಲ್ಲಿರುವ ಸುಮಾರು 700,000ಭಾರತೀಯರ ಪ್ರಾಣ, ಸೊತ್ತುಗಳ ಜೋಪಾಸನೆ ನೋಡುವ ಜವಾಬ್ದಾರಿಯೀಗ ಭಾರತ ಸರಕಾರದ ಮೇಲಿದೆ; ರಂಗೂನಿನಲ್ಲಿರುವ ಹಿಂದೀ ರಾಯಭಾರ ಕಚೇರಿಯೇ ಈಗ ಪ್ರಪಂಚದಲ್ಲೇ ಅತಿ ಹೆಚ್ಚಿನ ಕೆಲಸವಿರುವ ಕಚೇರಿಯೆನ್ನಬಹುದು. ಇತ್ತೀಚೆಗೆ ತಾನೇ ಭಾರತ ಸರಕಾರವು ಢಿಲ್ಲಿಯಿಂದ ರಂಗೂನಿಗೆ ವಯರ್‌ಲೆಸ್ ಸಂಬಂಧ ಜೋಡಣೆ ಮಾಡಿರುವುದರಿಂದ ಅಲ್ಲಿರುವ ತನ್ನ ರಾಯಭಾರಿ ಕಚೇರಿಯೊಡನೆ ಅದು ಮುಖಾಮುಖಿ ಮಾತುಕತೆ ನಡಿಸಲನುಕೂಲವಾಗಿದೆ. ಬರ್ಮದ ಯುದ್ಧ ವ್ಯೂಹಗಳ ಒಳಗಡೆಯು ಪ್ರದೇಶಗಳಲ್ಲಿ ಸುಮಾರು 2 ಲಕ್ಷ ಹಿಂದೀಯರು ಸಿಕ್ಕಿಬಿದ್ದಿದ್ದಾರೆಂದೂ ಹಿಂದೀಯರ ಮಟ್ಟಿಗೆ ಯುದ್ಧೋನ್ಮತ್ತ ಇಕ್ಕಡೆಯವರೂ ಔದಾರ್ಯ ವಹಿಸಿದ್ದಾರಾದರೂ, ಬರ್ಮಾ ಸರಕಾರದ ವಿಧೇಯರಾಗಿದ್ದ ಹಿಂದೀ ನೌಕರರು ಕೈಗೆ ಸಿಕ್ಕಿದಾಗ ಬಂಡಾಯಗಾರರು ಅವರನ್ನು ಕಠೋರರೀ-

ತಿಯಿಂದ ಕಾಣುತ್ತಿದ್ದಾರೆಂದೂ ತಿಳಿದುಬಂದಿದೆ. ಆದ್ದರಿಂದಲೇ "ನೀವು ಹಿಡಿದ ಹಿಂದೀಯರಿಗೇನಾದರೂ ಹಾನಿಮಾಡಿದಲ್ಲಿ ಅದನ್ನು ಅಂತರ್ರಾಷ್ಟ್ರೀಯ ಕಾನೂನುಭಂಗವೆಂದು ಗಣಿಸಲಾಗುವದು" ಎಂದುಭಾರತ ಸರಕಾರವು ಕರೆನ್ ಬಂಡಾಯಗಾರರನ್ನು ಎಚ್ಚರಿಸಿದೆ. ಬರ್ಮದಲ್ಲಿರುವ ಕೆಲವು ಭಾರತೀಯರು ಭಾರತಕ್ಕೆ ಮರಳಹತ್ತಿದ್ದಾರೆ; ಇಷ್ಟರಲ್ಲೇ 12000ಕ್ಕೆ ಮಿಕ್ಕಿ ಇತ್ತಬಂದಿದ್ದಾರೆ. ನಿಸ್ಸಹಾಯಕರಿಗೆ ಧರ್ಮಾರ್ಥ ಪ್ರಯಾಣ ವ್ಯವಸ್ಥೆಗಳನ್ನು ಭಾರತ ಸರಕಾರ ಮಾಡಿದೆ. ಇನ್ನು ಬರ್ಮವನ್ನೇ ತಮ್ಮ ನೆಲೆಯಾಗಿಮಾಡಿಕೊಂಡು ಆಸ್ತಿ, ಉದ್ದಿಮೇ ವಹಿವಾಟುಗಳನ್ನು ನಡೆಸುತ್ತಿರುವ ಭಾರತೀಯರ ಸಂಖ್ಯೆಯೂ ಬಹಳವಿದೆ. ಬರ್ಮದ ರಾಜಧಾನಿ ರಂಗೂನಿನಲ್ಲಿ ಭಾರತೀಯರು ಸರ್ವ ವ್ಯಾಪಿಗಳು. ಅಲ್ಲಿಯೇ ಸುಮಾರು 250000 ಭಾರತೀಯರಿದ್ದಾರೆ. ರಂಗೂನಿನ 25000 ರಿಕ್ಷಾವಳಿಯುವವರಲ್ಲಿ ಪ್ರತಿಯೊಬ್ಬನೂ ಭಾರತೀಯನಂತೆ ಟೇಕ್ಸಿ ಡ್ರೈವರುಗಳು, ಗಾಡೀವಾಲರು, ಹಡಿಮಾಳರು, ಹಾಲಿನವರು, ಕಸಗುಡಿಸುವವರು, ಧಕ್ಕೆ ಕೆಲಸಗಾರರೇ ಮೊದಲಾದವರಲ್ಲಿ ಅಧಿಕಸಂಖ್ಯಾಕರು ಹಿಂದೀಯರೇ. ಅಲ್ಲಿಯ ಶ್ರೀಮಂತ ವರ್ಗದಲ್ಲೂ ಭಾರತೀಯರೇ ಮುಖ್ಯ. ಕಟ್ಟಡಗಳಲ್ಲಿ ನೇಕಡಾ 70ರಷ್ಟು–ಸಿನಮಾಮಂದಿರಗಳಲ್ಲಿ ನೇ. 50ರಷ್ಟು—ವ್ಯಾಪಾರಗೋಡ್ಡೌನು, ಭಂಡಸಾಲೆ ಇತ್ಯಾದಿಗಳಲ್ಲಿ ದೊಡ್ಡಭಾಗ ಹಿಂದೀಯರದ್ದೇ. ಇವೆಲ್ಲವೂ, ಇವರೆಲ್ಲರೂ ಈಗ ಅಸ್ಥಿರಭವಿಷ್ಯಕ್ಕೀಡಾಗಿ ತಳಮಳವೆದ್ದಿದೆ. ಅಲ್ಲಿ ಭಾರತದ ರಾಯಭಾರಿಯಾಗಿರುವ–ಬರ್ಮದಲ್ಲೇ ಹುಟ್ಟಿ ಬರ್ಮದಲ್ಲೇ ಬೆಳೆದವರಾದ— ಡಾ| ಎಮ್. ಎ. ರಾವುಫರು ಬರ್ಮದಲ್ಲಿರುವ ಭಾರತೀಯರ ಪ್ರಾಣ, ಸೊತ್ತು ಮತ್ತು ಹಿತಸಂಬಂಧಗಳ ರಕ್ಷಣೆಯ ಸರ್ವ ಪ್ರಯತ್ನಗಳನ್ನೂ ಮಾಡುತಿದ್ದಾರೆ. ಇನ್ನು ಆ ಕಡೆಯಿಂದ ಕಮ್ಯೂನಿಸ್ಟ್ ಒತ್ತಡ ಬೀಳುವಾಗ ಹಿಂದೀ ಸಂರಕ್ಷಣಾ ಕಾರ್ಯದ ರಭಸ ನಾಲ್ಮಡಿಯೇರಬೇಕಾದೀತು. ಭಾರತವು ಬರ್ಮದ ಕುರಿತು ವಹಿಸಿದ್ದ ಆಸಕ್ತಿಯಂತೂ ಹೊಸ ರೂಪವನ್ನೇ ಧರಿಸಬೇಕಾದೀತು!

ಪರಿಶುದ್ಧತೆಯ ಮತ್ತು ಇಷ್ಟಾರ್ಥಸಿದ್ಧಿಯ

ಪವಿತ್ರ ಚಿಹ್ನ

[illegible]

ಚೇರ್‌ಮನ್ – ಶ್ರೀ ಪ್ರಭಾಶಂಕರ ಆರ್ ಭಟ್ಟ್.

ಮ್ಯಾನೇಜಿಂಗ್ ಡಾಯರೆಕ್ಟರ – ಶ್ರೀ ಎಂ. ಸುಂದರ ರಾಮ ಶೆಟ್ಟಿ.

ದಿ ಕ್ರೆಸೆಂಟ್ ಇನ್ಶೂರೆನ್ಸ್

RAS-271

ಮಂಗಳೂರು

ಕೆ. ಪಿ. ಭವಾನಿಶಂಕರ ಶೆಟ್ಟಿ, ಮೆನೇಜರ್,

ಜಯಂತ್ ಬಿಲ್ಡಿಂಗ್, ಮೈದಾನ್ ರಸ್ತೆ.

ನಿಮ್ಮ ಸಣ್ಣ ಹುಡುಗ

ನೀವು ಆತನಲ್ಲಿ ಕೇಂದ್ರೀಕರಿಸಿದ ಆಲೋಚನೆಗಳೆಲ್ಲಾ ನೀವು ಮುಂಚಿತವಾಗಿ ಯೇ ನೋಡಲಿಕ್ಕೆ ನಿರಾಕರಿಸಿದರೆ ಸತ್ಯವಾಗಿ ಪರಿಣಮಿಸಲಾರದು. ನಿಮಗೆ ಯಾವುದೇ ಒದಗಲಿ. ಆತನ ಮುಂದಾಳುತ್ವವು ಭದ್ರಪಡಿಸಲ್ಪಡತಕ್ಕದ್ದು.

ಅನಿಶ್ಚಿತವಾದ ಜೀವನದ ಭದ್ರತೆಗೋಸ್ಕರ ನಾವು ನಿಮಗೆ ವಿಶಾಲವಾದ ಹಂಚಿಕೆಯನ್ನು ಕೊಡುವೆವು.

[illegible]

ಭಾರತ್

ಇನ್ಶೂರೆನ್ಸ್ ಕ. ಲಿ.

[illegible]

BHARAT

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscriped	Rs. 20,00,000.
Capital Paid Up.	Rs. 19,99,800.
Reserves	Rs. 8,90,000.

Banking business of every description transacted.

ಗುರುವಾರ, ಉಡುಪಿ, ೨೬-೫-೪೯

ಗ್ರಾಮ ಪಂಚಾಯತು

ಬಹುತೇಕವಾಗಿ ಹಳ್ಳಿಗಳ ಎಲ್ಲಾ ಅಧಿಕಾರಗಳನ್ನು ಹಳ್ಳಿಗರ ಕೈಗೇನೇ ಒಪ್ಪಿಸುವ 'ಗ್ರಾಮ ಪಂಚಾಯತು ಮಸೂದೆ'ಯೊಂದನ್ನು ಮದ್ರಾಸ್ ಸರಕಾರವು ತಯಾರಿಸುತ್ತಿದೆ. ಈ ಮಸೂದೆಯಲ್ಲಿ ಅಡಕವಾಗುವ ವಿಧಾನಗಳನ್ನು ಅಭಿಪ್ರಾಯಸಂಗ್ರಹಕ್ಕಾಗಿ ಸರಕಾರವು ಪ್ರಕಟಿಸಿದ್ದಿತು. ಇದೇ ತಾ 22ರಲ್ಲಿ ಸ್ಥಳೀಯಾಡಳಿತೆಗಳ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರು ಆಕಾಶವಾಣಿ ಮೂಲಕ ನಿಯೋಜಿತ ಪಂಚಾಯತು ಮಸೂದೆಯ ರೂಪರೇಖೆಗಳನ್ನು ವಿವರಿಸಿದ್ದಾರೆ. ಮಸೂದೆಯು ಮುಂದಿನ ಎಸೆಂಬ್ಲಿ ಅಧಿವೇಶನದಲ್ಲಿ ಮುಂಬರಲಿದೆ.

ಗ್ರಾಮ ಜೀವನದಲ್ಲಿ ಪ್ರಾಮುಖ್ಯ ಬದಲಾವಣೆಯನ್ನು ತರಬಲ್ಲ ಈ ಪಂಚಾಯತ್ ವ್ಯವಸ್ಥೆಯ ಆಕಾರ ಹೀಗಿದೆ:— 500 ಅಥವಾ ಅದಕ್ಕೆ ಮಿಕ್ಕಿದ ಜನಸಂಖ್ಯೆಯುಳ್ಳ ಪ್ರತಿಗ್ರಾಮಕ್ಕೂ ಕಡ್ಡಾಯವಾಗಿ ಒಂದು ಪಂಚಾಯತು ಸ್ಥಾಪಿಸಲ್ಪಡುವದು. ಈ ಮಸೂದೆಯು ಕಾನೂನಾಗಿ ಮಾರ್ಪಟ್ಟ ಎರಡು ವರ್ಷಗಳೊಳಗೆ ಎಲ್ಲಾ ಹಳ್ಳಿಗಳಲ್ಲೂ ಪಂಚಾಯತು ಸ್ಥಾಪನೆಯಾಗುವದೆಂದು ನಿರೀಕ್ಷಿಸಲಾಗಿದೆ. 5000 ಮತ್ತು ಹೆಚ್ಚಿಗೆ ಜನಸಂಖ್ಯೆಯುಳ್ಳ ಹಳ್ಳಿಗಳ ಪಂಚಾಯತುಗಳು "ಫಸ್ಟ್‌ಕ್ಲಾಸ್" ಪಂಚಾಯತುಗಳಾಗಿ ಗಣಿಸಲ್ಪಟ್ಟು ಅಂಥವುಗಳಿಗೆ ಸರಕಾರವು ಎಕ್ಸಿಕ್ಯೂಟಿವ್ ಆಫೀಸರರನ್ನು ನೇಮಿಸಬಹುದು. ಎಸೆಂಬ್ಲಿಯ ಮತದಾರರೇ ಈ ಪಂಚಾಯತಿನ ಮತದಾರರಿದ್ದು ಆಯಾಯಾ ವಲಯದ ಈ ಮತದಾರರಿಂದ ಗುಪ್ತ ಮತದಾನ ಮೂಲಕ ಚುನಾಯಿಸಲ್ಪಡುವ ಸದಸ್ಯರಿಂದ ಪಂಚಾಯತ ಬೋರ್ಡು ರೂಪುಗೊಳ್ಳುವದು. ಪಂಚಾಯತ ಬೋರ್ಡಿನ ಅಧ್ಯಕ್ಷನು ಮತದಾರರಿಂದಲೇ ಆರಿಸಲ್ಪಡಬೇಕು. ಈ ಪಂಚಾಯತುಗಳಲ್ಲಿ ಯಾವುದೇ ಜಾತಿ ಅಥವಾ ವರ್ಗಕ್ಕೆ ಸ್ಥಾನಗಳನ್ನು ಕಾದಿಡುವುದಿಲ್ಲ. ಅಲ್ಪಸಂಖ್ಯಾಕ ಸಮಾಜ ಮತ್ತು ಸ್ತ್ರೀಯರ ಪ್ರಾತಿನಿಧ್ಯವಿರುವಂತೆ ಅವರ ಪ್ರತಿನಿಧಿ ಸದಸ್ಯರನ್ನು ಸಂಖ್ಯೆ ಮೂರಕ್ಕೆ ಮಿಕ್ಕದಂತೆ ಪಂಚಾಯತ್ ಬೋರ್ಡೇ ಹೆಚ್ಚಿಗೆ ನೇಮಿಸಿಕೊಳ್ಳಬಹುದು. ಪಂಚಾಯತ್ ಬೋರ್ಡಿನಲ್ಲಾಗುವ ಎಲ್ಲಾ ನಿರ್ಣಯಗಳನ್ನೂ ಜಾರಿಗೆ ತರಲು ಅಧ್ಯಕ್ಷನು ಬದ್ಧನಿದ್ದಾನೆ. ಆತನು ಭಿನ್ನಾಭಿಪ್ರಾಯ ಪಡುವ ಸಂದರ್ಭಗಳಲ್ಲಿ ಸಂಬಂಧಪಟ್ಟ ವಿಷಯವನ್ನು ತನ್ನ ತೀರ್ಮಾನಕ್ಕಾಗಿ ಸರಕಾರಕ್ಕೆ ತಿಳಿಸತಕ್ಕದ್ದು; ಈ ಕುರಿತು ಸರಕಾರವು ಕೊಡುವ ತೀರ್ಮಾನವನ್ನು ಅಧ್ಯಕ್ಷನೂ ಪಂಚಾಯತ್ ಬೋರ್ಡೂ ಶಿರಸಾವಹಿಸಿ ಕೊಳ್ಳತಕ್ಕದ್ದು. ಈ ಗ್ರಾಮ ಪಂಚಾಯತುಗಳು ಸ್ಥಳೀಯ ಸಂಸ್ಥೆಗಳ ಮತ್ತು ಸ್ಥಳೀಯ ವಿಷಯಗಳೆಲ್ಲವುಗಳ ಆಡಳಿತೆಯನ್ನೂ ನಿರ್ವಹಿಸತಕ್ಕದ್ದು. ಗ್ರಾಮ ಕಾರ್ಯ ಮತ್ತು ಗ್ರಾಮಾಡಳಿತೆಯ ಹೊಣೆಗಾರಿಕೆಯೆಲ್ಲವೂ ಆ ಗ್ರಾಮದ ಪಂಚಾಯತು ಬೋರ್ಡಿನದ್ದೇ. ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯ ತೀರ್ಮಾನಾಧಿಕಾರವನ್ನೂ ಅದಕ್ಕೆ ಕೊಡಲಾಗುತ್ತದೆ. ದಸ್ತಾವೇಜುಗಳ ರಜಿಸ್ತ್ರಿ; ನೀರಾವರಿ ಕೆಲಸಗಳ ವ್ಯವಸ್ಥಾಧಿಕಾರ; ಮೀನುಗಾರಿಕೆ ಕೇಂದ್ರಗಳ ಮತ್ತು ದಾನ ಉಂಬಳಿಗಳ ಅಧಿಕಾರ; ಎಲಿಮೆಂಟರಿ ಶಾಲೆಗಳ ವ್ಯವಸ್ಥಾಪನೆ; ರಾಜಮಾರ್ಗದ ಕಾಡುಗಳು, ಹುಲ್ಲುಗಾವಲುಗಳು, ಮೈದಾನುಗಳು, ಗುಡ್ಡಗಾಡುಗಳು ಮತ್ತಿತರ ಪರಂಪೋಕುಗಳೇ ಮೊದಲಾದುವುಗಳ ಅಧಿಕಾರ—ಇವೆಲ್ಲವೂ ಈ ಪಂಚಾಯತು ಬೋರ್ಡಿನದೇ. ಮನೆ ತೆರಿಗೆ, ವಾಹನ ತೆರಿಗೆ, ಉದ್ಯೋಗ ತೆರಿಗೆಗಳು ಎಲ್ಲಾ ಪಂಚಾಯತುಗಳಲ್ಲೂ ಕಡ್ಡಾಯವಾಗಿ ಇರತಕ್ಕದ್ದು. ಆದರೆ ಕೆಲವೊಂದು ವರ್ಗದ ಮನೆಗಳಿಗೆ (ಹುಲ್ಲು ಛಾವಣಿಯ ಮನೆಯಂಥವುಗಳಿಗೆ) ಅಥವಾ ಬಡವರೆಂಬುದರಿಂದ ಯಾರಿಗಾದರೂ ತೆರಿಗೆ ವಿನಾಯತಿ ಮಾಡುವ ಅಧಿಕಾರವು ಪಂಚಾಯತ ಬೋರ್ಡಿಗಿದೆ. ಈ ತೆರಿಗೆಗಳ ಪರಿಮಾಣದ ತೀರಾ ಕಡಿಮೆ ಮತ್ತು ಹೆಚ್ಚಿಗೆಯ ಮಿತಿಯನ್ನು ಸರಕಾರವೇ ನಿರ್ಣಯಿಸುವುದು. ತನ್ನ ಹಳ್ಳಿಗೆ ಯೋಗ್ಯವೆಂದು ತೋರುವ ಇತರ ತೆರಿಗೆಗಳನ್ನು ವಿಧಿಸುವ ಅಧಿಕಾರವು ಪಂಚಾಯತಿಗಿದೆ. ಆಯಾ ಗ್ರಾಮದಲ್ಲಿ ಸಂಗ್ರಹಿಸಲ್ಪಟ್ಟ ಗ್ರಾಮದ ಭೂತೆರಿಗೆಯ ಎಲ್ಲಾ ಮೊತ್ತವು ಅಥವಾ ಅದರ ಭಾಗವು, ಸರಕಾರವು ಕಾಲಾನುಗುಣವಾಗಿ ನಿರ್ಧರಿಸುವ ಪ್ರಕಾರ ಆಯಾ ಗ್ರಾಮ ಪಂಚಾಯತಿಗೆ ಕೊಡಲ್ಪಡುವದು. ಇದರ ಜತೆಯಲ್ಲಿ, ಜನಸಂಖ್ಯೆಯು 5000ಕ್ಕೂ ಕಡಿಮೆಯಿದ್ದು ವಾರ್ಷಿಕ ಉತ್ಪನ್ನವು 10000 ರೂಪಾಯಿಗಳಿಗೂ ಕಡಿಮೆಯಿರುವ ಗ್ರಾಮ ಪಂಚಾಯತುಗಳಿಗೆ ಗ್ರಾಂಟು ರೂಪದಿಂದ ಅಂತ ಪ್ರಕಾರ ಹಂಚಿಹಾಕಲು ಪ್ರಾಂತಿಕ ಭೂಕಂದಾಯದ (ನೀರತೆರಿಗೆ ಕೂಡಿ) ಒಟ್ಟು ಮೊತ್ತದಲ್ಲಿ ಕಡಿಮೆಯೆಂದರೆ ಸೇ. 12½ಯಷ್ಟನ್ನು ಪ್ರತ್ಯೇಕಿಸಿಡಲು ಸರಕಾರವು ಯೋಚಿಸಿದೆ. ವರುಷಕ್ಕೊಂದು ಬಾರಿ ಪ್ರತಿಯೊಂದು ಗ್ರಾಮ ಪಂಚಾಯತಿನ ಲೆಕ್ಕಪತ್ರಗಳನ್ನು ಅವುಗಳ ಆಡಳಿತೆಯ ಮೇಲ್ವಿಚಾರಣೆಗೆ ಸಂಬಂಧಿಸಿರದ ಲೆಕ್ಕ ತಪಾಸಣೆಗರಿಂದ ಧರ್ಮಾರ್ಥವಾಗಿ ಹಾಗೂ ಕಡ್ಡಾಯವಾಗಿ ಪರಿಶೋಧನೆ ನಡಿಸಲಾಗುವದು. ಈ ಪಂಚಾಯತುಗಳ ಮೇಲೆ ಜಿಲ್ಲಾ ಬೋರ್ಡುಗಳಿಗೆ ಯಾವುದೇ ಮೇಲಧಿಕಾರ ಅಥವಾ ಹತೋಟಿಯಿಲ್ಲ. ಕೆಲವೊಂದು ವಿಶೇಷ ಸಂದರ್ಭಗಳೊದಗಿದ ಹೊರತು ಜಿಲ್ಲಾ ಕಲೆಕ್ಟರರಿಗೂ ಇವುಗಳ ಮೇಲಾವ ಅಧಿಕಾರವೂ ಇಲ್ಲ. ಮುನ್ಸಿಪಲ್ ಕೌನ್ಸಿಲ್ ಮತ್ತು ಲೋಕಲ್ ಬೋರ್ಡುಗಳ ಇನ್ಸ್ಪೆಕ್ಟರರ ಮೂಲಕ ಸರಕಾರವೇ ಈ ಗ್ರಾಮ ಪಂಚಾಯತುಗಳ ಕೆಲಸ ವಹಿವಾಟುಗಳ ಹತೋಟಿ ಮತ್ತು ಮೇಲ್ವಿಚಾರಣೆ ನಡೆಸುವದು.

ಮೇಲಿನ ಸೂತ್ರಗಳಿಗನುಸಾರವಾಗಿ ಸರ್ವಸಾಮಾನ್ಯವಾಗಿ ಒಂದು ಗ್ರಾಮದ ಮೇಲಿನ ಎಲ್ಲಾ ಅಧಿಕಾರಗಳು ಮತ್ತು ಗ್ರಾಮದೊಳಗಿನ ಸರ್ವ ವ್ಯವಸ್ಥೆಯ ಹೊಣೆಯು ಗ್ರಾಮ ಪಂಚಾಯತಬೋರ್ಡುಗಳದ್ದಾಗುವದೆಂಬುದು ಸ್ಪಷ್ಟ. ತುಲನಾತ್ಮಕವಾಗಿ ಹೇಳುವದಾದರೆ ಕೇಂದ್ರಾಧಿಕಾರದ ಒಳಾಂಗಗಳಾಗಿ, ಸ್ವಂತ ಹೊಣೆಗಾರಿಕೆಗಳುಳ್ಳ ಪ್ರಾಂತ್ಯಾಧಿಕಾರವಿರುವಂತೆಯೇ, ಪ್ರಾಂತಿಕ ಸರಕಾರದ ಉಪಾಂಗಗಳಾಗಿ ಸ್ವಂತ ಹೊಣೆಗಾರಿಕೆಯ ಗ್ರಾಮಾಧಿಕಾರ ಬರಲಿದೆ. ಸ್ವಾಡಳಿತೆಯ ಒಳಾಂಗಗಳಾಗಿ ಗ್ರಾಮ ಪಂಚಾಯತುಗಳು ಸ್ಥಾಪನೆಗೊಳ್ಳತಕ್ಕದ್ದೆಂದು, ನಾಳೆ ಜಾರಿಗೆ ಬರಲಿರುವ ನವರಾಜ್ಯ ಶಾಸನದಲ್ಲಿ ಉಲ್ಲೇಖಗೊಂಡಿದೆ. ಗಾಂಧಿಜೀಯ ಕನಸಾಗಿದ್ದುದಂತೂ ಗ್ರಾಮ ಪಂಚಾಯತುಗಳ ರಾಮ ರಾಜ್ಯವೇ. ಅಂದಿನಿಂದೀವರೆಗೂ 'ಗ್ರಾಮಸುಧಾರಣೆ' 'ಗ್ರಾಮೋದ್ಧಾರ'ದ ಪಲ್ಲವಿಗಳೇನೋ ಬಹುಮುಖದಿಂದ ಹಾಡಲ್ಪಡುತ್ತಿವೆಯಾದರೂ ಕಾರ್ಯತಃ ಹಳ್ಳಿಗಳ ಉದ್ಧಾರವೆಲ್ಲಿಯೂ ಆದುದಿಲ್ಲವೆಂಬುದು ಒಪ್ಪತಕ್ಕ ವಿಷಯ. ಕೇವಲ ಪ್ರಚಾರ ಮೂಲಕ ಅಸ್ಪೃಶ್ಯತಾ ನಿವಾರಣೆ, ಪಾನ ನಿಷೇಧದಂತಹ ಸುಧಾರಣೆಗಳನ್ನು ಸಾಧಿಸುವದೆಷ್ಟು ಕಷ್ಟವೋ, ಅನಧಿಕೃತವಾಗಿ ಗ್ರಾಮ ಸುಧಾರಣೆ ಮಾಡುವದೆಂದರೆ ಅದಕ್ಕಿಂತಲೂ ಕಷ್ಟದ ಕೆಲಸ; ಮೇಲಾಗಿ ಗ್ರಾಮಕಾರ್ಯವು ಹೊರಗಿನವರಿಂದಾಗುವಂತಹದಲ್ಲ. ಅಂದ ಮೇಲೆ ಪಂಚಾಯತುಗಳ ಮೂಲಕ ತಂತಮ್ಮ ಗ್ರಾಮದ ಅಧಿಕಾರ ವಹಿಸುವ ಮತ್ತು ಅಭಿವೃದ್ಧಿ ಸಾಧಿಸುವ ಹೊಣೆಯನ್ನು ಆಯಾಯಾ ಗ್ರಾಮಸ್ಥರ ಪಾಲಿಗೇನೇ ಬಿಟ್ಟು, ರಾಷ್ಟ್ರದ ಜೀವಾಳವಾಗಿರುವ ಹಳ್ಳಿಗಳು ಒಳಗಿಂದೊಳಗೆ ತಿರುಳುಗೂಡಿ ಬೆಳೆಯುವಂತೆ ಮಾಡುವ ಯೋಜನೆಯು ಅಗತ್ಯ ಮತ್ತು ಪ್ರಾಮುಖ್ಯವಾದುದೆಂಬುದು ನಿಸ್ಸಂದೇಹ. ಇನ್ನಿಲ್ಲಿ ವಿಚಾರಿಸತಕ್ಕ ಅಂಶ ಕೂಡಾ ಈ 'ಒಳ-ಹೊರಗಿನ' ವ್ಯತ್ಯಾಸ ಮಾತ್ರ! ಅಧಿಕಾರವೇನೋ ಗ್ರಾಮದ ಹೊರಗಿದ್ದುದು ಈ ಮೂಲಕ ಒಳಗೆ ಬರುತ್ತಿದೆ; ಆ ಅಧಿಕಾರವನ್ನು ಅಭಿವೃದ್ಧಿಯ ಉಪಕರಣವಾಗಿ ವಿನಿಯೋಗಿಸಬಲ್ಲವರು ಒಳಗಿದ್ದಾರೆಯೆ? ಅಧಿಕಾರ ದಾನದ ಯೋಜನೆ ತಯಾರಾಗುತ್ತಿರುವಂತೆಯೇ, ಅಧಿಕಾರ ನಿರ್ವಹಣಕ್ಕೆ ಅಗತ್ಯವುಳ್ಳ ಶುದ್ಧ ಹೃದಯದ ಸೇವಾಸಕ್ತಿ, ತಿಳುವಳಿಕೆ ಮತ್ತು ಕಾರ್ಯಶಕ್ತಿಯಿರುವ ಗ್ರಾಮಸ್ಥರು ಅಲ್ಲಲ್ಲಿ ತಯಾರಾಗಿರುವರೇನು? ಇದುವರೆಗಿನ ಗ್ರಾಮಪಂಚಾಯತಬೋರ್ಡು, ಪಂಚಾಯತ ಕೋರ್ಟುಗಳ ಅನುಭವ ಹೇಗೆ? ಸರ್ವಸಾಮಾನ್ಯವಾಗಿ ಪ್ರತಿಯೊಂದು ಗ್ರಾಮವೂ, ಮಧ್ಯಯುಗದ ದೊರೆಗಳ ಮನೋವೃತ್ತಿಯುಳ್ಳ ಕೆಲವೇ ಮಂದಿ ಪ್ರತಿಷ್ಠಾವಂತರ ಆಟದ ಅಂಗಣವಾಗಿದೆ ಎಂದರೆ ಹೆಚ್ಚಾಗದು. ಸರಕಾರದ ಈ ಗ್ರಾಮಾಧಿಕಾರ ದಾನದ ಸ್ವೀಕಾರಕ್ಕೆ ನಾಳೆ ಮುಂದಾಗುವ ಕೈಗಳೆಂದರೆ ಇವೇ. ಅವಿದ್ಯೆ, ಅಜ್ಞಾನ, ಅಂಧಶ್ರದ್ಧೆ, ದುರ್ನಯ, ಕರಿ ಮೇಲೆ ಭಯಭಕ್ತಿ ವ್ಯಾಪಿಸಿ ಹೋಗಿರುವ ಹಳ್ಳಿಯ ಅಂಧಕಾರದ ನಡುವೆ ಈ ಅಧಿಕಾರವನ್ನು ಚೆಲ್ಲಿ ಕೊಟ್ಟು, ಮೇಲಿಂದ ಮೇಲೆ ತಡವರಿಸಿ ನೋಡುವ ಮೇಲ್ವಿಚಾರಣೆಯನ್ನಷ್ಟೇ ಸರಕಾರವು ನಡೆಸುತ್ತ ಬಂದರೆ ಸಾಲದು. ಅಸಡ್ಡೆ, ಅಪ್ರಬುದ್ಧತೆ, ಅಧಿಕಪ್ರಸಂಗ, ಅಧಿಕಾರದ ದುರ್ವಿನಿಯೋಗವಾವುದೂ ನಡೆಯದಂತೆ ನೋಡುವ-ನಡೆಸುವವರನ್ನು ಅಲ್ಲಿಂದಲ್ಲಿಯೇ ಶಿಕ್ಷಿಸಿ, ಅವಮಾನಿಸುವ-ಕ್ರಮ ನಿಯಮಗಳನ್ನು ಸರಕಾರವು ಕಠಿಣ ರೀತಿಯಿಂದ ಜಾರಿಗೆ ತರಬೇಕಾದುದು ಅಗತ್ಯವೆನ್ನುತ್ತೇವೆ. ಈ ರೀತಿ ಒಳಗಡೆಯಿಂದ ಅಧಿಕಾರದ ಹೊಣೆ ಹೆಗಲ ಮೇಲೆ—ಯಾವ ದುರ್ಬುದ್ಧಿಯೂ ಹುಟ್ಟದಂತೆ ನಡೆಯುತ್ತಿರುವ ಮೇಲ್ವಿಚಾರಣಾ ಹಸ್ತ ಹೊರಗಿನಿಂದ ತಲೆಯಮೇಲೆ ಬಿದ್ದರೇನೇ ಈ ಗ್ರಾಮರಾಜ್ಯ ಸುಯೋಜನೆಯು ಸಫಲಗೊಂಡು ಹಳ್ಳಿಯ ಅಂಧಕಾರವನ್ನು ನಿವಾರಿಸಬಲ್ಲುದು; ಬೆಳಗಬಲ್ಲುದು. ಹೀಗಾದರೆ ಮಾತ್ರ ಸಾರ್ಥಕ. ಪ್ರಚಲಿತ ಸ್ಥಿತಿಯೇ ತಮ್ಮ ಪ್ರಭುತ್ವಕ್ಕನುಕೂಲವೆಂದು ನಂಬಿರುವವರ ಕೈಗೆ ಈ ಅಧಿಕಾರ ದಂಡವನ್ನು ಕೊಟ್ಟುಬಿಟ್ಟರೆ ಎಲ್ಲವೂ ಪೂರ್ಣ ಕೆಟ್ಟುಹೋದಿತು; ಇಂಥವರ ಸಮೇತ ಇಡೀ ಊರನ್ನು ಶುದ್ಧೀಕರಿಸುವ ಯಂತ್ರವಾಗಿ ಅದು ಚಾಲೂಗೊಳ್ಳುತ್ತಿದ್ದರೆ ಮಾತ್ರ ಪ್ರಗತಿಸಾಧನೆಯಾದೀತು. ಈ ರೀತಿ ಅಭಿವೃದ್ಧಿಯಂತೆಯೇ ಅವನತಿಗೂ ಇಲ್ಲಿ ಎಡೆಯಿರುವುದರಿಂದ ಜಾಗ್ರತೆಯಿರಲಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ರತನ್ ಪಿಕ್ಚರ್ಸ್‌ನವರ

ಕಾಜಲ್

ಸುರಯ್ಯಾ, ಶಾಸ್ತ್ರಿ, ಜಯಂತ್ ಮೊದಲಾದವರು.

ಬರುವ ಚಿತ್ರ-
ಬಾಂಬೇ ಟಾಕಿಸಿನ ತಯಾರಿ-
ಆಸ್ಥಾನ ವಿದ್ವಾನ್ ರಾಜ ಅಯ್ಯಂಗಾರರ ಮುಖ್ಯ ಭೂಮಿಕೆ-
ಭಕ್ತಿಪರ ಚಿತ್ರ—ತಮಿಳಿನಲ್ಲಿ
ಸಂತ ತುಳಸೀದಾಸ್

ಅ. ಭಾ. ಕಾಂಗ್ರೆಸ್ ಸಮಿತಿ ಅಧಿವೇಶನ

ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸಭೆಯು ಡೆಹರಾಡನ್ನಿನಲ್ಲಿ ಇದೇ ತಾ 21 ರಲ್ಲಿ ಅಧ್ಯಕ್ಷ ಡಾ| ಪಟ್ಟಾಭಿಗಳ ಅಧ್ಯಕ್ಷತೆಯಲ್ಲಿ ಆರಂಭಿಸಿತು. 298 ಸದಸ್ಯರ ಪೈಕಿ 233ಮಂದಿ ಹಾಜರಿದ್ದರು. ಪ್ರಾರ್ಥನೆ, ಸರೋಜಿನೀ ದೇವಿಯವರ ನಿಧನಕ್ಕಾಗಿ ದುಃಖಸೂಚನೆಗಳಾದುವು. ಡಾ| ಪಟ್ಟಾಭಿಗಳು ತನ್ನ ಪ್ರಾರಂಭ ಭಾಷಣದಲ್ಲಿ, ರಾಷ್ಟ್ರದ ಮತ್ತು ಪ್ರಪಂಚದ ಆಗುಹೋಗುಗಳನ್ನು ಪ್ರಸ್ತಾಪಿಸುತ್ತ ಕಾಂಗ್ರೆಸ್ ಸಂಸ್ಥೆಯ ಶುದ್ಧೀಕರಣದ ಆವಶ್ಯಕತೆಯನ್ನು ಒತ್ತಿಹೇಳಿದರು. 500ಕ್ಕೂ ಮಿಕ್ಕಿದ ಸಂಸ್ಥಾನಗಳು ಭಾರತ ಕೇಂದ್ರದೊಡನೆ ಜೋಡಣೆಗೊಂಡುದು ಅಮೋಘ ಮಹತ್ಕಾರ್ಯವೆಂದು ಅವರು ವರ್ಣಿಸಿದಾಗ ಸಭೆಯು ಪ್ರಚಂಡ ಕರಚಪ್ಪಾಳೆಯಾಯಿತು. ಪಂಡಿತನೆಹರೂಗಳು ಅಂತರ್ರಾಷ್ಟ್ರೀಯ ರಂಗದಲ್ಲಿ ಜಗತ್ತಿನ ಮಹಾನಾಯಕರಲ್ಲೊಬ್ಬನಾಗಿ ಆವಿರ್ಭವಿಸಿದುದನ್ನೂ, ಆದೇಕಾಲದಲ್ಲಿ ಭಾರತದ ಸ್ಥಾನಮಾನವನ್ನು ಅಭೂತಪೂರ್ವ ರೀತಿಯಿಂದ ಮೇಲಕ್ಕೆತ್ತಿದುದನ್ನೂ ಅಧ್ಯಕ್ಷರು ಕೊಂಡಾಡಿದಾಗ ಸಭೆ ಮತ್ತೊಮ್ಮೆ ಬಲವಾಗಿ ಚಪ್ಪಾಳೆಹೊಡೆಯಿತು. "ಹೈದರಾಬಾದಿನ ತಾತ್ಕಾಲಿಕ ಸರಕಾರವು ಗಣನೀಯ ಪ್ರಗತಿಸಾಧಿಸಿದೆ. ಅಲ್ಲಿ ಅಂದಿನಿಂದೀವರೆಗೂ ಸುಮಾರು 1200 ಜಾಗೀರುದಾರರೇ (650 ಹಿಂದೂಗಳು 550 ಮುಸ್ಲಿಮರು) ರಾಜರಿಗಿಂತ ಹೆಚ್ಚಾಗಿ ಜನತೆಯನ್ನು ಸುಲಿಯುತ್ತಿದ್ದವರು. ಇವರ ದೆಸೆಯಿಂದಿದ್ದ ದುಸ್ಥಿತಿಯೇ ಅಲ್ಲಿಯ ಕಮ್ಯೂನಿಸ್ಟ್ ಚಟುವಟಿಕೆಗಳಿಗೆ ಆಧಾರ. ಅವುಗಳನ್ನು ನಿರ್ಮೂಲಗೊಳಿಸುವ ಕೆಲಸವಾಗಬೇಕು. ತಾತ್ಕಾಲಿಕ ಸರಕಾರವನ್ನು ಕಾಲೋಚಿತ ಪ್ರಜಾಸತ್ತಾ ಸರಕಾರವಾಗಿ ಮಾರ್ಪಡಿಸುವ ಕೆಲಸ ಮತ್ತೊಂದು ಉಳಿದಿದೆ. ಕಾಶ್ಮೀರದಲ್ಲಿ ಭಾರತವು ಸತ್ಯ ಮತ್ತು ನ್ಯಾಯವನ್ನೇ ಗಟ್ಟಿಹಿಡಿದಿರುವಾಗ ಪಾಕಿಸ್ತಾನವು ದುರ್ವಿಧಾನಗಳನ್ನವಲಂಬಿಸಿದೆ. ಕಾಶ್ಮೀರವು ಭಾರತದೊಂದಿಗೆ ಜೋಡಣೆಗೊಳ್ಳುವುದೊಂದೇ ಉಳಿದಿರುವ ಸಮಸ್ಯೆ. ಕಾಶ್ಮೀರದ ವಿಭಜನೆಯೆಂಬುದಿಲ್ಲವೇ ಇಲ್ಲ; ಆಕ್ರಮಣಗಾರರನ್ನು ಸಮಜಾಯಿಸುವ ಯೋಚನೆಯನ್ನೆಂದೂ ವಹಿಸುವಂತಿಲ್ಲ. ಭಾರತದ 174ನಿರಾಶ್ರಿತ ಶಿಬಿರಗಳಲ್ಲೀಗ ಸುಮಾರು [illegible] ಲಕ್ಷ ನಿರಾಶ್ರಿತರಿದ್ದು ಇವರಲ್ಲಿ ತಲಾ ಒಬ್ಬನಿಗೆ ದಿನ ಒಂದೊಂದು ರೂಪಾಯಿಯಂತೆ ವೆಚ್ಚವಾಗುತ್ತಿದೆ. ಈ ಸಂಕಷ್ಟನಿವಾರಣೆಗೆ ಪ್ರತಿಯೊಬ್ಬನೂ ತನ್ನ ಪಾಲನ್ನು ಸಲ್ಲಿಸಬೇಕು. ಎಲ್ಲರೂ ಗಾಂಧಿಜೀಯ ವಿಧಾಯಕ ಕಾರ್ಯಗಳನ್ನು ಮುಂದೊತ್ತಬೇಕು" ಎಂದು ಡಾ| ಪಟ್ಟಾಭಿಗಳಂದರು.

ಕಾಮನ್‌ವೆಲ್ತ್ ಸಂಬಂಧ

"ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಸದಸ್ಯನಾಗಿ ಉಳಿಯಬೇಕೆಂಬ ಲಂಡನ್ ಜಾಹೀರುನಾಮೆಯು ಜೈಪುರ ಕಾಂಗ್ರೆಸಿನಲ್ಲಾಗಿದ್ದ ವಿದೇಶ ಸಂಬಂಧ ಧೋರಣೆಯ ಠರಾವಿನ ನಿರ್ದೇಶಕ್ಕನುಗುಣವಾಗಿದ್ದು ಅಂಗೀಕಾರಾರ್ಹ"ವೆಂಬಸಾರಾಂಶವುಳ್ಳ ನಿರ್ಣಯವನ್ನು ಬಾಬು ರಾಜೇಂದ್ರ ಪ್ರಸಾದರು ಸಭೆಯ ಮುಂದಿಟ್ಟು ಅಮೋಘ ಭಾಷಣ ಮಾಡಿದರು. ಎಲ್ಲಾ ಆಕ್ಷೇಪಗಳನ್ನೂ ಸಮರ್ಪಕವಾಗಿ ಉತ್ತರಿಸಿ "ಭಾರತದ ಸ್ವತಂತ್ರ ಸಾರ್ವಭೌಮಾಧಿಕಾರಕ್ಕೆ ಇದರಿಂದ ಎಲ್ಲಿಯೂ ಎಳ್ಳಷ್ಟೂ ಬಾಧೆತಟ್ಟಿಲ್ಲ. ಬ್ರಿಟಿಷ್ ಸಿಂಹಾಸನದ ನಾಮಮಾತ್ರ ಮೇಲಧಿಕಾರವೂ ಪೂರ್ಣ ಕಳೆದುಹೋಗಿದೆ. ಹೆಚ್ಚಿನದಾಗಿ ಕಾಮನ್‌ವೆಲ್ತ್ ಸಂಬಂಧ ದೊರೆತಿದೆ. ಅದೂ ಬೇಡವೆಂದು ಭಾರತಕ್ಕೆ ತೋರಿದರೆ ಹಾಗೆ ಮಾಡದಂತೆ ಅದನ್ನು ಮತ್ತೊಂದೇ ಒಂದು ಕ್ಷಣ ತಡೆಯಬಲ್ಲುದೆಂಬುದೂ ಇಲ್ಲ. ಬ್ರಿಟನಿನೊಡನಾಗಿದ್ದ ಗತಕಾಲದ ಹೋರಾಟಗಳ ಕಹಿಸ್ಮರಣೆಯೇನೂ ಇಲ್ಲದೆ ಇಂತಹ ಸನ್ಮೈತ್ರಿ ಸ್ಥಾಪನೆಗೊಂಡುದು ಮಹಾತ್ಮಾ ಗಾಂಧಿಯವರ ವಿಜಯವೇ ಸರಿ. ಹಿಂದಿನ ವೈರಿಗಳೊಡನೆ ಲವಮಾತ್ರ ದ್ವೇಷಾಸೂಯೆಯನ್ನೂ ಪ್ರದರ್ಶಿಸದೆ ಒಪ್ಪಂದಕ್ಕೆಬರುವ ವಿಧಾನವು ಗಾಂಧಿಜೀ ಕಲಿಸಿದ್ದಾತ. ಲಂಡನ್ ಒಪ್ಪಂದವು ಅಹಿಂಸೆಯ ಮತ್ತೊಂದು ಅದ್ಭುತ ಸಾಧನೆ" ಎಂದು ಡಾ| ರಾಜೇಂದ್ರರು ಸಭೆಗೆ ಮನದಟ್ಟು ಪಡಿಸಿದರು. ಸಂಯುಕ್ತ ಪ್ರಾಂತ್ಯದ ಪ್ರಧಾನ ಮಂತ್ರಿ ಪಂಡಿತ ಗೋವಿಂದವಲ್ಲಭ ಪಂತರು ಈ ಠರಾವನ್ನು ಅನುಮೋದಿಸಿದರು.

ಈ ಸೂಚನೆಗೆ ಹಲವು ತಿದ್ದುಪಡಿ ಸೂಚನೆಗಳು ಮುಂದಾಗಿ ಸೂಚಿಸಲ್ಪಟ್ಟಿದ್ದವು. ಅವುಗಳಲ್ಲಿ ಹೆಚ್ಚಿನವುಗಳನ್ನು ಅಧ್ಯಕ್ಷ ಪಟ್ಟಾಭಿಗಳು ನಿಯಮಬಾಹಿರಗೊಳಿಸಿ ತಳ್ಳಿ ಹಾಕಿದರು. ಸೂಚನೆಯನ್ನು ವಿರೋಧಿಸಿ ಮತ್ತು ಸಮರ್ಥಿಸಿ ಹಲವರು ಮಾತಾಡಿದಮೇಲೆ ಪಂಡಿತ ನೆಹರೂಗಳು ಆಕ್ಷೇಪಗಳನ್ನೆಲ್ಲಾ ಇದಿರಿಸಿ, 50 ಮಿನಿಟು ಭಾಷಣವಿತ್ತರು. "ಮುಂದಿನ ನಾಲ್ಕೈದು ವರುಷಗಳು ಲೋಕಶಾಂತಿಯ ದೃಷ್ಟಿಯಿಂದ ಅತಿ ಪ್ರಾಮುಖ್ಯವಿವೆ. ನಾವೀ ಅವಧಿಯಲ್ಲಿ ಆರ್ಥಿಕ ದೃಢತೆ ಸಂಪಾದಿಸಿಕೊಳ್ಳದೆ ಹೋದರೆ ಜಾಗತಿಕ ರಾಜಕೀಯದಲ್ಲಿ ನಮ್ಮ ವರ್ಚಸ್ಸನ್ನು ಬೀರಲು ಅಸಮರ್ಥರಾಗುವೆವು. ಆ ಸಾಮರ್ಥ್ಯವನ್ನು ನಮ್ಮ ಸ್ವಾಭಿಮಾನಕ್ಕಾವ ಧಕ್ಕೆಯೂ ಬೀಳದಂತೆ ಗಳಿಸಿಕೊಳ್ಳಲು ಲಂಡನ್ ಒಪ್ಪಂದವು ಸಹಾಯಕವಾಗುವದು. ನಾವು ಗಳಿಸಿಕೊಂಡ ಸ್ವಾತಂತ್ರ್ಯವನ್ನು ಸುದೃಢಗೊಳಿಸಲು ಇದು ನೆರವಾಗುವದು" ಎಂದು ಪಂಡಿತಜೀ ವಿಶದೀಕರಿಸಿದರು. ಕೊನೆಗೆ ಉಪ ಸೂಚನೆಗಳೆಲ್ಲವೂ ಹಿಂದೆಗೆಯಲ್ಪಟ್ಟು ಬಾಬು ರಾಜೇಂದ್ರ ಪ್ರಸಾದರ ಸೂಚನೆ ಮತಕ್ಕೆ ಬಿದ್ದಾಗ ಅದಕ್ಕೆ ವಿರುದ್ಧವಾಗಿ 233 ಸದಸ್ಯರ ಆ ಸಭೆಯಲ್ಲಿ ಕೇವಲ 6 ಕೈಗಳು ಮೇಲಕ್ಕೆದ್ದುವು. ಲಂಡನ್ ನಿರ್ಧಾರವನ್ನು ಅಂಗೀಕರಿಸಿಕೊಳ್ಳುವ ನಿರ್ಣಯವು ಪ್ರಬಲ ಬಹುಮತದಿಂದ ಮಂಜೂರಾಯಿತು.

ಸಂಸ್ಥೆ-ಆಡಳಿತ ಸಂಬಂಧ

ಕಾಂಗ್ರೆಸ್ ಸರಕಾರ ಮತ್ತು ಕಾಂಗ್ರೆಸ್ ಸಂಸ್ಥೆಗಳೊಳಗೆ ಸುಸಂಬಂಧ ನಿರ್ಮಿಸುವದಕ್ಕಾಗಿ ಹೃದಯಬಿಚ್ಚಿ ಮಾತಾಡಲನುಕೂಲವಾಗುವಂತೆ ತಾ.22ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಗುಪ್ತ ಸಭೆ ಸೇರಿ 6 ತಾಸುಗಳ ವರೆಗೆ ಗಾಢ ಚರ್ಚೆ ನಡೆಯಿತು. ಚರ್ಚೆಯನ್ನಾರಂಭಿಸಿದ ಬಾಬು ರಾಜೇಂದ್ರ ಪ್ರಸಾದರು ಕಾಂಗ್ರೆಸಿನ ಅಧಿಕಾರಿ ಮತ್ತು ಅನಧಿಕಾರೀ ಪಕ್ಷಗಳೆರಡರಲ್ಲೂ ಇರುವ ದೋಷಗಳನ್ನು ವಿಮರ್ಶಿಸಿದರು. ಪಂಡಿತ ನೆಹರೂಗಳು ಮಂತ್ರಿ ಪಕ್ಷದ ವರ್ತನೆಗಳನ್ನು ಸಮರ್ಥಿಸಿ, ಅವರ ಮೇಲೆ ಅತಿಶಯೋಕ್ತಿಯ ದೋಷಾರೋಪಣೆಗಳಾಗುತ್ತಿರುವುದನ್ನು ಖಂಡಿಸಿ, ಅನಧಿಕಾರಿ ಕಾಂಗ್ರೆಸಿಗರು ವಿಧಾಯಕ ಕಾರ್ಯಗಳ ಮೂಲಕ ಅಧಿಕಾರಿ ಕಾಂಗ್ರೆಸಿಗರಿಗೆ ಬೆಂಬಲವಾಗಬೇಕೆಂದರು. ಆಚಾರ್ಯ ಕೃಪಲಾನಿಗಳು, ಕಾಂಗ್ರೆಸಿಗರ ಅಭಿಪ್ರಾಯಗಳಿಗೆ ಕಾಂಗ್ರೆಸ್ ಮಂತ್ರಿಗಳು ಸಾಕಷ್ಟು ಲಕ್ಷ್ಯಕೊಡುತ್ತಿಲ್ಲವೆಂದೂ, ಸರಕಾರವು ತನ್ನ ಸಂಕಟ ಕಾಲದಲ್ಲಿ ಮಾತ್ರ ಗಾಂಧೀ ತತ್ವ ಸ್ಮರಣೆಮಾಡುತ್ತಿದೆಯಲ್ಲದೆ ಕಾರ್ಯತಃ ಅದನ್ನನುಸರಿಸುತ್ತಿಲ್ಲವೆಂದೂ, ಗಾಂಧೀ ಪಾಠದಂತೆ ತಮ್ಮ ತಪ್ಪುಗಳನ್ನೊಪ್ಪಿಕೊಳ್ಳಲು ಅವರು ತಯಾರಿಲ್ಲವೆಂದೂ ಟೀಕಿಸಿದರು.

ಉಡುಪಿ

ಮಕ್ಕಳ ಮತ್ತು ಬಾಣಂತಿಯರ ಶ್ರೇಯೋಭಿವೃದ್ಧಿಗಾಗಿ ಹಣ ಸಂಗ್ರಹಿಸುವರೆ ಕುಂದಾಪುರ ವಿಭಾಗಕ್ಕೊಂದು ಕಮಿಟಿಯು ತಾ 19ರಲ್ಲು ತಾಲೂಕು ಕಚೇರಿಯಲ್ಲಿ ಕೂಡಿದ ಸಭೆಯಲ್ಲಿ ಸ್ಥಾಪಿಸಲ್ಪಟ್ಟಿತು. ಸಭೆಯ ಅಧ್ಯಕ್ಷತೆಯನ್ನು ಕುಂದಾಪುರದ ಸಬ್‌ಕಲೆಕ್ಟರ್ ರಾವ್ ಸಾಹೇಬ್ ಚಾರ್ಲ್ಸ್ ಜೋನ್ ಅವರು ವಹಿಸಿದ್ದರು. ಕಮಿಟಿಗೆ ಶ್ರೀಮತಿ ಅಂಬಿಕಾಬಾಯಿಯವರು ಅಧ್ಯಕ್ಷರಾಗಿ, ಶ್ರೀ ಪಿ. ಗೋಪಾಲನಾಯಕ ಮತ್ತು ಶ್ರೀಮತಿ ಪ್ರಫುಲ್ಲ ಶೆಟ್ಟಿಯವರು ಉಪಾಧ್ಯಕ್ಷರಾಗಿ, ಶ್ರೀಮತಿ ಚಾರ್ಲ್ಸ್ ಜೋನ್ ಮತ್ತು ಡಾ| ಫಾ| ವಿ. ಬಿ. ಕಲ್ಯಾಣಸುಂದರಂ ಜತೆ ಕಾರ್ಯದರ್ಶಿಯರಾಗಿ, ಶ್ರೀ ಕೆ. ನರಹರಿ ಕಾಮತರು ಖಜಾಂಚಿಯರಾಗಿ ಆರಿಸಲ್ಪಟ್ಟರು.

ನೃತ್ಯ ಪ್ರದರ್ಶನ:- ಶ್ರೀ ಉದಯಶಂಕರರ ಶಿಷ್ಯ ಶ್ರೀ ಪಿ. ಆರ್. ಬಿ. ರಾಯರು ಇದೇ ತಾ 21ರಲ್ಲು ಪೂರ್ವಾಹ್ನ ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಉಚಿತ ನೃತ್ಯ ಪ್ರದರ್ಶನವನ್ನಿತ್ತರು. ನೃತ್ಯವು ಪ್ರೇಕ್ಷಣೀಯವಿದ್ದು ಜನಮೆಚ್ಚುಗೆ ಪಡೆಯಿತು. ಅಂದು ಸಂಜೆ ಶ್ರೀ ರಾಯರನ್ನು ಗೌರವಿಸುವುದಕ್ಕಾಗಿ ಸ್ಥಳೀಯ 'ವುಡ್‌ಲಂಡ್ಸ್'ನವರು ಫಲಾಹಾರಕೂಟವನ್ನೇರ್ಪಡಿಸಿದ್ದರು. ಶ್ರೀ ಎ. ಜಿ. ಅಳ್ವೆಯವರ ಪ್ರಸ್ತಾವನೆಯಾದ ಮೇಲೆ ಶ್ರೀ ರಾಯರು ಬೇಂದ್ರೆಯವರ ಕೆಲ ಕವಿತೆಗಳನ್ನು ಹಾಡಿದರು. ಮುನಿಸಿಪಲ್ ಕಮಿಶನರ್ ಶ್ರೀ ಬಾಲಗಂಗಾಧರನವರೂ ಕೆಲ ಬಂಗಾಳಿ ಪದ್ಯಗಳನ್ನು ಹಾಡಿದರು. ಡಾ| ಎಸ್. ಆರ್. ಸ್ವಾಮಿಗಳು ಶ್ರೀ ರಾಯರಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿ ಮಾತನಾಡಿದರು. ಶ್ರೀ ಆರ್.ಆರ್. ಕುಂಜೂರರು ಧನ್ಯವಾದಗಳನ್ನರ್ಪಿಸಿದರು.

ವಿದಾಯ ಸತ್ಕಾರ:- ಕಾಸರಗೋಡಿಗೆ ವರ್ಗವಾಗಿ ಹೋಗಲಿರುವ ಉಡುಪಿ ಸಬ್ ಪೋಸ್ಟ್ ಮಾಸ್ಟರ್ ಶ್ರೀ ಬಿ.ಕೆ. ಬಳಿಗರಿಗೆ ಇಲ್ಲಿಯ ಟಪ್ಪಾಲು ಇಲಾಖೆಯವರು ತಾ 21ರಲ್ಲಿ ಉಪಹಾರವನ್ನಿತ್ತು ಗೌರವಿಸಿದರು. ದ.ಕ. ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ. ಟಿ. ವೆಂಕಟೇಶನ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹೊಸ ಸಬ್ ಪೋಸ್ಟ್‌ಮಾಸ್ಟರ್ ಶ್ರೀ ಜಿ. ಶೇಷಗಿರಿರಾಯರೂ ಸಮಾರಂಭದಲ್ಲಿ ಭಾಗವಹಿಸಿದ್ದರು. ಶ್ರೀಗಳಾದ ಪಿ ಎಸ್. ರಾವ್, ಪಿ ಆರ್ ನಾಯಕ್ ಮೊದಲಾದವರ ಭಾಷಣಗಳಾದ ನಂತರ ಶ್ರೀ ಎಮ್. ಶಿವರಾಯರು ಧನ್ಯವಾದಗಳನ್ನರ್ಪಿಸಿದರು.

OPPORTUNITY TO DEALERS
For your requirements in
Exercise Books
Visit
Vithalji & Co., Ltd.,
MANGALORE.
ವ್ಯಾಪಾರಿಗಳಿಗೆ ಸುಸಂಧಿ!
ಎಕ್ಸರ್‌ಸೈಜ್ ಪುಸ್ತಕಗಳು
ಬೇಕಾದಲ್ಲಿ ವಿಚಾರಿಸಿರಿ.
ವಿಠಲ್ಜಿ ಮತ್ತು ಕಂಪೆನಿ ಲಿ.,
ಮಂಗಳೂರು

ಮಂಗಳೂರು

ಮುನಿಸಿಪಲ್ ಚುನಾವಣೆ:—ಮಂಗಳೂರು ಮುನಿಸಿಪಾಲಿಟಿಯ ಬೋಳಾರ್ ವಾರ್ಡಿನ ಕೌನ್ಸಿಲರಾಗಿದ್ದ ಶ್ರೀ| ಕೊರಗಪ್ಪ ರೈ(ಕಮ್ಯೂನಿಸ್ಟ್)ಗಳಿಂದ ತೆರವಾದಸ್ಥಾನಕ್ಕೆ ಉಪಚುನಾವಣೆಯು ತಾ 18ರಲ್ಲು ಜರಗಿತು. ಮರುದಿನ ವೋಟುಗಳ ಎಣಿಕೆಯು ನಡೆದು ಸ್ಪರ್ಧಿಗಳಾಗಿದ್ದ ಶ್ರೀ ಅಲೆಮಾನ್ ಶ್ರೀನಿವಾಸರಾಯರಿಗೆ 327 ಮತಗಳೂ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿ ಶ್ರೀ| ಕೆ. ಕೆ. ಸಟ್ಟರಿಗೆ 296 ಮತಗಳೂ ದೊರೆತು ಮೊದಲಿನವರು ಜಯಶೀಲರಾಗಿರುವರು.

ಕಲಾಭವನದ ಪ್ರಾರಂಭೋತ್ಸವ ಆರು ಲಕ್ಷ ರೂಪಾಯಿಗಳ ಖರ್ಚಿನಿಂದ ಕಟ್ಟಿಸಿದ ಎಲೋಸಿಯಸ್ ಕಾಲೇಜಿನ ಹೊಸ ಕಲಾಭವನದ ಪ್ರಾರಂಭೋತ್ಸವವು ತಾ 19ರಲ್ಲು ಸಂಜೆ ಮಂಗಳೂರಿನ ಲಾರ್ಡ್ ಬಿಷಪ್ ರೆ| ಫಾ| ವಿ. ಆರ್. ಫೆರ್ನಾಂದಿಸರ ಹಸ್ತದಿಂದ ಜರಗಿತು. ಈ ಸಂದರ್ಭದಲ್ಲಿ ಇಲ್ಲಿಯ ರೆಕ್ಟರರಾಗಿ ಈಗ ಈ ಕಾಲೇಜನ್ನು ಬಿಟ್ಟು ಹೋಗಲಿರುವ ರೆ|ಫಾ| ಜೆ.ಎ.ಬಿ. ಕೊಯ್ಲೋರವರ ಭಾವಚಿತ್ರವನ್ನು ಎಲೋಸಿಯಸ್ ಸಂಘದ ಅಧ್ಯಕ್ಷರಾದ ಶ್ರೀ| ಜಿ. ಪಿ. ರೇಗೋರವರು ಒಪ್ಪಿಸಲು ಅದರ ಅನಾವರಣವನ್ನು ಲಾರ್ಡ್ ಬಿಷಪರು ಮಾಡಿದರು.

ಬಳಿಕ ರೆ| ಫಾ| ಜೆ. ಎ. ಬಿ. ಕೊಯ್ಲೋರವರು ಕಟ್ಟಡದ ವೆಚ್ಚದ ಕುರಿತು ಸವಿವರ ವರದಿಯನ್ನು ಸಭೆಯ ಮುಂದಿಟ್ಟರು. ಈ ಕಟ್ಟಡದ ಖರ್ಚಿಗಾಗಿ ಮದ್ರಾಸು ಸರಕಾರವು ರೂಪಾಯಿ 75,000-ಗ್ರಾಂಟನ್ನು ಕೊಟ್ಟಿರುತ್ತದೆ. ಬಳಿಕ ಮುನಿಸಿಪಲ್ ಚೆಯರ್‌ಮೆನ್ ಶ್ರೀ| ಎಲ್. ಸಿ ಪಾಯಸರು ರೆಕ್ಟರ್ ಕೊಯ್ಲೋರವರು ಸಲ್ಲಿಸಿದ ಸೇವೆಯನ್ನು ಸ್ತುತಿಸಿ ಮಾತನಾಡಿದರು. ನಂತರ ಭಾಷಣವಿತ್ತ ಶ್ರೀ| ಬಿ. ವೈಕುಂಠಬಾಳಿಗರು ಇಂತಹ ಕಟ್ಟಡಗಳು ಕಾಲೇಜುಗಳಿಗೆ ಅವಶ್ಯಕವೆಂದರು. ಕಾರ್ಯದರ್ಶಿ ಶ್ರೀ ಯು. ಕಣ್ಣಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಎಲೋಸಿಯಸ್ ಕಾಲೇಜಿನ ರೆಕ್ಟರ್ ಮತ್ತು ಪ್ರಿನ್ಸಿಪಾಲ ರಾದ ರೆ| ಫಾ| ಎ. ಬಿ. ಕೊಯ್ಲೋರವರು ಸದ್ಯದಲ್ಲೆ ಮಂಗಳೂರು ಬಿಡುವಕಾರಣ, ಮಂಗಳೂರ ಕಥೋಲಿಕ್ ಸಂಘದವರು ಅವರ ಸೇವೆಯನ್ನು ಶ್ಲಾಘಿಸುವ ಸಮಾರಂಭವನ್ನು ತಾ 15ರಲ್ಲು ಮಲಬಾರು ಜಡ್ಜರಾದ ಶ್ರೀ ಇ. ಎ. ಲೋಬೋರವರ ಅಧ್ಯಕ್ಷತೆಯಲ್ಲಿನೆರವೇರಿಸಿದರು. ಹಲವರ ಭಾಷಣಗಳಿದ್ದುವು

ಖಂಡನಾಸಭೆ ಮಲಯಾ ಸರಕಾರವು ದಕ್ಷಿಣ ಭಾರತೀಯರಾಗಿದ್ದು ಮಲಯದಲ್ಲಿ ಮಜೂರಮುಖಂಡರಾಗಿದ್ದ ಶ್ರೀ ಎಸ್.ಆರ್. ಗಣಪತಿಯವರನ್ನು ಗಲ್ಲಿಗೇರಿಸಿದ್ದನ್ನು ಮಂಗಳೂರ ಸೋಸಿಯಲಿಸ್ಟ್ ಪಕ್ಷದ ನೇತೃತ್ವದಲ್ಲಿ ಕೇಂದ್ರ ಮೈದಾನಿನಲ್ಲಿ ಜರಗಿದ ಸಭೆಯಲ್ಲಿ ಖಂಡಿಸಲಾಯಿತು.

ನಗರ ಸಭೆಯು ಈಚೆಗೆ ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿ ನಗರದ ರಸ್ತೆಗಳಿಗೆ ತಾರುಹಾಕುವ ಖರ್ಚಿನ ಅರ್ಧಾಂಶವನ್ನು ಕೊಡಲೇಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಠರಾವಾಯಿತು.

ಕಲೆಕ್ಟರರಿಗೆ ವರ್ಗ ದ. ಕ. ಜಿಲ್ಲಾ ಕಲೆಕ್ಟರರಾಗಿದ್ದ ಶ್ರೀ ಎಸ್. ಆರ್. ಕೈವಾರರಿಗೆ ಸೇಲಂಗೂ ಮದ್ರಾಸಿನ ಕಲೆಕ್ಟರರಾಗಿದ್ದ ಸೈಯದ್ ಅಹಮ್ಮದ್ ಸಾಹೇಬರಿಗೆ ಇಲ್ಲಿಗೂ ವರ್ಗವಾಗಿದೆ.

ಕಾರ್ಕಳ ತಾ 24ರಲ್ಲಿ ಮಾರಿಯಮ್ಮ ದೇವಸ್ಥಾನದಲ್ಲಿ ಯಾವತರದ ಪ್ರಾಣಿಬಲಿಯಿಲ್ಲದೆ ಫಲ ಪುಷ್ಪಾದಿಗಳಿಂದಲೇ ಮಹಾ ಪೂಜೆಯು ಸಾತ್ವಿಕರೀತಿಯಲ್ಲಿ ಜರಗಿತು.

ಕಿನ್ನಿಮೂಲ್ಕಿ ಪದ್ಮಸಾಲಿ ಸಮಾಜ ಸೇವಾಸಂಘದ ವಾರ್ಷಿಕೋತ್ಸವವು ತಾ 15ರಲ್ಲಿ ಶ್ರೀ ಪಿ. ವಾಮನ ಶೆಟ್ಟಿ, ಬಿ. ಎ, ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ರಾಮಚಂದ್ರ ಯು. ಕೆ. ಯವರ ಸ್ವಾಗತ ಭಾಷಣ, ಶ್ರೀ. ಕೆ. ಜಿ. ಪದ್ಮಸಾಲಿಗಳಿಂದ ವರದಿವಾಚನ, ಶ್ರೀಗಳಾದ ದೇವದಾಸ, ಕೆ. ಎ. ಮುತ್ತಯ ಶೆಟ್ಟಿಗಾರ, ಕೆ. ಸಿ. ಸಟ್ಟಿಗಾರ, ಬ್ರಹ್ಮಾನಂದ ಪದ್ಮಸಾಲಿಗಳ ಭಾಷಣ, ವಿನೋದಾವಳಿ, ನಾಟಕಗಳಿಂದ ಸಭಾಂತ್ಯವಾಯಿತು.

ಹಿರಿಯಡ್ಕ:—ಇಲ್ಲಿಯ ಆರ್ಯಸಮಾಜದ ವತಿಯಲ್ಲಿ ಕಳೆದ ತಾ 12 ಮತ್ತು 15ರಲ್ಲು ಸಾರ್ವಜನಿಕ ಸಭೆಗಳು ಜರಗಿದವು. ಶ್ರೀಗಳಾದ ಲಕ್ಷ್ಮಣದೇವ ವಿದ್ಯಾರ್ಥಿ ಮತ್ತು ಪಂಡಿತ ರುದ್ರದೇವಜಿ ಶಾಸ್ತ್ರಿಗಳವರು ಭಾಷಣ ಮಾಡುತ್ತಾ 'ದೈವ್ಯೋಕ್ತ' ದರ್ಶನವು ಸ್ತ್ರೀ ಪುರುಷರ ಗೌರವ,ಸ್ಥಾನಮಾನಗಳಿಗೆ ಚ್ಯುತಿ ಬರುವಂತಹದಿದ್ದು, ಅದು ಅಂಧಶ್ರದ್ಧೆಯೆಂದು ಸಾರಿಹೇಳಿದರು. ತಾ 17 ಮತ್ತು 18ರಲ್ಲು ಜ್ವಾಲಾಪುರ ಗುರುಕುಲದ ಕುಲಪತಿ ಶ್ರೀ ಆನಂದಪ್ರಕಾಶತೀರ್ಥರು 'ವೈದಿಕ ಧರ್ಮದ ಮಹತ್ವ'ದ ಕುರಿತು ಉಪನ್ಯಾಸವಿತ್ತರು.

ಪುಣಚಾ ಹಿಂದುಸ್ಥಾನೀ ಪ್ರಚಾರ ಸಂಘದ ವಾರ್ಷಿಕೋತ್ಸವವು ತಾ 14ರಲ್ಲಿ ಪರಿಯಾಲ್ತಡ್ಕ ಹಾ| ಎ| ಶಾಲೆಯಲ್ಲಿ ಶ್ರೀ. ಎ. ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್. ಉಡುಪಿ.

ಇವರ ಶಾಖಾ ಆಫೀಸುಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

WANTED

a B. A. B. T. or L. T.
from 1st June 1949.
Salary Accroding to Local Board Scale
Ayply to
Correspondent,
Melagres High School,
Kallianpur. S. K.
Kallianpur, 19-5-49.

Approved firm by the Govt. of Mysore Certified by the Agent of the Govt, of Cylone & Indian.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಜನಸಾಮಾನ್ಯರಿಗೂ ಅನುಕೂಲವಾಗುವಂತೆ ರೂ. 100ರಿಂದ ರಿಂದ 900ರ ಒಳಗಿನ ಮೊತ್ತದಲ್ಲಿ ವಿಮಾಮಾಡುವ ಸೌಕರ್ಯ!

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

ವಿವರಗಳಿಗೆ ಬರೆಯಿರಿ:

ಬಿ. ವಾಮನಾಚಾರ್, ಬಿ.ಎ.ಬಿ.ಎಲ್.
ಮೆನೇಜರ್.

ಋತುಸ್ರಾವ ನಿಂತಿತು

'ಕುಮಾರಿ' ದಿಲ್ಲಗಳನು ಉಪಯೋಗಿಸಿದರೆ ಹದಿಕಟ್ಟಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS- D. DEVEE, F· DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

1949—50ರಲ್ಲು ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಪ್ರೀತಿಯ ಯಾವುದಾದರೊಂದು ಹೂವಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರು ಮತ್ತು ವಿಳಾಸವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1-4-0 ಕಳುಹಿಸಿರಿ, ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು, ಲಾಭ ನಷ್ಟಗಳು, ಮದುವೆ, ಮುಂಜಿ, ಸಂತತಿ, ತೇಜಿ ಮಂದಿ, ಸಮಯಾದಿಗಳನ್ನು ಸೂಚಿಸುವೆವು. ಅಲ್ಲದೆ ದುಷ್ಟಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನು ಕೂಡಾ ಕೊಡುವೆವು. ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು ಟಪ್ಪಾಲು ವೆಚ್ಚ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,
Roj jyotshi
(N. R. U-) jullundur City.

— **ಮಕ್ಕಳನ್ನು ಹಡೆಯುವುದು ಸಾಕು** —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾಮಣಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಶಿಮೊಗ್ಗ, ಹಾವೇರಿ, ಬ್ಯಾಡಗಿ

ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ಸೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ. ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨/-

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ದ. ಕನ್ನಡ

ಸುಬ್ರಹ್ಮಣ್ಯದಲ್ಲಿ ಅಖಿಲ ಕರ್ನಾಟಕ ಧರ್ಮ ಸಮ್ಮೇಳನವು ಇದೇ ತಾ ...ರಲ್ಲು ಶ್ರೀ ಸಂಪುಟ ನರಸಿಂಹಸ್ವಾಮಿ ಮಠದಲ್ಲಿ ಶ್ರೀಮದ್ವಿದ್ಯಾಪ್ರಜ್ಞತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ದೇವತಾ ಪ್ರಾರ್ಥನೆಯಾದ ನಂತರ ಶ್ರೀಮದ್ವಿದ್ಯಾಸಿಂಧುತೀರ್ಥ ಶ್ರೀಗಳವರು ಪೂರ್ವಪೀಠಿಕಾ ಭಾಷಣ ಮಾಡಿದರು. ಬೇರೆ ಬೇರೆ ಧರ್ಮಪೀಠ, ಧರ್ಮಸಂಸ್ಥೆಗಳಿಂದ ಬಂದ ಸಂದೇಶಗಳನ್ನು ಶ್ರೀ ಎನ್. ಕಾಶೀನಾಥ ಭಟ್ಟರು ಓದಿದರು. ಧರ್ಮರಕ್ಷಣೆಯ ವಿಚಾರದಲ್ಲಿ ಹಲವರ ಭಾಷಣಗಳಾದುವು. ಬಳಿಕ ...ಂದೂ ಕೋಡ್ ಮಸೂದೆಯನ್ನೂ ಹಿಂದೂ ಧಾರ್ಮಿಕ ದುಂಬಳಿಗಳ ಮಸೂದೆಯನ್ನೂ ಖಂಡಿಸುವ, ಗೋವಧೆಯನ್ನು ನಿಷ್ಠಿಸುವರೆ ಕಾನೂನಾಗಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಸರ್ವರೂ ಧರ್ಮೋದ್ಧಾರ ಕಾರ್ಯಗಳಲ್ಲಿ ಸಹಕರಿಸಬೇಕೆಂದು ಕೇಳಿಕೊಂಡರು. ಸಮ್ಮೇಳನದ ಕಾರ್ಯದರ್ಶಿ ಶ್ರೀ ಕೆ. ವಿ. ನರಸಿಂಹಾಚಾರ್ಯರು ಧನ್ಯವಾದಗಳನ್ನ ರ್ಪಿಸಿದ ನಂತರ ಮಂಗಳಗೀತೆ ಹಾಡಲಾಯಿತು.

ತೃತೀಯ ಕರ್ನಾಟಕ ಮಲೆನಾಡು ಪರಿಷತ್ತು ಯಶಸ್ವಿಯಾಗಿ ಕೊನೆಗೊಳ್ಳಲು ವಿವಿಧರೀತಿಯಲ್ಲಿ ನೆರವಾದ ಶ್ರೀಯುತರು ಕೆ. ವ್ಯಾಸರಾವ್, ಕೆ. ಕುಶಾಲಪ್ಪಗೌಡ, ಪುಲ್ಲಡ್ಕ ಸುಬ್ರಾಯ್, ಮುರಂಕಲ್ಲು ಮಹದೇವ ಭಟ್, ಸುಳ್ಯ ರಾಮಚಂದ್ರ ಮಾಸ್ತರ್, ಎಮ್. ಎಮ್. ಗಿರಿ, ಕೆ. ಎಸ್. ನಾರಾಯಣ ರಾವ್, ಎನ್. ಜಿ. ಚಿಪಳೂಣಕರ್, ಕೆ. ವಾಸುದೇವರಾವ್, ಸಿ. ಪಿ. ಸಿ. ಕಂಪೆನಿಯ ಒಡೆಯರು, ಸುಬ್ರಹ್ಮಣ್ಯ ದೇವಸ್ಥಾನದ ಪಾಲಕರು, ಕೆ. ಎ. ಗೌಡ, ಎಮ್. ಗಿರಿಯಪ್ಪ, ಜಿಲ್ಲಾ ಕಲೆಕ್ಟರ್, ಪತ್ರಿಕಾ ಪ್ರತಿನಿಧಿಗಳು, ಶ್ರೀಮತಿ ಸಂಜೀವ ತಳ್ವಾರ್, ಶ್ರೀಮತಿ ಕಲ್ಯಾಣ ಸೆಟ್ಟಿ ಹಾಗೂ ಅಪರಿವರೆನ್ನದೆ ಸರ್ವರಿಗೂ ಕರ್ನಾಟಕ ಮಲೆನಾಡು ಸುಧಾರಣಾ ಸಂಘದ ಅಧ್ಯಕ್ಷ ಶ್ರೀ ಎಮ್ ಎಸ್ ಭಿಡೆಯವರು ಧನ್ಯವಾದಗಳನ್ನರ್ಪಿಸುತ್ತಾರೆ.

ಸಿದ್ಧವನ ಗುರುಕುಲದ ವಾರ್ಷಿಕೋತ್ಸವ:— ತಾ 15-5-49ರಲ್ಲಿ ಉಜಿರೆ ಸಿದ್ಧವನ ಗುರುಕುಲಾಶ್ರಮದ ಒಂಭತ್ತನೆ ವಾರ್ಷಿಕೋತ್ಸವವು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾತಃಕಾಲ ಅಧಿವೇಶನದ ಕಾರ್ಯಕ್ರಮವು, ಆಸನ, ಭಾಷಣ ಸ್ಪರ್ಧೆಗಳಿಂದ ಪ್ರಾರಂಭವಾಯಿತು. ಸಾಯಂಕಾಲ 3 ಗಂಟೆಗೆ ದೇವತಾ ಪ್ರಾರ್ಥನೆಯಿಂದ ಸಭಾಕಾರ್ಯವು ಆರಂಭಿಸಲ್ಪಟ್ಟಿತು. ಶ್ರೀ ಮಂಜಯ್ಯ ಹೆಗ್ಗಡೆಯವರು ಅಭ್ಯಾಗತ ಸಭಿಕರನ್ನುದ್ದೇಶಿಸಿ ಸಿದ್ಧವನದ ಕಾರ್ಯಗಳ ಬಗ್ಗೆ ಕೆಲವು ಅಂಶಗಳನ್ನು ತಿಳಿಸಿದರು.

ತರುವಾಯ ಈ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ನಾರಾಯಣಾಚಾರ್ಯರು ಶಾಲೆಯ ವರದಿಯನ್ನು ಓದಿದರು. ಗುರುಕುಲದ ನಿಯಮಗಳಂತೆ ಶಿಕ್ಷಣಗಳು ನಡೆಯುತ್ತಿವೆಯೆಂಬುದನ್ನೂ, ಉಚಿತ ಭೋಜನ ವಸ್ತ್ರಗಳೂ ಸಹ ವಿದ್ಯಾರ್ಥಿಗಳಿಗೆ ದೊರೆಯುತ್ತಿವೆಯೆಂಬುದನ್ನೂ ಈ ವರ್ಷ21,000 ರೂಪಾಯಿಗಳು ಈ ವಿದ್ಯಾನಿಲಯಕ್ಕೆ ಖರ್ಚಾಗಿದೆಎಂಬುದನ್ನೂ, ಶ್ರೀ ಮಂಜಯ್ಯ ಹೆಗ್ಗಡೆಯವರಾದಿಯಾಗಿ ಸಾಲ್ಕು ಜನ ಟ್ರಸ್ಟಿಗಳು ಇದನ್ನು ಸ್ಥಾಯಿಯಾಗಿ ನಡೆಸಲು ವ್ಯವಸ್ಥೆ ಮಾಡಿದ ವಿಷಯವನ್ನೂ ವಿವರಿಸಿದ್ದರು. ಬಹುಮಾನ ವಿತರಣೆಯಾದ ಮೇಲೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಚ್. ರಾಮರಾಯರೂ, ಶ್ರೀ ಹರಿ ಶೆಣೈಯವರೂ, ಶ್ರೀ ಪದ್ಮನಾಭ ಎಸ್. ಜೈನಿಯವರೂ, ವಿದ್ಯಾಭೂಷಣ ಶ್ರೀ ಭುಜಬಲಿ ಶಾಸ್ತ್ರಿಗಳೂ, ಆಸ್ಥಾನ ವಿದ್ವಾನ್ ಶ್ರೀ ಶಿಶುಪಾಲ ಶಾಸ್ತ್ರಿಗಳೂ ಗುರುಕುಲದ ಮಹತ್ವವನ್ನು ವಿವರಿಸಿ ಭಾಷಣ ಮಾಡಿದರು. ಕೊನೆಗೆ ಮಾನ್ಯ ಅಧ್ಯಕ್ಷರ ರಸಭರಿತವಾದ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.

ಮುಂಬಯಿ ಹೊಟೆಲು ಕೆಲಸಗಾರರ ಪರಿಷತ್ತು:—ಉತ್ತರ ಮುಂಬಾಯಿ ಮತ್ತು ಮುಂಬಾಯಿ ಹೋಟೆಲು ಕಾಮಗಾರ್ ಯುನಿಯನುಗಳ, ಜತೆ ಕಾರ್ಯಕಾರಿ ಸಮಿತಿಗಳ ಸಭೆಯು ಕಳೆದ 14ನೇ ಶನಿವಾರ ಕೂಡಿ ಈ ಕೆಳಗಿನ ನಿರ್ಧಾರ ಮಾಡಿತು.

ಮುಂಬಾಯಿಯ ಹೋಟೆಲು ಕಾಮಗಾರರ ಪರಿಸ್ಥಿತಿಯ ಕುರಿತು ಸರಕಾರದ ಮುಂದೆ, ಸಾರ್ವಜನಿಕರ ಮುಂದೆ ವಿದಿತ ಪಡಿಸಿ, ಮಾಲೀಕರ ಮುಂದೆ ಸಂಬಳ, ಸರ್ವಿಸ್ ಮತ್ತು ಇತರ ಸವಲತ್ತುಗಳ ಕುರಿತು ನ್ಯಾಯವಾದ ಕೇಳಿಕೆಗಳನ್ನು ಮುಂದಿಡುವರೆ, ಇಡೀ ಮುಂಬಾಯಿಯ ಅಂದರೆ ಕೊಲಾಬಾದಿಂದ ಅಂದೇರಿ ತನಕದ 75 ಸಾವಿರಕ್ಕೆ ಮಿಕ್ಕಿದ ಹೋಟೆಲು ಕೆಲಸಗಾರರ ಪ್ರತಿನಿಧಿಗಳ ಪರಿಷತ್ತನ್ನು ಆದಷ್ಟು ಬೇಗನೆ ಕರೆಯುವುದೆಂದೂ, ಆ ಪರಿಷತ್ತಿಗೆ ದೇಶದ ಇತರ ದಿಕ್ಕುಗಳಿಂದ ಪ್ರತಿನಿಧಿಗಳನ್ನು ಆಹ್ವಾನಿಸುವುದೆಂದೂ ಅಲ್ಲದೆ ಸರಕಾರದೊಡನೆ, ಆ ಪರಿಷತ್ತಿನಲ್ಲಿ ಹೋಟೆಲು ಕೆಲಸಗಾರರ ಸಂಪೂರ್ಣ ಪರಿಸ್ಥಿತಿಯನ್ನು ಅರಿಯುವರೆ ಒಂದು ತಜ್ಞರ ಸಮಿತಿಯನ್ನು ನೇಮಿಸಲು ಒತ್ತಾಯಿಸುವುದೆಂದೂ ನಿರ್ಧರಿಸಲಾಯಿತು. ಈ ಪರಿಷತ್ತಿನ ಸಂಪೂರ್ಣ ಕಾರ್ಯವನ್ನು ನೆರವೇರಿಸುವರೆ 15 ಜನರ ಸ್ವಾಗತ ಸಮಿತಿಯನ್ನು ನೇಮಿಸಲಾಯಿತು, ಎಂದು ಕಾರ್ಯದರ್ಶಿ ಶ್ರೀ ಪಿ. ವಿ. ಉಪಾಧ್ಯಾಯರು ತಿಳಿಸುತ್ತಾರೆ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ,

ಕರೆದರೆ ಓಗೊಡುವ ಸೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,
UDIPI, S. Kanara.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'
ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್
ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಯಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್ ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಬೇರೆ. ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18-ವಿ ಪಿ.ಮಾಫ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೫ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲಿನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

— ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬೊಂಬಾಯಿ ಸ್ಟಾಕಿಸ್ಟರು—ಲಕ್ಷವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

(೧೧ನೇ ಪುಟದಿಂದ ಮುಂದುವರಿದುದು)
ಕ್ಕೆ ರೈತನು ಹೊಣೆಯಾಗುವನು. ಎಲ್ಲಾದರೂ ಒಬ್ಬನು ಅನ್ನವಿಲ್ಲದೆ ಸತ್ತರೆ ಅವನ ಸಾವು ಸುಳ್ಳು ಲೆಕ್ಕವನ್ನು ಕೊಟ್ಟು ಕಾಳನ್ನೇ ಬಚ್ಚಿಟ್ಟುಕೊಂಡ ರೈತನ ತಲೆಯ ಮೇಲೆಂಬುದನ್ನು ರೈತನು ತಿಳಿಯಬೇಕು. ಬಕ್ಕವಿದ್ದಷ್ಟು ಕಾಳನ್ನು ಸರಕಾರೀ ಡಿಪೋಗೆ ಕೊಡುವ ಶ್ರದ್ಧೆ ಬೆಳೆಯಬೇಕು. ಬೇರೆ ಕಡೆ ಅನ್ನಧಾನ್ಯವನ್ನು ಮಾರುವುದಿಲ್ಲವೆಂಬ ನಿರ್ಧಾರ ಬುದ್ಧಿ ಬೇಕು.

ವಸ್ತ್ರ

ವಸ್ತ್ರದ ಪ್ರಶ್ನೆ ಜಟಿಲವಾಗಿದೆ. ವಸ್ತ್ರದ ಕುಟಾಗ್ರತೆಯನ್ನು ನಿವಾರಿಸಲು ಗಿರಣಿಗಳನ್ನು ಹೆಚ್ಚಿಸಲು ಸೂಚಿಸುತ್ತಾರೆ. ರಾಷ್ಟ್ರದಲ್ಲಿ ಇಪ್ಪತ್ತು ಲಕ್ಷ ಕೈಮಗ್ಗಗಳನ್ನು ನಡೆಸಿಕೊಂಡು ಒಂದು ಕೋಟಿ ಜನರು ಜೀವಿಸುತ್ತಿದ್ದಾರೆ.

ನೇಕಾರನಾದರೋ ತನ್ನ ಉದ್ಯೋಗವನ್ನು ನಿರ್ನಾಮಮಾಡ ಹೊರಟಿರುವ ಗಿರಣಿಯಿಂದಲೇ ಕಚ್ಚಾ ನೂಲನ್ನು ಬಯಸುತ್ತಾನೆ, ಕೈನೂಲನ್ನು ಕೈಬಿಟ್ಟಿದ್ದಾನೆ. ಕೈನೂಲನ್ನು ಅವನು ಅವಲಂಬಿಸಿದರೆ ಇಪ್ಪತ್ತು ಲಕ್ಷವೇಕೆ? ಐವತ್ತು ಲಕ್ಷ ಮಗ್ಗಗಳು ಹಿಂದೂಸ್ಥಾನದಲ್ಲಿ ನಡೆಯಬಲ್ಲವು. ಹಿಂದೂಸ್ಥಾನವೆಲ್ಲ ಖಾದೀ ಧರಿಸುವ ನಿರ್ಧಾರಮಾಡಿ ಹಳ್ಳಿ ಹಳ್ಳಿಗಳಲ್ಲಿ ಮನೆಮನೆಗಳಲ್ಲಿ ಒಂದೊಂದು ಗಿರಣಿಯಾಗಿ ಈ ದೊಡ್ಡ ಗಿರಣಿಗಳ ಬಟ್ಟೆಯೆಲ್ಲಾ ವಿದೇಶಕ್ಕೆ ನಿರ್ಯಾತವಾಗಿ ಇತರ ಅವಶ್ಯಕ ಯಂತ್ರಗಳನ್ನೂ ವಸ್ತುಗಳನ್ನೂ ವಿದೇಶಗಳಿಂದ ಆಯಾತಮಾಡಲು ಅನುವಾಗುವುದು. ಹೀಗೆ ಸರ್ವತೋಮುಖವಾದ ಲಾಭವಾಗುವುದು

ಗ್ರಾಮೋದ್ಯೋಗಗಳಲ್ಲಿ ಖಾದಿಯು ಗ್ರಹಮಂಡಲದಲ್ಲಿ ಸೂರ್ಯನಂತೆ, ಎಂದು ಗಾಂಧೀಜಿಯವರು ಹೇಳಿದ್ದಾರೆ. ಇಂದು ರಾಟೆಯಲ್ಲಿ ತಾಸಿಗೆ ಸರಾಸರಿ ೩೦೦ ಗಜಗಳ ವೇಗವಿದೆ. ತಾಸಿಗೆ ೨೫೦ ಗಜ ಅಥವಾ ೩ ಲಡಿ ತೆಗೆಯುವ ಸುಧಾರಿಸಿದ ರಾಟೆಯ ಆವಿಷ್ಕಾರದ ಕಡೆಗೆ ಲಕ್ಷ್ಯ ಕೊಡಬೇಕು. ಇಂಥ ರಾಟೆಯಿಂದ ದಿನಕ್ಕೆ ಒಂದು ತಾಸಿನಂತೆ ೩೦೦ ದಿನಗಳು ನೂತರೆ ೯೦೦ ಲಡಿಗಳ ನೂಲು ತಯಾರಾಗಿ ಅದರಿಂದ ೨೫ ಗಜ ಅರಿವೆ ತಯಾರಾಗಿ, ತಲಾ ೩೫ಗಜದಂತೆ ಆರು ಜನರಿಗೆ ಸಾಕಾಗುವಂತಾಗಿ, ಒಬ್ಬನು ದಿನಾಲು ಒಂದು ತಾಸು ನೂತರೆ ಇಡೀ ಸಂಸಾರಕ್ಕೆ ಸಾಕಾಗುವಷ್ಟು ಅರಿವೆ ತಯಾರಾಗುವದು. ಆಗ ವಸ್ತ್ರಸ್ವಾವಲಂಬನ ಯೋಜನೆಯು ಬೇಗನೆ ಯಶಸ್ವಿಯಾಗುವುದು. ಜಪಾನದಲ್ಲಿ ಹೊಸದಾಗಿ ತಯಾರಾಗಿರುವ ಒಂದು ರಾಟೆಯಲ್ಲಿ ತಾಸಿಗೆ ೨೦೦೦ ಗಜ ನೂಲು ತೆಗೆಯುವುದು ಸಾಧ್ಯವೆಂದು ಕೇಳಿದ್ದೇನೆ. ಅದರ ಫೋಟೋ ನಾನು ನೋಡಿದ್ದೇನೆ. ಅದನ್ನು ಪರಿಶೀಲಿಸಬೇಕಾಗಿದೆ. ಇಂಥ ಹೊಸ ರಾಟೆಗಳ ಆವಿಷ್ಕಾರದ ಬಗ್ಗೆ ಹಿಂದೂಸ್ಥಾನದಲ್ಲಿ ವಿಶಿಷ್ಟ ಪ್ರಯತ್ನ ತಜ್ಞರಿಂದ ನಡೆಯಬೇಕಾಗಿದೆ. ಅಲ್ಲಿಯವರೆಗೆ ನಾವು ಇಂದಿನ ರಾಟೆಯನ್ನು ಸತೇಜವಾಗಿ ಇಡುವುದು ಕರ್ತವ್ಯವಾಗಿದೆ.

ವಸ್ತ್ರ ಸ್ವಾವಲಂಬನ

ಹಿಂದೂಸ್ಥಾನ ಸರಕಾರವು ಖಾದಿಬಗ್ಗೆ ತನ್ನ ಧೋರಣವನ್ನು ನಿಶ್ಚಯಿಸುವುದು ಅವಶ್ಯ. ಗಿರಣಿಗಳೇ ಮುಖ್ಯ ಆಧಾರವೆಂದು ಹಿಡಿದು, ಖಾದಿ ಶಕ್ಯವಿದ್ದಷ್ಟು ಬೆಳೆಯಲೆಂದು “ಪ್ರೋತ್ಸಾಹ ಕೊಡುವ” ದೃಷ್ಟಿಯು ಹೋಗಿ ಹಿಂದೂಸ್ಥಾನದಲ್ಲಿ ಅಂತರಿಕ ಬಳಕೆಗೆ ಕೈನೂಲಿನ ಖಾದಿಯನ್ನೇ ಅವಲಂಬಿಸಿ, ಸಾಲದೆ ಬಂದಷ್ಟು ಗಿರಣಿ ಅರಿವೆ ಬಳಸಿ ಕ್ರಮೇಣ ಅದು ಪೂರ್ಣ ನಿರ್ಯಾತವಾಗುವಂತೆ ವ್ಯವಸ್ಥೆ ಮಾಡಿ, ಗಿರಣಿಗಳು ಅಪತ್ಕಾಲಕ್ಕೆ ಇರಲೆಂದು ತಡೆದು, ಖಾದಿಯನ್ನು ಸರ್ವವ್ಯಾಪಿಯಾಗಿ ಮಾಡುವಂಥ ಜವಳಿ ನೀತಿಯನ್ನು ಸರಕಾರವು ಅವಲಂಬಿಸಬೇಕಾದದ್ದು ಅನಿವಾರ್ಯ. ಇಡೀ ಜನತೆಯು ಈ ನೀತಿಯನ್ನು ತೀವ್ರತೆಯಿಂದ ಅಂಗೀಕರಿಸಿದರೆ ಜನತೆಯ ಪ್ರತಿಬಿಂಬವಾದ ಮಂತ್ರಿಮಂಡಲವು ಅದನ್ನು ಅಂಗೀಕರಿಸುವುದು. ಮಂತ್ರಿಮಂಡಲವೇ ಈ ನಿಶ್ಚಯಕ್ಕೆ ಬರಲೆಂದು ಜನತೆಯು ಕಾದು ಕುಳಿತಿರಬೇಕೇಕೆ?

ನೀರಾವರಿ ಯೋಜನೆಗಳು

“ಪ್ರಕೃತಿನಿಯಮಕ್ಕೆ ಪೋಷಕವಾದ ಮಾರ್ಗವನ್ನು ಬಿಟ್ಟು ಪ್ರಕೃತಿಯ ರೂಪವನ್ನೇ ಆಮೂಲಾಗ್ರ ಬದಲಿಸಲು ಪ್ರಯತ್ನಿಸುವುದು ಎಷ್ಟು ನಿರುಪಯೋಗಿ!” ಎಂದು ಚಿಂತೆಯಾಗುವುದು. ದೇಶದ ಹವಾಮಾನಕ್ಕೆ ತಕ್ಕಂತೆ ಭೂಮಿಯಲ್ಲಿ ಬೆಳೆ ಬರುವುದು, ಬೆಳೆಗೆ ತಕ್ಕಂತೆ ಅಲ್ಲಿಯ ಜನತೆ ಇರುವುದು. ಅದನ್ನು ಆಮೂಲಾಗ್ರ ಬದಲಿಸಿದರೆ ಜನತೆ ಅನಾಯಕ್ಕೀಡಾಗುವುದು. ಈ ಬಗ್ಗೆ ದೀರ್ಘಕಾಲದ ಯೋಜನೆಗಳನ್ನು ತಯಾರಿಸುವ ತಜ್ಞರು ಲಕ್ಷ್ಯಕೊಡಬೇಕು. ಧಾರವಾಡ ಬಿಜಾಪುರ ಜಿಲ್ಲೆಗಳು ಬೈಲುಸೀಮೆ; ಎರೆನಾಡು, ಜೋಳ, ಗೋದಿ, ಕುಸುಬಿ ಬೆಳೆಯುತ್ತವೆ. ಜೋಳ, ಗೋದಿಯನ್ನು ತಿಂದು ಜನರು ಧಷ್ಟಪುಷ್ಟರಾಗಿದ್ದಾರೆ. ಗಂಡು ಹವೆ, ಗಂಡು ಬೆಳೆ, ಧಷ್ಟಪುಷ್ಟಜನತೆ ಇವೆ. ಅಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿ ಲಕ್ಷೋಪಲಕ್ಷ ಎಕರೆ ನೆಲವನ್ನು ನೀರಿನಲ್ಲಿ ಮುಳುಗಿಸಿ ಹೆಚ್ಚು ಭತ್ತ ಬೆಳೆಯುವ ಆಸೆಮಾಡಿದರೆ ಜನರ ಮೋರೆ ಬೆಳ್ಳಗಾಗಿ ಹೊಟ್ಟೆಯಲ್ಲಿ ಗಡ್ಡೆ ಬೆಳೆದು ಜನಸಂಖ್ಯೆ ಕಡಿಮೆಯಾದೀತು. ಭತ್ತ ಹೆಚ್ಚು ಬೆಳೆದೇವು. ಆದರೆ ಜನರು ಸತ್ತಾರು; ಅಥವಾ ಜೀವಿತ ಶವಗಳಾಗಿ ಉಳಿದಾರು. ಮಲೇರಿಯಾ ಹೆಚ್ಚಾದರೆ ಡಿ. ಡಿ. ಟಿ. ಪ್ರಯೋಗಮಾಡಿ ಮಲೇರಿಯಾ ನಿವಾರಣೆ ಮಾಡಲಿಕ್ಕೆ ಬರುತ್ತದೆಂದು ಕೆಲವರು ಹೇಳುತ್ತಾರೆ. ಕೋಟಿ ರೂಪಾಯಿ ಖರ್ಚಿನಿಂದ ಮಲೇರಿಯಾ ಬಿತ್ತಿ ಬೆಳೆದು ಲಕ್ಷ ರೂಪಾಯಿ ಖರ್ಚುಮಾಡಿ ಅದರ ನಿವಾರಣೆ ಮಾಡುವ ಪ್ರಯತ್ನದಲ್ಲಿ ಜಾಣತನವಿಲ್ಲ. ಖರ್ಚುಮಾಡಿದರೂ ಒಡೆದದ್ದು ಬೆಸೆಯುವುದಿಲ್ಲ, ಬರೀ ತೇಪೆಯ ಕೆಲಸವಾಗುತ್ತದೆ. ದೊಡ್ಡ ನೀರಾವರಿ ಯೋಜನೆಗಳಲ್ಲಿ ಈ ಅಪಾಯವಿದೆಯೆಂದು ಸೂಚಿಸ ಬಯಸುತ್ತೇನೆ.

ಸಣ್ಣ ನೀರಾವರಿ ಯೋಜನೆಗಳಲ್ಲಿ ಯಾವುದೇ ಅಪಾಯವಿಲ್ಲ. ಸುಲಭಸಾಧ್ಯ, ಖರ್ಚು ಕಡಿಮೆ. ನೀರಾವರಿಗಾಗಿ ಕಟ್ಟೆ, ಕೆರೆ, ಭಾವಿಗಳನ್ನು ಕಟ್ಟಲು ಹೆಚ್ಚು ಲಕ್ಷ್ಯ ಕೊಡಬೇಕು. ಎಲ್ಲ ಹಳ್ಳಿಗಳಿಗೆ ಸಣ್ಣ ಪುಟ್ಟ ಆಣೆಕಟ್ಟುಗಳನ್ನು ಹಾಕಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಬೇಕು. ಮಳೆಯಿಂದಬೀಳುವ ನೀರಿನ ಪೂರ್ಣ ಸದುಪಯೋಗಮಾಡಿಕೊಂಡು ಒಕ್ಕಲತನವನ್ನು ಬೆಳಿಸಬೇಕು.

ಉದ್ಯೋಗ

ಅನ್ನ ವಸ್ತ್ರಗಳ ಮಾತನ್ನು ಹೇಳಿದ್ದಾಯಿತು. ನೆರಳು, ನೀರು, ಗಾಳಿಗಳ ಬಗ್ಗೆ ಸಹಾ ಬಹಳ ಹೇಳಬಹುದು. ಉದ್ಯೋಗಗಳೇ ಹಳ್ಳಿಗಳ ಜೀವನದ ಜ್ಯೋತಿಗಳು. “ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ” ಎಂದು ಕವಿಯು ಹೇಳಿದ್ದಾನೆ. ಉದ್ಯೋಗವು ಪುರುಷ ಲಕ್ಷಣ; ಉದ್ಯೋಗಿಯು ಪುರುಷಸಿಂಹ; ಪುರುಷಸಿಂಹನಿಗೆ ಲಕ್ಷ್ಮಿಯು ಒಲಿಯುತ್ತಾಳೆ. ಹಳ್ಳಿಗಳೇ ಲಕ್ಷ್ಮೀಸ್ಥಾನ. ಅವು ಕಾಂಚನಗಂಗಾ ಶಿಖರದಂತೆ ಪರ್ವತ ಶಿಖರದ ಮೇಲೆ ಬಿದ್ದ ಒಂದು ಹನಿ ನೀರು ಸಹಾ ಹರಿದು ಕೊಳ್ಳವಾಗಿ ಹಳ್ಳವಾಗಿ, ನದಿಯಾಗಿ ಸಮುದ್ರವನ್ನು ಸೇರುವವರೆಗೆ, ಎಂಥ ಬಂಡೆಗಳು ಪರ್ವತಗಳು ಅಡ್ಡಬಂದರೂ ನಿಲ್ಲುವುದಿಲ್ಲ. ಹಾಗೇ ಧನವನ್ನು ಉತ್ಪನ್ನಮಾಡುವ ಕಾಂಚನಗಂಗಾ ಶಿಖರದಂತಿರುವ ಹಳ್ಳಿಗಳಲ್ಲಿ ಹುಟ್ಟಿದ ಒಂದು ರೂಪಾಯಿ ಉಸುಳಿ, ಉರುಳಿ, ಸಮುದ್ರದಂತಿರುವ ಮುಂಬಯಿ, ದಿಲ್ಲಿ, ಕಲ್ಕತ್ತಾ ಮುಂತಾದ ಶಹರಗಳಿಗೆ ಹೋಗಿ, ಅಲ್ಲಿ ಒಬ್ಬ ಸಾವಕಾರನ ತಿಜೋರಿಯಲ್ಲಿ ಮಲಗುವ ವರೆಗೆ ಅದಕ್ಕೆ ಶಾಂತಿಯಿಲ್ಲ, ನಮ್ಮ ಹಳ್ಳಿಗರಿಗೂ ನಿದ್ದೆ ಬರುವುದಿಲ್ಲ. ಒಳ್ಳೇ ಒಕ್ಕಲತನಕ್ಕಾಗಿ ಅಲ್ಲಲ್ಲಿ ಒಡ್ಡುಗಳನ್ನು ಹಾಕಿ ನೀರನ್ನು ಕೆರೆಯಾಗಿ, ಕಟ್ಟೆಯಾಗಿ ತಡೆದು, ಭೂಮಿ ನೀರುಣ್ಣುವಂತೆ ಮಾಡುವ ತೆರದಲ್ಲಿ ಹಳ್ಳಿಗಳಿಗೆ ಗ್ರಾಮೋದ್ಯೋಗಗಳೆಂಬ ಒಡ್ಡುಗಳನ್ನು ಹಾಕಿ ಹಳ್ಳಿಯಿಂದ ಶಹರಕ್ಕೆ ಧಾರಾಕಾರವಾಗಿ ಹರಿಯುವ ಈ ಹಣದ ಪ್ರವಾಹವನ್ನು ತಡೆಗಟ್ಟಿ ಹಳ್ಳಿಗಳಲ್ಲಿ ತೇಜಸ್ಸನ್ನು ನಿಲ್ಲಿಸಬೇಕು, ಹಳ್ಳಿಗರಿಗೆ ಅವಶ್ಯವಾದ ಪಾತ್ರೆ, ಗುಳ, ಕುಡ, ಚಕ್ಕಡಿ, ಎಣ್ಣೆ, ಹಗ್ಗ, ಬಟ್ಟೆ, ಎಲ್ಲವೂ ಹಳ್ಳಿಗಳಲ್ಲೇ ತಯಾರಾಗಿ ಹಳ್ಳಿಗಳು ಸ್ವಾವಲಂಬಿಯಾಗುವಂತೆ ಮಾಡುವ ಬಗ್ಗೆ ರಚನಾತ್ಮಕ ಕಾರ್ಯಕರ್ತರು ಶ್ರಮಿಸಬೇಕಾಗಿದೆ.

ಶತ್ರುಗಳು

ರಾಷ್ಟ್ರಕ್ಕೆ ಅನೇಕ ಬಗೆಯ ಶತ್ರುಗಳಿರುತ್ತಾರೆ. ಗಳಿಸಿದ ಸ್ವರಾಜ್ಯವನ್ನು ಉಳಿಸಿಕೊಳ್ಳಬೇಕಾದರೆ ಎಲ್ಲ ಶತ್ರುಗಳ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದಿರಬೇಕು. ಕೆಲವು ಶತ್ರುಗಳು ನಿಮ್ಮ ಪಕ್ಕದಲ್ಲಿ ಕುಳಿತಿರಬಹುದು. ಓದುಬರೆಯಲು ಬರದೆಂದು ಹೇಳುವವನೊಬ್ಬ ರಾಷ್ಟ್ರದ ಶತ್ರು. ಉದ್ಯೋಗನೂ ಇದ ಸೋಮಾರಿಯೊಬ್ಬ ಶತ್ರು. ಯಾವ ವೇಳೆಯಲ್ಲಿ ಉದ್ಯೋಗದಿಂದ ಸಂಪತ್ತಿನ ನಿರ್ಮಾಣ ಮಾಡಬಹುದೋ ಅದನ್ನು ವೃಥಾ ಕಳೆದು ತಾನು ಕಷ್ಟಕ್ಕೆ ಸಿಕ್ಕಿ ರಾಷ್ಟ್ರವನ್ನು ಬಡತನದಲ್ಲಿ ತೊಳಲಿಸುವ ಸೋಮಾರಿಯು ದ್ವಿಮುಖ ಶತ್ರು. ತಿಂದದ್ದನ್ನು ಅರಗಿಸಿಕೊಳ್ಳಲಾರದೆ ಸದಾ ತನ್ನ ರೋಗದ ವರ್ಣನೆಯನ್ನೇ ಹೇಳಿಕೊಳ್ಳುವ ಅಶಕ್ತನೊಬ್ಬ ಶತ್ರು. ಅಶಕ್ತನು ದುಡಿದು ಗಳಿಸದಿರುವುದೊಂದು ಹಾನಿ. ಇನ್ನೊಬ್ಬರು ಗಳಿಸಿದ್ದರ ಮೇಲೆ ಜೀವಿಸುವುದು ಎರಡನೇ ಹಾನಿ. ಅವನೂ ದ್ವಿಮುಖ ಶತ್ರುವೇ. ಈ ಶತ್ರುಗಳಿಂದ ನೀವು ಜೋಕೆಯಾಗಿರಿ. ಶತ್ರುಗಳನ್ನು ಗುರ್ತಿಸಿ ಅವರಿಗೆ ಬುದ್ಧಿ ಗಲಿಸಿರಿ.

ಏಳು ಲಕ್ಷ ಹಳ್ಳಿಗಳೇಕೆ?

ಮಹಾತ್ಮಾಗಾಂಧಿಯವರು ಸಮಗ್ರ ಗ್ರಾಮಸೇವಾ ದೃಷ್ಟಿಯನ್ನು ಕಾರ್ಯಕರ್ತರ ಮುಂದಿಟ್ಟರು. ಈಗ “ಸರ್ವೋದಯ” ಶಬ್ದವು ಪರ್ಯಾಯದಲ್ಲಿ ಉಪಯೋಗಿಸಲ್ಪಟ್ಟಿದೆ. “ಸರ್ವೋದಯ” ಕಾರ್ಯವನ್ನು ಎಲ್ಲ ಹಳ್ಳಿಗಳಲ್ಲಿ ಮಾಡಿ ಮೇಲೆ ಹೇಳಿದ ನಾಲ್ಕು ಜೀವನಾವಶ್ಯಕ ಸೌಲಭ್ಯಗಳನ್ನು ನಾಲ್ಕು ನಾಗರಿಕತೆಯ ಪರಿಕರಣಗಳನ್ನು ಏಳು ಲಕ್ಷ ಹಳ್ಳಿಗಳಲ್ಲಿ ಪ್ರತಿಯೊಬ್ಬನಿಗೆ ಮುಟ್ಟಿಸುವುದು ಸಾಮಾನ್ಯವಲ್ಲ. ಸರಕಾರವು ಅನ್ನಧಾನ್ಯ ವಿತರಣೆಯ ಜವಾಬ್ದಾರಿಯನ್ನು ಹೊತ್ತಿದೆ. ಹಿಂದುಸ್ಥಾನದ ೩೨ ಕೋಟಿ ಜನತೆಯಲ್ಲಿ ೩೦ ಕೋಟಿ ಜನತೆಗೆ ಕಾಳು ಹಂಚಿ ೨ ಕೋಟಿ ಜನತೆಗೆ ಕಾಳು ಸಾಲದೆ ಬಂದರೆ ಆ ವಿತರಣ ವ್ಯವಸ್ಥೆಯು ದೋಷಯುಕ್ತವಾಗುವದು. ನೂರಾರು ಜನರು ಆಹಾರವಿಲ್ಲದೆ ಸಾಯುವಂತಾದರೆ ಎಲ್ಲರಿಗೂ ಆಹಾರದ ವ್ಯವಸ್ಥೆಯಾಯಿತು—ಎಲ್ಲೋ ನೂರಾರು ಜನರು ಮಾತ್ರ ಆಹಾರವಿಲ್ಲದೆ ಸತ್ತರು, ಎಂದು ಯಾರೂ ಉದಾರ ದೃಷ್ಟಿಯಿಂದ ನೋಡಲಾರರು. ಕಡೇ ಮನುಷ್ಯನಿಗೂ ಆಹಾರ ಸಿಗುವಂತೆ ವ್ಯವಸ್ಥೆಯಾದರೆ ಮಾತ್ರ ಅದು ಯೋಗ್ಯ. ಅಂತೆಯೇ ಮೇಲೆ ಹೇಳಿದ ಎಂಟೂ ಸೌಲಭ್ಯಗಳನ್ನು ೩೨ ಕೋಟಿಯಲ್ಲಿ ಪ್ರತಿಯೊಬ್ಬನಿಗೂ ಮುಟ್ಟಿಸಿದರೆ ಮಾತ್ರ ಅದು ಸುರಾಜ್ಯವೆನ್ನಿಸಿಕೊಳ್ಳುವುದು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಹಳ್ಳಿಗಳು ೭ ಲಕ್ಷವಿರುವವರೆಗೆ ಈ ಧ್ಯೇಯವನ್ನು ಸಾಧಿಸುವುದು ಶಕ್ಯವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ೭ ಲಕ್ಷ ಹಳ್ಳಿಗಳಲ್ಲಿ ಒಂದಕ್ಕೂ ತಪ್ಪದೆ ಕುಡಿಯುವ ನೀರಿನ ಬಾವಿಯ ವ್ಯವಸ್ಥೆ ಮಾಡುವುದು ಸಹಾ ಶಕ್ಯವಾಗಿಲ್ಲ. ಇನ್ನು ಶಾಲೆ, ವೈದ್ಯಕೀಯ ವ್ಯವಸ್ಥೆ, ಸ್ವಚ್ಛತೆ, ಇವೆಲ್ಲ ವ್ಯವಸ್ಥೆಗಳು ಕನಸಿನ ಮಾತು. ಖಾದೀ ಮತ್ತು ಗ್ರಾಮೋದ್ಯೋಗಗಳ ದೃಷ್ಟಿಯಿಂದ ವಿಚಾರ ಮಾಡಿದರೆ ಎಲ್ಲ ಹಳ್ಳಿಗಳಲ್ಲಿ ರಾಟೆಗಳನ್ನು ನಡೆಸಲು ಸಹಾ ಬಹಳ ವರ್ಷಗಳು ಹಿಡಿದಾವು. ಈ ವಿಚಾರ ಮಾಡುವಾಗ ಏಳು ಲಕ್ಷ ಹಳ್ಳಿಗಳೇಕೆ? ಎಂಬ ಪ್ರಶ್ನೆಯು ಮೂಡುವುದು. ೪೦೦೦ ಜನಸಂಖ್ಯೆಗಿಂತ ಕಡಿಮೆ ಇರುವ ಹಳ್ಳಿ ಇರಬಾರದು. ಒಂದು ಲಕ್ಷಕ್ಕಿಂತ ಮಿಕ್ಕ ಜನಸಂಖ್ಯೆಯ ಶಹರ ಇರಬಾರದು; ಎಂಬ ನಿರ್ಧಾರ ಮಾಡಿದರೆ ಹಿಂದುಸ್ಥಾನದಲ್ಲಿ ೮೦,೦೦೦ ಹಳ್ಳಿಗಳಾಗುತ್ತವೆ. ೮೦,೦೦೦ ಹಳ್ಳಿಗಳಲ್ಲಿ ಎಲ್ಲ ಸುಧಾರಣೆಗಳನ್ನು ಮಾಡುವುದು ಸುಲಭಸಾಧ್ಯ. ಮೂರು ಮೈಲು [Radius] ರೇಡಿಯಸದ ವರ್ತುಲದಲ್ಲಿ ೩೩,೦೦೦ ಎಕರೆ ಭೂಮಿ ಇರುತ್ತದೆ. ಇಷ್ಟು ಜಾಗಾ ೪,೦೦೦ ಜನಸಂಖ್ಯೆಯ ಜೀವನಕ್ಕೆ ಸಾಕು. ೮೦,೦೦೦ ಅಥವಾ ಒಂದು ಲಕ್ಷ ಹಳ್ಳಿಗಳಾದರೆ ಪ್ರತಿಯೊಂದು ಹಳ್ಳಿಯಲ್ಲಿ ಹಾಯಸ್ಕೂಲು, ಆಸ್ಪತ್ರೆ, ಸಣ್ಣ ಮುನಿಸಿಪಾಲ್ಟಿ, ರಸ್ತೆ, ಮುಂತಾದ ವ್ಯವಸ್ಥೆಗಳಾಗುವುದು ಸಾಧ್ಯ. ಇದ್ದೂರಿನಲ್ಲೇ ಹಾಯಸ್ಕೂಲಿದ್ದರೆ ಹುಟ್ಟಿದ ಮಕ್ಕಳೆಲ್ಲರೂ ವಿಶೇಷ ಖರ್ಚಿಲ್ಲದೆ ಮೆಟ್ರಿಕ್ ವರೆಗೆ ಕಲಿಯಬಹುದು. ನಿರಕ್ಷರತೆಯ ನಿರ್ಮೂಲನವಾಗುವುದು. ೭ ಲಕ್ಷ ಹಳ್ಳಿಗಳಿದ್ದರೆ ಎಲ್ಲ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲಿಕ್ಕೆ ಹಿಂದುಸ್ತಾನದ ವಾರ್ಷಿಕ ಉತ್ಪನ್ನದ ಅರ್ಧ ಹಣ ಖರ್ಚಾಗಬೇಕಾದೀತು. ಈ ದೃಷ್ಟಿಯಿಂದ ೪,೦೦೦ಕ್ಕಿಂತ ಕಡಿಮೆ ಜನಸಂಖ್ಯೆಯ ಹಳ್ಳಿ ಇರಬಾರದು. ೧ ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯ ಪಟ್ಟಣವಿರಬಾರದು; ಎಂದು ನಿರ್ಧರಿಸಿದರೆ, ಆ ದಿಶೆಯಲ್ಲಿ ಮುನ್ನಡೆ ಇಟ್ಟರೆ ಮಾತ್ರ ಎಲ್ಲ ಹಳ್ಳಿಗಳಲ್ಲಿ ಸಮಗ್ರ ಗ್ರಾಮಸೇವೆಯು ಶಕ್ಯವಾಗುವುದು. ಇಲ್ಲದಿದ್ದರೆ ಕಸ್ತೂರಬಾ ನಿಧಿ, ಗಾಂಧೀ ನಿಧಿ ಎಲ್ಲವನ್ನು ಸೇರಿಸಿದರೂ ಕೆಲವು ಹಳ್ಳಿಗಳಲ್ಲಿ ಮಾತ್ರ ಕೆಲಸ ಸಾಧ್ಯವಾಗಬಹುದು. ಲಕ್ಷಾಂತರ ಹಳ್ಳಿಗಳಿಗೆ ಗಾಂಧೀ ಸಂದೇಶವನ್ನು ಮುಟ್ಟಿಸುವ ಹಂಬಲವನ್ನು ನಾವು ಬಿಟ್ಟುಕೊಡಬೇಕಾಗುವುದು. ಈ ನನ್ನ ಸೂಚನೆಯ ಸಾಧಕ ಬಾಧಕಗಳನ್ನು ವಿವರವಾಗಿ ಇಲ್ಲಿ ವಿಶ್ಲೇಷಣೆ ಮಾಡಲಿಚ್ಛಿಸುವುದಿಲ್ಲ. ಈ ಪ್ರಶ್ನೆಯನ್ನು ತಜ್ಞರು ಹೆಚ್ಚು ವಿಮರ್ಶೆಮಾಡಬೇಕು. ಹೆಚ್ಚೆಚ್ಚು ವಿಚಾರ ಮಾಡಿದಷ್ಟೂ ಹಿಂದುಸ್ತಾನದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಹಳ್ಳಿಗಳಿರಬಾರದೆಂದು ನನಗೆ ಕಾಣುತ್ತದೆ. ರಚನಾತ್ಮಕ ಕಾರ್ಯಕರ್ತರಾದ ನೀವೆಲ್ಲರೂ ಇದರ ಪೂರ್ಣ ವಿಮರ್ಶೆಮಾಡಿ ಇನ್ನು ೩೦ ವರ್ಷಗಳೊಳಗೆ ಈ ಕಾರ್ಯವನ್ನು ಸಾಧಿಸಿದ್ದಾದರೂ ನಾನು ಅದನ್ನು ವಿಲಂಬವೆಂದು ಎಣಿಸುವುದಿಲ್ಲ.

ಸ್ವಾವಲಂಬನಕ್ಕೆ ಮಹತ್ವ

ಸ್ವರಾಜ್ಯ ಸಿಗುವುದಕ್ಕಿಂತ ಮುಂಚೆ ರಚನಾತ್ಮಕ ಕಾರ್ಯದಲ್ಲಿ ಜನರಿಗೆ ಹೆಚ್ಚು ಶ್ರದ್ಧೆ ಇತ್ತು. ಅವರು ಅದಕ್ಕಾಗಿ ಹಣ ಕೊಡಲು ಸಿದ್ಧರಾಗುತ್ತಿದ್ದರು. ಈಗ ಆ ಕೆಲಸವನ್ನು ಸರಕಾರವೇ ಮಾಡಲೆಂಬ ಪ್ರವೃತ್ತಿ ಹೆಚ್ಚಾಗಿದೆ. ಕಾರ್ಯಕರ್ತರೂ ಮೊದಲಿನಂತೆ ಮುಂದೆ ಬರುವದಿಲ್ಲ, ಸರಕಾರ ಏನು ಮಾಡಬಲ್ಲದು! ಜನರು ಕೆಲಸ ಮಾಡಿದರೆ ಸರಕಾರ ಸಹಾಯಮಾಡಬಲ್ಲದು. ಎಲ್ಲಕ್ಕೂ ಸರಕಾರವನ್ನೇ ಅವಲಂಬಿಸುವ ಹೊಸದಾಗಿ ಬೆಳೆದಿರುವ ಈ ವೃತ್ತಿಯನ್ನು ಕಿತ್ತು ಹಾಕಿ ಜನತೆಯಲ್ಲಿ ಸ್ವಾವಲಂಬನದ ಭಾವನೆಯನ್ನು, ಆತ್ಮವಿಶ್ವಾಸವನ್ನು ರಚನಾತ್ಮಕ ಕಾರ್ಯಕರ್ತರು ನಿರ್ಮಾಣ ಮಾಡಬೇಕಾಗಿದೆ. ಹೊಸದಾಗಿ ಬರುವ ಕಾರ್ಯಕರ್ತರು ಹಿಂದಿನಂತೆ ಇಂದೂ ಸ್ವಾರ್ಥವನ್ನು ಬಿಟ್ಟು ಬರುವವರಾಗಬೇಕೆಂದು ಬಯಸುವದೂ ಸರಿಯಲ್ಲ. ಅವರಿಗೆ ಯೋಗ್ಯ ಸಂಬಳ ದೊರೆಯಬೇಕು. ಆದರೆ ಅವರು ಸಮಗ್ರ ಗ್ರಾಮಸೇವಾ ಧ್ಯೇಯದಿಂದ ಪ್ರೇರಿತರಾಗಿ, ಬಂದ ಸಂಬಳದಲ್ಲಿ ತೃಪ್ತರಾಗಿ, ಹೆಚ್ಚಿನದಕ್ಕೆ ಆಸೆಪಡದೆ ಯದೃಚ್ಛಾಲಾಭ ಸಂತುಷ್ಟರಾಗಿ, ಅಪರಿಗ್ರಹ ವ್ರತವನ್ನಂಗೀಕರಿಸಿ ತನ್ನದಲ್ಲದ್ದನ್ನು ಮುಟ್ಟದೆ, ಸತ್ಯಸಂಧತೆಯಿಂದ ದುಡಿಯುವ ಶ್ರದ್ಧಾಳುಗಳು ಮಾತ್ರ ಆಗಿರಬೇಕು. ಇಂಥ ಕಾರ್ಯಕರ್ತರು ಹಲವರು ರಚನಾತ್ಮಕ ಕಾರ್ಯರಂಗಕ್ಕೆ ಬಂದು ರಾಷ್ಟ್ರ ಪುನರ್ನಿರ್ಮಾಣ ಕಾರ್ಯಕ್ಕೆ ಜೀವನವನ್ನು ಮುಡುಪಾಗಿಟ್ಟು ಗಾಂಧೀ ಪರಂಪರೆಯನ್ನು ಸಾಗಿಸಬೇಕೆಂದು ತರುಣರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಜಯ್ ಹಿಂದ್

ಚನಾತ್ಮಕ ಕಾರ್ಯವೆಂದರೆ ರಾಷ್ಟ್ರನಿರ್ಮಾ ರ್ಯ. ಈ ಹೆಸರನ್ನು ರಾಜಕೀಯ ದಿಂದ ಬೇರೆಯಾದ ರಾಷ್ಟ್ರಸೇವಾ ಕಾ ವನ್ನು ಸೂಚಿಸಲು ಉಪಯೋಗಿಸಲಾ ದೆ. ರಾಜಕೀಯವೂ ರಾಷ್ಟ್ರನಿರ್ಮಾಣ ವೇ. ಆದರೆ ರಾಜಕೀಯದಲ್ಲಿ ಅಧಿಕಾರ; ಅದಕ್ಕಾಗಿ ಪಕ್ಷ ಪಂಗಡಗಳ ಜಂಜಾ ಡೆ. ಪಕ್ಷದ ಬಲಾಬಲದ ಮೇಲೆ ನಿರ್ಭರ ನ ರಾಜಕೀಯದಲ್ಲಿ ಸ್ವಪಕ್ಷವನ್ನು ಪುಷ್ಟಿ ಳಿಸಿ ವಿರುದ್ಧ ಪಕ್ಷದ ಬಲವನ್ನು ಕುಗ್ಗಿ ವುದು ಆವಶ್ಯವಾಗಬಹುದು. ಪಕ್ಷಪಂಗ ಳ ಹರಾಟದಿಂದ ದೂರ ಸರಿದು ಎಲ್ಲ ರ ಮಿತ್ರನಾಗಿ, ಹಿತಚಿಂತಕನಾಗಿ, ಶತ್ರು ಕ್ರ ಸಮಭಾವನೆಯಿಂದ ಎಲ್ಲರಿಗೂ ಸೇ ಸಲ್ಲಿಸುವ ಯತ್ನಮಾಡುವುದು ರಚ ಕ ಕಾರ್ಯದಲ್ಲಿ ಮಾತ್ರ ಸಾಧ್ಯ. ಬಲವ ಬೆಳೆಸಿ, ಬುದ್ಧಿಯನ್ನು ತಿದ್ದಿ, ನೀತಿಯ ನೆಲೆಗೊಳಿಸಿ, ಅಂತಃಕರಣವನ್ನು ಅರಳಿ ಮಷ್ಟಿಯಲ್ಲಿ ಸತ್ಯವನ್ನು ಸ್ಥಾಪಿಸಿ, ಅ ಷಣವೃತ್ತಿಗೆ ಪರಿಸಮಾಪ್ತಿಯಾದ ಕೊ , ಸಮಾಜದಲ್ಲಿ ವ್ಯಕ್ತಿಗೆ "ನಿರ್ಭಯ" ಬ ವಾತಾವರಣವನ್ನು ನಿರ್ಮಿಸಿ, ರಾಷ್ಟ್ರ ಅತ್ಯಂತ ಕನಿಷ್ಠನಿಗೆ ಶ್ರೇಷ್ಠಮಾನಕೊ ಕನಿಷ್ಠನ ಉದ್ಧಾರ ಅಥವಾ "ಸರ್ವೋ ಯ"ವನ್ನು ಸಾಧಿಸುವುದೇ ರಚನಾತ್ಮಕ ರ್ಯದ ಧ್ಯೇಯ. ಈ ಮಂತ್ರದ ಋಷಿ ಮಪೂಜ್ಯ ಮಹಾತ್ಮಾಗಾಂಧೀಜಿಯವ ರಾಜಕೀಯಕ್ಕಿಂತಲೂ ರಚನಾತ್ಮಕ ಕಾ ಕ್ಕೆ ಹೆಚ್ಚಿನ ಮಹತ್ವ ಕೊಟ್ಟರು. ರಚ ಕ ಕಾರ್ಯಕ್ಕೆ ರಾಜಕೀಯ ಕಾರ್ಯ ರು ಅಧಿಕಾರದಿಂದ ಬೆಂಬಲಕೊಟ್ಟು ಷ್ಟವನ್ನು ಬಲಿಷ್ಠ ಮಾಡಬಲ್ಲರೇ ವಿನಾ ನಾತ್ಮಕ ಕಾರ್ಯಕರ್ತರಿಲ್ಲದ ರಾಷ್ಟ್ರವು ಜಕೀಯದಿಂದಲೇ ಬಲಿಷ್ಠವಾಗುವದು ವಿಲ್ಲ. ಇಂದು ಸ್ವತಂತ್ರ ಹಿಂದುಸ್ಥಾನವು ಷ್ಟವಾಗಲು ಸಹಸ್ರ ಮುಖದಿಂದ ರಚ ತ್ಮಕ ಕಾರ್ಯವು ನಡೆಯಬೇಕಾಗಿದೆ

ಸ್ವರಾಜ್ಯ ಗಳಿಸಿದಬಳಿಕ ಎಲ್ಲರ ಲಕ್ಷ್ಯ ರಾ ಕೀಯದ ಕಡೆಗೆ ಹೊರಳಿರುವುದು, ರಾಜ ಯವು ಎಲ್ಲರನ್ನೂ ಆಕರ್ಷಿಸುವುದು ಸಹ ಜಲ್ಲವೆಂದು ನಾ ಹೇಳಲಾರೆ. ರಾಜಕೀಯ ಸಿವಟಿಕೆಗಳಿಗಾದರೂ ಇನ್ನೂ ಹಲವು ರ್ಯಕರ್ತರ ಅವಶ್ಯಕತೆ ಇದೆ. ಆ ಕೆಲಸ ಚೆನ್ನಾಗಿ ಹುಲುಸಾಗಿ ನಡೆಯಬೇಕಾಗಿ ಆದರೆ ರಾಜಕೀಯ ಕಾರ್ಯಕರ್ತರಲ್ಲೂ ಚನಾತ್ಮಕ ದೃಷ್ಟಿ ಸಂಸ್ಕಾರ ಅವಶ್ಯ ಬೇಕು. ಚನಾತ್ಮಕ ದೃಷ್ಟಿ ರಾಜಕೀಯದಲ್ಲಿ ನೆಲೆ ರಬೇಕಾದರೆ ರಾಜಕೀಯದ ಹೊರಗೆ ಷ್ಟರಾಗಿ ಅಸಂಖ್ಯ ರಚನಾತ್ಮಕ ಕಾರ್ಯಕ ಇದ್ದು ರಾಷ್ಟ್ರದಲ್ಲೆಲ್ಲಾ ರಚನಾತ್ಮಕ ಕಾರ್ಯ ಸರಪಳಿಯೂ ಅಶೋಷಣ ವಾತಾವರ ವು ಬೆಳೆಯಬೇಕಾಗುತ್ತದೆ. ಈ ದೃಷ್ಟಿ ಂದ ರಚನಾತ್ಮಕ ಕಾರ್ಯಕರ್ತರ ಸೈನ್ಯ ವ್ವೇ ಬೆಳೆಸಬೇಕಾಗಿದೆ

ಸ್ವರಾಜ್ಯ ಬಂದಮೇಲೆ ಕೈಗೆ ಬಂದ ತುತ್ತು ಯಿಗೆ ಬರಲಿಲ್ಲದಂತಾಗಿ ಜನತೆಯು ಸ್ವಾ ತ್ರ್ಯ ಸ್ಫೂರ್ತಿಯಿಂದ ವಂಚಿತವಾಗಬೇಕಾ ತು. ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯ ಅಂ ಕರಣವು ಸ್ವರಾಜ್ಯದಿಂದ ಸ್ಫುರಿಸಬೇಕಾದ ನಿನೋ ಒಂದು ಕೊರತೆ ಇದೆಯೆಂಬುದು, ಲ್ಲರ ಅನುಭವದ ಮಾತಾಗಿದೆ. ಆ ಕೊರತೆ ು ರಚನಾತ್ಮಕ ಕಾರ್ಯದ ಅಭಾವವೆಂಬು ನ್ನು ನಾನು ನಿಮ್ಮ ಲಕ್ಷ್ಯಕ್ಕೆ ತರಬಯಸು ನೆ. ರಾಜಕೀಯದಲ್ಲಿರುವವರು ರಾಜಕೀ ವನ್ನು ಬಿಟ್ಟು ರಚನಾತ್ಮಕ ರಂಗಕ್ಕೆ ಬರ ಕೆಂದು ನಾನು ಹೇಳಬಯಸುವುದಿಲ್ಲ. ಬಂ ಒಳ್ಳೆಯದೇ. ಮನಶ್ಶಾಂತಿಯನ್ನು ಕಳ ಂಡ ಮಂದಿ ಶಾಂತಿಯನ್ನು ಮತ್ತೆ ಗಳಿಸಿ ಳ್ಳುವುದಾದರೆ ಯಾರು ಬೇಡ ಎನ್ನಬಹು ? ಆದರೆ ಹಲವು ಜನರು, ಅಸಂಖ್ಯ ಜನ ರಚನಾತ್ಮಕ ರಂಗಕ್ಕೆ ಕಾಲಿಡಬೇಕೆಂದು ನು ಕರೆಯುತ್ತೇನೆ. ಅದರಲ್ಲಿ ತೃಪ್ತಿಯಿದೆ, ಂತಿಯಿದೆ, ಲೋಕಕಲ್ಯಾಣವಿದೆ.

ಕರ್ನಾಟಕ ಪ್ರಾಂತ

ಕರ್ನಾಟಕದ ದೃಷ್ಟಿಯಿಂದ ಮಾತಾಡುವು

ಪಾಣೆಮಂಗಳೂರಿನ ದ. ಕ. ಜಿಲ್ಲಾ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನದಲ್ಲಿ

ಶ್ರೀ. ಕಾ. ಅ. ವೆಂಕಟರಾಮಯ್ಯನವರ

ಅಧ್ಯಕ್ಷ ಭಾಷಣ

ದಾದರೆ ಕನ್ನಡಿಗರೆಲ್ಲರ ಅಂತಃಕರಣದ ಆಂತ ರಾಳದಲ್ಲಿ ಮಿಡಿಯುತ್ತಿರುವ ಮಾತು "ಕರ್ನಾಟಕಪ್ರಾಂತನಿರ್ಮಾಣ", ಸಮಗ್ರ, ಸುಪುಷ್ಟ, ಕನ್ನಡ ಜನತಾರಾಜ್ಯವು ನಿರ್ಮಾಣವಾಗಬೇಕಾಗಿದೆ. ಕನ್ನಡ ಸಂಸ್ಕೃತಿ ಸಮನ್ವಯಕ್ಕೆ, ಕನ್ನಡ ನುಡಿಯ ಸಹಜ ವಿಕಾಸಕ್ಕೆ ಕನ್ನಡ ಜನತೆಯ ಸರ್ವತೋಮುಖ ಆರ್ಥಿಕ ಉನ್ನತಿಗೆ ಇಂಬಾಗುವ ಅಖಂಡ ಕರ್ನಾಟಕ ನಿರ್ಮಾಣವು ದೊಡ್ಡ ರಚನಾತ್ಮಕ ಕಾರ್ಯವಲ್ಲವೇ! ಮೂರುಜನರ ಸಮಿತಿಯು ಭಾಷಾವಾರ ಪ್ರಾಂತರಚನೆಯನ್ನು ಮುಂದೂಡಲೆತ್ನಿಸಿದೆಯೆಂಬ ಟೀಕೆಗೆ ಗುರಿಯಾಗಿದೆ. ಆದರೆ ನನಗೆ ಆ ವರದಿಯನ್ನು ಓದಿ ಮತ್ತೊಂದು ದೃಷ್ಟಿಯಿಂದ ಪರಮಾನಂದವಾಯ್ತು. ಆ ವರದಿಯಲ್ಲಿ "ಒಕ್ಕೂಟ ಭಾಗಗಳು ಸಂಸ್ಥಾನಗಳಲ್ಲಿ ಸೇರಲಾಗದು. ಮೈಸೂರು ಸೇರಿಯೆ ಕರ್ನಾಟಕ ಪ್ರಾಂತವಾಗಬೇಕು. ಸಂಸ್ಥಾನಗಳ ತೊಡಕು ಇಲ್ಲದಂತಾಗಬೇಕು." ಈ ಮೂರು ಮಾತುಗಳು ನಿಚ್ಚಳವಾಗಿ ಹೇಳಲ್ಪಟ್ಟಿವೆ. ಈ ಮಾತಿನಲ್ಲಿ ವಿಚಾರದ ಬಲವಿದೆ; ಕಾಯಿದೆಯ ನಿಲುವಿದೆ, ಜನತೆಯ ಒಲವಿದೆ; ಭಾರತದ ಧೋರಣೆಯಿದೆ, ಎಲ್ಲರ ಹಿತವಿದೆ; ಮೈಸೂರು ಸೇರಿ ಕರ್ನಾಟಕ ಪ್ರಾಂತವಾಗಲೆಂಬ ಉಪದೇಶವಿದೆ. ಕನ್ನಡ ಮಾತಾಡುವ ಜನರೆಲ್ಲಾ ಒಂದು ಆಡಳಿತದಲ್ಲಿ ಬರುವ ಅಮೃತ ಗಳಿಗೆಯ ಸೂಚನೆ ಇದೆ. ಈ ವಿಷಯದ ಕಡೆಗೆ ಮೈಸೂರಿನ ರಾಷ್ಟ್ರಸೇವಕರ ಲಕ್ಷ್ಯವನ್ನೆಳೆಯಲು ಅವರ ನಲುಗೆಯ ಸೇನುವನ್ನು ಬೇಡುತ್ತೇನೆ. ಅವರು ಇಂದೇ ಮಾಡಬೇಕಾದ ರಚನಾತ್ಮಕ ಕಾರ್ಯವಿದು. ಅದನ್ನು ಅವರೇ ಮಾಡುವುದು ಉಚಿತ ಅವಶ್ಯಂಭಾವಿಯೂ ಅನಿವಾರ್ಯವೂ ಆದ ಈ ಕಾರ್ಯವನ್ನು ಅವರೇ, ಈಗಲೇ, ಮಾಡಬೇಕೆಂದು ನನ್ನ ಆಶೆ.

ಮೈಸೂರು ಮುಂದಾಳುಗಳನ್ನು ಒಂದೂ ಡಿ, ಅವರನ್ನು ಸುತ್ತುವರಿದು ಕಾರ್ಯಸಾಧಿಸಲು ಹತ್ತಾರು ಸಹಸ್ರ ಸತ್ಯಾಗ್ರಹಿಗಳ ದಂಡಯಾತ್ರೆ ಮಾಡಿ ಜಯಸಾಧಿಸಬೇಕೆಂಬ ಮಾತುಗಳು ಕೇಳಿಬರುತ್ತಿವೆ. ಈ ಮಾತುಗಳ ಬಗ್ಗೆ ಆದರ ತೋರುವುದು ಸಾಧ್ಯವಿಲ್ಲ. ಮೈಸೂರು ಕಾಂಗ್ರೆಸ ಮುಂದಾಳುಗಳೆಲ್ಲರೂ ನನ್ನ ಆಪ್ತಮಿತ್ರರು. ಅವರಲ್ಲಿ ಅನೇಕ ಅತಿರಥ ಮಹಾರಥರನ್ನು ಒಂದಾನೊಂದು ಕಾಲದಲ್ಲಿ ಕಾಂಗ್ರೆಸಿನೊಳಗೆ ಬರಬೇಕೆಂದು ವಿನಂತಿಮಾಡಿ ಅದರಲ್ಲಿ ಯಶಸ್ವಿಯಾಗಿದೇನೆ. ಅವರ ಅಂತಃಕರಣವನ್ನು ಚೆನ್ನಾಗಿ ಅರಿತಿದ್ದೇನೆ. ಸಮಗ್ರ ಕರ್ನಾಟಕ ನಿರ್ಮಾಣ ಕಾರ್ಯದಲ್ಲೂ ಅವರೇ ಮುಂದಾಗಿ ಬರಬೇಕೆಂಬ ಭರವಸೆ ನನಗಿದೆ. ಅವರು ತಮ್ಮ ತ್ಯಾಗ ಸಾಹಸಗಳಿಂದ ಶಕ್ತರಾಗಿದ್ದಾರೆ. ಅವರಿಗೆ ಜನತೆಯ ಬೆಂಬಲವಿದೆ. ಅವರು ಕರ್ನಾಟಕದ ಆಧಾರಸ್ತಂಭರಾಗುವುದರಲ್ಲಿ ಸಂಶಯವಿಲ್ಲ. ಅವರು ಸಕ್ರಿಯವಾಗಿ ಸಮಗ್ರ ಕರ್ನಾಟಕ ನಿರ್ಮಾಣ ಕಾರ್ಯಕ್ಕೆ ವಿಲಂಬಮಾಡದೆ ಕೈಹಾಕಬೇಕೆಂದು ನಾನು ಆಮಂತ್ರಿಸುತ್ತೇನೆ

ಅನ್ನ ದೇವರು

ಹಲವು ಕಾಲದಿಂದ ಹೊರದೇಶಗಳಿಗೆ ಅನ್ನ ಧಾನ್ಯವನ್ನು ನಿರ್ಯಾತಮಾಡುತ್ತಿದ್ದ ಹಿಂದುಸ್ಥಾನಕ್ಕೆ ಇಂದು ಅನ್ನವು ಹೊರಗಿನಿಂದ ಬರಬೇಕಾಗಿದೆ. ವಿದೇಶೀ ಬಟ್ಟೆಗಾಗಿ ವರ್ಷಾ ೬೦ ಕೋಟಿ ರೂಪಾಯಿ ಚೆಲ್ಲುತ್ತಿದ್ದ ನಾವು ಅದನ್ನು ಉಳಿಸಿಕೊಂಡೆವೆನ್ನುವಷ್ಟರಲ್ಲಿ ಅನ್ನಕ್ಕಾಗಿ ೧೩೦ ಕೋಟಿ ರೂಪಾಯಿಗಳನ್ನು ತೆರುವ ಪಾಳಿ ಬಂದಿದೆ. ಈ ಕೊರತೆಯ ವೇಳೆಯಲ್ಲಿ ಅನ್ನ ದೇವರು ಪ್ರತ್ಯಕ್ಷವಾಗಬೇಕಾಗಿದೆ. ಅನ್ನ ದೇವರ ಪೂಜಾರಿಯಾದ ರೈತನ ತಪಸ್ಸು ಹೆಚ್ಚಾಗಬೇಕಾಗಿದೆ; ಶ್ರದ್ಧೆಯಿಂದ

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

SOB

Highly perfumed and medicated, worth using daily by one and all, keeps hair black and relieves head-ache etc.

REGD. TRADE MARK

Manufactured by:-

Swadeshi Oushadhi Bhandara (Regd.)

KUNJAL P. O Brahmavar, S. K.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ದರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao Kunjoor, Manager.

ಸಾಗಬೇಕಾಗಿದೆ. ಮಹಾತ್ಮಾ ಗಾಂಧಿಯವರು ಖಾದೀ ಮತ್ತು ಗ್ರಾಮೋದ್ಯೋಗ ಕಾರ್ಯಕರ್ತರಿಗೆ "ಒಕ್ಕಲತನವು ಹಳ್ಳಿಯ ಮೊದಲನೇ ಉದ್ಯೋಗ. ಅದರ ಕಡೆಗೆ ಪ್ರಥಮ ಲಕ್ಷ್ಯವನ್ನು ಕೊಡಬೇಕು" ಎಂದು ಹೇಳುತ್ತಿದ್ದರು. ಹಿಂದುಸ್ಥಾನದ ಮುಖ್ಯಮಂತ್ರಿಗಳು, "ಆಹಾರವಿಲ್ಲದೆ ಕೆಲವು ಮಂದಿ ಸತ್ತರೂ ಸರಿ; ಇನ್ನೆರಡು ವರ್ಷಗಳ ಬಳಿಕ ವಿದೇಶಗಳಿಂದ ಅನ್ನ ಧಾನ್ಯಗಳನ್ನು ತರಿಸತಕ್ಕದ್ದಲ್ಲ" ಎಂದಿದ್ದಾರೆ. ಅನ್ನದ ಬಗ್ಗೆ ಹಿಂದುಸ್ಥಾನವು ಸ್ವಾವಲಂಬಿಯಾಗಬೇಕೆಂಬ ಉತ್ಕಟಶ್ರದ್ಧೆ ಈ ಮಾತುಗಳಿಂದ ವ್ಯಕ್ತವಾಗುವುದು. ಈ ಮಾತು ತಪ್ಪದೆ ಕಾರ್ಯರೂಪಿಯಾಗಬೇಕು. ಇನ್ನೆರಡು ವರ್ಷಗಳಲ್ಲಿ ಅನ್ನದ ಬಗ್ಗೆ ನಾವು ಸ್ವಾವಲಂಬಿಯಾಗುವಂತೆ ಎಲ್ಲರೂ ನಾಲ್ಕಾಣೆ ಭಾಗ ಹೆಚ್ಚು ಬೆಳೆಯಲು ವಿಶಿಷ್ಟ ಪ್ರಯತ್ನಮಾಡಬೇಕು. ಭೂಮಿಯ ಸುಧಾರಣೆ, ಬೀಜದ ಸುಧಾರಣೆ, ದನಗಳ ಪೀಳಿಗೆಯ ಸುಧಾರಣೆ, ಗೊಬ್ಬರದ ಉತ್ಪನ್ನ ಹೆಚ್ಚುವಿಕೆ ಮುಂತಾದ ಒಕ್ಕಲತನದ ಪ್ರಶ್ನೆಗಳನ್ನು ಅಭ್ಯಾಸಮಾಡಿ ಇಡೀ ಜನತೆ ಹೆಚ್ಚು ಆಹಾರ ಬೆಳೆಯುವ ಕಡೆಗೆ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಬೇಕಾಗಿದೆ.

ಹಾಲನ್ನು ಚರಿಗೆಯಲ್ಲಿ ಹಾಕಿಕೊಟ್ಟರೆ ಹಾಲನ್ನು ಕುಡಿದು ಚರಿಗೆಯನ್ನು ವಾಪಸು ಕೊಡುವುದು ನೀತಿ. ಆದರೆ ಹಾಲನ್ನೂ ಚರಿಗೆಯನ್ನೂ ಕೂಡೇ ಚಹಾದಂಗಡಿಗೆ ಮಾರಿ ಚಹಾ ಕುಡಿದುಬಿಡುವ ನೀತಿಯನ್ನು ರೈತನು ಅವಲಂಬಿಸುತ್ತಾನೆ. ಭೂಮಿತಾಯಿಯು ದಂಟನ್ನು ಬೆಳೆಸಿ, ದಂಟಿನಮೇಲೆ ತೆನೆಯಿಟ್ಟು, ತೆನೆಯಲ್ಲಿ ಚಟ್ಟಿನೊಳಗೆ ಕಾಳಿಟ್ಟು, ಸುರಕ್ಷಿತವಾಗಿ ಎಲ್ಲೆಲ್ಲೂ ಚೆಲ್ಲದಂತೆ ಕಾಳಿನಲ್ಲಿ ಎಣ್ಣೆ ತುಂಬಿ, ಕೊಡುತ್ತಾಳೆ. ತನ್ನ ಹಳ್ಳಿಯಲ್ಲೇ ಗಾಣ ನಡೆಸಿ, ಎಣ್ಣೆ ತೆಗೆದುಂಡು ತಿಂದು, ಹಿಂಡಿ, ಚಟ್ಟು, ದಂಟು, ಇವುಗಳನ್ನೆಲ್ಲ ಗೊಬ್ಬರದ ರೂಪವಾಗಿ ಭೂಮಿಗೆ ವಾಪಸುಕೊಡಬೇಕಾದದ್ದು ರೈತನ ಕರ್ತವ್ಯ. ರೈತನು ಹಾಗೆ ಮಾಡದೆ ಎಣ್ಣೆಕಾಳನ್ನು ಪರಸ್ಥಳಕ್ಕೆ ಒಯ್ದು ಗಿರಣಿಗೆ ಮಾರುತ್ತಾನೆ. ಗಿರಣಿ ಮಾಲಕನು ಎಣ್ಣೆ, ಹಿಂಡಿ, ಎರಡನ್ನೂ ದೂರದೇಶಕ್ಕೆ ವ್ಯಾಗನುಗಳಲ್ಲಿ ಕಳಿಸಿ ಹೆಚ್ಚು ಬೆಲೆ ಸಿಕ್ಕಲ್ಲಿ ಮಾರುತ್ತಾನೆ. ಆ ಹಿಂಡಿಯು ಗೊಬ್ಬರವಾಗಿ ಹಳ್ಳಿಯ ಭೂಮಿಗೆ ಹಿಂತಿರುಗಿ ಮುಟ್ಟುವುದೇ ಇಲ್ಲ.

ಹಳ್ಳಿಯ ಕಸ, ಸಗಣಿ, ಪೇಸಿಗೆ, ಎಲ್ಲವೂ ಗೊಬ್ಬರವಾಗಬೇಕು. ಕಳಿತ ಗೊಬ್ಬರದ ಪದ್ಧತಿಯನ್ನು ರೈತನಿಗೆ ಕಲಿಸಬೇಕು. ಗೊಬ್ಬರದ ಉತ್ಪಾದನೆ ಸಹಜರೀತಿಯಿಂದ ಹೆಚ್ಚಾಗಬೇಕೇವಿನಾ ರಾಸಾಯನಿಕ ಗೊಬ್ಬರದ ಅವಲಂಬನೆಯು ಹೆಚ್ಚಾಗತಕ್ಕದ್ದಲ್ಲ.

ಪೇಸಿಗೆ ಗೊಬ್ಬರವು ಪೂರ್ಣ ಅಲಕ್ಷ್ಯಕ್ಕೊಳಪಟ್ಟಿದೆ. ಇದರಿಂದ ಹಳ್ಳಿಗಳ ಸ್ವಚ್ಛತೆಯೂ ಕೆಟ್ಟಿದೆ. ಪೇಸಿಗೆ ಗೊಬ್ಬರವು ಉತ್ತಮ ಗೊಬ್ಬರ. ಅದರ ಉಪಯೋಗ ಪ್ರತಿ ಹಳ್ಳಿಯಲ್ಲೂ ಆಗಬೇಕಾಗಿದೆ. ಕೆಲವು ದೇಶಗಳಲ್ಲಿ ಜನರು ಪೇಟೆಯ ಹಾಸಿ ರೌಚಕ್ಕೆ ಹೋಗಿ ಕಡೆಗೆ ಆ ಪೇಪರನ್ನು ಸುತ್ತಿ ತಮ್ಮ ಹೊಲಕ್ಕೆ ಒಯ್ದು ಹಾಕುವರೆಂದು ಕೇಳಿದ್ದೇನೆ. ಇದು ಸತ್ಯವಾದರೆ ಅವರಿಗೆ ನನ್ನದೊಂದು ನಮಸ್ಕಾರ. ಅವರು ನನಗೆ ಸರ್ವಥಾ ಮಾನ್ಯರು. ಅನ್ನದ ಉತ್ಪಾದನೆಯಲ್ಲಿ ನಾವು ಯುದ್ಧೋನ್ಮಾದರಂತೆ ಕೆಲಸಮಾಡಿ ಬೇಗನೇ ವಿದೇಶಗಳಿಂದ ಒಂದು ಕಾಳು ಅನ್ನವನ್ನೂ ಬಯಸದಂತಾಗಬೇಕು. ಯಾವ ಪ್ರಯತ್ನವೂ ಸಣ್ಣದಲ್ಲ, ಯಾವ ವಸ್ತುವೂ ಕೀಳಲ್ಲ.

ರೈತನಿಗೊಂದು ಕಿವಿಮಾತು. ರೈತ ಕಳ್ಳಪೇಟೆಗೆ ಇಳಿದರೆ ಇನ್ನೇನು ಗತಿ! ರೈತನು ಬೆಳೆದ ಧಾನ್ಯದಲ್ಲಿ ತನ್ನ ಕುಟುಂಬಕ್ಕೆ ಸಾಕಷ್ಟನ್ನು ಇಟ್ಟುಕೊಂಡು ಉಳಿದ ಎಲ್ಲ ಧಾನ್ಯವನ್ನು ಸರಕಾರಕ್ಕೆ ಒಪ್ಪಿಸಬೇಕು. ಒಂದು ಸೇರು ಕಾಳನ್ನು ಮುಚ್ಚಿಟ್ಟುಕೊಂಡರೆ ಹಿಂದೂಸ್ಥಾನದಲ್ಲಿ ಎಲ್ಲಿಯೋ ಒಬ್ಬನ ಉಪವಾಸ

(೧೦ನೇ ಪುಟ ನೋಡಿರಿ)

ಆಡುಗಳ ಅಭಿವೃದ್ಧಿಯ ಆವಶ್ಯಕತೆ

ಆಡು ದರಿದ್ರರ ಧೇನು! ಆದರೆ ಹಾಲು ಅತಿ ಹಿತಕಾರಿ!

ಮಾನವನ ಆರೋಗ್ಯಕ್ಕೆ ಹಾಲೇ ಅತ್ಯುತ್ತಮವಾದ ಆಹಾರ. ಹಾಲುಗಳಲ್ಲಿಯೂ ಆಕಳ ಹಾಲು-ಆಡಿನ ಹಾಲು ಅತ್ಯಂತ ಶ್ರೇಷ್ಠ. ಆಕಳ ಹಾಲು ಎಲ್ಲರಿಗೂ ಸಿಕ್ಕುವುದು ಸಾಧ್ಯವಿಲ್ಲ. ಆಡಿನ ಹಾಲು ಕೂಡ ಎಲ್ಲರಿಗೂ ಸಿಕ್ಕುವಂತಾಗಬೇಕಾದರೆ ಅವುಗಳನ್ನು ಪ್ರಯತ್ನಪೂರ್ವಕವಾಗಿ ಬೆಳೆಸಬೇಕಾಗುತ್ತದೆ. ಈಗ ಯಾವ ಬಗೆಯ ಹಾಲೂ ಚಿಕ್ಕ ಮಕ್ಕಳಿಗೆ ಒದಗುತ್ತಿಲ್ಲವೆಂದೇ ಎಳೆಯ ಮಕ್ಕಳಿಗೆ ಬಾಲಮೃತ್ಯು ಬರುತ್ತಿದೆ; ತರುಣರಿಗೆ ಅಕಾಲ ವಾರ್ಧಕ್ಯ ಆವರಿಸುತ್ತಿದೆ. ಇನ್ನು ಮೇಲಾದರೂ ಈ ದುಃಸ್ಥಿತಿ ದೂರಾಗುವುದು ಅತ್ಯವಶ್ಯವಿದೆ. ಎಂದರೆಯೆ ಸ್ವತಂತ್ರಭಾರತ ಸದೃಢ ಸ್ತ್ರೀ ಪುರುಷರಿಂದ ಸಮೃದ್ಧವಾಗುವುದು.

ಸದ್ಯ: ಹಿಂದುಸ್ತಾನದಲ್ಲಿಯ ಆಕಳು ೧-೧॥ ಸೇರು ಹಾಲಿಗಿಂತ ಹೆಚ್ಚಾಗಿ ಹಿಂಡುವುದಿಲ್ಲ. ಆಡುಗಳ ಹಾಲಂತೂ ಅರ್ಧ ಸೇರಿಗೆ ಕಡಿಮೆಯೇ. ಈ ಪ್ರಮಾಣದಿಂದ ನೋಡಿದರೆ ಈಗಿರುವ ಆಡು-ಆಕಳುಗಳ ಸಂಖ್ಯೆಯಿಂದ ಭಾರತೀಯರ ಬದುಕಿಗೆ ಬೇಕಾದಷ್ಟು ಹಾಲು ಸಿಕ್ಕಲಾರದೆಂದು ಯಾರೂ ಹೇಳಬಹುದಾಗಿದೆ. ಆದರೆ ಹಾಲಿಲ್ಲದೆ ಇಂದು ಯಾರ ಜೀವನವೂ ನಡೆಯುವುದಿಲ್ಲ. ನಿತ್ಯದ ಚಹಾದ ಚಟಕ್ಕಾದರೂ ಪಾವು-ಸೇರು ಹಾಲು ಬೇಕೇಬೇಕು. ಇದು ನಮ್ಮಲ್ಲಿ ಸಿಕ್ಕುವುದಿಲ್ಲವೆಂದಾಗ ವಿದೇಶಿಯ ಹಾಲಿನ ಪುಡಿಯಿಂದ ನಮ್ಮ ಹಸಿವನ್ನು ಹಿಂಗಿಸಿಕೊಳ್ಳಬೇಕಾಗಿದೆ. ಇದು ಎಂತಹ ಶೋಚನೀಯ ಮತ್ತು ನಾಚಿಕೆಗೇಡು! ಹೊಟ್ಟೆಯ ಸಲುವಾಗಿ ಹೆರವರ ಮುಖವನ್ನು ನೋಡುವ ಈ ಹೀನತನ ಎಂದು ಹಿಂಗಬೇಕು?

ಆಕಳುಗಳನ್ನು ಸಾಕುವುದಂತೂ ಎಲ್ಲರಿಗೂ ಸಾಧ್ಯವಿಲ್ಲ. ಅದು ಆವಶ್ಯವೂ ಇಲ್ಲ. ಆಡುಗಳನ್ನು ಕಾಪಾಡುವದು ಯಾರಿಗೂ ಸಾಧ್ಯವಿದೆ. ಆವಶ್ಯವೂ ಇದೆ. ಆದರೆ ಈ ಕೆಲಸ ಒಂದು ಸುವ್ಯವಸ್ಥಿತ ರೀತಿಯಲ್ಲಿ ಸಾಗತಕ್ಕದು. ಸಂಘಟಿತ ಪ್ರಯತ್ನ ನಡೆದರಂತೂ ಒಳ್ಳೆಯದೇ. ಈ ಕಾರ್ಯದಲ್ಲಿ ಸರಕಾರವೂ ಲಕ್ಷ್ಯವನ್ನು ಪೂರಯಿಸತಕ್ಕದೆಂದು ಬೇರೆಯಾಗಿ ಹೇಳಬೇಕಾಗಿಲ್ಲ.

ಹಾಲು ಕೊಡುವ ಆಡುಗಳಲ್ಲಿ ನಮ್ಮ ಕಡೆಗೆ ಸುರಲೇ ಅಥವಾ 'ಕುಂಯಾಡು'ಗಳು ಶ್ರೇಷ್ಠವಾಗಿವೆ. ಇವುಗಳ ಹಾಲಿಗೆ ರುಚಿ ಹೆಚ್ಚು, ದುರ್ವಾಸನೆ ಕಡಿಮೆ. ನಮ್ಮ ದೇಶದಲ್ಲಿ ಇವು ೧ಸೇರಿಗಿಂತ ಹೆಚ್ಚಾಗಿಯೇ ಹಾಲನ್ನು ಕೊಡುತ್ತಿವೆ. ಇವುಗಳ ಯೋಗ್ಯ ಜೋಪಾಸನೆಯಾದರೆ ಎರಡು ಮೂರು ಸೇರುಗಳನ್ನು ಪಡೆಯಬಹುದು. ಇಂತಹ ಜಾತಿವಂತ ಆಡುಗಳನ್ನು ಹೇಗೆ ಹೆಚ್ಚಿಸಬೇಕು, ಅವುಗಳನ್ನು ಹೇಗೆ ಜೋಪಾನ ಮಾಡಬೇಕು ಎಂಬ ಬಗೆಗೆ ಕೆಲವು ವಿಚಾರಗಳ ದಿಗ್ದರ್ಶನ ಮಾಡುವೆವು.

ಆಡುಗಳ ತಳಿಯನ್ನು ಬೆಳೆಸಬೇಕಾದರೆ ಮೊದಲು ಇದ್ದ ಪ್ರಾಣಿಗಳನ್ನು ಬದುಕಿಸಿಕೊಳ್ಳಬೇಕಾಗುವುದು. ಉತ್ತರ ಗುಜರಾಥ ಆದರಲ್ಲಿಯೂ ವಿಶೇಷವಾಗಿ ಉತ್ತರಭಾಗದಲ್ಲಿ-ಮತ್ತು ಬಡೋದ ಇಂದೂರ ಮುಂತಾದ ಸ್ಥಳಗಳಲ್ಲಿ ಈ ಪ್ರಾಣಿಗಳ ಕೊಲೆ ನಿತ್ಯವೂ ನಡೆದಿರುತ್ತದೆ ಇದರಂತೆ ಬೇರೆ ಕಡೆಗಳಲ್ಲಿಯೂ ನಡೆದಿರಬಹುದಾಗಿದೆ. ಈ ಕಟುಕತನವನ್ನು ಕಾಯಿದೆಯಿಂದ ನಿಲ್ಲಿಸಬೇಕು. ಹಾಲು ಕೊಡಲಿಕ್ಕೆ ತಕ್ಕವಾದ ಯಾವುದೇ ಜಾತಿಯ ಆಡನ್ನು ಕೊಲ್ಲಲಿಕ್ಕೆ ಒಪ್ಪಿಗೆ ಕೊಡದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಾಯದ ಅಪ್ಪಣೆಯಾಗಬೇಕು.

ಇಂತಹ ಆಡುಗಳನ್ನು ಕೊಳ್ಳುವ ಬಗೆಗೆ ಸಹಕಾರಿ ಸಂಘಗಳು ಏರ್ಪಡಬೇಕು. ಇದರಿಂದ ಪರಪ್ರಾಂತಗಳಲ್ಲಿ ಅವುಗಳನ್ನು ಒಮ್ಮೆಲೆ ಕೊಳ್ಳುವ ಮತ್ತು ತುಸುವೇ ಖರ್ಚಿನಿಂದ ಒಮ್ಮೆಲೆ ತರಿಸುವ ಕೆಲಸಕ್ಕೆ ಅನುಕೂಲವಾಗುವುದು. ಅಲ್ಲದೆ ಬೇಕೆನಿಸುವ ಗಿರಾಕಿಗಳಿಗೆ ಈ ಸಂಘಗಳಿಂದ ಹಣದ ಮತ್ತು ಕಾಲದ ಅನುಕೂಲವಾಗುವುದು. ಈ ವಿಚಾರದಲ್ಲಿ ಸರಕಾರವೂ ಸಿರಿವಂತರೂ ಲಕ್ಷ್ಯಪೂರಯಿಸುವುದು ಅಗತ್ಯ.

ಈ ಬಗೆಯಲ್ಲಿ ಪ್ರಾಣಿಗಳನ್ನು ಸಂಗ್ರಹಿಸುವುದು ಮತ್ತು ಜನಗಳಿಗೆ ಒದಗಿಸುವ ಅನುಕೂಲತೆಯಾದ ಮೇಲೆ ಅವುಗಳ ಬೆಳವಣಿಗೆಯ ವಿಚಾರವಾಗಬೇಕು. ಆಡುಗಳು ವರುಷದಲ್ಲಿ ಎರಡು ಸಲ ಮರಿಗಳನ್ನು ಈಯುತ್ತವೆ. ಈ ಪ್ರಸಂಗದಲ್ಲಿ ಅವುಗಳ ಶುದ್ಧ ಜಾತಿಯ ಪೀಳಿಗೆ ಸಿದ್ಧವಾಗುವಂತೆ ಎಚ್ಚರ ಪಡಬೇಕಾಗುತ್ತದೆ. ಇದರಿಂದ ನಾಲ್ಕೈದು ವರುಷಗಳಲ್ಲಿ ಅವುಗಳ ಸಂಖ್ಯೆ ಏನಿಲ್ಲೆಂದರೂ ನಾಲ್ಕು ಪಟ್ಟಾದರೂ ಬೆಳೆಯುವುದು. ಅಲ್ಲದೆ ಶುದ್ಧ ಸಂತತಿ ಬೆಳೆದಂತೆ ಹಾಲು ಕರೆಯುವ ಪ್ರಮಾಣವೂ ಹೆಚ್ಚಾಗುವುದು. ಈ ಪ್ರಯೋಗದಲ್ಲಿ ಕಾಫರ್ಡ ಮಾರ್ಕೆಟಿನ ಹಿಂದಿನ ಸುಪರಿಂಟೆಂಡೆಂಟರಾದ ಫ್ಲ್ಯಾಂಡರ್ಸರವರು ಬಹಳ ಮುಂದುವರಿದಿದ್ದರು. ಈ ಸುರಲೇ ಜಾತಿಯೊಂದನ್ನೇ ಅಲ್ಲದೆ, ಅಟ್ಕ, ಜಮುನಾಪಾರಿ ಬಿತ್ಲ, ಕಾಮೋರಿ (ಸಿಂಧ) ಬಾರ್ಬರೀ [ಕಿವಿ ಕತ್ತರಿಸಿದುವು] ಉಸ್ಮಾನೀ [ದೆ. ಹೈದರಾಬಾದ] ಕೊಯಿಮುತ್ತೂರು, ವೇಲೂರು ಮತ್ತು ಜಯಪುರದಿಂದಲೂ ಕೆಲವು ಪ್ರಸಿದ್ಧ ಜಾತಿಯ ಆಡುಗಳನ್ನು ಸಂಗ್ರಹಿಸಿದರು; ಅವುಗಳ ಪೀಳಿಗೆಯನ್ನು ಬೆಳೆಸಿದರು. ಹಾಲಿನ ಪ್ರಮಾಣವನ್ನು ಹೆಚ್ಚಿಸಿದರು. ಸಾಧ್ಯವಿದ್ದರೆ ಈ ಜಾತಿಯ ಪ್ರಾಣಿಗಳನ್ನು ಸಾಕಬಹುದು. ಇಲ್ಲವಾದರೆ ಬರಿಯ ಕುಂಯಾಡಿನ ತಳಿಯನ್ನೇ ಬೆಳೆಸಿದರೂ ನಮಗೆ ಸಾಕಷ್ಟು ಹಾಲು ಸಿಕ್ಕಬಹುದಾಗಿದೆ.

ಈ ಕಾರ್ಯದಲ್ಲಿ ಸರಕಾರ ಹೊರಬಹುದಾದ ಹೊಣೆ ಹೆಚ್ಚಾಗಿದೆ. ಯುರೋಪ ಖಂಡದಲ್ಲಿ ೧೦೦-೧೨೫ ವರ್ಷಗಳ ಪೂರ್ವದಲ್ಲಿ ಹಾಲಿನ ಕೊರತೆ ಬಹಳವಾಗಿತ್ತು. ಆಗ ಸರಕಾರ ಆ ಕಡೆಗೆ ಲಕ್ಷ್ಯವನ್ನು ಪೂರಯಿಸಿತು. ಎಮ್ಮೆ ಆಕಳುಗಳ ಸಂಖ್ಯೆಯನ್ನು ಬೆಳೆಸುವುದಕ್ಕಿಂತ ಆಡುಗಳ ಅಭಿವೃದ್ಧಿಯನ್ನು ಮಾಡುವುದು ಅವರಿಗೆ ಹಗುರಾಗಿ ತೋರಿತು. ಆಲ್ಪ್ಸ ಮತ್ತು ಪಿರನೀಜ ಪರ್ವತದ ಕೊಳ್ಳಗಳಲ್ಲಿರುವ ಜನರಲ್ಲಿ ಉತ್ತಮ ಜಾತಿಯ ಆಡುಗಳಿವೆಯೆಂದು ಕಂಡುಹಿಡಿದರು, ಅಲ್ಲಿಂದ ಕೆಲವೇ ಪ್ರಾಣಿಗಳನ್ನು ಕೊಂಡು ತಂದರು; ತಮ್ಮಲ್ಲಿ ಆ ತಳಿಯನ್ನು ಬೆಳೆಸಿದರು. ಅದರಂತೆ, ಆಂಗ್ಲೋ ನ್ಯೂಬಿಯನ್, ಸಾನೆನ್, ರೋಜೇನಬರ್ಗ ಈ ಕಡೆಯಿಂದಲೂ ಕೆಲವು ಆಡುಗಳನ್ನು ತಂದರು; ತಳಿಯನ್ನು ಹೆಚ್ಚಿಸಿದರು. ಈ ಆಡುಗಳು ೫ರಿಂದ ೭ಸೇರುಗಳ ವರೆಗೂ ಹಾಲನ್ನು ಕೊಡುತ್ತಿವೆ. ಜರ್ಮನಿಯಲ್ಲಿ ಕೂಡ ಕೆಲವು ವರ್ಷಗಳ ಹಿಂದೆ ಹಾಲಿನ ಬಗೆಗೆ ಹಾಹಾಕಾರವಿದ್ದಿತು. ಅಲ್ಲಿ ಸರಕಾರದ ಪ್ರಯತ್ನದಿಂದ ಆಡುಗಳ ಹಾಲನ್ನು ಪೂರೈಸುವ ಕೆಲಸವು ಯಶಸ್ವಿಯಾಗಿಯೇ ನಡೆಯಿತು; ಆರೋಗ್ಯದ ಅಭಿವೃದ್ಧಿಗೆ ಕಾರಣವಾಯಿತು.

ಇದೇ ಕಾರ್ಯಕ್ಷಮತೆಯನ್ನು ನಾವೂ ಸರಕಾರದ ಕಡೆಯಿಂದ ನಿರೀಕ್ಷಿಸಿದರೆ ತಪ್ಪಾಗಲಿಕ್ಕಿಲ್ಲವಷ್ಟೇ! ಆದರೆ ಈಗ ಸ್ವತಂತ್ರಭಾರತದ ಸರಕಾರ ಅದೆಷ್ಟೋ ಹೊಣೆಗಳನ್ನು ಹೊರಬೇಕಾಗಿದೆ. ಅಂತಹದರಲ್ಲಿ ಇದೊಂದು ಹೊಸ ಹೊರೆಯೇಕೆ ಎಂದು ಹೇಳಬಹುದು. ಇದು ಹೊಸ ಹೊರೆಯಲ್ಲ; ಅವರು ಹೊತ್ತಿರುವ ಹೊಣೆಯನ್ನೇ ಹಗುರು ಮಾಡುವ ಹೊಸ ಹಾದಿ ಎಂದು ನಮ್ಮ ಉತ್ತರ. ಈಗ ಆಹಾರ ಧಾನ್ಯವನ್ನು ಸರಕಾರ ಹೇಗಾದರೂ ಒದಗಿಸಲೇಬೇಕಾಗಿದೆಯಷ್ಟೇ. ಸದ್ಯಃ ಅವರು ಕೊಡುತ್ತಿರುವ ಕಾಳಿನಿಂದ ಆರೋಗ್ಯವರ್ಧನೆಗೆ ಏನೂ ಸಹಾಯವಾಗುವಂತಿಲ್ಲ. ಈ ಹೊಸಯೋಜನೆಯಿಂದ ಅನಾಯಾಸವಾಗಿ ಆರೋಗ್ಯ ವರ್ಧನೆಯಾಗಲಿದೆ; ಮುಖ್ಯ ಕಾಳುಕಡಿಗಳನ್ನುಪಯೋಗಿಸುವ ಪ್ರಮಾಣವೂ ಕಡಿಮೆಯಾಗಬಹುದಾಗಿದೆ. ಮತ್ತು ಈ ಆಡುಗಳ ಅಭಿವೃದ್ಧಿಗಾಗಿ ಹೆಚ್ಚಿಗೇನೂ ಪ್ರಯಾಸಪಡಬೇಕಾಗಿಲ್ಲ. ಅವುಗಳ ಆಹಾರ ಸುಲಭವಾಗಿ ಸಿಕ್ಕುವಂತೆ ಅನುಕೂಲ ಮಾಡಿಕೊಟ್ಟರೆ ಸಾಕು.

ಆಡು ಮುಟ್ಟದ ಗಿಡವಿಲ್ಲ ಎಂಬುದು ಗಾದೆಯ ಮಾತಂತಿದೆ. ಬಹುಶಃ ಅಡವಿಯಲ್ಲಿ ತಾನಾಗಿಯೇ ಬೆಳೆದ ಹುಲ್ಲು-ಗಿಡಗಳ ತೊಪ್ಪಲನ್ನು ತಿಂದು ಜೀವಿಸುವುದು ಅವುಗಳ ಗುಣಧರ್ಮ. ಇನ್ನೂ ವಿಶೇಷವೆಂದರೆ, ಆಡುಗಳಿಗೆ ದವಡೆಯಿಂದ ಕೆಚ್ಚಲಕ್ಕೇ ಹಾಲು ಇಳಿಯುತ್ತದೆಂದು ಕೆಲವರು ಹೇಳುವುದುಂಟು. ಅಂದರೆ ಹೆಚ್ಚಾಗಿ ತಿಂದಷ್ಟು ಹೆಚ್ಚು ಹಾಲನ್ನು ಕೊಡುವ ಜಾತಿಯದು. ಆದರಿಂದ ಅಲ್ಪ ವೆಚ್ಚದಲ್ಲಿ ಅಡವಿಯನ್ನುಪಯೋಗಿಸಿದಲು ಈ 'ಸಾಕುಗಾರಿ'ಕೆಗೆ ಆ ದಿಶೆಯಿಂದ ಅನುಕೂಲತೆಯನ್ನು ಮಾಡಿಕೊಡಬೇಕು.

ಇನ್ನು ಸಿರಿವಂತರಾದವರು ಈಗ ಡೇರಿ ಯೂನಿಯನ್‌ಗಳಲ್ಲಿ ಆಕಳು ಎಮ್ಮೆಗಳನ್ನು ಜೋಪಾನ ಮಾಡುತ್ತಿರುವಂತೆ ಆಡುಗಳ ಅಭಿವೃದ್ಧಿಯ ಸಲುವಾಗಿ ಇಂತಹ ಸಂಸ್ಥೆಗಳನ್ನು ತೆರೆದರೂ ಒಳಿತೇ.]

ಆಡುಗಳ ಅಭಿವೃದ್ಧಿಗಾಗಿ ಇಷ್ಟೆಲ್ಲಾ ಹೇಳುವುದರ ಕಾರಣವೇನು ಗೊತ್ತಿದೆಯೆ? 'ಆಡು ದರಿದ್ರರ ಧೇನು' ಎಂಬುದಂತೂ ಸರಿಯೇ. ಆದರೆ ಆಕಳ ಹಾಲಿಗಿಂತಲೂ ಆಡುಗಳ ಹಾಲು ಹೆಚ್ಚು ಹಿತಕಾರಿ ಎಂಬುದು ಎಷ್ಟೋ ಜನರಿಗೆ ತಿಳಿದಿಲ್ಲ

ಆಕಳು, ಎಮ್ಮೆಗಳ ಹಾಲಿಗಿಂತಲೂ ಆಡಿನ ಹಾಲಿನಲ್ಲಿ ಸ್ನಿಗ್ಧತೆ ಮತ್ತು ಸಕ್ಕರೆಯ ಅಂಶ ಹೆಚ್ಚು; ಆದರೂ ಪಚನವಾಗಲಿಕ್ಕೆ ಬಹಳ ಹಗುರು; ಕೇವಲ ೧೫, ೨೦ ಮಿನಿಟುಗಳಲ್ಲಿ ಎಂದರೆ ಆಕಳ ಹಾಲಿನ ¼ ಪಾಲು ಕಾಲದಲ್ಲಿ ಅರಗಿ ಬಿಡುತ್ತದೆ. ಆಕಳ ಹಾಲನಲ್ಲಿ ಆರು ಬಗೆಯ ಕ್ಷಾರಗಳಿರುತ್ತಿದ್ದರೆ, ಆಡಿನ ಹಾಲಿನಲ್ಲಿ ಒಂಬತ್ತು ಬಗೆಯ ಕ್ಷಾರಗಳಿರುವುವು. ಮಕ್ಕಳ ಎಲುವಿನ ಬೆಳವಣಿಗೆಗೆ ಬೇಕಾಗುವ 'ಕ್ಯಾಲ್ಸಿಯಂ' ಪ್ರಮಾಣ ಆಡಿನ ಹಾಲಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ; ಲೋಹದ ಅಂಶವಾದರೂ ಆಕಳ ಹಾಲಿಗಿಂತ ಎಂಟು ಹತ್ತು ಪಟ್ಟು ಹೆಚ್ಚಾಗಿರುತ್ತದೆ. ಎದೆ ಹಾಲನ್ನು ಬಿಡುವ ಹಸು ಮಕ್ಕಳಿಗೆ ಆಡಿನ ಹಾಲನ್ನು ಕುಡಿಸುವುದರಿಂದ, ಮೊಲೆ ಹಾಲಿನ ಪ್ರಮಾಣ ಹೆಚ್ಚುವುದಲ್ಲದೆ ಮಕ್ಕಳ ಆರೋಗ್ಯವು ಬೆಳೆಯುವುದು. ಆಕಳ ಹಾಲಿನಲ್ಲಿರಬಹುದಾದ ಕ್ಷಯರೋಗದ ಜಂತುಗಳು ಆಡಿನ ಹಾಲಿನಲ್ಲಿ ಇರುವುದಿಲ್ಲೆಂದು ಪ್ರಯೋಗದಿಂದ ಕಂಡು ಹಿಡಿದಿದ್ದಾರೆ. ಈ ಹಾಲಿನಲ್ಲಿ ಪೋಟ್ಯಾಶಿಯಮದ ಅಂಶವೂ ಚೆನ್ನಾಗಿ ಕಂಡುಬರುತ್ತಿದೆ. ಇಂತಹ ಸತ್ವಯುತ ಆದರೆ ಲಘುಪಾಚಕವಾದ (ಆಡಿನ) ಹಾಲನ್ನು ಮಕ್ಕಳಿಗೆ ಉಪಯೋಗಿಸುವುದಂತು ಬಹಳ ಒಳ್ಳೆಯದು. ಆಡಿನ ಹಾಲಿನಲ್ಲಿ ೧೦೦ಕ್ಕೆ ೫ರಂತೆ ಸಕ್ಕರೆಯ ಅಂಶವನ್ನು ಬೆರೆಸಿದರೆ ಸಶಕ್ತಳಾದ ತಾಯಿಯ ಹಾಲಿನಷ್ಟು ಹಿತಕರವಾಗುವುದು. ಈ ಹಾಲು, ಇಂತಹ ಹಾಲಿನಿಂದ ಮಕ್ಕಳ ಆರೋಗ್ಯ ಬೆಳೆಯುವುದಲ್ಲದೆ, ಬಾಲಮೃತ್ಯುವಿನ ಭಯವೂ ತಪ್ಪುವುದು. ಆಡಿನ ಹಾಲಿನಲ್ಲಿ ಕೆಲವು ತೊಪ್ಪಲುಗಳ ಮೂಲಕ-ಸಾಪ[illegible] ಶಕ್ತಿಯೂ ಬರುವದೆಂದು ಕೆಲವರ ಅಭಿಪ್ರಾಯವಿದೆ.

ಇಂತಹ ಮಹತ್ವದ ಆಹಾರವನ್ನು ಸೇವಿಸಲು ಕೆಲವರು ಸಹಮನಸ್ಸು ಮಾಡುವುದಿಲ್ಲ ಏಕೆಂದರೆ, ಆ ಹಾಲಿಗೆ ಒಂದು ಬಗೆಯ ದುರ್ಗಂಧ ಬರುತ್ತಿದೆ, ಇದೇನೂ ಅಷ್ಟು ದೊಡ್ಡ ಆತಂಕವಲ್ಲ. ಕೆಲವೇ ದಿವಸಗಳ ರೂಢಿಯಿಂದ ಈ ಹೇಸಿಕೆ ಹೋಗಬಹುದಾಗಿದೆ. ಮತ್ತು ಯೋಗ್ಯ ಆರೈಕೆಯನ್ನಿಟ್ಟರೆ ಈ ದುರ್ಗಂಧವೂ ದೂರವಾಗಬಹುದು, ಅಲ್ಲದೆ, ಕುಂಯಾಡು ಮೊದಲಾದುವುಗಳ ಹಾಲಿಗೆ ಯಾವ ಹೊಲಸು ವಾಸನೆಯೂ ಇರುವುದಿಲ್ಲ. ಎಂದಮೇಲೆ 'ದರಿದ್ರರ ಧೇನು'ವೆನಿಸಿರುವ ಆಡುಗಳ ಅಭಿವೃದ್ಧಿಗೆ ಭಾರತೀಯರೆಲ್ಲ ಮುಂದಾಗುವುದು ಅತ್ಯವಶ್ಯವಿದೆ. ಇದರಿಂದ, ಆಹಾರ ಧಾನ್ಯದ ಕೊರತೆಯ ಕಾಲವೂ ತಪ್ಪುವುದೆಂದು ಧಾರಾಳವಾಗಿ ಹೇಳಬಹುದಾಗಿದೆ; ಅಲ್ಲದೆ ತುಸು ರೊಕ್ಕದಲ್ಲಿ ಹೊಟ್ಟೆ ಹಸನೂ ಆಗುವುದು.

(ಜಯಕರ್ನಾಟಕ.)

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಅಳಿಯ ಸಂತಾನ ಕಾನೂನಿನ
ಇಂಗ್ಲಿಷ್ ಪ್ರತಿಗಳಿಗೆ
ನವಯುಗ ಪ್ರೆಸ್, ಉಡುಪಿ
ಇವರಿಗೆ ಬರೆಯಿರಿ

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618

2-6-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER
Hon'ble Sri. A. B. Shetty
Education Minister, Govt. of Madras

Telegram: "Navayuga"

ನವಯುಗ

Estd. 1921 ಸ್ಥಾಪನೆ

ವಾರ್ಷಿಕ ಚಂದಾ. 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ | ವಾರ 40

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ವಿದ್ಯಾಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 29
No. 40

ಇವರೆಲ್ಲರೂ ಪ್ರಗತಿ ವಿರೋಧಿಗಳು:-

ಕಳ್ಳ ಸಂತೆ, ಮತ್ತಿತರ ದುರ್ವ್ಯವಹಾರಗಳಿಂದ ಜನತೆಯ ಸುಲಿಗೆ ಮಾಡುವರೆ ತಮಗೆ ಅವಕಾಶವೊದಗಿಸಿರುವ ಪ್ರಚಲಿತ ಆರ್ಥಿಕ ಸಾಮಾಜಿಕ ಮಾನಸಿಕ ಪರಿಸ್ಥಿತಿಯೇ ಚಿರಂಜೀವಿಯಾಗಲಿ ಎಂದು ಬಯಸುವ ದುರ್ವ್ಯಾಪಾರಿವರ್ಗ—ಯಾವ ಪ್ರಗತಿಯನ್ನಾದರೂ ಹೊರಗಡೆಯಿಂದ ಒಡೆದು ಹಾಕಬಲ್ಲ ಟೋರ್ಪೆಡೋಗಳಿವು.

ಜನತೆಯ ಗುಣ, ನಡತೆ ಮತ್ತು ಭಾವನೆಯು ಕಾಲೋಚಿತವಾಗಿ ಯಾವುದೇ ರೀತಿಯಿಂದ ವಿಕಾಸಗೊಂಡ, ಇದುವರೆಗೆ ಮುಗುಳಾಗಿದ್ದುದು ಈಗ ಅರಳಹತ್ತಿ ಮುದು ತೋರಿಬಂದೊಡನೆಯೇ 'ಹಾಳಾಯಿತು' ಎಂಬ ಬೊಬ್ಬೆಯಿಟ್ಟು, ಅದರ ಎಸಳುಗಳನ್ನು ಚಿಮುಕಲು ನೋಡುವ ಅಂಧಾಚಾರನಿಷ್ಠರು— ಇಂದಿನ ಸಭ್ಯತೆಗಳು ಗಟ್ಟಿ ನಿಲ್ಲುವಂತೆ ಅದಕ್ಕೆ ಜಡಿಯಲ್ಪಟ್ಟಿರುವ ಮೊಳೆಗಳಿವು.

ಪರಂಪರಾಗತ ಆಸ್ತಿ, ಒಡವೆ, ಸ್ಥಾನಮಾನಗಳಿದ್ದು, ಅವುಗಳನ್ನು ಅಡಿಮೇಲು ಮಾಡುವ ಪ್ರಸ್ತಾಪವನ್ನು ಊಹಿಸಲೂ ಕ

ವನ್ನೇ ಅಡಿಮೇಲು ಮಾಡುವ ಪ್ರಳಯವೆಂದು ಭಾವಿಸಿರುವ ಹುಟ್ಟು ಶ್ರೀಮಂತವರ್ಗ—ಇಂದಿನ ಅಸ್ತವ್ಯಸ್ತ ಸ್ಥಿತಿಯು ಅಲುಗಾಡದಂತೆ ಭದ್ರವಾಗಿ ಹಿಡಿದಿಟ್ಟಿರುವ ಗೂಟಗಳಿವು.

ಸಂಪತ್ತೇ ಪ್ರಾಮುಖ್ಯವಾಗಿರುವ ಇಂದಿನ ಸ್ಥಿತಿಯಲ್ಲಿ ಹಣವೊಂದೇ ಯೋಗ್ಯತೆಯೆಂದು ಗಣಿಸಿ, ಅದರ ಬಲದಿಂದ ಬೇಕಾದವರನ್ನು ಬೇಕಾದಂತೆ ಆಡಿಸುತ್ತಾ, ಅದೊಂದಕ್ಕಲ್ಲದೆ ಬೇರಾವುದಕ್ಕೂ ಬೆಲೆಕೊಡದಿರುವ ಸಂಕುಚಿತ ಬುದ್ಧಿಯ ಸಂದರ್ಭ ಸಾಧಕರು—ದೊಡ್ಡದೂ ಅರಳದಂತೆ ಎಲ್ಲಾ ಸದ್ಭಾವನೆ, ಸದ್ಗುಣಗಳನ್ನೂ ಅಲ್ಲಿಂದಲ್ಲಿಯೇ ಬೇಯಿಸಿ ಬಾಡಿಸಿಹಾಕುವ ಒಲೆಗಳಿವು.

ಪರಂಪರಾಗತ ಶ್ರೀಮಂತಿಕೆ, ಸ್ಥಾನಮಾನ, ಪೂಜೆ ಆಚಾರಗಳ ಮತ್ತು ಜನಸಾಮಾನ್ಯರ ನಂಬಿಕೆಯ ಒಂದಲ್ಲೊಂದು ವಿಧದ ದಲ್ಲಾಳಿಗಳಾಗಿ ಲಾಭ ಕೊಡೆಯುತ್ತಾ ಬಂದಿರುವ ಬಹು ವಿಧದ ಮಧ್ಯಸ್ಥಗಾರ ವರ್ಗ—ಪ್ರಗತಿಪಥ ತೆರವಾಗದಂತೆ ಅಲ್ಲಿ ದಟ್ಟನಾಗಿ ಹರಡಿಹೋಗಿರುವ ಮುಳ್ಳುಕಂಟಿಗಳಿವು

ಈಗ ಶುದ್ಧ ಸೋಮಾರಿಗಳಾಗಿದ್ದರೂ ಹಿಂದೊಮ್ಮೆ ತಾವು ಮಾಡಿದ್ದ ಅಥವಾ ಮಾಡಿದಂತೆ ನಟಿಸಿದ್ದ ಕೆಲಸಗಳಿಗಾಗಿ ಒಣಹೆಮ್ಮೆಯನ್ನು ಪ್ರದರ್ಶಿಸುವುದನ್ನೇ ಆಸ್ತಿ: ಆಗ ತಾವು ಮಾಡಿದುದಕ್ಕೆ ಈಗಿನ ಎಲ್ಲವನ್ನೂ ಸಂಬಳವಾಗಿ ಕೇಳುವವರಂತಿರುವ ಒಣಾಭಿಮಾನೀ ರಾಜಕೀಯ ವಾದಿಗಳು—ಎಲ್ಲವನ್ನೂ ಹಿಂದಿನ ಕಾಲದತ್ತ ಎಳೆಯುವ, ಹಿಂಗಡೆಗೆ ಬಿದ್ದಿರುವ ಹಗ್ಗಗಳಿವು.

ಶ್ರಮಜೀವಿಗಳ ಅಜ್ಞಾನ ಮತ್ತು ವಿವಿಧರೀತಿಯ ದುಸ್ಥಿತಿಗಳನ್ನು ಅವುಗಳ ನಿವಾರಣೆಯ ನೆಪ ಹೇಳುತ್ತಾ ತಮ್ಮ ಮರು

ದ್ದೇಶ,ಅನ್ಯೋದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುತ್ತಿರುವ ಕಮ್ಯೂನಿಸ್ಟರಂಥವರು—ಪ್ರಗತಿಯ ಒತ್ತುಬಡಿಗೆಗಳೆಂಬ ನಮೂನೆಯಲ್ಲಿ ಮುಂದೆ ಬಂದು, ಅದನ್ನು ಒಡೆದು ಹಾಕುವ ಬಡಿಗೆಗಳಿವು.

ಧರ್ಮ, ಜಾತಿ, ಮತಗಳ ಹೆಸರಿನಿಂದ ಮಾನಸಿಕ ಹಾಗೂ ವ್ಯವಹಾರ ರಂಗದಲ್ಲಿ ಫಿರಂಗೀ ಏಟುಗಳ ಅಡ್ಡಗೋಡೆಗಳನ್ನು ಒಳಗಡೆಯಲ್ಲೇ ನಿರ್ಮಿಸುತ್ತಿರುವ ಹಿಂದೂ ಮಹಾಸಭಾ ಆರ್. ಎಸ್. ಎಸ್. ಮತ್ತಿಂತಹ ಇತರ ಜಾತೀಯವಾದಿಗಳು ಉಗ್ರಪ್ರಕಾರ ಬೀರುತ್ತಾ ಪ್ರಗತಿಯನ್ನಷ್ಟೇ ಅಲ್ಲ, ಪ್ರಗತಿಯ ಆಧಾರ ನೆಲೆಯನ್ನು ಕೂಡಾ ಸುಟ್ಟುಹಾಕುವ ಕೊಳ್ಳಿಗಳಿವು

ಸರಿ ನಿಸ್ಸಾರ, ಉಚಿತಾನುಚಿತ, ಅಭಿವೃದ್ಧಿ ಅವನತಿಯನ್ನು ವಿಚಾರಿಸಿ ತಿಳಿಯುವಷ್ಟು ವಿಮರ್ಶನ ಶಕ್ತಿ, ತಿಳುವಳಿಕೆ ಯಾವುದೂ ಇಲ್ಲದೆ ಬಂದ, ತಾಗಿದುದನ್ನೆಲ್ಲಾ ಹಿಡಿದುಕೊಳ್ಳುವ ಅಭ್ಯಾಸವಿರುವ ಅಜ್ಞಜನತೆ-ಪ್ರಗತಿ ಬೀಜವನ್ನು ಬಿದ್ದಲ್ಲೇ ಕರಟಿಸಿ ಬಿಡುವ ಬರಡು ಭೂಮಿಯಿದು.

ಯಥಾರ್ಥ ಜನಸೇವಾಸಕ್ತಿ ಮತ್ತು ಅದಕ್ಕನುಗುಣವಾದ ಜ್ಞಾನ ಸಾಧನ ಹಾಗೂ ಗುಣ ನಡತೆಗಳಿಲ್ಲದೆ ಧನ್ಯಸ್ಥಾನ, ಕೀರ್ತಿಲಾಲಸೆಯಿಂದ ಸಾರ್ವಜನಿಕ ಮುಂದಾಳುಗಳ ವೇಷ ಧರಿಸಿ ಕುಣಿದಾಡುತ್ತಿರುವವರು—ನಿಜಪ್ರಗತಿಯೆಂಬ ಶುದ್ಧ ಭಂಗಾರವು ಮಾರ್ಕೆಟಿಗೆ ಬೀಳದಂತೆ ಮಾಡಿರುವ ಕೃತಕ ನಗಗಳವು.

ನಿಜಕ್ಕೂ ನಡೆದುದೇನು, ಅದು ಪ್ರಚಾರದಲ್ಲಿರುವ ರೂಪವಾವುದು; ಇದುವರೆಗೆ ಆದುದೆಷ್ಟು, ಆಗದೆ ಬಾಕಿಬಿದ್ದಿರುದೆಷ್ಟು; ಒಂದು ಕೆಲಸವು ಇನ್ನೊಬ್ಬರಿಂದಾಗಿ ಹಾಗಾಯಿತು, ತಾವು ಆ ಸ್ಥಾನದಲ್ಲಿದ್ದರೆ ಅದು ಹೇಗಾಗುತಿತ್ತು; ಎಂಬುದಾವುದನ್ನೂ ತುಲನೆ ಮಾಡಿ ನೋಡಿಕೊಳ್ಳುವ ಬುದ್ಧಿಯೇ ಇಲ್ಲದೆ ಸೋಟೆ, ಶ್ರವಣ

ಮಾತ್ರದಿಂದ ಓಡಾಡುವ ಬಹು ಸಂಖ್ಯಾಕರು—ಕಾರ್ಯಕ್ಕಿಂತ ಪ್ರದರ್ಶನ, ಪ್ರಗತಿಗಿಂತ ಪ್ರಚಾರ ಮುಖ್ಯವೆಂಬ ಸ್ಥಿತಿ ನಿರ್ಮಿಸಿ ಪ್ರಗತಿಪಕ್ಷದ ನೆಲೆಯನ್ನು ಆಕ್ರಮಿಸಿ ಮುಚ್ಚಿಕೊಂಡಿರುವ ಪರಗೆಲೆಗಳಿವು.

ಎಲ್ಲಾ ಸಂಗತಿಗಳ ಜ್ಞಾನವಿದ್ದೂ 'ಆಗುವದೇನಿದೆಯೋ, ಎಲ್ಲವೂ ತನ್ನಂತೆ ಆಗುತ್ತಾ ಹೋಗಲಿ' ಎಂದು ತಮ್ಮ ಮೈಕೈ ತಾವಿರುವ ಜಾಡ್ಯೋತ್ಸೇಜಕರಾದ ಸೋಮಾರೀ ಸುಜ್ಞಾನಿಗಳು—ತುಕ್ಕುಹಿಡಿದು ಹಾಳಾಗಿರುವ ಪ್ರಗತೀ ಉಪಕರಣಗಳಿವು

ಒಟ್ಟಿನ ಮೇಲೆ ಸ್ವಾರ್ಥ, ಸಂಕುಚಿತ ಬುದ್ಧಿ, ಪೂರ್ವಾಗ್ರಹ ದುರಾಶೆ ಮನೋವೃತ್ತಿ, ಸಿರಾಸಕ್ತಿ, ಆಲಸ್ಯ, ಅಹಂಭಾವ, ಅಜ್ಞಾನ, ಇತ್ಯಾದಿಗಳಿರುವವರೆಲ್ಲರೂ ಪ್ರಗತಿವಿರೋಧಿಗಳೇ; ಇವುಗಳ ಪೈಕಿ ಒಂದಲ್ಲೊಂದು ದುರ್ಗುಣ ಅಥವಾ ದೌರ್ಬಲ್ಯವು ಒಂದಲ್ಲೊಂದು ರೀತಿಯಿಂದ, ಹೆಚ್ಚು ಕಡಿಮೆ ಪರಿಮಾಣದಲ್ಲಿ ಇಲ್ಲದ ಜನವಿಲ್ಲವಾದ್ದರಿಂದ ಎಲ್ಲರೂ ಪ್ರಚಲಿತ ಅಪ್ರಗತಿಕತನಕ್ಕೆ ಒಂದುಪ್ರಕಾರ ಹೊಣೆಗಾರರೇ. ಆದರಿಂದ ಜಾತಿ, ಪಂಗಡ, ಪಕ್ಷ, ವರ್ಗಭೇದ ನೋಡದೆ ಗುಣ-ದೋಷ ವಿಭಾಗಗಳನ್ನೇ ಆಧರಿಸಿ ಜನ ಮನೋವೃತ್ತಿಯನ್ನು ಶುದ್ಧೀಕರಿಸುವ ಕ್ರಾಂತಿಕಾರೀ ಸುಧಾರಣೆಗಳು ಬರಬೇಕು. ಒಳಗಿನ ಮಂಥನ ಮತ್ತು ಶಾಸನಮೂಲಕ.

ನಿಮ್ಮ ತೃಪ್ತಿ ಸಮ್ಮಗೀರವ
ಶ್ರೇಷ್ಠ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd
COONOOR (Nilgiris)

English copies of
MADRAS ALIYASANTHANA ACT of 1949
are available
NAVAYUGA PRESS, UDIPI.
ಮದ್ರಾಸು ಅಳಿಯ ಸಂತಾನ ಕಾನೂನಿನ ಇಂಗ್ಲಿಷ್ ಪ್ರತಿಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ: ಧಾರವಾಡ,
THE UNITED KARNATAKA INSURANCE COMPANY, LIMITED

ಕಾಂಗ್ರೆಸ್ ಮತ್ತು ಘಟನಾ ಸಮಿತಿ –

ಶಾಸನ ಸಭೆಗಳಲ್ಲಿ ಅಥವಾ ತರ್ಕರೂಪದ ಯಾವುದೇ ಸಭೆ ಸಮ್ಮೇಳನಗಳಲ್ಲಿ ಸಂದರ್ಭವಶಾತ್ ಹೊರಟಿಲ್ಲುವ ಮಾತುಗಳು, ಚರ್ಚೆಗಳು, ಘಟನೆಗಳು ಚಿತ್ತಾಕರ್ಷಕ ಅಥವಾ ಚಿತ್ತವೇಧಕವಾಗುವದಿದೆ. ತತ್ಪರಿಣಾಮವಾಗಿ ಸಭೆಯಲ್ಲಿ ನಗು, ಉತ್ಸಾಹ ಧ್ವನಿ, ಅಂತೆಯೇ ಪೈಪೋಟಿಗಳು, ನಾಯಿ ನರಿಗಳ ಕೂಗಾಟದಂತಹ ಬೊಬ್ಬೆಗಳು, ಕುರ್ಚಿ ಡೆಸ್ಕುಗಳ ಬಡಿತ ಮಾತ್ರವಲ್ಲ, ಅಪರೂಪವಾಗಿ ಕೈ ಕೈಯ್ಯಾಗುವದೂ ಇದೆ. ಶಾಸನ ಸಭೆಗಳ ತಾತನೆನ್ನಿಸಿರುವ ಬ್ರಿಟಿಷ್ ಪಾರ್ಲಿಮೆಂಟೂ ಇಂತಹ ವಿಶೇಷ ವಿದ್ಯಮಾನಗಳ ನಿರ್ಮಾಣಕ್ಕೆ ಹೆಸರಾಗಿದೆ. ಮೊನ್ನೆ ೩ನೇ ಜಪಾನಿನ ಶಾಸನ ಸಭೆಯಲ್ಲಿ ಸದಸ್ಯರು ಗುದ್ದಾಡಿಕೊಂಡಿದ್ದರು. ತುಲನಾತ್ಮಕವಾಗಿ ನೋಡುವದಾದರೆ ಅಂದಿನಿಂದೀವರೆಗೂ ಭಾರತದ ಕೇಂದ್ರ ಹಾಗೂ ಪ್ರಾಂತಿಕ ಶಾಸನ ಸಭೆಗಳೇ ಸಭ್ಯವರ್ತನೆಯ ಮಟ್ಟಿಗೆ ವಾಸಿ. ಇಲ್ಲಿ ನಗುವೆಬ್ಬಿಸುವ ಮಾತುಗಳು ಆಗಾಗ ಹಾರಾಡಿ ಆಹ್ಲಾದಗೊಳಿಸುವದಿದೆ; ವ್ಯಂಗ್ಯೋಕ್ತಿ, ಚಾಟೂಕ್ತಿಗಳು ಚುಚ್ಚು ನಗೆಯನ್ನೆಬ್ಬಿಸುವದಿದೆ; ಕೆಲವೇ ತಾಡನದಂತಹ ಮಾತುಗಳು ಕಣ್ಣು ನಾಲಗೆಗಳಿಂದ ಕಿಡಿ ಕಾರಿಸುವುದೂ ಇದೆ. ಆದರೆ ಒಬ್ಬ ಸದಸ್ಯನಕೈ ಇನ್ನೊಬ್ಬ ಸದಸ್ಯನಕೆನ್ನೆಯ ಮೇಲೆ ಆಡಿದ ದೃಷ್ಟಾಂತ ಗೋಚರಿಸುವುದಿಲ್ಲ. ಎಲ್ಲವೂ ಬಹುತೇಕವಾಗಿ ಸಭ್ಯ ನಿಯಮಾವಳಿಯ ಸರಹದ್ದಿನೊಳಗೇ ಇರುತ್ತವೆ; ಆದರೂ ಆಕಸ್ಮಿಕವಾಗಿ ವಿನೋದ, ವಿಚಾರ, ನವಚೇತನಗಳ ತೆರೆಗಳನ್ನು ಅವು ಎಬ್ಬಿಸಬಲ್ಲವು. ಈ ಬಾರಿಯ ಅ. ಭಾ. ಕಾಂಗ್ರೆಸ್ ಸಮಿತಿಯ ಅಧಿವೇಶನ ಮತ್ತು ಘಟನಾ ಸಮಿತಿ ಸಭೆಗಳ ಕೆಲವು ವಿಶೇಷ ವಿದ್ಯಮಾನಗಳನ್ನು ನಿದರ್ಶನಕ್ಕಾಗಿ ಇಲ್ಲಿ ಕೊಡಲಾಗುತ್ತದೆ

ಂ ಂ ಂ ಂ

ಇದೇ ಮೇ ತಾ. 21 ಮತ್ತು 22 ರಲ್ಲಿ ಡೆಹರಾಡೂನಿನಲ್ಲಿ ಸೇರಿದ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯ ಮುಂದಿದ್ದ ಮುಖ್ಯ ವಿಷಯಗಳೆರಡು– ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಸದಸ್ಯನಾಗಬೇಕೆಂಬ ಲಂಡನ್ ನಿರ್ಣಯ ಮತ್ತು ಕಾಂಗ್ರೆಸ್ ಸರಕಾರಗಳು ಮತ್ತು ಸಂಸ್ಥೆಗಳೊಳಗೆದ್ದಿರುವ ಭಿನ್ನಾಭಿಪ್ರಾಯಗಳ. ಈ ಪೈಕಿ ಮೊದಲನೆಯದು ಬಹಿರಂಗವಾಗಿ ಚರ್ಚಿಸಲ್ಪಟ್ಟಿದ್ದರೆ ಎರಡನೆಯದು ಗುಪ್ತವಾಗಿ ಪರ್ಯಾಲೋಚಿಸಲ್ಪಟ್ಟಿದ್ದಿತು. ಕಟೂಕ್ತಿ, ವ್ಯಂಗ್ಯೋಕ್ತಿಗಳ ಹಾರಾಟವು ಎರಡನೆಯ ಚರ್ಚಾಕೂಟದಲ್ಲೇ ಹೆಚ್ಚಾಗಿದ್ದಿರಬೇಕು. ಆದರೆ ಸದಸ್ಯರಿಗಲ್ಲದೆ ಮಿಕ್ಕವರಿಗೆ ಅವುಗಳನ್ನನುಭವಿಸುವ ಸುಯೋಗವಿರಲಿಲ್ಲ. ಕಾಮನ್‌ವೆಲ್ತ್ ಸಂಬಂಧದ ಠರಾವಿನ ಚರ್ಚೆಯ ವೇಳೆಯಲ್ಲೂ "ವಿವಿಧ ವಿನೋದ"ಗಳಿದ್ದುವು. ಸಭಾರಂಭದ ಪ್ರಥಮ ಕಾರ್ಯಕ್ರಮಕ್ಕಾಗಿ ಬಾಬು ರಾಜೇಂದ್ರ ಪ್ರಸಾದರು 'ಕಾಮನ್‌ವೆಲ್ತ್' ಸಂಬಂಧದ ಠರಾವನ್ನು ಮುಂದಿಡಲೇಳುವ ಹೊತ್ತಿನಲ್ಲಿ ಸಭೆಯಲ್ಲಿ ಶ್ರೀ ಪ್ರಫುಲ್ಲ ಕುಮಾರಗೋಸ್ವಾಮಿಗಳೆದ್ದು ನಿಂತಿರುವುದು ಕಂಡು ಬಂತು. ಅವರು 'ದೈವದ ದರ್ಶನ ಪಾತ್ರಿ'ಯಂತೆ ಚಪ್ಪರದ ಮೇಲೆಲ್ಲಾ ಕಣ್ಣು ಹೊರಳಿಸುತ್ತಾ ನುಡಿಗೊಟ್ಟರು. "ಈ ಸಭಾಮಂಟಪದ ತೊಲೆ ದಿಣ್ಣೆಗಳಿಗೆ ಸಿಕ್ಕಿಸಿರುವ ಆ ಧ್ವಜಗಳು ಕಾಂಗ್ರೆಸ್ ಧ್ವಜಗಳಲ್ಲ; ರಾಷ್ಟ್ರಧ್ವಜಗಳು" ಶ್ರೀ ಗೋಸ್ವಾಮಿಗಳ ಆಕ್ಷೇಪವು ಸತ್ಯವಾಗಿತ್ತು. ಮಧ್ಯದಲ್ಲಿ ನೂಲಿನ ಚರಕವಿರುವ ಹಿಂದಿನ ತ್ರಿವರ್ಣ ಧ್ವಜವೇ ಈವರೆಗೂ ಕಾಂಗ್ರೆಸ್ ಧ್ವಜವಾಗಿದೆ; ಘಟನಾ ಸಮಿತಿಯು ನಿರ್ಧರಿಸಿರುವ ಇಂದಿನ ಅಶೋಕ ಚಕ್ರಾಂಕಿತ ತ್ರಿವರ್ಣ ಧ್ವಜವು ರಾಷ್ಟ್ರಧ್ವಜ ಹೊರತು ಕಾಂಗ್ರೆಸ್ ಧ್ವಜವಲ್ಲ. ಆದರೂ ಅ. ಭಾ. ಕಾಂಗ್ರೆಸ್ ಚಪ್ಪರದಲ್ಲಿ ರಾಷ್ಟ್ರ ಧ್ವಜಗಳನ್ನೇ ತೂಗಾಡಿಸಿದ್ದರೆಂದು ಕಾಣುತ್ತದೆ. ಕೂಡಲೇ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕಲಾ ವೆಂಕಟರಾಯರೆದ್ದು ಶ್ರೀ ಪ್ರಫುಲ್ಲ ಕುಮಾರ ಗೋಸ್ವಾಮಿಗಳ ಆಕ್ಷೇಪವನ್ನು ದಾಖಲೆಗೆ ಕಟ್ಟಿಕೊಳ್ಳುವೆನೆಂದು ತಿಳಿಸಿದರು.

ಂ ಂ ಂ ಂ

ಡೆಹರಾಡೂನ್ ಅಧಿವೇಶನದಲ್ಲಿ ಅಧ್ಯಕ್ಷ ಪಟ್ಟಾಭಿಗಳ ಶಿಸ್ತುಗಾವಲ ಶಕ್ತಿ ಮತ್ತು ಚಾತುರ್ಯದಂತೆಯೇ ಅವರ ವ್ಯಂಗ್ಯೋಕ್ತಿ ಪ್ರತಿಭೆಯೂ ಒಡೆದು ತೋರಿದ್ದಿತು. ಬಾಬು ರಾಜೇಂದ್ರ ಪ್ರಸಾದರು ಮುಂದಿಟ್ಟಿದ್ದ ಕಾಮನ್‌ವೆಲ್ತ್ ಸಂಬಂಧದ ಮೂಲ ಠರಾವಿಗೆ ತಿದ್ದುಪಡಿ ಸೂಚನೆಗಳು ಬಹಳ ಬಂದಿದ್ದುವು. ಅವುಗಳಲ್ಲಿ ಹೆಚ್ಚಿನವು ಸೂಚಿಸುತ್ತಿದ್ದುದು ತಂದವರ ಅಜ್ಞಾನ, ಅಪಕ್ವಬುದ್ಧಿಯನ್ನೇ. ಇವೆಲ್ಲವನ್ನೂ ಒಂದೊಂದಾಗಿ ಎತ್ತಿಕೊಳ್ಳುತ್ತಾ, ಅಧ್ಯಕ್ಷ ಪಟ್ಟಾಭಿಗಳು 'ನಿಯಮಬಾಹ್ಯ'ವೆಂಬ ಪಟ್ಟಿಯನ್ನು ತಗಲಿಸಿ ತಳ್ಳಿ ಹಾಕುತ್ತಾ ಬಂದರು. ಆಗ ಅಧ್ಯಕ್ಷರು ಪ್ರತಿಯೊಂದಕ್ಕೂ ಅವುಗಳ ಯೋಗ್ಯತಾನುಸಾರವಾಗಿ ಮಾಡುತ್ತಾ ಬಂದ ಟೀಕಾ ಸರಪಣಿಯು, ತನ್ನ ದಡ್ಡ ಹೆಡ್ಡ ವಿದ್ಯಾರ್ಥಿಗಳಿಗೆ ವಿನೋದಿ ಅಧ್ಯಾಪಕನು ಕೊಡುವ ಸಂಭಾವನೆಯಂತಹದಿದ್ದು, ಸಭೆಯಲ್ಲೆಲ್ಲಾ ಚುಚ್ಚು ನಗೆಯನ್ನೆಬ್ಬಿಸಿದ್ದಿತು. ಮೂಲ ಠರಾವನ್ನು ಸಮರ್ಥಿಸಿಯೂ ವಿರೋಧಿಸಿಯೂ ಹಲವು ಸದಸ್ಯರು ಮಾತಾಡಿದ್ದರು. ಸಮರ್ಥಿಸಿ ಮಾತಾಡಿದ ಬಾಬು ಪುರುಷೋತ್ತಮದಾಸ್ ಟಂಡನರ ಮಾತುಗಳು ತೂಕವುಳ್ಳವುಗಳಿದ್ದು ಇಡೀ ಸಭೆಯ ಮನಸ್ಸನ್ನಾಕರ್ಷಿಸಿ ಚಪ್ಪಾಳೆ, ಉತ್ಸಾಹ ಧ್ವನಿಗಳ ಮನ್ನಣೆ ಗಳಿಸಿದ್ದುವು. ಅವರ ಭಾಷಣ ಮುಗಿದೊಡನೆ ಅಧ್ಯಕ್ಷ ಪಟ್ಟಾಭಿಗಳು ಆಜ್ಞಾಪಿಸಿದರು: "ಸಮಯದ ಅಭಾವವಿರುವುದರಿಂದ ಇನ್ನು ಮಾತಾಡುವ ಪ್ರತಿಯೊಬ್ಬನೂ ಮೂರು ಮಿನಿಟುಗಳಿಗೆ ಮಿಕ್ಕು ಉದ್ದ ಮಾತಾಡಬಾರದು." ಈ ನಿಯಮವು ಕೆಲವರಿಗೆ ಸಹ್ಯವಾಗಲಿಲ್ಲ. ಶ್ರೀ ರೋಶನ್‌ಲಾಲ್ ವ್ಯಾಸರೆದ್ದು ಹೇಳಿದರು: "ಠರಾವನ್ನು ಸಮರ್ಥಿಸಿ ಹಲವು ಪ್ರಮುಖ ನಾಯಕರು ಮಾತಾಡಿದ್ದಾರೆ. ಅಂದ ಮೇಲೆ ಅದನ್ನು ವಿರೋಧಿಸಿ ಮಾತಾಡುವವರಿಗೆ ಮೂರೇ ಮಿನಿಟುಗಳ ಸಮಯ ಕೊಟ್ಟು ಆ ಅಲ್ಪಾವಧಿಯೊಳಗೆ ಅವರು ತಮ್ಮ ಅಭಿಪ್ರಾಯಗಳನ್ನು ಮುಂದಿಡುವಂತೆ ವಿಧಿಸುವದು ನ್ಯಾಯವಲ್ಲ". ಆದರೆ ಅಧ್ಯಕ್ಷ ಪಟ್ಟಾಭಿಗಳಿಗೆ ಈ ವಾದವನ್ನು ಶಮನಿಸುವ ಉಪಾಯ ತಿಳಿದಿತ್ತು. "ಆಗಲಿ; ನಾನು ನಿಮ್ಮ ಸಲಹೆಯನ್ನು ಅಂಗೀಕರಿಸಿ ಕೊಳ್ಳುತ್ತೇನೆ. ಠರಾವನ್ನು ಸಮರ್ಥಿಸುವವರಿಗೆ ಕೊಟ್ಟುದಕ್ಕಿಂತ ಒಂದು ಮಿನಿಟು ಹೆಚ್ಚು ಸಮಯವನ್ನು ಠರಾವಿನ ವಿರೋಧಕರಿಗೆ ಕೊಡುತ್ತೇನೆ". ಈ ತೀರ್ಮಾನವನ್ನು ಕೇಳಿ ಸಭೆ ಗೊಳ್ಳೆಂದು ನಕ್ಕಿತು.

ಂ ಂ ಂ ಂ

ಅಸಂಬದ್ಧತೆಯನ್ನು ಕಂಡೊಡನೆ ಉರಿದು ಬೀಳುವ ಸ್ವಭಾವದ ಪಂಡಿತ ನೆಹರುಗಳನ್ನು ಬಡಿದೆಬ್ಬಿಸಿ ನಿಲ್ಲಿಸಿದ ಅಸತ್ಯ ಮತ್ತು ಅಪ್ರಬುದ್ಧ ಮಾತುಗಳೆರಡು ಅ. ಭಾ. ಕಾಂಗ್ರೆಸ್ ಸಮಿತಿಯಲ್ಲಿ ಜಡಾಯಿಸಲ್ಪಟ್ಟಿದ್ದುವು. ಕಾಮನ್‌ವೆಲ್ತ್ ಸಂಬಂಧದ ಲಂಡನ್ ನಿರ್ಧಾರವನ್ನು ವಿರೋಧಿಸಿ ಮಾತಾಡುತ್ತಾ ಶ್ರೀ ಜಗನ್ನಾಥರಾಯರು ಯಾವ ಆಧಾರದಿಂದಲೋ, "ಅಮೇರಿಕಕ್ಕೆ ಬರಬೇಕೆಂಬ ಅಧ್ಯಕ್ಷ ಟ್ರುಮೇನರ ಆಮಂತ್ರಣವನ್ನು ಅಂಗೀಕರಿಸಿರುವ ಪಂಡಿತ ನೆಹರುಗಳು ಸ್ಟಾಲಿನರಿಂದ ಬಂದ ಅಂಥಾ ಆಮಂತ್ರಣವನ್ನು ಮಾತ್ರ ಸ್ವೀಕರಿಸಲಿಲ್ಲ" ಎಂದುಬಿಟ್ಟರು. ಅದು ಕಿವಿಗೆ ಬಿದ್ದೊಡನೆ ಪಂಡಿತ ನೆಹರುಗಳು ಉರಿದೆದ್ದು ನಿಂತು, ಸ್ಟಾಲಿನರಿಂದ ತನಗೆ ಆಮಂತ್ರಣವೇ ಬಂ

OPPORTUNITY TO DEALERS

For your requirements in

Exercise Books

Visit

Vithalji & Co., Ltd.,

MANGALORE.

ವ್ಯಾಪಾರಿಗಳಿಗೆ ಸುಸಂಧಿ!

ಎಕ್ಸರ್‌ಸೈಜ್ ಪುಸ್ತಕಗಳು

ಬೇಕಾದಲ್ಲಿ ವಿಚಾರಿಸಿರಿ–

ವಿಠಲ್ಜಿ ಮತ್ತು ಕಂಪೆನಿ ಲಿ.,

ಮಂಗಳೂರು

ಉತ್ತಮ

–ಉಪಾಹಾರ ಮಂದಿರ

ವೀರ ಭಾರತ ವಿಶ್ರಾಂತಿ ಗೃಹ

(ನ್ಯೂ ಯೂನಿಯನ್ ಮಿಲ್ಸಿನ ಎದುರು)

ಡಿಲಿಸ್ಲ ರೋಡು

ಬೊಂಬಾಯಿ 13

ESTD. 1926

CROWN RUBBER STAMP Co.

MFRS OF

RUBBER STAMPS & ENGRAVERS

BALMATTA ROAD MANGALORE S.K.

Approved firm by the Govt. of Mysore
Certified by the Agent of the Govt. of Cylone & Indian.

— ಸಭೆಗಳ ಚರ್ಚಾ ಸ್ವಾರಸ್ಯಗಳು.

ದುದಿಲ್ಲವೆನ್ನುತ್ತಾ, ಶ್ರೀ ಜಗನ್ನಾಥರಾಯರ ಈ ಸುದ್ದಿಗೆ ಆಧಾರವೇನು, ಎಂದು ಪಟ್ಟುಸಿ ಕೇಳಿದರು. ಈ ಸುದ್ದಿಗಾವ ಆಧಾರವೂ ಇಲ್ಲದಿದ್ದ ರಾಯರಿಗೆ ನೆಹರೂಗಳ ಘರ್ಜನೆಯಿದಿರು ಗಟ್ಟಿ ನಿಲ್ಲಲಾಗುವ ಆಧಾರ ಕೂಡಾ ತಪ್ಪಿದಂತಾಗಿ ಅವರು ಕೂಡಲೇ ತನ್ನ ಮಾತನ್ನು ಹಿಂತೆಗೆದುಕೊಂಡು ಭಾಷಣ ಮುಗಿಸಿ, ಕುಳಿತುಬಿಟ್ಟರು. ಮತ್ತೊಬ್ಬ ಸದಸ್ಯ ಹೀಗೆಯೇ ಮಾತಾಡುತ್ತಾ "ಸಂಯುಕ್ತ ರಾಷ್ಟ್ರ ಸಂಘದ ಒಂದು ರಂಗಿನ ಚರ್ಚೆಯ ವೇಳೆಯಲ್ಲಿ ರಶ್ಯವು ತನ್ನ ವಿಶೇಷ ಮತಾಧಿಕಾರವನ್ನು ಉಪಯೋಗಿಸಬೇಕೆಂದು ಭಾರತವು ಕೇಳಿಕೊಂಡರೂ, ಯಾವುದೇ ಸ್ಪಷ್ಟ ವಿದೇಶ ಸಂಬಂಧ ಧೋರಣೆಯಿಲ್ಲದ ರಾಷ್ಟ್ರ ಭಾರತವೆಂಬುದರಿಂದ ರಶ್ಯವು ಹಾಗೆ ಮಾಡಲು ನಿರಾಕರಿಸಿದ್ದಿತು" ಎಂದಿದ್ದರು. ಈ ಅಸಂಬದ್ಧ ಟೀಕೆಗಾಗಿ ಪಂಡಿತ ನೆಹರೂಗಳು ಕೆರಳಿಎದ್ದರೂ, ಕೇವಲ ಅಪಹಾಸ್ಯದ ನಗೆಬೀರಿ ಸುಮ್ಮಗಾದರು.

° ° ° °

ಕಳೆದ ವಾರ ಘಟನಾ ಸಮಿತಿಯಲ್ಲಿ ಸ್ವತಂತ್ರ ಭಾರತ ಘಟನೆಯ ಪ್ರಮುಖ್ಯಾಂಗಗಳನ್ನು ರೂಪಿಸುವ ಕೆಲಸಗಳಾಗಿವೆ. ಅಲ್ಪ ಸಂಖ್ಯಾಕ ಸಮಾಜಗಳಿಗೆ ಪ್ರತ್ಯೇಕ ಮತದಾನದ ಹಕ್ಕು ಮತ್ತು ಕಾದಿಟ್ಟ ಸ್ಥಾನಗಳಿಲ್ಲವೆಂಬ ತೀರ್ಮಾನ—ಕೇಂದ್ರಾಧ್ಯಕ್ಷರ ಅಧಿಕಾರ ನಿರ್ಣಯ—ಸುಪ್ರೀಮ್ ಕೋರ್ಟು ನ್ಯಾಯಾಧೀಶರುಗಳ ಸಂಬಂಧದ ನಿಯಮಾವಳಿ ರಚನೆ ಇತ್ಯಾದಿಗಳು ಆಗಿವೆ. ಈ ಸಂದರ್ಭಗಳು ವಿನೋದ ಹಾಗೂ ವಿಚಾರ ಲಹರಿಗಳನ್ನೆಬ್ಬಿಸುವಂತಹವಿದ್ದುವು. ಘಟನಾ ಸಮಿತಿಯಲ್ಲಿ ಮತ್ತದು ಪಾರ್ಲಿಮೆಂಟಾಗಿ ಮಾರ್ಪಟ್ಟಾಗ ಅಲ್ಲಿ ಕೂಡಾ ಒಪ್ಪಳ ಮಾತಾಡುವವರೆಂದರೆ ಜನ್ಮತಃ ದ. ಕ. ಜಿಲ್ಲೆಯವರಾದ ಶ್ರೀ ಎಚ್. ವಿ. ಕಾಮತರು. ಶ್ರೀ ಕಾಮತರ ಸವಾಲು ಅಡ್ಡ ಸವಾಲುಗಳು—ಸೂಚನೆ ಪ್ರತಿಸೂಚನೆಗಳು — ಪೋನೆ ಮೆಂಡು ವ್ಯಾಖ್ಯಾನಗಳು, ಹಾರದ ಸಂದರ್ಭವೇ ವಿರಳವೆನ್ನಬಹುದು. ಭಾವೀ ಕೇಂದ್ರಾಧ್ಯಕ್ಷನ ಅಧಿಕಾರ ಸಂಬಂಧದ ಚರ್ಚೆಯು ಘಟನಾಸಮಿತಿಯಲ್ಲಿ ನಡೆದಿದ್ದಾಗ, ಅದಕ್ಕೆ ಸಂಬಂಧಿಸಿದ ಮೂಲ ಸೂಚನೆಯನ್ನು ಮುಂದಿಟ್ಟ ಕಾನೂನುಮಂತ್ರಿ ಡಾ| ಅಂಬೇಡ್ಕರರನ್ನು ಒಂದು ಸಂದೇಹ ನಿವೃತ್ತಿಗಾಗಿ ಅಧ್ಯಕ್ಷ ರಾಜೇಂದ್ರ ಪ್ರಸಾದರು ಪ್ರಶ್ನಿಸಿದ್ದರು. ಡಾ| ಅಂಬೇಡ್ಕರರು ಅದನ್ನು ಉತ್ತರಿಸುತ್ತಿದ್ದರು. ಮೊದಲೇ ತನ್ನ ಪಾಲಿನ ಭಾಷಣ ಮುಗಿಸಿದ್ದ ಶ್ರೀ. ಕಾಮತರಿಗೆ ಈ ಸಂದರ್ಭದಲ್ಲೂ ಸುಮ್ಮಗಿರಲು ಮನಸ್ಸು ಕೇಳಲಿಲ್ಲ. ಅವರು ನಡುವೆ ಬಾಯಿಹಾಕಿ ಹೇಳಿದರು: "ಅತ್ಯಂತ ಕ್ರೂರವಾದ ಬ್ರಿಟಿಷ್ ಆಡಳಿತೆಗಿಂತಲೂ ನಾವು ಒಂದು ಹೆಜ್ಜೆ ಮುಂದೆ ಹೋಗುತ್ತಿದ್ದೇವೆ". ತಕ್ಷಣ ಅಧ್ಯಕ್ಷ ರಾಜೇಂದ್ರ ಪ್ರಸಾದರೆಚ್ಚರಿಸಿದರು:"ನೀವು ಈ ಮೊದಲೇ ಒಂದು ಭಾಷಣ ಮಾಡಿದ್ದೀರಿ. ಈ ಅಭಿಪ್ರಾಯ ಸೂಚಿಸುವ ಕೆಲಸ ನಿಮಗಿಲ್ಲ."

° ° ° °

ಘಟನಾ ಸಮಿತಿ ಚರ್ಚೆಗಳಲ್ಲಿ ಸಾಕಷ್ಟು ಸ್ವಾರಸ್ಯೋಕ್ತಿಗಳಿಗೆ ಅವಕಾಶ ಕೊಟ್ಟ ನಿಬಂಧನೆಯೆಂದರೆ ಭಾರತದ 'ಸುಪ್ರೀಮ್ ಕೋರ್ಟಿ'ನ ಸ್ಥಾಪನೆ ಮತ್ತದರ ರೂಪರೇಖೆಗಳನ್ನು ರೂಪಿಸುವ ಸಂಬಂಧದ ಚರ್ಚೆ. ಈ ನಿಬಂಧನೆಯ ಮೂಲ ಸೂಚನೆಯಲ್ಲಿ 'ಸುಪ್ರೀಮ್ ಕೋರ್ಟು ಓರ್ವ ಚೀಫ್ ಜಸ್ಟೀಸ್ ಮತ್ತು ಹೆಚ್ಚೆಂದರೆ ಏಳು ಮಂದಿ ಜಡ್ಜರಿಂದ ಕೂಡಿರಬೇಕು' ಎಂದಿದೆ. ಜಡ್ಜರು ನಿವೃತ್ತಿಗೊಳ್ಳುವ ಪ್ರಾಯವು 65 ವರುಷವೆಂದು ಉಲ್ಲೇಖಿಸಲ್ಪಟ್ಟಿದೆ. ಕೇವಲ ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಈ ನಿಬಂಧನೆಯು ಘಟನಾ ಸಮಿತಿಯಲ್ಲಿ ಮಂಜೂರಾಗಿದೆ. ಆದರೂ ಹಲವು ತಿದ್ದುಪಡಿಗಳು ಬಂದಿದ್ದು ವಿಶೇಷ ಚರ್ಚೆ ನಡೆದಿತ್ತು. ಜಡ್ಜರ ನಿವೃತ್ತಿ ಪ್ರಾಯದ ಗಡಿಯನ್ನು 60 ವರುಷಕ್ಕಿಳಿಸಬೇಕೆಂಬ ಸೂಚನೆಯು ರಮ್ಯ ತರ್ಕಗಳಿಗೆಡೆಕೊಟ್ಟದ್ದಿತು. ಶ್ರೀ. ರೋಹಿಣೀ ಕುಮಾರ ಚೌಧರಿಗಳೆಂದರು. "ಜಡ್ಜರ ಪ್ರಾಯದ ಕನಿಷ್ಠ ಮಿತಿಯನ್ನು ನಿರ್ಧರಿಸಬೇಕಲ್ಲದೆ ಅವರ ನಿವೃತ್ತಿಯ ಕೊನೆಯ ಮಿತಿಯನ್ನು ನಿರ್ಧರಿಸುವದೇ ತಪ್ಪೆನ್ನುತ್ತೇನೆ. ಪ್ರಾಯಸ್ಥನೊಬ್ಬನು ಅತನ ಪ್ರಾಯವಿಷ್ಟೇ ಎಂದು ಜಾಹೀರು ಮಾಡುವಂತೆ ಕಡ್ಡಾಯಗೊಳಿಸುವದು ಬಹಳ ತಪ್ಪು. ನಮ್ಮ ಪ್ರಮುಖರು ತಮ್ಮ ಜನ್ಮದಿನಾಚರಣೆ ಮಾಡಲು ಬಿಡಕೂಡದೆಂದು ನಾನವರನ್ನು ಎಚ್ಚರಿಸಬೇಕಾಗಿದೆ. ಪಂಡಿತ ನೆಹರುಗಳು 60 ವರುಷದವರೆಂದು ತಿಳಿದಾಗ ನಾನೇ ಮ್ಮ ಕಂಪಿಸಿದೆ. ಪಂಡಿತಜೀ ತನ್ನ ಹುಟ್ಟುವರ್ಧಂತಿಯನ್ನಾಚರಿಸದಂತೆ ಮಾಡುತ್ತಿದ್ದರೆ ನಾನವರನ್ನು 50 ವರುಷ ಪ್ರಾಯದವರೆಂದು ನಂಬುತ್ತಿದ್ದೆ. ಮುಂದೆ ಮಹಿಳೆಯರೂ ಜಡ್ಜರಾಗಿ ನೇಮಕಗೊಳ್ಳಲಿದ್ದಾರೆ. ತಾನು 55 ಅಥವಾ 60 ವರುಷದವಳೆಂದು ಒಪ್ಪಿಕೊಳ್ಳುವ ಸ್ತ್ರೀ ಯಾರಾದರೂ ಇದ್ದಾಳೇನು? ಜಡ್ಜರ ಹುದ್ದೆ ಹಾಗಿರಲಿ, ಚಕ್ರವರ್ತಿ ಹುದ್ದೆ ದೊರೆಯುವಂತಿದ್ದರೂ ಯಾವ ಸ್ತ್ರೀಯೂ ಹಾಗೆ ಒಪ್ಪಿಗೆ ಕೊಡುವಂತಿಲ್ಲ" (ಸಭೆಯಲ್ಲೆಲ್ಲಾ ನಗು). ಸುಪ್ರೀಮ್ ಕೋರ್ಟು ಜಡ್ಜರ ಕೊನೆಯ ಪ್ರಾಯಾವಧಿಯನ್ನು 60 ವರುಷಕ್ಕಿಳಿಸಬೇಕೆಂಬ ಅಭಿಪ್ರಾಯವು ಪಂಡಿತ ನೆಹರುಗಳಲ್ಲೂ ತೀವ್ರ ಅಸಮ್ಮತಿ ನಿರ್ಮಿಸಿದ್ದಿತು. "ಅಷ್ಟೊಂದು ವೆಚ್ಚದಿಂದ ತರಬೇತಿಗೊಳಿಸಿದ ಜಡ್ಜರನ್ನು ಅವರ ಬುದ್ಧಿ ಮತ್ತು ದೇಹ ಪರಮಾವಧಿ ಪಕ್ವಗೊಳ್ಳುವ ಅವಧಿಯಲ್ಲೇ ಹೊರದಬ್ಬುವದೆಂದರೇನು? ಅನ್ಯರ ಪ್ರಾಯ 60ಕ್ಕೆ ಮಿಕ್ಕಿತೆಂಬ ಕಾರಣದಿಂದ ಅವರನ್ನು ಸ್ಥಾನದಿಂದ ತಳ್ಳುವದು ಅಪಹಾಸ್ಯಕರವಲ್ಲವೇ? ಅಮೇರಿಕದ ಸುಪ್ರೀಮ್ ಕೋರ್ಟಿನ ಜಸ್ಟೀಸ್ ಹೋಮ್ಸರು ತನ್ನ 92ನೇ ವಯಸ್ಸಿನಲ್ಲಿ ಅಸಾಧಾರಣ ಯೋಗ್ಯತೆಗಳನ್ನು ಪ್ರದರ್ಶಿಸಲಿಲ್ಲವೇ?" ಎಂದು ಮುಂತಾಗಿ ಪಂಡಿತಜೀ ಕಥೆಹೇಳಿದ್ದರು.

°° °° °°

ಒಂದು ಮಹಾ ಗ್ರಂಥವನ್ನೇ ತುಂಬಲಾಗುವಷ್ಟು ವಿನೋದೋಕ್ತಿಗಳನ್ನು, ವಿಲಕ್ಷಣ ಮಾದರಿಯ ಸೂಚನೆಗಳನ್ನು ಕಳೆದ ಒಂದೆರಡು ವರುಷಗಳಿಂದ ಜರಗುತ್ತಿರುವ ಘಟನಾ ಸಮಿತಿ ಸಭೆಗಳ ಕಾರ್ಯಕ್ರಮಗಳಿಂದ ಹೆಕ್ಕಿಕೊಳ್ಳಬಹುದು. ಈ ಬಾರಿಯ ಅಧಿವೇಶನದಲ್ಲೇ, ಪಾರ್ಲಿಮೆಂಟ್ ಚುನಾವಣೆ ಮತ್ತು ಉಮೇದ್ವಾರರುಗಳ ಯೋಗ್ಯತೆಗೆ ಸಂಬಂಧಿಸಿದ ನಿಬಂಧನೆಗೆ ಪ್ರೊ. ಕೆ. ಟಿ. ಶಾ ಅವರು ಮುಂದಿಟ್ಟ ಸೂಚನೆಯೊಂದು ಹಲವರ ಬಾಯಿ ನೀರೂರಿಸುವಂತಹದು. 'ಪಾರ್ಲಿಮೆಂಟ್ ಉಮೇದ್ವಾರರುಗಳ ಚುನಾವಣಾ ವೆಚ್ಚವನ್ನು ಸರಕಾರವೇ ವಹಿಸಬೇಕು. ಬಿದ್ದ ವೋಟುಗಳ ಪೈಕಿ ಸೇ. 10ರಷ್ಟನ್ನೂ ಪಡೆಯದ ಉಮೇದ್ವಾರರಿಗೆ ಆ ವೆಚ್ಚ ಕೇಳುವ ಹಕ್ಕಿರಕೂಡದು' ಎಂಬುದೇ ಪ್ರೊಫೆಸರ್ ಶಾರ ಸೂಚನೆ. ಅದೆಲ್ಲಿಯಾದರೂ ಅಂಗೀಕಾರ ಪಡೆಯುತ್ತಿದ್ದರೆ ಮತದಾರರಲ್ಲಿ ಅರೆವಾಸಿಗೂ ಮಿಕ್ಕಿ ಪಾರ್ಲಿಮೆಂಟಿನ ಉಮೇದ್ವಾರರುಗಳಾಗುತ್ತಿದ್ದರೇನೋ ಎಂದು ತೋರುತ್ತಿದೆ. ದೇವರ ದಯೆಯಿಂದಾಗಿ ಅದು ತಿರಸ್ಕೃತವಾಯಿತು. ಮತ್ತೊಂದು ಬಾರಿ ಘಟನಾ ಸಮಿತಿಯಲ್ಲಿ ಮಿ. ನಾಜಿರುದ್ದೀನ್ ಅಹಮ್ಮದರು ಒಂದು ದೂರು ಹೇಳಿಕೊಂಡಿದ್ದರು. ಅದು ಇಂಗ್ಲಿಷ್ ಪ್ರಯೋಗಗಳಲ್ಲಿ ಪ್ರಥಮತಃ ಬರುವ 'ದಿ' ಎಂಬ ಪದಕ್ಕೆ ಸಂಬಂಧಿಸಿದುದು. "ಘಟನೆಯ ಕರಡು ತಯಾರಿ ಸಮಿತಿಯವರು ಕೆಲವೊಂದು ನಿಬಂಧನೆಗಳಲ್ಲಿ 'ದಿ' ಪದದ ಕಡೆಗೆ ವಿಶೇಷ ಮೋಹವನ್ನೂ ಇನ್ನು ಕೆಲವುವೆಡೆ 'ದಿ'ಯ ಕಡೆಗೆ ಹೆಚ್ಚಿನ ವೈರವನ್ನೂ ತೋರಿಸಿದ್ದಾರೆ. ಹೀಗಾಗಿ ಕೆಲವೆಡೆ "ದಿ ಚೆಯರ್ ಮೇನ್" "ದಿ ಡಿಪ್ಯುಟಿ ಚೆಯರ್‌ಮೇನ್" "ದಿ ಸ್ಪೀಕರ್" ಎಂದಿದ್ದರೆ ಇನ್ನು ಕೆಲವೆಡೆ 'ದಿ'ಯ ಸುಳಿವೇ ಇಲ್ಲ" ಎಂದು ನಾಜೀರುದ್ದೀನರು ದೂರುತ್ತಾ ಹೋದಾಗ ಶ್ರೀ ಅನಂತ ಶಯನಮ್ ಅಯ್ಯಂಗಾರರು ನಡುವೆ ಬಾಯಿಹಾಕಿ "ನನ್ನ ಮಿತ್ರರು ಈ ಸಭೆಯ ಸಮಯವನ್ನು ಹೀಗೆ ವ್ಯಯಿಸುವದರ ಅರ್ಥವೇನು?" ಎಂದು ಕೇಳಿಬಿಟ್ಟರು. ಅಧ್ಯಕ್ಷ ರಾಜೇಂದ್ರ ಪ್ರಸಾದರು "ನಾನೇನೋ ನಾಜೀರುದ್ದೀನರ ಮನಸ್ಸು 'ದಿ'ಗೆ ಪರವಾಗಿದೆಯೋ, ವಿರುದ್ಧವಿದೆಯೋ ಎಂಬುದನ್ನು ತಿಳಿಯಬೇಕೆಂಬ ಆತುರದಿಂದಿದ್ದೆ" ಎಂದು ಹೇಳಿ ಸಭೆಯಲ್ಲಿ ನಗೆಯನ್ನೆಬ್ಬಿಸಿದರು. ಈ ಬಾರಿಯ ಅಧಿವೇಶನದಲ್ಲಿ ಅತಿಹೆಚ್ಚಿನ ಉತ್ಸಾಹ ಧ್ವನಿ ಮತ್ತು ಚಪ್ಪಾಳೆ ಹಾಗೂ ಶ್ಲಾಘನೋದ್ಗಾರಗಳನ್ನು ಪಡೆದವರೆಂದರೆ ಸರ್ದಾರ್ ಪಟೇಲರು. ಭಾರತದ ಇದುವರೆಗಿನ ರಾಜಕೀಯ ವಿಧಾನವನ್ನೇ ಬದಲಾಯಿಸಿಬಿಟ್ಟ "ಹರಿಜನರು ಮತ್ತು ಸಿಖ್ಖರ ಒಂದು ದಳಿತ ವಿಭಾಗದವರಿಗೆ ಇನ್ನು ಹತ್ತು ವರುಷಗಳ ವರೆಗೆ ಮಾತ್ರವಲ್ಲದೆ ಬೇರಾವ ಅಲ್ಪ ಸಂಖ್ಯಾಕ ಸಮಾಜಗಳಿಗೂ ಕಾದಿಟ್ಟ ಸ್ಥಾನಗಳಿಲ್ಲ" ಎಂಬ ಸೂಚನೆಯನ್ನು ಸರ್ದಾರರು ತಂದು ಮಂಜೂರು ಮಾಡಿಸಿ ಕೊಂಡಾಗ, ಅಲ್ಪಸಂಖ್ಯಾಕ ಪ್ರತಿನಿಧಿಗಳ ಸಮೇತ ಇಡೀ ಸಭೆಯು ಪ್ರದರ್ಶಿಸಿದ ಹರ್ಷೋತ್ಸಾಹಗಳು ಅಪೂರ್ವವಿದ್ದುವು. ಅಂತೂ ಭಾರತದ ಭವಿಷ್ಯ ನಿರ್ಮಿಸುವ ಬಿಗುವಾದ ಕಾರ್ಯಗಳಲ್ಲಿ ತೊಡಗಿರುವ ಘಟನಾ ಸಮಿತಿಯಲ್ಲಿ ಕೂಡಾ ಲಘುವಿನೋದಗಳಿಗೇನೂ ಬರಗಾಲವಿಲ್ಲ!

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯು ಜರೂರಾತಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತ. ಹೇಳಿದುದಾಗಿದೆ. ಇದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದು ಕೋಟಿ ರೂಪಾಯಿಗಳ ವಹಿವಾಟು

ಟಿ ಎ. ಪೈ.

ಜನರಲ್ ಮೆನೇಜರ್

ಎಲ್ಲಾ ತರದ ಶಾಸ್ತ್ರೀಯ

ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು

ವಿಚಾರಿಸಿರಿ.

ಅಪಾಯದಾಹುತಿ ಚೈನಾ-ಭಾರತಕ್ಕೊಂದು ಪಾಠ

[ಶಾಂಘಾಯಿ ಘಾಳಿಯೊತ್ತುತ್ತಿದ್ದಾಗ ಆ ನಗರವನ್ನು ಸಂದರ್ಶಿಸಿದ್ದ ಗಾಂಧೀ ಶಿಷ್ಯ ಪ್ರೊಫೆಸರ್ ಎಸ್. ಎನ್. ಅಗರ್ವಾಲ, ಇವರಿಂದ.]

ಗಾಂಧಿತತ್ವಪ್ರಚಾರಾರ್ಥವಾಗಿ, ನಾನು ಕೈಕೊಂಡ ಕ್ಷಣಿಕ ಲೋಕ ಸಂಚಾರದಲ್ಲಿ, ಉದ್ದೇಶಪೂರ್ವಕವಾಗಿಯೇ ಚೈನವನ್ನೂ ಸೇರಿಸಿಕೊಂಡಿದ್ದೆ. ಆದರೂ ಚೈನದ ರಾಜಕೀಯ ಸ್ಥಿತಿಗತಿಗಳಿಂದಾಗಿ, ಪ್ರಯಾಣ ಮಧ್ಯದಲ್ಲಿ ಶಾಂಘಾಯಿಯಲ್ಲಿಳಿಯಲು ನನಗೆ ಸಾಧ್ಯವಾದೀತೇ ಎಂಬುದು ತೀರಾ ಅನುಮಾನಕರವಾಗಿತ್ತು.-ಚೈನಾದಲ್ಲಿ ಭಾರತದ ರಾಯಭಾರಿಯಾಗಿರುವ ಸರ್ದಾರ್ ಕೆ. ಎಮ್. ಪಾನಿಕ್ಕರರು ಕೂಡಾ ಕಲ್ಕತ್ತದಲ್ಲಿ ನಮ್ಮ ವಿಮಾನವನ್ನೇ ಹತ್ತಿ ನಮ್ಮೊಂದಿಗಿದ್ದರು. ಸದ್ಯಸ್ಥಿತಿಯು ಚೈನದಲ್ಲಿ ನಿಲ್ಲಬಹುದೆಂಬ ಸ್ಪಷ್ಟ ಸಲಹೆ ಕೊಡಲು ಅವರೂ ಹಿಂಜರಿದಿದ್ದರು. ಲೊಸರೂ ಇಲ್ಲಿಯ ವಿಮಾನ ನಿಲ್ದಾಣದಲ್ಲಿ ಚೈನದ ಭಾರತ ರಾಯಭಾರಿ ಕಚೇರಿ ಮತ್ತು ಕನ್ಸಲೇಟ್ ಜನರಲರ ಕಚೇರಿಯ ಹಲವು ಮಿತ್ರರು ನಮಗೆ ಭೇಟಿಯಾದರು. ನಾನು ಕೆಲವು ದಿನಗಳ ಮಟ್ಟಿಗಾದರೂ ಚೈನಾ ಸಂಚರಿಸಲೇಬೇಕೆಂದು ಅಲ್ಲಿ ಆಕಾಶ ಪ್ರಯಾಣ ನಿಲ್ಲಿಸಲು ನಿರ್ಧರಿಸಿದೆ. ಇದು ಎಪ್ರಿಲ್ 18ರಲ್ಲಿ.

ಶಾಂಘಾಯಿಯ ಮರ್ಜಿ

ಸುಮಾರು 8 ಮಿಲಿಯ ಜನಸಂಖ್ಯೆಯುಳ್ಳ ದೊಡ್ಡ ನಗರ ಶಾಂಘಾಯಿ. ಚೈನೀಯರು, ಅಮೆರಿಕನರು, ಬ್ರಿಟಿಷರು, ಜಪಾನರು ಮತ್ತು ಸುಮಾರು 600 ಭಾರತೀಯರ ಸಮೇತ ಮಿಕ್ಕ ಹಲವು ರಾಷ್ಟ್ರೀಯರು ಬೆರಕೆಯಾಗಿರುವ ಸನ್ಮಿಶ್ರ ಜನಾಂಗ ಮರ್ಜಿಯ ನಗರವದು. ಭಾರತದ ಕನ್ಸಲೇಟ್ ಜನರಲರು ಶಾಂಘಾಯಿಯಲ್ಲೇ ನೆಲೆನಿಂತಿದ್ದು, ಅಲ್ಲಿರುವ ಭಾರತೀಯರಿಗೆ ಬೇಕಾಗುವ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದಾರೆ. ಶಾಂಘಾಯಿಯು ಚೈನದ ದೊಡ್ಡ ನಗರವಾದರೂ ಅದು ಚೈನೀ ಜನತೆಯ ಪುರಾತನ ಸನಾತನ ಸಂಸ್ಕೃತಿಯನ್ನೇನೂ ಪ್ರತಿನಿಧೀಕರಿಸುತ್ತಿಲ್ಲ. ಚೈನದ ಯಥಾರ್ಥ ತಿರುಳನ್ನು ತೋರಿಸುತ್ತಿರುವ ಯಾವದೊಂದು ಸಂಸ್ಥೆಯೂ ಅಲ್ಲಿದ್ದಂತೆ ಕಾಣುವದಿಲ್ಲ. ಶಾಂಘಾಯಿ ವಿಶ್ವವಿದ್ಯಾಲಯವನ್ನು ಕಾಣುವ ಸುಯೋಗವು ನನಗೊದಗಿದ್ದಿತು. ಆದರೆ ಆ ವಿಶ್ವವಿದ್ಯಾಲಯವನ್ನು ನಡೆಸುವವರು ಅಮೆರಿಕದ ಮಿಶನರಿಗಳಿದ್ದು ಚೈನೀ ಸಂಸ್ಕೃತಿ ಅಥವಾ ಕ್ರಮವಿಧಾನಗಳಿಗೆ ಅಲ್ಲಿ ಯಾವ ಲಕ್ಷ್ಯವೂ ಕೊಡಲ್ಪಟ್ಟಿಲ್ಲವೆನ್ನಬೇಕು. ನಾನು ಕೊನೆಗೆ ಸಂದರ್ಶಿಸಿದ ಫ್ಯುಟಾನ್ ವಿಶ್ವವಿದ್ಯಾಲಯವೇ ಈ ಮಟ್ಟಿಗೆ ವಿಶೇಷ 'ಚೈನೀಯ'ವಾಗಿತ್ತು. ಈ ಯುನಿವರ್ಸಿಟಿಗಳ ಹೆಚ್ಚಿನ ಪ್ರೊಫೆಸರರು ಅಮೇರಿಕನರು ಅಥವಾ ಬ್ರಿಟಿಷರು; ಹೀಗಿದ್ದರೂ ಚೈನೀ ವಿದ್ಯಾರ್ಥಿಗಳಿಗೆ ಈಗ ಕೂಡಾ ಅತ್ಯುಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡು ಅಥವಾ ಅಮೆರಿಕಕ್ಕೇನೇ ಹೋಗುವ ಚಟವಿರುವುದು ತೀರಾ ವಿಲಕ್ಷಣವೇ ಸರಿ. ಇಲ್ಲಿ ತರಗತಿಗಳಾರಾಗಿ ಚೈನೀ ಭಾಷೆಯಲ್ಲಿ ವಿಶಿಷ್ಟ ಉಪನ್ಯಾಸವಾವುದೂ ನಡೆಯದೆ, ಲ್ಯಾಟಿನ್ ಅಥವಾ ಅಂತರರಾಷ್ಟ್ರೀಯ ಪರಿಭಾಷೆಗಳೇ ಯುನಿವರ್ಸಿಟಿ ಲೆಕ್ಚರುಗಳಲ್ಲಿ ಸರ್ವತ್ರ ಉಪಯೋಗಿಸಲ್ಪಡುತ್ತಿವೆ. ಚೈನೀ ಭಾಷೆಯ ಪಠ್ಯ ಪುಸ್ತಕಗಳ ಜತೆಯಲ್ಲಿ ಇಂಗ್ಲಿಷ್ ಪುಸ್ತಕಗಳನ್ನು ಚೈನೀ ... [illegible] ಬಹಳ ಮೆಚ್ಚುತ್ತಾರೆ. ಹೈಸ್ಕೂಲು ಕ್ಲಾಸುಗಳ ತನಕ ಇಂಗ್ಲಿಷ್ ಭಾಷಾ ಶಿಕ್ಷಣವು ಕಡ್ಡಾಯವಾಗಿದ್ದು ಯುನಿವರ್ಸಿಟಿ ತರಗತಿಗಳಲ್ಲಿ ಅದು ಐಚ್ಛಿಕವಾಗಿದೆ.

ಭಾರತ-ಚೈನಾ ಸಮಾನ ಸಂಸ್ಕೃತಿ

ಶಾಂಘಾಯಿಯಲ್ಲಿ ನಾನಿದ್ದ ಅಲ್ಪಾವಧಿಯಲ್ಲಿ ಕೆಲವಂದಿ ಚೈನೀ ಮೇಧಾವಿಗಳನ್ನು ಭೇಟಿಯಾಗುವ ಸುಯೋಗ ಸಂಪಾದಿಸಿದೆ. ಡಾ. ಲಿನ್ ಟುಂಗ್ ಚೀ ಇವರು ಫ್ಯುಟಾನ್ ಯುನಿವರ್ಸಿಟಿಯ ರಾಜಕೀಯ ವಿಜ್ಞಾನದ ಪ್ರೊಫೆಸರರಿದ್ದಾರೆ. ಅಂತೆಯೇ ಶಾಂಘಾಯಿಯ ಪಾಶ್ಚಾತ್ಯ ಮರ್ಜಿಯ ಹಾಯಿಕ್ವಾಂಗ್ ಲೈಬ್ರರಿಯ ಡೈರೆಕ್ಟರರೂ ಇವರೇ. ಅವರು, ಭಾರತ ಮತ್ತು ಮಹಾತ್ಮಾ ಗಾಂಧಿಯವರ ಕುರಿತು ಆಸಕ್ತಿ, ಅಭಿರುಚಿಯುಳ್ಳ ಕೆಲವೇ ಮಂದಿಯ ಚುನಾಯಿತ ಸಭೆಯೊಂದರಲ್ಲಿ ಭಾಷಣ ಮಾಡುವಂತೆ ನನ್ನನ್ನು ಆಮಂತ್ರಿಸಿದ್ದರು. ಭಾರತ ಮತ್ತು ಚೈನಗಳೊಳಗೆ ನಿಕಟ ಸಾಂಸ್ಕೃತಿಕ ಸಂಬಂಧ ನಿರ್ಮಿಸಬೇಕೆಂದು ನಾನಲ್ಲಿ ವಾದಿಸಿದೆ. ಈ ಅಭಿಪ್ರಾಯವನ್ನೇ ಹಲವು ಚೈನೀ ಮಿತ್ರರೂ ಹೊಂದಿದ್ದರು. ಚೀನವ ಬಹು ಸಂಖ್ಯಾಕರು ಬೌದ್ಧ ಮತೀಯರಿದ್ದು, ಭಾರತ ಮತ್ತು ಚೈನಗಳ ಪುರಾತನ ಸಂಸ್ಕೃತಿಗಳೊಳಗೆ ಸಮಾನ ಸಂಗತಿಗಳೆಷ್ಟೋ ಹುದುಗಿವೆ. ಆದರೂ ಚೈನೀ ಬುದ್ಧಿಯೆಂಬುದು ಅಲ್ಲಿಯ ಕೋನ್ಫ್ಯುಸಿಯಸ್ ಮತ್ತು ಟಾವೋಯಿಸಮ್ ವಾದಗಳ ನಡುವೆ ಸಿಕ್ಕಿ ಹರಿದುಹೋಗಿದೆ. ಕೋನ್ಫ್ಯುಸಿಯಸ್ ಕರ್ತವ್ಯಧರ್ಮವನ್ನು ಬೋಧಿಸುತ್ತದಾದರೆ ಟಾವೋಯಿಸಮ್ ವ್ಯಕ್ತಿ ಸ್ವಾತಂತ್ರ್ಯವನ್ನೇ ಒತ್ತಿ ಹೇಳುತ್ತಿದೆ. ಪ್ರಾಯಶಃ ಚೈನದ ದೊಡ್ಡ ದುರಂತವೆಂದರೆ ರಾಜಕೀಯ ಘರ್ಷಣೆ ಅಥವಾ ಅಂತರ್ಯುದ್ಧವಾವುದೂ ಅಲ್ಲ—ಚೈನೀ ಜನತೆಯ ಮಿತಿಮೀರಿದ ಸ್ವಾತಂತ್ರ್ಯವುಳ್ಳ ವ್ಯಕ್ತಿತ್ವವೇ ಎನ್ನಬೇಕು. ಜನ್ಮತಃ ಅವರ ಲಕ್ಷ್ಯವಿರುವುದು ಪ್ರಥಮವಾಗಿ ವ್ಯಕ್ತಿಶಃ ತಮ್ಮಮೇಲೆ; ಆ ಮೇಲೆಯೇ ಕುಲ ಗೋತ್ರ ಮತ್ತು ರಾಷ್ಟ್ರದ ಮಾತು. ಚೈನವನ್ನಿಂದು ಆವರಿಸಿರುವ ಮಹಾ ಸಂಕಟಗಳಿಗೆ ಮೂಲ ಕಾರಣವಾಗಿರುವ ಈ ಚೈನೀ ಸ್ವಭಾವವೇ ಅವರಲ್ಲಿ ಅಳಕ್ಕೂ ಬೇರು ಬಿಟ್ಟಿರುವ ಮಹತ್ತಾದ ದೋಷ. ಮಹಾತ್ಮಾ ಗಾಂಧಿಯವರ ತತ್ವಗಳ ಕುರಿತು ಭಾಷಣ ಮಾಡುವಂತೆ, ಅಲ್ಲಿಯ ಜಾಗತಿಕ ಬೌದ್ಧ ಮಿಶ್ಯನಿನವರೂ ನನ್ನನ್ನು ಆಮಂತ್ರಿಸಿದ್ದರು. ಬುದ್ಧನ ತತ್ವಗಳನ್ನೇ ಹೋಲುವ ಗಾಂಧಿಜೀ ಬೋಧನೆಗಳನ್ನು ಕೇಳಿ ಆ ಮಿಶ್ಯನಿನ ಅಧ್ಯಕ್ಷ ಡಾ। ಥ್ಸೀ ಅವರು ಅವುಗಳ ಕುರಿತು ತನ್ನ ಗಾಢ ಗೌರವವನ್ನು ವ್ಯಕ್ತಪಡಿಸಿದರು. ಚೈನೀಯ ಸಾಂಸ್ಕೃತಿಕ ಸಮಿತಿಯೊಂದನ್ನು ಭಾರತಕ್ಕೆ ಕಳುಹಿಸಿಕೊಡುವ ಆಲೋಚನೆಯು ಆ ಸಭೆಯಲ್ಲಿ ರೂಪುಗೊಂಡಿತು. ಭಾರತದಲ್ಲಿ ಹೊಸತಾಗಿ ಸ್ಥಾಪನೆಗೊಂಡ ಸರ್ವೋದಯ ಸಮಾಜದ ಪರಿಚಯವನ್ನು ನಾನಾ ಕಮಿಶ್ಯನಿನ ಸದಸ್ಯರಿಗೆ ಮಾಡಿಕೊಟ್ಟೆ. ಕೂಡಲೇ ಡಾ। ಥ್ಸೀ ಅವರ ಸಮೇತ ಹಲವು ಸದಸ್ಯರು ಸರ್ವೋದಯ ಸಮಾಜದ ಸೇವಕರಾಗಿ ತಮ್ಮ ಹೆಸರುಗಳನ್ನು ದಾಖಲ್ಮಾಡಿಸಿಕೊಂಡರು.

ಕಮ್ಯೂನಿಸಮಿನ ಭವಿಷ್ಯ ಹೇಗೆ

ಚೈನವು, ಸಮೃದ್ಧ ಸಾಂಸ್ಕೃತಿಕ ವಿಧಾನಗಳುಳ್ಳ ಅತಿ ಪುರಾತನ ರಾಷ್ಟ್ರವಾದರೂ, ಸರ್ವಸಾಮಾನ್ಯ ಚೈನೀಯನು ತನ್ನ ವ್ಯಕ್ತಿಗತ ಜೀವನವೊಂದರ ಹೊರತು ಬೇರಾವುದರ ಕಡೆಗೂ ಸಾಕಷ್ಟು ಗಮನ ಕೊಡುವವನಲ್ಲವೆಂಬುದು ನನ್ನ ಮನಸ್ಸಿಗೆ ನಾಟಿದೆ. ಪ್ರಚಲಿತ ರಾಜಕೀಯ ಮತ್ತು ಆರ್ಥಿಕ ಅನಾಹುತಗಳಿಗೆ ಇದೂ ಒಂದಂಶ ಹೇತುವಾಗಿದೆ. ಇನ್ನಾದರೂ ಸರಿಯೇ, ವ್ಯಕ್ತಿಗತ ಲಾಭಗಳಿಗಿಂತ ಮುಖ್ಯವಾಗಿ ರಾಷ್ಟ್ರೀಯ ಹಿತ ಸಾಧನೆಯನ್ನು ಗಣಿಸದಿದ್ದಲ್ಲಿ, ಶೀಘ್ರ ಭವಿಷ್ಯದಲ್ಲೇ ಅಧೋಗತಿಯಿಂದ ತಪ್ಪಿ ಮೇಲಕ್ಕೇರುವುದು ಚೈನದ ಪಾಲಿಗೆ ಅಸಾಧ್ಯವೇ ಸರಿ. ಚೈನದಲ್ಲಿ ಕಮ್ಯೂನಿಸಮಿಗೆ ತೀರಾ ಸಂದೇಹಕರ ಭವಿಷ್ಯವಾದಿರುವಂತೆ ಮಾಡಿರುವುದೆಂದರೆ ಚೈನೀ ಜನತೆಯ ಅತಿ ಸಂಕುಚಿತ ವ್ಯಕ್ತಿತ್ವವೇ. ಕಮ್ಯೂನಿಸ್ಟರ ಸೇನಾಬಲವು ವಿಜಯದ ಮೇಲೆ ವಿಜಯಗಳನ್ನು ಸಾಧಿಸುತ್ತಿದೆಯಾದರೂ-ಚೈನವು ಸಂಪೂರ್ಣವಾಗಿ ಕಮ್ಯೂನಿಸ್ಟರ ಹಸ್ತಗತವಾಗಲು ಇನ್ನು ವರುಷಗಳು ಅಥವಾ ತಿಂಗಳುಗಳೇನೂ ಬೇಕಾಗಿರದೆ ಅದು ಕೇವಲ ವಾರಗಳ ಪ್ರಶ್ನೆಯೆಂದು ತೋರುತ್ತಿದೆಯಾದರೂ—ಚೀನಾ ಭೂಮಿಯಲ್ಲಿ ಕಮ್ಯೂನಿಸಮ್

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಜೊತೆಗಾರರ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ನಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ರಿಂದ ೫ ತಿಂಗಳು ,, ,, ೨॥

ರೂ. ೧೦೦೦ಕ್ಕಿಂತ ಕಡಮೆಯಲ್ಲದ ರೂ. ೧೯,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಹೆಡ್ ಆಫೀಸು: ಬಾವಟೆ ಗುಡ್ಡೆ, ಮಂಗಳೂರು.

ಇತರ ಶಾಖೆಗಳು:

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡಿಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

ಕರ್ನಾಟಕ ಏಕೀಕರಣವೇ ಕನ್ನಡ ಜನತೆಯ ಮುಖ್ಯ ಧ್ಯೇಯ!

ಹರಿದು ಹಂಚಾದ ಕನ್ನಡ ಜನತೆಯನ್ನು ಒಂದುಗೂಡಿಸುವ 2 ಕೋಟಿ ಕಂಠಗಳ ಮುಖ್ಯ ಧ್ವನಿಯೇ ಏಕೀಕರಣದ ಮಹಾ ಗುರಿ.

ಅಂತೆಯೇ ಶಾಸ್ತ್ರೀಯ ರೀತಿಯ ಆಯುರ್ವೇದ ತಯಾರಿಯಿಂದ ಜನಸಾಮಾನ್ಯರ ಸೇವೆಯೇ **ಸುಧಾ**ರವರ ಮಹಾ ಧ್ಯೇಯ.

ಪಾಯಿಲೋಕ್ಯೂರಾ:— ಮೂಲವ್ಯಾಧಿಗೆ ಇನ್ನುಮೇಲೆ ಭಯಪಡಬೇಕಾದ್ದಿಲ್ಲ. ನಮ್ಮ ಪಾಯಿಲೋಕ್ಯೂರಾ ಸೇವಿಸುವುದರಿಂದ ಮೊಳಕೆಯನ್ನು ನಿರ್ಮೂಲಗೊಳಿಸಿ, ರಕ್ತಸ್ರಾವವನ್ನು ನಿಲ್ಲಿಸುವುದು. ಮತ್ತು ಪ್ರಕೃತಿಯನ್ನು ಸುಲಭಗೊಳಿಸುವುದು.

ಇದೊಂದು ಆಯುರ್ವೇದದಲ್ಲಿ ರತ್ನವಿದ್ದಂತೆ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ ವಿಚಾರಿಸಿರಿ.....

ದಕ್ಷಿಣ ಭಾರತದ ಪ್ರಮುಖ ವಿತರಣಕರ್ತರು.

ಯು. ಪಿ. ಬಿ. ಬಿ. ಎಂಡ್ ಕಂಪೆನಿ,

ಪೋಸ್ಟ್ ಬೋಕ್ಸ್ ನಂಬ್ರ 38, ರೋಯಲ್ ಮಹಾಲ್, ಉಡುಪಿ. ದ. ಭಾ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 64/49

ವಾದಿ— ಸುಬ್ಬ ಪುಜಾ.

ಪ್ರತಿವಾದಿರು - 1 ಡಿ. ಬಿ. ಆ್ಯಸ್, ಜವಳಿ ಅಂಗಡಿ ಮಾಡುವ ಅಬ್ದುಲ್ ರಹೀಮಾನ್ ಸಾಹೇಬರ ವಿಧವೆ-

2 ನೂರಿನ್ನಿಸಾ

3 ಅಬ್ದುಲ್ ರಹಿಮಾನ

1ನೇ ಪ್ರತಿವಾದಿಳ ಮಕ್ಕಳು- ಕುಂದಾಪುರ ತಾಲ್ಕು ಯಡ್ತರೆ ಗ್ರಾಮ.

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುದ್ದು ಸದ್ರಿ ವಾದಿಯು ತನಗೆ ಬರ ಸಾಲಗೇಣಿ ಸೇಬಾಕಿ ಆ್ಯವೇಜು ರೂಪ್ಯಾ 32-0-6ನ್ನು ಬರಮಾಡಿಕೊಳ್ಳುವರೆ ದಾಕಲು ಮಾಡಿದ ಮೇಲಿನ ದಾವೆ ತಾರೀಕು 7-6-49ಕ್ಕೆ ಬಿಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆ ಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟು ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

K. V. Manjaya Shetty
Advocate for Plff-

ತಾರೀಕು 30-4-49 [illegible]

...ಳಕ್ಕೊ ಬೇರೂರುವದು ಅಸಂಭವವೆಂದೇ ಚೈನದ ಹೇವು ಜಾಣರ ಮತವಿದೆ. ಈ ದಿನ ಚೈನದಲ್ಲಿ ವ್ಯಾಪಿಸಿಹೋಗಿರುವ ವ್ಯಕ್ತಿತ್ವ ಮತ್ತು ಕಮ್ಯೂನಿಸಮ್‌ಗಳು ತತ್ವತಃ ಬದ್ಧ ವಿರೋಧಿಗಳು. ಚೀನೀ ಕಮ್ಯೂನಿಸ್ಟರು ಸೋವಿಯೆಟಿನ ಬಗಲೊಳಗೆ ಬೀಳುವವರಲ್ಲವೆಂಬ ನಿರೀಕ್ಷೆಯಿರುವದೇ, ಇಂಗ್ಲಾಂಡು ಅಮೆರಿಕಗಳು ಚೈನದ ರಾಷ್ಟ್ರೀಯ ಸರಕಾರಕ್ಕೆ ಸಹಾಯಕೊಡದಿರಲು ಒಂದು ಕಾರಣವೆಂದು ಚೀನೀ ಜಾಣರನ್ನುತಿದ್ದಾರೆ. ಚೈನೀ ಕಮ್ಯೂನಿಸ್ಟರು ನಾಮಮಾತ್ರ 'ಕಮ್ಯೂನಿಸ್ಟ'ರೆಂದೂ, ಚೈನದಲ್ಲೆಲ್ಲಾ ತಮ್ಮ ರಾಜಕೀಯಾಧಿಕಾರವನ್ನೊಮ್ಮೆ ಸುದೃಢವಾಗಿ ಸ್ಥಾಪಿಸಿಕೊಂಡ ಮೇಲೆ ಅವರು ಆಂಗ್ಲೋ ಅಮೆರಿಕನ್ ಪಂಗಡದೊಳಗೆ ಸೇರಿಕೊಳ್ಳಬಹುದೆಂದೂ ನಿರೀಕ್ಷೆಯಿದೆಯಂತೆ. ಈ ವಾದವು ಸತ್ಯವಾದೀತೆಂಬ ಕುರಿತು ನನಗೆ ಅನುಮಾನವಿದೆಯಾದರೂ, ಚೈನೀ ಕಮ್ಯೂನಿಸ್ಟರು ತಮ್ಮ ಕಮ್ಯೂನಿಸ್ಟ್ ಮುಖವಾಡವನ್ನು ಕಿತ್ತೆಸೆದ, ಗತಕಾಲದಲ್ಲಿ ಮಾಡಿದ್ದಂತೆಯೇ ಸ್ವಂತ ವ್ಯಕ್ತಿ ವೈಶಿಷ್ಟ್ಯವನ್ನು ಧರಿಸಿ ಪ್ರತ್ಯೇಕ ಮಾರ್ಗಯಲ್ಲಿರ ಹತ್ತಿದರೆ, ಅದರಲ್ಲೇನೂ ಆಶ್ಚರ್ಯವಿಲ್ಲ.

ಭಾರತಕ್ಕೊಂದು ಪಾಠ

ಚೈನದ ರಾಷ್ಟ್ರೀಯ ಸರಕಾರವು ಪೂರ್ಣ ಪತನಗೊಂಡಂತಿದೆ. ಸದ್ಯದ ಚೈನೀ ಸರಕಾರವು ಅವ್ಯಾಲಾಗ್ರ್ಯ ದಿವಾಳಿಖೋರತನದ್ದೂ, ನಿರುಪಯೋಗಿಯೂ ಇದ್ದು ಬಹಳ ದಿನ ಬಾಳುವಂತಹದಲ್ಲ. ಶಾಂಘಾಯಿ ಬಿಟ್ಟು ಟೋಕಿಯೋವಿಗೆ ಹೊರಡುವಾಗ ಚೈನೀ ಜನತೆಯನ್ನು ನೆನೆದು ನಾನು ಬಹಳ ದುಃಖಗೊಂಡೆ. ಅವರು ಬುದ್ಧಿವಂತರು; ಅತ್ಯಂತ ಶ್ರಮಜೀವಿಗಳು; ಮೇಲಾಗಿ ಪುರಾತನ ಸಾಂಸ್ಕೃತಿಕ ಹಿನ್ನೆಲೆಯುಳ್ಳವರು. ಆದರೆ ಅವರು ಗಂಭೀರ ಮತ್ತು ಗಾಢ ಪರಿಣಾಮಕಾರಿ ಕಾರ್ಯೋದ್ಯಮಿಗಳಲ್ಲ; ಸಾರ್ವತ್ರಿಕ ನಾಗರಿಕ ಕರ್ತವ್ಯ ಮತ್ತು ರಾಷ್ಟ್ರೀಯ ಸ್ಥಿರೀಕರಣ ಬುದ್ಧಿಯ ಅಭಾವವುಳ್ಳವರು. ಭಾರತದಲ್ಲಿ ಕೂಡಾ ಸಾರ್ವತ್ರಿಕ ಭಾವನೆಯು ವಿಶೇಷ ಪ್ರಕಾಶಗೊಂಡಿಲ್ಲ. ಆದ್ದರಿಂದ ನಾವು ಸಕಾಲದಲ್ಲೇ ಚೈನದಿಂದ ಒಂದು ಪಾಠಕಲಿತುಕೊಳ್ಳಬೇಕು. ಪಂಡಿತ ನೆಹರು ಮತ್ತು ಸರ್ದಾರ್ ಪಟೇಲರ ಅಮೋಘ ನಾಯಕತ್ವವು ದೊರಕೊಂಡಿರುವ ನಾವು, ಭಾರತೀಯರು, ನಿಜಕ್ಕೂ ಸುದೈವಿಗಳು. ಆದರೂ, ನಾವು ರಾಷ್ಟ್ರದ ಹಿತಕ್ಕಾಗಿ ಯಥಾರ್ಥತೆಯಿಂದ ಮತ್ತು ಶ್ರಮಪಟ್ಟು ದುಡಿಯದಿದ್ದಲ್ಲಿ ನಾವು ನಮ್ಮ ಭವಿಷ್ಯದ ಕುರಿತು ವಿಶೇಷ ಆಸೆ ಕಟ್ಟಿಕೊಳ್ಳಲಾಗುವದಿಲ್ಲ. ಅಪಾಯ ಸನ್ನಿಹಿತ. ಚೈನವೆಂಬುದು ಲೋಕದ ಚರಿತ್ರೆಯಲ್ಲೇ ಅತ್ಯಂತ ದೊಡ್ಡದಾದ ಮತ್ತು ಅತ್ಯಂತ ಶೋಚನೀಯವಾದ ದುರಂತಗಳಲ್ಲೊಂದು. ಇಷ್ಟೊಂದು ತಡವಾಗಿಹೋದ ಈ ಮುಹೂರ್ತದಲ್ಲಾದರೂ ಚೈನವು ತನ್ನ ಅತಿಮೀರಿದ ವ್ಯಕ್ತಿಗತ ಆಸಕ್ತಿಯನ್ನು ಬಿಟ್ಟುಕೊಡಲಿ; ಬಾಧಿಯನ್ನು ಭೇದಿಸಿಕೊಂಡು ಬಲಶಾಲಿ ಹಾಗೂ ಪ್ರಗತಿಶೀಲ ರಾಷ್ಟ್ರವಾಗಿ ಅದು ತಲೆಯೆತ್ತಲಿ.

ಜಾಗತಿಕ ಸ್ಥಿತಿಗತಿ

ಜಾಗತಿಕ ವಿದ್ಯಮಾನಗಳೆಲ್ಲವೂ ಬಹುತೇಕವಾಗಿ ಯಥಾಸ್ಥಿತಿಯಲ್ಲಿರುವವಾದರೂ, ಕ್ರೂರತೆ ಮತ್ತು ಅನಾಗರಿಕತೆಯ ಬದಲು ಒಂದು ರೀತಿಯ ಕೋಮಲತೆ ಮತ್ತು ಮಾನುಷತ್ವದ ಒಪ್ಪವು ಕಳೆದ ವಾರ ವಿಶೇಷ ಹೊಳಪು ಚೆಲ್ಲಿದೆ. ಶಾಂಘಾಯಿ ಕೈಬದಲಾವಣೆಯಲ್ಲಿ-ಪ್ಯಾರಿಸ್ ಮಾತುಕತೆಗಳಲ್ಲಿ-ಮತ್ತಿತರ ಕಡೆಗಳಲ್ಲೂ ಕಠೋರತೆಯ ಬದಲಿಗೆ ಒಂದಿಷ್ಟು ನಯ ತೋರಿ ಬಂದಿದೆ.

ಪ್ಯಾರಿಸ್ ಕೂಟ

ಬರ್ಲಿನ್ ದಿಗ್ಬಂಧನ ರದ್ದತಿಯ ಬೆನ್ನಲ್ಲೇ ಜರ್ಮನಿಯ ಭವಿಷ್ಯ ನಿರ್ಣಯಕ್ಕಾಗಿ ಪ್ಯಾರಿಸಿನಲ್ಲಿ ರಶ್ಯಾ, ಅಮೆರಿಕ, ಬ್ರಿಟನ್, ಫ್ರಾನ್ಸುಗಳ ವಿದೇಶಮಂತ್ರಿ ಸಮ್ಮೇಳನವು ಆರಂಭಿಸಿ ನಡೆಯುತ್ತಾ ಇದೆ. ರಶ್ಯಾ ಮತ್ತು ಪಾಶ್ಚಾತ್ಯ ತ್ರಿರಾಷ್ಟ್ರಗಳೊಳಗಿನ ಭಿನ್ನಾಭಿಪ್ರಾಯಗಳು ಹಾಗೆಯೇ ಉಳಿದಿದ್ದು, ಈ ವರೆಗಿನ ತೀರ್ಮಾನವೂ ಆಗಿಲ್ಲ; ಆದೀತೆಂಬ ಆಶೆಗೂ ಅವಕಾಶ ದೊರೆತಿಲ್ಲ. ಈಗ ಚತುರ್ರಾಷ್ಟ್ರಗಳ ವಿಭಜಿತ ಅಧಿಕಾರದೊಳಗಿರುವ ಜರ್ಮನಿಯನ್ನು ಸಂಯುಕ್ತ ರಾಷ್ಟ್ರವಾಗಿ ಮಾಡಿ ಸರಕಾರ ಸ್ಥಾಪಿಸುವ ಸಂಬಂಧದ ಸೂಚನೆಗಳು ಮುಂದೆ ಬರುತ್ತಿವೆ. 'ಅಖಿಲ ಜರ್ಮನಿಗೆ ಈ ಚತುರ್ರಾಷ್ಟ್ರಗಳ ಸಂಯುಕ್ತ ಆಡಳಿತೆ ಸ್ಥಾಪಿಸಬೇಕು; ಮತ್ತು ಆರ್ಥಿಕ ಹಾಗೂ ರಾಜಕೀಯಾಧಿಕಾರವುಳ್ಳ ಅಖಿಲ ಜರ್ಮನ್ ಕೌನ್ಸಿಲೊಂದನ್ನು ರಚಿಸಬೇಕು' ಎಂಬ ರಶ್ಯದ ಸೂಚನೆಯನ್ನು ಪಾಶ್ಚಾತ್ಯ ತ್ರಿರಾಷ್ಟ್ರಗಳು ಧಿಕ್ಕರಿಸಿವೆ. ಬದಲಿಗೆ ಜರ್ಮನ್ ಏಕೀಕರಣದ ತಮ್ಮ ಯೋಜನೆಯೊಂದನ್ನು ಬ್ರಿಟಿಷ್ ವಿದೇಶ ಮಂತ್ರಿ ಮಿ. ಬೆವಿನರು ಮುಂದಿಟ್ಟಿದ್ದು ರಶ್ಯದ ವಿದೇಶ ಮಂತ್ರಿ ವಿಶಿನ್ಸ್ಕಿಯವರು 'ಅದು ಏಕಪಕ್ಷೀಯ' ವಾದುದೆಂದು ಕೂಡಲೇ ಆಕ್ಷೇಪಿಸಿದ್ದಾರಾದರೂ ಸವಿವರ ಪರ್ಯಾಲೋಚನೆ ನಡೆಸುವೆನೆಂದಿದ್ದಾರೆ. ಮೇಲ್ನೋಟ ಮತ್ತು ಬುದ್ಧಿ ಭಿನ್ನತೆಗಳು ಅಚಲವಿದ್ದರೂ ಭದ್ರತಾ ಕೌನ್ಸಿಲಿನಲ್ಲಾಗುತ್ತಿದ್ದ ಕಚ್ಚಾಟಗಳ ಮಾದರಿಯ ಕಹಿಯಾವುದೂ ಪ್ಯಾರಿಸ್ ಸಮ್ಮೇಳನದಲ್ಲಿ ತೋರಿಬಾರದಿರುವುದೊಂದು ಶುಭ ಶಕುನವೆನ್ನಬಹುದು.

ಶಾಂಘಾಯಿ ಪತನ

ಸುಮಾರು ಹದಿನೈದು ದಿನಗಳ ಪ್ರಚಂಡ ಮುತ್ತಿಗೆಯ ನಂತರ ಕಮ್ಯೂನಿಸ್ಟ್ ಸೇನೆಗಳು ಮೇ ತಾ 25ರಲ್ಲಿ ಶಾಂಘಾಯಿ ನಗರದೊಳಗೆ ಪ್ರವೇಶಿಸಿ ಅದನ್ನು ಕೈವಶಪಡಿಸಿಕೊಂಡಿವೆ. ಕೆಂಪು ಸೇನೆ ಒಳಗೆ ಕಾಲಿಡುವ ವರೆಗಿದ್ದ ಬಿಗುವಾದ ವಿರೋಧವಾವುದೂ ಒಳಗಡೆಯುಳಿದಿರಲಿಲ್ಲ. ಏಶ್ಯಾದಲ್ಲೆಲ್ಲಾ ಅತ್ಯಂತ ದೊಡ್ಡ ನಗರವಿದ್ದು ಇಡೀ ಪ್ರಪಂಚದ ನಾಲ್ಕು ದೊಡ್ಡ ನಗರಗಳಲ್ಲೊಂದಾದ ಶಾಂಘಾಯಿಯನ್ನು ಹಸ್ತಗತ ಮಾಡಿಕೊಂಡುದು ಚೈನೀ ಕಮ್ಯೂನಿಸ್ಟರ ಅತಿ ದೊಡ್ಡ ವಿಜಯ; ಮಾತ್ರವಲ್ಲ, ಅದನ್ನು ವಶಪಡಿಸಿಕೊಂಡ ರೀತಿಯಾದರೋ ಲೋಕ ಶ್ಲಾಘನೆ ಗಳಿಸಿದ್ದು ಕಮ್ಯೂನಿಸ್ಟ್ ಸೇನೆಯ ಗೌರವವನ್ನು ಹೆಚ್ಚಿಸಿದೆ. ಶಾಂಘಾಯಿಯ ಜನತೆಗಾಗಲೀ, ಅಲ್ಲಿರುವ ಬ್ರಿಟನ್, ಅಮೆರಿಕ, ಭಾರತ ಮತ್ತಿತರ ವಿದೇಶಿಯರಿಗಾಗಲೀ ಯಾವ ಹಾನಿಯನ್ನೂ ಮಾಡದೆ-ಹಾನಿಯಾಗದಂತೆ ಜಾಗ್ರತೆ ನೋಡಿಕೊಂಡು-ಒಳಗಡೆ ಗಣ್ಯ ಹೋರಾಟವೇನನ್ನೂ ಕೊಡದ ಸರಕಾರೀ ಸೈನಿಕರನ್ನೆಲ್ಲ ಸ್ಫೂರ್ತಿಸಿ ತೆಗೆದು, ಆ ನಗರವನ್ನು ಹಿಡಿದ 72 ತಾಸುಗಳೊಳಗೆ ಅಲ್ಲಿ ಶಾಂತತೆ ಮತ್ತು ಪೂರ್ಣ ನೆಮ್ಮದಿಯನ್ನು ಸ್ಥಾಪಿಸಿ ಬಿಟ್ಟ ಕಮ್ಯೂನಿಸ್ಟರು ಶ್ಲಾಘನಾರ್ಹರಿದ್ದಾರೆ. ಶಾಂಘಾಯಿ ಈಗ ಯಥಾಸ್ಥಿತಿಗೆ ಬಂದಿದೆ. ವ್ಯಾಪಾರ ವಹಿವಾಟುಗಳೆಲ್ಲವೂ ಯಥಾಪ್ರಕಾರ ಸಾಗುತ್ತಿವೆ. ಮುಂದಿನ ಹೆಜ್ಜೆಯಾಗಿ ದಕ್ಷಿಣ ಚೈನವೆಲ್ಲವನ್ನೂ ಹಿಡಿದುಕೊಳ್ಳುವ ಯೋಜನೆ ಕಮ್ಯೂನಿಸ್ಟರದೆಂದು ತಿಳಿದು ಬಂದಿದೆ. ಬ್ರಿಟನ್ನಿನ ಬಂಕೆಯಲ್ಲಿರುವ ಅಂತರ್ರಾಷ್ಟ್ರೀಯ ವಸಾಹತು ಹೋಂಗ್‌ಕೋಂಗಿನಲ್ಲಿ ಕಠಿಣ ವ್ಯವಸ್ಥಾಪನಾಶಾಸನಗಳು ಜಾರಿಯಲ್ಲಿದ್ದು, ರಕ್ಷಣಾ ಸಿದ್ಧತೆಗಳು ಭರದಿಂದ ನಡೆದಿವೆಯಾದರೂ, ಶಾಂಘಾಯಿ ಪತನದ ವಿಧಾನ ಮತ್ತದರಿಂದ ತಮ್ಮ ವ್ಯಾಪಾರ ವಹಿವಾಟುಗಳಿಗಾದ ಹಾನಿಯೂ ಆಗದುದನ್ನು ಕಂಡು ಅಲ್ಲಿಯವರ ಉದ್ರೇಕವಿಳಿಯಹತ್ತಿದೆ. ಬ್ರಿಟನ್, ಅಮೆರಿಕಗಳು ಚೈನದ ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಕೊಡುವ ಕಾಲ ದೂರವಿಲ್ಲವೆನ್ನಬಹುದು.

ಬರ್ಮಾ ಹೋರಾಟ

ಬರ್ಮದ ಒಳಗಡೆಯ ಕರೆನ್ ಬಂಡಾಯ ಸಾಮುಧಾರೀ ಅಂತರ್ಯುದ್ಧವು ಅತ್ಯಂತ ಬಿರುಸಾಗಿ ಸಾಗಿದೆ. ಕರೆನ್ ಬಂಡಾಯಗಾರರು ಆಕ್ರಮಿಸಿ ಹಿಡಿದಿದ್ದ ಇನ್‌ಸೀನ್ ವಲಯವು ಈ ಹೋರಾಟ ಪ್ರಸಿದ್ಧಿಯ ರಂಗ. ಆ ಕ್ಷೇತ್ರದ ಮೇಲೆ ಬರ್ಮಾ ಸರಕಾರವು ಪ್ರಚಂಡ ಧಾಳಿಯನ್ನು 125 ದಿನಗಳಿಗೂ ಮಿಕ್ಕಿ ನಡೆಸಿದ್ದು, ಅದನ್ನೀವರೆಗೂ ಪ್ರತಿಭಟಿಸಿ ನಿಂತ ಕರೆನ್ ಸೈನಿಕರು ಈಗ ಅಲ್ಲಿಂದ ಕಾಲ್ತೆಗೆಯಹತ್ತಿದ್ದಾರೆಂದು ತಿಳಿದುಬರುತ್ತದೆ. ರಂಗೂನಿಗೆ 178 ಮೈಲು ದೂರದ ಪ್ರೋಮೆಯನ್ನು ಮರು ಸ್ವಾಧೀನಪಡಿಸಿಕೊಳ್ಳಬೇಕೆಂದು ಬರ್ಮಾ ಸರಕಾರದ ಒಂದು ಮಹಾಧಾಳಿಯು ರಂಗೂನಿನಿಂದ ಆರಂಭಿಸಿದೆ ಎಂದೂ ತಿಳಿದು ಬರುತ್ತದೆ. ಬಿಳಿ ಬಿಲ್ಲೆಯವರು, ಕಮ್ಯೂನಿಸ್ಟರು ಮತ್ತು ಸರಕಾರೀ ಸೇನೆಯಿಂದ ಸಿಡಿದು ಹೋದವರು, ಇವರೆಲ್ಲರೂ ಸೇರಿರುವ ಸಂಯುಕ್ತ ಬಂಡಾಯಗಾರ ಸೈನ್ಯದ ಕೇಂದ್ರ ಕಚೇರಿಯೇ ಪ್ರೋಮ್. ಅಕ್ಷ್ಯಯ ಇರ್ರವಾಡೀ ವಲಯದ ಏಳು ಜಿಲ್ಲೆಗಳು ಈ ಬಂಡಾಯಗಾರರ ಅಂಕೆಯೊಳಗಿವೆ. ಅತ್ತ ಚೈನಾ ಕಡೆಯಿಂದ ಬರ್ಮಾದ ಗಡಿಯತ್ತ ಮುಂದೊತ್ತಿರುವ ಚೈನೀ ಕಮ್ಯೂನಿಸ್ಟರ ಗಣ್ಯ ಚಟುವಟಿಕೆಗಳ ಸುದ್ದಿಯಿಲ್ಲವಾದರೂ ಅವರು ಒಂದು ಆಶ್ಚರ್ಯ ನಿರ್ಮಾಣದ ಸಿದ್ಧತೆ ಮಾಡುತಿದ್ದು, ಸಮಯ ಸಂದರ್ಭಗಳನ್ನು ಹೊಂಚುತ್ತಿರಬೇಕೆಂದು ಊಹಿಸಬಹುದು.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಜನಸಾಮಾನ್ಯರಿಗೂ ಅನುಕೂಲವಾಗುವಂತೆ ರೂ. 100ರಿಂದ **900**ರ ಒಳಗಿನ ಮೊತ್ತದಲ್ಲಿ ವಿಮಾಮಾಡುವ ಸೌಕರ್ಯ!

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

ವಿವರಗಳಿಗೆ ಬರೆಯಿರಿ:

ಬಿ. ವಾಮನಾಚಾರ್, ಬಿ.ಎ ಬಿ.ಎಲ್

ಮೆನೇಜರ್.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಧಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರ್ಮಿಕ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕೆಮಿಸ್ಟ್ರಿ ಕೆಮಿಸ್ಟ್, ಹಾವೇರಿ, ಬ್ಯಾಡಗಿ

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscriped	Rs. 20,00,000.
Capital Paid Up.	Rs. 19,99,800.
Reserves	Rs. 8,90,000

Banking business of every description transacted.

ನವಯುಗ

ಗುರುವಾರ, ಉಡುಪಿ, ೨-೬-'೪೯

ಮಹತ್ವದ ಬದಲಾವಣೆ

'ದಳಿತ ಸಮಾಜ (ಹರಿಜನರು) ಮತ್ತು ಸಿಖ್ಖರ ಒಂದು ದಳಿತ ವರ್ಗಕ್ಕಲ್ಲದೆ ಬೇರಾವ ಅಲ್ಪ ಸಂಖ್ಯಾಕ ಸಮಾಜಕ್ಕೂ ಶಾಸನ ಸಭೆಗಳಲ್ಲಿ ಕಾದಿಟ್ಟ ಸ್ಥಾನಗಳರ ಕೂಡದು. ಒಂದೂ ಮತ್ತು ಸಿಖ್ಖರ ದಳಿತ ವರ್ಗಗಳ ಕಾದಿಟ್ಟ ಸ್ಥಾನಗಳು ಕೂಡಾ ಇನ್ನು ಹತ್ತು ವರುಷಗಳವರೆಗೆ ಮಾತ್ರವಿರಬೇಕು'-ಎಂದು ಕಳೆದ ವಾರ ಘಟನಾ ಸಮಿತಿ ನಿರ್ಧರಿಸಿದೆ. ಪಂಡಿತ ನೆಹರುಗಳು ಆ ಸಂದರ್ಭದಲ್ಲಂದಂತೆ "ಭಾರತೀಯರ ಅದೃಷ್ಟ ನಿರ್ಮಾಪಕ ಚರಿತ್ರಾರ್ಹ ಮಾರ್ಪಾಟವಿದು" ಎಂಬುದು ನಿಸ್ಸಂದೇಹ. ಪ್ರತ್ಯೇಕ ಮತದಾನ ಮತ್ತು ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕು ಮುಸ್ಲಿಂ ಮತ್ತಿತರ ಅಲ್ಪ ಸಂಖ್ಯಾಕ ಸಮಾಜಗಳವರಿಗೆ ಬ್ರಿಟಿಷ್ ಆಡಳಿತೆಯಲ್ಲಿ ಕೊಡಲ್ಪಟ್ಟದ್ದಾದರ ಪರಿಣಾಮವೇನಾಯಿತೆಂಬುದು ಭಾರತೀಯರ ಅನುಭವಸಿದ್ಧ ವಿಷಯ:– ಪ್ರತಿಯೊಬ್ಬನ ಹೃದಯವನ್ನೂ ಒಂದೆಡೆ ಕೊರೆಯುತ್ತಾ ಉಳಿದಿರುವ ಒಂದು ಚಿರಯಾತನೆ! ಪ್ರಾಯಶಃ ಲೋಕದ ಯಾವುದೇ ರಾಜ್ಯಘಟನೆಯು ಯಾವ ವಿಧಾನವೂ ಮಾಡಿರದಷ್ಟು ಅನಾಹುತಗಳನ್ನು, ಬ್ರಿಟಿಷರು ತುರುಕಿಸಿದ್ದ ಈ ಪ್ರತ್ಯೇಕ ಮತದಾನ ಪದ್ಧತಿ ಮಾಡಿದೆ; ರಾಷ್ಟ್ರದ ಇಬ್ಭಾಗ ಮತ್ತು ಲಕ್ಷಾವಧಿ ಮಂದಿಯ ಸಾವು ನೋವುಗಳಿಗೆ ಮೂಲ ಕಾರಣ ಅದೇ. ಇಷ್ಟು ಪ್ರಾಣ, ಮಾನ, ಸೊತ್ತುಗಳನ್ನೂ ರಾಷ್ಟ್ರದೊಂದು ಭಾಗವನ್ನೂ ಆಹುತಿಪಡೆದ ಈ ಪ್ರತ್ಯೇಕತಾ ದೆವ್ವವನ್ನು ಭಾರತದ ನವರಾಜ್ಯ ಶಾಸನದಲ್ಲಿ ಪ್ರತಿಷ್ಠಿಸಕೂಡದೆಂಬುದು ಆಂದೇ ಖಚಿತವಾಗಿದ್ದ ವಿಷಯ. ಅಂತೆಯೇ ಸರ್ದಾರ್ ಪಟೇಲರು ಅಧ್ಯಕ್ಷರಾಗಿದ್ದ 'ಅಲ್ಪಸಂಖ್ಯಾತರ ಸಂಬಂಧದ ಸಲಹಾ ಸಮಿತಿ'ಯ ಶಿಫಾರಸುಗಳಂತೆ ಭಾರತದ ಘಟನಾ ಸಮಿತಿಯು "ಪ್ರತ್ಯೇಕ ಮತದಾನಪದ್ಧತಿಯನ್ನು ರದ್ದುಗೊಳಿಸಿ, ಅಲ್ಪ ಸಂಖ್ಯಾತರಿಗೆ ಅವರ ಸಂಖ್ಯಾಮಾನವನ್ನಾಧರಿಸಿ, ಶಾಸನ ಸಭೆಗಳಲ್ಲಿ ಸ್ಥಾನಗಳನ್ನು ಕಾದಿಡತಕ್ಕದ್ದು" ಎಂಬ ನಿರ್ಣಯವನ್ನು 1947ನೇ ಆಗೋಸ್ಟಿನಲ್ಲೊಮ್ಮೆ ಮಾಡಿದ್ದಿತು. ಆದರೆ ಆದಾಗಿ ಎರಡು ವರುಷಗಳು ಕಳೆಯುತ್ತಾ ಬಂದಿದ್ದು, ಈಗ ಪರಿಸ್ಥಿತಿ ಬದಲಾಗಿರುವುದರಿಂದ ಅದೇ ಸಮಿತಿಯು ಈ ಬಾರಿ "ಸರ್ವ ವಿಧದಿಂದಲೂ ಹಿಂದುಳಿದಿರುವ ಹಿಂದೂ ಹರಿಜನ ವರ್ಗ ಮತ್ತು ಮೊದಲು ಹರಿಜನರಾಗಿದ್ದು ಈಗ ಸಿಖ್ಖರಾಗಿ ಮತಾಂತರಗೊಂಡರೂ ಹಿಂದಿನಂತೆಯೇ ಹಿಂದುಳಿದಿರುವ ಸಿಖ್ಖರ ಒಂದು ವರ್ಗ ಇವೆರಡಕ್ಕೆ ಮಾತ್ರ ಇನ್ನು 10 ವರುಷಗಳ ವರೆಗಲ್ಲದೆ ಬೇರಾವ ಸಮಾಜಕ್ಕೂ ಯಾವ ಪ್ರಾತಿನಿಧಿಕ ಸಭೆಯಲ್ಲೂ ಸ್ಥಾನ ಕಾದಿಡಬಾರದು" ಎಂದು ಶಿಫಾರಸು ಮಾಡಿತು; ಆ ಸಂಬಂಧದ ನಿರ್ಣಯವನ್ನು ಸರ್ದಾರ್ ಪಟೇಲರು ಘಟನಾ ಸಮಿತಿಯ ಮುಂದೆ ತಂದರು; ಎರಡು ದಿನ ಸಾಕಷ್ಟು ಚರ್ಚೆ ನಡೆಯಿತು; ಮದ್ರಾಸಿನ ಮುಸ್ಲಿಂ ಲೀಗ್ ಸದಸ್ಯರೊಬ್ಬರು 'ಕಾದಿಡುವ ಸ್ಥಾನ'ಗಳಿಗಾಗಿಯೂ ಪ್ರತ್ಯೇಕ ಮತದಾನ ಪದ್ಧತಿಗಾಗಿಯೂ ಬಲವಾಗಿ ವಾದಿಸಿದರೂ ಮಿಕ್ಕೆಲ್ಲಾ ಮುಸ್ಲಿಂ, ಕ್ರೈಸ್ತ, ಸಿಖ್, ಪಾರ್ಶಿ, ಆಂಗ್ಲೋ ಇಂಡಿಯನ್, ದಳಿತ ಸಮಾಜಗಳವರ ಸಮೇತ ಸರ್ವರ ಹಾರ್ದಿಕ ಅನುಮೋದನೆಯಿಂದ ಅದು ಮಂಜೂರಾಯಿತು. "ಭಾರತ ಘಟನೆಯ ಗತ ಚರಿತ್ರೆಯಲ್ಲಿ ಮೆತ್ತಿದ್ದ ಒಂದು ದೊಡ್ಡ ಕಪ್ಪು ಚಿತ್ತನ್ನು ನಾವೀದಿನ ದೇವರ ದಯೆಯಿಂದ ಉಜ್ಜಿ ತೆಗೆಯುತ್ತಿದ್ದೇವೆ; ಪ್ರತಿಯೊಂದು ವಿಧಾನದಲ್ಲೂ ಪ್ರತಿಯೊಬ್ಬನೂ ಮತ್ತೊಬ್ಬನಿಗೆ ಸಂಸಮಾನನಾಗಿರುವ ನಿಜವಾದ ಜಾತ್ಯಾತೀತ ಪ್ರಜಾಸತ್ತಾತ್ಮಕ ರಾಜ್ಯದ ಅಸ್ತಿವಾರ ಹಾಕುತ್ತಿದ್ದೇವೆ" ಎಂದು ಸರ್ದಾರ್ ಪಟೇಲರು ತುಂಬು ಹೃದಯದಿಂದ ಉದ್ಗರಿಸುವಂತಾಯಿತ.

ಜಾತಿ ಮತ ವ್ಯತ್ಯಾಸಗಳನ್ನೇ ಮರೆತು ಬಿಟ್ಟು 'ಎಲ್ಲರೊಂದಿಗೆ ನಾವು" ಎಂದೆಲ್ಲರೂ ಭಾವಿಸಬೇಕಾದುದನ್ನು ರಾಜಕೀಯ ರಂಗದ ಮಟ್ಟಿಗೆ ಈ ಬದಲಾವಣೆಯು ಅನಿವಾರ್ಯಗೊಳಿಸುತ್ತದೆ. ಹರಿಜನ ವರ್ಗಕ್ಕೆ ಇನ್ನು ದಶ ವತ್ಸರಗಳ ವರೆಗಿರುವ 'ರಿಝರ್ವ್' ಸ್ಥಾನಗಳಾದರೋ ಸಮ್ಮಿಶ್ರ ಮತಗಳಿಂದಲೇ ಚುನಾಯಿಸಲ್ಪಡುವಂತಹವಿವೆ ಮೇಲಾಗಿ ಈ ರಿಯಾಯಿತಿಯು 'ಹಿಂದುಳಿದ' ವರ್ಗವೊಂದನ್ನು ಮುಂದಕ್ಕೆಳೆಯುವ ಆಧಾರ ಸೂತ್ರವಾಗಿದೆ ಹೊರತು ಜಾತೀಯ ಪಕ್ಷವೊಂದನ್ನು ಸೂಡಿ ಕಟ್ಟುವ ಸೂತ್ರವಲ್ಲ. ಒಂದು ಕೋಳಿಯನ್ನು, ಒಂದು ದೀರ್ಘಾವಧಿಯ ಕಾಹಿಲೆಯನ್ನೇ, ಈ ಮೂಲಕ ನಿವಾರಿಸಿಕೊಂಡಂತಾಯಿತು; ವಿವಿಧ ತೊರೆಗಳನ್ನು ಏಕ ಪ್ರವಾಹವಾಗಿ ಒಂದುಗೂಡಿಸಿ ರಾಷ್ಟ್ರೀಯ ವ್ಯವಸಾಯಕ್ಕನುಕೂಲ ಮಾಡಿದಂತಾಯಿತು. ಈ ಬದಲಾವಣೆಯ ಅರ್ಥವನ್ನು ಎಲ್ಲರೂ ಸರಿಯಾಗಿ ಗ್ರಹಿಸಿಕೊಳ್ಳಲಿ; ರಾಜಕಾರಣದಲ್ಲಿನ್ನು ಜಾತಿ ಮತವನ್ನಾಧರಿಸಿ ಪ್ರಯೋಜನವಿಲ್ಲವೆಂಬುದು ಎಲ್ಲರಿಗೂ ಮಂದಟ್ಟಾಗಲಿ; ರಾಜಕೀಯದಲ್ಲಷ್ಟೇ ಏಕೆ, ಜೀವನದ ಪ್ರತಿಯೊಂದು ರಂಗದಲ್ಲೂ 'ಜನತೆ'ಯ ಹೊರತು 'ಜಾತಿ'ಯ ಸ್ಮರಣೆ ಕೂಡಾ ಇನ್ನಿಲ್ಲವೆಂದಾಗಲಿ!

"ಯೋಗ್ಯ ಬಂದರ ಮಲ್ಪೆ"

ತಜ್ಞಮಂಡಲಿಯ ಅಭಿಪ್ರಾಯ

ಪಶ್ಚಿಮ ಕರಾವಳಿಯ ಗೋವಾ ಮತ್ತು ಕೊಚ್ಚಿಗಳ ನಡುವೆ ಮಲ್ಪೆಯೇ ಮಹಾ ಬಂದರಾಗಿ ರಚನೆಗೊಳ್ಳುವ ಲಕ್ಷಣಗಳು ಕಾಣಿಸುತ್ತಿವೆ. ಈ ಸಂಬಂಧದ ಸ್ಪಷ್ಟ ತೀರ್ಮಾನವು ಇನ್ನು ಕೆಲವೇ ದಿವಸಗಳೊಳಗೆ ತಿಳಿದುಬರಬಹುದು.

ಪಶ್ಚಿಮ ಕರಾವಳಿಯಲ್ಲೊಂದು ನವೀನ ಮಹಾ ಬಂದರದ ನಿರ್ಮಾಣಾವಶ್ಯಕತೆಯು ಎಷ್ಟೋ ವರುಷಗಳಿಂದ ಇದ್ದದ್ದೇ. ಭಾರತದ ಬಂದರಗಳ ಮತ್ತು ಹಡಗ ರಚನಾ ನೆಲೆಗಳ ಅಭಿವೃದ್ಧಿ ಮತ್ತು ನವರಚನೆಯ ಯೋಜನೆಯೊಂದನ್ನು ಭಾರತ ಸರಕಾರವೀಗ ಕೈಕೊಂಡಿದ್ದು, ಪಶ್ಚಿಮ ಕರಾವಳಿಯ ಮಹಾ ಬಂದರಗಳ ನಿರ್ಮಾಣವು ಅದರ ಮುಖ್ಯಾಂಗವಾಗಿದೆ. ಗೋವೆ-ಕೊಚ್ಚಿಗಳ ನಡು ವಲಯದ ಬಂದರಾಗುವ ಯೋಗ್ಯತೆಯಲ್ಲಿ 'ತಾನು ಮೇಲು, ನಾನು ಮುಂದೆ' ಎಂದು ಆ ವಲಯದೊಳಗಿನ ಕಾರವಾರ, ಭಟ್ಕಳ, ಮಲ್ಪೆ, ಮಂಗಳೂರು—ಇವು ನಾಲ್ಕೂ ಮೇಲಾಡಿವೆ; ಸ್ಪರ್ಧೆ, ಪರಮತ ಖಂಡನೆಯ ವಾದಗಳೂ, ಬಹಿರಂಗ ಅಂತರಂಗ ಕೆಲಸಗಳೂ ಬಹಳವಾಗಿ ನಡೆದಿದ್ದುವು; ಈಗಲೂ ನಡೆದಿವೆ. ಭಾರತ ಸರಕಾರವು ನೇಮಿಸಿದ್ದ 'ಪಶ್ಚಿಮ ಕರಾವಳಿ ಮಹಾ ಬಂದರಾಭಿವೃದ್ಧಿ ಸಮಿತಿ'ಯ ತಜ್ಞರ ದಳವೊಂದು ಇವೆಲ್ಲಾ ಬಂದರಗಳನ್ನು ಪ್ರತ್ಯಕ್ಷ ಸಂದರ್ಶಿಸಿಯೂ, ಸಂಗತಿ ಪರಿಶೀಲನೆಯ ಮೂಲಕವೂ ಕಳೆದಾರು ತಿಂಗಳುಗಳಲ್ಲಿ ತುಲನಾತ್ಮಕ ಶೋಧನೆ ನಡೆಸಿದ್ದಿತು. ಆ ವೇಳೆ ಬೊಂಬಾಯಿಯಲ್ಲಿ ಕೊನೆಯ ವಿಚಾರ ಮಂಥನ ನಡೆಸಿ ಸಮಿತಿಯು ತನ್ನ ಶಿಫಾರಸುಗಳನ್ನು ಭಾರತ ಸರಕಾರದ ಮುಂದಿಟ್ಟದೆಯೆಂದೂ ಅವುಗಳನ್ನಾಧರಿಸಿ ಸರಕಾರವು ತನ್ನ ತೀರ್ಮಾನವನ್ನು ಜಾಹೀರು ಮಾಡುವದೊಂದೇ ಬಾಕಿಯೆಂದೂ ತಿಳಿದುಬಂದಿದೆ.

ಮಲ್ಪೆಯ ಯೋಗ್ಯತೆ

ತಜ್ಞ ಸಮಿತಿಯ ತುಲನಾತ್ಮಕ ಅಭಿಪ್ರಾಯ ಈ ಕೆಳಗಿನಂತಿದೆ ಎಂದು ಪ್ರಕಟವಾಗಿದೆ:–

ಕಾರವಾರವು, ಒಂದು ನೈಸರ್ಗಿಕ ಬಂದರದ ಎಲ್ಲಾ ಯೋಗ್ಯತೆಗಳನ್ನೂ ಒಳಗೊಂಡಿದೆ. ಮತ್ತು ಭಾರತದ ಇತರ ಭಾಗಗಳೊಂದಿಗೆ ವ್ಯಾಪಾರ ಸಂಬಂಧಗಳನ್ನೂ ಪಡೆದಿದೆ. ಮಂಗಳೂರು, ಒಳ ಪ್ರದೇಶಗಳೊಂದಿಗೆ ಮುಖ್ಯವಾಗಿ ನೀರು ಹಾದಿ ಪಥಿವಾಟುಗಳುಳ್ಳ, ಉಬ್ಬರಿಳಿತದ ಸ್ಥಳ. ಅದರ ಧಕ್ಕೆಗಳಲ್ಲಿ ಕಡಿಮೆ ಭಾರದ ಹಡಗಗಳು ಮಾತ್ರ ತಲಪುವರಲು ಸಾಧ್ಯ.

ಭಟ್ಕಳ ಬಂದರವು, ಮೈಸೂರು ಸಂಸ್ಥಾನದ ಆವಶ್ಯಕತೆಗಳನ್ನು ಪೂರೈಸಲಾಗುವ ಮಾದರಿ ಸ್ಥಾನದಲ್ಲಿದೆ. ಸಂಸ್ಥಾನದ ವಿಸ್ತಾರ ಒಳಪ್ರದೇಶಗಳ ಅಭಿವೃದ್ಧಿ ಸಾಧನೆಗಾಗಿ ಭಟ್ಕಳವನ್ನು ಅಭಿವೃದ್ಧಿಪಡಿಸುವ ಆವಶ್ಯಕತೆಯ ಕುರಿತು ಭಾರತ ಸರಕಾರವನ್ನು ಮೈಸೂರು ಒತ್ತಾಯಿಸುತ್ತಿದೆ. ಮಲೆನಾಡು ಕ್ಷೇತ್ರವನ್ನಿರುವ ಆ ವಲಯದಲ್ಲಿ ಕೆಲವು ಪ್ರಾಮುಖ್ಯ ಉದ್ದಿಮೇ ಕಾರ್ಖಾನೆಗಳವೆ.

ಮಲ್ಪೆಯು, ಕೊಚ್ಚಿ ಮತ್ತು ಗೋವಾ ಬಂದರಗಳ ಮಧ್ಯಭಾಗದಲ್ಲಿದ್ದು, ಭಾರತದ ಪಶ್ಚಿಮಕರಾವಳಿಯ ಅತ್ಯಂತ ದೊಡ್ಡ ಮೀನು ಕೈಗಾರಿಕೆ ಕೇಂದ್ರವಾಗಿದೆ. ನೌಕಾ ಮತ್ತು ಹಡಗರಚನಾ ನಿಲ್ದಾಣಗಳನ್ನು ಸ್ಥಾಪಿಸಲನುಕೂಲವಾದ ದೊಡ್ಡ ಬಂಜರು ಭೂವಲಯವು ಇಲ್ಲಿದೆ. ಕರಾವಳಿಗಭಿಮುಖವಾಗಿ, ಸುಮಾರು 1½ ಮೈಲು ಉದ್ದಕ್ಕೂ ಹಬ್ಬಿರುವ ಸ್ಯೆಂಟ್ ಮೇರಿ ದ್ವೀಪಗಳೆಂದು ಹೆಸರಾಗಿರುವ ದೀರ್ಘದ್ವೀಪ ಸರಣಿಯು ಸಮುದ್ರಗೋಡೆಯಾಗಿ ಆಶ್ರಯವೀಯುವಂತಹದು. ಒಂಡೆಗಳು, ಬಂದುಬೀಳುವ ಹೊಯಿಗೆ ರಾಶಿ, ಅಪಾಯಕರ ತಳ ಸೆಳೆತಗಳಾವುದೂ ಇಲ್ಲದಿರುವ ಮತ್ತು ಬಿರುಗಾಳಿ ಅಥವಾ ಸುಂಟರಗಾಳಿಗಿದಿರಾಗಿ ನೈಸರ್ಗಿಕ ರಕ್ಷಣೆಗಳಿರುವ ಬಂದರವಿದು.

ಸಹಜ ಚಿತ್ರ

ನಾಲ್ಕು ಬಂದರಗಳ ರೇಖಾ ಚಿತ್ರದಂತಿರುವ ಈ ತುಲನಾತ್ಮಕ ನಿರೂಪಣೆಯಿಂದ ಸ್ಪಷ್ಟವಾಗುವ ವಿಷಯಗಳಿವು:- ಒಂದರದ ಪ್ರಶ್ನೆಯಲ್ಲೂ ನಗರದ ಯೋಗ್ಯತೆಯೊಂದನ್ನೇ ಆಧರಿಸಿ, ಮಿಕ್ಕೆಲ್ಲಾ ಕಡೆಗಳವರಿಗಿಂತ ಹೆಚ್ಚಿನ ಪ್ರಚಾರ ಮತ್ತು ಅಂತರ್ಗಾಮೀ ಪ್ರಯತ್ನಗಳನ್ನು ನಡೆಸಿದ್ದ ಮಂಗಳೂರು ನ್ಯಾಯಪ್ರಕಾರ ಮಹಾ ಬಂದರವಾಗಲಾರದು ಎಂಬುದು ಸ್ಪಷ್ಟವಾಗಿದೆ. (ಹಿಂದಿನ ವಾರ ಪಾಣ ಮಂಗಳೂರಿನಲ್ಲಿ ಸೇರಿದ್ದ ದ. ಕ. ಜಿಲ್ಲಾ ರಾಜಕೀಯ ಪರಿಷತ್ತು ಕೇವಲ ರಾಜಕೀಯ ಪರಿಷತ್ತಾಗಿದ್ದರೂ, ಉಡುಪಿ ಅಥವಾ ಜಿಲ್ಲೆಯ ಎಲ್ಲಾ ಕಡೆಯ ಪ್ರತಿನಿಧಿಗಳು ಅಲ್ಲಿರದಿದ್ದರೂ, ಬಂದರ ಪ್ರಶ್ನೆಯಂತಹ ಗೂಢ ಹಾಗೂ ಸೂಕ್ಷ್ಮ ವಿಷಯದ ಮರ್ಮವರಿತ ತಜ್ಞರಾರೂ ಅಲ್ಲಿ ಕಂಡು ಬಂದಿಲ್ಲವಾದರೂ, ಇಂತಹ ಪ್ರಶ್ನೆಯ ಮಟ್ಟಿಗಸತ್ಯವುಳ್ಳ ವಿಚಾರ ವಿಮರ್ಶೆ ಕೂಡಾ ಅಲ್ಲಿ ನಡೆದುದಿಲ್ಲವಾದರೂ, "ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದ ಮಂಗಳೂರೇ ಪ್ರಬುದ್ಧ ಬಂದರಾಗಬೇಕು" ಎಂಬೊಂದು ಠರಾವು ಅಲ್ಲಿ ಮಂಜೂರಾಯಿತೆಂದ ಮೇಲೆ ಏನನ್ನ ಬೇಕು!) ಮೈಸೂರಿನ ಬೆಂಬಲದಿಂದಾಗಿ ಮಿಕ್ಕೆಲ್ಲವುಗಳಿಗಿಂತಲೂ ಹೆಚ್ಚಿನ ಆಶೆ ಕಟ್ಟಿಕೊಂಡಿ

ಭಾರತ ಸರಕಾರದ ಬಂದರ ಯೋಜನೆ

ದ್ದ ಭಟ್ಕಳವು ಯೋಗ್ಯತೆಯ ಮಟ್ಟಿಗೆ ಮಲ್ಪೆ, ಕಾರವಾರಗಳಿಗಿಂತ ಹಿಂದಿದೆ ಎಂಬುದು ಸಿದ್ಧವಾಗಿದೆ. ಈ ತನಕ ನಿಷ್ಪಕ್ಷಪಾತಿ ವಿಚಾರಿಗಳ ಕಣ್ಣೆದಿರು "ಮಲ್ಪೆಯೋ ಭಟ್ಕಳವೋ?" ಎಂದಿದ್ದ ಪ್ರಶ್ನೆಯೀಗ "ಮಲ್ಪೆಯೋ ಕಾರವಾರವೋ?" ಎಂದು ಮಾರ್ಪಾಟುಗೊಂಡಿದೆ. ತಜ್ಞರ ಸಮಿತಿಯ ಅಭಿಪ್ರಾಯವೆಂಬಂತೆ ಪ್ರಕಟಗೊಂಡ ವಾರ್ತೆಯಲ್ಲಿ ಮಲ್ಪೆಯ ಸಮರ್ಥನೋಕ್ತಿಗಳು ಹೆಚ್ಚಿಗಿವೆಯಾದರೂ ಏಕಪಾಕ್ಷಿಕದ ಸಂಭಾವನೆ ಪಡೆದಿರುವ ಕಾರವಾರವು "ನೈಸರ್ಗಿಕ ರೇವುಯೋಗ್ಯತೆಗಳೆಲ್ಲವೂ ಇದ್ದು, ಭಾರತದ ಮಿಕ್ಕೆಡೆಗಳೊಡನೆ ವ್ಯಾಪಾರ ಸಂಬಂಧ ಕೂಡಾ ಇರುವ" ಬಂದರವೆಂಬುದು ಎದ್ದು ತೋರುವ ವಿಷಯ. ಕಾರವಾರಕ್ಕಿದ್ದ ಆ ವ್ಯಾಪಾರ ಪಥ ಜೋಡಣೆಯು ಮಲ್ಪೆಯ ಮಟ್ಟಿಗೆ ಹೊಸತಾಗಿ ಆಗಬೇಕಾಗಿದೆ ಎಂಬುದೂ ಹೊಳೆಯುವಂತಹದೇ. ಆದರೆ ಅದಕ್ಕಿಂತಲೂ ಸ್ಪಷ್ಟವಿರುವ ಸಂಗತಿಯೆಂದರೆ, ಪಶ್ಚಿಮ ಕರಾವಳಿಯ ನವಬಂದರ ರಚನೋದ್ದೇಶಕ್ಕೇನೇ ಕಾರವಾರದ ಸ್ಥಾನವು ವಿರುದ್ಧವಿದೆ ಎಂಬುದು. ಕಾರವಾರವು ಗೋವೆಯ ಸಮೀಪದಲ್ಲೇ ಇರುವ ಬಂದರ; 'ಗೋವೆ ಮತ್ತು ಕೊಚ್ಚಿಗಳ ನಡುಪ್ರದೇಶದಲ್ಲಿ ಮತ್ತೊಂದು ಪ್ರಬುದ್ಧ ಬಂದರ ನಿರ್ಮಿಸುವ ಅಗತ್ಯ' ಬಿದ್ದುದೇ ಈ ನವರಚನೆಯ ಮೂಲೋದ್ದೇಶವಲ್ಲದೆ, ಬೊಂಬಾಯಿ, ಬೊಂಬಾಯಿಯೊತ್ತಿಗೆ ಗೋವೆ, ಗೋವೆಯ ಪಕ್ಕದಲ್ಲಿ ಕಾರವಾರ ಎಂದು ಉತ್ತರಗಡೆಯಲ್ಲೇ ಬಂದರ ಸರಪಣಿಪೋಣಿಸುವ ಯೋಜನೆ ಸರಕಾರದ್ದಲ್ಲ. ಕಾರವಾರದಲ್ಲಿ ಈಗಿನ ಸ್ಥಿತಿಯು ವಿಶೇಷ ಬದಲಾಯಿಸದೆ, ಕಾರವಾರದಿಂದ ಕೊಚ್ಚಿವರೆಗಿನ ಪಶ್ಚಿಮಕರಾವಳಿಗೆ ಬಂದರವೇ ಇಲ್ಲದಂತಾಗುವದು. ಆದ್ದರಿಂದ ಈಗ ನ್ಯಾಯಪ್ರಕಾರ ಪಶ್ಚಿಮಕರಾವಳಿಯ ಪ್ರಬುದ್ಧ ಬಂದರಾಗಲು ಮಲ್ಪೆಯೇ ಯೋಗ್ಯವೆಂದು ಸಿದ್ಧವಾಗಿದೆ. ಒಳಪ್ರದೇಶಕ್ಕೊಡನೆ ರೈಲ್ವೇ ಜೋಡಣೆಮಾಡುವದೊಂದೇ ಉಳಿದಿರುವ ಹೆಚ್ಚಿನ ಕೆಲಸ. ಆದರೆ ಬಂದರ ನಿರ್ಮಾಣ ಮತ್ತು ರೈಲ್ವೇ ಜೋಡಣಾ ವೆಚ್ಚಗಳ ಮಟ್ಟಿಗೆ ಮುಖ್ಯ ಬಂದರವೊಂದಿಗೆ ಮಲ್ಪೆಯನ್ನು ಹೋಲಿಸಿದರೆ ಮಟ್ಟಿಗೂ ಮಲ್ಪೆಯೇ ವಾಸಿಯೆಂದು ತೋರದಿರದು. ಯೋಗ್ಯತೆಗೆ ಬೆಲೆಬಂತು ನಿಷ್ಪಕ್ಷಪಾತ ಶೋಧನೆ ನಡೆಯಿತು — ...ವಾದ ಯೋಗ್ಯತೆಯುಳ್ಳ ಮಲ್ಪೆಯು ...ರ್ಥಸಾಧಕರ ಅಪಹಾಸ್ಯಗಳಿಗೀಡಾಗಿದ್ದರೂ ಶೋಧಕರಿಂದ ನ್ಯಾಯಬದ್ಧ ಮನ್ನಣೆ ಪಡೆಯಿತು. ಎಂಬುದೇ ಇಲ್ಲಿ ಸಂತೋಷಿಸತಕ್ಕ ವಿಷಯ. ಇನ್ನು ಕೊನೆಯ ತೀರ್ಮಾನವೂ ಈ ನ್ಯಾಯದ ಎಲ್ಲೆಯನ್ನು ಮೀರಿ ಹೋಗಲಾರದೆಂದು ಆಶಿಸೋಣ.

ಸರಕಾರದ ಯೋಜನೆ

ಭಾರತ ಸರಕಾರವು ಬಂದರಗಳ ಮತ್ತು ನೌಕಾ ಹಾಗೂ ಹಡಗ ರಚನಾ ಠಾಣ್ಯಗಳ ನಿರ್ಮಾಣದ ವಿಸ್ತೃತ ಯೋಜನೆಯೊಂದನ್ನು ತಯಾರಿಸಿ ಕಾರ್ಯಪ್ರವೃತ್ತವಾಗಿದೆ. ಒಂದನೆಯದಾಗಿ ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕೊಚ್ಚಿ, ಈ ಪ್ರಬುದ್ಧ ಬಂದರಗಳ ವಿಸ್ತಾರಾಭಿವೃದ್ಧಿ ಸಾಧನೆ; ಎರಡನೆಯದಾಗಿ ವಿಶಾಖಪಟ್ಟದ ಹಡಗರಚನಾ ನೆಲೆಯ ವಿಸ್ತಾರ ಮತ್ತು ಬೊಂಬಾಯಿ, ಕಲ್ಕತ್ತಾ, ಕೊಚ್ಚಿಗಳಲ್ಲಿ ಹೊಸತಾಗಿ ಹಡಗ ರಚನಾ ಠಾಣ್ಯಗಳ ನಿರ್ಮಾಣ; ಮೂರನೆಯದಾಗಿ, ಭಾರತದ ಕರಾವಳಿ ಮತ್ತು ಹೊರ ದೇಶಗಳ ವ್ಯಾಪಾರ ವಹಿವಾಟು ನಡಿಸುವ 'ಶಿಪ್ಪಿಂಗ್ ಕಾರ್ಪೊರೇಶನ್'ಗಳ ಸ್ಥಾಪನೆ; ನಾಲ್ಕನೆಯದಾಗಿ ಹಡಗ ವಹಿವಾಟುಗಳಿಗನುಕೂಲವಾದ ಹೊಸ ಬಂದರಗಳ ರಚನೆ; ಐದನೆಯದಾಗಿ ಭಾರತದ ಸುತ್ತಲೂ ಕರಾವಳಿ ಮತ್ತು ದ್ವೀಪ ವಲಯಗಳಲ್ಲಿ ನೌಕಾ ನಿಲ್ದಾಣಗಳ ರಚನೆ. ಈ ಪಂಚ ಮುಖೀ ಮಹಾ ಯೋಜನೆಯನ್ನಯ ಇಷ್ಟರಲ್ಲೇ ಕಾರ್ಯಗಳಾರಂಭವಾಗಿದ್ದು ಇವು ಪೂರ್ಣಗೊಳ್ಳಲು 5ರಿಂದ 10 ವರುಷಗಳ ವರೆಗಿನ ಅವಧಿ ನಿರ್ಣಯಿಸಲ್ಪಟ್ಟಿದೆ. ಮಹಾ ಬಂದರಗಳ ವಿಸ್ತರಣೆ ಹಾಗೂ ಸುಧಾರಣೆಗಾಗಿ ಸರಕಾರವು ರೂ. 250,000,000 ವೆಚ್ಚದ ಹಂಚಿಕೆಗಳನ್ನು ಹಾಕಿದೆ. ವಿಶಾಖಪಟ್ಟಣದ ಹಡಗ ರಚನಾ ಕೇಂದ್ರದ ವಿಸ್ತರಣಾಭಿವೃದ್ಧಿಗಾಗಿ ರೂ. 25,000,000 ನಿಯೋಜಿಸಲ್ಪಟ್ಟಿದೆ. ವಿಶಾಖಪಟ್ಟಣದಲ್ಲಿ ರೂ. 30,000,000ಕ್ಕೂ ಮಿಕ್ಕಿದ ವೆಚ್ಚದಿಂದ ಇಷ್ಟರಲ್ಲೇ ಮೂರು ಹಡಗಗಳು ರಚಿಸಲ್ಪಟ್ಟಿದ್ದು ಮತ್ತೆ ಎರಡರ ರಚನೆಯಾಗುತ್ತಿದೆ. ಬೊಂಬಾಯಿಯ ಹಡಗ ರಚನಾ ಠಾಣ್ಯಕ್ಕಾಗಿ ರೂ. 25,000,000 ವೆಚ್ಚದ ಮೂರು ವರುಷಾವಧಿಯ ಯೋಜನೆಯನ್ನು ಬೊಂಬಾಯಿ 'ಪೋರ್ಟ್ ಟ್ರಸ್ಟ್'ನವರು ತಯಾರಿಸಿದ್ದು ಅದೀಗ ಭಾರತ ಸರಕಾರದ ಅನುಮತಿ ಕಾಯುತ್ತಿದೆ. ಆ ಸ್ಥಳವು ಬೊಂಬಾಯಿ ಬಂದರದ ಈಶಾನ್ಯಕ್ಕೆ 18 ಮೈಲು ದೂರದಲ್ಲಿದೆ. ಈ ತನಕ ಭಾರತದ ಬಂದರಗಳ ಮೂಲಕ ವರ್ಷಕ್ಕೆ ಸುಮಾರು 20,000,000 ಟನ್ನುಗಳಷ್ಟು ಸಾಮಾನುಗಳ ಆಮದು ರಫ್ತು ನಡೆಯುತ್ತಿದೆ. ನಿಯೋಜಿತ ಸುಧಾರಣೆಗಳಿಂದ ಅದು 26,000,000 ಟನ್ನುಗಳಿಗೇರಬಹುದೆಂದು ಅಂದಾಜು ಮಾಡಲಾಗಿದೆ. ಮುಂದಿನ ಐದುವರುಷಗಳೊಳಗೆ 2,000,000 ಟನ್ನು ತೂಕದ ಹಡಗು ನಿರ್ಮಾಣ ಮಾಡುವ ಗುರಿ ಭಾರತ ಸರಕಾರದ್ದು; ಈಗ 400,000ಟನ್ನುಗಳಷ್ಟೇ ವ್ಯಾಪಾರೀ ಜಲಯಾನಗಳಿವೆ.

ಪಶ್ಚಿಮಕರಾವಳಿಯಲ್ಲಿ ಎರಡು ಪ್ರಬುದ್ಧ ಬಂದರಗಳ ನಿರ್ಮಾಣ ಮಾಡುವದೇ ಭಾರತ ಸರಕಾರದ ಯೋಜನೆಯ ಮುಖ್ಯ ಭಾಗ. ಕರಾಚಿಯು ಪಾಕಿಸ್ತಾನಕ್ಕೆ ಸೇರಿದುದರಿಂದ ಉಂಟಾದ ದೊಡ್ಡ ಅಭಾವದ ನಿವಾರಣೆಗಾಗಿ ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿಯ ಉತ್ತರ ದಿಕ್ಕಿನ, ಕಚ್‌ಕಂದರದ ಪೂರ್ವ ತಡಿಯಲ್ಲಿರುವ ಕಾಂಡ್ಲಾ ಬಂದರವನ್ನು ಪ್ರಬುದ್ಧ ಬಂದರವಾಗಿ ನಿರ್ಮಿಸುವ ಕೆಲಸವಿಷ್ಟರಲ್ಲೇ ಆರಂಭಿಸಿದೆ. ಭಾರತದ ಈ 'ನವಕರಾಚಿ' ರಚನೆಗಾಗಿ ರೂ. 160,000,000 ಮೀಸಲಿಡಲ್ಪಟ್ಟಿವೆ; ಕಾಂಡ್ಲಾದಿಂದ ಅಹಮ್ಮದಾಬಾದಿಗೆ ರೈಲ್ವೇ ಜೋಡಣೆಮಾಡುವ ಕಾರ್ಯವೂ ಆರಂಭಿಸಿದೆ. ಕಾಂಡ್ಲಾ 'ಕರಾಚಿ'ಯಾದ ಮೇಲೆ ಅದು ವರುಷಕ್ಕೆ 3,000,000 ಟನ್ನುಗಳಷ್ಟು ಸಾಮಾಗ್ರಿ ವಹಿವಾಟುಗಳನ್ನು ನಡೆಸಲು ಸಮರ್ಥವಾದೀತು. ಪಶ್ಚಿಮಕರಾವಳಿಯಲ್ಲಿ ರಚಿಸಲ್ಪಡಲಿರುವ ಮತ್ತೊಂದು ಪ್ರಬುದ್ಧ ಬಂದರವೇ ಬೊಂಬಾಯಿಗೆ ದಕ್ಷಿಣದಿಕ್ಕಿನಲ್ಲಿ ಗೋವೆ ಕೊಚ್ಚಿಗಳ ಮಧ್ಯದ್ದು. ಹಡಗರಚನಾ ತಜ್ಞರಾದ ಮೂವರು ಫ್ರೆಂಚರೂ ಭಾರತ ಕರಾವಳಿಯ ಚಿಕ್ಕ ದೊಡ್ಡ ಬಂದರಗಳ ಮತ್ತು ಹಡಗರಚನೆಗಾಗುವ ಇತರ ಸ್ಥಳಗಳ ಸರ್ವೆ ನಡೆಸಿದ್ದಾರೆ. ಅವರ ಶಿಫಾರಸುಗಳು ಸದ್ಯದಲ್ಲೇ ಭಾರತ ಸರಕಾರದ ಕೈ ಸೇರಲಿವೆ. ಈ ಫ್ರೆಂಚ್ ತಜ್ಞಶ್ರೀಮೂರ್ತಿಗಳ ಪರಿಶೋಧನಾಹಡಗು ಮಲ್ಪೆ ಮತ್ತಿತರ ಪಶ್ಚಿಮ ಕರಾವಳಿ ಬಂದರಗಳಿಗೂ ಬಂದು ಹೋಗಿತ್ತು. ಇಲ್ಲಿಯ ಪ್ರಬುದ್ಧ ಬಂದರ ನಿರ್ಮಾಣದ ಕುರಿತು ಈ ತಜ್ಞರ ಅಭಿಪ್ರಾಯವನ್ನೂ ಗಣಿಸಲಿಕ್ಕಿದೆ. ನೈಸರ್ಗಿಕ ರಕ್ಷಣಾಶ್ರಯಗಳುಳ್ಳದ್ದೆಂದು 'ಬಂದರ ತಜ್ಞ'ರ ಸಮಿತಿಯಿಂದ ಎತ್ತಿ ಹೇಳಲ್ಪಟ್ಟ ಮಲ್ಪೆಯನ್ನೇ ಇವರೂ ಸೂಚಿಸಿದರಾದ್ದರಿಂದ, ಬಂದರ ಮತ್ತು ಹಡಗ ರಚನಾ ನಿಲ್ದಾಣವಾಗುವ ದ್ವಿವಿಧ ಯೋಗ್ಯತೆಯುಳ್ಳ ಮಲ್ಪೆಯು ಆರಿಸಲ್ಪಡುವದು ಹೆಚ್ಚಿನಂಶ ಸಂಭವನೀಯ. ಇನ್ನು ಹೊಸತಾಗಿ ರಚನೆಗೊಳ್ಳಲಿರುವ ವಿಮಾನ ನಿಲ್ದಾಣ ಸಂಬಂಧ, ಮತ್ತಿತರ ಭಾವೀ ಸಂಭವಗಳನ್ನೂ ಈ ಮಟ್ಟಿಗೆ ಆಲೋಚಿಸಲಿದೆಯಾದರೂ ಪರೀಕ್ಷೆಯ ಮುಖ್ಯ ವಿಷಯಗಳಲ್ಲಿ ಮಲ್ಪೆಯು ಸರ್ವ ಪ್ರಥಮವಾಗಿ ಪಾಸಾಗಿದೆ.

ಉಡುಪಿ

ಮಧ್ವ ಸರೋವರದಲ್ಲಿ ಶವ

ಮೇ ತಾ. 31ರಲ್ಲಿ ಮಧ್ಯಾಹ್ನ ಹೊತ್ತಿನಲ್ಲೇ ಮಧ್ವ ಸರೋವರದಲ್ಲಿ ಸುಮಾರು 14 ವರುಷದ ಹುಡುಗನ ಶವ ದೊರಕಿದೆ. ಹುಡುಗ ಉಡುಪಿಯವನೇ ಇದ್ದು ಪತ್ರಿಕೆ ಮಾರುತಿದ್ದವನೆಂದು ತಿಳಿದು ಬಂದಿದೆ. ರಾತ್ರಿ ಓಂದೂ ಸೇವಾ ಸಮಿತಿಯವರು ಆ ಶವದ ಸಂಸ್ಕಾರ ನಡಿಸಿದರು.

ಕುಂದಾಪುರ

ತಾ. 30-5-49ರಂದು ಹರಿಜನ ದಿನಾಚರಣೆಯು ಬಹು ಸಂಭ್ರಮದಿಂದ ವಡೇರಹೋಬಳಿ ಹರಿಜನ ಕೇರಿಯಲ್ಲಿ ಆಚರಿಸಲ್ಪಟ್ಟಿತು. ಬೆಳಗ್ಗೆ ಘಂಟೆ 8ಕ್ಕೆ ಸರಿಯಾಗಿ ಹರಿಜನರು, ಊರ ಪ್ರಮುಖರು, ಕಾಂಗ್ರೆಸ್ಸಿಗರೂ ಸರಕಾರಿ ಉದ್ಯೋಗಸ್ಥರೂ ವಡೇರಹೋಬಳಿ ಹರಿಜನ ಕೇರಿಯಲ್ಲಿ ನರೆದು, ಪ್ರಥಮವಾಗಿ ಹರಿಜನ ಬಾಲಕ ಹಾಗೂ ಯುವಕರೊಳಗೆ ಪಂದ್ಯಾಟ ನೆರವೇರಿಸಲಾಯಿತು. ಆ ವೇಳೆ ಭಜನಾ ಕಾರ್ಯಕ್ರಮವಾಗಿ ತದನಂತರ ಅಲ್ಲಿಯೇ ನೆರೆದ ಸಾರ್ವತ್ರಿಕ ಸಭೆಯಲ್ಲಿ, ಹರಿಜನ ದಿನಾಚರಣೆಯ ಉದ್ದೇಶ, ಗುರಿಯನ್ನು ವಿವರಿಸಿ ಸ್ಥಳೀಯ ಸರ್ಕಲ್ ಕಾಂಗ್ರೆಸ್ಸು ಕಮಿಟಿ, ಕಾರ್ಯದರ್ಶಿ ಶ್ರೀ ಎಮ್. ಎಮ್. ಹೆಗ್ಡೆಯವರೂ, ಕುಂದಾಪುರದ ರೂರಲ್ ವೆಲ್‌ಫೇರ್ ಆಫೀಸರರೂ ಮಾತನಾಡಿದರು. ಸಭಾಂತ್ಯದಲ್ಲಿ ಸಿಹಿತಿಂಡಿಯನ್ನು ಹಂಚಲಾಯಿತು. ಸ್ಥಳೀಯ ತಹಶೀಲ್‌ದಾರ ಶ್ರೀ ಪಿಂಟೋ, ಇವರು ಸಭೆಯಲ್ಲಿ ಹಾಜರಿದ್ದರು.

ಶ್ರೀ ಶಾರದಾ ವಿಜಯ
ಕನ್ನಡ ಇಂಗ್ಲೀಷ್
ಧರ್ಮಾರ್ಥ ರಾತ್ರಿ ಶಾಲೆ.
ಗಾಮದೇವಿ, ಮುಂಬಾಯಿ ನಂಬ್ರ 7.

ಈ ವೇಳೆ ಮುಚ್ಚಿರುವ ಶಾಲೆಯು ಇದೇ ಜೂನ್ ತಿಂಗಳ ತಾ. ೯ಕ್ಕೆ ಪುನಃ ತೆರೆಯಲ್ಪಡುವುದು. ಆದುದರಿಂದ ಹಳೇ ವಿದ್ಯಾರ್ಥಿಗಳೂ, ಹೊಸತಾಗಿ ಸೇರಲಿಚ್ಛಿಸುವ ವಿದ್ಯಾರ್ಥಿಗಳೂ ಉಪಾಧ್ಯಾಯರೆಲ್ಲರೂ ಎಂದಿನಂತೆ ಶಾಲೆಗೆ ತಪ್ಪದೆ ಹಾಜರಿರಬೇಕಾಗಿ ವಿನಂತಿ.



ಶ್ರೀ ಕೊರಡ್ಕಲ್
ಶ್ರೀನಿವಾಸ
ರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟರಾಯರ
'ಮನೆ ಮದ್ದು'
(HOME REMEDIES)
೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೩/-
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮೂತ್ರಸ್ರಾವ ನಿಂತಿತು

'...ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಮೂತ್ರಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ, ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ...ಲೆ: ರೂ 3.; ಸ್ಪೆಶಲ್ ರೂ. 5-; ಅಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ]
S. P. DEVEE, F. DS. (N. J.)
Tollygunge CALCUTTA.
ಶಿಷ್ಯರು: ಪಡಾಕಂಪನಿ, ಮಂಗಳೂರು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ನಡಿಯುವ ಚಿತ್ರ
"ಸಂತ ತುಳಸೀದಾಸ್"
ಬಾಂಬೇ ಟಾಕೀಸಿನ ತಯಾರಿ.
ಬರುವ ಚಿತ್ರ.
ಮಂಜ್‌ಬೂರ್.

ಉಡುಪಿ

ಬೋರ್ಡ್ ಶಾಲಾ ಉಪಾಧ್ಯಾಯರ ಯೂನಿಯನಿನ ಮಹಾಸಭೆ ತಾ 22ರಲ್ಲಿ ಶಾಲಾ ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಟಿ ಎಲ್ ರಾಯರ ಅಧ್ಯಕ್ಷತೆಯಲ್ಲಿ ಕಡಿಯಾಳಿಯಲ್ಲಿ ಜರಗಿತು ಯೂನಿಯನ್ ಕಾರ್ಯದರ್ಶಿ ಶ್ರೀ ಕೆದ್ಲಾಯರು ಗತವರುಷದ ವರದಿಯನ್ನೋದಿದರು ಉಪಾಧ್ಯಾಯರ ಆಗುಹೋಗುಗಳ ಕುರಿತು ಚರ್ಚೆ ನಡೆದು ಶಾಲಾದಿವಸಗಳನ್ನು 200ಕ್ಕೆ ತಂದು ಸೆಕೆಂಡ ರಜಾದಿನಗಳನ್ನು ಹೆಚ್ಚಿಸಬೇಕೆನ್ನುವ, ಉಪಾಧ್ಯಾಯ ವೃತ್ತಿಯಿಂದ ಬಿಡುಗಡೆ ಹೊಂದುವ ಕಾಲವನ್ನು 60ವರುಷಗಳಿಗೇರಿಸಬೇಕೆನ್ನುವ, ಉಪಾಧ್ಯಾಯರ ಮಕ್ಕಳಿಗೆ ಹೈಸ್ಕೂಲು ಶಿಕ್ಷಣವುಧರ್ಮಾರ್ಥ ಸಿಕ್ಕಬೇಕೆನ್ನುವ, ಸೆಂಟ್ರಲ್‌ಪೇ ಕಮಿಶನಿನ ಶಿಫಾರಿಸಿನಂತೆ ಸಂಬಳ ಮತ್ತು ತುಟ್ಟಿಭತ್ತೆ ಕೊಡಬೇಕೆನ್ನುವ, ಇ ಎಸ್ ಎಲ್ ಸಿ ಪರೀಕ್ಷಾ ಸಮಿತಿಯಲ್ಲಿ ಒಂದು ಸ್ಥಾನವನ್ನು ಪ್ರಾಥಮಿಕಶಾಲಾ ಉಪಾಧ್ಯಾಯರಿಗೆ ಮೀಸಲಿಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು ನಂತರ ಕಾರ್ಯ ನಿರ್ವಾಹಕ ಮಂಡಳಿಯ ರಚನೆಯೂ ಶ್ರೀಗಳಾದ ಎ ಎನ್ ಹೆಬ್ಬಾರ್, ಎಂ ವಿ ಕೆದ್ಲಾಯ ಮತ್ತು ಭೋಜರಾಜ ಶೆಟ್ಟರು ಕ್ರಮವಾಗಿ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿಯರಾಗಿ ಆರಿಸಲ್ಪಟ್ಟರು

ಮುನಿಸಿಪಲ್ ಕೌನ್ಸಿಲು ಮೀಟಿಂಗು ಕಳೆದ ತಾ 28ರಲ್ಲಿ ಚಯರ್‌ಮನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ಅಯ್ಯರ ಅಧ್ಯಕ್ಷತೆಯಲ್ಲಿ ಜರಗಿತು ಮುನಿಸಿಪಲ್ ರೆವಿನ್ಯೂ ಇನ್ಸ್‌ಪೆಕ್ಟರರಿಗೆ ಕಲೆಕ್ಷನ್ ಎಲೌನ್ಸ್ ಕೊಡಲು ಶಕ್ಯವಿಲ್ಲವೆಂದು ಸೂಚಿಸಿದ ಸರಕಾರಿ ಮಹಜರಿನಾದವನ್ನು ರಿಕಾರ್ಡ್ ಮಾಡಲಾಯಿತು. ಮುನಿಸಿಪಲ್ ಪೇಟೆ ಮತ್ತು ಸ್ತ್ರೀಗಳಿಗೆ ಸಮ ಪ್ರಶ್ನೆಯನ್ನು ಸೆಂಕ್ಷನ್ ಮಾಡಲಾಯಿತು ಕುಂಜಿಬೆಟ್ಟು ಸ್ಮಶಾನದ ಆಡಳಿತವನ್ನು ಕೆಲವು ಶರ್ತಗಳಿಗೊಳಪಟ್ಟು ಉಡುಪಿ ಶವಸಂಸ್ಕಾರ ಸಮಿತಿಗೆ ಬಿಟ್ಟುಕೊಡಬಹುದೆಂದಾಯಿತು ಮಕ್ಕಳಿಗೆ ಧರ್ಮಾರ್ಥ ಹಾಲನ್ನೀಯುವಂತೆ ಮಕ್ಕಳ ತಾಯಂದಿರಿಗೂ ಧರ್ಮಾರ್ಥ ಹಾಲುಕೊಡುವ ಯೋಜನೆಯಲ್ಲಿ ಅರ್ಧಾಂಶ ವೆಚ್ಚವನ್ನು ಸರಕಾರವು ಕೊಡುವುದಾದರೆ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಗರಸಭೆಯು ತಯಾರಾದೆ ಎಂದು ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್, ಮದ್ರಾಸು ಅವರಿಗೆ ತಿಳಿಸಬೇಕೆಂದಾಯಿತು

ಸಾರ್ವಜನಿಕ ಉಪಯೋಗಾರ್ಥವಾಗಿ ಈ ಸುಂಕದ ಟಪ್ಪಾಲುಕಟ್ಟು ಇದ್ದು ಈಗ ತ್ರಿವ್‌ಲ್ಯಾಂಡ್ ಉಡುಪಿ ಇರುವ ಕಟ್ಟಡದಲ್ಲಿ ಒಂದು ಟಪ್ಪಾಲು ಪೆಟ್ಟಿಗೆಯನ್ನಿಡಲಾಗಿದೆ.

ಕಲಾವೃಂದದಲ್ಲಿ— 'ಕನ್ನಡಸಾಹಿತ್ಯ' ಪರಿಷತ್ತಿನಿಂದ ನಡೆಸಲ್ಪಡುವ 'ಕಾವ' ಮತ್ತು 'ಜಾಣ' ತರಗತಿ ಶಿಕ್ಷಣ ಕೇಂದ್ರವು ಪದ್ಧತಿಯಂತೆ ಈ ವರುಷವೂ ತೆರೆಯಲ್ಪಡುವದೆಂದೂ ಬರುವ ನವಂಬರಿಗೆ ಪರೀಕ್ಷೆಗಳು ಜರಗುವವೆಂದೂ ಸೇರಬಯಸುವ ವಿದ್ಯಾರ್ಥಿಗಳು ಜೂನ್ 15ರೊಳಗೆ ಅಪೇಕ್ಷಾ ಪತ್ರಗಳನ್ನು ತಮಗೆ ಕಳುಹಿಸತಕ್ಕದ್ದೆಂದೂ ಕಲಾವೃಂದದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಪಾದೂರಿನ ಶ್ರೀ ಹೊಸಮನೆ ನಂದ್ಯಪ್ಪ ಹೆಗ್ಡೆಯವರು ಇದೇ ತಾ 28ರಲ್ಲಿ ತಮ್ಮ 87ನೇ ವರ್ಷ ವಯಸ್ಸಿನಲ್ಲಿ ದಿವಂಗತರಾದರು ಹೆಗ್ಡೆಯವರು ಒಳ್ಳೇ ಅನುಭವಸ್ಥ ಹಾಗೂ ನ್ಯಾಯ ತೀರ್ಮಾನಕರ್ತನೆಂದು ಹೆಸರಾದವರು, ಹಲವು ಕೌಟುಂಬಿಕವಾದ ವಿವಾದ, ವ್ಯಾಜ್ಯ ವ್ಯವಹಾರಗಳನ್ನು ತೀರ್ಮಾನಿಸಿದವರು ಅವರ ಆತ್ಮಕ್ಕೆ ಶಾಂತಿ ಕೋರುತ್ತೇವೆ

ಹುಳಬಿದ್ದು ನೇಜಿ ನಾಶ! ಕೃಷಿಕರ ಗೋಳು

ಕಾಸರಗೋಡಿನ ಹೆಚ್ಚಿನ ಗ್ರಾಮಗಳಲ್ಲಿ ಎಣೆಲು ಬೆಳೆಯ ನೇಜಿಯು, ಸಂಪೂರ್ಣವಾಗಿ ಹುಳವಾಗಿ ಪರಿಣಮಿಸಿರುತ್ತದೆ. ಹುಳದ ಸ್ಥಿತಿಯು ಹೀಗಿದೆ ಒಂದುವರೆ ಇಂಚಿನತನಕ ಉದ್ದವಿರುವ ಹುಳಗಳ ರಾಶಿಯು ಗದ್ದೆಯ ಹುಣಿಯನ್ನು ಕೂಡಾ ಆವರಿಸಿದ್ದು, ನಡೆದು ಹೋಗುವಾಗ ಕಾಲಿನ ಅಡಿಗೆಬಿದ್ದು ಸಾಯುವ, ಪಟ, ಪಟ, ಶಬ್ದವು ಕೇಳುತ್ತಿದೆ ನಡೆದು ಹೋಗಲು ಹೇಸಿಕೆ ಮತ್ತು ಹೆದರಿಕೆ ಆಗುತ್ತಿದೆ ಒಂದು ನಿಮಿಷ ಹುಣಿಯಲ್ಲಿ ನಿಂತರೆ ಮೈಗೆ ಹತ್ತುತ್ತಿದೆ. ಒಂದು ಕೋಲು ಚಚ್ಚೌಕದಲ್ಲಿ ಒಂದು ಕುಕ್ಕೆಯಷ್ಟು ಬಾಚಿ ತೆಗೆಯಲು ಸಿಕ್ಕುತ್ತಿದೆ ಹುಳವು ಮೇಯುವ ಪರಿಸ್ಥಿತಿಯು ಚಿಂತಾಜನಕವಿದೆ; ನೇಜಿಯ ಬುಡಸಮೇತ ಬಾಕಿ ಮಾಡುವುದಿಲ್ಲ ಹುಳವು ನೇಜಿಹಾಕಿದಗದ್ದೆಯಲ್ಲಿಮಾತ್ರವಲ್ಲ, ಬಾಕಿ ನೆಡಲಿಕ್ಕೆಂದು ಕಾದಿಟ್ಟಿರುವ ಗದ್ದೆಗಳ ಹುಲ್ಲಿನ ಮೇಲೆಯೂ ಇರುತ್ತದೆ ಹುಣಿಯಲ್ಲಿ ಮತ್ತು ಗದ್ದೆಯಲ್ಲಿರುವ ಹುಲ್ಲಿನ ಚಿಗುರು, ಬುಡವನ್ನು ಸಮೇತ ಒಕ್ಕಿಮಾಡುವುದಿಲ್ಲ ಕೃಷಿ ಇಲಾಖೆಯವರ ಪ್ರಯತ್ನ ಕೂಡಾ ವಿಫಲವಾಗುತ್ತಿದೆ ವಿನಾಶಕಾರಕ ಔಷಧಿಯನ್ನು ಉಪಯೋಗಿಸಿದಲ್ಲಿ ಒಂದಕ್ಕೆ ಎರಡು ಪಾಲಿನಂತೆ ಜಾಸ್ತಿ ಕಾಣುತ್ತಿದೆ ಊರ ವೈದ್ಯರುಗಳು ಸಂಪೂರ್ಣ ಸೋತಿರುತ್ತಾರೆ ಇನ್ನು ನೇಜಿಹಾಕಲು ಸ್ಥಳವಿಲ್ಲ, ಬೀಜವಿಲ್ಲ, ಇಷ್ಟರೆ ಸಮಯ ಸರಿಯಲ್ಲ ಹಲವರು ಈ ಹುಳವನ್ನು ಮಳೆಯ ನೀರಿನಲ್ಲಿ ಬಿದ್ದಿರಬೇಕೆಂದು ಹೇಳುತಿದ್ದಾರೆ ಮುಂದಿನ ಕೀರ್ತಿ ಮಸೂಲಿಗೂ, ಗೇಣಿ ಮಸೂಲಿಗೂ ಸಮಯ ಹಾರೈಸುತ್ತಿರುವ, ಸರಕಾರ ಮತ್ತು ಜಮೀನ್ದಾರಗಳು ಈ ಸಂಗತಿಯಲ್ಲಿ ತಕ್ಕ ನಿವೃತ್ತಿ ಮಾರ್ಗವನ್ನು ಕೈಕೊಂಡು ಕೃಷಿಕರ ಗೋಳಿಗೆ ಅಭಯವನ್ನು ನೀಡಬೇಕಾಗಿ ಜನತೆಯ ಪರವಾಗಿ ಜಿಲ್ಲಾ ಬೋರ್ಡ್ ಮಾಜಿಸದಸ್ಯ ಶ್ರೀ ಕೆ. ಶಂಕರ ಇವರು ಬರೆಯುತ್ತಾರೆ

ಇದೇರೀತಿ ಉಡುಪಿ ತಾಲೂಕಿನ ಪೆರ್ಡೂರು, ಕಳ್ತೂರು, ನಾಲ್ಕೂರು ನಂಚಾರು, ಕುಡಿ, ಹಲುವಳ್ಳಿ, ಪೆಜಮಂಗೂರು, ಹೊಸೂರು, ಕೆಂಜೂರು ಮೊದಲಾದ ಗ್ರಾಮಗಳಲ್ಲಿಯೂ ಕಾರ್ಕಳ ತಾಲೂಕಿನ ಹೆಬ್ರಿ,ಬೇಳಂಜೆ, ಕುಚ್ಚೂರು, ಚಾರ, ಕೆರೆಬೆಟ್ಟು ಮೊದಲಾದ ಗ್ರಾಮಗಳಲ್ಲಿಯೂ ಹುಳಬಿದ್ದು ನೂರಾರು ಸಾವಿರಾರು ಮುಡಿ ಬೀಜದ ನೇಜಿ ನಾಶವಾಗಿ ರೈತರು ಪೇಚಾಟಕ್ಕೀಡಾಗಿರುವರೆಂದು ತಿಳಿದುಬರುತ್ತದೆ ಈ ಕುರಿತು ಸರಕಾರವು ಕೂಡಲೇ ತಕ್ಕ ವ್ಯವಸ್ಥೆ ಮಾಡದಿದ್ದರೆ ಗದ್ದೆಗಳು ಹಡಿಲುಬೀಳಬಹುದು.

ಮೂಲ್ಕಿ:— ಬಿಲ್ಲವ ಸಮಾಜ ಸೇವಾ ಸಂಘದ ಮಹಾಸಭೆಯು ಕಳೆದ ತಾ 28ರಲ್ಲಿ ಶ್ರೀ ಕೆ ವೈ ಪೂಜಾರಿ, ಎಡ್ವೋಕೇಟ್ ಮಂಗಳೂರು, ಅವರ ಅಧ್ಯಕ್ಷತೆಯಲ್ಲಿ ಜರಗಿತು ದೇವತಾ ಪ್ರಾರ್ಥನೆಯಾದ ಬಳಿಕ ಸಂಘದ ಕಾರ್ಯದರ್ಶಿಯರು ಸಂಘದ ವರದಿಯನ್ನೂ ಲೆಖ್ಖಪತ್ರಗಳನ್ನೂ ಸಭೆಯ ಮುಂದಿಡಲು ಅದು ಮಂಜೂರಾಯಿತು ಬಳಿಕ ಶ್ರೀಗಳಾದ ಎಮ್ ರಾಮಕೃಷ್ಣ ಪ್ರಂಜ, ಕೆ ವಿಟ್ಟಪ್ಪ, ಕೆ. ಸುವರ್ಣ, ಕೆ ಚನ್ನಕೋಟಿಯಾನ್, ಎಮ್. ಕೆ ಎಲ್ಲಪ್ಪ ಮೊದಲಾದವರ ಭಾಷಣಗಳಾದುವು, ಕಾರ್ಯಕಾರೀ ಮಂಡಳಿಯ ಚುನಾವಣೆ ನಡೆದು ಅಧ್ಯಕ್ಷರ ಸಮಯೋಚಿತ ಭಾಷಣಾದಿಗಳಿಂದ ಸಭೆಯು ಕೊನೆಗೊಂಡಿತು.

ಎರ್ಮಾಳು:— ಇಲ್ಲಿಯ ಬಡಾ ಫ್ರೆಂಡ್ಸ್ ಹಳೇ ವಿದ್ಯಾರ್ಥಿ ಸಂಘದ ಮಹಾಸಭೆಯು ಈಚೆಗೆ ಶ್ರೀ ವೈ. ಕೊರಗಪ್ಪ, ಕೆ ಪುತ್ರನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ರಾತ್ರಿ ಹೊಸ ಮಾದರಿಯ ಸಾಮಾಜಿಕ ಸಂಗೀತ ನಾಟಕ ಪ್ರದರ್ಶನಗಳಾದುವು

ಕೀಳಂಜೆ.— ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲಾ ಪತ್ರಿಕವರ ಕೂಟವು ಕಳೆದ ತಾ 25ರಲ್ಲಿ ಶ್ರೀ ಕೀಳಂಜೆ ಬಿ ರಾಜಮೋಹನ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಶಾಲಾ ಮಕ್ಕಳಿಗೆ ಬಹುಮಾನ ವಿತರಣ, ಶ್ರೀ ಕೆ ಆರ್. ಭಟ್ ಮೊದಲಾದ ಸಭಿಕರ ಭಾಷಣ, ಅಧ್ಯಕ್ಷರ ಸಮಾರೋಪ ಮಾತುಗಳು, ಕಾರ್ಯದರ್ಶಿಯರ ಧನ್ಯವಾದಾರ್ಪಣೆಗಳೊಂದಿಗೆ ಸಭೆಯು ಮುಕ್ತಾಯವಾಯಿತು

ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಈಚೆಗೆ ಲಂಡನ್ ಕೋಮನ್‌ವೆಲ್ತ್ ಪರಿಷತ್ತಿಗೆ ಹೋದಾಗ ಲಂಡನ್ನಿನಲ್ಲಿ ನವ ಇಂಡಿಯಾ ಹ್ಯೆಕಮಿಶನರ್ ಶ್ರೀ ವಿ ಕೆ ಕೃಷ್ಣ ಮೆನನ್ನರೊಡನೆ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಿಜೆ ವ್ಯಾಪಾರಸ್ಥರು,
ರಥಬೀದಿ, ಉಡುಪಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 20 ವರ್ಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

For Life Assurance

CONSULT

THE NEW GUARDIAN OF INDIA
LIFE ASSURANCE Co. LTD.
(Established 1934)

Chairman **Mr. M CT M Chidambaram Chettyar**

A Policy in this progressive Life Office is a good investment, its Agency is a valuable business connection

MANGALORE BRANCH
K S R Road,
Hampankatta, Mangalore.

HEAD OFFICE
United India Life Bldg,
P B No 142, MADRAS

ಅಳಿಯ ಸಂತಾನ ಕಾನೂನಿನ ಇಂಗ್ಲಿಷ್ ಪ್ರತಿಗಳಿಗೆ
ನವಯುಗ ಪ್ರೆಸ್, ಉಡುಪಿ
ಇವರಿಗೆ ಬರೆಯಿರಿ

ಮಂಗಳೂರು

ರಕ್ಷಣಾ ಪಡೆಗೆ ಸೇರಲು ಪ್ರೋತ್ಸಾಹ:— ಭಾರತದ ರಕ್ಷಣೆಯ ದೃಷ್ಟಿಯಿಂದ ಯೋಗ್ಯರಾದ ಯುವಕರನ್ನು ಅಧಿಕವಾಗಿ ಸೈನಿಕದಳ, ನೌಕಾದಳ, ವೈಮಾನಿಕದಳ, ಮೊದಲಾದ ದಳಗಳಿಗೆ ಸೇರುವಂತೆ ಪ್ರೋತ್ಸಾಹಿಸುವ ಬಗ್ಗೆ ಕೇಂದ್ರ ಸರಕಾರದ ರಕ್ಷಣಾ ಸಚಿವಾಲಯದವರು ಪ್ರತಿ ಸೈನಿಕ ಕೇಂದ್ರಕ್ಕೆ ಮಿಲಿಟರಿ ಅಧಿಕಾರಿಗಳಿಂದ ಕೂಡಿದ ಒಂದೊಂದು ಸಮಿತಿಯನ್ನು ನೇಮಿಸಿರುವರು. ಈ ಸಮಿತಿಯವರು ಈ ತಿಂಗಳ ತಾ 8 ಮತ್ತು 9 ರಲ್ಲಿ ದ. ಕ. ಜಿಲ್ಲೆಯ ಪ್ರಮುಖ ಕಾಲೇಜುಗಳು ಮತ್ತು ಹೈಸ್ಕೂಲುಗಳನ್ನು ಸಂದರ್ಶಿಸಲಿರುವರು.

ಮಂಗಳೂರು ಮುನಿಸಿಪಲ್ ತೆರಿಗೆದಾರರ ಸಂಘದ ಬಿಜಯಿ ಶಾಖೆಯನ್ನು ಕಳದ ತಾ 22ರಲ್ಲಿ ಇಗರ್ಜಿ ಶಾಲೆಯಲ್ಲಿ ಕೂಡಿದ ತೆರಿಗೆದಾರರ ಸಭೆಯಲ್ಲಿ ಸ್ಥಾಪಿಸಲಾಯಿತು. ಈ ಶಾಖಾಸಂಘಕ್ಕೆ ಡಾ॥ ಸಿ. ಬಿ. ಲೋಬೋ ಅಧ್ಯಕ್ಷರಾಗಿಯೂ, ಶ್ರೀಗಳಾದ ಜೆ. ಎಲ್. ಡಿಸೋಜ ಮತ್ತು ಡಾ॥ ಎಮ್. ಆರ್. ಜೋನ್ ಅವರು ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟರು. ಬಿಜಯಿ ವಾರ್ಡಿನ ತೆರಿಗೆದಾರರ ಮಹಾಸಭೆಯನ್ನು ಇದೇ ತಾ 5ರಲ್ಲಿ ಜರಗಿಸಬೇಕಾಗಿ ನಿಶ್ಚಯಿಸಲಾಯಿತು.

ಪಾಣೆಮಂಗಳೂರು ರಾಜಕೀಯ ಪರಿಷತ್ತಿಗೆ ಬಂದಿದ್ದ ಶ್ರೀ ತಿ. ರಾ. ನಸ್ವಿಯವರು ಮಂಗಳೂರು, ಮೂಡಬಿದ್ರಿ, ಉಡುಪಿ ಮೊದಲಾದ ಸ್ಥಳಗಳನ್ನು ಕಳದ ತಾ 25ರಲ್ಲಿ ಸಂದರ್ಶಿಸಿ ಹುಬ್ಬಳ್ಳಿಗೆ ಹೋದರು. ತಾ 24ರಲ್ಲಿ ಬೆಳಗ್ಗೆ ಶ್ರೀ ವಿ. ಯಸ್. ಕುದ್ವರೊಂದಿಗೆ ಸಿ. ಪಿ. ಸಿ ಯ ಮುರೋಳಿಯ ವರ್ಕ್‌ಶೋಪನ್ನು ಸಂದರ್ಶಿಸಿದರು. ಸಂಜೆ ಜಿಲ್ಲಾ ಬಿಲ್ಲವ ಯೂನಿಯನ್ ಕಡೆಯಿಂದ ಶ್ರೀಯುತರು ಶ್ರೀಗೋಕರ್ಣನಾಥ ದೇವಸ್ಥಾನದಲ್ಲಿ ಸ್ವಾಗತ ಪಡೆದು ಉಪಹಾರ ಕೂಟದಲ್ಲಿ ಭಾಗವಹಿಸಿದರು.

ಶ್ರೀ ಕೆ. ವಿ ವೆಂಕಟರಾಮಯ್ಯನವರು ಬಂಟ್ವಾಳ, ಮಂಗಳೂರು ಖಾದಿ ಭಂಡಾರಗಳನ್ನೂ, ಮೂಡಬಿದ್ರೆಯ ಪನೆಜೆಲ್ಲಿ ಶಿಕ್ಷಣ ಕೇಂದ್ರ ಮೊದಲಾದುವನ್ನೂ ಸಂದರ್ಶಿಸಿ ತಾ 26ರಲ್ಲಿ ಮೈಸೂರಿಗೆ ತೆರಳಿದರು. ತಾ 25ರಲ್ಲಿ ಮಂಗಳೂರು ಬೆಸೆಂಟ್ ಪಾಠಶಾಲೆಯಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ ಪರಿಷತ್ತಿನಲ್ಲಿ ಶ್ರೀಯುತರು ಗಾಂಧಿನಿಧಾನ ಮತ್ತು ಸರ್ವೋದಯ ಸಮಾಜದ ಕುರಿತಾದ ಪ್ರಶ್ನೆಗಳಿಗೆ ಉತ್ತರಿಸಿದರು.

ಮದ್ರಾಸಿನ ಸುಪರಿಂಟೆಂಡೆಂಟ್: ಇಂಜನಿಯರ್ (ನೀರಾವರಿ) ಅವರು ಬೆಳ್ತಂಗಡಿ, ಕರಿಂಗೋಳಿ, ಸೀತೇಶ್ವರ, ಪಚ್ಚಮೊಗರು ಮೊದಲಾದ ಸ್ಥಳಗಳನ್ನು ಸೇತುವೆ ನಿರ್ಮಾಣದ ಬಗ್ಗೆ ಸಂದರ್ಶಿಸಿದರು.

ಹೊಸ ಪ್ರಿನ್ಸಿಪಾಲ್ ಸ್ಯೆಂಟ್ ಎಲೋಸಿಯಸ್ ಕಾಲೇಜಿನ ರೆಕ್ಟರ್ ಮತ್ತು ಪ್ರಿನ್ಸಿಪಾಲರಾಗಿದ್ದು ಅರು ವರುಷಗಳ ತನಕ ಕಾಲೇಜನ್ನು ಒಳ್ಳೆಯ ಶಿಸ್ತು ಮತ್ತು ಕ್ರಮದಿಂದ ನೋಡಿಕೊಂಡಿದ್ದ ರೆ॥ ಫಾ॥ ಜೆ. ಎ. ಬಿ. ಕ್ಯೊರೊರವರನ್ನು ಕಲ್ಲಿಕೋಟೆಯ ಜೊಸೆಫ್ಸ್ ಗ್ಯುರೋಪಿಯನ್ ಹೈಸ್ಕೂಲಿನ ಪ್ರಿನ್ಸಿಪಾಲರಾಗಿ ನೇಮಿಸಲಾಗಿದೆ. ಇವರ ಸ್ಥಾನಕ್ಕೆ ಮಿ. ಇ. ಜೇಕ್ಸ್ ಅವರು ನೇಮಿಸಲ್ಪಟ್ಟು ಚಾರ್ಜು ವಹಿಸಿರುವರೆಂದು ಗೊತ್ತಾಗಿದೆ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು— ಕಳದ ತಾ. 1ರಲ್ಲಿ ಮಂಗಳೂರಲ್ಲಿ ಶ್ರೀ. ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರೀಯ ಕಾಂಗ್ರೆಸ್ ಮಹಾಧಿವೇಶನ, ಸರ್ಕಲ್ ಕಾಂಗ್ರೆಸ್ ಕಮಿಟಿಗಳ ರಚನೆ, ಮುಂದೆ ಕೈಕೊಳ್ಳಬೇಕಾದ ಕಾರ್ಯಗಳ ಕುರಿತು ಪ್ರಧಾನ ಕಾರ್ಯದರ್ಶಿ ಶ್ರೀ. ಕೆ. ಕೆ. ಶೆಟ್ಟಿ ರು ಮಾತನಾಡಿದರು. ಬಳಿಕ ಜಿಲ್ಲಾ ಬೋರ್ಡು ಚುನಾವಣೆಯ ಪ್ರಶ್ನೆಯನ್ನೂ ಇತರ ಕೆಲವು ವಿಷಯಗಳನ್ನೂ ಮುಂದೆ ಹಾಕಿ ಒಲ್ಲಾ ಟ್ರಿಬ್ಯುನಲಿಗೆ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಕೆ. ಆರ್. ಆಚಾರ್, ಮತ್ತು ಜಿ ಮಂಜಯ್ಯ ಹೆಗ್ಡೆಯವರನ್ನು ಸರ್ವಾನುಮತದಿಂದ ಆರಿಸಲಾಯಿತು.

ಜನತಾ ಸೇವಾ-ಸಂಘದ ಮಹಾಸಭೆಯು ಕಳದ ತಾ 21ರಲ್ಲಿ ಪಾಣೆಮಂಗಳೂರಲ್ಲಿ, ಬಿಲ್ಲವ ಯೂನಿಯನಿನ ಅಧ್ಯಕ್ಷರಾದ ಶ್ರೀ ಪಿ. ಆರ್. ಕಕ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಕಾಂತಪ್ಪನವರು ಸಂಘದ ವರದಿಯನ್ನೋದಿದ ಬಳಿಕ ಶ್ರೀಗಳಾದ ಎಮ್. ಶಾಂತಪ್ಪ (R. W. C.) ಕೆ. ಕೃಷ್ಣರಾವ್, ಎಸ್. ಎಸ್. ಐತಾಳ್, ಓ. ಕಾದರ್ ಸಾಹೇಬ್ ಮೊದಲಾದವರ ಮಾತುಗಳಾದುವು. ಸಂಘದ ಅಧ್ಯಕ್ಷ ಶ್ರೀ ಬಿ. ಕೆ. ವೆಂಕಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಉದಕಮಂಡಲ— ಕಳದ ತಾ 18ರಲ್ಲಿ ಇಲ್ಲಿಯ ಬಾಸೆಲ್ ಶಾಲೆಯಲ್ಲಿ ವರ್ಷಾವಧಿ ಮಕ್ಕಳ ಕೂಟವು ಸರ್. ಸಿ. ಪಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಕಮಲಮ್ಮ ಯು. ರಾಮರಾಯರು ಮಕ್ಕಳಿಗೆ ಪಾರಿತೋಷಗಳನ್ನು ಹಂಚಿದರು.

ಪ್ರಕಟಣೆ

ಬಿಲ್ಲವರ ಎಸೋಸಿಯೇಶನ್, ಮುಂಬಾಯಿ:— ವಿದ್ಯಾರ್ಥಿ ವೇತನವನ್ನು ಪಡೆಯಲಿಚ್ಛಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಅರ್ಜಿಪತ್ರವನ್ನು ಜುಲಾಯಿ ತಿಂಗಳ ತಾರೀಕು ಒಂದರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅರ್ಜಿಪತ್ರವನ್ನು ಪಡೆಕೊಳ್ಳಬೇಕಾಗಿ ಈ ಮೂಲಕ ತಿಳಿಸಲಾಗುತ್ತದೆ. ವಿದ್ಯಾರ್ಥಿವೇತನ ಪಡೆಯುತ್ತಿರುವ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಪರೀಕ್ಷೆ ಫಲಿತಾಂಶ ಮೂಡನೆ ಮುಂದುವರಿಸುವ ಬಗ್ಗೆ ಅರ್ಜಿಯನ್ನು ಕೊಡತಕ್ಕದ್ದು. ಪ್ರಕೃತ ಹೈಸ್ಕೂಲು ವಿದ್ಯಾಭ್ಯಾಸದ ವರೆಗೆ ಮಾತ್ರ ವಿದ್ಯಾರ್ಥಿ ವೇತನವನ್ನು ಕೊಡಲಾಗುವುದು.

ಮಾನಾರ್ಥ ಪ್ರಧಾನ ಕಾರ್ಯದರ್ಶಿ,
ಬಿಲ್ಲವರ ಎಸೋಸಿಯೇಶನ್,
17 ರಘುನಾಥ ದಾದಾಜಿ ರಸ್ತೆ,
ಕೋಟೆ, ಮುಂಬಾಯಿ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ದರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Dadananda Rao. Kunjoor.
Manager.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಧಂಡಪಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ-

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಜಗತ್ತಿನಲ್ಲೆಲ್ಲಾ ಸುಮಾರು ನೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯವಶ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತ್ರಿಲೋಕ್ಯದ ಉತ್ತಮ ಔಷಧವು ಜೀರೋಂದಿದ್ದ ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನಕೋಶ, ಕಲೆಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್ ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಸೋಂಪವ್ಯಾಧಿ, ಅಜೀರ್ಣ, ಹೊಟ್ಟೆನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವುದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ವೇದನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಬಂದಲ್ಲಿ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರು ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0 ಡಜನ್ ಶೀಸೆಗಳಿಗೆ ರೂ. 18 ವಿ. ಪಿ. ಸಹಿತ.

ಪ್ರಶಂಸನಾ ಪತ್ರ— ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ಎಳು ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ನಿರ್ಧರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲಿನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಬೇಜಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಥ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ. ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿದೆ.

— ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly

ಬೊಂಬಾಯಿ ಸಾ ಕಿಸ ರು:— ...

ದ. ಕ. ಜಿಲ್ಲಾ ರಾಜಕೀಯ ಪರಿಷತ್ತು

ದಕ್ಷಿಣಕನ್ನಡ ಜಿಲ್ಲಾ ರಾಜಕೀಯ ಪರಿಷತ್ತು ಕಳೆದ ತಾ ೨೨ ಮತ್ತು ೨೩ ಈ ಎರಡು ದಿನಗಳಲ್ಲಿ ಮಂಗಳೂರಿಗೆ ಸುಮಾರು 14 ಮೈಲು ದಕ್ಷಿಣಕ್ಕಿರುವ ವಾಣಿಮಂಗಳೂರಲ್ಲಿ ಮುಂಬಯಿ ಶಾಸನ ಸಭಾಸದಸ್ಯರೂ, ಕೆ. ಪಿ. ಸಿ. ಸಿಯ ಉಪಾಧ್ಯಕ್ಷರೂ ಆದ ಶ್ರೀ ತಿ. ರು. ನೆಸ್ವಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ತಾ 22ರಲ್ಲು ಪ್ರಭಾತಫೇರಿಯಾಗಿ ಧ್ವಜ ವಂದನೆಯು ಶ್ರೀ ಎಲ್. ಸಿ. ಪಾಯಸ್‌ರ ಹಸ್ತದಿಂದ ಜರಗಿತು ಅವರು ತಮ್ಮ ಮಾತಿನಲ್ಲಿ ಒಕ್ಕೂಟ ಧ್ವಜದ ಮಹತ್ವವನ್ನೂ ಅದನ್ನು ಗೌರವಿಸುವುದು ಭಾರತೀಯರ ಕರ್ತವ್ಯವೆಂಬುದನ್ನೂ ತಿಳಿಸಿ ಭಾಷಣವಿತ್ತರು.

ಬಳಿಕ ಜಿಲ್ಲಾ ಕಲೆಕ್ಟರರಾದ ಶ್ರೀ ಎಸ್. ಆರ್. ಕೈವಾರರು ಸರ್ವೋದಯ ಪ್ರದರ್ಶನವನ್ನು ತೆರೆದರು. ಆ ಸಂದರ್ಭದಲ್ಲಿ ಜಿಲ್ಲೆಯಿಂದ ಹೊರ ಹೋಗುವ ಕಾಲದಲ್ಲಿ ತನಗಿತ್ತ ಮರ್ಯಾದೆಗಾಗಿ ಪರಿಷತ್ತಿನ ಸ್ವಾಗತ ಸಮಿತಿಗೂ ಆ ಮೂಲಕ ಜಿಲ್ಲೆಗೂ ತನ್ನ ಆಭಾರ ಸೂಚಿಸಿ, ಪ್ರದರ್ಶನಗಳ ಪ್ರಯೋಜನವನ್ನು ವಿವರಿಸಿದರು.

ನಿಯೋಜಿತ ಅಧ್ಯಕ್ಷರು ಅಂದು ಬೆಳಿಗ್ಗೆ ಬಾರದ್ದರಿಂದ ವಿಷಯನಿಯಾಮಕ ಸಭೆಯು ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿ ಗೊತ್ತುವಳಿಗಳಾದುವು.

ನಿಯೋಜಿತ ಅಧ್ಯಕ್ಷ ಶ್ರೀ ಹುಕ್ಕೇರಿಕರರು ಬಾರದ್ದರಿಂದ ಶ್ರೀ ತಿ. ರು. ನೆಸ್ವಿಯವರನ್ನು ಅಧ್ಯಕ್ಷರನ್ನಾಗಿ ಕೇಳಿಕೊಳ್ಳಲಾಯಿತು ಅವರು ಬಂದೊಡನೆ ಸ್ವಾಗತ ಸಮಿತಿಯ ಪ್ರಮುಖರೂ ಸ್ವಯಂಸೇವಕರೂ ಅವರನ್ನು ಇದಿರುಗೊಂಡು ಮೆರವಣಿಗೆಯಿಂದ ವೆಂಕಟ್ರಮಣ ದೇವಸ್ಥಾನದ ಬಳಿಯಿಂದ ಶ್ರೀನಿವಾಸ ನಗರಕ್ಕೆ ಜಯಘೋಷದೊಡನೆ ಕರೆದೊಯ್ಯಲಾಯಿತು.

ಬಹಿರಂಗ ಅಧಿವೇಶನಕ್ಕಾಗಿ ನಿರ್ಮಿಸಿದ ಶ್ರೀನಿವಾಸ ನಗರದ ಸುಂದರ ಮಂಟಪವು ಯೋಗ್ಯ ವೇದಿಕೆಯಿಂದ ಸಜ್ಜುಗೊಳಿಸಲ್ಪಟ್ಟಿತ್ತು. ಧ್ವನಿವರ್ಧಕ ಯಂತ್ರ ಹಾಗೂ ವಿದ್ಯುದ್ದೀಪದ ವ್ಯವಸ್ಥೆಯೂ ಇತ್ತು.

ವಂದೇ ಮಾತರಂ ಪ್ರಾರ್ಥನೆಯೊಂದಿಗೆ ಬಹಿರಂಗ ಅಧಿವೇಶನವು ಮೊದಲಾಯಿತು, ಬೋರಕಟ್ಟೆ ಕಸ್ತೂರಬಾ ಕೇಂದ್ರದ ಮಕ್ಕಳು 'ಕನ್ನಡ ಬಾವುಟ'ವನ್ನು ಹಾಡಿದರು. ಬಾಲಕ ಸುಧಾಕರನಿಂದ ಸ್ವಾಗತಗೀತೆಯಾಗಲು ಶ್ರೀ ಕೆ. ಕೆ. ಶೆಟ್ಟರು ಪರಿಷತ್ತಿಗೆ ಯಶಸ್ಸು ಕೋರಿ ಬಂದ ಸಂದೇಶಗಳನ್ನು ಓದಿದರು.

ಬಳಿಕ ಶ್ರೀಯುತರು ಎಚ್. ನಾರಾಯಣ ರಾವ್ ಮತ್ತು ಕೆ. ಬಿ. ಜಿನರಾಜ ಹೆಗ್ಗಡೆ ಇವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು.

ಶ್ರೀಮಾನ್ ನೆಸ್ವಿಯವರು ತಮ್ಮ ಮೊದಲ ಭಾಷಣದಲ್ಲಿ ಕಾಂಗ್ರೆಸಿಗರು ಅಧಿಕಾರ ಲಾಲಸೆಗೆ ಬಲಿಬೀಳದೆ, ವಿರೋಧಕ ಶಕ್ತಿಗಳಿಂದ ಉತ್ಸಾಹಗೊಂಡು, ರಚನಾತ್ಮಕ ಕಾರ್ಯದಿಂದ ರಾಷ್ಟ್ರನಿರ್ಮಾಣ ಮಾಡಬೇಕೆಂದರು. ಅಲ್ಲಿಗೆ ಅಂದಿನ ಕಾರ್ಯಕ್ರಮವು 'ಜನಗಣಮನ'ದೊಂದಿಗೆ ಕೊನೆಗೊಂಡಿತು. ರಾತ್ರಿ ಶ್ರೀ ಜಾರ್ಜ ಮತ್ತು ಪಾರ್ಟಿಯವರ ವಿವಿಧ ವಿನೋದಾವಳಿಗಳಾದುವು.

ಎರಡನೇ ದಿನದ ಕಾರ್ಯಕ್ರಮ.

ಮಳೆಯಿಂದಾಗಿ ಮರುದಿನ ಬೆಳಗ್ಗೆ ಬಹಿರಂಗ ಅಧಿವೇಶನವು ಶಾಲಾ ಮಂದಿರದಲ್ಲಿ ನಡೆಯಿತು. ಹದಿನಾರು ಗೊತ್ತುವಳಿಗಳು ಸ್ವೀಕೃತವಾದುವು. (ಅವನ್ನು ಬೇರೆ ಕಡೆಕೊಡಲಾಗಿದೆ) ಕೊನೆಯಲ್ಲಿ ಅಧ್ಯಕ್ಷರ ಉಪಸಂಹಾರ ಭಾಷಣವಾಯಿತು.

ಬಳಿಕ ರಾಜಕೀಯ ಸಂತ್ರಸ್ತರ ಪರಿಷತ್ತು ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ. ಎಚ್. ನಾರಾಯಣರಾಯರೂ, ಶ್ರೀ. ಕೆ. ಕೆ. ಶೆಟ್ಟರೂ ರಾಜಕೀಯ ಸಂತ್ರಸ್ತರಿಗೆ ಸಹಾಯ ನೀಡುವ ಸರಕಾರದ ಯೋಜನೆಯ ಬಿಕ್ಕಟ್ಟುಗಳನ್ನೂ ಆದ ಕಾರ್ಯಗಳನ್ನೂ ತನ್ನ ಧೋರಣೆಯನ್ನು ಸ್ಪಷ್ಟವಾದ ರೀತಿಯಲ್ಲಿ ಸರಕಾರವು ಜಾರಿಗೆ ತರುವಂತೆ ತಕ್ಕ ಶಿಬಂದಿ ಮತ್ತು ಅನುಕೂಲತೆಯನ್ನು ಸರಕಾರವು ಮಾಡಬೇಕೆಂಬುದೇ ಮುಂತಾದ ಠರಾವುಗಳಾದುವು.

ಆ ಮೇಲೆ ಶ್ರೀಮಾನ್ ಕೆ. ಎ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ರಚನಾತ್ಮಕ ಪರಿಷತ್ತು ಜರಗಿತು. ಅಧ್ಯಕ್ಷರ ಭಾಷಣವಾದ ಮೇಲೆ ಪರಿಷತ್ತು ಮುಂದುವರಿಯಿತು.

ಉಪಾಹಾರದ ಬಳಿಕ ಶ್ರೀಮಾನ್ ಎಂ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೃಷಿಕರ ಪರಿಷತ್ತು ಜರಗಿತು. ಶ್ರೀ ಬಿ. ಅನಂದ ರೈಗಳ ಸ್ವಾಗತ ಭಾಷಣವಾದ ಬಳಿಕ ಅಧ್ಯಕ್ಷರ ಭಾಷಣವಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮದ್ರಾಸ್ ಸರಕಾರವು ಈ ಜಿಲ್ಲೆಯ ಕುರಿತು ತೋರಿದ ಉದಾಸೀನಭಾವವನ್ನು ಚೆನ್ನಾಗಿ ವಿವರಿಸಿ ಜಿಲ್ಲೆಗೊಂದು ಕೃಷಿಕ ಸಂಘಟನೆ ಆಗತ್ಯವೆಂದರು. ಜಿಲ್ಲಾ ಕೃಷಿಕರ ಸಂಘದ ರಚನೆಯೂ ಆಯಿತು.

ರಾತ್ರಿ ವಿಧಾಯಕ ಕಾರ್ಯಕರ್ತರ ವಿಚಾರಗೋಷ್ಠಿಯು ಪುನಃ ನೆರೆದಾಗ ಶ್ರೀ ಕರಿಯಣ್ಣ ಶೆಟ್ಟಿ, ಬೋರಕಟ್ಟೆ ಕಸ್ತೂರಬಾ ಸೆಂಟರಿನ ಶ್ರೀಮತಿ ವಿಶಾರಾಬಾಯಿ ಮುಂತಾದವರು ಕೇಳಿದ ಪ್ರಶ್ನೆಗಳಿಗೆ ಅಧ್ಯಕ್ಷರು ತಕ್ಕ ಉತ್ತರವನ್ನಿತ್ತರು.

ಅವರು ತಮ್ಮ ಮಾತಿನಲ್ಲಿ ಕಾಂಗ್ರೆಸ್ಸಿಗರು ರಾಜಕೀಯ ಕಾರ್ಯವನ್ನೂ ರಚನಾತ್ಮಕ ಕಾರ್ಯವನ್ನೂ ಮಾಡುವುದು ಉಚಿತವೆಂದೂ, ಒಬ್ಬರಿಗೊಬ್ಬರು ಹೊಂದಿಕೊಂಡಿರುವುದು ತಕ್ಕುದೆಂದೂ ತಿಳಿಸಿದರು. ರಚನಾತ್ಮಕ ಕಾರ್ಯಕರ್ತರೆಂದು ಹೇಳಿಸಿಕೊಳ್ಳುವವರು ಮಾತ್ರ ಅದನ್ನೇ ಮಾಡಿದರೆ ಯೋಗ್ಯವೆಂದರು. ಅನೇಕ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವಿತ್ತರು.

ಬಳಿಕ ಪರಿಷತ್ತಿನ ಅಧ್ಯಕ್ಷರಿಗೂ ಇತರ ಅಧ್ಯಕ್ಷರುಗಳಿಗೂ, ಪರಿಷತ್ತಿನ ಯಶಸ್ಸಿಗೆ ಕಾರಣರಾದ ಎಲ್ಲಾ ಕೆಲಸಗಾರರಿಗೂ ಗೆಳೆಯರಿಗೂ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಉಪೇಂದ್ರ ನಾಯ್ಕರು ತಮ್ಮ ಅಭಿನಂದನೆ ಸಲ್ಲಿಸಿದರು.

ಕೊನೆಯಲ್ಲಿ ಕುಸ್ತಿ, ಕತ್ತಿ ಆಟಗಳೇ ಮುಂತಾದ ವಿನೋದಗಳೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯವಾಯಿತು.

ಸೋಮೇಶ್ವರ: ಮೈಸೂರಿನಿಂದ ಸೋಮೇಶ್ವರ ಮಾರ್ಗವಾಗಿ ಮುಂದೆ ಹೋಗುವ ಪ್ರಯಾಣಿಕರನ್ನು ಸೋಮೇಶ್ವರ ಸಮೀಪ ಕಾಡಿನ ಬಳಿ ಇತ್ತೀಚೆಗೆ ಕೆಲಕಾಲದಿಂದ ಯಾರೋ ದುರಾತ್ಮನೊಬ್ಬನು ಹೆದರಿಸಿ ಅವರೊಡನೆ ಇದ್ದ ಹಣ ಯಾ ಬೆಲೆಬಾಳುವ ಸಾಮಾನುಗಳನ್ನು ಕಸಕೊಳ್ಳುವ ಪ್ರಯತ್ನಗಳನ್ನು ನಡಿಸುತ್ತಾನೆಎಂಬ ಜನರ ಕೂಗು ಕೇಳಿಬರುತ್ತಿದೆ. ಇದರಲ್ಲಿ ಸತ್ಯಾಂಶವಿದ್ದರೆ ಸಂಬಂಧಪಟ್ಟವರು ಇದನ್ನು ಪತ್ತೆಹಚ್ಚುವರೆಂದು ಆಶಿಸಲಾಗಿದೆ.

ಕುಂಬಳೆ ಮದ್ರಾಸು ಸರಕಾರದ ಕುಷ್ಠರೋಗ ನಿವಾರಣಾ ಕಮಿಟಿಯ ಕಾರ್ಯದರ್ಶಿ ಶ್ರೀ ಜಗದೀಶನವರು ತಾ 17ರಲ್ಲಿ ಕುಂಬಳೆಗೆ ಬಂದು ಬದಿಯಡ್ಕದಲ್ಲಿರುವ ರೋಗಿಗಳನ್ನು ಸಂದರ್ಶಿಸಿದರು. ಈ ರೋಗವು ಬಾರದಂತೆ ಜನರು ಕೈಕೊಳ್ಳಬೇಕಾದ ಕರ್ತವ್ಯಗಳನ್ನು ಸಹ ಸೂಚಿಸಿದರು.

ಮುದ್ರಾಡಿ ಕಸ್ತೂರಿ ಬಾ ಸ್ಮಾರಕ ವಿದ್ಯಾಲಯದ ವರ್ಧಂತಿಯೂ ಹೊಸ ಕಟ್ಟಡದ ಉದ್ಘಾಟನೆಯೂ ತಾ 25-5-49ರಲ್ಲಿ ಜರಗಿತು. ಬೆಳಿಗ್ಗೆ ಧ್ವಜವಂದನೆ ಮತ್ತು ಮಕ್ಕಳ ಆಟದ ಸ್ಪರ್ಧೆಗಳು ಜರಗಿದುವು. ಸಾಯಂಕಾಲ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ ಇವರಿಂದ ಕಟ್ಟಡದ ಉದ್ಘಾಟನೆ ಮಾಡಲ್ಪಟ್ಟಿತು. ಶ್ರೀ ಎಂ. ಡಿ. ಅಧಿಕಾರಿಗಳು ಸ್ವಾಗತ ಭಾಷಣಮಾಡಿ ಶಾಲೆಯ ಕಟ್ಟಡ ಹಾಗೂ ಇತರ ಆರ್ಥಿಕ ಸಹಾಯವನ್ನಿತ್ತ ಸಂಸ್ಥಾಪಕರಾದ ಮುದ್ರಾಡಿ ಶ್ರೀ. ನಾಗರಾಜ ಅಧಿಕಾರಿಗಳ ಉದಾರತೆಯನ್ನು ಶ್ಲಾಘಿಸಿದರು. ಅಧ್ಯಕ್ಷರು ಕಸ್ತೂರಿ ಬಾರವರ ಅಮೋಘ ಜೀವನ ವಿಶಿಷ್ಟತೆಯನ್ನು ವಿವರಿಸಿ, ಭಾಷಣಮಾಡಿದರು. ಶ್ರೀ ಗಣಪಯ್ಯ ಶೆಟ್ಟಿ ಮತ್ತು ಶ್ರೀ. ಕಾರ್ಕಳ ನರಸಿಂಹ ಪ್ರಭು ಇವರು ಶಾಲೆಯ ಅಭಿವೃದ್ಧಿಯ ಕುರಿತು ಮಾತನಾಡಿದರು. ರಾತ್ರಿ ಮುದ್ರಾಡಿ ಯಕ್ಷಗಾನ ಕೂಟದವರಿಂದ ಯಕ್ಷಗಾನ ನಡೆಯಿತು

ನೋಟಿಸು

ಕಾಸರಗೋಡು

ಡಿ. ಮು. ಕೋರ್ಟಿನಲ್ಲಿ.

O. S. No 726/1943
R. E. P. No. 1013/1948
R. E. A. No. 393/1949

ನಾರಾಯಣ ಭಟ್ಟ —ಅರ್ಜಿದಾರ

ಮತ್ತು

ಅಚ್ಯುತ ಭಟ್ಟ ಕೂಡಾ-ರ್ಸ್ಪಾಂಡೆಂಟರು.

ಇವರೊಳಗೆ

ಸದ್ರಿ ವ್ಯವಹಾರದ ಅರ್ಜಿದಾರನು ಹಾಜರುಪಡಿಸಿದ ಯೇಲಂ ಇಸ್ತಿಹಾರು ಮಂಜೂರು ಮಾಡುವುದರ ಕುರಿತು-ರ್ಸ್ಪಾಂಡೆಂಟರಿಗೆ ನೋಟಿಸು ಮಾಡಿಸಿದಲ್ಲಿ 4ನೇ ರ್ಸ್ಪಾಂಡೆಂಟ ಸುಬ್ರಹ್ಮಣ್ಯ ಭಟ್ಟನು ನೋಟಿಸು ಜಾರಿಗೆ ಸಿಕ್ಕದೆ ಇರುವದರಿಂದ ತನ್ನಿಯು ತಾ. 14-6-1949ಕ್ಕೆ ಯಿಟ್ಟದುದಾಗಿಯೂ ಆ ದಿವಸ ಉದಹರಿಸದಿದ್ದರೆ ಯೆಕ್ಸಪಾರ್ಟಿಯಾಗಿ ತೀರ್ಮಾನಿಸುವದಾದೀತೆಂಬ ಸಂಗತಿ ಯೀಮೂಲಕ ತಿಳಿಸುವದಾಗುತ್ತದೆ.

ಕೆ. ಆರ್. ದಂಡಿಲ್ಲಾಯ
ಅರ್ಜಿದಾರನಕಡೆ ವಕೀಲ್

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ
S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ,

ಸೆಕ್ರೆಟರಿ
ತಾರಾನಾಥ ವಿದ್ಯಾಪೀಠ ಬಳ್ಳಾರಿ.
P. O. ಸಂಗನಕಲ್ ಬಳ್ಳಾರಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಶ್ವೇತ ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಪಾಣೆಮಂಗಳೂರು ರಾಜಕೀಯ ಪರಿಷತ್ತಿನ ನಿರ್ಣಯಗಳು

ಪಾಣೆಮಂಗಳೂರಿನಲ್ಲಿ ಕಳೆದ ತಾ 22, 23 ರಲ್ಲಿ ಜರಗಿದ ಜಿಲ್ಲಾ ರಾಜಕೀಯ ಪರಿಷತ್ತಿನಲ್ಲಿ ಸುಮಾರು ಹದಿನಾರು ನಿರ್ಣಯಗಳಂಗಿವೆ. ಅವುಗಳಲ್ಲಿ ಪ್ರಾಮುಖ್ಯವಾದವುಗಳನ್ನು ಇಲ್ಲಿ ವಿವರವಾಗಿ ಕೊಡಲಾಗಿದೆ, ನಿರ್ಣಯಗಳೆಲ್ಲವೂ ಅವಿರೋಧವಾಗಿ ಸ್ವೀಕರಿಸಲ್ಪಟ್ಟವು. ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದ ನಿರ್ಣಯದ ಕುರಿತು ಸುದೀರ್ಘ ಚರ್ಚೆಯಿತ್ತು.

ಕರ್ನಾಟಕ ಏಕೀಕರಣ

ವಿಷಯ ನಿಯಾಮಕ ಸಮಿತಿಯಲ್ಲಿ ಸ್ವೀಕೃತವಾದ ಕರ್ನಾಟಕ ಏಕೀಕರಣದ ಕುರಿತಾದ ಗೊತ್ತುವಳಿಯು ಹೀಗಿದೆ–"ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಕಾಂಗ್ರೆಸು ಮನ್ನಿಸಿ ಅಂಗೀಕರಿಸಿರುವುದರಿಂದ ಮತ್ತು ಆ ರೀತಿ ಪ್ರಾಂತ ರಚನೆಯಾಗುವುದರಿಂದಲೇ ಪ್ರಾಂತದ ಮತ್ತು ದೇಶದ ಅಭಿವೃದ್ಧಿಗೆ ಅನುಕೂಲವಿರುವುದರಿಂದ ಆಂಧ್ರ ಪ್ರಾಂತದೊಡನೆಯೇ ಕರ್ನಾಟಕ ಪ್ರಾಂತವನ್ನು ರಚಿಸುವುದು ಅಗತ್ಯವೆಂದು ಈ ಪರಿಷತ್ತು ನಿರ್ಧರಿಸುತ್ತದೆ, ವಿಶಾಲ ಕರ್ನಾಟಕದ ಪ್ರಗತಿ, ಅಭಿವೃದ್ಧಿ ಮತ್ತು ಅಭ್ಯುದಯದ ದೃಷ್ಟಿಯಿಂದ ಮೈಸೂರು ಸಹಿತವಾದ ಕರ್ನಾಟಕ ಪ್ರಾಂತ ರಚನೆ ಅಗತ್ಯವೆಂದು ಈ ಪರಿಷತ್ತು ನಿರ್ಧರಿಸುತ್ತದೆ.

"ಮೈಸೂರನ್ನು ಆದಷ್ಟು ತ್ವರೆಯಿಂದ ಇತರ ಯೂನಿಯನ್ ಕರ್ನಾಟಕ ಪ್ರದೇಶಗಳೊಂದಿಗೆ ಒಂದು ಗೂಡಿಸಿ ಕೂಡಲೇ ಕರ್ನಾಟಕ ಪ್ರಾಂತ ರಚನೆಯನ್ನು ಮಾಡುವರೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕಾಗಿ ಕೇಂದ್ರ ಸರಕಾರವನ್ನು ಈ ಪರಿಷತ್ತು ಒತ್ತಾಯಪಡಿಸುತ್ತದೆ.

"ಕರ್ನಾಟಕ ಏಕೀಕರಣ ಚಳವಳಿಯನ್ನು ನಡೆಸುವ ಭರದಲ್ಲಿ ಕಾಂಗ್ರೆಸಿಗರು ಕೆಲವರು ಶಿಸ್ತು ಮತ್ತು ಸಂಯಮವಿಲ್ಲದೆ ಪಂ. ನೆಹರ‍್ರು, ರಾಷ್ಟ್ರಪತಿ ಪಟ್ಟಾಭಿಯವರೇ ಮೊದಲಾದ ಮಾನ್ಯ ಮುಖಂಡರನ್ನು ಟೀಕಿಸುವುದು ಮಾತ್ರವಲ್ಲದೆ ಅಸಹಕಾರ, ಸತ್ಯಾಗ್ರಹವೇ ಮೊದಲಾದ ಉಗ್ರಕಾರ್ಯ ಕೈಕೊಳ್ಳುವರೆ ಬೆದರಿಕೆ ಹಾಕುವುದು ಅನುಚಿತವೂ ಅವಿವೇಕವೂ ಇರುವುದೆಂದು ಈ ಪರಿಷತ್ತು ಎಚ್ಚರಿಸುತ್ತದೆ"

ನಿರ್ಣಯದ ಕೊನೆಯ ಭಾಗಕ್ಕೆ ವಿಷಯ ನಿಯಾಮಕ ಸಮಿತಿಯಲ್ಲಿ ಕೆಲವರ ವಿರೋಧವಿದ್ದರೂ ಅದು ಸ್ವೀಕೃತವಾಯಿತು. ಆದರೆ ಬಹಿರಂಗ ಅಧಿವೇಶನದಲ್ಲಿ ಕೊನೆಯ ಭಾಗಕ್ಕೆ ತೀವ್ರ ವಿರೋಧ ಕಂಡು ಬಂತು ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆಯವರು 'ಆಂಧ್ರ ಪ್ರಾಂತದೊಡನೆ' ಎಂಬಲ್ಲಿ 'ಹೊಸ ಘಟನೆ ಮತ್ತು ಮುಂದಿನ ಚುನಾವಣೆ ಒಡನೆಯೇ' ಎಂಬುದಾಗಿ ಹಾಕಬೇಕೆಂದೂ ಗೊತ್ತುವಳಿಯ ಕೊನೆಯ ಭಾಗವನ್ನು ತೆಗೆದು ಹಾಕಿ, 'ಮೈಸೂರು ಸಹಿತ ಅಖಂಡ ಕರ್ನಾಟಕ ನಿರ್ಮಾಣ ಮಾಡುವುದು ಯೋಗ್ಯವೂ ಅನಿವಾರ್ಯವೂ ಇರುವುದರಿಂದ ಮೈಸೂರು ಪ್ರದೇಶದ ಮುಖಂಡರು ಸೂಕ್ತ ಕಾರ್ಯಕ್ರಮವನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕಾಗಿ ಈ ಪರಿಷತ್ತು ಒತ್ತಾಯಿಸುತ್ತದೆ' ಎಂಬ ಭಾಗವನ್ನು ಸೇರಿಸಬೇಕೆಂದೂ ತಿದ್ದುಪಡಿಗಳನ್ನು ಮಂಡಿಸಿದರು. ತಿದ್ದುಪಡಿಗಳಲ್ಲಿ ಗೊತ್ತುವಳಿಯ ಕೊನೆಯ ಅಂಶವನ್ನು ತ್ಯಜಿಸುವ ಕುರಿತಾದ ಹೊರತು ಉಳಿದವುಗಳು ವಿರೋಧವಿಲ್ಲದೆ ಸ್ವೀಕರಿಸಲ್ಪಟ್ಟವು. ಆದರೆ ಕೊನೆಯ ಭಾಗವನ್ನು ತೆಗೆಯಬೇಕೆಂಬ ತಿದ್ದುಪಡಿಗೆ ಮೂಲ ಗೊತ್ತುವಳಿಯ ಮಂಡಕರು ಮತ್ತು ಅನುಮೋದಕರು [ಶ್ರೀ. ಎಚ್. ನಾರಾಯಣರಾವ್ ಮತ್ತು ಶ್ರೀ ಕೆ. ಕೆ. ಶೆಟ್ಟರು] ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಇಷ್ಟರಲ್ಲಿ ಪ್ರತಿನಿಧಿಗಳಲ್ಲಿಯೂ ಹಲವರು ಮೂಲ ಗೊತ್ತುವಳಿಯ ಕೊನೆಯ ಭಾಗವನ್ನು ತೆಗೆಯಬೇಕೆಂದೂ, ಕಾಂಗ್ರೆಸಿಗರಾರೂ ಈ ವರೆಗೆ ಅಂತಹ ತಪ್ಪನ್ನು ಮಾಡದೆ ಗೊತ್ತುವಳಿ ಸ್ವೀಕರಿಸಿದರೆ ತಮ್ಮದೇ ತಪ್ಪಾಗುವುದೆಂದೂ ಸ್ಪಷ್ಟವಾಗಿ ಹೇಳಿದರು. ಪರಿಸ್ಥಿತಿಯು ಸ್ವಲ್ಪ ಗಹನತರವಾಗುವ ಸಂದರ್ಭವಿದ್ದುದರಿಂದ ಅಧ್ಯಕ್ಷರಾದ ಶ್ರೀ ನೆಸ್ವಿಯವರು ಎಲ್ಲರನ್ನೂ ಸಮಾಧಾನ ಪಡಿಸಲಾಗಿ, ಶ್ರೀ ಕೆ. ಕೆ. ಶೆಟ್ಟರು ಮೂಲ ಗೊತ್ತುವಳಿಯ ಕೊನೆಯ ಭಾಗವನ್ನು ತೆಗೆದು ಹಾಕಿ ಅದರ ಸ್ಥಾನದಲ್ಲಿ ಈ ಕೆಳಗಿನ ಅಂಶವನ್ನು ಸೇರಿಸಬೇಕೆಂಬ ತಿದ್ದುಪಡಿ ತಂದರು.

"ಇದೇ ತಾ. ೮ರ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಮಹಾ ಸಭೆಯಲ್ಲಿ ಚರ್ಚಿಸಲ್ಪಟ್ಟು ಇತ್ಯರ್ಥಕ್ಕೆ ಬಾಕಿಯಿರುವ ಕರ್ನಾಟಕ ಪ್ರಾಂತ ರಚನೆಯ ಕುರಿತಾದ ಠರಾವನ್ನು ಸಮರ್ಥಿಸುತ್ತ ಆ ಬಗ್ಗೆ ಸತ್ಯಾಗ್ರಹ ಮತ್ತು ಅಸಹಕಾರ ಮಾಡುವ ಉಗ್ರ ಕಾರ್ಯವನ್ನು ಅಖೈರಿ ಹೆಜ್ಜೆಯಾಗಿ ಸ್ವೀಕರಿಸಬೇಕೆ ಹೊರತು ಆ ಮೊದಲು ಆ ಕುರಿತು ಪಂ. ನೆಹರುಗಳೇ ಮೊದಲಾದ ಮಾನ್ಯ ಮುಖಂಡರನ್ನು ನಿಷೇಧಿಸಿ ಅಸಹಕಾರ, ಸತ್ಯಾಗ್ರಹಗಳ ಮಾತೆತ್ತಿ ವಾತಾವರಣವನ್ನು ಕಲುಷಿತಗೊಳಿಸುವುದು ಅಯುಕ್ತವೆಂದು ಈ ಪರಿಷತ್ತು ಅಭಿಪ್ರಾಯ ಪಡುತ್ತದೆ."

ಈ ತಿದ್ದುಪಡಿಯು ಯಾರ ವಿರೋಧವೂ ಇಲ್ಲದೆ ಸ್ವೀಕೃತವಾಯಿತು.

ಕರ್ನಾಟಕ ವಿಶ್ವವಿದ್ಯಾನಿಲಯ

ಕರ್ನಾಟಕ ವಿಶ್ವವಿದ್ಯಾನಿಲಯದ ಕುರಿತಾದ ಈ ನಿರ್ಣಯವು ಶ್ರೀ ಜಿನರಾಜ ಹೆಗ್ಗಡೆಯವರಿಂದ ಮಂಡಿಸಲ್ಪಟ್ಟು ಅವಿರೋಧವಾಗಿ ಸ್ವೀಕೃತವಾಯಿತು. "ಮುಂಬಯಿ ಎಸೆಂಬ್ಲಿ ಮತ್ತು ಕೌನ್ಸಿಲಿನಲ್ಲಿ ಈಗ ಪಾಸಾದ ವಿಶ್ವವಿದ್ಯಾನಿಲಯದ ಆಕ್ಟನ್ನು ಈ ಪರಿಷತ್ತು ಸ್ವಾಗತಿಸುತ್ತದೆ. ಬೇಗನೆ ಈ ವಿಶ್ವವಿದ್ಯಾನಿಲಯವು ಸ್ಥಾಪಿಸಲ್ಪಡುವುದು ನಿಶ್ಚಿತವಾಗಿರುವುದರಿಂದ ಮದ್ರಾಸು ಸರಕಾರದವರು ದ. ಕನ್ನಡ, ನೀಲಗಿರಿ, ಬಳ್ಳಾರಿ ಜಿಲ್ಲೆಗಳನ್ನೂ ಸೇಲಂ, ಕೊಯಮುತ್ತೂರುಗಳ ಕನ್ನಡ ಭಾಗಗಳನ್ನೂ ಈ ವಿಶ್ವವಿದ್ಯಾನಿಲಯದ ಆಡಳಿತೆಗೊಳಪಡಿಸುವ ಅನುಕೂಲಪಡಿಸಿ ಮದ್ರಾಸ್ ಕನ್ನಡ ಪ್ರಾಂತದ ಕಡೆಯಿಂದ ಆ ವಿದ್ಯಾನಿಲಯಕ್ಕೆ ಸಹಕಾರ ಮತ್ತು ಧನಸಹಾಯ ಕೊಡುವುದಲ್ಲದೆ ಕಾಲೇಜುಗಳು ಇಲ್ಲದ ಮದ್ರಾಸು ಕನ್ನಡ ಪ್ರದೇಶಗಳಲ್ಲಿ ಬೇಗನೇ ಅಗತ್ಯವುಳ್ಳ ಕಾಲೇಜುಗಳನ್ನು ಸ್ಥಾಪಿಸಬೇಕೆಂದು ಈ ಪರಿಷತ್ತು ಒತ್ತಾಯಪಡಿಸುತ್ತದೆ."

ಒಕ್ಕಲು ಹಿತ ಮಸೂದೆ

"ಒಕ್ಕಲುಗಳ ಮತ್ತು ಕೃಷಿಕರ ಪರಿಸ್ಥಿತಿಯನ್ನು ಸುಧಾರಿಸಿ ಭೂಮಿಯಲ್ಲಿ ಅವರಿಗೇನೆ ಪ್ರಥಮ ಹಕ್ಕನ್ನೀಯುವ ಕಾಂಗ್ರೆಸ್ ಚುನಾವಣಾ ಘೋಷಣೆಯನ್ನು ಜಾರಿಗೆತರುವ ಮತ್ತು ಪ್ರಾಂತದ ರೈತಾಪಿ ಜನರ ಸಂಕಷ್ಟಗಳನ್ನು ನಿವಾರಿಸುವರೆ ವಿಚಾರಣೆ ನಡೆಸುವ ಕುರಿತು ಮದ್ರಾಸು ಸರಕಾರವು ಕಾನೂನು ಮಾಡಲಿರುವುದೆಂದು ಕೊಟ್ಟಿರುವ ವಾಗ್ದಾನವು ನ್ಯಾಯವಾದುದಾದರೂ ಅದು ಈ ವರೆಗೂ ಕಾರ್ಯರೂಪಕ್ಕೆ ಬರುವ ಚಿಹ್ನೆಯೇ ತೋರದಿರುವುದು ಅತ್ಯಂತ ನಿರಾಶಾಜನಕವಿದೆ. ಚಾಲಗೇಣಿ ಒಕ್ಕಲುಗಳನ್ನು ಮನಸೋಚ್ಛೆ ಒಕ್ಕಲೆಬ್ಬಿಸದಂತೆ ತಡೆಹಾಕುವ ತಾತ್ಕಾಲಿಕ ಸ್ಟೇ ಕಾನೂನನ್ನಾದರೂ ಮದ್ರಾಸು ಸರಕಾರ ಕೈಕೊಳ್ಳದಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲುಗಳಲ್ಲಿ ತೀವ್ರ ಅತೃಪ್ತಿಯೂ ಜುಗುಪ್ಸೆಯೂ ಉಂಟಾಗಿರುತ್ತದೆ. ಪ್ರಕಾಶಂ ಮಂತ್ರಿಮಂಡಲವು ಇಂತಹ ಸ್ಟೇ ಮಸೂದೆಯೊಂದನ್ನು ತಯಾರಿಸಿರುವುದೆಂದು ತಿಳಿದುಬರುತ್ತದಾದರೂ ಅನಂತರದ ಮಂತ್ರಿ ಮಂಡಲಗಳು ಅದನ್ನು ಮೂಲೆಗೊತ್ತಿರುವುದು ತೀವ್ರ ವಿಷಾದಕರವಿದೆ. ಈ ಸಂಬಂಧವಾಗಿ ಶ್ರೀ ಕೆ ಆರ್. ಕಾರಂತರು ಖಾಸಗಿಯಾಗಿ ತಂದಿರುವ ಮಸೂದೆಯೂ ಹಿಂದೆ ಹಾಕಲ್ಪಟ್ಟದೆಯೆಂಬುದು ಮತ್ತಷ್ಟು ಶೋಚನೀಯವಿದೆ. ಆದುದರಿಂದ ಇನ್ನಾದರೂ ಮದ್ರಾಸು ಮಂತ್ರಿಮಂಡಲ ಮತ್ತು ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಇಂತಹ ಮಸೂದೆಯನ್ನು ಜಾರಿಗೆ ತರಬೇಕೆಂದು ಈ ಪರಿಷತ್ತು ಆಗ್ರಹ ಪೂರ್ವಕವಾಗಿ ಕೇಳಿಕೊಳ್ಳುತ್ತದೆ.

"ನಮ್ಮ ನೆರೆಯ ನಾಡಾದ ಮಲಬಾರಿನಲ್ಲಿ ಒಕ್ಕಲು ಹಿತ ಮಸೂದೆಯು ಹಲವು ವರ್ಷಗಳ ಹಿಂದೆ ಬಂದಿದ್ದು ಅದನ್ನು ತಿದ್ದುಪಡಿ ಕೂಡ ಮಾಡಿ ಈಗ ಜಾರಿಗೆ ತಂದಿರುವುದರಿಂದ ಜಿಲ್ಲೆಯಲ್ಲಿಯೂ ಅಂತಹ ಮಸೂದೆಯನ್ನು ಕೂಡಲೇ ಜಾರಿಗೆ ತರುವಂತೆ ತಮ್ಮಿಂದಾದ ಪ್ರಯತ್ನವನ್ನು ನಮ್ಮ ಜಿಲ್ಲೆಯ ಶಾಸನಸಭಾ ಸದಸ್ಯರು ಮಾಡಬೇಕಾಗಿ ಈ ಪರಿಷತ್ತು ಅವರನ್ನು ಒತ್ತಾಯ ಪಡಿಸುತ್ತದೆ."

ಆಹಾರ ಸಂಗ್ರಹಣ ಪದ್ಧತಿ.

"ಆಹಾರ ಸಂಗ್ರಹದ ವಿಚಾರದಲ್ಲಿ ಜಿಲ್ಲೆಯಲ್ಲಿ ಈಗ ದವಸ ಧಾನ್ಯಗಳ ಉಳಿತಾಯದ ಅಂದಾಜು ಮಾಡುವ ಕ್ರಮವು ಕೇವಲ ಅನ್ಯಾಯದ್ದಿದ್ದು ಕೃಷಿಕರಿಗೆ ಇದರಿಂದ ಬಹಳ ತೊಂದರೆ ಮತ್ತು ಪೀಡೆಗೆ ಆಸ್ಪದವಾಗಿರುವುದು. ಈ ರೀತಿಯ ಆಹಾರ ಸಂಗ್ರಹದ ಕ್ರಮದಿಂದಾಗಿ ಆ ಖಾತೆಯ ನೌಕರರಲ್ಲಿ ಹೆಚ್ಚಿನ ಲಂಚ ವಂಚನೆಗೆ ಆಸ್ಪದವಾಗಿರುವುದಲ್ಲದೆ ಕೆಲವರು ಅಪ್ರತ್ಯಕ್ಷವಾಗಿ ತಮ್ಮ ಇಚ್ಛಾನುಸಾರ ಭತ್ತ ಮತ್ತು ಅಕ್ಕಿಯನ್ನು ವಿಪರೀತ ಬೆಲೆಗೆ ಮಾರಿ ಕಳ್ಳಸಂತೆ ಮಾಡುವಂತಾಗಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಭತ್ತದ ಉತ್ಪಾದನೆಯು ಇಳಿಮುಖವಾಗುತ್ತಿದೆ. ಸಾಕಷ್ಟು ಉಣ್ಣಲು ಆಹಾರವಿಲ್ಲದೆ ಬಡ ಕೃಷಿಕರ ಮತ್ತು ಕೃಷಿ ಕೆಲಸಗಾರರ ಆರೋಗ್ಯವು ಕೆಟ್ಟು ಶಕ್ತಿ ಕ್ಷಯವಾಗುತ್ತಿದೆ. ಈ ಆಹಾರ ಸಂಗ್ರಹ ಪದ್ಧತಿಯಿಂದಾಗಿ ಜಿಲ್ಲೆಯ ಜನತೆಯು ತೀವ್ರ ಜಿಗುಪ್ಸೆಗೊಳ್ಳುವಂತಾಗಿದೆ.

"ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗಾದರೂ ಈ ಅನ್ಯಾಯಕರ ಪದ್ಧತಿಯನ್ನು ತೆಗೆದು ಹಾಕಿ ನೆರೆಯ ಕೊಡಗಿನಲ್ಲಿ ಅನುಸರಿಸುವ ಆಹಾರ ಸಂಗ್ರಹ ಪದ್ಧತಿಯನ್ನು ಅನುಸರಿಸುವುದು ಉಚಿತವೆಂದು ಈ ಪರಿಷತ್ತು ಅಭಿಪ್ರಾಯ ಪಡುತ್ತದೆ.

"ಈ ಪದ್ಧತಿಯು ಮೇರೆಗೆ ಗ್ರಾಮದಿಂದ ಗ್ರಾಮಕ್ಕೆ, ತಾಲೂಕಿನಿಂದ ತಾಲೂಕಿಗೆ ದವಸ ಧಾನ್ಯ ಕಳುಹಿಸುವುದನ್ನು ಕಠಿನವಾಗಿ ನಿಯಂತ್ರಿಸಲಾಗುತ್ತದೆ. ಪರ್ಮಿಟ್ ಮೂಲಕ ಮಾತ್ರ ದವಸ ಧಾನ್ಯಗಳ ಚಲಾವಣೆ ನಡೆಯಬೇಕು ಬೇಸಾಯಗಾರರು ಉಳಿತಾಯವನ್ನೆಲ್ಲ ಸರಕಾರಕ್ಕೆ ಅಥವಾ ಅದರ ಅಧಿಕೃತ ಏಜಂಟರಿಗೆ ನಿಯಮಿತ ದರದಲ್ಲಿ ಮಾರತಕ್ಕದ್ದು.

"ಸರಕಾರವು ಈ ಆಹಾರ ಸಂಗ್ರಹ ಕ್ರಮವನ್ನು ಕೂಡಲೇ ಸ್ವೀಕರಿಸಿ ಅನುಸರಿಸುವುದಾಗಿ ಪ್ರಕಟಿಸಿದರೆ ಬರುವ ಮಳೆಗಾಲದಲ್ಲೇ ಭತ್ತದ ಬೆಳೆಯನ್ನು ಹೆಚ್ಚಿಸಲು ಪ್ರೋತ್ಸಾಹ ಕೊಟ್ಟಂತಾಗುವುದು ಎಂದು ಈ ಪರಿಷತ್ತು ಅಭಿಪ್ರಾಯಪಡುತ್ತದೆ.

"ಮೇಲಿನ ಠರಾವನ್ನು ಸರಕಾರಕ್ಕೆ ಎಷ್ಟಕ್ಕೂ ಅನುಸರಿಸುವುದು ಅಸಾಧ್ಯವಾದರೆ ಈಗಿನ ಆಹಾರ ಸಂಗ್ರಹದ ಪದ್ಧತಿಯಲ್ಲಿ ಈ ಕೆಳಗಿನ ಬದಲಾವಣೆಗಳನ್ನು ಅವಶ್ಯವಾಗಿ ಮಾಡಬೇಕಾಗಿ ಈ ಪರಿಷತ್ತು ಒತ್ತಾಯ ಪಡಿಸುತ್ತದೆ

"(೧) ಚಾಲಗೇಣಿ ಒಕ್ಕಲುಗಳಿಂದ ಗೇಣಿಯನ್ನೆಲ್ಲ ಉಳಿತಾಯವಾಗಿ ಸಂಗ್ರಹಿಸುವ ಈ ಜಿಲ್ಲೆಯ ವಿಶಿಷ್ಟವಾದ ಕ್ರಮವನ್ನು ಕೂಡಲೇ ರದ್ದುಪಡಿಸಬೇಕೆಂದು ಜಿಲ್ಲಾ ಆಹಾರ ಸಮಿತಿಯವರು ಇತ್ತಲಾಗಿ ಮಾಡಿದ ಠರಾವನ್ನು ಮದ್ರಾಸು ಸರಕಾರವು ಕೂಡಲೇ ಜಾರಿಗೆ ತರಬೇಕು. (೨) ಬೇಸಾಯಗಾರರ ಉಳಿತಾಯವನ್ನು ನಿರ್ಣಯಿಸುವರೆ ಪ್ರತಿಯೊಂದು ಫಿರ್ಕದ ಸಪ್ಲೈ ಆಫೀಸರರಿಗೆ ಸಲಹೆ ಕೊಡುವರೆ ಪ್ರತಿ ಫಿರ್ಕದಿಂದ ಒಬ್ಬ ಅನಧಿಕಾರಿಯನ್ನು ಆರಿಸಿ ಸಲಹಾ ಸಮಿತಿಯನ್ನು ರಚಿಸತಕ್ಕದ್ದು."

ಮೇಲಿನ ಎರಡು ಗೊತ್ತುವಳಿಗಳನ್ನು ಶ್ರೀ ಕೆ. ಆರ್. ಕಾರಂತರು ತಯಾರಿಸಿ ಕಳುಹಿಸಿದ್ದರು. ಅವರು, ಭಾಷಾವಾರು ಪ್ರಾಂತ ರಚನೆಯ ಕುರಿತಾದ ಕಾಂಗ್ರೆಸ್ ಶಿಷ್ಟಮಂಡಲದಲ್ಲಿ ಢಿಲ್ಲಿಗೆ ಹೋದುದರಿಂದ ಸಮ್ಮೇಲನದಲ್ಲಿ ಉಪಸ್ಥಿತರಿರಲಿಲ್ಲ.

ಪಂಚಾಯತ ಮಸೂದೆ.

"ಗ್ರಾಮ ರಾಜ್ಯವೇ ಸ್ವರಾಜ್ಯದ ನಿಜವಾದ ತಳಹದಿಯಾಗಿ ಈ ವರೆಗೆ ಕೇಂದ್ರೀಕೃತವಾಗಿ ನಡೆಸಲ್ಪಡುತ್ತಿದ್ದ ರಾಜ್ಯಭಾರವು ವಿಕೇಂದ್ರೀಕೃತವಾಗಿ ಅಧಿಕಾರವು ಹಳ್ಳಿಯ ಜನತೆಯ ಕೈವಶವಾಗಿ ಅವರು ಸ್ವಾವಲಂಬಿಗಳಾಗಿ ರಾಜ್ಯಭಾರದ ಮೂಲ ಜವಾಬ್ದಾರಿಯನ್ನು ಹೊತ್ತು ನಿರ್ವಹಿಸುವಂತೆ ವ್ಯವಸ್ಥೆ ಮಾಡುವುದು, ಗಾಂಧೀವಾದ ಮತ್ತು ವಿಧಾನವನ್ನು ಅನುಸರಿಸುವುದು ಕಾಂಗ್ರೆಸ್ ಸರಕಾರಗಳ ಮುಖ್ಯ ಕರ್ತವ್ಯವಿರುತ್ತದೆ. ಈ ದೃಷ್ಟಿಯಿಂದ ಮದ್ರಾಸು ಸರಕಾರವು ಈಗ ತಾನೆ ತಂದಿರುವ ಗ್ರಾಮ ಪಂಚಾಯತ ಮಸೂದೆಯನ್ನು ಈ ಪರಿಷತ್ತು ಸ್ವಾಗತಿಸುತ್ತದೆ ಮತ್ತು ಅದನ್ನು ಕೂಡಲೇ ಮಂಜೂರು ಮಾಡಿ ಜಾರಿಗೆ ತರಬೇಕೆಂದು ಒತ್ತಾಯಪಡಿಸುತ್ತದೆ."

ಇತರ ಗೊತ್ತುವಳಿಗಳು.

ಪಂಡಿತ ನೆಹರೂಗಳ ಅಂತರ ರಾಷ್ಟ್ರೀಯ ಧೋರಣೆಯನ್ನು ಪ್ರಶಂಸಿಸಿ ಅವರನ್ನು ಅಭಿನಂದಿಸುವ; ಸಂಸ್ಥಾನಗಳ ಕುರಿತು ಅತ್ಯಂತ ಯಶಸ್ವಿಯಾಗಿ ಕಾರ್ಯ ಸಾಗಿಸಿದ ಸರದಾರ ಪಟೇಲರನ್ನು ಅಭಿನಂದಿಸುವ; ವಿಶಾಲ ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದ ಮಂಗಳೂರೇ ಪ್ರಬುದ್ಧ ಬಂದರಾಗಬೇಕೆನ್ನುವ; ಕೇಂದ್ರ ಸರಕಾರದ ಹಿಂದೂ ಕೋಡು ಮಸೂದೆ ಮತ್ತು ಮದ್ರಾಸು ಸರಕಾರದ ಹಿಂದೂ ಧರ್ಮ ಸಂಸ್ಥೆಗಳ ಮಸೂದೆಯನ್ನು ಸ್ವಾಗತಿಸಿ, ಅವುಗಳನ್ನು ಬೇಗನೆ ಕಾಯಿದೆ ಮಾಡಬೇಕೆನ್ನುವ; ಮಂಗಳೂರು ಹಾಸನ, ಮಂಗಳೂರು–ಅರಸಾಲು ರೈಲ್ವೆಗಳನ್ನು ಶೀಘ್ರವಾಗಿ ರಚಿಸಬೇಕೆನ್ನುವ; ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಮುಖ್ಯ ರಸ್ತೆಗಳು ಹ್ಯಾವೇ ಖಾತೆಗೆ ಕೊಡಲ್ಪಟ್ಟ ಮೇಲೆ ಬಹಳ ಕಳತೆಯ ಸ್ಥಿತಿಗಿಳಿದಿರುವುದರಿಂದ ಅವುಗಳನ್ನು ಯಥಾವಕಾಶ ಜಿಲ್ಲಾ ಬೋರ್ಡು ಆಡಳಿತೆಗೊಪ್ಪಿಸಬೇಕು ಅಥವಾ ಈ ವಿಚಾರದಲ್ಲಿ ಅಗತ್ಯವುಳ್ಳ ನಿಗಾ ತೆಗೆದುಕೊಳ್ಳಬೇಕು ಎಂದು ಮದ್ರಾಸು ಸರಕಾರವನ್ನು ಕೇಳಿಕೊಳ್ಳುವ; ಸರಕಾರದ ಇಂದಿನ ರಿಸರ್ವ್ ಪ್ರೋಲೀಸ್ ಧೋರಣೆಯನ್ನು ಖಂಡಿಸಿ ಅದನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುವ; ಸ್ವತಂತ್ರ ಭಾರತದ ಸೇನೆಗೆ ತರುಣರು ಹೆಚ್ಚಾಗಿ ಸೇರಬೇಕೆಂದು ವಿನ್ನವಿಸುವ; ಮಂತ್ರಿ ಮಂಡಲ ಮತ್ತು ಕಾಂಗ್ರೆಸ್ ಕಮಿಟಿಗಳೊಳಗಿನ ಸಹಕಾರ ಸೌಜನ್ಯ ಬೆಳೆಯಬೇಕೆನ್ನುವ; ಮದ್ಯಪಾನ ನಿಷೇಧ ಕಾರ್ಯಕ್ರಮ ಮೂರು ತಿಂಗಳ ಸಂಕಷ್ಟಗಳ ಕುರಿತಾದ ನಿರ್ಣಯಗಳೂ ಅವಿರೋಧವಾಗಿ ಸ್ವೀಕರಿಸಲ್ಪಟ್ಟವು.

ಪ್ರ ಕ ಟ ಣೆ

ಶ್ರೀ ಭಗವತೀ ನೃತ್ಯ ಕಲಾಮಂದಿರ, ಮುಂಬಯಿ ೧೩: — ಇವರು ಶ್ರೀ ಆರ್. ಡಿ. ಕಾಮತ್‌ರವರಿಂದ ಬರೆಯಲ್ಪಟ್ಟ "ನಾರದ ವಿಲಾಸ" ಎಂಬ ಶಾಸ್ತ್ರೀಯ ಭರತನಾಟ್ಯದ ಅತ್ಯುತ್ತಮ ಪೌರಾಣಿಕ ಕನ್ನಡ ನಾಟಕವನ್ನು ಶೀಘ್ರದಲ್ಲಿಯೇ ಮುಂಬಯಿಯ ಕಲ್ಬಾದೇವಿ ರೋಡಿನಲ್ಲಿ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸಲಿರುವರು.

ನಾಡಿನ ಒಳ ನೋಟ

ಮುಂದಿನ ಮನೆಗಳು

ಲೇಖಕ. - ಡಿ'ಸೋಜ

ನಾಗರಿಕತೆಯು ಬೆಳೆದಂತೆ ಮನುಷ್ಯನ ಆಹಾರ, ಉಡುಗೆ ತೊಡುಗೆ, ಆಚಾರ ವಿಚಾರಗಳಲ್ಲಿ ಬದಲಾವಣೆಯಾಗುತ್ತಾ ಬಂತು. ಮೊದಲು ಆಹಾರದಿಂದಿಳಿದು ಉಡುಗೆಗಿಳಿಯುತ್ತಾ ಅವನ ಆಚಾರ ವಿಚಾರಗಳಿಗೆ ಬಂತು. ತರುವಾಯ ಅದು ಅವನನ್ನು ಮಳೆ ಬಿಸಿಲುಗಳಿಂದ, ಕಾಡುಮೃಗಗಳ ಬಾಧೆಯಿಂದ ರಕ್ಷಿಸುವಂತೆ, ಒಂದು ನಿಶ್ಚಿತ ಸ್ಥಳದಲ್ಲಿ ನೆಲೆಸಲ್ಲಿಸುವಂತೆ, ಒಂದು ರಕ್ಷಣಾ ಕೇಂದ್ರ ಬೇಕಾಗುವಂತೆ ಮಾಡಿತು. ಅದೇ ಮನೆ ಎಂದೆನಿಸಿಕೊಂಡಿದೆ.

ಇಂದಿನ ಮನೆಗಳನ್ನು ನೋಡಿದರೆ, ಪ್ರತ್ಯೇಕವಾಗಿ ಹಳ್ಳಿಗಳಲ್ಲಿ, ಅವು ಹಲವು ಶತಮಾನಗಳ ಹಿಂದಿನ ಮಾದರಿಯವುಗಳೇ ಆಗಿವೆ. ಅವುಗಳಲ್ಲಿ ಒಂದು ಚಾವಡಿ, ಒಂದು ಯಾ ಎರಡು ಕೋಣೆಗಳಿರುತ್ತವೆ. ಅವುಗಳ ಮಾಡು ಹೆಚ್ಚಾಗಿ ಹುಲ್ಲು ಯಾ ಬೈಹುಲ್ಲಿನದಾಗಿರುತ್ತದೆ. ಹೆಚ್ಚಿನ ಬಾಳ್ವಿಕೆಯು ಮತ್ತು ಉತ್ತಮ ಮರಮಟ್ಟು ಅವುಗಳಲ್ಲಿ ಬಹು ಅಪರೂಪ. ಅಪರೂಪವಾಗಿರುವ ಕಿಟಕಿಗಳು ಕಿಟಕಿಗಳಿಂದ ಸಿಗಬಹುದಾದ ಪ್ರಯೋಜನಗಳನ್ನು ಪಡೆಯಬಹುದೆಂಬಷ್ಟು ಯೋಗ್ಯವಾಗಿಲ್ಲ. ಬಹು ಕಾಲದಿಂದ ತಾಂಡವ ಆಡುತ್ತಿದ್ದ ಬಡತನವೂ, ನವೀನಕಾಲದ ಮನೆಗಳ ಸಂಪರ್ಕ ಹಾಗೂ ತಿಳುವಳಿಕೆ ಇಲ್ಲದಿರುವಿಕೆಯೂ, ಅಲ್ಲದೆ ಹೆಚ್ಚಿನವರಿಗೆ ಪ್ರಯಾಸಪಟ್ಟು ಮನೆಕಟ್ಟಿದಲ್ಲಿ ಶಾಶ್ವತವಾಗಿ ಉಳಕೊಂಡೇನೆಂಬ ಭರವಸೆ ಇಲ್ಲದಿರುವಿಕೆಯೂ ನಮ್ಮ ನಾಡಲ್ಲಿ ಯೋಗ್ಯ ಮನೆಗಳ ನಿರ್ಮಾಣಕ್ಕೆ ತಡೆತೊಡಕುಗಳಾಗಿವೆ.

ಬಡತನ ಎಷ್ಟರ ಮಟ್ಟಿಗೆ ಇದೆ ಎಂದರೆ ಕೆಲವು ಸಣ್ಣ ಮನೆಗಳಿಗೆ, ಅವನ್ನು ಕಟ್ಟುವಾಗ ಒಂದು [illegible] ದಿಂದನ್ನೂ ಮರದ ತುಂಡನ್ನೂ ಇಟ್ಟುಬಿಟ್ಟು ಗೋಡೆ ಎಬ್ಬಿಸಿದ ತರುವಾಯ ತೆಗೆದು ಬಿಡುತ್ತಾರೆ. ಅವೇ ಕಿಟಕಿಗಳು. ರಾತ್ರಿ ಒಂದಿಷ್ಟು ಹರಕು ವಸ್ತ್ರವನ್ನು ಆ ಕಿಟಕಿಗಳಿಗೆ ತುರುಕಿಬಿಡುತ್ತಾರೆ. ಇವೇ ಕಿಟಕಿಯ ಬಾಗಿಲುಗಳು.

ನಾಗರೀಕತೆಗೆ ಒಪ್ಪುವ ಮನೆಗಳ ವಿಷಯ ಸರಿಯಾದ ತಿಳುವಳಿಕೆ ಇಲ್ಲದಿರುವ ಕುರಿತು ಹೇಳುವುದಾದರೆ ಕೆಲವು ಮನೆಗಳ ಹಂಚಿನ ಮಾಡುಗಳು ಬಹು ತಗ್ಗಾಗಿದ್ದು, ಶಖೆಯನ್ನುಂಟುಮಾಡುವಂತೆಯೂ, ಆಕಾರವು ಸರಿಯಾಗಿಲ್ಲದೆ ಕೋಣೆಗಳೆಲ್ಲಾ ಯಾವ ಪ್ರಯೋಜನಕ್ಕೂ ಬಾರದಂತೆಯೂ ಇವೆ. ಇವುಗಳೆಲ್ಲಾ ಯೋಗ್ಯ ಮನೆಗಳನ್ನು ಕಟ್ಟುವಂತಹ ಸಾಮರ್ಥ್ಯ ಇರುವವರಲ್ಲೂ ಕಂಡುಬರುವ ದೋಷಗಳು.

ರೈತ ಮಜೂರರಲ್ಲಿ ಹೆಚ್ಚಿನವರಿಗೆ ಮನೆಯೊಂದನ್ನು ಶಾಶ್ವತವಾಗಿ ಉಳಕೊಳ್ಳುವ ಅಧಿಕಾರ ಇಲ್ಲದಿರುವುದೂ, ಅಜ್ಞಾನ ಹಾಗೂ ಯೋಗ್ಯ ಮನೆಗಳಿರಬೇಕೆಂಬ ಮಹತ್ವಾಕಾಂಕ್ಷೆ ಇಲ್ಲದಿರುವುದೂ ಪ್ರಾಮುಖ್ಯವಾಗಿದೆ.

ಒಂದು ದೇಶದ ಪ್ರಗತಿಯಲ್ಲಿ, ಆ ದೇಶದ ನಿವಾಸಿಗಳ ನೈತಿಕ, ಆರ್ಥಿಕ, ಸಾಮಾಜಿಕ ಉನ್ನತಿಯ ಬೆಳವಣಿಗೆಗಳಲ್ಲಿ ಮನೆಗಳಿಗೂ ಪ್ರಾಮುಖ್ಯ ಸ್ಥಾನವಿದೆ. ನಮ್ಮ ಮುಂದಿನ ಜನಾಂಗವಾದ ಮಕ್ಕಳು ಮೊದಲು ಬೆಳೆಯಬೇಕಾದುದು [illegible] ಬಾಲ್ಯಾವಸ್ಥೆಯು ಕಾಲಕಳೆಯುವುದು [illegible] ಪಡೆದುಕೊಳ್ಳುವುದು ಅಲ್ಲಿ. ಆದುದರಿಂದ ನಮ್ಮ ಪ್ರಗತಿಯಲ್ಲಿ ಮನೆಗಳಿಗೆ ಅಗ್ರಗಣ್ಯ ಸ್ಥಾನವಿದೆ.

ಮನೆಗಳನ್ನು ಕಟ್ಟುವ ಮೊದಲು ನಾವು ಒಂದೆರಡು ಅತಿ ಪ್ರಾಮುಖ್ಯ ವಿಷಯಗಳನ್ನು ಯೋಚಿಸಬೇಕಾಗಿದೆ. ಮೊದಲನೆಯದಾಗಿ ಮನೆಗಳನ್ನು ನಿರ್ಮಿಸುವ ವಾತಾವರಣವನ್ನು ಸರಿಯಾಗಿ ಪರಿಶೀಲಿಸಬೇಕು. ನೀರಿನ ಪೂರೈಕೆಯು ಅತ್ಯಗತ್ಯವಾದುದು. ಪ್ರಕೃತಿಯ ಆಗುಹೋಗುಗಳಿಂದ ತೊಂದರೆ ಹುಟ್ಟುವಂತಿರಬಾರದು.

ತನ್ನ ಆರ್ಥಿಕ ಮಟ್ಟವನ್ನು ನೋಡಬೇಕಾದುದು ಎರಡನೆಯದು. ಈ ಅತಿಪ್ರಸರಣದ ಕಾಲದಲ್ಲಿ ಒಂದು ಯೋಗ್ಯ ಮನೆಯು ಒಂದೆರಡು ಸಾವಿರ ರೂಪಾಯಿಗಳ ವ್ಯಯವನ್ನು ತಗಲಿಸುತ್ತದೆ. ಆದುದರಿಂದ ಈ ಸ್ಥಿತಿಯ ಕಾಲದಲ್ಲಿ ಮನೆ ಕಟ್ಟುವ ಯೋಜನಗಳನ್ನು (ಅನಿವಾರ್ಯ ಸಂದರ್ಭಗಳನ್ನು ಬಿಟ್ಟು) [illegible] ವರುಷಗಳಿಗೆ ಹಿಂದೆ ಹಾಕುವುದು ಮೇಲು.

ಮನೆಗಳ ಆಯಕಟ್ಟು ಹಾಗೂ ಆಕಾರವು ಯೋಗ್ಯವಿರಬೇಕು. ಕೆಲವು ಶ್ರೀಮಂತರ ಮನೆಗಳು ಕೂಡಾ ಉತ್ತಮ ಮಾದರಿಯವುಗಳಾಗಿಲ್ಲ. ಅವು ಅಗಲಕಿರಿದಾಗಿದ್ದು ಅವುಗಳ ಕೋಣೆಗಳು ದೀರ್ಘ ಆಯತಾಕಾರದ್ದಾಗಿಲ್ಲ. ಮಾಡುಗಳು ಕೂಡಾ ತಗ್ಗಾಗಿದ್ದು ಸೆಕೆಗಾಲದಲ್ಲಿ ಹಂಚುಗಳು ಕಡು ಸೆಕೆಯನ್ನುಂಟುಮಾಡುವಂತಿವೆ. ಕಿಟಕಿ ಬಾಗಿಲುಗಳು ವಿಶಾಲವಾಗಿರುವುದು ಇನ್ನೊಂದು ಸಂಗತಿಯಾಗಿದೆ. ಬಾಗಿಲುಗಳು ಒಬ್ಬ ಮನುಷ್ಯನಿಂದ 1½ ಅಡಿ ಎತ್ತರ ಇರುವುದು ಮೇಲು. ಕಿಟಕಿಗಳು, ಕೋಣೆಯೊಳಗೆ ನಿಂತ ಒಬ್ಬ ಮನುಷ್ಯನು ಹೊರಗಿನ ನೋಟವನ್ನು ನೋಡುವಲ್ಲಿ ಅವನ ಕಣ್ಣಿನ ದೃಷ್ಟಿಗೆ ಅಡ್ಡಮಾಡುವಂತೆ, ಅವುಗಳ ಮೇಲಿನ ಪಡಿಯು ಇರಬಾರದು. ಈ ವಿಷಯವು ಶಾಲಾ ಕಟ್ಟೋಣಗಳಿಗೂ ಪ್ರಥಮ [illegible].

ಭವಿಷತ್ಕಾಲದಲ್ಲಿ ನಮ್ಮ ಜನಾಂಗವು ಹಂಚಿನ ಮನೆಗಳನ್ನೇ ಅಪೇಕ್ಷಿಸುವದೆಂದು ನಂಬಿಕೆ. ಆ ಕಾಲದಲ್ಲಿ ಯೋಗ್ಯ ಮನೆಗಳನ್ನೇ ಕಟ್ಟಬೇಕಾದುದು. ಯಾಕೆಂದರೆ ಅವು ಕಾಯಂ ಇರುವಂತಹವು. ಮುಂದಿನ ಮನೆಗಳ ಮಾದರಿಗಳನ್ನು ಪರೀಕ್ಷಿಸುವಾಗ ಅವುಗಳಿಗೆ "ಪೋರ್ಟಿಕೊ" ಇರಬೇಕೆಂದೇ ತೋರುತ್ತದೆ. ಬಡವರು ಕೂಡಾ ಎದುರು ಒಂದು ಜಗುಲಿಯನ್ನು ಇಡುವುದು ಈಗಲೇ ಕಾಣಲಾರಂಭವಾಗಿದೆ.

ಈ ಪೋರ್ಟಿಕೊದ ಸರಿ ಎದುರಿಗೆ ಒಂದು ಬಾಗಿಲು, ಬಾಗಿಲಿನ ಇಕ್ಕಡೆಗಳಲ್ಲಿ ಎರಡು ಕಿಟಕಿಗಳು (3½ × 2 ಫೀಟು ಆಯತದ್ದು ಉತ್ತಮ.) ಇರುವುದು ಇನ್ನೊಂದು ವೈಶಿಷ್ಟ್ಯ. ಇವುಗಳ ತರುವಾಯ ಒಂದು ನಡುಕೋಣೆ(Parlour). ಮುಂದಿನ ಕಿಟಕಿಗಳಿಗೆ ಎದುರಾಗಿ ಹಿಂದಿನ ಗೋಡೆಯಲ್ಲಿ ಎರಡು ಕಿಟಕಿಗಳೂ ಇರುವುವು.

ಈ ನಡುಕೋಣೆಯ ಇಕ್ಕಡೆಗಳಲ್ಲೂ ಎರಡು ಕೋಣೆಗಳಿದ್ದು, ಅವುಗಳಿಗೆ ಪೋರ್ಟಿಕೊದಿಂದ ಹಾಗೂ ನಡುಕೋಣೆಯಿಂದ ಪ್ರವೇಶಿಸಲು ಬಾಗಿಲುಗಳಿರುವುವು.

ಪಂಚಾಂಗ



ಗೋಡೆಗಳನ್ನು ಚೆಚ್ಚಾಗಿ ಮಣ್ಣಿನಿಂದ ಇಡುವುದು ಈ ನಾಡಲ್ಲಿ ಖರ್ಚಿನ ದೃಷ್ಟಿಯಿಂದ ತುಂಬಾ ಹಿತವಾಗಿದೆ. ಬರೆ ಸುಣ್ಣದ ಗಾರೆ ಮಾಡುವುದಕ್ಕಿಂತ ಅದರೊಂದಿಗೆ ಹಳದಿ ನೀಲ ಮೊದಲಾದ ಬಣ್ಣಗಳನ್ನು ತೆಳ್ಳಗೆ ಮಿಶ್ರಮಾಡಬಹುದು. ಒಂದೊಂದು ಕೋಣೆಯ ಗೋಡೆಗಳಿಗೆ ಒಂದೊಂದು ತರದ ಬಣ್ಣಗಳನ್ನು ಕೊಡುವುದು ಕಲಾ ದೃಷ್ಟಿಯಿಂದ ಯೋಗ್ಯವಾಗಿದೆ.

ಹಂಚಿನ ಮಾಡುಗಳಾಗಿದ್ದಲ್ಲಿ ಆ ಮಾಡುಗಳು ಆದಷ್ಟು ಎತ್ತರವಾಗಿರುವುದು ಮೇಲು. ಯಾಕೆಂದರೆ ಸೆಕೆಗಾಲದಲ್ಲಿ ಹಂಚುಗಳು ಬಿಸಿಯಾಗಿ ಕೊಠಡಿಗಳನ್ನು ಸೆಕೆಯಿಂದ ತುಂಬುವುವು. ಈ ದೃಷ್ಟಿಯಿಂದ ಅಟ್ಟದ ಮೇಲೆ ಹಲಗೆಗಳನ್ನು ಹಾಸಿ ಮಣ್ಣು ಹಾಕುವುದು ತುಂಬಾ ಪ್ರಯೋಜನಕರ. ಉತ್ತಮವಾದ ಮಾಳಿಗೆಗಳನ್ನು ಕಟ್ಟುವುದು ಈಗಿನ ಕಾಲದಲ್ಲಿ ತುಂಬಾ ಕಷ್ಟಸಾಧ್ಯ. ಅವುಗಳು [illegible]ನಲ್ಲಿ ಅಷ್ಟು ಅಗತ್ಯದವೂ ಅಲ್ಲ. ಅದೇ ಮೌಲ್ಯದಿಂದ ಒಳಗಿನ ಕೋಣೆಗಳನ್ನೇ ವಿಶಾಲಮಾಡಿ ಕಟ್ಟಬಹುದು. ನೆಲಕ್ಕೆ ಇಟ್ಟಿಗೆ ಹಾಸಬಹುದು.

ಇನ್ನು ಮನೆಗಳ ಮುಂದೆ ಸಣ್ಣ ಹೂದೋಟವಿರುವುದು ನಾಗರೀಕತೆಯ ಇನ್ನೊಂದು ಲಕ್ಷಣ.

ಅಡಿಗೆ ಕೋಣೆಯಲ್ಲಿ ಅಡಿಗೆ ಮಾಡುವಾಗ ಉಂಟಾಗುವ ಹೊಗೆಯು ಹೊರಹೋಗಲು ಹೊಗೆ ನಳಿಗೆಗಳಿರಬೇಕಾದುದು ಅತೀ ಪ್ರಾಮುಖ್ಯ ಸಂಗತಿ. ಮನೆಯ ಆಡಂಬರಕ್ಕಾಗಿ ದುರ್ವ್ಯಯ ಮಾಡುವುದಕ್ಕಿಂತ ಯೋಗ್ಯ ಎತ್ತರದ ಒಲೆಗಳನ್ನು (ಮೇಜಿನಹಾಗೆ) ಮಣ್ಣಿನಿಂದ ಕಟ್ಟುವುದು ಮೇಲು.

ಒಟ್ಟಿನಮೇಲೆ ಹೇಳುವುದಾದರೆ ಮನೆಗಳು ಆದಷ್ಟು ಕಡಿಮೆ ಖರ್ಚಿನಿಂದ ಆದಷ್ಟು ಉತ್ತಮವಾಗಿ ಕಟ್ಟಬೇಕಾಗಿರುತ್ತದೆ. ವಿಶಾಲವಾಗಿರುವುದೂ, ಕಿಟಕಿಗಳು ಆದಷ್ಟು ದೊಡ್ಡದಾಗಿದ್ದು, ಗಾಳಿ ಬೆಳಕುಗಳನ್ನು ಸರಾಗ ಒದಗಿಸುವುದೂ, ಶುಚಿಯಾಗಿರುವುದೂ ಅತೀ ಪ್ರಾಮುಖ್ಯವಾದ ಸಂಗತಿಯಾಗಿದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟಸುಬ್ರಮಣ್ಯಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಔಷಧಿಯ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು ಅಂದರೆ ಕೇವಲ ೪ ರೂಪಾಯಿಗಳೆ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದಭೂಷಣ, ನಂ. 5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು ಡಾ|| ಪಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ

BUY INDIAN' ENCOURAGE INDIAN INDUSTRY'

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

RIGD

TRADE MARK

Highly perfumed and medicated, worth using daily by one and all, keeps hair black and relieves headache etc.

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

9-6-1949

FOUNDER
Hon'ble Sri. A. B. Shetty
Minister for Agriculture & Veterinary

Telegram: "Navayuga"

Estd. 1921
ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ:
5—4—0

6 ತಿಂಗಳಿಗೆ
3—0—0

ಬಿಡಿಪ್ರತಿಗೆ
0—2—0

ವರ್ಷ ೨೯ ವಾರ 41	ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು	Vol. 29 No. 41

ಈ ಮಾರ್ಪಾಟು ಮನಮುಟ್ಟಲಿ—

ಆಗೋಸ್ತು 15, 1949ರೊಳಗೆ–ದ್ವಿತೀಯ ಸ್ವರಾಜ್ಯ ವರ್ಧಂತಿಯೊಳಗೆ–ಪೂರ್ಣಗೊಳಿಸಬೇಕೆಂಬ ಗುರಿಯಿಟ್ಟುಕೊಂಡು, ಘಟನಾ ಸಮಿತಿಯೀಗ ಜಾತ್ಯಾತೀತ ಸ್ವತಂತ್ರ ಸಾರ್ವಭೌಮಾಧಿಕಾರೀ ಭಾರತದ ರಾಜ್ಯಾಂಗ ರಚನಾ ಕಾರ್ಯವನ್ನು ಭರದಿಂದ ಸಾಗಿಸುತ್ತಿದೆ. ಆ ಘಟನೆಯ ಅಂಗೋಪಾಂಗಗಳು ಸವಿವರವಾಗಿ, ಸಂಬಂಧಪಟ್ಟ 'ಸಲಹಾ ಸಮಿತಿ' 'ಉಪ ಸಮಿತಿ'ಗಳಲ್ಲಿ ಚರ್ಚಿಸಲ್ಪಟ್ಟು, ಆ ಮೇಲೆ ಮೂಲ ಘಟನಾ ಸಮಿತಿಯಲ್ಲಿ ಕೂಲಂಕಷ ಪರ್ಯಾಲೋಚನೆ ಪಡೆದು ರೂಪುಗೊಳ್ಳುತ್ತಿವೆ. ಅಂದಮೇಲೆ, ಅವುಗಳ ಕುರಿತು ಸಾರ್ವಜನಿಕರಲ್ಲಿ ಯಾವಯಾವ ಅಭಿಪ್ರಾಯಗಳಿರಬಹುದೋ ಅವೆಲ್ಲವೂ ಅಲ್ಲಿಯು ಒಂದಲ್ಲೊಂದು ಅಂತಸ್ತಿನಲ್ಲಿ, ಒಬ್ಬನಲ್ಲೊಬ್ಬ ಸದಸ್ಯನಿಂದ ಮುಂದಿಡಲ್ಪಟ್ಟು ಚರ್ಚಿಸಲ್ಪಟ್ಟಿರಬೇಕೆಂದೂ, ಯಾವ ಅಂಶವನ್ನೂ ಬಾಕಿ ಬಿಡದೆ ವಿಚಾರ ವಿಮರ್ಶೆ ನಡೆಸಿದ ನಂತರವೇ ಅವು ಕೊನೆಯ ಆಕಾರ ಪಡೆಯುತ್ತಿವೆಯೆಂದೂ ಪ್ರತಿಯೊಬ್ಬನೂ ಸಮಾಧಾನದಿಂದಿರಬೇಕು.

ಇಡೀ ಘಟನೆಯ ಕುರಿತಾಗಲೀ, ಒಂದರೊಡನೊಂದಕ್ಕೆ ಸಂಬಂಧವಿರುವ ಅದರ ಒಳ ವಿಭಾಗಗಳ ಕುರಿತಾಗಲೀ, ಪೂರ್ಣಾಭಿಪ್ರಾಯ ಸೂಚಿಸಲಾಗುವ ಅವಧಿ ಇದಲ್ಲ. ಆದರೆ ಇಷ್ಟರಲ್ಲೇ ನಿರ್ಧಾರಗೊಂಡಿರುವ ಅಥವಾ ಸ್ಪಷ್ಟವಾಗಿರುವ ಕೆಲವು ವಿಷಯಗಳಿಂದ ಎಲ್ಲರೂ ಕಲಿತುಕೊಳ್ಳಬೇಕಾದ ಪಾಠಗಳಿವೆ. ಅವು–

ದಲಿತ ವರ್ಗ ಅಥವಾ ಹರಿಜನರ ಮಟ್ಟಿಗೆ ಶಾಸನ ಸಭೆಗಳಲ್ಲಿ ಇನ್ನು ಹತ್ತು ವರುಷಗಳ ವರೆಗೆ, ಈ ತನಕವಿರುವಂತೆಯೇ ಕಾದಿಟ್ಟ ಸ್ಥಾನಗಳಿವೆ. ಆದರೆ ಮಿಕ್ಕ ಯಾವ ಸಮಾಜಗಳಿಗೂ ಇನ್ನು ಹಾಗಿಲ್ಲವಾದ್ದರಿಂದ 'ಎಲ್ಲರೂ ಒಂದೇ' ಎಂದು ಭಾವಿಸಿಕೊಳ್ಳದೆ ಯಾರಿಗೂ ಅನ್ಯೋಪಾಯವಿಲ್ಲ.

ಬ್ರಿಟಿಷ್ ಆಡಳಿತೆಯ ಮಹಾ ಕೊಡುಗೆಯಾಗಿ ಪ್ರತ್ಯೇಕ ಮತದಾನದ ಹಾಗೂ ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕನ್ನು ಪಡೆದು, ಆ ಪ್ರತ್ಯೇಕತಾ ಆಧಾರದಿಂದ ಪ್ರತ್ಯೇಕತಾ ಭಾವನೆಯನ್ನು ಬೆಳೆಯಿಸುತ್ತಾ ಬಂದು, ಪ್ರತ್ಯೇಕ ರಾಷ್ಟ್ರವನ್ನೇ ಪಡೆದ ಮುಸ್ಲಿಮ್ ಸಮಾಜದವರಿಗೆ, ತಾವು ಅನಾಥರಾದೆವೆಂಬ ದುಃಖವೀ ಸಂದರ್ಭದಲ್ಲಿ ಒಮ್ಮೆ ಹುಟ್ಟಬಹುದು. ಆದರದು ಅನಗತ್ಯ.

ಪಾಕಿಸ್ತಾನ್ ನಿರ್ಮಾಣಾಂದೋಲನದ ಆ ಹೊತ್ತಿನಲ್ಲೇ "ದಕ್ಷಿಣ ಭಾರತದ ಮುಸ್ಲಿಮರಿಗೂ ಪಾಕಿಸ್ತಾನಬೇಕೆ?–ಜೋಕೆ!" ಎಂದು ನಾವು ಹಲವು ಸಲ ವಸ್ತುಸ್ಥಿತಿಯ ಸಹಜ ಚಿತ್ರವನ್ನು ಬಿಡಿಸಿ ತೋರಿಸಿದ್ದೆವು. "ಉತ್ತರಗಡೆಯ ಮುಸ್ಲಿಮರಿಗಾಗಿ, ಭಾರತದ ಒಳಗಡೆಯಲ್ಲಿ ಒಂದು ಅಫ್ಘಾನಿ ಸ್ಥಾನ ನಿರ್ಮಿಸಿಕೊಡಲು ದಕ್ಷಿಣ ಭಾರತದ ಮುಸ್ಲಿಮರು ಅವರಿಗಿಂತಲೂ ಹೆಚ್ಚಾಗಿ ಹಾರಾಡುತಿದ್ದಾರೆ. ಪಾಕಿಸ್ತಾನ ನಿರ್ಮಾಣದಿಂದ ದಕ್ಷಿಣ ಭಾರತೀಯ ಮುಸ್ಲಿಮರ ಪಾಲಿಗೆ, ನೆರೆಯ ಇರಾಕ್, ಇರಾನ್, ಅಫ್ಘಾನಿಸ್ಥಾನಗಳ ಜತೆಯಲ್ಲಿ ಒಂದು ಹೊಸ ಮುಸ್ಲಿಂ ರಾಜ್ಯ ಸ್ಥಾಪನೆಯಾದಷ್ಟೇ ಲಾಭ ಹೊರತು ಬೇರಿಲ್ಲ. ಅಷ್ಟಕ್ಕಾಗಿ ಅವರು ತಮಗೆ ಬೇಕೇಬೇಕೆಂದು ಭಾವಿಸಿರುವ ಎಲ್ಲಾ ವಿಶೇಷ ಹಕ್ಕು ಬಾಧ್ಯತೆಗಳನ್ನೂ ಕಳಕೊಂಡು ಆ ಮಟ್ಟಿಗೆ ಪಾಲಿ ಬೀಳಲಿದ್ದಾರೆ" ಎಂದು ತಿಳಿಸಿದ್ದೆವು. ಆದರೆ ದಕ್ಷಿಣ ಭಾರತದ ಮುಸ್ಲಿಮರಿಗೆ ಹೀಗಾಗಲೇಬೇಕಿತ್ತು–ಆ ಕಾಲದಲ್ಲಿ ಮಿ. ಜಿನ್ನರು ಮತ್ತಿತರ ಲೀಗ್ ಪ್ರಮುಖರೇ ಹೇಳಿದ್ದಂತೆ ಉತ್ತರಗಡೆಯ ಮುಸ್ಲಿಮರಿಗಿಂತಲೂ ಹೆಚ್ಚಾಗಿ ದಕ್ಷಿಣಗಡೆಯ ಮುಸ್ಲಿಮರೇ ಪಾಕಿಸ್ತಾನಕ್ಕಾಗಿ ಪ್ರಯತ್ನಿಸಿದ್ದರು; ಇಂದಿನದೆಲ್ಲವೂ ಅದರ ಪರಿಣಾಮವೇ; ಸತ್ಪರಿಣಾಮ.!

ಈ ಪರಿಣಾಮವು ಆ ಕಾಲದ ಮುಸ್ಲಿಂ ದುರಾಗ್ರಹದ ಮೇಲೆ ಬಲವಾದ ಪ್ರಹಾರ ದಂಡವಾದರೂ ಈಗಿನ ಕಾಲೋಚಿತ ಸದ್ಭಾವನೆಯ ಮಟ್ಟಿಗೆ ಯೋಗ್ಯ ರಾಜದಂಡವೆಂಬುದನ್ನು ಎಲ್ಲರೂ ಒಪ್ಪಬೇಕು.

ಇದೇ ಕಾರಣದಲ್ಲಿನ್ನು ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಶಿ ಇತ್ಯಾದಿ ಭೇದವೇ ಇಲ್ಲವೆಂದ ಮೇಲೆ ರಾಜಕೀಯಾಧಿಕಾರ, ಸ್ಥಾನಮಾನ, ಬೇಕಾದರೆ ಎಲ್ಲರೂ ಸಮಮಾನರೆಂದೇ ಭಾವಿಸಿಕೊಳ್ಳುವದಿನ್ನು ಅನಿವಾರ್ಯ.

ಧರ್ಮವಾರಾಗಿ ಭಿನ್ನ ಭೇದಗಳಿರುವ ಈ ಸಮಾಜಗಳೊಳಗೇನೇ ಇಂತಹ ಸಾಮ್ಯತೆ ಬಂದ ಮೇಲೆ ಇನ್ನು ಹಿಂದುಗಳೊಳಗಿನ ಅಥವಾ ಮಿಕ್ಕ ಸಮಾಜಗಳವರೊಳಗಿನ ವ್ಯತ್ಯಾಸವೆಂತೂ ಅವ್ಯವಹಾರ್ಯ ಮತ್ತು 'ಹಲ್ಕಾ ಬುದ್ಧಿ'ಯೆನ್ನಿಸಲೇಬೇಕು.

ಪ್ರತಿನಿಧಿ ಸ್ಥಾನಮಾನವಿನ್ನು ಬೇಕಾದರೆ, ಯಾರೇ ಆದರೂ ತಂತಮ್ಮ ಜಾತಿಯನ್ನು ಸರ್ವ ವಿಧದಿಂದಲೂ ಸಂಪೂರ್ಣವಾಗಿ ಮರೆತು, ಜನತೆಯ ಮನವೊಲಿಸಿ, ಜನತೆಯೆದುರು ಯೋಗ್ಯತೆ ಪ್ರದರ್ಶಿಸಬೇಕಾಗಿರುವುದರಿಂದ, ಜಾತಿಯವನಾಗದೆ ಜನತೆಯವನಾಗಬೇಕು.

ಈ ಮೊದಲಿನ ಕಹಿ ಭಾವನೆಯ ದೆಸೆಯಿಂದಾಗಿ ಈ ಐಕ್ಯತಾಭಾವವು ಒಮ್ಮೆಗೇ ಕೂಡಿ ಬಾರದಿದ್ದರೆ ಮುಸ್ಲಿಮರಂಥವರಿಗೆ ಸ್ಥಾನ ದೊರೆತೀತೇ, ಎಂಬ ಅನುಮಾನವೇಳಬಹುದು. ಈ ಕೆಳಗಿನ ಕಾರಣಗಳಿಂದಾಗಿ 'ದೊರೆತೀತು, ಈ ಮೊದಲಿದ್ದುದಕ್ಕಿಂತಲೂ ಹೆಚ್ಚಿನ ಸ್ಥಾನಗಳು ಅವರಿಗೆ ದೊರೆತರೂ ದೊರೆಯಬಹುದು'.

ಮೊದಲನೆಯದಾಗಿ, ಈ ತನಕ ಮುಸ್ಲಿಮರಂತಹ ಅಲ್ಪಸಂಖ್ಯಾಕ ಸಮಾಜಗಳವರ ಸ್ಥಾನಮಾನ ಸಾಧನೆಯ ಜವಾಬ್ದಾರಿ ಸ್ವತಃ ಅವರ ಮೇಲೆಯೇ ಇದ್ದುದು, ಈಗ ಅದನ್ನು ರಕ್ಷಿಸಿಕೊಡುವ ಹೊಣೆಯು ಬಹುಸಂಖ್ಯಾಕ ಸಮಾಜಗಳವರ ಮೇಲೆ ಬಿದ್ದಿದೆ. ಆದ್ದರಿಂದ ಮುಸ್ಲಿಮರಂಥ

ಸುವಾಸನೆ ಮತ್ತು ಮಾಧುರತೆಯಿಂದ
ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಾ ಮತ್ತು ಕಾಫಿ



PRABHAT
TEA & COFFEE (INDIA) Ltd.
COONOOR (Niligiris)

English copies of
MADRAS ALIYASANTHANA ACT of 1949
are available.
NAVAYUGA PRESS, UDIPI.
ಮದ್ರಾಸು ಅಳಿಯ ಸಂತಾನ ಕಾನೂನಿನ ಇಂಗ್ಲಿಷ್ ಪ್ರತಿಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:–ಧಾರವಾಡ,
THE UNITED KARNATAK INSURANCE COMPANY, LIMITED.

ವರ ಹಕ್ಕಿನ ಸ್ಥಾನಗಳನ್ನು ಅವರಿಗೆ ಕೊಡಿಸುವ ಪ್ರಯತ್ನಗಳನ್ನು ಅವರಿಗೊಂದು ಉಪಕಾರವಾಗಿ ಅಲ್ಲ, ತಮ್ಮ ಹೊಣೆ ನಿರ್ವಾಹವೆಂದು ಬಹುಸಂಖ್ಯಾಕರು ಸರ್ವಥಾ ಮಾಡಬಹುದು.

ಎರಡನೆಯದಾಗಿ, ಆದಿಯಿಂದಲೂ ಲೀಗ್ ಮನೋವೃತ್ತಿಯಿರದೆ ರಾಷ್ಟ್ರೀಯತಾ ಭಾವನೆಯನ್ನು ಕಟ್ಟಿಕೊಂಡಿದ್ದ ಮುಸ್ಲಿಮರು ಎಲ್ಲೆಡೆಗಳಲ್ಲೂ ಇದ್ದಾರೆ. ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕಿದ್ದ ಮುಸ್ಲಿಂ ಸಮಾಜದಿಂದ ಅಂಥವರಿಗೀವರೆಗಾವ ಸ್ಥಾನವೂ ದೊರೆತಿರಲಿಲ್ಲ; ಅವರಿಗೆ ಇನ್ನೀ ಸುಯೋಗ ಬರಬಹುದು.

ಮುಸ್ಲಿಮರ ಪ್ರತ್ಯೇಕತಾ ಭಾವನೆಯೊಂದು ಪೂರ್ಣ ಉಜ್ಜಿ ಹೋದರೆ, ಆ ಮೇಲೆ ಅವರಿಗೂ ಇತರರಿಗೂ ಇರುವುದಕ್ಕಿಂತ ಹೆಚ್ಚಿನ ಪೈಪೋಟಿ ಮಿಕ್ಕ ಪಕ್ಷ ಪಂಗಡಗಳೊಳಗಿವೆ. ಆದ್ದರಿಂದ ಸಾಕಷ್ಟು ಗಣ್ಯ ಸಂಖ್ಯೆಯಲ್ಲಿರುವ ಮುಸ್ಲಿಮರನ್ನು ತಂತಮ್ಮ ಕಡೆಗೆಳೆದುಕೊಳ್ಳಲು ಮುಂದಾಗುವ ಲಕ್ಷಣಗಳು ಇವೆ. ಇಂಥವುಗಳ ಪೈಕಿ ಕಾಂಗ್ರೆಸ್ಸೇ ಮೊದಲನೆಯದೆಂದೂ, ಮುಸ್ಲಿಮರಾದರೂ ಹೆಚ್ಚಾಗಿ ಕಾಂಗ್ರೆಸಿನ ಬೆನ್ನು ಹಿಡಿಯಬಹುದೆಂದೂ ಊಹಿಸಲು ಕಾರಣವಿದೆ.

ಸುಮಾರು 75 ಸಾವಿರ ಜನಸಂಖ್ಯೆಯಿರುವ ಕ್ಷೇತ್ರಕ್ಕೊಬ್ಬನಂತೆ ಎಸೆಂಬ್ಲಿಗೆ ಪ್ರತಿನಿಧಿಯನ್ನಾರಿಸಲಿಕ್ಕಿರುವುದರಿಂದ ಹಲವೆಡೆಗಳಲ್ಲಿ ಮುಸ್ಲಿಮರಂತಹ ಅಲ್ಪಸಂಖ್ಯಾಕ ಸಮಾಜಗಳವರು ಸಂಖ್ಯೆಯ ಬಲದಿಂದಲೂ ಆರಿಸಲ್ಪಡಬಹುದು. ಇನ್ನು ಹಲವೆಡೆ ಮಿಕ್ಕ ಪಕ್ಷಗಳೊಳಗಿರುವ ಪೈಪೋಟಿ ದ್ವೇಷಾಸೂಯೆಗಳು ಬಲವಾಗಿ, ಇವರ ನಡುವೆ ಮುಸ್ಲಿಮರಂತಹ ಅಲ್ಪಸಂಖ್ಯಾಕ ಸಮಾಜದ ಪ್ರತಿನಿಧಿಗಳೇ ವಾಸಿಯೆಂದು ತೋರಿ ಇವರಿಗೇನೇ 'ಚಾನ್ಸ್' ದೊರೆಯಬಹುದು.

ಹೀಗಾಗುವ ಬದಲಿಗೆ ಹಿಂದಿನಂತೆಯೇ ಪ್ರತ್ಯೇಕ ಪ್ರಾತಿನಿಧ್ಯ ಪಡೆಯುತಿದ್ದರೆ ಮುಸ್ಲಿಮರಂಥವರು ತಮ್ಮ ಹಕ್ಕಿನ ಲೆಕ್ಕದ ಸ್ಥಾನಗಳನ್ನಷ್ಟೇ ಪಡೆದು, ಭಾರತದ ಶಾಸನ ಸಭೆಗಳಲ್ಲೂ ಆಡಳಿತೆಯ ಮಟ್ಟಿಗೂ ಒಂದು ಮನೆಯ ಕೊಟ್ಟಿಗೆಯಲ್ಲಿ ಬಿಡಾರ ಬಿಟ್ಟವರಂತೆ, ಪ್ರತ್ಯೇಕವಾಗಿ ಮೂಲೆಪಾಲಾಗಿ ಮತ್ತು ಅಗಣ್ಯರಾಗಿ ಇರಬೇಕಾಗುತಿತ್ತು. ಕೇವಲ ಪ್ರತ್ಯೇಕ ಪ್ರಾತಿನಿಧ್ಯವಷ್ಟೇ ಇರುತಿದ್ದಲ್ಲಿ ಈ ಮೊದಲಾದರೂ ಅವಿಚ್ಛಿನ್ನ ಭಾರತದ ಒಂದೆರಡು ಪ್ರಾಂತಿಕ ಎಸೆಂಬ್ಲಿಗಳಲ್ಲಿ ಹೊರತು ಬೇರೆ ಪ್ರಾಂತ್ಯ ಅಥವಾ ಕೇಂದ್ರದಲ್ಲಿ ಅವರು ಅಲ್ಪಸಂಖ್ಯಾಕರೇ ಇದ್ದುದರಿಂದ ಅವರ ಯಾವ ಅಭಿಪ್ರಾಯಕ್ಕೂ ಬೆಲೆ ಬರುತ್ತಿದ್ದಿಲ್ಲ; ಆದರೆ ಅದರ ಜತೆಯಲ್ಲಿ ತಾವು 'ಕೂಡದು' ಎನ್ನುವಂತಹದು ನಡೆಯದಂತಹ ಕೆಲವು ವಿಶೇಷ ಹಕ್ಕು ಬಾಧ್ಯತೆಗಳನ್ನು ಬ್ರಿಟಿಷ್ ಸರಕಾರವು ಅವರಿಗೆ ಕೊಟ್ಟಿದ್ದುದರಿಂದಲೇ ಲೀಗ್ ಮುಸ್ಲಿಮರ ಪಿಟಿಲಾಟ ಮನ್ನಿಸಲ್ಪಟ್ಟಿದ್ದಿತು. ಇಂದು ಅವರ ಉಪಕಾರಿ ಆ ಬ್ರಿಟಿಷರೂ ಇಲ್ಲ; ಅವರ ಆಧಾರ ಆ ವಿಶೇಷ ಹಕ್ಕು ಬಾಧ್ಯತೆಗಳೂ ಇಲ್ಲ; ಹೀಗಾಗಿ ಇನ್ನು ಮುಸ್ಲಿಮರಂಥವರಿಗೆ ಪ್ರತ್ಯೇಕ ಪ್ರಾತಿನಿಧ್ಯ ದೊರೆತರೂ, ಅವರಿಗೊಂದು ಪ್ರತ್ಯೇಕ ಒಕ್ಕಲು ಮನೆ ಮಾತ್ರ ದೊರೆತು ಆಸ್ತಿಯ ಅಧಿಕಾರ ಎಲ್ಲವೂ ಕೈಬಿಟ್ಟಂತಾಗುತಿತ್ತು. ಆದರೀಗ ಎಲ್ಲರೊಂದಿಗೆ ಅವರೂ ಮನೆ ಆಸ್ತಿಗಳ ಅಧಿಕಾರಿಗಳಾಗಿ ಉಳಿದುಕೊಂಡರು.

ರಾಷ್ಟ್ರ ಹೇಗಿದೆಯೋ ರಾಷ್ಟ್ರದ ಅಧಿಕಾರ ವಿಧಾನ ಹಾಗಿರಬೇಕೆಂದಾಯಿತು.

ಘಟನಾ ಸಮಿತಿಯಲ್ಲಿ ಕಡೆಯಲ್ಪಡುತ್ತಿರುವ ಘಟನೆಯ ಆಕಾರವು ಇನ್ನೊಂದು ಪ್ರಾಮುಖ್ಯರೀತಿಯಿಂದ ಬದಲಾಗುತ್ತಿದೆ. ಅದೆಂದರೆ ಈ ವರೆಗಿದ್ದ ಪ್ರಾಂತ್ಯಾಧಿಕಾರಗಳಲ್ಲಿ ಮುಖ್ಯವಾದುವನ್ನು ಬೇರಿಕೊಂಡೂ ಎಲ್ಲಾ ಪ್ರಾಂತ್ಯಾಧಿಕಾರಗಳಿಗೂ ಮೂಗುದಾಣ ಸಿಕ್ಕಿಸಿಯೂ ಕೇಂದ್ರಾಧಿಕಾರವನ್ನು ಬೆಳೆಸುತ್ತಿರುವುದು.

ಹೆಚ್ಚಿನ ವಿಷಯಗಳಲ್ಲಿ ಸಂಪೂರ್ಣವಾಗಿ ಅಧಿಕಾರವಿದ್ದ ಪ್ರಾಂತಿಕ ಸರಕಾರಗಳ ಕೈಯ ಕೆಲವು ವಿಷಯಗಳು ಇನ್ನು ಕೇಂದ್ರ ಸರಕಾರದ ಕೈಗೆ ಹೋಗಲಿವೆ; ಈ ವರೆಗೆ ಇರದಿದ್ದ ನಿಯಂತ್ರಣಾಧಿಕಾರಗಳು, ಅಪ್ರತ್ಯಕ್ಷವಾಗಿ ಪ್ರತಿಯೊಂದು ವಿಷಯದಲ್ಲೂ ತನ್ನ ಕೈಯಾಡಿಸುವ ಅಧಿಕಾರ, ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಪೂರ್ಣ ಆಡಳಿತೆಯನ್ನೇ ಕೈವಶಪಡಿಸಿಕೊಳ್ಳುವ ಅಧಿಕಾರ—ಇನ್ನು ಪ್ರಾಂತಿಕ ಸರಕಾರಗಳ ಮೇಲೆ ಕೇಂದ್ರಾಧಿಕಾರಕ್ಕೆ ಬರುತ್ತದೆ. ಇದರಿಂದ ರಾಷ್ಟ್ರದ ಮೂಲೆ ಮೂಲೆಯಲ್ಲಿರುವವರಿಗೂ ರಾಷ್ಟ್ರೀಯ ಭಾವನೆಯಿರಬೇಕಾದುದು ಕೇವಲ ಅಭಿಮಾನದ ಪ್ರಶ್ನೆಯಷ್ಟೇ ಅಲ್ಲ—ಅನಿವಾರ್ಯವಾಗುತ್ತದೆ.

ಎಲ್ಲೆಡೆಯ ಆರಿಸುವಿಕೆಗಳಿಂದಲೇ ರೂಪುಗೊಳ್ಳಲ್ಪಡುವ ಕೇಂದ್ರಾಧಿಕಾರದಲ್ಲಿ, ಆಯಾ ಪ್ರಾಂತ್ಯ ಹೇಗಿದೆಯೋ ಅದಕ್ಕನುಗುಣವಾದ ಪ್ರಾತಿನಿಧ್ಯವಿರುವುದಾದ್ದರಿಂದ, ಅದಕ್ಕಾಗಿ ಆಕ್ಷೇಪಿಸಲೆಡೆಯಿಲ್ಲ. ಆ ಭಾಗದಲ್ಲಿದ್ದ ಪ್ರತ್ಯೇಕ ಪ್ರಾಂತೀಯತಾ ಭಾವನೆಯ ಸ್ಥಾನವನ್ನು ಸಾಮೂಹಿಕ ರಾಷ್ಟ್ರೀಯತಾ ಭಾವನೆ ಆವರಿಸಲಿದೆ, ಅಷ್ಟೆ.

ನೆಹರು ವಲ್ಲಭಭಾಯಿಗಳಂಥವರು, ಅಲ್ಲಿರುವ ವರೆಗೆ ಇದು ಸಮರ್ಪಕ ಮತ್ತು ಸರ್ವೋತ್ತಮ ವಿಧಾನವಾದೀತು. ಸಂಕುಚಿತ ಬುದ್ಧಿಯವರಾರಾದರೂ ಅಲ್ಲಿಗೇರುವ ಕಾಲಬಂದರೆ, ನಮ್ಮ ಜನತೆಯಲ್ಲಿರುವ ರೋಗಗಳು ಅಲ್ಲಿಯೂ ಪ್ರತಿಬಿಂಬಿಸಿ, ಈ ಮಟ್ಟಿಗೂ ರಾಷ್ಟ್ರವಿರುವ ಮಾದರಿಯಲ್ಲೇ ರಾಷ್ಟ್ರಾಡಳಿತೆಯೂ ಇರುವಂತಾದೀತು!

ಪಾಕಿಸ್ತಾನ್ ತುಂಡನ್ನು ಕತ್ತರಿಸಿ ಹಾಕಿಕೊಂಡು, ಮುಸ್ಲಿಂಲೀಗ್ ಆತಂಕಾಕ್ಷೇಪಗಳಿಲ್ಲದಂತೆ ಮಾಡಿಕೊಂಡುದರಿಂದಲೇ ಜಾತೀಯ ಪ್ರಾತಿನಿಧ್ಯವನ್ನೂ ಪ್ರಾಂತೀಯ ವಿಶೇಷಾಧಿಕಾರಗಳನ್ನೂ ವಜಾ ಪಡಿಸುವ ಸುಯೋಗ ದೊರಕಿತು. ಅಲ್ಲವಾದರೆ ಇವೆರಡನ್ನೂ ಆತಂಕಿಸುವ ಅಧಿಕಾರ ಮುಸ್ಲಿಮರಿಗಿತ್ತು. ಇನ್ನೀ ರಾಷ್ಟ್ರೀಯತೆಯು ಅಧಿಕಾರ ಮತ್ತು ಅಂತರ್ಯವೆಂಡರಲ್ಲೂ ಶುದ್ಧಿಗೊಂಡು ಪ್ರಗತಿಪಡೆಯಲಿ.

ಇಂದಿನ ಚೀನಾ-

ಚಿಯಾಂಗ್ ಕೈಶೇಕ್.
ತನ್ನ ಅಪ್ರಾಗತಿಕ ಧೋರಣೆಯ ಪ್ರತಿಫಲವಾಗಿ ಅವತಾರ ಮುಗಿಸಿಕೊಳ್ಳುತಿದ್ದಾರೆ.

ಚೈನದ ಚಿತ್ರ ಈಗ ಹೇಗಿದೆ? ಮುಂದೆ ಹೇಗಾಗಬಹುದು? ಎಂಬುದು ಇಂದಿನ ಲೋಕಪ್ರಾಮುಖ್ಯ ಪ್ರಶ್ನೆಗಳಲ್ಲಿ ಸರ್ವಪ್ರಥಮವಾದುದು. ಚೈನವು ಆರ್ಥಿಕ,ವ್ಯಾವಹಾರಿಕವಾಗಿ ಹಿಂದುಳಿದಿರುವ ಮತ್ತು ಎಷ್ಟೋ ವರುಷಗಳಿಂದ ಹೋರಾಟವನ್ನೇ ತನ್ನ ದೈನಂದಿನ ಜೀವನವಾಗಿ ನಡೆಸುತ್ತಾ ಬಂದಿರುವ, ಏಷ್ಯಾದ ಒಂದು ರಾಷ್ಟ್ರವಾಗಿರದಿದ್ದರೆ, ಇಂದು ಅಲ್ಲಿ ವ್ಯಾಪಿಸಿರುವ ಯುದ್ಧವು ಕ್ಷೇತ್ರವಿಸ್ತಾರ ಮತ್ತು ಜನಸಂಖ್ಯೆಯ ಮಟ್ಟಿಗೆ ಹಿಂದಿನ ಮಹಾಯುದ್ಧಗಳಿಗಿಂತ ಸಣ್ಣದೇನೂ ಅಲ್ಲ. ಯುರೋಪು ರಾಷ್ಟ್ರಗಳಂತೆ ಲೋಕಪ್ರಾಮುಖ್ಯತೆ ಪಡೆಯದ ರಾಷ್ಟ್ರವಾಗಿದ್ದರೂ, ಅಲ್ಲಿಯ ಯುದ್ಧದಲ್ಲಿ ಯುರೋಪು ಮಹಾಯುದ್ಧದಂತಹ ಅತ್ಯಾಧುನಿಕ ಶಸ್ತ್ರೋಪಕರಣಗಳ ಪ್ರಯೋಗವು ಅಷ್ಟುದೊಡ್ಡ ಪರಿಮಾಣದಲ್ಲಿ ನಡೆಯುತ್ತಿಲ್ಲವಾದರೂ, ಚೈನಾ ಯುದ್ಧವು ಇಡೀ ಪ್ರಪಂಚದ ಅದೃಷ್ಟವನ್ನು ಒಂದಲ್ಲೊಂದು ರೀತಿಯಿಂದ ಬದಲಾಯಿಸುವಷ್ಟು ಪ್ರಾಮುಖ್ಯದ್ದಿದೆ. ಏಷ್ಯಾದ ಒಂದು ಮುಖ್ಯರಾಷ್ಟ್ರವಾದ ಭಾರತವಂತೂ 'ಚೈನಾ ಮಾರ್ಗಾಟ'ದ ಕುರಿತು ವಿಶೇಷ ಲಕ್ಷ್ಯಕೊಡಬೇಕಾದುದು ಅನಿವಾರ್ಯ. ಇಂದು ಚೈನದ ಸ್ಥಿತಿಗತಿ ಹೇಗಿದೆ, ಎಂಬುದರ ಸ್ಥೂಲ ಪರಿಚಯ ಇಲ್ಲಿದೆ:—

ಚೈನಾ ಪಕ್ಷಗಳ ಬಲಾಬಲ

ಚಿಯಾಂಗ್ ಕೈಶೇಕ್ ಸರಕಾರದ ಪತನ ಮತ್ತು ಕಮ್ಯೂನಿಸ್ಟ್ ಸರಕಾರದ ಸ್ಥಾಪನೆ ನಿಶ್ಚಯವೆಂದು ಸುಮಾರು ಒಂದು ವರುಷದಿಂದ ನಿಚ್ಚಳವಾಗುತ್ತಾ ಬಂದಿತ್ತು; ಶಾಂಘಾಯಿ ಪತನದಿಂದ ಆ ತುದೀ ದಿನ ತೀರಾ ಸಮೀಪಿಸಿತೆಂಬುದೀಗ ಎಲ್ಲರಿಗೂ ಮನದಟ್ಟಾಗಿದೆ. ಶಾಂಘಾಯಿ ತೀರ್ಮಾನವು ಕಮ್ಯೂನಿಸ್ಟರ ವಿಜಯ ದುಂದುಭಿಯಂತೆಯೇ ಅವರ ಯೋಗ್ಯತೆಯ ಕೀರ್ತನಗಾರಿಯೂ ಲೋಕದ ಮೂಲೆ ಮೂಲೆಗಳಲ್ಲೂ ಧ್ವನಿಸುವಂತೆ ಮಾಡಿದೆ. ಇನ್ನೂ ಚೈನದ ರಾಷ್ಟ್ರೀಯ ಸರಕಾರದ ವಶ ಉಳಿದಿರುವ ಭೂಭಾಗವನ್ನು ಜಾದು ಹೋಗುವರೆ ಕಮ್ಯೂನಿಸ್ಟರಿಗೆ ಸಾವಕಾಶ ಮತ್ತು ಸಮಯವೆಷ್ಟು ಬೇಕೋ ಅಷ್ಟು ದಿನಗಳ ಅವಧಿಮಾತ್ರ ಉಳಿದಿದೆ ಹೊರತು ನಿಜವಾದ ಜಾಡಾಜಾಡಿ ಹೋರಾಟಕ್ಕೆಂದು ಮೀಸಲಿಡಬೇಕಾದ ಅವಧಿಯೆಂಬುದೇ ಇನ್ನಿಲ್ಲ. ಚೈನೀ ಕಮ್ಯೂನಿಸ್ಟ್ ಸರ್ವಸೇನಾನಿ ಮಾವೋ ಟ್ಸೆ ಟುಂಗರ ದಳಗಳು ಕರಾವಳಿ ಮಾರ್ಗವಾಗಿಯೂ ರಾಷ್ಟ್ರೀಯ ಸರಕಾರದ ವಶವಿರುವ ದಕ್ಷಿಣ ಚೈನದ ಹೃದಯ ಪ್ರದೇಶಾಭಿಮುಖವಾಗಿಯೂ ಪ್ರಚಂಡ ನೆರೆಯಂತೆ ನುಗ್ಗಿ ಬರುತ್ತಿವೆ. ಚೈನದಲ್ಲಿ ಈಗ ಇರುವ ಕ್ರಮಬದ್ಧ ಕಮ್ಯೂನಿಸ್ಟ್ ಸೇನೆಗಳ ಸಂಖ್ಯೆ ಸುಮಾರು 1,400,000. ಆದರೆ ಕಮ್ಯೂನಿಸ್ಟ್ ಸೇನಾ ಬಲವಿಷ್ಟೇ ಅಲ್ಲ. ತಾವು ಯುದ್ಧವನ್ನು ಕೊಂಡೊಯ್ದ ಕಡೆಯಲ್ಲೆಲ್ಲಾ ಸ್ಥಳೀಯ ಯೋಧರನ್ನು ಸಂಗ್ರಹಿಸಿ, ಆಯಾಯ ನೆಲೆಯ ಸಮರಗಳಲ್ಲಿ ಅವರನ್ನೂ ಕೂಡಿಕೊಂಡು, ಅಲ್ಲಿಯ ಕೆಲಸ ಮುಗಿದೊಡನೆ ಅವರೆಲ್ಲರನ್ನೂ ತಮ್ಮವರಾಗಿ ಇಟ್ಟುಕೊಂಡೇ ಅವರವರ ಹೊಲ ಗದ್ದೆಗಳಿಗೋ, ಗ್ರಾಮಗಳಿಗೋ ಕಳುಹಿಕೊಡುವದು ಕಮ್ಯೂನಿಸ್ಟರ ಸಂಪ್ರದಾಯ. ಚೈನೀ ಕಮ್ಯೂನಿಸ್ಟರು ಅತ್ಯಂತ ನಿಷ್ಠೆಯಿಂದ ಈ ಸಂಪ್ರದಾಯ ಪಾಲನೆ ಮಾಡುತ್ತಾ ಹೋಗಿದ್ದು, ಅವರಾಕ್ರಮಿಸಿಕೊಂಡ ಭಾಗಗಳಲ್ಲಿರುವವರೆಲ್ಲರೂ ಕಮ್ಯೂನಿಸ್ಟ್ ಯೋಧರೇ ಆಗಿದ್ದಾರೆ. ಮಾತ್ರವಲ್ಲ, ಇನ್ನು ತಾವು ಕಾಲಿಡಲಿ

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯ ಜರೂರಾತಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ. ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಆರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪ್ರೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತ: ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ನಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ.

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದು ಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.
ಜನರಲ್ ಮೆನೇಜರ್

-ಅದರ ಒಳನೋಟ

ಮೇಡಮ್ ಚಿಯಾಂಗ್
ಗಂಡನಿಗಿಂತಲೂ ಮಿಗಿಲಾಗಿ ಹಾರಾಡಿ ಈಗ ಅಮೇರಿಕಕ್ಕೆ ಹೋಗಿ ನಿಂತಿದ್ದಾರೆ.

ಸುವ ಕಡೆಗಳಿಗೂ ಮುಂದಾಗಿ ತಮ್ಮ ಗೊರಿಲ್ಲಾ ಪಡೆಗಳನ್ನು ನುಗ್ಗಿಸಿ, ಸ್ಥಳೀಯರನ್ನೂ ಗೊರಿಲ್ಲಾಗಳಾಗಿ ಮಾರ್ಪಡಿಸಿದ್ದಾರೆ, ಇನ್ನು ರಾಷ್ಟ್ರೀಯ ಸರಕಾರದ ಕ್ರಮಬದ್ಧ ಸೈನಿಕರೇ ಅಧಿಕಾಧಿಕ ಸಂಖ್ಯೆಯಲ್ಲಿ ಆ ಕಡೆಯಿಂದ ಜಾರಿ ಬಂದು ಕಮ್ಯೂನಿಸ್ಟ್ ಪಕ್ಷ ಹಿಡಿದಿದ್ದಾರೆ—ಹಿಡಿಯುತ್ತಿದ್ದಾರೆ ಅಪ್ರಾಗತಿಕ ಹಾಗೂ ದಿವಾಳಿಖೋರ ಚಿಯಾಂಗ್ ಸರಕಾರದ ಧೋರಣೆಗಳಿಂದ ಅತೃಪ್ತಿಯೊಂದನ್ನೇ ತಮ್ಮ ಅಂತರ್ಯವಾಗಿ ಮಾಡಿಕೊಂಡಿದ್ದ ಚೈನೀ ಜನತೆಯಂತೂ ತಮ್ಮವರೇ ಆದ ಕಮ್ಯೂನಿಸ್ಟರ ಕಡೆಗೆ ಸಂಪೂರ್ಣ ಒಲಿದಿದೆ. ಕಮ್ಯೂನಿಸ್ಟ್ ಸೇನೆಯ ಮುಖ್ಯಭಾಗವೀಗ ಇನ್ನೂ ರಾಷ್ಟ್ರೀಯ ಸರಕಾರದ ವಶವಿರುವ ಕ್ಷೇತ್ರದೊಳಗೆ ದ್ವಿಮುಖವಾಗಿ ನುಗ್ಗಿ ಹೋಗಿದೆ; ಅಲ್ಲಿ ಅದರ ಜಯಧ್ವಜ ಹಾರಾಡುವ ದಿನ ದೂರವಿಲ್ಲ. ಅತ್ತ ಆ ಕಡೆಯಲ್ಲಿ ರಾಷ್ಟ್ರೀಯ ಸರಕಾರದ ಸೈನಿಕರ ದಾಖಲೆಯ ಸಂಖ್ಯೆಯೇನೂ ಕಡಿಮೆಯಿಲ್ಲ. ಲೆಕ್ಕಕ್ಕೆ ಇನ್ನೂ 1,250,000ರಿಂದ 1,500,000ರಷ್ಟು ಸಂಖ್ಯೆಯ ಸೇನೆ ಚಿಯಾಂಗ್ ಕೈಶೇಕರ ರಾಷ್ಟ್ರೀಯ ಸರಕಾರದ್ದಾಗಿದೆ. ಈ ಪೈಕಿ ಸುಮಾರು ಅರೆವಾಸಿಯಷ್ಟು ಸೈನಿಕರು ಶಸ್ತ್ರಾಸ್ತ್ರ ಸುಸಜ್ಜಿತರೆಂದೂ ತಿಳಿದು ಬರುತ್ತದೆ- ಅದರವಂಗೆ ಯೋಗ್ಯ ನಾಯಕರಿಲ್ಲ. ಮೇಲಾಗಿ ಮನೋಬಲವು ಪೂರ್ತಿ ಕಳೆದು ಹೋಗಿರುವ ಅವರೆಲ್ಲರೂ ಜೀವರಹಿತ ಗೊಂಬೆಗಳಂತಾಗಿದ್ದು ಅವರ ಆಧುನಿಕಾಯುಧಗಳಿಗಿರುವುದೂ ಮೂರ್ತಿಯ ಕೈಯ ಕಾಡುಗೋಲಿನ ಶಕ್ತಿ ಮಾತ್ರ! ಇನ್ನೀ ಮಹಾ ಸಂಖ್ಯೆಯಲ್ಲಿ ತರಬೇತಿಗೊಂಡ ನಿಷ್ಠಾವಂತ ಸೈನಿಕರ ಅಂಶ ಅತ್ಯಲ್ಪ; ಹೆಚ್ಚಿನಂಶ ಸಮ್ಮತಿ ವಿನಹ ಸೇರಿದ್ದು ತಾಟಸ್ಥ್ಯ ಮನೋಭಾವವುಳ್ಳ ಹೊಸಬರೇ. ಆ ಸೇನಾದಳಗಳಾದರೂ ಕಮ್ಯೂನಿಸ್ಟ್ ಸೇನೆಗಳಂತೆ ಸಂಘಟನೆಯಿಂದ, ಸುವ್ಯವಸ್ಥಿತ ರಕ್ಷಣಾ ವ್ಯೂಹವಾಗಿ ನಿಂತಿರದೆ ಕಮ್ಯೂನಿಸ್ಟರ ಬಾಯಿಗೆ ಸುಲಭದಲ್ಲಿ ಬಲಿಬೀಳುವಂತ ಹಂಚಿಬಿದ್ದಿವೆ. ದಕ್ಷಿಣ ಚೈನದ ಕಲವೆಡೆಗಳಲ್ಲೀ, ಈ ರಾಷ್ಟ್ರೀಯ ಸೇನೆಗಳ ಉಪಕರಣ ಸಜ್ಜಿತ ಮತ್ತು ತರಬೇತಾದ ಮುಖ್ಯ ಸೇನಾದಳಗಳೂ, ಉಳಿದುಳಿದ ವಿಮಾನಪಡೆ ಮತ್ತು ನೌಕೆಗಳೂ ಸಂಗ್ರಹವಾಗಿವೆಯೆಂದು ತಿಳಿದುಬರುತ್ತದೆ. ಅದೇಕೋ! ಸುಮಾರು 200,000 ಸೇನಾಬಲವುಳ್ಳ ಚೈನದ ಈಶಾನ್ಯ ಪ್ರಾಂತ್ಯಗಳ ಮುಸ್ಲಿಮರ ಬೆಂಬಲವನ್ನೇ ಮುಖ್ಯವಾಗಿ ಅಲ್ಲಿಯ ರಾಷ್ಟ್ರೀಯ ಸರಕಾರವು ಅವಲಂಬಿಸಿರುವ ಸಂಪ್ರದಾಯ. ಆದರೀ ಕಷ್ಟಕಾಲದಲ್ಲಿ, ಹಿಂದಿನ ಭಾರತೀಯ ಮುಸ್ಲಿಮರ ಮನೋಗತಿಯನ್ನೇ ಅಲ್ಲಿಯ ಮುಸ್ಲಿಮರೂ ತೋರಿಸಹತ್ತಿ ಅಲ್ಲೀಗ ಸ್ಥಳೀಯ ಸ್ವಾತಂತ್ರ್ಯದ ಚಳವಳಿ ನಡೆಯುತ್ತಿದೆ. ಹೀಗಾಗಿ ಚಿಯಾಂಗ್ ಕೈಶೇಕ್ ಸರಕಾರವು ಹೊರಗಿನ ಹೊಡೆತ ಮತ್ತು ಒಳಗಿನ ಟೊಳ್ಳಿನಿಂದ ಫಕ್ಕಫಕ್ಕನೇ ಕುಸಿದುಬೀಳುತ್ತಿದೆ.

ಹೋಂಗ್‌ಕೋಂಗ್?

ಅಂತೂ ನಾಳೆಯದು ಅಥವಾ ಇಂದಿನದೇ ಕಮ್ಯೂನಿಸ್ಟ್ ಚೈನವೆಂದು ಕಟ್ಟಿಕೊಳ್ಳಬಹುದು. ಮುಂದಿನ ಆತುರದ ಪ್ರಶ್ನೆ- ಕಮ್ಯೂನಿಸ್ಟರು ಹೋಂಗ್‌ಕೋಂಗಿನ ಮೇಲೆ ಧಾಳಿನಡೆಸುವರೇ? ನಡೆಸಿದಲ್ಲಿ ಬ್ರಿಟಿಷರದನ್ನು ದಿರಿಸಿ ಹೋರಾಡುವರೇ? ಕಮ್ಯೂನಿಸ್ಟರು ಅಂತಹ ಪ್ರತ್ಯಕ್ಷ ಧಾಳಿ ಹೂಡುವದು ಅಸಂಭವ, ಹೂಡಿದಲ್ಲಿ ಬ್ರಿಟಿಷರು ಅದನ್ನಿದಿರಿಸುವದು ಅಸಾಧ್ಯ, ಎಂಬುದೇ ಇದಕ್ಕುತ್ತರ. "ಹೋಂಗ್ ಕೋಂಗ್ ರಕ್ಷಣೆಗಾಗಿ ಬ್ರಿಟಿಷರ ಸೇನೆ, ವಿಮಾನಗಳ ಸರಬರಾಯಿ" ಎಂಬ ಅಬ್ಬರದ ಸುದ್ದಿ ಕೇಳಬರುತ್ತಿದೆಯಾದರೂ ಹಾಗೆ ಸರಬರಾಯಿಯಾಗಿದ್ದುದೆಂದರೆ ಮುಲಯುದಲ್ಲಿದ್ದ ಕೆಲವು ವಿಮಾನಗಳು ಮತ್ತು ಹೆಚ್ಚಿಗೆ 6000 ಸೈನಿಕರು ಮಾತ್ರ. ಇಂತಹ ನಾಮಮಾತ್ರ ರಕ್ಷಣಾ ಸನ್ನಾಹದೊಡನೆ ಪ್ರಚಂಡ ಕಮ್ಯೂನಿಸ್ಟ್ ಧಾಳಿಗಿದಿರು ಬೀಳುವಂತಹ ಅವಿವೇಕಿಗಳು ಬ್ರಿಟಿಷರಲ್ಲ. ಅವರು ತಮ್ಮ ಜನ್ಮಸಿದ್ಧ ಬುದ್ಧಿವಂತಿಕೆಯೆಲ್ಲವನ್ನೂ ಕಾರ್ಯಕ್ಕೆ ಹಚ್ಚಿ ತಮ್ಮ ಮರ್ಯಾದೆಯನ್ನು ಉಳಿಸಿಕೊಂಡು ಅಪಾಯ ನಿವಾರಿಸಿಕೊಳ್ಳುವ ಒಂದು ಒಡಂಬಡಿಕೆಯನ್ನು ಕಮ್ಯೂನಿಸ್ಟರೊಂದಿಗೆ ಮಾಡಿಕೊಳ್ಳುವರೆಂದು ನಿರೀಕ್ಷಿಸಬಹುದು. ಕಮ್ಯೂನಿಸ್ಟ್ ಸರಕಾರಕ್ಕೆ ತಮ್ಮ ಸರಕಾರಗಳ ಮನ್ನಣೆ ದೊರಕಿಸಿಕೊಡುವ ಸಂಬಂಧವಾಗಿ ನಾನ್ಕಿಂಗಿನಲ್ಲಿರುವ ಬ್ರಿಟಿಷ್, ಅಮೇರಿಕ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳ ರಾಯಭಾರಿಗಳು ತಮ್ಮೊಳಗೆ ಪರ್ಯಾಲೋಚನೆ ನಡೆಸಿದ್ದಾರೆಂದು ತಿಳಿದು ಬಂದಿದೆ. ಹೋಂಗ್ ಕೋಂಗ್ ಸ್ಪರ್ಶದ ಮುಂಚಿತವಾಗಿ ಈ ಮನ್ನಣೆ ದೊರೆತರೆ, ಮೇಲಿನ ಪ್ರಶ್ನೆ ಶಾಂತ ತೀರ್ಮಾನಗೊಳ್ಳುವದು ಖಂಡಿತ. ಹಾಗಾಗದೆ ಹೋದರೆ ಕಮ್ಯೂನಿಸ್ಟ್ ಧಾಳಿಯನ್ನಿದಿರಿಸಲು ಸಹಾಯವಾಗಿ ಬರುವ ಸ್ಥಿತಿಯಲ್ಲಿ ಚೈನೀ ರಾಷ್ಟ್ರೀಯ ಸರಕಾರವೆಂತೂ ಇಲ್ಲ. ತನ್ನ ಮಿತ್ರರಿಂದಾಗದೆಂದು ಅಮೇರಿಕವು ಅವರ ನೆರವಿಗೆ ಬಂದರೆ, ರಶ್ಯವನ್ನು ಪ್ರತ್ಯಕ್ಷವಾಗಿ ಕೆಣಕಿದಂತಾಗುವದು. ಇನ್ನೊಂದು ಮಹಾಯುದ್ಧಕ್ಕೆ ಹೋಂಗ್‌ಕೋಂಗಿನಲ್ಲಿಯೇ ವಿಷಬೀಜ ಬೀಳಲೂಬಹುದು. ಚೈನೀ ಕಮ್ಯೂನಿಸ್ಟರು ಮತ್ತು ರಶ್ಯದೊಳಗಿನ ಸಂಬಂಧ ಬಲಗೊಳ್ಳುವುದಂತೂ ಖಂಡಿತ ಇಂತಹ ಭವಿಷ್ಯ ನಿರ್ಮಾಣಕ್ಕೆ ಬ್ರಿಟನ್ ಅಮೇರಿಕಗಳು ತಯಾರಿಲ್ಲ. ಇತ್ತ ಈ ಕಡೆಯಿಂದ ಚೈನೀ ಕಮ್ಯೂನಿಸ್ಟರು ಕೂಡಾ, ಬ್ರಿಟಿಷರ ಮೇಲಿನ ದ್ವೇಷಾಸೂಯೆಗಾಗಿ ಹೋಂಗ್‌ಕೋಂಗಿನ ಮೇಲೆ ಧಾಡಿಡುವ ಮನೋವೃತ್ತಿಯಲ್ಲಿಲ್ಲ. ಹೋಂಗ್‌ಕೋಂಗಿನಿಂದ ಚೈನದೊಳಗಡೆಯಲ್ಲೆಲ್ಲಾ ತಮ್ಮ ವ್ಯಾಪಾರ ವಹಿವಾಟುಗಳನ್ನು ಸಾಗಿಸಿ, ತಮ್ಮ ವರ್ಚಸ್ಸನ್ನೂ ಬೀರುತ್ತಿರುವ ಬ್ರಿಟಿಷರ ಆಟ ನಿಲ್ಲಿಸಬೇಕೆಂಬ ಇಚ್ಛೆಯೊಂದೇ ಕಮ್ಯೂನಿಸ್ಟರದಾದರೆ, ಅಷ್ಟಕ್ಕಾಗಿ ಅವರು ಹೋಂಗ್‌ಕೋಂಗಿನ ಮೇಲೆ ಪ್ರತ್ಯಕ್ಷವಾಗಿ ಬೀಳಬೇಕೆಂದಿಲ್ಲ. ವಿಶೇಷ ತಂಟೆಯಿಲ್ಲದ ಕೇಂಟೋನನ್ನು ವಶಪಡಿಸಿಕೊಂಡು ಹೋಂಗ್‌ಕೋಂಗಿನಮೇಲೆ ಕಠಿಣ ದಿಗ್ಬಂಧನ ಹಾಕಲು ಸಾಧ್ಯವಿದೆ. ಅದರೂ ಕಮ್ಯೂನಿಸ್ಟರು ಸಂಧಾನಾತೀತರಾಗಿ ಹೋಂಗ್‌ಕೋಂಗಿನ ಮೇಲೆ ಬೀಳುತ್ತಾರಾದರೆ ಅದಕ್ಕೆ ಮುಖ್ಯಕಾರಣ ರಶ್ಯದ ಪ್ರೇರಣೆಯೇ ಆಗಬಹುದು. ಈ ರೀತಿ, 'ಚೈನೀ ಕಮ್ಯೂನಿಸ್ಟರು ಸಂಪೂರ್ಣವಾಗಿ ರಶ್ಯದ ಕೈಗೊಂಬೆಗಳಾಗುವಂತಿಲ್ಲ' ಎಂಬ ಅಭಿಪ್ರಾಯದ ಸತ್ಯಾಸತ್ಯತೆಯನ್ನು, ತಿಳಿಯುವ ಒರೆಗಲ್ಲೆಂದರೆ ಅವರು ಹೋಂಗ್ ಕೋಂಗಿನಕುರಿತು ವಹಿಸುವ ವರ್ತನೆಯೇ.

ಕೆಂಪು ಚೈನಾ-ರಶ್ಯಾ ಭಿನ್ನಾಭಿಪ್ರಾಯ?

ಈ ನಡುವೆ ರಶ್ಯಾ ಸರಕಾರಕ್ಕೂ ಚೈನೀ ಕಮ್ಯೂನಿಸ್ಟರಿಗೂ ಭಿನ್ನಾಭಿಪ್ರಾಯ ಹುಟ್ಟಿಕೊಂಡ ವಾರ್ತೆಯಿದೆ. ಸುದ್ದಿ ಸತ್ಯವಿದ್ದರೆ, ಪ್ರೊಫೆಸರ್ ಅಗರ್ವಾಲರಿಂದ (ಕಳೆದವಾರದ ಸಂಚಿಕೆಯಲ್ಲಿ ಅವರ ಶಾಂಘಾಯಿ ಅನುಭವವನ್ನು ಕೊಡಲಾಗಿದೆ) "ಚೈನೀ ಜನತೆಯು ಹುಟ್ಟುಗುಣವಾದ ಮಿತಿಮೀರಿದ ವ್ಯಕ್ತಿಗತಾಸಕ್ತಿಯುಳ್ಳ ಕಮ್ಯೂನಿಸ್ಟರು ರಶ್ಯದ ಸೂತ್ರ ಕಡಿದುಕೊಂಡು ತಮ್ಮಷ್ಟಕ್ಕೆ ತಾವಾಗಿ ನಿಂತರೆ ಅದರಲ್ಲಿ ಆಶ್ಚರ್ಯವಿಲ್ಲ" ಎಂಬ ಮಾತು ಸತ್ಯವಾದ ಪಾರ ಭವಿಷ್ಯದಂತಾಯಿತು! ಕಮ್ಯೂನಿಸ್ಟರಂತೆಯೇ ಕಮ್ಯೂನಿಸ್ಟರಲ್ಲದವರನ್ನು ಮತ್ತು ಚಿಯಾಂಗ್ ಕೈಶೇಕ್ ಅನುಯಾಯಿಗಳನ್ನು ಕೂಡಾ ಸೇರಿಸಿಕೊಂಡು ಬರುವ ಆಗೋಸ್ತಿನಲ್ಲಿ ಅಖಿಲ ಚೈನಕ್ಕೊಂದು ಸಮ್ಮಿಶ್ರ ಸರಕಾರವನ್ನು ಸ್ಥಾಪಿಸಿಕೊಳ್ಳುವ ಯೋಜನೆ ಚೈನೀ ಕಮ್ಯೂನಿಸ್ಟರಿಗಿದೆಯಂತೆ; ರಶ್ಯಕ್ಕಿದು ಸರ್ವಥಾ ಸಮ್ಮತಿಯಿಲ್ಲದ ವಿಷಯ. ಆದರೆ ಚೈನದಲ್ಲಿರುವ ಆಂಗ್ಲೋ ಅಮೇರಿಕನ್ ರಾಜಕಾರಣಿಗಳು ಇಂತಹ ಸಮ್ಮಿಶ್ರ ಸರಕಾರ ರಚನೆಗಾಗಿ ಕಮ್ಯೂನಿಸ್ಟ್ ನಾಯಕ ಮಾವೊ ಟ್ಸೆ ಟಂಗರನ್ನು ಪುಸಲಾಯಿಸುತ್ತಿದ್ದಾರೆ; ಹಾಗೆ ಮಾಡಿದಲ್ಲಿ ಕೂಡಲೇ ಕಮ್ಯೂನಿಸ್ಟ್ ಸರಕಾರಕ್ಕೆ ಇಂಗ್ಲೆಂಡು ಅಮೇರಿಕಗಳ ಮನ್ನಣೆ ಸಂಪಾದಿಸಿ ಕೊಡುವೆವೆಂದು ಭರವಸೆಯಿತ್ತಿದ್ದಾರೆ. ಇನ್ನು ಜರ್ಝರಿತ ಚೈನಕ್ಕೆ ಎಲ್ಲಕ್ಕಿಂತ ಮುಖ್ಯವಾಗಿ ಬೇಕಾಗಿರುವ ಆರ್ಥಿಕ ಸಹಾಯ ಕೊಡುವ ಆಶ್ವಾಸನೆಗಳೂ ಇಂಗ್ಲೆಂಡು ಅಮೇರಿಕಾನಿಂದ ದೊರೆತಿರಬಹುದು. ಈ ಸುದ್ದಿ ಸುಳಿಯುತ್ತಿದ್ದಂತೆಯೇ ಶಾಂಘಾಯಿಯಲ್ಲಿದ್ದ ತನ್ನ 'ಕನ್ಸಲೇಟ್ ಕಚೇರಿ'ಯನ್ನು ರಶ್ಯವು ಮುಚ್ಚಿಬಿಟ್ಟುದು ಇನ್ನಷ್ಟು ಅನುಮಾನಕ್ಕೆ ಹೇತುವಾಗಿದೆ. ಈ ತನಕ ನಡೆದುಬಂದ ಸಂಗತಿಗಳನ್ನು ತ.ಸ. ಲೀವಾಗಿ ಅವಲೋಕಿಸಿದರೆ, ಕಮ್ಯೂನಿಸ್ಟ್ ರಶ್ಯ ಮತ್ತು ಕಮ್ಯೂನಿಸ್ಟ್ ಚೈನಗಳೊಳಗೆ

OPPORTUNITY TO DEALERS

For your requirements in

Exercise Books

Visit

Vithalji & Co., Ltd.,

MANGALORE.

ವ್ಯಾಪಾರಿಗಳಿಗೆ ಸುಸಂಧಿ!

ಎಕ್ಸರ್‌ಸೈಜ್ ಪುಸ್ತಕಗಳು

ಬೇಕಾದಲ್ಲಿ ವಿಚಾರಿಸಿರಿ-

ವಿಠಲ್ಜಿ ಮತ್ತು ಕಂಪೆನಿ ಲಿ.,

ಮಂಗಳೂರು

ವ ಸ್ವಭಾವ ವ್ಯತ್ಯಾಸವು ಸ್ಪಷ್ಟವಾಗುತ್ತದೆ. ಚೈನೀ ಕಮ್ಯೂನಿಸ್ಟರು ಎಲ್ಲೆಲ್ಲೂ, ತಮ್ಮ ರಾಷ್ಟ್ರೀಯರ ಕಡೆಗೆ ವಿಶೇಷ ಮಮತೆ ತೋರಿಸುತ್ತಾ ಬಂದಿದ್ದಾರೆ. ರಶ್ಯನ್ ವೈಶಿಷ್ಟ್ಯವಾದ ಪ್ರತಿವಾದಿಯ ಕಡೆಗಿನ ಕ್ರೂರ ಬುದ್ಧಿಯನ್ನಾಗಲೀ, ಆಂಗ್ಲೋ ಅಮೇರಿಕಾನರ ಮೇಲಿನ ದ್ವೇಷಾಸೂಯೆಯನ್ನಾಗಲೀ ಅವರು ಪ್ರದರ್ಶಿಸಿದುದಿಲ್ಲ. ಶಾಂಘಾಯಿ ಸ್ವಾಧೀನತೆಯ ನಂತರ, ವ್ಯಾಪಾರೀ ಪಥಗಳೆಲ್ಲವೂ ಕಮ್ಯೂನಿಸ್ಟ ಪ್ರಭಾವದೊಳಗಾದರೂ ಹೋಂಗ್‌ಕೋಂಗಿನ ಅಥವಾ ಬ್ರಿಟಿಷ್ ಅಮೇರಿಕನರ ವ್ಯಾಪಾರ ವಹಿವಾಟುಗಳಿಗೆ ಯಾವ ಬಾಧೆಯೂ ತಟ್ಟಿಲ್ಲ; ಯುದ್ಧಾಂದೋಲನದ ಅವಧಿಯಲ್ಲೇ ವ್ಯಾಪಾರ ರಂಗವನ್ನು ಅಸಾಧಾರಣರೀತಿಯಿಂದ ಯಥಾಸ್ಥಿತಿಗವರು ತಂದಿದ್ದಾರೆ. ಶಾಂಘಾಯಿ ನಗರ ನುಗ್ಗಿದಾಗ ಅಲ್ಲಿಯ ಕಟ್ಟಡಗಳ ನಾಶವಾಗಬಾರದೆಂಬುದಕ್ಕಾಗಿ, ಹೋರಾಟದ ವೇಳೆ ಕಟ್ಟಡಗಳನ್ನು ರಕ್ಷಣಾ ನೆಲೆಗಳಾಗಿ ಮಾಡಿಕೊಳ್ಳಕೂಡದೆಂದು ಕಮ್ಯೂನಿಸ್ಟ್ ಸೇನೆಗಳಿಗೆ ಆಜ್ಞೆಯಿದ್ದಿತು. ಮನಸ್ಸು ಮಾಡಿದ್ದರೆ, ಶಾಂಘಾಯಿಯ ಗಗನಚುಂಬಿತ ಕೇಥೆ ಹೊಟೆಲನ್ನಾಕ್ರಮಿಸಿಕೊಂಡು ಅದರ ಮಾಡಿನ ಮೇಲಿಂದ ಗುಂಡುಹಾರಿಸಿ, ತಮ್ಮ ವಿರೋಧಿಗಳ ಅತಿಭೀಕರ ಮೆಶಿನ್‌ಗನ್ನೊಂದನ್ನು ಕಮ್ಯೂನಿಸ್ಟರು ಧ್ವಂಸ ಮಾಡಬಹುದಿತ್ತು. ಆದರೂ ತಮ್ಮೊಳಗೆ ಆದಷ್ಟು ಕಡಿಮೆ ನಷ್ಟದಿಂದ ಕೆಲಸವಾಗಬೇಕೆಂಬುದಕ್ಕಾಗಿ ಅವರು ಹಾಗೆ ಮಾಡಿರಲಿಲ್ಲ. ಕಮ್ಯೂನಿಸ್ಟರ ಶಾಂಘಾಯಿ ಸೌಜನ್ಯವು ಆಂಗ್ಲೋ ಅಮೇರಿಕಾನರ ಸಮೇತ ಇಡೀ ಪ್ರಪಂಚದ ಶ್ಲಾಘನೆ ಪಡೆದಿದೆ. ಇದು ರಶ್ಯನ್ ವಿಧಾನವಲ್ಲವೆನ್ನಬಹುದು. ಅಂತೆಯೇ ಎಷ್ಟೋ ವರುಷಗಳ ಯುದ್ಧ ಪೀಡೆಯಿಂದಲೂ ಅಪ್ರಾಗತಿಕ ಚಿಯಾಂಗ್ ಕೈಶೇಕರಾಡಳಿತೆಯಿಂದಾಗಿಯೂ ಆರ್ಥಿಕ ದಿವಾಳಿಗಿರಿಯ ತುತ್ತ ತುದಿಗೇರಿರುವ ಚೈನದಲ್ಲಿ ತಾವು ಇನ್ನಷ್ಟು ಅಧಿಮೋಲು ಮಾಡಬೇಕಾಗಿ ಬಂತೆಂಬುದರಿಂದ ಮಾವೊ ಟ್ಸೆ ಟಂಗರೇನೂ ಹಿಗ್ಗಲಿಕೆ ಪಡುತ್ತಿಲ್ಲ. ದೇಶಪ್ರೇಮಿಗಳಾದ ಅವರಲ್ಲಿ ಖಡ್ಗ ಕೆಳಗಿಟ್ಟು ನೇಗಿಲು ಹಿಡಿಯುವ ಆತುರವೇ ಇದೆ. ವಿಸ್ತಾರದಲ್ಲೂ ಅಧೋಗತಿಯ ಮಟ್ಟಕ್ಕೂ ಪ್ರಪಂಚದಲ್ಲೇ ಸರ್ವಪ್ರಥಮವಾಗಿರುವ ಚೈನದ ಪುನರ್ರಚನೆಗೆ ಬ್ರಿಟನ್, ಅಮೇರಿಕ, ರಶ್ಯ ಮತ್ತಿತರ ಎಲ್ಲಾ ರಾಷ್ಟ್ರಗಳ ಎಷ್ಟು ಸಹಾಯ ದೊರೆತರೂ ಬೇಕೇಬೇಕು. ಆದರೆ, ಒಂದೋ ರಶ್ಯ, ಇಲ್ಲವೇ ಅಮೇರಿಕ ಎಂಬ ಪ್ರಶ್ನೆ ಬಂದರೆ ಇಂತಹ ಸಹಾಯದ ಮಟ್ಟಿಗೆ ಅಮೇರಿಕವೇ ವಾಸಿ. ಹೀಗಾಗಿ ಕಮ್ಯೂನಿಸ್ಟ್ ತತ್ವ ಪಾಲನೆ ಮತ್ತು ಭಂಡವಾಳಶಾಹೀ ವಿರುದ್ಧ ಧೋರಣೆಯ ಮಟ್ಟಿಗೆ ಚೈನೀ ಕಮ್ಯೂನಿಸ್ಟರು ಆತ್ಮವಂಚನೆ ಮಾಡಿಕೊಳ್ಳಲಾರರಾದರೂ ಪ್ರಕೃತ ಪರಿಸ್ಥಿತಿಯ ಒತ್ತಡದಿಂದಾಗಿ ನಮ್ಮ ಅಂದಿನ ಸಮಾಜವಾದಿ ನೆಹರುಗಳು ಇಂದು ಸೌಮ್ಯವಾದಿಯಾಗಿರುವಂತೆಯೇ ಚೈನದ ಕಮ್ಯೂನಿಸ್ಟ್ ನಾಯಕ ಮಾವೊ ಟ್ಸೆಟಂಗರೂ ತುಲನಾತ್ಮಕ ಶಾಂತ ಧೋರಣೆ ವಹಿಸಲೂ ಬಹುದು.

ಅಂತರ್ದೇಶೀಯ—

ಜಾಗತಿಕ ರಂಗದಲ್ಲಿ ಚೈನಾಯುದ್ಧವೊಂದನ್ನು ಬಿಟ್ಟರೆ ಲೋಕದ ಕಣ್ಣು ಕುಕ್ಕುವಷ್ಟು ದೊಡ್ಡ ಪ್ರತ್ಯಕ್ಷ ಹೋರಾಟ ಬೇರೆಲ್ಲಿಯೂ ಇಲ್ಲ; ಆದರೆ ಘರ್ಷಣೆ, ಗೊಂದಲಗಳೂ, ಬರ್ಮಾ ಯುದ್ಧದಂತಹವೂ ಯಥಾಸ್ಥಿತಿಯಲ್ಲಿವೆ. ವಿವಾದಗಳು ಮಾತ್ರ ಕಳೆದ ದಿನಗಳಲ್ಲಿ ಕವಲೊಡೆದು ಬೆಳೆದಿವೆ. ಸ್ವ-ಪರ ಸಂಬಂಧವೆರಡೂ ಇರುವ ಕಾಶ್ಮೀರ, ಫ್ರೆಂಚ್ ವಸಾಹತು, ಸಂಬಂಧದ ವಿವಾದಗಳು, ನೇಪಾಲದ ಗೊಂದಲದ ಕುರಿತಾದ ಆಸಕ್ತಿ ಭಾರತದ ಪಾಲಿನವಾಗಿವೆ.

ಪ್ಯಾರಿಸ್ ಮಾತುಕತೆ

ರಶ್ಯಾ, ಅಮೇರಿಕ, ಇಂಗ್ಲಾಂಡು, ಫ್ರಾನ್ಸ್—ಈ ಮಹಾ ಚತುರ್ರಾಷ್ಟ್ರಗಳ ವಿದೇಶಮಂತ್ರಿಗಳು ಪ್ಯಾರಿಸಿನಲ್ಲಿ ಕೆಲವು ದಿನಗಳಿಂದ ಸಮ್ಮೇಳನ ಸೇರಿ ಜರ್ಮನಿ ಸಂಬಂಧದ ಮಾತುಕತೆಗಳನ್ನು ನಡೆಸುತ್ತಿದ್ದಾರಷ್ಟೆ? ಏಕೀಕೃತ ಜರ್ಮನಿಗೆ ಈ ಚತುರ್ರಾಷ್ಟ್ರಗಳ ಸಂಯುಕ್ತಾಡಳಿತೆಯೊಂದನ್ನು ನಿರ್ಮಿಸುವ ಮಾತುಕತೆ ಜಯಶೀಲವಾಗಿಲ್ಲ. ಆ ಸಂಬಂಧದ ರಶ್ಯದ ಯೋಜನೆಗೂ ಪಾಶ್ಚಾತ್ಯ ರಾಷ್ಟ್ರಗಳ ಯೋಜನೆಗೂ ತಾಳಮೇಳ ಕೂಡಿಬಾರದೆ ಅದು ನಿರರ್ಥಕವಾಯಿತು. ಈಗ ಪ್ರತ್ಯೇಕವಾಗಿ ಬರ್ಲಿನಿನಲ್ಲಿ ಚತುರ್ರಾಷ್ಟ್ರ ಸಂಯುಕ್ತಾಧಿಕಾರ ನಿರ್ಮಿಸುವ ಸಂಬಂಧದ ಚರ್ಚೆಗಳು ಈ ಚತುರ್ವಿದೇಶೀ ಮಂತ್ರಿಕೂಟದಲ್ಲಿ ಗುಪ್ತವಾಗಿ ನಡೆಯುತ್ತಿವೆ. ಬರ್ಲಿನಿನಲ್ಲೀಗ ನಡೆದಿರುವ ರೈಲ್ವೇ ಮುಷ್ಕರದ ಮುಕ್ತಾಯ ಸಂಬಂಧದ ಮಾತುಕತೆ ಕೂಡಾ ಫಲಿಸಿಲ್ಲ. ಪ್ಯಾರಿಸ್ ಚರ್ಚೆಯ ವೇಳೆ, ಹೊಂದಿಕೆಯಿರುವ ಜಪಾನಿನ ಆಡಳಿತೆಯಂತಹ ಪ್ರಶ್ನೆಗಳೂ ಮುಂದೆ ಬಂದಿದ್ದುವೆಂದೂ ಯಾವುದರಲ್ಲೂ ಇಕ್ಕೆಡೆಯವರ ದ್ವಿವಿಧಾಭಿಪ್ರಾಯಗಳೊಂದುಗೂಡಿದುದಿಲ್ಲವೆಂದೂ ತಿಳಿದುಬಂದಿದೆ. ಆದರೂ ಎರಡೂ ಪಕ್ಷಗಳವರಿಗೆ ಸಮ್ಮತವಿರುವ ಸರ್ವಸಾಮಾನ್ಯ ಸಂಗತಿಗಳನ್ನುಲೇಪೆ ಹಚ್ಚಿಕೊಂಡೆವೆಂದು ತೋರಿಸಿ, ಒಮ್ಮತವಾಗದ ಮುಖ್ಯ ವಿಷಯಗಳನ್ನು ಮುಂದುವರಿಸಿಡುವ ಆಟವಾಡಿ ಪ್ಯಾರಿಸ್ ಸಮ್ಮೇಳನವು ವಸ್ತುತಃ ಪರಾಭವಗೊಂಡು ಮುಗಿಯಬಹುದೆಂದು ನಿರೀಕ್ಷಿಸಬಹುದು.

ಬರ್ಮಾ ಹೋರಾಟ

ಬರ್ಮದ ಒಳಗಡೆಯ ಹೋರಾಟವು ಗಣ್ಯ ಮಾರ್ಪಾಟವೇನೂ ಇಲ್ಲದೆ ಯಥಾಪ್ರಕಾರ ಸಾಗಿವೆ. ಒಳಗಿನ ಈ ಖಾಡಾಖಾಡಿ ಸಂಗ್ರಾಮ ಮತ್ತು ಆ ಕಡೆಯಿಂದ ತಮ್ಮ ಗಡಿಯತ್ತ ಚೈನೀ ಕಮ್ಯೂನಿಸ್ಟರು ನುಗ್ಗುತ್ತಿರುವರೆಂಬ ಸುದ್ದಿಯ ನಡುವೆ ಇಂದಿನ ಬರ್ಮಾ ಸರಕಾರವು ಶಕ್ತಿ ಮತ್ತು ದೃಢತೆಯಿಂದ ತನ್ನ ಕಾರ್ಯ ಸಾಗಿಸುತ್ತಿರುವುದು ಕಂಡು ಬರುತ್ತಿದೆ. ಕಾಮನ್‌ವೆಲ್ತ್ ರಾಷ್ಟ್ರಗಳಿಂದ ಸಹಾಯ ಪಡಕೊಳ್ಳುತ್ತಿರುವ ಹಂಚಿಕೆ, ಬರ್ಮದ ನೈಸರ್ಗಿಕ ಸೌಕರ್ಯಗಳನ್ನು ಕಾರ್ಯಕ್ಕೆ ಹಚ್ಚಬಲ್ಲ ವಿದೇಶೀ ಭಂಡವಾಳಗಳಿಗೆ ಸ್ವಾಗತ-ಮುಂತಾದ ವಿಧಾನಗಳಿಂದ ತನ್ನ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಬರ್ಮಾ ಸರಕಾರ ಮಾಡುತ್ತಿದೆ. ಅತ್ತ ಚೈನಾದ ಗಡಿಯಲ್ಲಿ ಚೈನೀ ಕೆಂಪು ದಳವು ಬರ್ಮಾ ಸರಹದ್ದಿಗೆ ದೊಡ್ಡ ಧಾಳಿಯನ್ನಾರಂಭಿಸಿದೆ, ಎಂಬ ಸುದ್ದಿಯು ಅತಿಶಯೋಕ್ತಿಯದೆಂದು ತಿಳಿದುಬಂದಿದೆ. ಚೈನೀ ಕಮ್ಯೂನಿಸ್ಟ್ ಸೇನೆ ಬರ್ಮದಗಡಿ ವರೆಗೂ ಚೈನವನ್ನಾಕ್ರಮಿಸಿಕೊಳ್ಳಲು ಇನ್ನು ಹೆಚ್ಚು ದಿನಹಿಡಿಯದೇನೋ ನಿಜ. ಆದರೆ ಈಗ ಈ ಗಡಿಯತ್ತ ಬಂದಿರುವವರ ಸಂಖ್ಯೆ 10 ಸಾವಿರಕ್ಕೆ ಮೇಲ್ಪಟ್ಟಿಲ್ಲ; ಮೇಲಾಗಿ ಅವರನ್ನು ಮೂಲ ಕಮ್ಯೂನಿಸ್ಟರೆಂದಾಗಲೀ ಕಮ್ಯೂನಿಸ್ಟರಾಗಿ ಮಾರ್ಪಟ್ಟವರೆಂದಾಗಲೀ ಹೇಳಲಾಗುವದಿಲ್ಲ; ಚೈನೀ ಕೆಂಪು ಸೇನೆ ಬರ್ಮದೊಳಗೆ ನುಗ್ಗುವದು ಅಸಂಭವವೆಂದೇ ಬರ್ಮದ ಸರಕಾರೀ ನಿರೀಕ್ಷಕರ ನಂಬಿಕೆ. ಆದರೂ ಆ ಸರಹದ್ದಿನಲ್ಲಿ ತಕ್ಕ ರಕ್ಷಣಾವ್ಯವಸ್ಥೆಗಳಾಗಿವೆ; ಮತ್ತು ಆ ಭಾಗದ ಜನರಿಗೆ ಭಾವೀ ಸಂಭವಗಳನ್ನು ದಿರಿಸಲಾಗುವ ಬೌದ್ಧಿಕ ಶಿಕ್ಷಣಗಳನ್ನು ಕೊಡಲಾಗುತ್ತಿದೆ.

ಕಾಶ್ಮೀರದ ವಿವಾದ

ಕಾಶ್ಮೀರದ ವಿವಾದದ ಕುರಿತು ಭಾರತ ಮತ್ತು ಪಾಕಿಸ್ತಾನಗಳೊಳಗೆ ಪೀಠಿಕಾ ಸಂಧಾನಮಾಡಲು ಕಾಶ್ಮೀರ ಕಮಿಶನಿನವರು ಕಳುಹಿದ್ದ ಸೂಚನೆಗಳಿಗೆ ಭಾರತ ಮತ್ತು ಪಾಕಿಸ್ತಾನವೆರಡರ ಉತ್ತರಗಳೂ ಬಂದಿವೆ. ಕಾಶ್ಮೀರ ಕಮಿಶನಿನವರು ಅವುಗಳ ಪಂಚಯಾತ್ಮಕ ಪ್ರಥಮ ವರದಿಯನ್ನು ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿ ಮಿ. ಟ್ರಿಗ್ವಿ ಲೀ ಅವರಿಗೆ ಕಳುಹಿದ್ದಾರೆ. ಮತ್ತು ತಾವು ಅವುಗಳಪರಾಮರ್ಶೆ ನಡೆಸುತಿದ್ದಾರೆ. ಭಾರತ, ಪಾಕಿಸ್ತಾನಗಳಿಂದ ಬಂದ ಉತ್ತರಗಳನ್ನು ಕಂಡು, ಇನ್ನು ಸಂಧಾನಕಾರ್ಯವಸಾಧ್ಯವೆಂಬರ್ಥದ ವರದಿಯನ್ನು ಕಾಶ್ಮೀರ ಕಮಿಶನಿನವರೊಪ್ಪಿಸಿದ್ದಾರೆಂದೂ, ಪರಾಭವದೊಡನೆ ಮರಳಿ ತಮ್ಮ ಕೈಗೆ ಬಂದ ಕಾಶ್ಮೀರ ಪ್ರಶ್ನೆಯ ಪರ್ಯಾಲೋಚನೆಗಾಗಿ ಭದ್ರತಾ ಕೌನ್ಸಿಲು ಸೇರಬಹುದೆಂದೂ ವಾರ್ತೆಯೊಮ್ಮೆ ಹರಡಿದ್ದಿತು. ಆದರೆ ಅಂತಹ ನಿರಾಶಾಜನಕ ಪರಿಸ್ಥಿತಿ ಈವರೆಗೆ ಉಂಟಾಗಿಲ್ಲವೆಂದು ತಿಳಿದು ಬರುತ್ತದೆ. ಆದರೂ ಸರ್ವಶ್ರುತವಿರುವ ಭಾರತ—ಪಾಕಿಸ್ತಾನ್ ಭಿನ್ನಾಭಿಪ್ರಾಯಗಳ ಮೊನೆಗಳು ಸ್ವಲ್ಪವೂ ಮೊಂಡಾಗಿಲ್ಲವಾದ್ದರಿಂದ ಪ್ರಶ್ನಾತೀತ ನಂಬಿಕೆಗೆ ಅವಕಾಶ ದೊರೆತಿಲ್ಲ. ಕಳೆದ ವಾರ ಪಂಡಿತ ನೆಹರುಗಳು ಶ್ರೀನಗರಕ್ಕೆ ಹೋಗಿ ಅಲ್ಲಿಯ ತನ್ನ ಎರಡು ಭಾಷಣಗಳಲ್ಲಿ ಕಾಶ್ಮೀರದ ಕಡೆಗಿನ ಭಾರತದ ಧೋರಣೆಯನ್ನು ಸುಸ್ಪಷ್ಟಪಡಿಸಿದ್ದಾರೆ. "ಕಾಶ್ಮೀರವು ಭಾರತದೊಂದಿಗೆ ಪಡೆದ ಜೋಡಣೆಯು ಅಭೇದ್ಯವಿದೆ, ಅಂತೆಯೇ ತ್ರಿಕಾಲಗಳಲ್ಲಿ ಭಾರತ ಮತ್ತು ಕಾಶ್ಮೀರದೊಳಗಿದ್ದ, ಇರುವ ಹಾಗೂ ಇರಲಿರುವ ಸಂಬಂಧವು ಅವಿಚ್ಛಿನ್ನವಾದುದು. ಏನೇ ಆದರೂ ಕಾಶ್ಮೀರಕ್ಕೆಕೊಟ್ಟಿರುವ ವಾಗ್ದಾನಗಳನ್ನಾಗಲೀ,

ಮದ್ಯಪಾನ ನಿಷೇಧವೆಂದರೇನು?

* ಅದು ಜನಾಂಗದ ಸಂಪತ್ತನ್ನುಳಿಸುವುದು.
* ಅದು ಜನತೆಯನ್ನು ಯೋಗ್ಯ ನಾಗರಿಕರನ್ನಾಗಗೊಡಲು ತರಬೇತಿ ಕೊಡುವುದು.
* ಅದು ಅನಿವಾರ್ಯವಾದ ಒಂದು ಸಾಮಾಜಿಕ ಸುಧಾರಣೆ.
* ಅದು ಗೃಹ ಜೀವನದ ಪಾವಿತ್ರ್ಯವನ್ನು ಕಾಪಾಡುವುದು.
* ಅದು ಪ್ರತಿಯೋರ್ವ ಬಾಲಕನಿಗೆ ಪ್ರಗತಿಗೆ ಸಂದರ್ಭವನ್ನೊದಗಿಸುತ್ತದೆ.

ಅದನ್ನು ಪ್ರೋತ್ಸಾಹಿಸುವ ಮೂಲಕ ನೀವು
ನಿಮ್ಮ ಸರಕಾರಕ್ಕೆ ಸಹಾಯ ಸಲಿಸಿದಂತಾಗುವುದು.

ಈ ಜಾಹೀರಾತಿನ ಸ್ಥಳ:—

ಕೆನರಾ ಬ್ಯಾಂಕ್ ಲಿಮಿಟೆಡ್

ಇವರ ಸೇವಾದಾನ.

ಕರ್ನಾಟಕ ಏಕೀಕರಣವೇ ಕನ್ನಡ ಜನತೆಯ ಮುಖ್ಯ ಧ್ಯೇಯ!
ಹರಿದು ಹಂಚಿದ ಕನ್ನಡ ಜನತೆಯನ್ನು ಒಂದುಗೂಡಿಸುವ 2 ಕೋಟಿ ಕಂಠಗಳ ಮಹಾ ಧ್ವನಿಯೇ ಏಕೀಕರಣದ ಮಹಾ ಗುರಿ.
ಅಂತೆಯೇ ಶಾಸ್ತ್ರೀಯ ರೀತಿಯ ಆಯುರ್ವೇದ ತಯಾರಿಯಿಂದ ಜನಸಾಮಾನ್ಯರ ಸೇವೆಯೇ ಸುಧಾಕರರ ಮಹಾ ಧ್ಯೇಯ.

ಪಾಯಿಲೋ ಕ್ಯೂರಾ:— ಮೂಲವ್ಯಾಧಿಗೆ ಇನ್ನುಮೇಲೆ ಭಯಪಡಬೇಕಾದ್ದಿಲ್ಲ. ನಮ್ಮ ಪಾಯಿಲೋ ಕ್ಯೂರಾ ಸೇವಿಸುವುದರಿಂದ ಮೊಳಿಕೆಯನ್ನು ನಿರ್ಮೂಲಗೊಳಿಸಿ, ರಕ್ತಸ್ರಾವವನ್ನು ನಿಲ್ಲಿಸುವುದು. ಮತ್ತು ಪ್ರಕೃತಿಯನ್ನು ಸುಲಭಗೊಳಿಸುವುದು.
ಇದೊಂದು ಆಯುರ್ವೇದದಲ್ಲಿ ರತ್ನವಿದ್ದಂತೆ.
ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ ವಿಚಾರಿಸಿರಿ:—
ದಕ್ಷಿಣ ಭಾರತದ ಪ್ರಮುಖ ವಿತರಣಕರ್ತರು.
ಯು. ಐ. ಬಿ. ಬಿ. ಎಂಡ್ ಕಂಪೆನಿ,
ಪೋಸ್ಟ್‌ಬೋಕ್ಸ್ ನಂಬ್ರ 38, ರೋಯಲ್ ಮಹಾಲ್, ಉಡುಪಿ. ದ. ಭಾ.

ಆದರೆ ಕಡೆಗಿನ ತನ್ನ ಕರ್ತವ್ಯಗಳನ್ನಾಗಲೀ ಭಾರತವು ಮರೆಯುವಂತಿಲ್ಲ" ಎಂದು ಪಂಡಿತಜೀ ಆ ಸಂಬಂಧದ ಒಳಸಂಶಯ ನೋಡಗಳನ್ನೆಲ್ಲಾ ಚದರಿಸಿಬಂದಿದ್ದಾರೆ. ಪೂರ್ವ ನಿಶ್ಚಯಪ್ರಕಾರ ಕಾಶ್ಮೀರದ ಪ್ರತಿನಿಧಿಗಳು ಈಗ ಭಾರತ ಘಟನಾಸಮಿತಿಯಲ್ಲಿ ಭಾಗವಹಿಸುತಿದ್ದಾರೆ.

ಭಾರತದ ಫ್ರೆಂಚ್ ವಸಾಹತು

ಭಾರತದಲ್ಲಿ ಈಗಲೂ ಫ್ರೆಂಚ್ ವಸಾಹತುಗಳಾಗಿ ಉಳಿದಿರುವ ಪಾಂಡಿಚೆರಿ ಮೊದಲಾದ ಐದು ಕ್ಷೇತ್ರಗಳ ಭವಿಷ್ಯ ನಿರ್ಧಾರ ಕಾರ್ಯವು ವಿವಾದಗಳಿಗೆಡೆಕೊಟ್ಟಿದೆ. ಬಹುತೇಕವಾಗಿ ಬ್ರಿಟಿಷರು ಭಾರತವನ್ನು ಹಿಡಿದಿದ್ದ ಹೊತ್ತಿನಲ್ಲೇ, ಪ್ರಥಮತಃ ಹೆಚ್ಚು ಭಾಗಗಳನ್ನು ಹಿಡಿದಿದ್ದ ಫ್ರೆಂಚರು ಹಿಂದೆಗೆಯುತ್ತಾ ಹೋಗಿ ಕೊನೆಗೆ ಶಾಶ್ವತವಾಗಿ ಈ ಐದು ತುಂಡುಗಳಲ್ಲಿ ಉಳಿದಿದ್ದರು. ಇಡೀ ದೇಹದಲ್ಲಿ ವಾಸಿಗೊಂಡ ತುನ್ನು ಉಂಗುಷ್ಟ ಪರಿಮಾಣ ಉಳಿದು ಕೊಂಡಿತೆಂಬಂತೆ ಅಖಿಲ ಭಾರತದ ಪರಕೀಯ ದಾಸ್ಯ ತೊಲಗಿದರೂ, ಈ ಚಿಕ್ಕ ಕ್ಷೇತ್ರಗಳಲ್ಲಿ ನಿಂತಿದೆ. ಭಾರತದ ನಿಜಾಂಗಗಳಾಗಿರುವ ಫ್ರೆಂಚ್ ವಸಾಹತುಗಳು ಭಾರತದೊಂದಿಗೆ ಏಕೀಕೃತಗೊಳ್ಳಲು ಬ

ಸರಕಾರದ ಒಪ್ಪಿಗೆ ಪಡೆದು ಓರ್ವ ಪಕ್ಷಾತೀತ ಪ್ರತಿನಿಧಿ ಹಾಜರಿರಬೇಕೆಂದು ನಿಶ್ಚಯವಾಗಿದ್ದಿತು. ಆದರೀಗ ಭಾರತ ಸರಕಾರದ ಅಭಿಪ್ರಾಯ ಕೇಳದೇನೇ ಅಂತರಾಷ್ಟ್ರೀಯ ನ್ಯಾಯತೀರ್ಮಾನ ಕೋರ್ಟಿನ ಉಪಾಧ್ಯಕ್ಷರು ಫ್ರೆಂಚರ ಸೂಚನಾನುಸಾರವಾಗಿ ಅವಲೋಕನಾಧಿಕಾರಿಯನ್ನು ಚಂದ್ರನಾಗೋರಿಗೆ ಕಳುಹಿಕೊಟ್ಟಿದ್ದಾರೆ. ಈತ ತಮ್ಮ ಅಭಿಪ್ರಾಯಾನುಸಾರ ನೇಮಕಗೊಂಡವನಲ್ಲವೆಂದೂ, ತಾವಾತನನ್ನು ಒಪ್ಪಿಕೊಳ್ಳುವಂತಿಲ್ಲವೆಂದೂ ಭಾರತ ಸರಕಾರವು ನಿಷೇಧ ಸೂಚಿಸಿದೆ. ಅಂತೆಯೇ ಚಂದ್ರನಾಗೋರಿನ ಮುನ್ಸಿಪಲ್ ಎಸೆಂಬ್ಲಿ ಮತ್ತು ಆಡಳಿತೆ ಕೌನ್ಸಿಲಿನ ಅಧ್ಯಕ್ಷರೂ ಈ ಏಕಪಕ್ಷೀಯ ಮತ್ತು ಅನ್ಯಾಯದ ನೇಮಕಕ್ಕಾಗಿ ಸಂಬಂಧಪಟ್ಟವರಿಗೆಲ್ಲಾ ತೀವ್ರ ನಿಷೇಧ ಸೂಚನೆ ಮಾಡಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿ ಟ್ರಿಗ್ವಿ ಲೀಯವರು, ತಮ್ಮ ಅಭಿಮತವನ್ನು ಮುಂದಾಗಿ ಕೇಳಿಕೊಳ್ಳದ ವಿಷಯವಿದಾದ್ದರಿಂದ ಈ ವಿವಾದದಲ್ಲಿ ತಾವು ಕೈಹಾಕುವಂತಿಲ್ಲವೆಂದಿದ್ದಾರೆ. ಚಂದ್ರನಾಗೋರು ನಗರಕ್ಷೇತ್ರವು ಬಂಗಾಳದೊಳಗಡೆಯಲ್ಲಿದ್ದು, ಒಂದುಬಾರಿ ಭಾರತೀಯ ಕಮ್ಯೂನಿಸ್ಟರದನ್ನು ಸ್ವಾಧೀನಪಡಿಸಿಕೊಂಡು ಭಾರತಕೇಂದ್ರದೊಳಗೆ

–ಆಗುಹೋಗುಗಳು

ಜ್ಞವಿನೆಯೆಂದೂ, ಆದರಾಕಾರ್ಯವನ್ನು ಫ್ರೆಂಚ್ ಸರಕಾರದೊಡನೆ ಸದ್ವ್ಯವಹಾರ ಮೂಲಕವೇ ಸಾಧಿಸುವ ಬಯಕೆ ತಮ್ಮದೆಂದೂ ಭಾರತ ಸರಕಾರವು ಸ್ಪಷ್ಟಪಡಿಸಿದ್ದಿತು. ಫ್ರೆಂಚ್ ಸರಕಾರವಾದರೋ ಭಾರತದ ತನ್ನೀ ಪಂಚ ವಸಾಹತುಗಳು ಭಾರತಕ್ಕೆ ಸೇರಬೇಕೋ ಬೇಡವೋ ಎಂಬ ಪ್ರಶ್ನೆಯನ್ನು ಆಯಾಯ ವಸಾಹತುಗಳ ಜನಮತ ಸಂಗ್ರಹದ ಮೂಲಕವೇ ನಿರ್ಧರಿಸಲೊಪ್ಪಿದೆ. ಆದರೆ ತೋರುವಿಕೆಯ ಸ್ನೇಹಾಚಾರ ಹೀಗಿದ್ದರೂ ಜನಮತ ಸಂಗ್ರಹ ವ್ಯವಸ್ಥೆ ಮತ್ತಿತರ ವ್ಯವಹಾರಗಳ ಕುರಿತು ಫ್ರೆಂಚ್ ಮತ್ತು ಭಾರತ ಸರಕಾರಗಳೊಳಗೆ ತೀಕ್ಷ್ಣ ಭಿನ್ನಾಭಿಪ್ರಾಯಗಳೆದ್ದಿವೆ. ಈ ಮತ ಸಂಗ್ರಹವು ಚಂದ್ರನಾಗೋರಿನಲ್ಲಿ ಇದೇ ಜೂನ್ ತಾ 19ಕ್ಕೂ, ಉಳಿದ ನಾಲ್ಕು ವಸಾಹತುಗಳಲ್ಲಿ ಬರುವ ಡಿಸೆಂಬರ ತಾ 11ಕ್ಕೂ ನಡೆಯಬೇಕೆಂದು ಫ್ರೆಂಚ್ ಸರಕಾರದ ನಿರ್ಧಾರ. ಚಂದ್ರನಾಗೋರಿನ ಮತ ಸಂಗ್ರಹದ ವೇಳೆ ಅದರ ಪರಿಶೀಲನೆಗಾಗಿ ಭಾರತ ಸರಕಾರದ ಓರ್ವ ಪ್ರತಿನಿಧಿ ಮತ್ತು ಭಾರತ

ಸೇರಿತೆಂದು ಘೋಷಿಸಿದ್ದರೂ ಅಂತಹ ಜುಲುಮೆಯಿಲ್ಲದೆ ಶಾಂತ ರೀತಿಯಿಂದ ಎಲ್ಲವನ್ನೂ ತೀರ್ಮಾನಿಸಿಕೊಳ್ಳಬೇಕೆಂಬುದಕ್ಕಾಗಿಯೇ ಭಾರತ ಸರಕಾರವದನ್ನು ಈ ವರೆಗೂ ಇದ್ದಂತೆ ಬಿಟ್ಟಿದ್ದಿತು. ಈ ವಸಾಹತುಗಳ ಸಂಬಂಧವಾಗಿ ಫ್ರಾನ್ಸ್ ಮತ್ತು ಭಾರತ ಸರಕಾರಗಳೊಳಗಿದ್ದ ಸುಂಕದ ಒಪ್ಪಂದದ ವಾಯಿದೆ ಮುಗಿದೊಡನೆ ಭಾರತವು ಹೊಸ ಒಪ್ಪಂದ ಮಾಡಿಕೊಳ್ಳದೆ ವ್ಯಾಪಾರಸಂಬಂಧ ಬಿಟ್ಟಿದ್ದಿತು. ಇನು ಆ ವಸಾಹತುಗಳ ಮೇಲೆ ಹೇರಿದ ಆರ್ಥಿಕ ದಿಗ್ಬಂಧನವೆನ್ನುತ್ತಾ ಫ್ರೆಂಚ್ ಸರಕಾರವು ಮನವುರಿದುಕೊಂಡು ದೂರುತ್ತಿದೆ. ನಿಜವಾಗಿ ಮತ್ತು ನಿರ್ವಿವಾದವಾಗಿ ಭಾರತದ ಉಪಾಂಗಗಳಾಗಿರುವ ಈ ವಸಾಹತುಗಳ ಆಡಳಿತೆಯನ್ನು ಭಾರತಕ್ಕೊಪ್ಪಿಸಿಕೊಟ್ಟು ಬ್ರಿಟಿಷರಂತೆ ಬಿಡಾರಕೀಳುವ ಆಲೋಚನೆಯು ಈ ಕಾಲದಲ್ಲಿ ಕೂಡಾ ಫ್ರೆಂಚರ ತಲೆಯೊಳಗೆ ಸುಳಿಯದಿರುವುದನ್ನು ಕಂಡರೆ ಒಳಜಗಳದಿಂದ ಚಿಲ್ಲಾಪಿಲ್ಲಿಯಾಗಿರುವ ಫ್ರಾನ್ಸಿಗಾದರೂ ಮೇಲಧಿಕಾರ ಲಾಲಸೆಯಿಷ್ಟಿದೆ ಎಂಬುದು ಸ್ಪಷ್ಟವಾಗುವದು.

ಅಫ್ಘಾನಿ-ಪಾಕಿಸ್ತಾನ್ ವಿವಾದ

ಭಾರತಕ್ಕೂ ಹಿತಸಂಬಂಧವಿರುವ ಎರಡು ಗಣ್ಯ ಆಂದೋಲನಗಳು ಭಾರತದ ನೆರೆಯಲ್ಲೇ ನಡೆಯುತ್ತಿರುವದನ್ನು ಕಡೆಗಣಿಸಲಾಗುವದಿಲ್ಲ. ಒಂದು ಸರಹದ್ದು ಸಂಬಂಧವಾಗಿ ಪಾಕಿಸ್ತಾನ್, ಅಫ್ಘಾನಿಸ್ಥಾನಗಳೊಳಗೆದ್ದಿರುವ ಘರ್ಷಣೆ; ಮತ್ತೊಂದು ನೇಪಾಲದ ಜನತಾಂದೋಲನ. ಗಡಿನಾಡು ಪ್ರಾಂತ್ಯವು ಭಾರತಕ್ಕೆ ಸೇರಬೇಕೋ, ಪಾಕಿಸ್ತಾನಕ್ಕೋ ಎಂಬ ಆ ಬಾರಿಯ ಮತಗಣನೆಯ ವೇಳೆಯಲ್ಲೇ ಖಾನ್ ಸಹೋದರರು ತಮ್ಮದು ಪ್ರತ್ಯೇಕ ಪಠಾಣಸ್ಥಾನದ ಬೇಡಿಕೆಯೆಂದು ತಾಟಸ್ಥ್ಯ ವಹಿಸಿದ್ದರು. ಪಠಾಣ ಪ್ರದೇಶವಾದ ಗಡಿನಾಡು ಪ್ರಾಂತ್ಯವು ಸಂಸ್ಕೃತಿ, ವಹಿವಾಟು ಸಂಬಂಧ ಮತ್ತು ಭೌಗೋಲಿಕ ದೃಷ್ಟಿಯಿಂದಲೂ ತಮ್ಮ ಹಕ್ಕಿನದೆಂದೂ ಅಲ್ಲಿ ವರೆಗೂ ತಮ್ಮ ಗಡಿ ವಿಸ್ತಾರಗೊಳ್ಳಬೇಕೆಂದೂ ನೆರೆ ರಾಷ್ಟ್ರ ಅಫ್ಘಾನಿಸ್ಥಾನವು ವಾದಿಸುತ್ತಾಬಂದಿದೆ. ಪಾಕಿಸ್ತಾನವೀ ವಾದವನ್ನು ಪೂರ್ಣ ಧಿಕ್ಕರಿಸಿ, ತಂಟೆಕೊಟ್ಟ ಸರಹದ್ದು ವಲಯದಮೇಲೆ ವಿಮಾನಧಾಳಿ ಮತ್ತು ಸೇನಾಧಾಳಿಯನ್ನು ನಡೆಯಿಸುತ್ತಾಬಂದಿದೆ. ಈಗ ಈ ವಾದದ ಬಿಸಿ ಹೆಚ್ಚಿದಂತಿದೆ. ಸರಹದ್ದು ಪ್ರದೇಶಗಳ ಪಠಾಣರ ಸ್ವೇಚ್ಛೆಯ ಮತಸಂಗ್ರಹಿಸಿ, ಆ ಮೂಲಕವೇ ಆ ಭಾಗಗಳು ಪಾಕಿಸ್ತಾನಕ್ಕೋ ಅಫ್ಘಾನಿಸ್ಥಾನಕ್ಕೋ ಎಂಬುದನ್ನು ತೀರ್ಮಾನಿಸಬಹುದೆಂದು ಅಫ್ಘಾನಿಸ್ಥಾನವು ವಾದಿಸುತ್ತಿದೆ. ಪಾಕಿಸ್ತಾನದ ದೊರಗು ವರ್ತನೆಯ ವಿರುದ್ಧ ಕಾರ್ಯ ಕೈಕೊಳ್ಳಬೇಕೆಂದು ಕಾಬೂಲು ಸರಕಾರವನ್ನು ಒತ್ತಾಯಿಸುವ ಅರ್ಜಿಯು ಅಫ್ಘಾನಿಸ್ಥಾನದ ಪ್ರಜೆಗಳಿಂದಲೂ ಹೋಗಿದ್ದಿತು. ಅವರೆಲ್ಲರೂ ಶಾಂತ ಸಂಧಾನ ಪ್ರಯತ್ನಗಳ ಪರಿಣಾಮ ತಿಳಿದು ಬರುವವರೆಗೆ ಸಹನೆವಹಿಸಬೇಕೆಂದು ಅಫ್ಘಾನಿ ಪ್ರಧಾನಿಗಳೀಗ ಕೇಳಿಕೊಂಡಿದ್ದಾರೆ. ಪಾಕಿಸ್ತಾನ್ ಅಫ್ಘಾನಿ ಸರಹದ್ದು ಮಾರ್ಗದಲ್ಲಿ ಸಂಚರಿಸುವ ವಾಹನ ಬಂಡಿಗಳ ಮೇಲೆ ಅಫ್ಘಾನಿ ಸರಕಾರವೀಗ ನಿರ್ಬಂಧಗಳನ್ನು ಹಾಕಿದೆ. ಅಲ್ಲಿಂದ ಪಾಕಿಸ್ತಾನಕ್ಕೆ ಹೋಗುವ ಬಂಡೀ ಡ್ರೈವರುಗಳು, ಹತ್ತುದಿನಗಳೊಳಗೆ ಆ ಬಂಡಿಯನ್ನು ಮರಳಿ ಅಫ್ಘಾನಿಸ್ಥಾನಕ್ಕೆ ತರುವೆವೆಂಬುದಕ್ಕೆ ಜಾಮೀನಾಗಿ ಸಾಕಷ್ಟು ಹಣಕಟ್ಟಿ ಸರಕಾರದ ಪರ್ಮಿಟ್ ಪಡೆಕೊಂಡು ಹೊರಡಬೇಕೆಂದಾಗಿದೆ.

ಇತ್ತ ನೇಪಾಲದ ಪ್ರಜೆಗಳಾದ ಯೋಧ ಯಶಸ್ವಿನ ಘೂರ್ಖರು, ಅಲ್ಲಿಯ ರಾಣಾಗಳ ನಿರಂಕುಶಾಡಳಿತೆಯ ವಿರುದ್ಧವಾಗಿ ಸತ್ಯಾಗ್ರಹಾಂದೋಲನ ಹೂಡಿದ್ದು ಕಠೋರ ರೀತಿಯ ಬಂಧನ, ಶಿಕ್ಷೆಗಳು ಆಗುತ್ತಿವೆ. ಪಂಡಿತ ನೆಹರುಗಳು ನೇಪಾಲಾಂದೋಲನದ ಕುರಿತು ಆಸಕ್ತಿ ಪ್ರದರ್ಶಿಸಿದ್ದಾರೆ. ಈ ಸ್ವಾತಂತ್ರ್ಯಾಂದೋಲನದ ಮೇಲೆ ಸಹಾನುಭೂತಿಯನ್ನೂ ಮಧ್ಯಕಾಲೀನ ಮರ್ಜಿಯ ರಾಣಾ ಆಡಳಿತೆಯ ಮೇಲೆ ಅಶ್ರದ್ಧೆಯನ್ನೂ ಸೂಚಿಸಿ ಭಾರತದ ಸಮತಾವಾದಿಗಳೇ ಮುಂತಾದವರು ಪ್ರದರ್ಶನಗಳನ್ನು ನಡೆಸಿದ್ದಾರೆ. ದಿಲ್ಲಿಯಲ್ಲಾದ ಇಂತಹ ಪ್ರದರ್ಶನದ ಪರಿಣಾಮವಾಗಿ ಸಮತಾವಾದಿ ನಾಯಕ ಶ್ರೀ. ರಾಮ ಮನೋಹರ ಲೋಹಿಯಾ ಮುಂತಾದವರು ಬಂಧನಕ್ಕೊಳಗಾಗಿದ್ದಾರೆ.

ಘಟನಾ ಸಮಿತಿಯಲ್ಲಿ

ಭಾರತದ ಘಟನಾ ಸಮಿತಿಯು ರಾಜ್ಯಾಂಗ ವಿಧಾನಗಳ ತಯಾರಿಯನ್ನು ಕಳೆದ ದಿನಗಳಲ್ಲಿ ಭರದಿಂದ ನಡೆಯಿಸಿದೆ.

ಪ್ರಾಂತ್ಯಗಳು ಇನ್ನುಮುಂದೆ 'ಸಂಸ್ಥಾನ'ಗಳೆಂದು ಕರೆಯಲ್ಪಡಬೇಕು; ಗವರ್ನರರನ್ನು ಅಧ್ಯಕ್ಷರೇ ನೇಮಿಸಬೇಕು–ಎಂದಾಗಿದೆ. ಹಿಂದಿನ ಸೂಚನೆಯಂತೆ ಪ್ರಾಂತಿಕ ಗವರ್ನರರುಗಳೂ ಮತದಾರರಿಂದ ಆರಿಸಲ್ಪಡಬೇಕಾಗಿದ್ದಿತು. ಆದರೆ ಈ ವಿಧಾನವು ಪ್ರಜಾಸತ್ತಾ ರಾಜ್ಯಾಧಾರ ನಿರ್ವಹಣಕ್ಕೆ ಹಿತಕರವಲ್ಲವೆಂದು ಈ ಬಾರಿ ಘಟನಾಸಮಿತಿಯು ಗವರ್ನರರ ಚುನಾವಣೆಯ ಬದಲಿಗೆ ನೇಮಕವನ್ನೇ ಒಪ್ಪಿಕೊಂಡಿದೆ. ಅಂತೆಯೇ ಕೇಂದ್ರಾಧಿಕಾರದ ಏಜಂಟರಂತಿರುವ ಗವರ್ನರರಿಗೆ, ರಾಜ್ಯಶಾಸನದನ್ವಯ ತನ್ನಿಚ್ಛೆಯ ಶಾಸನಗಳನ್ನು ಹೊರಡಿಸುವ ಸ್ವಾತಂತ್ರ್ಯವು, ಈ ವರೆಗಿನ ಗವರ್ನರರಿಗಿದ್ದಂತೆಯೇ ಇದೆ. ಮತ್ತು ಯಾವುದೇ ಶಿಕ್ಷೆಯನ್ನು ತಗ್ಗಿಸುವ, ಮಾಫಿಮಾಡುವಂತಹ ಅಧಿಕಾರಗಳೂ ಗವರ್ನರರಿಗುಳಿಸಲ್ಪಟ್ಟಿವೆ. ಮಂತ್ರಿಮಂಡಲದಲ್ಲಾಗುವ ಎಲ್ಲಾ ನಿರ್ಣಯಗಳನ್ನೂ ಮುಖ್ಯ ಮಂತ್ರಿಗಳು ಗವರ್ನರರಿಗೆ ತಿಳಿಸಬೇಕು. ಮತ್ತು ಆ ಸಂಬಂಧವಾಗಿ ಗವರ್ನರರು ಅಪೇಕ್ಷಿಸುವ ಸಂಗತಿ ಸುದ್ದಿಗಳನ್ನು ಗವರ್ನರರಿಗೆ ಒದಗಿಸಿಕೊಡಬೇಕು. ಓರ್ವ ಮಂತ್ರಿಯಿಂದಾಗಿದ್ದು, ಮಂತ್ರಿ ಮಂಡಲದಿಂದ ಪರ್ಯಾಲೋಚಿಸಲ್ಪಡದಿದ್ದ ಯಾವ ನಿರ್ಣಯವನ್ನಾದರೂ ಗವರ್ನರರು ಪುನರಾಲೋಚನೆಗಾಗಿ ಮಂತ್ರಿ ಮಂಡಲಿಗೆ ಮರಳಿ ಕಳುಹಿಸಬಹುದು, ಎಂಬಿತ್ಯಾದಿ ನಿರ್ಧಾರಗಳಾಗಿವೆ. ಭಾರತದ ಸುಪ್ರೀಮ್ ಕೋರ್ಟಿಗೆ ಸಿವಿಲ್ ಮತ್ತು ಕ್ರಿಮಿನಲ್ ಅಪ್ಪೀಲು ತೀರ್ಮಾನಾಧಿಕಾರವೆರಡನ್ನೂ ಕೊಡುವ ನಿರ್ಧಾರವಾಗಿದೆ. ಈ ಸಂಬಂಧದ ಚರ್ಚೆಯ ನಡುವೆ, ಮರಣ ದಂಡನೆಯನ್ನೇ ರದ್ದುಪಡಿಸುವದು ವಿಹಿತವೆಂದು ಕಾನೂನು ಮಂತ್ರಿ ಡಾ! ಅಂಬೇಡ್ಕರರು ಸೂಚಿಸಿದ್ದಾರೆ. ಆಗಸ್ಟ್‌ವರೆಗಿನ ಗಾಢ ವಿಮರ್ಶೆಗಳೊಂದಿಗೆ ಘಟನಾ ಸಮಿತಿ ಕಾರ್ಯಕಲಾಪಗಳು ಏಕ ಪ್ರಕಾರ ಸಾಗಿವೆ.

ಉತ್ತಮ
–ಉಪಾಹಾರ ಮಂದಿರ
ವೀರ ಭಾರತ
ವಿಶ್ರಾಂತಿ ಗೃಹ
(ನ್ಯೂ ಯೂನಿಯನ್ ಮಿಲ್ಸಿನ ಎದುರು)
ಡಿಲಿಸ್ಲೆ ರೋಡು
ಬೊಂಬಾಯಿ 13

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:-
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್. ಉಡುಪಿ.
ಇವರ ಶಾಖಾ ಖಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಿಮುತ್ತೂರು, ತ್ರಿವೇಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	... ...	Rs. 25,00,000.
Capital Issued & Subscribed	....	Rs. 20,00,000.
Capital Paid Up.	... ...	Rs. 19,99,800.
Reserves	... ...	Rs. 8,90,000

Banking business of every description transacted.

ಗುರುವಾರ, ಉಡುಪಿ, ೯-೬-'೪೯

ಅಧಿಕ ಧಾನ್ಯೋತ್ಪನ್ನ ಯೋಜನೆ

ಕೇಂದ್ರ ಸರಕಾರದ ಆಹಾರ ಮತ್ತು ಬೇಸಾಯ ಮಂತ್ರಿ ಶ್ರೀ. ಜೈರಾಮದಾಸ್ ದೌಲತರಾಮರು ಮದ್ರಾಸಿಗೆ ಬಂದು, ಇದೇ ತಾ. 4ರಲ್ಲಿ ಸರಕಾರೀ ಕಾರ್ಯಾಲಯದಲ್ಲಿ ಇಲ್ಲಿಯ ಮಂತ್ರಿಗಳು ಮತ್ತಿತರ ಮುಖ್ಯಾಧಿಕಾರಿಗಳೊಡನೆ ಅಧಿಕ ಧಾನ್ಯೋತ್ಪನ್ನ ಯೋಜನೆಯ ಕುರಿತು ಸವಿವರ ಚರ್ಚೆ ನಡೆಸಿದ್ದರು; 1951ರ ಅಂತ್ಯದೊಳಗೆ ಆಹಾರ ಸ್ವಾವಲಂಬನೆಯೆಂಬ ಗುರಿ ಮುಟ್ಟಲನುಕೂಲವಾಗುವ ಹಂಚಿಕೆಗಳು ಅಲ್ಲಿ ಪರ್ಯಾಲೋಚಿಸಲ್ಪಟ್ಟವು ಎಂದು ತಿಳಿದು ಬಂದಿದೆ. "ಊಟವಿಲ್ಲದೆ ಜನರು ಸಾಯುವಂತಾದರೂ ಸರಿಯೇ; 1951ನೇ ದಶಂಬರದ ನಂತರ ಹೊರ ದೇಶಗಳಿಂದ ಆಹಾರ ಧಾನ್ಯ ತರಿಸಿಕೊಳ್ಳುವಂತಿಲ್ಲವೆಂದು ನಾವು ದೃಢ ನಿರ್ಧಾರ ಮಾಡಿದ್ದೇವೆ" ಎಂದು ಆರಂಭದಲ್ಲೇ ಹೇಳಿದ್ದ ಪಂಡಿತ ನೆಹರುರವರ ಮಾತು, ಈ ಯೋಜನೆಯು ಸಾರ್ಥಕಾಂತ್ಯಗೊಳ್ಳುವ ವರೆಗೂ ಪ್ರತಿಯೊಬ್ಬನಿಗೂ ಸದಾ ನೆನಪಿನಲ್ಲಿರಬೇಕಾದುದು ಅಗತ್ಯ. ಆಮದು ಪಡಿಸಿಕೊಂಡು ಉಣ್ಣುವ ಆಹಾರದಿಂದಾಗಿ ಭಾರತವು ಕ್ಷಯಿಸುತ್ತಿದೆ; ಅದು ಇಂದಿನ ಆರ್ಥಿಕ ಸ್ಥಿತಿಯಲ್ಲಿ ರಾಷ್ಟ್ರಕ್ಕೆ ಮಾರಕವಾದ ಆಹಾರವು; ಆದ್ದರಿಂದ ಇಂತಹ ಆಮದನ್ನು ಪೂರ್ಣ ನಿಲ್ಲಿಸಿಕೊಂಡು ಬೆಳೆಯಿಸಿಯೇ ಉಣ್ಣಬೇಕು; ಉಣ್ಣಲು ಬೇಕಾಗುವಷ್ಟನ್ನು ಬೆಳೆಯಿಸಬೇಕು—ಎಂದು ಭಾರತ ಸರಕಾರವು ಸಹಜವಾಗಿ ನಿರ್ಧರಿಸಿದೆ. ಈ ತನಕ ವರುಷಂಪ್ರತಿ 100ಕೋಟಿ ರೂಪಾಯಿಗಳಿಗೂ ಮಿಕ್ಕಿದ ಮೌಲ್ಯದ ಆಹಾರಧಾನ್ಯಗಳನ್ನು ಭಾರತವು ಹೊರದೇಶಗಳಿಂದ ತರಿಸಿಕೊಳ್ಳುತ್ತಿದೆ. ಕೈಗಾರಿಕೋದ್ಯಮಗಳಿಗೂ ಸಾರ್ವಜನಿಕರ ಜೀವನ ನಿರ್ವಹಣಕ್ಕೂ ಅಗತ್ಯವುಳ್ಳ ಪ್ರಾಮುಖ್ಯ ಸಾಮಾಗ್ರಿಗಳನ್ನು ತರಿಸಿಕೊಳ್ಳಲು ಬೇಕಾಗಿದ್ದ ಈ ದೊಡ್ಡ ಮೊತ್ತವು, ಈ ರೀತಿ ಎಲ್ಲಕ್ಕಿಂತ ಮೊದಲ ಪ್ರಶ್ನೆಯಾದ ಹೊಟ್ಟೆಪಾಡಿಗಾಗಿ ವರುಷವಂಪ್ರತಿ ನೀರಾಗುತ್ತಿದೆ. ಹೀಗಾಗಿ ಜನತೆಯ ಜೀವನ ವೆಚ್ಚದ ಮಟ್ಟವನ್ನು ಇಳಿಸಲಿಕ್ಕಾಗಲಿಲ್ಲ. ಆಹಾರ ಧಾನ್ಯಗಳ ಉಳಿತಾಯವಿರುವ ಪ್ರಾಂತ್ಯಗಳು ಕೂಡಾ ಭಾರತ ಸರಕಾರದ ಸೂಚನೆಯಂತೆ ತಮ್ಮ ಮಿಕ್ಕೆಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಒತ್ತಟ್ಟಿಗಿಟ್ಟು, ಕೊರತೆಯುಳ್ಳ ಪ್ರಾಂತ್ಯಗಳ ಉಪಕಾರಾರ್ಥವಾಗಿ ಅಧಿಕಾಹಾರ ಧಾನ್ಯೋತ್ಪನ್ನಕ್ಕಾಗಿಯೇ ತಮ್ಮ ಹಣ ಮತ್ತು ಲಕ್ಷ್ಯವನ್ನು ವ್ಯಯಿಸುತ್ತಿವೆ. ಈ ರೀತಿ ರಾಷ್ಟ್ರ ಭಂಡಾರದ ಬಹು ಭಾಗವು ಆಮದು ಪಡಿಸಿಕೊಂಡ ಆಹಾರ ಧಾನ್ಯಗಳಿಗಾಗಿ ಹೊರ ದೇಶಗಳಿಗೆ ಹೋಗಿ, ಇಲ್ಲಿಯ ಮಿಕ್ಕೆಲ್ಲಾ ಯೋಜನೆಗಳೂ ಹಿಂದೆ ಬಿದ್ದಿವೆ; ಜೀವನಾವಶ್ಯ ಸಾಮಾಗ್ರಿಗಳ ಬೆಲೆಯೇರಿಯೇ ಇದೆ; ಸ್ವತಂತ್ರ ಭಾರತ ಬಿಂಬಕ್ಕೆ ಸೋಂಕಿದ ರಾಹುವಿದು! ಇದನ್ನು ಇನ್ನು ಎರಡೂವರೆ ವರುಷಗಳೊಳಗೆ ಬಿಡಿಸಿ, ರಾಷ್ಟ್ರವು ಸ್ವಪ್ರಭೆ ಬೀರಿ ಬೆಳಗುವಂತೆ ಮಾಡಬೇಕು, ಎಂಬುದೇ ಭಾರತ ಸರಕಾರದ ಧ್ಯೇಯ. ಇದು ಅತ್ಯಾವಶ್ಯ ಹಾಗೂ ಅತಿ ಪ್ರಾಮುಖ್ಯ ಹೆಜ್ಜೆಯೆಂಬುದು ನಿರ್ವಿವಾದ. ಕೇಂದ್ರದ ಆಹಾರ ಮಂತ್ರಿ ಶ್ರೀ. ಜೈರಾಮ್‌ದಾಸ್ ದೌಲತರಾಮರು ಮದ್ರಾಸಿನ ಪರ್ಯಾಲೋಚನಾ ಕೂಟದಲ್ಲಿ ಅಧಿಕಾಹಾರೋತ್ಪತ್ತಿ ಸಂಬಂಧದ ಕೇಂದ್ರ ಸರಕಾರದ ಘೋಷಣೆಯನ್ನೂ ಪ್ರಾಂತಿಕ ಸರಕಾರಗಳು ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನೂ ವಿವರಿಸಿದ್ದಾರೆ. ಪ್ರತ್ಯಕ್ಷವಾಗಿ ಪ್ರಾಂತಿಕ ಸರಕಾರಗಳ ಕಾರ್ಯಭಾರವಾಗಿರುವ, ಅಧಿಕಾಹಾರ ಬೆಳವಣಿಗೆಯ ಸಂಬಂಧವಾಗಿ ಕೇಂದ್ರ ಸರಕಾರವು ಗತಿನಿರ್ದೇಶಗಳನ್ನಷ್ಟೇ ಮಾಡಬಲ್ಲುದು, ಅಂತೆಯೇ ಅದೇ ಸಂಬಂಧವಾಗಿ ಚತುರ್ವಿಧ ಸಹಾಯಗಳನ್ನು ಮಾಡಲಿದೆ: (1) ಕ್ರಮಶಃ ಹೆಚ್ಚುತ್ತಿರುವ ಭಾರತ ಸರಕಾರದ, ಪ್ರಾಂತಿಕ ಸರಕಾರಗಳ ಮತ್ತು ಆಶ್ರಿತ ರಾಜ್ಯಗಳ ಆವಶ್ಯಕತೆಗಳಿಗನುಗುಣವಾಗಿ ಶಕ್ಯವಿದ್ದಷ್ಟು ಆರ್ಥಿಕ ಸಹಾಯ ಸಲ್ಲಿಸುವುದು. (2) ರಕ್ಷಣಾ ಖಾತೆಯ ಮರ್ಮಜ್ಞರ ನೆರವನ್ನೂ ಉಳುವ ಆಧುನಿಕ ಯಂತ್ರಗಳನ್ನೂ ಒದಗಿಸುವುದು (3) ಬೇಸಾಯೋತ್ಪನ್ನದ ಮೂಲಯೋಜನೆಗೆ ಹೊಂದಿಕೆಯಾಗುವಂತೆ, ಎಲ್ಲಾ ಪ್ರಾಂತ್ಯಗಳ ಕಾರ್ಯರೀತಿಗಳನ್ನು ಏಕರೂಪಕ್ಕೆ ತರುವುದು (4) ಉತ್ಪನ್ನಗಳ ಚಲನ ವಲನ ಮತ್ತು ವಾಹನ ಸಂಚಾರಗಳವಟ್ಟಿಗಿರುವ ತೊಡಕು ನಿವಾರಣೆಗಾಗಿ ಒಂದು ಕೇಂದ್ರ ಏಜನ್ಸಿಯು ಅನುಕೂಲತೆಯೊದಗಿಸುವದು.

ಪ್ರಾಂತಿಕ ಸರಕಾರವು ಕೈಕೊಳ್ಳಬೇಕಾದ ಕಾರ್ಯರೀತಿಯ ಕುರಿತೂ ಶ್ರೀ ಜೈರಾಮ್‌ದಾಸ್ ದೌಲತರಾಮರು ಸಲಹೆ ಕೊಟ್ಟಿದ್ದಾರೆ:-'ಅಧಿಕಾಹಾರ ಬೆಳೆಸುವ ಯೋಜನೆಗಳಿಗೆ ಆಡಳಿತೆಯ ಹಾಗೂ ಆರ್ಥಿಕಸಹಾಯ ಸಲ್ಲಿಸುವ ಕ್ಷಿಪ್ರಗಾಮಿ ಮತ್ತು ಪರಿಣಾಮಕಾರಿಯಂತ್ರವೊಂದು ಇರಬೇಕು. ಮಂತ್ರಿಗಳು ತಮ್ಮ ಸಂಚಾರದ ವೇಳೆ ಬೇಸಾಯಗಾರರಲ್ಲಿ ನವೋತ್ಸಾಹ ಹುಟ್ಟಿಸಿಯೂ, ಬಹುಮಾನಗಳನ್ನು ಮತ್ತು ಸಾಮಗ್ರೀ ಗ್ರ್ಯಾಂಟುಗಳನ್ನು ಹಂಚುವ ಯೋಜನೆಗಳನ್ನು ತಯಾರಿಸಿಯೂ ಉತ್ಪಾದಕರನ್ನು ಹುರಿದುಂಬಿಸಬೇಕು, ಇತ್ಯಾದಿ, ಇತ್ಯಾದಿ.

ಮದ್ರಾಸ್ ಸರಕಾರವು ಮುಖ್ಯವಾಗಿ ಕೆರೆಬಾವಿ, ಅಣೆಕಟ್ಟು, ಕಾಲುವೆ ಇತ್ಯಾದಿಗಳ ದುರಸ್ತಿ ಮೂಲಕ ಅಧಿಕೋತ್ಪನ್ನ ಕಾರ್ಯ ನಡಿಸಲು ನಿರ್ಧರಿಸಿದೆ. ಈ ದುರಸ್ತಿಗಳಿಗಾಗಿ ಐದರಿಂದ ಆರು ವರುಷಗಳ ಅವಧಿಯೊಳಗೆ, 10 ರಿಂದ 12 ಕೋಟಿ ರೂಪಾಯಿಗಳಷ್ಟು ವೆಚ್ಚಮಾಡಿ 1.5 ಲಕ್ಷ ಟನ್ನುಗಳಷ್ಟು ಅಧಿಕ ಧಾನ್ಯೋತ್ಪತ್ತಿ ಮಾಡುವ ಯೋಜನೆಯೊಂದು ಅಂದಾಜು ಮಾಡಲ್ಪಟ್ಟಿದೆ. ಈ ವರುಷವೇ ಈ ಯೋಜನೆಗಾಗಿ 1 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಸಣ್ಣ ಪುಟ್ಟ ನೀರಾವರಿಗಳ ಸುಧಾರಣೆಯಂತೆಯೇ ಭೂಸುಧಾರಣೆ, ಉತ್ತಮ ಬೀಜಗಳ ವಿತರಣೆ, ಹುಲ್ಲು ಗೊಬ್ಬರ ಉಪಯೋಗದ ಹೆಚ್ಚಳ—ಮುಂತಾದುವುಗಳ ಹಂಚಿಕೆಗಳನ್ನೂ ಮದ್ರಾಸ್ ಸರಕಾರವು ಕೈಕೊಂಡಿದೆ.

ಅಂತೂ ಭಾರತದ ಆದ್ಯಂತವೂ ಆಹಾರ ಧಾನ್ಯಗಳ ಅಧಿಕೋತ್ಪನ್ನವನ್ನು ಸಾಧಿಸುವ ಪ್ರಯತ್ನವು ನಡೆಯಲಿದೆ. ಇದಕ್ಕಾಗಿ ಇದೇ ಜುಲಾಯಿಯಲ್ಲಿ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳ ಜತೆ ಮಾತುಕತೆ ಪುನಃ ನಡೆಯಲಿದೆ. ಕೃಷಿ ಪ್ರಧಾನ ರಾಷ್ಟ್ರ ಭಾರತವನ್ನು ನಿಶ್ಚಿತಾವಧಿಯೊಳಗೆ ಆಹಾರ ಸ್ವಾವಲಂಬಿಯಾಗಿ ಮಾಡಿಸುವುದು ಅಸಾಧ್ಯವೇನೂ ಅಲ್ಲ; ಈ ಕುರಿತು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಿಟ್ಟುಕೊಂಡಿರುವ ಗುರಿ, ತೋರಿಸುತ್ತಿರುವ ಆಸಕ್ತಿ ಶ್ಲಾಘನೀಯವೇ. ನೀರಾವರಿ ಸಂಬಂಧದ ದುರಸ್ತಿಗಳು, ಗೊಬ್ಬರ, ಬೀಜ ಮತ್ತಿತರ ಬೇಸಾಯಾವಶ್ಯ ಸಾಮಾಗ್ರಿಗಳ ಸರಬರಾಯಿ, ಮೇಲಾಟ ಸ್ಫೂರ್ತಿಗಾಗಿ ಬಹುಮಾನಗಳ ದಾನ— ಇವೆಲ್ಲವೂ ಬೇಸಾಯವನ್ನೂ ಬೇಸಾಯಗಾರನ ಉತ್ಸಾಹವನ್ನೂ ಹೆಚ್ಚಿಸುವಂತಹವೆಂಬುದೂ ನಿಜವೇ. ಆದರೂ, ಇಡೀ ಬೇಸಾಯ ಭೂಮಿಯೇ ಆಗಿರುವ ಭಾರತದ ಸಾಗುವಳೀ ಕ್ಷೇತ್ರಗಳ ಬಹುಭಾಗವನ್ನೂ ಸಾಗುವಳೀದಾರರಲ್ಲಿ ಬಹುಸಂಖ್ಯಾಕರನ್ನೂ ಈ ಸುಧಾರಣಾ ಯೋಜನೆಗಳು ಸ್ಪರ್ಶಿಸಲು ಸಾಧ್ಯವೆ? ಹಳ್ಳೀ ರೈತನ ಮತ್ತು ಹಳ್ಳೀ ಸಾಗುವಳೀಭೂಮಿಗಳ ಸ್ಥಿತಿಗತಿಗಳ ಸರಿಯಾದ ಪರಿಚಯ ಮಾಡಿಕೊಂಡು ನೇರಾಗಿ ಅಲ್ಲಿಯೇ ಪರಿಣಾಮ ತೋರಿಬರುವ ಅಂಶವು ಈ ಯೋಜನೆಯಲ್ಲಿ ಎಷ್ಟಿದೆ? ನಿದರ್ಶನಕ್ಕಾಗಿ, ಕೇಂದ್ರ ಸರಕಾರದ ಚತುರ್ವಿಧದಾನಗಳಲ್ಲೊಂದಾದ 'ಮಿಲಿಟರಿಯವರನ್ನು ಬೇಸಾಯ ಕಾರ್ಯಕ್ಕೆ ಹಚ್ಚುವ ಮತ್ತು ಉಳುವ ಯಂತ್ರಗಳನ್ನೊದಗಿಸುವ' ವಿಧಾನವು ಮಿತಿಮೀರಿದ ವೆಚ್ಚದ್ದಾಗುವದೆಂದೂ ಸೈನಿಕರು ಇದನ್ನೊಂದು ತರಬೇತಿ ಮುಖ ಸೇವೆಯೆಂದು ಭಾವಿಸದಿದ್ದರೆ ಕಷ್ಟವೆಂದೂ ಮದ್ರಾಸಿನ ಪರ್ಯಾಲೋಚನೆಯ ವೇಳೆ ಚೀಫ್ ಇಂಜನೀಯರರು ತಿಳಿಸಿದಾಗ, ತಾನೀ ವಿಷಯದ ಕುರಿತು ರಕ್ಷಣಾಮಂತ್ರಿಗಳೊಡನೆ ಮಾತಾಡುವೆನೆಂದು ಶ್ರೀ ಜೈರಾಮ್‌ದಾಸ್ ದೌಲತರಾಮರು ಹೇಳಬೇಕಾಯಿತು. ಕಾಗದದಲ್ಲಿ ಅಮೂಲ್ಯವಾಗಿ ತೋರುವ ಮತ್ತು ಅಂಕೆ ಸಂಖ್ಯೆಗಳನ್ನು ತೃಪ್ತಿಕರವಾಗಿ ಮೂಡಿಸುವ ಯೋಜನೆಗಳ ಪ್ರತಿರೂಪವೇ ಹೊಲಗದ್ದೆಗಳಲ್ಲಿಯೂ ಪಡಿಮೂಡುವದೆಂದು ನಿರೀಕ್ಷಿಸುವದಸಾಧ್ಯ. ಮೇಲಾಗಿ, ಇಂತಹ ಸುಧಾರಣೆಗಳನ್ನು ನಿರ್ದೇಶಿಸುವ ಮಂತ್ರಿಗಳ ಮರ್ಜಿಯು, ಅವುಗಳನ್ನು ನಿಜಕ್ಕೂ ಕಾರ್ಯರೂಪದಲ್ಲಿಳಿಸುವ ನೌಕರರಲ್ಲಿ ಕಂಡುಬರುವದಿಲ್ಲ; ನಿಸ್ಸಹಾಯಕರಂತಿರುವ ಹಳ್ಳೀ ರೈತರ ಮಟ್ಟಿಗಂತೂ ಸರ್ವಥಾ ಹಾಗೆ! ಇಂತಹ ಸ್ಥಿತಿಯಲ್ಲಿ ಇನ್ನು ಎರಡೂವರೆ ವರುಷಗಳ ಅವಧಿಯಿರುವ, ಅಧಿಕಾಹಾರೋತ್ಪನ್ನದ ನವೀನ ಯೋಜನೆಗಳ ಕೊನೆಯ ಅವಧಿಯ ವರೆಗೂ ಅವುಗಳ ಹೆಸರನ್ನು ಕೂಡಾ ಕೇಳದ ರೈತರು ಅಧಿಕ ಸಂಖ್ಯೆಯಲ್ಲಿ ಉಳಿಯಬಹುದು. ಪ್ರತಿಯೊಂದು ಗದ್ದೆಯ ಬೆಳೆಯನ್ನೂ ಪ್ರತಿಯೊಬ್ಬ ರೈತನ ಉತ್ಸಾಹವನ್ನೂ ಇಮ್ಮಡಿಗೊಳಿಸಬಲ್ಲ ಯೋಜನೆಯು ಭಾರತದಂತಹ ವಿಶಾಲ ರಾಷ್ಟ್ರದಲ್ಲಿ ಈಗಲೇ ಆಗುವಂತಹದಲ್ಲವೆಂಬುದು ನಿಜ. ಆದರೆ ಅಲ್ಲಲ್ಲಿ ಇಷ್ಟಿಷ್ಟನ್ನು ಸಾಧಿಸುವ ಉದ್ದೇಶವೇನೂ ಸರಕಾರದ್ದಾಗಿರದೆ, ಸರ್ವವ್ಯಾಪೀ ಸುಧಾರಣೆಯಾಗಬೇಕೆಂಬುದೇ ಅದರ ಸಂಕಲ್ಪವೆಂಬುದಂತೂ ಖಂಡಿತ. ಅಂದ ಮೇಲೆ ಹೊಸ ಯೋಜನೆಯನ್ನು ಕೈಕೊಳ್ಳುವದು ಅಗತ್ಯವಿದ್ದರೂ ಅದೇ ಸರ್ವಸ್ವವಲ್ಲ—ಮಾತ್ರವಲ್ಲ, ಅದೊಂದು ಅಲ್ಪ ಭಾಗ ಮಾತ್ರ—ಎಂದೂ, ಸಾಗುವಳಿದಾರರ ಸ್ಥಿತಿಮತಿ ಸುಧಾರಿಸಿ, ಸದ್ಯಕ್ಕವರ ಸಂಪ್ರದಾಯಬದ್ಧ ಸಾಗುವಳೀ ವಿಧಾನಗಳಿಗಾವ ಅಡಚಣೆಯೂ ಒದಗದಂತೆ ನೋಡುವದು ಎಲ್ಲಕ್ಕಿಂತ ಮುಖ್ಯವೆಂದೂ ಸರಕಾರವೇಕೆ ಗಣಿಸಬಾರದು? ನಿದರ್ಶನಕ್ಕಾಗಿ—ದಕ್ಷಿಣಕನ್ನಡದ ಮುಖ್ಯ ಸಾಗುವಳಿ ನಡೆಯುತ್ತಿರುವ ಕಾಲವಿದು; ಅಕಾಲವೃಷ್ಟಿಯಿಂದ ರೈತರ ಅಂದಾಜು ತಪ್ಪಿದೆ; ಸಾಲದುದಕ್ಕೆ ಹುಳ ಹಿಡಿದು ನೇಜಿಯು ಗದ್ದೆಗದ್ದೆಗಳೇ ಹಡಿಲು ಬಿದ್ದ ಶೋಚನೀಯ ವಾರ್ತೆ ಹಲವು ಹಳ್ಳಿಗಳಿಂದ ಬಂದಿದೆ. ಇದರ ಪರಿಣಾಮವು ಈ ಬಾರಿಯ ಬೆಳೆಯಲ್ಲಿ ತೋರಿಬರಲಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಸರಕಾರೀ ಯೋಜನೆಯಂತೆ ಇಂದು ಉಳುವ ಯಂತ್ರಗಳ ಮಾತು ಕೇಳಬರುತ್ತಿದೆಯಾದರೆ, ಸಾಗುವಳೀದಾರನ ಹಂಚಿಕೆಯಂತಾಗುತಿದ್ದಲ್ಲಿ ಈ ದಿನ ಆ ಹುಳ ನಿರ್ಮೂಲನ ಸಾಧನೆಗಳು ಅಲ್ಲಿರಬೇಕಿದ್ದಿತು; ಸಾಗುವಳಿವೆಚ್ಚಕ್ಕೆ ಬೇಕಾಗುವ ಅಕ್ಕಿ, ಭತ್ತಗಳ ಮತ್ತಿತರ ಉಪಕರಣಗಳ ಕೊರತೆ ಅಲ್ಲಿರಲೇ ಬಾರದಿದ್ದಿತು. ಇಂದು ಹಾಗಿದೆಯೆ? ನಾಳೆಯಾದರೂ ಹಾಗಾಗುವಂತೆ ಮಾಡುವ ತೃಪ್ತಿಕರ ಸಿದ್ಧತೆನಡೆದಿದೆಯೆ? ಮುಂದಾಗಿ ಸರಕಾರದ ಲಕ್ಷ್ಯವೀ ಕಡೆಗೆ ಬೀಳಬಾರದೇಕೆ?

ಮದ್ರಾಸ್ ಮಂತ್ರಿಮಂಡಲದಲ್ಲಿ ಹೊಸ ಸದಸ್ಯ, ಹೊಸ ವ್ಯವಸ್ಥೆ

ಮದ್ರಾಸ್ ಮಂತ್ರಿಮಂಡಲಕ್ಕೆ ಮಿ. ರೋಶ್ ವಿಕ್ಟೋರಿಯಾ, ಎಂ. ಎಲ್. ಸಿ. ಇವರು ಹೊಸತಾಗಿ ಇದೇ ತಾ 31ರಲ್ಲಿ ನೇಮಕಗೊಂಡಿದ್ದಾರೆ. ಆಂದೇ ಮಂತ್ರಿ ಉದಕಮಂಡಲಕ್ಕೆ ಹೋಗಿ ಅಲ್ಲಿರುವ ಗವರ್ನರ್ ಭಾವನಗರದ ಮಹಾರಾಜರ ಮುಂದೆ ಪ್ರಮಾಣಬದ್ಧರಾಗಿ ತಾ. ೧2ರಲ್ಲಿ ಮದ್ರಾಸಿಗೆ ಮರಳಬಂದು ಅಧಿಕಾರವಹಿಸಿಕೊಂಡಿದ್ದಾರೆ. ಮಿ ಜೆ. ಎಲ್. ಪಿ. ರೋಶ್ ವಿಕ್ಟೋರಿಯರು ಹಿಂದೀ ಕ್ರೈಸ್ತ ಪ್ರಮುಖ. ಕಾಂಗ್ರೆಸ್ ಉಮೇದ್ವಾರಯಾಗಿ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿಗೆ ಆರಿಸಲ್ಪಟ್ಟಿದ್ದವರು. ಘಟನಾಸಮಿತಿಯ ಸಲಹೆ ಸಮಿತಿಯ ಓರ್ವ ಸದಸ್ಯನಿದ್ದಾರೆ. ತಿನ್ನವೆಲ್ಲಿಯ ಪ್ರಮುಖ ವ್ಯಾಪಾರಿ, 'ಇಂಡಿಯನ್ ಚೇಂಬರ್ ಓಫ್ ಕಾಮರ್ಸ್'ನ ಸ್ಥಾಪಕರಲ್ಲೊಬ್ಬರಿದ್ದು, ಅದರ ಪ್ರತಿನಿಧಿಯಾಗಿ 'ಫೆಡರೇಶನ್ ಓಫ್ ಕಾಮರ್ಸ್'ನಲ್ಲಿರುವವರು. 1926ರಿಂದ 1947ರ ವರೆಗಿನ 20 ವರುಷಗಳಿಗೆ ವ್ಪ್ಯಯೂ ಟ್ಯುಟಿಕೋರಿನ್ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿದ್ದವರು. ಪ್ರೌಢರ ಶಿಕ್ಷಣದಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ; ಮದ್ರಾಸಿನ 'ದಕ್ಷಿಣ ಭಾರತ ಪ್ರಾಯಸ್ಥರ ಶಿಕ್ಷಣ ಸಂಸ್ಥೆ'ಯ ಮುಖ್ಯ ಕಾರ್ಯದರ್ಶಿಯಾಗಿದ್ದರು ಮಂಗಲಗಿರಿಯಲ್ಲಿರುವ 'ಸೈಂಟ್ ಜೋಸೆಫ್ ಗೃಹಕೈಗಾರಿಕೆ' ಮತ್ತು 'ಗ್ರಾಮ ಪುನರುಜ್ಜೀವನಾ ಕೇಂದ್ರ'ದ ಸ್ಥಾಪಕರು ಮತ್ತು ಪ್ರಿನ್ಸಿಪಾಲರು ಇವರೇ. ಇನ್ನೂ ಹಲವು ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ನೇತೃತ್ವ ನಿರ್ವಹಿಸಿ ಅನುಭವವುಳ್ಳವರು ಮಿ. ರೋಶ್ ವಿಕ್ಟೋರಿಯಾ.

ಖಾತೆಗಳಲ್ಲಿ ಬದಲಾವಣೆ

ಹೊಸ ಮಂತ್ರಿಯ ನೇಮಕ ಮತ್ತು ಕನಗೆ ಆಹಾರ ಖಾತೆಯ ಬದಲಿಗೆ ಸಾರ್ವಜನಿಕಾರೋಗ್ಯ ಖಾತೆಯಾದೀತೆಂಬ ಡಾ| ಟಿ ಯಸ್. ಯಸ್. ರಾಜನರ ಅಪೇಕ್ಷೆಗನುಸಾರವಾಗಿ ಮದ್ರಾಸ್ ಮಂತ್ರಿಗಳೊಳಗೆ ಖಾತೆಗಳ ಮಟ್ಟಿಗೆ ಈ ಕೆಳಗಿನಂತೆ ಬದಲಾವಣೆಗಳಾಗಿವೆ.

ಮಿ. ರೋಶ್ ವಿಕ್ಟೋರಿಯಾ— ಆಹಾರ ಖಾತೆ ಮತ್ತು ಮೀನು ವ್ಯವಸಾಯ ಖಾತೆ.

ಡಾ| ಟಿ. ಯಸ್. ಯಸ್. ರಾಜನ್— ಸಾರ್ವಜನಿಕ ಆರೋಗ್ಯ ಖಾತೆ, ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಖಾತೆ, ಮತ್ತು ಮಾಜೀ ಸೈನಿಕರ ಪುನರ್ವ್ಯವಸ್ಥಾ ಖಾತೆ.

ಶ್ರೀ. ಕೆ. ಮಾಧವ ಮೆನನ್— ವಿದ್ಯಾ ಖಾತೆ, ಕಾನೂನು ಖಾತೆ, ಕೋರ್ಟು ಮತ್ತು ಜೈಲು ಖಾತೆ, (ಇಂಜನೀಯರಿಂಗ್ ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಾಧಿಕಾರವು ಸಾರ್ವಜನಿಕ ಕಾಮಗಾರಿ ಮಂತ್ರಿಯದು)

ಶ್ರೀ ಎ. ಬಿ. ಸೆಟ್ಟಿ— ಬೇಸಾಯ ಖಾತೆ ಮತ್ತು ಪಶುವೈದ್ಯ ಸಂಬಂಧ ಖಾತೆ.

ಶ್ರೀ. ಬಿ. ಪರಮೇಶ್ವರನ್— ಫಿರ್ಕಾ ಡೆವಲಪ್‌ಮೆಂಟ್ ಖಾತೆ, ಖಾದಿ ಮತ್ತು ಗ್ರಾಮ ಕೈಗಾರಿಕೆ ಖಾತೆ, ಸಿಂಚೋನಾ ಮತ್ತು ಹರಿಜನೋದ್ಧಾರ ಖಾತೆಗಳು.

ಶ್ರೀ. ಎನ್. ಸಂಜೀವ ರೆಡ್ಡಿ— ಪಾನ ನಿಷೇಧ ಖಾತೆ, ಮನೆ ನಿರ್ಮಾಣ ಮತ್ತು ಅರಣ್ಯ ಖಾತೆಗಳು.

ಪ್ರಧಾನಮಂತ್ರಿ ಶ್ರೀ. ಪಿ. ಯಸ್. ಕುಮಾರಸ್ವಾಮಿ ರಾಜಾ, ಶ್ರೀ. ಎಮ್. ಭಕ್ತವತ್ಸಲಮ್, ಶ್ರೀ. ಬಿ. ಗೋಪಾಲ ರೆಡ್ಡಿ, ಶ್ರೀ. ಯಚ್. ಸೀತಾರಾಮ ರೆಡ್ಡಿ, ಶ್ರೀ. ಕೆ. ಚಂದ್ರಮೌಳಿ, ಶ್ರೀ. ಸಿ. ಪೆರುಮಾಲಸ್ವಾಮಿ ರೆಡ್ಡಿಯವರ ಖಾತೆಗಳಲ್ಲಿ ಬದಲಾವಣೆಗಳಿಲ್ಲ.

ರಲ್ಲಿ ಪ್ರಥಮ ಚುನಾಯಿತಾಧ್ಯಕ್ಷನ ಚುನಾವಣೆ ನಡೆಯಿತು. ಕಾಂಗ್ರೆಸ್ ಉಮೇದ್ವಾರಿ ಶ್ರೀ. ವಿ. ವೆಂಕಟಪ್ಪನವರಿಗೆ 202 ಮತಗಳೂ, ಮತ್ತೊಬ್ಬ ಉಮೇದ್ವಾರಿ ಶ್ರೀ. ಎಸ್. ಸಿ. ಮಲ್ಲಯ್ಯನವರಿಗೆ 80 ಮತಗಳೂ ದೊರೆತು ಮೊದಲನೆಯವರು ಮೈಸೂರಿನ ಪ್ರಥಮ ಜನಪ್ರತಿನಿಧಿ ಅಧ್ಯಕ್ಷನಾಗಿ ಆರಿಸಲ್ಪಟ್ಟರು. ಮೈಸೂರಿನ ರಾಜ್ಯಭಾರದಚರಿತ್ರೆಯಲ್ಲೇ ಈಮೂಲಕ ಒಂದು ಹೊಸಾಧ್ಯಾಯವಾರಂಭಿಸಿದೆ. ಅವರೆಗೂ ಮೈಸೂರು ಶಾಸನಸಭೆಯ ಅಧ್ಯಕ್ಷತೆ ದಿವಾನರಪಾಲಿನ ಕಾದಿಟ್ಟ ಸ್ಥಾನವಾಗಿದ್ದಿತು. ಮೇ 31ರಿಂದ ಚುನಾಯಿತಾಧ್ಯಕ್ಷರು ಎಸೆಂಬ್ಲಿ ಕಾರ್ಯಕ್ರಮ ನಿರ್ದೇಶಿಸಹತ್ತಿದ್ದಾರೆ. ಮೇ 30ರಲ್ಲಿ ಕೊನೆಯಬಾರಿ ಅಧ್ಯಕ್ಷಗಾದಿಯಲ್ಲಿ ಮಂಡಿಸಿದ್ದ ಮೈಸೂರಿನ ಕೊನೆಯ ದಿವಾನ ಸರ್. ಆರ್ಕಾಟ್ ರಾಮಸ್ವಾಮಿ ಮುದಲಿಯಾರರ ದಿವಾನಗಿರಿ ಅವಧಿಯು ಬರುವ ಆಗೋಸ್ಟು 6ಕ್ಕೆ ಮುಗಿಯಲಿದೆ. ಆ ಮೇಲೆ ಹೊಸ ದಿವಾನರ ನೇಮಕವಿಲ್ಲವೆಂದು ಮೈಸೂರು ಮಹಾರಾಜರು ನಿರ್ಧರಿಸಿದ್ದಾರೆಂದು, ಸರ್. ಎ. ಆರ್. ಮುದಲಿಯಾರರು ಎಸೆಂಬ್ಲಿಯಲ್ಲಿ ಜಾಹೀರುಮಾಡಿದ್ದಾರೆ.

ಈ ರೀತಿ ದಕ್ಷಿಣ ಭಾರತದ ಸಂಸ್ಥಾನಗಳಲ್ಲಿ ಸ್ವತಂತ್ರಭಾರತೋಚಿತ ಮಾರ್ಪಾಟಗಳು ನಡೆದಿವೆಯಾದರೂ ಮೈಸೂರನ್ನು ಕರ್ನಾಟಕದಿತರ ಭಾಗಗಳೊಂದಿಗೆ ವಿಲೀನಗೊಳಿಸುವ ಸಿದ್ಧತೆಯು ಕೇಂದ್ರ ಸರಕಾರ ಅಥವಾ ಮೈಸೂರವರ ಕಡೆಯಿಂದ ನಡೆದಿಲ್ಲವೆಂಬುದು ಶೋಚನೀಯ.

ಆರ್. ಯಸ್. ಯಸ್. ಸಂಸ್ಥೆಯ ಬಹಿಷ್ಕಾರ ರದ್ದತಿ ಅಸಂಭವ

ಆರ್. ಯಸ್. ಯಸ್. ಸಂಸ್ಥೆಯ ಮೇಲೆ ಹಾಕಿರುವ ಬಹಿಷ್ಕಾರವನ್ನು ತೆಗೆಯಲಾಗುವ ಪರಿಸ್ಥಿತಿಯುಂಟಾಗುವದು ಅಸಂಭವವೆಂದು ತಿಳಿದು ಬಂದಿದೆ. ಸರಕಾರೀ ವಿರುದ್ಧ ಕಾನೂನುಭಂಗ ಗೊಂದಲವನ್ನು ಹೂಡಿದ್ದ ಆರ್. ಯಸ್. ಯಸ್. ಸಂಸ್ಥೆಯ ಸಾರ್‌ಸಂಘಚಾಲಕ ಶ್ರೀ ಗೋಲ್ವಾಲ್ಕರರು ಕೊನೆಗೆ ಅನಿವಾರ್ಯವಾಗಿ ಆ ಗೊಂದಲವನ್ನು ತಾನಾಗಿ ಮುಕ್ತಾಯಗೊಳಿಸಿಕೊಂಡರೂ, ಅದು ಜಾತ್ಯಾತೀತ ಸಂಸ್ಥೆಯಾಗಿ ಶುದ್ಧೀಕರಣಗೊಳ್ಳದೆ ಅದರ ಮೇಲಿನ ಬಹಿಷ್ಕಾರ ರದ್ದತಿ ಅಸಾಧ್ಯವೆಂದು ಭಾರತ ಸರಕಾರವು ಸ್ಪಷ್ಟಪಡಿಸಿದ್ದಿತು. ಸರಕಾರ ಮತ್ತು ಆರ್. ಯಸ್. ಯಸ್.ಗಳ ನಡುವೆ ಶಾಂತಿ ನಿರ್ಮಿಸಿಹಾಕಬೇಕೆಂದು ಆದಿಯಿಂದಲೂ ಪ್ರಯತ್ನಿಸುತ್ತಾ ಬಂದಿರುವ ಶ್ರೀ. ಟಿ. ಆರ್. ವೆಂಕಟರಾಮ ಶಾಸ್ತ್ರಿಗಳಮಧ್ಯಸ್ಥಿಕೇ ಓಡಾಟಗಳ ಪರಿಣಾಮವಾಗಿ ತನ್ನ ಘಟನೆಯನ್ನು ಸರಕಾರದ ಮುಂದಿಡಲು ಶ್ರೀ. ಗೋಲ್ವಾಲ್ಕರರೊಪ್ಪಿದ್ದರು. ಆ ಘಟನೆಯು ಅಸಮಾಧಾನಕರವೆನ್ನುತ್ತಾ ಭಾರತ ಸರಕಾರವು ಈ ಕೆಳಗಿನ ಶರ್ತಗಳನ್ನು ಸೂಚಿಸಿದ್ದಿತು: ರಾಷ್ಟ್ರಧ್ವಜವನ್ನು ಅಂಗೀಕರಿಸಿಕೊಂಡೆವೆಂದು-ತಾವಿನ್ನು ಜಾತೀಯತೆಯನ್ನು ಆದರಿಸುವಂತಿಲ್ಲವೆಂದು- ಇನ್ನಾವುದೇ ಗುಪ್ತ ಚಟುವಟಿಕೆಗಳನ್ನು ನಡೆಸುವದಿಲ್ಲವೆಂದು- 18 ವರುಷವಾಗದ ಅಪ್ರಾಯಸ್ಥರನ್ನು ಸದಸ್ಯರಾಗಿ ಸೇರಿಸಿಕೊಳ್ಳುವದಿಲ್ಲವೆಂದು- ಸಂಶಯಾತೀತ ರೀತಿಯಿಂದ ಆರ್. ಯಸ್. ಯಸ್. ಒಪ್ಪಿಕೊಳ್ಳಬೇಕು. ಸರಕಾರದ ಈ ಶರ್ತಗಳು ಅರ್ಥವಿಲ್ಲದವುಗಳೆಂದೂ, ಅಕಾರಣ ಸಂದೇಹವೇ ಅವುಗಳಿಗೆ ಮೂಲವೆಂದೂ ತಾನು ಮುಂದಿಟ್ಟ ಘಟನೆಗಿಂತ ಹೆಚ್ಚಿನದಿನ್ನೇನನ್ನೂ ಮಾಡುವದಸಾಧ್ಯವೆಂದೂ ತಿಳಿಸಿದ್ದಾರಂತೆ. ಅಪ್ರಾಯಸ್ಥ ಹುಡುಗರನ್ನು ಸದಸ್ಯರಾಗಿ ಸೇರಿಸಿಕೊಳ್ಳಕೂಡದೆಂಬ ಶರ್ತವಂತೂ ಅವರು ವಿಶೇಷ ವಿಸ್ಮಯ ಸೂಚಿಸಿ, ಪ್ರಬಲಾಕ್ಷೇಪ ಹೂಡಿದಂತಿದೆ.

ದ. ಭಾರತ ಸಂಸ್ಥಾನಗಳಲ್ಲಿ ಕಾಲೋಚಿತ ಸುಧಾರಣೆ

ಭಾರತದ ದಕ್ಷಿಣಮೂಲೆಯ ಪಶ್ಚಿಮ ಕರಾವಳಿ ಸಂಸ್ಥಾನಗಳಾದ ಕೊಚ್ಚಿ ಮತ್ತು ತಿರುವಾಂಕೂರುಗಳನ್ನು ಏಕೀಕೃತಗೊಳಿಸಿ, ಅವುಗಳಿಗೆ ಏಕಾಡಳಿತೆ ಸ್ಥಾಪಿಸುವ ಪೂರ್ವರಂಗ ತಯಾರಿಗಾಗಿ ಮೇ ಕೊನೆಯವಾರದಲ್ಲಿ ಕೊಚ್ಚಿ ತಿರುವಾಂಕೂರುಗಳತ್ತ ಬಂದಿದ್ದ ಭಾರತ ಸರಕಾರದ ಸಂಸ್ಥಾನಖಾತೆಯ ಕಾರ್ಯದರ್ಶಿ ಶ್ರೀ ವಿ ಪಿ. ಮೆನನರು ತನ್ನ ಕಾರ್ಯವನ್ನು ಜಯಶೀಲವಾಗಿ ಮುಗಿಸಿಹೋಗಿದ್ದಾರೆ. ಆ ಸಂಬಂಧದ ದಾಖಲೆಗೆ ಕೊಚ್ಚಿ ಮತ್ತು ತಿರುವಾಂಕೂರು ಮಹಾರಾಜರುಗಳ ಸಹಿಯಾಗಿದೆ. ಈ ಜೋಡಣಾಡಳಿತೆಯ ಸವಿವರ ರೂಪ ನಿರ್ಮಾಣಕ್ಕಾಗಿ ನೇಮಿಸಲ್ಪಟ್ಟಿರುವ ಸಮಿತಿಯು ಜೂನ್ ತಾ. 17ರಲ್ಲಿ ತನ್ನ ವರದಿಯೊಪ್ಪಿಸುವದೆಂದು ನಿರೀಕ್ಷಿಸಲಾಗಿದ್ದು, ಜುಲಾಯಿ ತಾ. 1ಕ್ಕೆ ಕೊಚ್ಚಿ ತಿರುವಾಂಕೂರು ಸಂಯುಕ್ತಾಡಳಿತೆಯ ಉದ್ಘಾಟನೋತ್ಸವ ಜರಗಲಿದೆ. ಎರಡು ಸಂಸ್ಥಾನಗಳ ಪೈಕಿ ದೊಡ್ಡ ಸಂಸ್ಥಾನಾಧೀಶರಾದ ತಿರುವಾಂಕೂರು ಮಹಾರಾಜರು, ತಾನು ಕೇವಲ ಅನಂತಪದ್ಮನಾಭಸ್ವಾಮಿಯ ದಾಸನಾಗಿರುವದರಿಂದ, ಸ್ವಾಮಿಯನ್ನು ಹಿಂದೆ ಹಾಕಿ ರಾಜಪ್ರಮುಖನಾಗಲಾರೆನೆಂದು ತಿಳಿಸಿದ್ದರೆಂಬ ವಾರ್ತೆಯಿದ್ದಿತು. ಶ್ರೀ. ಮೆನನರ ಮಾತಿನ ಮೇಲಿಂದ ತಿರುವಾಂಕೂರು ಮಹಾರಾಜರ ಆ ಧಾರ್ಮಿಕ ಭಾವನೆಗಾವ ಧಕ್ಕೆಯೂ ಬಾರದಂತಹ ವ್ಯವಸ್ಥೆಯಾಗಿದೆ, ಎಂದು ನಂಬಬಹುದು. ಸಂಸ್ಥಾನಗಳ ಜೋಡಣೆ ಮತ್ತು ವಿಲೀನೀಕರಣದ ಮಟ್ಟಿಗೆ ಭಾರತ ಸರಕಾರದ ಕೊನೆಯ ಕಾರ್ಯವಿದು— ಕೊಚ್ಚಿ ತಿರುವಾಂಕೂರು ಜೋಡಣೆ.

ಮೈಸೂರಿನ ಪ್ರಜಾ ಜವಾಬ್ದಾರಿ ಆಡಳಿತೆ ವಿಧಾನಗಳಿಗನುಸಾರವಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೇ ತಾ. 30

ಉಡುಪಿ
ಮಹಾತ್ಮಾಗಾಂಧಿ
ಮೆಮೋರಿಯಲ್ ಕಾಲೇಜು

ಈ ತಿಂಗಳ ಕೊನೆಯ ವಾರದಲ್ಲಿ ಪ್ರಾರಂಭವಾಗಲಿದ್ದು 90 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾತ್ರ ಈ ಬಾರಿ ಪ್ರವೇಶ ಕೊಡಲಾಗುವುದು. ಯುನಿವರ್ಸಿಟಿ ಕ್ಲಾಸುಗಳಿಗೆ ಅರ್ಹತೆಯುಳ್ಳ ಎಸ್. ಎಸ್. ಎಲ್ ಸಿ. ಪಾಸಾದ ವಿದ್ಯಾರ್ಥಿಗಳು ಎಸ್. ಎಸ್. ಎಲ್ ಸಿ. ಸರ್ಟಿಫಿಕೇಟು ಮತ್ತು ಗುಣ ನಡತೆಗಳ ಪತ್ರ ಸಮೇತ ಪ್ರವೇಶ ಅರ್ಜಿಗಳನ್ನು ಈ ತಿಂಗಳ ಎರಡನೆ ವಾರದೊಳಗಾಗಿ ಕಾಲೇಜು ಕಮಿಟಿಯ ಕಾರ್ಯದರ್ಶಿಯರಿಗೆ ಕಳುಹಿಸಬೇಕು.

ಪ್ರಕೃತ ಈ ಕೆಳಗಣ ವಿಷಯಗಳಲ್ಲಿ ಮಾತ್ರ ಶಿಕ್ಷಣ ಕೊಡಲಾಗುವುದು.

ಭಾಗ [1] ಇಂಗ್ಲಿಷು

ಭಾಗ [2] [ಅ] ಕನ್ನಡ [ಬ] ಸಂಸ್ಕೃತ [ಕ] ಹಿಂದಿ.

ಭಾಗ [3] [ಅ] ಆಧುನಿಕ ಚರಿತ್ರೆ [ಬ] ಇಂಡಿಯಾ ಚರಿತ್ರೆ [ಕ] ಎಲಿಮೆಂಟ್ಸ್ ಒಫ್ ಕೊಮರ್ಸ್ ಎಂಡ್ ಎಕೌಂಟೆನ್ಸಿ

[ಡ] ಮೆಥಮೆಟಿಕ್ಸ್

[ಇ] ಲೊಜಿಕ್

ಭಾಗ 3ರಲ್ಲಿ ಈ ಕೆಳಗಣ ಜೋಡಣೆಗಳಿಗೂ ಅವಕಾಶವಿದೆ.

1 ಮೆಥಮೆಟಿಕ್ಸ್, ಎಲಿಮೆಂಟ್ಸ್ ಒಫ್ ಕೊಮರ್ಸ್ ಎಂಡ್ ಎಕೌಂಟ್ಸ್ ಮತ್ತು ಲೊಜಿಕ್.

2 ಇಂಡಿಯನ್ ಹಿಸ್ಟರಿ, ಮೊಡರ್ನ್ ಹಿಸ್ಟರಿ ಮತ್ತು ಲೊಜಿಕ್.

3 ಇಂಡಿಯನ್ ಹಿಸ್ಟರಿ, ಎಲಿಮೆಂಟ್ಸ್ ಒಫ್ ಕೊಮರ್ಸ್ ಎಂಡ್ ಎಕೌಂಟೆನ್ಸಿ ಮತ್ತು ಲೊಜಿಕ್.

ಶಾಲಾ ಮಕ್ಕಳಿಗೆ ಅತ್ಯುಪಯುಕ್ತವಾದ

ಮಗ್ಗಿ ಪುಸ್ತಕಗಳು

ದೊರೆಯುತ್ತವೆ.

1 ಪ್ರತಿಗೆ	0	1	0
25ಕ್ಕೆ	1	5	0
50ಕ್ಕೆ	2	9	0
100ಕ್ಕೆ	5	0	0

ವಿಳಾಸ:-

ನವಯುಗ ಪ್ರೆಸ್, ಉಡುಪಿ.

ಬೆಂಗಳೂರಿನ ಮಲೆನಾಡು ಪರಿಷತ್ತು

ತಾ 11 ರಿಂದ 24ಕ್ಕೆ ಮುಂದರಿಸಲ್ಪಟ್ಟಿರುವುದೆಂದೂ ಮಾಹಿತಿಯನ್ನು ಕಳಿಸುವವರು ಹೆಚ್ಚಿನ ಮಾಹಿತಿ ಸಂಗ್ರಹಿಸಿ ತಾ 22ರೊಳಗೆ ತಲ್ಪುವಂತೆ ಕಳಿಸಿಕೊಡಬೇಕೆಂದೂ ಶ್ರೀ ಎಂ. ಎಸ್. ಭಿಡೆಯವರು ತಿಳಿಸುತ್ತಾರೆ.

ವಿವಾಹ ವಾರ್ತೆಗಳು.

ಮೂಲ್ಕಿ ಶ್ರೀ ರಾಮಕೃಷ್ಣ ಪೂಂಜರ ಪುತ್ರಿ ಶ್ರೀಮತಿ ಎಮ್. ವಸಂತಿಯನ್ನು ಉಡುಪಿ ವಕೀಲ್ ಶ್ರೀ ತೋನ್ಸೆವೆಂಕಪ್ಪ ಹೆಗ್ಡೆಯವರ ಪುತ್ರ ಶ್ರೀ ಕೆ. ಶಿವರಾಮಹೆಗ್ಡೆರು ಕಳೆದ ತಾ 29 ರಲ್ಲಿ ಮೂಲ್ಕಿ ಕಾರ್ನಾಡು ಮನೆಯಲ್ಲಿಯೂ ಶ್ರೀ ಉಪೇಂದ್ರ ಅನಂತ ಪೈಗಳವರ ಪುತ್ರ ಶ್ರೀ ಟಿ. ರಮೇಶ ಯು. ಪೈಗಳು ಮಂಗಳೂರು ಎಡ್ವೊಕೇಟ್ ಶ್ರೀ ಬಿ. ವೈಕುಂಠ ಬಾಳಿಗರ ಪುತ್ರಿ ಶ್ರೀಮತಿ ಶ್ರೀಮಂತಿನಿಯನ್ನು ಕಳೆದ ತಾ 29 ರಲ್ಲಿ ಮಂಗಳೂರಲ್ಲೂ ಬೇರೂರು ದೊಡ್ಡಮನೆ ಶ್ರೀ ಮಂಜಾಬಲ ಸೆಟ್ರ ಪುತ್ರಿ ಶ್ರೀಮತಿ ಲೀಲಾವತಿಯನ್ನು ಹಾವೂರು ಪಟೇಲ್ ಶ್ರೀ ಕೆ. ಪಿ. ನಂದಪ್ಪ ಸೆಟ್ರ ಸಹೋದರ ಶ್ರೀ ಕಾಂತಪ್ಪ ರೈಗಳು ಇದೇ ತಾ 5 ರಲ್ಲಿ ಮಂಗಳೂರಲ್ಲೂ, ಬಸ್ರೂರು ಶ್ರೀ ವಿಠಲ ಸೆಟ್ರ ಅಳಿಯ ಶ್ರೀ ವೀರರಾಜೇಂದ್ರನವರು ಬಸ್ರೂರು ಶ್ರೀ ತೇಜಪ್ಪ ಸೆಟ್ರ ಪುತ್ರಿ ಶ್ರೀಮತಿ ವಿಲಾಸಿನಿಯನ್ನು ಇದೇ ತಾ 5 ರಲ್ಲಿ ಬಸ್ರೂರಲ್ಲೂ ವಿವಾಹವಾದರು.

ಉಡುಪಿ

ಹಾಸ್ಪಿಟಲ್ ಎಡ್‌ಹೋಕ್ ಕಮಿಟಿ

ಇದರ ಸದಸ್ಯರಾದ ಡಾ. ಪಿ. ಆರ್. ಕಲ್ಯಾಣ ಸುಂದರಮ್, ರಾ. ಸಾ. ಪಿ. ಆರ್. ತಿರುವೆಂಗಡ ಸ್ವಾಮಿ ಮುದಲಿಯಾರ್ ಮೊದಲಾದವರು ಇದೇ ತಾ. 6 ರಲ್ಲಿ ಬೆಳಿಗ್ಗೆ ಉಡುಪಿ ಸರಕಾರಿ ಆಸ್ಪತ್ರೆಯನ್ನು ಸಂದರ್ಶಿಸಿದರು. ಕೆಪ್ಟನ್ ಶ್ರೀ ಸಿ. ಕೆ. ನಾಯರ್, ಡಾ. ಪಿ. ಆರ್. ನಾಯಕ್, ಡಾ. ಬಿ. ಮೂಕಾಂಬಾ ಮೊದಲಾದವರು ಸ್ವಾಗತವಿತ್ತರು. ಕಮಿಟಿ ಮೆಂಬರರು ಒಳರೋಗಿಗಳನ್ನು ಕಂಡು ಮಾತುಕತೆ ನಡೆಸಿದರು. ರೋಗಿಗಳಿಗೆ ಕೊಡಲ್ಪಡುವ ಆಹಾರದಲ್ಲಿ ಸ್ಥಳೀಯ ಸ್ಥಿತಿಗತಿಗಳನ್ನನುಸರಿಸಿ ಸುಧಾರಣೆ ಬೇಕೋ ಬೇಡವೋ ಎಂಬಿತ್ಯಾದಿ ವಿಷಯಗಳ ಅನುಭವ ಮಾಡಿಕೊಳ್ಳಲು ಎಡ್‌ಹೋಕ್ ಕಮಿಟಿಯವರು ಬಂದುದಾಗಿದೆ ಎಂದು ತಿಳಿದು ಬರುತ್ತದೆ.

ಹೊಸ ಡಿ. ಮುನ್ಸೀಫರು

ಇಲ್ಲಿಯ ಡಿ. ಮುನ್ಸೀಫ್ ಮಿ. ಇ. ಗೊನ್ಸಾಲ್ವೀಸರು ಪುತ್ತೂರಿಗೆ ವರ್ಗಾಯಿಸಲ್ಪಟ್ಟದ್ದರಿಂದ ಅವರ ಸ್ಥಾನದಲ್ಲಿ ಅಲ್ಲಿಯ ಮುನ್ಸೀಫ ಮಿ. ಬಿ. ಕುಲಾಸೋರವರು ಇಲ್ಲಿಯ ಕೋರ್ಟಿಗೆ ನೇಮಿಸಲ್ಪಟ್ಟು ಅವರು ಕೋರ್ಟು ಆರಂಭಕ್ಕೆ ಚಾರ್ಜು ವಹಿಸಿರುವರು.

ನೋಟೀಸು

ದ. ಕ. ಸಬ್ ಕೋರ್ಟಿನಲ್ಲಿ—

ದಿವಾಳಿ ಅರ್ಜಿ ನಂಬ್ರ 18/1948.

ಪದ್ಮಾವತಿಅಮ್ಮ ದಾಮೋದರ ಬಡಗರ ಹೆಂಡತಿ. ಹಾಲಿ ಮೈಸೂರಿನಲ್ಲಿರುವವಳು.

ಅರ್ಜಿದಾರಳು. ಮತ್ತು

ತಿಂಬಾರಣ್ಣ ಆಳವಾ, ಭಾರಿ ಭಂಡಾರಿ ಅಳಿಯ, ವ, ಪಮ್ಮಕ್ಕೆ ಹೆಂಗ್ಸಿನ ಮಗ, ಪುತ್ತೂರು ತಾಲ್ಕು ಕುಯ್ಲು ಗ್ರಾಮದ ಬಲ್ಲಮಜಲ್ಲ ಕಲ್ಲಿಮಾರು ಎಂಬಲ್ಲಿ ದೇರಣ್ಣ ರೈ ಮಗ ವಿಶ್ವನಾಥ ರೈಗಳ ಮನೆಯಲ್ಲಿರುವ ಮಂಥವಾ. ರೆಸ್ಪಾಂಡೆಂಟ್.

ರೆಸ್ಪಾಂಡೆಂಟ್ ತಿಂಬಾರಣ್ಣ ಆಳವರಿಗೆ..

ಮೇಲ್ಕಂಡ ಅರ್ಜಿದಾರಳು ನಿಮ್ಮನ್ನು ದಿವಾಳಿಯಂತ ಸ್ಥಾಪನೆ ಮಾಡಬೇಕೆಂತ ಹೇಳಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 25-6-1949 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಸದ್ರಿ ಅರ್ಜಿಗೆ ನಿಮ್ಮ ಆಕ್ಷೇಪವಿದ್ದರೆ ಸದ್ರಿ ತಾ. 25-6-1949 ನೇ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಪಡಿಸತಕ್ಕದ್ದು.

K. Devadas Nayak,
Vakil for Petitioner
Mangalore Date 6-6-1949

ಮಹಾಸಭೆ

ಉಡುಪಿ ಕೋಪರೇಟಿವ್ ಸ್ಟೋರ್ಸಿನ ಮಹಾಸಭೆಯು ಇದೇ ತಾ 3 ರಲ್ಲಿ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ. ವಿ. ಕೆ. ಉಪಾಧ್ಯಾಯರು ಗತವರುಷದ ವರದಿಯನ್ನೋದಿದರು. ಚಾಲ್ತಿ ವರುಷದ ಹಾಗೂ ಮುಂದಿನ ವರುಷದ ಬಜೆಟು ಮಂಜೂರು ಮಾಡಲಾಯಿತು. ಹಳೆ ಮಾಲುಗಳನ್ನು ಲೆಖ್ಖದಿಂದ ವಜಾ ಬರೆಯುವರೆ ಒಪ್ಪಿಗೆ ದೊರೆಯಿತು. ಡೈರೆಕ್ಟರ ಮಂಡಳಿಯ ಚುನಾವಣೆ ನಡೆದ ಬಳಿಕ ಸಭೆಯು ಕೊನೆಗೊಂಡಿತು. ಶ್ರೀಗಳಾದ ಪುಂಡಲೀಕ ಶೆಣೈ ಮತ್ತು ಆರ್. ಆರ್. ಕುಂಜೂರು ಇವರಿಬ್ಬರು ಹೊಸತಾಗಿ ಡೈರೆಕ್ಟರ ಮಂಡಳಿಗೆ ಆರಿಸಲ್ಪಟ್ಟಿರುವರು.

ಮಳೆ

ಧಾರಾಕಾರವಾಗಿ ಸುರಿಯುತ್ತಿದೆ. ಬೇಸಾಯ ಪ್ರಾರಂಭವಾಗಿಯದೆ, ಕೆಲವೆಡೆ ನೇಜಿಯ ಅಭಾವವೂ 'ನಾವಡ' ಹಾವಳಿಯಿಂದಾಗಿ ತಲೆದೋರಿದೆ.

ಬೊಂಬಾಯಿ

ಈಚೆಗೆ ಬೊಂಬಾಯಿ ಹೊಟೆಲು ಮಾಲಕರೊಳಗೂ ಹೊಟೆಲು ಕೆಲಸಗಾರರೊಳಗೂ ಇದ್ದ ವಾದವಿವಾದವನ್ನು ಲೇಬರ್ ಕಮಿಶನರ್ ಶ್ರೀ ವಿ. ಆರ್. ಅಯ್ಯಂಗಾರರು ಚೌಕಶಿ ನಡೆಸಿ ಅವರು ಕೊಟ್ಟ ಎವಾರ್ಡನ್ನು ಉಭಯತರು ಒಪ್ಪಿದರು. ತಮ್ಮ ನ್ಯಾಯವಾದ ಕೇಳಿಕೆಗಳು ಮನ್ನಿಸಲ್ಪಟ್ಟದ್ದು ಉತ್ತರ ಬೊಂಬಾಯಿ ಹೊಟೆಲು ಕೆಲಸಗಾರರ ಸಂಘಕ್ಕೊಂದು ವಿಜಯವೆಂದು ಸಂಬಂಧಪಟ್ಟವರೊಬ್ಬರು ತಿಳಿಸುತ್ತಾರೆ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.
ಜನಸಾಮಾನ್ಯರಿಗೂ ಅನುಕೂಲವಾಗುವಂತೆ ರೂ. 100 ರಿಂದ 900 ರ ಒಳಗಿನ ಮೊತ್ತದಲ್ಲಿ ವಿಮಾಮಾಡುವ ಸೌಕರ್ಯ!
ಎಲ್ಲಾ ಕಡೆಗಳಲ್ಲಿಯೂ ಉತ್ಸಾಹೀ ಏಜಂಟರು ಬೇಕಾಗಿದ್ದಾರೆ
ವಿವರಗಳಿಗೆ ಬರೆಯಿರಿ:
ಟಿ. ವಾಮನಾಚಾರ್, ಬಿ.ಎ ಬಿ.ಎಲ್
ಮೆನೇಜರ್.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ನಡಿಯುವ ಚಿತ್ರ
ಇಂಗ್ಲಿಷ್ ಸೀರಿಯಲ್—ಸಾಹಸಚಿತ್ರ,
◎ ಫೆಡರಲ್ ಅಪರೇಟರ್-99 ◎
ಬರುವ ಚಿತ್ರ.
ನೇಷನಲ್ ಆರ್ಟಿಸ್ಟ್ಸನವರ,
ಕೃಷ್ಣ ಸುಧಾಮ,
ಕರನ್ ದಿವಾನ್, ಗೋವಿಂದರಾವ್ ಟೆಂಬೆ, ದುಲಾರಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಕ್ಕಣ್ಣ ಬಿಡಬೇಕು.
ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ
ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.
ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ-

ಮಂಗಳೂರು

ನಗರ ಸಭೆ

ಕಳೆದ ತಾ. 28 ರಲ್ಲಿ ಶ್ರೀ ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಉಪಚುನಾವಣೆಯಲ್ಲಿ ಜಯಶೀಲರಾದ ಶ್ರೀ ಆಲ್ದೆಮಾನ್ ಶ್ರೀನಿವಾಸರಾಯರು ಪ್ರತಿಜ್ಞಾವಿಧಿಯನ್ನು ಪೂರೈಸಿ ಸದಸ್ಯತನದ ಪವಿತ್ರ ಧಾರಣ ಮಾಡಿದರು. ಮಂಗಳೂರು ಭಗಿನೀ ಸಮಾಜಕ್ಕೆ ರೂ. 1200 ಸಹಾಯ ಧನ ಕೊಡಲಾಯಿತು. ಅಂತೆಯೇ ಕಂಕನಾಡಿಯ ಸೈಂಟ್ ಜೊಸೆಫ್ ಕುಷ್ಠರೋಗಿ ಆಸ್ಪತ್ರೆಗೆ ರೂಪಾಯಿ 1750 ಸಹಾಯ ಕೊಡಲಾಯಿತು.

ಜಿಲ್ಲಾ ಸಮ್ಮೇಳನ

ಸೋಶಿಯಲಿಸ್ಟ್ ಪಾರ್ಟಿ ಕಾರ್ಯಕರ್ತರ ಮತ್ತು ಹಿತೈಷಿಗಳ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನವು ಇದೇ ತಾ. 11 ಮತ್ತು 12 ರಲ್ಲಿ ಮಂಗಳೂರಲ್ಲಿ ಜರಗುವುದು. ಈ ಸಂದರ್ಭದಲ್ಲಿ ದ. ಕ. ಜಿಲ್ಲಾ ತರುಣ ಸಮಾಜವಾದೀ ಸಂಘದ ವಾರ್ಷಿಕ ಅಧಿವೇಶನಗಳಲ್ಲಿ ಭಾಗವಹಿಸಲು ಸೋಶಿಯಲಿಸ್ಟ್ ಪಾರ್ಟಿಯ ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾದ ಶ್ರೀ. ನಾಗಭೂಷಣ ಮತ್ತು ಜತೆ ಕಾರ್ಯದರ್ಶಿಗಳಾದ ಶ್ರೀ. ಸದಾಶಿವರಾಯರೂ ಬರಲಿರುವರು. ಕೇರಳದಿಂದ ಸೋಶಿಯಲಿಸ್ಟ್ ಪಾರ್ಟಿಯ ರಾಷ್ಟ್ರೀಯ ಸಮಿತಿಯ ಸದಸ್ಯ ಶ್ರೀ. ಪಿ. ಎಮ್. ಕುಂಞರಾಮನ್ ನಂಬಿಯಾರರು, ಶ್ರೀ. ಬಾಲಕೃಷ್ಣ ಅವರೂ ಬರಲಿರುವರು.

ಹೊಸ ಜಿಲ್ಲಾ ಕಲೆಕ್ಟರರು.

ಶ್ರೀ ಎಸ್. ಆರ್. ಕೈವಾರರು ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಬಂದಿರುವ ಮಿ। ಸಯ್ಯದ್ ಅಹಮ್ಮದ್ ಅವರು ಇದೇ ತಾ 1 ರಲ್ಲಿ ಚಾರ್ಜು ವಹಿಸಿಕೊಂಡಿರುವರು.

ವಿದಾಯ-ಸ್ವಾಗತಸಮಾರಂಭಗಳು

ಗಿಲ್ಡ್ ಆಫ್ ಸರ್ವಿಸಿನ [ಸೇವಾಸಮಾಜ] ಅಧ್ಯಕ್ಷೆ ಶ್ರೀಮತಿ ಎಸ್. ಆರ್. ಕೈವಾರರು ಹೊರಪ್ರಯಾಣ ಮಾಡಲಿರುವುದರಿಂದ ಅವರನ್ನೂ ಅವರ ಪತಿಯನ್ನೂ ಬೀಳ್ಕೊಡುವುದಕ್ಕಾಗಿಯೂ, ಶ್ರೀಮತಿ ಮತ್ತು ಮಿ। ಸಯ್ಯದ್ ಅಹಮ್ಮದ್ ಸಾಹೇಬರನ್ನು ಸ್ವಾಗತಿಸಲಿಕ್ಕಾಗಿಯೂ, ಈಚೆಗೆ ಶ್ರೀರಂಗಭವನದಲ್ಲಿ ಸೇವಾಸಮಾಜದ ಕಡೆಯಿಂದ ಒಂದು ಸತ್ಕಾರಕೂಟ ಏರ್ಪಡಿಸಲಾಗಿತ್ತು. ಸಮಾಜದ ಉಪಾಧ್ಯಕ್ಷೆ ಶ್ರೀಮತಿ ಕಮಲ ಎಸ್. ಶಂಕರ ಆಳ್ವರು ಶ್ರೀ ಕೈವಾರ ದಂಪತಿಗಳ ಕುರಿತು ನಾಲ್ಕು ಚೊಕ್ಕ ಮಾತುಗಳನ್ನಾಡಿದರು.

ನಿವೇದನೆ

ಮಿ। ಆರ್. ಜೆ. ಪ್ರಿಂಗಲ್, ಮದ್ರಾಸ್ ಎಕ್ಸೈಜ್ ಕಲೆಕ್ಟರ್, ಅವರು ಈಚೆಗೆ ದ. ಕ. ಜಿಲ್ಲಾ ವಾಣಿಜ್ಯ ಸಂಘವನ್ನು ಸಂದರ್ಶಿಸಿದರು. ಹೊಗೆಸೊಪ್ಪನ್ನು ಹಡಗುಗಳ ಮೂಲಕ ಕಳುಹಿಸುವಲ್ಲಿ ಇರುವ ತೊಂದರೆಗಳ ಕುರಿತು ನಿವೇದಿಸಲಾಯಿತು.

ತುಫಾನು ರಭಸ

ಮಂಗಳೂರಿನಿಂದ ಲಖದ್ವೀಪಗಳಿಗೆ ಅಕ್ಕಿಯನ್ನೊಯ್ಯಲು ಹೊರಟಿದ್ದ ಒಂದು ಹಾಯಿ ಹಡಗವು ಕೆಲವು ದಿನಗಳ ಹಿಂದೆ ಇಲ್ಲಿಂದ ಕೆಲವು ಅಂತರ ಹೋದ ಮೇಲೆ ಬಿರುಗಾಳಿಯ ತುಫಾನಿಗೆ ಸಿಲುಕಿ ಕಲ್ಲಿಕೋಟೆ ಬಳಿಯೊಂದು ಕಡೆಯಲ್ಲಿ ಹೇಗೂ ದಡಕ್ಕೆ ಮುಟ್ಟಿತು. ಅದರಲ್ಲಿದ್ದ ಹದಿನಾರು ಮಂದಿ ನಾವಿಕರು ಸುರಕ್ಷಿತರಾಗಿದ್ದಾರೆ. ನಾವೆಗೆ ಸ್ವಲ್ಪ ಧಕ್ಕೆ ತಗಲಿದ್ದು ಸುಮಾರು ಐವತ್ತು ಗೋಣಿ ಚೀಲಗಳಷ್ಟು ಅಕ್ಕಿಯನ್ನು ನಾವೆ ರಕ್ಷಣೆ ಬಗ್ಗೆ ನೀರಿಗೆ ಆಹುತಿ ಕೊಡಲಾಗಿದೆ, ಎಂದು ವರ್ತಮಾನವಿದೆ.

ನಗರದಲ್ಲಿ ಸಾಂಕ್ರಾಮಿಕ ರೋಗಗಳ ಚಿಹ್ನೆ

ನಗರದಲ್ಲಿ ಕೆಲವು ಕಡೆ ಸಿಡುಬು, ವಾಂತಿ ಭೇದಿ ಮತ್ತು ವಿಷಮ ಜ್ವರ ಸಾಂಕ್ರಾಮಿಕ ರೋಗಗಳ ಚಿಹ್ನೆ ತೋರಿ ಬಂದಿದೆ. ಕೆಲವು ಮರಣಗಳೂ ಉಂಟಾಗಿವೆ ಎಂದು ಗೊತ್ತಾಗಿದೆ. ನಗರ ವಾಸಿಗಳು ಮುಂಜಾಗ್ರತೆಯಿಂದಿರುವುದು ಲೇಸು.

ದಕ್ಷಿಣ ಕನ್ನಡ

ಪುತ್ತೂರು

ಅಡಿಕೆ ವ್ಯವಸಾಯಗಾರರ ಸಭೆ

ದಕ್ಷಿಣ ಕನ್ನಡ ಮತ್ತು ಕೊಡಗು ಅಡಿಕೆ ಬೇಸಾಯಗಾರರ ಸಂಘದ ವರ್ಷಾವಧಿ ಸಭೆಯು ಕಳೆದ ತಾ. 26ರಲ್ಲಿ ಶ್ರೀ ಸಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಲಕ್ಷ್ಮೀನಾರಾಯಣ ರಾಯರು ಸಂಘದ ಗತ ವರುಷದ ವರದಿ ಯನ್ನೋದಿದರು. ಅಡಿಕೆ ವ್ಯವಸಾಯದ ಅಭಿವೃದ್ಧಿಗಾಗಿ ಕೈಕೊಂಡ ಕ್ರಮಗಳ ಬಗ್ಗೆ ಕೇಂದ್ರ ಸರಕಾರವನ್ನು ಅಭಿನಂದಿಸುವ ನಿರ್ಣಯವು ಅಧ್ಯಕ್ಷರಿಂದ ಮಂಡಿಸಲ್ಪಟ್ಟು ಸ್ವೀಕೃತವಾಯಿತು. ಕಾರ್ಯನಿರ್ವಾಹಕ ಮಂಡಳಿಗೆ ಶ್ರೀಗಳಾದ ಸಿ. ಎಸ್. ಶಾಸ್ತ್ರಿ, (ಅಧ್ಯಕ್ಷ); ಎ. ಪಿ. ಸುಬ್ಬಯ್ಯ [ಉಪಾಧ್ಯಕ್ಷ] ಎನ್. ಎಸ್. ಭಟ್ ಮತ್ತು ಐ. ಜಿ. ಕಡಂಬಿಲ [ಜತೆ ಕಾರ್ಯದರ್ಶಿಯರು], ಕೆ. ವೆಂಕಪ್ಪಯ್ಯ [ಕೋಶಾಧಿಕಾರಿ], ಡಿ. ವಿ. ಭಟ್, ಜಿ. ಕೆ. ಗೋವಿಂದ ಭಟ್, ಪಿ. ಲಕ್ಷ್ಮೀನಾರಾಯಣರಾವ್, ಕೆ. ಕೃಷ್ಣ ನಾಯಕ ಬೋರ್ಕಾರ್, ಪಟೇಲ್ ಸಜ್ಜಯ್ಯ ಮತ್ತು ಎಮ್. ಎನ್. ಭಟ್ ಯವರು ಆರಿಸಲ್ಪಟ್ಟರು.

ಮಣಿಪುರ

ಇಲ್ಲಿಯ ಬಿಲ್ಲವ ಯೂನಿಯನಿನ ನೇತೃತ್ವದಲ್ಲಿ ವರ್ಷಾವಧಿ ಸಪ್ತಾಹ ಮಹೋತ್ಸವವು ಕಳೆದ ತಾ. 22ರಲ್ಲಿ ಪ್ರಾರಂಭವಾಗಿ ತಾ. 28ರಲ್ಲಿ ಕೊನೆಗೊಂಡಿತು. ಬಳಿಕ ಯೂನಿಯನಿನ 10ನೇ ವಾರ್ಷಿಕೋತ್ಸವವು ಶ್ರೀ ಕೆ. ಮುದ್ದು ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಯೂನಿಯನ್ನಿನ ಕಾರ್ಯಕಲಾಪಗಳನ್ನು ಪ್ರಶಂಸಿಸುತ್ತಾ ವಿದ್ಯಾಪ್ರಚಾರದಲ್ಲಿ ವಿದ್ಯಾರ್ಥಿ ವೇತನ ಮತ್ತು ಇನ್ನಿತರ ರೀತಿಯಲ್ಲಿ ಪ್ರೋತ್ಸಾಹ ಕೊಡುವುದು ಅಭಿನಂದನೀಯವೆಂದರು.

ಕುಂಬಳೆ

ಮೂಡಬಿದ್ರೆಯ ಮೂಲ ಶಿಕ್ಷಣ ತರಬೇತಿ ಶಾಲೆಯು ಇದೇ ತಾ. 9ರಲ್ಲಿ ಪ್ರಾರಂಭವಾಗಲಿರುವುದೆಂದು ತಿಳಿದು ಬರುತ್ತದೆ.

ಮೂಡು ಪೆರಂಪಳ್ಳಿ

ಇದೇ ತಾ. 1ರಲ್ಲಿ ಮೂಡು ಪೆರಂಪಳ್ಳಿ ಎಲಿಮೆಂಟರಿ ಶಾಲಾ ಹೆತ್ತವರ ಕೂಟವು ಶ್ರೀ ಪಿ. ಎನ್. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಮಕ್ಕಳ ವಿವಿಧ ವಿನೋದಾವಳಿ ಪ್ರದರ್ಶನವಾದ ನಂತರ ಶ್ರೀ ಎಸ್. ಎಮ್. ಶಿವತ್ತಾಯರು ಶಾಲಾಭಿವೃದ್ಧಿಯ ಹಾಗೂ ಹೆತ್ತವರ ಜವಾಬ್ದಾರಿಯ ಕುರಿತು ಮಾತನಾಡಿದರು. ಬಹುಮಾನ ವಿತರಣೆ, ರಾಷ್ಟ್ರಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ಕಾರ್ಕಳ

ಕಳೆದ ತಾ. 30ರಲ್ಲಿ ಕಾರ್ಕಳ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವರ್ಧಂತಿ ಉತ್ಸವವು ಶ್ರೀ, ಕೆ. ಸೂರ್ಯನಾರಾಯಣ ಅಡಿಗ ಬಿ. ಎ. ಬಿ. ಎಲ್. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಎಡ್ವಕೇಟ್ ಶ್ರೀ ಎ. ವಿ. ಎನ್. ಹೆಬ್ಬಾರರು ಕೋಟೆಯಲ್ಲಿ ಸ್ಥಾಪಿಸಲ್ಪಡುವ ಹೈಸ್ಕೂಲಿನ ವಿಷಯದಲ್ಲೂ ಶ್ರೀ ಕೆ. ಆರ್. ಮಂದೆರು ಹೈಸ್ಕೂಲು ಶಿಕ್ಷಣದ ಕುರಿತೂ ಭಾಷಣವಿತ್ತರು. ನಾಟಕಾಭಿನಯಗಳಿಂದ ಸಮಾರಂಭ ಕೊನೆಗೊಂಡಿತು.

ಮುಂಡ್ಕೂರು

ಇಲ್ಲಿಯ ಸಂಕಲಕರಿಯ ಎಲಿಮೆಂಟರಿ ಶಾಲಾ ವರ್ಧಂತಿಯು ಕಳೆದ ತಾ. 29ರಲ್ಲಿ ಉಡುಪಿ ರೇಂಜ್ ಶಾಲೆಗಳ ಜೂನಿಯರ್ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಕೆ. ಶ್ರೀನಿವಾಸ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಬಹುಮಾನ ವಿತರಣೆ, ವಿವಿಧ ವಿನೋದಾವಳಿಗಳಾದ ಬಳಿಕ ಶ್ರೀಗಳಾದ ಯೇಸುದಾಸ ಫ್ರೆಂಕ್, ಎಸ್. ಎಲ್ಲಪ್ಪ ಸೆಟ್ಟಿ ಮೊದಲಾದವರ ಭಾಷಣಗಳಾದುವು. ಮುಂಡ್ಕೂರು ದೊಡ್ಡ ಮನೆ ರಾಜೀವ ಸೆಟ್ಟರು ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು. ಮಂಗಲಗೀತೆಯೊಂದಿಗೆ ಸಭಾಂತ್ಯವಾಯಿತು.

ಹೆರ್ಗಳೆ

ತಾ. 8-6-49ರಲ್ಲಿ ಶ್ರೀ ಬಿ. ಕರುಣಾಕರ ಹೆಗ್ಡೆ ಓವರ್ಸೀ ಬೆಂಚು ಮೆಜಿಸ್ಟ್ರೇಟರ ಮುಖಂಡತ್ವದಲ್ಲಿ ಶ್ರೀ. ಶಿವಶಂಕರರಾವ್ ಸಬ್ ಪೋಸ್ಟು ಮಾಸ್ಟರ್, ಮಣಿಪಾಲ ಇವರ ಸಲಹೆಯಂತೆ ಉಡುಪಿ ಪೋಸ್ಟಲ್ ಇನ್ಸ್‌ಪೆಕ್ಟರವರು ಹೊಸ ಪೋಸ್ಟಾಫೀಸನ್ನು ತೆರೆದರು. ಶ್ರೀ ಕಬ್ಯಾಡಿ ಆನಂದ ಸೆಟ್ಟರು ಬ್ರಾಂಚ್ ಪೋಸ್ಟು ಮಾಸ್ಟರಾಗಿ ನೇಮಿಸಲ್ಪಟ್ಟಿರುವರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

C. P. 37/1949.

ಸಾವಿತ್ರಿಅಮ್ಮ – ಅರ್ಜಿದಾರಳು

ಲಕ್ಷ್ಮಿದೇವಿ – ಎದ್ರಿ.

ಅರ್ಜಿದಾರಳ ಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಅರ್ಜಿದಾರಳ ಗಂಡ ವ ಎದ್ರಿಯ ತಂದೆ ವೆಂಕಟಗಿರಿ ರಮಣರು, ಕೋಟೇಶ್ವರ ಗ್ರಾಮದ ಬಡಾಕೆರೆಯಲ್ಲಿ 1948ನೇ ಇಸವಿ ಜನವರಿ ತಿಂಗಳಲ್ಲಿ ಮೃತ ಪಟ್ಟಿರುವುದರಿಂದ ಅರ್ಜಿದಾರಳು ಮೃತನ ಮುಖ್ಯ ವಾರಿಸ್‌ದಾರಳಾಗಿರುವುದರಿಂದ ಮೃತ ವೆಂಕಟಗಿರಿ ರಮಣರಿಗೆ ಮೇಲ್ಕಾಣ್ಸಿದ ಅರ್ಜಿಯಲ್ಲಿ ಕಾಣ್ಸಿದ ಮೂರರಿಂದ ಬರತಕ್ಕ ಹಣಗಳನ್ನು ತಾನು ವ್ಯಯಮಾಡುವ ಬಗ್ಗೆ ಅರ್ಜಿದಾರಳು ತನಗೆ ವಾರಿಸ್ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಮೇಲ್ಕಾಣ್ಸಿದ ಅರ್ಜಿಯು ತಾ. 20-6-1949ಕ್ಕೆ ತನಿಖೆಗೆ ಇಡಲ್ಪಟ್ಟಿರುತ್ತದೆ. ಸದ್ರಿ ಅರ್ಜಿ ಕುರಿತು ಯಾರಾದ್ರೂ ಆಕ್ಷೇಪ ಹೇಳುವವರಿದ್ದರೆ ಅವರು ಮೇಲ್ಕಾಣ್ಸಿದ ಕೋರ್ಟಿನಲ್ಲಿ ಸದ್ರಿ ದಿವಸ ಸ್ವತಹ ವ ವಕೀಲರ ಮುಖಾಂತರ ಹಾಜರು ಮಾಡಿ ಕೊಳ್ಳತಕ್ಕದ್ದು. ತಪ್ಪಿದರೆ ಅರ್ಜಿದಾರಳಿಗೆ ವಾರಿಸ್ ಸರ್ಟಿಫಿಕೇಟು ಕೊಡಲಾದೀತೆಂತ ಕೋರ್ಟಿನ ಹುಕುಂಪ್ರಕಾರ ಈ ನೋಟೀಸು ಕೊಟ್ಟದ್ದಾಗಿರುತ್ತದೆ.

K. Soorappa Shetty,
Advocate,
Coondapoor.
Date 4-6-1949

ಎಲ್ಲ ಸ್ಟೋರ್ಸ್‌ಗಳಲ್ಲಿ ದೊರೆಯುವ
ಹೋಮರ್ ಪೆನ್ ಉಪಯೋಗಿಸಿರಿ
ತಯಾರಕರು:—
ಮ್ಹಾತ್ರೆ ಪೆನ್ ಮತ್ತು ಪ್ಲಾಸ್ಟಿಂಗ್ ಇಂಡಸ್ಟ್ರೀಸ್
182 ಗಿರ್‌ಗಾಂ, ಬೊಂಬಾಯಿ.
Mhatre Pen & Plastics Industries
182 Girgaum, Bombay.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.


ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟೆರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,—ಸೀಮೂತ್ರ, ಆಸಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವುದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿವಾರಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18. ವಿ. ಪಿ. ಮಾಫ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಹೇದಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ್ಕಾವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ಹೊಸ ಪಂಚಾಯತಿಗಳು ನಡೆಸತಕ್ಕ ಕಾರ್ಯಗಳು

(1) ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುವ ಎಲ್ಲಾ ಮಾರ್ಗಗಳನ್ನು ನಿರ್ಮಿಸುವುದು, ಸೇತುವೆ, ಸಂಕಗಳನ್ನು ಕಟ್ಟಿಸುವುದು, ಅವುಗಳ ದುರಸ್ತಿ ಮತ್ತು ಮೇಲ್ವಿಚಾರಣೆ.

(2) ಹಳ್ಳಿಯ ಬೀದಿಗಳಿಗೆ ದೀಪಗಳನ್ನು ಇಡಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ದೀಪಗಳನ್ನು ಇಡಿಸುವುದು.

(3) ಚರಂಡಿಗಳನ್ನು ಕಟ್ಟಿಸುವುದು. ನೀರು ಹರಿದು ಹೋಗುವಂತೆ ಮಾಡುವುದು, ಕೊಳಕು ನೀರು ನಿಲ್ಲದಂತೆ ನೋಡಿಕೊಳ್ಳುವುದು.

(4) ಸ್ವಚ್ಛತೆ, ಬೀದಿಗಳನ್ನು ಗುಡಿಸುವುದು, ಮತ್ತು ಕೊಳೆಯ ತಿಪ್ಪೆಗಳನ್ನು ತೆಗೆಸುವುದು, ಸಾರ್ವಜನಿಕ ಪಾಯಿಖಾನೆಗಳನ್ನು ನಿರ್ಮಿಸುವುದು, ಸಾರ್ವಜನಿಕ ಮತ್ತು ಖಾಸಗಿ ಪಾಯಿಖಾನೆಗಳನ್ನು ತೊಳೆಸುವುದು.

(5) ದಫನ ಮತ್ತು ದಹನ ಸ್ಥಾನಗಳನ್ನು ನಿರ್ಮಿಸುವುದು, ಅವುಗಳ ಮೇಲ್ವಿಚಾರಣೆ.

(6) ಸ್ವಚ್ಛವಾದ ಕುಡಿಯುವ ನೀರಿನ ಪೂರೈಕೆ, ಸ್ನಾನಕ್ಕೆ, ಒಗೆಯಲಿಕ್ಕೆ ಯೋಗ್ಯವಾದ ಭಾವಿ, ಕೆರೆಗಳನ್ನು ಕಟ್ಟಿಸುವುದು, ರಿಪೇರಿ ಮಾಡಿಸುವುದು, ನೀರಾವರಿ ಕೆಲಸಗಳನ್ನು ಕೈಕೊಳ್ಳುವುದು.

(7) ರೋಗ ಪ್ರತಿಬಂಧಕ ಮತ್ತು ನಿವಾರಕ ಉಪಾಯಗಳನ್ನು ಕೈಕೊಳ್ಳುವುದು.

ಪಂಚಾಯತಿಯ ಅಧಿಕಾರಗಳು

ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಧಿಕಾರಗಳಲ್ಲಿ ಈಗಿನ ಪಂಚಾಯತಿ ಕೋರ್ಟುಗಳಿಗಿಂತ ಹೆಚ್ಚಿನ ಅಧಿಕಾರವನ್ನು ಪಂಚಾಯತಿ ಬೋರ್ಡುಗಳಿಗೆ ಕೊಡಬೇಕೆಂದು ತೀರ್ಮಾನಿಸಲಾಗಿದೆ.

ರಜಿಸ್ಟ್ರೇಷನ್ ಅಧಿಕಾರ—ರಿಜಿಸ್ಟ್ರೇಷನ್ ಆಫೀಸ್ ಇಲ್ಲದ ಸ್ಥಳಗಳಲ್ಲಿ ಪ್ರಥಮ ದರ್ಜೆಯ ಪಂಚಾಯತಿ ಬೋರ್ಡು ಎಕ್ಸಿಕ್ಯೂಟಿವ್ ಆಫೀಸರನಿಗೆ, ನೂರು ರೂಪಾಯಿ ಒಳಗಿನ ಮೌಲ್ಯದ ಪತ್ರಗಳನ್ನೂ, ಸ್ಟಾಂಪ ಡ್ಯೂಟಿಯ ಅವಶ್ಯವಿಲ್ಲದ ಕಾಗದಗಳನ್ನೂ ರಿಜಿಸ್ಟರ್ ಮಾಡುವ ಅಧಿಕಾರ ಕೊಡಲಾಗುವುದು.

ನೀರಾವರಿಗಳ ಆಡಳಿತೆ—ಪಂಚಾಯತಿಗಳು ಹಳ್ಳಿಯಲ್ಲಿರುವ ನೀರಾವರಿಯ ಯೋಜನೆಗಳ ಆಡಳಿತೆಯನ್ನು ನೋಡಿಕೊಳ್ಳಬೇಕಲ್ಲದೆ ಅವುಗಳ ಗುರಸ್ತಿಯನ್ನೂ ಮಾಡಬೇಕು. ಇದಕ್ಕಾಗಿ ಎಕ್ರೆಗೆ 4 ರಿಂದ 8 ಆಣೆಗಳಷ್ಟು ತೆರಿಗೆ ವಸೂಲು ಮಾಡುವ ಹಕ್ಕನ್ನು ಕೊಡಲಾಗುವುದು.

ಮೀನು ಹಿಡಿಯುವ ಹಕ್ಕು—ಊರಿನ ಕೆರೆ, ಭಾವಿಗಳಲ್ಲಿ ಮೀನು ಹಿಡಿಯುವ ಹಕ್ಕನ್ನು, ಪಂಚಾಯತಿಗಳಿಗೆ ಏಲಂ ಮಾಡಲು ಅಧಿಕಾರ ಕೊಡಲಾಗುವುದು. ಸಾರ್ವಜನಿಕರು ಇಷ್ಟಬಂದಂತೆ ಮೀನು ಹಿಡಿಯುವ ಹಕ್ಕನ್ನು ರದ್ದುಗೊಳಿಸಲಾಗುವುದು.

ಧರ್ಮ ನಿಧಿಗಳ ಮತ್ತು ಉಂಬಳಿಗಳ ಆಡಳಿತೆ—ಹಳ್ಳಿಯ ಎಲ್ಲಾ ಧರ್ಮನಿಧಿಗಳ ಉಂಬಳಿಗಳ ಆಡಳಿತೆಯನ್ನು ಪಂಚಾಯತ ಬೋರ್ಡಿಗೆ ಒಪ್ಪಿಸಲಾಗುವುದು.

ಶಾಲೆಗಳು—ಪಂಚಾಯತ ಬೋರ್ಡುಗಳು ಪ್ರಾಥಮಿಕ ಶಾಲೆಗಳನ್ನು ನಡೆಸುವ ಹಕ್ಕು ಉಳ್ಳವುಗಳಾಗುತ್ತವೆ. ಇದಕ್ಕೆ ತಕ್ಕ ಧನ ಸಹಾಯವನ್ನು ಸರಕಾರದವರು ಮಾಡುವರು. ಇದಲ್ಲದೆ ರಿಸರ್ವ ಕಾಡುಗಳು, ಹುಲ್ಲುಗಾವಲುಗಳು, ಪರಂಬೋಕು, ದರಖಾಸ್ತು ಜಾಗೆಗಳ ಆಡಳಿತೆಯನ್ನು ಪಂಚಾಯತ ಬೋರ್ಡಿಗೆ ಒಪ್ಪಿಸಲಾಗುವುದು.

ಪಂಚಾಯತಿಗಳು ಯುಕ್ತ ಕಂಡಲ್ಲಿ ಕೆಳಗಿನ ಸುಧಾರಣೆಗಳನ್ನು ನಡೆಸಬಹುದು:—

[1] ಮಾರ್ಗಗಳ ಬದಿಯಲ್ಲಿ ಗಿಡಗಳನ್ನು ನೆಡಿಸುವುದು ಮತ್ತು ರಕ್ಷಿಸುವುದು.

[2] ಮಾರ್ಕೆಟುಗಳನ್ನು ಕಟ್ಟಿಸುವುದು.

[3] ಊರಿನ ಜಾತ್ರೆ ಹಬ್ಬಗಳನ್ನು ನಡೆಸುವುದು.

[4] ಊರಿನಲ್ಲಿ ದನಗಳಿಗೆ, ಭಂಡಿಗಳಿಗೆ ಕೊಟ್ಟಿಗೆಗಳನ್ನು ಕಟ್ಟಿಸುವುದು.

[5] ಬೇಸಾಯದ ಪದ್ಧತಿಗಳನ್ನೂ, ಸಾಮಾನುಗಳನ್ನೂ ಅಭಿವೃದ್ಧಿಗೊಳಿಸುವುದು, ರೈತರ ಪರಿಷತ್ತುಗಳನ್ನು ಕೂಡಿಸುವುದು.

[6] ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹಿಸುವುದು.

[7] ಸಾರ್ವಜನಿಕ ಪುಸ್ತಕಾಲಯ ವಾಚನಾಲಯಗಳನ್ನು ತೆರೆಯುವುದು.

[8] ರೇಡಿಯೋ ಯಂತ್ರಗಳನ್ನು ಸ್ಥಾಪಿಸುವುದು, ಸಾರ್ವಜನಿಕ ಆಟದ ಬಯಲು, ವ್ಯಾಯಾಮ ಶಾಲೆಗಳನ್ನು ನಿರ್ಮಿಸುವುದು.

[9] ಆಸ್ಪತ್ರೆಗಳನ್ನು ಸ್ಥಾಪಿಸುವುದು, ಮಕ್ಕಳ ಮತ್ತು ಹೆಂಗಸರ ಆಸ್ಪತ್ರೆಗಳನ್ನು ಸ್ಥಾಪಿಸುವುದು.

[10] ಜನರ ಆರೋಗ್ಯ, ವಿದ್ಯೆ ಮತ್ತು ಸೌಕರ್ಯಗಳನ್ನು ಹೆಚ್ಚಿಸುವ ಇತರ ಯಾವ ಕೆಲಸಗಳನ್ನಾದರೂ ಮಾಡಬಹುದು.

ಆರ್ಥಿಕ ವ್ಯವಸ್ಥೆ

[1] ತೆರಿಗೆಗಳು—

ಮನೆ ತೆರಿಗೆ, ವಾಹನ ತೆರಿಗೆ, ವ್ಯಾಪಾರ ತೆರಿಗೆಗಳು ಖಡ್ಡಾಯವಾಗಿ ವಸೂಲು ಮಾಡಲ್ಪಡಬೇಕು. ಆದರೆ ಪಂಚಾಯತ ಬೋರ್ಡಿಗೆ ಸರಿಕಂಡಲ್ಲಿ ಮನೆ ತೆರಿಗೆಯನ್ನು ಕೆಲವು ಪ್ರಸಂಗಗಳಲ್ಲಿ, ಅಂದರೆ, ಹುಲ್ಲು ಹೊದಿಸಿದ ಮನೆಗಳು ಅತಿ ಬಡವರ ಮನೆಗಳು ಇತ್ಯಾದಿಗಳಿಗೆ, ಮಾಫಿ ಮಾಡಬಹುದು. ಈ ತೆರಿಗೆಗಳು ಹೆಚ್ಚೆಂದರೆ ಎಷ್ಟಿರಬೇಕು, ಕಮ್ಮಿ ಎಂದರೆ ಎಷ್ಟು ಇರಬೇಕೆಂಬುದನ್ನು ಸರಕಾರವು ನಿಶ್ಚಯಿಸುವುದು. ಪಂಚಾಯತಿಗೆ ಸರಿಕಂಡ ಇತರ ಯಾವ ತೆರಿಗೆಯನ್ನಾದರೂ ವಿಧಿಸಬಹುದು.

[2] ಸರಕಾರಿ ಹಣದ ಪಾಲುಕೊಡುವಿಕೆ

[ಎ] ಸರಕಾರದವರು ಆ ಹಳ್ಳಿಯಲ್ಲಿ ವಸೂಲು ಮಾಡಿದ ಭೂಕಂದಾಯದ ಎಲ್ಲಾ ಅಥವಾ ಸ್ವಲ್ಪ ಹಣವನ್ನು ಪಂಚಾಯತಿಗೆ ಕೊಡುವರು.

[ಬಿ] ಇದಲ್ಲದೆ, ಪಂಚಾಯತಿಗೆ ಇಷ್ಟೆಂದು ಹಂಚಲು ಪ್ರಾಂತದ ಭೂಕಂದಾಯದ 12½% ಹಣವನ್ನು ತೆಗೆದು ಇಡುವುದು. ವರ್ಷಕ್ಕೆ 10,000 ಕ್ಕಿಂತ ಕಡಿಮೆ ಉತ್ಪನ್ನವಿದ್ದು 5,000 ಜನಸಂಖ್ಯೆ ಇರುವ ಪಂಚಾಯತಗಳಿಗೆ ಇದನ್ನು ಹಂಚಲಾಗುವುದು.

[ಸಿ] ಈಗಿರುವಂತೆ, ಪಂಚಾಯತಿಗಳು ಸಾರ್ವಜನಿಕೋಪಯೋಗೀ ಕೆಲಸಗಳನ್ನು ನಡೆಸಲು ಸಾಧ್ಯವಾಗಲು ಬೇಕಾಗುವ ಹಣವನ್ನು ಸರಕಾರವು ಕಾಲಕಾಲಕ್ಕೆ ಕೊಡುವುದು.

ಲೆಕ್ಕ ಪರಿಶೋಧನೆ

ಪ್ರತಿ ಪಂಚಾಯತಿಯ ಲೆಕ್ಕ ಪರಿಶೋಧಯನ್ನು ವರ್ಷಕ್ಕೆ ಒಮ್ಮೆ ಮಾಡಲೇಬೇಕು. ಲೆಕ್ಕ ಪರಿಶೋಧನೆಯನ್ನು ಪಂಚಾಯತಿ ಮೇಲ್ವಿಚಾರಕರಲ್ಲದವರು ನಡೆಸುವರು. ದರ ಖರ್ಚನ್ನು ಸರಕಾರವು ನೋಡುವುದು.

ಮೇಲಧಿಕಾರ

ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಯಾವತರ ಮೇಲಧಿಕಾರವಾಗಲೀ ವಿಚಾರಣೆ ಮಾಡುವ ಹಕ್ಕಾಗಲೀ ಇರುವುದಿಲ್ಲ. ಊರ ಶಾಂತಿ ರಕ್ಷಣೆ ಇತ್ಯಾದಿ ಪ್ರಸಂಗಗಳಲ್ಲಿ ಅದೆ ಜಿಲ್ಲಾ ಕಲೆಕ್ಟರರಿಗೆ ಸಹ ಪಂಚಾಯತಿ ಮೇಲೆ ಏನೂ ಅಧಿಕಾರ ಇರುವುದಿಲ್ಲ— ಪಂಚಾಯತ ಬೋರ್ಡುಗಳ ಕಾರ್ಯ ವಿಚಾರಣೆಯನ್ನು ಸರಕಾರವು ಲೋಕಲ್ ಬೋರ್ಡು ಇನ್ಸ್‌ಪೆಕ್ಟರುಗಳ ಮುಖಾಂತರ ನಡೆಸುವುದು.

ಅಳಿಯ ಸಂತಾನ ಕಾನೂನಿನ
ಇಂಗ್ಲಿಷ್ ಪ್ರತಿಗಳಿಗೆ
ನವಯುಗ ಪ್ರೆಸ್, ಉಡುಪಿ
ಇವರಿಗೆ ಬರೆಯಿರಿ

ಜೀವವಿಮೆಗಾಗಿ
ವಿಚಾರಿಸಿರಿ
ನ್ಯೂ ಗಾರ್ಡಿಯನ್ ಒಫ್ ಇಂಡಿಯಾದಿ
ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.
(ಸ್ಥಾಪನೆ: 1934)
ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಇದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅನುಕೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸು ಸುಲಭವಾಗಿರುವುದು.
ನವಜೀವಾತು ಎಂಬ ಸೂತಿಕಾ ರಸಾಯನ



ಆ ಔಷಧಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು ಅಂದರೆ ಕೇವಲ ೪ ರೂಪಾಯಿಗಳೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ. ನಂ, 5 ಕೊಡಿಯಾಲಬೈಲು, ದಕ್ಷಿಣ
ಸ್ಟಾಕಿಸ್ಟರು. ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈರೆಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYALMAHAL,
UDIPI, S. Kanara.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ನೊದಿಸೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ-

REGD
ಎಲ್ಲ ಕಡೆಯೂ ಮದ್ದಿನವರಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Approved firm by the Govt. of Mysore
Certified by the Agent of the Govt. of Cylone & Indian.

ಕೇಂದ್ರ ಸರಕಾರದ ಕೃಷಿಖಾತೆಯ ಮಂತ್ರಿಗಳಾದ ಶ್ರೀ ಜಯರಾಮದಾಸ್ ದೌಲತ್‌ರಾಮರು ಮಲೆನಾಡು ಸುಧಾರಣೆಯ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಮುಂದರಿದಿದ್ದಾರೆ. ಇದೇ ಬರುವ ಜೂನ್ ತಾ]|ಕ್ಕೆ ಬೆಂಗಳೂರಲ್ಲಿ ಮದರಾಸು, ಬೊಂಬಯಿ, ಕೊಡಗು ಮತ್ತು ಮೈಸೂರು ಸರಕಾರಗಳೊಡನೆ ವಿಚಾರ ವಿನಿಮಯ ನಡೆಸುವುದಕ್ಕಾಗಿ ಆ ಸರಕಾರದ ಪ್ರತಿನಿಧಿಗಳನ್ನು ಕರೆಸಿಕೊಳ್ಳಲಿದ್ದಾರೆ. ಶ್ರೀ ಮಾನ್ ಜಯರಾಮದಾಸ್ ದೌಲತ್‌ರಾಮರು (ಕೃಷಿ ಮತ್ತು ಆಹಾರ ಖಾತೆಯ ಮಾನ್ಯ ಮಂತ್ರಿಗಳು) ಈ ಪರಿಷತ್ತಿನಲ್ಲಿ ಸ್ವತಃ ಭಾಗ ವಹಿಸುವರು.

ಈ ಕೆಳಗಿನ ವಿಷಯಗಳು ಪ್ರಾಮುಖ್ಯವಾಗಿ ಚರ್ಚಿಸಲ್ಪಟ್ಟು ಅವುಗಳ ಕುರಿತಾಗಿ ನಿರ್ಣಯಗಳನ್ನು ಕೂಡಾ ಈ ಪರಿಷತ್ತು ಮಾಡಲಿದೆ. 1. ಅಭಿವೃದ್ಧಿಗಾಗಿ ಚುನಾಯಿಸಲ್ಪಡುವ ಕ್ಷೇತ್ರಗಳು. 2 ಈ ಕ್ಷೇತ್ರಗಳ ಸುಧಾರಣೆಯ ಬಗ್ಗೆ ಕೈಕೊಳ್ಳಬೇಕಾದ ಉಪಾಯಗಳು ಮತ್ತು ಕಾರ್ಯಕ್ರಮಗಳು. 3 ಇಂತಹ ಸುಧಾರಣೆಯ ಕಾರ್ಯಕ್ರಮಗಳಿಗೆ ತಗಲುವ ಅಂದಾಜು ವೆಚ್ಚ ಮತ್ತು ಅದನ್ನು ಸಂಪಾದಿಸುವ ವಿಧಾನ, 4 ಇಂತಹ ಸುಧಾರಣೆಯಿಂದ, ಮುಖ್ಯವಾಗಿ ಕೃಷಿ ಸುಧಾರಣೆಯಿಂದ ಎಷ್ಟು ಕಾಲದಲ್ಲಿ ಪ್ರತ್ಯಕ್ಷ ಉಪಯೋಗವು ದೊರಕಬಹುದೆಂಬುದನ್ನು ಅಂದಾಜು ಮಾಡುವುದು.

ನಮ್ಮ ಮಲೆನಾಡು ಕೇಂದ್ರಗಳ ಪ್ರತಿನಿಧಿಗಳು ಸಾಹಸಪಟ್ಟರೆ ಕೃಷಿಯೋಗ್ಯ ಬಂಜರು

ಕೇಂದ್ರ ಸರಕಾರದವರು

ಮಲೆನಾಡು ಪರಿಷತ್ತು ಕರೆದಿರುವರು

ಮಲೆನಾಡಿಗರಲ್ಲಿ ಜರೂರು ವಿನಂತಿ

ಸ್ಥಳಗಳ ಮಾಹಿತಿ ಸಂಗ್ರಹಿಸುವುದು ದೊಡ್ಡ ಕೆಲಸವಲ್ಲ. ಸುಬ್ರಮಣ್ಯ, ಬೆಳ್ಳಾಡಿ, ಸುಳ್ಯ, ಸಂಪಾಜೆ, ಕಡಬ, ಉಪ್ಪಿನಂಗಡಿ, ಪುತ್ತೂರು, ಶಿರಾಡಿ, ಧರ್ಮಸ್ಥಳ, ಚಾರ್ಮಾಡಿ, ಮುಲವಂತಿಗೆ, ಬೆಳ್ತಂಗಡಿ, ಈ ಕೇಂದ್ರಗಳು ಮುಖ್ಯವಾಗಿ ಪುತ್ತೂರು ತಾಲೂಕಿನಲ್ಲಿಯೂ; ಮಾಳ, ವೇಣೂರು, ಹೆಬ್ರಿ, ಸೋಮೇಶ್ವರ, ಕಬ್ಬಿನಾಲೆ, ಮುಂತಾದ ಪ್ರಾಮುಖ್ಯವಾದ ಕಾರ್ಕಳ ತಾಲೂಕಿನ ಕೇಂದ್ರಗಳೂ; ಹಾಲಾಡಿ, ಕೊಲ್ಲೂರು, ಮುಂತಾದ ಕುಂದಾಪುರ ತಾಲೂಕಿನ ಮುಖ್ಯ ಕೇಂದ್ರಗಳು ಹಾಗೂ, ಪನಸ್ಕಾಡಿ, ಅಲೆಟ್ಟಿ, ಮುಂತಾದ ಕಾಸರಗೋಡು ತಾಲೂಕಿನ ಕೇಂದ್ರಗಳ ಮುಖಂಡರುಗಳು ಅತೀ ತ್ವರ್ಯದಲ್ಲಿ ಈ ಕೆಳಗಿನ ವಿವರಗಳಂತೆ ಮಾಹಿತಿಯನ್ನು ಸಂಗ್ರಹಿಸಿ ಸ್ವಲ್ಪವೂ ಕಾಲವಿಳಂಬ ಮಾಡದೆ ನಮಗೆ ಕಳುಹಿಸಿ ಕೊಡಬೇಕಾಗಿ ವಿನಂತಿ. ನಮ್ಮ ಜಿಲ್ಲೆಯ ಕಲೆಕ್ಟರರಾಗಿದ್ದ ಶ್ರೀ ಕೈಪಾರರು ವರ್ಗವಾಗಿ ಹೊಸತಾಗಿ ಬಂದ ಜನಾಬ್ ಸೈಯದ್ ಮಾಹಮ್ಮುದ್‌ರವರು ನಮಗೆ ನೆರವಾಗುವವರಾಗಿ ಭರವಸೆಯಿತ್ತಿದ್ದಾರೆ.

ಮಾಹಿತಿಯ ವಿವರ:

1) ಗ್ರಾಮದ ಹೆಸರು ಮತ್ತು ತಾಲೂಕು.

2) ಕೃಷಿಮಾಡಲು ಯೋಗ್ಯವಾದ ಸ್ಥಳಗಳ ವಿಸ್ತೀರ್ಣ ಮತ್ತು ವಿವರ.

a) ಭತ್ತದ ಕೃಷಿ-ಒಂದು ಬೆಳೆ, ಎರಡು ಬೆಳೆ, ಮೂರು ಬೆಳೆ.

b) ಅಡಿಕೆ ಕೃಷಿ.

c) ಒಳ್ಳೆಮೆಣಸು ಅಥವಾ ಇನ್ನಿತರ ಕೃಷಿ.

3) ಮೇಲಿನ ವಿಧವಾಗಿ ಕೃಷಿಮಾಡಲು ಈಗ ಇರುವ ತೊಡಕುಗಳು—ಉದಾ. ನೀರಿನ ಅಭಾವ, ಮಲೇರಿಯಾ, ಕಾಡಿನ ಸಾಮಿಪ್ಯ, —ಇವುಗಳಲ್ಲಿ ಯಾವುದೆಂದು ವಿವರವಾಗಿ ತಿಳಿಸಬೇಕು.

4) ಪ್ರತಿಯೊಂದು ಗ್ರಾಮದಲ್ಲಿ ದೊಡ್ಡ ಕ್ಷೇತ್ರಗಳನ್ನೂ, ಅವುಗಳು ಖಾಸಗಿ, ಸರಕಾರೀ ಅನಾಧೀನ ಅಥವಾ ಜಂಗಲಿಯಲ್ಲಿರುವುದೆಂಬುದನ್ನು ಸ್ಪಷ್ಟಪಡಿಸಬೇಕು.

5) ರಸ್ತೆಗಳು ಈ ಗ್ರಾಮದಿಂದ ಇರುವ ದೂರ ಮತ್ತು ರಸ್ತೆಗಳ ಸ್ವಭಾವ.

6) ಜನರ ಅಭಾವವಿದ್ದರೆ ಹಣದ ಅನುಕೂಲತೆ ಒದಗಿಸಿಕೊಟ್ಟರೆ ಜನವನ್ನು ಸಂಪಾದಿಸಬಹುದೆ?

7) ಸದ್ರಿ ಗ್ರಾಮಗಳಲ್ಲಿ ಜವಾಬ್ದಾರಿಯುಳ್ಳ ಯೋಗ್ಯ ಮುಖಂಡರಿರುವರೊ ಮತ್ತು ಅಂಥವರ ಹೆಸರು.

ಈ ಮಾಹಿತಿಯನ್ನು ನನಗೆ ಕಳುಹಿಸುವ ವಿಳಾಸ:—

M. N. Bhide,
ಅಧ್ಯಕ್ಷ
ಕರ್ನಾಟಕ ಮಲೆನಾಡು ಸುಧಾರಣಾ ಸಂಘ.
Hotel Embassy, (ಹೋಟೆಲ್ ಎಂಬೆಸ್ಸಿ)
Infantary Road Bangalore.

In the Court of the District Munsiff of Mangalore.

O. S No. 71/49.

Seshiamma, widow of Mairpadi Dota Laxminarayana, Mangalore Town .. Plaintiff

and

1 M. S. Venkat Rao, s/o Shambhatta Subba Rao, Panamboor village.

2 B Thimmappayya s/o Bettina Subraya, Hosabettu village.

NOTICE is hereby given to the above-named 1st Defendant that the above-named Plaintiff has filed the above suit for recovery of arrears of maintenance due to her on the responsibilities of the suit properties. If the said 1st Defendant has any objection, he may appear personally or through a Vakil before the above Court at 11 A. M. on 15 6-1949 and file his objections, if any, in writting, failing which the suit will be decided in his absence.

Mangalore } B. Bhasker Rao,
2 6-'49. } Advocate for Plff.

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ಸುಶಿಕ್ಷಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ
S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ
ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ
ತಾರಾನಾಥ ವಿದ್ಯಾಪೀಠ ಬಳ್ಳಾರಿ.
P. O. ಸಂಗನಕಲ್ ಬಳ್ಳಾರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಪಾಣಿ, ಕೆಮಿಸ್ಟ್, ಹಾವೇರಿ ಬ್ಯಾಡಗಿ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ದರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor.
Manager.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 20 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ದಿಲ್ಲಿಗಳನು ಉಪಯೋಗಿಸಿದರೆ ಹಪತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾಧಾರಣ ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ]

MIS. P. DEVEE, P. DS (N. J.)
Tollygunge CALCUTTA
ಸಪ್ಲೈಕರ್ತರು: ಶಹಾ ಕಂಪೆನಿ, ಮಂಗಳೂರು



ಶ್ರೀ ಕೌರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಡಾಕ್ಟರ್ ಕೌರಡ್ಕಲ್ ವೆಂಕಟಪ್ಪಯ್ಯರ
'ಮನೆ ಮದ್ದು'
(HOME REMEDIES)
೨೦೦ ಕಾಯಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨/-
ಪ್ರತಿಗಳು ಸಮೀಪದ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ.
ನವಯುಗ ಪ್ರೆಸ್, ಉಡುಪಿ

ವೈದ್ಯ ಶಿಕ್ಷಣ

'ಸರಿಯಾದ ಶಿಕ್ಷಣವಿಲ್ಲದೆ ಮಾರುದ್ದ ಬಿರುದು ಹೊತ್ತು ಚಿಕಿತ್ಸೆಗೆ ಪ್ರಾರಂಭಿಸಿದರೆ ಸಮಾಜಕ್ಕೆ ಹೆಚ್ಚಿನ ಕೇಡುಕಾಗಬಹುದು'

ಮಾನ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟಿ.

ನಮ್ಮ ದೇಶದ ಜನರಲ್ಲಿ ಹೆಚ್ಚಿನವರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಇವರಿಗೆ ವೈದ್ಯಕೀಯ ಚಿಕಿತ್ಸೆಯು ಹೆಚ್ಚಾಗಿ ದೇಶೀಯ ಔಷಧಗಳನ್ನು ಪ್ರಯೋಗಿಸುತ್ತಿರುವ ವೈದ್ಯರಿಂದಲೇ ದೊರೆಯುತ್ತಿದೆ. ಆದುದರಿಂದ ಇಂತಹ ದೇಶೀಯ ಔಷಧಗಳನ್ನು ರೋಗಿಗಳಿಗೆ ಉಪಯೋಗಿಸುತ್ತಿರುವ ವೈದ್ಯರಿಗೆಲ್ಲಾ ಸರಿಯಾದ ತರಬೇತಿಯು ಅತ್ಯಾವಶ್ಯಕವಾಗಿದೆ. ಮಾತ್ರವಲ್ಲ, ಸರಕಾರವು ಈ ತರಬೇತಿಯನ್ನು ಕ್ರಮಪಡಿಸಿ ಅವರ ವೈದ್ಯ ವೃತ್ತಿಯ ಮೇಲೆ ತನ್ನ ಹತೋಟಿಯನ್ನಿರಿಸಿಕೊಳ್ಳುವುದು. ಬೇರೆ ಬೇರೆ ಪ್ರಾಂತಗಳಲ್ಲಿ ದೇಶೀಯ ಔಷಧಗಳಲ್ಲಿ ತರಬೇತಿಕೊಡುವ ಶಾಲೆಗಳು ಪ್ರಾರಂಭವಾಗಿವೆ. ಮದ್ರಾಸು ನಗರದಲ್ಲಿ ಸ್ಥಾಪಿಸಿದ ಎಲ್. ಐ. ಎಂ. ಶಾಲೆ ಹಾಗೂ ಕಾಲೇಜೆಂದರೆ ಇಂತಹ ಸಂಸ್ಥೆಗಳಲ್ಲಿ ಅತ್ಯುತ್ತಮವಾಗಿವೆ. ಈ ಶಾಲೆಗೆ ಉತ್ತಮ ಅಧ್ಯಾಪಕ ವರ್ಗವೂ ಸಲಕರಣೆಗಳೂ ಬೇಕಾಗಿವೆ. ಇದಕ್ಕಾಗಿ ತಕ್ಕ ಚರ್ಯೆ ತಕ್ಕೊಳ್ಳಲಾಗುತ್ತಿದೆ. ದೇಶೀಯ ವೈದ್ಯವು ಶಸ್ತ್ರಕ್ರಿಯೆಗಳಲ್ಲಿ ಹಿಂದುಳಿದಿದೆಯೆಂದೂ ಪಾಶ್ಚಿಮಾತ್ಯ ಪದ್ಧತಿಯಿಂದ ರೋಗ ನಿಧಾನವನ್ನು ತಿಳಿಯುವ ರೀತಿ, ಸಲಕರಣೆಗಳನ್ನೆಲ್ಲಾ ಸ್ವೀಕರಿಸಬೇಕಾಗಿದೆಯೆಂದೂ ಛೋಪ್ರ ಸಮಿತಿಯು ಅಭಿಪ್ರಾಯ ಪಟ್ಟಿದೆ. ಇಂದು ಯಶಸ್ವಿಯಾಗಿ ವೈದ್ಯ ಚಿಕಿತ್ಸೆ ನಡೆಸಬೇಕಾದರೆ ರಸಾಯನ ಶಾಸ್ತ್ರ, ಭೌತಿಕ ಶಾಸ್ತ್ರ ಮೊದಲಾದುವುಗಳಲ್ಲಿ ಮೂಲ ಜ್ಞಾನವಾದರೂ ಅತ್ಯಾವಶ್ಯಕವಾಗಿದೆ. ರೋಗವನ್ನು ಸರಿಯಾಗಿ ತಿಳಕೊಳ್ಳುವುದು ಅತ್ಯಗತ್ಯವಾಗಿದೆ. ಅದಕ್ಕೆ ವೈಜ್ಞಾನಿಕ ಸಹಾಯ ಬೇಕೇ ಬೇಕಾಗಿದೆ.

ನಿರೋಧಕ ಚಿಕಿತ್ಸೆ

ನಿರೋಧಕ ದಾಮು ಮೊದಲಾದ ಆಧುನಿಕ ಕಾಲದ ಆರೋಗ್ಯ ವಿಷಯಕ ಕಾರ್ಯಕಲಾಪಗಳಿಂದ ಅನೇಕ ಸಾಂಕ್ರಾಮಿಕ ರೋಗಗಳನ್ನು ತಡೆಯಬಹುದು, ಇಲ್ಲವೇ ಹತೋಟಿಗೆ ತರಬಹುದು. ದೇಶೀಯ ವೈದ್ಯ ಶಿಕ್ಷಣದಲ್ಲಿ ಆಧುನಿಕ ಔಷಧಗಳ ಕುರಿತು ಸಾಮಾನ್ಯ ಜ್ಞಾನವನ್ನಾದರೂ ದೊರಕಿಸುವುದು ಅತ್ಯಾವಶ್ಯಕವಾಗಿದೆಯೆಂದು ಈ ಶಾಲೆಯಲ್ಲಿ ಅದಕ್ಕೆ ಅವಕಾಶ ಕಲ್ಪಿಸಲಾಗಿದೆ. ಆಧುನಿಕ ವೈದ್ಯ ಕ್ರಮದಲ್ಲಿ ತರಬೇತಿ ಮತ್ತು ಶಿಕ್ಷಣಗಳ ಮಟ್ಟವನ್ನು ಹೆಚ್ಚಿಸಬೇಕಾಗಿದೆ. ದೇಶೀಯ ವೈದ್ಯ ವಿದ್ಯಾರ್ಥಿಗಳನ್ನು ಮಲೇರಿಯಾ ನಿರೋಧ, ಅಂಟುರೋಗಗಳು ಹರಡದಂತೆ ದಾಮು ಹಾಕುವುದು, ಪೋಷಣ ವಿಷಯಕ ಪ್ರಚಾರ ಇತ್ಯಾದಿಗಳಲ್ಲಿ ತರಬೇತಿ ಮಾಡುವುದರಿಂದ ಹಳ್ಳಿಗಳಲ್ಲಿ ಇವರ ಕಾರ್ಯಕ್ಷೇತ್ರವು ವಿಸ್ತರಿಸಿ ಹೆಚ್ಚಿನ ಪ್ರಯೋಜನವಾದೀತು. ಹಿಂದೀಯ ವೈದ್ಯ ಪದ್ಧತಿಯಲ್ಲಿ ಚಿಕಿತ್ಸೆ ನಡೆಸುವವರು ಕಡ್ಡಾಯವಾಗಿ ದಾಖಲೆ ಮಾಡಿಸಿಕೊಳ್ಳಬೇಕು. ಇದರಿಂದ ಇವರಿಗೆ ಕೆಲವು ಹಕ್ಕು ಬಾಧ್ಯತೆಗಳು ದೊರೆಯುವುವು. ಮಾತ್ರವಲ್ಲ, ಇವರ ಚಿಕಿತ್ಸೆಯ ಮೇಲೆ ಸರಕಾರದ ಹತೋಟಿಯೂ ಇದ್ದಂತಾಗುವುದು. ಅಳಲೆಕಾಯಿ ವೈದ್ಯರನ್ನು ಹೋಗಲಾಡಿಸಿ ಹಿಂದೀಯ ವೈದ್ಯಕ್ಕೆ ತಕ್ಕ ಸ್ಥಾನಮಾನಗಳನ್ನೊದಗಿಸಬೇಕು; ಇತ್ಯಾದಿಗಳ ಕುರಿತು ಛೋಪ್ರಾ ಸಮಿತಿಯು ಸೂಚನೆ ಇತ್ತಿದೆ. ಇಷ್ಟಲ್ಲದೆ ಅನೇಕ ಬಗೆಯ ಹಿಂದೀಯ ಔಷಧಗಳಲ್ಲಿ ಸಂಶೋಧನೆ ನಡೆಸಲು ಎಲ್ಲಾ ಬಗೆಯ ಗಿಡಮೂಲಿಕೆಗಳ ಸಂಗ್ರಹಾಲಯವನ್ನು ಸ್ಥಾಪಿಸಲು ಔಷಧಗಳ ಹಾಗೂ ವಿಧಾನಗಳ ಕುರಿತು ಸರಿಯಾದ ಪಠ್ಯಪುಸ್ತಕಗಳನ್ನು ತಯಾರಿಸುವುದಕ್ಕೂ ಈ ಸಮಿತಿಯು ಸೂಚನೆಕೊಟ್ಟಿದೆ.

ಸಂಶೋಧನಾ ಶಾಖೆ

ಒಂದು ಲಕ್ಷ ರೂಪಾಯಿಗಳ ವೆಚ್ಚ ತಗಲಬಹುದಾದ ತಾತ್ಕಾಲಿಕ ಕಟ್ಟಡವೊಂದು ಮುಗಿಯುತ್ತಾ ಬಂದಿದೆ. ಇದರಲ್ಲಿ ಕಾಲೇಜನ್ನು ಸ್ಥಾಪಿಸಲಾಗುವುದಲ್ಲದೆ ಈಗಿನ ಆಸ್ಪತ್ರೆಯಲ್ಲಿರುವ 110 ರೋಗಿಗಳ ಹಾಸಿಗೆಗಳನ್ನು 210ಕ್ಕೆ ಹೆಚ್ಚಿಸಲಾಗುವುದು. ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ವಸತಿಯ ಏರ್ಪಾಡಿಗಾಗಿ ಸುಮಾರು 3 ಲಕ್ಷದ 30 ಸಾವಿರ ರೂಪಾಯಿಗಳ ವೆಚ್ಚ ತಗಲಬಹುದಾದ ಹಾಸ್ಟೆಲುಗಳ ಕೆಲಸವು ಮುಂದುವರಿಯುತ್ತಿದೆ. ಸರಕಾರವು ಶಾಲೆ-ಕಾಲೇಜು ಆಸ್ಪತ್ರೆಗಳ ವಿಸ್ತರಣೆಗೂ ಚಿಕಿತ್ಸಾಲಯ ಮತ್ತು ಗಿಡಮೂಲಿಕೆಗಳ ಸಂಗ್ರಹಾಲಯವನ್ನು ತೆರೆಯುವುದಕ್ಕೂ ತಯಾರಿಸಿದ ಯೋಜನೆಗಳಿಗಾಗಿ 7 ಲಕ್ಷದ 57 ಸಾವಿರ ರೂಪಾಯಿಗಳನ್ನು ಆಗಾಗ ಬೇಕಾದ ವೆಚ್ಚಕ್ಕೂ 20 ಲಕ್ಷದ 17 ಸಾವಿರ ರೂಪಾಯಿಗಳನ್ನು ವೆಚ್ಚಕ್ಕೂ ಮಂಜೂರು ಮಾಡಿದೆ. ಸದ್ಯದಲ್ಲೇ ಒಂದು ಸಂಶೋಧನಾ ಶಾಖೆಯೂ ತೆರೆಯಲ್ಪಡುವುದು.

1,168 ಮಂದಿ ತೇರ್ಗಡೆ.

ಎಲ್. ಐ. ಎಂ. ಶಾಲೆಯೊಂದು ಪ್ರಸಿದ್ಧವಾದ ಈ ಹಿಂದೀಯ ವೈದ್ಯ ಪಾಠಶಾಲೆಯಿಂದ ಈವರೆಗೆ 1,168 ಮಂದಿ ತೇರ್ಗಡೆ ಹೊಂದಿದ್ದಾರೆ. ಇವರಲ್ಲಿ 108 ಮಂದಿ ಮಹಿಳೆಯರು. ಇವರಲ್ಲಿ 836 ಮಂದಿ ಆಯುರ್ವೇದ, 265 ಮಂದಿ ಸಿದ್ಧ, 67 ಮಂದಿ ಯುನಾನಿ ಪದ್ಧತಿಗಳಲ್ಲಿ ಶಿಕ್ಷಣ ಪಡೆದಿದ್ದಾರೆ. ಈಗ ಎಲ್. ಐ. ಎಂ. ತರಗತಿಗಳಲ್ಲಿ ಒಟ್ಟು 366 ಮಂದಿ, ಕಾಲೇಜಿನಲ್ಲಿ 95 ಮಂದಿ ಕಲಿಯುತ್ತಿರುವರು. ಆಂಧ್ರ ವಿಶ್ವವಿದ್ಯಾಲಯವು ಆಯುರ್ವೇದದಲ್ಲಿ ಬಿ. ಎಮ್. ಎಂಬ ಡಿಗ್ರಿಯನ್ನು ಮಂಜೂರು ಮಾಡಿದೆ. ಮದ್ರಾಸು ವಿಶ್ವವಿದ್ಯಾಲಯವೂ ಕಾಲೇಜನ್ನು ಮಂಜೂರು ಮಾಡಿ ಯೋಗ್ಯ ಡಿಗ್ರಿ ಕೊಡುವ ವಿಷಯವು ಪರ್ಯಾಲೋಚನೆಯಲ್ಲಿದೆ.

ದೇಶೀಯ ವೈದ್ಯರಿಗೆ ಸೌಕರ್ಯ

ನಮ್ಮ ಪ್ರಾಂತದಲ್ಲಿ ಈಗ ಒಟ್ಟು 324 ಹಿಂದೀಯ ಔಷಧಗಳನ್ನುಪಯೋಗಿಸುವ ಗ್ರಾಮ ಚಿಕಿತ್ಸಾಲಯಗಳೂ 242 ಕ್ರಮಬದ್ಧವಾದ ಚಿಕಿತ್ಸಾಲಯಗಳೂ ಕೆಲಸ ಮಾಡುತ್ತಿವೆ. ಈ ಚಿಕಿತ್ಸಾಲಯಗಳಲ್ಲಿ 417 'ಎ' ತರಗತಿಯ ಹಾಗೂ 149 'ಬಿ' ತರಗತಿಯ ವೈದ್ಯರು ನೇಮಿಸಲ್ಪಟ್ಟಿದ್ದಾರೆ. ಎಲ್. ಐ. ಎಮ್. ಡಾಕ್ಟರರ ವೇತನ ದರವನ್ನು II ನೇ ತರಗತಿಯ ಸಿವಿಲ್ ಅಸಿಸ್ಟೆಂಟ್ ಸರ್ಜನರಿಗೆ ಸ್ಥಳೀಕ ಸಂಸ್ಥೆಗಳಲ್ಲಿ ದೊರೆಯುವ ದರದಷ್ಟೇ ಮಾಡಲಾಗಿದೆ. ಹೆರಿಗೆ ಮತ್ತು ಶಿಶು ವಿಹಾರಗಳಲ್ಲಿ ಎಲ್. ಐ. ಎಮ್. ಆದ ಮಹಿಳೆಯರನ್ನು ಮೆಡಿಕಲ್ ಆಫೀಸರರಾಗಿ ನೇಮಿಸಲಾಗಿದೆ. ಡ್ರಗ್ಸ್ ಆಕ್ಟಿನ ಬಗ್ಗೆ ಎಲ್. ಐ. ಎಮ್. ಡಾಕ್ಟರರನ್ನು ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟಿಶನರಂತೆಯೇ ಮಂಜೂರು ಮಾಡಲಾಗಿದೆ. ಈವರೆಗೆ 'ಎ' ತರಗತಿಯಲ್ಲಿ 1,167 ಮಂದಿಯೂ 'ಬಿ' ತರಗತಿಯಲ್ಲಿ 11,940 ಮಂದಿಯೂ ದಾಖಲೆ ಮಾಡಿಸಿಕೊಂಡಿದ್ದಾರೆ. ಹಿಂದೀಯ ವೈದ್ಯ ವೃತ್ತಿಯಲ್ಲಿರುವವರು ದಾಖಲೆ ಮಾಡಿಸುವುದಕ್ಕಾಗಿ 1914ರ IV ನೇ ಮದ್ರಾಸ್ ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟಿಗೆ ಸಮಾನವಾದ ಮಸೂದೆಯನ್ನು ಮಂಡಿಸಲು ಸರಕಾರದ ಪರ್ಯಾಲೋಚನೆಯಲ್ಲಿದೆ.

ಎಚ್ಚರದಿಂದ ಪ್ರಯೋಗಿಸಬೇಕು

1943-44ರಲ್ಲಿ ರೂರಲ್ ಮೆಡಿಕಲ್ ಪ್ರೇಕ್ಟಿಶನರಿಗೆ ಸಹಾಯ ಧನ ಕೊಟ್ಟುದು ಸಹಿತ ಹಿಂದೀಯ ವೈದ್ಯಕ್ಕಾಗಿ 2 ಲಕ್ಷದ 63 ಸಾವಿರ ವೆಚ್ಚವಾಗಿತ್ತು. ಆದರೆ 1949-50ರಲ್ಲಿ ಅದನ್ನು 7 ಲಕ್ಷದ 26 ಸಾವಿರಕ್ಕೆ ಏರಿಸಲಾಗಿದೆ. ಐದು ಖಾಸಗೀ ಪಾಠಶಾಲೆಗಳನ್ನೂ 'ಬಿ' ತರಗತಿಯ ವೈದ್ಯರ ತರಬೇತಿಗಾಗಿ ಮಂಜೂರು ಮಾಡಲಾಗಿದೆ. ಸರಿಯಾದ ಸಲಕರಣೆ, ಆಸ್ಪತ್ರೆ, ಅಧ್ಯಾಪಕ ವರ್ಗಗಳಿಂದ ಕೂಡಿದ ಪಾಠಶಾಲೆಗಳೇ ವೈದ್ಯ ಶಿಕ್ಷಣಕ್ಕೆ ಯೋಗ್ಯವಾಗಿವೆ. ಸರಿಯಾದ ಶಿಕ್ಷಣವಿಲ್ಲದೆ ಮಾರುದ್ದ ಬಿರುದನ್ನು ಹೊತ್ತು ಚಿಕಿತ್ಸೆಗೆ ಪ್ರಾರಂಭಿಸಿದರೆ ಸಮಾಜಕ್ಕೆ ಹೆಚ್ಚಿನ ಕೇಡುಕಾಗಬಹುದು. ಆಯುರ್ವೇದದಲ್ಲೂ ಅಲೋಪತಿಯಲ್ಲೂ ಅನೇಕ ಔಷಧಿಗಳು ಹೆಚ್ಚಿನ ಶಕ್ತಿಯುಳ್ಳವುಗಳಾಗಿವೆ. ಇವುಗಳನ್ನು ಎಚ್ಚರದಿಂದ ಪ್ರಯೋಗಿಸದಿದ್ದರೆ ಅನರ್ಥವಾದೀತು. ಪಾದರಸದಿಂದ ತಯಾರಿಸಲಾಗುವ ಔಷಧಗಳೂ ಸಲ್ಫ ಡ್ರಗ್ಸ್ ಇವೆಲ್ಲಾ ಸರಿಯಾದ ರೀತಿ ಪ್ರಮಾಣಗಳಲ್ಲಿ ಪ್ರಯೋಗಿಸದಿದ್ದರೆ ಹೆಚ್ಚಿನ ಅಪಾಯವನ್ನುಂಟುಮಾಡಬಲ್ಲವು. ಬದಲಾವಣೆಗೆ ಅನುಕೂಲವಾಗಿ ಹಿಂದೀಯ ವೈದ್ಯ ಶಿಕ್ಷಣದಲ್ಲಿ ಡಿಗ್ರಿ ಮತ್ತು ಲೈಸನ್ಸ್ ಕೋರ್ಸುಗಳೆಂದು ಎರಡು ವಿಧವಾದ ಅಭ್ಯಾಸಗಳು ಅವಶ್ಯಕವಾಗಿವೆ. ಲೈಸನ್ಸ್ ಕೋರ್ಸಿನಿಂದ ಹಳ್ಳಿಗಳಲ್ಲಿ ಶಿಕ್ಷಣ ನಡೆಸುತ್ತಿರುವ ನೂರಾರು ಮಂದಿ ವೈದ್ಯರಿಗೆ ತರಬೇತಿ ಹೊಂದಲು ಅವಕಾಶವಾಗುವುದು. ಇದು ಮೂರು ವರ್ಷಗಳ ಅಭ್ಯಾಸವಾಗಿದೆ. ಅಲ್ಲದೆ ಕೆಲವು ಹಳ್ಳಿ ವೈದ್ಯರಿಗೆ ಸಾರ್ವಜನಿಕಾರೋಗ್ಯ, ಚಿಕ್ಕ ಚಿಕ್ಕ ಶಸ್ತ್ರಕ್ರಿಯೆ ಇತ್ಯಾದಿಗಳಲ್ಲಿ ತರಬೇತಿ ಕೊಡಲು ಆರು ತಿಂಗಳ ಅಭ್ಯಾಸವನ್ನು ಪ್ರಾರಂಭಿಸಬೇಕೆಂದು ಸೂಚನೆಯಿದೆ. 1947ರಲ್ಲಿ ಒಮ್ಮೆ ಮುಚ್ಚಿದ ಎಲ್. ಐ. ಎಂ. ಶಾಲೆಯನ್ನು ತಿರುಗಿ ಪ್ರಾರಂಭಿಸಿ ಅಭ್ಯಾಸವನ್ನು 4 ವರುಷಗಳಿಗೆ ತಗ್ಗಿಸಿದುದರಿಂದ ಹೆಚ್ಚಿನ ಪ್ರಯೋಜನವಾಗಿದೆ. ಸರಕಾರವು ಗ್ರಾಮ ವೈದ್ಯ ಯೋಜನೆಯನ್ನು ಪರ್ಯಾಲೋಚಿಸುತ್ತಿದೆ. ಆರಿಸಲ್ಪಟ್ಟ ಕೆಲವು ಹಿಂದೀಯ ವೈದ್ಯ ವೃತ್ತಿಯಲ್ಲಿರುವವರಿಗೆ ಆರು ತಿಂಗಳ ತರಬೇತಿಕೊಟ್ಟರೆ ಹಳ್ಳಿಗಳಲ್ಲಿ ಸಾಕಷ್ಟು ವೈದ್ಯಕೀಯ ಸೌಕರ್ಯವು ದೊರೆಯಬಹುದು. ಸರಿಯಾಗಿ ತರಬೇತಿಯಿಲ್ಲದ ಅಸಮರ್ಥ ವ್ಯಕ್ತಿಗಳನ್ನು ಸರಕಾರವು ಹಳ್ಳಿಗಳಿಗೆ ಕಳುಹುವುದು ತಪ್ಪೆಂದು ಅನೇಕರು ಹೇಳಬಹುದು. ಆದರೆ ಹಳ್ಳಿಗರಿಗೆ ಔಷಧ ಕೊಡುತ್ತಿರುವ ವೈದ್ಯರಿಗೆ ಆರು ತಿಂಗಳ ಮಟ್ಟಿಗೆ ತರಬೇತಿಕೊಡುವುದು ಒಳ್ಳೆಯದೆಂದೂ ಹೇಳಲಾಗಿದೆ. ಏಕೆಂದರೆ ಹಳ್ಳಿಗರಿಗೆ ಆಧುನಿಕ ವೈದ್ಯ ಶಾಸ್ತ್ರಜ್ಞರು ಸಮೀಪದಲ್ಲಿ ದೊರೆಯುವ ಸಂಭವವಿರುವುದಿಲ್ಲ. ಮಾತ್ರವಲ್ಲ, ಹಳ್ಳಿಗರು, ಅಧಿಕ ಬೆಲೆಯ ಔಷಧಗಳನ್ನೂ ಸೂಜಿಮದ್ದುಗಳನ್ನೂ [ಇಂಜಕ್ಷನ್] ಕೊಂಡುಕೊಳ್ಳಲು ಶಕ್ತರಾಗಿಲ್ಲ.

ಪಠ್ಯ ಪುಸ್ತಕಗಳು

ಯೋಗ್ಯ ಪಠ್ಯ ಪುಸ್ತಕಗಳ ಕುರಿತು ಹೆಚ್ಚು ಒತ್ತಾಯಿಸಲು ಸಾಧ್ಯವಿಲ್ಲ. ಹಳೆಯ ಪುಸ್ತಕಗಳನ್ನು ಪರಿಷ್ಕರಿಸಿ ಹೊಸತಾಗಿಸಬೇಕು. ಆಧುನಿಕ ಕಾಲದ ಅನುಭವಗಳು ಅಂತಹ ಪುಸ್ತಕಗಳಲ್ಲಿ ಅಡಕವಾಗಿರಬೇಕು. ಆಧುನಿಕ ಜ್ಞಾನದ ಬೆಳಕಿನಲ್ಲಿ ಹಳೆಯ ರೀತಿಗಳನ್ನು ಪರೀಕ್ಷಿಸಿನೋಡಬೇಕು. ತಜ್ಞ ಸರಕಾರಿ ಸಮಿತಿಯೊಂದನ್ನು ಸ್ಥಾಪಿಸಿ ಹೊಸ ಅನುಭವಗಳನ್ನು ಒಟ್ಟುಗೂಡಿಸಬೇಕೆಂದು ಛೋಪ್ರ ಸಮಿತಿಯು ಸೂಚಿಸಿದೆ.

ಕ್ರಮಬದ್ಧವಾದ ಪರಿಶೀಲನೆ

ಕವಿರಾಜರೂ ಹಕೀಮರೂ ಉಪಯೋಗಿಸುತ್ತಿರುವ ಅನೇಕ ಗಿಡಮೂಲಿಕೆಗಳು ಹೊರಗಿನಿಂದ ನಾವು ತರಿಸುವ ಆಧುನಿಕ ಔಷಧಗಳಷ್ಟೇ ಶಕ್ತಿಯುಳ್ಳವುಗಳೆಂದು ತಿಳಿದು ಬಂದಿದೆ. ಹಾಗೆಯೇ ನಮ್ಮ ಪುರಾತನ ಗ್ರಂಥಗಳಲ್ಲಿ ಹೇಳಲ್ಪಟ್ಟವೆಯೆಂದು ಅನೇಕ ಕಮಿ ಯೋಗ್ಯತೆಯುಳ್ಳ ಇಲ್ಲವೇ ಏನೂ ಫಲವಿಲ್ಲದ ಹೆಚ್ಚೇಕೆ, ಕೆಡುಕುತರುವ ಔಷಧಗಳನ್ನಾದರೂ ಉಪಯೋಗಿಸುತ್ತಿದ್ದೇವೆ. ಅನೇಕ ಪುರಾತನ ಮೂಲಿಕೆಗಳು ಕುಟುಂಬದಲ್ಲಿ ಮಾತ್ರ ಗುಟ್ಟಾಗಿ ಉಳಿದು ಬರಬರುತ್ತಾ ಯಾರಿಗೂ ತಿಳಿಯದೆ ಕಳಕೊಂಡಿದ್ದೇವೆ. ಕೆಲವು ರೋಗ ಪರಿಹಾರಕಗಳ ವಿಷಯದಲ್ಲಿ ಮಿತಿಮೀರಿ ಹೊಗಳಿದರೂ ಅವುಗಳ ಶಕ್ತಿಯೇ ಸಂದೇಹಾಸ್ಪದವಾಗಿದೆ. ಆದುದರಿಂದ ಒಳ್ಳೆಯವುಗಳನ್ನೂ ಕೆಟ್ಟವುಗಳನ್ನೂ ಪ್ರತ್ಯೇಕಿಸಲು ಕ್ರಮಬದ್ಧವಾದ ಪರಿಶೀಲನೆಯು ನಡೆಯಬೇಕು. ಗಿಡಮೂಲಿಕೆಗಳನ್ನು ಉತ್ತಮ ಮಟ್ಟಕ್ಕೆ ತಂದು ಪರಿಶುದ್ಧವಾದ ರೀತಿಯಲ್ಲಿ ಅಧಿಕವಾಗಿ ತಯಾರಿಸುವುದರಿಂದ ಹಿಂದೀಯ ಔಷಧಗಳ ವ್ಯಾಪಾರವೂ ಅಭಿವೃದ್ಧಿಯಾದೀತು.

WANTED

A qualified Drawing Master for Milagres High School, Kallianpur. Vacancy permanent. Pay according to Local Board's Scale

Apply sharp to

The Correspondent,
Milagres High School,
Kallianpur [S. Kanara]

Kallianpur, 3-6-1949.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

SOB

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

RLGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618 | 16-6-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER:
Hon'ble Sri. A. B. Shetty
Minister for Agriculture & Veterinary

Telegram:
"Navayuga"

Estd.
1921
ಸ್ಥಾಪನೆ.

ವಾರ್ಷಿಕ ಚಂದಾ:
5—4—0
6 ತಿಂಗಳಿಗೆ
3—0—0
ಬಿಡಿಪ್ರತಿಗೆ
0—2—0

ವರ್ಷ ೨೯
ವಾರ 42

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 42

ಇವನ ಆತ್ಮಕ್ಕೆ ಶಾಂತಿಯಿರಬಹುದಲ್ಲವೆ?

ತನ್ನ ಅಭಿಪ್ರಾಯವು ನಿರ್ದೋಷ, ತನ್ನ ಅಧಿಕಾರವು ನಿರಂಕುಶವೆಂಬುದೇ ಹಿಟ್ಲರನ ವೈಶಿಷ್ಟ್ಯ. ಈ ಭಾವನೆಯನ್ನು ಕಟ್ಟಿಕೊಂಡಿರುವ ಮರಿ ಹಿಟ್ಲರರಿಂದು ಪ್ರತಿಯೊಂದು ಮನೆ, ಸಂಘ ಸಂಸ್ಥೆ, ಆಫೀಸು ಕಾರ್ಖಾನೆ, ಕಾರ್ಯಕ್ಷೇತ್ರಗಳಲ್ಲೆಲ್ಲಾ ವ್ಯಾಪಿಸಿದ್ದಾರೆ. ಪ್ರಪಂಚದ ಆದಿಯಿಂದ ಈವರೆಗಿನ ಚರಿತ್ರೆಯಲ್ಲೇ ಇಷ್ಟು ದೊಡ್ಡ ಸಂತಾನ ನಿರ್ಮಿಸಿಹಾಕಿದವರು ಬೇರಾರಿದ್ದಾರೆ?

ಯಾವ ವಿಶಾಲಭಾವನೆಯನ್ನೂ ಮನ್ನಿಸದೆ, ಸಂಕುಚಿತ ಬುದ್ಧಿಯ, ಕಟ್ಟುಗ್ರರೀತಿಯ ನಾಜೀ ಪಂಥವೊಂದಕ್ಕಲ್ಲದೆ ಬೇರಾವುದಕ್ಕೂ ಲೋಕದಲ್ಲಿ ಸ್ಥಾನವೇ ಇರಕೂಡದೆಂದು ಒದ್ದಾಡಿದವ ಹಿಟ್ಲರ್. ಆತನ ಯಥಾಪ್ರತಿಗಳಾಗಿ ತಂತಮ್ಮ ಕ್ಷೇತ್ರದಲ್ಲಿ ಅದೇ ಧೋರಣೆವಹಿಸಿರುವ ಹಿಟ್ಲರ್ ಸಂತಾನಿಗರಿಂದಲೇ ಇಂದು ಲೋಕವು ತುಂಬಿಹೋಗಿರುವಾಗ, ಹಿಟ್ಲರನಂತಹ ಲೋಕಪಿತನಿದ್ದಾನೆಯೆ?

ಸಂತಾನ ನಿರ್ಮಿಸಿಹಾಕಿದವ, ಅದಕ್ಕನುಗುಣವಾದ ಸಂಪತ್ತನ್ನೂ ಮಾಡಿಟ್ಟು ಹೋಗದಿದ್ದಲ್ಲಿ ಅವನ ಆತ್ಮವು ಶಾಂತಿಯಿಂದಿರುವುದು ಅಸಂಭವ; ಹಿಟ್ಲರ್ ಆ ಕಾರ್ಯವನ್ನು ಕೂಡಾ ಅನನ್ಯರೀತಿಯಿಂದ ಪೂರ್ಣಗೊಳಿಸಿಯೇ ಹೋಗಿದ್ದಾನೆ ತಾನೆ?

ಹಿಟ್ಲರ್ ನಿರ್ಮಿಸಿಹೋದ ಲೋಕಮಹಾಯುದ್ಧದಿಂದ ಲಾಭಪಡೆದವರಾರು? ಜರ್ಮನ್ ಜನತೆಯಲ್ಲ—ಅವರು ಸಂಪೂರ್ಣ ಅಧೋಗತಿಗೀಡಾದರು; ಸ್ವತಃ ಹಿಟ್ಲರ್ ಅಥವಾ ಅವನ ಅನುಯಾಯಿಗಳಲ್ಲ—ಅವರೆಲ್ಲಾ ನಿರ್ಮೂಲವಾದರು; ಯಾವುದೇ ಸಾಮ್ರಾಜ್ಯಶಾಹಿಯಲ್ಲ—ಎಲ್ಲಾ ಸಾಮ್ರಾಜ್ಯಶಾಹಿಗಳೂ ಕಳಚಿಬಿದ್ದುವು; ಕೇವಲ ಹಿಟ್ಲರ್ ಧೋರಣೆ, ವರ್ತನೆವಹಿಸಿದ ಮರಿ ಹಿಟ್ಲರರು—ಅವರೆಲ್ಲರೂ ಯುದ್ಧಾವಧಿಯಲ್ಲಿ ಕಳ್ಳಸಂತೆ, ಬಹುಮುಖೀ ದುರ್ವ್ಯಾಪಾರಗಳ ಮೂಲಕ ಹೇರಳ ಲಾಭಹೊಡೆದರು. ತನ್ನ ಸಂತತಿಗೆ, ಇಷ್ಟೂ ಸಂಪತ್ತು ಮಾಡಿಹಾಕಿದ ಕೃತಾರ್ಥಜೀವಿ ಬೇರೊಬ್ಬನಿರಲು ಸಾಧ್ಯವೆ?

ನಾಜೀಪಂಥ ಲೋಕವನ್ನಾಕ್ರಮಿಸಬೇಕು, ನಾಜೀ ಅಧಿಕಾರಾಂಕುಶದಡಿಯಲ್ಲಿ ಪ್ರಪಂಚವಿರಬೇಕು, ಎಂಬುದೇ ಹಿಟ್ಲರನ ಜೀವನಧ್ಯೇಯ. ಈ ಧ್ಯೇಯಸಾಧನೆಯ ಯುದ್ಧಕಣದಲ್ಲಿ ಹಿಟ್ಲರನು ಸೋತು ನಿರ್ಮೂಲನಾದರೂ, ಭಾವನೆ ಮತ್ತು ವ್ಯವಹಾರರಂಗದಲ್ಲಿ ಗೆದ್ದು ವಿಜಯಧ್ವಜ ಹಾರಿಸಿಲ್ಲವೆ? ಪ್ರತ್ಯಕ್ಷವಾಗಿ ತನ್ನ ಹಕ್ಕಿನ ಭೂಭಾಗಗಳನ್ನು ಸಹ ಕಳಕೊಂಡರೂ ಅಂತರಂಗಿಕವಾಗಿ ಇಡೀ ಪ್ರಪಂಚವನ್ನೇ ವ್ಯಾಪಿಸಿಕೊಂಡಿಲ್ಲವೆ? ಇಲ್ಲಿ, ಗಾಂಧಿಜೀ ದೇಹ ಬಲಿದಾನಕೊಟ್ಟು ತತ್ವತಃ ಸರ್ವಾಂತರ್ಯಾಮಿಯಾದರು, ಎನ್ನುವಂತೆ ಅಲ್ಲಿ ಹಿಟ್ಲರ್ ಸೋತು ಸತ್ತುಹೋದರೂ ತತ್ವತಃ ಲೋಕವ್ಯಾಪಿಯಾಗಿದ್ದಾನೆ, ಎಂದು ತೋರುವದಿಲ್ಲವೆ?

ಇಷ್ಟು, ತಾನು ಗಳಿಸಿಟ್ಟು ಬಂದುದು, ಶಾಶ್ವತವಾಗಿ ಉಳಿದೀತೇ ಎಂಬ ಹಂಬಲದಿಂದ ಯಾವ ಆತ್ಮವಾದರೂ ಕವಡುವದು ಸಹಜವೇ. ಹಿಟ್ಲರನ ಆತ್ಮವು ಈ ಮಟ್ಟಿಗೂ ಶಾಂತಿಯಿಂದಿರಲಡ್ಡಿಯೇನಿದೆ?

ಇಂದು ಹಿಟ್ಲರ್ ಮರ್ಜಿ, ಮನೋವೃತ್ತಿಗಳ ಅಂಶ ಯಾರಲ್ಲಿ ಅಧಿಕವಿದೆಯೋ ಅವರೇ ಲೋಕದ ಎಲ್ಲೆಲ್ಲೂ ಮುಖ್ಯಸೂತ್ರಧಾರಿಗಳು; ಪ್ರಭಾವಶಾಲಿಗಳು.

ತನ್ನ ಸಂತತಿಯನ್ನು ಸಮೃದ್ಧಿಗೊಳಿಸಿಟ್ಟು, ಸದಾಕಾಲ ತನ್ನ ಉಪಕಾರಸ್ಮರಣೆ ಮಾಡುವವರಿರುವಂತೆ ಮಾಡಿ ಸತ್ತವನ ಆತ್ಮಕ್ಕೆ ಶಾಂತಿನಿಶ್ಚಯವೆಂಬ ನಂಬಿಕೆಯಿದೆ. ಈ ದೃಷ್ಟಿಯಿಂದೆ ಶಾಂತಿಯೆಂಬುದು ಹಿಟ್ಲರನ ಆತ್ಮಕ್ಕಲ್ಲದೆ ಬೇರಾವುದಕ್ಕೆ?

ಮದ್ರಾಸು
ಅಳಿಯಸಂತಾನ ಕಾನೂನು
ಇದರ
ಕನ್ನಡ ಪ್ರತಿಗಳು
ದೊರೆಯುತ್ತವೆ

ವಿವಾಹ ಮತ್ತು ಅದರ ಬಿಡುಗಡೆ, ಆರನಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತ ವಾರಿಸ್ದಾರಿಕೆ, ಕುಟುಂಬ ಮತ್ತು ಅದರ ರಕ್ಷಣೆ, ವಿಭಾಗ ಮೊದಲಾದ, ಪ್ರತಿಯೊಬ್ಬ ಅಳಿಯ ಸಂತಾನಿಗನಿಗೂ ತಿಳಿದಿರಲೇಬೇಕಾದ ವಿಷಯಗಳಿಂದೊಡಗೂಡಿದೆ.

ಕ್ರಯ 0—8- 0. (ಟಪ್ಪಾಲು ಖರ್ಚು ಪ್ರತ್ಯೇಕ)

ಸಿಗುವ ಸ್ಥಳ:—
ನವಯುಗ ಪ್ರೆಸ್. ಉಡುಪಿ

ಸುವಾಸನೆ ಮತ್ತು ಮಧುರತೆಯಿಂದ
ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Niligiris)

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಅಂಥವರ ಹಿತದಿಂದ ಲೋಕವನ್ನು ಪಾರುಮಾಡಬೇಕಾದರೆ ದೀರ್ಘಾವಧಿ ತಾಗೀತೆಂಬುದು ನಿಶ್ಚಯವಿರುವಾಗ, ಆ ವರೆಗೂ ಅವರಲ್ಲಿ ಆವಾಹನೆಗೊಂಡಿರುವ ಹಿಟ್ಲರ್‌ಶಾಹಿ ಬಾಳಿಬರುವದು ನಿಸ್ಸಂದೇಹವಲ್ಲವೆ?

ಪ್ರತಿಯೊಬ್ಬನಲ್ಲೂ ಸತ್ಯಾಹಿಂಸೆಗಳ ಗಾಂಧೀ ಅಂಶ ಮತ್ತು ಸಂಕುಚಿತ ಸರ್ವಾಧಿಕಾರಗಳ ಹಿಟ್ಲರ್ ಅಂಶಗಳು ಅವರ ಜನನಕ್ಕೂ ಮೊದಲೇ ಇದ್ದು, ಉಳಿದುಬಂದಿವೆ. ಇವೆರಡರ ಪೈಕಿ ಯಾವ ಅಂಶ ಹೆಚ್ಚು ಪರಿಮಾಣದಲ್ಲಿದ್ದು ಆಳುವ ಶಕ್ತಿಯಾಗಿರುವುದೋ, ಕಾಲ ಅದರದಾಗುವದು. ಇಂದು ಹಿಟ್ಲರ್ ಅಂಶವೇ ಮೇಲ್ಗೈಯಾಗಿಲ್ಲವೆ?

ನಿದರ್ಶನಕ್ಕಾಗಿ, ಗಾಂಧೀಜಿಯ ರಕ್ತದಿಂದ ಕಲ್ಮಷಬುದ್ಧಿಯ ಕೆಲವಂಶ ತೊಳೆದುಹೋಗಿರುವ ಭಾರತೀಯನೊಬ್ಬನ ಮನೋವೃತ್ತಿಯನ್ನೇ ನೋಡೋಣ. ಅದರಲ್ಲೂ ಗಾಂಧೀ ಭಕ್ತರೆಂದು ಹೇಳಿಸಿಕೊಳ್ಳುವವರಲ್ಲಿ ಒಬ್ಬನ ಮರ್ಜಿ, ಮನೋವೃತ್ತಿಗಳನ್ನೇ ತೂಕಕ್ಕಿಡೋಣ. ಅವನಲ್ಲಿ ಜನತಾಹಿತಸಾಧಕ ಸತ್ಯಾಹಿಂಸೆ, ನಿಸ್ವಾರ್ಥತೆಯಿರುವದಕ್ಕಿಂತ ಹೆಚ್ಚು ಪರಿಮಾಣದಲ್ಲಿ, ವ್ಯಕ್ತಿಗತ ಲಾಭಾಕಾಂಕ್ಷೆಯಿರುವುದು ಸ್ಪಷ್ಟವಾಗಿ ತೋರಿಬಂದೀತು. ಗಾಂಧೀ ಅಂಶಕ್ಕಿಂತ ಹೆಚ್ಚಿಗೆ ಹಿಟ್ಲರ್ ಅಂಶವಿರುವದು ಖಚಿತವಾದೀತು. ಅಹಿಂಸಾಪ್ರವಾದಿಯೇ ರಾಷ್ಟ್ರಪಿತನಾಗಿರುವ ಭಾರತದಲ್ಲಿ ಕೂಡಾ ಹಿಟ್ಲರನನ್ನು ಸೋಲಿಸಲಿಕ್ಕಾಗಿಲ್ಲವೆಂದ ಮೇಲೆ. ಇನ್ನು ಎಂದಾದರೂ ಆತನ ಪತನ ಸಾಧಿಸುವ ಅದ್ಭುತ ನಡೆದೀತೆಂದು ನಿರೀಕ್ಷಿಸಲು ಆಧಾರವೇನ?

'ಜನತೆಗಾಗಿ ವ್ಯಕ್ತಿ' ಎಂಬ ತತ್ವದ ಸ್ವಾಧರಿಸಿರುವ ಪೇರಿಲ್ಲಾ ಪಂಥಗಳೂ ವ್ಯಕ್ತಿಗತ ಸಂಕುಚಿತತೆಗಳ ತ್ಯಾಗವನ್ನಪೇಕ್ಷಿಸುತ್ತವೆಯಾದ್ದರಿಂದ ಒರೆಗಲ್ಲಿಗೆ ಹಚ್ಚುತ್ತವೆಯಾದರೆ ವ್ಯಕ್ತಿಗಾಗಿ, ಜನತೆಯೆಂಬ ತತ್ವಾಧರಿತ, 'ಹಿಟ್ಲರ್‌ತನ'ವು ವ್ಯಕ್ತಿಯ ಜನ್ಮಸಿದ್ಧ ಖಾಸಗೀ ಮಹತ್ವಾಕಾಂಕ್ಷೆಗಳನ್ನೇ ಹುರಿದುಂಬಿಸುತ್ತದೆ. ಇಂತಹ ವ್ಯಕ್ತಿಗತ ಆಕಾಂಕ್ಷೆಗಳ ಸಿದ್ಧಿ ಮತ್ತು ಪೋಷಣೆಯನ್ನು ಹಿಟ್ಲರ್ ತನ್ನ ಜೀವನ ಮರಣವೆರಡರಿಂದಲೂ ಸಾಧಿಸಿದ್ದಾನೆ. ಅಂದಮೇಲೆ 'ಹಿಟ್ಲರ್‌ತನ'ಕ್ಕೆ ಜೀರಾವುದಕ್ಕಿಂತಲೂ ಹೆಚ್ಚಿನಬಾಳುವೆಯಿದೆ ಎಂದು ತೋರುವುದಿಲ್ಲವೆ?

ಈ ರೀತಿ ಲೋಕತುಂಬಾ ತನ್ನ ಮಕ್ಕಳು ಮರಿಗಳನ್ನೂ ಅವುಗಳಿಗತಿರೇಕ ಸಂಪತ್ತನ್ನೂ ಮಾಡಿಟ್ಟು, ಹೀಗೆ ತಾನು ಮಾಡಿಟ್ಟುದೆಲ್ಲವೂ ಬಹುಕಾಲ ಬಾಳುವಂತೆಯೂ ಆಗಿರುವಾಗ ಹಿಟ್ಲರನ ಆತ್ಮಕ್ಕೆ ಶಾಂತಿಯಿಲ್ಲದೆ ಹೋದೀತೆ?

ಸ್ವತಃ ಹಿಟ್ಲರನನ್ನು ನಿರ್ಮೂಲಿಸುವ ಮರಿದ್ದಂತೆ, ಲೋಕದ ಪ್ರತಿಯೊಂದೆಡೆಯಲ್ಲೂ ವ್ಯಾಪಿಸಿರುವ ಈ ಹಿಟ್ಲರ್‌ಶಾಹಿಯನ್ನು ಪೂರ್ಣಾಂತ್ಯಗೊಳಿಸಬಲ್ಲವರಾರಿದ್ದಾರೆ? ಎಂದು? ಆ ಕಾಲವೆಂದಿಗೆ?

ಅಥವಾ ಜರ್ಮನ್ ಸರ್ವಾಧಿಕಾರಿ ಹಿಟ್ಲರನು ತಮಗೊಂದು ಕಂಟಕವೆಂದು ಭಾವಿಸಿದ್ದಂತೆ, ತಮ್ಮೊಳಗೆ ಅಡಗಿಕೊಂಡಿರುವ ಹಿಟ್ಲರ್ ಪ್ರಪಂಚದ ಜನಸಾಮಾನ್ಯರಿಗೊಂದು ಕಂಟಕವೆಂದು ನೋಯುವವರಾದರೂ ಯಾರಿದ್ದಾರೆ?

ಅಂದಮೇಲೆ ಹಿಟ್ಲರನ ಆತ್ಮಶಾಂತಿಗೇನಡ್ಡಿ?

ಕೊಚ್ಚಿ ತಿರುವಾಂಕೂರು–

ತಿರುವಾಂಕೂರು ಮಹಾರಾಜರು ಜೀವಾವಧಿ ರಾಜಪ್ರಮುಖ.

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಒಂದಾಗುವವು; ಒಂದೇ ಮಂತ್ರಿಮಂಡಲ, ಒಂದೇ ಶಾಸನಸಭೆ, ಒಂದೇ ನ್ಯಾಯನಿರ್ಣಯ ಖಾತೆಯುಳ್ಳ ಏಕಾಡಳಿತೆಯೊಳಗೆ ಏಕಸಂಸ್ಥಾನವಾಗುವವು. ಈ ಸಂಯುಕ್ತಾಡಳಿತೆಯು ಇದೇ ಜುಲಾಯಿ ತಾ. 1ರಲ್ಲಿ ಉದ್ಘಾಟಿಸಲ್ಪಡುವದು. ಈ ಸಂಬಂಧದ ಕರಾರು ಪತ್ರಕ್ಕೆ ತಿರುವಾಂಕೂರು ಮತ್ತು ಕೊಚ್ಚಿ ಮಹಾರಾಜರುಗಳ ಸಹಿಯಾಗಿದೆ.

ಮೈಸೂರನ್ನು ಬಿಟ್ಟರೆ ಭಾರತದ ದಕ್ಷಿಣಾವಳಿಯ ಪುರಾತನ ಪ್ರಸಿದ್ಧ ಹಾಗೂ ದೊಡ್ಡ ಸಂಸ್ಥಾನಗಳೆಂದರೆ ತಿರುವಾಂಕೂರು ಮತ್ತು ಕೊಚ್ಚಿ. ಇವೆರಡು ಸಂಸ್ಥಾನಗಳೂ ಭಾರತ ಸ್ವಾತಂತ್ರ್ಯದಾದಿಭಾಗದಲ್ಲೇ ತಮ್ಮಲ್ಲಿ ಪ್ರಜಾಪ್ರತಿನಿಧಿ ಸರಕಾರ ಸ್ಥಾಪನೆ ಮಾಡಿಕೊಂಡಿದ್ದವು; ಹಿಂದಿನ ಕಾಲದಿಂದಲೂ ಪ್ರಗತಿಪರ ಸಂಸ್ಥಾನಗಳೆಂದು ಹೆಸರುಗಳಿಸಿದ್ದುವು. ವ್ಯವಹಾರಜ್ಞ ಮತ್ತು ಸಹೃದಯೀ ಮಹಾರಾಜರುಗಳನ್ನೂ ದಿವಾನರುಗಳನ್ನೂ ಪಡೆದಿದ್ದ ಇವೆರಡು ಸಂಸ್ಥಾನಗಳೂ ಆದಿಯಿಂದಲೂ ಕೀರ್ತಿಗಳಿಸಿದ್ದುವು. ಸಂಸ್ಥಾನಗಳನ್ನು ಒಕ್ಕೂಟಗಳಾಗಿ ಸೂಡಿಕಟ್ಟುವ ಅಥವಾ ನೆರೆಯ ಪ್ರಾಂತ್ಯಗಳೊಂದಿಗೆ ವಿಲೀನಗೊಳಿಸುವ ಮೂಲಕ, ಈ ಪ್ರದೇಶಗಳ ಅಡ್ಡಗೋಡೆಗಳನ್ನು ಉರುಳಿಸುವ ಭಾರತ ಸರಕಾರದ ಕಾರ್ಯಸರಣಿಯಲ್ಲಿ ತಿರುವಾಂಕೂರು ಕೊಚ್ಚಿ ಒಕ್ಕೂಟವು ಕೊನೆಯ ಗೊಣಸು ಎನ್ನಬಹುದು. ಎಲ್ಲಾ ಆಶ್ರಿತ ರಾಜ್ಯಗಳನ್ನೂ ಪ್ರಾಂತ್ಯಗಳ ಮಟ್ಟಕ್ಕೆ ತರಲು ಇನ್ನೂ ಕೆಲವು ಕೆಲಸಗಳು ಉಳಿದಿವೆ; ರಾಜ ವೈಶಿಷ್ಟ್ಯಗಳನ್ನು ಸಂಪೂರ್ಣವಾಗಿ ಉಜ್ಜಿತಗೆಯಲು ಕೆಲಕಾಲ ಹಿಡಿಯಬಹುದು. ಆದರೆ ಕೇವಲ ಸಂಸ್ಥಾನೀ ಜೋಡಣೆಯ ಸಂಬಂಧದ ಕಾರ್ಯ ಹೆಚ್ಚಿನಂಶ ಮುಗಿಯಿತು. ಇನ್ನೂ ಹಿಂದಿನಂತೆ ಉಳಿದಿರುವ ಸಂಸ್ಥಾನಗಳೆಂದರೆ ಭಾರತದ ಪೂರ್ವಭಾಗದ ಕೂಚ್‌ಬಿಹಾರ್, ತ್ರಿಪುರ, ಮತ್ತು ಮಣಿಪುರ ಸಂಸ್ಥಾನಗಳು ಸಂಯುಕ್ತ ಪ್ರಾಂತ್ಯದ ಪುಟ್ಟ ಸಂಸ್ಥಾನಗಳಾದ ರಾಮಪುರ ಮತ್ತು ಬನಾರಸುಗಳು. ಈ ಪೈಕಿ ರಾಮಪುರವನ್ನು ಜುಲಾಯಿ 1ರಂದಲೇ ಕೇಂದ್ರ ಸರಕಾರವು ಆಳಹತ್ತುವದೆಂದೂ ಬನಾರಸಿನ ಸಂಬಂಧ ನಿರ್ಣಯವು ಆಗೋಸ್ತು ಮಧ್ಯಾವಧಿಯಲ್ಲಾಗಬಹುದೆಂದೂ ತಿಳಿದುಬಂದಿದೆ. ಒಡೆದುತೋರುವ ಮತ್ತೊಂದು ಮುಖ್ಯ ವಿಷಯವೆಂದರೆ ಮೈಸೂರನ್ನು ಮಿಕ್ಕ ಕರ್ನಾಟಕ ಭಾಗಗಳೊಂದಿಗೆ ಜೋಡಣೆಗೊಳಿಸುವ ಕೆಲಸ ಬಾಕಿಬಿದ್ದಿರುವುದು. ಆದರಿದು ಭಾಷಾವಾರು ಪ್ರಾಂತ್ಯರಚನೆಗೆ ಸಂಬಂಧಿಸಿದ ಪ್ರಶ್ನೆ. ಏಕೀಕೃತ ಕೊಚ್ಚಿ ತಿರುವಾಂಕೂರುಗಳು ಐಕ್ಯ ಕೇರಳದೊಂದಿಗೆ ವಿಲೀನಗೊಳ್ಳುವುದೂ ಬಾಕಿಯಿದೆ; ಮೈಸೂರು ಕರ್ನಾಟಕದೊಂದಿಗೆ ವಿಲೀನಗೊಳ್ಳುವದೂ ಹಾಗೆಯೇ ಹಿಂದೆಬಿದ್ದಿದೆ.

ದೇವನಿಷ್ಠೆಗೆ ಮನ್ನಣೆ—

ಜುಲಾಯಿ ಮೊದಲನೇ ದಿನ ಉದ್ಘಾಟಿಸಲ್ಪಡುವ ತಿರುವಾಂಕೂರು ಕೊಚ್ಚಿ ಏಕೀಕರಣಾಧಿಕಾರವು ಬಹುಮಟ್ಟಿಗೆ ಭಾರತದ ಮಿಕ್ಕ ಸಂಸ್ಥಾನೀ ಒಕ್ಕೂಟಾಧಿಕಾರಗಳ ಮಾದರಿಯಲ್ಲೇ ಇದೆ. ದೇವಳಗಳ ಪ್ರಭಾವಕ್ಕೆ ಹೆಸರಾದ ದಕ್ಷಿಣ ಭಾರತದ ಇವೆರಡು ಸಂಸ್ಥಾನಗಳಲ್ಲೂ, ದೇವರುಗಳ ವರ್ಚಸ್ಸು ಬಹಳವಿರುವದರಿಂದ, ಈ ಧಾರ್ಮಿಕ ನಂಬಿಕೆಗಳಿಗೆ ಯಾವ ಧಕ್ಕೆಯೂ ಬೀಳದಂತೆ ಜಾಗರೂಕತೆ ವಹಿಸಿರುವುದೇ ಅವುಗಳ ಸಂಬಂಧ ಕರಾರಿನಲ್ಲಿರುವ ಒಂದು ಮುಖ್ಯ ವೈಶಿಷ್ಟ್ಯ. ತಿರುವಾಂಕೂರು– ಕೊಚ್ಚಿ ಜೋಡಣೆಯ ಪೂರ್ವಪೀಠಿಕೆಗಾಗಿ ಭಾರತ ಸರಕಾರದ ಸಂಸ್ಥಾನ ಖಾತೆಯ ಕಾರ್ಯದರ್ಶಿ ಶ್ರೀ. ವಿ. ಪಿ. ಮೆನನರು ಪ್ರಥಮ ಸಲ ಬಂದಾಗಲೇ ತಿರುವಾಂಕೂರು ಮಹಾರಾಜರು ತನ್ನ ಸ್ಥಿತಿ ಚಿತ್ರವನ್ನು ಸ್ಪಷ್ಟ ರೀತಿಯಿಂದ ಮುಂದಿಟ್ಟಿದ್ದರು. ತಾನು ಶ್ರೀ. ಪದ್ಮನಾಭಸ್ವಾಮಿಯ ದಾಸ; ತಿರುವಾಂಕೂರು ಆತನದು; ತಾನವನ ಏಜಂಟನಾಗಿ ರಾಜ್ಯ ನಿರ್ವಹಿಸುವವನು; ಆತನಿದಿರು ವಿಧೇಯತಾ ಪ್ರಮಾಣಬದ್ಧನಾಗಿರುವ ತಾನು, ಈ ಹೊಸ ವ್ಯವಸ್ಥೆಯಂತೆ ರಾಜಪ್ರಮುಖನಾಗಿ ಕೊಚ್ಚಿ ತಿರುವಾಂಕೂರು ರಾಜ್ಯ ಘಟನೆ ಮತ್ತು ಕೇಂದ್ರ ಭಾರತ ಘಟನೆಯ ವಿಧೇಯತಾ ಪ್ರಮಾಣವನ್ನು ಮತ್ತೊಂದು ಬಾರಿ ಉಚ್ಚರಿಸುವದು ಅಸಾಧ್ಯ; ಎಂದು ಅವರು ತನ್ನ ಅಸಹಾಯಕತೆಯನ್ನು ಸ್ಪಷ್ಟೀಕರಿಸಿದ್ದರು. ಭಾರತದ ಸಂಸ್ಥಾನ ಮಂತ್ರಿಗಳು ತಿರುವಾಂಕೂರು ಮಹಾರಾಜರ ಈ 'ಕುಲದೇವತಾ ಪ್ರಸನ್ನತೆ'ಗೆ ಯಾವ ಲೋಪವೂ ಬಾರದಂತಹ ವ್ಯವಸ್ಥೆ ಮಾಡಿದ್ದಾರೆ. 'ತಿರುವಾಂಕೂರು ಮಹಾರಾಜರು ಆ ಪ್ರಮಾಣವನ್ನು ತಾನು ಉಚ್ಚರಿಸುವದೇ ಬೇಡ; ಬರೆದುಕೊಟ್ಟರೆ ಸಾಕು; ಆ ಪತ್ರವನ್ನು ಜುಲಾಯಿ 1ರ ಉದ್ಘಾಟನಾ ಮುಹೂರ್ತದಲ್ಲಿ ತಿರುವಾಂಕೂರಿನ ಚೀಫ್ ಜಸ್ಟಿಸರು ಓದಿದಾಯಿತು.'— ಎಂದು ನಿರ್ಣಯವಾಗಿದೆ.

ತಿರುವಾಂಕೂರು ಮಹಾರಾಜರಿಗೆ, ಕುಲದೇವನಾದ ಶ್ರೀ ಪದ್ಮನಾಭ ಸ್ವಾಮಿಯ ಮೇಲಿರುವ ಭಕ್ತಿಯಂತಹ ಇನ್ನೊಂದು ನಿಷ್ಠೆಯು ಈ ಕಾಲದಲ್ಲಿ ಬೇರಾವ 'ರಾಜತನ'ದಲ್ಲೂ ಗೋಚರಿಸದಂತಹದು. ಆವೆ

OPPORTUNITY TO DEALERS
For your requirements in
Exercise Books
Visit
Vithalji & Co., Ltd.,
MANGALORE.
ವ್ಯಾಪಾರಿಗಳಿಗೆ ಸುಸಂಧಿ!
ಎಕ್ಸರ್‌ಸೈಜ್ ಪುಸ್ತಕಗಳು
ಬೇಕಾದಲ್ಲಿ ವಿಚಾರಿಸಿರಿ-
ವಿಠಲ್ಜಿ ಮತ್ತು ಕಂಪೆನಿ ಲಿ.,
ಮಂಗಳೂರು

ಉತ್ತಮ
—ಉಪಾಹಾರ ಮಂದಿರ
ವೀರ ಭಾರತ ವಿಶ್ರಾಂತಿ ಗೃಹ
(ನ್ಯೂ ಯೂನಿಯನ್ ಮಿಲ್ಸಿನ ಎದುರು)
ಡಿಲಿಸ್ಲೆ ರೋಡು
ಬೊಂಬಾಯಿ 13

ಏಕಛತ್ರದಡಿಯಲ್ಲಿ

ಪ್ರಗತಿಪರ ಒಕ್ಕೂಟಕ್ಕೆ ಹೇಳಿಸಿದ ಉದಾರಶೀಲ ಕರಾರು ಪತ್ರ

ರಡು ಸಂಸ್ಥಾನಗಳ ದೇವಸ್ವಗಳೂ ವಿಶಿಷ್ಟ ಸ್ಥಾನಮಾನ ಹೊಂದಲರ್ಹವುಳ್ಳವುಗಳು. ಇದಕ್ಕನುಗುಣವಾಗಿ ಕೊಚ್ಚಿ ತಿರುವಾಂಕೂರು ಏಕೀಕರಣ ಕರಾರಿನಲ್ಲಿ ದೇವಸ್ವಮ್ ಆಡಳಿತೆಯ ವಿಶಿಷ್ಟ ವಿಭಾಗವನ್ನು ಸೇರಿಸಲಾಗಿದೆ. ದ್ವಿಸಂಸ್ಥಾನಗಳ ಕೇಂದ್ರ ಭಂಡಾರದಿಂದ ಪ್ರತಿವರುಷ 50 ಲಕ್ಷ ರೂಪಾಯಿಗಳನ್ನು ತಿರುವಾಂಕೂರಿನ ದೇವಸ್ವಮ್ ನಿಧಿಗೂ 1 ಲಕ್ಷ ರೂಪಾಯಿಯನ್ನು ಶ್ರೀ ಪಂಡಾರವಾಕ ನಿಧಿಗೂ ತೆಗೆದಿಡಬೇಕು. ಈ ನಿಧಿಗಳ ಮತ್ತು ಅಲ್ಲಿಯ ಹಿಂದೂ ಧಾರ್ಮಿಕ ಸಂಸ್ಥೆಗಳ ವ್ಯವಸ್ಥಾಧಿಕಾರ ನಿರ್ವಹಿಸಲು ಮೂವರು ಹಿಂದೂ ಸದಸ್ಯರುಗಳುಳ್ಳ 'ದೇವಸ್ವಮ್ ಬೋರ್ಡು' ಒಂದನ್ನು ಸ್ಥಾಪಿಸತಕ್ಕದ್ದು. ಈ ಮೂವರಲ್ಲೊಬ್ಬನು ತಿರುವಾಂಕೂರು ಮಹಾರಾಜರಿಂದಲೂ, ಮತ್ತೊಬ್ಬನು ತಿರುವಾಂಕೂರು ಮಂತ್ರಿ ಮಂಡಲದ ಹಿಂದೂ ಸದಸ್ಯರಿಂದಲೂ ಮೂರನೆಯವನು ಕೊಚ್ಚಿ ತಿರುವಾಂಕೂರು ಕೇಂದ್ರ ಎಸೆಂಬ್ಲಿಯ ಹಿಂದೂ ಸದಸ್ಯರಿಂದಲೂ ನೇಮಕಗೊಳ್ಳಬೇಕು. ಆದರೆ ರಾಜಮನೆತನದ ಕುಲದೇವರಾದ ಶ್ರೀ ಪದ್ಮನಾಭಸ್ವಾಮಿಯ ದೇವಸ್ಥಾನವೊಂದರ ವ್ಯವಸ್ಥಾಧಿಕಾರವು ತಿರುವಾಂಕೂರು ಮಹಾರಾಜರಿಗೇನೇ ಇರತಕ್ಕದ್ದು. ಈ ದೇವಸ್ಥಾನದ ವೆಚ್ಚಗಳಿಗಾಗಿ ದೇವಸ್ವಮ್ ನಿಧಿಯಿಂದ ವರುಷಕ್ಕೆ ೫ ಲಕ್ಷ ರೂಪಾಯಿಗಳನ್ನು ತೆರತಕ್ಕದ್ದು. ಕೊಚ್ಚಿ ಸಂಸ್ಥಾನದ ದೇವಾಲಯಗಳ ಆಡಳಿತೆಗಾಗಿಯೂ ಇದೇ ಮಾದರಿಯ ವ್ಯವಸ್ಥೆಯಾಗಿದೆ.

ಇತರ ವ್ಯವಸ್ಥೆಗಳು—

ಈ ಜತೆ ಸಂಸ್ಥಾನಗಳ ಕೇಂದ್ರಾಡಳಿತೆಯು ಪ್ರಳಯವಾದರೂ ಮುರಿದು ಬಿದ್ದ ಸಂದರ್ಭದಲ್ಲಿ ರಾಜಪ್ರಮುಖನೇ ಆಡಳಿತೆ ವಹಿಸಿಕೊಳ್ಳುವ ಪ್ರತ್ಯೇಕ ಪ್ರಕರಣವೊಂದು ಕೊಚ್ಚಿ ತಿರುವಾಂಕೂರು ಏಕೀಕರಣ ಕರಾರಿನಲ್ಲಿದೆ. ಇದುವರೆಗಿನ ಸಂಸ್ಥಾನೀ ಒಕ್ಕೂಟಗಳ ಕರಾರುಗಳಲ್ಲಿ ಈ ವಿಭಾಗವಿಲ್ಲವಾದರೂ ಇದನ್ನು ಎಲ್ಲವುಗಳಲ್ಲೂ ಸೇರಿಸಲಾಗುವದೆಂದು ತಿಳಿದುಬರುತ್ತದೆ. ಪ್ರಾಂತ್ಯಗಳ ಆಡಳಿತೆಯು ಕುಸಿದುಬಿದ್ದಾಗ ಗವರ್ನರರೇ ಪ್ರಾಂತ್ಯಾಧಿಕಾರ ನಿರ್ವಹಿಸುವ ವಿಶೇಷಾಧಿಕಾರವನ್ನು ಇತ್ತೀಚೆಗೆ ಘಟನಾ ಸಮಿತಿಯು ಭಾರತ ರಾಜ್ಯಘಟನೆಯಲ್ಲಿ ಸೇರಿಸಿದ್ದಿತು; ಇದೂ ಆ ಮಾದರಿಯನ್ನು ಅನುಸರಿಸುವ ವ್ಯವಸ್ಥೆ.

ಈಗ ತಿರುವಾಂಕೂರಿನ ರಾಜಧಾನಿಯಾಗಿರುವ ತ್ರಿವೇಂದ್ರಮ್ ಈ ಜತೆ ಸಂಸ್ಥಾನೀ ರಾಜಧಾನಿಯಾಗಲಿದೆ. 'ಕೊಚ್ಚಿ ಮತ್ತು ತಿರುವಾಂಕೂರು ಕೇಂದ್ರ'ವೆಂದು ಕರೆಯಲ್ಪಡುವ ಈ ಒಕ್ಕೂಟದ ಹೆಸರಲ್ಲಿ 'ಕೇರಳ' ಪದವು ಸೇರಬಾರದುದು ಐಕ್ಯಕೇರಳ ಚಳವಳಿಗಾರರಲ್ಲಿ ಅತೃಪ್ತಿಯನ್ನು ನಿರ್ಮಿಸಿದಂತಿದೆ. ಕೇರಳದ ನಿಜಾರ್ಥವೆಂದರೆ ಮಲಬಾರ್. ಮದ್ರಾಸ್ ಪ್ರಾಂತ್ಯದ ಭಾಗವಾಗಿರುವ ಮಲಬಾರು ಜಿಲ್ಲೆಯು ಸೇರದೆ ಮಲಯಾಳಿ ಮಾತಾಡುವ ಎರಡು ಸಂಸ್ಥಾನಗಳು ಮಾತ್ರ ಈ ಮೂಲಕ ಜತೆಗೂಡುತ್ತಿರುವುದರಿಂದ ಅದಕ್ಕೆ 'ಐಕ್ಯಕೇರಳ' ಎಂದು ಹೆಸರಿಡುವದು ಅನುಚಿತವೆಂದು ಬಿಟ್ಟು ಬಿಡಲಾಗಿದೆ. ಭಾಷಾವಾರು ಪ್ರಾಂತ್ಯ ರಚನೆಯ ಅವಸರೋತ್ಸಾಹವಾವುದೂ ಸದ್ಯಕ್ಕಿಲ್ಲವೆಂಬುದಕ್ಕೆ ಇದೊಂದು ನಿದರ್ಶನ.

ಮೊದಲೇ ಭಾರತ ಕೇಂದ್ರದೊಂದಿಗೆ ಪ್ರತ್ಯಪ್ರತ್ಯೇಕವಾಗಿ ಜೋಡಣೆಗೊಂಡಿದ್ದ ಇವೆರಡು ಸಂಸ್ಥಾನಗಳ ಸಂಯುಕ್ತಾಡಳಿತೆಯ ಕರಾರಿನಲ್ಲಿ ಕೇಂದ್ರದ ಹಕ್ಕುಗೊಪ್ಪಿಸಿಕೊಟ್ಟ ಖಾತೆಗಳ ಸಂಬಂಧವಾಗಿ ಕೇಂದ್ರ ಪಾರ್ಲಿಮೆಂಟು ಮಾಡುವ ಶಾಸನಾಧೀನವಾಗಿ ವರ್ತಿಸುವ ಮತ್ತು ಕೇಂದ್ರಾಧಿಕಾರವನ್ನು ಪೂರ್ಣ ಒಪ್ಪಿಕೊಳ್ಳುವ ಪ್ರಕರಣಗಳು ನಮೂದನೆಗೊಂಡಿವೆ.

ಕೊಚ್ಚಿ, ತಿರುವಾಂಕೂರು ಸಂಯುಕ್ತಾಡಳಿತೆ ರಚನೆಯು ಮಿಕ್ಕ ಸಂಸ್ಥಾನೀ ಜೋಡಣೆಗಳ ಅನುಭವ ಸಂಪಾದಿಸಿಕೊಂಡ ಮೇಲೆ ಮತ್ತು ಅನುಕೂಲ ಕಾಲದಲ್ಲಿ ನಡೆದಿರುವುದರಿಂದ ಈ ಕರಾರು ಪತ್ರವು, ಈ ಮೊದಲಿನ ಇಂತಹ ದಾಖಲೆಗಳಿಗಿಂತ ಸ್ಪಷ್ಟ ಮತ್ತು ಉತ್ತಮ ನಮೂದನೆಗಳಿಂದ ಕೂಡಿದೆ. ಇನ್ನು ಸಂದರ್ಭೋಚಿತವಾಗಿ ಕೊಚ್ಚಿ ತಿರುವಾಂಕೂರು ಕೇಂದ್ರ ಜೋಡಣಾ ಕರಾರಿನ ಮಾದರಿಯಲ್ಲೇ ಹಿಂದಿನವುಗಳನ್ನೂ ತಿದ್ದಿಕೊಳ್ಳುವದು ಸಂಭವನೀಯ.

ಪ್ರಯೋಜನಕಾರೀ ಸಂಬಂಧ

ತಿರುವಾಂಕೂರುಕೊಚ್ಚಿ ಸಂಯುಕ್ತ ಸಂಸ್ಥಾನವು 9154 ಚದರ ಮೈಲು ವಿಸ್ತೀರ್ಣ, ಸುಮಾರು 7.5 ಮಿಲಿಯ ಜನಸಂಖ್ಯೆಯುಳ್ಳದ್ದು. ಮತ್ತು ಒಟ್ಟಿಗೆ 13·39 ಕೋಟಿ ರೂಪಾಯಿಗಳಷ್ಟು ವಾರ್ಷಿಕ ಉತ್ಪನ್ನವುಳ್ಳ ಕ್ಷೇತ್ರ. ಎರಡು ಸಂಸ್ಥಾನಗಳೂ ಪರಸ್ಪರ ಹೊಂದಿಕೊಂಡೇ ಇವೆ. ಕೊಚ್ಚಿಯ ರಾಜಧಾನಿಯ ಸಮೇತ, ಅದರ ಹಲವು ಭೂಭಾಗಗಳು ತಿರುವಾಂಕೂರಿನ ದ್ವೀಪಗಳೋ ಎಂಬಂತಿವೆ. ಕೊಚ್ಚಿಯ ಎರ್ನಾಕ್ಯುಲಮಿಗೆ ಸರಬರಾಯಿಯಾಗುತ್ತಿರುವ ನೀರಿನ ಮೂಲ ತಿರುವಾಂಕೂರಿನಲ್ಲೇ. ಒಂದು ಸಂಸ್ಥಾನದಲ್ಲಿ ಹುಟ್ಟಿ ಮತ್ತೊಂದು ಸಂಸ್ಥಾನವನ್ನು ಹಾದುಹೋಗಿರುವ ಹೊಳೆಗಳು ಹಲವಿದ್ದು, ಭಾರತ ಸರಕಾರಕ್ಕಿಂತ ಮೊದಲು ಪ್ರಕೃತಿಯೇ ಇವೆರಡು ಸಂಸ್ಥಾನಗಳನ್ನು ನದಿಝರಿಗಳಿಂದ ಜತೆಗೂಡಿಸಿದೆ. ಎರಡೂ ಸಂಸ್ಥಾನಗಳ ಪ್ರಜೆಗಳಲ್ಲಿ ಅತ್ಯಧಿಕ ಸಂಖ್ಯಾಕರು ಏಕ ಭಾಷೆ, ಏಕ ಸಂಸ್ಕೃತಿ, ಏಕ ವಿಧದ ಆಚಾರ ವಿಚಾರಗಳುಳ್ಳವರು. ಹೀಗಿದ್ದರೂ ಇವೆರಡು ಸಂಸ್ಥಾನಗಳೊಳಗೆ ಒಂದು ವಿಧದ ಹಳೇ ವೈರವಿದ್ದಿತು; ಸಂಕುಚಿತ ಸ್ಥಳಾಭಿಮಾನವೇ ಸರ್ವಸ್ವವಾಗಿದ್ದಿತು; ಹಿಂದಿನ ಆಡಳಿತೆಯೂ ಈ ಭಿನ್ನತೆಯನ್ನು ಪೋಷಿಸುವಂತಹದಿದ್ದಿತು. ಹೀಗಾಗಿ ಇವೆರಡು ಸಂಸ್ಥಾನಗಳೊಳಗೆ ಸದ್ವ್ಯವಹಾರವಿಲ್ಲದೆ ನೀರಾವರಿ ಯೋಜನೆ, ಹೈಡ್ರೋ ಇಲೆಕ್ಟ್ರಿಕ್ ಸಂಯೋಜನೆ, ಮುಂತಾದ ಅಭಿವೃದ್ಧಿ ಕಾರ್ಯ ಕೈಕೊಳ್ಳಲಾಗುತ್ತಿರಲಿಲ್ಲ. ಉದ್ದಿಮೆ ವಲಯ ಆಲ್ವಾಯಿ, ವ್ಯಾಪಾರ ಕೇಂದ್ರ ಆಲ್ಲೆಪ್ಪಿಗಳು ಕೊಚ್ಚಿ ಬಂದರಕ್ಕೆ ಅನತಿ ದೂರದಲ್ಲಿದ್ದರೂ ಪ್ರಗತಿ ಸಾಧಿಸಲಾಗಿಲ್ಲ. ಇವೆರಡು ಸಂಸ್ಥಾನಗಳೊಳಗಿನ ವ್ಯಾಪಾರ ವಹಿವಾಟುಗಳನ್ನು ಪ್ರತಿಬಂಧಿಸುವ ಸುಂಕ ನಿರ್ಬಂಧಗಳು ಈವರೆಗಿದ್ದವು. ಈ ಅಡ್ಡಗೋಡೆಗಳೆಲ್ಲವೂ ಇನ್ನು ಬಿದ್ದುಹೋಗಿ ಏಕರೂಪಗೊಂಡ ಕೊಚ್ಚಿ ತಿರುವಾಂಕೂರುಗಳ ಆರ್ಥಿಕಾಭಿವೃದ್ಧಿ ಸಾಧನೆ ಇನ್ನು ಭರದಿಂದ ನಡೆದೀತೆಂಬುದು ನಿಸ್ಸಂದೇಹ. ಮೇಲಾಗಿ ಈ ಬಾರಿಯ ಜೋಡಣೆಯಿಂದ ಭಾರತದ ಸಂಸ್ಥಾನ ಖಾತೆಯ ಹೆಗಲ ಮೇಲೆ ಬಿದ್ದಿರುವ ಭಾರ ಕೂಡಾ ಕಡಿಮೆ. ಪ್ರಜಾಸತ್ತೆಯೆಂದರೇನೆಂಬುದನ್ನೇ ಅರಿಯದಿದ್ದ ಕೆಲವು ಅಪ್ರಾಗತಿಕ ಸಂಸ್ಥಾನಗಳನ್ನು ಒಂದುಗೂಡಿಸಿದಾಗ ಅಲ್ಲಿಗೆ ಬೇಕಾಗುವ ಆಡಳಿತತಜ್ಞರನ್ನು ಕೇಂದ್ರ ಸರಕಾರವೇ ಕೊಡಬೇಕಿದ್ದಿತು. ಸ್ವತಂತ್ರ ಭಾರತದಲ್ಲಿ ಅನುಭವಶಾಲಿ ನೌಕರರ ಅಭಾವದ ಕೂಗೇಳಲು ಇದೂ ಒಂದು ಕಾರಣ. ಆದರೆ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರಂತಹ ಪ್ರತಿಭಾವಂತನನ್ನು ದಿವಾನನನ್ನಾಗಿ ಇಟ್ಟುಕೊಂಡಿದ್ದ ತಿರುವಾಂಕೂರು, ಸರ್. ಷಣ್ಮುಗಂ ಚೆಟ್ಟಿಯಾರರಂತಹ ಹೆಸರಾಂತ ಮುತ್ಸದ್ದಿಗೆ ದಿವಾನಗಿರಿ ಕೊಟ್ಟಿದ್ದ ಕೊಚ್ಚಿ, ಇವೆರಡೂ ನಿಪುಣ ಆಡಳಿತಜ್ಞರುಳ್ಳ, ಪ್ರಜಾಸತ್ತೆಯ ಪರಿಚಯವುಳ್ಳ ಸಂಸ್ಥಾನಗಳು. ದಿವಂಗತ ಕೊಚ್ಚಿ ಮಹಾರಾಜರಂತೂ ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರೆತೊಡನೆ ಸ್ವೇಚ್ಛೆಯಿಂದ ತನ್ನ ಸ್ಥಾನಮಾನಗಳ ಸಮೇತ ಸಂಸ್ಥಾನದ ಸರ್ವಾಧಿಕಾರವೂ ಪ್ರಜಾಮತದ ಅಧೀನವೆಂದು ಅಖಿಲ ಭಾರತದಲ್ಲೇ ಸರ್ವ ಪ್ರಥಮವಾಗಿ ಘೋಷಿಸಿದ್ದವರು. ಆದಕ್ಕಾಗಿ ಸರ್ದಾರ್ ಪಟೇಲರೇ ಆದಿಯಾಗಿ ಎಲ್ಲರ ಮುಕ್ತಕಂಠದ ಶ್ಲಾಘನೆ ಪಡೆದಿದ್ದವರು. ಇಂತಹ ಸಂಸ್ಥಾನಗಳ ಸಂಯುಕ್ತಾಡಳಿತೆಯ ಯಂತ್ರ ಚಲನೆಗಾಗಿ ಹೊರಗಿನವರನ್ನು ಕಳುಹಿ ಕೊಡುವ ಅವಶ್ಯಕತೆ ಹಿಂದೀ ಸರಕಾರಕ್ಕೆ ಬಿದ್ದಿಲ್ಲ.

ದೇಶರಕ್ಷಣಾ ದೃಷ್ಟಿಯಲ್ಲಿ

ರಾಷ್ಟ್ರದ ರಕ್ಷಣಾ ದೃಷ್ಟಿಯಿಂದ ಕೊಚ್ಚಿ ತಿರುವಾಂಕೂರು ಕ್ಷೇತ್ರವು ಅತಿ ಪ್ರಾಮುಖ್ಯದ್ದಿದೆ. ಕೊಚ್ಚಿ ಬಂದರವು ಭಾರತದ ಮುಖ್ಯ ನೌಕಾನಿಲ್ದಾಣವಾಗಿ ಸದ್ಯದಲ್ಲೇ ಮಾರ್ಪಡುವದೆಂದು ಭಾರತದ ನೌಕಾಪಡೆಯ ಸರ್ವಸೇನಾನಿ ವೈಸ್ ಎಡ್ಮಿರಲ್ ಪೇರ್ರಿಯವರು ಘೋಷಿಸಿದ್ದಾರೆ. ಅಲ್ಲಿ ಸದ್ಯದಲ್ಲೇ ಒಂದು ಗನ್ ಪ್ರಯೋಗ ಶಾಲೆ, ನಾವಿಕ ಶಾಲೆ, ಟೋರ್ಪೆಡೋ ಮತ್ತು ಸಬ್‌ಮೆರಿನ್ ನಿರೋಧಕ ಶಾಲೆಗಳು ತೆರೆಯಲ್ಪಡಲಿವೆ. "ಸ್ವತಂತ್ರ ಭಾರತದ ಕರಾವಳಿ ರಕ್ಷಣೆಯ ದೃಷ್ಟಿಮಾತ್ರ ನಮಗಿದ್ದರೆ ಸಾಲದು; ವೈರಿಯನ್ನು ನಮ್ಮ ದ್ವಾರ ಕರಾವಳಿಗೆ ಬರಲುಬಿಟ್ಟೇ ನಾವು ಸ್ವರಕ್ಷಣೆ ಮಾಡಿಕೊಳ್ಳುವದೆಂದರೆ ಅದೊಂದು ದುರ್ಬಲವಿಧಾನ. ಬದಲಿಗೆ ಸಮುದ್ರದಲ್ಲೇ ಅವನನ್ನು ತಡೆಗಟ್ಟುವ ಸಿದ್ಧತೆ ನಮ್ಮದಾಗಿರಬೇಕು" ಎಂದು ಎಡ್ಮಿರಲ್ ಪೇರ್ರಿ ಅಂದಿದ್ದಾರೆ. ಇಂತಹ ರಕ್ಷಣಾ ಸಿದ್ಧತೆಗೆ ಕೊಚ್ಚಿಯು ಯೋಗ್ಯ ನಿಲ್ದಾಣ. ಭಾರತದ ನೌಕಾ ನರನಾಡಿಗಳ ಹೃದಯವೇ ಆದಾಗಲಿದೆ. ಅಂತೆಯೇ ತಿರುವಾಂಕೂರು ನೆಲದಲ್ಲಿ ಅಟಂ ಕಣಗಳವೆ ಎಂಬ ಪ್ರತೀತಿಯಿದೆ. ರಾಷ್ಟ್ರರಕ್ಷಣೆಯ ದೃಷ್ಟಿಯಲ್ಲಿ ಅತ್ಯಂತ ಆಯಕಟ್ಟಿನವು ಮತ್ತು ಅತ್ಯುಪಯುಕ್ತ ಕ್ಷೇತ್ರವಾಗಿರುವ ಕೊಚ್ಚಿ ತಿರುವಾಂಕೂರು ಒಂದಾಗಿ ಭಾರತ ಕೇಂದ್ರದಡಿಯ ಸಬಲ ಏಕಾಡಳಿತೆಯಲ್ಲಿರಬೇಕಾದುದು ಅಗತ್ಯ. ಅಲ್ಲಿಯ ಸಂಸ್ಥಾನೀ ಸೇನೆಗಳ ಮೇಲಿನ ಅಧಿಕಾರವು ರಾಜಪ್ರಮುಖನಿಗಿರದೆ, ಅಲ್ಲಿಯ ಶಾಸನ ಸಭೆಗೇನೇ ಇರಬೇಕೆಂದು ಕರಾರು ಪತ್ರದಲ್ಲಿದೆಯಲ್ಲದೆ, ವಿಶೇಷ ಸಂದರ್ಭ ಮತ್ತು ರಾಷ್ಟ್ರಾವಶ್ಯ ವಿಷಯಗಳಲ್ಲಿ ರಾಜಪ್ರಮುಖನ ಮೇಲಧಿಕಾರವು ಭಾರತದ ಗವರ್ನರ್ ಜನರಲರಿಗಿದೆ. ರಾಜವೆಚ್ಚವಾಗಿ ತಿರುವಾಂಕೂರು ಮಹಾರಾಜರಿಗೆ ವರುಷಕ್ಕೆ 18 ಲಕ್ಷ ರೂಪಾಯಿಗಳೂ ಕೊಚ್ಚಿ ಮಹಾರಾಜರಿಗೆ ೨ ಲಕ್ಷ ರೂಪಾಯಿಗಳೂ ನಿರ್ಣಯಿಸಲ್ಪಟ್ಟಿವೆ, ಎಂದು ತಿಳಿದು ಬಂದಿದೆ. ಇದೇ ರೀತಿ ಭಾರತದ ಉಳಿದ ರಾಜರುಗಳಿಗೂ ಯೋಗ್ಯತಾನುಸಾರ ವರ್ಷಾಸನ ನಿಶ್ಚಯವಾಗಲಿದೆ. ಇದುವರೆಗೆ ತಿರುವಾಂಕೂರು ಮಹಾರಾಜರ ಖಾಸಗಿ ಹುಟ್ಟುವಳಿಯಾಗಿದ್ದು, ವರುಷಕ್ಕೆ 5½ ಲಕ್ಷ ರೂಪಾಯಿಗಳಷ್ಟು ಉತ್ಪನ್ನವಿದ್ದ ಕಂಡಾಸರಿ ಆಸ್ತಿಗಳು ಇನ್ನು ಮುಂದೆ ಸಂಸ್ಥಾನದವುಗಳಾಗುವವು. ಇದುವರೆಗಿನ ರಾಜರುಗಳಿಗೆ ವರ್ಷಾಸನ ನಿರ್ಧರಿಸಿಟ್ಟು, ಕೇಂದ್ರ ಜೋಡಣೆಗೊಂಡ ತಾರೀಕಿನ ನಂತರ ಹುಟ್ಟುವ ಯಾವ ರಾಜಕುಮಾರನಿಗೂ ಸಂಸ್ಥಾನ ಉತ್ಪನ್ನದಿಂದೇನೂ ದೊರೆಯದೆಂದು ನಿಶ್ಚೈಸುವ ಸಂಭವವಿದೆ.

ಅಂತೂ ಭಾರತದಲ್ಲಿ ರಾಜಶಾಹಿ ಆಡಳಿತೆ ಮುಕ್ತಾಯವಾಯಿತು; 'ರಾಜಮಹಾರಾಜರು'ಗಳ ಕಾಲ ಕೂಡಾ ಜೀರ್ಣಿಸುತ್ತಾ ಹೋಗುತ್ತಿದೆ; ಈಗ ಇರುವ ಮುಕುಟಧಾರಿ ತಲೆಗಳೊಮ್ಮೆ ಉದುರಿ ಹೋದರೆ, ಬಹುಶಃ ಮತ್ತೊಂದು ಬಾರಿ ಕಿರೀಟ ಅಥವಾ ಮುಂಡಾಸು ಧಾರಣೆಯೆಂಬುದೇ ಭಾರತದಲ್ಲಿಲ್ಲ!

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಪಾಕಿಸ್ತಾನ್ ಪ್ರಧಾನಿಗಳಿಗೆ ರಶ್ಯದ ಆಮಂತ್ರಣ

ಇದರ ಒಳಗುಟ್ಟೇನು?

ರಶ್ಯದ ಸರಕಾರವು ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಆಲೀಖಾನ್ ಮತ್ತು ಅವರ ಸಹಧರ್ಮಿಣಿಯನ್ನು ಮಾಸ್ಕೋವಿಗೆ ಆಮಂತ್ರಿಸಿದೆ; ಲಿಯಾಖತ್ ದಂಪತಿಗಳು ಈ ಆಹ್ವಾನವನ್ನು ಸ್ವೀಕರಿಸಿದ್ದಾರೆ.

ಭಾರತದ ಪ್ರಧಾನಿ ಪಂಡಿತ ಜವಾಹಿರಲಾಲರನ್ನು ಅಮೇರಿಕಾಧ್ಯಕ್ಷ ಟ್ರೂಮೇನರು ತಮ್ಮಲ್ಲಿಗೆ ಆಮಂತ್ರಿಸಿದ ಬೆನ್ನಲ್ಲೇ, ರಶ್ಯದ ಸ್ಟಾಲಿನರು ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತರನ್ನು ತಮ್ಮಲ್ಲಿಗೆ ಕರೆದಿದ್ದಾರೆ!

ಭಾರತ ಮತ್ತು ಪಾಕಿಸ್ತಾನ್ ಪ್ರಧಾನಿಗಳು ಅಮೇರಿಕ ಮತ್ತು ರಶ್ಯಕ್ಕೆ ಹೋಗಿಬರಲಿದ್ದಾರೆ. ಇನ್ನೂ ನಿಜಮೈತ್ರಿ ಸಂಪಾದಿಸಿಕೊಳ್ಳಲಿಕ್ಕಾಗದೆ ಕಾಶ್ಮೀರದಂತಹ ಮೊಕದ್ದಮೆಯಲ್ಲಿ ಮುಷ್ಟಿ, ಮುಷ್ಟಿ ಆಲೇರಾಗಿರುವ(?) ಇಬ್ಬರು ಪ್ರಮುಖರು, ಪ್ರಪಂಚವನ್ನೇ ಎರಡು ಪಾಳೆಯಗಳಾಗಿ ಮಾಡಿಹಾಕಿರುವ ಮಹಾ ವ್ಯಾಜ್ಯದ ವಾದಿ ಪ್ರತಿವಾದಿಗಳಾಗಿರುವ ಇಬ್ಬರು ಪ್ರಮುಖರಿಂದ ಪ್ರತ್ಯ ಪ್ರತ್ಯೇಕವಾಗಿ ಆಹ್ವಾನಿಸಲ್ಪಟ್ಟು, ಹೋಗಿ ಮಾತಾಡಿ ಬರಲಿದ್ದಾರೆ. ಇದರ ಪರಿಣಾಮ?

ಇದರ ಹಿನ್ನೆಲೆ

ಡೊಮಿನಿಯನ್ ಪ್ರಧಾನಿಗಳ ಸಮ್ಮೇಳನಕ್ಕಾಗಿ ಲಂಡನಿಗೆ ಹೋಗಿದ್ದ ಪಂಡಿತ ನೆಹರೂಗಳು ಭಾರತಕ್ಕೆ ಬಂದೊಡನೆಯೇ ಅವರು ಅಮೇರಿಕಾಧ್ಯಕ್ಷ ಟ್ರೂಮೇನರ ಆಮಂತ್ರಣಾನುಸಾರ ಅವರ ಒಕ್ಕೂಟ(?) ವಾಷಿಂಗ್ಟನ್ನಿಗೆ ಹೋಗಲಿರುವರೆಂಬ ವಾರ್ತೆ ಪ್ರಕಟವಾಗಿದ್ದಿತು; ಅಂತೆಯೇ ಆ ಸಮ್ಮೇಳನದಿಂದ ಮರಳಿ ಬರುತ್ತಾ ಮುಸ್ಲಿಂ ರಾಷ್ಟ್ರಗಳಿಗೆ ಭೇಟಿಕೊಟ್ಟು ಪರ್ಯಾಲೋಚನ ನಡೆಸಿಕೊಂಡು ಇತ್ತೀಚೆಗೆ ಪಾಕಿಸ್ತಾನಕ್ಕೆ ಮರಳಿದ ಮಿ. ಲಿಯಾಖತರು ಬಂದು ಮುಟ್ಟಿದ ಬೆನ್ನಲ್ಲೇ ರಶ್ಯದ ಸ್ಟಾಲಿನ್ ಸರಕಾರದ ಆಮಂತ್ರಣಾನುಸಾರವಾಗಿ ಆದಷ್ಟು ಬೇಗನೇ ಮಾಸ್ಕೋವಿಗೆ ಹೋಗಲಿರುವರೆಂಬ ವಾರ್ತೆ ಪ್ರಕಟವಾಗಿದೆ. ಇವೆರಡು ಸುದ್ದಿಗಳು ಮೇಲಾಟ ಸ್ವರೂಪದ್ದಿವೆ ಎನ್ನಿಲ್ಲೆಂದರೂ ಭಾರತ-ಪಾಕಿಸ್ತಾನ್, ಕಾಮನ್‌ವೆಲ್ತ್ ಕೂಟ ಮತ್ತು ಜಾಗತಿಕ ರಂಗದ ಭವಿಷ್ಯ ಬದಲಾವಣೆಯ ಬೀಜವು ಈ ದ್ವಿವಿಧ ಭೇಟಿಗಳಲ್ಲಿ ಹುದುಗಿರಬಹುದು. ಅಮೇರಿಕ ಮತ್ತು ರಶ್ಯ ಪರಸ್ಪರ ವಿರುದ್ಧಗಾಮಿಗಳಿದ್ದು, ತಂತಮ್ಮ ಪಂಥ ಬಿಡದೆ ಸಂಘಟನಾ ಸಾಧನೆಯ ನಟನೆಯನ್ನೇ ಮಾಡುತ್ತಿರುವ ರಾಷ್ಟ್ರಗಳು. ಅಂತೆಯೇ ಭಾರತ ಮತ್ತು ಪಾಕಿಸ್ತಾನ. ಅಲ್ಲಿಯ ವಿರುದ್ಧ ಪಕ್ಷಗಳಲ್ಲೊಂದು, ಇಲ್ಲಿಯ ವಿರುದ್ಧಪಕ್ಷಗಳಲ್ಲೊಂದನ್ನು ಆಹ್ವಾನಿಸಿತೆಂದೂ ಹನೆಯೇ(?), ಅಲ್ಲಿ ಉಳಿದ ಪಕ್ಷವು ಇಲ್ಲಿ ಉಳಿದ ಪಕ್ಷವನ್ನು ತನ್ನ ಕಡೆಗೆ ಕರೆದಿದೆ. ಎರಡೂ "ಕೇವಲ ಕುಶಲ ಭೇಟಿ"ಗಳೆಂದು ಹೇಳಲ್ಪಟ್ಟವೆಯಾದರೂ ಈ ಯೋಗ(?) ಪ್ರಶ್ನೆ ವಿಚಾರಗಳಲ್ಲೇ ತಮ್ಮ ಹಿತಚಿಂತನೆ, ಸಮಗಾಗದವರ ಅಹಿತ ಚಿಂತನೆ ನಡೆಯುವುದು ಸ್ವಾಭಾವಿಕ. ಮೇಲಾಗಿ ಕ್ರಮನಿಯಮಗಳ(?) ದೃಷ್ಟಿಯಿಂದ ಮಿ. ಲಿಯಾಖತ್ ಆಲೀಖಾನರು ರಶ್ಯದ ಆಮಂತ್ರಣವನ್ನು ಸ್ವೀಕರಿಸಿದ್ದರಲ್ಲಿ ತಪ್ಪೇನೂ ಇಲ್ಲವಾದರೂ ಅಂತರ್ಯತಃ ಕಾಮನ್‌ವೆಲ್ತ್ ಕೂಟೋದ್ದೇಶಕ್ಕೆ ಭಿನ್ನವಾದ ಉದ್ದೇಶವೊಂದು ಇದ್ದಿದೆ. ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರಗಳು ಈ ಕುರಿತು ಶಂಕೆ, ಸಂದೇಹಪಡುವುದು ಸ್ವಾಭಾವಿಕ. ಲಂಡನ್ ಸಮ್ಮೇಳನದ ಮಾತುಕತೆ ಮತ್ತು ನಿರ್ಧಾರಗಳು ಪಾಕಿಸ್ತಾನ್ ಪ್ರಧಾನಿಗಳಲ್ಲಿ ಸ್ವನಿಕೃಷ್ಟತಾ ಭಾವನೆಯ ವೇದನೆಯನ್ನು ನಿರ್ಮಿಸಿದ್ದುವೆಂಬುದು ಸ್ಪಷ್ಟ. ಭಾರತವು ರಿಪಬ್ಲಿಕ್ ಆಗಿದ್ದುಕೊಂಡೇ ಕಾಮನ್‌ವೆಲ್ತ್ ಕೂಟ ಸದಸ್ಯನಾಗಿರಬೇಕೆಂಬ ಮಾತುಕತೆ ಲಂಡನಿನಲ್ಲಿ ನಡೆದಿದ್ದಾಗ, 'ಅಂತಹ ಅರೆಮನಸ್ಸಿನ ಸದಸ್ಯನನ್ನು ಕೂಡಿಕೊಳ್ಳಕೂಡದು. ಅಂಥವರನ್ನು ಹೊರಗಟ್ಟಿರೆ ತಾವು ಪೂರ್ಣ ಮನಸ್ಸಿನ ಸದಸ್ಯರಾಗಿ ನಿಲ್ಲುವೆವು' ಎಂದು ಮಿ. ಲಿಯಾಖತ್ ಆಲೀಖಾನರು ಅಲ್ಲಿ ಕೇಳಿಕೊಟ್ಟಿದ್ದರೆಂದು ತಿಳಿದುಬಂದಿತ್ತು. ಆದರೂ ಮಿ. ಅಟ್ಲಿ ಮತ್ತು ಇತರ ಕಾಮನ್‌ವೆಲ್ತ್ ಪ್ರಮುಖರು ಭಾರತಕ್ಕೆ ಕೊಡುವಷ್ಟು ಬೆಲೆಯನ್ನು ಪಾಕಿಸ್ತಾನಕ್ಕೆ ಕೊಡದೆ ಹೋದರು; ನೆಹರೂ ಮಾತನ್ನು ಗಣಿಸಿದಷ್ಟು ಲಿಯಾಖತರ ಮಾತನ್ನು ಕೇಳದಾದರು. ಇದು ಮತ್ತಿತರ ಲಂಡನ್ ವರ್ತನೆಗಳು ಮಿ. ಲಿಯಾಖತ್ ಆಲೀಖಾನರ ಮನಸ್ಸನ್ನು ಬಹಳವಾಗಿ ನೋಯಿಸಿದ್ದುವೆಂಬುದಕ್ಕೆ ಮಿ. ಲಿಯಾಖತರು ಅಲ್ಲಿಯೇ ಬಾಯಿಬಿಟ್ಟ "ಪಾಕಿಸ್ತಾನದ ಕುರಿತು ತಪ್ಪು ತಿಳುವಳಿಕೆ ಮತ್ತು ತಾತ್ಸಾರಗಳು ಇಲ್ಲಿರುವುದು ಅಸಹ್ಯ; ಪಾಕಿಸ್ತಾನದ ಜನರೆಂದರೆ ಮಣ್ಣು ಕಲ್ಲುಗಳ ಗೊಂಬೆಗಳೆಂದು ಯಾರೂ ತಿಳಿಯದಿರಲಿ; ಅವರು ಎಲುಬು ಮಾಂಸಗಳಿಂದಲೇ ಆದವರು; ಅದರಲ್ಲೂ ತಮ್ಮ ನರನಾಡಿಗಳಲ್ಲಿ ಅತ್ಯಂತ ಬಿಸಿ ರಕ್ತ ಹರಿದಾಡುತ್ತಿರುವ ಜನರು; ತಿಳಿದಿರಲಿ" ಎಂಬ ಮಾತುಗಳೇ ನಿದರ್ಶನ. ಲಂಡನಿನಿಂದ ಮರಳುವಾಗ ಅವರು ಈಜಿಪ್ಟ್, ಇರಾಕ್, ಇರಾನುಗಳನ್ನು ಸಂದರ್ಶಿಸಿ, ಅಲ್ಲಿಯ ಪ್ರಮುಖರೊಂದಿಗೆ ಸಂಭಾಷಿಸಿದ್ದರು; ರಶ್ಯದ ಪ್ರತಿನಿಧಿಗಳು ಅಥವಾ ಹಸ್ತಕರಿಗೆ ಲಿಯಾಖತ್ ಹೃದಯದ ಪ್ರತ್ಯಕ್ಷ ಪರಿಚಯ ದೊರೆತಿರಬಹುದು; ಮಾಸ್ಕೋದ ವರೆಗೂ ಸೂತ್ರ ನಲುಗಾಟವೇನಾದರೂ ನಡೆದಿರಬಹುದು; ಈಗ ಮಾಸ್ಕೋದಿಂದ ಪಾಕಿಸ್ತಾನ್ ಪ್ರಧಾನಿಗೆ ಆಮಂತ್ರಣ ಬಂದಿದೆ; ಅದು ಅಂಗೀಕಾರಹೊಂದಿದೆ.

ಕಳೆದ ಅ. ಭಾ. ಕಾಂ. ಸಮಿತಿ ಅಧಿವೇಶನದಲ್ಲೊಬ್ಬ ಸದಸ್ಯನು "ಟ್ರೂಮೇನರ ಆಮಂತ್ರಣವನ್ನು ಸ್ವೀಕರಿಸಿದ ಪಂಡಿತ ನೆಹರುಗಳು ಸ್ಟಾಲಿನರಿಂದ ಬಂದ ಅಂತಹ ಆಮಂತ್ರಣವನ್ನು ನಿರಾಕರಿಸಿದ್ದಾರೆ" ಎಂದು ದೂರಿದಾಗ ನೆಹರುಗಳು ಉರಿದೆದ್ದು, ತನಗೆ ಅಂತಹ ಆಮಂತ್ರಣವೇ ಬಂದಿಲ್ಲವೆಂದು ನಿರಾಕರಿಸಿ, 'ಆ ಸುದ್ದಿಗೆ ಆಧಾರಕೊಡಿ'ರೆಂದು ಗದರಿಸಿ ಸುದ್ದಿಬಿಟ್ಟ ಸದಸ್ಯನಲ್ಲಿ ನಡುಕಹುಟ್ಟಿಸಿದ್ದರು.

ಇಲ್ಲಿಯೂ ದ್ವಿಪಕ್ಷತಂಟೆ?

ಸ್ಟಾಲಿನರ ಗುರಿಯೇನು?

ಆಂಗ್ಲೋ ಅಮೇರಿಕನರ ದಿಕ್ಕಿನಲ್ಲಿರುವ ಯಾವುದೇ ಪಂಕ್ತಿಯಲ್ಲಿ(?), ಏನಾದರೊಂದು ಬಿರುಕು ಗೋಚರಿಸಿದೊಡನೆ ಅಲ್ಲಿ ಕೈ ಹೂಗಿಸಿ ಅದನ್ನು ಅಗಲಗೊಳಿಸುವ ತಂತ್ರ ಸ್ಟಾಲಿನರದು. ಅವರು ವಿದ್ಯಮಾನಗಳೆಲ್ಲವನ್ನೂ ಆಳವಾಗಿ ವಿಚಾರಿಸಿಯೇ ಲಿಯಾಖತರನ್ನು ಆಮಂತ್ರಿಸಿದುದಾಗಿರಬೇಕು. ಕಳೆದ ಮಹಾಯುದ್ಧದ ಪೀಠಿಕೆಯಾಗಿ, ಜರ್ಮನಿಯ ವಿರುದ್ಧ ಮೈತ್ರೀ ಕರಾರು ಮಾಡಿಕೊಳ್ಳಲು ತನ್ನಲ್ಲಿಗೆ ಬಂದ ಬ್ರಿಟಿಷ್ ಮುತ್ಸದ್ದಿಗಳು ಕೆಲಸವಾಗದೆ ಮರಳಿದೊಡನೆಯೇ, ತನ್ನ ಬದ್ಧವಿರೋಧಿಗಳಾದ ನಾಜೀ ಪ್ರಮುಖರನ್ನು ಬರಮಾಡಿಕೊಂಡು 'ರಶ್ಯಾ ಜರ್ಮನಿ ಅನಾಕ್ರಮಣ ಒಪ್ಪಂದ' ಮಾಡಿಕೊಂಡವರು ಸ್ಟಾಲಿನರು. ಇಂದು ಅದೇ ಬುದ್ಧಿವಂತಿಕೆಯನ್ನು ಇಲ್ಲಿಯೂ ತೋರಿಸಿದ್ದಾರೆನ್ನಬಹುದು. ಈ ಆಮಂತ್ರಣದ ಮುಖ್ಯ ಹೇತುವಾಗಿ ತೋರುತ್ತಿರುವದೆಂದರೆ:-- ಮೊದಲನೆಯದಾಗಿ, ತನ್ನ ವಿರುದ್ಧವಾಗಿ ಕಟ್ಟಿದ ಸೇನಾ ವ್ಯೂಹವೆಂದು ರಶ್ಯವು ನೆನೆಸುವ ಕಾಮನ್‌ವೆಲ್ತ್ ರಾಷ್ಟ್ರಕೂಟದಲ್ಲಿ ಒಡಕನ್ನು ನಿರ್ಮಿಸುವುದು; ಎರಡನೆಯದಾಗಿ ಭಾರತ ಮತ್ತು ಪಾಕಿಸ್ತಾನಗಳೊಳಗೆ ತನ್ನ ಪಾಲಿನ ಪ್ರವೇಶದ್ವಾರವಿರುವ ಕಾಶ್ಮೀರದ ಕುರಿತು ರಶ್ಯಕ್ಕೆ ಆಸಕ್ತಿಯಿರುವುದರಿಂದ, ಅಲ್ಲೀಗ ಇದಿರುವಾದಿಯಾಗಿರುವ ಮತ್ತು ಮುಂದೆ ಕಾರ್ಯವಿಜಯಿಯಾಗಬಹುದೆಂಬ ಆಸೆಯಿರುವ ಪಾಕಿಸ್ತಾನವನ್ನು ತನ್ನ ಬಲಿಗೆ ಹಾಕಿಕೊಳ್ಳುವದು. ಕಾಶ್ಮೀರದ ಗಿಲ್ಗಿಟ್ ವಿಮಾನ ನಿಲ್ದಾಣದಿಂದ ರಶ್ಯದ ಕ್ಷೇತ್ರಗಳ ಮೇಲೆ ಆಕಾಶಧಾಳಿ ನಡೆಸುವ ಅನುಕೂಲತೆಯಿದೆಯೆಂದೂ, ಅದ್ದರಿಂದ ಆಂಗ್ಲೋ ಅಮೇರಿಕನರಿಗೂ ಕಾಶ್ಮೀರ ವಿವಾದದಲ್ಲಿ ಗಾಢಾಸಕ್ತಿ ವಿಶೇಷವಿದೆಯೆಂದೂ ಊಹಿಸಲಾಗಿದೆ.

ಅಂತೂ ಸ್ಟಾಲಿನರೊಂದು ಚೆಂಡನ್ನು ಉರುಳಿಸಿಬಿಟ್ಟರು. ಭಾರತ, ಬ್ರಿಟನ್, ಮತ್ತಿತರ ಕಾಮನ್‌ವೆಲ್ತ್ ರಾಷ್ಟ್ರಗಳಿದಿರು ತನಗಿದೊಂದು ಮಹಾ ಹೆಗ್ಗಳಿಕೆಯೆಂದು ಒಳಗಿಂದೊಳಗೆ ಹೆಮ್ಮೆಪಡುತ್ತ ಮಿ. ಲಿಯಾಖತ್ ಆಲೀಖಾನರು ಮಾಸ್ಕೋ ಪಯಣಕ್ಕೆ ಒಪ್ಪಿಕೊಂಡರು. "ಇದು ನೆರೆಯ ರಾಷ್ಟ್ರಕ್ಕೆ ಕೊಡುವ ಸ್ನೇಹಾಚಾರದ ಭೇಟಿ. ಇದರಿಂದ ರಶ್ಯ ಮತ್ತು ಪಾಕಿಸ್ತಾನವೆರಡಕ್ಕೂ ಒಳ್ಳೆಯದಾಗುವದೆಂದು ನನ್ನನಿಸಿಕೆ. ಈ ಕುರಿತು ಮಿಕ್ಕ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ನನ್ನನ್ನು ವಿಚಾರಿಸಿ ತಿಳಿಯುವ ಅಗತ್ಯವೆಷ್ಟಿದೆಯೋ ಅಷ್ಟು ಮಾತ್ರ ಅವುಗಳನ್ನು ವಿಚಾರಿಸುವ ಅಗತ್ಯ ನನಗೆ ಕಾಣದು." ಎಂದಿದ್ದಾರೆ ಮಿ. ಲಿಯಾಖತ್. "ಇದು ಕಾಮನ್‌ವೆಲ್ತ್ ಕೂಟವನ್ನು ಒಡೆದು ಹಾಕುವದಕ್ಕಾಗಿಯೂ, ಭಾರತ ಪಾಕಿಸ್ತಾನಗಳೊಳಗಿನ ಸಂಬಂಧವನ್ನು ಮತ್ತಷ್ಟು ಕೆಡಿಸುವದಕ್ಕಾಗಿಯೂ ಮಾಸ್ಕೋ ಹೂಡಿದ ಅತ್ಯಂತ ಬುದ್ಧಿವಂತಿಕೆಯ ಆಟ" ಎಂದು ಲಂಡನ್ ರಾಜಕಾರಣಿಗಳ ಮತ್ತು ಬ್ರಿಟಿಷ್ ಪತ್ರಿಕೆಗಳ ಅಭಿಪ್ರಾಯ. ಈ ಆಟದ ಅಂದ ನೋಡಲಿಕ್ಕಿದೆ!

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯು ಜರೂರಾಗಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ. ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತ: ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ.

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದುಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.
ಜನರಲ್ ಮೆನೇಜರ್

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ

ಜನಸಾಮಾನ್ಯರಿಗೂ ಅನುಕೂಲವಾಗುವಂತೆ ರೂ. 100ರಿಂದ 900ರ ಒಳಗಿನ ಮೊತ್ತದಲ್ಲಿ ವಿಮಾಮಾಡುವ ಸೌಕರ್ಯ!

ಎಲ್ಲಾ ಕಡೆಗಳಲ್ಲಿಯೂ ಉತ್ಸಾಹೀ ಏಜಂಟರು ಬೇಕಾಗಿದ್ದಾರೆ

ವಿವರಗಳಿಗೆ ಬರೆಯಿರಿ:

ಬಿ. ವಾಮನಾಚಾರ್, ಬಿ.ಎ.ಬಿ.ಎಲ್.
ಮೆನೇಜರ್.

ಲೋಕದ ವಿದ್ಯಮಾನಗಳೆಲ್ಲವೂ ಬಹು ಮಟ್ಟಿಗೆ ಥಂಡಾಗಿಟ್ಟಿವೆ. ವಾದ ವಿವಾದ ಮತ್ತು ಘರ್ಷಣೆಗಳು ಇದ್ದಂತಿವೆಯಾದರೂ, ಅವು ಒಳಮುಖವಾಗಿ ಪ್ರಜ್ವಲಿಸುತ್ತಿರುವಂತೆ ಕಾಣುತ್ತಿದೆ. ಪ್ಯಾರಿಸಿನ ಚತುರ್ರಾಷ್ಟ್ರ ವಿದೇಶಮಂತ್ರಿಗಳ ಸಮ್ಮೇಲನ, ಜೈನಾದ ಸ್ಥಿತಿಸಂಬಂಧ, ಕಾಶ್ಮೀರ ವಿವಾದ, ಮತ್ತಿತರ ಪ್ರಶ್ನೆಗಳು ಒಳಗಡೆಯಲ್ಲೇ ವಿಶೇಷ ಸುರುಳಿಗಟ್ಟಿ ಬಿಡಿಸಲತಿ ಕಷ್ಟಕರವಾದ ರೂಪಕ್ಕೆ ಮಾರ್ಪಟ್ಟಿವೆ. ಕಾಲಚಕ್ರವು ಹೀಗೆ ಎಷ್ಟುಕಾಲ ಇದ್ದಲ್ಲೇ ಉರುಳುತ್ತಾನಿಲ್ಲುವುದೋ ಎಂಬ ಜಗುಪ್ಸೆ ಮೂಡುತ್ತಿದೆ.

೦೦ ೦೦

ಜರ್ಮನಿ ಸಂಬಂಧವಾಗಿ ಒಂದು ಒಪ್ಪಂದ ಸಾಧಿಸಬೇಕೆಂಬ ಆತುರದಿಂದ ಪ್ಯಾರಿಸಿನಲ್ಲಿ ಕೆಲವು ದಿನಗಳಿಂದ ನೆರೆದಿರುವ ರಶ್ಯಾ, ಇಂಗ್ಲಂಡು, ಫ್ರಾನ್ಸ್, ಅಮೆರಿಕ ಚತುರ್ರಾಷ್ಟ್ರಗಳ ವಿದೇಶಮಂತ್ರಿ ಕೂಟವು ಮೆಟ್ಟಲು ಪ್ರಕಾರ ಹಂತಾಭವವನ್ನಲ್ಲದೆ ಸಾರ್ಥಕತೆಯೇನನ್ನೂ ಪಡೆದಿಲ್ಲ. ಪ್ರಥಮತಃ ಅಖಿಲ ಜರ್ಮನಿಗೆ— ಆ ಮೇಲೆ ಪ್ರತ್ಯೇಕವಾಗಿ ಬರ್ಲಿನಿಗೆ— ಚತುರ್ರಾಷ್ಟ್ರೀಯ ಸಂಯುಕ್ತಾಡಳಿತೆ ಸ್ಥಾಪಿಸುವ ಮಾತುಕತೆಗಳು ನಡದು ಎರಡೂ ಕ್ರಮಶಃ ನಿರರ್ಥಕವಾದವು; ಆ ಮೇಲೆ ಇಕ್ಕಡೆಯವರ ಪಾಲಿನ ಬರ್ಲಿನ್ ಭಾಗಗಳೊಳಗಿನ ಪಟುವಾಟು ಸಂಬಂಧದ ವಿವಾದಗಳನ್ನೂ, ಬರ್ಲಿನ್ ರೈಲ್ವೇ ಮುಷ್ಕರವನ್ನೂ ಮುಕ್ತಾಯಗೊಳಿಸುವ ಸಂಧಾನ ಮಾತುಕತೆಗಳು ನಡೆದು ಆ ಕುರಿತೂ ಏನಾದರೊಂದು ತೀರ್ಮಾನವಾಗುವದು ಪ್ರಯಾಸಕರವೆಂದು ತೋರಿಬಂತು; ಕೊನೆಗೆ ಬರ್ಲಿನಿನಲ್ಲಿರುವ ಚತುರ್ರಾಷ್ಟ್ರೀಯ ಅರ್ಥತಜ್ಞರ ಪರ್ಯಾಲೋಚನೆಗೆ ಈ ಪ್ರಶ್ನೆಯನ್ನು ಒಪ್ಪಿಸಿದಾಗ, ಅವರು ಸಾಕಷ್ಟು ಸಮಯ ಚರ್ಚಿಸಿದರೂ ಒಂದು ತೀರ್ಮಾನಕ್ಕೆ ಬರಲಾಗಿಲ್ಲ. ಹೇಗಾದರೂ ಮಾಡಿ, ಒಂದು ತಿಂಗಳಾಗುತ್ತಾ ಬರುತ್ತಿರುವ ಬರ್ಲಿನ್ ರೈಲ್ವೇ ಮುಷ್ಕರವನ್ನು ಮುಕ್ತಾಯಗೊಳಿಸುವ ವ್ಯವಸ್ಥೆಯಾಗಬಹುದೆಂದು ನಂಬಲಾಗಿದೆ.

೦೦ ೦೦

ಲೋಕದ ಅಭಿವೃದ್ಧಿ ಪಡೆಯದ ಹಾಗೂ ಹಿಂದೆ ಬಿದ್ದಿರುವ ರಾಷ್ಟ್ರಗಳಿಗೆ ಸಹಾಯ ಸಲ್ಲಿಸುವದಕ್ಕಾಗಿ ಸುಮಾರು 100,000,000 ಡೋಲರುಗಳಷ್ಟನ್ನು ಮಂಜೂರುಮಾಡುವ ಸವಿವರ ಯೋಜನೆಯೊಂದನ್ನು ಅಮೆರಿಕಾಧ್ಯಕ್ಷ ಟ್ರುಮೇನರು ತಯಾರಿಸಿದ್ದು, ಅದನ್ನು ಅಮೆರಿಕದ ಕಾಂ

ಪ್ರಾಪಂಚಿಕ ಸ್ಥಿತಿಗತಿ

ಗ್ರೆಸಿನ ಮುಂದಿಡುವರೆಂದು ಗೊತ್ತಾಗಿದೆ.

ಪೆಲಸ್ಟೈನ್ ಕಾಳಗಕ್ಕೆ ಸಂಬಂಧಿಸಿದ ಅರಬ್ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಸರಬರಾಯಿಯಾಗದಂತೆ 1948 ನೇ ಮೇ ತಿಂಗಳಿಂದಲೂ ಇರುವ ಬಹಿಷ್ಕಾರವನ್ನು ಪೆಲಸ್ಟೈನಿನ ಇಸ್ರಾಯೆಲ್ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡಿರುವ ಎರಡು ಅರಬ್ಬೀ ರಾಷ್ಟ್ರಗಳ ಮಟ್ಟಿಗೆ ತೆಗೆದು ಹಾಕುವ ಆಲೋಚನೆಯನ್ನು ಬ್ರಿಟಿಷ್ ಸರಕಾರವು ಮಾಡುತ್ತಿದೆ. ಪೆಲಸ್ಟೈನಿನಲ್ಲಿ ಶಾಂತಿ ಸ್ಥಾಪಿಸುವ ಉದ್ದೇಶದಿಂದ ಭದ್ರತಾ ಕೌನ್ಸಿಲು ಆ ಕಾಲದಲ್ಲಿ ಈ ಬಹಿಷ್ಕಾರ ಹೇರಿದ್ದಿತು. ಈಗ ಕಾಲ ಬದಲಾಗಿದೆ; ಅರಬ್ ರಾಷ್ಟ್ರಗಳಾದ ಟ್ರಾನ್ಸ್ ಜೋರ್ಡನ್ ಮತ್ತು ಈಜಿಪ್ತಗಳು ಪೆಲಸ್ಟೈನಿನ ಯಹೂದಿಗಳ ಇಸ್ರಾಯೇಲ್ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡಿವೆ ಈ ಮೊದಲಾಗಿರುವ ಒಪ್ಪಂದ ಕರಾರು ಪ್ರಕಾರ ಇಂತಹ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಸರಬರಾಯಿ ಮಾಡಲು ಬ್ರಿಟಿಷ್ ಸರಕಾರವು ಸಿದ್ಧವಿದೆ. ಟ್ರಾನ್ಸ್ ಜೋರ್ಡನ್ ಈಗ ಬ್ರಿಟನಿನಿಂದ ಈ ಸರಬರಾಯಿಯನ್ನು ಅಪೇಕ್ಷಿಸಿರುವದೆಂದು ತಿಳಿದುಬರುತ್ತದೆ.

೦೦ ೦೦

ಚೈನಾದಲ್ಲೀಗ ಕಮ್ಯೂನಿಸ್ಟ್ ಸೇನೆಗಳು ಸರಕಾರೀ ಆಕ್ರಮಿತ ದಕ್ಷಿಣಭಾಗದೊಳಗೆ ಮುನ್ನುಗ್ಗಿವೆ. ಅಲ್ಲಿಯ ಹುನಾನ್ ಪ್ರಾಂತ್ಯ ಪ್ರವೇಶಿಸಿವೆ. ರಶ್ಯದ ಪಾಲಿನ ಜರ್ಮನ್ ಕ್ಷೇತ್ರದಲ್ಲಿರುವ ಜರ್ಮನ್ ಮರ್ಮಜ್ಞರನ್ನೂ, ತಜ್ಞ ಸಲಹೆಗಾರರನ್ನೂ ತಮಗಾಗಿ ಚೀನೀ ಕಮ್ಯೂನಿಸ್ಟರು ಸಂಗ್ರಹಿಸಿಕೊಳ್ಳುತ್ತಿರುವರೆಂದು ತಿಳಿದು ಬಂದಿದೆ. ಅನ್ಯದೇಶಗಳೊಡನೆ ತಮ್ಮ ಸಂಬಂಧಸ್ಥಾಪನೆಮಾಡಿಕೊಳ್ಳುವ ವರೆಗೆ ರಶ್ಯದಿಂದ ಇಂತಹ ತಜ್ಞ ಜನಸಹಾಯ ಕೇಳಬಾರದೆಂಬುದೇ ಚೀನೀ ಕಮ್ಯೂನಿಸ್ಟರ ಧೋರಣೆಯಂತೆ. "ಚೈನದ ಅಂತಃಕಲಹದಲ್ಲಿ ಕೈಹಾಕುವ ಇಚ್ಛೆಯೇ ಬ್ರಿಟನಿಗಿಲ್ಲ. ಬ್ರಿಟನು ಅಲ್ಲಿಯ ಅಂತರ್ಯುದ್ಧದಲ್ಲಿ ಎಂದೂ ಕೈಹಾಕಿದ್ದಿಲ್ಲ. ನಾವು ಕಮ್ಯೂನಿಸ್ಟ್, ಕಮ್ಯೂನಿಸ್ಟ ವಿರೋಧ, ಕೋಮಿಂಟಂಗ್ ಅಥವಾ ಬೇರಾವುದೇ ಪಕ್ಷವನ್ನು ಧರಿಸಿ ಚೀನೀ ಸಮಸ್ಯೆಯನ್ನು ನೋಡುವಂತಿಲ್ಲ. ಅಲ್ಲಿ ಯಾವ ಪಕ್ಷವೇ ಮೇಲ್ಗೈಯಾಗಲಿ, ಅದು ನಮಗವಕಾಶವೊದಗಿಸಿ ಕೊಡುತ್ತದಾದರೆ ಅದರೊಡನೆ ವ್ಯವಹಾರ ಬೆಳೆಸಲು ಬ್ರಿಟನು ಸಿದ್ಧವಿದೆ" ಎಂದು ಬ್ರಿಟನಿನ ವಿದೇಶ ಮಂತ್ರಿ ಬೆವಿನರು ಬ್ರಿಟಿಷ್ ಲೇಬರ್ ಪಕ್ಷದ ವಾರ್ಷಿಕ ಸಮ್ಮೇಳನದಲ್ಲಂದಿದ್ದಾರೆ. ಚೈನದ ಕೆಂಪು ಸರಕಾರದೊಡನೆ ಸಂಬಂಧ ನಿರ್ಮಿಸುವ ಮಾತುಕತೆಗಳನ್ನು ಬ್ರಿಟನು ಇಷ್ಟರಲ್ಲೇ ನಡೆಸುತ್ತಿದೆ ಎಂದು ಪ್ರಚಾರವಾಗಿರುವ ಸುದ್ದಿಯು ಪೂರ್ಣ ಸುಳ್ಳೆಂದು ಬ್ರಿಟಿಷ್ ಸರಕಾರದ ನಕಾರ ಬಂದಿದೆ.

೦೦ ೦೦

ಬರ್ಮಾ ಯುದ್ಧವು ಯಥಾ ಪ್ರಕಾರ ಬಿರುಸಾಗಿ ಸಾಗಿದೆ. ಸ್ವತಂತ್ರ ಬರ್ಮದ ರಾಜ್ಯಘಟನೆಯಂತೆ ಸ್ವಾತಂತ್ರ್ಯದೊರೆತ 18 ತಿಂಗಳಲ್ಲಿ ಬರ್ಮಾದ ಸಾರ್ವತ್ರಿಕ ಚುನಾವಣೆ ನಡೆಯಬೇಕಿದ್ದಿತು. ಆದರೆ ಇಂದಿನ ಅಸಾಮಾನ್ಯ ಪರಿಸ್ಥಿತಿಯನ್ನು ಗಮನಿಸಿ ಸ್ವಾತಂತ್ರ್ಯೋತ್ತರ 28 ತಿಂಗಳ ನಂತರ-1950 ರಲ್ಲಿ--ಬರ್ಮದ ಚುನಾವಣೆ ನಡೆಸುವದೆಂದು ಅಲ್ಲಿಯ ಪಾರ್ಲಿಮೆಂಟು ತನ್ನ ಘಟನೆಯಲ್ಲಿ ತಿದ್ದುಪಡಿ ಮಾಡಿಕೊಂಡಿದೆ. ಈ ಕಡೆ ಅಸ್ಸಾಮ್ ಗಡಿಯಲ್ಲಿ ಕಮ್ಯೂನಿಸ್ಟ್ ಬಂಡಾಯಗಾರರು ನುಗ್ಗಿ ಬಂದು ಸರಹದ್ದಿನ 20 ಮೈಲು ದೂರದ ಸಂಕ ಸೇತುವೆಗಳನ್ನು ಕಡಿದು ಹಾಕಿದೊಡನೆ ಬರ್ಮಾ ಸರಕಾರದ ಸೇನೆಗಳು ಇಂಫಾಲ್ ರಸ್ತೆಯಿಂದ ಅಸ್ಸಾಮ್ ಸರಹದ್ದಿಗೆ ಧಾವಿಸಿ ಕಮ್ಯೂನಿಸ್ಟರೊಂದಿಗೆ ಜಾಡಾಜಾಡಿ ಗನ್ ಹೋರಾಟಕೊಟ್ಟ ವಿಶೇಷ ರೀತಿಯ ವಾರ್ತೆ ಬಂದಿದೆ. ಅತ್ತ ಚೈನಾ ಗಡಿಯಲ್ಲೂ ಚೈನೀಯ ಚಲ್ಲಾಪಿಲ್ಲಿ ಸೇನೆಗಳು ಬರ್ಮದ ಗಡಿಯತ್ತ ನುಗ್ಗುತ್ತಿವೆ. ಬರ್ಮದ ಸರಕಾರವು ಚೈನೀ ಗಡಿ ಹೋರಾಟ ಸಿದ್ಧತೆಗಳೆಲ್ಲವನ್ನೂ ಮಾಡಿದೆ.

೦೦ ೦೦

(ಆನೇ ಪುಟ ನೋಡಿರಿ)

ಮದ್ಯಪಾನ ನಿಷೇಧವೆಂದರೇನು?

- ಅದು ಜನಾಂಗದ ಸಂಪತ್ತನ್ನುಳಿಸುವುದು.
- ಅದು ಜನತೆಯನ್ನು ಯೋಗ್ಯ ನಾಗರಿಕರನ್ನಾಗಗೊಡಲು ತರಬೇತಿ ಕೊಡುವುದು.
- ಅದು ಅನಿವಾರ್ಯವಾದ ಒಂದು ಸಾಮಾಜಿಕ ಸುಧಾರಣೆ.
- ಅದು ಗೃಹ ಜೀವನದ ಪಾವಿತ್ರ್ಯವನ್ನು ಕಾಪಾಡುವುದು.
- ಅದು ಪ್ರತಿಯೋರ್ವ ಬಾಲಕನಿಗೆ ಪ್ರಗತಿಗೆ ಸಂದರ್ಭವನ್ನೊದಗಿಸುತ್ತದೆ.

ಅದನ್ನು ಪ್ರೋತ್ಸಾಹಿಸುವ ಮೂಲಕ ನೀವು
ನಿಮ್ಮ ಸರಕಾರಕ್ಕೆ ಸಹಾಯ ಸಲಿಸಿದಂತಾಗುವುದು.

ಈ ಜಾಹೀರಾತಿನ ಸ್ಥಳ:—

ಕೆನರಾ ಬ್ಯಾಂಕ್ ಲಿಮಿಟೆಡ್

ಇದರ ಸೇವಾದಾನ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯುದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಗೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.



Approved firm by the Govt. of Mysore
Certified by the Agent of the Govt. of
ylone & Indian.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು
ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆ
ನೋವು, ಘಾಯಗಳು, ಬಾತುಕೊಳ್ಳುವುದು,
ಚೇಳವಿಷಮುಂತಾದವು, ಪಕ್ಷಘಾತ, ನೆಗಡಿಮೆ
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಮುಳುಕಡ್ಡಿ ಮದ್ದುನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲಕತ್ತ.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscribed	Rs. 20,00,000.
Capital Paid Up	Rs. 19,99,800.
Reserves	Rs. 8,90,000.

Banking business of every description transacted

ಗುರುವಾರ, ಉಡುಪಿ, ೧೬-೬-೪೯

ಈ ಸ್ಥಿತಿ.

ಭಾರತವು ಜಾತ್ಯಾತೀತ ಹಾಗೂ ಸರ್ವವ್ಯಾಪಕ ಕೇಂದ್ರಾಧಿಕಾರವುಳ್ಳ ಅಖಂಡ ರಾಷ್ಟ್ರವಾಗುವಂತೆ ಮಾಡಬಲ್ಲ ಸುಭದ್ರ ಮತ್ತು ಪ್ರಗತಿಗನುಕೂಲವಾದ ಅಸ್ತಿವಾರವನ್ನು ಘಟನಾ ಸಮಿತಿಯೀಗ ತಯಾರಿಸುತ್ತಿದೆ. ಒಂದು ರಾಷ್ಟ್ರದ ಉದ್ಧಾರಕ್ಕೆ ಅದರ ಘಟನೆ ಅಥವಾ ಶಾಸನಗಳು ಮೂಲಾಧಾರಗಳೆಂಬುದು ನಿಸ್ಸಂದೇಹ. ಆದರೆ ಇವು ಮುಖ್ಯವಾಗಿ ಕೆಲವೇ ತಜ್ಞರ ಮೆದುಳಿನ ಕೆಲಸ; ಭದ್ರವಾದ ಹಾಗೂ ನಾಜೂಕಿನ ರಾಜ್ಯಾಂಗ ಮತ್ತು ಕಾಯಿದೆಗಳೇ ಒಂದು ರಾಜ್ಯವನ್ನು ಇಡಬೇಕಾದ ಸ್ಥಿತಿಯಲ್ಲಿ ಇಡಬಲ್ಲುವಾಗಿದ್ದರೆ, ಅಂಥವುಗಳನ್ನು ತಯಾರಿಸಬಲ್ಲ ಬುದ್ಧಿವಂತರಿಗೇನೂ ಕೊರತೆಯಿಲ್ಲದ ಭಾರತದ ಕುರಿತು ನಿಶ್ಚಿಂತೆಯಿಂದಿರಬಹುದಿದ್ದಿತು. ಆದರೆ ಯಾವುದು ಹೇಗಿದ್ದರೂ, ಆದರ ಮೇಲಿನ ಮೂಲಾಧಿಕಾರವು ಜನತೆಯ ಕೈಯಲ್ಲಿರುವ ಒಂದು ಪ್ರಜಾಸತ್ತಾ ರಾಷ್ಟ್ರದಲ್ಲಿ ಹೆಚ್ಚಾಗಿ ಜನತೆಯ ಯೋಗ್ಯತೆಯನ್ನವಲಂಬಿಸಿಕೊಂಡೇ ಭವಿಷ್ಯವಿದೆ. ಆದ್ದರಿಂದ ಭಾರತೀಯ ಜನತೆಯ ಯೋಗ್ಯತೆ ಮತ್ತು ಜನಮತ ಯಾವ ಮಟ್ಟದಲ್ಲಿದೆ ಎಂಬುದನ್ನೀಗ ನೋಡಬೇಕಾದುದು ಅಗತ್ಯ. ಸ್ವತಂತ್ರಾಧಿಕಾರ ನಿರ್ವಹಣದ ಬುಟ್ಟಿಗೆ ಹಿಂದೀ ಜನಸಾಮಾನ್ಯರಲ್ಲಿ ಇಂದು ಕಂಡು ಬರುವ ಯೋಗ್ಯತೆ ನಿಜಕ್ಕೂ ಸಾಕಾಗುವಂತಹದಲ್ಲ. ಜನಮತವಾದರೋ ಇಂದು ಗಲಿಬಿಲಿಗೊಂಡಂತಿದೆ. ಯಾವುದೇ ಅಂದಾಜು ದೊರೆಯಲಾರದಷ್ಟು ಅದು ಕದಡಿ ಹೋಗಿದೆ. ಒಂದು ಮುಂದನ್ನು ಯೋಚಿಸಿ ಹೇಳುವದಾದರೆ ಹೀಗಿರುವದು ಸ್ವಾಭಾವಿಕ. ದೀರ್ಘಾವಧಿಯ ಪರಾಧೀನತೆಯ ನಂತರ ಸ್ವತಂತ್ರರಾದ ಜನರ ಸ್ಥಿತಿಯು ಆ ಸ್ವಾತಂತ್ರ್ಯದ ಆದಿಭಾಗದಲ್ಲಿ ಹೀಗಿರುವುದೇನೂ ಹೆಚ್ಚಲ್ಲ. ಆದರೆ ಸಂಗತಿ ಸಂದರ್ಭಗಳಿಗನುಸಾರವಾಗಿ ತರಬೇತಿಗೊಳ್ಳುತ್ತಾ, ಹಿಂದೀ ಜನಮತವು ಯಾವ ರೂಪಕ್ಕೆ ತಿರುಗೀತೆಂಬ ಕಡೆಗೆ ವಿಶೇಷ ಜಾಗರೂಕತೆಯಿಡಬೇಕಾದುದು ಈ ಸಂದರ್ಭದಲ್ಲೇ. ಸತ್ಯಕ್ಕೂ ಇಂದು ಜನಸಾಮಾನ್ಯರ ಸ್ಥಿತಿ ಮತ್ತು ಮತಿ ಯೋಗ್ಯ ಪಥ ಹಿಡಿದು ಸಾಗುತ್ತಿವೆಯೆ? 'ಹೌದು' ಅಥವಾ 'ಇಲ್ಲ' ವೆನ್ನಲಾಗದಷ್ಟು ಗಲಿಬಿಲಿ ವ್ಯಾಪಿಸಿಹೋಗಿದೆ. ಸೂಕ್ಷ್ಮ ವಿಮರ್ಶಕ ಬುದ್ಧಿ, ದೂರದೃಷ್ಟಿ, ಗಾಢ ಜ್ಞಾನ, ಇವು ಯಾವ ರಾಷ್ಟ್ರದ ಸಾಮಾನ್ಯ ಜನವರ್ಗದಲ್ಲೂ ಇರುವಂತಿಲ್ಲ; ಭಾರತೀಯರಲ್ಲೂ ಇಲ್ಲದೆ ಹೋಗಬಹುದು. ಆದರೆ ಇಲ್ಲಿ ಕೂಡಾ ಒಂದು ಮಿತಿಯಿದೆ. ಆ ಮಟ್ಟದ ಮೇಲಿಂದ ಪ್ರಗತಿ ಅಥವಾ ಅವನತಿ ಸಾಧನೆಯ ಅಂದಾಜು ಹಿಡಿಯಲಾಗುತ್ತದೆ. ಹಿಂದೀ ಜನತಾರಂಗದಲ್ಲಿ, ಈ ಆದಿ ಭಾಗದಲ್ಲೇ ಸ್ವಾತಂತ್ರ್ಯಾಧಿಕಾರಗಳನ್ನು ಕೈವಶಪಡಿಸಿಕೊಳ್ಳಲು ನಡೆದಿರುವ ಮೇಲಾಟಗಳು ಈ ದೃಷ್ಟಿಯಿಂದ ಸಲ್ಲಕ್ಷಣಗಳಾಗಿ ತೋರುವದಿಲ್ಲ. ಅಗತ್ಯವುಳ್ಳ ತಿಳುವಳಿಕೆ ಸಂಪಾದಿಸಿಕೊಳ್ಳಲಿಚ್ಛಿಸುವವರಿಗಿಂತಲೂ, ತಮಗೆ ಯಾವ ಜ್ಞಾನವೂ ಇಲ್ಲದ ವಿಷಯಗಳ ಮೇಲೆ ತೀರ್ಮಾನ ಕೊಡುವವರೇ ಹೆಚ್ಚಿದ್ದಾರೆ. ಅಧಿಕ ಪ್ರಸಂಗ, ಅಸಂಬದ್ಧ ವಾದ, ದೂರು ದೂಷಣೆ, ಟೀಕೆ ಟಿಪ್ಪಣಿಗಳ ಬಾಯಿಬಡುಕತನಗಳೇ ಎಲ್ಲೆಲ್ಲೂ ಕಂಡುಬರುತ್ತಿವೆ. ಇವು ರಾಜ್ಯಾಡಳಿತೆಗಗತ್ಯವುಳ್ಳ ವಿಧಾಯಕ ರಚನೆಗಾಗಲೀ, ವಿಚಾರಬುದ್ಧಿಯ ನಿರ್ಮಾಣಕ್ಕಾಗಲೀ ಬೇಕಾದವುಗಳಲ್ಲ. ಆದರೂ ಭಾರತ ಸ್ವಾತಂತ್ರ್ಯರಂಗದಲ್ಲಿ ಈ ದುರ್ಮನೋವೃತ್ತಿಗಳು ಬೆಳೆದುಬಂದಿವೆ. ಇವುಗಳು ಮೊಳೆಯಲವಕಾಶವಿಲ್ಲದಂತೆ ಮಾಡಿ, ರಾಷ್ಟ್ರವಶ್ಯ ಗುಣವರ್ತನೆಗಳನ್ನು ಜನಸಾಮಾನ್ಯರಲ್ಲಿ ಆವಾಹನೆ ಮಾಡುವಂತಹ ಕಾರ್ಯಗಳಾಗಲೀ ಪ್ರಚಾರಗಳಾಗಲೀ ಇಂದು ನಡೆಯುತ್ತಿಲ್ಲ. ತಮ್ಮ ಧೋರಣೆಗೆ ಜನತಾಬೆಂಬಲವಿದೆಯೆಂಬ ವಿಶ್ವಾಸಬಲವೊಂದರಿಂದಲೇ ಇಂದಿನ ಸರಕಾರಗಳಿಂದ ಆಗುತ್ತಿರುವ ಮಾರ್ಪಾಟಗಳ ಮತ್ತು ಹೊಸ ಹೊಸ ಶಾಸನಗಳ ಅರ್ಥವೇ ಹೆಚ್ಚಿನಂಶ ಜನತೆಗಾಗುತ್ತಿಲ್ಲ; ಸ್ವಾಡಳಿತೆಯಲ್ಲಿ ಶಾಸನಕರ್ತರು ಹೇಗೆ ಜನತೆಗೆ ಪರಕೀಯರಾಗಿರಕೂಡದೋ, ಹಾಗೆಯೇ ಶಾಸನಗಳೂ ಪರಕೀಯವಾಗಿರಬಾರದು. ಅವು ಸಾಧ್ಯವಿದ್ದ ಮಟ್ಟಿಗೂ ಜನಮತದ ಬೆಂಬಲಪಡೆದು—ಎಲ್ಲಾ ಸಂದರ್ಭಗಳಲ್ಲೂ ಜನಹಿತಕ್ಕಾಗಿ—ಮುಂದೆ ಬರಬೇಕು. ಕಾನೂನು ನಿರ್ಮಾಪಕರ ಮೇಲೆ ಜನತೆಗಿರುವ ಭಕ್ತಿ ವಿಶ್ವಾಸಗಳನ್ನಷ್ಟೇ ಆಧರಿಸಿ ಕಾನೂನು ಹೊರಡ ಕೂಡದು, ಅವುಗಳ ಪರಿಚಯ ಮತ್ತು ಉದ್ದೇಶಗಳನ್ನು ಜನಸಾಮಾನ್ಯರಿಗೆ ಮುಂದಟ್ಟುಮಾಡಿ ಕೊಡಬೇಕು; ಅಂತೆಯೇ ಭಾವೀ ಹೊಣೆಗಾರಿಕೆಯನ್ನು ನಿರ್ವಹಿಸುವ ಸಂಬಂಧದ ಬೌದ್ಧಿಕ ಶಿಕ್ಷಣವು ಜನತೆಗೆ ಎಲ್ಲಾ ವಿಧದಿಂದಲೂ ದೊರೆಯುತ್ತಾ ಹೋಗಬೇಕು. ಇಂದು ನಿಜಕ್ಕೂ ಆ ಸ್ಥಿತಿಯಿಲ್ಲ. ಕಾಲ ಪ್ರಭಾವ ಮತ್ತು ಜನತೆಯ ಕಡೆಗಿನ ಸರಕಾರೀ ಅಲಕ್ಷ್ಯದ ದೆಸೆಯಿಂದ ಜನರಲ್ಲಿ ಶಂಕೆ, ಸಂದೇಹ ಗಲಿಬಿಲಿಗಳೇ ವ್ಯಾಪಿಸಿ ಹೋಗಿವೆ. ಇಂತಹ ಸ್ಥಿತಿ ಶುಭದಾಯಕವಲ್ಲವೆಂಬುದನ್ನು ಮನಗಾಣಿಸಿ, ಇಂದಿನ ಕಾಂಗ್ರೆಸ್ ಸರಕಾರಗಳು, ಸಾರ್ವಜನಿಕರ ಹೆಸರನ್ನಷ್ಟೇ ಉಚ್ಚರಿಸುವ ಬದಲಿಗೆ ತಮ್ಮ ಕಾರ್ಯಕಲಾಪಗಳಿಗೆ ಅವರ ಪ್ರತ್ಯಕ್ಷ ಸಂಬಂಧವನ್ನು ದೊರಕಿಸಿ ಕೊಳ್ಳಬೇಕಾದುದು ರಾಷ್ಟ್ರದಹಾಗೂ ಸ್ವತಃ ತಮ್ಮ ಭವಿಷ್ಯದ ದೃಷ್ಟಿಯಿಂದ ಅಗತ್ಯವೆನ್ನುತ್ತೇವೆ.

ಭಾರತದ ಒಳ ರೋಗಗಳು

ಸ್ವತಂತ್ರ ಭಾರತದ ಚುನಾವಣಾ ಸ್ಪರ್ಧೆಗಳಲ್ಲಿ ಎಂತಹ ಬಿಸಿಯೇರಬಹುದೆಂಬುದರ ದ್ಯೋತಕವಾಗಿದೆ—ಇದೇ ತಾ 12ರಲ್ಲಿ ಪಶ್ಚಿಮ ಬಂಗಾಳ ಎಸೆಂಬ್ಲಿಯ ಒಂದು ಸ್ಥಾನಕ್ಕೆ ದಕ್ಷಿಣ ಕಲ್ಕತ್ತಾ ಮತದಾರ ಕ್ಷೇತ್ರದಿಂದ ನಡೆದ ಚುನಾವಣೆ. ಪಶ್ಚಿಮ ಬಂಗಾಳ ಎಸೆಂಬ್ಲಿಯ ಖಾಲಿಬಿದ್ದ ಒಂದು ಸ್ಥಾನಕ್ಕೆ ಶ್ರೀ ಸುರೇಶಚಂದ್ರದಾಸ್ (ಕಾಂಗ್ರೆಸ್) ಶ್ರೀ. ಶರಶ್ಚಂದ್ರಬೋಸ್ (ಸೋಶಿಯಲಿಸ್ಟ್ ರಿಪಬ್ಲಿಕ್) ಶ್ರೀ. ದಿಲೀಪಕುಮಾರ್ ರೋಯಿ ಚೌಧರಿ (ಡೆಮೊಕ್ರಟಿಕ್ ವೇನ್‌ಗಾರ್ಡ್) ಶ್ರೀ. ಯಸ್. ಸಿ. ರೋಯಿ (ಇಂಡಿಪೆಂಡೆಂಟ್) ಈ ನಾಲ್ವರು ಉಮೇದ್ವಾರಿಗಳು ಸ್ಪರ್ಧಿಸಿದ್ದರು. ಈ ಪೈಕಿ ಕಾಂಗ್ರೆಸ್ ಮತ್ತು ಸೋಶಿಯಲಿಸ್ಟ್ ರಿಪಬ್ಲಿಕ್ ಉಮೇದ್ವಾರಿಗಳೊಳಗಿನ ಸ್ಪರ್ಧೆಯು ತೀವ್ರತರದ್ದಿದ್ದಿತು. ಒಂದು ಕಡೆ ಮುಖ್ಯವಾಗಿ ಕಾಂಗ್ರೆಸ್ ವರ್ಚಸ್ಸಿನ ಭಾರಬಿದ್ದಿದ್ದರೆ, ಮತ್ತೊಂದೆಡೆ ನೇತಾಜಿಯ ಹಿರಿಯಣ್ಣ ಮತ್ತು ಸ್ವತಃ ಹೆಸರಾದ ಪುಡಾರಿ ಶ್ರೀ ಶರಶ್ಚಂದ್ರಬೋಸರ ಪ್ರಭಾವದ ಭಾರ ಬಿದ್ದಿತ್ತು. ಆರೋಗ್ಯ ಸಾಧನೆಗಾಗಿ ಹಲವು ವಾರಗಳ ಮೊದಲೇ ಸ್ವಿಸರ್ಲೆಂಡಿಗೆ ಹೋಗಿರುವ ಶ್ರೀ. ಶರಶ್ಚಂದ್ರ ಬೋಸರು ಅಲ್ಲಿಂದಲೇ ಉಮೇದ್ವಾರರಾಗಿರುವವರು. ಅವರನ್ನು ಜುಲಾಯಿ ಅಂತ್ಯ ಭಾಗದಲ್ಲಿ ಕಲ್ಕತ್ತೆಕ್ಕೆ ಮರಳಲಿದ್ದಾರೆ. ಇಲ್ಲಿ ಅವರ ಕಡೆಯ ಕೆಲಸಗಳೆಲ್ಲವೂ ಅವರ ಪಕ್ಷೀಯರಿಂದ ನಡೆದಿದ್ದುವು. ಮುಖ್ಯವಾಗಿ ಶ್ರೀ ಸುರೇಶ ಚಂದ್ರ ದಾಸ್ ಮತ್ತು ಶ್ರೀ ಶರಶ್ಚಂದ್ರ ಬೋಸರ ಪ್ರಚಾರ ಕಾರ್ಯಗಳು ಪರಮಾವಧಿಯನ್ನು ಮುಟ್ಟಿ ಹಿಂಸಾತ್ಮಕ ಕೃತ್ಯಗಳಿಗೂ ಅವಕಾಶ ಮಾಡಿಕೊಟ್ಟದ್ದುವು. ಚುನಾವಣೆಯ ಪ್ರಚಾರಾರ್ಥವಾಗಿ, ಕಲ್ಕತ್ತದಲ್ಲಿ ಸಾರ್ವಜನಿಕ ಸಭೆ ಮೆರವಣಿಗೆಗಳಿಗಿದ್ದ ಬಹಿಷ್ಕಾರವನ್ನು ಸರಕಾರವು ರದ್ದುಗೊಳಿಸಿದೊಡನೆ ಇಕ್ಕಡೆಯವರ ಪ್ರಬಲ ಪ್ರದರ್ಶನಗಳಾಗಹತ್ತಿದ್ದುವು. ಶ್ರೀ ಶರಶ್ಚಂದ್ರ ಬೋಸರ ಕಡೆಯ ಸಾರ್ವಜನಿಕ ಸಭೆಗಳೆಲ್ಲವೂ ಶಾಂತ ರೀತಿಯಿಂದ ನಡೆದಿದ್ದರೂ ಕಾಂಗ್ರೆಸ್ ಉಮೇದ್ವಾರಿಯ ಪ್ರಚಾರ ಸಭೆಯೊಂದರಲ್ಲಿ ದೊಡ್ಡ ಗೊಂದಲ ನಡೆಯಿತು. ಬೋಸ್ ಪಕ್ಷಪಾತಿಗಳು ಆ ಸಭೆಯ ಮೇಲೆ ಇಟ್ಟಿಗೆ, ಎಸಿಡ್ ಬಲ್ಬುಗಳು ಮತ್ತು ಬೋಂಬುಗಳನ್ನು ಕೂಡಾ ಒಗೆದರು. ಭಾಷಣ ವೇದಿಕೆಗೂ ಕಾಂಗ್ರೆಸ್ ಪ್ರಚಾರ ಲೋರಿಗಳಿಗೂ ಬೆಂಕಿ ಕೊಟ್ಟರು. ಸುಮಾರು ಸಾವಿರ ಸಂಖ್ಯೆಯ ಪುಂಡಾಗಾರರದಂಡು ಮುಂಧಾವಿಸಿ ಕಾಂಗ್ರೆಸ್ ಉಮೇದ್ವಾರ ದಾಸರ ಮನೆಗೆ ಬೋಂಬುಗಳನ್ನೊಗೆದು, ಮನೇ ಕಿಟಿಕಿ ಸಾಮಾನುಗಳನ್ನು ಒಡೆಯ ಹತ್ತಿದಾಗ ಪೋಲೀಸರು ಲಾಠೀ ಚಾರ್ಜು ನಡೆಸಿದರೂ ಫಲ ಬರಲಿಲ್ಲ. ಕೊನೆಗೆ ಗುಂಡು ಹಾರಿಸಬೇಕಾಯಿತು; ತತ್ಪರಿಣಾಮವಾಗಿ ಒಬ್ಬನು ಸತ್ತುದಲ್ಲದೆ, ಕೆಲವರಿಗೆ ಜಖಮುಗಳಾದುವು; ಬೋಂಬು, ಎಸಿಡ್‌ಗಳ ದಾವಳಿಗೊಳಗಾದ ಹಲವರು ಆಸ್ಪತ್ರೆ ಸೇರುವಂತಾಯಿತು. ಪಂಡಿತ ನೆಹರುಗಳು ಈ ಪುಂಡಾಟಿಕೆಯನ್ನೂ ಶ್ರೀ ಶರಶ್ಚಂದ್ರ ಬೋಸರ ರಾಷ್ಟ್ರದ್ರೋಹಿ ಪ್ರಚಾರ ಕಾರ್ಯಗಳನ್ನೂ ಖಂಡಿಸಿ, ಕೇವಲ ಪ್ರತಿಭಟನೆ ಮತ್ತು ಧಿಕ್ಕಾರಗಳಿಂದಲೇ ಸ್ವಾತಂತ್ರ್ಯದ ಹೊಣೆ ನಿರ್ವಹಿಸಲಾಗುವದಿಲ್ಲವೆಂದೂ ಸಮತೂಕದ ಬುದ್ಧಿಯಗತ್ಯವೆಂದೂ ಮತದಾರರು ಕಾಂಗ್ರೆಸ್ಸಿಗೇನೇ ಬೆಂಬಲವಾಗಬೇಕೆಂದೂ ಕೇಳಿಕೊಂಡಿದ್ದರು. ಸರ್ದಾರ್ ಪಟೇಲರು ಭಾರತ ಸರಕಾರದ ಕಾರ್ಯಕಲಾಪಗಳು ಲೋಕ ಚರಿತ್ರೆಯಲ್ಲಿ ರಾಜಿಸುವಂತಹವಿವೆಯೆಂದೂ, ಕಾಂಗ್ರೆಸಿನ ಸ್ಥಾನಕ್ಕೇರಿ ಅಧಿಕಾರ ನಿರ್ವಹಿಸಬಲ್ಲ ಬೇರೊಂದು ಪಕ್ಷವೇ ಸದ್ಯಕ್ಕಿಲ್ಲವೆಂದೂ ಆದ್ದರಿಂದ ಜವಾಬ್ದಾರಿಯರಿತು ಕಾಂಗ್ರೆಸನ್ನೇ ಸಮರ್ಥಿಸಬೇಕೆಂದೂ ಕಲ್ಕತ್ತದ ಮತದಾರರನ್ನು ವಿಜ್ಞಾಪಿಸಿಕೊಂಡಿದ್ದರು.

ಚುನಾವಣೆಯು ತಾ. 12ರಲ್ಲಿ ನಡೆಯಿತು ದಕ್ಷಿಣ ಕಲ್ಕತ್ತಾ ಮತದಾರ ಕ್ಷೇತ್ರದಲ್ಲಿ 62000 ಮತದಾರರಿದ್ದಾರೆ. ಆ ಪೈಕಿ 20000 ಸ್ತ್ರೀ ಮತದಾರರು. ಅಂತೆಯೇ ಆ ಕ್ಷೇತ್ರದಲ್ಲಿ 62 ಮತ ಸಂಗ್ರಹ ಕೇಂದ್ರ [ಪೋಲಿಂಗ್ ಸ್ಟೇಶನು] ಗಳಿದ್ದು, ಈ ಪೈಕಿ 21 ಸ್ತ್ರೀಮತದಾರರಿಗಾಗಿಯೇ ಇದ್ದುವು. ಚುನಾವಣೆಯಲ್ಲಿದ್ದ ಘರ್ಷಣೆಯನ್ನು ಗಮನಿಸಿ, ಮತದಾನದ ದಿನ ವಿಶೇಷಂತಿಯಬಂದೋಬಸ್ತುಗಳಿದ್ದುವು. 4000 ಪೋಲೀಸರು ಮತ್ತು 1000 ಸ್ಪೆಶ್ಯಲ್ ಸಶಸ್ತ್ರ ಪೋಲಿಸರು ಪೋಲಿಂಗ್ ಸ್ಟೇಶನುಗಳ ಶಾಂತಿ ರಕ್ಷಣೆಗೆ ಕಾವಲಿದ್ದರು. ನೀಲ ಅಂಚಿನ ಸೀರೆ ಮತ್ತು ಟೋಪಿ ಧರಿಸಿದ ಸ್ತ್ರೀ ಪೋಲಿಸರು ಸ್ತ್ರೀ ಪೋಲಿಂಗ್ ಸ್ಟೇಶನುಗಳ ಪಹರೆಗಿದ್ದರು. ಸಶಸ್ತ್ರ ಕಾರುಗಳಲ್ಲಿ ಸೈನಿಕರೂ ವಯರ್‌ಲೆಸ್ ಉಪಕರಣಗಳಿದ್ದ ಬಂಡಿಗಳಲ್ಲಿ ಸಶಸ್ತ್ರ ಪೋಲೀಸರೂ ದಕ್ಷಿಣ ಕಲ್ಕತ್ತದ ರಸ್ತೆ ಗಲ್ಲಿಗಳಲ್ಲಿ ಗಸ್ತು ನಡೆಸುತ್ತಿದ್ದರು. ಮತದಾನದ ದಿನ ವಿಶೇಷ ಗೊಂದಲವೇನೂ ನಡೆಯಲಿಲ್ಲ. ಹಿರಿಯ ಕಿರಿಯ ಸ್ತ್ರೀ ಪುರುಷ ಮತದಾರರು ಒಟ್ಟು ಸಂಖ್ಯೆಯ ಅಧಿಕ ಭಾಗ—ಉತ್ಸಾಹದಿಂದ ವೋಟು ಕೊಡಲು ಬಂದಿದ್ದರು. ಮತದಾರರನ್ನು ಬಲಾತ್ಕರಿಸಿದರೆಂಬ ಕಾರಣಗಳಿಂದ ಕೆ

ದಸ್ತಗಿರಿಯಾಗಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸುಚೇತಾ ಕೃಪಲಾನಿ ಮತ್ತು ಘಟನಾ ಸಮಿತಿ ಸದಸ್ಯೆ ಶ್ರೀಮತಿ ರೇಣುಕಾದೇವಿಯವರನ್ನು ಒಂದು ಪೋಲಿಂಗ್ ಸ್ಟೇಶನಿನಲ್ಲಿ ವಿರುದ್ಧ ಪಕ್ಷೀಯ ಪ್ರದರ್ಶನಗಾರರು ಸುತ್ತುಗಟ್ಟಿ, ನಿಷೇಧ ಬೊಬ್ಬೆಹಾಕಿ ಅವರ ಮೇಲೆ ಕೆಸರು ಚೆಲ್ಲಿದರು. ಪೋಲೀಸರು ರಕ್ಷಣಾಕೋಟೆಯಾಗಿ ಸುತ್ತುಗಟ್ಟಿ ಆ ಮಹಿಳಾನಾಯಕಿಯರನ್ನು ಸುರಕ್ಷಿತ ಸ್ಥಳಕ್ಕೆ ಮುಟ್ಟಿಸಬೇಕಾಯಿತು. ನಿಶ್ಚಿತ ಸಮಯದ ವರೆಗೆ ಮತದಾನ ನಡೆದಮೇಲೆ ಕಲ್ಕತ್ತದ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ವೋಟಿನ ಪೆಟ್ಟಿಗೆಗಳ ಅಧಿಕಾರವಹಿಸಿ, ಬಲವಾದ ಸಶಸ್ತ್ರ ಸೈನಿಕಕಾವಲಿನಿಂದ ಅವುಗಳನ್ನು ಡಲ್‌ಹೌಸೀ ಭವನಕ್ಕೆ ಸಾಗಿಸಿದರು. ಅಲ್ಲಿ ತಾ 14ರಲ್ಲಿ 32ಮಂದಿ ಪ್ರಮುಖಾಧಿಕಾರಿಗಳು ಮತಗಣನೆ ನಡೆಸಿದರು. ಕಾಂಗ್ರೆಸ್ ಉಮೇದ್ವಾರಿ ಶ್ರೀ ಸುರೇಶಚಂದ್ರ ದಾಸರನ್ನೂ ಇತರ ಇಬ್ಬರು ಉಮೇದ್ವಾರಿಗಳನ್ನೂ ಸೋಲಿಸಿ, ಸೋಶಿಯಲಿಸ್ಟ್ ರಿಪಬ್ಲಿಕ್ ಉಮೇದ್ವಾರ ಶ್ರೀ ಶರತ್ಚಂದ್ರ ಬೋಸರು ಪ್ರಬಲ ಬಹುಮತದಿಂದ ಗೆದ್ದುಬಂದಿದ್ದಾರೆ. ಸ್ವಾತಂತ್ರ್ಯಾಂದೋಲನ ನಡೆಸುತ್ತಿದ್ದ ಕಾಂಗ್ರೆಸು ಆ ಕಾಲದಲ್ಲಿ ಇಂತಹ ಚುನಾವಣೆಗಳಲ್ಲಿ ಅಪಜಯವೆಂಬುದನ್ನೇ ಅರಿಯದು; ಆದರೆ ಸ್ವಾತಂತ್ರ್ಯಾಧಿಕಾರ ನಿರ್ವಹಿಸುತ್ತಿರುವ ಇಂದಿನ ಕಾಂಗ್ರೆಸಿಗೆ ಅಲ್ಲಲ್ಲಿಯ ಉಪಚುನಾವಣೆಗಳಲ್ಲಿ ಪರಾಭವದ ಕಹಿ ಅನುಭವವಾಗಹತ್ತಿದೆ. ಕಾಂಗ್ರೆಸಿಗರು ಇನ್ನಾದರೂ ತುಸು ಅಗಲವಾಗಿ ಕಣ್ಣು ತೆರೆಯುವರೆ?

oo oo

ಭಾರತದೊಳಗಡೆಯಲ್ಲಿ ಈ ದಿನ ಬೂದಿಯಡಿಯ ಕೆಂಡವಾಗಿರುವ ಕಮ್ಯೂನಿಸ್ಟ್ ಹಾವಳಿಯು ಹೇಗೆ ಅಲ್ಲಲ್ಲಿ, ಸಂದರ್ಭಾನುಸಾರ ಪ್ರಜ್ವಲಿಸುತ್ತಿದೆ ಎಂಬುದಕ್ಕೆ ನಿದರ್ಶನಗಳು ದೊರಕುತ್ತಲೇ ಇವೆ. ಹೈದರಾಬಾದ್ ಆಡಳಿತೆಯ ಇಂದಿನ ಮುಖ್ಯ ಕಂಟಕವೆಂದರೆ ಅಲ್ಲಿಯ ಕಮ್ಯೂನಿಸ್ಟರು. ಆ ಜಿಲ್ಲೆಗಳ ಹಲವು ನೂರು ಗ್ರಾಮಗಳನ್ನು ರಜ್ವೀ ಪ್ರಭಾವ ಕಾಲದಲ್ಲೇ ಆಕ್ರಮಿಸಿ ಹಿಡಿದುಕೊಂಡಿದ್ದ ಕಮ್ಯೂನಿಸ್ಟರು ಇಂದು ಕೂಡಾ ಪೂರ್ಣ ಪರಾಜಿತರಾಗಿಲ್ಲ. ಹಲವು ಕಾಂಗ್ರೆಸಿಗರು ಕಮ್ಯೂನಿಸ್ಟರ ಕೈಯಲ್ಲಿ ಪ್ರಾಣಕೊಡಬೇಕಾಯಿತು. ಇದೇ ತಿಂಗಳ ತಾ. 9ನೇ ರಾತ್ರಿ ಕಲ್ಕತ್ತದ ಡಮ್ ಡಮ್ ಜೈಲಿನೊಳಗೆ ಕಮ್ಯೂನಿಸ್ಟ್ ಕೈದಿಗಳಿಗೂ ಪೋಲೀಸರಿಗೂ ಹೊಯ್ಕೈಯಾಗಿ, ಮೂರು ಮಂದಿ ಸತ್ತು 20 ಮಂದಿ ಜಖಂಗೊಂಡರೆಂಬುದು ಅತ್ಯಂತ ಶೋಚನೀಯ ವಾರ್ತೆ. ಇದೇ ರೀತಿ ಕಲ್ಕತ್ತದ ಪ್ರೆಸಿಡೆನ್ಸಿ ಜೈಲಿನಲ್ಲೂ, ಅಲೀಪುರ ಸೆಂಟ್ರಲ್ ಜೈಲಿನಲ್ಲೂ ಕಮ್ಯೂನಿಸ್ಟರಿಗೂ ಜೈಲು ಕಾವಲುಗಾರರು ಮತ್ತು ಪೋಲೀಸರಿಗೂ ದೊಡ್ಡ ಪ್ರಮಾಣದ ಘರ್ಷಣೆಗಳಾಗಿದ್ದುವು. ರಾಷ್ಟ್ರದ ರಂಗಗಳಲ್ಲೂ ಕಮ್ಯೂನಿಸ್ಟ್ ಗುಪ್ತ ಚಟುವಟಿಕೆ ಇದ್ದೇ ಇದೆ. ಹೊರವಲಯದಲ್ಲಿ ಕೆಂಪು ಪಂಗಡಿಗರ ಒತ್ತಡ ಬೀಳುತ್ತಿರುವಾಗಲೇ ರಾಷ್ಟ್ರದೊಳಗಡೆಯ ಈ ಆಂದೋಲನವು ಭಾವೀ ಸಂಭವಗಳ ಶಕುನವಾಗಿಲ್ಲವೆ?

oo oo

ರಾಜಕಾರಣದ, ಅದರಲ್ಲೂ ಹಿಂದೀ ರಾಜಕಾರಣದ ಹೆಗ್ಗುಣವಾದ ಚಾಡಿಕೋರತನದ ಒಂದೆರಡು ಪ್ರಭಾವಗಳು ಗೋಚರಿಸಿವೆ. ರಿಪಬ್ಲಿಕ್ ಭಾರತ ಘಟನೆಯು ಜಾರಿಯಲ್ಲಿ ಬರುವಾಗ ಅದರ ಅಧ್ಯಕ್ಷತೆಯ ಘನಗಾದಿಗೆ ಶ್ರೀ. ಸಿ. ರಾಜಗೋಪಾಲಾಚಾರಿ ಮತ್ತು ಬಾಬು ರಾಜೇಂದ್ರ ಪ್ರಸಾದರೊಳಗೆ ಮೇಲಾಟವಿದೆ ಎಂಬ ರಮ್ಯ ಸುದ್ದಿಯೊಂದು ಪ್ರಚಾರಗೊಂಡಿದ್ದಿತು. ಬಾಬು ರಾಜೇಂದ್ರ ಪ್ರಸಾದರು ಅದನ್ನು ಬಲವಾಗಿ ಖಂಡಿಸುತ್ತಾ "ಯಾರೋ ಇಂತಹ ಕೃತಕ ಸಾಹಸದ ಸುದ್ದಿ ಹುಟ್ಟಿಸಿದುದನ್ನು ನೋಡಿ ನನಗಾಶ್ಚರ್ಯವಾಗಿದೆ. ಇದು ನಿರಾಧಾರವಾದುದು. ಅಂತಹ ಘನಸ್ಥಾನದ ಸಂಬಂಧವಾಗಿ ಖಾಸಗೀ ವ್ಯಕ್ತಿಗಳು ಇಂತಹ ಚರ್ಚೆಗಿಳಿಯುವುದನ್ನು ನಾನು ಖಂಡಿಸುತ್ತೇನೆ. ರಾಜಾಜಿ ಮತ್ತು ನನ್ನೊಳಗೆ ಯಾವುದೇ ಸ್ಥಾನ ಅಥವಾ ಮಾನಕ್ಕಾಗಿ ಯಾವ ವಿಧದ ಸ್ಪರ್ಧೆಯೂ ಇಲ್ಲ, ಇರಲು ಸಾಧ್ಯವೇ ಇಲ್ಲ. ಆದ್ದರಿಂದ ಈ ಮಾದರಿಯ ಪ್ರಚಾರದಿಂದ ವಂಚಿತರಾಗಬಾರದೆಂದು ನಾನು ಸಾರ್ವಜನಿಕರನ್ನು ಎಚ್ಚರಿಸುತ್ತೇನೆ" ಎಂದಿದ್ದಾರೆ. ಇನ್ನೊಂದು ಸಂಗತಿ ಮದ್ರಾಸಿನದು. ಮದ್ರಾಸ್ ಮಂತ್ರಿಗಳಲ್ಲಿ ಕೆಲವರ ಮೇಲೆ ಅವರ ಇದಿರುವಾದಿ ಪಂಗಡಿಗರು ಅಕೃತ್ಯಗಳ ಆರೋಪ ಹೊರಿಸಿರುವುದರಿಂದ ಈ ಕುರಿತು ಪೂರ್ವ ತನಿಖೆ ನಡೆಸಲು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಶಂಕರರಾವ್ ದೇವ್ರೋರವರು ಮದ್ರಾಸಿಗೆ ಬಂದಿದ್ದಾರೆ. ಶ್ರೀ ದೇವ್ರೋ ತನ್ನ ವರದಿಯನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೊಪ್ಪಿಸಲಿದ್ದಾರೆ. ಆ ವರದಿಯ ಮೇಲಿಂದ ಆರೋಪಕ್ಕೊಳಗಾದ ಮಂತ್ರಿಗಳನ್ನು ನ್ಯಾಯ ಖಾತೆಯ ತನಿಖೆಗೊಳಪಡಿಸುವದಗತ್ಯವೆಂದು ತೋರಿದಲ್ಲಿ ಹಾಗೆ ಮಾಡಲಾಗುವದೆಂದು ಕಾಂಗ್ರೆಸ್ ಅಧ್ಯಕ್ಷ ಡಾ. ಪಟ್ಟಾಭಿಗಳಂದಿದ್ದಾರೆ.

ಉಡುಪಿ

ನಗರ ಸಭೆ

ನಗರ ಸಭೆಯು ಇದೇ ತಾ. 11ರಲ್ಲಿ ಚೆಯರ್‌ಮೆನ್ ಶ್ರೀ ಸಿ. ಉಪೇಂದ್ರ ಶ್ರೀನಿವಾಸನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಎಲ್ಲಾ ಜಾತಿಯ ಬಡ ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಗಳನ್ನು ಧರ್ಮಾರ್ಥ ಕೊಡಲು ಸರಕಾರದ ಅನುಮತಿಯನ್ನು ಅಪೇಕ್ಷಿಸಿದುದಕ್ಕೆ ಅದು ಸಾಧ್ಯವಿಲ್ಲವೆಂದು ತಿಳಿಸಿದ ಸರಕಾರಿ ಮೆಮೊರಾಂಡಮ್ ರಿಕಾರ್ಡು ಮಾಡಲಾಯಿತು. ಧಾನ್ಯ ಮೆಣಸು ಇತ್ಯಾದಿ ಚಿಲ್ಲರೆ ವ್ಯಾಪಾರಿಗಳು ತಮ್ಮ ಲೈಸನ್ಸ್ ಫೀಸನ್ನು ಕಡಿಮೆ ಮಾಡಬೇಕೆಂದು ಮಾಡಿದ ವಿನಂತಿಯನು ಫೈನಾನ್ಸ್ ಕಮಿಟಿಯ ತೀರ್ಮಾನಕ್ಕೆ ಒಪ್ಪಿಸಲಾಯಿತು. ಹಿಂದೀ ಸ್ವಾತಂತ್ರ್ಯ ಸ್ಮಾರಕ ನಿಧಿಯ ಸ್ಕಾಲರ್ ಶಿಪ್ಪನ್ನು ಹೈಸ್ಕೂಲಲ್ಲಿ ಕಲಿಯುವ ಬಡ ವಿದ್ಯಾರ್ಥಿಯೊಬ್ಬನಿಗೆ ಕೊಡುವರೆ ಚುನಾವಣೆ ಕಮಿಟಿಯೊಂದು ಸ್ಥಾಪಿಸಲಾಯಿತು.

ವಿದಾಯ ಸತ್ಕಾರ

ಉಡುಪಿಯಿಂದ ಮಲ್ಪೆಗೆ ವರ್ಗಾಯಿಸಲ್ಪಟ್ಟ ರೆವರೆಂಡ್ ಚಾದೋ ಅಮ್ಮಣ್ಣನವರಿಗೆ ತಾ 12ರಲ್ಲು ಉಡುಪಿ ಕ್ರೈಸ್ತ ಸಭೆಯವರ ಕಡೆಯಿಂದ ಒಂದು ವಿದಾಯ ಸತ್ಕಾರವೀಯಲಾಯಿತು. ಈ ಸಂದರ್ಭದಲ್ಲಿ ಅವರಿಗೆ ಒಂದು ಮಾನಪತ್ರ ಮತ್ತು ಚಿನ್ನದ ಉಂಗುರ ಕಾಣಿಕೆ ಕೊಡಲಾಯಿತು.

ನೂತನ ದಂಪತಿಗಳಿಗೆ ಸ್ವಾಗತ.

ಉಡುಪಿಯ ಶ್ರೀ ಟಿ. ರಮೇಶ ಪೈಗಳು ಮಂಗಳೂರ ಶ್ರೀಮತಿ ಶ್ರೀಮಂತಿನಿಯನ್ನು ಈಚೆಗೆ ವಿವಾಹವಾಗಿದ್ದರಷ್ಟೆ. ನೂತನ ದಂಪತಿಗಳನ್ನು ಸ್ವಾಗತಿಸುವರೆ ತಾ 8ರಲ್ಲು ಮುಕುಂದ ನಿವಾಸದಲ್ಲಿ ಶ್ರೀ ಉಪೇಂದ್ರ ಪೈಗಳವರು ಸತ್ಕಾರಕೂಟವನ್ನೇರ್ಪಡಿಸಿದ್ದರು. ಪಟ್ಟಣದ ಅಗ್ರ ಗೃಹಸ್ಥ, ಗೃಹಿಣಿಯರು ಆಮಂತ್ರಿತರಾಗಿದ್ದರು.

ಕಳವಾರು

ಈ ಗ್ರಾಮದ ಜನರ ಸೌಕರ್ಯಕ್ಕಾಗಿ ಇದೇ ತಾ 13ರಲ್ಲು ಬ್ರಾಂಚ್ ಟಪ್ಪಾಲು ಆಫೀಸನ್ನು ಉಡುಪಿ ಡಿವಿಜನಿನ ಪೋಸ್ಟಲ್ ಇನ್ಸ್‌ಪೆಕ್ಟರರು ತೆರೆದಿರುವರು.

ತಿದ್ದುಪಡಿ.

ಇದೇ ಸಂಚಿಕೆಯ ೧೧ನೇ ಪುಟದಲ್ಲಿ ಪ್ರಕಟವಾಗಿರುವ ಕುಂದಾಪುರ ಡಿ. ಮು ಕೋರ್ಟಿನ ನೋಟೀಸಿನಲ್ಲಿ ಎಡ್ವಕೇಟ್ Soorappa Shetty, Volpady ಎಂದು ಇರುವುದನ್ನು Soorappa Shetty, Kolkebail ಎಂದು ತಿದ್ದಿ ಓದಿಕೊಳ್ಳುವದು

[ಸಂ. ನ.]

ಪ್ರಕಟಣೆ

ಕುಂದಾಪುರ ತಾಲ್ಲೂಕು ಕುಂದ ಬಾರಂದಾಡಿ ಗ್ರಾಮದಲ್ಲಿರುವ ನಾಗಪ್ಪ ಭಂಡಾರರ ಅಳಿಯ ಸುಬ್ಬಯ್ಯ ಶೆಟ್ಟಿಯು ಈ ಮೂಲ್ಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ- ನಾನು ನನ್ನ ಬಾಬ್ತು ಬಾರಂದಾಡಿ ಮನೆಯಲ್ಲಿ ರಕ್ತ ಕಾಹಿಲೆಯಲ್ಲಿರುವ ಸಮಯ ನನ್ನ ದತ್ತದನಂಗಿ ಪಣಿಯಮ್ಮ ಶೆಟ್ರ ಮಗಳು ಗಿರಿಜಮ್ಮ ಶೆಟ್ಟಿಳ ಗಂಡ ಕುಂದಾಪುರ ಕಸಬಾ ಗ್ರಾಮದಲ್ಲಿರುವ ಎಡ್ವೋಕೇಟ ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ರು ಸದ್ರಿ ಪಣಿಯಮ್ಮ ಶೆಟ್ರ ಪ್ರೇರೇಪಣೆ ವ ಉತ್ತೇಜನದಿಂದ ನನಗೆ ಮೋಸಗೊಳಿಸಿ ಅಕ್ರಮ ಲಾಭಹೊಂದುವ ದುರುದ್ದೇಶದಿಂದ ನಗದು ಹಣ ರೂಪಾಯಿ 400-0-0 ಕೂಡಿ ಸುಮಾರು ರುಪ್ಯ 10000 0-0 ಹತ್ತು ಸಾವಿರಕ್ಕೂ ಮಿಕ್ಕಿ ಬೆಲೆಬಾಳುವ ಚಿನ್ನಾಭರಣಗಳು, ನೋಟುಗಳು, ಹುಂಡಿಕಾಗದ ವಗೈರೆ ಕೊಂಡುಹೋಗಿ ಅಕ್ರಮ ಲಾಭಹೊಂದಿರುತ್ತಾರೆ. ಅವರು ಹಾಗೆ ಕೊಂಡುಹೋದ ನೋಟುಗಳ ವ ಹುಂಡಿ ಕಾಗದದ ಬಾಬ್ತು ಹಣವನ್ನು ನನ್ನ ಕಬೂಲಿ ಇಲ್ಲದೆ ಯಾರೂ ಪಡಕೊಳ್ಳಕೂಡದಂತಲೂ ಹಾಗೆ ಮಾಡಿದರೆ ನನ್ನ ಮೇಲೆ ಬದ್ಧವಾದದ್ದೆಂತ ಯೀ ಮೂಲ್ಕ ಸರ್ವ ಜನರಿಗೆ ತಿಳಿಸುತ್ತೇನೆ. ವ ಸದ್ರಿ ಸೊತ್ತುಗಳನ್ನು ಕೊಂಡು ಹೋದ ಶ್ರೀ ಸೂರಪ್ಪ ಶೆಟ್ರು ಸದ್ರಿ ಪೂರಾ ಸೊತ್ತುಗಳನ್ನು ನನಗೆ ಕೂಡಲೆ ಕೊಟ್ಟು ನನ್ನಿಂದ ರಶೀದಿ ಪಡಕೊಳ್ಳದೆ ಯಿದ್ದರೆ ವ ನನ್ನಿಂದ ಹಣ ಪಡೆದ ಸಾಲಗಾರರು ಹಣ ಬಡ್ಡಿಯನ್ನು ನನಗೆ ಕೊಡದೆಯಿದ್ದರೆ ನಾನು ಈ ಕುರಿತು ರಾಜ್ಯಿಕ ದೈವಿಕದಲ್ಲಿ ವ್ಯವಹರಣೆ ನಡಿಸುತ್ತೇನೆ ಯೆಂಬ ಸಂಗ್ತಿ ಈ ಮೂಲ್ಕ ಸರ್ವಜನರಿಗೆ ತಿಳುಹಿಸಿದ್ದಾಗಿರುತ್ತದೆ.

● ಈ ಎಡಗೈ ಹೆಬ್ಬೆಟ್ಟಿನ ಗುರ್ತ ಸುಬ್ಬಯ್ಯ ಶೆಟ್ಟಿ ರುಜು.

ಕುಂದಾಪುರ ತಾ 12-6-1949

English copies of
MADRAS ALIYASANTHANA ACT of 1949
are available.
NAVAYUGA PRESS, UDIPI.

ANNOUNCEMENT
MODERN TUTORIAL INSTITUTE UDIPI.
Modern School of Commerce, Church Road,
Special coaching! Individual attention!!
Evening classes by Experienced teachers
for
S. S. L. C. — October & March Examinations
Classes open on 25—6—1949.
Apply in person to
T V. Vasudevan.

ಸಂಗೀತವು ಸಂಸಾರಪೋಷಣೆಯ ಸಂಪಾದನೆಗಾಗಿ ಅಲ್ಲ. ಪರಮಾತ್ಮನ ಪವಿತ್ರಭಕ್ತಿಯ ಭಜನೆಗಾಗಿ ಎಂದು ಭಗವದ್ಭಕ್ತನಾಗಿ ಜಗತ್ತಿಗೇ ರಾಮನಾಮ ಮಹಿಮೆಯ ಮಂತ್ರ ಕಲಿಸಿದ ಶ್ರೀ ರಾಮಭಕ್ತ
ತ್ಯಾಗಯ್ಯ (ತೆಲುಗು)
ನಾಗಯ್ಯ ಮತ್ತು ಜಯಮ್ಮ
ತಾ 16—6—49 ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಬರುವ ಚಿತ್ರ. ನ್ಯೂ ಥಿಯೇಟರಿನವರ
ಊಂಚ್ ನೀಚ್

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು ಪತ್ತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಖರ್ಚುದಾಖಲೆ ಪ್ರತ್ಯೇಕ]
Mrs. D. DEVEE, F. DS (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.
The Moolky Bank Ltd.,
Moolky, S K.

(ಹಿನ್ನೆಪುಟದಿಂದ)

ಭಾರತದ ದಕ್ಷಿಣಭಾಗದಲ್ಲಿರುವ ನಾಲ್ಕು ಫ್ರೆಂಚ್ ವಸಾಹತುಗಳು ಭಾರತದೊಂದಿಗೆ ವಿಲೀನಗೊಳ್ಳಬೇಕೋ ಬೇಡವೋ ಎಂಬುದನ್ನು ನಿರ್ಧರಿಸುವ ಜನಮತ ಸಂಗ್ರಹವು ಬರುವ ದಶಂಬರ ತಾ 11ಕ್ಕೆಂದು ನಿರ್ಧರಿಸಲ್ಪಟ್ಟಿದೆಯಾದರೆ, ಉತ್ತರಗದೆಯ ಫ್ರೆಂಚ್ ಮೇಲಧಿಕಾರವಿರುವ ಚಂದ್ರನಾಗೋರಿನ ಜನಮತ ಸಂಗ್ರಹವು ಇದೇ ತಿಂಗಳ ತಾ. 19ಕ್ಕೆ ನಡೆಯಲಿದೆ. ಈ ಕುರಿತು ನಿಷ್ಪಕ್ಷಪಾತಿ ನಿರೀಕ್ಷಕನನ್ನು ನೇಮಿಸುವಾಗ ತಮ್ಮ ಅಭಿಪ್ರಾಯ ಪಡಕೊಳ್ಳಲಿಲ್ಲವೆಂದು ಭಾರತ ಸರಕಾರ ಮತ್ತು ಚಂದ್ರನಾಗೋರು ನಗರಾಡಳಿತೆಯವರು ಈ ಮೊದಲೇ ನಿಷೇಧ ಸೂಚಿಸಿದ್ದರು. ಆದರೂ ನಗರಾಡಳಿತೆಯವರು ಜೂನ್ ತಾರೀಕು 19ಕ್ಕೇನೇ ಮತ ಸಂಗ್ರಹ ನಡೆಸುವ ನಿರ್ಧಾರನ್ನು ಗಟ್ಟಿ ಮಾಡಿದ್ದಾರೆ. ಚಂದ್ರನಾಗೋರಿನ ಜನರು ಭಾರತದೊಂದಿಗೆ ಸೇರಿಕೊಳ್ಳುವದಕ್ಕೇನೇ ಅನುಕೂಲಾಭಿಪ್ರಾಯ ಕಟ್ಟಿಕೊಂಡಂತೆ ಕಾಣುತ್ತಿದೆ. ಈಗ ಚಂದ್ರನಾಗೋರಿನ ಮತಸಂಗ್ರಹವನ್ನೂ ಮಿಕ್ಕ ಫ್ರೆಂಚ್ ವಸಾಹತುಗಳ ಮತಸಂಗ್ರಹದೊಂದಿಗೇನೇ ನಡೆಸಲಾಗುವಂತೆ ಬರುವ ದಶಂಬರಕ್ಕೆ ಮುಂದುವರಿಸಬೇಕೆಂದು ಫ್ರೆಂಚ್ ಸರಕಾರವು ಸರ್ವವಿಧದ ಪ್ರಯತ್ನಗಳನ್ನು ಮಾಡುತ್ತಿದೆ. ಫ್ರೆಂಚ್ ಎಸೆಂಬ್ಲಿ ಸದಸ್ಯ ಗಾವ್ರಡಾರ್ಟರನ್ನು ಫ್ರೆಂಚ್ ಸರಕಾರವು ಈ ಕಾರ್ಯಸಾಧನೆಗಾಗಿ ಇಲ್ಲಿಗೆ ಕಳುಹಿದ್ದು, ಅವರೀಗ ಚುನಾವಣೆ ಮುಂದುವರಿಸಿಡುವಂತೆ ಚಂದ್ರನಾಗೋರು ನಗರಾಡಳಿತೆಯನ್ನು ಒತ್ತಾಯಿಸುವದಕ್ಕಾಗಿ ಚಂದ್ರನಾಗೋರು ಮತ್ತು ಪಾಂಡಿಚೆರಿಗಳ ನಡುವೆ ಓಡಾಡುತಿದ್ದಾರೆ. ಆದರೂ ಮತಸಂಗ್ರಹವನ್ನು ಪೂರ್ವ ನಿಶ್ಚಿತದಿನ ಇದೇ ತಾ 19ಕ್ಕೇನೇ ನಡೆಸಿಬಿಡುವದೆಂದೇ ಅಲ್ಲಿಯ ನಗರಾಡಳಿತೆಯ ದೃಢಸಂಕಲ್ಪ.

ದಕ್ಷಿಣ ಭಾರತದ ಪಾಂಡಿಚೆರಿ ಮೊದಲಾದ ನಾಲ್ಕು ಫ್ರೆಂಚ್ ವಸಾಹತುಗಳ ಅದೃಷ್ಟನಿರ್ಣಯ ಕಾರ್ಯವನ್ನು ಒಂದು ರಾಜಕೀಯ ಪ್ರಶ್ನೆಯಾಗಿ ಕಟ್ಟಿಕೊಳ್ಳದೆ ಫ್ರಾನ್ಸ್ ಮತ್ತು ಭಾರತಗಳು ಮೈತ್ರಿ ಪೂರ್ವಕ ಸಾಧಿಸಬೇಕೆಂದು ಫ್ರೆಂಚ್ ವಿದೇಶ ಮಂತ್ರಿ ಶ್ಯುಮೋನರು ಪಂಡಿತ ನೆಹರುಗಳೊಂದಿಗೆ ಮಾತು ವ್ಯವಹಾರ ಹೂಡಿದ್ದರು; ಪಂಡಿತ ನೆಹರುಗಳೂ ಆ ಸೂಚನೆಯನ್ನು ಸಂತೋಷಪೂರ್ವಕ ಒಪ್ಪಿಕೊಂಡಿದ್ದರು. ಭಾರತ ಸರಕಾರದ ಅಭಿಮತ ಕೇಳಿಯೇ ಅಲ್ಲಿಗೆ ಅವಲೋಕನಾಕರ್ತರನ್ನು ನೇಮಿಸಬೇಕೆಂದು ಫ್ರೆಂಚ್ ಸರಕಾರ ನಿರ್ಧರಿಸಿದೆ. ಸ್ಥಿತಿ-ಶಾಂತತಾ ಪ್ರಯತ್ನಕ್ಕಾಗಿ ತಾನೋರ್ವ ಖಾಸಗೀ ಪ್ರತಿನಿಧಿಯನ್ನು ಪಾಂಡಿಚೆರಿಗೆ ಕಳುಹುವೆನೆಂದು ಪಂಡಿತ ನೆಹರುಗಳೂ ಮಾತು ಕೊಟ್ಟಿದ್ದಾರೆ.

ಈ ನಡುವೆ ಫ್ರೆಂಚ್ ವಸಾಹತುಗಳ ನಡುವಿನ ಹಾಗೂ ಭಾರತ ಮತ್ತು ಅವುಗಳೊಳಗಿನ ವ್ಯಾಪಾರ ವಹಿವಾಟುಗಳನ್ನು ಆ ಸಂಬಂಧದಲ್ಲಿದ್ದ ಕರಾರು ವಾಯಿದೆ ಮುಗಿದೊಡನೆ ಭಾರತ ಸರಕಾರವು ನಿಲ್ಲಿಸಿಬಿಟ್ಟಿದ್ದಿತು. ಇದರಿಂದಾಗಿ ಆ ಫ್ರೆಂಚ್ ವಸಾಹತುಗಳ ಜನತೆ ಕಷ್ಟನಷ್ಟಗಳಿಗೀಡಾಗಿರುವ ಪರಿಮಾಣವನ್ನು ತಿಳಿದುಕೊಳ್ಳಲು ಭಾರತ ಸರಕಾರವು ಇತ್ತೀಚೆಗೆ ಶ್ರೀ ಪಿ. ಎ. ಮೆನನರನ್ನು ಪಾಂಡಿಚೆರಿಗೆ ಕಳುಹಿಸಿದ್ದಿತು. ಶ್ರೀ ಮೆನನರು ಅಲ್ಲಿಯ ಸ್ಥಿತಿಗತಿಗಳ ವರದಿಯೊಪ್ಪಿಸಿದೊಡನೆಯೇ ಭಾರತ ಸರಕಾರವು ಫ್ರೆಂಚ್ ವಸಾಹತುಗಳ ಮೇಲಿದ್ದ ವ್ಯಾಪಾರ ವಹಿವಾಟು ನಿಯಂತ್ರಣ, ನಿರ್ಬಂಧಗಳನ್ನು ಸಂಪೂರ್ಣವಾಗಿ ರದ್ದು ಮಾಡಿದೆ. ಅಲ್ಲಿಯ ಜನತೆಯ ಹಿತಸಾಧನೆಗಾಗಿ ಹಿಂದೀ ಸರಕಾರವು ತಾನಾಗಿ ಈ ಔದಾರ್ಯವಹಿಸಿದೆ. ಅದೃಷ್ಟ ಪರೀಕ್ಷಾ ಕಾರ್ಯಗಳಲ್ಲಿ ಎಂತಹ ಘರ್ಷಣೆ ಕಂಡುಬರುತ್ತಿದ್ದರೂ ಭಾರತ ಮತ್ತು ಫ್ರೆಂಚ್ ಸರಕಾರಗಳ ಮೈತ್ರೀಭಾವನೆಯ ಪ್ರತಿಫಲವಾಗಿ ಪ್ರತ್ಯಕ್ಷ ಭಾರತದ ಭಾಗಗಳಾಗಿರುವ ಈ ಫ್ರೆಂಚ್ ವಸಾಹತುಗಳು ನಿರಾತಂಕವಾಗಿ ಭಾರತದೊಂದಿಗೆ ತಾದಾತ್ಮ್ಯಗೊಳ್ಳುವವೆಂದು ನಿರೀಕ್ಷಿಸಬಹುದೆ?

○○ ○○

ಕಾಶ್ಮೀರದ ವಿವಾದ ತೀರ್ಮಾನಕ್ಕಾಗಿ, ಸಂಯುಕ್ತ ರಾಷ್ಟ್ರಸಂಘದಿಂದ ನೇಮಿಸಲ್ಪಟ್ಟಿದ್ದ ಕಾಶ್ಮೀರ ಕಮಿಶನಿನವರು ಭಾರತ ಮತ್ತು ಪಾಕಿಸ್ತಾನಗಳಿಗೆ ಕಳುಹಿದ್ದ ಕೊನೆಯ ಶಾಂತಿಸೂಚನೆಗಳಿಗೆ ಎರಡೂ ರಾಷ್ಟ್ರಗಳಿಂದ ಉತ್ತರಬಂದಿದ್ದಿತು. ಕಮಿಶನಿನ ಸೂಚನೆಗಳನ್ನು ನಿಶ್ಶರ್ತವಾಗಿ ಮತ್ತು ಸಂಪೂರ್ಣವಾಗಿ ಭಾರತ ಮತ್ತು ಪಾಕಿಸ್ತಾನವೆರಡೂ ಒಪ್ಪಿಕೊಂಡಿಲ್ಲ. ಮುಂದಿನ ಹಾದಿಶೋಧನೆಯ ಪ್ರಯತ್ನವನ್ನೀಗ ಕಾಶ್ಮೀರ ಕಮಿಶನಿನವರು ನಡೆಸುತಿದ್ದಾರೆ. ಕಮಿಶನಿನ ಡಾ| ಲೋರ್ಝಾನೊ ಮತ್ತವರ ಡೆಪ್ಯುಟಿ ಮಿ. ಸ್ಯಾಂಪರರು ದಿಲ್ಲಿಗೆ ಬಂದು ಭಾರತದ ವಿದೇಶಖಾತೆಯ ಮುಖ್ಯ ಕಾರ್ಯದರ್ಶಿ ಸರ್. ಗಿರಿಜಾಶಂಕರ್ ಬಾಜ್‌ಪಾಯಿಗಳೊಂದಿಗೆ ಈ ಕುರಿತು ಮಾತುಕತೆ ನಡೆಸಿದ್ದಾರೆ. ತಮ್ಮ ಸೂಚನೆಗಳು 'ಅಮಾನ್ಯವೆಂದಾದ ಮೇಲೆ ಭಾರತ ಪಾಕಿಸ್ತಾನಗಳೆರಡೂ, ತಮ್ಮ ಒಪ್ಪಿಗೆಯ ವ್ಯವಹಾರ್ಯ ಸೂಚನೆಗಳಾವುವೆಂಬುದನ್ನು ತಾವೇ ತಿಳಿಸಬೇಕೆಂದು ಕಮಿಶನಿನವರು ಆವೆರಡು ರಾಷ್ಟ್ರಗಳ ಸರಕಾರಗಳನ್ನೂ ಕೇಳಿಕೊಳ್ಳಲಿದ್ದಾರೆ.

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯವಾಚಕರೇ.............

ನಾನು ಒಬ್ಬ ಸಾಧಾರಣ ಮನುಷ್ಯ—ದುರದೃಷ್ಟವಶಾತ್ ನನ್ನ ಮಿತಿಮೀರಿದ ಕಾಮುಕ ಜೀವನವು ಅತಿ ಬೇಗನೆ ನರಗಳ ದೌರ್ಬಲ್ಯಕ್ಕೆ ಕಾರಣವಾಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಹೃದಯನಾದವೂ ಜಾಸ್ತಿಯಾಯಿತು, ಬಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತ ದಿಂದಿರುವುದಕ್ಕೆ ಬೇಜಾರೆನಿಸಿತು. ನನ್ನ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಆದರೆ ನಾನಂತು ಅದನ್ನು ತಿಳಿಸುವುದು? ಗುಟ್ಟಾಗಿ ಸಾವಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲದಂತಾಯಿತು. ಇಂತಹ ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪೇಷಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು [ಸನ್ಯಾಸಿ] ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಷ್ಟದಿಂದ ಮಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ತಿಳಿಸುವಂತೆ ಬಲಾತ್ಕರಿಸಿತು. ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎರಡು ಔಷಧಿಗಳನ್ನು ದಯಪಾಲಿಸಿದರು:-ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಪಿಸುವುದಕ್ಕೆ. ಅವರು ಹೇಳಿದಂತೆ ಗಿಡಮೂಲಿಕೆಗಳನ್ನು ಹುಡುಕಿ ತಂದು ಅವರೆದುರಿನಲ್ಲಿಯೇ ಆ ಎರಡು ಔಷಧಿಗಳನ್ನು ತಯಾರಿಸಿದೆನು. ಅನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಪ್ರಿಯ ವಾಚಕರೆ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೨೧ ದಿವಸಗಳಲ್ಲಿ ಸುಧಾರಿಸಿದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿ ದಿನವೂ ೪ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲವನಾದೆನು. ಕಣ್ಣುಗಳ ಹೊಳಪು ಬಂತು. ಒಂದು ತರಹ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು. ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅದರಿಂದ ಮಹತ್ವ ಗುಣವನ್ನು ಕಂಡುದಲ್ಲದೆ ಅದಕ್ಕಿಂತ ಬೇರೆ, ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾ ಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನುಪಯೋಗಿಸಿ ನಿರಾಶರಾಗಿರುವವರು ಇದನ್ನು ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಅದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. 5-0-0

ಹೊರಗೆ ಲೇಪಿಸುವ ತೈಲಕ್ಕೆ:— ೨೧ ದಿವಸಕ್ಕೆ ರೂ. 5-8-0

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು.

ಈ ಔಷಧಿಯು "ಕುಷ್ಟ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು-[ತೈಲವು ಚರ್ಮದ ಸೊಕ್ಕನ್ನು ಹುಟ್ಟಿಸುವುದಿಲ್ಲ.]

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ:—

[೧] ಡಾ. ಕೆ. ಜಿ. ಮಟ್ಟಿತ್ತಾಲ್, ಕೊಚಿನವರು ಬರೆಯುತ್ತಾರೆ:- ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೆ, ವೃದ್ಧರಿಗೂ ಪ್ರಯೋಗಿಸಿ ಅದರ ಶಕ್ತಿದಾಯಕ ಕಲಸವನ್ನು ಮೆಚ್ಚಿದ್ದೇನೆ.

[೨] ಡಾ. ಜೇವಿಯರ್ ಕುರುಪ ಸೇರಿ, ಕುಂಬಲಾಂಗಿಯವರು ಬರೆಯುತ್ತಾರೆ:— ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನುಂಟುಮಾಡಿವೆ.

[೩] ಮ್ಯಾನೇಜರ್, "ವೈ ಮ್ಯಾಗಜೈನ್" ಮದ್ರಾಸು ಬರೆಯುತ್ತಾರೆ:-ನಾನು ದಾರ್-ಉಲ್-ಶಫಾ-ಗೋಲಿಯಾನ, ಬಟಾಲರವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ಮಾನವನಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ. ಲೆಕ್ಕವಿಲ್ಲದಷ್ಟು ಸಾವಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು.

ಖಾತ್ರಿ;- ಈ ಔಷಧಿಗಳು ಯಾವ ತೊಂದರೆಯನ್ನು ನೀಡುವ ಪದಾರ್ಥಗಳನ್ನೂ ಹೊಂದಿಲ್ಲ. ಮತ್ತು ಇದನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ವಾಪಸ್ಸು ಮಾಡಲಾಗುವದು.

ನಿಮ್ಮ ಆರ್ಡರನ್ನು ಇವರಿಗೆ ಕಳುಹಿಸಿರಿ.—

The Manager,

DAR-UL-SHAFA GOLIAN (Regd.) (N. Y. U.) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಷಫಾ-ಗೋಲಿಯಾನ (ರಿಜಿಸ್ಟರ್ಡ್) (N.Y.U.) ಬಟಾಲ (ಪಂಜಾಬ್)

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ

S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ,

ಸೆಕ್ರೆಟರಿ

ತಾರಾನಾಥ ವಿದ್ಯಾಪೀಠ ಬಳ್ಳಾರಿ.

P. O. ಸಂಗನಕಲ್ ಬಳ್ಳಾರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೆಡಿಕಲ್ ಹಾಲ್ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕೆಮಿಕಲ್ಸ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

ಕರ್ನಾಟಕ ಏಕೀಕರಣವೇ ಕನ್ನಡ ಜನತೆಯ ಮುಖ್ಯ ಧ್ಯೇಯ!

ಹರಿದು ಹಂಚಿದ ಕನ್ನಡ ಜನತೆಯನ್ನು ಒಂದುಗೂಡಿಸುವ 2 ಕೋಟಿ ಕಂಠಗಳ ಮುಖ್ಯ ಧ್ವನಿಯೇ ಏಕೀಕರಣದ ಮಹಾ ಗುರಿ.

ಅಂತೆಯೇ ಶಾಸ್ತ್ರೀಯ ರೀತಿಯ ಆಯುರ್ವೇದ ತಯಾರಿಯಿಂದ ಜನಸಾಮಾನ್ಯರ ಸೇವೆಯೇ ಸುಧಾರವರ ಮಹಾ ಧ್ಯೇಯ.

ಪಾಯಿಲೋಕ್ಯೂರಾ:— ಮೂಲವ್ಯಾಧಿಗೆ ಇನ್ನುಮೇಲೆ ಭಯಪಡಬೇಕಾದ್ದಿಲ್ಲ. ನಮ್ಮ ಪಾಯಿಲೋಕ್ಯೂರಾ ಸೇವಿಸುವುದರಿಂದ ಮೊಳಕೆಯನ್ನು ನಿರ್ಮೂಲಗೊಳಿಸಿ, ರಕ್ತಸ್ರಾವವನ್ನು ನಿಲ್ಲಿಸುವುದು. ಮತ್ತು ಪ್ರಕೃತಿಯನ್ನು ಸುಲಭಗೊಳಿಸುವುದು.

ಇದೊಂದು ಆಯುರ್ವೇದದಲ್ಲಿ ರತ್ನವಿದ್ದಂತೆ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ ವಿಚಾರಿಸಿರಿ:—

ದಕ್ಷಿಣ ಭಾರತದ ಪ್ರಮುಖ ವಿತರಣಕರ್ತರು.

ಯು. ಐ. ಬಿ. ಬಿ. ಎಂಡ್ ಕಂಪೆನಿ,

ಪೋಸ್ಟ್‌ಬೋಕ್ಸ್ ನಂಬ್ರ 38, ರೋಯಲ್ ಮಾಹಾಲ್, ಉಡುಪಿ. ದ. ಭಾ.

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.

(Established: 1934)

Chairman: **Mr. M. CT. M. Chidambaram Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
142, MADRAS.

ಉಡುಪಿ

ಲೇಖನ ಸ್ಪರ್ಧೆ

ಇದೇ ಜುಲಾಯಿ ಎರಡನೇ ವಾರದಲ್ಲಿ ಜರಗಲಿರುವ ಉಡುಪಿಯ ಕಲಾವೃಂದದ ವಾರ್ಷಿಕೋತ್ಸವದ ಸಂಬಂಧಿಯಲ್ಲಿ ನಡೆಯಲಿರುವ ದಿವಂಗತ ಪಂಡಿತ ವೆಂಕಟ್ರಾಮಾಚಾರ್ಯರಸ್ಮಾರಕ ಲೇಖನಸ್ಪರ್ಧೆಯಲ್ಲಿ ಕನ್ನಡ ನಾಡಿನ ಎಲ್ಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಬೇಕಾಗಿ ವಿನಂತಿ. ಈ ಲೇಖನ ಸ್ಪರ್ಧೆಗೆ ಕಲೆ, ಸಂಸ್ಕೃತಿ, ಸಾಹಿತ್ಯ, ಧರ್ಮ ಇತ್ಯಾದಿ ವಿಚಾರವಾಗಿ, ಅಥವಾ ಪಂಡಿತ ವೆಂಕಟ್ರಾಮಾಚಾರ್ಯರ ವ್ಯಕ್ತಿತ್ವದ ಕುರಿತಾಗಿ ಪ್ರಬಂಧವನ್ನು ಬರೆದು ಕಳುಹಿಸಬಹುದು. ಪ್ರಬಂಧವು ಸ್ವತಂತ್ರವೂ ಚೊಕ್ಕವೂ ಆಗಿರಬೇಕು. ಬಹುಮಾನ ಪಡೆದ ಲೇಖನವನ್ನು ಕನ್ನಡನಾಡಿನ ಪ್ರಮುಖ ಪತ್ರಿಕೆಯೊಂದರಲ್ಲಿ ಪ್ರಕಟಿಸಲಾಗುವುದು. ಎಲ್ಲ ಲೇಖನಗಳ ಸರ್ವಾಧಿಕಾರವೂ 'ಕಲಾವೃಂದ'ಕ್ಕೆ ಸೇರಿದುದಾಗಿರುವುದು. ಪ್ರಬಂಧಗಳನ್ನು ಇದೇ ಜುಲಾಯಿ ತಿಂಗಳ ಒಂದನೇ ತಾರೀಕಿನೊಳಗೆ ಕಾರ್ಯದರ್ಶಿ 'ಕಲಾವೃಂದ' ಉಡುಪಿ, ಇವರಿಗೆ ಮುಟ್ಟುವಂತೆ ಕಳುಹಿಸಬೇಕೆಂದು ಕಲಾವೃಂದದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹೊಸ ಪೋಸ್ಟಾಫೀಸು

ಜನತೆಯ ಸೌಕರ್ಯಕ್ಕಾಗಿ ಅಂಬಲಪಾಡಿಯಲ್ಲಿ ಒಂದು ಹೊಸ ಪೋಸ್ಟಾಫೀಸು ಈಚೆಗೆ ತೆರೆಯಲ್ಪಟ್ಟಿದೆ

ಸರಕಾರಿ ಆಸ್ಪತ್ರೆಗೆ ವಿದ್ಯುದ್ದೀಪ

ಗಳನ್ನು ಬೆಳಗಿಸುವ ಸಮಾರಂಭವನ್ನು ಇದೇ ತಾ ೨ರಲ್ಲು ಸಂಜೆ ಮಂಗಳೂರು ಎಡ್ವೊಕೇಟ್ ಶ್ರೀ ಬಿ. ವೈಕುಂಠ ಬಾಳಿಗರು ನೆರವೇರಿಸಿದರು. ಈ ಸಮಾರಂಭಕ್ಕೆ ಶ್ರೀ ಕೊಟ್ಟಿಕಾರ್ ಪದ್ಮನಾಭ ಪೈಗಳವರು ಅಧ್ಯಕ್ಷರಾಗಿದ್ದರು. ಆಸ್ಪತ್ರೆ ಸುಧಾರಣಾ ಕಮಿಟಿಯ ಜತೆ ಕಾರ್ಯದರ್ಶಿ ಶ್ರೀ ಟಿ. ಎ. ಪೈಗಳವರು ಸ್ವಾಗತ ಭಾಷಣಮಾಡುತ್ತಾ ವಿದ್ಯುದ್ದೀಪಗಳ ಬಗ್ಗೆ ಉಡುಪಿಯ ಜನತೆಯು ಬೆಂಬಲವಿತ್ತುದಕ್ಕಾಗಿ ಅಭಾರವನ್ನಿತ್ತರು. ಶ್ರೀ ಆರ್. ಆರ್. ಕುಂಜೂರರು ಶ್ಲಾಘನೆಯ ಮಾತುಗಳನ್ನಾಡಿದರು. ಮೆಡಿಕಲ್ ಅಫೀಸರ್ ಕೆಪ್ಟನ್ ಪಿ. ಕೆ. ನಾಯರರು ಧನ್ಯವಾದಗಳನ್ನರ್ಪಿಸುತ್ತಾ ಆಸ್ಪತ್ರೆಯ ರೋಗಿಗಳಿಗೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವ ಕಾರ್ಯದಲ್ಲಿ ಉಡುಪಿಯ ಜನರು ಮುಂದಾಗಬೇಕಾಗಿ ಅಪೇಕ್ಷಿಸಿದರು. ವಿದ್ಯುದ್ದೀಪಗಳ ಸೌಕರ್ಯಕ್ಕಾಗಿ ಸಾಧಾರಣ ರೂಪಾಯಿ 2800- ಖರ್ಚಾಗಿದೆಯೆಂದು ತಿಳಿದು ಬರುತ್ತದೆ.

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು

ಈ ತಿಂಗಳ ತಾ 27ರಲ್ಲು ಪ್ರಾರಂಭವಾಗಲಿರುವುದೆಂದು ತಿಳಿದು ಬರುತ್ತದೆ. ಮುಂಬಯಿಯ ಸುಪ್ರಸಿದ್ಧ ಡಾ. ಕೆ. ಅಣ್ಣಪ್ಪ ಬಾಳಿಗರು ಕಾಲೇಜು ಕ್ಲಾಸುಗಳ ಉದ್ಘಾಟನಾ ಸಮಾರಂಭವನ್ನು ನೆರವೇರಿಸಲಿರುವರೆಂದು ಗೊತ್ತಾಗಿದೆ.

ದ. ಕನ್ನಡ

ಕುಂಬಳೆ

ಮಾಯಿಪಾಡಿಯಲ್ಲಿ ಮೂಲ ಶಿಕ್ಷಣ ತರಬೇತಿ ಶಾಲೆಯು ಇದೇ ತಾ ೨ರಲ್ಲು ತೆರೆಯಲಾಗಿದೆ. ಪ್ರಥಮ ವರುಷದ 35 ಮಂದಿ ವಿದ್ಯಾರ್ಥಿಗಳು ಶಾಲೆಯಲ್ಲಿರುವರು. ಶಾಲೆಗೆ ಕಟ್ಟಡದ ಅಭಾವವಿದ್ದುದರಿಂದ ಮಾಯಿಪಾಡಿ ಅರಸರು ಶಾಲೆಗೆ ಸ್ಥಳವನ್ನು ಒದಗಿಸಿಕೊಟ್ಟಿರುವರು.

ಕುಂಬಳೆ ಸೆಂಟರಿನ ಉಪಾಧ್ಯಾಯರ ಸಭೆಯು ತಾ. 11ರಲ್ಲು ಎಚ್. ಇ. ಶಾಲೆಯಲ್ಲಿ ಶ್ರೀ ಶಿವರಾಮ ಗೌಡ, ಡಿಪ್ಯುಟಿ ಇನ್ಸ್‌ಪೆಕ್ಟರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಫಿರ್ಕಾಭಿವೃದ್ಧಿ ಆಫೀಸರ್ ಶ್ರೀ ಬಾಬು ಸೆಟ್ಟಿರು ಸಂದರ್ಭೋಚಿತ ಭಾಷಣವಿತ್ತರು.

Notice.

ಕುಂದಾಪುರ ಡಿ ಮು ಕೋರ್ಟಿನಲ್ಲಿ.

S. I. A. 12/49 ಓ. C. 19/49

ವಾದಿ: ವಾಸುದೇವನಾಯ್ಕ

ಪ್ರತಿವಾದಿ: ಗುಡ್ಡೆಮುಕ್ರಿ ಹಮ್ಮದ್‌ಸ್ಯಾಬ

ಉತ್ತರ ಕನ್ನಡ ಜಿಲ್ಲಾ ಹೊನ್ನಾವರ ತಾಲ್ಲೂ ಮಂಕಿಯಲ್ಲಿರುವ ನ್ಯಾಕನಕಟ್ಟೆ ನ್ಯೂದಿನ್ ಸ್ಯಾಬರ ಮಗ ಗುಡ್ಡೆಮುಕ್ರಿ ಹಮ್ಮದ್ ಸ್ಯಾಬರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದ್ರಿ ಪ್ರತಿವಾದಿಯಿಂದ ವಾದಿಗೆ ಬರಮೂಲಗೇಣ ಗೇಣ ಬಾಕಿ ಬಗ್ಗೆ ವಾದಿ ಜರಗಿಸಿದ ಮೇಲಿನ ದಾವೆ ಮತ್ತು ಸದ್ರಿ ದಾವೆಯಲ್ಲಿ ವಾದಿ ದಾಖಲು ಮಾಡಿದ ಜ್ಯಪ್ತಿ ಜಪ್ತು ಅರ್ಜಿ ಕೂಡಾ ತಾರೀಕು 22-6-49ಕ್ಕೆ ತನಿಖೆಗೆ ಇರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟು ಮುಂದೆ ಹ್ಯಾಜರು ಮಾಡಿಕೊಳ್ಳತಕ್ಕದ್ದು.

(By order of the Court)

Coondapoor 5—6—49 } A. N. Rao, Advocate for Plaintiff.

ಬೇಕಾಗಿದ್ದಾರೆ.

ಮುನಿಸಿಪಲ್ ಎಲಿಮೆಂಟರಿ ಶಾಲೆಗಳಲ್ಲಿ ಹಂಗಾಮಿ ಮತ್ತು ಖಾಯಂ ಆಗಿ ಕೆಲಸಮಾಡಲು ಹಾಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯ ಉಪಾಧ್ಯಾಯಿನಿಯರು ರೂ 30-1-45ರ ಸಂಬಳದ ಮೇಲೆ ಬೇಕಾಗಿದ್ದಾರೆ. ಅರ್ಜಿಗಳನ್ನು ತಾರೀಕು 20-6-1949ರ ವರೇಗೆ ಮುನಿಸಿಪಲ್ ಕಮಿಷ್ನರವರು ಸ್ವೀಕರಿಸುವರು.

ವಿ. ಬಾಲಗಂಗಾಧರನ್
ಮುನಿಸಿಪಲ್ ಕಮಿಷ್ನರ್,

ಮುನಿಸಿಪಲ್ ಆಫೀಸು
ಉಡುಪಿ, ತಾ 14-6-1949.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ದರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಮಂಗಳೂರು

ಹಾನಿನಿರೋಧ ಶಾಖೆಯ ಡೆಪ್ಯುಟಿ ಕಮಿಶನರ್

ಆದ ಶ್ರೀ ಎ ಪಳನಿಯಪ್ಪ ಮುದಲಿಯಾರರು ಮಂಗಳೂರಿಗೆ ಇದೇ ತಾ ೯ರಲ್ಲು ಮೈಲ್ ಬಂಡಿಯಲ್ಲಿ ಬಂದರು ಇವರನ್ನು ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಎಮ್ ಶ್ರೀನಿವಾಸ ಪ್ಯಾನುಭಾಗರು ಮತ್ತು ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಮ್ ಕೃಷ್ಣಯ್ಯ ಸೆಟ್ಟರೇ ಮೊದಲಾದವರು

ನೋಟೀಸು.

ಉಡುಪಿ ಡಿ ಮು ಕೋರ್ಟಿನಲ್ಲಿ

ಕ್ರಮ ನಂಬ್ರ ೬೨ 1949

ಶ್ರೀ ವಿಭುದೇಶತೀರ್ಥ ಸ್ವಾಮಿಗಳು ಶ್ರೀ ಅಧಮಾರು ಮಠದ ಅಧಿಪತಿಗಳು ಇವರ ಬಗ್ಗೆ ಪವರ್ ಅಫ್ ಎಟೋರ್ನಿದಾರ ಪಿ ಶ್ರೀಪತಿ ರಾವ್ —ವಾದಿಯು

ಮತ್ತು

1 ಲೋಕಯ ಸೆಟ್ಟಿ 2 ವಾಸು ಸೆಟ್ಟಿ 3 ಅಬ್ಬಕ್ಕ ಸೆಟ್ಟಿ — ಪ್ರತಿವಾದಿಯು

ಇವರೊಳಗೆ

ವಾದಿಯೊಳಗೆ ಪ್ರತಿವಾದಿಯು ಪಾಲಿಗೇಣಿ ಅನುಭವಿಸಿ ಒಂದ ಆಸ್ತಿಗಳ ಬಾಬ್ತು ಸರ್ವಧಾರಿ ಸಂ॥ದ ಗೇಣಿ ವ ಬಡ್ಡಿ ವಗೈರೆಗೆ ವಾದಿಯು ಪ್ರತಿವಾದಿಯ ಮೇಲೆ ದಾಕಲು ಮಾಡಿರುವ ಈ ದಾವೆಯು ತಾರೀಕು 27 6 1949 ಕ್ಕೆ 1—2ನೇ ಪ್ರತಿವಾದಿಗೆ ನೋಟೀಸು ಬಗ್ಗೆಯಿಟ್ಟಿರುತ್ತದೆ ಸದ್ರಿ ತಾರೀಕು 27 6—1949ಕ್ಕೆ ಬೆಳಿಗ್ಗೆ ಹತ್ತುಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಪ್ರತಿವಾದಿಯು ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಲಿಕ್ಕೆ ತಪ್ಪಿದ್ರೆ ಸದ್ರಿಯವರ ಗೈರುಹಾಜರಿಯಲ್ಲಿ ಈ ದಾವೆಯನ್ನು ತೀರ್ಮಾನಿಸಲ್ಪಡುವದು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿಯದೆ

V R. Kidiyur,

Advocate for Plaintiff

ಉಡುಪಿ ತಾರೀಕು 13 ಜೂನು 1949

ಸ್ವಾಗತಿಸಿದರು ಮಾನ್ಯ ಕಮಿಶನರರು ಜಿಲ್ಲಾ ಸಂಚಾರ ಮಾಡಲಿರುವರಾಗಿ ತಿಳಿದು ಬರುತ್ತದೆ

ಇಂಡಿಯನ್ ಕಂಪೆನಿಗಳ ಕಾಯಿದೆ ಮೀರಿಗೆ ಮೊಕದ್ದಮೆಗಳು

ದ ಕ ಜಿಲ್ಲೆಯ 'ಫಿಶ್ ಇಂಡಸ್ಟ್ರೀಸ್' (ಮೀನು ಕೈಗಾರಿಕೆ) ಲಿಮಿಟೆಡ ನ ಮೆನೇಜಿಂಗ್ ಡೈರೆಕ್ಟರ್ ಎಮ್ ಜಾರಪ್ಪನವರು ಕಂಪೆನಿ ಆರಂಭವಾದಂದಿನಿಂದ ವಾರ್ಷಿಕ ಮಹಾಸಭೆ ನಡೆಸಲಿಲ್ಲ, ಸಂಸ್ಥೆಯ ಲಾಭನಷ್ಟದ ಸ್ಟೇಟ್‌ಮೆಂಟ್ ಒಪ್ಪಿಸಲಿಲ್ಲ, ಸಂಸ್ಥೆಯ ಡೈರೆಕ್ಟರರ ರಿಜಿಸ್ಟ್ರಿ ಇರಿಸಿ ಆ ಪಟ್ಟಿಯನ್ನೊಪ್ಪಿಸಲಿಲ್ಲ, ರಿಜಿಸ್ಟ್ರಿ ಆಫೀಸಿನ ಸ್ಥಳಬದಲಾವಣೆ ತಿಳಿಸಲಿಲ್ಲ ಎಂದು ಮುಂತಾದ ಆರೋಪಗಳುಳ್ಳ ಎಂಟು ಮೊಕದ್ದಮೆಗಳನ್ನು ಜೋಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರರು ಕಳೆದ ಎಪ್ರಿಲಿನಲ್ಲಿ ಸಬ್ ಡಿ, ಮಾಜಿಸ್ಟ್ರೇಟ್ ಮಿ। ಎಸ್ ಅಬ್ದುಲ್ ರಹಿಮಾನ್ ಸಾಹೇಬರ ಕೋರ್ಟಿನಲ್ಲಿ ಹೂಡಿದ್ದು ಅವುಗಳ ತನಿಖೆಯಾಗಿ ಆಗು ನೆಲಕದ್ದಮೆಗಳಲ್ಲಿ ಪ್ರತಿಯೊಂದಕ್ಕೆ ರೂಪಾಯಿ 70ರಂತೆಯೂ, ಒಂದು ಮೊಕದ್ದಮೆ ಸಂಬಂಧ ರೂ 30, ಇನ್ನೊಂದರ ಸಂಬಂಧ ರೂ 202 ಹೀಗೆ ಒಟ್ಟು ರೂಪಾಯಿ 652 ಜುಲ್ಮಾನೆ ವಿಧಿಸಲಾಯಿತು ಇವು 1913ನ ಇಸವಿ ಭಾರತ ಕಂಪೆನಿಗಳ ಕಾಯಿದೆ ಮೀರಿಗೆ ಹೂಡಲ್ಪಟ್ಟವು

ಬಿಡ್ಡಿ ಸಂಬಂಧ ಜಪ್ತಿ

ಸ್ಥಳೀಯ ರಥಬೀದಿಯಲ್ಲಿ ಒಂದೆರಡು ಕಡೆ ಬಿಡ್ ಸಂಬಂಧ ಪೋಲೀಸರ ಜಪ್ತಿ ಈಚೆಗೆ ನಡೆದು ಒಬ್ಬಿಬ್ಬರ ದಸ್ತಗಿರಿಯಾಗಿರುವುದಾಗಿ ತಿಳಿದು ಬರುತ್ತದೆ

ಶ್ರೀಮತಿ ಎನ್. ಲಲಿತಾಬಾಯಿಯವರು ದಿವಂಗತರಾದರು

ದಿವಂಗತ ಶ್ರೀ ಎನ್ ಸುಬ್ಬರಾಯರ ಪತ್ನಿಯೂ, ದಿವಂಗತ ಕುದ್ಮುಲ್ ರಂಗರಾಯರ ಜೇಷ್ಠ ಪುತ್ರಿಯವರೂ, ಶ್ರೀಮತಿ ರಾಧಾಬಾಯಿ ಸುಬ್ಬರಾಯನ್ ಮತ್ತು ಮದ್ರಾಸು ಯಥಿರಾಜ್ ಮಹಿಳಾ ಕಾಲೇಜಿನ ಪ್ರಿನ್ಸಿಪಲ್ ಕುಮಾರಿ ರಂಗರಾಯರ ಅಕ್ಕನೂ ಆಗಿ ತಿಂಗಳಿಂದ ಅಸ್ವಸ್ಥದಲ್ಲಿದ್ದವರು, ಸ್ವಗೃಹದಲ್ಲಿ ಈಚೆಗೆ ದೈವಾಧೀನರಾದರು ಈ ಸಂಬಂಧ ಗಣಪತಿ ಹ್ಯಾಸ್ಕೂಲಿಗೆ ರಜೆ ಇತ್ತು

ಮಾನನಷ್ಟದ ಮೊಕದ್ದಮೆ

ಸೋಶಿಯಲಿಸ್ಟ್ ಪಾರ್ಟಿ ಹೊಸದುರ್ಗ ತಾಲೂಕು ಕಮಿಟಿ ಕಾರ್ಯದರ್ಶಿ ಶ್ರೀ ಎನ್ ಕೆ. ಬಾಲಕೃಷ್ಣನ್, ಕಣ್ಣಾನೂರಿನ 'ದೇಶಮಿತ್ರಂ' ಮುದ್ರಾಲಯ ಮತ್ತು ಪ್ರಕಟನಾಲಯ ಕಂಪನಿ, ಲಿಮಿಟೆಡ್, ಇದರ ಮುದ್ರಕ ಮತ್ತು ಪ್ರಕಾಶಕ ಶ್ರೀಧರನ್ (ಈ ಕಂಪೆನಿಯಲ್ಲಿ "ಸ್ವತಂತ್ರ ಭಾರತಂ' ಎಂಬ ಮುಲೆಯಾಳಿ ವಾರಪತ್ರಿಕೆ ಅಚ್ಚಾಗಿ ಪ್ರಕಟವಾಗುವುದು , ಮತ್ತು ಆ ಪತ್ರಿಕೆಯ ಸಂಪಾದಕ ಪಿ ಎಮ್ ಕುಂಞರಾಮನ್ ನಂಬಿಯಾರ್ ಇವರ ಮೇಲೆ, ತನಗೆ ಮಾನನಷ್ಟಕಾರಕವಾದ ಒಂದು ಲೇಖನವನ್ನು ಬಾಲಕೃಷ್ಣನ್ ಬರೆದು ಮಿಕ್ಕ ಇಬ್ಬರು ಅದನ್ನು ಮುದ್ರಿಸಿ ಪ್ರಕಟಿಸಿದರೆಂದು ಆರೋಪ ಹೊರಿಸಿ ಉದ್ಮದ ಪಟೇಲ್ ಶ್ರೀ ಚೆರಿಪಾಡಿ ಕುಞಿಕಣ್ಣನ್ ನಾಯರ್ ಇವರು ಹೂಡಿದ ಮೊಕದ್ದಮೆಯನ್ನು ಎಡಿಶನಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಎಸ್ ಜೋಶ್ವಾ ತನಿಖೆ ನಡೆಸಿ, ಬಾಲಕೃಷ್ಣನ್‌ರಿಗೆ ರೂ 300 ಜುಲ್ಮಾನೆ ತಪ್ಪಿದರೆ 3 ತಿಂಗಳ ಸಾದಾ ಸಜೆ, ನಂಬಿಯಾರರಿಗೆ ರೂ 150 ಜುಲ್ಮಾನೆ ತಪ್ಪಿದರೆ ಆರು ವಾರಗಳ ಸಾದಾ ಸಜೆ ಎಂದು ವಿಧಿಸಿ, ಶ್ರೀಧರನ್ ತಾನೇ ಮುದ್ರಕನೆಂದು ರುಜುವಾಗಲಿಲ್ಲವೆಂದು ಅವನನ್ನು ಬಿಡುಗಡೆ ಮಾಡಿದರು

ಮುಂಬಯಿ

ಮೊಗವೀರ ವ್ಯವಸ್ಥಾಪಕ ಮಂಡಳಿ

ಇದರ 16ನೇ ವರ್ಷೋತ್ಸವವೂ ಮತ್ತು ಮೊಗವೀರ ಫ್ರೀ ನೈಟ್ ಸ್ಕೂಲು'ನ ಪಾರಿತೋಷ ವಿತರಣವೂ ಇದೇ ಜೂನು ತಿಂಗಳ ದಿನಾಂಕ 5ರಲ್ಲಿ ದಿ ವೆಸ್ಟರ್ನ್ ಇಂಡಿಯಾ ಬಿಲ್ಡಿಂಗ್ ಕನ್ಸಲ್‌ಟೆಂಟ್ಸ್''ನ ಚೇರ್‌ಮನ್ನರಾದ ಶ್ರೀ ಡಿ ಎಸ್ ಕ್ಯಾಂಟಾಲರವರ ಗಣ್ಯಾಧ್ಯಕ್ಷತೆಯಲ್ಲಿ ಸರ್ ಕವಾಸ್ಜಿ ಜಹಾಂಗೀರ ಸಭಾಸದನದಲ್ಲಿ ವಿಜೃಂಭಣೆಯಿಂದ ಜರಗಿತು

ಮಂಡಳಿಯ ಅಧ್ಯಕ್ಷ ಶ್ರೀ ನಾರಾಯಣ ಬಿ ಬಂಗೇರರು ಅಂದಿನ ಅಧ್ಯಕ್ಷರನ್ನೂ ಸಭಿಕರನ್ನೂ ಸ್ವಾಗತಿಸಿದ ಬಳಿಕ ಅಧ್ಯಕ್ಷರ ಔದಾರ್ಯ ಗುಣವನ್ನೂ ಕಾರ್ಯಕುಶಲತೆಯನ್ನೂ ಎತ್ತಿ ಮಾತಾಡಿ, ಸಭಿಕರಿಗೆ ಅವರ ಪರಿಚಯವನ್ನು ಮಾಡಿಕೊಟ್ಟು, ಮಂಡಳಿಯು ಇಷ್ಟು ವರುಷಗಳ ವರೆಗೆ ಸಮಾಜ, ನಾಡಿನ ಮತ್ತು ದೇಶದ ಅಭ್ಯುದಯದ ಕಾರ್ಯದಲ್ಲಿ ಯಾವ ರೀತಿಯಲ್ಲಿ ಅದರ ಪಾತ್ರವನ್ನು ನಿರ್ವಹಿಸಿರುವುದೆಂದು ಸಭಿಕರಿಗೆ ಮಂದಟ್ಟಾಗುವ ರೀತಿಯಲ್ಲಿ ವಿಶದೀಕರಿಸಿದರು

ಅದಾದನಂತರ ಮಂತ್ರಿಗಳು ಗಣನೀಯ ಮುಖಂಡರು ಮತ್ತು ನೂರಾರು ಸಂಘ ಸಂಸ್ಥೆಗಳಿಂದ ಬಂದಿದ್ದ ಸಂದೇಶಗಳನ್ನು ಓದಿ, ಮಂಡಳಿಯ ಸಂಕ್ಷಿಪ್ತ ಇತಿಹಾಸದ ವಾಚನ ಮಾಡಿ, ಶಾಲೆಯ ಮತ್ತು ಮಂಡಳಿಯ ಬಹುಮಾನ ವಿತರಣವಾಯಿತು

ತದನಂತರ ಸಭಿಕರಲ್ಲಿ ಶ್ರೀಗಳಾದ ಎಸ್ ನಟರಾಜನ್, ಜಿ ಎನ್ ವೈದ್ಯ, ಎಡ್ವೊಕೇಟ್, ಲೆಫ್ಟಿನೆಂಟ್ ಮಲ್ಯ ಮತ್ತು ಪರಂಜಾಪೆ ಅಡ್ಯ, ಇವರು ಸಭಿಕರ ಪರವಾಗಿ ಮಾತನಾಡಿದರು,

ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಮಂಡಳಿಯ ಕಾರ್ಯಕಲಾಪಗಳನ್ನು ಕೊಂಡಾಡಿ, ಅಭಿವೃದ್ಧಿಯನ್ನು ಕೋರಿ, ಬೇಕಾದ ಸಲಹೆಗಳನ್ನಿತ್ತು ಆಶೀರ್ವದಿಸಿದರು ಶ್ರೀ ಬಿ ಶಿವ ಸಾಲಿಯಾನರು ಸಭಾಧ್ಯಕ್ಷರಿಗೂ ಅತಿಥಿಗಳಿಗೂ ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಶಾಲಾ ಅಧ್ಯಾಪಕರೂ ವಿದ್ಯಾರ್ಥಿಗಳೂ ಐದ್ಕೆದ ತಾಡಿ" ಎಂಬ ಸಾಮಾಜಿಕ ತುಳು ನಾಟಕವನ್ನು ಅಭಿನಯಿಸಿದ ಬಳಿಕ ಸಮಾರಂಭವು ಕೊನೆಗೊಂಡಿತು

Free! Free!!

DR OSBORNE S

famous

REMEDY REJUVENATOR

SUPER D' SELIPHOSE

with atomised **GOLD** popularly known the world over as the S S Course for men and women

Now available in INDIA. Ask for free valuable literature and copies of brilliant appreciative letters received from gentlemen all over INDIA, since its introduction in August, 1948 Price Rs 6 (Full course).

Debilitated youths and persons over 48 years please Note particularly. A sure remedy for your ailments and an outstanding REJUVENATOR for your body Already a favourite with Doctors and public.

Contact

NORTHEND NEWSTREET & CO,

(Medical Dept) POST BOX No. 96

MANCHESTER, ENGLAND

(Sub Dist-)

R A SIMONS ESQR.

(M C) UDIPI S K

ಈಚೆಗೆ ಜರುಗಿದ ಕೊಮನ್‌ವೆಲ್ತ್ ಪರಿಷತ್ತಿಗೆ ದಯಮಾಡಿಸಿದ ಪ್ರದಾನಿಗಳ ಸಂಯುಕ್ತ ಛಾಯಾಚಿತ್ರ

ಎಡದಿಂದ ಬಲಕ್ಕೆ [ಹಿಂಗಿನ ಸಾಲು] ಸರ್ ಸ್ಟೆಫರ್ಡ್ ಕ್ರಿಪ್ಸ್, ಮಿ। ಲೆಸ್ಟರ್ ಪಿಯರ್‌ಸನ್ [ಕೆನಡಾ], ಮಿ। ಲಿಯಾಖತ್ ಅಲಿಖಾನ್ [ಪಾಕಿಸ್ತಾನ್], ಮಿ। ಪೀಟರ್ ಫ್ರೇಸರ್ [ನ್ಯೂಜಿಲೇಂಡ್], ಡಾ. ದಾನಿಯೆಲ್ ಮಲಾನ್ [ದಕ್ಷಿಣ ಆಫ್ರಿಕ], ಮಿ। ಡಿ ಎಸ್ ಸೇನಾನಾಯಕ್ [ಸಿಲೋನ್], ಮಿ। ಪಿ ಜೆ ನೊವೆಲ್‌ಬೇಕರ್ [ಎಡದಿಂದ ಬಲಕ್ಕೆ] [ಕುಳಿತವರು] ಮಿಸೆಸ್ ಆಟ್ಲಿ, ಪಂಡಿತ ನೆಹರು [ಇಂಡಿಯಾ] ಲೇಡಿ ಕ್ರಿಪ್ಸ್, ಮಿಸೆಸ್ ಮಲಾನ್, ಮಿ। ಸಿ ಆರ್. ಆಟ್ಲಿ, ಬೇಗಮ್ ಲಿಯಾಖತ್ ಅಲಿಖಾನ್ ಮತ್ತು ಮಿ। ಜೊಸೆಫ್ ಚಿಫ್ಲೆ [ಆಸ್ಟ್ರೇಲಿಯಾ]

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಪಾರಿಯರ್,

ರಥಬೀದಿ, ಉಡುಪಿ.

ಇಂದು ಪ್ರಪಂಚದಲ್ಲಿ ಶಿಶು ಮತ್ತು ಮಾತೃ ವರ್ಗಗಳು ಪೌಷ್ಟಿಕ ಆಹಾರ-ಮೋದಲಾಗಿ ವೈದ್ಯಕೀಯ ಮೇಲ್ವಿಚಾರಣೆಯ ಅಭಾವದಿಂದ ತುಂಬಾ ಹೀನಾವಸ್ಥೆಯಲ್ಲಿ ಇವೆ. ಅವರೆಲ್ಲರೂ ನಮ್ಮ ಭಾರತವು ಶಿಶುಗಳ ಮತ್ತು ಮಾತೃವರ್ಗದ ಸಂರಕ್ಷಣೆಯಲ್ಲಿ ಬಹಳೇ ಹಿಂದುಳಿದಿದೆ ಎಂಬುದು ಶೋಚನೀಯವಾದ ವಿಚಾರ. ಇಂದಿನ ಶಿಶುಗಳೇ ಭಾವೀ ಜನಾಂಗದ ಆಧಾರಸ್ತಂಭಗಳಾದುದರಿಂದ ಅವರ ಆರೈಕೆ ಹಾಗೂ ಸಂರಕ್ಷಣೆಯ ಬಗ್ಗೆ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕಾದುದು ಭಾರತದಲ್ಲಿಯ ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಿರುತ್ತದೆ. ಇಂದು ನಮ್ಮ ಭಾರತದಲ್ಲಿ ಶಿಶುಗಳ ಆರೈಕೆ ಮತ್ತು ಗರ್ಭಿಣಿಯರ ಹೆರಿಗೆಯ ವ್ಯವಸ್ಥೆ ಬಹಳ ಕೆಳಮಟ್ಟದ್ದಿದ್ದು ಅತೀ ಚಿಂತಾಜನಕವಾಗಿಯದೆ ಎಂಬುದು

ನೋಟೀಸು.

ಕುಂದಾಪುರದ ಡಿ ಮುಂ. ಕೋರ್ಟಿನಲ್ಲಿ

S. C. No. 117/1949

ನಾಗಯ್ಯ ಶೆಟ್ಟಿ —ವಾದಿ

1 ಶೇನಾಪುರ ಕೃಷ್ಣ ಶೆಟ್ಟಿ, ಸುಬ್ಬಿ ಶೆಡ್ತಿಯ ಮಗ.

2 ಸುಬ್ಬಿ ಶೆಡ್ತಿ-ಉದ್ರೆ ವೆಂಕಮ್ಮ ಶೆಡ್ತಿ ಮಗಳು. —ಪ್ರತಿವಾದಿರು

ತ್ರಾಸಿ ಗ್ರಾಮದ ಮಾನ್ಯಾಡಿಯಲ್ಲಿರುವವರು, ಸದ್ರಿ ಪ್ರತಿವಾದಿಯೀಗೆ ಈ ಮೂಲ್ಕ ತಿಳಿಯಗಡಿಸುವುದೇನಂದ್ರೆ

ವಾದೀಗೆ ಪ್ರತಿವಾದಿರು ಬರಕೊಟ್ಟ ಡಿಮಾಂಡ್ ನೋಟಿನ ಆಸಲು ಬಡ್ಡಿ ರೂ. 110-10-0ನ್ನು ಬರವಾಡಿಕೊಳ್ಳುವರೆ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತನ್ಕಿಗೆ ತಾ. 27-6-49ಕ್ಕೆ ಇಟ್ಟಿರುವುದರಿಂದ ಈ ಬಾಬಿನಲ್ಲಿ ನಿಮ್ಮದೇನಾದರೂ ಉಜ್ರಾಯತು ಇರುವ ಪಕ್ಷದಲ್ಲಿ ತನ್ನ ದಿವ್ಸ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ನಿಮ್ಮ ಮೇಲೆ ಎಕ್ಸ್‌ಪಾರ್ಟೆಯಿಂದ ಡಿಕ್ರಿ ಕೊಡಲ್ಪಡುವುದು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ತಿಳಿಸಲಾಗಿಯದೆ.

Soorappa Shetty, Volpady
Advocate for Plff.

ಕುಂದಾಪುರ ತಾ 10-6-49

ಸಂಯುಕ್ತ ರಾಷ್ಟ್ರಗಳ ಶಿಶು ಅಭಿವೃದ್ಧಿ ಯೋಜನೆ

ಈ ಕೆಳಗಿನ ಅಂಕೆ ಸಂಖ್ಯೆಗಳಿಂದ ಮನ್ನಣೆ ಕಂಡಿಸಲ್ಪಟ್ಟಿದೆ. ಭಾರತದಲ್ಲಿ ಹಡೆಯುವಾಗ ಮರಣ ಹೊಂದುವ ತಾಯಂದಿರು ಸಾಧಾರಣ 1000ಕ್ಕೆ 20 ಮಂದಿ

ಹುಟ್ಟಿದೊಡನೆಯೇ ಸಾಯುವ ಶಿಶುಗಳ ಸಂಖ್ಯೆ

ಭಾರತ, 1000ದಲ್ಲಿ 160. ಆಸ್ಟ್ರೇಲಿಯಾ 1000ದಲ್ಲಿ 30. ನ್ಯೂಜಿಲೇಂಡ್, 1000ದಲ್ಲಿ 30.

1 ವರ್ಷಕ್ಕೆ ಮೊದಲೇ ಸಾಯುವ ಮಕ್ಕಳ ಸಂಖ್ಯೆ

ಭಾರತ 21% ಇಂಗ್ಲಾಂಡ್ 7%

1 ವರ್ಷಕ್ಕೆ ಮೇಲ್ಪಟ್ಟು 5 ವರ್ಷಗಳ ಮೊದಲೇ ಸಾಯುವ ಮಕ್ಕಳ ಸಂಖ್ಯೆ

ಭಾರತ 19% ಇಂಗ್ಲಾಂಡ್ 2%

5 ವರ್ಷಕ್ಕೆ ಮೇಲ್ಪಟ್ಟು 10 ವರ್ಷಗಳ ಮೊದಲು ಸಾಯುವ ಮಕ್ಕಳ ಸಂಖ್ಯೆ

ಭಾರತ 6% ಇಂಗ್ಲಾಂಡ್ 1%

ಮೇಲೆ ವಿವರಿಸಿದಂತೆ ನಮ್ಮ ದೇಶದಲ್ಲಿ ಶಿಶುಗಳ ಹಾಗೂ ತಾಯಂದಿರ ಸ್ಥಿತಿಯು ಚಿಂತಾಜನಕವಿದ್ದರೂ ಮಕ್ಕಳ ಆರೈಕೆಗೆ ಬೇಕಾದ ಯೋಗ್ಯವಾದ ಒಂದು ಆಸ್ಪತ್ರೆಯೂ ಇಲ್ಲ. ತಾಯಂದಿರಿಗೆ ಉಪಯುಕ್ತವಾದ ಹೆರಿಗೆ ಆಸ್ಪತ್ರೆಗಳು ಅಲ್ಪ ಸ್ವಲ್ಪವಿದ್ದು ಜನತೆಯ ಆವಶ್ಯಕತೆಯನ್ನು ಪೂರೈಸುವಷ್ಟು ಸಂಖ್ಯೆಯಲ್ಲಿಲ್ಲ.

ಇದನ್ನು ಮನಗಂಡು ಸಂಯುಕ್ತ ರಾಷ್ಟ್ರಗಳು ಪ್ರಪಂಚದಲ್ಲಿನ ಯಾವತ್ತೂ ಮಕ್ಕಳ ಹಾಗೂ ತಾಯಂದಿರ ಪ್ರಯೋಜನಾರ್ಥವಾಗಿ ಅನೇಕ ಯೋಜನೆಗಳನ್ನು ಕೈಕೊಳ್ಳುವರೆ ನಿಧಿ ಸಂಗ್ರಹದ ಕಾರ್ಯವನ್ನು ಪ್ರಾರಂಭಿಸಿರುವರು. ಯುಕ್ತ ರಾಷ್ಟ್ರಗಳ ಈ ಯೋಜನೆಗನುಗುಣವಾಗಿ ನಮ್ಮ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳಲ್ಲಿ ನಿಧಿ ಸಂಗ್ರಹಕ್ಕಾಗಿ 'ಕುಂದಾಪುರ ಡಿವಿಜನಲ್ ಸಮಿತಿ'ಯು ಸ್ಥಾಪಿಸಲ್ಪಟ್ಟಿದೆ. ಈ ನಿಧಿಯನ್ನು ಸಂಗ್ರಹಿಸುವರೆ ಮೇಲಿನ ಸಮಿತಿಯು ಈ ಕೆಳಗಿನ ಪಂಚಿಕೆಯನ್ನು ಮಾಡಿದೆ.

1 ಪ್ರತಿಯೊಬ್ಬ ಉದ್ಯೋಗಸ್ಥನು ಕನಿಷ್ಠ ಪಕ್ಷ ತನ್ನ ಒಂದು ದಿನದ ಆದಾಯವನ್ನಾದರೂ ಕೊಡತಕ್ಕದ್ದು;

2 ಶಾಲಾ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳಿಂದ ಕನಿಷ್ಠ ಪಕ್ಷ ತಲೆ ಒಂದರ ಒಂದಾಣೆಯಂತೆ ವಂತಿಗೆ ಎತ್ತುವರೆ ಆಯಾ ಶಾಲಾ ಆಡಳಿತೆದಾರರಲ್ಲಿ ವಿನಂತಿಸುವುದು;

3 ನಾಟಕ, ಸಿನಿಮಾ ವಗೈರೆ ಸಂಸ್ಥೆಗಳು ತಮ್ಮ ಒಂದು ದಿನದ ಆಯವನ್ನು ಕೊಡತಕ್ಕದ್ದು;

4 ತಾ. 18-6-'49 ರಂದು ಇಡೀ ಡಿವಿಜನಿನಲ್ಲಿ ಧ್ವಜ ದಿನವನ್ನು ಆಚರಿಸಿ ಧ್ವಜಗಳ ಮಾರಾಟದಿಂದ ಹಣ ಸಂಗ್ರಹಿಸತಕ್ಕದ್ದು;

5 ಸಹಕಾರಿ ಸಂಸ್ಥೆಗಳ ಸಾರ್ವಜನಿಕ ಹಿತ ನಿಧಿಯನ್ನು ಈ ಸಂಸ್ಥೆಯ ಪರವಾಗಿ ಕೇಳಿ ಪಡಕೊಳ್ಳತಕ್ಕದ್ದು.

6 ಉದಾರ ಮಹಾಜನರಿಂದ ಹಾಗೂ ಸಾರ್ವಜನಿಕ ಸಂಸ್ಥೆಗಳಿಂದ ಧರ್ಮವನ್ನು ಪಡೆಯತಕ್ಕದ್ದು.

ಡಿವಿಜನಲ್ ಸಮಿತಿಯ ಆಯಾ ತಾಲೂಕು ಸದಸ್ಯರು ಇದೇ ತಿಂಗಳ ತಾ. 12 ರಿಂದ 30ರ ವರೆಗೆ ತಮ್ಮ ತಮ್ಮ ತಾಲೂಕುಗಳಲ್ಲಿ ಈ ನಿಧಿ ಸಂಗ್ರಹಕ್ಕಾಗಿ ಹೊರಡುವವರಿದ್ದಾರೆ. ಎಲ್ಲರೂ ಈ ಸಂಸ್ಥೆಯ ಉದಾತ್ತ ಉದ್ದೇಶವನ್ನು ಮನಗಂಡು ಉದಾರತೆಯಿಂದ ಧರ್ಮವನ್ನು ಕೊಡಬೇಕಾಗಿ ವಿನಂತಿ. ತಾವಾಗಿಯೇ ದಾನ ಕೊಡಲಿಚ್ಛಿಸುವವರು ಕುಂದಾಪುರದಲ್ಲಿ ರೆವರೆಂಡ್ ಫಾದರ್ ಬಿ. ಬಿ. ಕುಲಾಸೊ, ಉಡುಪಿಯಲ್ಲಿ ಶ್ರೀ ನರಹರಿ ಕಾಮತ್, ಕಾರ್ಕಳದಲ್ಲಿ ವಿ. ವಿ. ಶೆಣೈ ಇವರ ಹತ್ತಿರ ಕೊಟ್ಟು ರಶೀದಿಯನ್ನು ಪಡಕೊಳ್ಳಬಹುದು ಎಂದು ಕುಂದಾಪುರ ಸರ್ಕಲ್ ಸಮಿತಿಯ ಪ್ರಚಾರ ಸದಸ್ಯ ಶ್ರೀ ಎಂ. ಎಂ. ಹೆಗ್ಡೆರು ತಿಳಿಸುತ್ತಾರೆ.

HOMER

ಎಲ್ಲ ಸ್ಟೋರ್ಸ್‌ಗಳಲ್ಲಿ ದೊರೆಯುವ
ಹೋಮರ್ ಪೆನ್ ಉಪಯೋಗಿಸಿರಿ
ತಯಾರಕರು:—
ಮ್ಹಾತ್ರೆ ಪೆನ್ ಮತ್ತು ಪ್ಲಾಸ್ಟಿಂಗ್ ಇಂಡಸ್ಟ್ರೀಸ್
182 ಗಿರ್‌ಗಾಂ, ಬೊಂಬಾಯಿ.

Mhatre Pen & Plastics Industries
182 Girgaum, Bombay.

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷನರಿಗಳು
ದೊರೆಯುತ್ತವೆ.
ದೊಡ್ಡ ಸೈಜು ರೂ. 5 0 0
ಪಾಕೆಟ್ ಸೈಜು ರೂ. 4 8 0
ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ಹಾರ್ಲಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ಹಾರ್ಲಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರೆಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ಹಾರ್ಲಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು, ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ಹಾರ್ಲಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ಹಾರ್ಲಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನಕೋಶ, ಕಲಿಜೆಯ ರೋಗಗಳಲ್ಲಿ ಹಾರ್ಲಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗಾಲಿಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ಹಾರ್ಲಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ಹಾರ್ಲಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ಹಾರ್ಲಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟ ಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಹಾರ್ಲಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2 8 0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ಹಾರ್ಲಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ಹಾರ್ಲಿಂಗ್ ಟಿಲ್ಲಿ ದ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ದ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ಹಾರ್ಲಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1 8 0 ಡಜನ್ ಶೀಸೆಗಳಿಗೆ ರೂ. 18. ವಿ. ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ಹಾರ್ಲಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ಹಾರ್ಲಿಂಗ್ ಟಿಲ್ಲಿ ಆಯಿಲಿನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ್ಷ್ಮೀವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2

ಮಹಿಳಾ ಪುಟ

ಗೃಹ ವಿಜ್ಞಾನ

ಲೇಖಕಿ: ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್

ನಮ್ಮ ಹುಡುಗಿ ಮದುವೆಯಾಗಿ ಗಂಡನ ಮನೆಗೆ ಹೋದಳೆಂದರೆ ಗೃಹಿಣಿಯಾದಳೆಂದು ಸಹಜವಾಗಿ ಎಲ್ಲರೂ ಭಾವಿಸುತ್ತೇವೆ. ಗೃಹಿಣಿ ಎಂಬ ಬಿರುದನ್ನು ಹೊಂದಬೇಕಾದರೂ ಕೂಡ ವಿಶ್ವ ವಿದ್ಯಾನಿಲಯದಲ್ಲಿ ಪಟ್ಟ ಧಾರಿಯಾಗಲು ಕೆಲವು ನಿಬಂಧನೆಗಳೂ, ನಿಯಮಗಳೂ ಇವೆಯಲ್ಲ. ಅದೇ ರೀತಿಯಲ್ಲಿ ಹಲಕೆಲವು ಅನುಭವಗಳೂ, ಸದ್ಗುಣಗಳೂ ಅವಶ್ಯಕ. 'ಏನು ಹೀಗೆ ಹೇಳುತ್ತೀ? ಮದುವೆಯಾಗಿ, ಗಂಡನ ಸಹಿತ ಸಂಸಾರ ಹೂಡಿದಳೆಂದರೆ ತನ್ನಷ್ಟಕ್ಕೇ ಎಲ್ಲ ತಿಳಿದು ಹೋಗುತ್ತೆ. ಏನು ಪ್ರಮಾದ.' ಎಂದು ಒಂದು ಸಲ ನನ್ನ ಗೆಳತಿಯೊಬ್ಬಳು ಅಂದದ್ದು ನೆನಪಿಗೆ ಬರುತ್ತದೆ.

ಹಿಂದಿನ ಕಾಲದಂತೆ ನಮ್ಮ ಹುಡುಗಿಯರು ಮದುವೆಯಾದ ಬಳಿಕ ಅತ್ತೆಯ ಮನೆಗೆ ಹೋಗಿ ವರ್ಷಗಟ್ಲೆ ವಾಸಮಾಡಿ ಕೆಲಸ ಕಲಿಯುವವರು, ಅತ್ಯಂತ ಬಹಳ ಕಡಿಮೆ. ಮದುವೆಯಾಯಿತೆಂದರೆ ಗಂಡನ ಸಹಿತ ದೆಹಲಿಗೋ, ಕಲ್ಕತ್ತೆಗೋ, ಸಿಂಗಪ್ಪೂರಿಗೋ – ಕೊನೆಗೆ ಲಂಡನ್‌ಗೋ ಹೊರಟು ಬಿಡುತ್ತಾರೆ. ಮದುವೆಯಾಗುವ ವರೆಗೆ ತೌರುಮನೆಯಲ್ಲಾದರೂ ಕೊಂಚ ಮನೆಗೆಲಸ ಕಲಿಯೋಣವೆಂದರೆ ಹೈಸ್ಕೂಲು, ಕಾಲೇಜು ಎಂದು ವಿದ್ಯಾಲಯಗಳಿಗೆ ಹೋಗಿ ಬರುವುದಕ್ಕೂ, ಪಾಠಗಳನ್ನು ಮಾಡುವುದಕ್ಕೂ ಸಹ ಹೊತ್ತು ಸಾಲುವುದಿಲ್ಲ. ಹಾಡಿನ ಮೇಷ್ಟರಿಗೇ ದೊಡ್ಡ ಸಂಬಳ ತೆರಬೇಕಾಗಿದೆ. ಒಂದು ಘಳಿಗೆ ಕುಳಿತು ಕಲಿತ ಹಾಡನ್ನು ಅಭ್ಯಸಿಸಲೂ ಸಹ ಸಮಯ ಸಿಗದಿರುವಾಗ ಅಮ್ಮನ ಜೊತೆಗೆ ಮನೆಗೆಲಸಗಳನ್ನು ಗಮನಿಸಿ ಕೆಲಸ ಕಲಿಯಲು ಅವಕಾಶವೆಲ್ಲಿ ಸಿಗಬೇಕು? ಹಾಡು, ಓದು, ಸಾಧ್ಯವಾದಷ್ಟು ಲಲಿತ ಕಲೆ ಇವನ್ನು ಕಲಿತು ಮುಗಿಯುವುದರೊಳಗಾಗಿಯೋ, ಮುಗಿದೊಡನೆಯೋ, ಮದುವೆಯಾಯಿತೆಂದರೆ, ಗಂಡ ತಾನು ಉದ್ಯೋಗವಾಗಿರುವ ಎಡೆಗೆ ಜೊತೆಯಲ್ಲೇ ಕರೆದೊಯ್ಯುತ್ತಾನೆ. ಹುಡುಗಿ ಪಾಪ ಹೊಸದಾಗಿ ಸಂಸಾರ ಹೂಡುತ್ತಾಳೆ. ನೆರೆ ಹೊರೆಯವರೆಲ್ಲಾ ಅಪರಿಚಿತರು. ತನಗೆ ತಿಳಿಯದ ವಿಷಯವನ್ನು ಅವರಿಂದ ಕೇಳಿ ತಿಳಿಯಲೂ ಸಂಕೋಚ. ಇಷ್ಟರವರೆವಿಗೆ ತಾನು ಕಲಿತ ನವನಾಗರೀಕತೆಯೂ, ವಿದ್ಯಾಲಯದ ವ್ಯಾಸಂಗವೂ ಕುಟುಂಬ ನಿರ್ವಹಣೆಗೆ ಯಾವ ರೀತಿಯ ಒತ್ತಾಸೆ ಮಾಡಬಲ್ಲುದು? ಒಟ್ಟಿನಲ್ಲಿ ತಿಳುವಳಿಕೆ ಮಾತ್ರ ಚುರುಕಾಗಿರುವುದೆಂಬುದನ್ನು ನಾನು ಒಪ್ಪುತ್ತೇನೆ. ಆದುದರಿಂದಲೇ ಇಂತಹ ಓದಿದ ಹುಡುಗಿಯರ, ಆದರೆ ಮನೆಗೆಲಸ ತಿಳಿಯದ, ಹೆಣ್ಣು ಮಕ್ಕಳ ಒತ್ತಾಸೆಗಾಗಿ ನುರಿತ ಗೃಹಿಣಿಯರಿಂದ ಗೃಹ ನಿರ್ವಹಣೆಯ ವಿಷಯವಾಗಿ ನಮ್ಮ ನಾಡಿನಲ್ಲಿ ಒಳ್ಳೊಳ್ಳೆಯ ಪುಸ್ತಕಗಳು ಪ್ರಚುರವಾಗಬೇಕು. "ಪಾಕ ಶಾಸ್ತ್ರ'ಒಂದಿದ್ದರಾಯಿತು, ಏನೀಗ, ಮಿಕ್ಕುವೆಲ್ಲಾ ಸಣ್ಣ ಪುಟ್ಟ ವಿಷಯಗಳು. ಕ್ರಮೇಣ ತನ್ನಷ್ಟಕ್ಕೆ ಅನುಭವದಿಂದ ತಿಳಿದು ಹೋಗುತ್ತವೆ" ಎನ್ನಬಹುದು. ಹಾಗಲ್ಲ, ನೋಡಲು ಹೋದರೆ ಗೃಹಕೃತ್ಯವೂ ಸಹ ದೊಡ್ಡದೊಂದು ವಿಜ್ಞಾನವೇ ಸರಿ, ಉಪ್ಪನ್ನೂ ರವೆಯನ್ನೂ ಕಲಸಿ ಬೇಯಿಸಿಬಿಟ್ಟರೆ ಉಪ್ಪಿಟ್ಟಾಯಿತೇನು? ರವೆಗೆ ಸಾಕಷ್ಟು ತುಪ್ಪ ಹಾಕಿ ಸೀದು ಹೋಗದಂತೆ 'ಘಂ' ಎಂದು ಪಕ್ವವಾಗಿ ಹುರಿದು, ಒಗ್ಗರಣೆ ಮಾಡಿ, ಸಾಕಷ್ಟು ನೀರು ಚಿಮುಕಿಸಿ ಬೇಯಿಸಿ, ತೆಂಗಿನಕಾಯಿ ತುರಿ, ಕೊತ್ತಂಬರೀ ಸೊಪ್ಪು, ನಿಂಬೇಹುಳಿ, ಹುಪ್ಪಡಲ್ಲಿ ಹುರಿದ ಗೋಡಂಬೀ ಬೀಜ, ಎಲ್ಲ ಸೇರಿಸಿ, ಸಾಕಷ್ಟು ತುಪ್ಪ ಹಾಕಿ, ಹೂವಿನಂತೆ ಪಕ್ವವಾಗಿ ಉಪ್ಪಿಟ್ಟು ಮಾಡಿದರೆ—ಅದು ಉಪ್ಪಿಟ್ಟು. ಅದೇ ತರಹವೇ ಗೃಹಕೃತ್ಯ ನಿರ್ವಹಣೆಯೂ ಸಹ. 'ನಮ್ಮ ಯಜಮಾನರೂ ಆಫೀಸಿಗೆ ಹೋಗುತ್ತಾರೆ' ಎಂಬುದೊಂದು ತಮಿಳು ಗಾದೆಯುಂಟು. ಆ ತರಹ 'ನನ್ನ ಮಗಳೂ ಸಂಸಾರ ಮಾಡುತ್ತಾಳೆ' ಎಂದುಕೊಂಡು ಸಂತುಷ್ಟಿಯಿಂದಿದ್ದರೆ ಸಾಲದು. ಆವಳು ನನ್ನ ಮನೆಯಲ್ಲಿದ್ದಾಗಲಂತೂ ಎಲ್ಲ ಕೆಲಸ ಹೇಳಿಕೊಡಲು ನನ್ನಿಂದ ಸಾಧ್ಯವಾಗಲಿಲ್ಲ. ಆದರೆ ನೋಡಿದ್ದನ್ನೂ, ಕೇಳಿದ್ದನ್ನೂ, ಓದಿದ್ದನ್ನೂ, ತಕ್ಷಣ ಗ್ರಹಿಸಿಕೊಂಡು ಆಚರಣೆಗೆ ತರುವ ಚಾಳಕ್ಯತೆಯೂ, ಜಾಣ್ಮೆಯೂ ಉಂಟು ನನ್ನ ಮಗಳಿಗೆ. ಆದ್ದರಿಂದ ಅವಳಿಗೆ ಗೃಹಕೃತ್ಯ ನಿರ್ವಹಣೆಯಲ್ಲಿ ಯಾವ ವಿಷಯದಲ್ಲೇ ಆಗಲಿ ಅಲ್ಪ ಸಂಶಯವಾಗಲೀ, ತೊಡಕಾಗಲೀ ಏರ್ಪಟ್ಟರೂ ಕೂಡ ಅವಳು ಪುಸ್ತಕದಲ್ಲಿ ಓದಿ ತಿಳಿದುಕೊಳ್ಳುವಂತಹ ಸೌಲಭ್ಯವಾದರೂ ನಾವು ನಮ್ಮ ಹೆಣ್ಣು ಮಕ್ಕಳಿಗೆ ಕಲ್ಪಿಸಿಕೊಡಬೇಡವೇ?

ಈಗ ನಮಗೆ ಸ್ವಾತಂತ್ರ್ಯ ಲಭಿಸಿದೆ. ಸ್ವತಂತ್ರ ಭಾರತದಲ್ಲಿ ಹೆಣ್ಣು ಮಕ್ಕಳೂ ತಂತಮ್ಮ ಕಷ್ಟ ನಿಷ್ಠೂರಗಳನ್ನು ವ್ಯಕ್ತಪಡಿಸಿಕೊಂಡು, ತಮಗೆ ಅವಶ್ಯಕವಾದಂತಹ ಸೌಲಭ್ಯಗಳನ್ನೂ, ಹಕ್ಕು ಬಾಧ್ಯತೆಗಳನ್ನೂ ಕೇಳಿ ಪಡೆಯಲು ಅವಕಾಶ ಉಂಟು. ಈಗೀಗ ರೇಡಿಯೋ ಮೂಲಕವಾಗಿ ಹೆಣ್ಣು ಮಕ್ಕಳಿಗೆ ಉಪಯೋಗವಾಗುವಂತಹ ಪಾಕಶಾಸ್ತ್ರವೇ ಮುಂತಾದ ವಿಚಾರಗಳನ್ನು ಪ್ರಸಾರ ಮಾಡುತ್ತಾರೆಯಲ್ಲದೆ ಇನ್ನೂ ಹಲಕೆಲವು ಉಪಯುಕ್ತ ವಿಷಯಗಳನ್ನೂ ಪ್ರಸಾರಗೊಳಿಸುತ್ತಾರೆ. ಇಷ್ಟು ಮಾತ್ರ ಸಾಲದು. ಮನೆಯನ್ನು ಚೊಕ್ಕಟವಾಗಿಯೂ, ಅಂದವಾಗಿಯೂ ಇಡುವಿಕೆ, ರುಚಿರುಚಿಯಾದ ಊಟ-ಉಪಚಾರ, ಅತಿಥಿ ಸತ್ಕಾರ, ರೋಗಿಯ ಉಪಚಾರ, ಮಕ್ಕಳ ಪೋಷಣೆ, ಬಟ್ಟೆಗಳನ್ನು ಪರಿಶುದ್ಧವಾಗಿ ಒಗೆದು ಒಣಗಿಸಿ ಇಸ್ತ್ರೀ ಮಾಡುವಿಕೆ, ಮನೆಯ ಲೆಕ್ಕ ಪತ್ರಗಳನ್ನು ಕ್ರಮವಾಗಿ ಇಡುವಿಕೆ, ಮಿತವ್ಯಯ, ಪತಿಗೆ ನೆರವಾಗಿ ಮನೆಯ ಒಳಗೂ, ಹೊರಗೂ ಸಾಮರ್ಥ್ಯಶಾಲಿನಿಯಾದ | ಸತಿಯಾಗಿರುವಿಕೆ, ಸಮಾಜ ಸೇವೆ, ಗ್ರಾಮ ಸೇವೆ, ದೇಶ ಸೇವೆಯೇ ಮುಂತಾದ ಗೃಹ ವಿಜ್ಞಾನಕ್ಕೆ ಸಂಬಂಧಪಟ್ಟಂತಹ ವಿಷಯಗಳನ್ನು ನಮ್ಮ ಹೆಣ್ಣು ಮಕ್ಕಳಿಗೆ ಸಹಜವಾದ ಮತ್ತು ಸುಲಭವಾದ ಶೈಲಿಯಲ್ಲಿ ತಿಳಿಸಬೇಕಾಗಿದೆ. ಈ ಮಹಾತ್ಕಾರ್ಯಗಳು ರೇಡಿಯೋ ಭಾಷಣಗಳ ಮೂಲಕವೂ, ಗ್ರಂಥ ರಚನೆಗಳ ಮೂಲಕವೂ, ಪರಿವರ್ತನೆ ಹೊಂದಿದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಮೂಲಕವೂ ಸಾಧಿಸಲ್ಪಡಬೇಕಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಗೃಹಿಣಿಯರಿಗೇ ಮೀಸಲಾದ ಎಷ್ಟೆಷ್ಟೋ ಒಳ್ಳೊಳ್ಳೆಯ ಪುಸ್ತಕಗಳೂ, ಪತ್ರಿಕೆಗಳೂ, ಮಾಸಿಕಗಳೂ ಹೇರಳವಾಗಿ ಪ್ರಚುರವಾಗುತ್ತವೆ. "ಯಾಕೆ, ನಮ್ಮಲ್ಲೂ ಇಂತಹ ಪತ್ರಿಕೆಗಳುಇಲ್ಲವೇನು?" ಎನ್ನಬಹುದು. ಹೌದು, ಪತ್ರಿಕೆಗಳು ಇವೆ. ಇಲ್ಲವೆನ್ನಲಿಲ್ಲ. ಹೆಸರಿಗೆ ಮಾತ್ರ ಸ್ತ್ರೀಯರಿಗೆ ಮೀಸಲಾದ ಪತ್ರಿಕೆಗಳಷ್ಟೇ. ಅವುಗಳಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಒಂದೆರಡು ಅಡಿಗೆಯ ವಿಧಾನಗಳನ್ನು ಮಾತ್ರ ಪ್ರಕಟಿಸಿಬಿಟ್ಟರಾಯಿತು. ಅದು ಸ್ತ್ರೀಯರ ಪತ್ರಿಕೆಯೆಂಬ ಭಾವನೆಯಷ್ಟೆ. ಬಾಕಿ ಪುಟಗಳನ್ನೆಲ್ಲ ಬೇಕಾದರೆ, ತಿರುವಿ ನೋಡಿ! ಗೃಹಕೃತ್ಯ ನಿರ್ವಹಣೆಗೆ ಸಂಬಂಧಪಟ್ಟಂತಹ ವಿಷಯಗಳು ಬಹಳ ವಿರಳ.

ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರಿಗೆ ಉಪಯುಕ್ತವಾಗುವಂತಹ ಪುಸ್ತಕಗಳು ಮಾತ್ರ ಉಂಟೆಂದಲ್ಲ. ಅಲ್ಲಿನ ಫರ್ನೀಚರ್, ಬಟ್ಟೆ, ಪಾತ್ರೆ, ಗಾಜಿನ ಸಾಮಾನು, ಎಲೆಕ್ಟ್ರಿಕ ಬತ್ತಿ, ಬಾಗಿಲು ಮುಂತಾದ ಉಪಕರಣಗಳನ್ನು ತಯಾರಿಸುವ ಪ್ರತಿಯೊಂದು ಭಾರೀ ಕೈಗಾರಿಕಾ ಕಾರ್ಖಾನೆಯೂ ಸಹ ಮಹಿಳೆಯರ ಅಮೂಲ್ಯ ಸಲಹೆಗಳನ್ನು ಅಪೇಕ್ಷಿಸುತ್ತದೆ. ತಾನು ನೂತನವಾಗಿ ಸೃಷ್ಟಿಸಬೇಕೆಂದಿರುವ ಹೊಸ ಸಾಮಾನಿನ ನಮೂನೆಯೊಂದನ್ನು ಮೊಟ್ಟ ಮೊದಲು ದೇಶದ ನುರಿತ ಗೃಹಿಣಿಯರಿಗೋ, ಅಥವಾ ದೇಶದ ಮಹಿಳೆಯರ ಪ್ರತಿನಿಧಿಗಳಾದ ಮಹಿಳಾ ಸಂಘಗಳ ಅಧಿಪತಿಗಳಿಗೋ ತೋರಿಸಿ, ಅವರುಗಳ ಅಭಿಪ್ರಾಯ ಪಡೆಯದೆ ಆ ನೂತನ ವಸ್ತುವನ್ನು ತಯಾರಿಸುವುದಿಲ್ಲ. ಮತ್ತೂ ಆ ಮಹಿಳಾ ಪ್ರತಿನಿಧಿಗಳು ಅದರಲ್ಲಿ ಏನಾದರೂ ಮಾರ್ಪಾಟುಗಳೋ, ಸುಧಾರಣೆಗಳೋ ಆಗಬೇಕೆಂದು ಅಭಿಪ್ರಾಯಪಟ್ಟರೆ ಆ ಸಲಹೆಗಳನ್ನು ಅನುಸರಿಸಿ ಗೃಹಿಣಿಯರಿಗೆ ಅನುಕೂಲವಾಗುವಂತಹ ರೀತಿಯಲ್ಲೇ ತಯಾರಿಸುತ್ತಾರೆ. ಇಂತಹ ಸುಧಾರಣೆಗಳು ನಮ್ಮಲ್ಲೂ ಆಗಬೇಕು.

[ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾದದ್ದು.]

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದಭೂಷಣ, ನಂ. 5 ಕೊಡಿಯಾಲಬೈಲು, ದಕ ಸ್ಟಾಕಿಸ್ಟರು. ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves head-ache etc.

REGD. TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3613

23-6 1949

LICENCE No. 31

Licenced to Post without Prepayment

NAVAYUGA WEEKLY

POST BOX No 22 -- UDIPI, S. K

FOUNDER
Hon'ble Sri A. B. Shetty
Minister for Agriculture & Veterinary

Telegram:
"Navayuga"

Estd.
1921
ಸ್ಥಾಪನೆ



ವಾರ್ಷಿಕ ಚಂದಾ.
5—4—0

6 ತಿಂಗಳಿಗೆ
3—0—0

ಬಿಡಿಪ್ರತಿಗೆ
0—2—0

ವರ್ಷ ೨೯
ವಾರ 43

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿ ರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 43

ಹಿಂದೀಯರ ದೃಷ್ಟಿಕೋನ....!

ಸ್ವತಂತ್ರ ಭಾರತವು ರಾಜಕೀಯದಲ್ಲಿ ಅಭಿವೃದ್ಧಿ ಪಡೆಯುತ್ತಿರುವಂತೆ ನೈತಿಕ ವಿಧಾನಗಳಲ್ಲೂ ಪ್ರಗತಿ ಹೊಂದುತ್ತಾ ಸಾಗಿದೆಯೆ? 'ಊಹೂಂ' ಎನ್ನಬೇಕಾಗುವದು.

ಇಂದು ಜನ-ಧನ--ಶಾಸನ, ಇವು ಮೂರಕ್ಕನೇ ಪ್ರಾಮುಖ್ಯತೆ ದೊರೆತಿದೆ; ನಿಜ ಪ್ರಗತಿಯನ್ನು ಬೇಕಾದರೆ ಸಂಗತಿ--ಗುಣ-ನೀತಿ ನಿಯಮ, ಈ ಮೂರಕ್ಕೇನೇ ಪ್ರಾಮುಖ್ಯತೆ ದೊರೆಯಬೇಕಿದ್ದತು.

ಏನೇ ಮಾಡಿಯಾದರೂ ವ್ಯಕ್ತಿಗಳ ಕೀರ್ತಿ — ಶ್ರೀಮಂತಿಕೆ — ಶಾಸನಾಧಿಕಾರಗಳನ್ನು ಯಾರು ದೊರಕಿಸಿಕೊಳ್ಳುತ್ತಾರೋ ಅವರನ್ನೇ ಜನತೆ ಆರಾಧಿಸುತ್ತಿದೆ. ಈ ಮೂರು ಮಹತ್ತಿಕೆಗಳೂ ಕೇವಲ ನ್ಯಾಯವನ್ನಾಧರಿಸಿಯೇ ಸಾಧಿಸಲ್ಪಡುವಂತಹವಲ್ಲ. ಚಿರಕಾಲ ಉಳಿಯುವಂಥವುಗಳು ಅಥವಾ ಚಿರಕಾಲ ಬಾಳುವಂಥವುಗಳಲ್ಲ. ಆದರೂ ಇವುಗಳ ತಾತ್ಕಾಲಿಕ ಆಕರ್ಷಣೆಯೇ ಅಮೂಲ್ಯ ಮತ್ತು ಅಮರವೆಂಬಂತೆ, ವಸ್ತುಸ್ಥಿತಿ ಹಾಗೂ ಭವಿಷ್ಯದ ಚಿಂತನೆಯೇ ಇಲ್ಲದೆ ಜನತೆಯು ಅವುಗಳಿಗೆ ಕಟ್ಟು ಬಿದ್ದಿರುವುದು ಪ್ರಗತಿ ಸೂಚಕವಲ್ಲ.

ಕೇವಲ ಗತವೈಭವವುಳ್ಳ ರಾಜಧಾನಿಗಳೆಂಬುದರಿಂದ, ಯಾವುದನ್ನೂ ಇಂದು ಮುಖ್ಯ ಪಟ್ಟಣವಾಗಿ ಮಾಡಿಕೊಳ್ಳುತ್ತಿಲ್ಲ; ಅಂತೆಯೇ ಗತಕಾಲದಲ್ಲಿ ಮಹತ್ಕಾರ್ಯಗಳನ್ನು ಮಾಡಿದವರೆಂಬುದಕ್ಕಾಗಿಯೇ ಇಂದು ಯಾರನ್ನೂ ನಾಯಕರನ್ನಾಗಿ ಇಟ್ಟುಕೊಳ್ಳಕೂಡದು. ಯುದ್ಧಾವಧಿಯ ಅನಿವಾರ್ಯ ನಾಯಕನೆಂದು ಚರ್ಚಿಲ್ಲರನ್ನೇರಿಸಿಕೊಂಡು, ಯುದ್ಧ ಮುಗಿದ ಬೆನ್ನಲ್ಲೇ ಅವರನ್ನು ಪೀಠದಿಂದಿಳಿಸಿದ ಬ್ರಿಟಿಷ್ ಜನತೆಯ ತುಲನಾತ್ಮಕ ಬುದ್ಧಿ ಬೇಕು. ಈ ಬುದ್ಧಿ ಇಂದು ಭಾರತೀಯರಲ್ಲಿ ಕಾಣುತ್ತಿದೆಯೆ?

ಕಾಂಗ್ರೆಸಿಗರು ಮಾಡಿದ್ದೇ ಮಹತ್ವವೆನ್ನುವ, ಮತ್ತು ಕಾಂಗ್ರೆಸು ಮಾಡಿದ್ದೆಲ್ಲವೂ ಮಹದನ್ಯಾಯವೆನ್ನುವ ಎರಡು ಪಕ್ಷೀಯರ ಕುರಿತು ಗುಣ-ದೋಷ ವಿಮರ್ಶೆ ಮಾಡಿ ವಸ್ತುಸ್ಥಿತಿಯನ್ನು ಅರಿತುಕೊಂಡಿರುವ ತಜ್ಞರು ಮೂರನೇ ಪಕ್ಷವನ್ನಿಸುವಷ್ಟು ಇಲ್ಲಿದ್ದಾರೆಯೆ?

ಅಧಿಕಾರಕ್ಕೆ ಸಂಬಂಧಿಸಿದ ವಿಷಯಗಳ ಮಾತಂತಿರಲಿ, ನ್ಯಾಯಾನ್ಯಾಯಗಳ ಕುರಿತಾದರೂ ನಮ್ಮ ಜನರಿಗೆ ಅಧಿಕಾರ ಸ್ಥಾನದಲ್ಲಿರುವ ಒರ್ವನು ಹೇಳಿದ್ದೇ ಸತ್ಯವೆಂದು ತೋರಿದಂತೆ ಅನಧಿಕಾರಿಯೊಬ್ಬನ ಮಾತು ಮನಮುಟ್ಟುತ್ತಿದೆಯೆ?

ಇದೇ ರೀತಿ ಹಣವಂತನೊಬ್ಬನ ಗುಣ ನಡತೆ ಮಾತುಗಳು ಹೇಗಿದ್ದರೂ ಅವು ಸರ್ವಮಾನ್ಯವನ್ನಿಸುವಂತೆ, ಸಾಮಾನ್ಯನೊಬ್ಬನ ಮಾತು ವರ್ತನೆಗಳು ಎಷ್ಟು ಅಮೂಲ್ಯವಿದ್ದರೂ ಮನ್ನಿಸಲ್ಪಡುತ್ತಿವೆಯೆ? ಹಣವೊಂದೇ ಯೋಗ್ಯತೆಯಾಗಿದೆ ಹೊರತು ಯಾವುದೇ ವಿಭಾಗದಲ್ಲಿ ಅದಕ್ಕನುಗುಣವಾದ ನಿಜಯೋಗ್ಯತೆಎಲ್ಲಿ ಮನ್ನಿಸಲ್ಪಡುತ್ತಿದೆ?

ಅಂತೆಯೇ ಶಾಸನ ಕಡೆಗೂ! ನೀತಿವಾಕ್ಯವಾಗಿ—ಹಿತಬೋಧನೆಯಾಗಿ—ಯಾವುದೇ ಒಂದು ಸುಧಾರಣೆಯನ್ನು ಸೂಚಿಸಿದರೆ ಅದನ್ನಂಗೀಕರಿಸಿಕೊಳ್ಳುವ ನೀತಿಪರಿಚಿತರೆಷ್ಟು ಮಂದಿ? ಆದರೆ ಅದೇ ಸುಧಾರಣೆಯು ಶಾಸನವಾಗಿ ಜಾರಿಗೆ ಬಂದರೆ, ತಮ್ಮ ಆತ್ಮವಿಶ್ವಾಸದಂತೆ ಅದನ್ನು ಉಲ್ಲಂಘಿಸಬಲ್ಲ ನಿರ್ಭೀತರಾದರೂ ಯಾರಿದ್ದಾರೆ?

ಅಂದ ಮೇಲೆ ಯಾವುದು ಏನೇ ಆಗಲಿ; ಅದು ಎಂತಹದೇ ಇರಲಿ—ಒಮ್ಮೆ ಮೇಲ್ಗೈಯಾಯಿತೋ ಅದಕ್ಕಾಧೀನವಾಗುವದೊಂದೇ ನಮ್ಮ ಜನಕ್ಕೆ ಗೊತ್ತು ಹೊರತು ಎಷ್ಟೇ ಹೋರಾಡಿಯಾದರೂ ಸತ್ಯ ಮತ್ತು ನ್ಯಾಯವನ್ನು ಮೇಲ್ಗೈ ಮಾಡಬೇಕೆಂಬ ಮನಸ್ಸು ನಮ್ಮ ಜನರಲ್ಲಿಲ್ಲವೆಂಬುದು ಸ್ವಯಂವೇದ್ಯ.

ಜನತೆಯು, ಪ್ರಭಾವ-ಹಣ-ಅಧಿಕಾರ ರಂಗದಲ್ಲಿ ಯಾರು ಗೆಲ್ಲುತ್ತಾರೋ ಅವರ ಹಿಂದೆ ನಿಲ್ಲುತ್ತದೆ. ವಿಜಯವು ಲಂಚ, ವಂಚನೆ, ಯುಕ್ತಿಗಳಿಂದ ಸುಲಭಸಾಧ್ಯವಾದಷ್ಟು ನೇರಾದ ಹಾದಿಯಿಂದಾಗದೆಂಬುದಂತೂ ಖಂಡಿತ. ಹೀಗಾಗಿ ಈ ಕುಟಿಲದ ಹಾದಿಯಿಂದ ಆ ಸರ್ವಮಾನ್ಯ ವಿಜಯ ದೊರಕಿಸಿಕೊಳ್ಳುವ ಕಡೆಗಲ್ಲದೆ ಬೇರೆ ಕಡೆಗೆ ಯಾರೇಕೆ ಲಕ್ಷ್ಯ ಕೊಟ್ಟಾರು? 'ಗೆಲವೇ ನ್ಯಾಯ' ವೆಂದಿರುವಾಗ ಈ 'ಜಯಯಾನೆ ನ್ಯಾಯ' ಸಾಧನೆಯೊಂದನ್ನಲ್ಲದೆ ಬೇರಾವುದನ್ನು ಯಾರೇಕೆ ಮಾಡಿಯಾರು? ಇಂತಹ ವಾತಾವರಣದಲ್ಲಿ ಇದಕ್ಕಿಂತ ಪೂರ್ಣ ಭಿನ್ನವಾದ ಸಹಜ ಸತ್ಯ

[೨ನೇ ಪುಟ ನೋಡಿರಿ]

ಸುವಾಸನೆ ಮತ್ತು ಮಾಧುರತೆಯಿಂದ
ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Nilgiris)

ಮದ್ರಾಸು
ಅಳಿಯಸಂತಾನ
ಕಾನೂನು
ಇದರ
ಕನ್ನಡ ಪ್ರತಿಗಳು
ದೊರೆಯುತ್ತವೆ

ವಿವಾಹ ಮತ್ತು ಅದರ ಬಿಡುಗಡೆ, ಅಶನಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತ ವಾರಿಸ್ದಾರಿಕೆ. ಕುಟುಂಬ ಮತ್ತು ಅದರ ರಕ್ಷಣೆ, ವಿಭಾಗ ಮೊದಲಾದ, ಪ್ರತಿಯೊಬ್ಬ ಅಳಿಯ ಸಂತಾನಿಗನಿಗೂ ತಿಳಿದಿರಲೇಬೇಕಾದ ವಿಷಯಗಳಿಂದೊಡಗೂಡಿದೆ

ಕ್ರಯ 0-8-0. (ಟಪ್ಪಾಲು ಖರ್ಚು ಪ್ರತ್ಯೇಕ)

0-9-0 ಸ್ಟ್ಯಾಂಪು ಕಳಿಸಿದವರಿಗೆ ಒಡನೆ ಕಳಿಸಲ್ಪಡುವುದು.

ಸಿಗುವ ಸ್ಥಳ —

ನವಯುಗ ಪ್ರೆಸ್, ಉಡುಪಿ

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಶರತ್‌ಚಂದ್ರಬೋಸ್—

ಕೆಳದ ವಾರ ಪ್ರಕಟಿಸಿದಂತೆ ಪಶ್ಚಿಮ ಬಂಗಾಳ ಎಸೆಂಬ್ಲಿಗೆ, ದಕ್ಷಿಣ ಕಲ್ಕತ್ತಾ ಮತದಾರ ಕ್ಷೇತ್ರದಿಂದ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿ ಮತ್ತಿತರ ಇಬ್ಬರು ಉಮೇದ್ವಾರಿಗಳನ್ನು ಪ್ರಚಂಡ ಬಹುಮತದಿಂದ ಸೋಲಿಸಿ ಸೋಶಿಯಲಿಸ್ಟ್ ರಿಪಬ್ಲಿಕ್ ಪಕ್ಷದ ಶ್ರೀ ಶರಚ್ಚಂದ್ರ ಬೋಸರು ಆರಿಸಲ್ಪಟ್ಟಿದ್ದಾರೆ. ಈ ಚುನಾವಣೆ ಮತ್ತದರ ಫಲಿತಾಂಶವು ಅಖಿಲ ರಾಷ್ಟ್ರದ ಪ್ರಶ್ನೆಯಾಗಿ ಬೆಳೆದಿದ್ದಿತು; ಭಾರತೀಯರೆಲ್ಲರ ಹೃದಯದಲ್ಲೂ ಒಂದಲ್ಲೊಂದು ವಿಧದ ಪ್ರತಿಕ್ರಿಯೆಯನ್ನದು ಮೂಡಿಸಿದೆ. ಭಾರತೀಯರೆಲ್ಲರು—ಮುಖ್ಯವಾಗಿ ಕಾಂಗ್ರೆಸಿಗರು—ಆಳವಾಗಿ ವಿಚಾರಿಸಿ ನೋಡಬೇಕಾದ ಅಂಶ ಇಲ್ಲಿದೆ; ಮುಂದೆ ಉಪಯೋಗಕ್ಕೆ ಬೀಳಲಾಗುವಂತೆ ಕಲಿತುಕೊಳ್ಳಬೇಕಾದ ಪಾಠಗಳು ಇಲ್ಲಿವೆ. ಆದ್ದರಿಂದ ಕಲ್ಕತ್ತಾ ಚುನಾವಣೆಯನ್ನು ತುಸು ವಿವರವಾಗಿ ವಿಮರ್ಶಿಸಲಾಗಿದೆ.

ಕೌತುಕಕರ ಫಲಿತಾಂಶ

ಸ್ಪರ್ಧಿಸಿಕೊಂಡ ನಾಲ್ವರು ಉಮೇದ್ವಾರಿಗಳಿಗೆ ಬಿದ್ದ ಮತಗಳು ಹೀಗಿವೆ:—

ಶ್ರೀ. ಶರಚ್ಚಂದ್ರಬೋಸ್ (ಸೋಶಿಯಲಿಸ್ಟ್ ರಿಪಬ್ಲಿಕ್) 19030.

ಶ್ರೀ. ಸುರೇಶಚಂದ್ರದಾಸ್ [ಕಾಂಗ್ರೆಸ್] 5780.

ಶ್ರೀ. ದಿಲೀಪ್‌ಕುಮಾರ್ ಚೌಧರಿ [ಡೆಮೊಕ್ರೆಟಿಕ್ ವೇಂಗ್ವಾರ್ಡ್] 51.

ಶ್ರೀ. ಎಸ್. ಸಿ. ರಾಯ್ (ಸ್ವತಂತ್ರ) 13.

ಶ್ರೀ. ಯಸ್. ಯಮ್. ಭಟ್ಟಾಚಾರ್ಯರು ಉಮೇದ್ವಾರಿಕೆ ಹಿಂತೆಗೆಯುವ ವಾಯಿದೆ ದಾಟಿದ ನಂತರ ತನ್ನ ಉಮೇದ್ವಾರಿಕೆ ಹಿಂತೆಗೆದುಕೊಂಡುದರಿಂದ ಅವರು ಸ್ಪರ್ಧಿಸದಿದ್ದರೂ ನಿಯಮ ಪ್ರಕಾರ ಅವರ ಹೆಸರೂ ಪತ್ರಕ್ಕೆ ಬಿದ್ದು ಅವರಿಗೂ 12 ಮತಗಳು ಬಿದ್ದಿದ್ದುವು. ಬಿದ್ದ ಒಟ್ಟು ಮತಗಳ 1/10ನೇ ಅಂಶ ದೊರೆಯದವರ ಅಮಾನತ್ ಹಣ ಸ್ವಾಹಾ ಎಂಬ ನಿಯಮಾನುಸಾರ ಕೊನೆಯ ಮೂವರು ಉಮೇದ್ವಾರಿಗಳು ತಮ್ಮ ಹಣ ಕಳೆಕೊಂಡರು.

ಶ್ರೀ ಶರಚ್ಚಂದ್ರ ಬೋಸರ ವಿಜಯವು ಅನಿರೀಕ್ಷಿತವಾಗಿರಲಿಲ್ಲ. ಕಾಂಗ್ರೆಸಿಗರೇ ಇಲ್ಲಿ ತಮ್ಮ ಅಪಜಯವನ್ನು ನಿರೀಕ್ಷಿಸಿದ್ದರು. ದಕ್ಷಿಣ ಕಲ್ಕತ್ತ ಉಪಚುನಾವಣೆಗೆ ಕಾಂಗ್ರೆಸ್ ಉಮೇದ್ವಾರಿಯನ್ನು ನಿಲ್ಲಿಸುವುದೇ ಬೇಡವೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಕೆಲವು ಸದಸ್ಯರ ಅಭಿಪ್ರಾಯವಿತ್ತೆಂದೂ, ಆದರೆ ಬಂಗಾಳದ ಕಾಂಗ್ರೆಸಿಗರ ಒತ್ತಾಯದಿಂದಾಗಿಯೇ ಈ ಚುನಾವಣೆಯಲ್ಲಿ ಸ್ಪರ್ಧಿಸಲಾಯಿತೆಂದೂ ಈಗ ತಿಳಿದು ಬಂದಿದೆ. ಅಂತೂ ಶರಚ್ಚಂದ್ರರು ಗೆದ್ದುದು ಪರಿಸ್ಥಿತಿಯನ್ನರಿತಿರುವ ಕಾಂಗ್ರೆಸ್ ನಾಯಕರಲ್ಲಿ ಯಾವ ಆಶ್ಚರ್ಯವನ್ನೂ ನಿರ್ಮಿಸಿಲ್ಲ; ಆದರೆ ಶರಚ್ಚಂದ್ರರು ಅಷ್ಟು ಪ್ರಚಂಡ ಬಹುಮತ ಪಡೆದು ಗೆದ್ದುದು ನಿಜಕ್ಕೂ ಎಲ್ಲರನ್ನೂ ಕೌತುಕಗೊಳಿಸಿದೆ. ಶ್ರೀ ಶರಚ್ಚಂದ್ರಬೋಸರಿಗೆ 19030 ವೋಟುಗಳು ಬೀಳುವಾಗ ಶ್ರೀ ಸುರೇಶ್‌ಚಂದ್ರ ದಾಸರಿಗೆ 5780 ವೋಟುಗಳು ಮಾತ್ರ ಬಿದ್ದುವೆಂದ ಮೇಲೆ ಅವರಿಗೆಮೂರಕ್ಕಿಂತಲೂ ಹೆಚ್ಚಿಗೆ ದೊರೆತಾಗಇವರಿಗೆ ಒಂದು ಮಾತ್ರ ದೊರೆತಂತಾಯಿತು. ಆ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸಿಗಿಂತ ಸೋಶಿಯಲಿಸ್ಟ್ ರಿಪಬ್ಲಿಕ್ ಪಕ್ಷಕ್ಕೆ ಎನ್ನಲಾಗುವದಿಲ್ಲವಾದರೂ—ಕಾಂಗ್ರೆಸಿಗಿಂತ ಅಥವಾ ಕಾಂಗ್ರೆಸ್ ಉಮೇದ್ವಾರಿಗಿಂತ ಶ್ರೀ ಶರಚ್ಚಂದ್ರ ಬೋಸರಿಗೆ ಬೆಲೆ ಮೂರು ಪಾಲು ಹೆಚ್ಚಿಗಿದೆ ಎಂದಾಯಿತು! ಉಳಿದ ಇಬ್ಬರು ಉಮೇದ್ವಾರಿಗಳಲ್ಲಿದ್ದುದು ಪಕ್ಷ ಘಾಟಿಕೆ ಹೊರತು ಮತದಾರರ ನಂಬಿಕೆಯಲ್ಲವೆಂಬುದಂತೂ ಸ್ವತಃ ಸಿದ್ಧ. ಮನುಷ್ಯನ ಆಶೆ, ನಿರೀಕ್ಷೆಗಳು ಎಷ್ಟು ವಿಕಾರ ವಿರುತ್ತವೆ ಎಂಬುದಕ್ಕೆ ಅವರಿಬ್ಬರ ಉಮೇದೇ ನಿದರ್ಶನ ಸುಮಾರು 62000 ಮತದಾರರುಳ್ಳ ದಕ್ಷಿಣ ಕಲ್ಕತ್ತಾ ಕ್ಷೇತ್ರದಲ್ಲಿ ಮತದಾನ ಮಾಡಲು ಬಂದವರು 25,000ದಷ್ಟು. ಇಡೀ ರಾಷ್ಟ್ರದಲ್ಲೇ ಆತುರೋದ್ವೇಗವನ್ನು ನಿರ್ಮಿಸಿದ್ದ ಈ ಚುನಾವಣೆಯಲ್ಲಿ, ಸಂಚಾರಾನುಕೂಲತೆಯುಳ್ಳ ದೊಡ್ಡ ನಗರದಲ್ಲಿದ್ದು ಆದಿತ್ಯವಾರದ ಪದ್ಧತಿಯ ರಜೆಯೇ ಇದ್ದ ಸುಶಿಕ್ಷಿತ ಮತದಾರರು ಇಬ್ಬರಲ್ಲೊಬ್ಬನಂತಾದರೂ ಮತದಾನಮಾಡಲು ಮುಂದೆ ಬಾರದಿದ್ದುದು ಆಶ್ಚರ್ಯ. ಭಯ ಅಥವಾ ಬೇಸರದಿಂದಲ್ಲದೆ ಇಷ್ಟು ಹೆಚ್ಚಿನವರು ಹಿಂದುಳಿಯಲು ಕಾರಣವಿಲ್ಲ. ಚುನಾವಣೆಯಲ್ಲಿ ಗೆಲ್ಲಬೇಕಾದರೆ ಅಧಿಕ ಸಂಖ್ಯೆಯ ಮತಗಳು ದೊರೆಯಬೇಕೆಂಬ ನಿಯಮವಿದ್ದಂತೆಯೇ, ಚುನಾವಣೆಯು ಸಿಂಧುವಾಗಬೇಕಾದರೆ ಅಧಿಕಸಂಖ್ಯೆಯ ಮತದಾರರು ಅದರಲ್ಲಿ ಭಾಗವಹಿಸಬೇಕು ಎಂಬ ನಿಯಮವಿರುತ್ತಿದ್ದರೆ ಕಲ್ಕತ್ತದ ಆ ಚುನಾವಣೆಯು ಅಸಿಂಧು!

ಬೋಸ್ ವಿಜಯಕ್ಕೆ ಕಾರಣ

ಶ್ರೀ ಶರತ್‌ಚಂದ್ರ ಬೋಸರನ್ನು ಕಲ್ಕತ್ತ ಅಥವಾ ಬಂಗಾಳದ ಮಾತ್ರವೇ—ಅಖಿಲ ಭಾರತವೇ ದೀರ್ಘಕಾಲದಿಂದ ಅರಿತಿದೆ. ಆದರೆ ಅವರನ್ನು ಕಲ್ಕತ್ತದಲ್ಲಿ ಇದಿರಿಸಿನಿಂತ ಕಾಂಗ್ರೆಸ್ ಉಮೇದ್ವಾರಿಯ ಹೆಸರನ್ನು ಕೂಡಾ ಈ ಚುನಾವಣೆಯ ಮೊದಲು ಹೆಚ್ಚಿನವರು ಕೇಳಿರಲಿಲ್ಲ. ಈ ಬಾರಿ ಒತ್ತೊತ್ತಾಗಿ ಹಲವು ಸಲ ಕೇಳಿ ಬಂದಿದ್ದರೂ ಈಗ ಕೂಡಾ "ಶರತ್‌ಚಂದ್ರರ ಇದಿರು ನಿಂತ ಕಾಂಗ್ರೆಸ್ ಉಮೇದ್ವಾರಿಯಾರು?" ಎಂಬ ಪ್ರಶ್ನೆಯನ್ನು ಥಟ್ಟನೇ ಉತ್ತರಿಸಿ ಪಾಸಾಗಬಲ್ಲವರು ಕಡಿಮೆ. ಅರ್ಥಾತ್ ಸುಪ್ರಸಿದ್ಧನೊಬ್ಬನಿದಿರು ಅಪ್ರಸಿದ್ಧನೊಬ್ಬನನ್ನು ನಿಲ್ಲಿಸಿದ್ದರು. ಶರತ್‌ಚಂದ್ರರ ಪ್ರಸಿದ್ಧಿಯಾದರೋ 'ಕಾಂಗ್ರೆಸ್ ಪುಡಾರಿ' 'ಸ್ವಾತಂತ್ರ್ಯ ಯೋಧ' ನೆಂಬುದೇ ಹೊರತು ಬೇರಲ್ಲ. ಈ ಚುನಾವಣಾ ಹೋರಾಟದ ಹೊತ್ತಿಗೆ ಅವರೆಷ್ಟೇ ಕಾಂಗ್ರೆಸ್ ವಿರೋಧಿಯಿದ್ದರೂ ಆಗ ಕೂಡಾ ಹೆಚ್ಚಾಗಿ ನೆನಪಿಗೆ ಬರುವಷ್ಟು ಅಂದಿನ ಅವರ ಸ್ವಾತಂತ್ರ್ಯ ಯೋಧತ್ವವಿದ್ದಿತು. ಹಿಂದು ಮುಂದಿನ ಕಾಲಗಳಲ್ಲಿ ಕಾಂಗ್ರೆಸಿನೊಂದಿಗೆ ಭಿನ್ನಾಭಿಪ್ರಾಯಗೊಂಡು ಬೇರೆಹೋಗುವ ಚಟವಿದ್ದರೂ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂದರ್ಭ ಬಂದಾಗಲೆಲ್ಲಾ, ಮಿಕ್ಕೆಲ್ಲವನ್ನೂ ಮರೆತು ರಣಕಣಕ್ಕೆ ಧುಮುಕುತ್ತಿದ್ದವರು ಬೋಸ್ ಸಹೋದರರು. ಇಂದು ಕಾಂಗ್ರೆಸ್ ಆಡಳಿತೆಯ ಉಚ್ಚ ಸ್ಥಾನಗಳಲ್ಲಿರುವ ಕೆಲವರು, ತಮಗಿರುವ ಭಿನ್ನಾಭಿಪ್ರಾಯಗಳ ನೆವನ ಹೇಳಿ, ಸ್ವಾತಂತ್ರ್ಯಹೋರಾಟದಿಂದ ಆ ದಿನತಪ್ಪಿಸಿಕೊಂಡವರೆಂಬುದನ್ನು ನೆನಸಿ, ಅವರೊಂದಿಗೆ ಬೋಸ್‌ಸಹೋದರರನ್ನು ತುಲನೆಮಾಡಿದರೆ ರಾಷ್ಟ್ರದ ಈ ಆಪದ್ಬಂಧುಗಳ ಕುರಿತು ಗೌರವ ಮೂಡಲೇಬೇಕು. ಅದಲ್ಲದೆ ಒಂದು ವಿಶಿಷ್ಟ ರೀತಿಯಿಂದ ರಾಷ್ಟ್ರ ಸೇನಾನಿತ್ವ ವಹಿಸಿ ಹಿಂದೀಯರ ಹೃದಯವನ್ನು ತುಂಬಿರುವ ನೇತಾಜಿಯನ್ನು ಮರೆಯಬಲ್ಲವರಾರು? ಶರತ್ ಚಂದ್ರ ಬೋಸರು ನೇತಾಜೀ ಸುಭಾಷ್ಚಂದ್ರ ಬೋಸರ ಖಾಸಾ ಅಣ್ಣ. ವ್ಯಕ್ತಿ ಪ್ರಭಾವ ಹೀಗಿದ್ದರೆ ದಕ್ಷಿಣ ಕಲ್ಕತ್ತದ ಆ ಮತದಾರ ಕ್ಷೇತ್ರವೆಂತಹದೆಂಬುದನ್ನು ನೋಡೋಣ. ಅದು ಆದಿಯಿಂದಲೂ, ಬೋಸ್ ಸಹೋದರರು ನಿಂತು ಗೆಲ್ಲಲು ಅವರಿಗಾಗಿ ಮೀಸಲಿಟ್ಟಂತಿರುವ ಕ್ಷೇತ್ರ. ಪ್ರಥಮತಃ ಶ್ರೀ ಸುಭಾಸಚಂದ್ರ ಬೋಸರು ಈ ಕ್ಷೇತ್ರದಿಂದಲೇ ಬಂಗಾಳಾ ಎಸೆಂಬ್ಲಿಗಾರಿಸಲ್ಪಟ್ಟಿದ್ದರು; ಆ ಮೇಲೆ ಅವರ ಮತ್ತು ಶರತ್ ಚಂದ್ರರ ಅಣ್ಣ ಶ್ರೀ ಸತೀಶಚಂದ್ರ ಬೋಸರು ಇಲ್ಲಿಂದಲೇ ಚುನಾವಣೆಗೊಂಡಿದ್ದರು; ಇವರು ನಿಧನಗೊಂಡು ಖಾಲಿ ಬಿದ್ದ ಸ್ಥಾನಕ್ಕೇನೇ ಮೊನ್ನೆ ಚುನಾವಣೆ ನಡೆದುದು. ಇಲ್ಲಿಯೂ ಕಾಂಗ್ರೆಸು ಸ್ಪರ್ಧಿಸಿದಾಗ ತಮ್ಮ ಜನಪ್ರಿಯ ನಾಯಕ ಸರಣಿಯ ಒಂದು ಕೊಂಡಿಯನ್ನು ಕಡಿಯಲು ಅದು ನೋಡುತ್ತಿರುವದಷ್ಟೇ ಅಲ್ಲ. ತಮ್ಮ ಆತ್ಮೀಯನೊಬ್ಬನ ವಾರೀಸ್ ಹಕ್ಕನ್ನೇ ಅದು ಕಸಗೊಳ್ಳಲಿಚ್ಛಿಸುತ್ತಿದೆ ಎಂಬ ರೋಷ ಬಂಗಾಳಿಗಳಲ್ಲಿ ಮೂಡಿತು. ಇನ್ನು ಆ ಮತದಾರರಾದರೋ ಎಂಥವರು? ಸ್ವಾಭಿಮಾನ, ಸ್ವಜನಾಭಿಮಾನ, ಸ್ವನಾಯಕರ ಮೇಲೆ ಪ್ರಾಣಾವಧಿ ಭಕ್ತಿ ವಿಶ್ವಾಸವಿರುವ ಕಲ್ಕತ್ತಾ ನಗರದ ಸುಶಿಕ್ಷಿತ ಬಂಗಾಳಿಗಳು. ರಾಷ್ಟ್ರ ವಿಭಜನೆಯ ಪೂರ್ವೋತ್ತರ ದಿನಗಳ ಜಾತೀಯ ಗೊಂದಲಗಳಲ್ಲಿ ಸಹಸ್ರಾರು ಮಂದಿಯನ್ನು ಬಲಿಗೊಟ್ಟರೂ ಎದೆಗುಂದದೆ, ಮಿಕ್ಕೆಡೆಗಳವರು ಬಾಯಿ

[೧ನೇ ಪುಟದಿಂದ ಮುಂದುವರಿದುದು]

ಮತ್ತು ನ್ಯಾಯ ಮೊಳೆಯಲೆಡೆಯಲ್ಲಿದೆ?

ಪರಕೀಯರಾಡಳಿತೆಯಿದ್ದಾಗ ಆಗಿನ ಕಾನೂನು ಚಾಲಕರಿಗಿಂತ ಕಾನೂನು ಭಂಜಕರೇ ಸರ್ವ ಮಾನ್ಯರಾಗಿದ್ದರು; ಶ್ರೀಮಂತರಿಗಿಂತ ತ್ಯಾಗಿಗಳೇ ಮಾನನೀಯರಾಗಿದ್ದರು; ಗತಕಾಲದ ಕೀರ್ತಿ, ಬಿರುದು ಬಾವಲಿಗಳನ್ನು ಹೊತ್ತವರಿಗಿಂತ ಆ ಕಾಲದ ಸ್ವಾತಂತ್ರ್ಯ ಯೋಧರೇ ಪ್ರಭಾವಶಾಲಿಗಳಾಗಿದ್ದರು. ಆದರೆ ಸ್ವಾಡಳಿತೆ ಬಂದೊಡನೆ ಈ ಸ್ಥಿತಿ ಪೂರ್ಣ ಅದಲು ಬದಲಾಗಿದೆ.

ಸ್ವತಂತ್ರ ಭಾರತವು ಬೇರೆಲ್ಲಿ ಮುಂಗಡೆಗೆ ಮುಖ ಮಾಡಿದ್ದರೂ ಮಾನಸಿಕ ರಂಗದಲ್ಲಿ ಹಿಮ್ಮೊಗವಾಗಿದೆ!

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು. ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾದಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಉತ್ತಮ

—ಉಪಾಹಾರ ಮಂದಿರ

ವೀರ ಭಾರತ ವಿಶ್ರಾಂತಿ ಗೃಹ

(ನ್ಯೂ ಯೂನಿಯನ್ ಮಿಲ್ಸಿನ ಎದುರು)

ಡಿಲಿಸ್ಲೆ ರೋಡು

ಬೊಂಬಾಯಿ 13

— ವಿಜಯದ ಒಳನೋಟ

ಯೆತ್ತುವ ಸಂದರ್ಭಗಳಲ್ಲಿ ಕೂಡಾ ಕೈಯೆತ್ತುವದೊಂದನ್ನೇ ಅಭ್ಯಾಸವಾಗಿ ಮಾಡಿಕೊಂಡಿರುವ ಉಗ್ರ ಸ್ವಭಾವಿಗಳು. ಇಂತಹ ಬಂಗಾಳಿಗಳಿರುವ ಅಂತಹ ಮತದಾರಕ್ಷೇತ್ರದಲ್ಲಿ ಆ ಮಾದರಿಯ ನಾಯಕರಿಗಿದಿರಾಗಿ ಕಾಂಗ್ರೆಸು ತನ್ನ ಉಮೇದ್ವಾರಿಯನ್ನು ಜಟ್ಟೀಕಣಕ್ಕಿಳಿಸಿ ಗೆಲ್ಲುವಂತಿದೆಯೆ? ಆದ್ದರಿಂದ ಕಲ್ಕತ್ತದಲ್ಲಾದ ಕಾಂಗ್ರೆಸ್ ಸೋಲಿನಲ್ಲಿ ಆಶ್ಚರ್ಯವೇನೂ ಇಲ್ಲ. ಇನ್ನು ಸೋಲು ಇಷ್ಟೊಂದು ಪ್ರಚಂಡವಾಗಿ ಪರಿಣಮಿಸಿರುದು ಸೋಜಿಗವನ್ನು ನಿರ್ಮಿಸಿದೆ. ಇದರ ಕಾರಣವೂ ಸುಸ್ಪಷ್ಟವಿದೆ. ಸ್ವಾತಂತ್ರ್ಯದಿಂದ, ಮತ್ತು ಕಾಂಗ್ರೆಸ್ ಆಡಳಿತೆಯಿಂದ ಜನತೆ ನಿರೀಕ್ಷಿಸಿದ್ದಷ್ಟನ್ನು ಈವರೆಗೆ ಪಡೆದಿಲ್ಲ. ಇದಕ್ಕೆ ಒಂದು ಕಾರಣ ಕಾಲಸ್ಥಿತಿ; ಮತ್ತೊಂದು ಕಾರಣ ಕಾಂಗ್ರೆಸಿಗರ ಮನೋವೃತ್ತಿ. ಭಾರತದ ಪಾಲಿಗೆ ಯಾವ ಪಕ್ಷವು ಅಧಿಕಾರದಲ್ಲಿದ್ದರೂ, ಬಗೆಹರಿಸಿಕೊಳ್ಳಲಿಕ್ಕಾಗದ ಹೊಸ ಹೊಸ ಆಪತ್ತುಗಳನ್ನೂ ಬಿಗುಬಿಗು ಸಮಸ್ಯೆಗಳನ್ನೂ ಒಳಗೊಂಡಿರುವ ಯುದ್ಧೋತ್ತರ ಹಾಗೂ ಪರದಾಸ್ಯಾನಂತರದ ಪರೀಕ್ಷಾ ಕಾಲವಿದಾಗಿದ್ದರೆ, ತಾವು ಪವಿತ್ರರು ಮತ್ತು ಪರಿಪೂರ್ಣರೆಂಬ ಅಹಂಭಾವ ಹೆಚ್ಚಿನಂಶ ಇಂದಿನ ಕಾಂಗ್ರೆಸಿಗರಲ್ಲಿ ತುಂಬಿದೆ. ಇವೆರಡು ಸ್ಥಿತಿಗಳೂ ಜನಸಾಮಾನ್ಯರ ಆವಶ್ಯಕತೆಗಳ ಕಡೆಗೆ ಲಕ್ಷ್ಯಕೊಡುವುದನ್ನು ಅಸಾಧ್ಯಗೊಳಿಸುವಂತಹವು ಮತ್ತು ಅಸಕ್ತಿ ಮಾಡಿಸುವಂತಹವು; ತತ್ಪ್ರತಿಕ್ರಿಯೆಯಾಗಿ ಜನತೆಯಲ್ಲಿ ನಿರಾಶೆ ಮತ್ತು ದ್ವೇಷ ಭಾವನೆಯನ್ನು ಮೂಡಿಸುವಂತಹವು. ಇಂದು ಹಾಗಾಗುತ್ತಾ ಹೋಗಿದೆ. ಈ ಅಂಶವೂ ಸೇರಿ ಕಲ್ಕತ್ತದಲ್ಲಿ ಕಾಂಗ್ರೆಸಿನ ಪರಾಭವ ಅಷ್ಟು ಪ್ರಚಂಡವಾಯಿತು.

ಕಾಂಗ್ರೆಸಿನ ಅಧಿಕಪ್ರಸಂಗ?

ಒಂದು ಚುನಾವಣೆ—ಒಂದು ಯುದ್ಧ—ಒಂದು ಆಟ, ಯಾಕೆ, ಒಂದು ಜೀವನ ಹೋರಾಟದಲ್ಲಿ ಕೂಡಾ ಸೋಲು ಗೆಲವು ಮುಖ್ಯವಲ್ಲ; ನ್ಯಾಯಾನ್ಯಾಯವೊಂದೇ ಮುಖ್ಯ. ಯಾವುದರಲ್ಲೇ ಆಗಲಿ, ನ್ಯಾಯವಾಗಿ ಹೋರಾಡಿ ಸೋತವರು ವಸ್ತುತಃ ಗೆದ್ದಂತೆ; ಅನ್ಯಾಯವಾಗಿ ಮೇಲಾಡಿದವರೂ ಸತ್ಯಕ್ಕೂ ಸೋತಂತೆ. ಈ ದೃಷ್ಟಿಯಿಂದ ಕಲ್ಕತ್ತದಲ್ಲಿ ಕಾಂಗ್ರೆಸಿಗಾದುದು ಜಯವೋ ಅಪಜಯವೋ ಎಂದು ಪ್ರತ್ಯೇಕವಾಗಿ ವಿಚಾರಿಸಲಿಕ್ಕಿದೆ. ಶರತ್ ಚಂದ್ರ ಬೋಸರಿದಿರು ದಕ್ಷಿಣ ಕಲ್ಕತ್ತದ ಮತದಾರ ಕ್ಷೇತ್ರದಲ್ಲಿ, ಸ್ವಯಂ ಮಹಾತ್ಮರು ಪಂಡಿತ ನೆಹರು ಅಥವಾ ಸರ್ದಾರ್ ಭಾಯಿ ನಿಂತಿದ್ದರೂ ಗೆಲ್ಲುತಿದ್ದರೇ ಎಂಬ ಪ್ರಶ್ನೆಯಿದೆ. ತಾವೀಬಾರಿ ನಿಲ್ಲಿಸುವ ಉಮೇದ್ವಾರಿ ಗೆಲ್ಲಲಾರನೆಂಬುದಂತೂ ಮೊದಲೇ ಕಾಂಗ್ರೆಸಿಗರಿಗೆ ತಿಳಿದಿದ್ದಿತು. ಅಂದ ಮೇಲೆ ಕಾಂಗ್ರೆಸಿಗರು ಸ್ಪರ್ಧಿಸಿದುದು ಅಧಿಕ ಪ್ರಸಂಗವಲ್ಲವೆನ್ನುವವರಿದ್ದಾರೆ. ಹಾಗಲ್ಲ. ಕಾಂಗ್ರೆಸು ಒಂದು ಧೋರಣೆ ಮತ್ತು ಕಾರ್ಯಕ್ರಮಗಳನ್ನು ಕಟ್ಟಿಕೊಂಡಿರುವ ರಾಜಕೀಯ ಪಕ್ಷ. ಭಾವೀ ಪರಿಣಾಮದತ್ತ ದೃಷ್ಟಿ ಹಾಕದೆ, ಕಾಲಿನ ಕರ್ತವ್ಯವಾಗಿ ಅದು ಪ್ರತಿಯೊಂದು ಸ್ಥಾನಕ್ಕೂ ಸ್ಪರ್ಧಿಸುವದು ಎಂದಿಗೂ ತಪ್ಪಲ್ಲ. ಆದರೆ ಸಕಾರಣವಾಗಿ ಅಲ್ಲಲ್ಲಿ ಒಂದೊಂದು ಸ್ಥಾನವನ್ನು ಅದು ಸ್ಪರ್ಧಿಸದೆ ಬಿಟ್ಟಲ್ಲಿ, ಅದರಿಂದ ತತ್ವ ಭಂಗಮಾಡಿದ ದೋಷವೇನೂ ತಟ್ಟಲಾರದು. ತನ್ನ ರೀತಿ ನೀತಿಗಳನ್ನು ಜನತೆಯ ಮುಂದಿರಿಸಿ, ಶಾಸನ ಸಭೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವ ಮಾತು ಬೇರೆ; ಜಯಾಪಜಯಗಳನ್ನು ಮುಂದಾಗಿ ಊಹಿಸಿ ವ್ಯವಹಾರಜ್ಞರಂತೆ ಯಾವುದಾದರೊಂದೆಡೆ ಹಿಂದೆಗೆದು ನಿಲ್ಲುವ ಪ್ರಶ್ನೆ ಪ್ರತ್ಯೇಕ. ರಾಷ್ಟ್ರರಕ್ಷಣೆಗಾಗಿ ಹೋರಾಟಕ್ಕಿಳಿಯದೆ ಬಿಟ್ಟಲ್ಲಿ ಅದು ಅಪರಾಧವೆನ್ನಿಸುವಂತೆ, ಆ ಹೋರಾಟದ ವೇಳೆ ಅಪಜಯವನ್ನು ನಿರೀಕ್ಷಿಸಿ ಯಾವುದಾದರೊಂದೆಡೆ ಸೇನೆ ಹಿಂದೆಳೆದುಕೊಳ್ಳುವದು ತಪ್ಪಲ್ಲ; ಅದು ಸೋಲಲ್ಲ. ಅಂತೆಯೇ ಶ್ರೀ ಶರತ್ ಚಂದ್ರಬೋಸರಿದಿರಾಗಿ ಕಾಂಗ್ರೆಸು ಮುಂದೆ ಹೋಗದಿರುತಿದ್ದರೆ ತತ್ವ ಭಂಗವಾಗುತ್ತಿರಲಿಲ್ಲ; ಪ್ರಾಯಶಃ ಕೆಲವೇ ಮಂದಿ ಬಂಗಾಳೀ ಕಾಂಗ್ರೆಸಿಗರ ಹೊರತು ದೂರುವವರೂ ಇರುತಿದ್ದಿಲ್ಲ. ಆದರೂ ಕಾಂಗ್ರೆಸು ಅಲ್ಲಿ ಸ್ಪರ್ಧಿಸಿತೇಕೆ? ಹಿಂದಿನ ಕಾಲದಲ್ಲಿ ಪಂಡಿತ ಮಾಲವೀಯರಂತಹ ಅನ್ಯಪಕ್ಷೀಯರ ಮೇಲಿನ ವ್ಯಕ್ತಿ ಗೌರವದಿಂದ ಅಂಥವರಿದಿರು ತನ್ನ ಉಮೇದ್ವಾರಿಯನ್ನು ಹಾಕದಿದ್ದ ನಿದರ್ಶನಗಳು ಕಾಂಗ್ರೆಸ್ ಪಕ್ಷದ ದಾಖಲೆಯಲ್ಲಿಲ್ಲವೆ? ಕೇಂದ್ರದ ಕಾಂಗ್ರೆಸ್ ಸರಕಾರದೊಳಗೆ, ಕಾಂಗ್ರೆಸೇತರರು—ಯಾಕೆ, ಕಾಂಗ್ರೆಸಿನ ಮಾಜೀ ವೈರಿಗಳು—ಇಂದು ಕೂಡಾ ಸೇರಿಕೊಂಡಿಲ್ಲವೆ? ಅಂದ ಮೇಲೆ ಒಂದು ಕಾಲದಲ್ಲಿ, ಮತ್ತೊಂದಾದರೂ ಕೆಲವು ಸಂದರ್ಭಗಳಲ್ಲಿ ತೋರಿಬಂದಿರುವ ಕಾಂಗ್ರೆಸ್ ಔದಾರ್ಯವು ಶ್ರೀ ಶರತ್ ಚಂದ್ರ ಬೋಸರ ಪಟ್ಟಿಗೇಕೆ ಮುಂದೆ ಬರಲಿಲ್ಲ? "ಕಲ್ಕತ್ತದ ಪರಾಭವವು ಕಾಂಗ್ರೆಸಿಗಾದ ಪರಾಭವವಲ್ಲ; ಅದು ಶ್ರೀ ಶರತ್ ಚಂದ್ರ ಬೋಸರ ವ್ಯಕ್ತಿತ್ವಕ್ಕಾದ ವಿಜಯಮಾತ್ರ" ಎಂಬ ವಾದವಿಂದು ಕಾಂಗ್ರೆಸಿಗರಿಂದ ಕೇಳಬರುತ್ತಿದೆ. ಹೌದು; ಅದು ವಸ್ತುಸ್ಥಿತಿ. ಆದರೆ ಇದೇವಾದವನ್ನು ಕಾಂಗ್ರೆಸಿಗರು ತಿರುಗಿಸಿ ಹಿಡಿದು ನೋಡಲಿ—ಕಾಂಗ್ರೆಸಿಗಾಗಿರುವ ವಿಜಯಗಳಲ್ಲಿ ಹೆಚ್ಚಿನವುಗಳಿಗೆ ಇದು ಲಗಾವಾಗಲಾರದೆ? ಅದೇಕೆ-ಈ ವಾದಾನುಸಾರವಾಗಿ "ಇಂದು ಜನತೆಯ ವಿಶ್ವಾಸವಿರುವುದು ಕೇಂದ್ರಾಧಿಕಾರದಲ್ಲಿರುವ ಕಾಂಗ್ರೆಸಿನ ಮೇಲಲ್ಲ; ವ್ಯಕ್ತಿಶಃ ನೆಹರೂ ವಲ್ಲಭಾಯಿಗಳ ಮೇಲೆ" ಎಂದರೆ ಒಗ್ಗದೆ? ಶ್ರೀ ಶರತ್ ಚಂದ್ರ ಬೋಸರೇ ನಾಯಕ ಮತ್ತು ಸ್ಥಾಪಕರಾಗಿರುವ "ಸೋಶಿಯಲಿಸ್ಟ್ ರಿಪಬ್ಲಿಕ್" ಪಕ್ಷದ ಹೆಸರು ಅವರ ಇದಿರುವಾದಿ ಕಾಂಗ್ರೆಸ್ ಉಮೇದ್ವಾರಿಯ ಹೆಸರಿನಷ್ಟು ದೇಶಕ್ಕೆ ಪರಿಚಿತವಾದುದಲ್ಲ-ಈ ಶರತ್ ಚಂದ್ರ ಬೋಸರ ಹೆಸರು ದೇಶದ ಪಾಲಿಗೆ ಅವರನ್ನಿದಿರಿಸಿದ ಕಾಂಗ್ರೆಸಿನ ಹೆಸರಿನಷ್ಟು ಎಂದಿಗೂ ಆತ್ಮೀಯವಾಗಲಾರದು. ಈ ರೀತಿ ಸೋತಕಡೆಯಲ್ಲ ಪಕ್ಷ ಬಲವಿದ್ದರೆ, ಗೆದ್ದ ಕಡೆಯಲ್ಲಿ ಕೇವಲ ವ್ಯಕ್ತಿ ಬಲವಿದ್ದಿತೆಂಬುದಂತೂ ಖಂಡಿತ. 'ಸೋಶಿಯಲಿಸ್ಟ ರಿಪಬ್ಲಿಕ್' ಪಕ್ಷವು ಕಾಂಗ್ರೆಸನ್ನೆಂದಾದರೂ ಸೋಲಿಸುವ ದಿನ ಬಂದೀತೆಂದು ನಿರೀಕ್ಷಿಸುವವದಂತಿರಲಿ-ಬಂಗಾಳದಲ್ಲಾದರೂ ಅದಿನ್ನು ಮುಂದೆ ಸಾಕಷ್ಟು ಸ್ಥಾನಗಳನ್ನು ಗಳಿಸುವಂತಹದಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷವು ಇಂದಿನ ಬೇರಾವುದೇ ಪಕ್ಷದಿದಿರು ಸೋಲುವಂತಹದಲ್ಲವೆಂಬ ವಿಶ್ವಾಸಕ್ಕೆ ಕಲ್ಕತ್ತದ ಚುನಾವಣೆಯಿಂದಾದರೂ ಭಂಗ ಬಂದಿಲ್ಲ. ಆದರೆ 'ಕಾಂಗ್ರೆಸು ಎಂತಹ ಪ್ರಭಾವದಿದಿರಲ್ಲೂ ಸೋಲಲಾರದು' ಎಂಬ ನಂಬಿಕೆಯು ಕಲ್ಕತ್ತದಲ್ಲಿ ಕಳಚಿಬಿತ್ತು-ಶ್ರೀ ಶರತ್ ಚಂದ್ರಬೋಸರ ವ್ಯಕ್ತಿಪ್ರಭಾವದಿದಿರಲ್ಲಿ ಅದು ಸೋತು ಹೋಯಿತು. ಮೊದಲೇ ಹೇಳಿರುವಂತೆ ಕಾಲಸ್ಥಿತಿ ಮತ್ತು ಕಾಂಗ್ರೆಸಿಗರ ಮನೋವೃತ್ತಿಯ ದೆಸೆಯಿಂದಾಗಿ ಕಾಂಗ್ರೆಸಿನ ಜನಪ್ರಿಯತೆಯು ಒಳಗಿಂದೊಳಗೆ ಕುಸಿಯುತ್ತಾ ಹೋಗುತ್ತಿರುವಂತೆಯೇ, ಅದರ ವಿರುದ್ಧವಾಗಿ ಅಲ್ಲಲ್ಲಿ, ವಿವಿಧ ರೀತಿಯಿಂದ ಇಂತಹ ಪ್ರಭಾವಗಳು ಬೆಳೆಯುತ್ತಾ ಹೋಗುತ್ತಿವೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕಲ್ಕತ್ತದಲ್ಲಾದಂತಹ ಅಪಜಯಗಳನ್ನು ಇನ್ನು ಮುಂದೆ ಕಾಂಗ್ರೆಸು ಅನುಭವಿಸುತ್ತಾ ಹೋಗಬೇಕಾದೀತೆಂಬುದೇ ಇಲ್ಲಿರುವ ಸ್ಪಷ್ಟ ಸೂಚನೆ.

> **ಕಾಂಗ್ರೆಸಿಗರ ಕಣ್ಣಿಗಿದು ಅಂಜನ-ಕಾಂಗ್ರೆಸಿಗರು ಆತ್ಮ ವಿಶ್ವಾಸದಿಂದಿರುವ ಬದಲು ಆತ್ಮವಿಮರ್ಶೆ ಮಾಡಿಕೊಳ್ಳುವಂತಾದ ಪ್ರಸಂಗ-'ಹಾದಿ ತಪ್ಪುತ್ತಿರುವಿ' ಎಂದು ಕಾಂಗ್ರೆಸಿಗೊಂದೆಡೆ ಚಿವುಟ ಕೊಟ್ಟ ಎಚ್ಚರಿಕೆ!**

ವಿ. ಸೂ:—ನೆಹರು ಮತ್ತು ವಲ್ಲಭಾಯಿಗಳು ಕಾಂಗ್ರೆಸಿಗೇನೇ ಬೆಂಬಲವಾಗಬೇಕೆಂದು ದ. ಕಲ್ಕತ್ತದ ಮತದಾರರನ್ನು ಆಗ್ರಹಪೂರ್ವಕ ಕೇಳಿಕೊಂಡಿದ್ದರೆಂಬುದನ್ನೂ ಕಾಂಗ್ರೆಸಿನ ಮುಖ್ಯ ಕಾರ್ಯದರ್ಶಿ ಸಮೇತ ಹಲವುಮಂದಿ ಗಣ್ಯ ಕಾಂಗ್ರೆಸ್ ಕಾರ್ಯಕರ್ತರು ಪ್ರಚಾರ ಕಾರ್ಯಕ್ಕಾಗಿ ಕಲ್ಕತ್ತೆಗೆ ಹೋಗಿದ್ದರೆಂಬುದನ್ನೂ ಈ ಸಂದರ್ಭದಲ್ಲಿ ಗಮನಿಸತಕ್ಕದ್ದು.

ಕಾಂಗ್ರೆಸಿಗರ ಅವಗಾಹನೆಗೆ:—

ಸುವಿಚಾರಿ ಕಾಂಗ್ರೆಸಿಗನಾರೂ ಕಲ್ಕತ್ತದಲ್ಲಾದ ಕಾಂಗ್ರೆಸ್ ಪರಾಜಯಕ್ಕಾಗಿ ದುಃಖಿಸಲಾರ; ನಿಜಕ್ಕೂ ಸಂತೋಷಪಟ್ಟಾನು. ಬಂಗಾಳ ಎಸೆಂಬ್ಲಿಯ ಒಂದು ಸ್ಥಾನ ಕೈ ಬಿಟ್ಟುದರಿಂದ ಅಲ್ಲಿ ಕೂಡಾ ಕಾಂಗ್ರೆಸ್ ಆಡಳಿತೆಗಾವ ಧಕ್ಕೆಯೂ ಬೀಳುವಂತಿಲ್ಲ. ಅಂದ ಮೇಲೆ ಈ ದೃಷ್ಟಿಯಿಂದ ಕಾಂಗ್ರೆಸಿಗಾದ ನಷ್ಟ ಅತ್ಯಲ್ಪ. ಶ್ರೀ ಶರತ್ ಚಂದ್ರ ಬೋಸರಂತಹ ರಾಷ್ಟ್ರಪ್ರೇಮಿಯಿದಿರಲ್ಲಿ ಕಾಂಗ್ರೆಸ್ ಸೋತುದಕ್ಕಾಗಿ ಲಜ್ಜಿಸತಕ್ಕ ಅಂಶ ಕೂಡಾ ಇಲ್ಲ. ಬದಲಿಗೆ ಅದು ಕಾಂಗ್ರೆಸಿಗರಲ್ಲೀಗ ವ್ಯಾಪಿಸಿ ಹೋದಂತಿರುವ ಒಣಹಮ್ಮು—ಆಲಸ್ಯ—ಅಧಿಕಾರಲಾಲಸೆ ಬೆರೆತ ಮಂಕು ಬುದ್ಧಿಗೊಂದು ಬರೆಯಾಗಿ ಬಿದ್ದು, ಬಿಸಿ ಕೊಟ್ಟಿತೆಂಬುದಕ್ಕಾಗಿ ಸಂತೋಷಿಸಬೇಕಾಗಿದೆ.

ಶ್ರೀ ಶರತ್ ಚಂದ್ರಬೋಸರು ಮತ್ತು ಅವರ ಪಕ್ಷಪಾತಿಗಳು ಕೇವಲ ಚುನಾವಣಾ ಪ್ರಚಾರವಾಗಿಯಾದರೂ ಮಾಡಿರುವ--ಕಾಂಗ್ರೆಸ್ ಆಡಳಿತೆಯಿಂದ ಜನಸಾಮಾನ್ಯರಲ್ಲುಂಟಾಗಿರುವ ಅತೃಪ್ತಿ, ಕಳ್ಳಸಂತೆ ಮತ್ತು ಲಂಚಗುಳಿತನದ ಪ್ರಾಬಲ್ಯ, ಕಾಂಗ್ರೆಸ್ ಆಡಳಿತ ಯಂತ್ರದೊಳಗೆ ಬಿದ್ದಿರುವ ತೂತುಗಳು ಮತ್ತು ಸಡಿಲುಗಳ ಸಂಬಂಧದ ಆರೋಪಗಳು ಅತಿ ಭೀಕರವಾದವುಗಳು. ಇಂತಹ ಆರೋಪಗಳು ರಾಷ್ಟ್ರದ ದೊಡ್ಡ ನಗರವೊಂದರ ಶಿಕ್ಷಿತ ಮತದಾರ ಸಮುದಾಯಕ್ಕೆ ಸಹ್ಯವಾದುದಷ್ಟೇ ಅಲ್ಲ, ಸತ್ಯವಾಗಿ ತೋರಿತೆಂದ ಮೇಲೆ ಅದು ವಿಚಾರಣಾರ್ಹ ಅಪಾದನೆಯೆಂದು ಕಾಂಗ್ರೆಸಿಗರು ಅಗತ್ಯವಾಗಿ ತಿಳಿದುಕೊಳ್ಳಬೇಕು.

ಇಂದು ಕಾಂಗ್ರೆಸು ಶರತ್ ಚಂದ್ರಬೋಸರ ವ್ಯಕ್ತಿ ಪ್ರಭಾವದಿದಿರಲ್ಲಿ ಒಂದು ಕಡೆ ಸೋಲಬೇಕಾಯಿತು. ಆ ಪ್ರಭಾವವು ಕಾಂಗ್ರೆಸಿನ ಮಂದಗಾಮಿ ಮತ್ತು ಧನಿಕ ಪಕ್ಷಪಾತಿಧೋರಣೆಯ ವಿರುದ್ಧ ಕೆರಳಿನಿಂತಂತೆ ತೋರಿಸಿಕೊಂಡಿದ್ದಿತು. ಈ ಖಾಸಗೀ ಪ್ರಭಾವದಂತಹ ಸಾಮೂಹಿಕ ಪ್ರಭಾವವುಳ್ಳ ಒಂದು ದೇಶವ್ಯಾಪೀ ಪಕ್ಷ ತಲೆಯೆತ್ತುವದಾಗಲೀ, ಇಂದಿನ 'ಸಮಾಜವಾದಿ ಪಕ್ಷ'ವೇ ಸಾಕಷ್ಟು ಶ್ರಮಪಟ್ಟಲ್ಲಿ ಆ ಸ್ಥಾನಕ್ಕೇರುವದಾಗಲೀ ಈ ಕಾಲದಲ್ಲಿ ಸಾಧ್ಯವೆಂಬುದನ್ನು ಕಾಂಗ್ರೆಸಿಗರು ತಿಳಿದಿರಬೇಕು. ಹಾಗಾದಲ್ಲಿ ಕಲ್ಕತ್ತದಲ್ಲಿ ಪಡೆದಂತಹ ಪರಾಭವವನ್ನು ಎಲ್ಲೆಲ್ಲೂ ಪಡೆಯಲು ಸಾಧ್ಯವೆಂಬುದು ಕಾಂಗ್ರೆಸಿಗರ ಮನಸ್ಸಿಗೆ ಹತ್ತಿಕೊಳ್ಳಬೇಕು.

ಉಗ್ರಗಾಮಿಗಳನ್ನಿಸುವವರ ಅಥವಾ ಎಡಪಕ್ಷೀಯರ ವಾದಗಳು ಜನಸಾಮಾನ್ಯರಿಗೆ ಹೆಚ್ಚೆಚ್ಚಾಗಿ ಮೆಚ್ಚುಗೆಯಾಗಲು ಕಾರಣವೆಂದರೆ ಜನತೆಯಲ್ಲಿರುವ ಅಜ್ಞಾನದಂತೆಯೇ ತಮ್ಮ ಇಂದಿನ ಧೋರಣೆ ಮತ್ತು ಕಾರ್ಯಕ್ರಮಗಳು ಕೂಡಾ ಎಂದರಿತು ಕಾಂಗ್ರೆಸಿಗರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ತಾವು ಕೇವಲ "ಗತ ಮಹಾಯುದ್ಧ"ಗಳ ಬಿರುದುಬಾವಲಿ ತೊಟ್ಟ ಮಾತ್ರಕ್ಕೆ ಮುಂದೆ ಹೋಗಲಾರೆವೆಂದೂ "ಇಂದಿನ ಹೋರಾಟ"ಕ್ಕೆ ಅಗತ್ಯವುಳ್ಳ ಶಕ್ತಿ ಸಾಹಸಗಳನ್ನು ಪ್ರದರ್ಶಿಸಲೇ ಬೇಕಾಗಿದೆಯೆಂದೂ ಕಾಂಗ್ರೆಸಿಗರು ತಿಳಿದುಕೊಳ್ಳಬೇಕು.

ಅಂತೂ ಕಾಂಗ್ರೆಸಿಗರು 'ತಮಗಾಗಿ ಜನತೆ'ಯಿದೆ ಎಂಬ ಭಾವನೆಯನ್ನಾವ ಸಂದರ್ಭದಲ್ಲೂ ಇಟ್ಟುಕೊಳ್ಳದೆ 'ಜನತೆಗಾಗಿ ತಾವಿದ್ದೇವೆ' ಎಂಬ ಧೋರಣೆಯನ್ನು ಸರ್ವದಾ ವಹಿಸಬೇಕು. ತಾವು ಕಾಲೋಚಿತವಾಗಿ ವರ್ತಿಸದೆ ಹೋದರೆ ತಮ್ಮ ಕಾಲ ಕಳೆಯುತ್ತಿದೆ ಎಂಬುದನ್ನು ಮಿಕ್ಕೆಲ್ಲರಂತೆ ಕಾಂಗ್ರೆಸಿಗರೂ ತಿಳಿದಿರಬೇಕು.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಚಂದ್ರನಗರ—ಅದರ ಸ್ಥಿತಿಗತಿ

ಚಂದರ್ ನಾಗೋರ್ ಅಥವಾ ಚಂದ್ರ ನಗರ- ಸ್ವತಂತ್ರಭಾರತದಲ್ಲೂ ವಿದೇಶೀ ವಸಾಹತುಗಳಿವೆಯೆಂಬ ಅಪವಾದಕ್ಕೆಡೆ ಗೊಟ್ಟಿರುವ ಭೂತುಂಡುಗಳಲ್ಲೊಂದು.-- ಭಾರತದೊಂದಿಗೆ ಸೇರಿಕೊಳ್ಳಬೇಕೋ ಫ್ರೆಂಚ್ ಆಡಳಿತೆಯಲ್ಲೇ ಉಳಿಯಬೇಕೋ ಎಂಬ ಅದೃಷ್ಟ ನಿರ್ಣಯಕ್ಕಾಗಿ ಇದೇ ತಾ. 19ನೇ ಆದಿತ್ಯವಾರ ಅಲ್ಲಿಯ ಜನಮತ ಸಂಗ್ರಹ ನಡೆಯಿತು.

ಸ್ವತಂತ್ರ ಭಾರತ ಸರಕಾರದ ಪಾಲಿನ ಒಂದು ಕೆಲಸ ಈ ಮೂಲಕ ಮುಗಿದಿದೆ. ಇನ್ನೂ ದಕ್ಷಿಣ ಭಾಗದಲ್ಲಿ ಉಳಿದಿರುವ ಪಾಂಡಿಚೆರಿ ಮೊದಲಾದ ನಾಲ್ಕು ಫ್ರೆಂಚ್ ವಸಾಹತುಗಳ ಅದೃಷ್ಟ ನಿರ್ಣಯ ಕಾರ್ಯವು ಬರುವ ದಶಂಬರ್ ತಿಂಗಳ 11ನೇ ತಾರೀಕಿಗೆಂದು ನಿರ್ಣಯವಾಗಿದೆ. ಚಂದ್ರ ನಗರದ ಮತಸಂಗ್ರಹ ಕಾರ್ಯವನ್ನು ಅವಲೋಕಿಸಲು ನೇಮಿಸಲ್ಪಡುವ ಅಧಿಕಾರಿಯು ಭಾರತ ಸರಕಾರದ ಸಮ್ಮತಿಗೊಳಗಾದ ಜನವಿರಬೇಕೆಂಬ ಒಪ್ಪಂದವನ್ನು ಫ್ರೆಂಚ್ ಸರಕಾರವು ಮುರಿದು ಸ್ವೇಚ್ಛೆಯ ನೇಮಕ ಮಾಡಿದ್ದಿತು; ಭಾರತದ ಮನಸ್ಸನ್ನು ನೋಯಿಸಿದ್ದಿತು. ದಶಂಬರದ ಮತಗಣನೆಗಳಲ್ಲಿ ಇಂತಹ ಕಹಿ ಭಾವನೆಗೆಡೆ ದೊರೆಯದಂತೆ ಭಾರತ ಸರಕಾರದ ಅಭಿಮತ ಪಡೆದೇ ಅವಲೋಕನಾಧಿಕಾರಿಗಳನ್ನು ನೇಮಿಸುವದಾಗಿ ಫ್ರಾನ್ಸಿನ ಸರಕಾರವೊಪ್ಪಿದೆ. ಶಾಂತ ರೀತಿಯ ಕೆಲಸ, ನ್ಯಾಯಬದ್ಧ ತೀರ್ಮಾನ ನಡೆಯುವ ಸಂಭವವಿದೆ.

ಈ ಚಂದ್ರ ನಗರ—

ಚಂದ್ರ ನಗರವು ಬಂಗಾಳದಲ್ಲಿ ಕಲ್ಕತ್ತೆಕ್ಕೆ 21 ಮೈಲು ದೂರದಲ್ಲಿ ಉತ್ತರಗಡೆಯಲ್ಲಿ ಇರುವ ಸಣ್ಣ ನಗರ. ಪ್ರಸಿದ್ಧ ಹೂಗ್ಲಿ ಹೊಳೆಯ ಪಶ್ಚಿಮ ದಡದಲ್ಲಿ ಇದು ನಿಂತಿದೆ. ಅದು ಚಂದ್ರನ ನಗರ ಅಥವಾ ಚಂದನ (ಗಂಧದ) ನಗರವೆಂಬುದೇ ಹೆಸರಿನ ಅರ್ಥವಿರಬೇಕು. ಇಡೀ ಚಂದ್ರ ನಗರವೇ ಫ್ರೆಂಚರದ್ದೇನೂ ಅಲ್ಲ. ಅದು ಇಬ್ಭಾಗವಾಗಿದ್ದು ದಕ್ಷಿಣ ಭಾಗವು ಫ್ರೆಂಚರಿಗೆ ಸೇರಿದ್ದರೆ ಉತ್ತರ ಭಾಗವು ಭಾರತದ್ದಾಗಿದೆ. ಇವೆರಡು ಭಾಗಗಳನ್ನು ರೈಲ್ವೇ ಸ್ಟೇಶನಿನ ಹೊರಗಡೆಯ ಒಂದು ಕಂದರವು ವಿಂಗಡಿಸಿಟ್ಟಿದೆ. 18ನೇ ಶತಮಾನದಲ್ಲಿ ಭಾರತದಲ್ಲಿರುವ ಫ್ರೆಂಚರಿಗೂ ಬ್ರಿಟಿಷರಿಗೂ ಹೋರಾಟಗಳಾಗುತಿದ್ದಾಗ ಫ್ರೆಂಚರು ತಮ್ಮೀ ನಗರದ ರಕ್ಷಣೆಗಾಗಿ ಅದರ ಸುತ್ತಲೂ ಆಳವಾದ ಕಂದಕವನ್ನೊಮ್ಮೆ ತೋಡಿದ್ದರಂತೆ. ಆದರೆ ಕ್ಲೈವನು ಮೇಲ್ಗೈಯಾಗಿ ಆ ಕಣಿವೆಯನ್ನು ಫ್ರೆಂಚರ ಕೈಯಿಂದಲೇ ಒಮ್ಮೆ ಮುಚ್ಚಿಸಿದ್ದ. ಆ ಮೇಲೆ 1783ರಲ್ಲಾದ ವರ್ಸೇಲ್ಸ್ ಒಪ್ಪಂದಾನುಸಾರವಾಗಿ ಫ್ರೆಂಚರಿಗೆ ಪುನಃ ಅದನ್ನಗೆಯುವ ಸ್ವಾತಂತ್ರ್ಯ ದೊರೆತಿತ್ತು. ಫ್ರೆಂಚ್ ಚಂದ್ರನಾಗೋರು ಕೇವಲ ನಾಲ್ಕು ಮೈಲು ಉದ್ದ, ಒಂದು ಮೈಲಗಲವುಳ್ಳ ಊರು. ಪೂರ್ವ ಕಾಲದಲ್ಲಿ ಅದಕ್ಕಿದ್ದ ವೈಭವ ಈಗ ಇಲ್ಲ; ಈಗ ಅದೊಂದು ಹಳ್ಳೀ ವಲಯದ ಪೇಟೆಯಂತಿದೆ; ಹೊರಗಿನ ಭಾಗಗಳೊಂದಿಗೆ ಗಣ್ಯ ವ್ಯಾಪಾರ ವಹಿವಾಟು ಸಂಬಂಧವೇನೂ ಅದಕ್ಕಿಲ್ಲ. ಚೊಕ್ಕ ರಸ್ತೆಗಳು ಮತ್ತು ನಾಜೋಕಿನ ಸಣ ಪುಟ್ಟ ಮನೆಗಳಿಂದ 'ಆರೋಗ್ಯಧಾಮ', 'ಸೌಂದರ್ಯ ಬೀಡು' ಎನ್ನುವಂತಿದೆ ಆ ಊರು. 200 ವರುಷಗಳಿಗೆ ಹಿಂದಿನ ನಂದಾದಲಾಲ್ ದೇವಾಲಯ, 1882ರಲ್ಲಿ ಸ್ಥಾಪನೆಗೊಂಡಿರುವ ಡುಪ್ಲೆಕ್ಸ್ ಕಾಲೇಜ್ ಮೊದಲಾದ ಕೆಲವು ಚಿರಸ್ಮರಣೀಯ ಕಟ್ಟಡಗಳು ಅಲ್ಲಿವೆ. ಹೂಗ್ಲಿ ನದೀ ದಡದಲ್ಲಿ, ಛಾಯಾದಾಯಿ ರಮ್ಯ ಸಾಲು ಮರಗಳಿಂದ ರಂಜಿಸುತ್ತಿರುವ ಸುಮಾರು ಅರ್ಧ ಮೈಲುದ್ದದ ವಿಹಾರ ಸ್ಥಳವು ಅತ್ಯಂತ ಮನೋಹರವಾದುದು. ಫ್ರೆಂಚ್ ಚಂದ್ರನಗರದಲ್ಲಿ ಸುಮಾರು 52000 ಜನರಿದ್ದಾರೆ; ಅಶಿಕ್ಷಿತರು ಬಹಳ ಕಡಿಮೆ; ವಿದ್ಯಾವಂತರ ಪರಿಮಾಣವು ಪಶ್ಚಿಮ ಬಂಗಾಳಕ್ಕಿಂತ ಹೆಚ್ಚಿಗೆ. ನಗರಸಭೆಯಿಂದೊದಗುತ್ತಿರುವ ಸೌಕರ್ಯಗಳು ಕೂಡಾ ಅಪೇಕ್ಷಾತೀತವಾದವು. ಅಂತೂ ಚಂದ್ರನಾಗೋರಿನವರು ಸುಖಿಗಳು.

ಅಲ್ಲಿಯ ಆಡಳಿತೆ

ಪಾಂಡಿಚೆರಿಯಲ್ಲಿರುವ ಫ್ರೆಂಚ್ ಗವರ್ನರನ ಕೈಕೆಳಗೆ, ಓರ್ವ ಫ್ರೆಂಚ್ ಅಧಿಕಾರಿಯು ಚಂದ್ರನಗರಾಡಳಿತೆಯ ತಿರಸ್ಥಾಗಿದ್ದಾನೆ. ಅಲ್ಲಿಯ ಪೋಲಿಸ್ ಮುಖ್ಯಾಧಿಕಾರಿಯು ಫ್ರೆಂಚರವನೇ. ಆಡಳಿತಾಧಿಕಾರಿಗೆ ಸಹಾಯಕವಾಗಿ ಮತದಾರರಿಂದಾರಿಸಲ್ಪಟ್ಟ 25 ಸದಸ್ಯರುಳ್ಳ ಒಂದು ಕೌನ್ಸಿಲ್ ಇದೆ. ಆ ಪೈಕಿ 6 ಮಂದಿ ಮಂತ್ರಿಗಳಾಗಿದ್ದಾರೆ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಅಲ್ಲಿಯ ಮುನ್ಸಿಪಲ್ ಕೌನ್ಸಿಲಿನವರು ಮೌನ ಕ್ರಾಂತಿಯನ್ನು ನಿಂತಲ್ಲೇ ನಿರ್ಮಿಸಿ, ತಮ್ಮ ಆಫೀಸಿನ ಮೇಲೆ ಭಾರತ ಧ್ವಜವನ್ನೂ ಚಂದ್ರನಗರಕ್ಕೆ 'ಸ್ವತಂತ್ರ ನಗರ'ವೆಂಬ ಹೆಸರಿಟ್ಟ ಬೋರ್ಡನ್ನೂ ಏರಿಸಿಕೊಂಡರು. ಈ ಮುನ್ಸಿಪಲ್ ಕೌನ್ಸಿಲಿನ ಈಗಿನ ಅಧ್ಯಕ್ಷ ಶ್ರೀ. ದೇವೇಂದ್ರನಾಥ ದಾಸರು ಭಾರತದತ್ತ ನಿಷ್ಠೆಯುಳ್ಳವರು. ಚಂದ್ರನಗರದ ಆಡಳಿತೆಗಾರನ ನಿವಾಸಗೃಹದ ಮೇಲೆ ಮಾತ್ರ ಭಾರತ ಧ್ವಜವೂ ಫ್ರೆಂಚ್ ಧ್ವಜವೂ ಒಟ್ಟೊಟ್ಟಿಗೆ ಹಾರಾಡುತ್ತಿವೆ. ಇತ್ತೀಚೆಗೆ ತಾನೇ ಮಹಿಳೆಯರಿಗೂ ಅಲ್ಲಿ ಮತದಾನಾಧಿಕಾರ ದೊರೆತಿದೆ. 18 ವರುಷಕ್ಕೆ ಮೇಲ್ಪಟ್ಟವರಿಗೆ ವೋಟಿನ ಹಕ್ಕಿದೆ. ಮತದಾರರ ಪಟ್ಟಿಯಲ್ಲಿ 12,194 ಮತದಾರರ ಹೆಸರಿದೆ. ಇದು ಒಟ್ಟು ಜನಸಂಖ್ಯೆಯ ಕಾಲಂಶದೊಳಗೆ. ಅಲ್ಲಿಯ ಕೋರ್ಟು ಭಾಷೆ ಫ್ರೆಂಚ್.

ಅದರ ವೈಶಿಷ್ಟ್ಯ

ಫ್ರೆಂಚ್ ಚಂದ್ರನಾಗೋರಿಗೆ ಹೋದರೆ ಎಲ್ಲರೂ ರಜೆಯ ವಿರಾಮಸುಖದಲ್ಲಿರುವಂತೆ ತೋರುತ್ತಾರೆ. ಹೆಸರೆತ್ತಿ ಹೇಳಲಾಗುವ ವ್ಯಾಪಾರೋದ್ಯಮಗಳಾಗಲೀ ಕಾರ್ಖಾನೆಗಳಾಗಲೀ ಅಲ್ಲಿಲ್ಲ. ಇದಕ್ಕೆ ಕಾರಣವಿದೆ. ಚಂದ್ರನಾಗೋರಿನಲ್ಲಿ ದುಡಿಯಬಲ್ಲವರೆಲ್ಲರೂ ಕಲ್ಕತ್ತ ಮತ್ತದರ ಆಸುಪಾಸಿನ ಆಫೀಸುಗಳಲ್ಲೋ, ಕಾರ್ಖಾನೆಗಳಲ್ಲೋ, ಕಿತ್ತಾನಾರು ಗಿರಣಿಗಳಲ್ಲೋ ದುಡಿದು ಅಲ್ಲಿಗೆ ಮರಳುವವರೇ. ಮನೆ ಸಾಮಾನುಗಳ ತಯಾರಿ, ಕೈಮಗ್ಗ, ಆಭರಣ ತಯಾರಿಗಳು ಗೃಹ ಕೈಗಾರಿಕೆಗಳಾಗಿ ಅಲ್ಲಿವೆ. ಒಂದು ವಿಶೇಷವೆಂದರೆ ಪೂರ್ವ ಕಾಲದಿಂದಲೂ, ಭಾರತದಿಂದ ಕಳ್ಳಸೊತ್ತುಗಳನ್ನು ಹೊತ್ತವರಿಗೆ, ದಗಾಖೋರರಿಗೆ ಅದು ಆಶ್ರಯಸ್ಥಾನ. ಭಾರತದೊಳಗಡೆ ಕಾನೂನಿಗೆ ಬಲಿಬೀಳಬೇಕಾಗಿ ಬಂದ ವಂಚಕರು, ಕಳ್ಳಕಾಕರು, ಚಳವಳಿಗಾರರು, ಎಲ್ಲಾ ವಿಧದ ದಗಾಖೋರರು, ಅನ್ಯಾಡಳಿತೆಯಿರುವ ಫ್ರೆಂಚ್ ಚಂದ್ರನಾಗೋರಿನ ನೆಲ ಮುಟ್ಟುವ ತನಕ ಓಡಿದರಾಯಿತು— ಬಚಾವು! ದವಸಧಾನ್ಯಗಳು, ಪೆಟ್ರೋಲು ಮತ್ತಿತರ ಕೆಲವು ಸಾಮಾಗ್ರಿಗಳ ಕಳ್ಳಸಂತೆಯು ಅಲ್ಲಿ ಭಂಭಂಗಟೆಯಲ್ಲಿದೆ. ಹೆಚ್ಚಿನವರು ಭಾರತ ಕ್ಷೇತ್ರದಲ್ಲಿ ದುಡಿಯುವವರಾದ್ದರಿಂದ, ಅವರಿಲ್ಲಿಂದ ಕೊಂಡುಹೋಗುವ ಅಲ್ಪ ಪರಿಮಾಣದ ರೇಶನುಗಳ ದೆಸೆಯಿಂದ ಅಲ್ಲಿ ಬ್ಲೇಕ್ ಮಾರ್ಕೆಟ್ ಸಾಮಗ್ರಿಗಳಿಗೆ ಗಿರಾಕಿಗಳಾಗುತ್ತಾರೆ. ನಿಯಂತ್ರಣ ಬೆಲೆಗಿಂತ ತುಸು ಹೆಚ್ಚಿನ ಧಾರಣೆಗೆ ಪೆಟ್ರೋಲು ಎಷ್ಟು ಬೇಕಾದರೂ ಅಲ್ಲಿ ದೊರೆಯುತ್ತದೆ. ನಾಲ್ಕೇ ಚದರ ಮೈಲು ವಿಸ್ತೀರ್ಣವಿರುವ ಆ ಕ್ಷೇತ್ರದಲ್ಲಿ ಫ್ರೆಂಚ್ ಪೋಲೀಸರ ವರ ರಜಿಸ್ಟ್ರ ಮಾಡಲ್ಪಟ್ಟ ಮೋಟಾರು ವಾಹನಗಳು 2000.

ಈ ಚಂದ್ರನಗರವು 1688ನೇ ಇಸವಿಯಲ್ಲೇ ಫ್ರೆಂಚರ ವಶಕ್ಕೆ ಬಂದಿತ್ತು; ನೆಪೋಲಿಯನ್ ಯುದ್ಧಗಳ ಕಾಲದಲ್ಲಿ ಅದು ಕೆಲವು ಬಾರಿ ಬ್ರಿಟಿಷ್ ಮತ್ತು ಫ್ರೆಂಚರೊಳಗೆ ಕೈ ಬದಲಾವಣೆಗೊಂಡಿದ್ದರೂ 1816 ರಿಂದ ಅಚಲವಾಗಿ ಫ್ರೆಂಚರ ಕೈಯಲ್ಲೇ ಇದೆ.

ಜನಮತ ಸಂಗ್ರಹ

ಬ್ರಿಟಿಷರು ಅಖಿಲ ಭಾರತವನ್ನು ಬಿಟ್ಟು ಹೋಗಿ ಎರಡು ವರುಷಗಳಾಗುತ್ತಾ ಬಂದರೂ ಫ್ರೆಂಚ್ ಮತ್ತು ಪೋರ್ಚುಗೀಸರು ಇನ್ನೂ ಇಲ್ಲಿಯ ಕೆಲವು ತುಂಡುಗಳನ್ನು ಹಿಡಿದುಕೊಂಡಿರುವುದು ನಿಜಕ್ಕೂ ಅಸಹ್ಯ. ಕಳೆದ ಆದಿತ್ಯವಾರ— ಜೂನ್ ತಾ. 19 ರಲ್ಲಿ—ಚಂದ್ರನಾಗೋರಿನ ಜನಮತ ಸಂಗ್ರಹ ನಡೆಯಿತು. "ಚಂದ್ರನಾಗೋರು ಫ್ರೆಂಚ್ ಯೂನಿಯನಿನೊಳಗೇನೇ ಇರುವುದಕ್ಕೆ ನೀನು ಒಪ್ಪುವಿಯೋ?" ಎಂಬೊಂದೇ ಪ್ರಶ್ನೆಯನ್ನು ಮತದಾರನ ಮುಂದಿಡಲಾಗಿತ್ತು. "ಇಲ್ಲ" ಎಂದರೆ ಭಾರತದೊಂದಿಗೆ ಸೇರಿಹೋಗಲು ಮತಕೊಟ್ಟಂತೆ. "ಹೌದು" ಎಂದರೆ ಈಗಿನ ಸ್ಥಿತಿಯೇ ಊರ್ಜಿತದಲ್ಲಿರಬೇಕು ಎಂದಂತೆ. ಚುನಾವಣೆಯು ಯಾವ ಗೊಂದಲವೂ ಇಲ್ಲದೆ ಶಾಂತರೀತಿಯಿಂದ ನಡೆದಿದೆ. ಸ್ಪಷ್ಟ ಫಲಿತಾಂಶವು ಇದೇ ತಾ 21ಕ್ಕೆ ಪ್ರಕಟವಾಗಲಿದೆ. ಚುನಾವಣೆಯ ದಿನ ಕೆಂಪು ಪತಾಕೆ ಹೊತ್ತ ಸುಮಾರು ನೂರು ಮಂದಿ ಅಲ್ಲಿಯ ಆಡಳಿತೆಗಾರನ ಭವನ ಮತ್ತು ಮುನ್ಸಿಪಲ್ ಕೌನ್ಸಿಲ್ ಭವನದಿದಿರು ವಿರುದ್ಧ ಬೊಬ್ಬೆಹಾಕುತ್ತಾ ನಿಷೇಧ ಪ್ರದರ್ಶನ ನಡಿಸಿ, ಇದ್ದ ಬೋರ್ಡುಗಳನ್ನು ಕಿತ್ತೊಯ್ದರು. ಬೇರೇನೂ ತಂಟೆಯಿರಲಿಲ್ಲ.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯು ಜರೂರಾತಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತ: ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದುಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.

ಜನರಲ್ ಮೇನೇಜರ್

ANNOUNCEMENT

MODERN TUTORIAL INSTITUTE, UDIPI,

Modern School of Commerce, Church Road,

Special coaching! **Individual attention!!**

Evening classes by Experienced teachers

for

S. S. L. C. — October & March Examinations

Classes open on 25—6—1949.

Apply in person to:

T. V. Vasudevan.

ಜಾಗತಿಕ ಸ್ಥಿತಿಗತಿ

ಪ್ರಪಂಚದ ಸ್ಥಿತಿಗತಿಗಳೆಲ್ಲವೂ ಬಹು ಮಟ್ಟಿಗೆ ಇದ್ದಂತಿವೆ. ಆಶೆ—ನಿರಾಶೆಗಳ ನಡುವಿನ ತ್ರಿಶಂಕುಸ್ಥಾನದಲ್ಲೇ ಲೋಕದ ವಿವಿಧ ಭಾಗಗಳ ವಿವಿಧ ರಾಜಕೀಯ ಸಮಸ್ಯೆಗಳು ನಿಂತಿವೆ. ವಾದಿ—ಪ್ರತಿವಾದಿ ಪಂಗಡಗಳೊಳಗಿನ ಭಿನ್ನಾಭಿಪ್ರಾಯಗಳಲ್ಲಿರುವ ಕಟು, ಕಠೋರತೆಗಳು ಕಳೆದ ಮಹಾಯುದ್ಧದ ಹಿನ್ನೆಲೆಯಲ್ಲಿದ್ದಷ್ಟೇ ಪರಿಮಾಣದಲ್ಲಿ ಈಗಲೂ ಇವೆ; ಆದರೆ ಹಿಟ್ಲರನಲ್ಲಿದ್ದಂತಹ ಅಹಂಭಾವ, ಎದೆಗಾರಿಕೆ ಮತ್ತು ಯುದ್ಧೋತ್ಸಾಹ ಮಾತ್ರ ಈಗ ಯಾರಲ್ಲೂ ಕಂಡುಬರುವದಿಲ್ಲವಾದ್ದರಿಂದ ಸ್ಫೋಟಭೀತಿ ಸದ್ಯಕ್ಕಿಲ್ಲ; ಅಂತೆಯೇ ಶಾಂತ ತೀರ್ಮಾನದ ಆಶೆಯೂ ಇಲ್ಲ!

ºº ºº

ಜರ್ಮನಿ, ಮತ್ತದರ ಜತೆಯಲ್ಲಿ ಆಸ್ಟ್ರಿಯಾ ಸಂಬಂಧದ ವಿವಾದಗಳ ತೀರ್ಮಾನಕ್ಕಾಗಿ ಕಳೆದೊಂದು ತಿಂಗಳಲ್ಲಿ ಪ್ಯಾರಿಸಿನಲ್ಲಿ ನಡೆಯುತ್ತಾ ಬಂದಿರುವ ರಶ್ಯಾ, ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್ ಚತುರ್ರಾಷ್ಟ್ರೀಯ ವಿದೇಶಮಂತ್ರಿಗಳ ಸಮ್ಮೇಲನವು ಇದುವರೆಗಾವ ವಿಧದಿಂದಲೂ ಜಯಶೀಲವಾಗಿಲ್ಲ. ಜರ್ಮನಿಯಲ್ಲಿ 'ತಾವು ಬದುಕಿ ಇನ್ನೊಬ್ಬರನ್ನೂ ಬದುಕಿಸುವ' ಧೋರಣೆಯಿಟ್ಟುಕೊಂಡು ಒಂದು ವ್ಯವಸ್ಥೆಗೆ ಬರುವದಕ್ಕಾಗಿ—ಆಸ್ಟ್ರಿಯ ಸಂಬಂಧದ ವಿವಾದಗಳ ತೀರ್ಮಾನಕ್ಕಾಗಿ—ಈ ಚತುರ್ರಾಷ್ಟ್ರೀಯ ವಿದೇಶಮಂತ್ರಿಗಳೀಗ ಕೊನೆಯ ಪ್ರಯತ್ನಮಾಡುತಿದ್ದಾರೆ. ಆಸ್ಟ್ರಿಯಾ—ಯುಗೊಸ್ಲೇವಿಯಾ ಗಡಿ ವಿವಾದ, ಆಸ್ಟ್ರಿಯಾದಲ್ಲಿರುವ ತನ್ನ ಪಾಲಿನ ಜರ್ಮನ್ ಸೊತ್ತುಗಳ ಪ್ರತಿಫಲವಾಗಿ ಆರುವರುಷಗಳ ವಾಯಿದೆಯಲ್ಲಿ ತನಗೆ 150 ಮಿಲಿಯ ಡೋಲರುಗಳು ದೊರೆಯಬೇಕೆಂಬ ರಶ್ಯದ ವಾದ, ಜರ್ಮನಿಯ ಚತುರ್ರಾಷ್ಟ್ರೀಯ ಆಡಳಿತ ಸಂಬಂಧದ ಚರ್ಚೆ—ಮುಂತಾದುವುಗಳು ಅಲ್ಲಿ ತೀರ್ಮಾನಗೊಳ್ಳಬೇಕಾಗಿದೆ. ಪ್ಯಾರಿಸ್ ಸಮ್ಮೇಲನವು ಜಯಶೀಲವಾದರೆ ಯುರೋಪಿನ ಬಿಸಿ ಬಹುಮಟ್ಟಿಗೆ ಇಳಿದೀತು; ಸರ್ವ ಸಮಸ್ಯೆಗಳ ಸ್ಪಷ್ಟ ತೀರ್ಮಾನಕ್ಕಾಗಿ ಈ ವರುಷಾಂತ್ಯದೊಳಗೆ ಮತ್ತೊಂದು ಚತುರ್ರಾಷ್ಟ್ರೀಯ ಸಮ್ಮೇಳನ ಸೇರಲಿದೆ.

ºº ºº

ಚೈನದಲ್ಲಿ ನಾನ್ಕಿಂಗ್, ಶಾಂಘಾಯಿಗಳ ನಂತರ ತಮ್ಮ ಮುಂದಿನ ದೊಡ್ಡ ಹೆಜ್ಜೆಗನುಗುಣವಾದ ಸಿದ್ಧತೆಗಳನ್ನು ಮಾಡಿಕೊಳ್ಳಲು ಕೆಲವು ದಿನಗಳನ್ನು ವ್ಯಯಿಸಿದ ಕಮ್ಯೂನಿಸ್ಟರೀಗ ಮುಂದಿನ ಕಾರ್ಯಕ್ಕಿಳಿದಿದ್ದಾರೆ; ದಕ್ಷಿಣ ಚೈನದೊಳಗೆ ಕಮ್ಯೂನಿಸ್ಟರ ಮೂರು ಸೇನಾದಳಗಳು ನುಗ್ಗಿವೆ. ರಾಷ್ಟ್ರೀಯ ಸರಕಾರದ ರಕ್ಷಣಾ ವ್ಯೂಹಗಳನ್ನು ದುರ್ಬಲಗೊಳಿಸುವ ಉದ್ದೇಶದಿಂದ ನಡೆದಿರುವ ಈ ತ್ರಿಮುಖ ಧಾಳಿಯ ದಳಗಳಲ್ಲಿ ಹಿಂದಿನ ಗೊರಿಲ್ಲಾ ಸೈನಿಕರೇ ಹೆಚ್ಚಿಗಿದ್ದಾರೆ. ಹೋಂಗ್‌ಕೋಂಗ್ ಸಮಸ್ಯೆಯೇಳಲಿರುವುದು ಈ ದಕ್ಷಿಣ ಚೈನಾ ಹೋರಾಟದಲ್ಲೇ. ಕಮ್ಯೂನಿಸ್ಟ್ ಸೇನೆಗಳು ದಕ್ಷಿಣ ಚೈನದಲ್ಲಿ ಮುಂದೊತ್ತುತ್ತಾ ಹೋದಂತೆ, ಸ್ವಾಭಾವಿಕವಾಗಿ ಹೋಂಗ್ ಕೋಂಗಿನ ಎಲ್ಲಾ ಸುತ್ತುವಲಯಗಳನ್ನೂ ಆವರಿಸಿಕೊಳ್ಳಬೇಕಾಗುವದು. ಹಾಗೆ ಸುತ್ತುಗಟ್ಟಿದ ಕಮ್ಯೂನಿಸ್ಟ್ ಸೇನೆಗಳು ಹೋಂಗ್‌ಕೋಂಗಿನೊಳಗೆ ನುಗ್ಗಬಹುದೇ, ಎಂಬುದು ಈಗಿನ ಆತುರದ ಪ್ರಶ್ನೆ. ಈ ಧಾಳಿ ನಿರೀಕ್ಷೆಯಿಂದ ಹೋಂಗ್ ಕೋಂಗಿನ ರಕ್ಷಣೆಗಾಗಿ ಬ್ರಿಟಿಷರು ಸಾಧ್ಯವಿದ್ದ ಸಿದ್ಧತೆಗಳನ್ನೆಲ್ಲಾ ಮಾಡಿದ್ದಾರೆ. ಬ್ರಿಟನಿನ ರಕ್ಷಣಾಮಂತ್ರಿ ಎ. ವಿ. ಅಲೆಕ್ಸಾಂಡರರು ಹೋಂಗ್‌ಕೋಂಗಿಗೆ ಬಂದು ಅಲ್ಲಿಯ ರಕ್ಷಣಾವ್ಯವಸ್ಥೆಗಳನ್ನು ಪರಿಶೀಲಿಸಿ, ಈಗ ತಾನೇ ಇಂಗ್ಲೆಂಡಿಗೆ ಮರಳಿದ್ದಾರೆ. ತತ್ಪರಿಣಾಮವಾಗಿ ಇನ್ನಷ್ಟು ಸೇನಾ ಸರಬರಾಯಿಯು ಕ್ಷಿಪ್ರವಾಗಿ ಅಲ್ಲಿಗಾಗಲಿದೆಯೆಂದು ಗೊತ್ತಾಗಿದೆ. "ಹೋಂಗ್‌ಕೋಂಗನ್ನು ರಕ್ಷಿಸಿಟ್ಟುಕೊಂಡು ಚೀನೀ ಜನತೆಯೊಡನೆ ಸ್ನೇಹ ಸಂಬಂಧದಿಂದಿರುವುದೇ ಬ್ರಿಟನಿನ ದೃಢ ನಿರ್ಧಾರ"ವೆಂಬ ಸೂಚನೆ ಬಂದಿದೆ. ಕಮ್ಯೂನಿಸ್ಟರು ಹೋಂಗ್‌ಕೋಂಗಿನ ಮೇಲೆ ಬಿದ್ದಲ್ಲಿ ಚೈನದ ಆ ಮಹಾಪೂರ ಶಕ್ತಿದಿರಾಗಲು ಕಾಲುವೇ ರೂಪದಿಂದೆಂಬಂತೆ ಬ್ರಿಟನ್ ಸರಬರಾಯಿ ಮಾಡುವ ಸೇನೆಗಳಿಂದ ಆಗದ ಮಾತು; ಆದರೆ ಹೋಂಗ್‌ಕೋಂಗಿನ ಮೇಲೆ ಬಿದ್ದು ಬ್ರಿಟಿಷರನ್ನು ಕೆಣಕುವಂತಹ ಸ್ಫೂರ್ತಿ ಕಮ್ಯೂನಿಸ್ಟರಲ್ಲಿಯೂ ಇಲ್ಲವೆಂಬ ಸಮಾಧಾನವೊಂದಿದೆ. ಚೈನದ ರಾಷ್ಟ್ರೀಯ ಸರಕಾರೀ ಕಡೆಯವರು 'ಹೋಂಗ್ ಕೋಂಗಿನ ಮೂಲಕ ಕಮ್ಯೂನಿಸ್ಟರಿಗೆ ಶಸ್ತ್ರಾಸ್ತ್ರ ಮುಂತಾದುವುಗಳ ಸರಬರಾಯಿಯಾಗುತ್ತಿದೆ' ಎಂದು ಬಲವಾಗಿ ದೂರುತಿದ್ದಾರೆ. ಹೊರದೇಶಗಳ ಸಹಾಯದ ಆವಶ್ಯಕತೆ ಬಹಳವಿರುವ ಇಂದಿನ ಜರ್ಝರಿತ ಚೈನದ ಈ ದ್ವಾರವನ್ನು ಮುಚ್ಚಿಕೊಳ್ಳಲು, ಚೈನದ ಹೊಣೆಯನ್ನು ಸಂಪೂರ್ಣವಾಗಿ ಹೊರಲಿರುವ ಕಮ್ಯೂನಿಸ್ಟರು ತಯಾರಿರಲಾರರು. ಆ ಕಡೆ ಚೀನೀಯರ ಮನವೊಲಿಸಿಯೇ ತಮ್ಮ ಪಾಲಿನ ಚೈನೀ ಮಾರ್ಕೆಟು ಮತ್ತು ಹೋಂಗ್ ಕೋಂಗನ್ನು ಉಳಿಸಿಕೊಳ್ಳುವ ಆವಶ್ಯಕತೆಯಿರುವ ಬ್ರಿಟಿಷರಿದ್ದರೆ, ಇದಿರುಕಡೆ ಬ್ರಿಟನು, ಅಮೇರಿಕಗಳ ಸಹಾಯದಿಂದ ಆರ್ಥಿಕ ಪುನರ್ರಚನೆ ಮಾಡಿಕೊಳ್ಳಬೇಕೆಂದಿರುವ ಕಮ್ಯೂನಿಸ್ಟರಿರುವುದರಿಂದ ಹೋಂಗ್ ಕೋಂಗಿನ ಧಾಳಿ ಅಸಂಭವವೆಂದೇ ಹೇಳಬಹುದು. ಒಂದೊಮ್ಮೆಗೆ ಆ ಧಾಳಿ ನಡೆದುಹೋಯಿತೆಂದರೆ ಹೋಂಗ್‌ಕೋಂಗ್ ಬ್ರಿಟನಿನ ಕೈ ತಪ್ಪುವದಂತೂ ಖಂಡಿತ—ಈ ಕಡೆಯಿಂದ ರಶ್ಯಾ, ಆ ಕಡೆಯಿಂದ ಅಮೆರಿಕ ತಲೆಹೊಗಿಸುವ ಸಂದರ್ಭವೂ ಆಗ ಒದಗಬಹುದು.

ºº ºº

ಪಾಕಿಸ್ಥಾನ್—ಅಫ್ಘಾನಿಸ್ಥಾನಗಳೊಳಗಿನ ವೈಷಮ್ಯವು ದಿನದಿಂದ ದಿನಕ್ಕೆ ಬೆಳೆಯುತ್ತಾ ಬರುತ್ತಿದೆ. ಇದೇ ತಿಂಗಳ ತಾ 12ರಲ್ಲಿ ಅಫ್ಘಾನಿಸ್ಥಾನದ ಮೊಘುಲ್ ಗಾಯಿಕ್ಷೇತ್ರದ ಮೇಲೆ ಪಾಕಿಸ್ಥಾನ್ ವಿಮಾನಗಳು ಬೋಂಬೆಸೆದು 15 ಮಂದಿ ಸತ್ತು 26 ಮಂದಿ ಜಖಂಗೊಂಡರೆಂದು ಅಫ್ಘಾನಿಸ್ಥಾನವು ಪಾಕಿಸ್ಥಾನಕ್ಕೆ ತೀವ್ರ ನಿಷೇಧಸೂಚಿಸಿದೆ. ಪಖ್ತೂನ್ ಮಾತಾಡುವ ಗಡಿನಾಡು ಪ್ರಾಂತ್ಯವನ್ನೊಳಗೊಂಡ ಕ್ಷೇತ್ರವು ತನ್ನ ಹಕ್ಕಿನದೆಂದು ಕಾಬೂಲು ಸರಕಾರದ ವಾದವಿದ್ದರೆ, ಸರಹದ್ದು ಪ್ರದೇಶಗಳೆಲ್ಲಾ ತನ್ನದೆಂದು ಕರಾಚಿ ಸರಕಾರವನ್ನುತ್ತಿದೆ. ಭಾರತದಲ್ಲಿರುವ ಅಫ್ಘಾನಿ ರಾಯಭಾರಿ ಸರ್ದಾರ್ ನಜಿಬುಲ್ಲಾ ಖಾನರೂ ಪಾಕಿಸ್ಥಾನ್ ಸರಕಾರದ ಉದ್ರೇಕದಾಯೀ ಕೃತ್ಯಗಳನ್ನು ಖಂಡಿಸಿ, ಅದು ಇಸ್ಲಾಂ ವಿರೋಧವರ್ತನೆ ವಹಿಸಿರುವುದೆಂದೂ ಕಾಬೂಲು ಸರಕಾರವು ಶಾಂತಿ ಪ್ರೇಮದಿಂದ ಈ ವರೆಗೆ ಎಲ್ಲವನ್ನೂ ಸಹಿಸಿಕೊಂಡು ಗುಡ್ಡಗಾಡು ಜನರನ್ನು ಸಮಜಾಯಿಸುತ್ತಾ ಬಂದಿರುವುದೆಂದೂ, ಹೊಸತಾಗಿ ಮೂಡಿರುವ ಈ ಮುಸ್ಲಿಂ ರಾಷ್ಟ್ರವು ಸಾಮ್ರಾಜ್ಯವಾದಿ ರಾಷ್ಟ್ರಗಳ ಮಾದರಿಯನ್ನೇ ಅನುಕರಿಸುತ್ತಿದೆಯೆಂದೂ, ಟೀಕಿಸಿರುವರು. ಭಾರತದ ಪತ್ರಿಕೆಗಳಲ್ಲಿ ಅಫ್ಘಾನಿಸ್ಥಾನದ ವಾದಗಳನ್ನು ಪ್ರಕಟವಾಗಲು ಬಿಟ್ಟ ಕುರಿತು ಪಾಕಿಸ್ಥಾನವು ಭಾರತ ಸರಕಾರಕ್ಕೆ ನಿಷೇಧ ಸೂಚನೆ ಮಾಡಿದೆ. ಭಾರತವು ಅದಕ್ಕುತ್ತರ ಕೊಡುತ್ತಾ, ಅದೇನೂ ಒಪ್ಪಂದ ದ್ರೋಹವಲ್ಲವೆಂದೂ ಅಫ್ಘಾನಿಸ್ಥಾನದ ವಾದದಂತೆಯೇ ಪಾಕಿಸ್ಥಾನದ ವಾದಗಳಿಗೂ ಭಾರತೀಯ ಪತ್ರಿಕೆಗಳು ಸಾಕಷ್ಟು ಸ್ಥಳ ಕೊಡುತ್ತಿವೆಯೆಂದೂ ತಿಳಿಸಿದೆ. ಸ್ವತಃ ಪಾಕಿಸ್ಥಾನದ ಪತ್ರಿಕೆಗಳಲ್ಲಿ ಭಾರತದ ಕುರಿತಾಗಲೂ ನಡೆಯುತ್ತಿರುವ ಅಪಪ್ರಚಾರಗಳ ಕಡೆಗೆ ಪಾಕಿಸ್ಥಾನ್ ಸರಕಾರದ ಲಕ್ಷ್ಯವನ್ನೆಳೆದಿದೆ. ಅಂತೂ ಸರಹದ್ದು ಸಂಬಂಧವಾಗಿ ಕರಾಚಿ—ಕಾಬೂಲು ವೈಷಮ್ಯ ಕ್ರಮಶಃ ಹೆಚ್ಚುತ್ತಿದೆ. ಹಿಂದೆ ಅಫ್ಘಾನಿಸ್ಥಾನವನ್ನಾಳುತ್ತಿದ್ದು, ಅಲ್ಲಿಯ ಮುಲ್ಲಾನಿರ್ಮಿತ ದಂಗೆಯಿದಿರು ನಿಲ್ಲಲಾರದೆ ಓಡಿ ಹೋಗಿದ್ದ ರಾಜಾ ಅಮಾನುಲ್ಲಾರ ತಮ್ಮ ಮಹಮ್ಮದ್ ಅಮೀನ್ ಜಾನರು ಎಂಟೊಂಭತ್ತು ತಿಂಗಳುಗಳಲ್ಲಿ ಪಾಕಿಸ್ಥಾನ್ ವಲಯದ ಒಬ್ಬ ಮಾಲಿಕನ ಮನೆಯಲ್ಲಿ ನಿಂತುಕೊಂಡು, ಪಾಕಿಸ್ಥಾನ್ ಜಿಲ್ಲೆಗಳಿಂದಲೇ ಸೇನೆ ಕೂಡಿಸಲು ಪ್ರಯತ್ನಿಸಿ, ಇತ್ತೀಚೆಗೆ ಅಫ್ಘಾನಿಸ್ಥಾನದೊಳಗೆ ಒಂದೆಡೆ ನುಗ್ಗಿ ಅಲ್ಲಿಯವರಿಂದ ಹಿಂದಕ್ಕಟ್ಟಲ್ಪಟ್ಟರೆಂದು ತಿಳಿದು ಬಂದಿದೆ.

ºº ºº ºº ºº

ಇನ್ನೆರಡು ಮುಸ್ಲಿಂ ರಾಜ್ಯಗಳಾದ ಇರಾಕ್ ಮತ್ತು ಸಿರಿಯಾಗಳೊಳಗೂ ವೈಮನಸ್ಸೆದ್ದಿದೆ. ಇರಾಕ್—ಸಿರಿಯಾ ಸರಹದ್ದಿನಲ್ಲಿ ಇರಾಕಿನ ಸೇನೆ ಜಮೆಯಾಗಿದೆಯೆಂದೂ, ಈ ಪರಿಸ್ಥಿತಿಯು ಬೆಳೆದರೆ ಜಾಗತಿಕ ಘರ್ಷಣೆಗದು ಎಡೆಕೊಡಬಹುದೆಂದೂ ಸಿರಿಯದ ನಾಯಕ ಕರ್ನಲ್ ಹುಸನ್ ಝೂಯಿಮ್ ಅಂದಿದ್ದಾರೆ. ಈ ವೈಷಮ್ಯದ ಕುರಿತು ಬ್ರಿಟನು ದುಃಖ ಸೂಚಿಸಿ, ತಾನೀ ಕುರಿತು ಪ್ರತ್ಯಕ್ಷ ಮಧ್ಯಸ್ಥಿಕೆಯೇನನ್ನೂ ವಹಿಸಿಲ್ಲವೆಂದು ಸ್ಪಷ್ಟಪಡಿಸಿದೆ.

ಇಂಡೋ ಚೈನದ ಸ್ವಾತಂತ್ರ್ಯ ಹೋರಾಟವನ್ನು ಸದೆಬಡಿಯಲು ಫ್ರೆಂಚರು ಯುದ್ಧ ಕೈದಿಗಳಾದ ಮತ್ತು ಇತರ ಜರ್ಮನರನ್ನು ತಮ್ಮ ಸೇನೆಗಳಿಗೆ ಸೇರಿಸಿಕೊಂಡು ಇಂಡೋಚೈನದ ರಣರಂಗದಲ್ಲಿ ಬಲಿಕೊಡುತ್ತಿದ್ದಾರೆಂದೂ, ಹಾಗೆ ಮಾಡಬಾರದೆಂದು ಆಂಗ್ಲೋ ಅಮೆರಿಕನರ ಸಲಹೆಹೋಗಿದೆಯಾದರೂ ಫ್ರಾನ್ಸ್ ಅದನ್ನು ಕಡೆಗಣಿಸಿದೆಯೆಂದೂ ಪ್ರಕಟವಾಗಿದೆ. ಬರ್ಮಾ ಯುದ್ಧವು ವಿಶೇಷ ಘಟನೆಯೇನೂ ಇಲ್ಲದೆ ಯಥಾಪ್ರಕಾರ ಸಾಗಿದೆ.

ಕಾಶ್ಮೀರ ಸಂಬಂಧವಾಗಿ ಒಪ್ಪಂದ ಸೂಚನೆಗಳ ಪುನರುಜ್ಜೀವನಕ್ಕಾಗಿ ಡೆಲ್ಲಿಗೆ ಬಂದಿರುವ ಕಾಶ್ಮೀರ ಕಮಿಶನಿನ ಡಾ| ಲೋಝಾನೋರವರು ಕೃತಾರ್ಥರಾಗುವ ಸಂಭವ ಕಾಣುವದಿಲ್ಲ. ಸಂಧಾನದಾತರೆಷ್ಟಿದ್ದರೂ ಭಾರತ ಸರಕಾರವು ತಾನು ಮುಂದಿಟ್ಟಿರುವ ಸೂಚನೆಗಳನ್ನು ರದ್ದುಪಡಿಸಿಕೊಳ್ಳಲು ತಯಾರಿಲ್ಲ.

ಭಾರತ ಮತ್ತು ಪಾಕಿಸ್ಥಾನಗಳನ್ನು ಬಿಟ್ಟೋಡಿರುವ ನಿರಾಶ್ರಿತರ ಸಾಗುವಳಿ ಭೂಮಿಗಳ ವ್ಯವಸ್ಥಾ ಮಾತುಕತೆಗಳು ಇದೇ ತಾ 25 ಮತ್ತು 26ರಲ್ಲಿ ಕರಾಚಿಯಲ್ಲಿ ಕೂಡಲಿರುವ ಭಾರತ—ಪಾಕಿಸ್ಥಾನ್ ಅಂತರ್ವಸಾಹತು ಸಮ್ಮೇಳನದಲ್ಲಿ ನಡೆಯಲಿದೆ. ಪಾಕಿಸ್ಥಾನ್ ಪ್ರತಿನಿಧಿಗಳ ನಾಯಕನಾಗಿ ಸರ್. ಝಫರುಲ್ಲಾ ಖಾನರೂ ಭಾರತ ಪ್ರತಿನಿಧಿಗಳ ನಾಯಕನಾಗಿ ಶ್ರೀ. ಎನ್. ಗೋಪಾಲಸ್ವಾಮಿ ಅಯ್ಯಂಗಾರರೂ ಸಮ್ಮೇಳನ ನಡೆಸಲಿದ್ದಾರೆ.

ಮದ್ಯಪಾನ ನಿಷೇಧವೆಂದರೇನು?

* ಅದು ಜನಾಂಗದ ಸಂಪತ್ತನ್ನುಳಿಸುವುದು.
* ಅದು ಜನತೆಯನ್ನು ಯೋಗ್ಯ ನಾಗರಿಕರನ್ನಾಗಗೊಡಲು ತರಬೇತಿ ಕೊಡುವುದು.
* ಅದು ಅನಿವಾರ್ಯವಾದ ಒಂದು ಸಾಮಾಜಿಕ ಸುಧಾರಣೆ.
* ಅದು ಗೃಹ ಜೀವನದ ಪಾವಿತ್ರ್ಯವನ್ನು ಕಾಪಾಡುವುದು.
* ಅದು ಪ್ರತಿಯೊರ್ವ ಬಾಲಕನಿಗೆ ಪ್ರಗತಿಗೆ ಸಂದರ್ಭವನ್ನೊದಗಿಸುತ್ತದೆ.

ಅದನ್ನು ಪ್ರೋತ್ಸಾಹಿಸುವ ಮೂಲಕ ನೀವು ನಿಮ್ಮ ಸರಕಾರಕ್ಕೆ ಸಹಾಯ ಸಲಿಸಿದಂತಾಗುವುದು.

ಈ ಜಾಹೀರಾತಿನ ಸ್ಥಳ:—

ಕೆನರಾ ಬ್ಯಾಂಕ್ ಲಿಮಿಟೆಡ್

ಇದರ ಸೇವಾದಾನ.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscribed	Rs. 20,00,000.
Capital Paid Up	Rs. 19,99,800.
Reserves	Rs. 8,91,000.

Banking business of every description transacted.

ನವಯುಗ

ಗುರುವಾರ, ಉಡುಪಿ, ೨೩-೬-'೪೯

ನವ ರಾಜ್ಯಾಂಗ ರಚನೆ

ಸ್ವತಂತ್ರ ಭಾರತದ ರಾಜ್ಯಾಂಗ ಶಾಸನದ ಅತಿ ಮುಖ್ಯ ಭಾಗಗಳನ್ನು ರೂಪಿಸುವ ಒಂದು ತಿಂಗಳ ಅವಿಶ್ರಾಂತ ಹಾಗೂ ಅಮೂಲ್ಯ ಕಾರ್ಯಗಳ ನಂತರ ಘಟನಾ ಸಮಿತಿಯು ಆರು ವಾರಗಳ ರಜೆ ಪಡೆದಿದೆ; ಇನ್ನದು ಜುಲಾಯಿ ಮೂರನೇ ವಾರದಲ್ಲಿ ಪುನಃ ಸೇರಲಿದೆ. ರಿಪಬ್ಲಿಕ್ ಭಾರತವು ಕಾಮನ್‌ವೆಲ್ತಿನೊಳಗೆ ನಿಲ್ಲುವ ಲಂಡನ್ ಒಡಂಬಡಿಕೆಯ ಸ್ವೀಕಾರ- ಅಲ್ಪ ಸಂಖ್ಯಾಕ ಸಮಾಜಗಳಿಗೆ ಕಾದಿಟ್ಟ ಸ್ಥಾನಗಳಿಲ್ಲವೆಂಬ ನಿರ್ಧಾರ- ಶಾಸನ ಸಭೆಗಳ ಆಕಾರ--ಸುಪ್ರೀಮ್ ಕೋರ್ಟುಗಳ ರಚನೆ, ಕ್ಷೇತ್ರ, ಅಧಿಕಾರ ನಮೂದನೆ-ಕೇಂದ್ರ ಮತ್ತು ಸಂಸ್ಥಾನಗಳೊಳಗಿನ ಸಂಬಂಧ ನಿರೂಪಣೆ-ಆರ್ಥಿಕ ಮಸೂದೆಗಳ ರಚನಾವಿಧಾನ-ಚುನಾವಣಾಯಂತ್ರ ದಳಕಾರರನಿರ್ಧಾರ, ಇತ್ಯಾದಿ ಪ್ರಾಮುಖ್ಯ ಕಾರ್ಯಗಳು ಈ ಬಾರಿಯ ಅಧಿವೇಶನದಲ್ಲಾಗಿವೆ. ಇನ್ನು ಮುಂದಿನ ಅಧಿವೇಶನದಲ್ಲಿ ರೂಪಿಸಲ್ಪಡಲು ನಾಗರಿಕತನ-ರಾಷ್ಟ್ರಭಾಷೆ-ಸಂಯುಕ್ತಾಧಿಕಾರದ ನಾಮಕರಣ-ಕೇಂದ್ರ ಮತ್ತು ಸಂಸ್ಥಾನಗಳೊಳಗಿನ ಆರ್ಥಿಕ ಸಂಬಂಧ-ಕೇಂದ್ರ, ಸಂಸ್ಥಾನ ಮತ್ತು ಅವೆರಡರೊಟ್ಟು ವಿಷಯಗಳ ವಿಂಗಡಿಸುವಿಕೆ---ಕೇಂದ್ರ ಅಧ್ಯಕ್ಷ ಮತ್ತು ಗವರ್ನರರುಗಳ ಸೂಚನಾ ಸೂತ್ರಗಳು---ಮುಂತಾದ ವಿಷಯಗಳು ಉಳಿದಿವೆ. ಜುಲಾಯಿ ಮೂರನೇ ವಾರದಲ್ಲಿ ಇನ್ನೊಮ್ಮೆ ಪ್ರಾರಂಭಿಸುವ ಘಟನಾ ಸಮಿತಿಯು, ಎರಡನೇ ಸ್ವರಾಜ್ಯ ವರ್ಧಂತಿ ದಿನ ಆಗೋಸ್ತು 15ರೊಳಗೆ ಈ ಕೆಲಸಗಳನ್ನು ಮುಗಿಸಿಕೊಳ್ಳುವದೆಂದು ನಿರೀಕ್ಷಿಸಲಾಗಿದೆ. ಅಲ್ಲಿಗೆ ಸ್ವತಂತ್ರ ಭಾರತದ ಕರಡು ಘಟನೆಯ ದ್ವಿತೀಯ ವಾಚನ ಮುಗಿದು, ತೃತೀಯ ಹಾಗೂ ಕೊನೆಯ ವಾಚನಕ್ಕಾಗಿ ಘಟನಾಸಮಿತಿಯು ಮತ್ತೊಮ್ಮೆ ಸೆಪ್ಟೆಂಬರ್ ಅಂತ್ಯಭಾಗದಲ್ಲಿ ಸೇರಲಿದೆ. ಈ ನಡುವಿನ ಆರು ವಾರಗಳಲ್ಲಿ 'ಕರಡು ಜೋಡಣಾ ಸಮಿತಿ'ಯು ಕೊನೆಯ ಆಕಾರಬರುವಂತೆ ಶಾಸನದ ಪರಿಚ್ಛೇದಗಳನ್ನು ಸರಿಗೊಳಿಸುವ ಕೆಲಸಮಾಡಲಿದೆ. ಸೆಪ್ಟೆಂಬರ್ ತಿಯು ಮಂಗಳ ಕಾರ್ಯಗಳೆಲ್ಲವನ್ನೂ ಮುಗಿಸಲಿದೆ; ಗಾಂಧಿಜೀಯ ಜನ್ಮದಿನವಾದ ಒಕ್ಟೋಬರ್ 2ರಲ್ಲಿಸ್ವತಂತ್ರಭಾರತದ ರಾಜ್ಯಶಾಸನವು ಪೂರ್ಣಾಂಗೀಕಾರ ಹೊಂದಿ ಅಸ್ತಿತ್ವಕ್ಕೆ ಬರಲಿದೆ ಅಂತೂ ರಾಜ್ಯಾಂಗರಚನಾ ಕಾರ್ಯದಲ್ಲಿ ಮುಕ್ಕಾಲಂಶವು ಇಷ್ಟರಲ್ಲೇ ಮುಗಿದಿದೆ ಎನ್ನಬಹುದು. ಪ್ರಥಮ ವಾಚನವು ಸರಿಯಾದ ಪರಿಚಯ ಕೊಡುವಂತಹದಿದ್ದರೆ ದ್ವಿತೀಯ ವಾಚನವು ಅಮೂಲಾಗ್ರ ವಿಮರ್ಶೆ ನಡೆಸಲೆಡೆಕೊಡುವಂತಹದು; ತೃತೀಯ ವಾಚನವು ಕೊನೆಯ ಅಂಗೀಕಾರಕ್ಕಾಗಿ ಮಾತ್ರ. ಪ್ರಥಮ ವಾಚನವಂದೇ ಮುಗಿದು, ಒಟ್ಟು 315 ನಿಬಂಧನೆಗಳ ಪೈಕಿ 229ರ ದ್ವಿತೀಯ ವಾಚನ ಕೂಡಾ ಇಷ್ಟರಲ್ಲೇ ಮುಗಿದಿರುವುದರಿಂದ, ಆದ ಕೆಲಸಕ್ಕಿಂತ ಇನ್ನುಳಿದಿರುವ ಕೆಲಸ ಕಡಿಮೆ. ಈ ವರೆಗಿನ ಪ್ರಗತಿಯು ಸಮಾಧಾನಕರವಾದುದು; ಹೆಗ್ಗಳಿಕೆ ಮೂಡಿಸುವಂತಹದು.

ರಾಜ್ಯಾಂಗ ಶಾಸನದಲ್ಲಿ ಮೂಡಿರುವ ಕೆಲವು ಮುಖ್ಯ ವಿಷಯಗಳ ಸ್ಪಷ್ಟೀಕಾರಗಳು ರಾಷ್ಟ್ರದ ಮುಂದಿವೆ. ರಾಷ್ಟ್ರವಿಚ್ಛಿಸಿದೊಡನೆ ಆ ಸಂಬಂಧ ಕಡಿದುಕೊಳ್ಳುವ ಪೂರ್ಣಾಧಿಕಾರವಿರುವಾಗ, ರಿಪಬ್ಲಿಕ್ ಭಾರತವು ಕಾಮನ್‌ವೆಲ್ತ್ ಕೂಟದೊಳಗೆ ನಿಲ್ಲುವಸಂಬಂಧದನಿರ್ಧಾರದ ಕುರಿತು ಅಸಮ್ಮತಿಯಿರುವವರಾದರೂ ನಿರಾಶೆಪಡಲೆಡೆಯಿಲ್ಲ. ಕೆಲವು ಹಂಗು ದಾಕ್ಷಿಣ್ಯಗಳೊಳಗೆ ರಾಷ್ಟ್ರವನ್ನದು ತಾತ್ಕಾಲಿಕವಾಗಿ ಸಿಕ್ಕಿಸಬಹುದಾದರೂ ಯಾವ ತಡೆ ಅಥವಾ ಬಂಧನವನ್ನೂ ಅದೊಡ್ಡಲಾರದು. ಪ್ರತ್ಯೇಕ ಮತದಾನ ಪದ್ಧತಿ ರದ್ದಾದುದಷ್ಟೇ ಅಲ್ಲ, ಅಲ್ಪ ಸಂಖ್ಯಾಕ ಸಮಾಜಗಳಿಗೆ ಕಾದಿಟ್ಟ ಸ್ಥಾನಗಳು ಕೂಡಾ ಇಲ್ಲವೆಂದಾದುದರಿಂದ ಜಾತೀಯ ಭಾವನೆಯ ಮೂಲೋಚ್ಚಾಟನೆಯಾಗಿ ಜನತಾ ಭಾವನೆ ವ್ಯಾಪಿಸಲನುಕೂಲವಾಗಿದೆ; ರಾಜಕೀಯ ರಂಗದ ಮಟ್ಟಿಗಂತೂ ಹೀಗಾಗುವದು ಅನಿವಾರ್ಯವಾಗಿದೆ. ಜಾತೀಯತೆಯ ಬುಡಕ್ಕೇನೇ ಈ ಮೂಲಕ ಕೊಡಲಿ ಯೇಟು ಬಿದ್ದಿದ್ದರೆ. ಪ್ರಾಂತೀಯಾಧಿಕಾರಗಳನ್ನು ಪ್ರತ್ಯಕ್ಷಾಪ್ರತ್ಯಕ್ಷ ವಿಧಾನಗಳಿಂದ ಕೇಂದ್ರಾಧಿಕಾರದ ನಿಯಂತ್ರಣಕ್ಕೊಳಪಡಿಸುವ ಸೂತ್ರಗಳು ಸಂಕುಚಿತ ಪ್ರಾಂತೀಯತೆಯ ಆಧಾರ ತಪ್ಪಿಸುವಂತಹವಿವೆ. ಸಾಂಸ್ಥಾನಿಕ ಜಲ, ಭೂಮಿ, 'ಮಣ್ಣಡಿಯ ಖನಿಜ ಮತ್ತಿತರ ಸಂಪತ್ತುಗಳನ್ನೂ, ಶೇಷಾಧಿಕಾರಗಳೆಲ್ಲವನ್ನೂ ಕೇಂದ್ರ ಸರಕಾರ ಹಿತದೃಷ್ಟಿಯಿಂದ ಜಗಶ್ಯ ಮತ್ತು ಅನಿವಾರ್ಯವೆಂದು ತೋರಿ ಸಂಸ್ಥಾನಗಳ [ಈಗ 'ಪ್ರಾಂತ್ಯ' ಗಳೆಂದು ಕರೆಯಲ್ಪಡುವವುಗಳಿಗೆ ಹೊಸ ಶಾಸನದನ್ವಯ 'ಸಂಸ್ಥಾನ'ಗಳೆಂಬ ಹೆಸರು ಬಂದಿದೆ] ಕೌನ್ಸಿಲು ⅔ನೇ ಬಹುಮತದಿಂದ ನಿರ್ಣಯಿಸಿದಲ್ಲಿ, ಸಂಸ್ಥಾನಗಳ ಅಧಿಕಾರ ಪಟ್ಟಿಯೊಳಗಿನ ಯಾವುದೇ ವಿಷಯದ ಮೇಲೆ ಕಾನೂನುಗಳನ್ನು ಮಾಡುವ ಅಧಿಕಾರವು ಪಾರ್ಲಿಮೆಂಟಿಗೆ ಇರುತ್ತದೆ' ಎಂಬೊಂದು ವಿಶೇಷ ನಿಯಮವೂ ಇಲ್ಲಿದೆ. ಅಂತೆಯೇ ಅಖಿಲ ಭಾರತದ ಚುನಾವಣೆಗಳ ವ್ಯವಸ್ಥೆ, ನಿಯಂತ್ರಣ ಮತ್ತು ಮೇಲಧಿಕಾರ ನಿರ್ವಹಿಸಲು, ಸ್ವತಂತ್ರವಾದ ಕೇಂದ್ರ ಯಂತ್ರವೊಂದು ನಿಯೋಜಿಸಲ್ಪಟ್ಟಿದೆ. ಈ ಹೊಸ ವಿಧಾನಾನುಸಾರವಾಗಿ ಮುಖ್ಯ ಚುನಾವಣಾ ಕಮಿಶನರನ್ನು ರಾಷ್ಟ್ರಾಧ್ಯಕ್ಷನೂ, ಅವನ ಕೆಳಗಿನ ಚುನಾವಣಾ ಕಮಿಶನರರುಗಳನ್ನು ಪ್ರಾಂತಿಕ ಗವರ್ನರರುಗಳೂ ನೇಮಿಸತಕ್ಕದ್ದೆಂದಾಗಿದೆ. ಇವೆಲ್ಲಾ ಹೊಸ ವಿಧಾನಗಳೂ ಪ್ರಾಂತ್ಯದ್ದಾಗಿರುವ ವಿವಿಧಾಧಿಕಾರಗಳನ್ನು ಕಸಗೊಂಡು ಕೇಂದ್ರದ ಕೈಗೆ ಕೊಟ್ಟಿವೆ. ಈ ಕೈ ಬದಲಾವಣೆಯು ನ್ಯಾಯ ಪಾಲನೆ ಹಾಗೂ ನಿಷ್ಪಕ್ಷಪಾತ ಕಾರ್ಯಗಳಿಗನುಕೂಲವೆಂದು ನಂಬಲೆಡೆಯಿದೆ. ಈ ಮೂಲಕ ಪ್ರಾಂತೀಯಾಧಿಕಾರವನ್ನು ಕೇಂದ್ರಾಧಿಕಾರವು ಆವರಿಸಿಕೊಂಡು ನಿಂತಂ

ಮಾನ ನಿಷ್ಠೆಗಿಂತ ಹಿರಿಯದಾಗಿ ರಾಷ್ಟ್ರೀಯತಾ ಭಾವನೆ, ಅಭಿಮಾನ, ನಿಷ್ಠೆ ನಿಲ್ಲಲಿದೆ. ಇನ್ನು ಕೇಂದ್ರಾಧಿಕಾರವೆಂಬುದು ಪರಕೀಯವಾದುದೇನೂ ಅಲ್ಲ; ಪ್ರಾಂತ್ಯಾಧಿಕಾರಗಳಂತೆಯೇ ರಾಷ್ಟ್ರದ ಎಲ್ಲೆಡೆಯ ಪ್ರಾಯಸ್ಥರಿಂದ ಆರಿಸಲ್ಪಡುವಂತಹದು. ರಾಷ್ಟ್ರದಲ್ಲಿ ಒಂದು ಸಂಸ್ಥಾನವು [ಪ್ರಾಂತ್ಯ] ಯಾವ ಸ್ಥಾನಮಾನದಲ್ಲಿದೆಯೋ ತದ್ರೀತಿ ಕೇಂದ್ರದಲ್ಲಿ ಅದರ ಪ್ರಾತಿನಿಧ್ಯ ಮೂಡುವದು. ರಾಷ್ಟ್ರದಲ್ಲಿ ಒಂದು ಭಾಗವು ಹೇಗಿದೆಯೋ, ಎಷ್ಟಿದೆಯೋ ಅಖಿಲ ರಾಷ್ಟ್ರೀಯಾಡಳಿತೆಯಲ್ಲಿಯೂ ಅದರ ಪಾಲು ಹಾಗೆ, ಅಷ್ಟೇ, ಆಗಲಿದೆ. ಅಖಂಡ ರಾಷ್ಟ್ರೀಯ ಭಾವನೆ, ರಕ್ಷಣೆ ಮತ್ತು ಪ್ರಗತಿಗಂತೂ ಈ ಅಖಿಲ ರಾಷ್ಟ್ರೀಯತಾ ಕಟ್ಟುಗಳು ಅತ್ಯುಪಯೋಗಕಾರಿಗಳು. ಆದ್ದರಿಂದ ಈ ನವ ವ್ಯವಸ್ಥೆಯನ್ನು ಎಲ್ಲರೂ ಸ್ವಾಗತಿಸಬೇಕು; ಸ್ವತಂತ್ರ ಭಾರತ ರಾಜ್ಯಾಂಗ ವಿಧಾನಗಳ ರೂಪರೇಷೆ ಮತ್ತು ತಿರುಳನ್ನು, ಇನ್ನೆರಡೇ ವರುಷಗಳೊಳಗೆ ಅದನ್ನಾಧರಿಸಿ ಪ್ರತಿನಿಧಿಗಳನ್ನಾರಿಸಲಿಕ್ಕಿರುವ ಭಾರತೀಯರೆಲ್ಲರೂ ಸರಿಯಾಗಿ ತಿಳಿದುಕೊಳ್ಳಬೇಕು. ಸ್ವತಂತ್ರ ಭಾರತ ರಾಜ್ಯಭಾರ ನಿರ್ವಹಣದ ಮೂಲ ಹೊಣೆಗಾರರಾದ ಮತದಾರರು ಅದಕ್ಕನುಗುಣವಾದ ಯೋಗ್ಯತೆಯನ್ನು ಗಳಿಸಿಕೊಳ್ಳುವದಗತ್ಯ ಜನತೆ ತಯಾರಾಗಲಿ!

ಆಕರ್ಷಣೀಯ ವಿದ್ಯಮಾನಗಳು

ಮಲ್ಪೆ ಮಹಾ ಬಂದರ....

ಪಶ್ಚಿಮಕರಾವಳಿಯ 'ಮಹಾ ಬಂದರಾಭಿವೃದ್ಧಿ ಸಮಿತಿ'ಯವರು, ಮರ್ಮಗೋವಾ ಮತ್ತು ಕೊಚ್ಚಿಗಳ ನಡುವಲಯದಲ್ಲಿ ಮತ್ತೊಂದು ಮಹಾಬಂದರ ರಚನೆಯ ಸಂಬಂಧದ ತಮ್ಮ ಶಿಫಾರಸುಗಳ ಕೊನೆಯ ವರದಿಯನ್ನು ಭಾರತ ಸರಕಾರಕ್ಕೆ ಇದೇ ತಿಂಗಳ ಮಧ್ಯಾವಧಿಯಲ್ಲಿ ಒಪ್ಪಿಸಿದ್ದಾರೆಂದು ತಿಳಿದುಬರುತ್ತದೆ. ಆ ವರದಿ ಮತ್ತು ಸರಕಾರೀ ನಿರ್ಣಯವಾವುದೂ ಈ ವರೆಗೆ ಅಧಿಕೃತವಾಗಿ ಪ್ರಕಟವಾಗಿಲ್ಲ. ಆದರೆ ಬಂದರಾಭಿವೃದ್ಧಿ ಸಮಿತಿಯ ವರದಿಯ ಕುರಿತು, ಅದಿದ್ದ ಸ್ಥಳ ಬೊಂಬಾಯಿಯಿಂದ ಬಂದ ಸಾಧಾರ ಹಾಗೂ ಅಧಿಕೃತಸಮಾನ ವಾರ್ತೆ ಹೀಗಿದೆ:- ಭಟ್ಕಳ ಮತ್ತು ಕಾರವಾರಗಳನ್ನು ಈ ಮಟ್ಟಿಗೆ ಪೂರ್ಣ ರದ್ದುಪಡಿಸಲಾಗಿದೆ. ಮಲ್ಪೆ ಮತ್ತು ಮಂಗಳೂರುಗಳ ವಾದಗಳನ್ನು ಬಂದರ ಸಮಿತಿಯವರು ಸವಿವರವಾಗಿ ಪೃಥಕ್ಕರಿಸಿ ಎತ್ತಿ ಹಿಡಿದಿದ್ದಾರೆ. ಕೊನೆಗವರು ಇವೆರಡರ ಪೈಕಿ ಯಾವುದನ್ನು ಶಿಫಾರಸು ಮಾಡಿದ್ದಾರೆಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲವಾದರೂ ಮಲ್ಪೆಯನ್ನೇ ಸೂಚಿಸಿರುವರೆಂದು ಸಾಧಾರವಾಗಿ ನಂಬಬಹುದು. ಈ ಸಂಬಂಧದ ಗಾಢಾಸಕ್ತಿ ಮತ್ತು ನಿಕಟ ಪರಿಚಯವಿರುವ ಬೊಂಬಾಯಿಯ ಹಡಗೋದ್ಯಮಿ ಸಂಘದ ಅಭಿಪ್ರಾಯವಿದೇ. ಈಗಲೇ ರೈಲ್ವೇ ಜೋಡಣೆಯಿರುವ ಮಂಗಳೂರು ಮಹಾ ಬಂದರಾಗಲು ಈ ಮಟ್ಟಿಗೆ ಹೆಚ್ಚು ಯೋಗ್ಯವಿದೆ. ಆದರೆ, ಗುರುಪುರ, ನೇತ್ರಾವತಿ, ಇವೆರಡು ಹೊಳೆಗಳೂ ಈ ರೇವಿನೊಳಗೆ ಸಂಗಮವಾಗುತ್ತಿವೆ ಎಂಬುದು ವಿಶೇಷ ಲಕ್ಷ್ಯ ಕೊಡಬೇಕಾದ ವಿಷಯ. ರೇವಿನೊಳಗೆ ಕೆಸರರಾಶಿ ಬಂದು ಬಿದ್ದು ಜಮೆಯಾಗುವ ಶಾಶ್ವತ ಅಪಾಯವು ಇಲ್ಲಿದ್ದು, ಸರದಿ ಬಿಡದೆ ಅದನ್ನು ತೆಗೆಯುತ್ತಾ ಹೋಗುವದು ಅನಿವಾರ್ಯವಾಗುವದು. ಮಂಗಳೂರಿಗಿರುವ ರೈಲ್ವೇ ಸೌಕರ್ಯವು ಮಲ್ಪೆಗಿಲ್ಲವೆಂಬುದು ಒಪ್ಪತಕ್ಕ ವಿಷಯ. ಆದರೆ ಸ್ಥಾನಮರ್ಮ ಮತ್ತು ವ್ಯಾಪಾರ ವಹಿವಾಟುಗಳ ದೃಷ್ಟಿಯಿಂದ ಈ ಬಂದರವೇ ಉತ್ತಮವಾದುದು.

ಚಂದ್ರ ನಗರ ಭಾರತಕ್ಕೆ

ಇದೇ ತಾ. 19ರಲ್ಲಿ ನಡೆದ ಚಂದ್ರನಗರ ಚುನಾವಣೆಯಲ್ಲಿ ಅದು ಭಾರತದೊಂದಿಗೆ ವಿಲೀನಗೊಳ್ಳಬೇಕೆಂಬುದಕ್ಕೆ ಅತ್ಯಧಿಕ ಬಹುಮತ ದೊರೆತಿದೆ. ಒಟ್ಟು 7663 ವೋಟುಗಳು ಬಿದ್ದಿದ್ದು, ಆ ಪೈಕಿ ಭಾರತದೊಂದಿಗೆ ತಾದಾತ್ಮ್ಯಗೊಳ್ಳಬೇಕೆನ್ನುವವುಗಳು 7437, ಫ್ರೆಂಚ್ ಅಧಿಕಾರದಲ್ಲೇ ಉಳಿಯಬೇಕೆನ್ನುವವು 114. ಅಸಿಂಧುವಾದವು 21. ಪ್ರಥಮ ಬಾರಿಯ ಅನಧಿಕೃತ ಮತಗಣನೆ ಚುನಾವಣೆಯ ದಿನವೇ ನಡೆದಿತ್ತು. ತಾ 21ರಲ್ಲಿ ಕೊನೆಯ ಹಾಗೂ ಅಧಿಕೃತ ಗಣನೆ ನಡೆಯಿತು. ಚಂದ್ರನಗರದ ಒಟ್ಟು ಮತದಾರರ ಸಂಖ್ಯೆ 12,194. ಆ ಪೈಕಿ 60% ಕ್ಕೂ ಮಿಕ್ಕಿದ ಸಂಖ್ಯೆಯವರು ಮತದಾನ ಮಾಡಿದರೆಂದಾಯಿತು. ಚುನಾವಣೆಯು ಯಾವ ಗಲಭೆಯೂ ಇಲ್ಲದೆ, ಏನೊಂ

ದೂ ಅಶಾಂತ್ಯುದ್ವೇಗ ಪ್ರದರ್ಶಿಸಲ್ಪಡದೆ ಅತ್ಯಂತ ಶಾಂತ ಹಾಗೂ ಸೌಮ್ಯರೀತಿಯಿಂದ ನಡೆದಿದ್ದಿತು. ಅಂತೂ ಭಾರತದ ಉತ್ತರಗಡೆಯಲ್ಲಿದ್ದ ಒಂದು ಫ್ರೆಂಚ್ ಭೂಮಿ ತನ್ನ ಹಕ್ಕಿನ ಮಾತೃಭೂಮಿಯನ್ನು ಅಪ್ಪಿಕೊಂಡಿತು. ಇನ್ನು ದಕ್ಷಿಣಗಡೆಯಲ್ಲಿರುವ ಪಾಂಡಿಚೇರಿ ಮೊದಲಾದ ಫ್ರೆಂಚ್ ವಸಾಹತುಗಳ ಹಾಗೂ ಗೋವೆಯಂತಹ ಪೋರ್ಚುಗೀಸ್ ವಸಾಹತುಗಳ ಪ್ರಶ್ನೆಮಾತ್ರ ಬಾಕಿಯುಳಿದಿದೆ.

ಮದ್ರಾಸೀ ಆರೋಪ ತನಿಖೆ

ಮದ್ರಾಸಿನ ಓಮಂದೂರು ಮಂಡಲಿಯಲ್ಲಿದ್ದು ಈಗಿನ ಮಂಡಲಿಯಲ್ಲೂ ಇರುವ ಆರುಮಂದಿ ಮಂತ್ರಿಗಳು ಮತ್ತಿತರ ಕೆಲವು ಕಾಂಗ್ರೆಸಿಗರ ಮೇಲೆ, ಇದಿರುವಾದಿ ಒಳಪಂಗಡದ ಕೆಲವು ಎಂ. ಎಲ್. ಎ.ಗಳು ಆರೋಪಗಳನ್ನು ಹೊರಿಸಿ ಕಾಂಗ್ರೆಸ್ ಅಧಿನಾಯಕ ಮಂಡಲಿಗೆ ದೂರುಕೊಟ್ಟಿದ್ದುದನ್ನು ವಿಚಾರಿಸಲು ಕಾಂಗ್ರೆಸ್ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಶಂಕರರಾವ್ ದೇವೋರವರು ಕಳೆದವಾರ ಮದ್ರಾಸಿಗೆ ಬಂದು ಸಂಬಂಧಪಟ್ಟವರೆಲ್ಲರ ವಾಗ್ಮೂಲಗಳನ್ನೂ, ಸಂಬಂಧಿಸಿದ ದಾಖಲೆಗಳನ್ನೂ ಪಡೆದುಕೊಂಡು ಮರಳಿಹೋಗಿದ್ದಾರೆ. ಅವರು ತನ್ನ ವರದಿಯನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಒಪ್ಪಿಸಲಿದ್ದಾರೆ ಆ ವರದಿಯನ್ನು ಆಧರಿಸಿ ಕಾಂಗ್ರೆಸ್ ಸಮಿತಿಯು ತನ್ನ ತೀರ್ಮಾನವನ್ನು ಕೊಡಲಿದೆ. ಶ್ರೀ ದೇವೋ ಅವರು ಮದ್ರಾಸಿನಲ್ಲಿ ಆಪಾದಿತ ಮಂತ್ರಿಗಳನ್ನೂ ಶ್ರೀಗಳಾದ ಟಿ. ಪ್ರಕಾಶಮ್, ಕೆ. ಆರ್. ಕಾರಂತ, ಕಾಳೇಶ್ವರರಾವ್, ಟಿ. ವಿಶ್ವನಾಥನ್ ಮುಂತಾದ ಇದಿರುವಾದಿಗಳನ್ನೂ, ಶ್ರೀ ಓಮಂದೂರು, ಕೇಳಪ್ಪನ್ ಮೊದಲಾದವರನ್ನೂ ಕರೆಯಿಸಿ ಹೇಳಿಕೆಗಳನ್ನು ಸಂಗ್ರಹಿಸಿದ್ದರು. ತಮ್ಮ ಆರೋಪಗಳಿಗುತ್ತರವಾಗಿ ಆಪಾದಿತ ಮಂತ್ರಿಗಳು ಕೊಟ್ಟಿರುವ ಹೇಳಿಕೆಗಳ ಪ್ರತಿಗಳನ್ನು ಪರಾಮರ್ಶೆಗಾಗಿ ತಮಗೆ ಕೊಡಬೇಕೆಂದು ಶ್ರೀ ಕಾರಂತರೇ ಮೊದಲಾದವರು ಕೇಳಿಕೊಂಡಿದ್ದರೂ ಶ್ರೀ ದೇವೋ ಕೊಡದಿದ್ದುದರಿಂದ ಅವರಾರೂ ಆ ಮೇಲೆ ವಿಚಾರಣಾಭಾಗಿಗಳಾಗಲಿಲ್ಲವೆಂದು ತಿಳಿದು ಬಂದಿದೆ. "ಶ್ರೀ. ದೇವೋ ಅವರದು ಏಕಪಕ್ಷೀಯ ವಿಚಾರಣೆ; ಇದರಿಂದ ನ್ಯಾಯ ಶೋಧನೆಯಾಗದು; ನಿಷ್ಪಕ್ಷಪಾತಿ ಹಾಗೂ ನಿರ್ಲಿಪ್ತ ಬುದ್ಧಿಯ ನ್ಯಾಯಾಧೀಶ ಮಂಡಲಿಯನ್ನೇ ನೇಮಿಸಬೇಕು" ಎಂದು ಶ್ರೀ. ಟಿ. ಪ್ರಕಾಶಮರು ವಿಚಾರಣಾನಂತರವೂ ದೂರಿದ್ದಾರೆ. ಶ್ರೀ. ಪ್ರಕಾಶಮರೇ ಮುಂತಾದವರ ಮೇಲೂ ಅವರ ಇದಿರುವಾದಿ ಮಂತ್ರಿಗಳು ಆರೋಪಗಳನ್ನು ಹೊರಿಸಿದ್ದು, ಅವು ಕೂಡಾ ಶ್ರೀ ದೇವೋರ ವಿಚಾರಣೆಯೊಳಗಿದ್ದುವು.

ಗಾಂಧಿ ಕೊಲೆ ಮೊಕದ್ದಮೆ

ಗಾಂಧಿಜೀಯ ಕೊಲೆ ಮೊಕದ್ದಮೆಯ ಅಪ್ಪೀಲು ವಿಚಾರಣೆ ನಡೆಸಿದ ಪೂರ್ವ ಪಂಜಾಬು ಹೈಕೋರ್ಟು— ಶ್ರೀ ಜಸ್ಟೀಸ್ ಎ. ಎನ್. ಭಂಡಾರಿ, ಶ್ರೀ ಜಸ್ಟೀಸ್ ಅಚುರಾಮ್, ಶ್ರೀ ಜಸ್ಟೀಸ್ ಜಿ. ಡಿ. ಖೋಸ್ಲಾ, ಇವರ ಫುಲ್‌ಬೆಂಚ್— ಜೂನ್ ತಾ 21ರಂದು ತನ್ನ ತೀರ್ಪಿತ್ತಿದೆ. ಗೋಡ್ಸೆ ಮತ್ತು ಆಪ್ಟೆಯ ಮೇಲಾಗಿದ್ದ ಫಾಶೀ ತೀರ್ಮಾನ ಕಾಯಂಗೊಳಿಸಲ್ಪಟ್ಟು, ಜೀವಾವಧಿ ಸಜೆ ತೀರ್ಮಾನವಾಗಿದ್ದ ಐದು ಮಂದಿಯ ಪೈಕಿ ಒಬ್ಬನ ಮಟ್ಟಿಗೆ ಅದು ಕಾಯಂ ಆಗಿ ಉಳಿದ ನಾಲ್ವರು ಬಿಡುಗಡೆಗೊಂಡರೆಂದು ತಿಳಿದು ಬರುತ್ತದೆ.

1948ನೇ ಜನವರಿ 30ರಲ್ಲಿ ನಡೆದ ಗಾಂಧಿಜೀಯ ಕೊಲೆಯ ಸಂಬಂಧದ ಈ ಮೊಕದ್ದಮೆಯ ತನಿಖೆಯನ್ನು ಸ್ಪೆಶ್ಯಲ್ ಜಡ್ಜ ಶ್ರೀ. ಆತ್ಮಚರಣರು ದಿಲ್ಲಿಯ ಕೆಂಪು ಕೋಟೆಯಲ್ಲಿ 1948ನೇ ಮೇ ತಾ. 27ಕ್ಕೆ ಆರಂಭಿಸಿ, ದಶಂಬರ ತಾ. 30ಕ್ಕೆ ಮುಗಿಸಿದ್ದರು. ಪ್ರೊಸಿಕ್ಯೂಶನ್ ಕಡೆಯ 149 ಸಾಕ್ಷಿಗಳ ವಿಚಾರಣೆಯಾಗಿದ್ದಿತು. ಅವರ ಸಾಕ್ಷ್ಯಗಳು 720 ಫುಲ್‌ಸ್ಕೇಪ್ ಹಾಳೆಯಷ್ಟಾಗಿದ್ದವು. 404 ಕ್ಕೂ ಮಿಕ್ಕಿದ ಬರಹನಿಶಿ ದಾಖಲೆಗಳೂ 80 ಸಾಮಗ್ರಿ ದಾಖಲೆಗಳೂ ಸಾಕ್ಷ್ಯ ಪುರಾವೆಗಳಾಗಿ ಕೋರ್ಟಿಗೆ ಹಾಜರು ಮಾಡಲ್ಪಟ್ಟಿದ್ದುವು. ಅಪ್ಪೀಲು ತನಿಖೆಗಾಗಿ ಪೂರ್ವ ಪಂಜಾಬು ಹೈಕೋರ್ಟು ಆಪಾದಿತರ ಕಡೆಯ ಮತ್ತು ಸರಕಾರೀ ಕಡೆಯ ವಕೀಲರುಗಳ 'ವಾದ'ಗಳನ್ನು ಕೇಳುವದಕ್ಕಾಗಿ 26 ದಿನ ಕೋರ್ಟು ನಡೆಯಿಸಿದ್ದಿತು. ಪ್ರಥಮಾರೋಪಿ ನಾಥೂರಾಮ್ ಗೋಡ್ಸೆ ತಾನೇ ವಾದಿಸಿದ್ದ. ಉಳಿದ ಆರೋಪಿಗಳ ಪರವಾಗಿ ಶ್ರೀಗಳಾದ ಬಿ. ಬೆನರ್ಜಿ, ಎಸ್. ಡಿ. ಡಾಂಗೆ, ಪಿ. ಎಲ್. ಇನಾಮ್ದಾರ್, ಡಿ. ಎನ್. ಅವಾಸ್ತಿ ವಾದಿಸಿದ್ದರು. ಸರಕಾರೀ ಕಡೆಯಿಂದ ಚೀಫ್ ಪ್ರೊಸಿಕ್ಯೂಟಿಂಗ್ ವಕೀಲ್ ಶ್ರೀ ಸಿ. ಕೆ. ದಫ್ತಾರಿಯವರು ವಾದಿಸಿದ್ದರು. ಅವರಿಗೆ ಸಹಾಯಕರಾಗಿ ಶ್ರೀ ಎನ್. ಕೆ. ಪೆಟ್ರಿಗಾ ಮತ್ತು ಸರ್ದಾರ್ ಕರ್ತಾರ್ ಸಿಂಗ್ ಚಾವ್ಲಾ ಇದ್ದರು. ನಾಥೂರಾಮ್ ಗೋಡ್ಸೆ ತಾನು ಮಹಾತ್ಮಾ ಗಾಂಧಿಯವರ ಕೊಲೆ ಮಾಡಿದುದು ಹೌದೆಂದು ಒಪ್ಪಿಕೊಂಡು, ಅದು ತನ್ನೊಬ್ಬನ ಇಚ್ಛೆ ಮತ್ತು ಕೆಲಸ ಮಾತ್ರವೆಂದೂ ಅದಕ್ಕಾಗಿ ಯಾವ ಒಳಸಂಚೂ ಇರಲಿಲ್ಲವೆಂದೂ ಸಾಧಿಸಿದ್ದ. ಅಪ್ಪೀಲಿನಲ್ಲಿ ಆಪಾದಿತರ ಕಡೆಯ ವಾದವೆಲ್ಲವೂ ಹಾಗಿದ್ದಿತು. ಅದು ಕೇವಲ ಒಬ್ಬನ ಕೆಲಸ, ಬೇರೆ ಆರೋಪಿಗಳಾರೂ ಅದಕ್ಕೆ ಹೊಣೆಗಾರರಲ್ಲವೆಂದವರ ವಾದವಿದ್ದಿತು.

"ಕಾಂಗ್ರೆಸನ್ನು ಬಲಪಡಿಸಲಾರಿರಾದರೆ ಅದು ಬರ್ಖಾಸ್ತಾಗುವದು ಲೇಸು!"

ಪಂಡಿತ ನೆಹರುಗಳ ಬಿಚ್ಚು ಹೃದಯದ ಉದ್ಗಾರ

ಕಲ್ಕತ್ತಾ ಪರಾಭವದ ಬಿಸಿತಾಗಿದ್ದಲ್ಲಿಯೇ ಕಾಂಗ್ರೆಸಿಗರ ಮನೋವೃತ್ತಿಯನ್ನು ಸರಿಯಾದ ಆಕಾರಕ್ಕೆ ತಿರುಗಿಸಬಲ್ಲ ಸುತ್ತಿಗೆ ಹೊಡೆತದಂತಹ ಮಾತುಗಳು ಪಂಡಿತ ಜವಾಹಿರಲಾಲರ ಬಾಯಿಯಿಂದ ಬಂದಿವೆ. ದಿಲ್ಲಿಯ ರಾಜಕೀಯ ಸಮ್ಮೇಳನದಲ್ಲಿ ಮಾತಾಡುತ್ತಾ ಇದೇ ತಾ. 19ರಲ್ಲಿ ಪಂಡಿತಜೀ ಅಂದರು:-

"ಜನರ ಸಂಕಷ್ಟಗಳನ್ನು ಕೇಳಿ ತಿಳಿಯುವುದಕ್ಕಾಗಿಯೂ ನಾನವರಿಗೆ ತಿಳಿಸಲಿಕ್ಕಿರುವುದನ್ನು ಹೇಳಲಾಗುವಂತೆಯೂ, ದೊಡ್ಡ ಅಥವಾ ಸಣ್ಣ ಸಭೆಗಳಲ್ಲಿ ಇಲ್ಲಿ ಅಥವಾ ದೇಶದ ಇತರ ಕಡೆಗಳಲ್ಲಿ ಜನತೆಗೆ ಭಾಷಣ ಕೊಡುವ ಹೆಚ್ಚೆಚ್ಚು ಸಂದರ್ಭಗಳನ್ನು ನಾನು ಸಂಪಾದಿಸಿಕೊಳ್ಳಲಿಚ್ಛಿಸುತ್ತೇನೆ. ಕಲ್ಕತ್ತದ ಚುನಾವಣೆಯ ಪರಿಣಾಮವು ಅಗಣ್ಯವೆಂದು ನೆನೆಸುವುದು ತಪ್ಪು. ಒಂದೋ ಪಶ್ಚಿಮ ಬಂಗಾಳದ ಪ್ರಾಂತಿಕ ಕಾಂಗ್ರೆಸಿನ ಮೇಲೆ, ಅಥವಾ ಪ್ರಾಂತಿಕ ಸರಕಾರದ ಮೇಲೆ ದಕ್ಷಿಣ ಕಲ್ಕತ್ತಾ ಮತದಾರ ಕ್ಷೇತ್ರದ ಜನತೆ ಸಿಟ್ಟಿಗೆದ್ದಿದೆ ಎಂಬುದನ್ನದು ಸೂಚಿಸುತ್ತದೆ. ಇದಕ್ಕೇನು ಕಾರಣ, ಮತ್ತು ಬಂಗಾಳದ ಇತರ ಕಡೆಯ ಜನರ ಭಾವನೆ ಕೂಡಾ ಹೀಗೇನೇ ಇದೆಯೇ ಎಂಬುವನ್ನು ಶೋಧಿಸಿ ನೋಡಬೇಕಾದುದು ಈಗ ಕಾಂಗ್ರೆಸಿಗರ ಆದ್ಯ ಕರ್ತವ್ಯ. ಸ್ಥಿತಿಗತಿಗಳ ಸರಿಯಾದ ಪರಿಚಯ ಮಾಡಿಕೊಂಡು, ಕಾಂಗ್ರೆಸ್ ಸಂಸ್ಥೆಯನ್ನು ಪುನರುಜ್ಜೀವನಗೊಳಿಸುವ ಸರ್ವ ಪ್ರಯತ್ನಗಳನ್ನೂ ಮಾಡಬೇಕಾದ ಕಾಲವಿದು. ಕಾಂಗ್ರೆಸಿಗರ ಉತ್ಸಾಹವೀಗ ಕುಗ್ಗಿಹೋಗಿರುವುದೂ, ಕೆಲವು ಪ್ರಾಂತ್ಯಗಳಲ್ಲಿ ಸಣ್ಣಪುಟ್ಟ ಜಗಳಗಳಲ್ಲೇ ಅವರು ನಿರತರಿರುವದೂ ಖಂಡನೀಯ. ಮಹಾತ್ಮಾ ಗಾಂಧಿಯವರಿಂದಾಗಿದ್ದಂತೆ ಕಾಂಗ್ರೆಸಿಗರ ಹೃದಯವಶೀಕರಣ ಮಾಡುವ ಬದಲಿಗೆ, ದುರ್ವರ್ತನೆ, ಕರ್ತವ್ಯಭ್ರಷ್ಟತೆಗಳ ಕಾರಣಕೊಟ್ಟು ಅವರನ್ನು ಹೊರದಬ್ಬುವ ಚಟವೀಗ ಹಬ್ಬಿ ಹೋಗಿರುವುದು ಶೋಚನೀಯ. ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲಾರಿರಾದರೆ ಅದು ಕ್ರಮಶಃ ನುಚ್ಚುನುರಿಯಾಗಿ ಹೋಗುವದಕ್ಕಿಂತ ಅದನ್ನು ಬರ್ಖಾಸ್ತುಪಡಿಸಿ ಬಿಡುವದೇ ವಾಸಿ. ಕಾಂಗ್ರೆಸಿನ ಸ್ಥಾನಕ್ಕೇರಬಲ್ಲ ಇನ್ನೊಂದು ಪಕ್ಷ ಅಥವಾ ಅಧಿಕಾರವಾವುದೂ ನನಗೆ ತೋರುವದಿಲ್ಲ. ಕಾಂಗ್ರೆಸು ದುರ್ಬಲಗೊಂಡರೆ ಅರಾಜಕತೆ ಮತ್ತು ಗೊಂದಲ ವ್ಯಾಪಿಸಿ ಹೋಗುವದು. ಟೀಕೆಗಳಿಗೆ ನನ್ನ ಸ್ವಾಗತವಿದೆ; ಆದರೆ ಅವು ತೂಕ ತಪ್ಪಬಾರದೆಂದಷ್ಟೇ ನನ್ನಿಚ್ಛೆ. ನಾವು ಸರಕಾರದಲ್ಲಿರುವುದು ಜನತೆಯ ಪ್ರತಿನಿಧಿಗಳಾಗಿ; ಈ ಪ್ರತಿನಿಧಿ ಸ್ವರೂಪವನ್ನು ನಾವು ಕಳಕೊಂಡಿದ್ದೇವೆಂದು ತೋರಿದೊಡನೆಯೇ ನಾವು ರಾಜಿಕೊಟ್ಟು ಹೊರಬೀಳುವೆವು. ತಮ್ಮ ಸಂಕಷ್ಟಗಳ ನಿವಾರಣೆಗಾಗಿ ಮಾತ್ರವೇ ಜನತೆ ನಮ್ಮ ಕಡೆಗೆ ನೋಡುವದಲ್ಲ; ನಮ್ಮೊಡನವರು ಸಹಕರಿಸಬೇಕು. ಈ ವರುಷ ಒಕ್ಟೋಬರಿನಲ್ಲಿ ಹೊಸ ಘಟನೆಯು ಅಂಗೀಕಾರವಾದ ಮೇಲೆ 1950ನೇ ಜನವರಿ 26ಕ್ಕೆ ಭಾರತವನ್ನು 'ರಿಪಬ್ಲಿಕ್' ಆಗಿ ಜಾಹೀರುಮಾಡಬೇಕೆಂದು ನಿರ್ಧಾರವಾಗಿದೆ. ಚುನಾವಣೆಗಳ ಸಿದ್ಧತೆಗಳೀಗ ನಡೆಯುತ್ತಿದ್ದು ಅವು ಪೂರ್ಣಗೊಳ್ಳಲು ಇನ್ನೂ ಕೆಲಸಮಯ ಹಿಡಿಯಬಹುದಾದ್ದರಿಂದ 1950ನೇ ಛಳಿಗಾಲದ ಮೊದಲು — ಇನ್ನು 15 ತಿಂಗಳೊಳಗೆ— ಚುನಾವಣೆಗಳನ್ನು ನಡೆಸುವದು ಅಸಾಧ್ಯ. ಸಾಧ್ಯವಾದರೆ ಈ ಮಧ್ಯಾವಧಿಯೊಳಗೇನೆ ಕಾಂಗ್ರೆಸು, ಸರಕಾರ ಮತ್ತು ಅವುಗಳ ಧೋರಣೆಗಳ ಕುರಿತು ಜನತೆಯ ಭಾವನೆ ಹೇಗಿದೆ ಎಂಬುದನ್ನು ತಿಳಿದುಕೊಳ್ಳಬೇಕೆಂಬ ಆತುರ ನನಗಿದೆ. ಕಮ್ಯೂನಿಸಮಿನ ಹಲವು ತತ್ವಗಳಿಗೆ ಸ್ವತಃ ನನ್ನ ಒಪ್ಪಿಗೆಯಿದೆ, ಆದರೆ ಭಾರತದ ಕಮ್ಯೂನಿಸ್ಟ್ ಪಕ್ಷದ ಧೋರಣೆಯು ಆ ತತ್ವಗಳಿಗನುಸಾರವಾಗಿ ಇಲ್ಲ. ಇಲ್ಲಿಯ ಕಮ್ಯೂನಿಸ್ಟರಿಂದು ರಾಷ್ಟ್ರದ ವೈರಿಗಳು; ಕೆಲವೇ ಕಾಲಕ್ಕೆ ಮೊದಲು ಪಡೆಯಲ್ಪಟ್ಟಿರುವ ಸ್ವಾತಂತ್ರ್ಯದ ಎಳೆಸಸಿಯನ್ನು ಕಿತ್ತೆಸೆಯುವ ಬಯಕೆ ಅವರದು. ರಾಜಕೀಯ ಸ್ವಾತಂತ್ರ್ಯದಂತೆಯೇ ಆರ್ಥಿಕಸ್ವಾತಂತ್ರ್ಯವನ್ನೂ ಗಳಿಸಬೇಕೆಂಬುದನ್ನು ನಾನೊಪ್ಪುತ್ತೇನೆ. ಆದರೆ ಯಾವ ಕಡೆಯಿಂದಲೂ ಹೊಡೆತಬೀಳದಂತೆ ರಾಜಕೀಯ ಸ್ವಾತಂತ್ರ್ಯವನ್ನು ಜೋಪಾಸನೆಗೊಳಿಸದಿದ್ದರೆ ನಾವು ಆರ್ಥಿಕ ಸ್ವಾತಂತ್ರ್ಯದ ಕಡೆಗೆ ಹೆಜ್ಜೆಯಿಡಲು ಸಾಧ್ಯವಿಲ್ಲ. ಭಾರತದ ಮುಖ ಬದಲಾಗಿದೆ; ಬದಲಾಗುತ್ತಿದೆ. ಆರ್ಥಿಕರಂಗದಲ್ಲಿ ಸರಕಾರವು ಸ್ಪಷ್ಟ ಧೋರಣೆ ವಹಿಸಿದೆ; ಯಾವ ಕ್ರಾಂತಿಕಾರಿ ಬದಲಾವಣೆಯನ್ನೂ ಮಾಡಿಲ್ಲ. ಪ್ರಚಲಿತ ಪದ್ಧತಿಯನ್ನು ಅಡಿಮೇಲು ಮಾಡಿ ಹಾಕುವ ಇಚ್ಛೆಯಿಲ್ಲದುದರಿಂದ ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಲಾಯಿತು. ತಮ್ಮ ಐಶ್ವರ್ಯವನ್ನು ಉತ್ಪಾದನೆಗಳಲ್ಲಿ ಹಾಕದೆ ಕೂಡಿಸಿಟ್ಟುಕೊಳ್ಳುವ ಭಂಡವಾಳಗಾರರ ಸಂಕುಚಿತ ಧೋರಣೆಯು ರಾಷ್ಟ್ರಹಿತಘಾತಕವಿದೆ. ಭಾರತದ ಭವಿಷ್ಯವನ್ನೇ ಅವಲಂಬಿಸಿದೆ ಭಂಡವಾಳಗಾರರ ಭವಿಷ್ಯವೆಂಬುದನ್ನವರು ತಿಳಿಯಬೇಕು."

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ತಾ 21—6—49 ರಿಂದ
ನ್ಯೂ ಥಿಯೇಟರಿನವರ
"ಊಂಚ್-ನೀಚ್"
ಭಾರತಿ ದೇವಿ ಮತ್ತು ಸುಮಿತ್ರಾ.
ಬರುವ ಚಿತ್ರ- ಕನ್ನಡದಲ್ಲಿ,
'ಮೀರಾ'

ದ. ಕನ್ನಡದಲ್ಲಿ ಭತ್ತದ ಪೈರಿಗೆ ಹಾನಿ ಸರಕಾರೀ ಅಧಿಕಾರಿಗಳನ್ನು ಕಳುಹಿಸಲಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತದ ಪೈರಿಗೆ ಹುಳಗಳಿಂದ ಹಾನಿ ಸಂಭವಿಸಿದೆಯೆಂದು ತಿಳಿದು ಮದ್ರಾಸು ಸರಕಾರವು ಕೊಯಮುತ್ತೂರಿನಲ್ಲಿರುವ ಬೆಳೆಗಳ ರಕ್ಷಣ ಅಧಿಕಾರಿಗಳೂ ಒಕ್ಕಲುತನ ಖಾತೆಯ ಡೆಪ್ಯುಟಿ ಡೈರೆಕ್ಟರರೂ ದಕ್ಷಿಣ ಕನ್ನಡಕ್ಕೆ ಜರೂರಾಗಿ ಹೋಗಬೇಕೆಂದೂ ಅವರು ಈ ಹುಳದ ಹಾವಳಿಯನ್ನು ನಿಯಂತ್ರಿಸಲು ಕ್ರಿಮಿನಾಶಕ ಔಷಧಗಳನ್ನೂ, ಯಂತ್ರಗಳನ್ನೂ ಕೂಡ್ಲೆ ಅಲ್ಲಿಗೆ ತಕ್ಕೊಂಡು ಹೋಗಬೇಕೆಂದೂ ತಂತೀ ಮೂಲಕ ತಿಳಿಸಿದೆಯೆಂದು ಗೊತ್ತಾಗಿದೆ

ಕೋಡಪದವು

ಕಳೆದ ತಾ 30 ರಲ್ಲು ಹೊಸತಾಗಿ ಕೋಡಪದವು ಎಂಬಲ್ಲಿ ಬ್ರಾಂಚು ಪೋಸ್ಟಾಫೀಸು ತೆರೆಯಲಾಗಿದೆ

ಉಡುಪಿ

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆ

ಯು ತಾ 18ರಲ್ಲು ಸಂಜೆ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿತು ಕುಂದಾಪುರ, ಕಾರ್ಕಳ, ಉಡುಪಿ ತಾಲೂಕುಗಳ ಸೌಕರ್ಯಕ್ಕಾಗಿ ಉಡುಪಿಯಲ್ಲೊಂದು ಸಬ್‌ಕೋರ್ಟನ್ನು ಬೇಗನೆ ಸ್ಥಾಪಿಸಬೇಕೆಂದು ಮದ್ರಾಸು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು ನೇಜಿಗೆ ಹುಳಗಳು ಬಿದ್ದು ಬೇಸಾಯಗಾರರಿಗೆ ಉಂಟಾದ ಸಂಕಷ್ಟವನ್ನು ನಿವಾರಿಸುವಂತೆ ಕೃಷಿ ಇಲಾಖೆಯನ್ನು ಕೇಳಿಕೊಳ್ಳಲಾಯಿತು ಸಿಟಿ ಬಸ್‌ಸ್ಟ್ಯಾಂಡಿನಲ್ಲಿ ನುಗ್ಗಾಟವನ್ನು ನಿಲ್ಲಿಸಲು ಕ್ಯೂ ಪದ್ಧತಿಯನ್ನು ಕೂಡಲೇ ಜ್ಯಾರಿಗೆ ತರುವಂತೆ ಪೋಲೀಸ್ ಇಲಾಖೆಯನ್ನು ವಿನಂತಿಸಲಾಯಿತು

ಮೂರು ಮಕ್ಕಳ ಜನನ

ಇದೇ ತಾ 17ರಲ್ಲು ಬೆಳಿಗ್ಗೆ ಶ್ರೀ ಕೊಟ್ಟಕಾರ್ ಪದ್ಮನಾಭ ಪೈಗಳ ನೌಕರ ಕಡೆಕಾರಿನ ಶ್ರೀ ಕೊರಗ ಪೂಜಾರಿಯ ಹೆಂಡತಿ ಶ್ರೀಮತಿ ಸಂಕಿ ಪೂಜಾರ್ತಿಯು 2 ಗಂಡು ಮಕ್ಕಳನ್ನೂ ಒಂದು ಹೆಣ್ಣು ಮಗುವನ್ನೂ ಹಡೆದಳು ತಾಯಿ ಮಕ್ಕಳೆಲ್ಲಾ ಆರೋಗ್ಯವಾಗಿದ್ದಾರೆ. ಶಿಶುಗಳ ಭಾರವು ಸಾಧಾರಣ 8, 7, 6 ಪೌಂಡುಗಳಿರಬಹುದೆಂದು ತಿಳಿದು ಬರುತ್ತದೆ

ಕಡಿಯಾಳಿ

ಸ್ಥಳೀಯ ಹಾ। ಎ। ಶಾಲೆಯಿಂದ ಕಳೆದ ಎಂಟನೇ ದರ್ಜೆಯ ಸರಕಾರೀ ಪರೀಕ್ಷೆಗೆ ಕುಳಿತ 22 ಮಂದಿ ವಿದ್ಯಾರ್ಥಿಗಳಲ್ಲಿ 20 ಮಂದಿ ತೇರ್ಗಡೆ ಹೊಂದಿರುವುದರಿಂದಲೂ ಈ ವರ್ಷ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 500ಕ್ಕೂ ಮಿಕ್ಕಿದ ಗೌರವಾರ್ಥವಾಗಿಯೂ ಶಾಲಾ ವ್ಯವಸ್ಥಾಪಕರು ತಾ17-6-49 ರಲ್ಲಿ ಮಕ್ಕಳಿಗೆ ಸಿಹಿ ಹಂಚಿದರು.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

ರಾಣಿ ಎಲಿಜಬೆತ್ ಮತ್ತು ಮಗ (ಪ್ರಿನ್ಸ್ ಚಾರ್ಲ್ಸ್)

1949ರಲ್ಲಿ ಪ್ರಕಟವಾದ

ಸ್ತ್ರೀಪುರುಷರೆಲ್ಲರೂ ಓದತಕ್ಕ

ನವೀನ ಪುಸ್ತಕಗಳು

ಗ್ರಾಮೋದ್ಧಾರ ಬಿರುದಾವಳಿ (ಎಂ. ವಿ ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ (ಯಕ್ಷಗಾನ ,,)	0	3	0
ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ	0	4	0
ಗಾಡಿಯ ಗಾಂಧಿ (ಸೂಕ್ಷ್ಮಪರಿಚಯ)ಎಂ ವಿ ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ(ನೀಳ್ಗತೆ) ಪ ಸು ಭಟ್ಟ	0	3	0
ಒಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ ವಿ ಹೆಗ್ಡೆ)	0	3	0
ನನ್ನ ಹೆಂಡತಿ(ಕತೆಗಳು)ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ (ನೀಳ್ಗತೆ) ಗಿರಿಬಾಲೆ	0	3	0
ಸುಖದದಾರಿ (ವೈರಾಗ್ಯಪರ್ವ) ಕೆ. ಎ ದೇವದಾಸ	0	3	0
ಸುಕಾಂತೆ (ಅನುವಾದಿತ ಕತೆ) ವೀ ಚ- ಹಿತ್ತಲಮನಿ	0	3	0
ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ (ನೀಳ್ಗತೆ) ಕೆ ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! (ಕತೆ) ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಅವಳು (ಕತೆ) ಶ್ರೀಪತಿ	0	3	0
ತ್ರಿವೇಣಿ (ಪ್ರಬಂಧಗಳ ಸಂಗ್ರಹ)	0	3	0
ನಿಲುವಂಗಿ (ಕತೆ)ಎಸ್ ಸುಬ್ಬರಾಮಯ್ಯ, ಬಿ ಎ (ಆನರ್ಸ್)	0	3	0
ಬಾಡಿಗೆಯ ಮನೆ ಮತ್ತು ಮುಸುಕು (ನಾಟಕಗಳು)	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಅದರ ಸಾಧನೆ (ಬಾಪಟ ವಿನಾಯಕ ಶರ್ಮ)	0	3	0
ಎರಡು ಕತೆಗಳು (ಕೊಡತ್ತೂರು ಪದ್ಮನಾಭ ಉಡುಪ ಮತ್ತು ಆಲೂರ ಕೃಷ್ಣ)	0	3	0

ಅಂತರಂಗ ಆಫೀಸು, ಉಡುಪಿ, ಅಥವಾ
ನವಭಾರತ ಬುಕ್ ಡಿಪ್ಪೋ, ಉಡುಪಿ

ವಿವಾಹ ವಾರ್ತೆಗಳು

ದಿ। ಕುದ್ರುಬೀಡು ವೆಂಕಪ್ಪ ಶೆಟ್ರ ಪುತ್ರ ಶ್ರೀ ಹಾಲಾಡಿ ಶೀನಪ್ಪ ಶೆಟ್ರು ಶ್ರೀ ಗುಳ್ಳಾಡಿ ಸದಿಯಣ್ಣ ಹೆಗ್ಡೇರ ಪುತ್ರಿ ಸೌ। ಸಂಜೀವಿಯನ್ನು ತಾ 9-6-69ರಲ್ಲಿ ಕುಂದಾಪುರ ಲಕ್ಷ್ಮೀನಾರಾಯಣ ಟಾಕೀಸಿನಲ್ಲಿ—

ದಿ। ಹೇರೂರು ಪಟೇಲ್ ಅಚ್ಚಣ್ಣ ಶೆಟ್ರ ಪುತ್ರ ಶ್ರೀ ಆನಂದ ಶೆಟ್ಟರು ದಿ। ಉಳಿಯಾರಗೋಳಿ ದೇಜಪ್ಪ ಶೆಟ್ರ ಪುತ್ರಿ ಸೌ। ಸರೋಜಿನಿಯನ್ನು ತಾ 19 6-49ರಲ್ಲು ಉಡುಪಿ ಮೊಡರ್ನ್ ಹಾ। ಎ। ಶಾಲೆಯಲ್ಲಿ—

ದಿ। ತೋನ್ಸೆ ತೀಜಪ್ಪ ಹೆಗ್ಡೇರ ಪುತ್ರ ಶ್ರೀ ಶಂಕರ ಹೆಗ್ಡೇರು ಬ್ರಹ್ಮಾವರ ಸಬ್ ರಿಜಿಸ್ಟ್ರಾರ್ ಶ್ರೀ.ಕೆ.ದೇಜಪ್ಪ ಶೆಟ್ರ ಪುತ್ರಿ ಸೌ। ಶೈಲಜಳನ್ನು ತಾ 20-6-49ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ—

ಶ್ರೀ ಕಳವಾರು ರಾಘವ ಶೆಟ್ರ ಪುತ್ರ ಶ್ರೀ ಸದಾಶಿವ ಶೆಟ್ಟರು ತೋನ್ಸೆ ಬೊಮ್ಮಯ್ಯ ಶೆಟ್ರ ಪುತ್ರಿ ಸೌ। ಶೇಷಮ್ಮಳನ್ನು ತಾ 20-6-49ರಲ್ಲಿ ಪುತ್ತೂರು ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ—

ಶ್ರೀ. ಕೆಮ್ತೂರು ಶೀನಪ್ಪ ಶೆಟ್ರ ಪುತ್ರ ಶ್ರೀ ಸಂಜೀವ ಹೆಗ್ಡೆಯವರು ಉಳಿಯಾರಗೋಳಿ ಪಟೇಲ್ ಶ್ರೀ. ಕುಡ್ಡು ಯಾನ ಮುದ್ದಣ್ಣ ಹೆಗ್ಡೇರ ಪುತ್ರಿ ಸೌ। ಇಂದಿರಳನ್ನು ತಾ 20-6-49ರಲ್ಲಿ ಶಿರ್ವ ಹಿಂದು ಹೈಸ್ಕೂಲಲ್ಲಿ— ವಿವಾಹವಾದರು.

ನೂತನ ದಂಪತಿಗಳ ಭಾವಚಿತ್ರಗಳ ಪ್ರಕಟಣೆ

ನೂತನ ದಂಪತಿಗಳ 'ಫೋಟೋ'ವನ್ನು ನಮಗೆ ಕಳಿಸಿದಲ್ಲಿ ಅದರ ಬ್ಲೋಕನ್ನು ನಾವೇ ತಯಾರಿಸಿ 'ನವಯುಗ'ದಲ್ಲಿ ಪ್ರಕಟಿಸಲಿರುವೆವು. ಆದರೆ ಬ್ಲೋಕು ತಯಾರಿಸುವ ಖರ್ಚು ರೂ 10/-ನ್ನು ಕೊಡಬೇಕಾಗುವುದು. ನೂತನ ದಂಪತಿಗಳು ಈ ಸಂದರ್ಭವನ್ನು ಕಳಕೊಳ್ಳಬಾರದಾಗಿ ವಿನಂತಿ.

'ಫೋಟೋ'ವನ್ನೂ ಹಣವನ್ನೂ ಕೆಳಗಿನ ವಿಳಾಸಕ್ಕೆ ಕಳಿಸುವುದು.

ಮೆನೇಜರ್, ನವಯುಗ, ಉಡುಪಿ.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ಗೊರೆಯುತ್ತವೆ.

ದೊಡ್ಡ ಸೈಜು ರೂ. 5 0 0
ಪಾಕೆಟ್ ಸೈಜು ರೂ 4 8 0

ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ

ಓದಲೇ ಬೇಕಾದ ಪುಸ್ತಕಗಳು

ಶ್ರೀ ಕೆ. ಕೆ. ಶೆಟ್ಟರ

ಪ್ರೇಮ ವಿಜಯ
(ಸಾಮಾಜಿಕ ನಾಟಕ)
ಬೆಲೆ ರೂ 1—0—0

ವ್ಯಭಿಚಾರಿಣಿ ಯಾರು
(ಸಾಮಾಜಿಕ ನಾಟಕ)
ಬೆಲೆ ರೂ 1—0—0

ವಿವಿಧ ಕತೆಗಾರರ
ಪ್ರೇಮ ಪ್ರವಾಹ
(ಕಥಾ ಸಂಕಲನ)
ಬೆಲೆ ರೂ 0—8—0

ನವಭಾರತ ಬುಕ್ ಡಿಪ್ಪೋ,
ಉಡುಪಿ.

ದಕ್ಷಿಣ ಕನ್ನಡ

ಮಂಗಳೂರು ನಗರ ಸಭೆಯು– ...೧೧ರಲ್ಲು ಉಪಾಧ್ಯಕ್ಷ ಶ್ರೀ ಬಿ. ಗಂಗಾಧರ ...ಸರ ಅಧ್ಯಕ್ಷತೆಯಲ್ಲಿ ಜರಗಿತು. ಸೆನಿಟರಿ ಇನ್ಸ್‌ಪೆಕ್ಟರರಿಗೆ ಸಮವಸ್ತ್ರಕ್ಕಾಗಿ ಒಟ್ಟೊಟ್ಟಿಗೆ ರೂ 50/– ಸೊಳ್ಳೆ ವಿನಾಶಕ ಪಥಕದಲ್ಲಿ ...ಲಸಮಾಡುವ ನಿಮ್ನವರ್ಗದ ನೌಕರರಿಗೆ ಸಮವಸ್ತ್ರಕ್ಕಾಗಿ ರೂ. 660/– ಮಂಜೂರು ಮಾಡಲಾಯಿತು. ಕಮಿಶನರರಿಗೆ ಈಗಿರುವ ...ೂ 50/–ರ ವಾಹನ ಭತ್ತೆಯು ಸಾಲದೆಂ...ೂ ತಿಂಗಳೊಂದರ ರೂ. 75/– ಕೊಡಬೇ...ಂದೂ ಸರಕಾರವನ್ನು ಕೇಳಿಕೊಳ್ಳಲಾ...ಯಿತು.

ಜಿಲ್ಲಾ ಆಹಾರ ಸಮಿತಿಯ ಸಭೆಯು ಈಚೆಗೆ ಜಿಲ್ಲಾ ಕಲೆಕ್ಟರ್ ಮಿ। ...ಯ್ಯದ್ ಅಹಮ್ಮದ್‌ರವರ ಅಧ್ಯಕ್ಷತೆಯ... ಜರಗಿತು. ಗದ್ದೆಗಳಿಗೆ ಹುಳುಬಿದ್ದ ವಿಚಾ...ರದಲ್ಲಿ ಚರ್ಚೆನಡೆಯಿತು. ಕೃಷಿ ಇಲಾಖೆ...ಯು ಈಗಾಗಲೇ ಬೇಕಾದ ವ್ಯವಸ್ಥೆ ಮಾಡಿ...ದೆಂದೂ ರೈತರಿಗೆ ಬೀಜಬೇಕಾದಲ್ಲಿ ಒದ...ಗಿಸಿಕೊಡಲು ಬರೆದುಕೊಳ್ಳುವೆವೆಂದೂ ಕೃಷಿ ...ಲಾಖೆಯ ಜಿಲ್ಲಾಧಿಕಾರಿಗಳೂ ಹೇಳಿದ... ಮಳೆಗಾಲದಲ್ಲಿ ರೇಶನ್ ಕಾರ್ಡು ಇರು...ವರಿಗೆ ಒಮ್ಮೆಯೇ ಎರಡುವಾರಗಳ ರೇಶ...ನ್ ಸಿಗುವಂತಾಗಬೇಕೆಂದು ತಂದ ಶ್ರೀ ಕೆ. ...ರ್. ಕಾರಂತರ ಸೂಚನೆಯನ್ನು ರೆವಿನ್ಯೂ ...ಬೋರ್ಡಿನ ಅವಗಾಹನೆಗೆ ತರಬೇಕೆಂದಾ...ಯಿತು.

ಮಹಾಸಭೆ ದ. ಕ. ಜಿಲ್ಲಾ ಕಾಂಗ್ರೆಸ್ ...ಮಿಟಿಯ ಮಹಾಸಭೆಯು ಇದೇ ತಾ 25ರ... ಅಪರಾಹ್ನ 3 ಗಂಟೆಗೆ ಹಂಪನಕಟ್ಟೆಯ...ಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಮಿಟಿಯ ...ಆಫೀಸಿನಲ್ಲಿ ಜರಗುವುದೆಂದು ಗೊತ್ತಾಗಿದೆ.

ಆರೋಪಿಗಳಿಗೆ ಬಿಡುಗಡೆ

ಉಡುಪಿ ಬೀಡಿ ಲೇಬರ್ ಯೂನಿಯನಿನ ...ಹುಸೇನ್ ಬ್ಯಾರಿ. ಮುತೋಲಿ ಬ್ಯಾರಿ ಮತ್ತಿ...ತರರು ಅಕ್ರಮಕೂಟ ಕೂಡಿದರು, ತಾ ...–3.48ರಲ್ಲು ಅಬ್ದುಲ್ ಖಾದರ್ ಎಂಬಾ...ತನನ್ನು ಗಾಸಿಗೊಳಿಸಿದರು (ಇದಕ್ಕೆ ಕಾರಣ ...ಹಣಸಿನ ವಿಚಾರ) ಎಂಬ ಆರೋಪದ ...ಮೊಕದ್ದಮೆ (ಇದು ಉಡುಪಿ ಪೋಲೀಸರು ...ಹೂಡಿದ್ದು)ಯನ್ನೂ, ಇದಕ್ಕೆ ಪ್ರತಿಯಾಗಿ 2ನೇ ಆರೋಪಿ ಮುತೋಲಿ ಬ್ಯಾರಿ ಖಾಸಗಿ ...ಯಾಗಿ ಹೂಡಿದ ಇನ್ನೊಂದು ಮೊಕದ್ದಮೆ...ಯನ್ನೂ II ಎಡಿ॥ I ಕ್ಲಾಸ್ ಮೆಜಿಸ್ಟ್ರೇಟರಾದ ...ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟಿಯವರು ತನಿಖೆ ನಡೆ...ಸಿ, ರುಜುವಾತು ನಂಬದೆ ಎಲ್ಲ ಆರೋಪಿ...ಗಳನ್ನು ಬಿಡುಗಡೆ ಮಾಡಿಸಿದರು.

ಹುಸೇನ್ ಬ್ಯಾರಿ, ರಾಘವ, ಅನಂತಕೃಷ್ಣ ಐತಾಳ ಮತ್ತು ಆರು ಮಂದಿ ಇತರ ಉಡುಪಿಯ ಬೀಡಿ ಕೆಲಸಗಾರರು ಸೇರಿ ತಾ 25-3-48 ರಲ್ಲು ಅಬ್ದುಲ್ ಖಾದರ್, ಅಬ್ದುಲ್ ರಜಾಕ್, ಅಹಮ್ಮದ್ ಸಾಹೇಬ್ ಮೊದಲಾದ 4 ಮಂದಿಗೆ ಬೆತ್ತದಿಂದ, ಕೋಲಿನಿಂದ ಹೊಡೆದರು, ಚೀಂಕ ಎಂಬಾತನನ್ನು ಚೂರಿಯಿಂದ ತಿವಿದರು, ಅಕ್ರಮಕೂಟ ಕೂಡಿದರು ಎಂದು ಮುಂತಾದ ಆರೋಪಹೊರಿಸಿ ಉಡುಪಿ ಪೋಲೀಸರು ಹೂಡಿದ್ದ ಮೊಕದ್ದಮೆಯನ್ನು II ಎಡಿ॥ I ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರು ತನಿಖೆನಡೆಸಿ, ರುಜುವಾತು ನಂಬದೆ ಆರೋಪಿಗಳನ್ನು ಬಿಡುಗಡೆಮಾಡಿದರು.

ವರ್ಗಾವರ್ಗಿ ಮಂಗಳೂರಿನ ಡೆಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಎಮ್. ಯು. ಮೂಲ್ಕಿ ಸಾಹೇಬರು, ಇಂಡಿಯಾ ಸರಕಾರವು ಹೊಸದಾಗಿ ತೆರೆದಿರುವ ಟೆಕ್ನಿಕಲ್ ಅಸಿಸ್ಟೆಂಟ್ ಡೈರೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಮಲಬಾರಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ ಚೂಡಾಮಣಿಯವರು ಇವರ ಸ್ಥಾನಕ್ಕೆ ನೇಮಕ ಹೊಂದಿರುತ್ತಾರೆ.

ಪ್ರಚಾರಾರ್ಥ ಉಚಿತ ನಾಟಕ ಮತ್ತು ನೃತ್ಯಪ್ರದರ್ಶನ ಮಂಗಳೂರಿನ ಕಾಂಗ್ರೆಸ್ ಸೇವಾದಲದ ವತಿಯಿಂದ ಪ್ರಚಾರಾರ್ಥವಾದ ಉಚಿತ ನಾಟಕ ಮತ್ತು ನೃತ್ಯಪ್ರದರ್ಶನವು, ಗಣಪತಿ ಹ್ಯಾಸ್ಕೂಲಿನ ಶಾರದಾ ಸದನದಲ್ಲಿ ಈಚೆಗೆ ಜಯಶೀಲವಾಗಿ ನಡೆಯಿತು.

ಸುರತ್ಕಲ್

ಅಗ್ರಿದಕರಿ ಶಾಲೆಯಲ್ಲಿ ತಾ 14 ರಿಂದ ಆರನೆಯ ತರಗತಿ ತೆರೆಯಲ್ಪಟ್ಟಿದೆ.

ಮುನ್ನೂರು

ಶಾಂತಾಶ್ರಮ ಸಹಕಾರ ಸಂಘದ ಮತ್ತು ಗ್ರಾಮ ಸುಧಾರಣಾ ಸಂಘದ ಮಹಾಸಭೆಯು ತಾ. 14 ರಲ್ಲು ಶ್ರೀ ಪಿ. ರಾಮಯ್ಯ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರದಹೊಸ ಯೋಜನೆಯಂತೆ 'ಗ್ರಾಮ ಸುಧಾರಣಾ ಸಂಘ'ವನ್ನು ಸಹಕಾರ ಸಂಘದೊಂದಿಗೆ ಸಂಯೋಜಿಸುವ ನಿರ್ಣಯವಾಗಿ ಸುಧಾರಣಾ ಕಮಿಟಿಗೆ ಐದು ಮಂದಿ ಸದಸ್ಯರನ್ನು ಆರಿಸಲಾಯಿತು

ಹರಿಜನೋದ್ಧಾರ ದಿನಾಚರಣೆ

ಅಂಬ್ಲಮೊಗರು, ಬೆಳ್ಮ, ಕೊಣಾಜೆ, ಹರೇಕಳ ಮತ್ತು ಮುನ್ನೂರು ಗ್ರಾಮಗಳ 'ಹರಿಜನೋದ್ಧಾರ ದಿನಾಚರಣೆ'ಯು ಕಳೆದ ತಾ 30ರಲ್ಲು ಗೌರವ ಮೆಜಿಸ್ಟ್ರೇಟ್ ಶ್ರೀ ಕೆ. ಐತಪ್ಪ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು.

ಕುಂದಾಪುರ

ಪ್ರಕೃತ ಸಾಗುವಳಿ ಸಮಯವಾದ್ದರಿಂದ ಹಳ್ಳಿಯ ಸಾಗುವಳಿದಾರರು ಹಗಲೆಲ್ಲಾ ದುಡಿದು, ರಾತ್ರೆ ತಮ್ಮ ಅಡಿಗೆ, ಸ್ನಾನ, ಜಾನುವಾರು ಪೋಷಣೆ ಇತ್ಯಾದಿ ಅಗತ್ಯವಿರುವ ದಿನಚರಿ ಕೆಲಸಗಳನ್ನು ಮಾಡಬೇಕಾದ್ದರಿಂದ ಹಾಲಿ, ½-1-1½ ಬಾಟ್ಲಿಗಳಂತೆ ಸಿಕ್ಕುವ ಸರ್ವರಿಗೂ 2 ಬಾಟ್ಲಿಗಳಂತೆ ಚಿಮಿಣಿ ಎಣ್ಣೆಯನ್ನು ಇದೇ ಜೂನು ಆರಂಭದಿಂದ ಸೆಪ್ಟೆಂಬರ ಅಂತ್ಯದ ವರೆಗೆ ಯಾವ ಲೋಪವನ್ನು ಮಾಡದೆ ಚಿಮಿಣಿ ಎಣ್ಣೆ ಮಾರಾಟಗಾರರು, ಎಲ್ಲಾ ಸಾಗುವಳಿದಾರರಿಗೆ ಕೊಡಬೇಕೆಂದು ಮಾನ್ಯ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್, ಶ್ರೀ ಚಾರ್ಲ್ಸ್ ಎಸ್. ಜೋನ್ಸ್, ಬಿ. ಎ., ಇವರು ಸಮ್ಬಂಧಪಟ್ಟ ಎಲ್ಲಾ ತಹಶೀಲದಾರರು ತಕ್ಕ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದಾರೆ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಕ್ಷೇಮನಿಮಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್ ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ: ಕೆ. ಎಸ್. ರಾವ್. ರೋಡು, ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ: "ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಶಿವನ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಹೇಳಿದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಧಾರವಾಡದಲ್ಲಿ ನೃತ್ಯ ಸಂಗೀತ ಶಾಲೆ.

ನಾಟ್ಯಾಚಾರ್ಯ ಶ್ರೀ ಕುಲಕರ್ಣಿ ಶ್ರೀನಿ...ವಾಸ, ಬಿ. ಎ. ಅವರ ನೇತೃತ್ವದಲ್ಲಿ ಇದೇ ...ಜೂನ್ ಎರಡನೆಯ ವಾರದಿಂದ ನೃತ್ಯ-ಸಂ...ಗೀತ ಶಾಲೆ ಧಾರವಾಡದಲ್ಲಿ ಪ್ರಾರಂಭವಾಗಿದೆ.

ನೃತ್ಯ ವರ್ಗಗಳು:–ಪ್ರಾರಂಭಿಕ ವರ್ಗ:–ಆ...ರು ತಿಂಗಳ ಅಭ್ಯಾಸ. ವಾರದಲ್ಲಿ ಮೂರು ...ಪಾಠಗಳು. ಷಾಣ್ಮಾಸಿಕ ಫೀ ೬೦ ರೂ.

ಪ್ರಾಗತಿಕ ವರ್ಗ:– ಆರು ತಿಂಗಳ ಅಭ್ಯಾ...ಸ. ವಾರದಲ್ಲಿ ಆರು ಪಾಠಗಳು. ಷಾಣ್ಮಾಸಿಕ ...ಫೀ ೧೨೦ ರೂ.

ಸಂಗೀತ-ವಾದ್ಯವಾದನ ವರ್ಗ: ಪ್ರಾರಂಭಿ...ಕ ವರ್ಗ:– ಆರು ತಿಂಗಳ ಅಭ್ಯಾಸ. ವಾರದ...ಲ್ಲಿ ಮೂರು ಪಾಠಗಳು. ಷಾಣ್ಮಾಸಿಕ ಫೀ ... ರೂ. ಪ್ರಾಗತಿಕ ವರ್ಗ:– ಆರು ತಿಂಗಳ ...ಅಭ್ಯಾಸ. ವಾರದಲ್ಲಿ ಆರು ಪಾಠಗಳು. ಷಾ...ಣ್ಮಾಸಿಕ ಫೀ ೬೦ ರೂ.

ಪ್ರವೇಶ ಫೀ ೫ ರೂ.

ವಿವರಗಳಿಗಾಗಿ ವಿಚಾರಿಸಿರಿ:

ಭಾರತೀಯ ನೃತ್ಯಕಲಾಕೇಂದ್ರ

[illegible]

ಪ್ರಕಟಣೆ

ಕುಂದಾಪುರ ತಾಲೂಕು ಕುಂಭಾಶಿ ದಾಡಿಯಲ್ಲಿರುವ ಬಾಲಂಬಾಡಿ ಸುಬ್ಬಯ್ಯ ಶೆಟ್ಟಿಯು ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ: ಕಳೆದ ತಾ 16-6-1949 ನೆ 'ನವಯುಗ' ವಾರಪತ್ರಿಕೆಯಲ್ಲಿ ನನ್ನ ಹೆಸ್ರಿನಿಂದ ನನ್ನ ಮನೆಯ ದತ್ತದ ತಂಗಿ ಪಣಿಯಮ್ಮ ಶೆಡ್ತಿಯ ಮಗಳ ಗಂಡನ ದ್ವೇಷಿಕರು ಕೇವಲ ಕಲ್ಪನೆ ಸಂಗ್ತಿಯನ್ನು ಕಾಣಿಸಿ, ಒಂದು ಪ್ರಕಟಣೆಯನ್ನು ಪ್ರಕಟಿಸಿದ್ದಾರೆ. ಆ ಪ್ರಕಟಣೆಯಲ್ಲಿ ಹೇಳುವ ಎಲ್ಲಾ ವಿಷಯವು ಕೇವಲ ಸುಳ್ಳು, ದ್ವೇಷಮೂಲಕದ್ದು ಮತ್ತು ನನ್ನ ಅಳಿಯ ಪಟೇಲ್ ಮಂಜಪ್ಪ ಶೆಟ್ಟಿಯ ವಶನಂಬಿನದ್ದು. ನನ್ನ ಅಳಿಯ ಮಂಜಪ್ಪ ಶೆಟ್ಟಿಯು ಕುಂದಾಪುರ ನನ್ನ ವಕೀಲ್ ಎಮ್. ಎಮ್. ಪೈ. ...ರರ ಮತ್ತು ಅವರ ಗುಮಾಸ್ತ ಸೀತಾರಾಮ ಹೆಬ್ಬಾರರನ್ನು ವಶನಂಬಿಗೆ [illegible] ಹೊಸ ಗಂಡನ ಕಾಸಿಗೆ ದ್ವೇಷವನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಪೋರ್ಜರಿ ಪಟ್ಟಿ ಹಾಕಿಸಿ, ಪ್ರಕಟಣೆಯನ್ನು ಮಾಡಿಸಿದ್ದಾಗಿರುತ್ತದೆ.

ನನಗೆ ಯಾವತರದ ಪ್ರಕಟಣೆ ಹೊರಡಿಸುವ ಅಗತ್ಯವೇ ಇಲ್ಲ. ನಾನು ಕಳೆದ ದಶಂಬರ ತಿಂಗಳಲ್ಲಿ ತೀವ್ರ ಕಾಹಿಲೆ ಬಿದ್ದದ್ದು ನಿಜ. ಆದರೆ, ನಾನು ನನ್ನ ಹೆಂಡ್ತಿ ಮನೆಯಾದ ಅತ್ರಾಡಿ ಮನೆಯಲ್ಲಿ ನನ್ನ ಹೆಂಡ್ತಿ ತಂಗಿ ಮಕ್ಕಳ ಶುಶ್ರೂಷೆಯಲ್ಲಿದ್ದು ಕಾಹಿಲೆಯಿಂದ ನಿವೃತ್ತನಾದೆ. ಬಾಲಂಬಾಡಿ ಮನೆಯಲ್ಲಿ ಕಾಹಿಲೆ ಬಿದ್ದದ್ದೇ ಇಲ್ಲ. ಅದು ಕೇವಲ ಕಲ್ಪನೆಯು. ಅಲ್ಲದೆ 16ನೇ ತಾರೀಕಿನ ಪ್ರಕಟಣೆಯಲ್ಲಿ ತೋರುವ ವಿಷಯಗಳು ಎಲ್ಲಾ ಸುಳ್ಳು. ನನ್ನ ಮಠದರುವ ಚಿನ್ನಾಭರಣಗಳನ್ನು ನನ್ನ ಹೆಂಡ್ತಿಯ ಜೀವಿತಕಾಲದಲ್ಲೇ ನನ್ನ ಹೆಂಡ್ತಿ ತಂಗಿ ಮಕ್ಕಳಿಗೆ ಪಾಲುಮಾಡಿ ಅವರ ವಶವೇ ಕೊಟ್ಟಿದ್ದೇನೆ. ನನ್ನ ಎಲ್ಲಾ ಸಮಸ್ತ [illegible] ನನ್ನ ಹೆಂಡ್ತಿ ಮನೆಯಲ್ಲಿ ಇರುವದಲ್ಲದೆ ನನ್ನ ಸ್ವಾರ್ಜಿತ ಮನೆಯಲ್ಲಿ ಇರುವುದಿಲ್ಲ. 1940ನೇ ಇಸವಿ ಲಾಗಾಯ್ತು ನನ್ನ ಕಾಯಂ ವಾಸ್ತವ್ಯವು ಅತ್ರಾಡಿಯಲ್ಲಿಯೇ ಇರುತ್ತದೆ. ಬಾಲಂಬಾಡಿ ಮನೆಯಲ್ಲಿ ಅಲ್ಲ. ನಾನು ಒಕ್ಕಲುಗಳ ಭೇಟಿ ವಸೂಲಿಮುಟ್ಟಿಗೆ ಮಾತ್ರ ಆಗಿಂದಾಗ್ಗೆ ಬಾಲಂಬಾಡಿಗೆ ಬರುವದಲ್ಲದೆ ಕಾಯಂ ವಾಸ್ತವ್ಯ ಬಾಲಂಬಾಡಿಯಲ್ಲಿ ಮಾಡಿದ್ದು ಇಲ್ಲ.

ಸುಬ್ಬೈ ಶೆಟ್ಟಿಯವರು.

[illegible] 19-6-1949

ದ. ಕ. ಜಿಲ್ಲಾ ಸಮಾಜವಾದೀ ಪಕ್ಷದ ಪರಿಷತ್ತು

ಬಹಿರಂಗ ಅಧಿವೇಶನವು ಇದೇ ತಾ 12ರ ಲ್ಲು ಸಂಜೆ ಕೇಂದ್ರ ಮೈದಾನಿನಲ್ಲಿ ಕರ್ನಾಟಕ ಸಮಾಜವಾದೀ ಪಕ್ಷದ ಜತೆ ಕಾರ್ಯದರ್ಶಿಯರಾದ ಶ್ರೀ ಬಿ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಸ್. ಎಮ್. ರಾಮಕೃಷ್ಣರಾಯರು ಸ್ವಾಗತ ಭಾಷಣ ಮಾಡಿ, ಪರಿಷತ್ತಿಗೆ ಬಂದಿದ್ದ ಸಂದೇಶಗಳನ್ನು ಓದಿದರು. ಬೊಂಬಾಯಿ ಕೆಲಸಗಾರರ ಸಂಘದ ಕಾರ್ಯದರ್ಶಿಯಾಗಿದ್ದು ಬೊಂಬಾಯಿ ಸರಕಾರದ ಗಡಿಪಾರು ಆಜ್ಞೆಯಂತೆ ಇಲ್ಲಿಗೆ ಬಂದಿದ್ದ ಶ್ರೀ ಡಿ. ಪಿ. ಜಮೆಲ್ಲಾರವರು ಪರಿಷತ್ತಿನ ಉದ್ಘಾಟನೆ ಮಾಡಿದರು. ಬಳಿಕ ವಿಷಯ ನಿಯಾಮಕ ಸಮಿತಿ ಸ್ವೀಕರಿಸಿದ ನಿರ್ಣಯಗಳು ಮತ್ತು ದೇಶದ ಸದ್ಯದ ಪರಿಸ್ಥಿತಿಯ ವಿಚಾರದಲ್ಲಿ ಡಾ। ಸಂಜೀವನಾಥ, ಅ. ಕ. ಸಂಕಪ್ಪ ರೈ. ಜೆ. ಫೆರ್ನಾಂಡೀಸ ಮೊದಲಾದವರು ಮಾತನಾಡಿದರು.

ಜಿಲ್ಲೆಯಲ್ಲಿ ಪೈರನ್ನು ನಾಶಮಾಡುತ್ತಿರುವ ಹುಳುಗಳನ್ನು ನಾಶಮಾಡುವಲ್ಲಿ ಸರಕಾರವು ಉದಾಸೀನತೆತೋರುವಂತಿದೆಯೆನ್ನುವ, ಅದನ್ನು ನಾಶಮಾಡಲು ತಕ್ಕ ವ್ಯವಸ್ಥೆಯಾಗಬೇಕೆನ್ನುವ, ಅರ್ಧ್ವಾರು ಮಸೂದೆಯನ್ನು ಈ ಜಿಲ್ಲೆಗೆ ಅನ್ವಯಿಸುವಲ್ಲಿ ಮದ್ರಾಸು ಸರಕಾರವು ಅನ್ಯಾಯ ಮಾಡಿತೆನ್ನುವ, ಆದಷ್ಟು ಬೇಗನೆ ರೈತರ ಹಿತ ಸಾಧನೆಯ ಒಕ್ಕಲುಹಿತ ಮಸೂದೆಯನ್ನು ತರಬೇಕೆನ್ನುವ, ಸರಕಾರದ ಪಂಚಾಯತರಿತ್ತ ಎವಾರ್ಡನ್ನು ಜಿಲ್ಲೆಯ ಮೋಟಾರ್ ಕಂಪನಿಗಳು ಅನುಸರಿಸದಿರುವುದನ್ನು ನಿಷೇಧಿಸುವ ಮತ್ತು ಮ್ಯಾಲಕರು ಕೊಡುವಂತೆ ಅವರನ್ನು ಸರಕಾರವು ಒತ್ತಾಯಿಸಬೇಕೆನ್ನುವ, ಮುನಿಸಿಪಲ್ ಉಪಚುನಾವಣೆಯಲ್ಲೂ ಜಿಲ್ಲಾ ಬೋರ್ಡ್ ಚುನಾವಣೆಯಲ್ಲೂ ಭಾಗವಹಿಸಬೇಕೆಂದು ನಿರ್ಧರಿಸುವ ನಿರ್ಣಯಗಳು ಸ್ವೀಕರಿಸಲ್ಪಟ್ಟವು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದರೂ ನಿಜವಾದ ಸ್ವಾತಂತ್ರ್ಯ ಬಂದಿಲ್ಲವೆಂದೂ ಇನ್ನೂ ವ್ಯಕ್ತಿ ಸಂಸ್ಥೆಗಳಿಗೆ ವಾಕ್ ಸ್ವಾತಂತ್ರ್ಯ ಕೂಡಾ ಸಿಕ್ಕಿಲ್ಲವೆಂದೂ ಹೇಳಿದರಲ್ಲದೆ ಸರಕಾರವನ್ನು ನಡೆಸುವ ಕಾಂಗ್ರೆಸ್ಸು ಬಂಡವಾಳಗಾರರ ಸ್ನೇಹ ಸಂಪಾದಿಸುತ್ತಿದೆಯೆಂದೂ ನಿಜವಾದ ಭಾರತ ಉದ್ಧಾರಕ್ಕೆ ಸಮತಾವಾದ ಸಮಾಜ ನಿರ್ಮಾಣವೇ ಮೂಲವೆಂದೂ ಹೇಳಿದರು. ಶ್ರೀ ಎಸ್. ಎಮ್. ರಾಮಕೃಷ್ಣರಾಯರು ಅಭಿನಂದಿಸಿದರು.

ಈ ಪರಿಷತ್ತಿನೊಂದಿಗೆ ತರುಣ ಸಮಾಜವಾದಿಗಳ ಮತ್ತು ಇತರ ಮಜೂರ ಸಂಘಟನೆಗಳ ಪರಿಷತ್ತುಗಳೂ ಜರಗಿದವು.

ಬೀಜ ವಿತರಣೆ

ನಮ್ಮ ಜಿಲ್ಲೆಯಲ್ಲಿ ಇತ್ತೀಚೆಗೆ ಸಮ್ಮಟಿ ಹುಳುವಿನಿಂದಾಗಿ, ಭತ್ತದ ಸಸಿಗಳು ನಾಶವಾದುದು ಸರಿಯಷ್ಟೆ. ರೈತರಿಗಾದ ಈ ನಷ್ಟವನ್ನು ಹೋಗಲಾಡಿಸಲು, ಮಾನ್ಯ ಸರ್ಕಾರದವರು ಭತ್ತದ ಬೀಜವನ್ನು ಜನರಿಗೆ ಹಂಚುವ ವ್ಯವಸ್ಥೆಯನ್ನು ಮಾಡಿರುವುದು ಸಂತೋಷದ ಸಂಗತಿಯಾಗಿದೆ.

ಆದರೆ ಆದರ ಮಾರಾಟದ ವಿತರಣೆಯನ್ನು ನೋಡಿ, ಅಷ್ಟೇ ಮರುಕಪಡಬೇಕಾಗಿದೆ. ಬೀಜ ಬೇಕಾದವರು, ಶ್ಯಾನುಭೋಗರಿಂದ ಶಿಫಾರಸನ್ನು ಪಡೆದು, ಮಣೆಗಾರರಿಂದ ಪರ್ಮಿಟ್‌ನ್ನು ಮಾಡಿಸಿ, ವ್ಯವಸಾಯ ಇಲಾಖೆಯಲ್ಲಿ ಹಣವನ್ನು ಕಟ್ಟಿ, ಗ್ರಾಮಗಳಲ್ಲಿ ಬೀಜವನ್ನು ಪಡೆಯಬೇಕಾಗಿದೆ. ಈಗಾಗಲೇ ವ್ಯವಸಾಯಕ್ಕೆ ಕಾಲವಿಳಂಬವಾಗಿದೆ. ಅಂಥ ಮೇಲೆ ಇಷ್ಟೆಲ್ಲಾ ಕೆಲಸಗಳನ್ನು ಮಾಡಿಸಿಕೊಂಡು, ಬೀಜವನ್ನು ಪಡೆಯುವುದು ಅವಿದ್ಯಾವಂತ ರೈತನಿಗೆ ಸಾಧ್ಯವೇ? ಇನ್ನು ಇಷ್ಟೆಲ್ಲಾ ಕೆಲಸವನ್ನು ಮಾಡಬೇಕಾದರೆ ಭತ್ತದ ದರಕ್ಕಿಂತಲೂ ಪ್ರಯಾಣದ ಖರ್ಚೇ ಹೆಚ್ಚಾಗುತ್ತದೆ. ಇವನ್ನೆಲ್ಲಾ ಯೋಚಿಸಿದರೆ, ಈ ರೀತಿಯ ಮಾರಾಟದ ವ್ಯವಸ್ಥೆಯಿಂದ ಜನರು ಎಷ್ಟು ಪ್ರಯೋಜನವನ್ನು ಪಡೆದಾರು ಎಂದು ಗೊತ್ತಾಗುವುದಿಲ್ಲ.

ಆದರ ಬದಲಿಗೆ ಆಯಾ ಗ್ರಾಮದ ಅಧಿಕಾರಿಗಳಿಗೆ ಬೀಜ ಮಾರುವ ಹಕ್ಕನ್ನು ಕೊಟ್ಟಲ್ಲಿ, ಸುಲಭವಾಗಿ ರೈತನಿಗೆ ಬೀಜವು ಸಿಗುವುದು. ಮತ್ತು ಸರ್ಕಾರದವರ ಶ್ರಮವು ಸಾರ್ಥಕವಾದೀತು.

ಓರ್ವ ಹಳ್ಳಿಗ.

ಮುಂಬಾಯಿ

ವಿದ್ಯಾದಾಯಿನಿ ಸಭೆಯು ವರ್ಷಂಪ್ರತಿ, ವಿದ್ಯಾರ್ಥಿ ವೇತನವನ್ನು ಕೊಡುತ್ತಾ ಬರುವಂತೆ ಈ ವರ್ಷವೂ ವಿದ್ಯಾರ್ಥಿ ವೇತನವನ್ನು ಪಡೆಯಲಿಚ್ಛಿಸುವ ಬಿಲ್ಲವಜಾತಿಗೆ ಸೇರಿದ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ಜುಲೈ ತಿಂಗಳ ತಾ. 10ರ ಒಳಗೆ "ಮಾನಾರ್ಥ ಪ್ರಧಾನ ಕಾರ್ಯದರ್ಶಿ, ವಿದ್ಯಾದಾಯಿನಿ ಸಭಾ, 31 ರಘುನಾಥ ದಾದಾಜಿ ರಸ್ತೆ ಕೋಟೆ, ಮುಂಬಾಯಿ" ಇವರಿಗೆ ಬರೆದು ಅರ್ಜಿ ಪತ್ರವನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ವಿದ್ಯಾರ್ಥಿ ವೇತನವನ್ನು ಪಡೆಯುತ್ತಿರುವ ಮತ್ತು ತೇರ್ಗಡೆಹೊಂದಿದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪರೀಕ್ಷೆಯ ಫಲಿತಾಂಶದೊಡನೆ ಮುಂದರಿಸುವ ಬಗ್ಗೆ ಅರ್ಜಿಯನ್ನು ಕೊಡತಕ್ಕದ್ದು.

Notice.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 136/1949

ವಾದಿ—ಶೀನಪ್ಪ ಶೇರ್ವೆಗಾರ

ಪ್ರತಿವಾದಿರು— 1 ರಾಮನ್ನಾಯ್ಕ 2 ಬಚ್ಚನ್ನಾಯ್ಕ.

ಉಡುಪಿ ತಾಲ್ಲೂಕು ಶಿರೂರು ಗ್ರಾಮದ ಮಣಿಯಾಡ್ ಬೈಲು ಆಡಿಯಲ್ಲಿರುವ ದೂಳನಾಯ್ಕನ ಮಗ 1ನೇ ಪ್ರತಿವಾದಿ ರಾಮನ್ನಾಯ್ಕ 1. 2ನೇ ಪ್ರತಿವಾದಿ ಬಚ್ಚನ್ನಾಯ್ಕ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ಕಳೆದ ಪಾರ್ಥಿವ, ವ್ಯಯ, ಸರ್ವಜಿತು, ಸರ್ವಧಾರಿ ಸಂವತ್ಸರಗಳ ಬಾಬ್ತು ಬರತಕ್ಕ ಚಾಲಗೇಣಿ ಗೇಣಿ ಬಾಕಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ 29-6-49ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

N. S. Parameshwariah.
Advocate for Plff.
Coondapoor, Date 11 6 49.

Notice.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 369/48
S. C. 496/37

ದಿ. ಕುಂದಾಪುರ ಬ್ಯಾಂಕ್ ಲಿಮಿಟೆಡ್
ಅರ್ಜಿದಾರ.

P. ಸೀತಾರಾಮಯ್ಯ ಪಾಠಕ
ಎದ್ರಿರು

4 ವೆಂಕಟಕೃಷ್ಣ- ಪಿ. ಸೀತಾರಾಮಯ್ಯನ ಮಗ, ಉಡುಪಿ ತಾಲ್ಲೂಕು ಮೂಡಹಡವು ಗ್ರಾಮ ಸದ್ರಿ ಅರ್ಜಿದಾರನ ಕಡೆಯಿಂದ ಈ ಕೆಳ್ಕ ತಿಳಿಯಪಡಿಸುವದೇನೆಂದ್ರೆ—

ಮೇಲ್ಕಂಡ ಅಮ್ಲುಜಾರಿಯಲ್ಲಿ 3 ರಿಂದ 6ನೇ ವರೇಗಿನ ಎದ್ರಿರ ಸ್ಥಿರಾಸ್ತಿ ಲೈಲಮಾಡಿಸುವಗೋಸ್ಕರ ಹಾಜ್ರುಪಡ್ಸಿದ ಇಸ್ತಿಹಾರಿನ ಶರ್ತ ನಿರ್ಣಯಿಸುವರೆ ತಾ-30-6-49ಕ್ಕೆ ಆಖೈರೆ ತನ್ಖೆಗೆ ಇಡೋಣಾಗಿಯದೆ. ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕ ಅರ್ಜಿದಾರನ ಕಡೆಯಿಂದ ತಿಳಿಯಪಡ್ಸಿದೆ.

G. Sanjiva Rao
Kundapur. Date 16-6-49



Approved firm by the Govt. of Mysore Certified by the Agent of the Govt. of Cyloae & Indian.

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದುಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ
S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ
ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ
ತಾರಾನಾಥ ವಿದ್ಯಾಪೀಠ ಬಳ್ಳಾರಿ.
P. O. ಸಂಗನಕಲ್ ಬಳ್ಳಾರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲದಾಸ, ಕಮಿಶ್ಯ, ಹಾವೇರಿ, ಬ್ಯಾಡಗಿ

ಕರ್ನಾಟಕ ಏಕೀಕರಣವೇ ಕನ್ನಡ ಜನತೆಯ ಮುಖ್ಯ ಧ್ಯೇಯ!

ಹರಿದು ಹಂಚಾದ ಕನ್ನಡ ಜನತೆಯನ್ನು ಒಂದುಗೂಡಿಸುವ 2 ಕೋಟಿ ಕಂಠಗಳ ಮಹಾ ಧ್ವನಿಯೇ ಏಕೀಕರಣದ ಮಹಾ ಗುರಿ.

ಅಂತೆಯೇ ಶಾಸ್ತ್ರೀಯ ರೀತಿಯ ಆಯುರ್ವೇದ ತಯಾರಿಯಿಂದ ಜನಸಾಮಾನ್ಯರ ಸೇವೆಯೇ ಸುಧಾರವರ ಮಹಾ ಧ್ಯೇಯ.

ಪಾಯಿಲೋಕ್ಯೂರಾ:— ಮೂಲವ್ಯಾಧಿಗೆ ಇನ್ನು ಮೇಲೆ ಭಯಪಡಬೇಕಾದ್ದಿಲ್ಲ. ನಮ್ಮ ಪಾಯಿಲೋಕ್ಯೂರಾ ಸೇವಿಸುವುದರಿಂದ ಮೊಳಕೆಯನ್ನು ನಿರ್ಮೂಲಗೊಳಿಸಿ, ರಕ್ತಸ್ರಾವವನ್ನು ನಿಲ್ಲಿಸುವುದು. ಮತ್ತು ಪ್ರಕೃತಿಯನ್ನು ಸುಲಭಗೊಳಿಸುವುದು.
ಇದೊಂದು ಆಯುರ್ವೇದದಲ್ಲಿ ರತ್ನವಿದ್ದಂತೆ.
ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ ವಿಚಾರಿಸಿರಿ—
ದಕ್ಷಿಣ ಭಾರತದ ಪ್ರಮುಖ ವಿತರಣಕರ್ತರು.

ಯು. ಐ. ಬಿ. ಬಿ ಎಂಡ್ ಕಂಪೆನಿ,
ಪೋಸ್ಟುಬೋಕ್ಸ್ ನಂಬ್ರ 38, ರೋಯಲ್ ಮಹಾಲ್, ಉಡುಪಿ. ದ. ಭಾ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K

ಧೂಮಪಾನದಿಂದಾಗುವ ದುಷ್ಪರಿಣಾಮ

ಅದನ್ನು ನಿರ್ಮೂಲವಮಾಡಲು ಬಲವಾದ ಪ್ರಚಾರ ಬೇಕು

ಹರಿಜನ ಪತ್ರಿಕೆಯಲ್ಲಿ ಶ್ರೀ ಕೆ. ಜಿ. ಮಷ್ರೂವಾಲರವರು ಈ ರೀತಿ ಬರೆಯುತ್ತಾರೆ:—

ಬಾತ್ಮಿದಾರರೊಬ್ಬರು ಬರೆದ ಪತ್ರದಿಂದ ಈ ಮುಂದೆ ಕಂಡ ಅಂಶವನ್ನು ನಾನು ಹೊರತೆಗೆದಿದ್ದೇನೆ.

"ಮದ್ಯಪಾನಕ್ಕಿಂತಲೂ ಧೂಮಪಾನ ದೊಡ್ಡ ಶಾಪವಂತೆ. ಏಕೆಂದರೆ ಅದರಿಂದಾಗುವ ಕೆಡುಕನ್ನು ಮನುಷ್ಯನು ಯುಕ್ತಕಾಲದಲ್ಲಿ ಅರಿಯಲಾರ. ಅದು ಅನಾಗರಿಕವೆಂದು ಯಾರೂ ಭಾವಿಸುವುದಿಲ್ಲ. ನಾಗರಿಕಜನರೇ ಅದನ್ನು ಮನ್ನಿಸುವರು. ನಾನು ಇಷ್ಟುಮಾತ್ರ ಹೇಳಬಲ್ಲೆ. ಬಿಡಬಲ್ಲಂತಹವರು ಆ ಅಭ್ಯಾಸವನ್ನು ಬಿಟ್ಟು ಇತರರಿಗೆ ಮಾರ್ಗದರ್ಶನವೀಯಲಿ" (ಮಹಾತ್ಮ ಗಾಂಧಿ, ಯಂಗ್ ಇಂಡಿಯಾ ೪–೨-೪೬).

"ಧೂಮಪಾನವನ್ನು ಒಂದು ಕಾಲದಲ್ಲಿ ಹಿಂದೂಗಳೂ ಮುಸ್ಲಿಮರೂ ಅಶುದ್ಧವೆಂದು ಭಾವಿಸಿದ್ದರು. ದಕ್ಷಿಣ ಭಾರತದಲ್ಲಿಯು ದೇವಸ್ಥಾನಗಳಲ್ಲಿ ಅಥವಾ ಮಸೀದಿಗಳಲ್ಲಿ ಧೂಮಪಾನ ಮಾಡಲು ಇಂದಿಗೂ ಕೂಡ ಪ್ರತಿಬಂಧಕವಿದೆ. ಉತ್ತರ ಭಾರತದಲ್ಲಿ ಪೂಜಾರಿಗಳು ಮಂತ್ರೋಚ್ಚಾರಣೆ ಮಾಡುತ್ತಿರುವಾಗಲೂ ದೇವತಾರ್ಚನೆ ಮಾಡುತ್ತಿರುವಾಗಲೂ ಧೂಮಪಾನವಮಾಡುತ್ತಿರುವುದನ್ನು ಕಾಣಬಹುದು. ಉಪಾಹಾರಕೂಟ ಅಥವಾ ಭೋಜನಕೂಟವಾದ ಮೇಲೆ ಪಾನ್‌ಸುಪಾರಿಯಂತೆ ಸಿಗರೇಟುಗಳನ್ನು ಅಹ್ವಾನಿತರಿಗೆ ಕೊಡಲಾಗುವದು ಶ್ಲಾಘನೀಯವಾಗಿ ಬೀಡಿ ಮತ್ತು ಸಿಗರೇಟುಗಳನ್ನು ತಯಾರುಮಾಡುವುದೇ ಅಲ್ಲದೆ ಹೊರಗಿನಿಂದಲೂ ಕೂಡ ನಾನಾ ಪತ್ತಾದ ಸೀಗರೇಟುಗಳನ್ನು ಕೋಟಿಗಟ್ಟಲೆ ನಮ್ಮ ದೇಶಕ್ಕೆ ಇಂದಿಗೂ ಕೂಡ ಆಮದು ಮಾಡಲಾಗುತ್ತಿದೆ. ಸೈನ್ಯದಲ್ಲಂತೂ ಇದಕ್ಕೆ ಎಲ್ಲಕ್ಕಿಂತ ಪ್ರಥಮ ಸ್ಥಾನ. ಸೈನಿಕನಿಗೊದಗಿಸುವ ವಸ್ತುಗಳಲ್ಲಿ ಇದು ಮುಖ್ಯವಾದುದು. ವಿಜಯಹೊಂದಿದ ತಮ್ಮ ಸೈನಿಕರಿಗೆ ಸೀಗರೇಟನ್ನೊದಗಿಸದಿದ್ದುದಕ್ಕಾಗಿ ಒಬ್ಬ ಬ್ರಿಗೇಡಿಯರನ್ನು ವಿಚಾರಣೆ ಇಲ್ಲದೆಯೇ ಕೆಲಸದಿಂದ ತೆಗೆದುಹಾಕಲಾಯಿತು.

"ಪ್ರಮುಖ ವೈಜ್ಞಾನಿಕರಾದ ಡಾ॥ ಪಿ. ಸಿ. ರಾಯ್‌ರವರು ಈ ಕೆಡುಕನ್ನು ನಿವಾರಿಸಲು ಅವರಲ್ಲಿಯೂ ವಿದ್ಯಾರ್ಥಿವರ್ಗದಲ್ಲಿ ಬಹಳ ಬಲವಾದ ಪ್ರಚಾರ ಕೈಕೊಂಡಿದ್ದರೆಂದು ನನಗೆ ನೆನಪಿದೆ.

"ಮೊದಲು ಧೂಮಪಾನವನ್ನು ಅಶುದ್ಧವೂ ಕೆಟ್ಟುದೂ ಆದ ಅಭ್ಯಾಸವೆಂದು ಪರಿಗಣಿಸಿ ಅನಂತರ ಆ ಕೆಡುಕನ್ನು ನಿವಾರಿಸಲು ಕ್ರಮಕೈಕೊಳ್ಳಬೇಕು. ದುಡಿದು ಸಂಪಾದನೆ ಮಾಡುವವರನೇಕರು ತಮ್ಮನ್ನವಲಂಬಿಸಿರುವವರಿಗೆ ಆಹಾರ ಮತ್ತು ಬಟ್ಟೆಗೆ ಒದಗಿಸುವ ಹಣಕ್ಕಿಂತ ಹೆಚ್ಚು ಹಣವನ್ನು ತಮ್ಮ ಧೂಮಪಾನಕ್ಕೆ ವ್ಯಯಮಾಡುವರು. ಆರ್ಥಿಕವಾಗಿಯೂ ಕೂಡ ಅದು ದೊಡ್ಡ ನಷ್ಟ.

"ಅದೊಂದು ಕೆಡುಕೆಂದು ಮನ್ನಿಸಿದ ಮೇಲೆ ಅದನ್ನು ನಿವಾರಿಸಲು ಮೊದಲು ಎಲ್ಲ ಆಧುನಿಕ ಮಾರ್ಗಗಳಿಂದಲೂ ಬಲವಾದ ಪ್ರಚಾರ ನಡೆಸಬೇಕು. ಪತ್ರಿಕೆಗಳು, ಹಸ್ತಪತ್ರಿಕೆಗಳು, ಭಾಷಣಗಳು, ಸ್ಲೈಡ್‌ಗಳು. ಚಲಸಚಿತ್ರಗಳು ಮತ್ತು ಇತರ ಎಲ್ಲ ಮಾರ್ಗಗಳಿಂದಲೂ ಪ್ರಚಾರ ನಡೆಸಬೇಕು. ಥಿಯೇಟರುಗಳಲ್ಲಿ, ಹೋಟೆಲುಗಳಲ್ಲಿ, ಭೋಜನ ಗೃಹಗಳಲ್ಲಿ, ರೈಲುಗಳಲ್ಲಿ, ಬಸ್ಸುಗಳಲ್ಲಿ ಮತ್ತು ಸಾರ್ವಜನಿಕವಾದ ಇತರ ಸ್ಥಳಗಳಲ್ಲಿ ಧೂಮಪಾನವನ್ನು ಪ್ರತಿಬಂಧಿಸಬಹುದು. 'ಧೂಮವಿನಿಯೋಗ' (ಹಾಗೆಂದೇ ಸಾಮಾನ್ಯವಾಗಿ ಕರೆಯುವ ಅಭ್ಯಾಸ) ವನ್ನು ಅಧಿಕಾರಿ ಸಂತೋಷಕೂಟಗಳಲ್ಲಿ ಪ್ರತಿಬಂಧಿಸಬಹುದು. ಸಿಗರೇಟುಗಳನ್ನು ಆಮದು ಮಾಡುವುದಕ್ಕೆ ಪ್ರತಿಬಂಧಕ ಹಾಕಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಬಲವಾದ ಪ್ರಚಾರ ನಡೆಸಬೇಕು."

ತಂಬಾಕು ಮದ್ಯಕ್ಕಿಂತ ಹೆಚ್ಚು ಅಪಾಯಕರವೆಂದು ಟಾಲ್‌ಸ್ಟಾಯ್‌ರವರು ಪರಿಗಣಿಸಿದ್ದರು. ಆದರೆ ಅದನ್ನ ನಿರ್ಮೂಲಮಾಡಲು ಸರ್ಕಾರದ ಯಂತ್ರದ ಮೂಲಕ ಮಾಡಲು ಆಗುವ ಹಾಗಿದ್ದಲ್ಲಿ ಮಂತ್ರಿಗಳ ಮತ್ತು ಶಾಸಕರುಗಳ ಹೊಸತಲೆಮಾರೇ ಬರಬೇಕಾಗುವುದು. ಈಗಿನ ಪೀಳಿಗೆಯವರು ಧೂಮಪಾನಕ್ಕೆ ಹೆಚ್ಚು ಖರ್ಚಾಗಂತೆಯೋ ಅಥವಾ ಬಾಲಕರು ಧೂಮಪಾನ ಮಾಡದಂತೆಯೋ ಮಾಡಬಹುದು, ಅದಕ್ಕಿಂತ ಹೆಚ್ಚಿನದನ್ನು ಮಾಡಲಸಮರ್ಥರಾಗುವರು. ಜನಾಭಿಪ್ರಾಯಕ್ಕೆ ಬಹಳ ಮುಂಚಿತವಾಗಿಯೇ ಶಾಸನ ಮಾಡಿದಲ್ಲಿ ಅಂತಹ ಕಾನೂನು ಬರಿಯ ಕಡತದಲ್ಲಿ ಮಾತ್ರ ಇರುವದು. ಮುಖಂಡರೂ, ಶಾಸಕರೂ ಮತ್ತು ಆಡಳಿತಗಾರರೂ ಏನು ಮಾಡಬಲ್ಲರೆಂಬುದನ್ನು ನೋಡದೆ, ಈ ಧೂಮಪಾನ ವಿರೋಧಿಗಳು ಈ ಕೆಡುಕನ್ನು ನಿವಾರಿಸಲು ಪ್ರಚಾರ ಕೈಕೊಳ್ಳಬೇಕು, ಸಾಧಾರಣಾ ಪ್ರಯತ್ನ ನಡೆಸಬೇಕು.



ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ'

(ENGLISH MADE EASY)

ಮನೆಯಲ್ಲಿ ಸೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧–೮–೦

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೩/-

ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಜನಸಾಮಾನ್ಯರಿಗೂ ಅನುಕೂಲವಾಗುವಂತೆ ರೂ. 100ರಿಂದ 900ರ ಒಳಗಿನ ಮೊತ್ತದಲ್ಲಿ ವಿಮಾಮಾಡುವ ಸೌಕರ್ಯ!

ಎಲ್ಲಾ ಕಡೆಗಳಲ್ಲಿಯೂ ಉತ್ಸಾಹೀ ಏಜಂಟರು ಬೇಕಾಗಿದ್ದಾರೆ

ವಿವರಗಳಿಗೆ ಬರೆಯಿರಿ:

ಬಿ. ವಾಮನಾಚಾರ್, ಬಿ.ಎ.ಬಿ.ಎಲ್

ಮೆನೇಜರ್.

English copies of

MADRAS ALIYASANTHANA ACT of 1949

are available.

NAVAYUGA PRESS, UDIPI.

ಋತುಸ್ರಾವ ನಿಂತಿತು

'ಕುಮಾರಿ' ದಿಲ್ಲಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುತ್ತಸು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mis. D. DEVEE, F. DS. (N. J.)

Tollygunge CALCUTTA.

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು—ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಎಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-ವಿ ಪಿ.ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಬೇದಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ್ಷ್ಮಿವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ನಾನು ಹೆಂಗಸಾಗಿ ಹುಟ್ಟಿದ್ದರೆ ಹೆಂಗಸು ತನ್ನ ಆಟದ ಸಾಮಾನೆಂದು ತಿಳಿಯುವ ಗಂಡಸಿನ ನೀತಿಯ ವಿರುದ್ಧ ದಂಗೆ ಏಳುತ್ತಿದ್ದೆ. ಹೆಂಗಸಿನ ಹೃದಯ ಪ್ರವೇಶ ಮಾಡಲು ಮಾನಸಿಕವಾಗಿ ನಾನು ಹೆಂಗಸಾಗಿರುವೆ ನಾನು ನನ್ನ ಹೆಂಡತಿಯ ಬಗ್ಗೆ ಅವಳಿಗಿದ್ದ ನನ್ನ ನೀತಿಯನ್ನು ಬದಲು ಮಾಡುವ ವರೆಗೆ ಆಕೆಯ ಹೃದಯ ಪ್ರವೇಶವಾದಲು ಸಾಧ್ಯವಾಗಲಿಲ್ಲ ಗಂಡನಿಗೆ ಸೇರಿದ್ದೆನ್ನುವ ಹಕ್ಕುಗಳನ್ನು ತ್ಯಾಗಮಾಡಿ ಆಕೆಯ ಪೂರ್ಣ ಹಕ್ಕುಗಳನ್ನು ಕೊಟ್ಟ ನಂತರವೇ ಇದು ಸಾಧ್ಯವಾಯಿತು. ಇಂದು ನನ್ನಂತೆಯೇ ಆಕೆಯು ಸರಳವಾಗಿರುವದನ್ನು ನೀವು ನೋಡುವಿರಿ, ಆಕೆಯ ಕುತ್ತಿಗೆಯಲ್ಲಿ ಸರಪಣಿಗಳಾಗಲೀ, ಮೈಯಲ್ಲಿ ಶೋಕಿನ ಪೋಷಾಕಾಗಲೀ ಇಲ್ಲ. ನೀವೂ ಕೂಡ ಹಾಗೆ ಆಗಬೇಕೆಂದು ನನ್ನ ಇಚ್ಛೆ. ನೀವು ಇಚ್ಛೆ ಅನಿಚ್ಛೆಗಳ ಗುಲಾಮರಾಗದಿರಿ; ಗಂಡಸಿನ ಗುಲಾಮರಾಗದಿರಿ ನಿಮ್ಮನ್ನು ಶೃಂಗರಿಸಿಕೊಳ್ಳಲು ತಿರಸ್ಕರಿಸಿರಿ. ಸುಗಂಧ ದ್ರವ್ಯಗಳಿಗೂ, ಇತರ ಬಿನ್ನಾಣದ ವಸ್ತುಗಳಿಗೂ ಮನಕೊಡದಿರಿ. ನೀವು ನಿಜವಾದ ಸುಗಂಧವನ್ನು ಬೀರಬೇಕಾದರೆ ಅದು ನಿಮ್ಮ ಹೃದಯದಿಂದ ಬರಬೇಕು ಆಗ ನೀವು ಬರೇ ಗಂಡಸನ್ನು ಕೈವಶದಲ್ಲಿಡುವದಲ್ಲ, ಇಡೀ ಮಾನವಗಣವನ್ನು. ಅದು ನಿಮ್ಮ ಜನ್ಮಸಿದ್ಧ ಹಕ್ಕು. ಗಂಡಸು ಹೆಂಗಸಿನಿಂದ ಹುಟ್ಟಿರುವನು. ಆತನು ಆಕೆಯ ಮಾಂಸದ ಮಾಂಸ. ಆಕೆಯ ಎಲುಬಿನ ಎಲುಬು ನಿಮ್ಮ ಸಾನತೆಗೇರಿ ನಿಮ್ಮ ಶುಭ ಸಂದೇಶವನ್ನು ಬೀರಿರಿ. (ಯಂಗ್ ಇಂಡಿಯಾ 1927 ಪುಟ ೪೦೬)

ಹೆಂಗಸು ತಾನು ಗಂಡಸಿನ ಭೋಗದ ವಸ್ತುವೆಂದು ತಿಳಿಯುವದನ್ನು ಬಿಡಬೇಕು. ಇದನ್ನು ಬಗೆಹರಿಸುವ ಶಕ್ತಿ ಗಂಡಸಿಗಿಂತ ಆಕೆಯಲ್ಲಿದೆ. ಗಂಡಸಿನಷ್ಟೇ ತಾನು ಸ್ವತಂತ್ರಳು, ಆತನ ಪ್ರತಿಯೊಂದು ಕಾರ್ಯದಲ್ಲಿಯೂ ಸಮಪಾಲುಗಾರಳು ಎಂದಾಗಬೇಕಾದರೆ ಗಂಡಸಿನ ತೃಪ್ತಿಗಾಗಿ-ತನ್ನ ಗಂಡನಿಗೂ ಕೂಡ-ತಲ್ಲ ಶೃಂಗರಿಸಿಕೊಳ್ಳುವದನ್ನು ಬಿಡಬೇಕು. ತನ್ನ ಶಾರೀರಿಕ ಸೌಂದರ್ಯದಿಂದ ರಾಮನನ್ನು ಮೋಹಿಸಲು ಸೀತೆಯು ಒಂದು ಕ್ಷಣವನ್ನಾದರೂ ವ್ಯಯಿಸಿರಬಹುದೆಂದು ನಾನು ಊಹಿಸಲಾರೆ. (ಯಂಗ್ ಇಂಡಿಯಾ ೧೯೩೧, ಪುಟ ೨೩೯)

ಗಂಡಸು ತಾನು ಮಾಡಿದ ಮಹಾಪರಾಧಗಳಲ್ಲಿ ನನ್ನ ದೃಷ್ಟಿಯಲ್ಲಿ ಮಾನವಗಣದ ಉತ್ತಮಾರ್ಧವಾದ ಹೆಂಗಸನ್ನು-ಅಬಲೆಯಲ್ಲ-ತನ್ನ ದುರುಪಯೋಗಕ್ಕೆ ಡೆ ಮಾಡಿರುವದರಷ್ಟು ಅಮಾನುಷ ಮತ್ತು ಕೆಳಗತಿಯ ಕೆಲಸ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು,ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ,ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಪುಳುಕಡ್ಡಿ ಮದ್ದುನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮಹಿಳಾ ಪುಟ

ಹೆಂಗಸು ಅಬಲೆಯಲ್ಲ

ಲೇ:-ಮಹಾತ್ಮಾ ಗಾಂಧಿ.

ಬೇರೊಂದಿರಲಾರದು ಗಂಡು ಹೆಣ್ಣುಗಳಲ್ಲಿ ಹೆಣ್ಣೇ ಉತ್ತಮ. ಇಂದೂ ಕೂಡ ತ್ಯಾಗ, ನುರುಮಾತಿಲ್ಲದ ಸಹನೆ, ದೈನ್ಯಭಾವ, ನಂಬಿಕೆ ಮತ್ತು ಜ್ಞಾನದ ಮೂರ್ತಿಯೇ ಆಕೆ. (ಯಂಗ್ ಇಂಡಿಯಾ ೧೯೨೧. ಪುಟ ೨೯೨)

ಹೆಂಗಸು ತ್ಯಾಗದ ಮೂರ್ತಿಯೆಂದು ನನ್ನ ಭಾವನೆ. ಆದರೆ ತನ್ನ ಮುದ್ರೆಯೊತ್ತಲು ಗಂಡಸಿಗಿಂತ ತನಗೆ ಎಂಥಾ ಅನುವಿದೆಯೆಂಬುದನ್ನು ದುರಾದೃಷ್ಟವಶಾತ್ ಆಕೆ ಅರಿಯಳು. ಮಹಾಕವಿ ಟಾಲ್‌ಸ್ಟಾಯಿ ಹೇಳುತ್ತಿದ್ದಂತೆ ಅವರು ಗಂಡಸಿನ ಜಾದುವಿನಂಥಾ ಪ್ರಭಾವದಲ್ಲಿ ತೊಳಲುತ್ತಿದ್ದಾರೆ. ಅವರು ಅಹಿಂಸೆಯ ಬಲವನ್ನು ತಿಳಿಯಬಲ್ಲರಾದರೆ ಅಬಲೆಯರೆಂದು ಕರಸಿಕೊಳ್ಳಲು ಎಂದೂ ಒಪ್ಪಲಿಕ್ಕಿಲ್ಲ [ಯಂಗ್ ಇಂಡಿಯಾ ೧೯೩೦ ಪುಟ ೧೯]

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು ಅಂದರೆ ಕೇವಲ ೪ ರೂಪಾಯಿಗಳೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ. ನಂ, 5 ಕೊಡಿಯಾಲಬೈಲು, ದ ಕ

ಸ್ಟಾಕಿಸ್ಟರು. ಡಾ। ಐ. ಕೆ. ಶಿವರಾಮ ರಾವ್ ,ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S K.

ಹೆಂಗಸನ್ನು ಅಬಲೆಯೆಂದು ಕರೆಯುವದು ಆರೋಪ. ಇದು ಹೆಂಗಸಿಗೆ ಗಂಡಸಿನ ಅನ್ಯಾಯ ಶಕ್ತಿ ಎಂದರೆ ಪಾಶವೀಶಕ್ತಿ ಎಂದೆನ್ನುವದಾದರೆ ಖಂಡಿತವಾಗಿಯೂ ಹೆಂಗಸು ಗಂಡಸಿಗಿಂತ ನಿರ್ಬಲಳು ಶಕ್ತಿ ಎಂದರೆ ನೈತಿಕಶಕ್ತಿ ಎನ್ನುವದಾದರೆ ಹೆಂಗಸು ಗಂಡಸಿಗಿಂತ ಹೇಳಲಾರದಷ್ಟು ಪಾಲು ಸಬಲಳು. ಆಕೆಗೆ ಹೆಚ್ಚು ಆತ್ಮಬಲ, ಹೆಚ್ಚು ತ್ಯಾಗಶಕ್ತಿ, ಹೆಚ್ಚು ಕಷ್ಟ ಸಹನಾಶಕ್ತಿ, ಹೆಚ್ಚು ಧೈರ್ಯ ಇಲ್ಲವೇ? ಆಕೆ ಇಲ್ಲದಿದ್ದರೆ ಗಂಡಸು ಇಲ್ಲ. ಅಹಿಂಸೆಯು ಮಾನವಕುಲದ ಉತ್ತಮ ತತ್ವವಾದರೆ ಭವಿಷ್ಯವು ಹೆಂಗಸಿನದು. ಹೆಂಗಸಿನಷ್ಟು ಹೃದಯವನ್ನು ಪ್ರಚೋದಿಸುವವರು ಯಾರಿರುವರು? [ಯಂಗ್ ಇಂಡಿಯಾ ೧೯೩೦- ಪುಟ ೧೨೧]

ಗಂಡಸು ತನ್ನ ಕುರುಡು ಸ್ವಾರ್ಥತೆಯಿಂದ ಹೆಂಗಸಿನ ಆತ್ಮವನ್ನು ಕೆಳಗೆ ತುಳಿಯದಿದ್ದರೆ, ಆಕೆಯು ಜೀವನದ ಭೋಗಸುಖಕ್ಕೆ ಬಲಿಯಾಗದಿದ್ದರೆ ಆಕೆಯಲ್ಲಿ ಅಂತರಿಕವಾಗಿರುವ ಮಹಾಶಕ್ತಿಯ ಪ್ರದರ್ಶನವನ್ನು ಜಗತ್ತಿಗೆ ಆಕೆ ಮಾಡುತಿದ್ದಳು. ಹೆಂಗಸಿಗೆ ಗಂಡಸಿನಂತೆಯೇ ಸಮಾನ ಸ್ವಾತಂತ್ರ್ಯ, ಸಮಾನಾವಕಾಶ ದೊರೆತು ತನ್ನ ಪರಸ್ಪರ ಸಹಾಯ ಮತ್ತು ಐಕ್ಯತೆಯ ಗುಣಗಳನ್ನು ಆಕೆ ಬೆಳೆಸಿಕೊಂಡಾಗ ಜಗತ್ತು ಆಶ್ಚರ್ಯದಿಂದ ಆಕೆಯ ಘನತೆಯನ್ನು ನೋಡುವದು. (ಯಂಗ್ ಇಂಡಿಯಾ ೧೯೨೧- ಪುಟ ೯೬)

ಜೀವನದಲ್ಲಿ ಪವಿತ್ರವಾದುದು ಮತ್ತು ಧಾರ್ಮಿಕವಾದುದಾವುದಿದೆಯೋ ಅವುಗಳೆಲ್ಲವುಗಳ ಸ್ವಾಮಿನಿಗಳು ಹೆಂಗಸರು ಪ್ರಾಕೃತಿಕವಾಗಿ ಹಳೇ ಸಂಪ್ರದಾಯವಾದಿಗಳಾಗಿ ತಮ್ಮ ಮೂಢ ನಂಬಿಕೆ ಮತ್ತು ಅಂಧವಿಶ್ವಾಸಗಳನ್ನು ಅವರು ಬಿಡಲು ನಿಧಾನವಾದಂತೆಯೇ ಜೀವನದಲ್ಲಿ ಪವಿತ್ರವಾದುದನ್ನು, ಉತ್ತಮವಾದುದನ್ನೂ ಬಿಡಲು ಅವರು ನಿಧಾನರು. (ಹರಿಜನ ೧೯೩೪ ಪುಟ ೪೨)

ಹೆಂಗಸರ ಹಕ್ಕುಬಾಧ್ಯತೆಗಳ ಬಗ್ಗೆ ನಾನು ಒಪ್ಪಂದಕ್ಕೆ ತಯಾರಿಲ್ಲ. ಗಂಡಸಿಗೆ ಇಲ್ಲದ ಯಾವದೇ ನಿಯಮದ ಬಂಧನ ಆಕೆಗಿರಬಾರದೆಂದು ನನ್ನ ಅಭಿಪ್ರಾಯ ನಾನು ಹೆಣ್ಣು ಮಕ್ಕಳನ್ನೂ ಗಂಡು ಮಕ್ಕಳನ್ನೂ ಸಮಾನ ರೀತಿಯಲ್ಲಿ ಕಾಣುವೆನು. (ಯಂಗ್ ಇಂಡಿಯಾ ೧೯೨೯. ಪುಟ ೩೪೦.)

ಹೆಂಗಸರಿಗೆ ಯೋಗ್ಯ ವಿದ್ಯಾಭ್ಯಾಸ ಕೊಡುವದರಲ್ಲಿ ನನಗೆ ವಿಶ್ವಾಸವಿದೆ. ಆದರೆ ಹೆಂಗಸು ಗಂಡಸಿನ ಅನುಕರಣೆ ಮಾಡುತ್ತಾ ಆತನೊಡನೆ ಪೈಪೋಟಿಗಿಳಿಯುವದರಿಂದ ತನ್ನ ಪಾಲಿನ ಸೇವೆಯನ್ನು ಜಗತ್ತಿಗೆ ಸಲ್ಲಿಸಲು ಹೆಂಗಸು ಅಸಮರ್ಥಳಾಗುವಳೆಂದೂ ನನಗೆ ನಂಬಿಕೆ ಇದೆ ಆಕೆ ಗಂಡಸಿನೊಡನೆ ಸ್ಪರ್ಧಿಸಬಹುದು ಆದರೆ ತನಗೆ ಸಾಧ್ಯವಿರುವ ಮಹಾ ಎತ್ತರಕ್ಕೆ ಗಂಡಸನ್ನು ಅನುಕರಿಸುವದರಿಂದ ಆಕೆ ಏರಲಾರಳು. ಆಕೆಯು ಗಂಡಸಿನಲ್ಲಿರುವ ನ್ಯೂನತೆಯನ್ನು ತುಂಬುವ ಪೂರಕಶಕ್ತಿಯಾಗಿರಬೇಕು. (ಯಂಗ್ ಇಂಡಿಯಾ ೧೯೩೯, ಪು. ೩೪೦)

ಅನುವಾದಕ.— ಶ್ರೀ ಬಿ. ಡಿ. ಗ.

(ಕೊಡಗು.

ಶ್ರೀ ರಜಕ ಸಂಘ ಮುಂಬಯಿ

ಕಡ್ಡಾಯ ಶಿಕ್ಷಣವು ಜಾರಿಗೆ ಬಾರದ ಶಾಲೆಯಲ್ಲಿ ಕಲಿಯುತ್ತಿರುವ ರಜಕ ಜಾತಿಯ ವಿದ್ಯಾರ್ಥಿಗಳ ಪೈಕಿ ಯಾರಾದರೂ ವಿದ್ಯೆ ಕಲಿಯಲು ಅಸಮರ್ಥರಾದ ಬಡ ವಿದ್ಯಾರ್ಥಿಗಳಿದ್ದರೆ ಅಂಥವರು ತಾ 15-7-49ರೊಳಗೆ ತಮ್ಮ ಅರ್ಜಿಪತ್ರಗಳನ್ನು ಈ ಕೆಳಗಿನ ವಿಳಾಸಕ್ಕೆ ರವಾನಿಸಬೇಕಾಗಿ ವಿನಂತಿ.

ಗೌ. ಕಾರ್ಯದರ್ಶಿ

262, Ferere Road,
Room No. 23
2nd Floor
Fort Bombay.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

30-6-1949

LICENCE No. 31
Licenced to Post without Prepayment

NAVAYUGA WEEKLY

POST BOX No. 22 -- UDIPI, S. K

FOUNDER:
Hon'ble Sri. A. B. Shetty
Minister for Agriculture & Veterinary

Telegram:
"Navayuga"

Estd.
1921
ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ:
5—4—0

6 ತಿಂಗಳಿಗೆ
3—0—0

ಬಿಡಿಪ್ರತಿಗೆ
0—2—0

ವರ್ಷ ೨೯
ವಾರ 44

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟಿ ಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 44

ಹೀಗೆ ತೋರುತ್ತಿದೆ:—

ಅಧಿಕಾರಿ ಕಾಂಗ್ರೆಸಿಗನಿಂದಾರಂಭಿಸಿ, ಅಡ್ಡಾಡಿ ಕಾಂಗ್ರೆಸಿಗನ ವರೆಗಿನ ಎಲ್ಲರೂ ತಮಗೆ ಅಗತ್ಯತೋರಿದಾಗಲೆಲ್ಲಾ ಗಾಂಧಿಜೀಯ ಹೆಸರು ಹೇಳುತ್ತಿದ್ದಾರೆ, ಮತ್ತು ಸಾಧ್ಯವಿದ್ದಷ್ಟು ಗಾಂಧೀ ವೇಶ ತೊಡುತ್ತಿದ್ದಾರೆ ಹೊರತು ಗಾಂಧೀವಾದದ ತಿರುಳಾಗಿರುವ ಸತ್ಯನಿಷ್ಠೆ ಮತ್ತು ನ್ಯಾಯನಿಷ್ಠುರತೆಯ ಕಡೆಗೆ ಗಮನಕೊಡುತ್ತಿಲ್ಲ.

'ನಮ್ಮ ಸರಕಾರ'ವಾದ್ದರಿಂದ 'ನಾವು ಮಾಡಿದ್ದೇ' ಎಂಬ ಸಲುಗೆ ಸರಕಾರೀ ನೌಕರವರ್ಗದಲ್ಲಿ ವ್ಯಾಪಿಸಿದ್ದರೆ, 'ನಾವು ಕೊಟ್ಟದ್ದೇ' ಎಂಬ ಮನೋವೃತ್ತಿ ಜನತೆಯಲ್ಲಿ ಪಸರಿಸಿದೆಯಲ್ಲದೆ, ತಮ್ಮ ಸರಕಾರವಾದ್ದರಿಂದ ತಮ್ಮ ಮೇಲೆಬಿದ್ದಿರುವ ಕರ್ತವ್ಯದ ಹೊಣೆಗಾರಿಕೆ ಯಾರಮನಸ್ಸಿಗೂ ತಟ್ಟುತ್ತಿಲ್ಲ.

ಅಧಿಕಾರ ಸ್ಥಾನಕ್ಕೇರುವದಾಗಲೀ, ಅಧಿಕಾರ ಸ್ಥಾನದಲ್ಲಿರುವವರೊಡನೆ ಯಾವುದೇ ವಿಧದ ಸಂಬಂಧವಿಟ್ಟುಕೊಳ್ಳುವದಾಗಲೀ ಅಸಾಧ್ಯವಿರುವ ಬಡವರು ಮಾಡಿದ ಅಪರಾಧಗಳು ಕಠಿಣರೀತಿಯಿಂದ ದಂಡಿಸಲ್ಪಡುತ್ತಿವೆಯಾದರೆ, ಮೇಲಿನ ಅನುಕೂಲತೆಗಳಿರುವ ಶ್ರೀಮಂತವರ್ಗದ ತಪ್ಪುಗಳು ಅಂತರ್ಗಾಮೀ ವಹಿವಾಟುಗಳಿಂದ, ಅಲ್ಲಿಂದಲ್ಲೇ ಮಾಯವಾಗುತ್ತಿವೆ.

ಇಂದಿನ ಅಸ್ತವ್ಯಸ್ತ ಆರ್ಥಿಕ ಪರಿಸ್ಥಿತಿ ಅಥವಾ ದುರ್ವಹಿವಾಟುಗಳ ವಿರುದ್ಧ ಹೂಡಲ್ಪಡುವ ಯಾವುದೇ ಚಳವಳವಾದರೂ ನಿದಾಕ್ಷಿಣ್ಯವಾಗಿ ನಿರ್ಮೂಲಿಸಲ್ಪಡುತ್ತಿರುವಾಗ, ಆ ದುಷ್ಟಪದ್ಧತಿಯನ್ನಾಧರಿಸಿ ನಡೆಯುವ ದುರ್ವಹಿವಾಟುಗಳ ಮೇಲೆ ಅಷ್ಟು ಬಲವಾದ ಗದಾಪ್ರಹಾರವೇನೂ ಬೀಳುತ್ತಿಲ್ಲ.

ಕಾಂಗ್ರೆಸಿನ ಮೇಲೆ, ಮತ್ತದರ ತ್ಯಾಗಿ ನಾಯಕರ ಮೇಲೆ ಸಹಜವಾಗಿ ಜನತೆಗಿರುವ ಗೌರವ ವಿಶ್ವಾಸಗಳನ್ನೇ ಈಗ ಅಧಿಕಾರಸ್ಥಾನಗಳಲ್ಲಿರುವ ಹಾಗೂ ಇಲ್ಲದಿರುವ ಕಾಂಗ್ರೆಸ್ ನಾಯಕರು ವ್ಯಯಿಸುತ್ತಿದ್ದಾರಲ್ಲದೆ, ಆ ಭಂಡಾರಕ್ಕೆ ಹೆಚ್ಚಿಗೇನನ್ನೂ ಕೂಡಿಸುತ್ತಿಲ್ಲ.

'ಪಾನನಿಷೇಧ'ದಂತಹ ಕೆಲವು ಅಮೂಲ್ಯ ಗಾಂಧೀ ತತ್ವಗಳನ್ನು ಕಾಯಿದೇಬದ್ಧವಾಗಿ ಜಾರಿಗೆ ತರುವವರಲ್ಲಿಯೇ ಗಾಂಧಿಜೀಯ ಸರಳ ಬೋಧನೆಯಾದ ನಿರ್ಮಾತ್ಸರ್ಯ ಮತ್ತು ನಿರ್ಮಲ ಬುದ್ಧಿಯೆಂಬುದಿಲ್ಲ.

'ಕಾಳಸಂತೆ ವ್ಯಾಪಾರಿಗಳ ತಲೆಯಲ್ಲಿ ಬಿಳಿ ಟೋಪಿ' ಎಂಬ ಗಾದೆಯು ನಿತ್ಯ ಜೀವನದ ನಾಣ್ಣುಡಿಯಾಗಿ ಪ್ರಚಾರದಲ್ಲಿ ನಿಂತಿದೆ.

ಈ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ, ಸರಕಾರಕ್ಕೆ ಹೇರಳ ಲಾಭವೊದಗಿಸಬಲ್ಲ ಮುಖ್ಯೋದ್ದಿಮೆಗಳನ್ನಾದರೂ 'ರಾಷ್ಟ್ರೀಕರಣ'ಗೊಳಿಸದೆ, ರಾಷ್ಟ್ರದ ಸಂಪದಭಿವೃದ್ಧಿಯ ನೆವನ ಹೇಳುತ್ತಾ ಖಾಸಗೀ ಮಾಲಕತ್ವವನ್ನೇ ಪ್ರೋತ್ಸಾಹಿಸಲಾಗುತ್ತಿದೆ.

ಇದಿರುವಾದಿ ಪಕ್ಷಗಳ ಚಳವಳಗಳನ್ನು ಕಾಯಿದೇಮೂಲಕ ದಮನಗೊಳಿಸಿಟ್ಟುದರಿಂದಲೂ, ಬದಲಿಗೆ ಕಾಂಗ್ರೆಸ್ ಪ್ರಚಾರವೆಂಬುದಾವುದೂ ಇಲ್ಲದ ದೆಸೆಯಿಂದಲೂ ಜನತಾರಂಗವೀಗ ಪೂರ್ತಿ ಖಾಲಿಬಿದ್ದಿದೆ.

ಗಾಂಧಿಜೀಯ 'ಸೈನಿಕರ ಅಥವಾ ಪೋಲೀಸರ ಆವಶ್ಯಕತೆಯೇ ಇಲ್ಲದ ರಾಮರಾಜ್ಯ'ದ ಮಾತು ಹಾಗಿರಲಿ—'ಇದಿರುವಾದಿಗಳನ್ನು ಕಾನೂನಿನ ಬಲದಿಂದಲ್ಲ, ಕಾರ್ಯಬಲದಿಂದ ಗೆಲ್ಲಬೇಕು' ಎಂಬ ಅವರ ಸಾಮಾನ್ಯ ಬೋಧೆ ಕೂಡಾ ಇಂದು ಮನ್ನಿಸಲ್ಪಟ್ಟಿಲ್ಲ.

'ಜನತಾ ಸಂಪರ್ಕ' 'ಜನತೆಯೊಡನೆ ಆತ್ಮೀಯತೆ' ಎಂಬ ಸೂತ್ರಗಳಿಗೀಗ 'ತಮಗೆಬೇಕಾದ ಜನರ ಸಂಪರ್ಕ, ಅವರೊಡನೆ ಆತ್ಮೀಯತೆ' ಎಂಬ ಅರ್ಥ ಮೂಡಿತೋರುತ್ತಿದೆ.

ಬ್ರಿಟಿಷ್ ಆಡಳಿತೆಯ ಕಾಲದಲ್ಲಿದ್ದಂತೆಯೇ ತಮ್ಮ ನೌಕರರ ಪರ್ತನೆಯನ್ನು ಎತ್ತಿಹಿಡಿಯುವ ಪದ್ಧತಿಯು ಇಂದಿನ ಆಡಳಿತೆಯಲ್ಲೂ ಊರ್ಜಿತದಲ್ಲಿದೆಯಾದರೂ, ಆಗಿನವರು ತಮ್ಮ ನೌಕರರ ಕಡೆಗೆ ಪ್ರದರ್ಶಿಸುತ್ತಿದ್ದ ಕಾರ್ಯೋಚಿತ ಮತ್ತು ಸ್ಥಾನೋಚಿತ ಬಿಗುಮಾನವು ಈಗಿನವರಲ್ಲಿ ಕಾಣುತ್ತಿಲ್ಲ.

ಕಾಂಗ್ರೆಸ್ ಸಂಸ್ಥೆಗಳ ಕಾರ್ಯಕರ್ತರಾಗಿರುವವರು, ತಾವು ಸರಕಾರೀ ಅಧಿಕಾರಿಗಳ ಸಲಹೆಗಾರರು ಮತ್ತು ಸರಕಾರೀ ಯಂತ್ರದ ಸಹಾಯಕ ಚಾಲಕರೆಂದು ಭಾವಿಸಿಕೊಂಡು, 'ಸಮಾನಾಧಿಕಾರಿ'ಗಳೆನ್ನಿಸಿದ್ದಾರೆ ಹೊರತು ಜನತೆಯ ನಡುವೆ ಕೆಲಸ ಮಾಡುತ್ತಿಲ್ಲ.

ಒಟ್ಟಿನ ಮೇಲೆ ಇಂದಿನ ಸ್ವಾತಂತ್ರ್ಯವು ಸದ್ಯಕ್ಕೆ ಉಚ್ಚಾಧಿಕಾರಿಗಳಿಂದಾರಂಭಿಸಿ ಸಾಮಾನ್ಯರ ವರೆಗಿನ ಎಲ್ಲರ ಭಾವನೆ, ಶಕ್ತಿ, ಯೋಗ್ಯತೆಗಳ ದುರ್ಭಾಗಗಳನ್ನೇ ಚೇತನಗೊಳಿಸಿದಂತಿದೆ; ಉತ್ತಮ ಭಾಗವು ನಿರ್ಲಕ್ಷಿತನಗೊಳ್ಳುತ್ತಾ ಬರುವ ಲಕ್ಷಣಗಳೇ ಎಲ್ಲೆಲ್ಲೂ ಕಾಣಿಸುತ್ತಿವೆ.

ಸಾಮೂಹಿಕವಾಗಿ, ಸಾರ್ವಜನಿಕದೃಷ್ಟಿಯಿಂದ ನಡೆಯಬೇಕಾದ ಕೆಲಸಗಳಲ್ಲಿ ಹೆಚ್ಚಿನವು ಸಂಬಂಧಿಕ, ವ್ಯಕ್ತಿಗತ ದೃಷ್ಟಿಯಿಂದ ನಡೆಯುತ್ತಿರುವಂತೆ ಕಾಣುತ್ತಿದೆ.

ಗಾಂಧಿಜೀ ಒಮ್ಮೆ ಆಶಿಸಿದ್ದಂತೆ, ಅವರು 125 ವರುಷ ಬಾಳದೇ ಹೋದುದು ಮಹಾಪರಾಧವಾಯಿತೆ !

ಸುವಾಸನೆ ಮತ್ತು ಮಧುರತೆಯಿಂದ
ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Niligiris)

ಮದ್ರಾಸು
ಅಳಿಯಸಂತಾನ ಕಾನೂನು
ಇದರ
ಕನ್ನಡ ಮತ್ತು ಇಂಗ್ಲಿಷ್
ಪ್ರತಿಗಳು ದೊರೆಯುತ್ತವೆ

ವಿವಾಹ ಮತ್ತು ಅದರ ಬಿಡುಗಡೆ, ಅಶನಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತ ವಾರಿಸ್ದಾರಿಕೆ, ಕುಟುಂಬ ಮತ್ತು ಅದರ ರಕ್ಷಣೆ, ವಿಭಾಗ ಮೊದಲಾದ, ಪ್ರತಿಯೊಬ್ಬ ಅಳಿಯ ಸಂತಾನಿಗನಿಗೂ ತಿಳಿದಿರಲೇಬೇಕಾದ ವಿಷಯಗಳಿಂದೊಡಗೂಡಿದೆ.

ಕ್ರಯ 0—8—0. (ಟಪ್ಪಾಲು ಖರ್ಚು ಪ್ರತ್ಯೇಕ)

0-9-0 ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು.

ಸಿಗುವ ಸ್ಥಳ:-
ನವಯುಗ ಪ್ರೆಸ್, ಉಡುಪಿ

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ:—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:- ಧಾರವಾಡ,

THE UNITED KARNATAK INSURANCE COMPANY, LIMITED.

ನೆಹರೂ ವಲ್ಲಭಾಯಿ ಕೆಳಗಿಳಿದು ಬರಬೇಕೆ?

ದಕ್ಷಿಣ ಕಲ್ಕತ್ತದ ಮತದಾರರು, ತಮ್ಮ ಮಾತಿಗೂ ಬೆಲೆಕೊಡದೆ, ಕಾಂಗ್ರೆಸಿಗೆ ಪ್ರಚಂಡ ಸೋಲನ್ನೊದಗಿಸಿಕೊಟ್ಟುದು ನೆಹರು, ವಲ್ಲಭಾಯಿಗಳ ಹೃದಯದಲ್ಲಿ ಭಾವಾಂದೋಲನವೆಬ್ಬಿಸಿದೆ, ಎಂಬುದಕ್ಕೆ ನಿದರ್ಶನಗಳು ದೊರಕಿವೆ. ತಾವು ಅಧಿಕಾರಸ್ಥಾನದಿಂದಿಳಿದು ಜನತೆಯ ನಡುವೆ ಕಾಂಗ್ರೆಸ್ ಪ್ರಚಾರಕ್ಕೆ ತೊಡಗಬೇಕೆಂಬ ಆತುರವು ಪ್ರತ್ಯಪ್ರತ್ಯೇಕವಾಗಿ ಅವರಿಬ್ಬರಲ್ಲೂ ಮೊಳೆತಿರಬಹುದು.

“ದಿಲ್ಲಿ ಮತ್ತು ದೇಶದ ಇತರಕಡೆಗಳ ಸಣ್ಣ ದೊಡ್ಡ ಸಾರ್ವಜನಿಕ ಸಭೆಗಳಲ್ಲಿ ಅಧಿಕಾಧಿಕವಾಗಿ ಭಾಗವಹಿಸುವ ಸಂದರ್ಭವನ್ನು ದೊರಕಿಸಿಕೊಳ್ಳಬೇಕೆಂದು ನನ್ನಿಚ್ಛೆಯಿದೆ; ಹೊಸ ಘಟನೆಯನ್ವಯ 1950ರ ಅಂತ್ಯದ ಮೊದಲು ಚುನಾವಣೆ ನಡೆಸಲಾಗುವದು ಅಸಾಧ್ಯ. ಈ ಮಧ್ಯಾವಧಿಯಲ್ಲೇ ಕಾಂಗ್ರೆಸಿನ, ಕಾಂಗ್ರೆಸ್ ಸರಕಾರಗಳ ಮತ್ತವುಗಳ ಧೋರಣೆ ಕಾರ್ಯಕ್ರಮಗಳ ಕುರಿತು ಜನಮತ ಹೇಗಿದೆಯೆಂಬುದನ್ನು ತಿಳಿದುಕೊಳ್ಳಬೇಕೆಂಬ ಆತುರ ನನಗಿದೆ”—ಎಂದು ಪಂಡಿತ ಜವಾಹಿರಲಾಲರು ದಿಲ್ಲಿಯ ರಾಜಕೀಯ ಸಮ್ಮೇಳನದಲ್ಲಾಡಿದ ಮಾತುಗಳು, ಜನತಾರಂಗಕೊಮ್ಮೆ ಧುಮುಕೋಣವೆಂಬ ಹುಮ್ಮಸ್ಸು ಪಂಡಿತಜೀಯಲ್ಲಿ ಮೂಡಿರಬೇಕೆಂಬ ಅರ್ಥಕೊಡುತ್ತಿವೆ.

ಶರತ್‌ಚಂದ್ರ ಬೋಸ್ ವಿಜಯದ ನಂತರ ಸರ್ದಾರ್ ವಲ್ಲಭಾಯಿಗಳ ಮಾತು ಕೇಳಿಬಂದಿಲ್ಲ. ಆದರೆ ಪೂರ್ಣ ನಿರಾಧಾರವೆನ್ನಲಾಗದಂತಹ ಸುದ್ದಿಯೊಂದು ಒಮ್ಮೆ ಸುಳಿದಾಡಿದ್ದಿತು. ‘ಭಾರತ ಸರಕಾರದ ಗೃಹಸಚಿವ ಸ್ಥಾನಕ್ಕೆ ರಾಜಿಕೊಟ್ಟು, ಕೆಳಗಿಳಿದು ದೇಶದಲ್ಲೆಲ್ಲಾ ಕಾಂಗ್ರೆಸ್ ಪ್ರಚಾರ ನಡೆಸಬೇಕೆಂದು ಸರ್ದಾರ್ ವಲ್ಲಭಾಯಿಗಳು ಯೋಚಿಸಿದ್ದಾರೆ. ಅವರು ಬಿಟ್ಟ ಗೃಹಮಂತ್ರಿ ಸ್ಥಾನಕ್ಕೆ ಬೊಂಬಾಯಿಯ ಶ್ರೀ. ಯಸ್. ಕೆ. ಪಾಟೀಲರು ಬರಬಹುದು’ ಎಂಬುದೇ ಆ ವಾರ್ತೆ.

ಪಂಡಿತ ನೆಹರುಗಳ ಆಶೆಯು ಯಾವ ನಮೂನೆಯದಿದ್ದರೂ ಜನತಾ ಸಂಪರ್ಕ ಸಾಧನೆಯನ್ನವರು ಪ್ರಧಾನ ಮಂತ್ರಿಯಾಗಿದ್ದುಕೊಂಡೇ ಮಾಡಬೇಕಾಗಿ ಬಂದೀತು. ಸರ್ದಾರ್ ವಲ್ಲಭಾಯಿಗಳ ಕುರಿತು ಕೇಳಿಬಂದಿರುವ ಸುದ್ದಿಯಾದರೂ ಸತ್ಯವಾಗುವ ಸಂಭವ ಕಡಿಮೆಯೆನ್ನಬಹುದು. ಈ ಮಟ್ಟಿಗೆ, ನೆಹರೂ ವಲ್ಲಭಾಯಿಗಳಿಬ್ಬರ ಯೋಚನೆಗಳೂ ಒಟ್ಟಿಗೆ ಕಾರ್ಯತಃ ಕಂಡು ಬರುವದಂತೂ ಪೂರ್ಣ ಅಸಾಧ್ಯ.

ಆದರೆ ಕಾಂಗ್ರೆಸ್ ಸಂಸ್ಥೆ ಹಾಗೂ ಕಾಂಗ್ರೆಸಿಗರು ಇಂದು ಇರಬೇಕಾದ ಸ್ಥಿತಿಯಲ್ಲಿಲ್ಲ; ರಾಷ್ಟ್ರದ ಮನೋಗತಿ ಹಿಡಿಯಬೇಕಾದ ಏಕ್ಯವನ್ನು ಹಿಡಿದಿಲ್ಲ; ಈ ತಪ್ಪನ್ನು ಸರಿಗೊಳಿಸಲು ತಾವಿಬ್ಬರಲ್ಲೊಬ್ಬರು, ಬೇರೆಲ್ಲಾ ಹೊಣೆಗಾರಿಕೆಯನ್ನು ಬಿಟ್ಟು ಇಳಿಯಬೇಕಾದ ಕಾಲ ಬಂದಿದೆ—ಎಂದು ನೆಹರೂ ವಲ್ಲಭಾಯಿಗಳಿಗೀಗ ಅನ್ನಿಸಹತ್ತಿದೆ, ಎಂಬ ಸಂಗತಿ ನಿಜ.

ಇದು ಅಗತ್ಯವೆ?

ಆದರೆ ಪಂಡಿತ ನೆಹರುಗಳನ್ನಾಗಲೀ, ಸರ್ದಾರ್ ವಲ್ಲಭಾಯಿಗಳನ್ನಾಗಲೀ ದೇಶವಿಂದು ಕೆಳಕ್ಕೆ ಕರೆಯುತ್ತಿಲ್ಲ. ಅಧಿಕೃತವಾಗಿ ಅಥವಾ ಪ್ರಕಟವಾಗಿ ಅವರು ಆ ಭಾವನೆಯನ್ನು ಹೊರಗೆಡಹಿಲ್ಲವೆಂಬುದು ನಿಜವಾದರೂ, ಅವರ ಅಂತರ್ಯದಲ್ಲದು ಮೂಡಿರುವುದು. ಹೌದಾದರೆ ಅದು ಅಪೇಕ್ಷಣೀಯ ಅಥವಾ ಗೌರವಾರ್ಹ ಬಯಕೆಯಲ್ಲವೆನ್ನಬೇಕಾಗುತ್ತದೆ “ಪರಕೀಯಾಡಳಿತೆಯೆದಿರು ವಹಿಸಿದ ಧೋರಣೆಯನ್ನೇ ಸ್ವಾಡಳಿತೆಯ ಕುರಿತು ವಹಿಸಕೂಡದು.” ಎಂಬ ಮಾತು ಮಿಕ್ಕೆಲ್ಲರಂತೆ ನೆಹರೂ, ವಲ್ಲಭಾಯಿಗಳಿಗೂ ಅನ್ವಯಿಸುತ್ತದೆ. “ನಿನ್ನೇನು ಆಗಬೇಕೆನ್ನುವಿರೋ ಅವೆಲ್ಲವನ್ನೂ ನಿಮ್ಮದೇ ಆಗಿರುವ ಸರಕಾರದಿಂದ, ಅದನ್ನು ಬಲಗೊಳಿಸಿ, ಮಾಡಿಸಿಕೊಳ್ಳಿ” ಎಂದು ಬೇರೆಯವರಿಗೆ ಹೇಳಿದಂತೆಯೇ ಸ್ವತಂತ್ರ ಭಾರತದ ಈ ದ್ವಿಮೂರ್ತಿಗಳಿಗೂ ಹೇಳಬಹುದು. ಆ ಕಾಲದಲ್ಲಿ ಸ್ವಾತಂತ್ರ್ಯ ಸಾಧನೆಗಾಗಿ ಜನತೆಯಲ್ಲಿ ಪ್ರಚಾರ ಮಾಡುವದು ಅನಿವಾರ್ಯವಾಗಿದ್ದಿತು; ಆದರ ಸಾಧನಾ ಸಲಕರಣೆಯೆಂಬುದು ಕೇವಲ ಸಾರ್ವಜನಿಕರೇ ಇದ್ದುದರಿಂದ, ಅದನ್ನು ಚಾಲೂಮಾಡಲು ಅಲ್ಲಿಯೇ ಇರಬೇಕಿದ್ದಿತು. ಆದರೀಗಿನದು ಸ್ವತಂತ್ರಾಧಿಕಾರ. ಈ ಅಧಿಕಾರ ಯಂತ್ರವನ್ನು ಚಾಲು ಮಾಡಿಯೇ ಎಲ್ಲವನ್ನೂ ಸಾಧಿಸಿಕೊಳ್ಳಬಹುದು. ಹಾಗೆ ಚಾಲು ಮಾಡಲು ಕುಳಿತವರೇ ಅದನ್ನು ಬಿಟ್ಟು ಕೆಳಗಿಳಿಯುವಂತಾದರೆ ಆ ಅಧಿಕಾರ ಯಂತ್ರದಿಂದ ಅಪೇಕ್ಷಿತ ಕಾರ್ಯವಾಗುವಂತಿಲ್ಲ ಎಂದಂತೆಯೇ ಸರಿ; ಅಂದರೆ ಸ್ವತಂತ್ರಾಧಿಕಾರ ಸಾಕಷ್ಟು ಪರಿಣಾಮಕಾರಿಯಲ್ಲವೆಂಬ ಆಪಾದನೆ ತಟ್ಟಬಹುದು. ಒಂದೋ—ನೆಹರು, ವಲ್ಲಭಾಯಿಗಳಂಥವರಿಗೆ ಕೂಡಾ ಹಿಡಿಸದ ಆ ಅಧಿಕಾರ ಯಂತ್ರದಲ್ಲಿ ದೋಷವಿರಬೇಕು. ಇಲ್ಲವೇ—ಅಲ್ಲಿಂದೊಮ್ಮೆ ಹೊರಟು ಪ್ರಯತ್ನಿಸಬೇಕೆಂಬ ನೆಹರು, ವಲ್ಲಭಾಯಿಗಳ ಬಯಕೆಯಲ್ಲಿ ದೋಷವಿರಬೇಕು. ಈ ಪೈಕಿ ಎರಡನೆಯದೇ ನಿಜವಾಗಿರಬಹುದು. ಸ್ವಾತಂತ್ರ್ಯ, ಸ್ವಾಡಳಿತೆ ತಪ್ಪೆಂಬ ಸ್ವರ ಇಡೀ ಜಗತ್ತಿನಲ್ಲಿ ಎಲ್ಲಿಯೂ ಏಳುವಂತಹದಲ್ಲ; ಭಾರತದ ಸ್ವಾತಂತ್ರ್ಯವಂತೂ ದೀರ್ಘಾವಧಿಯ ತ್ಯಾಗ, ಕಷ್ಟ ನಷ್ಟ ಸಹನೆಗಳ ನಂತರ ಪಡೆದ ಅತ್ಯಮೂಲ್ಯ ಹಾಗೂ ಅತ್ಯಪೂರ್ವ ಸೊತ್ತು. ಇದು ತಪ್ಪೆಂಬ ಮಾತು ಹಾಗಿರಲಿ, ‘ಇದರಲ್ಲೇನಾದರೂ ಕೊರತೆಯಿದೆಯೆಂದರೂ ‘ನಮ್ಮದು ಪೂರ್ಣ ಸ್ವಾತಂತ್ರ್ಯ’ ಎಂದು ಈ ಧುರೀಣರೇ ಎದೆತಟ್ಟಿ ಹೇಳುತ್ತಾ ಬಂದಿದ್ದ ಮಾತು ಸುಳ್ಳಾದೀತು. ಆ ಯಂತ್ರ ಪರಿಪೂರ್ಣವಿದೆ-ಅದನ್ನು ಯೋಗ್ಯ ರೀತಿಯಿಂದ ಚಾಲೂ ಮಾಡುತ್ತಿದ್ದೇವೆ-ಆದರೆ ಜನತೆ ಇರಬೇಕಾದಂತಿಲ್ಲ, ಅಥವಾ ತಮ್ಮ ಆಡಳಿತೆಯನ್ನು ಸರಿಯಾಗಿ ತಿಳಿದುಕೊಂಡಿಲ್ಲ-ಹೀಗಾಗಿ ಈಗ ತಿದ್ದಲ್ಪಡಬೇಕಾದುದು ಜನತೆಯ ಮನೋವೃತ್ತಿಯಾದ್ದರಿಂದ ಆ ತಿದ್ದುಪಡಿಗಾಗಿ ತಾವಿಳಿಯಬೇಕು-ಎಂಬುದೇ ನೆಹರು, ವಲ್ಲಭಾಯಿಗಳ ಭಾವನೆಯಿರಬೇಕು.

ಜನಮತ ಪರೀಕ್ಷೆ?

ಅಥವಾ ಪಂಡಿತ ನೆಹರುಗಳಂದಂತೆ ತಮ್ಮ ಕುರಿತು ಜನತೆಯ ಭಾವನೆ ಹೇಗಿದೆ ಎಂಬುದನ್ನು ಗೊತ್ತುಹಚ್ಚುವ ಯೋಚನೆಯಿದಾಗಿರಬಹುದೆ? ಇದು ನಿಜಕ್ಕೂ ಆಶ್ಚರ್ಯದ ಸಂಗತಿ. ನೆಹರೂ, ವಲ್ಲಭಾಯಿಗಳಂತಹ ಭಾರತೀಯರ ಆತ್ಮೀಯ ಬಂಧುಗಳಿಗೆ, ತಮ್ಮ ಜನತೆಯ ಮನೋವೃತ್ತಿ ತಿಳಿಯದಿರಲು ಕಾರಣವಿಲ್ಲ; ತಾವು, ತಮ್ಮ ಸಂಸ್ಥೆ, ತಮ್ಮ ಆಡಳಿತೆಯ ಕುರಿತು ನೀವೆನ್ನುವದೇನು, ಎಂದು ಅವರು ಜನತೆಯನ್ನು ಕೇಳುತ್ತಾರಾದರೆ, ಅದು ನಿಜಕ್ಕೂ ಅಧಿಕಪ್ರಸಂಗ! ಅಥವಾ ಜನತೆಯಿಂದ ತಮ್ಮ ‘ಸ್ತುತಿ ಪತ್ರ’ ನಿರ್ಮಿಸಿಟ್ಟುಕೊಳ್ಳುವ ಒಂದು ಚಟ! ವ್ಯಕ್ತಿಶಃ ತಮಗಾಗಿ ಅದು ಅನಗತ್ಯವೆಂಬುದನ್ನವರು ಬಲ್ಲರು; ಆದರೆ ತಮ್ಮ ಪಕ್ಷಕ್ಕಾಗಿ ಇಂತಹ ಸ್ವಸಮರ್ಥನೆ ಅವರಿಗಿಂದು ಬೇಕನ್ನಿಸಿದೆ- ಅಂದ ಮೇಲೆ ನೆಹರೂ, ವಲ್ಲಭಾಯಿಗಳು ಯಾವ ಹೆಸರಿನಿಂದ ಕರೆದರೂ, ಇದು ಅವರ ಪಕ್ಷದ ಪ್ರಚಾರ ಕಾರ್ಯವಷ್ಟೇ ಹೊರತು ಬೇರೇನೂ ಆಗದು. ವ್ಯಕ್ತಿಶಃ ನೆಹರು ವಲ್ಲಭಾಯಿಗಳನ್ನು ರಾಷ್ಟ್ರದ ಅತ್ಯಧಿಕ ಜನತೆಯು ಪ್ರಶ್ನಾತೀತ, ಸಂದೇಹಾತೀತ ಸ್ಥಾನಕ್ಕೇರಿಸಿಟ್ಟುಕೊಂಡಿದೆ. ಸ್ವತಃ ಅವರೂ ಇದಕ್ಕನುಗುಣವಾಗಿ, ಇಂದಿನ ರಾಷ್ಟ್ರಾಧಿನಾಯಕ ಸ್ಥಾನದಲ್ಲಿರುವವರೆಗೂ ಪಕ್ಷಾತೀತರಾಗಿ ನಿಂತುಕೊಳ್ಳಲಿ, ನಿರೀಕ್ಷಕರಾಗಿ ಇದ್ದು ಬಿಡಲಿ. ತಮ್ಮ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಕಾರ್ಯ ಮತ್ತು ಧೋರಣೆಗಳ ಕಡೆಗೆ ಜನಮತ ಹೇಗಿದೆ ಎಂಬುದನ್ನು, ಬೇಕಾದರೆ ಅನಧಿಕೃತವಾಗಿ ಕಾಂಗ್ರೆಸ್ ಸಮಿತಿಗಳ ಮೂಲಕ ಕಂಡು ಹಿಡಿಯಲಿ. ‘ಕೇಂದ್ರ ಸರಕಾರದ ಆಡಳಿತೆಯ ಕುರಿತು ನಿನಗೆ ಪೂರ್ಣ ಸಮ್ಮತಿಯೋ, ಪೂರ್ಣ ಅಸಮ್ಮತಿಯೊ? ಸಮ್ಮತಿಯ ಅಂಶವೆಷ್ಟು, ಅಸಮ್ಮತಿಯ ಅಂಶವೆಷ್ಟು? ಯಾವುದು ಸಮ್ಮತ, ಯಾವುದು ಅಸಮ್ಮತ?’ ಎಂಬ ವಿವರವಾದ ಪ್ರಶ್ನಾಮಾಲಿಕೆಯೊಂದನ್ನು ತಯಾರಿಸಲಿ. ಅದೇ ರೀತಿ ಆಯಾಯ ಪ್ರಾಂತಿಕ ಸರಕಾರಗಳ ಕುರಿತು ಪ್ರತ್ಯೇಕ ಪ್ರಶ್ನಾಮಾಲಿಕೆ ಹೊರಡಲಿ. ಕಾಂಗ್ರೆಸ್ ಸಮಿತಿಗಳು ತಂತಮ್ಮ ಕ್ಷೇತ್ರಗಳಲ್ಲಿ ಈ ಪ್ರಶ್ನಾಮಾಲಿಕೆಗಳಿಗೆ ಉತ್ತರಗಳನ್ನು ಸಂಗ್ರಹಿಸಲಿ. (ಇಲ್ಲಿಯೂ ಬಡವ- ಶ್ರೀಮಂತ, ಸಾಮಾನ್ಯ—ಗಣ್ಯ, ಬೇಕಾದವ- ಬೇಡಾದವ ವ್ಯತ್ಯಾಸ ಮಾತ್ರ ಮಾಡದಿರಲಿ!) ಹಾಗೆ ಸಂಗ್ರಹವಾದ ಜನಮತದಿಂದಲೇ ತಮ್ಮ ಆಡಳಿತೆಗಳ ಕುರಿತು ರಾಷ್ಟ್ರದ ಅಭಿಪ್ರಾಯ ಹೇಗಿದೆ, ಎಂಬುದನ್ನು ನೆಹರು, ವಲ್ಲಭಾಯಿಗಳು ಅರಿತುಕೊಳ್ಳಲಿ. ಇನ್ನು ಕಾಂಗ್ರೆಸ್ ಸಂಸ್ಥೆಯ ಕುರಿತು ಜನಮತ ಹೇಗಿದೆ ಎಂಬುದನ್ನು ಪ್ರತ್ಯೇಕವಾಗಿ ತಿಳಿದುಕೊಳ್ಳುವ ಅಂಶವಿಲ್ಲ. ಅದೊಂದು ರಾಜಕೀಯ ಪಕ್ಷ; ಅದರಲ್ಲಿರುವ ಬಲ ಮತ್ತು ಅದಕ್ಕಿರುವ ಬೆಂಬಲದ ಮೇಲಿಂದಲೇ ಅದರ ಸ್ಥಾನಮಾನವೆಂತಹದೆಂಬುದನ್ನು ಅರಿತುಕೊಂಡಾಯಿತು—ಇದಕ್ಕಿಂತ ಹೆಚ್ಚಿನ ಪರೀಕ್ಷೆಯು ಇನ್ನೊಂದು ಚುನಾವಣೆಯಿಂದ ಗೊತ್ತಾಗಬೇಕಲ್ಲದೆ ಬೇರೆ ಕೃತಕ ವಿಧಾನಗಳಿಂದಲ್ಲ.

ಉತ್ತಮ
—ಉಪಾಹಾರ ಮಂದಿರ
ವೀರ ಭಾರತ ವಿಶ್ರಾಂತಿ ಗೃಹ
(ನ್ಯೂ ಯೂನಿಯನ್ ಮಿಲ್ಸಿನ ಎದುರು)
ಡಿಲಿಸ್ಲೆ ರೋಡು
ಬೊಂಬಾಯಿ 13

ಕುಡುಕುತನ- ಕೆಡುಕುತನವಹುದು
ಆದರೆ
ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಉದ್ಧಾರಕ್ಕಾಗಿ ತಾವು ತೆರಿಗೆ ತೆರಬೇಕಾಯಿತೆಂದು ಮುನಿಯುತ್ತಾರೆ
—ನಾವು ಮರೆಯುತ್ತೇವೆ—
ಏನೆಂದರೆ, ಇಂದು ವಿದೇಶೀ ಮದ್ಯಗಳನ್ನು ಇಲ್ಲಿಗೆ ಆಮದು ಮಾಡುವ ಮೂಲಕ ಪರದೇಶಕ್ಕೆ ತೆರುತ್ತಿರುವ ಮಿಲಿಯಗಟ್ಲೆ ಹಣವು ಇಲ್ಲೇ ಉಳಿಯುವುದೆಂಬುದನ್ನು!
ಮದ್ಯನಿಷೇಧವನ್ನು ಪ್ರೋತ್ಸಾಹಿಸಿರಿ! ತನ್ಮೂಲಕ ದೇಶೀ ಹಣವು ಹೊರಗೆ ಹೋಗದಂತೆ ತಡೆಯಿರಿ.
ಈ ಜಾಹೀರಾತಿನ ಸ್ಥಳ:—
ಕೆನರಾ ಬ್ಯಾಂಕ್ ಲಿಮಿಟೆಡ್
ಇದರ ಸೇವಾದಾನ.

ಅಲ್ಲಿಂದಲೇ ಶುದ್ಧೀಕಾರ್ಯ ಚಾಲು ಮಾಡಿದರೆ ಸಾಕು



ಶುದ್ಧೀಕಾರ ನಡೆಯಲಿ

ಅಂತೂ ಪಂಡಿತನೆಹೆರು, ಸರ್ದಾರ್
ಪಟೇಲ್, ಇವರಿಬ್ಬರ ತ್ಯಾಗಜೀವನ, ನೈತಿ
ಕಶಕ್ತಿ ಮತ್ತು ಮನೋಬಲ, ದೇಶಸೇವಾ
ನಿಷ್ಠೆ, ನಿಷ್ಪಕ್ಷಪಾತತೆಯ ಕುರಿತು ಪ್ರತಿ
ಮಾತಿಲ್ಲ; ಇವರು ಶಿರಸ್ಸಾಗಿರುವ ಕಾಂ
ಗ್ರೆಸ್ ಸರಕಾರಗಳ ಧೋರಣೆ, ಕಾರ್ಯ
ಕ್ರಮಗಳ ಕುರಿತು ಟೀಕಿಸುವಾಗ ಆ ಟೀಕೆ
ಇವರೇ ತಲೆ ಕೊಡದೇಕಾಗಿದೆ ಎಂಬು
ದು ನಿಜ. ಅಂತೆಯೇ ವ್ಯಕ್ತಿಶಃ ಯೋಗ್ಯ
ರಾದ ಇವರ ಸರಕಾರೀ ಚಾಲಕತ್ವದಲ್ಲಿ
ಆಕ್ಷೇಪಿಸುವ ಅಂಶಗಳಿವೆ ಎಂಬುದೂ
ನಿಜವೇ. ಓರ್ವ ವ್ಯಕ್ತಿ, ವ್ಯಕ್ತಿಶಃ ನಿರ್ದೋ
ಷ ಮತ್ತು ಸಶಕ್ತನೆಂದು ಒಪ್ಪಿಕೊಂಡ
ರೋ—ಆ ಮೇಲೆ ಆತ ಆಡಿದ್ದೆಲ್ಲಾ
ಅಮೃತ, ಮಾಡಿದ್ದೆಲ್ಲಾ ಮಹತ್ಸಾಧನೆ
ಎಂಬ ನಂಬಿಕೆ ನಮ್ಮಲ್ಲಿ ಬೇರೂರಿದು ನಿಂ
ತು ಬಿಡುತ್ತದೆ ಸತ್ಯಸ್ಥಿತಿ ಹಾಗಿರುವುದಿಲ್ಲ.
ದೃಷ್ಟಿ ಬೀಳದವರಿಲ್ಲ; ಪೂರ್ಣತೆ ಪಡೆದವ
ರಿಲ್ಲ. ನೆಹರೂ ವಲ್ಲಭಾಯಿಗಳಾದರೂ ಹಾ
ಗೆಯೇ—ಇವರ ಗುರು, ರಾಷ್ಟ್ರಪಿತ, ಗಾಂ
ಧಿಜೀ ಕೂಡಾ ಈ ಮಾತಿಗಪವಾದವಲ್ಲ.
ಅಂದ ಮೇಲೆ ರಾಷ್ಟ್ರದ ಇಂದಿನ ಸ್ಥಿತಿಯ
ಲ್ಲಿ— ಈ ಕಾಲದಲ್ಲಿ— ತಾವು ಹಿಡಿದ ಹಾ
ದಿಯೇ ನವೋದಿತ ಸ್ವತಂತ್ರ ರಾಷ್ಟ್ರದ
ಪ್ರಗತಿ ಮತ್ತು ದೃಢತೆಯ ದೃಷ್ಟಿಯಿಂದ
ಪೂರ್ಣ ಸರಿ ಎಂಬ ನಂಬಿಕೆಯಿಂದಲೇ ನೆ
ಹರೂ ವಲ್ಲಭಾಯಿಗಳು ತಪ್ಪು ಹಾದಿ ಹಿಡಿ
ಯಲೂ ಬಹುದು. ರಾಷ್ಟ್ರದ ಪಾಲಿಗೆ ನಿಜ
ಕ್ಕೂ ದೊಡ್ಡ ಅಪಾಯವಾಗಿರುವಂತಹ
ದೊಂದು ಸಂಗತಿ, ಈ ದ್ವಿನಾಯಕರ ಕಣ್ಣಿಗೆ
ಅಷ್ಟು ದೊಡ್ಡ ಅಪಾಯವಾಗಿ ತೋರದಿರ
ಬಹುದು.— ಯಾವುದು ಅಗಣ್ಯ ಅಪಾಯ
ವೋ ಅದೇ ಅಗಾಧವಾಗಿ ಕಾಣಿಸಿಕೊಳ್ಳ
ಲೂ ಬಹುದು. ಇವರ ಕಣ್ಣಿಗೆ ರಾಷ್ಟ್ರದ
ಪಾಲಿನ ದೊಡ್ಡ ಸಂಕಷ್ಟವಾಗಿ ತೋರುತ್ತಿ
ರುವದರ ದಶಪಾಲು ಅಧಿಕ ಪರಿಮಾಣದ
ಸಂಕಷ್ಟಗಳು ಇವರ ನೋಟದಿಂದಲೇ ಮರೆ
ಯಾಗಿರಬಹುದು; ದಿಲ್ಲಿಯ ಅಧಿಕಾರಪೀಠ
ದಿಂದ ಕಾಣುವಾಗ ನೆಹರೂ ವಲ್ಲಭಾಯಿಗಳಿ
ಗೆ ನೀರಬುಗ್ಗೆಯಂತೆ ತೋರುತ್ತಿರುವು
ದು, ವಸ್ತುತಃ ಜ್ವಾಲಾಮುಖಿಯ ಸ್ಫೋ
ಟವಾಗಿರಬಹುದು. ಹೀಗೆಲ್ಲಾ ಮಾನವೋ
ಚಿತವಾಗಿ ಅವರು ಅಂದಾಜು ತಪ್ಪಬ
ಹುದು; ತೀರ್ಮಾನ ತಪ್ಪಬಹುದು; ಹೀಗೆ ತ
ಪ್ಪಿ ಬಿದ್ದು ಹಾದಿಯೇ ತಪ್ಪಬಹುದು. "ಅ
ದ್ದರಿಂದ ಅವರು ಪ್ರತ್ಯಕ್ಷ ಕೆಳಗಿಳಿದು
ನೋಡುವದೇ ವಾಸಿ" ಎಂಬ ವಾದ ಮಾ
ತ್ರ ಇಲ್ಲಿ ಮುಂದೆ ತರಕೂಡದು ಈ ನಾ
ಯಕರ ಹೃದಯವನ್ನು ಇವರ ಅನು
ಯಾಯೀ ರಾಷ್ಟ್ರ— ರಾಷ್ಟ್ರದ ಹೃದ
ಯವನ್ನು ಈ ನಾಯಕರು— ಇಕ್ಕಡೆಯ
ಸ್ಥಿತಿಗತಿಗಳ ಮೇಲಿಂದ ಎಷ್ಟು ಸಾಧ್ಯ
ವೋ ಅಷ್ಟೂ ಅರಿತುಕೊಂಡಾಗಿದೆ; ಇ
ನ್ನೇನೇ ಮಾಡಿದರೂ ಈ ಮಟ್ಟಿಗೆ ಹೊಸ
ಅನುಭವ ಸಂಪಾದಿಸಿಕೊಳ್ಳುವದಸಾಧ್ಯ.
ರಾಷ್ಟ್ರಹೃದಯದ ಪರಿಚಯ ಹೀಗಿದ್ದರೆ,
ಸಾರ್ವಜನಿಕ ಸ್ಥಿತಿಗತಿಗಳ ಗುರು
ತ್ವಾರ್ಥವನ್ನು ಆಗಿಂದಾಗಲೇ ಮಾಡಿ
ಕೊಳ್ಳಲಾಗುವ ಸಂಬಂಧ ದ್ವಾರಗಳು
ಇದ್ದೇ ಇವೆ. ಈ ದ್ವಾರಗಳ ಬದಲಿಗೆ, ಪ್ರ
ತ್ಯಕ್ಷ ನೆಹರೂ ವಲ್ಲಭಾಯಿಗಳ ಮುಖ
ತೋರಿಬಂದರೆ ಅವು ನಿಜಸ್ಥಿತಿಯ ಪರಿಚ
ಯವನ್ನೆಂದಿಗೂ ಹೀರಿಕೊಳ್ಳುವಂತಿಲ್ಲ;
ಬದಲಿಗೆ ವಸ್ತುಸ್ಥಿತಿಯನ್ನು ಮರೆಮಾಡುವ
ಮೋಸದ ಪರದೆಗಳಂತೆ ಲಕ್ಷಾವಧಿ ಕಂಠಗ
ಳ 'ಜೈಕಾರ'ಗಳಷ್ಟೇ ಹೋದಲ್ಲೆಲ್ಲಾ ಅವ
ರಿಗೆ ಕೇಳಿಬರಬಹುದು. ಇದು ವಸ್ತುಸ್ಥಿ
ತಿಯನ್ನರಿತು ಕೊಳ್ಳುವ ವಿಧಾನವೆ? ಹಾ
ದಿಯನ್ನು ತಪ್ಪಾಗಿ ಗ್ರಹಿಸಿಕೊಂಡ ರಾ
ಷ್ಟ್ರ ಸ್ವಾತಂತ್ರ್ಯ ರಥದ ಈ ಜ್ಯೋತಿಷ್ಟ್ರ
ಗಳು, ಹೋಗಬಾರದ ಹಾದಿಯತ್ತ ಎಳೆ
ಯುತ್ತಿವೆ ಎಂಬ ಆರೋಪವು ನಿಜವೆಂ
ದಾದರೆ, ಅವುಗಳ ಗತಿಯನ್ನತ್ತ ತಿರುಗಿ
ಸಿದ ವಿದ್ಯಮಾನವಾವುದು, ಎಂಬುದನ್ನು
ನೋಡಿದರಾಯಿತು- ಅದು ಅವರೇರಿರುವ
ನೌಕರಶಾಹೀ ಯಂತ್ರ ಮತ್ತು ಅವ
ರನ್ನೇರಿಸಿರುವ ಕಾಂಗ್ರೆಸ್ ಯಂತ್ರ ದೋ
ಷವಿದ್ದರೆ ಇಲ್ಲಿರಬೇಕು, ತಿದ್ದಿ ಕೊ
ಳ್ಳುವ ಅಂಶವಿರುವದಾದರೆ ಇದಿಲ್ಲಿಯೇ.
ಈ ಯಂತ್ರಗಳ ಪೈಕಿ ನೌಕರಶಾಹೀ
ಯಂತ್ರವು ಮೊದಲಿನದೇ- ಅದು ದೋ
ಷಯುಕ್ತವಾದುದೆಂದು ಆ ಕಾಲದಿಂದ
ಲೂ ಸಾರಲಾಗಿತ್ತು; ಹಾಗೆ ಸಾರಿದವರಲ್ಲಿ
ನೆಹರೂ, ವಲ್ಲಭಾಯಿಗಳು ಗಣ್ಯರು; ಎರ
ಡನೆಯ ಕಾಂಗ್ರೆಸ್ ಯಂತ್ರದಲ್ಲಾದ
ರೋ ಈಗ ಅಲ್ಲಲ್ಲಿ ಬಿರುಕುಗಳು ಬಿದ್ದಿರು
ವುದೂ, ಅದರ ಸರಾಗ ಚಲನೆಯಿಲ್ಲದೆ ಗ
ಡಬಡಾಟವೆದ್ದಿರುವುದೂ ಎದ್ದು ತೋರು
ತ್ತಿರುವ ವಿಷಯ. ನೆಹರೂ ವಲ್ಲಭಾಯಿ
ಗಳೀಗ ಮನಸ್ಸು ಕೊಡಬೇಕಾದುದು ಇ
ವೆರಡು ಯಂತ್ರಗಳ ದುರಸ್ತಿಯ ಕಡೆಗೆಂ
ಬುದು ಸ್ಪಷ್ಟವಲ್ಲವೆ? ಎರಡಂಲ್ಲಿರುವುದೂ
ಇವರಿಬ್ಬರ ಅಧಿಕಾರ, ಎರಡಕ್ಕೂ ಮಾನ್ಯ
ವಾಗುವದು ಇವರಿಬ್ಬರ ಅಭಿಪ್ರಾಯ;
ಎರಡನ್ನೂ ಒಳಗಡೆಯಿಂದ ದುರಸ್ತಿ ಪಡಿ
ಸುವುದಕ್ಕೆ ನೆಹರೂ ವಲ್ಲಭಾಯಿಗಳು ಈಗ
ಇರುವ ಸ್ಥಾನವೇ ಅತ್ಯನು
ಕೂಲ; ಆ ಸ್ಥಾನವನ್ನು ಬಿಟ್ಟು ಅವರು
ಕೆಳಗಿಳಿಯಲಿಚ್ಛಿಸುತ್ತಾರಾದರೆ, ಅದು ಈ
ಯಂತ್ರಗಳ ದುರಸ್ತಿಗಾಗಿ ಅಲ್ಲ—ಅವು
ಹಾಳು ಬಿದ್ದಿವೆ ಎಂದು ದೂರುವವರ
ಬಾಯಿ ಮುಚ್ಚಿಸುವದಕ್ಕಾಗಿ. ಇದು ಮಾ
ತ್ರ ನೆಹರೂ ವಲ್ಲಭಾಯಿಗಳಿಗೆ ಹೇಳಿ
ಸಿದ್ದಲ್ಲ!

ಇಷ್ಟನ್ನರಿತುಕೊಳ್ಳಲಿ!

ಆದ್ದರಿಂದ ನೆಹರೂ ವಲ್ಲಭಾಯಿಗಳೀಗ
ತಾವು ತಪ್ಪು ಸ್ಥಾನದಲ್ಲಿದ್ದೇವೆ, ಎಂದು
ಭಾವಿಸಿಕೊಳ್ಳುವ ಬದಲಿಗೆ ತಾವಿರುವಲ್ಲಿ
ತಪ್ಪುಗಳಿವೆ ಎಂದಷ್ಟೆ ಸ್ಪಷ್ಟವಾಗಿ ನೆನಸಿ
ಕೊಳ್ಳಬೇಕು; ಮತ್ತಾ ತಪ್ಪುಗಳ ನಿವಾ
ರಣೆಗೆ ವಿಶೇಷ ಲಕ್ಷ್ಯಕೊಡಬೇಕು.

ಈಗ ಕಾಂಗ್ರೆಸಿನ ಮೇಲೆ, ಕಾಂಗ್ರೆಸ್
ಸರಕಾರಗಳ ಮೇಲೆ ಕೇಳಿಬರುತ್ತಿರುವ
ಟೀಕೆ ದೂಷಣೆಗಳೆಲ್ಲಾವೂ ತಮಗಿದಿ
ರುಬಿದ್ದ ಖಾಹಾಖಾಡಿ ವಿರೋಧ ಅಥವಾ
ಖಂಡನೆಯಾಗಿರದೆ, ತಮ್ಮೆಡೆಗೆ ಬಂದಿ
ರುವ ದೂರುಗಳೆಂದು ಗಣಿಸಿ, ಅವುಗಳನ್ನು
ನಿರ್ವಿಕಾರ ಹಾಗೂ ದೃಢಚಿತ್ತದಿಂದ ಪ
ರಾಮರ್ಶಿಸಿ, ಕೂಡಲೇ ಶಮನೋಪಾಯ
ಗಳನ್ನು ಕೈಕೊಳ್ಳಬೇಕು.

ರಾಷ್ಟ್ರದ ದೊಡ್ಡ ದೊಡ್ಡ ಉದ್ದಿಮೆ
ಗಳು, ಮತ್ತು ಸಂಘದ್ದುಗಳು ರಾಷ್ಟ್ರದ
ಆಯಕಟ್ಟಿನ ಪ್ರಾಮುಖ್ಯಾಂಗಗಳೆಂಬು
ದು ನಿಜವಾದರೂ, ರಾಷ್ಟ್ರದ ಜೀವಾಳ
ವೆಂದರೆ ಜನತೆಯೆಂಬುದನ್ನು ಗ್ರಹಿಸಿ
ಕೊಂಡು, ಈಗ ಈ ಪ್ರಾಣವು ನಿಸ್ತೇಜನ
ಗೊಳ್ಳುತ್ತಾ ಬರುತ್ತಿದೆ ಎಂಬುದನ್ನು ತಿಳಿ
ದಿರಬೇಕು. ಈ ಒಂದನೇ, ಎರಡನೇ
ಸ್ಥಾನಗಳನ್ನು ತಾವು ತಮ್ಮ ಕಾರ್ಯಕಲಾ
ಪಗಳ ಮಟ್ಟಿಗೆ ಹಿಂದು-ಮುಂದಾಗಿ ಗಣಿ
ಸಿಲ್ಲವೇ ಎಂಬುದನ್ನು ಲಕ್ಷ್ಯಿಸಬೇಕು.

ಆಹಾರಾಭಾವ ಮತ್ತು ನಿತ್ಯ ಜೀವನದ
ವೆಚ್ಚಾಧಿಕ್ಯಗಳಿಂದ ಇಂದು ಜನಸಾಮಾ
ನ್ಯರು "ಸಂಕಟದಾಯಿ ಸ್ವಾತಂತ್ರ್ಯ"ದ
ಕಹಿ ಅನುಭವ ಪಡೆಯುತ್ತಿದ್ದಾರೆ—
ಸ್ವಾತಂತ್ರ್ಯ ಸಂಪಾದನೆಯ ಮೊ
ದಲು ಸ್ವತಃ ತಾವೇ ಬಿಡಿಸಿ ತೋರಿಸಿದ್ದ
ಸ್ವಾತಂತ್ರ್ಯದ ರಮ್ಯಚಿತ್ರವು ಹೃದಯದ
ಲ್ಲಿ ಕೆತ್ತಲ್ಪಟ್ಟಿರುವ ಜನತೆಯು ಅದರೊಂ
ದಿಗೆ ಈ ಸಾಕ್ಷಾತ್ ಸ್ವರೂಪವನ್ನು
ಹೋಲಿಸಿ ಇಂದು ಕೊರಗುತ್ತಿದ್ದಾರೆ
ಎಂಬುದನ್ನು ನಾಯಕರು ತಿಳಿದಿರಬೇಕು
ಅಪಕ್ವ ವ ಗಾಲಕಾರಣ ಕಾಲಸ್ಥಿತಿಯೆಂಬು
ದು ನಿಜವಾದರೂ, ಹಿಂದಿನ ಕಾಲಸ್ಥಿತಿಗ
ಳೊಡನೆ ಕಾಂಗ್ರೆಸು ಹೋರಾಡಿದ್ದಷ್ಟು ರ
ಭಸದಿಂದ ಇಂದಿನ ಈ 'ಕಾಲಸ್ಥಿತಿ'ಯೊಡ
ನದು ಹೋರಾಡುತ್ತಿಲ್ಲವೆಂಬ ವೇದನೆ ಜ
ನತೆಗಿದೆಯೆಂಬುದನ್ನು ಗ್ರಹಿಸಿಕೊಂಡ,
ಅದು ಸರಿಯಾಗಿಲ್ಲವೇ, ಎಂದು ತಮ್ಮ
ಮನಸ್ಸಾಕ್ಷಿಯನ್ನು ತಾವೇ ಪ್ರಶ್ನಿಸಿಕೊಂ
ಡು ಜನತೆಯ ಈ ಎದೆನೋವು ನಿವಾರಣೆ
ಗಾಗಿ ಪ್ರಥಮತಃ ಪ್ರಯತ್ನಿಸಬೇಕು.

ಎಲ್ಲವೂ ಅವಸರದಿಂದಾಗಬೇಕಾದ
ಪ್ರಾಮುಖ್ಯ ವಿಷಯಗಳೇ-ಜಾತೀಯ
ಗೊಂದಲಗಳ ನಿವಾರಣೆ, ನಿರಾಶ್ರಿತರ ರ
ಕ್ಷಣಾ ವ್ಯವಸ್ಥೆ, ಕೇಂದ್ರದೊಂದಿಗೆ ಆಶ್ರಿತ
ರಾಜ್ಯಗಳ ಜೋಡಣೆ, ಈ ಮಹತ್ಕಾರ್ಯ
ಗಳು ಚಿರಿತಾರ್ಹವಾದುವು. ಆದರೆ ಇವೆ
ಲ್ಲವುಗಳ ಜುವಾಬ್ದಾರಿ ಪ್ರಾಮುಖ್ಯತೆಯಿರುವ
ಜನಸಾಮಾನ್ಯರ ನಿತ್ಯ ಜೀವನಸ್ಥಿತಿ ಸು
ಧಾರಣೆ ಮತ್ತು ಆರ್ಥಿಕ ಅಸ್ತವ್ಯಸ್ತತೆಯ
ನಿವಾರಣೆಯ ಕಡೆಗೆ ಅಷ್ಟೇ ಲಕ್ಷ್ಯಕೊ
ಟ್ಟು ಅಷ್ಟೇ ರಭಸದಿಂದ ಕಾರ್ಯವೇಕೆ
ನಡೆದಿಲ್ಲವೆಂಬುದೇ ಜನತೆಯ ನ್ಯಾಯ
ವಾದ ದೂರೆಂದು ಈ ನಾಯಕರು ತಿಳಿದಿ
ರಬೇಕು.

ಈಗ ಅಸಾಮಾನ್ಯ ಆಕಸ್ಮಿಕ ಮರಂತ
ಗಳು—ಸ್ವಾತಂತ್ರ್ಯೋತ್ತರದ ಮಹಾ ಗೊಂ
ದಲಗಳು— ಬಹುಮಟ್ಟಿಗೆ ನಿಂತು ಹೋಗಿ
ವೆ. ನೆಹರೂ, ವಲ್ಲಭಾಯಿಗಳಂಥವರು,
ತಾವಿನ್ನು ಅಧಿಕಾರರಂಗ ಬಿಟ್ಟು ಜನತಾ
ರಂಗಕ್ಕಿಳಿದರೂ ಹಾನಿಯಿಲ್ಲವೆಂದು ಭರ
ವಸೆಪಡುವಷ್ಟು ಅನುಕೂಲಸ್ಥಿತಿಯುಂ
ಟಾಗಿದೆ, ಈ ಪ್ರಶಾಂತ ವಾತಾವರಣದಲ್ಲಿ
ಜನತೆಯ ಲಕ್ಷ್ಯವನ್ನೆಳೆಯಬಲ್ಲ ನವನೂ
ತನ ವಿಷಯಗಳಾವುವೂ ಇಲ್ಲದಿರುವಾಗ,
ಬಾಕಿ ಬಿದ್ದಿರುವ ತಮ್ಮ ಸಂಕಷ್ಟ ನಿವಾರ
ಣಾ ಕಾರ್ಯದ ಕಡೆಗೆ ಜನತೆಯ ಸರ್ವ
ಲಕ್ಷ್ಯ ಬೀಳುವುದೂ, ಅದಕ್ಕಾಗಿ ಅವರು
ಕಾಂಗ್ರೆಸ್ ಸರಕಾರಗಳನ್ನು ಕೆಣಕಿ ಕೇ
ಳುವುದೂ ಸಹಜವಲ್ಲವೆ? ಈ ಸಹಜ ಕಾ
ರ್ಯದತ್ತ ತಾವು ಸರ್ವ ಲಕ್ಷ್ಯ
ಹರಿಯಿಸತಕ್ಕದ್ದೆಂದು ನಾಯಕರು ದೃಢ
ಶಪಥ ತೊಡಬೇಕು

'ಸ್ವಾತಂತ್ರ್ಯದ ರಕ್ಷಣೆ ಮತ್ತು ಭದ್ರತ
ಗಾಗಿ' ಈಗ ನಡೆದಿರುವ ಭಂಡವಾಳಶಾ
ಹೀ ಉದ್ದಿಮೇದಾರರ ಪ್ರೋತ್ಸಾಹ, ವಿರುದ್ಧ
ಸ್ವರಗಳ ದಮನ, ಇತ್ಯಾದಿಗಳು ಒದಗಿಸುವ
ರಕ್ಷಣಾ ಮತ್ತು ಭದ್ರತೆಗಿಂತಲೂ ಜನಸಾ
ಮಾನ್ಯರ ತೃಪ್ತಿ ಮತ್ತು ಉತ್ಸಾಹದಿಂದ
ತಿರುಳುಗೂಡಿ ಬರುವ ಸುರಕ್ಷಿತತೆ ಮತ್ತು
ದೃಢತೆಯೇ ಹೆಚ್ಚಿನದೆಂಬುದನ್ನು ನಾಯ
ಕರೇಕೆ ಕಾರ್ಯತಃ ಮನ್ನಿಸಬಾರದು?

ಜನತೆಯ ಅಜ್ಞಾನ ಮ
ತ್ತು ಆಪತ್ತು ನಿವಾರಣೆಗಾಗಿ
ಜನತಾ ರಂಗದಲ್ಲೇ ಕೆಲಸಮಾಡುವ ಕ
ಠಿಣ ನಿಯಮಗಳನ್ನು ಕಾಂಗ್ರೆಸ್ ಸಮಿತಿ
ಗಳಿಗೆ ಹಾಕಿಕೊಟ್ಟು ಈ ಮಟ್ಟಿಗೆ ಅವು
ಜನತೆಗೂ ಸರಕಾರಗಳಿಗೂ ಮಾಧ್ಯಮ
ವಾಗಿ ನಿಲ್ಲುವಂತೇಕೆ ಮಾಡಬಾರದು?

ಬದಲಿಗೆ ರಾಷ್ಟ್ರನಾಯಕರು ತಮ್ಮ
ಅಧಿಕಾರ ಸ್ಥಾನಗಳಿಂದ ಚಲಿಸಿ 'ದೂರು
ದೂಷಣೆಗಳ' ಶಮನಕ್ಕೆಂದು ಹೊರಟರೆ,
ಕೇಂದ್ರಾಧಿಕಾರದ ಮೇಲೆ ಈ ವರೆಗೆ ಜನ
ತೆಗಿರುವ ವಿಶ್ವಾಸಕ್ಕೆ ಧಕ್ಕೆ ಬಿದ್ದೀತು;
ನಿಜ ಕರ್ತವ್ಯದಿಂದ ನುಣುಚಿಕೊಂಡರೆಂಬ
ಅಪವಾದ ಈ ನಾಯಕರಿಗೂ ತಟ್ಟೀತು

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಮದ್ರಾಸಿನ ಆರು ಮಂದಿ ಮಂತ್ರಿಗಳು ಮತ್ತಿತರ ಕೆಲವು ಮಂದಿ ಕಾಂಗ್ರೆಸಿಗರ ಮೇಲೆ, ಇದಿರುವಾದಿ ಒಳ ಪಂಗಡದ ಕಾಂಗ್ರೆಸ್ ಎಂ. ಎಲ್. ಎ.,ಗಳು ಕೆಲವು ಆಪಾದನೆಗಳನ್ನು ಹೊರಿಸಿ ಕಾಂಗ್ರೆಸ್ ಅಧ್ಯಕ್ಷರಿಗೆ ದೂರು ಕೊಟ್ಟದ್ದಂತೆ, ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವ್ರೋ ಮದ್ರಾಸಿಗೆ ಬಂದು ಅಗತ್ಯವುಳ್ಳ ವಿಚಾರಣೆ ನಡಸಿ ಮರಳಿ ಹೋಗಿದ್ದಾರಷ್ಟೆ? ಇನ್ನವರು ವರದಿಯನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೊಪ್ಪಿಸಲಿದ್ದಾರೆ; ಮುಂದೇನು, ಎಂಬುದನ್ನು ಕಾಂಗ್ರೆಸ್ ಅಧಿನಾಯಕ ಮಂಡಲಿಯೇ ನಿರ್ಧರಿಸಲಿದೆ. ಆದ್ದರಿಂದ ಈ ಆರೋಪ-ಪ್ರತ್ಯಾರೋಪ, ಇವುಗಳೊಳಗಿನ ಸತ್ಯಾಸತ್ಯ, ನ್ಯಾಯಾನ್ಯಾಯಗಳ ವಿಮರ್ಶೆ ಇಲ್ಲಿ ಅನಗತ್ಯ. ಆದರೆ ಈ ಸಂಬಂಧವಾಗಿ ನಡೆದಿರುವ ಗದ್ದಲವೀಗ ಯಾವುದನ್ನೂ ಮರೆಮಾಡಲಾಗದಷ್ಟು ಬೆಳೆದು ಹೋಗಿರುವುದಂತೂ ಸರ್ವವಿದಿತ. ಮದ್ರಾಸಿನ ಕಾಂಗ್ರೆಸ್ ವಾತಾವರಣವು ಕೊಳಸು ನಾರುತ್ತಿರುವುದೊಂದನ್ನಲ್ಲದೆ ಬೇರಾವುದನ್ನೂ ಇದು ಸೂಚಿಸುತ್ತಿಲ್ಲ. ಹೀಗೆ ತಾವೊಳಯಿಯೊಳಗಡೆ ಜಗಳಾಡಿಕೊಳ್ಳುತ್ತಿರುವವರು— ಕಾರ್ಯರಂಗವನ್ನೇ ಕಚ್ಚಾಟದ ಕಣವಾಗಿ ಮಾಡಿಕೊಂಡಿರುವವರು— ಇವರು, ಇಂಥವರು, ನಮ್ಮ ಪ್ರತಿನಿಧಿಗಳು! ಇಂಥ ಮನೋವೃತ್ತಿಯನ್ನು ಅಳೆದ ಮಾನದಿಂದಲೇ— ಇವರನ್ನಾರಿಸಿ ಕಳುಹಿದ್ದು, ಇವರೀಗ ಮಾಡುವುದೆಲ್ಲಾ ಮಾನ್ಯವೆಂಬಂತಿರುವ, ಮದ್ರಾಸ್ ಪ್ರಾಂತ್ಯದ ಜನರು ತಮ್ಮ ಮನೋವೃತ್ತಿಯನ್ನೂ ಸ್ಪಷ್ಟಪಡಿಸಿಕೊಳ್ಳಲಿಕ್ಕಿದೆ. ಮದ್ರಾಸಿನಲ್ಲಾಗುತ್ತಿರುವ ಅಪಮಾನ, ಅವಹೇಳನ, ಅನಶಾಸನ, ಎಲ್ಲಕ್ಕೂ ತಾವು ಹೊಣೆಗಾರರೆಂದು ಜನತೆಯರಿಯಬೇಕು; ಈ ಸ್ಥಿತಿಗಾಗಿ ಲಜ್ಜಿಸಬೇಕು.

ಆಪಾದನಾ ಚರಿತ್ರೆ

ಓಮಂದೂರು ಮಂಡಲಿಯಿದ್ದಾಗ, ಅದರ ಆರು ಮಂದಿ ಮಂತ್ರಿಗಳ ಮೇಲೆ ಅಧಿಕಾರ ದುರ್ವಿನಿಯೋಗದ ವಿವಿಧಾರೋಪಗಳನ್ನು ಹೊರಿಸಿ ಶ್ರೀಗಳಾದ ಕೆ. ಆರ್. ಕಾರಂತ, ಟಿ. ವಿಶ್ವನಾಥನ್, ಎ. ಕಾಳೇಶ್ವರ ರಾವ್ ಮೊದಲಾದ ಎಮ್. ಎಲ್. ಎ. ಗಳು ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದರಿಗೆ ದೂರನ್ನೊಪ್ಪಿಸಿದ್ದರು. ಈ ಆಪಾದನಾ ಪತ್ರವು ಅಧ್ಯಕ್ಷ ರಾಜೇಂದ್ರ ಪ್ರಸಾದರಿಗೆ 1948ನೇ ಏಪ್ರಿಲ್ 26ರಲ್ಲಿ ಬೊಂಬಾಯಿಯಲ್ಲಿ ಒಪ್ಪಿಸಲ್ಪಟ್ಟಾಗ, ಅಧ್ಯಕ್ಷರು ಸುಮಾರು ಒಂದು ತಾಸಿನ ತನಕ ಆ ದೂರು ಕೊಟ್ಟ ಸದಸ್ಯರ ನಿವೇದನೆಗಳನ್ನೆಲ್ಲಾ ಮುಖತಃ ಕೇಳಿದ್ದರೆಂದು ತಿಳಿದು ಬರುತ್ತದೆ. ಆ ಮೇಲೆ ಅಧ್ಯಕ್ಷ ಪ್ರಸಾದರು ಆರೋಪಗಳಿಗೊಳಗಾದ ಮದ್ರಾಸ್ ಮಂತ್ರಿಗಳಿಂದ ಆ ಕುರಿತು ಉದಾಹರಣೆ ಕೇಳಿದ್ದರು; ಮಂತ್ರಿಗಳು ಅದನ್ನು ಕೊಟ್ಟಿದ್ದರು. ಇಷ್ಟಾದ ಮೇಲೆ ಇನ್ನಾಕುರಿತು ಮಾಡಬೇಕಾದ ಕೆಲಸವಿಲ್ಲವೆಂಬಂತೆ ಬಾಬು ರಾಜೇಂದ್ರ ಪ್ರಸಾದರು ಹೆಜ್ಜೆ ಮುಂದಿಟ್ಟಿರಲಿಲ್ಲ. ಆದರೆ ದೂರು ಕೊಟ್ಟ ಸದಸ್ಯರು, ಆ ಕುರಿತು ತನಿಖೆ ನಡೆಯಲೇಬೇಕೆಂದು ಮೇಲಿಂದ ಮೇಲೆ ಒತ್ತಾಯಪೂರ್ವಕ ಕೇಳುತ್ತಾ ಬಂದರು; ಬಾಬು ರಾಜೇಂದ್ರ ಪ್ರಸಾದರ ಅವಧಿ ಮುಗಿದು ಡಾ। ಪಟ್ಟಾಭಿಗಳ ಕಾಂಗ್ರೆಸ್ ಅಧ್ಯಕ್ಷತೆ ಬಂತು:— ವಿಚಾರಣೆಗಾಗಿ ದೂರಿತ್ತವರ ಆಗ್ರಹವಿದ್ದೇ ಇತ್ತು. “ನಮ್ಮ ಮೂಲ ದೂರು ಹೋದನಂತರದ ಒಂದು ವರುಷಕ್ಕೂ ಮಿಕ್ಕಿದ ಅವಧಿಯ ಬೇರೆ ಹಲವು ಆಪಾದನೆಗಳೂ ಇವೆ; ನ್ಯಾಯಾಧೀಶ ಮಂಡಲಿಯೊಂದನ್ನು ವಿಚಾರಣೆಗೆ ನೇಮಿಸಲಿ; ಅದರ ಮುಂದೆ ನಾನೆಲ್ಲಾ ಸಾಕ್ಷ್ಯ ಪುರಾವೆಗಳನ್ನೂ ಹಾಜರುಪಡಿಸುತ್ತೇನೆ” ಎಂದು ಆಪಾದನಾ ಪಟ್ಟಿ ಮುಂದಿಟ್ಟವರ ವಾದ. ಅಧ್ಯಕ್ಷ ಡಾ। ಪಟ್ಟಾಭಿಗಳು ಕಾಂಗ್ರೆಸ್ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ. ಶಂಕರ ರಾವ್ ದೇವ್ರೋ, ಅವರನ್ನು ವಿಚಾರಣೆಗಾಗಿ ಮದ್ರಾಸಿಗೆ ಬೀಳ್ಕೊಟ್ಟರ. “ಅವರ ವರದಿಯನ್ನು ಪರಿಶೀಲಿಸಿದ ಮೇಲೆ ಆರೋಪಿತರನ್ನು ವಿಚಾರಣೆಗೊಳಪಡಿಸುವದು ಅಗತ್ಯವೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ತೋರಿದರೆ ಹಾಗೆಯೇ ಮಾಡಲಾಗುವದು” ಎಂದರು. ಶ್ರೀ ದೇವ್ರೋ ಮದ್ರಾಸಿಗೆ ಬಂದು ದೂರು ಕೊಟ್ಟವರನ್ನೂ, ದೂರಿಗೊಳಗಾದವರನ್ನೂ, ತಮಗಗತ್ಯವೆಂದು ತೋರಿದ ಇತರರನ್ನೂ ಕರೆಯಿಸಿ ಹೇಳಿಕೆಗಳನ್ನು ಪಡಕೊಂಡರು. ಸರಕಾರದಿಂದ ಅಗತ್ಯವುಳ್ಳ ದಾಖಲೆಗಳನ್ನೂ ಫೈಲುಗಳನ್ನೂ ತರಿಸಿಕೊಂಡು ತನಿಖೆ ನಡೆಯಿಸಿದರು. ಆದರೆ ಈ ವಿಚಾರಣೆಯು, ದೂರೊಪ್ಪಿಸಿದ ಶ್ರೀ ಕಾರಂತರೇ ಮೊದಲಾದವರಿಗೆ ಸಮಾಧಾನಕರವಾಗಲಿಲ್ಲ. ತಮ್ಮ ಆಪಾದನಾಪಟ್ಟಿಗೆ ಆಪಾದಿತ ಮಂತ್ರಿಗಳು ಕೊಟ್ಟಿದ್ದ ‘ಉತ್ತರ’ಗಳ ಪ್ರತಿಯನ್ನು ತಮಗೆ ಕೊಡಬೇಕು-ಅದನ್ನು ನೋಡಿಕೊಳ್ಳದೆ ಈ ವಿಚಾರಣೆಯಲ್ಲಿ ಭಾಗಿಗಳಾಗುವದು ತಮಗಸಾಧ್ಯವೆಂದು ಅವರ ವಾದವಿದ್ದರೆ, ‘ಅದನ್ನು ಕಡೆಗೆ ನೋಡೋಣ; ಪ್ರಥಮತಃ ನಿಮ್ಮ ಆರೋಪಗಳನ್ನೆಲ್ಲಾ ಸರಿಯಾಗಿ ಖಚಿತಪಡಿಸಿಕೊಡಿ’ ಎಂದು ಶ್ರೀ. ದೇವ್ರೋ ಹೇಳಿದ್ದರು. ಈ ಕುರಿತು ದೇವ್ರೋ-ಕಾರಂತರೊಳಗೆ ಪತ್ರ ಮೂಲಕ ನಡೆದ ತರ್ಕವು ಕೊನೆಗೆ ಪರಸ್ಪರ ದೂಷಣೆಯಾಗಿ ಮಾರ್ಪಟ್ಟುದು ಶೋಚನೀಯ.

ಪತ್ರ ವ್ಯವಹಾರ ಸಾರ

ಶ್ರೀಗಳಾದ ದೇವ್ರೋ- ಕಾರಂತ್ ಪತ್ರ ವ್ಯವಹಾರದ ತಿರುಳು ಹೀಗಿದೆ:-

“ನಾನು ವಿಚಾರಣೆಗಾಗಿ ಮದ್ರಾಸಿಗೆ ಬರುತ್ತೇನೆ; ನಿಮ್ಮೊಡನೆ ಆ ಕುರಿತು ಮಾತಾಡಲಿಚ್ಛಿಸುತ್ತೇನೆ” ಎಂದು ನವಡಿಲ್ಲಿಯಿಂದ ಮೇ ತಾ. 31ಕ್ಕೆ ಶ್ರೀ. ದೇವ್ರೋ ಕಾರಂತರಿಗೆ ಬರೆದರು. “ಆಗಲಿ; ಮಂತ್ರಿಗಳು ಕೊಟ್ಟಿದ್ದ ಎಲ್ಲಾ ಉತ್ತರದ ಪ್ರತಿಗಳನ್ನೂ ದಯವಿಟ್ಟು ನನಗೆ ಕೊಡುವಿರಾ?” ಎಂದು ಜೂನ್ 1ರಂದು ಶ್ರೀ. ಕಾರಂತರು ಶ್ರೀ ದೇವ್ರೋರಿಗೆ ಬರೆದರು.

ಮದ್ರಾಸಿನಲ್ಲಿ ಶ್ರೀ ಕಾರಂತ, ಶ್ರೀ ಟಿ. ವಿಶ್ವನಾಥನರೊಡನೆ ಮುಖಾಮುಖಿ ಮಾತಾಡಿದ ಮೇಲೆ ಪತ್ರಮೂಲಕ ಶ್ರೀ ದೇವ್ರೋ ಜೂನ್ 15ರಲ್ಲಿ ಶ್ರೀ ಕಾರಂತರಿಗೆ ತಿಳಿಸಿದರು:-“ನನ್ನದಿದು ಕೇವಲ ಪ್ರಾಥಮಿಕ ರೂಪದ ವಿಚಾರಣೆ. ಆದ್ದರಿಂದ ಈ ಕುರಿತು ಮುಂದಿನ ಕಾರ್ಯಕ್ರಮ ಅಗತ್ಯವೋ ಅಲ್ಲವೋ ಎಂಬ ನಿರ್ಧಾರಕ್ಕೆ ನಾನು ಬರಬೇಕಾದರೆ ಆರೋಪಣೆಗಳನ್ನು ಮುಂದಿಟ್ಟಿರುವ ನೀವು, ನಿಮ್ಮೊಡನಿರುವ ಎಲ್ಲಾ ಸಾಕ್ಷ್ಯ ರುಜುವಾತುಗಳ ಮೂಲಕ ಅವನ್ನು ಸಿದ್ಧಮಾಡಿಕೊಡಬೇಕು. ನಿಮ್ಮ ದೂರುಗಳನ್ನು ಪಡೆದ ಬಾಬು ರಾಜೇಂದ್ರ ಪ್ರಸಾದರು ಅವುಗಳನ್ನು ಮಾಮೂಲುವಾಗಿ ಪಡೆದು, ಉದಾಹರಣೆ ಕೇಳಿ ಬಿಟ್ಟುಬಿಟ್ಟಿದ್ದರು ಹೊರತು ವಿಚಾರಣಾರ್ಹವೆಂದು ಗಣಿಸಿದ್ದಿಲ್ಲ. ಆದ್ದರಿಂದ ಈಗ ಆಪಾದನೆಗಳ ಸಮರ್ಥನೆಗಗತ್ಯವುಳ್ಳ ರುಜುವಾತುಗಳನ್ನು ಕೊಡುವ ಕೆಲಸ ನಿಮ್ಮದು”.

ಈ ಪರಚಾಟದಿಂದ

ಜೂನ್ 16ರಲ್ಲಿ ಶ್ರೀ ಕಾರಂತರು ಶ್ರೀ ದೇವ್ರೋರಿಗೆ ಬರೆದರು:- “ತಾ 14ರಲ್ಲಿ ನಮ್ಮೊಡನೆ ನೀವು ನಡೆಸಿದ ಪ್ರಥಮ ಮಾತುಕತೆಯ ವೇಳೆ ಮಂತ್ರಿಗಳ ಉತ್ತರಗಳ ನಕಲನ್ನು ಕೊಡಲೊಪ್ಪಿದ್ದಿರಿ; ಆ ವೇಳೆ ನೀವು ಕಾಂಗ್ರೆಸ್ ಅಧ್ಯಕ್ಷರನ್ನು ನೋಡಲು ಹೋದಿರಿ ಅವರೊಡನೆ ಮಾತಾಡಿ ಬಂದವರೇ ಪುನಃ ನಮಗೆ ಕರೆ ಕಳುಹಿಸಿದಿರಿ. ಆಗ ನೀವು ತುಸು ಬದಲಾವಣೆಗೊಂಡಿದ್ದಂತೆ ನನಗೆ ತೋರಿತು. ಮಂತ್ರಿಗಳ ಹೇಳಿಕೆಗಳನ್ನು ತಿಳಿಯುವ ಮೊದಲು, ನಾವು ನಮ್ಮ ರುಜುವಾತುಗಳನ್ನೆಲ್ಲಾ ಕೊಡಬೇಕೆಂದು ನೀವು ಹೇಳಿದಾಗ, ಮಂತ್ರಿಗಳು ಹೇಳುವುದೇನು, ನಾವು ರುಜುವಾತು ಕೊಡಬೇಕಾದ ಅಂಶವಾವುದು, ಎಂಬುದನ್ನು ತಿಳಿದುಕೊಳ್ಳಲು ಪ್ರಥಮತಃ ಆ ಹೇಳಿಕೆಗಳು ನಮಗೆ ದೊರೆಯುವುದಗತ್ಯವೆಂದು ನಾವು ಕಾರಣ ಕೊಟ್ಟು ಸವಿವರವಾಗಿ ವಾದಿಸಿದೆವು. 45 ಮಿನಿಟುಗಳ ಚರ್ಚೆಯ ನಂತರ ನೀವು ಪುನಃ ಮಂತ್ರಿಗಳ ವಾಗ್ಮೂಲಪ್ರತಿಯನ್ನು ಕೊಡಲೊಪ್ಪಿದಿರಿ. ಆ ಮೇಲೆ ನೀವು ಮತ್ತೊಮ್ಮೆ ನಮಗೆ ಕರೆ ಕಳುಹಿಸಿದಾಗ ನನಗೆ ನಿಜಕ್ಕೂ ಆಶ್ಚರ್ಯವಾಯಿತು. ನಿನ್ನೆ ಬೆಳಗ್ಗೆ ನಾವು ಹೋದಾಗ ನೀವು ಪುನಃ ಆ ಹಳೇ ಕಥೆಯನ್ನೇ ಹೇಳಿದಿರಿ—

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬೇಂಕಿನ ಸೇವೆಯು ಜರೂರಾತಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬೇಂಕು ಅಗಾಧ ಪ್ರಯತ್ನವನ್ನು ಮಾಡಿದೆ. ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಅರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತ: ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ.

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದು ಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.
ಜನರಲ್ ಮೆನೇಜರ್

ANNOUNCEMENT

MODERN TUTORIAL INSTITUTE, UDIPI,
Modern School of Commerce, Church Road,
Special coaching! **Individual attention!!**
Evening classes by Experienced teachers
for
S. S. L. C — October & March Examinations
Classes open on 25—6—1949.
Apply in person to:
T. V. Vasudevan.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಸಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಜಾತುಕೊಳ್ಳುವುದು, ಚೇಳವಿಷ, ಮಂಜಾಡಪ್ಪ, ಸಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ-



REGD
ಪುಳುಕಟ್ಟಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.



Approved firm by the Govt. of Mysore
Certified by the Agent of the Govt. of Cylone & Indian,

"ಪ್ರಥಮತಃ ನೀವು ನಿಮ್ಮ ರುಜುವಾತುಗಳನ್ನೆಲ್ಲಾ ಕೊಡಬೇಕು. ಆ ಮೇಲೆ ಮಂತ್ರಿಗಳ ವಾಗ್ಮೂಲಗಳ ನಕಲು" ಎಂದಿರಿ. ಮಂತ್ರಿಗಳ ಉತ್ತರಗಳೇನೆಂಬುದನ್ನು ತಿಳಿದುಕೊಳ್ಳದೆ ನಾವೀ ವಿಚಾರಣೆಯಲ್ಲಿ ಇನ್ನು ಭಾಗವಹಿಸುವದು ಅಸಾಧ್ಯವೆಂದು ನಾವು ಪುನಃ ನಿಮಗೆ ಮಂದಟ್ಟುಮಾಡಿದೆವು ಕೊನೆಯಲ್ಲಿ ನಾವು ಹೊರಡುವಾಗ ನೀವು ನಮ್ಮ ವಾದ ಕ್ಕೊಪ್ಪದಿರಲಿಲ್ಲ. ರಾಜೇಂದ್ರ ಪ್ರಸಾದರು ನಮ್ಮ ಆರೋಪಗಳನ್ನು ಮಾಮೂಲಿನ ದೆಂಬ ತಾತ್ಸಾರದಿಂದ ಕಂಡಿದ್ದರೆಂಬ ನಿಮ್ಮ ಮಾತು ತಪ್ಪು. ಅವರು ನಮ್ಮ ವಾದಗಳನ್ನು ಒಂದುತಾಸು ಕೇಳಿ, ಅನಂತರವೇ ಮಂತ್ರಿಗಳಿಂದ ಉದಾಹರಣೆ ಕೇಳಿದ್ದುದು. ನೀವು ಆ ಉದಾಹರಣೆಗಳ ಪ್ರತಿಗಳನ್ನು ನಮಗೆ ಕೊಡಲು ನಿರಾಕರಿಸುತ್ತಿರುವುದು ವಿಲಕ್ಷಣವೇ ಸರಿ ನಿಮ್ಮ ಸಹೋದ್ಯೋಗಿಯ [ಶ್ರೀ ಕಲಾ ವೆಂಕಟರಾವ್] ಸಂಬಂಧದ ಆರೋಪಗಳ ವಿಚಾರಣೆಯ ಕುರಿತು ಕಾಂಗ್ರೆಸ್ ಅಧ್ಯಕ್ಷರು ಕೊಟ್ಟ ಪತ್ರಿಕಾ ಹೇಳಿಕೆಯು ವಿಚಾರಣಾ ನ್ಯಾಯಕ್ಕೆ ಹಾನಿಯೊಡ್ಡುವಂತಹದು. ಮತ್ತೀಗ ಸ್ಪಷ್ಟವಿರುವಂತೆ ಅವರು ಈ ವಿಚಾರಣೆಯ ಪ್ರತಿಯೊಂದಸ್ತಿನಲ್ಲೂ ಕೈ ಹಾಕುತ್ತಿರುವದು ತೀರಾ ಆಕ್ಷೇಪಣೀಯವಾದುದು. ಆದರೂ ನಮ್ಮ ಮೇಲಿನ ವಿಜ್ಞಾಪನೆಯನ್ನು ಮನ್ನಿಸಿದಲ್ಲಿ ನಾವಿನ್ನೂ ಈ ವಿಚಾರಣೆಯಲ್ಲಿ ಭಾಗ ವಹಿಸಲು ತಯಾರು."

ಜೂನ್ 16ರಲ್ಲೇ ಶ್ರೀ ದೇವ್ರೋರು ಶ್ರೀ ಕಾರಂತರಿಗೆ ಬರೆದರು: "ಅನಗತ್ಯವಾಗಿ ಉದ್ದ ಬರೆಯಲು ನಾನಿಲ್ಲಿ ಹೋಗುವದಿಲ್ಲ. ಆದರೆ ಮಂತ್ರಿಗಳ ಉತ್ತರದ ಪ್ರತಿಯನ್ನು ನಿಮಗೆ ಕೊಡಲು ನ್ಯಾಯಾದಿ ಭಾಗದಲ್ಲಿ ಒಪ್ಪಿ, ಆ ಮೇಲೆ ಕಾಂಗ್ರೆಸ್ ಅಧ್ಯಕ್ಷರೊಡನೆ ಮಾತಾಡಿ ಬಂದ ಪರಿಣಾಮವಾಗಿ, ಕೊನೆಗೆ ನಿರಾಕರಿಸಿದೆ, ಎಂಬ ನಿಮ್ಮ ವಾದ ಸರಿಯಲ್ಲ. ಕನಿಷ್ಟ ಪಕ್ಷ ಇಷ್ಟನ್ನಾದರೂ ನಾನು ಹೇಳಬೇಕಾಗಿದೆ-ಈ ವಿಚಾರಣೆಯ ಪ್ರತಿಯೊಂದು ವಿಭಾಗವನ್ನೂ ಕಾಂಗ್ರೆಸ್ ಅಧ್ಯಕ್ಷರು ನಿರ್ದೇಶಿಸುತ್ತಿದ್ದಾರೆ, ಎಂದು ನೀವು ನಿಮ್ಮ ಪತ್ರದಲ್ಲಂದಿರುವಿರಿ. ನಾನು ಅಧ್ಯಕ್ಷರನ್ನು ಕಂಡ ಮಾತ್ರಕ್ಕೆ, ನಿಮ್ಮ ಸ್ಥಾನ ಮತ್ತು ದರ್ಜೆಯ ಓರ್ವ ಕಾಂಗ್ರೆಸಿಗನು ಕೇವಲ ಗಾಳಿ ಸುದ್ದಿ ಅಥವಾ ಪತ್ರಿಕಾ ವಾರ್ತೆಗಳನ್ನಾಧರಿಸಿ, ಕಾಂಗ್ರೆಸಿನ ಉನ್ನತಾಧಿಕಾರಿಯ ಕುರಿತು ಇಂತಹ ಮಾತನ್ನಾಡುವುದನ್ನು ಕಂಡು ನನಗೆ ವೇದನೆಯಾಗುತ್ತಿದೆ. ಕಠಿಣ ಶಬ್ದಗಳನ್ನು ಹಾಕಿ ಮಾತಾಡುವ ಅಭ್ಯಾಸ ನನಗಿಲ್ಲ. ಆದ್ದರಿಂದ ನಿಮ್ಮೆರಡು ವಾದಗಳೂ ಸಂಪೂರ್ಣ ಸುಳ್ಳು ಎಂದಿಷ್ಟೇ ನಾನಿಲ್ಲಿ ಹೇಳಬೇಕಾಗಿದೆ. ನೀವು ಆರೋಪಿಸುತ್ತಿರುವಂತೆ, ಮಂತ್ರಿಗಳ ವಾಗ್ಮೂಲಗಳನ್ನು ಕೊಡುವೆನೆಂದು ನಾನು ಪ್ರಥಮ ಸಂಭಾಷಣೆಯ ವೇಳೆ ನಿಮ್ಮೊಡನೊಪ್ಪಿದ್ದುದು ಹೌದಾದರೆ, ಆ ಮೇಲೆ ಮತ್ತೆರಡು ಬಾರಿ ನಿಮ್ಮನ್ನು ಕರೆದು ಉಪಸ್ಥಿತಿ ಕೊಡುವ ಅಗತ್ಯವೇ ನನಗಿರಲಿಲ್ಲ. ಡಾ|| ರಾಜೇಂದ್ರ ಪ್ರಸಾದರ ಕುರಿತು ನಾನು ಹೇಳಿದುದು ಸತ್ಯ ಸ್ಥಿತಿ; ನಿಮಗನುಮಾನವಿದ್ದರೆ ಆದಕ್ಕವರೇ ಇದ್ದಾರೆ. ನಿಮ್ಮ ವಾದವನ್ನು ಅವರು ಕೂಲಂಕುಷ ಪರ್ಯಾಲೋಚಿಸಿ, ಮುಂದಿನ ವಿಚಾರಣೆಗೆ ಹೇಳಿಸಿದ ಯೋಗ್ಯ ದೂರೆಂದು ಅದನ್ನೊಪ್ಪಿಕೊಂಡಿದ್ದರೆನ್ನುವದು ವಿಪರ್ಯಾಸವೇ ಸರಿ. ನೀವು ನಿಮ್ಮ ಈ ಮನೋವೃತ್ತಿಯನ್ನೇ ಇನ್ನೂ ಮುಂದೊತ್ತಿ, ನಿಮಗರಿವಿಲ್ಲದೇನೇ ಈ ಕುರಿತು ತಡವಾಡಿ ಹಾಕುವ, ಮತ್ತು ಮೂಲಕ ನಾವೆಲ್ಲರೂ ಯಾವ ಸಂಸ್ಥೆಗೆ ಸೇರಿದವರೆಂಬ ಗೌರವ ಪಡೆದಿರುವೆವೋ ಆ ಸಂಸ್ಥೆಗೆ ಧಕ್ಕೆಕೊಡುವ, ಕೃತ್ಯವೆಸಗಲಾರಿರೆಂದು ಆಶಿಸುತ್ತೇನೆ".

ತಾ 16ರಲ್ಲೇ ಶ್ರೀ ಕಾರಂತರು ಶ್ರೀ ದೇವ್ರೋರಿಗೆ ಬರೆದರು: "ನಿಮ್ಮ ಇಂದಿನ ಪತ್ರ ನೋಡಿ ನಾನೂ ನನ್ನ ಮಿತ್ರರೂ ಬೆರಗಾಗಿಹೋದೆವು. ಮಂತ್ರಿಗಳ ಆ ಉತ್ತರಗಳೆಂಬವು, ನಮ್ಮ ಆರೋಪಗಳಿಗೆ ಪ್ರತಿಯಾಗಿ ಬಂದವುಗಳೆಂಬುದನ್ನೂ, (ಕಾನೂನು ಬದ್ಧ ಮತ್ತು ಘಟನಾತ್ಮಕ ಹಕ್ಕಿನ ಮಾತು ಹಾಗಿರಲಿ) ಮೂಲ ನ್ಯಾಯಕ್ಕನುಸಾರವಾಗಿಯೂ, ಮುಂದಿನ ವಿಚಾರಣೆಯ ಮೊದಲು ಅವುಗಳನ್ನು ಪಡೆಯುವ ಹಕ್ಕು ನಮಗಿದೆಯೆಂಬುದನ್ನೂ ನೀವು ಮರೆತಂತೆ ಕಾಣುತ್ತದೆ. ನಿಮ್ಮೀ ಧೋರಣೆಯ ಮೂಲಕ, ಇನ್ನು ಮುಂದೆ ಇದರಲ್ಲಿ ನಾವು ಭಾಗ ವಹಿಸದಂತೆ ನೀವು ಮಾಡಿದುದಕ್ಕಾಗಿ ನಾನು ವಿಷಾದಿಸುತ್ತೇನೆ. ಇಂದಿಗೆ ಒಂದು ವರುಷಕ್ಕೂ ಮಿಕ್ಕಿ ಬಾಕಿ ಬಿದ್ದಿರುವ ಈ ವಿಷಯದ ಸಂಬಂಧವಾಗಿ ಆಗಿರುವವಿಳಂಬಗಳಿಗೆಲ್ಲಕ್ಕೂ ನೀವೇ ಹೊಣೆಗಾರರು ಹೊರತು ನಿಜಕ್ಕೂ ನಾವಲ್ಲ. ಕಾಂಗ್ರೆಸ್ ಸಂಸ್ಥೆಗಾಗಿರುವ "ಧಕ್ಕೆ"ಯೇನಾದರೂ ಇದ್ದರೆ, ಅದು ಸತ್ಯಕ್ಕೂ ನಮ್ಮ ಕೈಗಳದ್ದಲ್ಲ. ಮಂತ್ರಿಗಳ ಉತ್ತರಗಳನ್ನು ಕೊಡುವೆನೆಂದು ನೀವು ಪ್ರಥಮತಃ ಒಪ್ಪಿದ್ದ ಕುರಿತು ನಮ್ಮ ಪತ್ರಗಳಲ್ಲಿದ್ದುದರಲ್ಲಿ ಯಾವುದೂ ಸುಳ್ಳಲ್ಲ; ಆದರೆ ಆ ವಾಗ್ದಾನವನ್ನು ಮುರಿದು ಕೊಂಡ ಮೇಲೆ ನೀವಿಂತಹ ಮಾತನ್ನಾಡಹತ್ತಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ರಾಜೇಂದ್ರ ಪ್ರಸಾದರ ಸಂಬಂಧದಲ್ಲಿ, ನನ್ನ ಉತ್ತರದಲ್ಲಿರುವಂತಹ ವಿಷಯಗಳನ್ನೂ, ಊಹನೆಗಳನ್ನೂ ನೀವು ನಿಮ್ಮ ಪತ್ರದಲ್ಲಿ ಉಲ್ಲೇಖಿಸಿರುವಿರಿ; ಅವರು ನಮ್ಮ ದೂರನ್ನು 'ಮಾಮೂಲಿನ'ದಾಗಿ ಗಣಿಸಿದ್ದರೆಂಬ ನಿಮ್ಮ ಅಭಿಪ್ರಾಯವು ನಮ್ಮ ತಿಳುವಳಿಕೆಯ ಮಟ್ಟಿಗೆ ಸರಿಯಲ್ಲವಾದ್ದರಿಂದ ಅದಕ್ಕಷ್ಟೇ ನಾನು ನನ್ನ ಪತ್ರದಲ್ಲಿ ಉತ್ತರ ಕೊಟ್ಟಿದ್ದೆ. ಈ ವಿಚಾರಣೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರು ಕೈಹಾಕುತ್ತಿರುವ ಕುರಿತು, ಸಂಗತಿಯು ಖಚಿತ ಮತ್ತು ಸುಸ್ಪಷ್ಟವಿರುವುದರಿಂದ, ನೀವು ಹೇಳಿದುದು ಸರಿ ಎಂದು ನಾವು ಒಪ್ಪಿಕೊಳ್ಳುವುದಿಲ್ಲ".

ಆ ಮೇಲೆ ಶ್ರೀ ದೇವ್ರೋರ ಪತ್ರವಿಲ್ಲ.

ಹುರುಳಿಲ್ಲದ ಗದ್ದಲ!

ಹೇಗಿದೆ ಮೇಲಿನ ತರ್ಕ ಸರಣಿ, ಮತ್ತದು ಬಿಸಿಯೇರುತ್ತಾ ಹೋಗಿ ಕೊನೆಗೆ ಸ್ಫೋಟ ಮುಕ್ತಾಯಗೊಂಡ ರೀತಿ! ಇದು ಮದ್ರಾಸ್ ಪ್ರಾಂತ್ಯದ ಜನ ಪ್ರತಿನಿಧಿ ಸರಕಾರ ರಂಗದಲ್ಲಿ-ಅದೂ ಕಾಂಗ್ರೆಸ್ ಪಕ್ಷದೊಳಗಡೆಯಲ್ಲೇ-ಹುಟ್ಟಿರುವ ವಿವಾದದ ನಮೂನೆ! ಇಂತಹ ಕಚ್ಚಾಟಗಳಲ್ಲೇ ಇಕ್ಕಡೆಯವರ ಬಲಾಬಲಗಳನ್ನು ಅಳೆಯುವ ಸ್ವಭಾವವು ಸಾರ್ವಜನಿಕರಲ್ಲೂ ಮೂಡಿ ಹೋಗಿದೆ-ಕಾರಣನೆಂದರೆ ಮದ್ರಾಸೀ ರಂಗದಲ್ಲಿ ಇವು ನಿತ್ಯದ ಮಾತಾಗಿವೆ; ಪ್ರಚಲಿತ ಪದ್ಧತಿಯಾಗಿ ನಿಂತಿವೆ. ಇದಕ್ಕಿಂತ ಹೆಚ್ಚಿನ ದುಸ್ಥಿತಿ ಬೇರೇನಿದ್ದೀತು? ಕಾಂಗ್ರೆಸ್ ಪಾಳಯ ಸಂಬಂಧದ ಪ್ರಶ್ನೆ ಹೀಗಿದ್ದರೆ ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ಈ ಕುರಿತು ನಡೆದಿದ್ದ ಚರ್ಚೆಗಳಲ್ಲೂ ಸ್ವಾರಸ್ಯವಿದ್ದಿತು. "ಅಧಿಕಾರಿ ಗುಟ್ಟುಗಳ ಶಾಸನ" (Official Secrets Act) ದನ್ವಯ, ಆ ಕಾನೂನಿನ ಮೇರೆಗೆ ಅಧಿಕಾರಹೊಂದಿದವರಿಗಲ್ಲದೆ ಹೊರಗಿನವರಿಗೆ ಸರಕಾರೀ ಫೈಲುಗಳನ್ನು ಅಥವಾ ಗುಟ್ಟಿನ ಯಾವುದೇ ಪತ್ರಗಳನ್ನು ಒಪ್ಪಿಸಕೂಡದಷ್ಟೇ ಅಲ್ಲ—ಸರಕಾರೀ ಮೇಲಧಿಕಾರಿಗಳಿಂದ ಹಿಡಿದು ಜವಾನ ವರೆಗಿನ ಯಾರೇ ಆದರೂ ಸರಕಾರದ ಯಾವುದೇ ಗುಪ್ತಸುದ್ದಿಯನ್ನೂ ಕೊಡಬಾರದು' ಎಂಬ ನಿರ್ಬಂಧವಿರುವಾಗ, ಶಾಸನ ಸಭೆಗೆ ಹೊರಗಿನವರಾದ ಶ್ರೀ ಶಂಕರರಾವ್ ದೇವ್ರೋರಿಗೆ ಅದನ್ನು ಕೊಟ್ಟುದು ಹೇಗೆ? ಮದ್ರಾಸ್ ಮಂತ್ರಿಗಳು ಮದ್ರಾಸ್ ಶಾಸನ ಸಭೆಗಳಿಗೆ ಹೊಣೆಗಾರರೋ, ಹೊರಗಿನ ಕಾಂಗ್ರೆಸ್ ಅಧಿಕಾರಕ್ಕೋ?" ಎಂಬ ಬಿಗುಬಿಗು ವಾದಗಳನ್ನು ವಿರುದ್ಧಪಕ್ಷದ ಸದಸ್ಯರು ಕೌನ್ಸಿಲ್ ಮತ್ತು ಎಸೆಂಬ್ಲಿಗಳಲ್ಲಿ ಹೂಡಿದ್ದರು. 'ಅಂತೂ ಇವೆಲ್ಲಾ ಕಲಸು ಮೇಲೋಗರಗಳ ದುರ್ವಾಸನೆಯ ನಡುವೆ ಸಾರ್ವಜನಿಕರ ಪರವಾಗಿ ಇದೊಂದು ಹಂಬಲ ಮೂಡುವದು ಸ್ವಾಭಾವಿಕ:- 'ಬೇರಾವುದೇ ವಿಧದಲ್ಲಿ ಕ್ರಮ, ನಿಯಮ, ಸತ್ಸಂಪ್ರದಾಯ ತಪ್ಪಿದರೂ ಅದಕ್ಕಾಗಿ ಪ್ರಶ್ನಿಸುವವರು, ವಿಚಾರಿಸುವವರು ಇದ್ದೇ ಇದ್ದಾರೆ. ಮದ್ರಾಸಿನ ಅಧಿಕಾರ ಸಂಬಂಧವಾಗಿ ಹಬ್ಬುತ್ತಾ ಬಂದಿರುವ ಒಳರೋಗಗಳು, ಆ ರೋಗಿಗಳನ್ನಾರು ಅರಿಸಿದ್ದರೋ ಆ ಸಾರ್ವಜನಿಕರು ನಿರೀಕ್ಷಿಸಿದ್ದ ಕ್ರಮ ನಿಯಮ, ಸಂಪ್ರದಾಯ, ವರ್ತನೆ, ಇವೆಲ್ಲಕ್ಕೂ ವಿರುದ್ಧವಾದವುಗಳು. ಆದರೂ ಅವುಗಳ ಮೂಲ ಕಾರಣವಾಗುವಂತಹ ಪ್ರಶ್ನೆ ಛಡಾಯಿಸುವವರಾರಿದ್ದಾರೆ?'. ನಿಜಕ್ಕೂ ಇದೀಗ ದುರ್ದೈವ.

ಇನ್ನು ಈ 'ಕಾಂಗ್ರೆಸ್ ತನಿಖೆ' ವಿವಾದದ ಕುರಿತು ಸಾರ್ವಜನಿಕರ ಸವಾಲುಗಳಿಷ್ಟೇ:-

ವಾದಿಯ ದೂರುಗಳನ್ನು ಕೇಳಿಕೊಂಡು, ಅವಕ್ಕೆ ಪ್ರತಿವಾದಿಯ ಉತ್ತರಗಳನ್ನೂ ಪಡೆದು ಆ ಮೇಲಿನ ವಿಚಾರಣೆ ಅನಗತ್ಯವೆಂದು ಆಗಿನ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಅಲ್ಲೇ ಬಿಟ್ಟಿದ್ದ ಈ ವಾದವನ್ನು ಮುಂದಿನ ತನಿಖೆಗಾಗಿ ಈಗಿನ ಅಧ್ಯಕ್ಷ ಡಾ|| ಪಟ್ಟಾಭಿಗಳು ಎತ್ತಿಕೊಂಡುದೇಕೆ? ವಿಚಾರಣೆಗಾಗಿ ಶ್ರೀ. ಶಂಕರ ರಾವ್ ದೇವ್ರೋ ಬಂದುದೇಕೆ?

'ಕೇವಲ ಇಲಾಖೆಗೆ ಸಂಬಂಧಿಸಿದ ಒಳ ತನಿಖೆ'ಗಾಗಿ, ಅದೂ ವಾದೀ ಕಡೆಯ ಒತ್ತಾಯದ ಮೇಲಿಂದ ಶ್ರೀ. ಶಂಕರ ರಾವ್ ದೇವ್ರೋ ಬಂದುದಾಗಿದ್ದರೆ, ಆ ಇಲಾಖೆವಾರು ತನಿಖೆಗಗತ್ಯವುಳ್ಳ ಎಲ್ಲಾ ಸಾಕ್ಷ್ಯ ರುಜುವಾತುಗಳನ್ನೂ ಸ್ವತಃ ಸಂಗ್ರಹಿಸಿಕೊಳ್ಳುವದು ಶ್ರೀ. ದೇವ್ರೋರ ಕೆಲಸವಲ್ಲವೆ? "ನಿಮ್ಮ ಆರೋಪಗಳನ್ನು ಸಿದ್ಧಮಾಡಿ ಕೊಡಿ" ಎಂದು ಶ್ರೀ. ಕಾರಂತರೇ ಮೊದಲಾದವರನ್ನು ಮತ್ತು ಮತ್ತು ಕೇಳುವ ಅಗತ್ಯ ಅವರಿಗೇನಿತ್ತು? ಹಾಗೆ ಕೇಳಿದ ಮೇಲೆ "ಹಾಗೆ ಸಿದ್ಧಮಾಡಿ ಕೊಡಲು ಅಗತ್ಯ ಬೇಕಾಗಿರುವ ಮಂತ್ರಿಗಳ ಉತ್ತರಗಳನ್ನು ನಮಗೆ ಕೊಡಿ" ಎಂದು ಶ್ರೀ ಕಾರಂತರೇ ಮೊದಲಾದವರು ಕೇಳಿದುದರಲ್ಲಿ ತಪ್ಪೇನು?

[-ನೇ ಪುಟ ನೋಡಿರಿ]

ಪುರುಷಾರ್ಥವೇನು?

ನಿಮ್ಮ ಸಣ್ಣ ಹುಡುಗ

ನೀವು ಆತನಲ್ಲಿ ಕೇಂದ್ರೀಕರಿಸಿದ ಆಲೋಚನೆಗಳೆಲ್ಲಾ ನೀವು ಮುಂಚಿತವಾಗಿಯೇ ನೋಡಲಿಕ್ಕೆ ನಿರಾಕರಿಸಿದರೆ ಸತ್ಯವಾಗಿ ಪರಿಣಮಿಸಲಾರವು. ನಿಮಗೆ ಯಾವುದೇ ಒದಗಲಿ, ಆತನ ಮುಂದಾಭಿವೃದ್ಧಿಯು ಭದ್ರಪಡಿಸಲ್ಪಡತಕ್ಕದ್ದು.

ಆಸ್ತಿಯುಳ್ಳ ಜೀವನದ ಭದ್ರತೆಗೋಸ್ಕರ ನಾವು ನಿಮಗೆ ವಿಶಾಲ ವ್ಯಾಪ ಹಂಚಿಕೆಯನ್ನು ಕೊಡುವೆವು.



ಭಾರತ್
ಇನ್ಶೂರೆನ್ಸ್ ಕ. ಲಿ.

81-6-KAN

THE
Canara Banking Corporation Ltd.
(Incorporated in India)
Estd: 1906
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscribed	Rs. 20,00,000
Capital Paid Up.	Rs. 19,99,800.
Reserves	Rs. 8,91,000.

Banking business of every description transacted.

ಗುರುವಾರ, ಉಡುಪಿ, ೩೦-೬-'೪೯

ಭಾಷಾವಾರು ಪ್ರಾಂತ್ಯ ರಚನಾ ಪ್ರಶ್ನೆ

ಭಾಷಾವಾರಾಗಿ ಪ್ರಾಂತ್ಯಗಳನ್ನು ವಿಂಗಡಿಸಿ ಹಾಕಿಸುವ ಸಂಬಂಧವಾಗಿ ಎದ್ದಿರುವ ಚಳವಳದಲ್ಲಿ ಕೆಲವೇ ವಾರಗಳ ಮೊದಲು ಕಂಡುಬರುತ್ತಿದ್ದ ಚೇತನ ಈಗ ಕಾಣಿಸುತ್ತಿಲ್ಲ; ಸಂಬಂಧಿಸಿದ ಭಾಷಾಭಾಗಗಳವರಲ್ಲಿದ್ದ ಭಿನ್ನಾಭಿಪ್ರಾಯಗಳು ಮಾತ್ರ ಈಗ ಬೆಳೆದು ಬಂದಿವೆ. ತಮ್ಮ ಪಾಲಿನ ಯಾವುದಾದರೊಂದು ಪ್ರಶ್ನೆ ಮುಂದೆ ಬಂದಾಗ ಒಮ್ಮೆ ಆರಂಭ ಶೂರತ್ವ ಪ್ರದರ್ಶಿಸಿ, ಕ್ರಮೇಣ ತಣ್ಣಗಾಗುತ್ತಾ ಹೋಗುವ ಸ್ವಭಾವವು ಕನ್ನಡಿಗರೇ ಮೊದಲಾದ ಭಾಷಾವಾರು ಭಾಗಗಳವರಲ್ಲಿ ಅಧಿಕ ಪರಿಮಾಣದಲ್ಲಿದೆ, ಎಂದರೆ ಅದೊಂದು ಆರೋಪವೆನ್ನಿಸದು. ಭಾಷಾವಾರು ಪ್ರಾಂತ್ಯ ರಚನಾ ಪ್ರಶ್ನೆಯು ಇಷ್ಟೊಂದು ಅಸಡ್ಡೆಗೀಡಾಗಲು ಮೂಲ ಕಾರಣ ಈ ದುರ್ಬಲ ಮನೋವೃತ್ತಿಯೇ. ಒಂದು ಬೇಡಿಕೆಯ ಹಿನ್ನೆಲೆಯಲ್ಲಿರುವ ಆಗ್ರಹಾತುರಗಳೆಲ್ಲವೂ ತಾನಾಗಿ ಥಂಡಾಗೊಳ್ಳುವಂಥವುಗಳೆಂಬುದಾದರೆ, ಅವೇನೂ ಅವಶ್ಯಕತೆಯ ಮೇಲಿಂದ ಹುಟ್ಟಿದವುಗಳಲ್ಲವೆಂಬುದು ಅದರಿಂದಲೇ ಸ್ಪಷ್ಟ. ಹೀಗಿದ್ದಮೇಲೆ ತಾತ್ಕಾಲಿಕಾವೇಶದ ಬೇಡಿಕೆಯನ್ನು ಮನ್ನಿಸುವ ಪ್ರಯಾಸ ವಹಿಸುವ ಬದಲಿಗೆ, ತನ್ನ ಸ್ವಭಾವಾನುಸಾರವಾಗಿ ಅದಾಗಿಯೇ ತಣ್ಣಗಾಗುವವರೆಗೆ ತಪ್ಪಿಸಿಕೊಳ್ಳುವುದು ವಾಸಿ, ಎಂದು ಮೇಲಧಿಕಾರಿಗಳಿಗೆ ತೋರಿದರೆ ಆಶ್ಚರ್ಯವೇನೂ ಇಲ್ಲ. ಇಂದು ಹೀಗಾದಂತೆ ತೋರುತ್ತಿದೆ; ಭಾಷಾವಾರು ಭಾಗಗಳವರು ಭಿನ್ನಾಭಿಪ್ರಾಯಗಳ ಜಡುಪಿನಲ್ಲಿ ಸಿಕ್ಕಿಕೊಂಡು, ಉತ್ಸಾಹ ಕಂದಿದ್ದಾರೆ; ಡಿಲ್ಲಿಯ ಅಧಿಕಾರಿಗಳು ಇವರ ಆಟಗಳನ್ನು ಅವಲೋಕಿಸುತ್ತಾ ಸುಮ್ಮಗಿದ್ದಾರೆ.

ಬೇಗನೆ ಪ್ರಾಂತ್ಯವಾಗಿ ರೂಪುಗೊಳ್ಳುವ ರಿಯಾಯತಿ ದೊರೆತಿರುವ ಆಂಧ್ರದಲ್ಲಿ ತ್ರಿಮೂರ್ತಿಸಮಿತಿಯ ತೀರ್ಮಾನವನ್ನು ಒಪ್ಪಿಕೊಳ್ಳುವ ಒಂದು ಪಂಗಡವಿದೆಯಾದರೆ, 'ಮದ್ರಾಸ್' ನಗರವನ್ನು ಬಿಟ್ಟ ಆಂಧ್ರ ಪ್ರಾಂತ್ಯವೆಂದರೆ ಮೂಗಿಲ್ಲದ ಮುಖವಾದ್ದರಿಂದ ಅದನ್ನೆಂದಿಗೂ ಒಪ್ಪಲಾರೆವು" ಎನ್ನುವ ಪಕ್ಷ ಬೇರೊಂದಿದೆ. ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳು ನಾಳೆ-ಜುಲಾಯಿ ತಾ. 1ಕ್ಕೆ-ಏಕಾಧಿಕಾರದೊಳಗೆ ಸೇರಿಹೋದ ಮೇಲೆ, ಕೇರಳದಲ್ಲಿ ಅಲ್ಪಾಂಶ ಕಳೆದುಳಿಯುವ ಮಲಬಾರು ಜಿಲ್ಲೆಯು ಇದ್ದಸ್ಥಿತಿಯಲ್ಲೇ ಉಳಿದುಕೊಳ್ಳಲಿ, ಎನ್ನುವವರೆಗೆ ಐಕ್ಯಕೇರಳಾಂದೋಲನದಲ್ಲಿ ಇಳಿತ ಗೋಚರಿಸಿದೆ. ಆ ಕಡೆಯ ಮಹಾರಾಷ್ಟ್ರ ಪ್ರಾಂತ್ಯ ರಚನೆಯ ಮಟ್ಟಿಗೂ ಮಧ್ಯ ಪ್ರಾಂತ್ಯದ ಮರಾಟೀ ಮಾತಾಡುವ ಭಾಗ ಮತ್ತು ಬೊಂಬಾಯಿ ಪ್ರಾಂತ್ಯದ ಮರಾಟೀ ಕ್ಷೇತ್ರಗಳೊಳಗಿನ ಭಿನ್ನತೆಗಳು ತೊಡಕಾಗಿಯೇ ನಿಂತಿವೆ. ಕರ್ನಾಟಕ ಪ್ರಾಂತ್ಯ ರಚನೆಯ 'ಮೈಸೂರನ್ನು ಒಳಗೊಂಡೇ ಆಗಬೇಕು" ಎಂಬ ತ್ರಿಮೂರ್ತಿ ಸಮಿತಿಯ ಶರ್ತವನ್ನು ಪೂರೈಸುವುದು ಹೇಗೆಂಬ ಹಾದಿಯೇ ತೋರುತ್ತಿಲ್ಲ. ಮೈಸೂರು ಮಹಾರಾಜರನ್ನು ಕೆಳಗಿಳಿಸಿಕೊಂಡು ವಿಶಾಲ ಕರ್ನಾಟಕದೊಂದಿಗೆ ತಾದಾತ್ಮ್ಯಗೊಳ್ಳುವ ಕುರಿತು ಮೈಸೂರು ಕಾಂಗ್ರೆಸಿನಲ್ಲಿಯೇ ಪರಸ್ಪರ ವಿರುದ್ಧಾಭಿಪ್ರಾಯಗಳ ಎರಡು ಪಕ್ಷಗಳು ಹುಟ್ಟಿಕೊಂಡಿವೆ. 'ಮೈಸೂರಿನ ಜನಮತ ಸಂಗ್ರಹಿಸಿ ತೀರ್ಮಾನಿಸಬಹುದು' ಎಂಬ ವಾದ ಅಲ್ಲಿ ಬಲಗೊಂಡಿದೆ. ಸದ್ಯಸ್ಥಿತಿಯಲ್ಲಿ 'ಆಳುವ ಮಹಾಪ್ರಭುಗಳ ಕಿರೀಟ ಕೆಳಗಿಡಿಸುವ' ಸೂಚನೆಗೆ ಮೈಸೂರು ಜನತೆಯು ಮತಕೊಡಲಾರದೆಂಬುದಂತೂ ಖಂಡಿತ. ಅಲ್ಲಿಯ ಜನತೆಯಲ್ಲಿ ತಲೆಮಾರುಗಳಿಂದ ಇಳಿದು ಬಂದಿರುವ ಮೂಲಭೂತ ರಾಜನಿಷ್ಠೆಯನ್ನು ಒಮ್ಮೆಗೇ ಅಲುಗಾಡಿಸಲು ನೋಡುವುದರಿಂದ ಕೆಲಸವಾಗದು. ಆದರೆ ಅಂತಹ ನೋವೇನನ್ನೂ ಮಾಡದೆ, ಬುಡದಿಂದಲೇ ಅದನ್ನು ಕಿತ್ತು ಹಾಕಿದಲ್ಲಿ ಎಲ್ಲವೂ ಸುಗಮವಾದೀತು ಹೊರತು ಕ್ರಾಂತಿ ಅಥವಾ ಬೊಬ್ಬೆ ಯಾವುದೂ ಏಳುವಂತಿಲ್ಲ. ಆದರೆ ಹಾಗೆ ಮಾಡಬಲ್ಲವರಾರು? ಕೇಂದ್ರ ಸರಕಾರವೊಂದೇ.

ಕೊಚ್ಚಿ ತಿರುವಾಂಕೂರು ಜೋಡಣೆಯಂತಹ ಸಂಸ್ಥಾನಗಳ ಒಕ್ಕೂಟ ರಚನೆಗಳು— ಕೆಲವು ಸಂಸ್ಥಾನಗಳನ್ನು ಪ್ರಾಂತ್ಯಗಳೊಳಗಡೆಗೆ ದೂಡಿ ಬಿಟ್ಟ ವಿಧಾನಗಳು— ಕೇವಲ ಎರಡೂವರೆ ವರುಷಗಳ ಮೊದಲಿನ ದಿನಗಳಲ್ಲಿ ಊಹನೆಗೂ ನಿಲುಕದಿದ್ದ ಕೌತುಕಗಳೇ. ಆದರೂ ರಾಷ್ಟ್ರಹಿತ ದೃಷ್ಟಿಯಿಂದ ಈ ಅದ್ಭುತ ಸಾಧನೆಯಾಗಿದೆ. ಭಾಷಾವಾರು ಪ್ರಾಂತ್ಯ ರಚನೆಯ ತತ್ವವನ್ನು ಕಾಂಗ್ರೆಸು ಮೊದಲಾಗಿ ಒಪ್ಪಿಕೊಂಡಿದ್ದ ಆ ದಿನಗಳಲ್ಲಿ, ಆಶ್ರಿತ ರಾಜ್ಯಗಳಿಗೆ ಇಂದು ದೊರೆತ ಗತಿಯನ್ನು 'ಭವಿಷ್ಯವಾಣಿ'ಯಾಗಿ ಸೂಚಿಸಿದವರು ಕೂಡಾ ಇಲ್ಲ. ರಾಷ್ಟ್ರದ ಸ್ವತಂತ್ರೋತ್ತರ ಆವಶ್ಯಕತೆಯನ್ನನುಸರಿಸಿ, ಅವಸರವಸರದಿಂದ ಈ ನವವ್ಯವಸ್ಥೆ ಆಗಿಹೋಯಿತು. ಇದರ ನಂತರವಾದರೂ, ಆ ಕಾಲದಲ್ಲೇ ವಾಗ್ದಾನವಾಗಿದ್ದ ಭಾಷಾವಾರು ಪ್ರಾಂತ್ಯ ರಚನೆಯಾಗುವದು ಬೇಡವೆ? ಭಾರತದ ಸರಕಾರೀ ನಾಯಕರು ಈಗಲಾದರೂ ಅದನ್ನು ಮಾಡುವದು ಬೇಡವೆ? ಈಗ ತಯಾರಿಯಲ್ಲಿರುವ ರಾಜ್ಯಘಟನೆಯನ್ವಯ ಪ್ರಾಂತ್ಯಾಧಿಕಾರವು ಕೇಂದ್ರಾಧಿಕಾರದ ಆಶ್ರಯದೊಳಗೇನೇ ಇರಬೇಕಾಗಿರುವುದರಿಂದ, ಭಾಷಾವಾರು ಪ್ರಾಂತ್ಯಗಳಿಂದ ರಾಷ್ಟ್ರೀಯತೆಗೆ ಭಂಗಬಂದೀತೆಂಬದು ಹುಸಿಹೆದರಿಕೆ; ಸಂಬಂಧಪಟ್ಟ ಭಾಷಾವಾರು ಭಾಗಗಳವರೇ, ತಂತಮ್ಮೊಳಗೆ ವ್ಯವಸ್ಥೆ ಮಾಡಿಕೊಂಡು ತಂತಮ್ಮ ಪ್ರಾಂತ್ಯಗಳ ಅಸ್ತಿವಾರಗಳನ್ನು ಹಾಕಿಯಾರೆಂದು ನಿರೀಕ್ಷಿಸುವದೂ ಈಗಿನ ಸ್ಥಿತಿಗತಿಗಳ ಮೇಲಿಂದ ನಿರರ್ಥಕ. ಆದ್ದರಿಂದ ಕೇಂದ್ರ ನಾಯಕರೇ ಈ ಕುರಿತು ಕೈಹಾಕಬೇಕಾದುದು ಆಗತ್ಯ ಹಾಗೂ ನ್ಯಾಯಸಮ್ಮತ. ಹಾಗೆ ಮಾಡಬೇಕಾದ ಸಂದರ್ಭ ಇದೇ—ಎನ್ನುತ್ತೇವೆ.

ವಾರ್ತಾ ಸಾರ

ಜಾಗತಿಕ ಸ್ಥಿತಿ ಗತಿಗಳೆಲ್ಲವೂ ಬಹುಮಟ್ಟಿಗೆ ಇದ್ದಂತಿವೆ. ವರ್ತಮಾನ ಕಾಲದ ಸ್ಥಿತಿಗತಿಗಳ ವಿಚಾರ ಮಂಥನ ಮತ್ತು ಭಾವೀ ನಿರೀಕ್ಷೆಗಳೇ ಕಳೆದ ದಿನಗಳಲ್ಲಿ ಲೋಕ ವಾತಾವರಣವನ್ನು ಆವರಿಸಿಕೊಂಡಂತೆ ಕಾಣುತ್ತದೆ. ಇರುವ ಘರ್ಷಣೆಗಳನ್ನು ಮಹಾಘರ್ಷಣೆಗಳಾಗಿ ಮಾರ್ಪಡಿಸುವ ಸಿದ್ಧತೆಗಳ ಬದಲಿಗೆ, ಸದ್ಯಕ್ಕಿರುವವುಗಳೇ ಹೆಚ್ಚಾಯಿತೆಂಬಂತೆ, ವಿಚಾರ ವಿಮರ್ಶೆ ನಡೆದಿರುವುದು ಸುಲಕ್ಷಣವೇನೋ ನಿಜ; ಆದರೆ ಯಾವುದೇ ಆದರೂ ಸುಖಾಂತ್ಯಗೊಳ್ಳುವ ಆಶೆಗೆ ಆಸ್ಪದವೀಯುವಂತಹದೇನೂ ನಡೆದಿಲ್ಲವೆಂಬುದು ಮಾತ್ರ ಶೋಚನೀಯ!

೦೦ ೦೦ ೦೦

ಚೈನದಲ್ಲಿ ಕಮ್ಯೂನಿಸ್ಟ್ ಸೇನೆಗಳು ದಕ್ಷಿಣಾಗಡೆಗೆ ಮುಂಧಾವಿಸಿ, ಈಗ ಹೋಂಗ್‌ಕೋಂಗಿನ ತೀರಾ ಸನಿಹದಲ್ಲಿ ಅಲ್ಲಿಯ ರಾಷ್ಟ್ರೀಯ ಸರಕಾರ ಮತ್ತು ಕಮ್ಯೂನಿಸ್ಟ್ ಸೇನೆಗಳೊಳಗೆ ಹೋರಾಟ ನಡೆಯುತ್ತಿದೆ; ಕಮ್ಯೂನಿಸ್ಟ್ ಸೇನೆಗಳು ಮುಂದೊತ್ತುತ್ತಾ ಹೋದಂತೆ, ರಾಷ್ಟ್ರೀಯ ಸೇನೆಗಳು ಹಿಂದೆಗೆಯುತ್ತಾ ಹೋಗಿ ಪ್ರಸಿದ್ಧ ಫೂಚೋ ಬಂದರ ನಿರಾತಂಕವಾಗಿ ಕೆಂಪು ಸೇನೆಯ ಹಸ್ತಗತವಾಗಿದೆ. ಕರಾವಳಿ ಬಂದರಗಳಲ್ಲೆಲ್ಲಾ ರಾಷ್ಟ್ರೀಯ ಸರಕಾರವು ದಿಗ್ಬಂಧನ ಹಾಕಿರುವುದರಿಂದ ವಿದೇಶೀ ಹಡಗಗಳು ಆ ಕಡೆಗಳಿಂದ ಹಿಂದೆಗೆಯಬೇಕಾಗಿ ಬಂತು. ಚೈನಾ ಕರಾವಳಿಯಲ್ಲಿ ತಮ್ಮ ವ್ಯಾಪಾರೀ ಹಡಗುಗಳ ಚಲನವಲನಗಳಿಗೆ ಬೇಕಾಯದೇಶೀರ ಪ್ರತಿಬಂಧ ಬೀಳುವುದನ್ನು ತಡೆಗಟ್ಟುವ ಕರ್ತವ್ಯವು ಬ್ರಿಟಿಷ್ ನಾವೆಗಳದೆಂದು ಬ್ರಿಟಿಷ್ ನಾವಿಕಾಧಿಕಾರಿಯ ಸೂಚನೆಯಾಗಿದೆ.

ಲೋಕದ ಹಿಂದುಳಿದ ಕ್ಷೇತ್ರಗಳು ಆರ್ಥಿಕಾಭಿವೃದ್ಧಿಗೊಳ್ಳುವಂತೆ ಸಹಾಯವಾಗಿ ಸಲ್ಲಿಸಲು 15,000,000 ಡೋಲರುಗಳನ್ನು ಮಂಜೂರು ಮಾಡಬೇಕೆಂದು ಅಮೇರಿಕಾಧ್ಯಕ್ಷರು ಅಲ್ಲಿಯ ಕಾಂಗ್ರೆಸಿನ ಮುಂದೆ ವಿಶೇಷ ಸಂದೇಶ ಇಟ್ಟಿದ್ದಾರೆ.

ಬರ್ಮಾಯುದ್ಧವು ಯಥಾಪ್ರಕಾರ ಸಾಗಿದೆ. ಬರ್ಮದ ರಕ್ಷಣಾಮಂತ್ರಿ ಮತ್ತು ಸರ್ವಸೇನಾನಿಯಾಗಿರುವ ಲೆಫ್ಟನೆಂಟ್ ಜನರಲ್ ನೆ ವಿನ್, ಇವರು ಬರ್ಮಾ ರಕ್ಷಣೆಯ ಸಂಬಂಧದ ಮಾತುಕತೆಗಳಿಗಾಗಿ ಜುಲೈ ತಿಂಗಳ ಮೊದಲ ವಾರದಲ್ಲಿ ಲಂಡನಿಗೂ ವಾಷಿಂಗ್ಟನಿಗೂ ಹೋಗಲಿದ್ದಾರೆ; ಬ್ರಿಟಿಷ್ ಸರಕಾರದಿಂದ ನವಿನರಿಗೆ ಆಮಂತ್ರಣ ಬಂದಿರುವುದೆಂದು ತಿಳಿದುಬಂದಿದೆ.

ಅಫ್ಘಾನಿಸ್ಥಾನ—ಪಾಕಿಸ್ತಾನಗಳೊಳಗಿನ ಗಡಿವಲಯ ಸಂಬಂಧದ ಘರ್ಷಣೆಯು ದಿನದಿಂದ ದಿನಕ್ಕೆ ಬೆಳೆಯುತ್ತಾ ಬಂದಿದೆ. "ಗಡಿನಾಡು ಪ್ರಾಂತ್ಯ ಮತ್ತು ಗುಡ್ಡಗಾಡುಗಳಲ್ಲಿರುವ ಏಳುಮಿಲಿಯ ಪಠಾಣರ ಸಂಬಂಧವಾಗಿ ಪಾಕಿಸ್ತಾನದೊಡನೆ ತನಗಿರುವ ವಿವಾದದ ಇತ್ಯರ್ಥದಲ್ಲಿ ಸಹಾಯ ಮಾಡಬೇಕು" ಎಂದು ಕಾಬೂಲು ಸರಕಾರವು ಬ್ರಿಟಿಷ್ ಸರಕಾರವನ್ನು ಕೇಳಿಕೊಂಡಿದೆ. "ಇದು ಅಫ್ಘಾನಿಸ್ಥಾನದ ಜೀವನ—ಮರಣದ ಪ್ರಶ್ನೆ. ನಮ್ಮ ರಕ್ತಮಾಂಸದ ಮಿಲಿಯಾವಧಿ ಬಂಧುಗಳು ಪಾಕಿಸ್ತಾನದೊಳಗಡೆ ಸೇರಿಹೋಗಲು ನಾವೆಂದಿಗೂ ಬಿಡಲಾರೆವು" ಎಂದು ಲಂಡನಿನಲ್ಲಿರುವ ಅಫ್ಘಾನಿ ರಾಯಭಾರಿಯೆಂದಿದ್ದಾನೆ.

೦೦ ೦೦ ೦೦ ೦೦

ಭಾರತದ ಪಾಲಿಗೆ ಬೇಸರ ಬರಿಸುವಷ್ಟು ದೀರ್ಘಾವಧಿಯಿಂದ ಕೊಳೆಯುತ್ತಿರುವ ಪ್ರಶ್ನೆಯಾದ ಕಾಶ್ಮೀರದ ಇತ್ಯರ್ಥದ ಕುರಿತು ಸಂಯುಕ್ತ ರಾಷ್ಟ್ರಸಂಘದ ಮುಖ್ಯಕಾರ್ಯದರ್ಶಿ ಟ್ರಿಗ್ವೆಲೀಯವರು ಒಳ್ಳೇ ಆಶೆಯಿಂದಿದ್ದಾರೆ. ಸದ್ಯದಲ್ಲೇ ಒಂದು ತೀರ್ಮಾನವಾಗಲಿದೆಯೆಂದು ಅವರ ಅಂಬೋಣ. ಕಾಶ್ಮೀರದ ಕಮೀಶನಿನವರು ಭಾರತ ಮತ್ತು ಪಾಕಿಸ್ತಾನ್ ಅಧಿಕಾರಿಗಳ ನಡುವೆ ಓಡಾಡಿ ಸಂಧಾನ ಸಾಧಕ ಮಾತುಕತೆಗಳನ್ನು ನಡೆಸುತ್ತಿದ್ದಾರೆ. ಕಾಶ್ಮೀರ ಕಮಿಶನಿನ ಕೊಲಂಬಿಯಾದ ಸದಸ್ಯರಾದ ಡಾ। ಅಲ್ಫ್ರೆಡೋ ಲೋಝುಯಾನೋ ತನ್ನ ಸ್ವಂತ ಕಾರಣಗಳಿಗಾಗಿ ರಾಜಯಿತ್ತಿದ್ದಾರೆ. ಭಾರತ- ಪಾಕಿಸ್ತಾನಗಳ ಅಭೇದ್ಯ ಭಿನ್ನಾಭಿಪ್ರಾಯಗಳ ದೆಸೆಯಿಂದಾಗಿ ತಾನು ರಾಜೀನಾಮೆಕೊಡುವ ಬೆದರಿಕೆ ಹಾಕಿದ್ದೇನೆಂಬುದು ಸುಳ್ಳೆಂದೂ, ಜಾಗತಿಕ ಸಂಘದ ಕಾರ್ಯದರ್ಶಿಯ ಸೂಚನೆಗಳನ್ನಷ್ಟೇ ತಾನು ಕಾಯುತ್ತಿದ್ದೇನೆಂದೂ ಕಾಶ್ಮೀರ ಮತಸಂಗ್ರಹದ ಮೇಲಧಿಕಾರಿಯಾಗಿ ನೇಮಕಗೊಂಡಿರುವ ಎಡ್ಮಿರಲ್ ನಿಮಿಟ್ಸ್ ಅಂದಿದ್ದಾರೆ.

ಗಾಂಧೀ ಕೊಲೆಮೊಕದ್ದಮೆಯ ಅಪೀಲು ಶೋಧನೆಯಲ್ಲಿ ಪೂರ್ವಪಂಜಾಬು ಹೈಕೋರ್ಟಿನವರು, ನಾತೂರಾಮ್ ವಿನಾಯಕ ಗೋಡ್ಸೆ ಮತ್ತು ನಾರಾಯಣ

ದತ್ತಾತ್ರೇಯ ಆಪ್ಟೆ, ಇವರಿಬ್ಬರಿಗೆ ಸ್ಪೆಶ್ಯಲ್ ಕೋರ್ಟು ವಿಧಿಸಿದ್ದ ಫಾಸೀ ಸಜೆಯನ್ನು ಕಾಯಂಗೊಳಿಸಿದರು; ಉಳಿದ ಐವರು ಆರೋಪಿಗಳಾದ ವಿಷ್ಣು ರಾಮಚಂದ್ರ ಕರ್ಕರೇ, ಮದನಲಾಲ್ ಕಾಶ್ಮೀರಿಲಾಲ್ ಪಾಹ್ವಾ, ಶಂಕರ ಕಿಷ್ಟಯ್ಯಾ, ಗೋಪಾಲ ವಿನಾಯಕ ಗೋಡ್ಸೆ(ನಾಥುರಾಮನ ತಮ್ಮ) ದತ್ತಾತ್ರೇಯ ಸದಾಶಿವ ಪರಚುರೆ ಇವರಿಗೆ ವಿಧಿಸಲ್ಪಟ್ಟಿದ್ದ ಜೀವಾವಧಿ ಸಜೆಗಳ ಪೈಕಿ ಸದಾಶಿವ ಪರಚುರೆ, ಮತ್ತು ಶಂಕರ ಕಿಷ್ಟಯ್ಯಾ, ಇವರಿಬ್ಬರನ್ನು (ಕಳೆದವಾರ ತಪ್ಪಾಗಿ ಪ್ರಕಟವಾಗಿದ್ದಂತೆ ನಾಲ್ವರನ್ನಲ್ಲ) ವಿಮೋಚನೆಗೊಳಿಸಿ ಬಂಧ ಮುಕ್ತ ಮಾಡಿದರು. ಗೋಪಾಲಗೋಡ್ಸೆಯ ಮಟ್ಟಿಗೆ ಸರಕಾರವು ಕರುಣೆತೋರಿಸಬಹುದೆಂದು ಶಿಫಾರಸು ಮಾಡಿದ್ದಾರೆ. ಮೂವರು ಜಡ್ಜರ ಪೈಕಿ ಒಬ್ಬರು ಮದನಲಾಲನ ಶಿಕ್ಷೆಯನ್ನು ತಗ್ಗಿಸಬಹುದೆಂದು ಪ್ರತ್ಯೇಕ ಶಿಫಾರಸು ಬರೆದಿದ್ದರು.

ವಿವಾಹ ವಾರ್ತೆಗಳು.

ಶ್ರೀ. ನಂದಿಕೂರು ಮಾಗಣ್ತಡಿ ಸಾಂತು ಶೆಟ್ರ ಪುತ್ರ ಶ್ರೀ, ಕೆ ಗೋವಿಂದ ಶೆಟ್ಟರು ಶ್ರೀ ಕಾಪು ಮುದ್ದಣ್ಣ ಶೆಟ್ರ ಪುತ್ರಿ ಸೌ। ವಸಂತಿಯನ್ನು ತಾ24-6-49ರಲ್ಲಿ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿಯೂ

ಶ್ರೀ. ಬಂಗಬೆಟ್ಟು ಪಟೇಲ್ ತಿಮ್ಮಯ ಶೆಟ್ರ ಪುತ್ರ ಶ್ರೀ ಮಹಾಬಲ ಶೆಟ್ಟರು ಶ್ರೀ ಬೆಳ್ಳಿಪ್ಪಾಡಿ ಬೀಡು ಮಂಜಪ್ಪ ರೈಗಳ ಪುತ್ರಿ ಸೌ। ದೇವಕಿಯನ್ನು ತಾ 28-6-49ರಲ್ಲಿ ಮಂಗಳೂರು ನ್ಯೂ ಚಿತ್ರಾ ಟಾಕೀಸಿನಲ್ಲಿಯೂ ವಿವಾಹವಾದರು.

ಕೊಡವೂರು: ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಗಿರುವ ಸ್ವತಂತ್ರ ಉತ್ತಮ ಕಟ್ಟಡದ ಅಭಾವವನ್ನು ಹೋಗಲಾಡಿಸುವರೆ ಊರ ಮಹಾಜನರ ಸಭೆಯೊಂದು ತಾ 26ರಲ್ಲು ಡಾ। ಕೆ. ಎಲ್. ಪತಾಳರ ಅಧ್ಯಕ್ಷತೆಯಲ್ಲಿ ಜರಗಿ ಕಟ್ಟಡ ಕಮಿಟಿ ಸ್ಥಾಪಿಸಲಾಯಿತು. ಧನಸಂಗ್ರಹಿಸುವರೆ ಡಾ। ಕೆ. ಎಲ್. ಪತಾಳ್ (ಅಧ್ಯಕ್ಷ) ಶ್ರೀಗಳಾದ ಟಿ. ವೆಂಕಪ್ಪ ಹೆಗ್ಡೆ, ಡಾ। ಯು. ಬಿ. ಆಚಾರ್ಯ (ಉಪಾಧ್ಯಕ್ಷರು) ಟಿ. ಕೋದಂಡ ರಾಮಹೊಳ್ಳ (ಖಜಾನ್ಜಿ) ಕೆ. ಎಸ್. ಎನ್. ಉಪಾಧ್ಯಾಯ ಮತ್ತು ಎಚ್. ಎ. ಪಿ. ಕೆದ್ಲಾಯ (ಜತೆಕಾರ್ಯದರ್ಶಿಯರು) ಇರುವ ಸಮಿತಿ ನೇಮಕವಾಯಿತು.

Notice.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 205/1949

ವಾದಿ. ಸಂಜೀವ ಹೆಗ್ಡೆ, ಸೇನಾಡಿ ಮಹಾಬಲ ಹೆಗ್ಡೇರ ಅಳಿಯ, ಕುಂದಾಪುರ ತಾಲ್ಲೂಕು ಕೆದೂರುಗ್ರಾಮ

ಪ್ರತಿವಾದಿರು. 1 ಕೃಷ್ಣ ಮೊಗೇರ, ಅಣ್ಣು ತಂಮ, 2, ವೆಂಕಟ, 1 ನೇ ಪ್ರತಿವಾದಿ ಮಗ, ಕುಂದಾಪುರತಾಲ್ಲೂಕು ಬೇಳೂರು ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ವಾದಿಯು ತನಗೆ ಬರತಕ್ಕ ಪ್ರತಿವಾದಿರು ಬರಕೊಟ್ಟ 2 ದಿವಾಂಚು ನೋಟುಗಳ ಹಣ ಬಡ್ಡಿ ವಗೈರೆ ವಸೂಲಿ ಕುರಿತು ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ ದಾಖಲ್ಲು ಮಾಡಿದ ಮೇಲಿನ ದಾವೆಯು ತಾರೀಕು 13-7-49 ಕ್ಕೆ ತನ್ಖಿಗೆ ಯಿಡೋಣಾಗಿಯದೆ. ಈ ಕುರಿತು ಪ್ರತಿವಾದಿರ ಆಕ್ಷೇಪಣೆಗಳು ಯೇನಾದರೂ ಯಿದ್ದರೆ ಮೇಲೆಕಾಣ್ಸಿದ ತಾರೀಕಿನ ದಿವ್ಸ ಸದ್ರಿ ಕೋರ್ಟು ಮುಂದೆ ಜಾಹೀರು ಮಾಡಿಕೊಳ್ಳತಕ್ಕದ್ದು.

S. S. Kolkebail.
Advocate for Plaintiff

ಈ ಪರಚಾಟದಿಂದ ಪುರುಷಾರ್ಥವೇನು?

[೫ನೇ ಪುಟದಿಂದ ಮುಂದುವರಿದುದು]

ಕೇವಲ ಖಾಸಗೀ ಒಳವಿಚಾರಣೆಗೆ ಬಂದ ನ್ಯಾಯಶೋಧಕನ ಪಾಲಿನ ಕೆಲಸವೆಂದರೆ—ಕೋರ್ಟು ವಿಚಾರಣೆಯಂತಹ ಅಡ್ಡ ಸವಾಲುಗಳಿಗಾಗಲೀ, ವಿಷಯದ ಕೆದಕುವಿಕೆಗಾಗಲೀ ಅಸ್ಪದ ಕೊಡದೆ, 'ತನಗೆ ಇಂತಿಂತಹದು ಬೇಕು' ಎಂದಷ್ಟೇ ಸ್ಪಷ್ಟವಾಗಿ ಕೇಳಿ ಪಡೆದು, ದೊರೆತುದರ ಮೇಲಿಂದ ಶೋಧಿಸುವದಷ್ಟೇ ಅಲ್ಲವೆ? ಬದಲಿಗೆ "ನಿಮ್ಮ ಆರೋಪಗಳನ್ನು ಸರಿಯಾಗಿ ರುಜುವಾತುಪಡಿಸಿ ಬಿಡಿ" ಎನ್ನುತ್ತಾ ಅಲ್ಲೇ ತಡೆದುನಿಂತು ಇಂತಹ ಘರ್ಷಣೆಗೇಕೆ ಎಡೆಕೊಡಬೇಕಿತ್ತು?.

ಇನ್ನು, ಆರೋಪಹೊರಿಸಿದವರ ವಾದಸರಣಿಯ ಅರ್ಥವಾದರೂ ಏನು? ತನಖೀ ಪೀಠಿಕೆ ನಡೆಸಿ, ವರದಿಯೊಪ್ಪಿಸುವಂತೆ ಕಾಂಗ್ರೆಸ್ ಅಧ್ಯಕ್ಷರಿಂದ ನೇಮಕಹೊಂದಿ ಬಂದಿದ್ದ ಶೋಧಕನನ್ನೇ ನ್ಯಾಯಾಧೀಶನನ್ನಾಗಿ ಮಾರ್ಪಡಿಸಿ, ಅವರಿದಿರು ತಮ್ಮ ಪ್ರತಿವಾದಿಗಳ ವಾಗ್ಮೂಲ ಪ್ರತಿಯನ್ನು ಹಿಡಿದುಕೊಂಡು, ಅದರ ವಾದಕ್ಕೆ ಪ್ರತಿವಾದ, ಸವಾಲಿಗೆ ಅಡ್ಡ ಸವಾಲುಗಳನ್ನು ಛಡಾಯಿಸಿ 'ವ್ಯವಹಾರ' ನಡೆಯಿಸಬೇಕೆಂಬ ಹುರುಪು ಮಾನ್ಯವೆ?

ಕಾಂಗ್ರೆಸ್ ಮಂತ್ರಿಗಳ ಮೇಲಿನ ಆಪಾದನೆಗಳ ಕುರಿತು ಕಾಂಗ್ರೆಸ್ ಸಂಸ್ಥೆಯ ಅಧಿಪತಿಗಳು ಖಾಸಗೀ ರೀತಿಯಿಂದ ಪೀಠಿಕಾ ತನಖಿ ನಡೆಯಿಸಿಕೊಳ್ಳದೆ, ನ್ಯಾಯಾಧೀಶಮಂಡಲಿಗೆ ಈ ವಿವಾದವನ್ನು ಒಮ್ಮೆಗೇ ಒಪ್ಪಿಸಿಬಿಡುವುದು ಯೋಗ್ಯವೆ? ನ್ಯಾಯಾಲಯದಲ್ಲಿ ತನಿಖೆಹೊಂದುವಂತಹ ಗಂಭೀರ ಅಪಾದನೆಗಳು ಅವು ಆಗಿದ್ದರೆ, ಪ್ರಚಲಿತ ಪದ್ಧತಿಯಂತೆಯೇ ಆಪಾದಿತರನ್ನು ಕೋರ್ಟಿಗೆಳೆದರಾಯಿತಲ್ಲ?

ಕಾಂಗ್ರೆಸ್ ಸಂಸ್ಥೆಯೊಳಗಿರುವವರು ಆ ಸಂಸ್ಥೆಯ ಅಧಿಪತಿಯಿಂದ ಶೋಧಕನಾಗಿ ನೇಮಕಗೊಂಡವನ ಶೋಧನಾ ವಿಧಾನಗಳಲ್ಲಿ ಎಷ್ಟೇ ಅಸಮ್ಮತಿಗೊಂಡರೂ, ಆ ಮೇಲಿನ ಸಂದರ್ಭಗಳಲ್ಲಿ ಪುನಃ ಪ್ರಯತ್ನಿಸೋಣವೆಂಬ ಭಾವನೆಯನ್ನು ಕಟ್ಟಿಕೊಂಡು ಈ 'ಶೋಧಕ'ನಿದಿರು ತಮ್ಮಿಂದ ಸಾಧ್ಯವಿದ್ದ ರುಜುವಾತುಗಳನ್ನಿಡಲು ನೋಡಬೇಕಲ್ಲದೆ, ತಾವೆಂದಂತೆ, ಅಥವಾ ತಮಗೆ ನ್ಯಾಯವೆಂದು ತೋರಿದಂತೆ ಆತ ವರ್ತಿಸಲಿಲ್ಲವೆಂಬ ಕಾರಣದಿಂದ ಆ ಶೋಧಕನನ್ನೇ ಪ್ರತಿವಾದಿಯೆಂದು ಗಣಿಸುವದು ಯಾವ ನ್ಯಾಯ?

ಇನ್ನು, ಈ 'ಪಾಳಯದೊಳಗಿನ ಖಾಸಗೀ ವಿಚಾರಣೆ'ಯ ಆಪಾದನೆ, ನಿಂದೆ, ದೋಷಾರೋಪಣೆಗಳು ಹೀಗೆಲ್ಲಾ ಪ್ರಕಟವಾಗಿ ಬಟ್ಟಬಯಲಾಗುತ್ತಾ ಬಂದುದು ಯಾವ ಜನತಾ ಜನಾರ್ದನನ ಪ್ರೀತ್ಯರ್ಥವಾಗಿ?

ಜವಾಬ್ದಾರಿ ಸ್ಥಾನಗಳಲ್ಲಿರುವವರೇ ಅನಾಚಾರಕ್ಕೆಳಿದರಾದರೆ ಅಂಥವರನ್ನು ಸಾಮಾನ್ಯರಿಗಿಂತಲೂ ಕಠಿಣವಾಗಿ ದಂಡಿಸಬೇಕು—ನೀತಿ, ನಿಯಮ, ಶಿಸ್ತು, ಶಿಷ್ಟಾಚಾರ ಮುರಿಯುವವರಿಗೂ ಪ್ರಾಯಶ್ಚಿತ್ತವಾಗಲೇಬೇಕು—ಆದರೆ ಎಲ್ಲಕ್ಕಿಂತ ಹೆಚ್ಚಿನದಾಗಿ ಮತ್ತು ಮುಖ್ಯವಾಗಿ ಮೇಲಿನ ದುಶ್ಚೇಷ್ಟೆಗಳಾವುವೂ ಇರದ ಪರಿಶುದ್ಧ ಹಾಗೂ ಪ್ರಗತಿಪರ ವಾತಾವರಣ ಬೇಕು.. ಮದ್ರಾಸಿನಲ್ಲಿ ಅದು ಎಲ್ಲಿದೆ?.

ಉಡುಪಿ.

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಉದ್ಘಾಟನಾ ಸಮಾರಂಭವನ್ನು ಇದೇ ತಾ 27ರಲ್ಲು ಸಂಜೆ ಬೊಂಬಾಯಿಯ ಜನಪ್ರಿಯ ಡಾಕ್ಟರ್. ಶ್ರೀ. ಎ. ವಿ. ಬಾಳಿಗರು ನೆರೆದ ಸಾರ್ವಜನಿಕ ಸಮುದಾಯದ ಮುಂದೆ ನೆರವೇರಿಸಿದರು. ಶ್ರೀಯುತರಿಗೆ ಎಕೆಡಮಿ ಒಫ್ ಜನರಲ್ ಎಜ್ಯುಕೇಶನ್, ಕಾಲೇಜು ಕಮಿಟಿಯ ಪರವಾಗಿ ಡಾ। ಎಸ್. ಆರ್. ಪೈಗಳವರು ಮಾನಪತ್ರವೊಂದನ್ನು ಓದಿ ಅರ್ಪಿಸಿದರು. ಉದ್ಘಾಟನಾ ಸಮಾರಂಭಕ್ಕೆ ಯಶಸ್ಸನ್ನು ಕೋರಿಬಂದ ಹಲವಾರು ಸಂದೇಶಗಳನ್ನು ಶ್ರೀ. ಟಿ. ಎ. ಪೈಗಳವರು ಓದಿದರು. ಮಂಗಳೂರ ಎಡ್ವೊಕೇಟ್ ಶ್ರೀ, ಬಿ. ವೈಕುಂಠ ಬಾಳಿಗರು ಮಂಗಳೂರು ಬಾರ್ ಎಸೋಶಿಯೇಶನಿನ ಪರವಾಗಿ ನಾಲ್ಕು ಮಾತುಗಳನ್ನಾಡಿ ಮಂಗಳೂರ ಜನತೆಯ ಬೆಂಬಲವು ನೂತನ ಕಾಲೇಜು ಸಂಸ್ಥೆಗಿದೆ ಎಂದು ಹೇಳಿದರು. ಮಾನ್ಯ ಡಾ। ಬಾಳಿಗರು ಉತ್ತರವೀಯುತ್ತಾ, ಉಡುಪಿಯಲ್ಲಿ ಎಂದೋ ಆಗಬೇಕಾಗಿದ್ದ ಕಾಲೇಜು ಇಂದಾದರೂ ಕಾರ್ಯರೂಪಕ್ಕೆ ಬರುವಂತೆ ಮಾಡಿದ ಕಾಲೇಜು ಕಮಿಟಿಯನ್ನು ಅಭಿನಂದಿಸಿದರು. ಈ ಕಾಲೇಜು ಉತ್ತರೋತ್ತರ ಅಭಿವೃದ್ಧಿ ಹೊಂದುವಂತೆ ಉಡುಪಿಯ ಹಾಗೂ ಇತರ ಕಡೆಗಳವರು ಉದಾರ ಮನಸ್ಸಿನಿಂದ ಸಹಾಯವೀಯಬೇಕೆಂದರು. ಮಂಜೇಶ್ವರ, ಮೂಲ್ಕಿ, ಕಾರ್ಕಳ ಮೊದಲಾದ ದೇವಸ್ಥಾನಗಳು, ಉಡುಪಿಯ ಮಠಗಳು ತಮ್ಮ ಸಂಪತ್ತಿನ ಕೆಲವಂಶವನ್ನಾದರೂ ವಿದ್ಯಾ ಸಂಸ್ಥೆಗಳಿಗಾಗಿ ಉಪಯೋಗಿಸಬೇಕಾಗಿದೆ ಎಂದರು ಸರಕಾರವು ಮುಂದರಿಸುವ ಮೊದಲು ಧರ್ಮಸಂಸ್ಥೆಗಳು ಆತ್ಮ ಸಂತೋಷದಿಂದ ಈ ಕಾರ್ಯಕ್ಕೆ ತಾವಾಗಿ ಮುಂದೆ ಬರುವುದು ಒಳ್ಳೆತೆಂದರು. ಮಹಾತ್ಮಾಜೀಯವರ ಹೆಸರಿನಿಂದ ಜನ್ಮತಾಳಿದ ಈ ಕಾಲೇಜು ಆದರ್ಶ ಸಂಸ್ಥೆಯಾಗಿ ಇಲ್ಲಿ ಕಲಿತು ಹೋಗುವ ವಿದ್ಯಾರ್ಥಿಗಳು ಆದರ್ಶ ಪುರುಷರಾಗಿ ಮೆರೆವಾಡುವಂತೆ ಭಗವಂತನು ಅನುಗ್ರಹಿಸಲೆಂದು ಬಯಸಿದರು. ಡಾ। ಟಿ, ಮಾಧವ ಪೈಗಳವರು ಧನ್ಯವಾದಗಳನ್ನರ್ಪಿಸಿದರು. ನಂತರ ನಾಟ್ಯಕೂಟದ ಕಡೆಯಿಂದ ಶ್ರೀಗಳಾದ ಆರ್, ಆರ್, ಕುಂಜತ್ತೂರು, ಎ, ಜೆ, ಅಲ್ಸೆ, ಪದ್ಮನಾಭಶೆಟ್, ಸಿ. ಶೀನಶೆಟ್ಟರು ಪಾತ್ರ ವಹಿಸಿ, ಶ್ರೀ ಸಿ. ಸೀನಶೆಟ್ಟರಿಂದ ಬರೆಯಲ್ಪಟ್ಟ ಏಕಾಂಕ ನಾಟಕ ದೃಶ್ಯವನ್ನು ಚಲೋದಾಗಿ ಪ್ರದರ್ಶಿಸಿದರು.

ಚಹಾ ಸತ್ಕಾರ: ಮುನಿಸಿಪಲ್ ಚೆಯರ್‌ಮೆನ್ ಶ್ರೀ ಸಿ. ಉಪೇಂದ್ರ ಶ್ರೀನಿವಾಸ ನಾಯ್ಕರು ತಾ 27ರಲ್ಲು ಅಪರಾಹ್ನ 3½ ತಾಸಿಗೆ ಡಾ। ಎ. ವಿ. ಬಾಳಿಗರಿಗೆ ಮುನಿಸಿಪಲ್ ಆಫೀಸಿನಲ್ಲಿ ಚಹಾಸತ್ಕಾರವಿತ್ತುದಲ್ಲದೆ ಉಡುಪಿ ನಾಗರಿಕರ ಪರವಾಗಿ ಸುಸ್ವಾಗತವನ್ನಿತ್ತರು. ತನಗಿತ್ತ ಸನ್ಮಾನಕ್ಕಾಗಿ ಮಾನ್ಯ ಅತಿಥಿಯು ಆಭಾರ ಸೂಚಿಸಿದರು.

ಬೊಂಬೆ ಲ್ಯಾಬ್ ಆಫೀಸಿನಲ್ಲಿ ಡಾ। ಬಾಳಿಗರ ಹಳೆಸಂಗಾತಿ ಸಹಪಾಠಿಗಳು ತಾ 27ರಲ್ಲು ಪೂರ್ವಾಹ್ನ ಅವರಿಗೆ ಉಪಾಹಾರವನ್ನಿತ್ತರು. ಯೋಗಕ್ಷೇಮಗಳನ್ನು ವಿಚಾರಿಸಿ ಕುರಲ ಮಾತುಗಳನ್ನಾಡಿದರು ಡಾ। ಬಾಳಿಗರು.

ಕಲ್ಯಾಣಪುರದಲ್ಲಿ ಬಾಲಾ ಸಂದರ್ಶನ: ಡಾ। ಬಾಳಿಗರು ತಾ 28ರಲ್ಲು ಅಪರಾಹ್ನ ಕಲ್ಯಾಣಪುರ ಹಿಂದೂ ಹಾಯರ್ ಎಲಿಮೆಂಟರಿ ಶಾಲೆ ಮತ್ತು ಮಿಲಾಗ್ರಿಸ್ ಹೈಸ್ಕೂಲುಗಳನ್ನು ಸಂದರ್ಶಿಸಿದರು. ಮಕ್ಕಳಿಗೆ ನಾಲ್ಕು ಹಿತೋಕ್ತಿಗಳನ್ನು ಹೇಳಿದರು.

ಮಾನ್ಯಮಂತ್ರಿ ಗೋಪಾಲ ರೆಡ್ಡಿಯವರು— ತಾ. 3ಕ್ಕೆ ಸಂಜೆ ಮಂಗಳೂರಿಗೆ ಬಂದು ಮರುದಿನ ಮಂಗಳೂರಲ್ಲಿ ಉಳಿದು ತಾ 5ಕ್ಕೆ ಮೋಟಾರು ಕಾರಿನಲ್ಲಿ ಮೂಡಬಿದ್ರಿ, ಶಿರ್ವ, ಇನ್ನಂಜೆ, ಕಟಪಾಡಿಗಾಗಿ ಉಡುಪಿಗೆ ಬಂದು ತಾ 6ಕ್ಕೆ ಕುಂದಾಪುರಕ್ಕೆ ಹೋಗಿ ಮರುದಿನ ಅಲ್ಲಿಂದ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಹಿಂತಿರುಗುವರು. ತಾ 8ಕ್ಕೆ ಪುತ್ತೂರಿಗೆ ಹೋಗಿಬಂದು ಮರುದಿನ ಮದ್ರಾಸಿಗೆ ಹಿಂತೆರಳುವರೆಂದು ತಿಳಿದು ಬರುತ್ತದೆ.

ಆಲೆವೂರು: ಇಲ್ಲಿಯ ಅಧ್ಯ ಮಹನೀಯರಲ್ಲೊಬ್ಬರಾದ ಶ್ರೀ ಪುಣಿಚೆ ಗೋಪಾಲ ಕೃಷ್ಣ ಭಟ್ಟರು ಇದೇ ತಾ. 26ರಲ್ಲು ಅಪರಾಹ್ನ ತನ್ನ 69ನೆ ವಯಸ್ಸಿನಲ್ಲಿ ಸ್ವಗೃಹದಲ್ಲಿ ದೈವಾಧೀನರಾದರು. ಶ್ರೀಯುತರು ಆಲೆವೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳ್ತೆದಾರರಾಗಿದ್ದು ಸದ್ರಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು ಮಾಡಿರುವುದಲ್ಲದೆ ಶ್ರೀ ದೇವಸನ್ನಿಧಿಯಲ್ಲಿ ಎರಡು ಸಲ ರಾಶಿಪೂಜೆ ಸೇವೆಯನ್ನೂ ಒಮ್ಮೆ ಮಹಾಗಣಪತಿ ಪ್ರೀತ್ಯರ್ಥವಾಗಿ ಗಣಯಾಗವನ್ನೂ ಬಹು ಆಸಕ್ತಿಯಿಂದ ಮಾಡಿಸಿದ್ದರು. ಶ್ರೀಯುತರ ಅಗಲುವಿಕೆಯಿಂದುಂಟಾದ ಶೋಕದಲ್ಲಿ ಅವರ ಪತ್ನೀ, ಪುತ್ರಿಯರಲ್ಲೂ ಗ್ರಾಮನಿವಾಸಿಗಳಲ್ಲೂ ಸಹ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವೆವು.

ಕರ್ನಾಟಕ ಏಕೀಕರಣವೇ ಕನ್ನಡ ಜನತೆಯ ಮುಖ್ಯ ಧ್ಯೇಯ!

ಹರಿದು ಹಂಚಿದ ಕನ್ನಡ ಜನತೆಯನ್ನು ಒಂದುಗೂಡಿಸುವ 2 ಕೋಟಿ ಕಂಠಗಳ ಮಹಾ ಧ್ವನಿಯೇ ಏಕೀಕರಣದ ಮಹಾ ಗುರಿ.

ಅಂತೆಯೇ ಶಾಸ್ತ್ರೀಯ ರೀತಿಯ ಆಯುರ್ವೇದ ತಯಾರಿಯಿಂದ ಜನಸಾಮಾನ್ಯರ ಸೇವೆಯೇ **ಸುಧಾಂ**ವರ ಮಹಾ ಧ್ಯೇಯ.

ಪಾಯಿಲೋಕ್ಯೂರಾ:— ಮೂಲವ್ಯಾಧಿಗೆ ಇನ್ನುಮೇಲೆ ಭಯಪಡಬೇಕಾದ್ದಿಲ್ಲ. ನಮ್ಮ ಪಾಯಿಲೋಕ್ಯೂರಾ ಸೇವಿಸುವುದರಿಂದ ಮೊಳೆಯನ್ನು ನಿರ್ಮೂಲಗೊಳಿಸಿ, ರಕ್ತಸ್ರಾವವನ್ನು ನಿಲ್ಲಿಸುವುದು. ಮತ್ತು ಪ್ರಕೃತಿಯನ್ನು ಸುಲಭಗೊಳಿಸುವುದು.

ಇದೊಂದು ಆಯುರ್ವೇದದಲ್ಲಿ ರತ್ನವಿದ್ದಂತೆ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ ವಿಚಾರಿಸಿರಿ:—

ದಕ್ಷಿಣ ಭಾರತದ ಪ್ರಮುಖ ವಿತರಣಕರ್ತರು.

ಯು. ಪಿ. ಬಿ. ಬಿ. ಎಂಡ್ ಕಂಪೆನಿ,

ಪೋಸ್ಟುಬೋಕ್ಸ್ ನಂಬ್ರ 38, ರೋಯಲ್ ಮಹಾಲ್, ಉಡುಪಿ. ದ. ಭಾ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಡಿಯುವ ಚಿತ್ರ.

ಹೊನ್ನಪ್ಪ ಭಾಗವತರ್, ಕೆ ಯಲ್. ವಿ. ವಸಂತಂ, ಎನ್. ಎಸ್. ಕೃಷ್ಣನ್, ಟಿ. ಎ. ಮಥುರಮ್, ಮೊದಲಾದವರುನಟಿಸಿದ,

"ಬರ್ಮಾ ರಾಣಿ"

ಬರುವ ಚಿತ್ರ-

"ಪರಾಯಿ ಆಗ್"

ಉಲ್ಹಾಸ್, ಮುನ್ನಾವರ್‌ಸುಲ್ತಾನ್, ಮಧುಕರ್ ಗುಪ್ತೆ.

ದ. ಕ. ಜಿಲ್ಲಾ-

ಪುತ್ತೂರುಜೂನ್ ತಾ 20ರಲ್ಲಿ ಇಲ್ಲಿಯ ಭಾರತ ಟಾಕೀಸ್ ಲಿಮಿಟೆಡ್ ಸಂಸ್ಥೆಯವರು ಕಟ್ಟಿಸಿದ ಅರುಣ ಥಿಯೇಟರಿನ ಉದ್ಘಾಟನಾ ಸಮಾರಂಭವು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಜನಾಬ್ ಎಸ್. ಎ. ಕರೀಮ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅನೇಕ ಗೃಹಸ್ಥ ಗೃಹಿಣಿಯರು ಈ ಸಮಾರಂಭಕ್ಕೆ ಬಂದಿದ್ದರು.

ಕಾಸರಗೋಡು ತಾಲೂಕಿನ ಕೊಡ್ಲಮೊಗರು ಶ್ರೀವಾಣೀ ವಿಜಯ ಹಾ। ಎಲಿಮೆಂಟರಿ ಶಾಲೆಯಲ್ಲಿ ಕಳೆದ ಎಪ್ರಿಲ್ ತಿಂಗಳಲ್ಲಿ E. S. L. C. ಪರೀಕ್ಷೆಗೆ ಕುಳಿತ 28 ವಿದ್ಯಾರ್ಥಿಗಳಲ್ಲಿ 23 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು. ಇಂಗ್ಲಿಷ್ ವಿಷಯದಲ್ಲೂ ಪರೀಕ್ಷೆಕೊಟ್ಟ ವಿದ್ಯಾರ್ಥಿಗಳೆಲ್ಲರೂ ಪಾಸಾಗಿರುವುದು ಎತ್ತಿ ಹೇಳತಕ್ಕದಾಗಿದೆ. ಊರ ಮಹನೀಯರ ಸಹಕಾರ, ಇಲಾಖಾ ಬೆಂಬಲ-ಪ್ರೋತ್ಸಾಹಗಳಿಂದ ಶಾಲೆಯು ಬೇಗನೆ ಹೈಸ್ಕೂಲಾಗಿ ಮಾರ್ಪಡುವುದು ಕಾಲೋಚಿತ.

ತಲಪಾಡಿ ಶ್ರೀ ದುರ್ಗಾ ಪ್ರಸಾದಿಕ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಶ್ರೀ ಉಡುಪಿ ವ್ಯಾಸಾಚಾರ್ಯರಿಂದ ಹರಿಕಥಾ ಕಾಲಕ್ಷೇಪ ಜರಗಿತು. ಶ್ರೀ ಆಚಾರ್ಯರು ತಿರುವಾಂಕೂರು ಮಹಾರಾಜರ ಆಶ್ರಯದಲ್ಲಿ ಸಂಗೀತ ತರಬೇತಿಯನ್ನು ಪಡೆದಿರುವರು.

Free! Free!!

DR. OSBORNE'S

famous

REMEDY—REJUVENATOR

SUPER D' SELIPHOSE

with atomised **GOLD** popularly known the world over as the S. S. Course for men and women.

Now available in INDIA. Ask for free valuable literature and copies of brilliant appreciative letters received from gentlemen all over INDIA, since its introduction in August, 1948. Price Rs 6 (Full course).

Debilitated youths and persons over 48 years please Note particularly. A sure remedy for your ailments and an outstanding REJUVENATOR for your body Already a favourite with Doctors and public.

Contact Sole Distributors:

NORTHEND NEWSTREET & CO.,

(Medical Dept.) POST BOX No. 96

MATTANCHERRY, COCHIN.

(Sub. Dist.)

R. A. SIMONS ESQR.,

(M. C.) *UDIPI, S. K.*

ನೂತನ ದಂಪತಿಗಳ ಭಾವಚಿತ್ರಗಳ ಪ್ರಕಟಣೆ

ನೂತನ ದಂಪತಿಗಳ 'ಫೋಟೋ'ವನ್ನು ನಮಗೆ ಕಳಿಸಿದಲ್ಲಿ ಅದರ ಬ್ಲೋಕನ್ನು ನಾವೇ ತಯಾರಿಸಿ 'ನವಯುಗ'ದಲ್ಲಿ ಪ್ರಕಟಿಸಲಿರುವೆವು. ಆದರೆ ಬ್ಲೋಕು ತಯಾರಿಸುವ ಖರ್ಚು ರೂ. 10/-ನ್ನು ಕೊಡಬೇಕಾಗುವುದು. ನೂತನ ದಂಪತಿಗಳು ಈ ಸಂದರ್ಭವನ್ನು ಕಳಕೊಳ್ಳಬಾರದಾಗಿ ವಿನಂತಿ.

'ಫೋಟೋ'ವನ್ನೂ ಹಣವನ್ನೂ ಕೆಳಗಿನ ವಿಳಾಸಕ್ಕೆ ಕಳಿಸುವುದು.

ಮೆನೇಜರ್, ನವಯುಗ, ಉಡುಪಿ.

ಜನಮತ

ಮದುವೆಯಾದ ನೋಟೀಸು ಯಾರಿಗೆ ಮತ್ತು ಹೇಗೆ ಕೊಡಬೇಕು ?

ಈಗ ಹೊಸತಾಗಿ ಜಾರಿಯಲ್ಲಿ ಬಂದಿರುವ 'ಅಳಿಯ ಸಂತಾನ ಕಾನೂನಿನ' 11ನೇ ಪರಿಚ್ಛೇದದ (3)ನೇ ಪ್ರಕರಣದಲ್ಲಿ, 'ಮದುವೆಯಾದವರು ನಿಶ್ಚಿತ ಫೋರ್ಮಿನಲ್ಲಿ ಬರೆದು ನಿಶ್ಚಿತಾಧಿಕಾರಿಗಳಿಗೆ ತಮ್ಮ ಮದುವೆ ಸಂಬಂಧದ ನೋಟೀಸು ಕೊಡದಿದ್ದರೆ, ಅಂಥವರು ರೂ. 50ರ ವರೆಗಿನ ಜುಲ್ಮಾನೆಗೊಳಗಾಗಲು ಬದ್ಧರಿದ್ದಾರೆ' ಎಂಬ ನಮೂದನೆಯಿದೆ. ಈ ಕಾನೂನು ಜಾರಿಗೆ ಬಂದ ದಿನದ ನಂತರ ಅಳಿಯ ಸಂತಾನಿಗರ ಹಲವು ಮದುವೆಗಳಾದುವು. ಆದರೆ ಮದುವೇ ಸಂಬಂಧದಲ್ಲಿ ಕೊಡುವ ನೋಟಿಸನ್ನು ಬರೆಯುವ ಫೋರ್ಮುಗಳು ಈ ತನಕ ಹೊರಬಿದ್ದಿಲ್ಲ; ಆ ಅರ್ಜಿ ಸ್ವೀಕರಿಸುವ ಅಧಿಕಾರಿಗಳನ್ನು ಸರಕಾರವು ನೇಮಿಸಿದ್ದೂ ಪ್ರಕಟವಾಗಿಲ್ಲ. ಅಂದ ಮೇಲೆ ಮದುವೆಯಾದವರು ನಿಶ್ಚಿತ ಫೋರ್ಮ್‌ನಲ್ಲಿ ನಿಶ್ಚಿತಾಧಿಕಾರಿಗೆ ಅರ್ಜಿ ಬರಕೊಳ್ಳದಿದ್ದರೆ, ಅದು ತಪ್ಪಾಗಲು ಸಾಧ್ಯವಿಲ್ಲ. ಆದರೆ ಇಂತಹ ಶರ್ತು ಹಾಕಿಯೂ ಆ ಶರ್ತು ಪಾಲನೆಯ ವ್ಯವಸ್ಥೆಯನ್ನು ಆಗದಿರುವುದು ಯಾರ ತಪ್ಪು ?

—"ಅಳಿಯ ಸಂತಾನಿಗ"

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves head-ache etc.

REGD TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿರೋಗ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ, ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕವಲಗುಡ್ಡ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ಸ್ವಂತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ

S. S. L. C. **ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ**

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ,

ಸೆಕ್ರೆಟರಿ

ತಾರಾನಾಥ ವಿದ್ಯಾಪೀಠ ಬಳ್ಳಾರಿ.

P. O. ಸಂಗನಕಲ್ ಬಳ್ಳಾರಿ.

ಮಂಗಳೂರು
ಸಂಭಾವನಾ ಸಮಿತಿ ಸಭೆ

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ 60ನೇ ವರ್ಧಂತಿಗೆ 'ಗ್ರಂಥಕಾಣಿಕೆ' ಮಾಡುವ ಸಂಭಾವನಾ ಸಮಿತಿಯವರು ತಾ. 19.6-49ರಲ್ಲಿ ವೀರಭವನದಲ್ಲಿ ಸಭೆ ಸೇರಿದರು. ಶ್ರೀಗಳಾದ ವಿ. ಸೀತಾರಾಮಯ್ಯ ಚಿಕ್ಕಮಗಳೂರು, ಕೆ. ಬಿ. ಜಿನರಾಜ ಹೆಗ್ಗಡೆ, ಎಸ್. ಎಸ್. ಶೆಟ್ಟಿ, ಎಚ್. ಭೀಮರಾವ್, ಎಂ. ಕೆ. ದೇವರಾಜರು, ಶ್ರೀನಿವಾಸ ಬಲ್ಲಾಳರು, ಡಿ. ಪುಟ್ಟ ಸ್ವಾಮಿ, ಎ. ರಾಮಣ್ಣ ಶೆಟ್ಟಿ ಮತ್ತು ಸಮಿತಿಯ ಆಹ್ವಾನದಂತೆ ಕಡಂಗೋಡ್ಲು ಶಂಕರ ಭಟ್ಟರು, ಮಂಜೇಶ್ವರ ಗೋವಿಂದ ಪೈಗಳು, ಕೋ. ಶಿ. ಕಾರಂತರು ಕೂಡಾ ಬಂದಿದ್ದರು. ಈವರೆಗೆ ಬಂದ ಮತ್ತು ಒಪ್ಪಿಕೊಂಡ ಲೇಖನ ಪರಿಶೀಲನೆ ಮಾಡಿ, ತಿದ್ದುಪಡಿ ಸೂಚಿಸಿ, ವಿಮರ್ಶಕ ಕಮಿಟಿ ಆರಿಸಿ, ಅವರ ಸ್ವಾಧೀನಕ್ಕೆ ಕೊಡಲಾಯಿತು. ಲೇಖನಗಳು ಜುಲೈ 15 ರೊಳಗೆ ತಲಪಬೇಕೆಂದೂ, ಆಗಸ್ಟ್ ಪ್ರಾರಂಭಕ್ಕೆ ಪ್ರೆಸ್ಸಿಗೆ ಗ್ರಂಥವು ಹೋಗಬೇಕೆಂದೂ, ಗ್ರಂಥದ ಪುಟ 480 ಮತ್ತು ಒಟ್ಟು ವೆಚ್ಚ ರೂ 7000 ಬೇಕಾಗುವದೆಂದೂ ನಿಶ್ಚೈಸಲಾಯಿತು. ನವಂಬರದಲ್ಲಿ ಗ್ರಂಥವು ಸಮರ್ಪಿತವಾಗಬೇಕೆಂದೂ ತೀರ್ಮಾನಿಸಿತು.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ದೊರೆಯುತ್ತವೆ.

ದೊಡ್ಡ ಸೈಜು	ರೂ. 5 0 0
ಪಾಕೆಟ್ ಸೈಜು	ರೂ. 4 8 0

ನವಯುಗ ಪ್ರೆಸ್, ಉಡುಪಿ.

ಅಥವಾ

ನವಯುಗ ಆಫೀಸು, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಓದಲೇ ಬೇಕಾದ ಪುಸ್ತಕಗಳು

ಶ್ರೀ. ಕೆ. ಕೆ. ಶೆಟ್ಟರ

ಪ್ರೇಮ ವಿಜಯ

(ಸಾಮಾಜಿಕ ನಾಟಕ)

ಬೆಲೆ ರೂ 1—0—0

ವ್ಯಭಿಚಾರಿಣಿ ಯಾರು

(ಸಾಮಾಜಿಕ ನಾಟಕ)

ಬೆಲೆ ರೂ 1—0—0

ವಿವಿಧ ಕತೆಗಾರರ

ಪ್ರೇಮ ಪ್ರವಾಹ

(ಕಥಾ ಸಂಕಲನ)

ಬೆಲೆ ರೂ 0—8—0

ನವಭಾರತ ಬುಕ್ ಡಿಪೊ,

ಉಡುಪಿ.

ಮಂಗಳೂರು

ಜಿಲ್ಲಾ ಕಲೆಕ್ಟರರ ಪ್ರಕಟಣೆ.

ಒಂದನೆ ಮತ್ತು ಎರಡನೆ ಬೆಳೆಯ ಅಕ್ಕಿ ಭತ್ತವನ್ನು ಸಕಾಲದಲ್ಲಿ ಒಪ್ಪಿಸದಿದ್ದವರಿಗೆ ಅಕ್ಕಿಯಾದರೆ ಎಂಟಾಣೆ, ಭತ್ತವಾದರೆ ಆರಾಣೆಯಂತೆ ಮುಡಿಯೊಳ್ಗುವುದಲ್ಲಿ ಕಡಿತಮಾಡಲಾಗುವುದು. ಮೂರನೆ ಬೆಳೆಯ ಉಳಿತಾಯವನ್ನು ಇದೇ ತಾ 18ರೊಳಗೆ ಒಪ್ಪಿಸಿದ್ದಲ್ಲಿ ಕಡಿತವಿಲ್ಲ. ತಾ. 19ರಿಂದ 25ರೊಳಗಾಗಿ ಒಪ್ಪಿಸಿದವರಿಗೆ ಅಕ್ಕಿ ಮುಡಿಯಲ್ಲಿ ನಾಲ್ಕಾಣೆಯಂತೆಯೂ ಭತ್ತ ಮುಡಿಯಲ್ಲಿ ಎರಡಾಣೆಯಂತೆಯೂ ಕಡಿತವಿದೆ. ತಾ 26 ಯ ಅನಂತರ ಒಪ್ಪಿಸಿದ ಭತ್ತ ಮುಡಿಯ ಮೇಲೆ ಆರಾಣೆಯಂತೆಯೂ ಅಕ್ಕಿ ಮುಡಿಯ ಮೇಲೆ ಎಂಟಾಣೆಯಂತೆಯೂ ಕಡಿತಮಾಡಲಾಗುವುದೆಂದು ಇದೇ ತಾ 21ರಲ್ಲಿ ಜಿಲ್ಲಾ ಕಲೆಕ್ಟರರು ಒಂದು ಪ್ರಕಟಣೆ ಹೊರಡಿಸಿರುತ್ತಾರೆ.

ಜಿಲ್ಲಾ ಟೀಚರ್ಸ್‌ಗಿಲ್ಡಿನ ಕೌನ್ಸಿಲು

ಸಭೆಯು ಈಚೆಗೆ ಎಲೋಸಿಯಸ್ ಕಾಲೇಜಿನಲ್ಲಿ ರಿ ಫಾ ಸಿಕೇರರ ಅಧ್ಯಕ್ಷತೆಯಲ್ಲಿ ಜರಗಿ ಕಳೆದ ಮಹಾ ಸಭೆಯಲ್ಲಿ ಪಾಸಾದ ಕೆಲವು ನಿರ್ಣಯಗಳನ್ನು ವಿಮರ್ಶಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಡುವುದೆಂದಾಯಿತು.

ಕೇಂದ್ರ ಸರಕಾರದ ಮಂತ್ರಿಗಳಿಗೆ ಮನವಿ

ಅಖಿಲ ಭಾರತ ಸುಪಾರಿ ಫೆಡರೇಶನಿನವರು ಕೇಂದ್ರ ಸಂಕಾರದ ಕೃಷಿ ಮಂತ್ರಿಗಳಾದ ಶ್ರೀ ಜಯರಾಮದಾಸ್ ದೌಲತ ರಾಮರಿಗೆ ಒಂದು ಮನವಿಯನ್ನು ಒಪ್ಪಿಸಿ, ಅದರಲ್ಲಿ ಸರಕಾರದ ಅಡಿಕೆ ಕಮಿಟಿಗೆ ಅಡಿಕೆ ವ್ಯವಸಾಯಗಾರರಿಗಿತ್ತ ಸ್ಥಾನಗಳಲ್ಲಿ ಕೆಲವೊಂದು ಸುಧಾರಣೆಗಳನ್ನು ಮಾಡಬೇಕೆಂದು ಸೂಚಿಸಿರುವರು.

ಸಂತೋಷಸೂಚಕ ರಜೆ

ಸ್ಯೆಂಟ್ ಎಲೋಸಿಯಸ್ ಕಾಲೇಜಿನ ಈ ವರ್ಷದ ಸರಕಾರಿ ಪರೀಕ್ಷೆಯ ಫಲಿತಾಂಶವು ಉತ್ತಮವಾಗಿದ್ದುದರಿಂದ ಸಂತೋಷ ಸೂಚನಾರ್ಥವಾಗಿ ವಿದ್ಯಾರ್ಥಿಗಳಿಗೆ ಇದೇ ತಾ 19 ರಲ್ಲಿ ರಜೆಕೊಡೋಣಾಗಿತ್ತು.

ಅಡಿಕೆ ಬೇಸಾಯಗಾರರಿಂದ ಸೆಕ್ಯೂರಿಟಿ

ಬೇಸಾಯದ ಬಗ್ಗೆ ಅಕ್ಕಿ ಯಾ ಭತ್ತವನ್ನಿಟ್ಟುಕೊಂಡ ಅಡಿಕೆ ಬೇಸಾಯಗಾರರಿಂದ ಸರಕಾರವೀಗ ಪ್ರತಿಯೊಂದು ಮುಡಿ ಭತ್ತಕ್ಕೆ ಮೂರು ರುಪಾಯಿ, ಮತ್ತು ಒಂದು ಮುಡಿ ಅಕ್ಕಿಗೆ ಆರು ರುಪಾಯಿಯಂತೆ ಸೆಕ್ಯೂರಿಟಿ ಕೇಳಿದೆ. ಅಲ್ಲದೆ ಅಕ್ಕಿ ಯಾ ಭತ್ತವನ್ನಿಟ್ಟುಕೊಳ್ಳುವ ಕುರಿತು ಇರುವ ಕೆಲವು ಶರ್ತಗಳನ್ನು ಸರಿಯಾಗಿ ಅನುಸರಿಸುವೆವು ಎಂದು ಬೋಂಡು ಬರೆದು ಕೊಡಬೇಕೆಂದೂ ಸರಕಾರದಿಂದ ಬೇಸಾಯಗಾರರಿಗೆ ನೋಟೀಸು ಬಂದಿದೆ. ಈ ಎರಡು ಶರ್ತಗಳನ್ನು ರದ್ದುಗೊಳಿಸಬೇಕೆಂದು ಕೇಳಿಕೊಳ್ಳುವ ಮನವಿಯೊಂದನ್ನು ಮದ್ರಾಸು ಸರಕಾರಕ್ಕೆ ಕಳುಹಿಸಿಕೊಡಲಾಗಿದೆ ಎಂದು ಗೊತ್ತಾಗಿದೆ.

ದ. ಕ. ಒಟೋಮೊಬೈಲ್ ಕೆಲಸಗಾರರ ಯೂನಿಯನ್ನಿನ

ಕಾರ್ಯಕಾರಿ ಸಮಿತಿಯು ಈಚೆಗೆ ಅದರ ಅಧ್ಯಕ್ಷ ಶ್ರೀ ಬಿ. ಗಣೇಶ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ನಿನ ಈಗಿನ ಪರಿಸ್ಥಿತಿಯು ಅಷ್ಟೊಂದು ಚೆನ್ನಾಗಿಲ್ಲವಾದುದರಿಂದ ಸದಸ್ಯರೆಲ್ಲರೂ ಇನ್ನೂ ಹೆಚ್ಚು ಬೆಂಬಲನೀಡಿ ಯೂನಿಯನ್ನಿನ ಅಭಿವೃದ್ಧಿಗಾಗಿ ದುಡಿಯಬೇಕು ಎಂಬಿತ್ಯಾದಿ ವಿಷಯಗಳಲ್ಲಿ ಗೊತ್ತುವಳಿಗಳಾದುವು.

ಮಾನ್ಯ ಮಂತ್ರಿ ಗೋಪಾಲರೆಡ್ಡಿಯವರು

ಜುಲೈ ತಿಂಗಳ ಮೊದಲ ದಿನದಲ್ಲಿ ಮಂಗಳೂರಿಗೆ ಆಗಮಿಸಿ ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ಸಂದರ್ಶಿಸುವ ಐದಾರು ದಿವಸಗಳ ಕಾರ್ಯಕ್ರಮ ಹಾಕಿರುವರೆಂದು ವರ್ತಮಾನವಿದೆ.

ಹೆಚ್ಚಿಗೆ ವ್ಯಾಪಾರಿಕರಕ್ಕೆ ವಿರೋಧ.

ದ. ಕ. ಜಿಲ್ಲಾ ಹೋಟೆಲ್ ಮಾಲಕರ ಸಭೆಯು ಈಚೆಗೆ ಅದರ ಅಧ್ಯಕ್ಷ ಶ್ರೀ ಕೆ. ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿ ಹೆಚ್ಚಿಗೆ ಸೇಲ್ಸ್ ಟೇಕ್ಸನ್ನು ಮಾಲಕರ ಮೇಲೆ ಹೊರಿಸಬಾರದೆಂದೂ, ಸರಕಾರದ ಧೋರಣೆಯನ್ನು ಬದಲಾಯಿಸಬೇಕೆಂದೂ ಸರಕಾರಕ್ಕೆ ತಿಳಿಸುವ ನಿರ್ಧಾರಗಳಾದುವು.

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯ ವಾಚಕರೇ.................

ನಾನು ಒಬ್ಬ ಸಾಧಾರಣ ಮನುಷ್ಯ—ದುರದೃಷ್ಟವಶಾತ್ ನನ್ನ ಮಿತಿಮೀರಿದ ಕಾಮುಕ ಜೀವನವು ಅತಿ ಬೇಗನೆ ನರಗಳ ದೌರ್ಬಲ್ಯಕ್ಕೆಳೆಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಹೃದಯನಾದವೂ ಜಾಸ್ತಿಯಾಯಿತು. ನಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತದಿಂದಿರುವುದಕ್ಕೆ ಬೇಜಾರೆನಿಸಿತು. ನನ್ನ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಆದರೆ ನಾನೆಂತು ಅದನ್ನು ತಿಳಿಸುವುದು? ಗುಟ್ಟಾಗಿ ಸಾವಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲದಂತಾಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪೆಶಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು [ಸನ್ಯಾಸಿ] ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಷ್ಟದಿಂದ ಮಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ತಿಳಿಸುವಂತೆ ಬಲಾತ್ಕರಿಸಿತು. ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎರಡು ಔಷಧಿಗಳನ್ನು ದಯಪಾಲಿಸಿದರು—ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಪಿಸುವುದಕ್ಕೆ. ಅವರು ಹೇಳಿದಂತೆ ಗಿಡಮೂಲಿಕೆಗಳನ್ನು ಹುಡುಕಿ ತಂದು ಅವರೆದುರಿನಲ್ಲಿಯೇ ಆ ಎರಡು ಔಷಧಿಗಳನ್ನು ತಯಾರಿಸಿದೆನು. ಅನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಪ್ರಿಯ ವಾಚಕರೆ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೨೧ ದಿವಸಗಳಲ್ಲಿ ಸುಧಾರಿಸಿದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿ ದಿನವೂ ೪ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲವನಾದೆನು. ಕಣ್ಣುಗಳ ಹೊಳಪು ಬಂತು. ಒಂದು ತರಹ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು. ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅದರಿಂದ ಮಹತ್ತ ಗುಣವನ್ನು ಕಂಡುದಲ್ಲದೆ ಅದಕ್ಕಿಂತ ಬೇರೆ ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾ ಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನುಪಯೋಗಿಸಿ ನಿರಾಶರಾಗಿರುವವರು ಇದನ್ನು ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಅದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. 5-0-0

ಹೊರಗೆ ಲೇಪಿಸುವ ತೈಲಕ್ಕೆ:— ೨೧ ದಿವಸಕ್ಕೆ ರೂ. 5-8-0

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು.

ಈ ಔಷಧಿಯು "ಕುಷ್ಟ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು. [ತೈಲವು ಚರ್ಮದ ಸೊಕ್ಕನ್ನು ಹುಟ್ಟಿಸುವುದಿಲ್ಲ.]

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ:—

[೧] ಡಾ. ಕೆ. ಜಿ. ಮಟ್ಟಿತ್ತಾಲ್, ಕೊಚಿನವರು ಬರೆಯುತ್ತಾರೆ:- ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೆ, ವೃದ್ಧರಿಗೂ ಪ್ರಯೋಗಿಸಿ ಅದರ ಶಕ್ತಿದಾಯಕ ಕೆಲಸವನ್ನು ಮೆಚ್ಚಿದ್ದೇನೆ.

[೨] ಡಾ. ಜೇವಿಯರ್ ಕುರುಪ ಸೇರಿ, ಕುಂಬಲಾಂಗಿಯವರು ಬರೆಯುತ್ತಾರೆ:— ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನುಂಟುಮಾಡಿವೆ.

[೩] ಮ್ಯಾನೇಜರ್, "ಮೈ ಮ್ಯಾಗಜೈನ್" ಮದ್ರಾಸು ಬರೆಯುತ್ತಾರೆ:-ನಾನು ದಾರ್-ಉಲ್-ಶಫಾ-ಗೋಲಿಯಾನ, ಬಟಾಲರವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ಮಾನವನಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ. ಲೆಕ್ಕವಿಲ್ಲದಷ್ಟು ಸಾವಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು.

ಖಾತ್ರಿ:- ಈ ಔಷಧಿಗಳು ಯಾವ ತೊಂದರೆಯನ್ನು ಮಾಡುವ ಪದಾರ್ಥಗಳನ್ನೂ ಹೊಂದಿಲ್ಲ. ಮತ್ತು ಇದನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ವಾಪಸ್ಸು ಮಾಡಲಾಗುವದು.

ನಿಮ್ಮ ಆರ್ಡರನ್ನು ಇವರಿಗೆ ಕಳುಹಿಸಿರಿ.—

The Manager,

DAR-UL-SHAFA GOLIAN (Regd.) (N.Y.U.) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಶಫಾ-ಗೋಲಿಯಾನ (ರಿಜಿಸ್ಟರ್ಡ್) (N.Y.U.) ಬಟಾಲ (ಪಂಜಾಬ್)

NOTICE

In the matter of the Canara Forest and Farms Ltd., (In liquidation.)

The liquidator of the above company will publicly auction the right of collecting the amounts due under the decrees obtained by him against the contributories at 10 A. M. on sunday the 10th day of July. 1949 at his office in Karkal and will assign the decree rights in favour of the highest bidder.

Terms of sale:-(1) The entire purchase price must be paid in cash to the liquidator on the date of sale. (2) The assignment charges will have to be borne by the purchaser.

Better Particulars of the rights proposed to be sold can be had in the office of the liquidator on any day. All intending bidders are requested to be present on that day.

N. M. Adyanthaya.
Liquidator.

Karkal 28-6-49.

ಋತುಸ್ರಾವ ನಿಂತಿತು

"ಕುಸುಮ" ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪಿದ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ]

Mrs- D. DEVEE, F. DS. (N. J.)
Tollygunge CALCUTTA.

ಸಾ. ಕಿ. ಹ. ನಂ: ಶಶಾಂಕ [illegible]

ಕರ್ನಾಟಕ ಪ್ರಾಂತ್ಯರಚನೆ ಏಕಾಗಬೇಕು?

ಲೇಖಕರು:- ಶ್ರೀ. ಜಿ ಎಸ್. ಅರ್ಕಲಗೂಡು, ಬಳ್ಳಾರಿ.

ಭಾರತವು ಸ್ವಾತಂತ್ರ್ಯ ಗಳಿಸಿದ ಮೇಲೆ ಸಾಧಾರಣವಾಗಿ ಎಲ್ಲ ಪತ್ರಿಕೆಗಳಲ್ಲೂ ಭಾಷಾವಾರು ಪ್ರಾಂತ ರಚನೆಯ ವಿಷಯಗಳೇ ಹೆಚ್ಚಾಗಿ ಬರುತ್ತಲಿವೆ. ನಿತ್ಯ ನಾವು ಆ ವಿಷಯವನ್ನೇ ನೋಡುತ್ತಿದ್ದರೂ ಭಾಷಾವಾರು ಪ್ರಾಂತ ರಚನೆಯಿಂದಾಗುವ ನಿಜವಾದ ಉಪಯೋಗಗಳೇನೆಂಬುದು ಬಹಳ ಜನರಿಗೆ ತಿಳಿದಿಲ್ಲ. ಈ ವಿಷಯದಲ್ಲಿ ಕೆಲ ಅಂಶಗಳನ್ನು ನಾನು ಕೊಡುತ್ತಿರುವುದು ಈ ವಿಷಯವನ್ನು ತಿಳಿದ ಪಂಡಿತರಿಗಲ್ಲ- ಆದರ ವಿಷಯದಲ್ಲಿ ಅರ್ಧ ತಿಳಿದಿರುವ, ಸ್ವಲ್ಪವೂ ತಿಳಿಯದಿರುವ ಜನರಿಗೆ ಮಾತ್ರ.

ಈ ನಮ್ಮ ಮಹಾ ಕರ್ನಾಟಕವು ಮೈಸೂರು, ಕೊಡಗು, ಮದ್ರಾಸು, ಬೊಂಬಾಯಿ, ಮುಂತಾದ ದೇಶಗಳಲ್ಲಿ ಚೂರು ಚೂರಾಗಿ ಹರಿದು ಹಂಚಿ ಹೋಗಿದೆ- ಇದರಿಂದ ನಮ್ಮ ತಾಯ್ನುಡಿಯ ವೈಶಿಷ್ಟ್ಯ, ಸಂಸ್ಕೃತಿ ಇತ್ಯಾದಿಗಳು ಅನೇಕ ಇತರ ಭಾಷಾಜನರಲ್ಲಿ ಬೆರೆತು ನಾವು ನಿಜವಾದ ಕನ್ನಡಿಗರು ಹೌದೋ ಅಲ್ಲವೋ ಎಂಬುದು ನಮಗೇ ಅನುಮಾನವಾಗುವ ಸ್ಥಿತಿಯಾಗಿದೆ.

ಕರ್ನಾಟಕ ಪ್ರಾಂತವು ನಿರ್ಮಾಣವಾಗಿ ಅದು ಪ್ರಾಬಲ್ಯಕ್ಕೆ ಬಂದಾಗ ಇಡೀ ಕನ್ನಡಿಗರೊಂದಾಗಿ ಅವರಲ್ಲಿ ಕನ್ನಡದ ಸಂಸ್ಕೃತಿಯು ಹೊಂದಿ ಒಂದಾಗಿ ನಮ್ಮ ವೈಶಿಷ್ಟ್ಯವನ್ನು ಜಗತ್ತಿನಲ್ಲೆಲ್ಲಾ ಎತ್ತಿ ತೋರಿಸಬಹುದು.

ಬೊಂಬಾಯಿ, ಮದ್ರಾಸು ಮುಂತಾದ ಎಲ್ಲ ಪ್ರಾಂತಗಳಿಂದಲೂ ಜನಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಜಿಲ್ಲೆಗಿಷ್ಟು ಮಂದಿಯಂತೆ ಪ್ರಜಾಪ್ರತಿನಿಧಿ ಸಭೆಗಳಿಗೆ ಹೋಗಿ ಅಲ್ಲಿ ಆಯಾ ಜಿಲ್ಲೆಗಳಿಗಾಗಿರುವ ಅನುಕೂಲ ಅನಾನುಕೂಲಗಳನ್ನು ಚರ್ಚಿಸಿ ಅವರಿಂದ ದೇಶದ ಹಿತಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಬೊಂಬಾಯಿ, ಮದ್ರಾಸು ಮುಂತಾದ ಪ್ರಾಂತಗಳಲ್ಲಿ ಕರ್ನಾಟಕದ ಕೆಲಭಾಗಗಳು ಮಾತ್ರವಿವೆ- ಆ ಜಿಲ್ಲೆಗಳಿಂದ ಪ್ರತಿನಿಧಿ ಸಭೆಗೆ ಬಹಳ ಕಡಿಮೆ ಪ್ರತಿನಿಧಿಗಳು ಹೋಗುತ್ತಾರೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ದೇಶದ ಉತ್ಪತ್ತಿ, ಅದನ್ನು ಆ ದೇಶದ ಯಾವ ಭಾಗಕ್ಕೆ ಎಷ್ಟು ಅಂಶವನ್ನು ಉಪಯೋಗಿಸಬೇಕೆಂಬ ವಿಷಯ ಚರ್ಚೆಯಾಗುತ್ತದೆ- ಆಗ ಆ ಎಲ್ಲ ಪ್ರತಿನಿಧಿಗಳ ಬಹುಮತವನ್ನು ತೆಗೆದುಕೊಳ್ಳುತ್ತಾರೆ- ಈ ಪ್ರಾಂತಗಳಲ್ಲಿ ಬಹುಜನ ಪ್ರತಿನಿಧಿಗಳು ಇತರ ಭಾಷಾ ಜಿಲ್ಲೆಗಳಿಂದಲೇ ಹೋಗಿರುವುದರಿಂದ ಉತ್ಪನ್ನದ ಹೆಚ್ಚಿನ ಅಂಶವು ಕನ್ನಡ ಹೊರತಾದ ಇತರ ಜಿಲ್ಲೆಗೆ ಹೋಗುವುದಕ್ಕೆ ಮಾತ ದೊರೆಯುತ್ತದೆ- ಕನ್ನಡ ಜಿಲ್ಲೆಗಳಲ್ಲಾದ ಉತ್ಪತ್ತಿಯು ಬಹಳ ಕಡಿಮೆ ಅಂಶವು ಕನ್ನಡ ಜಿಲ್ಲೆಗಳಿಗೆ ಹೋಗಬಹುದು. ಇಲ್ಲದಿದ್ದರೆ ಇಲ್ಲ- ಈ ಅನ್ಯಾಯವನ್ನು ತಡೆಗಟ್ಟಬೇಕಾದರೆ ಬೇಗನೆ ಕರ್ನಾಟಕ ಪ್ರಾಂತವು ರಚನೆಯಾಗಬೇಕು- ದೊಡ್ಡ ದೊಡ್ಡ ಇತರ ಭಾಷಾಪ್ರಭಾವವಿರುವ ಪ್ರಾಂತಗಳಲ್ಲಿರುವ ಕರ್ನಾಟಕ ಜಿಲ್ಲೆಗಳೆಲ್ಲಾ ಸೇರಿ ಒಂದು ಏಕೀಕೃತ ಕರ್ನಾಟಕ ಪ್ರಾಂತ ರಚನೆಯಾದರೆ ಆಗ ಕರ್ನಾಟಕದಲ್ಲುತ್ಪನ್ನವಾದದ್ದೆಲ್ಲಾ ಅಗತ್ಯವಾಗಿರುವ ಪ್ರದೇಶಗಳಿಗೆಲ್ಲಾ ವ್ಯಯವಾಗಿ ಕನ್ನಡಿಗರಿಗೆ ಹೆಚ್ಚು ಅನುಕೂಲವಾಗುತ್ತದೆ.

ಇತರ ಭಾಷಾಪ್ರಭಾವ ಹೆಚ್ಚಾಗಿರುವ ಪ್ರದೇಶದಲ್ಲಿ ಕನ್ನಡಿಗರೂ ಆ ದೇಶ ಭಾಷೆಯನ್ನೇ ಕಲಿತು ಅವರ ಸಂಸ್ಕೃತಿಯನ್ನೆ ತಮಗೆ ಇಷ್ಟವಿಲ್ಲದಿದ್ದರೂ ಅನುಸರಿಸಬೇಕಾಗುತ್ತದೆ, ಅಲ್ಲಿನ ಮೇಲಧಿಕಾರಿಗಳನ್ನು ಮೆಚ್ಚಿಸುವುದಕ್ಕಾದರೂ ಹೀಗೆ ಮಾಡಬೇಕಾಗುತ್ತದೆ. ಹೀಗೆ ಬೇರೆ ಬೇರೆ ಭಾಷಾ ಸಂಸ್ಕೃತಿಗಳನ್ನನುಸರಿಸಿದ ಕನ್ನಡಿಗರು ಬೇರೆ ಬೇರೆಯಾಗಿ, ಒಂದೇ ತಾಯಿಮಕ್ಕಳಂತಿರದೆ ಒಡೆದು ಹರಿಹಂಚಾಗಿ ಹೋಗುವ ಸಂಭವಬರುತ್ತದೆ. ಕರ್ನಾಟಕ ಪ್ರಾಂತರಚನೆಯಾದರೆ ಕನ್ನಡಿಗರೆಲ್ಲಾ ಒಂದಾಗಿ ಕಲೆತು ಅಣ್ಣತಮ್ಮಂದಿರಂತೆ ಪ್ರೇಮದಿಂದ ಬೆಳೆಯಲು ಅನುಕೂಲವಾಗುತ್ತದೆ.

ಕರ್ನಾಟಕ ಪ್ರಾಂತರಚನೆಯಾದರೆ ಕೇಂದ್ರ ಸರ್ಕಾರಕ್ಕೆ ನಮ್ಮಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ನೇರವಾಗಿ ಹೋಗಿ ನಮಗೆ ಇರುವ ಅನಾನುಕೂಲತೆಯನ್ನು ತಿಳಿಸಿ ನಮಗೆ ಅಗತ್ಯವಿರುವ ಯಾವ ಕೆಲಸವನ್ನಾದರೂ ಮಾಡಿಸಿಕೊಳ್ಳಬಹುದು. ಈಗ ಹಾಗಿಲ್ಲದೆ ಆಯಾ ಪ್ರಾಂತದಿಂದ ಎಲ್ಲರ ಪರವಾಗಿ ಹೋಗುವ ಪ್ರತಿನಿಧಿಗಳು ಸಹಜವಾಗಿ ತಮ್ಮ ಪ್ರಾಂತಗಳಿಗೆ ಮಾತ್ರ ಕ್ಷೇಮ ಬಯಸಬಲ್ಲರು.

ಕರ್ನಾಟಕ ಪ್ರಾಂತ ನಿರ್ಮಾಣವಾಗಿ ಒಂದು ವಿಶಾಲವಾದ ನಾಡಾದರೆ ಇತರ ರಾಷ್ಟ್ರಗಳೊಡನೆ ಸುಲಭವಾಗಿ ಸ್ನೇಹಬೆಳೆಸಿ ವ್ಯಾಪಾರ, ವ್ಯವಹಾರಗಳನ್ನು ಹೆಚ್ಚುಮಾಡಿಕೊಂಡು ನಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಮಾಡಿಕೊಂಡು ನಮಗೆ ಬೇಕಾದ ಪದಾರ್ಥಗಳನ್ನು ಸುಲಭವಾಗಿ ಹಡಗಿನ, ಅಥವಾ ಉಗಿ ಬಂಡಿಗಳ ಮೂಲಕ ತರಿಸಿಕೊಳ್ಳಬಹುದು.

ನಮ್ಮ ಈಗಿನ ಕರ್ನಾಟಕದಲ್ಲಿ ಆಯಾ ಪ್ರಾಂತದ ಬೇರೆ ಬೇರೆಯ ಭಾಷಾ ಜನಗಳು ಕೆಲಸದಲ್ಲಿ ಸೇರಿ ಪ್ರಬಲಗೊಂಡು ಮುಂದೆ ಕೆಲಸಕ್ಕೆಲ್ಲ ಅವರ ಮಾತೃಭಾಷಾ ಜನರನ್ನೇ ನಿಯಮಿಸಿಕೊಳ್ಳುತ್ತಿರುವುದನ್ನು ನಾವು ನಿತ್ಯ ನೋಡುತ್ತಿದ್ದೇವೆ. ಇದರಿಂದ ನಮ್ಮ ಕನ್ನಡಿಗರು ನಿರುದ್ಯೋಗಿಗಳಾಗಿ ಬಳಲುವ ಪರಿಸ್ಥಿತಿ ಬಂದಿದೆ. ಕರ್ನಾಟಕ ಪ್ರಾಂತರಚನೆಯಾದರೆ ಕನ್ನಡಿಗರಿಗೇ ಆ ಉದ್ಯೋಗಗಳು ದೊರೆತು ನಮ್ಮ ನಿರುದ್ಯೋಗ ಸಮಸ್ಯೆಯು ಬಗೆಹರಿದಂತಾಗುತ್ತದೆ.

ಈಗ ಮದ್ರಾಸು, ಮೈಸೂರು, ಬೊಂಬಾಯಿ ಮುಂತಾದ ಪ್ರಾಂತಗಳಲ್ಲಿ ಕನ್ನಡದ ಮುಂದಾಳುಗಳು ಕೆಲವರು ಮಂತ್ರಿಗಳಾಗಿದ್ದಾರೆ. ಅಂತಹ ದಕ್ಷರಾದ ಮಂತ್ರಿಗಳು ಬರೇ ಕರ್ನಾಟಕ ಪ್ರಾಂತಕ್ಕೇ ಆದರೆ ಅದರಿಂದ ದೇಶದ ಅಸಾಯಕತೆಯು ತಪ್ಪಿಹೋಗಿ ಕರ್ನಾಟಕವು ಪ್ರಗತಿಹೊಂದುತ್ತದೆ.

ಅದಲ್ಲದೆ ಕರ್ನಾಟಕದ ಒಂದು ದೊಡ್ಡ ವಿಶ್ವವಿದ್ಯಾನಿಲಯವು ಸ್ಥಾಪಿತವಾಗಿ ಅದರಿಂದ ಹೊರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿಯ ಪ್ರಭಾವವನ್ನು ಬೀರಿ ಇಡೀ ಪ್ರಪಂಚದಲ್ಲಿ ನಮ್ಮ ಮೇಲ್ಮೆಯನ್ನು ತೋರಿಸುವುದಕ್ಕೆ ಅನುಕೂಲವಾಗುತ್ತದೆ.

"ಈಗಿನ ರಾಜಕೀಯ ಪರಿಸ್ಥಿತಿಯು ವಿಷಮವಾಗಿರುವಾಗ ಭಾಷಾವಾರು ಪ್ರಾಂತರಚನೆಗೆ ಇನ್ನೂ ಕೆಲ ವರ್ಷಗಳು ಹೋಗಲಿ. ಏನೀಗ ಅವಾಂತರ?" ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಹೌದು; ಮುನ್ನೂರು ನಾನೂರು ವರ್ಷಗಳಿಂದ ಸುಮ್ಮನಿದ್ದ ಈ ಜನರಿಗೆ ಈಗಲೇ ಏನು ಅವಾಂತರ, ಎಂದು ನಮಗೂ ಎನ್ನಿಸುತ್ತದೆ. ಆದರೆ ನಾನು ಹಿಂದೆಯೇ ಹೇಳಿದಂತೆ ಮದ್ರಾಸು, ಬೊಂಬಾಯಿ ಮುಂತಾದ ಪ್ರಾಂತಗಳಲ್ಲಿ ಪ್ರಭಾವಶಾಲಿಗಳಾಗಿರುವ ಇತರ ಭಾಷಾ ಪ್ರತಿನಿಧಿಗಳು ಹೇಗಾದರೂ ಭಾಷಾವಾರು ಪ್ರಾಂತರಚನೆಯಾಗುವುದೆಂದೂ, ಈಗ ಕನ್ನಡಜಿಲ್ಲೆಗೆ ಯಾವುದಾದರೂ ಸಹಾಯಮಾಡಿದರೆ ಮುಂದೆ ಅದರ ಉಪಯೋಗವು ಕನ್ನಡಿಗರಿಗೇ ಹೋಗುತ್ತದೆಂದೂ ಎಣಿಸಿ ಅಲ್ಲಿನ ಕನ್ನಡಿಗರಿಗೆ ಸ್ವಲ್ಪವೂ ಅನುಕೂಲವಾಗದಂತೆ ಕನ್ನಡ ಪ್ರಾಂತದ ಉತ್ಪತ್ತಿಯನ್ನೆಲ್ಲಾ ತಾವೇ ಉಪಯೋಗಿಸಿಕೊಂಡು ಬಿಡುತ್ತಾರೆ. ಇಡೀ ದೇಶದ ಹಿತದೃಷ್ಟಿಯನ್ನಿಟ್ಟುಕೊಂಡಿರುವ ಕೆಲ ಮಂತ್ರಿಗಳೇ ಹೀಗೆ "ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ"ವೆನ್ನುವಂತೆ ಕೆಲಸ ಮಾಡುತ್ತಿದ್ದಾರೆ. ಉದಾಹರಣೆಗೆ ನಿಜವಾಗಿ ಬಳ್ಳಾರಿಯಲ್ಲಾಗಬೇಕಾದ ಇಂಜನಿಯರಿಂಗ್ ಕಾಲೇಜನ್ನು ಅನಂತಪುರಕ್ಕೆ ಕೊಟ್ಟಿದ್ದು; ಈಗ ಬಳ್ಳಾರಿಯಲ್ಲಿರುವ ವೀರಶೈವ ಕಾಲೇಜಿನ ಮಾನ್ಯತೆಯನ್ನು ಕಿತ್ತುಕೊಂಡದ್ದು.

ಹೀಗೆಯೇ ಇನ್ನು ಹತ್ತು ವರ್ಷ ಕಾಲಾವಕಾಶ ಮಾಡಿದರೆ ಅಲ್ಲಿನ ಕನ್ನಡಿಗರಿಗೆಲ್ಲಾ ಬೇಸರವಾಗಿ ಕೆಲವರು ಅಲ್ಲಿನ ಇತರ ಭಾಷಾ ಜನರಲ್ಲಿ ಸೇರಿ ಹೋಗಬಹುದು, ಅಥವಾ ಇದಕ್ಕಾಗಿ ಅಣ್ಣತಮ್ಮಂದಿರಂತಿರುವ ಇತರ ಜನರಲ್ಲಿ ದ್ವೇಷಕಟ್ಟಿಕೊಂಡು ಒಬ್ಬರಿಗೊಬ್ಬರು ಹೊಡೆದಾಡುವ ಪ್ರಸಂಗ ಬಂದರೂ ಬರಬಹುದು. ವಿಜಯನಗರದ ಕಾಲದಲ್ಲಿ ನಮ್ಮ ಕನ್ನಡಿಗರು ಮುತ್ತು ರತ್ನಗಳನ್ನು ಬೀದಿಯಲ್ಲಿಟ್ಟು ಮಾರುತ್ತಿದ್ದುದು ಹೋಗಿ ಹುಲ್ಲು ಹುರಳಿಗಳನ್ನೂ ಮಾರದ ಸ್ಥಿತಿಯೂ ಬರಬಹುದು.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.
(Established: 1934)

Chairman: **Mr. M. CT. M Chidambaram Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
142, MADRAS

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಮಹಿಳೆ ಮಹಾ ತ್ಯಾಗಿನಿ ಕಂಡಯ್ಯ. ತನ್ನ ಪತಿಗಾಗಿ ತನ್ನ ಮಕ್ಕಳಿಗಾಗಿ ಸಂದರ್ಭ ಸನ್ನಿಹಿತವಾದೊಡೆ ತನ್ನ ದೇವರಿಗಾಗಿ ತನ್ನಡೆಯಿಲ್ಲ ತ್ಯಾಗ ಮಾಡಬಲ್ಲಳು ಮಹಿಳೆ. ತನ್ನನ್ನೂ ತ್ಯಾಗ ಮಾಡಬಲ್ಲಳು ಮಹಿಳೆ. ಸಹಗಮನ ಸಿದ್ಧಿ ಪ್ರಸಿದ್ಧಿ ಯಾರಿಂದ ಹೇಳಾ! ಮಹಿಳೆ ಕ್ರಿಯಾ ಶಕ್ತಿನಿ ಕಂಡಯ್ಯ. ಆವಳು ಮಾಡದ ಕೆಲಸವಿಲ್ಲ. ಅವಳಿಲ್ಲದ ಮನೆಯಿಲ್ಲ. ಪಾತ್ರೆ ಬಟ್ಟೆಗಳನ್ನು ಶುಭ್ರವಾಗಿ ತೊಳೆವ ಕೆಲಸ ಅವಳಿಗೆ ಮೀಸಲು. ನೆಲದ ಮಲ ನಿರ್ಮೂಲವಾಗುವಂತೆ ಒಳಿವ ಕೆಲಸ ಅವಳಿಗೆ ಮೀಸಲು. ಸಿಂಗಾರಕ್ಕಾಗಿ ಪೃಥ್ವಿಯ ಪೂರ್ವಾಶ್ರಯ ಪರಿಹಾರಕ್ಕಾಗಿ ರಂಗವಲ್ಲಿಯ ರಚನೆಯ ಕಾರ್ಯ ಅವಳಿಗೆ ಮೀಸಲು. ಸಾಲದುದಕ್ಕೆ ಮಕ್ಕಳ ಕೆಲಸ, ಪತಿ ಸೇವೆ, ಅತಿಥಿ ಅಭ್ಯಾಗತರ ಸತ್ಕಾರ ಇವೆಲ್ಲವೂ ಅವಳಿಗೆ ಮೀಸಲು. ಆಯುಷ್ಯದ ಚಿಂತೆ, ಅಗುಹೋಗುಗಳ ಚಿಂತೆ, ಆಧಿ ವ್ಯಾಧಿಗಳ ಚಿಂತೆ,

ಮಹಿಳಾ ಲೋಕ

ಮಹಿಳಾ ಮಹತ್ವ

ಇವೆಲ್ಲ ಹೊಣೆಗಾರಿಕೆ ಅವಳಿಗೆ ಮೀಸಲು. ಸಾಲವೇ ಕ್ರಿಯಾಶಕ್ತಿ ಎಂಬುದಕ್ಕೆ ಸಾಕ್ಷಿಗಳು? ಮಹಿಳೆ ಸಾಹಿತಿ ಸಂಗೀತಗಾತಿ ಕಂಡಯ್ಯ: ಸ್ತ್ರೀಯು ಸಾಹಿತಿಯಾಗಲು ಸಾಕ್ಷರಳಾಗಬೇಕೆಂಬ ನಿಯತಿ ಇಲ್ಲ ನೋಡಾ! ಸ್ವಭಾವ ಸಹಜವಾಗಿ ಲಾಲಿ ಪದ, ಉಯ್ಯಾಲೆ ಪದ, ಬೀಸುವ ಪದ, ಕುಟ್ಟುವ ಪದಗಳ ಕಟ್ಟಬಲ್ಲಳು ಸ್ತ್ರೀಯು. ಕೋಲಾಟದ ಹಾಡು, ಹಬ್ಬದ ಹಾಡು, ಸೋಬಾನ, ಜೋಗುಳಗಳ ರಚಿಸಬಲ್ಲಳು ಸ್ತ್ರೀಯು. ಬಾಳಿನ ಚಿತ್ರ, ಬಳಗದ ಚರಿತ್ರ ನಿರ್ಮಿಸಬಲ್ಲಳು ಸ್ತ್ರೀಯು, ಕತೆ ಕಟ್ಟಬಲ್ಲಳು, ಒಗಟು ಒಕ್ಕಣಿಸಬಲ್ಲಳು. ಇಂತು ಬಗೆ ಬಗೆಯಾಗಿ ಜೀವನದಲ್ಲಿ ಸಹಜಾನಂದ ಉಕ್ಕಿಸುವ ಕುತೂಹಲ ಕೆರಳಿಸುವ ಗೀತಗಳನ್ನು ಹುಟ್ಟಿಸಬಲ್ಲಳು. ತಾನೇ ತಾನಾಗಿ ತನ್ನ ಕೃತಿಯಲ್ಲಿ ತನ್ನ ಲಯದಲ್ಲಿ ಹಾಡಿ ಹರುಷಿಸಬಲ್ಲಳು ನೋಡಾ! ಅವಳಿಗೆ ಕಾವ್ಯ ವ್ಯಾಕರಣಗಳ ಕಟ್ಟಾಗಲಿ, ಸಂಗೀತ ಶಾಸ್ತ್ರಗಳ ನಿಬ್ಬಾಗಲಿ ಬೇಕಿಲ್ಲ. ಅವಳು ನಿರಂಕುಶ ಸಾಹಿತಿ, ಸಂಗೀತಗಾತಿ, ಕಾಣಾ. ಮಹಿಳೆ ರಕ್ತಿ-ವಿರಕ್ತಿಗಳ ಸಂಯೋಗಿಣಿ ಕಂಡಯ್ಯ: ಎನಿತು ಭೋಗ ಭಾಗ್ಯಗಳಿದ್ದರೆಯು ಬೇಕೆಂಬ ರಕ್ತಿ ಮಹಿಳೆಯದು. ಎನಿತು ಉಡುಗೆ ತೊಡುಗೆಗಳಿದ್ದರೆಯು ಬೇಕೆಂಬ ಬಯಕೆ ಮಹಿಳೆಯದು. ಎನಿತು ಮಕ್ಕಳು ಮೊಮ್ಮಕ್ಕಳಿದ್ದರೆಯು ಆಗಬೇಕೆಂಬ ಆಸಕ್ತಿ ಮಹಿಳೆಯದು. ಆದೇ ಬಡತನ ಒದಗಿದಡೆ, ಉಪಜೀವಿಕೆ ಉಂಟಾದಡೆ ಎಲ್ಲಿಗಂದಡಲ್ಲಿಗೆ ತೃಪ್ತಿ, ಎಲ್ಲದರಲ್ಲಿಯು ವಿರಕ್ತಿ. ನಾರಿ ವೀರರಮಣಿ ಕಂಡಯ್ಯ: ತನ್ನೊಡನೆ ಹ್ಯಾಜ್ಯ ಕಾಯ್ದಾಪರ ಮಾತು ಕಟ್ಟುವ ಮೊದಲ್ಗೊಂಡು, ಕತ್ತಿ ಹಿಡಿದು ಕಲಿತನದಿಂದ ರಾಜ್ಯ ಕಟ್ಟುವ ವರವಿಗೂ ಮಹಿಳೆಯದು ಪ್ರತಿಯಿಲ್ಲದ ಹೋರಾಟ. ಇದು ಕಾರಣ 'ವೀರಪತ್ನಿ' ಎಂಬ ಬಿರುದು ಅವಳಿಗೆ ಸಂದಿತ್ತು. ಮಹಿಳೆ ಮಂಗಳ ರೂಪಿಣಿ ಕಂಡಯ್ಯ. ಆಧ್ಯಾತ್ಮ, ಸಾಹಿತ್ಯ, ರಾಜಕೀಯ, ವ್ಯವಸಾಯಿಕ ಮುಂತಾದ ಯಾವ ರಂಗದಲ್ಲಿಯೇ ಆಗಲಿ ಮಂಗಳಾರತಿ ಮಹಿಳೆಯದು. ಬರಿದೆ ಮಂಗಳಾರತಿ ಬೆಳಗುವದಲ್ಲದೆ ಮಂಗಳ ಕೋರುವುದು, ಮಂಗಳ ಬರಮಾಡಿಕೊಂಬುದು, ಮಂಗಳ ರೂಪಾಗಿರುವುದು ಮಹಿಳೆಯದಲ್ಲವೆ ಪೇಳಾ! ಇಂತಾಗಿ ಸತಿಯಿಲ್ಲದ ಸಂಸಾರ ಅಸಾರ; ಕೃತಿಯಿಲ್ಲದ ಸಂಗೀತ; ಅರ್ಥವಿಲ್ಲದ ಧ್ವನಿ; ರಸವಿಲ್ಲದ ಕಾವ್ಯ; ಆತ್ಮವಿಲ್ಲದ ಅಂಗ ಕಂಡಯ್ಯ. ಸತಿ ಸಹಧರ್ಮಿಣಿಯಾದಡೆ ಹೂವಿಗೆ ಕಂಪು, ಹಾಲಿಗೆ ಬಿಳುಪು, ಸಕ್ಕರೆಗೆ ಸಿಹಿ, ದೀಪಕ್ಕೆ ದೀಪ್ತಿ ಕೂಡಿ ಬಂದಂತೆ ಕಂಡಯ್ಯ. ಮಹಿಳೆ ಮಾತೆಯಾದಡೆ ಮಕ್ಕಳಿಗೆ ಗುರು, ಮನೆಗೆ ಉಸಿರು ಕಂಡಯ್ಯ. ಹೆಣ್ಣು ಬಾಳಿನ ಕಣ್ಣು. ಬದುಕಿಗೆ ಹೊನ್ನು ಕಂಡಯ್ಯ ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶ ವಾಸಕುಮಾರೇಶ್ವರ.

ಮಡದಿ ಮಂತ್ರಿಯೆಂದುದು ನೀತಿ, ಮಾತೆ ಮೊದಲ ದೇವತೆಯೆಂದುದು ಶ್ರುತಿ. ಈ ನೀತಿ ಶ್ರುತಿಗಳ ಮಾತು ನಮ್ಮಾಳಿಗೂ ನಿಜ ಕಾಣಿರಣ್ಣ. ಬ್ರಹ್ಮನ ಬಗೆ ಬಗೆಯ ಈ ಸೃಷ್ಟಿ ರಚನೆಯ ಪ್ರೇರಕಳು 'ಸರಸ್ವತಿ' ಇವಳಿಲ್ಲದ ಆ ಬ್ರಹ್ಮನ ಪ್ರತಿಭೆ, ವ್ಯಕ್ತಿತ್ವ, ಸೃಷ್ಟಿ ಕರ್ತೃತ್ವ ಎತ್ತಣ ಮಾತು? ವಿಷ್ಣುವಿನ ವಿಶ್ವರಕ್ಷಣ ಕಾರ್ಯಕರ್ತಳು ಲಕ್ಷ್ಮೀ; ಇವಳಿಲ್ಲದ ಮೇಲೆ ವಿಷ್ಣು ವಿಶ್ವವನ್ನು ಪಾಲಿಸುವುದೇನ, ಲಾಲಿಸುವುದೇನು? ರುದ್ರಂಗೆ ಸಂಹಾರ ಸಾಮರ್ಥ್ಯ ಪ್ರದಾತಳು ಶಕ್ತಿ; ಇವಳಿಲ್ಲದ ರುದ್ರನು ಹಲ್ಲಿಲ್ಲದ ಸಿಂಗ. ಮಾರನು ಮನಸಿಜನಾಗಿ ಮಾನವ ಮನೋರಂಜನನಾಗಿ ಮೆರೆಯುವುದು ರತಿಯಿಂದ. ರತಿಯಿಲ್ಲದ ಭಸ್ಮಾಂಗನು ಏತಕ್ಕೆ ಬೇಕು? ಇದು ಕಾರಣ ಮಹಿಳೆ ಸೃಷ್ಟಿ ಸ್ಥಿತಿ ಲಯಕರ್ತೆ, ಪ್ರಪಂಚ ಶಕ್ತಿ ಪ್ರದಾತೆ. ಅವಳಿಲ್ಲದಣುವಿಲ್ಲ; ಮಹತ್ತಿಲ್ಲ. ವಿಶ್ವಚೇತನ, ವಿಶ್ವಾತ್ಮ ಚೇತನ ಆಗಿಹಳು ಆ ಪ್ರಕೃತಿ ಮಾತೆ. ಮಾತೃಸರ್ವ ಭರಿತಳು, ಸರ್ವೇಶ್ವರೀ. ವೇದವು ಮಾತೆಯೆಂದೆನಿಸಿತ್ತು. ಭಾರತ ಮಾತೆಯೆನಿಸಿತ್ತು. ಪ್ರಕೃತಿ ಮಾತೆಯೆನಿಸಿತ್ತು. ಭೂ ಮಾತೆಯೆನಿಸಿತ್ತು; ಗಂಗೆ ಮಾತೆಯೆನಿಸಿತ್ತು, ಗೋ ಮಾತೆಯೆನಿಸಿತ್ತು, ಇಂತಿವೆಲ್ಲವು ಮಾತೆಯ ನಾಮರೂಪಗಳಾದಳ್, ತತ್ವ, ಮಹತ್ವಗಳೇನು ಹೇಳಾ ಶ್ರೀ ನಿಡುಮಾಮಿಡಿ ಶ್ರೀ ಗಿರಿಸಿಂಹಾಸನಾಧೀಶವಾಸ ಕುಮಾರೇಶ್ವರ.



ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ಸ್ವಂತವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ. ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೮೦೦ ಮದ್ದುಗಳ ವಿವರ ಇರುವ ಪುಸ್ತಕ. ಬೆಲೆ: ರೂ. ೩/-

ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ದಿ ನ್ಯೂ ಕರ್ನಾಟಕ ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಜನಸಾಮಾನ್ಯರಿಗೂ ಅನುಕೂಲವಾಗುವಂತೆ ರೂ. 100ರಿಂದ 900ರ ಒಳಗಿನ ಮೊತ್ತದಲ್ಲಿ ವಿಮಾಮಾಡುವ ಸೌಕರ್ಯ!

ಎಲ್ಲಾ ಕಡೆಗಳಲ್ಲಿಯೂ ಉತ್ಸಾಹೀ ಏಜಂಟರು ಬೇಕಾಗಿದ್ದಾರೆ

ವಿವರಗಳಿಗೆ ಬರೆಯಿರಿ:

ಬಿ. ವಾಮನಾಚಾರ್, ಬಿ.ಎ ಬಿ.ಎಲ್
ಮೆನೇಜರ್.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ' ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾರ್ನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾರ್ನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ವಾರ್ನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾರ್ನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನ್ಯುಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾರ್ನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾರ್ನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾರ್ನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಸಿಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವುದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾರ್ನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ ಈ ವಾರ್ನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಿನಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾರ್ನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾರ್ನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾರ್ನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾರ್ನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18. ವಿ ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೇ.

The Eclipse Distributing Agency,
Dahanu Road, B B. & C. I Rly.

ಬೊಂಬಾಯಿ ಸ್ಟಾಕಿಸ್ಟರು:—ಆಕ್ಕವಾಲಾ ಲಿಮಿಟೆಡ್, 25, ಪಿಲ್ಟ್ ಹನುಮಾನ್ ಲೇನ್, ಬೊಂಬಾಯಿ 2

ರೈತ ಪ್ರಪಂಚ

ಕಾಂಪೋಸ್ಟ ಗೊಬ್ಬರ ಮತ್ತು ಅದನ್ನು ತಯಾರಿಸುವ ರೀತಿ

[ಧಾರವಾಡ ಜಿಲ್ಲೆಯ ಒಕ್ಕಲತನ ಅಧಿಕಾರಿಗಳಾದ ಶ್ರೀ ಬಿ. ಬಿ. ಯಲಿಗಾರರವರು ಅಖಿಲ ಭಾರತ ಆಕಾಶವಾಣಿಯ ಮುಂಬಯಿ ಸ್ಟೇಶನದಿಂದ ತಾ. ೧೪-೬-೪೯ರಲ್ಲಿ ಮಾಡಿದ ಭಾಷಣದಿಂದ]

೧ ಹೆಚ್ಚು ಆಹಾರ ಧಾನ್ಯ ಬೆಳೆಯಿರಿ ಎಂಬ ಪ್ರಚಾರವು ಪ್ರಾರಂಭವಾದಂದಿನಿಂದ ಕಾಂಪೋಸ್ಟ ಗೊಬ್ಬರದ ಬಗ್ಗೆ ಬಹು ಜನರು ಬಹು ರೀತಿಯಲ್ಲಿ ಹೇಳುತ್ತಲಿದ್ದಾರೆ. ಇದಾದರೂ ಒಂದು ಸಾಮಾನ್ಯ ಸೇಂದ್ರಿಯ ಗೊಬ್ಬರವು. ಇದು ಬಹು ಪುರಾತನ ಕಾಲದಿಂದಲೂ ಒಂದಿಲ್ಲೊಂದು ರೂಪದಲ್ಲಿ ಬಳಿಕೆಯಲ್ಲಿದ್ದರೂ ಜಗತ್ತಿನ ಅನೇಕ ಕಡೆಗಳಲ್ಲಿ ನಡೆದ ಸಂಶೋಧನೆಗಳ ಫಲವಾಗಿ ಇತ್ತೀಚೆಗೆ ಈ ಕಾಂಪೋಸ್ಟ ಗೊಬ್ಬರವನ್ನು ತಯಾರಿಸುವ ರೀತಿಯಲ್ಲಿ ಅನೇಕ ಸುಧಾರಣೆಗಳಾಗಿವೆ. ಹೀಗಾಗಿ ಎಷ್ಟೋ ಪದ್ಧತಿಗಳು ಬಳಿಕೆಯಲ್ಲಿ ಬಂದಿವೆ ಆದರೆ ಈ ಎಲ್ಲ ಪದ್ಧತಿಗಳಲ್ಲಿ ಮುದುಗಿರುವ ತತ್ವ ಮಾತ್ರ ಒಂದೇ.

೨ ಕಾಂಪೋಸ್ಟ ಗೊಬ್ಬರದ ಅವಶ್ಯಕತೆ- ಸೇಂದ್ರಿಯ ಗೊಬ್ಬರವನ್ನು ಹಾಕುವದರಿಂದ ಬೆಳೆಗಳಿಗೆ ಬೇಕಾಗುವ ಆಹಾರದ ಸಂಗ್ರಹವು ಭೂಮಿಯಲ್ಲಿ ಹೆಚ್ಚುತ್ತದೆ. ಭೂಮಿಯ ರಚನೆಯು ಸುಧಾರಿಸಿ ಹೆಚ್ಚು ಹಸಿಹಿಡಿಯುವದು. ಹಿಡಿದ ಹಸಿಯು ಬಹಳ ಅವಧಿಯವರೆಗೆ ಉಳಿಯುವದು. ಬುಳುಸುಗಳ ಮತ್ತು ಸೂಕ್ಷ್ಮ ಜೀವಜಂತುಗಳ (ಬ್ಯಾಕ್ಟೇರಿಯಾ) ಕಾರ್ಯಗಳಿಗೆ ಮಂಚ ದೊರೆತು ಬೆಳೆಗಳಿಗೆ ಬೇಕಾಗುವ ಆಹಾರಗಳನ್ನು ತಯಾರಿಸುವ ಕೆಲಸವು ಭರದಿಂದ ಸಾಗುವದು. ಭೂಮಿಯಲ್ಲಿ ಪೈರುಗಳ ಬೆಳವಣಿಗೆಗೆ ಸಾಕಷ್ಟು ಹವೆ ಮತ್ತು ಉಷ್ಣತೆಗಳು ದೊರೆಯುವವು. ಒಟ್ಟಿನ ಮೇಲೆ ಪೈರುಗಳು ಹುಲುಸಾಗಿ ಬೆಳೆಯಲಿಕ್ಕೆ ಅವಶ್ಯವಿರುವ ಎಲ್ಲ ಬಗೆಯ ಅನುಕೂಲ ಪರಿಸ್ಥಿತಿಯು ಭೂಮಿಯಲ್ಲಿ ಉಂಟಾಗುವದು. ಇನ್ನೊಂದು ಮಹತ್ವದ ವಿಷಯವೆಂದರೆ ಇಂಥ ಗೊಬ್ಬರವನ್ನು ಕೊಟ್ಟು ಬೆಳೆದ ಜವಾರಿ ಧಾನ್ಯಗಳೂ, ಹಣ್ಣು ಹಂಪಲಗಳೂ ಹೆಚ್ಚು ಆರೋಗ್ಯಕರವಾಗಿರುವದರಿಂದ ನಮಗೆ ಉಂಟಾಗುವ ಅನೇಕ ರೋಗಗಳ ಬಾಧೆಯನ್ನು ತಪ್ಪಿಸಿಕೊಳ್ಳಬಹುದು.

ಇಂಥ ಸೇಂದ್ರಿಯ ಗೊಬ್ಬರಗಳಲ್ಲಿ ಬೆಳೆಗಳಿಗೆ ಬೇಕಾಗುವ ಎಲ್ಲ ಬಗೆಯ ಸತ್ವಗಳು ಅಡಕವಾಗಿರುವದರಿಂದ ಇವುಗಳಿಗೆ ಪೂರ್ಣ ಗೊಬ್ಬರಗಳೆನ್ನುತ್ತಾರೆ. ಒಂದೇ ಬಗೆಯ ಸತ್ವವನ್ನು ಪೂರೈಸುವ ರಾಸಾಯನಿಕ ಗೊಬ್ಬರಗಳನ್ನು ಕೊಡಬೇಕಾಗುವ ಬೆಳೆಗಳಿಗೂ ಕೂಡ ಮೂಲ ಗೊಬ್ಬರಗಳೆಂದ ಸೇಂದ್ರಿಯ ಗೊಬ್ಬರಗಳನ್ನು ಮೊದಲು ಕೊಡುವದು ಅವಶ್ಯವಿರುತ್ತದೆ. ಹಾಗೆ ಮಾಡದಿದ್ದಲ್ಲಿ ರಾಸಾಯನಿಕ ಗೊಬ್ಬರಗಳ ಪರಿಣಾಮವು ಬೆಳೆಗಳ ಮೇಲೆ ಸರಿಯಾದ ರೀತಿಯಲ್ಲಿ ಆಗುವದಿಲ್ಲ.

ನಮ್ಮ ಕರ್ನಾಟಕವು ನೈಸರ್ಗಿಕ ದೃಷ್ಟಿಯಿಂದ ಮೂರು ಭಾಗವಾಗಿ ಮಾಡಲ್ಪಟ್ಟಿದೆ.

೧ ಮಲೆನಾಡು:—ಅಂದರೆ, ಹೆಚ್ಚು ಮಳೆಯಾಗತಕ್ಕ ಪ್ರದೇಶ. ಇಲ್ಲಿ ಗಿಡಗಂಟಿಗಳು ವಿಪುಲವಾಗಿದ್ದು, ಹಸಿರೆಲೆಗಳು ಸಾಕಷ್ಟು ದೊರೆಯುತ್ತವೆ. ಇದಲ್ಲದೆ ನಾನಾ ತರದ ಹಸಿ ಮತ್ತು ಒಣ ಹುಲ್ಲು, ಕಬ್ಬಿನ ಸಿಪ್ಪೆ, ಮತ್ತು ಭತ್ತದ ಗೊಳಲು ಮೊದಲಾದವುಗಳು ದೊರೆಯುತ್ತವೆ.

೨ ಗಡಿನಾಡು:—ಅಂದರೆ, ಮಲೆನಾಡಿಗಿಂತ ಕಡಿಮೆ ಮಳೆಯಾಗುವ ಪ್ರದೇಶ. ಈ ನಾಡಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾಂಪೋಸ್ಟ ಗೊಬ್ಬರವನ್ನು ತಯಾರಿಸಲಿಕ್ಕೆ ಹಳೆ ಸೊಪ್ಪು, ಸೇಂಗಾಚೆಟ್ಟು, ಹತ್ತಿಕಟ್ಟಿಗೆ, ಜೋಳದ ಕೋಲಿ ಮೊದಲಾದವುಗಳು ವಿಪುಲವಾಗಿ ದೊರೆಯುತ್ತವೆ.

೩ ಬೆಳವಲ ನಾಡು ಅಥವಾ ಬೈಲುಸೀಮೆ. ಅಂದರೆ, ಕಡಿಮೆ ಮಳೆಯಾಗುವ ಪ್ರದೇಶ. ಇಲ್ಲಿಯೂ ಸಹ ಹಳೆಸೊಪ್ಪು, ಚಿಪ್ಪಾಡಿ, ಕುಸುಬಿಚಟ್ಟು, ಅಗಸಿ ಹಿಂಜರ, ಜೋಳದ ಕೋಲಿ, ಮೊದಲಾದವುಗಳು ದೊರೆಯುತ್ತವೆ

ಆ ಆನಾಡುಗಳಲ್ಲಿ ದೊರೆಯುವ ಕಚ್ಚಾವಸ್ತುಗಳಿಂದ ಕಂಪೋಸ್ಟ ಗೊಬ್ಬರವನ್ನು ತಯಾರಿಸಲಿಕ್ಕೆ ಬರುತ್ತದೆ. ಇಂಥಾ ಗೊಬ್ಬರವು ಯಾವ ಕಚ್ಚಾವಸ್ತುಗಳಿಂದ ಮಾಡಿದರೂ ಕೂಡ ಶಗಣಿಯ ಗೊಬ್ಬರಕ್ಕಿಂತ ಹೆಚ್ಚು ಶಕ್ತಿಯುಳ್ಳದ್ದಾಗುವದೆಂದು ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ.

ಕಾಂಪೋಸ್ಟ ತಯಾರಿಸುವ ಕ್ರಮ:—

ಈ ಗೊಬ್ಬರವನ್ನು ತಯಾರಿಸಲು ೨ ಪದ್ಧತಿಗಳನ್ನು ಅನುಸರಿಸಬಹುದು.

೧ ಕುಣಿ ಪದ್ಧತಿ.

೨ ರಾಸಿ ಅಥವಾ ಗುಂಪಿನ ಪದ್ಧತಿ

೧ ಕುಣಿ ಪದ್ಧತಿ:- ಇದನ್ನು ಅನುಸರಿಸಲು ಸಾಧ್ಯವಿಲ್ಲದಲ್ಲಿ ಮಾತ್ರ ಗುಂಪಿ ಪದ್ಧತಿಯನ್ನು ಅನುಸರಿಸಬಹುದು. ಕುಣಿ ಪದ್ಧತಿಯಲ್ಲಿ ಮೊದಲು ೧೦ ಫೂಟು ಉದ್ದ ೬ ಫೂಟು ಅಗಲ, ೩ ಫೂಟು ಆಳವಾದ ಗುಂಡಿಯನ್ನು ನಾಲ್ಕೂ ಮಗ್ಗಲು, ಸುಮಾರು ೬ ಇಂಚು ಇಳಿಜಾರಾಗಿ ಕಡಿಯಬೇಕು. ಅಂದರೆ ತಳದ ಅಳತೆಯು ೯ ಫೂಟು ಉದ್ದ, ೫ ಫೂಟು ಅಗಲವಾಗುವದು. ಹೀಗೆ ತಯಾರಿಸಿದ ಗುಂಡಿಯ ತಳಕ್ಕೆ ಗೊಬ್ಬರ ತಯಾರಿಸಲು ಉಪಯೋಗವಿರುವ ಕಚ್ಚಾಮಾಲನ್ನು ಒಂದು ಫೂಟು ದಪ್ಪವಾಗುವಂತೆ ಥರಹಾಕಿತುಳಿಯಬೇಕು.ಆ ಬಳಿಕ ಈ ಥರದ ಮೇಲೆಳ ಕೊಡ ನೀರನ್ನು ಸುರಿದು ಕಸಕಡ್ಡಿಗಳನ್ನೆಲ್ಲತೋಯಿಸಬೇಕು, ನಂತರ ೩ ಬುಟ್ಟಿ ಶಗಣಿಯಲ್ಲಿ ೪ ಕೊಡದಷ್ಟು ನೀರನ್ನು ಹಾಕಿ, ಬೇರೆ ಕಲಸಿ ತಯಾರಿಸಿದ ರಾಡಿಯನ್ನು ಆ ಥರದ ಮೇಲೆ ತುಂಬಾ ಚಿಮುಕಿಸಬೇಕು. ಬಳಿಕ ಅರ್ಧ ಬುಟ್ಟಿ ಬೂದಿಯನ್ನು ಹರವಬೇಕು. ಮತ್ತು ದನಗಳ ಮೂತ್ರವನ್ನಾಗಲಿ ಅಥವಾ ಮಿಶ್ರಿತ ಮಣ್ಣನ್ನಾಗಲಿ ಆ ಥರದ ಮೇಲೆ ಸ್ವಲ್ಪ ಮಟ್ಟಿಗಾದರೂ ಹಾಕಲೇಬೇಕು, ಇದರಿಂದ ಕಾಯುವ ಕಾರ್ಯಕ್ಕೆ ಪುಟ ದೊರೆಯುತ್ತದೆ. ಇದೇ ರೀತಿಯಾಗಿ ಕ್ರಮದಿಂದ ಒಂದರ ಮೇಲೊಂದು ಕೋಲಿ, ಕಸಕಡ್ಡಿ ಮೊದಲಾದ ಕಚ್ಚಾವಸ್ತುಗಳ ೫ ಥರಗಳನ್ನು ನೆಲದಿಂದ, (ಗುಂಡಿಯ ದಂಡೆಯ ಮೇಲೆ) ಎರಡು ಫೂಟು ಏರುವಂತೆ ಹಾಕಿ ಕೊನೆಯ ಥರದ ಮೇಲೆ ೨ ಇಂಚು ದಪ್ಪವಾಗುವಂತೆ ಮಣ್ಣನ್ನು ಹರವಬೇಕು.

ಈ ಪ್ರಕಾರ ತುಂಬಿದ ಕುಣಿಗಳು ಒಂದೆರಡು ವಾರಗಳಲ್ಲಿ ಒಳಗಿನ ಕಸವು ಕಳಿಯುವತ್ತ ಕುಸಿಬೀಳುವದು. ಹೀಗಾದ ಕೂಡಲೆ ಮತ್ತೆ ಒಂದೆರಡು ಥರಗಳನ್ನು ಹಾಕಿ ಮೊದಲಿನಂತೆ ಮೇಲೆ ೨ ಇಂಚು ದಪ್ಪ ಮಣ್ಣಿನ ಥರ ಹಾಕಬೇಕು. ಹೀಗೆ ಸಂಗ್ರಹಿಸಿದ ಕಂಪೋಸ್ಟ ನಾಲ್ಕಾರು ತಿಂಗಳಲ್ಲಿ ಉತ್ಕೃಷ್ಟ ಗೊಬ್ಬರ ತಯಾರಾಗುವದು.

೨ ರಾಸಿ ಅಥವಾ ಗುಂಪಿ ಪದ್ಧತಿ:- ಈ ಪದ್ಧತಿಯಲ್ಲಿ ಕುಣಿಯ ಅವಶ್ಯಕತೆ ಇಲ್ಲ. ಕಣವೆಯಾದ ಎತ್ತರ ಸ್ಥಳದಲ್ಲಿ, ಕುಣಿ ಪದ್ಧತಿಯಲ್ಲಿಯಂತೆ ಒಂದರ ಮೇಲೊಂದು ಥರವನ್ನು ಹಾಕಬೇಕು. ಪ್ರತಿಯೊಂದು ಥರದ ಅಳತೆಯು, ಸುತ್ತಲೂ ಅರ್ಧ ಫೂಟನಂತೆ ಕಡಿಮೆಯಾಗುತ್ತ, ೫ ಫೂಟು ಎತ್ತರಕ್ಕೆ ಮುಗಿಯಬೇಕು, ೫ ಥರಗಳನ್ನು ಹಾಕುತ್ತಾ ಹೋಗಿ, ಕಡೆಯ ಥರವು ಮುಗಿದ ನಂತರ, ಇಡೀ ರಾಸಿಯ ಮೇಲೆ ಎರಡು ಇಂಚು ದಪ್ಪವಾಗಿ ಮಣ್ಣನ್ನು ಸ್ವಲ್ಪ ಹಸಿ ಮಾಡಿ ತುಂಬಾ ಮೆತ್ತಬೇಕು.

ಕಂಪೋಸ್ಟ ಗೊಬ್ಬರವನ್ನು ತಯಾರಿಸುವಾಗ್ಗೆ ಲಕ್ಷ್ಯದಲ್ಲಿಡುವ ಮುಖ್ಯಸಂಗತಿಗಳು.

೧ ತಗ್ಗುಗಳ ಉದ್ದಳತೆಯನ್ನು ೨೦ ಫೂ, ಅಥವಾ ೩೦ ಫೂಟು ಇಡಬಹುದು. ಆದರೆ ಅಗಲಳತೆ ೬ ಫೂಟು, ಆಳವು ೩ ಫೂಟು ಮಾಡಿ ಇಡಲಿಕ್ಕೆ ಬೇಕು.

೨ ಕುಣಿಯನ್ನು ಆದಷ್ಟು ಎತ್ತರವಾದ ಸ್ಥಳದಲ್ಲಿ ತೆಗೆಯ, ಮಳೆಗಾಲದಲ್ಲಿ ಹೊರಗಿನ ನೀರು ಕುಣಿಯಲ್ಲಿ ಹೋಗದಂತೆ ಕುಣಿಯ ಸುತ್ತಲೂ ಕಡಿದ ಮಣ್ಣಿನಿಂದಲೇ ಒಂದೆರಡು ಫೂಟು ಎತ್ತರವಾದ ಒಡ್ಡು ಹಾಕಬೇಕು.

೩ ಕಚ್ಚಾಮಾಲನ್ನು ತಂದು ಕುಣಿಯ ಸಮೀಪದಲ್ಲಿ ಗುಂಪಿ ಹಾಕಿಡಬೇಕು ಬೇರೆ ಬೇರೆ ಪ್ರಕಾರದ ಕಚ್ಚಾಮಾಲನ್ನು ಆದಷ್ಟು ಮಿಶ್ರಮಾಡಿ ಇಟ್ಟುಕೊಂಡಿರಬೇಕು. ಇದರಂತೆ, ಶಗಣಿಯನ್ನು ಮತ್ತು ದನದ ಮೂತ್ರವನ್ನು ಅಥವಾ ಮೂತ್ರ ಮಿಶ್ರಿತ ಮಣ್ಣನ್ನು ಸಹಿತ ಕುಣಿಯ ಸಮೀಪದಲ್ಲಿಯೇ ತಂದಿಡಬೇಕು.

೪. ಕುಣಿಯನ್ನು ತುಂಬುವ ಕೆಲಸವನ್ನು ಒಂದೆರಡು ದಿವಸಗಳಲ್ಲಿಯೇ ಮುಗಿಸಿ ಅದನ್ನು ಪೂರ್ಣ ಮುಚ್ಚಿ ಅದರ ಮೇಲ್ಭಾಗಕ್ಕೆ ಸಹಿತ ಎರಡು ಇಂಚಿನ ಮಣ್ಣಿನ ಥರವನ್ನು, ಮೇಲ ಮುಚ್ಚಿಯನ್ನು ಹಾಕಿದಂತೆ. ಹಾಕಿ ಮುಚ್ಚಬೇಕು.

೫. ಈ ಪ್ರಕಾರ ಗೊಬ್ಬರ ತಯಾರ ಮಾಡಲಿಕ್ಕೆ ಮುಂಬಯಿ ಸರಕಾರದವರು ಒಂದು ಯೋಜನೆ ಮಾಡಿದ್ದು, ಈಗ ಎರಡು ಮೂರು ವರುಷಗಳಿಂದ ಈ ಕಾರ್ಯವು ಬಹಳ ಜೋರಿನಿಂದ ನಡೆದು ಬಂದಿದೆ ಈ ಯೋಜನೆಯಲ್ಲಿಸರಕಾರದವರುಪ್ರತಿಯೊಬ್ಬ ರೈತನಿಗೆ ಈ ಗೊಬ್ಬರದ ಕುಣಿ ತೆಗೆದು ಮೇಲಿನ ಕ್ರಮದಂತೆ ಗೊಬ್ಬರ ತಯಾರಮಾಡಲಿಕ್ಕೆ ಪ್ರತಿಯೊಂದು ತಗ್ಗಿಗೆ[೧೦ಫೂ. ಉದ್ದ ೬, ಫೂ. ಅಗಲ; ೩ ಫೂ. ಆಳ] ಮೂರು ರೂಪಾಯಿಯಂತೆ ಸಹಾಯಕ ಧನವೆಂದು ಕೊಡುತ್ತಾರೆ, ಈ ಸವಲತ್ತಿನ ಲಾಭವನ್ನು ಪಡಕೊಂಡು ಪ್ರತಿಯೊಬ್ಬ ರೈತನು ಆದಷ್ಟು ಹೆಚ್ಚು ಗೊಬ್ಬರವನ್ನು ತಯಾರ ಮಾಡಿಕೊಂಡು, ಹೆಚ್ಚು ಆಹಾರ ಧಾನ್ಯ ಬೆಳೆಯಲೆಂದು ನನ್ನ ನಮ್ರ ವಿನಂತಿ. [ಸ. ಕ.]

English copies of
MADRAS ALIYASANTHANA ACT of 1949
are available.
NAVAYUGA PRESS, UDIPI.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರೆಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಜೋಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾನಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವ. ತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ. ನಂ, 5 ಕೊಡಿಯಾಲಬೈಲು, ದ ಕ

ಸ್ಟಾಕಿಸ್ಟರು- ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618

LICENCE No. 31
Licenced to Post without Prepayment

NAVAYUGA WEEKLY
POST BOX No 22 -- UDIPI, S. K

7-7-1949

FOUNDER
Hon'ble Sri A B Shetty
Minister for Agriculture & Veterinary

Telegram
'Navayuga"

Estd
1921
ಸ್ಥಾಪನೆ

ನವಯುಗ

ವಾರ್ಷಿಕ ಚಂದಾ:
5—4—0
6 ತಿಂಗಳಿಗೆ
3—0—0
ಬಿಡಿಪ್ರತಿಗೆ
0—2—0

ವರ್ಷ ೨೯
ವಾರ 45

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ ಬಿ ಶೆಟ್ಟಿ ಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No 45

ಕಲಿಸಿಕೊಟ್ಟ ವಿದ್ಯೆ ತಿರುಗಿಬಿದ್ದಿದೆ!

ಕಾನೂನನ್ನು ಭಂಗಿಸುವುದನ್ನು ಕಲಿಸಿಕೊಟ್ಟು ಆ ಮೂಲಕ ಸ್ವಾತಂತ್ರ್ಯ ಸಾಧಿಸಿ, ಅಧಿಕಾರ ವಹಿಸಿಕೊಂಡ ಕಾಂಗ್ರೆಸ್ ಸರಕಾರಗಳಿಗಿದಿರಾಗಿ ಕಾನೂನುಭಂಜಕ ಪಕ್ಷಗಳು ತಲೆಯೆತ್ತಿವೆ

"ಯಾವ ವಾದ ಹೇಗಿದ್ದರೂ ಅವನ್ನು ಶಾಂತ ವ್ಯವಹಾರ ರೀತಿಯಿಂದಲೇ ಬಗೆಹರಿಸಿಕೊಳ್ಳಬೇಕಲ್ಲದೆ, ಕಾನೂನು ಮತ್ತು ವ್ಯವಸ್ಥೆಗೆ ಭಂಗವೊದಗುವ ಯಾರ ಕೃತ್ಯಗಳನ್ನಾದರೂ ಯಾವ ಸರಕಾರವೂ ಎಂದಿಗೂ ಸಹಿಸಲಾರದು" ಎಂದು ಬ್ರಿಟಿಷರ ಕಾಲದಲ್ಲಿ ಕಾಂಗ್ರೆಸಿಗರಿಗೆ ಹೇಳಿದ್ದ ಮಾತುಗಳನ್ನೇ ಇಂದು ಅಧಿಕಾರಾರೂಢ ಕಾಂಗ್ರೆಸಿಗರು ತಮ್ಮ ಇದಿರು ವಾದಿಗಳಿಗೆ ಹೇಳುತಿದ್ದಾರೆ.

'ಧ್ಯೇಯ ಸಾಧನೆಗಾಗಿ ಸೆರೆಮನೆ ಸೇರುವುದೊಂದು ಹೆಗ್ಗಳಿಕೆ' ಎಂದು ಆ ಕಾಲಗಳಲ್ಲಿ ಕಾಂಗ್ರೆಸಿಗರು ಕಲಿಸಿದ್ದನ್ನೇ ಕಲಿತುಕೊಂಡು, ಈ ಕಾಲದ ಕಾಂಗ್ರೆಸ್ ಆಡಳಿತೆಗಿದಿರಾಗಿಯೂ ಆ ಹೆಗ್ಗಳಿಕೆಯನ್ನು ಪ್ರದರ್ಶಿಸಲಾಗುತ್ತಿದೆ

ಜೈಲೊಳಗಡೆಯಲ್ಲಿ ಅನ್ನ ಸತ್ಯಾಗ್ರಹ, ಸೆರೆಮನೆಯೊಳಗಡೆ ಲಾಠೀ ಚಾರ್ಜು, ಗುಂಡೇಟು— ಮುಂತಾದುವುಗಳೆಲ್ಲವೂ ಕಾಂಗ್ರೆಸ್ ಆಂದೋಲನಗಳ ಕಾಲದಲ್ಲಿ ದ್ವೇಷಿಗಳು ಕಲಿತುಕೊಂಡುದರಿಂದಾಗಿ— ಕಾಂಗ್ರೆಸ್ ಆಡಳಿತೆಯ ಈ ಕಾಲದಲ್ಲೂ ಇವೆ.

"ಬಡ ಹಿಂದೀಯನೊಬ್ಬನ ಸಂಪಾದನೆಯು ದಿನಕ್ಕೆ ಎರಡೇ ಆಣೆ ಇರುವಾಗ, ಅವನ ತಲೆಯ ಮೇಲೆ ಕುಳಿತ ನೀವು ಬೇರೆ ವಿವಿಧ ಬತ್ತೆಗಳ ವಿನಹ ತಿಂಗಳಿಗೆ 26000 ರೂಪಾಯಿಗಳನ್ನು ಸಂಬಳವನ್ನೇ ಪಡೆಯುತ್ತಿರುವಿರಿ" ಎಂದು ಗವರ್ನರ್ ಜನರಲಿಗೆ ಆ ಕಾಲದಲ್ಲಿ ಗಾಂಧಿಜೀ ಬರೆದಿದ್ದರೆ, ಇಂದು ಅದೇ ಪೀಠದಲ್ಲಿರುವ ಅದೇ ಗಾಂಧಿಜೀಯ ಶಿಷ್ಯ ರಾಜಾಜಿಗೆ ಅದೇ ಮಾತು ಮಕ್ಕಳಿಂದ ಮುಟ್ಟುತ್ತಿದೆ

"ವಿನಾಶಾತ್ಮಕ ಶಕ್ತಿ, ಚಳವಳಿಗಳಿಂದ ರಾಷ್ಟ್ರ ರಕ್ಷಣೆಯಾಗದು, ಭದ್ರತೆ ಮತ್ತು ವ್ಯವಸ್ಥೆ ಉಳಿಯದು." ಎಂದು ಆ ಕಾಲದ ಬ್ರಿಟಿಷ್ ಆಡಳಿತಗಾರರು ಪಂಡಿತ ನೆಹರುಗಳಂಥವರಿಗೆ ಹೇಳಿದುದನ್ನೇ ಈ ಕಾಲದಲ್ಲಿ ಪಂಡಿತಜೀ ತನ್ನ ದೇಶೀಯ ಬಂಧುಗಳಿಗೆ ಹೇಳುತಿದ್ದಾರೆ

ಕಾಂಗ್ರೆಸಿಗರು ಅಂದು ಬಯ್ಯುತ್ತಿದ್ದ ಮಾಡಿಸಿದ್ದ "ಪೋಲೀಸ್ ರಾಜ್ಯ" "ನೌಕರಶಾಹೀ ದಬ್ಬಾಳಿಕೆ ಯಂತ್ರ" ಇತ್ಯಾದಿ



ನಾಮಪದಗಳು ಇಂದು ಕಾಂಗ್ರೆಸ್ ಸರಕಾರಗಳ ವಿರುದ್ಧ ಕೆಲವರಿಂದ ಉಚ್ಚರಿಸಲ್ಪಡುತ್ತಾ ಇಳಿದುಕೊಂಡಿವೆ

ಆ ದಿನಗಳಲ್ಲಿ ಸಮಾಜವಾದ, ಪೂರ್ಣ ಸ್ವಾತಂತ್ರ್ಯ ವಾದಗಳ ಅದ್ವಿತೀಯ ನಾಯಕರಾಗಿದ್ದ ಪಂಡಿತ ಜವಾಹಿರಲಾಲರು, ಈ ಕಾಲದಲ್ಲಿ ಅದೇ ಸಮತಾವಾದ, ಅದೇ ಪೂರ್ಣಸ್ವಾತಂತ್ರ್ಯದ ಚಳವಳಿಗಾರರ 'ತಂಟೆ'ಗಳ ಇದಿರುವಾದಿಯಾಗಿದ್ದಾರೆ

"ನಮ್ಮ ಸಂಸ್ಕೃತಿ, ಆಚಾರ ವಿಚಾರಗಳೆಲ್ಲವೂ ಪ್ರತ್ಯೇಕವಾದ್ದರಿಂದ ನಮಗೆ ಪ್ರತ್ಯೇಕ ಸ್ಥಾನವೇ ಬೇಕು" ಎಂದು ಮುಸ್ಲಿಮ್ ನಾಯಕರು ಪಾಕಿಸ್ತಾನ ಪಡೆದಿದ್ದರೆ, ಇಂದು ಅದೇ ಪಾಕಿಸ್ತಾನದಲ್ಲಿ ಅಕ್ಷರಶಃ ಅದೇ ವಾದವನ್ನಾಧರಿಸಿ ಗಡಿನಾಡಿನ ಪಠಾಣರು ಪ್ರತ್ಯೇಕ ಸ್ಥಾನ ಯಾಚಿಸುತಿದ್ದಾರೆ

ಲೀಗ್ ನಾಯಕರ ಪ್ರತ್ಯೇಕತಾ ಯಾಚನೆಯ ವಿರುದ್ಧವಾಗಿ,ಆ ಕಾಲದಲ್ಲಿ ಕಾಂಗ್ರೆಸ್ ನಾಯಕರು ಯಾವ ಅಖಂಡತೆ, ಐಕ್ಯತೆಯ ವಾದ ಮಾಡಿದ್ದರೋ ಅದೇ

(ನೇ ಪುಟ ನೋಡಿ)

Madras Aliyasanthana Act, IX of 1949

ಮದ್ರಾಸು
ಅಳಿಯಸಂತಾನ ಕಾನೂನು
ಇದರ
ಕನ್ನಡ ಮತ್ತು ಇಂಗ್ಲಿಷ್ ಪ್ರತಿಗಳು ದೊರೆಯುತ್ತವೆ

ವಿವಾಹ ಮತ್ತು ಅದರ ಬಿಡುಗಡೆ, ಜೀವನಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತ ವಾರಿಸ್ದಾರಿಕೆ, ಕುಟುಂಬ ಮತ್ತು ಅದರ ರಕ್ಷಣೆ, ವಿಭಾಗ ಮೊದಲಾದ, ಪ್ರತಿಯೊಬ್ಬ ಅಳಿಯ ಸಂತಾನಿಗನಿಗೂ ತಿಳಿದಿರಲೇಬೇಕಾದ ವಿಷಯಗಳಿಂದೊಡಗೂಡಿದೆ

ಕ್ರಯ 0—8—0 (ಟಪ್ಪಾಲು ಖರ್ಚು ಪ್ರತ್ಯೇಕ)
0 9 0 ಸ್ಟಾಂಪು ಕಳುಹಿಸಿದವರಿಗೆ ಪ್ರತಿ ಕಳುಹಿಸಲ್ಪಡುವುದು
ಸಿಗುವ ಸ್ಥಳ:-
ನವಯುಗ ಪ್ರೆಸ್, ಉಡುಪಿ

ಸುವಾಸನೆ ಮತ್ತು ಮಧುರತೆಯಿಂದ
ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Nilgiris)

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ
ಪ್ರಧಾನ ಕಾರ್ಯಾಲಯ:- ಧಾರವಾಡ,
THE UNITED KARNATAK INSURANCE COMPANY, LIMITED

ಪೂರ್ವ ನಿಶ್ಚಯ ಮತ್ತು ವ್ಯವಸ್ಥೆಗನುಸಾರವಾಗಿ ಇದೇ ಜುಲಾಯಿ ತಾ. 1ನೇ ಶುಕ್ರವಾರದಿಂದ ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಒಂದಾಗಿ, ಏಕಾಡಳಿತೆಯಲ್ಲಿವೆ. ಈ ಸಂಯುಕ್ತಾಧಿಕಾರದ ಉದ್ಘಾಟನಾ ಸಮಾರಂಭವು ಜುಲಾಯಿ ತಾ. 1ನೇ ಪೂರ್ವಾಹ್ನ ತ್ರಿವೇಂದ್ರಮಿನ ಲೆಜಿಸ್ಲೇಟಿವ್ ಕೌನ್ಸಿಲ್ ಭವನದಲ್ಲಿ ಜರಗಿತು. ಸಮಾರಂಭವು ಸಾದಾ ರೀತಿಯದಿದ್ದರೂ ಆಕರ್ಷಣೀಯವಿದ್ದಿತು. ಕೊಚ್ಚಿ, ತಿರುವಾಂಕೂರುಗಳ ಶಾಸನ ಸಭಾ ಸದಸ್ಯರುಗಳು, ಬಿರುದುವಾಲರು, ಆಪ್ತ ಗೃಹಸ್ಥರು, ಅನಧಿಕಾರಿ ಯುರೋಪಿಯನರು ಅಲ್ಲಿ ಹಾಜರಿದ್ದರು. ಅನಿವಾರ್ಯ ಕಾರಣಗಳಿಂದಾಗಿ ಸರ್ದಾರ್ ಪಟೇಲರು ಬಂದಿರಲಿಲ್ಲ. ಭಾರತ ಸರಕಾರದ ಸಂಸ್ಥಾನ ಖಾತೆಯ ಸಲಹೆಗಾರ ಶ್ರೀ ವಿ. ಪಿ. ಮೆನನ್, ಕಾರ್ಯದರ್ಶಿ ಶ್ರೀ ಎಮ್. ಕೆ. ವೆಲ್ಲೋಡಿ, ತಿರುವಾಂಕೂರು ಕೊಚ್ಚಿ ಮಿಲನಸಮಿತಿಯ ಅಧ್ಯಕ್ಷ ಮಿ. ಎನ್. ಎಮ್. ಬುಚ್ ಹಾಜರಿದ್ದರು. ತಿರುವಾಂಕೂರು ಮಹಾರಾಜರು 'ರಾಜ ಪ್ರಮುಖ'ನಾಗಿ ಪೀಠವೇರಿದ ಮೇಲೆ ಸಂಸ್ಥಾನ ಖಾತೆಯ ಕಾರ್ಯದರ್ಶಿ ಶ್ರೀ ವೆಲ್ಲೋಡಿಯವರಿಂದ ಈ ಜೋಡಣಾ ಸಂಬಂಧದ ಕರಾರು ವಾಚನವಾಯಿತು. ಆ ಮೇಲೆ ತಿರುವಾಂಕೂರು ಕೊಚ್ಚಿ ಕೇಂದ್ರದ ಚೀಫ್ ಜಸ್ಟೀಸರು 'ರಾಜ ಪ್ರಮುಖ'ರು ಭಾರತ ಸರಕಾರಕ್ಕೊಪ್ಪಿಸಿದ ಪ್ರತಿಜ್ಞಾಪತ್ರವನ್ನೋದಿದರು. ಶ್ರೀ ಟಿ ಕೆ. ನಾರಾಯಣ ಪಿಳ್ಳೆಯವರು ಪ್ರಧಾನ ಮಂತ್ರಿಯಾಗಿ ಶ್ರೀಗಳಾದ ಎ. ಇಕ್ಕಂಡ ವಾರಿಯರ್, ಎ. ಜೆ. ಜೋನ್, ಕೆ. ಅಯ್ಯಪ್ಪನ್, ಪನಂಪಳ್ಳಿ ಗೋವಿಂದ ಮೆನನ್, ಇ. ಕೆ. ಮಾಧವನ್, ಟಿ. ಎ. ಅಬ್ದುಲ್ಲರುಳ್ಳ ಮಂತ್ರಿ ಸಮಿತಿ ಸದಸ್ಯರು ರಾಜ ಪ್ರಮುಖರಿದಿರು ಪ್ರಮಾಣಬದ್ಧರಾದರು. ಆ ಮೇಲೆ ರಾಜ ಪ್ರಮುಖರು ಭಾರತದ ಗವರ್ನರ್ ಜನರಲ್, ಪ್ರಧಾನ ಮಂತ್ರಿ, ಉಪ ಪ್ರಧಾನ ಮಂತ್ರಿ, ಮತ್ತು ಕೊಚ್ಚಿ ಮಹಾರಾಜರಿಂದ ಬಂದಿದ್ದ ಸಂದೇಶಗಳನ್ನು ಓದಿದರು. ಸರ್ದಾರ್ ಪಟೇಲರಿಗೆ ಈ ಸಮಾರಂಭಕ್ಕಾಗಮಿಸುವದು ಅನಿವಾರ್ಯ ಕಾರಣಗಳಿಂದ ಅಸಾಧ್ಯವಾದರೂ ಅವರ ಹೃದಯ ಇಲ್ಲೇ ಇದೆಯೆಂದೂ ಆಗೋಸ್ತು ಅಂತ್ಯಭಾಗದಲ್ಲಿ ಅಥವಾ ಸೆಪ್ಟೆಂಬರ್ ಮೊದಲ ದಿನಗಳಲ್ಲಿ ಅವರು ಇಲ್ಲಿಗೆ ಬರಲಿರುವರೆಂದೂ ಶ್ರೀ ವಿ. ಪಿ. ಮೆನನರು ತಿಳಿಸಿದರು. ಕೊಚ್ಚಿ ತಿರುವಾಂಕೂರು ಹೈಕೋರ್ಟು ಮತ್ತು ಲಾ ಕಾಲೇಜವು ಎರ್ನಾಕ್ಯುಲಮ್‌ನಲ್ಲಿ ಸ್ಥಾಪಿಸಲಾಗುವದೆಂದು ತಿಳಿದು ಬಂದಿದೆ. ಇನ್ನು ಕೆಲವೇ ದಿನಗಳೊಳಗೆ ಹೈಕೋರ್ಟಿನ ಉದ್ಘಾಟನೆಯಾಗಲಿದೆ. ಇದೇ ತಾ. 1ರಿಂದ ತಿರುವಾಂಕೂರು-ಕೊಚ್ಚಿ ಏಕ ಸಂಸ್ಥಾನವಾಗಿವೆ; ಏಕಾಧಿಕಾರ ನಿರ್ವಹಿಸುತ್ತಿವೆ

ಪ್ರಾಮುಖ್ಯ ಕೂಟ

ಮೊನ್ನೆ ರಚನೆಗೊಂಡ ಕೊಚ್ಚಿ ತಿರುವಾಂಕೂರು ಕೂಟವು ಭಾರತ ಸರಕಾರದ ಸಂಸ್ಥಾನೀ ಜೋಡಣೆಯ ಕಾರ್ಯಗಳ ಪೈಕಿ ಕೊನೆಯದು. ಇನ್ನು ಇಂತಹ ಕೂಟ ರಚನೆಯ ಕೆಲಸವಿಲ್ಲ; ಅಂತೆಯೇ ಈಗ ಇರುವ ಇಂತಹ ಆರು ಕೂಟಗಳ ಪೈಕಿ, ಈ ಕೊನೆಯ ಕೂಟವೇ ಭೂವಿಸ್ತಾರದ ಮಟ್ಟಿಗೆ ಎಲ್ಲಕ್ಕಿಂತ ಸಣ್ಣದು. ಇದರ ಒಟ್ಟು ವಿಸ್ತೀರ್ಣ 8150 ಚದರ ಮೈಲುಗಳು ಮಾತ್ರ. ಆದರೆ ಜನ ಸಂಖ್ಯೆಯಲ್ಲಿ ಆರು ಸಂಸ್ಥಾನೀ ಕೂಟಗಳಲ್ಲಿ ಈ ಕೂಟವು ಎರಡನೆಯದು. ಇಲ್ಲಿ 75 ಲಕ್ಷ ಜನರಿದ್ದಾರೆ. ಜನನಿವಾಸದೊತ್ತಡದಲ್ಲಂತೂ ಈ ಕೂಟವು ಮಿಕ್ಕೆಲ್ಲಾ ಭಾಗಗಳಿಗಿಂತ ಮುಂದಿದೆಯೆನ್ನಬಹುದು. ಭಾರತದಲ್ಲಿ ಚದರ ಮೈಲೊಂದಕ್ಕೆ 267 ಜನರು ವಾಸಿಸುತ್ತಿದ್ದಾರಾದರೆ ಈ ಕೊಚ್ಚಿ ತಿರುವಾಂಕೂರು ಕ್ಷೇತ್ರದಲ್ಲಿ ಚದರ ಮೈಲಿಗೆ 920 ಜನರಿದ್ದಾರೆ. ಇಲ್ಲಿಯ ಕಂದಾಯೋತ್ಪನ್ನವಾದರೋ ಆರು ಸಂಸ್ಥಾನೀ ಕೂಟಗಳ ಪೈಕಿ ಅತ್ಯಂತ ದೊಡ್ಡದಾದ ರಾಜಸ್ಥಾನ್ ಕೂಟದಷ್ಟೇ; ವರುಷಕ್ಕೆ ಸುಮಾರು 13 ಕೋಟಿ ರೂಪಾಯಿಗಳಿಗೂ ಮಿಕ್ಕುತ್ತದೆ. ಇನ್ನು ಪ್ರಕೃತಿ ಸೌಂದರ್ಯ-ಪ್ರಕೃತಿದತ್ತ, ಹಾಗೂ ಉದ್ದಿಮೇ ಸಂಪತ್ತು-ಸಾಮಾಜಿಕ, ಸಾಂಸ್ಕೃತಿಕ ಔನ್ನತ್ಯ-ವಿದ್ಯೆ, ಕಲೆ, ಪ್ರಜಾಸತ್ತಾತ್ಮಕಸಂಸ್ಥೆಗಳಮಟ್ಟ—ಮುಂತಾದುವುಗಳಲ್ಲಿ, ಇವೆರಡು ಸಂಸ್ಥಾನಗಳ ಒಕ್ಕೂಟ ವಲಯವು ನಿಜಕ್ಕೂ ಅಸಾಮಾನ್ಯವಾದುದು. ಪುರಾತನ ಕಾಲದಿಂದಲೂ ಸತ್ಕೀರ್ತಿ ಗಳಿಸಿದ್ದ ಕ್ಷೇತ್ರವಿದು.

ರಾಜಪ್ರಮುಖ, ಮೇಜರ್ ಜನರಲ್, ಹಿಸ್ ಹೈನೆಸ್, ಶ್ರೀ ಪದ್ಮನಾಭದಾಸ, ವಾಂಚಿಪಾಲ, ಸರ್ ಬಲರಾಮ ವರ್ಮ, ಕುಲಶೇಖರ ಕಿರೀಟಪತಿ, ಮನ್ನೆ ಸುಲ್ತಾನ್, ಮಹಾರಾಜಾ ರಾಜಾ ರಾಮ ರಾಜಾ ಬಹದ್ದೂರ್, ಶಮ್ಶೇರ್‌ಜಂಗ್ ಜಿ. ಸಿ. ಯಸ್. ಐ.

ಪೂರ್ವ ಚರಿತ್ರೆ

ಇಂದು ತಿರುವಾಂಕೂರು ಮತ್ತು ಕೊಚ್ಚಿಗಳನ್ನು ಹೊಸದಾಗಿ ಒಂದುಗೂಡಿಸಿದ ಕೀರ್ತಿ ಭಾರತ ಸರಕಾರಕ್ಕೆ ಸಲ್ಲುತ್ತಿದೆ. ಆದರಿದು ಪುನರ್ಮಿಲನ ಹೊರತು ಹೊಸ ಜೋಡಣೆಯಲ್ಲವೆಂಬುದು ಚರಿತ್ರೆಯಿಂದ ತಿಳಿಯುತ್ತದೆ. ಒಂಭತ್ತನೇ ಶತಮಾನದ ವರೆಗೂ ತಿರುವಾಂಕೂರು, ಕೊಚ್ಚಿ ಮತ್ತು

ಐಕ್ಯಗೊಂಡ— ಈ ಕೂಟದ—

ಮಲಬಾರು ಜಿಲ್ಲೆ ಒಂದೇ ಆಡಳಿತೆಯಲ್ಲಿದ್ದುವು. ಆ ಸ್ಥಿತಿ ಪುನಃ ಉದ್ಭವಿಸಿತೆನ್ನಬೇಕಾದರೆ ಈ ಕೊಚ್ಚಿ ತಿರುವಾಂಕೂರು ಏಕ ಕೇಂದ್ರದೊಂದಿಗೆ ಮಲಬಾರು ಜಿಲ್ಲೆಯೂ ಕೂಡಿ ಐಕ್ಯ ಕೇರಳವಾಗಿಕೊಳ್ಳಬೇಕು. ಕೊಚ್ಚಿ ತಿರುವಾಂಕೂರು—ಮಲಬಾರನ್ನೊಳಗೊಂಡ ರಾಜ್ಯವನ್ನು ಆಳುತ್ತಾ ಬಂದ ಚೇರಾ ರಾಜ ಪರಂಪರೆಯಲ್ಲಿ ಕೊನೆಯವನಾದ ಚೆರಮಾನ್ ಪೆರುಮಾಳನು ತನ್ನ ಮಕ್ಕಳು ಮತ್ತು ಸಂಬಂಧಿಕರೊಳಗೆ ಆ ರಾಜ್ಯವನ್ನು ವಿಂಗಡಿಸಿಹಾಕಿದ್ದನು; ಇಂದಿನ ಕೊಚ್ಚಿ ಮತ್ತು ತಿರುವಾಂಕೂರು ರಾಜರುಗಳ ಮೂಲ ಹಿರಿಯನು ಒಬ್ಬನೇ. ಆ ಮೇಲೆ ಸುಮಾರು ಸಾವಿರ ವರುಷಗಳ ವರೆಗೂ, ದಕ್ಷಿಣ ಭಾರತದ ಚರಿತ್ರಾಂತರ್ಗತವಾಗಿ ಚೋಳರು, ಪಾಂಡ್ಯರು, ನಾಯಕರಾಜರು ಈ ಕೇರಳ ರಾಜ್ಯಗಳನ್ನಾಳಿದ್ದರು. ಆ ಮೇಲೆಯೇ ಪಾಶ್ಚಾತ್ಯ ರಾಷ್ಟ್ರಗಳು ಪ್ರವೇಶಿಸಿ ಇಲ್ಲಿ ಪರಸ್ಪರ ಸ್ಪರ್ಧಿಸಿಕೊಂಡುದು

1729ರಿಂದ 1758ರ ವರೆಗಿನ ಅವಧಿಯಲ್ಲಿ—ಭಾರತದಲ್ಲಿ ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ಮೇಲಾಟ ಹೋರಾಟಗಳನ್ನು ನಡೆಯಿಸುತ್ತಿದ್ದ ಕಾಲದಲ್ಲಿ—ತಿರುವಾಂಕೂರನ್ನಾಳುತ್ತಿದ್ದ ರಾಜಾ ಮಾರ್ತಾಂಡ ವರ್ಮರು ವಿಶೇಷ ಶಕ್ತಿ ಯೋಗ್ಯತೆಗಳಿದ್ದ ರಾಜ. ಇವರು ತನ್ನ ಹೋರಾಟ ಶಕ್ತಿ ಮತ್ತು ಬುದ್ಧಿವಂತಿಕೆಗಳಿಂದ ತನ್ನ ರಾಜ್ಯವನ್ನು ಭದ್ರಪಡಿಸಿಕೊಂಡಿದ್ದರು. ತಿರುವಾಂಕೂರನ್ನು ಶ್ರೀ ಪದ್ಮನಾಭ ಸ್ವಾಮಿಯ ಆಸ್ತಿಯಾಗಿ ಸಮರ್ಪಿಸಿ, ಆ ಮೇಲಿನ ತಿರುವಾಂಕೂರು ಮಕುಟಾಧಿಪತಿಗಳೆಲ್ಲಾ ಪದ್ಮನಾಭ ದಾಸರಾಗಿರುವಂತೆ ಮಾಡಿದವನು ಈ ರಾಜನೇ. 1750ನೇ ಜನವರಿಯ ಒಂದು ದಿನ ರಾಜಾ ಮಾರ್ತಾಂಡವರ್ಮರು ತಿರುವೇಂದ್ರಮಿನಲ್ಲಿರುವ ಅರಮನೆ ದೇವರಾದ ಶ್ರೀ ಪದ್ಮನಾಭ ಸ್ವಾಮಿಯ ದೇವಸ್ಥಾನಕ್ಕೆ ತೆರಳಿ, ಅಲ್ಲಿ ನೆರೆದಿದ್ದ ರಾಜ ಕುಟುಂಬದ ಎಲ್ಲಾ ಸದಸ್ಯರು, ಅರ್ಚಕರು ಮತ್ತು ಮುಖ್ಯ ಮಂತ್ರಿಯ ಸಮಕ್ಷಮದಲ್ಲಿ ಪದ್ಮನಾಭ ಸ್ವಾಮೀ ಮೂರ್ತಿಯ ಮುಂಭಾಗದಲ್ಲಿ ತನ್ನ ಖಡ್ಗವನ್ನು ಕಾಣಿಕೆಯಾಗಿ ಇಟ್ಟು, ರಾಜ್ಯವನ್ನು ಆ ದೇವರಿಗೆ ಅರ್ಪಣೆ ಮಾಡಿದರು. ಆ ತಾರೀಕಿನಿಂದ ಅವರೂ ಅವರ ನಂತರದ ತಿರುವಾಂಕೂರರಸುಗಳೂ ತಾವು ಆ ದೇವನ ಸೇವಕರಾಗಿ ರಾಜ್ಯ ನಿರ್ವಹಿಸುವರೆಂಬುದಕ್ಕಾಗಿ ತಮ್ಮನ್ನು 'ಪದ್ಮನಾಭದಾಸ' ಎಂದು ಕರೆಯಿಸಿಕೊಂಡರು. 18ನೇ ಶತಮಾನದ ಕೊನೆಯಭಾಗದಲ್ಲಿ ಮೈಸೂರಿನ ಹೈದರಲಿ ಮತ್ತು ಟಿಪ್ಪು ಸುಲ್ತಾನರ ವಿರುದ್ಧವಾಗಿ ತಿರುವಾಂಕೂರರಸರು ಬ್ರಿಟಿಷರ ಪಕ್ಷ ವಹಿಸಿ ನಿಂತರು. 1795ರಲ್ಲಿ ತಿರುವಾಂಕೂರು ರಾಜ ಮತ್ತು ಬ್ರಿಟಿಷರೊಳಗೊಂದು ಒಡಂಬಡಿಕೆಯಾಯಿತು. ಅದಕ್ಕನುಸಾರವಾಗಿ ಆಕ್ರಮಣಗಳ ವಿರುದ್ಧ ತಿರುವಾಂಕೂರಿನ ರಕ್ಷಣೆಗೆ ಬ್ರಿಟಿಷರು ನಿಲ್ಲಬೇಕು-ಪ್ರತಿಫಲವಾಗಿ ತಿರುವಾಂಕೂರಿನಿಂದ ವರುಷಂಪ್ರತಿ ಕ

[೧ನೇ ಪುಟದಿಂದ]

ವಾದವನ್ನು ಪಾಕಿಸ್ತಾನ್ ಸರಕಾರವು ಇಂದು ಮರಾಠರ ಪ್ರತ್ಯೇಕತಾ ಬೇಡಿಕೆಯ ವಿರುದ್ಧ ಹೂಡುತ್ತಿದೆ

ರಾಷ್ಟ್ರ ವಿಭಜನೆಯನ್ನು ಯಾಚಿಸುವ ಮೊದಲು ಮುಸ್ಲಿಮರ ಪ್ರತ್ಯೇಕ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಮಿ. ಜಿನ್ನರು ಮುಂದಿಟ್ಟ ಆ ಚಿರಸ್ಮರಣೀಯ ಹನ್ನೊಂದು ಸೂತ್ರಗಳ ಮಾದರಿಯಲ್ಲೇ, ಸಿಂಧ್ ಪ್ರಾಂತೀಯರ ಪ್ರತ್ಯೇಕ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಸಿಂಧೀಯರೀಗ ಪಾಕಿಸ್ತಾನ್ ಸರಕಾರದ ವಿರುದ್ಧ ಎಂಟೊಂಭತ್ತು ಸೂತ್ರಗಳನ್ನು ಮಂಡಿಸಿದ್ದಾರೆ.

ಪಾಕಿಸ್ತಾನ್ ವಲಯದ ಮುಸ್ಲಿಮರಿಗಿಂತಲೂ ಹೆಚ್ಚಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ ಚಳವಳಿಸಿದ್ದ ಭಾರತ ವಲಯದ ಮುಸ್ಲಿಮರಿಂದು ತಮಗೆ ಶಾಸನ ಸಭೆಗಳ ಪ್ರತ್ಯೇಕ ಸ್ಥಾನ ಕೂಡಾ ಬೇಡ ಎನ್ನುತಿದ್ದಾರೆ.

ಆದರೆ ಇಲ್ಲಿಯವರಿಗಿದನ್ನು ಕಲಿಸಿದ ಮಹಾತ್ಮಾ ಗಾಂಧಿಯವರೂ ಈಗಿಲ್ಲ; ಅಲ್ಲಿಯವರಿಗದನ್ನು ಕಲಿಸಿದ ಖಾಯದೇ ಆಝಮ್ ಜಿನ್ನರೂ ಈಗಿಲ್ಲ. ತಾವು ಕಲಿಸಿದ್ದುದರೊಡನೆಯೇ ಕಾದಾಡಲು ಗಾಂಧಿಜೀ ತನ್ನ ಬಲಗೈ ನೆಹರುವನ್ನು ಬಿಟ್ಟು ಹೋದರೆ, ಜಿನ್ನರು ತನ್ನ ಬಲಗೈ ಲಿಯಾಖತರನ್ನು ಬಿಟ್ಟುಹೋದರು. ಎಬ್ಬಿಸಿಬಿಡಲು ಗುರುಗಳಿದ್ದರು—ಎದೆಗೊಡಲು ಶಿಷ್ಯರುಳಿದರು!

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಹಿಂದೀರಾಷ್ಟ್ರದ ಹಳ್ಳಿಗಳ ಬಡತನವು ನಿವಾರಣೆಯಾಗಬೇಕಾದರೆ ಅವುಗಳಿಗೆ ಬ್ಯಾಂಕಿನ ಸೇವೆಯು ಜರೂರಾಗಿಯಿದೆ. ಈ ಧ್ಯೇಯದ ಸಫಲತೆಗಾಗಿ ಸಿಂಡಿಕೇಟ್ ಬ್ಯಾಂಕು ಅಗಾಧ ಪ್ರಯತ್ನವನ್ನು ಮಾಡಿದೆ. ಹಿಂದೀರಾಷ್ಟ್ರದ ಪ್ರಾಮುಖ್ಯ ನಗರಗಳಲ್ಲಿ ಆರುವತ್ತಕ್ಕೂ ಮಿಕ್ಕಿದ ಶಾಖೆಗಳಿವೆಯಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಮೂವತ್ತಕ್ಕೂ ಮಿಕ್ಕಿದ ಕಾರ್ಯಾಲಯಗಳಿವೆ.

ಪಿಗ್ಮಿ ಡಿಪೋಜಿಟ್ ಯೋಜನೆಯು ಹಳ್ಳಿ ಜನರಿಗೆ ವಿಶೇಷತಃ ಹೇಳಿದುದಾಗಿದೆ. ಅದು ದಿನಾಲೂ ನಿಮ್ಮ ಮನೆ ಬಾಗಿಲಿಗೇನೇ ಬಂದು ಕಡಿಮೆ ಎಂದರೆ ಎರಡಾಣೆಯಂತೆ ಸಹ ನಿಧಿ ಸಂಗ್ರಹಿಸುವ ಒಂದು ಏರ್ಪಾಡಾಗಿದೆ. ಈ ಯೋಜನೆಯು ಕೆಲವೇ ವರುಷಗಳಲ್ಲಿ ಸಹಸ್ರಾರು ಬಡಜನರು ಸಾಧಾರಣ ಹಣವನ್ನು ಉಳಿಸಿಕೊಳ್ಳುವಂತೆ ಮಾಡಿದೆ

ನೀವಾದರೂ ಪಿಗ್ಮಿ ಯೋಜನೆಗೆ ಏಕೆ ಸೇರಬಾರದು?

ಐದು ಕೋಟಿ ರೂಪಾಯಿಗಳ ವಹಿವಾಟು

ಟಿ. ಎ. ಪೈ.
ಜನರಲ್ ಮೆನೇಜರ್

ತಿರುವಾಂಕೂರು ಕೊಚ್ಚಿ

—ಪೂರ್ವಾರ್ಧುನಿಕ ರೂಪರೇಖೆ.

ಣೆಗೆ ಹೋಗಬೇಕೆಂಬ ನಿರ್ಧಾರವಿದ್ದಿತು. 1805ರಲ್ಲಿ ಈ ಕರಾರನ್ನು ಪುನಃ ವಿಸ್ತರಿಸಲಾಯಿತು. ತಿರುವಾಂಕೂರು ಮಹಾರಾಜರ ಸಾರ್ವಭೌಮಾಧಿಕಾರವನ್ನು ಬ್ರಿಟಿಷ್ ಆಡಳಿತೆಯ ಅಧೀನಗೊಳಿಸಲಾಯಿತಲ್ಲದೆ, ಅವರು ಕೊಡುವ ವಾರ್ಷಿಕ ಕಾಣಿಕೆಯನ್ನು ಹೆಚ್ಚಿಸಲಾಯಿತು. ಆಗಿನ ದೇಶಪ್ರೇಮಿ ತಿರುವಾಂಕೂರು ದಿವಾನ್ ವೇಲುತಂಪಿ ದಳವಾಯಿಗೆ ಇದು ಸಹನೆಯಾಗದೆ ಅವರೊಂದು ಬಂಡಾಯವನ್ನೆಬ್ಬಿಸಿದರು; ಆದರದು ನಿರ್ಮೂಲಿಸಲ್ಪಟ್ಟು ಈಸ್ಟ್ ಇಂಡಿಯಾ ಕಂಪೆನಿಯ ಓರ್ವ ರೆಸಿಡೆಂಟನ ಸ್ವಾಧೀನಕ್ಕೆ ತಿರುವಾಂಕೂರಿನ ಆಡಳಿತೆಯೊಪ್ಪಿಸಲ್ಪಟ್ಟಿತು. ಆ ಮೇಲೆ 1862ರಲ್ಲಿ ತಿರುವಾಂಕೂರರಸರ ಸ್ವಂತ ಹಕ್ಕು ಬಾಧ್ಯತೆಗಳು ಅಂಗೀಕಾರ ಹೊಂದಿದುವು; ಅಂದಿನಿಂದ ಬ್ರಿಟಿಷ್ ಆಡಳಿತೆಯ ಕೊನೆಯ ವರೆಗೆ ಏಕ ಪ್ರಕಾರ ಸಾಗಿದ್ದಿತು.

ಕೊಚ್ಚಿಯ ಪೂರ್ವ ಚರಿತ್ರೆ ಕೂಡಾ ಬಹುಮಟ್ಟಿಗೆ ಹೀಗೆಯೇ. 16ನೇ ಶತಮಾನದಾದಿ ಭಾಗದಲ್ಲಿ ಇಲ್ಲಿಗೆ ಪೋರ್ಚುಗೀಸ್ ಪ್ರವೇಶವಾದಾರಭ್ಯ ಕೊಚ್ಚಿಗೆ ವಿದೇಶಿ ದಾಹವು ಸೋಂಕಿದ್ದಿತು. 1663ರಲ್ಲಿ ಡಚ್ಚರು ಕೊಚ್ಚಿ ನಗರದಿಂದ ಪೋರ್ಚುಗೀಸರನ್ನು ಓಡಿಸಿಬಿಟ್ಟರು. ಆದರೂ ತಿರುವಾಂಕೂರರಸರೊಡನೆ ಮೈತ್ರೀ ಸಂಬಂಧವಿಟ್ಟುಕೊಂಡು ಕರಾವಳಿಯ ಹಲವು ಗ್ರಾಮಗಳನ್ನು ಮಾತ್ರ ಪಡಕೊಂಡು ಅನುಭೋಗಿಸುತ್ತಾ ಬಂದರು. ಸುಮಾರು 100 ವರುಷಗಳ ನಂತರ ಡಚ್ಚರ ಅಧಿಕಾರವು ಕುಸಿಯುತ್ತಾ ಬಂದಾಗ, ಕಲ್ಲಿಕೋಟೆಯ ಝಾಮೊರಿನರು ಕೊಚ್ಚಿಯ ಮೇಲೆ ದಂಡೆತ್ತಿ ಬಂದರು. ಆಗ ಝಾಮೊರಿನರನ್ನು ಅಲ್ಲಿಂದ ಹಿಂದಕ್ಕಟ್ಟಲು ಸಹಾಯವಿತ್ತವರು ತಿರುವಾಂಕೂರರಸರು. ಇದಕ್ಕೆ ಪ್ರತಿಫಲವಾಗಿ ಕೊಚ್ಚಿಯ ಕೆಲವು ಭಾಗಗಳು ತಿರುವಾಂಕೂರಿಗೆ ದೊರೆತವು. 1776ರಲ್ಲಿ ಹೈದರಾಲಿಯು ಕೊಚ್ಚಿಯ ಮೇಲೆ ದಂಡೆತ್ತಿ ಬಂದು ಅದನ್ನು ಸೋಲಿಸಿದ ಅಂದಿನಿಂದ 1791ರ ವರೆಗೆ ಅವನ ಮತ್ತು ಅವನ ಮಗ ಟಿಪ್ಪುಸುಲ್ತಾನನ ಅಧೀನ ರಾಜ್ಯವಾಗಿತ್ತು ಕೊಚ್ಚಿ. 1791ರಲ್ಲಿ ಕೊಚ್ಚಿ ರಾಜರು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯೊಂದಿಗೆ ಒಂದು ಒಡಂಬಡಿಕೆ ಮಾಡಿಕೊಂಡು ವರುಷಕ್ಕೊಂದು ಲಕ್ಷ ರೂಪಾಯಿ ಕಪ್ಪಕೊಡಲೊಪ್ಪಿ ಅದರ ಆಶ್ರಯ ಪಡೆದರು. 1808ರಲ್ಲಿ ಈ ಪರದಾಸ್ಯತೆಯ ವಿರುದ್ಧ ದೇಶಾಭಿಮಾನಿಗಳು ಬಂಡಾಯವೆಬ್ಬಿಸಿದರೂ ಬ್ರಿಟಿಷರದನ್ನು ಸುಲಭದಲ್ಲಿ ನಿರ್ಮೂಲಿಸಿಬಿಟ್ಟರು ಅದನ್ನೇ ಕಾರಣವಾಗಿ ಮಾಡಿ ಕೊಚ್ಚಿಯ ಮೇಲೆ ಇನ್ನೂ ಹೆಚ್ಚಿನ ಕಪ್ಪ ಹೇರಲಾಯಿತಲ್ಲದೆ ರಾಜರ ಸಾರ್ವಭೌಮಾಧಿಕಾರವನ್ನೂ ಕಸಗೊಂಡು, ಅವರನ್ನು ಅಧೀನ ರಾಜರಾಗಿ ಮಾಡಲಾಯಿತು. ಬ್ರಿಟಿಷ್ ಆಳ್ವಿಕೆ ಮುಕ್ತಾಯದ ವರೆಗೂ ಅದೇ ಸ್ಥಿತಿಯುಳಿಯಿತು.

ಇಂದಿನ ಮಹಾರಾಜರುಗಳು.

ತಿರುವಾಂಕೂರು ಮತ್ತು ಕೊಚ್ಚಿ, ಇವೆರಡರ ಮಹಾರಾಜರುಗಳೂ ಭಾರತದ ಮಕುಟಧಾರಿಗಳ ಪೈಕಿ ಎತ್ತಿ ಹೇಳತಕ್ಕ ಕಾಲಧರ್ಮಜ್ಞಾನಿಗಳೆನ್ನಬಹುದು. ತಿರುವಾಂಕೂರು ಮಹಾರಾಜರಿಂದು, ಇಂದಿನ ಸಂಯುಕ್ತಾಡಳಿತ ಯಂತ್ರದ ರಾಜಪ್ರಮುಖ ಪಟ್ಟವೇರಿರುವ—ರಾಜಪ್ರಮುಖ, ಮೇಜರ್ ಜನರಲ್, ಹಿಸ್ ಹೈನೆಸ್, ಶ್ರೀ ಪದ್ಮನಾಭದಾಸ, ವಾಂಚಿಪಾಲ, ಸರ್ ಬಲರಾಮವರ್ಮ ಕುಲಶೇಖರ, ಕಿರೀಟಪತಿ, ಮನ್ನೆ ಸುಲ್ತಾನ್, ಮಹಾರಾಜ ರಾಜರಾಮರಾಜ ಬಹದ್ದೂರ್ ಶಮ್ಶೇರ್ ಜಂಗ್ ಜಿ.ಸಿ.ಯಸ್. ಐ.— ಇವರು 1912ನೇ ನವಂಬರ್ 7ರಲ್ಲಿ ಜನಿಸಿದವರು. 1924ರಲ್ಲೇ ಇವರು ಸಿಂಹಾಸನಾಧಿಕಾರಿಯಾದರೂ ಅಪ್ರಾಯಸ್ಥರಿದ್ದುದರಿಂದ ತಾಯಿ ಮಹಾರಾಣಿ ಸೇತುಪಾರ್ವತಿಬಾಯಿಯವರು ಏಳು ವರ್ಷ ಗಾರ್ಡಿಯನರಾಗಿದ್ದರು. 1931ರಲ್ಲಿ ಈ ಮಹಾರಾಜರೇ ತಿರುವಾಂಕೂರು ಅಧಿಕಾರ ಸ್ವೀಕರಿಸಿದರು. ಈ ರಾಜರು ತನ್ನ ಅವಧಿಯಲ್ಲಿ ಹೆಚ್ಚಿನ ಪ್ರಜಾಪ್ರಾತಿನಿಧ್ಯವುಳ್ಳ ಶಾಸನ ಸಭೆಯನ್ನು ಜಾರಿಗೆ ತಂದರು;— ಸಂಸ್ಥಾನದಲ್ಲೆಲ್ಲಾ ಮೇಲ್ದರಗತಿಯ ಹೈಡ್ರೋ ಇಲೆಕ್ಟ್ರಿಕ್ ವ್ಯವಸ್ಥೆ ಮಾಡಿದರು;— ದೊಡ್ಡ ಪರಿಮಾಣದ ಉದ್ದಿಮೆಗಳನ್ನೂ ಹಳ್ಳೀ ಕೈಗಾರಿಕೆಗಳನ್ನೂ ಅಭಿವೃದ್ಧಿಗೊಳಿಸಿದರು;— ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯಗೊಳಿಸಿದರು;— 1936ರಲ್ಲಿ ಜಾತಿಭೇದವಿಲ್ಲದೆ ಎಲ್ಲಾ ಹಿಂದುಗಳಿಗೂ ದೇವಾಲಯ ಪ್ರವೇಶ ಕೊಡಬೇಕೆಂದು ವಿಧಿಸಿ ಅಸ್ಪೃಶ್ಯತಾ ನಿವಾರಣೆ ಮಾಡಿದರು;— 1944ರಲ್ಲಿ ತನ್ನ ಸಂಸ್ಥಾನದೊಳಗೆ ಫಾಶೀ ಶಿಕ್ಷೆಯನ್ನು ರದ್ದುಗೊಳಿಸಿದರು;— ತನ್ನ ಅರಮನೆ ಆಸ್ತಿ ಸುಮಾರು 20000 ಎಕ್ರೆಯಷ್ಟನ್ನು ಸಂಸ್ಥಾನಕ್ಕರ್ಪಿಸಿದರು.— 1947ನೇ ಸೆಪ್ಟೆಂಬರ್ 4ರಲ್ಲಿ, ತನ್ನ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವ ಜಾಹೀರುನಾಮೆ ಹೊರಡಿಸಿ, ಪ್ರಾಯಸ್ಥರ ಮತದಾನದಿಂದ ತಿರುವಾಂಕೂರು ಘಟನಾ ಸಮಿತಿಯನ್ನೂ ನಡುಗಾಲ ಮಂತ್ರಿಮಂಡಲವನ್ನೂ ಸ್ಥಾಪಿಸಿಕೊಂಡರು;— ಭಾರತ ಕೇಂದ್ರದೊಂದಿಗೆ ಜೋಡಣೆಗೊಂಡರು. ಕೊನೆಗೆ ಕೊಚ್ಚಿ ತಿರುವಾಂಕೂರು ಏಕೀಕರಣ ಕರಾರಿಗೆ ಕಳೆದ ಮೇ 27ರಲ್ಲಿ ಸಹಿ ಹಾಕಿ, ಈ ಜುಲಾಯಿ 1ರಿಂದ ಅದರ ರಾಜಪ್ರಮುಖನಾಗಿದ್ದಾರೆ.

ಈಗಿನ ಕೊಚ್ಚಿ ಮಹಾರಾಜ, ಹಿಸ್ ಹೈನೆಸ್ ಶ್ರೀರಾಮ ವರ್ಮರು 1870ನೇ ಆಗೋಸ್ತಿನಲ್ಲಿ ಹುಟ್ಟಿದವರು. ಅವರು ಪಟ್ಟಕ್ಕೇರಿದುದು ಕಳೆದ 1948ನೇ ಜುಲಾಯಿಯಲ್ಲಿ. ಆ ವರೆಗೆ ಕೊಚ್ಚಿಯನ್ನಾಳುತಿದ್ದ, ಇವರ ಅಣ್ಣ ಶ್ರೀ ಕೇರಳವರ್ಮರು ಅಖಿಲಭಾರತದಲ್ಲಿ ಮುಂದಾಗಿ ಕೇಂದ್ರಾಧಿಕಾರದೊಂದಿಗೆ ಜೋಡಣೆಗೊಂಡವರು; ಅಂತೆಯೇ ತನ್ನೆಲ್ಲಾ ಅಧಿಕಾರಗಳೂ ಪ್ರಜೆಗಳ ಇಚ್ಛಾಧೀನವೆನ್ನುತ್ತಾ ತನ್ನ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವವನ್ನು ತಾನಾಗಿ ಹಾಗೂ ಮುಂದಾಗಿ ಸೂಚಿಸಿದವರು. ಆ ಮಹಾರಾಜರು ಐಕ್ಯ ಕೇರಳದ ಕುರಿತು ವಿಶೇಷಾಸಕ್ತಿಯಿದ್ದವರು. ಈಗಿನ ಮಹಾರಾಜಾ ಶ್ರೀ. ರಾಮವರ್ಮರಲ್ಲೂ ತನ್ನ ಅಣ್ಣನ ಪ್ರಜಾನುರಾಗ ಮತ್ತು ವಿಶಾಲಭಾವನೆಗಳಿವೆ; ಇವರೂ ಅದೇ ಪಥದಲ್ಲಿ ಹೆಜ್ಜೆಯಿಡುತಿದ್ದಾರೆ. ಮೇಲಾಗಿ ಕೊಚ್ಚಿಯ ಈ ವರೆಗಿನ ರಾಜರುಗಳ ಪೈಕಿ ಅತಿ ಹೆಚ್ಚಿಗೆ ಭೂ-ಸಂಚಾರ ಮಾಡಿದವರೆಂದರೆ ಇವರೇ. ಶ್ರೀ ರಾಮವರ್ಮರು ಸಂಸ್ಕೃತದಲ್ಲಿ ಹೆಸರಾದ ವಿದ್ವಾಂಸ. ಅದರಲ್ಲೂ ಮೀಮಾಂಸ ಮತ್ತು ವೇದಾಂತದಲ್ಲಿ ಇವರಿಗಿರುವ ಪ್ರೌಢಿಮೆಯು ವಿಶೇಷವಾದುದು. ಕಲೆಗಳ ಮೇಲೆ ಆಸಕ್ತಿ ಹಾಗೂ ಜ್ಞಾನವುಳ್ಳವರು; ತರ್ಕಶಾಸ್ತ್ರ ನೈಪುಣ್ಯದಲ್ಲಿ ಪ್ರಮುಖರು. 1948ನೇ ಸೆಪ್ಟೆಂಬರದಲ್ಲೇ ತನ್ನ ಸಂಸ್ಥಾನದಲ್ಲಿ ಪ್ರಾಯಸ್ಥರ ಮತದಾನವನ್ನಾಧರಿಸಿದ ಶಾಸನ ಸಭೆ ಚುನಾಯಿಸಿಕೊಂಡಿದ್ದರು; ಸಂಪೂರ್ಣವಾಗಿ ಆ ಪ್ರಜಾಪ್ರತಿನಿಧಿ ಸಭೆಗೆ ಹೊಣೆಗಾರವಾದ ಮಂತ್ರಿ ಮಂಡಲ ರಚಿಸಿದ್ದರು. ಕೊಚ್ಚಿ ತಿರುವಾಂಕೂರು ಐಕ್ಯತೆಗೆ ಈ ಮಹಾರಾಜರಂತೆಯೇ ಇವರ ಮಂತ್ರಿ ಮಂಡಲವೂ ನಿರೀಕ್ಷಣೀಯ ಸಹಕಾರ ಮತ್ತು ಸಮ್ಮತಿಯನ್ನಿತ್ತಿದ್ದಿತು.

ಅಮೂಲ್ಯ ಭಂಡಾರ

ತಿರುವಾಂಕೂರು ಕೊಚ್ಚಿ ವಲಯವು ಭಾರತದ ಮಿಕ್ಕೆಲ್ಲಾ ಪ್ರದೇಶಗಳಿಗಿಂತ ಹೆಚ್ಚಿನ ಗಣನೆಗೀಡಾಗುವಂತಹ ಹಲವು ವಿಶಿಷ್ಟ ಅನುಕೂಲತೆ ಹಾಗೂ ಲಕ್ಷಣಗಳಿಂದ ಕೂಡಿದೆ. ವಿದ್ಯೆಯ ಮಟ್ಟಿಗೆ ಇದು ಅತ್ಯಂತ ಮುಂದುವರಿದ ಭಾಗ. ತಿರುವಾಂಕೂರು ಜನತೆಯ ನೇ. 45ರಷ್ಟು ಸಾಕ್ಷರರು. ನೇ. 67. 9ರಷ್ಟು ಪುರುಷರೂ ನೇ. 42. 1ರಷ್ಟು ಸ್ತ್ರೀಯರೂ ಬರೆಹಬಲ್ಲವರು. 1817ರಿಂದಲೇ ತಿರುವಾಂಕೂರು ಸರಕಾರವು ತನ್ನ ಪ್ರಜೆಗಳ ವಿದ್ಯಾದಾನದ ಹೊಣೆವಹಿಸಿಕೊಂಡು ಬಂದಿದೆ. ಈಗ ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಾಲಾ ಕಾಲೇಜುಗಳಿವೆಯಲ್ಲದೆ, 'ಟೆಕ್ನಾಲೋಜಿಕಲ್' ಮತ್ತು 'ರಿಸರ್ಚ್' ಸಂಬಂಧದ ಒಂದು ಪ್ರತ್ಯೇಕ ಯುನಿವರ್ಸಿಟಿಯು 1937ರಿಂದ ತಿರುವಾಂಕೂರಿನಲ್ಲಿದೆ.

ಕೊಚ್ಚಿ ತಿರುವಾಂಕೂರು ಕ್ಷೇತ್ರದ ಪ್ರಾಮುಖ್ಯ ಮೂಲ ಭಂಡವಾಳವೆಂದರೆ ಅರಣ್ಯ ಸಂಪತ್ತು. ಸುಮಾರು 3000 ಚದರ ಮೈಲು ವಿಸ್ತೀರ್ಣದ ಕಾಡುಗಳು ಅಲ್ಲಿದ್ದು, ಅವುಗಳಲ್ಲಿ ಚಂದನದಿಂದಾರಂಭಿಸಿ, ವಿವಿಧ ವರ್ಗದ, ಸಾವಿರಕ್ಕೂ ಮಿಕ್ಕಿದ ಜಾತಿಗಳ ಮರಗಳು ದೊರೆಯುತ್ತವೆ. ಆ ಕಾಲದಲ್ಲಿ ಬ್ರಿಟಿಷ್ ನೌಕೆಗಳ ರಚನೆಯಾಗುತ್ತಿದ್ದುದು ಇಲ್ಲಿಯ ಕಾಡುಗಳಿಂದಲೇ ಎಂಬ ನಂಬಿಕೆ ಪಸರಿಸಿತ್ತು. ತ್ರಾಫಲ್ಗಾರ್ ಮತ್ತು ನೈಲ್ ರಣರಂಗಗಳಲ್ಲಿ ನೆಲ್ಸನನಿಗೆ ವಿಜಯ ದೊರಕಿಸಿಕೊಟ್ಟುದು ಕೊಚ್ಚಿ ತಿರುವಾಂಕೂರುಗಳ ಕಾಡುಗಳೆಂಬ ನಾಣ್ಣುಡಿಯಿದೆ; ಕಾರಣವೆಂದರೆ ಅವನ ಹಡಗಗಳು ಕಟ್ಟಲ್ಪಟ್ಟಿದುದು ಇಲ್ಲಿಯ ಮರಮಟ್ಟುಗಳಿಂದಲೇ. ಕಾಗದ ತಯಾರಿಗಗತ್ಯವುಳ್ಳ ಬಿದಿರು ಮುಂತಾದುವುಗಳೂ ಈ ಕಾಡುಗಳಲ್ಲಿ ಹೇರಳವಾಗಿ ದೊರೆಯುತ್ತಿವೆ. ಆದ್ದರಿಂದ ಕಾಗದ ತಯಾರಿ ಹೊಸಹೊಸ ಕಾರ್ಖಾನೆಗಳು ಈಗ ಇಲ್ಲಿ ಹುಟ್ಟಿಕೊಂಡಿವೆ. ಮೆಣಸು ಮತ್ತು ಯೇಲಕ್ಕಿಯಂಥವುಗಳಿಗೂ ಪ್ರಸಿದ್ಧಿಗೊಂಡ ಸ್ಥಳವಿದು. ಪಾಶ್ಚಾತ್ಯ ರಾಷ್ಟ್ರಗಳವರು ಆದಿಭಾಗದಲ್ಲಿ ವ್ಯಾಪಾರೋದ್ದೇಶದಿಂದ ಇಲ್ಲಿಗೆ ಪ್ರವೇಶಿಸಿದ್ದುದು ಈ ಖಾರವಸ್ತುಗಳಿಗಾಗಿಯೇ. ಪ್ರಕೃತ ವರುಷಕ್ಕೆ ಸುಮಾರು 22,208 ಟನ್ನುಗಳಷ್ಟು ಮೆಣಸು 7000 ಟನ್ನುಗಳಷ್ಟು ಏಲಕ್ಕಿ ಇಲ್ಲಿ ಉತ್ಪಾದನೆಯಾಗುತ್ತಿದೆ.

ತಿರುವಾಂಕೂರು ಕೊಚ್ಚಿಗಳ "ಸೌಭಾಗ್ಯತರು" ಅಥವಾ "ಕಲ್ಪವೃಕ್ಷ"ವೆಂದು ಗಣಿಸಲ್ಪಟ್ಟಿರುವ ತೆಂಗಿನ ಮರಗಳಿಗಂತೂ ಈ ವಲಯವು ಅತಿ ಪ್ರಸಿದ್ಧ. ಈ ಕಲ್ಪವೃಕ್ಷಗಳು ಆಹಾರ ಮತ್ತಿತರ ಜೀವನಾವಶ್ಯ ಉಪಯೋಗಗಳಿಗೆ ಬೀಳುತ್ತಿರುವುದಷ್ಟೇ ಅಲ್ಲ; ಸಾಬೂನು ತಯಾರಿಗೂ ನೆರವಾಗಿದೆ. ವರುಷಕ್ಕೆ ಸುಮಾರು ಒಂದು ಲಕ್ಷ ಟನ್ನುಗಳಷ್ಟು ಹುರಿ ಹಗ್ಗ ಮಡಿವಾಟುಗಳನ್ನು ತಿರುವಾಂಕೂರು ಕೊಚ್ಚಿಗಳು ನಡೆಯಿಸುತ್ತಿರುವುದು ಈ ತೆಂಗಿನ ಸಂಪತ್ತಿನಿಂದಲೇ. ಚಾ, ಕಾಫಿ ಮತ್ತು ರಬ್ಬರು ಈ ಸಂಸ್ಥಾನ ಕೂಟದ ಇತರ ಉತ್ಪತ್ತಿಗಳು. ಸುಮಾರು 47 ಮಿಲಿಯ ಪೌಂಡುಗಳಷ್ಟು ಚಾ, 330,000 ಪೌಂಡುಗಳಷ್ಟು ಕಾಫಿ, 30 ಮಿಲಿಯ ಪೌಂಡುಗಳಷ್ಟು ರಬ್ಬರ್ ಇಲ್ಲಿ ವರ್ಷಾವಧಿ ಉತ್ಪನ್ನವಾಗುತ್ತಿದೆಯೆಂದು ಅಂದಾಜು ಮಾಡಲಾಗಿದೆ. ಬಂಗಾಳ ವಿಭಜನೆಯಿಂದಾಗ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿಮರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ನಾರಿನ ಕೊರತೆ ಬಿದ್ದಿರುವ ಭಾರತದ ಆವಶ್ಯಕತೆಯನ್ನು ಗಮನಿಸಿ ಇವೆರಡು ಸಂಸ್ಥಾನಗಳಲ್ಲೂ ಕೆತ್ತಾನಾರನ್ನು ಬೆಳೆಸುವ ಪೂರ್ವ ತಯಾರಿಯೀಗ ಜಯಶೀಲವಾಗಿ ನಡೆದಿದೆ. ನೀನು ವ್ಯವಸ್ಥೆಯಲ್ಲೂ ಈ ಕರಾವಳಿ ವಲಯವು ಬಹಳ ಮುಂದಿದೆ. ಇತ್ತೀಚೆಗೆ ಇಲ್ಲಿ ಕೋಡ್ಲಿವರ್ ಎಣ್ಣೆ ತಯಾರಿ ವ್ಯವಸ್ಥೆ ಬಂದಿದೆ.

ಅಟಂ ಶಕ್ತಿ ನೆಲೆ

ಅಖಿಲ ರಾಷ್ಟ್ರೀಯ ವ್ಯವಹಾರ, ರಕ್ಷಣೆ ಮತ್ತು ಅತ್ಯಪೂರ್ವ ಶಕ್ತಿಯೊಂದರ ಸಂಚಯದ ಮಟ್ಟಿಗೆ ಈ ಸಂಸ್ಥಾನೀ ವಲಯವು ಅದೊಂದು ವಿಶಿಷ್ಟ ಪ್ರಾಮುಖ್ಯ ಸ್ಥಾನ ಸಂಪಾದಿಸಿದೆ. ಉದ್ದಕ್ಕೂ ಸಮುದ್ರ ದಡದಲ್ಲಿರುವ ಇವೆರಡು ಸಂಸ್ಥಾನಗಳೂ ನಾವಿಕ ವ್ಯಾಪಾರ ವಹಿವಾಟುಗಳ ಮಟ್ಟಿಗೆ ಪೂರ್ವಕಾಲದಿಂದಲೂ ಹೆಸರಾದುವುಗಳು. ಎರಡರ ಕಿನಾರೆ ವಲಯದಲ್ಲೂ ಬೋಟುಗಳೂ ವಿವಿಧಾಕಾರಗಳ ಜಲಯಾನಗಳೂ ಸದಾ ಚಲಿಸುತ್ತಿರುವ ಆಕರ್ಷಣೀಯ ದೃಶ್ಯವಿದ್ದದ್ದೇ. ಕೇಂದ್ರ ಭಾರತದ ಒಳ ದ್ವೀಪವಾಗಿರುವ ಪ್ರಸಿದ್ಧ ಬಂದರ ಕೊಚ್ಚಿಯಂತೂ ಭಾರತದ ಮುಖ್ಯ ನೌಕಾ ನಿಲ್ದಾಣವಾಗಿ ರಚಿಸಲ್ಪಡುವ ಭವ್ಯಾದೃಷ್ಟ ಪಡೆದಿದೆ. ಎರಡೂ ಸಂಸ್ಥಾನಗಳ ಕರಾವಳಿಯಲ್ಲೂ ಬೇರೆ ಸಣ್ಣ ಪುಟ್ಟ ಬಂದರಗಳೂ ಇವೆ. ಸಂಸ್ಥಾನಗಳೊಳಗಡೆಯ ರಸ್ತೆ ವ್ಯವಸ್ಥೆಗಳೂ ನಾಜೂಕಾಗಿದ್ದು ಬೆಳೆಯುತ್ತಾ ಬರುತ್ತಿರುವ ವ್ಯಾಪಾರ ವಹಿವಾಟುಗಳನ್ನು ಸುಗಮಗೊಳಿಸುತ್ತಿವೆ. ತ್ರಿವೇಂದ್ರಮಿನಿಂದ ಕನ್ಯಾಕುಮಾರಿಯ ವರೆಗಿನ ಸುಮಾರು 60 ಮೈಲುದ್ದಕ್ಕೂ ಇರುವ ಕಾಂಕ್ರೀಟ್ ರಸ್ತೆಯು ಭಾರತದಲ್ಲೇ ಅತ್ಯುದ್ದವಾದ ಕಾಂಕ್ರೀಟ್ ರಸ್ತೆಯೆಂದು ತಿಳಿದುಬರುತ್ತದೆ.

ತಿರುವಾಂಕೂರಿನ ಅನ್ಯಾದೃಶ ಭಾಗ್ಯವೆಂದರೆ, ಲೋಕಾದ್ಭುತ ಶಕ್ತಿ ಕಣಗಳು ಅಲ್ಲಿಯ ಕರಾವಳೀ ಹೊಯಿಗೇ ಕಣಗಳಲ್ಲಿ ಹುಗಿರುವುದು! ಅಟಂಬೋಂಬು ತಯಾರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಅತಿ ಪ್ರಾಮುಖ್ಯ ಥೋರಿಯಮ್ ಅಂಶಗಳು ಪ್ರಥಮತಃ 1900ರಲ್ಲಿ ತಿರುವಾಂಕೂರು ಹೊಯಿಗೆಯಲ್ಲೇ ಕಂಡುಹಿಡಿಯಲ್ಪಟ್ಟವು. ಈ ಮೂಲೆಯ ಈ ಅದ್ಭುತ ಹೊಯಿಗೇ ಪರಿಚಯವನ್ನು ಆ ಮೂಲೆಯ ಜರ್ಮನರು ಮಾಡಿಕೊಂಡ, ಮತ್ತದನ್ನು ಅಂಶಾಂಶವಾಗಿ ತರಿಸಿಕೊಂಡ ಕಥೆಯು ಸ್ವಾರಸ್ಯದ್ದಿದೆ. ತಿರುವಾಂಕೂರು ಕರಾವಳಿಯಿಂದ ಜರ್ಮನರು ತರಿಸಿಕೊಳ್ಳುತ್ತಿದ್ದ ತೆಂಗಿನಕಾಯಿ ನಾರುಗಳು, ಅವುಗಳೊಡನೆ ಮಿಶ್ರಗೊಂಡಿದ್ದ ಕೆಂಬಣ್ಣದ ಹೊಯಿಗೆಯ ದೆಸೆಯಿಂದ ವಿಶೇಷ ಭಾರವಿರುವುದನ್ನು ಗೊತ್ತುಹಚ್ಚಿದ ಜರ್ಮನರು ತಮ್ಮ ಗೋಡೌನುಗಳಲ್ಲಿದ್ದ ಆ ಹೊಯಿಗೆಯ ಪಾಠಶೋಧ ನಡಿಸಿ, ಗುಟ್ಟನ್ನರಿತುಕೊಂಡರು; ಥೋರಿಯಮನ್ನು ಶೋಧಿಸಿ ತೆಗೆದರು. ಈ ಹೊಯಿಗೆಗಾಗಿ ತಿರುವಾಂಕೂರಿನ ಜುಲಿಹಗ್ಗದ ವ್ಯಾಪಾರ ಬೆಳೆಸಿದ್ದರು. ಈಗ ಈ ಹೊಯಿಗೆಯ ರಫ್ತು ಆಗದಂತೆ ಪ್ರತಿಬಂಧ ಬಿದ್ದಿದೆ. ಇಲ್ಲಿಯ ಮಣ್ಣಿನಿಂದ ಆ ಅತ್ಯಪೂರ್ವ ಥೋರಿಯಮ್‌ನ ಶೋಧಕ್ಕಾಗಿ ಭಾರತ ಸರಕಾರವೀಗ 'ಅಟಮ್ ಶಕ್ತಿ ಸಂಚಯ ಕಮಿಶನ್' ಒಂದನ್ನು ನೇಮಿಸಿದೆ.

ಪ್ರಕೃತ ಕೊಚ್ಚಿ ತಿರುವಾಂಕೂರು ವಲಯದಲ್ಲಿ ತೋರಿಬರುವ ಕೊರತೆಯೆಂದರೆ ಆಹಾರ ಧಾನ್ಯಗಳದ್ದು. ವರ್ಷಕ್ಕೆ ಸುಮಾರು 50000 ಟನ್ನುಗಳಷ್ಟು ಆಹಾರ ಧಾನ್ಯ ಕಡಿಮೆಯಾಗಬಹುದೆಂದು ಅಂದಾಜು. ಕಳೆದ ವರುಷ ಭಾರತ ಸರಕಾರವು ಇಲ್ಲಿಗೆ ಇದಕ್ಕಾಗಿಯೇ ರೂ. 99 ಲಕ್ಷವನ್ನು ಸಹಾಯಧನವಾಗಿ ಕೊಟ್ಟಿದ್ದಿತು.

ಕಲೆಗಳ ಬೀಡು—

ಈ ಕೇರಳ ಸಂಸ್ಥಾನಗಳಿಂದ ಭಾರತೀಯ ಸಂಸ್ಕೃತಿ ಮತ್ತು ಕಲೆಯ ಭಂಡಾರಕ್ಕೂ ಹೇರಳ ಸರಬರಾಯಿಯಾಗಿದೆ. ತನ್ನ ಜೀವನದ ಅಲ್ಪಾವಧಿಯಲ್ಲೊಮ್ಮೆ ಆಧ್ಯಾತ್ಮಿಕವಾಗಿ ಅಖಿಲ ಭಾರತವನ್ನೇ ಗೆದ್ದುಕೊಂಡಿದ್ದ ಶ್ರೀ ಶಂಕರಾಚಾರ್ಯರು ತಿರುವಾಂಕೂರಿನವರು. ಭಾರತದ ನೃತ್ಯಕಲಾ ವಿಭಾಗದ ಒಂದು ಗಣ್ಯಾಂಗವಾಗಿರುವ 'ಕಥಕ್ಕಳಿ'ಯ ಉಗಮವು ಕೇರಳ ರಾಜ್ಯದಲ್ಲೇ. ಈ ನೃತ್ಯನಾಟಕ ಕಲೆಯ ಸ್ಥಾಪನಾರ್ಯನು 17ನೇ ಶತಮಾನದಲ್ಲಿ ಬಾಳಿದ್ದ ಕೊಟ್ಟಾರಕರದ ಕೆಪ್ಪಾನ ವೀರಕೇರಳ ವರ್ಮ. ಕರ್ನಾಟಕೀ ಸಂಗೀತ ಪ್ರವಾಹವನ್ನು ಬೆಳೆಸಲು ತಿರುವಾಂಕೂರಿನ ಪ್ರವಾಹವೂ ಸಂಗಮಗೊಂಡಿದ್ದಿತು. ಅಲ್ಲಿಯ ರಾಜಸ್ಥಾನವು ಪರಂಪರೆಯಾಗಿ ಈ ಕಲೆಯನ್ನು ಪ್ರೋತ್ಸಾಹಿಸುತ್ತಾ ಬಂದಿದ್ದಿತು. 1813 ರಿಂದ 1847ರ ವರೆಗೆ ತಿರುವಾಂಕೂರನ್ನು ಆಳಿದ್ದ ಸ್ವಾತಿ ತಿರುನಾಳನು ಅತ್ಯುಚ್ಚ ಗಾಯಕನಿದ್ದುದಲ್ಲದೆ ಪದ್ಯಗಳನ್ನೂ ಸ್ವತಃ ಕಟ್ಟಬಲ್ಲವನಿದ್ದನು. ಕಲೆ ಹಾಗೂ ಸಂಗೀತ ವಿಜ್ಞಾನದ ಕುರಿತು ಆತನು ಹಲವು ಕೃತಿಗಳನ್ನು ರಚಿಸಿದ್ದನು. ಶಿಲ್ಪಕಲೆ, ಚಿತ್ರ ಕಲೆಯಲ್ಲೂ ತಿರುವಾಂಕೂರಿನ ಕೀರ್ತಿ ದೊಡ್ಡದು ಮತ್ತು ಪುರಾತನ ಕಾಲದಿಂದಿದ್ದುದು. ಬಂಡೆಕೊರೆದು ನಿರ್ಮಿಸಿದ್ದ ತಿರುನಾಥಿಕ್ಕರ್ ದೇವಾಲಯದ ಗೋಡೆಗಳಲ್ಲಿ ಕೆತ್ತನೆಗೊಂಡಿರುವ ಕಲಾಪೂರ್ಣ ಕೃತಿಗಳೂ ಸುಚೀಂದ್ರ, ಕನ್ಯಾಕುಮಾರಿ ಮತ್ತು ತ್ರಿವೇಂದ್ರಂ ದೇವಸ್ಥಾನಗಳ ಗೋಡೆ, ಒಳಮೆತ್ತಿಗೆಗಳಲ್ಲಿ ಮೂಡಿ ತೋರುತ್ತಿರುವ ಚಿತ್ರಗಳೂ ಇದಕ್ಕೆ ಸಾಕ್ಷಿ. ಪದ್ಮನಾಭಪುರದ ಅರಮನೆಯೂ ಹಲವು ಕೌತುಕ ರಮ್ಯಕೃತಿಗಳನ್ನು ತೋರಿಸುತ್ತಿದೆ. ಸರ್ವವ್ಯಾಪೀ ಕೀರ್ತಿವಂತ ಹಾಗೂ ಚಿರಸ್ಮರಣೀಯ ಚಿತ್ರಗಾರ ರಾಜಾ ರವಿವರ್ಮನು ತಿರುವಾಂಕೂರು ಅರಸುಮನೆತನದವನೇ. ತ್ರಿವೇಂದ್ರಮಿನ 'ರಂಗವಿಲಾಸ'ದ ಕಲಾಮಂಟಪದಲ್ಲೂ, ಸ್ವತಃ ರಾಜರ ವಠದಲ್ಲೂ ಅನೇದಂತದ ಹಲವು ಚಮತ್ಕಾರಿಕ ಕಲಾಕೃತಿಗಳಿವೆ. ಕಥಕ್ಕಳಿನೃತ್ಯಭಂಗಿಗಳ ಉಚ್ಚ ಕೃತಿಗಳನ್ನು ಈ ಕಲಾಮಂಟಪದಲ್ಲಿ ಕಾಣಬಹುದು. ರಾಜರಜನ್ಮದಿನೋತ್ಸವದ ಮೆರವಣಿಗೆಗೊಯ್ಯುವದಂತದ ಪಲ್ಲಕಿಯಲ್ಲಿ ಮತ್ತು 1758ರಿಂದ 1798ರ ವರೆಗೆ ತಿರುವಾಂಕೂರನ್ನಾಳಿದ್ದ ಕಾರ್ತಿಕ ತಿರುನಾಳನ ದಂತಸಿಂಹಾಸನದಲ್ಲಿ ಮೂಡಿತೋರುವ ಶಿಲ್ಪಕಲಾ ಚಮತ್ಕೃತಿಯು ಚರಿತಪಸ್ಸು ಅರ್ಥ ಕೊಡುವಂತಹದಿದೆ. ತ್ರಿವೇಂದ್ರಮ್ ಮ್ಯೂಸಿಯಮಿನಲ್ಲಿಡಲ್ಪಟ್ಟಿರುವ, ಅತ್ಯಂತ ಸೂಕ್ಷ್ಮವಾಗಿ ಮರದಿಂದಲೇ ಮಾಡಲ್ಪಟ್ಟ ಕೃತಿಗಳನ್ನು ಕಂಡರೆ ಸಾಕು!

ಒಳಗಡೆಯ ಈ ಮಾನವ ನಿರ್ಮಿತ ಕಲಾಕೃತಿಗಳ ಮಾತೇಕೆ? ಸ್ವತಃ ತಿರುವಾಂಕೂರು ಕೊಚ್ಚಿ ಕ್ಷೇತ್ರವೇ ಪ್ರಕೃತಿ ನಿರ್ಮಿತ ಕಲಾಮಂಡಲ. ಭಾರತದ ಅತ್ಯಂತ ರಮಣೀಯ ಭೂಭಾಗಗಳಲ್ಲಿ ಮಲಬಾರ್ ಕರಾವಳಿಯೊಂದು. ಉದ್ದಕ್ಕೂ ಹರಡಿರುವ ಹುಲುಸಾಗಿ ಬೆಳೆದ ತೆಂಗು ಮತ್ತು ಅಡಿಕೆ ಮರಗಳು ಭಾರತಮಾತೆಯ ಮುಂಗುರುಳನಂತೆ ಈ ಕರಾವಳಿಯಲ್ಲಿ ರಾಜಿಸುತ್ತಿವೆ. ಅವುಗಳ ಹಿನ್ನೆಲೆಯಲ್ಲೇ ಹುಲುಸು ಗದ್ದೆಗಳ ರಮ್ಯ ವಲಯ, ಅದನ್ನನುಸರಿಸಿ ದಟ್ಟಾರಣ್ಯಗಳಿಂದ ತುಂಬಿರುವ ಗುಡ್ಡಗಳು ಕಂಗೊಳಿಸುತ್ತಿವೆ. ಕೊನೆಯ ಪೂರ್ವ ಸರಹದ್ದು ದುರ್ಗಗಳಾಗಿ ನಿಂತಿರುವ, 'ಗುಡ್ಡಕ್ಕಡ್ಡಗುಡ್ಡ'ವೆಂಬಂತೆ 8840 ಅಡಿಗಳ ವರೆಗೂ ಎತ್ತರದ ಶಿಖರಗಳುಳ್ಳ ಪಶ್ಚಿಮ ಘಟ್ಟಗಳ ರಮಣೀಯ ದೃಶ್ಯವಂತೂ ವರ್ಣನಾತೀತ. ಕರಾವಳಿ ಸರಹದ್ದಿನಲ್ಲಿ ತಿರುವಾಂಕೂರಿನ ರಾಜಧಾನಿ ತ್ರಿವೇಂದ್ರಮಿನಿಂದ ಮಲಬಾರು ಜಿಲ್ಲೆಯ ಪೊನ್ನಾನಿ ವರೆಗೂ 200 ಮೈಲು ಉದ್ದಕ್ಕೆ ನೀರಹಾದಿಯೇ ಇದೆ.

ಈ ರೀತಿ ಸಂಪತ್ತು, ಸಂಸ್ಕೃತಿ, ಸೌಂದರ್ಯ, ಕಲೆ, ಸುಧಾರಣೆ, ವಿದ್ಯಾಬುದ್ಧಿಗಳೆಲ್ಲವೂ ಏಕೀಕೃತವಾಗಿ ರಾಜಿಸುತ್ತಿರುವ ತಿರುವಾಂಕೂರು-ಕೊಚ್ಚಿ ಸಂಸ್ಥಾನಗಳೇ ಇಂದು ಏಕೀಕರಣಗೊಂಡು ರಾಜಿಸುತ್ತಿವೆ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 44/49

ನರಸಿಂಹ ಪೈ ಯ್ಯು — ಅರ್ಜಿದಾರ

ಅಂಗ್ರಾಜಡಿ ಸಿಲ್ವ ಬಾ ಎದ್ರಿ

ಸದ್ರಿ ಅರ್ಜಿದಾರ ಈ ಮೂಲ್ಕ ಜಾಹೀರು ಮಾಡಿಕೊಳ್ಳುವದೇನೆಂದ್ರೆ.

ಎದ್ರಿ ಉ. ಅಂಗರಾಜಡಿ ಸಿಲ್ವಬಾ. ಪರಾಸ್ಕದಿಯಾಸನ ವಿಧವೆ, ವ ಜಾತಿ ಡಿ ಸಿಲ್ವನ ಮಗಳು, ಉಪ್ಪಿನಕುದ್ರು ಗ್ರಾಮ, ಕುಂದಾಪುರ ತಾಲೂಕು

ಎದ್ರಿಳಿಗೆ ಅರ್ಜಿದಾರನ ಕುಟುಂಬದವರು ತಾ 28-3-38ರಲ್ಲಿ ರೂ. 800-0-0ರ ಭೋಗ್ಯಾದಿ ಅಡವು ದಸ್ತಾವೇಜಿನ ಬಾಬ್ತು ರೂ. 814-0-0ನ್ನು ಕೋರ್ಟು ಡಿಪೋಜಿಟು ಮಾಡಿದ್ದನ್ನು ಎದ್ರಿಳಿಗೆ ಕೊಟ್ಟು ಅದರ ದಸ್ತಾವೇಜಿನ ರಿಡಂಪ್ಶನ್ ಡಿಕ್ಲೇರ್ ಮಾಡ್ಸಿ ಆಸ್ತಿ ಬಿಟ್ಟುಕೊಡಬೇಕೆಂತ ಅರ್ಜಿದಾರನು ಕೊಟ್ಟ ಅರ್ಜಿಯು ತಾರೀಕು 19-7-49ಕ್ಕೆ ಅಖೈರೆ ತನಿಖೆಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವಸ ಹಗಲು 11 ಗಂಟೆಗೆ ಸ್ವತಹಾ ವ ವಕೀಲರದ್ವಾರಾ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿಯದೆ.

G. Sanjiva Rao,
Pleader for Petitioner

Kundapur. Date 29-6-49

ಕುಡುಕುತನ- ಕೆಡುಕುತನವಹುದು

ಆದರೆ

ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಉದ್ಧಾರಕ್ಕಾಗಿ ತಾವು ತೆರಿಗೆ ತೆರಬೇಕಾಯಿತೆಂದು ಮರೆಯುತ್ತಾರೆ.

— ನಾವು ಮರೆಯುತ್ತೇವೆ —

ಏನೆಂದರೆ, ಇಂದು ವಿದೇಶೀ ಮದ್ಯಗಳನ್ನು ಇಲ್ಲಿಗೆ ಆಮದು ಮಾಡುವ ಮೂಲಕ ಪರದೇಶಕ್ಕೆ ತೆರುತ್ತಿರುವ ಮಿಲಿಯಗಟ್ಲೆ ಹಣವು ಇಲ್ಲೇ ಉಳಿಯುವುದೆಂಬುದನ್ನು!

ಮದ್ಯನಿಷೇಧವನ್ನು ಪ್ರೋತ್ಸಾಹಿಸಿರಿ! ತನ್ಮೂಲಕ ದೇಶೀ ಹಣವು ಹೊರಗೆ ಹೋಗದಂತೆ ತಡೆಯಿರಿ.

ಈ ಜಾಹೀರಾತಿನ ಸ್ಥಳ:—

ಕೆನರಾ ಬ್ಯಾಂಕ್ ಲಿಮಿಟೆಡ್

ಇವರ ಸೇವಾದಾನ.

Rush up!

Classes commenced on 27-6-1949,

MODERN TUTORIAL INSTITUTE,

The Modern School of Commerce,

Approved by the Government of Madras.

Church Road, **UDIPI**, S. Kanara.

This institution undertakes to give Special tuition in all subjects for candidates appearing for:

S. S. L. C — October & March Examinations.

Individual attention & Special coaching IS OUR MOTTO.

The Classes are held in the evenings to convenience all.

Tuition fee is MODERATE to suit ALL.

Apply in person.

T. V. Vasudevan.

Manager.

ಈ ಬಾರಿಯೂ 'ಪ್ರಾಪಂಚಿಕ ಸ್ಥಿತಿಗತಿ ಇದ್ದಂತಿದೆ' ಎಂಬ ನಿತ್ಯದ ಪಲ್ಲವಿಯು ನ್ನೇ ಹಾಡಬೇಕಾಗಿ ಬಂದಿದೆ. ನ್ಯಾಯ-ನೀತಿ ಸೂತ್ರಗಳನ್ನು ಗಮನಿಸದೆ, ಅನುಕೂಲ ಶಾಸ್ತ್ರವನ್ನೇ ಪಠಿಸುವ ಹವ್ಯಾಸ ಎಲ್ಲೆಲ್ಲೂ ತೋರಿಬಂದಿದೆ. ಸೀದಾರಸ್ತೆ ತಮಗೆ ಕಷ್ಟದಾಯಕವೆಂದು ತೋರಿದಾಗ ಒಳ್ಳೆ ಹಾದಿ ಹಿಡಿಯುವ ಸಂದರ್ಭ ಸಾಧಕರು ಹೆಚ್ಚಿದ್ದಾರೆಂಬುದೇ ಕಳೆದ ದಿನಗಳ ವಿಶೇಷ ಸೂಚನೆಗಳು.

ಚೈನಾ ರಂಗದಲ್ಲಿ

ದಕ್ಷಿಣ ಚೈನದೊಳಗಡೆಯಲ್ಲೂ ಮುಂದೊತ್ತಿ ವಿಜಯ ಗಳಿಸುತ್ತಿರುವ ಕಮ್ಯೂನಿಸ್ಟ್ ಸೇನಾ ಧಾಳಿಗೆ ಗಣ್ಯ ತಡೆಯೆಲ್ಲಿಯೂ ಬಂದಿಲ್ಲ; ರಾಷ್ಟ್ರೀಯ ಸರಕಾರವು ಪ್ರತಿಭಟನೆಯ ಗುಪ್ತ ಹಂಚಿಕೆಗಳನ್ನು ತಯಾರಿಸಿ, ಒಳಗಿಂದೊಳಗೆ ಯಾವುದೋ ಸಿದ್ಧತೆಯಲ್ಲಿದೆ, ಎಂಬ ವಾರ್ತೆಯಿದೆ. ಎಲ್ಲಕ್ಕಿಂತ ವಿಶೇಷ ಸಂಗತಿಯೆಂದರೆ ಚೈನೀ ಕಮ್ಯೂನಿಸ್ಟರ ಧೋರಣೆಯೇನೆಂಬುದು ಸುಸ್ಪಷ್ಟವಾಗಿರುವುದು. ಚೈನವು ಕೆಂಪು ವರ್ಣಕ್ಕೆ ಮಾರ್ಪಡದಂತೆ ಮಾಡಬಹುದಾದ ಯಾವ ವಿಧಾನವಾವುದೂ ಉಳಿದಿಲ್ಲವೆಂದು ಖಚಿತವಾದ ಮೇಲೆ ಬ್ರಿಟನ್, ಅಮೇರಿಕದಂತಹ ರಾಷ್ಟ್ರಗಳು, ಅದು ರಶ್ಯದ ಪಕ್ಷ ವಹಿಸದಂತೆ ಪುಸಲಾಯಿಸುವ ಹಂಚಿಕೆಗಳನ್ನು ಹೂಡಿದ್ದವು. ಚೈನೀ ಕಮ್ಯೂನಿಸ್ಟರು, ರಶ್ಯದ ಕೈಗೊಂಬೆಗಳಲ್ಲವೆಂದೂ ಅವರು ಸ್ವತಂತ್ರ ಧೋರಣೆ ವಹಿಸಿ, ತಮ್ಮ ಆರ್ಥಿಕ ಭದ್ರತೆಗಾಗಿ ಪಾಶ್ಚಾತ್ಯ ರಾಷ್ಟ್ರಗಳ ಮೈತ್ರಿ ಕಟ್ಟಿಕೊಳ್ಳುವರೆಂದೂ ಪ್ರಚಾರ ನಡೆಯಿಸಿದ್ದರು; ಆದಕ್ಕಾಗಿ ಸರ್ವ ಪ್ರಯತ್ನಗಳನ್ನೂ ಮಾಡುತ್ತಾ ಬಂದರು. ಆದರೆ ಚೈನೀ ಕಮ್ಯೂನಿಸ್ಟ್ ಪಕ್ಷದ 28ನೇ ಜನ್ಮ ದಿನೋತ್ಸವವಾದ ಇದೇ ಜುಲಾಯಿ ತಾ. 1ರಲ್ಲಿ ಚೈನೀ ಕಮ್ಯೂನಿಸ್ಟ್ ನಾಯಕ ಮಾವೊ ಟ್ಸೆಟುಂಗರು ಕೊಟ್ಟ ಹೇಳಿಕೆಯು ಇವೆಲ್ಲಾ ಬಯಲಾಸೆಗಳನ್ನೂ ಗಾಳಿಗೆ ತೂರಿದೆ. "ಅಂತರ್ರಾಷ್ಟ್ರೀಯ ಸಂಬಂಧಗಳ ಕ್ಷೇತ್ರದಲ್ಲಿ ಚೈನೀ ಕಮ್ಯೂನಿಸ್ಟರು ಸೋವಿಯಟ್ ಯೂನಿಯನಿನ ಪಕ್ಷ ಹಿಡಿಯಲಿದ್ದಾರೆ. ನಾವು 'ಜನತೆಯ ಪ್ರಜಾಸತ್ತಾತ್ಮಕ ಸರ್ವಾಧಿಕಾರ' ಸ್ಥಾಪನೆಗಾಗಿಯೇ ಹೋರಾಡುತ್ತಿದ್ದೇವೆ. ಸಮತಾವಾದ ಮತ್ತು ಸಾಮ್ರಾಜ್ಯ ಸಾಹಿತ್ಯಗಳೊಳಗಿನ ಮಧ್ಯ ಹಾದಿಯೆಂಬುದಿಲ್ಲವೇ ಇಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಭಂಡವಾಳಗಾರರು ಹಣಗಳಿಸುವ ಉದ್ದೇಶದಿಂದ, ಅಲ್ಲಿಯ ಬೇಂಕರರು ತಮ್ಮ ಬಿಕ್ಕಟ್ಟು ನಿವಾರಣೆಗಾಗಿ ಬಡ್ಡಿಗಳಿಸುವ ಧ್ಯೇಯದಿಂದ, ಚೈನಕ್ಕೆ ಸಹಾಯವೀಯ ಬಿಚ್ಛಿಸುತ್ತಾರೆ. ಇದು ನಿಜವಾದ ಸಹಾಯವಲ್ಲ. ನಾವು ಸಾಮ್ರಾಜ್ಯವಾದಿಗಳ ಬೆಂಬಲವಿದ್ದ ಚಿಯಾಂಗ್-ಕೈ-ಶೇಕ್ ಸರಕಾರದ ಅಪ್ರಗತಿಕ ಶಕ್ತಿಯನ್ನು ವಿರೋಧಿಸುತ್ತಾ ಬಂದವರು; ಅಂತೆಯೇ ಮೂರನೇ ಹಾದಿಯ ಕನಸಿಗೂ ನಾವು ವಿರೋಧಿಗಳೇ. ಇಡೀ ಪ್ರಪಂಚದಂತೆಯೇ ಚೈನದಲ್ಲಿ ಕೂಡಾ ಮೂರನೇ ಹಾದಿಯೆಂಬುದಿಲ್ಲವೇ ಇಲ್ಲ. ಅಪ್ರಗತಿಕರ ಸದ್ದಡಗಿ ಜನತೆಯ ಸ್ವರವೊಂದೇ ಕೇಳಬರಲಾಗುವಂತೆ ಜನತಾ ಪ್ರಜಾಸತ್ತಾತ್ಮಕ ಸರ್ವಾಧಿಕಾರವನ್ನು ಸ್ಥಾಪಿಸುವ ಅಣತಿಯನ್ನು ಹಲವು ವರುಷಗಳ ಅಗಣಿತ ಅನುಭವಗಳ ಮೇಲಿಂದ ಚೀನೀ ಜನತೆ ನಮಗಿತ್ತಿದೆ" ಎಂದೇ ಮಾವೊ ಟ್ಸೆಟುಂಗರ ಕಂಠೋಕ್ತ ಮಾತು. ರಾಷ್ಟ್ರೀಯ ಚೈನದ ಸ್ಥಾಪಕನಾದ ಸನ್‌ಯತ್‌ಸೆನರ ಪತ್ನಿ-ಜನರಲಿಸಮೊ ಚಿಯಾಂಗ್ ಕೈಶೇಕರ ಹೆಂಡತಿಯಕ್ಕ-ಮೇಡಮ್ ಸನ್‌ಯತ್‌ಸೆನರು ವಿಜಯೀ ಕಮ್ಯೂನಿಸ್ಟರನ್ನು ಅಭಿನಂದಿಸಿರುವುದು ಕಮ್ಯೂನಿಸ್ಟರಿಗೆ ಹೊಸ ಹುರುಪನ್ನು ಕೊಡುವ 'ಟಾನಿಕ್' ಆಗಿ ಪರಿಣಮಿಸಿದೆ. "ಚೈನೀ ಜನಜೀವನದಲ್ಲೇ ಈಗಿನದು ಅತಿ ದೊಡ್ಡ ಅಧ್ಯಾಯ. ಅವರ ಪೂರ್ಣ ವಿಜಯವು ಇಷ್ಟರಲ್ಲೇ ಕಣ್ಣ ಮುಂದಿದೆ. ಇದೀಗ ಪ್ರಪಂಚದ ಅತಿ ದೊಡ್ಡ ಪ್ರಕಾಶ" ಎಂದು ಹಿಗ್ಗಿ ಶ್ಲಾಘಿಸಿದ್ದಾರೆ. ಮೇಡಮ್ ಸನ್ ಯತ್ ಸೆನ್ ಚೈನಾ ರಾಷ್ಟ್ರಪಿತನ ವಿಧವೆ. ಈಕೆ, ಕಮ್ಯೂನಿಸ್ಟರ ಯುದ್ಧಾಪರಾಧಿ ಪಟ್ಟಿಯ ಪ್ರಥಮ ಪಂಗ್ತಿಯಲ್ಲೇ ಇರುವ ಮೇಡಮ್ ಚಿಯಾಂಗ್ ಕೈಶೇಕ್ ಮತ್ತು ಮೇಡಮ್ ಯುಚ್. ಕುಂಗರ ಸಹೋದರಿಯಾಗಿದ್ದರೂ ಈ ರೀತಿ ಜಾಹೀರಾಗಿ ಕಮ್ಯೂನಿಸ್ಟ್ ಪಕ್ಷ ವಹಿಸಿರುವುದು ಗಣನೀಯ ಸಂಗತಿ.

ಜಾಗತಿಕ ವಹಿವಾಟುಗಳು

ಸ್ಟರ್ಲಿಂಗ್ ಮತ್ತು ಡೋಲರ್ ವಹಿವಾಟುಗಳ ಸಂಬಂಧವಾಗಿ ಯುರೋಪು ರಾಷ್ಟ್ರಗಳ ಸಮ್ಮೇಳನವು ಹಿಂದಿನ ವಾರ ಪ್ಯಾರಿಸಿನಲ್ಲಿ ನಡೆಯಿತು. ಇನ್ನು ಸ್ಟರ್ಲಿಂಗ್ ಸಂದಾಯ ಸಂಬಂಧವಾಗಿ ಕಾಮನ್‌ವೆಲ್ತ್ ರಾಷ್ಟ್ರಗಳ ಅರ್ಥ ಸಚಿವರ ಸಮ್ಮೇಳನವು ಲಂಡನಿನಲ್ಲಿ ಸೇರುವದಿದೆ. ಬ್ರಿಟನಿನ ಆರ್ಥಿಕ ಬಿಕ್ಕಟ್ಟೇ ಇದಕ್ಕೆ ಮೂಲ ಹೇತು.

ಸಂಯುಕ್ತ ರಾಷ್ಟ್ರಸಂಘದ ತೀರ್ಮಾನಾನುಸಾರ ಇಂಡೋನೇಶಿಯದಲ್ಲಿ ಡಚ್ಚರು ಆಕ್ರಮಿಸಿಕೊಂಡಿದ್ದ ಜೋಗ್ಜಕಾರ್ತ ನಗರವನ್ನು ಶಾಂತ ರೀತಿಯಿಂದ ರಿಪಬ್ಲಿಕನರಿಗೊಪ್ಪಿಸಿಕೊಟ್ಟಿದ್ದಾರೆ. ರಿಪಬ್ಲಿಕನರ ಪರವಾಗಿ ಅಲ್ಲಿಯ ಸುಲ್ತಾನರು ನಗರಾಡಳಿತೆ ವಹಿಸಿದ್ದಾರೆ.

ಬರ್ಮದ ಹೋರಾಟ ಯಥಾ ಪ್ರಕಾರ ಸಾಗಿದೆ. ಭಾರತದ ಪಾಲಿನ ಅಸ್ಸಾಮಿನ ಮತ್ತು ಪಾಕಿಸ್ತಾನದ ಪೂರ್ವಬಂಗಾಳದ ಗಡಿ ವಲಯದಲ್ಲೇ ಬರ್ಮದ ಸರಕಾರೀ ವಿರೋಧಿಗಳ ಕೈಮೇಲಾಗಿರುವದು ಗಣ್ಯ ವಿಷಯ. ಪೂರ್ವ ಬಂಗಾಳ ಗಡಿಯಲ್ಲಿರುವ ಅರ್ಕಾನ್ ಜಿಲ್ಲೆಯ ಎರಡು ಪ್ರಮುಖ್ಯ ಹೋಳೇ ನಗರಗಳು ಬಂಡಾಯಗಾರ ಸೇನೆಗಳ ಕೈವಶವಾಗಿವೆ. ಇತ್ತ ಅಸ್ಸಾಮ್ ಗಡಿಗೆ 70 ಮೈಲು ದೂರದ ಮಿಂಗಿನ್ ನಗರವೂ ಸರಕಾರೀ ವಿರೋಧಿ ಸೇನೆಗಳ ವಶವಾಗಿದೆ. ಲಂಡನಿಗೆ ಹೊರಟಿದ್ದ ಬರ್ಮದ ಉಪ ಪ್ರಧಾನಿ, ರಕ್ಷಣಾ ಮಂತ್ರಿ ಜನರಲ್ ನೆ ವಿನ್ನರು ಕಲ್ಕತ್ತದಲ್ಲಿಳಿದು ಹೋದರು.

ದಕ್ಷಿಣಾಫ್ರಿಕದಲ್ಲಿ ಹಿಂದೀಯರ ಮೇಲಾಗುತ್ತಿರುವ ಅತ್ಯಾಚಾರಗಳು ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇವೆ. ಕಾಶ್ಮೀರದ ಶ್ರೀನಗರಕ್ಕೆ ಬಂದಿರುವ ದಕ್ಷಿಣಾಫ್ರಿಕ ಹಿಂದೀ ನಾಯಕ ಡಾ। ದಾದು ಇವರು "ಹಿಟ್ಲರನ ಜರ್ಮನಿಯಲ್ಲಿ ಯೆಹೂದಿಗಳಿಗೊದಗಿದ್ದ ದುರದೃಷ್ಟವೇ ದಕ್ಷಿಣಾಫ್ರಿಕದ ಹಿಂದೀಯರನ್ನು ಕಾದಿದೆ. ಆದ್ದರಿಂದ ಭಾರತ ಸರಕಾರವು ಕ್ಷಿಪ್ರವಾಗಿ ಕಠಿಣ ಹಾಗೂ ದೃಢವಾದ ಕಾರ್ಯ ಕೈಗೊಳ್ಳಬೇಕು" ಎಂದಿದ್ದಾರೆ.

ಪಾಕಿಸ್ತಾನ್– ಅಫ್ಘಾನಿಸ್ತಾನಗಳ ಗಡಿ ಸಂಬಂಧದ ವಿವಾದವು ಹಾಗೆಯೇ ಉಳಿದು ಬೆಳೆದಿದೆ. ಈ ಸಂಬಂಧವಾಗಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ ಕಾಮನ್‌ವೆಲ್ತ್ ಸಂಬಂಧ ಖಾತೆಯ ಕಾರ್ಯದರ್ಶಿ ಫಿಲಿಪ್ ನೋಯೆಲ್ ಬೇಕರರು ಗಡಿ ವಲಯದ ಮಟ್ಟಿಗೆ ಪಾಕಿಸ್ತಾನದ ವಾದವನ್ನೇ ಸಮರ್ಥಿಸಿ 'ಅಂತರ್ರಾಷ್ಟ್ರೀಯ ಕಾಯಿದೆಯನ್ವಯ ಆ ವಲಯದ ಮೇಲೆ ಹಿಂದಿನ ಭಾರತ ಸರಕಾರಕ್ಕಿದ್ದ ಹಕ್ಕು ಬಾಧ್ಯತೆಗಳೆಲ್ಲವೂ ಪಾಕಿಸ್ತಾನಕ್ಕೆ ಸೇರತಕ್ಕವುಗಳೆಂದೂ ಡುರಾಂಡ್ ಗಡಿಯೇ ಪಾಕ್-ಅಫ್ಘಾನ್ ಗಡಿಯಾಗಿರಬೇಕೆಂದೂ ತಿಳಿಸಿದರು. ಇವೆರಡು ರಾಷ್ಟ್ರಗಳ ವಿವಾದವು ರಾಜೀ ತೀರ್ಮಾನ ಹೊಂದಬಲ್ಲುದೆಂದು ಆಶಿಸಿ, ಕಾಮನ್‌ವೆಲ್ತ್ ರಕ್ಷಣಾ ಸಂಬಂಧದ ತನ್ನ ಹೊಣೆಗಾರಿಕೆಯು ಬ್ರಿಟನಿಗೆ ಸರಿಯಾಗಿ ನೆನಪಿದೆ ಎಂದರು.

ಭಾರತ-ಪಾಕಿಸ್ಥಾನ

ಭಾರತ-ಪಾಕಿಸ್ತಾನಗಳೊಳಗೆ ಕೆಲವು ಸಾಮಾಗ್ರಿಗಳ ಕುರಿತು ಪರಸ್ಪರ ವ್ಯಾಪಾರ ನಡೆಯಿಸುವ ಸಂಬಂಧದ ಒಪ್ಪಂದವು ಕರಾಚಿಯಲ್ಲಿ ಹಿಂದಿನ ವಾರದಲ್ಲೇ ಆಗಿದ್ದಿತು. ಈ ಕರಾರು ಪ್ರಕಾರ ಪಾಕಿಸ್ತಾನವು ಹತ್ತಿ, ಹಸಿನಾರು, ಸಾಸಿವೆ, ಕಲ್ಲುಪ್ಪು, ತೊಗಲು ಮುಂತಾದ ನಾಲ್ಕೈದೇ ಬಗೆಯ ಸಾಮಾಗ್ರಿಗಳನ್ನು ನಿಯಮಿತ ಟನ್ನುಗಳಷ್ಟು ಭಾರತಕ್ಕೆ ಕಳುಹಬೇಕೆಂದಿದೆ. ಆದರೆ ಇದಕ್ಕೆ ಪ್ರತಿಯಾಗಿ ಭಾರತವು ಕಲ್ಲಿದ್ದಲು, ಉಕ್ಕು, ವಸ್ತ್ರ, ನೂಲು, ವಾರ್ನಿಶ್, ಹೊಗೆಸೊಪ್ಪು ಮುಂತಾದ 24 ಬಗೆಯ ಸಾಮಾಗ್ರಿಗಳನ್ನು ಪಾಕಿಸ್ತಾನಕ್ಕೆ ನಿಶ್ಚಿತ ಪರಿಮಾಣ ಪ್ರಕಾರ ಕಳುಹಿಸಬೇಕಾಗಿದೆ. ಈ ಸಂಬಂಧದ ಮೌಲ್ಯ ಸಂದಾಯಗಳ ವ್ಯವಸ್ಥೆಯೂ ನಿರ್ಣೈಸಲ್ಪಟ್ಟಿದೆ.

ಆದರೆ ಭಾರತ–ಪಾಕಿಸ್ತಾನಗಳಿಂದ ತಂತಮ್ಮ ಸ್ಥಿರಚರಸೊತ್ತುಗಳನ್ನು ಬಿಟ್ಟು ಒಂದರಿಂದಿನ್ನೊಂದಕ್ಕೋಡಿರುವ ಮುಸ್ಲಿಮ್– ಮುಸ್ಲಿಮೇತರರ ಆಸ್ತಿಗಳ ಸಂಬಂಧವಾಗಿ ಒಂದು ನ್ಯಾಯಬದ್ಧ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಭಾರತ ಸರಕಾರವು ಅಂದಿನಿಂದಿದುವರೆಗೂ ಬಾರಿ ಬಾರಿ ಪ್ರಯತ್ನಿಸಿದರೂ ಒಂದಲ್ಲೊಂದು ಹುಸಿ ನೆವ ಹೇಳಿ ಪಾಕಿಸ್ತಾನವು ಅಂತಹ ಒಪ್ಪಂದಕ್ಕೆ ಬರಲು ನಿರಾಕರಿಸಿದೆ. ಕಳೆದ ಜನವರಿಯಲ್ಲಿ ಈ ಸಂಬಂಧವಾಗಿ ಒಂದು ತಾತ್ಕಾಲಿಕ ಶಮನದ ಒಪ್ಪಂದವು ಇವೆರಡು ರಾಷ್ಟ್ರಗಳೊಳಗಾಗಿದ್ದಿತು. ಆದರೆ ಪಾಕಿಸ್ತಾನವು ಆ ಒಡಂಬಡಿಕೆ ಶರ್ತಗಳನ್ನು ಭಂಗಿಸುತ್ತಾ ಬಂದಿದೆ. ಮುಸ್ಲಿಂಗೊಂದಲದಿದಿರು ಪ್ರಾಣದಾಸೆಯಿಂದ ತಮ್ಮ ಸರ್ವಸ್ವವನ್ನೂ ಅಲ್ಲೇ ಬಿಟ್ಟು ಪಾಕಿಸ್ತಾನದಿಂದ ಭಾರತಕ್ಕೋಡಿ ಬಂದಿರುವ ಮುಸ್ಲಿಮೇತರರ ಸ್ಥಿರಜಂಗಮಾಸ್ತಿಗಳ ಒಟ್ಟು ಮೌಲ್ಯವು ಹಲವು ಸಾವಿರ ಕೋಟಿ ರೂಪಾಯಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಇಂತಹ ಅಪಾರ ಆಸ್ತಿಪಾಸ್ತಿಗಳನ್ನು 'ನಿರಾಶ್ರಿತ ಆಸ್ತಿ'ಯಾಗಿ ಗಣಿಸಿ ಅವುಗಳ ಸಂಬಂಧವಾಗಿ ಪಾಕಿಸ್ತಾನವು ತನ್ನಿಚ್ಛೆಯಂತೆ ವರ್ತಿಸುತ್ತಿರುವುದಷ್ಟೇ ಅಲ್ಲ; ಎಷ್ಟೋ ಸ್ಥಳ ಬಿಡದ, ಅಲ್ಲಿರುವ ಹಿಂದುಗಳನ್ನೂ ನಿರಾಶ್ರಿತರನ್ನಾಗಿ ಮಾಡಿ ಅವರ ಆಸ್ತಿ ಸೊತ್ತುಗಳನ್ನು ಕಬಳಿಸುವ ದುರಾಶೆಯಿಂದ ಅಂಥವರಿಗೆ ಕಾಯಂ ಠೇವು ಕಾರ್ಡುಗಳನ್ನು ಕೊಡುತ್ತಿಲ್ಲ; ತಾತ್ಕಾಲಿಕ ಕಾರ್ಡು ದೊರೆಯಬೇಕಾದರೂ ಪರಮಾವಧಿ ಪ್ರಯಾಸವಿದೆ; ಹಿಂದುಗಳ ಆಸ್ತಿಗಳಿಗೆ ತೀರಾ ಕಡಿಮೆ ಮೌಲ್ಯಕಟ್ಟಿ ಅವುಗಳಿಗೆ ಕಡಿಮೆ ಗೇಣಿದೊರೆಯುವಂತೆ ಮಾಡಲಾಗುತ್ತಿದೆ; ಪ್ರಸಿದ್ಧ ಹಿಂದುಗಳ ಕಟ್ಟಡ, ಕಂಪೆನಿಗಳಿಗೆ 'ನಿರಾಶ್ರಿತ ಸೊತ್ತು'ಗಳೆಂಬ ಹುಸಿ ಚೀಲಿ ಹಚ್ಚಿ ಪಾಕಿಸ್ತಾನ್ ಸರಕಾರವು ಸ್ವಾಹಾ ಮಾಡಿಕೊಂಡ ನಿದರ್ಶನಗಳೂ ಇವೆ. ಇದಕ್ಕೆ ಪ್ರತಿಯಾಗಿ ಭಾರತ ಬಿಟ್ಟೋಡಿರುವ ಮುಸ್ಲಿಮರ ಹಕ್ಕಿನ 'ನಿರಾಶ್ರಿತ ಆಸ್ತಿಪಾಸ್ತಿ'ಗಳನ್ನು ವಜಾಪಡಿಸಿ ಕೊಳ್ಳೋಣವೆಂದರೆ ಇಲ್ಲಿರುವ ಅಂಥವುಗಳ ಪರಿಮಾಣವು ತುಲನಾತ್ಮಕವಾಗಿ ಅತ್ಯಲ್ಪ; ಆದ್ದರಿಂದಲೇ ಪಾಕಿಸ್ತಾನವು ಇಂತಹ ಆಟವಾಡುತ್ತಿದೆ. ಹಿಂದಿನ ವಾರ ಕರಾಚಿಯಲ್ಲಿ ಈ ಸಂಬಂಧವಾಗಿ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರ ನಾಯಕತ್ವದಲ್ಲಿ ಭಾರತ ಪ್ರತಿನಿಧಿಗಳೂ ಸರ್. ಝಫರುಲ್ಲಾರ ನಾಯಕತ್ವದಲ್ಲಿ ಪಾಕಿಸ್ತಾನ್ ಪ್ರತಿನಿಧಿಗಳೂ ಕಲೆತು

[೭ನೇ ಪುಟ ನೋಡಿರಿ]

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	....	Rs. 25,00,000.
Capital Issued & Subscribed	....	Rs. 20,00,000.
Capital Paid Up.	....	Rs. 19,99,800.
Reserves	....	Rs. 8,91,000.

Banking business of every description transacted.

ಗುರುವಾರ, ಉಡುಪಿ, ೭-೭-೪೯

ಮಂತ್ರಿಗಳ ಆಗಮನ

ನಮ್ಮ ಪ್ರಾಂತಿಕ ಕಾಂಗ್ರೆಸ್ ಸರಕಾರದ ಅರ್ಥಸಚಿವ ಶ್ರೀ. ಬಿ. ಗೋಪಾಲರೆಡ್ಡಿಗಳೀಗ ದಕ್ಷಿಣಕನ್ನಡಜಿಲ್ಲೆಯ ಆರು ದಿನಗಳ ಸಂಚಾರ ಕಾರ್ಯಕ್ರಮದಲ್ಲಿದ್ದಾರೆ. ಇದೇ ತಾ 5ನೇ ಅಪರಾಹ್ನ ಉಡುಪಿಯ ಸಾರ್ವಜನಿಕ ಸಭೆಯಲ್ಲಿ ಅವರ ಭಾಷಣವು ಕರ್ಣಾನಂದಕರ ಮತ್ತು ಸ್ಥಿತಿಗತಿ, ಅಂಕೆ ಸಂಖ್ಯೆಗಳ ಪರಿಚಯಾತ್ಮಕವಿದ್ದುದರಿಂದ ಸಭೆಯ ಮೆಚ್ಚುಗೆಯನ್ನು ಗಳಿಸಿದೆ. ತಿಂಗಳುಗಳ ಹೆಚ್ಚಳದಿಂದ ಮನ ನೊಂದಿರುವ ಸಾರ್ವಜನಿಕರನ್ನು ಸಮಜಾಯಿಸುವದೇ ಮಾನ್ಯ ಮಂತ್ರಿಗಳ ಉದ್ದೇಶವಿದ್ದಂತೆ ತೋರಿತು; ಆ ಮಟ್ಟಿಗವರು ಜಯಶೀಲರಾಗಿದ್ದಾರೆ. ಸ್ಥಿತಿಗತಿಯ ಸ್ಮರಿಯಾದೇನೇ ಸರ್ವವನ್ನೂ ತಿಳಿದಿದ್ದೇವೆಂಬ ಭಾವನೆ ಕಟ್ಟಿಕೊಂಡು ವಿಮರ್ಶಿಸುವವರ-ತಿಳುವಳಿಕೆಯಿಲ್ಲದೆ ತೀರ್ಮಾನ ಹೇಳುವವರ—ಸಂಖ್ಯೆ ಬಹಳವಾಗಿ ಬೆಳೆದಿರುವ ಕಾಲವಿದು. ಅಂತಹ ಲಗು ಬುದ್ಧಿಯ ಟೀಕೆಗಳನ್ನು, ಮಂತ್ರಿಗಳಾದವರು ತಮ್ಮಲ್ಲಿರುವ ಕಾರಣಗಳನ್ನು ಮತ್ತು ಅಂಕೆ ಸಂಖ್ಯೆಗಳನ್ನು ಮುಂದಿಡುವ ಲಗುವಿಧಾನದ ಮೂಲಕವೇ ಶಮನಿಸಬಲ್ಲರು. ಹಣಕಾಸಿನ ಮಂತ್ರಿಗಳು ಪ್ರಾಂತ್ಯದ ಆಯ—ವ್ಯಯ ಪಟ್ಟಿಯನ್ನು ತಯಾರಿಸಿದವರು; ಅದರ ಚರ್ವಿತ ಚರ್ವಣ ನಡೆಯಿಸಿದವರು. ಹುಟ್ಟು—ವೆಚ್ಚ, ಲಾಭ—ನಷ್ಟದ ಅಂಕೆ ಸಂಖ್ಯೆಗಳು ಅವರಿಗೆ ಬಾಯಿಪಾಠವಿರಲೇಬೇಕು; ಅವುಗಳನ್ನು ಅವರು ಹೇಳಿತೋರಿಸಿದುದೂ ಸಂದರ್ಭೋಚಿತವಾಗಿಯೇ. "ಪ್ರಾಂತ್ಯದ ಹುಟ್ಟುವಳಿಯ ಮೂರನೇ ಒಂದಂಶವನ್ನು—17 ಕೋಟಿ ರೂಪಾಯಿಗಳನ್ನು-ಪಾನನಿಷೇಧದಿಂದ ಕಳಕೊಂಡೆವು; ಆದಾಯ ತೆರಿಗೆಯಂತಹ ಕೆಲವು ಕರಕಂದಾಯಗಳು ಕೇಂದ್ರ ಸರಕಾರದ ಪಾಲಿಗೆ ಹೋಗುತ್ತವೆ; ಈಗ ಕೂಡಾ ನೌಕರರಿಗೆ ದೊರೆಯುವ ವೇತನವು ಸಮಾಧಾನಕರವಲ್ಲವಾದರೂ ಅವರ ತುಟ್ಟಿಭತ್ತೆ, ಸಂಬಳ ಇತ್ಯಾದಿಗಳನ್ನು ಹೆಚ್ಚಿಸಿದುದರಿಂದ ಸಂಬಳಪಟ್ಟಿಯ ಸಂಖ್ಯೆಯೇರಿದೆ; ಇಂತಹ ಸ್ಥಿತಿಯಲ್ಲಿ ನಾವು ಹೊಸ ಕರಕಂದಾಯಗಳನ್ನು ಹೇರದೆ ಹೋಗಬೇಕೆಲ್ಲಿಗೆ?" ಎಂದು ಮಂತ್ರಿಗಳು ಅಂಕೆ ಸಂಖ್ಯೆಗಳನ್ನು ಮುಂದಿಟ್ಟು ಸವಿವರವಾಗಿ ವರ್ಣಿಸಿ ಮಂಡಿಸಿದ್ದಾರೆ. ನಾವು ಮೊದಲೇ ಹೇಳಿರುವಂತೆ, ಆಳವಾಗಿ ವಿಚಾರಿಸಿಕೊಳ್ಳದೆ ಆಕ್ಷೇಪಿಸುವವರಿರುವ ಈ ಕಾಲದಲ್ಲಿ ಹೊಣೆ ನಿರ್ವಹಿಸುವವರು ಈ ರೀತಿ ಸ್ಥಿತಿಚಿತ್ರವನ್ನು ಜನರ ಮುಂದಿಟ್ಟು ಸಮಜಾಯಿಸಬೇಕಾದುದು ನ್ಯಾಯ. ಆದರಿಲ್ಲಿ ಸೂಕ್ಷ್ಮ ವಿಮರ್ಶೆಯ ನಂತರ ಸೂಚಿಸಲಾಗುವ ತಿದ್ದುಪಡಿಗಳಿಲ್ಲವೆಂದಾಗಲೀ-ಪರಂಪರಾಗತ ಪದ್ಧತಿಗಳನ್ನೇ ಊರ್ಜಿತದಲ್ಲಿಟ್ಟು ಅವುಗಳಿಗಲ್ಲಲ್ಲಿ ಪಾನನಿಷೇಧದಂತಹ ಗಾಂಧೀ ತತ್ವವನ್ನು ಕಸಿಕಟ್ಟುವ ಬದಲಿಗೆ ಪ್ರಚಲಿತ ಆರ್ಥಿಕ ಧೋರಣೆಯನ್ನೇ ಬದಲಾಯಿಸಿದರೆ ಉತ್ತಮಸ್ಥಿತಿಗೆ ಬರುವದು ಸಾಧ್ಯವೆಂದಾಗಲೀ ಅರ್ಥವಲ್ಲ. ಆದರೆ ಕೇವಲ ಓರ್ವ ಮಂತ್ರಿ ಭೇಟಿಯ ಈ ಸಂದರ್ಭವು ಅಂತಹ ಗಾಢ ವಿಚಾರ ವಿಮರ್ಶೆಗಳಿಗೆ ಹೇಳಿಸಿದ್ದಲ್ಲ. "ಈಗಿನ ಸ್ಥಿತಿಯಲ್ಲಿ ಹೀಗಾಗುವದು ಅನಿವಾರ್ಯ" ವೆಂದು ಅರ್ಥ ಸಚಿವರೊಡನೆ ಸಮ್ಮತಿಸುವುದೇ ವಾಸಿ.

ಸಂದರ್ಭೋಚಿತವಾದ ಪ್ರಶ್ನೆಯೆಂದರೆ 'ನಮ್ಮ ಕಾಂಗ್ರೆಸ್ ಮಂತ್ರಿಗಳ ವಾದಮುಖ ಮತ್ತು ಸಂಚಾರ ವಿಧಾನಗಳು ಕೂಡ ಹೀಗಿರಬೇಕೆ?' ಎಂಬುದು. "ಇಡೀ ಪ್ರಾಂತ್ಯದ ಭೂಸ್ವಾಮಿಗಳು ಮತ್ತು ವ್ಯಾಪಾರೋದ್ಯಮಿಗಾರರು ಕೊಡುವ ಒಟ್ಟು ಕಂದಾಯಕ್ಕಿಂತ ಹೆಚ್ಚಿನ ಕರವನ್ನು ಅರೆ ಸೂಟ್ಟೆಯ ಸಣ್ಣ ಪುಟ್ಟ ಕಸಬುಗಾರ ವರ್ಗದವರು ಕೊಡುತಿದ್ದಾರೆ." "ರೂ.400ರಿಂದ 700ರ ವರೆಗೆ ಸಂಬಳಪಡೆಯುವ ಸರಕಾರೀ ನೌಕರರ ಸಂಸಾರ ನಿರ್ವಹಣದ ಕಷ್ಟಗಳನ್ನು ಕೇಳಿಯೇ ನನಗೆ ಕಣ್ಣೀರು ಬಂತು." "1947ನೇ ಆಗೋಸ್ತು 15ರಲ್ಲಿ ನಮಗೆ ರಾಜಕೀಯ ಸ್ವಾತಂತ್ರ್ಯ ದೊರೆತರೂ ಹಳ್ಳೀ ಭಾರತದ ಸ್ಥಿತಿ ಈಗಲೂ ಎಷ್ಟು ಶೋಚನೀಯವಿದೆ!" ಮುಂತಾದ ಹೃದಯಸ್ಪರ್ಶಿ ಮಾತುಗಳು ಅರ್ಥ ಸಚಿವರ ಬಾಯಿಯಿಂದ ಬಂದಿವೆ. ಆದರೆ ಸರಕಾರಕ್ಕೆ ಭಂಡಾರದ ಅಧಿಕಾಂಶವನ್ನು ತುಂಬಿಸಿಕೊಡುವ ಆ ಶ್ರಮಜೀವೀ ವರ್ಗಕ್ಕೆ-ಸ್ವತಂತ್ರ ಭಾರತದಲ್ಲೂ ತೀರಾ ದುಸ್ಥಿತಿಯಲ್ಲಿರುವ ಹಳ್ಳೀ ಭಾರತಕ್ಕೆ- ಶೋಚನೀಯ ರೀತಿಯಿಂದ ಜೀವನ ನಿರ್ವಹಿಸುತ್ತಿರುವ ನೌಕರವರ್ಗಕ್ಕೆ- ಅವುಗಳ ಈ ವಿಶೇಷ ಸ್ಥಾನಕ್ಕನುಸಾರವಾಗಿ ಸರಕಾರವೇನು ಮಾಡಿದೆ, ಎಂಬ ಅಂಶವಾವುದೂ ಮಂತ್ರಿಗಳ ಮುಖದಿಂದ ಹೊರಬೀಳಲಿಲ್ಲ. ಅಂದ ಮೇಲೆ, ಎಲ್ಲರಂತೆ ಮಂತ್ರಿಗಳೂ, ಹಿಂದುಳಿದವರ ದೀನದುಃಖಿತರ ಕುರಿತು ಬಾಯಿಸಹಾನುಭೂತಿಯನ್ನಷ್ಟೇ ಸೂಚಿಸಿ ಸುಮ್ಮಗಿರಬೇಕೆಂದು ಅರ್ಥವೆ? ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯವರೊಪ್ಪಿಸಿದ ಮಾನಪತ್ರದಲ್ಲಿ ಸ್ಥಳೀಯ ಜನತೆಯ ಪರವಾಗಿ ವ್ಯವಹಾರ್ಯ ವಿಜ್ಞಾಪನೆಗಳಿದ್ದುವು. ಪ್ರಾಂತಿಕ ಅರ್ಥ ಮಂತ್ರಿಗಳು ಒಂದುಊರನ್ನು ಸಂದರ್ಶಿಸಿದಾಗಲೂ, ಎಸೆಂಬ್ಲಿಯ 'ಬಜೆಟ್ ಭಾಷಣ'ದಂತಹ ಉಪನ್ಯಾಸವನ್ನೇ ಕೊಡುವ ಬದಲಿಗೆ,ಜನತೆಯ ಆ ಸುಖ ದುಃಖಗಳನ್ನು ತಾನು ಮನವರಿಕೆ ಮಾಡಿಕೊಂಡ ಮನೋವೃತ್ತಿಯನ್ನು ಪ್ರದರ್ಶಿಸುವ ಮೂಲಕ ಜನತಾ ಸಂಪರ್ಕ ಬೆಳೆಸುವ ಕಾಂಗ್ರೆಸ್ ಮಂತ್ರಿವೈಶಿಷ್ಟ್ಯವನ್ನು ತೋರಿಸಬಹುದಿತ್ತು.

ಅಸಹಜವೆನ್ನಲಾಗದಂತಹ ಒಂದು ಸಾರ್ವಜನಿಕ ಭಾವನೆಯ ಕಡೆಗೆ ಕಾಂಗ್ರೆಸ್ ಮಂತ್ರಿಗಳು ಲಕ್ಷ್ಯಕೊಡಬೇಕಾದುದು ಅಗತ್ಯ. ಕಾಂಗ್ರೆಸ್ ಆಡಳಿತೇ ಕಾಲದ ಹೆಚ್ಚಿನ ಸರಬರಾಯಿಯೆಂಬಂತೆ, ಪ್ರಾಂತ್ಯದ ಇತರ ಭಾಗಗಳಂತೆ ದಕ್ಷಿಣ ಕನ್ನಡಕ್ಕೂ ಆಗಾಗ 'ಮಂತ್ರಿ ಭೇಟಿ'ಯ ಸುಯೋಗ ದೊರೆತಿದೆ. ಆದರೆ ಬಂದವರೆಲ್ಲರೂ ಶ್ರೀಮಂತ ವರ್ಗದವರನ್ನು ಹಿಂದೆ ಅಥವಾ ಮುಂದೆ ಇಟ್ಟುಕೊಂಡು ಪೇಟೆ ಪಟ್ಟಣಗಳ ಸಭೆ ಸಮಾರಂಭ, ಉದ್ಘಾಟನೆ, ಶಂಕುಸ್ಥಾಪನೆಗಳನ್ನು ನೆರವೇರಿಸಿ ಹೋಗುವವರೇ; ಹಳ್ಳಿಗಳ ಪ್ರಾಮುಖ್ಯತೆಯನ್ನು ಮಂತ್ರಿಗಳರಿತಿದ್ದಾರೆ--ರೈತರ, ಶ್ರಮಜೀವಿಗಳ ಕಡೆಗೆ ಅವರಿಗೆ ಸಹಾನುಭೂತಿಯಿದೆ-- ಎಂದು ತಿಳಿದು ಬರುವುದು ಅವರು ಪೇಟೆ ಪಟ್ಟಣಗಳಿಗೆ ಬಂದು ಕೊಡುತ್ತಿರುವ ಭಾಷಣಗಳ ಮೇಲಿಂದಲೇ. ಹೀಗೇಕೆ? ಕೇವಲ ತಾತ್ಕಾಲಿಕ ಕೂಟವಾಗಿದ್ದರೂ, ಹಳ್ಳಿಯ ಪ್ರಾಮುಖ್ಯತೆಯು ಮನ್ನಿಸಲ್ಪಡಬೇಕೆಂಬುದಕ್ಕಾಗಿ, ಪ್ರತಿನಿಧಿ ಪ್ರೇಕ್ಷಕರಿಗೆಂತಹ ಅಡಚಣೆಗಳೊದಗಿದರೂ ಇತ್ತೀಚೆಗಿನ ವರುಷಗಳಲ್ಲಿ ಕಾಂಗ್ರೆಸಿನ ಮಹಾಧಿವೇಶನಗಳು ಕೂಡಾ ಹಳ್ಳೀವಲಯಗಳಲ್ಲೇ ನಡೆಯುತ್ತಿವೆ. ಒಂದು ಜಿಲ್ಲೆಯಲ್ಲಿ ಐದಾರು ದಿನಗಳ ವರೆಗೆ ನಿಲ್ಲುವಷ್ಟು ವಿರಾಮವನ್ನು ದೊರಕಿಸಿಕೊಂಡು ಬರುವ ಶ್ರೀ ಬಿ. ಗೋಪಾಲ ರೆಡ್ಡಿಗಳಂತಹ ತರುಣೋತ್ಸಾಹಿ ಮಂತ್ರಿಗಳಾದರೂ, ಈ ಸಾಗುವಳೀ ಸಮಯದಲ್ಲಿ ದಕ್ಷಿಣ ಕನ್ನಡದ ಒಂದೆರಡು ಒಳ ಹಳ್ಳಿಗಳನ್ನಾದರೂ ಸಂದರ್ಶಿಸಬಾರದಿತ್ತೆ? ಒರುವ ವರುಷದ ಭೂ ಕಂದಾಯ ಎತ್ತು ಗೇಣಿ ಸಂದಾಯದ ಮಟ್ಟಿಗೆ ರೈತರು ಅನಿವಾರ್ಯವಾಗಿ ರಿಯಾಯತಿ ಯಾಚಿಸುವಂತೆ ಮಾಡಿರುವ ನೆರೆ ಹೊಳೆದ ಹಾವಳಿಯ ಈ ಕಾಲದಲ್ಲಿ ಅಂತಹ ಒಂದೆರಡು ಕ್ಷೇತ್ರಗಳನ್ನಾದರೂ ಮಂತ್ರಿಗಳು ಕಣ್ಣಾರೆ ನೋಡಬಾರದಿತ್ತೆ? ಕಾಂಗ್ರೆಸ್ ಮಂತ್ರಿಗಳ ವರ್ತನೆಗಳಲ್ಲಿ ಇಂತಹ ಸುಧಾರಣೆಗಳಾಗಬೇಕಾದುದು ಅಗತ್ಯ; ಅವರು ಈವರೆಗಿನಸಂಪ್ರದಾಯ ಮುರಿದು ಹಳ್ಳೀ ಮೂಲೆಗಳ ಜನತೆಯೊಡನೆ ಪ್ರತ್ಯಕ್ಷ ಸಂಬಂಧ ಬೆಳಸಿಕೊಳ್ಳಬೇಕಾದುದು ಕಾಲೋಚಿತ; ಸಮಯಾವಕಾಶ ಹಾಗೂ ಸಂಖ್ಯಾಬಲದ ಮೇಲಿಂದ ಮದ್ರಾಸ್ ಮಂತ್ರಿ ಮಂಡಲಿಯ ಸದಸ್ಯರಿಗೆ ಈ ರೀತಿಯ ಜನತಾ ಸಂಪರ್ಕ ಸಾಧನೆಯು ಸಾಧ್ಯವಿದ್ದದ್ದೆ. ನಮ್ಮ ಮಂತ್ರಿಗಳು ಈ ಕಡೆಗೆ ಚಿತ್ತ ಕೊಡುವರೆ?

ಉಡುಪಿಯಲ್ಲಿ-

ಮದ್ರಾಸ್ ಸರಕಾರದ ಅರ್ಥಖಾತೆ, ಸಾರಗೇಖಾತೆಗಳ ಮಂತ್ರಿಯೂ, ಮದ್ರಾಸ್ ಎಸೆಂಬ್ಲಿ ನಾಯಕನೂ ಆಗಿರುವ ಶ್ರೀ ಬಿ. ಗೋಪಾಲ ರೆಡ್ಡಿಗಳು ಇದೇ ತಾ 5ನೇ ಮಂಗಳವಾರ ಮಂಗಳೂರಿನಿಂದ ಮೂಡಬಿದ್ರೆ, ಶಿರ್ವ ಮಾರ್ಗವಾಗಿ ಉಡುಪಿಗಾಗಮಿಸಿದರು. ಮಂತ್ರಿಗಳೊಂದಿಗೆ ಅವರ ಸಧರ್ಮಿಣಿಯೂ ಎಂ. ಎಲ್. ಎ. ಗಳಾದ ಡಾ| ಯು. ಪಿ. ಮಲ್ಯ, ವಿ. ಎಲ್. ಸಿ ಪಾಯಸ್, ಪಿ. ಯಚ್. ಯಸ್. ಹುಸ್ಸೇನ್ ಸಾಹೇಬ್ ಜಿಲ್ಲಾ ಕಲೆಕ್ಟರ್, ಮತ್ತು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟಿ, ಶ್ರೀ ವಿ. ಯಸ್. ಕುಡುವ ಮೊದಲಾದವರು ಬಂದಿದ್ದರು.

ಸಾರ್ವಜನಿಕ ಸಭೆಯಲ್ಲಿ

ಅಪರಾಹ್ನ 6 ಘಂಟೆಗೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಪತಿಯಿಂದ ಶ್ರೀ. ರಾಮಕೃಷ್ಣ ಥಿಯೇಟರಿನಲ್ಲಿ ಡಾ| ಯು. ಪಿ. ಮಲ್ಯ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿತು. ಅಧ್ಯಕ್ಷರು ತನ್ನ ಭಾಷಣದಲ್ಲಿ ಮಾನ್ಯ ಮಂತ್ರಿಗಳ ಪರಿಚಯವನ್ನು ಸಭಿಕರಿಗೂ ದಕ್ಷಿಣಕನ್ನಡಜಿಲ್ಲೆಯ ಸ್ಥಿತಿಗತಿ ಮತ್ತು ಅವಶ್ಯಕತೆಗಳ ಪರಿಚಯವನ್ನು ಮಂತ್ರಿಗಳಿಗೂ ಮಾಡಿಕೊಟ್ಟರು. ಪಿ. ಎಲ್. ಸಿ. ಪಾಯಸ್ ಎಂ. ಎಲ್. ಎ. ಅವರು ಸ್ವಾತಂತ್ರ್ಯ, ಗಾಂಧೀತತ್ವ, ಇತ್ಯಾದಿ ವಿಷಯಗಳನ್ನೊಳಗೊಂಡ ಭಾಷಣವಿತ್ತರು. ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯ ಮಾನಪತ್ರವನ್ನು ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರೋದಿದರು. ಸರಕಾರೀ ಕಾರ್ಯಕಲಾಪಗಳಲ್ಲಾಗುತ್ತಿರುವ ವಿಳಂಬ ನಿವಾರಣೆ— ಉಡುಪಿಗೆ ಜೋಗಿನ ವಿದ್ಯುಚ್ಛಕ್ತಿ ಸರಬರಾಯಿ ಅವಶ್ಯಕತೆ- ಪಾನನಿಷೇಧದಲ್ಲಾಗುತ್ತಿರುವದೋಷಗಳ ನಿವಾರಣೆ— ಜಿಲ್ಲೆಯ ಹೊಳೆಗಳಿಗೆ ಸೇತುವೆಗಳಾಗಬೇಕಾದ ಅವಶ್ಯಕತೆ—ಪ್ರಬುದ್ಧ ಬಂದರ ನಿರ್ಮಾಣದಲ್ಲಿ ನ್ಯಾಯಪಾಲನೆ— ಸೇಕಾರ ಸೊಸ್ಸೈಟಿಯ ಬೋನಸು ವಿತರಣೆ— ಬಸ್ ಮಾಲಕ ಮಂಜೂರ ವಿವಾದ ಸಂಬಂಧದ ಎವಾರ್ಡಿನ ಜಾರಿ—ಗಾಂಧೀಸ್ಮಾರಕ ಕಾಲೇಜಿಗೆ ಸಹಾಯ— ಮದ್ರಾಸ್ ಕಾಂಗ್ರೆಸ್ ಪಕ್ಷದೊಳಗಿನ ಒಡಕುಗಳ ಸಂಬಂಧವಾಗಿ ಸಾರ್ವಜನಿಕ ಪ್ರತಿಕ್ರಿಯೆಯ ಸೂಚನೆ- ಇತ್ಯಾದಿಗಳ ಸಂಬಂಧದ ವಿಜ್ಞಾಪನೆಗಳು ಮಾನಪತ್ರದಲ್ಲಿದ್ದುವು- ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ದಿವಂಗತೆ ಪಾಚಮ್ಮ ಸೆಡ್ತಿಯವರು

ಕಟ್ಟಪಾಡಿ ಕುರ್ಕಾಲುಂಜೆ ಶ್ರೀ ಚಂದಯ್ಯ ಸೆಟ್ಟರ ವಿಧವೆ, ಶ್ರೀ ಕವಲ್ಲೂರು ಪಾಚಮ್ಮ ಸೆಡ್ತಿಯವರು ಇದೇ ತಾ. 5-7-49ನೇ ಮಂಗಳವಾರ ಅಪರಾಹ್ನ 2 ಘಂಟೆಗೆ ತನ್ನ ಪುತ್ರ ಶ್ರೀ. ಕೆ. ಹೊನ್ನಯ್ಯ ಸೆಟ್ಟರ ಉಡುಪೀ ಗೃಹದಲ್ಲಿ ನಿಧನಗೊಂಡರೆನ್ನಲು ವಿಷಾದಿಸುತ್ತೇವೆ ಸುಮಾರು 75 ವರುಷ ಪ್ರಾಯವಾಗಿದ್ದ ಸೆಡ್ತಿಯವರ ಜೀವಮಾನವನ್ನು ಎಳೆಂಟು ದಿನಗಳ ಜ್ವರ ಮತ್ತು ವೃದ್ಧಾಪ್ಯವು ಮುಕ್ತಾಯಗೊಳಿಸಿತು. ಹಿಂದೂ ಸ್ತ್ರೀತ್ವದ-ಅದರಲ್ಲೂ ಹಳ್ಳೀ ಗೃಹಿಣಿಯ-ಸದ್ಗುಣಗಳಾದ ನಿಷ್ಕಲ್ಮಷ ಪ್ರೀತಿ, ದಯಾದ್ರ ಹೃದಯ, ಸರಳತೆ, ಸೌಜನ್ಯತೆಗಳು ಶ್ರೀ. ಸೆಡ್ತಿಯವರಲ್ಲಿ ಮೂರ್ತಿಮತ್ತಾಗಿದ್ದುವು. ಅವರು ದಾನ, ಧರ್ಮ, ಪರೋಪಕಾರ ಬುದ್ಧಿಯವರಿದ್ದರು; ಅನ್ನದಾನದಲ್ಲಿ ವಿಶೇಷಾಸಕ್ತಿಯಿದ್ದಿತು. ಗುಣ ನಡತೆಯಲ್ಲೂ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳ ಕುಟುಂಬ ಭಾಗ್ಯದಲ್ಲೂ ಆದರ್ಶ ಗೃಹಿಣಿಯಾಗಿದ್ದು ಪಕ್ವವಯಸ್ಸಿನಲ್ಲಿ ಇಹ ಯಾತ್ರೆ ಮುಗಿಸಿಕೊಂಡ ಪಾಚಮ್ಮ ಸೆಡ್ತಿಯವರ ಆತ್ಮಕ್ಕೆ ಶಾಂತಿ ಕೋರುತ್ತೇವೆ.

-ಅರ್ಥಮಂತ್ರಿ ಶ್ರೀ. ಬಿ. ಗೋಪಾಲರೆಡ್ಡಿಗಳು

ಮದ್ರಾಸ್ ಸರಕಾರದ ಅರ್ಥಸಚಿವ ಶ್ರೀ ಬಿ. ಗೋಪಾಲರೆಡ್ಡಿ—ರಾಜಾಜಿ ಮಂಡಲಿಯಲ್ಲಿ ಸ್ಥಳೀಯ ಖಾತೆಯ ಮಂತ್ರಿಯಾಗಿದ್ದಾಗ.

ನವರ ಬಿನ್ನವತ್ತಳೆಯನ್ನು ಅದರ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ಜೆ. ಆಳ್ವರು ಓದಿದರು. ಸಿನೆಮಾಲಯ ಮುಂತಾದುವುಗಳ ಮೇಲಿನ ವಿಶೇಷ ತೆರಿಗೆಗಳಿಂದಾಗಿರುವ ತೊಂದರೆಗಳನ್ನು ಅದರಲ್ಲಿ ನಮೂದಿಸಲಾಗಿತ್ತು. ಮಾನ್ಯ ಮಂತ್ರಿಗಳು ತಮ್ಮ ಸುದೀರ್ಘ ಭಾಷಣದಲ್ಲಿ ಭಾರತ ಸ್ವಾತಂತ್ರ್ಯದ ಚರಿತ್ರೆಯನ್ನು ವಿವರಿಸಿದರು. ಪ್ರಾಂತಿಕ ಸರಕಾರದ ಆರ್ಥಿಕ ಸ್ಥಿತಿಗತಿಗಳನ್ನು ಸವಿವರವಾಗಿ ತಿಳಿಸಿ, ಹೆಚ್ಚಿನ ಕರ ಕಂದಾಯಗಳ ಕಾರಣಗಳನ್ನು ಮುಂದಟ್ಟು ಮಾಡಿದರು. “ಪರಕೀಯ ಆಳಿಕೆಯಿದ್ದಾಗ ರೋಧಿಸಲಾದ ದಿದ್ದ ಬೇಡಿಕೆಗಳು ಈಗ ಹೋದಲ್ಲೆಲ್ಲಾ ಮುಂದೆ ಬರುತ್ತಿವೆ. ಎಲ್ಲರೂ ಸಹಾಯ ಯಾಚಿಸುವವರೇ ಹೊರತು ಅಂತಹ ಸಹಾಯ ಸಾಧ್ಯವಾಗುವಂತೆ ಸರಕಾರದ ಭಂಡಾರ ತುಂಬಿಸಲಾಗುವ ಸೂಚನೆ ಕೊಡುವವರಿಲ್ಲ. ರಾಜಕೀಯ ಸ್ವಾತಂತ್ರ್ಯ ದೊರೆತರೂ ಆರ್ಥಿಕ ಸ್ಥಿತಿ ಸುಧಾರಣೆ ಹೊಂದಿಲ್ಲ. ಹಳ್ಳಿಗಳ ಹಾಗೂ ಜನಸಾಮಾನ್ಯರ ಜೀವನ ಮಟ್ಟ ಮೇಲೇರಿಲ್ಲ. ಇದಕ್ಕೆ ಅನಿವಾರ್ಯವಾದ ಕಾರಣಗಳಿವೆ. ಈ ಕಷ್ಟ ಕಾಲದಲ್ಲಿ ದೊರೆತ ಸ್ವಾತಂತ್ರ್ಯದ ಆದಿ ಭಾಗದಲ್ಲಿ ಜನರು ತಮ್ಮದೇ ಆದ ಆಡಳಿತೆಯೊಂದಿಗೆ ಸಹನೆಯೊಡನೆ ಸಹಕರಿಸಬೇಕು. ಜನಪ್ರತಿನಿಧಿ ಸರಕಾರವೆಂಬುದು ಒಂದು ಲಿಮಿಟೆಡ್ ಸಂಸ್ಥೆ’ಯಂತಿದ್ದು ಎಲ್ಲಾ ಮತದಾರರೂ ಅದರ ಪಾಲುಗಾರರು, ನನ್ನಂತಹ ಮಂತ್ರಿಯೆಂದರೆ ಅದರ ಒಬ್ಬ ಡೈರೆಕ್ಟರ್ ಮಾತ್ರ” ಎಂದೆಲ್ಲಾ ಬೋಧಿಸಿದರು. ಪ್ರಾಂತಿಕ ಕರ ಕಂದಾಯಗಳ ಆಯವ್ಯಯಗಳನ್ನು, ವಿವಿಧ ವಿಭಾಗ ಮತ್ತು ಕ್ಷೇತ್ರಗಳಲ್ಲಿ ಮದ್ರಾಸ್ ಸರಕಾರವು ಮಾಡುತ್ತಾ ಬಂದಿರುವ ಕಾರ್ಯಗಳನ್ನೂ ವಿವರಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಿರುವ ಶಾಲಾ ಕಾಲೇಜುಗಳ ಹೆಚ್ಚಳವನ್ನು ಶ್ಲಾಘಿಸಿದರು. ಈ ಜಿಲ್ಲೆಯಿಂದ ಸರಕಾರವು ಪಡೆಯುತ್ತಿರುವ ಕರ ಕಂದಾಯಗಳಿಗಿಂತ ಹೆಚ್ಚಿನ ಮೊತ್ತವನ್ನು ಈ ಜಿಲ್ಲೆಗಾಗಿ ವ್ಯಯಿಸುತ್ತಿದೆ, ಎಂದರು. ಅಧ್ಯಕ್ಷ ಡಾ। ಮಲ್ಯರು ತಮ್ಮ ಮುಕ್ತಾಯ ಭಾಷಣದಲ್ಲಿ “ಈಚಿನ 2–3 ವರುಷಗಳಲ್ಲಿ ದಕ್ಷಿಣ ಕನ್ನಡದ ಆಯಕ್ಕಿಂತ ಇಲ್ಲಿ ಆಗುವ ವ್ಯಯವು ಹೆಚ್ಚಿಗಿರಬಹುದೇನೋ! ಆದರೆ ಅ ಮೊದಲಿನ ಎಲ್ಲಾ ಕಾಲದಲ್ಲೂ ದಕ್ಷಿಣ ಕನ್ನಡದಿಂದ ಹೋದುದೇ ಹೆಚ್ಚಲ್ಲವೇ?” ಎಂದು ಮುಂತಾಗಿ ಪ್ರಶ್ನಿಸಿ, ಈ ಜಿಲ್ಲೆಯ ಕುರಿತು ಪೂರ್ಣ ಸಹಾನುಭೂತಿಯಿರುವ ಶ್ರೀ ಗೋಪಾಲ ರೆಡ್ಡಿಗಳ ಮಾತು ಕೃತಿಗಳ ಮೇಲೆ ವಿಶ್ವಾಸ ವ್ಯಕ್ತಪಡಿಸಿದರು. ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಕೆ ನರಹರಿ ಕಾಮತರ ಧನ್ಯವಾದ, ‘ಜನಗಣಮನ’ದೊಂದಿಗೆ ಸಭಾಂತ್ಯವಾಯಿತು.

ಆಮೇಲೆ ಮಾನ್ಯ ಮಂತ್ರಿಗಳು ಸಪತ್ನೀಕರಾಗಿ ಶ್ರೀ ಕೃಷ್ಣ ದೇವಾಲಯ ಸಂದರ್ಶಿಸಿ, ಶ್ರೀ ಅದಮಾರು ಮಠಕ್ಕೆ ಭೇಟಿ ಕೊಟ್ಟರು. ರಾತ್ರಿ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಮಂತ್ರಿ ಪಂಗಡಿಗರಿಗೂ ಇತರರಿಗೂ ಔತಣ ಸತ್ಕಾರವಿತ್ತರು.

ಗಾಂಧಿಜೀ ಭಾವಚಿತ್ರ ಅನಾವರಣ

ತಾರೀಕು 6ನೇ ಮುಂಜಾನೆ ಮಂತ್ರಿಗಳು ಉಡುಪಿಯ ಬೇಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿಗಳೆಲ್ಲವುಗಳ ಪರವಾಗಿ ಕೆನರಾ ಮ್ಯೂಚುವಲಿನಲ್ಲಿತ್ತ ಚಹಾಕೂಟ ಸ್ವೀಕರಿಸಿ, ಮಲ್ಪೆಗೆ ಹೋಗಿಬಂದರು. ಆ ಮೇಲೆ ‘ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜ’ನ ಗಾಂಧಿಜೀಯ ಭಾವಚಿತ್ರ ಅನಾವರಣವನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ನೆರವೇರಿಸಿದರು. ಈ ಸಂಬಂಧವಾಗಿ ವಿ. ಎಲ್. ಸಿ. ಪಾಯಸ್, ಎಂ. ಎಲ್-ಎ ಇವರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ನವಕಾಲೇಜಿನ ಪ್ರಿನ್ಸಿಪಾಲರು ಮಂತ್ರಿಗಳನ್ನು ಸ್ವಾಗತಿಸಿ ಗಾಂಧಿಜೀಯ ತತ್ವಾದರ್ಶಗಳನ್ನು ವಿವರಿಸಿ, ಅವೀಗ ಹಿನ್ನೆಲೆಗೆ ಸೇರಿವೆ ಎಂದು ತಿಳಿಸಿ, ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷ ವಿ. ಪಾಯಸರು ತಮ್ಮ ಭಾಷಣದಲ್ಲಿ ಮಹಾತ್ಮಾಜೀಯ ಪರಿಶುದ್ಧ ಹಾಗೂ ಸರ್ವಮಾನ್ಯ ತತ್ವ, ಕಾರ್ಯಕ್ರಮಗಳನ್ನು ವಿವರಿಸಿದರು. ಮಂತ್ರಿ ಶ್ರೀ ಗೋಪಾಲ ರೆಡ್ಡಿಯವರು, ಭಾಷಣವೀಯುತ್ತಾ ಆಧುನಿಕ ಪ್ರಪಂಚ ಮತ್ತು ಪುರಾತನ ಕಾಲಗಳಲ್ಲೂ ಅದ್ವಿತೀಯನೆನ್ನಿಸಿದ್ದ ಗಾಂಧಿಜೀಯಿಂದ ಆಗಿರುವ ರಾಷ್ಟ್ರೋದ್ಧಾರ, ಹರಿಜನೋದ್ಧಾರ, ದೀನ ದುಃಖಿತರ ಉದ್ಧಾರಗಳ ನೆನಪು ಮಾಡಿದರು. “ಈಗ ಒಂದು ತತ್ವ, ಒಂದು ಸ್ಫೂರ್ತಿ, ಒಂದು ಚೇತನ ಮಾತ್ರವಾಗಿರುವ ಗಾಂಧಿಜೀ ತಮ್ಮ ಜೀವಮಾನದಲ್ಲಿ ಪ್ರಾಯಶಃ ಯಾವನೊಬ್ಬ ಜೀವಂತ ವ್ಯಕ್ತಿಯೂ ಪಡೆದಿರದ ಕೀರ್ತಿ ಗಳಿಸಿದ್ದರು. ಅವರ ಭಾಷೆ ಬಾರದ ಮೂಲಕ ಮಿಲಿಯ ಮಂದಿ ಕೂಡಾ ಕೇವಲ ಅವರ ದರ್ಶನಕ್ಕಾಗಿ, ಅಸಾಧ್ಯವಾದರೆ ಅವರೇರಿರುವ ವಾಹನಗಳ ದರ್ಶನಕ್ಕಾಗಿಯಾದರೂ ಮುತ್ತುತಿದ್ದರು. ಇಂತಹ ಭಾಗ್ಯ ಶ್ರೀ ರಾಮನಿಗಾದರೂ ಇತ್ತೋ ಹೇಳಲಾರೆ. ಗಾಂಧಿಜೀ ಕೈಕೊಂಡಿದ್ದ ದಂಡೀ ಯಾತ್ರೆಯಂತಹ ಸಂದರ್ಭಗಳಲ್ಲಿ ಅವರನ್ನು ಹಿಂಬಾಲಿಸಿದಷ್ಟು ಜನ, ಅಯೋಧ್ಯೆ ಬಿಟ್ಟು ಅರಣ್ಯಕ್ಕೆ ಹೊರಟಿದ್ದ ರಾಮನನ್ನು ಹಿಂಬಾಲಿಸಿದ್ದರೊ ತಿಳಿಯೆ. ಗಾಂಧಿಜೀ ಮಾಡಿದ್ದ ಜನೋಪಕಾರ ಮಿತವಿಲ್ಲದ್ದು. ತನ್ನ ಜೀವಮಾನದಲ್ಲಿ ಅವರಿಂದ ಸಾಧಿಸಲಾಗದಿದ್ದುದೆಂದರೆ ಹಿಂದೂ ಮುಸ್ಲಿಂ ಐಕ್ಯವೊಂದೇ. ಇದರ ಪರಿಣಾಮವಾಗಿ ಅವರ ಹೃದಯವನ್ನು ಗುಂಡು ಭೇದಿಸಿತು. ಮಹಾತ್ಮಾಜೀಯ ಆಯುಷ್ಯದಲ್ಲಿ ಅಪೂರ್ಣವಾಗಿ ಉಳಿದ ಈ ಜಾತೀಯ ಒಗ್ಗಟ್ಟಿನ ಸಾಧನೆಗಾಗಿ ನಾವು ಉಳಿಯುವುದಕ್ಕೂ ಅಳಿಯುವುದಕ್ಕೂ ತಯಾರಾಗಬೇಕು. ಹಿಂದು ಮುಸ್ಲಿಂ ಕ್ರೈಸ್ತ, ಕೆಥೊಲಿಕ ಮುಂತಾದ ಅಧಿಕ ಅಲ್ಪ ಸಂಖ್ಯಾಕ ಸಮಾಜದವರು ಭೇದ ಭಾವನೆಗಳೆಲ್ಲವನ್ನೂ ಅಳಿಸಿ ಬಿಡಬೇಕು. ಪಾಕಿಸ್ತಾನ್ ಸಾಧಕರಿಂದು ಮುಂತಾದ ಕಾರಣಗಳಿಂದ ಮುಸ್ಲಿಮರ ಮೇಲಿರಬಹುದಾದ ಎಲ್ಲಾ ಕಹಿ ಭಾವನೆಗಳನ್ನೂ ನಿರ್ಮೂಲಿಸಿಕೊಂಡು, ಅವರಲ್ಲಿ ಭರವಸೆ ಹುಟ್ಟಿಸಿ ಪರಸ್ಪರ ಒಂದಾಗಬೇಕು. ಹಿಂದುಗಳು ಹಿಂದುತ್ವದ, ಮುಸ್ಲಿಮರು ಇಸ್ಲಾಮಿನ ವೈಶಿಷ್ಟ್ಯವುಳಿಸಿಕೊಂಡೇ ಸ್ನೇಹಾಚಾರ, ಬಂಧುಭಾವದಿಂದಿರಲು ಸಾಧ್ಯವಿದೆ. ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನ ವಿದ್ಯಾರ್ಥಿಗಳು ಈ ಜಾತೀಯ ಐಕ್ಯ ಭಾವನೆಯ ಪೋಷಣೆಗೆ ನೆರವಾಗಲಿ. ಸರ್ವದಾ ಜಾತೀಯ ಐಕ್ಯತೆ ಸಾಧಿಸಲಿ” ಎನ್ನುತ್ತಾ ಮಹಾತ್ಮರ ಭಾವಚಿತ್ರದ ಅನಾವರಣ ಮಾಡಿದರು. ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು ಧನ್ಯವಾದಗಳನ್ನರ್ಪಿಸಿದರು. ‘ಜನ ಗಣಮನ’ದೊಂದಿಗೆ ಸಭಾ ಮಂಗಳವಾಯಿತು.

ಅಲ್ಲಿಂದ ಮುನ್ಸಿಪಲ್ ಭವನಕ್ಕೆ ಹೋಗಿ, ಅಲ್ಲಿ ಮುನ್ಸಿಪಾಲಿಟಿಯ ಮಾನಪತ್ರ ಮತ್ತು ಚಹಾ ಸತ್ಕಾರ ಸ್ವೀಕರಿಸಿ, ಆ ಮೇಲೆ ಮುನ್ಸಿಪಲ್ ಹೌಸ್ ಗರ್ಲ್ಸ್ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದರು. ನಂತರ ಕುಂದಾಪುರಕ್ಕೆ ಹೊರಟು ಹೋದರು.

[೫ನೇ ಪುಟದಿಂದ ಮುಂದುವರಿದುದು]

ಪರ್ಯಾಲೋಚನೆ ನಡೆಸಿದರಾದರೂ ಪಾಕಿಸ್ತಾನ್ ಪ್ರತಿನಿಧಿಗಳು ಟೋಳ್ಳು ನೆವನ ಹೇಳಿ ಯಾವುದೊಂದು ತೀರ್ಮಾನವೂ ಆಗದಂತೆ ಮಾಡಿದ್ದಾರೆ. ತನಗೆ ತೊಂದರೆಯಿದೆಯೆಂದಾದಲ್ಲಿ ಮಾತ್ರ ಭಾರತದೊಡನೆ ಮೈತ್ರಿ ಸಾಧನೆಗೆ ಹಾತೊರೆಯುವ ಪಾಕಿಸ್ತಾನವು, ತನ್ನ ಲಾಭ ಸಾಧನೆಗಾಗಿ ಎಷ್ಟು ಅವಮಾನದ ರೀತಿಯಿಂದ, ಎಂತಹ ಕಠೋರ ಧೋರಣೆ ವಹಿಸುವದೆಂಬುದಕ್ಕೆ ಇದೊಂದು ನಿದರ್ಶನ. ಇದರಿಂದ ಭಾರತ ಸರಕಾರವು ಪಾಠ ಕಲಿಯಲಿಕ್ಕಿರುವಂತೆಯೇ ಅಖಿಲ ಪ್ರಪಂಚವು, ವಿಶೇಷವಾಗಿ ಸಂಯುಕ್ತ ರಾಷ್ಟ್ರ ಸಂಘವು ಪಾಕಿಸ್ತಾನ್ ಮನೋಗತಿಯೆಂತಹದೆಂಬುದನ್ನು ಅರಿತುಕೊಳ್ಳಲಿಕ್ಕಿದೆ.

ಇತರ ಸಮಸ್ಯೆಗಳು

ಕಾಶ್ಮೀರ ವಿವಾದದ ಇತ್ಯರ್ಥಕ್ಕಾಗಿ ಕಾಶ್ಮೀರ ಕಮಿಶನಿನವರು ಹೊಸ ಸೂಚನೆಗಳನ್ನು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳಿಗಿತ್ತಿರುವರೆಂದು ತಿಳಿದು ಬಂದಿದೆ. ಕಾಶ್ಮೀರದಲ್ಲಿ ಜನಮತ ಸಂಗ್ರಹಿಸುವ ಕಾರ್ಯಕ್ಕೆ 7 ಮಿಲಿಯ ಡೋಲರುಗಳ ವೆಚ್ಚ ತಾಗಬಹುದೆಂದು ಸಂಯುಕ್ತ ರಾಷ್ಟ್ರ ಸಂಘದ ತಜ್ಞರು ಅಂದಾಜು ಕಟ್ಟಿದ್ದಾರೆ. ಈ ಮೊತ್ತವು ಹೆಚ್ಚೆಂದು ತೋರಿದರೂ ಕಾಶ್ಮೀರದ ಜನಮತ ಸಂಗ್ರಹ ಕಾರ್ಯವು ಅಷ್ಟು ಅಗಾಧವಾದುದು. ಮತದಾನಾವಲೋಕನೆಗಾಗಿ ಮೆಕ್ಸಿಕೋ, ನೋರ್ವೆ, ಬೆಲ್ಜಿಯಮ್, ಮೊದಲಾದ ರಾಷ್ಟ್ರಗಳಿಂದ 3000 ಸೇನಾ ನಿರೀಕ್ಷಕರನ್ನು ತರಿಸಿಕೊಳ್ಳಬೇಕೆಂದು ಮತ ಸಂಗ್ರಹಾಧಿಕಾರಿ ಎಡ್ಮಿರಲ್ ನಿಮಿಟ್ಸರು ಬಗೆದಿದ್ದಾರೆ. ಇನ್ನು ಮತ ಸಂಗ್ರಹ ಪೆಟ್ಟಿಗೆಗಳಿಂದಾರಂಭಿಸಿ, ನೌಕರರೇ ಮೊದಲಾದ ಎಲ್ಲಾ ವಿಭಾಗಗಳ ವೆಚ್ಚಗಳು ಪ್ರತ್ಯೇಕವಿವೆ. ಈ ಅಪಾರ ವೆಚ್ಚವನ್ನು ಹೊರತಕ್ಕವರಾರು ಎಂಬುದನ್ನು ಲೇಕ್ ಸಕ್ಸೆಸ್‌ನಲ್ಲಿ ಸಂಯುಕ್ತ ರಾಷ್ಟ್ರ ಸಂಘದವರು ಯೋಚಿಸಲಿರುವರು. ಇದುವರೆಗೆ ಮತ ಸಂಗ್ರಹಾಧಿಕಾರಿ ಮತ್ತವರ ನೌಕರ ವರ್ಗದ ವೆಚ್ಚವನ್ನು ರಾಷ್ಟ್ರ ಸಂಘವೇ ನೋಡುತ್ತಿದೆ. ಹಿಂದೆ, ಇದೇ ಮಾದರಿಯ ಪೆಲಸ್ತೀನ್ ಮಧ್ಯಸ್ಥಿಕೆ ವ್ಯವಸ್ಥೆಗೆ 3.5 ಮಿಲಿಯ ಡೋಲರು ವ್ಯಯವಾಗಿದ್ದಿತು. ಸಂಯುಕ್ತ ರಾಷ್ಟ್ರ ಸಂಘವೇ ಆ ವೆಚ್ಚವನ್ನು ಹೊತ್ತಿದ್ದಿತು.

ಪಂಡಿತ ನೆಹರುಗಳು ಶ್ರೀ ನಗರಕ್ಕೆ ಬಂದು ಲಡಾಕ್‌ಗೆ ಹೋಗಿದ್ದಾರೆ.

PUBLIC AUCTION

A portable Cinema Machine with accessories will be sold in public auction at the District Health Office (District Board Compound) Mangalore, on 30-7-1949 3 P. M.

M. Ramachandra Rao,
District Health Officer,
South Kanara.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

7-7-49 ರಿಂದ

ಸ್ತ್ರೀ ಶೋಭೆಯು ಎಲ್ಲಿ ಅಡಗಿರುವುದೆಂದು ನಾವು ಹೇಳುವುದರಲ್ಲೇನಿಲ್ಲ ಅವರು ಮುಸುಕು ಹಾಕಿಕೊಂಡರು ತೆಗೆದರೂ ಮನದಣಿಯೆ ನೋಡತಕ್ಕವರೆ,

ಪ್ರಕಾಶ ಚಿತ್ರ- **ಗುಂಘಟ್**

ನಿರ್ಮಲಾ, ಅರುಣ್, ಉಮಾಕಾಂತ್, ಕುರ್ಶಿದ್ ಜ್ಯೂನಿಯರ್, ನೊದಲಾದವರು

ಬರುವ ಚಿತ್ರ-

“ಭಂವರ್”

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 44/48. R. E. P 86/49.

ವಾದಿರು ಜೋಸೆಫ್, ಎಮ್. ಫೆರ್ನಾಂಡಿಸ್ ಕೂಡಾ

ಪ್ರತಿವಾದಿ ಶ್ರೀ ನಾರಾಯಣಗುರು ಬೇಂಕು. ಲಿಮಿಟೆಡ್, ಮಂಗಳೂರು.

ಗಾರ್ನಿಷಿ. 1 ದಿ ಕುಪ್ಪಯ್ಯ ಸೆಟ್ಟಿ, ಸಾಹುಕಾರು ನಾಗಯ್ಯ ಸೆಟ್ಟಿ ಅಳಿಯ ಕುಂದಾಪುರ ತಾಲ್ಲೂಕು ಗುಳುವಾಡಿಗ್ರಾಮ. 2. C ಕೃಷ್ಣಪ್ಪ ಸೆಟ್ಟಿ. ಸಪ್ರಮಕ್ತಿ ಅಂತಯ್ಯ ಸೆಟ್ಟಿ ಅಳಿಯ, ಕುಂದಾಪುರ ತಾಲ್ಲೂಕು, ಕೆರಾಡಿಗ್ರಾಮ

ಮೇಲ್ಕಾಣಿಸಿದ ಡಿಕ್ರಿ ಸಮಾಧಾನದಬಗ್ಗೆ ವಾದಿಯು, ಪ್ರತಿವಾದಿಯು ವಾದಿಯಾಗಿ ಪಡೆದ ಕುಂದಾಪುರ ಡಿ ಮು ಕೋರ್ಟು O. S. 451/46ನೇ ಡಿಕ್ರಿಯನ್ನು ಜಪ್ತುಮಾಡ್ಸಿ ಅದರ ಮೇಲೆ ಮುಂದಿನ ವ್ಯವಹರಣೆ ನಡ್ಸುವರೆ ಪರ್ಮಿಶನ್ ಕೊಡಿಸಬೇಕೆಂದು ಮಾಡಿದ ಪೇಟಿಸ ಅರ್ಜಿಯಲ್ಲಿ ನಿಮ್ಮಿಂದರು ತಾ 14-7-49ಕ್ಕೆ ತಸ್ತಿಗೆ ಇಟ್ಟಿದೆ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲಾಗಿ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕ್ಮಂ ಪ್ರಕಾರ ತಿಳುಹಿಸಿಯದೆ.

M. M. Hegde.
Advocate for Peter

ತಾರೀಕು 2-7-49.

ಮಂಗಳೂರು

ಜಿಲ್ಲಾ ಸೆಂಟ್ರಲ್ ಕೊಪರೇಟಿವ್ ಬೇಂಕ್ ಹೊಸಕಟ್ಟಡ ಪ್ರವೇಶ- ದ. ಕ. ಜಿಲ್ಲಾ ಸೆಂಟ್ರಲ್ ಕೊಪರೇಟಿವ್ ಬೇಂಕಿನ ಹೊಸಕಟ್ಟಡ ಪ್ರವೇಶ ಸಮಾರಂಭವು ಈಚೆಗೆ ಮಂಗಳೂರು ಮುನಿಸಿಪಲ್ ಚೆಯರ್‌ಮೆನ್ ಶ್ರೀ ಎಲ್ ಸಿ. ಪಾಯಸ್, ಅವರ ಮುಂದಾಳುತ್ವದಲ್ಲಿ ಯಶಸ್ವಿಯಾಗಿ ಜರಗಿತು. ಬೇಂಕಿನ ಡೈರೆಕ್ಟರ್ ಶ್ರೀ ಎಸ್. ನರಸಪ್ಪಯ್ಯನವರು ಆಮಂತ್ರಿತರಿಗೆ ಸುಸ್ವಾಗತವನ್ನು ಬಯಸಿದರು. ಬೇಂಕಿನ ಕಾರ್ಯದರ್ಶಿ ಶ್ರೀ ಯು. ಶಾಂತಾರಾಮ ರಾಯರು ಸಮಾರಂಭಕ್ಕೆ ಶುಭವನ್ನು ಕೋರಿಬಂದ ಸಂದೇಶಗಳನ್ನು ಓದಿದರು. ಶ್ರೀಗಳಾದ ಎಮ್. ಶ್ರೀನಿವಾಸ ಶ್ಯಾನುಭಾಗ (ಡಿಪ್ಯುಟಿ ರಿಜಿಸ್ಟ್ರಾರ್), ಎಮ್. ಗಿರಿಯಪ್ಪ, ಎಮ್. ಪಾಂಡುರಂಗ ಕಾಮತ್ ಮೊದಲಾದವರು ಮಾತನಾಡಿದರು. ಶ್ರೀ ಕೆ. ಸುಬ್ಬಣ್ಣಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಕೊಪರೇಟಿವ್ ಸುಪರ್‌ವೈಜರ ಪರಿಷತ್ತು ಈಚೆಗೆ ಸೆಂಟ್ರಲ್ ಬೇಂಕಿನ ಕಟ್ಟಡದಲ್ಲಿ ಬೇಂಕಿನ ಅಧ್ಯಕ್ಷ ಶ್ರೀ. ಎಮ್. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದುಹೋದ ಆರು ತಿಂಗಳ ಚಟುವಟಿಕೆಗಳನ್ನೂ ಮುಂದಿನ ಆರುತಿಂಗಳ ಕಾರ್ಯಕ್ರಮಗಳನ್ನೂ ಪರ್ಯಾಲೋಚಿಸಲಾಯಿತು. ತಾಲೂಕು ಯೂನಿಯನ್ ಪ್ರತಿನಿಧಿಗಳೂ ಜಿಲ್ಲಾ ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಮ್. ಕೃಷ್ಣಸೆಟ್ಟರೂ ಹಾಜರಿದ್ದರು.

ಪಾನನಿಷೇಧ ಮೀಟಿಂಗು

ಮದ್ರಾಸು ಪ್ರಾಂತಿಕ ಮದ್ಯನಿಷೇಧ ಇಲಾಖಾ ಕಮಿಶನರ್ ಶ್ರೀ ವಿ. ಎಸ್. ಕುಡ್ವರು ಕಳೆದ ತಾ 30ರಲ್ಲು ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿದ ಆದೊಂದು ನಾಗರಿಕ ಪ್ರಮುಖರ ಸಭೆಯಲ್ಲಿ ಮದ್ಯ ನಿಷೇಧ ಸಂಬಂಧ ವಿಚಾರ ವಿನಿಮಯ ಯುಕ್ತವಾದ ಚರ್ಚೆ ನಡೆಸಿದರು. ಮಂಗಳೂರಿನ ಬಿಶಪ್ ಶ್ರೀಗಳಾದ ಕೈತಾನ್ ಲೋಬೋ, ಎಸ್. ರಾಮರಾವ್, ಕೆ. ಕೆ. ಸೆಟ್ಟಿ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಹೊಸ ಸಬ್‌ಮೆಜಿಸ್ಟ್ರೇಟರು

ಸಬ್‌ಮೆಜಿಸ್ಟ್ರೇಟರಾದ ಶ್ರೀ ಎಮ್. ಸಿ. ಮೂಚಿನರು ಉಡುಪಿ ಅಸಿಸ್ಟ್ಯಾಂಟ್ ತಾ। ಸರಬರಾಯಿ ಆಫೀಸರರಾಗಿ ಉಡುಪಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ಅವರ ಸ್ಥಾನಕ್ಕೆ ಶ್ರೀ ಎಮ್. ಬಾಬು ಸೆಟ್ಟರು ನೇಮಿಸಲ್ಪಟ್ಟಿದ್ದಾರೆ.

ಹೊಟೇಲುಗಳ ಮುಷ್ಕರ

ನಗರದ ಪ್ರಮುಖ ಹೊಟೆಲುಗಳು ಇದೇ ತಾ. 1ರಲ್ಲು ಮಾಂಸಾಟಕರ ಹೆಚ್ಚಳ ನಿಷೇಧಾರ್ಥವಾಗಿ ಮುಚ್ಚಲ್ಪಟ್ಟಿದ್ದವು.

ಜಿಲ್ಲಾ ವಾಣಿಜ್ಯ ನೌಕರರ ಸಂಘದ ಮಹಾಸಭೆಯು ಕಳೆದ ತಾ. 26ರಲ್ಲು ಶ್ರೀ ಕೆ ಶಶಿಧರರಾಯರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರುಷದ ಅಧಿಕಾರಿವರ್ಗದ ಚುನಾವಣೆ ನಡೆಯಿತು. ಕಾರ್ಖಾನೆಗಳಲ್ಲಿ ಕೆಲಸಮಾಡುವ ನೌಕರರನ್ನು ಶೋಪ್ ಮತ್ತು ಎಸ್ಟಾಬ್ಲಿಶ್‌ಮೆಂಟ್ ಕಾನೂನಿನೊಳಗೆ ಸೇರಿಸಬೇಕು, ಈ ಕಾನೂನಿನಲ್ಲಿ ಬೆಳಿಗ್ಗೆ ಎಂಟರಿಂದ ರಾತ್ರಿ ಎಂಟರ ತನಕ ಎಂದಿರುವ ಸಮಯವನ್ನು ಬೆಳಿಗ್ಗೆ ಹತ್ತರಿಂದ ಎಂದು ತಿದ್ದುಪಡಿ ಮಾಡಬೇಕು ಎಂಬಿತ್ಯಾದಿ ನಿರ್ಣಯಗಳಾದುವು.

ಶ್ರೀ ಎಮ್. ಆರ್. ಕುಂಞರಾಮ ಗುಪ್ತನ್

ಸೌತ್ ಇಂಡಿಯನ್ ಎಕ್ಸ್‌ಟ್ರಾ ಡಿಪಾರ್ಟ್‌ಮೆಂಟಲ್ ಪೋಸ್ಟಲ್ ಆಫೀಶಿಯಲ್ಸ್ ಯೂನಿಯನ್ನಿನ ಜನರಲ್ ಸೆಕ್ರೆಟರಿ ಶ್ರೀ ಎಮ್. ಆರ್. ಕುಂಞರಾಮ ಗುಪ್ತನ್‌ರವರು ಕಳೆದ ತಾ. 30ಕ್ಕೆ ಮಂಗಳೂರಿಗೆ ಬಂದಿದ್ದು ನಾಲ್ಕು ದಿವಸಗಳ ತನಕ ಜಿಲ್ಲಾ ಸಂಚಾರವನ್ನು ಕೈಕೊಂಡು ಯೂನಿಯನ್ನಿಗೆ ಸದಸ್ಯರನ್ನು ಸೇರಿಸುವ, ಜಿಲ್ಲೆಯಲ್ಲೊಂದು ಶಾಖೆಯನ್ನು ತೆರೆಯುವ ಕಾರ್ಯಕ್ರಮವನ್ನಿಟ್ಟುಕೊಂಡಿರುವರೆಂದು ಗೊತ್ತಾಗಿದೆ.

ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯು ಈಚೆಗೆ ಡಾ। ಯು. ಪಿ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬರುವ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಭಾಗವಹಿಸಬೇಕೆಂಬ ನಿರ್ಣಯವು ಬಹುಮತದಿಂದ ಪಾಸಾಯಿತು.



Approved firm by the Govt. of Mysore Certified by the Agent of the Govt, of Cylone & Indian.

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ತೋರುವ ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಅಸಲು ಐವೇಜು ವಾ ಬಡ್ಡಿಸಹಿತ ಬಹಳ ಕಾಲದಿಂದ ಬಾಕಿಮಾಡಿಕೊಂಡಲ್ಲಿ ಸದ್ರಿಯವರಿಗೆ ಕ್ರಮದಂತೆ ನೋಟೀಸು ವಾ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಬೇಂಕಿಗೆ ಸಲತಕ್ಕ ಅಸಲು ವಾ ಬಡ್ಡಿ ಐವೇಜನ್ನು ಇನ್ನೂ ಬಾಕಿಮಾಡಿಕೊಂಡಿರುವುದರಿಂದ ಸದ್ರಿಯವರು ಬೇಂಕಿಗೆ ಸಲತಕ್ಕ ಅಸಲು ಬಡ್ಡಿ ವಾ ಇತರ ಖರ್ಚನ್ನು ಕೂಡಾ ತಾರೀಕು 19-7-49ನೇ ಮಂಗಳವಾರ 3 ಗಂಟೆಗೆ ಮೊದಲು ಬೇಂಕಿಗೆ ಸಲ್ಲಿಸಿ ಲೋನುಗಳನ್ನು ಬಿಡಿಸುವರೆ ತಪ್ಪಿದಲ್ಲಿ ತಾರೀಕು 23-7-49ನೇ ಶನಿವಾರ ಹಗಲು ಗಂಟೆ 1ಕ್ಕೆ ಯಾ ಬೇಂಕಿಗೆ ಯುಕ್ತತೋರುವ ಮುಂದಿನ ಯಾವುದೇ ದಿನಗಳಲ್ಲಿ ಬೇಂಕಿನ ಮಹಾರದಲ್ಲಿ ಲೋನಿನ ಆಭರಣಗಳನ್ನು ಬಹಿರಂಗವಾಗಿ ಏಲಂ ಮಾಡುವುದಲ್ಲದೆ, ಏಲಂನಲ್ಲಿ ಹುಟ್ಟಿಬಂದ ಐವೇಜು ಸಾಲಕ್ಕೆ ಕಡಿಮೆಯಾದ ಪಕ್ಷದಲ್ಲಿ ನಿಮ್ಮ ದೇಹ ಜವಾಬ್ದಾರಿ ವಾ ಸ್ಥಿರಚರ ಸೊತ್ತುಗಳ ಜವಾಬ್ದಾರಿಯಿಂದ ವಸೂಲು ಮಾಡಿಕೊಳ್ಳಲಾದೀತೆಂಬುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು.
185/45-46	ಶ್ರೀ. ದೇವೇಂದ್ರ ಹೆಗ್ಡೆ. ಅಣ್ಣಪ್ಪ ಹೆಗ್ಡೆರ ಮಗ ಶಿರಿಯಾರ ಗ್ರಾಮ ಸಾಬರಕಟ್ಟೆ ದ. ಕ.	75--0—0
220/-do-	ಶ್ರೀ. ದುಗ್ಗಪ್ಪ ಶೆಟ್ಟಿ, ಅಣ್ಣಪ್ಪ ಶೆಟ್ರ ಮಗ, ಕುಪ್ಪಹಿಕ್ಕ ಕೊಡ್ಲಾಡಿಗ್ರಾಮ, ಶಂಕರನಾರಾಯಣ, ದ. ಕ.	700—0--0
479/45-46	ಶ್ರೀ. ವೆಂಕಪ್ಪ ಶೆಟ್ಟಿ. ಮುತ್ತಯ ಶೆಟ್ಟರ ಅಳಿಯ, ಬಡಾಕೆರೆ, ಬಳ್ಕೂರುಗ್ರಾಮ, ಪೋ. ಬಸ್ರೂರು ದ. ಕ	225 -0—0
509/-do-	ಶ್ರೀ. ಅಣ್ಣಯ ಶೆಟ್ಟಿ, ಕೃಷ್ಣಯ ಶೆಟ್ರ ಮೊಮ್ಮಗ, ಹೊಸಂಗಡಿ ಗ್ರಾಮ, ಮಂಡಗೆದ್ದೆ, ಹೊಸಂಗಡಿ, ದ. ಕ.	100-0—0
616/ - -	ಶ್ರೀ. ವಾರಪ್ಪ ಶೆಟ್ಟಿ, ನಾಗಪ್ಪ ಶೆಟ್ರ ಅಳಿಯ, ಇಡೂರ. ಕುಂಞಾಡಿ ಗ್ರಾಮ, ವಂಡ್ಸೆ ದ. ಕ.	100—0—0
723/- -	ಶ್ರೀ. ಬೈಲಾಡಿ ಅಂತಯ ಶೆಟ್ಟಿ, ಸುಬ್ಬಯ ಶೆಟ್ರ ಮೊಮ್ಮಗ, ದೇವಲ್ಕುಂದ ಗ್ರಾಮ, ಹಕ್ಲಾಡಿ ದ. ಕ.	140 0 0
729/ - -	ಶ್ರೀ ವೆಂಕಪ್ಪ ಶೆಟ್ಟಿ, ಬಳ್ಕೂರು ಬಡಾಮನೆ ಮುತ್ತಯ ಶೆಟ್ರ ಅಳಿಯ, ಪೋಸ್ಟು ಬಸ್ರೂರು, ದ. ಕ.	50 0—0
909/ - -	ಶ್ರೀ. ಸೂರಪ್ಪ ಶೆಟ್ಟಿ, ಶೀನಶೆಟ್ರ ಅಳಿಯ, ಬಡಿಲ್ಮಕ್ಕಿ ನಾಡಗ್ರಾಮ, ಗಂಗೊಳ್ಳಿ, ದ. ಕ.	70—0—0
444/46-47 - -	ಶ್ರೀ ಯು. ಗೋಪಾಲ ಶೇಟ್, ಸುಬ್ರಾಯ ಶೇಟರ ಮಗ, ಚಿಕ್ಕಿನ, ಕುಂದಾಪುರ.	160- 0-0

K. Narayana Shetty.
Agent, Coondapur.

ಬೇಕಾಗಿದ್ದಾರೆ!

ಹಯರ್‌ಗ್ರೇಡ್ ಟ್ರೈನ್ಡ್ ಆದ ಉಪಾಧ್ಯಾಯಿನಿ ಒಬ್ಬರು ಬೇಕಾಗಿದ್ದಾರೆ. ಅನುಭವದ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವುದು.

ವಿಳಾಸ:—

A. G. Karkada, Manager,
S. M. Ele. School,
Koluvail Pavanje,
P. O. Haleangadi,
S. Kanara.

ಹಳೆಯಂಗಡಿ, 26-6-49.

ನೂತನ ದಂಪತಿಗಳ ಭಾವಚಿತ್ರಗಳ ಪ್ರಕಟಣೆ

ನೂತನ ದಂಪತಿಗಳ 'ಫೊಟೊ'ವನ್ನು ನಮಗೆ ಕಳಿಸಿದಲ್ಲಿ ಅದರ ಬ್ಲೋಕನ್ನು ನಾವೇ ತಯಾರಿಸಿ 'ನವಯುಗ'ದಲ್ಲಿ ಪ್ರಕಟಿಸಲಿರುವೆವು. ಆದರೆ ಬ್ಲೋಕು ತಯಾರಿಸುವ ಖರ್ಚು ರೂ. 10/-ನ್ನು ಕೊಡಬೇಕಾಗುವುದು. ನೂತನ ದಂಪತಿಗಳು ಈ ಸಂದರ್ಭವನ್ನು ಕಳಕೊಳ್ಳಬಾರದಾಗಿ ವಿನಂತಿ.

'ಫೊಟೊ'ವನ್ನೂ ಹಣವನ್ನೂ ಕೆಳಗಿನ ವಿಳಾಸಕ್ಕೆ ಕಳಿಸುವುದು.

ಮೆನೇಜರ್, ನವಯುಗ, ಉಡುಪಿ.

ಓದಲೇ ಬೇಕಾದ ಪುಸ್ತಕಗಳು

ಶ್ರೀ. ಕೆ. ಕೆ. ಶೆಟ್ಟರ

ಪ್ರೇಮ ವಿಜಯ
(ಸಾಮಾಜಿಕ ನಾಟಕ)
ಬೆಲೆ ರೂ 1—0—0

ವ್ಯಭಿಚಾರಿಣಿ ಯಾರು
(ಸಾಮಾಜಿಕ ನಾಟಕ)
ಬೆಲೆ ರೂ 1—0—0

ವಿವಿಧ ಕತೆಗಾರರ

ಪ್ರೇಮ ಪ್ರವಾಹ
(ಕಥಾ ಸಂಕಲನ)
ಬೆಲೆ ರೂ 0—8—0

ನವಭಾರತ ಬುಕ್ ಡಿಪೊ, ಉಡುಪಿ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಆರೋಗ್ಯಕರ ಖಾದ್ಯಗಳಿಂದ ಕೂಡಿದ ಮೇಲ್ದರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಶ್ರೀ ಎಂ. ವಿ. ಹೆಗ್ಡೆಯವರು ಬರೆದ ನವೀನ ಯಕ್ಷಗಾನ ನಾಟಕಗಳು.

ಪದ-ಅರ್ಥಸಹಿತ

ಸ್ವರಾಜ್ಯ ವಿಜಯ

ಅಟ್ಲೀ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪಟೇಲ್, ಗಾಂಧಿ, ಅಜಾದ್, ಕೃಪಲಾನಿ, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರವರ್ಗ.

ಬೆಲೆ ಬರೇ 0 8 0

ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ. ಇಲ್ಲಿ ದೊರೆಯುತ್ತವೆ.

ದ. ಕನ್ನಡ

ಮೂಲ್ಕಿ:— ಸ್ಥಳೀಯ ಯೂನಿಯನ್ ಕ್ಲಬ್ಬಿನ ಚಾಲ್ತಿ ವರ್ಷದ ಕಾರ್ಯಕರ್ತರುಗಳಾಗಿ ಈ ಕೆಳಗಿನ ಮಹನೀಯರು ತಾ 30-6-1949ರಲ್ಲಿ ಜರಗಿದ ಆಡಳಿತ ಮಂಡಳಿಯಲ್ಲಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಶ್ರೀಗಳಾದ (1) ಯಂ. ಸಿದ್ದುಶೆಟ್ಟಿ, ಅಧ್ಯಕ್ಷ (2) ಬಿ. ಜನಾರ್ಧನ ಕಾಮತ್, ಉಪಾಧ್ಯಕ್ಷ, (3) ಯಂ. ಉಮೇಶರಾವ್-ಕೋಶಾಧ್ಯಕ್ಷ. (4) ಯಂ. ಗೋವಿಂದ್ರಾವ್, ವಿದ್ವಾನ್, ಕಾರ್ಯದರ್ಶಿ, (5) ಬಿ ಮಂಗೇಶರಾವ್, ಸಹಾಯಕಕಾರ್ಯದರ್ಶಿ ಮತ್ತು ಲೈಬ್ರೇರಿಯನ್.

ಕುಂಬಳೆ ಪಾನನಿರೋಧ ಕಾನೂನು ಯಶಸ್ವಿಯಾಗಲು ಮದ್ರಾಸಿನ ಪ್ರೊಹಿಬಿಷನ್ ಕಮಿಶನರ್ ಶ್ರೀ ವಿ. ಎನ್. ಕುಡ್ವರು ಕಳೆದ ತಾ 29ರಲ್ಲಿ ಎಚ್. ಇ. ಶಾಲೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ತಕ್ಕ ಸಲಹೆಗಳನ್ನಿತ್ತು ಜನತೆಯ ಸಹಕಾರವನ್ನು ಕೋರಿದರು. ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್ ಸಾಹೇಬ್ ಅವರೂ ಹಾಜರಿದ್ದರು.

ಹರಿಜನ ದಿನಾಚರಣೆಯು ತಾ 30ರಲ್ಲಿ ಎಚ್. ಇ. ಶಾಲೆಯಲ್ಲಿ ಶ್ರೀ ಟಿ ಎಲ್. ರಾವ್, ಡಿಸ್ಟಿ ಇನ್ಸ್‌ಪೆಕ್ಟರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಅಂಗಡಿಮೊಗರು ಗ್ರಾಮಸೇವಾ ಸಂಘದ ಸಭೆಯು ಈಚೆಗೆ ಜನಾಬ್ ಎ ಕೆ. ಫೆರೋಜ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ವಾಚನಾಲಯವನ್ನು ವೃದ್ಧಿಗೊಳಿಸುವ, ರಾತ್ರಿ ಶಾಲೆಯನ್ನು ತೆರೆಯುವ ಇತ್ಯಾದಿ ವಿಷಯಗಳ ಕುರಿತು ನಿರ್ಧಾರಗಳಾದುವು.

ಸಾಲಿಗ್ರಾಮ

ಇಲ್ಲಿಯ ಶ್ರೀ ವಾಣೀವಿಲಾಸಿನೀ ಸಂಸ್ಕೃತ ಪಾಠಶಾಲೆಯ ೨೫ನೇ ವರ್ಷೋತ್ಸವವು ಇದೇ ತಾ. 4ನೇ ಸೋಮವಾರ ಅಪರಾಹ್ನ ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮಾನ್ ಯಮ್. ರಾಮಚಂದ್ರರಾವ್, ಯಮ್. ಎ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಿಕೆಯರ ಮಂಗಳಾಚರಣೆ, ಕಾರ್ಯದರ್ಶಿಗಳ ಸ್ವಾಗತ ಭಾಷಣ ಮತ್ತು ವರದಿವಾಚನವಾದ ಮೇಲೆ ಶ್ರೀಗಳಾದ ರಾಮದೇವ ಹಂದೆ, ಎ. ವಿ. ಎಸ್. ಹೆಬ್ಬಾರ್, ಯಚ್. ಕೃಷ್ಣದೇವ ಐತಾಳ, ಯಚ್. ಆನಂದಪದ್ಮನಾಭ ಭಟ್ಟ, ವೆಂಕಟಕೃಷ್ಣ ಸೋಮಯಾಜಿ ಮೊದಲಾದವರು ಭಾಷಣವಿತ್ತರು. ನಂತರ ಶಾಲಾ ಮುಖ್ಯೋಪಾಧ್ಯಾಯರ ನೇತೃತ್ವದೊಂದಿಗೆ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯ ಚಿಕ್ಕ ಪ್ರಹಸನವನ್ನು ಅಭಿನಯಿಸಿ ತೋರಿಸಿದರು. ಅಧ್ಯಕ್ಷರು ಸಂಸ್ಕೃತ ಭಾಷೆಯು ಹಿಮಾಚಲ ಪರ್ಯಂತ ವ್ಯಾಪಿಸಿ ಮೆರೆಯುತಿದ್ದ ಕಾಲದಲ್ಲಿ ಇಡೀ ಪ್ರಪಂಚದಲ್ಲೇ ನಮ್ಮ ಭರತಭೂಮಿಯು ಪಡೆದ ಸ್ಥಾನಮಾನ ಗೌರವಾದಿಗಳನ್ನೂ, ಸಂಸ್ಕೃತ ಭಾಷೆಯು ಮೃತಭಾಷೆಯೆಂದು ತಿರಸ್ಕೃತವಾದೀ ಕಾಲದಲ್ಲಿ ನಮ್ಮ ಭಾರತಮಾತೆಗೆ ಪ್ರಾಪ್ತವಾದ ಅವನತಿ, ದಾರಿದ್ರ್ಯ, ದಾಸ್ಯ ದುಃಖಾದಿಗಳನ್ನೂ ವಿವರಿಸಿ ಸಂಸ್ಕೃತ ಭಾಷೆಯ ಆವಶ್ಯಕತೆಯ ಕುರಿತು ಭಾಷಣವಿತ್ತರು. ಬಹುಮಾನ ವಿತರಣೆ, ಮಂಗಳಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಚರ್ಮ ಕೊಳ್ಳುವುದು, ಚೇಳವಿಷ ಮುಂತಾದವು, ಪಕ್ಷವಾತ, ನೊಡಿಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ಕೂಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇಡು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ್ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ. ಗದಗ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು ಅಂದರೆ ಕೇವಲ ೪ ರೂಪಾಯಿಗಳಿ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದಭೂಷಣ, ನಂ, 5 ಕೊಡಿಯಾಲಬೈಲು, ದ ಕ

ಸ್ಟಾಕಿಸ್ಟರು ಡಾ। ಐ. ಕೆ. ಶಿವರಾಮ ರಾವ್, ಕಂಚಿಬೆಟ್ಟು, ಉಡುಪಿ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ನಾನಾನಮೂನೆಗಳೂ ರಖಂ ಆಗಿ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ

ಮೂಲ್ಕಿ ಬೇಂಕ್.

ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

Moolky, S. K.

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ 1934)

ಚೆಯರ್‌ಮೆನ್ ಶ್ರೀ. ಎಮ್. ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್ ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪಾಲಿಸಿ ಪಡೆಯುವುದೆಂದರೆ ಆದೊಂದು ಉತ್ತಮ ವಿನಿಯೋಗ. ಅಂತೆಯೇ ಇದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು

ಪ್ರಕಟಣೆ

ಡಿ. ಮಂಜಯ್ಯ ಹೆಗ್ಗಡೆಯವರಿಗೆ ಗ್ರಂಥ ಕಾಣಿಕೆ ಕೊಡುವ ಬಗ್ಗೆ ರೂ-10 ಕ್ಕಿಂತ ಮೇಲ್ಪಟ್ಟು ಈ ವರೇಗೆ ಧನಸಹಾಯ ಮಾಡಿದ ಮಹನೀಯರು—

ರೂ 105 ಕೊಟ್ಟವರು ಶ್ರೀ ಸಾವುಕಾರ್ ಬಂಟ್ವಾಳ ಛಾಮ ಕೃಷ್ಣ ಶೆಣೈಗಳವರು. ರೂ 101 ಕೊಟ್ಟವರು: 1 ಶ್ರವಣಬೆಳಗುಳ ಚಾರುಕೀರ್ತಿ ಸ್ವಾಮಿಗಳವರು, 2 ಸಂಸೆ ಪಟೇಲ್ ಶಾಂತಿರಾಜ ಶೆಟ್ಟಿ 3. ಬಂಟ್ವಾಳ ಬಿ. ಪದ್ಮನಾಭ ಪಿರಿಲ ಬಾಳಿಗರು, 4. ಪಿ. ಎಸ್. ನಾರಾಯಣಸ್ವಾಮಿ ಕಾರ್ಕಳ, ರೂ51 ಕೊಟ್ಟವರು, ಎತ್ತರಕೃಷ್ಣಪ್ಪ ಶೆಟ್ರು ಕುಂದಾಪುರ. ರೂ 25 ಕೊಟ್ಟವರು. 1. ಕುಂದಾಡಿ ವರ್ದಪ್ಪಯ 2. ಧರ್ಮಪ್ಪ ಅತಿಕಾರಿ, ವೇಣೂರು, 3 ಉಡ್ಡಿ ಕೃಷ್ಣ ಕುಡ್ವರು 4 ಬಿ ಕೃಷ್ಣಪಿರಲ ಬಾಳಿಗರು ಬಂಟ್ವಾಳ, ರೂ 20 ಕೊಟ್ಟವರು: 1. ಎಚ್ಚಿ ನಾಭಿರಾಜ ಇಂದ್ರರು, 2. ಉಜ್ರೆ ಕೃಷ್ಣ ಪಡುವೆಟ್ನಾಯರು, 3. ಎಲ್ ನರಸಿಂಹಯ್ಯ ಪಟೇಲ್ ಪಾಡಿಗಲ್ಲು, 4 ಎಚ್. ಎಸ್. ಅಪ್ಪರಾವ್ ದಾರ್ಗಲ್ಲು, ರೂ 21 ಕೊಟ್ಟವರು, ಬಿ ಎಲ್. ಲಕ್ಷ್ಮಣ ಬಾಗ ಎಂಡ್ ಸನ್ಸ್, ಬಂಟ್ವಾಳ, ರೂ 15 ಕೊಟ್ಟವರು ವೇಣುಗೋಪಾಲ ವ್ಯಾಕರ್, ಉಪ್ಪಿನಂಗಡಿ.

'ಅಂತರಂಗ'ಕ್ಕೆ

6 ರೂಪಾಯಿ

ಚಂದಾ ಕೊಟ್ಟು

ಒಂದೇ ವರ್ಷದಲ್ಲಿ

50 ಪುಸ್ತಕಗಳನ್ನು ಪಡೆಯಿರಿ.

'ಅಂತರಂಗ' ಉಡುಪಿ.



ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ಸ್ವತಃ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦

ದಾಕ್ಟರ್ ಕೊರಡ್ಕಲ್ ವೆಂಕಟರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೨/-

ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ,

ಉಡುಪಿ.

ನವಯುಗ ಪ್ರೆಸ್, ಉಡುಪಿ

ಜನಮತ

ಬಾರಕೂರ ಕಡವು.

ಇಂದು ಹಿಂದಿನಂತಿಲ್ಲ; ಈಗ ಈ ಕಡವಿನ ಮೂಲಕ ಹೋಗಿ ಬರುವವರ ಸಂಖ್ಯೆ ತುದಿಗೇರಿದೆ. ಅನೂ ಪ್ರತಿ (ಶುಕ್ರವಾರ) ಸಂತೆಯ ದಿನವಂತೂ ಬೆಳಿಗ್ಗೆಯಿಂದ ರಾತ್ರಿಯ ತನಕವೂ ಎಡೆಯಿರಲಾರದು. ಪಾಪ... ಆ ವಾಗ್ಗೆ ಕಡವಿನವರು ಪಟ್ಟುಕೊಳ್ಳುತ್ತಿರುವ ಪ್ರಯಾಸವನ್ನು ನೋಡುವವರಿಗೂ ವ್ಯಸನವಾಗಬೇಕು.

ಇರುವುದು ಒಂದೋ ಎರಡೋ ದೋಣಿ. ಆದರ ಸುಯಾಂತರ ಎಲ್ಲರನ್ನೂ ಒಮ್ಮಿಂದೊಮ್ಮೆಗೇ ಸಾಗಿಸಿಬಿಡಲು ಆಗುವುದೇ? ಅದರಲ್ಲಿಯೂ ಮಧ್ಯ ಒಂದು 'ಹೊಯಿಗೆರಾಶಿ'ಯ ಸಾಲು ಎದ್ದು ನಿಂತಿರುವಾಗ ಒಂದೊಂದು ನೋಣ ಒಂದೊಂದು ಬದಿಯಲ್ಲಿಯೇ ಸಾಗಿಸುತ್ತಿರಬೇಕಷ್ಟೆ? ಸಾರ್ವಜನಿಕರು ಇದನ್ನಾದರೂ ನೋಡಿಕೊಂಡು ಸುಧಾರಿಸಿಕೊಳ್ಳುವುದು ಬೇಡವೇ?

ಅಷ್ಟುಬೇಗ ಹೋಗಬೇಕೆಂದುಳ್ಳವರು ಮೊತ್ತಮೊದಲೇ ಬಂದು ಕಾದು ನಿಂತುಕೊಂಡರೆ ಸರಿ-ಹಾಗೇನೂ ಮಾಡದೆ ಕಡವಿನವರ ಮೇಲೆ ತಪ್ಪನ್ನು ಹೇರಿಬಿಡುವುದರಲ್ಲಿ ಯಾವ ನ್ಯಾಯವಿದೆ? ಮೇಲಾಗಿ ಮದುವೆಗೋ ಸಂತೆಗೋ ಹೋಗಿಬರುವವರು ಹೆಚ್ಚಿನ ಸಹಾಯ ಸಲ್ಲಿಸಿರುವಾಗ ಅವರನ್ನೂ ಕೇವಲ ಕಡವಿನ 'ಫೀ' ಕೊಟ್ಟವರ ಜತೆಯಲ್ಲಿಯೇ ಕಳುಹಿಸಿ ಬಿಡುವುದಾದರೆ.. ಆ ಭಾರವೆಲ್ಲಿದೆ?

ಇನ್ನೊಂದು ವಿಷಯ; '...ಪಾಪು' ತೋರಿಸಿ ಧರ್ಮಾರ್ಥವಾಗಿ ಅತ್ತ ಇತ್ತ ಹೋಗುತ್ತಿರುವ 'ಅ...ಸ್ಕೂಲು' ಹುಡುಗರನ್ನು ಸರಿಯಾಗಿ ದಾಟಿಸಲಿಕ್ಕೆ ಯಾವ ಕಂಬೇರನಿಂದ ಸಾಧ್ಯ? 'ಸವಾರಿಕೂಲಿ'ಯೆಂದು ಹೇಳಿಯಾದರೂ...ಕೊಡುತ್ತಿದ್ದರೆ ಆವರ ಮೇಲೆ ಅನಾಗರಿಕ ಅಸಭ್ಯ ಮಾತುಗಳು ಹೊರಳಲು ಅವಕಾಶವಿದೆಯೇ?

...ನಮ್ಮ ಜನತಾ ಸರಕಾರ ಈ ಎಲ್ಲಾ ತಂಟೆಗಳನ್ನು ಹೋಗಲಾಡಿಸಿ ಸರಿಪಡಿಸಿದರೆ ಮಾತ್ರ ಎದ್ದು ಬರುತ್ತಿರುವ ಎದುರುಸಿಟ್ಟು ಅಡಗಿಹೋದೀತು' ಸಂಬಂಧಪಟ್ಟವರು ಇತ್ತ ಗಮನಿಸುವರೇ?

'ಸ್ವಾನುಭವಿ'

ಕಂಬನಿ

ರೆವೆರೆಂಡ್ ಇಮ್ಯಾನುವೆಲ್ ಫ್ಲೈಟರರು.

ದಲಿತ ಜನತೆಯ ಉದ್ಧಾರಕ್ಕಾಗಿ ಇಲ್ಲಿಗೆ ಬಂದ ಮಿಶನರಿಗಳಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಯಾಗಿ ಇರಿಸಿ ಗತಿಸಿದ ವಿಭೂತಿ ಪುರುಷರು ಫ್ಲೈಟರ್ ದೊರೆಗಳು. ಇವರು ನಮ್ಮ ಉಡುಪಿಗೆ ಸಲ್ಲಿಸಿದ ಸೇವೆ ಅಪಾರ, ಅನಂತ. ಉಡುಪಿಯಲ್ಲಿ ಗಣ್ಯವೆನಿಸಿದ ಕ್ರಿಶ್ಚನ್ ಹೈಸ್ಕೂಲನ್ನು ಸ್ಥಾಪಿಸಿದವರು ಈ ಮಹನೀಯರೇ. ಈ ಶಾಲೆಗಾಗಿ ಆವರು ಕಟ್ಟಿಸಿದ ಕಟ್ಟಡ ಅಸಾಮಾನ್ಯವೂ ಅತ್ಯುತ್ತಮವೂ ಆಗಿದ್ದು, ಇಂದಿಗೂ ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಮಾಡುತ್ತಿದೆ.

ಈ ಮಹಾ ಪುರುಷನಿಗೆ ಹುಟ್ಟುಗೊಟ್ಟ ಪುಣ್ಯಭೂಮಿ ಬಾಸೆಲ್. ಅಲ್ಲಿ ಅವರು 21-5-1872ರಂದು ಜನಿಸಿ ವಿಶ್ವಕ್ಕೊಂದು ಆದರ್ಶ ಜೀವಿಗಳಾಗಿ ಬಾಳಿ 5-5 1949ರಲ್ಲಿ ಎಂದರೆ ತನ್ನ 77ನೆಯ ಆಹರ ವಯಸ್ಸಿನಲ್ಲಿ ಜೀವಲೋಕದಿಂದ ಮರೆಯಾದರು. ಜರ್ಮನಿಯಲ್ಲಿ ಉಪಾಧ್ಯಾಯರಾಗಿ ಸೇರಿದ ಇವರು 1899ರಲ್ಲಿ ಭಾರತಕ್ಕೆ ಬಂದು 1910 ರಿಂದ 1914ರ ವರೆಗೆ ಉಡುಪಿ ಕ್ರಿಶ್ಚನ್ ಹೈಸ್ಕೂಲಿನ ಆದರ್ಶ ಸಂಚಾಲಕರಾಗಿ ನಮ್ಮೆಲ್ಲರಿಗೆ ದೇಶಸೇವೆಯ ಮಾರ್ಗವನ್ನು ತೋರಿದರು. 1914ರ ಮಹಾಯುದ್ಧದ ಸಂದರ್ಭದಲ್ಲಿ ಅವರು ಇಲ್ಲಿಂದ ತೆರಳಲೇ ಬೇಕಾದುದು ನಮ್ಮೆಲ್ಲರ ದೌರ್ಭಾಗ್ಯವೆನ್ನಬೇಕು. ಇಲ್ಲಿಂದ ಹೋದ ಮೇಲೂ ವಿಶ್ವಕ್ಕೆ ಆವರು ತೋರಿದ ಬೆಳಕು ತ್ರಿಕಾಲದಲ್ಲೂ ಪ್ರಜ್ವಲಿಸುವಂತಹದು.

ಸೃಷ್ಟಿಕರ್ತನ ಸೃಷ್ಟಿಗೊಳಪಟ್ಟ ಪ್ರಕೃತಿಯ ಸೇವಕರಾದ ಇವರು ತಮ್ಮ ಕೊನೆಗಾಲದವರೆಗೂ ಪ್ರಕೃತಿಯಲ್ಲಿ ಆ ಪರಮಾತ್ಮನು ಅಡಗಿಸಿ ಇರಿಸಿದ ತನ್ನ ನವನೂತನ ವೈಶಿಷ್ಟ್ಯವನ್ನು ಅರಿತುಕೊಳ್ಳುವುದರಲ್ಲೂ, ಪಡೆದ ಅನುಭವವನ್ನು ಜಿಜ್ಞಾಸುಗಳಿಗೆ ಬೋಧಿಸುವುದರಲ್ಲೂ ತನ್ನ ಜೀವನವನ್ನು ಸವೆಸಿದವರು. ಪ್ರಕೃತಿ ಶಾಸ್ತ್ರದಲ್ಲಿ ಇವರು ಬರೆದ ಪುಸ್ತಕವು ತಜ್ಞವೃಂದಕ್ಕೊಂದು ದರ್ಪಣದಂತಿದ್ದು ವಿಶ್ವಕ್ಕೇ ಒಂದು ಹೊಸಬೆಳಕನ್ನು ನೀಡುತ್ತಿದೆ.

ಇವರು ವಿಜ್ಞಾನಿ, ಆದರ್ಶ ಉಪಾಧ್ಯಾಯ, ಹೆಸರಾಂತ ಸಂಶೋಧಕ. ಶಾಲೆ, ಮನೆ, ಪ್ರವಾಸ-ಎಲ್ಲೆಲ್ಲಾ ಇವರ ವೈಜ್ಞಾನಿಕ ಸಂಶೋಧನ ಕ್ರಿಯೆಗಳು. ಸೂಕ್ಷ್ಮದರ್ಶಕ, ದೂರದರ್ಶಕ, ಬಿಂಬ ಗ್ರಾಹಕಗಳು ಯಾವಾಗಲೂ ಇವರ ಅಗಲದ ಗೆಳೆಯರು. ಖಗೋಲ ಶಾಸ್ತ್ರದಲ್ಲಿಯೂ ಇವರಿಗೆ ಅದ್ಭುತ ಆಸಕ್ತಿ. ಚಿತ್ರಗಾನ ಮೊದಲಾದ ಲಲಿತಕಲೆಗಳಲ್ಲಿಯೂ ನಿಸ್ಸೀಮ ಆದರ ವಿಶ್ವಾಸಗಳು.

ಇವರ ನಿಧನದಿಂದ ವಿಶ್ವವೇ ತನ್ನೊಂದು ರತ್ನವನ್ನು ಕಳೆದುಕೊಂಡಿರುವುದಲ್ಲದೆ ಇವರ ಕುಟುಂಬದ ಆಧಾರಸ್ತಂಭವೇ ಮುರಿದು ಬಿದ್ದಂತಿದೆ. ಈ ಸಂದರ್ಭದಲ್ಲಿ ಪರಮಾತ್ಮನು ತನ್ನ ಸೇವೆಯನ್ನು ಸೃಷ್ಟಿಯಲ್ಲಿ ಸಲ್ಲಿಸಿ ಬಂದ ಭಕ್ತನನ್ನು ಆದರದಿಂದ ಸ್ವಾಗತಿಸುವಂತೆ ಆವರ ಕುಟುಂಬಕ್ಕೂ ಆವರ ಅನುಯಾಯಿಗಳಾದ ನಮಗೂ ಚಿತ್ತ ಸಮಾಧಾನವನ್ನು ಈಯಲೆಂದು ಆವರ ಕುಟುಂಬದೊಂದಿಗೆ ಕಂಬನಿದುಂಬಿ ಪ್ರಾರ್ಥಿಸುತ್ತೇವೆ.

"ಪರಮಾತ್ಮನೇ! ಹುಟ್ಟಿದಂದಿನಿಂದ ಈ ಕನಕ ನನ್ನನ್ನು ಓದಿಸಿರಿ. ನಿನ್ನ ಅಮಾನುಷವಾದ ಕೆಲಸಗಳನ್ನು ಈ ಗಳಿಗೆಯ ವರೆಗೂ ಸಾರಿ ಹೇಳುತ್ತಿರುವೆನು" ಎಂಬ ಆವರ ದಿವ್ಯ ಸಂದೇಶವು ನಮಗೆ ಮಾರ್ಗದರ್ಶಿಯಾಗಲಿ!

ಕ್ರಿಸ್ತ ಮಾಧ್ಯಮಿಕ ಶಾಲೆ,
ಉಡುಪಿ.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಸನರಿಗಳು

ದೊರೆಯುತ್ತವೆ.

ದೊಡ್ಡ ಸೈಜು	ರೂ. 5 0 0
ಪಾಕೆಟ್ ಸೈಜು	ರೂ. 4 8 0

ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಪಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಸ್ಟೋರ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಹಾವೇರಿ, ಬ್ಯಾಡಗಿ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ ಔಷಧಿ' ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ- ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ,ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ-ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಹೊಟ್ಟೆನೋವು,ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು,ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ ಸಹಿತ ರೂ. 30.0.0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ- ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18-ವಿ.ಪಿ.ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೫ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

—ಧಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ.
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ್ಷ್ಮಿವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ಭಾರತಕ್ಕೆ ಪಶುವೈದ್ಯನ ಮಹತ್ವ ಎಷ್ಟೆಂದು ತೂಗಬೇಕಾದರೆ ಈ ದೇಶದ ಉತ್ಪನ್ನದಲ್ಲಿ ಮೂರರಲ್ಲಿ ಎರಡಂಶದಷ್ಟು ಪಶುಗಳಿಂದಲೇ ಆಗುವದೆಂದು ಅರಿತರೆ ಸಾಕು. ತಜ್ಞರ ಲೆಕ್ಕಾಚಾರದಂತೆ ನಿಷ್ಪ್ರಯೋಜಕ ಪಶುಗಳನ್ನು ಸಾಕಲು ನಾವು ೧೭೦ ಕೋಟಿ ರೂಪಾಯಿಗಳನ್ನು ಹಾಳುಮಾಡುತ್ತಿದ್ದರೂ ಈ ಸ್ಥಿತಿ! ಪಶುತಜ್ಞರು ಮಾತ್ರ ಈ ಪಶುಗಳನ್ನು ಸುಧಾರಿಸಿ ಈ ಅಪಾರ ವ್ಯಯಗಳನ್ನುಳಿಸಬಲ್ಲರಲ್ಲದೆ, ಈ ನಿಷ್ಪ್ರಯೋಜಕ ಪ್ರಾಣಿಗಳನ್ನು ಪ್ರಯೋಜಕವಾಗಿ ಮಾಡಿ ಅಪಾರ ಲಾಭವನ್ನು ಮಾಡಿಕೊಡಬಲ್ಲರು.

ನಮ್ಮದು ಕೃಷಿಪ್ರಧಾನ ದೇಶ. ಕೃಷಿಯೂ ದನಕರುಗಳೂ ಅಕ್ಕ ತಂಗಿ ಇದ್ದಂತೆ. ಅವು ಅನ್ಯೋನ್ಯಾಶ್ರಯವಾಗಿವೆಯಲ್ಲದೆ ಒಂದನ್ನು ಬಿಟ್ಟು ಇನ್ನೊಂದು ಸಾಗಲಾರದು. ಕೃಷಿಯು ಏಳಿಗೆಯಾಗಬೇಕಾದರೆ ಕಾರ್ಯಕ್ಷಮವಾದ ಶ್ರಮ, ಶಕ್ತಿ ಅವಶ್ಯ. ಈ ಚಾಲಕ ಶಕ್ತಿಯ ಮುಖ್ಯ ಆಕರವೇ ಎತ್ತು. ಎತ್ತನ್ನು ಬಿಟ್ಟರೆ ಅಥವಾ ಅದನ್ನು ಅಸಮರ್ಥವಾಗಗೊಟ್ಟರೆ ಕೃಷಿಗೇ ಉಳಿಗಾಲವಿಲ್ಲ. ಪಶುವೈದ್ಯರಿಗೆ ಇಲ್ಲಿ ಅದ್ವಿತೀಯ ಸ್ಥಾನವಿದೆ.

ಮಕ್ಕಳಿಗೂ ದೊಡ್ಡವರಿಗೂ ಪ್ರಕೃತಿ ದತ್ತವಾದ ಶ್ರೇಷ್ಠವೂ ಪರಿಪೂರ್ಣಪೋಷಿತವೂ ಆದ ಆಹಾರವೆಂದರೆ ಹಾಲು. ಅದು ಪಶುಗಳಿಂದ ದೊರಕುತ್ತದೆ. ಆದರೆ ಡೆನ್ಮಾರ್ಕಿನಲ್ಲಿ ದನಗಳು ಸರಾಸರಿ ದಿನಕ್ಕೆ ಒಂಭತ್ತು ಸೇರು ಹಾಲು ಕರೆಯುತ್ತಿರುವಾಗ ನಮ್ಮ ದನಗಳು ಸರಾಸರಿ ಒಂದು ಸೇರಿಗಿಂತಲೂ ಕಡಮೆ ಹಿಂಡುತ್ತವೆ. ಕಳೆದ ಯುದ್ಧಕ್ಕಿಂತ ಮೊದಲು ನಾವು ೧೮ ಕೋಟಿ ಪಶುಗಳಿಂದ ಪಡೆಯುತ್ತಿದ್ದಷ್ಟೇ ಹಾಲನ್ನು ಜರ್ಮನಿಯಲ್ಲಿ ಎರಡೂವರೆ ಕೋಟಿ, ಅಮೇರಿಕೆಯಲ್ಲಿ ಮೂರೂವರೆ ಕೋಟಿ, ಬ್ರಿಟನ್ನಿನಲ್ಲಿ ಏಳುವರೆ ಕೋಟಿ ಮತ್ತು ರಶಿಯಾದಲ್ಲಿ ಏಳೇ ಕೋಟಿ ದನಗಳು ಕೊಡುತಿದ್ದವೆಂದು ತಿಳಿದರೆ ನಾವು ನಾಚಿಕೊಳ್ಳಬೇಕಾಗಿದೆ. ಇಂದು ಭಾರತದಲ್ಲಿ ಹಿಂಡುವ ದನಗಳು ಸರಾಸರಿ ಕೊಡುವಷ್ಟೇ ಹಾಲನ್ನು ಒಂದು ಕಾಲದಲ್ಲಿ ಡೆನ್ಮಾರ್ಕಿನ ದನಗಳೂ ಸಾಮಾನ್ಯವಾಗಿ ಕೊಡುತ್ತಿದ್ದವು. ಆಗಿಂದ ಅವರು ದನಗಳ ಆರೈಕೆಯನ್ನು ಸುಧಾರಿಸತೊಡಗಿದರು. ಈ ಐವತ್ತು ವರ್ಷಗಳೊಳಗೆ ಅಲ್ಲಿಯ ಸಾಮಾನ್ಯ ದನವೊಂದು ಕೊಡುವ ಬೆಣ್ಣೆಯ ಪ್ರಮಾಣ ವರ್ಷಕ್ಕೆ ೮೮ ಪೌಂಡಿನಿಂದ ೩೫೯ ಪೌಂಡಿಗೆ, ಅಂದರೆ, ಹದಿನಾಲ್ಕರಷ್ಟು ಏರಿದೆ. ಅದೇ ಪ್ರಕಾರ ಬೇರೆ ದೇಶಗಳಲ್ಲಿಯೂ ಎದ್ದು ಕಾಣುವ ಸುಧಾರಣೆಯಾಗಿದೆ. ಇತರ ದೇಶಗಳ ದನಗಳಷ್ಟೇ ಹಾಲನ್ನು ನಮ್ಮವುಗಳೂ ಕೊಡಲಾರವೆಂದು ನಂಬಲು ಕಾರಣವೇನೂ ಇಲ್ಲ.

ಜಗತ್ತಿನಲ್ಲಿರುವ ದನಕರುಗಳಲ್ಲಿ ಮೂರರಲ್ಲೊಂದರಷ್ಟು ಭಾರತದಲ್ಲಿವೆಯಾದರೂ ಇಲ್ಲಿ ತಲಾ ಹಾಲಿನ ಬಳಕೆ ೭ ಔನ್ಸ್ ಆಗಿದೆ. ಅದೇ ಫ್ರಾನ್ಸಿನಲ್ಲಿ ತಲಾ ೩೦ ಔನ್ಸು, ಅಮೇರಿಕೆಯಲ್ಲಿ ೩೫ ಔನ್ಸು, ಬ್ರಿಟನ್ನಿನಲ್ಲಿ ೩೯ ಔನ್ಸು, ನಾರ್ವೆಯಲ್ಲಿ ೪೩ ಔನ್ಸು ಮತ್ತು ನ್ಯೂಝೀಲಂಡಿನಲ್ಲಿ ೫೬ ಔನ್ಸ್ ಹಾಲನ್ನು ಉಪಯೋಗಿಸಲಾಗುತ್ತದೆ.

ಜನರು ಸರಾಸರಿ ಉಪಯೋಗಿಸುವ ಹಾಲಿನ ಪರಿಮಾಣಕ್ಕೂ ಸರಾಸರಿ ಆಯುರ್ದಾಯಕ್ಕೂ ಏನೋ ಸಂಬಂಧವಿರುವಂತೆ ತೋರುತ್ತದೆ. ಕಡಿಮೆ ಹಾಲು ಉಪಯೋಗಿಸುವ ಭಾರತೀಯನ ಸರಾಸರಿ ಆಯುಷ್ಯ ೨೭ ವರ್ಷವಾದರೆ ಸರಾಸರಿ ೫೬ ಔನ್ಸ್ ಹಾಲು ಬಳಸುವ ನ್ಯೂಝೀಲಂಡಿನ ಪ್ರಜೆಯ ಆಯುರ್ದಾಯ ೬೦ ವರ್ಷವಾಗಿದೆ.

ಭಾರತದಲ್ಲಿ ಸಾಯುವಷ್ಟು ಶಿಶುಗಳು ಬಹುಶಃ ಬೇರೆಲ್ಲೂ ಸಾಯವೆಂದು ತೋರುತ್ತದೆ. ಹಾಲಿನ ಬಳಕೆಗೂ ಆಯುರ್ದಾಯಕ್ಕೂ ಇರುವ ಸಂಬಂಧದಂತಹದೇ ಸಂಬಂಧ ಇಲ್ಲಿಯೂ ಇರುವಂತೆ ತೋರುತ್ತದೆ. ಪಶುವೈದ್ಯನಿಗೆ ಇಲ್ಲಿದೆ ಸ್ಥಾನ: ಏಕೆಂದರೆ ಆವನೊಬ್ಬನೇ ನಮ್ಮ ಪ್ರಜೆಗೆ ಆರೋಗ್ಯಕಾಯನಾಗಿಯೂ ಬುದ್ಧಿಶಾಲಿಯಾಗಿಯೂ ಬೆಳೆಯಲು ನೆರವಾಗಬಲ್ಲನು.

ರೈತ ಪ್ರಪಂಚ

ಭಾರತದಲ್ಲಿ ಪಶುವೈದ್ಯರು

ಲೇ:- ಶ್ರೀ. ಜಿ. ಕರ್ನೇಲಸಿಂಗ್, (ಹರಿಜನದಿಂದ)

ಭಾರತದ ಕುರಿಯೂ ಕೀಳ್ತರದ್ದು. ಅದರ ಸರಾಸರಿ ತೂಕ ೬೦ ಪೌಂಡೂ ಇಲ್ಲ. ಸರಾಸರಿ ಉಣ್ಣೆಯ ಹುಟ್ಟು ಸುಮಾರು ಎರಡು ಪೌಂಡು—ಇದೂ ತೀರ ಕಡಿಮೆಯೇ. ಇದರೊಡನೆ ಹೋಲಿಸಿದರೆ, ಯುರೋಪಿನ ಕುರಿಗಳು ಉತ್ತಮ ದರ್ಜೆಯವು. ಅವುಗಳ ಸರಾಸರಿ ಜೀವಂತ ತೂಕವೂ ಉಣ್ಣೆಯ ಹುಟ್ಟುವಳಿಯೂ ಭಾರತದ ಕುರಿಗಿಂತ ಮೂರುಪಟ್ಟು ಹೆಚ್ಚಾಗಿವೆ. ಜಗತ್ತಿನಲ್ಲಿರುವ ಕುರಿಗಳಲ್ಲಿ ನೂರಕ್ಕೆ ೬ ಭಾರತದಲ್ಲಿವೆ. ಆದರೆ ಅದು ಕೊಡುವ ಉಣ್ಣೆ ಜಗತ್ತಿನಲ್ಲಿ ನೂರಕ್ಕೆ ಎರಡಂಶದಷ್ಟು ಮಾತ್ರ. ಅರ್ಥಾತ್ ಇಲ್ಲಿರುವ ಕುರಿಗಳ ಸಂಖ್ಯೆಯ ಮೇಲೆ ಮೂರು ಪಾಲು ಕಡಿಮೆ ಉಣ್ಣೆ ಉತ್ಪನ್ನವಾಗುತ್ತದೆ. ಇಲ್ಲಿಯೂ ಪಶುವೈದ್ಯನಿಗೆ ಕೆಲಸವಿದೆ. ಅವರು ಈ ಪ್ರಾಣಿಗಳನ್ನು ಇತರ ಮುಂದುವರಿದ ದೇಶಗಳಲ್ಲಿರುವವುಗಳಷ್ಟೇ ಸುಧಾರಿಸಿ ಹೆಚ್ಚು ಉತ್ತಮ ಉಣ್ಣೆಬಟ್ಟೆಗಳನ್ನೂ ಹೆಚ್ಚು ಮಾಂಸವನ್ನೂ ಒದಗಿಸಬಲ್ಲರು.

ಆಡು ಮತ್ತು ಕೋಳಿಗಳ ಸಂಗತಿಯೂ ಅಷ್ಟೇ. ಅವುಗಳನ್ನೂ ಸುಧಾರಿಸಬೇಕಾಗಿದೆ. ಅವುಗಳನ್ನು ಸುಧಾರಿಸಿ ಪಶುವೈದ್ಯರು ಹಾಲು ಮತ್ತು ಮೊಟ್ಟೆಗಳನ್ನು ಎಲ್ಲರ ಕೈಯಳವಿಗೆ ತರಬಲ್ಲರು.

ಪ್ರಾಣಿಗಳಿಗೆ ಬರುವ ಕೆಲ ದೊಡ್ಡ ಸೋಂಕು ರೋಗಗಳಿಂದಾಗುವ ಹಾನಿಯನ್ನು ಇನ್ನು ವಿಚಾರಿಸೋಣ.

ದನಕರುಗಳಿಗೆ ಅಂಟುವ ಮೂರು ಮುಖ್ಯ ಪಿಡುಗುಗಳಿವೆ ಅತಿಸಾರ (ರಿಂಡರ್‌ಪೆಸ್ಟ್) ಗುಂಡಿಗೆ ಸೆಲೆ (ಎಚ್. ಎಸ್.) [ಒಂದು ಬಗೆಯ ಹೃದಯ ವಿಕಾರ] ಮತ್ತು ಕಾಲುಬೇನೆ ಬಾಯಿಬೇನೆ. ಇವು ಭಾರತಕ್ಕೆ ಅಪಾರ ಹಾನಿಯನ್ನುಂಟುಮಾಡುತ್ತವೆ. ೧೯೨೬-೨೭ರಲ್ಲಿ ಈ ಬೇನೆಗಳಿಂದ ಆದ ಪಶು ಮರಣಗಳ ಸಂಖ್ಯೆಗಳು ಇಂತಿವೆ; ಅತಿಸಾರದಿಂದ ೨೦೨೨೦೦, ಗುಂಡಿಗೆ ಸೆಲೆಯಿಂದ ೩೬೪೦೦, ಕಾಲುಬೇನೆ ಬಾಯಿಬೇನೆಯಿಂದ ೧೪೬೦೦. ನಿಜವಾಗಿ ಈ ಸಂಖ್ಯೆಗಳು ಸತ್ತ ಸಂಖ್ಯೆಗಳಿಗಿಂತ ಎಷ್ಟೋ ಕಡಿಮೆಯಾಗಿವೆ. ದನಕರುಗಳಿಗೆ ಬರುವ ರೋಗಗಳಿಂದಾದ ಪಶುಮರಣಗಳನ್ನು ಅಧಿಕಾರಿಗಳಿಗೆ ತಿಳಿಸಲೇ ಬೇಕೆಂಬ ಕಾಯಿದೆಯಿದ್ದ ಬ್ರಹ್ಮದೇಶದ ಒಂದು ಭಾಗದ ಸಂಖ್ಯೆಗಳನ್ನು ನೋಡಿದರೆ ಈ ಮಾತು ಮನವರಿಕೆಯಾದೀತು. ಈ ಸಂಖ್ಯೆಗಳನ್ನು ನಂಬಿದರೆ ದನಕರುಗಳ ಸರಾಸರಿ ಆಯುಷ್ಯ ೫೪ ವರ್ಷವೆಂದು ತೋರಿಬರುವಂತಿತ್ತು. ಆದರೆ ಇದು ಉತ್ಪ್ರೇಕ್ಷೆ ಇರಬಹುದು. ಈಗ ದನಕರುಗಳ ಸರಾಸರಿ ಆಯುಷ್ಯ ೬ ವರ್ಷ. ಮೇಲೆ ಕಂಡುಬಂದ ಆಯುಸ್ಸು ಈಗಿನ ಆಯುಸ್ಸಿನ ಒಂಭತ್ತರಷ್ಟಾಗುತ್ತದೆ. ಅಂದ ಮೇಲೆ ನಿಜವಾದ ಪಶುಮರಣದ ಸಂಖ್ಯೆ ಲೆಕ್ಕದಲ್ಲಿ ದಾಖಲಾದ ಸಂಖ್ಯೆಗಿಂತ ಒಂಭತ್ತು ಪಟ್ಟು ಇತ್ತೆಂದು ತಿಳಿದುಕೊಳ್ಳಲಡ್ಡಿಯಿಲ್ಲ. ರೈತನಿಗೆ ಅಪ್ರತ್ಯಕ್ಷವಾಗಿ ಇದಕ್ಕಿಂತಲೂ ಹೆಚ್ಚು ಹಾನಿಯಾಗಿರಬೇಕು. ಉದಾಹರಣೆಗಾಗಿ ಕಾಲುಬೇನೆ ಬಾಯಿಬೇನೆಯಿಂದ ಒಂದು ದನಸತ್ತರೆ ೧೯ ದನಗಳು ತಾತ್ಕಾಲಿಕವಾಗಿ ನಿರುಪಯುಕ್ತವಾಗಬಹುದು. ಈ ಮೂಲಕ ಸಾಗುವಳಿ ಕೆಲಸ ಸರಿಯಾಗದೆಯೂ ಹಾಲು ಕರೆಯುವದು ಕಡಿಮೆಯಾಗಿಯೂ ಅವನಿಗೆ ನಷ್ಟವಾಗುತ್ತದೆ. ಇನ್ನೂ ಹಲವಾರು ಜ್ಞಾತಾಜ್ಞಾತ ಕ್ಷಯ ಮತ್ತು ಜೀವಾಣು ಮೂಲರೋಗಗಳಿದ್ದು ಅವುಗಳಿಂದೊದಗುವ ಹಾನಿಯೂ ದೊಡ್ಡದೇ ಆಗಿರುತ್ತದೆ. ದನಗಳ ಮೈಯನ್ನು ಕಚ್ಚಿ ಗುಳ್ಳೆಯೆಬ್ಬಿಸುವ ಒಂದು ಜಾತಿಯ ನೊಣಗಳ ಪೀಡೆಯಿಂದ ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿ ನಷ್ಟವಾಗುತ್ತದೆಂದರೆ ಅತಿಶಯೋಕ್ತಿಯಲ್ಲವೆಂದು ಹೇಳಬಹುದು. ಯುರೋಪಿನಲ್ಲಿ ಈ ರೋಗಗಳನ್ನು ಪೂರ್ತಿಯಾಗಿಯೆ ಉಚ್ಚಾಟನೆಮಾಡಿದಂತಿದ್ದು ಅಲ್ಲಿ ಇವುಗಳಿಂದಾಗುವ ಹಾನಿ ತೀರ ಅಲ್ಪ. ಇತರರು ಸಾಧಿಸಿದ್ದನ್ನು ನಾವೂ ಸಾಧಿಸಲಾರೆವೆಂದು ನಂಬಲು ಕಾರಣವೇನೂ ಇಲ್ಲ. ಹೀಗೆ ಪಶುವೈದ್ಯನು ಮಾತ್ರ ರೋಗಗಳನ್ನು ದೂರಮಾಡುವದೇ ಮೊದಲಾದ ಕಾರ್ಯಗಳಿಂದ ದೇಶದ ಹಾನಿಯನ್ನು ತಪ್ಪಿಸಬಲ್ಲನೆಂದು ಸ್ಪಷ್ಟವಾಗುತ್ತದೆ.

ಪಶುಗಳಿಂದ ಕ್ಷಯವೇ ಮೊದಲಾದ ಅನೇಕ ರೋಗಗಳು ಮನುಷ್ಯನಿಗೂ ದಾಟುತ್ತವೆ. ವಾಂತಿಭೇದಿ ಮೊದಲಾದ ಹಲವಾರು ರೋಗಗಳು ಹಾಲಿನ ಮೂಲಕ ಒಬ್ಬ ಮನುಷ್ಯನಿಂದ ಇನ್ನೊಬ್ಬನಿಗೆ ದಾಟುವದುಂಟು. ಪಶುವೈದ್ಯರು ಪಶುಗಳ ರೋಗಗಳನ್ನು ನಿವಾರಿಸುವ ಮತ್ತು ಗುಣಪಡಿಸುವ ಮೂಲಕ ಪರಿಶುದ್ಧವಾದ ಹಾಲನ್ನೊದಗಿಸಿ ಮನುಷ್ಯರಲ್ಲಿಯೂ ಈ ರೋಗಗಳ ಬಾಧೆಯನ್ನು ಕಡಿಮೆಮಾಡಬಲ್ಲರು.

ಮೇಲೆ ಹೇಳಿದ ಸಂಗತಿಗಳಿಂದ ಭಾರತಕ್ಕೆ ಪಶುವೈದ್ಯರ ಮಹತ್ವವೆಷ್ಟಿದೆಯೆಂದು ನಿಷ್ಪಕ್ಷಪಾತಿಗೆ ಮನವರಿಕೆಯಾಗದಿರದು. ವಸ್ತುತಃ ಭಾರತದ ಸಮೃದ್ಧಿಯ ಕೀಲಿಕೈಯೇ ಪಶುವೈದ್ಯರ ಕೈಯಲ್ಲಿದೆಯೆನ್ನಬಹುದು.

ಹೀಗಿದ್ದರೂ ಎಲ್ಲೆಲ್ಲಿಯೂ ಪಶುವೈದ್ಯರನ್ನು ಕಡೆಗಣಿಸುವದೇ ಕಾಣಬರುತ್ತಿದೆ. ಅವರ ಕಡೆ ಯೋಗ್ಯ ಲಕ್ಷ್ಯವನ್ನು ಕೊಡುವವರಿಲ್ಲ. ಬಹುತರವಾಗಿ ಜನರು ಅವರನ್ನು ಕೀಳಾಗಿ ಕಾಣುತ್ತಾರೆ. ಇದೆಲ್ಲ ಅವರ ಯೋಗ್ಯತೆಯನ್ನು ಅರಿಯದ ಜನರ ಅಜ್ಞಾನದ ಪರಿಣಾಮ. ಕೆಲ ಪಶುವೈದ್ಯರು ಕೂಡ ತಮ್ಮ ವೃತ್ತಿ ತುಚ್ಛವೆಂದು ತಿಳಿಯುವದುಂಟು. ಈ ವೃತ್ತಿಗೆ ಸೇರಿದ್ದೇ ತಮ್ಮ ದುರದೃಷ್ಟವೆಂದು ಅವರು ಬಗೆಯುತ್ತಾರೆ. ಆದರೆ ಪಶುವೈದ್ಯಕವು ಆರ್ಥಿಕ ದೃಷ್ಟಿಯಲ್ಲಿ ಅತ್ಯಂತ ಪ್ರಯೋಜನಕಾರಿಯೂ ವಿಜ್ಞಾನ ದೃಷ್ಟಿಯಿಂದ ತುಂಬ ಅರ್ಥವತ್ತಾಗಿಯೂ ಇದೆ. ಆದರೂ ಪಶುವೈದ್ಯರಿಗೆ ಸರಕಾರ ಸರಿಯಾದ ಸಂಬಳ ಕೊಡುತ್ತಿಲ್ಲ!

ಆಗಿ ಹೋದುದಕ್ಕೆ ಕೂಗಿ ಫಲವಿಲ್ಲ. ಭವಿಷ್ಯತ್ತಿನ ಕಡೆ ಆಶಾದೃಷ್ಟಿಯನ್ನಿಡೋಣ. ಏಕೆಂದರೆ ಈಗ ಪ್ರಾಮಾಣಿಕ ಜನರು ನಮ್ಮ ರಾಷ್ಟ್ರದ ಸೂತ್ರಧಾರರಾಗಿದ್ದಾರೆ, ಅವರು ಇತ್ತ ಲಕ್ಷ್ಯ ಕೊಟ್ಟೇ ಕೊಡುವರು. ಈ ವರೆಗೆ ಅತ್ಯಂತ ಮಹತ್ವದ ಕೆಲಸಗಳೇ ಅತ್ಯಂತ ದುರ್ಲಕ್ಷ್ಯಕ್ಕೊಳಗಾಗಿದ್ದವು. ಆದುದರಿಂದ ಪಶುವೈದ್ಯರು ಎಲ್ಲರಿಗಿಂತ ದುರ್ಲಕ್ಷಿತರಾಗಿದ್ದರು. ಇಂದು ಅವರು ಎಷ್ಟು ತಿರಸ್ಕೃತರಾಗಿದ್ದಾರೆಂದರೆ ಕೆಲ ವೇಳೆ ಅವರು ತಮ್ಮ ವೃತ್ತಿಯನ್ನು ಪ್ರಕಾಶಪಡಿಸಲು ಕೂಡ ಹಿಂಜರಿಯುತ್ತಾರೆ.

ಮೇಲೆ ಹೇಳಿದ್ದರ ಮೇಲೆ ಪಶುವೈದ್ಯರು ಅತ್ಯಂತ ಮಹತ್ವದ ಸಮಸ್ಯೆಯನ್ನೆದುರಿಸಬೇಕಾಗಿದೆಯೆಂದು ಓದುಗರಿಗೆ ಮನದಟ್ಟಾಗಬಹುದು. ಅವಾವುವೆಂದರೆ—

(೧) ಹಾಲಿನ ಮತ್ತು ತಜ್ಜನ್ಯ ಪದಾರ್ಥಗಳ ಉತ್ಪತ್ತಿ.

(೨) ದನಕರುಗಳ ತಳಿ ಸುಧಾರಣೆ ಮತ್ತು ಕೃಷಿ ಕಾರ್ಯಕ್ಕಾಗಿ ಒಳ್ಳೆ ಎತ್ತುಗಳ ಪೂರೈಕೆ

(೩) ಕುರಿ ಆಡುಗಳ ಸುಧಾರಣೆಯ ಮೂಲಕ ಮಾಂಸದ ಪೂರೈಕೆ.

(೪) ಕುರಿಗಳ ಸುಧಾರಣೆಯ ಮೂಲಕ ಉಣ್ಣೆಯ ಪೂರೈಕೆ.

(೫) ಕೋಳಿಗಳ ಸುಧಾರಣೆಯ ಮೂಲಕ ತತ್ತಿಗಳ ಪೂರೈಕೆ.

(೬) ದನಕರುಗಳ ಸಾಂಕ್ರಾಮಿಕ ಮತ್ತು ಇತರ ರೋಗಗಳನ್ನು ಹಿಡಿತಕ್ಕೆ ತರುವದು.

(೭) ಮನುಷ್ಯನಿಗೂ ಪಶುಗಳಿಗೂ ಸಾಮಾನ್ಯವಾದ ರೋಗಗಳ ನಿವಾರಣೆ.

(೮) ಹಾಲಿನ ಮೂಲಕ ಹಬ್ಬುವ ರೋಗಗಳ ನಿವಾರಣೆ.

(೯) ರುಗ್ಣ ಪಶುಗಳ ಶುಶ್ರೂಷೆ.

ಇದಲ್ಲದೆ ಗೋಮಾಂಸ ಮತ್ತು ಹಂದಿಯ ಮಾಂಸಗಳನ್ನು ಅವುಗಳ ರೂಢಿಯಿದ್ದವರಿಗೆ ಒದಗಿಸುವ ಕೆಲಸವೂ ಪಶುವೈದ್ಯರ ಪಾಲಿಗೆ ಬರುತ್ತದೆ.

ಇವು ರಾಷ್ಟ್ರಕ್ಕೆ ಮಹತ್ವದ ಸಮಸ್ಯೆಗಳು. ನಮ್ಮ ದೇಶ ಮುಂದುವರಿಯಬೇಕಾದರೆ, ಮತ್ತು ಅದರ ಪ್ರಗತಿ ತೀವ್ರವಾಗಬೇಕಾದರೆ, ಅತ್ಯಂತ ಸಮರ್ಥರೂ ಕಾರ್ಯಕ್ಷಮರೂ ಆದ ಜನರನ್ನು ಪಶುವೈದ್ಯ ವೃತ್ತಿಯತ್ತ ಒಲಿಸಬೇಕಾಗಿದೆ. ಆದರೆ ದುರ್ದೈವದಿಂದ, ಬೇರೆ ಯಾವಲ್ಲಿಯೂ ಎಡೆದೊರೆಯದವರು ಇದನ್ನು ಆಶ್ರಯಿಸುತ್ತಾರೆ. ಸಮರ್ಥರೂ ಕೃತ್ಯಶಾಲಿಗಳಾದವರನ್ನು ಇತ್ತ ಆಕರ್ಷಿಸಲು ಪಶುವೈದ್ಯರ ಅಂತಸ್ತನ್ನು ಏರಿಸಬೇಕು. ರಾಷ್ಟ್ರದ ನಾಯಕರೂ ವಿವಿಧ ಗೋಸೇವಾಕಾರ್ಯಕರ್ತರೂ ಈ ವಿಷಯವನ್ನು ಆಸ್ಥೆಯಿಂದ ವಿಚಾರಿಸುವರೆಂದು ಹಾರೈಸುತ್ತೇನೆ.

'ಕ. ವಿ.'

Taranath Ayurveda Vidyapeetha Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ

S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ
ತಾರಾನಾಥ ವಿದ್ಯಾಪೀಠ ಬಳ್ಳಾರಿ.
P. O. ಸಂಗನಕಲ್ ಬಳ್ಳಾರಿ.

English copies of
MADRAS ALIYASANTHANA ACT of 1949
are available·
NAVAYUGA PRESS, UDIPI.

ಪುರುಷ-ಸ್ತ್ರೀ ಭೇದ

ಸೃಷ್ಟಿಯ ನಿಯಮದ ಪ್ರಕಾರ, ಸ್ತ್ರೀ ಪುರುಷ ಭೇದಗಳು ಹುಟ್ಟಿವೆ. ಭೇದವು ಇದೆಯೆಂದ ಮೇಲೆ ಆ ಪ್ರಕಾರಗಳಲ್ಲಿ ವೈವಿಧ್ಯವಿರುವುದು ಅನಿವಾರ್ಯವಾದದ್ದು.

ಇಂದು ಸ್ತ್ರೀ ಪುರುಷರಲ್ಲಿ ಸಮಾನತೆ ಇರಬೇಕೆಂಬ ಆಂದೋಲನವು ನಡೆದಿದೆ. ಆ ಆಂದೋಲನದ ಧ್ಯೇಯಧೋರಣಗಳೇನು? ಎಂಬ ಮಾತನ್ನು ಈ ಭೇದದ ಸ್ಪಷ್ಟಕಲ್ಪನೆಯಿಲ್ಲದೆ ತಿಳಿದುಕೊಳ್ಳಲು ಆಗದು.

ಮೊದಲು ಈ ಅಸಮಾನತೆ ಇದೆಯೇ? ಎಂಬುದನ್ನು ನೋಡುವುದು ಆವಶ್ಯಕವಿದೆ. ಸ್ತ್ರೀಯರು ಮನೆಯಲ್ಲಿಯೇ ಇರಬೇಕು, ಪುರುಷರು ಬೇಕಾದಲ್ಲಿ ಹೋಗಲು ಆಸ್ಪದವಿದೆ, ಸ್ತ್ರೀಯರು ಪುರುಷರನ್ನು ಅವಲಂಬಿಸಿದ್ದಾರೆ, ಪುರುಷರು ಸ್ವತಂತ್ರರಿದ್ದಾರೆ, ಪುನರ್ವಿವಾಹ ಮಾಡಿಕೊಳ್ಳಲು ಸ್ತ್ರೀಯರಿಗೆ ಆಸ್ಪದವಿಲ್ಲ, ಪುರುಷರಿಗೆ ಆ ನಿರ್ಬಂಧವಿಲ್ಲ; ತಂದೆಯ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಮಾತ್ರ ಭಾಗವು ಸಿಗುವುದರಿಂದ ಸ್ತ್ರೀಯರು ತಂದೆಯ ಮೇಲಾಗಲಿ, ಗಂಡನ ಮೇಲಾಗಲಿ, ಮಗನ ಮೇಲಾಗಲಿ ಅವಲಂಬಿಸಬೇಕಾಗಿದೆ, ಇವೇ ಮೊದಲಾದ ಕಾರಣಗಳ ಮೂಲಕ ಸ್ತ್ರೀಯರಿಗೆ ಮುಂದರಿಯಲು ಆಸ್ಪದವಿಲ್ಲ. ಅದ್ದರಿಂದ ಈ ಅಸಮಾನತೆಯು ಹೋಗಬೇಕು ಎಂಬುದು ಸ್ತ್ರೀಸ್ವಾತಂತ್ರ್ಯ ಪುರಸ್ಕರ್ತರ ವಾದವಾಗಿದೆ.

ಈ ಭೇದಗಳು ಭೇದಗಳೇ? ಎಂಬ ಬಗ್ಗೆ ನಾವು ವಿಚಾರಮಾಡಬೇಕಾಗಿದೆ. ಇವು ಭೇದಗಳು ಮತ್ತು ಸ್ತ್ರೀಯರ ಅವನತಿಗೆ ಕಾರಣವಾದ ಭೇದಗಳು ಎಂದು ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದಕರು ಹೇಳುತ್ತಿದ್ದಾರೆ. ಮತ್ತು ಈ ನಿಯಮಗಳನ್ನು ಪುರುಷರೇ ಮಾಡಿದ್ದರಿಂದ ಅವರು ತಮಗೆ ಅನುಕೂಲವಾಗುವ ರೀತಿಯಲ್ಲಿ ಮತ್ತು ಸ್ತ್ರೀಯರು ಸದಾಕಾಲ ತಮ್ಮ ಕೈಗೆ ಸಿಕ್ಕಿರುವಂತೆ ಮಾಡುವ ಹಾಗೆ ಅವುಗಳನ್ನು ರಚಿಸಿದ್ದಾರೆ ಎಂದೂ ಅವರ ಅಂಬೋಣವಿದೆ.

ಹಾಗೆ ನೋಡಿದರೆ, ಈ ಸ್ತ್ರೀ ಸ್ವಾತಂತ್ರ್ಯದ ವಿಚಾರವನ್ನು ಮೊದಲು ಪ್ರಾರಂಭಮಾಡಿದವರೂ ಪುರುಷರೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಪುರುಷರು ಮಾಡಿದ ಹಿಂದಿನ ನಿಯಮ ನಿರ್ಬಂಧಗಳ ಬಗ್ಗೆ ಸ್ತ್ರೀಯರಿಗೆ ಸಂಶಯ ಬರುವುದಾದರೆ ಈಗ ಅವರು ಮಾಡಬಯಸುತ್ತಿರುವ ಈ ಹೊಸ ನಿಯಮಗಳಿಂದ ತಮಗೆ ಹಿತವಾದೀತೆಂದು ತಿಳಿಯುವುದಾದರೂ ಏಕೋ ತಿಳಿಯದಾಗಿದೆ.

ಮತ್ತು ಪೂರ್ವದ ನಿಯಮಗಳು ಪ್ರತಿಗಾಮಿ ಸ್ವರೂಪದವಾಗಿದ್ದುವೇ? ಅಥವಾ ಈಗ ಕೇಳುತ್ತಿರುವ ಸ್ವಾತಂತ್ರ್ಯದಿಂದ ಸ್ತ್ರೀವರ್ಗಕ್ಕೆ ಹಿತವಾಗುವುದಿದೆಯೇ? ಎಂಬುದನ್ನು ನೋಡುವುದು ಆವಶ್ಯಕವಿದೆ.

ಪೂರ್ವಜರು ನಿಸರ್ಗ ಸ್ವಭಾವ, ಭೇದ ಯೋಗ್ಯತೆಗಳನ್ನು ಅನುಲಕ್ಷಿಸಿ ನಿಯಮ ಮಾಡಿದ್ದಾರೆ ಆಗ ಅವರು ಸ್ತ್ರೀಯರಿಗೆ ಅನ್ಯಾಯಮಾಡುವ ದೃಷ್ಟಿಯನ್ನು ಇಟ್ಟುಕೊಂಡಿದ್ದರೆಂಬುದು ಅನ್ನುವುದಂತೂ ತೀರ ಅಸಂಬದ್ಧವಾದ ವಿಚಾರ.

ಒಂದು ವೇಳೆ ಪುರುಷನು ತನ್ನ ಸಂಪತ್ತಿಯನ್ನು ತನ್ನ ಅಂಕಿತದಲ್ಲಿ ಇಟ್ಟುಕೊಳ್ಳಬೇಕೆಂದು ಇಚ್ಛಿಸಿದನೆಂದು ತಿಳಿದರೂ ಅವನು ತನ್ನ ತಾಯಿಯನ್ನು, ಅಕ್ಕ ತಂಗಿಯರನ್ನು ಮತ್ತು ಮಗಳನ್ನು ಅದೇ ಪಾರತಂತ್ರ್ಯದಲ್ಲಿ ದೂಡಲು ಎಂದೂ ಇಚ್ಛಿಸುವುದು ಸಾಧ್ಯವಿಲ್ಲ. ಹೀಗಿದ್ದರೆ ಅವನು ಹೆಂಡತಿಗೊಂದು, ಉಳಿದವರಿಗೊಂದು ನಿಯಮವನ್ನು ಮಾಡಬೇಕಾಗಿತ್ತು. ಹೀಗೆ ಮಾಡಿಲ್ಲ. ಅದ್ದರಿಂದ ಆ ದೃಷ್ಟಿಯು ಅವನದಿದ್ದಿಲ್ಲ ಎಂದು ಧಾರಾಳವಾಗಿ ಹೇಳಬಹುದು.

ನಿಮಗೆ ಇಂದಿನ ನಿಯಮಗಳಿಂದ ಕಷ್ಟವಾಗಿದೆಯೇ? ಎಂದು ಸ್ತ್ರೀ ವರ್ಗವನ್ನು ಕೇಳಿದರೂ ಈ ಮಾತಿನ ತಥ್ಯವು ಚನ್ನಾಗಿ ಹೊರಬೀಳದೆ ಇರಲಾರದು. ಇಂದಿನ ಸ್ಥಿತಿಯನ್ನು ರೂಪಾಂತರಗೊಳಿಸಲು ಯಾವ ಗೃಹಿಣಿಯೂ ಸಿದ್ಧವಿಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಅವರನ್ನು ಅಶಿಕ್ಷಿತರನ್ನಾಗಿ ಇಟ್ಟುದರಿಂದ ಅವರು ಈ ತರಹದ ಅಭಿಪ್ರಾಯವನ್ನು ಕೊಡುತ್ತಿದ್ದಾರೆ ಎಂದು, ಈ ಸ್ವಾತಂತ್ರ್ಯವಾದಿಗಳು ಹೇಳುತ್ತಿದ್ದಾರೆ ಶಿಕ್ಷಣವೆಂದರೇನು? ಬಿ ಎ, ಎಮ್ ಎ, ಪರೀಕ್ಷೆಯನ್ನು ದಾಟಿದವರೇ? ಅಂಥವರು ಸ್ವಾತಂತ್ರ್ಯದ ಹವ್ಯಾಸವನ್ನು ಇಟ್ಟುಕೊಂಡುದು ನಿಜ

ಇಂಥವರ ಜೀವನವನ್ನು ಇಂದು ನಾವು ನೋಡಬಹುದು ಅವರಿಗೆ ಲಗ್ನವಾಗುವುದು ಕಠಿಣವಾಗುತ್ತದೆ ಮುಂದೆ ಅವರು ಅಸ್ತವ್ಯಸ್ತ ಜೀವನವನ್ನು ಸಾಗಿಸುತ್ತ ನಿರಾಶೆಗಳಲ್ಲಿ ಕಾಲಕಳೆಯುವ ಪ್ರಸಂಗ ಬರುವುದೇ ಬಹಳ.

ಪ್ರಯೋಗದ ದೃಷ್ಟಿಯಿಂದ ಈಗ ಸರ್ವ ಸ್ಥಿತ್ಯಂತರಗಳು ಸಾಗಿವೆ. ಮೊದಲಿನದು ಕೀಳು ಆಗಿತ್ತೆಂದು ಅದರಲ್ಲಿ ವ್ಯತ್ಯಾಸಮಾಡಬೇಕಾಗಿಲ್ಲ. ಹೊಸ ಪರಿಸ್ಥಿತಿಯು ಯೋಗ್ಯವೆಂದು ಹಳೇ ಪದ್ಧತಿಯನ್ನು ಬಿಡಬೇಕಾಗಿಲ್ಲ. ಮೂಲದಲ್ಲಿ ಇವಾವ ಸ್ಥಿತಿಗಳೂ ಗ್ರಾಹ್ಯ, ಅಗ್ರಾಹ್ಯಗಳಾಗಿಲ್ಲ ಹೊತ್ತು ಬಂದಂತೆ ನಮ್ಮ ರೀತಿನೀತಿಗಳನ್ನು ಸರಿಪಡಿಸಿಕೊಳ್ಳಬೇಕೆಂಬ ಮಾತಿಗನುಸರಿಸಿ ಈ ಘಟನೆಗಳು ಸಾಗಿವೆ.

ಅದ್ದರಿಂದ, ಸ್ಥಿತ್ಯಂತರಗಳನ್ನು ಸೂಚಿಸುವವರಿಗೂ ನಮ್ಮ ವಿರೋಧವಿಲ್ಲ. ಅವರಿಗೆ ಯೋಗ್ಯ ಕಂಡ ಸ್ಥಿತ್ಯಂತರಗಳನ್ನು ಅದಕ್ಕೆ ಜನಮತವಿದ್ದರೆ, ಅವಶ್ಯವಾಗಿ ಮಾಡಿಕೊಳ್ಳಲಿ ಆದರೆ ಯಾವುದೇ ವಿಷಯವನ್ನು ಚರ್ಚಿಸುವುದಾದರೆ, ಅದರ ಮೂಲದಲ್ಲಿ ಹೊಕ್ಕು ವಿಚಾರಮಾಡುವುದು ಅವಶ್ಯವಿದೆ. ಸ್ಥಿತ್ಯಂತರವಾಗುವುದನ್ನು ಕಂಡು ಪೂರ್ವ ಸಾಂಪ್ರದಾಯಿಕರೂ ಬೆದರುವ ಕಾರಣವಿಲ್ಲ. ಯಾವ ವಿಚಾರವೂ ಇಂದಿನಂತೆ ಕೊನೆಯವರೆಗೆ ಇರಲಾರದು. ಅನುಭವದಿಂದ, ಪರಿಸ್ಥಿತಿಗ ತಕ್ಕಂತೆ ವ್ಯತ್ಯಾಸಗಳಾಗುವುದು ಸಹಜವೂ ಅನಿವಾರ್ಯವೂ ಆಗಿದೆ.

ಸ್ತ್ರೀಯರಿಗೂ ವ್ಯಾಯಾಮ ಮಾಡಿಸಬೇಕು ಮತ್ತು ಆದರಲ್ಲಿ ಸ್ತ್ರೀಪುರುಷರ ಬಗ್ಗೆ ಭೇದಗಳನ್ನು ಕಲ್ಪಿಸುವ ಆವಶ್ಯಕತೆಯಿಲ್ಲ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ. ಅಂಥವರಿಗೆ ಆ ವಿಷಯದ ಜ್ಞಾನವುಳ್ಳವರು ಹಲಕೆಲವು ಮಾತುಗಳನ್ನು ಹೇಳಿದ್ದಾರೆ:-

"ಸ್ತ್ರೀಯರು ಮತ್ತು ಪುರುಷರಲ್ಲಿ ಸ್ವಾಭಾವಿಕ ಭೇದವಿದೆ. ಆ ವಿಷಯವನ್ನು ಸಂಪೂರ್ಣವಾಗಿ ಗಮನಿಸಿ ನಮ್ಮ ಹೆಜ್ಜೆಗಳನ್ನು ಇಡುವುದು ಆವಶ್ಯವಿದೆ. ಇಲ್ಲದಿದ್ದರೆ ಅನರ್ಥಗಳಾಗದೆ ಇರದು.

ದೈಹಿಕ ರಚನೆಯನ್ನು ನೋಡಿದರೆ ಸಾಮಾನ್ಯಸ್ವರೂಪದ ಸ್ತ್ರೀಯರ ಸೊಂಟವು ಅವಳ ಹೆಗಲುಗಳಿಗಿಂತ ಉದ್ದವಿರುತ್ತದೆ ಮತ್ತು ಅದರ ಸುತ್ತು ಹೆಚ್ಚಿನ ಮಾಂಸದ ಆವರಣವಿರುತ್ತದೆ ಅವಳ ಜನನೇಂದ್ರಿಯದ ಸುತ್ತಲು ಇರುವ ಎಲುವುಗಳು ಹೆಚ್ಚು ಅಗಲವಾದ ಕೋನಗಳಲ್ಲಿ ರಚಿಸಲ್ಪಟ್ಟಿರುತ್ತವೆ. ಮತ್ತು ದುರ್ಬಲವಿರುತ್ತವೆ. ಸ್ತ್ರೀಯ ಶ್ವಾಸ, ಎದೆ, ಸ್ನಾಯು ಮೊದಲಾದವು ಚಿಕ್ಕವು ಮತ್ತು ದುರ್ಬಲವಾದಂಥವು ಇರುತ್ತವೆ. ಅದ್ದರಿಂದ ಸ್ತ್ರೀಯಲ್ಲಿ ಹೆಚ್ಚಿನ ದೈಹಿಕ ಪ್ರಸವವನ್ನು ವಹಿಸಲು ಸಾಮರ್ಥ್ಯವು ಇರುವುದಿಲ್ಲ"

ಮಾನಸಿಕ ದೃಷ್ಟಿಯಿಂದ ನೋಡಿದರೂ ಈ ಭೇದಗಳು ಕಾಣುತ್ತವೆ ಇವುಗಳ ದೃಷ್ಟಿಯಿಂದ ವಿಚಾರಮಾಡಿ, ಸಮಾಜದಲ್ಲಿ ಸ್ತ್ರೀಯ ಕಾರ್ಯಗಳೇನು? ಸ್ಥಾನಮಾನಗಳೇನು ಎಂಬ ಬಗ್ಗೆ ನಮ್ಮ ಪೂರ್ವಜರು ನಿರ್ಧಾರ ಮಾಡಿದ್ದಾರೆ ಅವುಗನ್ನು ಲಕ್ಷ್ಯಿಸಿ ನಾವು ನಡೆಯುವುದು ಅವಶ್ಯ. (ಜಯಹಿಂದ)

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪಡೆತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹಣ್ಣೆರಡಾಣೆ ಪ್ರತ್ಯೇಕ]

Mrs. P. DEVEE, F. 93 (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

Nambiar's
ARYA VAIDYA SALA
UDIPI
Ideal House for Ayurvedic Treatment.
T. M. Kelu Nambiar,
Vaidya

BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL

SOB
ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ಪ್ರಕಟಣೆ

ಕುಂದಾಪುರ ತಾಲ್ಲೂಕು ಕುಂದ ಬಾರಂದಾಡಿ ಗ್ರಾಮದಲ್ಲಿರುವ ನಾಗಪ್ಪ ಭಂಡಾರ ಅಳಿಯ ಸುಬ್ಬಯ್ಯ ಸೆಟ್ಟಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ:-

ನಂನ ಬಾಬ್ತು ಸುಮಾರು ರೂಪಾಯಿ 10,000ಕ್ಕೂ ಮಿಕ್ಕಿ ಬೆಲೆಬಾಳುವ ನಗದು ಹಣ, ಚಿನ್ನಾಭರಣಗಳು, ನೋಟುಗಳು, ಹುಂಡಿಕಾಗದ ವಗೈರೆ ನನ್ನಿಂದ ಅಪಹರಿಸಲ್ಪಟ್ಟ ಕುರಿತು ನಾನು ಈ ಮುಂಚೆ ತಾ. 12-6-1949ನೇ ನಮೂದಿನಿಂದ ಕೊಟ್ಟ ಪ್ರಕಟಣೆಯು ಇದೇ ಪತ್ರಿಕೆಯ ತಾ 16-6-49ನೇ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿತ್ತು. ಅದರಲ್ಲಿ ಬರೆದ ಪೂರಾ ವಿಷಯಗಳು ನಿಜವಾಗಿ ನಡೆದವುಗಳಾಗಿರುತ್ತವೆ ಸದ್ರಿ ಅಸಲು ಪ್ರಕಟಣೆಗೆ ನಾನು ನನ್ನ ಎಡಗೈ ಹೆಬ್ಬೆಟ್ಟಿನ ಮುದ್ರೆಯನ್ನು ಹಾಕಿರುತ್ತೇನೆ. ಸದ್ರಿ ಪ್ರಕಟಣೆಯನ್ನು ತಬ್ದೀಲು ಮಾಡಲಿಕ್ಕಾಗಲೀ, ರದ್ದುಪಡಿಸಲಿಕ್ಕಾಗಲೀ ಯಾವ ಕಾರಣ ಯಾ ಆಗತ್ಯತೆಯು ಇರುವುದಿಲ್ಲ. ಹೀಗಿರುತ್ತಿರುವಲ್ಲಿ ಈ ಪತ್ರಿಕೆಯ ತಾ 26-6-49ನೇ ಸಂಚಿಕೆಯಲ್ಲಿ ನನ್ನ ದಸ್ಕತು ನಮೂದುಳ್ಳದ್ದಾಗಿ ಕಾಣುವ ಮಂದು ಪ್ರಕಟಣೆಯು ಛಾಪೆಯಾಗಿದ್ದು ನನ್ನ ತಿಳುವಳಿಕೆಗ ಬಂದು ಅದನ್ನು ಓದುವಾಗ ತುಂಬಾ ಆಶ್ಚರ್ಯಕ್ಕೆ ಕಾರಣವಾಯ್ತು. ನಾನು ಕೊಟ್ಟ ತಾ 12 6 1949ರ ಪ್ರಕಟಣೆಯಲ್ಲಿ ಕಾಣುವ ಪೂರಾ ಸಂಗ್ತಿಗಳು ಸುಳ್ಳೆಂತಲೂ, ನನ್ನ ಅಳಿಯ ಪಟೇಲ ಮಂಜಯ್ಯ ಸೆಟ್ಟಿಯು ವಳಸಂಚಿನದ್ದೆಂತಲೂ ಆವನು ನಂನ ವಕೀಲ M. M. ಹೆಬ್ಬಾರರು ಮತ್ತು ಲವರ ಗುಮಾಸ್ತ M. ಶೀತಾರಾಮ ಹೆಬ್ಬಾರರನ್ನು ವಳಸಂಚಿಗೆ ತೆಗೆದುಕೊಂಡು ನಂನ್ನ ಸೊಸೆ ಗಂಡನ ಕಾಶಿಗೆ ದ್ವೇಷವನ್ನು ಪೂರೈಸಿಕೊಳ್ಳುವ ಉದ್ದೇಶದಿಂದ ಫೋರ್ಜರಿ ಹೆಬ್ಬೆಟ್ಟು ಹಾಕಿ ಆ ಅಸಲು ಪ್ರಕಟಣೆಯನ್ನು ಮಾಡಿಸಿದ್ದೆಂತ ವಗೈರೆ ಪ್ರಕಟಣೆಯನ್ನು ಕಾಣಿಸಿದ್ದಾರೆ. ಈ ಪ್ರಕಟಣೆಯನ್ನು ನಾನು ಕೊಡಲಿಲ್ಲಾ. ಇದರಲ್ಲಿ ಕಾಣುವ ಎಲ್ಲಾ ವಿಷಯಗಳು ಮತ್ತು ವಾಚಕಗಳು ಕಲ್ಪನೆಯವುಗಳು. ನ ಜವಾಬದಾರಿ ಇಲ್ಲದವುಗಳು. ನಾನು ಕೊಟ್ಟ ತಾ 12 6-1949ರ ಪ್ರಕಟಣೆಯ ಬಗ್ಗೆ ವಕೀಲ ಶ್ರೀ M. M. ಹೆಬ್ಬಾರರವರಿಗೆ ಅನುಭವಕೊಟ್ಟದ್ದಿರುವುದಿಲ್ಲ. ಆ ಬಗ್ಗೆ ಅವರ ಗುಮಾಸ್ತ M. ಶೀತಾರಾಮ ಹೆಬ್ಬಾರರಿಗೆ ಅನುಭವ ಹೇಳಿ ಅವರಿಂದ ಬರೆಸಿ ಓದಿ ಸಮಾಧಾನಪಟ್ಟು ನನ್ನ ಎಡಗೈ ಹೆಬ್ಬೆಟ್ಟು ಮುದ್ರೆಯನ್ನು ಹಾಕಿ ಪತ್ರಿಕೆಗೆ ಕಳುಹಿಸಿದ್ದಾಗಿರುತ್ತದೆ. ನನಗೆ ಈಗ ಕೆಲವು ಸಮಯದಿಂದ ವೃದ್ಧಾಪ್ಯದಿಂದ್ದಾಗಿ ಕೈನಡುಗುವುದರಿಂದ ಹೆಚ್ಚಾಗಿ ದಸ್ಕತು ಹಾಕುವುದಿಲ್ಲ. ನಾನು ಕೊಟ್ಟ ತಾ 12-6-49ರ ಪ್ರಕಟಣೆಯಲ್ಲಿ ಕಾಣಿಸಿದ ಅಯೋಗ್ಯ ನಡತೆಗಳ ಬಾಬಿನಲ್ಲಿ ಅಪರಾಧಿಗಳೆಂತ ಮನಃಸಾಕ್ಷಿಗೆ ಗೊತ್ತಿದ್ದು ತಂಮ ದುಸ್ನಡತೆಯು ಬಯಲಿಗೆ ಬಿದ್ದದಕ್ಕೆ ನೊಂದುಕೊಂಡ ಜನರು ಬಿದ್ದುಹೋದ ತಂಮ ಪ್ರತಿಷ್ಠೆಯನ್ನು ಹೇಗಾದರೂ ಎತ್ತಿಕೊಳ್ಳುವರೆ ನಂನ್ನ ಎಡಗೈ ಹೆಬ್ಬೆಟ್ಟು ಫೋರ್ಜರಿಮಾಡಲು ಧೈರ್ಯಸಾಲದೆ ನಂನ ದಸ್ಕತು ಫೋರ್ಜರಿ ಮಾಡಿ ನಂನ ಹೆಸರಿನಿಂದ ಸದ್ರಿ ಪ್ರಕಟಣೆಯನ್ನು ಕಳುಹಿಸಿದ್ದಾಗಿರುತ್ತದೆಂತ ನಾನು ದೃಢವಾಗಿ ನಂಬುತ್ತೇನೆ. ತಾ 26-6-49ರ ಪತ್ರಿಕೆಯಲ್ಲಿ ಕಾಣುವ ವಿಷಯವನ್ನು ಪ್ರಕಟಿಸಲಿಕ್ಕೆ ಕಾರಣರಾದವರು ಹೇಡಿಗಳು ವ ಅಸತ್ಯವಾದಿಗಳು, ಇಂಥಾ ನಡತೆಯಿಂದ ಅವರಿಗೇನೂ ಪ್ರಯೋಜನ ಸಿಕ್ಕಲಾರದು. ನಾನು ತಾ. 12-6-49ರಲ್ಲು ಕೊಟ್ಟ ಪ್ರಕಟಣೆಯು ಅಚ್ಚಳಿಯದೇ ಮತ್ತು ಎಷ್ಟರಮಟ್ಟಿಗೂ ತಬ್ದೀಲು ಆಗದೇ ಇಂದಿಗೂ ಜಾರಿಯಲ್ಲಿದೆ ಎಂತ ಸರ್ವರಿಗೂ ಈ ಮೂಲಕ ತಿಳಿಯಪಡಿಸಿಯದೆ.

● ಈ ಯೆಡಕೈ ಹೆಬ್ಬೆಟ್ಟಿನ ಗುರುತು ಸುಬ್ಬಯ ಸೆಟ್ಟಿ ರುಜುವಾಗಿರುತ್ತದೆ.

Wit: ಮೊಜ ಪೂಜಾರಿ ಅಳಿಯ ಚಿಕ್ಕ ಪೂಜಾರಿ ಸಾಕ್ಷಿ. ಹಕ್ಲಾಡಿ ಗ್ರಾಮದ ಹೊಳಮಗೆ ತಿರುಕು ಮನೆ-ಪೋ: ಹಕ್ಲಾಡಿ.

ತಾರೀಕು 28-6-49 ಮೊಕ್ಕಾಂ: ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618
LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

14-7-1949

FOUNDER:
Hon'ble Sri. A. B. Shetty
Minister for Agriculture & Veterinary

Telegram: "Navayuga"

Estd. 1921 ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ ವಾರ 46
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟಿ ಯಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು
Vol. 29 No. 46

...ಪ್ರಿಯವೇ ನ್ಯಾಯ—ಅಧಿಕಾರವು ಬೇಡು' ಎಂಬ ಭಾವನೆ ಜನರಲ್ಲಿ ವ್ಯಾಪಿಸಿಹೋಗಿದೆ; ಅಂತಹ ಅಮೂಲ್ಯ ಅಧಿಕಾರ ಸಂಪಾದನೆಗಾಗಿ ಏನನ್ನೇ ಆದರೂ, ...ಗಾರನ್ನೇ ಆದರೂ ಬೆಲೆತೆರಲು ಅಳುಕಬೇಡ.

...ನ್ ಕಾಪಡಿ ರಚನೆಯಲ್ಲಿ ಹಿಂದಿರುವೆಯೋ, ಹಾಗಾದರೆ ಟಾರ್ಪೆಡೋ ...ನಿರ್ಮಾಣದಲ್ಲಾದರೂ ಮುಂದಾಗು; ಕಾ...ರ್ಯಯುಕ್ತ ಸಶಕ್ತ ವಾದಬಲ ಕಡಿಮೆ...ದ್ದರೆ, ಆಕ್ಷೇಪ ಅಡ್ಡಸವಾಲುಗಳ ...ಟವನ್ನಾದರೂ ಬೆಳೆಯಿಸಿಕೊ.

ಒಂದು ಸಾಮಾನಿನ ತಯಾರಿಗಿಂತ ...ಷ್ಟಿಗೆ, ಅದರ ಜಾಹೀರಾತಿಗಾಗಿ ವ್ಯಯ...ವಾಗುತ್ತಿರುವ ಕಾಲವಿದು; ಒಳಗೇನಿಲ್ಲದಿ...ದ್ದರೂ ಹೊರಗಿನ ಒಪ್ಪ ಮಿನುಗುತ್ತಿರ...ಬೇಕಾದ ಯುಗವಿದು. ಆದ್ದರಿಂದ ಕಾರ್ಯ...ವೇನೂ ಮಾಡದಿದ್ದರೂ ದೊಡ್ಡದೊಡ್ಡ ...ಘೋಷಣೆಗಳನ್ನು ಹೊರಡಿಸುವ ಕರ್ತವ್ಯ...ಮಾಡದಿರಬೇಡ.

ಮನಸ್ಸು ಯಾವ ಕಡೆಗಿದ್ದರೂ ಮಂ...ತ್ರ ಪಠನೆ ಮಾಡುವವ ಪೂಜಾರಿಯೆನ್ನಿಸು...ತ್ತಿಸ; ಮನಸ್ಸಿನಲ್ಲಿಂತಹ ಕಲ್ಮಷ ತುಂ...ಬಿದ್ದರೂ ಗಾಂಧೀ ಮಂತ್ರಪಠನೆ ಮಾಡು...ತ್ತ ಹೋದರೆ, ಪುಢಾರಿಯೆನ್ನಿಸುತ್ತಿ.

ರಾಜಕೀಯ ರೀತಿ ವಚನಗಳು?

ಮನಸ್ಸೊಪ್ಪಬಲ್ಲುದಾದರೆ, ಆಲಿಂಗಿಸಿಕೊಂಡಲ್ಲಿಯೇ ತಿವಿದು ಕೆಡವಿ ಹಾಕುವದು ಸುಲಭ; ಬುದ್ಧಿಯಂತಹದಿದ್ದರೆ, ಅಂಕೆಯೊಳಗಿನ ಜನತೆಯನ್ನೇ ಸುಲಿದು ಕೆಡಿಸಿ ಹಾಕುವದೂ ಸುಲಭವೇ.

ಹಾರಾಡುತ್ತಿರುವ ಧ್ವಜದಡಿ ನಿಂತು ಹಣಬಡಕೊಂಡರೂ, ಅದು ಧ್ವಜವಂದನೆಯೆಂದೇ ಹೆಸರು ಹೊಂದುತ್ತದೆ; ಸ್ವಾತಂತ್ರ್ಯದ ಈ ಕಾಲದಲ್ಲಿ ಸಾಮಾನ್ಯರಿಂತಹ ಕಷ್ಟ ನಷ್ಟಗಳನ್ನನುಭವಿಸಿದರೂ ಅದು ರಾಷ್ಟ್ರಾಭಿಮಾನಕ್ಕಾಗಿ ಎಂದೇ ಕರೆಯಲ್ಪಡುತ್ತಿದೆ.

ಅಮಾವಾಸ್ಯೆಯ ರಾತ್ರಿಗಿಂತಲೂ ಹೆಚ್ಚಿನ ಕತ್ತಲು ಸಾಮಾನ್ಯ ಜನತೆಯ ತಲೆಯೊಳಗೆ ತುಂಬಿದೆ, ಎಂದು ಕಟ್ಟಿಕೋ. ಅಲ್ಲಿ ಶಾಶ್ವತ ಬೆಳಕನ್ನು ಹಚ್ಚಿಸಿದೆಯಾದರೆ ನಿನ್ನ ಸ್ವರೂಪವೂ ತಿಳಿದುಬಂದೀತು, ಆದ್ದರಿಂದ ಆಗತ್ಯಬಿದ್ದಾಗ ಅಲ್ಲಿ ಮಿಂಚು ಬಳ್ಳಿಯನ್ನಷ್ಟೇ ಚಿಮುಕಿಸಿ, ಬೇಕಾದುದನ್ನಾಯ್ದುಕೊಂಡು ಸುಮ್ಮಗಿರು.

ಎಂತಹ ಬೊಬ್ಬೆ ಕೇಳಬರುತ್ತಿದ್ದರೂ ಅಧಿಕಾರ ಅಥವಾ ಐಶ್ವರ್ಯವನ್ನು ಸರ್ವರದನ್ನಾಗಿ ಮಾರ್ಪಡಿಸುವ ಕೆಲಸ ನಡೆದಿದೆ ಎಂದು ಹೆದರಬೇಡ; ಈಗಿನವರೆಲ್ಲರೂ ಒಂದೋ ಐಶ್ವರ್ಯಾಧಿಕಾರಗಳ ಆರಾಧಕರು ಅಥವಾ ಅದರ ಆಸ್ತೇ ಪಕರೇ ಹೊರತು ಅದನ್ನು ಅಡಿಮೇಲು ಮಾಡುವವರಲ್ಲ. ಒಂದು ದಿನ್ನೆಯು ಅಗೆಯುವವರಿಂದಲ್ಲದೆ ಅದಕ್ಕೆ ಪ್ರದಕ್ಷಿಣೆ ಬರುವವರಿಂದಾಗಲೀ ಆಳೆಯುವವರಿಂದಾಗಲೀ ಅಡಿಮೇಲಾಗದೆಂದು ತಿಳಿದುಕೊ.

ನಿನ್ನ ಹಿಂಬಾಲಕ ಜನರ ಸುಖಕ್ಕೆಂದು ಹಾದಿಯ ಕಲ್ಲು ಮುಳ್ಳನ್ನು ತೆಗೆಯುವುದರಲ್ಲೇ ನಿಧಾನಿಸಿದೆಯಾದರೆ ಜನರು ನಿನಗನ್ನುವದು ದಡ್ಡನೆಂದು; ಬದಲಿಗೆ ಕಲ್ಲು ಮುಳ್ಳು ಹಾದಿಯನ್ನು ನೆಗೆಯುವುದರ ಮೂಲಕವೇ ದಾಟಿದೆಯಾದರೆ, ಜನರು ಸ್ವತಃ ಅದರ ನೋವನ್ನನುಭವಿಸುತ್ತಾ, ನಿನ್ನ ಸಾಹಸವನ್ನು ಕೊಂಡಾಡುವರೆಂದು ತಿಳಿದುಕೊ.

ಗದ್ದಲಗಳ ನಡುವೆ ತಂಬೂರಿ ಬಾರಿಸುವುದಕ್ಕಿಂತ ನಗಾರಿ ಬಾರಿಸಿದರೇನೇ ಕೇಳಿಸೀತು; ಇಂದಿನ ಕರ್ಕಶ ಕಾಲದಲ್ಲಿ ಮನ ವೊಲಿಸುವ ಪ್ರಯತ್ನಕ್ಕಿಂತಲೂ ಬಡಾಯಿ ಹಾರಿಸಿದರೇನೇ ಬೆಲೆಬಂದೀತು.

ರಾಜಕೀಯಾಟದಷ್ಟು ದೊಡ್ಡ ಮಹೇಂದ್ರಜಾಲ ಮತ್ತೊಂದಿಲ್ಲ; ನಿನ್ನ ಧೋರಣೆಯು 'ಅಲ್ಲಿದೆಯೋ, ಇಲ್ಲಿದೆಯೋ?—ಅದೋ, ಇದೋ?' ಎಂದು ಜನತೆ ಕೊನೆಯ ವರೆಗೂ ಕೌತುಕದಿಂದಿರುವಂತೆ ಮಾಡಿ ಆಟ ಮುಗಿಸಿಕೊಂಡರಾಯಿತು.

ಯಾವ ಕಾಲದಲ್ಲಿ ಯಾರು ಅಧಿಕಾರಕ್ಕೆ ಬರಬಹುದು—ಯಾವ ಸಂದರ್ಭದಲ್ಲಿ ಯಾವುದು ಪ್ರಾಮುಖ್ಯತೆ ಪಡೆಯಬಹುದು, ಎಂಬ ನಿಶ್ಚಯವಿಲ್ಲ. ನೀನೂ ಹಾಗಿರು. 'ಇಂಥವನೇ' ಎಂಬ ಗುಟ್ಟು ಯಾರಿಗೂ ದೊರೆಯದಂತಿದ್ದು, ಸಂದರ್ಭಕ್ಕೆ ಸರಿಯಾಗಿ ವೇಷ, ಧೋರಣೆ ಬದಲಾಯಿಸಿಕೊ.

'ಜನಸೇವೆ' 'ದೇಶಸೇವೆ' 'ಧಾರ್ಮಿಕಾಚರಣೆ' 'ಕಲಾರಾಧನೆ' ಇತ್ಯಾದಿಗಳಲ್ಲಿ ಯಾವುದನ್ನೂ ಜನತೆಯ ನಡುವಿನಿಂದ ಹೆಕ್ಕಿಕೊಳ್ಳುವೆನೆನಬೇಡ; ಅವು ದೂರವಾಗಿ ಪ್ರತ್ಯೇಕವಿವೆ. ಬೇಕೆಂದು ತೋರಿದರೆ ಐಶ್ವರ್ಯ, ಅಧಿಕಾರ ಅಥವಾ ಅಕಾರದಲ್ಲಿ ಜನತೆಗೆಟುಕದ ಮಟ್ಟಕ್ಕೇರಿ, ಅಸಾಮಾನ್ಯನೆನ್ನಿಸಿ ದೂರದೂರ ಹೋಗಿಯೇ ಈ ಬಿರುದುಗಳನ್ನೆಟುಕಬಲ್ಲೆ.

ಜನತೆಗೇನು ತಿಳಿದಿದೆ ಮಣ್ಣು? ಒಳವಿನ ನೋಟ, ಓರೆನೋಟ ಎಂಬ ಎರಡೇ ಕಣ್ಣುಗಳಿವೆ ಹೊರತು ಒಳನೋಟವೆಂಬ ಮೂರನೇ ದೃಷ್ಟಿ ಅದಕ್ಕಿಲ್ಲ. ಆದ್ದರಿಂದ ಒಟ್ಟಿನ ಮೇಲೆ ನಿನ್ನ ಒಳಗೆ ಏನೇ ಇದ್ದರೂ ಹೊರಗಿನ ಒಪ್ಪಮಾತ್ರ ಥಳಥಳಿಸಿದ್ದರಾಯಿತು.

...ವಾಸನೆ ಮತ್ತು ಮಾಧುರತೆಯಿಂದ ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಹಾ ಮತ್ತು ಕಾಫಿ



PRABHAT
TEA & COFFEE (INDIA) Ltd.
COONOOR (Niligiris)

Madras Aliyasanthana Act, IX of 1949.

ಮದ್ರಾಸು
ಅಳಿಯಸಂತಾನ ಕಾನೂನು

ಇದರ
ಕನ್ನಡ ಮತ್ತು ಇಂಗ್ಲಿಷ್ ಪ್ರತಿಗಳು ದೊರೆಯುತ್ತವೆ

ವಿವಾಹ ಮತ್ತು ಅದರ ಬಿಡುಗಡೆ, ಅಶನಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತ ವಾರಿಸ್ದಾರಿಕೆ, ಕುಟುಂಬ ಮತ್ತು ಅದರ ರಕ್ಷಣೆ, ವಿಭಾಗ ಮೊದಲಾದ, ಪ್ರತಿಯೊಬ್ಬ ಅಳಿಯ ಸಂತಾನಿಗನಿಗೂ ತಿಳಿದಿರಲೇಬೇಕಾದ ವಿಷಯಗಳಿಂದೊಡಗೂಡಿದೆ.

ಕ್ರಯ **0—8—0**. (ಟಪ್ಪಾಲು ಖರ್ಚು ಪ್ರತ್ಯೇಕ)
0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು.
ಸಿಗುವ ಸ್ಥಳ:—
ನವಯುಗ ಪ್ರೆಸ್, ಉಡುಪಿ

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಭಾರತದ ಆ ಮೂಲೆ ಲಡಾಕ್ ಕ್ಷೇತ್ರ.

ಭಾರತ, ಪಾಕಿಸ್ತಾನ, ಇವೆರಡು ಸರಕಾರಗಳ ಹೆಚ್ಚಿನ ಲಕ್ಷ್ಯವೂ ತಂತಮ್ಮ ಉತ್ತರಮೂಲೆಯ ಗಡಿಗಳಲ್ಲಿ ಅನಿವಾರ್ಯವಾಗಿ ಸಿಕ್ಕಿಕೊಂಡಿವೆ. ಗಡಿನಾಡಿನ ಗುಡ್ಡವಲಯಗಳ ಪಠಾಣರ ಪ್ರತ್ಯೇಕ ಸ್ಥಾನಯೋಜನೆ ಮತ್ತಾಸಂಬಂಧದ ಕಿರುಕುಳಗಳು ಪಾಕಿಸ್ತಾನವನ್ನು ನೆಮ್ಮದಿಯಿಂದಿರಲು ಬಿಡುತ್ತಿಲ್ಲ; ಆ ಮೂಲೆಯ ಕಾಶ್ಮೀರದ ಸಮಸ್ಯೆಯು (ಪಾಕಿಸ್ತಾನವು ಇದರಲ್ಲೂ ಭಾಗಿ) ಭಾರತ ಸರಕಾರವನ್ನೂ ಸುಮ್ಮಗಿರಲು ಎಡೆಗೊಟ್ಟಿಲ್ಲ. ಇವೆರಡು ಸರಕಾರಗಳ ಪಾಲಿಗೆ ಬಂದಿರುವ ಈ ಕರ್ತವ್ಯಗಳಂತೂ ವಿಶೇಷ ರೀತಿಯವು. ಗುಡ್ಡಗಾಡುಗಳ ಪಠಾಣರು, ಅಪ್ಘಾನಿಸ್ಥಾನದ ಬೆಂಬಲದಿಂದಾದರೂ ತಮ್ಮ ಪಠಾಣಿಸ್ತಾನ್ ಸ್ಥಾಪನೆಯನ್ನಲ್ಲಿ ಮಾಡಿಕೊಂಡಾರೆಂದು ಊಹಿಸುವುದು ತಪ್ಪು. ಪ್ರಪಂಚದಲ್ಲೇ ಸರ್ವಪ್ರಥಮ ದೊಡ್ಡ ಮುಸ್ಲಿಮ್‌ರಾಷ್ಟ್ರವಾಗಿರುವ ಪಾಕಿಸ್ತಾನವು ಅಲ್ಲಿಯ ಶಕ್ತಿಪ್ರಯೋಗದಲ್ಲಿ ಮೇಲ್ಗೈಯಾಗುವಂತಹದೇ. ಮೇಲಾಗಿ, ಪಠಾಣಿಸ್ತಾನ್ ಬೇಡಿಕೆಯೆಂಬುದು, ಇಲ್ಲಿ ಬ್ರಿಟಿಷ್ ಆಡಳಿತೆಯ ಕಾಲದಲ್ಲಿದ್ದ ಸ್ಥಿತಿಯನ್ನು ಬದಲಾಯಿಸುನಂತಹ ಬೇಡಿಕೆ. ಬ್ರಿಟಿಷರು ಪಾಕಿಸ್ತಾನ, ಅಪ್ಘಾನಿಸ್ತಾನಗಳೊಳಗಿನ ಈ ಗಡಿವಿವಾದದ ಮಟ್ಟಿಗೆ ತಮ್ಮ ಆ ಕಾಲದ ಗಡಿಯನ್ನೇ ಸಮರ್ಥಿಸುತಿದ್ದಾರೆ ಹೊರತು ಸುಧಾರಣೆ ಸೂಚಿಸುತ್ತಿಲ್ಲ. ಈ ಮಟ್ಟಿಗೆ ಕೇವಲ ಬಾಯಿ ಸಲಹೆಯನ್ನಷ್ಟೇ ಕೊಟ್ಟು ಸುಮ್ಮಗಿರುವುದೂ ಬ್ರಿಟನರಿಗಸಾಧ್ಯವಾಗುತ್ತದೆ. ಕಾರಣವೆಂದರೆ ಪಾಕಿಸ್ತಾನವೀಗಲೂ ವಸಾಹತು ಅಧಿಕಾರ ನಿರ್ವಹಿಸುತ್ತಿದೆ. ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರವಾಗಿದೆ. ಈ ಸಂಬಂಧಾನುಸಾರವಾಗಿ ಬ್ರಿಟನು ಅದಕ್ಕೆ ನೆರವಾಗಲು ಬದ್ಧವಿದೆ. ಇದಿರುವಾದಿ ಅಪ್ಘಾನಿಸ್ಥಾನವು ಪರಕೀಯ ರಾಷ್ಟ್ರ. ಹೀಗಾಗಿ ಬಲಪ್ರಯೋಗದಿಂದ ಅಪ್ಘಾನಿಸ್ತಾನ ಮತ್ತು ಪಠಾಣರು ಪಠಾಣಿಸ್ಥಾನ ಸ್ಥಾಪಿಸಿಕೊಳ್ಳುವದು ಅಸಾಧ್ಯ. ಆದರೆ ಪಠಾಣರ ಈ ಚಳವಳವನ್ನು ನಿರ್ಮೂಲಿಸುವದು ಯಾರಿಂದಲೂ ಆಗದ ಮಾತು. ಪೂರ್ವದ ಅಖಂಡ ಭಾರತದಲ್ಲಿ ಬ್ರಿಟಿಷ್ ಆಡಳಿತೆಯಿದ್ದಾಗಲೂ, ಆಗಾಗ ಆಕಾಶಧಾಳಿ, ನೆಲಧಾಳಿಗಳನ್ನು ಹಲವು ವರುಷಗಳಿಂದ ನಡೆಯಿಸಿದರೂ ಆ ವಲಯದ ಗುಡ್ಡಗಾಡು ಜನರ ಹಾವಳಿಯನ್ನು ತಣಿಸಲಾಗಿರಲಿಲ್ಲ; ಬ್ರಿಟಿಷರಿಂದಾಗದುದು ಪಾಕಿಸ್ತಾನಿಗಳಿಂದಾಗುವಂತಿಲ್ಲ. ಆದ್ದರಿಂದ ಗುಡ್ಡಗಾಡು ಪಠಾಣರ ಕಂಟಕಕಾರುಗಳು ಗುಣವಾಗಲೊಲ್ಲದೆ ಉದರಶೂಲೆಯಾಗಿ ಪಾಕಿಸ್ತಾನ್ ಸರಕಾರವನ್ನು ಸದಾಕಾಲ ಪೀಡಿಸುತ್ತಾ ಉಳಿಯಲಿವೆ. ವಿಧೇಯತೆ ಮತ್ತು ಶೌರ್ಯವೇಷರ ಪರಮಾವಧಿಯನ್ನೂ ಮುಟ್ಟಿದಂತಿರುವ—ಆ ಪರ್ವತ ಪ್ರದೇಶಗಳ ಜೀವಂತ ಶಿಲೆಗಳಾಗಿರುವ-ಪಠಾಣರ ಆತ್ಮೀಯತೆ ದೊರಕಿಸಿಕೊಳ್ಳುವದು ನವಾಧಿಕಾರದ ಗರ್ವ ಮತ್ತು ಮಿತಿಮೀರಿದ ಸ್ವಾಭಿಮಾನದಿಂದಕುಂಟಿರುವ-ಪಾಕಿಸ್ತಾನಿಗಳಿಂದ ಅಸಾಧ್ಯ. ಅಂತೆಯೇ ಕಾಶ್ಮೀರದಾ ತುದಿ ಮೂಲೆಯ ಲಡಾಕಿನಂತಹ ಭಿನ್ನ ಮರ್ಜಿಯ ಜನತೆಯೊಡನೆ ವ್ಯವಹರಿಸಬೇಕಾದ ಕಷದ ಕಾರ್ಯವು ಭಾರತದಪಾಲಿಗೂ ಒದಗಿದೆ. ಆದರೆ, ಈ ಮಟ್ಟಿಗೆ ಭಾರತ ಮತ್ತು ಪಾಕಿಸ್ತಾನಗಳ ಮುಂದಿನ ಹಾದಿಗಳಲ್ಲಿರುವ ಪರಸ್ಪರ ಭಿನ್ನತೆಯನ್ನು ಅರಿತಿರಬೇಕು. ಈ ಎರಡು ರಾಷ್ಟ್ರಗಳಿಗೂ ಇನ್ನು ಮುಂದಿನ ಕಾಲವು, ತಾನು ಮಾಡಿದ್ದನ್ನು ತಾವೇ ಉಣ್ಣುವ ಯೋಗವುಳ್ಳದ್ದೆಂಬಂತೆ ತೋರುತ್ತಿದೆ. ತನ್ನ ಹುಟ್ಟು ಗುಣ ಹಾಗೂ ಅಸ್ತಿವಾರ ಮೂಲವಾಗಿರುವ ಪ್ರತ್ಯೇಕತಾ ಭಾವನೆಯನ್ನೇ ಉಡುಗೊರೆಯಾಗಿ ಪಾಕಿಸ್ತಾನವಿಂದು ಪಠಾಣರಿಂದ ಪಡೆಯುತ್ತಿದೆ; ತನ್ನ ಹುಟ್ಟು ಸ್ವಭಾವ ಮತ್ತು ಅಸಾಮಾನ್ಯ ಕಷ್ಟ ನಷ್ಟಗಳನ್ನನುಭವಿಸಿಯೂ ತಾನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದ್ದ ಐಕ್ಯತಾ ಭಾವನೆಯನ್ನೇ ಭಾರತವಿಂದು ಲಡಾಕಿನಂತಹ ಮೂಲೆ ವಲಯದ ಜನರಿಂದ ಬಲುವಳಿಯಾಗಿ ಪಡೆಯುತ್ತಿದೆ. ಪಠಾಣರು ಪಾಕಿಸ್ತಾನದಿಂದ ಪ್ರತ್ಯೇಕ ಸ್ಥಾನ ಯಾಚಿಸುತಿದ್ದಾರೆ; ಲಡಾಕೀ ಜನರು ಭಾರತದೊಂದಿಗೆ ಸೇರಿಹೋಗಲಿಚ್ಛಿಸುತಿದ್ದಾರೆ. 'ಮಾಡಿದ್ದನ್ನು ಉಣ್ಣಬೇಕು' 'ಬಿತ್ತಿದುದನ್ನೇ ಕೊಯ್ಯಬೇಕು' ಎಂಬ ಗಾದೆಗಳು ಸುಳ್ಳಲ್ಲ.

ಆ ತುದಿ ಮೂಲೆ ಲಡಾಕ್

ಭಾರತದ ತುತ್ತತುದಿಯ ಈಶಾನ್ಯ ಮೂಲೆಯಾಗಿ, ಹಿಮಾಲಯದ ಅತ್ಯುನ್ನತ ಕರಕೋರಮ್ ಪರ್ವತಾವಳಿಯ ಬುಡದಲ್ಲಿ ಲಡಾಕ್ ಜಿಲ್ಲೆಯಿದೆ. ಅದರ ವಿಸ್ತಾರ 45,762 ಚದರ ಮೈಲುಗಳು. ಇಡೀ ಜಮ್ಮು ಮತ್ತು ಕಾಶ್ಮೀರದ ಅರೆವಾಸಿಗಿಂತಲೂ ಹೆಚ್ಚು ವಿಸ್ತಾರವುಳ್ಳ ಈ ಪ್ರದೇಶವು ಕಾಶ್ಮೀರಕ್ಕೊತ್ತಾಗಿ ಇದೆ. ಕರಕೋರಮ್ ಪರ್ವತಶ್ರೇಣಿಯ ಆಚೆ ಬದಿಯೇ ಚೈನದ ಸಿಂಕಿಯಾಂಗ್ ಪ್ರಾಂತ್ಯ. ಲಡಾಕಿನ ಪೂರ್ವಗಡೆಯಲ್ಲಿ ಟಿಬೇಟ್ ಇದ್ದರೆ, ದಕ್ಷಿಣದ ತುದಿಯ ಮೂಲೆಯು ಪೂರ್ವ ಪಂಜಾಬಿನ ಈಶಾನ್ಯ ಮೂಲೆಯೊಂದಿಗೆ ಸೇರಿಕೊಳ್ಳುತ್ತದೆ. ಲಡಾಕ್ ಜಿಲ್ಲೆಯು ಈ ಕೆಳಗಿನ ಮೂರು ತಹಶೀಲುಗಳಾಗಿ ವಿಂಗಡಿಸಲ್ಪಟ್ಟಿದೆ: ಲಡಾಕ್—ಕಾರ್ಗಿಲ್—ಸ್ಕಾರ್ಡು. ಈ ಪೈಕಿ ಸ್ಕಾರ್ಡು ತಹಶೀಲು ಈಗಲೂ ಕಾಶ್ಮೀರೀ ವಿರೋಧಿ ಬಂಡಾಯಗಾರರ ಕೈಯಲ್ಲೇ ಇದೆ ಇಲ್ಲಿರುವದು ಆರ್ಯರಕ್ತ ಮಿಶ್ರಿತ ಮೊಂಗೋಲ್ ಜನಾಂಗವನ್ನು ಒಳಗೊಂಡ ಸುಮಾರು 85,000 ಕ್ಕೂ ಮಿಕ್ಕಿದ ಶಿಯಾ ಮುಸ್ಲಿಮರು ಒಂದು ಬಾರಿ ಬಂಡಾಯಗಾರರಿಂದಾಕ್ರಮಿಸಲ್ಪಟ್ಟಿದ್ದರೂ ಹಿಂದೀ ಸೇನೆಯು ಮರುಸ್ವಾಧೀನ ಪಡಿಸಿಕೊಂಡಿರುವ ಕಾರ್ಗಿಲ್ ತಹಶೀಲ್‌ನಲ್ಲಿ 44,410 ಮುಸ್ಲಿಮರು, 8298 ಬೌದ್ಧ ಮತೀಯರು, 97 ಹಿಂದುಗಳು, 42ಸಿಕ್ಕರು, 6ಮಂದಿ ಇತರರಿದ್ದಾರೆ. ಲಡಾಕ್ ತಹಶೀಲಿನಲ್ಲಿ 31,866 ಬೌದ್ಧ ಮತೀಯರು, 4086 ಮುಸ್ಲಿಮರು, 217ಹಿಂದುಗಳು, 9ಸಿಖ್ಖರು 129ಮಂದಿ ಬೇರೆಯವರಿದ್ದಾರೆ. ಅತ್ಯುನ್ನತ ಪರ್ವತಗುಡ್ಡಗಳು, ಭೀತಾಕಾರಾಕೃತಿಯ ಶಿಲೆಗಳು, ಎತ್ತರದ ಕಂದರಗಳು, ಕೊರೆದು ಬಡಿದಪ್ಪಳಿಸಿ ಶಿಲೆಗಳೆಡೆಯಿಂದ ಹರಿಯುವ ಪ್ರವಾಹಗಳು ಲಡಾಕನ್ನು ತುಂಬಿಕೊಂಡಿವೆ. ಇಡೀ ಪ್ರಪಂಚದ ಅತ್ಯುನ್ನತವಾದ ಜನನಿವಾಸ ಪ್ರದೇಶಗಳಲ್ಲಿ ಲಡಾಕ್ ಒಂದು. ಲಡಾಕಿನ ಅತೀ ತಗ್ಗು ಪ್ರದೇಶಕೂಡಾ 8000 ಅಡಿ ಕಡಿಮೆ ಎತ್ತರದಲ್ಲಿಲ್ಲ.

ಒಳಗಿನ ಸ್ಥಿತಿಗತಿ

ಲಡಾಕಿನ ಹವಾಮಾನ, ರೀತಿ ನೀತಿ, ಜನರ ಆಚಾರ ವಿಚಾರಗಳೆಲ್ಲವೂ ವಿಚಿತ್ರವಾದವುಗಳೇ. ಸೆಖೆಗಾಲದಲ್ಲಿ ಉತ್ತರ ಭಾರತದ ಯಾವುದೇ ಬಯಲುಪ್ರದೇಶದಲ್ಲಿ ಎಷ್ಟು ಹೆಚ್ಚು ಸೆಖೆಯಿರುವುದೋ ಅಷ್ಟೇ ಕಾವು ಇಲ್ಲಿದೆ. ಆದರೆ ಚಳಿಗಾಲದಲ್ಲಿ ಪರಮಾವಧಿ ಥಂಡಾ. ಲೇಹ್ ಎಂಬುದು ಲಡಾಕಿನ ಮುಖ್ಯಪಟ್ಟಣ. ಆಧುನಿಕರೀತಿಯ ಸಂಚಾರ ವ್ಯವಹಾರ ಜೋಡಣೆಯಾವುದೂ ಹೊರಗಿನ ಪ್ರಪಂಚಕ್ಕೂ ಈ ಪಟ್ಟಣಕ್ಕೂ ಇಲ್ಲ. ಆದರೂ ಟಿಬೇಟ್, ಯಾರ್ಕಂಡ್ ಮತ್ತು ಪೂರ್ವ ಟರ್ಕಿಸ್ತಾನಗಳೊಡನೆ ಭಾರತಕ್ಕಿರುವವ್ಯಾಪಾರ ಪಥದ ಕೇಂದ್ರನೆಲೆಯಾಗಿದೆಲೇಹ್. ಲಡಾಕ್, ಇಂತಹಹಲವು ಪರಸ್ಪರ ವಿರುದ್ಧ ಸ್ಥಿತಿಗತಿಗಳ ಆಶ್ರಯಸ್ಥಾನವಾಗಿದೆ. ಅದು ಹಿಮಾವರಿತ ಪ್ರದೇಶ; ಅದರೊಳಗಡೆ ಸುಮಾರು 300 ಮೈಲುಗಳ ಉದ್ದಕ್ಕೂ ಮಿಕ್ಕಿ ಇಂಡಸ್ ಹೊಳೆ ಪ್ರವಹಿಸುತ್ತಿದೆ; ಆದರದು ತೀರಾ ಒಣ ಭೂಮಿಯಾಗಿಯೇ ಇದೆ. ಕೆಲವೆಡೆಗಳಲ್ಲಂತೂ ಕುಡಿಯುವ ನೀರಿನ ಅಭಾವ ಕೂಡಾ ಇದೆ. ಅದು ಇಡೀ ಪ್ರಪಂಚಕ್ಕೇನೇ ಪೂರ್ಣ ಅಜ್ಞಾತವಿರುವ— ಲೋಕದೊಂದು ಕತ್ತಲೆ ಮೂಲೆಯೆಂಬಂತಿರುವ—ಕ್ಷೇತ್ರ. ಆದರೂ ಇಲ್ಲಿಯ ಪ್ರಜೆಗಳಲ್ಲಿ ನೇಕಡಾ 90ಕ್ಕೂ ಮಿಕ್ಕಿದವರು ವಿದ್ಯಾವಂತರು. ವರುಷದಲ್ಲಿ ಆರು ತಿಂಗಳು ಹೊರಗಿನ ಲೋಕಕ್ಕೂ ಈ ಪ್ರದೇಶಕ್ಕೂ ಸ್ಪರ್ಶ ಸಂಬಂಧವೇ ಇಲ್ಲ.

ಲಡಾಕ್ ನೆಲದಂತೆಯೇ ಲಡಾಕೀ ಜನರೂ ವೈಚಿತ್ರ್ಯಪೂರ್ಣ ವಿಶಿಷ್ಟತೆಯುಳ್ಳವರು. ಲೋಕದ ಅತ್ಯಂತ ಆಕರ್ಷಣೀಯ ಜನಾಂಗಗಳ ಪೈಕಿ ಅತ್ಯಂತ ಧರ್ಮನಿಷ್ಠರೂ, ಸಾದಾ ಜೀವನದವರೂ, ಉದ್ದಿಮೆಶೀಲರೂ ಆಗಿರುವ ಲಡಾಕೀ ಜನರು ಗಣ್ಯರು. ಅಲ್ಲಿ ಸಾಗುವಳಿ ಭೂಮಿ ಕಡಿಮೆ; ಇದ್ದ ನೆಲವಾದರೂ ಫಲವತ್ತಾದುದೆನ್ನಲಾಗುವದಿಲ್ಲ. ಆದರೂ ಅಲ್ಲಿಯ ಜನತೆಯ ಗಣ್ಯಭಾಗ ಸಾಗುವಳಿಗಾರರಾಗಿದ್ದಾರೆ. ಹೊರಗಿನ ಪ್ರಪಂಚದೊಡನೆ ವ್ಯಾಪಾರ, ವ್ಯವಹಾರ, ಸಂಬಂಧ ಬೆಳೆಯಿಸುವ ಅನುಕೂಲವಿಲ್ಲದ್ದರಿಂದಲೇ ಹೀಗಾಗಿದ್ದಾರೆನ್ನೋಣವೆ? ಜನರ ಸ್ವಭಾವದಲ್ಲಿ ಅವರ ಈ ಏಕಾಂತಜೀವನ ವೈಶಿಷ್ಟ್ಯ ತೋರುವದಿಲ್ಲ. ಕಡಿಮೆ ಸಂಪತ್ತು, ಕಠಿಣ ಹವಾಮಾನವಿರುವ ಭೂಮಿಯಾಗಿದ್ದರೂ ಜನರು ಅತ್ಯಂತ ಉಲ್ಲಾಸಚಿತ್ತರು; ಆನಂದಶೀಲರು; ಸಾಮಾಜಿಕ ಕೂಡಾಟ ಮತ್ತು ಹೊಕ್ಕು ಬಳಕೆಗಳಲ್ಲಿ ಆಸಕ್ತಿಯುಳ್ಳವರು. ಹಬ್ಬ ಉತ್ಸವಗಳ ಆಚರಣೆ, ಅವುಗಳಲ್ಲ ಮಹಿಳೆಯರ ನರ್ತನ ಇವು ಸರ್ವಸಾಮಾನ್ಯವಾಗಿರುವುದೇ ಅಲ್ಲಿಯವರ ಚಿತ್ತ ಪ್ರಫುಲ್ಲತೆಗೆ ಕಾರಣವೆನ್ನಬಹುದು.

ಸರ್ವಸಾಮಾನ್ಯವಾಗಿ ಇಡೀ ಲಡಾಕ್ ಜನತೆಯೇ ಬೌದ್ಧ ಮತಾವಲಂಬಿ. ಈ ಕಾಲದಲ್ಲಿ ಮಹಾತ್ಮಾ ಬುದ್ಧನ ಧರ್ಮ ತತ್ವಗಳು ಸಾರ್ವತ್ರಿಕವಾಗಿ ಜಾರಿಯಲ್ಲಿರುವ ಪ್ರದೇಶವೆಂದರೆ ಇಡೀ ಪ್ರಪಂಚದಲ್ಲಿ ಇದೊಂದೆ. ಲಡಾಕಿಗೆ ಹೋದಲ್ಲೆಲ್ಲಾ ಕಾಣಬರುವ ಮುಖ್ಯಸ್ಥರೆಂದರೆ ಲಾಮಾ ಎಂದು ಕರೆಯಲ್ಪಡುವ ಬೌದ್ಧ ಸನ್ಯಾಸಿಗಳು; ಮುಖ್ಯ ಸ್ಥಳಗಳೆಂದರೆ ಬೌದ್ಧ ಆಶ್ರಮಗಳು. ಮುಖವನ್ನು ನಾಜೂಕಾಗಿ ಬೋಳಿಸಿಕೊಂಡು, ತಲೆಯಲ್ಲಿ ಹೊಳಪುಗೆಂಪಿನ ಚೈನೀ ಮಾದರಿಯ ಟೊಪ್ಪಿ ಮತ್ತು ಅದಕ್ಕನುಗುಣವಾದ ಕೆಂಪು ಎದೆ ಪಟ್ಟಿಗಳಿಂದ ರಾಜಿಸುತ್ತಿರುವ ಲಡಾಕಿನ ಬುದ್ಧ ಭಿಕ್ಷು ತುಲ್ಯಮೂರ್ತಿಗಳನ್ನು ಸಾಮಾನ್ಯ ಭಾರತೀಯರು ರಂಗಭೂಮಿಯಲ್ಲಿ ಕೂಡಾ ಕಾಣುವದಸಾಧ್ಯ. ಲಡಾಕಿನ ಯಾವುದೇ ಗ್ರಾಮದ ಯಾವುದೊಂದು ಮನೆಯನ್ನು ಸಂದರ್ಶಿಸಿದರೂ ಅಲ್ಲಿ ಲಾಮಾಗಳ ಕೆಂಪು

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೇ ಉಳಿತಾಯದ ಪ್ರಶ್ನೆಯೂ ನಿಮ್ಮದಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್.

ಪ್ರಧಾನಿ ನೆಹರುಗಳು ನೋಡಿ ಬಂದ ಸ್ಥಳ

ಟೋಪಿ ಧರಿಸಿಕೊಂಡ ಹುಡುಗರೂ ಚೋಮೋ (ಬೌದ್ಧ ಸನ್ಯಾಸಿನಿ) ಗಳ ಟೋಪಿ ಧರಿಸಿಕೊಂಡ ಹುಡುಗಿಯರೂ ನೋಡಲು ಸಿಗುತ್ತಾರೆ ಅದು ಬೌದ್ಧಾಶ್ರಮಗಳ ದೇಶವೆಂದರೂ ಸಲ್ಲುವದು. ಒಂದೊಂದರಲ್ಲಿ ನೂರು ಬುದ್ಧ ಭಿಕ್ಷುಗಳ ಮನೆಗಳಿರುವ ಕೆಲವು ಆಶ್ರಮಗಳಂತೂ ಪ್ರತಿಯೊಂದೂ ಒಂದೊಂದು ಗ್ರಾಮಕ್ಕಿಂತ ದೊಡ್ಡದಿರುತ್ತದೆ. ಕೆಲವೇ ಮನೆಗಳಿರುವ ಸಣ್ಣ ಹಳ್ಳಿಯಾದರೂ ಸರಿಯೇ; ಲಾಮಾಗಳ ಆಡಳಿತೆಯೊಳಗಿನ ಬುದ್ಧದೇವಾಲಯಗಳೂ ಆಶ್ರಮಗಳೂ ಅಲ್ಲಿ ಇರಲೇ ಬೇಕು. ಶ್ರೀಮಂತರ ಮನೆಯೆಂದರಾಯಿತು—ಆ ಮನೆಗೊಂದು ಬುದ್ಧ ದೇವಾಲಯ, ಮತ್ತದರ ಅಧಿಪತಿ ಓರ್ವ ಲಾಮಾ ಇರುವುದು ಅನುಲ್ಲಂಘನೀಯ ಸಂಪ್ರದಾಯ. ಹೀಗಾಗಿ ಲಡಾಕ್ ಲಾಮಾಮಯವಾಗಿದ್ದರೂ, ಸರ್ವಸಾಮಾನ್ಯರೆಂಬುದರಿಂದ ಅವರೇನೂ ಜನತೆಯ ಅಸಡ್ಡೆಗೀಡಾಗದೆ ವಿಶೇಷವಾಗಿ ಗೌರವಿಸಲ್ಪಡುತಿದ್ದಾರೆ. ಮಹಾತ್ಮ ಬುದ್ಧನ ಮೂಲ ತತ್ವಗಳಿಗೂ ಈ ಬುದ್ಧ ಮತಾನುಯಾಯಿ ಲಡಕೀ ಆಚರಣೆಗಳಿಗೂ ವ್ಯತ್ಯಾಸ ಕಾಣುತ್ತಿದೆ. ಗುರು ಬುದ್ಧನು ವಿಗ್ರಹಾರಾಧಕನಿರಲಿಲ್ಲ. ಆದರೆ ಲಡಾಕಿನ ಬೌದ್ಧಾಶ್ರಮಗಳು ಮತ್ತು ದೇವಾಲಯಗಳು ಹಿಂದೂ ದೇವಸ್ಥಾನಾಶ್ರಮಗಳ ಪಂಕ್ತಿ ಹಿಡಿದಿವೆ.

ಅಲ್ಲಿ ವ್ಯಾಪಾರೋದ್ದಿಮೆ ಮತ್ತು ಸಾಗುವಳೀ ಸಂಪತ್ತು ಕಡಿಮೆಯಿರುವ ದೆಸೆಯಿಂದ ಜೀವನ ನಿರ್ವಹಣವು ಪ್ರಯಾಸಕರವಾದ್ದರಿಂದಲೇ ಇರಬಹುದು—ಮಿತ ಸಂತಾನ ಪದ್ಧತಿ ಸ್ವಾಭಾವಿಕವಾಗಿ ಬೇರುಬಿಟ್ಟಿದೆ. ಲಾಮಾ ಎಂದು ಕರೆಯಲ್ಪಡುವ ಗಂಡು ಭಿಕ್ಷುಗಳಾಗಲೀ ಚೋಮೋ ಎಂದು ಕರೆಯಲ್ಪಡುವ ಹೆಣ್ಣು ಭಿಕ್ಷುಗಳಾಗಲೀ ಅವಿವಾಹಿತರಾಗಿರುವುದೇ ಹೆಚ್ಚಿಗೆ. ಮದುವೆಯಾಗಬಾರದೆಂಬ ನಿರ್ಬಂಧವವರಿಗಿಲ್ಲದಿದ್ದರೂ ಹೀಗೆ ಮಹಿಳೆಯರಿಗಲ್ಲಿ ಸಂಚಾರ ವ್ಯವಹಾರ ಸ್ವಾತಂತ್ರ್ಯವೇನೋ ಸಂಪೂರ್ಣವಿದೆ. ಆದರೆ ಮಹಿಳೆಗೆ ಮನೆ ಆಸ್ತಿಗಳ ಹಕ್ಕು ಬಾಧ್ಯತೆಗಳ ಮಟ್ಟಿಗೆ ನಿಯಂತ್ರಣವಿದೆ. ಅಣ್ಣತಮ್ಮಂದಿರಲ್ಲಿ ಹಿರಿಯಣ್ಣನೊಬ್ಬನಿಗೇನೇ ಅಲ್ಲಿ ವಾರೀಸು ಹಕ್ಕು; ಹಿರಿಅಣ್ಣ ಮದುವೆಯಾದರೆ, ಆತನ ಹೆಂಡತಿ ಹಕ್ಕು ಪ್ರಕಾರ ಆವನ ತಮ್ಮಂದಿರೆಲ್ಲರ ಹೆಂಡತಿಯಾಗುತ್ತಾಳೆ. ಅವಳಿಗೆ ಹುಟ್ಟಿದ ಮಕ್ಕಳಿಗೆ ಒಬ್ಬ 'ಹಿರಿತಂದೆ'ಯಿದ್ದರೆ, ಬೇರೊಬ್ಬ ಅಥವಾ ಹೆಚ್ಚು ಮಂದಿ 'ಕಿರಿತಂದೆ'ಯರಿರುತ್ತಾರೆ. ಇದು ಅಲ್ಲಿ ಶತಮಾನಗಳಿಂದಿರುವ ಕ್ರಮ. ಹೀಗಾಗಿ ಅಲ್ಲಿ ಕೌಟುಂಬಿಕ ಭಾವನೆಯ ವೈವಿಧ್ಯ ಬಹುರೂಪೀ ಆಕರ್ಷಣೆಗಳಿಲ್ಲವಾದರೂ, ಒಂದು ಸುದೃಢ ಪ್ರೇಮ ಸಂಬಂಧ ಕಟ್ಟಿ ಇಡೀ ಕುಟುಂಬವನ್ನು ಬಿಗಿದಿರುತ್ತದೆ. ಕುಟುಂಬ ಕಲಹಗಳಂತೂ ಅಲ್ಲಿ ಅತ್ಯಪರೂಪ. ಜೀವನ ತೃಪ್ತಿಯ ಉಲ್ಲಾಸ, ಹರ್ಷ, ನಗೆ—ಆದರೆ ಸಂದರ್ಭ ಬಂದರೆ, ಎಂತಹದಕ್ಕೂ ಎದೆಗೊಡುವ ದೃಢತೆಗಳನ್ನು ಸೂಸುತ್ತಿರುವ ಜನ ಅವರು. ಲಡಾಕಿನ ಒಳಹೊಕ್ಕಲ್ಲಿ ಇಂತಹ ವಿಚಿತ್ರ ರೀತಿ ನೀತಿಗಳನ್ನು ಕಾಣಬಹುದು; ಹೊರಗೆ ದೂರದಿಂದ ನೋಡಿದರೆ ಈ ಲಡಾಕಿನ ನಿಸರ್ಗ ನಿರ್ಮಿತವಾದ—ಹಿಮಾವೃತ ಶಿಖರ ಮತ್ತು ಕಪ್ಪು ಹಸುರು ಕಾಡುಮಲಯ—ಮಾತ್ರ ಕಾಣುತ್ತದೆ.

ಅಂದಿನ ಆಕ್ರಮಣ

ಕಾಶ್ಮೀರಧಾಳಿಯ ಆದಿಭಾಗದಲ್ಲಿ ಈ ಲಡಾಕಿಗೂ ಬಂಡಾಯಗಾರ ರಾಹು ಸೋಂಕಿದ್ದಿತು. ಕಾಶ್ಮೀರ ಕಂದರದ ಸುತ್ತಲೂ ಹಿಂದೀಸೇನೆ ಕಟ್ಟಿದ್ದ ಉಕ್ಕಿನ ಕೋಟೆಯಂತಹ ರಕ್ಷಣಾವ್ಯೂಹ ಭೇದಿಸಿ ಒಳನುಗ್ಗಲಾರದ ಪಾಕಿಸ್ತಾನೀ ಹಸ್ತಕ ಬಂಡಾಯಗಾರರು, ಹಿಂದೀ ಸೇನೆಯ ಲಕ್ಷ್ಯವನ್ನೇ ಬೇರೆಡೆಗೆಳೆಯುವ ಉದ್ದೇಶದಿಂದ 1948ನೇ ಜನವರಿಯಲ್ಲಿ ಲಡಾಕ್ ಮತ್ತು ಬಾಲ್ಟಿಸ್ತಾನಗಳ ಮೇಲೆ ಧಾಳಿ ಹೂಡಿದ್ದರು. ಆದಿಯಲ್ಲಿ ಸ್ಕಾರ್ಡು ತಹಶೀಲಿಗೆ ಮುತ್ತಿಗೆ ಹಾಕಿ ಕೆಲವೇ ವಾರಗಳೊಳಗೆ ಉನ್ನತ ಗುಡ್ಡವಲಯಗಳ ಹಾದಿಯಿರುವ ಕಾರ್ಗಿಲನ್ನು ಕೈವಶಪಡಿಸಿಕೊಂಡರು. ಕಾಶ್ಮೀರದಲ್ಲಿ ಹಿಂದೀ ಮುಖ್ಯಸೇನಾ ಕಚೇರಿಯಲ್ಲಿದ್ದ ಜನರಲ್ ತಿಮ್ಮಯ್ಯನವರಿಗೆ ಲಡಾಕಿನ ರಾಜಧಾನಿ ಲೆಹ್‌ನಿಂದ ಪ್ರಾಣರಕ್ಷಣೆಯ ಮೊರೆಗಳು ಬರಹತ್ತಿದುವು. ಆಗ ಪರಿಸ್ಥಿತಿಯ ಪ್ರತ್ಯಕ್ಷಾವಲೋಕನೆಗಾಗಿ ಜ. ತಿಮ್ಮಯ್ಯನವರು ಮಾಡಿದ್ದ ಹಾರಾಟವು ಲೋಕದ ಮಹಾ ವಿಮಾನ ಸಾಹಸಗಳಲ್ಲಿ ಒಂದಾಗಿದೆ. ಭಾರತೀಯ ವಿಮಾನಪಡೆಯ ಓರ್ವ ದಳಪತಿ ಮೆಹರ್‌ಸಿಂಗರು ಜನರಲ್ ತಿಮ್ಮಯ್ಯನವರನ್ನು ಕುಳ್ಳಿರಿಸಿಕೊಂಡು, ಲೋಕೋನ್ನತ ಪರ್ವತ ಶಿಖರಗಳ ಮೇಲ್ಗಡೆ ಹೊಸಹಾದಿ ಶೋಧಿಸುತ್ತಾ ಹಾರಿ, ಲೆಹ್‌ನಲ್ಲಿ ಇಳಿದಿದ್ದರು. ಲಡಾಕ್ ಕಂದರದ ಸರಾಸರಿ ಎತ್ತರವು ಸಮುದ್ರಮಟ್ಟಕ್ಕಿಂತ 10ಸಾವಿರ ಅಡಿ ಇದೆ. ಲೆಹ್ ವಿಮಾನ ರಣ್ಯವಂತೂ 11554ಅಡಿ ಮೇಲಿದೆ. ಮೆಹರ್ ಸಿಂಗರ ವಿಮಾನವಾದರೋ, 23000 ಅಡಿಗಳಿಗೂ ಮಿಕ್ಕಿ ಮೇಲ್ಗಡೆ ಹಾರಬೇಕಿದ್ದಿತು. ಅಲ್ಲಿಯ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡು ಬಂದ ಜನರಲ್ ತಿಮ್ಮಯ್ಯನವರು ಸಮಯಕ್ಕೆ ಸರಿಯಾಗಿ ವಿಮಾನಮೂಲಕ ಅಲ್ಲಿಗೆ ಘೂರ್ಕಾಸೇನೆಗಳನ್ನಿಳಿಸಿದರು. ಧಾಳಿಗಾರರು ಮುಂದೊತ್ತಿ ಲೆಹ್ ನಗರದ ಮೇಲೆ ಬೀಳುವಾಗ ಅವರನ್ನು ಬಡಿದಟ್ಟಲು ಹಿಂದೀಯೋಧರು ಅಲ್ಲಿ ತಯಾರಿದ್ದರು. ಬೆನ್ನಲ್ಲೇ ಪೂರ್ವಪಂಜಾಬಿನ ಮನಾಲಿ ಎಂಬಲ್ಲಿಂದ ಕತ್ತೆಗಳೇ ಮೊದಲಾದ ವಾಹನಗಳ ಮೂಲಕ, ಹಿಮಾವೃತ ಪರ್ವತ ಶಿಖರಗಳ ಮೇಲಿಂದ 16200 ಅಡಿಯಿರುವ ಬಾರಾಲಚಾಲಾ ಕಣಿವೆ ಮತ್ತಿತರ ಕಣಿವೆಗಳನ್ನು ಹಾದು ಅಗತ್ಯವುಳ್ಳ ಸರಬರಾಯಿಗಳು ಹೋಗಿ ಮುಟ್ಟಿದುವು. ಮನಾಲಿಯಿಂದ ಲೆಹ್‌ವರೆಗಿನ 203 ಮೈಲುಗಳನ್ನು ಸಾಗಬೇಕಾದರೆ ಅವರಿಗೆ ಎರಡು ತಿಂಗಳು ಹಿಡಿದಿತ್ತು. ಆದರೆ ಇಷ್ಟರಿಂದಲೇ ಕೆಲಸವಾಗುವಂತಿರಲಿಲ್ಲ. ಲಡಾಕಿನ ಕಾರ್ಗಿಲ್ ತಹಶೀಲನ್ನು ಮರುಸ್ವಾಧೀನಪಡಿಸಿಕೊಂಡು, ಝೋಜಿಲಾ ಭೂಮಾರ್ಗವನ್ನು ಪುನಃ ತೆರೆಯದಿದ್ದರೆ ಲೆಹ್ ನಗರವನ್ನು ರಕ್ಷಿಸಿಕೊಳ್ಳುವುದಸಾಧ್ಯವೆಂದು ಜನರಲ್ ತಿಮ್ಮಯ್ಯನವರಿಗೆ ತೋರಿ, ಅವರು ಟ್ಯಾಂಕ್ ದಳವನ್ನು ನುಗ್ಗಿಸಿ ವೈರಿ ಕೋಟೆಯನ್ನೊಡೆದು ಮುಂದೊತ್ತಿದರು. 1948ನೇ ಒಕ್ಟೋಬರಿನಲ್ಲಿ ವೈರಿಕೋಟೆಯನ್ನು ಭೇದಿಸಿ ಹೊರಟವರು ನವಂಬರಿನಲ್ಲಿ ಕಾರ್ಗಿಲನ್ನು ಪುನರಾಧೀನ ಪಡಿಸಿಕೊಂಡರು. ಇವೆಲ್ಲಾ ಯುದ್ಧಪಟುತ್ವಗಳೂ ಚರಿತ್ರಾರ್ಹ ಸಮರ ಸಾಹಸಗಳಿವೆ.

ನೆಹರೂ ಸಂದರ್ಶನ

ಇತ್ತೀಚೆಗೆ ಲಡಾಕಿನ ಪ್ರಮುಖ ಲಾಮಾನ ನೇತೃತ್ವದಲ್ಲಿ ಅಲ್ಲಿಯ ಬುದ್ಧರ ಒಂದು ಶಿಷ್ಟಮಂಡಲಿಯವರು ನವದಿಲ್ಲಿಗೆ ಬಂದು ಪ್ರಧಾನಮಂತ್ರಿ ಪಂಡಿತ ಜವಾಹರಲಾಲರ ಭೇಟಿಮಾಡಿ ನೆಹರುಗಳನ್ನು ಅಲ್ಲಿಗಾಮಂತ್ರಿಸಿದ್ದರು. "ರಾಜಕೀಯ ನಮಗರಿಯದು. ಲಡಾಕ್ ಭಾರತದೊಳಗೆ ಸೇರಿರಬೇಕೆಂದೇ ನಮ್ಮ ಉತ್ಕಟಾಭಿಲಾಷೆ" ಎಂದವರು ನಿವೇದಿಸಿಕೊಂಡಿದ್ದರು. ಪಂಡಿತ ನೆಹರುಗಳು ಅವರಿಗಾಶ್ವಾಸನೆ ಕೊಟ್ಟು ಕಳುಹಿದಂತೆ ಶ್ರೀನಗರಕ್ಕೆ ಬಂದು, ಅಲ್ಲಿಂದ ಶೇಕ್ ಅಬ್ದುಲ್ಲಾರನ್ನು ಕೂಡಿಕೊಂಡು, ವಿಮಾನದಲ್ಲಿ ಲೆಹ್‌ನಲ್ಲಿಳಿದು ಇದೇ ತಾ 4ರಿಂದ 7ರ ವರೆಗೆ ಅಲ್ಲಿದ್ದು ತಾ 8ಕ್ಕೆ ಶ್ರೀನಗರಕ್ಕೆ ಮರಳಿ, ಅಲ್ಲಿಂದ ಸುರಕ್ಷಿತವಾಗಿ ನವದಿಲ್ಲಿ ಮುಟ್ಟಿದ್ದಾರೆ.

ಈ ಗುಡ್ಡೇಗವಿಯಂತಹ ಸ್ಥಳವು ಪಂಡಿತ ನೆಹರುಗಳಂತಹ ದೊಡ್ಡ ಮನುಷ್ಯನನ್ನು ಕಂಡುದು ತನ್ನ ಚರಿತ್ರೆಯಲ್ಲಿ ಇದೇ ಮೊದಲು; ಶೇಕ್ ಅಬ್ದುಲ್ಲರು ಕೂಡಾ ಅಲ್ಲಿಗೀ ವರೆಗೆ ಹೋದವರಲ್ಲ. ರಮಣೀಯ ಸೋನಮಾರ್ಗ್, ರೋಮಾಂಚಕರ ಭೀತಿದಾಯಿ ಝೋಜಿಲ ಕಣಿವೆ, ಕಾರ್ಗಿಲ್ ಮತ್ತು ಇಂಡಸ್ ಕಂದರಗಳ ಮೇಲ್ಗಡೆ, ಹಿಮಾವೃತ ಪ್ರದೇಶದಲ್ಲಿ ಹಾರಾಡುವುದಕ್ಕಾಗಿ ಒಳ್ಳೇ ವಿಮಾನ ಹಾಗೂ ತಜ್ಞ ಯಂತ್ರಚಾಲಕರನ್ನು ಆರಿಸಿಕೊಳ್ಳಲಾಗಿತ್ತು. ಓಕ್ಸಿಜನ್ ಮತ್ತು ಹಿಮಭೇದಕ ಉಪಕರಣಗಳೂ ನೆಹರು ವಿಮಾನದಲ್ಲಿದ್ದುವು. ಲೆಹ್ ನಿಲ್ದಾಣದಲ್ಲಿಳಿದೊಡನೆಯೇ ಪಂಡಿತ ನೆಹರು ಮತ್ತು ಶೇಕ್ ಅಬ್ದುಲ್ಲರ ಸ್ವಾಗತಕ್ಕಾಗಿ ತಯಾರಾಗಿದ್ದ ಭವ್ಯ ಶಾಮಿಯಾನಾದಲ್ಲಿ ಅಲ್ಲಿಯ ಪ್ರಸಿದ್ಧ 75 ಮಂದಿ ಲಾಮಾಗಳು ಸ್ವಾಗತಿಸಿದರು. ಬುದ್ಧ ಭಿಕ್ಷುಗಳೆಲ್ಲರೂ ತಮ್ಮ ಕೆಂಪು ನೀಲಿ ವಿಶೇಷ ಪೋಷಾಕುಗಳನ್ನು ತೊಟ್ಟಿದ್ದು, ಇಬ್ಬರು ಪ್ರಧಾನಿಗಳ ಶ್ರೇಯಸ್ಸಿಗಾಗಿ ಬುದ್ಧ ಪದ್ಧತಿಯ ಪ್ರಾರ್ಥನೆ ಸಲ್ಲಿಸಿದರು. ಸ್ವಾಗತ ನಗಾರಿಗಳು ಬಾರಿಸಲ್ಪಟ್ಟುವು. ಅತ್ಯಪೂರ್ವ ರೀತಿಯ ಸ್ವಾಗತ ದೊರೆಯಿತು. ಲಡಾಕಿನ ವಿವಿಧ ಬುದ್ಧಾಶ್ರಮಗಳ ಲಾಮಾಗಳು ತಮ್ಮ ವರ್ಣರಂಜಿತ ವಿಶೇಷ ಪೋಷಾಕುಗಳಿಂದ ಹಾಜರಿದ್ದು ಪಂಡಿತಜೀಗೆ ಅತಿ ಗೌರವದ ಸ್ವಾಗತವಿತ್ತರು. ಲಡಾಕಿನ ಸೇನಾ ಪ್ರಮುಖರೂ ನಾಗರಿಕಾಡಳಿತ ನಾಯಕರೂ ಸ್ವಾಗತಕ್ಕೆ ಹಾಜರಿದ್ದರು. ಕೆಂಪು ಮತ್ತು ನೀಲಿ ವರ್ಗಗಳ ಲಾಮಾರ ಮುಂದಾಳುತ್ವದಲ್ಲಿ ಅತ್ಯಪೂರ್ವ ರೀತಿಯ ಪುರಮೆರವಣಿಗೆ ನಡೆಯಿತು. ಲಡಾಕ್ ಪದ್ಧತಿಗನುಸಾರವಾಗಿ ಬಿಳೀ ಶಿಲ್ಕ್ ಶಾಲಿನ ಉಡುಗೊರೆ ಸನ್ಮಾನ್ಯ ಅತಿಥಿ ಪಂಡಿತ ನೆಹರುವಿಗಾಯಿತು. ಪಂಡಿತಜೀ ಕುದುರೆ ಹತ್ತಿ ಮೆರವಣಿಗೆ ಹೊರಟಿದ್ದರು. ಹಾದಿಯುದ್ದಕ್ಕೂ ಅವರ ದರ್ಶನಕ್ಕಾಗಿ ದೂರದಿಂದಲೂ ಬಂದು ನೆರೆದಿದ್ದ ಸ್ತ್ರೀಪುರುಷರು ಉತ್ಸಾಹರವಗಳನ್ನೆಬ್ಬಿಸುತ್ತಿದ್ದರು. ಪಂಡಿತಜೀಯ ಮೆರವಣಿಗೆ ಪಥದಲ್ಲೆಲ್ಲಾ ಕಲಾಪೂರ್ಣ ಕಮಾನುಗಳೂ ಹೆಚ್ಚು ಬೆಲೆಯ ರೇಶ್ಮೆಯ ತೋರಣಗಳೂ ರಾಜಿಸುತಿದ್ದುವು. ಆ ಮೇಲೆ ಪಂಡಿತ ನೆಹರು ಮತ್ತು ಶೇಕ್ ಅಬ್ದುಲ್ಲಾರು ಕುದುರೆ ಹತ್ತಿ, ಅಲ್ಲಿಯ ವೈಶಿಷ್ಟ್ಯಕ್ಕನುಸಾರವಾಗಿ ಹಿಮಾವೃತ ಹಾಗೂ ಹಸುರು ಗದ್ದೆಗಳು, ಏರುತಗ್ಗುಗಳಿಂದ ತುಂಬಿದ್ದ 13 ಮೈಲಷ್ಟು ಹಾದಿಯನ್ನು ಕುದುರೆ ಹತ್ತಿ ದಾಟಿ ರಣಬೀರ್‌ಪುರ ಮುಟ್ಟಿದರು. ಅಲ್ಲಿಯ ಅಭೂತಪೂರ್ವ ಸಮಾರಂಭದಲ್ಲಿ ಪಂಡಿತ ನೆಹರುಗಳು ಲಡಾಕಿನ ಕೆಂಪು ಮತ್ತು ನೀಲಿವರ್ಗದ ಪ್ರಮುಖ ಲಾಮಾರಿಗೆ ಸಾಂಚಿಯ ಸಾರನಾಥ್ ಬುದ್ಧ ಮತ್ತು ಗಯೆಯ ಬುದ್ಧ ದೇವಸ್ಥಾನಗಳ ಭಾವಚಿತ್ರಗಳೂ ಬುದ್ಧನ ಎರಡು ಪ್ರತಿಮೆಗಳೂ ಇದ್ದ ಹಸ್ತಿದಂತದ ಪೆಟ್ಟಿಗೆಗಳನ್ನೂ ಮಹಾತ್ಮಾ ಗಾಂಧಿಯವರ ದೊಡ್ಡ ಭಾವಚಿತ್ರಗಳನ್ನೂ ಉಡುಗೊರೆಯಿತ್ತರು. ಕೂಡಿದ್ದ ಜನಸಂದಣಿ

For Life Assurance

CONSULT

THE NEW GUARDIAN OF INDIA
LIFE ASSURANCE Co. LTD.
(Established. 1934)

Chairman: **Mr. M. CT. M Chidambaram Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
MADRAS

ಯು ಹರ್ಷ ಪುಳಕಗೊಂಡು ಸರದಿ ಸಾಲಾಗಿ ಬಂದು ಆ ಉಡುಗೊರೆಗಳನ್ನು—ಅವರಲ್ಲೂ ಗಾಂಧೀಜಿಯ ಚಿತ್ರವನ್ನು--ಭಕ್ತಿಗೌರವಗಳಿಂದ ಸ್ವೀಕರಿಸಿದ ದೃಶ್ಯ ಆಕರ್ಷಣೀಯವಿದ್ದಿತು. ಪಂಡಿತ ನೆಹರುಗಳು ಲಡಾಕಿನ ಆ ನಾಯಕಕೂಟಕ್ಕೆ ಭಾಷಣ ನೀಯುತ್ತಾ "ನಾವು, ಭಾರತ ಮತ್ತು ಲಡಾಕಿನ ಜನತೆಯು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಾಗೂ ಧಾರ್ಮಿಕವಾಗಿ ಮತ್ತಿತರ ಹಲವು ರೀತಿಗಳಿಂದ ಅಭೇದ್ಯವಾಗಿ ಒಂದಾಗಿರಲು ಬದ್ಧರಿದ್ದೇವೆ. ಭಾರತದ ನಿಮ್ಮ ಬಂಧುಗಳ ಪ್ರೇಮ, ಸದಾಶಯಗಳನ್ನು ನಿಮಗರ್ಪಿಸಲು ನಾವು ಬಂದವರು. ಲೋಕದ ಇಂದಿನ ಸ್ಥಿತಿಯಲ್ಲಿ ನಾವು ಒಬ್ಬರಿಗೊಬ್ಬರು ಬೇಕೇಬೇಕು; ಪರಸ್ಪರ ಕಲಿತುಕೊಳ್ಳಬೇಕು. 2500 ವರುಷಗಳಿಗೆ ಮೊದಲು ಬುದ್ಧನಾದವು ಪ್ರಕಾಶಿಸಿ, ದೂರ ದೇಶಗಳಿಗೂ ಪ್ರಸರಿಸಿದ್ದ ಭಾರತದಿಂದ ಅದರ ಅಂಗವಾದ ಈ ಬುದ್ಧ ಕೇಂದ್ರಕ್ಕೆ ನಾವೀಗ ಬಂದಿದ್ದೇವೆ. ನಿಮ್ಮ ಮತ್ತು ನಮ್ಮ ಪ್ರಯೋಜನಕ್ಕಾಗಿ ನಿಮ್ಮ ಪುರಾತನ ಲಿಪಿ ಬರೆಹಗಳ ಮತ್ತಿತರ ಕೆಲಸಗಳ ಪರಿಚಯವನ್ನು ನಿಮ್ಮ ವಿದ್ವಾಂಸರ ಸಹಕಾರದಿಂದ ಮಾಡಿಕೊಳ್ಳಬೇಕೆಂಬುದೇ ನನ್ನಲ್ಲಿ ದೀರ್ಘಾವಧಿಯಿಂದಿರುವ ಬಯಕೆ. ನಿಮ್ಮ ಭವಿಷ್ಯದ ಕುರಿತು ನಿಮಗಾವ ಭಯವೂ ಬೇಡ; ಲಡಾಕ್ ಭಾರತದೊಂದು ಅಂಗವೆಂಬ ಭಾವನೆಯಿಂದಲೇ ನೂರಾರು ಮೈಲು ದೂರದಿಂದ ಇಲ್ಲಿ ಸೇನೆ ಕಳುಹಿದ್ದೆವು; ಲಡಾಕಿನ ಮೇಲಿನ ಧಾಳಿಯನ್ನು ಭಾರತದ ಮೇಲಿನ ಧಾಳಿಯೆಂದೇ ಗಣಿಸಿ ನಮ್ಮ ಸರ್ವ ಶಕ್ತಿಯಿಂದ ಇದಿರಿಸುವೆವು-ಎಂಬ ಆಶ್ವಾಸನೆಯನ್ನು ನಿಮಗೆ ಕೊಡುವದಕ್ಕಾಗಿಯೇ ಫೀಲ್ಡ್-ಇ-ಮಾರ್ಷಲರನ್ನು ಕೂಡಿಕೊಂಡು ನಾನಿಲ್ಲಿ ಬಂದಿದ್ದೇನೆ" ಎಂದು ಹುರಿದುಂಬಿಸಿದರು. ಹೆಮಿಸ್ ಬುದ್ಧಾಶ್ರಮದ 9 ವರುಷ ಪ್ರಾಯದ ಲಾಮಾನಿಗೆ ವಿದಾಯ ಹೇಳುವಾಗ ನೆಹರುಗಳು ಒಂದು ರಿಸ್ಟ್ ವಾಚನ್ನು ಅವನಿಗೆ ಉಡುಗೊರೆಯಿತ್ತರು. ಆ ಹುಡುಗ ಲಾಮಾ ಉಬ್ಬಿ "ಇದು ಭಾರತದ ಮಹಾನಾಯಕನಿಂದ ನನಗೆ, ಓ!" ಎಂದು ಹಿಗ್ಗಿ ಹೇಳಿದ. ನೆಹರುಗಳ ಲಡಾಕ್ ಪ್ರಯಾಣವು ಸಾರಾಸಾಹಸ ಮತ್ತು ಸಂಬಂಧನಿರ್ಮಾಣ ದಾಖಲೆಗಳಲ್ಲೇ ದೊಡ್ಡದು.

ಕಾಂಗ್ರೆಸ್ ಶುದ್ಧೀಕರಣ ಸನ್ನಾಹ

ಕಾಂಗ್ರೆಸಿನ ದೌರ್ಬಲ್ಯಗಳನ್ನೂ ದೋಷಗಳನ್ನೂ ನಿವಾರಿಸಿ, ಜನತಾ ಸಂಪರ್ಕ ಬೆಳೆಯಿಸಿಕೊಳ್ಳುವ ಮೂಲಕ ಪರಿಣಾಮಕಾರಿ ಸಂಸ್ಥೆಯಾಗಿ ಅದನ್ನು ಮಾರ್ಪಡಿಸಬೇಕೆಂಬ ಆತುರವೀಗ ಕಾಂಗ್ರೆಸಿನ ನಾಯಕ ವರ್ಗದಲ್ಲಿ ಬಲಗೊಂಡಿದೆ. ಇದೇ ತಾ. 16ರಲ್ಲಿ ನವದಿಲ್ಲಿಯಲ್ಲಿ ಕೂಡಲಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮುಂದಿರುವ ಮುಖ್ಯ ಪ್ರಶ್ನೆಯಿದೇ. ಕಲ್ಕತ್ತಾ ಚುನಾವಣೆಯಲ್ಲಾದ ಪರಾಭವದ ಕಾರಣಗಳ ಶೋಧನೆ-ಮದ್ರಾಸ್ ಮಂತ್ರಿ ಮಂಡಲಿಯ ಕೆಲವರ ಮೇಲಾಗಿರುವ ಅಪಾದನೆಗಳ ಸೀರಿಕಾ ತನಿಖೆ ನಡೆಯಿಸಿ ಬಂದ ಶ್ರೀ ಶಂಕರರಾವ್ ದೇವ್ರ ವರದಿಯ ಪರಾಮರ್ಶೆ-ಈ ಬಾರಿಯ ಕಾಂಗ್ರೆಸ್ ಸಮಿತಿ ಸಭೆಯಲ್ಲಾಗಲಿದೆ. ಅಂತೂ ಈ ವಾರಾಂತ್ಯದಲ್ಲಿ ನವದಿಲ್ಲಿಯಲ್ಲಿ ಸೇರಲಿರುವ ಕಾಂಗ್ರೆಸ್ ಅಧಿನಾಯಕ ಮಂಡಲಿಯ ಕೆಲಸವೆಂದರೆ ಸಂಸ್ಥೆಯೊಳಗಿನ ಕಷ್ಟಲಗಳನ್ನು ಝಾಡಿಸಿ, ಅದನ್ನು ಶುದ್ಧ ಮತ್ತು ಸಶಕ್ತವನ್ನಾಗಿ ಮಾಡಿ ರಂಗನಾಯಕತ್ವವನ್ನು ದೂರಕಿಸಿಕೊಡುವದೊಂದೇ.

ಮೂಲಕಾರಣ

ಕಾಂಗ್ರೆಸ್ ನಾಯಕರಿಗೆ ಈಗಲೇ ಈ ಬುದ್ಧಿ ಹೊಳೆಯಲು ಒಂದು ಮುಖ್ಯಕಾರಣವಿದೆ. ಹೊಸ ಘಟನೆಯನ್ವಯ ಸಾರ್ವತ್ರಿಕ ಚುನಾವಣೆಗಳು 1951ರ ಆದಿ ಭಾಗದಲ್ಲಿ ನಡೆಯುವವೆಂಬ ನಿರೀಕ್ಷೆಯಿದೆ. ಇನ್ನು ಉಳಿದಿರುವುದು ಹೆಚ್ಚೆಂದರೆ ಎರಡೇ ವರುಷ. ಪ್ರಾಯಸ್ಥರೆಲ್ಲರಿಗೂ ಮತಾಧಿಕಾರವುಳ್ಳ ಮುಂಬರುವ ಆ ಮಹಾ ಚುನಾವಣೆಗಾಗಿ, ಇಂದಿನಿಂದಲೇ ಕಾರ್ಯಾರಂಭಿಸಿದರೂ ಹೆಚ್ಚಾಗದು. ಅದಲ್ಲವಾದರೆ, ಆ ಕಾರ್ಯಯಂತ್ರದ ದುರಸ್ತಿಗಂತೂ ಇನ್ನು ತಡಮಾಡಬಾರದು. ಕಾಂಗ್ರೆಸ್ ಯಂತ್ರದಲ್ಲಿ ದುರಸ್ತಿಯಂಶ ಬಹಳವಿದೆ, ಎಂಬುದನ್ನು ಸಾಮಾನ್ಯರಂತೆಯೇ ನಾಯಕರೂ ಬಲ್ಲರು. ಅದಕ್ಕಾಗಿಯೇ ಈ ಬಾರಿಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಆ ಕೆಲಸ ಮಾಡಲಿದೆ. ಮುಂದಿನ ಚುನಾವಣೆಯೇ ಇಲ್ಲಿರುವ ಮುಖ್ಯೋದ್ದೇಶ. ಮದುವೆ ಎಂಬುದಕ್ಕಾಗಿ ಮಾತ್ರ ಮನೆ ದುರಸ್ತಿ ಮಾಡುವದಕ್ಕಿಂತ, ಆ ಮನೆಯನ್ನು ಸದಾ ಕಾಲ ಚೊಕ್ಕವಾಗಿಡುವ ಮೂಲಕ ಗೃಹಧರ್ಮ ಪಾಲನೆ ಮಾಡುವದು ನಿಜಕ್ಕೂ ಉತ್ತಮ; ಅದಲ್ಲವಾದರೆ ವಿವಾಹ ಸಮಾರಂಭಕ್ಕಾಗಿಯಾದರೂ ಅಂತಹ ಗೃಹ ಶುದ್ಧೀಕರಣ ಅಗತ್ಯವಾದುದು. ಭಾವೀ ಚುನಾವಣೆಯನ್ನು ದೃಷ್ಟಿಪಥದಲ್ಲಿಟ್ಟುಕೊಂಡಾದರೂ ಕಾಂಗ್ರೆಸು ತನ್ನ ನಿತ್ಯಸ್ಥಿತಿಯಾಗಿರದ ಸುಧಾರಣೆಗೆ ಮನಸ್ಸು ಮಾಡಿದುದು ಅದರ ಕರ್ತವ್ಯಬುದ್ಧಿಯ ದ್ಯೋತಕ. ಆದಿಯಿಂದಲೂ ಹೀಗಿರಬೇಕಿತ್ತು-ಅನಿವಾರ್ಯ ಸಂದರ್ಭಕ್ಕಾಗಿಯಾದರೂ ಹೀಗಾದುದು ತಪ್ಪಲ್ಲ. ಕೆಲವು ಕಾಂಗ್ರೆಸ್ ನಾಯಕರ ಕಳಕಳಿಯ ಮಾತುಗಳ ಮೇಲಿಂದ ಕಾಂಗ್ರೆಸ್ ಸಂಘಟನೆ ಬಲಗೊಳ್ಳುವದೆಂದು ನಂಬಲವಕಾಶವಿದೆ.

ಧುರೀಣರ ಮಾತುಗಳು

"ಕಾಂಗ್ರೆಸಿನ ಹೆಸರು ಈ ರಾಷ್ಟ್ರದ ಚರಿತ್ರೆಯಲ್ಲಷ್ಟೇ ಅಲ್ಲ, ಇಡೀ ಲೋಕದ ಚರಿತ್ರೆಯಲ್ಲಿ ಶಾಶ್ವತವಾಗಿ ನಿಲ್ಲಲಿದೆ; ಅದರಲ್ಲೇನಾದರೂ ದೌರ್ಬಲ್ಯಗಳಿವೆಯಾದರೆ ಅವುಗಳನ್ನು ಕಿತ್ತೆಸೆಯಬೇಕು; ಆದರೆ ಬಹುಕಾಲವಾಗಿ ಸತ್ತೇಹೋಗಿದ್ದ ರಾಷ್ಟ್ರಕ್ಕೆ ಜೀವದಾನ ಮಾಡಿದ್ದ ಆ ಸಂಸ್ಥೆಯನ್ನು ರಕ್ಷಿಸಿಕೊಳ್ಳಬೇಕು. ನಾವು ಕಾಂಗ್ರೆಸನ್ನು ಬಲಗೊಳಿಸುವ ಮೂಲಕ ಮಾತ್ರವೇ ಮುಂದೊತ್ತಬಲ್ಲೆವು"-ಸಂಯುಕ್ತ ಪ್ರಾಂತ್ಯದ ಪ್ರಧಾನಮಂತ್ರಿ ಗೋವಿಂದ ವಲ್ಲಭಪಂತ್.

"ಜನರಲ್ಲಿ ಈಗ ಹರಡಿರುವ ಅತೃಪ್ತಿಗೆ ಕಾರಣವೆರಡೇ. ಅವರೀಗ ಹೊರಬೇಕಾಗಿ ಬಂದಿರುವ ಅಸಾಮಾನ್ಯ ಭಾರವೊಂದಾಗಿದ್ದರೆ, ಕೆಲವು ಕಾಂಗ್ರೆಸಿಗರು ತಮಗೆ ಮಂತ್ರಿಗಳೊಡನೆ ಮತ್ತು ಸರಕಾರದ ಉಚ್ಚಾಧಿಕಾರಿಗಳೊಡನೆ ಇರುವ ಸಂಬಂಧಗಳನ್ನು ತಮ್ಮ ಅನುಕೂಲತೆಗಾಗಿ ದುರ್ವಿನಿಯೋಗಿಸಿ, ಕಾಂಗ್ರೆಸಿಗೆ ಕೆಟ್ಟ ಹೆಸರು ತಂದಿರುವುದಿನ್ನೊಂದು. ರಾಷ್ಟ್ರಕ್ಕೆ ಸೇವೆ ಸಲ್ಲಿಸಬಲ್ಲ ಸಂಸ್ಥೆ ಕಾಂಗ್ರೆಸ್ ಒಂದೆ. ಭಾರತವನ್ನು ಶಾಂತಿಯ ಹಾಗೂ ಪ್ರಗತಿಯ ಹಾದಿಯಲ್ಲಿ ಮುನ್ನಡೆಸಬೇಕೆಂದ. ವಿಶ್ವಾಸಾರ್ಹ ನಾಯಕರ ಬಯಕೆಯಿದ್ದರೆ, ಅವರು ಕಾಂಗ್ರೆಸಿಗೆ ಅಪಕೀರ್ತಿ ತರುವವರನ್ನು ಅದರಿಂದ ಹೊರಗಟ್ಟಬೇಕು; ಇಲ್ಲವೇ ತಾವೇ ಪ್ರತ್ಯೇಕಗೊಂಡು ಬೇರೊಂದು ಪಕ್ಷ ಕಟ್ಟಿಕೊಳ್ಳಬೇಕು. ಪ್ರಕೃತ ಕಾಂಗ್ರೆಸ್ ಖಾಲಿ ಮಾಡುವ ಸ್ಥಾನಕ್ಕೇರಬಲ್ಲ ಇನ್ನೊಂದು ರಾಜಕೀಯ ಪಕ್ಷವಿಲ್ಲ. ಅದ್ದರಿಂದ ಅದನ್ನು ಬಿಟ್ಟು ಹೋಗುವ ಬದಲಿಗೆ ಅದರೊಳಗಿನ ಸಮಾಜ ದ್ರೋಹಿಗಳನ್ನು ಹೊರತಳ್ಳುವುದೇ ವಾಸಿ"-ಕೇಂದ್ರ ಸಚಿವ ಮಿ. ರಫಿ ಅಹಮ್ಮದ್ ಕಿಡ್ವಾಯಿ.

"ಕಾಂಗ್ರೆಸು ತನ್ನ ತತ್ವವಾದ ಸೇವಾಜೀವನ ಕೈಕೊಳ್ಳಬೇಕು. ಇಲ್ಲವಾದರೆ ಅದು ಕೇವಲ ಪ್ರಚಾರ ವಾಹನ ಮತ್ತು ಪಾರ್ಲಿಮೆಂಟರೀ ಯಂತ್ರದ ಕೆಳದರ್ಜೆಗಿಳಿಯದಂತೆ ತಡೆಗಟ್ಟಲು ಯಾರಿಂದಲೂ ಸಾಧ್ಯವಾಗದು. ಕಾಂಗ್ರೆಸಿನ ಅಧಿಕಾರ ಸ್ಥಾನಗಳಲ್ಲಿದ್ದೂ ಖಾದಿ ತೊಡದವರಿದ್ದಾರೆ; ಅಂತೆಯೇ ತಾವು ಮಾಡಬೇಕಾದ ವಿಧಾಯಕ ಕಾರ್ಯವೇನು, ಮತ್ತದನ್ನು ಮಾಡುವುದು ಹೇಗೆ, ಎಂಬುದನ್ನರಿಯದ ಕಾಂಗ್ರೆಸಿಗರೂ ಇದ್ದಾರೆ. ಇದು ಶೋಚನೀಯ. ರಾಷ್ಟ್ರದ ಭವಿಷ್ಯವು ತಮ್ಮನ್ನು ಅವಲಂಬಿಸಿದೆ ಎಂಬುದನ್ನು ಇವರರಿತಿರಬೇಕು. ಸ್ವತಃ ತಮಗಾಗಿಯಲ್ಲವಾದರೆ, ತಮ್ಮ ಭಾವೀ ಜನಾಂಗಕ್ಕಾಗಿಯಾದರೂ ಅವರು ಗತಕಾಲದ ತಮ್ಮ ಸ್ಥಾನಮಾನಗಳಿಗೆ ತಕ್ಕಂತೆ ವರ್ತಿಸಬೇಕು"-ಕಾಂಗ್ರೆಸ್ ಕಾರ್ಯದರ್ಶಿ ಶಂಕರರಾವ್ ದೇವ್.

"ಕಾಂಗ್ರೆಸಿಗರು ಹಿಂದಿನ ಕಾಲದಲ್ಲಿ, ಅಷ್ಟೊಂದು ದೊಡ್ಡ ಪರಿಮಾಣದಲ್ಲಿ ತೋರಿಸಿದ್ದ ಧೈರ್ಯ, ನಿರ್ಮಲೋದ್ದೇಶ ಮತ್ತು ಸೇವೆ ಹಾಗೂ ತ್ಯಾಗಸ್ಫೂರ್ತಿಯಂಶಗಳನ್ನು ತೋರಿಸುತ್ತಾರಾದರೆ, ಅಂತೆಯೇ ಇತರರು ಸಾಕಷ್ಟು ರೀತಿಯಿಂದ ಸಹಕರಿಸುತ್ತಾರಾದರೆ, ಭವಿಷ್ಯದ ಕುರಿತು ನಾನೊಂದಿಷ್ಟು ನಿರಾಶೆಯಿಂದಿಲ್ಲ. ಪರಿಸ್ಥಿತಿಗನುಗುಣವಾದುದನ್ನು ನಿರ್ಮಿಸಿಕೊಳ್ಳಲು ನಾವು ಸಮರ್ಥರಾಗುವೆವೆಂದು ಆಶಿಸುತ್ತಿದ್ದೇನೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ರಾಷ್ಟ್ರದ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿ, ತಪ್ಪಿಬಿದ್ದಿರಬಹುದಾದ ಕಡೆಗಳಲ್ಲಿ ಸರಿಪಡಿಸಲೇನು ಮಾಡಬೇಕೆಂಬುದನ್ನು ನಿರ್ಧರಿಸುವುದೆಂದು ನಿರೀಕ್ಷಿಸುತ್ತೇನೆ. ಕಾಂಗ್ರೆಸು ಸುಮಾರು ಎರಡು ವರುಷಗಳಿಂದ ಕೇಂದ್ರಾಧಿಕಾರವನ್ನೂ ಮೂರು ವರುಷಗಳಿಂದ ಪ್ರಾಂತ್ಯಾಧಿಕಾರಗಳನ್ನೂ ಇಷ್ಟರಲ್ಲೇ ನಿರ್ವಹಿಸಿದೆ. ಅದ್ದರಿಂದ ಅದು ಮಾಡಿದ್ದೇನು, ಮಾಡದೆ ಪರಾಭವಗೊಂಡುದೆಲ್ಲಿ ಎಂಬ ಪರ್ಯಾಲೋಚನೆಗೆ ಇದೀಗ ಸುಕಾಲ. ನಾನು ಕಾಂಗ್ರೆಸ್ ಕಾರ್ಯಕಾರಿಯಿಂದ ನಿರೀಕ್ಷಿಸುತ್ತಿರುವುದಿಷ್ಟನ್ನೇ. ಈ ವರ್ಷ ರಾಷ್ಟ್ರದ ವಿವಿಧ ಭಾಗಗಳಲ್ಲಿ ಜನತಾ ಭಾವನೆ ಮತ್ತು ಅಭಿಪ್ರಾಯಗಳು ಹೇಗಿವೆ, ಎಂಬುದನ್ನು ನಾವು ತಿಳಿಯಲಾಗುವಂತಹ ಘಟನೆಗಳಾಗಿವೆ; ಎಷ್ಟೋ ಮಾತುಗಳೂ ಬರೆಹಗಳೂ ಬಂದಿವೆ. ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸಿಗರ ಮೇಲೊಂದು ವಿಲಕ್ಷಣ ಕರ್ತವ್ಯ ಹಾಗೂ ಹಂಗಿನ ಹೊಣೆಯಿದೆ. ಅವರು ಸ್ವತಃ ತಮ್ಮ ವರ್ತನೆಗಳ ಮೂಲಕವೇ ತಮ್ಮ ಯೋಗ್ಯತೆಯನ್ನು ಪ್ರದರ್ಶಿಸಬೇಕಲ್ಲದೆ, ಗತಕಾಲದ ಕೀರ್ತಿಯನ್ನು ಎತ್ತಿಕೊಂಡು ತೋರಿಸುವುದರಿಂದ ಫಲವಿಲ್ಲ"-ಬಾಬು ರಾಜೇಂದ್ರ ಪ್ರಸಾದ್.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಪ್ರಾಪಂಚಿಕ ಸ್ಥಿತಿಗತಿ

ಪ್ರಾಪಂಚಿಕ ರಂಗಗಳಲ್ಲೆಲ್ಲಾ ರಿಪೇರಿ ಹಾಗೂ ಪುನರ್ಘಟನಾ ಆಂದೋಲನಗಳೇ ಒಡೆದು ತೋರುತ್ತಿವೆ. ಯುರೋಪಿನ ಆರ್ಥಿಕ ಹಾಗೂ ವ್ಯಾಪಾರ ವಹಿವಾಟು ರಂಗದಲ್ಲಿ ಪರಿಣಾಮವನ್ನುಂಟು ಮಾಡಿರುವ ಬ್ರಿಟನ್ನಿನ ಡೋಲರ್ ಸ್ಟರ್ಲಿಂಗ್ ಬಿಕ್ಕಟ್ಟು-ಭಾರತದ ಆಹಾರ ಬಿಕ್ಕಟ್ಟು-ಅಮೇರಿಕದ ಯುರೋಪು ಅಭಿವೃದ್ಧಿ ಯೋಜನೆ, ಇತ್ಯಾದಿಗಳೇ ಕಳೆದ ದಿನಗಳಲ್ಲಿ ವಿಶೇಷ ಪ್ರಾಮುಖ್ಯತೆ ಪಡೆದಿವೆ.

ವಿದೇಶೀ ರಂಗದಲ್ಲಿ

ಪ್ರಾಪಂಚಿಕ ಪುನರ್ರಚನಾ ಯೋಜನೆಗೊಂದು ಆತಂಕವಾಗಿ ಪರಿಣಮಿಸಿರುವ ಡೋಲರ್ ಸ್ಟರ್ಲಿಂಗ್ ಬಿಕ್ಕಟ್ಟಿನ ನಿವಾರಣೆಗಾಗಿ ಅಲ್ಪಾವಧಿಗಾಗುವ ಹಂಚಿಕೆಗಳನ್ನು ಕಂಡುಗೊಳ್ಳಲು ಲಂಡನ್ನಿನಲ್ಲಿ ಅಮೇರಿಕ ಇಂಗ್ಲೆಂಡ್, ಕೆನಡಾ ರಾಷ್ಟ್ರಗಳ ಜೋನ್, ಎ. ಸ್ನೈಡರ್, ಸರ್. ಸ್ಟಾಫೋರ್ಡ್ ಕ್ರಿಪ್ಸ್, ಡೊಗ್ಲಾಸ್ ಇ. ಲಿಬ್ಬೇಟರೊಳಗೆ ಮಾತುಕತೆಗಳು ನಡೆದವು. ಅವರು ಆ ಸಂಬಂಧದ ದೀರ್ಘಾವಧಿ ಒಪ್ಪಂದಗಳ ಕುರಿತಾಗಿಯೂ ಪರ್ಯಾಲೋಚಿಸಿದ್ದರು. ಬರುವ ಸೆಪ್ಟೆಂಬರಿಗೆ ಶಾಶ್ವತ ಒಡಂಬಡಿಕೆಯ ಮಾತುಕತೆಗಳು ವಾಷಿಂಗ್ಟನ್ನಿನಲ್ಲಿ ಜರಗಲಿವೆ. ಯುರೋಪಿನ ವ್ಯಾಪಾರ ವಹಿವಾಟುಗಳ ಮಟ್ಟಿಗೆ ಯಾವ ಪಕ್ಷಪಾತವನ್ನೂ ಅಮೇರಿಕವು ಮಾಡದೆ, ತನ್ನ ಪ್ರಚಲಿತ ಧೋರಣೆಯನ್ನೇ ಮುಂದೊತ್ತುವದೆಂಬು ಅಮೇರಿಕದ ಖಜಾನಾ ಕಾರ್ಯದರ್ಶಿಯಂದಿದ್ದಾರೆ.

ಚೈನದ ಪರಿಸ್ಥಿತಿಯಲ್ಲಿ ಗಣ್ಯ ಬದಲಾವಣೆಯಿಲ್ಲ. ಆದರೆ ಭಾವನಾ ಬದಲಾವಣೆಗಳು ಕಂಡುಬರುತ್ತಿವೆ. ಕಮ್ಯೂನಿಸ್ಟ್ ನಾಯಕರು ತಾವು ರಶ್ಯದ ಪಕ್ಷ ವಹಿಸುವವರೆಂದು ಕಂಠೋಕ್ತವಾಗಿ ಜಾಹೀರು ಮಾಡಿದ ಮೇಲೆ ಚಿಯಾಂಗರ ರಾಷ್ಟ್ರೀಯ ಸರಕಾರಕ್ಕೆ ಅದಾವ ಕಾರಣದಿಂದಲೋ ಹೊಸ ಧೈರ್ಯ ಬಂದಂತಾಗಿದೆ. ಎರಡು ತಿಂಗಳ ಮೊದಲು ರಾಷ್ಟ್ರೀಯ ಸರಕಾರೀ ಕಡೆಯವರಲ್ಲಿ ವ್ಯಾಪಿಸಿದ್ದಷ್ಟು ನಿರಾಶೆ ಈಗ ತೋರುತ್ತಿಲ್ಲ. ಇಡೀ ದಕ್ಷಿಣ ಚೈನವನ್ನು ಕಮ್ಯೂನಿಸ್ಟರ ವಿರುದ್ಧ ನಿಂತು ತಾವು ಉಳಿಸಿಕೊಳ್ಳುವೆವೆಂದೂ ಕೇಂಟನ್ ಅವರ ರಾಜಧಾನಿಯಾಗುವದೆಂದೂ ರಾಷ್ಟ್ರೀಯರನ್ನುತ್ತಿದ್ದಾರೆ. ಕೇಂಟನನ್ನು ಖಾಲಿಮಾಡುವ ಪೂರ್ವ ನಿಶ್ಚಯವಿದ್ದರೂ, ಈಗ ರಾಷ್ಟ್ರೀಯ ಸರಕಾರವದನ್ನು ಬಿಟ್ಟುಹೋಗುವದಿಲ್ಲವೆಂದು ತಿಳಿದುಬಂದಿದೆ. ಫಿಲಿಪ್ಪಾಯಿನ್ ಸರಕಾರದ ಆಮಂತ್ರಣಾನುಸಾರವಾಗಿ ಚಿಯಾಂಗ್‌ಕೈಶೇಕರು ಮನಿಲಾಕ್ಕೆ ಹೋಗಿ ಅಲ್ಲಿ ಫಿಲಿಪ್ಪಾಯಿನ್ ಸರಕಾರೀ ಅಧಿಪತಿಗಳೊಂದಿಗೆ, ಕಮ್ಯೂನಿಸ್ಟ್ ವ್ಯಾಪನೆಯ ಪ್ರತಿಬಂಧಕೋಪಾಯಗಳ ಕುರಿತು ಆಲೋಚನೆ ನಡೆಸುತ್ತಿರುವುದು ಗಣ್ಯಸಂಗತಿ. ಕಮ್ಯೂನಿಸ್ಟ್ ಚೈನದ ಮೇಲ್ಗಡೆ ರಶ್ಯನ್ ವಿಮಾನಗಳು ನಿರಾತಂಕವಾಗಿ ಹಾರಾಡಿರುವುದು ತಿಳಿದುಬಂದಿದೆ; ಕಮ್ಯೂನಿಸ್ಟ್ ಚೈನದೊಂದಿಗೆ ಜಪಾನು ವ್ಯಾಪಾರ ಒಡಂಬಡಿಕೆಯ ಮಾತುಕತೆ ಹೂಡಿದೆ.

ಬರ್ಲಿನ್ನಿನ ಗಡಿವಲಯಗಳಲ್ಲಿ ರಶ್ಯಾ ಮತ್ತು ಅಮೇರಿಕದ ಪಹರೆ ಸೋಲ್ಜರರೊಳಗೆ ಸಣ್ಣ ಪುಟ್ಟ ಘರ್ಷಣೆಗಳಾಗಿರುವುದೂ ಪರಸ್ಪರ ನಿಷೇಧ ಸೂಚನೆಗಳು ನಡೆದಿರುವುದೂ ಕೇಳಿಬರುತ್ತಿದೆ. ಒಂದೆಡೆ ಓರ್ವ ಅಮೇರಿಕನ್ ಅಧಿಕಾರಿಯು ಓರ್ವ ರಶ್ಯನ್ ಸೋಲ್ಜರನನ್ನು ಗುಂಡಿಟ್ಟು ಕೊಂದುಹಾಕಿದ್ದಾನೆ.

ಆಸ್ಟ್ರೇಲಿಯದಲ್ಲಿ ಕಲ್ಲಿದಲ ಗಣಿ ಕೆಲಸಗಾರರು ಕಳೆದೆರಡುವಾರಗಳಿಂದ ಮುಷ್ಕರದಲ್ಲಿದ್ದಾರೆ. ಲಂಡನ್ನಿನಲ್ಲಿ ಧಕ್ಕೇ ಮುಷ್ಕರವೆದ್ದಿದೆ.

“ಪ್ರಪಂಚವು ನಿಧಾನವಾಗಿ ಮತ್ತು ಕ್ರಮಶಃ ಲೋಕಶಾಂತಿಯತ್ತ ನಡೆದಿದೆ; ಆ ಗುರಿಮುಟ್ಟುವದು ನಿಶ್ಚಯ. 1945 ನೇ ಎಪ್ರಿಲಿನಿಂದ ಶಾಂತಿಗಾಗಿ ನಾನು ಎಡೆಬಿಡದೆ ಧರ್ಮ ಯುದ್ಧವನ್ನೇ ನಡೆಸಿದ್ದೇನೆ. ಲೋಕಶಾಂತಿ ಸಾಧನೆಗಾಗಿ ಪ್ರತಿಯೊಂದು ಸಂದರ್ಭವನ್ನೂ ಉಪಯೋಗಿಸಿದ್ದೇನೆ. ಇನ್ನಾದರೂ ಅದನ್ನೇ ಮಾಡಲಿದ್ದೇನೆ” ಎಂದು ಅಮೇರಿಕಾಧ್ಯಕ್ಷ ಟ್ರೂಮೇನರಂದಿದ್ದಾರೆ.

ಬರ್ಮಾ ಯುದ್ಧರಂಗದಲ್ಲಿ ವಿಶೇಷ ಆಗುಹೋಗುಗಳೇನೂ ನಡೆದಿಲ್ಲ.

ಭಾರತ ರಂಗದಲ್ಲಿ

ನವ ಸ್ವಾತಂತ್ರ್ಯದ ಪರಿಣಾಮವಾಗಿ ಎದ್ದಿದ್ದ ರಾಜಕೀಯ ಸಮಸ್ಯೆಗಳಲ್ಲಿ ಭಾರತದ ಪಾಲಿಗೆ ಇನ್ನೂ ಉಳಿದಿರುವ ಏಕಮಾತ್ರ ಗೊಂದಲವೆಂದರೆ ಕಾಶ್ಮೀರದ್ದು; ಭಾರತವು ಸದ್ವ್ಯವಹಾರ ಮೂಲಕ ಸಂಧಾನ ಸಾಧಿಸಿಕೊಳ್ಳಲಾರದ ರಾಷ್ಟ್ರವೊಂದು ಪ್ರಪಂಚದಲ್ಲಿರುವುದಾದರೆ, ಅದು ಬೇರಾವುದೂ ಆಗಿರದೆ ತನ್ನಿಂದ ಇತ್ತೀಚೆಗೆ ಸಿಡಿದು ಹೋದ ಪಾಕಿಸ್ತಾನವೆಂಬ ಅನುಭವವು ಭಾರತಕ್ಕಿಂದು ಆಗುತ್ತಿದೆ. ಕಾಶ್ಮೀರದಲ್ಲಿ ಹೋರಾಟ ನಿಲ್ಲಿಸುವ ತಾತ್ಕಾಲಿಕ ಒಡಂಬಡಿಕೆಯೊಂದು ಗುಂಡು ಹಾರಾಟ ಮುಕ್ತಾಯದೊಂದಿಗೆ ಈ ಇಸವಿಯ ಮೊದಲನೇ ದಿನದಿಂದಲೇ ಅಸ್ತಿತ್ವದಲ್ಲಿದೆ. ಮುಂದೆ ಕಾಶ್ಮೀರವು ಭಾರತದೊಂದಿಗೋ ಪಾಕಿಸ್ತಾನದೊಂದಿಗೋ ಎಂಬುದನ್ನು ನಿರ್ಣಯಿಸುವ ಕಾಶ್ಮೀರೀ ಜನಮತ ಸಂಗ್ರಹದ ಪೂರ್ವ ಪೀಠಿಕೆಯಾಗಿ ಭಾರತ ಮತ್ತು ಪಾಕಿಸ್ತಾನಗಳೊಳಗಿನ ರಾಜಕೀಯ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಒಂದು ಸುದೃಢ ಸಂಧಾನ ಸಂಧಿಸಬೇಕೆಂದು ಸಂಯುಕ್ತರಾಷ್ಟ್ರ ಸಂಘದ ಕಾಶ್ಮೀರ ಕಮಿಶನಿನವರು ಮಾಡಿದ ಪ್ರಯತ್ನ ಪರಾಭವಗೊಂಡಿದೆ. ಕಮಿಶನಿನ ಮೊದಲನೆಯ ಹಾಗೂ ಎರಡನೆಯ ಸೂಚನೆಗಳಿಗೆ ಭಾರತ ಮತ್ತು ಪಾಕಿಸ್ತಾನವೆರಡೂ ತಂತಮ್ಮ ಸ್ವಂತ ಕಾರಣಗಳ ಮೇಲಿಂದ ಆಕ್ಷೇಪಿಸಿವೆ. ಈ ರೀತಿ ಜನಮತ ಸಂಗ್ರಹದ ಪೂರ್ವ ವ್ಯವಸ್ಥೆಯಲ್ಲಿ ಒಮ್ಮತವಾಗಲಿಲ್ಲವೆಂದಾದ ಬೆನ್ನಲ್ಲೇ ಕಾಶ್ಮೀರದಲ್ಲಿ ಆ ದಿನದಿಂದ ಥಂಡಾಗೊಂಡಿರುವ ಕದನರಂಗವು ಪುನಃ ಸ್ಫೋಟಗೊಳ್ಳುವದು ಸಹಜ. ಪ್ರಕೃತ ಇಂತಹ ಅಪಾಯ ಸಂಭವಿಸದಂತೆ ನೋಡಿಕೊಂಡು, ಆ ಮೇಲೆ ಹೊಸತಾಗಿ ರಾಜಕೀಯ ಸಂಧಾನ ಸಾಧನೆಯನ್ನು ಕೈಕೊಳ್ಳಬೇಕೆಂಬುದಕ್ಕಾಗಿ ಕಾಶ್ಮೀರ ಕಮಿಶನಿನವರು ಈ ಎರಡು ರಾಷ್ಟ್ರಗಳನ್ನೂ ಸೇನಾ ಮಾತುಕತೆಗಳಿಗಾಗಿ ಆಹ್ವಾನಿಸಿದ್ದಾರೆ; ಎರಡು ರಾಷ್ಟ್ರಗಳೂ ಈ ಆಮಂತ್ರಣವನ್ನು ಅಂಗೀಕರಿಸಿವೆ ಎಂದು ತಿಳಿದುಬಂದಿದೆ. ಆದಿನ ಯುದ್ಧನಿಲ್ಲಿಸಿದ್ದ ಗಡಿಯೇ ಅಚಲವಾಗಿ ಉಳಿಯುವಂತೆ, ಯುದ್ಧರಹಿತ ಗಡಿಗೆರೆಗಳನ್ನು ನಿರ್ಧರಿಸುವುದೇ ಈ ಸೇನಾ ಸಮ್ಮೇಳನದ ಉದ್ದೇಶ.

ಭಾರತದೊಂದಿಗೆ ಸೇರಿಕೊಳ್ಳಬೇಕೆಂಬುದಕ್ಕೆ ಇತ್ತೀಚೆಗೆ ಪ್ರಬಲ ಬಹುಮತ ದೊರೆತ ಚಂದ್ರನಾಗೋರನ್ನು ಭಾರತಕ್ಕೆ ಒಪ್ಪಿಸಿಕೊಡುವ ಸಂಬಂಧವಾಗಿ ಭಾರತ ಮತ್ತು ಫ್ರೆಂಚ್ ಸರಕಾರಗಳ ಜತೆ ಜಾಹೀರುನಾಮೆಯೊಂದು ಸದ್ಯದಲ್ಲೇ ಹೊರಡಲಿದೆಯೆಂದು ಭಾರತದ ಫ್ರೆಂಚ್ ವಲಯಗಳ ಕಮಿಶನರ್ ಜಾಹೀರುಮಾಡಿದ್ದಾರೆ.

ಆಹಾರ ಸ್ವಾವಲಂಬನೆ

ರಾಷ್ಟ್ರದೊಳಗಡೆಯಲ್ಲಿ ಭಾರತ ಸರಕಾರವು ಅತ್ಯಂತ ರಭಸದಿಂದ ಕೈಕೊಂಡಿರುವ ಕಾರ್ಯಕ್ರಮವೆಂದರೆ 1951 ರೊಳಗೆ ಭಾರತವನ್ನು ಆಹಾರ ಸ್ವಾವಲಂಬಿಯಾಗಿ ಮಾರ್ಪಡಿಸಬೇಕೆಂಬ ಗುರಿಯಿಟ್ಟುಕೊಂಡು ಅಧಿಕಾಹಾರೋತ್ಪತ್ತಿ ಪ್ರೋತ್ಸಾಹ. ರಾಷ್ಟ್ರದ ಮೂಲೆ ಮೂಲೆಯಲ್ಲೂ ಈ ಕಾರ್ಯವು ಪರಿಣಾಮಕಾರಿಯಾಗಿ ಜರಗುವಂತೆ ಸರಕಾರವು ಇಷ್ಟರಲ್ಲೇ ಯಂತ್ರ ಚಾಲೂ ಮಾಡಿದೆ. ಇದೇ ತಾ. ೬ರಲ್ಲಿ ಗವರ್ನರ್ ಜನರಲ್ ರಾಜಾಜಿಯವರು ದೇಶ ವ್ಯಾಪೀ ಆಕಾಶವಾಣೀ ಭಾಷಣವೀಯುತ್ತಾ ಬೋಧಿಸಿದರು: “ನಮಗೆ ಬೇಕಾಗುವ ಎಲ್ಲಾ ಆಹಾರಗಳನ್ನೂ ನಾವೇ ಬೆಳೆಯಿಸಬೇಕಾಗಿದೆ. ಇಲ್ಲವಾದರೆ, ನಮ್ಮ ಜನ ಸಂಖ್ಯೆಯನ್ನು ತಗ್ಗಿಸುವಂತಹ ಬರಗಾಲ ಹಾಗೂ ಗೊಂದಲಗಳನ್ನೇ ನಾವು ಆಮಂತ್ರಿಸಿಕೊಂಡಂತಾಗುವದು. ಪ್ರಕೃತಿಯು ಅವಿಶ್ರಾಂತ ಗಣಿತಗಾರನಿದ್ದು ತನ್ನಂತೆ ಕೆಲಸ ಮಾಡುತ್ತಾ ಹೋಗುವಂತಹದಿದೆ. ನಾವು ಒಂದು ರಾಷ್ಟ್ರವಾಗಿ ಬಾಳಿ, ಸ್ವತಂತ್ರ ಹಾಗೂ ನಾಗರಿಕ ಜನರಾಗಿ ಗಣನೆ ಹೊಂದುವಂತೆ ಮಾಡಿಕೊಳ್ಳುವೆವೆ? ಮಾಡುವೆವೆಂದು ನನಗನ್ನಿಸುತ್ತದೆ. ಸರಿ, ಹಾಗಾದರೆ ನಾವೊಮ್ಮೆ ಕುಳಿತು ಆಹಾರಾಭಾವದ ಕುರಿತು ಚಿಂತನೆ ಮಾಡಬೇಕು; ಆ ಚಿಂತನೆಯಿಂದಾವುದು ಹೊಳೆಯುವುದೋ ಅದರಂತೆ ಮಾಡಬೇಕು. ಇಲ್ಲವಾದರೆ ನಾವು ಕುಸಿದು ಬೀಳುವೆವು. ಪ್ರಕೃತ ನಾವು ಪರದೇಶಗಳಿಂದ ಆಹಾರ ಧಾನ್ಯಗಳಂತೆಯೇ ಇತರ ಸಾಮಾಗ್ರಿ ಸಲಕರಣೆಗಳನ್ನೂ ಹೇರಳವಾಗಿ ಆಮದು ಪಡಿಸಿಕೊಳ್ಳುತಿದ್ದೇವೆ. ಇದಕ್ಕೆ ಪ್ರತಿಯಾಗಿ ಹೆಚ್ಚಿನ ಸಾಮಾಗ್ರಿಗಳನ್ನು ತಯಾರಿಸಿ, ವಿದೇಶಗಳಿಗೆ ರಫ್ತುಮಾಡುವ ಬದಲಿಗೆ ಯುದ್ಧಕಾಲದಲ್ಲಿ ನಾವು ಇಂಗ್ಲಾಂಡಿನ ಬೇಂಕುಗಳಲ್ಲಿರಿಸಿದ್ದ ಉಳಿತಾಯಗಳಿಂದಲೇ ಅವುಗಳ ಮೌಲ್ಯವನ್ನು ತೆರುತಿದ್ದೇವೆ. ಸದ್ಯಕ್ಕಿದು ಒಳ್ಳೆಯದೇ. ಆದರೆ ಸದಾಕಾಲವೂ ಹೀಗಿರಲು ಸಾಧ್ಯವಿಲ್ಲ. ಸಾಧ್ಯವೆ? ನಾವು ರಫ್ತುಮಾಡಲು ನಮ್ಮಲ್ಲಿರುವದಕ್ಕಿಂತ ಹೆಚ್ಚಿನದನ್ನು ಆಮದು ಪಡಿಸಿಕೊಳ್ಳುವದನ್ನು ನಿಲ್ಲಿಸಿಬಿಡಬೇಕು. ನಾವಾಗಿ ನಿಲ್ಲಿಸಿಕೊಳ್ಳದೆ ಹೋದರೆ ಅದು ತಾನಾಗಿಯೇ ನಿಲ್ಲಲಿದೆ. ಆದರೆ ನಾವೇನನ್ನೇ ಮಾಡಿದರೂ ಮಾಡದಿದ್ದರೂ ಊಟವನ್ನಂತೂ ಮಾಡಲೇಬೇಕು. ಬೇರಾವುದೇ ಆದರೂ ಕಾದುನಿಲ್ಲಬಲ್ಲುದು; ಇದು ಮಾತ್ರ ನಿಲ್ಲದು. ನಾವು ಅಕ್ಕಿಯ ಅನ್ನ ಉಣ್ಣುವ ಜನ. ದೊಡ್ಡ ಪರಿಮಾಣದಲ್ಲಿ ಗೋದಿಯನ್ನೂ ಉಪಯೋಗಿಸುತ್ತೇವೆ. ನಾವು ಒಮ್ಮೆಗೇ ಮತ್ತು ಸುಲಭವಾಗಿ ಸಾಗುವಳೀ ಭೂಮಿಯನ್ನು ವಿಸ್ತರಿಸಿಕೊಳ್ಳಲಾರೆವು. ನಮ್ಮನ್ನೇ ನಾವು ಹೊಂದಿಸಿಕೊಳ್ಳಬಲ್ಲೆವಾದರೆ, ಕಡಿಮೆಯಿದ್ದ ಆಹಾರದ ಒಂದು ವರ್ಗದ ಬದಲಿಗೆ ಇನ್ನೊಂದನ್ನು ಉಪಯೋಗಿಸಿಕೊಳ್ಳಲು ಕಲಿಯಬಹುದು. ಅಧಿಕ ಅಕ್ಕಿ ಉತ್ಪನ್ನದ ನೀರಾವರಿ ಯೋಜನೆಗಳು ಪೂರ್ಣಗೊಳ್ಳುವ ವರೆಗೆ ಕಾಯುತ್ತಾ ಕುಳಿತಿರಲಾರೆವು; ಬದಲಿಗೆ ಬೇಗನೇ ಫಲಕೊಡುವ ಸಜ್ಜೆ ಸಾವಣೆಗಳನ್ನು, ಹಣ್ಣುಹಂಪಲುಗಳನ್ನು ಬೆಳೆಸಬಹುದು. ಮೊಟ್ಟೆಗಾಗಿ ಕೋಳಿಗಳನ್ನೂ, ಮೀನುಗಳನ್ನೂ ಸಾಕಬಹುದು. ದೈನಿಕವಾಗಿ ರಾಗಿ, ಜೋಳ, ಸಜ್ಜೆ ಇತ್ಯಾದಿಗಳನ್ನೇ ಉಪಯೋಗಿಸುತ್ತಿದ್ದು ಅಕ್ಕಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸುತಿದ್ದ ರೈತರು ಮತ್ತು ಸ್ವಂತ ಭೂಮಿಯಿಲ್ಲದ ಕೂಲಿಗರು ಕೂಡಾ ಈಗ ಎಲ್ಲರೂ ಅಕ್ಕಿಯನ್ನೇ ಉಣ್ಣಹತ್ತಿದ್ದಾರೆ. ಜತೆಯಲ್ಲಿ ಜನಸಂಖ್ಯೆಯೂ ಬೆಳೆದಿದೆ. ಹೀಗಾಗಿ ಅಕ್ಕಿಯವೆಚ್ಚ ಬಹಳವಾಗಿ ಹೆಚ್ಚಿದೆ. ಅಕ್ಕಿಯ ಆಹಾರವು ಬಾಯಿ ರುಚಿಯಿದ್ದಷ್ಟು ಆರೋಗ್ಯಕರವೇನೂ ಅಲ್ಲ; ಅದರ ಕ್ಷೇತ್ರ ವಿಸ್ತರಿಸುವುದೂ ಪ್ರಯಾಸಕರವಾದುದು. ಆದ್ದರಿಂದ ರಾಗಿ, ಜೋಳ ಇತ್ಯಾದಿಗಳನ್ನೇ ಅಧಿಕಾಧಿಕವಾಗಿ ಉಪಯೋಗಿಸಬೇಕು. ಮೇಲ್ದರ್ಜೆಯವರೆನ್ನಿಸುವವರು ಇದನ್ನೂ ಜೈಲುಪ್ರವೇಶ, ಗಾಂಧೀಟೋಪಿ ಧಾರಣೆಯಂತಹ ‘ಫೇಶನ್’ ಆಗಿ ತಾವು ಆಚರಿಸಿ ಮಿಕ್ಕವರಿಗೊಂದು ಮಾದರಿಯಾಗಬೇಕು.”

THE CANARA INDUSTRIAL & BANKING SYNDICATE LIMITED., SALIGRAMA RURAL BRANCH

NOTICE.

The loss of the Bank's Receipt issued in respect of the Fixed Deposit No. 240 of Rs. 2100/- of Mr. B. Sitharama Maiya, S/o Subbanna Maiya, Kotathattu village, Kota P. O. having been intimated to us, it is hereby notified that a duplicate Receipt will be issued unless objections are received by us within a fortnight from the date of publication of this notice.

SALIGRAMA, 28th June, 1949.

K. P. Urala. AGENT.

THE
Canara Banking Corporation Ltd.
(Incorporated in India)
Estd. 1906
HEAD OFFICE, UDIPI, S. I.

Capital Authorised	....	Rs. 25,00,000.
Capital Issued & Subscribed	....	Rs. 20,00,000.
Capital Paid Up	....	Rs. 19,99,800.
Reserves	....	Rs. 8,91,000.

Banking business of every description transacted

ಗುರುವಾರ, ಉಡುಪಿ, ೧೪-೭-'೪೯

ಮುಂದಿನ ಜಿಲ್ಲಾ ಬೋರ್ಡು ಚುನಾವಣೆ

ಈ ಮೊದಲೇ ಆಗಬೇಕಾಗಿದ್ದ, ಕೆಲವು ಕಾರಣಗಳಿಂದಾಗಿ ಮುಂದುವರಿಸಲ್ಪಟ್ಟಿದ್ದ ಜಿಲ್ಲಾ ಬೋರ್ಡು ಚುನಾವಣೆಗಳು ಮದ್ರಾಸ್ ಪ್ರಾಂತ್ಯದಲ್ಲೆಲ್ಲಾ ಈ ಬಾರಿ ನಡೆಯಲಿವೆ. ಪ್ರಾಂತ್ಯದ ಬೇರೆ ಬೇರೆ ಭಾಗಗಳಿಗೆ ಈ ಚುನಾವಣಾ ಸಂಬಂಧದ ದಿನಗಳು ನಿಶ್ಚಯಿಸಲ್ಪಟ್ಟಿವೆ. ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಚುನಾವಣೆಯು ಕೊನೆಯದಾಗಿ, ಬರುವ ಸೆಪ್ಟಂಬರ್ ತಿಂಗಳಲ್ಲಿ ನಡೆಯುವದೆಂದು ತಿಳಿದು ಬಂದಿದೆ. ತಮಿಳುನಾಡು ಮತ್ತು ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಈ ಚುನಾವಣೆಯಲ್ಲಿ ಭಾಗವಹಿಸುವ ನಿರ್ಧಾರಮಾಡಿ ಇಷ್ಟರಲ್ಲೇ ಕಾರ್ಯರಂಗಕ್ಕಿಳಿದಿವೆ. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯೂ ಇಲ್ಲಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಸ್ಪರ್ಧಿಸುವ ನಿರ್ಣಯ ಮಾಡಿದೆ.

ಸ್ಥಳೀಯ ಸಂಸ್ಥೆಗಳ ಆಡಳಿತೆಯ ಮಟ್ಟಿಗೆ ಆಡಳಿತ ಯೋಗ್ಯತೆ, ಕರ್ತವ್ಯದಕ್ಷತೆ ಮತ್ತು ನ್ಯಾಯನಿಷ್ಠುರತೆಯಂತಹ ವ್ಯಕ್ತಿಗತ ಗುಣಗಳಿಗಿರುವ ಪ್ರಾಧಾನ್ಯತೆಯು ರಾಜಕೀಯ ತತ್ವಗಳಿಗಿಲ್ಲವೆನ್ನಬಹುದು. ಆದ್ದರಿಂದ ಕಾಂಗ್ರೆಸಿನಂತಹ ರಾಜಕೀಯ ಪಕ್ಷವು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾಗವಹಿಸಬಾರದೆಂಬ ಅರ್ಥವಲ್ಲ; ಮುಖ್ಯವಾಗಿ ವ್ಯಕ್ತಿಗತ ಯೋಗ್ಯತೆಗಳನ್ನು ಗಣಿಸಿ ಉಮೇದ್ವಾರಗಳನ್ನು ಆರಿಸಬೇಕೆಂಬುವೇ ತಾತ್ಪರ್ಯ. ಇಂತಹ ಸಮರ್ಥರನ್ನು ಹೆಕ್ಕಿಕೊಡುವ ಕೆಲಸಕ್ಕಾಗಿಯೇ ಕಾಂಗ್ರೆಸು ಈ ಚುನಾವಣೆಯಲ್ಲಿ ಪ್ರತ್ಯಕ್ಷ ಭಾಗವಹಿಸುವ ಅಗತ್ಯವಿದೆಯೇ? ಸ್ವತಃ ತಾನೇ ರಂಗಕ್ಕಿಳಿಯುವ ಬದಲಿಗೆ, ಸಂಶವರಲ್ಲಿ ಯೋಗ್ಯರಾದವರಿಗೆ ಬೆಂಬಲವಾಗುವ ಮತ್ತು ಯೋಗ್ಯರೇ ನಿಲ್ಲುವಂತೆ ಪ್ರೇರೇಪಿಸುವ ಕೆಲಸಗಳನ್ನು ಹಿಂದಿನಂತೆ ನಡೆಯಿಸಿದರೆ ಸಾಲದೇ? ತನ್ನ ಉಮೇದ್ವಾರಗಳನ್ನು ಆರಿಸಿಕೊಳ್ಳುವಾಗ ಯೋಗ್ಯತಾಯೋಗ್ಯತೆಗಳ ತುಲನೆಗಿಂತ ಹೆಚ್ಚಾಗಿ ಹಂಗು ದಾಕ್ಷಿಣ್ಯಗಳಿಗೆ ಬಲಿಬೀಳಬೇಕಾದ ಸಂದರ್ಭಗಳೇ ಕಾಂಗ್ರೆಸ್ ಸಮಿತಿಗೊದಗಲಾರವೆ? ಮುಂತಾದ ಪ್ರಶ್ನೆಗಳು ಈ ಸಂದರ್ಭದಲ್ಲೇಳುವದು ಸಹಜ. ಆದರೆ ಇವೆಲ್ಲಾ ಸಂದೇಹಗಳೊಂದಿಗೆ ಸದ್ಯದ ಸ್ಥಿತಿಗತಿಗಳನ್ನು ಹೋಲಿಸಿ ನೋಡುವಾಗ,-ನಿಷ್ಪಕ್ಷಪಾತವಾಗಿ, ನ್ಯಾಯನಿಷ್ಠುರತೆಯಿಂದ ಪರಿಶೀಲಿಸಬಲ್ಲುದಾದರೆ-ಕಾಂಗ್ರೆಸ್ ಸಮಿತಿಯು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಭಾಗವಹಿಸುವ ನಿರ್ಧಾರ ಮಾಡಿದುದು ಸರಿಯೆಂದೇ ಒಪ್ಪಿಕೊಳ್ಳಬೇಕಾಗುತ್ತದೆ. ಒಂದನೆಯದಾಗಿ ಮಿಕ್ಕೆಡೆಗಳ ಕಾಂಗ್ರೆಸ್ ಸಮಿತಿಗಳು ಈ ಚುನಾವಣೆಯಲ್ಲಿ ಸ್ಪರ್ಧಿಸುವ ನಿರ್ಧಾರ ಮಾಡಿರುವಾಗ ದ. ಕ. ಜಿಲ್ಲಾ ಕಾಂಗ್ರೆಸ್ ಹಿಂದುಳಿಯಲಾಗುವದಿಲ್ಲ; ಎರಡನೆಯದಾಗಿ ಕಾಂಗ್ರೆಸ್ ಹಿಂದೆ ನಿಂತರೂ, ಸಮತಾವಾದಿಗಳು, ಕಮ್ಯೂನಿಷ್ಟರೇ ಮೊದಲಾದವರು ತಮ್ಮಿಂದ ಸಾಧ್ಯವಿದ್ದಷ್ಟಾದರೂ ಸ್ಪರ್ಧಿಸುವ ಚಿಹ್ನೆ ತೋರಿ ಬರುತ್ತಿರುವುದರಿಂದ, ಈ ಸ್ಥಳೀಯ ರಂಗದಲ್ಲಿ ಪಕ್ಷ ಸ್ಪರ್ಧೆ ಬೇಡವೆಂದರೆ ನಡೆಯುವಂತಿಲ್ಲ. ಮೂರನೆಯದಾಗಿ ಕಾಂಗ್ರೆಸ್ ತೊರೆದುಬಿಟ್ಟರೆ ಮತ್ತೆ ಜಿಲ್ಲಾ ಬೋರ್ಡು ಚುನಾವಣಾ ರಂಗದಲ್ಲಿ ಮುಖ್ಯವಾಗಿ ತಾಂಡವವಾಡುವದು ಜಾತೀಯತೆ ಎಂಬುದು ನಿಸ್ಸಂದೇಹ. ಆದ್ದರಿಂದ ಈ ಸಂಬಂಧದ ಕಾಂಗ್ರೆಸ್ ಸಮಿತಿಯ ನಿರ್ಣಯವೇನೂ ತಪ್ಪಲ್ಲ. ಹೊರಗಿನ ವಾತಾವರಣದ ಮೇಲಿಂದ ಈ ನಿರ್ಧಾರವು ಸರಿಯೆನ್ನುವಾಗಲೇ, ಕಾಂಗ್ರೆಸಿನ ಒಳರಂಗದಲ್ಲಿ ಯಾವುದೇ ರೀತಿಯ ದೌರ್ಬಲ್ಯ ತೋರಿಬಂದಲ್ಲಿ "ಪ್ರಮಾದವಾಯಿತು!" ಎನ್ನುವ ಸಂದರ್ಭ ಬರಲಾರದೆಂಬ ಭರವಸೆಯಿಲ್ಲ. ಆದ್ದರಿಂದ, ಈ ಸಂಬಂಧದ ಹೊಣೆಹೊತ್ತಿರುವ ಕಾಂಗ್ರೆಸಿಗರು ಈಗ ನೋಡಿಕೊಳ್ಳಬೇಕಾದುದು ಸ್ವತಃ ತಮ್ಮನ್ನೇ. ಮುಂಬರುವ ಶಾಸನಸಭಾ ಚುನಾವಣೆಗಳನ್ನು ನೆನೆಸಿ, ಕಾಂಗ್ರೆಸ್ಸನ್ನು ಆ ಹೋರಾಟಕ್ಕಳಿಸುವ ಮೊದಲು ಅದರಲ್ಲಿ ದುರಸ್ತಿಪಡಿಸಿಕೊಳ್ಳುವ ಅಂಶವಿದೆ ಎಂಬುದು ನಾಯಕರ ಲಕ್ಷ್ಯವನ್ನೀಗ ಎಳೆದಿದೆ. ಅಂತಹ ದುರಸ್ತಿ ಕಾರ್ಯ ಬಾಕಿಯುಳಿದಿರುವಾಗಲೇ ಮದ್ರಾಸ್ ಪ್ರಾಂತ್ಯದ, ಮತ್ತದರೊಳಗಿನ ದಕ್ಷಿಣ ಕನ್ನಡದ ಕಾಂಗ್ರೆಸ್ ಸಮಿತಿಗಳು ಈ ಚುನಾವಣೆಯಲ್ಲಿ ಭಾಗವಹಿಸಬೇಕಾಗಿ ಬಂದಿದೆ, ಎಂಬುದು ಜ್ಞಾಪಕದಲ್ಲಿರಬೇಕು. ಮೇಲಾಗಿ ದಕ್ಷಿಣ ಕನ್ನಡದ ಕಾಂಗ್ರೆಸಿಗರಿಗೆ ಈ ಸಂದರ್ಭದಲ್ಲಾದರೂ ನೆನಪಿಗೆ ಬಂದೇ ತೀರುವಂತಹ ಕೆಲವು ಕಹಿ ಅನುಭವಗಳು ಹಿಂದಿನ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಾಗಿದ್ದುವು. ಇಂತಹ ಪರಿಸ್ಥಿತಿಯಲ್ಲಿ ದಕ್ಷಿಣ ಕನ್ನಡದ ಕಾಂಗ್ರೆಸಿಗರು, ತಮ್ಮ ಭವಿಷ್ಯದ ಮೇಲೆ ದೊಡ್ಡ ಪರಿಣಾಮ ಮಾಡಬಲ್ಲ ಒಂದು ಯೋಜನೆಗಿಳಿಯುತ್ತಿದ್ದೇವೆ ಎಂದು ಭಾವಿಸಿಕೊಂಡು, ಈ ಸಂದರ್ಭದಲ್ಲಿ ವಿಶೇಷ ಜಾಗರೂಕತೆ ವಹಿಸಬೇಕಾದುದು ಅಗತ್ಯ. ಕಾಂಗ್ರೆಸಿನ ಸ್ಥಾನಮಾನ ದೊಡ್ಡದು-ಅದು ಜನತೆಯಲ್ಲಿ ಗಳಿಸಿರುವ ವರ್ಚಸ್ಸು ದೊಡ್ಡದು-ಈ ದಿನಗಳಲ್ಲಿ ಯಾರೆಷ್ಟೇ ಟೀಕಿಸಿದರೂ ಕಾಂಗ್ರೆಸಿಗೆ ಜನತಾಬೆಂಬಲವಿದ್ದೇ ಇದೆ, ಆದರ ಸ್ಥಾನಕ್ಕೆ ಬರಬಲ್ಲ ಇನ್ನೊಂದು ಪಕ್ಷವಿಲ್ಲ-ಎಂಬ ಆತ್ಮವಿಶ್ವಾಸದಿಂದ ದುಡುಕುವದು ಅಪಾಯಕರ. "ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸಿಗರ ಮೇಲೆ ಒಂದು ವಿಶಿಷ್ಟ ರೀತಿಯ ಕರ್ತವ್ಯ ಹಾಗೂ ಋಣಾನುಬಂಧದ ಹೊರೆಯಿದೆ. ಅವರು ಸ್ವತಃ ತಮ್ಮ ಹಾಗೂ ತಮ್ಮ ಇಂದಿನ ಕೆಲಸಗಳ ಯೋಗ್ಯತೆಯನ್ನೇ ತೋರಿಸಬೇಕಲ್ಲದೆ, ಗತಕಾಲದ ಕೀರ್ತಿಗಳಿಕೆಯನ್ನು ಎಳೆದು-ತಂದು ತೋರಿಸುವುದು ನಿರರ್ಥಕ" ಎಂದ ಬಾಬು ರಾಜೇಂದ್ರಪ್ರಸಾದರ ಮಾತು ಕಾಂಗ್ರೆಸಿಗರಿಗೆ ಸದಾ ಜ್ಞಾಪಕವಿರಬೇಕು. ಕಾಂಗ್ರೆಸಿನ ಎಲ್ಲಾ ಆ ಮೂಲ್ಯತೆಯೂ, ಅದು ಮಾಡಿರುವ ಜನತಾಸೇವೆಯಿಂದ ಬಂದುದು—ಅದೇನೂ ಜನ್ಮತಃ ಪವಿತ್ರಸಂಸ್ಥೆಯಲ್ಲ. ಒಳಗಡೆಯ ಕ್ಷಿದ್ದು ಕೊಂಡು ಕಾಂಗ್ರೆಸಿನ ಈ ತಿರುಳನ್ನು ಕೊರೆಯುವ ಕೀಟಗಳಿದ್ದರೆ, ಅವನ್ನೂ, ಕಾಂಗ್ರೆಸಿನ ಅಂಗವಾಗಿ ಗಣಿಸಿ ಬೆಳೆಯಿಸುವದು ಧರ್ಮವಾಗದೆಂಬ ಭಾವನೆ ಜನತೆಯಲ್ಲಿ ಬೆಳೆಯುತ್ತಾ ಹೋಗಿದೆ. ಈಗಿನ ಪರಿಸ್ಥಿತಿಯಲ್ಲಿ ಕಾಂಗ್ರೆಸಿನ ಹೊಣೆ ಹೊತ್ತವರು ನ್ಯಾಯ ತಪ್ಪಿದರೆಂದು ತೋರಿದರೆ, ಅಂಥವರನ್ನು ಆ ಕಾಂಗ್ರೆಸ್ ಕೀಟಗಳ ಸಾಲಿಗೆ ಸೇರಿಸುವಷ್ಟು ಜನ ಮುಂದುವರಿದ್ದಾರೆ. ಆದ್ದರಿಂದ ದಕ್ಷಿಣಕನ್ನಡದ ಕಾಂಗ್ರೆಸಿಗರ ಪರೀಕ್ಷಾಕಾಲವಿದು. ನಾವು ಮೊದಲೇ ಹೇಳಿರುವಂತೆ, ಸ್ಥಳೀಯ ಸಂಸ್ಥೆಗಳ ಮಟ್ಟಿಗೆ ಎಲ್ಲಕ್ಕಿಂತ ಮುಖ್ಯವಾದ ವ್ಯಕ್ತಿಗತ ಯೋಗ್ಯತೆ, ಹಾಗೂ ಜನತಾ ವಿಶ್ವಾಸಗಳಿಸಿರುವ ಜನಸೇವಾನಿಷ್ಠರನ್ನೇ ತಮ್ಮ ಉಮೇದ್ವಾರಗಳಾಗಿ ಆರಿಸುವುದರಲ್ಲಿ-ನ್ಯಾಯಬದ್ಧ ಮನಸ್ಸಾಕ್ಷಿಗೆ ಯಾತನೆ ಕೊಡಬಲ್ಲ ಯಾವುದೇ ಪಕ್ಷಪಾತ, ಜಾತ್ಯಭಿಮಾನ ನಡೆಯದಂತೆ ನೋಡುವುದರಲ್ಲಿ-ಜಿಲ್ಲೆಯ ಸಾಮಾನ್ಯ ಜನತೆಯ ಮುಂದಿನ ಮಹತ್ವದ ಹೊಣೆ ಹೊರಲಾಗುವಂತೆ ಜಾಗ್ರತೀ ಪ್ರಚಾರ ಮಾಡುವುದರಲ್ಲಿ-ದ. ಕ. ಜಿಲ್ಲೆಯ ಕಾಂಗ್ರೆಸಿಗರು ತಪ್ಪಿಬೀಳಲಾರರೆಂದು ನಿರೀಕ್ಷಿಸುತ್ತೇವೆ.

ಕಾಂಗ್ರೆಸ್ ಇಂದು, ಅದರ ವೈರಿಗಳು ನೆನಸಿರುವಷ್ಟು ನಿಸ್ಸತ್ವವೂ ಆಗಿಲ್ಲ. ಅದರ ಕಾರ್ಯಾಧಿಕಾರಿಗಳು ಭಾವಿಸಿಕೊಂಡಿರುವಷ್ಟು ಪ್ರಭಾವಶಾಲಿಯಾಗಿಯೂ ಉಳಿದಿಲ್ಲ. ಈ ತೂಕಕ್ಕಿಂತಲೂ ಕಾಂಗ್ರೆಸಿಗರು ಹಿಂದಿನ ಮತ್ತು ಇಂದಿನ ಕಾಂಗ್ರೆಸನ್ನು ತುಲನೆ ಮಾಡಿಕೊಳ್ಳುವದೇ ವಾಸಿ; ಅದರೊಳಗಡೆ ಹಿಂದೆ ಇದ್ದಷ್ಟು ತಿರುಳಾಗಲೀ, ಅದರ ಸುತ್ತಂಗಡೆ ಹಿಂದಿನ ವಾತಾವರಣವಾಗಲೀ ಈಗಿಲ್ಲ. ಮೇಲಾಗಿ ಕಾಂಗ್ರೆಸ್ ಕಾರ್ಯಾಧಿಕಾರಿಗಳ ಮಾತು ಹೇಗಿದ್ದರೂ ಚುನಾವಣೆಯಂತಹ ಸಂದರ್ಭಗಳಲ್ಲಿ ಅವರನ್ನು ಬಳಸಿ ನಿಲ್ಲುವ ಸ್ವಾರ್ಥಸಾಧಕರಿಗೇನೂ ಕಡಿಮೆಯಾಗದು, ಆದ್ದರಿಂದಲೇ ಕಾಂಗ್ರೆಸಿನ ಈ ಪರೀಕ್ಷಾಕಾಲದಲ್ಲಿ ವಿಶೇಷ ಜಾಗರೂಕತೆ, ನ್ಯಾಯನಿಷ್ಠುರತೆ-ಇರಲಿ, ಎನ್ನುತ್ತೇವೆ.

ಉಡುಪಿ

ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರಮಾಣ ಪತ್ರ ವಿತರಣೋತ್ಸವವು ತಾ ೧೦ರಲ್ಲಿ ಡಾ। ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಮೊಡರ್ನ್ ಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಥಾ ಸಾಂಗವಾಗಿ ಜರಗಿತೆಂದು ತಿಳಿದು ಬರುತ್ತದೆ.

ಬಾರಕೂರು ಕಡವಿನ ಕುರಿತು ಕಳೆದ ವಾರ ಪ್ರಕಟವಾದ ವಾರ್ತೆಗೆ ಉತ್ತರವೊಂದು ಬಂದಿದೆ. ಆ ದಿನ ನೆರೆಇದ್ದು ಕಡವಿನ ಇಕ್ಕೆಡೆಗಳಲ್ಲಿ ದಿಬ್ಬಣ, ಶಾಲಾ ಮಕ್ಕಳು ಮತ್ತು ಸಂತೆಯ ಜನರಿಂದ ಜನಸ್ತೋಮವು ತುಂಬಿದ್ದರೂ ಕಡವಿನವರು ಜಾಗ್ರತೆಯಿಂದ ಜನರನ್ನು ನಿಧಾನವಾಗಿ ದಾಟಿಸುತ್ತಿದ್ದರೆಂದು ತಿಳಿದು ಬರುತ್ತದೆ. (ಸಂ ನ).

ಹರತಾಳ—ಗೌಡಸಾರಸ್ವತ ಸಮಾಜದ ಗುರುಗಳಾದ ಶ್ರೀ ಕಾಶಿಮಠದ ಶ್ರೀ ಸುಕೃತೀಂದ್ರ ತೀರ್ಥರು ಕೊಚ್ಚಿಯಲ್ಲಿ ತಾ ೧೦ನೆ ರಾತ್ರಿ ವೈಕುಂಠವಾಸಿಗಳಾದ ಸುದ್ದಿಯು ಮರುದಿನ ಇಲ್ಲಿಗೆ ತಲ್ಪಿದೊಡನೆ ಸಮಾಜದ ಹತ್ತು ಸಮಸ್ತರು ತಮ್ಮ ವ್ಯಾಪಾರ ವಹಿವಾಟುಗಳನ್ನು ನಿಲ್ಲಿಸಿ ಹರತಾಳವನ್ನಾಚರಿಸಿದರು. ಸಂಜೆ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಸಮಾಜದವರ ದುಃಖ ಸೂಚಕ ಸಭೆಯು ಜರಗಿತೆಂದು ತಿಳಿದುಬರುತ್ತದೆ.

ಬ್ರಹ್ಮಾವರ.—ಶ್ರೀ ದುರ್ಗಾ ಪರಮೇಶ್ವರಿ ಯಕ್ಷಗಾನ ಸಂಘದ ಭಾಗವತರಾದ ಶ್ರೀ ಹಂದಾಡಿ ಜೈಲ್ಮನೆ ಮುಕಾಬಲ ಶೆಟ್ರು ತಾ ೮ರಲ್ಲಿ ತನ್ನ 40ನೇ ವರ್ಷದಲ್ಲಿ ದಿವಂಗತರಾದುದು ವಿಷಾದಕರವಿದೆ, ದಿವಂಗತರು ಜಿಲ್ಲೆಯ ಯಕ್ಷಗಾನ ಕಲಾ ಸೇವಕರಲ್ಲೊಬ್ಬರಿದ್ದು ಸರಳ ಸ್ವಭಾವಿಗಳಾಗಿದ್ದರು.

ಕುಂಬಳೆ

ಬಂಬ್ರಾಣ ಎಂಬಲ್ಲಿ ತಾ. ೬ರಂದು ಅಪರಾಹ್ನ 4 ಗಂಟೆಗೆ ಕಸ್ತೂರ್ ಬಾ ಸೇವಾ ಕೇಂದ್ರವನ್ನು ಶ್ರೀಮತಿ ಲೀಲಾವತಿ ನಿಕ್ಕಾಂಬರರಾಯರು ತೆರೆದಿರುವರು. ಅದರ ಉದ್ದೇಶವನ್ನು ವಿವರಿಸಿ ಶ್ರೀಮತಿ ಕುಮಾರಿ ನಿರಾಕುಪ್ಪಿಕ್ಕಾರ್ ಮತ್ತು ಶ್ರೀ ಬಿ. ಜಗನ್ನಾಥಶೆಟ್ಟಿ ಕೂಡಾ ಭಾಷಣ ಕೊಟ್ಟಿರುವರು. ಕೇಂದ್ರ ಕಾರ್ಯಕರ್ತೆಯರನ್ನಾಗಿ ಶ್ರೀಮತಿ ಕುಮಾರಿ ಸುನಂದ ಕಾಮತ್, ಶ್ರೀಮತಿ ನೀಲಮ್ಮ ಸೆಟ್ಟಿ ಕೂಡಾ ಇಬ್ಬರನ್ನು ನೇಮಕ ಮಾಡಲಾಗಿದೆ. ಬಂಬ್ರಾಣದ ಶ್ರೀ ಬಾಲಕೃಷ್ಣ ಅದ್ಯಂತಾಯರು ಬೇಕಾದ ಸ್ಥಳವನ್ನು ಒದಗಿಸಿ ಕೊಟ್ಟಿರುವರು. ಶ್ರೀ ಲಿಯೋ ಡೇಸರು ವಂದನಾರ್ಪಣೆ ಮಾಡಿದರು.

ನವಯುಗದ ಚಂದಾದಾರರಲ್ಲಿ ವಿನಂತಿ

ಇದೇ ಬರುವ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ 29ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 30ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ನವಯುಗದ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ದಯಮಾಡಿ ಸಕಾಲದಲ್ಲಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಅಂತೆಯೇ ಇನ್ನೂ ಚಂದಾ ಹಣ ಬಾಕಿ ಇಟ್ಟುಕೊಂಡಿರುವವರೂ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸುವಂತೆಯೂ ವಿನಂತಿ.

ಮೆನೇಜರ್,
ನವಯುಗ, ಉಡುಪಿ.

ಬಿಸಿಯೇರಿರುವ ಕಲ್ಕತ್ತ-ನೆಹರೂ ಭೇಟಿ!

ಎಲ್ಲಿ ಅಪಾಯವೋ ಅಲ್ಲಿಗೆ ತನ್ನ ಉಕ್ಕಿನ ಎದೆಯನ್ನು ಒಡ್ಡುತ್ತಾ ಮುನ್ನುಗ್ಗುವ—ಎಲ್ಲಿ ಕದಡಿದೆಯೋ ಅಲ್ಲಿಯ ಶುದ್ಧಿಗಾಗಿ ನಿರ್ಮಲಚಿತ್ತದೊಡನೆ ಧಾವಿಸುವ-ಪಂಡಿತ ಜವಾಹರಲಾಲ ನೆಹರೂಗಳು ಇದೇ ತಾ 12ರಲ್ಲಿ ಕಲ್ಕತ್ತೆಗೆ ಹೋಗಿದ್ದಾರೆ; ಅಲ್ಲಿ ಅವಿಶ್ರಾಂತವಾಗಿ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸುತಿದ್ದಾರೆ. ಕಲ್ಕತ್ತವಿಂದು "ಅಪಾಯ! ಪ್ರವೇಶವಿಲ್ಲ!" ಎಂಬ ಬೋರ್ಡು ತಾಗಿಸಿಕೊಂಡು ನಿಂತಂತೆ ಭೀಕರ ಗಂಭೀರತೆಯನ್ನು ಪ್ರದರ್ಶಿಸುತ್ತಿರುವ ನಗರ; ಪ್ರಜ್ವಲಿತ ಭಾರತದ ಸ್ಫೋಟ ನೆಲೆ. ಆದರೆ ಭಾರತದೊಂದು ಮಹತ್ವದ ಸುದ್ದಿಯವೆಂದರೆ, ಅಪಾಯವಿದ್ದಲ್ಲಿಗೆ ನುಗ್ಗಬಲ್ಲ ಅಗ್ರಗಣ್ಯ ನಾಯಕನು ಅದಕ್ಕಿರುವುದೇ. ಪ್ರಧಾನಮಂತ್ರಿ ನೆಹರು ಕಲ್ಕತ್ತಕ್ಕೆ ಹೋಗಿದ್ದಾರೆ!

ಗೊಂದಲ ಸ್ವಭಾವದ ನಗರ

ಆಧುನಿಕ ಭಾರತದ ಚರಿತ್ರೆಯಲ್ಲಿ ಬಂಗಾಳವಮತ್ತದರಮುಖ್ಯನಗರ ಕಲ್ಕತ್ತದ ಕಥಾನಕವು ಗಣ್ಯಭಾಗವನ್ನಾಕ್ರಮಿಸುವಂತಹದು. ಸ್ವಾತಂತ್ರ್ಯ ಹೋರಾಟದಂತೆಯೇ ರಾಷ್ಟ್ರದ ಒಳಗೊಂದಲಗಳ ಉಗಮಸ್ಥಾನವೂ ಇದೇ. ರಾಷ್ಟ್ರವಿಭಜನೆಯ ಪೂರ್ವೋತ್ತರದ ಹಿಂದೂ ಮುಸ್ಲಿಮ್ ಗೊಂದಲಗಳು ಪ್ರಥಮತಃ ದೊಡ್ಡ ಪರಿಮಾಣದಲ್ಲಿ ಆರಂಭಿಸಿದುದು ಕಲ್ಕತ್ತೆಯಲ್ಲಿ; ನೊನ್ನೆತಾನೇ ಕಾಂಗ್ರೆಸಿಗೆ ಚುನಾವಣಾ ರಂಗದಲ್ಲಿ ಮಹಾ ಪರಾಭವವನ್ನೊಡ್ಡಿದುದು ಕಲ್ಕತ್ತ; ಡಮ್‌ಡಮ್ ಶಸ್ತ್ರಾಗಾರದ ಮೇಲಿನ ಧಾಳಿಯಂತಹ ಕಮ್ಯೂನಿಸ್ಟ ಮಹಾ ಹೊಡೆತಬಿದ್ದುದೂ ಅಲ್ಲಿಯೇ; ಎಡೆಬಿಡದೆ ಹಿಂಸಾತ್ಮಕ ಕೃತ್ಯಗಳನ್ನಾಚರಿಸುತ್ತಾ, ಭಾರತದಲ್ಲೂ ಅಂತರ್ಯುದ್ಧದೊಂದು ಊರೀಗಲೂ ಇದೆ ಎಂಬಂತಾಗಿರುವುದು ಕಲ್ಕತ್ತೆಯಿಂದ. ಅಲ್ಲಿಯ ಕಾಂಗ್ರೆಸು ಅಂತಃಕಲಹಗಳ ದೆಸೆಯಿಂದ ದುರ್ಬಲವಾಗಿದೆ; ಪೋಲೀಸುದಳ ಪರಿಣಾಮಕಾರಿ ಕೆಲಸಮಾಡದೆ ಅವಹೇಳನಕ್ಕೀಡಾಗಿದೆ; ಶರತ್‌ಚಂದ್ರ ಬೋಸರಂತಹ ಕಾಂಗ್ರೆಸ್ ಇದಿರುವಾದಿ ಸಂಗಡಿಗರ ವರ್ಚಸ್ಸು ಎಲ್ಲವನ್ನೂ ಮೀರಿದೆ; ಅತ್ಯಷ್ಟ ನಿರಾಶ್ರಿತರು ತುಂಬಿಹೋಗಿದ್ದಾರೆ; ಈ ಪರಿಸ್ಥಿತಿಯನ್ನು ತಮ್ಮ ಅನುಕೂಲತೆಗಾಗಿ ಉಪಯೋಗಿಸಿಕೊಂಡು ಕಮ್ಯೂನಿಸ್ಟರು ಅಲ್ಲಿ ಅಪಾಯಕರ ರೀತಿಯಿಂದ ಬೆಳೆದಿದ್ದಾರೆ. ಇಂತಹ ಕಾದ ಕಾವಲಿಯ ಮೇಲೆ ಪಂಡಿತ ನೆಹರುಗಳೀಗ ಕಾಲಿಟ್ಟಿದ್ದಾರೆ!

ಕಾಂಗ್ರೆಸಿನ ಮೇಲೆ ಅಸಮಾಧಾನ

ಪಶ್ಚಿಮ ಬಂಗಾಳವು, ಅದರಲ್ಲೂ ಕಲ್ಕತ್ತಾ ನಗರವು ಸ್ವಂತ ಅಭಿಮಾನಕ್ಕಾಗಿ ಕಾಂಗ್ರೆಸ್ ನಿಷ್ಠೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ಬಂದಿದೆ. ಬಂಗಾಳಿಗಳ ಹುಟ್ಟುಗುಣ ಮತ್ತು ಅವರಿಗೊದಗಿರುವ ಪರಿಸ್ಥಿತಿಯೇ ಇದಕ್ಕೆ ಕಾರಣ. 'ಬಂಗಾಳೀ ಸ್ಫೂರ್ತಿ'ಯು ಆದಿಕಾಲದಿಂದಲೂ 'ಕಾಂಗ್ರೆಸ್ ಭಾವನೆ'ಯೊಂದಿಗೆ ಹಲವು ಬಾರಿ ಢಿಕ್ಕಿ ಹೊಡೆದಿದೆ; ಅಂತೆಯೇ ಕಾಂಗ್ರೆಸ್ ಭಾವನಾ ಪ್ರವಾಹಕ್ಕೆ ನೆರೆಯೇರಿಸಿದ್ದಿತೆಂಬುದನ್ನೂ ಮರೆಯಬಾರದು. ಈ ದಿನ ಅಲ್ಲಿ ಬೆಳೆಯುತ್ತಾ ಬಂದಿರುವುದು ಕಾಂಗ್ರೆಸ್ ವಿರೋಧವೇ. ನೇತಾಜೀ ಸುಭಾಷ್ಚಂದ್ರ ಬೋಸರು ಆ ಬಾರಿ ಎರಡನೇ ಸಲ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಾಗ, ಗಾಂಧಿಜೀ ಸಮೇತ ಎಲ್ಲಾ ಹಿರಿಯ ಕಾಂಗ್ರೆಸಿಗರೂ ಅಸಮ್ಮತಿ ಸೂಚಿಸಿದುದರ ಪ್ರತಿಕ್ರಿಯೆಯಾಗಿ ಸ್ವಾಭಿಮಾನೀ ಬಂಗಾಳಿಗಳು ಕಾಂಗ್ರೆಸ್ ರಂಗದಲ್ಲೊಂದು ಬಂಡಾಯವನ್ನೇ ಎಬ್ಬಿಸಿದ್ದರು. ರಾಷ್ಟ್ರ ವಿಭಜನಾ ಪೂರ್ವದಲ್ಲಿ ಕೇಂದ್ರ ಮಂತ್ರಿಮಂಡಲದಲ್ಲಿ ಶ್ರೀ ಶರತ್‌ಚಂದ್ರಬೋಸರು ಒಮ್ಮೆ ಸೇರಿದ್ದರೂ ಕೊನೆಗೆ ರಾಜಕೊಟ್ಟು ಹೊರಬಂದಿದ್ದರು. ಇತ್ತೀಚೆಗೆ ನಡೆದ ಬಂಗಾಳ ಎಸೆಂಬ್ಲಿ ಚುನಾವಣೆಯಲ್ಲಿ ಶ್ರೀ. ಶರತ್‌ಚಂದ್ರ ಬೋಸರು ಕಾಂಗ್ರೆಸ್ ಉಮೇದ್ವಾರಿಯನ್ನು ಪ್ರಚಂಡ ಬಹುಮತದಿಂದ ಸೋಲಿಸಿದ್ದರು. ಸದಾಕಾಲ 144ನೇ ಸೆಕ್ಷನ್, ಆಗಾಗ ಕರ್ಫ್ಯೂ ಆಜ್ಞೆ, ಜಾರಿಯಲ್ಲಿರಬೇಕಾದಷ್ಟು ಗೊಂದಲ, ಹಿಂಸಾತ್ಮಕ ಕೃತ್ಯಗಳು ಅಲ್ಲಿ ನಡೆಯುತ್ತಲೇ ಇವೆ.

ಪ್ರಾಮುಖ್ಯ ನೆಲೆ

ಕಲ್ಕತ್ತಾ ನಗರದ ಪ್ರಾಮುಖ್ಯತೆಯು ಮೇಲಿಂದ ಅಲ್ಲಿಯ ಆಗುಹೋಗುಗಳನ್ನು ಸ್ಥಳೀಯ ವಿದ್ಯಮಾನಗಳೆಂದು ಕಡೆಗಣಿಸಲಾಗುವದಿಲ್ಲ; ಅದು ಭಾರತದ ಶ್ವಾಸಕೋಶದಂತಿದೆ. ಬರ್ಮ, ಚೈನಾದಂತಹ ಹೊರಸುತ್ತುಗಳಲ್ಲಿ ಕಮ್ಯೂನಿಸ್ಟ ಪ್ರಭಾವ ಹಬ್ಬಿರುವಾಗ, ಒಳಗಿನ ಹತ್ತಿರದ ಮಹಾ ನಗರ ಕಲ್ಕತ್ತದಲ್ಲಿ ಕಮ್ಯೂನಿಸ್ಟ ಪ್ರತಾಪಕ್ಕಿನ್ನೊಂದು ಅನುಕೂಲ ವಾತಾವರಣ ದೊರೆತಿರುವುದು ಅತ್ಯಂತ ಶೋಚನೀಯ; ಕಮ್ಯೂನಿಸ್ಟರಿಗೀ ಸೌಭಾಗ್ಯವೊದಗಿಸಿಕೊಡುವದಕ್ಕಾಗಿ ಅಕ್ಷಯ ಕಾಂಗ್ರೆಸಿಗರು ತಮ್ಮೊಳಗೆ ಜಗಳಾಡಿಕೊಳ್ಳುತ್ತಿರುವುದಂತೂ ತೀರಾ ದುರ್ದೈವ ಸಾಮಾನ್ಯ ಕಾಲದಲ್ಲೇ ಸುಮಾರು 60ಲಕ್ಷ ಜನರಿರುವ ನಗರ ಕಲ್ಕತ್ತ; ಈಡೀ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವಷ್ಟು ಜನ ಅಲ್ಲಿದ್ದಾರೆ; ಮಂಗಳೂರಿಗಿಂತ 40ಪಾಲಷ್ಟು ಅದು ದೊಡ್ಡದಿದೆ. ಈಗಲಂತೂ ಪೂರ್ವ ಪಾಕಿಸ್ತಾನದಿಂದ ಓಡಿಬಂದಿರುವ ನಿರಾಶ್ರಿತರಿಂದ ಪಶ್ಚಿಮ ಬಂಗಾಳ ಮತ್ತು ಕಲ್ಕತ್ತಾ ನಗರ ತುಂಬಿ 'ಗಿಜಿಗಿಜ' ಎನ್ನುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಚದರ ಮೈಲೊಂದಕ್ಕೆ ಸರಾಸರಿ 825 ಜನರಿಂತೀಗ ವಾಸಿಸುತಿದ್ದಾರೆಂದು ಅಂದಾಜು. ಇಂತಹ ಜನದೊತ್ತಡ ಅಖಿಲ ಭಾರತದಲ್ಲಿ ಬೇರೆಲ್ಲಿಯೂ ಇಲ್ಲ. ಬಂಗಾಳಿಗಳ ಇಂದಿನ ಅತೃಪ್ತಿಗೆ ಇದೂ ಒಂದು ಕಾರಣ. ಹೊರಗಿನ ತಿಪಿಯನ್ನಾವಾಹನೆ ಮಾಡಿಕೊಳ್ಳುವಂತಹ ಆಯಕಟ್ಟಿನ ಸ್ಥಳದಲ್ಲೇ ಇರುವ ಕಲ್ಕತ್ತ ಈಗ ಈ ರೀತಿ ಬಿಸಿಯೇರಿದೆ. ಇನ್ನು ಯಾವ ಕಾಲದಲ್ಲಿ ಎಂತಹ ಸ್ಫೋಟವಾಗಬಹುದೋ ಎಂದು ಹೆದರದೆ ನಿವಾಗ ಹವಿದೆಯೆ?

ಕಾಂಗ್ರೆಸಿನ ಒಳ ಜಗಳ

ಪಶ್ಚಿಮ ಬಂಗಾಳದ ಕಾಂಗ್ರೆಸಿಗರೊಳಗಂತೂ ಒಗ್ಗಟ್ಟಿಲ್ಲ. ಒಮ್ಮನಸ್ಸಿಲ್ಲ ಭಿನ್ನಾಭಿಪ್ರಾಯಗಳಿದ್ದರೆ ವಾದರಂಗದಲ್ಲೇ ಹೋರಾಡಿ ಸುಮ್ಮಗಿರುವವರು ಬಂಗಾಳಿಗಳಲ್ಲ; ತಮ್ಮ ವಾದವನ್ನು ಮನ ಮುಟ್ಟಿಸುವುದಕ್ಕಿಂತಲೂ ಬಲ ಪ್ರಯೋಗದ ಮೂಲಕ ಮೈಮುಟ್ಟಿಸುವ ಕಲೆಯೇ ಅವರಲ್ಲಿ ಸರ್ವಸಾಮಾನ್ಯವಾಗಿದೆ! ದಕ್ಷಿಣ ಕಲ್ಕತ್ತಾದ ಉಪಚುನಾವಣೆ ಮುಗಿದೊಡನೆಯೇ ಪರಿಸ್ಥಿತಿಯನ್ನೆಲ್ಲಾ ಸರ್ದಾರ್ ವಲ್ಲಭಾಯಿಗಳೊಡನೆ ಮುಖತಃ ನಿವೇದಿಸಿಕೊಳ್ಳಬೇಕೆಂದು ಬಂಗಾಳಾ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸುರೇಂದ್ರ ಮೋಹನ ಘೋಷರು ಡೆಹರಾಡನ್ನಿಗೆ ಅಂದೇ ಹೊರಡುವವರಿದ್ದರು. ಅಗಲೇ ಅವರ ವಿರೋಧಿ ಸಂಗಡಿಗರು ಅವರ ಮನೆನುಗ್ಗಿ ಹೊಡೆದು ಹಾಕಿದುದರ ಪರಿಣಾಮವಾಗಿ ಶ್ರೀ ಘೋಷರು ಈಗಲೂ ಹಾಸಿಗೆ ಬಿಡದಂತಾಗಿದೆ. ಕಲ್ಕತ್ತದಸೋಲಿನರಂತೂ ಗೊಂದಲಗಳ ನಿವಾರಣೆಯಕಡೆಗೇನೂಮನಸ್ಸುಕೊಡದೆ ಸಕ್ಕಪಾಕವಾಡುತ್ತಿದ್ದಾರೆಂಬಕಟುವಿಮರ್ಶೆಗಳು ಅಲ್ಲಿಯ ಪತ್ರಿಕೆಗಳಿಂದಾರಂಭಿಸಿ, ಎಲ್ಲರಿಂದಲೂ ಕೇಳಬರುತ್ತಿವೆ.

ಪಶ್ಚಿಮ.ಬಂಗಾಳ ಕಾಂಗ್ರೆಸಿನ ಒಳಸ್ಥಿತಿಗಳನ್ನು ಪರ್ಯಾಲೋಚಿಸಿ, ವಿವಿಧ ಪಂಗಡಗಳನ್ನು ಒಂದುಗೂಡಿಸುವದಕ್ಕಾಗಿ ಕಾಂಗ್ರೆಸ್ ಅಧಿನಾಯಕರು ಶ್ರೀ ಸತ್ಯನಾರಾಯಣ ಸಿಂಹರನ್ನು ಕಲ್ಕತ್ತೆಗೆ ಕಳುಹಿದ್ದರು. ಅವರು ಭಿನ್ನಪಕ್ಷೀಯ ನಾಯಕರೊಡನೆ ಚರ್ಚಿಸಿ, ಎಷ್ಟೇ ಪ್ರಯತ್ನಿಸಿದರೂ ಸಂಧಾನ ಸಾಧ್ಯವಾಗದೆ ಶಿಲ್ಲಿಗೆ ಮರಳಿ ಪಂಡಿತ ನೆಹರುಗಳಿಗೆ ವರದಿಯೊಪ್ಪಿಸಿದ್ದರು. ಈಗ ಪಂಡಿತಜೀ ಸ್ವತಃ ಕಲ್ಕತ್ತೆಗೆ ಧಾವಿಸಿದ್ದಾರೆ. ಅವರು ಈ ವರೆಗಿನ ಪದ್ಧತಿಪ್ರಕಾರ ವಿಜಯಿಯಾಗಿ ಮರಳಲಿ, ಎಂದು ರಾಷ್ಟ್ರವು ಆತುರ ಪೂರ್ವಕ ಹಾರೈಸುತ್ತಿದೆ.

ವಿವಾಹ ಸಮಾಚಾರಗಳು

ತಾ. 30-6-49ರಲ್ಲಿ ಕಾಣಿಯೂರು ಮಠದ ಪಜಾರಿ ಶ್ರೀ ಬಿ. ಅನಂತ ಕೃಷ್ಣಾಚಾರ್ಯರ ಪುತ್ರ ಶ್ರೀ ಬಿ. ಶ್ರೀನಿವಾಸಾಚಾರ್ಯರು ಉಡುಪಿ ರೋಯಲ್ ಮಹಾಲಿನ ಪ್ರಾಲಕ ಶ್ರೀ ಕೆ ವೆಂಕಟ್ರಮಣ ಭಟ್ರ ಪುತ್ರಿ ಸೌ। ಲಲಿತ ಬಾಯಿಯನ್ನೂ, ಶ್ರೀ ಬಡಗಬೆಟ್ಟು ಪಟೇಲ್ ಮಹಾಬಲ ಹೆಗ್ಡೇರ ಪುತ್ರ ಶ್ರೀ ಸುರೇಶ ಹೆಗ್ಡೇರು ಶ್ರೀ ಬಜ್ಪೆ ಮುಂಡಾರಗುತ್ತು ತಿಮ್ಮಪ್ಪ ರೈಯವರ ಪುತ್ರಿ ಸೌ। ಸರೋಜಿನಿಯನ್ನೂ, ತಾ. 3-7-49ರಲ್ಲಿ ಶ್ರೀ ಬೆಳ್ಳಿ ಸುಬ್ಬಣ್ಣ ಶೆಟ್ರ ಪುತ್ರ ಶ್ರೀ ರಾಘವ ಶೆಟ್ಟರು ಪೆರ್ಡೂರು ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಕೆ ಯಜ್ಞ. ಶೆಟ್ರ ಪುತ್ರಿ ಸೌ। ರುಕ್ಮಿಣಿಯನ್ನೂ ತಾ. 5-7-49ರಲ್ಲಿ ಪೆರ್ಡೂರು ವ್ಯಾಸಭಾಗ ಶ್ರೀ ಕೆ. ನಾರಾಯಣ ಶೆಟ್ರ ಪುತ್ರ ಶ್ರೀ. ಭೋಜಶೆಟ್ಟರು ಶ್ರೀ ಕೈದೇಲ್ ಬಡಪ್ಪ ಮಲ್ಲಿಯವರ ಪುತ್ರಿ ಸೌ। ವಿನೋದಳನ್ನೂ ಸಭೆರಿ ಶ್ರೀ ಮಲ್ಲಿಯವರ ಪುತ್ರ ಶ್ರೀ ದಯಾನಂದಮಲ್ಲಿಯವರು ಸಬ ಶ್ರೀ. ನಾರಾಯಣ ಶೆಟ್ಟರ ಪುತ್ರಿ ಸೌ। ವನಜಾಕ್ಷಿಯನ್ನೂ ವಿವಾಹವಾದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C 247/1949

ವಾದಿ - ತೋನ್ಸೆ ಗೋಪಾಲಕೃಷ್ಣ ಪೈ.

ಪ್ರತಿವಾದಿ— ಬಿ. ಸದಾನಂದ ರಾವ.

ಉಡ್ಪಿ ತಾಲ್ಲೂಕು ಶಿರಿಯಾರ ಗ್ರಾಮದ ಸ್ವಾರಕಟ್ಟೆಯಲ್ಲಿರುವ ಬಿ. ರಾಮನ್ನಾಯಕನ ಅಳಿಯ ಪ್ರತಿವಾದಿ ಬಿ ಸದಾನಂದರಾವಗೆ

ಈ ಮೂಲಕ ವಾದಿಯ ಕಡೆಯಿಂದ ತಿಳಿಯಪಡಿಸುವದೇನಂದ್ರೆ ವಾದಿಯು ಪ್ರತಿವಾದಿಯು ಬರಕೊಟ್ಟ ಸಂಡಿಗಳ ಪ್ರಕಾರ ವಾದಿಗೆ ಬರಾ ರುಪ್ಯಾ 179-6-0 ಅಸಲು ಬಡ್ಡಿಯಿಂದ ಬರಾ ಅೈವೇಜಿನ ಬಗ್ಗೆ ಪ್ರತಿವಾದಿಯ ಮೇಲೆ ವಾದಿಯು ದಾಕಲು ಮಾಡಿದ ಮೋಕದ್ದಮೆಯು ತಾರೀಕು 1 8-1949ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುವ ಪ್ರಯುಕ್ತ ಆ ಕುರಿತು ಆಕ್ಷೇಪವಿರುವಲ್ಲಿ ತನ್ನ ಪರವಾಗಿ ಕೋರ್ಟಿನವರು ಕಂಡದಾಗ್ಯೆ ಹಾಜ್ರು ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನ್ಯಾಯರ ಹಾಜ್ರಿಯನ್ನು ಕೇಳಿ ಪೈಸಲ ಮಾಡೋದೀತೆಂಬದನ್ನು ತಿಳಿದಿರತಕ್ಕದ್ದು.

K. Narayana Kamath,

ವಾದಿಯ ಕಡೆ ಎಡ್ವೊಕೇಟ

ಕುಂದಾಪುರ ತಾರೀಕು 12-7-1949.

NOTICE

In the Court of the District Munsif of Mangalore.

O. S. No. 52 of 1949.

Between
C S. Tauro —Plaintiff.
and
Pedru pinto and 5 others -Defendants.

To

Defendant No 3 Benedict Louis Pinto, Defendent No. 4 Mary Denis Pinto- Children of Pedru Pinto. All are residing in Bijai, Mangalore town.

Please take notice that the above suit filed plaintiff for the reliefs claimed in the plaint filed in the above suit, stands posted to 30-7-1949 for your appearance

In default of your appearance on the said date at 11'Oclok, the suit will be decided exparte.

[By order of court]

M Venkatraya Kamath.
Advocate for Plaintiff.
Mangalore.
11 7—1949

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು 12—7—49 ರಿಂದ

ಚಿತ್ರಮಂದಿರ್ ಚಿತ್ರ

"ಭಂವರ್"

ಶಾಮಿನಿ, ಬಲ್‌ವಂತ್‌ಸಿಂಗ್, ಮಾಯಾದೇವಿ

ಬರುವ ಚಿತ್ರ:

ಸಾಮ್ರಾಟ್ ಅಶೋಕ್

ಪ್ರುಲ್ಹಾಸ್, ಸಪ್ರು, ಮೊದಲಾದವರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ಪ್ರಾತಃಕಾಲ ದಿಯುಪಕಾರ್ಯ,

ರಥಬೀದಿ ಉಡುಪಿ

ಉಡುಪಿ

'ಕಲಾವೃಂದ'ದ ಐದನೇ ವಾರ್ಷಿಕೋತ್ಸವವು ಇದೇ ತಾ 9 ಮತ್ತು 10ರಲ್ಲಿ ಚಂದ್ರಮೌಳೀಶ್ವರ ದೇವಾಲಯದ ಮಹಡಿಯಲ್ಲಿ ಸಾಂಗವಾಗಿ ಜರಗಿತು. ಮೊದಲನೇ ದಿನ ಪೂರ್ವಾಹ್ನ ಶ್ರೀ ಕೆ. ವೆಂಕಟಾಚಲ ಭಟ್ಟರು ಪರೀಕ್ಷಕರಾಗಿ ಲೇಖನ ಸ್ಪರ್ಧೆ ನಡೆದು ಅಪರಾಹ್ನ ಶ್ರೀ ಯಚ್. ಸುರೇಶರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಪ್ರಾರ್ಥನೆ, ಶ್ರೀ ಹರಿಮಾರ್ಕಂಡರ ಪರಿಚಯ ಮಾತುಗಳಿದ್ದುವು. ಶ್ರೀ ಅದಮಾರು ಮಠದ ಶ್ರೀಪಾದಂಗಳವರು ಉತ್ಸವವನ್ನು ಉದ್ಘಾಟಿಸುತ್ತಾ ಕಲೆಗಳ ಹುಟ್ಟು ಮತ್ತು ಸ್ವರೂಪವನ್ನು ವಿವರಿಸಿ ಕಲಾವೃಂದದ ಕಾರ್ಯಕಲಾಪಗಳಿಗಾಗಿ ಸಂತೋಷ ವ್ಯಕ್ತಪಡಿಸಿದರು. ವೃಂದದ ಕಾರ್ಯದರ್ಶಿ ಶ್ರೀ. ಕೆ. ಶ್ರೀನಿವಾಸ ಭಟ್ಟರಿಂದ ವರದಿವಾಚನ—ಶ್ರೀ ಕೆ. ಹರಿದಾಸಭಟ್ಟರಿಂದ ಭಾರತವಾಚನ ಶ್ರೀಗಳಾದ ಕೆ. ಎಸ್. ಉಪಾಧ್ಯಾಯ, ಶ್ರೀನಿವಾಸ ಭಟ್ಟ, ಯಸ್. ಕೆ. ಶ್ರೀಪತಿ ಆಚಾರ್, ಇವರ ಭಾಷಣಗಳು— 'ಸಾಹಿತ್ಯವೂ ಶಿಕ್ಷಣವೂ' ಎಂಬ ಕುರಿತು ಶ್ರೀ ಎಮ್. ಸುಬ್ರಾಯನರ ಉಪನ್ಯಾಸ,ನಡೆದುವು. ಇಂದಿನ 'ಮಾತುನಾಲ್ಲತನ'ದ ಕುರಿತು ಅಧ್ಯಕ್ಷರ ಭಾಷಣ,ವೃಂದದ ಅಧ್ಯಕ್ಷ ಶ್ರೀ. ಎ. ಎಸ್. ಶ್ರೀ ರಮಣಾಚಾರ್ಯರ ಧನ್ಯವಾದಾರ್ಪಣೆ, ಮಂಗಲಗೀತೆಗಳಾದುವು. ರಾತ್ರಿ ಶ್ರೀಗಳಾದ ಪಿಡ್ಲೆ ಮಂಜುನಾಥಯ್ಯ, ಎಮ್. ರಾಜಗೋಪಾಲಾಚಾರ್, ಕೆ. ಸುಂದರಾಚಾರರ ಸಂಗೀತ ಕಚೇರಿಯು ಶ್ರೀ ಕಾಣೂರು ಮಠದ ಕಿರಿಯ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಪಾದಂಗಳವರ ಉಪನ್ಯಾಸವಿತ್ತು. ಎರಡನೇ ದಿನ ಪೂರ್ವಾಹ್ನ ವೃಂದದ ಹಸ್ತಲಿಖಿತ ಪತ್ರಿಕೆ'ಸವ್ಯಸಾಚಿ'ಯ ಕಲಾಂಕವನ್ನು ಡಾ| ಕೆ. ಎಲ್. ಐತಾಳರು ಉದ್ಘಾಟಿಸಿದರು. ಅಪರಾಹ್ನ ವೃಂದದ ಅಧ್ಯಕ್ಷರ ಪರಿಚಯವಾಣಿಯೊಂದಿಗೆ ಶ್ರೀ ಬಿ. ರಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿತು, ಶ್ರೀ ಶ್ರೀನಿವಾಸಭಟ್ಟರು ವೃಂದದ ಶ್ರೇಯಃಪ್ರಾರ್ಥನೆ ಮಾಡಿದರು. ಶ್ರೀ ಎ. ಶ್ರೀಶಬಲ್ಲಾಳರಿಂದ ಆಧುನಿಕ ಕವಿತಾ ವಾಚನವಾಯಿತು. ಅಧ್ಯಕ್ಷರ ಹಸ್ತದಿಂದ ಬಹುಮಾನಗಳು ಹಂಚಲ್ಪಟ್ಟ ಮೇಲೆ ಶ್ರೀಮತಿ ಪಾರ್ವತಿಬಾಯಿಯವರು 'ಕಲೆ ಮತ್ತು ಸಂಸ್ಕೃತಿ'ಯ ಕುರಿತು ಉಪನ್ಯಾಸವೀಯುತ್ತಾ, ಅವೆರಡರೊಳಗಿನ ಸಂಬಂಧ, ಅವುಗಳ ಹಿಂದಿನ ಮತ್ತು ಇಂದಿನ ಸ್ಥಿತ್ಯಂತರ, ಇತ್ಯಾದಿಗಳನ್ನು ವಿವರಿಸಿದರು. 'ಸಾಹಿತ್ಯವೂ ಧರ್ಮವೂ' ಎಂಬ ಕುರಿತು ಶ್ರೀ ಕೆ.ಸುಬ್ರಾಯ ಪುರಾಣಿಕರ ಉಪನ್ಯಾಸವಾಯಿತು. ಅಧ್ಯಕ್ಷರು ಸಾಹಿತ್ಯ ಮತ್ತು ಕಲೆಗಳ ಅಂದು—ಇಂದಿನ ಮಟ್ಟ ಮತ್ತು ದೊಡ್ಡ ಕೃತಿಗಳು ಸಾಮಾನ್ಯರಿಗೆ ಪರಿಚಿತವಿದ್ದ ರೀತಿಯೊಂದಿಗೆ ಹಿಂದಿನ ಸಾಮಾಜಿಕ ಸ್ಥಿತಿಗತಿಗಳನ್ನೂ ವಿವರಿಸಿ ಭಾಷಣವಿತ್ತರು. ವೃಂದದ ಅಧ್ಯಕ್ಷರಿಂದ ಧನ್ಯವಾದ, ಮಂಗಲಾಚರಣೆಗಳಾದುವು. ರಾತ್ರಿ ಪಯ್ಯಾರು ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ವೃಂದದ ಸದಸ್ಯರು 'ಸ್ವರ್ಣಮೂರ್ತಿ' ಮತ್ತು 'ಪುರುಷವಧು' ನಾಟಕಗಳನ್ನು ಭೋಜನಶಾಲಾ ಕಟ್ಟಡದಲ್ಲಿ ಅಭಿನಯಿಸಿದರು. ಶ್ರೀ.ಮಿತ್ತಂತಾಯರ ಭಾಷಣ, ವೃಂದಾಧ್ಯಕ್ಷರ ಧನ್ಯವಾದಗಳಿದ್ದುವು.

ಜಿಲ್ಲಾವರ ಸೇವಾ ಸಂಘದ ವಿಶೇಷ ಮಹಾಸಭೆಯು ಇದೇ ತಾ 3ನೆ ಆದಿತ್ಯವಾರ ಶ್ರೀ ಗುರು ನಾರಾಯಣ ಭಜನಾ ಮಂದಿರದಲ್ಲಿ ಜರಗಿ ಶ್ರೀ ಕೆ. ಬಾಬ ಪೂಜಾರಿಗಳು ಅಧ್ಯಕ್ಷರಾಗಿಯೂ, ಡಾ| ಕೆ. ಎನ್. ಸುವರ್ಣರು ಗೌರವ ಕಾರ್ಯದರ್ಶಿಗಳಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು.

ನಗರ ಸಭೆಯು ದಿನಾಂಕ 9ರಲ್ಲು ಉಪಾಧ್ಯಕ್ಷ ಶ್ರೀ ಎ. ಬಿ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿ ನಗರ ಸಭೆಯ ಗತವರುಷದ ಆಡಳಿತ ವರದಿಯನ್ನು ಸ್ವೀಕರಿಸಲಾಯಿತು. ಚೆಯರ್‌ಮೆನ್, ಕಮಿಶನರ್, ಹೆಲ್ತ್ ಆಫೀಸರ್ ಮತ್ತು ಮೆಂಬರರೊಳಗೆ ಪರಸ್ಪರ ಮೈತ್ರಿಯಿತ್ತೆಂದೂ ಆಡಳಿತವು ತೃಪ್ತಿಕರವಾಗಿತ್ತೆಂದೂ ಸೂಚಿಸುವ ನಿರ್ಣಯವನ್ನು ವರದಿ ಸ್ವೀಕಾರದೊಡನೆ ಮಾಡಲಾಯಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P-No. 54/1949

1 ಶೇಷಂಮ ಹೆಂಗ್ಸು,ಫ್ಲೋರೆಸ್‌ಗಾರ್ಡ್ ಅೃತಪ್ಪ ಗೌಡರ ವಿಧವೆ.

2 ಚಂನಪ್ಪ ಗೌಡ, ಪ್ರಾಯ 8ವರ್ಷ.

3 ಕೊರಗಪ್ಪ ಗೌಡ ಪ್ರಾಯ 4ವರ್ಷ ಫ್ಲೋರೆಸ್ ಗಾರ್ಡ್ ಅೃತಪ್ಪ ಗೌಡರ ಪ್ಯಾನರ ಮಕ್ಕಳು. ಕ್ಷೇಮಾಬಿಂತಕಳು 1ನೇ ಅರ್ಜೀದಾರಳು ಶೇಷಂಮ ಹೆಂಗ್ಸು

—ಅರ್ಜೀದಾರರು.

ಎಲ್ಲಾ ಅರ್ಜಿದಾರರು ಪುತ್ತೂರು ತಾಲ್ಲೂಕು ಕುಟ್ರುಪ್ಪಾಡಿ ಗ್ರಾಮದ ಉಳಿಪ್ಪಾಡಿಯಂಬಲ್ಲಿ.

ಮತ್ತು

ಸೋಮಪ್ಪಗೌಡ, ಅಂಣಪ್ಪ ಗೌಡರ ಮಗ, ಮೈಸೂರು ಸ್ಟೇಟ್ ಹಾಸನ ಜಿಲ್ಲಾ ಮಂಜರಾಬಾದ್ ತಾಲೂಕು ತಿಕ್ಕಳಿಯೆಂಬಲ್ಲಿ ಫೋರ್ಸ್ ಹೆತ್ತೂರು. —ಎದ್ರಿ

ಸದ್ರಿ ಎದ್ರಿ ನ ಸಮಸ್ತ ಜನರಿಗೆ ಯೀ ಮೂಲಕ ತಿಳಿಯಪಡಿಸುವುದೇನೆಂದ್ರೆ,

ಫ್ಲೋರೆಸ್‌ಗಾರ್ಡ್ ಮೃತ ಅೃತಪ್ಪಗೌಡನ ಬಾಬ್ತು ಓರಿಯೆಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಸ್ಸೂರೆನ್ಸ್ ಕಂಪೆನಿ, ಲಿಮಿಟೆಡ್ ಪೋಲಿಸಿನಂ.579489-Bನೇಗಿರುವ ರೂಪಾಯಿ 500ನ್ನು ಪಡಕೊಳ್ಳುವರೆ ಸದ್ರಿ ಮೃತನ ಹೆಂಡ್ತಿ 1ನೇ ಅರ್ಜೀದಾರಳು ವ 2, 3ನೇ ಅರ್ಜಿದಾರರಾದ ಮಕ್ಕಳು ಕೂಡಾ ಮೇಲ್ಕಂಡ ಅರ್ಜಿ ದಾಖಲ್ಲು ಮಾಡಿರುತ್ತಾರೆ, ಸದ್ರಿ ಅರ್ಜೀಯು ತಾ 19-7-1949ಕ್ಕೆ ನ್ಯಾಯಕ್ಕಾಗಿ ಉತ್ತದೆ, ಸದ್ರಿ ಅರ್ಜೀದಾರರಿಗೆ ಸಕ್ಸೆಸರ್ ಸರ್ಟಿಫಿಕೇಟು ಕೊಡುವಲ್ಲಿ ಯಾರೇನಾದರೂ ಏನಾದರೂ ಆಕ್ಷೇಪಣೆಯಿದ್ದರೆ ಮೇಲ್ಕಂಡ ಅರ್ಜಿಯು ತನ್ನಿ ವಾಯಿದೆಯಾದ ತಾರೀಕು 19-7-1949ನೇ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತ ಈ ಮೂಲಕ ಕೋರ್ಟಿನ ಹುಕುಂ ಪ್ರಕಾರ ತಿಳಿಸೋಣಾಗಿದೆ.

[Sd] **N. V. Kolathaya,**
Vakil forPlff.

Puttur
Date 4-7-49

ಬೇಕು

ಎಲ್ಲೆಲ್ಲಿಯೂ ಉತ್ಸಾಹೀ ಸಮರ್ಥ ಏಜಂಟರು ಬೇಕಾಗಿದ್ದಾರೆ.

ಸರಿಯಾಗಿ ಕೆಲಸ ಮಾಡುವವರು ತಿಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು.

ವಿವರಕ್ಕೆ ಬರೆಯಿರಿ:
ಬಿ. ವಾಮನಾಚಾರ್,
ಬಿ.ಎ.,ಬಿ.ಎಲ್.,ಬಿ.ಟಿ.
ಮೆನೇಜರ್,
ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಸೂರೆನ್ಸ್ ಕಂಪೆನಿ ಲಿ., ಉಡುಪಿ.

The Catholic Bank Limited, Kallianpur.

ಏಲಂ ನೋಟೀಸು

ಉಡುಪಿ ತಾಲೂಕು ಉಪ್ಪೂರು ಗ್ರಾಮದ ಮಾವಿನಕುದುರಿನಲ್ಲಿರುವ ಡೇವಿಯಲ್ ಪಸಾನ್ನರ ಮಗ ಶ್ರೀ. ಫಿಲಿಕ್ಸ್ ಪಸಾನ್ನ ಎಂಬವರು ಚಿನ್ನಾಭರಣಗಳ ಈಡಿನ ಮೇಲೆ ಮೋಲ್ದಾಣಿಸಿದ ಬ್ಯಾಂಕಿನಿಂದ ಪಡೆದ ಸಾಲದ ರೂಪಾಯಿ ಎಪ್ಪತ್ತೈದು (Rs. 75/- J. L. No. 22/1234; ತಾ. 5-5-1947) ಮತ್ತು ಅದಕ್ಕಾಗುವ ಈತನಕದ ಬಡ್ಡಿಯನ್ನು ಸಹಾ ವಾಯಿದೆಗೆ ಸರಿಯಾಗಿ ಕೊಡದೇಯಿರುವುದರಿಂದಲೂ, ಅಲ್ಲದೆ ರಿಜಿಸ್ಟರ್ಡ್ ನೋಟಿಸು ಕೊಟ್ಟಲ್ಲಿ ಅವರು ಆ ಎಡ್ರಸಿನಲ್ಲಿಲ್ಲವೆಂತಲೂ, ಹಿಂದೆ ಬಂದಿರುವುದರಿಂದ, ಸದರೀಯವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—ಸದರೀಯವರು ಈಡಿಟ್ಟಿರುವ ನಗಗಳನ್ನು ಇದೇ ಜುಲಾಯಿ ತಿಂಗಳ ತಾರೀಕು 23ರೊಳಗೆ ಬಿಡಿಸದೇ ಇದ್ದಲ್ಲಿ ಸದರೀಯವರು ಈಡಿಟ್ಟಿರುವ ನಗಗಳನ್ನು ತಾ. 30-7-1949ನೇ ಶನಿವಾರ ಗಂಟೆ 12 30ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡುವುದು.

Kallianpur,
Date 8 7-1949

S Rebello,
Agent.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದುಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ

S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ,

ಸೆಕ್ರೆಟರಿ
ತಾರಾನಾಥ ವಿದ್ಯಾಪೀಠ ಬಳ್ಳಾರಿ.
P. O. ಸಂಗನಕಲ್ ಬಳ್ಳಾರಿ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ನೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.



Approved firm by the Govt. of Mysore Certified by the Agent of the Govt of, Cylone & Indian,

ಮಂಗಳೂರಲ್ಲಿ ಮಾನ್ಯ ಗೋಪಾಲರೆಡ್ಡಿಯವರು

ಮದ್ರಾಸು ಸರಕಾರದ ಹಣಕಾಸು ಖಾತೆಯ ಮಂತ್ರಿಗಳಾದ ಶ್ರೀ ಬಿ. ಗೋಪಾಲ ರೆಡ್ಡಿಯವರು ಇದೇ ತಾ 3ರಲ್ಲು ಸಂಜೆ ಮಂಗಳೂರಿಗೆ ಬಂದಾಗ ಅವರನ್ನು ರೈಲ್ವೆ ನಿಲ್ದಾಣದಲ್ಲಿ ಎಮ್. ಎಲ್. ಎ ಗಳಾದ ಡಾ। ಯು. ಪಿ. ಮಲ್ಯ ಶ್ರೀ ಎಲ್. ಸಿ. ಪ್ಯಾಸ್, ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧಿಕಾರಿಗಳೂ, ಪುರನಿವಾಸಿಗಳೂ, ಅಧಿಕಾರಿವರ್ಗದವರೂ ಸ್ವಾಗತಿಸಿದರು.

ಮರುದಿನ ಬೆಳಿಗ್ಗೆ ಮಂತ್ರಿಗಳು ಪಿಯರ್ಸ್ ಲೆಸ್ಲಿ ಕಂಪೆನಿಯ ಗೇರುಬೀಜ ಕಾರ್ಖಾನೆ, ಕಾಮನ್‌ವೆಲ್ತಿನ ಹಂಚಿನ ಕಾರ್ಖಾನೆ, ಭಗಿನಿ ಸಮಾಜ ಮೊದಲಾದ ಸಂಸ್ಥೆಗಳನ್ನು ಸಂದರ್ಶಿಸಿ ಗವರ್ನ್‌ಮೆಂಟ್ ಕಾಲೇಜಿಗೆ ಚಿತ್ತೈಸಿದರು. ಅಗ ಕಾಲೇಜಿನ ಪ್ರಿನ್ಸಿಪಾಲ್ ಮಿ। ಹಸೀಮಿಯವರು ಮಂತ್ರಿಗಳಿಗೆ ಸ್ವಾಗತವಿತ್ತರು. ಬಳಿಕ ವಿದ್ಯಾರ್ಥಿಗಳ ಸಭೆಯಲ್ಲಿ ಮಂತ್ರಿಗಳು ಮದ್ರಾಸು ಸರಕಾರದ ಇಂದಿನ ಆರ್ಥಿಕ ಧೋರಣೆ, ಪ್ರಾಂತದ ಆರ್ಥಿಕ ಪರಿಸ್ಥಿತಿ, ಹೊಸ ಕರಗಳನ್ನು ಹೇರುವ ಅವಶ್ಯಕತೆಗಳನ್ನು ವಿವರಿಸಿ ಹೇಳಿ ವಿದ್ಯಾರ್ಥಿವೃಂದವು ದೇಶದ ಆಡಳಿತೆಯ ವಿದ್ಯಮಾನಗಳನ್ನು ಯೋಗ್ಯ ರೀತಿಯಲ್ಲಿ ನಿರೀಕ್ಷಿಸುತ್ತಿರಬೇಕೆಂದರು.

ಬಳಿಕ ಮಂತ್ರಿಗಳು ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯಕ್ಕೆ ಹೋಗಿ ಅಲ್ಲಿ ಹಾಜರಿದ್ದ ವ್ಯಕ್ತಿಗಳಿಗೆ ಭೇಟಿಯಿತ್ತು ಅವರ ಹಾಲಾಹವಾಲೆಗಳನ್ನು ಕೇಳಿದರು. ಶ್ರೀಗಳಾದ ವಿ. ಎಸ್. ಕುಡ್ವ, ಪಿ. ಉಪೇಂದ್ರ ಶ್ರೀನಿವಾಸ ನಾಯಕ್, ಎ. ಮೋಹನರಾವ್, ಎಮ್. ಶ್ಯಾಮಭಟ್ ಮೊದಲಾದ ಮೋಟಾರ್ ಸಂಸ್ಥೆಗಳ ಮ್ಹಾಲಕರು ಮಂತ್ರಿಗಳನ್ನು ಭೇಟಿಯಾಗಿ ತಮ್ಮ ಸಂಸ್ಥೆಗಳ ಕಷ್ಟಗಳನ್ನು ನಿವೇದಿಸಿಕೊಂಡರು. ಮೋಟಾರ್ ಕೆಲಸಗಾರರ ಯೂನಿಯನಿನ ಶಿಷ್ಟಮಂಡಲವು ಮಂತ್ರಿಗಳನ್ನು ಕಂಡು ತಮ್ಮ ಕಷ್ಟಗಳನ್ನು ನಿವೇದಿಸಿ, ಎವಾರ್ಡನ್ನು ಮಾಲಕರು ಪಾಲಿಸುವಂತೆ ಮಾಡಬೇಕೆಂದು ಕೇಳಿಕೊಂಡರು. ಮಾಂಬಲೆ, ಮೀನಿನ ವ್ಯಾಪಾರದ ಮೇಲೆ ಹೇರಿಸಲಿರುವ ಮಾರಾಟಕರದ ಕುರಿತು ಮೊಗವೀರ ಬಂಧುಗಳ ಶಿಷ್ಟಮಂಡಲವು ಅರಿಕೆಮಾಡಿಕೊಂಡದ್ದಕ್ಕೆ ಆ ಕುರಿತು ತಾನು ವಿಚಾರಿಸುವೆನಾಗಿ ಮಂತ್ರಿಗಳು ಭರವಸೆಯಿತ್ತರು.

ಸಂಜೆ ಮಂತ್ರಿಗಳು ದ. ಕ. ಜಿಲ್ಲಾ ವಾಣಿಜ್ಯ ಸಂಘಕ್ಕೆ ಭೇಟಿಯಿತ್ತರು. ಶ್ರೀ ಬಿ. ವೈಕುಂಠಬಾಳಿಗರು ಸ್ವಾಗತ ಭಾಷಣವಿತ್ತರು. ಶ್ರೀ. ವಿ. ಆರ್. ಶೆಣೈಯವರು ಸಂಘದ ಬಿನ್ನವತ್ತಳೆಯನ್ನು ಓದಿದರು. ಮಾರಾಟದ ಸಲಹಾ ಸಮಿತಿಯಲ್ಲಿ ಜಿಲ್ಲಾ ವಾಣಿಜ್ಯ ಸಂಘಕ್ಕೂ ಪ್ರತಿನಿಧ್ಯ ದೊರೆಯಬೇಕೆಂದು ಕೇಳಿಕೊಳ್ಳಲಾಗಿತ್ತು.

ಮಂತ್ರಿಗಳು ಉತ್ತರವೀಯುತ್ತಾ ಈ ರೀತಿ ಹೇಳಿದರು "ನಾವಿಂದು ಯುದ್ಧ ಕಾಲದಿಂದ ರಚನೆಯ ಕಾಲಕ್ಕೆ ಬಂದಿದ್ದೇವೆ. ರಾಷ್ಟ್ರದಪ್ರತಿಯೊಂದೆಡೆಯಲ್ಲೂ ಸುಧಾರಣೆಯಾಗಬೇಕಾಗಿದೆ. ಇದರಿಂದಾಗಿ ಶಿಕ್ಷಣ, ಚಿಕಿತ್ಸೆ ಮೊದಲಾದ ಹಲವು ಅಭಿವೃದ್ಧಿಯ ಕಾರ್ಯಗಳನ್ನು ಸರಕಾರವು ಕೈಕೊಂಡಿದೆ. ಇದಕ್ಕೆ ಹಣಬೇಕು. ನಾವು ಸರಕಾರ ಸ್ಥಾಪಿಸಿದೊಡನೆ ನಮ್ಮ ವಿರೋಧ ಪಕ್ಷದವರು ತೊಡಗಿದ ವಿಧ್ವಂಸಕ ಕಾರ್ಯಗಳನ್ನು ತಡೆಗಟ್ಟಿ ಶಾಂತಿ ಕಾಪಾಡಲು ಪೋಲೀಸ್ ಖಾತೆಯ ವೆಚ್ಚವು ಜಾಸ್ತಿಯಾಯಿತು. ಪಾನ ನಿರೋಧದಿಂದ ಹದಿನೇಳು ಕೋಟಿ ರೂಪಾಯಿ ಉತ್ಪತ್ತಿ ಕಡಿಮೆಯಾಯಿತು. ಇಂತಹ ಪರಿಸ್ಥಿತಿಯಲ್ಲಿ ಮಾರಾಟಕರದಲ್ಲಿ ಒಂದು ಚಿಕ್ಕಾಸೂ ಕಡಿಮೆಯಾಗುವಂತಿಲ್ಲ"ವೆಂದರು. ದ. ಕ. ಜಿಲ್ಲೆಯ ಕುರಿತು ಮಾತನಾಡುತ್ತಾ ಈ ಜಿಲ್ಲೆಯನ್ನು ನಾನೆಂದೂ ಅಲಕ್ಷಿಸಲಿಲ್ಲವೆಂದರು. ನಂತರ ಮಂತ್ರಿಗಳು ನಗರಸಭಾ ಭವನಕ್ಕೆ ತೆರಳಿ ನಗರಸಭೆಯ ಬಿನ್ನವತ್ತಳೆಯನ್ನು ಪೌರಸಭಾಧ್ಯಕ್ಷ ಶ್ರೀ ಎಲ್. ಸಿ. ಪಾಯಸರ ಹಸ್ತದಿಂದ ಪಡೆದು ಅದಕ್ಕೆ ಪ್ರತ್ಯುತ್ತರವನ್ನಿತ್ತು ಕೆಥೋಲಿಕ್ ಕ್ಲಬ್ಬಿಗೆ ಹೋದರು. ಆನಂತರ ಕೇಂದ್ರ ಬಸ್ಸುಸ್ಟಾಂಡಿನ ಶಂಕುಸ್ಥಾಪನೆ ನೆರವೇರಿಸಿದರು. ಅಲ್ಲಿಂದ ಬಾವಟೆ ಗುಡ್ಡೆಗೆ ಹೋಗಿ ಅಲ್ಲಿನ ಹೂತೋಟ ತೆರೆದು ಆಕಾಶವಾಣಿ ಮಂದಿರದ ಶಂಕುಸ್ಥಾಪನೆಯನ್ನು ಅವರ ಪತ್ನಿಯವರು ಮಾಡಿದರು.

ಸಾರ್ವಜನಿಕ ಭಾಷಣ

ತಾ.3ರಲ್ಲು ಸಂಜೆ ಗಣಪತಿ ಶಾಲೆಯ ಶಾರದಾ ಸದನದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಶ್ರೀ ಬಿ. ಗೋಪಾಲರೆಡ್ಡಿಯವರು ಮಾಡಿದ ಭಾಷಣದ ಸಾರಾಂಶ ಹೀಗಿದೆ: "ಹತ್ತು ವರುಷಗಳ ಹಿಂದೆ ನಾನು ಇಲ್ಲಿಗೆ ಬಂದಾಗ ನಿಮ್ಮ ಸಮಸ್ಯೆಗಳನ್ನೆಲ್ಲ ಕೇಳಿದ್ದೆ. ಅದೇ ಪಲ್ಲವಿ ಇಂದೂ ಕೇಳಿಸುತ್ತಿದೆ. ಈ ಹತ್ತು ವರುಷಗಳ ಅವಧಿಯಲ್ಲಿ ಬಡವರ, ಹಳ್ಳಿಯವರ ಪರಿಸ್ಥಿತಿ ಎಲ್ಲೆಡೆಯಲ್ಲೂ ಇದ್ದ ಹಾಗೆಯೇ ಇದೆ. ಇದನ್ನು ಪರಿಶೀಲಿಸುವಾಗ ಕಣ್ಣೀರು ಬರುತ್ತದೆ. ಆದರೆ ನೀವೇ ಆರಿಸಿ ಕಳುಹಿಸಿದ ಕಾಂಗ್ರೆಸ್ ಸರಕಾರವೇಕೆ ಬಡವರ, ಹಳ್ಳಿಗಳ ಸಮಸ್ಯೆಗಳನ್ನು ಪರಿಹರಿಸಲಿಲ್ಲವೆಂಬುದನ್ನು ನೀವೂ ಯೋಚಿಸಬೇಕು. ಸ್ವರಾಜ್ಯ ಬಂದಾಗ ನಮ್ಮ ಪರಿಸ್ಥಿತಿ ಹೇಗಿತ್ತೆಂಬುದನ್ನು ನಾವೊಮ್ಮೆ ವಿಚಾರಿಸಬೇಕು. ಆಹಾರದ ಅಭಾವ, ಎಲ್ಲೆಲ್ಲೂ ಮುಷ್ಕರಗಳು, ಜನತೆಯಲ್ಲಿ ಒಂದು ರೀತಿಯ ಉದ್ವಿಗ್ನತೆ. ಶಾಂತಿ ನೆಮ್ಮದಿ ಕಾಯ್ದುಕೊಳ್ಳುವುದೇ ಕಷ್ಟವಾದ ಸ್ಥಿತಿ! ಸುಜಲಾಂ ಸುಫಲಾಂ ಸಸ್ಯಶ್ಯಾಮಲಾಂ ಎಂದು ಭಾರತಮಾತೆಯನ್ನು ಹಾಡಿದ ನಾವು, ಅಧಿಕಾರಕ್ಕೆ ಬರುವಾಗ ಎಂಟ್ಟು ಯಾ ಹತ್ತು ಔನ್ಸು ಅಕ್ಕಿ ಕೊಡಿಸುವುದೇ ಕಷ್ಟವಾದರೆ ನಮಗೆಂತಹ ನೋವಾಗುವುದಿಲ್ಲ. ಕೊಳಗಿಲ್ಲದ ಬ್ರಿಟಿಷರೆಂದು ನಾವು ಅವರನ್ನು ನಿಂದಿಸುತ್ತಿದ್ದೆವು; ಇಂದು ನಮಗೆ ಬೇಕಷ್ಟು ಅನ್ನ ಒದಗಿಸಲು ಬೇಸಾಯ ಮಾಡುವ ಜನರಿಲ್ಲದೆ ಜನತೆಗೆ ಅನ್ನಕೊಡುವ ದೊಡ್ಡ ಜವಾಬ್ದಾರಿಯನ್ನು ಕೇಂದ್ರ ಸರಕಾರವೂ ಪ್ರಾಂತಿಕ ಸರಕಾರವೂ ಹೊರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಜನತೆಯು ಮಹಾತ್ಯಾಗವಮಾಡಬೇಕಾಗಿದೆ" ಎಂದು ಹೇಳಿ ಮುಂಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸಿನ ಮಹಾಶಕ್ತಿಯನ್ನು ಅದರ ಮೇಲೆ ನಿಮ್ಮಗಿರುವ ಬೆಂಬಲವನ್ನೂ ಪ್ರದರ್ಶಿಸಬೇಕೆಂದರು.

ಮಂತ್ರಿಗಳು ಮಹಿಳಾಸಭೆ, ರಾಮಕೃಷ್ಣ ವಿದ್ಯಾರ್ಥಿಭವನ, ಸೇವಾಸಮಾಜ, ಕಂಕನಾಡಿಯ ಕೃಷಿಕ್ಷೇತ್ರ, ಸೈಂಟ್ ಎಲೋಸಿಯಸ್ ಕಾಲೇಜು ಮುಂತಾದ ಸಂಸ್ಥೆಗಳನ್ನೂ ಸಂದರ್ಶಿಸಿದರು.

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯವಾಚಕರೇ.................

ನಾನು ಒಬ್ಬ ಸಾಧಾರಣ ಮನುಷ್ಯ—ದುರದೃಷ್ಟವಶಾತ್ ನನ್ನ ಮಿತಿಮೀರಿದ ಕಾಮುಕ ಜೀವನವು ಅತಿ ಬೇಗನೆ ನರಗಳ ದೌರ್ಬಲ್ಯಕ್ಕೀಡಾಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಹೃದಯನಾದವೂ ಜಾಸ್ತಿಯಾಯಿತು, ಬಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತದಿಂದಿರುವುದಕ್ಕೆ ಬೇಜಾರೆನಿಸಿತು. ನನ್ನ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಆದರೆ ನಾನೆಂತು ಅದನ್ನು ತಿಳಿಸುವುದು? ಗುಟ್ಟಾಗಿ ಸಾವಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲದಂತಾಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪೆಶಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು [ಸನ್ಯಾಸಿ] ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಷ್ಟದಿಂದ ಮಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ತಿಳಿಸುವಂತೆ ಬಲಾತ್ಕರಿಸಿತು. ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎರಡು ಔಷಧಿಗಳನ್ನು ದಯಪಾಲಿಸಿದರು: ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಪಿಸುವುದಕ್ಕೆ. ಅವರು ಹೇಳಿದಂತೆ ಗಿಡಮೂಲಿಕೆಗಳನ್ನು ಹುಡುಕಿ ತಂದು ಅವರೆದುರಿನಲ್ಲಿಯೇ ಆ ಎರಡು ಔಷಧಿಗಳನ್ನು ತಯಾರಿಸಿದೆನು. ಆನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಪ್ರಿಯವಾಚಕರೆ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೨೧ ದಿವಸಗಳಲ್ಲಿ ಸುಧಾರಿಸಿದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿ ದಿನವೂ ೪ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲವನಾದೆನು. ಕಣ್ಣುಗಳ ಹೊಳಪು ಬಂತು. ಒಂದು ತರಹ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು. ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅದರಿಂದ ಮಹತ್ತ್ವ ಗುಣವನ್ನು ಕಂಡುದಲ್ಲದೆ ಅದಕ್ಕಿಂತ ಬೇರೆ ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾ ಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನುಪಯೋಗಿಸಿ ನಿರಾಶರಾಗಿರುವವರು ಇದನ್ನು ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಅದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. 5-0-0

ಹೊರಗೆ ಲೇಪಿಸುವ ತೈಲಕ್ಕೆ:— ೨೧ ದಿವಸಕ್ಕೆ ರೂ. 5-8-0

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು

ಈ ಔಷಧಿಯು "ಉಷ್ಣ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು. [ತೈಲವು ಚರ್ಮದ ಸೊಕ್ಕನ್ನು ಹುಟ್ಟಿಸುವುದಿಲ್ಲ.]

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ:—

[೨] ಡಾ. ಕೆ. ಜೆ. ಮಟ್ಟತ್ತಾಲ್, ಕೊಚಿನವರು ಬರೆಯುತ್ತಾರೆ:— ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೆ, ವೃದ್ಧರಿಗೂ ಪ್ರಯೋಗಿಸಿ ಅದರ ಶಕ್ತಿದಾಯಕ ಕೆಲಸವನು ಮೆಚ್ಚಿದ್ದೇನೆ.

[೨] ಡಾ. ಜೇವಿಯರ್ ಕುರುವ ಸೇರಿ, ಕುಂಬಲಾಂಗಿಯವರು ಬರೆಯುತ್ತಾರೆ:— ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನುಂಟುಮಾಡಿವೆ.

[೩] ಮ್ಯಾನೇಜರ್, "ವೈ ಮ್ಯಾಗಜೈನ್" ಮದ್ರಾಸು ಬರೆಯುತ್ತಾರೆ:—ನಾನು ದಾರ್-ಉಲ್-ಶಫಾ-ಗೋಲಿಯಾನ, ಬಟಾಲರವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ಮಾನವರಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ. ಲೆಕ್ಕವಿಲ್ಲದಷ್ಟು ಸಾವಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು.

ಸೂಚನೆ:- ಈ ಔಷಧಿಗಳು ಯಾವ ತೊಂದರೆಯನ್ನು ಮಾಡುವ ಪದಾರ್ಥಗಳನ್ನೂ ಹೊಂದಿಲ್ಲ. ಮತ್ತು ಇದನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ವಾಪಸ್ಸು ಮಾಡಲಾಗುವದು.

ನಿಮ್ಮ ಆರ್ಡರನ್ನು ಇವರಿಗೆ ಕಳುಹಿಸಿರಿ.—

The Manager,

DAR-UL-SHAFA GOLIAN (Regd.) (N.Y.U.) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಷಫಾ-ಗೋಲಿಯಾನ (ರಿಜಿಸ್ಟರ್ಡ್) (N.Y.U.) ಬಟಾಲ (ಪಂಜಾಬ್)

ದ. ಕನ್ನಡ
ಛೋಣಗುಡ್ಡೆ ಗರಡಿ ಬಿಲ್ಲವರ ಸಂಘ ಮುಂಬಯಿ

ಮೇಲಿನ ಸಂಘದ ಹದಿನೈದನೇ ವಾರ್ಷಿಕ ಮಹಾಸಭೆಯು ತಾ. 3-7-49ರಲ್ಲಿ ಶ್ರೀ ಪಿ. ಕೆ. ಸುವರ್ಣರವರ ಅಧ್ಯಕ್ಷತೆಯಲ್ಲಿ ಜರಗಿತು. ಗತ ವರುಷದ ಸಂಕ್ಷಿಪ್ತ ವರದಿವಾಚನದ ತರುವಾಯ ಸದ್ರಿ ಒಂದು ವರುಷದ ಆಯವ್ಯಯದ ಪಟ್ಟಿಯು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು ಹೊಸ ಕಮಿಟಿಗೆ ಹದಿಮೂರು ಮೆಂಬರರ ಚುನಾವಣೆಯಾಗಿ, ಸಂಘದ ಮುಂದೇಳಿಗೆಯ ಕುರಿತು, ಅಲ್ಲದೆ ಅದು ಸದ್ಯವೇ ಕೈಗೊಳ್ಳಲಿರುವ ಕೆಲವು ಸತ್ಕಾರ್ಯಗಳ ಕುರಿತು ಶ್ರೀಗಳಾದ ಪಿ. ಕೆ. ಸುವರ್ಣ, ಕೃಷ್ಣಪ್ಪ ಯಂ. ಬಂಗೇರ, ಡಿ. ಬಿ. ಕೋಟ್ಯಾನ್, ವೈ. ಕೃಷ್ಣಪ್ಪ ಸುವರ್ಣ, ಕೆ. ಯಂ. ಬಂಗೇರ ಮೊದಲಾದ ಮಹನೀಯರು ತಮ್ಮತಮ್ಮ ಸಲಹೆಗಳನ್ನಿತ್ತು ಭಾಷಣ ಮಾಡಿದರು.

ಶ್ರೀ. ವೈ. ವಿ. ಅಮೀನ್ ಇವರು ಸಂಘದಲ್ಲಿ ಹೆಚ್ಚಿನ ಶ್ರದ್ಧೆ ವಹಿಸಿ ಕೆಲಸ ಮಾಡುತ್ತಿರುವ ಶ್ರೀಗಳಾದ, ಪಿ. ಎ. ಸುವರ್ಣರಿಗೂ, ಡಿ. ಬಿ. ಕೋಟ್ಯಾನರಿಗೂ, ಸಂಘದ ಪರವಾಗಿ ತಮ್ಮ ಕೃತಜ್ಞತೆಗಳನ್ನರ್ಪಿಸಿದರು

ಧನ್ಯವಾದ, ಲಘು ಫಲಾಹಾರದೊಂದಿಗೆ ಸಭಾಂತ್ಯವಾಯಿತು.

ಕಿನ್ನಿಗೋಳಿ

ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. ೩-೭-೪೯ರಲ್ಲಿ ಡಾ। ಎಸ್. ಚಂಪಾ ಅವರು "ಸಮಾಜ ಸುಧಾರಣೆಗೆ ಸಂಘ ಸಂಸ್ಥೆಗಳ ಸಹಕಾರ" ಎಂಬ ವಿಷಯದ ಕುರಿತು ಉಪನ್ಯಾಸ ಕೊಡುತ್ತಾ "ನಮ್ಮ ಸಮಾಜ ಬೇರೆ ದೇಶದ ಸಮಾಜಕ್ಕಿಂತ ಎಷ್ಟೋ ಪಾಲು ಹಿಂದುಳಿದಿದೆ. ಇಷ್ಟರ ತನಕ ಈ ನಿಟುರ ನಮಗೆ ಅಷ್ಟೊಂದು ದೂಷಣಪ್ರದವಾಗದಿದ್ದರೂ ಇನ್ನು ಮಾತ್ರ ಎಷ್ಟಕ್ಕೂ ಭೂಷಣಪ್ರದವಾಗಲಾರದು. ಆ ಸುಧಾರಣೆ ವೈಯುಕ್ತಿಕಕ್ಕಿಂತಲೂ ಸಾಮೂಹಿಕವಾಗಿ–ಸಾಂಘಿಕವಾಗಿ ಪ್ರಯತ್ನಿಸಿದರೆ ಹೆಚ್ಚಿನ ಪರಿಣಾಮಕಾರಿಯಾದೀತು" ಎಂದರು.

ಶ್ರೀ ಬಿ. ಗೋಪಾಲರೆಡ್ಡಿಗಳು ಕುಂದಾಪುರದಲ್ಲಿ ಮಂತ್ರಿ

ಮಾನ್ಯ ಮದ್ರಾಸು ಸರಕಾರದ ಹಣಕಾಸಿನ ಮಂತ್ರಿ ಶ್ರೀ ಬಿ. ಗೋಪಾಲರೆಡ್ಡಿಯವರು ತಾ 6-7-49ನೇ ಸಂಜೆ ಬಂದೊಡನೆ ಸಾರ್ವಜನಿಕರು ಗಾಂಧಿ ಮೈದಾನದಲ್ಲಿ ವಾದ್ಯಘೋಷದೊಡನೆ ಎದಿರುಗೊಂಡು ಮೆರವಣಿಗೆಯಿಂದ ಕುಂದಾಪುರ ಟಿ. ಬಿ.ಗೆ ಕರೆದೊಯ್ದರು, ಅಲ್ಲಿಂದ ಮಂತ್ರಿವರ್ಯರು ಮುನ್ಸೀಫ್ ಕೋರ್ಟಿಗೆ ಬಿಜಯಂಗೈದು ಅಲ್ಲಿ ಶ್ರೀ ಮಾಸ್ ಎಲ್. ಸಿ. ಪಯಸ್, ಎಂ ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ಮಹಾತ್ಮಾ ಗಾಂಧಿಯವರ ತೈಲಚಿತ್ರ ಅನಾವರಣವನ್ನು ಮಾಡಿದರು, ಆ ಮೇಲೆ ಮಡುಗಿಯರ ಶಾಲೆಗೆ ಬಂದು ಅಲ್ಲಿ ಪ, ಬೋರ್ಡ್ ಪ್ರೆಸಿಡೆಂಟ್, ಶ್ರೀ ಎಚ್. ಎಸ್. ಪೈಗಳು ಕೊಟ್ಟ ಉಪಾಹಾರವನ್ನು ಸ್ವೀಕರಿಸಿದರು. ತದನಂತರ ಹಾಸ್ಕೂಲು ಕಂಪೌಂಡಿನಲ್ಲಿ ಸಾರ್ವಜನಿಕ ಸಭೆಯು ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ನೆರೆಯಿತು ಪಟ್ಟಣಿಗರ ಹಾಗೂ ಕಾಂಗ್ರೆಸ್ಸು ಕಮಿಟಿಯ ಪರವಾಗಿ, ಸರ್ಕಲು ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಎಮ್. ಎಮ್. ಹೆಗ್ಡೆಯವರು ಮಂತ್ರಿಗಳಿಗೆ ಸನ್ಮಾನ ಪತ್ರವನ್ನು ಅರ್ಪಿಸಿದರು. ಅದರಲ್ಲಿ ಸೇತುವೆಗಳು, ಹೆರಿಗೆ ಆಸ್ಪತ್ರೆ, ನೀರಾವರಿ ಯೋಜನೆ; ವಿದ್ಯುಚ್ಛಕ್ತಿ ಮತ್ತಿತರೆ ಸವಲತ್ತುಗಳನ್ನು ಕುಂದಾಪುರ ತಾಲೂಕಿಗೆ ಒದಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡಿತ್ತು. ಆ ಮೇಲೆ ಪ. ಬೋರ್ಡ್ ಪರವಾಗಿ ಅಧ್ಯಕ್ಷ ಶ್ರೀ ಎಚ್. ಎಸ್. ಪೈಗಳು ಮಂತ್ರಿಗಳಿಗೆ ಮಾನಪತ್ರ ಸಮರ್ಪಿಸಿದರು. ಮಂತ್ರಿವರ್ಯರು ಮಾನಪತ್ರಗಳಿಗೆ ಉತ್ತರಕೊಡುತ್ತಾ ಪ್ರಾಂತ್ಯದ ಆಯಾಯ ಜಿಲ್ಲೆಗಳ ಅವಶ್ಯಕತೆ ಹಾಗೂ ಕೊರತೆಗಳನ್ನು ಕ್ರಮವಾಗಿ ಒದಗಿಸಿ, ಹೋಗಲಾಡಿಸುವರೆ ಸರಕಾರದ ಮುಂದಿರುವ ಎಡರು ತೊಡರುಗಳನ್ನು ವಿಶದವಾಗಿ ವಿವರಿಸುತ್ತಾ ಮದ್ಯಪಾನ ನಿಷೇಧ ಜಾರಿಯ ವಿಚಾರದಲ್ಲಿ ಸಾರ್ವತ್ರಿಕರು ಸಂಬಂಧಪಟ್ಟ ಶಿಬಂದಿಯೊಟ್ಟಿಗೆ ಸಹಕರಿಸಬೇಕಾಗಿ ಕೇಳಿಕೊಂಡರು, ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ರಾತ್ರೆ ಘಂಟೆ 9ಕ್ಕೆ ಮಂತ್ರಿವರ್ಯರಿಗೂ ಅವರ ಸಂಗಾತಿಗಳಿಗೂ ಕುಂದಾಪುರ ಸತ್ಕಾರಕೂಟದವರು ಪಂಚಾಯತ ಬೋರ್ಡ್ ಆಫೀಸಿನಲ್ಲಿ ಭೋಜನವನ್ನಿತ್ತರು. ತಾ7-7-49ರ ಬೆಳಗ್ಗೆ 8 ಘಂಟೆಗೆ ಮಂತ್ರಿಗಳು ಬಸರೂರಿಗೆ ಹೊರಟಾಗ ದಾರಿಯಲ್ಲಿ ಅಳಿಯಸಂತಾನ ಮನೆಯನ್ನು ನೋಡುವ ಕುತೂಹಲದಿಂದ ಪುರಾತನದ ಮನೆಯಾದ ಮೂಡ್ಲಕಟ್ಟೆ ಮನೆಯನ್ನು ಸಂದರ್ಶಿಸಿದರು. ಬಳಿಕ ಬಸರೂರಿನ ಕಾರ್ಯಕ್ರಮಗಳನ್ನು ಪೂರೈಸಿ ಕಾರ್ಕಳಕ್ಕೆ ಘಂಟೆ 10ಕ್ಕೆ ಸರಿಯಾಗಿ ಹೊರಟು ಹೋದರು.

ANNOUNCEMENT

Messrs. NOEL & SONS,
Post Box No. 1409, BOMBAY.

Sole Agents for: **Delicious Food Products**
(Manufacturers of High Class English Toffees & Confectionery)

Have pleasure to announce that the under mentioned firm has been appointed as their Sole Agents for the area comprising SALEM, NILGIRIS, COIMBATORE, SOUTH KANARA, & MALABAR Districts and COCHIN State.

Messrs. JOS BROS.,
Broadway, ERNAKULAM.

Enquiries regarding Sub-Agency and Distribution rights in the areas mentioned may please be addressed to the above Sole Agents.

ಪ್ರಕಟಣೆ

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. No. 124/1949.

M. ಪದ್ಮನಾಭ—ವಾದಿ.

ಮತ್ತು

M. ರಾಮಚಂದ್ರ, ಪೋನಪ್ಪ ಪುರುಷರ ಮಗ. C/o Naik's Beedi Works, Santhekatte, ಉಡುಪಿ ಪೇಟೆಯಲ್ಲಿರುವವ. —ಪ್ರತಿವಾದಿ

ಇವರೊಳಗೆ

ಪ್ರತಿವಾದಿಯಿಂದ ವಾದಿಗೆ ದಿನಾಂಕ ಪ್ರೊಮಿಸರಿ ನೋಟು ಪ್ರಕಾರ ಬರಬೇಕಾಗಿರುವ ಬಡ್ಡಿ ಖರ್ಚು ರೂಪಾಯಿ 288-9 8ನ್ನು ವಸೂಲು ಮಾಡಿಕೊಳ್ಳುವರೆ ದಾಖಲು ಮಾಡಿದ ಮೊಕದ್ದಮೆ ನ್ಯಾಯ ಕೋರ್ಟು ತಾರೀಕು 22-7-1949ಕ್ಕೆ ತನಿಖೆಗೆ ಇಟ್ಟಿರುವದರಿಂದ ಆ ದಿವಸ ಹಾಜರಾಗದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ

B. Padmanab.
Advocate for Plaintiff.
Kasaragod, 7-7-1949.

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

O. S. 163/49

ರವೀಂದ್ರ ಬಿನ್ನಿ ಸಹಾ — ವಾದಿರು

ಬಿಜ್ಜು ಯಾನೆ ರೋಜಿನ್ ಮಡ್ತಾ ಮೋಬ್ಯ ಸಹಾ —ಪ್ರತಿವಾದಿರು

1 ಬಿಜ್ಜು ಯಾನೆ ರೋಜಿನ್ ಮಡ್ತಾದೊ, ಬಸ್ತು ಸೋಜನ ವಿಧವೆ ಕೋಣಿ ಗ್ರಾಮ.

ಸದ್ರಿ ವಾದಿರು ಈ ಮೂಲಕ ಜಾಹೀರು ಮಾಡಿಕೊಳ್ಳುವದೇನೆಂದ್ರೆ

1ನೇ ಪ್ರತಿವಾದಿಯ ಸ್ವಾಧೀನವಿರುವ ದಾವಾ A B ಶೆಡ್ಯೂಲು ಆಸ್ತಿಗಳಲ್ಲಿ ವಾದಿರಿಗೆ ½ ಅಂಶದ ಪಾಲು ಕೊಡಿಸಬೇಕಾಗಿ ಮಾಡಿದ ದಾವೆಯು ತಾ 25-7-49ಕ್ಕೆ ಅಖೈರಿ ತನಿಖೆಗೆ ಇಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಉದಾಹರಣೆಯಿದ್ರೆ ಸದ್ರಿ ದಿವಸ ಹಗಲು 11ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿದೆ.

G. Sanjiva Rao.
Pleader for Plff.
Kundapur Date. 4-7-49.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳೆ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದಭೂಷಣ, ನಂ, 5 ಕೊಡಿಯಾಲಬೈಲು, ದ ಕ

ಸ್ಟಾಕಿಸ್ಟರು. ಡಾ। ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಹಳ್ಳಿಯ ರೈತ

ಕೆಲವು ಸಮಯಗಳಿಂದ ಲೇಖನಗಳನ್ನು ಬರೆಯಲಿಲ್ಲ. ನಮ್ಮ ಮಾನ್ಯ ಮಂತ್ರಿ ಪಂಡಿತ್ ನೆಹರೂರವರು ಆಹಾರದ ಕುರಿತು ಪತ್ರಿಕೆಗಳು ಸಹಕರಿಸಬೇಕಾಗಿ ಹೇಳಿದುದನ್ನು ತಾ 4ರ 'ಹಿಂದು'ಪತ್ರಿಕೆಯಲ್ಲಿ ಓದಿದೆ. ನಮ್ಮ ದೇಶವು ಆಹಾರ ಸಂಬಂಧವಾಗಿ ವಿದೇಶಗಳನ್ನು ಹೊಂದಿಕೊಂಡು ಇರುವುದು ಸರಿಯಲ್ಲವೆಂದೂ ಆಹಾರದ ಬೆಳವಣಿಗೆ ಹೆಚ್ಚಿಸಿ, 1951ರ ಒಳಗೆ ರಾಷ್ಟ್ರವನ್ನು ಆಹಾರ ಸ್ವಾವಲಂಬಿಯಾಗಿ ಮಾಡಬೇಕೆಂದೂ ಅವರು ಹೇಳಿದ್ದರು. ಕುಂಬಳೆ ಫಿರ್ಕಾ ಕಮಿಟಿ ಸಭೆಯಲ್ಲಿ ಈ ಕುರಿತು ಚರ್ಚಿಸಿ ನ್ಯಾಯವಾದೊಂದು ಯತ್ನವನ್ನು ಜಿಲ್ಲೆಯ ಮುಂದಿಡಬೇಕೆಂಬ ಆಲೋಚನೆ ಮೆಂಬರರಲ್ಲಿತ್ತು. ರೈಲು ರಸ್ತೆಯ ಬಳಿ ಮತ್ತು ಇನ್ನನೇಕ ಕಡೆಗಳಲ್ಲಿ ಒಳ್ಳೆ ಪೈರು ಬರುವ ಬಂಜರು ಭೂಮಿಗಳಿವೆ. ಆವೆಮಣ್ಣು ತೆಗೆದು ಬಂಜರು ಬಿದ್ದ ಉತ್ತಮ ತರದ ಬೈಲುಗದ್ದೆಗಳಿವೆ, ಇವುಗಳ ಬದಿಯಲ್ಲೇ ಗುಡ್ಡೆ ಮತ್ತು ಎತ್ತರದ ಸ್ಥಳಗಳೂ ಇವೆ. ಲಗ್ಗಿದಾರರು ಇಂತಹ ಬೈಲುಗದ್ದೆಗಳನ್ನು, ಬದಿಯ ಗುಡ್ಡಗಳನ್ನಗೆದ ಮಣ್ಣಿನಿಂದ ಏರಿಸುವ ಪ್ರಯತ್ನ ಮಾಡಿದರೆ, ತಗ್ಗಿನ ಬೈಲುಗದ್ದೆ ಏರಿ, ಎತ್ತರದ ಗುಡ್ಡೆ ತಗ್ಗಿ, ಎರಡರಲ್ಲಿಯೂ ಬೆಳೆ ಬರುವಂತೆ ಆಗುವುದು; ಆಹಾರ ಸಮೃದ್ಧಿಯಾಗಲು ಇದು ಸುಲಭ ಉಪಾಯ. ಹಳ್ಳಿಗಳು ವೃದ್ಧಿಯಾಗಬೇಕೆಂದಿರುವವರು ಬೇಗನೆ ಈ ಕಡೆಗೆ ನಿಗಾ ಕೊಡುವರೇ? ಮಣ್ಣಿನ ಕೆಲಸಕ್ಕೆ ಈಗಿನ ಸಮಯ ಅತೀ ಯೋಗ್ಯ.

ಸಾಗುವಳಿ ಕೆಲಸ ಮುಗಿಯುತ್ತಾ ಬರುತ್ತಿದೆ. ತೋಟದ ಅಗ್ರಿಗಳನ್ನು ಮಾಡಿ, ಹೊಂಡ ದಿಣ್ಣೆಗಳನ್ನು ಸರಿಪಡಿಸಿ, ಬೆಳೆದು ಬರುವ ಪೈರನ್ನು ಒಳಗೆ ತರುವ ಸಂಭ್ರಮವನ್ನು ಕಾಯುವ ಸಮಯವಿದು. ಈ ಮಧ್ಯೆ ಆಗೋಸ್ತು 15 - ಸ್ವತಂತ್ರ ದಿನಾಚರಣೆಯ ದಿನ; ಆಗಲೆ ಹಿಂದುಗಳಿಗೆ ಕೃಷ್ಣಾಷ್ಟಮಿ. ಈ ದಿವಸಗಳಲ್ಲಿ ನಮ್ಮ ಊರ ಹಣ್ಣುಹಂಪಲುಗಳನ್ನು ವೃದ್ಧಿಸುವದು ಯೋಗ್ಯ ಮತ್ತು ಸುಲಭಸಾಧ್ಯವಿದೆ. ಪ್ರತಿ ಮನೆಯವರು ಕನಿಷ್ಠ ಒಂದೆರಡು ಬಾಳೆಗಿಡ, ಒಂದೆರಡು ಪಪ್ಪಾಯಿ ಗಿಡ, ಈ ಸಲ ನಟ್ಟರೆ ಇವುಗಳ ಫಲರೂಪ ಆಹಾರವು ಎಲ್ಲರಿಗೂ ಬೇಗನೆ ಸಿಕ್ಕುವದು. ಹಾಗೆಯೇ ತರಕಾರಿ. ಮೂಲ್ಕಿ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಇದನ್ನು ಈ ವರ್ಷ ಕಾರ್ಯರೂಪಕ್ಕೆ ತರಬೇಕೆಂದಿದೆ. ಜಿಲ್ಲೆಯಲ್ಲಿ ಎಲ್ಲರೂ ಈ ಕಾರ್ಯ ಕೈಕೊಳ್ಳುವರೇ? ಹಾಗೆಯೇ ಟೊಮೆಟೊ ಮಂಗಿಡವಿದೆ. ಬೇಗನೆ ಫಲಕ್ಕೆ ಬಂದು ಉಪಯೋಗಕ್ಕೆ ಬರುವ ಗಿಡಗಳು ಅನೇಕವಿವೆ. ಒಂದು ಅಥವಾ ಎರಡು ತೆರದ್ದನ್ನು ನಟ್ಟರಾಯಿತು; ಅದು ಪ್ರತಿಯೊಬ್ಬನ ಆಹಾರವಾಗಿ ನಿಲ್ಲುವುದು.

ಪಂಡಿತ ನೆಹರೂ ಅವರು ಆಹಾರವನ್ನು ಹಾಳುಮಾಡಲು ಬಿಡಬಾರದೆಂದು ಬರೆದಿರುವರು. ನಾವೆಷ್ಟು ಜನರು ಈ ವಿಷಯವಾಗಿ ಯಾವ ತರದ ಯತ್ನದಲ್ಲಿರುವೆವೆಂದು ಈ ಸಂದರ್ಭದಲ್ಲಿ ಯೋಚಿಸಿ ತಿಳಿಯುವುದು ತಪ್ಪಾಗದು. ಬಂಟರ ಸಮಾಜದ ಮದುವೆಯ ಕ್ರಮವನ್ನು ಪರ್ಯಾಲೋಚನೆಗೆ ಇಡಬೇಕೆಂದಿರುವೆನು. ಅನೇಕ ತರದ ಖರ್ಚುಗಳಿಗೆ ಕಾರಣವಾಗಿರುವ ಮದುವೆಗಳ ಕ್ರಮ ವಿಧಾನಗಳನ್ನು ಸುಲಭ ರೀತಿಗೆ ತರಲು ಸಮಾಜದ ಯತ್ನವಿತ್ತು. ಬಂಟರ ಸಂಘವು ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಪ್ರೋತ್ಸಾಹಕೊಟ್ಟು ಮೂಲ್ಕಿ ಆಸುಪಾಸಿನಲ್ಲಿ, ಅಂತೆಯೇ ಇತರ ಕೆಲವು ಕಡೆಗಳಲ್ಲಿ ಅದನ್ನು ನಡಿಸಿಕೊಂಡು ಬರುವ ವಿಷಯವು ಅದೊಂದು ವಿಧದ ಹೆಗ್ಗಳಿಕೆಯೊಡನೆ, ಸಂಘದ ವಾರ್ಷಿಕ ವರದಿಯಲ್ಲಿ ಪ್ರತಿ ವರ್ಷವೂ ನಮೂದಿಸಲ್ಪಡುತ್ತಿದೆ. ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ನಿರ್ಮಲವಾದ ಮನೆ, ತೋಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ, ಮತ್ತು ಅನಾವಶ್ಯಕವಾದ ಖರ್ಚುಗಳನ್ನು ನಿಲ್ಲಿಸಿ ಮಿತವ್ಯಯಿಗಳಾಗಿ ಇರುವ ಪ್ರಯತ್ನ--ಇವೆರಡನ್ನು ಮುಖ್ಯ ಸಾಧನೆಯಾಗಿ ಇಟ್ಟುಕೊಂಡಿದೆ. ಹೀಗಿರುತ್ತಾ ಮನೆಗಳನ್ನು ಬಿಟ್ಟು ಪೇಟೆ ಪಟ್ಟಣಗಳಿಗೆ ಸೇರಿ, ಭವನ, ಸಿನೇಮಾ ಕಟ್ಟಡ, ಶಾಲೆ ಹೋಟೆಲ್‌ಗಳಲ್ಲಿ ಮದುವೆಗಳನ್ನು ಜರಗಿಸಿ, ಅಗತ್ಯವಿಲ್ಲದ ಪೇಟೆಯ ಮಹಾಜನರಿಗೆ ಕಾಫಿಫಲಾಹಾರ ಕೊಡುವುದು ಎಷ್ಟರ ನ್ಯಾಯವೆಂಬುದನ್ನು ಪಂಡಿತ ನೆಹರೂಗಳ ಮಾತಿನೊಡನೆ ಹೋಲಿಸಿ ತಿಳಿಯಬೇಕೆಂದು ಎಲ್ಲರ ಲಕ್ಷ್ಯವನ್ನು ಈ ಕಡೆಗೆ ಎಳೆಯುವೆನು. ಸಂಘದ ಆಡಳಿತೆಯವರು ಈ ಮಾತುಗಳಲ್ಲಿ ಏನಾದರೂ ತಿರುಳಿರುವುದೆಂದು ತಿಳಿಯುವುದಾದರೆ ಈ ತರದ ಖರ್ಚುಗಳಲ್ಲಿ ಭಾಗಿಗಳಾಗುವುದು ಸರಿಯೇ ಎಂದು ಆಲೋಚಿಸಿ ಅದನ್ನು ಇನ್ನಾದರೂ ಸರಿಪಡಿಸಲು ಯತ್ನಿಸಬಾರದೇಕೆ? ನಮ್ಮ ಮನೆಗಳು ರಿಪೇರಿಗೊಳ್ಳಲು ಮದುವೆಯು ಒಂದು ಸುಸಂದರ್ಭ. ಶುಭಕೆಲಸಗಳು ಸಣ್ಣ ರೀತಿಯಲ್ಲೇ ಅದೂ ಮನೆಯಲ್ಲೇ ಆಗುವುದು ಮನೆಗೊಂದು ಭೂಷಣ. ನಾನೊಂದು ಮದುವೆಯನ್ನು ಈ ರೀತಿ ಮಾಡಿದೆನೆಂದು ಬರೆಯುವುದಲ್ಲ; ಮಾಡಿ ಅನಂತರ ಎಲ್ಲವರೊಡನೆ ಕೇಳಿ ಕೊಳ್ಳಬೇಕೆಂಬುವೇ ನನ್ನ ವಿಚಾರದಲ್ಲಿ ಕೆಲವು ಸಮಯದಿಂದ ಇದ್ದ ಮತ. ಎಷ್ಟರ ಹಾಳು, ನಷ್ಟ, ಖರ್ಚು ಆಗುತ್ತಿದೆ ಎಂಬುದು ಎಲ್ಲವರೂ ತಿಳಿವ ವಿಚಾರ. ಒಮ್ಮೆ ಎಂಜಲೆಲೆಯನ್ನು ಬಿಸಾಡಿ ಒಂದು ವರ್ಗವು ಬೆಳೆದು ಬರಲು ಅನುಕೂಲ ಮಾಡಿಕೊಟ್ಟೆವು; ಈಗ ಬಿಸಾಡಿದ ಫಲಾಹಾರ ವಸ್ತುಗಳನ್ನು ಹೆಕ್ಕಿ ತಿನ್ನಲು ಇನ್ನೊಂದು ಜಾತಿಗೆ ಎಡೆ ಕೊಡುತ್ತಿರುವೆವು. ರೈತ ವರ್ಗದವರು, ಮುಖ್ಯವಾಗಿ ಹಳ್ಳಿಗಳಲ್ಲಿರುವ ವರ್ಗದವರು ಈ ತರದ ಖರ್ಚಿಗೆ ಇಳಿಯದೆ ಆಹಾರದ ಬೆಳವಣಿಗೆ ಮತ್ತು ಸಮೃದ್ಧಿಗೆ ಸಹಕಾರ ಕೊಡುವುದಾದರೆ ನಮ್ಮ ಮಂತ್ರಿ ಪಂಡಿತ ನೆಹರೂರವರ ಹೇಳಿಕೆಗೆ ಮಾನ್ಯತೆ ಕೊಟ್ಟಂತಾಗುವುದು. ಹಳ್ಳಿಗರು, ಪಟ್ಟಣಿಗರು ಎಂಬ ಭೇದವಿಲ್ಲದೆ ಎಲ್ಲರೂ ಇದರಲ್ಲಿ ಸಹಕರಿಸುವುದು ಅಗತ್ಯವೋ ತಿಳಿಯಿರಿ.

ಈ ರೀತಿ ಬರೆಯುವಾಗ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸುವ ಅಗತ್ಯ ಕೂಡಾ ಇರುವುದೆಂದು ಹೇಳಬೇಕಾಗಿದೆ. 1946ರಲ್ಲಿ ಕಂಟ್ರೋಲು ತೆಗೆದು ಹಾಕಬೇಕೆಂದು ಬರೆದಿದ್ದೆವು. ಮಹಾತ್ಮಾ ಗಾಂಧಿಯವರು ಈ ಕುರಿತು ತನ್ನ ಅಭಿಪ್ರಾಯವನ್ನು ಒತ್ತಿಕೊಟ್ಟ ಕಾರಣ ಒಂದು ವರ್ಷ ಕಂಟ್ರೋಲು ರದ್ದಾಯಿತು. ತಜ್ಞರ ಕೂಟದಲ್ಲಿ ಕಂಟ್ರೋಲು ಇಡಬೇಕೆಂದು ತೀರ್ಮಾನವಾಗಿ ಅದು ಪುನಃ ಜಾರಿಗೆ ಬಂದುದು ಬಹು ಶೋಚನೀಯ. ಆಹಾರ ವಸ್ತುಗಳು ಸರಿಯಾಗಿ ಬೆಳೆದುಬರಬೇಕಾದರೆ ಕಂಟ್ರೋಲು ಇರಕೂಡದು. ಪ್ರತಿಯೊಬ್ಬನೂ ತನಗೆ ಬೇಕಾದುದನ್ನು ಸ್ವತಃ ಬೆಳೆಸಲು ನೋಡಬೇಕು. ಹೀಗಾದರೆ ಬಂಜರು ಭೂಮಿಗಳು ಫಲಕೊಡುವವು. ಇಲ್ಲವಾದರೆ ಸರಕಾರಕ್ಕೆ ಸದಾಕಾಲವೂ ಕೆಲಸವಾಗುವುದು.

ಎಸ್. ಆರ್. ಪೂಂಜ,
ಕಾರ್ಯದರ್ಶಿ
ಗ್ರಾಮಾಭಿವೃದ್ಧಿ ಕಮಿಟಿ, ಮೂಲ್ಕಿ.

Rush up!

Classes commenced on 27-6-1949.

MODERN TUTORIAL INSTITUTE,

The Modern School of Commerce,

Approved by the Government of Madras.

Church Road, **UDIPI**, S. Kanara.

This institution undertakes to give Special tuition in all subjects for candidates appearing for:

S. S. L. C — October & March Examinations.

Individual attention & Special coaching IS OUR MOTTO.
The Classes are held in the evenings to convenience all.
Tuition fee is MODERATE to suit ALL

Apply in person.
T. V. Vasudevan.
Manager.

English copies of
MADRAS ALIYASANTHANA ACT of 1949
are available.
NAVAYUGA PRESS, UDIPI.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ ಔಷಧಿ' ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆ ನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಣಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-ವಿ. ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೫ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಬೊಂಬಾಯಿ ಸ್ಟಾಕಿಸ್ಟರು:—ಲಕ್ಷ್ಮಿವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ಸಮಾಜ ಸುಧಾರಕರು ಸಮಾಜದಲ್ಲಿನ ಕುಂದುಕೊರತೆಗಳನ್ನು ಸಾಕಷ್ಟು ಪರಿಶೀಲಿಸಿ, ಅದಕ್ಕೆ ಪರಿಹಾರ ಮಾರ್ಗ ಕೈಗೊಂಡಿದ್ದರೂ ವಿಧವೆಯರ ಬಗ್ಗೆ ಯಾವ ಆಂದೋಲನವನ್ನೂ ಗಮನಿಸದೆ ಇರುವುದು ತುಂಬ ವಿಷಾದದ ವಿಷಯವಾಗಿದೆ.

ನಮ್ಮ ಸಮಾಜದಲ್ಲಿ ವಿಧವೆಯರನ್ನು ಕಾಣುವ ರೀತಿ ಬಹಳ ಹೀನ ತರದ್ದಾಗಿದೆ. ಅವರ ಬಗ್ಗೆ ನಾವಾಡುವ ಮಾತು ತಿರಸ್ಕಾರಯುಕ್ತವಾಗಿದೆ. ವಿಧವೆಯರೆಂದರೆ ಅಮಂಗಳ ಎಂದು ಕಿವಿ ಮುಚ್ಚಿಕೊಳ್ಳುತ್ತೇವೆ.

ವಿಧವೆಯರಲ್ಲಿ ಎಷ್ಟೋ ಮಂದಿ ವಿದ್ಯಾವಂತರಿದ್ದಾರೆ. ಅಲ್ಪಸ್ವಲ್ಪ ಓದಿ ಬರೆಯಲು ಕಲಿತವರಿದ್ದಾರೆ. ವಿದ್ಯಾವಂತರೂ ಅನೇಕ ಮಂದಿ ಇದ್ದಾರೆ.

ವಿದ್ಯಾವಂತ ವಿಧವೆಯರಿಗೆ ಸರ್ಕಾರದಲ್ಲಿ ಉದ್ಯೋಗಗಳನ್ನು ಕೊಡಬೇಕು. ತಾಲ್ಲೂಕು ಕಚೇರಿಯಿಂದ ಮೊದಲ್ಗೊಂಡು ದೊಡ್ಡದೊಡ್ಡ ಕಚೇರಿಗಳಲ್ಲಿಯೂ ಗುಮಾಸ್ತ ಕೆಲಸದಿಂದ ಹಿರಿಯ ಅಧಿಕಾರಿಯ ಉದ್ಯೋಗದವರೆಗೂ ವಿಧವೆಯರಿಗೆ ಸ್ಥಾನ ಕೊಡಬೇಕು. ಬಂಡವಾಳಸ್ಥರು ಕೈಗೊಳ್ಳುವ ಉದ್ಯಮಗಳ ಕಚೇರಿಗಳಲ್ಲಿ ಅವರು ಕೆಲಸ ಮಾಡುವುದಕ್ಕಿಂತ ಸರ್ಕಾರದಲ್ಲಿ ಕೆಲಸ ಮಾಡಿದರೆ, ಅವರ ಶೀಲಕ್ಕೆ ಧಕ್ಕೆ ಬರಲಾರದು. ಆದಕಾರಣವೇ ಸರ್ಕಾರ ವಿದ್ಯಾವಂತ ವಿಧವೆಯರಿಗೆ ಈ ರೀತಿಯ ಸಹಾಯವನ್ನು ಮಾಡಿ ಅವರನ್ನು ಉದ್ಧರಿಸಬೇಕಾಗಿರುವುದು. ಈ ವಿಧದ ವಿಧವೆಯರ ಉದ್ಧಾರ ಮುಂಬಯಿ ನಗರದಲ್ಲಿಯೂ ಮತ್ತು ಪ್ರಾಂತದಲ್ಲಿಯೂ ಹೆಚ್ಚು ಬಳಕೆಯಲ್ಲಿರುವುದು. ಅಲ್ಲದೆ ಮೈಸೂರು ಮತ್ತಿತರ ಸಂಸ್ಥಾನಗಳಲ್ಲಿ ಉಪಾಧ್ಯಾಯಿನಿಯರ ವೃತ್ತಿಗೆ ಮಾತ್ರ ಅವರನ್ನು ಸೇರಿಸಿಕೊಳ್ಳುತ್ತ ಉತ್ತೇಜಿಸುತ್ತಿರುವರು. ಇದು ಅಭಿನಂದನೀಯವಾದ ಸಂಗತಿ.

ಅಲ್ಪ ವಿದ್ಯಾವಂತ ವಿಧವೆಯರ ಪ್ರಶ್ನೆ

ಇನ್ನು ಅಲ್ಪ ವಿದ್ಯಾವಂತ ವಿಧವೆಯರ ಪ್ರಶ್ನೆ!

ಅಲ್ಪ ವಿದ್ಯಾವಂತರೆಂದರೆ ತಕ್ಕ ಮಟ್ಟಿಗೆ ಓದಿ ಬರೆಯಲು ಕಲಿತವರೆಂದು ಅರ್ಥ. ಅವರಿಗೆ ಸರ್ಕಾರದಲ್ಲಿ ಕೆಲಸ ಸಿಕ್ಕುವುದು ಅಸಾಧ್ಯ. ಸರ್ಕಾರದಲ್ಲಿ ಕೆಲಸ ಮಾಡಲು ಇರಬೇಕಾದ ವಿದ್ಯಾ ಅರ್ಹತೆ ಅಂದರೆ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದರ ಯೋಗ್ಯತಾ ಪತ್ರ ಅವರಲ್ಲಿರುವುದು. ಎಂದ ಮೇಲೆ ಸರಕಾರೀ ಕಚೇರಿಗಳಲ್ಲಿ ಕೆಲಸ ಮಾಡುವುದು ಅವರಿಂದ ಸಾಧ್ಯವಾಗದ ಕೆಲಸ. ಹಾಗೆ ಒಂದು ಪಕ್ಷ ಸಾಧ್ಯವಾದರೂ ಸರಕಾರದ ಕಾಯಿದೆ-ಕಾನೂನುಗಳು ಅದಕ್ಕೆ ಅಡ್ಡಿ ಬರುವುವು.

ಇದರಿಂದಾಗಿ ಅಲ್ಪ ವಿದ್ಯಾವಂತ ವಿಧವೆಯರ ಪ್ರಶ್ನೆಯನ್ನು ಆಳವಾಗಿ ಯೋಚಿಸಬೇಕಾಗಿದೆ. ಅಲ್ಲದೆ ಇವರ ಜೀವನೋಪಾಯಕ್ಕೆ ಸರಿಯಾಗಿ ಹೊಂದುವಂತಹ ಸುಲಭ ಉದ್ಯೋಗ ಒಂದೇ ಒಂದು ಎನ್ನಬಹುದು.

ಮುದ್ರಣಶಾಲೆಗಳಲ್ಲಿ ಅಕ್ಷರ ಜೋಡಿಸುವ ಕೆಲಸ. ಈ ಕೆಲಸಕ್ಕೆ ಹೆಚ್ಚು ವಿದ್ಯೆಯ ಅಗತ್ಯವಿಲ್ಲ. ತಕ್ಕಮಟ್ಟಿಗೆ ಓದಿ-ಬರೆಯಲು

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಜನರಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ, 8-[ವಿ. ಪಿ. ಖರ್ಚು ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಮಹಿಳಾ ಪುಟ

ಸಮಾಜದಲ್ಲಿ ವಿಧವೆಯರ ಸಮಸ್ಯೆ

ಬಂದರೆ ಸಾಕು. ಹೀಗೆ ಮುದ್ರಣಾಲಯಗಳಲ್ಲಿ ಅಕ್ಷರ ಜೋಡಿಸುವ ಕೆಲಸದಿಂದ ಮೊದಲ್ಗೊಂಡು ಅಚ್ಚೊತ್ತುವ ಕೆಲಸ ಎಂದರೆ printing work ಕೂಡ ಮಾಡಬಹುದು. ಆಯಾಸವಿಲ್ಲದೆ ಕಷ್ಟವಿಲ್ಲದೆ ನಿಂತಲ್ಲಿ ನಿಂತು ಮಾಡುವ ಸುಲಭ ಕಾರ್ಯ. ದೇಹಕ್ಕೆ ಅನಾರೋಗ್ಯವಾದಾಗ, ನಿಂತು ಬೇಸರವಾದಾಗ, ಎತ್ತರವಾದ ಸ್ಟೂಲಿನ ಮೇಲೆ ಕೂತು ಸಹ ಈ ಕೆಲಸಗಳನ್ನು ಮಾಡಬಹುದು. ಇದರಿಂದ ಹೆಚ್ಚು ಲಾಭವೂ, ಶರೀರಕ್ಕೆ ಬೇಕಾಗುವ ವ್ಯಾಯಾಮವೂ ಆಗಿ ಅವರು ಜೀವನ ನಡೆಸುವುದಕ್ಕೂ, ತಮ್ಮ ಶರೀರದ ಆರೋಗ್ಯ ಕಾಪಾಡಿಕೊಳ್ಳುವುದಕ್ಕೂ ಸಹಕಾರಿಯಾಗುವುದು.

ಪುಸ್ತಕಗಳನ್ನು ಅಚ್ಚು-ಕಟ್ಟಾಗಿ ಮಡಿಚಿದ್ದು, ಅಂದವಾಗಿ ಕಾಣುವಂತಹ ಹೊದಿಕೆಯನ್ನು ಹಾಕಿ ಬೈಂಡ್ ಮಾಡುವುದು ಮತ್ತೊಂದು ಸುಲಭ ಕೆಲಸ. ಇದಕ್ಕೆ ಸಾಕಷ್ಟು ತಾಳ್ಮೆ ಬೇಕಾಗಿರುವುದು. ಅಲ್ಲದೆ ಕುಳಿತ ಕಡೆ ಕಷ್ಟವಿಲ್ಲದೆ ಮಾಡಬಹುದಾದ ಕೆಲಸ. ಇದನ್ನು ಮುದ್ರಣಾಲಯದ ಒಂದು ವಿಭಾಗವೆಂದು ಕರೆಯಬಹುದು ಮತ್ತಿದು ಮುದ್ರಣಾಲಯದಂತೆಯೇ ಲಾಭದಾಯಕ ಉದ್ಯಮ.

ಇಂತಹ ಉದ್ಯಮಗಳನ್ನು ಸರಕಾರ ಇಲ್ಲವೇ ದೇಶದ ಪ್ರಮುಖ ಬಂಡವಾಳಶಾಹಿಗಳು, ವ್ಯಾಪಾರೋದ್ಯಮಿಗಳು ಕೈಗೊಳ್ಳಬೇಕು. ಕೇವಲ ಹಣ ಸಂಪಾದನೆಗಾಗಿ ಈ ರೀತಿಯ ಕಾರ್ಯಪ್ರವೃತ್ತರಾದರೆ ಇಂತಹ ಉದ್ಯಮಗಳು ಯಶಸ್ವಿಯಾಗಲಾರವು. ವಿಧವೆಯರ ಉದ್ಧಾರ ಮಾಡುವ ಅವರ ಹಿತಚಿಂತನೆಯ ದೃಷ್ಟಿಯಿಂದಲೂ ಮಾಡಬೇಕು. ಆಗ ಮಾತ್ರ ಉದ್ಯಮದಿಂದ ಲಾಭ, ಉದ್ಯಮದ ಉದ್ದೇಶ, ಸಮಾಜದ ಉದ್ಧಾರಗಳು ಸರಿಹೋಗುವುವು.

ಪಾಶ್ಚಾತ್ಯದೇಶಗಳಾದ ಅಮೇರಿಕ, ಬ್ರಿಟನ್ ರಷ್ಯಾ ಮುಂತಾದ ಕಡೆಗಳಲ್ಲಿ ಜನರು ತಮ್ಮ ತಮ್ಮ ಮನೆಗಳಲ್ಲಿಯೇ ಸಣ್ಣ ಸಣ್ಣ ಮುದ್ರಣಾಲಯಗಳನ್ನು ತೆರೆದು ಅದರಲ್ಲಿ ಹೆಂಗಸರು-ಮಕ್ಕಳು ಮೊದಲಾಗಿ ದುಡಿದು, ಅದರಿಂದ ತಮ್ಮ ಜೀವನವನ್ನೂ ತಮ್ಮ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನೂ ಭರಿಸುತ್ತಾರೆ. ಅಲ್ಲದೆ ತಮ್ಮ ದೇಶದ ಸಂಪತ್ಸಮೃದ್ಧಿಯನ್ನು ಹೆಚ್ಚಿಸಲು ನೆರವಾಗುತ್ತಾರೆ.

ಹೀಗೆ ನಾವೂ ಅವರನ್ನು ಅನುಕರಿಸಿದಲ್ಲಿ ವಿಧವೆಯರಿಗೆ ಹೆಚ್ಚು ಉಪಕಾರವಾಗಿ ಸುಲಲಿತವಾಗಿ ತಮ್ಮ ಜೀವನವನ್ನು ನಡೆಸಿಕೊಳ್ಳಲಾಗುವುದು.

ಲಲಿತ ಕಲೆಗಳಲ್ಲಿ ಶಿಕ್ಷಣ.

ಅಲ್ಲದೆ ಇಂತಹ ಕಾರ್ಯಗಳಲ್ಲಿ ತೊಡಗಲು ಹಿಂದು ಮುಂದು ನೋಡುವ ವಿಧವೆಯರಿಗೆ ಚಿತ್ರಲೇಖನ, ಸಾಹಿತ್ಯ, ಸಂಗೀತ, ನೃತ್ಯ ಮುಂತಾದ ಲಲಿತ ಕಲೆಗಳಲ್ಲಿ ಶಿಕ್ಷಣ ಕೊಟ್ಟು ತರಬೇತು ಮಾಡಿದರೆ ಒಳ್ಳೆಯದು.

ವಿಧವೆಯರಿಗೆ ಸಾಮಾನ್ಯವಾಗಿ ನೃತ್ಯ ಕಲೆಯಲ್ಲಿ ಹೆಚ್ಚು ಇಷ್ಟವಿರುವುದಿಲ್ಲ. ಆದ್ದರಿಂದ ಸಂಗೀತ, ಸಾಹಿತ್ಯ ಮತ್ತು ಚಿತ್ರಕಲೆಗಳಲ್ಲಿ ತರಬೇತು ಮಾಡುವುದು ಹೆಚ್ಚು ಪ್ರಯೋಜನವಾಗುವುದು.

ದಿನ ದಿನಕ್ಕೆ ಬೆಳೆಯುತ್ತಿರುವ ದೇಶದಲ್ಲಿ ಸಾಹಿತ್ಯದಿಂದ ಆಗುವ ಪ್ರಯೋಜನ ಅಪಾರವಾದುದು. ದೇಶದ ರೀತಿ ನೀತಿಯ, ಸಮಾಜದ ಮತ್ತು ಜನತೆಯ ಪ್ರತಿಬಿಂಬ ಸಾಹಿತ್ಯ. ಅಲ್ಲದೆ ದೇಶದ ಆಗುಹೋಗುಗಳು ಅದರ ಪಾಲಿನವಾಗಿದೆ. ಇಂತಹ ಸಾಹಿತ್ಯ ಕಲೆಯಲ್ಲಿ ಅಲ್ಪ ವಿದ್ಯಾವಂತ ವಿಧವೆಯರಿಗೆ ಶಿಕ್ಷಣ ಕೊಟ್ಟರೆ ದೇಶದ ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲ. ಹೀಗೆಯೇ ಚಿತ್ರಕಲೆ-ಸಂಗೀತ ಕಲೆಗಳೂ ಅವರ ಜೀವನವನ್ನು ಸಾಗಿಸಲು ಸಹಕಾರಿಯಾಗುವುವು. ಮತ್ತು ದೇಶದ ಸಂಸ್ಕೃತಿಯನ್ನೂ ಸಂಪತ್ತನ್ನೂ ಹೆಚ್ಚಿಸುವುವು.

ಅವಿದ್ಯಾವಂತ ಮಹಿಳೆಯರು.

ಉಳಿದಿರುವುದು ಅವಿದ್ಯಾವಂತ ವಿಧವೆಯರ ಜೀವನ ಮಾರ್ಗ. ಇದು ಪೂಜ್ಯ ಬಾಪೂಜಿಯವರ ತತ್ವದೃಷ್ಟಿಯಿಂದ ಬಹಳ ಸುಲಭವಾಗಿ ಆಗುವ ಕೆಲಸ.

ವಿಶ್ವಪೂಜ್ಯ ಬಾಪೂಜಿಯವರು ಕೈಗೊಂಡ ಗ್ರಾಮ ಕೈಗಾರಿಕೆ ಒಂದು ಮುಖ್ಯವಾದ ಹಾಗೂ ವಿಧವೆಯರಿಂದ ಸಾಧ್ಯವಾಗಬಹುದಾದ ಕೆಲಸ.

ತಕಲಿಯಿಂದ ಇಲ್ಲವೇ ರಾಟೆಯಿಂದ ಅಥವಾ ಮತ್ತಿತರ ಸಾಧನಗಳಿಂದ ನೂಲನ್ನು ನೂತು ಕೈಮಗ್ಗಗಳಲ್ಲಿ ನೇಯುವುದು, ಗ್ರಾಮ ಸೈಮರ್ಕಲ್ಯದಲ್ಲಿ ಕಾರ್ಯತಃ ಶಿಕ್ಷಣ Practical training ಅನ್ನು ಪಡೆದು ಗ್ರಾಮಗಳಲ್ಲಿ ಸರ್ಕಾರದ ಪ್ರತಿನಿಧಿಗಳಾಗಿರುವುದು, ಮುಂತಾದ ಕಾರ್ಯಗಳಲ್ಲಿ ತೊಡಗುವುದು ಅವಿದ್ಯಾವಂತ ವಿಧವೆಯರಿಂದ ಸುಲಭವಾಗಿ ಸಾಧ್ಯವಾಗುವ ಕಾರ್ಯಗಳು.

ಹೀಗೆ ಅವಿದ್ಯಾವಂತ ವಿಧವೆಯರು ಬಾಪೂಜಿಯ ಗ್ರಾಮೋದ್ಧಾರ ಕಾರ್ಯಗಳಲ್ಲಿ ಭಾಗವಹಿಸಿ ತಮ್ಮ ಪಾಲಿನ ಸೇವೆಯನ್ನೂ ತಮ್ಮ ಜೀವನೋಪಾಯವನ್ನೂ ಮಾಡಬಹುದು.

ಇದೆಕ್ಕೆಲ್ಲ ಸರ್ಕಾರದ ನೆರವು ಅತ್ಯಗತ್ಯ. ಸಮಾಜ ಸೇವಕರು ನಿಷ್ಪಕ್ಷಪಾತ ಬುದ್ಧಿಯಿಂದ ವರ್ತಿಸುವುದು, ಜನತೆ ಬೆಂಬಲ ಕೊಡುವುದು ಅಗತ್ಯ, ಅಲ್ಲದಿದ್ದರೆ ವಿಧವೆಯರ ಉದ್ಧಾರ, ಸಮಾಜದ ಉದ್ಧಾರ, ದೇಶದ ಸಂಪತ್ತು-ಸಂಸ್ಕೃತಿಗಳ ಬೆಳವಣಿಗೆಯಾಗುವುದು ಅಸಾಧ್ಯ ಕೆಲಸ.

ಜೀವನನಡೆಸಲು ದಿಕ್ಕುಗಾಣದ ವಿಧವೆಯರು ಶೀಲವನ್ನು ಬಿಡುವುದು ಸಮಾಜಕ್ಕೇ ಅಪಕೀರ್ತಿ ತರುವಂತಹ ವಿಷಯ.

ಆದರಿಂದಾಗಿ ಸರ್ಕಾರ, ಮುಖಂಡರು, ಧುರೀಣರು, ಪ್ರಜೆಗಳು, ವಿಧವೆಯರ ಬಗ್ಗೆ ಸಾಕಷ್ಟು ಶ್ರದ್ಧೆವಹಿಸಿ ಅವರ ಉದ್ಧಾರ ಕಾರ್ಯದಲ್ಲಿ ತೊಡಗಿದರೆ ದೇಶೋದ್ಧಾರ ಕಾರ್ಯದಲ್ಲಿ ತೊಡಗಿದಂತಾಗುವುದು.

—ಇಂದಿರಾ ತನಯ
(ಚಿತ್ರಗುಪ್ತ)

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all: keeps hair black and relieves head-ache etc.

REGD TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಶುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರ್ಮಿಕ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಚನಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಗಮೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD
ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

21-7-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER:
Hon'ble Sri. A. B. Shetty
Minister for Agriculture & Veterinary

ನವಯುಗ

Telegram: "Navayuga"

Estd. 1921 ಸ್ಥಾಪನೆ.

ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ ವಾರ 47

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29 No. 47

ಇಂತಹ ಬುದ್ಧಿಗೇನೆನ್ನಲಿ!

ಬ್ರಿಟಿಷ್ ಆಡಳಿತೆಯಿದ್ದಾಗ ಭಾರತದ ಇಂದಿನ ಮಹಾ ಪ್ರಧಾನನ ಪಟ್ಟದ ಬಿಳಿ ಅಧಿಕಾರಿಯೊಬ್ಬನು ಸಂಚಾರಕ್ಕೆ ಹೊರಟ ರಸ್ತೆಯಲ್ಲಿ ಬಿಳಿಟೋಪಿ ಹೊತ್ತ ತಲೆ ಕಂಡು ಬಂದೊಡನೆ ಅದನ್ನು ಲಾಠಿಯಿಂದ ಬಡಿದು ಹಾಕುತ್ತಿದ್ದರು. ಈಗ ಲಕ್ಷಾವಧಿ ಜನರ ನಡುವೆ ಕೈಜೋಡಿಸಿಕೊಂಡು ಬರುವ ಪಂಡಿತ ನೆಹರುಗಳ ಹಾದಿಯಲ್ಲಿ ಬೋಂಬು ಹಿಡಿದುಕೊಂಡು ನಿಲ್ಲುವಷ್ಟು ಸಲುಗೆ ಬೆಳೆದು ಹೋಗಿದೆ.

ಯುದ್ಧ ಕಾಲದಲ್ಲಿ ಬ್ರಿಟಿಷ್ ಆಡಳಿತೆಯಿದ್ದಾಗ ಆಹಾರ ಬರಗಾಲದಿಂದ ೧೦ ಲಕ್ಷಕ್ಕೂ ಮಿಕ್ಕಿದ ಜನರು ಕಲ್ಕತ್ತದ ರಾಜ ರಸ್ತೆಗಳಲ್ಲೇ ಬಿದ್ದು ಹುಳಗಳಂತೆ ಸತ್ತಿದ್ದರು; ಆಗ ಕೂಡಾ ಧೀರ ಬಂಗಾಳಿಗಳಲ್ಲಿ ತೋರಿಬಾರದಿದ್ದಷ್ಟು ಅತೃಪ್ತಿ ಆವೇಶಗಳು ಈಗ ಕೆಲವು ಅನಿವಾರ್ಯ ಕಾರಣಗಳನ್ನೇ ನೆವನವಾಗಿ ಇಟ್ಟುಕೊಂಡು ನೆಹರೂ ಸರಕಾರದ ಕಡೆಗೆ ತೋರಿ ಬರುತ್ತಿವೆ.

ಬ್ರಿಟಿಷರ ಪೈಕಿ ಕೆಳಮಟ್ಟದವನೇ ಆದರೂ ಇಲ್ಲಿ ಅಧಿಕಾರ ಚಾಲು ಮಾಡಲು ಬಂದರಾಯಿತು-ಆತನ ಕಡೆಗೆ ಕೇವಲ ಭಯ ಭಕ್ತಿಯಷ್ಟೇ ಪ್ರದರ್ಶಿಸಿ ಆತನೊಬ್ಬ ಮಹಾ ಘನವಂತನೆಂದು ಕಲ್ಪಿಸಿಕೊಳ್ಳಲು ನಮ್ಮ ಜನರಿಗೆ ತಿಳಿದಿತ್ತು; ಈಗ ಎಂತಹ ಉಚ್ಚ ಗುಣ ನಡತೆಯುವ ಅಧಿಕಾರಕ್ಕೇರಿದರೂ ಆತ ನಮ್ಮವನೆಂಬ ಸಲುಗೆಯಿಂದ, ದೋಷವನ್ನೇ ಹುಡುಕುವ ಅಭ್ಯಾಸ ಜನತೆಯಲ್ಲಿ ಬೇರು ಬಿಟ್ಟಿದೆ.

ಅಭಿಮಾನ, ಮಾನುಷತ್ವದ ಮಾತು ಹಾಗಿರಲಿ. ಕೇವಲ ಅನುಕೂಲತೆಯ ದೃಷ್ಟಿಯಿಂದ ನೋಡಿದರೂ ಈ ಕಾಲದಲ್ಲೂ ಪರಕೀಯಾಡಳಿತೆ ಇರುತ್ತಿದ್ದರೆ ಕಾಲ ಮಹಾತ್ಮೆಯಿಂದಾಗಿ ಪರಿಸ್ಥಿತಿ ಇದಕ್ಕಿಂತಲೂ ಕಳತೆಯದಾಗುತಿತ್ತೆಂಬುದನ್ನು ಅಂತುಕೊಳ್ಳುವಷ್ಟು ಜ್ಞಾನವಿಲ್ಲದೆ ಗತವೈಭವವನ್ನು ಸ್ಮರಿಸುವವರಿದ್ದಾರೆ.

ಕಾನೂನು ಮತ್ತು ವ್ಯವಸ್ಥಾ ಪಾಲನೆಯ ಮಟ್ಟಿಗೆ ಪಕ್ಷಪಾತ ವಹಿಸುವದೆಷ್ಟು ಅನಾಹುತಕಾರಿಯೋ, ಸಡಿಲುಬಿಡುವದೂ ಅಷ್ಟೇ ಅಪಾಯಕರ, ಮತ್ತು ಅಪಾಯವು ಜನತೆಗೇನೇ ಎಂಬುದನ್ನರಿಯದೆ, ಪಂಡಿತ ನೆಹರುಗಳಂತಹ ರಾಷ್ಟ್ರ ನಾಯಕರು ಚಳವಳಿ ಕಾಲದಲ್ಲಿ ತೋರಿಸುತ್ತಿದ್ದ ಸಲುಗೆಯನ್ನೇ ಅಧಿಕಾರ ಚಲನೆಯಲ್ಲೂ ತೋರಿಸುತ್ತಿಲ್ಲವೆಂಬುದಕ್ಕಾಗಿ ಟೀಕಿಸುವ ಅಜ್ಞರಿದ್ದಾರೆ.

ಪ್ರಗತಿ ಪಥದಲ್ಲಿ ಬೊಬ್ಬೆಹಾಕುತ್ತಾ ನಿಲ್ಲುವವರಿಂದಾರಂಭಿಸಿ, ನೆಹರೂ ಹಾದಿಯಲ್ಲಿ ಬೋಂಬು ಹಿಡಿದು ನಿಲ್ಲುವವರ ವರೆಗೂ ತಲೆತಿರುಕರವರ್ಗ ಬುಡದಿಂದ ತುದಿಯ ವರೆಗೆ ಬೆಳೆದುಹೋಗಿದೆ.

ನೆಹರು, ವಲ್ಲಭಾಯಿಗಳಂತಹ ಅತಿಶ್ರಮಿಗಳು ಹಾಗೂ ಅಪರ ವಯಸ್ಸಿನವರು ತಾವು ಗಳಿಸಿಕೊಂಡ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕೆಂಬ ಆತುರವೊಂದಿಲ್ಲವಾದರೆ ನಿಜಕ್ಕೂ ಇಷ್ಟರಲ್ಲೇ ರಾಜಕೀಯದಿಂದ ನಿವೃತ್ತಿಗೊಳ್ಳುತ್ತಿದ್ದರು. ಆದರೆ ಅಂಧವರನ್ನು ಅಡ್ಡೈಸಿ ಉರುಳಿಸುವ ಅನಗತ್ಯ ರಂಪಾಟ ಹೂಡುವವರಿದ್ದಾರೆ ಹೊರತು, ಅವರ ಸ್ಥಾನಗಳನ್ನು ಹಕ್ಕುಪ್ರಕಾರವೇರುವ ಯೋಗ್ಯತಾ ಸಾಧನೆಯ ಪ್ರಯತ್ನ ಮಾಡುವವರು ತೋರಿಬರುವುದಿಲ್ಲ.

ಏನಿಲ್ಲೆಂದರೂ ಈಗ ನಮ್ಮ ಅಧಿಕಾರ ನಮ್ಮಲ್ಲೇ ಇದೆ. ಇನ್ನು ಅಧಿಕಾರ ನಮ್ಮ ಪೈಕಿ ಯಾವ ಪಕ್ಷ ಸಂಗಡದ್ದಾಗಬೇಕಾದರೂ ಆ ಅಧಿಕಾರದ ಮೂಲಾಧಾರವಾಗಿರುವ ಜನತೆಯ ಬೆಂಬಲ ಸಂಪಾದಿಸುವ ಮೂಲಕವೇ ಗಳಿಸಿಕೊಳ್ಳಬಹುದು. ಇಂತಹ ಸದಾಚಾರನಿರತರ ಬದಲಿಗೆ ಹಿಂಸಾತ್ಮಕ ಕೃತ್ಯಗಳಿಂದ ದಿಗಿಲು ಮತ್ತು ಗೊಂದಲ ನಿರ್ಮಿಸಿ ಜುಲುಮೆಯಿಂದ ಅದನ್ನು ಕಿತ್ತುಕೊಳ್ಳಬಯಸುವ ಪುಂಡರೇ ಹೆಚ್ಚಿದ್ದಾರೆ.

ರಾಜಕೀಯ ಭಿನ್ನಾಭಿಪ್ರಾಯಗಳಿರಬಹುದು— ಆದರೆ ನಾಳೆ ತಾವೂ ಪ್ರಜಾಸತ್ತಾತ್ಮಕ ಅಧಿಕಾರ ನಿರ್ವಹಿಸಬೇಕೆಂದು ಬಯಸುವ ಯಾರೇ ಆದರೂ ಪ್ರಜಾ ಹೊಣೆಗಾರ ವ್ಯಕ್ತಿಯ ಕಡೆಗಲ್ಲವಾದರೆ, ಅವರೇರಿರುವ ಪ್ರಧಾನ ಹುದ್ದೆಯ ಕಡೆಗೆ ಗೌರವವಿರಲೇಬೇಕು. ಪಂಡಿತ ನೆಹರುಗಳಂತಹ ಭಾರತದ ಪ್ರಧಾನಿಯನ್ನು ತಮ್ಮ ಬೋಂಬು ಗುಂಡುಗಳಿಗಾಗುವ ಬೇಟೆಯೆಂದು ಗಣಿಸಿದವರು ನಿಜಕ್ಕೂ ಅರಾಜಕತೆ ನಿರ್ಮಾಪಕ ಪುಂಡರು ಹೊರತು ಬೇರಾರೂ ಅಲ್ಲ.

ಸ್ವತಂತ್ರ ರಾಷ್ಟ್ರದಲ್ಲಿ ಸ್ವತಂತ್ರ ಪ್ರಜೆಗಳಾಗಿ ಅಥವಾ ಮನುಷ್ಯರಾಗಿ ಬಾಳಬೇಕೆಂದಿರುವ ಪ್ರತಿಯೊಬ್ಬನೂ ತನ್ನ ರಾಜಕೀಯ ಪಂಥ ಮತ್ತು ಅಭಿಪ್ರಾಯ ಯಾವುದಿದ್ದರೂ ಮುಂದಾಗಿ ಶಿರಸಾವಹಿಸಿಕೊಳ್ಳಬೇಕಾದ ಮೂಲ ಸೂತ್ರಗಳಿವೆ:— ರಾಷ್ಟ್ರದ ಅಸ್ತಿತ್ವ, ರಾಜ್ಯಶಾಸನ, ಮತ್ತು ರಾಜ್ಯಭಾರದ ಮುಖ್ಯ ಹಾಗೂ ಆಯಕಟ್ಟಿನ ಸ್ಥಾನಮಾನಗಳು. ಇವುಗಳನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಮಿಸಿಟ್ಟಿರುವ ಹಾದಿಗಳ ಮೂಲಕವೇ ಗಳಿಸಿಕೊಂಡು, ಆ ಮೇಲೆ ತಮ್ಮ ಬಯಕೆಗನುಸಾರವಾಗಿ ಇವುಗಳನ್ನು ತಿದ್ದಬೇಕಲ್ಲದೆ ಬೇರೆ ಹಾದಿಯಿಂದ ದುಡುಕುವವರೆಲ್ಲರೂ ಜನತಾ ದ್ರೋಹಿಗಳು.

Madras Aliyasanthana Act, IX of 1949.

ಮದ್ರಾಸು
ಅಳಿಯಸಂತಾನ ಕಾನೂನು
ಇದರ
ಕನ್ನಡ ಮತ್ತು ಇಂಗ್ಲಿಷ್ ಪ್ರತಿಗಳು ದೊರೆಯುತ್ತವೆ

ವಿವಾಹ ಮತ್ತು ಅದರ ಬಿಡುಗಡೆ, ಅಶನಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತ ವಾರಿಸ್ದಾರಿಕೆ, ಕುಟುಂಬ ಮತ್ತು ಅದರ ರಕ್ಷಣೆ, ವಿಭಾಗ ಮೊದಲಾದ, ಪ್ರತಿಯೊಬ್ಬ ಅಳಿಯ ಸಂತಾನಿಗನಿಗೂ ತಿಳಿದಿರಲೇಬೇಕಾದ ವಿಷಯಗಳಿಂದೊಡಗೂಡಿದೆ

ಕ್ರಯ 0—8—0. (ಟಪ್ಪಾಲು ಖರ್ಚು ಪ್ರತ್ಯೇಕ)
0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು.
ಸಿಗುವ ಸ್ಥಳ:—
ನವಯುಗ ಪ್ರೆಸ್, ಉಡುಪಿ

ಸುವಾಸನೆ ಮತ್ತು ಮಾಧುರತೆಯಿಂದ
ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಾ ಮತ್ತು ಕಾಫಿ



PRABHAT
TEA & COFFEE (INDIA) Ltd.
COONOOR (Niligiris)

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪೋಸ್ಟು ಬಾಕ್ಸು ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:- ಧಾರವಾಡ,
THE UNITED KARNATAK INSURANCE COMPANY, LIMITED.

ಕಾಡ್ಗಿಚ್ಚಿನಂತಹ ಕಲ್ಕತ್ತಾ-



ಪಂಡಿತ ಜವಾಹಿರಲಾಲ ನೆಹರು- ಸ್ವತಂತ್ರ ಭಾರತದ ಆಶೆ, ಆಶ್ರಯಗಳ ಆಧಾರನೆಲೆ-ಸ್ವಾತಂತ್ರ್ಯ ಸಾಧನೆಗೆ ಎದೆ ಕೊಟ್ಟದ್ದಂತೆಯೇ ಅದರ ರಕ್ಷಣೆಗೆ ಹೆಗಲನ್ನೂ ಕೊಟ್ಟು ನಿಂತಿರುವ ಅದ್ವಿತೀಯ ನಾಯಕ-ಕಲ್ಕತ್ತೆಗೆ ಹೋಗಿ ಬಂದರು. ಜುಲಾಯಿ ತಾ. 12ನೇ ಮಧ್ಯಾಹ್ನ ಧಿಲ್ಲಿಯಿಂದ ಹೊರಟು ಡಮ್‌ಡಮ್ ನಿಲ್ದಾಣದಲ್ಲಿಳಿದವರು ತಾ. 15ನೇ ಪೂರ್ವಾಹ್ನ ಅದೇ ನಿಲ್ದಾಣದಲ್ಲಿ ಧಿಲ್ಲಿಗಾಗಿ ವಿಮಾನ ಹತ್ತಲು ಸಮರ್ಥರಾದರು. ಆ ಮೂರು ದಿನಗಳೀಗ ಕಳೆದು ಹೋಗಿವೆ; ಈ ಅವಧಿಯಲ್ಲಿ ರಾಷ್ಟ್ರದ ಪಾಲಿಗೆಂತಹ ಅಪಾಯ ಒದಗಲು ಸಾಧ್ಯವಿತ್ತೆಂಬುದನ್ನು ಸಂಯಾಗಿ ಯೋಚಿಸಿಕೊಂಡರೆ, ಇದೊಂದು ಗಡಿ ಸುಖವಾಗಿ ದಾಟಿ ಹೋಯಿತೆಂಬುದಕ್ಕಾಗಿ ಭಾರತೀಯರೊಮ್ಮೆ ಸಂತೋಷದ ನಿಟ್ಟುಸಿರನ್ನು ಬಿಡಬೇಕಾಗಿದೆ. ಇದೇ ತಾ. 12ರಿಂದ 15ರೊಳಗಿನ ಯಾವ ದಿನವಾದರೂ 1948ನೇ ಜನವರಿ ತಾ. 30, ಆಗಲು ಸಾಧ್ಯವಿದ್ದಿತು! ಗಾಂಧೀಜೀಯ ದೇಹಕ್ಕೆ ಬಡಿದ ಅಪಾಯ ಪಂಡಿತಜೀಯ ಕಾಯವನ್ನೂ ಸೋಂಕಬಹುದಿದ್ದಿತು. ಆ ದೃಶ್ಯ ದೆಡೆಯು ದೂರ ನೋಟದ ಮೇಲಿಂದಲೇ ನಾವು ಕಳವಳದ ಆತುರಪೂರ್ವಕ ಹಾರೈಸಿದ್ದಂತೆ ವಿಜಯೀ ಪಂಡಿತಜೀ ತನ್ನ ಪದ್ಧತಿ ಪ್ರಕಾರ ಕಲ್ಕತ್ತದಿಂದಲೂ ಗೆದ್ದು ಬಂದಿದ್ದಾರೆ. ಅನಾಹುತ ನಡೆದುಹೋದ ಮೇಲೆಯೇ ಕಳವಳಿಸುವ ಸ್ವಭಾವವಿರುವ ಹೆಚ್ಚಿನವರಿಗೆ ನೆಹರು ಕಲ್ಕತ್ತೆಗೇ ಬಾರಿ ಹೋಗಿ ಬಂದುದರಲ್ಲಿ ಅಂತಹ ವಿಶೇಷವೇನೂ ತೋರದಿರಬಹುದು. ಆದರದು ನಿಜಕ್ಕೂ ಆಕ್ಸಗಲದ ಕಣಿವೆಯನ್ನು ನೆಗೆದಂತಹ ಸಾಹಸ; ಅಗ್ನಿಕುಂಡವನ್ನು ನಡೆದು ದಾಟಿದಂತಹ ಕಠಿಣತನ!

ನೆಹರೂ ಎದೆಗಾರಿಕೆ

ಪಂಡಿತನೆಹರುಗಳು ಕಲ್ಕತ್ತದಲ್ಲಿ ಕಾಲಿಟ್ಟಂದಿನಿಂದ ಅಲ್ಲಿಂದ ಕಾಲ್ತೆಗೆಯುವವರೆಗೂ ಅಲ್ಲಿ ತೋರಿಬಂದ ಧ್ವಂಸಾತ್ಮಕ ಹಿಂಸಾತ್ಮಕ ಚಟುವಟಿಕೆಗಳನ್ನು ಗಮನಿಸಿದರೆ ಇಡೀ ಪ್ರಪಂಚದಲ್ಲೇ ಬೇರೆಲ್ಲೂ ಇರಲಾರದವನ್ನುರು, ಪಂಡಿತಜೀಯ ಪ್ರಾಣಕ್ಕೆ ಸಂಚಕಾರ ಕೊಡುವವರು, ಕಲ್ಕತ್ತದಲ್ಲಿದ್ದರೆಂಬುದನ್ನು ಸುಲಭದಲ್ಲಿ ಊಹಿಸಬಹುದು. ಕಲ್ಕತ್ತವು ಕುದಿಯುತ್ತಿದೆ ಎಂಬುದನ್ನು ನೆಹರುಗಳರಿಯದವರಲ್ಲ; ಆದರೆ ಪಂಡಿತಜೀಗಿಂತಹ ಚಿಹ್ನೆ ತೋರಿ ಬರುವುದರಿಂದ ಅಪಾಯಕ್ಕಿನ್ನಷ್ಟು ಅನುಕೂಲ ಹೊರತು ಪ್ರತಿಬಂಧವಲ್ಲ. ಕಾರಣವೆಂದರೆ ಅಪಾಯದೆದುರಿನಲ್ಲಿ ಎದೆ ಹೊಡೆದು ನಿಲ್ಲುವುದೊಂದೇ ನೆಹರುಗಳಿಗೆ ಗೊತ್ತು. ಇಂತಹ ಸನ್ನಿವೇಶಗಳಲ್ಲಿ ರಕ್ಷಣಾ ಹೊಣೆಹೊತ್ತವರು ಅಪಾಯಗಳ ನಿವಾರಣೆಯ ಕಡೆಗೆ ಲಕ್ಷ್ಯ ಕೊಟ್ಟಂತೆಯೇ ಪಂಡಿತಜೀಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಕಡೆಗೂ ವಿಶೇಷ ಗಮನ ಕೊಡಬೇಕಾಗುತ್ತದೆ. ರಾಷ್ಟ್ರದ ಹೊಣೆಬಾಧ್ಯತೆ, ಸೊತ್ತು ತತ್ವಗಳ ಯಾವ ವಿಧದ ಹಾನಿಯನ್ನೂ ಸಹಿಸದ ಪಂಡಿತ ಜವಾಹಿರಲಾಲರು, ತನ್ನ ಪ್ರಾಣವು ರಾಷ್ಟ್ರದ ಅಮೂಲ್ಯ ಸೊತ್ತೆಂಬುದೊಂದನ್ನು ಮರೆತೇಬಿಡುತ್ತಾರೆ; ಅದನ್ನು ಕೀಳಾ ಕಡೆಗಣಿಸಿ, ಎಲ್ಲಿ ಅಪಾಯವೋ ಅಲ್ಲಿ ದುಡುಕಿ ಧಾವಿಸುತ್ತಾರೆ. ಇದು ನೆಹರೂ ವೈಶಿಷ್ಟ್ಯ! ರಾಷ್ಟ್ರ ವಿಭಜನೆಯ ಪೂರ್ವದಲ್ಲಿ, ಆಗಿನ ವೈಸರಾಯಿ ಲೋರ್ಡ್ ವೇವೆಲರಿಂದಾರಂಭಿಸಿ, ಸಂಗತಿಯರಿತವರೆಲ್ಲರೂ ಬೇಡಬೇಡವೆಂದು ತಡೆದರೂ ಕೇಳದೆ, ಮುಸ್ಲಿಂ ಲೀಗ್ ಪ್ರಚಾರದಿಂದ ಹುಚ್ಚೇರಿ ಮದ್ದಾನೆ ಹಿಂಡಿನಂತಾಗಿದ್ದ ಗಡಿನಾಡಿನ ಗುಡ್ಡಗಾಡು ಜನರ ನಡುವೆ ಪಂಡಿತಜೀ ನುಗ್ಗಿ ಹೋಗಿದ್ದರು; ಬಂಡೇಕಲ್ಲುಗಳ ಜಡಿಮಳೆಗೇನೇ ಸಿಕ್ಕಿ ಜಜ್ಜಿ ಹೋಗುವುದರಲ್ಲಿದ್ದರು. ಒಂದು ಸಂದರ್ಭದಲ್ಲಿ ಖಾನ್ ಸಹೋದರರು ತಮ್ಮ ಮಾನ್ಯ ಅತಿಥಿಯ ಪ್ರಾಣ ರಕ್ಷಣೆಗಾಗಿ ಸ್ವತಃ ತಮ್ಮ ಪ್ರಾಣವನ್ನೇ ಕಡೆಗಣಿಸಿ, ಆ ಸಾಮಾನ್ಯ ಪ್ರಸಂಗಾವಧಾನತೆಯನ್ನು ತೋರಿಸದಿರುತ್ತಿದ್ದರೆ ಪಂಡಿತ ನೆಹರುಗಳು ಆ ಗುಡ್ಡಗಾಡ ಪಠಾಣರ ಕಲ್ಲುಗಳಡಿಯಲ್ಲೇ ಹೂಳಲ್ಪಡುತ್ತಿದ್ದರು! ಆ ವೇಳೆಯ ಅಸಾಮಾನ್ಯ ಜಾತೀಯಗೊಂದಲಗಳ ವೇಳೆ ನರಭಕ್ಷಕ ಹುಲಿಗಳಿಗಿಂತಲೂ ಕ್ರೂರವಾಗಿದ್ದ ಖಂಡಾಯಗಾರ ತಂಡಗಳ ನಡುವೆ ಏಕಾಕಿಯಾಗಿ ಬರಿಕೈಯಿಂದ ನುಗ್ಗಿ ಅವರ ಕತ್ತಿ ಚೂರಿಗಳನ್ನು ಪಂಡಿತಜೀ ಕಸಗೊಂಡುದಿದೆ. ಮೊನ್ನೆ ಕಲ್ಕತ್ತದ ಬಿಸಿ ವಾರ್ತೆ ಕೇಳಿದ ಲಂಡನಿನ 'ಡೈಲಿ ಟೆಲಿಗ್ರಾಫ್' ಪತ್ರಿಕೆಯು ನೆನಪು ಮಾಡಿದ ಹಿಂದಿನ ಒಂದು ಕಥೆಯು ನೆಹರೂ ಎದೆಗಾರಿಕೆಯ ಸರಿಯಾದ ಪರಿಚಯ ಕೊಡುವಂತಹದು. 1947—ರಾಷ್ಟ್ರವು ಇಬ್ಭಾಗವಾದುದರ ಪರಿಣಾಮವಾಗಿ ಪಂಜಾಬಿನಲ್ಲಿ ಮನುಷ್ಯ ರಕ್ತ ವರ್ಷಕಾಲದ ಪ್ರವಾಹವಾಗಿ ಹರಿಯುತ್ತಿದ್ದ ಕಾಲವದು. ಲಾಹೋರಿನ ರಸ್ತೆಯಲ್ಲಿ ಓರ್ವ ಹಿಂದುವಿನ ಮುಖ ತೋರಿ ಬಂದ ತಕ್ಷಣ-ಅವ್ಯಾಹತಸರದಲ್ಲಿ ಓರ್ವ ಮುಸ್ಲಿಮನ ಮುಖ ತೋರಿಬಂದರೆ ಆ ಕ್ಷಣದಲ್ಲೇ-ಕೊಂದು ಕತ್ತರಿಸಿ ಹಾಕುತ್ತಿದ್ದ ದಿನವದು. ನವೋದಿತ ಪಾಕಿಸ್ತಾನ್ ಮತ್ತು ಭಾರತದೊಳಗಿನ ಒಂದು ಮಾತುಕತೆಗಾಗಿ ಪಂಡಿತ ನೆಹರುಗಳು ಲಾಹೋರಿಗೆ ಹೋಗಬೇಕಾಯಿತು. ಪಾಕಿಸ್ತಾನ್ ಅಧಿಕಾರಿಗಳು ನೆಹರುಗಳ ಮೈಗಾವಲಿಗಾಗಿ ವಿಶೇಷ ಜಾಗರೂಕತೆ ವಹಿಸಿದ್ದರು. ಇಕ್ಕಡೆಯವರೊಳಗಿನ ಸಮ್ಮೇಳನ ಮುಗಿದು ಪ್ರತಿನಿಧಿಗಳು ಚಹಾ ತೆಗೆದುಕೊಳ್ಳಲು ಕುಳಿತಿದ್ದರು: ಅತ್ತಿತ್ತ ನೋಡುವಾಗ ನೆಹರೂ ಅಲ್ಲಿಲ್ಲ; ಎಲ್ಲರೂ ದಿಗಿಲುಬಿದ್ದರು. ಅರ್ಧ ಘಂಟೆಯ ನಂತರ ಪಂಡಿತಜೀ ನಗುಮೊಗದೊಡನೆ ಹಾಜರಾಗಿ ಚಹಾಕೂಟದಿಂದ ತಪ್ಪಿಸಿಕೊಂಡುದಕ್ಕಾಗಿ ಕ್ಷಮೆಯಾಚಿಸುತ್ತಾ ಕಾರಣ ಹೇಳಿದರು. "ನನ್ನ ಹಳೇಮುಸ್ಲಿಮ್ ಸ್ನೇಹಿತನೊಬ್ಬನೊಡನೆ ಮಾತಾಡಿ ಬರಬೇಕೆಂದು ತೋರಿತು. ಕೆಳಗೆ ಪೇಟೆ ಸುತ್ತಾಡಿ ಬಂದೆ" ಕೇಳಿದವರೆಲ್ಲರೂ ಅವಾಕ್ಕಾದರು. ಬಾಪೂಜಿಯನ್ನು ಕೊಂದ ರಾಷ್ಟ್ರವೆಂತಹ ದುರ್ದೈವಿಯೆಂದರೂ, ಪಂಡಿತಜಿ ಮೃತ್ಯುವಾಡಿಗೆ ತಲೆ ತೂಡಿಸಿದ ಪ್ರತಿಯೊಂದು ಸಂದರ್ಭದಲ್ಲೂ ಅವರು ಸುರಕ್ಷಿತರಾಗಿ ತಲೆಯೆತ್ತಿಕೊಂಡೇ ಮರಳುವಂತಾಗುವ ಅಷ್ಟೊಂದು ಸುದೈವ ಭಾರತದ್ದು.

ಕಲ್ಕತ್ತದಲ್ಲಿ

ಪೂರ್ವ ನಿಶ್ಚಯದಂತೆ ಮಹಾ ಪ್ರಧಾನಿ ಪಂಡಿತ ಜವಾಹಿರಲಾಲ ನೆಹರುಗಳು ತಾ. 12ರಲ್ಲಿ ಧಿಲ್ಲಿಯಿಂದ ಹೊರಟು ಅಪರಾಹ್ನ 1-5ಕ್ಕೆ ಕಲ್ಕತ್ತದ ಡಮ್‌ಡಮ್ ನಿಲ್ದಾಣದಲ್ಲಿಳಿಯುವಾಗ ಪಶ್ಚಿಮ ಬಂಗಾಳದ ಗವರ್ನರ್ ಡಾ. ಕೈಲಾಸನಾಥ ಕಟ್ಜು, ತಾತ್ಕಾಲಿಕ ಪ್ರಧಾನ ಮಂತ್ರಿ ಶ್ರೀ ಎನ್. ಆರ್. ಸರ್ಕಾರ್ ಮತ್ತಿತರ ಮಂತ್ರಿಗಳು, ತಾತ್ಕಾಲಿಕ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಅರುಣಚಂದ್ರ ಗುಹ, ಪ್ರಾಂತಿಕ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಚಾರುಚಂದ್ರ ಭಂಡಾರಿ ಮತ್ತು ನಾಗರಿಕ ಹಾಗೂ ಸೈನಿಕ ಉಚ್ಚಾಧಿಕಾರಿಗಳು, ಶೆರೀಫರೇ ಮುಂತಾದ ಊರ ಪ್ರಮುಖರು ಸ್ವಾಗತಕ್ಕಲ್ಲಿ ತಯಾರಿದ್ದರು. ಅಲ್ಲಿ ಗವರ್ನರರಿಂದ ಪುಷ್ಪಹಾರ, ಸಶಸ್ತ್ರ ಪೋಲೀಸು ದಳದ ಗೌರವ ರಕ್ಷೆ ಸ್ವೀಕರಿಸಿ, ಸಂಪ್ರದಾಯಬದ್ಧ ಪರಿಚಯಗಳಾದುವು; ಆ ವೇಳೆ ಗವರ್ನರ್ ಕಟ್ಜು ಮತ್ತು ಪುತ್ರಿ ಇಂದಿರೆಯೊಂದಿಗೆ ಮಾಡು ತೆರೆದ ಕಾರಿನಲ್ಲಿ ಕೈ ಜೋಡಿಸಿ ನಿಂತುಕೊಂಡೇ ಹೊರಟರು; ಆ ನಿಲ್ದಾಣದಿಂದ ನಗರಕ್ಕಿರುವ ಎಂಟು ಮೈಲುದ್ದ ಹಾದಿಯಲ್ಲಿ ಸಾಲುಗಟ್ಟಿ ನಿಂತಿದ್ದ ಜನರ ಜೈಕಾರಗಳನ್ನೂ ಪುಷ್ಪಹಾರ, ಪುಷ್ಪಗುಚ್ಛಗಳನ್ನೂ ವಂದನಾಪೂರ್ವಕ ಸ್ವೀಕರಿಸುತ್ತಾ ಬರುತ್ತಿದ್ದರು. ಶಾಮ್‌ಬಝಾರ್ ಎಂಬಲ್ಲಿ ರಸ್ತೆ ತಿರುಗುವಲ್ಲಿ ದೊಡ್ಡ ಜನಸಂದಣಿ ನೆರೆದಿದ್ದಿತು. ಹೆಚ್ಚಿನವರು ದರ್ಶನಾಪೇಕ್ಷಿಗಳಾಗಿ ಜೈಕಾರ ಹಾಕುತ್ತಿದ್ದರೂ ಸಣ್ಣದೊಂದು ಪಂಗಡ "ನೆಹರೂ, ಹಿಂದೆ ಹೋಗು" ಬೊಬ್ಬೆ ಹಾಕಹತ್ತಿತು. ಪೋಲಿಸರು ಅವರ ಮೇಲೆ ಲಾಠೀ ಚಾರ್ಜು ಮಾಡಿದಾಗ ಕೆಲವು ಇಟ್ಟಿಗೆ ತುಂಡುಗಳೂ ಕರಪತ್ರಗಳ ಕಟ್ಟುಗಳೂ ಪಂಡಿತಜೀಯ ಕಾರಿಗೆಸೆಯಲ್ಪಟ್ಟವು. ಕಲ್ಕತ್ತ ಸೇರಿದ 24 ತಾಸುಗಳೊಳಗೆ ಪಶ್ಚಿಮಬಂಗಾಳದ ಗವರ್ನರ್, ಮಂತ್ರಿಗಳು, ಕಾಂಗ್ರೆಸ್ ಅಧಿಕಾರಿಗಳು ಮತ್ತು ವಿರುದ್ಧಪಕ್ಷದ ಕಾಂಗ್ರೆಸಿಗರು, ಪತ್ರಿಕೋದ್ಯಮಿಗಳು, ಇತರ ಸಾರ್ವಜನಿಕ ಪಕ್ಷ ಪಂಗಡದ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿ ಪಂಡಿತಜೀ ಪಶ್ಚಿಮಬಂಗಾಳದ ಪರಿಸ್ಥಿತಿಯ ಯಥಾಚಿತ್ರವನ್ನು ತನ್ನ ಚಿತ್ತಪಟದಲ್ಲಿ ಮೂಡಿಸಿಕೊಂಡರು. ಪೂರ್ವ ಪಾಕಿಸ್ತಾನದ ಭಾರತ ರಾಯಭಾರಿ, ವಿದ್ಯಾರ್ಥಿಗಳ ಹಾಗೂ ಮುಸ್ಲಿಮರ ಶಿಷ್ಟಮಂಡಲಿಯವರು ಪ್ರತ್ಯಪ್ರತ್ಯೇಕವಾಗಿ ಪಂಡಿತ ನೆಹರುಗಳೊಡನೆ ಸಂಭಾಷಿಸಿದ್ದರು. ತಾ 13ನೇ ಅಪರಾಹ್ನ ಪಶ್ಚಿಮಬಂಗಾಳದ ಕಾಂಗ್ರೆಸ್ ಶಾಸನಸಭಾ ಸದಸ್ಯರ ಮತ್ತು ತಾ 14ನೇ ಪೂರ್ವಾಹ್ನ ಪಶ್ಚಿಮಬಂಗಾಳದ ಕಾಂಗ್ರೆಸಿಗರ ಸಭೆಯಲ್ಲಿ ಬಂಗಾಳದ ಶುದ್ಧೀಕರಣಕ್ಕಾಗಿ ಬಿಚ್ಚುಹೃದಯದ ಬೋಧನೆ ಕೊಟ್ಟರು. ಕಾಂಗ್ರೆಸಿಗರ ಕಡೆಗಿರುವ ಜನತಾ ಅತೃಪ್ತಿಯನ್ನು ನಿವಾರಿಸಿಕೊಳ್ಳಲೇಬೇಕು-ಅಧಿಕಾರಾಕಾಂಕ್ಷಿ ಕಾಂಗ್ರೆಸಿಗರನ್ನು ನಾನು ದ್ವೇಷಿಸುತ್ತೇನೆ—ಎಂದು

ಭಾರತದ ಸ್ವಾತಂತ್ರ್ಯವು ರಕ್ತಪಾತವಿಲ್ಲದೆ ಗಳಿಸಲ್ಪಟ್ಟಿತು.

ಇದು ಜಾಗತಿಕ ಇತಿಹಾಸದಲ್ಲೊಂದು ಅಪೂರ್ವಘಟನೆ.

ಮದ್ಯಪಾನಕ್ಕೆದುರಾಗಿ

ನಮ್ಮ ಹೋರಾಟವೂ ಅದರಂತೆಯೇ.

ಈ ಜಾಹೀರಾತಿನ ಸ್ಥಳ:—

ಕೆನರಾ ಬೇಂಕ್, ಲಿಮಿಟೆಡ್.

ಇದರ ಸೇವಾದಾನ

ತಿರುಗಾಡಿ ಬಂದ ಪಂಡಿತಜೀ!

ಎರಡೂ ಸಭೆಯಲ್ಲಿ ಪಂಡಿತಜೀ ಕಾಂಗ್ರೆಸಿಗರ ಕಣ್ಣಿಗೆ ಕೈಹಾಕಿ ಮಾತಾಡಿದ್ದರು. ಮಂತ್ರಿಗಳು ಮತ್ತು ಕಾಂಗ್ರೆಸಿಗರು ತಮ್ಮ ಅನುದಿನದ ಕಾರ್ಯಕಲಾಪಗಳಲ್ಲಿ ಕೈಹಾಕುತ್ತಿರುವ ಕುರಿತು ಪಶ್ಚಿಮಬಂಗಾಳದ ನೌಕರರಿಂದ ಬಂದಿರುವಷ್ಟು ದೂರು ಬೇರೆಲ್ಲಿಂದಲೂ ಬಂದಿಲ್ಲ—ಮಂತ್ರಿಗಳ ಮೇಲೂ ಇತರ ಅಧಿಕಾರಿಗಳ ಮೇಲೂ ಲಂಚಕೋರತನ, ಅಧಿಕಾರ ದುರ್ವಿನಿಯೋಗಗಳ ದೂರು ಬಹಳ ಕೇಳಬಂದಿದೆ—ಸಾಧಾರ ಆರೋಪಗಳನ್ನೆಲ್ಲಾ ಪರಾಮರ್ಶಿಸಲಾಗುವದು; ನಿರಾಧಾರೀ ಆರೋಪಗಳು ತ್ಯಾಜ್ಯವಿವೆ--ನಿಂತ್ರಿಕರ ವ್ಯವಸ್ಥೆ ಮಿಕ್ಕ ಕಡೆಗಳಗಿಂತ ಇಲ್ಲಿ ಉತ್ತಮವಿದ್ದರೂ ಇಲ್ಲಿಯವರು ದೂರುತ್ತಿರುವುದು ಎಲ್ಲರಿಗಿಂತ ಹೆಚ್ಚಿಗೆ. ಪಶ್ಚಿಮ ಬಂಗಾಳದ ಇಂದಿನ ಅಶಾಂತಿ ನಿವಾರಣೆಗೊಳ್ಳದಿದ್ದರೆ ಅಲ್ಲಿ ಏಕತಂತ್ರಾಡಳಿತೆ ಅನಿವಾರ್ಯ-ಎಂದು ಮುಂತಾಗಿ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಎದೆ ಚುಚ್ಚಿ ಎಚ್ಚರಿಸಿದ್ದರು. ಇಲ್ಲಿಯ ಕಾಂಗ್ರೆಸಿಗರು ಕರೆದೆಯೊಳಗೆ ಚಲಿಸುವಂತೆ ದ್ವಾರಿ-ಕೈಬೆರಳೆಣಿಕೆಯ ಕೆಲವೇ ಮಂದಿ ಅಲ್ಲಿಷ್ಟು ಇಲ್ಲಿಷ್ಟು ನಡೆಸುವ ಹಿಂಸಾಕಾರ್ಯಗಳಿಗೆ ಹೆದರಿ ಸಾರ್ವಜನಿಕ ಸಭೆಗಳನ್ನೂ ನಡೆಸುತ್ತಿಲ್ಲ-ಧೈರ್ಯ ಮತ್ತು ಎದೆಗಾರಿಕೆಯೇ ಮೂಲ ಸೂತ್ರವಾಗಿರುವ ಗಾಂಧಿಜೀಯ ತತ್ವಪಾಲನೆಯ ಆವಶ್ಯಕತೆ ಬಹಳವಿರುವ ಈ ಕಾಲದಲ್ಲಿ ಇಲ್ಲಿಯ ಕಾಂಗ್ರೆಸಿಗರು ನಿಜವಾದ ಕೆಲಸದಿಂದ ಮೈ ತಪ್ಪಿಸಿಕೊಂಡು ಅಧಿಕಾರ ಲಾಲಸೆಯ ಆಟವಾಡುವುದರಲ್ಲಿದ್ದಾರೆ-ಎಂದು ಕಾಂಗ್ರೆಸ್ ಕಾರ್ಯಕರ್ತರ ಹೃದಯ ತಂತುವನ್ನು ಮೀಂಟಿ ಮೀಂಟಿ ಬೋಧಿಸಿದ್ದರು. ಆದರೂ ಪಶ್ಚಿಮ ಬಂಗಾಳದ ಕಾಂಗ್ರೆಸಿಗರೊಳಗೆ, ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತು ಕಾಂಗ್ರೆಸ್ ಶಾಸನ ಸಭಾ ಪಕ್ಷೀಯರೊಳಗೆ, ಇರುವ ವೈಷಮ್ಯಗಳು ನೆಹರೂ ಭೇಟಿಯ ಆ ಮುಹೂರ್ತದಲ್ಲೇ ನಿವಾರಣೆಗೊಳ್ಳಲಾರದೆ ಹೋಗಿವೆ.

ತಾ. 13ರಲ್ಲೂ ನೆಹರೂ ವಿರುದ್ಧ ಪ್ರದರ್ಶನದ ಕೆಲವು ಪ್ರಯತ್ನಗಳು ಕಲ್ಕತ್ತದಲ್ಲಾಗಿದ್ದುವು; ಅಲ್ಲಿ ಜಾರಿಯಲ್ಲಿದ್ದ 144ನೇ ಸೆಕ್ಷನನ್ನು ಮುರಿದು ವಿದ್ಯಾರ್ಥಿಗಳು ಯುನಿವರ್ಸಿಟಿ ಪಾರದಲ್ಲಿ ಹಿಂಡುಗಟ್ಟಿ ಮೆರವಣಿಗೆ ಹೊರಡಿಸಲು ಉದ್ಯುಕ್ತರಾದಾಗ ಪೋಲೀಸರು ಲಾಠೀ ಚಾರ್ಜ್ ಮಾಡಿ ಚದರಿಸಿದರು; ಹಾಗೆ ಕಾಲೇಜ್ ರಸ್ತೆಯಲ್ಲಿ ಚೆದರಿದ ಗುಂಪು ಚಿಕ್ಕ ಕೂಟಗಳಿಂದ ಹೋಗಿ ಹೆರ್ರಿಸನ್ ರಸ್ತೆಯಲ್ಲಿ ಜಮೆಯಾಗಿ ಅಲ್ಲಿಂದ ಪುನಃ ಮೆರವಣಿಗೆ ಹೊರಡಹತ್ತಿತು. ಅಲ್ಲಿಗೂ ಲಾಠೀಧಾರಿ ಪೋಲೀಸರ ಪ್ರವೇಶವಾಗಿ ಮೆರವಣಿಗೆಯವರನ್ನು ಬೆನ್ನಟ್ಟಿದರು. ಆದರೆ ಮತ್ತೊಮ್ಮೆ ಅದೇ ಗುಂಪಿನ ಅಂಶ ಲಾಲ್‌ಬಝಾರ್ ರಸ್ತೆಯಲ್ಲಿ ತಲೆಯೆತ್ತಿದಾಗ ಪೋಲೀಸರು ಮತ್ತೊಮ್ಮೆ ಹೊಡೆದಟ್ಟಬೇಕಾಯಿತು. ಈ ರೀತಿ ಪೋಲೀಸರೊಡನೆ ಪುಂಡಾಟದ ಕಣ್ಣುಮುಚ್ಚಾಲೆಯಾಡುವುದರಲ್ಲಿ ಪ್ರವೀಣತೆ ಗಳಿಸಿದ್ದ ಕಲ್ಕತ್ತದ ಪುಂಡರು ನೆಹರೂಭೇಟಿಯ ಸಂದರ್ಭದಲ್ಲಿ ತಮ್ಮೆಲ್ಲಾ ಕಲಾಕೌಶಲ್ಯವನ್ನೂ ಪ್ರದರ್ಶಿಸಿದ್ದರು, ಇವೆಲ್ಲಾ ಸಂದರ್ಭಗಳಲ್ಲೂ ಸಹಜವಾಗಿ ಕೆಲವರಿಗೆ ಲಾಠೀಜಖಂ ಮತ್ತಿನ್ನು ಕೆಲವರ ದಸ್ತಗಿರಿಗಳಾಗಿದ್ದುವು.

ಸಾರ್ವಜನಿಕ ಸಭೆಯಲ್ಲಿ

ಜುಲಾಯಿ ತಾ 14ನೇ ಅಪರಾಹ್ನ ಕಲ್ಕತ್ತದ ವಿಶಾಲ 'ಬ್ರಿಗೇಡ್ ಪರೇಡ್ ಗ್ರೌಂಡ್'"ನಲ್ಲಿ ನಡೆದ ಸಾರ್ವಜನಿಕ ಸಭೆ, ಅಲ್ಲಿ ಪಂಡಿತಜೀಯವರ ಭಾಷಣ--ಮತ್ತಲ್ಲಿ ಪಂಡಿತಜೀ ದಾಟಿ ಬಿಟ್ಟ ಅಪಾಯ-ಚಿರಸ್ಮರಣೀಯವಿವೆ. ಆ ಮೈದಾನು ಹತ್ತು ಲಕ್ಷ ಜನರನ್ನು ಹಿಡಿಯುವ ಸ್ಥಳ. ಕಲ್ಕತ್ತದಲ್ಲಿ ಕೆಲಕಾಲದಿಂದ ಚಿರಸ್ಥಾಯಿಯಾಗಿರುವ 144ನೇ ಸೆಕ್ಷನನ್ನು ಪಂಡಿತ ನೆಹರುಗಳ ಈ ಮೈದಾನು ಭಾಷಣಕ್ಕಾಗಿ ಈ ಸ್ಥಳದ ಮಟ್ಟಿಗೆ ತಾ. 1ನೇ ಅಪರಾಹ್ನ 4 ತಾಸಿನಿಂದ 6 ತಾಸಿನ ವರೆಗಿನ ಎರಡು ಘಂಟೆಗಳ ತನಕ ರದ್ದುಪಡಿಸಿದ್ದರು. ಸಭೆಯ ನಿಶ್ಚಿತಾವಧಿಯ ಐದು ತಾಸುಗಳಿಗಿಂತಲೂ ಮೊದಲೇ ಕಲ್ಕತ್ತದ ಜನಪ್ರವಾಹ ಈ ಮೈದಾನಿನೊಡನೆ ಸಂಗಮಗೊಳ್ಳಲು ಹರಿಯಹತ್ತಿದ್ದಿತು. ನಡು ಮಧ್ಯಾಹ್ನದ ನಂತರ ಮೋಡ ಕವಿದುಕೊಂಡು ಆಗಾಗ ಮಳೆ ಸುರಿದು ಜನರನ್ನು ಚದರಿಸುತ್ತಾ ಬಂದರೂ ಹೆಚ್ಚಿನವರು ಕದಲಿರಲಿಲ್ಲ. ಸಭಾರಂಭದ ಹೊತ್ತಿಗೆ ಆಕಾಶವು ಶುಭ್ರವಾಯಿತು, ಮೈದಾನು ತುಂಬ ಸುಮಾರು 10 ಲಕ್ಷ ಮಂದಿ ನೆರೆದಿದ್ದರು. ಸಭಾವ್ಯವಸ್ಥೆ ಅತಿ ನಾಜೋಕಿನದಿದ್ದಿತು. ಪಂಡಿತಜೀಯ 80ಅಡಿ ಎತ್ತರದ ಭಾಷಣ ವೇದಿಕೆ-ಅದರ ಮುಂಭಾಗದಲ್ಲೇ ಸುಮಾರು 2000 ಮಂದಿ ಮುಖ್ಯಸ್ಥರು ಮಂಡಿಸಿದ್ದ ಮುಂಭಾಗನಿಲ್ದಾಣ—ಈ ಕೇಂದ್ರ ಪೀಠದ ಬಲಬದಿಯಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಪ್ರತ್ಯೇಕಾವರಣವಿಭಾಗ,—ಉಳಿದ ಸಭೆಗಾಗಿ ಮೂರು ಹಾದಿಗಳಿದ್ದು ಪಂಗಡವಾರಾಗಿ ವಿಭಾಗಿಸಲ್ಪಟ್ಟಿದ್ದ ವಿಶಾಲ ನೆಲೆ-ನೆಹರೂ ಭಾಷಣವನ್ನು ಧ್ವನಿಸಲು ಭಾರತದಲ್ಲೇ ಇದೀಗ ಪ್ರಥಮ ಬಾರಿ ಉಪಯೋಗಿಸಲ್ಪಟ್ಟ 120 ವಾಟ್ಸ್‌ಗಳ ವಿಶೇಷಪವರಿನ ಧ್ವನಿವಾಹಕಗಳು-ಮತ್ತು ಕಣ್ಣಿಗೆಣ್ಣೆ ಹಚ್ಚಿ ಕಾಯುತ್ತಿದ್ದ ಸಶಸ್ತ್ರ ಹಾಗೂ ಸಾಮಾನ್ಯ ಪೋಲೀಸು ದಳಗಳ ಬಂದೋಬಸ್ತು- ಮಿಲಿಯನುಂದಿ ಜನರು ನೆಹರೂನಿಷ್ಠೆಯಿಂದ ವಹಿಸಿದ್ದ ಏಕಾಗ್ರತೆ-ಇವುಗಳಿಂದ ಆ ಮೈದಾನು ಸಭೆಯು ಅಭೂತಪೂರ್ವವಿದ್ದಿತು. ರೇಡಿಯೋ ಘೋಷಕನ ನೆಹರೂ ಪ್ರವೇಶ ಸುದ್ದಿ ಕಿವಿಗೆಬಿದ್ದೊಡನೆ ಮೈದಾನಿನ ಐದಾರಡಿ ಮೇಲೆದ್ದಿತೋ ಎಂಬಂತೆ ಇಡೀ ಸಭೆಯು ಎದ್ದು ನಿಂತು ಜೈಕಾರ ಹಾಕಿತು. ಪಂಡಿತ ನೆಹರುಗಳು ಸಭಾಪೀಠ ಹತ್ತಿದ ಮರುಕ್ಷಣದಲ್ಲೇ, ಆ ಮಂಟಪಕ್ಕೆ ಹೋಗುವ ಎಡಪಕ್ಕದ ಹಾದಿಯಲ್ಲಿ ಸಹಲೀ ಲೈನಾಗಿ ನಿಂತಿದ್ದ ಪೋಲೀಸರ ಮೇಲೆ ಒಂದು ಬೋಂಬು ಒಗೆಯಲ್ಪಟ್ಟು ಅದು ದೊಡ್ಡ ಶಬ್ದದೊಡನೆ ಸ್ಫೋಟಗೊಂಡಿತು. ಅದರಿಂದ ಸಶಸ್ತ್ರ ದಳದ ಓರ್ವ ಕಾನ್‌ಸ್ಟೇಬಲನು ಮರಣಗೊಂಡನಲ್ಲದೆ ಮೂವರು ಪೋಲೀಸರಿಗೆ ಜಖಮಾಯಿತು. ಸಹಜವಾಗಿ ಆ ವಲಯದ ಸಭಿಕರು ಗಲಿಬಿಲಿಗೊಂಡರಾದರೂ ಜನರು ಶಾಂತರಾಗಿರುವಂತೆ ನೆಹರುಗಳು ಕೇಳಿಕೊಂಡೊಡನೆಯೇ ಎಲ್ಲರೂ ಸ್ವಸ್ಥ ಕುಳಿತುಕೊಂಡರು. ಪಂಡಿತಜೀಯ ಭಾಷಣವು ಧಾರಾಕಾರವಾಗಿ ಹರಿಯಹತ್ತಿ 45 ಮಿನಿಟುಗಳಾಗಿರಬಹುದು-ಅಷ್ಟರಲ್ಲಿ ಒತ್ತಿ ಕುಳಿತ ಸಭೆಯ ಪೂರ್ವ ಮೂಲೆಯಲ್ಲಿ ಕರಪತ್ರಗಳ ಹಾರಾಟ ನಡೆಯಹತ್ತಿತು; ಬೆನ್ನಲ್ಲೇ ನೆಹರೂ ವಿರುದ್ಧ ಘೋಷಗಳೇಳಹತ್ತಿದುವು; ಅದನ್ನನುಸರಿಸಿ ಕಲ್ಲು ಮತ್ತಿತರ ಸಾಮಗ್ರಿಗಳ ಜಡಿಮಳೆ ಬೀಳಲಾರಂಭ. ಸುಮಾರು 150ಮಂದಿ ಘಟಿಂಗರು ಈ ಪುಂಡಾಟಿಕೆಗಳನ್ನು ನಡೆಸುತ್ತಾ ಬಂದರೂ, ಪ್ರತ್ಯಕ್ಷವಾಗಿ ಅವರ ಹೊಡತ ಬಡಿತಗಳಿಗೀಡಾದವರಲ್ಲದೆ ಬೇರಾವ ಸಭಿಕರೂ ಅತ್ತಗಮನವನ್ನೇ ಕೊಡದೆ ಪಂಡಿತಜೀಯ ಭಾಷಣ ಶ್ರವಣದಲ್ಲಿ ತಮ್ಮನ್ನೇ ತಾವು ಮರೆತಿದ್ದರು. ತನ್ನ ಭಾಷಣಾವಸರದಲ್ಲಿ ನೆಹರುಗಳೊಮ್ಮೆ ಕಣ್ಣರಳಿಸಿ ಗಲಭೆಯತ್ತ ಸುತ್ತಲೂ ನೋಡಿ "ಐದು ಅಥವಾ ಹತ್ತು ಮಂದಿಯಿಂದ ಏನೂ ಆಗುವಂತಿಲ್ಲ" ಎನ್ನುತ್ತಾ ಯಥಾ ಪ್ರಕಾರ ಮಾತು ಮುಂದೊತ್ತಿದರು. ಆದರೆ ಹೀಗೆ ಅಲಕ್ಷ್ಯಿಸಲ್ಪಟ್ಟಲ್ಲೇ ತಮ್ಮ ಆಟವಾಡುವುದರಲ್ಲಿ ನಿಪುಣರಿರುವ ಆ ಪುಂಡರು ಭಾಷಣ ವೇದಿಕೆಯತ್ತ ನುಗ್ಗಹತ್ತಿದರು; ಅಪಾಯದ ಸ್ವರೂಪವನ್ನರಿತ ಪೋಲೀಸರು ಅದನ್ನು ತಡೆಗಟ್ಟಲು ಧಾವಿಸಿದಾಗ ಪಂಡಿತ ನೆಹರುಗಳು ಕೂಡಲೇ ಏರಿಕೆಯ ಸ್ವರದಿಂದ "ಪೋಲೀಸರು ಇದರಲ್ಲಿ ಕೈಹಾಕುವುದು ನನಗಿಷ್ಟವಿಲ್ಲ. ಸ್ವತಃ ಜನರೇ ನಿಗಾ ತೆಗೆದುಕೊಳ್ಳಲಿ" ಎಂದು ತಡೆದರು. ಪಂಡಿತ ಜವಾಹಿರಲಾಲರು 100 ಮಿನಿಟುಗಳ ವರೆಗೆ ಭಾಷಣಮೀಯುತ್ತಿದ್ದಂತೆ ಮಿಲಿಯಮಂದಿಯ ಆ ಪ್ರಚಂಡ ಸಭೆಯ ಸಂದುಮೂಲೆಗಳಲ್ಲಿ ಆದಿಯಿಂದ ಅಂತ್ಯದವರೆಗೂ ಪುಂಡರ ಪೋರಾಟಿಕೆಗಳು ನಡೆದೇ ಇದ್ದುವೆನ್ನಬಹುದು. ಒಂದು ಮೂಲೆಯ ಪುಂಡಾಟ ಅಸಹ್ಯವಾಗಿ ಪುಂಡರ ಮೇಲೆ ಪೋಲಿಸರು ಲಾಠೀಚಾರ್ಜ್ ಮಾಡಬೇಕಾಯಿತು, ತತ್ಪರಿಣಾಮವಾಗಿ ಜಖಂಗೊಂಡವರನ್ನು ಉದ್ದೇಶಪೂರ್ವಕ ಸಭೆಯೊಳಗಡೆಗೆ ಹೊತ್ತು ತರಲಾಯಿತಾದರೂ ಆ ಜನಸಮುದ್ರದ ನಡುವೆ ಈ ತೇಲಿಬಂದ ಹಲಗೆಯನ್ನು ಕಂಡವರಾಗಲೀ ಲೆಕ್ಕಿಸಿದವರಾಗಲೀ ಬಹಳ ಕಡಿಮೆ. ಮತ್ತೊಂದೆಡೆ ಸಭಾಭಂಗಕ್ಕಾಗಿ ಬಂದ ಕಮ್ಯೂನಿಸ್ಟರಿಗೂ "ಜನರೇ ನೋಡಿಕೊಳ್ಳಲಿ" ಎಂದ ನೆಹರೂವಾಣಿಯನ್ನಾಲಿಸಿದ ಸಭಿಕರಿಗೂ ಖಂಡಾಖಂಡಿ ಹೊಯ್ಕೈಯಾಗುತಿತ್ತು. ಪಂಡಿತಜೀಯ ಮಾತನ್ನು ಏಕಚಿತ್ತದಿಂದಾಲಿಸುತ್ತಿದ್ದ ಒಂದು ಕಡೆಯ ಸಭಿಕರನ್ನಂತೂ ವಿರೋಧ ಪ್ರದರ್ಶಕರ ಬೊಬ್ಬೆ ಮತ್ತವರು [illegible]ಜವನ್ನು ಕೇಳಲುಮಾಡಿದ ಪ್ರಯತ್ನ ಪರಮಾವಧಿ ಕೆರಳಿಸಿ, ಜನರು ಆ ಪುಂಡರನ್ನು ಹಿಡಿದು ಜಪ್ಪಿಬಿಡುವುದರಲ್ಲಿದ್ದಾಗ ಪೋಲೀಸರು ಅವರ ಪ್ರಾಣರಕ್ಷಣೆಗೆ ಬರಬೇಕಾಯಿತು. ಕೊನೆಯಲ್ಲಿ ಸಭೆ ಮುಗಿದು ಪಂಡಿತ ನೆಹರುಗಳು ಸಭಾ ನಿಲ್ದಾಣದಿಂದಿಳಿದು ಸರಕಾರೀ ಭವನದತ್ತ ಹೊರಡುವ ಹೊತ್ತು. ಆ ದಾರಿಯ ಕಾವಲ ಹೊಣೆ ಹೊತ್ತು ನಿಂತಿದ್ದ ಸ್ಪೆಶಲ್ ಪೋಲೀಸ್ ಬ್ರಾಂಚಿನ ಡೆಪ್ಯುಟಿ ಕಮಿಶನರರು, ಆ ಹಾದಿಯತ್ತ ಚಲಿಸುತ್ತಿದ್ದ ಓರ್ವ ತರುಣನ ಚಲನವಲನದ ಮೇಲಿಂದ ಅನುಮಾನಗೊಂಡು ಹಿಡಿಯಲು ಬಂದೊಡನೆಯೇ ತರುಣ ರಿವಾಲ್ವರ್ ತೆಗೆದು ಅವರ ಮೇಲೆ ಮೂರು ಬಾರಿ ಗುಂಡು ಹೊಡೆದ, ಮೂರೂ ಗುರಿತಪ್ಪಿದುವು; ಸವಾರ ಪೋಲೀಸ್ ಸಾರ್ಜೆಂಟನೊಬ್ಬನು ಧಾವಿಸಿಬಂದು ಕೆಳಗೆ ಹಾರಿ ಅಪರಾಧಿಯ ಕಡೆಗೆ ಗುಂಡುಗಳನ್ನು ಹಾರಿಸುತ್ತಾ ಆತನನ್ನು ಹಿಡಿದುಕೊಂಡ. ಆ ಗುಂಡೇಟುಗಳಿಂದಲೂ ಏನೂ ಆಗಿಲ್ಲ; ಪುಂಡನ ವಶ ಒಂದು ರಿವಾಲ್ವರ್ ಮತ್ತು ಒಂಭತ್ತು ಸಜೀವ ತೋಟೆಗಳು ದೊರೆತವು. ಸಮುದ್ರದೊಡನೆ ಹಳ್ಳದ ಸ್ಪರ್ಧೆಯೆಂಬಂತೆ ಇತ್ತ ಪಂಡಿತಜೀಯ ಪ್ರಚಂಡ ಸಭೆ ನೆರೆದಿದ್ದಾಗಲೇ ಅದೇ ಬದಿಯ ವೆಲಿಂಗ್ಟನ್ ಮೈದಾನಿನಲ್ಲಿ ನೆಹರೂ ವಿರೋಧಿ ಎಡಪಕ್ಷೀಯರ ಸಭೆಯೊಂದು 144ನೇ ಸೆಕ್ಷನನ್ನು ಮುರಿದು ನೆರೆದಿದ್ದಿತು. ಪೋಲೀಸರು ಈ ಸಭೆಯನ್ನಾತಂಕಿಸದೆ, ಅದರ ಸುತ್ತು ನೆಲೆಗಳಲ್ಲಿ ಲಾರಿಗಳಲ್ಲಿ ಕಾಯುತ್ತಾ ನಿಂತಿದ್ದು ಕೊನೆಗೆ ಕೇವಲ 1000 ಮಂದಿಯೊಳಗಿದ್ದ ಆ ಸಭೆಯೊಡೆದು ಎರಡು ಮೆರವಣಿಗೆಗಳಾಗಿ ಮುಂದೊತ್ತಿದಾಗ ತಡೆಗಟ್ಟಿ ಚದರಿಸಿದರು. ಆ ವಿರೋಧ ಪ್ರದರ್ಶ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:..
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಕರಲ್ಲಿ ವಿದ್ಯಾರ್ಥಿ ಸಂಘ-ಸೋಶಿಯಲಿಸ್ಟ್ ರಿಪಬ್ಲಿಕ್ ಪಕ್ಷ-ಸಮತಾವಾದಿ ಪಕ್ಷ ಮುಂತಾದ ಪಂಗಡಗಳವಂದ್ದರು. ರಾತ್ರಿಯ ವರೆಗೂ ಟ್ರಾಮುಗಳನ್ನು ಬಲಾತ್ಕಾರದಿಂದ ಹತ್ತಲು ಪ್ರಯತ್ನಿಸಿ ತಡೆಯು ಬಂದವರ ಮೇಲೆ ಬಾಟ್ಲಿ ಕಲ್ಲುಗಳೆಸೆಯುವದೇ ಮುಂತಾದ ಪುಂಡಾಟಿಕೆಗಳು ನಡೆದಿದ್ದುವು. ನೆಹರೂ ಸಭಾರಂಭದ ಮೊದಲೇ ಬೊಂಬೊಗೆತ, ವಿರುದ್ಧ ಘೋಷಗಳ ಮೆರವಣಿಗೆ, ಟ್ರಾಮ್ ಮೊದಲಾದ ವಾಹನಗಳಿಗೆ ಕಲ್ಲೆಸೆತ, ಇತ್ಯಾದಿ ಪುಂಡಾಟಿಕೆಗಳು ಕಲ್ಕತ್ತದ ಬೇರೆ ಬೇರೆ ಡೆಗಳಲ್ಲಾಗಿದ್ದುವು. ಅಂದು ಅಪರಾಹ್ನ 2 ತಾಸಿಗೆ ಸೀಲ್ದಾ ರೈಲ್ವೇ ಸ್ಟೇಶನಿನ ಹೆಬ್ಬಾಗಿಲಲ್ಲಿ ಒಂದು ಬೊಂಬು ಸಿಡಿದು ಮೂವರು ರೈಲ್ವೇ ಪೋಲೀಸರಿಗೆ ಜಖಮಾಗಿದ್ದಿತು. ಅದೇ ಹೊತ್ತಿನಲ್ಲಿ ಅದೇ ಸ್ಥಳದ ಪೋಲೀಸು ಗುಂಪಿನ ಮೇಲೊಂದು, ಆ ಮೇಲೆ ವ್ಯಾಲ್ಕ್ಲೀ ಸಮೀಪದ ಪೋಲೀಸ್ ಗುಂಪಿನ ಮೇಲೊಂದು ಬೊಂಬು ಒಗೆಯಲ್ಪಟ್ಟರೂ ಯಾರಿಗೂ ಜಖಮಾಗಿಲಿಲ್ಲ. ಭವಾನಿಪುರದ ಆಶುತೋಶ್ ಕಾಲೇಜಿನ ಇದಿರು ಹಲವು ಬೊಂಬುಗಳೆಸೆಯಲ್ಪಟ್ಟಿದ್ದುವು. ಅಂತೂ ತಾ 14ರ ವಿವಿಧ ಹಾಗೂ ಬಹುಮುಖೀ ಗೊಂದಲಗಳಿಂದ ಓರ್ವ ಪೋಲಿಸನ ಮರಣ ಮತ್ತು 10 ಮಂದಿ ಪೋಲೀಸರ ಸಮೇತ 35 ಮಂದಿಗೆ ಜಖಮುಗಳಾಗಿದ್ದುವು; ಕೇವಲ 36 ಮಂದಿ ದಸ್ತಗಿರಿಮಾಡಲ್ಪಟ್ಟಿದ್ದರು.

ಮನನೀಯ ವಿಚಾರಗಳು

ಕಲ್ಕತ್ತದ ಆ ಪ್ರಚಂಡಸಭೆಯಲ್ಲಿ ಸುಮಾರು 100 ಮಿನಿಟುಗಳವರೆಗೆ ಹಿಂದುಸ್ಥಾನಿಯಲ್ಲಿ ಸರಳವಾಣಿಯಿಂದ, ಮಧುರ ಹಾಗೂ ಸುದೃಢ ಸ್ವರದಿಂದ ಪಂಡಿತ ನೆಹರುಗಳತ್ತ ಭಾಷಣವು, ಬಂಗಾಳದ ಅನಾಚಾರ ಭಸ್ಮರಾಶಿಯನ್ನು ತೊಳೆಯುವ ಭಾಗೀರಥೀ ಪ್ರವಾಹದಂತಿತ್ತು. ಹಿಂದೀ ಕಮ್ಯೂನಿಸ್ಟರು ರಾಷ್ಟ್ರದ ಮತ್ತು, ತಾನು ಸರಿಯಾಗಿ ಓದಿ ತಿಳಿದಿರುವ ಕಮ್ಯೂನಿಸಮಿನ ಅತಿ ದೊಡ್ಡ ವೈರಿಗಳೆಂದು ಪಂಡಿತಜೀ ಒತ್ತಿ ಒತ್ತಿ ಹೇಳಿದ್ದರು. ಕೆಲವೇ ಪುಂದಿ ಪುಂಡರ ಪೋಕಾಟಿಕೆಗಳಿಗೆ ಅಂಜಿ ಅಥವಾ ಅಸಡ್ಡೆವಹಿಸಿ ಸಾರ್ವಜನಿಕರು ಸುಮ್ಮನಿರದೆ, ಧೈರ್ಯ ಸ್ಥೈರ್ಯಗಳಿಂದ ಅವುಗಳನ್ನು ನಿರ್ಮೂಲಿಸಿಕೊಳ್ಳಬೇಕೆಂದರು. ಅಗಣ್ಯಪಕ್ಷವಾಗಿದ್ದ ಕಮ್ಯೂನಿಸ್ಟ್ ಪಕ್ಷ ಯುದ್ಧಕಾಲದಲ್ಲಿ ರಾಷ್ಟ್ರದ್ರೋಹಿ ವರ್ತನೆ ವಹಿಸಿ ಬ್ರಿಟಿಷ್ ಬೆಂಬಲದಿಂದ ಪ್ರಾಬಲ್ಯಕ್ಕೆ ಬಂದುದನ್ನು ನೆನಪುಮಾಡಿಕೊಟ್ಟರು. ಕಾಂಗ್ರೆಸು ಗಾಂಧಿಜೀಯ ನಿರೀಕ್ಷೆಯ ಮಟ್ಟಕ್ಕೇರಲಿಲ್ಲವೆಂಬುದನ್ನು ಒಪ್ಪಿಕೊಂಡು, ಆ ಕುರಿತು ಸರ್ವ ಶಕ್ತಿಯಿಂದ ಸರ್ವಪ್ರಯತ್ನಗಳನ್ನೂ ಕೈಕೊಳ್ಳುತಿದ್ದೇವೆ, ಎಂದರು. ಬಂಗಾಳದ ದುಸ್ಥಿತಿ ಪುತ್ತುದರ ನಿವಾರಣಾ ಪ್ರಯತ್ನ—ಭಾರತ ಸರಕಾರವನ್ನಿದಿರಿಸಿರುವ ಬಹುಮುಖೀ ಸಮಸ್ಯೆಗಳು—ಅವಕಾಶ ದೊರೆತೊಡನೆ ಭಾಷಾವಾರಾಗಿ ಪ್ರಾಂತಿಕಗಡಿ ಪುನರ್ರಚಿಸುವ ದೃಷ್ಟಿ—ಕಾಂಗ್ರೆಸೊಂದೇ ಆಶ್ರಯ ವೆಂಬುದರ ಕಾರಣ—ಇತ್ಯಾದಿಗಳನ್ನೂ ಪಂಡಿತಜೀ ವಿಶದೀಕರಿಸಿ ಮುಂದಟ್ಟು ಮಾಡಿದ್ದರು. ಆದಷ್ಟು ವೇಗನೆ, ಮಿಕ್ಕ ಕಡೆಗಳಿಗಿಂತ ಮೊದಲೇ ಬಂಗಾಳದಲ್ಲಿ ಹೊಸ ಚುನಾವಣೆಗಳನ್ನು ನಡೆಸುವ ಅಭಿಲಾಷೆ ವ್ಯಕ್ತ ಪಡಿಸಿ, ಎಲ್ಲಾ ವಿಷಯಗಳನ್ನೂ ಕೇಂದ್ರ ಸಚಿವ ಮಂಡಲಿ ಮತ್ತು ಕಾಂಗ್ರೆಸ್ ಅಧಿನಾಯಕ ಮಂಡಲಿಯ ಮುಂದಿರಿಸಿ ಕೂಡಲೇ ತೀರ್ಮಾನ ಕೊಡಿಸುವೆನೆಂದು ಭರವಸೆ ಕೊಟ್ಟರು. ಈವರೆಗೆ ಪಶ್ಚಿಮ ಬಂಗಾಳದಲ್ಲಿ 9 ಔನ್ಸಿರುವ ಆಹಾರ ರೇಶನನ್ನು ಬರುವ ವಾರದಿಂದ 12 ಔನ್ಸಿಗೇರಿಸಲಾಗುವದೆಂದು ಪಂಡಿತಜೀ ಜಾಹೀರು ಮಾಡಿದಾಗ ಸಭೆ ಹರ್ಷ ಧ್ವನಿಯೆಬ್ಬಿಸಿತು.

ಕಲ್ಕತ್ತಾ ಬಿಡುವಾಗ ವಿದಾಯ ಸಂದೇಶವೀಯುತ್ತಾ ಕಲ್ಕತ್ತದ ಜನತೆಯು ತನ್ನ ಕಡೆಗೆ ತೋರಿಸಿದ ಗೌರವಾದರಗಳನ್ನೂ ಪೋಲೀಸರು ಹಾಗೂ ಸಾರ್ವಜನಿಕರು ಪ್ರದರ್ಶಿಸಿದ ಶಿಸ್ತುಮತ್ತು ದೃಢಚಿತ್ತವನ್ನೂ ಪಂಡಿತಜೀ ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಕರ್ತವ್ಯಪಾಲನೆಯಲ್ಲಿ ಪ್ರಾಣಾರ್ಪಣೆ ಮಾಡಿದ ಪೋಲಿಸನಿಗಾಗಿ ದುಃಖ ಸೂಚಿಸಿ, ಅಂತಹ ಅಸಾಮಾನ್ಯ ಸನ್ನಿವೇಶದಲ್ಲೂ ಪೋಲೀಸರು ಮತ್ತು ಸಭಿಕರು ತೋರಿಸಿದ್ದ ನಿರ್ಲಿಪ್ತ ದೃಢ ಬುದ್ಧಿಯನ್ನು ಎತ್ತಿ ಕೊಂಡಾಡಿದ್ದಾರೆ.

ಕಲ್ಕತ್ತಾ ಗಲಭೆಗಳ ಸ್ವರೂಪದ ಮೇಲಿಂದ ಇಷ್ಟನ್ನು ಊಹಿಸಬಹುದು:-

ನೆಹರೂ ಆಗಮನವಾರ್ತೆ ಕಿವಿಗೆ ಬಿದ್ದಂದಿನಿಂದಲೂ ದುಷ್ಕೃತ್ಯಗಳ ತಾಂಡವರಂಗವಾಗಿರುವ ಕಲ್ಕತ್ತದ ಎಲ್ಲಾ ವಿರುದ್ಧ ಬಲಗಳೂ ಅವರನ್ನಿದಿರಿಸಿನಿಲ್ಲಲು ಸಂಘಟನೆಯಿಂದ ತಯಾರಾಗಿದ್ದವು; ಆ ಪೈಕಿ ಸೋಶಿಯಲಿಸ್ಟರು, ಸೋಶಿಯಲಿಸ್ಟ್ ರಿಪಬ್ಲಿಕನರೇ ಮೊದಲಾದ ಎಡಪಕ್ಷೀಯರು ವಿರುದ್ಧ ಸಭೆ, ವಿರುದ್ಧ ಪ್ರದರ್ಶನಗಳನ್ನು ನಡೆಸುವ ಯೋಜನೆ ಹಾಕಿಕೊಂಡಿದ್ದರೆ ಕಮ್ಯೂನಿಸ್ಟರು ಪಂಡಿತಜೀಯನ್ನೇ ತೀರಿಸಿಬಿಡುವದನ್ನು ಹವಣಿಸಿದ್ದಿರಬೇಕು. ಕಲ್ಕತ್ತದ ಅಲ್ಲಲ್ಲಿ ಮತ್ತು ಪ್ರತ್ಯಕ್ಷ ಸಭೆಯಲ್ಲಾದ ಬೊಂಬು ಸ್ಫೋಟಗಳೂ ಗುಂಡೆಸೆತವೂ ಕಮ್ಯೂನಿಸ್ಟ್ ಮರ್ಜಿಯದು. ಬೇರೆ ಕಡೆಗಳಲ್ಲಿ ಸಿಡಿದಿದ್ದ ಬೊಂಬುಗಳು ಕೇವಲ ಗದ್ದಲ ಮತ್ತು ಜಖಮುಗಳನ್ನಷ್ಟೇ ನಿರ್ಮಿಸಿದ್ದರೆ ಪಂಡಿತ ನೆಹರು ವೇದಿಕೆ ಹತ್ತುತ್ತಿರುವಾಗಲೇ ಸಭೆಯಲ್ಲಿ ಸಿಡಿದ ಬೊಂಬು ಓರ್ವ ಪೋಲೀಸನನ್ನು ಕೊಲ್ಲುವಷ್ಟು ಕ್ರೂರವಿತ್ತು. ಸಭೆಯನ್ನಾಮೂಲಕ ಗಲಿಬಿಲಿಗೊಳಿಸಿ ಚದರಿಸಿ, ಆ ಗೊಂದಲದ ನಡುವೆ ನೆಹರೂಗಳ ಮೇಲೆ ಬೀಳುವ ಹಂಚಿಕೆ ಕಮ್ಯೂನಿಸ್ಟರದಿದ್ದಿರಬಹುದು.

ಸಭೆಮುಗಿಸಿ ಪಂಡಿತಜೀ ಹೊರಡುವ ಹೊತ್ತಿಗೆ ಸರಿಯಾಗಿ ಆ ಹಾದಿಯಲ್ಲೇ ಹತ್ತು ಹನ್ನೆರಡು ತೋಟೆಗಳೊಂದಿಗೆ ರಿವಾಲ್ವರ್ ಸಮೇತ ಕಾಯುತ್ತಿದ್ದ ತರುಣನು ನಿಜಕ್ಕೂ ಗೋಡ್ಸೆಯ ದ್ವಿಪ್ರತಿ. ಅಂತಹ ಜನದೊತ್ತಡದ ನಡುವೆ, ಆಗಿಂದಾಗಲೇ ಇವನ ಮುಖಭಾವ ಮತ್ತು ಚಲನವಲನಗಳ ಮೇಲಿಂದಲೇ ಸಂದೇಹಗೊಂಡು, ಪತ್ತೆಹಚ್ಚಲು ಸಮರ್ಥರಾದ ಪೋಲೀಸ್ ಅಧಿಕಾರಿಗಳು ಶ್ಲಾಘನೀಯರು.

ರಕ್ಷಣಾ ವ್ಯವಸ್ಥೆಯಲ್ಲಿ ಓರ್ವ ಪೋಲೀಸು ಪ್ರಾಣಕೊಟ್ಟ. ಕಲವು ಪುಂಡರು ಪಂಡಿತಜೀಯ ಪ್ರಾಣಕೆಗೆದುಕೊಡುವೆವೆಂಬ ಆಶ್ವಾಸನೆಯೊಂದಿಗೆ ಸಕಲ ಸಿದ್ಧತೆ ಮಾಡಿ ಮೃತ್ಯುವನ್ನು ಆ ದಿನ ಆ ಮೈದಾನಿಗಾಮಂತ್ರಿಸಿದ್ದರೆಂದೂ, ಪಂಡಿತಜೀಯ ಬದಲಿಗೆ ತನ್ನ ಪ್ರಾಣವನ್ನು ಕೊಟ್ಟು ಆ ಪೋಲೀಸರವ ಅದನ್ನು ಹಿಂದೆ ಕಳುಹಿಕೊಟ್ಟನೆಂದೂ ನೆನಸಬೇಕು. ತಾ 15ರಲ್ಲಿ ಆತನ ಶವಸಂಸ್ಕಾರವು ಐ. ಜಿ., ಡಿ. ಐ. ಜಿ. ಮೊದಲಾದ ಪೋಲೀಸ್ ಉಚ್ಚಾಧಿಕಾರಿಗಳ ಹಾಗೂ ಸಶಸ್ತ್ರ ಪೋಲೀಸು ದಳಗಳ ಮೆರವಣಿಗೆಯಿಂದ ಅತ್ಯಂತ ಗೌರವಪೂರ್ವಕವಾಗಿ ನಡೆಯಿತು. ಶವದಹನದ ಹೊತ್ತಿನಲ್ಲಿ ಗವರ್ನರ್ ಕಟ್ಜುಗಳು ಸ್ವತಃ ಹಾಜರಿದ್ದು, ಶವಕ್ಕೆ ಸೆಲ್ಯೂಟ್ ಕೊಟ್ಟು ತನ್ನ ಶಾಂತಿ ಸ್ಪರ್ಶಿಸಿದರು. ಪ್ರಧಾನ ಮಂತ್ರಿ ನೆಹರುಗಳ, ಬಂಗಾಳದ ಪ್ರಧಾನ ಮಂತ್ರಿ ಮತ್ತಿತರರ ಪರವಾಗಿ ಆಸಾರ್ಥಕ ಮರಣೆಯ ಶವಕ್ಕೆ ವಸ್ತ್ರಗಳರ್ಪಿಸಲ್ಪಟ್ಟಿದ್ದುವು. ಪಂಡಿತಜೀ ಆ ಪೋಲೀಸರವನ ಸಂಬಂಧಿಕರಿಗೆ ತನ್ನ ಸಹಾನುಭೂತಿಯ ಸಂದೇಶ ಕಳುಹಿದ್ದಾರೆ.

ಅದೇ ಪ್ರಸಂಗದಲ್ಲೇ 'ನಿಷ್ಕಲ್ಮಷ ಬುದ್ಧಿಯ ಅತ್ಯುಚ್ಚ ನಾಗರಿಕ'ನೆಂದು ವಿಶೇಷ ರೀತಿಯಿಂದ ಗೌರವಿಸಲ್ಪಡುವ ಪಂಡಿತ ನೆಹರುಗಳನ್ನು ಅವರ ಸ್ವಂತ ರಾಷ್ಟ್ರದ ಒಂದು ಊರಿನಲ್ಲಿ ಈ ದೃಷ್ಟಿಯಿಂದ ಕಾಣುವವರಿದ್ದಾರೆ, ಎಂಬುದು ಬ್ರಿಟನ್ ಮತ್ತಿತರ ದೇಶಗಳಲ್ಲಿ ಆಶ್ಚರ್ಯಾತುರಗಳನ್ನು ನಿರ್ಮಿಸಿದೆ. ಪಂಡಿತಜೀ ಹುಚ್ಚು ಎದೆಗಾರಿಕೆಯನ್ನು ಪ್ರದರ್ಶಿಸಬಾರದೆಂದೂ ತನ್ನ ದೇಹರಕ್ಷಣೆಯ ಕಾವಲಿಲ್ಲದೆ ಹೊರಡಬಾರದೆಂದೂ ಎಲ್ಲೆಲ್ಲಿಂದಲೂ ಉಪದೇಶವಾಣಿ ಕೇಳಬರುತ್ತಿದೆ.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರತ್ಯೇಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.

ಚೆಯರ್ಮೆನ್ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

Notice

In the Court of the District Munsif of Coondapur.

Original Suit No 170/1949

Between

G. Krishna Rao —Plaintiff

and

Chandayya Hegde and others —Defendants

To

The 1st defendant Chandayya Hegde, son of Janaki Heggadthi, residing in Kukkehalli village, Udipi Taluk.

Please take notice that the plaintiff had filed the above suit for arrears of rent and for apportionment of rent between you and himself in respect of the plaint scheduled properties. The said suit stands posted to 4-8-1949 at 11 A. M. before the said court. If you fail to appear before the said court on that date either in person or through a pleader duly instructed you will be declared exparte and the matter will be proceeded with in your absence.

Sd K. Ramappayya B.A. B.L.
Advocate for plaintiff.

Coondapur
Dated 15-7-1949

ಪ್ರಾಪಂಚಿಕ ಸ್ಥಿತಿಗತಿ

ಹೋರಾಟ ಮತ್ತು ಗೊಂದಲ ಮೊನೆಯು, ತುಸು ಮೊಂಡಾಗಿ ಆರ್ಥಿಕ, ಅಂತರಿಕ ವಹಿವಾಟುಗಳ ಪ್ರಭಾವವೇ ಕಳೆದ ದಿನಗಳ ಜಾಗತಿಕ ರಂಗದಲ್ಲಿ ಹೆಚ್ಚಿರುವಂತೆ ತೋರುತ್ತಿದೆ. ವಿಶಾಲ ಪ್ರಪಂಚವು ಅಪಾರ ಸಮುದ್ರದಂತೆ ಅಲೆಗಳನ್ನೂ ಅಲ್ಲಲ್ಲಿ ಗಾಳಿ ಬಿರುಗಾಳಿಗಳನ್ನೂ ಎಬ್ಬಿಸುವಂತಹದೇನೋ ನಿಜ; ಸರೋವರದಂತೆ ಶಾಂತವಿರುವಂತಹದಲ್ಲ. ಆದರೆ ಈಗಿನ ಪ್ರಾಪಂಚಿಕಾಂದೋಲನಗಳು ಸ್ವಾಭಾವಿಕತೆಯ ಅಥವಾ ಪ್ರಗತಿ ಸೂಚನೆಯ ಸ್ವರೂಪದವುಗಳಿರದೆ ದುರ್ಗುಣಗಳ ದ್ಯೋತಕವಾಗಿವೆ ಎಂಬುದೊಂದೇ ಇಲ್ಲಿ ಚಿಂತಿಸತಕ್ಕ ವಿಷಯ.

ಲೋಕ ವಿದ್ಯಮಾನ

ಚೈನಾ ಯುದ್ಧ ರಂಗದಲ್ಲಿ ಗಣನೀಯ ಆಗುಹೋಗುಗಳೇನೂ ತೋರಿ ಬರುತ್ತಿಲ್ಲ. ಇತ್ತೀಚೆಗೆ ಫಿಲಿಪ್ಪಾಯಿನ್ಸಿಗೆ ಹೋಗಿ ಬಂದ ಚಿಯಾಂಗ್ ಕೈಶೇಕರು ಚೈನಾ, ಫಿಲಿಪ್ಪಾಯಿನ್ ಮತ್ತು ದಕ್ಷಿಣಕೋರಿಯಾಗಳು ಒಂದಾಗಿ ಕಮ್ಯೂನಿಸ್ಟ್ ವಿರೋಧಿ ದೂರಪ್ರಾಚ್ಯ ಒಡಂಬಡಿಕೆಯನ್ನು ಮಾಡಿಕೊಳ್ಳಲು ನಿರ್ಧರಿಸಿವೆ, ಎಂದು ಜಾಹೀರುಮಾಡಿದ್ದಾರೆ. ಕುಮಿಂಟಾಂಗ್ ಸರಕಾರೀಪಕ್ಷದ ಕೇಂದ್ರಸಮಿತಿಗಳ ಮುಂದೆ ಮಾತಾಡುತ್ತಾ, ಚಿಯಾಂಗ್ ಕೈಶೇಕರು ಕಮ್ಯೂನಿಸ್ಟರ ವಿರೋಧವಾಗಿ ವಿಜಯ ಸಾಧಿಸುವ ಆಯಕಟ್ಟಿನ ಸಂದರ್ಭವೀಗ ಬಂದಿದೆಯೆಂದೂ 25 ವರುಷಗಳ ಮೊದಲು ರಾಷ್ಟ್ರೀಯರು ವಿಜಯಧ್ವಜ ಹೂಡಿದ್ದ ಕೇಂಟನನ್ನು ರಕ್ಷಿಸಿಕೊಂಡು ಈ ಬಾರಿಯೂ ಇಲ್ಲಿಂದಲೇ ಕಮ್ಯೂನಿಸ್ಟರ ಮೇಲೆ ವಿಜಯದಂಡಯಾತ್ರೆ ಕೈಕೊಳ್ಳಬೇಕೆಂದೂ ಹುರಿದುಂಬಿಸಿದ್ದಾರೆ.

ಅರ್ಥರಂಗದ ಮುಖ್ಯಸಮಸ್ಯೆಯಾಗಿರುವ ಬ್ರಿಟನಿನ ಡೋಲರ್ ಬಿಕ್ಕಟ್ಟಿನ ಸಂಬಂಧವಾಗಿ ಕಾಮನ್‌ವೆಲ್ತ್ ರಾಷ್ಟ್ರಗಳ ಅರ್ಥಸಚಿವರ ಸಮ್ಮೇಳನವು ಲಂಡನಿನಲ್ಲಿ ಈ ವಾರದಾದಿಯಲ್ಲಿ ಮುಕ್ತಾಯಗೊಂಡಿತೆಂದು ತಿಳಿದು ಬರುತ್ತದೆ. ಬ್ರಿಟನಿನ ಖಜಾನಾಧಿಕಾರಿ ಸರ್. ಕ್ರಿಪ್ಸರು ಆರೋಗ್ಯ ಸಂಪಾದನೆಗಾಗಿ ಆರು ವಾರ ಸ್ವಿಸರ್ಲೆಂಡಿಗೆ ಹೋಗುವರೆಂದೂ, ಪ್ರಧಾನಿ ಅಟ್ಲಿಯವರೇ ಈ ಅವಧಿಯಲ್ಲಿ ಅವರ ಖಾತೆಯನ್ನು ನಡೆಸುವರೆಂದೂ ತಿಳಿದು ಬರುತ್ತದೆ.

ಇಡೀ ಪ್ರಪಂಚದ ಟ್ರೇಡ್‌ಯೂನಿಯನುಗಳ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಸರಕಾರೀ ಸಂಬಂಧರಹಿತತಜ್ಞರ ಒಂದು ಕೋರ್ಟನ್ನು ಸ್ಥಾಪಿಸಿಕೊಳ್ಳುವ ಸೂಚನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿ ಟ್ರಿಗ್ವಿ ಲೀಯವರು ಮುಂದಿಟ್ಟಿದ್ದಾರೆ,

ಬರ್ಮಾ ಯುದ್ಧಗತಿಯಲ್ಲೂ ಬದಲಾವಣೆಗಳು ಕಂಡು ಬರುತ್ತಿಲ್ಲ. ಈಗ ಲಂಡನಿಗೆ ಹೋಗಿ ಬ್ರಿಟಿಷ್ ವಿದೇಶ ಮಂತ್ರಿ, ಯುದ್ಧ ಮಂತ್ರಿ ಮತ್ತು ಸಂಬಂಧ ಪಟ್ಟ ಇತರರೊಡನೆ ಮಾತಾಡಿರುವ ಬರ್ಮಾದ ಮುಖ್ಯ ಸೇನಾನಿ ಮತ್ತು ರಕ್ಷಣಾ ಮಂತ್ರಿಯಾಗಿರುವ ಜನರಲ್ ನೆ ವಿನ್ನರು ಕಮ್ಯೂನಿಸ್ಟರು ಮತ್ತು ಬಂಡಾಯಗಾರ ಕರೆನ್ನರು ಶಸ್ತ್ರ ಕೆಳಗಿಡುವ ವರೆಗೂ ಬರ್ಮಾ ಸರಕಾರವು ಯುದ್ಧ ಮುಂದುವರಿಸುವದೆಂದೂ, ಅವರು ಶರಣು ಬಂದಲ್ಲಿ ಮತ್ತೆ ಅವರನ್ನು ವೈರಿಗಳಂತೆ ಕಾಣದೆ ಮಿತ್ರರಂತೆ ನೋಡಲಾಗುವದೆಂದೂ ಘೋಷಿಸಿದ್ದಾರೆ. ಬರ್ಮಾದಲ್ಲಿ ನಿಜಕ್ಕೂ ಗೊಂದಲ ನಿರ್ಮಿಸುತ್ತಿರುವವರು ಕಮ್ಯೂನಿಸ್ಟ್ ಹೊರತು ಕರೆನ್ನರಲ್ಲವೆಂದೂ ಕರೆನ್ ಜನರಲ್ಲಿ ಸೇಕಡಾ ಐದಾರುಮಂದಿ ಮಾತ್ರ ಗೊಂದಲದಲ್ಲಿ ಸೇರಿದ್ದಾರೆ ಹೊರತು ಎಲ್ಲರಲ್ಲವೆಂದೂ ಅವರ ಅಂಬೋಣ.

ಪಾಕಿಸ್ತಾನದ ಪಾಲಿನಗೊಂದಲಗಳೂ ಬಹುಮಟ್ಟಿಗೆ ಇದ್ದಂತಿವೆ; ಪಠಾಣಿಸ್ತಾನ್ ಬೇಡಿಕೆಸಂಬಂಧದ ಚಳವಳದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಮಾಮ್ದೋಟಿನ ನವಾಬರ ನಾಯಕತ್ವದಲ್ಲಿದ್ದ ಪಶ್ಚಿಮ ಪಂಜಾಬ್ ಸರಕಾರವನ್ನು ಅಧಿಕಾರದ ದುರ್ವಿನಿಯೋಗದ ಕಾರಣಕ್ಕಾಗಿ ರದ್ದುಪಡಿಸಿ, ಕಳೆದ ಜನವರಿಯಿಂದಲೂ 99ನೇ ಸೆಕ್ಶನಿನನ್ವಯ ಗವರ್ನರ್ ಸರ್. ಫ್ರಾನ್ಸಿಸ್ ಮುಡಿಯವರ ಏಕತಂತ್ರಾಡಳಿತೆಗೊಪ್ಪಿಸಿದ್ದರು. ಈ ಬಿಳಿ ಗವರ್ನರರ ವಿರುದ್ಧವಾಗಿ ಅಲ್ಲಿಯ ಮುಸ್ಲಿಮ್ ಲೀಗಿನವರು ಪ್ರಚಾರ ಚಳವಳಹೂಡಿದ್ದರಲ್ಲದೆ, ಮಂತ್ರಿಮಂಡಲಿಯ ಅಧಿಕಾರವುಳ್ಳ ಲೀಗ್ ಸಲಹೆಗಾರ ಸಮಿತಿಯನ್ನು ಗವರ್ನರರಿಗೆ ನೇಮಿಸಬೇಕೆಂದು ಕೇಳಿಕೊಂಡಿದ್ದರು. ಗವರ್ನರ್ ಮುಡಿಯವರು ಇದಕ್ಕೊಪ್ಪದೆ ತನ್ನ ಸ್ಥಾನಕ್ಕೆ ರಾಜೀನಾಮೆಯೊಪ್ಪಿಸಿ ಇಂಗ್ಲಂಡಿಗೆ ಹೊರಟುಹೋಗಿದ್ದಾರೆ. ಪಾಕಿಸ್ತಾನ್ ಪಂಜಾಬಿನಲ್ಲಿ ಇನ್ನು ಯಾರು ಅಧಿಕಾರ ವಹಿಸುವರೋ ನೋಡಲಿಕ್ಕಿದೆ.

ಆರ್. ಯಸ್. ಯಸ್.

ಆರ್. ಯಸ್. ಯಸ್.ನ ಸಾರ್ ಸಂಘಚಾಲಕ ಶ್ರೀ ಗೊಲ್ವಾಲ್ಕರರು ತನ್ನ ಸಂಘವನ್ನು ಕೇವಲ ಹಿಂದೂ ಸಂಸ್ಕೃತಿಗಾಗಿ ಹಾಗೂ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುವದೆಂದೂ ಯಾವುದೇ ಗುಪ್ತ ಮತ್ತು ಹಿಂಸಾತ್ಮಕ ಚಟುವಟಿಕೆಗಳನ್ನು ಕೈಕೊಳ್ಳವದಿಲ್ಲವೆಂದೂ ರಾಷ್ಟ್ರಧ್ವಜ ಮತ್ತು ರಾಷ್ಟ್ರದ ಘಟನೆಗೆ ವಿಧೇಯತಾ ಮನ್ನಣೆ ಕೊಡುವದೆಂದೂ, ಇವೆಲ್ಲಾ ಸೂತ್ರಗಳ ನಮೂದನೆಯನ್ನು ಸಂಘದ ಜಾಹೀರು ಘಟನೆಯಲ್ಲಿ ಸೇರಿಸಿಕೊಳ್ಳುವೆವೆಂದೂ ಒಪ್ಪಿಕೊಂಡಂತೆ ಆರ್. ಯಸ್. ಯಸ್.ನ ಮೇಲಿದ್ದ ಬಹಿಷ್ಕಾರವನ್ನು ಇದೇ ತಾ 12ರಂದ ತೆಗೆದು ಹಾಕಲಾಗಿದೆ. ಎಲ್ಲಾ ಪ್ರಾಂತಿಕ ಸರಕಾರಗಳೂ ಕೇಂದ್ರ ಸರಕಾರದ ನಿರ್ದೇಶಾನುಸಾರವಾಗಿ ಆರ್. ಯಸ್. ಯಸ್. ಮೇಲಿನ ಬಹಿಷ್ಕಾರವನ್ನು ರದ್ದುಪಡಿಸಿ,ಜೈಲೊಳಗಿರಿಸಿದ್ದ ಅದರ ಸದಸ್ಯರೆಲ್ಲರನ್ನೂ ಬಿಡುಗಡೆ ಮಾಡಿವೆ. ಅದರ ಸಾರ್ ಸಂಘಚಾಲಕ ಶ್ರೀ ಮಾಧವ ಸದಾಶಿವ ಗೊಲ್ವಾಲ್ಕರರು ಮಧ್ಯ ಪ್ರಾಂತ್ಯದ ಸಿಯೋನಿ ಜೈಲಿನಿಂದ ಬಿಡುಗಡೆ ಹೊಂದಿ, ಈ ಸಂಧಾನ ಪ್ರಯತ್ನ ಮಾಡಿದ್ದ ಮದ್ರಾಸಿನ ಶ್ರೀ ಟಿ. ಆರ್. ವೆಂಕಟರಾಮ ಶಾಸ್ತ್ರಿಗಳನ್ನ ಕಾಣಲು ಇದೇ ತಾ. 20ರಲ್ಲಿ ಮದ್ರಾಸಿಗೆ ಬಂದಿದ್ದಾರೆ.

ಗಾಂಧಿಜೀಯ ಕೊಲೆಯಾದ ಬೆನ್ನಲ್ಲೇ "ದ್ವೇಷ ಮತ್ತು ಹಿಂಸೆಯನ್ನು ಹರಡಿ, ರಾಷ್ಟ್ರ ಸ್ವಾತಂತ್ರ್ಯಕ್ಕಾತಂಕಪ್ರಾಯ ಮತ್ತು ಭಾರತದ ಒಳ್ಳೆಯ ಹೆಸರಿಗೆ ಕಳಂಕವಾಗುವ ಶಕ್ತಿಗಳನ್ನು ಸಮೂಲನಾಶ ಮಾಡುವದೇ ನಮ್ಮ ಧೃಢ ನಿರ್ಧಾರ"ವೆನ್ನುತ್ತಾ ಭಾರತ ಸರಕಾರವು 1948ನೇ ಫೆಬ್ರವರಿಯಲ್ಲಿ ಆರ್. ಯಸ್. ಯಸ್.ನ ಮೇಲೆ ಬಹಿಷ್ಕಾರ ಹಾಕಿದ್ದಿತು. 1948ನೇ ದಶಂಬರ 9ರಲ್ಲಿ ಆರ್. ಯಸ್. ದೇಶವ್ಯಾಪೀ ಕಾಯಿದೇಭಂಗ ಚಳವಳ ಹೂಡಿತು; ಆದರಲ್ಲಿ ಪರಾಭವಗೊಂಡು 1949ನೇ ಜನವರಿ 28ರಲ್ಲಿ ನಿಶ್ಶರ್ತವಾಗಿ ತಾನೇ ಆ ಚಳವಳವನ್ನು ನಿಲ್ಲಿಸಿಕೊಂಡಿತು. ಈ ನಡುವೆ ಶ್ರೀ ಟಿ. ಆರ್. ವಿ. ಶಾಸ್ತ್ರಿಗಳಂಥವರು ಸರಕಾರ ಮತ್ತು ಆರ್. ಯಸ್. ಗಳ ನಡುವೆ ಸಂಧಾನಕ್ಕಾಗಿ ಓಡಾಡಿದರು. ಸರಕಾರದ ಶರ್ತಗಳಿಗನುಸಾರವಾದ ಆರ್. ಯಸ್. ಯಸ್. ಘಟನೆಯನ್ನು ಗೋಲ್ವಾಲ್ಕರರಿಂದ ತಯಾರು ಮಾಡಿಸಿ ಸರಕಾರದ ಮುಂದಿಟ್ಟರು; ಪ್ರಥಮತಃ ಕೆಲವು ಆಕ್ಷೇಪಗಳುಳಿದಿದ್ದವು. ಕೊನೆಗೆ ಹಚ್ಚಿನಂಶ ಸರಕಾರದ ಎಲ್ಲಾ ಶರ್ತಗಳನ್ನೂ ಒಪ್ಪಿಕೊಂಡು, ಸ್ಪಷ್ಟ ಭರವಸೆಗಳನ್ನು ಕೊಟ್ಟುದರಿಂದ ಆ ಸಂಸ್ಥೆಯ ಮೇಲಿನ ಬಹಿಷ್ಕಾರವೀಗ ರದ್ದಾಗಿದೆ.

ಕಾಂಗ್ರೆಸ್ ಮೂಲ ಮಂಡಲಿ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇದೇ ತಾ. 16ರಿಂದ ನವದೆಹಲಿಯಲ್ಲಿ ಸರ್ದಾರ್ ಪಟೇಲರ ನಿವಾಸದಲ್ಲಿ ನಡೆಯುತ್ತಿದೆ. ಅಧ್ಯಕ್ಷ ಡಾ| ಪಟ್ಟಾಭಿಗಳು ಜ್ವರಪೀಡಿತರಾಗಿರುವದರಿಂದ ಸರ್ದಾರ್ ಪಟೇಲರೇ ಅಧ್ಯಕ್ಷತೆ ವಹಿಸಿದ್ದಾರೆ. ಕಾಂಗ್ರೆಸಿನ ಶುದ್ಧೀಕರಣ—ಬಂಗಾಳದ ಸ್ಥಿತಿ ಸುಧಾರಣೆ—ಮದ್ರಾಸ್ ಮಂತ್ರಿಗಳ ಆರೋಪ ತನಿಖೆ—ಇತ್ಯಾದಿ ಪ್ರಾಮುಖ್ಯ ಹಾಗೂ ಬಹುಮುಖೀ ಕಾರ್ಯಭಾರವು ಈ ಬಾರಿಯ ಸಮಿತಿ ಸಭೆಯ ಮೇಲಿರುವುದರಿಂದ ಅದು ಕೆಲವು ದಿನಗಳ ವರೆಗೆ ಮುಂದುವರಿಯುವ ಸಂಭವವಿದೆ. ಕಲ್ಕತ್ತೆಯಿಂದ ಮರಳಿದ ನೆಹರುಗಳು ಬಂಗಾಳದ ಸಂಬಂಧದ ತನ್ನ ಅನುಭವ ಹಾಗೂ ಅಭಿಪ್ರಾಯಗಳನ್ನು ಸಮಿತಿಯ ಮುಂದಿಟ್ಟಿದ್ದಾರೆ. ಬಂಗಾಳಾ ಮಂತ್ರಿ ಮಂಡಲದಲ್ಲಿ ಎಲ್ಲಾ ಪಕ್ಷೀಯರನ್ನೂ ಸೇರಿಸಿ ಅದನ್ನು ವಿಸ್ತರಿಸುವುದು ಮತ್ತು ಬಂಗಾಳಾ ಕಾಂಗ್ರೆಸ್ ಕಾರ್ಯಕಾರಿಯಲ್ಲೂ ಎಲ್ಲಾ ಒಳಪಂಗಡದವರನ್ನು ಸೇರಿಸುವ ಒಂದು ಹಾದಿ—ಅಥವಾ ಬಂಗಾಳ ಶಾಸನಸಭೆಗೂ, ಬಂಗಾಳ ಕಾಂಗ್ರೆಸಿಗೂ ಕೂಡಲೇ ಹೊಸ ಚುನಾವಣೆ ನಡೆಸುವ ಬದಲು ಪಥ—ಇವೆರಡು ವಿಧಾನಗಳು ಆಳವಾಗಿ ಚರ್ಚಿಸಲ್ಪಡುತ್ತಿವೆ. ಮದ್ರಾಸಿನ ಕೆಲವು ಮಂತ್ರಿಗಳ ಮೇಲಾಗಿದ್ದ ಆರೋಪದ ತನಿಖೆ ನಡಿಸಿದ ಶ್ರೀ ಶಂಕರರಾವ್ ದೇವ್‌ರ ವರದಿ ಸಮಿತಿಯ ಮುಂದಿದೆ. ಶ್ರೀ. ಟಿ. ಪ್ರಕಾಶಮರು. ತನ್ನ ಅನುಯಾಯಿಗಳೊಂದಿಗೆ ನವದಿಲ್ಲಿಯಲ್ಲಿ ಹಾಜರಿದ್ದಾರಲ್ಲದೆ, ತಮ್ಮ ವಿಜ್ಞಾಪನಾ ದಾಖಲೆಯೊಂದನ್ನು ಮೊದಲೇ ಒಪ್ಪಿಸಿದ್ದರು. ಕಾಂಗ್ರೆಸ್ ಸಮಿತಿಯು ತಾ. 17ರಲ್ಲಿ ಪ್ರಕಾಶಂ ಸಂಗಡಿಗರನ್ನು ಆಮಂತ್ರಿಸಿ ಅವರ ಹೇಳಿಕೆಗಳನ್ನು ಪಡಕೊಂಡಿದೆ.

ಅಪಘಾತಗಳು

ಇಂಡೋನೇಶಿಯಾದ ಸ್ವಾತಂತ್ರ್ಯ ಸಂಪಾದನೆಗೆ ಹೋಗಿದ್ದ 13 ಮಂದಿ ಅಮೇರಿಕದ ಪತ್ರಿಕೋದ್ಯಮಿಗಳೂ 11 ಮಂದಿ ವಿಮಾನ ನೌಕರರೂ ಕೂಡಿ ಒಟ್ಟಿಗೆ 34 ಮಂದಿಯಿದ್ದು ಅಮೇರಿಕಕ್ಕೆ ಮರಳಲಿದ್ದ ಡಚ್ ವಿಮಾನವೊಂದು ಹಾದಿಯಾಗಿ ಇದೇ ತಾ. 12ರಲ್ಲಿ ಬೊಂಬಾಯಿಗೆ ಬಂದಾಗ ಮೋಡ ಕವಿದಿದ್ದ ದೆಸೆಯಿಂದ ಬೊಂಬಾಯಿ ಸಾಂತಾಕ್ರುಝ್ ನಿಲ್ದಾಣ ನೆಲೆಯನ್ನು ಗೊತ್ತುಹಚ್ಚಲಾರದೆ ಓಡಿ, ನಿಲ್ದಾಣಕ್ಕೆ ಮೂರು ಮೈಲು ದೂರದ ಘಾಟ್ಕೋಪರ್ ಗುಡ್ಡ ಪಂಕ್ತಿಯ ನಟ್ಟನಡುವೆ ಢಿಕ್ಕಿ ಹೊಡದು ಒಬ್ಬನೂ ಉಳಿಯದೆ ಎಲ್ಲರೂ ಸತ್ತು ಹೋಗಿದ್ದಾರೆ. ಹೊಡೆದ ರಭಸದಿಂದ ವಿಮಾನವೂ ಎಲ್ಲಾ ಶವಗಳೂ ಗುರುತು ಹತ್ತದ ರೀತಿಯಾಗಿ ಚೆಲ್ಲಾಪಿಲ್ಲಿಯಾಗಿದ್ದವು. ಬೇರೆ ಒಂದೆರಡು ವಿಮಾನಾಘಾತಗಳ ವಾರ್ತೆಗಳೂ ಇವೆ. ಜರ್ಮನಿಯ ಫ್ರೇಂಕ್‌ಫರ್ಟ ಬಳಿ ನೆಲದಡಿಯಲ್ಲಿದ್ದ ಮದ್ದುಗುಂಡುಗಳ ಸಂಗ್ರಹಾಲಯವೊಂದು ತಾ 15ನೇ ರಾತ್ರಿಸ್ಫೋಟಿಸಿಗೊಂಡು 30 ಮಂದಿಗೂ ಮಿಕ್ಕಿ ಸತ್ತು 42 ಕ್ಕೂ ಮಿಕ್ಕಿ ಜಖಂಗೊಂಡ ವಾರ್ತೆಯಿದೆ.

Taranath Ayurveda Vidyapeehta Bellary

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ

Recognised by the Central Board of Indian Medicine Madras

ಈ ವಿದ್ಯಾಪೀಠವು ಮದ್ರಾಸ್ ಸರ್ಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀರ್ತಿಶೇಷ ಪಂಡಿತ ತಾರಾನಾಥರಿಂದ ಬಹುದಿನಗಳ ವರೆಗೆ ಸುಂತ ವಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ನಾಲ್ಕು ವರ್ಷಗಳಲ್ಲಿ ಕಲಿಸಲಾಗುವುದು. ಜನಸೇವೆ ಮಾಡಿ ಧನ ಮಾನ ಗಳಿಸುವಂಥಾ ಸರ್ವೋದಯ ಸಮಾಜವನ್ನು ಕಟ್ಟುವ ಸಾಹಸ ಸಾಮರ್ಥ್ಯವನ್ನು ತಂದು ಕೊಡುವಂಥ ಶಿಕ್ಷಣ ಕೊಡಲಾಗುವುದು.

ಜನಸೇವಾ ಬುದ್ಧಿಯುಳ್ಳ ಸುಶೀಲ-ಸಚ್ಚರಿತ್ರರಾದ

S S L C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಪ್ರಾಸ್ಪೆಕ್ಟಸ್‌ಗಾಗಿ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ

ತಾರಾನಾಥ ವಿದ್ಯಾಪೀಠ ಬಳ್ಳಾರಿ.

P. O. ಸಂಗನಕಲ್ ಬಳ್ಳಾರಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE: **UDIPI, S. I.**

Capital Authorised .... Rs. 25,00,000.
Capital Issued & Subscribed .... Rs. 20,00,000.
Capital Paid Up .... Rs. 19,99,800.
Reserves .... Rs. 8,91,000.

Banking business of every description transacted

ಗುರುವಾರ, ಉಡುಪಿ, ೨೧-೭-೪೯

ಅಧಿಕಾಹಾರೋತ್ಪತ್ತಿ

1951 ಮುಗಿಯುವುದರೊಳಗೆ ರಾಷ್ಟ್ರಕ್ಕೆ ಬೇಕಾಗುವಷ್ಟು ಆಹಾರವು ರಾಷ್ಟ್ರದಲ್ಲೇ ಉತ್ಪನ್ನವಾಗುವಂತೆ ಮಾಡಿ, ಆ ಮೂಲಕ ಆಹಾರದ ಕೊರತೆಯನ್ನೆಲ್ಲಾ ನಿವಾರಿಸಿಕೊಳ್ಳುವುದರೊಂದಿಗೆ, ಈಗ ವರುಷಂಪ್ರತಿ ಪರದೇಶಗಳಿಗೆ ಹೋಗುತ್ತಿರುವ 100 ಕೋಟಿ ರೂಪಾಯಿಗಳಷ್ಟನ್ನು ಉಳಿಸಿಕೊಂಡು, ಅವನ್ನು ರಾಷ್ಟ್ರದ ಸಂಪದಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗುವಂತೆ ಮಾಡುವ ಭಾರತ ಸರಕಾರದ ಕಾರ್ಯಯೋಜನೆಯೀಗ ಆರಂಭಿಸಿದೆ. ಈ ಸಂಬಂಧದ ಸರಕಾರೀ ಯಂತ್ರವು ಇಷ್ಟರಲ್ಲೇ ಚಾಲೂಗಹತ್ತಿದೆ. ಪ್ರತಿಯೊಂದು ಪ್ರಾಂತ್ಯದ ಪ್ರತಿಯೊಂದು ಮೂಲೆಯಲ್ಲೂ ಅಧಿಕಾಹಾರೋತ್ಪನ್ನ ಕಾರ್ಯ ಪ್ರತ್ಯಕ್ಷ ಕಂಡು ಬರಬೇಕು-- ಈ ಸಾಧನೆಯಲ್ಲಿ ಯಾವ ಅಂಶವನ್ನೂ ಬಾಕಿ ಬಿಡಕೂಡದು-- ಎಂಬುದೇ ಸರಕಾರೀ ನಾಯಕರ ಉದ್ದೇಶ. ದ್ವಿತೀಯ ಸ್ವರಾಜ್ಯ ವರ್ಧಂತಿ ದಿನ,ಬರುವ ಆಗೋಸ್ತು ತಾ.15ರಿಂದಬಂದು ವಾರವನ್ನು 'ಮರ ನೆಡುವ ರಾಷ್ಟ್ರೀಯ ವಾರ'ವಾಗಿ ಎಲ್ಲೆಲ್ಲೂ ಆಚರಿಸಿ, ಧಾನ್ಯ ನಾಗುವಳ್ಳಿಗೆ ಅಥವಾ ತರಕಾರೀ ಬೆಳವಣಿಗೆಗೆ ಆಗದೆ ಖಾಲಿ ಇರುವ ಸ್ಥಳಗಳಲ್ಲೆಲ್ಲಾ ಬೇಗ ಫಲ ಬಿಡುವ ವೃಕ್ಷಗಳ ಸಸಿ ನೆಡಿಸಬೇಕೆಂದು, ಕೇಂದ್ರ ಸರಕಾರದ ಬೇಸಾಯ ಮಂತ್ರಿ ಖಾತೆಯು ಪ್ರಾಂತಿಕ ಸರಕಾರಗಳಿಗೆ ಸೂಚಿಸಿದೆ. ಈ ಉತ್ಸವಾವಧಿಯಲ್ಲಿ ನೆಟ್ಟ ಸಸಿಗಳೂ ಆಗಿನ ಹುರುಪಿನೊಂದಿಗೇನೇ ಕಟೆಹೋಗದಂತೆ ಆರೈಕೆನೋಡುವ ವ್ಯವಸ್ಥೆಯ ಕಡೆಗೆ ವಿಶೇಷ ಎಚ್ಚರಿಕೆ ಕೊಡಲಾಗಿದೆ. ಸಾರ್ವಜನಿಕ ಕಟ್ಟಡ, ಶಾಲೆಗಳ ವಠಾರಗಳು, ಹಳ್ಳೀ ಹುಲ್ಲುಗಾವಲುಗಳು, ಖಾಸಗೀ ಬಂಗಲೇ ವಠಾರಗಳು ಮುಂತಾದ ಯಾವ ಭಾಗಗಳನ್ನೂ ಬಾಕಿಬಿಡದೆ ಸಸಿನೆಡಬೇಕೆಂಬ ಸೂಚನೆಯಿದೆ. ಆಹಾರಾಭಾವ ನಿವಾರಣೆಗಾಗಿ ಸರ್ವವ್ಯಾಪೀ ಪ್ರಯತ್ನವು ಸರ್ವಶಕ್ತಿಯಿಂದ ನಡೆಯಬೇಕಾದುದು ಅತ್ಯಗತ್ಯವಿರುವಂತೆಯೇ, ಅದರ ಅಂಗವಾಗಿ ಹೀಗೆ ಸಸಿನೆಡುವ ಕಾರ್ಯವಾಗಬೇಕಾದುದೂ ಉಚಿತವೇ. ಅಂತೂ, ಸದಾಕಾಲ ರಾಷ್ಟ್ರದ ಜೀವಾಳವೇ ಆಗಿರುವ ಕೃಷಿಕರ ಪ್ರಾಮುಖ್ಯತೆಯನ್ನು ಎಲ್ಲಕ್ಕಿಂತ ಮುಂಭಾಗಕ್ಕೆ ತಂದಿರುವ-- ರೈತರ ಹೆಗಲ ಮೇಲೆ ಸರ್ವಪ್ರಥಮ ಹೊಣೆಹೇರಿರುವ-- ಕಾಲವಿದು. ರಾಷ್ಟ್ರರಕ್ಷಣೆಯ ಹೋರಾಟದಂತಹ ವಿಶೇಷ ಸಂದರ್ಭಗಳಲ್ಲಿ ಯೋಧರು, ಯೋಧರಲ್ಲದವರು ಎಂಬ ಭೇದವಿಲ್ಲದೆ ಸರ್ವರೂ ಕಡ್ಡಾಯವಾಗಿ ತಂತಮ್ಮ ಪಾಲಿನ ಕರ್ತವ್ಯಗಳನ್ನು ಮಾಡಬೇಕಾಗಿ ಬರುವಂತೆ, ಆಹಾರಾಭಾವದ ಮೇಲೆ ಹೂಡಿರುವ ಈ ಯುದ್ಧದಲ್ಲೂ ರೈತರು ಮತ್ತಿತರರೆಂಬ ವ್ಯತ್ಯಾಸವಿಲ್ಲದೆ ಭಾರತೀಯರೆಲ್ಲರೂ ದುಡಿಯಲೇಬೇಕಾಗಿ ಬಂದಿದೆ. ಇಂತಹ ಸಂದರ್ಭದಲ್ಲೂ ತಮ್ಮ ಹೊಣೆಗಾರಿಕೆಯನ್ನು ಮರೆತುಬಿಡುವ ದೇಶದ್ರೋಹಿಗಳು ಇರಲಾರರೆಂದು ಆಶಿಸಬಹುದು.

ಆಹಾರಾಭಾವವು ಗಾಬರಿಗೊಳಿಸುತ್ತಿದ್ದ ಮಳೆಗಾಲಗಳನ್ನು ನಾವು ದಾಟಿದವರಿದ್ದೇವೆ. ಎಷ್ಟೆಂದರೂ ಈ ಮಳೆಗಾಲ ಅಷ್ಟೊಂದು ಭೀಕರದ್ದೇನೂ ಅಲ್ಲ, ಧಾನ್ಯ ಸಂಗ್ರಹ-- ರೈತರ ಕಡೆಗಿನ ಮರ್ಜಿ-- ಹಸುಗೇ ವ್ಯವಸ್ಥೆ, ಇತ್ಯಾದಿಗಳ ಕುರಿತು ದೂರುವ ಅಂಶಗಳಿರಬಹುದು. ಮೂರು ವರುಷದ ಕೆಳಗಿನ ಮಕ್ಕಳಿಗೆ ಹಸುಗೆಯಿಲ್ಲದಿರುವ ಮತ್ತು 12 ವರುಷದೊಳಗಿನವರಿಗೆ ಅರ್ಧ ಪರಿಮಾಣವೆಂಬಂತಹ ನಿಯಮಗಳು ಹೆಚ್ಚಿನ ಕುಟುಂಬಗಳಿಗೆ ತ್ರಾಸದಾಯಕವಾಗಿವೆ-- ಈ ಪ್ರಾಯದೊಳಗಿನ ಮಕ್ಕಳೇ ಅಧಿಕಾಹಾರವುಣ್ಣುವವೆಂಬ ಪ್ರತ್ಯಕ್ಷಾನುಭವವುಳ್ಳ ಕುಟುಂಬಿಕರಿಗೆ ಈ ಕಾರಣದಿಂದ ಸಂತತಿ ಸಂಯಮನದ ತತ್ವ ಹೊಳೆಯುವಂತಾಗಿದೆ! ಅದೇ ರೀತಿ ಹಳ್ಳೀವಲಯಗಳಲ್ಲಿ ಸಾಗುವಳ್ಳೀ ವೆಚ್ಚಕ್ಕೆ ಬಿಟ್ಟ ಧಾನ್ಯಾಂಶಗಳ ಮತ್ತಿತರ ವಿಧಾನಗಳ ಕುರಿತೂ ದೂರುಗಳಿವೆ. ನಿಶ್ಚಿತ ಪರಿಮಾಣದ ಆಹಾರ ಧಾನ್ಯ ಸಾಕಾಗದೆ ಎಲ್ಲೆಲ್ಲೂ ಕಳ್ಳ ಸಂತೇ ವ್ಯಾಪಾರ ಹರಡಿರುವಂತಿದೆ. ಹೇಗಿದ್ದರೂ ಹಿಂದಿನ ಮಳೆಗಾಲಗಳೊಡನೆ ಈಗಿನ ದಿನಗಳನ್ನು ಹೋಲಿಸಿ ನೋಡಿದರೆ, ಆಹಾರ ಧಾನ್ಯಗಳ ಧಾರಣೆ, ವಿತರಣೆ, ಎರಡರ ಮಟ್ಟಿಗೂ ಸರ್ವರೂ ಸಮಾಧಾನದುಸಿರನ್ನು ಬಿಡಬಹುದು. ದುಷ್ಕಾಲವು ಕಳೆಯುತ್ತಾ ಹೋಗುತ್ತಿದೆ-- ಅದರಪೆಚ್ಚಿನಂಶ ಕಳೆದಿದೆ-- ಎಂದು ಭರವಸೆಯಿಂದಿರಬಹುದು. ಈಗಲೂ ಉಳಿದಿರುವ ಕೊರತೆ ಹಾಗೂ ದೋಷಗಳ ನಿವಾರಣೆಗಾಗಿ ಸರಕಾರವು ಪ್ರೋತ್ಸಾಹ ಕೊಡುವುದಷ್ಟೇ ಅಲ್ಲ-ಪ್ರತ್ಯಕ್ಷ ಕಾರ್ಯಾಚರಣೆಗಿಳಿದಿರುವಾಗ ರೈತರು, ರೈತೇತರರೆನ್ನದೆ ಸರ್ವರೂ ಅಧಿಕಾಹಾರ

ಕಾಂಗ್ರೆಸ್ ರಾಜ್ಯ ಹೇಗಿದೆ-

ನ್ಯಾಯತಜ್ಞರ ಟೀಕೆ—

ಸ್ವತಂತ್ರಭಾರತದಲ್ಲಿ ಕಾಂಗ್ರೆಸಿನ ಏಕಪಕ್ಷೀಯ ಆಡಳಿತೆಯಿದೆ— ಇತರ ಯಾವುದೇ ಪಕ್ಷವು ತಲೆಯೆತ್ತಲಾಗದಂತಹ ಅಡ್ಡಿ ಆಕ್ಷೇಪಗಳಿವೆ— ಯೋಚನಾ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಮತ್ತಿತರ ನಾಗರಿಕ ಹಕ್ಕುಬಾಧ್ಯತೆಗಳು ಅಪಹರಿಸಲ್ಪಟ್ಟಿವೆ— ಎಂಬ ದೂರು ದೂಷಣೆಗಳು ಈಗ ಹಲವೆಡೆಗಳಿಂದ ಕೇಳಿಬರುತ್ತಿವೆ. ಸತ್ಯಸ್ಥಿತಿಯ ಪರಿಚಯವಿಲ್ಲದ ಅಜ್ಞರಿಂದಾಗುತ್ತಿರುವ ಇಂತಹ ಆರೋಪಗಳ ಮಟ್ಟಿಗೆ "ಅವರು ಬ್ರಿಟಿಷ್ ಆಡಳಿತೆ ಕಾಲದಲ್ಲಿ ಬಾಯಿಪಾಠಮಾಡಿದ್ದ ಈ ಸೊಲ್ಲುಗಳನ್ನು ಇನ್ನೂ ಮರೆತಿಲ್ಲ" ಎನ್ನಬಹುದಿದ್ದಿತು; "ಸ್ವಾತಂತ್ರ್ಯವೆಂದರೆ ಸ್ವೇಚ್ಛಾವರ್ತನೆಗವಕಾಶವೆಂದು ಭಾವಿಸಿಕೊಂಡವರ ಹಂಬಲಗಳಿವು" ಎಂದು ಪರಿಹಾಸ್ಯ ಮಾಡಬಹುದಿದ್ದಿತು. ಆದರೆ ನ್ಯಾಯಶಾಸ್ತ್ರ ಮತ್ತು ಕಾನೂನುಕಾಯಿದೆಗಳ ಗುಟ್ಟನ್ನರಿತ ತಜ್ಞರ ಬಾಯಿಯಿಂದಲೂ ಅಂತಹ ಕಟುವಿಮರ್ಶೆಗಳು ಕೇಳಬರುತ್ತಿವೆ. ಇದೇ ತಾ 16 ಮತ್ತು 17ರಲ್ಲಿ ಮದ್ರಾಸಿನಲ್ಲಿ ಜರಗಿದ 'ಅಖಿಲಭಾರತ ನಾಗರಿಕ ಸ್ವಾತಂತ್ರ್ಯ ಸಮ್ಮೇಲನ'ದಲ್ಲಿ ಅಧ್ಯಕ್ಷ ಶ್ರೀ ಪಿ. ಆರ್. ದಾಸರಾಡಿದ್ದ ಮಾತುಗಳು ವಿಚಾರಣಾರ್ಹವಿವೆ. ಶ್ರೀ ದಾಸರು ಪಾಟ್ನಾ ಹೈಕೋರ್ಟಿನ ನಿವೃತ್ತ ಜಡ್ಜರು; ರಾಜ್ಯಶಾಸನ ತಜ್ಞರೆಂದು ಹೆಸರಾದವರು;ವಿವಿಧ ಪ್ರತಿಕೂಲ ವಿಷಯಗಳ ನಡುವೆ ಹುಗಿದು ಹೋಗಿರುವ ನ್ಯಾಯವನ್ನೂ ಶೋಧಿಸಿ, ಎತ್ತಿ ಹಿಡಿದು ತೋರಿಸಬಲ್ಲ ಭಾರತದ ಕಾನೂನು ತಜ್ಞರಲ್ಲೊಬ್ಬರು. ಇಂಥವರ ಈ ಕೆಳಗಿನ ಮಾತುಗಳಿಗೆ ಮೌಲ್ಯವಿದೆಯೆಂದು ಮುಂದಾಗಿ ಒಪ್ಪಿಕೊಂಡೇ ಆ ಮೇಲಿನ ವಿಮರ್ಶೆಗಿಳಿಯಬೇಕಾಗಿದೆ.

ಮನನೀಯ ಟೀಕೆ

ನಾಗರಿಕ ಸ್ವಾತಂತ್ರ್ಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಆರಂಭ ಹಾಗೂ ಮುಕ್ತಾಯ ಭಾಷಣಗಳೆಡೆಯಲ್ಲಿ ಶ್ರೀ ಪಿ. ಆರ್. ದಾಸರಂದರು:-"ನಾಗರಿಕ ಸ್ವಾತಂತ್ರ್ಯರಕ್ಷಣೆಯ ಗ್ಯಾರಂಟಿಯು ಒಂದು ರಾಜಸತ್ತೆ ಅಥವಾ ವಿದೇಶೀ ಆಡಳಿತೆಯಲ್ಲಿ ಎಷ್ಟೇ ಪ್ರಾಮುಖ್ಯವಿದ್ದರೂ ಸ್ವತಃ ಜನರಿಂದಲೇ ತಯಾರಿಸಲ್ಪಡುವ ಘಟನೆ ನಿರ್ಮಾಣಕ್ಕೆ ದುಡಿಯಬೇಕಾದುದು ಅತ್ಯಗತ್ಯ. ಹಳ್ಳೀ ರೈತರು ತಮ್ಮ ಸಂಕೋಚ ಸ್ವಭಾವವನ್ನು ಬದಿಗಿಟ್ಟುತಮ್ಮಲ್ಲಿ ಚಿಂತಕ ಕಾರ್ಯಕ್ಕಾಗಿ ಎಲ್ಲಿ.ಏನು ಆಗಬೇಕಾಗಿದೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳ ಲಕ್ಷ್ಯಕ್ಕೆ ತರಬೇಕು, ತಾವು ಮಾಡಬೇಕಾಗಿರುವ-ಕಲಿಯಬೇಕಾಗಿರುವ-ಅಂಶಗಳಲ್ಲೇನನ್ನೂ ಬಾಕಿ ಬಿಡದೆ ಪೂರ್ತಿಗೊಳಿಸಿಕೊಳ್ಳಬೇಕು. ಆ ಮೂಲಕ ಸ್ವತಃ ತಮ್ಮ ಹಾಗೂ ಸಾರ್ವತ್ರಿಕವಾಗಿ ಅಖಿಲ ರಾಷ್ಟ್ರದ ಅಭಿವೃದ್ಧಿಗೆ ನೆರವಾಗಬೇಕು.

ಯೊಂದರಲ್ಲಿ ಮತ್ತು ಅದರ ಅಡಿಯಲ್ಲಿ ಸಾರ್ವಜನಿಕ ಕಾರ್ಯ ಚಾಲು ಮಾಡುವರೆ ಜನತೆಯಿಂದಲೇ ಆರಿಸಲ್ಪಟ್ಟ ಶಾಸಕ ಮಂಡಲಿಯಿರುವಲ್ಲಿ ಅದಕ್ಕೆ ಸ್ಥಾನವಿಲ್ಲವೆಂಬ ತಪ್ಪಭಿಪ್ರಾಯದಿಂದಾಗಿ ಮಾನವ ಜನಾಂಗವು ಬಹಳ ತೊಂದರೆಗೀಡಾಗಿದೆ. ಇಂತಹ ಭ್ರಮೆಗೊಳಗಾದವರು, ಅಧಿಕಾರದ ಆಕ್ರಮಣ ಲಾಲಸೆಯೆಂಬುದು ತನ್ನ ಅಧಿಕಾರದ ಗಡಿಯನ್ನು ಒತ್ತೊತ್ತಿ ವಿಸ್ತರಿಸಿಕೊಳ್ಳಲು ಹವಣಿಸುವ ಸ್ವಭಾವದ್ದೆಂಬುದನ್ನು ಮರೆತೇ ಬಿಡುತ್ತಾರೆ. ಆದ್ದರಿಂದ ಕಾಲ ಕಾಲಕ್ಕೆ ನಾಗರಿಕ ಸ್ವಾತಂತ್ರ್ಯವನ್ನು ಪುನರಾವರ್ತನೆಗೊಳಿಸುತ್ತಾ ಹೋಗಬೇಕಾದುದು ಅಗತ್ಯ. ಭಾರತದಲ್ಲೀದಿನ ಏಕಪಕ್ಷೀಯ ರಾಜ್ಯವಿದೆ ಎಂಬುದನ್ನು ನಾವೀ ಸಂದರ್ಭದಲ್ಲಿ ನೆನಪಿಟ್ಟುಕೊಳ್ಳಬೇಕು. ಕಾಂಗ್ರೆಸಿನ ವರ್ಚಸ್ಸು ಎಷ್ಟಿದೆಯೆಂದರೆ, ತಾನು ಚುನಾವಣೆಗಳಲ್ಲಿ ಹೋರಾಡಬೇಕೆಂದು ಅದು ನಿರ್ಧರಿಸಿದ ಮೇಲೆ, ಬೇರೆ ಯಾವ ಪಕ್ಷಕ್ಕಾದರೂ ಮತದಾರರ ಮನವೊಲಿಸುವುದು ಅಸಾಧ್ಯವಾಗುತ್ತದೆ. ಸ್ವತಃ ಕಾಂಗ್ರೆಸ್ಸೇ ರಾಜ್ಯ ಘಟನೆ ತಯಾರಿಸುತ್ತಿದೆ; ಇತರ ಯಾವುದೇ ಏಕ ಪಕ್ಷೀಯ ರಾಜ್ಯದಂತೆ ಇದೂ ಸರ್ವಾಧಿಕಾರದ ಗುರಿಮುಟ್ಟಲು ಬದ್ಧವಿದೆ. ಏಕ ಪಕ್ಷೀಯ ಆಡಳಿತೆಯು ಎಷ್ಟಕ್ಕೂ ಪ್ರಜಾಸತ್ತಾಡಳಿತೆಯಾಗಿ ಹೊಂದಿಕೊಳ್ಳಲಾರದು. ಹಿಟ್ಲರನು ಗಣ್ಯ ಪರಿಮಾಣದಲ್ಲಿ ಜರ್ಮನ್ ಜನತೆಯಿಂದ ಗೌರವ ಗಳಿಸಿದ್ದನೆಂಬುದು ನೆನಪಿರಲಿ; ಆದರೂ ಹಿಟ್ಲರನ ಜರ್ಮನಿಯು ಪ್ರಜಾಸತ್ತಾತ್ಮಕ ರಾಷ್ಟ್ರವಾಗಿತ್ತೆಂದು ಹೇಳುವವರಾರೂ ಇಲ್ಲ. ಈ ದಿನ ಭಾರತದ ಸ್ಥಿತಿ ಹೇಗಿದೆ? ಯಾವ ಜೀವನ ಚರಿತ್ರೆಯು ಒಂದು ವೀರಕಾವ್ಯವಾಗಿ ಪೋಣಿಸಲ್ಪಡಬಲ್ಲದೋ ಅಂತಹ ಮನುಷ್ಯನನ್ನೇ ಸರಕಾರದ ಶಿರಸ್ಸಾಗಿ ನಾವೀಗ ಪಡೆದಿದ್ದೇವೆ. ಜನ್ಮತಃ ಓರ್ವ ರಾಜಕುವರನಿದ್ದರೂ ಸ್ವೇಚ್ಛೆಯಿಂದ ಕಷ್ಟಾನುಭವ ಮತ್ತು ಕಂಟಕಮಯೀ ಜೀವನ ವಿ

'ನವಯುಗ'ದ ಚಂದಾದಾರರಲ್ಲಿ ವಿನಂತಿ

ಇದೇ ಬರುವ ಆಗೋಸ್ತು ತಿಂಗಳಾಂತ್ಯಕ್ಕೆ ನವಯುಗದ 29ನೇ ವರ್ಷವು ಕೊನೆಗೊಂಡು ಸಪ್ಟಂಬರ್ ಆದಿಯಿಂದ 30ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ನವಯುಗದ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ದಯಮಾಡಿ ಸಕಾಲದಲ್ಲಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಅಂತೆಯೇ ಇನ್ನೂ ಚಂದಾ ಹಣ ಬಾಕಿ ಇಟ್ಟುಕೊಂಡಿರುವವರೂ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸುವಂತೆಯೂ ವಿನಂತಿ.

ಮೆನೇಜರ್,
ನವಯುಗ, ಉಡುಪಿ

-ಸರ್ವಾಧಿಕಾರಿತ್ವದತ್ತ ಧಾವಿಸುತ್ತಿದೆ?

—ಅರಿತುಕೊಳ್ಳಬೇಕಾದ ಅಂಶ

ಧಾಸವನ್ನು ಅಂಗೀಕರಿಸಿದ ಜನ— ಭಾವನಾ ಪ್ರಕಾಶ, ದೂರದೃಷ್ಟಿ, ಧೈರ್ಯ ಸ್ಥೈರ್ಯಗಳಿರುವ ಮನುಷ್ಯ- ಅಭಿಮಾನ ಮಿಶ್ರಿತ ಆದರ್ಶವಾದಿ ಮತ್ತು ಯಾವುದೇ ವಿಧಾನದ ಅರಾಜಕತೆ ಅಥವಾ ಗೊಂದಲವನ್ನಾದರೂ ದ್ವೇಷಿಸುವ ಮಹಾನುಭಾವ. ಅವರು ಲೋಕಕ್ಕಿತ್ತ ಆ ಅಮೂಲ್ಯ ಗ್ರಂಥ, ಅವರ ಆತ್ಮಕಥೆಯಲ್ಲಿರುವುದು ಸತ್ಯವಾದರೆ, ಕಾಯಿದೇಶೀರ ಆಡಳಿತೆಯನ್ನು ಎತ್ತಿ ಹಿಡಿಯುವ ಜನ ಅವರು. ಅಂತೆಯೇ ಎರಡನೇ ಸೇನಾನಿಯಾಗಿ ಸರ್ದಾರ್ ವಲ್ಲಭಾಯಿಗಳು ನಮಗಿದ್ದಾರೆ; ಅವರೋರ್ವ ಅತ್ಯಂತ ದೃಢತೆಯ ಹಾಗೂ ಅಜೇಯ ವ್ಯವಹಾರವಾದಿ; ತನ್ನ ಹೃದಯವನ್ನು ತಲೆಯೊಳಗಿಟ್ಟುಕೊಂಡೇ ವ್ಯವಹರಿಸುವವರು; ಕೆಲವು ತಿಂಗಳುಗಳಲ್ಲಲ್ಲ, ಕೆಲವೇ ದಿನಗಳೊಳಗೆ ಈ ರಾಷ್ಟ್ರದಲ್ಲಿದ್ದ ಪಾಳೆಯಗಾರತನಕ್ಕೆ, ಬೇರೆ ಉತ್ತಮ ಶಬ್ದ ದೊರೆಯದಿರುವುದರಿಂದ ನಾನನ್ನಬೇಕಾಗಿರುವ 'ಅಹಿಂಸಾತ್ಮಕ ಹಿಂಸಾ' ವಿಧಾನಗಳ ಮೂಲಕ ಮೃತ್ಯು ಹೊಡೆತವನ್ನು ಕೊಟ್ಟವರು. ಇವರಿಬ್ಬರು ಮೂಲಸೂತ್ರಧಾರಿಗಳಾಗಿರುವಾಗ, ಮುಂದಿನ ಪ್ರಜಾಸತ್ತಾ ರಿಪಬ್ಲಿಕ್ ಭಾರತದ ಭವಿಷ್ಯವು ಭದ್ರವಿದೆ, ಎಂದು ನಾನು ಯೋಚಿಸಿದ್ದೆ. ಆದರೆ ಘಟನಾಸಮಿತಿಯಿಂದ ಈ ವರೆಗೆ ಅಂಗೀಕಾರ ಹೊಂದಿರುವ ರಾಜ್ಯಾಂಗ ಶಾಸನ ಹೇಗಿದೆಯೆಂದರೆ, ಅದು ಶಾಸನಾಧಿಕಾರಿ ಸರಕಾರಕ್ಕೆ ರಾಜಕೀಯ ಪಕ್ಷಗಳನ್ನು ನಿರ್ಮೂಲಿಸುವ-ಪತ್ರಿಕಾ ಸ್ವಾತಂತ್ರ್ಯವನ್ನು, ಭಾಷಣ ಸ್ವಾತಂತ್ರ್ಯವನ್ನು, ಸಂಘಸ್ವಾತಂತ್ರ್ಯವನ್ನು ಆತಂಕಿಸುವ-ಕಾಯಿದೇ ಕೋರ್ಟುಗಳ ಮುಂದೆ ಹಾಜರು ಪಡಿಸದೆ ಯಾರನ್ನೇ ಆದರೂ ಜೈಲು ಕೋಣೆಸೇರಿಸುವ—ಅಧಿಕಾರಗಳನ್ನಿತ್ತಿದೆ; ಆ ಮೂಲಕ ಸರ್ವಾಧಿಕಾರಿತ್ವಕ್ಕೆ ಹಾದಿ ಮಾಡಿಟ್ಟಿದೆ. ನಾವು ಸ್ವತಂತ್ರರು ಮತ್ತು ಅಸ್ವತಂತ್ರರು ಇವೆರಡೂ ಆಗಿರಲು ಸಾಧ್ಯವಿಲ್ಲ. ಕ್ರಿಮಿನಲ್ ಲಾಎಮೆಂಡ್‌ಮೆಂಟ್ಸ್ ಆಕ್ಟನ್ನು ಅವಲಂಬಿಸಿರಬೇಕಾದ ಒಂದು ಸರಕಾರವು ಬಾಳಲಿಕ್ಕೇನೇ ಅಯೋಗ್ಯವೆಂದು ಪಂಡಿತ ಜವಾಹರಲಾಲರು ಹನ್ನೆರಡು ವರುಷಗಳಿಗೆ ಮೊದಲೇ ಹೇಳಿದ್ದರು; ಮತ್ತು ನಾಗರಿಕ ಸ್ವಾತಂತ್ರ್ಯ ವಿನಹ ಪ್ರಜಾಸತ್ತೆ ಅಸಾಧ್ಯವೆಂದೂ ಸಾರಿದ್ದರು. ಉತ್ತರಿಸಲು ಪಂಡಿತ ನೆಹರುಗಳಿಗೆ ಸಮಯವಿದೆಯೋ ಎಂಬುದು ನನಗರಿಯದಾದರೂ ನಾನೀ ಸಂದರ್ಭದಲ್ಲಿ ಪಂಡಿತ ನೆಹರುಗಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಲಿಚ್ಛಿಸುತ್ತೇನೆ:- "ಜೀವನದ ಅತ್ಯಂತ ಪ್ರಾಮುಖ್ಯ ವಿಷಯಗಳಲ್ಲಿ ಒಂದೆಂದು ನೀವೀಗಲೂ ನಾಗರಿಕ ಸ್ವಾತಂತ್ರ್ಯಕ್ಕೆ ಬೆಲೆ ಕೊಡುವಿರಾ? ಕ್ರಿಮಿನಲ್ ಲಾಎಮೆಂಡ್‌ಮೆಂಟ್ ಮತ್ತಂತಹ ಇತರ ಶಾಸನಗಳನ್ನವಲಂಬಿಸಿರುವ ಸರಕಾರವು ಅಸ್ತಿತ್ವದಲ್ಲಿರುವ ಹಕ್ಕನ್ನು ಕಳಕೊಂಡಿದೆಯೆಂದೂ, ಅಂತಹದಿನ್ನೂ ಬಾಳಿಕೊಂಡಿರುವುದರಲ್ಲಿ ನ್ಯಾಯದ ಛಾಯೆ ಕೂಡಾ ಇಲ್ಲವೆಂದೂ ಈಗಲೂ ನೀವು ನೆನಸುವಿರಾ? ನಾಗರಿಕ ಸ್ವಾತಂತ್ರ್ಯವಿಲ್ಲದೆ ಪ್ರಜಾಸತ್ತೆ ಸಾಧ್ಯವೆಂದು ನೀವು ನಂಬುವಿರಾ? ಬಲ ಪ್ರಯೋಗ ಮಾಡುವ ಶಾಸನಾಧಿಕಾರ ಮಂಡಲಿಯ ಮೇಲೆ ವಿಶ್ವಾಸವಿಡಲಾಗುವುದಿಲ್ಲವೆಂಬ ಪ್ರೊಫೆಸರ್ ಲಸ್ಕಿಯವರ ವಾದ ನಿಮಗೆ ಒಪ್ಪಿಗೆಯೇ? ಶಾಸನಾಧಿಕಾರಿಗಳ ನ್ಯಾಯವೆಂಬುದು ನಿಜ ನ್ಯಾಯದ ನಿರಾಕರಣೆಗಾಗಿರುವ ನೆವನ ಮಾತ್ರವೆಂದು ನೀವು ಒಪ್ಪುವಿರಾ? ಈಗ ಭಾರತಕ್ಕೆ ಕೊಡಲ್ಪಡುತ್ತಿರುವ ಆ ಘಟನೆಯು ಪ್ರಜಾಸತ್ತಾತ್ಮಕವಾದುದೆಂದು ನೀವು ನಂಬುವಿರಾ?". ಪಂಡಿತ ನೆಹರುಗಳು ಈ ರಾಷ್ಟ್ರವನ್ನು ಇನ್ನೂ ಹಲವು ವರುಷ ಆಳಬೇಕೆಂದೇ ವ್ಯಕ್ತಿಶಃ ನನ್ನ ಆಶೆ. ಆದರೆ ನಾಗರಿಕ ಸ್ವಾತಂತ್ರ್ಯದ ಪ್ರಶ್ನೆಯು ಮಟ್ಟಿಗೆ ಸಂಧಾನವಸಾಧ್ಯ. ಪಂಡಿತ ನೆಹರುಗಳು ಪ್ರಜಾಸತ್ತಾಸಾರಗಳನ್ನು ಮತ್ತು ಮೂಲಕ ನಾಗರಿಕ ಸ್ವಾತಂತ್ರ್ಯವನ್ನು ಮರೆತು ಬಿಡಲಾರರು; ಮರೆಯುವವರಲ್ಲ; ಮರೆಯುವ ಎದೆಗಾರಿಕೆ ವಹಿಸಕೂಡದು. ಸ್ವಾತಂತ್ರ್ಯಕ್ಕೆ ಬೆಲೆ ಕೊಡುವವರೆಲ್ಲರೂ ಇನ್ನು ತಡಮಾಡದೆ ಒಂದುಗೂಡಿ, ನಿಜಕ್ಕೂ ಪ್ರಜಾಸತ್ತಾತ್ಮಕವಿರುವ ಒಂದು ಪಕ್ಷವನ್ನು ಕಟ್ಟಿಕೊಳ್ಳಬೇಕು. ಈ ಪಕ್ಷವು ಮುಂದಿನ ಮಹಾ ಚುನಾವಣೆಯಲ್ಲಿ ಮತದಾರರ ಮೇಲೆ ಪರಿಣಾಮ ಮಾಡಬಲ್ಲುದೆಂಬ ಕುರಿತು ನನಗೆ ಹೆಚ್ಚಿನ ಆಶೆಯೇನೂ ಇಲ್ಲ. ಯಾಕೆಂದರೆ ಕಾಂಗ್ರೆಸಿನ ವರ್ಚಸ್ಸು ಅಂತಹದು; ಕಾಂಗ್ರೆಸ್ ನಾಯಕರು ಆಮೂಲಾಗ್ರವಾಗಿ ಉಪಯೋಗಿಸುತ್ತಿರುವ ಮಹಾತ್ಮಾ ಗಾಂಧಿಯವರ ಹೆಸರು ಅವರನ್ನು ಇನ್ನೊಮ್ಮೆ ಅಧಿಕಾರಕ್ಕೇರಿಸಬಲ್ಲದೆಂಬುದು ನಿಸ್ಸಂದೇಹ. ಆದರೂ ಒಂದು ವಿರುದ್ಧ ಪಕ್ಷವಿರಬೇಕಾದುದು ಅಗತ್ಯ".

ಸ್ಥಿತಿಗೊಗ್ಗದ ಮಾತು

ಶಾಸನಗಳ ತಿರುಳನ್ನು ಮತ್ತು ಸಂದರ್ಭಾನುಸಾರವಾಗಿ ಅವುಗಳಿಂದಾಗುವ ಪರಿಣಾಮಗಳ ಗೂಢವರಿತ ನಿವೃತ್ತ ಹೈಕೋರ್ಟು ಜಡ್ಜ ಶ್ರೀ ಪಿ.ಆರ್. ದಾಸರು ಈಗ ತಯಾರಾಗುತ್ತಿರುವ ರಾಜ್ಯ ಘಟನೆಯು ಯಾವ ರೀತಿ ನಿರಂಕುಶಾಡಳಿತೆಗೆ ಆಸ್ಪದ ಕೊಟ್ಟೀತೆಂಬುದನ್ನು ಅದರ ಕೆಲವು ಕಲಮುಗಳ ಆಮೂಲಾಗ್ರ ವಿಮರ್ಶೆಯೊಂದಿಗೆ ವಿವರಿಸಿದ್ದಾರೆ. ಮುಖ್ಯವಾಗಿ ಮೂಲಭೂತ ಹಕ್ಕುಗಳ ಅಡಿಗಲ್ಲಿನಂತಿರುವ 15ನೇ ಪ್ರಕರಣವನ್ನು ಎತ್ತಿಕೊಂಡು ಟೀಕಿಸಿದ್ದಾರೆ. ಕಾಂಗ್ರೆಸ್ ರಾಜ್ಯಭಾರದ ಮೇಲೂ ಈಗ ತಯಾರಾಗುತ್ತಿರುವ ಘಟನೆಯ ಮೇಲೂ ಬಂದ ಟೀಕೆಗಳ ಪೈಕಿ ಹೆಚ್ಚಿನ ತಿರುಳುಳ್ಳ ಮತ್ತು ತೂಕವುಳ್ಳ ಟೀಕೆಯೆಂದರೆ ಶ್ರೀ. ಪಿ. ಆರ್. ದಾಸರದೆನ್ನಬಹುದು. ವಿಮರ್ಶಕನ ಸ್ಥಾನದಂತೆಯೇ ಆ ವಿಮರ್ಶೆಯಲ್ಲಿರುವ ಗಾಂಭೀರ್ಯವೂ ಬೆಲೆ ಬಾಳುವಂತಹದಾದ್ದರಿಂದ ನಿಜಕ್ಕೂ ವಿಚಾರಾಂದೋಲನವೆಬ್ಬಿಸುವಂತಹದು.

ಆದರೆ, ಟೀಕಿಸುವವರು ಪರಿಸ್ಥಿತಿಗಿಂತ ಹೆಚ್ಚಾಗಿ ತಂತಮ್ಮ ಆದರ್ಶವನ್ನೇ ಲಕ್ಷಿಸುವ ಅದೊಂದು ಸಂಪ್ರದಾಯವನ್ನು ಶ್ರೀ. ಪಿ.ಆರ್. ದಾಸರು ಕೂಡಾ ಬಿಟ್ಟಿಲ್ಲವೆಂಬುದು ಇಲ್ಲಿ ಒಡೆದು ತೋರುವ ಸಂಗತಿ. ಶ್ರೀ ದಾಸರು ನಿವೃತ್ತ ಹೈಕೋರ್ಟು ನ್ಯಾಯಾಧೀಶರು. ಅವರ ವ್ಯಕ್ತಿಗತ ಮನಸ್ಸು ಮತ್ತು ಗುಣ ನಡತೆಗಳು ಇಂದಿನ ಕೆಲವು ಸರಕಾರೀ ಆಚರಣೆಗಳಿಂದ ನೋಯುವಂತಹವಿರುವುದು ಸಹಜ. ಆದರೆ ಭಾರತೀಯರೆಲ್ಲರೂ ದಾಸರ ಮಟ್ಟದಲ್ಲಿರುವವರಲ್ಲ; ಓರ್ವ ನ್ಯಾಯಾಧೀಶನ ಸಂಸ್ಕಾರ, ನೀತಿ ನಿಯಮ, ಸಭ್ಯತೆಗಳ ಅಂತಸ್ತಿನ ಮಾತು ಹಾಗಿರಲಿ.. ಕೆಲವು ವರುಷ ಸ್ವಾತಂತ್ರ್ಯವನ್ನನುಭವಿಸಿ ಅಭ್ಯಾಸವುಳ್ಳ ರಾಷ್ಟ್ರವೊಂದರ ಸಾಮಾನ್ಯ ಜನತೆಯ ಮನೋಮಟ್ಟಕ್ಕೂ ಸಾಮಾನ್ಯ ಭಾರತೀಯನ ಮನಸ್ಸೀತನಕ ಬಂದಿಲ್ಲ; ಅಂತಹ ಸಂಸ್ಕಾರ ಹೊಂದದಿರುವಾಗಲೇ ಸ್ವಾತಂತ್ರ್ಯಕ್ಕೆ ಅಪಾರ್ಥಕಟ್ಟಿ ದುಡುಕುವ ಬುದ್ಧಿ ಪ್ರತ್ಯೇಕ ಬೆಳೆದು ಬಂದಿದೆ. ಭಾರತದ ಎಲ್ಲೆಡೆಗಳಲ್ಲೂ ಎಲ್ಲಾ ರಂಗಗಳಲ್ಲೂ ತೋರಿಬರುತ್ತಿರುವ ಸತ್ಯಸ್ಥಿತಿಯಿದು. ಶ್ರೀ ಪಿ. ಆರ್. ದಾಸರ ವಿಚಾರದ ವಿಮರ್ಶೆಗಳಲ್ಲಿ ಇಂತಹ ಜನರನ್ನಾಳುವ 'ನಾಗರಿಕ ಸ್ವಾತಂತ್ರ್ಯೋಚಿತ' ಉಪಾಯಗಳಾವುವೂ ಸೂಚಿಸಲ್ಪಟ್ಟಿಲ್ಲ; ಉತ್ತಮರನ್ನು, ನ್ಯಾಯಶಾಸ್ತ್ರವನ್ನಭ್ಯಾಸಿಸಿ ಸಭ್ಯತೆಯನ್ನವಲಂಬಿಸಿರುವವರನ್ನು ಆಳುವ ವಿಧಾನಗಳಷ್ಟೇ ನಿರ್ದೇಶಿಸಲ್ಪಟ್ಟಿವೆ. ಅಂಥವರೇ ಇರುವ ರಾಜ್ಯ ಈ ದಿನ ನಮ್ಮದಲ್ಲವೆಂದ ಮೇಲೆ ಶ್ರೀ ದಾಸರಂಥವರ ಅಭಿಪ್ರಾಯಗಳೂ ಇಂದು ನಮ್ಮ ಪಾಲಿಗೆ ಉಚಿತವಾಗಲಾರವು. ಸ್ವತಂತ್ರ ರಾಷ್ಟ್ರದ ಮಹಾ ಪ್ರಧಾನನು ಇಂಗ್ಲೆಂಡಿನಿಂದ ಬಂದವನೆಂಬಂತೆ 'ನೆಹರು ಹಿಂದೆ ಹೋಗು' ಎಂದು ಕೂಗುವವರಿರುವಲ್ಲಿ—ರಾಜ್ಯದ ಸೂತ್ರಧಾರಿಗೆ ಪಿಸ್ತೂಲು, ಬೋಂಬುಗಳ ಉಡುಗೊರೆ ಕೊಡುವವರಿರುವಲ್ಲಿ—ಅಶ್ಲೀಲ ಮಾತುಗಳಿಂದ ಬೈಯ್ಯುವುದನ್ನೂ ಅಸಭ್ಯ ರೀತಿಯಿಂದ ಮತ್ತು ಹಿಂಸಾತ್ಮಕವಾಗಿ ವರ್ತಿಸುವುದನ್ನೂ ಅಭ್ಯಾಸವಾಗಿ ಮಾಡಿಕೊಂಡವರು ಮತ್ತು ಅಂಥವರ ಕಡೆಗೂ ನಾಯಕೋಚಿತ ಗೌರವ ಪ್ರದರ್ಶಿಸುವವರು ಇರುವಲ್ಲಿ-ನಾಗರಿಕ ಹಕ್ಕಿನ ಹೆಸರಿನಿಂದ ಅರಾಜಕತೆ, ಗೊಂದಲಗಳನ್ನು ಹಬ್ಬಲು ಬಿಡಬೇಕೆಂದು ಶ್ರೀ ಪಿ. ಆರ್. ದಾಸರಂಥವರೆಂದಿಗೂ ವಾದಿಸಲಾರರು; ಶಾಂತ ಹಾಗೂ ಸಭ್ಯ ಜೀವನ ನಡೆಸಲಿಚ್ಛಿಸುವ ಸಾಮಾನ್ಯರೂ ಬಯಸಲಾರರು. ಕಾಂಗ್ರೆಸ್ ಸರಕಾರಗಳು ಇಂದು, ಸರ್ವಾಧಿಕಾರಿತ್ವದತ್ತ ಹೋಗುವ ನಿರಂಕುಶಾಡಳಿತೆಯನ್ನು ವಿಶೇಷ ಶಾಸನಗಳ ಮೂಲಕ ನಡೆಸುತ್ತಿವೆ, ಎನ್ನುವ ದೂರಿಗೆಡೆಕೊಟ್ಟಿರುವ ಈ ಕಾಲದಲ್ಲೂ "ಕಾನೂನು ಕಠೋರತೆಗಳನ್ನು ಸಡಿಲುಬಿಟ್ಟು ಅಸಹ್ಯ ಅನಾಚಾರಗಳಿಗವಕಾಶ ಕೊಡಲಾಗುತ್ತಿದೆ" ಎಂದು ಸಾರ್ವಜನಿಕರು ದೂರುವಷ್ಟು ಅಕೃತ್ಯಗಳು ಸಾಮೂಹಿಕವಾಗಿಯೂ ಬಿಡಿಬಿಡಿಯಾಗಿಯೂ ನಡೆಯುತ್ತಿವೆ. ಇಂತಹ ಸ್ಥಿತಿಯಲ್ಲಿ ಆ 'ನಾಗರಿಕ ಹಕ್ಕುರಕ್ಷಣೆಯ ಪ್ರಜಾಸತ್ತಾ ಜನತಾರಾಜ್ಯ' ಸ್ಥಾಪನೆಗಾಗಿಯೇ ಕಾಂಗ್ರೆಸ್ ಸರಕಾರಗಳಿಂದು ನ್ಯಾಯ ನಿಷ್ಠುರತೆ ವಹಿಸಬೇಕು; ಅನಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಓಡಿಸಲೇಬೇಕು. ನವರಾಜ್ಯ ಶಾಸನರಚನೆಯಲ್ಲಿ ಇಂತಹ ಅವಶ್ಯಕತೆಗಳಿಗೆ ಸಿಕ್ಕಿದ ದೋಷಗಳೇನಾದರೂ ಇದ್ದರೆ ಅವುಗಳನ್ನು ಸಕಾಲದಲ್ಲಿ ಸರಿಪಡಿಸಿಕೊಳ್ಳಲು ಇಂದಿನ ರಾಷ್ಟ್ರನಾಯಕರು ಹಿಂಜರಿಯಲಾರರು.

ನೋಟೀಸು.

ಉಡುಪಿ ತಾಲೂಕು ಪಾರಂಪಳ್ಳಿ ಗ್ರಾಮದಲ್ಲಿರುವ ಮಹಾಬಲ ಭಟ್ಟರ ಮಗ-ಕುಪ್ಪಯ್ಯ ಭಟ್ಟನು ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದ್ರೆ:-

ಸದರೀ ಪಾರಂಪಳ್ಳಿ ಗ್ರಾಮದಲ್ಲಿರುವ ವೆಂಕಟ್ರಮಣ ಹಂದೇರ ಮಗ- ಅನಂತೈಯ ಹಂದೆ ಎಂಬವನು ತನ್ನ ಹಕ್ಕಿನ ಪಾರಂಪಳ್ಳಿ ಗ್ರಾಮದ ಸರ್ವಾಧಿ ಆಸ್ತಿಯನ್ನು ನನಗೆ ರೂಪಾಯಿ 3500-0-0ಕ್ಕೆ ಕ್ರಯಕ್ಕೆ ಕೊಡುವುದಾಗಿ ನಿಶ್ಚಯಿಸಿ ರೂಪಾಯಿ 300-0-0ನ್ನು ಎಡ್ವಾನ್ಸು ಪಡಕೊಂಡು ತಾ 12-5-1949ರಲ್ಲಿ ಆ ಕುರಿತು ನನಗೆ ಎಗ್ರೀಮೆಂಟು ಬರಕೊಟ್ಟಿರುತ್ತಾನೆ. ಆದ್ದರಿಂದ ಸದ್ರಿ ಅನಂತೈಯ ಹಂದೆಯಿಂದ ಯಾರೊಬ್ಬರೂ, ಆವನ ಬಾಬ್ತು ಆಸ್ತಿಯನ್ನು ಯಾವ ರೂಪದಿಂದಲೂ, ಪರಾಧೀನಕ್ಕೆ ಪಡಕೊಳ್ಳಕೂಡದೆಂದು ಈ ಮೂಲಕ ಸರ್ವರಿಗೂ ತಿಳಿಯಪಡಿಸಿದ್ದೇನೆ. ಇದಕ್ಕೆ ವಿರೋಧವಾಗಿ ಯಾರಾದರೂ ಪಡಕೊಂಡಲ್ಲಿ ಅಂಥಾ ಪರಾಧೀನಗಳು ಮೇಲೆ ಹೇಳಿದ ಎಗ್ರೀಮೆಂಟಿಗೆ ವಿರೋಧವಾಗಿ ಮಂಜೂರು ಆಗತಕ್ಕದ್ದಲ್ಲ, ಎಂಬ ಸಂಗ್ತಿ ಈ ಮೂಲಕ ಸರ್ವಜನರಿಗೂ ತಿಳಿಯಪಡಿಸಿಯದೆ.

ಕುಂದಾಪುರ. 19-7-1949. } ಪಿ. ಕುಪ್ಪಯ್ಯ ಭಟ್ಟ.

ಉಡುಪಿ

ಹಿಂದೀ ಪ್ರಮಾಣಪತ್ರ ವಿತರಣೆ- ಇದೇ ತಾ. 17ನೇ ಅಪರಾಹ್ನ ಶ್ರೀ. ಎ. ಎಲ್. ಎನ್. ರಾವ್ ಶಾಲಾ ಕಟ್ಟಡದಲ್ಲಿ ವಿದ್ವಾನ್ ಶ್ರೀ. ಬಿ. ರಾಮಕೃಷ್ಣಾಚಾರರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಗತ ಹಿಂದೀ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರಚಾರಕ ಶ್ರೀ. ಬೇಕಲ್ ಕೃಷ್ಣರಾಯರು ಪ್ರಮಾಣ ಪತ್ರಗಳನ್ನು ಹಂಚಿದರು. ಈ ಬಾರಿಯ ದಕ್ಷಿಣ ಭಾರತ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಸರ್ವಪ್ರಥಮರಾಗಿ ಪಾಸಾದ ಕುಮಾರಿ ಜಿ. ಪದ್ಮಳಿಗೆ ದಿವಂಗತ ರಾಘವಾಚಾರ್ಯ ಸ್ಮಾರಕ ಬಹುಮಾನಗಳು ಕೊಡಲ್ಪಟ್ಟವು. ಅಧ್ಯಕ್ಷರ ಸಮಯೋಚಿತ ಭಾಷಣ, ಧನ್ಯವಾದ, ಉಪಹಾರ, ಗ್ರೂಪ್ ಫೋಟೋಗಳಿದ್ದುವು.

ಕಟ್ಟೋಣ ಕುಸಿದು ಬಿತ್ತು:— ಎರಡು ವರ್ಷಗಳಿಂದ ಕಟ್ಟಲ್ಪಡುತ್ತಿದ್ದ ಸಂಸ್ಕೃತ ಕಾಲೇಜಿನ ಕಟ್ಟೋಣದ ಭಾಗವೊಂದು ತಾ 16ರಲ್ಲಿ ಅಕಸ್ಮಾತ್ತಾಗಿ ಕುಸಿದು ಬಿದ್ದು ನಷ್ಟ, ಕಷ್ಟ ಸಂಭವಿಸಿರುವುದು ವಿಷಾದಕರವಿದೆ. ಸಂಬಂಧಪಟ್ಟವರು ಕಟ್ಟೋಣದ ಉಳಿದ ಭಾಗಕ್ಕೆ ಅಪಾಯಬಾರದಂತೆ ತಕ್ಕ ವ್ಯವಸ್ಥೆ ಮಾಡಿರುವರಲ್ಲದೆ, ಬಿದ್ದ ಭಾಗವನ್ನು ಬೇಗನೇ ಸರಿಪಡಿಸಿ ಕಟ್ಟಲಿರುವರೆಂದು ತಿಳಿದು ಬರುತ್ತದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ನಡೆಯುವ ಚಿತ್ರ-
ಮೋಡರ್ನ್ ಪಿಕ್ಚರ್ಸ್‌ನವರ
"ಡೈನಮೈಟ್"
ಬೆಂಜಮಿನ್, ಮತ್ತು ಮನೆಡನ್
ಬರುವ ಚಿತ್ರ: ಫಿಲ್ಮಿಸ್ತಾನದವರ,
• ಸಫರ್ •
ಶೋಭಾ, ಕಾನ್‌ರೋಯಿ, ವಿ. ಎಚ್. ದೇಸಾಯಿ.

ಮಂಗಳೂರು

ವಿಧವಾ ವಿವಾಹ:— ಕಾಂಗ್ರೆಸ್ ಚಳವಳದಲ್ಲಿ ಭಾಗವಹಿಸಿ ತುರಂಗವಾಸ ಶಿಕ್ಷೆ ಅನುಭವಿಸಿದ ನೀರೇಶ್ವಾಲ್ಯದ ಶ್ರೀ N. ತಿಮ್ಮಪ್ಪ ಮಲ್ಯರೆಂಬವರು ಉತ್ತರಕನ್ನಡ ಜಿಲ್ಲೆಯ ಸ್ವಜಾತಿಯ ಬಾಲವಿಧವೆ ಗುಲಾಬಿ ಎಂಬವರನ್ನು ತಾ 6-7-49ರಲ್ಲಿ ವಿಧಿಪೂರ್ವಕ ವಿವಾಹವಾದರು. ಮಲ್ಯರ ಜಾತಿಯಲ್ಲಿ ಇದೇ ಪ್ರಥಮ ವಿಧವಾ ವಿವಾಹವೆಂದು ತಿಳಿದು ಬರುತ್ತದೆ.

ವಿದ್ಯಾರ್ಥಿಗೆ ಬಹುಮಾನ— ಕೆಲವು ತಿಂಗಳುಗಳ ಹಿಂದೆ ಬೋಳೂರು ಬತ್ತೇರಿ ಸಮೀಪ, ದೋಣಿ ಮಗುಚಿನಿದ್ದು ಸುಮಾರು 9 ಜನರು ನೀರುಪಾಲಾದ ದುರಂತ ನಡೆದಾಗ ಅನೇಕರನ್ನು ಬದುಕಿಸಲು ಸಹಾಯಕನಾದ ವಾಮನ ಕರ್ಕೇರನೆಂಬ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗೆ ಮದರಾಸು ಸರಕಾರದವರು ಅವನು ಕಲಿಯುತ್ತಿರುವ ತನಕ ಅವನಿಗೆ ಎಲ್ಲ ಶಾಲೆ ಮತ್ತು ಕೊಲೇಜುಗಳಲ್ಲಿ ಧರ್ಮಾರ್ಥ ಶಿಕ್ಷಣ ದೊರೆಯುವಂತೆ ತಕ್ಕ ವ್ಯವಸ್ಥೆ ಮಾಡಿರುವರೆಂದೂ ವರ್ಷಂಪ್ರತಿ ನೂರು ರೂಪಾಯಿ ಸಂಭಾವನೆಯನ್ನು ಮಂಜೂರು ಮಾಡಿರುವರೆಂದೂ ತಿಳಿದುಬರುತ್ತದೆ.

ಶ್ರೀ ಬೆನಗಲ್ ಶಿವರಾಯರು— ಇತ್ತೀಚೆಗೆ ಮಂಗಳೂರಿಗೆ ಆಗಮಿಸಿರುವ ಘಟನಾ ಸಮಿತಿಯ ಸದಸ್ಯ ಶ್ರೀ. ಬಿ. ಶಿವರಾಯರ ಸನ್ಮಾನಾರ್ಥವಾಗಿ ಶ್ರೀ. ವಿ. ಎಸ್ ಕುಡ್ವರು ತಾ 15ರಲ್ಲಿ ಸತ್ಕಾರ ಕೂಟವೊಂದನ್ನು ಸಿ. ಪಿ. ಸಿ. ಸಭಾಂಗಣದಲ್ಲಿ ಏರ್ಪಡಿಸಿದ್ದರು. ಮಂಗಳೂರು ಪ್ರಬುದ್ಧ ಬಂದರ, ಉಳ್ಳಾಲ ರೈಲ್ವೆ ಸೇತುವೆಯ ರಸ್ತೆ ಇತ್ಯಾದಿಗಳ ಕುರಿತು ಮಾತುಕತೆಗಳಾದುವೆಂದು ತಿಳಿದುಬರುತ್ತದೆ.

ಜಿಲ್ಲಾ ಪೋಸ್ಟ್ಮೇನ್ ಮತ್ತು ಕೆಳತರಗತಿಯ ನೌಕರರ ಸಂಘದ ಕಾರ್ಯನಿರ್ವಾಹಕ ಮಂಡಳಿಯ ಸಭೆಯು ಇದೇ ತಾ 10ರಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ. ಎ. ಬಾಬು ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಜಿಲ್ಲಾ ಸದಸ್ಯರ ಕೇಳಿಕೆಯನ್ನು ಚರ್ಚಿಸುವ ಬಗ್ಗೆ ಪ್ರತಿ ತಿಂಗಳ ಮೊದಲನೇ ಆದಿತ್ಯವಾರ ಬೆಳಿಗ್ಗೆ 10-11ರ ತನಕ ಅಥವಾ ಮಧ್ಯಾಹ್ನ 3ರಿಂದ 4ರ ವರೆಗೆ ಜಿಲ್ಲಾ ಸುಪರಿಂಟೆಂಡೆಂಟರು ಸಿಗಬೇಕಾಗಿಯೂ ಪುತ್ತೂರಿಗೆ ಜಾಸ್ತಿ ಪೋಸ್ಟ್ಮೇನರನ್ನು ಕೊಡುವ ಬಗ್ಗೆ ಇದರ ಮುಂಚಿತವಾಗಿ ಪುತ್ತೂರಿನ ಕಮಿಟಿ ಮೆಂಬರರಿಂದ ಬಂದ ಸಂಪೂರ್ಣ ವಿವರಗಳ ಕಾಗದವನ್ನು ಸುಪರಿಂಟೆಂಡೆಂಟರು ಪುನಃ ಕೊಡಬೇಕಾಗಿಯೂ ಉಡುಪಿಯ ಪೋಸ್ಟ್ಮೆನರಿಗೆ ದಿವಸದ ಮಧ್ಯದಲ್ಲಿ 10ರಿಂದ 12ರ ವರೆಗೆ ವಿರಾಮ ಕೊಡಬೇಕಾಗಿಯೂ ಮಂಗಳೂರು ಶಹರಿನ ಪೋಸ್ಟ್ಮೆನರು ಬೆಳಿಗ್ಗೆ ಮತ್ತು ಸಂಜೆಗೆ ಎಂದು ದಿವಸಕ್ಕೆ 15 ಮೈಲು ನಡೆಯುವುದು ಸಾಧಾರಣ 10½ ಗಂಟೆ ಅವರ ಕೆಲಸವಾಗುವುದರಿಂದ ಜಾಸ್ತಿ ಸಿಬಂದಿಯನ್ನು ಕೊಡಬೇಕು; ರಾತ್ರಿ ಕೆಲಸಮಾಡಲು ಟೋರ್ಚ್‌ಲೈಟ್ ಮತ್ತು ಛತ್ರಿ ಸಿಗಬೇಕು; ಜಾಸ್ತಿ ರೇಶನ್ ಕೂಡಾ ಸಿಗುವಂತಾಗಬೇಕು ಎಂದು ಜಿಲ್ಲಾ ಸುಪರಿಂಟೆಂಡೆಂಟರನ್ನು ಕೇಳಿಕೊಳ್ಳಬೇಕಾಗಿಯೂ ನಿರ್ಣಯವಾಯಿತು. ಸಂಘದ ಸದಸ್ಯರು ಒಂದು ರೂಪಾಯಿಯಂತೆ ಧನಸಹಾಯ ನೀಡಬೇಕೆಂದು ಕೇಳಿಕೊಳ್ಳಲಾಯಿತು.

ಬುದ್ಧನು ಗೃಹತ್ಯಾಗಮಾಡಿದ ಆಷಾಢ ಪೂರ್ಣಿಮಾ ದಿನಾಚರಣೆಯು ತಾ 11ರಲ್ಲಿ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀಮತಿ ಕೆ. ರಾಧಾ. ಎಲ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ ಕೆ. ನಾರಾಯಣ, ಕೆ ಲೋಕಯ್ಯ ಸೆಟ್ಟಿ, ಎಚ್. ಶ್ರೀನಿವಾಸ ಉಡುಪ ಮೊದಲಾದವರು ಬುದ್ಧದೇವನ ಜೀವನ, ಸಂದೇಶಾದಿಗಳ ಕುರಿತು ಭಾಷಣವಿತ್ತರು. ಕುಮಾರಿಯರುಗಳಾದ ಲಕ್ಷ್ಮೀ ಮತ್ತು ನಿರುಪಮೆಯರು ಶ್ರೀ ಶಿವರಾಮಕಾರಂತರ 'ಕಿಸಾಗೋತಮಿ'ಯಿಂದ ಒಂದು ನೃತ್ಯವನ್ನು ಮಾಡಿದರು. ಅಧ್ಯಕ್ಷರ ಭಾಷಣವಾಗಿ ಕುಮಾರಿ ಶಾಕುಂತಳೆಯ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಲಲಿತಾಬಾಯಿ ಸುಬ್ಬರಾವ್ ಅವರ ಸ್ಮಾರಕ ದಿನವು ಈಚೆಗೆ ಸ್ಥಳೀಯ ಬ್ರಹ್ಮಸಮಾಜ ಮಂದಿರದಲ್ಲಿ ಡಾ। ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿಯರಾದ ಆನಂದಿಬಾಯಿ, ಶಾಂಭವಿ ಆರ್. ಮೂಂಜ, ಶ್ರೀ ಎಚ್ ನರ್ಸಪ್ಪ ಮೊದಲಾದವರು ದಿವಂಗತೆಯರು ಸಮಾಜಕ್ಕೆ ಸಲ್ಲಿಸಿದ ಸೇವೆಯ ಕುರಿತು ಮಾತನಾಡಿದರು. ಅಧ್ಯಕ್ಷರ ಭಾಷಣವಾದೊಡನೆ ಶ್ರೀ. ಕೆ. ಎಚ್. ಎನ್. ರಾಯರು ಧನ್ಯವಾದಗಳನ್ನರ್ಪಿಸಿದರು.

ಸೈಂಟ್ ಎಲೋಸಿಯಸ್ ಕಾಲೇಜು ಯೂನಿಯನ್ ಚುನಾವಣೆಯು ತಾ 13ರಲ್ಲಿ ಜರಗಿ ಶ್ರೀಗಳಾದ ವಿ. ಸಿ. ವಿಶ್ವನಾಥನ್ (ಅಧ್ಯಕ್ಷ), ಬರ್ಟ್ರಾಂ. ಎಫ್. ಆರ್. ಡಿ. ಸಿಲ್ವ (ಪ್ರಧಾನಕಾರ್ಯದರ್ಶಿ), ಸಿರಿಲ್ ಸೆಬಾಸ್ಟಿನ್ (ಜತೆಕಾರ್ಯದರ್ಶಿ), ಕೆ ಪಿ. ಕೃಷ್ಣ ಸೆಟ್ಟಿ (ಉಪಕಾರ್ಯದರ್ಶಿ), ವೈ. ಮಹಾಲಿಂಗಭಟ್ (ಸಹಾಯಕ ಕಾರ್ಯದರ್ಶಿ) ಯವರಾಗಿ ಆರಿಸಲ್ಪಟ್ಟರು.

ಪಂಚಾಯತಗಳ ಪರಿಷತ್ತು:— ಮದ್ರಾಸು ಸರಕಾರವು ನ್ಯಾಯವಿಧಾಯಕ ಸಭೆಯ ಮುಂದಿರಿಸಿ, ಈಗ ತಜ್ಞರ ಸಮಿತಿಗೊಪ್ಪಿಸಲ್ಪಟ್ಟಿರುವ ಪಂಚಾಯತ ಮಸೂದೆಯ ಕುರಿತು ಆಲೋಚಿಸುವುದಕ್ಕಾಗಿ ದಕ್ಷಿಣಕನ್ನಡ, ಕೇರಳ ಒಕ್ಕಟ್ಟು, ನೀಲಗಿರಿ ಜಿಲ್ಲೆಗಳ ಪಂಚಾಯತಗಳ ಹಾಗೂ ಸಾರ್ವಜನಿಕರ ಪರಿಷತ್ತೊಂದು ಇದೇ ತಾ 31ರಲ್ಲಿ ಮಂಗಳೂರಲ್ಲಿ ಜರಗಲಿರುವುದು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮಂತ್ರಿ ಶ್ರೀ ಚಂದ್ರಮೌಳಿಯವರು ಪರಿಷತ್ತಿನ ಉದ್ಘಾಟನೆ ನಡೆಸುವರು. ಜನಾಬ್ ಎಚ್. ಎಸ್. ಹುಸ್ಸೇನ್, ಎಮ್. ಎಲ್. ಎ. ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿರುವರು.

ಜಿಲ್ಲಾ ಬೋರ್ಡು ಚುನಾವಣೆ:— ಬರುವ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಹುರಿಯಾಳುಗಳನ್ನು ನಿಲ್ಲಿಸಲು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯು ನಿರ್ಧರಿಸಿರುವುದಷ್ಟೆ. ಇದೇ ಕಳೆದ ತಾ ೨ರಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯು ಸಭೆಸೇರಿ, ಇದೇ ಜುಲೈ ತಾ ೩೦ರೊಳಗೆ ಕಾಂಗ್ರೆಸ್ ಪರವಾಗಿ ಜಿಲ್ಲಾ ಬೋರ್ಡಿಗೆ ನಿಲ್ಲುವ ಉಮೇದ್ವಾರರೆಲ್ಲರೂ, ೫೦ ರೂಪಾಯಿ ಠೇವಣಾತಿ ಸಹಿತ ತಮ್ಮ ಅರ್ಜಿಗಳನ್ನು ಕಳುಹಿಸಬೇಕೆಂದು ನಿರ್ಧರಿಸಲಾಗಿದ್ದು ಅರ್ಜಿ ಫಾರ್ಮುಗಳನ್ನು ಜಿ। ಕಾಂ। ಕಮಿಟಿ ಆಫೀಸಿನಿಂದ ಪಡೆಯಬಹುದು. ಈ ಚುನಾವಣೆಯ ಸಂಬಂಧವಾದ ಸರ್ವ ಜವಾಬ್ದಾರಿಯನ್ನು ಈ ಕೆಳಗಿನ ಸಮಿತಿಗೆ ಒಪ್ಪಿಸಲಾಯಿತು. ೧. ಪಿ. ಲಕ್ಷ್ಮೀನಾರಾಯಣ ನಾಯ್ಕ, ೨. ಡಾ. ಯು. ಪಿ. ಮಲ್ಯ, ೩. ಕೆ. ಕೆ. ಶೆಟ್ಟಿ, ೪. ಎಚ್. ನಾರಾಯಣರಾವ್, ೫. ಪಿ ಶ್ರೀನಿವಾಸರಾವ್, ೬. ಎಲ್. ಸಿ. ಪಾಯಸ್, ೭. ಬಿ. ಆರ್. ಕರ್ಕೇರ.

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿದೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ. ಈ ಚಿತ್ರಗಳನ್ನು ನೀವು ನೋಡದಿದ್ದರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ- 2-8-0. ದೊಡ್ಡ ಸೆಟ್‌ಗೆ(ವಿಶಿಷ್ಟಪೋಸ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ. ಕೂಡಲೇ ಓರ್ಡರು ಕೊಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
Lothian Road, Delhi

ಬೇಕು

ಎಲ್ಲೆಲ್ಲಿಯೂ ಉತ್ಸಾಹೀ ಸಮರ್ಥ ಏಜಂಟರು ಬೇಕಾಗಿದ್ದಾರೆ.

ಸರಿಯಾಗಿ ಕೆಲಸ ಮಾಡುವವರು ತಿಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು.

ವಿವರಕ್ಕೆ ಬರೆಯಿರಿ:
ಬಿ. ವಾಮನಾಚಾರ್, ಬಿ.ಎ.,ಬಿ.ಎಲ್.,ಬಿ.ಟಿ.
ಮೆನೇಜರ್,
ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿ., ಉಡುಪಿ.

ಜೀವವಿಮೆಗಾಗಿ
ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮನ್: ಶ್ರೀ. ಎಮ್. ಸಿ.ಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಪೂರ್ವ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್ ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸು ನಂಬ್ರ 142
ಮದ್ರಾಸು

THE VIJAYA BANK Ltd, KAUP. S. K.
ದಿ. ವಿಜಯಾ ಬ್ಯಾಂಕ್ ಲಿಮಿಟೆಡ್, ಕಾಪು-

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಸಾಲವನ್ನು ಮರು ಪಾವತಿಮಾಡದೆ ಬಡ್ಡಿಸಹ ಹೆಚ್ಚು ಸಮಯ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಮತ್ತು ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳಲ್ಲಿ 1ನೇ ಯವರಿಗೆ ಜಾರಿಯಾಗಿಯೂ 2ನೇ ಮತ್ತು 3ನೇ ಯವರಿಗೆ ಜಾರಿಯಾಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದರೆ ಸದ್ರಿ ನಗಗಳನ್ನು ತಾ. 25 - 7- 49ನೇ ಸೋಮವಾರ ಅಪರಾಹ್ನ ಘಂಟೆ 3ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಅದೇ ದಿವಸ ಸಂಪೂರ್ಣ ಆಗದೆ ಇದ್ದಲ್ಲಿ ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು. ತಿಳಿದಿರುವುದು.

S. No.	J. L. No	BORROWERS NAME	AMOUNT. Rs.	As.	Ps
1	541 / 45·6.	M. K. ಮೂಡುಕಟ್ಟೆ, ಕೆ. ಆರ್. ಮೂಡುಕಟ್ಟೆಯವರಮಗ, ಕಾಪು	10	0	0
2	512 / 46·7	ರಾಘುಶೆಟ್ಟಿ. ಹೊನ್ನಯ್ಯಸೆಟ್ಟಿ ಅಳಿಯ, ಉಪಾಧ್ಯಾಯ, ಇನ್ನಂಜೆ	60	0	0
3	467 / 47·8	ನರಸಿಂಗ ಗಣಪತಿಭಟ್ಟ, ಸಂತೆಕಟ್ಟೆ ಉಡುಪಿ.	125	0	0

office of the Bank: KAUP.
Date- 16 – 7 —1949.

Sitarama Shetty.
AgenT, **KAUP**

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ದೊರೆಯುತ್ತವೆ.

ದೊಡ್ಡ ಸೈಜು	ರೂ.	5 0 0
ಪಾಕೆಟ್ ಸೈಜು	ರೂ.	4 8 0

ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.



ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ
ಬೆಲೆ: ೧—೮—೦

ಡಾಕ್ಟರ್ ಕೊರಡ್ಕಲ್ ವೆಂಕಟರಾಯರ

'ಮನೆ ಮದ್ದು'

(HOME REMEDIES)
೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೩/-
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ದ. ಕನ್ನಡ

ಕುಂಬಳೆ:—ಇತ್ತೀಚೆಗೆ ವಿಪರೀತ ಮಳೆಯೂ ಗಾಳಿಯೂ ಇತ್ತು. ಹೊಳೆಗಳಲ್ಲಿ ನೆರೆಬಂದಿರುವುದಾದರೂ ವಿಶೇಷ ನಾಶವೇನೂ ಇಲ್ಲ. ಗಾಳಿ ನಿಮಿತ್ತ ಊಜಾರು ಉಳುವಾರಿನಲ್ಲೂ, ಎಡನಾಡಿನಲ್ಲೂ, ಒಂದೊಂದು ಮನೆ ಬಿದ್ದುಹೋಗಿವೆ. ಎಷ್ಟೋ ಮರಗಳೂ ಮುರಿದುಬಿದ್ದಿವೆ.

ಕುಂಬಳೆ ಫಿರ್ಕಾ ಡೆವಲಪ್‌ಮೆಂಟ್ ಕಮಿಟಿ ಸಭೆಯು ತಾ. 17ರಂದು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಜನಾಬ್ ಸಯ್ಯದ್ ಅಬ್ದುಲ್ ಕರೀಮ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಸೇರಿತು. ಜಿಲ್ಲೆಯ ಮುಖ್ಯಾಧಿಕಾರಿಗಳು ತಂತಮ್ಮ ಇಲಾಖೆಗೆ ಒಳಪಟ್ಟ ಫಿರ್ಕಾಭಿವೃದ್ಧಿಯೋಜನೆ ಸಂಬಂಧವಾಗಿ ಮಾಡಿದ ಕೆಲಸಗಳನ್ನು ವಿವರಿಸಿ ಓದಿದರು. ಆಗೋಸ್ಟ್ ತಿಂಗಳಲ್ಲಿ ಗಿಡಮರಗಳು ನೆಡುವ ವಾರವನ್ನಾಚರಿಸುವುದಕ್ಕೂ, ಹಳೇ ಟ್ರೈಂಡ್ ಉಪಾಧ್ಯಾಯರುಗಳಿಗೆ ಮೂಲಶಿಕ್ಷಣದಲ್ಲಿ ಸ್ವಲ್ಪಕಾಲ ತರಬೇತಿ ಕೊಡುವ ಏರ್ಪಾಡಿಗಾಗಿ ಅಧಿಕಾರಸ್ಥರೊಡನೆ ಕೇಳುವುದಕ್ಕೂ, ಗ್ರೂಪ್ ಕೂಡಿಹೋಗಿ ಪ್ರಚಾರಗೊಳಿಸುವುದಕ್ಕೂ, ರಸ್ತೆ, ಬಾವಿ ಮುಂತಾದುವುಗಳನ್ನು ಮಾಡುವ ಕೆಲಸವನ್ನು ಮಾಡಲು ಗ್ರಾಮಸೇವಾ ಸಂಘದವರಿಗೂ ಪಂಚಾಯತ್ ಬೋರ್ಡಿನವರಿಗೂ ಜವಾಬುದಾರಿಕೆ ಕೊಡುವುದಕ್ಕೂ ತೀರ್ಮಾನಿಸಲಾಯಿತು. ಮಾಯಿಪಾಡಿ ಮೂಲ ಶಿಕ್ಷಣ ತರಬೇತಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರಾಮಕೃಷ್ಣ ಶೆಟ್ಟರು, ಮೂಲ ಶಿಕ್ಷಣಪದ್ಧತಿಯನ್ನು ವಿವರಿಸಿ ಭಾಷಣಮಾಡಿರುವರು.

ಪೆರ್ಲ—ಶ್ರೀ. ಪಡ್ರೆಜೆ ಪುರುಷೋತ್ತಮ ಭಟ್ಟರು ರೂ. ಹನ್ನೆರಡು ಸಾವಿರದಷ್ಟು ವೆಚ್ಚಮಾಡಿ ವಿದ್ಯಾರ್ಥಿ ಭವನವೊಂದನ್ನು ಕಟ್ಟಿಸಿ ವಿದ್ಯಾರಣ್ಯ ವಿದ್ಯಾವರ್ಧಕ ಸಂಘಕ್ಕೆ ಬಿಟ್ಟುಕೊಟ್ಟಿರುವರೆಂಬುದು ಅಭಿನಂದನೀಯವಿದೆ.

ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿ ಸಭೆಯು— ತಾ 10-7-49ರಲ್ಲಿ ಬಳ್ಳಂಜೆ ಪಂ। ಬೋ। ಅಧ್ಯಕ್ಷ ಶ್ರೀ. ಜೂಜೆ ಪಿಯೂಜ್ ಶಿಕೇರರ ಅಧ್ಯಕ್ಷತೆಯಲ್ಲಿ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಜರಗಿ ಈ ವರ್ಷ ಸಸಿ ದಿನಾಚರಣೆಯನ್ನು ಸ್ವಾತಂತ್ರ್ಯೋತ್ಸವದ ದಿನ ತಾ 15-8-49ಕ್ಕೆ ಆಚರಿಸಬೇಕಾಗಿಯೂ ಆಹಾರ ಕೊರತೆ ನಿವಾರಣೆಗಾಗಿ ಬಾಳೆ, ಪಪ್ಪಾಯಿ, ಮರಗೆಣಸು, ಇವನ್ನು ವಿದ್ಯಾರ್ಥಿಗಳ ಮೂಲಕ ಅಂಚುಗಳಲ್ಲಿ ಸಾಧ್ಯವಾದಷ್ಟು ನೆಡಬೇಕಾಗಿಯೂ ಕುಂಬಳೆ ಫಿರ್ಕಾ ಕಮಿಟಿಯ ಸಭೆಯೊಂದನ್ನು ಆಗೋಸ್ತು ತಿಂಗಳಲ್ಲಿ ಮೂಲ್ಕಿಯಲ್ಲಿ ಜರಗಿಸುವಂತೆ ಕೇಳಿಕೊಳ್ಳಬೇಕಾಗಿಯೂ ಸರ್ವರೂ ಕಮಿಟಿಯ ಕಾರ್ಯಕಲಾಪಗಳು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿಯೂ ನಿಶ್ಚಯಿಸಲಾಯಿತೆಂದು ಕಮಿಟಿ ಕಾರ್ಯದರ್ಶಿ ಶ್ರೀ ಎಂ. ಆರ್. ಪೂಂಜರು ತಿಳಿಸುತ್ತಾರೆ.

ಉಚ್ಚಿಲ—ಪರಿಯಾಳ ಸಮಾಜ ಸುಧಾರಕ ಸಂಘ (ಬಾರಕೂರು ಹೋಬಳಿ) ಇದರ ಮಹಾಸಭೆಯು ತಾ. 25-7 49ಕ್ಕೆ ಉಚ್ಚಿಲ ಸರಸ್ವತೀ ಮಂದಿರದಲ್ಲಿ ಜರಗಲಿದೆ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಓದಲೇಬೇಕಾದ ಪುಸ್ತಕಗಳು

೧೯೪೯ರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ (ಯಕ್ಷಗಾನ ,,)	0	3	0
ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ	0	4	0
ಗಾದೆಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ(ನೀಳ್ಗತೆ) ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ)	0	3	0
ನನ್ನ ಹೆಂಡತಿ(ಕತೆಗಳು)ಮೂಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ (ನೀಳ್ಗತೆ) ಗಿರಿಬಾಲೆ	0	3	0
ಸುಖದದಾರಿ (ವೈರಾಗ್ಯರತ್ನ) ಕೆ. ಎ. ದೇವದಾಸ	0	3	0
ಸುಕಾಂತ (ಅನುವಾದಿತ ಕತೆ) ವೀ. ಜ- ಹಿತ್ತಲಮನಿ	0	3	0
ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ (ನೀಳ್ಗತೆ) ಕೆ ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! (ಕತೆ) ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಆವಳು (ಕತೆ) ಶ್ರೀಪತಿ	0	3	0
ತ್ರಿವೇಣಿ (ಪ್ರಬಂಧಗಳ ಸಂಗ್ರಹ)	0	3	0
ನಿಲುವಂಗಿ (ಕತೆ)ಎಸ್.ಸುಬ್ಬರಾಮಯ್ಯ, ಬಿ ಎ.(ಆನರ್ಸ್)	0	3	0
ಬಾಡಿಗೆಯ ಮನೆ ಮತ್ತು ಮುಸುಕು (ನಾಟಕಗಳು)	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಅದರ ಸಾಧನೆ(ಬಿ. ವಿ. ಶರ್ಮ)	0	3	0
ಎರಡು ಕತೆಗಳು	0	3	0
ಸರಸ- ವಿರಸ! (೪ ವಿನೋದ ಚಿತ್ರಗಳು)	0	3	0
ಹೃದಯೇಶ್ವರಿ (ಕಾದಂಬರಿ)	0	3	0
ವಿವಿಧ ವಿಷಯ ಕೋಶ ಭಾಗ ೧ (ವೈಜ್ಞಾನಿಕ ಸಂಗ್ರಹ)	0	3	0
,, ,, ಭಾಗ ೨ ,,	0	3	0

ಪ್ರತಿಗಳು ಸಿಗುವಸ್ಥಳ: -(1) ಅಂತರಂಗ ಆಫೀಸು, ಉಡುಪಿ. (2) ನವಭಾರತ ಬುಕ್ ಡಿಪೊ, ಉಡುಪಿ. (3) ನವಯುಗ ಪ್ರೆಸ್, ಉಡುಪಿ. (4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪ್ರಕಟಣೆ

ಕುಂದಾಪುರ ತಾಲೂಕ, ಅಲ್ಬಾಡಿ ಗ್ರಾಮದ, ಕೊಂಜಾಡಿಯಲ್ಲಿರುವ, ಕೊಂಜಾಡಿ ಮನೆ ಮಹಾಲಿಂಗ ಶೆಟ್ರ ಅಳಿಯ, ಅನಂತ ಶೆಟ್ಟಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದ್ರೆ -

ನಮ್ಮ ಕುಟುಂಬಕ್ಕೆ ಸುಮಾರು ರೂ 50-0 0 ತೀರ್ವೆ ತರುವ ಸ್ಥಿರಾಸ್ತಿಗಳಿದ್ದು ಅವೈಕಿ ಕೆಲವು ಸ್ಥಿರಾಸ್ತಿಗಳನ್ನು ಮನೆ ಸಾಗ್ವಳಿಯಿಂದಲೂ ಕೆಲವು ಚಾಲಗೇಣಿ ಒಕ್ಕಲುಗಳ ಮುಖಾಂತ್ರವೂ ನಾವು ಅನುಭವಿಸಿಬರುತ್ತಿದ್ದೇವೆ. ಸದ್ರಿ ಸ್ಥಿರಾಸ್ತಿಗಳಿಂದ ತೀರ್ವೆ ಕಳೆದು ಸುಮಾರು ಅಕ್ಕಿ ಮುಡಿ 50 ಐವತ್ತು ಉತ್ಪತ್ತಿ ಇರುತ್ತದೆ. ಈಗ ನಮ್ಮ ಕುಟುಂಬದಲ್ಲಿ ನನ್ನ ಚಿಕ್ಕತಾಯಿ, ನಾನು ಮತ್ತು ನನ್ನ ಅಳಿಯಂದ್ಯರು 3 ಜನರು ಕೂಡಾ 5 ಜನರು ಮಾತ್ರ ಇದ್ದು ಕುಟುಂಬದ ಹುಟ್ವಳಿಯಿಂದ ನಮ್ಮ ಖರ್ಚುಗಳೆಲ್ಲಾ ಹೋಗಿ ಕೆಲವು ಅಂಶ ಉಳಿತಾಯವಾಗುತ್ತದೆ. ಹೀಗಿರುತ್ತಾ, ಈಗ ನನ್ನ ಅಳಿಯಂದ್ಯರು ದುಗ್ಗಪ್ಪ ಶೆಟ್ಟಿ, ಮಂಜ್ಯ ಶೆಟ್ಟಿ, ಬಡಿಯ ಶೆಟ್ಟಿ ಸಹ ಮೂವರು ಪಟ್ಟಾದಾರಳಾಗಿರುವ ನನ್ನ ಚಿಕ್ಕ ತಾಯಿ ಸುಮಾರು 80 ವರುಷ ಪ್ರಾಯದ ವಯೋವೃದ್ಧಳೂ, ಓದುಬರಹವಿಲ್ಲದವಳೂ, ಈಗ ಬುದ್ಧಿಸ್ವಾಸ್ಥ್ಯವಿಲ್ಲದವಳೂ ಆಗಿರುವ ತುಂಗಮ್ಮ ಶೆಟ್ರೇರ ಯಡಕ್ಕೆ ಪೆಟ್ಟೆಟ್ಟಿನ ಗುರ್ತ ಹಾಕ್ಸಿ ಕುಟುಂಬಾರ್ಥದ ಪ್ರಯೋಜನಕ್ಕೆಂತ ನಮೂದಿಸಿ ಸಾಲಪಡಕೊಳ್ಳಲಿಕ್ಕೂ ಮ ಕುಟುಂಬಕ್ಕೂ ನನ್ನ ಹಕ್ಕಿಗೂ ವಿರೋಧವಾಗುವ ಇತರ ದಾಖ್ಲೆಗಳನ್ನು ತಯ್ಯಾರಿಸಲಿಕ್ಕೂ ಉದ್ಯುಕ್ತರಾಗಿರುತ್ತಾರಾಗಿ ನಾನು ತಿಳಿಯುತ್ತೇನೆ. ಸದ್ರಿಯವರಿಗೆ ಯಾರಾದ್ರೂ ಸಾಲ ವಗೈರೆ ಕೊಟ್ಟದ್ದೇ ಆದ್ರೆ ಅಂಥಾ ಸಾಲಗಳು ಕುಟುಂಬದ ಸ್ಥಿರಚರ ಸೊತ್ತುಗಳ ಮೇಲೆ ಲಗಾವಾಗತಕ್ಕದ್ದಲ್ಲಾ, ಯಾ ನನ್ನ ಹಕ್ಕಿಗೆ ಯಾವ ವಿಧದಿಂದಲೂ ಭಾದಿಸತಕ್ಕದ್ದಲ್ಲವೆಂಬ ಸಂಗ್ತಿ ಈ ಮೂಲಕ ಸರ್ವಜನರಿಗೆ ತಿಳಿಸಿದ್ದೇನೆ.

ಅನಂತ ಶೆಟ್ಟಿ ರುಜು

ಮೊಕ್ಕಾಂ ಕೊಂಜಾಡಿ
ತಾ 18-7-1949
ಪೋಸ್ಟು ಹಾಲಾಡಿ.

ಮುಲ್ಕಿ ಬೇಂಕ್.
ಲಿಮಿಟೆಡ್, ಮುಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ತಕ್ಷಣ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು



ತಿಮ್ಮಪ್ಪಯ್ಯನವರು ನನ್ನ ಹಳೆಯ ಪರಿಚಯಸ್ಥರು. ನಮ್ಮಿಬ್ಬರ ಆ ಹಳೆಯ ಜೀವನವು ಕತೆ ಕಾದಂಬರಿಗಳಲ್ಲಿ ರಮಿಸುವ ಜೀವನದಂತೆ ಆಗಾಗ ನನ್ನ ನೆನಪಿಗೆ ಬರುತ್ತಿತ್ತು. ಆ ಎಳೆಪ್ರಾಯದ ಆಟ, ಊಟಗಳು, ಒಮ್ಮೆ ಗುಡ್ಡ ಬೆಟ್ಟಗಳಲ್ಲೂ, ಇನ್ನೊಮ್ಮೆ ಬಯಲು ತಗ್ಗಿನಲ್ಲೂ, ತಿರುಗಾಡುವ ಆ ತಿರುಗಾಟಗಳು, ಈ ಜೀವನದ ದಾರಿಯಲ್ಲಿ ಕಾಣಸಿಗುವ ಪ್ರಾರಂಭದ ವೈಚಿತ್ರ್ಯಗಳೇ.

ಮಾವನೊಡನೆ ವೈಶಮ್ಯದಿಂದ ಹೊರಹೊರಟ ತಿಮ್ಮಪ್ಪಯ್ಯನವರು ಅಂತೂ ಇಂತೂ ಬೊಂಬಾಯಿಯನ್ನು ಸೇರಿದರು. ಮೊದಲ ದಿನಗಳ ಜೀವನ ಸಂಪ್ರದಾಯವನ್ನು ತಿರುಗಾ ಮುರುಗಾ ಗೊಳಿಸಿದರೂ ಪರಿಸ್ಥಿತಿಗೆ ತನ್ನನ್ನು ತಾನೇ ಸರಿಗೊಳಿಸಿ ಜೀವನ ಸಂಗ್ರಾಮವನ್ನು ಹೂಡಿದರು ತಿಮ್ಮಪ್ಪಯ್ಯನವರು. ಬೊಂಬಾಯಿಯಲ್ಲಿ ಕೆಲವು ತಿಂಗಳು ತನಕ ಒಂದು ಚಾಕರಿಯಲ್ಲಿ ಕೂಡಿಕೊಂಡರೂ, ಬಳಿಕ ಅದನ್ನು ಅಲ್ಲೇ ಅಂತ್ಯಗೊಳಿಸಿ ಸ್ವತಹ ಒಂದು ಸಣ್ಣ ಅಂಗಡಿಯನ್ನಿಟ್ಟು ಬೀಡಿ, ಬೀಡಗಳ ವ್ಯಾಪಾರವನ್ನು ಆರಂಭಿಸಿದರು. ಇದರಿಂದಾಗಿ ತಿಮ್ಮಪ್ಪಯ್ಯನವರ ಆರ್ಥಿಕ ಸ್ಥಿತಿಯು ಸುಧಾರಿಸುತ್ತಾ ಸುದೃಢಗೊಳ್ಳುತ್ತಿತ್ತು. ಐದು ವರ್ಷಗಳ ಕಾಲವೂ ಸಂದಿತ್ತು. ಇದರೊಂದಿಗೆ ತಾನು ಕಲಿತ ವಿದ್ಯೆಯನ್ನೂ ರಾತ್ರಿ ಶಾಲೆಯಿಂದ ವೃದ್ಧಿಗೊಳಿಸಿದ್ದರು.

ಹೀಗೆ ಬೊಂಬಾಯಿಯಲ್ಲಿ ಯೋಗ್ಯ ಜೀವನವನ್ನು ಸಾಗಿಸುತ್ತಿದ್ದರೂ ತಿಮ್ಮಪ್ಪಯ್ಯ

ರೈತ ಲೋಕ

ಜೀವನದ ಮಟ್ಟವು ಮೇಲೇರಿತು!

ಶ್ರಮ ಜೀವನ ಮತ್ತು ಬುದ್ಧಿಶಕ್ತಿಯಿಂದ.

ಲೇಖಕ— ಯಮ್. ಡಿ'ಸೋಜ

ನವರಿಗೆ ತಾನು ಬೊಂಬಾಯಿಂದ, ಹಿಂದೆ ತನ್ನ ತಾಯೂರಿಗೆ ತೆರಳಿ ಅಲ್ಲೊಂದು ಬೇಸಾಯಮಾಡಿ ಕೃಷಿಕನಾಗಬೇಕೆಂಬ ಹಂಬಲು ಈ ಐದು ವರುಷಗಳಲ್ಲಿ ನೂರಾರುಬಾರಿ ಪೀಡಿಸುತ್ತಲೇ ಇತ್ತು. ಈಗಲಂತೂ ಅದು ತಿಮ್ಮಪ್ಪಯ್ಯನವರಲ್ಲಿ ಒಂದು ಚಳವಳವನ್ನೇ ಆರಂಭಿಸಿತ್ತು. ತಾಯಿ ತಂದೆಗಳು ತೀರಿಕೊಂಡಿದ್ದರೂ, ತನ್ನ ಮಾವನನ್ನು ಯಾ ಸಂಬಂಧಿಕರನ್ನು ನೋಡಬೇಕೆಂಬ ಆಶೆ ಇಲ್ಲದಿದ್ದರೂ ತಾನು ಊರಿಗೆ ತೆರಳಿ ತನ್ನ ಎಳೆವಯಸ್ಸಿನ ವೃತ್ತಿಯನ್ನೇ ನಡೆಸಬೇಕೆಂದು ತಿಮ್ಮಪ್ಪಯ್ಯನವರಿಗೆ ಆಗಾಗ ಅನಿಸುತ್ತಿತ್ತು.

ಒಂದುದಿನ ತನ್ನ ಅಂಗಡಿ, ಕಪಾಟು, ಮತ್ತಿತರ ಸಾಮಾನುಗಳನ್ನು ಮಾರಿ, ತನ್ನ ಕೈಯಲ್ಲಿದ್ದ ಮೌಲ್ಯದೊಟ್ಟಿಗೆ 2–3 ಸಾವಿರ ರೂಪಾಯಿಗಳ ಬಂಡವಾಳದೊಂದಿಗೆ ತಿಮ್ಮಪ್ಪಯ್ಯನವರು ಊರಿಗೆ ಹೊರಟರು. ಬಂದವರು ತನ್ನ ಊರಿನ ಅಂಗಡಿಯವನ ಮಾಳಿಗೆಯನ್ನು ಬಾಡಿಗೆಗೆ ಮಾಡಿ ಕೆಲವು ದಿನ ತನ್ನ ಕೈಯಲ್ಲಿದ್ದ ದುಡ್ಡಿನಿಂದ ಕಾಲಹರಣ ಮಾಡಿದರು. ಹೀಗೆ ಅವರೊಂದು ದಿನ ಪೇಟೆಯಲ್ಲಿ ತಿರುಗಾಡುತ್ತಾ ಇರುವಾಗ ಯಾರೋ ಒಬ್ಬನು ನರೆಯೂರಾದ ಹಿರಿಯೂರಿನಲ್ಲಿ ಮರಿಯಪ್ಪ ಭಟ್ಟರು ಹತ್ತು ಎಕ್ರೆ ಖಾಲಿ ಸ್ಥಳವನ್ನು ಒಂದುಸಾವಿರ ರೂಪಾಯಿಗೆ ಮಾರುತ್ತಾರೆಂಬ ವರ್ತಮಾನವನ್ನು ಹೇಳಿದನು. ತಿಮ್ಮಪ್ಪಯ್ಯನವರಿಗೆ ಇದನ್ನು ಕೇಳಿದೊಡನೆಯೆ ಸಂತೋಷದಿಂದ ಮೈ ಜುಮ್ಮೆಂದಿತು. ತನ್ನನ್ನು ಹಲವು ವರುಷಗಳಿಂದ ಪೀಡಿಸುತ್ತಿದ್ದ, 'ಕೃಷಿಕನಾಗಬೇಕೆಂಬ ಆಲೋಚನೆಗೆ ಈಗ ಪುಟವಿಟ್ಟಂತಾಯಿತು. ತಾನು ಆ ಸ್ಥಳವನ್ನು ಪಡಕೊಂಡು ಅದರ ರೂಪವನ್ನೇ ಬದಲಾಗಿಸಿ ಹಳ್ಳಿಗೊಂದು ಆದರ್ಶ ಕೇಂದ್ರವನ್ನಾಗಿ ಮಾಡಬೇಕೆಂಬ ಹುರುಪು ಹೊರಹೊಮ್ಮಿತು. ಆದರೆ ಉಳಕೊಳ್ಳಲು ಮನೆ, ಸಾಗುವಳಿ ಮಾಡಲು ಗದ್ದೆ ಅದಾವುದೂ ಅಲ್ಲಿರಲಿಲ್ಲ. ಅಲ್ಲಿದ್ದುದು ಬರೇ ಗಿಡಗಳಿಂದ ಕೂಡಿದ ಗುಡ್ಡಗಳ ಸಾಲಿನ ಇಳಿಜಾರಾದ ಭಾಗ. ಕೆಳಗೆ ವಿಶಾಲವಾದ ಹಡಿಲುಭಾಗ.

ತಿಮ್ಮಪ್ಪಯ್ಯನವರು ಈ ಸ್ಥಳವನ್ನು ಕೊಂಡುಕೊಂಡು ಇಂದಿಗೆ 10 ವರುಷಗಳು ಸಂದಿವೆ. ಈಗ ತಿಮ್ಮಯ್ಯನವರ ಈ ಸ್ಥಳವು ಇಡೀ ಹಿರಿಯೂರಿಗೆಯೇ ಕೇಂದ್ರವಾಗಿದೆ.

ಈ ಹತ್ತು ವರುಷಗಳಲ್ಲಿ ತಿಮ್ಮಪ್ಪಯ್ಯನವರ ಖ್ಯಾತಿಯು ನೂರಾರು ಬಾರಿ ನನ್ನ ಕಿವಿಗೆ ಬಿದ್ದರೂ ನನಗೆ ಅಲ್ಲಿ ಹೋಗಿ ನೋಡಬೇಕೆಂಬ ಮನಸ್ಸಾದುದು ಈಚೆಗಿನ ಒಂದೆರಡು ವರುಷಗಳಲ್ಲಿ. ನಮ್ಮೂರಿಂದ ಹಿರಿಯೂರಿಗೆ 12 ಮೈಲು ದೂರವಿದೆಯಾದರೂ ಈಗ ಅವರ ಮನೆಯ ವರೆಗೆ ಬಸ್ಸು ಕೂಡಾ ಇದೆ. ಇನ್ನೇನು ಎಂದುಕೊಂಡು ಒಂದು ದಿನ ಬೆಳಗ್ಗೆ ಹೊರಟೇ ಬಿಟ್ಟೆ.

ಬಸ್ಸಿನಿಂದಿಳಿದು ಒಂದು ಫರ್ಲಾಂಗ್ ನಡೆದೊಡನೆ ಸಿಕ್ಕಿದ ಹಳ್ಳಿಗನೊಬ್ಬನೊಡನೆ ಇಲ್ಲಿ ತಿಮ್ಮಪ್ಪಯ್ಯನವರ ಮನೆ ಎಲ್ಲಿ ಎಂದು ಕೇಳಲು; "ಓಹೊ ನೀವು ಕೇಳುವುದು ಬಂಗ್ಲೆಯನ್ನು, ಇದು ಇಲ್ಲೆ ಗುಡ್ಡದ ಕೆಳಗಿದೆ" ಅಂದನು. ನಾನು ರಾಜರಸ್ತೆಯನ್ನು ಬಿಟ್ಟು ಮೆಲ್ಲನೆ ಒಂದು ಸಣ್ಣ ಅಡ್ಡ ಮಾರ್ಗವನ್ನು ಹಿಡಿದು ಮುಂದರಿದೆ. ಸ್ವಲ್ಪ ದೂರ ನಡೆದೊಡನೆಯೆ ಎದುರಿಗೆ ಬಹಳ ತಗ್ಗಾದ ಬಯಲು ಕಾಣಸಿತು. ಬಹು ದೂರದಲ್ಲಿ ಈ ಬಯಲಿಗೆಲ್ಲಾ ಜೀವ ಕೊಡುವಂತಿರುವ ಒಂದು ಹೊಳೆಯು ಪೂರ್ವ ಪಶ್ಚಿಮಕ್ಕೆ ಹರಿಯುತ್ತಿತ್ತು. ನಾನು ಹಿಡಿದ ಕಿರು ರಸ್ತೆಯು ಹಾವಿನಂತೆ ಎಡಕ್ಕೂ ಬಲಕ್ಕೂ ತಿರುಗಿ ಕೆಳಗಿಳಿಯುತ್ತಿತ್ತು. ಅಲ್ಲೆ ಕೆಳಗಿದ್ದುದು ತಿಮ್ಮಪ್ಪಯ್ಯನವರ ಮನೆ. ಈ ಮಾರ್ಗದಿಂದ ಗಾಡಿ ಎಲ್ಲಿಯಾದರೂ ಇಳಿದರೆ ತಲೆಕೆಳಗಾಗಿ ಬೀಳಲೇಬೇಕು.

ನಾನು ಮನೆಯನ್ನು ಪ್ರವೇಶಿಸಿದಾಗ ಅಲ್ಲಿ ತಿಮ್ಮಪ್ಪಯ್ಯನವರಿರಲಿಲ್ಲ. ಮನೆ ಒಡತಿಯು ಒಳಗಿನಿಂದ ಬಂದು "ಬಂದುದೆಲ್ಲಿಂದ?" ಎಂದು ನುಡಿದಳು. ನಾನು ಬಂದ ಊರು ಮ



Approved firm by the Govt. of Mysore Certified by the Agent of the Govt of, Cylone & Indian.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar, ·Vaidya

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 230/1949

ವಾದಿ. ವೆಂಕಟ್ರಮಣ ಹೊಳ್ಳ.

ಪ್ರತಿವಾದಿ. ಬೊಮ್ಮಯ್ಯ ಹೆಗ್ಡೆ.

ಕುಂದಾಪುರ ಕಸ್ಬಾಗ್ರಾಮದಲ್ಲಿರುವ ಸ್ಟೈಲಾಡಿ ಮಂಜಯ್ಯ ಭಂಡಾರಿಯವರ ಅಳಿಯ ಬೊಮ್ಮಯ್ಯ ಹೆಗ್ಡೇರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯು ವಾದಿಯಿಂದ ಎಡ್ವಾನ್ಸ್ ಪಡೆದ ಹಣ ಬಡ್ಡಿ ಕೂಡಾ ರೂ. 57-7-9 ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖ್ಲೆ ಮಾಡಿದ ಮೇಲಿನ ದಾವೆಯು ತಾ 25-7-49ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಣೆಗಳೇನಾದರೂ ಇದ್ದ ಪಕ್ಷದಲ್ಲಿ ಸದ್ರಿದಿವ್ಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ಎಂಬಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

N. S. Parameshwariah
Advocate for Plff.
Coondapoor Date 9-7-49



ಜಗತ್ತಿನಲ್ಲೆಲ್ಲಾ ಸುಮಾರು ನೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಯಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು ಹಲ್ಲಿನೋವು, ಮುಖ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-ವಿ. ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬೊಂಬಾಯಿ ಸ್ಟಾಕಿಸ್ಟರು:— ಲಕ್ಡವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ತ್ತು ಉದ್ದೇಶವನ್ನು ಹೇಳಿದೆನು. ಅಷ್ಟರಲ್ಲಿ ಬಾಳೆಯ ತೋಟದಲ್ಲಿ ಆಳುಗಳೊಂದಿಗೆ ಕೆಲಸ ಮಾಡುತ್ತಿದ್ದ ತಿಮ್ಮಪ್ಪಯ್ಯನವರು ಬಿರುಸಿನಿಂದ ಬಂದು ಹಸ್ತಲಾಘವವಿತ್ತು ನನ್ನನ್ನು ಮನೆಯ ಕೋಣೆಯೊಂದಕ್ಕೆ ಕರೆದೊಯ್ದರು.

ಕೋಣೆಯನ್ನು ಪ್ರವೇಶಿಸಿದೊಡನೆ ನಾನು ಒಮ್ಮೆ ದಿಗಿಲು ಬಿದ್ದೆ. ಯಾಕೆಂದರೆ ಆ ಕೋಣೆಯು ಮೇಜು ಕುರ್ಚಿಗಳಿಂದ ತುಂಬಿ ಹೋಗಿದ್ದಿತು. ನಾವು ಇಬ್ಬರು ಕುಳಿತುಕೊಳ್ಳುವಷ್ಟರಲ್ಲಿ ಕಾಫಿ ತಿಂಡಿ ಎಲ್ಲವೂ ಆಂಗ್ಲ ಮರ್ಜಿಯಂತೆ ಬಂದೇಬಿಟ್ಟಿತು: ಕಪ್ಸ್ ಸಾಸರುಗಳು! ತಿಮ್ಮಪ್ಪಯ್ಯನವರ ಪತ್ನಿಯೂ ಒಂದು ಕುರ್ಚಿಯಲ್ಲಿ ಕುಳಿತರು. ಗಂಟೆ 11 ಬಡೆಯಿತು.

ಗಂಟೆ ಒಂದಕ್ಕೆ ಸರಿಯಾಗಿ ಊಟವಾಯಿತು. ಮೇಜು ಕುರ್ಚಿಗಳ ಮರ್ಜಿಯಲ್ಲೇ. ಚೈನಾ ಡಿಷ್‌ಗಳಲ್ಲೇ. ಎರಡು ಗಂಟೆಗೆ ಸರಿಯಾಗಿ ನಾವು ಇಬ್ಬರೂ ತಿಮ್ಮಪ್ಪಯ್ಯನವರ ಜಮೀನನ್ನು ನೋಡ ಹೊರಟೆವು. ಮನೆಯ ಉತ್ತರ ದಿಕ್ಕಿಗೆ ಹರಿಯುತ್ತಿರುವ ತೊರೆಯ ಇಕ್ಕಡೆಗಳಲ್ಲೂ ಗದ್ದೆಗಳಿದ್ದುವು. ಇದರ ಬದಿಯಲ್ಲಿ ತೆಂಗಿನ ಸಾಲು; ಅದೆಷ್ಟು ಆನಂದ! ಸಾಧಾರಣ 50-60 ಮರಗಳಿದ್ದುವು. ಗುಡ್ಡಗಳು ಮೂರು ಬದಿಗಳಿಂದ ಆವರಿಸಿದ್ದುದರಿಂದ ಯಥೇಷ್ಟವಾಗಿತ್ತು ನೀರು. ಧಾರಾಳವಾಗಿ ಫಲಕೊಡುತ್ತಿದ್ದುವು ತೆಂಗಿನ ಮರಗಳು. ಈ ಗದ್ದೆಗಳ ಸಾಲಿನ ಇಕ್ಕಡೆಗಳಲ್ಲೂ ಇನ್ನೂ ಅಗೆಯುತ್ತಾ ಇರುವ ಹೊಸ ಗದ್ದೆಗಳಿದ್ದುವು. ನಾವು ಇವನ್ನೆಲ್ಲಾ ನೋಡುತ್ತಾ ಇನ್ನೂ ಮುಂದರಿದೆವು. ಅವುಗಳ ಆಚೆ ಇದ್ದುದು ರೈತರ ಮನೆಗಳು ಮತ್ತು ಆ ಹೊಳೆಯು. ನಾವು ಅಲ್ಲಿಂದ ಹಿಂದಕ್ಕೆ ತಿರುಗಿ ಎಡಬದಿಯ ಗುಡ್ಡವನ್ನೇರುವ ಸಾಹಸಕ್ಕೆ ತೊಡಗಿದೆವು. ತಿಮ್ಮಪ್ಪಯ್ಯನವರಿಗೆ ಸೇರಿದ ಈ ಭಾಗದ ಮುಳ್ಳುಗಿಡಗಳನ್ನೂ ಕಾಡು ಪೊದರುಗಳನ್ನೂ ಕತ್ತರಿಸಿ ನೂರಾರು ಸಾಗುವಾನಿ ಗಿಡಗಳೂ ಬೋಗಿಯ ಸಸಿಗಳೂ ನೆಡಲ್ಪಟ್ಟಿದ್ದುವು. ಅಲ್ಲಿಂದ ಸ್ವಲ್ಪದೂರದಲ್ಲಿ ಸೊಪ್ಪಿನ ಗಿಡಗಳೂ ಕಟ್ಟಿಗೆ, ತರಗೆಲೆಗಾಗಿ ಬೆಳೆಯಿಸಲ್ಪಟ್ಟ ಕಾಡೂ ಇದ್ದುವು. ನಾವು ಇವುಗಳನ್ನು ದಾಟಿ ಮೇಲೇರಿದೆವು. ನನ್ನ ಕಾಲುಗಳ ಗಂಟುಗಳು ಬಿಗಿಯಲಾರಂಭಿಸಿದರೂ ತಿಮ್ಮಪ್ಪಯ್ಯನವರ ಬೆನ್ನು ಬಿಡಲಿಲ್ಲ. ಸ್ವಲ್ಪ ಮೇಲೇರಿದ ಮೇಲೆ ಮರಗಳು ಬೆಳೆಯದಿರುವ ಈ ಸ್ಥಳದಲ್ಲಿ ಹುಂಜಾ ಆಲದ ಮರಗಳಿದ್ದುವು.

ನಾವು ಗುಡ್ಡದ ನೆತ್ತಿಯನ್ನೇರಿ ಅಲ್ಲಿ ಸಣ್ಣದೊಂದು ಬಂಡೆಯಮೇಲೆ ಕುಳಿತೆವು. ದೃಷ್ಟಿಯಿದ್ದಕ್ಕೂ ಬಗೆ ಬಗೆಯ ದೃಶ್ಯಗಳು ಕಾಣಿಸುತ್ತಿದ್ದುವು. ದೂರದಲ್ಲಿ ಹೊಳೆ ಸಪ್ಟೆಂಬರ್ ತಿಂಗಳಿನ ತಿಳ್ಳಗಿನ ನಿರ್ಮಲ ನೀರಿನಿಂದೆ ಹರಿಯುತ್ತಿತ್ತು. ಅದರ ಆಚೆ ಆ ಊರಿನ ಮಧ್ಯಸ್ಥಳ ಸಣ್ಣದೊಂದು ಗಾಡಿ ರಸ್ತೆಯಿಂದ ಜೋಡಿಸಲ್ಪಟ್ಟಿತ್ತು. ಏಳೆಂಟು ಅಂಗಡಿಗಳು. ಹತ್ತಿರದಲ್ಲಿ ತೆನೆಗಳಿಂದ ಕೂಡಿದ ಗದ್ದೆಗಳು ಗಾಳಿಯೊಂದಿಗೆ ನಗೆದಾಡುತ್ತಿದ್ದುವು. ತಿಮ್ಮಪ್ಪಯ್ಯನವರ ಮರಗಳು ಇನ್ನೂ ಗುಡ್ಡದ ತುದಿಯನ್ನು ಮೀರಲಿಲ್ಲವೆಂಬಂತೆ ಬೆಳೆಯುತ್ತಿದ್ದುವು.

“ಈ ಸ್ಥಳದಲ್ಲಿ ವಾಸಿಸುವ ನೀವು ನಿಜವಾಗಿ ಈ ಪ್ರದೇಶದ ಅರಸರೇ” ಎಂದೆ ನಾನು.

“ನಾನೀ ಅರಸನಾಗಲು ಪಟ್ಟ ಶ್ರಮವೆಷ್ಟೆಂದು ನೀವು ತಿಳಿದಿಲ್ಲ. ನಾನು ಈ ಹತ್ತು ವರ್ಷಗಳಿಂದ ಮಾಡಿದ ಪ್ರಯತ್ನವೆಷ್ಟು! ನಾನು ಈ ಸ್ಥಳವನ್ನು ಪಡೆದಾಗ ಇದು ಬರೇ ಗುಡ್ಡವಾಗಿತ್ತು. ಬಂದ ವರುಷವೇ ನಾನು ಬಲವಾದ ಬೇಲಿಹಾಕಿಸಿದೆ. ಇದರನಂತರ ನಾನು ಮಾಡಿದ ಕೆಲಸ ಆ ದೂರದಲ್ಲಿ ಕಾಣುವ ಗದ್ದೆಗಳನ್ನು. ತದನಂತರವೇ ನನಗೆ ಮನೆ ಕಟ್ಟಬೇಕೆಂದು ಗೋಚರವಾದುದು. ಅಂತೂ ಸಣ್ಣ ಹುಲ್ಲಿನ ಮನೆಯೊಂದು ಆಯಿತು. ಕೋಣಗಳು ಬೇಕೆಂದಾಯಿತು; ಅವೂ ಆದುವು. ಅದುವರೆಗೆ ನಾನು ನೆರೆಮನೆ ರಾಮಣ್ಣನಲ್ಲಿ ಉಣ್ಣುತ್ತಿದ್ದೆ. ಅರ್ಧಮೈಲು ದೂರದಲ್ಲಿ ಅವರ ಮನೆ. ಮಣ್ಣು ಹೊನ್ನು ಇವಿದ್ದರೆ ಸಾಕೇ? ಹೆಣ್ಣೂ ಬೇಕಾಯಿತು. ರಾಮಣ್ಣನವರ ಪುತ್ರಿ ಆಗಲೇ 8ನೇ ತರಗತಿ ಪಾಸಾಗಿದ್ದಳು. ಈ ಒಂದು ವರ್ಷ ನನ್ನ ಅರ್ಧಜೀವ ಈ ಆಸ್ತಿಯಲ್ಲಿದ್ದರೆ ಅರ್ಧಜೀವ ರಾಮಣ್ಣನಲ್ಲಿತ್ತು. ಯಾಕೆಂದರೆ ಅಲ್ಲಿದ್ದಳು ನನ್ನ ಪ್ರಭಾ. ಇಷ್ಟೆಲ್ಲಾ ಮಾಡಿದ ನಾನು ಸ್ವತಃ ಸಾಗುವಳಿಗೆ ಮೊದಲುಮಾಡಿದೆ. ಊಟಕ್ಕೆ ತಕ್ಕ ಉತ್ಪತ್ತಿಯೂ ಆಯಿತು. ನಂತರದ ವರುಷವಂತೂ ಮದುವೆಯೂ ಆಯಿತು. ಮೊದಲು ರಾಮಣ್ಣನವರ ಮನೆ ಮತ್ತು ಇಲ್ಲಿ ಓಡಾಡುತ್ತಿದ್ದ ನನ್ನ ಬದಲಿಗೆ ಈಗ ಅವರಿಗೆ ಮಗಳ ಮನೆಗೆ ಬಾಗ ಸಾಕುವಂತಾಯಿತು. ಮದುಮಗನೆಂದು ನಾನೇನೂ ಮನೆಯಲ್ಲಿ ಕೂತುಕೊಳ್ಳಲಿಲ್ಲ. ಮರಗಿಡಗಳನ್ನು ನೆಡಲು ಮೊದಲು ಮಾಡಿದೆ. ಹತ್ತಿಪ್ಪತ್ತು ಕಸಿಮಾವಿನ ಸಸಿಗಳನ್ನು ನೆಟ್ಟೆ. ಈಗ ಅವುಗಳ ಸಂಖ್ಯೆ ಐನೂರಕ್ಕೂ ಮಿಕ್ಕಿದೆಯಲ್ಲಾ; ನನಗೆ ಸಾವಿರ ಹಣ್ಣಿನ ಉತ್ಪತ್ತಿ ಇದೆ. ಹೇಗೂ 50 ರೂ. ಉತ್ಪತ್ತಿ ಇದರಿಂದಾಗುತ್ತದೆ. ಮಾವಿನ ಮರಗಳ ನಂತರ ಒಳ್ಳೆಯ ಕಾಯಿಗಳನ್ನು ತರಿಸಿ ಸಸಿ ಮಾಡಿ ನೆಟ್ಟ ತೆಂಗಿನ ಮರಗಳವು. ಹಲವುನೂರು ಕಾಯಿಗಳು ಈಗ ಸಿಗುತ್ತವೆ. ಇತ್ತ ಗದ್ದೆ ಅಗೆಯಿಸುತ್ತಲೂ, ಗಿಡ ಮರಗಳನ್ನು ಸ್ವತಃ ನಾನೇ ನೆಡುತ್ತಲೂ ಮುಂದರಿದೆ. ಈ ಗುಡ್ಡ ಬೆಟ್ಟಗಳ ಬದಿಯಲ್ಲಿ ಒಳ್ಳೆಯ ಮಾವಿನ ಹಣ್ಣುಗಳಾಗುತ್ತವೆ.”

ಗಂಟೆ ಸುಮಾರು ನಾಲ್ಕಾಯಿತು. ಸೆಪ್ಟೆಂಬರಿನ ಬಿಸಿಲು ನಮಗೆ ಯಾವ ತೊಂದರೆಯನ್ನೂ ಮಾಡಿರಲಿಲ್ಲ. ಪಡುವಣ ಗಾಳಿಯು ಮೆಲ್ಲನೆ ಬೀಸುತ್ತಿತ್ತು. ನಾವು ಅಲ್ಲಿಂದೆದ್ದು ದಕ್ಷಿಣಕ್ಕೆ ತಿರುಗಿ ಈ ಗುಡ್ಡದ ಮೇಲಿನಿಂದ ಬಂದೆವು. ಆಗಲೇ ನನಗೆ ನಾನು ಬೆಳಗ್ಗೆ ಬಂದ ಕಿರು ಮಾರ್ಗವು ಸಿಕ್ಕಿತು. ನಾವು ಮಾತಾಡುತ್ತಾ ಕೆಳಗಿಳಿದೆವು. ಕೆಳಗೆ ತಿಮ್ಮಪ್ಪಯ್ಯನವರ ಮನೆಯೂ ಅದರ ಸುತ್ತಲಿರುವ ಹಣ್ಣು ಹಂಪಲುಗಳ ತೋಟವೂ ರಮ್ಯವಾಗಿ ಕಾಣುತ್ತಿತ್ತು. ಗುಡ್ಡಗಳನ್ನು ಕಡಿದು ಮಾಡಿದ ಗದ್ದೆಗಳು ಶೋಭಿಸುತ್ತಿದ್ದುವು. ಅನಾನಾಸಿನ ಗಿಡಗಳ ಸಾಲುಗಳು ಅಲ್ಲಲ್ಲಿ ಇದ್ದುವು. ಅವೆಲ್ಲವೂ ಕಸಿಗಿಡಗಳು.

“ನೀವು ಈ ಮನೆಯನ್ನು ಯಾವಾಗ ಕಟ್ಟಿದಿರಿ?” ಎಂದೆ ನಾನು.

ನಾನು 5 ವರ್ಷ ನನ್ನ ಹುಲ್ಲಿನ ಮನೆಯಲ್ಲೇ ವಾಸಿಸಿದೆ. ತರುವಾಯ ಮಳೆಗಾಲದಲ್ಲಿ ಪಂಚಾಂಗ ಹಾಕಿ ಇನ್ನೊಂದು ಮಳೆಗಾಲದೊಳಗೆ ಹೊಸ ಮನೆಯನ್ನು ಮುಗಿಸಿದೆ. ಇನ್ನೆರಡು ವರ್ಷಗಳಲ್ಲಿ ಹಟ್ಟಿ ಕೊಟ್ಟಿಗೆಗಳನ್ನೂ ಕಟ್ಟಿದೆ. ಇವೆಲ್ಲಕ್ಕೆ ಸಾವಿರ ರೂಪಾಯಿ ಖರ್ಚಾಯಿತು. ಈಗ ಆದರೆ 6 ಸಾವಿರ ರೂಪಾಯಿ ಬೇಕು” ಎಂದರು ತಿಮ್ಮಪ್ಪಯ್ಯ.

“ನಿಮ್ಮ ಹಟ್ಟಿಯಲ್ಲಿರುವ ಈ 3 ಜೊತೆ ಕೋಣಗಳನ್ನು ಹೇಗೆ ಸಾಕುತ್ತೀರಿ?” ಎಂದೆ.

“ನಮ್ಮ ಇಬ್ಬರು ಒಕ್ಕಲಿಗರಿದ್ದಾರೆ. ಅವರು ಕೂಲಿಯವರು. ದಿನಾಲು ಇಲ್ಲಿ ಕೆಲಸವಿದೆ. ಸೊಪ್ಪು ತರುವುದು, ಸಮಯವಿದ್ದಾಗ ಅಗತೆ ಮಾಡುವುದು, ಗದ್ದೆಗಳ ತೆವರಿ ಕಟ್ಟುವುದು, ಇಂತಹ ಕೆಲಸಗಳಿವೆ. ನಾವೆಲ್ಲಾ ಒಟ್ಟಿಗೆ ಕೆಲಸ ಮಾಡುತ್ತೇವೆ. ಇನ್ನೆರಡು ವರ್ಷಗಳಲ್ಲಿ ಅವರಿಗೂ ದರ್ಖಾಸ್ತು ಮಾಡಿಕೊಡುತ್ತೇನೆ. ಅವರೂ ನನ್ನಂತೆ ಸ್ವಂತ ಕೃಷಿ ಮಾಡಲಿ. ಇಲ್ಲಿ ಸ್ವಲ್ಪ ದೂರ ಎಷ್ಟೋ ಒಸರಿನ ಬಂಜರು ಭೂಮಿ ಇದೆ. ಹತ್ತಿಪ್ಪತ್ತು ಮನೆಗಳ ಜಮೀನು ಮಾಡಬಹುದು” ಎಂದರು ತಿಮ್ಮಪ್ಪಯ್ಯ.

ನಾವು ಮನೆಯನ್ನು ಸೇರುವಾಗಲೇ ಕಾಫಿ ತಿಂಡಿ ತಯಾರಿತ್ತು.

“ಇನ್ನೇನು ಮಾಡಲಿರುವಿರಿ?” ಎಂದೆ ನಾನು.

“ಕೋಳಿ, ಜೇನು ನೊಣಗಳನ್ನು ಸಾಕಲಿಕ್ಕಿದೆ. ಪಷ್ಟಿಗೊಂದು ಕೋಳಿ ಮಾಂಸ ತಿನ್ನುವ ಯೋಜನ ತಯಾರಾಗಬೇಕು' ಎಂದರು ತಿಮ್ಮಪ್ಪಯ್ಯ.

9 ಗಂಟೆಗೆ ರಾತ್ರಿಯೂಟ ತೀರಿತು. ನಾನು ನನ್ನ ಸ್ಪೆಶಲ್ ಕೋಣೆಗೆ ಹೋಗಿ ಮಲಗಿಕೊಂಡೆ. ನಿಜವಾಗಿಯೂ ತಿಮ್ಮಪ್ಪಯ್ಯನವರ ಜೀವನದ ಮಟ್ಟವು ಮೇಲೇರಿದೆ; ಅವರ ಉತ್ಪತ್ತಿಯು ವರ್ಷಕ್ಕೆ 800 ರೂಪಾಯಿಯಂತೆ ಎಂದುಕೊಂಡೆ. ಆಗಲೇ ಚಂದ್ರನು ಮೂಡಿದನು. ಗಂಟೆ 11 ಬಡೆಯಿತು. ಆಗ ಇನ್ನೊಮ್ಮೆ ಅಂದುಕೊಂಡೆ ತಿಮ್ಮಪ್ಪಯ್ಯನವರ ಜೀವನದ ಮಟ್ಟ ಬಹಳ ಮೇಲೇರಿದೆ, ಎಂದು.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 172/1949

ವಾದಿರು- ಮ್ಯಸರ ಶಂಕರನಾರಾಯಣ ವಿತ್ತಂತಾಯ ಕೂಡಾ.

ಪ್ರತಿವಾದಿರು- ರಾಮಭಟ್ಟ ಕೂಡಾ

ಕುಂದಾಪುರ ತಾಲ್ಲೂಕು ಬಸ್ರೂರು ಗ್ರಾಮದಲ್ಲಿರುವ ರಾಮಭಟ್ಟರ ಮಕ್ಕಳು 2ನೇ ಪ್ರತಿವಾದಿ ನಾಗಪ್ಪಯ್ಯ I, 3ನೇ ಪ್ರತಿವಾದಿ ಕೃಷ್ಣ I, 4ನೇ ಪ್ರತಿವಾದಿ ವೆಂಕಟ್ರಮಣ I ಕೂಡಾ 3ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿರಿಗೆ 1ರಿಂದ 4ನೇ ವರೆಗಿನ ಪ್ರತಿವಾದಿರಿಂದ ಬರಕೊಳ್ಳ ಕುಡಿನ ಹಣ ಬಡ್ಡಿ ಕೂಡಾ ರೂ 166 0-0ನ್ನು ಬರಮಾಡಿಕೊಳ್ಳುವರೆ ವಾದಿರು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ 27-7-49ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಖಿಗೆ ಇಟ್ಟದುತ್ತದೆ. ಆ ಕುರಿತು ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ಎಂಬಸಂಗ್ತಿ ಈ ಮೂಲಕ ತಿಳಿಯಪಡಿಸಲಾಗುತ್ತದೆ.

N. S Parameshwariah,
Advocate for Plff.
Coondaopor. Date 9-7-49

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪೂರ— ಚನ್ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
‘ಮಹಾಜನ’
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

ಮಹಿಳಾ ಪುಟ

ಹೆಂಗಸರು ಮಾಡಬಹುದಾದ ಕಾರ್ಯಗಳು.

(ಬಿಡುವಿರುವಾಗ ಮಹಿಳೆಯರು ಏನೇನು ಮಾಡಬಹುದು ಮತ್ತು ಮಾಡಬೇಕು ಎಂಬುದನ್ನು ವಿವರಿಸುವ ಈ ಲೇಖನವು ಹಂಗಳೂರಿನಿಂದ ಮಹಿಳೆಯರಿಗಾಗಿಯೇ ಹೊರಡುತ್ತಿರುವ ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾಗಿದೆ.)

ಯಾವ ಹೆಂಗಸಿಗೆ ತಮ್ಮ ಮನೆಗೆಲಸಗಳನ್ನು ಮುಗಿಸಿ ಸ್ವಲ್ಪವಾದರೂ ಬಿಡುವು ದೊರಕುತ್ತದೋ, ಅವರಿಗಾಗಿ ಈ ಲೇಖನವನ್ನು ಬರೆದುದಾಗಿದೆ. ಕೆಲವರು ತಮಗೆ ಸ್ವಲ್ಪ ಸಮಯ ಸಿಕ್ಕುತ್ತಲೇ ನೆರೆಮನೆಗೆ ಹೋಗುವರು, ಕೆಲವರು ನಿದ್ದೆ ಮಾಡುವರು, ಹೇಗಾದರೂ ತಮ್ಮ ಸಮಯವನ್ನು ಆನಂದದಿಂದ ಕಳೆಯಲು ಪ್ರಯತ್ನಿಸುವರು. ಆದರೆ ಇಂಥವರು ತಮ್ಮ ಬಿಡುಸಮಯವನ್ನು ಏನಾದರೂ ಪ್ರೀತಿಯ ವ್ಯವಸಾಯವನ್ನು ಮಾಡುವುದರಲ್ಲಿ ಕಳೆದರೆ, ಅವರ ಸಮಯವು ವ್ಯರ್ಥವಾಗದು.

ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ಹೆಂಗಸರು ತಮ್ಮ ಸಮಯವನ್ನು ಬ್ಯಾಡ್‌ಮಿಂಟನ್, ಟೆನ್ನಿಸ್ ಮುಂತಾದ ಆಟಗಳಲ್ಲಿಯೂ, ಸಂಗೀತ, ಹೊಲಿಗೆಯ ವರ್ಗಗಳಲ್ಲಿಯೂ ಹೊಸ ಚಿತ್ರ ಪಟಗಳನ್ನು ನೋಡುವುದರಲ್ಲಿಯೂ ಕಳೆಯುವರು. ಆದರೆ, ಇಂಥಾ ಸೌಕರ್ಯಗಳು ಇಲ್ಲದ ಕಡೆಗಳಲ್ಲಿ ಕಾಲವನ್ನು ಹೇಗೆ ಕಳೆಯಬಹುದೆಂದು ಕೆಲವು ಸೂಚನೆಗಳನ್ನು ಕೊಡುವೆವು.

ಅಡಿಗೆ

ಯಾವ ಸ್ತ್ರೀಯರಿಗೆ ಸ್ವತಃ ಅಡಿಗೆಮಾಡುವ ಆಗತ್ಯ ಬೀಳುವುದಿಲ್ಲವೋ ಅವರು ಆಗಾಗ ಹೊಸ ಹೊಸ ತಿಂಡಿಗಳನ್ನೂ, ಪಕ್ವಾನ್ನಗಳನ್ನೂ ಮಾಡಲು ಕಲಿಯಬಹುದು. ಒಂದು ಹೊಸ ವಿಧದ ತಿಂಡಿಯನ್ನು ಮಾಡಲು ಕಲಿತರೆ ಮನಸ್ಸಿಗೆ ಆನಂದವುಂಟಾಗುವುದು. ಅಲ್ಲದೆ ಮನೆಯಲ್ಲಿದ್ದ ಇತರರು ಅದರ ರುಚಿಯನ್ನು ತಿಳಿದುಕೊಳ್ಳಬಹುದು. ನಿತ್ಯವೂ ಹೊಸ ಪದಾರ್ಥಗಳನ್ನು ಮಾಡಬೇಕೆಂದಿಲ್ಲ. ಅಗತ್ಯವಿದ್ದ ಪದಾರ್ಥವನ್ನು ನಾವು ಸ್ವತಃ ನಮ್ಮ ಕೈಯಿಂದಲೇ ಜಾಗರೂಕತೆಯಿಂದ ಮಾಡಿದರೆ ಒಳ್ಳೆಯದು. ಒಂದು ಸಲ ಪಾಕಶಾಸ್ತ್ರದ ರುಚಿಯು ಹತ್ತಿದರೆ ಮತ್ತೆ ನಮ್ಮ ಕೈಯಿಂದಲೇ ಹೊಸ ವಿಧದ ಪದಾರ್ಥಗಳನ್ನು ಮಾಡಲು ನಮಗೆ ಸ್ಫೂರ್ತಿಯು ಬರುವುದು.

ಹೊಲಿಗೆ ಕಸೂತಿ ಮುಂತಾದ ಕೆಲಸಗಳು

ಈ ವಿಷಯವು ಅನೇಕ ವಿಧಗಳಿಂದ ತುಂಬಿಕೊಂಡಿರುವುದರಿಂದ 'ಇದರಲ್ಲಿನ ಯಾವ ಭಾಗವನ್ನೂ ನಾವು ಚೆನ್ನಾಗಿ ಕಲಿಯಬಲ್ಲೆವು. ಸಾಧಾರಣ ಹೊಲಿಗೆ, ರೇಶ್ಮೆ ನೂಲಿನಿಂದ ಕಸೂತಿ ಹಾಕುವುದು ಮುಂತಾದ ಹೊಸ ನಮೂನೆಯ ಕೆಲಸಗಳನ್ನು ನಾವು ನಿತ್ಯವೂ ನೋಡುತ್ತಿರುವೆವು. ಈ ಕೆಲಸಗಳಲ್ಲಿ ನಮಗೆ ಯಾವುದು ಬೇಕೋ ಅದನ್ನು, ನಾವು ಚೆನ್ನಾಗಿ ಕಲಿಯಬಹುದು.

ನಾವು ತಯಾರು ಮಾಡುವ ವಸ್ತುಗಳು ಅದಷ್ಟು ನಮ್ಮ ನಿತ್ಯದ ಉಪಯೋಗಕ್ಕೆ ಬೀಳುವಂತದ್ದು ಇದ್ದರೆ ಒಳ್ಳೆಯದು. ಇದರಿಂದ ಉಪಯೋಗವೂ, ಗೃಹಶೋಭೆಯೂ ಆಗುವುದು. ಏಕೆಂದರೆ ರೇಶ್ಮೆ ನೂಲಿನಿಂದ ಹಾಕಿದ ಕಸೂತಿಯ ಚಿತ್ರಗಳನ್ನು ಗೋಡೆಗೆ ತೂಗಿಸುವುದರಿಂದ ಶೋಭೆಯು ಬರಲಾರದು. ಇದಕ್ಕಿಂತ ಒಂದೆರಡು ಕುರ್ಚಿಗಳ ಮೇಲಿನ ದಿಂಬುಗಳನ್ನು ಮಾಡಿದರೆ ಒಳ್ಳೆಯದು.

ಮಧ್ಯಮ ವರ್ಗದ ಸ್ತ್ರೀಯರಿಗೆ ಹೆಚ್ಚು ಖರ್ಚು ತಗಲುವ ಸಾಮಾನುಗಳನ್ನು ಕೊಂಡುಕೊಳ್ಳಲು ಅವಕ್ಯವಾದುದು. ಇಂಥವರು ಅಲ್ಪ ಖರ್ಚಿನಿಂದ ಸುಂದರ ವಸ್ತುಗಳನ್ನು ತಯಾರು ಮಾಡಲು ಪ್ರಯತ್ನಿಸಬೇಕು. ಅನೇಕರೊಡನೆ ಉಪಯೋಗಿಸಿದ ಸಣ್ಣ ಸಣ್ಣ ವಸ್ತ್ರದ ಚೂರುಗಳಿರುತ್ತವೆ. ಇವುಗಳಿಂದ ಸಣ್ಣ ಚೀಲಗಳನ್ನೂ, ಎರೆಗಳನ್ನೂ ಹೂವುಗಳನ್ನೂ ಮಾಡಬಹುದು. ಹೊಸ ವಸ್ತುಗಳಿಗಿಂತ ಇಂಥ ವಸ್ತುಗಳನ್ನು ತಯಾರಿಸುವುದರಲ್ಲಿ ಹೆಚ್ಚು ಆನಂದವುಂಟಾಗುವುದು.

ಇನ್ನು ಸಣ್ಣ ಸಣ್ಣ ಮಕ್ಕಳ ಆಟದ ಗೊಂಬೆಗಳನ್ನು ತಯಾರಿಸಬಹುದು. ಇವುಗಳನ್ನು ಮಾಡುವ ಅಭ್ಯಾಸವಾಗಿ ಬಿಟ್ಟರೆ ಮತ್ತೆ ಹೊಸ ವಸ್ತುಗಳನ್ನು ತಯಾರಿಸುವ ಕಲ್ಪನೆಗಳೂ ಬರುವವು.

ಛಾಯಾ ಚಿತ್ರಗಳನ್ನು ತೆಗೆಯುವದು.

ಇದರಿಂದ ಮನಸ್ಸಿಗೆ ಬಹಳ ಸಂತೋಷವಾಗುವುದು. ಇತ್ತೀಚೆಗೆ ಹೊರಟ ಕ್ಯಾಮರಾಗಳಿಂದ ಮನುಷ್ಯನು ಈ ಕಲೆಯನ್ನು ಬಹಳ ಸುಲಭದಿಂದ ಕಲಿಯಬಹುದು. ಕೆಲವು ಕ್ಯಾಮರಾಗಳೊಂದಿಗೆ ಅವುಗಳನ್ನು ಉಪಯೋಗಿಸುವ ವಿಧಾನಗಳನ್ನು ಕೊಟ್ಟಿರುವ ಪುಸ್ತಕಗಳೂ ಸಿಕ್ಕುತ್ತವೆ. ಇದರಿಂದ ತಕ್ಕಮಟ್ಟಿನ ಸಹಾಯವಾಗುತ್ತದೆ. ಇದರ ಮೂಲಕ ನಮ್ಮ ಅನುಭವದ ವಿಶೇಷ ಪ್ರಸಂಗಗಳು, ಸ್ನೇಹಿತರು, ಸುಂದರ ದೃಶ್ಯಗಳು ಮುಂತಾದುವುಗಳ ಚಿತ್ರಗಳನ್ನು ಯಾವಾಗಲೂ ನಮ್ಮ ಸಂಗ್ರಹದಲ್ಲಿಡಬಹುದು. ಸಮಯವೂ ಇಚ್ಛೆಯೂ ಇದ್ದರೆ ನಾವು ತೆಗೆದ ಚಿತ್ರಗಳನ್ನು ನಾವು ಮನೆಯಲ್ಲೇ ಛಾಪಿಸಬಹುದು, ಆದರೆ ಖರ್ಚಿನ ದೃಷ್ಟಿಯಿಂದ ಈ ಕಲೆಯು ಎಲ್ಲರಿಂದಲೂ ಸಾಧ್ಯವಾಗಲಾರದು. ಇದಕ್ಕೆ ತಗಲುವ ಸಾಮಾನುಗಳು ಬೆಲೆಯುಳ್ಳವುಗಳಾಗಿವೆ. ಹೇರಳ ಹಣವಿದ್ದವರು ಮಾತ್ರ ಈ ಕಲೆಯನ್ನು ಅಭ್ಯಾಸಿಸಬಹುದು.

ಲೇಖನ ಕಲೆ

ಇತ್ತೀಚೆಗೆ ಅನೇಕ ಹೆಂಗಸರು ಈ ಕಲೆಯ ವ್ಯವಸಾಯವನ್ನು ಮಾಡುತ್ತಿರುವರು. ಈ ಕಲೆಯಿಂದ ನಮ್ಮ ಮನಸ್ಸನ್ನೂ ಇತರರ ಮನಸ್ಸನ್ನೂ ಸಂತೋಷಗೊಳಿಸಬಹುದು. ಯಾರು ಒಂದು ವಿಷಯವನ್ನು ವಿಚಾರಪೂರ್ವಕವಾಗಿ, ವ್ಯವಸ್ಥಿತವಾಗಿ, ಬೇರೆಯವರ ಮುಂದೆ ಇಡಬಲ್ಲರೋ ಅಥವಾ ತಮ್ಮ ಕಲ್ಪನಾ ಶಕ್ತಿಯಿಂದ ಕಥೆಗಳನ್ನು ರಚಿಸಬಲ್ಲರೋ ಅಂಥವರು ಈ ಲೇಖನ ಕಲೆಯಿಂದ ಅತ್ಯಂತವಾದ ಆನಂದವನ್ನು ಪಡೆಯುವರು. ಇದು ತಮ್ಮಿಂದ ಸಾಧ್ಯವಿಲ್ಲವೆಂದು ಗ್ರಹಿಸಿ ಸುಮ್ಮನಿರಬಾರದು. ಸಾಕಷ್ಟು ಶಿಕ್ಷಣವಿದ್ದವರು, ಬರೆವ ಅಭಿರುಚಿ ಮತ್ತು ಕುತೂಹಲವಿದ್ದವರು, ತಮಗೆ ತಿಳಿದ ವಿಷಯಗಳನ್ನು ಬರೆಯಲು ಯತ್ನಿಸಬೇಕು.

ತೋಟಗಾರಿಕೆ

ತೋಟವನ್ನು ಮಾಡುವುದು ಪುರುಸೊತ್ತಿನ ಸಮಯವನ್ನು ಕಳೆಯುವ ಇನ್ನೊಂದು ಉಪಾಯವಾಗಿದೆ. ಮನುಷ್ಯನಿಗೆ ಒಂದು ಸಲ ಇದರ ಚಟವು ಹತ್ತಿತೆಂದರೆ ಮತ್ತೆ ಇದು ಬಿಟ್ಟುಹೋಗಲಾರದು. ಬೀಜ ಹಾಕುವುದು, ಹೂಗಿಡಗಳನ್ನು ನೆಡುವುದು, ಅವುಗಳಿಗೆ ನಿತ್ಯವೂ ನೀರು ಹಾಕುವುದು, ಅವುಗಳಲ್ಲಿ ದಿನದಿಂದ ದಿನಕ್ಕೆ ಆಗುವ ಬೆಳವಣಿಗೆಯನ್ನು ನೋಡುವುದು, ಕಡೆಗೆ ಹೂ ಬಿಟ್ಟ ಮೇಲೆ ಅದರ ಸೊಬಗನ್ನು ಉಣ್ಣುವುದು; ಇದರಲ್ಲೇ ಮನಸ್ಸು ರಮಿಸುವುದು. ತನ್ನ ಪರಿಶ್ರಮದಿಂದ ತಾನು ನೆಟ್ಟ ಗಿಡದ ಹೂವು ಅಥವಾ ಹಣ್ಣನ್ನು ನೋಡಿದರೆ ಎಷ್ಟು ಆನಂದವುಂಟಾಗುವುದೆಂದು ಅನುಭವಿಸಿದವರೇ ತಿಳಿಯಬಲ್ಲರು. ತೋಟಗಾರಿಕೆಯನ್ನು ಮಾಡುವುದರಿಂದ ಹೊರಗಿನ ಹವೆಯಲ್ಲಿ ವ್ಯಾಯಾಮವೂ ಸಿಗುವುದು. ಗಿಡಗಳಿಗಾಗಿ ಮಣ್ಣನ್ನು ಅಗೆಯುವುದು, ನೀರು ಹಾಕುವುದು, ಹುಲ್ಲನ್ನು ತೆಗೆದು ಅಂದವಾಗಿ ಇಡುವುದು. ಈ ಕೆಲಸಗಳನ್ನು ಮಾಡುವಾಗ ಸಾಕಷ್ಟು ವ್ಯಾಯಾಮವೂ ಸಿಕ್ಕುವುದು.

ಹೊತ್ತು ಕಳೆಯುವ ಇನ್ನೊಂದು ಸಾಧನವೆಂದರೆ ವಾಚನ. ವಾಚನದಿಂದ ಮನಸ್ಸಿಗೆ ಸಂತೋಷವಾಗುವುದಲ್ಲದೆ ನಮ್ಮ ಜ್ಞಾನವು ವೃದ್ಧಿಗೊಳ್ಳುವುದು. ಬೇರೆ ಬೇರೆ ವಿಧಗಳಿಂದ ವಿಚಾರಮಾಡಿಕೊಳ್ಳುವ ಶಕ್ತಿಯುಂಟಾಗುವುದು. ಈ ದೃಷ್ಟಿಯಿಂದ ನೋಡಿದರೆ ಇತರ ಎಲ್ಲಾ ವ್ಯವಸಾಯಗಳಿಗಿಂತ ಇದು ಹೆಚ್ಚಿನ ಮಹತ್ವವುಳ್ಳದ್ದು. ವಾಚನವು ಎಲ್ಲರಿಗೂ ಸಾಧ್ಯವಿದೆ. ಎಲ್ಲರಿಗೂ ಎಲ್ಲ ಕಾಲಗಳಲ್ಲಿಯೂ ಅವಶ್ಯವಿದೆ. ಆದ್ದರಿಂದ ವಾಚನದ ಅಭ್ಯಾಸವನ್ನು ಮಾಡಿಕೊಳ್ಳಲೇ ಬೇಕು.

ಮೇಲೆ ಹೇಳಿದ ವ್ಯವಸಾಯಗಳೆಲ್ಲ ಮುಖ್ಯವಾಗಿ ಸಮಯವಿದ್ದವರಿಗಾಗಿವೆ. ಇವುಗಳಲ್ಲಿ ಒಂದೆರಡು ವ್ಯವಸಾಯಗಳಿಂದ ಹಣವನ್ನೂ ಗಳಿಸಬಹುದು. ಮಧ್ಯಮ ವರ್ಗದ ಸ್ತ್ರೀಯರು ಬಿಡುವಿನ ಸಮಯದಲ್ಲಿ ಸ್ವಲ್ಪ ಪರಿಶ್ರಮದಿಂದ ಹಣವನ್ನು ಗಳಿಸಿ ತಮ್ಮ ಕುಟುಂಬಕ್ಕೆ ಸಹಾಯ ಮಾಡಬಹುದು. ಲೇಖನಗಳಿಂದಲೂ ಸ್ವಲ್ಪ ಕಸೂತಿಗಳನ್ನು ಹಾಕುವದರಿಂದಲೂ ಮನೆಯಲ್ಲಿ ಕೂತಲ್ಲೇ ಸ್ವಲ್ಪ ಅರ್ಥೋತ್ಪಾದನವನ್ನು ಮಾಡುವುದರಿಂದ ಏನೂ ಕೆಡುಕಿಲ್ಲ.

ಮನುಷ್ಯನಿಗೆ ಸಮಯವನ್ನು ಕಳೆಯುವ ಎಷ್ಟು ಸಾಧನಗಳಿದ್ದರೂ ಸಮ ವಯಸ್ಕರ ಬಳಿ ಕೂಡಿಕೊಂಡು ಸ್ವಲ್ಪ ಸಮಯವನ್ನು ಕಳೆಯಲೇಬೇಕೆನಿಸುವುದು. ಆಗಾಗ್ಗೆ ಸ್ನೇಹಿತರನ್ನು ಕಾಣಬೇಕು, ಕರೆಸಬೇಕು, ಮಾತುಕತೆ ನಡೆಸಬೇಕು, ವಿಚಾರ ವಿನಿಮಯ ಮಾಡಬೇಕು. ನಿತ್ಯವೂ ಸ್ನೇಹಿತರನ್ನು ಕೂಡಿಕೊಂಡು ಹರಟೆ ಕೊಚ್ಚುವುದರಿಂದ ಮಾತ್ರ ಪ್ರಯೋಜನವಿಲ್ಲ. ಬದಲಾಗಿ ಮನಸ್ಸು ಬೆಳೆಯದೆ ಮೊಂಡು ಆಗುವುದು.

ಪ್ರತಿಯೋರ್ವ ಮನುಷ್ಯನಲ್ಲಿ ವಿಧ ವಿಧ ರುಚಿಯೂ ಶಕ್ತಿಯೂ ಅಡಗಿಕೊಂಡೇ ಇದೆ. ನಾವು ನಮ್ಮಲ್ಲಿರುವ ಆ ಅಭಿರುಚಿ ಮತ್ತು ಶಕ್ತಿಯನ್ನು ಕಂಡುಕೊಳ್ಳಬೇಕು ಮತ್ತು ಅದನ್ನು ಕಾರ್ಯರೂಪಕ್ಕೆ ಹಚ್ಚಬೇಕು. ಹಾಗಾದರೆ, ಆಯುಷ್ಯವನ್ನು ಇನ್ನಷ್ಟು ಆನಂದದಿಂದ ಕಳೆಯಬಹುದು.

--ಕೆ. ವಿ. ಡಿ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷ ಮುಂತಾದವು, ಪಕ್ಷವಾತ, ಮೂಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್ ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಲ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ, 5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು. ಡಾ। ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

English copies of MADRAS ALIYASANTHANA ACT of 1949 are available. NAVAYUGA PRESS, UDIPI.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3613

28-7-1949

LICENCE No. 31
Licenced to Post without Prepayment

NAVAYUGA WEEKLY
POST BOX No 22 -- UDIPI, S. K

FOUNDER
Hon'ble Sri. A. B. Shetty
Minister for Agriculture & Veterinary

Telegram: "Navayuga"

Estd 1921 ಸ್ಥಾಪನೆ.



ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ ವಾರ 48

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟಿ ಇವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29
No. 48

ಎಲ್ಲರೂ ಮಹತ್ವಾಕಾಂಕ್ಷಿಗಳೇ!

ಕೆಲವು ವರುಷಗಳಿಂದ ಗಾಂಧೀ ಟೋಪಿ ಹೊತ್ತುಕೊಂಡು ತಿರುಗಾಡಿದ ಯೋಗ್ಯತೆಯ ಮೇಲಿಂದ, ಈಗ ಅಧಿಕಾರ ಮಕುಟ ಹೊತ್ತುಕೊಳ್ಳಬೇಕಾದವರು ತಾವೆಂದೇ ಕೆಲವರ ಆಶೆ.

ತಮ್ಮ ದೇಹ ಮತ್ತು ಸಂಪತ್ತುಗಳಿಗಾವ ತೊಂದರೆಯೂ ಆಗದಂತೆ, ಅಪಾಯ ತೋರಿಬಂದ ಸಂದರ್ಭಗಳಲ್ಲೆಲ್ಲಾ ಅಂತರ್ಗಾಮಿತ್ವ ವಹಿಸಿ, ಬಣ್ಣ ಬದಲಾವಣೆ ನಡೆಸಿ, ತಪ್ಪಿಸಿಕೊಂಡು ಬಡಜನ ಮಕ್ಕಳನ್ನು ಮುಂದೂಡಿ ಬಲಿಕೊಟ್ಟ ತ್ಯಾಗ ಬಲದ ಮೇಲಿಂದ 'ದೇಶಭಕ್ತ'ರೆನ್ನಿಸಿ ಮೆರೆದಾಡ ಹವಣಿಸಿದ್ದಾರೆ

ಊರ ಹತ್ತು ಮಂದಿ ಬಡವರನ್ನು ಸಲಹಿಯೋ, ಒಬ್ಬಿಬ್ಬರು ಶ್ರೀಮಂತರ ಸಹಾಯ ಪಡೆದೋ 'ಕಾಂಗ್ರೆಸ್'ನ ಡೇರೆ ಹತ್ತಿದವನು ಊರಲ್ಲಿ ತನ್ನ ಸಂಸ್ಥಾನವನ್ನೇ ಸ್ಥಾಪಿಸಿಕೊಂಡು ಆಳಬೇಕೆಂದೇ ಚಡಪಡಿಸಹತ್ತುತ್ತಾನೆ.

ತನ್ನ ಆಸುಪಾಸಿನಲ್ಲೆಲ್ಲಾ ಒಕ್ಕಲು ಜನರು, ತುಂಡು ವರ್ಗದಾರರೇ ಇರುವ ದೆಸೆಯಿಂದ ಅವರೆಲ್ಲರಿಗಿಂತ ದೊಡ್ಡ ಭೂಮ್ಯಾಲಿಕ ತಾನಾಗಿದ್ದರಾಯಿತು; ಆತ ಜಮೀನ್ದಾರ ಹೆಸರು, ಬಿರುದು, ಠೇಂಕಾರಗಳನ್ನೆಲ್ಲಾ ಹಚ್ಚಿಕೊಳ್ಳುತ್ತಾನೆ. ಎರಡು ಕವಾಟು ಹೆಚ್ಚಿಗಿಟ್ಟರಾಯಿತು; ಅಂತಹ ಅಂಗಡಿಯವ 'ಸೇಟ್' ಆಗಿಬಿಡುತ್ತಾನೆ.

ಕೃತಿಚೌರ್ಯ, ವಿಷಯ ಕಳವು, ವಾಕ್ಯಾಪಹಾರ ನಡೆಸಿಯಾದರೂ ನಾಲ್ಕು ಪಂಕ್ತಿ ಬರೆದುಹಾಕಿದ ದಾಖಲೆಯಿದ್ದರಾಯಿತು—ಅಂಥವನಿಗೆ ಪತ್ರಿಕಾ ಸಂಪಾದಕ ಅಥವಾ ಪ್ರಕಾಶಕನಾಗದೆ ನಿದ್ರೆ ಬರುವಂತಿಲ್ಲ.

ನಾಲ್ವರು ಕೂಡಿದ ನಾಲ್ಕೆಡೆಗಳಲ್ಲಿ ತರಲೆವಾತು ಬಿಟ್ಟು ಕೈಚಪ್ಪಾಳೆ ಪಡೆದ ರುಚಿ ತಾಗಿದವನು, ವೇದಿಕೆ ಹತ್ತಿ ಭಾಷಣಗಾರನೆನ್ನಿಸಿಕೊಳ್ಳದೆ ಕೆಳಗೆ ಬಿದ್ದಿರುವಂತಿಲ್ಲ

ರಸ್ತೆಯ ಅಕ್ಕ ಪಕ್ಕದವರ ಕಣ್ಣು ಬೀಳುವಷ್ಟು ಸೌಂದರ್ಯ, ಫೇಶನ್, ತನ್ನಲ್ಲಿದೆಯೆಂದಾದ ಮೇಲೆ ಆಕೆ ಮತ್ತೆ ರಜತಪರದೆಯ ನಟಿ ಹೊರತು ಊರಹುಡುಗಿಯಲ್ಲ.

ತಾವು ಎಂತಹ ವಂಚನೆ, ಆಲಸ್ಯ, ಅನಾಚಾರಗಳನ್ನು ಮಾಡಿದರೂ ಅದನ್ನು ಟೀಕಿಸುವವರ ಬಾಯಿ ಮುಚ್ಚಿಸಲು, ನೆಹರೂ ವಲ್ಲಭಾಯಿಗಳ ವಾದದಲ್ಲೇ ಶಿಸ್ತು, ಸಹನೆ, ಸಂಯಮಗಳ ಉಪದೇಶ ಕೊಡುವ ಡೆಗ್ಗುಣ ಕಾಂಗ್ರೆಸಿಗರದಾಗಿದೆ.

ಆಕಳಿಸುವುದಕ್ಕೂ ಗೀಚುವುದಕ್ಕೂ ಉಪಯೋಗವಾಗಬಲ್ಲ ಹತ್ತು ಅಶ್ಲೀಲಪದಗಳ ಅಭ್ಯಾಸ ಮಾಡಿಕೊಂಡವರೆಲ್ಲರೂ 'ಕಾಮ್ರೇಡ್'ಗಳೋ 'ಕ್ರಾಂತಿಕಾರಿ ಲೇಖಕ'ರೋ ಆಗಿಬಿಡುತ್ತಾರೆ.

ಎರಡು ಶ್ಲೋಕಗಳನ್ನು ಬಾಯಿಪಾಠ ಮಾಡಿಕೊಂಡು ಹೊಟ್ಟೆ ಹೊರೆಯುವವರೆಲ್ಲರೂ 'ವೇದಾಂತಿ'ಗಳಾಗಿ ತಮ್ಮನ್ನು ತಾವು ಮಾರ್ಪಡಿಸಿಕೊಂಡು ಸಾಮಾನ್ಯರಿಗಿಂತ ದೂರವಾಗುವದೇ ಸರಿ

ಒಂದು ವಿಷಯದ ಆಳವನ್ನರಿಯುವಷ್ಟು ಬುದ್ಧಿ ಅಥವಾ ಅಧ್ಯಯನವಿಲ್ಲದಿದ್ದರೂ, ಅದರಲ್ಲಿ ದೋಷವನ್ನು ಕಂಡು ಹಿಡಿಯುವ ದೃಷ್ಟಿಯೊಂದಿರುವ ಅರ್ಹತೆಯ ಮೇಲಿಂದ ಎಲ್ಲವನ್ನೂ, ಎಂತಹ ತಜ್ಞರ ಕೃತಿಗಳನ್ನಾದರೂ ವಿಮರ್ಶಿಸುವುದರಲ್ಲೇ ಮಗ್ನರಾಗಿ ತಮಗೆ ತಾವೇ 'ಪ್ರಗತಿಶೀಲ ವಿಮರ್ಶಕ' ಬಿಲ್ಲೆ ಹಚ್ಚಿಕೊಳ್ಳುವವರು ಎಷ್ಟೋ ಮಂದಿ.

ಮಹಾತ್ಮರ ತತ್ವ, ಕಾರ್ಯಕ್ರಮಗಳಿಗೆ ಪೂರ್ಣ ವಿರುದ್ಧವಿದ್ದರೂ ತಮ್ಮಲ್ಲಿಯೂ ಮಹಾತ್ಮೆಯಿದೆ ಎಂಬುದನ್ನು ಪ್ರದರ್ಶಿಸುವುದಕ್ಕಾಗಿ, ಮಹಾತ್ಮರುಟ್ಟುದಕ್ಕಿಂತಲೂ ಗಿಡ್ಡ ಬೈರಾಸುಟ್ಟು ತಿರುಗುವವರಿದ್ದಾರೆ. ಮಹಾರಾಜರ ಸ್ಥಾನಮಾನ, ಸಂಪತ್ತೇ ತಮ್ಮದೂ ಎಂಬುದನ್ನು ತೋರಿಸಿಕೊಳ್ಳುವದಕ್ಕಾಗಿ ಬೇರೇನಿಲ್ಲದಿದ್ದರೂ ಮಹಾರಾಜಾ ಮರ್ಜಿಯ ವೇಷ, ಭೂಷಣ, ದೌಲು ಪ್ರದರ್ಶಿಸುವವರಿದ್ದಾರೆ.

ತಂದೆಯನ್ನು ಆಡಿಸುವ ಬಯಕೆಯುಳ್ಳ ಮಕ್ಕಳು—ಗುರುವಿಗೆ ಹೊಸ ಹೊಸ ಅನುಭವಗಳನ್ನು ದೊರಕಿಸಿಕೊಡುತ್ತಿರುವ ವಿದ್ಯಾರ್ಥಿ—ನಾಯಕರಿಗೆ ತಮ್ಮ ಮನಸ್ಸೋಡಿದ ಹಾದಿಯಲ್ಲಿ ನಿರ್ದೇಶಿಸುತ್ತಿರುವ ಅನುಯಾಯಿಗಳು—ಈಗ ಹೆಚ್ಚಿದ್ದಾರೆ.

[illegible] ಒಂದು ತುತ್ತು ಕಡಿಮೆಯಾದ[illegible] ಆಹಾರ ಮಂತ್ರಿಗಳನ್ನು ಟೀಕಿಸಿ ಸರಿಪಡಿಸಿಕೊಳ್ಳಬೇಕೆಂಬ ಬಯಕೆ; ಸ್ನೇಹವನ್ನಾದರೂ ಮುಷ್ಕರ ಹೂಡಿಯೇ ಸಂಪಾದಿಸಿಕೊಳ್ಳಬೇಕೆಂಬ ಹುರುಪು; [illegible] ಸಂಗತಿಗಳ ಖಂಡನೆ ಮಾಡಿಯಾದರೂ ಕೀರ್ತಿಗಳಿಸಬೇಕೆಂಬ ಹುಚ್ಚು; ಎಲ್ಲೆಲ್ಲೂ ಬೆಳೆದಿದೆ.

ನಾಲ್ಕುಮಂದಿಯನ್ನು ಕೂಡಹಾಕಿ ಭೋಜನೋತ್ತರ ಸಂಭಾವಣೆ ನಡೆಸಿದವನೂ ತನ್ನೀಕೂಟಕ್ಕೆ 'ಸಮ್ಮೇಳನ' ಎಂದೇ ಹೆಸರಿಟ್ಟು ಸಮ್ಮೇಳನಕರ್ತನಾಗುತ್ತಾನೆ; ಸಂಬಂಧಿಕರನ್ನು ಕಟ್ಟಿಕೊಂಡು ಲಾಭ ಪಡೆಯಲು ಹೊರಟವನೂ ತನ್ನೀ ಕುಟುಂಬ ವ್ಯವಹಾರವನ್ನು 'ಸಂಸ್ಥೆ'ಯೆಂದು ಕರೆದು ಸಂಸ್ಥಾಧಿಪತಿಯಾಗುತ್ತಾನೆ; ನಾಲ್ವರಿಗೆ ಮಾರ್ಗದಾಣ ಹಾಕಿ ಬೆನ್ನ ಹಿಂದಿಕ್ಕಿಯಬಲ್ಲವನು ತನ್ನೀ ಪಟುತನಕ್ಕೆ "ಜನನಾಯಕ" ಬಿರುದು ತಾಗಿಸಿಕೊಳ್ಳುತ್ತಾನೆ. ಎಲ್ಲವೂ ಎಲ್ಲರೂ [illegible]!

ಸುವಾಸನೆ ಮತ್ತು ಮಧುರತೆಯಿಂದ ಎಲ್ಲರ ಮೆಚ್ಚುಗೆಗೆ ಅರ್ಹವಾಗಿವೆ

ಪ್ರಭಾತ ಚಾ ಮತ್ತು ಕಾಫಿ



PRABHAT
TEA & COFFEE (INDIA) Ltd.
COONOOR (Nilgiris)

Madras Aliyasanthana Act, IX of 1949.

ಮದ್ರಾಸು
ಅಳಿಯಸಂತಾನ ಕಾನೂನು
ಇದರ
ಕನ್ನಡ ಮತ್ತು ಇಂಗ್ಲಿಷ್ ಪ್ರತಿಗಳು ದೊರೆಯುತ್ತವೆ

ವಿವಾಹ ಮತ್ತು ಅದರ ಬಿಡುಗಡೆ, ಅರಸಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತ ವಾರಿಸ್ದಾರಿಕೆ, ಕುಟುಂಬ ಮತ್ತು ಅದರ ರಕ್ಷಣೆ, ವಿಭಾಗ ಮೊದಲಾದ, ಪ್ರತಿಯೊಬ್ಬ ಅಳಿಯ ಸಂತಾನಿಗನಿಗೂ ತಿಳಿದಿರಲೇಬೇಕಾದ ವಿಷಯಗಳಿಂದೊಡಗೂಡಿದೆ

ಕ್ರಯ 0—8—0 (ಟಪ್ಪಾಲು ಖರ್ಚು ಪ್ರತ್ಯೇಕ)

0 9-0 [illegible]

ಸಿಗುವ ಸ್ಥಳ:—
ನವಯುಗ ಪ್ರೆಸ್, ಉಡುಪಿ

ವಿಮೆ ಮಾಡಲಿಕ್ಕೆ ಯಾ ಏಜೆನ್ಸಿ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ: ಧಾರವಾಡ,

THE UNITED KARNATAK INSURANCE COMPANY, LIMITED.

ಮದ್ರಾಸ್ ಬೇಸಾಯ ಶಾಸನ-

ಒಬ್ಬನ ಭೂಮಿಯನ್ನು ಮತ್ತೊಬ್ಬನಿಗೆ ಒಪ್ಪಿಸಿಕೊಡುವ ಅಧಿಕಾರ.

ಮದ್ರಾಸ್ ಸರಕಾರವು 'ಬೇಸಾಯ ಶಾಸನ'ವೊಂದನ್ನು ತರಲು ಸಂಕಲ್ಪಿಸಿ, ಅದರ ಕರಡನ್ನು ಸಾರ್ವಜನಿಕರ ವಿಚಾರ ವಿಮರ್ಶೆಗಳಿಗಾಗಿ ಪ್ರಕಟಿಸಿದೆ. ಇದು ಆಸ್ತಿ ಮಾಲಕರು ಮತ್ತು ಸಾಗುವಳಿಗಾರ ಒಕ್ಕಲುಗಳೊಳಗಿನ ಸಂಬಂಧ ನಿರ್ಧಾರಕ ಮಸೂದೆಯೇನೂ ಅಲ್ಲ. ಅಧಿಕಾಹಾರೋತ್ಪನ್ನ ಮಾಡುವ ಸರಕಾರದ ನಿಶ್ಚಿತ ಗುರಿ ಮುಟ್ಟಲಾಗುವಂತೆ ಅಗತ್ಯವುಳ್ಳ ಕಾರ್ಯಕೈಕೊಳ್ಳಲು ಸಾಗುವಳಿ ಸ್ಥಳಗಳ ಮೇಲೆ ಸರಕಾರದ ಕೈಗೆ ವಿಶೇಷಾಧಿಕಾರಗಳನ್ನು ಒಪ್ಪಿಸುವಂತಹ ಮಸೂದೆಯಿದು. "ಪರಿಣಾಮಕಾರಿಯಾಗಿ ಸ್ವತಃ ಸಾಗುವಳಿ ಮಾಡಲಾರದ ಮಾಲಿಕರ ವಶ ಆಸ್ತಿಗಳನ್ನು ಬಿಡುವದಕ್ಕಿಂತ, ಮೈಮುರಿದು ದುಡಿಯುವ ರೈತ ಬೇಸಾಯಗಾರರಿಗೇನೇ ಅವುಗಳನ್ನು ಕೈವರ್ತಿಸಿಕೊಡಬೇಕು" ಎಂಬ ಶ್ರಮಜೀವಿ ರೈತ ಪಕ್ಷಪಾತಿಗಳ ವಾದವು ಕೆಲವಂಶ ತಾತ್ಕಾಲಿಕವಾಗಿಯಾದರೂ ಈ ನವ ಶಾಸನದ ಮೂಲಕ ಸಾಫಲ್ಯ ಹೊಂದಬಹುದು. "ಆಸ್ತಿ ಪಾಸ್ತಿಗಳು ಸರಕಾರೀ ಸೊತ್ತುಗಳಾಗಿರಬೇಕು" ಎಂಬ ಸಮತಾವಾದದ ತತ್ವವು ಈ ಮೂಲಕ ಕೆಲವಂಶ ಮನ್ನಣೆ ಪಡೆದಿದೆ. ಆದರೆ ಇಲ್ಲಿಯ ದೃಷ್ಟಿ ಕೇವಲ ಅಧಿಕ ಬೆಳೆ ಬೆಳೆಯಿಸುವದೇ ಎಂಬುದನ್ನು ಮರೆಯಬಾರದು; ಸದ್ಯಸ್ಥಿತಿಯಲ್ಲಿ-ಇಂದಿನ ಸರಕಾರೀಯಂತ್ರ ಮತ್ತು ವಿಧಾನಗಳ ಮೇಲಿಂದ-ಎಲ್ಲವೂ ಸತ್ಪರಿಣಾಮಕಾರಿಯಾಗಿ, ಸರ್ವಸಾಮಾನ್ಯರ ಹಿತಸಾಧಕವಾಗಿ ಮತ್ತು ನ್ಯಾಯೋಚಿತವಾಗಿ ನಡೆದಾವೆಂದು ಕಣ್ಣುಮುಚ್ಚಿ ಕುಳಿತಿರಲು ಸಾಧ್ಯವಿಲ್ಲ. ಅಂತಹ ಭರವಸೆಯಿಲ್ಲದಿರುವಾಗಲೇ ಮುಂದೆಬಂದಿರುವ ಈ ಶಾಸನವಂತೂ ಮಾಲಕ-ಶ್ರಮಜೀವಿ ರೈತನೆಂಬ ವರ್ಗಭೇದ ನೋಡದೆ ಸಾಗುವಳಿ ಭೂಮಿಗಳ ಮೇಲಿನ ಅಧಿಕಾರದ ಮಟ್ಟಿಗೆ ಪ್ರಬಲ ಹಾಗೂ ಪ್ರಾಮುಖ್ಯ ಬದಲಾವಣೆಗಳನ್ನು ಒಳಗೊಂಡಿದೆ. ಆದ್ದರಿಂದ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಕ್ಕಾಗಿ ಪ್ರಕಟವಾಗಿರುವ ಈ ಮಸೂದೆಯ ಅಂಗೋಪಾಂಗಗಳನ್ನು ಸಂಬಂಧಪಟ್ಟವರೆಲ್ಲರೂ ಸರಿಯಾಗಿ ಪರಿಶೀಲಿಸಿನೋಡಬೇಕು; ಅದರ ಒಳ್ಳಿತು—ಕೆಡುಕು, ಉಪಕಾರ--ಅಪಕಾರ, ಉತ್ತಮ--ನಿಕೃಷ್ಟತೆಗಳನ್ನು ತುಲನಾತ್ಮಕವಾಗಿ ವಿಮರ್ಶಿಸಿ ತಿಳಿದುಕೊಂಡು ಸರಕಾರಕ್ಕೆ ತಿಳಿಸಬೇಕು. ಅದಕ್ಕಾಗಿ ರೈತರು ತಮ್ಮ ಸಭೆ, ಸಂಘಗಳನ್ನು ಏರ್ಪಡಿಸಿಕೊಂಡು ಸಂಘಟನೆಯಿಂದ ತಮ್ಮ ಪಾಲಿನ ವಾದವನ್ನು ಮುಂದಿಡಬೇಕು; ಅಗತ್ಯವುಳ್ಳ ಪ್ರಯತ್ನ ಹಾಗೂ ಕಾರ್ಯಾಚರಣೆಗಳನ್ನು ಕೈಕೊಳ್ಳಲೇ ಬೇಕು. ಎಲ್ಲವೂ ಕೈಮೀರಿ ಹೋದ ಮೇಲೆ ಪ್ರಲಾಪಿಸುವುದಕ್ಕಿಂತ, 'ನಿಮ್ಮ ನಿಮ್ಮ ಅಭಿಪ್ರಾಯ ಮುಂದೆ ಬರಲಿ' ಎಂದು ಆಮಂತ್ರಿಸಲ್ಪಟ್ಟಿರುವ ಈ ಕಾಲದಲ್ಲೇ ಸಂಬಂಧ ಪಟ್ಟವರೆಲ್ಲರೂ ಮುಂದಾಗಲಿ. ಸಾರ್ವಜನಿಕರ ತಿಳುವಳಿಕೆಗಾಗಿ ನಿಯೋಜಿತ ಮಸೂದೆಯ ಸಾರಾಂಶಗಳನ್ನು ಇಲ್ಲಿ ಕೊಡಲಾಗಿದೆ:-

ಬೇಸಾಯ ಕಾನೂನು

ಈ ಶಾಸನವು '1949ನೇ ಮದ್ರಾಸ್ ಬೇಸಾಯ ಶಾಸನ' ಎಂದು ಕರೆಯಲ್ಪಡುವುದು. ಇದು ಇಡೀ ಮದ್ರಾಸ್ ಪ್ರಾಂತ್ಯಕ್ಕೆ ಅನ್ವಯವಾಗುವದು. "ಸಾರ್ವಜನಿಕ ಹಿತದೃಷ್ಟಿಯಿಂದ ಉಚಿತವೆಂದು ತೋರುವಷ್ಟು ಉತ್ಪನ್ನ ಮಾಡಿ, ರಾಷ್ಟ್ರದ ಆಹಾರ ಮತ್ತಿತರ ಬೇಸಾಯೋತ್ಪನ್ನಗಳಲ್ಲಿ ಈ ಪ್ರಾಂತ್ಯದ ಪಾಲನ್ನು ನಿರ್ವಹಿಸಲಾಗುವಂತೆ ಪ್ರಾಂತದಲ್ಲಿ ಪರಿಣಾಮಕಾರಿಯಾಗಿ ಬೇಸಾಯೋದ್ಯಮವನ್ನು ಸಂಘಟಿಸುವುದೇ" ಈ ಶಾಸನದ ಉದ್ದೇಶ

ಧಾರಣೆ; ಮಾರ್ಕೆಟಿನ ಭರವಸೆ- ಸಂಬಂಧಪಟ್ಟ ವಿಷಯಗಳೆಲ್ಲವುಗಳನ್ನು ಪರಿಶೀಲಿಸಿ ಹೊಂದಿಸಿಕೊಂಡು, ಮತ್ತು ಬೇಸಾಯಗಾರರು ಉತ್ಪನ್ನಗಳನ್ನು ಮಾಡಲಾಗುವಂತೆ, ಸರಕಾರವು ಅಂತಹ ಉತ್ಪತ್ತಿಗಳಿಗೆ, ಒಂದು ವರುಷಕ್ಕೆ ಕಡಿಮೆಯಾಗದ ವಾಯಿದೆಗಾಗಿ ಧಾರಣೆಗಳನ್ನು ಆಗಾಗ ನಿರ್ಧರಿಸುವುದು. ಮತ್ತು ಉತ್ಪಾದಕರಿಗೆ ಆ ಧಾರಣೆಗಳನ್ನೂ ಅವುಗಳಿಗೆ ತಕ್ಕ ಮಾರ್ಕೆಟುಗಳನ್ನೂ ಒದಗಿಸುವ ಗ್ಯಾರಂಟಿಕೊಡುವುದು. ನಿಶ್ಚಿತ ವಾಯಿದೆಗಳೊಳಗೇನೇ ಉತ್ಪಾದಕರು ಆ ಮೌಲ್ಯಗಳನ್ನು ಪಡೆಯುವಂತೆ ನೋಡಲಾಗುವದಲ್ಲದೆ ನಿಶ್ಚಿತಾವಧಿಯ ಒಳಗೆ ಈ ಧಾರಣೆಗಳನ್ನು ತಗ್ಗಿಸುವಂತಿಲ್ಲ. ತಾವು ಕೊಡುವ ಈ ಗ್ಯಾರಂಟಿಗಳ ಪಾಲನೆಗಾಗಿ ಸರಕಾರವು ನಿಶ್ಚಿತಧಾರಣೆಕೊಟ್ಟು ಉತ್ಪನ್ನಗಳನ್ನು ತಾನೇ ಪಡೆಕೊಳ್ಳಬಹುದು; ಅಥವಾ ಈ ಗ್ಯಾರಂಟಿಗನುಗುಣವಾದ ಶರ್ತಗಳನ್ನು ಹಾಕಿ ಯಾವನೇ ಒಬ್ಬನಿಗೆ, ಅಥವಾ ಹಲವರದಾದ ಸಂಸ್ಥೆಗಳಿಗೆ ಅಂತಹ ವ್ಯಾಪಾರಾಧಿಕಾರ ಕೊಡಬಹುದು. ಇಲ್ಲವೇ ಉತ್ಪಾದಕರಿಗೆ ಆಶ್ವಾಸನೆಯಿತ್ತ ಧಾರಣೆಗಳ, ನಿಶ್ಚಿತ ಮಾರ್ಕೆಟನ್ನು ನಿರ್ಮಿಸಲು ಅಗತ್ಯವೆಂದು ತೋರುವ ಯಾವುದೇ ಕಾರ್ಯವನ್ನು ಸರಕಾರವು ಕೈಕೊಳ್ಳಬಹುದು.

ಮಾಲಕರ ಮತ್ತು ಒಕ್ಕಲಿಗರ ಕರ್ತವ್ಯ—ರಾಷ್ಟ್ರೀಯ ಹಿತದೃಷ್ಟಿಯಿಂದ ಈ ಪ್ರಾಂತ್ಯದಲ್ಲಿ ಬೆಳೆಯಿಸುವುದಗತ್ಯವೆಂದು ತನಗೆ ತೋರುವ ಬೇಸಾಯ ಬೆಳೆಗಳ ಹೆಸರುಪಟ್ಟಿಗಳನ್ನು ಸರಕಾರವು ತನ್ನ ಪ್ರಕಟಣೆಗಳ ಮೂಲಕ ಕಾಲ ಕಾಲಕ್ಕೆ ತಿಳಿಸುತ್ತಾ ಹೋಗತಕ್ಕದು ಮತ್ತು ಯಾವುದೇ ಸ್ಥಳದ ಯಾವುದೊಂದು ಭೂಮಿ ಅಥವಾ ಯಾವುದೇ ಭೂವರ್ಗದಲ್ಲಿ ತಾನು ಕೊಟ್ಟ ಹೆಸರು ಪಟ್ಟಿಯಲ್ಲಿದ್ದವುಗಳನ್ನಲ್ಲದೆ, ಇತರ ಬೆಳೆಗಳನ್ನು ಬೆಳೆಯಿಸಬಾರದೆಂದು ಅಂತಹ ಪ್ರಕಟಣೆಗಳ ಮೂಲಕ ಪ್ರತಿಬಂಧಿಸಲೂ ಬಹುದು.

ಆಹಾರ ಸಂಬರಾಯಿ ಅಥವಾ ಇತರ ಬೇಸಾಯೋತ್ಪನ್ನಗಳ ಮಟ್ಟಿಗೆ ರಾಷ್ಟ್ರೀಯ ಹಿತ ದೃಷ್ಟಿಯಿಂದ ತನಗೆ ಅಗತ್ಯವೆಂದು ತೋರಿದರೆ ಸರಕಾರವು ತನ್ನ ಕೈಕೆಳಗಿನ ಯಾವನೇ ಅಧಿಕಾರಿಗೆ ಈ ಕೆಳಗಡೆ ನಮೂದಿಸಿರುವ ಯಾವುದೇ ಕಾರ್ಯಾಚರಣೆಯ ಅಧಿಕಾರಗಳನ್ನು ಕೊಡಬಹುದು. ಮತ್ತು ಸರಕಾರವು ಅವುಗಳನ್ನು ಕಾಲಕಾಲಕ್ಕೆ ಮಾರ್ಪಡಿಸಲು ಅಥವಾ ರದ್ದು ಪಡಿಸಲೂ ಬಹುದು:-

(1) ಖಾಲಿಬಿದ್ದಿರುವ ಮತ್ತು ಬೇಸಾಯವಾಗದೆ ಉಳಿದಿರುವ ಯಾವುದೇ ಭೂಮಿಯನ್ನು ಬೇಸಾಯ ಮಾಡುವಂತೆ ನಿರ್ದೇಶಿಸುವುದು. (2) ಯಾವುದೇ ಭೂಮಿಯಲ್ಲಿ ಎಲ್ಲಿ ಯಾವ ವರ್ಗದ ಉತ್ಪನ್ನವನ್ನು ಮಾಡತಕ್ಕದ್ದೆಂಬ ನಿಶ್ಚಿತ ವಿಧಾನವನ್ನು ಆಜ್ಞಾಪಿಸುವದು. (3) ಮೇಲ್ಗಡೆ ನಮೂದಿಸಿದ ವಿಧಾನಾನುಸಾರವಾಗಿ ಭೂಸಾಗುವಳಿ ನಡೆಯಬೇಕಾದರೆ ಅಗತ್ಯಬೀಳುವ ಯಾವುದೇ ಕೆಲಸ ಮಾಡುವಂತೆ ನಿರ್ದೇಶಿಸುವುದು. (4) ಗೋಚರಾವಿಗಾಗಿ ಯಾವುದೇ ಒಂದು ವಿಶಿಷ್ಟ ವಲಯವನ್ನು ಹುಲ್ಲುಗಾವಲಾಗಿ ಕಾದಿಡತಕ್ಕದ್ದೆಂದು ವಿಧಿಸುವುದು. (5) ಪರೀಕ್ಷಿಸಿ ಮಂಜೂರುಮಾಡಲ್ಪಡದ ಬೀಜಗಳನ್ನು ಉಪಯೋಗಿಸದಂತೆ ಪ್ರತಿಬಂಧಿಸುವುದು (6) ಈ ಕಾನೂನಿನ ಉದ್ದೇಶಗಳನ್ನು ಜಾರಿಗೆ ತರಲಾಗುವ ಇತರ ಯಾವುದೇ ಆಜ್ಞೆಗಳನ್ನು ಹೊರಡಿಸುವುದು.

ಯಾವುದೇ ಸ್ಥಳದ ಸಾಗುವಳಿ ಕೆಲಸಗಳ ಮೇಲ್ತನಿಖೆಗಾಗಿ ಮತ್ತು ಆ ಸ್ಥಳದ ಬೇಸಾಯೋದ್ಯಮದಲ್ಲಿ ತೊಡಗಿರುವ ಎಲ್ಲಾ ಜನರೂ ತಂತಮ್ಮ ಹೊಣೆಗಾರಿಕೆಗಳನ್ನು ಸರಿಯಾಗಿ ನಿರ್ವಹಿಸುವಂತೆ ನೋಡುವದಕ್ಕಾಗಿ ಎಗ್ರಿಕಲ್ಚರಲ್ ಇಲಾಖೆಯ ಯಾವನೇ ಆಫೀಸರನನ್ನಾದರೂ ಸುಪರ್ವೈಸರನನ್ನಾಗಿ ಸರಕಾರವು ನೇಮಿಸಬಹುದು. ಈ ಆಫೀಸರನು ತನ್ನ ಕಾರ್ಯಕ್ಷೇತ್ರದ ಯಾವನೊಬ್ಬನ ಬೇಸಾಯ ಭೂಮಿಯಲ್ಲಿ ಯಾವುದೇ ಕೊರತೆ ಮತ್ತು ಬೇಸಾಯ ಕಾರ್ಯಗಳಲ್ಲಿ ಯಾವುದೇ ದೋಷ ತೋರಿಬಂದರೆ ಅವುಗಳನ್ನು, ಅವುಗಳಿಗೆ ತಾನು ಸೂಚಿಸುವಂತಹ ಶಮನೋಪಾಯಗಳನ್ನೂ ಜಿಲ್ಲಾ ಕಲೆಕ್ಟರಿಗೆ ರಿಪೋರ್ಟ್ ಮಾಡತಕ್ಕದ್ದು.

ಪೈರುಗಳಿಗೆ, ಹುಲ್ಲುಗಾವಲಿಗೆ, ಆಹಾರ ಧಾನ್ಯಗಳಿಗೆ, ಜಾನುವಾರುಗಳಿಗೆ, ಮರಗಿಡಗಳಿಗೆ, ಕೆರೆಗಳಿಗೆ ಅಥವಾ ಯಾವುದೇ ಭೂಮಿಯ ಯಾವುದೇ ಕೆಲಸಕ್ಕೆ ಹಾನಿಯೊಡ್ಡುವಂತಹದಾದ್ದರಿಂದ ಅಗತ್ಯವೆಂದು ಎಗ್ರಿಕಲ್ಚರಲ್ ಸುಪರ್ವೈಸರಿಗೆ ಅಥವಾ ಸಂಬಂಧಪಟ್ಟ ಅಧಿಕಾರ ಹೊಂದಿದ ಇತರ ಯಾವನೇ ಅಧಿಕಾರಿಗೆ ತೋರಿ ಬಂದಲ್ಲಿ, ಅಂಥವರು ಅಂತಹ ಸ್ಥಳದ ಯಾವುದೇ ಪ್ರಾಣಿ, ಪಕ್ಷಿಗಳನ್ನು ಅಥವಾ ಅಂತಹ ಪಕ್ಷಿಯ ಮೊಟ್ಟೆಗಳನ್ನು ನಾಶಮಾಡುವದರ ಸಮೇತ ಅಗತ್ಯ ತೋರುವ ಯಾವುದೇ ಕಾರ್ಯವನ್ನು, ಇಂತಿಷ್ಟೇ ವಾಯಿದೆಯೊಳಗೆ ಮಾಡತಕ್ಕದ್ದೆಂದು ಸಂಬಂಧಪಟ್ಟವರಿಗೆ ನೋಟೀಸು ಕೊಡಬಹುದು.

ಮಾಲಕರೂ ಒಕ್ಕಲುಗಳೂ ತಮ್ಮಾಧೀನದ ಭೂಮಿಯಲ್ಲಿ ಅಧಿಕವಾಗಿ ಮತ್ತು ಉತ್ತಮ ವರ್ಗದ ಉತ್ಪತ್ತಿಯೇ ಆಗುವಂತೆ ಸುವ್ಯವಸ್ಥೆ ಮತ್ತು ಉತ್ತಮ ಕೃಷಿವಿಧಾನಗಳಿಗನುಸಾರವಾಗಿಯೇ ತಮ್ಮ ಭೂಸಾಗುವಳಿಯನ್ನು ನಿರ್ವಹಿಸತಕ್ಕದ್ದು. ವಿಶೇಷತಃ ಅವರು ಈ ಕೆಳಗಿನ ಕಾರ್ಯಗಳನ್ನು ಅನುಸರಿಸತಕ್ಕದ್ದು: [1] ಸಾಗುವಳಿಯೋಗ್ಯ ಭೂಮಿಯಾವುದೂ ಸಾಗುವಳಿಯಾಗದೆ ಬಾಕಿಬೀಳದಂತೆ ನೋಡತಕ್ಕದ್ದು. [2] ಕೃಷಿವಲಯ ಸ್ಥಳಗಳೆಲ್ಲವೂ ಸಾಗುವಳಿಗರ್ಹ ಸ್ಥಿತಿಯಲ್ಲಿ, ಫಲವತ್ತಾಗಿ ಮತ್ತು ಉತ್ತಮ ಸ್ಥಿತಿಯಲ್ಲಿರುವಂತೆನೋಡಿಕೊಳ್ಳಬೇಕು. [3] ಬೆಳೆಗಳು ಮತ್ತು ಜಾನುವಾರುಗಳಿಗೆ ರೋಗ ಅಥವಾ ಹುಳ ಮತ್ತಿನ್ನಿತರ ಬಾಧೆತಟ್ಟದಂತೆ ಅಗತ್ಯವುಳ್ಳ ಮುಂಜಾಗ್ರತೆಗಳನ್ನು ವಹಿಸಿರತಕ್ಕದ್ದು. [4] ಬೆಳೆಗಳಿಗೆ ಸರಿಯಾದ ರಕ್ಷಣೆಯಿರಬೇಕಲ್ಲದೆ ಸಕಾಲದಲ್ಲಿ ಅವುಗಳ ಕಟಾವು ನಡೆಸತಕ್ಕದ್ದು [5] ಸಾಗುವಳಿ ನಿರ್ವಹಣದಲ್ಲಿ ತಮ್ಮ ಕರ್ತವ್ಯವಾಗಿ ಬರುವ ಸಂರಕ್ಷಣೆ ಮತ್ತು ದುರಸ್ತಿ ಕಾರ್ಯಗಳನ್ನು ಸರಿಯಾದ ರೀತಿಯಿಂದ ನಿರ್ವಹಿಸತಕ್ಕದ್ದು. [6] ವಿಧಿಸಲಾಗುವ ರೀತಿಯಲ್ಲಿ ಆಹಾರಧಾನ್ಯ ಬೆಳೆಯುವ ಕ್ಷೇತ್ರದಲ್ಲಿ ಒಟ್ಟು ಪರಿಮಾಣದ ದಾಮಾಶಯಕ್ಕೆ ಸರಿಬೀಳುವಂತೆ ಸರದಿಪ್ರಕಾರ ತಪ್ಪದೆ ಬೇರೆಬೇರೆ ಬೆಳೆಗಳ ಬೆಳವಣಿಗೆಯಿರತಕ್ಕದ್ದು. [7] ಈ ಶಾಸನವನ್ನಯ

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೇ ಉಳಿತಾಯದ ಪ್ರವೃತ್ತಿಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ **ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟು**ಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

-ಉತ್ತಮ ಸಾಗುವಳಿಗಾಗಿ

ಸರಕಾರವು ಕಡ್ಡಾಯವಾಗಿ ಆಸ್ತಿ ವಶಪಡಿಸಿಕೊಳ್ಳಬಲ್ಲದು.

ಅಧಿಕೃತರಿಂದ ಆಫೀಸರರು ಆಗಾಗ ಕೊಡುವ ಆಜ್ಞೆಗಳನ್ನು ಸರಿಯಾಗಿ ಪಾಲಿಸತಕ್ಕದ್ದು.

ಎಗ್ರಿಕಲ್ಚರಲ್ ಸುಪರ್‌ವೈಸರರ ಅಥವಾ ಅಂತಹ ಇತರ ಅಧಿಕಾರಿಗಳ ರಿಪೋರ್ಟುಗಳನ್ನು ಪಡೆದ ಜಿಲ್ಲಾ ಕಲೆಕ್ಟರರು ಯಾವುದೇ ಭೂಮಿಯು ಅದರ ಮ್ಹಾಲಕನಿಂದ ಯೋಗ್ಯರೀತಿಯಲ್ಲಿ ಸಾಗುವಳಿಯಾಗುತ್ತಿಲ್ಲವೆಂದು ಖಚಿತಮಾಡಿಕೊಂಡರೆ, ಸಂಬಂಧಪಟ್ಟ ಭೂಮ್ಹಾಲಕನಿಗೆ ನೋಟೀಸುಕೊಟ್ಟು, ಅವನ ಆಕ್ಷೇಪಗಳೇನಾದರೂ ಇದ್ದರೆ ಕೇಳಿಕೊಂಡು, ಸದ್ರಿ ಭೂಮಿಯು, ಇಂತಿಷ್ಟು ಅವಧಿಯ ವರೆಗೆ ಇಂಥವನ ಆಡಳಿತೆಯಲ್ಲಿರತಕ್ಕದ್ದೆಂದು ವಿಧಿಸುವ ಮೂಲಕ ಬೇರೆಯವರ ಸ್ವಾಧೀನಪಡಿಸಬಹುದು. ಮ್ಹಾಲಕನು ಇಂತಹ ಕೆಲಸವನ್ನು ಈ ರೀತಿ ಮಾಡಬೇಕೆಂದು ಆಜ್ಞೆಯಲ್ಲಿ ನಮೂದಿಸಿದ ವಿಶಿಷ್ಟಮಾದರಿಯಲ್ಲಿ ನಡೆದುಕೊಳ್ಳತಕ್ಕದ್ದೆಂದು ವಿಧಿಸಬಹುದು; ಅಥವಾ ಸಂದರ್ಭಾನುಸಾರವಾಗಿ ನಮೂದಿಸಿತಿಳಿಸುವ ಮಾದರಿಯ ಬೆಳೆಗಳನ್ನು ಇಂತಹ ಸ್ಥಳದಲ್ಲಿ ಹೀಗೆ ಹೀಗೆಯೇ ಬೆಳೆಸತಕ್ಕದ್ದೆಂದು ವಿಧಿಸಬಹುದು.

ಈ ರೀತಿ ವರ್ಗಾಯಿಸುವಂತಹ ಭೂಮಿಯ ಮಟ್ಟಿಗೆ, ಯಾರಿಗೆ ಆ ಭೂಮ್ಹಾಲಿಕೆ ವರ್ಗಾಯಿಸಲ್ಪಟ್ಟು ದೊರೆಯುವುದೋ ಅಂಥವನು ಆ ಭೂಮಿಯನ್ನು ಒಳ್ಳೇಸ್ಥಿತಿಗೆ ಮತ್ತು ಉತ್ತಮಸಾಗುವಳಿಗೇರಿಸತಕ್ಕದ್ದೆಂಬುದು ಅಂತಹ ಪ್ರತಿಯೊಂದು ವರ್ಗೀಕರಣದಲ್ಲೂ ಒಂದು ಶರ್ತವಾಗಿರತಕ್ಕದ್ದು.

ಹೀಗೆ ಕೈಬದಲಾವಣೆಯಿಂದ ಸಾಗುವಳೀ ಭೂಮಿ ಪಡೆಯುವವನು ಜಿಲ್ಲಾ ಕಲೆಕ್ಟರರು ನಿರ್ಧರಿಸುವಷ್ಟು ಸದ್ರಿ ಭೂಮಿಯ ಉತ್ಪನ್ನಗಳ ಪಾಲನ್ನಾಗಲೀ, ಅದರ ಉತ್ಪನ್ನಗಳ ಲಾಭಾಂಶವನ್ನಾಗಲೀ ತೆರಲು ಬದ್ಧನಿದ್ದಾನೆ.

ಅಂತಹ ಮನುಷ್ಯನು ಅಂತಹ ಭೂಮಿಯಲ್ಲಿ ಮಾಡುವ ಯಾವುದೇ ದುರಸ್ತಿ ಅಥವಾ ಸುಧಾರಣೆಯ ವೆಚ್ಚವನ್ನು ಅವನ ಪರವಾಗಿ ಸರಕಾರವೇ ಭೂಕಂದಾಯ ಕಂತುರೂಪದಿಂದ ಮ್ಹಾಲಕನಿಂದ ವಸೂಲುಮಾಡಿಕೊಳ್ಳುವುದು.

ಎಗ್ರಿಕಲ್ಚರಲ್ ಸುಪರ್‌ವೈಸರ್ ಅಥವಾ ಇತರರಿಂದ ವರದಿಯಾದ ಪ್ರಕಾರ ಒಬ್ಬ ಒಕ್ಕಲುಕೃಷಿಕನು ತನ್ನ ಪಾಲಿನ ಸಾಗುವಳೀಭೂಮಿಯನ್ನು ಸರಿಯಾಗಿ ಸಾಗುವಳೀಮಾಡುತ್ತಿಲ್ಲವೆಂಬುದು ಜಿಲ್ಲಾ ಕಲೆಕ್ಟರರಿಗೆ ಮನದಟ್ಟಾದರೆ, ಅವರು ಅಂತಹ ಒಕ್ಕಲಿಗೆ ನೋಟೀಸು ಕೊಟ್ಟು, ಅವನ ಆಕ್ಷೇಪಗಳೇನಾದರೂ ಇದ್ದರೆ ವಿಚಾರಿಸಿಕೊಂಡು, ಭೂಮಿಯ ಮೇಲಿನ ಅವನ ಒಕ್ಕಲುತನವನ್ನು ರದ್ದುಪಡಿಸಬಹುದು. ಮತ್ತು ಆ ಆಸ್ತಿಯ ಮ್ಹಾಲಕನಿಗೆ, ಆತನು ಸ್ವತಃ ಸಾಗುವಳಿಮಾಡುವಂತೆ ಅಥವಾ ತನ್ನಿಚ್ಛೆಯ ಬೇರೆ ಒಕ್ಕಲಿಗೆ ಅದನ್ನು ಕೊಡುವಂತೆ ಆಜ್ಞಾಪಿಸಬಹುದು. ಮ್ಹಾಲಕನಾದವನು ಇವೆರಡನ್ನೂ ಮಾಡಲಾರದೆ ಹೋದರೆ ಆ ಭೂಸಾಗುವಳಿಗೆ ತಾನೇ ಓರ್ವ ಒಕ್ಕಲನ್ನು ಕಲೆಕ್ಟರ್ ನೇಮಿಸಬಹುದು.

ಹೀಗೆ ರದ್ದುಮಾಡಲ್ಪಡುವ ಒಕ್ಕಲಿಗೆ ತಾನುಮಾಡಿದ್ದ ಕೃತಗಳಿಗಾಗಿ ಯಾವುದೇ ಪರಿಹಾರದ್ರವ್ಯ ಕೇಳುವ ಹಕ್ಕಿರುವುದಿಲ್ಲ.

ಈ ರೀತಿ ಕಲೆಕ್ಟರರಿಂದ ಮಂಜೂರು ಹೊಂದಿ ಯಾವುದೇ ಒಕ್ಕಲು ಭೂಮಿಯನ್ನು ಪಡೆಯುವ ಯಾವನೇ ಒಕ್ಕಲಿನವನಾದರೂ ಆ ಭೂಮಿಯ ಗೇಣಿಯನ್ನು ನೇರಾಗಿ ಅದರ ಮ್ಹಾಲಕನಿಗೇನೇ ಕೊಡತಕ್ಕದ್ದು.

ಯಾವುದೇ ಮಾಲಿಕನ ಸ್ವಾಧೀನದಲ್ಲಿರುವ ಆಸ್ತಿಯು ಬಂಜರ ಬಿದ್ದಿದ್ದರೆ, ಅಥವಾ ಬೇಸಾಯವಾಗದೆ ಉಳಿದಿದ್ದರೆ, ಜಿಲ್ಲಾ ಕಲೆಕ್ಟರರು ಒಂದು ಮಾಯಿದೆ ನಮೂದಿಸಿ, ಅದರೊಳಗೆ ಆ ಭೂಮಿಯನ್ನು ಹಸನುಗೊಳಿಸಬೇಕು ಅಥವಾ ಬೇಸಾಯಮಾಡಬೇಕು, ಎಂದು ನೋಟಿಸು ಕೊಡಬಹುದು. ಮತ್ತದಕ್ಕೆ ತಪ್ಪಿದಲ್ಲಿ ತನ್ನಿಂದ ಆರಿಸಲ್ಪಡಬಹುದಾದ ಇಂತಹ ಮನುಷ್ಯನಿಗೆ ಆ ಭೂಮಿಯನ್ನು ಒಪ್ಪಿಸಲಾಗುವದೆಂದು ಆ ನೋಟಿಸಿನಲ್ಲಿ ನಮೂದಿಸಬಹುದು. ನೋಟಿಸಿನಲ್ಲಿ ಸೂಚಿಸಿದ ಮಾಯಿದೆಯೊಳಗೆ, ಅದರೊಳಗಿನ ಶರ್ತಗಳ ಪಾಲನೆಗಗತ್ಯವುಳ್ಳ ಕಾರ್ಯಗಳನ್ನು ಮ್ಹಾಲಕನು ಕೈಕೊಳ್ಳದಿದ್ದರೆ, ಅಥವಾ ಹಾಗೆ ಮಾಡದಿರಲು ತನಗಿರುವ ಸರಿಯಾದ ಕಾರಣಗಳಾವುವನ್ನೂ ಮುಂದಿಡಲಾರದೆ ಹೋದರೆ, ಜಿಲ್ಲಾ ಕಲೆಕ್ಟರನು ಆ ಭೂಮಿಯನ್ನು ಯೋಗ್ಯನೆಂದು ತನಗೆ ತೋರುವ ಬೇರೊಬ್ಬನಿಗೆ, ಇಂತಿಷ್ಟೇ ಮಾಯಿದೆಗಾಗಿ ಕೊಟ್ಟು ಬಿಡಬಹುದು. ಹೀಗೆ ಭೂಮಿ ಪಡಕೊಳ್ಳುವವನು ಸರಕಾರಕ್ಕೆ ಅದರ ತೀರ್ವೆಯನ್ನೂ ಮಾಲಕನಿಗೆ ಕಲೆಕ್ಟರರು ನಿರ್ಣಯಿಸುವ ಅದರ ಗೇಣಿಯನ್ನೂ ತೆರತಕ್ಕದ್ದೆಂಬ ಶರ್ತವಿರತಕ್ಕದ್ದು: ಇಂತಹ ಒಕ್ಕಲಿನವನು ಕ್ರಮಬದ್ಧವಾಗಿ ಒಕ್ಕಲು ಬಿಡಬೇಕಾಗಿ ಬರುವಾಗ, ತಾನು ಮಾಡಿರುವ ಕೃತಗಳಿಗಾಗಿ ಪರಿಹಾರ ದ್ರವ್ಯ ಪಡೆಯಲು ಹಕ್ಕುದಾರನಾಗುತ್ತಾನೆ.

ಮೇಲಿನ ಪ್ರಕರಣದನ್ವಯ ತಾನು ಕೊಡುವ ಆಜ್ಞೆಗಳೆಲ್ಲವೂ ಸರಿಯಾಗಿ ಜಾರಿಯಲ್ಲಿರುವಂತೆ ಮಾಡುವರೆ ಅಗತ್ಯವೆಂದು ತೋರುವ ಎಲ್ಲಾ ವಿಧದ ಅಧಿಕಾರಗಳನ್ನೂ ಜಿಲ್ಲಾ ಕಲೆಕ್ಟರರು ನಿರ್ವಹಿಸಬಹುದು.

ಆಸ್ತಿ ಸ್ವಾಧೀನತೆ:- ಯಾವುದೇ ಬೇಸಾಯ ಭೂಮಿಯು ಸಾಗುವಳಿಯಾಗದೆ, ಬಿದ್ದಿದ್ದರೆ, ಅಥವಾ ಸರಿಯಾದ ರೀತಿಯಿಂದ ಸಾಗುವಳಿಯಾಗದಿದ್ದರೆ, ಸರಕಾರವು ಅಂತಹ ಆಸ್ತಿಯನ್ನು ಕಡ್ಡಾಯವಾಗಿ ಕ್ರಯಕ್ಕೆ ಅಥವಾ ಗೇಣಿಗಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಮತ್ತದರ ಸರಿಯಾದ ಸಾಗುವಳಿಗಾಗಿ ತನಗೆ ಯೋಗ್ಯವೆಂದು ತೋರುವಂತಹ ವ್ಯವಸ್ಥೆಗಳನ್ನು ಮಾಡಬಹುದು.

ಹೀಗೆ ಸ್ವಾಧೀನಪಡಿಸಿಕೊಂಡ ಭೂಮಿಯನ್ನು, ಇನ್ನೊಂದು ಭೂಮಿಯ ಕೂಡು ವಿಕೆಯಿಂದಲ್ಲದೆ ಸಮಾಧಾನಕರವಾಗಿ ಸಾಗುವಳೀ ಮಾಡುವುದಸಾಧ್ಯವೆಂದು ಸರಕಾರಕ್ಕೆ ತೋರಿದರೆ, ಸರಕಾರವು ಆ ಇನ್ನೊಂದು ಭೂಮಿಯನ್ನೂ ಸಂದರ್ಭೋಚಿತವಾಗಿ ಕಡ್ಡಾಯವಾಗಿ ಕ್ರಯ ಅಥವಾ ಗೇಣಿಗೆ ಪಡಕೊಳ್ಳಬಹುದು.

40 ಎಕ್ರೆಗಳಿಗೆ ಮಿಕ್ಕ ಮತ್ತು 100 ಎಕ್ರೆಗಳೊಳಗೆ ಸ್ವಾಧೀನತಾ ಭೂಮಿಯುಳ್ಳ ಯಾವನೇ ಆದರೂ ಗ್ರಾಮ ರಿಜಿಸ್ಟ್ರಿಯಲ್ಲಿ ಹಿಂದಿನವರುಷ ಅವನ ಹೆಸರಿನಲ್ಲಿ ಕಂಡುಬಂದಿರುವಂಥಾ ಹಡಿಲು ಭೂಮಿಯ ಶೇಕಡಾ 10 ಅಂಶವನ್ನು ತನ್ನ ಸಾಗುವಳೀ ಭೂಮಿಯ ಜತೆಯಲ್ಲಿ ಸ್ವಂತ ಅಥವಾ ಗೇಣಿಗೆ ಕೊಟ್ಟು, ಆಜ್ಞಾಪತ್ರದಲ್ಲಿ ನಮೂದಿಸಲ್ಪಡುವ ಸಾಗುವಳೀ ವರುಷದೊಳಗೆ ಬೇಸಾಯ ಮಾಡಿಸಲೇಬೇಕೆಂದು ಸರಕಾರವು ಆಜ್ಞಾಪಿಸಬಹುದು.

ಅದೇರೀತಿ 100 ಎಕ್ರೆಗಳಿಗೂ ಮಿಕ್ಕಿದ ಸ್ವಾಧೀನಸಾಗುವಳೀ ಭೂಮಿಯಿರುವವನು, ಹಿಂದಿನವರುಷದಲ್ಲಿ ತನ್ನ ಹೆಸರಿನಲ್ಲಿ ಕಾಣಿಸಿರುವ ಬಂಜರ ಭೂಮಿಯ ಶೇ. 20ರಷ್ಟನ್ನು ನಮೂದಿತ ಸಾಗುವಳೀ ವರುಷದಲ್ಲಿ ಸ್ವತಃ ಅಥವಾ ಇನ್ನೊಬ್ಬರಿಗೆ ಕೊಟ್ಟು ಸಾಗುವಳಿ ಮಾಡಿಸತಕ್ಕದ್ದೆಂದು ಸರಕಾರವು ಆಜ್ಞಾಪಿಸಬಹುದು.

ಹೀಗೆ ಸಾಗುವಳೀ ಮಾಡತಕ್ಕ ಹಡಿಲು ಭೂಮಿಯ ಎಕ್ರೆಗಳನ್ನು ಲೆಕ್ಕಿಸಿ ನಿರ್ಣಯಿಸುವಾಗ ಬರುವ ಅರ್ಧ ಎಕ್ರೆಗೆ ಕಡಿಮೆಯಿರುವ ಅಂಶಗಳನ್ನು ಕಡೆಗಣಿಸಲಾಗುವದು

ಹಡಿಲು ಬಿದ್ದ ಸ್ಥಳವು ತನ್ನ ಜಾನುವಾರುಗಳ ಹುಲ್ಲಿಗಾಗಿ ಇಟ್ಟದ್ದೆಂದು-ಕೆಲಕಾಲ ಹಡಿಲುಬಿದ್ದು ಕೊನೆಗೇನೇ ಫಲವತ್ತಾಗಬೇಕಾದಂತಹ ದುರ್ಬಲ ಮಣ್ಣೆಂದು-ಮತ್ತಿಂತಹ ಇತರಸರಿಯಾದ ಕಾರಣಗಳನ್ನು ಕೊಟ್ಟು, ನಮೂದಿತ ಸಾಗುವಳಿ ವರುಷದ ಮೊದಲಿನ ಎಪ್ರಿಲ್ 1ನೇ ತಾರೀಕಿನೊಳಗೆ ಎಗ್ರಿಕಲ್ಚರಲ್ ಸುಪರ್‌ವೈಸರರಿಗೆ ಅರ್ಜಿ ಹಾಕಿ ಯಾವದೇ ಭೂಮ್ಹಾಲಕನು ಅಥವಾ ಆ ಭೂಮಿಯು ಸ್ವಾಧೀನದಲ್ಲಿರುವವನು ಹಡಿಲು ಸ್ಥಳಗಳ ಸಾಗುವಳಿ ಮಟ್ಟಿಗೆ ವಿನಾಯತಿ ಹೊಂದಬಹುದು (ಈ ಸಂಬಂಧದ ಶರ್ತಗಳು ಮಸೂದೆಯಲ್ಲಿವೆ). ಇಂತಹ ವಿನಾಯತಿ ಯಾಚನಾ ಅರ್ಜಿಯ ಕುರಿತು ಎಗ್ರಿಕಲ್ಚರಲ್ ಸುಪರ್‌ವೈಸರರು ಅಗತ್ಯವುಳ್ಳ ವಿಚಾರಣೆಗಳನ್ನು ನಡೆಸಿ ವಿನಾಯತಿ ಮಾಡಲು ಸಾಕಾಗುವ ಕಾರಣಗಳಿಲ್ಲವೆಂದು ಕಂಡುಕೊಂಡರೆ ಅಥವಾ ತನ್ನ ಆ ಹಡಿಲು ಭೂಮಿಗಳ ಸಾಗುವಳಿಗಾಗಿ ಯೋಗ್ಯ ಅನುಭೋಗದಾರನನ್ನು ನೇಮಿಸಬೇಕೆಂದು ಸಂಬಂಧಪಟ್ಟ ಭೂಮ್ಹಾಲಕನಿಂದ ಅಥವಾ ಭೂಸ್ವಾಧೀನತಾಸಾಗುವಳೀಗಾರನಿಂದ ಮೇಲ್ಕಂಡ ನಮೂದಿಸಿದ ಮಾರ್ಚಿ 1ರೊಳಗೆ ಜಿಲ್ಲಾಕಲೆಕ್ಟರರಿಗೆ ಅರ್ಜಿ ಬಂದಿದ್ದರೆ, ಕಲೆಕ್ಟರರು ಅಂತಹ ಹಡಿಲು ಸ್ಥಳವನ್ನು ಇಡಿಯಾಗಿ ಅಥವಾ ಅಂಶತಃ ಯಾವನೊಬ್ಬ ಅನುಭೋಗದಾರನಿಗಾದರೂ ಐದು ವರುಷಗಳಿಗೆ ಮಿಕ್ಕದ ಮಾಯಿದೆಗೆ ಕಟ್ಟಿಕೊಡಬಹುದು. ಹಾಗೆ ಕಟ್ಟಿಕೊಡುವ ಸಂದರ್ಭದಲ್ಲಿ ಮೊದಲಿನ 3ವರುಷಗಳಿಗೆ ಆ ಭೂಮಿಯ ತೀರ್ವೆಯಷ್ಟೇ ಗೇಣಿ, ಆ ಮೇಲಿನ ಎರಡು ವರುಷಗಳಿಗೆ ಅದರ ಇಮ್ಮಡಿ ಗೇಣಿ ವಿಧಿಸಬಹುದು. ಹೀಗೆ ಗೇಣಿಗೆ ಕಟ್ಟಿಕೊಡುವ ಅಧಿಕಾರವು ಜಿಲ್ಲಾ ಕಲೆಕ್ಟರರಿಗೆ ಮತ್ತು ಅವರಿಂದ ನಿಯಮಿಸಲ್ಪಡುವ ತಹಶೀಲ್ದಾರ ದರ್ಜೆಗಿಂತ ಕಡಿಮೆಯವರಲ್ಲದ ಅಧಿಕಾರಿಗಳಿಗೆ ಮಾತ್ರವಿರುವುದು. ಹಾಗೆ ವಹಿಸಿಕೊಂಡವನು ಯಾರ ಪರವಾಗಿ ಕಲೆಕ್ಟರ್ ಅಥವಾ ತಹಶೀಲ್ದಾರರ ಮೂಲಕ ಆ ಸ್ಥಳವನ್ನು ತ ವಹಿಸಿಕೊಂಡಿದ್ದನೋ ಆ ಸ್ಥಳದೊಡೆಯನಿಗೇನೇ ನಿಶ್ಚಿತರೀತಿಯಲ್ಲಿ ನಿಶ್ಚಿತಕಾಲದಲ್ಲಿ ಗೇಣಿಸಂದಾಯಿಸತಕ್ಕದ್ದು. ತದ್ವಿರುದ್ಧವಾದ ಪ್ರಚಲಿತ ನಿಯಮ ಶಾಸನಗಳೇನಿದ್ದರೂ ಇಂತಹ ಸ್ಥಳಪರಾಧೀನತೆಯೋ ಸಿಂಧುವಾಗಿ, ಅದರಲ್ಲಿ ನಮೂದಿಸಲ್ಪಟ್ಟ ರೀತಿಯಲ್ಲಿ ಜಾರಿಗೆ ಬರಲು ಬದ್ಧವಿದೆ.

ಬೇಸಾಯ ಸುಧಾರಣಾ ಬೋರ್ಡು.

ಈ ಶಾಸನದನ್ವಯ ಕೊಡಲ್ಪಡುವ ಕಾರ್ಯಭಾರಗಳನ್ನು ಅಥವಾ ನಿಯೋಜಿಸಲ್ಪಡುವ ಇತರ ಕಾರ್ಯಕಲಾಪಗಳನ್ನು ನಿರ್ವಹಿಸುವುದಕ್ಕಾಗಿ ಸರಕಾರವು ಯಾವುದೇ ಸ್ಥಳೀಯ ಕ್ಷೇತ್ರದಲ್ಲಿ ಒಂದು 'ಬೇಸಾಯ ಸುಧಾರಣಾ ಬೋರ್ಡ'ನ್ನು ನಿರ್ಮಿಸಬಹುದು. ಇಂತಹ ಬೋರ್ಡು ನೇಮಿತ ಕ್ಷೇತ್ರದಲ್ಲಿ,ಸರಕಾರವು ನಿಶ್ಚಯಿಸುವ ಅವಧಿಗಾಗಿ ಸರಕಾರವು ಇಚ್ಛಿಸುವಷ್ಟು ಸಂಖ್ಯೆಯ ಬೇಸಾಯ ಸುಧಾರಣೆಯಲ್ಲಿ ಆಸಕ್ತಿಯುಳ್ಳ ಸದಸ್ಯರಿಂದ ಕೂಡಿದ್ದು ಕಾರ್ಯ ನಿರ್ವಹಿಸುವಂತಹದಾಗುವದು. ಈ ಬೋರ್ಡು ಈ ಕಾನೂನಿನನ್ವಯ ಅದಕ್ಕೆ ಒಪ್ಪಿಸಿಕೊಡಲ್ಪಡುವ ಕಾರ್ಯಭಾರಗಳನ್ನು ನಿರ್ವಹಿಸುವ ಸರಕಾರೀ ಏಜಂಟ್ ಆಗಿ ಗಣಿಸಲ್ಪಡುವಂತಹದು.

ಈ ಶಾಸನದನ್ವಯ ಸರಕಾರದ್ದಾಗಿರುವ ಮತ್ತು ಸರಕಾರವು ಸ್ವಾಧೀನಕ್ಕೆ ತೆಗೆದುಕೊಂಡ ಯಾವುದೇ ಭೂಮಿಯ ಆಡಳಿತೆಯನ್ನು ಈ ಶಾಸನಾನುಸಾರ ಸಾಗಿಸಲು ಸರಕಾರವು [illegible]ರ್ಡಿಗೆ ವಹಿಸಿಕೊಡಬಹುದು. ಮತ್ತು ಅದರ ಕಾರ್ಯವೆಚ್ಚಕ್ಕಾಗಿ ಅಗತ್ಯವೆಂದು ತೋರುವ ನಿಧಿಯನ್ನು ಬೋರ್ಡಿನ ವಶಕ್ಕೆ ಸರಕಾರವು ಬಿಡಬಹುದು.

ನವಯುಗದ ಚಂದಾದಾರರಲ್ಲಿ ವಿನಂತಿ

ಇದೇ ಬರುವ ಆಗೋಸ್ತು ತಿಂಗಳಾಂತ್ಯಕ್ಕೆ ನವಯುಗದ 29ನೆ ವರ್ಷವು ಕೊನೆಗೊಂಡು ಸಪ್ಟಂಬರ್ ಆದಿಯಿಂದ 30ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ನವಯುಗದ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ದಯಮಾಡಿ ಸಕಾಲದಲ್ಲಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಅಂತೆಯೇ ಇನ್ನು ಚಂದಾ ಹಣ ಬಾಕಿ ಇಟ್ಟುಕೊಂಡಿರುವವರೂ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸುವಂತೆಯೂ ವಿನಂತಿ.

ಮೆನೇಜರ್,
ನವಯುಗ, ಉಡುಪಿ

ಈ ಬೋರ್ಡು, ಸರಕಾರವು ಕೊಡುವ ನಿರ್ದೇಶಗಳನ್ನು ಜಾರಿಗೆ ತರುವದು, ತನ್ನ ಸ್ವಾಧೀನವಿರುವ ಭೂಮಿಯಲ್ಲಿ ಅಥವಾ ಭೂಮಿಗಾಗಿ ಉಪಯೋಗಕರ ಸುಧಾರಣೆಗಳನ್ನೆಲ್ಲಾ ಮಾಡುವದು, ಅಗತ್ಯ ತೋರಿದರೆ ತನ್ನಾಧೀನ ಭೂಮಿಗಳನ್ನು ಗೇಣಿಗೆ ವಹಿಸಿ ಕೊಡುವುದೇ ಮುಂತಾದ ಆ ಸಂಬಂಧದ ಸರ್ವ ಕಾರ್ಯಭಾರಗಳನ್ನು ನಿರ್ವಹಿಸುವ ಅಧಿಕಾರವುಳ್ಳದ್ದಾಗುವದು. ಬೋರ್ಡಿನ ಸ್ವಾಧೀನ ಬರುವ ಆಸ್ತಿಗಳಲ್ಲಿ 100 ಎಕ್ರೆಗಳು ಮತ್ತು ಅದಕ್ಕೂ ಮಿಕ್ಕಿ ಒಂದೇ ಕಡೆಯಲ್ಲಿದ್ದರೆ, ಅಂತಹ ಭೂಮಿಯ ಸುಧಾರಣೆ, ಸಲಕರಣೆ, ಬೇಸಾಯಕ್ಕಾಗಿ ಬೋರ್ಡು ಒಂದು ಯೋಜನೆಯನ್ನು ತಯಾರಿಸಿಕೊಳ್ಳಬೇಕು. ಸಾಗುವಳಿ ವಿಧಾನ ಮತ್ತು ಯಾವ ವಿಧದ ಒಕ್ಕಲುತನದ ಮೂಲಕ ಅದರ ಬೇಸಾಯ, ಅದನ್ನು ವಿಂಗಡಿಸಿ ಹಲವು ಒಕ್ಕಲುಗಳನ್ನು ಹಾಕುವದಾದರೆ ಎಷ್ಟು ಮಂದಿ ಮತ್ತು ಯಾವ ನಮೂನೆ, ಈ ಹಂಚಿಕೆಗಳ ಅಂದಾಜು ವೆಚ್ಚ, ಇತ್ಯಾದಿ ವಿವರಗಳು ಆ ಯೋಜನೆಯಲ್ಲಿ ಅಡಕವಾಗಿರತಕ್ಕದ್ದು. ಸರಕಾರವು ಬದಲಾವಣೆ ವಿನಹ ಅಥವಾ ಅಗತ್ಯತೋರುವ ಬದಲಾವಣೆಗಳೊಂದಿಗೆ ಅಂತಹ ಯೋಜನೆಯನ್ನು ಮಂಜೂರು ಮಾಡಬಹುದು. ಈ ಬೇಸಾಯ ಸುಧಾರಣಾ ಬೋರ್ಡು ತನ್ನ ಅಂಕೆಯೊಳಗಿನ ಆಸ್ತಿಪಾಸ್ತಿಗಳ ನಕಾಶೆಗಳನ್ನು, ರಿಕಾರ್ಡುಗಳನ್ನು, ಲೆಕ್ಕಪತ್ರಗಳನ್ನು ಮತ್ತಿತರ ಸಂಬಂಧಪಟ್ಟ ದಾಖಲೆಗಳೆಲ್ಲವನ್ನೂ ಇಡತಕ್ಕದ್ದೆಂಬ ನಿಯಮಗಳಿವೆ. ಬೇಸಾಯಮಾಡಿ ಅನುಭವವುಳ್ಳವರಿಗೆ, ಸಾಗುವಳೀ ಕೆಲಸಗಾರರಿಗೆ, ಅಥವಾ ಕೋಪರೇಟಿವ್ ಸೊಸೈಟಿಗಳಿಗೆ ಬೋರ್ಡು ತನ್ನಾಸ್ತಿಯನ್ನು ಸಾಗುವಳಿಗೆ ಕೊಡಬೇಕೆಂದು ನಿಯಮಿಸಲಾಗಿದೆ. ಒಂದು ಒಕ್ಕಲಿಗೆ ಕೊಡುವಾಗ ಬಯಲುಭೂಮಿಯಾದರೆ 5 ಎಕ್ರೆಗೆ ಕಡಿಮೆಯಾಗದಷ್ಟು, ಬೆಟ್ಟಾದರೆ 10 ಎಕ್ರೆಗೆ ಕಡಿಮೆಯಾಗದಷ್ಟು, ತೋಟ ಭೂಮಿಯಾದರೆ 2 ಎಕ್ರೆಗೆ ಕಡಿಮೆಯಾಗದಷ್ಟನ್ನೇ ಕೊಡಬೇಕೆಂಬ ನಿಯಮವಿದೆ. ಬೋರ್ಡು ಸದಸ್ಯರಿಗೆ ಪ್ರಯಾಣಭತ್ತೆ ಮತ್ತು ಸಭಾಭತ್ತೆಗಳು ದೊರಕುವವು. ಸರಕಾರದ ಅನುಮತಿ ಪಡೆದು ಸಂಬಳದ ಮೇಲೆ ಕೆಲಸಮಾಡುವ ನೌಕರರನ್ನು ಬೋರ್ಡು ಇಟ್ಟುಕೊಳ್ಳಬಹುದು.

ಅಪರಾಧಗಳು ಮತ್ತು ಶಿಕ್ಷೆಗಳು—ಸರಕಾರದಿಂದ ಅಥವಾ ಸರಕಾರೀ ಆಫೀಸರನಿಂದ ಈ ಶಾಸನದ ಯಾವುದೇ ಪ್ರಕರಣದನ್ವಯ ಕೊಡಲ್ಪಡುವ ಆಜ್ಞೆಯೊಂದನ್ನು ಉಲ್ಲಂಘಿಸುವ, ಅಥವಾ ಅದರಂತೆ ವರ್ತಿಸಲು ತಪ್ಪುವ ಯಾವನೇ ಒಬ್ಬ ಮನುಷ್ಯ ರೂ. 100 ವರೆಗಿನ ಜುಲ್ಮಾನೆಗೊಳಗಾಗಲು ಬದ್ಧನಿದ್ದಾನೆ. ಈ ಶಾಸನದಲ್ಲಿರುವ ಕಡಿಲು ಭೂಸಾಗುವಳೀ ಸಂಬಂಧದ ಪ್ರಕರಣಗಳನ್ನು ಭೂಮಿಯುಳ್ಳ ಯಾವನೇ ಆದರೂ ಉಲ್ಲಂಘಿಸಿದರೆ, ಅಥವಾ ತದನುಸಾರವಾಗಿ ವರ್ತಿಸಲು ತಪ್ಪಿದರೆ, ಅಂಥವನು ಈ ಸಂಬಂಧವಾಗಿ ಸರಕಾರದಿಂದ ನೇಮಿಸಲ್ಪಡುವ ರೆವಿನ್ಯೂ ಆಫೀಸರನು ಆಜ್ಞಾಪಿಸುವಂತೆ, ಸಾಗುವಳಿಯಪೇಕ್ಷಿಸಲ್ಪಟ್ಟ ಅಂತಹ ಭೂಮಿಯ ಎಕ್ರೆಯೊಂದಕ್ಕೆ 50 ರೂಪಾಯಿಗಳಿಗೆ ಮಿಕ್ಕದ ದಂಡಕೆರಲು ಬದ್ಧನಾಗುತ್ತಾನೆ.

ಮೇಲ್ಗಡೆ ಪ್ರಥಮತಃ ನಮೂದಿಸಿರುವ ದಂಡನೆಯನ್ನೊಳಗೊಂಡ ಕಲಮಿಗೆ ಆಬಾಧಿತವಾಗಿ, ಆ ಕಲಮಿನನ್ವಯ ಆಜ್ಞೆ ಕೊಟ್ಟ ಅಧಿಕಾರಿ, ಅಥವಾ ಅವನಿಂದ ಅಧಿಕೃತನಾಗುವ ಅವನ ಕೈಕೆಳಗಿನ ಅಧಿಕಾರಿ, ಇಲ್ಲವೆ ಅಂತಹ ಆಜ್ಞೆಯು ಸರಕಾರದಿಂದಲೇ ಕೊಡಲ್ಪಟ್ಟಿದ್ದಲ್ಲಿ ಸರಕಾರವು ನೇಮಿಸುವ ಯಾವನೊಬ್ಬ ಅಧಿಕಾರಿಯು ಸದ್ರಿ ಭೂಮಿಯೊಳಗೆ ಪ್ರವೇಶಿಸಬಹುದು; ಮತ್ತು ಆಜ್ಞಾಪಿಸಲ್ಪಟ್ಟಂತಹ ಕಾರ್ಯಗಳನ್ನು ಅಲ್ಲಿ ಜಾರಿಗೆ ತರಬಹುದು. ಅಂತಹ ಕೆಲಸ ಕಾರ್ಯಗಳಿಗೆ ಬೀಳುವ ವೆಚ್ಚವನ್ನೆಲ್ಲಾ, ಮೂಲತಃ ಯಾರು ಹಾಗೆ ಮಾಡಲು ಆಜ್ಞಾಪಿಸಲ್ಪಟ್ಟಿದ್ದರೋ ಅವರಿಂದಲೇ ಭೂಕಂದಾಯ ಬಾಕಿಗಳ ರೂಪದಿಂದ ವಸೂಲು ಮಾಡಲಾಗುವದು.

ಯಾವನೊಬ್ಬ ಆಫೀಸರನನ್ನು ಅಥವಾ ಈ ಶಾಸನದನ್ವಯ ಅಧಿಕಾರ ಹೊಂದಿ ವರ್ತಿಸುವ ಯಾವನೇ ಮನುಷ್ಯನನ್ನು ಆತಂಕಿಸುವವನೊಬ್ಬನು 100 ರೂಪಾಯಿಗಳ ವರೆಗಿನ ದಂಡನೆಗೊಳಗಾಗಲು ಬದ್ಧನಿದ್ದಾನೆ.

ತನ್ನ ಸ್ವಾಧೀನದಲ್ಲಿರುವ ಆಸ್ತಿಗಳನ್ನು ಸರಕಾರವು ಯಾರಿಗಾದರೂ ವಹಿಸಿಕೊಡುವ ಮತ್ತು ಹಾಗೆ ಕೊಡುವಾಗ ತನ್ನಿಚ್ಛೆಯ ಶರ್ತಗಳನ್ನು ಹಾಕುವ ಸಂಬಂಧದ ಸರಕಾರೀ ಅಧಿಕಾರಗಳನ್ನು ನಿಯಂತ್ರಿಸಬಲ್ಲುದಾವುದೂ ಈ ಶಾಸನದಲ್ಲಿಲ್ಲ.

ಬೀಜಗಳನ್ನು, ಗೊಬ್ಬರಗಳನ್ನು, ಉಳುವ ಯಂತ್ರಗಳನ್ನು ಅಥವಾ ಇತರ ಬೇಸಾಯೋಪಕರಣಗಳನ್ನು ಕೊಂಡುಕೊಳ್ಳುವ ಸಲುವಾಗಿ ಸರಕಾರವು ಬೇಸಾಯ ಸುಧಾರಣಾ ಬೋರ್ಡಿಗೆ ಸಹಾಯಧನ ಸಲ್ಲಿಸಬಹುದು; ಭೂಮ್ಯಾಲಿಕರಿಗೆ ಮತ್ತು ಭೂಮಿಯ ಸಾಗುವಳೀಗಾರರಿಗೆ ಸಾಲಗಳನ್ನು ಮಂಜೂರು ಮಾಡಬಹುದು. ಮತ್ತೀ ಸಲಕರಣೆಗಳ ಸಂಗ್ರಹ ಮತ್ತು ಸರಬರಾಯಿ ವ್ಯವಸ್ಥೆಗಾಗಿ ಅಗತ್ಯವುಳ್ಳ ಕಾರ್ಯಗಳನ್ನು ಕೈಗೊಳ್ಳಬಹುದು.

ಈ ಕಾನೂನಿನ ನಿಯಮಗಳಿಗನುಸಾರವಾಗಿ ಆಗಿಂದಾಗ ನಿಶ್ಚೈಸುವ ಪರಿಮಾಣಾನುಸಾರವಾಗಿ, ಈ ಕಾನೂನಿನನ್ವಯದ ಕಾರ್ಯಗಳಿಗೊಳಪಟ್ಟ ಯಾವುದೇ ಕ್ಷೇತ್ರದಲ್ಲಿ ಬೆಳೆಯುವಂಥಾ ವ್ಯಾಪಾರೀ ಬೆಳೆ ಅಥವಾ ಬೆಳೆಗಳ ಮೇಲೆ ಸರಕಾರವು ಒಂದು ಕರವನ್ನು ಹೇರಬಹುದು.

ಈ ಶಾಸನದನ್ವಯ ಜಾರಿಯಾಗುವ ಆಜ್ಞೆಗಳ ಮತ್ತು ಕಾರ್ಯಕ್ರಮಗಳ ಸಂಬಂಧದಲ್ಲಿ ಯಾವದೇ ಸಿವಿಲ್ ಕೋರ್ಟಿಗೆ ಕ್ಷೇತ್ರಾಧಿಕಾರವಾಗಲೀ, ವ್ಯಾಜ್ಯ ವ್ಯವಹರಣೆಗಳನ್ನು ದಾಖಲ್ಪಡಿಸಿಕೊಳ್ಳುವ ಅಧಿಕಾರವಾಗಲೀ ಇಲ್ಲ. ಈ ಶಾಸನದ ಉದ್ದೇಶಗಳ ಜಾರಿಗಾಗಿ ಅಗತ್ಯವುಳ್ಳ ಯಾವುದೇ ಅಥವಾ ಎಲ್ಲಾ ನಿಯಮಗಳನ್ನೂ ಸರಕಾರವೇ ಮಾಡುವುದು.

ಈ ಶಾಸನದನ್ವಯದ ತನ್ನ ಪಾಲಿನ ಕಾರ್ಯ ನಿರ್ವಹಣಾಧಿಕಾರಗಳಲ್ಲಿ ಯಾವುದನ್ನೇ ಆದರೂ ಜಿಲ್ಲಾ ಕಲೆಕ್ಟರು ತಹಶೀಲ್ದಾರರ ದರ್ಜೆಗಿಂತ ಕಡಿಮೆಯವನಲ್ಲದ ತನ್ನ ಕೈಕೆಳಗಿನ ಯಾವನೊಬ್ಬ ಅಧಿಕಾರಿಗೆ ಒಪ್ಪಿಸಿಕೊಡಬಹುದು.

ಮೇಲ್ಗಡೆ ನಮೂದನೆಗೊಂಡಿರುವ ಬೇಸಾಯೋತ್ಪತ್ತಿಗಳೆಂದರೆ— (1) ಬತ್ತ (2) ಜೋಳ (3) ರಾಗಿ (4) ತೆನಾಯಿ (5) ಕುಂಬು (6) ಗೋದಿ (7) ಹುರುಳಿ (8) ಹೆಸರು (9) ಉದ್ದು (10) ನೆಲಗಡಲೆ (11) ಶುಂಠಿ (12) ಬಟಾಟಿ (13) ಕಬ್ಬು [14] ಹತ್ತಿ.

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿದೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ. ಈ ಚಿತ್ರಗಳನ್ನು ನೀವು ನೋಡದಿದ್ದರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ 2-8-0, ದೊಡ್ಡ ಸೆಟ್‌ಗೆ (ವಿಶಿಷ್ಟ ಪೋಸ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ. ಕೂಡಲೇ ಒರ್ಡರು ಕೊಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
Lothian Road, Delhi

ಸ್ತ್ರೀ ಪುರುಷರೆಲ್ಲರೂ ಓದಲೇಬೇಕಾದ ಕೆಲವು ಪುಸ್ತಕಗಳು

ನಾಟಕ ಪುಸ್ತಕಗಳು

ಸ್ವತಂತ್ರ ಜೀವನೋಪಾಯ	[ಕೆ ಎಚ್. ಶೆಟ್ಟಿ]	0	3	0
ಸಂಶಯ ಪಿಶಾಚಿ	[ಕೆ. ಕೆ. ಶೆಟ್ಟಿ]	0	8	0
ಕುಶಲವ	[,,]	0	6	0
ವ್ಯಭಿಚಾರಿಣಿ ಯಾರು	[,,]	1	0	0
ಹೆಂಡ್ತಿ ಗಂಡನಾದರೆ	[,,]	0	4	0
ಪುರುಷವಧು	[,,]	0	4	0
ದೇಶಭಕ್ತ	[,,]	1	4	0
ಪ್ರೇಮ ವಿಜಯ	[,,]	1	0	0
ರಂಗ ಭೂಮಿ	[ಎಸ್. ವೆಂಕಟರಾಜ]	0	8	0
ಸೇವಾಪಥ	[ಎಸ್. ಎಲ್. ಸುಬ್ರಹ್ಮಣ್ಯಂ]	0	8	0
ಪ್ರಕಾಶ	[ಸರಸ್ವತೀ ಬಾಯಿ ರಾಜವಾಡೆ]	2	4	0
ಮೂರು ಪ್ರಹಸನಗಳು	[ಕೊರಡ್ಕಲ್]	0	14	0
ಜೀವನ ಸಂಗ್ರಾಮ	[ಪಿ. ಶೀನ ಶೆಟ್ಟಿ]	1	8	0
ಸ್ವರಾಜ್ಯ ವಿಜಯ	[ಎಂ. ವಿ. ಹೆಗ್ಡೇರ ಯಕ್ಷಗಾನ ನಾಟಕ]	0	8	0
ಸರಸ್ವತಿ	[ಎಂ. ಮಾಧವಾಚಾರ್ಯ]	0	12	0
ಮೀರಾ ಬಾಯಿ	[,,]	0	10	0

ಕಾದಂಬರಿ

ಜಮೀನ್ದಾರ	[ಹೊಸಮನಿ ಗುಡ್ಡಪ್ಪ]	1	8	0
ಸನ್ಯಾಸಿಯ ಸೋಗಿನಲ್ಲಿ	[ಕೆ. ಕೆ. ಶೆಟ್ಟಿ]	0	8	0

ಕತೆಗಳು

ಪ್ರೇಮ ಪ್ರವಾಹ	[ಸಂಗ್ರಹ]	0	8	0
ಮಧುವನ	[ಸಂಕಲನ]	3	0	0
ನಂದಾದೀಪ	[ಕೊರಡ್ಕಲ್]	0	14	0
ಭಾರತೀಯ ಕತೆಗಳು	[,,]	0	14	0
ನಗೆ ನೋಟಗಳು	[ಕೆ. ವಿ. ಶಣೈ]	0	14	0
ಅನ್ನದೇವರು ಮತ್ತಿತರ ಕತೆಗಳು	[ಕಯ್ಯಾರ ಕಿಞ್ಞಣ್ಣ ರೈ]	1	0	0
ವಿಷ್ಣುವಿನ ದಶಾಪರಾಧಗಳು	[ಎಂ. ವಿ. ಹೆಗ್ಡೆ]	0	12	0
ಆಕಾಶ ಗಂಗೆ	[ಎಸ್. ವೆಂಕಟರಾಜ]	1	12	0
ಕದಂಬ	[ಸರಸ್ವತೀ ಬಾಯಿ ರಾಜವಾಡೆ]	1	4	0
ಸಪ್ತಸಾಗರ	[ಎಸ್. ವೆಂಕಟರಾಜ]	0	12	0

ಕವಿತೆ ಮತ್ತಿತರ ಪುಸ್ತಕಗಳು

ಕಾವ್ಯ ಸಾಮ್ರಾಜ್ಯ	[ಸಂಕಲನ]	1	0	0
ಕವಿತಾ ಕಾಮಿನಿ	[ಎಸ್. ವೆಂಕಟರಾಜ]	2	0	0
ಮುಗುಳು	[ಕೆ. ಹೊನ್ನಯ್ಯ ಶೆಟ್ಟಿ]	0	4	0
ಭಾರತದಲ್ಲಿ ಜಾತಿಭೇದ	[ಸುಬ್ರಹ್ಮಣ್ಯಂ]	1	0	0
ಸ್ವಾತಂತ್ರ್ಯವೀರ ಸಾವರ್ಕರ	[ಇಂದಿರಾಬಾಯಿ]	1	4	0
ಮನೆ ಮದ್ದು	[ಡಾ। ಕೊರಡ್ಕಲ್]	2	0	0
ಸುಲಭದಲ್ಲಿ ಇಂಗ್ಲಿಷ್	[ಕೊರಡ್ಕಲ್]	1	8	0

ಟಪ್ಪಾಲು ಖರ್ಚು ಪ್ರತ್ಯೇಕ.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಈ ಪುಸ್ತಕಗಳು ದೊರೆಯದಿದ್ದರೆ **ನವಭಾರತ ಪುಸ್ತಕ ಭಂಡಾರ, ಉಡುಪಿ** ಇವರಿಗಾಗಲಿ, **ಸ್ಕೂಲ್ ಬುಕ್ ಕಂಪೆನಿ ಮಂಗಳೂರು,** ಇವರಿಗಾಗಲಿ ಬರೆಯಿರಿ.

English copies of
MADRAS ALIYASANTHANA ACT of 1949
are available.
NAVAYUGA PRESS, UDIPI.



ಕಾಂಗ್ರೆಸನ್ನು ಅಡ್ಡೈಸಿರುವ ಕಂಟಕಗಳು

ಕಾರ್ಯಕಾರೀ ಸಮಿತಿ ಇವುಗಳನ್ನು ಕತ್ತರಿಸಿಕೊಳ್ಳಬಲ್ಲುದೆ?

ಕಾಂಗ್ರೆಸ್ ಅಧಿನಾಯಕ ಮಂಡಲಿ—ಕಾರ್ಯಕಾರೀ ಸಮಿತಿ—ಈ ತಿಂಗಳ ತಾ. 16ರಿಂದ ಢಿಲ್ಲಿಯಲ್ಲಿ ಸೇರಿದೆ. ಪ್ರಾಯಶಃ ತಿಂಗಳಾಂತ್ಯದ ವರೆಗೂ ಅದರ ಸಭೆ ಸೇರಬಹುದು. ಒಂದೇ ಸಲ ಇಷ್ಟು ದೀರ್ಘಾವಧಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನ ಸಭೆಗಳನ್ನು ಜರಗಿಸಿದ ದಾಖಲೆಯು ಬಹುಶಃ ಕಾಂಗ್ರೆಸ್ ಚರಿತ್ರೆಯಲ್ಲೇ ಬೇರಿಲ್ಲ. ಅದು ಈ ಬಾರಿ ಆಲೋಚಿಸಬೇಕಾಗಿ ಬಂದಿರುವಂತಹ ಶೋಚನೀಯ ವಿಷಯಗಳಂತಹವು ಈ ವೊದಲು ಅದರ ಪಾಲಿಗೊದಗಿದುದೂ ಇಲ್ಲ. ಅಧಿನಾಯಕ ಮಂಡಲಿ ಈ ವರೆಗೂ ಹೆಗ್ಗಳಿಕೆಯ ದಾಖಲೆಯನ್ನೇ ನಿರ್ಮಿಸುತ್ತಾ ಹೋಗಿದ್ದಿತು; ಲೋಕದಲ್ಲೇ ಅತ್ಯಂತ ಪ್ರಬಲವಾದ ಬ್ರಿಟಿಷ್ ಸಾಮ್ರಾಜ್ಯದೊಡನೆ ಹೋರಾಡುವ ನಿರ್ಧಾರಗಳನ್ನು ಮಾಡುವುದು—ಲೋಕೈಕ ಮಹಾತ್ಮನಿಗೆ ಸೇನಾನಿ ಪಟ್ಟಕಟ್ಟುವ ನಿರ್ಣಯ ಮಾಡುವುದು—ತನ್ನ ಘನ ಧ್ಯೇಯ ಧೋರಣೆಗಳನ್ನು ಮುಂದಿಟ್ಟು ಚುನಾವಣಾ ಹೋರಾಟ ಕೊಡುವ ವ್ಯವಸ್ಥೆ ಮಾಡುವುದು—ಮತ್ತಿತರ ಘನವಾದ ಹಾಗೂ ಗೌರವಾರ್ಹ ವಿಷಯಗಳನ್ನಷ್ಟೇ ಪರ್ಯಾಲೋಚಿಸಿ, ತೀರ್ಮಾನಿಸುವ ಹೆಗ್ಗಳಿಕೆಯ ಕಾರ್ಯಗಳೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಗತಕಾಲದ ಸಭೆಗಳಲ್ಲಾಗಿದ್ದವು. ಹಾಗಿದ್ದ ದೆಸೆಯಿಂದಲೇ ಕಾಂಗ್ರೆಸಿನ ವರ್ಚಸ್ಸು ಇಷ್ಟೊಂದು ಬೆಳೆದಿದ್ದಿತು. ಈ ಬಾರಿ,ಇಷ್ಟು ದೀರ್ಘಾವಧಿ ಕಾಂಗ್ರೆಸ್ ಅಧಿನಾಯಕ ಸಮಿತಿ ಯೋಚಿಸಬೇಕಾಗಿ ಬಂದಿರುವ ಸಂಗತಿಗಳು ಮಾತ್ರ ಘನ ಗಾಂಭೀರ್ಯವುಳ್ಳವುಗಳೂ ಅಲ್ಲ; ಸದಸ್ಯರ ಮನಸ್ಸಿನಲ್ಲಿ ಹೆಗ್ಗಳಿಕೆ ಅಥವಾ ಉತ್ಸಾಹ ಮೂಡಿಸುವಂತಹವೂ ಅಲ್ಲ. ಒಳಗಿನ ದುರಸ್ಥಿಯ ಅತ್ಯಂತ ಬೇಸರದ ಕಾರ್ಯಗಳೇ ಬುಡದಿಂದ ತುದಿವರೆಗೂ ಈ ಸಲ ಕಾಂಗ್ರೆಸ್ ಸಮಿತಿಯ ಹೆಗಲ ಮೇಲೆ ಬಿದ್ದಿವೆ. ರಾಷ್ಟ್ರೀಯ ಹೋರಾಟ, ರಾಷ್ಟ್ರೀಯ ಸಮಸ್ಯೆಗಳಂತಹ ಘನ ವಿಷಯಗಳನ್ನು ಪರ್ಯಾಲೋಚಿಸುವ ಬದಲಿಗೆ ಪಾಳಯದೊಳಗಿನ ಕಚ್ಚಾಟ ತೀರ್ಮಾನ, ತನ್ನವರ ಮೇಲಿನ ಆರೋಪಗಳ ತನಿಖೆ, ಒಳಗಡೆ ರಾಶಿರಾಶಿ ತುಂಬಿಕೊಂಡಿರುವ ಕಸಕಲ್ಮಷಗಳ ಝಾಡಣೆ-ಇತ್ಯಾದಿ ಯಾತನಾತ್ಮಕ ಪರಿಶ್ರಮಗಳನ್ನೇ ಈ ಬಾರಿ ಕಾಂಗ್ರೆಸ್ ಸಮಿತಿ ಮಾಡಬೇಕಾಗಿ ಬಂದಿದೆ. ಬಹುತೇಕವಾಗಿ ಪ್ರಶ್ನೆಗಳಲ್ಲಿ ಪ್ರತಿಯೊಂದೂ ಒಂದೊಂದು ಒಗಟೇ; ಬಿಡಿಸುವುದು ಅಸಾಧ್ಯ-ಬಿಚ್ಚುವಾಗಲಂತೂ ಅಸಹ್ಯ ದುರ್ವಾಸನೆ ಹೊರಟು ಕೀರ್ತಿ ಸೂಸುವಂತಿಲ್ಲ! ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಇಂತಹ ಕಠಿಣ ಕಾರ್ಯದಲ್ಲೀಗ ಆಸಕ್ತವಾಗಿದೆ.

ಹಾಜರಿರುವವರು-

ಅಧ್ಯಕ್ಷ ಪಟ್ಟಾಭಿಗಳು ನವದಿಲ್ಲಿಯಲ್ಲೇ ಇದ್ದರೂ ಜ್ವರಪೀಡಿತರಿರುವುದರಿಂದ ಸಮಿತೀ ಸಭೆಗಳಿಗೆ ಹಾಜರಾಗಿಲ್ಲ. ಈಗ ಅವರು ಗುಣಹೊಂದಿದ್ದಾರೆ; ಮುಂದಿನ ಸಭೆಗಳಿಗೆ ಹಾಜರಾಗಲೂ ಬಹುದು. ಅಧ್ಯಕ್ಷರ ಗೈರುಹಾಜರಿಯಲ್ಲಿ ಮಾಜೀ ಅಧ್ಯಕ್ಷರಲ್ಲಿ ಹಿರಿಯ ಸರ್ದಾರ್ ಪಟೇಲರು ಅಧ್ಯಕ್ಷತೆ ವಹಿಸಿದ್ದರು. ಸಭೆ ಜರಗುತ್ತಿರುವುದೂ ಸರ್ದಾರರ ಭವನದಲ್ಲೇ. ಸಮಿತಿಯು ಜಗಿಯಲಿಕ್ಕಿರುವ ಕಬ್ಬಿಣದ ಕಡಲೆಗಳ ಮೇಲಿಂದ ಈ ಉಕ್ಕಿನಮನುಷ್ಯನ ನಿರ್ದೇಶಕತ್ವವು ಅದಕ್ಕೆ ದೊರೆತುದು ಉಚಿತವನ್ನಿಸಿದೆ. ಹಾಜರಿದ್ದ ಮತ್ತು ಆಗುತ್ತಿರುವ ಸದಸ್ಯರೆಂದರೆ ಪಂಡಿತ ಜವಾಹಿರಲಾಲ ನೆಹರು, ಡಾ। ರಾಜೇಂದ್ರ ಪ್ರಸಾದ್, ಮೌಲಾನಾ ಅಬುಲ್ ಕಲಮ್ ಆಜಾದ್, ಪಂಡಿತ ಗೋವಿಂದ ವಲ್ಲಭ ಪಂತ್, ಶ್ರೀ ಜಗಜ್ಜೀವನ ರಾಮ್, ಶ್ರೀ. ಶಂಕರರಾವ್ ದೇವ್, ಶ್ರೀ. ಕಲಾ ವೆಂಕಟರಾವ್, ಡಾ। ಪ್ರಫುಲ್ಲ ಚಂದ್ರಘೋಷ್ ಮಿ. ರಫಿ ಅಹಮ್ಮದ್ ಕಿದ್ವಾಯಿ, ಶ್ರೀಮತಿ ಸುಚೇತಾ ಕೃಪಲಾನಿ, ಶ್ರೀ ಎನ್. ಜಿ ರಂಗ, ಶ್ರೀ ಎಸ್. ಕೆ. ಪಾಟೀಲ್, ಶ್ರೀ ಕೆ. ಕಾಮರಾಜನಾದರ್, ಶ್ರೀ ಎಮ್. ಗೋಕುಲಭಾಯಿ ಭಟ್, ಶ್ರೀ ನಿಜಲಿಂಗಪ್ಪ, ಶ್ರೀ ರಾಮ್ ಸಹಾಯಿ, ಸರ್ದಾರ್ ಪ್ರತಾಪ ಸಿಂಗ್.

ರಾಷ್ಟ್ರದ ಅಗ್ರಗಣ್ಯ ನಾಯಕರು ಅಲ್ಲಿ ಕಲೆತಿದ್ದಾರೆ; ಅಂತಃ ಕಲಹವಿರುವ ಪ್ರಾಂತ್ಯಗಳ ಪ್ರತಿನಿಧಿಗಳು ಅಲ್ಲಿದ್ದಾರೆ. ನವ ರಾಜ್ಯಶಾಸನದನ್ವಯದ ಮಹಾ ಚುನಾವಣೆ ಕಣ್ಣಮುಂದಿದೆ; ಕಾಂಗ್ರೆಸ್ ಪಾಳಯದೊಳಗಿನ ಸಣ್ಣ ದೊಡ್ಡ ಕಚ್ಚಾಟಗಳು ಕಾಲಡಿಯಲ್ಲಿವೆ; ಕಾಂಗ್ರೆಸ್ ಸಂಸ್ಥೆಗೆ ನವಚೇತನ ಬರಿಸುವ ಕಾಯಕಲ್ಪ ಚಿಕಿತ್ಸೋಪಕರಣಗಳು ಆಕ್ಕ ಪಕ್ಕದಲ್ಲಿ ಬಿದ್ದಿವೆ. ನವದಿಲ್ಲಿಯಲ್ಲಿ ಇವೆಲ್ಲವುಗಳ ಸಮ್ಮಿಲನದ ಮಹಾ ಮಂಥನ ನಡೆದಿದೆ.

ಕಾಂಗ್ರೆಸಿನ ಅಗ್ನಿ ಪರೀಕ್ಷೆ

ಇನ್ನಾದರೂ ಕರಿಯೆ-ಒಳಗಿರುವ ಲೋಪ ದೋಷಗಳನ್ನು ನಿವಾರಿಸಿ, ತತ್ವ ಮತ್ತು ನಿಯಮನಿಷ್ಠೆಯನ್ನೂ ಕಾರ್ಯಾಶಕ್ತಿ ಮತ್ತು ಹೊಸ ಹುರುಪನ್ನೂ ನಿರ್ಮಿಸಿ, ಕಾಂಗ್ರೆಸನ್ನು ಕಾಲೋಚಿತ ಜನತಾ ಸಂಸ್ಥೆಯಾಗಿ ಬೆಳೆಸಲು ಸಾಧ್ಯವಿದೆಯೆಂಬ ಆಶೆಯೊಂದಲ್ಲವಾದರೆ, ಇಂದಿನ ಅದರ ವಾತಾವರಣ ಮಂಗಳಗೀತೆಯ ಸ್ವರವೆಬ್ಬಿಸುವಂತಹದೇ! ಸ್ವಾತಂತ್ರ್ಯನಂತರದ ಕಾಲಕ್ಕನುಗುಣವಾಗಿ ಕಾಂಗ್ರೆಸಿಗರು ಬದಲಾವಣೆಗೊಳ್ಳಲಿಲ್ಲ. ಹಿಂದಿನ ಧ್ಯೇಯ ಮತ್ತು ಕೆಲಸಗಳು ಈ ದಿನ ಕಾಂಗ್ರೆಸಿನ ಪಾಲಿಗುಳಿದಿಲ್ಲವಾದ್ದರಿಂದ ಈಗ ತಮಗೆ ಕೆಲಸವೇ ಇಲ್ಲವೆಂಬಂತೆ ಹೆಚ್ಚಿನ ಕಾಂಗ್ರೆಸಿಗರ ಮನೋವೃತ್ತಿಯಾಗಿದೆ. ಅಂದ ಮೇಲೆ 'ಕಾಂಗ್ರೆಸೂ ಇಲ್ಲ'ವೆಂದಾಗುವುದಕ್ಕೆ ಮಾತ್ರ ಅಂಥವರ ಸಮ್ಮತಿಯಿಲ್ಲ. ತಾವು ಆಶ್ರಯಿಸಿ ನಿಲ್ಲಲಾಗುವಂತೆ; ಆಗತ್ಯ ತೋರಿದಾಗ ಮುಖವಾಡವಾಗಿ ಅದನ್ನು ತೋರಿಸಿಕೊಂಡು ಶೋಭಿಸಲಾಗುವಂತೆ ಕಾಂಗ್ರೆಸ್ ಬೇಕು-ಎಂದವರ ಮತ. ಸ್ವಾತಂತ್ರ್ಯನಂತರದ ಈ ಕಠೋರ ಕಾಲವು ಈ ಮಾದರಿಯ ಕೇವಲ ಪ್ರದರ್ಶನಗಳಿಗೆ ಪ್ರಾಮುಖ್ಯತೆ ಕೊಡುವಂತಹದಲ್ಲ. ಹಿಂದೆ ಜನತಾರಂಗದಲ್ಲಿ ಮಾಡಿದ್ದ ಕಾರ್ಯಗಳ ನೆನಪಾಗಲಿ, ಈಗ ಅಧಿಕಾರ ಕ್ಷೇತ್ರದಲ್ಲಿ ಮಾಡುತ್ತಿರುವ ಕಾರ್ಯಗಳ ನೋಟವಾಗಲೀ, ಕಾಂಗ್ರೆಸನ್ನು ಮೇಲಕ್ಕೆತ್ತಿ ನಿಲ್ಲಿಸುವ ಆಧಾರವಾಗಲಾರವು, ಹೀಗಾಗಿ ಹಿಂದಿನ ಕಾಂಗ್ರೆಸಿನ ಅಂದಿನ ಸ್ಥಾನಮಾನವಾವುದೂ ಈ ದಿನವಿಲ್ಲ; ಇದು ಸ್ವಾಭಾವಿಕ. ಯುದ್ಧ ಮುಗಿದ ಮೇಲೂ ಸೇನೆಯು ಯುದ್ಧಾವಧಿಯ ರಂಗದಲ್ಲೇ ನಿಂತು ಅದೇ ಸ್ಥಾನಮಾನ ಪಡೆಕೊಳ್ಳತ್ತೇನೆಂದರಾಗದು; ಇದ್ದರಿಂದಲೇ ಗಾಂಧಿಜೀ ಅಂದೇ ಹೇಳಿದ್ದರು "ಕಾಂಗ್ರೆಸು ಈಗಿನ ರೂಪವನ್ನು ಪೂರ್ಣ ಬದಲಾಯಿಸಿಕೊಂಡು ಲೋಕಸೇವಾ ಸಂಘವಾಗಿ ಪುನರುದ್ಭವ ಹೊಂದಬೇಕು" ಎಂದು. ಅಂತಹ ಸತ್ಯಲೋಕ ನಿರ್ಮಾಪಕ ಸೇವಾ ಸಂಸ್ಥೆಯಾಗುವದಸಾಧ್ಯವೆಂದು ತೋರಿದ್ದರೆ ಜನತಾ ರಾಜ್ಯ ನಿರ್ಮಾಪಕ ಯೋಧ ಕೂಟವಾಗಿಯಾದರೂ ಕಾಂಗ್ರೆಸು ಮಾರ್ಪಡುವದು ಅವಶ್ಯಕವಿತ್ತು. ಈಗಿನ ವಿದ್ಯಮಾನಗಳನ್ನು ಅವಲೋಕಿಸುವಾಗ ಕಾಂಗ್ರೆಸು ಒಂದು ಸಲ ಆಮೂಲಾಗ್ರವಾಗಿ ವಿಸರ್ಜನೆಗೊಂಡು ಹೊಸ ಪಕ್ಷವಾಗಿ ತಲೆಯೆತ್ತುವದೇ ವಿಹಿತವಿದ್ದಿತೆಂದು ತೋರುತ್ತಿದೆ. ಕಾರಣವಿದು:- ಗುಲಾಮಗಿರಿಯಿದ್ದ ಕಾಲದಲ್ಲಿ ಸ್ವಾತಂತ್ರ್ಯದ ಧ್ಯೇಯವಿಟ್ಟುಕೊಂಡು ಅದರ ಸಾಧನಾ ಕಾರ್ಯಕ್ರಮಗಳನ್ನು ಕೈಕೊಂಡು ಕಾಂಗ್ರೆಸ್ ಕ್ರಾಂತಿಕಾರಿ ಸಂಸ್ಥೆಯಾಗಿ ಅಗ್ರಗಾಮಿತ್ವ ವಹಿಸಿದುದರಿಂದಲೇ ಅದಕ್ಕಂತಹ ಸ್ಥಾನಮಾನ ದೊರೆಯಿತು. ಸ್ವಾತಂತ್ರ್ಯ ದೊರೆತ ನಂತರ ಹಿಂದಿನ ರೂಪಕ್ಕೇನೇ ಅಲ್ಲಲ್ಲಿ ತೇಪೆ ಹಚ್ಚಿಕೊಂಡು ಅದು ನಿಂತುದರಿಂದಲೂ, ಗುಲಾಮಗಿರಿಯಿದ್ದ ಆ ಕಾಲದಲ್ಲಿ ಸ್ವಾತಂತ್ರ್ಯ ಕ್ರಾಂತಿಯನ್ನೆಬ್ಬಿಸಿದಂತೆ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜನತಾರಾಜ್ಯ ಪ್ರಭೆಯನ್ನದು ಬೀರಲು ಅಸಮರ್ಥವಾದುದರಿಂದಲೂ, ಇಂದಿನ ಕಾಂಗ್ರೆಸಿಗೆ ಅಂದಿನ ಮಂದಗಾಮಿಗಳ ಸ್ಥಾನವೇ ದೊರೆತಿದೆ; ಅದಲ್ಲೇ ಮೊಂಡಾಗಿದೆ. ಇಂತಹ ಸ್ಥಿತಿಯಲ್ಲಿ ಕಾಂಗ್ರೆಸಿಗರ ನಡುವೆ ಆಲಸ್ಯ ಜಾಡ್ಯ ಬಲೆ ಹರಡುವಂತಹದೇ. ಹೀಗೆ ಜಡತ್ವ ತುಂಬಿದರೂ ಒಂದು ಕಾಲದ ಹುರುಪು, ತಾವು ವಿಜಯೀ ಯೋಧರೆಂಬ ನೆನಪು, ಸುಮ್ಮನಿರಲು ಬಿಡುವಂತಹವಲ್ಲ. ಅವುಗಳ ಕೆಲಸವೇ ಈಗಿನ ಅಧಿಕಾರಲಾಲಸೆ; ಪಾಳಯದೊಳಗಿನ ಕಚ್ಚಾಟ.

ಎಲ್ಲೆಲ್ಲೂ ಒಳರೋಗವೇ!

ಅಂತೂ ಈಗ ಕಾಂಗ್ರೆಸಿಗರ ನಡುವೆ ಹೆಚ್ಚಾಗಿ ತೋರುತ್ತಿರುವದು ಅಧಿಕಾರ ಲಾಲಸೆಯ ಓಕುಳಿ; ಪದವೀ ಪಂದ್ಯಾಟ; ಪರಸ್ಪರ ಆರೋಪ ದೂಷಣೆಗಳ ಕೆಸರು ಚೆಲ್ಲಾಟಗಳೇ- ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮುಂದಿನ ಮಹಾ ಚುನಾವಣಾ ಸನ್ನಿವೇಶಕ್ಕಾಗಿ ದಂಡನ್ನು ಸಜ್ಜುಗೊಳಿಸುವ ಮುಖ್ಯ ಸಂಕಲ್ಪವನ್ನು ಈ ಬಾರಿ ಇಟ್ಟುಕೊಂಡಿದ್ದಿತು. ಸಂಸ್ಥೆಯನ್ನು ಶುದ್ಧೀಕರಿಸಿ ಪುನರ್ಜೀವನ ಬರಿಸುವ ಬಯಕೆ ಕಟ್ಟಿಕೊಂಡಿದ್ದಿತು. ನವಚೇತನ ನಿರ್ಮಿಸುವ ಉತ್ತರಾರ್ಧದ ಮಾತು ಕೊನೆಗಿರಲಿ; ಪ್ರಥಮತಃ ಆಗಬೇಕಾದ ಶುದ್ಧೀಕರಣ ಕಾರ್ಯವೇ ಈಗ ದೊಡ್ಡ ಹೊರೆಯಾಗಿ ಸಮಿತಿಯ ಕಣ್ಣಮುಂದೆ ಬಿದ್ದಿದೆ. ಕಲ್ಕತ್ತದಿಂದ ಮುಂಳಬಂದ ಪಂಡಿತ ನೆಹರುಗಳು, ಮದ್ರಾಸಿನಿಂದ ಮರಳಿರುವ ಶ್ರೀ ಶಂಕರರಾವ್ ದೇವರು, ಎರಡು ಹೊರೆಗಳನ್ನು ಹೊತ್ತುತಂದು ಅಲ್ಲಿ ಹಾಕಿದ್ದಾರೆ. ಅದೇರೀತಿ ಪ್ರತಿಯೊಂದು ಪ್ರಾಂತ್ಯದಿಂದಲೂ ತಿಪ್ಪ ಮಂಡಲಿಗಳ ಮುಖಾಂತರ, ಪ್ರತಿನಿಧಿಗಳ ಮೂಲಕ, ಕಾಗದ ತಂತಿಗಳೊಳಗಿಂದ ಬಂದು ಬಿದ್ದಿರುವ ಹೊರೆಗಳೆಲ್ಲವೂ ದೊಡ್ಡ ರಾಶಿಯಾಗಿ ಬಿದ್ದಿವೆ.

ಪಶ್ಚಿಮ ಬಂಗಾಳದಲ್ಲಂತೂ ಕಾಂಗ್ರೆಸು ಜೀವನ-ಮರಣದ ಪರಿಸ್ಥಿತಿಯಲ್ಲಿದೆ. ಎಲ್ಲಾ ಕಡೆಗಳಿಗಿಂತ ಅಲ್ಲಿ ಮೊದಲಾಗಿ ಚುನಾವಣೆ ನಡೆಸಿಬಿಡಲೋ, ಎಂಬ ಪ್ರಶ್ನೆ ಯೀಗ ಗಾಢ ವಿಚಾರಕ್ಕೊಳಗಾಗಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಅಲ್ಲಿಯ ಕಾಂಗ್ರೆಸಿನ ಇದಿರುವಾದಿ ಎರಡು ಪಕ್ಷಗಳ ಪ್ರತಿ

[೭ನೇ ಪುಟ ನೋಡಿರಿ]

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇತರ ಶಾಖಾ ಕಛೇರಿಗಳು:..

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE: **UDIPI, S. I.**

Capital Authorised	Rs. 25,00,000.
Capital Issued & Subscribed	Rs. 20,00,000.
Capital Paid Up	Rs. 19,99,800.
Reserves	Rs. 8,91,000.

Banking business of every description transacted

ಗುರುವಾರ, ಉಡುಪಿ, ೨೮-೭-೪೯

ಬೇಸಾಯ ಮಸೂದೆ.

ಮದ್ರಾಸ್ ಸರಕಾರವು ಕಾನೂನಾಗಿ ಮಾರ್ಪಡಿಸಲಿಚ್ಛಿಸಿ, ಆ ಮೊದಲು ಸಾರ್ವಜನಿಕ ಅಭಿಪ್ರಾಯ ಸಂಗ್ರಹಕ್ಕಾಗಿ ಪ್ರಕಟಿಸಿರುವ-ಇಡೀ ಮದ್ರಾಸ್ ಪ್ರಾಂತ್ಯದ ಸಾಗುವಳೀ ಭೂಮಿಗೆ ಅನ್ವಯವಾಗುವ- 'ಬೇಸಾಯ ಮಸೂದೆ'ಯ ಸಾರಾಂಶವನ್ನು ಸಂಪೂರ್ಣವಾಗಿ ಈ ಸಂಚಿಕೆಯಲ್ಲಿ ಕೊಡಲಾಗಿದೆ. ಆಕ್ಷೇಪ ಅಥವಾ ಸೂಚನೆಗಳಿದ್ದರೆ, ಅವನ್ನು ಬರುವ ನವಂಬರ್ ತಾ. 1ರೊಳಗೆ ಮುಟ್ಟುವಂತೆ ಮದ್ರಾಸ್ ಸರಕಾರದ ಆಹಾರ ಖಾತೆಯ ಕಾರ್ಯದರ್ಶಿಗಳಿಗೆ ಕಳುಹಿಸಬಹುದು. ಇದು ಪ್ರಾಂತ್ಯದ ಪ್ರಾಮುಖ್ಯ ಉದ್ಯೋಗ ಹಾಗೂ ಉತ್ಪನ್ನಕ್ಕೆ-ಜನತೆಯಲ್ಲಿ ಅಧಿಕಸಂಖ್ಯಾಕರಾದ ರೈತವರ್ಗಕ್ಕೆ- ಅನ್ವಯಿಸುವಂತಹ ಮಸೂದೆ. ಪ್ರಾಂತ್ಯದ ಗ್ರಾಮಜೀವನದಲ್ಲೇ ಪ್ರಬಲ ಮಾರ್ಪಾಟುಗಳನ್ನು ತರಬಲ್ಲ ಅಂಶಗಳು ಈ ಮಸೂದೆಯಲ್ಲಿವೆ. ಆದ್ದರಿಂದ ಸಂಬಂಧಪಟ್ಟ ಜನರೆಲ್ಲರೂ ಈ ಕುರಿತು ವಿಶೇಷ ಆಸಕ್ತಿ ವಹಿಸಿ, ಗಾಢವಿಚಾರ ವಿಮರ್ಶನಡಿಸಿ, ತಮ್ಮ ಅಭಿಪ್ರಾಯಗಳನ್ನು ಮುಂದಿಡಬೇಕಾದುದು ಅಗತ್ಯ. ಸರಕಾರವಾದರೋ ಭೂಬೇಸಾಯವನ್ನು ತಮ್ಮ ಜೀವನವಾಗಿ ಮಾಡಿಕೊಂಡು, ಅದರಲ್ಲೇ ಐಕ್ಯಗೊಂಡಿರುವ ರೈತವರ್ಗದ ಅನುಭವ, ಅಭಿಪ್ರಾಯಗಳಿಗೆ ಎಲ್ಲಕ್ಕಿಂತ ಹೆಚ್ಚಿನ ಬೆಲೆಕೊಟ್ಟು ಈ ಮಟ್ಟಿಗೆ ಅವರ ಸೂಚನೆಗಳನ್ನೂ ವಿಜ್ಞಾಪನೆಗಳನ್ನೂ ಅಂಗೀಕರಿಸಿಕೊಳ್ಳಲೇಬೇಕು. ನಿಯೋಜಿತ ಶಾಸನದ ಕುರಿತು ರೈತರು ಹಾಗೂ ಸರಕಾರವು ಮೂರು ಮೂರು ಬಾರಿ ಯೋಚಿಸಿಕೊಳ್ಳಬೇಕಾದ ಅಂಶಗಳಿವೆ.

ಇದು, ಯುದ್ಧಕಾಲದ ಆವಶ್ಯಕತೆಗಳಿಗನುಸಾರವಾಗಿ ಇಂಗ್ಲಾಂಡಿನಲ್ಲಿ ಜಾರಿಗೆ ತಂದಿದ್ದ ಕಾನೂನನ್ನೇ ಹೋಲುವ ಶಾಸನ. ಆ ಮಾದರಿಯ ಶಾಸನಗಳು ನಮ್ಮ ಪ್ರಾಂತ್ಯಗಳಲ್ಲೂ ಬರುವದು ಹಿತವೆಂದು ಅ. ಭಾ. ಕಾಂಗ್ರೆಸ್ ಸಮಿತಿಯ ಆರ್ಥಿಕ ಸಂಶೋಧನಾ ಖಾತೆಯು 1947ನೇ ಫೆಬ್ರವರಿಯಲ್ಲೇ ಸೂಚಿಸಿದ್ದಂತೆ ಮದ್ರಾಸ್ ಸರಕಾರವಿದನ್ನು ತರಲಿಚ್ಛಿಸಿದೆ. ತನಗೆ ಸಮಾಧಾನಕರವೆಂದು ತೋರುವಷ್ಟು ಬೆಳೆಪಡೆಯುವುದಕ್ಕಾಗಿ ಸರಕಾರವು ಸಾಗುವಳೀ ಕ್ಷೇತ್ರಗಳ ಒಳಗೆ ನೇರಾಗಿ ತನ್ನ ಅಧಿಕಾರ ಹಸ್ತವನ್ನು ಈ ಮೂಲಕ ಹೊಗಿಸಲಿಚ್ಛಿಸಿದೆ; ಈ ಉದ್ದೇಶ ಸಾಧನೆಗಾಗಿ ಇಂತಹ ನವ ವ್ಯವಸ್ಥೆ ಅಗತ್ಯವೇ ಎಂಬುದು ಮೊದಲನೇ ಪ್ರಶ್ನೆ. ಈ ಮಸೂದೆಯಲ್ಲಡಕವಾಗಿರುವ ಕ್ರಮ ವಿಧಾನಗಳ ಮೇಲಿಂದ ಉದ್ದೇಶ ಸಾಧನೆಯಾದೀತೇ, ಎಂಬುದು ಆ ಮೇಲಿನ ಪ್ರಶ್ನೆ. ಇವೆರಡಕ್ಕೂ "ಹೌದು" ಎಂದು ಒಪ್ಪಿಕೊಂಡಲ್ಲಿ, ಸಾಗುವಳೀದಾರರು ತಮ್ಮ ಕರ್ತವ್ಯಪಾಲನೆಯ ಮಟ್ಟಿಗೆ ಈ ತನಕ ಅಸಡ್ಡೆ ಅಥವಾ ಆಲಸ್ಯ ವಹಿಸಿದ್ದಾರೆಂದೂ, ಅವರಿಗೆ ಸಾಗುವಳಿ ಅನುಭವ ಕೂಡಾ ಇಲ್ಲವೆಂದೂ ಒಪ್ಪಿಕೊಂಡಂತಾಗುವದು; ಹಾಗಲ್ಲವಾದರೆ ಸಾಗುವಳೀ ವ್ಯವಸ್ಥಾಧಿಕಾರಕ್ಕೆ ಸರಕಾರನೇ ಕೈ ಹಾಕಿ ಮಾಡಿಸುವ ಅಗತ್ಯವೇನಿದೆ? ಸರಕಾರೀ ನೇಮಿತ ಬೇಸಾಯ ಸುಧಾರಣಾ ಬೋರ್ಡು, ಎಗ್ರಿಕಲ್ಚರಲ್ ಸುಪರ್‌ವೈಸರ್, ಕಲೆಕ್ಟರ್ ಅಥವಾ ತಹಶೀಲ್ದಾರರು ಇಂತಹ ಸ್ಥಳದಲ್ಲಿ, ಇಂತಹ ಬೆಳೆಯನ್ನು ಈ ರೀತಿ ಬೆಳೆಸತಕ್ಕದ್ದೆಂದು ಮಣ್ಣಲ್ಲೇ ಹೊರಳಾಡುತ್ತಿರುವ ಭೂಪುತ್ರ ರೈತನಿಗೆ ಕಲಿಸಿಕೊಡುವ ಆವಶ್ಯಕತೆಯೇನಿದೆ? ಇಂತಹ ಆರೋಪ ಮತ್ತು ಅಪನಂಬಿಕೆಗೆ ರೈತರೆಂದಿಗೂ ಬಾಧ್ಯರಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಪ್ರಾಂತ್ಯದ ಎಲ್ಲಾ ಸಾಗುವಳೀ ಕ್ಷೇತ್ರಗಳಲ್ಲೂ ಸುಧಾರಣೆ ಮಾಡುವ ಅಂಶವಿರಬಹುದು; ಆಹಾರ ಧಾನ್ಯಗಳನ್ನು ಅಥವಾ ಇತರ ಯಾವುದೇ ವರ್ಗದ ಸಸ್ಯಗಳನ್ನು ಬೆಳೆಸಲಾಗುವ ಸ್ಥಳಗಳು ಅಲ್ಲಲ್ಲಿ ಹಡಿಲು ಬಿದ್ದಿರಬಹುದು; ಹಲವೆಡೆ ಪ್ರಾಮುಖ್ಯ ಬೆಳೆಗಳ ಬದಲಿಗೆ ಅಪ್ರಾಮುಖ್ಯ ಬೆಳೆಗಳಾಗುತ್ತಿರಬಹುದು. ಆದರೆ ಇಂತಹ ಲೋಪದೋಷಗಳಿಗೆ ನಿಜಕ್ಕೂ ರೈತರ ಅಸಡ್ಡೆ ಅಥವಾ ಅಜ್ಞಾನ ಕಾರಣವಲ್ಲ; ಅನಾನುಕೂಲತೆಯೊಂದೇ ಕಾರಣ- ನೀರಿನ ಅಭಾವ, ಸಾಗುವಳೀ ಉಪಕರಣಗಳ ಮತ್ತು ಸಾಗುವಳೀ ವೆಚ್ಚದ ಅಕ್ಕೀಭತ್ತಗಳ ಕೊರತೆ, ಹಡಿಲು ಭೂಮಿಗಳ ಹೆಚ್ಚಿನ ಕೃತಕ್ಕಾಗಿ ಬೇಕಾಗುವ ಅಧಿಕ ವೆಚ್ಚ ಹೊರಲಾಗದ ಬಡತನ-ಮುಂತಾದುವುಗಳೇ ನಿಜವಾದ ಕಾರಣಗಳು. ಬೇಸಾಯಗಾರ ವರ್ಗದ ಈ ಆಪತ್ತುಗಳನ್ನು ನಿವಾರಿಸುವ ಹೊಸ ವಿಧಾನವೇನೂ ನಿಯೋಜಿತ ಶಾಸನದಲ್ಲಿ ತೋರುವುದಿಲ್ಲ. ನಿಶ್ಚಿತ ಧಾರಣೆ ಮತ್ತು ಯೋಗ್ಯ ಮಾರ್ಕೆಟ್ ಒದಗಿಸುವೆವು, ಸಾಗುವಳೀ ಉಪಕರಣಗಳ ಸರಬರಾಯಿ ವ್ಯವಸ್ಥೆ ಮಾಡುವೆವೆನ್ನುವ ಮಾತು ಹಳೆಯ ರಾಗ ಮಾತ್ರ. ಬದಲಿಗೆ, ಮೇಲಿನ ಅಡಚಣೆಗಳ ದೆಸೆಯಿಂದಾಗಿ ಹಡಿಲು ಭೂಮಿಯನ್ನು ಎಲ್ಲಿಯಾದರೂ ಬಿಟ್ಟಿದ್ದ, ಸರಿಯಾಗಿ ಸಾಗುವಳಿ ಮಾಡಿಲ್ಲವೆಂದು ತೋರಿ ಬಂದ, ಭೂಮಾಲೀಕರ ಆಸ್ತಿಯನ್ನೂ ಒಕ್ಕಲುಗಳ ಒಕ್ಕಲು ಭೂಮಿಯನ್ನೂ ಕಸಗೊಂಡು ಸರಕಾರೀ ಅಧಿಕಾರಿಗಳು ತಮಗಿಚ್ಛೆ ತೋರಿದ ಬೇರೆಯವರಿಗೆ ಕೊಟ್ಟುಬಿಡುವ ಪರಿಹಾರೋಪಾಯವು ಈ ಮಸೂದೆಯ ತಿರುಳಾಗಿದೆ. ಈ ಕಾರಣಗಳಿಗಾಗಿ ಸರಕಾರವು ಒಬ್ಬನ ಆಸ್ತಿಯನ್ನು ಕಡ್ಡಾಯವಾಗಿ ಕ್ರಯಕ್ಕಾಗಲಿ, ಗೇಣಿಗಾಗಲಿ, ಪಡಕೊಳ್ಳಬಲ್ಲದು; ಇಂತಹ ಎಲ್ಲಾ ಕೈಬದಲಾವಣೆಗಳ ಸಂದರ್ಭದಲ್ಲೂ ಸರಕಾರೀ ಅಧಿಕಾರಿಗಳು ಕಟ್ಟಿದ್ದೇ ಗೇಣಿ, ಅವರು ಕೊಟ್ಟದ್ದೇ ಕ್ರಯ. ಸದ್ಯಸ್ಥಿತಿಯಲ್ಲಿ ಈ ನವವಿಧಾನವು ಎಂತೆಂತಹ ಶೋಚನೀಯ ಪ್ರಮಾದಗಳಿಗೆಡೆಕೊಟ್ಟೀತೆಂಬುದನ್ನು ಊಹಿಸುವುದು ಅಸಾಧ್ಯ. ಕೆಲವು ವರುಷಗಳಿಂದ 'ಅಧಿಕಾಹಾರ ಬೆಳೆಸಿರಿ' ಚಳವಳ ನಡೆಸಿದ್ದ ಸರಕಾರದ ಬೇಸಾಯಖಾತೆಯವರಿಗಾಗಲೀ, ಜಿಲ್ಲಾ ಕಲೆಕ್ಟರ್, ತಹಶಿಲ್ದಾರರಂತಹ ಅಧಿಕಾರಿಗಳಿಗಾಗಲಿ, ಸಾಗುವಳಿಯ ಮತ್ತು ಸಾಗುವಳಿ ಭೂಮಿಯ ಸರಿಯಾದ ಪರಿಚಯ, ಪೂರ್ಣಾನುಭವವಿರಲಾರದೆಂಬುದು ಪ್ರತ್ಯಕ್ಷ ತಿಳಿದುಬರುವ ಸಂಗತಿ. ವಂಶಪಾರಂಪರ್ಯವಾಗಿ ಸಾಗುವಳೀಗಾರರಿದ್ದು ಮಣ್ಣಗುಣವನ್ನು ಹುಟ್ಟು ಸ್ವಭಾವವಾಗಿ ತಿಳಿದಿರುವ ರೈತನ ಮಟ್ಟಕ್ಕೆ ಅನರಾರೂ ಬರಲಾರರು. ಅಂದ ಮೇಲೆ ಅನುಭವದ ಬದಲಿಗೆ, ಅಧಿಕಾರ ಬಲದಿಂದ ತೀರ್ಮಾನಿಸುವ ಇಂತಹ ಅಧಿಕಾರಿಗಳು ಅಂದಾಜು ತಪ್ಪಬಹುದು; ತಪ್ಪುಗಳನ್ನು ಮಾಡಬಹುದು. ಧನಿ ಒಕ್ಕಲುಗಳೊಳಗಿನ ಸಂಬಂಧ ಕೆಟ್ಟಿರುವ ದೆಸೆಯಿಂದಲೂ, ತಮಗಿರುವ ಅನಿವಾರ್ಯ ಅಡಚಣೆಗಳಿಂದಾಗಿಯೂ 'ಯೋಗ್ಯ ರೀತಿಯಲ್ಲಿ ಸಾಗುವಳಿ' ಮಾಡಲಾರದ ಒಕ್ಕಲುಗಳು ಬೇಕಾದಂತೆ ದೊರೆಯಬಹುದು; ಧನಿಯು ಈ 'ಕೈಬದಲಾವಣಾ' ವ್ಯವಸ್ಥೆಯನ್ನು ತನ್ನ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುವ ಹಂಚಿಕೆ ಹೂಡಿ ತನಗಾಗದ ಒಕ್ಕಲಿನವನನ್ನು ಎಬ್ಬಿಸಿಕೊಳ್ಳಬಹುದು. ಒಂದು ಆಸ್ತಿಯನ್ನು, ಆ ಆಸ್ತಿಯ ಸಾಗುವಳಿಗಗತ್ಯವೆಂದು ತೋರುವ ಒತ್ತಿನಾಸ್ತಿಯನ್ನೂ, ಸರಕಾರವು ಕಡ್ಡಾಯವಾಗಿ ಪಡಕೊಳ್ಳುವಾಗ ರೋದನವೇಳುವ ಸಂದರ್ಭಗಳು ಬರಬಹುದು. ಭೂಮಿಯಲ್ಲೇ ಬೆಳೆದು ಕಲಿತ ರೈತನಿಗೆ ಇಂತಹ ಸಾಗುವಳಿಯನ್ನು ಹೀಗೆಯೇ ಮಾಡತಕ್ಕದ್ದೆಂದು ಕಲಿಸಿ ಕೊಡಲು ಶಾಲೆಗೆ ಹೋಗಿ ಕಲಿತ ಯೋಗ್ಯತೆಯ ಮೇಲಿಂದ ಎಗ್ರಿಕಲ್ಚರಲ್ ಸುಪರ್‌ವೈಸರ, ತಹಶೀಲ್ದಾರ, ಅಥವಾ ಕಲೆಕ್ಟರರಂಥವರು ಬರುತ್ತಾರೆನ್ನುವಾಗ ಅಪಹಾಸ್ಯದ ನಗೆ, ಅಧಿಕಪ್ರಸಂಗವನ್ನು ಕಂಡಾಗಿನ ಜಿಗುಪ್ಸೆ ಮೂಡುವುದು ಸ್ವಾಭಾವಿಕ.

ಆದ್ದರಿಂದ ನಿಯೋಜಿತ ಶಾಸನದಲ್ಲಿ ಸಾಗುವಳೀ ಮಟ್ಟಿಗೆ ರೈತರಲ್ಲಿ ಅಸಡ್ಡೆ, ಆಲಸ್ಯ ಅಥವಾ ಅಜ್ಞಾನವಿದೆಯೆಂಬ ಭಾವನೆಯನ್ನಾಧರಿಸಿ ಬಂದಿರುವ ಅಂಶಗಳನ್ನೆಲ್ಲಾ ಸರಕಾರವು ವಜಾಪಡಿಸಿಕೊಳ್ಳಬೇಕಾದುದು ಅಗತ್ಯ. ಅಧಿಕೋತ್ಪನ್ನಗಳಾಗಬೇಕೆಂದು ಸರಕಾರಕ್ಕೆ ಈಗ ತಾನೇ ಮೂಡಿರುವ ವಿಶೇಷ ಹಂಬಲದ ನಾಲ್ಮಡಿ ಆಶೆಯು—ತನ್ನ ಭೂಮಿಯಲ್ಲಿ ಸಾಧ್ಯವಿದ್ದಷ್ಟು ಹೆಚ್ಚು ಬೆಳೆಯಾಗಬೇಕೆಂಬ ಸ್ವಾಭಾವಿಕ ಆತುರವು—ರೈತನಲ್ಲಿ ನೇಗಿಲುಹಿಡಿದಂದಿನಿಂದಲೂ ಇರುವಂತಹದೇ. ಹೀಗಿದ್ದೂ ಉತ್ತಮಬೆಳೆಯಾಗದಿರಲು ಮತ್ತು ಸಾಗುವಳೀ ಭೂಮಿ ಬಂಜರಿರಲು ಕಾರಣಗಳೇನೆಂಬುದನ್ನು ಯಾವ ಸ್ಥಳವನ್ನೂ ಬಾಕಿಬಿಡದೆ ಪ್ರಥಮತಃ ಶೋಧಿಸಲಿ; ಅಂತಹ ಅಡಚಣೆ, ಆತಂಕಗಳೆಲ್ಲವನ್ನೂ ಸಂಪೂರ್ಣವಾಗಿ ನಿವಾರಿಸುವ ವ್ಯವಸ್ಥೆ ಬರಲಿ. ನಿಯೋಜಿತ ಶಾಸನದಲ್ಲಿರುವಂತಹ ಅಧಿಕಾರಿಗಳನ್ನೂ, ಬೇಸಾಯ ಸುಧಾರಣಾ ಬೋರ್ಡನ್ನೂ ನೇಮಿಸುವ ಬದಲಿಗೆ ಸಾಗುವಳೀ ಲೋಪದೋಷ ಶೋಧಕತಜ್ಞರುಗಳನ್ನೂ ರೈತರ ಸಂಕಟನಿವಾರಕ ಹಾಗೂ ಸಹಾಯಕ ಬೋರ್ಡುಗಳನ್ನೂ ಸ್ಥಾಪಿಸಿಕೊಳ್ಳಲಿ; ಅವುಗಳಿಗೆ ಮಾಡುವಂತಹ ವೆಚ್ಚವನ್ನು ಇವುಗಳಿಗಾಗಿ ಮಾಡಲಿ. ಸಾಗುವಳಿದಾರರ ಕಾರ್ಯಪಟುತ್ವ ಮತ್ತು ಬೇಸಾಯಾನುಭವದ ಕುರಿತು ಮುಂದಾಗಿ ಅಪನಂಬಿಕೆ ಪ್ರದರ್ಶಿಸುವ ನಿಯೋಜಿತ ಶಾಸನದ ರೀತಿ ಬದಲಾಯಿಸಿ, ರೈತರ ಅನಾನುಕೂಲತೆಗಳನ್ನು ನಿವಾರಿಸುವುದನ್ನೇ ಪ್ರಾಮುಖ್ಯವಾಗಿ ಅದರಲ್ಲಿ ಸೇರಿಸಿಕೊಳ್ಳಲಿ. ಸರಕಾರದ ಅಂತಹ ಸಹಾಯ ವ್ಯವಸ್ಥೆಯ ನಂತರವೂ 'ಯೋಗ್ಯ ರೀತಿ'ಯಲ್ಲಿ ಸಾಗುವಳೀ ನಡೆಸದವರ ಭೂಮಿಗಳನ್ನು ಮಾತ್ರ ಇತರರಿಗೆ ವರ್ಗಾಯಿಸುವ ಮತ್ತು ಸರಕಾರವು ಕಡ್ಡಾಯವಾಗಿ ಪಡಕೊಳ್ಳುವ ವ್ಯವಸ್ಥೆ ಬರಲಿ, ಎನ್ನುತ್ತೇವೆ. ರಾಷ್ಟ್ರದ ಹಾಗೂ ಪ್ರಾಂತ್ಯದ ಸಾಮೂಹಿಕ ಹಿತದೃಷ್ಟಿಯಿಂದ ಬೆಳೆಸಬೇಕಾದ ಬೇರೆ ಬೇರೆ ವರ್ಗದ ಬೆಳೆಗಳ ಪರಿಮಾಣಗಳನ್ನು ಸರಕಾರವು ಅಧಿಕಾರ ಪೂರ್ವಕ ನಿರ್ದೇಶಿಸಲಡ್ಡಿಯಿಲ್ಲ. ಸಾಗುವಳೀದಾರರಿಗೆ ಬೆಂಬಲವಾಗಿ ನಿಂತು, ಅವರ ಕೈಬಲ ಪಡಿಸಿ, ನೆಲ ಮತ್ತು ಬೆಳೆಯ ಮಟ್ಟಿಗೆ ಯಾವ ಅಂಶವೂ ಬಾಕಿಬೀಳದಂತೆ ಕೆಲಸ ಮಾಡಿಸುವಾಗ, ಆ ಮಟ್ಟಿಗಗತ್ಯ ಬೀಳುವ ಶಾಸನಗಳೆಲ್ಲವನ್ನೂ ಜಾರಿಗೆ ತರಲಿ. ಬದಲಿಗೆ "ಎಲ್ಲಾ ಜ್ಞಾನ, ಯೋಗ್ಯತೆ, ಪರಿಣಾಮಗಳೂ ತಮ್ಮಲ್ಲೇ, ತಮ್ಮ ನೌಕರರಲ್ಲೇ" ಎಂಬ ಭಾವನೆಯಿಂದ ಬೇಸಾಯ ವ್ಯವಸ್ಥೆಯಲ್ಲೂ ಹಿಂದುಮುಂದು ನೋಡಿಕೊಳ್ಳದ ದುಡುಕಿ, ತಾನು ಇಷ್ಟರಲ್ಲೇ ಮೈಗೆ ಹಚ್ಚಿಕೊಂಡಿರುವ ಹಲವು ಗದ್ದಲಗಳ ಜತೆಗೆ ಇದೊಂದು ಮಹಾ ಗೊಂದಲವನ್ನೂ ಸರಕಾರವೇಕೆ ಹಚ್ಚಿಕೊಳ್ಳಬೇಕು?

ಕಾಂಗ್ರೆಸಿನ ಆರ್ಥಿಕ ಪರಿಶೋಧನಾ ಶಾಖೆಯವರು ಈ ಬ್ರಿಟಿಷ್‌ಮಾದರಿಯನ್ನು ಪ್ರಾಂತಿಕ ಕಾಂಗ್ರೆಸ್ ಸರಕಾರಗಳಿಗೆ ಶಿಫಾರಸುಮಾಡಿರುವುದು ನಿಜ; ಈ ಆದರ್ಶಕ್ಕೇನೇ ಆಕಾರಕೊಟ್ಟಿರುವ ಮದ್ರಾಸ್ ಸರಕಾರವು ಕಾಂಗ್ರೆಸ್ ನಿರ್ದೇಶದಂತೆ ವರ್ತಿಸಿರುವುದೆಂಬುದೂ ಸತ್ಯವೇ. ಆದರೆ ಕೇವಲ ಆದರ್ಶಕ್ಕಾಗಿ ವಸ್ತುಸ್ಥಿತಿಯನ್ನು ಮರೆಯಲಾಗುವದಿಲ್ಲ; ಭಾವನಾರಂಗದಲ್ಲಿ ನಾಜೋಕಾಗಿರುವಂತಹದು, ಕಾರ್ಯರಂಗದಲ್ಲಿ ಕಳತೆಯನ್ನೇ ನಿರ್ಮಿಸುವಂತಿದ್ದರೆ, ಅದರಿಂದ ಉದ್ದೇಶ ಸಾಧನೆಯಾಗದು. ಆದ್ದರಿಂದ ಈ ಮಸೂದೆಯು ಮೇಲಿನ ಸೂಚನೆಗಳಂತೆ ರೂಪ ಬದಲಾವಣೆಗೊಳ್ಳುವನೆಂದು ನಿರೀಕ್ಷಿಸುತ್ತೇವೆ.

ಪ್ರಾಪಂಚಿಕ ವಿದ್ಯಮಾನ

ಜಾಗತಿಕ ರಂಗದಲ್ಲಿ ನಿರೀಕ್ಷೆಗೆ ಮೀರಿದ ವಿಶೇಷ ಘಟನೆಗಳಾಗಲೀ, ಕೌತುಕಗಳಾಗಲೀ ನಡೆದಿಲ್ಲ. ಪ್ರಚಲಿತ ಸ್ಥಿತಿಗತಿಗಳೇ ಚೇತನಗೊಂಡಿವೆ. ಎಲ್ಲಾ ವಿದ್ಯಮಾನಗಳ ಮೇಲೂ ದೃಷ್ಟಿಯೋಡಿಸುವಾಗ ಇತ್ತ ಶಾಂತ ವಿಧಾನದಿಂದಾಗಲೀ ಅತ್ತ ಹೋರಾಟ ವಿಧಾನದಿಂದಾಗಲೀ ಬೇಗನೇ ತೀರ್ಮಾನಗೊಳ್ಳುವ ವಿಷಯ ಯಾವುದೂ ಇಲ್ಲವೆನ್ನಬಹುದು.

೦೦

ಚೈನಾ ಯುದ್ಧದಲ್ಲಿ ಕಮ್ಯೂನಿಸ್ಟರೀಗ ಪುನಃ ತಮ್ಮ ಹೊಡೆತವನ್ನು ರಭಸದಿಂದ ಆರಂಭಿಸಿದ್ದಾರೆ. ರಾಷ್ಟ್ರೀಯ ಸರಕಾರದ ಸೂತ್ರಧಾರಿ ಚಿಯಾಂಗ್ ಕೈ ಶೇಕರು ಏನೋ ಒಳಸಿದ್ಧತೆಗಳನ್ನು ಮಾಡಿಕೊಂಡು ದಕ್ಷಿಣ ಚೈನದಲ್ಲಿ ಕಮ್ಯೂನಿಸ್ಟರನ್ನು ತಡೆಗಟ್ಟುವ ಎದೆಗಾರಿಕೆಯನ್ನು ಸೂಚಿಸಿದ ಬೆನ್ನಲ್ಲೇ ಕೆಂಪು ಸೇನಾ ಪ್ರವಾಹವು ದಕ್ಷಿಣ ಚೈನದಲ್ಲಿ ರಭಸದಿಂದ ಮುಂದೆ ಪ್ರವಹಿಸ ಹತ್ತಿದೆ. ಹುನಾನ್ ಪ್ರಾಂತ್ಯದ ರಾಜಧಾನಿಯಿಂದಲೇ ರಾಷ್ಟ್ರೀಯ ಸೇನೆಗಳು ಹಿಂದೆಗೆದು ಆ ಪ್ರಾಂತ್ಯವಿಡೀ ಕಮ್ಯೂನಿಸ್ಟರ ಬಗಲಿಗೆ ಬಿದ್ದಿದೆ. ಈಗ ಕ್ವಾಂಗ್ಸಿ, ಕ್ವಾಂಗ್‌ಟಂಗ್ ಪ್ರಾಂತ್ಯಗಳ ಸರದಿ ಬಂದಿದೆ. ಕೇಂಟನ್ ನಗರವನ್ನು ರಕ್ಷಿಸಿಕೊಳ್ಳುವ ಬಯಕೆಯಿಂದ ಚಿಯಾಂಗ್ ಕೈ ಶೇಕರು ಸ್ವತಃ ಅಲ್ಲಿದ್ದು, ಸಕಲ ಸಿದ್ಧತೆ ಮಾಡುತಿದ್ದಾರೆ. ಅಲ್ಲೊಂದು ಬಿಗು ಸಮರ ನಡೆಯುವುದು ಸಂಭವನೀಯ. ಈಗ ಆತುರದಾಯಿ ಪ್ರಶ್ನೆಯಾಗಿ ಉಳಿದಿರುವುದೆಂದರೆ ಬ್ರಿಟಿಷ್ ರಕ್ಷಣೆಯಲ್ಲಿರುವ ಹೋಂಗ್‌ಕೋಂಗಿನಲ್ಲೇನಾಗುವದೆಂಬುದೇ. ದಕ್ಷಿಣ ಚೈನದಲ್ಲಿರುವ ಹೋಂಗ್ ಕೋಂಗ್ ಕಡೆಗೆ ಕೆಂಪುಸೇನೆಯೀಗ ಧಾವಿಸಿಬರುತ್ತಿದೆ. ಇನ್ನೆರಡುವಾರಗಳೊಳಗೆ ಅದರ ಹೊರಸುತ್ತಿಗೆ ಕಮ್ಯೂನಿಸ್ಟರು ಮುಟ್ಟುವರು. ಒಳಗಡೆಯಲ್ಲಿ ಬ್ರಿಟಿಷ್ ಸೇನೆಗಳು ಮತ್ತು ವಿಮಾನಗಳು ಹೆಚ್ಚು ಹೆಚ್ಚಾಗಿ ತುಂಬಿಕೊಳ್ಳುತ್ತಿವೆ. ಇಲ್ಲಿ ಬ್ರಿಟಿಷ್—ಕಮ್ಯೂನಿಸ್ಟ ಘರ್ಷಣೆಯಾಗಬಹುದೆ? ಆವಲ್ಲಿ ಅದರ ಪರಿಣಾಮವೇನು? ಎಂಬ ಆತುರದ ಪ್ರಶ್ನೆಗಳೆದ್ದಿವೆ.

೦೦

ಮಿಕ್ಕ ಹೋರಾಟರಂಗಗಳು ಬಹುಮಟ್ಟಿಗೆ ಇದ್ದಂತಿವೆ. ಬರ್ಮದ ರಣಕಣಗಳು ಹೊಸರೂಪ ಧರಿಸಲು ಅಸಮರ್ಥವಾಗಿ ಯಥಾಗತಿ ಓಡಿದಿವೆ. ಮಲಯದ ಗೊಂದಲ ವಾತಾವರಣ ಒಂದಿಷ್ಟೂ ಬಿಸಿ ಆರದೆ, ದರೋಡೆಗಾರರ ಮತ್ತು ದರೋಡೆ ನಿರ್ಮೂಲನ ಶಾಸನಗಳ ಕ್ರೂರಾಚರಣೆಗಳಿಂದ ಭೀಕರವಾಗಿಯೇ ಇದೆ. ಈ ವಾತಾವರಣದ ದೆಸೆಯಿಂದ ಕಳೆದ ವಾರದಲ್ಲಿ ನಿರ್ದೋಷೀ ಭಾರತೀಯರು 4 ಮಂದಿ ಸತ್ತು 25 ಮಂದಿ ಜಖಮಿಗಳಾದರೆಂದು ಅಧಿಕೃತ ಪ್ರಕಟಣೆ. ಸ್ಥಿತಿ ಹೇಗೋ!

ಆಸ್ಟ್ರಿಯದ ಮೇಲೆ ಯುಗೊಸ್ಲೇವಿಯವು ಮುಂದಿಟ್ಟಿರುವ ಬೇಡಿಕೆಗಳ ಸಂಬಂಧವಾಗಿ ರಶ್ಯಕ್ಕೂ ಯುಗೊಸ್ಲೇವಿಯಕ್ಕೂ ಮನಸ್ತಾಪ ಬೆಳೆಯುತ್ತಾ ಹೋಗಿದೆ. ಪೇರಿಸಿನಲ್ಲಿ ಸೇರಿದ್ದ ವಿದೇಶ ಮಂತ್ರಿಗಳ ಸಮ್ಮೇಲನವು ಯುಗೊಸ್ಲೇವಿಯಕ್ಕೆ ಅನ್ಯಾಯ ಮಾಡಿದೆಯೆಂದು ಯುಗೊಸ್ಲೇವಿಯವು ರಶ್ಯಕ್ಕೆ ಕಳುಹಿದ ನಿಷೇಧ ಸೂಚನೆಗೆ ರಶ್ಯವು ಧಿಕ್ಕಾರ ಸೂಚಿಸಿದೆ-ತನ್ನನ್ನು ವಂಚಿಸಿ ಯುಗೊಸ್ಲೇವಿಯವು ಬ್ರಿಟನಿನೊಡನೆ ಗುಪ್ತ ಒಡಂಬಡಿಕೆ ಮಾಡಿಕೊಂಡಿದ್ದುದರ ವಿವರವು ತನಗೆ ಗೊತ್ತಾಗಿದೆ ಎಂದು ರಶ್ಯದ ಆರೋಪ.

ಇಂಡೋನೇಶಿಯಾದಲ್ಲಿ ಸಂಯುಕ್ತ ಸಂಸ್ಥಾನಾಡಳಿತೆಯೊಂದನ್ನು ಸ್ಥಾಪಿಸಿಕೊಳ್ಳುವ ಸಂಬಂಧವಾಗಿ ಅಲ್ಲಿಯ ರಿಪಬ್ಲಿಕನ್ ಮತ್ತು ಫೆಡರಲಿಸ್ಟ್ ಪಕ್ಷಗಳೊಳಗೊಂದು ಒಪ್ಪಂದವಾಗಿದೆ.

ಇಂಗ್ಲಾಂಡಿನಲ್ಲಿ ಮುಂಬರುವ ಮಹಾ ಚುನಾವಣೆಗಾಗಿ ಅಟ್ಲಿ ನಾಯಕತ್ವದ ಕೂಲಿಗಾರ ಪಕ್ಷವೂ ಚರ್ಚಿಲ್ ನಾಯಕತ್ವದ ಟೋರಿ ಪಕ್ಷವೂ ಇಷ್ಟರೊಳಗೇನೇ ಪ್ರಚಾರಕ್ಕಿಳಿದಿವೆ.

ಸಂಯುಕ್ತ ರಾಷ್ಟ್ರ ಸಂಘದ ಮುಖ್ಯ ಕಾರ್ಯದರ್ಶಿ ಮಿ. ಟ್ರಿಗ್ವಿ ಲೀ ಇವರು ಕಮ್ಯೂನಿಸ್ಟ್ ಒತ್ತಡಕ್ಕೆ ಬಲಿಬಿದ್ದಿರುವರೆಂದೂ, ಸಂಸ್ಥೆಯ ಕಾರ್ಯಾಲಯದಲ್ಲಿ ಕಮ್ಯೂನಿಸ್ಟ್ ವರ್ಚಸ್ಸು ಹರಡಿಹೋಗಿರುವುದೆಂದೂ, ಲೀಯನ್ನು ರದ್ದುಪಡಿಸಿ ಬೇರೆಯವರನ್ನು ನೇಮಿಸಿಕೊಳ್ಳಬೇಕೆಂದೂ ಒಂದು ದೂರು ಕೇಳಿಬಂದಿದೆ.

ರಶ್ಯದ ಕಮ್ಯೂನಿಸಂ ಪ್ರಚಾರಕ್ಕಿದಿರು ನಿಲ್ಲಲಾಗುವಂತೆ ಮಿತ್ರ ರಾಷ್ಟ್ರಗಳಿಗೆ ಶಸ್ತ್ರೋಪಕರಣಗಳ ಸಹಾಯವೊದಗಿಸುವುದಕ್ಕಾಗಿ 14500 ಮಿಲಿಯ ಡಾಲರುಗಳನ್ನು ಮಂಜೂರು ಮಾಡುವ ಮತ್ತು ಆ ಸಂಬಂಧದ ಸರ್ವಾಧಿಕಾರವನ್ನು ಅಧ್ಯಕ್ಷ ಟ್ರುಮೇನರಿಗೆ ಕೊಡುವ ಸೂಚನೆಯು ಅಮೇರಿಕದ ಕಾಂಗ್ರೆಸಿನ ಮುಂದೆ ಬಂದಿದೆ. ಇತ್ತ ರಶ್ಯವು ತನ್ನ ಗಡೀ ಪ್ರದೇಶಗಳೊಳಗಿನ 2½ ಲಕ್ಷ ರಶಿಯೇತರ ಜನರನ್ನು ಹೊರಗೆ ಹಾಕಿದೆಯೆಂದೂ, ತನ್ನ ಗೋಪ್ಯ ರಕ್ಷಣೆಗಾಗಿಯೇ ಈ ಕೃತ್ಯವೆಂದೂ ಊಹಿಸಲಾಗಿದೆ.

೦೦

ಕಾಶ್ಮೀರದಲ್ಲಿ ಪುನಃ ಯುದ್ಧಸ್ಫೋಟವಾಗದಂತೆ ಮಧ್ಯ ಗಡಿಗಳನ್ನು ನಿಶ್ಚೈಸಿಕೊಳ್ಳುವರೆ ಭಾರತ ಮತ್ತು ಪಾಕಿಸ್ತಾನಗಳ ಮಿಲಿಟರಿ ಸಮ್ಮೇಳನವು ಕರಾಚಿಯಲ್ಲಿ ಸೇರಿದ್ದು ಕೆಲವು ವಿಷಯಗಳಲ್ಲಿ ಒಮ್ಮತವಾದರೂ ಇನ್ನು ಕೆಲವು ಪ್ರಶ್ನೆಗಳಲ್ಲಿ ಮನಸ್ಸು ಕೂಡಿ ಬಂದಿಲ್ಲ. ಇದು ಕೇವಲ ತಾತ್ಕಾಲಿಕ ಶಾಂತಿ ರಕ್ಷಣೆಯ ವ್ಯವಸ್ಥೆ. ಇನ್ನು ಶಾಶ್ವತ ಸಂಧಾನ ವಿಧಾನಗಳ ಕುರಿತು ಭಾರತ ಮತ್ತು ಪಾಕಿಸ್ತಾನಗಳೊಳಗೆ ತೀವ್ರ ಮತಭೇದವಿರುವುದರಿಂದ, ಅದು ಸಾಧ್ಯವಾದೀತೇ ಎಂಬ ಸಂದೇಹ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ. ಕಾಶ್ಮೀರ ಕಮಿಶನಿನ ಪ್ರಯತ್ನಗಳೆಲ್ಲವೂ ನಿಷ್ಫಲವಾಗಿ ಪುನಃ ಸಶಸ್ತ್ರ ಹೋರಾಟವೆದ್ದರೆ, ಆ ಮೇಲದು ಕೇವಲ ಕಾಶ್ಮೀರ ರಂಗದಲ್ಲೇ ಉಳಿದುಕೊಳ್ಳದೆ, ಭಾರತ-ಪಾಕಿಸ್ತಾನ್ ವ್ಯಾಪಿಯಾಗಬಹುದೆಂದು ನಿರೀಕ್ಷಿಸಬಹುದು. ಇಂತಹ ಸಂದರ್ಭವೊದಗಿದರೆ ಇಕ್ಕಡೆಗಳಲ್ಲೂ ಇರುವ ತಮ್ಮ ಜನರನ್ನು ಹಿಂದೆಗೆದುಕೊಳ್ಳುವೆವೆಂದು ಬ್ರಿಟಿಷ್ ಸರಕಾರವು ಸೂಚಿಸಿರುವುದೆಂದು ತಿಳಿದು ಬರುತ್ತದೆ.

ಭಾರತದ ಪೂರ್ವ ಪಂಜಾಬು ಮತ್ತು ಪಾಕಿಸ್ತಾನದ ಪಶ್ಚಿಮ ಪಂಜಾಬುಗಳೊಳಗೆ ಹರಿಯುತ್ತಿರುವ ಸಟ್ಲೆಜ್ ಹೊಳೆಯ ಕೈಗೊಂದೆಡೆ ಪೂರ್ವ ಪಂಜಾಬು ಸರಕಾರವು ಬಕ್ರಾ ಅಣೆಕಟ್ಟನ್ನು ಹಾಕುವ ಯೋಜನೆ ಕೈಕೊಂಡಿದೆ. ಇದರಿಂದ ತಮ್ಮ ಕ್ಷೇತ್ರಕ್ಕೆ ಹರಿಯುವ ನೀರಿಗೆ ತೊಂದರೆಯಾಗುವದೆಂದೂ ಅದು ಅಂತರ್ರಾಷ್ಟ್ರೀಯ ಹೊಳೆಯೆಂದೂ ಪಾಕಿಸ್ಥಾನ್ ಸರಕಾರವು ಆಕ್ಷೇಪಿಸಿದೆ. ಆ ಅಣೆಕಟ್ಟಿಗಾಗಿ ಭಾರತ ಸರಕಾರಕ್ಕೆ ಸಾಲ ಮಂಜೂರು ಮಾಡದಂತೆ ಜಾಗತಿಕ ಬೇಂಕಿಗೂ ಈ ದೂರನ್ನು ವಿಚಾರಿಸಬೇಕೆಂದು ಜಾಗತಿಕ ಕೋರ್ಟು ಮತ್ತು ಸಂಯುಕ್ತ ರಾಷ್ಟ್ರ ಸಂಘಕ್ಕೂ ಪಾಕಿಸ್ತಾನದ ಅರ್ಜಿ ಹೋಗಿದೆ. ಭಾರತ ಪಾಕಿಸ್ತಾನಗಳೊಳಗಿನ ಪೂರ್ವ ಪಂಜಾಬು ಕಾಲುವೇ ವಿವಾದಗಳ ತೀರ್ಮಾನ ಸಮ್ಮೇಳನವು ಆಗೋಸ್ತು 4ಕ್ಕೆ ನವದಿಲ್ಲಿಯಲ್ಲಿ ಸೇರುವುದು.

[ಜನೇ ಪುಟದಿಂದ ಮುಂದುವರಿದುದು]

ಕಾಂಗ್ರೆಸನ್ನು ಅಡ್ಡೈಸಿರುವ ಕಂಟಕಗಳು

ನಿಧಿಗಳನ್ನೂ ನವದಿಲ್ಲಿಗೆ ಕರೆದಿದ್ದಾರೆ ಸಮಿತಿ ಸಭೆಯ ಆದಿಭಾಗದಿಂದಲೂ ಅಲ್ಲಿ ಹಾಜರಿರುವ—ಬಂದು ಹೋಗುತ್ತಿರುವ-ಬಂಗಾಳೀ ಕಾಂಗ್ರೆಸಿಗರಿಗೇನೂ ಕಡಿಮೆಯಿಲ್ಲ.

ಮದ್ರಾಸಿನ ಆರುಮಂದಿ ಕಾಂಗ್ರೆಸ್ ಮಂತ್ರಿಗಳ ಮೇಲೆ ಅಧಿಕಾರ ದುರ್ವಿನಿಯೋಗದ ಆರೋಪಗಳು ಬಂದಿದ್ದು, ಆದರ ವಿಚಾರಣೆ ನಡೆಸಿಬಂದ ಶ್ರೀ ಶಂಕರರಾವ್ ದೇವೋ ತನ್ನ ವರದಿಯನ್ನು ಕಾಂಗ್ರೆಸ್ ಸಮಿತಿಗೊಪ್ಪಿಸಿದ್ದಾರೆ. ಆ ದೂರುಗಳನ್ನು ಕೊಟ್ಟ ಶ್ರೀ ಟಿ. ಪ್ರಕಾಶಮ್‌ರೂ ಅವರ ಅನುಯಾಯಿಗಳೂ ಸಮಿತೀ ಸಭೆಗಾಹ್ವಾನಿಸಲ್ಪಟ್ಟು ತಮ್ಮ ಸವಿವರ ವಾಗ್ಮೂಲಗಳನ್ನಿತ್ತಿದ್ದಾರೆ. ನ್ಯಾಯಾಧೀಶ ಮಂಡಲಿಯಿಂದಲೇ ಮುಂದಿನ ವಿಚಾರಣೆ ನಡೆಯಬಹುದು—ಒಬ್ಬಿಬ್ಬರು ಮಂತ್ರಿಗಳು ರಾಜಿ ಕೊಡಬೇಕಾದೀತು—ಮುಂತಾದ ನಾನಾ ಊಹಾಪೋಹಗಳೆದ್ದಿವೆ. ಆರೋಪ ಹೇರಿದವರು ಕೊನೆಗೆ ವಿಚಾರಣಾ ಭಾಗಿಗಳಾಗಲು ನಿರಾಕರಿಸಿದ್ದರಿಂದಲೂ ಬೇರೆ ಕಾರಣಗಳಿಂದಾಗಿಯೂ, ಇನ್ನೂ ವಿಚಾರಣೆ ನಡೆಸಬೇಕಾದ ಅಂಶವಿದೆಯೆಂದು ಶ್ರೀ ದೇವೋ ವರದಿ ಮಾಡಿದ್ದಾರೆಂದು ನಂಬಬಹುದು. ಆ ವಿಚಾರಣೆ ಯಾವ ರೂಪದ್ದೆಂಬುದು ಬಂಗಾಳ ಸಂಬಂಧದ ತೀರ್ಮಾನದಂತೆಯೇ ಈ ತಿಂಗಳಾಂತ್ಯದೊಳಗೆ ತಿಳಿದುಬರಲಿದೆ.

ಬಿಹಾರಿನ ಕಾಂಗ್ರೆಸ್ ಮಂತ್ರಿಗಳ ಕೆಲವರ ಮೇಲೂ ಇದೇ ಮಾದರಿಯ ದುರಾಡಳಿತೆಯ ಆರೋಪಗಳು ಬಂದಿದ್ದು, ಅಲ್ಲಿಯ ಪ್ರಧಾನ ಮಂತ್ರಿ ಸಮೇತ ಕೆಲವರು ದಿಲ್ಲಿಗೆ ಬಂದಿದ್ದಾರೆ. ಅದರ ವಿಚಾರಣಾಧಿಕಾರವನ್ನು ಡಾ! ರಾಜೇಂದ್ರ ಪ್ರಸಾದರಿಗೆ ಕೊಡಲಾಗಿದೆ.

ರಾಜಸ್ಥಾನ್ ಕಾಂಗ್ರೆಸಿಗೂ ಅಲ್ಲಿಯ ಮಂತ್ರಿಮಂಡಲಕ್ಕೂ ವಿರೋಧವೆದ್ದಿದೆ. ಮಿಕ್ಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತು ಪ್ರಾಂತಿಕ ಕಾಂಗ್ರೆಸ್ ಸರಕಾರಗಳೊಳಗೂ ಇಂತಹ ಮನೋಮಾಲಿನ್ಯತೆಯೇ ಇರುವುದರಿಂದ ಕಾಂಗ್ರೆಸ್ ಪಾರ್ಲಮೆಂಟರಿ ಬೋರ್ಡಿನ ಅನುಮತಿ ವಿನಹ ಯಾವ ಪ್ರಾಂತಿಕ ಕಾಂಗ್ರೆಸ್ ಸಮಿತಿಯೂ ಪ್ರಾಂತಿಕ ಸರಕಾರದ ಮೇಲೆ ಅವಿಶ್ವಾಸ ಸೂಚನೆಮಾಡಬಾರದು' ಎಂದು ಕಾಂಗ್ರೆಸ್ ಸಮಿತಿಯು ಮುಂದಾಗಿ ನಿರ್ಣಯಿಸಿಕೊಂಡಿದೆ.

ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಶಾಸನ ಸಭಾ ಪಕ್ಷದೊಳಗೆ ಮದ್ರಾಸಿನಂತೆಯೇ ಒಳಪಂಗಡಗಳು ಹುಟ್ಟಿ ಬೆಳೆಯುತ್ತಾ ಬಂದುದನ್ನು [illegible] ಮತ್ತು ಪ್ರಧಾನಿ ಪಂತರು ಬೆದರಿಸಿ ಗದರಿಸಿ ಅವುಗಳ ತಲೆಯನ್ನಲ್ಲೇ ತಗ್ಗಿಗೊತ್ತಿದ್ದಾರೆ. ಬೊಂಬಾಯಿ ಸರಕಾರದ ಮೇಲೆ ಸ್ವಭಾಷಾವಲಯ ಪಕ್ಷಪಾತ, ಮತ್ತಿತರ ದೂರುಗಳು ಕೇಳಬರುತ್ತಿವೆ. ಪೂರ್ವ ಪಂಜಾಬಿನ ಕಾಂಗ್ರೆಸ್ ಮಂತ್ರಿಮಂಡಲವಂತೂ ರಚನೆಯೊಂದಿಗೇನೇ ಕಲಹವನ್ನು ಆರಂಭಿಸುತ್ತಾ ಬಂದಿರುವಂತಹದು. ಕಾಂಗ್ರೆಸ್ ಅಧಿನಾಯಕರು ಅದಕ್ಕೊಂದು ಕಟ್ಟುಹಾಕಿರುವರಾದರೂ ಈಗಲೂ ಅಲ್ಲಿ ಒಮ್ಮತವಿಲ್ಲ.

ಈ ರೀತಿ ಎಲ್ಲೆಲ್ಲೂ ಒಳರೋಗ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇವೆಲ್ಲವುಗಳಿಗೂ ಚಿಕಿತ್ಸೆ ಮಾಡಬೇಕಾಗಿ ಬಂದಿದೆ. ಸಾಧ್ಯವಾದೀತೆ?

ಕಟಪಾಡಿ:-ಇಲ್ಲಿ ಬ್ರೇಂಚ್ ಪೋಸ್ಟ್ ಆಫೀಸು ಇದ್ದುದು ಕಳೆದ ಜೂನ್ ತಿಂಗಳಿಂದ ಸಬ್ ಪೋಸ್ಟ್ ಆಫೀಸಾಗಿ ಮಾರ್ಪಟ್ಟಿರುತ್ತದೆ. ಬೊಂಬಾಯಿಯಿಂದ ಟೆಲಿಗ್ರಾಂ ಮನಿಯಾರ್ಡರು ಈ ಮುಂಚಿನಂತೆ ಉಡುಪಿ ಪೋಸ್ಟ್ ಆಫೀಸಿಗೆ ಮಾಡಿದಲ್ಲಿ ಕಟಪಾಡಿಗೆ ಒಂದು ದಿನ ತಡವಾಗಿ ಸಿಗುವುದು. ಕಾಪು ಪೋಸ್ಟ್ ಆಫೀಸಿಗೆ ಮಾಡಿದರೆ ಅದೇ ದಿನ ಸಿಗುವುದು. ಪರವೂರ ಮಹನೀಯರು ಈ ಕಡೆಗೆ ಗಮನವಿಡಬೇಕಾಗಿ ಪ್ರಾರ್ಥನೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ನಡೆಯುವ ಚಿತ್ರ- ರಾಜಕಮಲದವರ,
"ಬನ್ವಾಸಿ"
ಶೋಭಾರಾಣಿ, ವಿಶ್ವಾಸ್, ಗುಲಾಬ್, ಮಹಿಪಾಲ್, ಗ್ಯಾನಿ,
ಬರುವ ಚಿತ್ರ: ಪ್ರಕಾಶ ಚಿತ್ರದವರ
● ಭಕ್ತಧ್ರುವ ●
ಮಾಸ್ಟರ್ ಲಕ್ಷ್ಮಣ, ಶಶಿಕಪೂರ್ ಮೃದುಲ, ಜೀವನ್,

ಉಡುಪಿ

ವರ್ಗಾವರ್ಗಿ ಉಡುಪಿ ಬೋರ್ಡ್ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ. ಯು. ಭವಾನಿ ಶಂಕರರಾಯರಿಗೆ ಕಾಸರಗೋಡು ಹೈಸ್ಕೂಲಿಗೂ ಅಲ್ಲಿಯ ಹೆಡ್ಮಾಸ್ತರ್ ಶ್ರೀ. ಕೆ. ಸಂಜೀವ ಶೆಟ್ಟರಿಗೆ ಇಲ್ಲಿಯ ಹೈಸ್ಕೂಲಿಗೂ ಮುಖ್ಯೋಪಾಧ್ಯಾಯರಾಗಿ ವರ್ಗವಾಗಿದೆ. ಶ್ರೀ. ರಾಯರನ್ನು ಇಲ್ಲಿಯ ಅಧ್ಯಾಪಕ ವೃಂದದವರು ಬೀಳ್ಕೊಡಲು ತಾ 23ರಲ್ಲಿ ಉಪಾಹಾರ ಕೂಟವೊಂದನ್ನೇರ್ಪಡಿಸಿದ್ದರು.

ಕಲಾವೃಂದದ ಮಹಾಸಭೆಯು ತಾ. 23ರಲ್ಲಿ ಜರಗಿ ಹಿಂದಿನಂತೆ, ಶ್ರೀ ಎ. ಎಸ್. ಶ್ರೀರಾಮಾಚಾರ್ಯರು ಅಧ್ಯಕ್ಷರಾಗಿಯೂ, ಶ್ರೀ ಕೊಡವೂರು ಶ್ರೀನಿವಾಸ ಭಟ್ಟರು ಕಾರ್ಯದರ್ಶಿಗಳಾಗಿ, ಶ್ರೀಗಳಾದ ಕೆ. ಸದಾಶಿವ ಐತಾಳ (ಕೋಶಾಧಿಕಾರಿ) ಪಿ. ರಾಮಶಂಕ್ರಿ (ಹಸ್ತಲಿಖಿತ ಪತ್ರ ಸಂಪಾದಕ), ಕೆ. ಸೂರ್ಯನಾರಾಯಣ ಸೋಮಯಾಜಿ (ವಾಚನಾಲಯ ಕಾರ್ಯದರ್ಶಿ), ಪಿ. ವೆಂಕಟಕೃಷ್ಣ ಉಪಾಧ್ಯಾಯ (ಭಜನಾ ಕಾರ್ಯದರ್ಶಿ) ಆರಿಸಲ್ಪಟ್ಟರು.

ಕಲಾವೃಂದದ ದಿವಂಗತ ಪಂಡಿತ ವೆಂಕಟ್ರಮಣಾಚಾರ್ಯರ ಸ್ಮಾರಕ ಲೇಖನ ಸ್ಪರ್ಧೆಗೆ ಸಾಕಷ್ಟು ಲೇಖನಗಳು ಬಾರದಿದ್ದುದರಿಂದ ಲೇಖನ ಸ್ವೀಕಾರ ಮತ್ತು ಫಲಿತಾಂಶ ಪ್ರಕಟಣೆ ತಾರೀಕನ್ನು ಆಗೋಸ್ತು ತಾ. 25ರ ತನಕ ಮುಂದುವರಿಸಲಾಗಿದೆ ಎಂದು ಸಹ ತಿಳಿದುಬರುತ್ತದೆ

NOTICE

In the Court of the District Munsiff of Coondapur.

R. I. A. No. 552 and 553 of 1949 in O. S. No. 454 of 1946.

Between:- 1 Srinivasa Karantha
2 Sadashiva Karantha
Petitioners
and
1 Thejappa Hegde
2 Ramanna Hegde
3 Rudramma Shedthi
4 Monappa Shetty
5 Sanjeeva Shetty
6 Venkatesha Kamath
Respondents.

To

(1) Ramanna Hegde, son of Thungamma Heggadthi (2nd respondent)

(2) Rudramma Shedthi, daughter of Chandamma Shedthi and wife of Advocate K. Soorappa Shetty, Residing at Balkudru Village of Udipi Taulk and Vadarhobli village of Coondapur Taluk, respectively.

Please take notice that the petitioners above named had filed the above applications for final decree and for excusing delay in applying for final decree, and the same is posted for your appearence either in person or through a pleader duly instructed to 12-8-1949 at 11 A. M. before the said court, failing which you will be declared exparte and the matter proceeded with.

Sd. K. Ramappayya B. A. B. L;
Advocate for petitioners.

Coondapur
23-7-1949

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು—ಇದೇ ತಾ 24ರಲ್ಲಿ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ತಜ್ಞರ ವರದಿಯಂತೆ ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರ ಚುನಾವಣೆ ಮಾಡುವಂತೆ ಕೇಂದ್ರ ಸರಕಾರವನ್ನು ವಿನಂತಿಸುವ, ಸಿಟಿಬಸ್ಸುಗಳಲ್ಲಿ ಸರ್ವಿಸು ಬಸ್ಸುಗಳಂತೆ ಲಗ್ಗೇಜನ್ನು ಒಯ್ಯುವ ಅನುಕೂಲತೆ ದೊರೆಯಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಮಂಗಳೂರು

ಬೀಳ್ಕೊಡುವ ಸಮಾರಂಭ

ಮಂಗಳೂರು ಸೆಕೆಂಡರಿ ಟ್ರೈನಿಂಗ್ ಶಾಲೆಯ ಸಹಾಯಕ ಉಪಾಧ್ಯಾಯರಾಗಿದ್ದ ಶ್ರೀ ಯು. ಕೃಷ್ಣರಾವ್ ಅವರು ಉಡುಪಿಯ ಸರಕಾರಿ ಟ್ರೈನಿಂಗ್ ಶಾಲೆಯ ಹೆಡ್ಮಾಸ್ತರರಾಗಿ ವರ್ಗವಾದ ನಿಮಿತ್ತ ಅವರನ್ನು ಬೀಳ್ಕೊಡುವ ಸಮಾರಂಭವು ಈಚೆಗೆ ನಡೆಯಿತು. ಶ್ರೀ ನಜರತ್ ಅವರು ಅಧ್ಯಕ್ಷತೆ ವಹಿಸಿದ್ದರು.

ಪಂಚಾಯತ ಪರಿಷತ್ತು

ಪಶ್ಚಿಮ ಕರಾವಳಿ ಮತ್ತು ನೀಲಗಿರಿ ಜಿಲ್ಲೆಗಳ ಪಂಚಾಯತ ಸಮ್ಮೇಳನವು ಇದೇ ತಾ. 31ರಲ್ಲಿ ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬ್ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ ಜರಗುವುದು. ಮದ್ರಾಸಿನ ಸ್ಥಳೀಯ ಖಾತೆಗಳ ಮಂತ್ರಿ ಮಾನ್ಯ ಶ್ರೀ ಕೆ. ಚಂದ್ರಮೌಳಿಯವರು ಸಮ್ಮೇಳನದ ಉದ್ಘಾಟನ ಮಾಡುವರು.

ಕಾರ್ಯಕ್ರಮಗಳು— ತಾ 31ನೆ ಆದಿತ್ಯವಾರ ಬೆಳಿಗ್ಗೆ 10-30ರಿಂದ 12-30ರ ತನಕ ಶ್ರೀ ಟಿ. ಮಂಜಯ್ಯ ಹೆಗ್ಗಡೆಯವರಿಂದ ಸ್ವಾಗತ ಭಾಷಣ, ಮಾನ್ಯ ಶ್ರೀ ಕೆ. ಚಂದ್ರಮೌಳಿಯವರಿಂದ ಸಮ್ಮೇಳನದ ಉದ್ಘಾಟನೆ, ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬರಿಂದ ಅಧ್ಯಕ್ಷ ಭಾಷಣ. ನಿಯಾಮಿತ ಸಮಿತಿಯ ಚುನಾವಣೆ. ಅಪರಾಹ್ನ 4-30ರಿಂದ 6ಗಂಟೆಯ ತನಕ ಬಹಿರಂಗ ಅಧಿವೇಶನ.

ಸಮ್ಮೇಳನದ ಉದ್ಘಾಟನಾ ಸಮಾರಂಭ

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No 42/1949

ಕಲ್ಯಾಣಿ ಹೆಗ್ಗಡ್ತಿ ಕೂಡಾ 6 ಜನರು
—ಅರ್ಜಿದಾರರು.

ಮತ್ತು

ನಾಗಣ್ಣ ಸೆಟ್ಟಿ ಕೂಡಾ 13 ಜನರು
—ಎದ್ರಿರು

ಸದ್ರಿ ಯೆದ್ರಿರಿಗೆ ಮತ್ತು ಇತರ ಸಮಸ್ತರಿಗೆ ಕೂಡಾ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಕಾರ್ಕಳ ತಾಲೂಕು ಕಲ್ಯಮುಂಡ್ಕೂರು ಗ್ರಾಮದಲ್ಲಿ ತಾರೀಕು 11-11-1948ರಲ್ಲಿ ಮೃತಪಟ್ಟಿರುವ ನಿಡ್ಡೋಡಿ ಬಾವದ ನಾರಾಯಣ ಸೆಟ್ರಿಗೆ ಬರಬೇಕಾಗಿದ್ದ ಸಾಲ ವಗೈರೆ ಆತನ assets ಗಳನ್ನು ವಸೂಲುಮಾಡುವರೆ ಅರ್ಜಿದಾರರ ಕಡೆಯಿಂದ 1ನೇ ಅರ್ಜಿದಾರಳ ಹೆಸರಿಗೆ ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ಕೊಟ್ಟ ಸದ್ರಿ ಅರ್ಜಿಯು ತಾರೀಕು 19-8-1949ಕ್ಕೆ ಇಟ್ಟಿರುವುದರಿಂದ ಈ ಕುರಿತು ಆಕ್ಷೇಪವುಳ್ಳವರು ಸದ್ರಿ ದಿನ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಅವರ ಆಕ್ಷೇಪಣೆಗಳನ್ನು ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ಅರ್ಜಿಯು ಅರ್ಜಿದಾರರ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ.

ಅರ್ಜಿದಾರರ ವಕೀಲ್
K. Mahabala Hegde,
Karkal 25-7-1949

ಕ್ಕೂ ಮಧ್ಯಾಹ್ನಾನಂತರ ಜರಗುವ ಬಹಿರಂಗ ಅಧಿವೇಶನಕ್ಕೂ ಸಭಾಭವನದಲ್ಲಿ ಸ್ಥಳಾಭಾವದ ಕೊರತೆ ಇರುವುದರಿಂದ ಪ್ರವೇಶ ಬಯಸುವವರು ಕಾರ್ಯದರ್ಶಿ ಶ್ರೀ. ಡಿ. ಮೋಹನರಾವ್, ಎಡ್ವೋಕೇಟ್, ಅವರಿಗೆ ಮುಂದಾಗಿ ಬರೆದು ಫ್ರೀಪಾಸುಗಳನ್ನು ಪಡೆದುಕೊಳ್ಳತಕ್ಕದ್ದೆಂದು ತಿಳಿಸಲಾಗಿದೆ.

ಆಹಾರ ಸಾಗಾಟಕ್ಕಾಗಿ:—ಎಂಟು ಲೋರಿಗಳನ್ನು ಸರಕಾರದ ಸಾರ್ವಜನಿಕ ಸಾಗಾಟ ಖಾತೆಯವರು ಕಳುಹಿಸಿದ್ದು ಇವೀಗ ಕಲೆಕ್ಟರರ ಆಫೀಸಿನ ಕಂಪೌಂಡಿನಲ್ಲಿವೆ. ಖಾಸಗಿ ಆಹಾರ ಸಾಗಾಟಕ್ಕೂ ಈ ಲೋರಿಗಳನ್ನು ಉಪಯೋಗಿಸಿಕೊಳ್ಳಬಹುದು

ಶ್ರೀ ಸುಕೃತೀಂದ್ರಸ್ವಾಮಿಗಳವರು 1912ನೆ ಇಸವಿಯಲ್ಲಿ ಶ್ರೀ ವರದೇಂದ್ರ ತೀರ್ಥ ಸ್ವಾಮಿಗಳವರಿಂದ ಸನ್ಯಾಸ ಆಶ್ರಮ ದೀಕ್ಷೆಯನ್ನು ಪಡೆದರು. 1914ರಲ್ಲು ಶ್ರೀ ವರದೇಂದ್ರ ತೀರ್ಥರು ಸಮಾಧಿ ಹೊಂದಿದುದರಿಂದ ಶ್ರೀ ಸುಕೃತೀಂದ್ರರು ಗುರುಪಟ್ಟವನ್ನೇರಿದರು. ಅಂದಿನಿಂದ ವೃಂದಾವನಸ್ಥರಾಗುವ ತನಕವೂ ಶ್ರೀ ಸುಕೃತೀಂದ್ರ ತೀರ್ಥರು ಸಮಾಜ ಧರ್ಮಸಂಸ್ಥೆಗಳ ಜೀರ್ಣೋದ್ಧಾರ ಮೊದಲಾದ ಹಲವಾರು ಧಾರ್ಮಿಕ ಕಾರ್ಯಗಳನ್ನು ಪೂರ್ಣಗೊಳಿಸಿದ್ದರು. ಶಿಷ್ಯವೃಂದಕ್ಕೆ ಸ್ವಾಮಿಗಳವರ ಮೇಲೆ ಅತುಲಭಕ್ತಿ ಪ್ರೇಮಗಳಿದ್ದುವು ಎಂಬುದಕ್ಕೆ ಜಿಲ್ಲೆಯಲ್ಲೆಲ್ಲ ಅವರ ಸಮಾಧಿ ವರ್ತಮಾನ ಬಂದೊಡನೆ ಹರತಾಳವನ್ನಾಚರಿಸಿದುದೂ ಅಂತೆಯೇ ತಾ. 22ರಲ್ಲು ಅವರಾತ್ಮ ಪ್ರೀತ್ಯರ್ಥವಾಗಿ ಭಜನೆ, ಮೆರವಣಿಗೆ, ಫಲಹಾರ ಸಂತರ್ಪಣೆ ಜರಗಿದುದೂ ಸಾಕ್ಷಿ.

ದ. ಕನ್ನಡ

ಕುಂಬಳೆ

ಸ್ಥಳೀಯ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಸಾರ್ವಜನಿಕೋಪಯೋಗಾರ್ಥವಾಗಿ ಸ್ಥಾಪಿಸಿದ್ದ ರೇಡಿಯೋವಿನ ಉದ್ಘಾಟನೆಯನ್ನು ಮಾಜಿ ತಾಲೂಕು ಬೋರ್ಡು ಪ್ರೆಸಿಡೆಂಟ್ ಶ್ರೀ ಐ. ಸಿ. ಭಂಡಾರಿಯವರು ತಾ. ೧೮ರಂದು ನಿರ್ವಹಿಸಿರುವರು.

ನೋಟೀಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

R. E. P 125/1949 O. S. 411/1945
R I. A. 1455/47

C. ಲೋಕಯ್ಯ ನ್ಯಾಕ—ಅರ್ಜಿದಾರ

ಬೆಲ್ಚರಸೋಜಾ ಕೂಡಾ 9ಜನರು.
—ಎದ್ರಿರು

ಈ ಅಮ್ಲುಜ್ಯಾರಿಯಲ್ಲಿ ಯೆದ್ರಿರಾದ ಕಿಲ್ಪಾಡಿ ಶಿವಾಂಸೋಜನ ಮಕ್ಕಳು 2ನೇ ಎದ್ರಿ ಅಂಜಲ್ ಸೋಜಾ; 3ನೇ ಮಾರ್ಸೆಲಸೋಜ, 4ನೇ ಆಂದ್ರು ಸೋಜಾ, 5ನೇ ಎದ್ರಿ ಮಾರ್ಗರೆಟ್ ಸೋಜಾಬಾಯಿ, 7ನೇ ಎದ್ರಿ ಆಲಿಸ್ ಸೋಜಾಬಾಯಿ ಇವರಿಗೆ ಮತ್ತು ಯಿತರ ಸಮಸ್ತ ಜನರಿಗೆ ಕೂಡಾ ಈ ಮೂಲಕ ತಿಳಿಯಪಡಿಸುವುದೇನಂದರೆ:.

ಮೇಲ್ಕಾಣಿಸಿದ O. S. 411/1945ನೇ ಡಿಕ್ರಿಯ ಲೆಕ್ಕಕ್ಕೆ ಕೋರ್ಟು ಡಿಪೋಜಿಟಿನಲ್ಲಿ 1ರಿಂದ 7ನೇ ವರೆಗಿನ ಯೆದ್ರಿರ ಪಕ್ಕಿನದಾಗಿ ಯಿರುವ ರೂ. 2588-0-0ರ ಪೈಕಿ, ಅರ್ಜಿದಾರನ ಗುಣಕ್ಕೆ ಸದ್ರಿ ಡಿಕ್ರಿಯ ವಿಧ ಪ್ರಕಾರ ಎದ್ರಿರಿಂದ ಬರಾ ವ್ಯವಜಿನ ಬಗ್ಗೆ ರುಪಾಯಿ 880-0 0ನ್ನು Order 21 Rule 52ರ ಪ್ರಕಾರ ಜಪ್ತುಮಾಡಿ ಅರ್ಜಿದಾರನ ಗುಣಕ್ಕಾಗಿರುವ ಡಿಕ್ರಿಯ ಸಮಾಧಾನದ ಬಗ್ಗೆ ಕೊಡಬೇಕಾಗಿ ಅರ್ಜಿದಾರನು ಅಪೇಕ್ಷಿಸಿ ಸದ್ರಿ ಅರ್ಜಿ ಕೊಟ್ಟಿರುವುದರಿಂದ, ಈ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ನೀವು ತಾ 13-8-1949ನೇ ದಿನ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಣೆಯನ್ನು ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿಯು ನಿಮ್ಮ ಗೈರುಹಾಜ್ರಿಯಿಂದ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

K. Mahabala Hegde
ಅರ್ಜಿದಾರನ ವಕೀಲ್
ಕಾರ್ಕಳ. ತಾ. 25-7-49

ಶ್ರೀ ಪಿ. ಕೆ. ಕೃಷ್ಣ ಹೆಬ್ಬಾರ ಅಧ್ಯಕ್ಷರಾಗಿಯೂ, ಶ್ರೀ ಶಂಕರ ನಾರಾಯಣ ಪಾಟಾಳಿ ಉಪಾಧ್ಯಕ್ಷರಾಗಿಯೂ, ಶ್ರೀ ರಘುರಾಮ ಆಳ್ವ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿಯೂ ೧೨ ಮಂದಿ ಸೇರಿದ ಗ್ರಾಮ ಸೇವಾ ಸಂಘವನ್ನು ತಾ. ೨೦ರಂದು ಕಣ್ಣೂರಿನಲ್ಲಿ ಸ್ಥಾಪಿಸಲಾಗಿದೆ.

ಕಾಸರಗೋಡು

ಇಲ್ಲಿದ್ದ ಸ್ಪೆಶ್ಯಲ್ ಒಂದನೇ ಮೆಜಿಸ್ಟ್ರೇಟ್ ಕೋರ್ಟನ್ನು ಸರಕಾರದವರು ತೆಗೆದು ಹಾಕಿ ಹುಕುಂ ಕಳಿಸಿರುವುದಾಗಿ ತಿಳಿದು ಬರುತ್ತದೆ. ಸ್ಥಳೀಯ ಬೋರ್ಡ್ ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ಕೆ. ಸಂಜೀವ ಶೆಟ್ಟರು ಉಡುಪಿಗೆ ವರ್ಗವಾಗಿ ಹೋಗುವಾಗ ಹರಿಜನ ವಿದ್ಯಾರ್ಥಿ ಭವನದಲ್ಲೂ ಶಾಲೆಯಲ್ಲೂ ಸತ್ಕಾರ ಕೂಟಗಳು ನಡೆದುವು.

ಸ್ವಾಬರಕಟ್ಟೆ

ಶಿರಿಯಾರ ಗ್ರಾಮದ ಸ್ವಾಬರಕಟ್ಟೆಯಲ್ಲಿ ಒಂದು ಪಂಚಾಯತ ಬೋರ್ಡು ಇಲ್ಲದಿರುವುದು ಬಹಳ ವಿಷಾದಕರ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನವನ್ನೀಯುವರೆ?

ಬೈಲೂರು

ಇಲ್ಲಿಯ ಗಾಂಧಿ ಸ್ಮಾರಕ ಸಂಘದ ಆಶ್ರಯದಲ್ಲಿ ನಡೆಯುವ ವಾಚನಾಲಯದಲ್ಲಿ ತಾ. 22 7-49ರಲ್ಲಿ ಶ್ರೀ ಜೆ. ನಾಗಣ್ಣ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರಗಿತು. ಪ್ರಾರ್ಥನಾನಂತರ ಶ್ರೀ ಅನಂತಪ್ಪ ಕಿಣಿಯರ ಆರಂಭ ಭಾಷಣವಾಯಿತು. ಕಾರ್ಕಳ ರೇಂಜಿನ ಶಾಲಾ ಇನ್ಸ್ಪೆಕ್ಟರ್ ಶ್ರೀ ದೇಜು ಉಚ್ಚಿಲ ಬಿ. ಎ., ಎಲ್. ಟಿ. ಇವರು ಪುಸ್ತಕ ಭಂಡಾರದ ಆವಶ್ಯಕತೆ ಹಾಗೂ ಅಭಿವೃದ್ಧಿಯ ಕುರಿತು ಸುರಸವಾದ ಭಾಷಣವಿತ್ತರು. ಅಧ್ಯಕ್ಷರ ಭಾಷಣ, ಧನ್ಯವಾದ ಸಮರ್ಪಣೆ, ಲಘು ಉಪಹಾರ, ರಾಷ್ಟ್ರಗೀತೆಯೊಂದಿಗೆ ಸಭೆ ಕೊನೆಗಂಡಿತು.

ಬ್ರಹ್ಮಾವರ

ಇಲ್ಲಿನ ಜನಪ್ರಿಯ ಸಬ್ ರಿಜಿಸ್ಟ್ರಾರ್ ಶ್ರೀ. ಕೆ. ವೇಂಕಪ್ಪ ಶೆಟ್ರು ಕಾಸರಗೋಡಿಗೆ ವರ್ಗಾಯಿಸಲ್ಪಟ್ಟುದರಿಂದ ಅವರಿಗೆ ಇಲ್ಲಿನ ಬರಹಗಾರರು ತಾ. 16—7—49ರಲ್ಲು ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಪಿ. ವೈ. ರಾಮನ್ ಗುರಿಕ್ಕಳರ ಅಧ್ಯಕ್ಷತೆಯಲ್ಲಿ ಟೀಪಾರ್ಟಿ ಸತ್ಕಾರವಿತ್ತು ಗೌರವಿಸಿದರು. ಸಭಿಕರಲ್ಲಿ ಶ್ರೀ ಕೆ. ಕುಪ್ಪಯ್ಯ ನಾವಡ, ಶ್ರೀ ಬಿ. ವಿಟ್ಠಲ ಶೆಟ್ಟಿ ಮತ್ತು ಅಧ್ಯಕ್ಷರು ಶ್ರೀಯುತರ ಸೌಜನ್ಯಾದಿಗಳನ್ನು ಕೊಂಡಾಡಿ ಅವರಿಗೆ ಶ್ರೇಯೋಭಿವೃದ್ಧಿಯನ್ನು ಹಾರೈಸಿದರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.



Approved firm by the Govt. of Mysore
Certified by the Agent of the Govt of. Cylone & Indian,

ಆರ್. ಎಸ್. ಎಸ್.

ಡಾಕ್ಟರ ಹರ್ಡೀಕರ ಅವರಿಂದ

ಜನತೆಗೆ ಸುಖಸಮಾಧಾನಗಳನ್ನು ಒದಗಿಸುವುದಕ್ಕಾಗಿ ಮತ್ತು ರಾಷ್ಟ್ರದ ಅಭ್ಯುದಯವನ್ನು ಸಾಧಿಸುವುದಕ್ಕಾಗಿ ಹೆಣಗುವ ಸರಕಾರಕ್ಕೆ ಸಹಾಯಮಾಡಲು, ಸುಸಜ್ಜಿತ, ಸುಪದ್ಧತಿಯಿಂದ ಕಾರ್ಯಮಾಡುವ ಮತ್ತು ಸುಸಮರ್ಥ ಸಂಘಟನೆಗಳ ಅತ್ಯಂತ ಆವಶ್ಯಕತೆಯು ಯಾವಾಗಲೂ ಇರುತ್ತದೆ. ಕಾಂಗ್ರೆಸ್ಸು, ತನ್ನ ಅನುಯಾಯಿಗಳ ಅಪರಾಧಗಳಿಗಾಗಿ ಮುಕ್ತಗೊಳಿಸುತ್ತಿರುವಾಗ್ಗೆ, ದೇಶದ ಆಡಳಿತವನ್ನು ಸಾಗಿಸುತ್ತಿರುವವರ ಬಲವನ್ನು ಬೆಳೆಸುವುದಕ್ಕಾಗಿ ಇಂತಹ ಸಂಸ್ಥೆಗಳು ಬೇಕೆಂಬುದು ಸ್ಪಷ್ಟವಿದೆ.

ಉತ್ತಮ ಸಂಘಟನೆಯಿಂದ ಕೂಡಿದ ಮತ್ತು ತಮ್ಮ ದಾರಿಯಲ್ಲಿ ಕೆಲಸ ಮಾಡುತ್ತಿರುವ ಕೆಲವು ಸಂಸ್ಥೆಗಳು ಸದ್ಯಕ್ಕೆ ನಮ್ಮ ದೇಶದಲ್ಲಿ ಇರುವುದು ನಿಜ. ಆದರೆ ಇವುಗಳಲ್ಲಿಯ ಬಹುಶಃ ಸಂಸ್ಥೆಗಳು ಒಂದಿಲ್ಲೊಂದು ರೀತಿಯಿಂದ, ತೀರ ವಿರುದ್ಧ ದಿಶೆಯಲ್ಲಿ ಕಾರ್ಯಮಾಡುತ್ತಿರುವುದೂ ಮತ್ತು ಮೂವತ್ತು ಕೋಟಿಗೆ ಮೇಲ್ಪಟ್ಟ ಜನತೆಗೆ ಸಂಬಂಧಪಟ್ಟ ಆಡಳಿತವನ್ನು ಹಿಡಿದ, ನುರಿತ ಮುಂದಾಳುಗಳ ಕಾಲನ್ನು ಹಿಂದೆ ಜಗ್ಗುತ್ತಿರುವುದು ಅನುಭವದ ಮಾತಾಗಿದೆ

ಯಾವದೇ ಸರಕಾರಗಳಿಂದ ತಪ್ಪುಗಳಾಗುವುದು ಸ್ವಾಭಾವಿಕವಾಗಿದೆ. ವಿಸ್ತಾರವಾದ ದೇಶದ ಆಡಳಿತವನ್ನು ಸಾಗಿಸುವ ಅನುಭವವಿಲ್ಲದ ಮತ್ತು ಶೈಶವಾವಸ್ಥೆಯಲ್ಲಿರುವ ಸ್ವತಂತ್ರ ದೇಶವು ತಪ್ಪುಗಳನ್ನು ಮಾಡುವುದು ದೊಡ್ಡ ಮಾತಲ್ಲ. ಇಂತಹ ತಪ್ಪುಗಳ ಲಾಭತೆಗೆದುಕೊಂಡು ಆ ಸರಕಾರದ ವಿರುದ್ಧ ಪ್ರಚಾರ ಮಾಡುವುದು ರಾಷ್ಟ್ರದ್ರೋಹವಾಗಿದೆ. ಅದು ಅಕ್ಷಮ್ಯವಾದುದು. ನಮ್ಮೊಳಗೆ ಮತಭೇದಗಳಿದ್ದರೂ, ಹಿಂದುಸ್ಥಾನವನ್ನು ಒಂದು ಸುಖಮಯ ಮತ್ತು ಸುಸಂಪನ್ನವಾದ ರಾಷ್ಟ್ರವನ್ನು ಮಾಡುವ ಸರ್ವಸಾಮಾನ್ಯ ಕಾರ್ಯಕ್ಕಾಗಿ ಎಲ್ಲರೂ ಕೂಡಿಕೊಂಡು ಒಂದೇ ವ್ಯಕ್ತಿಯಂತೆ ಸಾಗುವುದು ನಮ್ಮ ಕರ್ತವ್ಯವಾಗಿದೆ.

ಕಮ್ಯೂನಿಸ್ಟರು, ಸಾಮ್ಯವಾದಿಗಳು, ರಾಯಿಸ್ಟರು ಮತ್ತು ಆರ್. ಎಸ್. ಎಸ್. ದವರು ಮತ್ತು ಇಂತಹ ಅನೇಕ ಇತರ ಸಂಸ್ಥೆಗಳು, ಸದ್ಯದ ಸರಕಾರದ ಮತ್ತು ಕಾಂಗ್ರೆಸಿನ ವಿರುದ್ಧ ಹೋಗಿ, ರಾಷ್ಟ್ರದ ಅಪಾರ ಹಾನಿ ಮಾಡುತ್ತಿದ್ದಾರೆ. ಇದರ ಮೂಲಕವೇ ಬಂಗಾಲದಲ್ಲಿ ಮತ್ತು ಇತರ ಪ್ರಾಂತಗಳಲ್ಲಿ ಕೋಲಾಹಲಗಳು ನಡೆದಿವೆ.

ಇಂದು ನಾವು ಆರ್. ಎಸ್. ಎಸ್. ಸಂಸ್ಥೆಯ ಬಗ್ಗೆ ಗಮನಕೊಡಬೇಕಾಗಿದೆ. ಆದರ ಜಾತ್ಯಂಧತೆಯ ಮತ್ತು ಹಿಂಸಾತ್ಮಕ ಕಾರ್ಯದ ಮೂಲಕ ಅದು ಕಟ್ಟಳೆಗೆಟ್ಟದ್ದೆಂದು ಸಾರಲ್ಪಟ್ಟಿತು. ಮತ್ತು ಆದರ ಅನೇಕ ಸಭಾಸದರು ಸೆರೆಮನೆಗೆ ಕಳಿಸಲ್ಪಟ್ಟರು. ಈಗ ಆದರ ಮೇಲಿನ ನಿರ್ಬಂಧವು ತೆಗೆಯಲ್ಪಟ್ಟದೆ ಮತ್ತು ಅದರ ಸಭಾಸದರು ಮುಕ್ತಗೊಳಿಸಲ್ಪಟ್ಟದ್ದಾರೆ. ಈ ನಿರ್ಬಂಧಗಳನ್ನು ತೆಗೆಯುವಾಗ್ಗೆ ಜಾಣಾಕ್ಷರಾದ ಕೇಂದ್ರ ಮಂತ್ರಿಗಳು, ಆರ್. ಎಸ್. ಎಸ್. ಸಂಸ್ಥೆಯು ಇನ್ನು ಮುಂದೆ ಸರಕಾರದ ನಿರ್ದಿಷ್ಟ ಧೋರಣದ ವಿರುದ್ಧ ಹೋಗುವುದಿಲ್ಲವೆಂಬ ಬಗ್ಗೆ ಮನವರಿಕೆ ಮಾಡಿಕೊಂಡಿರಲಿಕ್ಕೆ ಸಾಕು. ತಮ್ಮ ಕರ್ತವ್ಯದ ಬಗ್ಗೆ ಪರಿಪೂರ್ಣ ಜ್ಞಾನವುಳ್ಳ ಉಕ್ಕಿನ ವ್ಯಕ್ತಿಯಾದ ಸರದಾರ ಪಟೇಲರು, ದೇಶದ ಬೇಕು ಬೇಡಗಳನ್ನು ಚನ್ನಾಗಿ ಬಲ್ಲರು ಮತ್ತು ಯಾರನ್ನು ಬಿಡಬೇಕು ಯಾರನ್ನು ಬಂಧಿಸಬೇಕೆಂಬುದನ್ನು ನಿಚ್ಚಳವಾಗಿ ಅರಿತವರಾಗಿರುವರು. ಹಿಂದುಸ್ಥಾನದ ಭಾವೀ ಸುಂದರ ಚಿತ್ರವನ್ನು ಚಿತ್ರಿಸಲು ತಮ್ಮ ಅಭಿರುಚಿಯ ಮೇರೆಗೆ ಕಾರ್ಯಮಾಡಲು ಸಾಕಷ್ಟು ದೂರದೃಷ್ಟಿಯು ಮತ್ತು ಕಲ್ಪನಾಶಕ್ತಿಯು ಇವರಿಗೆ ಇರುವವೆಂಬುದರಲ್ಲಿ ಸಂದೇಹವಿಲ್ಲ. ಪರಿಸ್ಥಿತಿಯ ಸಂಪೂರ್ಣ ಅಭ್ಯಾಸಮಾಡಿ ಮತ್ತು ಸರ್ವ ಘಟನೆಗಳನ್ನು ವಿಮರ್ಶಿಸಿ, ಈಗ ಹಾಕಲ್ಪಟ್ಟ ನಿರ್ಬಂಧಗಳ ಕೆಳಗೆ, ಆರ್. ಎಸ್. ಎಸ್.ಕ್ಕೆ ಸ್ವಾತಂತ್ರ್ಯ ಕೊಡುವುದರಿಂದ ದೇಶಕ್ಕೆ ಸಹಾಯವಾಗುವುದೆಂಬ ನಿರ್ಣಯಕ್ಕೆ ಅವರು ಬಂದಿರಬೇಕೆಂದು ನಾನು ತಿಳಿಯುತ್ತೇನೆ. ಆದ್ದರಿಂದ ಆರ್. ಎಸ್. ಎಸ್. ವು ಇಂದು ಸ್ವತಂತ್ರವಾಗಿದೆ.

ಆರ್. ಎಸ್. ಎಸ್. ವು ಈ ಸಂಗತಿಯನ್ನು ಗಮನಿಸಬೇಕೆಂದೂ ಮತ್ತು ಹಿಂದುಸ್ಥಾನದ ಅಭಿವೃದ್ಧಿಗಾಗಿ ನಿಷ್ಠೆಯಿಂದ ಕಾರ್ಯಮಾಡಬೇಕೆಂದೂ ನಾನು ಹೇಳಬಯಸುತ್ತೇನೆ, ತನ್ನ ಸಭಾಸದರ ಮಿಥ್ಯಾಂತರ ಜಾತ್ಯಂಧತೆಯನ್ನು ಹಬ್ಬಿಸುವ ಮತ್ತು ದೇಶದ ನಾಯಕರನ್ನು ನಿಂದಿಸುವ ತನ್ನ ಹಳೇ ಅಭ್ಯಾಸಗಳಿಗೆ ಅದು ಅಂಟಿಕೊಳ್ಳಕೂಡದು. ಹಾಕಲ್ಪಟ್ಟ ನಿರ್ಬಂಧಗಳು ಯಾವವೇ ಇರಲಿ, ಅವುಗಳನ್ನು ಅದು ಅಂತಃಕರಣ ಪೂರ್ವಕ ಪಾಲಿಸಬೇಕು, ಮತ್ತು ಹಿಂದುಸ್ಥಾನದ ಹಾಗೂ ಕಾಂಗ್ರೆಸಿನ ಶಕ್ತಿಯನ್ನು ಬೆಳೆಸಲು ಸದ್ಯದ ಸರಕಾರಕ್ಕೆ ಸಹಾಯ ಮಾಡಬೇಕು. ಈ ಮಾತನ್ನು ಅಲಕ್ಷಿಸಿದರೆ ಅದು ತನಗೆ ತಾನೇ ಅಪಾಯಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ.

ಈ ಸಂಸ್ಥೆಯು ಏನು ಮಾಡುವುದೆಂಬುದು ಕಾಲಾಂತರದಲ್ಲಿ ತಾನೇ ತಿಳಿಯುವುದು.

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯವಾಚಕರೇ..............

ನಾನು ಒಬ್ಬ ಸಾಧಾರಣ ಮನುಷ್ಯ—ದುರದೃಷ್ಟವಶಾತ್ ನನ್ನ ಸಿಕಿಮಿಯಿಂದ ಕಾಮುಕ ಜೀವನವು ಅತಿ ಬೇಗನೆ ನರ ಳ ದೌರ್ಬಲ್ಯಕ್ಕೆ ಳಿಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಹೃದಯನಾದವೂ ಜಾಸ್ತಿಯಾಯಿತು. ಬಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತದಿಂದಿರುವುದಕ್ಕೆ ಬೇಜಾರೆನಿಸಿತು. ನನ್ನ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಆದರೆ ನಾನೆಂತು ಅದನ್ನು ತಿಳಿಸುವುದು? ಗುಟ್ಟಾಗಿ ಸಾವಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲದಂತಾಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪೆಷಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು [ಸನ್ಯಾಸಿ] ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಷ್ಟದಿಂದ ಮಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ತಿಳಿಸುವಂತೆ ಬಲಾತ್ಕರಿಸಿತು ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎರಡು ಔಷಧಿಗಳನ್ನು ದಯಪಾಲಿಸಿದರು-ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಪಿಸುವುದಕ್ಕೆ. ಅವರು ಹೇಳಿದಂತೆ ಗಿಡಮೂಲಿಕೆಗಳನ್ನು ಹುಡುಕಿ ತಂದು ಅವರೆದುರಿನಲ್ಲಿಯೇ ಆ ಎರಡು ಔಷಧಿಗಳನ್ನು ತಯಾರಿಸಿದೆನು. ಅನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಪ್ರಿಯವಾಚಕರೆ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೨೧ ದಿವಸಗಳಲ್ಲಿ ಸುಧಾರಿಸಿದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿ ದಿನವೂ ೪ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲವನಾದೆನು. ಕಣ್ಣುಗಳ ಹೊಳಪು ಬಂತು. ಒಂದು ತರಹ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು. ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅದರಿಂದ ಮಹತ್ತ ಗುಣವನ್ನು ಕಂಡುದಲ್ಲದೆ ಅದಕ್ಕಿಂತ ಬೇರೆ ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾ ಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನುಪಯೋಗಿಸಿ [illegible] ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಆದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. 5-0-0

ಹೊರಗೆ ಲೇಪಿಸುವ ತೈಲಕ್ಕೆ:— ೨೧ ದಿವಸಕ್ಕೆ ರೂ. 5-8-0

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು

ಈ ಔಷಧಿಯು "ಕುಷ್ಠ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು-[ತೈಲವು ಚರ್ಮದ ಸೊಕ್ಕನ್ನು ಹುಟ್ಟಿಸುವುದಿಲ್ಲ.]

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ:—

[೨] ಡಾ. ಕೆ. ಜಿ. ಪಟ್ಟಿತ್ತಾಲ್, ಕೊಚಿನವರು ಬರೆಯುತ್ತಾರೆ:- ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೆ, ವೃದ್ಧರಿಗೂ ಪ್ರಯೋಗಿಸಿ ಆದರ ಶಕ್ತಿದಾಯಕ ಕೆಲಸವನ್ನು ಮೆಚ್ಚಿದ್ದೇನೆ.

[೩] ಡಾ. ಜೀವಿಸಿಂಗ್ ಕುರುಪ ಸೇಠಿ, ಕುಂಬಲಾಂಗಿಯವರು ಬರೆಯುತ್ತಾರೆ:— ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನುಂಟುಮಾಡಿವೆ.

[೪] ಮ್ಯಾನೇಜರ್, "ವೈ ಮ್ಯಾಗಜೈನ್" ಮದ್ರಾಸು ಬರೆಯುತ್ತಾರೆ:- ನಾನು ದಾರ್-ಉಲ್-ಶಫಾ-ಗೋಲಿಯಾನ, ಬಟಾಲರವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ಮಾನವನಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ. ಲೆಕ್ಕವಿಲ್ಲದಷ್ಟು ಸಾವಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು.

ಖಾತ್ರಿ:- ಈ ಔಷಧಿಗಳು ಯಾವ ತೊಂದರೆಯನ್ನು ಮಾಡುವ ಪದಾರ್ಥಗಳನ್ನೂ ಹೊಂದಿಲ್ಲ. ಮತ್ತು ಇವನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ವಾಪಸ್ಸು ಮಾಡಲಾಗುವದು.

ನಿಮ್ಮ ಆರ್ಡರನ್ನು ಇವರಿಗೆ ಕಳುಹಿಸಿರಿ.—

The Manager,

DAR-UL-SHAFA GOLIAN (Regd.) (N.Y.U.) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಷಫಾ-ಗೋಲಿಯಾನ (ರಿಜಿಸ್ಟರ್ಡ್) (N.Y.U.) ಬಟಾಲ (ಪಂಜಾಬ್)

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ-

ಕ್ರಮ ನಂಬ್ರ 196/49.

ವಾದಿ:- ಪಟ್ಟಯ್ಯ ಶೆಟ್ಟಿ ಕೂಡಾ.

ಪ್ರತಿವಾದಿ:-ನಾಗಮ್ಮ ಶೆಡ್ತಿ ಕೂಡಾ.

ಕುಂದಾಪುರ ತಾಲ್ಲೂಕು ಹೊಸೂರು ಗ್ರಾಮದಲ್ಲಿರುವ ಕಟ್ಟುಬೆಳ್ತೂರು ಸುಬ್ಬ ಶೆಡ್ತಿ ಮಗಳು 6ನೇ ಪ್ರತಿವಾದಿ ಮುತ್ತಕ್ಕ ಶೆಡ್ತಿ,1 ಇದೂರು ಕುಂಜಾಡಿ ಗ್ರಾಮದಲ್ಲಿರುವ ಕಟ್ಟು ಬೆಳ್ತೂರು ಕಾವೇರಿ ಶೆಡ್ತಿ ಮಗ 11ನೇ ಪ್ರತಿವಾದಿ ಮಾದಯ್ಯ ಶೆಟ್ಟಿ 1, ಮತ್ತು ಸದ್ರಿ ಹೊಸೂರು ಗ್ರಾಮದಲ್ಲಿರುವ ಕಟ್ಟು ಬೆಳ್ತೂರು ಸಂಕಮ್ಮ ಶೆಡ್ತಿ ಮಗಳು 13ನೇ ಪ್ರತಿವಾದಿ ಪುಟ್ಟಮ್ಮ ಶೆಡ್ತಿ 1, ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಯು [illegible] ಗೆ [illegible] ರಿನ ಆಸ್ತಿ ಸಾರ್ಥವನ್ನು ಬರಮಾಡಿಕೊಳ್ಳುವ ಬಗ್ಗೆ ಜರಗಿಸಿದ ಮೇಲಣ ದಾವೆ ತಾ. 6-8-49ಕ್ಕೆ ತನಿಖೆ ಬಗ್ಗೆ ಇಡೋಣವಾಗಿರುತ್ತದೆ. ಸದ್ರಿ ದಾವೆಯ ಕುರಿತು ಪ್ರತಿವಾದಿರಾದ ನಿಮ್ಮ ಮೇಲ್ಯಾವದೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲು ಕೋರ್ಟ ಮುಂದೆ ಹಾಜರಿದ್ದು ಮಾಡಿಕೊಳ್ಳತಕ್ಕದ್ದು.

(By order of the court)

A. N. Rao,

Advocate for Plaintiffs.

Coondapoor, 23-7-49

ಹೆಣ್ಣು- ಒಂದು ಒಗಟು

ವಿಡಂಬನ

ಹೆಣ್ಣು, ಹೊನ್ನು, ಮಣ್ಣು, ಮಾನವನನ್ನು ದಾರಿತಪ್ಪಿಸಿ ಕಾಡುಪಾಲು ಮಾಡುವ ಪಾಶವೀಶಕ್ತಿಗಳೆಂದು ಆರ್ಯೋಕ್ತಿ. ಪ್ರಪಂಚದ ಚರಿತ್ರೆಯಲ್ಲಿ, ಪುರಾಣಗಳ ಕಾಲದಿಂದ ಇಂದಿನ ಗಾಂಧಿಯುಗದ ವರೆಗೂ ಹೆಣ್ಣಿನ ಪಾತ್ರ ಪ್ರಶಂಸನೀಯವಾಗಿಲ್ಲ. ಸುಂದರ ಲಂಕೆ ಭಸ್ಮೀಭೂತವಾದುದು, ಯಃಕಶ್ಚಿತ್ ಹೆಣ್ಣಿನಿಂದ, ಹೆಣ್ಣಿಗಾಗಿ. ಕುರುಕುಲ ಮಣ್ಣಾದುದು ಹೆಣ್ಣಿನ ರೋಷಕ್ಕೆ ಸಿಕ್ಕಿ. ಚರಿತ್ರೆಯ ಹಲವಾರು ಸಮರಗಳು ಹೆಣ್ಣಿನ ಕಾರಣದಿಂದ.

ಆಡಂ—ಈವ್

ಭಾರತೀಯ ಇತಿಹಾಸ ಮಾತ್ರವೇ ಹೆಣ್ಣನ್ನು ತುಚ್ಛೀಕರಿಸಿಲ್ಲ. ಕ್ರೈಸ್ತ ಸಿದ್ಧಾಂತದ ಪ್ರಕಾರ, ಹೆಣ್ಣು ಸೈತಾನನ ಸಹಾಯಕಿಯಾಗಿ ಮಾನವ ಪೀಳಿಗೆಯನ್ನು ಪಾಪದ ಹಾದಿಗೆ ಎಳೆದಳು. ತಿನ್ನಬಾರದ ಫಲವನ್ನು ತಿನ್ನಿಸಿ ಮತ್ತೆ ಟ್ರಾಯ್ ನಗರ ಬೆಂಕಿಯ ಪಾಲಾದುದು ಹೆಲನ್‌ಳ ಅಪಕಾರ್ಯಕ್ಕಾಗಿ ಮುಸ್ಲಿಮ್ ತತ್ವವಂತೂ ಹೆಣ್ಣಿಗೆ ಆತ್ಮವನ್ನೇ ಕೊಟ್ಟಿಲ್ಲ.

ತಾತ್ವಿಕರಂತೂ ಹೆಣ್ಣನ್ನು ಹೀನಾಯಮಾನವಾಗಿ ತೆಗಳಿದ್ದಾರೆ. ತಪಸ್ಸಿನಿಂದ ದೈವತ್ವವನ್ನು ಒಲಿಸಿಕೊಳ್ಳುವ ಋಷಿ ಶಿಖರಕ್ಕೆ ಹೆಣ್ಣೆಂದರೆ ಸಿಂಹಸ್ವಪ್ನ. ಕಾಡಿನ ಕೊಂಪೆಯಲ್ಲಿ ಕೂತರೂ ಗಂಧರ್ವ ಸ್ತ್ರೀಯರ ಕಾಟ. ಶತಮಾನಗಳ ತಪಸ್ಸನ್ನು ಕಳೆದುಕೊಂಡು ತೊಳಲಿದ, ಮೇನಕೆಯ ಕಾಟಕ್ಕೆ ಸಿಲುಕಿದ ಬಡಪ್ರಾಣಿ ವಿಶ್ವಾಮಿತ್ರ. ಪರ್ವತ ರಾಜನ ಮಗಳ ಮೋಹಪಾಶಕ್ಕೆ ಸಿಕ್ಕಿದ ಪಾಶುಪತಾಸ್ತ್ರಧಾರಿ ಮುಕ್ಕಣ್ಣನಿಗೂ ತಪೋಭಂಗ ತಪ್ಪಲಿಲ್ಲ.

“ಬೆತ್ತವನ್ನು ಮರೆಯಬೇಡ”

ಪಾಶ್ಚಾತ್ಯ ತತ್ವವೇತ್ತರು ಹೆಣ್ಣನ್ನು ಕಟುವಾಗಿ ಹೀಯಾಳಿಸಿದ್ದಾರೆ. ಸುಪ್ರಸಿದ್ಧ ತತ್ವಜ್ಞಾನಿ ನೀಷೆ “ಹೆಣ್ಣು ಒಂದು ದೊಡ್ಡ ಒಗಟು ಹೆಣ್ಣಿನೊಡನೆ ಹೋಗುತ್ತಿಯಾ, ಹಾಗಾದರೆ ಬೆತ್ತವನ್ನು ಮರೆಯಬೇಡ” ಎಂದಿದ್ದಾನೆ. ಆತನ ಪಂಥಕ್ಕೇ ಸೇರಿದ ಆಟೋ ವಿನ್ನಿಂಗರ್ ಹೆಣ್ಣನ್ನು ಹೀಯಾಳಿಸಿ ಬೃಹತ್ ಗ್ರಂಥವನ್ನು ರಚಿಸಿ, ಅದರ ಫಲಿತಾಂಶಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡ. ಆವನ ದೃಷ್ಟಿಯಲ್ಲಿ “ಹೆಣ್ಣು, ಹೆಂಡ, ಜೂಜುಗಾರಿಕೆ” ಒಂದೇ ಅಂತಸ್ತಿನವು.

ಇಷ್ಟಾದರೂ ಜಗತ್ತಿನ ಸುಸೂತ್ರವಾಗಿ ತನ್ನ ಆಡಳಿತವನ್ನು ನಡೆಸಿಕೊಂಡು ಬರುತ್ತಿರುವ ಹೆಣ್ಣು ನಿಜವಾಗಿಯೂ “ಒಂದು ಒಗಟು.” ಹೆಣ್ಣನ್ನು ಹಳಿಯುತ್ತಿದ್ದವರೇ ಹೆಣ್ಣಿನ ಮೋಹಜಾಲಕ್ಕೆ ಮೊದಲು ಬಿದ್ದರು. ವಿಶ್ವವಿಖ್ಯಾತ ಜಾರ್ಜ್ ಬರ್ನಾರ್ಡ್ ಷಾ ಸಹ ಮಹಿಳೆಯೊಬ್ಬಳಿಗೆ ಸೋತುಬಿಟ್ಟರು. ರವಿ ಮುಳುಗದ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾಗಿದ್ದ ಡ್ಯೂಕ್ ಆಫ್ ವಿಂಡ್ಸರ್, ಹೆಣ್ಣಿಗಾಗಿ ಬಕ್ಕಿಂಗ್ಹಾಂ ಅರಮನೆ ಬಿಟ್ಟು ಭಿಕಾರಿಯಾದರು. “ನೀರಿನಲ್ಲಿ ಮೀನಿನ ಹೆಜ್ಜೆಯನ್ನು ಕಂಡರೂ ಹೆಂಗಸಿನ ರೀತಿಯನ್ನು ಕಾಣಲು ಸಾಧ್ಯವಿಲ್ಲ” ವೆಂದು ಶಾಸ್ತ್ರಿಗಳೇ ಸೋಲನ್ನು ಒಪ್ಪಿಕೊಂಡಿದ್ದಾರೆ

ನಿಜವಾಗಿಯೂ ಅಬಲೆಯೇ!

ಹೆಣ್ಣು ನಿಜವಾಗಿಯೂ ಅಬಲೆಯೇ? ಚಾಂದ ಬೀಬಿ, ತಾರಾಬಾಯಿ, ಝಾನ್ಸಿ ಮಹಾರಾಣಿ ಮತ್ತು ಇತ್ತೀಚಿನ ಕ್ಯಾಪ್ಟನ್ ಲಕ್ಷ್ಮಿಯವರುಗಳ ಸಮರವೂ ಹೆಣ್ಣಿನ ಅಬಲತ್ವ ಬರಿಯ ನಟನೆಯೆಂದರೆ ತಪ್ಪಾಗಬಹುದೇ? ಅಬಲೆ ಹೆಣ್ಣಾದರೆ ಗಂಡು ಸಬಲನೇ? ಎಂದಿಗೂ ಅಲ್ಲ. ಹೆಣ್ಣಿನ ಬಲಹೀನತೆಯೇ ಆಕೆಯ ಪ್ರಬಲತ್ವ; ಸೋತು ಸೋಲಿಸುವುದು ಹೆಣ್ಣಿನ ಕಾರ್ಯಕೌಶಲ. ಗಂಡಸನ್ನು ಭ್ರಮೆಗೊಳಿಸಿ ಮಂಕುಬೂದಿ ಚೆಲ್ಲಿ ತನ್ನ ದಾಸಾನುದಾಸನನ್ನಾಗಿ ಮಾಡಿಕೊಂಡಿದ್ದಾಳೆ ಹೆಂಗಸು. ಸಾಗರಗಳನ್ನು ಸರಾಗವಾಗಿ ದಾಟಬಲ್ಲವನೂ ಹೆಣ್ಣಿನ ಕಣ್ಣೀರ ಹನಿಯೊಂದನ್ನು ದಾಟಲಾರ!

ಹೆಣ್ಣು ಎಂದೂ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಪ್ರಕೃತಿಯನ್ನೇ ಪರಿವರ್ತಿಸುವುದಕ್ಕೆ ಹೊರಡುತ್ತಾಳೆ. ಸ್ವಾಭಾವಿಕವಾಗಿ ಇಲ್ಲದ ಸೌಂದರ್ಯವನ್ನು ಕೃತಕವಾಗಿ ಸಾಧಿಸಿಕೊಳ್ಳುವ ಚಾತುರ್ಯ ಹೆಣ್ಣಿಗಿದೆ. ಯಾವ ಅಡ್ಡ ಮೋರೆಯ ಗಂಟು ಮೂಗಿನ ಕುರೂಪಿ ಹೆಂಗಸೂ ತಾನೂ ರೂಪವತಿಯಲ್ಲವೆಂದು ಒಪ್ಪಿಕೊಳ್ಳುವುದಿಲ್ಲ. ಅನೇಕವೇಳೆ ಸ್ವಭಾವಜನ್ಯವಾಗಿ ದೊರೆಕಿದ, ತನ್ನ ಗೆಲುವಿಗೆ ಪ್ರತಿಬಂಧಕವಾಗಬಹುದಾದ ಅನಾನುಕೂಲಗಳನ್ನೇ ಅನುಕೂಲಗಳಾಗಿ ಪರಿವರ್ತಿಸಿಕೊಳ್ಳಬಲ್ಲಳು. ಇದಕ್ಕಾಗಿ ಪಾಶ್ಚಾತ್ಯ ವೈದ್ಯಕೀಯ ಶಾಸ್ತ್ರದಲ್ಲಿ ಒಂದು ಶಾಖೆಯೇ ಇದೆ. ಮೂಳೆಗಳನ್ನು ಮೃದುಗೊಳಿಸಿ ಆಕಾರಕ್ಕೆ ತರುವ ಪದ್ಧತಿ. (bone reaustic surgery)

ಹೆಣ್ಣಿಗಾಗಿ

ಹೆಣ್ಣಿಗೆ ಸೌಂದರ್ಯ ಸಲಕರಣೆಗಳನ್ನು ಒದಗಿಸಿಕೊಡುವ ಸಲುವಾಗಿಯೇ ಅನೇಕ ರಸಾಯನ ಶಾಸ್ತ್ರಜ್ಞರು ಹಗಲಿರುಳು ದುಡಿಯುತ್ತಿದ್ದಾರೆ, ಅದಕ್ಕಾಗಿ ಉನ್ನತ ಕಾರ್ಖಾನೆಗಳು ಬೆಳಕು ಕಂಡಿವೆ ಲಕ್ಷಾಂತರ ಜನರು ಕೂಲಿಮಾಡುತ್ತಿದ್ದಾರೆ. ಇಂದು ಹೆಂಗಸರು ಸೌಂದರ್ಯ ಸಾಧನೆಗಳಿಗೆ ಶರಣು ಹೊಡೆದರೆ ನಾಳೆಯೇ ಲಕ್ಷಾಂತರ ಜನರು ಬೀದಿಯ ಭಿಕಾರಿಗಳಾಗುತ್ತಾರೆ. ಲಕ್ಷಾಧೀಶ್ವರರು ಭಿಕ್ಷಾಪಾತ್ರೆಗೆ ಕೈ ಒಡ್ಡಬೇಕಾಗುತ್ತದೆ.

ಹೆಣ್ಣಿನ ಸೌಂದರ್ಯ ಹೆಚ್ಚಿಸುವ ಸಲುವಾಗಿ ಬೆಟ್ಟದ ಕಲ್ಲುಗಳನ್ನು (Tale) ಪುಡಿಮಾಡಿ ಸುವಾಸನೆಗೊಳಿಸಿ ಬಣ್ಣ ಬಣ್ಣದ ಪೆಟ್ಟಿಗೆಯಲ್ಲಿ ತುಂಬಿ ಮಾರುತ್ತಾರೆ. ಫೇಸ್ ಪೌಡರ್ ರಂಗುರಂಗಿನ ಚೂರ್ಣ, ಸೌಂದರ್ಯ ಸಾಧನೆಯ ಯುಕ್ತಿಯಂತೆ. ಹಾಗೆಯೇ ರಕ್ತವಿಲ್ಲದೆ ಬಿಳಿಚಿಕೊಂಡ ನರಪೇತಲಿಯ ಉಗುರಿನಲ್ಲೂ ರಕ್ತ ಚಿಮ್ಮಿಸುವ ಬಣ್ಣ, ತುಟಿಗಳನ್ನು ಕವಿಗಳ ತೊಂಡೆಯ ಹಣ್ಣಿನ ಉಪಮಾನವನ್ನು ನಾಚಿಸುವಂತೆ ಮಾಡುವ ಬಣ್ಣಗಳು. ಅವುಗಳಲ್ಲೂ ಅಭಿರುಚಿಗೆ ತಕ್ಕಂತೆ ವಿವಿಧ ವರ್ಣಗಳು. ಹೆಂಗಸು ಮನಸ್ಸು ಮಾಡಿದರೆ ತುಟಿ ಹಸುರಾಗಬಹುದು, ಕಂಪಾಗಬಹುದು, ನೀಲಿಯೂ ಆಗಬಹುದು. ತುಟಿಗೆ ಬಣ್ಣ ಹಾಕುವುದು ಒಂದು ಪ್ರಮುಖ ಕಲೆಯೆಂದಿದ್ದಾಳೆ, ಹೆಲೆನಾ ರೂಬಿನ್ ಸ್ಟೈನ್!

ಸೃಷ್ಟಿಯ ಪ್ರಾಣಿಗಳೆಲ್ಲಾ ಬದುಕಿರಲು ಒಂದೇ ಕಾರಣ, ಹೆಣ್ಣಿನ ಸೌಂದರ್ಯ ವರ್ತನೆ. ಸಹರಾ ಮರುಭೂಮಿಯಲ್ಲಿ ಜನಜಂಗುಳಿಯಿಂದ ದೂರವಾಗಿರುವ ಉಷ್ಟ್ರ ಪಕ್ಷಿಯ ಗರಿಗಳೂ ಸಹ ಹೆಣ್ಣಿನ ವಕ್ರದೃಷ್ಟಿಯಿಂದ ದೂರವಾಗಿಲ್ಲ. ಅದನ್ನು ಬೇಟೆಯಾಡಿ ರೆಕ್ಕೆ ಪುಕ್ಕಗಳನ್ನು ಕಿತ್ತು ತನ್ನ ಅಲಂಕಾರಮಾಡಿಕೊಳ್ಳುತ್ತಾಳೆ. ಹಿಮಾಚಲದಲ್ಲಿ ಸಾಧುಸಂತರೊಡನೆ ವಾಸಿಸುವ ವಿರಾಗಿ ಚಮರೀ ಮೃಗಕ್ಕೂ ಉಳಿಗಾಲವಿಲ್ಲ. ಇಲಿಯ ಬಾಲವನ್ನು ನಾಚಿಸಿದ ಹೆಣ್ಣಿನ ಜಡೆಯನ್ನು ಫಣಿವೇಣಿಯಾಗಿ ಮಾಡಿಸುವುದಕ್ಕೆ, ಹೆಣ್ಣಿನ ಕೈ ಚೀಲಕ್ಕೆ (Vanity Bag) ಹಿಮಸಾರಂಗದ ಚರ್ಮಬೇಕು, ಶೀತವಲಯದ ಮೂಲೆಯಿಂದ.

ಹಾಗೆಯೇ ಆಭರಣಗಳೂ. ಚಿನ್ನಕ್ಕೆ ಬೆಲೆ ಬಂದದ್ದು ಹೆಣ್ಣಿನಿಂದ. ಕಿವಿ, ಮೂಗು, ಕಣ್ಣುಗಳನ್ನು ಚುಚ್ಚಿಸಿಕೊಂಡಾದರೂ ಸಾಧ್ಯವಾದಷ್ಟು ಚಿನ್ನ ಹೊರಲು ಪ್ರಯತ್ನಪಡುತ್ತಾಳೆ. “ಗಂಡಸರ ಬಿನ್ನಾಣದ ಚಿನ್ನ!” ಕತ್ತಿನ ಹಾರಕ್ಕಾಗಿ ಸಮುದ್ರದ ಆಳಕ್ಕೆ ಇಳಿದು ತೆಗೆಸುತ್ತಾಳೆ ರತ್ನಮುತ್ತುಗಳನ್ನು, ಚಿಪ್ಪಿನೊಳಗೆ ನಿದ್ರಿಸುವ ಕಪ್ಪೆಯನ್ನು ಕೊಂದು ಭೂಗರ್ಭದ ವೈಪರೀತ್ಯಗಳ ಸಾಮರಸ್ಯ. ಹೆಣ್ಣಿನ ತಪ್ಪುಗಳೆಲ್ಲಾ ಗಂಡಿಗೆ ಒಪ್ಪು. ಹೆಣ್ಣು ತನ್ನ ಪ್ರತಿಯೊಂದು ತಪ್ಪನ್ನು ಹೆಮ್ಮೆಯಿಂದ ಪ್ರದರ್ಶಿಸಿ ತನ್ನ ಅರ್ಹತೆಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳುತ್ತಾಳೆ. ಗಂಡಸು ಮೂರ್ಖನಂತೆ ತಲೆಯಾಡಿಸುತ್ತಾನೆ. ಮದನನ ಸಂಗೀತದ ನಂತರ ಬುಧನ ಭಾಷಣ ಕರ್ಕಶ ಎನಿಸಬಹುದು. ನಿರಾಶಾವಾದಿ ಶೋಪೆನ್‌ಹಾರ್ ಹೇಳಿದಂತೆ “ಹೆಂಗಸಿನ ಸೌಂದರ್ಯ ಗಂಡಿನ ಕಣ್ಣಿನಲ್ಲಿ, ಹೆಣ್ಣು ಸುಂದರಿಯೆಂದು ಹೇಳುವುದು ಆರಾಧ್ಯದಿತವಾದ ಗಂಡಸಿನ ಕಣ್ಣು. ಪ್ರೇಮ ಪ್ರಕೃತಿಯ ಮೋಸ, ಮದುವೆ ಪ್ರಾಯಶ್ಚಿತ್ತ”. (ಚಿತ್ರಗುಪ್ತ)

ಮುಂಬಯಿ ಒಗ್ಗಾಡಿ ದೂರಬಳಿ

ಮೊಗವೀರ ಮಹಾಜನ ಸಂಘ, ಮುಂಬಯಿ ಇದರ ವಾರ್ಷಿಕೋತ್ಸವವು ತಾ. 17-7-49 ರಲ್ಲಿ ಕೋಟೆಯೊಳಗಣ 136 ಅಪೊಲ್ಲೊ ಸ್ಟ್ರೀಟಿನಲ್ಲಿರುವ ಕೆ. ಆರ್. ಕಾಮಾ ಓರಿಯಂಟಲ್ ಇನ್ಸ್ಟಿಟ್ಯೂಟ್ ಹೋಲಿನಲ್ಲಿ ಡಾ। ಎ. ಪಿ. ಪೈ, ಎಮ್. ಬಿ. ಬಿ. ಎಸ್. ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಸಮಾಜದ ಪುರೋಭಿವೃದ್ಧಿಯ ಕುರಿತು ಅತಿಥಿಗಳಲ್ಲಿ ಅನೇಕರು ಮತ್ತು ಅಧ್ಯಕ್ಷರು ಸುರಸಭಾಷಣ ಮಾಡಿದರು.

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷನರಿಗಳು
ದೊರೆಯುತ್ತವೆ.
ಸಿರಿಗನ್ನಡ ಅರ್ಥಕೋಶ 4 ೧ 0
ಬೆಲೆ. ರೂ. 4 8 0
ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.


ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ
‘ಸುಲಭದಲ್ಲಿ ಇಂಗ್ಲಿಷ್’
(ENGLISH MADE EASY)
ಮನೆಯಲ್ಲಿ ಸೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ
ಬೆಲೆ: ೧—೬—೦
ಡಾಕ್ಟರ್ ಕೊರಡ್ಕಲ್ ವೆಂಕಟಪ್ಪಯ್ಯರ
‘ಮನೆ ಮದ್ದು’
(HOME REMEDIES)
೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೬೦ ಮದ್ದುಗಳ ವಿವರವಿರುವ ಪುಸ್ತಕ. ಬೆಲೆ: ರೂ. ೩/-
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.,
(Established 1934)
Chairman: **Mr. M. C T M. Chidambarm Chettyar.**
A Policy in this progressive Life Office is a good investment; its Agency is a valuable business connection
MANGALORE BRANCH.
K. S. R. Road,
Hampankatta, Mangalore
HEAD OFFICE:
United India Life Building,
MADRAS

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI, S. Kanara.

ರೈತರಿಗೆ ದಷ್ಟಪುಷ್ಟ ಜಾನುವಾರು

39೦ ಮಿಲಿಯ ಜನಸಂಖ್ಯೆ ಇರುವ ಹಿಂದುಸ್ಥಾನದಲ್ಲಿ 215 ಮಿಲಿಯ ಜಾನುವಾರುಗಳು ಇವೆ. ಇವುಗಳು ವರ್ಷಕ್ಕೆ 6,400 ಮಿಲಿಯ ಗೇಲನುಗಳಷ್ಟು ಹಾಲುಕೊಡುತ್ತವೆ. ಈ ಪ್ರಾಣಿಗಳು ಒಳ್ಳೆಯ ಸ್ಥಿತಿಯಲ್ಲಿದ್ದರೆ, ೧೦ಪಾಲಷ್ಟು ಹಾಲು ಸಹಜವಾಗಿ ಹೆಚ್ಚು ದೊರೆಯಬೇಕು. ಹಿಂದುಸ್ಥಾನದಲ್ಲಿ ಜನರಿಗೆ ಬೇಕಾದಷ್ಟು ಆಹಾರವು ದೊರೆಯುವುದಿಲ್ಲ. ಆದರೆ ದನಗಳಿಗೆ ಬೇಕಾದಷ್ಟು ಮೇವು ನಮ್ಮ ದೇಶದಲ್ಲಿ ಇದೆ. ನಮ್ಮ ದನಕರುಗಳು ಅರೆ ಹೊಟ್ಟೆಯಲ್ಲಿ ಇರುವಾಗ್ಗೆ, ನಾವು ಅತಿ ವಿಪುಲವಾಗಿ ಇರುವ ಕಾಡುಗಳಲ್ಲಿಯ ಹುಲ್ಲು ಸೊಪ್ಪು ಸೆದೆಗಳನ್ನು ವ್ಯರ್ಥ ಹಾಳುಮಾಡಿಬಿಡುತ್ತೇವೆ. ನಮ್ಮ ರೈತರು ತಮ್ಮ ಬೇಸಾಯಕ್ಕೆ ಎತ್ತು, ಕೋಣಗಳನ್ನು ಬಹಳವಾಗಿ ಅವಲಂಬಿಸಿರುವುದರಿಂದ, ದಷ್ಟ ಪುಷ್ಟ ದನಗಳು ನಮಗೆ ಬಹಳ ಅಗತ್ಯನಾಗಿವೆ.

ನಾವು ನಮಗೆ ಅಗತ್ಯವಿರುವುದಕ್ಕಿಂತ ಹೆಚ್ಚು ದನಕರುಗಳನ್ನು ಸಾಕುತ್ತಿದ್ದೇವೆ. ಉಪಯೋಗವಿಲ್ಲದ, ಬರಡು ದನಗಳನ್ನು, ಪರದೇಶಗಳಲ್ಲಿ ಕಡಿದು, ತಿಂದುಬಿಡುತ್ತಾರೆ. ನಾವು ಮಾಂಸಾಹಾರಿಗಳಲ್ಲದ್ದರಿಂದ, ನಮ್ಮಲ್ಲಿ ಪ್ರಯೋಜನವಿಲ್ಲದ ದನಗಳು ತುಂಬಿಹೋಗಿವೆ ಇದಲ್ಲದೆ, ಯುರೋಪಿನಲ್ಲಿ ಎತ್ತು, ಕೋಣಗಳ ಸಹಾಯದಿಂದ ಬೇಸಾಯ ಮಾಡುವುದಿಲ್ಲವಾದ್ದರಿಂದ, ಅವರು ಅವುಗಳನ್ನು ಸಾಕುವುದೇ ಇಲ್ಲ.

ನಮಗೆ, ದನಕರುಗಳು ವ್ಯವಸಾಯಕ್ಕೆ, ಹಾಲು ಮೊಸರಿಗೆ, ಬೆಣ್ಣೆ ತುಪ್ಪಕ್ಕೆ, ಬೇಕಾಗಿವೆ. ಗಾಡಿ ಎಳೆಯಲು ಸಹ ನಾವು ಎತ್ತುಗಳನ್ನು ಉಪಯೋಗಿಸುತ್ತೇವೆ ಇಷ್ಟು ಉಪಯುಕ್ತವಾದ ದನಗಳು ಪುಷ್ಟಿಯಾಗಿ ಬೆಳೆಯುವಂತೆ ನೋಡುವುದು ನಮ್ಮ ಕರ್ತವ್ಯ. ಇದಕ್ಕೆ ಇರುವ ಒಂದು ಸುಲಭ ಉಪಾಯೆಂದರೆ, ಸರಕಾರಿ ರಿಸರ್ವ್ ಕಾಡುಗಳಲ್ಲಿ, ದನಕರುಗಳನ್ನು ವ್ಯವಸ್ಥಿತ ರೀತಿಯಿಂದ ಮೇಯಿಸುವುದು.

ಹಳ್ಳಿಯ ರೈತರು ಹೆಚ್ಚಾಗಿ ದನಕರುಗಳನ್ನು ಕಾಡಿನ ಹೊರಭಾಗದಲ್ಲೇ ಮೇಯಿಸುತ್ತಾರಲ್ಲದೆ ಕಾಡಿನ ಒಳಗೆ ಹೋಗಗೊಡುವುದಿಲ್ಲ. ಇದರಿಂದ ದನಗಳಿಗೆ ಸಾಕಷ್ಟುಮೇವು ಸಿಕ್ಕುವುದಿಲ್ಲ. ಕಾಡಿನ ಒಳಭಾಗದಲ್ಲಿ ದನಗಳನ್ನು ಮೇಯಿಸಲು ತಕ್ಕ ಆವರಣಗಳನ್ನು ಹಾಕಿ, ಸೊಪ್ಪು ನೀರುಗಳಿಂದ ಅವುಗಳನ್ನು ಪೋಷಿಸುವುದು ಅತಿ ಉತ್ತಮಕ್ರಮ. ಕಾಡಿನಲ್ಲಿ ಅಲ್ಲಲ್ಲಿ ಆವರಣಗಳನ್ನು ನಿರ್ಮಿಸಿ, ದನಗಳನ್ನು ಒಳಗೆ ಬಿಡಬೇಕು. ಅವುಗಳಿಗೆ ತಕ್ಕಷ್ಟು ಮೇವು, ನೀರನ್ನು ಒದಗಿಸಬೇಕು ಸರಿಯಾಗಿ ಬಿಸಿಲು, ಗಾಳಿ ಬರುವಂತಹ ಜಾಗಗಳಲ್ಲಿ, ಆವರಣಗಳನ್ನು ನಿರ್ಮಿಸಬೇಕಲ್ಲದೆ, ಪ್ರತಿನಿತ್ಯ ಇವುಗಳನ್ನು ಗುಡಿಸಿ, ಸ್ವಚ್ಛಮಾಡಿ ಕ್ರಿಮಿನಾಶಕ ಪುಡಿಗಳನ್ನು ಹಾಕಬೇಕು. ಕರು, ಒಳ್ಳೇಜಾತಿಯ ದನ, ಮತ್ತು ಮುದಿ ಪ್ರಾಣಿಗಳನ್ನು ಬೇರೆ ಬೇರೆಯಾಗಿ ಕಟ್ಟಬೇಕು. ಯಾವುದಾದರೂ ರೋಗ ತಗಲಿದ ದನವು ಇದ್ದರೆ ಅದನ್ನು ಗುಂಪಿನಿಂದ ಬೇರ್ಪಡಿಸಬೇಕು. ಪಶು ವೈದ್ಯರೊಬ್ಬರು ತಿಂಗಳಿಗೊಮ್ಮೆಯಾದರೂ, ಈ ಆವರಣಗಳನ್ನು ಸಂದರ್ಶಿಸಿ, ರೋಗದ ಚಿಹ್ನೆ ಇರುವ ದನಗಳಿಗೆ ಔಷಧ ಕೊಡಬೇಕು. ಸಾಂಕ್ರಾಮಿಕ ರೋಗಗಳು ತಗಲದಂತೆ ಎಲ್ಲಾ ದನಗಳಿಗೂ ದಾಕು ಹಾಕಬೇಕು ಒಂದು ಆವರಣದಲ್ಲಿ ಮೇವು ಮುಗಿದನಂತರ ಕಾಡಿನ ಮತ್ತೊಂದು ಭಾಗದಲ್ಲಿ ಆವರಣವನ್ನು ಹೂಡಬೇಕು

ದನಗಳು ಮೆಲುಕಾಡುವ ಪ್ರಾಣಿಗಳಾದ್ದರಿಂದ ಅವುಗಳು ಹುಲ್ಲು ತಿಂದಾದ ಮೇಲೆ ವಿಶ್ರಾಂತಿಯಿಂದ ಮಲಗಿ ಮೆಲುಕಾಡಲು ಅವಕಾಶ ಕಲ್ಪಿಸಿ ಕೊಡಬೇಕು. ಅಲ್ಲದೆ ಅವುಗಳಿಗೆ ದಿನಕ್ಕೆ 3ಬಾರಿಯಾದರೂ ನೀರು ಕುಡಿಸಬೇಕು ಬೆಳಿಗ್ಗೆ ಅವುಗಳಿಗೆ ಒಮ್ಮೆ ನೀರು ಕುಡಿಸಿ 3 ಗಂಟೆಗಳ ಕಾಲ ಮೇಯಲು ಬಿಡಬೇಕು, ನಂತರ ಮಧ್ಯಾಹ್ನ ನೆರಳಿನಲ್ಲಿ ಅವುಗಳನ್ನು ಮೆಲುಕಾಡಲು ಬಿಡಬೇಕು. ನಂತರ ನೀರುಕುಡಿಸಿ ಇನ್ನೊಮ್ಮೆ ಮೇಯಿಸಬೇಕು. ಹೀಗೆ ಮೇಯಿಸಿದ ನಂತರ ರಾತ್ರಿ ಆವರಣದೊಳಗೆ ಕೂಡಿಡುವ ಮೊದಲು ಇನ್ನೊಮ್ಮೆ ನೀರು ಕುಡಿಸಬೇಕು ಎಮ್ಮೆ ಕೋಣಗಳನ್ನು ಹರಿಯುವ ನೀರಿನಲ್ಲಿ ದಿನಕ್ಕೊಮ್ಮೆ ತೊಳೆಯಬೇಕು. ಎತ್ತು, ದನಗಳ ಮೈಯನ್ನು ದಿನಕ್ಕೊಮ್ಮೆ ತಿಕ್ಕಬೇಕು. ಇದಲ್ಲದೆ ಜಾನುವಾರುಗಳಿಗೆ ಕುಡಿಸುವ ನೀರು ಶುದ್ಧವಾಗಿರುವಂತೆ ನೋಡಬೇಕು.

ಜಾನುವಾರುಗಳಿಗೆ ಮೂರು ತರದ ಸಾಂಕ್ರಾಮಿಕ ರೋಗಗಳು ಹೆಚ್ಚಾಗಿ ಬರುತ್ತವೆ. (I) ಪ್ಲೀಹ ಜ್ವರ, (2) ಗೋಮಾರಿ ರೋಗ, (3) ಕಾಲು ಮತ್ತು ಬಾಯಿ ಹುಣ್ಣು ರೋಗ. ಯಾವುದಾದರೂ ದನಕ್ಕೆ ಈ ರೋಗ ತಗಲಿದರೆ ಅವುಗಳನ್ನು ಬೇರ್ಪಡಿಸಿ ಕೂಡಲೆ ಸರಕಾರಿ ಪಶು ವೈದ್ಯರಿಂದ ಚಿಕಿತ್ಸೆ ಮಾಡಿಸಬೇಕು.

ಜಾನುವಾರುಗಳನ್ನು ಸಾಕುವ ವೃತ್ತಿಯಿಂದ ಜೀವಿಸುವವರು ಕಾಡುಗಳಲ್ಲಿ ದನ ಮೇಯಿಸುವುದನ್ನು ಮೆಚ್ಚುತ್ತಾರೆ. ಆದರೆ ಹಳ್ಳಿಗಳಲ್ಲಿ, ಹೊಲಗದ್ದೆಗಳ ಬೇಸಾಯ ಮಾಡಿಕೊಂಡಿರುವ ರೈತರಿಗೆ ಈ ಕ್ರಮವು ಅನುಕೂಲವಾಗುವುದಿಲ್ಲ. ಇದಕ್ಕಾಗಿ ಹಳ್ಳಿಗರು ಒಂದು ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ ತುಂಬ ಅನುಕೂಲವಾಗುವುದು.

ಆವರಣಗಳನ್ನು ಸ್ವಚ್ಛವಾಗಿಡುವುದು, ಕ್ರಿಮಿನಾಶಕ ಔಷಧಗಳನ್ನು ಹಾಕುವುದು. ನೀರು ಹರಿದುಹೋಗುವಂತೆ ನೋಡುವುದು, ಸೆಗಣಿ ಮೂತ್ರಗಳನ್ನು ಬಹಳ ದೂರದಲ್ಲಿ ಸಂಗ್ರಹಿಸುವುದು ಅಗತ್ಯ.

ಎಲ್ಲಾ ಜಾನುವಾರುಗಳಿಗೆ ದಾಕು ಹಾಕಿಸಿ ಆಗಾಗ್ಗೆ ಡಾಕ್ಟರರಿಂದ ಪರೀಕ್ಷಿಸಬೇಕು.

ರಾಯಲ ಸೀಮೆಯ ನಲ್ಲಮಲೈ ಕಾಡುಗಳಲ್ಲಿ ಈ ಪದ್ಧತಿಯು ಬಹಳ ಪ್ರಚಾರದಲ್ಲಿ ಇದೆ. ಬೇರೆ ಭಾಗಗಳಲ್ಲಿಯೂ ಇದನ್ನು ಪ್ರಚಾರಕ್ಕೆ ತಂದಲ್ಲಿ, ನಮ್ಮ ಜಾನುವಾರುಗಳು ಉತ್ತಮಗೊಳ್ಳುವವು

ಮ. ಸ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all; keeps hair black and relieves head-ache etc.

REGD TRADE MARK

Manufactured by:-
Swadeshi Oushadhi Bhandara (Regd)
KUNJAL P. O. Brahmavar, S. K.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದಕ
ಸ್ಟಾಕಿಸ್ಟರು- ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಮೂಲ್ಕಿ ಬೇಂಕ್.
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ-

REGD

ಪುಳುಕಡ್ಡಿ ಮದ್ದುನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಫ್ರೋನ್ಸಿನಿಂದ ಕಳಿಸಲ್ಪಡುತ್ತದೆ

ತಾಜಾ ಹೂವುಗಳ ಸುಗಂಧವನ್ನು ಎಲ್ಲ ಕಡೆಗೂ ಹರಡುವ

ಇಲಿ ಮಾರ್ಕಿನ

ಫುಲರಾಣಿ ಊದಿನ ಕಡ್ಡಿ, ಚಂದನಿ, ರಾತ್ರಿಯರಾಣಿ (ರಜಿಷ್ಟರ್ಡ್)

ಮನೆಯಲ್ಲಿಯೂ ಸಿಕ್ಕುತ್ತವೆ.

ಮೊದಲೇ 4½ ರೂಪಾಯಿ ಕಳಿಸಿದರೆ 3 ಡಜನ್ ಫುಲರಾಣಿ ಊದಿನ ಕಡ್ಡಿಗಳನ್ನು ಮನೆಗೆ ಕಳಿಸುತ್ತೇವೆ

ಬಾಂಬೆ ಅಗ್ಗರಬತ್ತಿ ಕಂ.

ಪಾನವಾಲಾ ರಸ್ತೆ, ಕೃಷ್ಣ ಸಿನೇಮ ಹತ್ತಿರ, ಮುಂಬಯಿ 4

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'
ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಅಂಡಮಾನ್ ದ್ವೀಪಗಳು

ಕೊಲೆಗಡುಕರ ಕಾರಾಗೃಹದಲ್ಲಿ ನಿರಾಶ್ರಿತರ ನಂದನವನ.

೨೨೩ ದ್ವೀಪಗಳ ಗುಂಪು

ಬಂಗಾಳ ಕೊಲ್ಲಿಯ ಮಧ್ಯದಲ್ಲಿರುವ ಅಂಡಮಾನ್ ದ್ವೀಪಗಳ ಗುಂಪಿನಲ್ಲಿ ಒಟ್ಟು ೨೨೩ ದ್ವೀಪಗಳಿವೆ. ಇಷ್ಟು ದಿನವೂ ಕೊಲೆಗಡುಕರು ಮತ್ತಿತರ ಅಪರಾಧಿಗಳ ನೆಲೆಯಾಗಿದ್ದ ಈ ದ್ವೀಪಗಳಲ್ಲಿ ನಿರಾಶ್ರಿತರಿಗೆ ಪುನರ್ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಇನ್ನು ಮುಂದೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಸಾವಿರಾರು ಮಂದಿ ನಿರಾಶ್ರಿತರ ಏಕೈಕ ಆಶಾದಾಯಕ ನೆಲೆ.

ಭಾರತಕ್ಕಿಂತ ಬರ್ಮಾಕ್ಕೆ ಹತ್ತಿರದಲ್ಲಿರುವ ಈ ದ್ವೀಪಗಳು ರಂಗೂನಿನಿಂದ ೩೬೦ ಮೈಲಿ ದೂರದಲ್ಲಿವೆ. ಕಲ್ಕತ್ತಾದಿಂದ ೭೮೦ ಮೈಲಿ ಮತ್ತು ಮದರಾಸಿನಿಂದ ೭೪೦ ಮೈಲಿ ದೂರದಲ್ಲಿರುವ ಈ ದ್ವೀಪಗಳಿಗೆ ೧೫ ದಿನಗಳಿಗೊಂದಾವರ್ತಿ ಹಡಗು ಸಂಚಾರವನ್ನೇರ್ಪಡಿಸಲಾಗಿದೆ. ಯುದ್ಧ ಸಮಯದಲ್ಲಿ ರಚಿಸಲಾಗಿದ್ದ ವಿಮಾನ ನಿಲ್ದಾಣವು ಸದ್ಯದಲ್ಲಿ ಉಪಯೋಗಿಸಲ್ಪಡುತ್ತಿಲ್ಲವಾದರೂ ಮುಂದೆ ಅಭಿವೃದ್ಧಿಯಾಗುವ ಸಂಭವವಿದೆ.

ಅಂಡಮಾನ್ ಎಂಬ ಹೆಸರು ಬಂದ ಬಗೆ.

ಈ ದ್ವೀಪಗಳಿಗೆ "ಅಂಡಮಾನ್" ಎಂಬ ಹೆಸರು ಹೇಗೆ ಬಂದಿತೆಂಬ ವಿಷಯದಲ್ಲಿ ನಾನಾ ಅಭಿಪ್ರಾಯಗಳಿವೆ. ಮಲಯನ್ ಭಾಷೆಯ "ಹಂಡುಮಾನ್ ಅಥವಾ ಹನುಮಾನ್" ಎಂಬ ಪದದಿಂದ ಈ ದ್ವೀಪಗಳಿಗೆ "ಅಂಡಮಾನ್" ಎಂಬ ಹೆಸರು ಬಂದಿತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಮತ್ತೆ ಕೆಲವರು ಈ ದ್ವೀಪಗಳಿಗೆ "ಅಂಥರ್ ಮಾನಿಕ್" ಎಂಬ ಹೆಸರಿನಿಂದ "ಅಂಥರ್ ಮಾನಿಕ್" ಅಥವಾ ಅಂಡಮಾನ್ ಎಂಬ ಹೆಸರಾಯಿತೆಂದು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ಈಗಲೂ ಭಿನ್ನಾಭಿಪ್ರಾಯಗಳಿದ್ದೇ ಇವೆ. ಬರ್ಮಾದ ಕೇಪ್ ನೆಗ್ರಾಯ್ಸ್‌ನಿಂದ ನೈಋತ್ಯ ಸುಮಾತ್ರದ ತನಕ ಹರಡಿರುವ ೭೦೦ ಮೈಲಿ ಪರ್ವತ ಪಂಕ್ತಿಯೇ ಅಂಡಮಾನ್ ದ್ವೀಪಗಳ ಮೂಲ. ಕೇಪ್ ನೆಗ್ರಾಯ್ಸ್ ಮತ್ತು ಉತ್ತರ ಅಂಡಮಾನಿನ "ಲ್ಯಾಂಡ್ ಫಾಲ್" ದ್ವೀಪಗಳ ಮಧ್ಯೆಯಿರುವ ಹಸು ಮತ್ತು ಕರು, "ಟೇಬಲ್ ಮತ್ತು ಕೋಕೊ" ಪ್ರಿಪಾರಿಸ್ ಎಂಬ ದ್ವೀಪಗಳು ಬರ್ಮಾ ಸರ್ಕಾರದ ಆಡಳಿತಕ್ಕೊಳಪಟ್ಟು ಅಂಡಮಾನ್ ದ್ವೀಪಗಳಿಗೆ ೩೦ ಮೈಲು ದೂರದಲ್ಲಿವೆ. ಈ ಮಧ್ಯೆ ಇರುವ ಸಮುದ್ರಕ್ಕೆ "ಕೋಕೋ ಕಡಲ್ಗಾಲುವೆ" ಎಂದು ಹೆಸರು. ಸುಮಾತ್ರಾದಿಂದ ೧೧೦ ಮೈಲಿ ದೂರದಲ್ಲಿರುವ "ಗ್ರೇಟ್ ನಿಕೋಬಾರ್" ದ್ವೀಪಗಳು ಅಂಡಮಾನ್ ದ್ವೀಪಗಳ ದಕ್ಷಿಣದಲ್ಲಿವೆ.

ಉತ್ತರ ಅಂಡಮಾನಿನಿಂದ ನಿಕೋಬಾರ್ ದ್ವೀಪಗಳ ತನಕ ಇರುವ ಪ್ರದೇಶ ಒಟ್ಟು ೪೭೦ ಮೈಲಿ ಉದ್ದವಿದೆ.

ವಿಸ್ತೀರ್ಣ ಮತ್ತು ಸ್ವಾಭಾವಿಕ ಸಂಪತ್ತು.

೩೧೦೦ ಚದರ ಮೈಲಿ ವಿಸ್ತೀರ್ಣವಿರುವ ಅಂಡಮಾನ್ ದ್ವೀಪಗಳಲ್ಲಿ ೧೯೬೦ ಚದರ ಮೈಲಿ ಪ್ರದೇಶವು ಉಷ್ಣವಲಯದ ಕಾಡುಗಳಿಂದಾವೃತವಾಗಿದೆ. ದ್ವೀಪಗಳ ವಾಯುಗುಣವನ್ನೇ ಹೋಲುತ್ತದೆ. ದ್ವೀಪಗಳ ಸ್ವಾಭಾವಿಕ ಸಂಪತ್ತನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡಿಲ್ಲದಿದ್ದರೂ, ಕಾಡುಗಳನ್ನು ಕಡಿದು ಮರದ ದಿಮ್ಮಿಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಎರಡನೇ ಯುದ್ಧ ಪ್ರಾರಂಭವಾಗುವ ತನಕ ಇಲ್ಲಿ ಬೆಳೆಯುತ್ತಿದ್ದ "ಪಡಾಕ್" "ಸಿಲ್ವರ್ ಗ್ರೇ" ಮತ್ತು "ಜೇಬ್ರಾ" ಮುಂತಾದ ಉತ್ತಮ ಜಾತಿಯ ಮರದ ದಿಮ್ಮಿಗಳನ್ನು ಯುರೋಪ್ಯ ರಾಷ್ಟ್ರಗಳಿಗೆ ರವಾನಿಸಲಾಗುತ್ತಿತ್ತು. ಈ ಕಾಡುಗಳಲ್ಲಿ ಬೆಳೆಯುವ "ಗರ್ಜನ್" "ಚಪ್ಲಾಸ್" "ಬದಂ" "ಸಿಮೂಲ್" "ವೈಟ್ ಮ್ಯಾನ್‌ಗ್ರೋ" "ಧೂಪ್" ಜಾತಿಯ ಮರಗಳು. ದ್ವೀಪದ ಅರಣ್ಯಶಾಖೆಯಲ್ಲಿ ೩೧೦೦ ಮಂದಿ ಕೆಲಸಗಾರರಿದ್ದಾರೆ. ಈ ಸಂಖ್ಯೆಯನ್ನು ೪೫೦೦ಕ್ಕೇರಿಸಿ ವರ್ಷಕ್ಕೆ ೭ ಲಕ್ಷ ಟನ್ ಮರವನ್ನು ರಫ್ತು ಮಾಡಬೇಕೆಂಬ ಯೋಜನೆಯನ್ನು ಪರಿಶೀಲಿಸಲಾಗುತ್ತಿದೆ.

ದ್ವೀಪದ ಪ್ರದೇಶವೆಲ್ಲಾ ಸರ್ಕಾರದ ಅಧೀನದಲ್ಲಿದೆ. ಖಾಸಗಿ ಜಮೀನನ್ನು ಪಡೆದಿರಲು ಯಾರಿಗೂ ಅವಕಾಶವಿಲ್ಲ. ಆದರೂ ರೈತರು ಎಕರೆಗೆ ೩ ರೂ ಅಥವಾ ೪ ರೂ.ಗಳಂತ ಬಾಡಿಗೆಕೊಟ್ಟು ಬೇಸಾಯ ಮಾಡುವ ಹಕ್ಕನ್ನು ಪಡೆಯಬಹುದು

ಬಿಡುಗಡೆಯಾದ ಕೈದಿಗಳ ಸ್ತುತ್ಯಕಾರ್ಯ.

ಈಗ ಅಂಡಮಾನ್ ದ್ವೀಪಗಳು "ಕೊಲೆಗಡುಕರ ಕಾರಾಗೃಹ"ವಲ್ಲ; ಬಿಡುಗಡೆಯಾದ ಎಷ್ಟೋ ಮಂದಿ ಅಪರಾಧಿಗಳಿಗೆ ಬೇಸಾಯ ಮಾಡುವುದಕ್ಕೂ ತೋಟಗಳನ್ನು ಮಾಡಿಕೊಳ್ಳುವುದಕ್ಕೂ ಅವಕಾಶ ಕಲ್ಪಿಸಿಕೊಡಲಾಗಿದೆ. ಈ ಅಪರಾಧಿಗಳನ್ನು ಅರಣ್ಯ ನಿರ್ಮೂಲ ಕಾರ್ಯದಲ್ಲೂ ರಸ್ತೆಗಳ ನಿರ್ಮಾಣಕ್ಕೂ ನೇಮಿಸಿಕೊಳ್ಳಲಾಗುತ್ತಿತ್ತು.

ಪೋರ್ಟ್ ಬ್ಲೇರ್ ಬಂದರಿನ ಮತ್ತು ದ್ವೀಪದ ಸಂಚಾರ ಮಾರ್ಗಗಳ ಅಭಿವೃದ್ಧಿಗೆ ಈ ಬಂದಿಗಳೇ ಕಾರಣ.

ಜನಸಂಖ್ಯೆ ಮತ್ತು ಆಹಾರ

ದ್ವೀಪಗಳಲ್ಲಿರುವ ಗುಡ್ಡಗಾಡಿನ ಜನರ ಜತೆಗೆ ೧೩೫೪೪ ಮಂದಿ ಭಾರತೀಯರೂ, ೨೩೨೨ ಮಂದಿ ಬರ್ಮೀ, ಚೀಣೀ ಮತ್ತು ಇಂಡೋನೇಷಿಯನ್ ಪ್ರಜೆಗಳೂ ಇದ್ದಾರೆ. ಅಂಡಮಾನ್ ದ್ವೀಪದಲ್ಲಿ ಹಿಂದೆ ಯಾರಿದ್ದರೆಂಬ ವಿಷಯದಲ್ಲಿ ಏನೂ ಗೊತ್ತಿಲ್ಲ ೫ಅಡಿ ೩ವರೆ ಇಂಚು ಎತ್ತರವಿರುವ ನಿಕೋಬಾರ್ ಪ್ರಜೆಗಳು ಅಂಡಮಾನ್ ಪ್ರಜೆಗಳಿಗಿಂತ ಎತ್ತರವಾಗಿದ್ದಾರೆ. ಅಂಡಮಾನಿಗಳು ಅರ್ಧ ಬೇಯಿಸಿದ ಮೀನು ಮತ್ತು ಮಾಂಸಗಳನ್ನೂ ನಿಕೋಬಾರಿಗಳು ತೆಂಗಿನ ಕಾಯನ್ನೂ ತಿಂದು ಜೀವಿಸುತ್ತಾರೆ. ಅಂಡಮಾನ್ ದ್ವೀಪಗಳು ಭಾರತದಿಂದ ಪ್ರತ್ಯೇಕಿಸಲ್ಪಡಬೇಕೆಂಬ ಬೇಡಿಕೆಗೆ ಕ್ರೈಸ್ತ ಪಾದ್ರಿಗಳ ಪ್ರಚಾರವೇ ಕಾರಣ. ಈ ಗುಡ್ಡಗಾಡು ಜನರೆಲ್ಲಾ ವಿದೇಶಿಯರೊಡನೆ ಸ್ನೇಹದಿಂದಿರುತ್ತಾರೆ

ಪೋರ್ಟ್ ಬ್ಲೇರ್ ಬಂದರು.

ಚೀಫ್ ಕಮೀಷನರ ಆಡಳಿತಕ್ಕೊಳಪಟ್ಟಿರುವ ಈ ದ್ವೀಪಗಳಿಗೆ ಪೋರ್ಟ್‌ಬ್ಲೇರ್ ಬಂದರೇ ಮುಖ್ಯಪಟ್ಟಣ. ಪೋರ್ಟ್ ಬ್ಲೇರಿಗೆ ಕ್ರಮವಾಗಿ ೩೧೦ ಮತ್ತು ೩೫೫ ಮೈಲಿ ದೂರದಲ್ಲಿರುವ ಲಿಟ್ಲ್ ಮತ್ತು ಗ್ರೇಟ್ ನಿಕೋಬಾರ್ ದ್ವೀಪಗಳಲ್ಲಿ ಯಾವ ಆಡಳಿತ ವ್ಯವಸ್ಥೆಯೂ ಇಲ್ಲ.

ದ್ವೀಪದ ಅಭಿವೃದ್ಧಿಗೆ ನಾನಾ ಮುಖವಾದ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಸಂಚಾರ ಮಾರ್ಗಗಳ ಉದ್ದ ಕೇವಲ ೧೨೦ ಮೈಲಿ. ಇಡೀ ದ್ವೀಪದಲ್ಲಿರುವುದು ಒಂದೇ ಒಂದು ಆಸ್ಪತ್ರೆ ಮತ್ತು ಒಂದೇ ಒಂದು ಹೈಸ್ಕೂಲು. ಹೋದ ವರ್ಷ ಪ್ರಥಮ ಭಾಗದಲ್ಲಿ ಭಾರತ ಸರ್ಕಾರದ ಫೈನಾನ್ಸ್ ಸ್ಟಾಂಡಿಂಗ್ ಸಮಿತಿಯವರು ದ್ವೀಪದ ಆರ್ಥಿಕ ಜೀವನವನ್ನು ಉತ್ತಮಗೊಳಿಸುವುದಕ್ಕಾಗಿ ೧೦ ಲಕ್ಷ ರೂ. ಗಳನ್ನು ಮಂಜೂರ್ಮಾಡಿದ್ದರು. ಜಪಾನೀಯರ ವಶದಲ್ಲಿದ್ದ ಕಾಲದಲ್ಲಿ ಈ ದ್ವೀಪಗಳು ತೀರಾ ದುಃಸ್ಥಿತಿಗೆ ಬಂದುವು. ಹೊಟ್ಟೆಗೆ ಆಹಾರವಿಲ್ಲದ ಬಹುಮಂದಿ ಪ್ರಾಣ ಬಿಟ್ಟರು.

ದ್ವೀಪದ ಅಭಿವೃದ್ಧಿಕಾರ್ಯ.

ಭಾರತ ಸರ್ಕಾರದವರು ನೀತಿಗನುಗುಣವಾಗಿ, ಈ ದ್ವೀಪಗಳಲ್ಲಿ ಮೀನಿನ ಕೈಗಾರಿಕೆ, ರಬ್ಬರ್ ಮತ್ತು ತೆಂಗಿನಕಾಯಿ ಪ್ಲಾಂಟೇಷನ್‌ಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅನೇಕ ಖಾಸಗೀ ಸಂಸ್ಥೆಗಳಿಗೆ ಲೈಸನ್ಸ್ ಕೊಟ್ಟಿರು. ಪೂರ್ವ ಬಂಗಾಳದಿಂದ ಬಂದ ೭೦೦ ನಿರಾಶ್ರಿತ ಸಂಸಾರದವರು ಈ ದ್ವೀಪಗಳಲ್ಲಿ ನೆಲೆಸಿದ್ದಾರೆ. ಆದರೂ ಸದ್ಯದ ಪರಿಸ್ಥಿತಿಯಲ್ಲಿ ಈ ದ್ವೀಪಗಳಲ್ಲಿ ಹಿರಿಯ ಪ್ರಮಾಣದ ಪುನರ್ವ್ಯವಸ್ಥಾ ಕಾರ್ಯವನ್ನು ಕೈಗೊಳ್ಳುವುದು ಅಸಾಧ್ಯ. ಭಾರತದ ರಕ್ಷಣಾ ದೃಷ್ಟಿಯಲ್ಲಿ ಈ ದ್ವೀಪಗಳಿಗೆ ತುಂಬಾ ಪ್ರಾಮುಖ್ಯತೆಯಿದೆ. ಸಣ್ಣ ಹಡಗುಗಳು ನಿಂತುಕೊಳ್ಳಲು ಉಪಯೋಗಕರವಾಗಿದ್ದರೂ, ಪೋರ್ಟ್‌ಬ್ಲೇರ್ ಬಂದರು ಪೂರ್ವ ಮತ್ತು ಈಶಾನ್ಯ ಮಾರುತಗಳ ಹೊಡೆತಕ್ಕೆ ಸಿಕ್ಕಿದೆ. ಜಪಾನಿಯವರು ಈ ದ್ವೀಪಗಳಲ್ಲಿದ್ದಾಗ ಸಬ್‌ಮೇರಿನ್ ನೆಲೆಯೊಂದನ್ನೇರ್ಪಡಿಸಿದ್ದರು.

ಅಂಡಮಾನಿಗೆ ದಕ್ಷಿಣದಲ್ಲಿರುವ ನಾನ್‌ಕೌರಿ ಬಂದರನ್ನು ಅಭಿವೃದ್ಧಿಗೊಳಿಸಿ ನೌಕಾ ನೆಲೆಯನ್ನಾಗಿ ಮಾರ್ಪಡಿಸಬಹುದು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ— ಚಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕೆಮಿಲವಾರ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಚ್ಚುಚ್ಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಡತಪ್ಪಿ ಋತುಸ್ರಾವವಾಗುವುದು ತಕ್ಷಣ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MRS P. DEVEE, F. DS (N. J.)

Tollygunge CALCUTTA.

ಸ್ವಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಬೇಕು

ಎಲ್ಲೆಲ್ಲಿಯೂ ಉತ್ಸಾಹೀ ಸಮರ್ಥ ಏಜಂಟರು ಬೇಕಾಗಿದ್ದಾರೆ.

ಸರಿಯಾಗಿ ಕೆಲಸ ಮಾಡುವವರು ತಿಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು.

ವಿವರಕ್ಕೆ ಬರೆಯಿರಿ:

ಬಿ. ವಾಮನಾಚಾರ್,

ಬಿ.ಎ.,ಬಿ.ಎಲ್.,ಬಿ.ಟಿ.

ಮೆನೇಜರ್,

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿ., ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

4-8-1949

FOUNDER.
Hon'ble Sri. A. B. Shetty
Minister for Agriculture & Veterinary

Telegram: "Navayuga"

ನವಯುಗ

Estd. 1921 ಸ್ಥಾಪನೆ.

ವಾರ್ಷಿಕ ಚಂದಾ. 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ ವಾರ 49

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29 No. 49

ಈ ಯದ್ವಾತದ್ವಾ ನಮ್ಮ ವೈಶಿಷ್ಟ್ಯವೆ?

ಯಾರಿಂದ ಮತ್ತು ಎಲ್ಲಿ ಏನು ನಡೆಯತಕ್ಕದ್ದೋ, ಅವರಿಂದ ಮತ್ತು ಅಲ್ಲಿ ಅಂತಹದೇನೂ ನಡೆಯದೆ ಯಾರಿಗೆ ಮತ್ತು ಎಲ್ಲಿ ಆ ಕೆಲಸ ಆಗತಕ್ಕದ್ದಲ್ಲವೋ ಅವರಿಂದ ಮತ್ತು ಅಲ್ಲಿಯೇ ಅದು ನಡೆಯುತ್ತಿರುವುದೇ ನಮ್ಮ ಇಂದಿನ ವೈಶಿಷ್ಟ್ಯವೆಂಬಂತೆ ತೋರುತ್ತಿದೆ. ಇದೀಗ ನಮ್ಮ ಪಾಲಿನ ಯದ್ವಾತದ್ವಾಪಥ-ತಿರುಗಾ ಮುರುಗಾಯುಗ-ಆಗಿಬಹುದೆ?

ಸರಕಾರ ನಿರ್ವಹಣದ ಹೊಣೆಗಾರ ಮಂತ್ರಿಗಳು ಪ್ರಚಾರಕರ ಮಾದರಿಯಲ್ಲಿ ಉದ್ದುದ್ದ ಭಾಷಣಗಳನ್ನು ಕೊಡುತ್ತಾ ಹೋಗುವ ಸಂಪ್ರದಾಯ ಲೋಕದಲ್ಲೇ ಅಪರೂಪ; ಪಕ್ಷಪ್ರಚಾರಕರು, ಕಾರ್ಯಕರ್ತರ ಮೇಲೆಯೇ ಜನತಾ ಪ್ರಚಾರ ಮತ್ತು ಸಂಘಟನೆಗಾಗಿ ಊರೂರು ಭಾಷಣ ಸಂಚಾರ ಕೈಕೊಳ್ಳುವ ಜವಾಬ್ದಾರಿ. ಆದರೀಗ ಭಾರತದ ಪ್ರಧಾನ ಮಂತ್ರಿಯಿಂದಾರಂಭಿಸಿ, ಪ್ರಾಂತಿಕ ಮಂತ್ರಿಗಳ ವರೆಗಿನ ಎಲ್ಲರೂ ಅಲ್ಲಲ್ಲಿ ಉದ್ದುದ್ದ ಭಾಷಣಗಳನ್ನು ಕೊಡುತ್ತಿರುವುದು ಕೇಳಿ ಬರುತ್ತಿದೆ. ಯಾದರೆ ಕಾಂಗ್ರೆಸ್ ಕೆಲಸಗಾರರು ಅಂತಹದೇನನ್ನೂ ಮಾಡದಿರುವುದು ಕಾಣಿಸುತ್ತಿದೆ.

ಅಧಿಕಾಹಾರ ಬೆಳೆಯುವುದು ಹಳ್ಳಿಗಳಲ್ಲೆಂಬುದ ಗೊತ್ತಿದ್ದದ್ದೆ. ಆದರಿಂದು "ಅಧಿಕಾಹಾರ ಬೆಳೆಸಿರಿ" ಪ್ರಕಟಣೆಗಳು, ಭಾಷಣಗಳು, ಸಭೆ ಮೆರವಣಿಗೆಗಳು ನಡೆಯುತ್ತಿರುವುದು ಪೇಟೆ ಪಟ್ಟಣಗಳಲ್ಲೇ.

ಹೋಟೆಲುಗಳ ಸಂಖ್ಯೆಗಿಂತ ಹೆಚ್ಚಿಗೆ ಗಿರಾಕಿಗಳು-ಲೇಖಕರಿಗಿಂತ ಹೆಚ್ಚಿಗೆ ವಾಚಕರು ಇಲ್ಲದಿದ್ದರೆ ಹೇಗೆ? ಆದರೆ ಇಂದು ಓದುವರಿಗಿಂತ ಹೆಚ್ಚಿಗೆ ಬರೆಯುವವರ-ಚಂದಾದಾರರಾಗುವವರಿಗಿಂತ ಹೆಚ್ಚಿಗೆ ಪತ್ರಿಕೆಗಳ-ಸಂಖ್ಯೆಯೇರಿರಬಹುದೇ ಎಂಬ ಶಂಕೆಗೆಡೆಯಿದೆ

ಕಾಂಗ್ರೆಸ್ ಕಾರ್ಯಕರ್ತರು ಸಾರ್ವಜನಿಕರೊಡನೆ ತಾವೂ ಬೆರೆತು ಹೋಗಿ, ಜನತೆಯ ಪ್ರತಿನಿಧಿಗಳಾಗಿ ಸರಕಾರೀ ಅಧಿಕಾರಿಗಳೊಡನೆ ವ್ಯವಹರಿಸಬೇಕಾದುದು ಕ್ರಮ. ಆದರೆ ಇಂದು ಕಾಂಗ್ರೆಸ್ ಅಧಿಕಾರಿಗಳಲ್ಲೇ ಸರಕಾರೀ ಮೇಲಧಿಕಾರಿಗಳ ಮನಸ್ಸು, ಮರ್ಜಿ ಮಾಡಿ ಅವರು ಸರ್ವ ಸಾಮಾನ್ಯರ ಪಾಲಿಗೆ ಅಧಿಕಾರೀ ಸಮಾನರಾಗಿದ್ದಾರೆ

ಹೊಸ ಹೊಸ ಶಾಸನಗಳು, ಕರಕಂದಾಯಗಳು ಎಷ್ಟು ಮತ್ತು ಹೇಗೆ ಎಂಬ ಸರಿಯಾದ ವಿವರವು ಎಲ್ಲಾ ಜನರಿಗೂ ತಿಳಿದಿರಬೇಕಾದುದು ಅಗತ್ಯ; ಮತ್ತು ತಿಳಿಸುವ ಸುವ್ಯವಸ್ಥೆಗಳಿರಬೇಕಾದುದೂ ಅಗತ್ಯವೇ. ಆದರೆ ಈ ಕಾಲದ ಅಂತಹ ನವರಚನೆಗಳ ಸಂಖ್ಯೆ ಮತ್ತು ರೂಪರೇಖೆಗಳ ಮೇಲಿಂದ ಸಂಬಂಧಪಟ್ಟ ಅಧಿಕಾರಿಗಳಿಗೂ ಅವು ಸರಿಯಾಗಿ ಗೊತ್ತಿರಬಹುದೇ ಎಂಬುದು ಅನುಮಾನಕರ.

ಲೋಕದ ಯಾವ ರಾಷ್ಟ್ರದಲ್ಲಾಗಲೀ, ಯಾವುದೇ ಮೂಲೆಯಲ್ಲಿರುವವರಲ್ಲಾಗಲೀ, ತಂತಮ್ಮ ಪಾಲಿನ ಕರ್ತವ್ಯಗಳೇನೆಂಬುದನ್ನಷ್ಟೆ ತಿಳಿದುಕೊಳ್ಳುವುದೂ ಅನ್ಯರ ಸಂಬಂಧದ ವಿಷಯಗಳಲ್ಲಿ ಆದಷ್ಟು ಕಡಿಮೆ ತಲೆ, ಬಾಯಿ, ಕೈಹಾಕುವುದೂ ಮಾನವೋಚಿತ ಧರ್ಮ. ಆದರೆ ಇಂದು ನಮ್ಮಲ್ಲಿ ಉಚ್ಚಾಧಿಕಾರ ಸ್ಥಾನಗಳಲ್ಲಿರುವವರಿಂದಾರಂಭಿಸಿ, ಸಾಮಾನ್ಯನ ವರೆಗಿನ ಎಲ್ಲರೂ ಪರೋಪದೇಶ ಪಾಂಡಿತ್ಯ ಮತ್ತು ಅನ್ಯರ ವಿಮರ್ಶೆಯಲ್ಲೇ ನಿರತರಾಗಿದ್ದಾರೆ.

ರೈತರ ಹಾಗೂ ಶ್ರಮಜೀವಿಗಳ ಹಿತಸಾಧಕರೆಂಬ ಬಿಲ್ಲೆ ಹಚ್ಚಿಕೊಂಡವರು ತಮ್ಮಿಂದ ಸಾಧ್ಯವಿದ್ದಷ್ಟಾದರೂ ಈ ವರ್ಗದವರಿಗಾಗುತ್ತಿರುವ ಸೂರೆಸುಲಿಗೆಗಳನ್ನೂ ಅವರ ಅಜ್ಞಾನವನ್ನೂ ನಿವಾರಿಸಲು ಪ್ರಯತ್ನಿಸಬೇಕಿತ್ತು. ಬದಲಿಗೆ ಇವರು ಸ್ವಾರ್ಥ ಮತ್ತು ಸ್ವಕಾರ್ಯ ಸಾಧನೆಗಾಗಿ ಪಕ್ಕ ಸುಲಿಗೆಗಾರರಿಗಿಂತ ಭಿನ್ನವಾದ ವಿಧಾನಗಳ ಮೂಲಕ, ರೈತ ಕೂಲಿಗಾರರನ್ನು ಸುಲಿಯುವುದೂ ಅವರ ಅಜ್ಞಾನಕ್ಕೆ ಹೊಸ ರೂಪ ಕೊಡುತ್ತಿರುವುದೂ ಕಾಣಿಸುತ್ತದೆ.

ಸ್ವತಃ ತಾವೇ ದಬ್ಬಾಳಿಕೆಗೊಳಗಾದವರು [illegible] ಇತರ ದಲಿತ ವರ್ಗದವರೊಡನೆ ಸಹಕರಿಸಿ, [illegible] ವರ್ತಿಗಳಾಗಿರಬೇಕಾದುದು ಅಗತ್ಯ. ಆದರೆ ಧನಿಯ ಪ್ರೀತಿಪಾತ್ರ ಬಂಟನಾಗಿ ಹೋದ ಒಕ್ಕಲಿನವನು ಬೇರೆ ಒಕ್ಕಲಿನವರ ಮೇಲೆ ಧನಿಗಿಂತಲೂ ಹೆಚ್ಚಿಗೆ ಅಧಿಕಾರ ಚಲಾಯಿಸಲು ನೋಡುತ್ತಾನೆ. ಬ್ರಾಹ್ಮಣನಿಗಿಂತಲೂ ಹೆಚ್ಚಾಗಿ ಓರ್ವ ಮುಂಡಾಲನು ಓರ್ವ ಕೊರಗನನ್ನು ಮುಟ್ಟಲು ಹೇಸುತ್ತಾನೆ.

ಕ್ರಮಪ್ರಕಾರ ಯಾವ ವಿಧಾನದಿಂದಾದರೂ ಸ್ವತಃ ಸಹಸ್ರಗಟ್ಟಲೆ ಗಳಿಸುವವನಿಗೆ ಅದೆಲ್ಲವನ್ನೂ ಮನಸೋಚ್ಛೆ ವ್ಯಯಿಸುವ ಅಧಿಕಾರವಿದೆ; ಹಿರಿಯರು ಕೂಡಿಸಿಟ್ಟಿದ್ದಿರುವವನಿಗೆ ಕಿರಿಯರಿಗಾಗಿ ಅದನ್ನು ಕಾದುಕೊಡುವ ಬುದ್ಧಿಯು ಬೇಕಿದ್ದಿತು. ಆದರೆ ಈ ದಿನ ಮೊದಲಿನವರಲ್ಲಿ ಹೆಚ್ಚಿನವರು ಜಿಪುಣರು; ಎರಡನೇ ವರ್ಗದವರಲ್ಲಿ ಅಧಿಕ ಸಂಖ್ಯಾಕರು [illegible] ದುಂದುಗಾರರು-

(೨ನೇ ಪುಟ ನೋಡಿರಿ)

ನೀವು ಅಳಿಯಸಂತಾನಿಗರೊ?

ಹಾಗಿದ್ದರೆ ಈಗತಾನೆ ಪ್ರಕಟವಾದ

ಮದ್ರಾಸು

ಅಳಿಯಸಂತಾನ ಕಾನೂನು

ಇದನ್ನು ಓದಲೇಬೇಕು
ಇದರ ಮಾಹಿತಿಯನ್ನು ಪಡೆಯಲೇಬೇಕು

ಇಂಗ್ಲಿಷ್ ಪ್ರತಿಗಳೂ ಕನ್ನಡ ಪ್ರತಿಗಳೂ ದೊರೆಯುತ್ತವೆ.

ಕ್ರಯ 0—8—0 (ಟಪ್ಪಾಲು ಖರ್ಚು ಪ್ರತ್ಯೇಕ)

0 9 0 ಸ್ಟಾಂಪು ಕಳಿಸಿದರೆ ಬು. ಪೋ. ಪ್ರತಿ ಕಳಿಸಲ್ಪಡುವುದು

ಸಿಗುವ ಸ್ಥಳ ...

ನವಯುಗ ಪ್ರೆಸ್, ಉಡುಪಿ

ಸುವಾಸನೆ ಮತ್ತು ಮಧುರತೆಯಿಂದ
ಎಲ್ಲರ ಮೆಚ್ಚುಗೆಗೆ ಅರ್ಹವಾಗಿದೆ
ಪ್ರಭಾತ ಚಾ ಮತ್ತು ಕಾಫಿ

PRABHAT
TEA & COFFEE (INDIA) Ltd.
COONOOR (Nilgiris)

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:- ಧಾರವಾಡ,

THE UNITED KARNATAK INSURANCE COMPANY, LIMITED.

ಕಾಂಗ್ರೆಸ್ ನಿಯಮಾನುಸಾರ ಮದ್ರಾಸ್ ಆರೋಪ ತನಿಖೆ

ಮದ್ರಾಸ್ ಪ್ರಾಂತ್ಯದ ಕೆಲವು ಮಂತ್ರಿಗಳ ಮೇಲಿರುವ ಆಪಾದನೆಗಳ ಸಂಬಂಧವಾಗಿಯೂ, ಪಶ್ಚಿಮ ಬಂಗಾಳ ಪ್ರಾಂತ್ಯದ ಕಾಂಗ್ರೆಸ್ ದುಸ್ಥಿತಿ ಮತ್ತು ಪ್ರಾಂತಿಕ ಅತೃಪ್ತಿ ನಿವಾರಣೆಗಾಗಿಯೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕಳೆದ ವಾರ ನಿರ್ಧಾರಗಳನ್ನು ಮಾಡಿದೆ. ಎರಡು ನಿರ್ಧಾರಗಳೂ ಸಂಬಂಧಪಟ್ಟ ಎರಡೂ ಪ್ರಾಂತ್ಯಗಳಿಂದ ಆನಂದಾಕ್ಷೇಪ ಮಿಶ್ರಿತ ಸ್ವಾಗತಗಳನ್ನು ಪಡೆದಿವೆ. ಗೊಂದಲದತ್ತ ಹಾರಿಬರುವ ಯಾವ ಸೂಚನೆಗಾದರೂ ಪ್ರಥಮತಃ ಇಂತಹ ರಂಗವೇ ಇದಿರಾಗುವದು ಸ್ವಾಭಾವಿಕ. ಏನೇ ಮಾಡಿದರೂ ಸುಖಾಂತ್ಯಗೊಳ್ಳಲೊಪ್ಪದ ದುರಂತ ನಾಟಕಗಳ ಗತಿ ಬದಲಾಯಿಸುವುದು ಯಾವ ತೀರ್ಮಾನದಿಂದಲೂ ಆಗದ ಮಾತು. ಬಂಗಾಳಾ ದುಸ್ಥಿತಿ ಮತ್ತು ಮದ್ರಾಸ್ ವಿವಾದಗಳು ಅಂಥವುಗಳಲ್ಲವೆಂಬುದು ನಿಜವಾದರೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನ ತತ್ವ, ಧೋರಣೆ, ನಿಯಮ, ಶಿಸ್ತು ಮತ್ತು ಭವಿಷ್ಯದತ್ತ ದೃಷ್ಟಿಯಿಟ್ಟು ಎರಡರ ಸಂಬಂಧದಲ್ಲೂ ಯೋಗ್ಯ ನಿರ್ಣಯವನ್ನೇ ಮಾಡಿದೆ ಎನ್ನಬಹುದು.

ಮದ್ರಾಸ್ ಸಂಬಂಧದಲ್ಲಿ

ಮದ್ರಾಸಿನ ಹಿಂದಿನ ಮಂತ್ರಿಮಂಡಲದ ಕೆಲವು ಸದಸ್ಯರ ಮೇಲೆ ಬಂದಿದ್ದ ಆರೋಪಗಳ ಕುರಿತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮಾಡಿದ ನಿರ್ಣಯದ ಸಾರ ಹೀಗಿದೆ:-

'ಮದ್ರಾಸಿನ ಕಾಂಗ್ರೆಸ್ ಶಾಸನ ಸಭಾ ಸದಸ್ಯರಲ್ಲಿ ಕೆಲವರು ಕಳೆದ ವರುಷ ಆ ಕಾಲದಲ್ಲಿ ಪ್ರಾಂತಿಕ ಸರಕಾರದ ಮಂತ್ರಿಗಳಾಗಿದ್ದ ಕೆಲವರ ವರ್ತನೆಗಳ ಕುರಿತು ಮಾಡಿದ್ದ ಆಪಾದನೆಗಳನ್ನು ಕಾರ್ಯಕಾರೀ ಸಮಿತಿ ಪರ್ಯಾಲೋಚಿಸಿದೆ. ಶ್ರೀ ಶಂಕರರಾವ್ ದೇವ್ರೋರ ವರದಿಯೂ ಸಮಿತಿಯ ಮುಂದಿದ್ದಿತು. ಆಪಾದನೆಗಳನ್ನು ಮುಂದಿಟ್ಟಿದ್ದ ಶ್ರೀಗಳಾದ ಟಿ. ಪ್ರಕಾಶಂ, ಟಿ. ವಿಶ್ವನಾಥಮ್ ಮತ್ತಿತರರು ಸಮಿತಿಯ ಮುಂದೆ ಹಾಜರಾಗಿ ಅಭಿಪ್ರಾಯಗಳನ್ನಿತ್ತಿದ್ದರು. ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ. ಪಿ. ಎಸ್. ಕುಮಾರಸ್ವಾಮಿ ರಾಜರೊಡನೆ ಸಂಭಾಷಿಸುವ ಸುಯೋಗವೂ ಸಮಿತಿಗೊದಗಿದ್ದಿತು. ಈ ಆಪಾದನೆಗಳು ಹಿಂದಿನ ಮಂತ್ರಿ ಮಂಡಲಕ್ಕೆ ಮತ್ತು ಒಂದು ವರ್ಷದ ಹಿಂದೆ ನಡೆದಿದ್ದ ಸಂಗತಿಗಳಿಗೆ ಸಂಬಂಧಿಸಿದವುಗಳಾಗಿವೆ. ಮದ್ರಾಸಿನ ಇಂದಿನ ಪ್ರಧಾನ ಮಂತ್ರಿಗೆ ಅವುಗಳೊಡನಾವ ಸಂಬಂಧವೂ ಇಲ್ಲ. ಈ ಆಪಾದನೆಗಳಿಗೀಡಾಗಿದ್ದವರ ಪೈಕಿ ಒಬ್ಬರು ಆ ಮೇಲೆ ಸತ್ತು ಹೋದರು; ಆ ಕಾಲದಲ್ಲಿ ಮಂತ್ರಿಯಾಗಿದ್ದ ಮತ್ತೊಬ್ಬರು ಈಗ ಮಂತ್ರಿಯಾಗಿಲ್ಲ. ಶ್ರೀ ಶಂಕರರಾವ್ ದೇವ್ರೋರು ತನ್ನ ವರದಿಯಲ್ಲಿ ಕೆಲವು ಆರೋಪಗಳಿಗೆ ಆಧಾರವಿಲ್ಲವೆಂದೂ ಇನ್ನು ಕೆಲವು ಮುಂದಿನ ವಿಚಾರಣೆಗರ್ಹವಿವೆಯೆಂದೂ ಸೂಚಿಸಿದ್ದಾರೆ. ದುರ್ದೈವ ವಶಾತ್ ಶ್ರೀ ದೇವ್ರೋರಿಗೆ ತನ್ನ ವಿಚಾರಣೆಯ ವೇಳೆ ಆಪಾದನೆ ಮುಂದಿಟ್ಟವರ ಸಹಕಾರ ದೊರೆತಿರಲಿಲ್ಲ. ಮಂತ್ರಿ ಸ್ಥಾನದಲ್ಲಿರುವ ಓರ್ವನ ಮೇಲೆ ಯಾವನೇ ಜವಾಬ್ದಾರೀ ಮನುಷ್ಯನಿಂದ ಆರೋಪಗಳು ಬಂದರೆ, ಮತ್ತವುಗಳಲ್ಲಿ ಏನಾದರೂ ತಿರುಳಿದ್ದರೆ, ಅಂತಹದನ್ನು ವಿಚಾರಿಸಲೇಬೇಕೆಂದು ಕಾರ್ಯಕಾರೀ ಸಮಿತಿಯ ಆತುರವಿದೆ. ಓರ್ವ ಮಂತ್ರಿಯ, ಅಥವಾ ಶಾಸನ ಸಭಾ ಪಕ್ಷದ ಓರ್ವ ಸದಸ್ಯನ ಮೇಲೆ ಏನಾದರೂ ಆರೋಪ ಬಂದಾಗ ನ್ಯಾಯವಾದ ಹಾದಿಯೆಂದರೆ, ಪಕ್ಷದ ಶಿಸ್ತಿಗೆ ಮುಖ್ಯ ಹೊಣೆಗಾರನಿರುವ ಪಕ್ಷ ನಾಯಕನಿಗೆ ಆ ವಿಷಯವನ್ನು ಒಪ್ಪಿಸುವುದು. ನಾಯಕನು ಅವುಗಳ ವಿಚಾರಣೆ ನಡೆಸಬೇಕು. ಆ ವೇಳೆ ಅಗತ್ಯವೆಂದು ತೋರಿದರೆ ಪಕ್ಷದೊಂದು ಸಮಿತಿಯು ಅವುಗಳ ತನಿಖೆ ನಡೆಸಬಹುದು. ಈ ವಿಧಾನದಿಂದ ಸಮಾಧಾನ ಕಂಡು ಬಾರದಿದ್ದರೆ, ಆ ಮೇಲೆ ಅಗತ್ಯವಾದಲ್ಲಿ ಪಕ್ಷ ನಾಯಕನ ವರದಿಯೊಂದಿಗೆ ವಿಷಯವನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೊಪ್ಪಿಸಬಹುದು. ಮದ್ರಾಸಿನ ಹಿಂದಿನ ಮಂಡಲಿಯ ಕೆಲವು ಮಂತ್ರಿಗಳ ಮೇಲಿನ ಆಪಾದನೆಗಳ ಕುರಿತು, ಶ್ರೀ ಶಂಕರರಾವ್ ದೇವ್ರೋರ ವರದಿಯ ಮೇಲಿಂದಲೂ, ಸಾರ್ವಜನಿಕ ಗಮನಕ್ಕೆ ತಳ್ಳಲ್ಪಟ್ಟಿರುವ ಕೆಲವು ದೂರುಗಳು ಮತ್ತು ಆಪಾದನೆಗಳ ಕುರಿತು ಸರಿಯಾದ ಪರಾಮರ್ಶೆ ಅಗತ್ಯವಿರುವುದರಿಂದಲೂ ಕೆಲವು ವಿಷಯಗಳ ಕುರಿತು ಮುಂದಿನ ವಿಚಾರಣೆಯು ಅಗತ್ಯವೆಂದು ಸಮಿತಿಯ ಅಭಿಪ್ರಾಯವಿದೆ. ಆದ್ದರಿಂದ ಅಂತಹ ವಿಚಾರಣೆ ನಡೆಸಲು ಸಮಿತಿಯು ವರ್ಚಸ್ಸುಳ್ಳವರಾದ ಮತ್ತು ನ್ಯಾಯ ನಿಷ್ಣಾತರಿರುವ ಒಬ್ಬ ಅಥವಾ ಹೆಚ್ಚು ಮಂದಿಯನ್ನು ನೇಮಿಸಿಕೊಳ್ಳಲಿಚ್ಛಿಸುತ್ತದೆ. ಈ ಮುಂದಿನ ವಿಚಾರಣೆಯ ಪೂರ್ವ ಪೀಠಿಕೆಯಾಗಿ ಕೆಲವೊಂದು ಕಾರ್ಯಕ್ರಮವಗತ್ಯವಿರುವುದರಿಂದ, ಈ ಕೆಳಗಿನ ಕ್ರಮ ನಿಯಮಗಳಿಗನುಸಾರವಾಗಿ, ಮದ್ರಾಸ್ ಪ್ರಧಾನಿ ಶ್ರೀ ಕುಮಾರಸ್ವಾಮಿ ರಾಜರು ಅಗತ್ಯವುಳ್ಳ ಸರಕಾರೀ ಫೈಲುಗಳು ಮತ್ತು ಕಾಗದ ಪತ್ರಗಳಿಂದಲೂ ಶಾಸನ ಸಭೆಯ ಯಾವನೇ ಸದಸ್ಯನ ಸೂಚನೆಗಳನ್ನಾಧರಿಸಿಯೂ ಮೇಲ್ಗಡೆ ನಮೂದಿಸಿರುವ ಆಪಾದನೆಗಳ ಕುರಿತು ಪರಿಶೋಧನೆ ನಡೆಸತಕ್ಕದ್ದೆಂದು ಸಮಿತಿಯು ಅವರನ್ನು ವಿನಂತಿಸಿಕೊಳ್ಳುತ್ತದೆ. ಹೀಗೆ ಮಾಡುವಾಗ, ಆರೋಪಗಳನ್ನು ಮುಂದಿಟ್ಟವರಿಗೆ ಈ ಆರೋಪಗಳ ಸಂಬಂಧದ ಯಾವುದೇ ವಿಷಯದ ಕಡೆಗೆ ತನ್ನ ಲಕ್ಷ್ಯವನ್ನು ಎಳೆಯಲಾಗುವ ಪೂರ್ಣ ಸ್ವಾತಂತ್ರ್ಯವನ್ನು ಶ್ರೀ ಕುಮಾರಸ್ವಾಮಿ ರಾಜರು ಕೊಡತಕ್ಕದ್ದು. ತಾನು ಸರಕಾರೀ ಪತ್ರಗಳಿಂದ ಅಥವಾ ಬೇರೆ ದಾಖಲೆಗಳಿಂದ ಸಂಗ್ರಹಿಸಿಕೊಂಡ ಸತ್ಯ ಸಂಗತಿಗಳನ್ನು ಆರೋಪಕಾರರಿಗೆ ತಿಳಿಸಿ, ಪ್ರತಿಯೊಂದು ವಿಷಯದ ವಸ್ತುಸ್ಥಿತಿಯನ್ನೊಳಗೊಂಡ ಒಂದು ವರದಿ ತಯಾರಿಸತಕ್ಕದ್ದು. ಅವರು ಮತ್ತು ಆರೋಪಣಾಕರ್ತರೊಳಗೆ ಭಿನ್ನಾಭಿಪ್ರಾಯಗಳೇನಾದರೂ ತೋರಿಬಂದ ಸಂದರ್ಭದಲ್ಲಿ ಅಂತಹ ಭಿನ್ನಾಭಿಪ್ರಾಯಗಳನ್ನೂ ವರದಿಯಲ್ಲಿ ನಮೂದಿಸತಕ್ಕದ್ದು.

ಆಪಾದನೆಗಳ ಪೈಕಿ, ಮುನ್ಸಿಪಾಲಿಟಿಗಳ ರದ್ದತಿಯಂತಹ ಕೆಲವು ವಿಷಯಗಳು ಕೇವಲ ರಾಜಕೀಯ ಸ್ವರೂಪದವುಗಳಿದ್ದು, ಅಂಥವುಗಳ ಕುರಿತು ವಿಚಾರಣೆ ನಡೆಸುವುದು ಸಾಧ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ಪ್ರಾಂತಿಕ ಸರಕಾರಗಳು ತಮ್ಮ ವಿವೇಚನಾನುಸಾರ ನಿರ್ವಹಿಸಬೇಕಾದ ಅನುದಿನದ ಆಡಳಿತೆಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕೈಹಾಕುವಂತಿಲ್ಲ. ಕಾಂಗ್ರೆಸಿನ ಮೂಲತತ್ವಗಳು ಅನುಸರಿಸಲ್ಪಡುವಂತೆ ಮತ್ತು ಆಡಳಿತೆಯು ಸುದೃಢವಾಗಿರುವಂತೆ ನೋಡುವದಷ್ಟೇ ಸಮಿತಿಯ ಕರ್ತವ್ಯ. ಆದ್ದರಿಂದ ರಾಜಕೀಯ ಪ್ರಶ್ನೆಗಳಿಗೆ ಸಂಬಂಧಿಸಿದ ಈ ಮಾದರಿಯ ಯಾವ ವಿಷಯಗಳನ್ನೂ ಪ್ರಧಾನ ಮಂತ್ರಿಗಳು ವಿಚಾರಿಸಬೇಕೆಂದಿಲ್ಲ. ಶ್ರೀ ಟಿ. ಪ್ರಕಾಶಮರು ಮುಂದಿಟ್ಟಿರುವ ಆಪಾದನಾಪಟ್ಟಿಯಲ್ಲಿ ಇಂಥವುಗಳನ್ನು ಗುರುತಿಸಲಾಗಿದೆ, ಪ್ರಥಮತಃ ಇರದಿದ್ದ ಹೊಸ ಆಪಾದನೆಗಳೂ ಈ ಪಟ್ಟಿಯಲ್ಲಿ ಇವೆ. ಇವುಗಳನ್ನು ಕೂಡಾ ವಿಚಾರಿಸತಕ್ಕದ್ದು. ಶ್ರೀ ಟಿ. ಪ್ರಕಾಶಮರಿಗೆ ಅಥವಾ ಆಪಾದನಾಕರ್ತರ ಪರವಾಗಿ ಇವರಿಂದ ನೇಮಿಸಲ್ಪಡುವ ಯಾರಿಗೇನೇ ಆದರೂ, ಸತ್ಯ ಶೋಧನೆಗೆ ಸಹಾಯಕಾರಿಯಾಗಬಲ್ಲ ಮತ್ತು ಗುಪ್ತ ಹಾಗೂ ಅಂತರಂಗಿಕವಲ್ಲದ ಅಗತ್ಯವುಳ್ಳ ಎಲ್ಲಾ ಕಾಗದ ಪತ್ರಗಳನ್ನೂ ಪ್ರಧಾನ ಮಂತ್ರಿಗಳು ತೋರಿಸತಕ್ಕದ್ದು. ಈ ವಿಚಾರಣೆ, ಶೋಧನೆಗಳ ನಂತರ ಪ್ರಧಾನ ಮಂತ್ರಿಗಳು ಸಂಗತಿ ಸಂಗ್ರಹಿತ ವರದಿಯೊಂದನ್ನು ಕಾಂಗ್ರೆಸ್ ಕಾರ್ಯಕಾರಿಗೊಪ್ಪಿಸತಕ್ಕದ್ದು. ಈ ಸಾಧಾರ ವರದಿಯ ಫಲಿತಾಂಶದ ಮೇಲಿಂದ, ಆಪಾದನೆಗಳ ಪೈಕಿ ಸಮಿತಿಯು ಆ ಉದ್ದೇಶಕ್ಕಾಗಿ ನೇಮಿಸಲಿರುವ ವ್ಯಕ್ತಿಯು ಅಥವಾ ವ್ಯಕ್ತಿಗಳ ಪರಿಶೋಧನೆಗಿಲ್ಲವೇ ಅಭಿಪ್ರಾಯಗಳಿಗೆ ಬಿಡಬೇಕಾದ ಆರೋಪಗಳಾವುವು ಎಂಬುದನ್ನು ಸಮಿತಿಯೇ ನಿರ್ಧರಿಸಲಿದೆ. ದೀರ್ಘಾವಧಿಯಿಂದ ಬಾಕಿ ಬೀಳುತ್ತಾ ಬಂದಿರುವ ಈ ವಿಷಯವು ಸಾಧ್ಯವಿದ್ದಷ್ಟು ಕ್ಷಿಪ್ರವಾಗಿ ಮತ್ತು ಪರಿಣಾಮಕಾರಿಯಾಗಿ ತೀರ್ಮಾನಗೊಳ್ಳಬೇಕೆಂದು ಸಮಿತಿಯ ಅಪೇಕ್ಷೆ, ಪ್ರಧಾನ ಮಂತ್ರಿಗಳು ಆಗೋಸ್ತು 15ರೊಳಗೆ ತನ್ನ ವರದಿಯನ್ನು ಕಳುಹಿಸುವರೆಂದು ಸಮಿತಿ ನಂಬುತ್ತದೆ. ಮುಂದಿನ ವಿಚಾರಣೆ ನಡಿಸಿ ತೀರ್ಮಾನಗಳನ್ನೊಪ್ಪಿಸತಕ್ಕವರನ್ನು ನೇಮಿಸುವದರೊಂದಿಗೆ ಈ ಸಂಬಂಧವಾಗಿ ಅಗತ್ಯಬೀಳುವ ಮುಂದಿನ ಕಾರ್ಯಗಳೆಲ್ಲವನ್ನು ಕೈಕೊಳ್ಳುವ ಅಧಿಕಾರಗಳನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಪಂಡಿತ ಜವಾಹಿರಲಾಲ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದರುಳ್ಳ ಉಪ ಸಮಿತಿಗೀಯುತ್ತದೆ.'

ಮದ್ರಾಸ್ ಮಂತ್ರಿಗಳ ಮೇಲಿನ ಆಪಾದನೆಗಳ ತನಿಖೆಗಾಗಿ ಈ ವ್ಯವಸ್ಥೆ

(೧ನೇ ಪುಟದಿಂದ ಮುಂದುವರಿದುದು)

ಸತ್ಯ, ಅಹಿಂಸೆ, ಬಂಧು ಭಾವನಾತತ್ವಗಳನ್ನು ಅಕ್ಷರಶಃ ಅನುಕರಿಸುವುದು ಯಾರಿಂದಾದರೂ ಅಸಾಧ್ಯವಾದರೆ ಅವುಗಳ ಕುರಿತು. ಆಸಕ್ತಿ, ಅಭಿರುಚಿಯುಳ್ಳವರೇ ಖಾದೀಧಾರಿಗಳು, ಗಾಂಧಿಟೋಪಿ ಭೂಷಿತರು ಎಂಬ ನಂಬಿಕೆಯಿದ್ದಿತು; ಆದರೀಗ ಕಾಳಸಂತೆ ಹಸಿವು ಮತ್ತಿತರ ವಿಧದ ವಂಚನಾತೃಷೆಗಳುಳ್ಳ ಹೃದಯ ಶಿರಸ್ಸುಗಳೇ ಈ ಬಿಳಿ ವೇಷಭೂಷಣಗಳೊಳಗಡೆ ಅಡಗಿಕೊಳ್ಳುತ್ತಿರುವಂತೆ ಕಾಣುತ್ತಿದೆ.

ಕಾಮ, ಕ್ರೋಧಾದಿಗಳನ್ನು ಪೂರ್ತಿ ನಿಯಂತ್ರಿಸಿಕೊಳ್ಳುವದು ಯಾರಿಗಾದರೂ ಅಸಾಧ್ಯ, ಅವ್ಯವಹಾರ್ಯವೆಂಬುದು ನಿಜವಾದರೂ ಸನ್ಯಾಸಿಯಾದವರು ಓರ್ವ ಸಂಸಾರಿಗಿಂತ ಅಥವಾ ಸಾಮಾನ್ಯನಿಗಿಂತ ಈ ಮಟ್ಟಿಗೆ ಮೇಲ್ಮಟ್ಟದಲ್ಲಿರಬೇಕಾದುದು ಸ್ವಾಭಾವಿಕ. ಆದರೆ ವ್ಯವಹಾರ್ಯ ಸಭ್ಯತೆ, ರೀತಿ, ನಿಯಮಗಳಿಗೆ ಬೆಲೆ ಕೊಡುವ ಸಾಮಾನ್ಯರು ಅಂಜುವಂತಹ ಆಚರಣೆಗಳಿಗಾದರೂ ಸನ್ಯಾಸಿಗಳು ಅಳುಕುವುದಿಲ್ಲ.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲಿ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್.

ಪಶ್ಚಿಮ ಬಂಗಾಳ ಎಸೆಂಬ್ಲಿಗೆ ಆರು ತಿಂಗಳಲ್ಲಿ ಚುನಾವಣೆ

ಮಾಡಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮತ್ತೊಂದು ಠರಾವಿನ ಮೂಲಕ ಹೀಗೆ ನಿರ್ದೇಶಿಸಿದೆ: 'ಶಾಸನಸಭಾ ಪಕ್ಷದ ಓರ್ವ ಕಾಂಗ್ರೆಸ್ ಸದಸ್ಯನು ಓರ್ವ ಮಂತ್ರಿಯ ಮೇಲಿನ ಅಥವಾ ಇನ್ನೊಬ್ಬ ಸದಸ್ಯನ ಮೇಲಿನ ಅಪಾದನೆಗಳನ್ನು ಇಲ್ಲವೇ ದೂರುಗಳನ್ನು ಬಹಿರಂಗವಾಗಿ ಪ್ರಕಟಿಸುವುದಕ್ಕೆ ಸಮಿತಿಯು ತನ್ನ ಪೂರ್ಣ ಅಸಮ್ಮತಿ ವ್ಯಕ್ತಪಡಿಸುತ್ತದೆ. ಅಂತಹ ವರ್ತನೆಯು ಕಾಂಗ್ರೆಸ್ ಶಿಸ್ತಿಗೆ ವಿರೋಧವಿರುವುದರಿಂದ ಖಂಡನಾರ್ಹವಿದೆ. ಅಂತಹ ಎಲ್ಲಾ ಸಂದರ್ಭಗಳಲ್ಲೂ ಅನುಕರಿಸಬೇಕಾದ ವಿಧಾನಗಳು ಇಷ್ಟರಲ್ಲೇ ಸೂಚಿಸಲ್ಪಟ್ಟಿವೆ.'

ಯೋಗ್ಯ ವಿಧಾನ

ಪಕ್ಷ ನಾಯಕನಾಗಿರುವ ತನ್ನ ಹಕ್ಕು ಪ್ರಕಾರ ತನ್ನ ಪಕ್ಷದೊಳಗಡೆ ಸುಳಿಯುತ್ತಿರುವ ದೂರುಗಳ ಪ್ರಥಮ ತನಿಖೆ ನಡೆಸಲು ತನ್ನನ್ನೇ ಬಿಡತಕ್ಕದ್ದೆಂದು ಮದ್ರಾಸ್ ಪ್ರಧಾನಿ ಶ್ರೀ ಪಿ. ಯಸ್. ಕುಮಾರಸ್ವಾಮಿ ರಾಜರು ಕಾಂಗ್ರೆಸ್ ಸಮಿತಿಯ ಮುಂದೆ ವಾದಿಸಿದುದು ಸರಿಯೆಂದೊಪ್ಪಿಕೊಂಡು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಅವರಿಗೆ ಪ್ರಥಮ ಪರಿಶೀಲನಾಧಿಕಾರವನ್ನು ಕೊಟ್ಟಿದೆ. ಸಮಿತಿಯ ಈ ನಿರ್ಣಯದಿಂದ ಮದ್ರಾಸ್ ಪ್ರಧಾನಿಗಳು ಸಮಾಧಾನಗೊಂಡಿದ್ದಾರೆ.

ಶ್ರೀ ಶಂಕರರಾವ್ ದೇವ್‌ರ ವರದಿಯ ಅಭಿಪ್ರಾಯಗಳನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮನ್ನಿಸಿದಂತೆ ತೋರಿದರೂ ಅವರು ಮಾಡಿದ್ದ ಕೆಲಸವನ್ನೇ ಪುನಃ ಮಾಡಲು ಶ್ರೀ ಕುಮಾರಸ್ವಾಮಿ ರಾಜರಿಗೆ ಕೊಟ್ಟುದರಿಂದ ಶ್ರೀ ದೇವ್‌ರ ವಿಚಾರಣೆಗೆ ಕ್ರಮಬದ್ಧ ಸ್ಥಾನ ಸಿಕ್ಕಿಲ್ಲವೆನ್ನಬಹುದು. ಇದಕ್ಕೆ ಒಂದು ಕಾರಣ ದೂರಿಟ್ಟವರು ಅವರ ವಿಚಾರಣೆಯಲ್ಲಿ ಸಹಕರಿಸದಿದ್ದುದು. ಮತ್ತೊಂದು ಕಾರಣ ಅಧ್ಯಕ್ಷ ಪಟ್ಟಾಭಿಗಳು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಅಥವಾ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಅನುಮತಿ ಕೇಳಿಕೊಳ್ಳದೆ ಸ್ವತಃ ತಾನೇ ಶ್ರೀ ದೇವ್‌ರನ್ನು ವಿಚಾರಣೆಗೆ ಕಳುಹಿದ್ದುದು. ಡಾ। ಪಟ್ಟಾಭಿಗಳ ಈ ಸ್ವೇಚ್ಛಾ ವರ್ತನೆಯನ್ನು ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಹಲವರು ಖಂಡಿಸಿದ್ದರೆಂದು ತಿಳಿದು ಬರುತ್ತದೆ.

'ಹಿಂದಿನ ಆರೋಪಿತ ಮಂತ್ರಿಗಳೇ ಈಗಲೂ ಮಂತ್ರಿಗಳಾಗಿರುವುದರಿಂದ ಕಾಂಗ್ರೆಸು ಸಮಿತಿಯು 'ಹಿಂದಿನವರ ವಿಚಾರಣೆ'ಯೆಂದಿದನ್ನು ಗಣಿಸಬಾರದು-ಆರೋಪಗಳಿಗೀಡಾಗಿರುವ ಮಂತ್ರಿಗಳನ್ನು ಹೊಸ ಸಮಿತಿಯಲ್ಲಿ ಸೇರಿಸಿಕೊಳ್ಳ ಕೂಡದೆಂದು ನಾನು ಆ ನೇಮಕದ ಹೊತ್ತಿನಲ್ಲೇ ಕಾಂಗ್ರೆಸ್ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಶ್ರೀ ಕುಮಾರಸ್ವಾಮಿ ರಾಜರಿಗೆ ಬರೆದಿದ್ದರೂ ಗೊತ್ತಿದ್ದೇ ಅವರನ್ನು ನೇಮಿಸಿಕೊಳ್ಳಲಾಗಿತ್ತು-ಅದ್ದರಿಂದ ಶ್ರೀ ರಾಜರ ಪ್ರಥಮ ವಿಚಾರಣೆ ನನಗೆ ಸರಿಕಾಣುವದಿಲ್ಲ- — ಹೇಗಿದ್ದರೂ ಸಂಗತಿಯ ಸ್ಪಷ್ಟೀಕರಣಕ್ಕಾಗಿ ಶ್ರೀ ರಾಜರ ಪ್ರಥಮ ವಿಚಾರಣೆಯಲ್ಲಿ ಭಾಗವಹಿಸಲು ನಾನು ಸಿದ್ಧನಿದ್ದೇನೆ— ಅಧ್ಯಕ್ಷ ಪಟ್ಟಾಭಿ ಮತ್ತು ಕಾರ್ಯದರ್ಶಿ ಕಲಾ ವೆಂಕಟರಾಯರು ಮುಂದಿನ ವಿಚಾರಣೆಯಿಂದ ಹಿಂದೆಗೆದು ನಿಂತು ಉಪಸಮಿತಿಯ ಕ್ರಿಯಾರ್ಥಿಗಳಿಗೇನೇ ಎಲ್ಲವನ್ನೂ ಬಿಟ್ಟುಬಿಡಲಿ' ಎಂದು ಶ್ರೀ ಟಿ. ಪ್ರಕಾಶಮರ ವಾದವಿದೆ. ತಪ್ಪಲ್ಲ.

ರಾಜಿಮಾಡಿಸಿ ಹಾಕುವ ಉದ್ದೇಶದಿಂದ ಇಕ್ಕಡೆಯವರನ್ನೂ ಸಮಜಾಯಿಸಿ ಕಾಂಗ್ರೆಸ್ ಘನತೆಯನ್ನು ಉಳಿಸುವ ಪಥವನ್ನು ಕಾರ್ಯಕಾರೀ ಸಮಿತಿ ಹಿಡಿದಿದೆ ಎಂಬುದು ಸ್ಪಷ್ಟ. 'ನ್ಯಾಯಾಧೀಶ ಮಂಡಲಿಯೇ ತೀರ್ಮಾನಿಸಲಿ' ಎಂದು ಶ್ರೀ ಟಿ. ಪ್ರಕಾಶಮ್ ಪಕ್ಷದ ವಾದವಿದ್ದರೆ 'ವರ್ಚಸ್ಸುಳ್ಳವರು ಮತ್ತು ನ್ಯಾಯಬುದ್ಧಿಯುಳ್ಳವರು' ಜನರು ಅಂತಹ ವಿಚಾರಣೆಗಾರಿಕಲ್ಪಡಲಿದ್ದಾರೆ. ಹೀಗಲ್ಲದೆ ಕಾನೂನುಬದ್ಧ ವಿಚಾರಣೆಯೇ ಆಗಬೇಕೆಂದಿದ್ದವರು ಕೋರ್ಟಿಗೇನೇ ಹೋಗಬೇಕಿತ್ತಲ್ಲದೆ ಕಾಂಗ್ರೆಸ್ ಸಮಿತಿಗಲ್ಲ. ಪಕ್ಷನಾಯಕ ಹಾಗೂ ಪ್ರಧಾನ ಮಂತ್ರಿಯಾಗಿರುವವರು ಆಪಾದನೆಮುಂದಿಟ್ಟವರನ್ನು ಕೂಡಿಕೊಂಡು, ಅಗತ್ಯಾನಗತ್ಯ ವಿಷಯಗಳನ್ನು ವಿಂಗಡಿಸಿ, ಕಾಂಗ್ರೆಸ್ ಅಧಿನಾಯಕ ಮಂಡಲಿಗೆ ವರದಿ ಮಾಡಬೇಕಾಗಿರುವುದರಿಂದ ತಮ್ಮ ಪಕ್ಷದೊಳಗಿನ ಪ್ರಶ್ನೆಯಲ್ಲಿ ಕಾಂಗ್ರೆಸ್ ಅಧಿನಾಯಕರು ನೇರಾಗಿ ಕೈಹಾಕಿದರೆಂದು ಆರೋಪಿತ ಮಂತ್ರಿಗಳಾಗಲೀ ಮದ್ರಾಸ್ ಕಾಂಗ್ರೆಸ್ ಶಾಸನ ಸಭಾ ಪಕ್ಷೀಯರಾಗಲೀ ಮನನೋಯಲೆಡೆಯಿಲ್ಲ. ಆ ಮೇಲಾದರೂ ಇಂತಿಂತಹ ವಿಷಯಗಳನ್ನೇ ಪರಿಶೀಲಿಸಿ ತೀರ್ಮಾನಿಸಬೇಕೆಂದು ಹಕ್ಕಿಕೊಂಡು ತೀರ್ಮಾನ ಕರ್ತರ ಮುಂದಿಡುವ ಅಧಿಕಾರ ನೆಹರು-ವಲ್ಲಭಾಯಿ-ರಾಜೇಂದ್ರ ಸಮಿತಿಯದೇ. ಇಷ್ಟೂ ಬಹಿರಂಗವಾಗಿರುವ ದೂರು ಆಪಾದನೆಗಳ ಕುರಿತು ಇಂತಹ ವಿಚಾರಣೆಯೂ ಬೇಡವೆಂದು ಆಪಾದಿತರಾದರೂ ಹೇಳಲಾರರು. ಹೇಳುವಂತಿದ್ದರೆ ಅಂಥವರು ಕೂಡಲೇ ರಾಜೀನಾಮೆ ಕೊಡುವುದು ಹಿತ. ಯಾಕಂದರೆ, ಅವರನ್ನುವ 'ಅನ್ಯೋದ್ದೇಶಗಳಿಗಾಗಿಯೇ' ಇಷ್ಟು ಪ್ರಚಾರವಾಗಿರುವ ಅಪವಾದಗಳನ್ನು ತೊಳೆಯಿಸಿಕೊಂಡು ನಿರ್ಮಲವಾಗಿ, ನಿಶ್ಚಿಂತೆಯಿಂದ ಇರಲು ಅಪಾದಿತ ಮಂತ್ರಿಗಳಿಗೆ ಇದಕ್ಕಿಂತ ಉತ್ತಮವಾದ ಬೇರೆ ಹಾದಿ ಇಲ್ಲ. ಆರೋಪಿಗಳಲ್ಲೊಬ್ಬರಾದ ಶ್ರೀ ಕಲಾ ವೆಂಕಟರಾಯರು 'ರಾಜಕೀಯ ಸ್ವರೂಪದವುಗಳ ತನಿಖೆಯಿಲ್ಲ' ಎಂಬ ಸೂತ್ರದಂತೆ ಇಷ್ಟರಲ್ಲೇ ನಿರ್ಲಿಪ್ತರಾಗಿದ್ದಾರೆ.

ಮೇಲಿನ ಕಾರಣಗಳಿಂದಾಗಿ ಮದ್ರಾಸ್ ಸಂಬಂಧದ ಕಾಂಗ್ರೆಸ್ ಸಮಿತಿ ನಿರ್ಣಯವು ಸಂಪೂರ್ಣ ಸರಿ. ಶ್ರೀ ರಾಜಾ ಮತ್ತು ಶ್ರೀ ಪ್ರಕಾಶಮರು ರೆಕಾರ್ಡುಗಳ ಜತೆ ಶೋಧನೆಗೆ ಕುಳಿತಲ್ಲಿಯೇ ಹೃದಯ ಶೋಧನೆಯನ್ನೂ ಮಾಡಿಕೊಂಡು ಸ್ವತಃ ಒಂದಾದರೆ ಅದುದೆಲ್ಲವೂ ಸಾರ್ಥಕವೇ!

ಬಂಗಾಳದ ಕುರಿತು

ಪಶ್ಚಿಮ ಬಂಗಾಳದ ಸರಕಾರೀ ಮತ್ತು ಕಾಂಗ್ರೆಸ್ ರಂಗಗಳಲ್ಲಿ ವ್ಯಾಪಿಸಿರುವ ದುಸ್ಥಿತಿ ನಿವಾರಣೆಗಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮಾಡಿರುವ ನಿರ್ಣಯದ ಸಾರ ಹೀಗಿದೆ:—

'ಕಲ್ಕತ್ತದಲ್ಲಿದ್ದು ಬಂದ ಪಂಡಿತ ನೆಹರುಗಳು ಪಶ್ಚಿಮ ಬಂಗಾಳದ ಪರಿಸ್ಥಿತಿಯ ಕುರಿತು ತನ್ನ ಪ್ರತ್ಯಕ್ಷಾನುಭವದ ವರದಿಯನ್ನೊಪ್ಪಿಸಿದ್ದರು. ಸಂಬಂಧಪಟ್ಟ ಎಲ್ಲರೊಡನೆ ಮಾತಾಡಿ, ಎಲ್ಲವುಗಳನ್ನೂ ಪರಿಶೀಲಿಸಿದ ಆಧಾರದ ಮೇಲಿಂದ ಪಶ್ಚಿಮ ಬಂಗಾಳ ಎಸೆಂಬ್ಲಿಗೂ ಪಶ್ಚಿಮ ಬಂಗಾಳ ಕಾಂಗ್ರೆಸಿಗೂ ಹೊಸ ಚುನಾವಣೆಗಳನ್ನು ನಡೆಸಿ, ಆ ಮೂಲಕ ಜನತೆಯು ತಮ್ಮಿಚ್ಛೆಯವರನ್ನಾರಿಸಿಕೊಳ್ಳುವಂತೆ ಮಾಡುವದು ಅಪೇಕ್ಷಣೀಯವೆಂಬ ಅಭಿಪ್ರಾಯಕ್ಕೆ ಸಮಿತಿ ಬಂದಿದೆ. ಪ್ರಾಯಸ್ಥರ ಮತದಾರಯಾದಿ ತಯಾರಿ ಮತ್ತಿತರ ವ್ಯವಸ್ಥೆಗಳು 1950ನೇ ಅಂತ್ಯದೊಳಗೆ ಮುಗಿಯುವಂತಹವಲ್ಲವಾದ್ದರಿಂದ, ಹೊಸ ಘಟನೆಯನ್ನಾಧರಿಸಿ ಪ್ರಾಯಸ್ಥರೆಲ್ಲರ ಮತದಾನದಿಂದ ನಡೆವ ಚುನಾವಣೆಯು 1950ರ ಅಂತ್ಯ ಅಥವಾ 1951ರ ಆದಿಭಾಗದಲ್ಲೇ ನಡೆಯಲು ಸಾಧ್ಯವಿದೆ. ಹೀಗಾಗಿ 1950ರ ಒಳಗೆ ನಡೆಯುವ ಯಾವುದೇ ಪ್ರಾಂತಿಕ ಎಸೆಂಬ್ಲಿ ಚುನಾವಣೆಯಾದರೂ 1935ನೇ ಭಾರತ ಸರಕಾರೀ ಶಾಸನದನ್ವಯ ಮತ್ತು ಪ್ರಚಲಿತ ಮತದಾರ ಯಾದಿಯಂತೆಯೇ ನಡೆಯಬೇಕಾದುದು ಅನಿವಾರ್ಯ. ಕಾಂಗ್ರೆಸ್ ಸಂಸ್ಥೆಯ ಮಟ್ಟಿಗೂ ಇದೇ ಸ್ಥಿತಿ. ಹೊಸಯಾದಿಗಳು ತಯಾರಾಗಿಕೊಳ್ಳದೆ, ಪ್ರಾಥಮಿಕ ಸಮಿತಿಗಳ ಮುಖಾಂತರದ ಮೇಲ್ಮಟ್ಟದ ಸಂಘಟನೆ ಕಷ್ಟವಿದೆ. ಹಳೇ ಯಾದಿಗಳ ಕಾಲಮೀರಿ ಹೋಗಿದೆಯಲ್ಲದೆ ಕೆಲವೆಡೆ ಅವು ದೊರೆಯುವಂತೆಯೂ ಇಲ್ಲ. ಆದ್ದರಿಂದ ಕಾಂಗ್ರೆಸ್ ಕಮಿಟಿಯ ಸೂಚನೆಗಳೆಂದರೆ:—1935ನೇ ಭಾರತ ಶಾಸನದನ್ವಯ ಇಂದಿನಿಂದ ಆರು ತಿಂಗಳುಗಳೊಳಗೆ ಪಶ್ಚಿಮ ಬಂಗಾಳಾ ಎಸೆಂಬ್ಲಿಗೆ ಹೊಸ ಚುನಾವಣೆಗಳಾಗಬೇಕು. ಇದಕ್ಕನುಗುಣವಾಗಿ ಈಗಿನ ಪಶ್ಚಿಮ ಬಂಗಾಳ ಎಸೆಂಬ್ಲಿಯು ಸಕಾಲದಲ್ಲಿ ವಿಸರ್ಜನೆಗೊಳ್ಳಬೇಕು. ಸಾಧ್ಯವಿದ್ದರೆ ಈ ಚುನಾವಣೆಯು, ಸ್ಥಾನಗಳನ್ನು ಕಾದಿಟ್ಟ ಸಂಯುಕ್ತ ಮತದಾನ ಪದ್ಧತಿಯಿಂದ ನಡೆಯಬೇಕು. ಇದು ಅಶಕ್ಯ ಮತ್ತು ವಿಳಂಬಕ್ಕೆ ಕಾರಣವೆಂದಾದರೆ ಪ್ರಚಲಿತ ಪದ್ಧತಿಯನ್ನೇ ಅನುಸರಿಸತಕ್ಕದ್ದು. ಪೂರ್ವ ಬಂಗಾಳದಲ್ಲಿ ಮತದಾರರಾಗಿದ್ದು, ಪೂರ್ವ ಪಾಕಿಸ್ತಾನದಿಂದ ಬಂದು ಇಲ್ಲಿ ಶಾಶ್ವತವಾಗಿ ನೆಲಸಿರುವ ಮತ್ತು ಕೊನೆಯಪಕ್ಷ ಆರು ತಿಂಗಳ ನಿವಾಸ ಯೋಗ್ಯತೆಗಳಿರುವ ನಿರಾಶ್ರಿತರನ್ನು ಮತದಾರರಾಗಿ ಸೇರಿಸಿಕೊಳ್ಳುವ ಮೂಲಕ ಪ್ರಚಲಿತ ಮತದಾರ ಯಾದಿಯನ್ನು ಸಾಧ್ಯವಿದ್ದಷ್ಟು ದುರಸ್ತಿ ಪಡಿಸಿಕೊಳ್ಳಬೇಕು. ಎಸೆಂಬ್ಲಿಯ ಸಾರ್ವತ್ರಿಕ ಚುನಾವಣೆ ನಡೆಯುವ ವರೆಗಿನ ಅವಧಿಗಾಗಿ ನಡುಗಾಲ ಮಂತ್ರಿಮಂಡಲವೊಂದನ್ನು ರಚಿಸಿಕೊಳ್ಳಬೇಕಾದುದು ಅಗತ್ಯ. ಇಂತಹ ಮಂತ್ರಿಮಂಡಲವು ದೊರೆವ ಉತ್ತಮ ಪ್ರತಿಭಾವಂತರಿಂದ ಕೂಡಿರಬೇಕಲ್ಲದೆ, ಪ್ರಕೃತ ಪ. ಬಂಗಾಳಾ ಎಸೆಂಬ್ಲಿ ಸದಸ್ಯರಾಗಿರದವರನ್ನೂ ಒಳಗೊಂಡಿರಬಹುದು. ಈ ಸಂಬಂಧದ ಯಾವುದೇ ಸೂಚನೆಗಳನ್ನಾದರೂ ಪಶ್ಚಿಮ ಬಂಗಾಳಾ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷವು ಪರ್ಯಾಲೋಚನೆಗಾಗಿ ಪಾರ್ಲಿಮೆಂಟರೀ ಬೋರ್ಡಿಗೆ ರವಾನಿಸಬಹುದು. ನಿಯೋಜಿತ ಸಾರ್ವತ್ರಿಕ ಚುನಾವಣೆಯ ಕಾರಣದಿಂದ ಈಗ ಉಳಿದಿರುವ ಉಪಚುನಾವಣೆಗಳು ನಡೆಯಬೇಕಾಗಿಲ್ಲ. ಎಸೆಂಬ್ಲಿಯಂತೆಯೇ ಪಶ್ಚಿ

ಭಾರತದ ಸ್ವಾತಂತ್ರ್ಯವು ರಕ್ತಪಾತವಿಲ್ಲದೆ ಗಳಿಸಲ್ಪಟ್ಟಿತು.

ಇದು ಜಾಗತಿಕ ಇತಿಹಾಸದಲ್ಲೊಂದು ಅಪೂರ್ವಘಟನೆ.

ಮದ್ಯಪಾನಕ್ಕೆದುರಾಗಿ

ನಮ್ಮ ಹೋರಾಟವೂ ಅದರಂತೆಯೇ.

ಈ ಜಾಹೀರಾತಿನ ಸ್ಥಳ:—

ಕೆನರಾ ಬೇಂಕ್, ಲಿಮಿಟೆಡ್.

ಇದರ ಸೇವಾದಾನ.

ಬೇಕು

ಎಲ್ಲೆಲ್ಲಿಯೂ ಉತ್ಸಾಹೀ ಸಮರ್ಥ ಏಜಂಟರು ಬೇಕಾಗಿದ್ದಾರೆ.

ಸರಿಯಾಗಿ ಕೆಲಸ ಮಾಡುವವರು ತಿಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು.

ವಿವರಕ್ಕೆ ಬರೆಯಿರಿ:

ಬಿ. ವಾಮನಾಚಾರ್,
ಬಿ.ಎ.ಬಿ.ಎಲ್.,ಬಿ.ಟಿ.
ಮೆನೇಜರ್,

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿ., ಉಡುಪಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs. 25,00,000.
Capital Issued & Subscribed	Rs. 20,00,000.
Capital Paid Up.	Rs 19,99,800.
Reserves	Rs. 8,91,000.

Banking business of every description transacted.

ಗುರುವಾರ, ಉಡುಪಿ, ೪-೮-೪೯

ಜನಜಾಗ್ರತಿ ನಡೆಸಲಿ

ಹೊಸ ಘಟನೆಯನ್ವಯ ರಾಜ್ಯಭಾರ ನಿರ್ವಹಿಸುವ ಜವಾಬ್ದಾರಿಯು ಸಾರ್ವಜನಿಕರಿಗೆ ವಹಿಸಲ್ಪಟ್ಟಂತೆ, ಬೌದ್ಧಿಕ ಶಿಕ್ಷಣ ಪ್ರಚಾರವಾಗಬೇಕಾದುದು ಅಗತ್ಯವೆಂದು ಈ ಮೊದಲು ಹಲವು ಬಾರಿ ಹೇಳಿದ್ದುದನ್ನೇ ಈಗ ಪುನಃ ನೆನಪು ಮಾಡಬೇಕಾಗಿದೆ. ಪ್ರಾಯಪ್ರಬುದ್ಧ ಮತದಾರರನ್ನೆಲ್ಲಾ ಬುದ್ಧಿಪ್ರಬುದ್ಧರನ್ನಾಗಿ ಮಾರ್ಪಡಿಸಿಕೊಳ್ಳದಿದ್ದರೆ, ನವರಾಜ್ಯ ಶಾಸನದನ್ವಯ ನಡೆಯುವ ಚುನಾವಣೆಯಾದರೂ ಪ್ರಗತಿ ಚಿಂತಕರ ಬಯಕೆಯನ್ನು ಈಡೇರಿಸೀತು ಎಂದು ನಿರೀಕ್ಷಿಸುವದು ಅಸಾಧ್ಯ. ಜನರ ನಡುವೆ ಯಾವುದೇ ರೀತಿಯ ವರ್ಚಸ್ಸು ಬೀರಿದವರು ಅಥವಾ ಅಂಕುಶ ಹಿಡಿದು ಆಳುತ್ತಿದ್ದವರೇ ಹಿಂದಿನ ಚುನಾವಣೆಗಳಲ್ಲಿ ಮತದಾರರ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದರು. ಮತದಾನದ ಹಕ್ಕು ಕ್ರಮಶಃ ವಿಸ್ತರಿಸುತ್ತಾ ಬಂದಿದೆ. ಅದೊಂದು ಮಿತಿಯ ಕರಕಂದಾಯ ಕೊಡುವವರಿಗೆ ಮಾತ್ರವಿದ್ದ ಆ ಅಧಿಕಾರವು ಓದು ಬರಹ ಬಲ್ಲ ಎಲ್ಲರ ಪಾಲಿಗೂ ಈ ಮೊದಲೇ ಬಂದಿದ್ದಿತು. ಆದರೂ ಹಿಂದಿನಂತೆಯೇ ಬೇರೆಲ್ಲಾ ಯೋಗ್ಯತೆಗಳಿಗಿಂತ ಹೆಚ್ಚಾಗಿ ಶ್ರೀಮಂತರೆಂಬ ಕಾರಣದಿಂದಲೇ ಪ್ರತಿನಿಧಿಗಳಾಗಿ ಆರಿಸಲ್ಪಟ್ಟವರು ಹೆಚ್ಚಿಗೆ. ಪರಿಸ್ಥಿತಿ ಹೇಗಿದೆ ಎಂಬುದನ್ನು ಈ ವಿದ್ಯಮಾನದಿಂದಲೇ ಅರಿತುಕೊಳ್ಳಬಹುದು. ಮತಾಧಿಕಾರವಿರುವ ಬರಹಬಲ್ಲ ವರ್ಗದವರೂ ಶ್ರೀಮಂತ ಪಕ್ಷಪಾತಿಗಳೆಂದು ಇದರ ಅರ್ಥವೇ? ಸಿರಿವಂತಿಕೆಯೇ ಮೇಲ್ದರ್ಜೆಯೆಂಬ ಭಾವನೆ ಮಾತ್ರವಲ್ಲ, ಹಣದ ಪ್ರಭಾವವೇ ಸರ್ವ ವಿಜಯಿಯಾಗಿರುವ ವಾತಾವರಣದಲ್ಲಿ, ಅಂತಹ ಆಢ್ಯತೆಯಿರುವವರು ಮತದಾರರನ್ನು ಬೇಕಾದಂತೆ ಆಡಿಸಬಲ್ಲರೆಂಬುದೇ ಇದರ ಸ್ಪಷ್ಟಾರ್ಥ. ನವರಾಜ್ಯ ಶಾಸನದನ್ವಯ ಪ್ರಾಯಸ್ಥರೆಲ್ಲರಿಗೂ ಮತಾಧಿಕಾರ ಬರಲಿದೆ; ಆ ಸಂಬಂಧವಾಗಿ ಮತದಾರರ ಹೆಸರು ದಾಖಲಾತಿ ಕಾರ್ಯಗಳಾಗಿವೆ; ಮತದಾರ ಪಟ್ಟಿ ತಯಾರಿಯಲ್ಲಿದೆ. ಇದುವರೆಗೆ ತಿಳಿದು ಬಂದ ಅಂದಾಜಿನಂತೆ ಈ ವರೆಗಿನ ಬರೆಹ ಬಲ್ಲ ಮತದಾರರಿಗಿಂತ ಇನ್ನು ಮುಂದಿನ ಪ್ರಾಯಪ್ರಬುದ್ಧ ಮತದಾರರ ಸಂಖ್ಯೆ ಇಮ್ಮಡಿ, ಮುಮ್ಮಡಿಯೇರಲಿದೆ. ಗೃಹಾಡಳಿತೆಯ ಹೊಣೆ ಹೊರುವ ಪ್ರಾಯಕ್ಕೆ ಬಂದವರಿಗೆಲ್ಲಾ ರಾಜ್ಯಾಡಳಿತ ಸಂಬಂಧದ ಹೊಣೆ ಹೊರುವ ಹಕ್ಕೂ ಬರುತ್ತಿದೆ. ಈ ವಿಸ್ತರಣೆಯಿಂದಾದರೂ ಧನಾಢ್ಯರ ಆಟ ನಡೆಯದಂತಾಗುವದೆಂದು ನಿರೀಕ್ಷಿಸಬಹುದೇ? ಬಡಜನ ಪಕ್ಷಪಾತಿಗಳೆಂಬ ಬಿಲ್ಲೆ ಹಚ್ಚಿಕೊಂಡು, ವಸ್ತುಸ್ಥಿತಿಯನ್ನರಿಯದೆ ಆಟವಾಡುತ್ತಿರುವ ಕೆಲವು ಪಕ್ಷ ಪಂಗಡಿಗರಲ್ಲಿ ಈ ಆಶೆಯಿರುವಂತಿದೆ. ಆದರಿಂಥವರು ನಿಜಕ್ಕೂ ಬಿಸಿಲ್ಗುದುರೆಯ ಬೆನ್ನು ಹತ್ತಿದ್ದಾರೆ. 'ಪ್ರಾಯಸ್ಥರೆಲ್ಲರಿಗೆ ಮತಾಧಿಕಾರ'ವೆಂದರೆ ಜನಸಾಮಾನ್ಯರಿಗೆ-ಅತ್ಯಧಿಕ ಸಂಖ್ಯಾಕ ಬಡವರ ವರ್ಗಕ್ಕೆ-ಸಂಖ್ಯಾಮಾನದ ಮೇಲಿಂದ ಹೆಚ್ಚಿನ ಅಧಿಕಾರ ಬಂದಂತೆ; ಆದ್ದರಿಂದ ಇನ್ನು ಮುಂದೆ ಬಡಜನೋದ್ಧಾರಕರು ಹಾಗೂ ಸಾರ್ವಜನಿಕ ಕಾರ್ಯಾಸಕ್ತರೇ ಆರಿಸಿ ಬರುವರು ಎಂದು ನಿರೀಕ್ಷಿಸುವುದು ಕೇವಲ ಭ್ರಾಂತಿ. ಇದು ವರೆಗಿನ ಮತದಾರ ವರ್ಗವು ಯಾವ ಕಾರಣಗಳಿಂದಾಗಿ ಯಾವ ಶ್ರೀಮಂತವರ್ಗದವರ ಕೈಗೊಂಬೆಯಾಗಿದ್ದಿತೋ, ಆ ಕಾರಣಗಳಿಂದಾಗಿಯೇ ಅದೇ ಶ್ರೀಮಂತ ವರ್ಗದವರ ಬಲೆಯೊಳಗೆ ಇನ್ನು ಮುಂದಿನ ವಿಸ್ತೃತ ಮತದಾರ ವರ್ಗವು ಇನ್ನಷ್ಟು ಸುಲಭದಲ್ಲಿ ಬೀಳಲಿದೆ. ಹಾಗಾಗದಿರಬೇಕಾದರೆ ಜನಜಾಗ್ರತಿಯುಂಟುಮಾಡಬೇಕು. ಬಡಜನ ವರ್ಗದ ನಿಸ್ಸಹಾಯಕ ದುಃಸ್ಥಿತಿಗಳನ್ನು ಕೂಡಲೇ ನಿವಾರಿಸುವುದು ಅಸಾಧ್ಯವಾದರೂ, ಅವರು ಶ್ರೀಮಂತ ವರ್ಗದ ಬೆನ್ನ ಹಿಂದೆ ನಿಲ್ಲಲು ಆ ದುಸ್ಥಿತಿಯೇ ಕಾರಣವಲ್ಲವೆಂಬುದನ್ನು ತಿಳಿದಿರಬೇಕು. ಧನಾಢ್ಯರ ಅಜ್ಞಾಧೀನವಾಗಿ ವರ್ತಿಸಿ ತಮ್ಮ ಅಡಚಣೆಗಳನ್ನು ನಿವಾರಿಸಿಕೊಳ್ಳುವುದಸಾಧ್ಯವೆಂಬ ಅನುಭವವು ಬಡವರಿಗೆ ತಮ್ಮ ನಿತ್ಯ ಜೀವನದಲ್ಲಾಗುತ್ತಿದೆ. ಆದರೆ ತಾವು ಕೊಡುವ ವೋಟಿನ ಬೆಲೆಯೇನೆಂಬುದನ್ನರಿಯದ ದೆಸೆಯಿಂದಲೇ ಅವನ್ನು ಒತ್ತಾಯಕ್ಕಾಗಿ ಅಥವಾ ಹಂಗು ದಾಕ್ಷಿಣ್ಯಗಳಿಗೋಸ್ಕರವಾಗಿ ಅದನ್ನತ್ತ ಎಸೆದು ಬಿಟ್ಟು 'ಒಂದು ತಂಟೆಯಿಂದ ಹೇಗೂ ತಪ್ಪಿಸಿ'ಕೊಳ್ಳುತ್ತಿದ್ದಾರೆ. ಈರೀತಿ ಜನಸಾಮಾನ್ಯರಲ್ಲಿರುವ ಅಜ್ಞಾನ ಮತ್ತು ಮನೋದೌರ್ಬಲ್ಯದಿಂದಾಗಿಯೇ ಅವರ ಮತಾಧಿಕಾರವು ದುರ್ವಿನಿಯೋಗವಾಗುತ್ತಿದೆ. ಇದೇ ಪರಿಸ್ಥಿತಿ ರಿಪಬ್ಲಿಕ್ ಭಾರತದ ನವರಾಜ್ಯ ಶಾಸನದನ್ವಯ ನಡೆಯುವ ಮಹಾ ಚುನಾವಣೆಯ ಕಾಲದಲ್ಲೂ ಉಳಿದುಕೊಂಡರೆ ಭಾರತಕ್ಕೆ ಭವ್ಯಭವಿಷ್ಯವಾದರೂ ಎಲ್ಲಿಂದ?

ಆದ್ದರಿಂದ ಸಾರ್ವಜನಿಕ ಕಾರ್ಯಕರ್ತರು, ಮುಖ್ಯವಾಗಿ ಕಾಂಗ್ರೆಸ್ ಕೆಲಸಗಾರರು ಜನಸಾಮಾನ್ಯರಿಗೆ ಬೌದ್ಧಿಕ ಶಿಕ್ಷಣಕೊಡುವ ಕಾರ್ಯವನ್ನೀಗ ಅವಿಶ್ರಾಂತವಾಗಿ ನಡೆಸಬೇಕು. ತಮಗೆ ಬೇಕಾದ ಸರಕಾರವನ್ನು ತಾವೇ ಕಟ್ಟಿಕೊಳ್ಳುವ, ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ, ಅಧಿಕಾರವೇ ಮತಾಧಿಕಾರ—ತಮ್ಮ ಹಿತ ಸಾಧಿಸಬಲ್ಲ ಯೋಗ್ಯತೆ ಮತ್ತು ಆಸಕ್ತಿಯುಳ್ಳವರಿಗಲ್ಲದೆ ಯಾವುದೇ ರೀತಿಯ ಸ್ವಾರ್ಥಸಾಧಕರಿಗೆ ಕೊಟ್ಟ ಮತವೂ ತಮ್ಮ ಹೊಟ್ಟೆಗೆ ತಾವೇ ಹಾಕಿಕೊಳ್ಳುವ ಚೂರಿಯಂತೆ—ಎಂಬ ವಿಷಯವು ಪ್ರಾಯಸ್ಥರೆಲ್ಲರಿಗೂ ಮನದಟ್ಟಾಗುವಂತೆ ಸಾಧ್ಯವಿರುವ ಎಲ್ಲಾ ವಿಧಾನಗಳಿಂದಲೂ ಹಳ್ಳಿ ಹಳ್ಳಿ, ಮನೆ ಮನೆ ಪ್ರಚಾರವಾಗಬೇಕು. ಮುಂದಿನ ಜಿಲ್ಲಾಬೋರ್ಡು ಚುನಾವಣಾ ಪ್ರಚಾರ ಮತ್ತಿತರ ಸಂದರ್ಭಗಳಲ್ಲಿ ಈ ಮಾದರಿಯ ಜನಜಾಗ್ರತಿ ನಿರ್ಮಿಸಲು ತಪ್ಪಬಾರದು. ಕಾಂಗ್ರೆಸ್ ಕಾರ್ಯಕರ್ತರು ಇತ್ತ ಗಮನಕೊಡುವರೆ?

ಬೇಸಾಯಗಾರರ ಕರ್ತವ್ಯ

ಮದ್ರಾಸ್ ಮಂತ್ರಿಗಳ ಮಾತು

ಜುಲಾಯಿ ತಾ. 30ರಲ್ಲಿ ಕೊಯಮುತ್ತೂರಿನ 32ನೇ ಬೇಸಾಯ ಕಾಲೇಜು ವರ್ಧಂತಿ ಮತ್ತು ಪರಿಷತ್ತನ್ನು ಉದ್ಘಾಟಿಸುತ್ತಾ ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ ಪಿ. ಯಸ್. ಕುಮಾರಸ್ವಾಮಿ ರಾಜರೂ, ಅಲ್ಲಿಯ ಬೇಸಾಯ ಪ್ರದರ್ಶನವನ್ನು ಉದ್ಘಾಟಿಸುತ್ತಾ ಮದ್ರಾಸಿನ ಬೇಸಾಯ ಮಂತ್ರಿ ಶ್ರೀ ಎ. ಬಿ. ಸೆಟ್ಟಿಯರೂ ಸಾಗುವಳಿ ಮತ್ತು ಸಾಗುವಳೀದಾರರ ಪ್ರಾಮುಖ್ಯತೆ, ಸರಕಾರದ ಧೋರಣೆ ಮತ್ತು ಬೇಸಾಯಗಾರರ ಕರ್ತವ್ಯಗಳ ಕುರಿತು ಮನನೀಯ ಮಾತುಗಳನ್ನಾಡಿದ್ದಾರೆ. ಅವುಗಳ ಕೆಲವಂಶ ಇಲ್ಲಿದೆ:-

ಪ್ರಧಾನ ಮಂತ್ರಿಗಳ ಮಾತು

ಶ್ರೀ ಪಿ. ಯಸ್. ಕುಮಾರ ಸ್ವಾಮಿ ರಾಜರು ತಮ್ಮ ಭಾಷಣದಲ್ಲೆಂದರು: "ಬೇಸಾಯವು ಆದಿ ಕಾಲದಿಂದಲೂ ಈ ದೇಶದ ಜನತೆಯ ಮುಖ್ಯೋದ್ಯಮವಾಗಿದ್ದು ಬಂದಿದೆ. ಈಗ ಕೂಡಾ ನಮ್ಮ ರಾಷ್ಟ್ರಾಭಿವೃದ್ಧಿಯ ಬೆಂಗೋಲು ಬೇಸಾಯವೇ. ಲೋಕದ ಕೆಲವು ಮುಖ್ಯರಾಷ್ಟ್ರಗಳಲ್ಲಿ ನೂತನ ವಿಜ್ಞಾನೋಪಕರಣಗಳ ಮೂಲಕ ನಡೆದಿರುವ ಶಾಸ್ತ್ರೀಯ ಆಧುನಿಕೋದ್ಯಮದ ಅಲೆಗಳು ಭಾರತದ ಮೇಲೆ ಬಹಳವಾಗಿ ಬಡಿದಿಲ್ಲ. ಬೇಸಾಯೋದ್ಯಮ ಸಂಬಂಧದ ದಾಖಲೆಯಾವುದೂ ಐವತ್ತು ವರುಷಗಳಿಗೆ ಮೊದಲಿರದಿದ್ದ ಜಪಾನಿನಂತಹ ರಾಷ್ಟ್ರವು ಆಧುನಿಕ ಹಾಗೂ ಶಾಸ್ತ್ರೀಯ ವಿಧಾನಗಳನ್ನು ಅನುಸರಿಸಿ ಬೇಸಾಯೋದ್ಯಮ ರಂಗದಲ್ಲಿ ಹೇಗೆ ಅಗ್ರಪಂಕ್ತಿ ಹಿಡಿಯಿತೆಂಬುದನ್ನು ನಾವು ಕಾಣುತ್ತಿದ್ದೇವೆ. ನಮ್ಮ ರೈತರು ಆಧುನಿಕ ಮತ್ತು ಶಾಸ್ತ್ರೀಯ ಕ್ರಮಗಳನ್ನನುಸರಿಸಲು ಹಿಂಜರಿಯುತ್ತಿರುವುದು—ಹಣ ಹಾಕುವ ಸಾಮರ್ಥ್ಯ ಅವರಲ್ಲಿಲ್ಲದಿರುವುದು—ಋತುಮಾನಗಳ ವಿರುದ್ಧಗತಿ, ಮತ್ತಿತರ ಕಾರಣಗಳೇ ನಮ್ಮಲ್ಲಿ ಯೋಜನಬದ್ಧ ಬೇಸಾಯಕ್ರಮ ಮತ್ತು ಬೇಸಾಯಾಭಿವೃದ್ಧಿಗೆ ಮುಖ್ಯ ತೊಡಕುಗಳಾಗಿವೆ. ಈ ಖಂಡನಾರ್ಹ ಕಾರಣಗಳೇ ಸರಕಾರಕ್ಕೆ ಕಾರ್ಯ ಪ್ರೇರಣೆಯಿತ್ತಿವೆ. ಜನಹಿತ ಸಾಧಕ ಸರಕಾರವಾವುದೇ ಆದರೂ ಈ ತೊಂದರೆಗಳನ್ನು ನಿರ್ಮೂಲಿಸಿಕೊಂಡು ರಾಷ್ಟ್ರದ ಸಾಮೂಹಿಕ ಸಂಪದಭಿವೃದ್ಧಿಗಾಗಿ ಪ್ರಯತ್ನಿಸದೆ ಕಣ್ಮುಚ್ಚಿ ಕುಳಿತಿರುವಂತಿಲ್ಲ." ಎನ್ನುತ್ತಾ ಪ್ರಧಾನಮಂತ್ರಿಗಳು ಮದ್ರಾಸ್ ಸರಕಾರವು ಕೈಕೊಂಡಿರುವ ಬಾವಿ ಅಗೆತ ಸಹಾಯ ಯೋಜನೆ, ನೀರಾವರಿ ಯೋಜನೆ ಮುಂತಾದವುಗಳನ್ನು ವಿವರಿಸಿದರು. ನಿಯೋಜಿತ 'ಬೇಸಾಯ ಶಾಸನ' [ಕಳೆದ ವಾರ ಪ್ರಕಟವಾಗಿದೆ]ದ ಕುರಿತು ಪ್ರಸ್ತಾಪಿಸುತ್ತಾ ಪ್ರಧಾನಿ ಶ್ರೀ ರಾಜರೆಂದರು: "ಭೂಸಾಗುವಳಿ ಮಾಡುವವರಲ್ಲಿ ಅಧಿಕೋತ್ಪಾದನೆ ಮಾಡುವ ಹುರುಪನ್ನು ನಿರ್ಮಿಸುವದೇ ಈ ಮಸೂದೆಯ ಮುಖ್ಯೋದ್ದೇಶ. ವಿಶೇಷತಃ ತಮ್ಮಾಸ್ತಿ ಬಿಟ್ಟು ದೂರವಿರುವ ಭೂಮಾಲಿಕರ ದೃಷ್ಟಿಯಿಂದಲೂ ಇನ್ನಿತರ ಕಾರಣಗಳಿಂದಲೂ ಈ ಮಸೂದೆಯ ಕೆಲವು ಪ್ರಕರಣಗಳು ಆಕ್ಷೇಪಣೀಯವಾಗಿ ತೋರಬಹುದು. ಆದರೆ ನಮ್ಮ ಜನತೆಯನ್ನು ಉಣ್ಣಿಸುವ ಹಾಗೂ ರಾಷ್ಟ್ರವನ್ನು ಆಹಾರ ಸ್ವಾವಲಂಬಿಗೊಳಿಸುವ ಪ್ರಾಮುಖ್ಯ ಸಮಸ್ಯೆಯನ್ನು ಬಿಡಿಸಿಕೊಳ್ಳುವಾಗ, ಕೆಲವು ವ್ಯಕ್ತಿಗಳ ಹಕ್ಕು ಬಾಧ್ಯತೆಗಳು ಮನ್ನಾ ಹೊಂದುವುದು ಸಹಜ. ನಮ್ಮ ಜನರ ಆರ್ಥಿಕ ದುಸ್ಥಿತಿ ನಿವಾರಣೆಯಾಗಬೇಕು ಮತ್ತು ಕಲ್ಯಾಣವಾಗಬೇಕು ಎಂದು ಮನಸ್ಸಿನಲ್ಲಿದ್ದರೆ, ನಮ್ಮನ್ನಿದಿರಿಸಿರುವ ಆಹಾರ ಪರಿಸ್ಥಿತಿಯ ಕುರಿತು ನಮ್ಮಲ್ಲಿ ಪ್ರತಿಯೊಬ್ಬನೂ ಗಾಢ ಚಿಂತನೆ ನಡೆಸಬೇಕು. ನಾವು ಒಂದು ಅವಧಿ ನಿಶ್ಚೈಸಿಕೊಂಡು, ಅದರೊಳಗೆ

ನವಯುಗದ ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ ನವಯುಗದ 29ನೆ ವರ್ಷವು ಕೊನೆಗೊಂಡು ಸಪ್ಟಂಬರ್ ಆದಿಯಿಂದ 30ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ನವಯುಗದ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ದಯಮಾಡಿ ಸಕಾಲದಲ್ಲಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಅಂತೆಯೇ ಇನ್ನೂ ಚಂದಾ ಹಣ ಬಾಕಿ ಇಟ್ಟುಕೊಂಡಿರುವವರೂ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸುವಂತೆಯೂ ವಿನಂತಿ.

ಮ್ಯಾನೇಜರ್,
ನವಯುಗ, ಉಡುಪಿ

ಸ್ವಾವಲಂಬನಾ ಗುರಿಮುಟ್ಟುವಂತೆ ಮತ್ತು ಆಹಾರದ ಮಟ್ಟಿಗೆ ನಾವು ಸ್ವತಂತ್ರರಾಗುವಂತೆ ಅಧಿಕಾಹಾರೋತ್ಪನ್ನದ ಸರಿಯಾದ ಯೋಜನೆ ಹಾಕಿ ಕೊಂಡು ಮುಂದೊತ್ತಬೇಕು”

ಬೇಸಾಯ ಮಂತ್ರಿಗಳ ಮಾತು

ಬೇಸಾಯ ಮಂತ್ರಿ ಶ್ರೀ ಎ. ಬಿ. ಸೆಟ್ಟರು ತನ್ನ ಭಾಷಣದಲ್ಲಿಂದರು: “ಎಲ್ಲಕ್ಕಿಂತ ಹೆಚ್ಚಾಗಿ ಬೇಸಾಯೀ ರಾಷ್ಟ್ರವಾಗಿರುವ ನಮ್ಮೀ ದೇಶವು ಆಹಾರಾಭಾವಕ್ಕೀಡಾಗಿರುವುದೂ, ರಾಷ್ಟ್ರದ ಭಂಡಾರವನ್ನು ವಿಶೇಷ ರೀತಿಯಿಂದ ಖಾಲಿಮಾಡಿ ವಿದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸಿಕೊಳ್ಳುವ ಅಗತ್ಯಬಿದ್ದಿರುವುದೂ ದುರ್ದೈವವೇ ಸರಿ. ವರುಷಕ್ಕೆ ನಾಲ್ಕು ಮಿಲಿಯದಂತೆ ನಮ್ಮಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯು ಆಹಾರ ಸಂಬರಾಯಿಯ ಪ್ರಶ್ನೆಯನ್ನು ನಮ್ಮ ಪಾಲಿಗೆ ಶಾಶ್ವತಗೊಳಿಸಿದೆ. ದೇಶ ವಿಭಜನೆಯಿಂದಾಗಿ ಪಶ್ಚಿಮ ಪಂಜಾಬು ಮತ್ತು ಸಿಂಧದ ಉಳಿತಾಯದ ಗೋದಿ ಮತ್ತು ಅಕ್ಕಿ ನಮಗೆ ದೊರೆಯದಂತಾಗಿದೆ. ಕೆಲವು ಉತ್ತಮ ನೀರಾವರಿಪ್ರದೇಶಗಳು ಪಾಕಿಸ್ಥಾನದ ಪಾಲಿಗೆ ಸೇರಿ ನಾವು ಹೆಚ್ಚಾಗಿ ಮಳೆಯನ್ನೇ ಆಧರಿಸಿರುವಂತಾಯಿತು. ನಮಗೆ ಅಕ್ಕಿ ರವಾನಿಸುತ್ತಿದ್ದ ಏಶ್ಯಾದ ರಾಷ್ಟ್ರಗಳಲ್ಲಿ ಅಂತರ್ಯುದ್ಧವೆದ್ದು ಅಲ್ಲಿ ಉತ್ಪಾದನೆ ತಗ್ಗಿರುವದು, ಹಿಂಡಿಗೊಬ್ಬರದಂಥವುಗಳ ಮಿಶ್ರಿತರ ಗೊಬ್ಬರಗಳ ಅಭಾವ, ಉಕ್ಕು ಕಬ್ಬಿಣದ ಬೇಸಾಯ ವಸ್ತು ಉಪಕರಣಗಳ ಹಾಗೂ ಗಾಡೀಟಯರುಗಳೇ ಮೊದಲಾದವುಗಳ ಸರಬರಾಯಿ ಸಾಕಷ್ಟಿಲ್ಲದಿರುವದು, ಮತ್ತು ಮೇಲಿಂದ ಮೇಲೆ ಮಳೆಯು ಅಸ್ತವ್ಯಸ್ತಗೊಳ್ಳೊದಗಿ ಬಂದುದು—ಇವೇ ಮುಂತಾದುವು ನಮ್ಮ ಆಹಾರ ಪರಿಸ್ಥಿತಿಯನ್ನು ಮತ್ತಷ್ಟು ಕಳತೆಗೊಳಿಸಲು ಕಾರಣಗಳಾದುವು. ಗವರ್ನರ್ ಸಲಹೆಗಾರ ಆಡಳಿತೆಯಲ್ಲಿ ಆರಂಭಿಸಿದ್ದ ‘ಅಧಿಕಾಹಾರ ಬೆಳೆಸಿರಿ’ ಚಳವಳವು ನಿರೀಕ್ಷಿತ ಪರಿಣಾಮವನ್ನೀಯಲಿಲ್ಲ. ಆ ವೇಳೆ ಈಗಿನ ಜನಪ್ರತಿನಿಧಿ ಸರಕಾರವು ಅಧಿಕೋತ್ಪನ್ನಕ್ಕಾಗಿ ಐದು ವರುಷಗಳ ಯೋಜನೆ ಹಾಕಿಕೊಂಡಿತು. ಅದು ಕೂಡಾ ಈ ತನಕ ನಮ್ಮ ಆಪತ್ತನ್ನು ನಿವಾರಿಸಿಲ್ಲ. ಹೊಸ ನೀರಾವರಿ ಯೋಜನೆಗಳ ಜತೆಯಲ್ಲಿ ಪ್ರಾಂತ್ಯದ ರೈತ್ವಾರೀ ಕ್ಷೇತ್ರಗಳ 25000ದಷ್ಟಿರುವ ಹಾಳುಬಿದ್ದ ನೀರಾವರಿ ಕೆರೆಗಳ ದುರಸ್ತಿಗಾಗಿ ಹಲವು ಕೋಟಿ ರೂಪಾಯಿಗಳ ವೆಚ್ಚವಾಗುವ ಕೆಲಸಗಳನ್ನು ಕೈಕೊಳ್ಳುತ್ತಿದ್ದೇವೆ. ‘ಅಧಿಕಾಹಾರ ಬೆಳೆಸಿರಿ’ ಚಳವಳಾರಂಭದಿಂದ 1949ನೇ ಮಾರ್ಚಿಯವರೆಗೆ ಹೊಸ ಬಾವಿಗಳ ಅಗೆತ ಮತ್ತು ಹಳೆ ಬಾವಿಗಳ ದುರಸ್ತಿಗಾಗಿ 5. 78 ಕೋಟಿ ರೂಪಾಯಿಗಳನ್ನು ಸಹಾಯಧನವಾಗಿ ಕೊಡಲಾಗಿದೆ. ರಾಷ್ಟ್ರವು ಹೊರಗಿನಿಂದ ತರಿಸಿಕೊಳ್ಳುತ್ತಿರುವ ಧಾನ್ಯಗಳಿಗಾಗಿ ಬೀಳುವ ವೆಚ್ಚವು 1946 ರಿಂದ ಬೆಳೆಯುತ್ತಾ ಹೋಗಿದೆ. 1948 ರಲ್ಲಿ 130 ಕೋಟಿ ರೂಪಾಯಿಗಳನ್ನು ತೆತ್ತು 2 8 ಮಿಲಿಯ ಟನ್ನು ಧಾನ್ಯಗಳನ್ನು ಆಮದು ಪಡಿಸಿಕೊಂಡಿದ್ದೆವು. ಈ ವರುಷ 4 ಮಿಲಿಯ ಟನ್ನುಗಳ ಆವಶ್ಯಕತೆ ಬಿದ್ದಿದೆ. ಇದಕ್ಕೆ 175 ಕೋಟಿ ರೂ. ತೆರಬೇಕಾದೀತು. ಇದರಿಂದ ರಾಷ್ಟ್ರದ ಖಜಾನೆಗೆ ದೊಡ್ಡ ಪೆಟ್ಟು ಬೀಳುತ್ತಿದೆ ಆದ್ದರಿಂದಲೇ 1951 ರೊಳಗೆ ರಾಷ್ಟ್ರವನ್ನು ಆಹಾರ ಸ್ವಾವಲಂಬಿಯಾಗಿ ಮಾಡಬೇಕೆಂದು ಸರಕಾರವು 16·78 ಕೋಟಿ ರೂ. ವೆಚ್ಚವಾಗುವ ಯೋಜನೆಗಳನ್ನು ಕೈಕೊಂಡಿದೆ. ಈ ಪೈಕಿ ರೂ. 10.50 ಕೋಟಿಯಷ್ಟು ಪ್ರಾಂತಿಕ ಸರಕಾರಗಳ ಮೇಲೆ ಬೀಳುತ್ತದೆ. ಉಳಿದುದನ್ನು ಕೇಂದ್ರ ಸರಕಾರವು ಹೊರಲಿದೆ. ಈ ಯೋಜನೆಗಳ ಪ್ರಕಾರ 1947-48ರಿಂದ 1950-51ರ ವರೆಗೆ 12 ಲಕ್ಷ ಟನ್ನುಗಳಿಗೆ ಮಿಕ್ಕಿ ಹೆಚ್ಚಿನ ಧಾನ್ಯೋತ್ಪತ್ತಿಯಾದೀತೆಂದು ಅಂದಾಜು”ಎಂದು ವಿವರಿಸುತ್ತಾ ಬೇಸಾಯ ಮಂತ್ರಿಗಳು ಸದ್ಯ ನಮ್ಮ ಬೇಸಾಯ ಪದ್ಧತಿಯಲ್ಲಿರುವ ಕೊರತೆಗಳನ್ನು ಎತ್ತಿಹೇಳಿದರು. “ರಾಷ್ಟ್ರದಲ್ಲೀಗ ಅಂತಹ ಆಹಾರಾಭಾವವೇನೂ ಇಲ್ಲವೆಂದೂ ಇಂದಿನ ತೊಂದರೆಗಳಿಗೆ ಆಹಾರ ನಿಯಂತ್ರಣವೇ ಕಾರಣವೆಂದೂ ಹೇಳುವವರಿದ್ದಾರೆ. ನಿಯಂತ್ರಣವೇ ಬ್ಲೇಕ್ ಮಾರ್ಕೆಟಿಗೆ ಹಾದಿಮಾಡಿಕೊಟ್ಟಿದೆ, ಬೇಸಾಯಗಾರರಲ್ಲಿ ನಿರುತ್ಸಾಹ ನಿರ್ಮಿಸಿದೆ,ಎನ್ನುವವರಿದ್ದಾರೆ. ನಿಯಂತ್ರಣವನ್ನು ಒಂದು ಬಾರಿ ರದ್ದುಪಡಿಸಿ ಇಚ್ಛಿತ ಸತ್ಪರಿಣಾಮವಾಗದಿದ್ದರಿಂದಲೇ ಪುನಃ ಹೇರಿರುವುದರಿಂದ ಈಗ ನಿಯಂತ್ರಣ ರದ್ದತಿಯಾಗುವದು ಅಸಂಭವ ಇಗೇ ತಾ1ಕ್ಕೆ ಢಿಲ್ಲಿಯಲ್ಲಿ ಸೇರುವ ಆಹಾರ ಸಮ್ಮೇಳನದ ಸಭೆಯಲ್ಲಿ ಕ್ರಮಶಃ ನಿಯಂತ್ರಣ ವಿಸರ್ಜನೆಯ ಪ್ರಶ್ನೆಯನ್ನು ಪರಿಶೀಲಿಸಬಹುದು” ಎಂದರು. ರೈತರು ಮಾಡುವ ಉತ್ಪಾದನೆಗಳಿಗೆ ಯೋಗ್ಯ ಬೆಲೆ ದೊರೆಯುವಂತೆ ಮಾಡುವದು ಸರಕಾರದ ಕರ್ತವ್ಯವೆಂಬುದನ್ನು ಒಪ್ಪಿಕೊಂಡು, ಆ ಕುರಿತು ಸರಕಾರವು ಮಾಡುತ್ತಾ ಬಂದಿರುವ ಮತ್ತು ಮಾಡುತ್ತಿರುವ ವ್ಯವಸ್ಥೆಗಳನ್ನು ತಿಳಿಸಿ ಅಧಿಕಾಹಾರೋತ್ಪಾದನಾ ಕಾರ್ಯದಲ್ಲಿ ಪ್ರತಿಯೊಬ್ಬರೂ ಸಹಕರಿಸಬೇಕೆಂದರು.

ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ
‘ಸುಲಭದಲ್ಲಿ ಇಂಗ್ಲಿಷ್’
(ENGLISH MADE EASY)
ಮನೆಯಲ್ಲಿ ಸ್ವಂತವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦
ನವಯುಗ ಪ್ರೆಸ್, ಉಡುಪಿ.

ಜಾಗತಿಕ ವಿದ್ಯಮಾನ

ಲೋಕ ವಿದ್ಯಮಾನಗಳೆಲ್ಲವೂ ಹೆಚ್ಚಿನಂಶ ಯಥಾ ರೀತಿ ಇವೆ. ಈ ಮೊದಲು ಮುಖಮಾಡಿದಲ್ಲಿಂದ ಬೇರೆದಿಕ್ಕಿಗೆ ತಿರುಗುವ ಸುದೈವ ಅಥವಾ ದುರ್ದೈವವು ಪ್ರಪಂಚದ ಯಾವ ಘಟನೆಗೂ ಒದಗಿಲ್ಲ ಆದ್ದರಿಂದ ಹೆಚ್ಚಿಗೇನನ್ನೂ ನಿರೀಕ್ಷಿಸಲಾಗುವದಿಲ್ಲ.

೦೦

ಅಟಂ ಬೋಂಬಿನ ಗುಪ್ತತೆಯ ಕುರಿತು ಕಳದ ವಾರ ಕುಸು ಹೆಚ್ಚಿನ ವಿಚಾರಾಂದೋಲನ ನಡೆದಂತಿದೆ. ಈಗ ಅಟಮ್ ಗುಟ್ಟುಗಳು ಮತ್ತು ಕೆಲವು ಅಟಂ ಬೋಂಬುಗಳು ಇರುವ ರಾಷ್ಟ್ರವೆಂದರೆ ಅಮೇರಿಕ. ಆದರ ತಯಾರಿಯಲ್ಲಿ ಸಹಭಾಗಿಗಳಾಗಿದ್ದ ಬ್ರಿಟಿಷ್ ವೈಜ್ಞಾನಿಕರಿಗೆ ಅವು ಅಪರಿಚಿತವೆಂದಾಗಲೀ ರಶ್ಯವೀ ಗಂಧಗಾಳಿಯಲ್ಲಿಲ್ಲವೆಂದಾಗಲೀ ಅರ್ಥವಲ್ಲವಾದರೂ ಅಟಂ ಬೋಂಬುಗಳುಳ್ಳ ರಾಷ್ಟ್ರವೆಂದರೆ ಅಮೇರಿಕವೆಂದೇ ತೀರ್ಮಾನ. ಈಗ ತಮ್ಮ ಈ ಗುಟ್ಟನ್ನು ಬ್ರಿಟನಿನಂತಹ ಮಿತ್ರ ರಾಷ್ಟ್ರಗಳಿಗೆ ಕೊಡಬಹುದೇ ಎಂಬ ಕುರಿತು ಅಮೇರಿಕದ ಅಧಿಕಾರೀ ಮಂಡಲದೊಳಗೆ ವಿಚಾರ ವಿಮರ್ಶೆ ನಡೆದಿದೆ. ಸಂಯುಕ್ತ ರಾಷ್ಟ್ರ ಸಂಘವು ಈ ಸಂಬಂಧದ ತೀರ್ಮಾನಕ್ಕಾಗಿ ‘ಅಟಾಮಿಕ್ ಎನರ್ಜಿ ಕಮಿಶನ್’ ಒಂದನ್ನು ನೇಮಿಸಿಕೊಂಡಿದ್ದಿತು. ಆದರೆ ಪಂಚ ಮಹಾರಾಷ್ಟ್ರಗಳು ಏಕಾಭಿಪ್ರಾಯಕ್ಕೆಬಾರದಿರುವುದರಿಂದ ಆ ಕಮಿಶನಿನ ಸಭೆಗಳನ್ನು ದುನಿಲ್ಲಿಸಿಕೊಂಡಿದೆ.

ಚೈನದಲ್ಲಿ ಕಮ್ಯೂನಿಸ್ಟ್ ಸೇನಾಪ್ರವಾಹವು ಭರದಿಂದ ಮುಂದೊತ್ತಿ ಹುನಾನ್ ರಾಜಧಾನಿ ಚಾಂಗ್ಶಾದತ್ತ ಧಾವಿಸಿದೆ. ರಾಷ್ಟ್ರೀಯ ಸರಕಾರವು ತನ್ನ ಮುಖ್ಯ ಕಾರ್ಯಾಲಯವಿರುವ ಕೇಂಟನಿನಲ್ಲಿ ಹೋರಾಟ ಕೊಡಬಹುದೆಂದಿದ್ದ ನಿರೀಕ್ಷೆಯು ಹುಸಿಗೊಂಡು, ಅದನ್ನವರು ಖಾಲಿಪಡಿಸಿ ಹಿಂದೆಹೋಗುವ ಸಿದ್ಧತೆಗಳು ತೋರಿಬರುತ್ತಿವೆ “ಚೈನದ ಕಡೆಗಿನ ಧೋರಣೆಯೆಂಬುದೇ ಇಲ್ಲದೆ ಅಧ್ಯಕ್ಷ ಟ್ರುಮೇನರು ಲೋಕ ಶಾಂತಿಯ ಕೀಲಿಕೈಯನ್ನು ಶಾಂತಿ ಸಮುದ್ರದ ಮಧ್ಯಕ್ಕೊಗೆದಿದ್ದಾರೆ’ ಎಂದು ಅಲ್ಲಿಯ ಗವರ್ನರ’ ದಿವೆಯಂಥವರ ಅಭಿಪ್ರಾಯವಿದೆ.

ಪಶ್ಚಿಮ ಯುರೋಪು ರಾಷ್ಟ್ರಗಳಿಗೆ 145,000,000 ಡೋಲರುಗಳ ಮಿಲಿಟರಿ ಸಹಾಯ ಕೊಡುವ ಅಮೇರಿಕದ ಸೂಚನೆಯ ಸಂಬಂಧವಾಗಿ ಸಂಬಂಧಪಟ್ಟ ಸಮಿತಿಯ ಮುಂದೆ ಹೇಳಿಕೆಯೀಯುತ್ತಾ ಅಮೇರಿಕದ ಕಾರ್ಯದರ್ಶಿ ಡೀನ್ ಅಚ್‌ಸನರಂದರು: ‘ಅಮೇರಿಕದ ಭದ್ರತೆಗೆ ಅಗತ್ಯವಿರುವ ಪಶ್ಚಿಮ ಯುರೋಪು ರಾಷ್ಟ್ರಗಳು ಒಂದು ದೊಡ್ಡ ಧಾಳಿಯನ್ನಿದಿರಿಸಿ ನಿಲ್ಲುವಷ್ಟು ಸಶಕ್ತವಾಗಿಲ್ಲ. ಶಾಂತ ಕಾಲದಲ್ಲಿ ಲೋಕ ಚರಿತ್ರೆಯಲ್ಲೇ ಇರದಿದ್ದಷ್ಟು ದೊಡ್ಡ ಸೇನೆಗಳನ್ನು ಸೋವಿಯಟ್ ರಶ್ಯವೀಗ ಇಟ್ಟುಕೊಂಡಿದೆ”

ಇಂಡೋನೇಶಿಯದ ಇತ್ಯರ್ಥ ಸಂಬಂಧವಾಗಿ ಡಚ್ಚರು ಮತ್ತು ಇಂಡೋನೇಶಿಯಾನರೊಳಗೂ ಇಂಡೋನೇಶಿಯದ ರಿಪಬ್ಲಿಕನರು ಮತ್ತು ಫೆಡರಲಿಸ್ಟರೊಳಗೂ ಯೋಗ್ಯ ತೀರ್ಮಾನಗಳಾಗುವ ಕೊನೆಯ ಅಂಕದ ಪ್ರಯತ್ನಗಳು ನಡೆದಿವೆ.

ಇಂಡೋಚೈನದಲ್ಲಿ ಮೇಲಧಿಕಾರಿ ಫ್ರೆಂಚರವಿರುದ್ಧವಾಗಿ ಸ್ವಾತಂತ್ರ್ಯಾಂದೋಲನ ನಡೆದಿದ್ದರೆ ಒಳಗಡೆ ಕಮ್ಯೂನಿಸ್ಟರು ಮತ್ತು ಇತರರೊಳಗೆ ವೈಷಮ್ಯಗಳಿರುವುದರಿಂದಲೂ ಚೈನಾ ಯುದ್ಧಗತಿಯ ದೆಸೆಯಿಂದ ಇಂಡೋನೇಶಿಯದಲ್ಲಿ ಕಮ್ಯೂನಿಸ್ಟ್ ಪ್ರಭಾವ ಬಲಗೊಳ್ಳುತ್ತಿರುವುದರಿಂದಲೂ ಫ್ರೆಂಚ್ ಸರಕಾರವು ಅಲ್ಲಿರುವ ತನ್ನ ಹೈ ಕಮಿಶನರರ ಮೂಲಕ ಶಾಂತಿ ಸೂಚನೆಗಳನ್ನು ಮುಂದಿಟ್ಟಿದೆ.

ಬರ್ಮಾಯುದ್ಧ, ಮತ್ತಿತರ ಸ್ಥಿತಿಗತಿಗಳು ಯಥಾಪ್ರಕಾರವಿವೆ.

೦೦

ಭಾರತದ ಘಟನಾ ಸಮಿತಿಯು ಜುಲಾಯಿ ತಾ 30ರಿಂದ ನವಢಿಲ್ಲಿಯಲ್ಲಿ ಸಭೆ ಸೇರಲಾರಂಭಿಸಿದೆ. ಪ್ರಾಂತ್ಯಗಳಲ್ಲಿ ಮೇಲ್ಮನೆ (ಕೌನ್ಸಿಲು)ಗಳನ್ನು ರಚಿಸುವ ಮತ್ತು ಅವುಗಳಿಗೂ ಎಸೆಂಬ್ಲಿಗಳಿಗೂ ಇರಬೇಕಾದ ಜೋಡಣೆ ಸಂಬಂಧದ—ಪ್ರಾಂತಿಕ ಗವರ್ನರರ ವಿಶೇಷಾಧಿಕಾರ ಸಂಬಂಧದ—ಮತ್ತಿತರ ವಿಭಾಗಗಳ ಚರ್ಚೆಗಳೂ ನಿರ್ಣಯಗಳೂ ಆಗುತ್ತಿವೆ. ಈ ಬಾರಿಯ ಘಟನಾ ಸಮಿತಿ ಸಭೆಯು ಆಗೋಸ್ತು 15ರ ವರೆಗೆ ನಡೆದು ನವಶಾಸನದ ದ್ವಿತೀಯ ವಾಚನವನ್ನು ಮುಗಿಸಿಕೊಳ್ಳುವದೆಂಬ ನಿರೀಕ್ಷೆಯಿದೆ.

ಪಾಕಿಸ್ಥಾನ್ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು ಇದ್ ಹಬ್ಬದ ಚರಣೆಯ ವೇಳೆ ಕರಾಚಿಯಲ್ಲಿ ಭಾಷಣವೀಯುತ್ತಾ, “ಭಾರತದಲ್ಲಿರುವ 35 ಮಿಲಿಯ ಮುಸ್ಲಿಮರು ಇದ್ ಹಬ್ಬವನ್ನು ಸ್ವತಂತ್ರ ಜನತೆಯಾಗಿ ಆಚರಿಸುತ್ತಿಲ್ಲ” ಎಂದರು. ಪಶ್ಚಿಮ ಬಂಗಾಳದ ಗವರ್ನರ್ ಡಾ। ಕಟ್ಜುರವರು ಅದಕ್ಕುತ್ತರವೀಯುತ್ತಾ “ಭಾರತದ ಮುಸ್ಲಿಮರು ಸ್ವತಂತ್ರರಿದ್ದಾರೆ ಮತ್ತು ಕಾನೂನು ಬದ್ಧವಾಗಿ ಯಾವ ಜಾತಿ ಮತ ಧರ್ಮ ವ್ಯತ್ಯಾಸವೂ ಇಲ್ಲದೆ ಇತರರೊಂದಿಗೆ ಸಮಾನತೆಯನ್ನನುಭವಿಸುತಿದ್ದಾರೆ” ಎಂದು ಸ್ಪಷ್ಟಪಡಿಸಿದ್ದಾರೆ. ಮಿ. ಲಿಯಾಖತರ ಅಸಂಬದ್ಧ ಪ್ರಲಾಪವನ್ನು ಖಂಡಿಸುತ್ತಾ ಸರ್ ಮಿರ್ಜಾ ಇಸ್ಮಾಯಿಲರು “ಮಿ ಲಿಯಾಖತರ ಇಂತಹ ದುರ್ದೈವಿ ಹಾಗೂ ಎಳ್ಳಷ್ಟೂ ಅಗತ್ಯವಿಲ್ಲದ ಉದ್ಗಾರವು ಶೋಚನೀಯ. ಭಾರತದಲ್ಲಿರುವ ಮುಸ್ಲಿಮರೊಡನೆ ಇರಾನ್ ಅಥವಾ ಈಜಿಪ್ಟಿನ ಪ್ರಧಾನ ಮಂತ್ರಿಗಿರುವುದಕ್ಕಿಂತ ಹೆಚ್ಚಿನ ಕೆಲಸವೇನೂ ಪಾಕಿಸ್ಥಾನ್ ಪ್ರಧಾನ ಮಂತ್ರಿಗಿಲ್ಲ” ಎಂದಿದ್ದಾರೆ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಉಡುಪಿ.

ಸ್ವಾತಂತ್ರ್ಯ ದಿನಾಚರಣೆ ಸಂಬಂಧ ಇದೇ ತಾ 15ರಲ್ಲಿ ಆಚರಿಸಬೇಕಾದ ಕಾರ್ಯಕ್ರಮಗಳನ್ನು ನಿರ್ಧರಿಸುವರೆ ಕಳೆದ ತಾ 29ರಲ್ಲಿ ವಕೀಲ್ ಶ್ರೀ ಎಮ್. ವಿಠಲ ಕಾಮತರ ಅಧ್ಯಕ್ಷತೆಯಲ್ಲೊಂದು ಸಭೆಯು ಕಾಂಗ್ರೆಸ್ ಕಚೇರಿಯಲ್ಲಿ ಜರಗಿತು. ಸ್ವಾತಂತ್ರ್ಯ ದಿನಾಚರಣೆಯನ್ನು ಯಶಸ್ವಿಗೊಳಿಸುವರೆ ಶ್ರೀಗಳಾದ ಯು. ಎಸ್. ನಾಯಕ್, ನರಹರಿ ಕಾಮತ್, ವಿಠಲಕಾಮತ್, ಶ್ರೀಪತಿ ಆಚಾರ್, ಬಾಲಗಂಗಾಧರನ್, ಶ್ರೀಮತಿ ಇಂದಿರಾ ಬಾಯಿ, ಮಿಸ್, ಮೋನಿಕಾ ಆನಂದ ಮತ್ತು ಸ್ಥಳೀಯ ತಹಶಿಲ್ದಾರ್, ಮುನ್ಸಿಫ್, ಡಿ. ಎಸ್. ಪಿ. ಗಳಿರುವ ಉಪಸಮಿತಿಯು ರಚನೆಯಾಯಿತು.

ಮುನಿಸಿಪಲ್ ಸಭೆಯು ತಾ 30ರಲ್ಲಿ ಚೆಯರ್‌ಮೆನ್ ಶ್ರೀ. ಎ, ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾತಂತ್ರ್ಯ ದಿನಾಚರಣೆಗೆ, ನಡೆಸಿನಡುವ ಸಪ್ತಾಹ ಆಚರಣೆಗೆ ಅಲ್ಪ ಸ್ವಲ್ಪ ಹಣ ಸೆಂಕ್ಷನ್ ಮಾಡಲಾಯಿತು. ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ವಿಕ್ಟೋರಿಯಾ ಜುಬಿಲಿಯೂನಿಯನ್ ಕ್ಲಬ್ ಕಟ್ಟಡವನ್ನು ಬಿಟ್ಟುಕೊಡಲಿರುವುದರಿಂದ ಕ್ಲಬ್ಬಿನ ಉಪಯೋಗಕ್ಕಾಗಿ ಮುನಿಸಿಪಲ್ ಲ್ಯಾಬ್ರೆರಿ ಕಟ್ಟಡವನ್ನು ಬಿಟ್ಟುಕೊಡಬೇಕಾಗಿ ಬರದ ವಿಷಯವನ್ನು ಮುಂದಿನ ಸಭೆಯ ಇತ್ಯರ್ಥಕ್ಕೆ ಬಾಕಿಯಿಡಲಾಯಿತು.

ಉದ್ಘಾಟನೆ—ನವೋದಿತ ಮಾಸಪತ್ರಿಕೆ 'ಪುಷ್ಪ'ದ ಉದ್ಘಾಟನಾ ಸಮಾರಂಭವು ಇದೇ ತಾ 1ನೇ ಪೂರ್ವಾಹ್ನ ಡಾ॥ ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಪತ್ರಿಕೋದ್ಯಮಿಗಳ ಕೂಡುವಿಕೆಯಿಂದ ಜರಗಿತು. ಪತ್ರಿಕೆಯ ಸಂಪಾದಕ ಶ್ರೀ ಯು. ಪ್ರಭಾಕರರಾಯರ ಮುಮುಕ್ತಾಗಳಾದ ಮೇಲೆ ಅಧ್ಯಕ್ಷರು ಸಂದರ್ಭೋಚಿತ ಭಾಷಣದೊಂದಿಗೆ ಉದ್ಘಾಟನೆಮಾಡಿದರು. ಶ್ರೀಗಳಾದ ಕೆ. ವಿ. ಶೆಣೈ, ಬನ್ನಂಜೆ, ಎಂ. ವಿ. ಹೆಗ್ಡೆ, ಪಿ. ಯಸ್. ಸೆಟ್ಟಿ, ಯಸ್. ಯಲ್. ಯಸ್. ಭಟ್, ಕೆ. ಯಸ್. ಉಪಾಧ್ಯಾಯರು ಹೊಸ ಪತ್ರಿಕೆಗೆ ಶುಭಕೋರಿ ಮಾತಾಡಿದರು. ಪತ್ರಿಕೆಯ ಸಂಚಾಲಕ ಶ್ರೀ. ಕೆ. ಆನಂದ ಸೆಟ್ಟರ ಧನ್ಯವಾದಗಳಾಗಿ ಚಹಾ ಸತ್ಕಾರ ನಡೆಯಿತು.

ನೋಟೀಸು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

C. P. No. 35/1949

ಗಿರಿಜಾ ಹೆಗ್ಗಡ್ತಿ ಅರ್ಜಿದಾರಳು.

ಮತ್ತು

1. ಪಟೇಲ್ ರಾಮಣ್ಣ ಹೆಗಡೆ, ನಾಗ್ಯ ಹೆಗಡೇರ ಅಳಿಯ 2. ಶ್ರೀ ಬಿ. ಶೀನಪ್ಪಹೆಗಡೆ 3. ಬಿ. ಸಂಜೀವ ಹೆಗಡೆ, ದೊಡ್ಡು ತಾವು ಸಂಕ್ಯರಟ್ರ ಮಕ್ಕಳು. 4, ಬಿ. ಸುಲೋಚನ ಹೆಗ್ಗಡ್ತಿ,ಅಕ್ಕಯ್ಯಹೆಗ್ಗಡ್ತಿ ಮಗಳು-ಎದ್ರಿರು.

1ನೇ ಯದ್ರಿ ಚೆರ್ಕಾಡಿ ಗ್ರಾಮದಲ್ಲಿಯೂ 2ನೇ ಯದ್ರಿ ಉಡ್ಪಿ ಕಸಬೆಯಲ್ಲಿಯೂ, 3ನೇ ಯದ್ರಿ ಪೆರ್ಡೂರು ಗ್ರಾಮದಲ್ಲಿಯೂ, 4ನೇ ಯದ್ರಿಳು ಅಂಜಾರು ಗ್ರಾಮದಲ್ಲಿಯೂ ಯಿರುತ್ತಾರೆ.

ಅರ್ಜಿದಾರಳ ತಾಯಿ ಮೃತಪಟ್ಟ ರಾಮಮ ಹೆಗ್ಗಡ್ತಿಗೆ The Canara Industrial and Banking Syndicate Ltd., Brahmavar ಯೆಂಬ ಬೇಂಕಿನಿಂದ F. D. Receipt No. 2137/33/44ನೇಗೆ ಬರಬೇಕಾದ ಅಸ್ಲು ಬಡ್ಡಿ ಹಣವ್ನರಿಗೆ ವಾರೀಸು ಸರ್ಟಿಫಿಕೇಟು ಕೊಡ ಹೇಳಿ ಅರ್ಜಿದಾರಳು ದಾಕಲ್ಮಾಡಿದ ಮೋಲ್ಕಂಡಅರ್ಜಿ ತಾ 5-8-1949ಕ್ಕೆ ತಸ್ಕಿಗೆ ಯಿಟ್ಟಿದೆ. ಆ ಕುರಿತು ಆಕ್ಷೇಪ ಉಳ್ಳವರು ಸದ್ರಿ ದಿನ 11ಗಂಟೆಗೆ ಕೋರ್ಟು ಮುಂದೆ ಹ್ಯಾಜರುಮಾಡಿಕೊಳ್ಳತಕ್ಕದ್ದು.

K. L. Aithal

ಅರ್ಜಿದಾರಳಕಡೆ ವಕೀಲ್

ತಾ. 1—8—49.

ಶಯ್ಯಾಗೃಹದ ಫೋಟೋಗಳು

(ಅಪ್ರಾಯಸ್ಥರಿಗೆವಿಕ್ರಯಿಸೋದಾಗಲಿಕ್ಕಿಲ್ಲ)

ಶಯ್ಯಾಗೃಹದ ದೃಶ್ಯ, ಸೌಂದರ್ಯಾದಿಗಳನ್ನು ನೋಡಲಪೇಕ್ಷಿಸುವಿರಾದರೆ ಇಂದೇ ಆರ್ಡರು ಕೊಡಿರಿ 50 ಫೋಟೊಗಳ ಸೆಟ್ಟಿನ ಬೆಲೆ ರೂಪಾಯಿ **6/-** ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

V. P. Store [N. U.]

Post Box 51, Meerut, U. P.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಸಾಚಾರ್ಯ, ರಥಬೀದಿ, ಉಡುಪಿ.

ಮಂಗಳೂರು

ಕರ್ನಾಟಕ ಏಕೀಕರಣ ದಿನಾಚರಣೆಯು ಕಳೆದ ತಾ. 25ರಲ್ಲಿ ಕರ್ನಾಟಕ ಏಕೀಕರಣ ಸಂಘದ ನೇತೃತ್ವದಲ್ಲಿ ಶ್ರೀ ಎಸ್. ನರಸಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮರು ಕರ್ನಾಟಕ ಪ್ರಾಂತ ರಚನೆಯಲ್ಲಿ ಅನುಕೂಲ ನಿರ್ಣಯ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುವ ನಿರ್ಣಯವು ಸ್ವೀಕರಿಸಲ್ಪಟ್ಟು ಅದನ್ನು ಕಾಂಗ್ರೆಸ್ ಅಧ್ಯಕ್ಷರಿಗೆತಂತಿ ಮೂಲಕ ತಿಳಿಸಲಾಯಿತು.

ಶ್ರೀ ಜಿ. ಕೆ. ಗೋವಿಂದ ಭಟ್ಟರು ಕೇಂದ್ರ ಅಡಿಕೆ ಸಮಿತಿಗೆ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ ಅಡಿಕೆ ಬೇಸಾಯಗಾರರ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು.

ದ. ಕ. ಒಟೋಮೊಬೈಲ್ ಕೆಲಸಗಾರರ ಯೂನಿಯನ್ನಿನ ಕಾರ್ಯಕಾರಿ ಸಭೆಯು ಈಚೆಗೆ ಶ್ರೀ ಗಣೇಶ ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. 1948 49ನೆ ಮಾರ್ಚಿ ವರ್ಷಾಂತ್ಯದ ಆದಾಯ ವೆಚ್ಚಗಳ ಪರಿಶೀಲನವಾಗಿ ಮಂಜೂರು ಮಾಡಲಾಯಿತು.

ಮುನ್ಸಿಪಲ್ ಕೌನ್ಸಿಲ್ ಮೀಟಿಂಗು ಈಚೆಗೆ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಮಾರ್ಕೆಟ್ ರೋಡ್, ಕದ್ರಿ, ಮಂಗಳಾದೇವಿ, ಮಹಾತ್ಮಾಗಾಂಧಿ ರಸ್ತೆಗಳಿಗೆ 1½ ಇಂಚು ಮತ್ತು ಕಾರ್ಸ್ಟ್ರೀಟ್ ಸದಾಶಿವರಾವ್ ರೋಡ್, ಗೋಳಿಕಟ್ಟೆ ರಸ್ತೆಗಳಿಗೆ ಎರಡು ಇಂಚು ತಾರು ಹಾಕಲು ಹಣ ಮಂಜೂರು ಮಾಡಲಾಯಿತು.

ದ್ರಾಕ್ಷಾಸವ ಇಂತಿ ಆಸವಾರಿಷ್ಟಗಳಲ್ಲಿ ಸೇಕಡಾ 20ರಷ್ಟು 'ಸ್ಪಿರಿಟ್' ಇರುವಲ್ಲಿ ಗೆಲನ್ ಶುದ್ಧ ಸ್ಪಿರಿಟಿಗೆ ರೂ 35ರಂತೆ ಸುಂಕ ಹೇರಬೇಕೆಂದೂ ಕೆಲವು ಆಸವಾರಿಷ್ಟಗಳ ನಮೂನೆಗಳನ್ನು ಪರೀಕ್ಷಿಸಲಾಗಿ ಅವುಗಳಲ್ಲಿ ಸೇಕಡಾ 20ಕ್ಕಿಂತ ಹೆಚ್ಚು ಸ್ಪಿರಿಟ್ ಇರುವುದೆಂತಲೂ ರೆವಿನ್ಯೂ ಬೋರ್ಡು ನಿರ್ಧರಿಸಿದೆ. ಜನಸಾಮಾನ್ಯರ ಸೇವೆ ಮಾಡುತ್ತ ಬಂದಿರುವ ಆಯುರ್ವೇದ ಪದ್ಧತಿಗೆ ಹೀಗೆ ದಿನೇ ದಿನೇ ತೊಡಕುಗಳನ್ನು ತಂದೊಡ್ಡುತ್ತಿರುವುದು ಜನಸಾಮಾನ್ಯರಿಗೆ ಕೆಡುಕು ಎಂದು ತಿಳಿದು ಬರುತ್ತದೆ.

ಜಿಲ್ಲಾ ವಾಣಿಜ್ಯಸಂಘದ ವರ್ಷಾವಧಿ ಮಹಾಸಭೆಯು ಕಳೆದ ತಾ 27ರಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ವಿ. ಎಸ್. ಕುಡ್ವರು ಅಧ್ಯಕ್ಷರಾಗಿಯೂ ಜನಾಬ್ ಮಹಮ್ಮದ್ ಅಬ್ದುಲ್ ಸಾಕೂರ್ ಸಾಹೇಬರು ಉಪಾಧ್ಯಕ್ಷರಾಗಿಯೂ ಶ್ರೀ ಎ. ಉಮಾನಾಥ ಭಂಡಾರಿಗಳು ಕೋಶಾಧಿಕಾರಿಗಳಾಗಿಯೂ ಶ್ರೀಗಳಾದ ದೇವಿದಾಸ ಗಿರಿಧರಲಾಲ ಮತ್ತು ಪಿ. ರಮಾನಾಥ ಶೆಣೈಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಜಿಲ್ಲಾ ಆಹಾರ ಸಮಿತಿ ಸಭೆಯು ಈಚೆಗೆ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿಮರ್ಶಿಸಿತು. ಬರುವ ಬೆಳೆಯ ವರೆಗೆ ಅಕ್ಕಿಯ ಕೊರತೆಯಿರುವುದರಿಂದ ಸರಕಾರವು ಕೂಡಲೆ ಎರಡು ಸಾವಿರ ಟನ್ ಆಹಾರ ಧಾನ್ಯವನ್ನು ಜಿಲ್ಲೆಗೆ ಕಳುಹಿಸುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ರೈತರಿಗೆ ಅಧಿಕಾರಿಗಳಿಂದ ಹಿಂಸೆಯಾಗದಂತೆ ಈಗಿನ ನಿಯಂತ್ರಣ ಪದ್ಧತಿಯನ್ನು ಸುಧಾರಿಸುವಂತೆ ಸೂಚನೆಗಳನ್ನು ಕೊಡಲು ಶ್ರೀಗಳಾದ ಕೆ. ಆರ್. ಕಾರಂತ, ಕೆ. ಬಿ. ಜಿನರಾಜ ಹೆಗ್ಡೆ, ಎಮ್. ಶಿವರಾವ್, ಜಿಲ್ಲಾ ಸರಬರಾಯಿ ಆಫೀಸರ್ ಮತ್ತು ಜಿಲ್ಲಾ ಕೃಷಿ ಆಫೀಸರ್ ಇವರುಗಳ ಒಂದು ಉಪಸಮಿತಿ ರಚಿಸಲಾಯಿತು.

ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ದ. ಕ. ಜಿಲ್ಲೆಯಲ್ಲಿ ಕಳೆದ ತಾ 19ರ ತನಕ ರೂಪಾಯಿ 1,45,000ಕ್ಕೂ ಮಿಕ್ಕಿದ ಮೊತ್ತಿಗೆ ಜಮೆಯಾಗಿದೆ ಎಂದು ತಿಳಿದುಬರುತ್ತದೆ.

ವರ್ಗಾವರ್ಗಿ— ಇಲ್ಲಿಯ ಹಜೂರ್ ಶಿರಸ್ತೆದಾರರಾಗಿದ್ದ ಶ್ರೀ ಬಿ ನಾರಾಯಣ ಹೆಗ್ಡೆಯವರು ತಿರುಚಿನಪಳ್ಳಿ ಜಿಲ್ಲೆಗೆ ಡೆಪ್ಯುಟಿ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುವುದರಿಂದ ಹಜೂರ್ ಶಿರಸ್ತೆದಾರರಾಗಿ ಕುಂದಾಪುರದ ತಹಶಿಲ್ದಾರರಾಗಿದ್ದ ಶ್ರೀ ಎಫ್. ಎಮ್. ಪಿಂಟೋ ಅವರೂ, ಕುಂದಾಪುರ ತಹಶಿಲ್ದಾರರಾಗಿ ಕಾಸರಗೋಡಿನ ತಹಶಿಲ್ದಾರರಾಗಿದ್ದ ಶ್ರೀ ಕೆ ದೇವೇಂದ್ರ ಅವರೂ, ಕಾಸರಗೋಡಿನ ತಹಶಿಲ್ದಾರರಾಗಿ ಶ್ರೀ ಬೇಕಲ್ ನಾರಾಯಣರಾಯರೂ ನೇಮಕಹೊಂದಿರುವರು.

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಒದಗಿದೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ. ಈ ಚಿತ್ರಗಳನ್ನು ನೀವು ನೋಡದಿದ್ದರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ- 2-8-0. ದೊಡ್ಡ ಸೆಟ್‌ಗೆ(ವಿಶಿಷ್ಟ ಪೋಸ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ. ಕೂಡಲೇ ಓರ್ಡರು ಕೊಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
Lothian Road, Delhi

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾರೋಗಳಿಗೂ ಸಿದ್ಧೌಷಧ-



REGD

ಸುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮ. ದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮೂಲ ಶಿಕ್ಷಣ ತರಬೇತು ಹೊಂದಿದ ಅಧ್ಯಾಪಕರ ವಿಚಾರವೇನು?

ನಮಗೆ ಸ್ವಾತಂತ್ರ್ಯ ಸಿಕ್ಕಿದೊಡನೆ, ಸ್ವತಂತ್ರ ಹಿಂದುಸ್ಥಾನಕ್ಕೆ ಸ್ವತಂತ್ರ ಶಿಕ್ಷಣದ ಅಗತ್ಯವಿದೆಯೆಂದು, ನಮಗೆ ಸ್ವಾತಂತ್ರ್ಯ ದೊರಕಿಸಿ ಕೊಟ್ಟ ಪರಮ ಪೂಜ್ಯ ಬಾಪೂಜಿಯವರು 'ಮೂಲಶಿಕ್ಷಣ ಸಿದ್ಧಾಂತ'ವನ್ನು ಸರಕಾರದ ಅವಗಾಹನೆಗೆ ತಂದರು. ಘನ ಸರಕಾರವು ಅದನ್ನು ವಿಮರ್ಶಿಸಿ ಆ ಶಿಕ್ಷಣ ಕ್ರಮವನ್ನು ಜಾರಿಗೆ ತರುವರೆ ನಮ್ಮ ಪ್ರಾಂತ್ಯದಲ್ಲಿ ಮೊದಲಿಗೆ 5 ತರಬೇತು ಶಾಲೆಗಳನ್ನು ಅಧ್ಯಾಪಕರ ತರಬೇತಿಗೋಸುಗ ತೆರೆಯಿಸಿತು. ಅದರಲ್ಲಿ ನಮ್ಮ ಜಿಲ್ಲೆಯ ಮೂಡುಬಿದ್ರಿ ಎಂಬಲ್ಲಿ ಈ ಶಾಲೆಯೊಂದು ಪ್ರಾರಂಭವಾಗಿ ನಮ್ಮ 29 (ಇಪ್ಪತ್ತೊಂಬತ್ತು) ಮಂದಿ ವಿದ್ಯಾರ್ಥಿಗಳಿಗೆ ತರಬೇತು ಕೊಟ್ಟಿರುತ್ತದೆ.

ನಮ್ಮಗಳ ತರಬೇತಿಯು ಕಳೆದ ಎಪ್ರೀಲ್ ಪ್ರಾರಂಭದಲ್ಲಿ ಮುಗಿದಿತ್ತಾದರೂ ನಮ್ಮ ಮುಂದಿನ ವ್ಯವಸ್ಥೆ ಏನೆಂದಿನ್ನೂ ತಿಳಿಯದು. ತರಬೇತಿ ಮುಗಿದೊಡನೆ ನೌಕರಿ ಬಂದೀತೆಂದು ಭಾವಿಸಿದ್ದೆವು. ಅದು ಭಾವನೆಯಲ್ಲೇ ಉಳಿದು ಜೂನ್ ತಿಂಗಳ ತನಕಂ ಕೂಡಾ ಕನಸಿನ ಗಂಟಾಯಿತು. ಈಗ ಜುಲಾಯಿ ಕಳೆದರೂ ನಮ್ಮ ವಿಚಾರವಾಗಿ ಸಂಬಂಧಪಟ್ಟ ಇಲಾಖೆಯವರೇನು ಕಾರ್ಯಕ್ರಮ ಕೈಗೊಂಡಿರುವರೆಂದಿನ್ನೂ ತಿಳಿಯದು.

ನಾವುಗಳು ಮೂಲಶಿಕ್ಷಣ ತರಬೇತು ಹೊಂದಿದ ಮೊದಲಿನ ಉಪಾಧ್ಯಾಯರಾಗಿದ್ದು, ನಮ್ಮ ವಿಚಾರವಾಗಿ ಸರಕಾರವು ಮೊದಲ ಹೆಜ್ಜೆಯಲ್ಲೇ ನಮಗೆ ನಿರುತ್ಸಾಹ ಹುಟ್ಟುವಂತೆ ಮಾಡಿದರೆ ಈ ಶಿಕ್ಷಣ ಪ್ರಚಾರದ ಮುಂದಿನ ಕೆಲಸವೆಂತು ಸಾಗೀತು? ಭಾವೀ ಜನಾಂಗದ ಏಳ್ಗೆಗಾದರಾದ ನಾವುಗಳೀಗ ನಮ್ಮ ಏಳ್ಗೆಯಾಗುವುದೇ ಎಂದು ಸಂದೇಹಪಡಬೇಕಾಗಿದೆ.

ನಮ್ಮ ತರಬೇತು ಹೊಂದಿದಂದಿನಿಂದ ಇಷ್ಟರ ವರೆಗಿನ ಸಮಯವನ್ನು ಹುಕುಮಿನ ನಿರೀಕ್ಷಣೆಯಲ್ಲೇ ಕಳೆದ, ನಮಗೆ ಸರಕಾರವು ನಷ್ಟವಾದ ಈ ಸಮಯದ ಭತ್ತೆ ಕೊಡುವುದೆ? ನಮಗೆ ಕೆಲಸ ಸಿಗುವುದೇ ಯಾ ಇಲ್ಲವೇ? ಸಿಗುವುದಾದರೆ ಯಾವಾಗ? ನಮ್ಮ ಸಂಬಳದ ವಿಚಾರವೇನು? ಎಂಬಿತ್ಯಾದಿ ವಿಚಾರಗಳ ಕಡೆಗೆ ಸರಕಾರವು ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕಾಗಿ ಕೋರಿಕೆ.

ಇತಿ-

ಮೂಲ ಶಿಕ್ಷಣ ತರಬೇತು ಹೊಂದಿದ ಬಡ ಭಾವೀ ಅಧ್ಯಾಪಕ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಮೋಹನ್ ಚಿತ್ರದವರ-

"ಸಿಂದಬಾದ್ ನಾವಿಕ"

ಪ್ರಕಾಶ್, ಮತ್ತು ಶಾಂತಾಪಟೇಲ್

ಬರುವ ಚಿತ್ರ: ಪ್ರಕಾಶ ಚಿತ್ರದವರ,

● ಭಕ್ತಧ್ರುವ ● (ಹಿಂದಿ)

ಮಾಸ್ಟರ್‌ಲಕ್ಷ್ಮಣ, ಶಶಿಕಪೂರ್, ಮುತ್ತಿತರರು,

ದ. ಕನ್ನಡ

ಕುಂಬಳೆ—ಮೈಸೂರು ಶಾಸನಸಭಾ ಸದಸ್ಯರಾದ ಶ್ರೀಯುತ ಕಾರ್ಳೆ ತಿಮ್ಮಯ್ಯ ಗೌಡರು ತಾ 24, 25ರಲ್ಲಿ ಇಲ್ಲಿಗೆ ಬಂದು ಶಿಕ್ಷಾಭಿವೃದ್ಧಿ ಕೆಲಸಗಳನ್ನು ನೋಡಿ ಹೋಗಿರುವರು.

ಕಳನಾಡ್ ಎಂಬಲ್ಲಿ ಒಂದು ಹೊಸ ರೈಲು ನಿಲ್ದಾಣವನ್ನೇರ್ಪಡಿಸಲು ರೈಲ್ವೆ ಬೋರ್ಡಿನವರು ತೀರ್ಮಾನಿಸಿರುವುದಾಗಿ ತಿಳಿದು ಬರುತ್ತದೆ.

ಮದರಾಸ್ ಸರಕಾರದ ಮಾನ್ಯಮಂತ್ರಿ ಚಂದ್ರಮೌಳಿಯವರು ತಾ 20ರಂದು ಅಪರಾಹ್ನ ಕಾಸರಗೋಡಿಗೆ ಚಿತ್ತೈಸಿದಾಗ ಜಿಲ್ಲಾ ಕಲೆಕ್ಟರ್, ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಮುಂತಾದ ಅಧಿಕಾರಿಗಳೂ ಕಾಂಗ್ರೆಸ್ ಕಾರ್ಯಕರ್ತರೂ ಸ್ವಾಗತವಿತ್ತರು. ಮಾನ್ಯಮಂತ್ರಿಯವರು, ಕಾಸರಗೋಡು ಪಟ್ಟಣಕ್ಕಾಗಿ ಕರ್ನಾಟಕ ಸೆರಾಮಿಕ್ ಕಂಪೆನಿಯವರು ಸ್ಥಾಪಿಸಿದ ಇಲೆಕ್ಟ್ರಿಕ್ ಬೆಳಕನ್ನು ಪ್ರಕಾಶಿಸುವ ಸಮಾರಂಭವನ್ನು ನೆರವೇರಿಸಿದರು. ಅಲ್ಲಿನ ಪಂಚಾಯತ್ ಬೋರ್ಡಿನವರೂ ಅವರನ್ನು ಸ್ವಾಗತಿಸಿದ್ದಲ್ಲದೆ ಸತ್ಕಾರವನ್ನೂ ಏರ್ಪಡಿಸಿದ್ದರು.

ಮುಂಡ್ಕೂರು—ಇಲ್ಲಿಯ ಸಹಕಾರ ಸಂಘದ ಮತ್ತು ಗ್ರಾಮ ಸಂಘದ ಮಹಾಸಭೆಗಳು ತಾ. 23-7-49ರಲ್ಲಿ ಬೋರ್ಡ್ ಶಾಲೆಯಲ್ಲಿ ಸಂಘದ ಅಧ್ಯಕ್ಷ ಶ್ರೀ ಎಂ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಗ್ರಾಮ ಸಂಘದ ಯಾವತ್ತೂ ಕಾರ್ಯಕಲಾಪಗಳನ್ನು ಇನ್ನು ಮುಂದೆ ಸಹಕಾರ ಸಂಘವು ಕೈಕೊಂಡು, ಕೆಲಸ ನಡೆಸುವಂತೆ ಸಂಘದ ಉಪನಿಬಂಧನೆಗಳಲ್ಲಿ ತಕ್ಕ ತಿದ್ದುಪಡಿಗಳನ್ನು ಮಂಜೂರು ಮಾಡಲಾಯಿತು. ಸಹಕಾರ ಸಂಘದ ನೇತೃತ್ವದಲ್ಲಿ ಒಂದು ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ತೆರೆಯುವಂತೆಯೂ ಬರುವ ಸ್ವಾತಂತ್ರ್ಯ ದಿನಾಚರಣೆ ದಿನ ಸಹಿದಿನಾಚರಣೆಯನ್ನು ಜರಗಿಸುವಂತೆಯೂ ನಿರ್ಣಯಗಳಾದುವು. ರಾತ್ರಿ ಯಕ್ಷಗಾನ ಕೂಟ ಜರಗಿಸಲ್ಪಟ್ಟಿತು. ಶ್ರೀಗಳಾದ ಮೊಲ್ಯ ದೇಜು ಶೆಟ್ರು ವಾಲಿ ಮತ್ತು ಪ್ರಹಸ್ತ, ಅಡ್ವೆ ವಾಸು ಶೆಟ್ರು ರಾಮ, ಕಿನ್ನಿಗೋಳಿ ವಿಟ್ಠಲ ಕಾಮತರು ತಾರೆ, ನಂದಳಿಕೆ ಯೆಲ್ಲಪ್ಪ ಶೆಟ್ರು ಅಂಗದ, ಈ ಪಾತ್ರವರ್ಗಗಳು ಪ್ರೇಕ್ಷಕರ ಮೆಚ್ಚಿಗೆಯನ್ನು ಪಡೆದುವು.

ಕಿರಿಮಂಜೇಶ್ವರ—ಕಳೆದ ತಾ 30ರಲ್ಲಿ ಕಿರಿಮಂಜೇಶ್ವರದಲ್ಲಿ ಅಲ್ಲಿಯ ಬೋರ್ಡ್ ಶಾಲೆ ಮಕ್ಕಳು, ಉಪಾಧ್ಯಾಯರು ಹಾಗು ಊರವರು ಹರಿಜನ ದಿನವನ್ನು ಕುಂದಾಪುರ ಶಾಲಾ ಇನ್ಸ್‌ಪೆಕ್ಟರ್ ಶ್ರೀ ಬಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಶ್ರೀಗಳಾದ ಸದಾಶಿವ ಶೆಟ್ಟಿ, ನಾರಾಯಣ ಶಾಸ್ತ್ರಿ, ಕೆ. ರಾಮ ಮೊದಲಾದವರು ಹರಿಜನ ದಿನಾಚರಣೆಯ ಮಹೋತ್ಸವವನ್ನು ವಿವರಿಸಿ ಮಾತನಾಡಿದರು.

ಕುಂದಾಪುರ ತಾ. 30-7-49ರಲ್ಲಿ ಹರಿಜನ ದಿನಾಚರಣೆಯು ಅತಿ ಸಂಭ್ರಮದಿಂದ ಜರಗಿತು. ಬೆಳಗ್ಗೆ ಕಾಂಗ್ರೆಸ್ಸಿಗರೂ ಸರಕಾರಿ ಉದ್ಯೋಗಸ್ಥರೂ ವಡೇರಹೋಬಳಿ ಹರಿಜನ ಕೇರಿಯನ್ನು ಸಂದರ್ಶಿಸಿ ಹರಿಜನ ನಿವಾಸ ಸ್ಥಳದ ಸ್ವಚ್ಛತೆಯನ್ನು ಪರೀಕ್ಷಿಸಿ ಯೋಗ್ಯ ಸಲಹೆಗಳನ್ನು ಕೊಟ್ಟು ಘಂಟೆ9ಕ್ಕೆ ಸರಿಯಾಗಿ ಕುಂದಾಪುರ ಬೋರ್ಡ್ ಹೈಸ್ಕೂಲಿನಲ್ಲಿ ನೆರೆದ ಸಾರ್ವಜನಿಕ ಸಭೆಗೆ ಬಂದು, ಇನ್‌ಚಾರ್ಜ್ ತಹಶೀಲದಾರ ಶ್ರೀ ಆರ್. ಎಸ್. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸಭೆಯು ಕಾರ್ಯಕ್ರಮಗಳು ನೆರವೇರಿದವು. ಆ ಸಂದರ್ಭದಲ್ಲಿ ಹರಿಜನ ದಿನಾಚರಣೆ ಕಾರಣ, ಗುರಿ ಮುಂತಾದ ವಿಷಯಗಳ ಮೇಲೆ ಶ್ರೀಗಳಾದ ಅಬ್ಬುಬಕರ್ ಸಾಹೇಬ, ಬಿ. ಸದಾಶಿವರಾವ್, ಸ್ಥಳೀಯ ಕಾಂಗ್ರೆಸ್ಸು ಕಾರ್ಯದರ್ಶಿ ಎಂ. ಎಂ. ಹೆಗ್ಡೆಯವರು ಮಾತನಾಡಿದರು, ಅಧ್ಯಕ್ಷರ ಭಾಷಣದ ತರುವಾಯ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು. ಆ ಮೇಲೆ ಹರಿಜನರ ಹೋಟೇಲು ಪ್ರವೇಶ ಕಾರ್ಯಕ್ರಮಗಳು ಸಹಾ ಯಶಸ್ವಿಯಾಗಿ ನೆರವೇರಿಸಲಾಯಿತು.

ಕರ್ನಾಟಕ ಸಂಘ, ಮದ್ರಾಸು—ಇದರ ಆಶ್ರಯದಲ್ಲಿ ೧೮-೭-೪೯ರಲ್ಲಿ ಶ್ರೀ ಎಂ. ಮರಿಯಪ್ಪ ಭಟ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಎಸ್. ರಾಮಾಚಾರ್ ಅವರ ಕಾವ್ಯ ಕವನ 'ಗಾಯನ'ವೂ, ೨೪-೭-೪೯ರಲ್ಲಿ ಗವರ್ನಮೆಂಟ್ ಮ್ಯೂಸಿಯಂ ಥಿಯೇಟರಿನಲ್ಲಿ ಶ್ರೀ ಎ. ಕೆ. ಶ್ರೀನಿವಾಸ್ ಅವರ ಹಾಡುಗಾರಿಕೆ, ಶ್ರೀ. ಎನ್. ವಿ. ಮೂರ್ತಿ, (ವಿದ್ವಾನ್ ಮಣಿ ಅವರ ಶಿಷ್ಯ) ಅವರ ಮೃದಂಗ, ಶ್ರೀ ಜಿ ಎಲ್. ಕಾಶೀನಾಥ ಶಾಸ್ತ್ರಿ ಅವರ ಪಿಟೀಲು, ಇವರಸೇರುವಿಕೆಯಿಂದ ಸುಶ್ರಾವ್ಯವಾದ ಸಂಗೀತ ಕಛೇರಿಯೂ, ೩೧-೭-೪೯ರಲ್ಲಿ ಪಂಡಿತ ಎಚ್. ಶೇಷ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಸಿದ್ದವನಹಳ್ಳಿ ರಾಜಗೋಪಾಲ್, ಪಂಡಿತ ಬಿ. ನಂಜುಂಡ ಸ್ವಾಮಿ, ಎಸ್. ನಾರಾಯಣ ರಾವ್ ಮೊದಲಾದವರ ಕಾವ್ಯ ಕವನ ಕೀರ್ತನೆಗಳೂ ನಡೆದುವು.

'ಬಿ' ಜೀವಾತು (ಬ್ಯಾಸೋನೈಟ್) ಮಾತ್ರೆಗಳ ಪ್ರಚಾರ

ಹಿಂದೂದೇಶದ ಜನರ ಆಹಾರದಲ್ಲಿ 'ಬಿ' ಜೀವಾತುವಿನ ನ್ಯೂನತೆ ಅತ್ಯಧಿಕವಾಗಿದೆ ಎಂದು ಎಲ್ಲರಿಗೆ ಗೊತ್ತಿರುವ ವಿಷಯ. ಇದನ್ನು ಮನಗಂಡು ಬೊಂಬಾಯಿಯ ಜೇಮ್ಸ್ ರ್‍ಯಾಟ್ ಕಂಪೆನಿಯವರು 'ಬ್ಯಾಸೊನೈಟ್' ಹೆಸರಿನ 'ಬಿ'ಜೀವಾತು ಮಾತ್ರೆಗಳನ್ನು ಹೊಸತಾಗಿ ತಯಾರಿಸಿದ್ದಾರೆ. ಅದನ್ನು ಮೈಸೂರು ಸಂಸ್ಥಾನದ ಆದ್ಯಂತ ಪ್ರಚಾರಮಾಡುವ ಸಲುವಾಗಿ, ಕಂಪೆನಿಯ ಪ್ರಮುಖ ಪ್ರತಿನಿಧಿಗಳಾದ ಡಾ. ರಾವರು ಬೆಂಗಳೂರಿನ ಸುಪ್ರಸಿದ್ಧ ಸರಕಾರಿ ಮತ್ತು ಖಾಸಗಿ ಡಾಕ್ಟರುಗಳನ್ನು ಬರಮಾಡಿಸಿ, ಅವರಿಗೆ 'ಬ್ಯಾಸೊನೈಟ್'ನ ಮಹತ್ವವನ್ನು ವರ್ಣಿಸಿದುದೇ ಮಾತ್ರವಲ್ಲದೆ ಸಂಭ್ರಮದ ಔತಣವಿತ್ತು ಸತ್ಕರಿಸಿದರು. ಮೈಸೂರು ಸರಕಾರದ ಸೀನಿಯರ್ ಸರ್ಜನರಾದ ಡಾ। ಜಯರಾಮರು ಡ। ರಾವರಿಗೆ ನೆರೆದವರೆಲ್ಲರ ಪರವಾಗಿ ಧನ್ಯವಾದಗಳನ್ನರ್ಪಿಸಿದರು. ಮೈಸೂರು ಸಂಸ್ಥಾನ ಹಾಗೂ ಕೊಡಗಿನ ಬಗ್ಗೆ 'ಬ್ಯಾಸೊನೈಟ್' ವಿತರಣಕಾರರಾಗಿ 'ದಿ ಲಕ್ಷ್ಮೀ ಟ್ರೇಡ್ಸ್, ಲಿಮಿಟೆಡ್, ಬಸವನಗುಡಿ; ಬೆಂಗಳೂರು' ಇವರು ನೇಮಕ ಹೊಂದಿರುವರಾಗಿ ತಿಳಿಯುತ್ತೇವೆ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 93/1949.

1. ಶ್ರೀನಿವಾಸ ಪೆಜತ್ತಾಯ...
2. ಭೂಮಿ ಅಮ್ಮ . .

} ವಾದಿರು.

ಮತ್ತು

1. ಮುಕ್ಕುಪ್ರಾಣಭಟ್ಟ, 2. ಶ್ರೀನಿವಾಸ ಭಟ್ಟ 3. ರಾಮಭಟ್ಟ, ಗುರುರಾಜ ಭಟ್ಟರ ಮಕ್ಕಳು. 4. ಗುರುರಾಜ ಭಟ್ಟ, 5. ನಾಗರಾಜ ಭಟ್ಟ 6. ಶ್ರೀಧರ ಭಟ್ಟ, ಕೃಷ್ಣಭಟ್ರ ಮಕ್ಕಳು. ಪ್ರತಿವಾದಿರು

ತಿರುವಾಂಕೂರು ಸಂಸ್ಥಾನದ ವೈಕಂ ತಾಲ್ಕು ಮೂಡುಕರಿಮಠವ್ ಯೆಂಬಲ್ಲಿರುವವರು—

ಮೇಲ್ಕಂಡ ವಾದಿರು ಸದ್ರಿ ಪ್ರತಿವಾದಿರ ಮೇಲೆ ಆಸ್ತಿ ಸ್ವಾಧೀನತೆ, ಗೇಣಿಬಾಕಿ ಮತ್ತು ಹುಟ್ಟುವಳಿ, ವ, ಮುಂದಿನ ಹುಟ್ಟುವಳಿ ಕೂಡಾ ಕೇಳಿ ಮಾಡಿದ ಮೇಲ್ಕಂಡ ದಾವೆಯು ಸದ್ರಿ ಕೋರ್ಟಿನಲ್ಲಿ ಪ್ರತಿವಾದಿರ ಹಾಜ್ರಾತಿ ಬಗ್ಗೆ ತಾ 19-8-49ಕ್ಕೆ ಇಟ್ಟಿದೆ. ಆದ್ದರಿಂದ ಪ್ರತಿವಾದಿರು ಆದಿನ ಬೆಳಿಗ್ಗೆ 11ಗಂಟೆಗೆ ಸ್ವತಃ ಯಾ ವಕೀಲರ ಮುಖಾಂತರ ಕೋರ್ಟ ಮುಂದೆ ಹಾಜರಾಗಿ ಉದೆಹರಿಸಲಿಕ್ಕೆ ತಪ್ಪಿದಲ್ಲಿ ಪ್ರತಿವಾದಿರ ಗೈರ ಹಾಜರಿನಲ್ಲಿ ಸದ್ರಿ ದಾವಾ ತೀರ್ಮಾನಿಸಲಾದೀತು. ಎಂತ ಎಲ್ಲಾ ಪ್ರತಿವಾದಿರಿಗೆ ಕೋರ್ಟ ಹುಕುಂ ಪ್ರಕಾರ ಈ ಮೂಲಕ ತಿಳಿಸೋದಾಗಿಯದೆ.

S/d H. K. Gopaalkrishna Rao
ವಾದಿರ ಕಡೆ ವಕೀಲ್.

ಕಾರ್ಕಳ.
ತಾ 31—7—49 }



Approved firm by the Govt. of Mysor Certified by the Agent of the Govt of, Cylone & Indian.

ಏಲಂ ನೋಟೀಸು

ಮಂಗಳೂರು ಕಸಬೆಯಲ್ಲಿ ಹಿತ್ಲು, ಮನೆ, ಕಟ್ಟೋಣಗಳು

ಪುತ್ತೂರು ಡಿ. ಮು. ಕೋರ್ಟ

ಕ್ರಮ ನಂಬ್ರ 83/1948.
(ಮಂಗಳೂರುಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ)
ಕ್ರಮ ನಂಬ್ರ 23/1948
R. I. A. No 735/49.

ರಗಡೆ ಅಪ್ಪುರಾವ್ ವಾದಿ, ಅರ್ಜಿದಾರ
ರಗಡೆ ರಂಕರರಾವ್ ಕೂಡಾ - ಪ್ರತಿವಾದಿರು,
—ರೆಸ್ಪೋಂಡೆಂಟರು.

ಮೇಲೆ ಕಾಣಿಸಿದ R. I. A. 735/49 ರಲ್ಲಿ ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಿಂದ ನೇಮಿಸಲ್ಪಟ್ಟ ಕಮಿಶನರ್ ಮಂಗಳೂರಲ್ಲಿರುವ ಎಡ್ವೋಕೇಟ್ ಬೈಂದೂರು ಅನಂತರಾಯರು ಇದೇ ಸಪ್ಟಂಬರ ತಾ 4ನೇ ಆದಿತ್ಯವಾರ ಹಗಲು ಗಂಟೆ 10ಕ್ಕೆ ಕೊಡಿಯಾಲಬೈಲಿನಲ್ಲಿರುವ ಅವರ ಆಫೀಸಿನಲ್ಲಿ ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಯನ್ನು ಈ ಕೆಳಗೆ ಕಾಣಿಸಿದ ಶರ್ತಗಳಿಗೆ ಒಳಪಟ್ಟು ಬಹಿರಂಗವಾಗಿ ಏಲಂ ಮಾಡುವರು ಸದ್ರಿ ಆಸ್ತಿಯನ್ನು ಪಡಕೊಳ್ಳಲು ಅಪೇಕ್ಷೆಯುಳ್ಳವರು ಬೇಕಾದ ಅನುಭವವನ್ನು ಏಲಂ ಮುಂಚಿತವಾಗಿ ಕಮಿಶನರರಿಂದ ತಿಳಿದುಕೊಳ್ಳಬಹುದು.

ಏಲಂವಿನ ಶರ್ತಗಳು:

(1) ಆಸ್ತಿಯನ್ನು ಅಂದಾಜು ಕ್ರಯಕ್ಕಿಂತ ಮೇಲ್ಪಟ್ಟು ಮಾರು ಕರೆಯಲಾದೀತು.

(2) ಅತೀ ಹೆಚ್ಚಿನ ಮೊಬಲಗಿಗೆ ಯಾವಾತನು ನಿಲ್ಲುತ್ತಾನೋ ಅಂಥವನ ಹೆಸರಲ್ಲಿ ಮೂರು ವಾರಿನಿಂದ ಮಾರಾಟವು ನನಗೆ ಯುಕ್ತ ಕಂಡರೆ ಕಾಯಂ ಮಾಡೋಣಾಗುವುದು. ಏಲವನ್ನು ಕಾಯಂ ಮಾಡುವ ವ ನಿರಾಕರಿಸುವ ಹಕ್ಕು ಮತ್ತು ಏಲಂ ದಿನವನ್ನು ಮುಂದರಿಸುವ ಹಕ್ಕು ಸಹ ಸಂಪೂರ್ಣವಾಗಿ ನನಗೆ ಇರುತ್ತದೆ.

(3) ದರಖಾಸ್ತುದಾರನು ತನ್ನ ಹೆಸರಲ್ಲಿ ಕಾಯಂ ಮಾಡಿದ ವಾರಿನ ಐವೇಜಿನ ಪ್ರತಿ ಸೇಕಡಾ 25ರಷ್ಟು ಆಗುವ ಐವೇಜನ್ನು ಕೂಡಲೇ ನನ್ನ ವಶಕೊಟ್ಟು ಕ್ರಮಪ್ರಕಾರ ಪಾವತಿ ಪಡೆಯತಕ್ಕದ್ದು. ಹಾಗೆ ವಸೂಲು ಕೊಡುವರೆ ತಪ್ಪಿದ್ದಲ್ಲಿ ಆತನ ಜವಾಬ್ದಾರಿ ಮೇಲೆ ಸದರಿ ಆಸ್ತಿಯನ್ನು ಪುನಃ ಏಲಂ ಮಾಡೋಣಾಗುವುದು. ಹಾಗೆ ಪುನಃ ಏಲಂ ಆಗುವುದರಿಂದ ಉಂಟಾಗಬಹುದಾದ ನಷ್ಟಕ್ಕೆ ಆತನು ಬದ್ಧನಾಗಿರತಕ್ಕದ್ದು. ಒಂದು ವೇಳೆ ಮುನಾಫೆ ಉಂಟಾದರೆ ಅದರಲ್ಲಿ ಅವನಿಗೆ ಎಷ್ಟನ್ನಾದರೂ ಹಕ್ಕಿರುವುದಿಲ್ಲ.

(4) ಮೂರು ವಾರು ಕಾಯಂ ಆಗಿ ಸೇಕಡಾ 25ರಷ್ಟು ಐವೇಜು ಕಟ್ಟಿದಂದಿನಿಂದ 7ದಿವಸಗಳೊಳಗೆ ಉಳಿದ ಕ್ರಯದ ಐವೇಜನ್ನು ನನ್ನ ವಶಕೊಟ್ಟು ಪಾವತಿ ಪಡೆಯತಕ್ಕದ್ದು. ಇದಕ್ಕೆ ತಪ್ಪಿದರೆ ಆತನು ವಸೂಲುಕೊಟ್ಟ ಸೇಕಡ 25 ಐವೇಜು ದಂಡವಾಗಿ ಉಪಯೋಗಿಸಿಕೊಳ್ಳೋಣಾಗಿ, ಆಸ್ತಿಯನ್ನು ಪುನಃ ಏಲಂ ಮಾಡೋಣಾಗುವುದು. ಅಂಥಾ ಏಲವಿನಲ್ಲಿ ಸಹಾ ಉಂಟಾಗಬಹುದಾದ ನಷ್ಟಕ್ಕೆ ಕ್ರಯಗಾರನು ಜವಾಬ್ದಾರನಾಗಿರತಕ್ಕದ್ದು. ಆದರೆ ಆದಾಯ ಉಂಟಾದರೆ ಅದರಲ್ಲಿ ಅವನಿಗೆ ಎಷ್ಟನ್ನಾದರೂ ಹಕ್ಕಿರುವುದಿಲ್ಲ.

(5) ದರಖಾಸ್ತುದಾರನು ಕ್ರಯವಾದ ಆಸ್ತಿಯ ಕ್ರಯಚೀಟಿನ ರಸೆ ರಿಜಿಸ್ಟ್ರಿ ಫೀಸು ವಗೈರೆ ಎಲ್ಲಾ ಖರ್ಚುಗಳನ್ನು ಸಹಿಸಿಕೊಳ್ಳತಕ್ಕದ್ದು. ಮತ್ತು ಕ್ರಯಚೀಟನ್ನು ತಕ್ಕ ... ವಲ್ಲಿ ಪಡಕೊಳ್ಳುವ ಜವಾಬ್ದಾರಿಯು ದರಖಾಸ್ತುದಾರನದೇ ಆಗಿರುತ್ತದೆ.

ಮಾರಾಟದ ಆಸ್ತಿಯ ವಿವರ:

ದಕ್ಷಿಣ ಕನ್ನಡಾ ಜಿಲ್ಲಾ ರಿಜಿಸ್ಟ್ರೇಶನ ಮಂಗಳೂರು ಸಬ್ ಡಿಸ್ಟ್ರಿಕ್ಟಿಗೆ ಸೇರಿದ ನಂಬ್ರ 91ನೇ ಮಂಗಳೂರು ಕಸಬಾ ಬಾಜಾರು ಗ್ರಾಮದ ಬಾಬ್ತು XIII ಮಾರ್ಕೇಟು ನೋರ್ತ್ ವಾರ್ಡ ರೆವೆನ್ಯೂ ಸರ್ವೆ ನಂಬ್ರ 369 ಬಾಗಾಯಿತು 0-61 ಸೆಂಟ್ಸ್ (26572 Sq Feet) 10-6-0 ತೀರ್ವೆಯ ಸ್ಥಳ ವ ಅದರಲ್ಲಿರುವ T-S-No. 15/1, 2 3, 4, 5ನೇ ಕಟ್ಟೋಣಗಳು:

ಈ ಆಸ್ತಿಯು ಕೆನರಾ ಹೈಸ್ಕೂಲಿನ ಒಂದುಗಡೆಯಲ್ಲಿದ್ದು ಮಾರ್ಗಕ್ಕೆ ತಾಗಿರುವ ಉಪ್ಪರಿಗೆ ಕಟ್ಟೋಣ 1, ಇದಕ್ಕೆ ಇಲೆಕ್ಟ್ರಿಕ್ ದೀಪಗಳು ಇರುತ್ತವೆ. ಇದು ಈಗ ಖಾಲಿಯಾಗಿರುವುದರಿಂದ ಏಲವಿಗೆ ನಿಲ್ಲುವವರು ಅದನ್ನು ಕೂಡಲೇ ಸ್ವಾಧೀನ ಪಡೆಯಬಹುದು

ಉಳಿದ ಬಿಟ್ಟು ಸದ್ರಿ ಕಂಪೌಂಡಿನಲ್ಲಿರುವ ಬಿಡಾರಗಳಿಂದ ತಿಂಗಳೊಂದರ ರೂ. 53-0-0 ಅಂದಾಜು ಬಾಡಿಗೆ ಸಿಕ್ಕುತ್ತದೆ. ಸದರಿ ಬಾಗಾಯಿತಿನಲ್ಲಿ ತೆಂಗಿನ ಮರಗಳು, ಕೃಷಿ ಮಾವಿನ ಮರಗಳು, ಹಲಸಿನ ಮರಗಳು ವಗೈರೆ ಇರುತ್ತವೆ.

ಕೋರ್ಟ ಹುಕುಂ ಪ್ರಕಾರ ಈಗ ಮಾರು ಕರೆಯುವ ಅಂದಾಜು ಕ್ರಯ ರೂ. 20,000/- ಆಗಿರುತ್ತದೆ.

Mangalore, } **B ANANTHA RAO,** B. A. B. L.
20—7—49, } Advocate-Commissioner.

ಪ್ರಕಟಣೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 44/1949.

ಅಪ್ಪಿಯಾನೆ ಲಕ್ಷ್ಮಿಬಾಯಿ, ಗೋವಿಂದ ನ್ಯಾಕರ ಹೆಂಡ್ತಿ, ಕಾರ್ಕಳ ತಾಲ್ಕು ಮರ್ಣೆ ಗ್ರಾಮದ ಕಿರಂಬೈಲು. ಅರ್ಜಿದಾರಳು

ಮತ್ತು

1. ಕಿಟ್ಟನ್ಯಾಕ, 2. ಅಪ್ಪುನ್ಯಾಕ, ರಾಮಯ್ಯನ್ಯಾಕ್ರ ಮಕ್ಕಳು. ಸದ್ರಿ ಮರ್ಣೆ ಗ್ರಾಮದಲ್ಲಿರುತ್ತಾರೆ. ಎದ್ರಿರು.

ಈ ಮೂಲಕ ತಿಳಿಯಪಡಿಸುವದೇನಂದ್ರೆ ಅರ್ಜಿದಾರಳ ತಂದೆ ಮೃತ ಗೋವಿಂದ ನ್ಯಾಕರು ತಾರೀಕು 3-1-1943ಲ್ಲಿ ಬರೆದಿಟ್ಟ ರಿಜಿಸ್ಟ್ರಿ ವೀಲನಾಮೆ ಪ್ರಕಾರ ಅತ್ತೆ ಬಹಾ ಐವೇಜು ವಸೂಲಾತಿಗೆ ವಾರಿಸ ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿದಾರಳು ಕೊಟ್ಟ ಸದ್ರಿ ಅರ್ಜಿಯು ತಾರೀಕು 29-8-1949ಕ್ಕೆ ಇಟ್ಟಿದೆ. ಆಕ್ಷೇಪ ಉಳ್ಳವರು ಸದ್ರಿದಿನ ಬೆಳಿಗ್ಗೆ 11ಗಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ಉಜರಿಸತಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು.

By order of the court
N. Mohandas Adyanthaya
Advocate for Petitioner

ಮೊಕ್ಕಾಂ. ಕಾರ್ಕಳ }
ತಾ. 1—8—1949. }

ಹಳ್ಳಿಗಳಲ್ಲಿ ಪಾನನಿರೋಧದ ಪರಿಣಾಮ

ಲೇಖಕ—'ಹಳ್ಳಿಗ'

ನಮ್ಮ ಮದ್ರಾಸ್ ಪ್ರಾಂತ್ಯದ ಕಾಂಗ್ರೆಸ್ ಸರಕಾರವು ತಮಗೆ ಪ್ರತಿ ವರ್ಷವೂ ಬರುತ್ತಿದ್ದ ಹದಿನೇಳುವರೆ ಕೋಟಿ ರೂಪಾಯಿಗಳ ಆದಾಯವನ್ನು ಕಳೆದುಕೊಂಡು ಪ್ರಾಂತ್ಯದಿಂದ ಸುರಾ ರಾಕ್ಷಸನನ್ನು ಹೊರಗೋಡಿಸಿ ಹಳ್ಳಿಯ ಜನರಿಗೆ ಮಹದುಪಕಾರವನ್ನು ಮಾಡಿದೆ ಎಂದು ಈಗ ಅಧಿಕಾರದಲ್ಲಿರುವ ಮಂತ್ರಿಗಳು ಹೆಗ್ಗಳಿಕೆಯಿಂದ ಹೇಳಿಕೊಳ್ಳುವುದು ರೂಢಿಯಾಗಿಯದೆ. ಪಾನಪ್ರತಿಬಂಧದಿಂದ ಹಳ್ಳಿಗನ ಜೀವನ ಮಟ್ಟವು ಏರಿದೆಯಂತೆ; ನೈತಿಕಮತ್ತೆಯ ಮಟ್ಟವು ಬಹಳ ಏರಿದೆಯಂತೆ. ಆದುದರಿಂದ ಪಾನನಿರೋಧದಿಂದುಂಟಾದ ನಷ್ಟವನ್ನು ತುಂಬಿಸಿಕೊಳ್ಳುವುದಕ್ಕೋಸ್ಕರ ಹೆಚ್ಚಿನ ಕರ ಹೇರುವುದು ನ್ಯಾಯವೆಂದು ಪ್ರಾಂತ್ಯದ ರಾಜಧಾನಿಯಲ್ಲಿ ಕುಳಿತು ಹಳ್ಳಿಗಳ ಪರಿಸ್ಥಿತಿಯನ್ನು ತಿಳಿಯದೆ ಹೇಳುವುದು ಸರಿಯಲ್ಲ. ಹಳ್ಳಿಯ ಜೀವನದಲ್ಲಿ ನುರಿತು ಹಳ್ಳಿಗಳ ಪರಿಸ್ಥಿತಿಯನ್ನು ಅಭ್ಯಾಸಿಸಿ ಹೇಳುವುದಾದರೆ ಪಾನಪ್ರತಿಬಂಧದಿಂದ ಕಳ್ಳ ಸೆರೆಯ ಉತ್ಪಾದನೆ, ಲಂಚಗುಳಿತನ ಮತ್ತು ಆಹಾರ ಉತ್ಪಾದನೆಗೆ ತಡೆ ಆಗಿದೆ. ದುರಭ್ಯಾಸದ ಚಟದಿಂದ ಕುಟುಂಬಿಕನ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎನ್ನಬಹುದು.

ಹಳ್ಳಿಗಳಲ್ಲಿ ಹೆಚ್ಚಿನ ಒಕ್ಕಲಿಗರು ಕೃಷಿಯ ಕಡೆಗೆ ಹೆಚ್ಚು ಗಮನ ಕೊಡುವುದನ್ನು ಬಿಟ್ಟು ಕಳ್ಳ ಸೆರೆಯನ್ನು ಮಾಡಿ ಅದರಿಂದ ಅಧಿಕ ಲಾಭ ಪಡೆದು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುತ್ತಿದ್ದಾರೆಂದು ಊಹಿಸಬಹುದು. ಆದುದರಿಂದ ಮೊನ್ನೆ ಮಾನ್ಯ ಗೋಪಾಲ ರೆಡ್ಡಿಯವರು ಪಾನ ನಿರೋಧದಿಂದ ಹಳ್ಳಿಗನ ಜೀವನ ಮಟ್ಟವು ಏರಿಯದೆ ಎಂದು ಹೇಳಿದ್ದು ಒಂದು ರೀತಿಯಿಂದ ಸರಿಯೆ. ಬರೆ ಆರು ರೂಪಾಯಿ ಬೆಲೆ ಇರುವ ಒಂದು ಮಣ ಬೆಲ್ಲದಿಂದ ಬಾಟ್ಲಿ ಒಂದಕ್ಕೆ ಐದು ರೂಪಾಯಿ ಬೆಲೆ ಇರುವ ಹದಿನೈದರಿಂದ ಇಪ್ಪತ್ತು ಬಾಟ್ಲಿ ಸೆರೆ ಮಾಡಲಾಗುತ್ತದಂತೆ. ಇದನ್ನು ತಯಾರು ಮಾಡಲು ಅವನಿಗೆ ಬೆಲ್ಲವನ್ನು ಕಡಡಿ ಇಡಲು ಅರ್ಧ ಘಂಟೆ, ಬಟ್ಟಿ ತೆಗೆಯಲು ಸಾಧಾರಣ ಮೂರು ಘಂಟೆಗಳು ಬೇಕಾಗಬಹುದು. ಮೂರು ನಾಲ್ಕು ಘಂಟೆ ದುಡಿತದಲ್ಲಿ ಕಡಿಮೆ ಎಂದರೆ ಎಪ್ಪತ್ತೈದು ರೂಪಾಯಿ ಲಾಭ ಸಿಕ್ಕುವಾಗ ಯಾರು ತಾನೆ ಆ ಕೆಲಸದಲ್ಲಿ ಪ್ರವೃತ್ತನಾಗುವುದಿಲ್ಲ? ನಿರಾತಂಕವಾಗಿ ಇಷ್ಟು ಹಣ ಸಿಕ್ಕುವಾಗ ಕೃಷಿಯ ಕಡೆ ಯಾರು ಲಕ್ಷ್ಯ ಕೊಡುವರು? ಧನಿಗಳ ಕಣ್ಣಿಗೆ ಮಣ್ಣೆರಚಲು ಏನೋ ಎಂತೊ ಸಾಗು ಮಾಡುವರು. ಹೀಗೆ ಮನಸ್ಸಿಲ್ಲದೆ ಕೃಷಿ ಮಾಡಿದ ಫಲವಾಗಿ ಉತ್ಪಾದನೆಯು ಕುಗ್ಗಿ ರಾಷ್ಟ್ರದ ಆಹಾರ ಪರಿಸ್ಥಿತಿ ಹದಗೆಟ್ಟು, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಆಹಾರ ಧಾನ್ಯಗಳನ್ನು ಹೊರ ದೇಶದಿಂದ ತರಿಸಿ ಯುದ್ಧ ಕಾಲದಲ್ಲಿ ಕೂಡಿಟ್ಟ ಸ್ಟರ್ಲಿಂಗ್ ಸಂಗ್ರಹವು ಬರಿದಾಗುವ ಪರಿಸ್ಥಿತಿ ಒದಗಿದೆ.

ಕಳ್ಳ ಸೆರೆ ಮತ್ತು ಮದ್ಯಪಾನವನ್ನು ನಿಲ್ಲಿಸಲು ಮುಂಚೆ ಇದ್ದುದಕ್ಕಿಂತ ಎಷ್ಟೋ ಪಾಲು ಹೆಚ್ಚು ಅಧಿಕಾರಿಗಳನ್ನು ನಿಯಮಿಸಿದ್ದೇವೆ ಎಂದು ನಮ್ಮ ಮಂತ್ರಿಗಳು ತಮ್ಮ ಘೋಷಣೆಯನ್ನು ಸಮರ್ಥಿಸಿಕೊಳ್ಳುವರು. ಈ ಪಾನ ನಿರೋಧಾಧಿಕಾರಿಗಳು ಬಡವರ ಮೇಲೆ ಕರ ಹೇರಿ ವಸೂಲು ಮಾಡಿದ ಹಣವನ್ನು ಸಂಬಳ ರೂಪದಲ್ಲಿ ಪಡೆದು ಸಂಬಳದ ಜತೆಯಲ್ಲೇ ಒಳ ಸಂಪಾದನೆಗೆ ಪ್ರಯತ್ನಿಸಬಹುದು. ಹೊರತು ಸತ್ಯ ಶೋಧನೆಯಲ್ಲಿ ನಿರತರಾಗಿರುವುದು ಕಾಣಸುತ್ತಿಲ್ಲ.

ನಮ್ಮ ಉಡುಪಿ ತಾಲೂಕಿನ ಉಪ್ಪೂರು ಗ್ರಾಮದಲ್ಲೇ ತನಿಖಿಗಿಳಿಯಲಿ. ಹಲವು ವಾರ್ಡುಗಳಿರುವ ಈ ಗ್ರಾಮದ ಒಂದು ವಾರ್ಡನ್ನು ಮಾತ್ರ ಪರಿಶೋಧಿಸಿದರೆ ಸಾಕು-ಅಲ್ಲಿಯ ಕೆಲವೆ ಮನೆಗಳನ್ನು ಬಿಟ್ಟರೆ ಮಿಕ್ಕ ಮನೆಗಳಲ್ಲಿ ಬಾಟ್ಲಿ ಬಾಟ್ಲಿ ತಯಾರೀ ಕಾರ್ಯ ಕಂಡುಬರಬಹುದು. ಕಳ್ಳಸೆರೆಯ ದೆಸೆಯಿಂದ ಬೆಲ್ಲದ ದರವು ತುಟಾಗ್ರತೆಯನ್ನು ಮುಟ್ಟಿಯದೆ. ಹಬ್ಬ ಹಾದಿಗೆ ಒಂದೆರಡು ಸೇರು ಬೆಲ್ಲವನ್ನು ಕೊಂಡುಹೋಗುವ ಒಕ್ಕಲಿಗರು ಒಂದುಡೆಯಿಂದ ಹಿಡಿದು ಡಬ್ಬಕಟ್ಟಲೆ ಬೆಲ್ಲವನ್ನು ಅಂಗಡಿಗಳಿಂದ ಕೊಂಡುಹೋಗುವ ದೃಶ್ಯ ಕಾಣುತ್ತಿದೆ. ಕಬ್ಬಿನ ಹಿತ್ತಲುಗಳಲ್ಲಿ, ಹೊಳೆಯ ಹೊಯಿಗೆಗಳಲ್ಲಿ, ಕೈಗದ್ದೆಗಳಲ್ಲಿ ಮತ್ತು ದೊಡ್ಡ ಪೊದರಿನ ಬುಡಗಳಲ್ಲಿ ಹುಳಿ ಆಗಲಿಕ್ಕೆ ಬೆಲ್ಲವನ್ನು ಕಡಡಿ ಇಟ್ಟ ಗಡಿಗೆಗಳು ಕಾಣಸಿಗಬಹುದು. ಈ ಗ್ರಾಮದ ಸಂದುಮೂಲೆಗಳಿಗೆ ಸಂಜೆಯಾಗುತ್ತಲೆ ನೂರುಕಟ್ಟಲೆ ಜನರು ಗ್ರಾಮದ ಇತರ ಭಾಗದಿಂದಲೂ, ನೆರೆಹೊರೆಯ ಗ್ರಾಮಗಳಿಂದಲೂ ಹೋಗಿಬರುತ್ತಿದ್ದಾರೆ. ಇನ್ನು ರಾತ್ರಿ ದೋಣಿಗಳ ಮೂಲಕ ಕಳ್ಳ ವಸ್ತುವನ್ನು ಕಲ್ಯಾಣಪುರದ ವರೆಗೆ ಕೊಂಡುಹೋಗಿ ಅದನ್ನು ಅಲ್ಲಿಂದ ಅಷ್ಟ ಮಾಹನೀಯರ ಕಾರುಗಳಿಂದ ಜಿಲ್ಲೆಯ ಇತರ ಪಟ್ಟಣಗಳಿಗೆ ಸಾಗಿಸುವರೆಂಬ ಊಹೆನೆಡೆಯಿದೆ. ಇದಲ್ಲದೆ ಕಳ್ಳಸೆರೆ ವಿತರಣೆ ಮಾಡುವ ದಲ್ಲಾಳಿಗಳಿಗಂತೂ ಕಡಿಮೆಯಿರುವಂತಿಲ್ಲ.

ಅಬ್ಕಾರಿ ಮತ್ತು ಪೋಲೀಸ್ ಅಧಿಕಾರಿಗಳು ಸುಮ್ಮನೆ ಕಣ್ಣು ಮುಚ್ಚಿ ಕುಳಿತಿರುವರೆ? ಅವರು ಪ್ರತಿ ಹಳ್ಳಿಗಳಿಗೆ ಹೋಗಿ ಕಳ್ಳ ಸೆರೆಯನ್ನು ಹಿಡಿಯುವುದಿಲ್ಲವೆ? ಇದನ್ನು ನಿಲ್ಲಿಸಲು ಜನರು ಸಹಕರಿಸುವುದಿಲ್ಲವೆ? ಎಂಬ ಪ್ರಶ್ನೆಗಳು ಉದ್ಭವಿಸುವವು. ಆದರೆ ಸರ್ವಸಾಮಾನ್ಯವಾಗಿ ಎಲ್ಲಾ ವರ್ಗದವರೂ ಸೇಕಡಾ ತೊಂಭತ್ತೊಂಭತ್ತು ಮಂದಿ ಸುರಾದೇವತೆಯ ಆರಾಧಕರೇ ಹೊರತು ಬ್ರಿಟಿಷರ ಕಾಲದಲ್ಲಿ ಸುರಾರಾಕ್ಷಸನನ್ನು ಓಡಿಸಲಿಕ್ಕೆ ಗುತ್ತಿಗೆಗಳ ಮುಂದೆ ಪೋಲೀಸ್ ಪಡೆಯ ಲಾಠೀ ಪೆಟ್ಟಿಗೆ ಎದೆ ಕೊಟ್ಟು ನಿಂತು ಪಿಕೆಟಿಂಗ್ ಮಾಡಿದ ಸ್ವಯಂಸೇವಕರಲ್ಲ ಎಂದು ಸರಕಾರಕ್ಕೆ ನಮ್ರತೆಯಿಂದ ಹೇಳಬಯಸುತ್ತೇವೆ. ದಿನ ಒಂದಕ್ಕೆ ಇಪ್ಪತ್ತರಿಂದ ನೂರು ರೂಪಾಯಿ ನಿರಾತಂಕವಾಗಿ ಗಳಿಸುವವನಿಗೆ ಲಂಚ ಕೊಡಲಿಕ್ಕೇನು ತೊಂದರೆ? ಅರೆ ಘಳಿಗೆಯಲ್ಲಿ ತಿಂಗಳ ಪಗಾರದ ಇಮ್ಮಡಿಯಷ್ಟು ಹಣವು ನಿರಾಯಾಸವಾಗಿ ಸಿಕ್ಕುವಾಗ ಅದನ್ನು ಬಿಡಲಿಕ್ಕೆ ಮಾನವನ ಮನಸ್ಸು ಒಪ್ಪೀತೆ? ಸತ್ಯಶೋಧನೆಯಾಗಲಿದೆಯಾದರೂ ಆರೋಪದ ವಾಟ್ಟಿಗೆ ಮಂತ್ರಿಗಳ ಮೇಲೂ ಲಂಚಗುಳಿತನದ ಆರೋಪವಿರುವಾಗ ಕೆಳತರಗತಿಯ ನೌಕರರು ಲಂಚವನ್ನು ಬಿಟ್ಟುಕೊಟ್ಟು ಕಾರ್ಯದಕ್ಷತೆಯೊಂದನ್ನೇ ಅವಲಂಬಿಸಿಯಾರೆಂದು ನಿಸ್ಸಂಶಯದಿಂದಿರುವುದು ಹೇಗೆ? ತಪ್ಪಿತಸ್ಥರನ್ನು ದಂಡಿಸುವವರಾರು? ಇನ್ನು ಲಂಚದವಿತರಣಗತ್ಯವುಳ್ಳ ಜಾಣ್ಮೆಗೇನೂ ಜನರಲ್ಲಿ ಅಭಾವವಿಲ್ಲ. ಈ ದುರ್ನಡತೆಯನ್ನು ಬಯಲಿಗೆಳೆಯಲು ಪ್ರಯತ್ನಿಸಿದರೆ, ಎಲ್ಲ ಒಟ್ಟುಕೂಡಿ ಅವನ ಮೇಲೆಯೇ ಇಲ್ಲದ ಅಪವಾದನೆ ಹೊರಿಸಿ, ಸಿದ್ಧಪಡಿಸಿ ಅವನ ಮೇಲೆ ತಿರುಗಿ ಬೀಳುವಂತೆ ಮಾಡಲು ಹಿಂದೆಮುಂದೆ ನೋಡುವುದಿಲ್ಲ. ಹೆಸರಿಗೆ ತಕ್ಕ ಬೇರೆ ಉದ್ಯೋಗವಿರುವ ಈ ವರ್ಗದವರು ಹೇರಳ ಹಣ ಸಂಪಾದಿಸಿ ವರ್ಷ ಒಂದಕ್ಕೆ ಹತ್ತು ಯಾ ಹದಿನೈದು ಸಾವಿರ ರೂಪಾಯಿ ಬೆಲೆ ಬಾಳುವ ಆಸ್ತಿಗಳನ್ನು ತಮ್ಮ ಕುಟುಂಬದವರ ಹೆಸರಿಗೆ ಕ್ರಯ ಮಾಡಿದ ನಿದರ್ಶನಗಳು ಅನೇಕವಿವೆ. ನಮ್ಮ ಪ್ರಾಂತ್ಯದಲ್ಲಿ ಪ್ರತಿ ವರ್ಷವೂ ಕುಡಿಯಲಿಕ್ಕೆ ವ್ಯಯವಾಗುವ ಐವತ್ತು ಕೋಟಿಗೆ ಮೇಲ್ಪಟ್ಟ ಹಣವು ಇಂಥ ಜನರ ಕೈಸೇರುವುದರಿಂದ ಅವರ ಜೀವನಮಟ್ಟ ಏರುವುದಕ್ಕೇನು ಅಡ್ಡಿ?

ಇನ್ನು ಜನರ ನೈತಿಕಮತ್ತೆಯತ್ತ ಗಮನ ಕೊಡುವುದಾದರೆ ಅದು ಕೂಡಾ ಹೀನ ಸ್ಥಿತಿಗಿಳಿದಿದೆ. ಮುಂಚೆ ಸೇಂದಿಯು [ಕಳ್ಳು] ಸಿ

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. P. 60/1949.

ದೇವಪ್ಪ ರೈ, ಶಿವಮ್ಮನ ಮಗ,
ಹಾಲಿ ಪುತ್ತೂರು ಕಸಬಾ—ಅರ್ಜಿದಾರ.

1. ಮಂಜಮ್ಮ, ಸಿದ್ದಂಮನ ಮಗಳು. 2. ನೀಲಂಮ 1ನೆ ಎದ್ರಿ ಮಗಳು. 3. ರಾಜವರ್ಮ ರೈ. 4. ಶೀಲಾವತಿ. 5. ವಸಂತ ದೇವಿ. 6. ರಾಜಕುಮಾರ ರೈ. 7. ಜ್ಞಾನವತಿ [ಮ್ಯಾನರಳು] 3ರಿಂದ 7ನೆ ವರೆಗಿನವರು 2ನೆ ಎದ್ರಿರ ಮಕ್ಕಳು. 7ನೆಯವಳು ಮ್ಯಾನರಳು, ಗಾರ್ಡಿಯಾನ ತಾಯಿ 2ನೆ ಎದ್ರಿ. 1-2-3-6-7ನೆ ಎದ್ರಿರು ಚಿಕ್ಕ ಮುಡ್ನೂರು ಗ್ರಾಮದ ಮುಂಡಾಯೂರು. 4ನೆ ಎದ್ರಿಳು ಬಿಳಿಯೂರು ಗ್ರಾಮದ ಅಡಿಂಜ ಆರಿಗರ ಹೆಂಡತಿ. 5ನೆಯವಳು ಕಣಿಯೂರು ಗ್ರಾಮದ ಪಿಲಿಕುಂಡೆಲು ಸಾಂತಪ್ಪ ಪೆರ್ಗಡೆರ ಮನೆಯಲ್ಲಿ —ಎದ್ರಿರು.

ಸದ್ರಿ ವ್ಯವಹರಣೆಯಲ್ಲಿ ತಾ.29-10-1947ರಲ್ಲು ಅರ್ಜಿದಾರನ ಅಕ್ಕನಾಗುವ ತಂಗಪ್ಪೆಯು ಬರೆದಿಟ್ಟ ವೀಲುನಾಮೆ ಪ್ರಕಾರ ಅರ್ಜಿಯಿಂದ ಕಾಣುವ ಆಸ್ತಿಗಳ ವಸೂಲಿಗೆ ಅರ್ಜಿದಾರನು ಹಕ್ಕುದಾರನಾಗಿದ್ದು ಅರ್ಜಿದಾರನ ಹೆಸರಿಗೆ ವಾರಿಸು ಸರ್ಟಿಫಿಕೇಟು Succession Certificate ಕೊಡಿಸಬೇಕಾಗಿ ಬರಕೊಂಡ ಅರ್ಜಿಯು ನೋಟೀಸಿನ ತನಿಖೆಯು ಇದೇ ಬರುವ ತಾರೀಕು 9-8-1949ಕ್ಕೆ ಇಟ್ಟಿರುವದರಿಂದ ಆ ಕುರಿತು ಎದ್ರಿರ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಬರಹಮೂಲಕ ಈ ಕೋರ್ಟಿನ ಮುಂದೆ 11 ಘಂಟೆಗೆ ಆ ವ್ಯಾಜಿಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಎದ್ರಿರನ್ನು ಶಿವಾಯಿ ಎಂತ ಮಾಡಿ ಮುಂದಿನ ತನ್ಖೆಯಿಂದ ತೀರ್ಮಾನಿಸೋಣಾಗುತ್ತದೆ. ಎಂತ ಈ ಕೋರ್ಟಿನವರ ಹುಕುಂಪ್ರಕಾರ ಈ ನೋಟೀಸು ಮಾಡಿಸಿಯದೆ.

B. Ramachandra Rao.
Pleader for Petitioner.
ತಾರೀಕು 11-7-1949. Puttur S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಕುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ಜೀವವಿಮೆಗಾಗಿ
ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.
(ಸ್ಥಾಪನೆ: 1934)
ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ: ಕೆ. ಎಸ್. ರಾವ್ ರೋಡು, ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ: "ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು

ನೋಟೀಸು

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ.

R. E. P. No. 165/1949. in
O. S. 289/47.

ಪದ್ಮಾವತಿ ಅಂಮ —ಅರ್ಜಿದಾರಳು.
ಮತ್ತು
1. ಮೈನರ್ ವಾಸುದೇವ. ಗಾರ್ಡಿಯನ್ ತಾಯಿ ಲಲಿತಂಮ. ಶೇಷ ಯಾನೆ ಸುಬ್ರಾಯ ಬಲ್ಲಾಳರ ವಿಧವೆ-ಉಡುಪಿ ತಾಲ್ಲೂಕು ಪುತ್ತೂರು ಗ್ರಾಮದ ನಿಟ್ಟೂರು. 2. ನರಸಿಂಹ ಉಡುಪ, ವೆಂಕಟ್ರಮಣ ಉಡುಪರ ಮಗ. ಉಡುಪಿ ಕಸಬಾ ಸೋದೆ ಮಠದ ಒಣ —ಎದ್ರಿರು.

ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಮೇಲ್ಕಂಡ ಡಿಕ್ರಿ ಅಮಲುಜಾರಿ ಪ್ರಕಾರ ಬಹಾ ಆವೇಜು ವಸೂಲಿ ಬಗ್ಗೆ ಅರ್ಜಿದಾರಳು ಅಪೇಕ್ಷಿಸಿದ ಯೇಲಂ ಕುರಿತು ನೋಟೀಸಿನ ಬಗ್ಗೆ ವ, ಯೇಲಂ ಶರ್ತ ನಿರ್ಣಯಿಸುವರೆ ತಾ. 16-8-1949ಕ್ಕೆ ಯಿಡೋಣಾಗಿಯದೆ. ಸದ್ರಿ ಎದ್ರಿರು ಆಕ್ಷೇಪ ಹೇಳತಕ್ಕದ್ದಿದ್ದರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಬೆಳಿಗ್ಗೆ 10 ಗಂಟೆಗೆ ಸ್ವತಹಾ-ವ-ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಎದ್ರಿರಿಗೆ ಯಾವ ತರದ ಆಕ್ಷೇಪವೂ ಇಲ್ಲವೆಂತ ಭಾವಿಸಿ ಸದ್ರಿ ಅಮಲುಜಾರಿಯ ಬಾಬ್ತು ಮುಂದಿನ ಕೆಲ್ಸ ಜರಗಿಸಲಾದೀತು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯದೆ.

(By Order of the Court)
U. B. Krishna Rao.
Advocate for Petitioner.
ಉಡುಪಿ, ತಾ. 27-7-49.

ಕ್ಕುತ್ತಿದ್ದ ಸಮಯದಲ್ಲಿ ಕುಡಿಕನು ತನ್ನ ದಿನ ಕೂಲಿಯ ಕಾಲಂಶದಲ್ಲಿ ತನ್ನ ಸುರಾತೃಷ್ಣೆಯನ್ನು ತೃಪ್ತಿಪಡಿಸಿಕೊಳ್ಳುತ್ತಿದ್ದನು. ಆದರೆ ಈಗ ಇಡಿ ದಿನ ದುಡಿದ ಹಣವನ್ನು ಕಳ್ಳ ಶರಾಬು ಕೊಂಡುಕೊಳ್ಳುವುದಕ್ಕೆ ವ್ಯಯಿಸಿದರೂ ತೃಪ್ತನಾಗದೆ ಮನೆಗೆ ಹೋಗಿ ಮತ್ತನಾಗಿ ಹೆಂಡತಿ ಮಕ್ಕಳಿಗೆ ಹೊಡೆದು ಹೆಂಡತಿ ದುಡಿದು ತಂದ ಅನ್ನವನ್ನು ತಿಂದು ಜೀವಿಸುವನು. ಶರಾಬಿನ ತೃಷೆಯು ಹೆಚ್ಚಿದಂತೆ ಅದನ್ನು ತೃಪ್ತಿಪಡಿಸುವುದಕ್ಕೋಸ್ಕರ ಹಣ ಸಂಪಾದಿಸಲು ಕಳ್ಳತನವನ್ನು ಮಾಡಲೆಬೇಕಾಗುತ್ತದೆ. ಮತ್ತತೆಯೂ ವಿಷಯಲಂಪಟತ್ವವೂ ಒಂದನ್ನೊಂದು ಹೊಂದಿಕೊಂಡಿರುವುದರಿಂದ ಇತ್ತೀಚೆಗೆ ಭ್ರೂಣ ಹತ್ಯಾದಿಗಳು ಹೆಚ್ಚಿದಂತಿವೆ. ಕುಡಿದು ಮತ್ತರಾಗಿ ಹೊಡೆದು ಹೊಡಿಸಿಕೊಳ್ಳುವುದು, ನಿರಪರಾಧಿಗಳಿಗೆ ಹೊಡೆಯುವುದು ಮತ್ತು ಜುಗಾರಿಯಾಡುವುದು ಹಳ್ಳಿಗಳಲ್ಲಿ ವಾಡಿಕೆಯ ವಿಷಯ.

ಕುಡುಕರ ಆರೋಗ್ಯವು ಪಾನ ಪ್ರತಿಬಂಧದ ಪೂರ್ವಕ್ಕಿದ್ದುದಕ್ಕಿಂತ ಎಷ್ಟೋ ಹದಗೆಟ್ಟಿದೆ. ಬೇಗನೆ ಹುಳಿ ಬರುವಂತೆ ನವಸಾಗರವೆ ಮೊದಲಾದ ರಸಾಯನಿಕ ದ್ರವ್ಯಗಳನ್ನು ಸೇರಿಸಿ ತಯಾರು ಮಾಡಿದ ಶರಾಬನ್ನು ಮನಸೋಚ್ಛೆ ಕುಡಿದ ಕುಡುಕನು ಖಂಡಿತವಾಗಿ ನರಗಳ ಸಂಬಂಧವಾದ ಕಾಯಿಲೆ, ಜೀರ್ಣಾಂಗಗಳ ಕಾಯಿಲೆ ಮತ್ತು ಕ್ಷಯರೋಗಕ್ಕೆ ಬಲಿ ಬೀಳುತ್ತಾನೆ! ಹೆಂಡ ಅಥವಾ ಸೇಂದಿಯು ಬೇಕಾದಷ್ಟು ಸಿಕ್ಕುತ್ತಿರುವ ಸಮಯದಲ್ಲಿ ಕುಡುಕ ಕೂಲಿಯವರು ತಮ್ಮ ಹಗಲಿನ ಗೆಯ್ಮೆಯ ಭವಣೆಯನ್ನು ಮರೆಯಲು ಸಂಜೆಗೆ ಒಂದು ಬಾಟ್ಲಿ ಸೇಂದಿಯನ್ನು ಕುಡಿಯುತ್ತಿದ್ದರು. ಇದು ಅವರಿಗೆ ಸುಖದಾಯಕವಾಗುತ್ತಿತ್ತಲ್ಲದೆ ಅದರಲ್ಲಿ ಸ್ವಲ್ಪ ಮಟ್ಟಿಗೆ "ಬಿ" ಜೀವಾತು ಇರುವುದರಿಂದ ಅವರ ದೇಹದ ಮೇಲೆ ಒಳ್ಳೆ ಪರಿಣಾಮವನ್ನುಂಟು ಮಾಡುತ್ತಿತ್ತು. ಇದನ್ನು ತಿಳಿದೊ ಏನೊ ಇತ್ತಿತ್ತಲಾಗಿ ಸರಕಾರದವರು, ತೆಗೆದಿಟ್ಟ ಕೆಲವೆ ಘಂಟೆಗಳಲ್ಲಿ ಮದ್ಯವಾಗುವ, ನೀರಾವನ್ನು ನೀರಾ ಕೇಂದ್ರಗಳಿಂದ ದೊರೆಯುವಂತೆ ಮಾಡಿದುದು ಸ್ತುತ್ಯಾರ್ಹವಾಗಿದೆ.

ಗುತ್ತಿಗೆದಾರರ ಮತ್ತು ಮುಕ್ತೇದಾರರ ಆರ್ಥಿಕ ಪರಿಸ್ಥಿತಿಯು ಹದಗೆಟ್ಟುದರಿಂದ ಅವರ ಕರುಣ ಕಥೆಯನ್ನು ಹೇಳಿ ತೀರದು. ಗುತ್ತಿಗೆದಾರರೆಲ್ಲ ಮಧ್ಯಮ ವರ್ಗಕ್ಕೆ ಸೇರಿದ್ದು ಮೇಲ್ಮಟ್ಟದ ಜೀವನವನ್ನು ಸಾಗಿಸುತ್ತಿದ್ದರು. ಈಗ ಅವರಿಗೆ ಆ ರೀತಿಯ ಜೀವನವನ್ನು ಸಾಗಿಸಲಿಕ್ಕಾಗದೆ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿಬಿದ್ದು ಹೆಚ್ಚು ತುಂಬಾ ಸಾಲಮಾಡಿ ನಿರುದ್ಯೋಗಿಗಳಾಗಿ ದಿನಕಳೆಯುತ್ತಿರುವರು. ಅವರಿಗೆ ಬೇರೆ ಉದ್ಯೋಗವನ್ನೂ ಮಾಡಿದ ಅಭ್ಯಾಸವಿಲ್ಲದುದರಿಂದ ಈ ಪರಿಸ್ಥಿತಿಗಿಳಿದಿರುವರು. ಬೇರೆಗತಿ ಇಲ್ಲದೆ ಕಳವು ಮತ್ತು ಮೋಸದಿಂದ ಜೀವಿಸುತ್ತಿರುವವರೆಷ್ಟು ಮಂದಿಯೋ!

ಪಾನ ನಿರೋಧದ ದೆಸೆಯಿಂದ ಹಳ್ಳಿಗಳಲ್ಲಿ ನಾಯಿಕೊಡೆಗಳಂತೆ ಅಲ್ಲಲ್ಲಿ ತಲೆ ಎತ್ತಿರುವ ಚಾ ಕಾಫಿ ಹೋಟೇಲುಗಳ ದೆಸೆಯಿಂದ ಕೂಲಿಯವರ ಕೈ ಬರಿದಾಗಿಯದೆ. ಅಲ್ಲದೆ ಹರೆಯದ ಮಕ್ಕಳಿಗೆ ಹಾಲು ಸಿಕ್ಕುವುದು ಕಠಿಣವಾಗಿಯದೆ. ಪಾನನಿರೋಧದ ಮುಂಚೆ ನನ್ನ ಗ್ರಾಮದಲ್ಲಿ ದಿನಕ್ಕೆ ಬರೆ ಹತ್ತು ಹದಿನೈದು ರೂಪಾಯಿ ವ್ಯಾಪಾರವಾಗುವ ಮೂರು ನಾಲ್ಕು ಹೋಟೇಲುಗಳಿದ್ದುವು. ಈಗ ಅಲ್ಲಿ ದಿನ ಒಂದಕ್ಕೆ ಹತ್ತರಿಂದ ಎಪ್ಪತ್ತೈದು ರೂಪಾಯಿಗಳ ವರೆಗೆ ವ್ಯಾಪಾರವಾಗುವ ಸಾಧಾರಣ ಇಪ್ಪತ್ತೈದು ಹೋಟೇಲುಗಳಿವೆ. ಕೆಲವು ಕಡೆಗಳಲ್ಲಿ ಈ ಹೋಟೇಲುಗಳಿಗೆ ಮನರಂಜಕ ಕೇಂದ್ರಗಳೆಂದು ಹೆಸರಿಟ್ಟು ಸಹಾಯ ಸಲ್ಲಿಸುತ್ತಿರುವರು. ಆಹಾರ ಅಭಾವದ ಈ ಕಾಲದಲ್ಲಿ ಹೇಗೋ ಹೇರಳ ಇಡ್ಲಿ ದೋಸೆಗಳನ್ನು ತಯಾರಿಸಿ ಲಾಭ ಪಡೆಯುವರು. ಮುಂಚೆ ಎರಡಾಣೆಯ ಮದ್ಯವನ್ನು ಕುಡಿದು ತೃಪ್ತರಾಗುತ್ತಿದ್ದ ದಿನ ಕೂಲಿಯವರು ಈಗ ಒಂದೆಡೆ ಸಿಕ್ಕಿದಾಗ ಕಳ್ಳ ಶರಾಬನ್ನೂ ಇನ್ನೊಂದೆಡೆ ಮೂರು ನಾಲ್ಕು ಸಲ ಚಾ ಕಾಫಿಯನ್ನೂ ಕುಡಿದು, ಗಳಿಸಿದ ಹಣವನ್ನೆಲ್ಲಾ ಅನಾವಶ್ಯಕ ವ್ಯಯಿಸುವುದರಿಂದ ಅವರಲ್ಲಿ ಅಸಂತುಷ್ಟಿಯುಂಟಾಗಿ ಸಂಪುಗಳು ತಲೆದೋರಿ ದೇಶದ ಉತ್ಪಾದನೆಯು ಕುಸಿಬಿದ್ದಿದೆ. ಆದುದರಿಂದ ಹೋಟೆಲುಗಳ ಪ್ರಸಾರವನ್ನು ತಡೆಗಟ್ಟಲು ಸರಕಾರದವರು ಒಂದು ಗ್ರಾಮದಲ್ಲಿ ಇಂತಿಷ್ಟೇ ಹೋಟೆಲುಗಳಿರಬೇಕೆಂದು ನಿಶ್ಚಯಿಸಿ ಅವುಗಳನ್ನು ಮುಂಚಿನ ಸೇಂದಿ ಅಂಗಡಿಗಳಂತೆ ಹರಾಜು ಮಾಡಿ ಅದರಿಂದ ಬಂದ ಹಣದಿಂದ ಸರಕಾರದ ಬರಿದಾದ ಬೊಕ್ಕಸವನ್ನು ತುಂಬಿಕೊಳ್ಳಬಹುದು.

ಇಂದಿನ ಕಾಂಗ್ರೆಸ್ ಸರಕಾರಕ್ಕೆ ನಿರೋಧವನ್ನು ಖಂಡಿತವಾಗಿಯೂ ಸಾರ್ಥಕ ಮಾಡಬೇಕೆಂದಿದ್ದರೆ ಈ ಕೆಳಗೆ ವಿವರಿಸಿದ ತರುಣೋಪಾಯವನ್ನು ಶೀಘ್ರದಲ್ಲಿ ಕೈಕೊಳ್ಳಬೇಕು. ಪ್ರತಿ ಗ್ರಾಮವನ್ನು ಸಂಘಟಿಸಿ ಅಲ್ಲಿ ಪಾನ ನಿರೋಧ ಕಮಿಟಿಗಳನ್ನು ಸ್ಥಾಪಿಸಬೇಕು. ಆ ಕಮಿಟಿಗಳಲ್ಲಿ ಬ್ರಿಟಿಷರ ಕಾಲದಲ್ಲಿ ಚುನಾವಣೆಯನ್ನು ಗೆಲ್ಲುವುದಕ್ಕೋಸ್ಕರ ಕಾಂಗ್ರೆಸ್ ಚೀಟಿಯನ್ನು ಕಟ್ಟಿದ ದುಡ್ಡಿನ ದೊಡ್ಡಪ್ಪನವರೂ ಕಾಳಸಂತೆಯಲ್ಲಿ ನಿಪುಣರೂ ಜಾತೀಯ ಗುಲಾಮರೂ ಅಧಿಕಾರ ಲೋಲುಪರೂ ಸ್ವಾರ್ಥ ಸಾಧಕರೂ ಇಲ್ಲದಂತೆ ನೋಡಿಕೊಳ್ಳಬೇಕು. ಬ್ರಿಟಿಷರ ಕಾಲದಲ್ಲಿ ಪೋಲೀಸರ ಲಾಟಿಯ ಪೆಟ್ಟಿಗೆ ಎದೆಕೊಟ್ಟು, ನಿಂತು ಸೆರಮನೆಯನ್ನು ಸೇರಿದ ಸದ್ಗುಣಿಗಳೂ ಚಾರಿತ್ರ್ಯವಂತರೂ ನಿಸ್ವಾರ್ಥಿಗಳೂ ನ್ಯಾಯನಿಷ್ಠರೂ ಜಾತ್ಯಾತೀತರೂ ಆದ ಮಧ್ಯಮ ವರ್ಗದ ಜನರು ಈ ಸಂಸ್ಥೆಗಳನ್ನು ಸೇರುವಂತೆ ಮಾಡಿ ಅವರಿಗೆ ತಕ್ಕ ವೇತನವನ್ನು ಕೊಟ್ಟು ಪಾನ ನಿರೋಧದ ಕಾರ್ಯವನ್ನೆಸಗಲಿಕ್ಕೆ ಅಧಿಕಾರಕೊಡಬೇಕು. ಕಳ್ಳಸೆರೆ ತಯಾರು ಮಾಡುವವರಿಗೆ ಕಠೋರ ಶಿಕ್ಷೆಯನ್ನು ವಿಧಿಸಬೇಕಲ್ಲದೆ ಸೆರೆ ತಯಾರು ಮಾಡುವವನನ್ನು ಹಿಡಿದುಕೊಟ್ಟವನಿಗೆ ಉತ್ತಮ ಇನಾಮುಗಳನ್ನು ಜಾಹೀರು ಮಾಡಬೇಕು.

ಇಂದಿನ ಈ ಸಂಕ್ರಾಂತಿಕಾಲದಲ್ಲಿ ಗುಳೆ ಬಂದ ಸಂತ್ರಸ್ತರತ್ತ ಗಮನಕೊಡದೆ, ಸರಕಾರವೇನೆಂದು ತಿಳಿಯದ ಕೋಟಿಕಟ್ಟಲೆ ಜನರಲ್ಲಿ ಸಾಕ್ಷರತೆಯ ಪ್ರಸಾರವನ್ನು ಕೈಕೊಳ್ಳದೆ, ಕೃಷಿ ಮತ್ತು ಕೈಗಾರಿಕೆಯತ್ತ ಸಾಕಷ್ಟು ಲಕ್ಷ್ಯಕೊಡದೆ ಜನರ ನೈತಿಕ ಮಟ್ಟವನ್ನು ಒಂದೆ ಸವನೆ ಮೇಲಕ್ಕೆತ್ತುವೆನೆಂಬ ತಪ್ಪುಭಾವನೆಯಿಂದ ಪಾನನಿರೋಧವನ್ನು ಕೈಕೊಂಡು ಅನಾಯಾಸವಾಗಿ ಬರುತ್ತಿದ್ದ ಕೋಟ್ಯಾಂತರ ಹಣವನ್ನು ಬಿಟ್ಟುಕೊಟ್ಟು ವಿವಿಧ ರೀತಿಯ ಕರಹೇರುವ ಪವ್ಯಾಸಕ್ಕೆ ಹೋಗಿ ಸರಕಾರವು ದೊಡ್ಡ ಪ್ರಮಾದವನ್ನೆಸಗಿದೆ. ಮಹಾತ್ಮಾಗಾಂಧಿಯವರ ಪಾನನಿರೋಧ ತತ್ವವನ್ನು ಯಾರೂ ಅಲ್ಲಗಳೆಯರು. ಆದರೆ ದೇಶದ ಮೂಢರೂ ನಿರಕ್ಷರ ಕುಕ್ಷಿಗಳೂ ಆದ ಕೋಟಿಕಟ್ಟಲೆ ಜನರನ್ನು ಮಹಾತ್ಮಾ ಗಾಂಧಿಯವರನ್ನಾಗಿ ಪರಿವರ್ತಿಸಲು ಹೊರಟ ಸರಕಾರದ ಧೋರಣೆಯು ಅವ್ಯವಹಾರ್ಯವೂ ಅಕಾಲಿಕವೂ ಇರುತ್ತದೆ. ಸೋಮಪಾನವು ವೇದಕಾಲದಿಂದಲೂ ದೇಶದಲ್ಲಿ ರೂಢಿಯಾಗಿದ್ದ ವಿಷಯ ಎಂಬುದನ್ನು ಗಮನಿಸಿ ಪಾನ ಪ್ರತಿಬಂಧದ ಕಾನೂನನ್ನು ಒಂದೋ ಕಿತ್ತೊಗೆದು ದೇಶದ ಬೆಳವಣಿಗೆಯತ್ತ ಲಕ್ಷ್ಯಕೊಡಬೇಕು. ಅಥವ ತಾವು ಮಾಡಿದ ಕಾನೂನು ಉಲ್ಲಂಘನೆಯಾಗದಂತೆ ತಕ್ಕ ಕ್ರಮ ಕೈಕೊಳ್ಳಬೇಕು. ಇಲ್ಲವಾದರೆ ಇಂದು ದೇಶದ ಆದ್ಯಂತ್ಯದಲ್ಲಿ ತಲೆದೋರಿರುವ ಅರಾಜಕತೆಯ ಚಿಹ್ನೆಗಳನ್ನು ನೋಡಿ ಬೇಸತ್ತು ಮಧ್ಯಮವರ್ಗದ ಜನರು ಕ್ಷೋಭೆಗೊಂಡು ಕಾಂಗ್ರೆಸ್ಸಿನ ಮೇಲಿರುವ ಆದರವನ್ನು ತೊರೆದು ಎಡಪಕ್ಷದವರ ಪ್ರಚಾರಕ್ಕೆ ಬಲಿಬೀಳುವ ಅಪಾಯವಿದೆ.

NOTICE

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

O. P. No. 25/1949

R. I. A 515/1949.

ಬೊಳಂತಿ ಮೊಗರು ರಾಮಕೃಷ್ಣ ಭಟ್ಟ
—ಅರ್ಜಿದಾರ.

ಮತ್ತು

1. ರಾಮಂಣ ಗಾಂಟೀರ. ಮೂಡಂಬೈಲು ಅಪ್ಪಯ್ಯ ಗಾಂಟೀರರ ಮಗ. 2 ಅಮ್ಮಣ್ಣಾಳ್ವ. 3. ಚಟ್ಟಿಂಣ ಆಳ್ವ. 1ನೆ ಎದ್ರಿ ತಂಗಿ ಉಂಮಕ್ಕ ಹೆಂಗ್ಸಿನ ಮಕ್ಕಳು. 3ನೇಯವ ಮೈನರ್, ಗಾರ್ಡಿಯನ್ ಮಾವ 1ನೇ ಎದ್ರಿ. ಕಾಸ್ರಗೋಡು ತಾಲ್ಲೂ ಬಾಡೂರು ಗ್ರಾಮದ ಕೂಟೇಲಲ್ಲಿ —ಎದ್ರಿಯರು.

ಸದ್ರಿ ಎದ್ರಿಯರೀಗೆ ಕೋರ್ಟು ಹುಕುಂ ಪ್ರಕಾರ ಈ ಮೂಲ್ಕ ತಿಳಿಸುವುದೇನಂದ್ರೆ:— ಅರ್ಜಿದಾರ ಕೂಡಾ ನಿಮಗೆ ತಾರೀಕು 23-8-1940ರಲ್ಲಿ ರುಪ್ಯಾ 1600ಕ್ಕೆ ಬರಕೊಟ್ಟ ಯಿಳಿದಾರುವಾರಿನ ಕೂಡಾ ರುಪ್ಯಾ 1600ನ್ನು T. P. ಆಕ್ಟಿನ ಸೆಕ್ಷನ್ 83ರ ಪ್ರಕಾರ ಸದ್ರಿ ಆಧಾರದ ವಿಮೋಚನೆಯಿಂದ ಆಸ್ತಿ ಸ್ವಾಧೀನ ಹೊಂದುವ ಬಗ್ಗೆ ಕೋರ್ಟಿಗೆ ಡಿಪೋಜಿಟು ಮಾಡಿರುವುದರಿಂದ, ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಮೇಲ್ಕಂಡ ಅರ್ಜಿಯ ತನ್ಖಿದ್ಯಾದಿಯಾದ ತಾ. 17-8-49ಕ್ಕೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉಪಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(Sd) **C. S. Shastry.**
Vakil for Petr.
Puttur 18-7-1949.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd.)
KUNJAL P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬೆಳಶೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿನಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆ [illegible] ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಶಶೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ ಸಿಟಿ.

ಏಜಂಟರು:—ಹುಬ್ಬಳ್ಳಿ ಧಾಮರ್ಗಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಚನಪ್ಪ ಸಿದ್ದಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು ಪಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಮೂಲ್ಕಿ ಬೇಂಕ್.
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K

ಹಳ್ಳಿಯ ರೈತ

—ಸಸಿ ದಿನಾಚರಣೆ ಮತ್ತು ಕಂಟ್ರೋಲು

ನಮ್ಮ ಜಿಲ್ಲೆಯಲ್ಲಿ ಸಸಿದಿನಾಚರಣೆಯನ್ನು ಸ್ವತಂತ್ರ ದಿನಾಚರಣೆಯಾಗಿರುವ ತಾ 15-8-'49 ಮತ್ತು ತಾ 21-8-'49ರ ವರೆಗಿನ ಏಳು ದಿವಸಗಳಲ್ಲಿ ಆಚರಿಸುವಂತೆ ಉತ್ಸಾಹ ಹುಟ್ಟಿಸುವ ರೀತಿ ಎಲ್ಲಾ ಇಲಾಖಾ ಅಧೀಕರರಿಗೆ ತಿಳಿಸಿ ಆಹಾರ ತುಟ್ಟಿಯ ನಿವಾರಣೆಗೆ ಎಲ್ಲರ ಸಹಕಾರ ಬಯಸುವ ಸರ್ಕ್ಯುಲಾರನ್ನು ಜಿಲ್ಲಾ ಕಲೆಕ್ಟರರು ತಾ 21-7-'49ಕ್ಕೆ ಹೊರಡಿಸಿರುವರು. ಬೇಗನೆ ಫಲ ಬರುವ ಒಂದು ಸಸಿಯನ್ನಾದರೂ, ಪ್ರತಿಯೊಬ್ಬನೂ ನೆಡಬೇಕೆಂಬುದು ಅವರ ಇಚ್ಛೆ. ಎಲ್ಲರೂ ಹೀಗೆ ಸಸಿನೆಟ್ಟು ಫಲ ಹುಟ್ಟಿಸಿದರೆ ಇದೊಂದು ಮಹತ್ಕಾರ್ಯವಾಗಿ ಪರಿಣಮಿಸುವುದು- ಸರ್ವರೂ ಈ ಕಡೆಗೆ ಗಮನಕೊಡುವರೆ?

ಬಾಳೆ, ಪಪ್ಪಾಯಿ, ಮರಗೆಣಸು ಮೊದಲಾದುವು ಖಾಲಿ, ಮೂಲೆ ಸ್ಥಳ ಮತ್ತು ಬೇಲಿಗಳಲ್ಲಿ, ಇದಬಹುದಾದ ಬೇಗನೆ ಫಲಕೊಡುವ ಗಿಡಗಳಾಗಿವೆ, ಸರಿ ಗುಳಿತೆಗೆದು ಗೊಬ್ಬರಹಾಕಿ ಬಾಳೆ ನಟ್ಟಿದ್ದಾದರೆ ನೀರು ಇಲ್ಲದೆಯೂ ಫಲಕೊಡುವುದು. ಒಂದೆರಡಕ್ಕೆ ನೀರು ಹಾಕುವುದಾದರೂ ಕಷ್ಟವಾಗದು. ಎಲ್ಲೆಲ್ಲಿ ಮಾತ್ರ ಶಂಕೆ ಏಕೆ ಮಾಡಬೇಕು? ಬಾಳೆಗಿಡ ಊರಲ್ಲಿ ಸಿಕ್ಕುವದು. ಪಪ್ಪಾಯಿ ಗಿಡಗಳನ್ನು ಕೃಷಿಇಲಾಖೆ ಮತ್ತು ನಮ್ಮ ಜಿಲ್ಲೆಯಲ್ಲಿ ಅನೇಕವಾಗಿರುವ ನರ್ಸರಿಯವರು ತಯಾರಿಸಿ ಸಹಕರಿಸುವುದು ಉತ್ತಮವಿದೆ. ನಡುವುದು ಮೇಲೆ ನಮೂದಿಸಿದ ದಿವಸಗಳಲ್ಲಿ ಮತ್ತು ಅನಂತರವೂ ಆಗಬಹುದು. ಮರಗೆಣಸು ಅಲ್ಲಲ್ಲಿ ಸುಲಭವಾಗಿ ಸಿಕ್ಕುವಂತೆ ಕೃಷಿಇಲಾಖೆಯು ಎಚ್ಚರವಿಡಬೇಕಾಗುವುದು. ಹಾಗೆಯೇ ಅದರ ಉಪಯೋಗವನ್ನು ಎಲ್ಲರೂ ತಿಳಿಯುವಂತೆ ಅವು ಬೆಳೆದು ಬರುವ ಮೊದಲು ಪ್ರಚಾರ ಮಾಡುವುದೂ ಅಗತ್ಯ. ಸರಕಾರವು ಕ್ರಿಯೆಕ್ಕೆ ಪಡಿಯುವುದೆಂದೂ ಇದೆ.

ಇತರ ಗಿಡಗಳನ್ನು ನಡುವುದು ಕೂಡಾ ಕಲೆಕ್ಟರರ ಸರ್ಕ್ಯುಲರಿನಲ್ಲಿ ಸೇರಿರುತ್ತದೆ. ಇವನ್ನು ಮುಂದಿನ ವರ್ಷಕ್ಕೆ ಬಾಕಿಮಾಡಿ ಈ ವರ್ಷ ಮೇಲಿನ ಮೂರು ತರದ ಗಿಡಗಳನ್ನು ಮಾತ್ರ ನಡುವುದು ಹಿತವಾಗದೋ ಎಂದು ಎಲ್ಲರೂ ಆಲೋಚಿಸೋಣ. ಇನ್ನೊಂದು ನಡಲಿಕ್ಕಿರುವುದು ನಮ್ಮ ಊರಿಗೆಣಸು. ಕುಮ್ರಿ ಭೂಮಿಯಲ್ಲಿ ನಟ್ಟು ಆಗಿದೆ. ಬತ್ತದ ಪೈರು ಕೊಯ್ದು ಮಳಲು ತರದ ನೀರಿಲ್ಲದ ಗದ್ದೆಗಳಲ್ಲಿ ನಡಲು ಸಮಯವಿದೆ. ಆಗ ಅದಷ್ಟು ನಟ್ಟು ಹೆಚ್ಚಿನ ಬೆಳೆ ತೆಗೆದವರಿಗೆ ಜಿಲ್ಲಾ ಕಲೆಕ್ಟರರು ಬಹುಮಾನ ಕೊಡುವುದಾದರೆ ಉತ್ತಮ.

ಸಸಿದಿನಾಚರಣೆಯ ಕುರಿತು ಬರಿಯುತ್ತಾ ಕಂಟ್ರೋಲು ವಿಷಯ ಕೆಲವು ಮಾತು ಬರಿಯಬೇಕೆಂದಿರುವೆನು. ಕಂಟ್ರೋಲು ತೆಗೆದು ಹಾಕಬೇಕೆಂಬುದು ನಮ್ಮಲ್ಲಿರುವ ಆಶೆ, ಮಹಾತ್ಮಾಜಿಯವರ ಪ್ರಯತ್ನದಿಂದ ತೆಗೆದುಹಾಕಲ್ಪಟ್ಟು ತಿರುಗಿ ಬಂದುಬರ ಕುರಿತು ಎಲ್ಲರೂ ಆಲೋಚಿಸಿ ಊರ ಹಿತಕ್ಕೆ ಪ್ರಯತ್ನಿಸುವುದು ತಪ್ಪಾಗದು. ಕೃಷಿಮಂತ್ರಿ ನಮ್ಮ ಊರವರು. ಸುಧಾರಣೆಯು ನಮ್ಮ ಊರಿಂದ ಏಕೆ ಆಗಕೂಡದು? ಎಲ್ಲವರ ಸಹಕಾರ ಸಿಕ್ಕಲು ಅನುಕೂಲಿಸಬೇಕಷ್ಟೆ. ಕ್ರಯ ನಿರ್ಣಯಿಸಿ ಅಕ್ಕಿ ಪಡಿಯುವ ಮೊದಲು ಹಿಂದೊಮ್ಮೆ ಶ್ರೀ ಧರ್ಮಸ್ಥಳ ಮಂಜಯ ಹೆಗ್ಗಡೇರು, [ಶ್ರೀ ಮೊಳಹಳ್ಳಿ ಶಿವರಾಯರು ಮತ್ತು ಶ್ರೀ ಜಿನರಾಜ ಹೆಗ್ಗಡೇರು ರೈತರು ಅಕ್ಕಿಯನ್ನು ಮುಡಿ ಒಂದರ ರೂ 7-14-0ರಲ್ಲಿ ಕೊಡುವಂತೆ ಯತ್ನಮಾಡಿದ್ದರು, ಅದೇ ತರದ ಪ್ರಯತ್ನ ಈಗ ಏಕೆ ಮಾಡಬಾರದು? ಅವರು ಜಿಲ್ಲೆಯಲ್ಲಿ ಸಂಚರಿಸಿದೊಡನೆ ಸರಕಾರವು ಕ್ರಯ ನಿಶ್ಚಯಿಸಿ ಅಲ್ಲಲ್ಲಿ ಕೆಲವರ ಅಕ್ಕಿ ಪಡೆಯಿತು ಅನಂತರ ವರ್ಷಂಪ್ರತಿ ಅಕ್ಕಿಯಲ್ಲಿ ಬಂದ ನಷ್ಟ ಎಷ್ಟೆಂದು ಗ್ರಹಿಸಲು ಕೂಡಾ ಕಷ್ಟವಾಗಿದೆ. ಬೆಳೆಸಲು ಪ್ರಯತ್ನಿಸುವಾಗ ನಷ್ಟಬಾರದಂತೆ ನೋಡುವುದು ಅತೀ ಅಗತ್ಯ. ಇವೆರಡು ಸಾಧನೆಗಳಿದ್ದರೆ ಮಾತ್ರ ಆಹಾರ ತುಟ್ಟಿಯಿಂದ ಪಾರಾಗಬಹುದು. ಕೆಲಸಗಾರನಿಗೆ ಉಣ್ಣಲು ಕಡಿಮೆ ಮಾಡುವುದರಲ್ಲಿ ಫಲವಿಲ್ಲ. ಎಲ್ಲರಿಗೂ ಬೇಕಾದ ಆಹಾರ ಅವರವರು ಪಡೆದು ಇಟ್ಟುಕೊಳ್ಳುವಂತೆ ಎಡೆಕೊಡುವದು ಅಗತ್ಯ. ಹೆಚ್ಚಿಗೆ ಇಟ್ಟುಕೊಳ್ಳುವುದಾದರೆ ಸರಕಾರವು ಸ್ವಾಧೀನ ಪಡಿಯುವಂತಿರಬೇಕು. ಸಾಯಲು ಬಿಡುವುದು ಸರಿಯಲ್ಲವಾದರೂ ಧರ್ಮಾಸ್ಪತ್ರಿಯ ಔಷಧಿಯಂತೆ ಎಲ್ಲರೂ ಸರಕಾರದಿಂದ ಅಕ್ಕಿ ಪಡಿಯುವುದು ಸರಿಯಲ್ಲ. ಎಷ್ಟು ದೊಡ್ಡ ಸರಕಾರವಾದರೂ ಒಂದಲ್ಲ ಒಂದು ಸಮಯ ಸೋತು ನಿಲ್ಲುವುದು. ಮಾನ್ಯ ಗವರ್ನರ್ ಜನರಲ್ ಶ್ರೀ ರಾಜಾಜಿಯವರು ಈ ಕುರಿತು ಎಚ್ಚರದ ಮಾತುಗಳನ್ನು ಎಲ್ಲರೂ ತಿಳಿಯುವಂತೆ ಕೆಲವೇ ದಿವಸದ ಹಿಂದೆ ಆಡಿರುವರು. ಬಲಿಷ್ಠನು ಅಬಲಿಯನ್ನು ಪ್ರೀತಿಯಿಂದ ಕಾಣಬೇಕಾದಂತೆ ಬಲಿಷ್ಠನಾಗಿರುವ ಸರಕಾರವು ನಂಬಿಕೆಯನ್ನು ಪ್ರಥಮವಾಗಿ ತೋರಿಸಿ ಕಾರ್ಯಸಾಧಿಸುವುದು ಉತ್ತಮ. ನಂಬಿಕೆ ಇಲ್ಲದಿರುವುದೆಂದರೆ ಪರಸ್ಪರ ಕೆಲಸವಾಗುವುದು ಸಂದೇಹ. ಸ್ವತಂತ್ರ ಪಡೆದವರಾಗಿ ನಮ್ಮನ್ನು ನಾವು ತಿಳಿದುಕೊಳ್ಳಬೇಡವೇ? ಹಿಂಜರಿಯುವುದು ತೀರಾ ತಪ್ಪಾಗದೇ? ವರ್ಗದಾರರು ಮತ್ತು ರಹಿತರು ಅಕ್ಕಿಯನ್ನು ಒಳ್ಳೇ ರೀತಿಯಲ್ಲಿ ತಯಾರಿಸಿ ಹೆಚ್ಚಿಗೆ ಅಕ್ಕಿಯನ್ನು ಸ್ಟೋರುಗಳಿಗೆ ಕೊಡುವಂತೆ ಮನಸ್ಸುಮಾಡುವುದು, ರೂ 13-12-0 ಕ್ರಯ ಸರಕಾರ ಕೊಡುವುದು, ಚಿಲ್ಲರೆಯಾಗಿ ಒಂದು ಮುಡಿ ಮಾತ್ರ ರೂ 15-12-0ರಂತೆ ಊರ ಉಪಯೋಗಕ್ಕೆ ವಿಕ್ರಯಿಸ ಬಿಡುವುದು. ಮುಡಿ ಹೊತ್ತುಕೊಂಡು ಹೋಗತಕ್ಕದ್ದಲ್ಲದೆ, ಗಾಡಿ ದೋಣಿ, ವಗೈರೆ ವಾಹನಗಳಲ್ಲಿ ಕೊಂಡುಹೋಗ ಕೂಡದೆಂದಿರುವುದು, ಸರಕಾರವು ಮಾತ್ರ ತುಟ್ಟಿ ನಿಗತ ಸ್ಥಳಗಳಿಗೆ ಕೊಂಡುಹೋಗಿ ಸೇರು 1ರ ಎಂಟಾಣೆಯಂತೆ ವಿಕ್ರಯಿಸುವ ಏರ್ಪಾಡು ಇಡುವುದು, ದಾಸ್ತಾನಿಗೆ ಇರುವ ಅಕ್ಕಿ ದಸಂಬರ ಮತ್ತು ಅನಂತರದ ತಿಂಗಳಲ್ಲಿ ತಯಾರಿಸುವುದು, ಅತನಕ ಹೊರ ಊರುಗಳಿಗೆ ಹೋಗದ ರೀತಿ ಎಲ್ಲಾ ತರದ ಜಾಗ್ರತೆಯಿಡುವುದು, ತಪ್ಪಿ ನಡೆದವರಿಗೆ ಕಠಿಣ ಶಿಕ್ಷೆ ವಿಧಿಸುವುದು-ಈ ಕ್ರಮಗಳನ್ನಿಟ್ಟರೆ ಸುಧಾರಣೆ ಬೇಗ ಬರಲಾರದೇ? ಕಷ್ಟಗಳು ಇಲ್ಲವೆಂದು ಹೇಳಲಾರೆ. ಸೇರು 1ರ ಎಂಟಾಣೆಯಲ್ಲಿ ವಿಕ್ರಯಿಸಿ ಸಿಕ್ಕುವ ಮುನಾಫೆಯಿಂದ ಅಗತ್ಯವೆಂದಾಗುವ ಶಿಬಂಧಿಯ ಖರ್ಚು ಕಳೆದು ಉಳಿಯುವ ರೂ. 13—2—0ರಲ್ಲಿ ಕೊಟ್ಟವರಿಗೆ ಬೋನಸ್ಸು ಕೂಡಾ ಕೊಡಬಹುದು. ಸರಕಾರದ ನೌಕರರಿಗೆ, ಪಡೆದ ರೂ. 13-2-0ರ ಕ್ರಯಕ್ಕೆ ಖರ್ಚು ಕೂಡಿಸಿ ಕೊಡಬಹುದು. ಸರಕಾರವು ನಂಬಿಕೆ ತೋರಿಸಿ, ಸಹಕಾರವನ್ನು ಕೊಟ್ಟ ರೈತರಂತೂ ಊರಲ್ಲಿ ಅಕ್ಕಿಯನ್ನು ಕೇಖರಿಸಿಡಲು ಎಡೆಕೊಡಲಾರರು. ಮುಖ್ಯವಾಗಿ ಇಂಥವರಿಂದ ಕೂಡಿದ ಕಮಿಟಿಗಳನ್ನು ಪ್ರತಿ ಗ್ರಾಮದಲ್ಲಿ ಮಾಡಿದುದಾದರೆ ಯೋಗ್ಯ ಕೆಲಸವಾಗಲು ಕಾರಣವಿರುವುದು. ಕ್ರಮೇಣ ಅಕ್ಕಿಯ ದರಇಳಿವು ಮಾಡುತ್ತಾ ಬರಲು ಇದು ಅನುಕೂಲ ಮಾಡಿಕೊಡುವುದು. ಪೇಟೆಯ ಜನರು ಹಳ್ಳಿಗೆ ಸೇರಲುಅನುಕೂಲಕೂಡಾ ಕೊಟ್ಟು ಕೃಷಿ ಹೆಚ್ಚಲು ಕಾರಣವಾಗುವುದು. ಇದೊಂದು ರೀತಿಯನ್ನು ಮಾನ್ಯ ಮಂತ್ರಿಗಳವರು, ಇನ್ನಿತರ ಅಧೀಸಂಬ ಮತ್ತು ರೈತ ವರ್ಗದ ಮುಂದಿಡಲು ಸಂಕೋಚವಾಗುವುದಾದರೂ ಅವರೆಲ್ಲರೂ ವಿಚಾರಿಸುವಂತೆ ಇಲ್ಲಿ ಕೊಡಲಾಗಿದೆ.

ಸಸಿ ದಿನಾಚರದೆ ಕುರಿತು ಮದ್ರಾಸು ಸರಕಾರದ ಮಾನ್ಯ ಕೃಷಿ ಇಲಾಖಾ ಮಂತ್ರಿಯವರು ಈ ರೀತಿ ಬರೆಯುತ್ತಾರೆ:—

"ಆಹಾರ ತುಟ್ಟಿ ನಿವಾರಣೆಗಾಗಿ ಬೇಗ ಫಲಕೊಡುವ ಫಲಗಿಡಗಳನ್ನು ರಭಸದಿಂದ ನಡುವ ಕುರಿತು ಕಮಿಟಿಯ ನಿರ್ಣಯದ ಕಾಗದ ತಲ್ಪಿರುತ್ತದೆ. ಅದನ್ನು ಡಿಪಾರ್ಟ್‌ಮೆಂಟಿಗೆ ಕಳುಹಿಸುತ್ತಿರುವೆನು. ಕೇಂದ್ರ ಸರಕಾರದ ವ್ಯವಸಾಯ ಮಂತ್ರಿಗಳು ಪ್ರಾರಂಭಿಸಿದ ಸಸಿದಿನಾಚರಣೆ ಯೋಜನೆಯನ್ನು ನಿಮ್ಮ ಕಮಿಟಿಯು ತೆಗೆದುಕೊಂಡಿರುವುದು ನನಗೆ ಸಂತೋಷ ಕೊಡುವುದು. ಬರುವ ತಿಂಗಳ ತಾ. 15ಕ್ಕೆ ಸಂಸ್ಥಾನದಲ್ಲೆಲ್ಲಾ ಸಸಿದಿನಾಚರಣೆ ವಾರವನ್ನು ಕೈಕೊಳ್ಳುವ ಆಲೋಚನೆ ಇರುವುದು."

Fort St. George (ಸಹಿ) ಎ. ಬಿ. ಶೆಟ್ಟಿ.
26-7-49

ತಾ. 15-8-49ಕ್ಕೆ ಇನ್ನು ಹೆಚ್ಚಿನ ದಿವಸವಿಲ್ಲ. ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಸಸಿದಿನಾಚರಣೆಯನ್ನು ಆಚರಿಸಿ ಅದಷ್ಟು ಫಲಗಿಡಗಳನ್ನು ನಟ್ಟು ನಮ್ಮ ದೇಶದ ಸಂಪತ್ತು ಹಾಗೆಯೇ ಆಹಾರಾಭಿವೃದ್ಧಿಗೆ ನಾವೆಲ್ಲರೂ ಸಹಕಾರವನ್ನು ಕೊಡುವೆವೇ?

ಎಮ್. ಆರ್. ಪುಂಡ.
ಕಾರ್ಯದರ್ಶಿ.
ಮುಲ್ಕಿ ಗ್ರಾಮಾಭಿವೃದ್ಧಿ ಕಮಿಟಿ.
ತಾ. 26-7-49, ಮುಲ್ಕಿ.

ಬೇಕಾಗಿದ್ದಾರೆ

ಹಾಯರ್‌ಗ್ರೇಡ್ ಟ್ರೈನಾದ ಉಪಾಧ್ಯಾಯರೊಬ್ಬರು ಪುತ್ತೂರು ತಾಲ್ಲೂಕು ಮರ್ಕಂಜಾ ಪಂಚಾಯತ ಬೋರ್ಡ ಶಾಲೆಯಲ್ಲಿ ಕೆಲಸ ಮಾಡುವರೆ ಬೇಕಾಗಿದ್ದಾರೆ. ತಲಬು ನಿಶ್ಚಯ ವಗೈರೆ ಹೆಚ್ಚಿನ ವಿವರದ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವುದು.

ಸೋಮಪ್ಪ ರೈ,
President,
Markanja Panchayat Board·S·K·

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷನರಿಗಳು
ದೊರೆಯುತ್ತವೆ.
ಬೆಲೆ. ರೂ. 4 8 0
ಸಿರಿಗನ್ನಡ ಅರ್ಥಕೋಶ 4 8 0
ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಷ್ಣುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಕ್ಕಿಣ್ಣ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.

ನೋಟೀಸು

ಮೂಲ್ಕಿ 'ಆಸ್ಪತ್ರೆ ಬಡ ರೋಗಿ ಫಂಡಿನ' ಮೆಂಬರರ ಮಹಾಸಭೆಯು ಇದೇ ಬರುವ ಆಗೋಸ್ತು ತಿಂಗಳ ತಾ 27ನೇ ಶನಿವಾರ ಮಧ್ಯಾಹ್ನ 5 ಘಂಟೆಗೆ ಮೂಲ್ಕಿ ಸಹಕಾರ ಸ್ಟೋರು ಕಟ್ಟಡದಲ್ಲಿ ಜರಗುವುದು. ಮೆಂಬರರೆಲ್ಲರೂ ದಯವಿಟ್ಟು ಬರುವಂತೆ ವಿನಂತಿಸುವ,

ಎಮ್. ಆರ್. ಪುಂಜ,
ಪ್ರೆಸಿಡೆಂಟ್.
Mulki Hospital Poor Fund.
26-7-49, ಮುಲ್ಕಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 — 11-8-1946

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER:
Hon'ble Sri. A. B. Shetty
Minister for Agriculture & Veterinary

Telegram: "Navayuga"

Estd. 1921 ಸ್ಥಾಪನೆ.

ನವಯುಗ

ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ ವಾರ 50

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29 No. 50

ಅಗೋಸ್ತು 15 ಹಿಡಿಯುವ ರಾತ್ರಿ, ತಾಸು 12 ಕಳೆದು ಮಿನಿಟಾಗುವಾಗ-

ಪಂಡಿತ ನೆಹರುಗಳೇ ಆದಿಯಾಗಿ ಕೇಂದ್ರದ ಹಾಗೂ ಪ್ರಾಂತ್ಯದ ಎಲ್ಲಾ ಮಂತ್ರಿಗಳೂ ಎದ್ದು ಕುಳಿತು ಸ್ವತಂತ್ರ ಭಾರತಮಾತೆಯ ಮತ್ತು ಬಲಿದಾನಿ ಬಾಪೂಜಿಯ ಚಿತ್ರವನ್ನು ತಮ್ಮ ಮನೋಪಟಲದಲ್ಲಿ ಚಿತ್ರಿಸಿಕೊಂಡು ಮೂರು ನಿಮಿಷ ಏಕಾಗ್ರಚಿತ್ತದಿಂದ ಧ್ಯಾನಿಸಬೇಕು. ಆ ವೇಳೆ ಅವೆರಡು ಪ್ರೇರಕ ಶಕ್ತಿಗಳ ನಿರ್ದೇಶಾನುಸಾರವಾಗಿ ಕಳೆದೆರಡು ವರುಷಗಳ ಆಡಳಿತೆಯಲ್ಲಿ ತಾವು ಮಾಡಿದುದೆಷ್ಟು, ಮಾಡದೆ ಬಾಕಿ ಬಿಟ್ಟಿರುವುದೆಷ್ಟು ಎಂಬುದನ್ನು ತೂಗಿ ನೋಡಿಕೊಂಡು ತಮ್ಮ ಮೇಲೆ ಬಾಕಿಯಿರುವುದೆಲ್ಲವನ್ನೂ ಇನ್ನೊಂದು ಅಗೋಸ್ತು 15 ಬರುವುದರೊಳಗೆ ಸಂದಾಯಿಸುವೆವೆಂದು ಆ ಭಾರತಾಂಬೆ ಮತ್ತು ಬಾಪೂಜೀ ಆತ್ಮದಿದಿರಲ್ಲಿ ಪ್ರಮಾಣಬದ್ಧರಾಗಬೇಕು.

ಅತ್ಯುಚ್ಚ ಅಧಿಕಾರಿಯಿಂದ ಹಿಡಿದು ತೀರಾ ಕೆಳ ದರ್ಜೆಯ ನೌಕರನ ವರೆಗಿನ, ಸರಕಾರೀ ಸಂಬಳ ತಿನ್ನುವ ಸರ್ವರೂ ಮೂರು ಮಿನಿಟು ಕಣ್ಣು ಮುಚ್ಚಿ ಕುಳಿತು ಸ್ವಾತಂತ್ರ್ಯಾವಧಿಯಲ್ಲಿ ತಾವು ನಡೆಸಿರಬಹುದಾದ ಲಂಚ, ವಂಚನೆ, ದರ್ಪ, ಅತ್ಯಾಚಾರಗಳೆಷ್ಟು; ಅಂತೆಯೇ ನ್ಯಾಯ, ಶಾಂತಿ, ವ್ಯವಸ್ಥಾಪಾಲನೆ ಮಾಡಿದುದೆಷ್ಟು ಎಂಬುದನ್ನು ತುಲನೆ ಮಾಡಿ ನೋಡಿ, ಉಳಿವ ಶೇಷಾಂಶವಾವುದಿದ್ದರೂ 'ಭಾರತಾರ್ಪಣ'ವೆಂದು ಪೂರ್ಣ ವಿಸರ್ಜಿಸಿಕೊಂಡು, ಇನ್ನು ಮುಂದೆ ಸ್ವತಂತ್ರ ರಾಷ್ಟ್ರ ಮತ್ತು ರಾಷ್ಟ್ರಪಿತನ ಸೂತ್ರಗಳಿಗೆ ವಿರುದ್ಧವಾಗುವದೇನನ್ನೂ ಮಾಡಲಾರೆವೆಂದು ಪ್ರತಿಜ್ಞೆ ತೊಡಬೇಕು.

ಎಲ್ಲಾ ವಿಧದ ಕಳ್ಳ ಸಂತೇ ವ್ಯಾಪಾರಿಗಳೂ ಆ ಕಾಳರಾತ್ರೀ ಮುಹೂರ್ತದಲ್ಲಿ ತಮ್ಮ ಅಂತಃಚಕ್ಷುವನ್ನು ತೆರೆದಿದ್ದು, ಎರಡು ವರುಷಗಳ ಸ್ವಾತಂತ್ರ್ಯಾವಧಿಯಲ್ಲಿ ಭಾರತಾಂಬೆಯೆಷ್ಟು ಕ್ಷಯಿಸಿದ್ದಾಳೆ ಎಂದು ಆಕೆಯ ಕಡೆಗೊಮ್ಮೆ ಅವಳು ಕ್ಷೀಣಿಸಿದಷ್ಟು ಅಂಶ ತಮ್ಮ ಬೊಕ್ಕಸ ಕೊಬ್ಬಿರುವದೇ ಎಂದು ತಮ್ಮ ಕಡೆಗೊಮ್ಮೆ ನೋಡಿಕೊಂಡು, ರಾಷ್ಟ್ರದ ಸಂಪತ್ತಿನ ಮತ್ತು ತಮ್ಮ ಭಂಡಾರದ ಈ ಅಸ್ತವ್ಯಸ್ತ ಇಳಿತ ಭರತಗಳು ಮುಂದಿನ ಮಹಾ ಪ್ರಳಯದ ಸೂಚನೆಯಲ್ಲವೇ ಎಂದು ಆ ಮೂರು ಮಿನಿಟು ಯೋಚಿಸಿಕೊಳ್ಳಬೇಕು. ಇಂತಹ ಸೆಳೆತವನ್ನು ಈಗಿನಿಂದಲೇ ಬಿಟ್ಟೆವೆಂದು ಭಾರತಮಾತೆ ಮತ್ತು ಬಾಪೂ ಆತ್ಮ ಸಾಕ್ಷಿಯಾಗಿ ಪ್ರಮಾಣಮಾಡಿ ನೀಟಾನೀಟ ಅಡ್ಡಬಿದ್ದು ಅಲ್ಲೇ ಅಶಿಂದಮನ, ಆತ್ಮಸಂಯಮನ ತಪ ಮಾಡುತ್ತಾ, ತಾ. 15ರ ಸೂರ್ಯನೊಂದಿಗೆ ಏಳಬೇಕು.

ಹಿಂದೂ, ಮುಸ್ಲಿಂ ಅಥವಾ ಬೇರಾವುದೇ ಧಾರ್ಮಿಕವಾದಿಗಳು, ಇಲ್ಲವೇ ಯಾವುದೇ ಉಪ ಜಾತಿ, ಒಳ ಜಾತಿ ಅಭಿಮಾನಿಗಳು ತಾವಿರುವ ಸ್ವತಂತ್ರ ಭಾರತಾಂಬೆಯು ವಸ್ತುತಃ ಹೇಗಿದ್ದಾಳೆಂಬುದನ್ನೂ ರಾಷ್ಟ್ರಪಿತನು ಯಾವುದಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡನೆಂಬುದನ್ನೂ ಸರಿಯಾಗಿ ಮುಂದಿಟ್ಟು ಪಡಿಸಿಕೊಳ್ಳುವದಕ್ಕಾಗಿ ಆ ಕತ್ತಲೇ ಮುಹೂರ್ತದಲ್ಲಿ ಅವೆರಡು ಮಹಾ ಶಕ್ತಿ ಕಿರಣಗಳನ್ನು ತಮ್ಮಲ್ಲಿ ಸಾಕ್ಷಾತ್ಕರಿಸಿಕೊಂಡು ಮೂರು ಮಿನಿಟು ಹೊತ್ತು ಆ ಪ್ರಖರ ಪ್ರಕಾಶಕ್ಕೆದೆಯೊಡ್ಡಿ ಒಳಗಿನ ಕಲ್ಮಷಗಳನ್ನು ಕರಟಿಸಿ ಬಿಟ್ಟು ಏಳಬೇಕು.

ಕಮ್ಯೂನಿಸ್ಟರು, ಕಾನೂನು ಭಂಜಕರು, ಹಿಂಸಾ ಪ್ರವೃತ್ತರು, ಟೀಕಾಕಾರರು ಮತ್ತಿತರ ಎಲ್ಲಾ ವಿಧದ ಅವಸರವಾದಿಗಳು ಉಗ್ರಗಾಮಿಗಳು ಸ್ವತಂತ್ರ ಭಾರತಾಂಬೆಯ ಸೌಮ್ಯಮೂರ್ತಿ ಮತ್ತು ಬಾಪೂಜಿಯ ಶಾಂತಾಕಾರವನ್ನು ಧ್ಯಾನಿಸಲಾರರಾದರೆ ಕಣ್ಣು ಮುಂದಿರುವ ಆ ಕಾಳರಾತ್ರಿಯನ್ನೇ ಮೂರು ಮಿನಿಟು ಯೋಚಿಸಿಕೊಳ್ಳಲಿ. ಈ ರಾತ್ರಿ ಈಗಲೇ ನಿವಾರಣೆಯಾಗಬೇಕೆಂದು ಮನೆಗೆ ಬೆಂಕಿ ಹತ್ತಿಸಿ ಬೆಳಕು ಮಾಡಿಕೊಳ್ಳಬಹುದೇ, ಅಥವಾ ಸೂರ್ಯೋದಯ ತನಕ ಕಾಯಬೇಕೇ ಎಂಬುದನ್ನಾದರೂ ತುಲನೆಮಾಡಿಕೊಳ್ಳಲಿ. ವ್ಯಕ್ತಿಶಃ ತಮ್ಮನ್ನೂ ಆ ರಾತ್ರಿಯನ್ನೂ ಮಾತ್ರವಲ್ಲದೆ ತಮಗಿರುವ ಬೇರಾವ ಸಂಬಂಧವನ್ನೂ ಆ ಮುಹೂರ್ತದ ಮಟ್ಟಿಗೆ ನೆನಪು ಮಾಡದೇ ನೇ ಚಿಂತಿಸಿ ಯಾವ ತೀರ್ಮಾನ ಮಾಡುವುದೋ ಅದರಂತೆ ವರ್ತಿಸುವೆವೆಂದು ಪ್ರಮಾಣಬದ್ಧರಾಗಲಿ.

ಜಮೀನ್ದಾರರು, ದೊಡ್ಡ ದೊಡ್ಡ ವರ್ಗದಾರರು, ಭಂಡವಾಳಗಾರರು, ಮೇಲ್ಜಾತಿಯವರೆಂದು, ಮೇಲ್ವರ್ಗದವರೆಂದು ಮೆರೆಯುತ್ತಿರುವ ಎಲ್ಲರೂ ಈ ಮುಹೂರ್ತದಲ್ಲಿ ಎದ್ದು ಕುಳಿತು ತಮ್ಮ ಸ್ಥಾನಮಾನ, ಮುಂಡಾಸು, ಬಿರುದುಬಾವಲಿಗಳ— ಮಹಾರಾಜರುಗಳ ಕಿರೀಟ ಮತ್ತು 'ಸರ್' 'ದಿವಾನ್ ಬಹದ್ದೂರ್' ನಂತಹ ಬಿರುದು ಬಿಲ್ಲೆಗಳೊಡನೆ ಹೋಲಿಸಿ ನೋಡಿ, ಅವುಗಳ ಗತಿಯೇ ಹೀಗಾದ ಮೇಲೆ ತಮ್ಮವುಗಳಿಳಿದಾವೇ ಎಂದು ಯೋಚಿಸಿ ಆ ಮೂರು ಮಿನಿಟುಗಳೊಳಗೆ ತೀರ್ಮಾನಕ್ಕೆ ಬಂದು, ಅದರಂತೆ ವರ್ತಿಸುವ ಶಪಥ ತೊಡಲಿ.

ರೈತ ವರ್ಗ ಮತ್ತು ಯಾವುದೇ ರೀತಿಯ ಬೆಳೆ ಬೆಳೆಯಿಸಲು ಸಾಧ್ಯವಿರುವ ಎಲ್ಲರೂ ಆಗೊಮ್ಮೆ ನಿದ್ರೆ ಬಿಟ್ಟೆದ್ದು ನಿಂತು, ತಮ್ಮ ದೃಷ್ಟಿಪಥದಲ್ಲಿ ಸ್ವತಂತ್ರ ಭಾರತ ಮಾತೆಯ ನಿಜ ಸ್ವರೂಪವನ್ನು ಇಟ್ಟುಕೊಂಡು ಏಕಚಿತ್ತದಿಂದ ಮೂರು ಮಿನಿಟು ನೋಡಲಿ. ಆ ರೂಪದಲ್ಲಿ ತೊನ್ನು ಹಿಡಿದಂತೆ ಬಂಜರು ಭೂಮಿಗಳೂ ಒಂದೆಡೆ ದೊಡ್ಡ ಗಾಯವಾಗಿ [illegible] ಆಹಾರ ಧಾನ್ಯಕ್ಕಾಗಿ ಹೋಗುವ ಕೋಟ್ಯಾವಧಿ ರೂಪಾಯಿಗಳ ಧಾರೆಯೂ ಕಾಣಿಸುತ್ತಿದೆಯಾದರೆ "ಅಯ್ಯೋ, ಅದನ್ನಲ್ಲಿಯೇ ಸರಿಪಡಿಸಿ ಬಿಡುವೆವು" ಎಂದು ಆಗಲೇ ಪ್ರಮಾಣ ಮಾಡಲಿ.

ಪ್ರಾಯ 21 ರೊಳಗಿನ ಅಪ್ರಾಯಸ್ಥ ಸ್ತ್ರೀ ಪುರುಷರೆಲ್ಲರೂ, ಈ ಮುಹೂರ್ತದಲ್ಲಿ ಕಣ್ಣು ಉಜ್ಜಿಕೊಂಡೆದ್ದು, ತಮ್ಮಂತೆಯೇ ಇನ್ನೂ ಪಕ್ವಕ್ಕೆ ಬಾರದಿರುವ ಭಾರತ ಸ್ವಾತಂತ್ರ್ಯವನ್ನು ಮತ್ತು ಸ್ವತಃ ತಮ್ಮನ್ನು ಮೂರು ಮಿನಿಟುಗಳ ವರೆಗೆ ತಾದಾತ್ಮ್ಯತೆಯಿಂದ ಅವಲೋಕಿಸಿ ಸ್ವತಂತ್ರ ಭಾರತವೂ ತಾವೂ ಒಟ್ಟೊಟ್ಟಿಗೆ ತುಂಬಿಕೊಳ್ಳುವಂತೆ ಆಗಿನಿಂದ ಸರ್ವಶಕ್ತಿಯನ್ನು ಉಪಯೋಗಿಸಿ ಅವಿಶ್ರಾಂತವಾಗಿ ದುಡಿಯುವೆವೆಂದು ಪ್ರತಿಜ್ಞೆ ತೊಡಲಿ.

ಪ್ರಾಯ 21ಕ್ಕೆ ಮಿಕ್ಕಿದವರೆಲ್ಲರೂ ಕಣ್ಣು ಜಾಡ್ಯ ಕಳೆದ ಆ ಕ್ಷಣದಲ್ಲಿ ಎದ್ದು ಕುಳಿತುಕೊಳ್ಳಲಿ. ರಿಪಬ್ಲಿಕ್-ಭಾರತದ ಭವ್ಯ ಭಾವನಾಚಿತ್ರದಿದಿರಲ್ಲಿ ಆ ಚಿತ್ರವನ್ನು ರೂಪಿಸತಕ್ಕ ಹೊಣೆಗಾರ ಮತದಾರರು ತಾವೆಂಬುದನ್ನೂ ಚಿತ್ರಿಸಿಕೊಂಡು, ಮೂರು ಮಿನಿಟು ತಲ್ಲೀನರಾಗಿ 'ನಿನಗೆ ಭವ್ಯ ಭವಿಷ್ಯವನ್ನು ರೂಪಿಸಿ ಕೊಡುವೆವು; ನೆರವೇರಿಸಿಕೊಡುವೆವು, ನಡೆಯಿಸಿ ಕೊಡುವೆವು' ಎಂದು ಸ್ವತಂತ್ರ ಭಾರತಾಂಬೆಯಿದಿರು ಪ್ರಮಾಣ ಮಾಡಲಿ.

ಎಲ್ಲರೂ ಆ ಮುಹೂರ್ತದಲ್ಲೆದ್ದು, ಮೂರು ಮಿನಿಟುಗಳ ಆತ್ಮಶುದ್ಧಿ ಧ್ಯಾನ ಮಾಡಿ 'ಜೈ-ಹಿಂದ್!' ಎನ್ನಲಿ- ಈ ಜೈ ಹಿಂದ್ ಆ ಮುಹೂರ್ತದಿಂದ ಕಾರ್ಯರೂಪ ಧರಿಸುತ್ತಾ ಹೋಗಲಿ!

ಜೈ-ಹಿಂದ್ !

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:- ಧಾರವಾಡ,

THE UNITED KARNATAK INSURANCE COMPANY, LIMITED.

ಇದೀಗ ರೈತನ ಸರದಿ-

ಭಾರತ ಸ್ವಾತಂತ್ರ್ಯಕ್ಕೆ ಎರಡು ವರುಷ ತುಂಬಿ ಮೂರನೇ ವರುಷ ಹಿಡಿಯುವ ಈ ಸ್ಥಿತ್ಯಂತರದ ಪ್ರಾಮುಖ್ಯ ಸನ್ನಿವೇಶದಲ್ಲಿ ಈಗ ಬಂದಿರುವುದು ತಮ್ಮ ಕಾಲವೆಂದು ರೈತರು ತಿಳಿದಿರಬೇಕಾದುದು ಅಗತ್ಯ. ಶಾಶ್ವತವಾದ ಮುಖ್ಯಾಮುಖ್ಯ ಸ್ಥಾನಗಳು ಸದಾ ಹಾಗಿರಬಹುದು ಆದರೆ ಕಾಲೋಚಿತ ಪ್ರಾಮುಖ್ಯತೆಯು ಒಮ್ಮೊಮ್ಮೆ ಒಂದೊಂದು ವರ್ಗಕ್ಕೆ ಬರುವದಿದೆ. ಭಾರತದ ಮಟ್ಟಿಗೆ ರೈತನಿಗೇನೇ ಎಂದೆಂದಿಗೂ ಶಾಶ್ವತ ಪ್ರಾಮುಖ್ಯತೆ. ಜತೆಯಾಗಿ ಈಗಿನ ಕಾಲಾನುಗುಣ ಪ್ರಾಮುಖ್ಯತೆಯೂ ಆತನಿಗೇನೇ ಬಂದಿದೆ.

ಈ ಪರ್ಯಾಯ

ಸ್ವತಂತ್ರ ಭಾರತಕ್ಕಾಗಿ ಒಂದೊಂದು ಅವಧಿಯಲ್ಲಿ ಒಂದೊಂದು ವರ್ಗವು ಮಿಕ್ಕವರಿಗಿಂತ ಹೆಚ್ಚಾಗಿ ದುಡಿಯಬೇಕಾದ ವಿಶೇಷ ಸಂದರ್ಭಗಳಿಗೀಡಾಗಿದ್ದಿತು ಸ್ವಾತಂತ್ರ್ಯ ಚಳವಳಗಳ ವೇಳೆ ಮಿಕ್ಕೆಲ್ಲವನ್ನೂ ಮರೆತು ಹೋರಾಟ ರಂಗದಲ್ಲಿ ತಮ್ಮನ್ನು ತಾವೇ ಸಮರ್ಪಿಸಿಕೊಳ್ಳುವ ಯುವಕ ಯುವತಿಯರ ಆವಶ್ಯಕತೆ ಬಿದ್ದಿದ್ದಿತು. ಸ್ವಾತಂತ್ರ್ಯದಾದಿ ಭಾಗದಲ್ಲಿ ಎದ್ದ ಜಾತೀಯ ಮಹಾಗೊಂದಲಗಳ ವೇಳೆ ಶಾಂತಿರಕ್ಷಕ ದಳಗಳ ಮತ್ತು ಕಾನೂನು ವ್ಯವಸ್ಥಾಪಾಲಕ ಪೋಲೀಸರ ಪ್ರಾಮುಖ್ಯತೆ ಬೆಳೆದಿದ್ದಿತು ಹೈದರಾಬಾದು ಹೋರಾಟದ ಆ ಐದು ದಿನಗಳಲ್ಲಿ ಮತ್ತು ಕಾಶ್ಮೀರ ಸಮರ ನಡೆಯುತಿದ್ದಾಗ ಸೈನಿಕರ ಆವಶ್ಯಕತೆ ಮೂಡಿದ್ದಿತು. ಸ್ವಾತಂತ್ರ್ಯದ ಸಮರ ಕಾಲಗಳಲ್ಲಿ ಹೋರಾಟ ಶಸ್ತ್ರರ ಆವಶ್ಯಕತೆಯಿದ್ದಂತೆ ಸ್ವಾತಂತ್ರ್ಯನಂತರ ಆಡಳಿತ ಚತುರರ ಅಗತ್ಯ ತೋರಿ ಬಂತು. ಈ ರೀತಿ ರಾಷ್ಟ್ರಕ್ಕೆ ಆಯಾಯಾ ಸಮಯಕ್ಕೆ ವಿಶೇಷ ಅಗತ್ಯ ಬೀಳುವುದನ್ನು ಆಗಾಗಲೇ ಪೂರೈಸಿಕೊಡುವ ವರ್ಗವು ಆ ಅವಧಿಯ ಮಟ್ಟಿಗೆ ಸರ್ವ ಪ್ರಥಮ ಗೌರವ ಗಳಿಸುವುದು ಸ್ವಾಭಾವಿಕ. ಇಂದು ಕೃಷಿಕರ ಸರದಿ ಬಂದಿದೆ, ಈಗ ಬೇಸಾಯಗಾರರ ಪರ್ಯಾಯ.

ಮುಖ್ಯ ಸಮಸ್ಯೆ

ಆಹಾರದ ಪ್ರಶ್ನೆಯು ಇಂದು ಎಲ್ಲಕ್ಕಿಂತ ಮುಖ್ಯವಾಗಿದೆ. ಎರಡು ವತ್ಸರ

ಸಂಕಟದಲ್ಲಿದ್ದ ವಿಧವೆಗೆ ರೂ. ೨೪,೮೦೦

FIDAALLY & CO.
MANUFACTURERS OF METAL CALENDARS ADVERTISEMENT BOARDS PRINTED TIN CONTAINERS AND PLAIN TIN CONTAINERS OF ALL KINDS
3rd Cross Lane Falkland Road
BOMBAY

೭೨—೬—೧೯೪೯

ಕ್ರೀಸೆಂಟ ಇನ್ಶೂರೆನ್ಸ ಕಂ. ಲಿ. ಮುಂಬಯಿ

ಮಾನ್ಯರೆ,

ನನ್ನ ಮೃತಹೊಂದಿದ ಗಂಡನು ನಿಮ್ಮ ಕಂಪನಿಯಲ್ಲಿ ಇಳಿಸಿದ ವಿಮೆಯ ಹಣವನ್ನು, ನನ್ನ ಬೇಡಿಕೆಯ ಮೇರೆಗೆ ತಾವು, ಅತ್ಯಂತ ಸಹಾನುಭೂತಿಯಿಂದ ತಡಮಾಡದೆ ನನಗೆ ಕೊಟ್ಟದ್ದಕ್ಕಾಗಿ ನಾನು ತಮಗೆ ಚಿರಋಣಿಯಾಗಿರುವೆನು

ನನ್ನ ಗಂಡನು ಕಂತಿನಿಂದ ಕೇವಲ ರೂ. ೩,೮೭೩-೮-೦ ಮಾತ್ರ ಈ ಪಾಲಿಸಿಗಳ ಮೇರೆ ಕೊಟ್ಟಿದ್ದನು. ಅದರ ಬದಲಾಗಿ ನನಗೆ ತಮ್ಮಿಂದ ರೂ ೨೪,೮೦೦ ದೊರೆತವು. ಇದರಿಂದ ನನಗೆ ಈ ಸಮಯದಲ್ಲಿ ಬಹಳ ದೊಡ್ಡ ಸಹಾಯವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ದುರ್ದೈವದಿಂದ ನನ್ನ ಗಂಡನು ಅಕಸ್ಮಾತ್ತಾಗಿ ತೀರಿಕೊಂಡದರಿಂದ ನನ್ನ ಮೇಲೆ ದುಃಖದ ರಾಶಿಯೇ ಬಿದ್ದಿತು ತುಂಬಿಬರಲಾರದ ಹಾನಿಯಿಂದ ದಿಕ್ಕುತೋಚದವಳಾಗಿ ನಿರಾಶಳಾದ ನನಗೆ ನಿಮ್ಮ ಕ್ರೀಸೆಂಟ ಇನ್ಶೂರನ್ಸ ಕಂಪನಿಯು ಈ ಸಹಾಯದಿಂದ ಆಶಾಕಿರಣಗಳನ್ನು ಅಂಕುರಿಸಿ ಎಷ್ಟೋ ಧೈರ್ಯವನ್ನು ಕೊಟ್ಟಿದೆ.

ತಮ್ಮ ಈ ಸತ್ವರ ಸಹಾಯಕ್ಕಾಗಿ ನಾನು ತಮಗೆ ತುಂಬಾ ಕೃತಜ್ಞಳಾಗಿದ್ದೇನೆ. ನನ್ನ ನಮ್ರ ವಂದನೆಗಳನ್ನು ಸ್ವೀಕರಿಸಬೇಕು.

ತಮ್ಮಿಂದ ಉಪಕೃತಳು



ಅದೊಂದು ದುಃಸಹವಾದ ವಿಪತ್ತು!

ಒಮ್ಮಿಂದೊಮ್ಮೆಲೆ ದೈವವು ಆಕೆಯ ಪತಿಯನ್ನು ಕಸಿದುಕೊಂಡಿತು. ಆದರೆ "ಕ್ರೀಸೆಂಟ" ದ ಆಸರದಿಂದ ಅದರ ವಿಪರೀತ ಪರಿಣಾಮಗಳು ತೀವ್ರವೇ ದೂರಾದವು. ಕೇವಲ ರೂ. ೩,೮೦೦ ಕಂತು ತುಂಬಿದ್ದರೂ ಕೂಡಲೇ ರೂ. ೨೪,೮೦೦ ವಿಮಾ ಹಣವು ಕೊಡಲಾಯಿತು.

ಕ್ರೀಸೆಂಟದಲ್ಲಿಯ ವಿಮೆಯು ನಿಮ್ಮನ್ನು ದುರ್ದೈವೀ ಆಪತ್ತುಗಳಿಂದ ಖಂಡಿತವಾಗಿ ರಕ್ಷಿಸಬಲ್ಲದು. ಬೇಕಾದಂಥ ದುರ್ಧರ ಪ್ರಸಂಗದಲ್ಲಿಯೂ ಕ್ರೀಸೆಂಟದ ಸತ್ವರ, ಸಾದರ ಸೇವೆಯು ಹಾಗೂ ಅತ್ಯಂತ ಉಪಯುಕ್ತವಾದ ಯೋಜನೆಗಳು ನಿಮಗೆ ಎಲ್ಲ ಸುಖಶಾಂತಿಯನ್ನು ಕೊಡುವವು.

ನಿಮ್ಮ ಎಲ್ಲ ಅವಶ್ಯಕತೆಗಳಿಗಾಗಿ
ವಿಮಾ ಯೋಜನ ಇದ್ದೇ ಇದೆ

ದಿ ಕ್ರೀಸೆಂಟ
ಇನ್ಶೂರನ್ಸ ಕಂಪನಿ ಲಿ.

ಸ್ಥಾಪನೆ ೧೯೧೯

ಲಾಲಜೀ ಚೇಂಬರ್ಸ, ಟಿಮರಿಂಡ ಲೇನ, ಫೋರ್ಟ, ಮುಂಬಯಿ.

NAS 365

ತುಂಬಿದ ಸ್ವಾತಂತ್ರ್ಯದ ಈ ಅವಧಿಯಲ್ಲಿ ಎಲ್ಲಕ್ಕಿಂತ ದೊಡ್ಡ ಕಷ್ಟವಾಗಿ ಉಳಿದಿರುವ ಸಮಸ್ಯೆಯೆಂದರೆ ಆಹಾರದ್ದು. ರಾಷ್ಟ್ರದೊಳಗಿನ ಅತೃಪ್ತಿ, ಅಶಾಂತತೆಗಳೆಲ್ಲಕ್ಕೂ ಪ್ರತ್ಯಕ್ಷಾಪ್ರತ್ಯಕ್ಷ ಮೂಲ ಕಾರಣವೇ ಆಹಾರದ ಅಭಾವ. ಜೀವನದ ಮೂಲಾಧಾರವಾದ ಆಹಾರ ಕಡಿಮೆ ಬಿದ್ದುದರಿಂದ ಸಾಮಾನ್ಯರಲ್ಲಿ ಅತೃಪ್ತಿ ಹಬ್ಬಿಕೊಂಡಿತು; ಈ ಅತೃಪ್ತಿಯು 'ಸ್ವಾತಂತ್ರ್ಯದಳಿತ ಸಾರ್ಥಕವಾಗಲಿಲ್ಲ' ಎಂಬ ರಾಜಕೀಯ ಅತೃಪ್ತಿಯನ್ನು ಮೊಳೆಯಿಯೊದಗಿಸವು ಮತ್ತು ಶಕ್ಯವಿದ್ದಷ್ಟು ಕಾಂಗ್ರೆಸ್ ಸರಕಾರಗಳು ಹೋರಾಡುತ್ತಾ ಬಂದಿವೆ. ಆದರೆ ತಾವು ಕೊಟ್ಟ ಹೋರಾಟ ಸಾಲದೆಂಬುದು ಜನತೆಗಿಂತಲೂ ಹೆಚ್ಚಾಗಿ ಸರಕಾರೀ ನಾಯಕರಿಗೆ ತಿಳಿದಿದೆ. ಆ ಹೋರಾಟವನ್ನು ಅಮೂಲಾಗ್ರವಾಗಿ ನಡೆಯಿಸಿ, ಆಹಾರ ಕೊರತೆಯನ್ನು ಪೂರ್ಣ ನಿವಾರಿಸಿಕೊಳ್ಳಬೇಕು; ಆಹಾರ ಧಾನ್ಯಗಳಿಗಾಗಿ 1951ರ ನಂತರ ಚಿಕ್ಕಾಸೂ ವಿದೇಶಗಳಿಗೆ ಹೋಗದಂತೆ ಆ ಅವಧಿಯೊಳಗೆ ರಾಷ್ಟ್ರವನ್ನೂ ಕಿತ್ತೆಸೆದು ಎಲ್ಲವನ್ನೂ ಸಂಗೊಳಿಸಿಟ್ಟು ಇಂದಿನ ನೆಹರೂ ನೇತೃತ್ವದ ಕಾಂಗ್ರೆಸ್ ಸರಕಾರಗಳು ಮುಂದಿನ ರಿಪಬ್ಲಿಕ್ ಭಾರತ ಸರಕಾರಗಳಿಗೆ ಮಹದುಪಕಾರ ಮಾಡಿದಂತಾಗುವದು. ಅಪ್ರಾಯಸ್ಥ, ಅಪಕ್ವ ಭಾರತದ ಗಾರ್ಡಿಯನ್‌ತನವನ್ನು ಪ್ರಚಲಿತ ಸರಕಾರಗಳು ಯೋಗ್ಯ ರೀತಿಯಿಂದ ನಿರ್ವಹಿಸಿದಂತಾಗುವದು. ಅಂತಹ ಕೃತಾರ್ಥತೆಯನ್ನು ಸಾಧಿಸಿಕೊಡತಕ್ಕವರು ರೈತರು; ಎಂದೆಂದಿಗೂ ಭಾರತದ ಜೀವಾಳವಾಗಿರುವ ಕಿಸಾನರು.

-ರೈತ, ರಾಷ್ಟ್ರಕ್ಕೆ ಸ್ವಂತಾಹಾರ ನಿರ್ಮಿಸಲಿ!

ಸಿತ.; ಹೀಗೆ ಉದರದಿಂದೆದ್ದು ಮನಸ್ಸಿನ ವರೆಗೆ ವ್ಯಾಪಿಸಿದ ಅಸಮಾಧಾನವು ಕಮ್ಯೂನಿಷ್ಟರಂತಹ ಅಶಾಂತಿ ನಿರ್ಮಾಪಕರಿಗೆ ಅನುಕೂಲ ವಾತಾವರಣವನ್ನು ನಿರ್ಮಿಸಿತು; ಆಡಳಿತ ನಿರ್ವಹಿಸುತ್ತಿರುವ ಪಕ್ಷದ ದೂರು ದೂಷಣೆ ಮಾಡುವವರಿಗೆ ಇದೇ ಆಶ್ರಯವಾಯಿತು. ಆಹಾರಾಭಾವವು ಈ ರೀತಿ ಒಂದೆಡೆ ಅಶಾಂತಿಗೆ ಕಾರಣವಾದರೆ ಮತ್ತೊಂದೆಡೆ ಕ್ಷಯ ಹೇತುವಾಯಿತು. ಈಗಿನ ಅತೃಪ್ತಿಕರ ಸ್ಥಿತಿಯನ್ನಾದರೂ ಇಷ್ಟಕ್ಕೇ ಸುಧಾರಿಸಿಕೊಳ್ಳಬೇಕಾದರೆ ವರುಷಕ್ಕೆ 100 ಕೋಟಿಗಳಿಗೂ ಮಿಕ್ಕಿ ಹಣ ಸುರಿಸಿ ಪರದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸಿಕೊಳ್ಳುವ ಆವಶ್ಯಕತೆ ಬಿತ್ತು. ರಾಷ್ಟ್ರದ ಕಾದಿಟ್ಟ ನಿಧಿಯು ಇದಕ್ಕಾಗಿ ಕರಗಹತ್ತಿತು. ಬದುಕಿ ಉಳಿದನಂತರವೇ ಭಾಗ್ಯ ಸಂಪಾದನೆ; ಊಟದ ಪ್ರಶ್ನೆ ಮುಗಿಸಿಕೊಂಡ ಮೇಲೆಯೇ ಉದ್ಯಮಗಳ ಪ್ರಶ್ನೆ. ಹೀಗಾಗಿ ರಾಷ್ಟ್ರದ ಯಾವುದೇ ಉದ್ಯಮವನ್ನು ಬಲಗೊಳಿಸಲು ಹಣವುಳಿದಿಲ್ಲ. ಅವುಗಳಿಗೆ ಪಾಲಬಹುದಾಗಿದ್ದ ದೊಡ್ಡ ಮೊತ್ತವು ಆಹಾರಕ್ಕಾಗಿ ಹೋಗುತ್ತಿದೆ. ಸ್ವತಂತ್ರ ರಾಷ್ಟ್ರದ ಪುನರ್‌ರಚನಾ ಕಾರ್ಯಗಳೆಲ್ಲವೂ ಪಾಲಿಬೀಳುತ್ತಿವೆ. ಈ ರೀತಿ ಇಲ್ಲಿ ಜನತೆಯ ಹೊಟ್ಟೆಯನ್ನೂ ಅಲ್ಲಿ ಉದ್ಯಮರಂಗವನ್ನೂ ಬಂಜರು ಬೀಳುವಂತೆ ಮಾಡುವ ದುರ್ಯೋಗವು ನವೋದಿತ ಸ್ವತಂತ್ರ ಸರಕಾರಕ್ಕೊದಗಿದುದರಿಂದ "ಸ್ವಾತಂತ್ರ್ಯದ ಮಹಾ ಪ್ರಸಾದವೆಂದರೆ ಈ ಅಭಾವಾಡಚಣೆಗಳಲ್ಲವೆ ?" ಎಂಬ ದೂಷಣೆ ಕೇಳಬೇಕಾಗಿ ಬಂತು. ಸಾಧನಾ ಹೋರಾಟಗಳ ವೇಳೆ ಜನತೆಯ ಎದುರು ಚಿತ್ರಿಸಿ ತೋರಿಸಿದ ಈ ಸ್ವಾತಂತ್ರ್ಯದ ರೂಪವೆಷ್ಟು ಮನೋಹರವಿದ್ದಿತು! ನವಯುವತಿಯು ತನ್ನ ಭಾವೀ ವರನ ಕುರಿತು— ಹೊಸ ಗೃಹಜೀವನ ತನ್ನ ಭಾವೀ ಉದ್ಯೋಗದ ಕುರಿತು— ಕಟ್ಟಿಕೊಳ್ಳುವ ಸ್ವಪ್ನ ಹುಸಿಗೊಳ್ಳುವ ಮಾದರಿಯಲ್ಲೇ ಭಾರತೀಯರು ಅಂದು ಕಂಡಿದ್ದ ಕನಸು ಮಾಯವಾಗಿದೆ. ಅಂದು ಕಲ್ಪಿಸಿದ್ದ ಸ್ವಾತಂತ್ರ್ಯ ರೂಪ ಇಂದು ನಿಜಕ್ಕೂ ಕಣ್ಣ ಮುಂದಿಲ್ಲ.

ಅಪರಾಧ ಯಾರದು?

ಆದರೆ ಸ್ವಾತಂತ್ರ್ಯದ ಇಂದಿನ ಈ ರೂಪಕ್ಕೆ ಹೊಣೆ ಯಾರು? ಕಾಲ ಸ್ಥಿತಿ ಮತ್ತು ಸ್ವತಃ ಆ ಸ್ವಾತಂತ್ರ್ಯವು ಆ ಮುದು ಅದ ವಿದ್ಯಮಾನ. ಈ ಪ್ರತಿಕೂಲತೆಗಳೊಡನೆ ತಮಗೆ ಅನುಕೂಲತೆಕ್ಕೆ ಬೇಕಾದಷ್ಟನ್ನು ರಾಷ್ಟ್ರದೊಳಗೇನೇ ಬೆಳೆಯಿಸಬೇಕು. ಆ ಮೂಲಕ ಉಳಿಯುವ ಕೋಟ್ಯಾವಧಿ ಹಣವನ್ನು ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಸಾಧಕ ಉದ್ಯಮಗಳಿಗೆ ವಿನಿಯೋಗಿಸಬೇಕು–ಎಂದು ಸರಕಾರವೀಗ ಭೀಷ್ಮ ಪ್ರತಿಜ್ಞೆ ತೊಟ್ಟಿದೆ. ಈ ಆಹಾರ ಸ್ವಾವಲಂಬನಾ ಚಳವಳವೀಗ ಭರದಿಂದ ಆರಂಭವಾಗಿದೆ. ಎರಡನೇ ಸ್ವರಾಜ್ಯ ವರ್ಧಂತಿ ದಿನದಿಂದ (ತಾ.15-8-49) ಒಂದು ವಾರದ ವರೆಗೆ ಇದಕ್ಕಾಗಿಯೇ ರಾಷ್ಟ್ರದ ಎಲ್ಲೆಡೆಗಳಲ್ಲೂ 'ಸಸಿ ಸಪ್ತಾಹ' ಆಚರಿಸಲ್ಪಡುತ್ತಿದೆ. ಈ ಕ್ಷೇತ್ರದಲ್ಲಿ ಗುರಿ ಮುಟ್ಟಿದರೆ ಮತ್ತೆ ನಾವು ಎಲ್ಲಾ ರಂಗಗಳಲ್ಲೂ ಗೆದ್ದಂತೆಯೇ. ಮೊದಲೇ ಹೇಳಿರುವಂತೆ ಜನತೆಯ ಅತೃಪ್ತಿ, ಕಮ್ಯೂನಿಸ್ಟರ ಪ್ರಭಾವ, ರಾಜಕೀಯ ನಿರುತ್ಸಾಹ, ಮುಂತಾದ ಎಲ್ಲಾ ಪ್ರಮಾದಗಳಿಗೂ ಮೂಲ ಹೇತುವಾದ ಆಹಾರ ಸಮಸ್ಯೆಯೊಂದು ಜಯಶೀಲವಾಗಿ ಬಿಡಿಸಲ್ಪಟ್ಟರೆ ಮತ್ತೆಲ್ಲಾ ಕಗ್ಗಂಟುಗಳೂ ಸ್ವತಃ ಸಡಿಲುಗೊಳ್ಳುವವು. 1951ರ ಆದಿ ಭಾಗದಲ್ಲಿ ಪ್ರಾಯಸ್ಥರ ಮತದಾನದಿಂದ ಚುನಾಯಿಸಲ್ಪಡುವ [illegible] ಭಾರತ ಸರಕಾರದ ಕಣ್ಮುಂದೆ ನಾಜೋಕಿನ ಪ್ರಗತಿ ಪಥವುಳಿಯುವುದು. ಸ್ವಾತಂತ್ರ್ಯ ಸ್ಥಾಪನಾ ಕಾಲದಲ್ಲಿ ಜಾತೀಯ ಗೊಂದಲ, ನಿರಾಶ್ರಿತರ ಸಮಸ್ಯೆ, ಆಶ್ರಿತ ರಾಜ್ಯಗಳ ತೊಡಕು ಇತ್ಯಾದಿಗಳನ್ನು ನಿವಾರಿಸಿದಂತೆಯೇ, ಆರ್ಥಿಕ ಹಾಗೂ ಜನಜೀವನ ರಂಗದ ಮಹಾ ಕಂಟಕ

ರೈತರೇಳಲಿ!

ಸ್ವಾತಂತ್ರ್ಯದ ಹೋರಾಟ ಕಾಲದಲ್ಲಿ ಧೀರ ಸ್ವಯಂಸೇವಕರಿಗೆ–ಹೈದರಾಬಾದ್ ಪೋಲಿಸ್ ಆಚರಣೆಯ ವೇಳೆ ಮಹಾರಾಜೇಂದ್ರ ಸಿಂಹಜೀಯ ಸೈನಿಕರಿಗೆ–ಬಂದಿದ್ದ ಸುಯೋಗವು ಈಗ ಅಖಿಲ ಭಾರತದ ರೈತರಿಗೆ ಒದಗಿದೆ. ಅವರು ಅದೇ ಸ್ಫೂರ್ತಿಯಿಂದ ಅಭಾವ ನಿವಾರಣೆಗೆ ತಯಾರಾಗಬೇಕು. ಒಂದಿಂಚು ನೆಲವೂ ಪಾಲಿ ಬೀಳದಂತೆ, ಒಂದಂಶ ಬೆಳೆಯೂ ಕಡಿಮೆ ಬೆಳೆಯದಂತೆ ಆ ಬೆಳವಣಿಗೆಗೆ ನಡು ಬಿಗಿಯಬೇಕು. ತಮ್ಮ ಪಾಲಿನದಾದ ಈ ಯುಗದ ಯಾವುದೇ ದಿನ–ಒಂದೇ ಒಂದು ಕ್ಷಣ–ನಿರರ್ಥಕವಾಯಿತೆನ್ನಲಾಗದಂತೆ ಅವಿಶ್ರಾಂತವಾಗಿ ದುಡಿಯಬೇಕು. ರಾಷ್ಟ್ರದ ಜೀವಾಳ ಕೃಷಿಕ ವರ್ಗವು ಈ ವರೆಗೂ ಅಲಕ್ಷ್ಯಿಸಲ್ಪಟ್ಟು ಕಷ್ಟನಷ್ಟಗಳಿಗೀಡಾಗಿ ಕುಸಿದಿದೆ, ಎಂಬುದು ನಿಜ. ಆದರೆ ಕೃಷಿ ಪ್ರಧಾನ ರಾಷ್ಟ್ರ ಭಾರತವು ಯಾವ ಆದ್ಯಷ್ಟಕ್ಕೆ ತಿರುಗಿದರೂ ಅನಿವಾರ್ಯವಾಗಿ ರೈತ ರಾಜ್ಯವಾಗಿಯೇ ಇರಬೇಕಾಗುತ್ತದೆ. ರೈತರು ಕ್ಷೀಣಿಸಿದ್ದರೆ ರಾಷ್ಟ್ರವೂ ಕ್ಷೀಣಿಸಿದೆ [illegible] ಪ್ರಗತಿ ಹೊಂದಿದ್ದರೆ ರಾಷ್ಟ್ರವೂ ಪ್ರಗತಿಯಲ್ಲಿದೆ—ಅನ್ಯಥಾ ಅಲ್ಲ. ಅಂದಮೇಲೆ ರೈತರು ಕಡೆಗಣಿಸಲ್ಪಟ್ಟದ್ದರೆ ರಾಷ್ಟ್ರಹಿತ ಕಡೆಗಣಿಸಲ್ಪಟ್ಟಿದೆ ಎಂದರ್ಥ. ರಾಷ್ಟ್ರವಿಂದು ಪಡೆದಿರುವುದು ಆ ಕಹಿ ಅನುಭವವನ್ನೇ; ಇಂದಿನ ಆಹಾರಾಭಾವವು ಅದರ ಪರಿಣಾಮವೇ. ಆದ್ದರಿಂದಲೇ ಇಂದು ಸರಕಾರದ ಲಕ್ಷ್ಯವು ರಾಷ್ಟ್ರದ ಅಭಿವೃದ್ಧಿ ಸಾಧನೆಯ ಕಡೆಗೆ, ಅರ್ಥಾತ್ ರೈತರ ಕಡೆಗೆ ಹರಿದಿದೆ. ರೈತನೇ ರಾಷ್ಟ್ರ; ರಾಷ್ಟ್ರವೇಳಬೇಕಾದರೆ ರೈತನೇಳಬೇಕು. ಇಂದಾತ ಎದ್ದು ನಿಲ್ಲಲಿ! ಈ ಯುಗಕ್ಕೆ ಕೈಯಿಕ್ಕಿದವ ಅದನ್ನು ಜಯಶೀಲವಾಗಿ ಮುಗಿಸಿಕೊಂಡ ಮೇಲೆಯೇ ಮೇಲೇಳಲಿ. ಅವನೆದ್ದು ನೋಡುವಾಗ ಆಹಾರ ಸ್ವಾವಲಂಬಿ ಭಾರತ ರಾಷ್ಟ್ರ ತೋರಿಬರಲಿ. ಈ ನೇಗಿಲಯೋಗಿ–ಭೂಪುತ್ರ–ಕವಿಗಳಿಂದ ಹಾಡಲ್ಪಟ್ಟವ; ಸ್ವಾತಂತ್ರ್ಯ ಸಂಗ್ರಾಮದ ವೇಳೆ ಕಿಸಾನನ ಕಂಠಸ್ವರವನ್ನು ಸೇರಿಸಿಕೊಂಡೇ ರಣಭೇರಿ ಮೊಳಗಿದ್ದಿತು; ದೇಶಪ್ರೇಮಿಗಳೆಲ್ಲರೂ ತಮ್ಮ ಕಣ್ಮುಂದೆ ಹಳ್ಳೀ ರೈತನ ಎಲುಬುಗೂಡುಗಳನ್ನಿಟ್ಟುಕೊಂಡೇ ಪೂಜಿಸುತ್ತಿದ್ದರು. ಇಂತಹ ಆರಾಧ್ಯ–ಆದರ್ಶ ಮೂರ್ತಿ–ಇಂದು ತನ್ನ ನಿಜಶಕ್ತಿಯನ್ನು ಪ್ರದರ್ಶಿಸಬೇಕಾಗಿದೆ. ರೈತ ಮಣ್ಣಿನೊಡನೆ ಪಂಥಕಟ್ಟಿ ಉರುಡಾಡುವ ಮೂಲಕವೇ ರಾಷ್ಟ್ರದ ಪತನವನ್ನು ತಪ್ಪಿಸಬೇಕಾಗಿದೆ. ತಪ್ಪಿಸಲಾರನೆ?

ಸ್ವಂತೋದ್ಧಾರ.

ಸ್ವತಂತ್ರ ರಾಷ್ಟ್ರದ ಮೇಲೆ ಮಿಕ್ಕೆಲ್ಲರಿಗಿಂತ ಹೆಚ್ಚಿನ ಹಕ್ಕುಬಾಧ್ಯತೆಗಳುಳ್ಳ ಕೃಷಿಕರು ತಮ್ಮೀ ಸ್ಥಾನಕ್ಕನುಗುಣವಾಗಿಯೇ ಆಹಾರ ಸ್ವಾವಲಂಬನೆ ನಿರ್ಮಿಸಲು ಬದ್ಧರು; ತಮ್ಮ ಭಾವೀ ಸಂತಾನಗಳಿಗೆ ಭವ್ಯ ಭಾರತವನ್ನು ನಿರ್ಮಿಸಿಡಲು ಬಾಧ್ಯರಿದ್ದಾರೆ; ಇವುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವಷ್ಟು ಜ್ಞಾನೋದಯವು ಇನ್ನೂ ರೈತ ವರ್ಗದಲ್ಲಾಗಿಲ್ಲವೆಂದರೂ ತಮ್ಮ ಈಗಿನ ಸುಖ ಲಾಭಕ್ಕಾಗಿಯಾದರೂ ಅಧಿಕೋತ್ಪನ್ನ ಮಾಡುವ ಆಶೆ, ಹುರುಪು ಸಾಗುವಳೀದಾರರಲ್ಲಿ ಹುಟ್ಟಲೇಬೇಕು. ಇಂದು ಸರಕಾರವು ಕಿಸಾನನಿಂದ ನಿಸ್ವಾರ್ಥ ತ್ಯಾಗವನ್ನು ಅಪೇಕ್ಷಿಸುತ್ತಿಲ್ಲ; ಪ್ರತಿಫಲವುಳ್ಳ ಉದ್ಯಮವನ್ನಷ್ಟೇ ಬಯಸಿದೆ. ಅಧಿಕಾಧಿಕ ಬೆಳೆಸದಂತೆ ರೈತನನ್ನು ಅಸಮರ್ಥಗೊಳಿಸಿರುವುದಾವುದು–ಆತನಿಗಿರುವ ಅಡ್ಡಿ ಅಡಚಣೆಗಳೇನು–ಇವುಗಳಿಗಾವ ಪರಿಹಾರವೆಂಬುದನ್ನು ಶೋಧಿಸಿ ನೋಡಿ, ತಕ್ಕ ಶಮನೋಪಾಯ, ಸಹಾಯ ಕಾರ್ಯ ಕೈಕೊಳ್ಳಲು ಸರಕಾರವು ಅಣಿಯಾಗಿದೆ. ತನ್ನ ಈ ದಿನವನ್ನಷ್ಟೇ ನೋಡಿಕೊಳ್ಳುವ ರೈತನಿಗಾದರೂ ಇಂದು ಬೇಕಾಗಿರುವುದಿಷ್ಟೇ ಅಲ್ಲವೆ? ಅವುಗಳನ್ನು ಅಂಗೀಕರಿಸಿಕೊಳ್ಳಲು ಮುಂದಾಗಿ ತನ್ನ ಅಭಿವೃದ್ಧಿಯನ್ನು ತಾನು ಸಾಧಿಸಿಕೊಳ್ಳುವದು ರೈತನ ಕರ್ತವ್ಯವಲ್ಲವೆ? "ಯುದ್ಧಾವಧಿಯು ವ್ಯಾಪಾರೀ ವರ್ಗಕ್ಕೆ ಹೇರಳ ಸಂಪಾದಿಸುವ ಸುಯೋಗವೊದಗಿಸಿಕೊಟ್ಟಿತು; ನಮಗಿಂತಹ ಸುವರ್ಣ ಸಂದರ್ಭವಿಲ್ಲ" ಎಂದು ರೈತವರ್ಗ ಸಂತಾಪಗೊಂಡಿದೆ. ಅಂತಹ ಅತಿರೇಕವೇನೂ ಇರದೆ ನಿಷ್ಕಲಂಕವಾದ, ಆದರೆ ಅದೇ ಮಾದರಿಯ ಸುಯೋಗವು ಈಗ ರೈತರಿಗೊದಗಿದೆ. ತಾವು ಕಡೆಗಣಿಸಲ್ಪಟ್ಟಿದ್ದೇವೆ, ಎಂದೀ ವರೆಗೂ ರೈತರ ನ್ಯಾಯೋಚಿತ ದೂರಿದ್ದಿತು. ಈಗ ಅವರನ್ನೇ ಸರ್ವ ಪ್ರಮುಖರಾಗಿ ಮುಂಗಡೆಗೆ ಆಹ್ವಾನಿಸಲಾಗಿದೆ. ಅಂದ ಮೇಲೆ ಈಗ ರೈತರು ಹಿಂದುಳಿಯಬಾರದು. ತಮ್ಮಿಂದ ಕೆಲಸವಾಗಬೇಕಾದರೆ ತಮಗೇನು ಆಗಬೇಕೆಂಬುವನ್ನು ಸಂಬಂಧಪಟ್ಟವರ ಲಕ್ಷ್ಯಕ್ಕೆ ತರಲಿ; ತಮ್ಮ ಸರ್ವಶಕ್ತಿಯಿಂದ ಅಧಿಕೋತ್ಪನ್ನಕ್ಕಾಗಿ ದುಡಿಯಲಿ, ರೈತರು ಸಮೃದ್ಧ ರೈತರಾಜ್ಯ ನಿರ್ಮಿಸಲಿ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ [illegible] ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಎರಡು ವರುಷಗಳ ಸ್ವರಾಜ್ಯದಿಂದ-

1949ನೇ ಆಗೋಸ್ಟು 15 ಹಿಡಿಯುವ ನಡು ಮಧ್ಯ ರಾತ್ರಿ ಕಳೆದು ಒಂದು ಮಿನಿಟಾಗುವಾಗಲೇ ಭಾರತದಲ್ಲಿ ಸ್ವಾತಂತ್ರ್ಯದ ಉದ್ಘಾಟನೆಯಾಗಿದ್ದಿತು. 1949ನೇ ಆಗೋಸ್ತು 15 (ಬರುವ ಸೋಮವಾರ) ಹಿಡಿಯುವ ಮಧ್ಯ ರಾತ್ರಿಗೆ ಆ ಸ್ವಾತಂತ್ರ್ಯಕ್ಕೆ ಪೂರ್ಣ ಎರಡು ವರುಷ ತುಂಬುತ್ತದೆ. ನಮ್ಮದೇ ಸರಕಾರವಿದ್ದುಕೊಂಡು, ನಮಗೆ ನಾವೇ ಹೊಣೆಗಾರರಾಗಿ, ನಮಗಾಗಿ ನಾವು ಮಾಡಿಕೊಂಡವುಗಳು ಮತ್ತು ಆಗಿ ಹೋದವುಗಳು ಬಹಳ. ಇವುಗಳ ಸತ್ಪರಿಣಾಮ,ದುಷ್ಪರಿಣಾಮಗಳೇನು? ಲಾಭ ನಷ್ಟಗಳ ಲೆಕ್ಕಾಚಾರ ಹೇಗೆ? ಸುಖ ದುಃಖಗಳೆಷ್ಟೆಷ್ಟು? ಎಂಬುದನ್ನೊಮ್ಮೆ ತೂಗಿ ನೋಡಬೇಕಾದ ಮುಹೂರ್ತವಿದು; ಎರಡು ವರುಷಗಳನ್ನು ಮುಗಿಸಿಕೊಂಡು ಮೂರನೇ ವರುಷವನ್ನು ಆರಂಭಿಸಲಿರುವ ಮಧ್ಯಾವಧಿಯಿದು. ಇಲ್ಲಿ ಚಿರಸ್ಮರಣೀಯ ಮುಖ್ಯ ಘಟನೆಗಳನ್ನಷ್ಟೇ ನೆನಪು ಮಾಡಲಾಗಿದೆ

• ವ್ಯಯ ವಿಭಾಗ •

ಆಗೋಸ್ತು 15ರ ಆ ಮಧ್ಯ ರಾತ್ರಿಯಲ್ಲಿ ಸ್ವರಾಜ್ಯ ಸ್ಥಾಪನೆಯಾಗುವದು ಶುಭವಲ್ಲವೆಂದು ಆಗಲೇ ಆಚಾರನಿಷ್ಠರ ಕಿವಿಮಾತುಗಳಿದ್ದುವು. ರಾತ್ರಿ ಹೊತ್ತಿನಲ್ಲಿ ಯಾವುದೊಂದು ಮಹತ್ಕಾರ್ಯವನ್ನು ಆರಂಭಿಸುವುದೂ ಕಲ್ಯಾಣಕರವಲ್ಲವೆಂಬ ಭಾವನೆ ಹಿಂದುಗಳದು. ಘಳಿಗೆ ಮುಹೂರ್ತ, ಶಕುನಗಳಲ್ಲಿ ವಿಶ್ವಾಸವಿಡದಿದ್ದವರೂ ಒಂದು ಘನ ಕೆಲಸವನ್ನಾರಂಭಿಸುವಾಗ ಅನುಕೂಲ ಕಾಲವನ್ನಾರಿಸಿಕೊಳ್ಳುವದು ಸಂಪ್ರದಾಯ. ಬ್ರಿಟಿಷರಾದರೂ 'ರಾತ್ರಿ 12 ಕಳೆದು 1 ಮಿನಿಟು ಆಗುವಾಗಲೇ' ಎಂದೊಂದು ನಿಶ್ಚಿತ ಮುಹೂರ್ತವನ್ನು ಆರಿಸಿ ಇಲ್ಲಿಂದ ಕಾಲ್ತೆಗೆದಿದ್ದರಿಂದ ಮೇಲೆ ಮುಹೂರ್ತ ಪ್ರಮುಖ್ಯತೆಯೆಂಬುದು ಯಾರಲ್ಲಾದರೂ ಇದ್ದೇ ಇದೆ. ಅಂದಮೇಲೆ ಅಷ್ಟು ದೀರ್ಘಾವಧಿ ಕಾದ ನಾವು, ಯಾವುದೇ ಮನೋವೃತ್ತಿಯವರ ಯಾವ ವಿಧದ ಶಂಕೆ ಸಂದೇಹಗಳಿಗೂ ಎಡೆಯಿರದ ಒಂದು ಸರ್ವಮಾನ್ಯ ಸುಮುಹೂರ್ತವನ್ನೇ ಆರಿಸಿಕೊಳ್ಳಬಹುದಿದ್ದಿತು.. ಆದರೆ ನಮ್ಮ ಸ್ವರಾಜ್ಯ ಸ್ಥಾಪನಾ ಮುಹೂರ್ತವು ಅಂತಹದಾಗಿರಲಿಲ್ಲ.

○○ ○○ ○○

ದಿಲ್ಲಿಯಿಂದಾರಂಭಿಸಿ, ಪ್ರತಿಯೊಂದು ಹಳ್ಳಿ ಮೂಲೆಯವರೂ, ತಾವು ದೀರ್ಘಾವಧಿಯಿಂದ ಕಾಯುತಿದ್ದ ಸ್ವಾತಂತ್ರ್ಯಯುಗಾದಿಯ ಆ ಸುಮುಹೂರ್ತದಲ್ಲಿ ಆನಂದೋತ್ಸವವಾಚರಿಸುತಿದ್ದಾಗ, ಈ ಸ್ವಾತಂತ್ರ್ಯದ ಮೇಸ್ತ್ರಿ ಶಿಲ್ಪಿ ಮಹಾತ್ಮಾಗಾಂಧಿಯವರು "ಇದು ನನ್ನದಲ್ಲ"ವೆನ್ನುತ್ತಾ ದುಃಖಾಮಂತ ನವಾಖಾಲಿಯಲ್ಲಿ ಕಾಲ್ನಡಿಗೆಯಲ್ಲಿ ಸುತ್ತುತಿದ್ದರು. ತನ್ನ ಇಚ್ಛೆಗೆ ವಿರೋಧವಾಗಿ ಅಧ್ಯಕ್ಷನಾಗಿ ಆರಿಸಲ್ಪಟ್ಟ ಬಾಬು ಸುಭಾಸ್‌ಚಂದ್ರ ಬೋಸಾಧ್ಯಕ್ಷ ಗಿರಿಯ ಕಾಂಗ್ರೆಸ್ ಮಹಾಧಿವೇಶನವು ಅತ್ತ ಒಂದೆಡೆ ನಡೆಯುತ್ತಿದ್ದಾಗಲೇ, ಇತ್ತ ರಾಜಕೋಟದಲ್ಲಿ ಪ್ರಾಣಾವಧಿ ಉಪವಾಸ ಹಿಡಿದಿದ್ದ ಗಾಂಧಿಜೀಯುಅಂದಿನ ವೈರಾಗ್ಯ ಭಾವನೆಯೇ ಈ ರೀತಿ 1947 ಆಗೋಸ್ತು 15ರಲ್ಲೂ ತೋರಿ ಬಂದಿದ್ದಿತು. ಇದಂ ಶೋಚನೀಯ.

○○ ○○ ○○

ವಿಭಾಗವಾದುದರ ಪರಿಣಾಮವಾಗಿ ಬಂಗಾಳ ಮತ್ತು ಪಂಜಾಬುಗಳಲ್ಲಿ ಸ್ವಾತಂತ್ರ್ಯ ಸ್ಥಾಪನಾನಂದವಾವುದೂ ತೋರಿಬಾರದಿದ್ದುದು ಒಂದು ಕೊರತೆ ಯಾಗಿದ್ದರೆ, ಸ್ವಾತಂತ್ರ್ಯ ಸ್ಥಾಪನೆಯೊಂದಿಗೆ ಪಂಜಾಬಿನಲ್ಲಿ ಭೀಕರ ರೀತಿಯ ಅತಿ ದೊಡ್ಡ ಪರಿಮಾಣದ ಹಾಕೀಯು ಗೊಂದಲ ಆರಂಭವಾದುದು ಅತ್ಯಂತ ಶೋಚನೀಯ. ಭಾರತದ ಚರಿತ್ರೆಯಲ್ಲೇ ದೊಡ್ಡದಾದ ಈ ರಕ್ತಾಧ್ಯಾಯವು ಸ್ವಾತಂತ್ರ್ಯದ ಪ್ರಥಮ ಪುಟದೊಂದಿಗೇ ಪ್ರಾರಂಭಿಸಿದುದು ಸೊಗಸಲ್ಲ.

○○ ○○ ○○

ಸ್ವತಂತ್ರ ಭಾರತ ಸರಕಾರವು ಮೊನ್ನೆ ಮಾರು ಕಳಕೊಂಡ ಲಕ್ಷಾವಧಿ ನಿರಾಶ್ರಿತರ ವ್ಯವಸ್ಥೆಯನ್ನು ಕೈಕೊಳ್ಳುವ ದುಃಖದಾಯೀ ಹೊಣೆಗಾರಿಕೆಯನ್ನು ಪ್ರಾರಂಭದಿಂದಲೇ ನಿರ್ವಹಿಸಬೇಕಾಗಿ ಬಂದುದು ಸಲ್ಲಕ್ಷಣವಲ್ಲ. ರಾಷ್ಟ್ರದ ಉತ್ಪನ್ನದಲ್ಲಿ ಗಣ್ಯ ಅಂಶವನ್ನು ಈ ನಿರ್ಗತಿಕರ ಪಾಲನೆ ಮತ್ತು ಇರಸ್ಸಿಕೆಗಾಗಿ ವ್ಯಯಿಸಬೇಕಾಗಿ ಬಂದುದು ಅಪಘಾತದೊಂದಿಗೆ ಅನಿರೀಕ್ಷಿತ ಅಪವ್ಯಯವನ್ನೂ ತಂದೊಡ್ಡಿ ಗಂಡಾಂತರ ರೂಪು ಹೊಂದಿತು.

○○ ○○ ○○

ಒಂದು ಕೃಷಿ ಪ್ರಧಾನ ರಾಷ್ಟ್ರವು ಸ್ವಾತಂತ್ರ್ಯ ಹೊಂದಿದರೂ ಆದಿಯ ಎರಡು ವರುಷಗಳಲ್ಲೂ ನೂರಾರು ಕೋಟಿ ರೂಪಾಯಿಗಳನ್ನು ಪರದೇಶಗಳಿಗೆ ಕೊಟ್ಟು ಧಾನ್ಯಗಳನ್ನು ತರಿಸಿಕೊಳ್ಳುತ್ತಾ ಆಹಾರ ಪರಾವಲಂಬಿಯಾಗಿದ್ದುದು ಹಣಕಾಸಿನ ಮಟ್ಟಿಗೆ ಎಲ್ಲಕ್ಕಿಂತ ದೊಡ್ಡದಾದ ನಷ್ಟ; ಅಭಿಮಾನಕ್ಕೂ ತುಸು ಕೊರತೆಯೊಡ್ಡುವ ಸಂಗತಿ.

○○ ○○ ○○

ಮಿಕ್ಕೆಲ್ಲವೂ ಕಷ್ಟ, ನಷ್ಟ, ಚಿಂತನೆಗಳನ್ನು ನಿರ್ಮಿಸಿದ್ದರೆ ಎಲ್ಲರ ಹೃದಯವನ್ನು ಮೂಲ ಆಳದವರೆಗೂ ಭೇದಿಸಿಬಿಟ್ಟ ಅತಿ ದೊಡ್ಡದಾದ ಹಾಗೂ ಲೋಕವ್ಯಾಪೀ ದುರಂತವೆಂದರೆ ರಾಷ್ಟ್ರಪಿತನ ಕೊಲೆ. ಯಾರು ಈ ಸ್ವಾತಂತ್ರ್ಯದ ಕಾರಣಪುರುಷನೋ, ಯಾರು ಈ ಮಾನವೋಚಿತ ಸ್ವಾತಂತ್ರ್ಯಸಾಧನೆಯ ಉಪಕರಣಗಳಾಗಿ ಪರಿಶುದ್ಧ ಹಾಗೂ ಉಚ್ಚ ತತ್ವಗಳನ್ನು ಮುಂದಿಟ್ಟು ಲೋಕಕ್ಕೆ ಆದರ್ಶನಾಗಿದ್ದನೋ ಆ ಮಹಾತ್ಮನನ್ನು ಪೂರ್ತಿ ಆರು ತಿಂಗಳ ಅವಧೀವರೆಗಾದರೂ ಉಳಿಸಿಕೊಳ್ಳಲಾರದ ಸ್ವಾತಂತ್ರ್ಯವು ರಾಹುಗ್ರಸ್ತವಾದಂತಾಯಿತು. ಇದೊಂದು ಚಿರಸ್ಥಾಯೀ ವೇದನೆ.

○○ ○○ ○○

ಸ್ವಾತಂತ್ರ್ಯವೆಂದರೆ ಸ್ವೇಚ್ಛಾವರ್ತನೆ-ಅಜ್ಞಾನ, ಅನಾಚಾರಗಳಿಗೂ ಸ್ಥಾನವಿರಬೇಕಾದ ಸಡಿಲು ವಾತಾವರಣ-ಎಂಬ ಭಾವನೆಯು ಹಲವು ಪಕ್ಷ ಪಂಗಡಗಳಲ್ಲಿ ಬೆಳೆದು ಬಂದುದು ಗಣ್ಯ ನೈತಿಕ ನಷ್ಟ. ಇಂತಹ ಸಡಿಲು ಮನೋವೃತ್ತಿಯು ಅಲ್ಲಲ್ಲಿ ಪ್ರಾಂತಿಕ ಕಾಂಗ್ರೆಸ್ ಮಂತ್ರಿಮಂಡಲಗಳಲ್ಲಿಯೂ ಸಂಸ್ಥಾನೀ ಸಚಿವಸಮಿತಿಗಳಲ್ಲಿಯೂ ಸರಕಾರೀ ಯಂತ್ರ ಭಾಗಗಳಾದ ನೌಕರ ವರ್ಗಗಳಲ್ಲಿಯೂ ತೋರಿಬಂದುದು. ಗಣನೀಯ ಕೊರತೆ.

○○ ○○ ○○

ಕಮ್ಯೂನಿಸ್ಟರು, ಆರ್. ಯಸ್. ಯಸ್. ಅಂಥವರು ಕಂಟಕಗಳನ್ನೊಡ್ಡುವುದೂ ಕಾಯಿದೇಭಂಗ ಚಳವಳದಂತಹ ಆಂದೋಲನಗಳನ್ನು ಹೂಡಿದುದೂ ತುಲನಾತ್ಮಕ ಬುದ್ಧಿಗೆ ಬಡಿದ ಬರಗಾಲ. ಅಲ್ಲಲ್ಲಿ ರೈಲ್ವೆ, ಅಂಚೆ ತಂತಿ ಖಾತೆಗಳಂಥವರೂ ಕಾರ್ಖಾನೆಗಳ ಕೆಲಸಗಾರರೂ ಮುಷ್ಕರ ಬೆದರಿಕೆ ಹಾಕುವ ಮತ್ತು ಮುಷ್ಕರ ಹೂಡುವ ಪರಿಸ್ಥಿತಿಯಿದ್ದುದು ಭೂಷಣಪ್ರದವಲ್ಲ. ಅಂತಹ ಗೊಂದಲಗಳ ನಿವಾರಣೆಗಾಗಿ ಗಾಂಧಿಜೀ ಪ್ರಣೀತ ಹೃದಯ ಪರಿವರ್ತನೆ, ಅಹಿಂಸಾಚರಣೆಗಳನ್ನೇ ಕಾರ್ಯ ಸೂತ್ರಗಳಾಗಿ ಅಂಗೀಕರಿಸಿಕೊಂಡಿರುವ ಕಾಂಗ್ರೆಸ್ ಸರಕಾರಗಳು ಅನಿವಾರ್ಯವಾಗಿ ಬಲ ಪ್ರಯೋಗ, ಕಠಿಣ ಕಾನೂನು ಪ್ರಯೋಗ ಮಾಡಬೇಕಾಗಿ ಬಂದುದು ಲಜ್ಜಾಸ್ಪದ ಸಂಗತಿ.

○○ ○○ ○○

ಸ್ವಾತಂತ್ರ್ಯಾಂದೋಲನಗಳ ಕಾಲದಲ್ಲಿದ್ದ ತ್ಯಾಗ ಬುದ್ಧಿ, ಜನಸೇವಾಸಕ್ತಿ, ಬಂಧು ಭಾವ, ಇತ್ಯಾದಿಗಳು ಎಲ್ಲೆಲ್ಲೂ ಜೀರ್ಣಿಸಿ ಹೋಗಿರುವುದು ಮಹತ್ತಾದ ನಷ್ಟ. ಕಾಂಗ್ರೆಸಿಗರು ಹಿಂದಿನ ಕಾಲದಲ್ಲಿ ರಾಷ್ಟ್ರಕ್ಕೆ ತಾವು ಉಪಕಾರಿಗಳಾಗಿದ್ದ ಪರಿಮಾಣದಷ್ಟಾದರೂ ಈಗ ಉಪದ್ರವಿಗಳಾಗುವ ಹಕ್ಕು ತಮಗಿದೆಯೆಂಬ ಭಾವನೆ ಕಟ್ಟಿಕೊಂಡಿದ್ದಾರೆ, ಎಂಬಂತಹ ಆರೋಪಗಳಿಗೀಡಾಗಿರುವುದು ವರ್ಚಸ್ಸಿಗೆ ಬಿದ್ದ ಮಹಾ ಹೊಡೆತ.

○○ ○○ ○○

ಸರಕಾರೀ ಯಂತ್ರದ ಪಟ್ಟಿಗೂ ಜನತಾ ಕಾರ್ಯ ಕ್ಷೇತ್ರದಲ್ಲೂ ನುರಿತ ಹಾಗೂ ಯೋಗ್ಯರಾದ ಕೆಲಸಗಾರರ ಅಭಾವವಿರುವುದು ಗಣ್ಯ ಕೊರತೆ. ಸರಕಾರೀ ಶಿರಸ್ಸುಗಳಿಂದಾರಂಭಿಸಿ, ಕೊನೆಯ ಕೆಳಮಟ್ಟದ ನೌಕರನ ವರೆಗೂ ಕಾರ್ಯ ನಿರ್ವಹಣದ ಬಗ್ಗೆ ಮಾನ ತುಸು ಕಡಿಮೆಯಾದಂತಿರುವುದು ಗಣನೀಯ ದೋಷ. ಅಂದು ಜನ ನಾಯಕರಾಗಿದ್ದವರೇ ಇಂದು ಸರಕಾರೀ ನಾಯಕರೆಂಬುದರಿಂದ ಸೌಹಾರ್ದತಾ ವಾತಾವರಣ, ಸಮಾನತಾ ಭಾವನೆ ವ್ಯಾಪಿಸಿಕೊಳ್ಳುವ ಬದಲಿಗೆ, ಸ್ವಕಾರ್ಯ ಸಾಧಕ ಸಲುಗೆ ಹರಡಿ ಹೋದಂತಿರುವುದು ನ್ಯಾಯ ತಕ್ಕಡಿಯಲ್ಲಿ ತೋರಿ ಬರುತ್ತಿರುವ ಮಹಾನಷ್ಟ.

○○ ○○ ○○

ಎಲ್ಲಕ್ಕಿಂತ ಹೆಚ್ಚಾಗಿ ಎದ್ದು ತೋರುವ ಕೊರತೆಯೆಂದರೆ ರೈತರು, ಕೂಲಿಗಾರರೇ ಮೊದಲಾದ ಜನ ಸಾಮಾನ್ಯರ ಜೀವನ ಮಟ್ಟವು ಮೇಲೇರದೆ, ಕೆಲವು ವಿಧಾನಗಳಿಂದ ಅಲ್ಲಲ್ಲಿ ಇನ್ನಷ್ಟು ಕುಸಿದಂತಿರುವುದು; ಕಳ್ಳ ಸಂತೆಯವರು, ಲಾಭ ಬಡುಕರು ಮತ್ತು ಲಂಚಖೋರರ ಮೇಲೆ ಸಾಕಷ್ಟು ಕಠಿಣವಾದ ನಿಯಂತ್ರಣ ಮತ್ತು ಪ್ರಾಯಶ್ಚಿತ್ತ ವಿಧಾನಗಳು ಜಾರಿಯಾಗದಿರುವುದು. ಈ ಕಾರಣಗಳಿಂದ ಬಹು ಸಂಖ್ಯಾಕರು ಸಹಜವಾಗಿ ಅತೃಪ್ತರಾಗಿರುವರಾದರೆ, ಬಹು ಮುಖಿ ಕರತೆರಿಗೆಗಳಿಂದಾಗಿ ಎಲ್ಲರೂ ಒಂದಲ್ಲೊಂದು ರೀತಿಯ ಅಸಮಾಧಾನಕ್ಕೀಡಾಗಿ ಅತೃಪ್ತಿ ಸರ್ವವ್ಯಾಪಿಯಾಗಿರುವುದು.

ಅವರವರಿನ್ನದೆ ಎಲ್ಲರಲ್ಲೂ ಕೃತಿಗಿಂತ ಹೆಚ್ಚಿಗೆ ಮಾತು-ಅತ್ಮ ವಿಮರ್ಶೆಯ ಬದಲಿಗೆ ಪರಕೀಯ ಟೀಕೆ-ತನ್ನ ಪಾಲಿನ ಕರ್ತವ್ಯ ನಿರ್ವಹಣಕ್ಕೆ ಪ್ರತಿಯಾಗಿ ಅನ್ಯರ ಕೆಲಸಗಳಲ್ಲಿ ಲೋಪದೋಷವನ್ನು ಕಾಣುವ ಹಾಗೂ ಅವುಗಳನ್ನು ಆತಂಕಿಸುವ ಹವ್ಯಾಸ--ಬೆಳೆದು ಹೋಗಿರುವುದು ನಷ್ಟದ ಬಾಬುಗಳು.

○○ ○○ ○○

ಈ ವ್ಯಯ ವಿಭಾಗವು ವಿಸ್ತರಿಸುತ್ತಾ ಹೋಗುತಿದ್ದಲ್ಲಿ ನಮಗೆ ಹೊಸತಾಗಿ ದೊರೆತ ಸ್ವಾತಂತ್ರ್ಯವನ್ನು ಕಸಗೊಳ್ಳ

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

-ನಮಗಾದ ನಷ್ಟವೆಷ್ಟು? ಲಾಭವೇನು?

ವ ಕೈ ಅಥವಾ ಕೈಗಳು ಮುಂದೆ ಬರಬಹುದಿತ್ತು; ನಾವು ಬ್ರಿಟಿಷರಿಗೆ ಸ್ವಾತಂತ್ರ್ಯವನ್ನು ಮಾರಿದ್ದ ಆ ಕಾಲವೇ ಆಧುನಿಕ ರೂಪದಿಂದ ಪುನರುತ್ಥಾನಗೊಳ್ಳುತಿತ್ತು. ಅಥವಾ ಒಳಗಡೆಯಿಂದ ಈ ಸ್ವಾತಂತ್ರ್ಯವನ್ನು ಸ್ಫೋಟಿಗೊಳಿಸಿ ಬಿಸುಸಿಡಿಮದ್ದು ಸಂಗ್ರಹವಾಗುತಿತ್ತು. ನಾವು ಮನುಷ್ಯರಾಗಿ ಸ್ವತಂತ್ರ ನಾಗರಿಕರಾಗಿ ಬಾಳಲಾರದವರು, ಎಂದು ಲೋಕವೇ ತಿರಸ್ಕರಿಸುವಂತಾಗುತಿತ್ತು; ಆ ಮೇಲೆ ನಾವು ಮತ್ತೊಮ್ಮೆ ತಲೆಯೆತ್ತುವದು ಎಂದೆಂದಿಗೂ ಅಸಾಧ್ಯವಾಗುತಿತ್ತು.

• ಆಯ ವಿಭಾಗ •

ಸುಮಾರು ಎರಡು ಶತಮಾನಗಳವರೆಗಿದ್ದ ದಾಸ್ಯ ಶೃಂಖಲೆಯನ್ನು ವ್ಯವಸ್ಥಾಪೂರ್ವಕವಾಗಿ ಕಳಚಿಕೊಳ್ಳಲು ಸಾಧ್ಯವಾದುದೂ ಆ ವ್ಯವಸ್ಥೆಯು ಅವಸರದಿಂದಾಗಬೇಕಾಗಿದ್ದರೂ ಅದನ್ನು ಯೋಗ್ಯ ರೀತಿಯಿಂದ ಪ್ರತಿಷ್ಠಾಪಿಸಿಕೊಳ್ಳುವ ರಾಷ್ಟ್ರದ ವಿಶ್ವಾಸಾರ್ಹ ಧುರೀಣರು ಅಲ್ಲಿದ್ದುದೂ, ಅವಾಂತರಾವಶಕಗಳ ನಡುವೆ ಎಲ್ಲವನ್ನೂ ಸರಿದೂಗಿಸಿಕೊಂಡು ಹೆಗ್ಗಳಿಕೆ ಪಡಲಾಗುವಂತೆ ಆಗೋಸ್ಟು 15ನೇ ನಡು ರಾತ್ರಿಗೆ ಸ್ವರಾಜ್ಯ ಸ್ಥಾಪನೆಯಾದುದೂ ಆನಂದದಾಯಕ ವಹಿವಾಟು.

೦೦ ೦೦ ೦೦

ಮಹಾತ್ಮಾಜೀಗೆ ರಾಷ್ಟ್ರವಿಭಜನೆಯು ಅಸಮ್ಮತವಿದ್ದು, ಕೇವಲ ಅಧಿಕಾರ ವರ್ಗೀಕರಣವು ತನ್ನ ಕನಸಿನ 'ರಾಮರಾಜ್ಯ'ವಲ್ಲವೆಂಬ ಅತೃಪ್ತಿಯು ಅವರಲ್ಲಿದ್ದರೂ ತನ್ನ ಅನುಯಾಯಿ ರಾಷ್ಟ್ರನಾಯಕರಿಗೆ ನೆರವಾಗಿ, ರಾಷ್ಟ್ರದ ಕಲ್ಮಷ ಕಂಟಕಗಳನ್ನು ನಿವಾರಿಸುವ ಮೂಲಕ ದೊರೆತ ಸ್ವರಾಜ್ಯವನ್ನು ಪೂರ್ಣಗೊಳಿಸಬೇಕೆಂದು ಅವರು ತನ್ನ ಸರ್ವ ಲಕ್ಷ್ಯವನ್ನೂ ವಾತಾವರಣ ಶುದ್ಧಿಯ ಕಡೆಗೆ ಹರಿಸಿದ್ದುದು ಅತ್ಯನುಕೂಲ ಘಟನೆ.

೦೦ ೦೦ ೦೦

ಪಂಜಾಬಿನಲ್ಲಿ ಹರಿದಂತಹ ರಕ್ತಪಾತ, ನಡೆದಂತಹ ನರಹತ್ಯೆ, ಆ ಮಾನುಷ ಅತ್ಯಾಚಾರಗಳು ಅತಿ ಹೆಚ್ಚಿನವಾದರೂ ದೀರ್ಘಾವಧಿ ಪರದಾಸ್ಯದಲ್ಲಿದ್ದ ಭಾರತದಂತಹ ಬೃಹದ್‌ರಾಷ್ಟ್ರವು ಸ್ವಾತಂತ್ರ್ಯ ಪಡೆಯುವಾಗ-ಅದೃಷ್ಟ ಬದಲಾಯಿಸಿಕೊಂಡು ಹೊಸ ಜೀವನವನ್ನೇ ಆರಂಭಿಸುವಾಗ--ಇಂತಹ ಗಡಿಬಿಡಿಯೇಳುವುದು ಸ್ವಾಭಾವಿಕ. ಲೋಕದ ಇತರ ರಾಷ್ಟ್ರಗಳು ಸ್ವಾತಂತ್ರ್ಯ ಹೊಂದುವಾಗ ಹರಿದ ರಕ್ತದೊಂದಿಗೆ, ಭಾರತದ ವಿಸ್ತಾರ, ಸ್ಥಾನ, ಸಂಗತಿಗಳನ್ನು ಗಣಿಸಿ ನೋಡಿದರೆ ಇಂತಹ ಭಾರತವು ಬಂಧವಿಮೋಚನೆಗೊಳ್ಳುವಾಗ ಇಷ್ಟು ರಕ್ತ ಹರಿದುದರಲ್ಲಿ ಬರ್ಬರತೆಯಂತೆಯೇ ಸ್ವಾಭಾವಿಕತೆಯೂ ಕಾಣಿಸುತ್ತಿದೆ.

೦೦ ೦೦ ೦೦

ಅಖಂಡ ಭಾರತವು ಎರಡು ಹೋಳುಗಳಾದುದು ಸದಾಕಾಲ ದುಃಖಿಸತಕ್ಕ ಹಾಗೂ ಲಜ್ಜಿಸಬೇಕಾದ ಸಂಗತಿಯೇನೋ ನಿಜ. ಆದರೆ ಹಾಗೆ ಕಾಲಂಶವನ್ನು ಕಡಿದುಕೊಂಡು ಪ್ರತ್ಯೇಕಿಸಿಡದಿರುತ್ತಿದ್ದರೆ ಇಡೀ ರಾಷ್ಟ್ರದಲ್ಲಿ ಅನಿಶ್ಚಿತತೆ, ಅಸ್ತವ್ಯಸ್ತತೆ ಹೊರತು ಯಾವುದೇ ವಿಧದ ನವನಿರ್ಮಾಣ ಕಾರ್ಯವೂ ಅಸಾಧ್ಯವಾಗುತಿತ್ತು; ಎಲ್ಲವೂ ಅಪೂರ್ಣವಾಗಿಯೇ ಉಳಿಯಬೇಕಿತ್ತು. ಬ್ರಿಟಿಷರಿದ್ದ ಕಾಲದಂತೆಯೇ ಸ್ವಾತಂತ್ರ್ಯಾವಧಿಯಲ್ಲಿ ಕೂಡಾ ದ್ವಿತೀಯ ಅಧಿಕ ಸಂಖ್ಯಾಕ ಸಮಾಜ ಮುಸ್ಲಿಮರು ಪ್ರತಿಯೊಂದು ನವರಚನೆಗೂ ಆತಂಕವಾಗಿಯೇ ನಿಲ್ಲುವ ಆಪತ್ತು ಉಳಿದು, ಯಾವ ಕಾರ್ಯವೂ ಸಾಗುತ್ತಿರಲಿಲ್ಲ. ಆಶ್ರಿತ ರಾಜರನ್ನು ಆಕರ್ಷಿಸಿಕೊಳ್ಳುವದು– ಹೈದರಾಬಾದನ್ನು ಗೆಲ್ಲುವದು– ಪ್ರತ್ಯೇಕ ಮತದಾನ ಪದ್ಧತಿ ರದ್ದತಿ– ಜಾತ್ಯಾತೀತ ರಿಪಬ್ಲಿಕ್ ಭಾರತದ ಪ್ರಗತಿಪರ ಘಟನೆ ತಯಾರಿ– ಇವಾವುದೂ ನಡೆಯದಂತಾಗುತಿತ್ತು. ಈಗ ನಾಲ್ಕರಲ್ಲೊಂದಂಶವನ್ನು ಪಾಕಿಸ್ತಾನವಾಗಿ ಆಚೆ ತೆಗೆದಿಟ್ಟುದರಿಂದ ಉಳಿದ ಮೂರಂಶಗಳಲ್ಲಿ ನಿರಾತಂಕವಾಗಿ ನವನಿರ್ಮಾಣ ಕಾರ್ಯಗಳನ್ನು ಮುಂದೊತ್ತುವ ಅನುಕೂಲತೆ ದೊರೆತಿದೆ. ಆಸಕ್ತಿಯಿಂದ ಕೆಲಸ ಮುಂದೊತ್ತಿದರೆ ಈ ಮುಕ್ಕಾಲಂಶ ಭಾರತದಲ್ಲೇ ಮೂರು ಭಾರತದ ಶಕ್ತಿ, ಪ್ರಗತಿ ನಿರ್ಮಿಸಲು ಸಾಧ್ಯವಿದೆ. ನಾಲ್ಕಂಶಗಳೂ ಉಳ್ಳ ಅಖಂಡ ಭಾರತದ ಮಟ್ಟಿಗೆ ಹೀಗೆ ಮಾಡುವದಸಾಧ್ಯವೆಂದು ಖಚಿತವಾದ ಮೇಲೆ ಒಂದಂಶವನ್ನು ಕತ್ತರಿಸಿಕೊಂಡು ಉಳಿದ ಮೂರಂಶಗಳಲ್ಲಿ ಇದನ್ನು ಸಾಧಿಸಿಕೊಳ್ಳುವಂತಾಗ [illegible] ಲಾಭವೇ ಹೊರತು ನಷ್ಟವಲ್ಲ.

೦೦ ೦೦ ೦೦

ನಿಜ; ಮಹಾತ್ಮಾಜೀ ಗಾಂಧಿಗಾಹುತಿಯಾದರು. ಅದು ಮಹಾತ್ಮರಿಗೆ ಹೇಳಿಸಿದ ಮರಣ. ತನ್ನ ಉಚ್ಚ ಗುರಿ ಸಾಧನೆಗೇನೇ ಸಂಪೂರ್ಣವಾಗಿ ಮೀಸಲಿದ್ದ ಒಂದು ಜೀವನವು ಆದರ್ಶಾನುಗುಣವಾದ ಮರಣ ಹೊಂದುವುದೇ ಸಾರ್ಥಕ ಹೊರತು ರೋಗರುಜೆಗಳಿಗೆ ತುತ್ತಾಗಿ ನಶಿಸುವುದು ಭೂಷಣವಲ್ಲ. ಕೃತಾರ್ಥ ಜೀವನದಂತೆಯೇ ಸಾರ್ಥಕ ಮರಣ ಹೊಂದಿದರು ಗಾಂಧಿಜೀ; ಅವರಿಗೇ ಮೊದಲನೇ ಸುಯೋಗವನ್ನು ಸ್ವಾತಂತ್ರ್ಯ ಹೋರಾಟ ಕಾಲವು ಒದಗಿಸಿಕೊಟ್ಟಿದ್ದರೆ ಎರಡನೇ ಭಾಗ್ಯವನ್ನು ಸ್ವಾತಂತ್ರ್ಯದ ಆದಿ ಭಾಗವುದೊರಕಿಸಿ ಕೊಟ್ಟಿತು. ಇಂತಹ ಇಮ್ಮಡಿ ಪ್ರಭಾವದ ಮೂಲಕ ಗಾಂಧಿಜೀ ಈಗ ದುಬಾರಿ ಮಹಾತ್ಮನಾಗಿದ್ದಾರೆ; ಲೋಕಾದರ್ಶಕನಾಗಿ, ಭಾರತೀಯರೆಲ್ಲರ ಹೃದಯದಲ್ಲಿ ರಾಜಿಸುತಿದ್ದಾರೆ. ಅವರ ಉಪದೇಶಗಳಿಗಿಂತ ಎಷ್ಟೋ ಪಾಲು ಹೆಚ್ಚಿನ ಕೆಲಸವನ್ನು ಅವರ ರಕ್ತ ಸಾಧಿಸಿ ಕೊಟ್ಟಿದೆ. ಅವರ ಬಲಿದಾನದ ಪರಿಣಾಮವಾಗಿ, ಅದಕ್ಕಿಂತ ಮೊದಲಿದ್ದ ಜಾತೀಯ ದ್ವೇಷಗಳಷ್ಟೇ ಅಲ್ಲ, ದುರಭಿಮಾನಗಳು ಕೂಡಾ ಆ ಬೆನ್ನಲ್ಲೇ ಮಾಯವಾಗಿವೆ. ಬಾಪೂ ಬಲಿದಾನದ ಮೊದಲಿನ, ಮತ್ತು ಮೇಲಿನ ವಾತಾವರಣಗಳನ್ನು ತುಲನೆ ಮಾಡಿ ನೋಡಿದರೆ ಸಂಗತಿ ಸ್ಪಷ್ಟವಾಗುವದು. ಆದ್ದರಿಂದ ಮಹಾತ್ಮರ ಬಲಿದಾನವು ಸ್ವತಂತ್ರ ಭಾರತದ್ದಷ್ಟೇ ಅಲ್ಲ, ಲೋಕ ಚರಿತ್ರೆಯಲ್ಲೂ ವಜ್ರಾಕ್ಷರಗಳಿಂಗ ಮೂಡುವಂತಹದು.

೦೦ ೦೦ ೦೦

500ಕ್ಕೂ ಮಿಕ್ಕಿದ ಆಶ್ರಿತ ರಾಜ್ಯಗಳನ್ನು ಭಾರತ ಕೇಂದ್ರದೊಳಗೆ ಜೋಡಣೆಗೊಳಿಸಿಕೊಂಡುದು ಚರಿತ್ರಾರ್ಹ ಮಹತ್ಸಾಧನೆ. ಭಾರತದೊಳಗಡೆಯಲ್ಲಿ ಹಿಂದಿನ ಪಾಕಿಸ್ತಾನ್ ಪ್ರಶ್ನೆಗಿಂತಲೂ ಹೆಚ್ಚಿನ ತೊಂದರೆ ಕೊಡಲು ಸಾಧ್ಯವಿದ್ದ ಈ ಸಂಸ್ಥಾನೀ ಪ್ರದೇಶಗಳನ್ನು ಒಲವು [illegible] ಒತ್ತಾಯ ಮೂಲಕ ಕೇಂದ್ರ ಭಾರತ ಛತ್ರದಡಿಯಲ್ಲಿ ಸೇರಿಸಿಕೊಂಡ ಕೆಲಸವು ಅತಿ ದೊಡ್ಡದು. ಇಂದಿನ ಕಾಂಗ್ರೆಸ್ ನಾಯಕರ ಬದಲಿಗೆ ಬೇರೆಂತಹ ಉಗ್ರಗಾಮಿ ಪಕ್ಷ ಪ್ರಮುಖರು ಅಲ್ಲಿರುತಿದ್ದರೂ ಇಷ್ಟೊಂದು ಅಲ್ಪಾವಧಿಯೊಳಗೆ, ಇಷ್ಟು ಅಧಿಕ ಸಂಖ್ಯೆಯ ರಾಜರುಗಳ ತಲೆಮಾರುಗಳಿಂದಿದ್ದ ವೈಭವಗಳನ್ನು ಅಪಹರಿಸಿ ಅವರನ್ನು ಸಾಧುಗೊಳಿಸಿಟ್ಟುಕೊಳ್ಳಲು ಸಾಧ್ಯವಿತ್ತೇ? ಇದೊಂದು ಮಹಾ ಕ್ರಾಂತಿಯಲ್ಲವೆ? ಎಂಬುದನ್ನು ಯೋಚಿಸಬೇಕು. ಇದೂ ನಿಜಕ್ಕೂ ಅತಿ ದೊಡ್ಡ ಲಾಭ.

೦೦ ೦೦ ೦೦

ಅತಿರೇಕ ಪೌರುಷ ಪ್ರದರ್ಶನಗಳನ್ನು ಮಾಡುತಿದ್ದ ಹೈದರಾಬಾದನ್ನು ಐದೇ ದಿನಗಳೊಳಗೆ ಹಣ್ಣು ಮಾಡಿ ಹಾದಿಗೆ ತಂದ ರೀತಿಯು ಲಾಭ, ಕೀರ್ತಿ, ಹೆಗ್ಗಳಿಕೆಗಳನ್ನು ಗಳಿಸಿಕೊಟ್ಟಿದೆ. ಭಾರತವು ಹೈದರಾಬಾದಿನಂತಹ ಒಳಭಾಗವನ್ನು ಬಗಲಿಗೆಳೆದುಕೊಂಡುದೊಂದೇ ಮಹಾ ವಿಜಯವೆಂಬ ಅರ್ಥವಲ್ಲ. ಹೆಗ್ಗಳಿಕೆಗೆ ಕಾರಣವೆಂದರೆ ಆ ಕೆಲಸವಾಗಿ ಹೋದ ವಿಧಾನ. ಸ್ವತಂತ್ರ ಭಾರತದಲ್ಲಿ ತನ್ನ ಸ್ಥಾನಮಾನಕ್ಕೆ ತಕ್ಕ ಶಕ್ತಿ ಮತ್ತು ಬುದ್ಧಿ ಕುಶಲತೆ, ಎರಡೂ ಇದೆಯೆಂಬುದನ್ನು ಲೋಕವು ಹೈದರಾಬಾದ್ ಕಾರ್ಯಾಚರಣೆಯಲ್ಲಿ ಕಂಡಿತು. ತುಸು ಉದ್ದ ಬೆಳೆಯುತಿದ್ದರೆ ಹಲವು ಕಂಟಕಗಳನ್ನು ಮೊಳೆಯಿಸುವಂತಿದ್ದ ಆ ಕೆಲಸವನ್ನು ಭಾರತವು ಸಕಾಲದಲ್ಲೇ ಮುಗಿಸಿಕೊಂಡಿತು; ಭಾರತದೊಳಗಿನ ಮುಸ್ಲಿಮರ ಕಡೆಗೂ ಅಕ್ರಮ ಒಳಾಭಿಮಾನವಿಟ್ಟುಕೊಂಡಿದ್ದ ಪಾಕಿಸ್ತಾನದ ಭ್ರಮೆ ಬಿಟ್ಟುಹೋಗುವಂತೆ ಹಿಂದೀ ಮುಸ್ಲಿಮರು ಯೋಗ್ಯ ವರ್ತನೆ ವಹಿಸಿದ್ದರು. ಈ ರೀತಿ ಉತ್ತೀರ್ಣಗೊಂಡು ಸರ್ಟಿಫಿಕೇಟು ದೊರೆತಂತಹ ಆ ಕಠಿಣ ಪರೀಕ್ಷೆ ನಡೆಯಲೇಬೇಕಾಗಿ ಬಂದುದೂ ಹಿತಕರವಾಗಿ ತೋರುತ್ತಿದೆ.

೦೦ ೦೦ ೦೦

ಒಳಗಡೆ ಜಾತೀಯ ವಾದಿಗಳ, ಉಗ್ರಗಾಮಿಗಳ, ಅಜ್ಞಾನ ಅಹಂಭಾವ ಪ್ರೇರಿತ ಪಕ್ಷಪಂಗಡಗಳ ಗಲಭೆ, ಚಳವಳಿ, ಸಡಿಲು ವರ್ತನೆಗಳೇನಿದ್ದರೂ ಅವೆಲ್ಲವೂ ಹಿಂದಿನಿಂದಲೂ ಇದ್ದು ಈಗ ಪ್ರಬಲಿಸಿದ ರೋಗಗಳು. ದಾಸ್ಯ ಕಾಲದ ಪರಿಣಾಮಗಳೇ ಹೊರತು ಸ್ವತಂತ್ರ ಯುಗದ ಬೀಜಗಳಲ್ಲ. ಇಂತಹ ಆಟಗಳಿಗೆ ಸ್ವತಂತ್ರ ಭಾರತದಲ್ಲಿ ಅವಕಾಶವಿಲ್ಲವೆಂಬ ಸ್ಪಷ್ಟ ಪಾಠವು ಗೊಂದಲಗಾರರಿಗೂ ಖಂಡಿತ ಭರವಸೆಯು ಸಾರ್ವಜನಿಕರಿಗೂ ದೊರೆತಿರುವುದು ನೆಮ್ಮದಿದಾಯಿಯಿದೆ. ಸ್ವಾತಂತ್ರ್ಯವು ಸುದೃಢ ಮತ್ತು ಯೋಗ್ಯವಾಗಬೇಕಾದರೆ ಇರಲೇಬೇಕಾದ ಆಳಲು ಕಲಿತವರಿದ್ದಾರೆಂಬುದು ಇಲ್ಲಿಯ ಆತಂಕ ನಿರ್ಮಾಪಕರಂದಾರಂಭ

ನೀವು ಅಳಿಯಸಂತಾನಿಗರೋ?

ಹಾಗಿದ್ದರೆ ಈಗತಾನೆ ಪಾಸಾದ

ಮದ್ರಾಸು

ಅಳಿಯಸಂತಾನ ಕಾನೂನು

ಇದನ್ನು [illegible]

ಇದರ ಮಾಹಿತಿಯನ್ನು ಪಡೆಯಲೇಬೇಕು

ಇಂಗ್ಲಿಷ್ ಪ್ರತಿಗಳೂ ಕನ್ನಡ ಪ್ರತಿಗಳೂ ದೊರೆಯುತ್ತವೆ.

ಕ್ರಯ **0–8–0**. (ಟಪ್ಪಾಲು ಖರ್ಚು ಪ್ರತ್ಯೇಕ)

0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು.

ಸಿಗುವ ಸ್ಥಳ..

ನವಯುಗ ಪ್ರೆಸ್, ಉಡುಪಿ

1950ನೇ ವರುಷದ ಎಂಟನೆ ತರಗತಿಯ ಪಬ್ಲಿಕ್ ಪರೀಕ್ಷೆಯ

ಕನ್ನಡ ಪಾಠಪುಸ್ತಕದ

ಟಿಪ್ಪಣಿಯು

ಹಿಂದಿನ ವರ್ಷಗಳಂತೆ ಉಪಯುಕ್ತ ವಿಷಯಗಳಿಂದ ಕೂಡಿ ಅಚ್ಚಾಗುತ್ತಲಿದೆ. ಈ ತಿಂಗಳೊಳಗೆ ಪ್ರಕಟವಾಗುವುದು

ಅಪೇಕ್ಷಕರು ತಮಗೆ ಬೇಕಾದ ಪ್ರತಿಗಳ ಬಗ್ಗೆ ಈ ಕೆಳಗಣ ವಿಳಾಸಗಳಿಗೆ ಬರೆದುಕೊಳ್ಳುವುದು

1. ಡಿ. ವಿ. ಹೊಳ್ಳ, ವಿದ್ವಾನ್, ಕುಂದಾಪುರ.
2. ಎಲ್. ಎನ್. ಪ್ರೆಸ್, ಕುಂದಾಪುರ.
3- ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಸಿ ಅಖಿಲ ಪ್ರಪಂಚಕ್ಕೂ ತಿಳಿಯುವಂತಾಯಿತು. ಈ ಯೋಗ್ಯತಾ ಸಂಪಾದನೆಯ ಅನುಭವವು ಆದಿ ಭಾಗದಲ್ಲೇ ದೊರೆತುದು ಒಂದು ಲಾಭವೇ ಸರಿ.

೦೦ ೦೦ ೦೦

ಕಾಲದೋಷದಿಂದೆದ್ದ ಆಹಾರಾಭಾವವನ್ನು ಪ್ರಚಲಿತ ಸರಕಾರಗಳು ತಗ್ಗಿಸಿಕೊಂಡ ವ್ಯವಸ್ಥಾ ವಿಧಾನಗಳು ಸದ್ಯಸ್ಥಿತಿಯಲ್ಲಿ ಅಸಮಾಧಾನಕರವಾದುವುಗಳೆನ್ನಲು ಕಾರಣವಿಲ್ಲ. ಅಂತೆಯೇ ಗತಕಾಲದ ಕಾರಣಗಳಿಂದಾಗಿ ಜನತೆಯಲ್ಲಿ ಉಳಿದಿರುವ ಅಜ್ಞಾನ, ಉಬ್ರಮೆಗಳು ಸ್ವಾತಂತ್ರ್ಯದಾದಿ ಭಾಗದಲ್ಲಿ ಬೆಳೆದು ಹರಡಿದಂತೆ ತೋರಿದರೂ, ಅದು ಚಲ್ಲಾಪಿಲ್ಲಿ ಚದರಿ ಹೋಗಿ ಮಾಯವಾಗುವ ಸ್ಥಿತ್ಯಂತರ ಹೊರತು ನಿಜಕ್ಕೂ ಬೆಳವಣಿಗೆಯಲ್ಲವಾದ್ದರಿಂದ, ಮನೋರಂಗದ ಇವೆಲ್ಲಾ ದೋಷಗಳೂ ಕ್ರಮಶಃ ನಶಿಸುತ್ತಿವೆ ಎಂಬ ಭಾವನೆಯಿಂದಿರಲು ಅಡ್ಡಿಯಿಲ್ಲ.

೦೦ ೦೦ ೦೦

ಪರದೇಶಗಳಲ್ಲಿ ಸ್ವತಂತ್ರಭಾರತದ ವರ್ಚಸ್ಸು, ಯಶಸ್ಸು, ಪ್ರಾಮುಖ್ಯತೆ ಇಷ್ಟು ಅಲ್ಪಾವಧಿಯೊಳಗೆ ಹರಡಿಹೋಗಿರುವ ಪರಿಮಾಣವು ನಿಜಕ್ಕೂ ಹೆಗ್ಗಳಿಕೆ ಮೂಡಿಸುವಂತಹದು. ಸ್ವತಂತ್ರ ಭಾರತವು ಲೋಕ ಶಾಂತಿ ಪಾಲನೆಯಲ್ಲಿ ವಹಿಸಿರುವ ಆಸಕ್ತಿ- ಅದು ತೋರಿಸುತ್ತಿರುವ ದಿಗ್ದರ್ಶನ- ಅದರ ನಾಯಕರಲ್ಲಿ ಕಂಡು ಬರುತ್ತಿರುವ ಲೋಕಕೀರ್ತಿ, ನಾಗರಿಕ ನಡತೆ-- ಇತ್ಯಾದಿಗಳ ದೆಸೆಯಿಂದ ಅದಕ್ಕೆ ಪ್ರಾಪಂಚಿಕ ರಾಷ್ಟ್ರಗಳ ಭಾವೀ ಘರ್ಷಣೆಯ ನಡುವೆ ಮಧ್ಯಸ್ಥಗಾರ ಸ್ಥಾನವೇರುವ ಯೋಗ ಕಂಡು ಬರುತ್ತಿದೆ. ಆಸ್ಯಾದ ಮುಂದಾಳು ಸ್ಥಾನವಂತೂ ಅದಕ್ಕೆ ಮೀಸಲಿರುವಂತಿದೆ.

೦೦ ೦೦ ೦೦

ಕಾಶ್ಮೀರದಲ್ಲಿ ಭಾರತಸರಕಾರವು ತಳೆದ, ಕೈ ಹೊಗಿಸಿದ ರೀತಿ ಮತ್ತು ಮಾಡಿರುವ ಕಾರ್ಯಗಳು ಕೂಡಾ, ಅಲ್ಲಿಯ ಕೆಲಸವಿನ್ನೂ ಬಾಕಿ ಇದ್ದರೂ ಭಾರತದ ಘನತೆ ಮತ್ತು ಶಕ್ತಿಯನ್ನಲ್ಲದೆ ದುರಾಕಾಂಕ್ಷೆ ಮತ್ತು ದೌರ್ಬಲ್ಯವನ್ನೇನೂ ಪ್ರದರ್ಶಿಸುತ್ತಿಲ್ಲ. ಇದೂ ಲಾಭದ ತಪ್ಪೆಗೆ ಸೇರುವ ವಿಷಯವೇ.

೦೦ ೦೦ ೦೦

ಆಹಾರಾಭಾವವನ್ನು 1951ರೊಳಗೆ ಸಂಪೂರ್ಣ ನಿವಾರಿಸಿಕೊಳ್ಳುವ ಈಗಿನ ಕಾರ್ಯರೀತಿಯು ಮೂಲ ಕೊರತೆಯನ್ನು ಮೂಲೋಚ್ಚಾಟನೆ ಮಾಡುವಂತಹದಿರುವುದರಿಂದ ಅತ್ಯಂತ ಪ್ರಾಮುಖ್ಯವಾದುದು.

೦೦ ೦೦ ೦೦

ಒಳಗಡೆಯಲ್ಲಿ, ಎಂತಹ ದೌರ್ಬಲ್ಯ ಕಂಡು ಬಂದರೂ ಅವೆಲ್ಲವನ್ನೂ ನಿವಾರಿಸಬಲ್ಲ ಮತ್ತು ಆ ದೋಷಗಳ ಹತ್ತು ಪಾಲಷ್ಟು ಗುಣಗಳನ್ನು ಪ್ರದರ್ಶಿಸಬಲ್ಲ ನೆಹರು, ವಲ್ಲಭಾಯಿಗಳಂತಹ ವಿಶ್ವಾಸಾರ್ಹ ನಾಯಕರು ಸ್ವತಂತ್ರ ಭಾರತಕ್ಕೆ ಸಾರಥಿಗಳಾಗಿ ದೊರೆತುದು ಮಹತ್ತಾದ ಸುದೈವ. ಒಂದನೆಯವರು ಭಾವಶುದ್ಧಿ ಮತ್ತು ಲೋಕ ಪ್ರಾಮುಖ್ಯತೆಗೆ ಕಾರಣರಾದರೆ ಎರಡನೆಯವರು ಆಂತರಿಕ ಸ್ಥಾನಿವಾರಣೆ ಮತ್ತು ಶಿಸ್ತು ಸಂಘಟನೆಗೆ ಕಾರಣಕರ್ತರಾದ್ದಾರೆ. ಈ ದೆಸೆಯಿಂದ ಅಂತರಂಗ-ಬಹಿರಂಗದ ಎಲ್ಲಾ ಕಂಟಕ ಕಲ್ಮಷಗಳೂ ನಿವಾರಣೆಗೊಂಡು ಒಳಗೂ ಹೊರಗೂ ಭಾರತವು ವೈಗೂಡಿ, ಘನತೆಗಳಿಸಿ ಬೆಳೆಯುವಂತಾಗಿದೆ

೦೦ ೦೦ ೦೦

ಕ್ಷಿಪ್ರವೇಗಕ್ಕಾಗಿ ತಾತ್ಕಾಲಿಕ ವ್ಯವಸ್ಥೆಯೊಂದಿಗೆ ಸ್ಥಾಪನೆಗೊಂಡಿದ್ದ ಇಂದಿನ ಸರಕಾರವು ತನ್ನ ಅವಧಿಯಲ್ಲೇ ಎಲ್ಲಾ ಕಂಟಕಗಳನ್ನೂ ನಿವಾರಿಸಿ ಬಿಟ್ಟು, ಪ್ರಾಯಸ್ಥರ ಮತದಾನದಿಂದಾರಿಸಲ್ಪಡುವ ಮುಂದಿನ ಸರಕಾರಕ್ಕೆ ಕ್ಷೇತ್ರವನ್ನು ಪರಿಶುದ್ಧಗೊಳಿಸಿಡುತ್ತಿರುವುದರಿಂದ ಮುಂದೆ ಸರ್ವತೋಮುಖ ಪ್ರಗತಿಶೀಲ ಜನತಾರಾಜ್ಯ ಮೂಡಲಡ್ಡಿಯಿಲ್ಲ.

೦೦ ೦೦ ೦೦

ಈ ರೀತಿ ವ್ಯಯ ವಿಭಾಗದ ಎಲ್ಲಾ ಅಂಶಗಳನ್ನೂ ತುಂಬಿಸಿಕೊಟ್ಟು ಮುಂದೆ ಉಳಿತಾಯವೇ ಬರುತ್ತಾ ಹೋಗುವಂತಹ ವ್ಯವಸ್ಥೆಗಳು, ಕಾರ್ಯಕ್ರಮಗಳಿರುವುದರಿಂದ ಭಾರತ ಸ್ವಾತಂತ್ರ್ಯವು ಸಾರ್ಥಕ! ಮಾನುಷತ್ವಕ್ಕಗತ್ಯವಿರುವಂತೆಯೇ ಲಾಭದಾಯಿ ಕೂಡಾ! ಸ್ವತಂತ್ರ ಭಾರತಕ್ಕೆ ಲೋಕ ಪ್ರಾಮುಖ್ಯ ಸ್ಥಾನ ಬರುವ ಭವ್ಯ ಭವಿಷ್ಯ ಕಾದಿದೆ. ಈ ಸ್ವಾತಂತ್ರ್ಯವು ನಮ್ಮಲ್ಲಿ ಹೊಣೆಗಾರಿಕೆಯನ್ನು ನಿರ್ಮಿಸಿದಂತೆಯೇ ಭರವಸೆ ಮತ್ತು ಹೆಗ್ಗಳಿಕೆಯನ್ನೂ ಕೊಡುತ್ತಿದೆ.

ಜೈ-ಹಿಂದ್ !

ಅಸಮಾಧಾನವೇಕೆ?-

ಭಾರತ ಸ್ವಾತಂತ್ರ್ಯಕ್ಕೀಗ ಎರಡು ವರುಷಗಳು ತುಂಬಿವೆಯಷ್ಟೆ? ಪರಿಸ್ಥಿತಿ ಹೇಗಿದೆ, ಜನತೆಯ ಭಾವನೆ ಹೇಗಿದೆ, ಎಂದೊಮ್ಮೆ ಸುತ್ತಲೂ ನೋಡಿಕೊಂಡರೆ ಹೆಚ್ಚಿನಂಶ ಆಶಾಭಂಗವಾದ ಚಿಹ್ನೆಗಳೇ ಎಲ್ಲೆಲ್ಲೂ ಗೋಚರಿಸುತ್ತಿವೆ, ಎಂಬುದನ್ನೊಪ್ಪಬೇಕು. ಆಹಾರಾಭಾವದ ಸಂಕಟ-- ಕರಕಂದಾಯಗಳ ಹೆಚ್ಚಳದ ಅಸಮಾಧಾನ-- ಶ್ರಮಜೀವಿಗಳ ಕಡೆಗೆ ಸಾಕಷ್ಟು ಲಕ್ಷ್ಯ ಹರಿದಿಲ್ಲವೆಂಬ ಅತೃಪ್ತಿ-- ಕಾಂಗ್ರೆಸಿಗರು ಒಂದು ಹೊಸ ಮೇಲ್ವರ್ಗವಾಗಿ ಮೂಡಿದ್ದಾರೆಂಬ ದೂಷಣೆ-- ಸ್ವರಾಜ್ಯಾಡಳಿತೆಯು ಹಿಂದಿನಾಡಳಿತೆಯ ಲೋಪದೋಷಗಳನ್ನೆಲ್ಲಾ ಉಳಿಸಿಕೊಂಡು ಗುಣ ಸಲ್ಲಕ್ಷಣಗಳನ್ನು ಕಳಕೊಂಡಿದೆ ಎಂಬಂತಹ ಭಾವನೆ-- ಇಂದು ಹಬ್ಬಿ ಹೋಗಿದೆ. ಇವೆಲ್ಲವೂ ನಿರಾಧಾರವಾದವುಗಳು, ನಿಷ್ಕಾರಣ ಮುಂದೆ ಬಂದವುಗಳು, ಎಂದು ತೆಗೆದು ಹಾಕಲು ಸಾಧ್ಯವೇ ಇಲ್ಲ. ನೋಟದ ಮಟ್ಟಿಗೆ ಸ್ಥಿತಿಗತಿ ಹೀಗಿರುವುದು ನಿಜ. ಆದರೆ ಇದಕ್ಕಾಗಿ ಅತೃಪ್ತಿ ಅಥವಾ ನಿರಾಶೆಗೊಳಗಾಗುವದು ಪೂರ್ಣ ತಪ್ಪು. ಗೊಂದಲಕ್ಕೀಳುವದಂತೂ ಆತ್ಮಹತ್ಯಾ ಸಮಾನ. ಅಜ್ಞಾನವಶಾತ್ ಅಸಮಾಧಾನಗೊಂಡಿರುವವರೂ, ಬೆಂಕಿ ಹಿಡಿದಲ್ಲೇ ಬೇಳೆ ಬೇಯಿಸಿಕೊಳ್ಳೋಣವೆಂದು ದುರುದ್ದೇಶಪೂರ್ವಕ ಅತೃಪ್ತಿ ಪ್ರದರ್ಶನ, ಆತಂಕ ನಿರ್ಮಾಣಗಳಿಗೆ ನಡು ಬಿಗಿದವರೂ ಅಗತ್ಯವಾಗಿ ಆಲೋಚಿಸಿಕೊಳ್ಳಬೇಕಾದ ಅಂಶಗಳಿವೆ. ಸ್ಥಿತಿಗತಿಗಳ ಪ್ರತಿಕೂಲತೆಗಳಿಂದ ಸಹಜವಾಗಿ ಹೆದರಿ ಹೋದವರು ಗೊತ್ತಿಲ್ಲದೆ ದಿಗಿಲು ಬಿದ್ದಿದ್ದಾರೆ; ಅಂಥವರು ನಿಜಕ್ಕೂ ಭರವಸೆಯಿಂದಿರಬಹುದು. 'ಶ್ರಮಜೀವಿಗಳಿಗಾಗಿಅಥವಾ ಜನತೆಗಾಗಿ ಮಾಡುತ್ತಿದ್ದೇವೆ' ಎಂದು ಗೊಂದಲ ನಿರ್ಮಿಸಹೊರಟವರ ಉದ್ದೇಶವು ಸತ್ಯಕ್ಕೂ ಅದೇ ಆಗಿದ್ದರೆ ಅವರು ತಮ್ಮನ್ನೇ ತಾವು ಕೆಡಿಸಿಕೊಳ್ಳುತಿದ್ದಾರೆ; ಅಂಥವರು ತಮ್ಮ ಸ್ವಭಾವ, ಕ್ರಮ ಬದಲಾಯಿಸಿ ಬೇರೆ ಗತಿ ಹಿಡಿಯುವುದು ಅಗತ್ಯವಿದೆ. ಶುದ್ಧ ಹೃದಯದಿಂದ, ವಸ್ತುಸ್ಥಿತಿಯನ್ನು ಆಳಕ್ಕೆ ಶೋಧಿಸಿ, ಅಭ್ಯಾಸಿಸಿ, ಚಿಂತಿಸಿ ನೋಡುವವರಿಗೆ ಸ್ಪಷ್ಟವಾಗಿ ಹೊಳೆಯುವ ಕಿರಣಗಳಿವು.

೦೦೦

ಅಜ್ಞಾನವಶಾತ್ ದೂರುವವರು ಆಲೋಚಿಸಬೇಕಾದುದಿಷ್ಟೆ:- ಇಂದಿನ ಆಹಾರಾಭಾವ, ಹೊಸ ಹೊಸ ಕರ ಕಂದಾಯಗಳು, ಒಮ್ಮೆಗೇ ಸೌಭಾಗ್ಯವೊದಗಿಸಿಕೊಡಲಾರದ ದೌರ್ಬಲ್ಯಗಳು ಇಲ್ಲದಂತೆ ಮಾಡಬಲ್ಲ ಸರಕಾರವೊಂದಿರಲು ಸಾಧ್ಯವಿತ್ತೇ? ನಮ್ಮ ರಾಷ್ಟ್ರದಲ್ಲಿ ಆಡಳಿತೆ ನಡೆಸುವ ಸರಕಾರವು ನಮ್ಮವರದೇ ಇರಬೇಕು; ನಾವಿದ್ದಂತೆ ಮಾತ್ರ ನಮ್ಮಲ್ಲಿಯ ಸ್ಥಿತಿಗತಿಗಳಿರುವಂತೆ ಇರಬೇಕು; ಹೊರತು ಆಕಾಶದಿಂದ ಇಳಿದು ಇಲ್ಲಿ ನಿಲ್ಲಲು ಗುತ್ತದೆಯೆ? ಹಾಗಾದರೆ ಇಂದಿನ ಎಲ್ಲಾ ಅಭಾವಗಳಿಗೂ ಯುದ್ಧೋತ್ತರ ದುಷ್ಕಾಲವೊಂದೇ ಕಾರಣವೆಂದೂ, ಇಂದಿನ ಎಲ್ಲಾ ಅಸಮಾಧಾನಗಳಿಗೂ ಸ್ವಾತಂತ್ರ್ಯದ ಆದಿ ಭಾಗದಲ್ಲಿ ಸಹಜವಾದ ಅತಿಮೋಹಗಳು ಮತ್ತು ಮುಂಜಾಗ್ರತೆಗಳೇ ಹೇತುವೆಂದೂ ತಿಳಿದುಕೊಳ್ಳಿ. ಎಲ್ಲವನ್ನೂ ತೂಕಕ್ಕಿಟ್ಟು ನೋಡುವ ಸಾವಧಾನತೆಯೊಂದನ್ನಲ್ಲದೆ ಈ ಸಂಕಟಗಳ ನಿವಾರಣೆಯ ಮಟ್ಟಿಗೆ ಬೇರಾವುದೇ ವಿಧದ ಆಲಸ್ಯವನ್ನಾಗಲೀ ಮುಂದಗಾಮಿತ್ವವನ್ನಾಗಲೀ ಕಾಂಗ್ರೆಸ್ ಸರಕಾರಗಳು ವಹಿಸಿಲ್ಲವೆಂಬುದು ಗೊತ್ತಿರಲಿ. ಕಾಂಗ್ರೆಸ್ ಸರಕಾರಗಳಲ್ಲಾ ಕಾಂಗ್ರೆಸಿಗರಲ್ಲೂ ನಾವು ಎತ್ತಿ ತೋರಿಸಲಾಗುವ ಜಾಡ್ಯ, ಲೋಪದೋಷಗಳಿವೆಯಾದರೂ ಕಾಂಗ್ರೆಸ್‌ನಲ್ಲಿ ಅಂತರ್ಗತವಾಗಿರುವ ಕೆಲವು ಉಚ್ಚಾದರ್ಶ ಮತ್ತು ತತ್ವಗಳ ದೆಸೆಯಿಂದ ಹಾಗೂ ಕಾಂಗ್ರೆಸ್ ಯಂತ್ರದ ಚಾಲಕತ್ವವು ವಿಶ್ವಾಸಾರ್ಹ ಮತ್ತು ಚುರುಕಿನದಿರುವುದರಿಂದ ಸ್ಥಿತಿಗತಿಗನುಸಾರವಾಗಿ ಮುಂದಗತಿಯಿಂದಾದರೂ ಕಾರ್ಯವಾಗುತ್ತಿದೆ, ಎಂಬುದನ್ನೊಪ್ಪಬೇಕು. ಬದಲಿಗೆ ಈವರೆಗಿನ ಅವಧಿಯಲ್ಲಿ ಬೇರಾವ ಪಕ್ಷವೇ ಆದರೂ ಅಧಿಕಾರದಲ್ಲಿರುತಿದ್ದರೆ ಎಲ್ಲವೂ ಅಸ್ತವ್ಯಸ್ತವಾಗುತ್ತಿತ್ತೆಂದು ಖಂಡಿತವಾಗಿ ಹೇಳಬಹುದು. ಈ ಕೆಳಗಿನ ಕಾರಣಗಳಿಂದ ಈ ವಾದವು ನಿಜವೆಂದು ಅನ್ನಿಸುವದಿಲ್ಲವೇ?:-

ಓದಲೇಬೇಕಾದ ಪುಸ್ತಕಗಳು

೧೯೪೯ರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ (ಯಕ್ಷಗಾನ ,,)	0	3	0
ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ	0	4	0
ಗಾದೆಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ(ನೀಳ್ಗತೆ) ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ. ವಿ. ಹೆಗ್ಡೆ)	0	3	0
ನನ್ನ ಹೆಂಡತಿ, ಕತೆಗಳು) ಮೂಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ (ನೀಳ್ಗತೆ) ಗಿರಿಬಾಲೆ	0	3	0
ಸುಖದವಾರಿ (ವೈರಾಗ್ಯಶರ್ತ) ಕೆ. ಎ. ದೇವದಾಸ	0	3	0
ಸುಕಾಂತ (ಅನುವಾದಿತ ಕತೆ) ವೀ. ಚ- ಹಿತ್ತಲಮನಿ	0	3	0
ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ (ನೀಳ್ಗತೆ) ಕೆ. ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! (ಕತೆ) ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಆವಳು (ಕತೆ) ಶ್ರೀಪತಿ	0	3	0
ತ್ರಿವೇಣಿ (ಪ್ರಬಂಧಗಳ ಸಂಗ್ರಹ)	0	3	0
ನಿಲುಮಂಗಿ (ಕತೆ)ಎಸ್.ಸುಬ್ಬರಾಮಯ್ಯ, ಬಿ ಎ.(ಆನರ್ಸ್)	0	3	0
ಬಾಡಿಗೆಯ ಮನೆ ಮತ್ತು ಮುಸುಕು (ನಾಟಕಗಳು)	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಅದರ ಸಾಧನೆ(ಬಿ. ವಿ. ಶರ್ಮ)	0	3	0
ಎರಡು ಕತೆಗಳು	0	3	0
ಸರಸ ವಿರಸ! (೪ ವಿನೋದ ಚಿತ್ರಗಳು)	0	3	0
ಹೃದಯೇಶ್ವರಿ (ಕಾದಂಬರಿ)	0	3	0
ವಿವಿಧ ವಿಷಯ ಕೋಶ ಭಾಗ ೧ (ವೈಜ್ಞಾನಿಕ ಸಂಗ್ರಹ)	0	3	0
,, ,, ಭಾಗ ೨ ,,	0	3	0
ನುಡಿ ಮುತ್ತುಗಳು ಎಂ. ವಿ. ಹೆಗ್ಡೆ ಮಾಲೆ ೧	0	3	0
,, ,, ಮಾಲೆ ೨	0	3	0
,, ,, ಮಾಲೆ ೩	0	3	0

ಪ್ರತಿಗಳು ಸಿಗುವಸ್ಥಳ:-(1) ಅಂತರಂಗ ಆಫೀಸು, ಉಡುಪಿ. (2) ನವಭಾರತ ಬುಕ್ ಡಿಪೋ, ಉಡುಪಿ. (3) ನವಯುಗ ಪ್ರೆಸ್, ಉಡುಪಿ. (4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

—ಆಲೋಚಿಸಿ ನೋಡಿ!

ಹೊಸತಾಗಿ ದೊರೆತ ಸ್ವಾತಂತ್ರ್ಯದ ತಿರಸ್ಸಾಗಿ ರಾಷ್ಟ್ರದ ಜನತೆಯಲ್ಲಿ ಅತ್ಯಧಿಕ ಸಂಖ್ಯಾಕರ ಪ್ರೀತ್ಯಾದರ ಮತ್ತು ವಿಶ್ವಾಸಕ್ಕೆ ಅರ್ಹರಾದ ನಾಯಕರಿರಬೇಕಾದುದು ಎಲ್ಲಕ್ಕಿಂತ ಮುಖ್ಯ. ಆ ಸ್ಥಾನಕ್ಕೆ ನೆಹರು ವಲ್ಲಭಭಾಯಿಗಳನ್ನು ಬಿಟ್ಟರೆ ಬೇರಾವ ಪಕ್ಷ ಪ್ರಮುಖನೇರಬಹುದಾಗಿತ್ತು? ವಿಚಾರತಕ್ಕಡಿಯನ್ನೆತ್ತಿ ಹಿಡಿದು, ಪ್ರತಿಯೊಂದು ಪಕ್ಷದ ನಾಯಕರುಗಳನ್ನೂ ಆ ಸ್ಥಾನದಲ್ಲಿ ಇಟ್ಟು ಇಬ್ಬಿಬ್ಬರಾಗಿ ತೂಗಿ ನೋಡಿಕೊಳ್ಳಿ. ನೀವು ಎಲ್ಲರನ್ನೂ ಕೆಳಗಿಳಿಸಿ ಕೊನೆಗೆ ನೆಹರೂ ವಲ್ಲಭಾಯಿಗಳನ್ನೇ ಏರಿಸಿಕೊಳ್ಳಲಾರಿರಾ?

ನಂಬಿಗೆಗರ್ಹರಾದ ಈ ನಾಯಕರು ರಾಷ್ಟ್ರದಲ್ಲಿ ಇಂತಹ ಆತಂಕಾಡಚಣೆಗಳನ್ನು ಈವರೆಗೆ ಉಳಿಯಬಿಟ್ಟುದು ನಿರ್ವಾಹವಿಲ್ಲದೆ ಹೊರತು, ಔದಾಸೀನ್ಯದಿಂದ ಅಥವಾ ಬೇರಾವುದೇ ಕಾರಣದಿಂದಲ್ಲವೆಂಬ ಮಟ್ಟಿಗೂ ನಾವು ಅವರ ಮೇಲೆ ವಿಶ್ವಾಸವಿಡಬೇಕಲ್ಲವೆ?

ಅಂತರ್ರಾಷ್ಟ್ರೀಯ ರಂಗವನ್ನೇ ತಮ್ಮ ಕಾರ್ಯ ಕ್ಷೇತ್ರವಾಗಿ ಮಾಡಿಕೊಂಡಿರುವ ಕಮ್ಯೂನಿಸ್ಟರು ಅಧಿಕಾರದಲ್ಲಿರುತಿದ್ದರೆ, ಅವರ ಪಾಲಿಗೆ ನವೋದಿತ ಸ್ವಾತಂತ್ರ್ಯವು ಕಮ್ಯೂನಿಸಮ್ ಸ್ಥಾಪನೆಯ ಒಂದು ಉಪಕರಣ ಮಾತ್ರವಾಗುತಿತ್ತಲ್ಲದೆ, ಅದರಲ್ಲಿ ಬೇರಾವ ಗಣ್ಯವೈಶಿಷ್ಟ್ಯವೂ ಕಂಡು ಬರುತ್ತಿರಲಿಲ್ಲ. ತಮ್ಮ ವಿರೋಧಿಗಳೆಂದು ಗಣಿಸಿರುವ ಶ್ರೀಮಂತ ವರ್ಗವನ್ನು ಮತ್ತು ಕಮ್ಯೂನಿಸಮ್ ವಿರೋಧಿಗಳನ್ನು ದಮನಿಸುವ ಕಡೆಗೇನೇ ಅವರು ಪೂರ್ಣ ಲಕ್ಷ್ಯಕೊಟ್ಟು ಭಾರತೀಯ ವೈಶಿಷ್ಟ್ಯ, ಕಾಶ್ಮೀರ ಸಮಸ್ಯೆ, ಪಾಕಿಸ್ತಾನ್ ಒತ್ತಡ, ನಿರಾಶ್ರಿತ ಸಮಸ್ಯೆ, ವಿವಿಧ ರೂಪಿ ಪ್ರಜಾಭಿಪ್ರಾಯವೆಲ್ಲವನ್ನೂ ಕಡೆಗಣಿಸಿ ಬಿಡುತಿದ್ದರು. ಈ ಮೂಲಕ ಒಳಗಡೆಯಲ್ಲಿ ಹಾಹಾಕಾರ, ಹೊರಗಡೆಯಿಂದ ಗಂಡಾಂತರಗಳೇಳುತಿದ್ದುವು. ಕಮ್ಯೂನಿಸ್ಟರು ಹೊಂದಿಕೊಂಡಿರುವ ಮತ್ತು ವೈರಿಗಳೆಂದು ಕಟ್ಟಿಕೊಂಡಿರುವ ಲೋಕದ ಇಕ್ಕಡೆಯ ರಾಷ್ಟ್ರಗಳನ್ನು ಭಾರತದ ಆ ಪ್ರಕ್ಷುಬ್ಧ ಕ್ಷೇತ್ರವು ಆಕರ್ಷಿಸಿಕೊಳ್ಳುತಿತ್ತು- ಎಲ್ಲವೂ ಗೊಂದಲಮಯವಾಗಿ ಹೋಗುತಿತ್ತು.

ಹಿಂದೂ ಮಹಾಸಭೆ ಮತ್ತು ಆರ್. ಯಸ್. ಯಸ್. ಮನೋಧರ್ಮಕ್ಕನುಗುಣವಾದ ಒಂದು ಪಕ್ಷವು ಅಲ್ಲಿರುತಿದ್ದರೆ ನಿರಾಶ್ರಿತರ ಪ್ರಶ್ನೆ ಈಗಿನ ಅಂಕೆಕ್ಕಿಳಿಯದೆ ಎಷ್ಟೋ ಪಾಲು ದೊಡ್ಡದಾಗುತಿತ್ತು, ಹಿಂದುಗಳಲ್ಲದ ಇತರ ಸಮಾಜಗಳು ಸುರಕ್ಷಿತಾಭಾವನೆಯಿಂದಿರುವುದಸಾಧ್ಯವಾಗಿ ಸಂದೇಹಮಯ ವಾತಾವರಣವು ಸರ್ವವ್ಯಾಪಿಯಾಗುತಿತ್ತು. ಹೋಣೆ ಹೊತ್ತ ಮೇಲೆ ಹಿಂದುಗಳಿಗೆಂದೇ, ಹಿಂದೂತ್ವಕ್ಕೆಂದು ಹೆಚ್ಚಿನದೇನನ್ನು ಮಾಡುವದೂ ಅವರಿಗ ಸಾಧ್ಯವಾಗುತಿತ್ತಲ್ಲದೆ, ಇಂದಿನ ಕಾಂಗ್ರೆಸ್ ಪಕ್ಷೀಯರು ಮಾಡಿದಷ್ಟು ರಾಷ್ಟ್ರಾವಶ್ಯ ಕಾರ್ಯಗಳನ್ನು ಮಾಡಲು ಅವರಿಂದ ಎಂದೂ ಆಗುತ್ತಿರಲಿಲ್ಲ, ಒಂದು ಜಾತೀಯ ರಾಷ್ಟ್ರವೆಂಬುದರಿಂದ ಲೋಕದಿದಿರು ಭಾರತದ ಸ್ಥಾನವು ತೀರಾ ಕೆಳಮಟ್ಟದ್ದಾಗಿ, ಯಾವುದೇ ವಿಧದ ಸಹಾನುಭೂತಿ, ಸಖ್ಯ, ಸಹಾಯವೂ ದೊರೆಯುತಿದ್ದಿಲ್ಲ. ಮಾತ್ರವಲ್ಲ, ನೆರೆಯ ಪಾಕಿಸ್ತಾನದೊಂದಿಗೆ ಲೋಕದ ಇತರ ರಾಷ್ಟ್ರಗಳೂ ಈ ರಾಷ್ಟ್ರದ ಕಡೆಗೆ ಹೊಂಚುತ್ತಾ ನಿಲ್ಲುತಾಗುವಾಗಲೇ ಒಳಗಡೆ ಜಾತೀಯ ಅವಿಶ್ವಾಸಗಳ ದೆಸೆಯಿಂದ ಗೊಂದಲ ವ್ಯಾಪಿಸಿಕೊಂಡು ಅಂತಹ ಬೇಟೆಗಾರ ರಾಷ್ಟ್ರಗಳಿಗೆ ಒಳ ಪ್ರವೇಶಿಸುವ ಅವಕಾಶವೂ ದೊರೆಯುತಿತ್ತು.

●

ಇವರಿಂದಾಗದುದು—

ಇನ್ನೊಬ್ಬನಿಂದಾಗುತಿತ್ತೇನು?

●

ಇನ್ನು ಬೇರಾರಿದ್ದಾರೆ? ಸಮತಾವಾದಿಗಳು ಬರಬಹುದಿತ್ತೆನ್ನೋಣವೆ? ಕಾಂಗ್ರೆಸ್ ನಾಯಕರಂತಹ ನಾಯಕರು ಅವರಲ್ಲಿ ಕಾಣುವದಿಲ್ಲ; ಆ ಸ್ಥಾನಕ್ಕೇರುತಿದ್ದರೆ ಜೈಪ್ರಕಾಶ್, ಪಟ್ವರ್ಧನರು ನೆಹರು, ವಲ್ಲಭಾಯಿಗಳನ್ನೂ ಮಿಗಿಸುತಿದ್ದರೆಂದು ಕಟ್ಟಿಕೊಳ್ಳೋಣವೆಂದರೂ ಯಾರಿಗೂ ಅಧಿಕಾರವಿರದಿದ್ದ ಆ ಕಾಲದಲ್ಲಿ ಸಾರ್ವಜನಿಕರ ದೃಷ್ಟಿಯಲ್ಲಿ ನೆಹರು ವಲ್ಲಭಾಯಿ ಮತ್ತು ಜೈಪ್ರಕಾಶ್ ಪಟ್ವರ್ಧನರೊಳಗಿದ್ದ ತಾರತಮ್ಯವನ್ನು ಊಹಿಸಿಕೊಳ್ಳಲಿಕ್ಕಿದೆ. ಕೀರ್ತಿವಂತರೇ ಅಧಿಕಾರಕ್ಕೇರಬೇಕೆಂಬ ಮಾತಲ್ಲ-- ಜನತಾ ವಿಶ್ವಾಸ ಪಾತ್ರರಾಗಬೇಕೆಂಬುದೇ ಇಲ್ಲಿಯ ಅರ್ಥ. ಅಂದೂ ಇಂದೂ ಸಮತಾವಾದಿಯಿರುವ ನೆಹರುಗಳಿಂದಾಗದುದು ಜೈಪ್ರಕಾಶರಿಂದಾಗುತಿತ್ತೇನೋ, ಎಂದು ಊಹಿಸುವುದಕ್ಕಿಂತಲೂ ಜೈಪ್ರಕಾಶರು ಅಧಿಕಾರ ವಹಿಸಿದರೆ ಇಂದಿನ ನೆಹರುಗಳಂತಾಗಲಾರರೇ ಎಂದು ಯೋಚಿಸಿ ನೋಡುವುದೇ ಉತ್ತಮ. ಹಾಗೇನೂ ಆಗದೆ ಸಮತಾವಾದಿಗಳು ತಮ್ಮ ಆದರ್ಶಗಳನ್ನೆಲ್ಲಾ ಈ ಅವಧಿಯೊಳಗೆನೇ ಜಾರಿಗೆ ತರಲು ಪ್ರಯತ್ನಿಸುತಿದ್ದರು ಎಂದು ಕಟ್ಟಿಕೊಂಡಲ್ಲಿ ಅಪಾಯಕರ ರೀತಿಯಿಂದ ದುಡುಕುತಿದ್ದರು, ಎಂದೇ ಹೆದರಬೇಕಾಗುತ್ತದೆ. ಮಿಕ್ಕೆಲ್ಲವುಗಳ ಮಟ್ಟಿಗೂ ಕಾಂಗ್ರೆಸಿಗರು ಮಾಡಿದಂತೆಯೇ ಮಾಡಿ, ಒಳಗಡೆ ಕ್ರಾಂತಿಕಾರೀ ಆರ್ಥಿಕ ಬದಲಾವಣೆ ತರುವುದರಲ್ಲೂ ಕಾಮನ್‌ವೆಲ್ತ್ ಸಂಬಂಧ ಕಡಿದುಕೊಳ್ಳುವುದರಲ್ಲೂ ಇವರು ಮುಂದುವರಿಯುತಿದ್ದರೆಂದು ಊಹಿಸಬಹುದು. ಹೊಸ ಸ್ವಾತಂತ್ರ್ಯವನ್ನು ಭದ್ರಪಡಿಸುವದಕ್ಕೆಂದಲ್ಲದೆ ಬೇರಾವುದಕ್ಕಾಗಿಯೂ ನೆಹರೂ ಸರಕಾರವು ಈ ಮಟ್ಟಿಗೆ ಮುಂದಗಾಮಿಯಾಗಿಲ್ಲ. ಈ ಭದ್ರತೆ ಎಲ್ಲಕ್ಕಿಂತ ಮುಖ್ಯವೆಂಬುದನ್ನು ಸಮತಾವಾದಿಗಳೂ ಒಪ್ಪುತ್ತಾರೆ. ಅಂದಮೇಲೆ ಅವರು ಅಧಿಕಾರದಲ್ಲಿದ್ದರೂ ಒಂದೊಮ್ಮೆಗೆ ನೆಹರೂ ತೀರ್ಮಾನಕ್ಕೇನೇ ಬರಬೇಕಿತ್ತು; ಇಲ್ಲವೇ ಈ ಅವಸರದ ಪರಿಣಾಮವಾಗಿ ಅಪಾಯವನ್ನು ಆಹ್ವಾನಿಸಿಕೊಳ್ಳಬೇಕಿತ್ತು. ಕೂಡಲೇ ಆರ್ಥಿಕ ಸಮಾನತೆ ಸಾಧಿಸುವುದರಿಂದ ಮತ್ತು ಕಾಮನ್‌ವೆಲ್ತ್ ಮೈತ್ರೀ ಸಂಬಂಧ ಕಡಿದುಕೊಳ್ಳುವುದರಿಂದ ಅಂತಹ ಅಪಾಯ ಅಥವಾ ನಷ್ಟ ಇಲ್ಲವೆಂದು ಅವರನ್ನುತ್ತಾರಾದರೆ, ಪಂಡಿತ ನೆಹರುಗಳು ಅಂದಾಜು ತಪ್ಪಿದ್ದಾರೆಂದು ತಿಳಿಯಬೇಕಾಗುವದು. ಅವರ ಅಂದಾಜು ತಪ್ಪು, ಇವರದೇ ಸರಿ ಎಂದು ಸಾರ್ವಜನಿಕರು ನಂಬಿಕೆಯಿಡುವಷ್ಟಾದರೂ ಜನತಾ ಬೆಂಬಲ ದೊರಕಿಸಿಕೊಳ್ಳಲಾರದ ಸಮತಾವಾದಿಗಳು ಅಧಿಕಾರ ನಿರ್ವಹಣಕ್ಕೂ ಅರ್ಹರಲ್ಲ. ಅದ್ದರಿಂದ ಜನತಾ ರಂಗಕ್ಕಿಳಿದು ಕಾರ್ಯ ಕೈಕೊಂಡು, ಇಂದಿನ ನೆಹರೂ ಸರಕಾರದ ವಾರಿಸ್ದಾರರಾಗಿ ನಾಳೆಯ ಅಧಿಕಾರ ನಿರ್ವಹಣಕ್ಕೆ ತಯಾರಾಗುವ ಅರ್ಹತೆ ಗಳಿಸಬೇಕಾದುದೇ ಈಗ ಸಮತಾವಾದಿಗಳ ಕೆಲಸ.

ಹೀಗೆ ತುಲನೆ ಮಾಡಲಾಗುವ ಬೇರೆ ಪಕ್ಷವಾವುದೂ ನಮ್ಮ ನಡುವೆ ಕಾಣಿಸುತ್ತಿಲ್ಲ. ಅದ್ದರಿಂದ ಇಂದು ನೆಹರೂ ನೇತೃತ್ವದ ಕಾಂಗ್ರೆಸ್ ರಾಜ್ಯಭಾರವಿರುವುದು ಸರಿ; ಅದಿದ್ದುದು ಮತ್ತು ಇರುವುದು ರಾಷ್ಟ್ರದ ಒಂದು ಮಹತ್ತಾದ ಭಾಗ್ಯ; ಇಂದಿನ ಲೋಪದೋಷಗಳಾವುವೂ ಸ್ವತಃ ಅದರ ನಿರ್ಮಾಣಗಳೂ ಅಲ್ಲ; ಅವುಗಳ ನಿವಾರಣೆಗಾಗಿ ಅದು ಮಾಡಬೇಕಾದುದನ್ನು ಮಾಡದೆ ಕರ್ತವ್ಯಬಾಹಿರವಾದುದೂ ಇಲ್ಲ, ಎಂಬುದು ಸ್ವತಃಸಿದ್ಧ.

ಂಂ ಂಂ ಂಂ

ಈಗ ಸರಕಾರದ ದಿಕ್ಕಿನಿಂದ ನಮ್ಮ ದೃಷ್ಟಿಯನ್ನೆಳೆದುಕೊಂಡು ಸ್ವತಃ ನಮ್ಮನ್ನೇ ನೋಡಿಕೊಳ್ಳೋಣ. ಯಾವುದೇ ಅತೃಪ್ತ ಪಕ್ಷಕ್ಕೆ ಸೇರಿದವನಿರಲಿ; ಇಲ್ಲವೇ ಸ್ವಂತ ಕಾರಣಗಳಿಂದ ಅಸಮಾಧಾನಗೊಂಡವನಿರಲಿ; ಪ್ರತಿಯೊಬ್ಬನೂ ತನ್ನ ಪಾಲಿನ ಕರ್ತವ್ಯವನ್ನು ತಾನು ಮಾಡಿರುವೆನೇ ಎಂಬುದನ್ನು ನೋಡಿಕೊಳ್ಳಲಿ. ಇಲ್ಲೀಗ ಮೊದಲನೇ ಪ್ರಶ್ನೆ:-ಈ ಸ್ವಾತಂ

(೯ನೇ ಪುಟ ನೋಡಿರಿ)

THE
Canara Banking Corporation Ltd.
(Incorporated in India)
Estd 1906
HEAD OFFICE, UDIPI, S. I.

Capital Authorised	Rs 25,00,000
Capital Issued & Subscribed ..	Rs 20,00,000
Capital Paid Up	Rs 19,99,800
Reserves	Rs 8,91,000

Banking business of every description transacted.

ಗುರುವಾರ, ಉಡುಪಿ, ೧೧-೮-೪೯

ಆಗೋಸ್ತು ೧೫

ಆಗೋಸ್ತು ಹದಿನೈದು ಮೂರನೇ ಬಾರಿ ಬಂತು. ಆ ಮೊದಲ ದಿನದ ಸೂರ್ಯ ಅಸ್ತಮಿಸುವಾಗ ಇದ್ದ ಕತ್ತಲೆ ಅಂದಿಗೇ ಪೂರ್ತಿ ಕಳೆದು, 1947ನೇ ಆಗೋಸ್ತು 15ರ ಸೂರ್ಯನೊಂದಿಗೆ ಭಾರತದಲ್ಲಿ ಬೆಳಕಾಗಿತ್ತು; ಭಾರತೀಯರ ನವಜೀವನ ಪ್ರಾರಂಭಿಸಿದ್ದಿತು. ಅಂದಿನಿಂದೀವರೆಗಿನ ಅವಧಿಯ ನಟ್ಟನಡುವೆ 1948ನೇ ಆಗೋಸ್ತು 15 ಬಂದು ಹೋಯಿತು; ಈಗ 1949ನೇ ಆಗೋಸ್ತು 15 ಬಂದಿದೆ. ಒಂದನೆಯದರಲ್ಲಿ ಹೊಸ ಹೊಸ ದುಃಖ ಮಿಶ್ರಿತ ಅಪೂರ್ವ, ಅಪಾರ ಹಾಗೂ ನವೀನಾನಂದವಿದ್ದಿದ್ದರೆ, ಎರಡನೆಯದರಲ್ಲಿ ಬಾಪೂಜಿ ಬಲಿದಾನ ಮತ್ತು ಬಾಕಿಬಿದ್ದ ಕಾರ್ಯಗಳ ದೆಸೆಯಿಂದೆದ್ದ ಗಭೀರ ಚಿಂತನೆ ವ್ಯಾಪಿಸಿದ್ದಿತು. ಈಗ ಬರುತ್ತಿರುವ ಮೂರನೆಯದರಲ್ಲಿ ಸುಖದುಃಖವೆರಡೂ ಸಾಕಷ್ಟು ಪಾಕಗೊಂಡು, ಆ ಮೂಲಕ ಪಕ್ವವಾದ ಬುದ್ಧಿ ಮತ್ತು ಅನುಭವಪೂರ್ಣ ಹೊಣೆಗಾರಿಕೆಯು ಎದ್ದು ತೋರುತ್ತಿದೆ. ಈ ಅವಸ್ಥಾಂತರಗಳು ನಾವು ಹಿಡಿದ ಮಾರ್ಗದಲ್ಲಿದಷ್ಟೇ ಮುಂದೊತ್ತಿಕೊಂಡು ಬಂದಿದ್ದೇವೆ ಎಂಬುದರ ಗುರುತುಗಳಿವು.

ಎರಡು ವರುಷ ದಾಟಿದ ನಮ್ಮ ಸ್ವಾತಂತ್ರ್ಯದ ಸ್ಥಿತಿಗತಿ, ಏರು ತಗ್ಗು, ಒಳಗಿನ ಹೊರಗಿನ ನೋಟ-ಈ ಸ್ವಾತಂತ್ರ್ಯದ ಸಾರ್ಥಕತೆಗಾಗಿ ನಾವು ನಮ್ಮ ಹೃದಯ, ಮಿದುಳು, ನಡತೆಯನ್ನು ತಿದ್ದಿಕೊಳ್ಳಬೇಕಾದ ನಮೂನೆ- ಇತ್ಯಾದಿಗಳನ್ನೇ ಪಡಿಮೂಡಿಸುವ ಮೂಲಕ ಈ ಸಂಚಿಕೆಯನ್ನು 'ಸ್ವರಾಜ್ಯ ವರ್ಧಂತಿ' ಸ್ಮಾರಕವಾಗಿ ಮಾಡಿದ್ದೇವೆ. ಇದರಲ್ಲಿರುವುದೆಲ್ಲವೂ ಆ ಸ್ಮರಣೆಯೇ ಎಂದ ಮೇಲೆ ಇಲ್ಲಿ ಪ್ರತ್ಯೇಕವಾಗಿ ಹೆಚ್ಚಿಗೆ ಹೇಳಲಿಕ್ಕಿಲ್ಲ. ನಮ್ಮಲ್ಲಿಂದು ಅವಶ್ಯಕತೆಗೂ ಮಿಕ್ಕಿ ಬೆಳೆದಿರುವುದೇನಾದರೂ ಇದೆಯಾದರೆ ಅದು ಮಾತಿನ ಬಿಸಿಯೇ ಸರಿ! ಅದು ಬೇಕಾಗಿಲ್ಲ.

ಉಚ್ಚವರ್ಗದ ನಾಗರಿಕತೆಗೆ, ಅದೇಕೆ, ಭಾರತೀಯರಾದ ನಮ್ಮ ಸ್ವಭಾವಸಿದ್ಧ ಹಾಗೂ ಸಂಸ್ಕಾರ ಬದ್ಧವಾದ ಔದಾರ್ಯ, ವಿಶಾಲ ಧೋರಣೆ, ಕ್ಷಮೆ, ದಮೆ, ಸಹನೆಗಳಿಗೆ ವಿರುದ್ಧವಾಗುವ ಯಾವ ದುರ್ಭಾವನಾ ತೆರೆಗಳನ್ನೂ ಈ ಸಂದರ್ಭದಲ್ಲಿ ಎಬ್ಬಿಸಿಕೊಳ್ಳಬಾರದು. ಗತಕಾಲದ ಯಾವ ಕಹಿ ನೆನಪೂ ಈಗ ಬೇಡ. ನಾವು ಉದ್ದೇಶಿಸಿ ಪ್ರಯತ್ನಿಸಿದ ಸುಖಸಂತೋಷಗಳಷ್ಟೇ ಅಲ್ಲ; ಅನಿರೀಕ್ಷಿತ ಸುಖಗಳೂ ನಮಗೆ ದೊರೆತುದಿವೆ. ಅದೇ ರೀತಿ ನಮ್ಮ ಕರ್ಮಗಳ ಪ್ರತಿಫಲವಾಗಿ ಬಂದ ಆಪತ್ತುಗಳಂತೆಯೇ ನಾವು ನಿರೀಕ್ಷಿಸದಿದ್ದ ದುರಂತಗಳೂ ದುರ್ದೈವವಶಾತ್ ಬಡಿದುದಿರಬಹುದು. ಹೇಗಿದ್ದರೂ ಹೋದ ದಿನ ತಿರುಗಿ ಬರುವಂತಿಲ್ಲ; ದೊರೆತ ಅನುಭವ ಮತ್ತೆ ಕಳೆದು ಹೋಗುವಂತೆಯೂ ಇಲ್ಲ. ಆದ್ದರಿಂದ ಗತಕಾಲದಿಂದ ಪಡೆದ ಅನುಭವವನ್ನಲ್ಲದೆ ಬೇರಾವುದನ್ನೂ ನಾವಿನ್ನು ನೆನಸಿಡಬೇಕಾಗಿಲ್ಲ. ನಾವು ಹೆಜ್ಜೆ ಮುಂದಿಡುತ್ತಾ ಹೋಗುವವರು. ಈ ವರೆಗೆ ಹಾದುಬಂದ ಪಥದಲ್ಲಾದ ಅನುಭವವನ್ನು ಉಪಯೋಗಿಸಿಕೊಂಡು ಮುಂದಿನ ಹಾದಿ ಸಾಗಿದರಾಯಿತು.

ಈ ತನಕ ನಾವು ತುಳಿದುಬಂದುದು ಕಡಿಮೆ; ಇನ್ನು ಸಾಗಲಿಕ್ಕಿರುವ ಹಾದಿಯೇ ಹೆಚ್ಚು. ಇಷ್ಟರ ವರೆಗಾದುದು ಪ್ರಚಾರ ಮಾತ್ರ; ಪ್ರಗತಿಯಲ್ಲ. ಹಾದಿ ಇಲ್ಲಿಗೇ ಮುಗಿಯಿತು, ಎನ್ನುವ ಯಥಾಸ್ಥಿತಿ ಭಕ್ತರನ್ನೂ "ನೆಗೆನೆಗೆದ ಓಡೋಣ" ಎಂದು ಎಳೆದೊಯ್ದು ಅಪಘಡಕ್ಕೀಡು ಮಾಡುವ ಅವಸರೋಗ್ರವಾದಿಗಳನ್ನೂ ನಂಬಕೂಡದು. ಇವರಾರೂ ನಮ್ಮವರಲ್ಲ. ಅಪಾಯದಲ್ಲಾಗಲೀ, ಅಡ್ಡಹಾದಿಯಲ್ಲಾಗಲೀ ಸಿಕ್ಕಿಬೀಳದಂತೆ ಸಾಕಷ್ಟು ಮುಂಜಾಗ್ರತೆಯಿಂದ, ದೃಢವಾಗಿ ಪ್ರಗತಿಪಥದಲ್ಲಿ ಮುಂದೊತ್ತುತ್ತ, ಸರ್ವಸಮಾನತೆಯ, ಸರ್ವತೋಮುಖ ಅಭಿವೃದ್ಧಿಯ ಗುರಿ ಸೇರುವದೊಂದೇ ನಮಗೆ ಬೇಕಾಗಿದೆ. ಇದಕ್ಕಾಗಿ ಸ್ವತಃ ನಮ್ಮಲ್ಲಿ ಮತ್ತು ಕಾರ್ಯರಂಗದಲ್ಲಿ ಏನೆಲ್ಲಾ ಆಗಬೇಕೋ ಅವೆಲ್ಲವನ್ನೂ ಮಾಡಿಕೊಳ್ಳೋಣ. ಅದಕ್ಕಾಗಲೇ ನಾವು ತಯಾರೆಂದು ಈ ದಿನ ಪ್ರತಿಜ್ಞೆ ಧರಿಸೋಣ.

ಈ ಸ್ವಾತಂತ್ರ್ಯಕ್ಕಾಗಿ ಆದಿಯಿಂದಲೂ ವಿವಿಧ ರೀತಿಯಿಂದ, ಬೇರೆ ಬೇರೆ ರಂಗಗಳಲ್ಲಿ ದುಡಿದಿದ್ದ ಹುತಾತ್ಮರೆಲ್ಲರ- ರಾಷ್ಟ್ರಪಿತ ಬಲಿದಾನಿ ಮಹಾತ್ಮನ, ಮತ್ತು ಈ ಸೇನಾನಿಯ ಕೈಕೆಳಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸಂದ ಎಲ್ಲಾ ಯೋಧರ- ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಿಂದ ಸ್ವಾತಂತ್ರ್ಯ ಸಾಧನೆಯಲ್ಲಿ ಪಾಲುಗಾರರಾಗಿದ್ದು ಕಳೆದು ಹೋದ ಸರ್ವರ- ಪುಣ್ಯ ಸ್ಮರಣೆಯನ್ನು ಮಾಡೋಣ. ಅವರ ಆತ್ಮ ಸಾಕ್ಷಿಯಾಗಿ ಪ್ರತಿಜ್ಞೆ ತೊಟ್ಟು ಕಾರ್ಯಪ್ರವೃತ್ತರಾಗೋಣ.

ಜೈಹಿಂದ್!



ಇವರ ಕಾಲ

ಕಳೆದ ವರುಷವು 'ಸರ್ದಾರ್‌ಮಜಿ'ಯಲ್ಲಿ ಕಳೆದು ಹೋಯಿತೆನ್ನಬಹುದು. ವಸ್ತುತಃ ಅದು 'ಗಾಂಧೀವತ್ಸರ' ವಾಗಿರಲೂ ಇಲ್ಲ; "ನೆಹರೂ ಇಸವಿ"ಯಾಗಿರಲೂ ಇಲ್ಲ; "ವಲ್ಲಭಾಯಿ ವರುಷ" ವಾಗಿತ್ತು.

ರಾಷ್ಟ್ರನಾಯಕ ಸರ್ದಾರ್ ಗಾಂಧೀಜೀಯಿಂದಾದವರು. ಗಾಂಧೀ ಭಕ್ತ. ನೆಹರುಗಳ ಅನುಯಾಯಿ ಮತ್ತು ಬಲಗೈ. ಆದ್ದರಿಂದ ಸರ್ದಾರರ ಕಾಲವೆನ್ನುವಾಗ ಗಾಂಧೀಜೀ ಮತ್ತು ಪಂಡಿತಜೀಯ ಕಾಲವೆಂದಂತಾಯಿತೇ ಹೊರತು ಬೇರಲ್ಲ. ಆದರೂ ವಲ್ಲಭಾಯಿ ವೈಶಿಷ್ಟ್ಯವೆಂಬುದಿದೆ. ಗಾಂಧಿತ್ವ, ನೆಹರುತ್ವಕ್ಕಿಂತ ಹೆಚ್ಚಾಗಿ ಈ ಕಾಲದಲ್ಲಿ ವಲ್ಲಭಾಯಿ ವೈಶಿಷ್ಟ್ಯವೇ ಗೆದ್ದಿದೆ.

ಗಾಂಧೀಜೀ ಒಂದು ಆದರ್ಶ, ಆದರ್ಶವೇ ಆಕಾರ ಹೊಂದಿದವರು. ಸತ್ಯಾಹಿಂಸೆಗಳ ಒರೆಗಲ್ಲಿಗೆ ಹಚ್ಚಲ್ಪಡದ ಯಾವ ಆಚರಣೆಯನ್ನೂ ಅವರೊಪ್ಪುವವರಲ್ಲ. ಪಂಡಿತಜೀ ಉಚ್ಚ ನಾಗರಿಕ, ಸರ್ವ ಸದ್ಗುಣಗಳ ಮತ್ತು ಸಲ್ಲಕ್ಷಣಗಳ ಸಾಕಾರ; ಭಾವಜೀವಿ. ಉತ್ತಮ ಭಾವನೆ, ವಿಶಾಲ ಧೋರಣೆಯಿರದ ಯಾವ ವಿಧಾನದಲ್ಲೂ ಅವರಿಲ್ಲ. ಸರ್ದಾರ್ ವ್ಯವಹಾರವಾದಿ ಮಾತ್ರ. ಮಹಾತ್ಮರ ಮತ್ತು ಪಂಡಿತರ ಸತ್ಯ, ಅಹಿಂಸೆ, ಆದರ್ಶ, ಸದ್ಭಾವನೆ, ವಿಶಾಲ ಧೋರಣೆ ಎಲ್ಲವೂ ಇವರಿಗೆ ಬೇಕು; ವ್ಯವಹಾರದಲ್ಲೇ ಬೇಕು; ವ್ಯವಹಾರದಲ್ಲೆಷ್ಟು ಸಾಧ್ಯವೋ ಅಷ್ಟು ಮಾತ್ರ ಬೇಕು.

ಆಗುತ್ತಾ ಬಂದಿರುವುದೂ ಇಷ್ಟೇ. ಇಂದಿನ ಸ್ವತಂತ್ರ ಭಾರತವು ಗಾಂಧೀಜೀಯ ಹೆಜ್ಜೇ ಸಾಲುಗಳಲ್ಲೇ ಹೆಜ್ಜೆಯೂರುತ್ತಾ ಹೋಗುತ್ತಿದೆ, ಎನ್ನುವ ಧೈರ್ಯ ಯಾರಿಗಿದೆ? ಎಲ್ಲೆಲ್ಲೂ ಮಹಾತ್ಮರ ಆರಾಧನೆ ನಡೆಯುತ್ತಿದೆ, ಆದರವರ ಅನುಕರಣ ನಿಜವಾಗಿಯೂ ನಡೆಯುತ್ತಿಲ್ಲ. ಮಹಾತ್ಮಾ ಗಾಂಧಿಯವರು ಇಹಯಾತ್ರೆ ಮುಗಿಸಿದ ಇಷ್ಟು ಅಲ್ಪಾವಧಿಯೊಳಗೇನೇ ರಾಮ, ಕೃಷ್ಣರಂತಹ ಆರಾಧ್ಯ ಮೂರ್ತಿಗಳ ಪಂಗ್ತಿಗೆ ಸೇರಿದ್ದಾರೆ ಹೊರತು ಜನನಾಯಕನಾಗಿ ಉಳಿದಿಲ್ಲ.

ಪಂಡಿತ ನೆಹರುಗಳ ಸರ್ವಸಮತೆ, ವಿಶಾಲ ಧೋರಣೆ ಉಚ್ಚಾದರ್ಶಗಳ ಮಟ್ಟದಲ್ಲಿ ಇಂದು ಭಾರತದ ರಾಜಕೀಯ ನಿಂತಿಲ್ಲ. ಪಂಡಿತ ನೆಹರುಗಳೂ ಈಗ ತಮ್ಮ ಹಿಂದಿನ ಮನೋವೃತ್ತಿಯನ್ನು ಕಟ್ಟಿಕೊಂಡಿಲ್ಲ. ಒಂದು ಕಾಲದ ಉಗ್ರ ಸಮತಾವಾದಿ ಪಂಡಿತಜೀ ಇದೇ ತಾ 5ರಲ್ಲೆಂದರು. "ರಾಷ್ಟ್ರದ ಹಾಗೂ ಜನತೆಯ ಹಿತಕ್ಕಾಗಿ ಎಲ್ಲಾ ಸಜ್ಜನರೂ ಅತಿ ಹೆಚ್ಚಿನ ಸೌಹಾರ್ದತೆಯಿಂದ ಸಹಕರಿಸಿಕೊಂಡಿರಬೇಕೆಂಬ ಅಭಿಪ್ರಾಯವನ್ನು ಮನ್ನಿಸುವವ ನಾನು. ಯಾವುದಾದರೊಂದು 'ಇಸಮ್'ನ್ನು ಕಟ್ಟಿಕೊಂಡು ಜಾರಿಕೊಳ್ಳುವುದು ಅಪಾಯಕರವೆಂದೇ ವ್ಯಕ್ತಿಶಃ ನನ್ನ ಅಭಿಪ್ರಾಯ." ಇದು ಪಟೇಲ್ ಭಾವನೆ.

ಸಮತಾವಾದಿ ಪಂಡಿತ ಜವಾಹಿರಲಾಲರು ಇದೇ ತಾ. 5ರಲ್ಲಿ "ಇನ್ನು ಹತ್ತು ವರುಷಗಳ ತನಕ ರಾಷ್ಟ್ರದ ಮುಖ್ಯೋದ್ಯಮಗಳನ್ನು ರಾಷ್ಟ್ರೀಕರಣಗೊಳಿಸಬಾರದೆಂದು ನಾವು ನಿರ್ಧರಿಸಿಟ್ಟಿದ್ದೇವೆ" ಎಂದಿದ್ದಾರೆ. ಖಾಸಗಿ ಉದ್ದಿಮೇದಾರರನ್ನು ಬಲಗೊಳಿಸಿ, ಆ ಮೂಲಕವೇ ಕೆಲಸ ಮಾಡಿಕೊಳ್ಳಬೇಕೆಂಬ ಸರ್ದಾರರ ದೃಢ ಭಾವನೆಯು ನೆಹರುಗಳ ಬಾಯಿಯಿಂದ ಹೀಗೆ ಹೊರಬಿದ್ದಿದೆ, ಎಂಬುದು ಸ್ಪಷ್ಟ.

"ನಮಗೆ ಆರ್. ಯಸ್. ಯಸ್.ನ ಮೇಲೆ ಅಂತಹ ನಂಬಿಕೆಯೇನೂ ಇಲ್ಲ. ಅವರ ಕಡೆಗೆ ನಾವು ಅತ್ಯಂತ ಎಚ್ಚರಿಕೆಯಿಂದ ಕಣ್ಣಿಡಬೇಕಾಗಿದೆ. ತೋರುವಿಕೆಗೆ ಆರ್. ಯಸ್. ಯಸ್. ಮತ್ತು ಕಮ್ಯೂನಿಸ್ಟರೊಳಗೆ ಉತ್ತರ-ದಕ್ಷಿಣ ಧ್ರುವಗಳಂತಹ ವ್ಯತ್ಯಾಸತೋರಿಬಂದರೂ ಹಿಂಸಾಪ್ರೇಮ ಮತ್ತು ಸರ್ವಾಧಿಕಾರಿತ್ವದ ಮಟ್ಟಿಗೆ ಇವೆರಡು ಪಕ್ಷಗಳು ಪರಸ್ಪರ ನಿಕಟ ಸಾಮ್ಯತೆಯುಳ್ಳವುಗಳು" ಎಂದು ಡೆಲ್ಲಿಯಲ್ಲೇ ಪಂಡಿತ ನೆಹರುಗಳಂದಿದ್ದಾರಾದರೂ ನೆಹರೂ ಸರಕಾರವು ಆರ್. ಯಸ್. ಯಸ್. ಕಡೆಗೆ ತೋರಿಸುವಂತಹ ಸೌಮ್ಯತೆಯನ್ನು ಕಮ್ಯೂನಿಸ್ಟರ ಕಡೆಗಾಗಲೀ ಇತರರ ಕಡೆಗಾಗಲೀ, ತೋರಿಸಿಲ್ಲವೆಂಬುದು ಸ್ವತಃಸಿದ್ಧ. ಈ ಮಟ್ಟಿಗೂ ಸರ್ದಾರ್ ಮನಸ್ಸಿನಂತೆಯೇ ಸರಕಾರೀ ಧೋರಣೆ ಎಂಬುದು ಸ್ಪಷ್ಟ.

ರಾಷ್ಟ್ರದೊಳಗಡೆಯ ಎಲ್ಲಾ ವಿಭಾಗಗಳಲ್ಲೂ ಗೃಹಮಂತ್ರಿ ಪಟೇಲ್ ಮನೋವೃತ್ತಿಯೇ ತೀರ್ಮಾನಕರ್ತೃ ಸ್ಥಾನದಲ್ಲಿದ್ದಿತು. ವಿದೇಶ ಸಂಬಂಧಗಳ ಮಟ್ಟಿಗೆ ಕೆಲಸಕ್ಕೆ ಬಾರದ ವಿಶಾಲ ಧೋರಣೆಗಳ ಘೋಷಣೆಯಲ್ಲಿ ಮಾತ್ರ ವಿದೇಶಮಂತ್ರಿ ನೆಹರೂ ಭಾವನೆ ಸೇರಿಕೊಂಡಿದೆಯಲ್ಲದೆ ಕಾಮನ್‌ವೆಲ್ತ್ ಸಂಬಂಧದಂತಹ ತೀರ್ಮಾನಗಳಲ್ಲೂ ಪಟೇಲ್ ಅಭಿಮತವೇ ಮೊಹರಾಗಿ ಬಿದ್ದಿದೆ.

ಸರ್ದಾರ್ ಪಟೇಲ್ ಈವರೆಗೆ ತಪ್ಪಲ್ಲ; ಆದರೆ ಇನ್ನು ಮುಂದಿನ ಕಾಲವು ಪ್ರಚಲಿತ ಸ್ಥಿತಿಯ ಈ ಅಜೇಯ ಕಾವಲುಗಾರನ ಕೈಯಿಂದ ಕ್ರಮಶಃ ಜಾರಿ ತಪ್ಪಿ ಹೋಗಬೇಕು.

ಪ್ರಕಟಣೆ

ಬರುವ ವಾರ ಸ್ವಾತಂತ್ರ್ಯೋತ್ಸವ, ವಿಟ್ಲಪಿಂಡಿ ಬಗ್ಗೆ ಪ್ರೆಸ್ಸಿಗೆ ಬಿಡುವು ಇರುವುದರಿಂದ ತಾ 18ರ ನವಯುಗ ಸಂಚಿಕೆಯು ಹೊರಡುವುದಿಲ್ಲ

— ಮೆನೇಜರ್

ಅಸಮಾಧಾನವೇಕೆ? ಆಲೋಚಿಸಿ ನೋಡಿ!

(೭ನೇ ಪುಟದಿಂದ ಮುಂದುವರಿದುದು)

ತ್ರ್ಯವು ಈ ರೀತಿ ಕಷ್ಟ, ನಷ್ಟ, ದುಃಖ, ಅಪಮಾನ, ಪಕ್ಷಪಾತ, ವಂಚನೆಗಳನ್ನೊಡ್ಡುವಂತಹದೆಂದೇ ಕಟ್ಟಿಕೊಳ್ಳೋಣ; ಹಾಗಾದರೆ ಇಂತಹ ಸ್ವಾತಂತ್ರ್ಯದ ಬದಲಿಗೆ ಪಾರತಂತ್ರ್ಯವೇ ವಾಸಿಯೆಂದು ಹೇಳುವವರಿದ್ದಾರೆಯೆ? ಮನಸ್ಯರಾದವರು? ನಿಜಕ್ಕೂ ಇಲ್ಲ; ಹೇಗಿದ್ದರೂ ನಾವು ಜೀವಿಸಿರಬೇಕಾದ್ದರಿಂದ ಸ್ವತಂತ್ರರಾಗಿಯೇ ಜೀವಿಸಬೇಕೆನ್ನುವವರೇ ಎಲ್ಲರೂ. ಸ್ವಂತ ರಾಷ್ಟ್ರದ ರಾಜಕೀಯ ಸ್ವಾತಂತ್ರ್ಯಕ್ಕಿಂತ ಇಡೀ ಲೋಕದ ಬಡವರ ವಿಮೋಚನೆಯನ್ನೇ ಮುಖ್ಯ ಗುರಿಯಾಗಿ ಇಟ್ಟುಕೊಂಡಿರುವ ಕಮ್ಯೂನಿಸ್ಟರಂಥವರು ಕೂಡಾ, ತಮ್ಮೀ ಧ್ಯೇಯ ಸಾಧನೆಯ ಪ್ರಥಮ ಹೆಜ್ಜೆಯಾಗಿ ಸ್ವಾವಲಂಬನೆ, ಸ್ವಾಧಿಕಾರವನ್ನೇ ಸಾಧಿಸಬೇಕು. ಅಂದ ಮೇಲೆ, ಬೆನ್ನಲ್ಲೆಂತಹ ಭಿನ್ನಾಭಿಪ್ರಾಯಗಳಿದ್ದರೂ ಪ್ರಥಮತಃ ಎಲ್ಲರಿಗೂ ಸ್ವಾತಂತ್ರ್ಯ ಬೇಕೇಬೇಕು; ಅದನ್ನು ರಕ್ಷಿಸಿ [illegible] ಹಾದಿ ಹಿಡಿಯಬೇಕು ತಾನೆ? ಈ ಸ್ವಾತಂತ್ರ್ಯವನ್ನು ರಕ್ಷಿಸುವ ಹೊಣೆಯು ಅಧಿಕೃತವಾಗಿ ಕಾಂಗ್ರೆಸಿನಂತಹ ತಮಗಾಗದ ಪಕ್ಷದ ಮೇಲಿದೆ, ಎಂಬುದರಿಂದ ಎಲ್ಲರ ಪಾಲಿನದಾದ ಸ್ವಾತಂತ್ರ್ಯಕ್ಕೇನೇ ಹಾನಿಯೊಡ್ಡುವ ಹಕ್ಕು ಕಮ್ಯೂನಿಸ್ಟರಿಗೂ ಇಲ್ಲ; ಬೇರಾವ ಪಕ್ಷಕ್ಕೂ ಇಲ್ಲ. "ಈಗಿನದಕ್ಕೂ ಸ್ವಾತಂತ್ರ್ಯವೆಂದು ಹೆಸರೆ? ಇದು ಸ್ವಾತಂತ್ರ್ಯದ ನೆರಳು ಮಾತ್ರ" ಎಂದು ಕಮ್ಯೂನಿಸ್ಟರಂಥವರು ಕೆಲವರು ಹೇಳಬಹುದು. ಹಾಗೇನೂ ಬಿಸಿಗೊಳ್ಳದೆ ಸಾವಧಾನವಾಗಿ ಚಿಂತಿಸಿ ನೋಡುವವರು ಕೂಡಾ "ಈಗಿನದು ತುಂಬಿದ ಸ್ವಾತಂತ್ರ್ಯವಲ್ಲ. ಆಗಿರುವುದು ಕಡಿಮೆ, ಆಗಲಿರುವುದೇ ಹೆಚ್ಚಿಗೆ" ಎಂದು ಉದ್ಗರಿಸಲೇ ಬೇಕಾಗುವದು; ಕಮ್ಯೂನಿಸ್ಟರ ಅಭಿಪ್ರಾಯವನ್ನೇ ಬೇರೆ ವಾಕ್ಯಗಳಿಂದ ಹೇಳಬೇಕಾಗುವದು. 'ಬ್ರಿಟಿಷರಿನ್ನೂ ಬುದ್ಧಿವಂತಿಕೆಯ, ವಂಚನೆಯ ಆಟಗಳನ್ನಾಡುತ್ತಾ ಭಾರತಕ್ಕೆ ಅಂಟಿನಂತೆ ತಾಗಿಕೊಂಡೇ ಇದ್ದಾರೆ' ಎಂಬ ಬೋಲ್ಶೆವಿಕ್ ವಾದವನ್ನಾದರೂ ತರ್ಕಕ್ಕಾಗಿ ಒಪ್ಪಿಕೊಳ್ಳೋಣ ಆದರೂ 'ಬ್ರಿಟಿಷರು ಇಲ್ಲಿಯ ಆಡಳಿತ ಸೂತ್ರ ಬಿಟ್ಟಿದ್ದಾರೆ' ಎಂಬ ಮಟ್ಟಿಗೆ ಪ್ರತಿ ಮಾತು ಇರಲಾರದಷ್ಟೆ? "ಬ್ರಿಟಿಷರು ಬಿಟ್ಟ ಆ ಆಡಳಿತ ಸೂತ್ರವು ಹಿಂದೀ ಜನತೆಯ ಪ್ರತಿ ಶ್ರೀಮಂತ ವರ್ಗದ ಪಕ್ಷಪಾತಿಗಳಾದವರ ಕೈಯಲ್ಲೇ ಈ ತನಕ ಉಳಿದುಕೊಂಡಿದೆ" ಎಂಬುದನ್ನು ಕೂಡಾ ಸೈ ಎನ್ನೋಣ. "ಜನತೆಗೆ ನಮ್ಮ ಮೇಲೆ ವಿಶ್ವಾಸವಿಲ್ಲ ಎಂದು ತೋರಿ ಬಂದ ಮರುಕ್ಷಣದಲ್ಲೇ ನಾವು ಪೀಠದಿಂದಿಳಿಯುವೆವು" ಎಂದು ಆ ಶ್ರೀಮಂತ ಪಕ್ಷಪಾತಿಗಳು ಹಲವು ಬಾರಿ ಹೇಳಿದ್ದರೂ ಜನತೆಯ ಅವಿಶ್ವಾಸವನ್ನು ಹಾಜರು ಪಡಿಸಿದವರಾರೂ ಇಲ್ಲ. ಬೇಡ- ಹಾಗೆ ಕ್ರಮಬದ್ಧವಾಗಿ ಮುಂದೆ ಬಾರದಿದ್ದರೂ ಜನತೆಯ ಅವಿಶ್ವಾಸ ಒಳಗಡೆ ತುಂಬಿ ಬಂದು ಭದ್ರವಾಗಿದೆ ಎಂದೇ ನೆನಸಿಕೊಳ್ಳೋಣ. ತಾನಾಗಿ ಒಡೆದುಕೊಂಡು ಮುನ್ನುಗ್ಗಿ ಬರುವ ಕ್ರಮವೇ ಹಿಂದೀ ಜನಸಾಮಾನ್ಯರ ಭಾವನೆಗಿಲ್ಲವಾದ್ದರಿಂದ ಹೀಗೆನ್ನುವ. ಕಮ್ಯೂನಿಸ್ಟ್ ವಾದವನ್ನು ಮಧ್ಯದಲ್ಲೆಲ್ಲಿಯೂ ಅಡ್ಡಗಟ್ಟದೆ ಕೊನೆಯ ವರೆಗೂ ಅನುಕರಿಸಿ ಪರೀಕ್ಷಿಸೋಣವೆಂದೇ ಹೀಗೆ ಪ್ರತಿಯೊಂದಕ್ಕೂ 'ಸೈ'. ಆದರೀಗ ಪ್ರಾಯಸ್ಥರೆಲ್ಲರಿಗೆ ಮತಾಧಿಕಾರ ಬಂದಿದೆಯೆಂಬುದನ್ನೂ ಅದನ್ನಾಧರಿಸಿಯೇ ನವ ರಾಜ್ಯಶಾಸನಾನುಸಾರ ರಿಪಬ್ಲಿಕ್ ಭಾರತ ಸರಕಾರ ರಚನೆಯಾಗಲಿದೆ ಎಂಬುದನ್ನೂ ಸುಳ್ಳೆನ್ನುವವರಿಲ್ಲವಷ್ಟೆ? ಅಂತಹ ಚುನಾವಣೆಯು ವಿಳಂಬವೆಂದರೆ 1951ರ ಆದಿಭಾಗದಲ್ಲಿ ನಡೆಯುವದೆಂಬುದೂ ನಿಜ ತಾನೆ? ಇನ್ನದಕ್ಕಿರುವುದು ಒಂದೂವರೆ ವರುಷ. ಎಷ್ಟೇ ಬಾಂಬು, ಎಸಿಡ್ ಚೆಲ್ಲಿದರೂ, ಎಂತಹ ಮುಷ್ಕರ, ಗೊಂದಲ ಹೂಡಿದರೂ ಇನ್ನು ಒಂದೂವರೆ ವರುಷದೊಳಗೆ 'ಕಾಂಗ್ರೆಸ್ ಭಂಡವಾಳಗಾರರ ಸರಕಾರ'ವನ್ನು ಕಿತ್ತೆಸೆದು ಇಡೀ ರಾಷ್ಟ್ರದಲ್ಲಿ ತಮ್ಮ ಸರಕಾರವನ್ನು ಪ್ರತಿಷ್ಠಾಪಿಸುವ ಯೋಜನೆ ಯಾವ ಪಕ್ಷದ ಕಣ್ಣ ಮುಂದಾದರೂ ಇರಬಹುದೆ? ನಿಜಕ್ಕೂ ನೋಡಲಾಗುವ ಕಣ್ಣು ಇರುವ ಯಾರ ಮುಂಗಡೆಯಲ್ಲೂ ಅಂತಹ ಆಶೆಯಿರುವುದು ಅಸಾಧ್ಯ. ಬದಲಿಗೆ ಪ್ರಾಯಸ್ಥ ಮತದಾರರನ್ನು-ಶ್ರಮಜೀವಿಗಳು, ಬಡವರೇ ಅತ್ಯಧಿಕ ಸಂಖ್ಯಾಕರಿರುವ ಈ ಜನತೆಯನ್ನು-ಒಲಿಸಿಕೊಳ್ಳುವ ಮೂಲಕ ಯಾವ ಪಕ್ಷವಾದರೂ ಇನ್ನು ಒಂದೂವರೆ ವರುಷದೊಳಗೆ ತಮ್ಮ ಸರಕಾರ ಸ್ಥಾಪಿಸಿಕೊಳ್ಳಬಹುದು. ಈ ನ್ಯಾಯೋಚಿತ ಸುಲಭ ಹಾದಿಯು [illegible] ಅಲ್ಲಿ ಹಿಡಿಲು ಬಿದ್ದಿದೆ-ಕಮ್ಯೂನಿಸ್ಟರು, ಸಮತಾವಾದಿಗಳಂಥವರು ಪ್ರತ್ಯಕ್ಷ ಸರಕಾರವನ್ನೇ ಸರಕಾರವೀಗ ತಾತ್ಕಾಲಿಕವಾಗಿ ಕಾಲೂರುತ್ತಿರುವ ನೆಲೆಗಳನ್ನೇ ತುಳಿದು ಕುಳಿಸಮಗೊಳಿಸಿ ಬಿಡುವೆವೆಂದು ಇಲ್ಲಿ ಹಾರಾಡುತ್ತಿದ್ದಾರೆ ಯಾಕೀ ಹವ್ಯಾಸ? ಇದು ಅರಾಜಕತೆಯ ನಿರ್ಮಾಣ ಹೊರತು ನವ ನಿರ್ಮಾಣವೆ? ಜನತೆಯಲ್ಲಿ ಅಂತಹ ಪ್ರಚಾರ ಮಾಡಲಾಗದ ಪ್ರತಿಬಂಧಗಳೀಗ [illegible], ಎಂದು ಕಮ್ಯೂನಿಸ್ಟರಂಥವರನ್ನಬಹುದು. 'ಅಂತಹ ಪ್ರಚಾರಾಧಿಕಾರ ನಿಮಗಿಲ್ಲ'ವೆನ್ನುತ್ತಾ ಸರಕಾರವು ಕಮ್ಯೂನಿಸ್ಟರನ್ನು ದಂಡಿಸಲು ಹೋಗಿದ್ದೇನೂ ಅಲ್ಲ. ಹಿಂಸಾಚರಣೆಗಳನ್ನು ತಡೆಗಟ್ಟುವದಕ್ಕಾಗಿ ಮಾತ್ರವೇ ಆ ಪ್ರತಿಬಂಧಕಗಳಿವೆ. ಕಮ್ಯೂನಿಸ್ಟರೂ ಆರ್. ಯಸ್. ಯಸ್. ನಂತೆ ತಾವಿನ್ನು ವಿಧಾಯಕ ವಿಧಾನಗಳಿಂದಲ್ಲದೆ ವಿಧ್ವಂಸಕ ವಿಧಾನಗಳನ್ನು ಕೈಕೊಳ್ಳುವದಿಲ್ಲವೆಂಬ ಸ್ಪಷ್ಟ ಭರವಸೆಕೊಟ್ಟು ತಡೆಗಳನ್ನು ಕಳೆದುಕೊಳ್ಳಲಿ. ಉದ್ದೇಶ ಸಾಧನೆಗಾಗಿ ಮನಸ್ಸಾಕ್ಷಿಯನ್ನು ಬಚ್ಚಿಟ್ಟು ಸಂದರ್ಭ ಬಂದಂತೆ ಯಾವ ಕಡೆಗೂ ನೆಗೆಯಬಹುದೆಂಬುದೇ ರಾಜಕೀಯ ತತ್ವವಾಗಿರುವ ಕಮ್ಯೂನಿಸ್ಟರು ತಮ್ಮ ಭಾವೀ ಸರಕಾರಕ್ಕಾಗಿ, ಜನಮತವನ್ನೊಲಿಸುವ ಸಂದರ್ಭ ಸಾಧನೆಗಾಗಿ ಸರಕಾರಕ್ಕೀದಿನ [illegible] ಬರುವದು ಅಸಮಾಧಾನಕರವೆ? ಅಥವಾ ಅಂತಹದೇನೂ ಅವರಿಗೆ ಬೇಕಾಗಿರದೆ, ಲೋಕವ್ಯಾಪೀ ಕಮ್ಯೂನಿಸ್ಟ್ ಧೋರಣೆಗನುಸಾರವಾಗಿ ಹಿಂಸಾತ್ಮಕ ಕೃತ್ಯಗಳಿಂದ ಅರಾಜಕತೆ ನಿರ್ಮಿಸುವದೊಂದೇ ಇಲ್ಲಿಯ ಕಮ್ಯೂನಿಸ್ಟರಿಗೆ ಬೇಕಾಗಿದೆಯೆ? ಈ ಆಟಕ್ಕೆ ಮಾತ್ರ ಭಾರತೀಯ ಜನತೆ ಅವಕಾಶ ದೊರಕಿಸಿ ಕೊಡುವಂತಿಲ್ಲ. ಇದೇ ಮಾತ— "ನಮ್ಮಗೆ ಕಾಂಗ್ರೆಸ್ ನಾಯಕರನ್ನು ದೂರುತ್ತಾ ಕಾಲ ಕಳೆಯುತ್ತಿರುವಿರೇಕೆ? ಜನಮತವನ್ನೊಲಿಸಿಕೊಂಡು ಇನ್ನೊಂದೂವರೆ ವರುಷದಲ್ಲಾದರೂ ನಿಮ್ಮ ಯುಗಾರಂಭಿಸಬಾರದೆ?" ಎಂಬ ಹಿತ ವಚನ-- ಸಮತಾವಾದಿಗಳಿಗೂ; ಜನತೆಯ ಹೆಸರು ಹೇಳಿಕೊಂಡು ಯಾವುದೇ ಪಂಥ ಪಕ್ಷ ಕಟ್ಟಿಕೊಂಡಿರುವವರೆಲ್ಲರಿಗೂ. ಈ ಸ್ವಾತಂತ್ರ್ಯವು ರಾಷ್ಟ್ರದ್ದಿದೆ; ಜನತೆಯದಿದೆ. ನೆಹರು ವಲ್ಲಭಾಯಿಗಳದೂ ಅಲ್ಲ; ಕಾಂಗ್ರೆಸಿನದೂ ಅಲ್ಲ. ಆದ್ದರಿಂದ ಯಾರಿಗೆ ಏನೇ ಆದರೂ ಕೆಲಸವಿರುವುದು ಜನತೆಯೊಡನೆ; ನೆಹರೂ ವಲ್ಲಭಾಯಿಗಳೊಡನಲ್ಲ. ಜನರನ್ನೊಲಿಸಿಕೊಳ್ಳುವ ಕೆಲಸವಿದೆ ಹೊರತು, ಕಾಂಗ್ರೆಸ್ಸನ್ನು ಅಥವಾ ಅದರ ನಾಯಕರನ್ನು ಬೈಯ್ಯುವ ಕೆಲಸವಿಲ್ಲ. ಹೀಗೆ ತಮ್ಮನ್ನೇ ತಾವು ಅರಿತುಕೊಂಡರೇನಂತೆ?

ಮುದ್ರಣದಲ್ಲಿ

ತೃಪ್ತಿಯ ಸುಗ್ಗಿ!

ನವಯುಗ ಪ್ರೆಸ್, ಉಡುಪಿ

——— ಮ್ಯಾನೇಜರು(?) ———

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O S No 306/48 R.E P.No 43/49

ಗುಂಡು ನಾಯ್ಕ ವಾದಿ—ಅರ್ಜಿದಾರ

ಕೃಷ್ಣಯ್ಯ ಕೂಡಾ—ಪ್ರತಿವಾದಿರು-ಎದ್ರಿರು

ಸದ್ರಿ 1ನೇ ಎದ್ರಿ ಕೃಷ್ಣಯ್ಯ, ತಂ ಮುಯ್ಯನ ಮಗ, ಉಡ್ಪಿ ತಾಲೂಕು ನಂಬ್ರ 35ನೇ ಸಾಲ್ಯಾರು ಗ್ರಾಮದಲ್ಲಿರುವವ. ಇವರಿಗೆ ಈ ಮೂಲಕ ತಿಳಿಸುವದೇನೆಂದ್ರೆ

ನೀವು 30-3-1948ರಲ್ಲು ಹೆಜ್ಜಿ ಬೀಡಿನ ರಗುರಾಮ ಬಲ್ಲಾಳರಿಗೆ ರಿಜಿಸ್ಟ್ರಿ ಸಿ ರೂಪಾಯಿ 400-ಕ್ಕೆ ಬರಕೊಟ್ಟ ಖಂಡಿತ ಕ್ರಯಚೀಟಿನಲ್ಲಿ ವಳಪಡ್ಸಿದ ರೂಪಾಯಿ 380-8 4ನ್ನು ಕ್ರಯಗಾರರು ಸಲ್ಲಿಸದ ಇರುವದ್ರಿಂದ ಅರ್ಜಿದಾರನು ಸದ್ರಿ ಹಕ್ಕು ಜಪ್ತಿ ಮಾಡಿ ಏಲಮಿಗೆ ತಂದಿರುತ್ತಾನೆ. ಸದ್ರಿ ಏಲಮಿನಲ್ಲಿ ಬಿಡ್ ಮಾಡುವರೆ ತನಗೆ ಪರ್ಮಿಶನ್ ಕೊಡಬೇಕಾಗಿ ಸಹಾ ಅರ್ಜಿದಾರನು ಬರಕೊಂಡಿದ್ದಾನೆ. ಏಲಂ ಇಸ್ತಾರಿಗೆ ಮ ಬಿಡ್ ಅರ್ಜಿಗೆ ನಿಂಮ ಕಡೆಯಿಂದ ಏನಾದರೂ ಆಕ್ಷೇಪ ಇರುವದಾದರೆ ಇದೇ ಬರುವ 13-8-1949ನೇ ಹಗಲು ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಪ್ರತಿಹೇಳು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಇಸ್ತಾರಿನ ಷರತುಗಳು ನಿರ್ಣಯಿಸಲಾದೀತು.

ಕೋರ್ಟು ಹುಕುಂ ಪ್ರಕಾರ

K. V. Kamath,
Advocate for Petitioner

ಕಾರ್ಕಳ ತಾ 26-7-49



Approved firm by the Govt. of Mysore Certificated by the Agent of the Govt. of Cylone & Indian.



ಸ್ವಾತಂತ್ರ್ಯೋತ್ಸವ

ದಿನಾಚರಣೆಯ ಸಂತೋಷ ಕಾಲದಲ್ಲಿ

ಓದಲಿಕ್ಕೂ ಅಭಿನಯಿಸಲಿಕ್ಕೂ

ಅತ್ಯುಪಯುಕ್ತ ಪುಸ್ತಕ

ಸ್ವರಾಜ್ಯವಿಜಯ

(ಎಂ. ವಿ. ಹೆಗ್ಡೆರಿಂದ ವಿರಚಿತ)

ಬೆಲೆ 0 8 0

ಪ್ರತಿಗಳು ಎಲ್ಲಾ ಕಡೆಗಳಲ್ಲೂ ದೊರೆಯುತ್ತವೆ

ಉಡುಪಿ

ಕಲಾವೃಂದದಲ್ಲಿ ತಾ 1ರಲ್ಲೊಂದು ಸಭೆಯು ಶ್ರೀ ಕೆ ಯಸ್ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿ ಭಾಷಣಗಳೂ ಕವಿತಾ ವಾಚನಗಳೂ ನಡೆದುವು ಇದೇ ತಾ 15 ಮತ್ತು 16ರಲ್ಲಿ ಸಂಜೆ 4ಕ್ಕೆ ಸ್ವಾತಂತ್ರ್ಯೋತ್ಸವ ಮತ್ತು ಕೃಷ್ಣಾಷ್ಟಮಿ ಸಂಬಂಧ ಸಾರ್ವಜನಿಕ ಸಭೆಗಳಿವೆ

ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ವಿಟ್ಲಪಿಂಡಿ ಮಹೋತ್ಸವವು ಶ್ರೀಕೃಷ್ಣಮಠದಲ್ಲಿ ಇದೇ ತಾ 16 ಮತ್ತು 17ರಲ್ಲು ಜರಗಲಿರುವುವು

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಸಂಘಗಳ ಪ್ರಾರಂಭೋತ್ಸವವು ಇದೇ ತಾ 3ರಲ್ಲು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್ ಸಾಹೇಬರ ಅಧ್ಯಕ್ಷತಯಲ್ಲಿ ಜರಗಿತು ಮಂಗಳೂರು ಗವರ್ನಮೆಂಟ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಮ್ ಐ ಹಷಿಮಿಯವರು ಪ್ರಾರಂಭೋತ್ಸವ ಭಾಷಣಮಾಡಿದರು ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರು ಧನ್ಯವಾದಗಳನ್ನರ್ಪಿಸಿದರು

ಅಕಾಲ ಮರಣ:– ತಾ 8ರಲ್ಲು ಸಂಜೆ ಮಿಶನ್ ಕಂಪೌಂಡು ಕೆರೆಯೊಂದರಲ್ಲಿ ಈಜಾಡಲುಹೋದ ರತ್ನಾಕರ ಶಟ್ಟಿ ಮತ್ತು ಬಾಲಕೃಷ್ಣ ಬಾಳಿಗ ಎಂ ಜಿ ಎಂ ವಿದ್ಯಾರ್ಥಿಗಳಲ್ಲಿ ಮೊದಲನೆಯವನು ಅಕಾಲ ಮರಣಕ್ಕೀಡಾದುದು ವಿಷಾದಕರವಿದೆ ಮೃತನ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಆತನ ತಂದೆ ಶ್ರೀ ಅಂತಪ್ಪ ಶ್ಯಾನುಭಾಗರಿಗುಂಟಾದ ಅಪಾರ ಶೋಕದಲ್ಲಿ ಸಹಸಂತಾಪ ಸೂಚಿಸುವೆವು

ಹಿಂದೀ ಶಿಕ್ಷಣ

ತಾ 16 8-49ರಿಂದ 'ರಾಷ್ಟ್ರಭಾಷಾ ಶಿಕ್ಷಣ ಶಿಬಿರ'ದಲ್ಲಿ ಪ್ರಥಮತ (ಅಕ್ಷರಾಭ್ಯಾಸದಿಂದ ಮೊದಗಿ) ಕಲಿಯುವವರ ಒಗ್ಗೆ ಹಿಂದೀ ಶಿಕ್ಷಣವೀಯುವ ಪ್ರತ್ಯೇಕ ತರಗತಿಯು ಏರ್ಪಡುವುದು ಮಹಿಳೆಯರಿಗೆ ಅಥವಾ ಬಾಲಕಿಯರಿಗೆ ಪ್ರತ್ಯೇಕವಾಗಿ, ಅನುಭವೀ ಅಧ್ಯಾಪಕಿಯರು ನೇಮಕವಾಗಿರುವರು

ತಾ 22-8-49ರಿಂದ ಯಥಾವತ್ತಾಗಿ ಮಧ್ಯಮಾ ಮತ್ತು ರಾಷ್ಟ್ರಭಾಷಾ ತರಗತಿಗಳು ಪ್ರಾರಂಭವಾಗುವವು–ಸಿ ಮಹಾಬಲ ನಾಯಕ, ಕಾರ್ಯದರ್ಶಿ 'ಶಿಬಿರ' ಸ್ಥಳ–ಸರಸ್ವತಿ ಬಾಲಿಕಾ ಪಾಠಶಾಲಾ, ಶಿರಿಬೀಡು ಉಡುಪಿ

ಭಜನಾ ಸಪ್ತಾಹ– ಸ್ಥಳೀಯ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಪದ್ಧತಿಯ ಭಜನಾ ಸಪ್ತಾಹವು ವಿಜೃಂಭಣೆಯಿಂದ ಜರಗಿ, ಕಳದ ದ್ವಾದಶಿ ದಿನ ಮಂಗಳಗೊಂಡಿತು

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೇರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿದೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ ಈ ಚಿತ್ರಗಳನ್ನು ನೀವು ನೋಡದಿದ್ದರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ. 2-8-0. ದೊಡ್ಡ ಸೆಟ್‌ಗೆ(ವಿಶಿಷ್ಟಪೋಸ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ ಕೂಡಲೇ ಒರ್ಡರು ಕೊಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
Lothian Road, Delhi

ಮಂಗಳೂರು

ದೋಣಿಯ ದುರಂತ.–ಉಳ್ಳಾಲ ಸಂಕದ ಹತ್ತಿರ ಕಡಲಿನ ದೋಣಿಯೊಂದು ನೇತ್ರಾವತಿಯಲ್ಲಿ ಕವಚಿಬಿದ್ದು ಮಹಾ ದುರಂತವೊಂದು ಸಂಭವಿಸಿತು. ಈ ದೋಣಿಯಲ್ಲಿ 30ಕ್ಕೆ ಮೇಲ್ಪಟ್ಟು ಜನರಿದ್ದರೆಂದು ಹೇಳಲಾಗಿದೆ ಈ ದುರಂತವನ್ನು ಕಂಡೊಡನೆ ಸಮೀಪವಿದ್ದ ಮೊಗವೀರರು ದೋಣಿಗಳನ್ನು ಹಿಡಿದುಕೊಂಡು ಬಂದು ನೀರುಪಾಲಾದವರನ್ನು ಬದುಕಿಸುವ ಪ್ರಯತ್ನಮಾಡಿದರು ಒಂಭತ್ತು ಮಂದಿಯನ್ನು ಬದುಕಿಸಲಾಗಿದೆಯೆಂದೂ ಆರೇಳು ಹೆಣಗಳು ದೊರೆಕಿವೆಯೆಂದೂ ಹೇಳಲಾಗಿದೆ

ಮರಬಿದ್ದು ಕಟ್ಟಡಗಳಿಗೆ ಹಾನಿ. ಮಂಗಳೂರಿನ ರಥಬೀದಿಯಲ್ಲಿ ಕಾಳಿಕಾಂಬಾ ದೇವಸ್ಥಾನದ ಸಮೀಪವಿದ್ದ ಒಂದು ದೊಡ್ಡ ಅಶ್ವತ್ಥದ ಮರವು ಭಯಂಕರ ಗಾಳಿಯಿಂದಾಗಿ ಬಿದ್ದು ಹತ್ತಿರದ ಅಂಗಡಿಗಳಿಗೂ ಮನೆಗಳಿಗೂ ಹಾನಿಯುಂಟಾಗಿದೆ ಅಂಗಡಿಯೊಳಗಿದ್ದವರನ್ನು ಗೋಡೆ ಒಡೆದು ಹೊರತರಲಾಯಿತೆಂದು ತಿಳಿದುಬರುತ್ತದೆ

ಮಿಶ್ರಭೋಜನ:– ಕಳೆದ ತಾ 30ರಲ್ಲು ಸಂಜೆ ಮಂಗಳೂರಲ್ಲಿ ಹರಿಜನ ದಿನಾಚರಣೆಯ ಸಂಬಂಧವಾಗಿ ಒಂದು ಮಿಶ್ರಭೋಜನವು 'ಮೋಹಿನಿ ವಿಲಾಸ'ದಲ್ಲಿ ರಾತ್ರಿ ಜರಗಿತು

ಮದ್ರಾಸಿನ ಆಹಾರ ಮಂತ್ರಿಗಳಾದ ಮಾನ್ಯ ರೋಚ್ ವಿಕ್ಟೋರಿಯಾ ಅವರು ಇದೇ ತಾ 19ರಲ್ಲು ಬೆಳಿಗ್ಗೆ ಮಂಗಳೂರಿಗೆ ಬಂದು ಅದೇ ದಿನ ಸಂಜೆ ಕಲೆಕ್ಟರರ ಆಫೀಸಿನಲ್ಲಿ ಗಾಂಧಿಜೀಯವರ ತೈಲಚಿತ್ರದ ಅನಾವರಣ ಮಾಡಲಿರುವರು ತಾ 20ರಲ್ಲು ಬೆಳಿಗ್ಗೆ ಉಡುಪಿಗೆ ಪ್ರಯಾಣಬೆಳೆಸಿ ಅಲ್ಲಿಯ ಕಾರ್ಯಕ್ರಮವನ್ನು ಮುಗಿಸಿ ಅಂದೇ ಸಂಜೆ ಮಂಗಳೂರಿಗೆ ಮರಳಲಿರುವರು

ರಾಜಕೀಯ ಸಂತ್ರಸ್ತರಿಗೆ: ಇದೇ ತಾ 1ರಲ್ಲು ಸಂಜೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜಿಲ್ಲಾ ರಾಜಕೀಯ ಸಂತ್ರಸ್ತರ ಅರ್ಜಿ ಪರಿಶೀಲನಾ ಸಭೆಯೊಂದು ಜರಗಿತು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ ಕೆ ಶೆಟ್ಟಿ ಮತ್ತು ಶ್ರೀಗಳಾದ ಎಚ್ ನಾರಾಯಣ ರಾವ್, ಬಿ ಶಿವಪ್ಪ ರೈಗಳವರು ಹಾಜರಿದ್ದರು ಆರಂಭದಲ್ಲಿ ಕಲೆಕ್ಟರರು ಮಾತನಾಡುತ್ತಾ, ಆರುನೂರ ಐವತ್ತಕ್ಕೂ ಮೇಲ್ಪಟ್ಟು ರಾಜಕೀಯ ಸಂತ್ರಸ್ತರ ಅರ್ಜಿಗಳು ಬಾಕಿಯಿವೆ ಎಂದೂ ಈ ವರ್ಷದ ಅಂತ್ಯದೊಳಗಾಗಿ, ಈ ಅರ್ಜಿಗಳನ್ನೆಲ್ಲ ಪರಿಶೀಲಿಸಿ ತೀರ್ಮಾನ ಕೊಡಬೇಕಾಗಿದೆ ಎಂದೂ ಇದಕ್ಕಾಗಿ ಮೂರು ತಿಂಗಳ ಮಟ್ಟಿಗೆ ಓರ್ವ ಸ್ಪೆಶಲ್ ತಹಶಿಲ್ದಾರ್ ಮತ್ತು ಮೂವರು ಗುಮಾಸ್ತರನ್ನೂ ನೇಮಿಸಬೇಕಾಗಿ ಸರಕಾರವನ್ನು ವಿನಂತಿಸಲಾಗಿದೆ ಎಂದೂ ತಿಳಿಸಿದರು

ತದನಂತರ ಇಪ್ಪತ್ತೈದು ಅರ್ಜಿಗಳನ್ನು ಪರಿಶೀಲಿಸಿ ಹಲವರ ಅರ್ಜಿಗಳನ್ನು ಮಾನ್ಯ ಮಾಡಲಾಯಿತು ಕೆಲವು ಅರ್ಜಿಗಳಲ್ಲಿ ಅರ್ಜಿದಾರರು ರಾಜಕೀಯ ಸಂತ್ರಸ್ತರೇ ಅಲ್ಲವೇ ಎಂಬುದು ಸ್ಪಷ್ಟವಾಗದಿದ್ದುದರಿಂದ ಮತ್ತು ಬೇರೆ ಕಾರಣಗಳಿಗಾಗಿ ತಿರಸ್ಕರಿಸಲಾಯಿತು ಅಮ್ಮೆಂಬಳ ಬಾಲಪ್ಪ 4 38 ಎಕ್ರೆ, ಉಳ್ಳಾಲ ದೇವಪ್ಪ ಕರ್ಕೇರ 5 73 ಎಕ್ರೆ, ಈಶ್ವರಭಟ್ಟ ನೆರಿಂಗಾಣ 10 ಎಕ್ರೆ, ಕೆ ಆರ್ ಭಂಡಾರ್‌ಕಾರ್ 5 ಎಕ್ರೆ, ಲಕ್ಷ್ಮೀನಾರಾಯಣ ಹಂದೆ 5 ಎಕ್ರೆ, ಮಾಣಿ ಸದಾನಂದಪ್ಪೈ 10 ಎಕ್ರೆ, ವೆಂಕಪ್ಪಯ್ಯ 5 77 ಎಕ್ರೆ, ಮೊದಲಾದವರ ಅರ್ಜಿ ಮಾನ್ಯ ಮಾಡಲಾಯಿತು ಶ್ರೀಮತಿ ಕಮಲಾದೇವಿ ಶ್ರೀಗಂಗಾಧರ ಶ್ರೀನಿವಾಸ ಮಲ್ಯ ಎಚ್ ನಾರಾಯಣರಾವ್, ಹಿ ರಾಮರಾಯಮಲ್ಯ ಮೊದಲಾದ ಇಪ್ಪತ್ತು ಜನರು ಸಹಕಾರಿ ಪದ್ಧತಿಯಲ್ಲಿ ಕೃಷಿಮಾಡುವುದಕ್ಕಾಗಿ ಕೇಳಿದ 99 ಎಕ್ರೆ ಸ್ಥಳವನ್ನು ಕೊಡಲು ನಿರ್ಧರಿಸಲಾಯಿತು ಮುಂದಿನ ಸಭೆಯು ಸಪ್ಟಂಬರ ಆದಿಯಲ್ಲಿ ಜರಗುವುದು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

11—8—49ರಿಂದ

ಮುಸ್ಕರಾತ್ (ಮುಗುಳ್ನಗು)

ವನಮಾಲಾ, (B A B T.) ಮೋತಿಲಾಲ್.

ಶ್ರೀರಾಮಜನನವು ಶಾಂತಾ ಪಿಕ್ಚರ್ಸ್

ಯುನೈಟೆಡ್ ಪಿಕ್ಚರ್‌ರವರ ಶಹ್‌ಕಾರ,

ಶೋಭನ ಸಮರ್ಥ್, ಶಾನಹಾಜ್, ಅನವರ್,

ನಿರೀಕ್ಷಿಸಿರಿ ಡಾಕ್‌ಬಂಗಲ್– ಸೂರೈಯಾ ಮತ್ತು ನಾಸ್ತಿ

ದ. ಕನ್ನಡ

ಗಂಜಿಮಠ ಕಳದ 1942ನೇ ಇಸವಿಯಲ್ಲಿ ಮದ್ರಾಸು ಸೊಸೈಟಿ ರಜಿಸ್ಟ್ರೇಶನ್ ಆಕ್ಟ್ ಪ್ರಕಾರ ರಿಜಿಸ್ಟ್ರಿ ಹೊಂದಿ ಹಳ್ಳಿಗಳ ವಿದ್ಯಾಭಿವೃದ್ಧಿಗಾಗಿಯೇ ಜನ್ಮವೆತ್ತಿರುವ ಗಂಜಿಮಠ ಸಮಾಜ ಸೇವಾ ಸಂಘವು ಪ್ರಕೃತ ಬಡಗ ಉಳಿಪಾಡಿ, ತೆಂಕ ಉಳಿಪಾಡಿ, ಮೊಗರು ಗ್ರಾಮಗಳಲ್ಲಿ ಮೂರು ಎಲಿಮೆಂಟರೀ ಶಾಲೆಗಳನ್ನೂ ಗಂಜಿಮಠ ಕೇಂದ್ರದಲ್ಲಿ ಒಂದು ಪ್ರೌಢ ಶಿಕ್ಷಣ ಶಾಲೆಯನ್ನೂ, ವಿಕ್ಟರೀ ಎಂಬ ಸಾರ್ವಜನಿಕ ಪುಸ್ತಕ ಭಂಡಾರ ವಾಚನಾಲಯವನ್ನೂ ನಡೆಸುತ್ತಾ ಬರುತ್ತಿದೆ. ಹಳ್ಳಿಗರ ನಿರಕ್ಷರತಾ ನಿವಾರಣೆಯ ಬಗ್ಗೆ ಈ ಸಂಘವು ಪಡುತ್ತಿರುವ ಶ್ರಮವು ಸ್ತುತ್ಯಾರ್ಹ

ಬೈಲೂರು

ಈ ಕೇಂದ್ರದಲ್ಲಿ ಹರಿಜನ ದಿನಾಚರಣೆಯ ಕಾರ್ಯಕಲಾಪವು ತಾ 30–7 49 ರಲ್ಲಿ ಶ್ರೀಯು ದೇಜು ಉಚ್ಚಿಲ್ ಬಿ ಎ ಎಲ್ ಟಿ ಕಾರ್ಕಳ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು ಬೆಳಿಗ್ಗೆ ಹರಿಜನ ಕೇರಿ ಸಂದರ್ಶನೆ ನಡೆಯಿತು ಈ ಸಂದರ್ಭದಲ್ಲಿ ಶ್ರೀ ನಾಯರಬೆಟ್ಟು ವೆಂಕಪ್ಪ ಹೆಗ್ಡೆಯವರು ಕಾಯಿಲೆಯುಳ್ಳ ಹರಿಜನರಿಗೆ, ಚಾಪೆ ಬಟ್ಟೆಗಳನ್ನು ಧರ್ಮಾರ್ಥವಾಗಿ ಕೊಟ್ಟಿದ್ದರು ಮಧ್ಯಾಹ್ನ ಮಿಶ್ರಭೋಜನ, 5 ಗಂಟೆಗೆ ಸಾರ್ವಜನಿಕ ಸಭೆಯು ನೀರೆ ಬೈಲೂರು ಬ್ರಾಂಚ್ ಶಾಲೆಯಲ್ಲಿ ನಡೆಯಿತು. ಹರಿಜನೋದ್ಧಾರದ ಕುರಿತು ಶ್ರೀಗಳಾದ ಅನಂತಪ್ಪ ಕಿಣಿ, ಡಿ ಡಿ ಅಲ್ವಾಲ್, ಕೆ ಬಿ ಜಗನ್ನಾಥ ಶೆಟ್ಟಿ ಇವರು ಭಾಷಣವಿತ್ತರು ಅಧ್ಯಕ್ಷರ ಭಾಷಣ, ಧನ್ಯವಾದ, ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು

ವರ್ಷಂಪ್ರತಿ ನಡೆಯುವ ಇಲ್ಲಿಯ ಮಾರಿಪೂಜೆ ಜಾತ್ರೆಯು ಇದೇ ತಾ 2 3ರಲ್ಲು ಪ್ರಾಣಿಬಲಿಯಿಲ್ಲದೆ ಸಾತ್ವಿಕ ರೀತಿಯಲ್ಲಿ ನಡೆದುದು ಸ್ತುತ್ಯ

ಕುಂಬಳೆ

ತಾ ೭ ೮ ೯ರಲ್ಲಿ ಬಂಬ್ರಾಣ, ಕುಂಬಳೆ ಹಯರ್, ಮೊಗ್ರಾಲ್, ಕಣ್ಣೂರು, ಮಾಯಿಪಾಡಿ, ಪಟ್ಲ, ಮಧೂರ್ ಮುಟ್ಟತ್ತೋಡಿ, ಸೂರಂಬೈಲ್, ಪೆರ್ಲ ಮೊದಲಾದ ಹತ್ತು ಪ್ರಾಥಮಿಕ ಶಾಲೆಗಳನ್ನು ಬುನಾದಿ ಶಿಕ್ಷಣ ಶಾಲೆಯನ್ನಾಗಿ ಮಾರ್ಪಡಿಸಿ, ಬುನಾದಿ ಶಿಕ್ಷಣ ತರಬೇತು ಹೊಂದಿದ ಉಪಾಧ್ಯಾಯರುಗಳನ್ನು ನಿಶ್ಚಯಿಸಿ ಜಿಲ್ಲಾ ಬೋರ್ಡಿನವರು ಹುಕುಂ ಮಾಡಿರುವರು ಈ ಕಾರಣದಿಂದ ಎಷ್ಟೋ ಸರ್ವಿಸುಳ್ಳ ಉಪಾಧ್ಯಾಯರುಗಳನ್ನು ಬೇರೆ ಕಡೆಗೆ ವರ್ಗಾಯಿಸಿದ್ದರಿಂದ ಕಷ್ಟಕ್ಕೀಡಾಗಿರುವರು.

ತಾ ೧೧ರಂದು ಸಂಜೆ ಉಂಟಾದ ಸುಳಿಗಾಳಿ ನಿಮಿತ್ತ ಅಚ್ಚುತ್‌ಬೈಲ್ ಮುಂತಾದ ಕಡೆಗಳಲ್ಲಿ ತುಂಬ ನಷ್ಟಕಷ್ಟಗಳು ಬಂದೊದಗಿದುವಾಗಿ ತಿಳಿದು ಬರುತ್ತದೆ

ಇಲ್ಲಿಗೆ ಮುಬಜಾರಿನಿಂದ ೬೦ ಟನ್ ಅಕ್ಕಿ ಕಳುಹಿಸಲು ಹುಕುಂ ಆಗಿರುತ್ತದೆ. ೨೫೦ ಗೋಣಿ ಮಿಲೋ ಇಲ್ಲಿಗೆ ಬಂದಿರುತ್ತದೆ

ತಾ ೩೦ ರಂದು ಬದಿಯಡ್ಕದಲ್ಲಿ ಹರಿಜನ ದಿನಾಚರಣ ಸಭೆಯು ಶ್ರೀ ಬಿ ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಸೇರಿತು ಡಾ। ಪಿ ಎಸ್. ಶಾಸ್ತ್ರಿಗಳು ಭಾಷಣವಿತ್ತರು ಫಿರ್ಕಾ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಬಾಬು ಶೆಟ್ಟರು ವಂದನಾರ್ಪಣೆ ಮಾಡಿದರು.

ದ. ಕನ್ನಡ ನೀಲಗಿರಿ, ಮಲಬಾರ್

ಪಂಚಾಯತ ಪರಿಷತ್ತು

"ಭಾವೀ ರಾಜ್ಯಭರಣದ ಆಸ್ತಿವಾರವು ನಮ್ಮ ಹಳ್ಳಿಗಳಲ್ಲೇ ಆರಂಭವಾಗಬೇಕು. ಗ್ರಾಮ ರಾಜ್ಯದಿಂದಲೇ ಸ್ವಾಯತ್ತ ಆಡಳಿತವನ್ನು ಪ್ರಾರಂಭಿಸೋಣ," ಎನ್ನುತ್ತ ಮದ್ರಾಸು ಸರಕಾರದ ಸ್ಥಳೀಯಾಡಳಿತೆಯ ಮಂತ್ರಿಗಳಾದ ಶ್ರೀ। ಚಂದ್ರಮೌಳಿಯವರು ತಾ. ೩೧ರಂದು ಮುಂಜಾನೆ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ ಆರಂಭವಾದ ನೀಲಗಿರಿ ಮತ್ತು ಪಶ್ಚಿಮ ಕರಾವಳಿಯ ಪಂಚಾಯತ ಪರಿಷತ್ತನ್ನು ಉದ್ಘಾಟಿಸಿದರು.

ಈ ಪರಿಷತ್ತಿಗೆ ನೀಲಗಿರಿಯಿಂದ ೧೪ ಮಂದಿ, ಮಲಬಾರಿನಿಂದ ಒಬ್ಬರು ಹಾಗೂ ದ. ಕನ್ನಡದ ಬೇರೆ ಬೇರೆ ಭಾಗಗಳಿಂದ ಒಟ್ಟು ೪೯ ಮಂದಿ ಪ್ರತಿನಿಧಿಗಳೂ ಹಲವಾರು ಮಂದಿ ಪ್ರೇಕ್ಷಕರೂ ಬಂದಿದ್ದರು.

ಸ್ವಾಗತ ಭಾಷಣ.

ಸ್ವಾಗತಾಧ್ಯಕ್ಷರಾದ ಶ್ರೀ। ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು ಮಂತ್ರಿಗಳನ್ನೂ ಪ್ರತಿನಿಧಿ-ಪ್ರೇಕ್ಷಕರನ್ನೂ ಸ್ವಾಗತಿಸುತ್ತ, "ಈ ಪರಿಷತ್ತು ಪ್ರತಿನಿಧೀಕರಿಸುವ ನೀಲಗಿರಿ, ಮಲಬಾರ್ ಮತ್ತು ದ. ಕ. ಜಿಲ್ಲೆಗಳ ಪೈಕಿ ಕೊನೆಯ ಜಿಲ್ಲೆಯಲ್ಲಿ ಅತ್ಯಧಿಕ ಪಂಚಾಯತ ಬೋರ್ಡುಗಳಿರುವುದರಿಂದ ಈ ಜಿಲ್ಲೆಯಲ್ಲೇ ಪರಿಷತ್ತನ್ನು ಜರಗಿಸುವುದು ಯೋಗ್ಯವೆಂದು ನಿರ್ಧರಿಸಿದೆವು"-ಎಂದರು.

"ಪಂಚಾಯತ ಮಸೂದೆಯೊಂದು ಈಗಾಗಲೇ ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸಲ್ಪಟ್ಟು ತಜ್ಞರ ಸಮಿತಿಗೊಪ್ಪಿಸಲ್ಪಟ್ಟಿದೆ. ಆದ್ದರಿಂದ ಈ ಮಸೂದೆಯ ಸಾಧಕ ಬಾಧಕಗಳ ಕುರಿತು ಶೀಘ್ರವಾಗಿ ನಾವು ವಿಚಾರಿಸಬೇಕಾಗಿದೆ. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತೆಯಲ್ಲಿ ವಿಶಾಲ ಅನುಭವಿಗಳಾದ ಶ್ರೀ ಮೊಳಹಳ್ಳಿ ಶಿವರಾಯರು ನಮಗೆ ಮಾರ್ಗದರ್ಶಕರಾಗಿರಲೊಪ್ಪಿದುದು ಸಂತೋಷದ ವಿಷಯ.

"ನಮ್ಮ ಪ್ರಗತಿ ಹಾಗೂ ಸಂಸ್ಕೃತಿಗಳು ಸ್ಥಿರವಾಗಿ ಉಳಿಯಬೇಕಾದರೆ ನಮ್ಮ ಹಳ್ಳಿಗಳಲ್ಲಿ ಅವು ಬೇರು ಬಿಡಬೇಕು-ಎಂದು ನಮ್ಮ ರಾಷ್ಟ್ರಪಿತ ಬಾಪೂಜಿ ಪದೇ ಪದೇ ಬೋಧಿಸಿದ್ದಾರೆ. ಗ್ರಾಮ ರಾಜ್ಯವು ನಮ್ಮ ದೇಶಕ್ಕೇನೂ ಹೊಸತಲ್ಲ. ಅನಾದಿಯಿಂದ ಗ್ರಾಮ ಸಂಘಟನೆಗಳಿದ್ದುದಕ್ಕೆ ಚರಿತ್ರೆಯ ಆಧಾರವಿದೆ. ಇಂದಿಗೂ ಭಾರತವು ಕೃಷಿ ಪ್ರಧಾನ ದೇಶವಾಗಿದ್ದು ಸೇ. ೭೫ ಮಂದಿ ಈ ವ್ಯವಸಾಯದಲ್ಲೇ ಹಳ್ಳಿಗಳಲ್ಲಿ ದುಡಿಯುತ್ತಿದ್ದಾರೆ. ಆದುದರಿಂದ, 'ಹಳ್ಳಿಗಳು ಉಳಿದರೆ ಭಾರತವೂ ಉಳಿಯುವುದು' ಎಂಬ ಮಾತು ಇಂದಿಗೂ ಸತ್ಯ.

"ಈ ದೃಷ್ಟಿಯಿಂದ ನೋಡಿದರೆ ಪಂಚಾಯತ ಮಸೂದೆಯ ಆಗಮನವೇನೂ ಅಕಾಲದಲ್ಲಾಗಲಿಲ್ಲ. ಇತ್ತೀಚೆಗೆ ಮಂಡಿಸಲ್ಪಟ್ಟ ಇತರ ಮಸೂದೆಗಳಿಗಿದ್ದಷ್ಟು ವಿರೋಧವೂ ಇದಕ್ಕಿರಲಾರದು.

"ಆದರೆ, ೪೦ ಸಾವಿರ ಪಂಚಾಯತ ಬೋರ್ಡುಗಳನ್ನೂ, ೩೪ ಜಿಲ್ಲಾ ಬೋರ್ಡ್, ಹಾಗೂ ೫೦ ಮುನಿಸಿಪಾಲಿಟಿಗಳನ್ನೂ, ದೂರದ ಮದ್ರಾಸಿನಲ್ಲಿರುವ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಬ್ಬರು ನಿಯಂತ್ರಿಸಬಲ್ಲರೇ? ಎಂಬುದು ಸಂದೇಹ ಮಾತ್ರವಲ್ಲದೆ, ಈಗ ಪಂಚಾಯತ ಬೋರ್ಡುಗಳಿಗೆ ಸರಕಾರವು ಕೊಡಲು ನಿರ್ಧರಿಸಿರುವ ಭೂಕಂದಾಯದ ಸೇ. ೧೨ ೧/೨ ಅತ್ಯಲ್ಪ. ಇದು ಸಿಬ್ಬಂದಿಗಳ ವೆಚ್ಚಕ್ಕೆ ಮುಗಿದು ಹೋಗಬಹುದು. ಇದರಿಂದ 'ಸಿಬ್ಬಂದಿ ಹೆಚ್ಚಿತು, ಕೆಲಸವಾಗಲಿಲ್ಲ' ಎಂಬ ದೂರು ಕೇಳಿಬರದಿರಲಾರದು. ಆದುದರಿಂದ ಪ್ರತಿ ಐದು ಗ್ರಾಮಗಳ ಸಮೂಹಕ್ಕೊಂದು ಪಂಚಾಯತ ಬೋರ್ಡು ರಚಿಸುವುದಲ್ಲದೆ, ಭೂಕಂದಾಯದ ಸೇ. ೨೫ರಷ್ಟನ್ನಾದರೂ ಈ ಪಂಚಾಯತಗಳು ಪಡೆಯಬೇಕು.

"ಪಂಚಾಯತಗಳಿಗೆ ನ್ಯಾಯಾಧಿಕಾರವನ್ನು ಕೊಡುವ ಸೂಚನೆಯ ಕುರಿತು ಮತಭೇದ ಬಾರದಿರಲಾರದು. ಇದರಿಂದ ಬಣಗಳು ತಲೆಯೆತ್ತಿ ಪಂಚಾಯತಗಳೇ ನಿರ್ನಾಮವಾಗುವ ಭೀತಿಯಿದೆ. ಆದುದರಿಂದ ಕ್ರಿಮಿನಲ್ ಮತ್ತು ಸಿವಿಲ್ ಕಾರ್ಯಗಳನ್ನು ಪಂಚಾಯತ ಬೋರ್ಡುಗಳಿಂದ ದೂರವಿರಿಸಿ ಆ ಬಗ್ಗೆ ಪ್ರತ್ಯೇಕ ಸಂಸ್ಥೆಯೊಂದನ್ನು ಏರ್ಪಡಿಸುವುದು ಯೋಗ್ಯವೆಂಬುದು ನನ್ನ ಸೂಚನೆ.

"ಆರೋಗ್ಯ, ರಕ್ಷಣೆ, ವಿದ್ಯೆ, ಮಾರ್ಗ ಸೌಕರ್ಯ, ಮೊದಲಾದ ಜವಾಬ್ದಾರಿಗಳನ್ನೆಲ್ಲ ಪಂಚಾಯತ ಬೋರ್ಡುಗಳಿಗೆ ಕೊಡಲು ಸರಕಾರವೇನೋ ಸಿದ್ಧವಿದೆ. ಆದರೆ ಅದಕ್ಕೆ ತಕ್ಕ ಹಣವೂ ಬೇಕು. ನೇರವಾದ ತೆರಿಗೆಗಳು ಯಾವಾಗಲೂ ಜನರ ಟೀಕೆಗೆ ಗುರಿಯಾಗುತ್ತವೆ. ಆದುದರಿಂದ ಬೇರೆ ವಿಧದಿಂದ ತೆರಿಗೆ ಎತ್ತಲು ಸೂಚಿಸಬೇಕು". ಎಂದರು

ಹಳ್ಳಿಗಳೇ ಭಾರತದ ಜೀವಾಳ

ಆನಂತರ ಮಾನ್ಯ ಮಂತ್ರಿಗಳು ಉದ್ಘಾಟನೆಯನ್ನು ನೆರವೇರಿಸುತ್ತ, ಮದ್ರಾಸ್ ಪಂಚಾಯತ ಮಸೂದೆಯ ಮುಖ್ಯಾಂಶಗಳನ್ನು ವಿವರಿಸಿ, "ಅದರಲ್ಲಿರಬಹುದಾದ ಕುಂದುಕೊರತೆಗಳ ಬಗ್ಗೆ ಹೆಚ್ಚಿನ ಚರ್ಚೆಯಾಗುವ ರೀತಿಯಲ್ಲಿ ಒಮ್ಮತಕ್ಕೆ ಬರಲು ಇಂಥಾ ಪರಿಷತ್ತುಗಳು ಅಗತ್ಯ" ಎಂದರು.

"ಹಳ್ಳಿಯಿಂದಲೇ ನಮ್ಮ ದೇಶದ ಜನಜೀವನವು ಆರಂಭವಾಗುತ್ತದೆ. ಇಂದು ಕೂಡ ನಮ್ಮ ದೇಶದ ನೇಕಡಾ ೮೦ರಷ್ಟು ಮಂದಿ ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಪೇಟೆಯ ಬೆಡಗುಗಳಿಗೆ ಮಾರು ಹೋದ ಪಟ್ಟಣಿಗರು 'ಹಳ್ಳಿಗಳಲ್ಲೇನಿದೆ?' ಎಂದು ಮೂಗು ಮುರಿಯಬಹುದು. ಆದರೆ ಕೃಷಿಯೇ ದೇಶದ ಪ್ರಾಮುಖ್ಯ ಸಂಪತ್ತಾಗಿರುವ ನಮ್ಮ ದೇಶದಲ್ಲಿ ಹಳ್ಳಿಗಳಿಂದಲೇ ಪೇಟೆಗಳು ಬದುಕಿ ಬಾಳುವುವು ಎಂಬುದು ನೆನಪಿರಲಿ.

"ನಮ್ಮ ಹಳ್ಳಿಗಳ ಸುಧಾರಣೆಗೆ ಪಾಶ್ಚಾತ್ಯ ಕ್ರಮಗಳು ಸರಿಹೋಗಲಾರವು. ಹಳ್ಳಿಯ ಜೀವನ ಕ್ರಮವನ್ನನುಲಕ್ಷಿಸಿ ಅದಕ್ಕೆ ಬೇಕಾಗುವ ಮಾದರಿಯ ಸುಧಾರಣೆಗಳನ್ನು ಕೈಕೊಳ್ಳಬೇಕು.

ಹಳ್ಳಿಗಳ ಸಂಘ ರಚನೆ

"ಪ್ರಕೃತ ತಜ್ಞರ ಸಮಿತಿಗೊಪ್ಪಿಸಲ್ಪಟ್ಟಿರುವ ಪಂಚಾಯತ ಮಸೂದೆಯಲ್ಲಿ ಇಷ್ಟರಲ್ಲೇ ಟೀಕೆಗೊಳಗಾಗಿರುವ ಕೆಲವು ವಿಚಾರಗಳನ್ನು ಪ್ರಸ್ತಾಪಿಸುವೆನು. ಜನ ಸಂಖ್ಯೆ ೫೦೦ಕ್ಕೆ ಮೇಲ್ಪಟ್ಟಿರುವ ಗ್ರಾಮಗಳಿಗೆ ಪ್ರತ್ಯೇಕವಾದ ಪಂಚಾಯತವಿರಬೇಕೆಂದೂ, ಇದಕ್ಕಿಂತಲೂ ಕಡಿಮೆ ಜನಸಂಖ್ಯೆ ಇರುವ ಗ್ರಾಮಗಳನ್ನು ಒಟ್ಟು ಸೇರಿಸಿ ಒಂದು ಪಂಚಾಯತ ರಚಿಸಬೇಕೆಂದೂ ಮಸೂದೆಯಲ್ಲಿದೆ. ಆದರೆ ಕೆಲವರು, ಇಷ್ಟು ಸಣ್ಣ ಘಟಕಗಳಿಗೆ ಏನು ಮಾಡಲೂ ಸಾಧ್ಯವಾಗಲಾರದೆಂದೂ ಹೆಚ್ಚು ಗ್ರಾಮಗಳನ್ನು ಒಟ್ಟು ಸೇರಿಸಿ, ಕ್ಷೇತ್ರವನ್ನು ವಿಶಾಲಗೊಳಿಸಬೇಕೆಂದೂ ಸೂಚಿಸುತ್ತಾರೆ. ಆದರೆ ಹಾಗೆ ಗ್ರಾಮಗಳನ್ನು ಒಟ್ಟು ಸೇರಿಸಿದರೆ ದುರ್ಬಲ ಗ್ರಾಮಗಳು ಹಿಂದೆಯೇ ಉಳಿಯುವುವು. ದೊಡ್ಡ ಗ್ರಾಮಗಳು ಮಾತ್ರ ಮುಂದೆ ಬರಲು ಎಡೆಯಾಗುವುದು.

"ಇನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷನು ಸಾರ್ವತ್ರಿಕ ಮತದಾರರಿಂದಲೇ ಆರಿಸಲ್ಪಡಬೇಕೆಂಬ ಒಂದು ಸೂತ್ರವಿದೆ. ಕೆಲವರು ಇದನ್ನು ವಿರೋಧಿಸಿ, ಆತನನ್ನು ಪಂಚಾಯತ ಸದಸ್ಯರೇ ಆರಿಸಿಕೊಳ್ಳಬೇಕೆನ್ನುತ್ತಾರೆ. ಹೀಗೆ

ಪ್ರಕಟಣೆ

ಶಿರ್ವ ಪಂಚಾಯತ ಕೋರ್ಟು.

ಶಿ. ವ್ಯಾ. ನಂಬ್ರ 5/49

1 ಸೀತಾರಾಮ ಶ್ಯಾನುಭಾಗ, ವಾಸ್ತವ ಶ್ಯಾನುಭಾಗರ ಮಗ, ಉಡ್ಪಿ ತಾಲ್ಲೂಕು ಬೇರೂರು ಗ್ರಾಮ —ವಾದಿ

2 ಅಂಣುಪೂಜಾರಿ, ಕೊರಗಪೂಜಾರಿ ಅಳಿಯ, ಉಡ್ಪಿ ತಾಲ್ಲೂಕು ಬೆಳ್ಳೆಗ್ರಾಮ.

ಪ್ರತಿವಾದಿಗೆ ಈ ಮೂಲಕ ತಿಳಿಸು ಪಡಿಸುವದೇನೆಂದರೆ--

ಮೇಲ್ಕಂಡ ವ್ಯಾಜ್ಯದ ತನಿಖೆಯು ತಾ 20-8-49ನೇ ಶನಿವಾರ ಮಧ್ಯಾಹ್ನ ಘಂಟೆ 12ಕ್ಕೆ ತನಿಖೆಗೆ ಇಟ್ಟಿರುತ್ತದೆ. ನಿನ್ನ ಆಕ್ಷೇಪಗಳೇನೂ ಇದ್ದರೆ ಸದ್ರಿ ದಿನ ಈ ಕೋರ್ಟಿಗೆ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದ್ರೆ ಪ್ರತಿವಾದಿ ಗೈರ ಹಾಜ್ರಿಯಿಂದ ಏಕಪಕ್ಷವಾಗಿ ವಾದಿಗುಣಕ್ಕೆ ತೀರ್ಮಾನಿಸಲಾದೀತು.

ಕೆ. ಕುಮಾರ ಹೆಗ್ಡೆ
ಪ್ರೆಸಿಡೆಂಟ್,
ಶಿರ್ವ ಪಂಚಾಯತ ಕೋರ್ಟ್.
6—8—1949

ಸ್ತ್ರೀ ಪುರುಷರೆಲ್ಲರೂ ಓದಲೇಬೇಕಾದ ಶ್ರೇ[illegible] ಪುಸ್ತಕಗಳು

ನಾಟಕ ಪುಸ್ತಕಗಳು

ಸ್ವತಂತ್ರ ಜೀವನೋಪಾಯ	[ಕೆ. ಎಚ್. ಶೆಟ್ಟಿ]	0	3	0
ಸಂಶಯ ಪಿಶಾಚಿ	[ಕೆ. ಕೆ. ಶೆಟ್ಟಿ]	0	8	0
ಕುಶಲವ	[,,]	0	6	0
ವ್ಯಭಿಚಾರಿಣಿ ಯಾರು	[,,]	1	0	0
ಹೆಂಡ್ತಿ ಗಂಡನಾದರೆ	[,,]	0	4	0
ಪುರುಷವಧು	[,,]	0	4	0
ದೇಶಭಕ್ತ	[,,]	1	4	0
ಪ್ರೇಮ ವಿಜಯ	[,,]	1	0	0
ರಂಗ ಭೂಮಿ	[ಎಸ್. ವೆಂಕಟರಾಜ]	0	8	0
ಸೇವಾಪಥ	[ಎಸ್. ಎಲ್. ಸುಬ್ರಹ್ಮಣ್ಯಂ]	0	8	0
ಪ್ರಕಾಶ	[ಸರಸ್ವತೀ ಬಾಯಿ ರಾಜವಾಡೆ]	2	4	0
ಮೂರು ಪ್ರಹಸನಗಳು	[ಕೊರಡ್ಕಲ್]	0	14	0
ಜೀವನ ಸಂಗ್ರಾಮ	[ಪಿ. ಶೀನ ಶೆಟ್ಟಿ]	1	8	0
ಸ್ವರಾಜ್ಯ ವಿಜಯ	[ಎಂ. ವಿ. ಹೆಗ್ಡೇರ ಯಕ್ಷಗಾನ ನಾಟಕ]	0	8	0
ಸಂಸ್ಕೃತಿ	[ಎ. ಮೋಹನಾಚಾರ್ಯ]	0	12	0
ಮೀರಾ ಬಾಯಿ	[,,]	0	10	0

ಕಾದಂಬರಿ

ಜವಿಾನ್ದಾರ	[ಹೊಸಮನಿ ಗುಡ್ಡಪ್ಪ]	1	8	0
ಸನ್ಯಾಸಿಯ ಸೋಗಿನಲ್ಲಿ	[ಕೆ. ಕೆ. ಶೆಟ್ಟಿ]	0	8	0

ಕತೆಗಳು

ಪ್ರೇಮ ಪ್ರವಾಹ	[ಸಂಗ್ರಹ]	0	8	0
ಮಧುವನ	[ಸಂಕಲನ]	3	0	0
ನಂದಾದೀಪ	[ಕೊರಡ್ಕಲ್]	0	14	0
ಭಾರತೀಯ ಕತೆಗಳು	[,,]	0	11	0
ನಗೆ ನೋಟಗಳು	[ಕೆ. ವಿ. ಶೆಣೈ]	0	14	0
ಅನ್ನದೇವರು ಮತ್ತಿತರ ಕತೆಗಳು	[ಕಬ್ಬಿನ ಕೃಷ್ಣಮೂರ್ತಿ]	1	0	0
ವಿಷ್ಣುವಿನ ದಶಾಪರಾಧಗಳು	[ಎಂ. ವಿ. ಹೆಗ್ಡೆ]	0	12	0
ಆಕಾಶ ಗಂಗೆ	[ಎಸ್. ವೆಂಕಟರಾಜ]	1	12	0
ಕದಂಬ	[ಸರಸ್ವತೀ ಬಾಯಿ ರಾಜವಾಡೆ]	1	4	0
ಸಪ್ತಸಾಗರ	[ಎಸ್. ವೆಂಕಟರಾಜ]	0	12	0

ಕವಿತೆ ಮತ್ತಿತರ ಪುಸ್ತಕಗಳು

ಕಾವ್ಯ ಸಾಮ್ರಾಜ್ಯ	[ಸಂಕಲನ]	1	0	0
ಕವಿತಾ ಕಾಮಿನಿ	[ಎಸ್. ವೆಂಕಟರಾಜ]	2	0	0
ಮುಗುಳು	[ಕೆ. ಹೊನ್ನಯ್ಯ ಶೆಟ್ಟಿ]	0	4	0
ಭಾರತದಲ್ಲಿ ಜಾತಿಭೇದ	[ಸುಬ್ರಹ್ಮಣ್ಯಂ]	1	0	0
ಸ್ವಾತಂತ್ರ್ಯವೀರ ಸಾವರ್ಕರ	[ಇಂದಿರಾಬಾಯಿ]	1	4	0
ಮನೆ ಮದ್ದು	[ಡಾ. ಕೊರಡ್ಕಲ್]	2	0	0
ಸುಲಭದಲ್ಲಿ ಇಂಗ್ಲಿಷ್	[ಕೊರಡ್ಕಲ್]	1	8	0

ಟಪ್ಪಾಲು ಖರ್ಚು ಪ್ರತ್ಯೇಕ.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಈ ಪುಸ್ತಕಗಳು ದೊರೆಯದಿದ್ದರೆ **ನವಭಾರತ ಪುಸ್ತಕ ಭಂಡಾರ, ಉಡುಪಿ** ಇವರಿಗಾಗಲಿ, **ಸ್ಕೂಲ್ ಬುಕ್ ಕಂಪೆನಿ ಮಂಗಳೂರು,** ಇವರಿಗಾಗಲಿ ಬರೆಯಿರಿ.

DR. OSBORNE'S Famous
REMEDY-REJUVENATOR
"SUPER D'SELIPHOSE"
with automised GOLD. Now available in India. A boon to a happy & suffering humanity. Contains Vitamins, A. B. C. D.- Valuable literature on REJUVENATION & brilliant appreciative letters from Doctors & gentlemen sent free on request. Apply early or ask your chemist Price Rs. 6/- only. (Full course)- Distributors

R. A. SIMONS Esqr.,—M. C.
UDIPI, SOUTH KANARA.

Notice.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 263/1949. O. S. 507/1940

ಅರ್ಜಿದಾರ. ಕೃಷ್ಣ ಮಂಜ.

ಎದುರು. ಭದ್ರಯ್ಯ ಸೇರೆಗಾರ ಸಹಾ.

ಕುಂದಾಪುರ ಕಸಬೆಯಲ್ಲಿರುವ ಭದ್ರಯ್ಯನ ತಿಂಮಪ್ಪನಾಯಕರ ಮಗ 1ನೇ ಎದ್ರಿ, ಭದ್ರಯ್ಯ ಸೇರೆಗಾರ. ವ ಕಂದಾವರ ಗ್ರಾಮದ ಸಾಂತಾವರ ಹಿಗ್ಲೇದು ಮನೆ, ಶೇಷಸೇರೆಗಾರನ ಮಗ 5ನೇ ಎದ್ರಿ ಗೋವಿಂದ ಸೇರೆಗಾರ ಸಹಾ 2 ಜನಂಗೆ ಕೊಡುವ ನೋಟೀಸು:-

ಮೇಲಿನ ಡಿಕ್ರಿಯ ಅಮ್ಲುಜಾರಿ ಬಗ್ಗೆ ಅರ್ಜಿದಾರನು ಮಾಡಿದ ಮೇಲಿನ ಅಮ್ಲುಜಾರಿಯನು ತಾ 19-8 1940ಕ್ಕೆ ಈ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ತನಿಖೆಗೆ ಮುಂದೂಡಲಾಗಿಯದೆ.

Sd/**A. V. N. Hebbar**
Pleader for Petitioner

Kundapoor }
30—7—49 }

ಮಾಡಿದರೆ, ಪಂಚಾಯತದೊಳಗೆ ಆರಂಭದಲ್ಲೇ ಎರಡು ಬಣಗಳಾಗುವುದು ಖಂಡಿತ. ಅಧ್ಯಕ್ಷನು ಪಕ್ಷಗಳ ತಿಕ್ಕಾಟಕ್ಕೆ ಬೀಳದೆ ಸ್ವತಂತ್ರನಾಗಿದ್ದು ಗ್ರಾಮದ ಸಾಮುದಾಯಿಕ ಹಿತದ ಕಡೆಗೆ ಲಕ್ಷ್ಯಕೊಡುವಂತೆ ಮಾಡುವುದೇ ಈ ಸೂತ್ರದ ಉದ್ದೇಶ. ಸ್ವಿಜರ್‌ಲೇಂಡಿನಲ್ಲಿ ಜಡ್ಜರನ್ನೂ ಮತಪಾರರೇ ಆರಿಸಿಕೊಳ್ಳುವರು.

ಅಧಿಕಾರ ವಿಶಾಲವಿದೆ

“ಆದರೆ ನಿಧಿ ಮಾತ್ರ ಅತ್ಯಲ್ಪ—ಎಂಬುದು ಇನ್ನೊಂದು ಟೀಕೆ. ಈಗ ನೆಲ ಕಂದಾಯದಲ್ಲಿ ನೇ. ೧೨ರಷ್ಟನ್ನು ಪಂಚಾಯತಗಳಿಗೆ ಕೊಡುವುದಾಗಿ ಮಸೂದೆಯಲ್ಲಿ ಸೂಚಿಸಿದೆ. ಇದು ಅತ್ಯಲ್ಪ ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಇದಕ್ಕಿಂತ ಹೆಚ್ಚು ಕೊಡುವ ಪರಿಸ್ಥಿತಿಯಲ್ಲಿ ಇಂದು ನಮ್ಮ ಸರಕಾರವಿಲ್ಲ. ಬ್ರಿಟಿಷರು ನಮ್ಮನ್ನು ಬಡಸ್ಥಿತಿಗೆ ತಂದಿಳಿಸಿದ್ದಾರೆ. ಪಂಚಾಯತಗಳ ಉತ್ಪತ್ತಿಯನ್ನು ಹೆಚ್ಚಿಸುವ ಕುರಿತು ನೀವೇನಾದರೂ ಸೂಚನೆಗಳನ್ನಿತ್ತರೆ ಅದನ್ನು ಮಂತ್ರಿಗಳ ಮುಂದಿಡುವೆನು.

ನ್ಯಾಯಾಂಗ

“ಪಂಚಾಯತಗಳಿಗೆ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳನ್ನು ಕೊಡುವ ಕುರಿತಾಗಿಯೂ ಟೀಕಿಸಲಾಗುತ್ತಿದೆ. ಆದರೆ, ಈ ಬಗೆಗೆ ಕೊಡಲಾಗುವ ಅಧಿಕಾರ ಅತ್ಯಲ್ಪ. ಹಳ್ಳಿಯ ಚಿಕ್ಕ ಪುಟ್ಟ ಜಗಳ ಇತ್ಯಾದಿಗಳ ತೀರ್ಪಿಗಾಗಿ ದೂರದ ಪೇಟೆಗೆ ಬಂದು ಹಣವನ್ನೂ ವೇಳೆಯನ್ನೂ ಹಾಳು ಮಾಡುವುದನ್ನು ತಪ್ಪಿಸುವುದೇ ಇದರ ಉದ್ದೇಶ. ನ್ಯಾಯಾಂಗಗಳನ್ನು ಪರಿಶೀಲಿಸುವ ಬಗ್ಗೆ ಪ್ರತ್ಯೇಕ ಕಮಿಟಿಗಳಾಗಬೇಕೆಂದಿದ್ದರೆ ಹಾಗೂ ರಚಿಸಿಕೊಳ್ಳಬಹುದು.

ಪರೀಕ್ಷಾ ಪ್ರಯೋಗ

“ಈಗ ಮಂಡಿಸಲಾಗಿರುವ ಮಸೂದೆಯು ಗ್ರಾಮ ರಾಜ್ಯ ಪದ್ಧತಿಯ ಒಂದು ಪರೀಕ್ಷಾ ಪ್ರಯೋಗ—ಒಂದು ಚಿಕ್ಕ ಆರಂಭ ಮಾತ್ರ. ಇದನ್ನು ನೀವು ಚೆನ್ನಾಗಿ ವಿವೇಚಿಸಿ ನಿಮ್ಮ ಸೂಚನೆಗಳನ್ನು ಕೊಡಬೇಕು.”

ಕೊನೆಗೆ ನಮ್ಮ ಜಿಲ್ಲೆಯ ಸಹಕಾರಿ ಸಂಘಗಳ ಬೆಳವಣಿಗೆಗೆ ಕಾರಣರಾದ ಶ್ರೀ ಎಂ. ಶಿವರಾಯರನ್ನು ಪ್ರಶಂಸಿಸುತ್ತ, “ಸಹಕಾರಿ ಸಂಘಗಳೂ ಪಂಚಾಯತಗಳೂ ಒಂದೇ ದೇಹದ ಎರಡು ಶ್ವಾಸಕೋಶಗಳಿದ್ದಂತೆ” ಎಂದರು.

ಸಂದೇಶ

ಆ ಬಳಿಕ ಕಾರ್ಯದರ್ಶಿ ಶ್ರೀ ಡಿ. ಮೋಹನರಾಯರು ಪರಿಷತ್ತಿಗೆ ಶುಭವನ್ನು ಕೋರಿ ಮದ್ರಾಸಿನ ಪ್ರಧಾನಿ ಕುಮಾರಸ್ವಾಮಿ ರಾಜ, ಎ. ಬಿ. ಶೆಟ್ಟಿ, ಕೆ. ಆರ್. ಕಾರಂತ, ರಾ. ಬ. ಗಿರಿಯಪ್ಪ, ಮೊದಲಾದವರಿಂದ ಬಂದಿದ್ದ ಸಂದೇಶಗಳನ್ನೋದಿದರು.

ಜನಾಬ್ ಎಚ್. ಎಸ್. ಹುಸೇನ್ ಸಾಹೇಬರನ್ನು ಅಧ್ಯಕ್ಷಸ್ಥಾನಕ್ಕೆ ಶ್ರೀ ಸದಾಶಿವರಾಯರು ಸೂಚಿಸಲು, ಮಲಬಾರಿನ ಶ್ರೀ ಪಿ. ಜೆರೋಡಿಯವರೂ ನೀಲಗಿರಿಯ ರಾಮಯ್ಯ ಗೌಡರೂ ಅನುಮೋದಿಸಿದರು.

ಅಧ್ಯಕ್ಷರ ಭಾಷಣ

“ಸುಮಾರು ೫೪ ಸಾವಿರ ಗ್ರಾಮಗಳಲ್ಲಿ ಸ್ವಯಂಪ್ರಭುತ್ವ ಸ್ಥಾಪಿಸಿ, ಸೇಕಡಾ ಅಂರಷ್ಟು ಮಂದಿಗೆ ಸ್ವತಂತ್ರ ಆಡಳಿತೆಯ ತರಬೇತಿಕೊಡಲಿರುವ ಮಸೂದೆಯು ಬಹು ಕಾಲದಿಂದ ನಿರೀಕ್ಷಿಸಲ್ಪಟ್ಟಿತ್ತು. ವಿದೇಶೀ ಸರಕಾರವೂ ಇಂಥಾ ಮಸೂದೆಯ ಅಗತ್ಯವನ್ನು ಕಂಡು, 1946ರಲ್ಲಿ ‘ಗ್ರಾಮ ಪಂಚಾಯತ ಆಕ್ಟ್” ಎಂಬ ಮಸೂದೆಯೊಂದನ್ನು ಜಾರಿಗೆ ತಂದಿತ್ತು. ಆದರೆ ಈ ಮಸೂದೆಯಂತೆ, ಪಂಚಾಯತ ಬೋರ್ಡ್ ರಚನೆಯು ಕಡ್ಡಾಯವಾಗಿರಲಿಲ್ಲ. ಆದರೆ ಪ್ರಕೃತದ ಮಸೂದೆಯಲ್ಲಿ ಎಲ್ಲ ಗ್ರಾಮಗಳಲ್ಲಿಯೂ ಬೋರ್ಡುಗಳಾಗಬೇಕೆಂಬ ಕಡ್ಡಾಯವಿದೆ.

ಸಾಮಾನ್ಯ ೫೦೦ ಜನಸಂಖ್ಯೆ ಇರುವ ಗ್ರಾಮಕ್ಕೊಂದು ಪಂಚಾಯತ ರಚಿಸಿದರೆ, ಉತ್ಪತ್ತಿಯು ಅತ್ಯಲ್ಪವಾಗಿದ್ದು ಯಾವ ಸುಧಾರಣೆಯನ್ನೂ ಮಾಡಲು ಅಸಾಧ್ಯವಾಗುವುದರಿಂದ, ಜನಸಂಖ್ಯೆಯ ಮಿತಿಯನ್ನು ೨೦೦೦ಕ್ಕೇರಿಸಿ, ಸಾಮಾನ್ಯ ಅಷ್ಟೇ ಆದಾಯವುಳ್ಳ ಗ್ರಾಮಗಳ ಸಮೂಹಕ್ಕೊಂದು ಬೋರ್ಡು ರಚಿಸುವುದು ಯೋಗ್ಯವೆಂದೂ ಸೂಚಿಸಿದರು. ಸದಸ್ಯರ ಸಂಖ್ಯೆಯನ್ನು ಏರಿಸಬೇಕೆಂದರು. ನ್ಯಾಯಾಧಿಕಾರಗಳನ್ನು ಪಂಚಾಯತಗಳಿಗೆ ಕೊಡುವುದು ಹಿತಕರ ಕಾಣಿಸುವುದಿಲ್ಲ ಎಂದರು. ಅಧ್ಯಕ್ಷನನ್ನು ಮತದಾರರೇ ಆರಿಸುವುದರಿಂದ ಉಂಟಾಗಬಹುದಾದ ದೋಷಗಳನ್ನೆತ್ತಿ ತೋರಿಸಿದರು. ಎರಡನೇ ಕ್ಲಾಸಿನ ಪಂಚಾಯತಗಳ ಮೇಲ್ತನಿಖೆಗೆ ಇಂಥಾ ಮೂರು ನಾಲ್ಕು ಪಂಚಾಯತಗಳ ಸಮೂಹಕ್ಕೊಬ್ಬರಂತೆ ಎಕ್ಸಿಕ್ಯೂಟಿವ್ ಅಧಿಕಾರಿಗಳೊಬ್ಬರ ನೇಮಕವು ಅಗತ್ಯ. ಈ ಆಫೀಸರರು ಅನನುಭವಸ್ಥರಿಗೆ ಆಡಳಿತಾಂಗದಲ್ಲಿ ತರಬೇತಿ ಕೊಡಬಹುದು. ಹೀಗೆಯೆ ಪ್ರಥಮ ಶ್ರೇಣಿಯ ಪಂಚಾಯತಗಳಿಗೆ ಒಬ್ಬ ಓವರ್ಸಿಯರರ ನೇಮಕವಾಗಬೇಕು. ಹಳ್ಳಿಗಳಲ್ಲಿ ವಿದ್ಯಾಪ್ರಚಾರದ ಕಡೆಗೆ ಹೆಚ್ಚಿನ ಗಮನ ಕೊಡುವುದು ಅತ್ಯಗತ್ಯವಾದುದರಿಂದ, ಪ್ರತಿ ಪಂಚಾಯತಗಳೂ ಒಂದೊಂದು ಪ್ರಾಥಮಿಕ ಶಾಲೆಯನ್ನು ನಡೆಸುವಂತಾಗಬೇಕು. ಅಲ್ಲಿ ವಯಸ್ಕರ ಶಿಕ್ಷಣಕ್ಕೂ ಅವಕಾಶವಿರಬೇಕು. ಕೆಲವು ಗ್ರಾಮಗಳ ಗುಂಪಿಗೊಂದರಂತಾದರೂ ಆಸ್ಪತ್ರೆ, ಪ್ರಸೂತಿಕಾಲಯ, ಹಾಗೂ ಶಿಶುವಿಹಾರಗಳಿರಬೇಕು—ಎಂದರು. ಇಂಥಾ ಪ್ರಾಮುಖ್ಯ ಮಸೂದೆಯೊಂದನ್ನು ಜಾರಿಗೆ ತರುವಾಗ ಎಚ್ಚರ ಅವಶ್ಯ—ಎಂದರು.

ಆಂಧ್ರದಿಂದ ಬಂದ ಆಪ್ತ ಪ್ರತಿನಿಧಿಗಳಾಗಿದ್ದ ಶ್ರೀ. ಎ. ಸತ್ಯನಾರಾಯಣರು ಮಾತನಾಡುತ್ತ, “ಅವಿದ್ಯೆ, ಅಜ್ಞಾನ ಮತ್ತು ಅನಾರೋಗ್ಯಗಳಿಂದ ಉದ್ಧಾರ ಮಾಡುವುದೇ ಈ ಮಸೂದೆಯ ಉದ್ದೇಶ” ಎಂದರು.

ಆ ಬಳಿಕ ವಿಷಯ ನಿಯಾಮಕ ಸಮಿತಿಯ ಆಯ್ಕೆ ನಡೆದು ಬೆಳಗ್ಗಿನ ಕಾರ್ಯಕ್ರಮಗಳು ಕೊನೆಗೊಂಡುವು.

ಬಹಿರಂಗಾಧಿವೇಶನ

ಸಂಜೆ ನಾಲ್ಕೂವರೆ ಗಂಟೆಗೆ ಬಹಿರಂಗಾಧಿವೇಶನವು ಜರಗಿ ವಿಷಯನಿಯಾಮಕ ಮಂಡಳಿಗಳಿಂದ ಸೂಚಿಸಲ್ಪಟ್ಟ ಹಲವು ಠರಾವುಗಳು ಮಾನ್ಯವಾದವು. ಮಾನ್ಯ ಮಂತ್ರಿಗಳೂ ಸ್ವಲ್ಪ ಕಾಲ ಠರಾವುಗಳ ಚರ್ಚೆಯಲ್ಲಿ ಭಾಗವಹಿಸಿದರು.

ಠರಾವುಗಳು

‘ಎಲ್ಲ ಪಂಚಾಯತಗಳಿಗೂ ಪ್ರತ್ಯೇಕ ಇಂಜಿನಿಯರಿಂಗ್ ಶಾಖೆಗಳಿರಬೇಕು’ ಎಂಬ ಠರಾವನ್ನು ಅಧ್ಯಕ್ಷರು ಮುಂತಂದು ಅದು ಸರ್ವಾನುಮತದಿಂದ ಮಾನ್ಯವಾಯಿತು.

ಎರಡನೆಯ ತರಗತಿಯ ಪಂಚಾಯತಗಳಿಗೆ ಭೂಕಂದಾಯದ ನೇ. ೧೨ರಷ್ಟನ್ನು ಕೊಡುವುದಾಗಿ ಮಸೂದೆಯಲ್ಲಿದೆ. ಇದನ್ನು ನೇ. ೨೫ರಷ್ಟಕ್ಕಾದರೂ ಏರಿಸಬೇಕೆಂದು ಶ್ರೀ. ಎಂ. ಎಸ್. ಭಿಡೆಯವರು ಸೂಚಿಸಿದರು. ಶ್ರೀ. ಕುಕ್ಕಿಲ ಗಣಪಯ್ಯ ಶೆಟ್ಟರು ಅದನ್ನು ಆವೇಶಪೂರ್ವಕವಾಗಿ ಅನುಮೋದಿಸಿದರು. ಮಾನ್ಯ ಮಂತ್ರಿಗಳು ಚರ್ಚೆಗೆ ಉತ್ತರ ಕೊಡುತ್ತ, “ನೇ. ೧೨ರಿಂದ ಹೆಚ್ಚೇ ಕೊಡಬಹುದು. ಬೊಂಬಯಿ ಸರಕಾರವು ಜಾರಿಗೆ ತಂದಿರುವ ಇದೇ ರೀತಿಯ ಮಸೂದೆಯಲ್ಲಿ ನೇ. ೧೫ ಕೊಡಲಾಗಿದೆ. ಹೀಗೆಯೇ ಮದ್ರಾಸ್ ಸರಕಾರವೂ ಹೆಚ್ಚೇ ಕೊಡಬಹುದು, ಕ್ರಮೇಣ ಸರಕಾರವು ಕೊಡುವ ಗ್ರಾಂಟು ನಿಂತು ಹೋಗಿ ಪಂಚಾಯತಗಳು ಸ್ವತಂತ್ರವಾಗಿ ಕರಗಳನ್ನೆತ್ತುವಂತಾಗಬಹುದು” ಎಂದರು. ಠರಾವು ಸರ್ವಾನುಮತದಿಂದ ಮಾನ್ಯವಾಯಿತು.

ಚಿಕ್ಕ ಗ್ರಾಮಗಳನ್ನು ಒಂದುಗೂಡಿಸುವ ಅಥವಾ ದೊಡ್ಡದನ್ನು ವಿಭಾಗಿಸುವ ಅಧಿಕಾರವು ಜನತೆಗಿರಬೇಕೆಂಬ ಠರಾವನ್ನು ಶ್ರೀ. ಎಂ. ಆರ್. ಪೂಂಜರು ಮಂಡಿಸಿದರು. ಅದೂ ಸರ್ವಾನುಮತದಿಂದ ಮಂಜೂರಾಯಿತು.

ಪಟೇಲರೇ ಮೊದಲಾದ ಗ್ರಾಮಾಧಿಕಾರಿಗಳು ಪಂಚಾಯತ ಬೋರ್ಡುಗಳಲ್ಲಿ ಎಕ್ಸ್ ಅಫಿಸಿಯೊ ಸದಸ್ಯರಾಗಿರಬೇಕೇ ಬೇಡವೆ? ಎಂಬ ಕುರಿತು ದೀರ್ಘ ಚರ್ಚೆಯಾಯಿತು. ಶ್ರೀಗಳಾದ ಕೆ. ಗಣಪಯ್ಯ ಶೆಟ್ಟರು, ಪುಲ್ಲಡ್ಕ ಸುಬ್ರಾಯರು ಎಂ. ಐತಪ್ಪ ರೈ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಕೊನೆಗೆ ಠರಾವನ್ನು ಓಟಿಗೆ ಹಾಕಲಾಗಿ ಶ್ರೀ. ಗಣಪಯ್ಯ ಶೆಟ್ರು ಸೂಚಿಸಿದಂತೆ, ಮಸೂದೆಯಲ್ಲಿದ್ದಂತೆಯೆ ಗ್ರಾಮಾಧಿಕಾರಿಗಳಿಗೆ ಎಕ್ಸ್ ಅಫಿಸಿಯೊ ಸದಸ್ಯರಾಗಿರುವ ಅಧಿಕಾರವಿರಬೇಕೆಂದು ತೀರ್ಮಾನವಾಯಿತು.

ಪಂಚಾಯತ ಬೋರ್ಡುಗಳಿಗೆ ನ್ಯಾಯಾಧಿಕಾರವಿರಬಾರದೆಂಬ ಠರಾವು ಶ್ರೀ. ಎಂ. ಸದಾಶಿವರಾಯರಿಂದ ಮಂಡಿಸಲ್ಪಟ್ಟು ಶ್ರೀ. ಡಿ. ವೆಂಕಟೇಶ ಭಟ್ಟರಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಮಾನ್ಯವಾಯಿತು.

ಉಪಸಂಹಾರ

ಕೊನೆಗೆ ಪರಿಷತ್ತು ಜಯಪ್ರದವಾಗುವಂತೆ ಸಹಕರಿಸಿದ ಪ್ರತಿನಿಧಿಗಳೆಲ್ಲರನ್ನೂ ಅಭಿನಂದಿಸುತ್ತ ಅಧ್ಯಕ್ಷರು, “ಹಳ್ಳಿಯ ಜೀವನದಲ್ಲಿ ದೊಡ್ಡ ಬದಲಾವಣೆಯಾಗುವ ಕಾಲವೀಗ ಸನ್ನಿಹಿತವಾಗಿದೆ. ನಮ್ಮ ಇಂದಿನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿ” ಎಂದು ಹಾರೈಸಿದರು.

ಸಿಲೆಕ್ಟ್ ಸಮಿತಿಯ ಮುಂದೆ ಸಾಕ್ಷಿ ಕೊಡಬೇಕಾದವರನ್ನು ಆರಿಸಲಾಯಿತು. ಕಾರ್ಯದರ್ಶಿ ಶ್ರೀ ಡಿ. ಮೋಹನರಾಯರ ಧನ್ಯವಾದಾರ್ಪಣೆಯ ಅನಂತರ ‘ಜನ ಗಣ ಮನ’ ರಿಕಾರ್ಡು ಸಂಗೀತದೊಡನೆ ಸಭೆ ಕೊನೆಗೊಂಡಿತು. ಪರಿಷತ್ತಿನ ಕಾರ್ಯಕ್ರಮಗಳೆಲ್ಲ ಹೆಚ್ಚಾಗಿ ಕನ್ನಡದಲ್ಲೇ ಜರಗಿದುವು.

ಋತುಸ್ರಾವ ನಿಂತಿತು

‘ಕುಮಾರಿ’ ಬಿಲ್ಲೆಗಳನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಪಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves head-ache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ಬೇಕು

ಎಲ್ಲೆಲ್ಲಿಯೂ ಉತ್ಸಾಹೀ ಸಮರ್ಥ ಏಜಂಟರು ಬೇಕಾಗಿದ್ದಾರೆ.
ಸರಿಯಾಗಿ ಕೆಲಸ ಮಾಡುವವರು ತಿಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು.
ವಿವರಕ್ಕೆ ಬರೆಯಿರಿ:
ಬಿ. ವಾಮನಾಚಾರ್,
ಬಿ. ಎ., ಬಿ. ಎಲ್., ಬಿ. ಟಿ.
ಮೆನೇಜರ್,
ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿ., ಉಡುಪಿ.

ಹಳ್ಳಿಯ ರೈತ

ಸಸಿ ದಿನಾಚರಣೆ, ಪ್ರದರ್ಶನ, ನೀರಾವರಿಗೆ ಬೇಕಾದ ಕಟ್ಟೆ ಮತ್ತು ಹೊಸ ಸುಗ್ಗಿ ಬೀಜ.

ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯು ಸಸಿ ದಿನಾಚರಣೆಯನ್ನು ಕೈಕೊಂಡು ಇದು ಐದನೇ ವರ್ಷ. ಜಿಲ್ಲಾ ಆಫೀಸರರು ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಯಲ್ಲಿ ಆಚರಿಸುವ ಕುರಿತು ಸರ್ಕ್ಯುಲಾರು ಹೊರಡಿಸಿದ್ದರು. ಈ ವರ್ಷ ತಾ 21-7-49ಕ್ಕೆ ಅದು ಹೊರಟಿದೆ. ಪ್ರಯತ್ನವೂ ನಡಿಯುವಂತಿದೆ. ಅಂತೆಯೇ ಇಂಡಿಯಾ ಸರಕಾರದ ಸರ್ಕ್ಯುಲಾರುಗಳು ಪತ್ರಿಕೆಗಳಲ್ಲಿ ಕಾಣಬರುವುವು. ಮಂಗಳೂರು ಕೃಷಿ ಡೆಮೋನ್‌ಸ್ಟ್ರೇಟರರು ತೆಂಗಿನ ಗಿಡ 1ರ ರೂ 0-12-6, ಬಾಳೆ 0-2-0, 0-2-6, ಪಪ್ಪಾಯಿ 0-1-0, ಅಂಬಾಜು ಮದಗೆಣಸು 100 ತುಂಡುಗಳಿಗೆ 0-12-0. ಬೇಕಾದಲ್ಲಿ ತಿಳಿಸಲು ಬರೆದಿರುವರು. ಕಂಕನಾಡಿ ಸರಕಾರಿ ಫಾರ್ಮಿನವರು ಬಾಳೆ ಗಿಡ ಕೊಡಬಹುದಾಗಿ ತಿಳಿಸಿರುವರು. ಮಂಗಳೂರಲ್ಲಿ ನರ್ಸರಿ ಶ್ರೀ ಸೋನ್ಸರು ಪಪ್ಪಾಯಿ ಗಿಡ ತಯಾರಿಸಿರುವರು. ಕುಂಬಾಪುರ ಕಾಪುವಿನಲ್ಲಿಯೂ ತಯಾರಿಸಲು ಕೇಳಿಕೊಂಡಿದೆ. ಪ್ರಥಮ ವರ್ಷ ಕಮಿಟಿಯು ಯತ್ನದಲ್ಲಿ ಯಾವ ಸಸಿ ಎಲ್ಲಿ ನಡುವುದೆಂದು ಪ್ರತಿಯೊಬ್ಬರೂ ಕೇಳಿದ ಪ್ರಶ್ನೆಯಾಗಿತ್ತು. ಈ ರೀತಿ ಗಿಡಗಳು ಸಿಗಹತ್ತಿದರೆ ಯಾವ ಸಸಿಯೆಂದು ಕೇಳದೆ ಎಲ್ಲೂ ನಡಬಹುದು. ನಮ್ಮ ದೃಷ್ಟಿಯನ್ನು ಸುತ್ತ ಹರಿಯಲು ಬಿಟ್ಟಿದ್ದಾದರೆ ಅನೇಕ ಕಡೆ ಅನವಶ್ಯವಾದ ಏನೂ ಪ್ರಯೋಜನವಿಲ್ಲದ ಮೂಲೆಗಳಲ್ಲಿ ಬಾಳೆ, ಪಪ್ಪಾಯಿ ಬೆಳೆಸಿದವರು ಅನೇಕರಿರುವರು. ಅವರು ಮಾತ್ರ ಬೆಳೆಸಿ ಸುಮ್ಮನಿರುವರು. ಮನಸ್ಸನ್ನು ಅಂತಹ ಮೂಲೆ ಮತ್ತು ಪ್ರಯೋಜನಕ್ಕಾಗದ ಖಾಲಿಸ್ಥಳಗಳ ಕಡೆಗೆ ಎಳೆಯುವುದು ಈಗಿನ ಸಾಧನೆ. ಬೇಲಿಗಳಲ್ಲಿ ನೋಡಿದರೂ ಕೆಲವೆಡೆ ಮರಗೆಣಸಿದೆ. ಎಲ್ಲರೂ ಮನಸ್ಸು ಮಾಡಿ ಇದನ್ನು ನಟ್ಟು ದೇಶದ ಸಂಪತ್ತು ವೃದ್ಧಿಗೆ ಸಾಧಿಸುವರೆಂಬ ಭರವಸೆಯಿರುವುದು. ಸ್ವತಂತ್ರ ದಿನಾಚರಣೆ ತಾ 15-8-49 ಸೋಮವಾರ. ಈ ದಿವಸದ ಆಚಂದೆ ತಿಂಗಳ ಅಂತ್ಯದ ತನಕವೂ ನಡೆಯಬಹುದು. ರೈತರು ಎಚ್ಚತ್ತು ಸಸಿನೆಡುವುದನ್ನೂ ಇತರರಿಗೂ ಉತ್ತೇಜನ ಕೊಡುವುದನ್ನೂ ಮಾಡಲಿ.

ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯ ಇನ್ನೊಂದು ಚಟುವಟಿಕೆ ಪ್ರದರ್ಶನ. ಪ್ರದರ್ಶನದ ಪ್ರಯೋಜನ ಫಕ್ಕನೆ ತಿಳಿಯಲು ಕಷ್ಟ. ಅದು ಯಶಸ್ವಿಯಾಗಲು ಕೆಲವು ಸಮಯದ ಯತ್ನ ಬೇಕಿರುವುದು. ಬೆಳೆಸಿದುದನ್ನು ಯಾ ತಯಾರಿಸಿದುದನ್ನು ತಂದು ತೋರಿಸುವುದು ಒಂದು ರೀತಿ. ಬೆಳೆಯುವಲ್ಲಿ ಮತ್ತು ತಯಾರಾಗುವಲ್ಲಿ ಹೋಗಿ ನೋಡುವುದು ಇನ್ನೊಂದು ರೀತಿ. ಇವೆರಡನ್ನು ಅನುಕೂಲಿಸಿದಲ್ಲಿ ಪ್ರದರ್ಶನವು ಯಶಸ್ವಿಯಾಗುವುದು ನಮ್ಮ 4ನೇ ಪ್ರದರ್ಶನವನ್ನು ಇದೇ ಬರುವ ಡಿಸಂಬರ ತಿಂಗಳಲ್ಲಿ ಮೂಲ್ಕಿ ಬಪ್ಪನಾಡು ದೇವಸ್ಥಾನದ ವಠಾರದಲ್ಲಿ ಜರಗಿಸಬೇಕೆಂದಿದೆ. ಕೃಷಿ ಆಫೀಸರರ ಸಮ್ಮತಿ ಬಂದಿದೆ. ಕೈಗಾರಿಕೆ, ವ ಇತರ ಇಲಾಖೆಗಳಿಗೆ ಬರೆದು ನಮ್ಮ ಗ್ರಾಮಾಭಿವೃದ್ಧಿ ಕ್ಷೇತ್ರಕ್ಕೆ ಸೇರಿದ ಗ್ರಾಮಗಳ ಪ್ರದರ್ಶನ ಮಾತ್ರವಲ್ಲ; ಜಿಲ್ಲಾ ಪ್ರದರ್ಶನವನ್ನೂ ಈ ಸಲ ಏರ್ಪಡಿಸಬೇಕೆಂದಿದೆ ಸರಕಾರವು ಪ್ರದರ್ಶನದ ಪ್ರಯೋಜನ ತಿಳಿದು ಇದಕ್ಕೆ ಉತ್ತೇಜನ ಕೊಡುವ ಕುರಿತು ಹಣ ನಿಗದಿಸಿದಂತಿದೆ. ಹಿಂದಿನ ರೀತಿಯನ್ನನುಸರಿಸುವುದರಲ್ಲಿ ಕ್ರಮವಿದ್ದರೂ ಪ್ರಯೋಜನವಿರುವುದನ್ನು ತಿಳಿದು ಮಾಡುವುದು ಮನುಷ್ಯ ನಗರೀಕ್ಷಿದ್ದಾನೆ. ಹೀಗೆ ತಿಳಿಯುವಾಗ ಪ್ರದರ್ಶನವು ಸುಲಭವಾದೀತು. ಎಲ್ಲರೂ ಪ್ರದರ್ಶನದಲ್ಲಿ ಭಾಗಿಯಾಗಲು ಇಂದಿನಿಂದಲೇ ಪ್ರಯತ್ನಪಡುವರೆಂಬ ಆಶೆಯಿದೆ.

ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ನಾವು ಕೈಕೊಂಡ ಇನ್ನೊಂದೆಂದರೆ ನೀರಾವರಿಯ ಅಭಿವೃದ್ಧಿ. ಪಶ್ಚಿಮ ಕರಾವಳಿಯಲ್ಲಿ ಅನೇಕ ನದಿಗಳೂ ಅದಕ್ಕೆ ನೀರನ್ನು ತರುವ ತೋಡುಗಳೂ ಇವೆ. ಸರಕಾರವು ಕಟ್ಟುತ್ತಾರೆಂದು ತೆರುತ್ತಾ ಇದೆ. ರೈತರು ಕಟ್ಟೆಗಳನ್ನು ಕಟ್ಟಿ ನದಿ, ಸಮುದ್ರಕ್ಕೆ ಹರಿದು ಹೋಗುವ ನೀರನ್ನು ಶೇಖರಿಸಿಕೊಂಡು ಪ್ರಯೋಜನ ಪಡೆಯಬಹುದು. ಅನೇಕ ಕಡೆ ಇದ್ದವುಗಳನ್ನು ವರ್ಷಂಪ್ರತಿ ಕಟ್ಟುವ ಶ್ರಮ ಕಷ್ಟಗಳಿಂದಾಗಿ ಕೆಲವೆಡೆ ರೈತರು ಬಿಟ್ಟಿರುವರು. ಕಟ್ಟುತ್ತಾರೆ ಕೊಡುವದೂ ನಿಂತು ಹೋಗಿರುವುದು. ನೀರು ಶೇಖರಿಸಿ ಇಟ್ಟಲ್ಲಿ ಗದ್ದೆಗಳಿಗೆ ಸುಲಭ ತರದಲ್ಲಿ ಕೊಂಡು ಹೋಗಿ ಸಾಗುವಳಿ ಮಾಡುವ ಅನುಕೂಲ ವಿನಹ, ಶೇಖರಿಸಿಟ್ಟ ನೀರಿನಿಂದ ಬಹುದೂರಕ್ಕೆ ಬುಗ್ಗೆಗಳು ಹುಟ್ಟಿ, ಬಾಗ್ಯಾತು ಸ್ಥಳ, ಧಾನ್ಯದ ಪೈರು ವ ನೇಜಿ ಹಾಕುವುದಕ್ಕೆ ತುಂಬಾ ಅನುಕೂಲವಾಗಿ ಭೂಮಿಯ ಉತ್ಪತ್ತಿ ಹೆಚ್ಚುವುದು. ಸರಕಾರವು ಬಾವಿ ಕೆರೆಗಳಿಗೆ ಸಹಾಯ ಕೊಡುವ ಮತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಯಲ್ಲಿರುವುದಾದರೂ ಬಾವಿ ಕೆರೆಗಳಿಂದ ನಮ್ಮ ಪಶ್ಚಿಮ ಕರಾವಳಿಯಲ್ಲಿ ಹೆಚ್ಚಿನ ಪ್ರಯೋಜನ ದೊರಕಲು ಕಷ್ಟ. ದೊಡ್ಡ ನೀರಾವರಿ ಯೋಜನೆಯೆಂದರೆ ಇನ್ನು ಕೆಲವು ವರ್ಷ ಬೇಕಾಗುವುದು. ಸರಕಾರದ ಆಲೋಚನೆಯಲ್ಲಿ 30-40 ಯೋಜನೆಗಳಿರುವುವಾದರೂ ಕುಂಬಳೆ ಫಿರ್ಕದ ಶಿರಿಯ ಅಣೆಕಟ್ಟು ಒಂದು ಮಾತ್ರ ಬಹುಶಃ ಬರುವ ವರ್ಷಕ್ಕಾಗಬಹುದಷ್ಟೆ. ಅಂದರೆ 1950-51ರ ಸಾಗುವಳಿ ಪ್ರಯೋಜನಕ್ಕೆ ಬರಬಹುದು. ಆಹಾರ ತುಷ್ಟಿಯನ್ನು ಬೇಗನೆ ನೀಗಿಸಬೇಕಾದರೆ ಇದೇ ವರ್ಷ ಪ್ರಯೋಜನಕ್ಕೆ ಬರುವ ರೀತಿ ರೈತರಿಗೆ ಸರಕಾರವು ಸಹಾಯ ಕೊಟ್ಟು ನಮ್ಮಲ್ಲಿ ಅನೇಕವಿರುವ ನದಿತೋಡುಗಳಿಗೆ ಕಟ್ಟೆಹಾಕಲು ಎಡೆಕೊಡುವುದು ಸುಲಭ ಮತ್ತು ಆಗತ್ಯ. ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯು ತನ್ನ ಎರಡು ಹೊಳೆಗಳಲ್ಲಿ ಉಪ್ಪುನೀರ ಕಟ್ಟೆಗಳಿಗೂ, ಮೇಲೆ ಒಂದು ಅಣೆಕಟ್ಟೆಗೆ ಪ್ರಯತ್ನಿಸುತ್ತಿರುವಾಗಲೂ ಮೂಲ್ಕಿ ಹೊಳೆಗೆ ಮುಂಡ್ಕೂರಲ್ಲಿ ಕಟ್ಟೆ ಒಂದನ್ನು 1945 ದಸಂಬರದಿಂದ ಈ ನಾಲ್ಕು ವರ್ಷದಲ್ಲಿ ಹಾಕುತ್ತಾ ಬರುತ್ತಿದೆ. ಇದರ ಪ್ರಯೋಜನವನ್ನು ಮೇ ಅಪ್ರೈಲ ತಿಂಗಳಲ್ಲಿ ಅಲ್ಲಿ ಹೋಗಿ ನೋಡಿದರೆ ಎಲ್ಲರಿಗೂ ತಿಳಿಯುವುದು. ಕಳೆದ ವರ್ಷ ಬೇರೆ ಕಡೆ ನೀರಿಲ್ಲದ ಸಮಯವಾದರೂ ಆ ಕಟ್ಟೆಯಲ್ಲಿ ನೀರು ತುಳುಕಾಡುತ್ತಿತ್ತು. ಸುಗ್ಗಿ, ಕೊಳಕೆ ಪೈರು ಹೆಚ್ಚು ವಂತೆ ಅನುಕೂಲ ಕೊಟ್ಟದ್ದಲ್ಲದೆ ದೂರದ ಬಾಗ್ಯಾತು, ನೇಜಿ ಹಾಕುವ ಸ್ಥಳಗಳಿಗೂ ತುಂಬ ಸಹಾಯ ಕೊಟ್ಟಿದೆ. ನೇಜಿ ಒಳ್ಳೇದಾಗುವುದರಿಂದ ಮುಂದಿನ ಬೆಳೆಗೆ ಸಹಾಯ ದೊರೆತಂತೆ ಇನ್ನೊಂದರಿಂದ ಸಹಾಯ ಸಿಗಲಾರದು. ಈ ತರದ ಕಟ್ಟೆಗಳನ್ನು ಹಾಕಲು ನವಂಬರ ದಸಂಬರ ತಿಂಗಳ ಮಾಯಿದೆ. ಸಮಯವು ಹೆಚ್ಚಿಗೆಯಿಲ್ಲ. ಸರಕಾರವು ಬೇಗನೆ ಎಚ್ಚರವಿಡಬೇಕು. ಮಲಬಾರು ಜಿಲ್ಲೆಯಲ್ಲಿ ಈ ರೀತಿಯ ಆಲೋಚನೆ ಇತ್ತೀಚೆಗೆ ಬಂದದೆಂದು ತಿಳಿದು ಬರುತ್ತದೆ. ನಮ್ಮ ಜಿಲ್ಲೆಯ ರಹಿತರು ಅವರವರ ಊರ ಅನುಕೂಲನೋಡಿ ಸರಕಾರಕ್ಕೆ ತಿಳಿಸಿ ಪ್ರಯೋಜನ ಪಡೆದು ಊರ ಹಿತಸಾಧಿಸುತ್ತಾ ತಮ್ಮ ಏಳಿಗೆಯನ್ನು ತಾವಾಗಿ ಮಾಡಿಕೊಳ್ಳಲು ಏಕೆ ಮುಂದೆ ಬರಬಾರದು?

ಇನ್ನೊಂದು ವಿಷಯ ಹೊಸಬೀಜ. ಕೊಯಮುತ್ತೂರು 2, 3, ಜಿ.ಬಿ. 24 ಈ ರೀತಿ ಕೆಲವು ಬೀಜಗಳಿವೆ. ಜಿ.ಬಿ. 24 ಬೇಗನೆ ಬೆಳೆಯತಕ್ಕದ್ದು ನೀರು ಕಡಿಮೆ ಸಾಕಾಗುವುದು. ಹೆಚ್ಚಿನ ಬೆಳೆಯನ್ನೂ ಕೊಡುವದು. ಕೊಯಮುತ್ತೂರು 2. 3 ನಮ್ಮ ಊರ ಬೀಜದ ಬೆಳೆಗಿಂತ 2, 3ರಷ್ಟು ಜಾಲು ಹೆಚ್ಚಿಗೆ ಬೆಳೆ ಕೊಡುವುದು. ಎಕ್ರೆ ಒಂದರ ಕನಿಷ್ಟ ಅಕ್ಕಿ ಮುಡಿ 6ರ ಜಾಸ್ತಿ ಬೆಳೆ ಲೆಖ್ಖ ಹಾಕಬಹುದಾಗಿದೆ. ಹೀಗಿದ್ದರೂ ತಿಳಿದ ಅನೇಕ ರಹಿತರು ಈ ಬೀಜಗಳ ಕುರಿತು ಗೊತ್ತಿಲ್ಲದೆ ಇರುತ್ತಾರೆಂಬುದು ತಪ್ಪಾಗದು. ಕೃಷಿ ಇಲಾಖೆಯವರೊಡನೆ ವಿಚಾರಿಸಿ ಎಲ್ಲಾ ರೈತರು ಇದನ್ನು ಉಪಯೋಗಿಸಲು ಪ್ರಯತ್ನಿಸುವುದು ಅತೀ ಉತ್ತಮ ಬೀಜಹಾಕಲು ಸಮಯವು ಬೇಗನೆ ಬರುತ್ತಿದೆ. ರೈತರೆಲ್ಲರೂ ಮನಸ್ಸುಕೊಡಬಾರದೇಕೆ? ಹಾಗೆಯೇ 3 ಮತ್ತು 1ನೇ ಬೆಳೆಗೆ ಹೆಚ್ಚಿಗೆ ಬೆಳೆಯನ್ನು ಕೊಡುವ ಬೀಜಗಳಿವೆ. ಸರಿ ತಿಳಕೊಳ್ಳದೆ ಯಾರೇನಾದರೂ ಹೇಳುವ ಮಾತುಗಳಿಗೆ ಕಿವಿಗೊಡದೆ ನಾವು ಪ್ರತಿಯೊಬ್ಬರೂ ಅವುಗಳನ್ನು ಪರೀಕ್ಷಿಸಿ ತಿಳಿಯುವುದೆಂದರೆ ಜಾಣತನ. ಎಲ್ಲವರೂ ತಿಳಿಯುವ ರೀತಿ ಇದೊಂದು ಲೆಖ್ಖವನ್ನು ಜಿಲ್ಲೆಯ ಮುಂದಿಡುವೆನು. ಮೂಲ್ಕಿ ಗ್ರಾಮಾಭಿವೃದ್ಧಿ ಕಾರ್ಯವು ಪ್ರಾರಂಭವಾದುದು 1945ರ ಫೆಬ್ರವರಿ ತಿಂಗಳಲ್ಲಿ. ಅದೇ ವರುಷ 1ನೇ ಬೆಳೆಗೂ 2, 3ನೇ ಬೆಳೆಗೂ ಕೂಡಿದ ಭತ್ತಿನ ಹೊಸ ಬೀಜವನ್ನು ಕೃಷಿ ಇಲಾಖೆಯು ಕೊಡುವಂತೆ ಯತ್ನವಿಟ್ಟೆವು. ಮುಂಡ್ಕೂರಲ್ಲಿ ದಸಂಬರ ತಿಂಗಳಲ್ಲಿ ಕಟ್ಟೆ ಹಾಕಿ ನೀರಿನ ಪ್ರಯೋಜನವನ್ನೂ ಮಾಡಿಕೊಂಡೆವು. ಮುಂಚಿನವರ್ಷ 1944-'95ರಲ್ಲಿ ನಮ್ಮ ಫಿರ್ಕದಿಂದ ಜಮೆಯಾದ ಅಕ್ಕಿ ಮುಡಿ 39000 1945-'46ರಲ್ಲಿ ಮಂಗಳೂರು ತಾಲೂಕಿನ ಎಲ್ಲಾ ಫಿರ್ಕಗಳಲ್ಲಿ ಕಾಲಸ್ಥಿತಿ ಒಳ್ಳೇದಿದ್ದ ಕಾರಣ ಶೇಕಡ 15ರಷ್ಟು ಜಾಸ್ತಿ ಜಮೆಯಾಗಿತ್ತು. ಹೀಗಾಗುವಲ್ಲಿ ನಾವು 45,000 ಮುಡಿ ಕೊಡಬೇಕಿದ್ದ ರೂ 54,000 ಮುಡಿ ಕೊಟ್ಟಿರುವೆವು. ನಾವು ಮಾಡಿದ ಕೆಲಸಗಳಿಂದ 9,000 ಮುಡಿ ಒಂದು ಫಿರ್ಕದಲ್ಲಿ ಜಾಸ್ತಿಯಾದುದಾದರೆ ನಮ್ಮ ಜಿಲ್ಲೆಯ ಇತರ ಫಿರ್ಕಗಳೂ ಕೆಲಸಕ್ಕಿಳಿದು ಪ್ರಯತ್ನಿಸಿದರೆ ನಮ್ಮ ಜಿಲ್ಲೆಯಲ್ಲಿ ಆಹಾರ ತುಟ್ಟಿಯು ತನ್ನಷ್ಟಕ್ಕೆ ಓಡಿಹೋಗದೇ? 9000 ಮುಡಿ ಎಲ್ಲವೂ ನಮ್ಮ ಕೆಲಸದ ಫಲವೆನ್ನುವುದಿಲ್ಲ. ಹೆಚ್ಚಿನ ಅಂಶವು ಅದರ ಫಲವೆನ್ನಲು ಅಡ್ಡಿಯಿಲ್ಲ. ಆನಂತರದ ವರ್ಷಗಳಲ್ಲಿ ಇನ್ನೂ ಹೆಚ್ಚಾಗಿರಬೇಕು. ರೈತರೆಲ್ಲರೂ ಎಚ್ಚತ್ತು ಇನ್ನೊಬ್ಬರನ್ನು ನೋಡುತ್ತಾ ಸಮಯ ಕಳೆಯದೆ ಮುಂದೆ ಬರಬಾರದೇಕೆ?

—ಎಮ್. ಆರ್. ಪ್ರೇಂಜ,
ಕಾರ್ಯದರ್ಶಿ
ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿ.

ದಿ. ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ಏಲಂ ನೋಟೀಸು.

ಬೇಂಕಿನ ಪರವಾಗಿ ಇದರ ಏಜಂಟ್ ಶ್ರೀ. ಎಚ್. ರಾಜೀವ ಸೆಟ್ಟಿಯು ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಾಣಿಸಿದ ವಿಜಯಾ ಬೇಂಕಿನಿಂದ ಬೈಂದೂರು ಕ್ಷಚೆಯಲ್ಲಿರುವ ಶ್ರೀ ಬಿ. ಶಂಕರನಾರಾಯಣ ಹೊಳ್ಳರು, ಜವುಳಿವ್ಯಾಪಾರಿ, ಬೈಂದೂರು, ಇವರು ಗೂಡ್ಸುಲೋನು ಮೇರೆಗೆ ಪಡೆದ ಕ್ಯಾವೇಜಿನ ಪೈಕಿ ಬಾಕಿಇರುವ ಕ್ಯಾವೇಜನ್ನು ವಸೂಲು ಕೊಡುವರೆ ರಿಜಿಸ್ಟ್ರಿನೋಟೀಸು ಮೂಲಕ ಕೇಳಿಕೊಂಡಾಗ್ಯೂ ಎಷ್ಟನ್ನಾದರೂ ವಸೂಲುಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದ್ರಿ ಲೋನಿನಲ್ಲಿ ಈಡಿಟ್ಟಿರುವ ಈ ಕೆಳಗೆ ನಮೂದಿಸಿದ ವ್ಹಾಲುಗಳನ್ನು ಬೇಂಕಿನ ಕಚೆಯಿಂದ ಇದೇ ಆಗೋಸ್ತು ತಿಂಗಳ ತಾ 19ನೇ ಶುಕ್ರವಾರ ಅಪರಾಹ್ನ ಗಂಟೆ 3ಕ್ಕೆ ಅಥವಾ ಬೇಂಕಿಗೆ ಯುಕ್ತತೋರುವ ಇತರ ದಿನಗಳಲ್ಲಿ ಪುನಃ ನೋಟೀಸುಕೊಡದೇನೆ ಬಹಿರಂಗವಾಗಿ ಹರಾಜು ಮಾಡಲಾದೀತು.

ಏಲಮಿನ ಶರ್ತಗಳು.

1) ಅತಿಹೆಚ್ಚಿನ ಮೊಬಲಗಿಗೆ ಯಾವಾತನು ವಾರಿಗ ನಿಲ್ಲುತ್ತಾನೋ ಅವನ ಹೆಸರಲ್ಲಿ ಮೂರು ವಾರಿನಿಂದ ಮಾರಾಟವು ಬೇಂಕಿಗೆ ಯುಕ್ತಕಂಡರೆ ಕಾಯಂ ಮಾಡೋಣಾಗುವುದು. ಏಲವನ್ನು ಕಾಯಂ ಮಾಡುವ ದಿವಸವನ್ನು ಮುಂದುವರಿಸುವ ಹಕ್ಕು ಸಂಪೂರ್ಣ ಬೇಂಕಿಗೆ ಇರುತ್ತದೆ. ಅಲ್ಲದೆ ಯುಕ್ತಕಂಡರೆ ಬೇಂಕಿನ ಕಡೆಯಿಂದಲೂ ಏಲಮಿನಲ್ಲಿ ಪಡೆಯುವರೆ ಸಂಪೂರ್ಣ ಹಕ್ಕಿರುತ್ತದೆ.

2) ಖರೀದಾಸ್ತುದಾರನು ತನ್ನ ಹೆಸರಲ್ಲಿ ಮಾರಾಟವಾದ ವ್ಹಾಲುಗಳ ಕ್ರಯದ ಸಂಪೂರ್ಣ ಕ್ಯಾವೇಜನ್ನು ಕೂಡಲೇ ಬೇಂಕಿನ ಕಡೆಯಿಂದ ಏಲಂ ಮಾಡುವ ಅಧಿಕಾರಸ್ಥರ ವಶಕೊಟ್ಟು ಪಾವ್ತಿಪಡೆದು ಏಲಮಿನಲ್ಲಿ ವಹಿಸಿಕೊಂಡ ವ್ಹಾಲುಗಳನ್ನು ಡೆಲಿವರಿ ಪಡೆಯತಕ್ಕದ್ದು. ಆ ಪ್ರಕಾರ ಕ್ಯಾವೇಜನ್ನು ಕೊಡಲು ತಪ್ಪಿದಲ್ಲಿ, ಖರೀದಾಸ್ತುದಾರನಿಗೆ ನೋಟೀಸು ಕೊಡದೇನೆ ಸದ್ರಿ ವ್ಹಾಲುಗಳನ್ನು ಪುನಃ ಏಲಂ ಮಾಡುವುದಲ್ಲದೆ ಆ ಸಂಬಂಧ ಏನಾದರೂ ನಷ್ಟಗಳು ಸಂಭವಿಸಿದಲ್ಲಿ ಅದಕ್ಕೆ ಅವನೇ ಸಂಪೂರ್ಣ ಜವಾಬುದಾರನಾಗಿರತಕ್ಕದ್ದು. ಅಲ್ಲದೆ ವ್ಹಾಲುಗಳ ಮೇಲೆ ಅವನಿಗೆ ಯಾವ ಅಧಿಕಾರವಾಗಲೀ ಪುನಃ ವಾರಿಗೆ ನಿಲ್ಲಲು ಹಕ್ಕಾಗಲೀ ಇರುವುದಿಲ್ಲ.

3) ಎಲ್ಲಾ ವ್ಹಾಲುಗಳ ಕುಂದುಕೊರತೆಗಳಿಗೂ ಖರೀದಾಸ್ತುದಾರನೇ ಬದ್ಧನಾಗಿರತಕ್ಕವನಲ್ಲದೆ ಬೇಂಕಿನವರು ಯಾವುದಕ್ಕೂ ಜವಾಬ್ದಾರರಲ್ಲ. ವ್ಹಾಲುಗಳನ್ನು ಬೇಂಕಿನ ವಠಾರದಲ್ಲಿ ಪರೀಕ್ಷಿಸಬಹುದು.

4) ಕೆಳಗೆ ಕಾಣಿಸಿರುವ ವ್ಹಾಲುಗಳ ಪೈಕಿ ಯುಕ್ತತೋರುವ ವ್ಹಾಲುಗಳ ಏಲವನ್ನು ಕಾರಣಕೊಡದೆ ನಿಲ್ಲಿಸಲಿಕ್ಕೂ ಬೇಂಕು ಸಂಪೂರ್ಣ ಅಧಿಕಾರ ಇಟ್ಟುಕೊಂಡಿದೆ.

5) ಆಗತ್ಯವೆಂತ ಕಂಡಲ್ಲಿ ಮುಂಚಿತವಾಗಿ ನೋಟೀಸು ಕೊಡದೇನೆ ವ್ಹಾಲುಗಳನ್ನು ಒಂದೇ ಲೋಟು ವ ಅನೇಕ ಲೋಟುಗಳಾಗಿಯಾಗಲೀ ಅಥವಾ ಪ್ರತ್ಯೇಕವಾಗಿಯಾಗಲೀ ಹರಾಜು ಮಾಡಲು ಬೇಂಕು ಸಂಪೂರ್ಣ ಅಧಿಕಾರ ಇಟ್ಟುಕೊಂಡಿದೆ.

ಲೋನು ನಂಬ್ರ	ವ್ಹಾಲಿನ ವಿವರ	ಮೊಬಲಗು	ರೂ	ಆ	ಪೈ	ಗೋಡಾವು
22/46-7	ಸೀರೆಗಳು ನಲವತ್ತೇಳು	Rupees nine hundred eight & as eight only	908	8	-	ಬೇಂಕಿನ ಆಫೀಸು

Office of the Vijaya Bank Ltd,
Byndoor
5-8-1949

H Rajeeva Shetty,
ಏಜಂಟ್.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕ, ಕುರಿಫಂಡು
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಸಸಿ ಸಪ್ತಾಹದ ಸಮಯದಲ್ಲಿ ಗಮನಿಸತಕ್ಕ ವಿಷಯ.

"ಸಸಿ ಸಪ್ತಾಹ" "ಹೆಚ್ಚು ಬೆಳೆ ಬೆಳೆಸಿರಿ" ಎಂಬ ಮಂತ್ರಗಳು ಈಗ ಘೋಷಿಸಲ್ಪಡುತ್ತಿವೆ. ತನ್ನಿಮಿತ್ತ ಬಡಬಗ್ಗರು ಈ ಕುರಿತು ಪಡೆಯುತ್ತಿರುವ ಒಂದು ಅನುಭವವನ್ನು ಇಲ್ಲಿ ಕೊಡಲೇ ಬೇಕಾಗಿದೆ. ಸಸಿಗಳು ನೆಡಲ್ಪಟ್ಟವು, ಬೆಳೆಗಳು ಬೆಳೆಸಲ್ಪಟ್ಟವು, ಬೇಲಿಗಳು ಹಾಕಲ್ಪಟ್ಟವು; ಆದರೆ ಹಾಕಿದ ಬೇಲಿ ಗೋಡೆಗಳು ಆಡುಗಳಿಗೆ ಈಡಲ್ಲ. ದೊಡ್ಡವರ ಬೇಲಿಗಳು ದೊಡ್ಡವಿದ್ದು ಭದ್ರವಾಗಿ ಇರಬಹುದು. ಕಾವಲಿಗೆ ಜನರನ್ನು ಇಟ್ಟಿರಲೂ ಬಹುದು. ಆದರೆ ಅಲ್ಪ ಸ್ವಲ್ಪ ನೆಡುವ ಬಡಬಗ್ಗರಿಗೆ ಹಾಕಿದ ಬೇಲಿಯು, ಮೊಗೆದ ನೀರಿನ ಖರ್ಚು ಹುಟ್ಟಬೇಕಷ್ಟೆ? ದಕ್ಷ್ಯಾನುಸಾರ ಹಾಕಿದ ದುರ್ಬಲಬೇಲಿ ನೆರೆಮನೆಯವರ ಆಡು ದನಗಳನ್ನು ತಡೆಯುವಂತಿಲ್ಲ. ಕಳೆದ ವರ್ಷ ನೆಡಿಸಿದ ಸಸಿಗಳು ಮಾಯವಾಗಿ ಹೊಂಡಗಳು ಹೊಸ ಸಪ್ತಾಹವನ್ನು ಕಾದುಕೊಂಡಿರುದು ಅಲ್ಲಲ್ಲಿ ಕಾಣಸಿಗಬಹುದಾದ ವಿಷಯ.

ಹೀಗೆ ಮುಂದಂದರೆ ಬಡಜನರ ಪಾಡೇನು? ಸಸಿನೆಟ್ಟು ಫಲವೇನು? ಎಂಬ ಪ್ರಶ್ನೆಗಳು ಏಳುವದು ಸಹಜ. ಸಪ್ತಾಹದಲ್ಲಿ ಸಸಿನೆಟ್ಟರೆ ನೆಟ್ಟ ಬೆನ್ನಲ್ಲೇ 'ಆಡುಗಳ ಬಾಯಿಗೆ ಆಹಾರವಾಗಿ' ಅದು ಮುಗಿದು ಹೋದರೆ 'ಅಧಿಕಾಹಾರ' ಬೆಳೆಸಿ ದಂತಾಗದೆಂದು ಪ್ರತ್ಯೇಕ ಹೇಳಬೇಕಿಲ್ಲವಷ್ಟೆ? ಸಸಿ ಸಪ್ತಾಹದ ರಾಷ್ಟ್ರವಕ್ತ ಕಾರ್ಯಕೈಕೊಂಡವರು ಈ ಕಡೆಗೆ ಸಾಕಷ್ಟು ಗಮನ ಕೊಟ್ಟಂತಿಲ್ಲ. ಸ್ವತಃ ಕೃಷಿ ಮಾಡುತ್ತಿರುವವರಿಗೆ ನಿತ್ಯವೂ ಅನುಭವವಾಗುತ್ತಿರುವ ಸಂಗತಿಯಿದು. ಆದ್ದರಿಂದ ಮುಖ್ಯವಾಗಿ ಆಡುಗಳನ್ನು ಹೊರಗೆ ಬಿಡುವ ಕುರಿತು ಕಠಿಣ ನಿರ್ಬಂಧ ಬರಬೇಕಾದುದು ಅಗತ್ಯ. ದನ, ಎಮ್ಮೆ ವರ್ಗದ ಜಾನುವಾರುಗಳ ಸ್ವೇಚ್ಛಾಸಂಚಾರಕ್ಕೂ ಈಗಿರುವುದಕ್ಕಿಂತ ಹೆಚ್ಚಿನ ನಿಯಂತ್ರಣ ಬೀಳಬೇಕು. ಅಧಿಕಾರಿಗಳು ಈ ವರುಷದ ಸಪ್ತಾಹದಲ್ಲಿ ಇದನ್ನು ತಮ್ಮ 'ಅಧಿಕಾಹಾರ' ಬೆಳೆಸುವ ಯೋಜನೆಯ ಒಂದು ಅಂಗವಾಗಿ ಜಾರಿಗೆ ತರಬೇಕು. ಸಸಿಗಳನ್ನು ನೆಡುವುದಕ್ಕಿಂತಲೂ ಅವುಗಳನ್ನು ಜೋಪಾಸನೆ ಮಾಡುವುದು ಮುಖ್ಯವಿದೆ. ಇಂದಿನ ಅಧಿಕೋತ್ಪತ್ತಿ ಯೋಜನೆಯಂತೆ ಈ ಕಡೆಗೆ ಸಂಬಂಧಪಟ್ಟವರೆಲ್ಲರೂ ಸರಿಯಾದ ಲಕ್ಷ್ಯಕೊಡುವರೆಂದು ಬಡ ಬೇಸಾಯಗಾರರು ನಿರೀಕ್ಷಿಸುತಿದ್ದಾರೆ.

ಯಸ್. ಬಿ. ಯಸ್.

ಕುರುಕಾಲು ಗ್ರಾಮದ ಸಭೆಗಳು

ತಾ 30-7-49ರಲ್ಲಿ ಕುಂಜಾರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕುರುಕಾಲು ಪಂಚಾಯತ ಬೋರ್ಡು, ಗ್ರಾಮಾಭಿವೃದ್ಧಿ ಸಂಘ, ಕೋಪರೇಟಿವ್ ಸೊಸೈಟಿ ಈ ಮೂರು ಸಂಸ್ಥೆಗಳ ಸಭೆಗಳು ಅನುಕ್ರಮವಾಗಿ ಸದ್ರಿ ಸಂಸ್ಥೆಗಳ ಪ್ರೆಸಿಡೆಂಟ್ ಶ್ರೀ ಕುರುಕಾಲು ಗಣಪಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿ ಗ್ರಾಮಾಭಿವೃದ್ಧಿಯ ಕುರಿತು ಹಲವು ಪ್ರಾಮುಖ್ಯ ನಿರ್ಣಯಗಳಾದ ಬಳಿಕ, ಹೊಸತಾಗಿ ಕಟ್ಟಿಸಲಿಕ್ಕಿರುವ ಸೊಸೈಟಿ ಕಟ್ಟೋಣದ ಬಗ್ಗೆ ನೆರೆದ ಸಭೆಯಲ್ಲಿ ರೂಪಾಯಿ 700 ವಾಗ್ದಾನವಾಯಿತು. ಈ ಸಭೆಗಳಿಗೆ ಬಂದಿದ್ದ ಉಡುಪಿ ರೂರಲ್ ವೆಲ್‌ಫೇರ್ ಆಫೀಸರ್ ಶ್ರೀ. ಕಣ್ಣನ್ ನಾಯರರ ಹಸ್ತದಿಂದ ಮೇಲ್ಕಂಡ ಸಂಸ್ಥೆಗಳ ಲೈಬ್ರೆರಿ ಪುಸ್ತಕಗಳ ಉದ್ಘಾಟನೆಯು ಜರಗಿತು. ಸಸಿ ಸಪ್ತಾಹವನ್ನು ಉತ್ತಮ ರೀತಿಯಲ್ಲಿ ಆಚರಿಸುವ ಕಾರ್ಯಕಲಾಪಗಳ ರಚನೆಯ ಬಗ್ಗೆ ತಾ 7-8-49 ಕ್ಕೆ ಪುನಹ ಗ್ರಾಮಸ್ಥರ ಸಭೆಯು ಜರಗಬೇಕಾಗಿ ನಿರ್ಣಯಿಸಿ ಅಂದಿನ ಸಭೆಯು ಕೊನೆಗೊಂಡಿತು. ತಾ 7-8-49ರಲ್ಲಿ ಗ್ರಾಮಸ್ಥರ ಸಭೆಯು, ಉಡುಪಿ ಸೌತ್ ರೇಂಜ್ ಶಾಲೆಗಳ ಡಿಪ್ಟಿ ಇನ್ಸ್‌ಪೆಕ್ಟರರಾದ ಮಿಸ್ಸೆಸ್ ಯಲ್. ಡಿ. ಸೋಜ, ಯಮ್. ಎ. ಯಲ್. ಟಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕುರುಕಾಲು ಗಣಪಯ್ಯ ಸೆಟ್ರು ಸಸಿ ಸಪ್ತಾಹದ ಕುರಿತು, ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರಿಂದಲೂ, ಉಡುಪಿತಾಲೂಕು ತಹಶೀಲ್ದಾರರಿಂದಲೂ ಬಂದ ಸರ್ಕಲರುಗಳನ್ನು ಓದಿ ಹೇಳಿದ ಬಳಿಕ ಶ್ರೀಮತಿ ಅಧ್ಯಕ್ಷೆಯವರು ತಮ್ಮ ಭಾಷಣದಲ್ಲಿ ಸಪ್ತಾಹದ ದಿನಗಳಲ್ಲಿ ಜನತೆಯು ಖಡ್ಡಾಯವಾಗಿ ಫಲಗಿಡಗಳನ್ನು ನೆಡುವಂತೆ ಅಮೂಲ್ಯ ಸಲಹೆಗಳನ್ನೀಯಲು ಸಭೆಯಲ್ಲಿ ಗ್ರಾಮದ ಪ್ರತಿಮನೆಯವರೂ ಖಡ್ಡಾಯವಾಗಿ ಕೊನೆಯ ಪಕ್ಷ 10ಕ್ಕೆ ಮಿಕ್ಕಿ ಫಲಗಿಡಗಳನ್ನು ನೆಡಬೇಕಾಗಿ ವಗೈರೆ ಕಾರ್ಯಕ್ರಮಗಳನ್ನು ರಚಿಸಿದ್ದಲ್ಲದೆ ತಾ 15-8-49ನೇ ಬೆಳಿಗ್ಗೆ ಅತಿ ವಿಜೃಂಭಣೆಯಿಂದ ಸಸಿ ಮೆರವಣಿಗೆಯಾಗಿ ಘಂಟೆ 12ಕ್ಕೆ ಕುಂಜಾರು ಶಾಲಾ ವಠಾರದಲ್ಲಿ ಸಾರ್ವಜನಿಕ ಸಭೆಯು ಜರಗಬೇಕೆಂದು ನಿರ್ಣಯಿಸಲಾಯಿತು.

ನಂದಿಕೂರು

ನಂದಿಕೂರು ಗ್ರಾಮದ ಬೈಲುಮನೆ, ವಾಸು ಸೆಟ್ರ ಮನೆಯ ಶಂಭು ಸೆಟ್ಟಿ ಎಂಬ, ಫಲಿಮಾರು ಬೋರ್ಡು ಎಲಿಮೆಂಟರಿ ಶಾಲೆಗೆ ಹೋಗುವ ಹುಡುಗನು, ತಾ 3-8-49ರಂದು ಸಂಜೆ ಶಾಲೆಯಿಂದ ಮನೆಗೆ ಬರುವಾಗ, ನಂದಿಕೂರು ತೋಡಿನಲ್ಲಿ Foot Bridge(ಪಾಪು) ದಾಟುವಾಗ, ಕಾಲುಜಾರಿ ನೆರೆನೀರಿಗೆ ಬಿದ್ದಿರುವನೆಂದೂ, ಇದುವರೆಗೂ (5-8-49) ಹೆಣವು ಸಿಕ್ಕಲಿಲ್ಲವೆಂದೂ ನಂದಿಕೂರು ಪಟೇಲರು ಪೋಲೀಸಿಗೆ ತಿಳಿಸಿರುತ್ತಾರೆಂದು ತಿಳಿದು ಬರುತ್ತದೆ.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 255/49.

ವಾದಿ:— ಕುಪ್ಪಯ್ಯ ಶೆಟ್ಟಿ ಕೂಡಾ.

ಪ್ರತಿವಾದಿರು— ವೆಂಕಮ್ಮ ಶೆಡ್ತಿ ಕೂಡಾ.

ಕುಂದಾಪುರ ತಾಲ್ಲೂಕು ಕುರ್ಕುಂಜೆ ಗ್ರಾಮದ ಹೆಜ್ಜಾಡಿ ತೋಟದ ಮನೆಯಲ್ಲಿರುವ ಶೇಸಿ ಶೆಡ್ತಿ ಮಗ ನಾಗಯ್ಯ ಶೆಟ್ಟಿ (3ನೇ ಪ್ರತಿವಾದಿ) ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪ್ರತಿವಾದಿರು ವಾದಿರಿಗೆ ತಾ. 7-2-45ರಲ್ಲಿ ಡಿ. ಪಿ. ಬರಕೊಟ್ಟ ಈಡಿನ ಬಾಬ್ತು ಪಾರ್ಥಿವ, ವ್ಯಯ, ಸರ್ವಜಿತು ಮತ್ತು ಸರ್ವಧಾರಿ ಸಂವತ್ಸರಗಳ ಬಡ್ಡಿಯನ್ನು ಪ್ರತಿವಾದಿರು ಬಾಕಿ ಮಾಡಿಕೊಂಡ ಸಂಬಂಧ ಅದನ್ನು ಬರಮಾಡಿಕೊಳ್ಳುವ ಬಗ್ಗೆ ವಾದಿರು ಜರಗಿಸಿದ ಮೇಲಣ ದಾವೆ ತಾರೀಕು 19-8-49ಕ್ಕೆ ತನ್ನಿಗೆ ಇಡೋಣಾಗಿದೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟಿನಮುಂದೆ ಹಾಜರು ಮಾಡಿಕೊಳ್ಳತಕ್ಕದ್ದು.

(By order of the Court)

A. N. Rao.

Advocate for Plaintiff.

ಕುಂದಾಪುರ, 4-8-49.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 291/1949

ವಾದಿ— ರಾಮ ಪೂಜಾರಿ.

ಪ್ರತಿವಾದಿರು— 1 ಮೈದಿನ್ ಸಾಹೇಬ.

2 ಯಾಕೂಬ್ ಸಾಹೇಬ.

ಕುಂದಾಪುರ ಕಸ್ಬಾ ಕೋಡಿಯಲ್ಲಿರುವ ಕೋಟಿ ಇದ್ರಿ ಸಾಹೇಬರ ಮಕ್ಕಳು, ಮೈದಿನ್ ಸಾಹೇಬು, ಯಾಕೂಬ್ ಸಾಹೇಬು, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪ್ರತಿವಾದಿರು ವಾದಿಯಿಂದ ಕೈಗಡ ಪಡೆದ ಹಣ ಬಡ್ಡಿ ಕೂಡಾ ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ. 19-8-1949ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸುತ್ತದೆ.

N S Parameshwaraih,

Advocate for Plff

Coondapoor
Date 1-8-49

ಖಾತ್ರಿಯಾದ ಉತ್ತಮ ತರದ

ಕಸಿ ಗಿಡಗಳ ನಿಮ್ಮ ಪೂರೈಕೆಗಾಗಿ ನಮ್ಮನ್ನು ವಿಚಾರಿಸಿರಿ

ಮಾವು, ಚಿಕ್ಕು, ದಾಳಿಂಬ, ಪೇರಳೆ, ಅಂಜೂರ, ಕಿತ್ತಳೆ, ಲಿಂಬೆ ಮುಂತಾದ ಫಲ ಗಿಡಗಳೂ,

ಗುಲಾಬಿ, ಸಂಪಿಗೆ, ಮಲ್ಲಿಗೆ ಮುಂತಾದ ಹೂವಿನ ಗಿಡಗಳೂ ಸದಾ ಸಿದ್ಧವಾಗಿವೆ.

ಫಲಪುಷ್ಪಗಳ ತೋಟದ ನಿರ್ಮಾಣದ ಕಂಟ್ರ್ಯಾಕ್ಟನ್ನೂ ಗ್ಯಾರಂಟಿ ಸಹಿತ ವಹಿಸಿಕೊಳ್ಳುವೆವು.

ಎಸ್. ಬಿ. ಎಸ್. ನರ್ಸರಿ ಗಾರ್ಡನ್ಸ್,

ಪ್ರೊ: ಎಸ್. ಬಿ. ಸೋನ್ಸ್. ಪೋಸ್ಟ್: ಉಚ್ಚಿಲ, ದ. ಕ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ದರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ.

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.

(Established: 1934)

Chairman: r. M. C. T. M Chidambarm Chettyar.

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
MADRAS

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ' ಕಾಸರಗೋಡು.

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷನರಿಗಳು

ದೊರೆಯುತ್ತವೆ.

ಬೆಲೆ. ರೂ. 4 8 0

ಸಿರಿಗನ್ನಡ ಅರ್ಥಕೋಶ 4 8 0

ನವಯುಗ ಪ್ರೆಸ್, ಉಡುಪಿ.

ಅಥವಾ

ನವಯುಗ ಆಫೀಸು, ಉಡುಪಿ.

ಆಹಾರದ ಕೊರತೆಯನ್ನು ಹೋಗಲಾಡಿಸುವುದೆಂತು?

ಆಹಾರದ ಕೊರತೆಯನ್ನು ಹೋಗಲಾಡಿಸುವುದೆಂತು? ಎಂಬುದೇ ನಮ್ಮ ಇಂದಿನ ಪ್ರಾಮುಖ್ಯ ಪ್ರಶ್ನೆ. ಆಹಾರದ ಆಯಾತಕ್ಕಾಗಿ ಕೋಟಿಗಟ್ಟಲೆ ಹಣವು ಇಂದು ವಿದೇಶಗಳಲ್ಲಿ ಸುರಿಯಲ್ಪಡುತ್ತಿದೆ. ಆದರೂ ನಮಗೆ ಬೇಕಷ್ಟು ಆಹಾರ ದೊರೆಯುವುದಿಲ್ಲ. ನಾವು ಪರದೇಶದ ಆಯಾತಗಳ ಮೇಲೆಯೇ ಅವಲಂಬಿಸಿದರೆ, ಆಹಾರೋತ್ಪಾದನೆಯನ್ನು ಹೆಚ್ಚಿಸಬಲ್ಲ ಯೋಜನೆಗಳಾವುವೂ ಕೈಗೂಡುವಂತಿಲ್ಲ. ಆದುದರಿಂದ ಆದಷ್ಟು ಬೇಗನೆ ನಾವು ಸ್ವಾವಲಂಬಿಗಳಾಗಬೇಕು. ಪ್ರತಿಯೊಬ್ಬನೂ ಈ ರಾಷ್ಟ್ರೀಯ ಕಾರ್ಯದಲ್ಲಿ ಸಹಕರಿಸಬೇಕಾದ ಕಾಲವೀಗ ಬಂದೊದಗಿದೆ. 'ಹೆಚ್ಚು ಬೆಳೆಸಿರಿ' ಮತ್ತು 'ಹಾಳುಮಾಡದಿರಿ' ಎಂಬುದೇ ಇಂದಿನ ಬೀಜ ಮಂತ್ರವಾಗಬೇಕು.

ಈಗ ಉತ್ಪಾದನೆಯಾಗುವ ಸ್ಥಳಗಳನ್ನೆ ಹೆಚ್ಚು ಫಲವತ್ತಾಗಿ ಮಾಡುವುದು ಮತ್ತು ಹೆಚ್ಚು ಸ್ಥಳಗಳನ್ನು ಬೇಸಾಯ ಯೋಗ್ಯವಾಗಿ ಮಾರ್ಪಡಿಸುವುದು ಈ ಎರಡು ದಾರಿಗಳಿಂದ ನಾವು ಆಹಾರದ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಬಹುದು.

ಉತ್ತಮವಾದ ಗೊಬ್ಬರ, ಶ್ರೇಷ್ಠ ತರಗತಿಯ ಬೀಜ, ಒಂದು ಅಥವಾ ಎರಡು ಬೆಳೆ ಬೆಳೆಯುವಲ್ಲಿ ಮೂರು ಅಥವಾ ನಾಲ್ಕು ಬೆಳೆ ಬೆಳೆಸುವುದು—ಈ ಉಪಾಯಗಳಿಂದ ಇದ್ದ ಸ್ಥಳಗಳಲ್ಲಿ ನಾವು ಹೆಚ್ಚು ಉತ್ಪಾದನೆಯನ್ನೆತ್ತಬಹುದು.

ಕುಮ್ಕಿ ಮತ್ತು ಪಟ್ಟಿ ಸ್ಥಳಗಳಲ್ಲಿ ಕೃಷಿಗೆ ಯೋಗ್ಯವಾದ ವಿಶಾಲ ಸ್ಥಳಗಳಿವೆ. ಹೆಚ್ಚಿನ ಪ್ರಯಾಸವಿಲ್ಲದೆ ಗೆಣಸು, ಮರಗೆಣಸು, ಫಲಗಿಡ ಇತ್ಯಾದಿಗಳನ್ನು ಬೆಳೆಸಬಹುದು. ಹೀಗೆ

ದ. ಕ. ಜಿಲ್ಲಾ ಕಲೆಕ್ಟರರ ಮನವಿ

ಯೇ ಸರಕಾರದ ವಶವಿರುವ ವಿಶಾಲ ಪ್ರದೇಶಗಳೂ ಆಹಾರ ಪದಾರ್ಥಗಳನ್ನು ಬೆಳೆಸಲು ದೊರೆಯುವುವು.

ಇನ್ನು ಆಹಾರ ಪದಾರ್ಥದ ದುರುಪಯೋಗವಾಗದಂತೆ ನೋಡಿಕೊಳ್ಳುವುದೂ ದೊಡ್ಡ ಕರ್ತವ್ಯವೇ ಆಗಿದೆ. ಮದುವೆ, ಹಬ್ಬಗಳಲ್ಲಿ ಆಹಾರದ ದುವ್ಯಯವು ಮಿತಿಮೀರಿ ನಡೆಯುತ್ತಿದೆ. ಉತ್ಸವಗಳು ರಾಷ್ಟ್ರೀಯ ಗೌರವದ ದ್ಯೋತಕಗಳಾದರೂ ದುವ್ಯಯವು ಈಗ ಅರಾಷ್ಟ್ರೀಯವೇ ಆಗಿದೆ. ಇದನ್ನು ತಡೆಯಲೇ ಬೇಕು.

ಸರಕಾರದ ಸಹಾಯಗಳು

ಹಲವಾರು ಚಿಕ್ಕ ಮತ್ತು ದೊಡ್ಡ ನೀರಾವರಿ ಯೋಜನೆಗಳನ್ನು ಸರಕಾರವು ಕೈಕೊಂಡಿದೆ. ಇವು ಕಾರ್ಯರೂಪಕ್ಕೆ ಬರಲು ಕೆಲವು ವರ್ಷಬೇಕು. ಆ ತನಕ ನಾವು ಕಾಯಲು ಸಾಧ್ಯವಿಲ್ಲ. 1951 ರೊಳಗಾಗಿ ನಮಗೆ ಬೇಕಾದುದನ್ನು ನಾವು ಬೆಳೆಸಿಕೊಳ್ಳಲೇ ಬೇಕು.

ಬಾವಿ ತೋಡಿಸುವ ಯೋಜನೆಯೊಂದನ್ನು ಸರಕಾರವು ಜಾರಿಗೆ ತಂದಿದೆ. ನಮ್ಮ ಜಿಲ್ಲೆಯ ಆಹಾರ ಬೆಳೆಯ ವೃದ್ಧೀಕರಣಕ್ಕೆ ಇದು ತುಂಬ ಸಹಾಯಕಾರಿಯಾಗಿದೆ. ಹೆಚ್ಚು ಜನರು ಇದರ ಉಪಯೋಗವನ್ನು ಪಡೆಯಬೇಕೆಂದು ವಿನಂತಿಸುವೆನು.

ಕೇವಲ 3½ ದರದ ಬಡ್ಡಿಯಲ್ಲಿ ಸಾಗುವಳಿ ಭೂಮಿಯ ಸುಧಾರಣೆಗಾಗಿ ಮತ್ತು ಬೇಸಾಯಕ್ಕಾಗಿ ರೈತರಿಗೆ ಸರಕಾರದಿಂದ ಸಾಲ ದೊರೆಯುತ್ತಿದೆ. ಇದರ ಉಪಯೋಗವನ್ನು ರೈತರು ಹೆಚ್ಚಾಗಿ ಪಡೆದು ಉತ್ಪಾದನೆಯನ್ನು ಹೆಚ್ಚಿಸಬೇಕು.

ಹೀಗೆಯೇ ಬಂಜರು ಭೂಮಿಯನ್ನು ಬೇಸಾಯಕ್ಕಾಗಿ ಪಡಕೊಳ್ಳುವ ಅನುಕೂಲತೆಗಳಿವೆ. ಕೇವಲ ಲ್ಯಾಸೆನ್ಸನ್ನು ಪಡಕೊಂಡು ಪರಂಬೋಕು ಸ್ಥಳಗಳಲ್ಲಿಯೂ ಹಣ್ಣುಹಂಪಲು ಗಿಡಗಳನ್ನು ಬೆಳೆಸುವ ಅನುಕೂಲತೆ ಇದೆ.

ಹೀಗೆಯೇ ಉತ್ತಮವಾದ ಗೊಬ್ಬರ ಹಾಗೂ ಕೃಷಿ ಸಾಧನಗಳನ್ನು ವಿಕ್ರಯಿಸಲು ಅಲ್ಲಲ್ಲಿ ಡಿಪೋಗಳನ್ನು ತೆರೆಯಲಾಗಿದೆ. ಅಲ್ಲಿ ಕಡಿಮೆ ಬೆಲೆಗೆ ಉತ್ತಮ ಬೀಜಗಳೂ ಸಿಗುವುವು. ಬಂಜರು ಪ್ರದೇಶಗಳನ್ನು ಉತ್ತುಕೊಡುವ 'ಟ್ರ್ಯಾಕ್ಟರು'ಗಳಿವೆ. ಇವೆಲ್ಲವುಗಳ ಉಪಯೋಗವನ್ನು ವೈಯಕ್ತಿಕ ಹಾಗೂ ಸಾಮೂಹಿಕ ಹಿತಕ್ಕಾಗಿ ಕೃಷಿಕರು ಪಡೆಯಬೇಕೆಂದು ವಿನಂತಿಸಿಕೊಳ್ಳುವೆನು.

ಪಟ್ಟಣಿಗರು

ಆಹಾರೋತ್ಪಾದನೆಯ ಹೆಚ್ಚಳದಲ್ಲಿ ಹಳ್ಳಿಗರಂತೆ ಪಟ್ಟಣ ವಾಸಿಗಳ ಕರ್ತವ್ಯವೂ ಇದೆ. ಮನೆಮುಂದೆ ಚಿಕ್ಕ ಕೈತೋಟಗಳಿಲ್ಲವೇ? ಅವುಗಳನ್ನು ಖಾಲಿಬಿಡಬೇಡಿರಿ. ತರಕಾರಿಗಳಿಂದ ಹಸುರಾಗಿ ಕಂಗೊಳಿಸಲಿ. ಸೆಗಣಿಯನ್ನು ಉರುವಲಾಗಿ ಉಪಯೋಗಿಸದೆ ನೈಸರ್ಗಿಕವಾದ ಈ ಗೊಬ್ಬರವನ್ನು ಬುಡಕ್ಕೆ ಹಾಕಿರಿ.

ಅಧಿಕಾರಿಗಳು

ಆಹಾರದ ಸಮರದಲ್ಲಿ ಅಧಿಕಾರಿ ವರ್ಗವು ನಿರ್ವಹಿಸತಕ್ಕ ಹೊಣೆಯು ಚಿಕ್ಕದೇನೂ ಅಲ್ಲ. ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಬೇಕು. ಆಹಾರದ ಬೆಳೆಯ ಹೆಚ್ಚಳಕ್ಕೆ ಸರ್ವ ವಿಧದಿಂದಲೂ ಬೆಂಬಲ ಕೊಡಬೇಕು. ಅವರ ಅಸಡ್ಡೆಯು ರಾಷ್ಟ್ರಘಾತಕವಾಗಿ ಪರಿಗಣಿಸಲಾಗುವುದು. ಆದುದರಿಂದ ಆಹಾರೋತ್ಪಾದನೆಯ ಈ ಪವಿತ್ರ ಕಾರ್ಯದಲ್ಲಿ ಸಕಲರೂ ಶಕ್ತಿಮೀರಿ ಸಹಕರಿಸುವರೆಂದು ನಂಬಿದ್ದೇನೆ.

The Canara Banking Corporation Limited, Udipi.

ಸ್ಥಿರಾಸ್ತಿ ಯೇಲಂ ನೋಟೀಸು

ಬೇಂಕಿನವರು ಕೋರ್ಟು ಯೇಲಂನಲ್ಲಿ ಪರಬಾಸ್ತಿಗೆ ಪಡದು ಡಿಲಿವರಿ ಹೊಂದಿ ಸ್ವಾಧೀನಪಡಿಸಿ ಬರುವ, ಉಡ್ಪಿ ಬಡಗಪೇಟೆ ಕಲ್ಸಂಕದ ರಸ್ತೆಯ ಬದಿಯಲ್ಲಿ, ಕಲ್ಸಂಕದ ಸಮೀಪವಿರುವ ತಕ್ಕಪ್ರೋಷಿ ಪಂಚು ಜಾವಣಿಯ ಅಂಗಡಿ ಕಟ್ಟೋಣ, ಇದ್ರ ಹಿಂಬದಿ ಸ್ಥಳ ಮತ್ತು ಗೋಡೌನ್ ಕೋಣೆ] ಕೂಡಾ ಲೋಟು [ಮತ್ತು ಉಡ್ಪಿ ಸಾರಸ್ವತ ದೇವಸ್ಥಾನದ ರಸ್ತೆಯ ಬದಿಯಲ್ಲಿ ಕಲ್ಸಂಕದ ಸಮೀಪವಿರುವ ತೋಟ ಸ್ಥಳ, ತೆಂಗಿನ ವಗೈರೆ ಮರಮಟ್ಟುಗಳು ಬಾವಿ, ಕಟ್ಟಡಗಳು ಕೂಡಾ ಲೋಟು II. ಈ ಮೇರೆಗಿನ ಸ್ಥಿರಾಸ್ತಿ ವಗೈರೆಯನ್ನು ಎರಡು ಲೋಟುಗಳಾಗಿ ತಾರೀಕು 23-8-1949ನೇ ದಿನ ಹಗಲು 11 ಗಂಟೆಗೆ ಬೇಂಕಿನ ಉಡ್ಪಿ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ವಿಕ್ರಯಿಸಲ್ಪಡುವದು. ಯೇಲಂನ ಶರ್ತಗಳನ್ನೂ, ಬೇಂಕಿನ ಸ್ವಾಧೀನವಿರುವ ಸಂಮ್ಮಂಧಪಟ್ಟ ರಿಕಾರ್ಡುಗಳನ್ನೂ ಬೇಂಕಿನ ಆಫೀಸಿನಲ್ಲಿ ಆಫೀಸು ಸಮಯದಲ್ಲಿ (11 ಗಂಟೆಯಿಂದ 3 ಗಂಟೆ ವರೆಗೆ) ಬಂದು ನೋಡಬಹುದು. ಸ್ಥಳ ಕಟ್ಟೋಣ ವಗೈರೆ ನೋಡಲಪೇಕ್ಷಿಸುವವರೀಗೆ ತೋರಿಸಿಕೊಡಲಾಗುವದು. ಎಂಬ ಸಂಗ್ತಿ ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗಿಯದೆ.

Office of the Bank, } Dated 5-8-1949.

V. R. Kamath, B.A.L L B. Genaral Manager.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar, *Vaidya*

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 327/1949.

ವಾದಿ—ಭಾಗೀರಥಿ ಅಮ್ಮ.

ಪ್ರತಿವಾದಿರು—ಚಂದಮ್ಮ ಶೆಡ್ತಿ ಕೂಡಾ.

ಪ್ರತಿವಾದಿರು—1. ಚಂದಮ್ಮ ಶೆಡ್ತಿ, ವಕ್ವಾಡಿ ಪುರಾಣ ಬೈಲುಮನೆ ಅಂಣಪ್ಪ ಸೆಟ್ರ ಮಗಳು.

2. ಅಂಣಪ್ಪ ಸೆಟ್ಟಿ, 3. ಬೊಮ್ಮ ಸೆಟ್ಟಿ, 1ನೇ ಪ್ರತಿವಾದಿ ಚಂದಮ್ಮ ಶೆಡ್ತಿ ಮಕ್ಕಳು, ಕುಂದಾಪುರ ತಾಲ್ಲೂಕು ಮುಚ್ಚಟ್ಟಿನಲ್ಲಿರುವವರು. Post Siddapur. ಇವರೀಗೆ—

ವಾದಿಳಿಗೆ ಪ್ರತಿವಾದಿರು ತಾರೀಕು 30-4-1996ರಲ್ಲು ಬರಕೊಟ್ಟ ರೂಪಾಯಿ 100-0-0ರ ಡಿಮಾಂಡ ನೋಟಿನ ಪ್ರಕಾರ ಬರ ಹಣಗಳ ಬಗ್ಗೆ ವಾದಿಳು ಸದ್ರಿ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಪ್ರುದಾಪರಣೆ ಇದ್ದಲ್ಲಿ ತಾರೀಕು 22-8-1949ನೇ ದಿವಸ ಹಗಲು 11 ಗಂಟೆಗೆ ಯೀ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು, ಎಂಬ ಸಂಗ್ತಿ ಕೋರ್ಟ ಹುಕುಂಪ್ರಕಾರ ಯೀ ಮೂಲ್ಕ ತಿಳಿಸೋಣಾಗುತ್ತದೆ.

K. Raghunatha Shenai,
Pleader for Plaintiff.
Coondapoor, 25-7-1949.

ಶಯ್ಯಾಗೃಹದ ಫೋಟೋಗಳು

(ಅಪ್ರಾಯಸ್ಥರಿಗೆ ವಿಕ್ರಯಿಸೋಣಾಗಲಿಕ್ಕಿಲ್ಲ)

ಶಯ್ಯಾಗೃಹದ ದೃಶ್ಯ, ಸೌಂದರ್ಯಾದಿಗಳನ್ನು ನೋಡಲಪೇಕ್ಷಿಸುವಿರಾದರೆ ಇಂದೇ ಆರ್ಡರು ಕೊಡಿರಿ 50 ಫೋಟೋಗಳ ಸೆಟ್ಟಿನ ಬೆಲೆ ರೂಪಾಯಿ 6/- ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲೆ.

V. P. Store [N. U.]
Post Box 51, Meerut, U. P.

ಮೂಲ್ಕಿ ಯೂನಿಯನ್ ಕ್ಲಬ್ಬಿನ ಹೊಸ ಧೋರಣೆ

ಇಲ್ಲಿ ಈಗ ಹೊಸ ಕಾರ್ಯದರ್ಶಿಯರ ದಕ್ಷತೆಯಲ್ಲಿ ಮೇಲಿನ ಕ್ಲಬ್ ನಡೆಯುತ್ತಿದೆಯಷ್ಟೆ. ಇಲ್ಲಿನ ಈಗಿನ ಕ್ರಮ ನಿಬಂಧನೆಗಳು ಬಹಳ ಬದಲಾಗಿವೆ. ಮೊದಲು ಶಾಲಾ ಮಕ್ಕಳಿಗೆ ಧರ್ಮಾರ್ಥವಾಗಿ ವೃತ್ತ ಪತ್ರಿಕೆಗಳು ದೊರೆಯುತ್ತಿದ್ದುವು. ಈಗ ಅವು ದೊರೆಯುವದಿಲ್ಲ. ಕಾರಣ ಕ್ಲಬ್ ಆಫೀಸಿನಂತೆ ಕ್ರಮ ಪ್ರಕಾರವಾಗಿ ಮೆಂಬರರ ಸಮಯವನ್ನೇ ಹೊಂದಿಕೊಂಡಿರುತ್ತದೆ. ನೋಟೀಸು ಬೋರ್ಡಿನ ಮೇಲೆ "ಮೆಂಬರರಲ್ಲದವರಿಗೆ ಪ್ರವೇಶವಿಲ್ಲ" ಎಂದು ಬರೆಯಲಾಗಿಯದೆ. ಇದು ಸಾರ್ವಜನಿಕ ಕ್ಲಬ್. ಆದ್ದರಿಂದ ಮೆಂಬರರೇತರರಿಗೆ ಪ್ರವೇಶವಿಲ್ಲದಿದ್ದರೂ ವಿದ್ಯಾರ್ಥಿಗಳಿಗಾದರೂ ಪ್ರವೇಶ ಕೊಡದಿರುವರೆ ವಿದ್ಯಾರ್ಥಿಗಳು ಅಂತಹ ತಪ್ಪನ್ನೇನು ಮಾಡಿರುವರು? ಕಡವು, ನಾಟಕ, ಸಿನೇಮಾಗಳಲ್ಲಿ ಕೂಡ ರಿಯಾಯತಿ ಇರುತ್ತಾ ಸಾರ್ವಜನಿಕ ಸಂಸ್ಥೆಯಾದ ಕ್ಲಬ್‌ನ ಮೆಂಬರರೂ, ಕಮಿಟಿ ಮೆಂಬರರೂ ಇಷ್ಟು ನಿರ್ದಯರಾಗಬಹುದೇ? ಸಂಬಂಧಪಟ್ಟವರು ಇನ್ನಾದರೂ ತಕ್ಕ ಕ್ರಮ ತೆಗೆದುಕೊಳ್ಳುವಂತೆ ನೋಡುವರೇ?

ಮೂಲ್ಕಿ 28-7-49 "ವಸಂತ"

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ, ಎದೆನೋವು,ಛಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ,ಮೊಡಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಜನಮತ

ಪಶ್ಚಿಮ ಕರಾವಳಿಯ ಪ್ರಮುಖ ಬಂದರು

ಮಲ್ಪೆಯೋ? ಮಂಗಳೂರೋ?

(ಲೇಖಕರು:- ಪಿ. ಹರಿಶ್ಚಂದ್ರ ಉಪಾಧ್ಯಾಯ, ಕಾರ್ಕಳ)

ಕೊಚ್ಚಿ ಮತ್ತು ಗೋವಾಗಳ ನಡುವೆ ಒಂದು ಉತ್ತಮ ಬಂದರವಾಗಬೇಕೆಂದು ಕೇಂದ್ರ ಸರಕಾರವು ನಿರ್ಣಯಿಸಿದೊಡನೆಯೇ ಪಶ್ಚಿಮ ಕರಾವಳಿಯ ಎಲ್ಲಾ ಬಂದರುಗಳೂ ತಮ್ಮ ಉತ್ಕೃಷ್ಟತೆಯನ್ನು ಸಾರತೊಡಗಿದುವು. ಇವುಗಳ ಯೋಗ್ಯಾಯೋಗ್ಯತೆಗಳನ್ನು ಪರಿಶೀಲಿಸಲಿಕ್ಕಾಗಿ ಸರಕಾರವು ಒಂದು ಸಮಿತಿಯನ್ನೇರ್ಪಡಿಸಿತ್ತು. ಸಮಿತಿಯವರು ಇತ್ತೀಚೆಗೆ ಕೇಂದ್ರ ಸರಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ಮಂಗಳೂರು ಮತ್ತು ಮಲ್ಪೆ ಬಂದರುಗಳನ್ನು ಆರಿಸಿದ್ದಾರೆಂದೂ, ಅದರಲ್ಲೂ ಮಲ್ಪೆಯ ಪ್ರಾಶಸ್ತ್ಯವನ್ನು ಒತ್ತಿ ಹೇಳಿದ್ದಾರೆಂದೂ ದಟ್ಟವಾಗಿ ಸುದ್ದಿ ಹಬ್ಬಿದೆ. ಇದು ನಿಜವಾಗಿರಲೆಂದೇ ನಮ್ಮೆಲ್ಲರ ಹಾರೈಕೆ.

ಆದರೆ ಈ ಮಾತು ಮಂಗಳೂರಿನ ಜನತೆಗೆ ಹಿತವೆನಿಸದು. ಅವರು ಮೊದಲಿನಿಂದಲೂ ಮಂಗಳೂರಿನ ಸೌಕರ್ಯಗಳನ್ನು ಶ್ಲಾಘಿಸುತ್ತಾ, ಮಂಗಳೂರು ಮಲ್ಪೆಗಿಂತ ಯಾವ ವಿಧದಲ್ಲೂ ಕೀಳಲ್ಲವೆಂದು ಘೋಷಿಸುತ್ತಾ ಬಂದಿದ್ದರು. ಆದುದರಿಂದಲೇ ಕೇಂದ್ರ ಸರಕಾರವು ಮಂಗಳೂರಿನ ಕಡೆಗೆ ಒಲಿಯಲೂ ಬಹುದೆಂದು ಆಂಗ್ಲ ದೈನಂದಿನವೊಂದು ಸೂಚಿಸಿದೆ. ತಮ್ಮ ಊರಿನ ಅಭ್ಯುದಯಕ್ಕಾಗಿ ಮಂಗಳೂರಿನ ಧುರೀಣರು ಸಾಧಿಸುವುದಾದರೆ ಜಿಲ್ಲೆಯ ಏಳಿಗೆಯ ದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ.

ಬಂದರದ ಅಭಿವೃದ್ಧಿಯನ್ನೂ, ವ್ಯಾಪಾರಾಭ್ಯುದಯವನ್ನೂ ಅವಲೋಕಿಸುವಾಗ ಪಟ್ಟಣವು ಈಗಲೇ ಸಾಕಷ್ಟು ಬೆಳೆದು ಬಿಟ್ಟಿದೆ. ಮದ್ರಾಸ್ ಪ್ರಾಂತ್ಯದಲ್ಲಿ ಮೂರನೆಯ ಉತ್ತಮ ಪಟ್ಟಣವಾಗಿ ಮಂಗಳೂರು ಪರಿಗಣಿಸಲ್ಪಟ್ಟಿದೆ. ಬಂದರ ಪ್ರದೇಶದಲ್ಲಂತೂ ಜನವಸತಿಯೂ ಕಟ್ಟಡಗಳೂ ನಿಬಿಡವಾಗಿವೆ. ಹೊಸಮಾದರಿಯಲ್ಲಿ ರಚನೆಯಾಗಬೇಕಾದರೆ ಈಗಿನ ಕಟ್ಟಡಗಳೆಲ್ಲಾ ನೆಲಸಮವಾಗಬೇಕು. ಇದು ಅಸಾಧ್ಯ ಪ್ರಶ್ನೆ. ಪಟ್ಟಣದ ಜನಸಂಖ್ಯೆಯು, ಮುಖ್ಯವಾಗಿ ಬಂದರ ಪ್ರದೇಶದಲ್ಲಿ, ಮಿತಿಮೀರಿದ್ದು ಪೇಟೆಯು ರೋಗರುಜೆಗಳಿಗೆಲ್ಲಾ ಉಗಮಸ್ಥಾನದಂತಿದೆ.

ಮೊದಲೇ ಉತ್ತಮ ಪಟ್ಟಣವಾಗಿದ್ದು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಮಂಗಳೂರನ್ನು ಬಂದರವಾಗಿ ಆರಿಸಿದಲ್ಲಿ ವಾಣಿಜ್ಯ, ವ್ಯವಹಾರಗಳೆಲ್ಲಾ ಅಲ್ಲೇ ಕೇಂದ್ರೀಕೃತವಾಗಿ ಜಿಲ್ಲೆಯ ಉಳಿದೆಲ್ಲಾ ಪೇಟೆ ಪಟ್ಟಣಗಳು ಹಿಂದೆ ಬೀಳುವುವು. ಮಂಗಳೂರಿಗೆ ರೈಲ್ವೇ ಸೌಕರ್ಯವಿದೆಯೆಂಬುದೇನೋ ನಿಜ. ಆದರೆ ನಮ್ಮ ಜಿಲ್ಲೆಯ ಶ್ರೇಯಸ್ಸಿನ ದೃಷ್ಟಿಯಿಂದ ನೋಡುವುದಾದರೆ ಇದರಿಂದಾಗಿ ಕಾಸರಗೋಡಿಗೆ ಮಾತ್ರವಲ್ಲದೆ ಬೇರೆ ಯಾವ ಊರಿಗೂ ಪ್ರಯೋಜನವಿಲ್ಲ. ಇಲ್ಲವೆ ಭಾವೀ ಕರ್ನಾಟಕ ಪ್ರಾಂತ್ಯದ ದೃಷ್ಟಿಯಿಂದಲೂ ರೈಲ್ವೇ ಮಾರ್ಗವು ಮದ್ರಾಸಿನಿಂದ ಮಂಗಳೂರು ವರೆಗೆ ಮಾತ್ರವೇ ಇರುವುದರಿಂದ ಮೈಸೂರಿಗಾಗಲೀ, ಕರ್ನಾಟಕದ ಇತರ ಭಾಗಗಳಿಗಾಗಲೀ ಏನೊಂದೂ ಪ್ರಯೋಜನಕಾರಿಯಾಗುವುದಿಲ್ಲ.

ಮಲ್ಪೆಯು ನೈಸರ್ಗಿಕ ಬಂದರವಾಗಿದ್ದು ಕಡಿಮೆ ಖರ್ಚಿನಿಂದ ಬಂದರವನ್ನು ಊರ್ಜಿತಗೊಳಿಸಬಹುದೆಂಬುದು ಬಂದರು ಪರಿಶೀಲನಾ ಸಮಿತಿ ಮತ್ತು ಕೇಂದ್ರ ಸರಕಾರವು ಸ್ಪಷ್ಟಯಿಸತಕ್ಕ ವಿಷಯ. ನಮ್ಮ ಜಿಲ್ಲೆಯ ಏಳಿಗೆಯನ್ನು ಲಕ್ಷಿಸುವುದಾದರೂ ಮಲ್ಪೆಯೇ ಉತ್ತಮ ಬಂದರವಾಗಬೇಕಾಗುವುದು. ಮಲ್ಪೆಯಲ್ಲಿ ಅಂದವಾದ ಪಟ್ಟಣವನ್ನು ನಿರ್ಮಿಸಲು ಬೇಕಷ್ಟು ವಿಶಾಲ ಪ್ರದೇಶವಿದೆ. ಸರಿಯಾದ ಸೌಕರ್ಯಗಳಿಲ್ಲದೆ ಹಿಂದುಳಿದಿದ್ದ ನಮ್ಮ ಜಿಲ್ಲೆಯ ಹಲವು ಊರುಗಳು ಆರ್ಥಿಕ ಏಳಿಗೆಯನ್ನು ಹೊಂದುವುವು.

ಮಲ್ಪೆಗೆ ರೈಲ್ವೇ ಜೋಡಣೆ ಇಲ್ಲವೆಂಬುದೊಂದು ನ್ಯೂನತೆಯೇ ಸರಿ. ಆದರೆ ದೇಶದ ವಾಣಿಜ್ಯ, ಆರ್ಥಿಕ ಸಂಪತ್ತು ಮತ್ತು ಸೌಲಭ್ಯಗಳನ್ನು ದೃಷ್ಟಿಯಲ್ಲಿಟ್ಟು ಉತ್ತಮ ಬಂದರವನ್ನು ನಿರ್ಮಿಸಲು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಗೊಳಿಸಲು ಸಿದ್ಧವಾದ ಕೇಂದ್ರ ಸರಕಾರಕ್ಕೆ ಮಲ್ಪೆ ಮತ್ತು ಮಂಗಳೂರನ್ನು ರೈಲ್ವೆಯಿಂದ ಜೋಡಿಸುವುದು ಹೆಚ್ಚಿನ ವೆಚ್ಚವನ್ನು ತಂದೊಡ್ಡಲಿಕ್ಕಿಲ್ಲ. ಈ ರೈಲ್ವೇ ಜೋಡಣೆಯು ಪ್ರಶ್ನೆಯೊಂದು ಯುದ್ಧಕ್ಕಿಂತ ಮೊದಲೇ ಯುದ್ಧಾನಂತರದ ಅಭಿವೃದ್ಧಿಯ ಯೋಜನೆಯಲ್ಲಿ ಸೇರಿಕೊಂಡಿತ್ತು. ಆದರೆ ಮಲ್ಪೆಯು ಉತ್ತಮ ಬಂದರವಾದರೆ ಮಾತ್ರವೇ ಈ ಯೋಜನೆಯು ಬೆಳಕನ್ನು ಕಂಡೀತಲ್ಲದೆ ಮಂಗಳೂರೆಂದಾದರೆ ಇನ್ನೆಷ್ಟು ವರುಷಗಳು ಉರುಳಬೇಕಾಗುವುದೋ! ಮಲ್ಪೆಯು ಪ್ರಾಮುಖ್ಯ ಬಂದರಾಗಿ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನೊಡನೆ ರೈಲ್ವೆ ಮೂಲಕ ಕಾರ್ಕಳ ಮಾರ್ಗವಾಗಿ ಸೇರಿಸಲ್ಪಟ್ಟರೆ ನಮ್ಮ ಇಡೀ ಜಿಲ್ಲೆಯೇ ಊರ್ಜಿತಗೊಳ್ಳುವುದಲ್ಲದೆ ದೇಶದಲ್ಲೇ ಪ್ರಾಮುಖ್ಯತೆಯನ್ನು ಹೊಂದುವುದೆಂದು ನಿಸ್ಸಂದೇಹವಾಗಿ ಹೇಳಬಹುದು. ಜಿಲ್ಲೆಯ ಮುಖ್ಯ ಪಟ್ಟಣವಂತೂ ಮಂಗಳೂರಷ್ಟೆ. ಮಲ್ಪೆಯು ಮುಖ್ಯ ಬಂದರವೆಂದಾದರೆ ಇದರಿಂದಾಗಿ ಮಂಗಳೂರಿನ ಪ್ರಾಧಾನ್ಯತೆ ಏನೂ ಕಡಿಮೆಯಾಗಲಿಕ್ಕಿಲ್ಲ. ಬದಲಾಗಿ ಜಿಲ್ಲೆಯ ಉಳಿದೆಲ್ಲಾ ಪಟ್ಟಣಗಳು ತಾವೇ ತಾವಾಗಿ ಅಭಿವೃದ್ಧಿಯನ್ನು ಹೊಂದುವುದು ಮಾತ್ರವಲ್ಲದೆ ಸರಿಯಾದ ವಾಣಿಜ್ಯ ಸರಕುಗಳ ಚಲಾವಣೆಯಿಂದ ಮಂಗಳೂರು ಇನ್ನೂ ಪ್ರಶಸ್ತಿಯನ್ನು ಹೊಂದುವುದಕ್ಕೆ ಅಡ್ಡಿ ಇಲ್ಲ.

ಇಷ್ಟೇ ಅಲ್ಲದೆ ನಮ್ಮ ಜಿಲ್ಲೆಗೆ ಇನ್ನೊಂದು ಸುವಾರ್ತೆಯೆಂದರೆ 1950ರೊಳಗಾಗಿ ಮಂಗಳೂರಿನ ಸಮೀಪದಲ್ಲೇ ವಿಮಾನ ನಿಲ್ದಾಣವೊಂದು ನಿರ್ಮಿತವಾಗುವುದು. ಇದರಿಂದಾಗಿ ಮಂಗಳೂರು ದೇಶದ ಕೆಲವೇ ಉತ್ತಮ ಪಟ್ಟಣಗಳಲ್ಲಿ ಒಂದಾಗುವುದಕ್ಕೆ ಸಂದೇಹವಿಲ್ಲ.

ಆದುದರಿಂದ ದೇಶದ ಏಳ್ಗೆಯ ದೃಷ್ಟಿಯಿಂದಲೂ ಜಿಲ್ಲೆಯ ಶ್ರೇಯಸ್ಸಿನ ದೃಷ್ಟಿಯಿಂದಲೂ ಮಲ್ಪೆಯು ಬಂದರಾಗಲು ಯೋಗ್ಯವೆಂದು ಜಿಲ್ಲೆಯ ಪ್ರತಿಯೊಬ್ಬನಿಗೂ ಮನಗಾಣದಿರದು. ಕೇಂದ್ರ ಸರಕಾರವು ಬಂದರ ಪರಿಶೀಲನಾ ಸಮಿತಿಯ ವರದಿಯನ್ನು ವಿಮರ್ಶಿಸಿ ಮಲ್ಪೆಯನ್ನೇ ಪ್ರಾಮುಖ್ಯ ಬಂದರಾಗಿ ಆರಿಸುವುದೆಂದು ಆಶಿಸುವ. ಆದರೆ ಮಂಗಳೂರಿನ ಧುರೀಣರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಶ್ರೇಯಸ್ಸನ್ನು ಲಕ್ಷಿಸಿ ತಮ್ಮ ಸಮರ್ಥನೆಯ ಉದ್ವೇಗವನ್ನು ತಣಿಸುವರೆಂದು ಆಶಿಸೋಣವೇ?

ಪ್ರತಿಭಟನೆ

ಲೇಖಕರು: ಕೆ. ಜೆ. ಎಸ್, ಮುಂಬಾಯಿ.

ಮಲ್ಪೆಯು ಪ್ರಕೃತಿಸೌಂದರ್ಯದ ಬೀಡಾಗಿದೆ. ಮಾತ್ರವಲ್ಲದೆ ಪ್ರಕೃತಿದತ್ತವಾದ ಬಂದರೂ ಆಗಿರುತ್ತದೆ. ಇಲ್ಲಿ ಸಮುದ್ರದ ದಡಬಿಟ್ಟು ಸುಮಾರು ಮೂರು ಮೈಲು ದೂರದಲ್ಲಿ ಮೂರು ಸಣ್ಣ ಸಣ್ಣ ದ್ವೀಪಗಳಿದ್ದು ಹಡಗುಗಳು ಒಳಗೆ ಬಂದು ನಿಲ್ಲಲು ಯೋಗ್ಯವಾದ ಸ್ಥಳವನ್ನು ಉಂಟುಮಾಡಿದೆ. ಮಾತ್ರವಲ್ಲದೆ ಸಮುದ್ರವನ್ನೇ ಆಳ ಮಾಡುವಾಗ ನೀರಿನ ಮಟ್ಟವು ಕೆಳಗೆ ಇಳಿದು ಹಡಗನ್ನು ಸಂಪೂರ್ಣವಾಗಿ ಗಾಳಿಯಿಂದ ರಕ್ಷಿಸುತ್ತದೆ. ಇನ್ನು ಸ್ಥಳದ ವಿಷಯದಲ್ಲಿ ಇಲ್ಲಿಯೇ ವಿಶಾಲವಾದ ಖಾಲಿ ಸ್ಥಳವಿದೆ ಎಂದೂ, ಧಕ್ಕೆ ಕಟ್ಟಲು ಬೇಕಾದ ಬಂಡೆಕಲ್ಲು ಮೊದಲಾದ ಕಚ್ಚಾ ಮಾಲುಗಳು ಹತ್ತಿರದಲ್ಲಿಯೇ ಇವೆ ಎಂದೂ ಮತ್ತು ಮಲ್ಪೆಯು ಇತರ ಎರಡು ಬಂದರುಗಳಿಗಿಂತ ಒಳ ನಾಡಿಗೆ ಹತ್ತಿರದಲ್ಲಿದೆ ಎಂದೂ ಶಿಫಾರಸು ಮಾಡಿರುತ್ತದೆ ಕಸ್ತೂರಿಭಾ ಸಮಿತಿ.

ಆ ಸಮಿತಿಯವರು ತಮ್ಮ ಕೆಲಸವನ್ನು ಒಳ್ಳೆಯ ಆಸಕ್ತಿಯಿಂದ ಕೈಗೊಂಡು ದೇಶದ ಏಳಿಗೆಗಾಗಿ ತಾವು ಕೆಲಸವನ್ನು ಮಾಡುವೆವೆಂದು ತಿಳಿದುಕೊಂಡೇ ತಮ್ಮ ಕೆಲಸವನ್ನು ನಿರ್ವಹಿಸಿರಬೇಕು. ಆದರೂ ಭಾರತ ಸರಕಾರದ ಮನಸ್ಸು ಮಂಗಳೂರಿನತ್ತ ವಾಲಿದೆ ಎಂದು ವಾರ್ತೆಯಿದೆ. ವಿಶೇಷ ವೆಚ್ಚ ಮಾಡಿ, ಬಂದರ ಸಂಬಂಧದ ಸಂಗತಿಗಳನ್ನು ತಿಳಿದವರೆಂಬ ವಿಶ್ವಾಸದಿಂದ ನೇಮಿಸಿದ್ದ ತನ್ನ ಸಮಿತಿಯ ಶಿಫಾರಸುಗಳನ್ನು ತಾನೇ ನಿರಾಕರಿಸಿಬಿಟ್ಟರೆ ಅದು ಸರಕಾರದ ನಿಷ್ಪಕ್ಷಪಾತ ತೀರ್ಮಾನವೆನ್ನಿಸೀತೆ? ನ್ಯಾಯವಾದಿಗಳಲ್ಲಿ [illegible] ಜಿಗುಪ್ಸೆಗಳನ್ನು ನಿರ್ಮಿಸದಿದ್ದರಿಂದ ಭಾರತ ಸರಕಾರವು ಎಂದಿಗೂ ಹಾಗೆ ಮಾಡಲಾರದೆಂದೂ ಮಾಡಿದರೆ ಜನತೆಯು ನ್ಯಾಯ ಪಾಲನೆಗಾಗಿ ಪ್ರತಿಭಟಿಸಬಹುದೆಂದು ನಿರೀಕ್ಷಿಸಬಹುದೆ?

NOTICE

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ.

O. P. No. 36/1949.

ಸಂಪ ಸೆಡ್ತಿ. ಸೋಮಯ್ಯ ಸೆಟ್ರ ವಿಧವೆ. ಮ, ನರಸಿ ಸೆಡ್ತಿ ಮಗಳು, ಉಡುಪಿ ತಾಲ್ಲೂಕು ಬಡಾ ಗ್ರಾಮ ಅರ್ಜಿದಾರರು.

ಯೀ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದ್ರೆ:

ಅರ್ಜಿದಾರಳ ಗಂಡ ಮೃತ ಸೋಮಯ್ಯ ಸೆಟ್ಟಿಯು ತಾರೀಕು 7-3-1948ರಲ್ಲಿ ರಿಜಿಸ್ಟ್ರಿ ಇಸಿ ಬರದಿಟ್ಟ ವೀಲು ಮೇರೆಗೆ ಸದ್ರಿ ಸೋಮಯ್ಯ ಸೆಟ್ಟಿಯು The Empire of India Life Insurance Co.' Ltd., ಯೀ ಕಂಪೆನಿಯಲ್ಲಿ Policy No 237998ಕ್ಕೆ ಮಾಡಿದ ಯಿನ್ಸೂರು ಅಯಿವೇಜು ವಸೂಲು ಪಡಿಯುವರೇ ಕುಟುಂಬದ ಯೆಜಮಾನ್ತಿಯಾದ ತನಗೆ Succession certificate ಕೊಡ್ಸಬೇಕಾಗಿ ಅರ್ಜಿದಾರಳು ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 31-8-49ಕ್ಕೆ ತನ್ಖಿ ಬಗ್ಗೆ ಯಿಡೋಣಾಗಿಯದೆ. ಆಕ್ಷೇಪ ಹೇಳತಕ್ಕವರು ಯೀ ದಿವಸ ಸದ್ರಿ ಕೋರ್ಟು ಮುಂದೆ 11 ಗಂಟೆಗೆ ಸ್ವತಹಾ ಯಾ ಪ್ಲೀಡರ್ ಮೂಲ್ಕ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಯೀ ಮೂಲಕ ಪ್ರಕಟಿಸೋಣಾಗಿಯದೆ.

K. J. Ballal.
Vakil for Petitioner.

Udipi, Date 6-8-49.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವಾಂಕು ಎಂಬ ಸೂತಿಕಾ ರಸಾಯನ



೬ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ, 5 ಕೊಡಿಯಾಲಬೈಲು, ದ ಕ
ಸ್ಟಾಕಿಸ್ಟರು. ಡಾ। ಐ ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಶರ್ತು:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

English copies of
MADRAS ALIYASANTHANA ACT of 1949
are available.
NAVAYUGA PRESS, UDIPI.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 25-8-1949

LICENCE No. 31
Licenced to Post without Prepayment

NAVAYUGA WEEKLY
POST BOX No. 22 -- UDIPI, S. K

FOUNDER:
Hon'ble Sri. A. B. Shetty
Minister for Agriculture & Veterinary

Telegram: "Navayuga"

Estd. 1921
ಸ್ಥಾಪನೆ

ನವಯುಗ

ವಾರ್ಷಿಕ ಚಂದಾ: 5—4—0
6 ತಿಂಗಳಿಗೆ 3—0—0
ಬಿಡಿಪ್ರತಿಗೆ 0—2—0

ವರ್ಷ ೨೯ ವಾರ 51

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ.ಬಿ. ಶೆಟ್ಟಿಯಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 29 No. 51

ಮೂರನೇ ವರುಷದಿಂದ-

ಕಳೆದೆರಡು ವರುಷಗಳ ಸ್ವರಾಜ್ಯಾಡಳಿತೆಯ ಅನುಭವಗಳನ್ನು ಆಧರಿಸಿ ಕಾರ್ಯ ಪ್ರವೃತ್ತರಾಗಬೇಕು. ಈ ಎರಡು ವರುಷಗಳಲ್ಲಾದುದು 'ಸ್ವರಾಜ್ಯ ತರಬೇತಿ' ಎಂದೂ, ಇನ್ನು ಮುಂದೆಯೇ ಅದನ್ನೊಂದು ಉದ್ಯೋಗವಾಗಿ ನಿರ್ವಹಿಸುತ್ತ ಹೋಗತಕ್ಕದ್ದೆಂದೂ ದೃಢವಾಗಿ ಭಾವಿಸಿಕೊಳ್ಳಬೇಕು. ಭಾರತ ಮಾತೆಗೆ ಸುಮಾರು ಎರಡು ಶತಮಾನಗಳಿಂದಿದ್ದ ದಾಸ್ಯರೋಗವು 1947ನೇ ಅಗೋಸ್ತು 15ಕ್ಕೆ ಗುಣ ಹೊಂದಿದರೂ ಆ ನಂತರದಿಂದೀ ವರೆಗಿನ ಅವಧಿಯು ನಿಶ್ಶಕ್ತಿ, ದುರವಸ್ಥೆಗಳಿಂದ ಪಾರಾಗಿ ಚೇತನ ಹೊಂದುವುದರಲ್ಲೇ ಕಳೆದು ಹೋಗಿರುವುದರಿಂದ ಈ ವರೆಗಿನದೆಲ್ಲವೂ ಕಾಹಿಲೆಯ ಮತ್ತು ಕಾಹಿಲೇ ನಿವಾರಣೆಯ ಅವಧಿಯೆಂದೂ, ಇನ್ನು ಮುಂದೆ ಮಾತ್ರ ಕಾರ್ಯಕ್ಕಿಳಿಯುವ ಕಾಲವೆಂದೂ ತಿಳಿದಿರಬೇಕು. ಇನ್ನೂ ಹಾಗಿದ್ದರೆ ನಾವು ಆಲಸಿಗಳೆನ್ನಿಸುವೆವು, ಕರ್ತವ್ಯ ಭ್ರಷ್ಟರಾಗಿ ಅಪರಾಧಿಗಳೆನ್ನಿಸುವೆವು ಎಂಬುದು ಸ್ಪಷ್ಟ.

ಆದ್ದರಿಂದ ಕಳೆದೆರಡು ವತ್ಸರಗಳ ತಪ್ಪು-ಸರಿ ಮಿಶ್ರಿತ ಕರಡು ಪ್ರತಿಯಿಂದ ಸರಿಯುಳ್ಳ ಅಂಶಗಳನ್ನಷ್ಟೇ ನಕಲು ತೆಗೆದು, ಆ ಹಳೇ ಪ್ರತಿಯನ್ನು ಹರಿದು ಹಾಕಿ ಬಿಡೋಣ; ಹೊಸ ದಾಖಲೆಯನ್ನು ಬರೆಯಲಾರಂಭಿಸೋಣ.

ಈವರೆಗೆ ಜಾತೀಯ ಗೊಂದಲಗಳ ನಿವಾರಣೆ-ನಿರಾಶ್ರಿತರ ವ್ಯವಸ್ಥೆ-ಸಂಸ್ಥಾನಗಳ ಸಂಬಂಧದ ಸಮಸ್ಯೆ-ಮುಂತಾದುವುಗಳ ಕಡೆಗೇನೇ ನಮ್ಮ ಸರಕಾರಗಳು ಹೆಚ್ಚಿನ ಲಕ್ಷ್ಯ ಕೊಡಬೇಕಾಗಿದ್ದಿತು. ಒಳಗಡೆಯ ಆರ್ಥಿಕ, ಸಾಮಾಜಿಕ ಸ್ಥಿತಿ ಸುಧಾರಣೆಯ ಕಡೆಗೆ ಸಾಕಷ್ಟು ಲಕ್ಷ್ಯ ಹರಿಸಲು ಸರಕಾರಗಳಿಗಾಗದಿದ್ದುದು ಕ್ಷಮ್ಯವೆನ್ನಿಸಿದ್ದಿತು. ಈಗೀಗ ಕೈ ಹಾಕಿದ ಆ ಕೆಲಸಗಳು ಹೆಚ್ಚಿನಂಶ ಮುಗಿಯುತ್ತಾ ಬಂದಿರುವುದರಿಂದ ಇನ್ನು ಬಾಕಿ ಬಿದ್ದಿರುವ ಈ ಕೆಲಸಕ್ಕೆ ಅವರು ಕೈ ಹಾಕಲಿ.

ಬ್ರಿಟಿಷರ ಕೈಯಿಂದ ತಪ್ಪಿದ ಅಧಿಕಾರವು ಈವರೆಗೆ ನಮ್ಮ ಜನರ ಕೈಗೆ ಬಂದಿದ್ದಿತು. ಹಿಂಗಡೆಯ ಮೂಕ ವಿಲಿಯ ಜನತೆಯ ಮುಂಭಾಗದಲ್ಲಿದ್ದವರ ಕೈಗೆ, ಆಚೇ ಕಡೆಯ ಪರಕೀಯರ ಹಸ್ತದಿಂದ ಈ ಅಧಿಕಾರ ಬದಲಾವಣೆಯಾಗಿದ್ದಿತೇ ಹೊರತು, ಇಲ್ಲಿಂದಲೂ ಒಳಗಡೆಗೆ ಬಂದು ಹರಡಿ ಬಿದ್ದಿಲ್ಲ. ಅಧಿಕಾರವು ನಮ್ಮ ವಿರುದ್ಧ ದಿಕ್ಕಿನಿಂದ ನಮ್ಮ ದಿಕ್ಕಿಗೆ ವರ್ಗಾಯಿಸಲ್ಪಟ್ಟಿದೆಯೇ ವಿನಹಾ ನಮ್ಮ ನಡುವೆ ಕ್ರಮಬದ್ಧವಾಗಿ ಪ್ರತಿಷ್ಠಾಪಿಸಲ್ಪಟ್ಟಿಲ್ಲ, ಅದನ್ನು ಒಳಗಡೆಯಲ್ಲಿ ವ್ಯವಸ್ಥೆಯಿಂದ ನಿಲ್ಲಿಸಿಕೊಳ್ಳುವ ಕೆಲಸವೀಗ ನಡೆಯುತ್ತಿದೆ. ಆ ಕೆಲಸ ಪೂರ್ಣಗೊಂಡು ಈಗಿನ ಸ್ವಾಧಿಕಾರವು ಜನತಾಧಿಕಾರವಾಗಿ ಬೆಳೆದು ಒಳಗಡೆಯಲ್ಲಿ ನಿಲ್ಲಲಿದೆ. ಈ ವರೆಗೆ ಜನತೆಯ ಪರವಾಗಿ ಆ ಅಧಿಕಾರ ನಿರ್ವಹಿಸುತ್ತಿದ್ದವರು ತೋರಿಸಿದಂತಹ ಚಾತುರ್ಯ, ಪ್ರಸಂಗಾವಧಾನತೆ, ಶಿಸ್ತು ನಿಯಮ, ಎದೆಗಾರಿಕೆಗಳನ್ನು ಇನ್ನು ಮುಂದೆ ಸ್ವತಃ ಜನತೆಯೆ ತೋರಿಸಬೇಕು.

ಅವಸ್ಥಾಂತರದ ಒಂದು ಪಾಠವು ಈ ಸಂದರ್ಭದಲ್ಲಿ ನೆನಪಾಗುತ್ತಿದೆ. ಬ್ರಿಟಿಷ್ ಆಡಳಿತೆಯಿರುವಾಗ ಇಲ್ಲಿ ತೋರಬಂದ ಎಲ್ಲಾ ಲೋಪದೋಷಗಳಿಗೂ ಅವರನ್ನೇ ಹೊಣೆಗಾರರನ್ನಾಗಿ ಮಾಡಿ ನಮ್ಮ ನಾಯಕರು ದೂರುತ್ತಿದ್ದರು; ಸ್ವತಃ ನಮ್ಮ ನಾಯಕರ ಕೈಗೇನೇ ಆಡಳಿತೆ ಬಂದ ಮೇಲೆ ನಡೆದ ಎಲ್ಲಾ ತಪ್ಪುತಡೆಗಳಿಗೂ ನಾವು ನಾಯಕರನ್ನೇ ಹೊಣೆಮಾಡಿ ದೂರುತ್ತಿದ್ದೇವೆ; ಇನ್ನು ಈ ಆಡಳಿತೆಯ ಜವಾಬ್ದಾರಿ ಸ್ವತಃ ನಮ್ಮದಾಗುವಾಗ ನಮ್ಮ ಕಾಲದಲ್ಲಿ, ಜನತಾ ರಾಜ್ಯದಲ್ಲಿ, ಕಷ್ಟ ನಷ್ಟ ತಡೆ ತೊಡಕುಗಳುಂಟಾದಲ್ಲಿ ಆಗ ಯಾರು ಯಾರನ್ನು ದೂರಬೇಕು? ಇದುವರೆಗಿನ ಸಂಪ್ರದಾಯಾನುಸಾರ ನಮ್ಮ ಭಾವೀ ಸಂತಾನವೇ ನಮ್ಮನ್ನು ದೂರಬೇಕಾಗುವುದು. ಹೀಗಾಗಲು ನಾವು ಬಿಡಬಹುದೆ?

ಕೂಡದು. ಆಗಿ ಹೋದ ತಪ್ಪುಗಳಿಗಾಗಿ ದೂರು ಕೇಳುವವರು ಬೇಕೆಂದು ಹೊರಗೆ ಹುಡುಕಲು ಹೋಗುವದಕ್ಕಿಂತ ಎಲ್ಲರೂ ಸ್ವತಃ ತಮ್ಮನ್ನು ತಾವೇ ಶೋಧಿಸಿ ನೋಡಿಕೊಂಡಲ್ಲಿ, ತಾವೂ ಅಂಶತಃ ಅದರ ಪಾಲುಗಾರರೆಂಬುದನ್ನು ಅರಿಯುವಂತಾಗುವದು. ಸರ್ವರೂ ಒಂದೆಡೆಯಿಂದ ಇನ್ನೊಂದೆಡೆಗೆ ಕೈ ತೋರಿಸುತ್ತಾ ನಿಂತುದರಿಂದಲೇ ಯಾರ ಕಾಲಡಿಯ ಕಸವೂ ಹೋಗದಂತಾಗಿದೆ. ಇನ್ನಾದರೂ ಈ ಕ್ರಮ ಬದಲಾಗಿ ಪ್ರತಿಯೊಬ್ಬರೂ ತಂತಮ್ಮ ಕಾಲಡಿಯ ಕಸವನ್ನು ತಾವು ತಾವೇ ಗುಡಿಸಿಕೊಳ್ಳಲು ಬಗ್ಗಬೇಕು. ಈ ವರೆಗಿರುವಂಥಾ ಅನ್ಯರನ್ನು ವಿಮರ್ಶಿಸುವ, ದೂಷಿಸುವ ಚಟವನ್ನು ಜಾತೀಯತಾ ದುರ್ಭಾವನೆ, ಸಂಕುಚಿತ ಸ್ವಾರ್ಥಾಭಿಲಾಷೆಗಳ ಪಂಕ್ತಿಗೆ ಸೇರಿಸಿ, ಇನ್ನು ಮುಂದೆ ಸರಕಾರೀ ಘೋಷಣೆಯಂತೆಯೇ ಸರ್ವರ ಮನೋವೃತ್ತಿಯೂ ಅಂತರ್ಮುಖಿಯಾಗಬೇಕು.

ಸರಕಾರದಿಂದ ಜನತೆ ಏನೇನೆಲ್ಲಾ ಅಪೇಕ್ಷಿಸಿದ್ದಿತೋ ಅವೆಲ್ಲವೂ ಸರಕಾರದಿಂದಾಗಿಲ್ಲ; ಜನತೆಯಿಂದ ಸರಕಾರವೇನೇನನ್ನು ಬಯಸಿದ್ದಿತೋ ಅವುಗಳೆಲ್ಲವೂ ಜನತೆಯಿಂದಲೂ ಆಗಿಲ್ಲ. ಇಕ್ಕಡೆಯವರ ಅಪೇಕ್ಷೆಗಳಲ್ಲಿಯೂ ವಾಸ್ತವತೆ, ಸ್ವಾಭಾವಿಕತೆಗಳಂತೆಯೇ ಅವಾಸ್ತವಿಕತೆ, ಅಧಿಕ ಪ್ರಸಂಗಗಳೂ ಬೇಕಾದಷ್ಟಿವೆ. ಯಾರೇ ಇರಲಿ, ಇನ್ನೊಬ್ಬರಿಗೆ ಹೇಳುವುದರಲ್ಲೇ ಇನ್ನೊಬ್ಬನಿಂದ ಮಾಡಿಸುವುದರಲ್ಲೇ ನಿರತನಾಗಿದ್ದರೆ ಹೀಗಾಗುವದು ಸ್ವಾಭಾವಿಕ. ಬದಲಿಗೆ ಅವರೂ ಇವರೂ ತಂತಮ್ಮ ಕರ್ತವ್ಯದ ಕಡೆಗೆ ತಾವು ತಾವೇ ಲಕ್ಷ್ಯಹರಿಸಿದರೆ ಹೀಗಾಗದು. ಆದ್ದರಿಂದ ಇನ್ನು ಮುಂದೆ ಮುಖ್ಯವಾಗಿ ಸ್ವಕರ್ತವ್ಯ ಬುದ್ಧಿಯೆಲ್ಲರಲ್ಲೂ ತೋರಬರಬೇಕು.

ಈ ವರೆಗೆ ನಮ್ಮಿಂದಾದುದೆಲ್ಲವೂ, ದೀರ್ಘಾವಧಿಯಿಂದ ಹಿಡಿದು ನಿಂತಿದ್ದ ಪರಕೀಯ ಒಕ್ಕಲನ್ನೆಬ್ಬಿಸಿ, ಸ್ವಂತ ಆಸ್ತಿಯಲ್ಲಿ ಸ್ವತಃ ಒಕ್ಕಲಾಗುವ ಕೆಲಸ ಮಾತ್ರ. ಹಿಂದಿನವರಿಂದಾಗಿದ್ದ ಕಣಿಕುಳಿಗಳನ್ನೂ, ಮೊದಲೇ ಕುಸಿದಿದ್ದು, ನಮ್ಮ ಅವಸರದ ಪ್ರವೇಶದಿಂದಾಗಿ ಜರಿದು ಬಿದ್ದುಬಿಟ್ಟ ಗೋಡೆ ಪಾಗಾರಗಳನ್ನೂ ದುರಸ್ತಿಪಡಿಸುವುದರಲ್ಲೇ ಇಷ್ಟು ಸಮಯ ಹೋಯಿತು. ಇದು ಕೇವಲ ದುರಸ್ತಿ ಹೊರತು ಕೃಷಿಯಲ್ಲ; ಇನ್ನು ಕೃಷಿಯಾಗಬೇಕಾಗಿದೆ. ಆ ಕೃಷಿ ಕಾರ್ಯ ಕುಟುಂಬದವರಿಂದಲೇ ಜನತೆಯಿಂದಲೇ ಆಗಬೇಕಾಗಿದೆ. ಜನರಿನ್ನು ಆ ಶಕ್ತಿ, ಯೋಗ್ಯತೆ ಮತ್ತು ಪರಿಶ್ರಮ ತೋರಿಸಬೇಕಾಗಿದೆ.

ಈವರೆಗಾಗುತ್ತಾ ಬಂದುದು ಹೆಚ್ಚಿನಂಶ ಸಮಾಧಾನಕರವೆ. ಇನ್ನು ಮುಂದೆ ಆಗುವಂತಹದೆಲ್ಲವೂ ಪೂರ್ಣ ತೃಪ್ತಿಕರವಿರಬೇಕು. ಈ ವರೆಗೆ ಬ್ರಿಟಿಷರು ಕರೆದು ನಿಲ್ಲಿಸಿ ಹೋದ ನೆಹರು ಪಟೇಲರು ಅಲ್ಲಿದ್ದಾರಾದರೆ, ಇನ್ನು ಮುಂದೆ ಜನತೆಯು ತಾನೇ ನಿರ್ಮಿಸಿ ಕಳುಹಿಸುವ ನೆಹರೂ ಪಟೇಲರು ಅಲ್ಲಿರಬೇಕು. ಹೀಗಾಗಬೇಕಾದರೆ, ಏನು ಬೇಡವೆಂದರೂ ಆ ದಿನ ಕೈ ಬದಲಾವಣೆ ನಡೆಸಿದ ಬ್ರಿಟಿಷ್ ಮುತ್ಸದ್ದಿಗಳ ಯೋಗ್ಯತೆಯು ಹಿಂದೀ ಜನಸಾಮಾನ್ಯರಲ್ಲಿ ತೋರಬಂಬೇಕು. ಸಾರ್ವಜನಿಕರೆಲ್ಲರೂ ಅಂತಹ ಪ್ರಬುದ್ಧತೆ ಗಳಿಸಿಕೊಳ್ಳಲಿ.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ. THE UNITED KARNATAK INSURANCE COMPANY, LIMITED.

ಸ್ವರಾಜ್ಯ ವರ್ಧಂತಿ–

ತಾ. 15ರಲ್ಲಿ ಸ್ವರಾಜ್ಯದ ದ್ವಿತೀಯ ವರ್ಧಂತ್ಯುತ್ಸವವು ಭಾರತದ ಎಲ್ಲಾ ಸಣ್ಣ ದೊಡ್ಡ ಊರುಗಳಲ್ಲೂ ಉಚಿತ ವಿಜೃಂಭಣೆಗಳಿಂದ ಜರಗಿತು. ಅದೊಂದು ದಿನ ಸ್ವರಾಜ್ಯವು ಪ್ರತಿಯೊಬ್ಬ ಭಾರತೀಯನ ಲಕ್ಷ್ಯವನ್ನೂ ತನ್ನ ಕಡೆಗೆ ವಿಶೇಷ ರೀತಿಯಿಂದ ಎಳೆದುಕೊಂಡಿತ್ತು. 'ತನಗಲ್ಲ'ವೆಂದು ಯಾವುದೇ ಕಡೆಯ ಯಾವನೊಬ್ಬನೂ ಅನಾಸಕ್ತನಾಗಿರದ ರೀತಿಯಲ್ಲಿ ಸರ್ವರೂ ಒಂದಲ್ಲೊಂದು ವಿಧದಿಂದ ಈ ಮಹೋತ್ಸವದಲ್ಲಿ ಭಾಗವಹಿಸಿದ್ದರು. ಸ್ವಾಧಿಕಾರದ ಎರಡು ವರುಷಗಳನ್ನು ಸಮಾಧಾನಕರ ರೀತಿಯಿಂದ ಮುಗಿಸಿಕೊಂಡು ಮೂರನೇ ವರುಷವನ್ನು ಆರಂಭಿಸಿದ ಅತಿ ಪ್ರಾಮುಖ್ಯ ದಿನವದು. ಸಾರ್ವಜನಿಕ ಕವಾನ, ದೀಪಾಲಂಕಾರಗಳೇ ಮೊದಲಾದ ಅತಿ ವಿಜೃಂಭಣೆಗಳಿರದೆ ಸಾಧ್ಯವಿದ್ದಷ್ಟು ಸಾದಾರೀತಿಯಿಂದ ಈ ಉತ್ಸವವನ್ನಾಚರಿಸಬೇಕೆಂದು ನಾಯಕರು ಕೇಳಿಕೊಂಡಿದ್ದಂತೆ ಮಿತಿಮೀರಿದ ವಿಜೃಂಭಣೆಗಳೆಲ್ಲಿಯೂ ಇರಲಿಲ್ಲವಾದರೂ ಸಂದರ್ಭೋಚಿತ ಸಂತೋಷ ಪ್ರದರ್ಶನಗಳು ಎಲ್ಲಾ ರೀತಿಯಿಂದಲೂ ಜರಗಿದ್ದುವು. ಅಂತೂ ಅದು, ಅಖಿಲ ಭಾರತೀಯರ ಹೃದಯದಲ್ಲಿ ಅಮೃತ ಭರಿತವನ್ನು ಉಂಟುಮಾಡಿದ್ದ ದಿನ; ಇಡೀ ರಾಷ್ಟ್ರದ ಸರ್ವೇಡೆಗಳವರೂ ಏಕಪ್ರಕಾರ ಆಚರಿಸಿದ ಮಹಾ ಹಬ್ಬ

ಆ ಸಮದೃಶ್ಯ

ದೇಶದ ಹಳ್ಳಿ ಮೂಲೆಗಳಿಂದಾರಂಭಿಸಿ ಪೇಟೆ ಪಟ್ಟಣ, ರಾಜಧಾನಿಗಳ ವರೆಗೆ ನಡೆದ ಸ್ವಾತಂತ್ರ್ಯ ದಿನೋತ್ಸವದ ಸರ್ವ ಸಾಮಾನ್ಯ ರೂಪ ಹೀಗಿದ್ದಿತು: ಮನೆ, ಕಾರ್ಯಾಲಯ, ಕಟ್ಟಡಗಳ ಮೇಲೆಲ್ಲಾ ಮುಂಜಾನೆಯಿಂದ ಸಂಜೆಯ ವರೆಗೆ ರಾಷ್ಟ್ರ ಧ್ವಜದ ಹಾರಾಟ- ಮುಂಜಾನೆ ಪ್ರಭಾತ ಫೇರಿ, ಅಪರಾಹ್ನ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ. ನಡುವೆ ಸಸಿ ನೆಡುವಾಚರಣೆ,-ಸೈನಿಕರು, ನಾವಿಕರು, ವೈಮಾನಿಕರು, ಪೋಲೀಸರು, ಗೃಹರಕ್ಷಕ ದಳದವರು, ಅಗ್ನಿಶಾಮಕದಳ ಮೊದಲಾದವರು, ಕಾಂಗ್ರೆಸ್ ಸ್ವಯಂ ಸೇವಕರು, ಇರುವಲ್ಲೆಲ್ಲಾ ಅವರ ಶೀಘ್ರ ನಡೆ, ವಂದನಾರ್ಪಣೆಗಳು-ಮಹಾಬಂದರಗಳಲ್ಲಿ ಯುದ್ಧ ಹಡಗಗಳ ಪ್ರದರ್ಶನ-ಸರಕಾರೀ ನಾಯಕರ ಮತ್ತು ಜನ ಪ್ರಮುಖರ ಉತ್ಸವೋಚಿತ ಸತ್ಕಾರಕೂಟಗಳು ಇತ್ಯಾದಿ; ಇತ್ಯಾದಿ. ಆ ದಿನ ವಿಶೇಷ ರೀತಿಯಿಂದ ರಾಷ್ಟ್ರೀಯ ಶೃಂಗಾರ ಮಾಡಿಕೊಳ್ಳದ ಗಣ್ಯ ಕಾರ್ಯಾಲಯಗಳಾಗಲೀ ಒಂದು ಹೊಸತನ ಮೂಡಿ ತೋರದ ಮುಖಗಳಾಗಲೀ ಕಂಡುಬಂದುದು ಅಪರೂಪ. ಎಲ್ಲೆಲ್ಲೂ ರಾಷ್ಟ್ರೀಯ ಹಾಡುಗಳು ಕೇಳಿಬಂದುವು; ವಿವಿಧ ರೀತಿಯ ಕಲಾಪ್ರದರ್ಶನಗಳಾದುವು. ಎಲ್ಲೆಲ್ಲೂ ರಾಷ್ಟ್ರಧ್ವಜ ಹಾರಾಡುತಿತ್ತು. ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನು ಹೊರಡಿಸಿದ್ದುವು. ವೇದಿಕೆಗಳಲ್ಲೂ ಪತ್ರಿಕೆಗಳಲ್ಲೂ ಕಳೆದೆರಡು ವರುಷಗಳ ಸ್ಥಿತಿಗತಿ ವಿಮರ್ಶೆ ಮತ್ತು ಮುಂದಿನ ಮಾರ್ಗದರ್ಶನಗಳಾದುವು. ರಾಷ್ಟ್ರಪಿತನಿಗೆ ತಾವು ಋಣಿಗಳೆಂಬುದನ್ನು ಈ ಸಂದರ್ಭದಲ್ಲಿ ಎಲ್ಲೆಡೆಯವರೂ ಮಾಪಿಸಿಕೊಂಡರು; ಸ್ವಾತಂತ್ರ್ಯಕ್ಕಾಗಿ ಬಲಿದಾನವಾಗಿದ್ದ ಎಲ್ಲರ ಪುಣ್ಯಸ್ಮರಣೆ ಮಾಡಿಕೊಂಡರು. ಬೇರಾವುದರಲ್ಲಿ ಯಾವ ವ್ಯತ್ಯಾಸಗಳಿದ್ದರೂ ರಾಷ್ಟ್ರಧ್ವಜ ಮತ್ತು ಗಾಂಧಿಜೀಯ ಭಾವಚಿತ್ರ ಪ್ರದರ್ಶನಗಳ ಮಟ್ಟಿಗೆ ಎಲ್ಲೆಲ್ಲೂ ಸಮದೃಶ್ಯವೇ. ಸ್ವಾತಂತ್ರ್ಯದ, ಆ ಸ್ವಾತಂತ್ರ್ಯಕ್ಕಾಗಿ ದುಡಿದು ಮಡಿದ ಮಹಾತ್ಮನ ಮತ್ತು ಹುತಾತ್ಮರೆಲ್ಲರ, ಆ ಸ್ವಾತಂತ್ರ್ಯವಿತ್ತ ಸಿಹಿ ಕಹಿಗಳ ಮತ್ತು ಭವ್ಯ ಭವಿಷ್ಯದ ಸ್ಮರಣೆ —ಸ್ವಾತಂತ್ರ್ಯದ ಚಿಹ್ನೆಗಳಿಗೆ ವಂದನೆ —ಸ್ವಾತಂತ್ರ್ಯದ ವಿವಿಧ ರೀತಿಯ ಶ್ರವಣ—ಆಗೋಸ್ತು 15 ಒಂದು ದಿನ ಸರ್ವರ ಆಹ್ನಿಕವೆಂದರೆ ಇವುಗಳೇ. ನವದೆಹಲಿಯ ಚರಿತ್ರಾರ್ಹ ಕೆಂಪುಕೋಟೆಯಲ್ಲಿ, ಮೇಲ್ಗಡೆ ವಿಮಾನಗಳ ವಂದನೆ, ಕೆಳಗಡೆ ಸಶಸ್ತ್ರ ಸೈನಿಕ ದಳದ ವಂದನೆಯು ನಡುವೆ ಪಂಡಿತ ನೆಹರುಗಳು ರಾಷ್ಟ್ರಧ್ವಜವೇರಿಸಿದ್ದರೆ, ಆ ತುದಿಯಿಂದ ಮೂಲದ ವರೆಗೂ ಈ ಗಂಭೀರಾಚರಣೆ ನಡೆದಿದ್ದಿತು. ಪ್ರತಿಯೊಂದು ಪ್ರಾಂತ್ಯದ ಗವರ್ನರರೂ ಪ್ರಧಾನ ಮಂತ್ರಿಗಳಿಂದಾರಂಭಿಸಿ ಜಿಲ್ಲಾ ಕಲೆಕ್ಟರರುಗಳ ವರೆಗಿನ ಆಡಳಿತೆಯ ಅಂತಸ್ತುವಾರು ಶಿರಸ್ಸುಗಳೆಲ್ಲವೂ ರಾಷ್ಟ್ರಧ್ವಜದೇರಾಟದೊಂದಿಗೆ ಸಶಸ್ತ್ರದಳಗಳ ವಂದನೆ ಸ್ವೀಕರಿಸಿದ್ದುವು. ಸ್ವತಂತ್ರ ರಾಷ್ಟ್ರದ ಸ್ವಾತಂತ್ರ್ಯೋತ್ಸವಕ್ಕನುಗುಣವಾಗಿ ಯುದ್ಧ ಹಡಗಗಳ ತೋಪುಗಳು, ಶುಭಸಂಕೇತ ಫಿರಂಗಿಗಳು, ವಿಮಾನ ಝೇಂಕಾರಗಳು ನಿಶ್ಚಿತ ವೇಳೆಗಳಲ್ಲಾಗಿದ್ದುವು. ಅಂತೂ ಸ್ವತಂತ್ರ ಭಾರತದ ದ್ವಿತೀಯ ವರ್ಧಂತ್ಯುತ್ಸವವು ಸರ್ವ ವಿಧದಿಂದಲೂ ರಾಷ್ಟ್ರದ ಸ್ಥಾನ, ಮಾನ, ಘನತೆ, ಗೌರವಗಳಿಗನುಗುಣವಾಗಿಯೇ ಜರಗಿ ಹೋಯಿತು.

ಕರಾಚಿಯ ದುರ್ಘಟನೆ

ಪದ್ಧತಿ ಪ್ರಕಾರ ಲೋಕದ ಯಾವ ರಾಷ್ಟ್ರಗಳಲ್ಲಿ ಭಾರತ ರಾಯಭಾರಿ ಕಚೇರಿಯಿರುವುದೋ ಅಲ್ಲೆಲ್ಲಾ ಭಾರತ ರಾಷ್ಟ್ರಧ್ವಜವೇರಿಸಲ್ಪಟ್ಟಿದ್ದಿತು; ಭಾರತ ರಾಯಭಾರಿಗಳು ಸತ್ಕಾರಕೂಟಗಳನ್ನೇರ್ಪಡಿಸಿದ್ದರು. ಸಂಪ್ರದಾಯಾನುಸಾರವಾಗಿ ವಿವಿಧ ರಾಷ್ಟ್ರಗಳ ಅಧಿನಾಯಕರಿಂದ ಭಾರತ ಸರಕಾರದ ಅಧಿನಾಯಕರಿಗೆ ಅಭಿವಂದನೆಗಳು ಬಂದಿದ್ದುವು. ಏಕಮಾತ್ರವಾದ ಹಾಗೂ ಅತ್ಯಂತ ಶೋಚನೀಯದ ಘಟನೆಯೆಂದರೆ ಕರಾಚಿಯದು; ನವೋದಿತ ಪಾಕಿಸ್ತಾನದ ರಾಜಧಾನಿ ಕರಾಚಿಯಲ್ಲಿ ಭಾರತ ರಾಷ್ಟ್ರಧ್ವಜಕ್ಕೆ ಅಪಮಾನವಾದುದು! ಈ ಘಟನೆಯು ಆಶ್ಚರ್ಯಪಡಿಸಿ ಬಿಡುವಂತಹದಲ್ಲವಾದ್ದರಿಂದ ಅದರ ಗುಣಾವಗುಣಗಳನ್ನು ವಿಮರ್ಶಿಸುವ ಮೊದಲು, ನಡೆದುದೇನು ಎಂಬುದನ್ನು ಮುಂದಾಗಿ ನೋಡಿಕೊಳ್ಳಲಿಕ್ಕಿದೆ. ಆ ಕುರಿತು ಹೊರಬಿದ್ದಿರುವ ವರದಿಗಳಲ್ಲಿ ಪರಸ್ಪರ ತುಸು ವ್ಯತ್ಯಾಸ ಕಂಡುಬಂದರೂ ನವದೆಹಲಿಗೆ ಬಂದಿರುವ ಅಧಿಕೃತ ವಾರ್ತೆ ಮತ್ತು ಪಾಕಿಸ್ತಾನ್ ಸರಕಾರದ ಸ್ವಂತ ಹೇಳಿಕೆಗಳ ಮೇಲಿಂದ ಈ ಕೆಳಗಿನಂತೆ ನಡೆಯಿತೆಂದು ಊಹಿಸಬಹುದು. ಪಾಕಿಸ್ತಾನದಲ್ಲಿ ಭಾರತದ ಹೈಕಮಿಶನರ್ ಆಗಿ ಈಗ ಇರುವವರೆಂದರೆ ಡಾ| ಸೀತಾರಾಮ್. ಭಾರತದ ರಾಜಧಾನಿ ನವದೆಹಲಿಯಲ್ಲಿ ಶೆರ್ ಶಾ ಮೆಸ್‌ನಲ್ಲಿ ಪಾಕಿಸ್ತಾನದ ಹೈಕಮಿಶನರ್ ಕಚೇರಿಯಿರುವಂತೆಯೇ, ಪಾಕಿಸ್ತಾನದ ರಾಜಧಾನಿ ಕರಾಚಿಯ ಬಂದರ್ ರಸ್ತೆಯಲ್ಲಿ ಭಾರತದ ಹೈಕಮಿಶನರರ ಕಚೇರಿಯಿದೆ. ಈ ಕಚೇರಿಯಲ್ಲಿ ಎಷ್ಟೋ ಮಂದಿ ನೌಕರರಿದ್ದಾರೆ. "ಓಂ ಮಂದಿರ' ಅಥವಾ 'ಚಿದಕಾಶ' ಎಂಬ ಹೆಸರಿನ ದೊಡ್ಡ ಕಟ್ಟಡವೇ ಕರಾಚಿಯಲ್ಲಿರುವ ಭಾರತ ಹೈಕಮಿಶನರ್ ಕಚೇರೀ ನೌಕರರ ನಿವಾಸಗೃಹ. ಲೋಕದ ಇತರ ರಾಷ್ಟ್ರಗಳಲ್ಲಿರುವ ಭಾರತ ಕಚೇರಿಗಳು ಮಾಡಿದಂತೆಯೇ ಕರಾಚಿಯಲ್ಲಿರುವ ಭಾರತ ಕಚೇರಿಯೂ ಆಗೋಸ್ತು 15ರ ಸ್ವಾತಂತ್ರ್ಯ ದಿನದಂದು ಉತ್ಸವಾಚರಿಸುವ ಏರ್ಪಾಡು ಮಾಡಿದ್ದಿತು. ಕಚೇರಿಯ ನೌಕರ ವರ್ಗದವರು ತಮ್ಮದೇ ಆದ ಒಂದು ಔತಣ ಕೂಟದೇರ್ಪಾಡನ್ನು ಈ 'ಓಂ ಮಂದಿರ'ದಲ್ಲಿ ಮಾಡಿದ್ದರು. ತಮ್ಮ ಮೇಲಧಿಕಾರಿ ಹೈಕಮಿಶನರ್ ಡಾ. ಸೀತಾರಾಮರನ್ನೇ ಮುಖ್ಯ ಅತಿಥಿಯಾಗಿ ಆಮಂತ್ರಿಸಿದ್ದರು. ತತ್ಸಂಬಂಧ ಭಾರತ ರಾಷ್ಟ್ರಧ್ವಜವನ್ನು ತಮ್ಮ ಕಟ್ಟಡದಲ್ಲಿ ಏರಿಸಿಕೊಂಡರು. ಭಾರತ ರಾಷ್ಟ್ರಧ್ವಜದ ತ್ರಿವರ್ಣಗಳು ಕಣ್ಣಿಗೆ ಬಿದ್ದೊಡನೆಯೇ ಹೊರಗೆ ಮುಸ್ಲಿಮರು ಗುಂಪು ಕೂಡಿದರು; ಭಾರತದಿಂದ ಓಡಿಹೋಗಿದ್ದ ಮುಸ್ಲಿಮ್ ನಿರಾಶ್ರಿತರೇ ಆ ಹಿಂಡಿನಲ್ಲಿ ಅಧಿಕ ಸಂಖ್ಯೆಯಲ್ಲಿದ್ದರೆಂದು ತಿಳಿದು ಬರುತ್ತದೆ. ಈ ಸಂದಣಿಯು ಭಾರತ ಧ್ವಜದೊಂದಿಗೆ ಪಾಕಿಸ್ತಾನ್ ಧ್ವಜವನ್ನೂ ಏರಿಸಬೇಕೆಂದು ಕೂಗುತ್ತಿತು. ಅಲ್ಲಿದ್ದ ಪೋಲೀಸರ ಅಪೇಕ್ಷೆಗನುಸಾರವಾಗಿ ಹಾಗೆಯೇ ಮಾಡಲಾಯಿತು. ಅಷ್ಟರಲ್ಲಿ ಹೊರಗಿನ ಗುಂಪು ಬೆಳೆಯುತ್ತಾ ಬಂದು ಸಂಖ್ಯೆ 2000ಕ್ಕೂ ಮಿಕ್ಕಿ ಹೋಗಿದ್ದಿತು. ಆ ಹಿಂಡು ಮತ್ತೂ ಬೆಳೆಯುತ್ತಾ ಹೋದಂತೆ ಅವರ ಬೇಡಿಕೆಯೂ ಬೆಳೆಯುತ್ತಾ ಬಂತು; ಮತ್ತದು ಭಾರತ ಧ್ವಜದೊಂದಿಗೆ ಪಾಕಿಸ್ತಾನ್ ಧ್ವಜವೇರಿಸಿಕೊಂಡ ಮಾತ್ರಕ್ಕೆ ಸಮಾಧಾನಗೊಳ್ಳದೆ ಭಾರತ ಧ್ವಜವನ್ನೇ ಕಿತ್ತೊಗೆಯಬೇಕೆಂದು ಹಠ ಹಿಡಿಯಹತ್ತಿತು; ಅಲ್ಲಿ ಏರಿಸಿಕೊಂಡ ಪಾಕಿಸ್ತಾನ್ ಧ್ವಜ ಸಣ್ಣದಾಯಿತೆಂದೂ ಅವರ ಆಕ್ಷೇಪವಿತ್ತಂತೆ. ಅದು ಹಿಂದೀ ರಾಷ್ಟ್ರಧ್ವಜ, ಭಾರತ ಸರಕಾರದ ಧ್ವಜವಾಗಿದ್ದರೂ ಈ ತಂಡವದನ್ನು "ಕಾಂಗ್ರೆಸ್ ಧ್ವಜ"ವೆಂದು ಕರೆಯುತ್ತಾ ಕೂಗಾಡುತಿತ್ತು. ಕೂಗಾಟದ ಬೆನ್ನಲ್ಲೇ ಆ ಮಂದಿರದ ಮೇಲೆ ಕಲ್ಲುಗಳ ಸುರಿಮಳೆ; ಅಷ್ಟರಲ್ಲೇ ನಿಲ್ಲದೆ ಕಟ್ಟಡದೊಳಗೆ ಬಲಾತ್ಕಾರದಿಂದ ನುಗ್ಗಲಿಕ್ಕಾರಂಭ. ಕಟ್ಟಡದೊಳಗೆ ನೌಕರರ ಹೆಂಗಸು ಮಕ್ಕಳೂ ತುಂಬಿದ್ದರು. ನುಗ್ಗಿ ಬಂದ ಪುಂಡರ ತಂಡದಿಂದಾಗಿ ಒಳಗಿದ್ದ ಕೆಲವರಿಗೆ ಜಖಮುಗಳಾದುವು, 'ಚಿದಕಾಶ ಭವನ'ವಾನೆ 'ಓಂ ಮಂದಿರ'ದ ಕಿಟಿಕಿ ಬಾಗಿಲುಗಳೊಡೆದುವು. ಅಷ್ಟರಲ್ಲಿ ಹೆಚ್ಚಿನ ಪೋಲೀಸು ದಳ ಬಂದಿತ್ತು; ಅವರು ಜನರನ್ನು ಚದರಿಸುವುದಕ್ಕಾಗಿ ಲಾಠೀಚಾರ್ಜ ಮಾಡಿದರು. ಫಲ ಬರಲಿಲ್ಲ; ಕೊನೆಗೆ ಕಣ್ಣೀರ ಹಬೆ ಪ್ರಯೋಗಿಸಿದರು; ಮತ್ತೂ ಪುಂಡರ ಗುಂಪು ಹತೋಟಿಗೆ ಬಾರದೆ ಅಮಲೇರಿದ ವಾನರ ದಳದಂತೆ ಓಂ ಮಂದಿರದ ಪಾಗಾರಕ್ಕೆ ಹತ್ತಲಾರಂಭಿಸುವುದನ್ನು ಕಂಡ ಪೋಲೀಸರು ಪ್ರಥಮತಃ ಆಕಾಶದ ಕಡೆಗೆ ಗುಂಡು ಹಾರಿಸಿದರು; ಆ ಮೇಲೆ ನೇರಾಗಿ ಜನಸಂದಣಿಯ ಕಡೆಗೇನೇ ಗುಂಡಿಟ್ಟರು. ತತ್ಪರಿಣಾಮವಾಗಿ ಒಬ್ಬ ನಿರಾಶ್ರಿತ ಮುಸ್ಲಿಮ ಅಲ್ಲಿಯೇ ಸತ್ತು ಬಿದ್ದ; ಬೇರೆ ಐವರಿಗೂ ಜಖಮುಗಳಾದುವೆಂದು ತಿಳಿದು ಬಂದಿದೆ. ಪೋಲೀಸರಿಗೂ ಸಣ್ಣ ಪುಟ್ಟ ಘಾಯಗಳಾಗಿವೆಯಂತೆ. ಗುಂಡು ಬಿದ್ದೊಡನೆ ಹಿಂಡು ಚೆಲ್ಲಾಪಿಲ್ಲಿಯಾಯಿತು. ಈ ನಡುವೆ ಪಾಕಿಸ್ತಾನದ ಒಳ ವಿಭಾಗದ ಮಂತ್ರಿ ಖ್ವಾಜಾ ಶಹಬುದ್ದೀನರು ಗಲಭೆಯ ಸ್ಥಳಕ್ಕೆ ಧಾವಿಸಿ ಬಂದು ತನ್ನ ಕಾರಿನ ಮಾಡಿನ ಮೇಲೆ ನಿಂತುಕೊಂಡು ಹುಚ್ಚೆದ್ದ ತಂಡವನ್ನು ಸಮಾಧಾನಿಸಲು ನೋಡಿದ್ದರು. ಅವರ ಮಾತಿಗೆ ಬೆಲೆ ಬರಲಿಲ್ಲ. ಭಾರತದ ಹೈಕಮಿಶನರು ಕರೆ ಹೋದುದರಿಂದ [illegible] ಪಾಕಿ

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ **ಸಂಪಾದನೆ** ಸಮಯದಲ್ಲೇ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ **ರಜತ ಮಹೋತ್ಸವದ ಕ್ಯಾಷ್** ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.

ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

-ಕರಾಚಿಯ ಗೊಂದಲ

ಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಕತ್ ಅಲೀಖಾನರು ಸ್ವತಃ ಅಲ್ಲಿಗೆ ಬಂದರು. ಬಂದವರೇ ಈ ಪುಂಡುಗಾರರನ್ನು ಜರಿದು ಭಂಗಿಸಿ ಮಾತಾಡಿದರು ಏನೇ ನಡೆದರೂ, ಜನರು ತನ್ನೊಡನೆ ಹೇಳಬೇಕಿತ್ತೇ ಹೊರತು, ಕಾನೂನನ್ನು ತಮ್ಮ ಸ್ವಂತ ಕೈಗೆ ತೆಗೆದುಕೊಂಡು ಇಂತಹ ಕೃತ್ಯ ನಡೆಸಿದುದು ತಪ್ಪಾಯಿತೆಂದರು. ಪೋಲೀಸರು ಗೋಲೀಬಾರು ಮಾಡಬೇಕಾಗಿಬಂದು, ಅದರ ದೆಸೆಯಿಂದ ಒಬ್ಬನು ಮಡಿದು ಬಿದ್ದು, ಕೆಲವರು ಜಖಂಗೊಂಡುದಕ್ಕಾಗಿ ಮಿ. ಲಿಯಾಕತರು ದುಃಖ ಸೂಚಿಸಿದಾಗ, ಜನರ ತಂಡದಿಂದ "ಅವನು ಪಾಕಿಸ್ತಾನ್ ಧ್ವಜದ ಗೌರವ ರಕ್ಷಣೆಗಾಗಿ ಕೊಲೆ ಮಾಡಲ್ಪಟ್ಟ. ಆತನೊಬ್ಬ ಹುತಾತ್ಮ" ಎಂಬ ಮಾತು ಕೇಳಿಬಂತು. "ಹಾಗೋ? ಹಾಗಾದರೆ ನೀವು ಮನೆಗೆ ಹೋಗಿ ಅವನ ಆತ್ಮಶಾಂತಿಗಾಗಿ ಪ್ರಾರ್ಥನೆ ನಡೆಯಿಸಿರಿ. ಪಾಕಿಸ್ತಾನ್ ಧ್ವಜದ ಗೌರವ ಪಾಲನೆಯ ಮಟ್ಟಿಗೆ, ಅಂತಹ ಸಂದರ್ಭವೊದಗಿ ಬಂದರೆ ಅದಕ್ಕಾಗಿ ಪ್ರಥಮತಃ ಪ್ರಾಣ ಬಲಿದಾನ ಕೊಡತಕ್ಕವನು ನಾನು!" ಎಂದು ಮಿ. ಲಿಯಾಕತರು ಎದೆತಟ್ಟಿಕೊಂಡರು, ಗುಂಡೆಸೆತದ ಕುರಿತು ವಿಚಾರಣೆ ನಡೆಸುವೆನೆಂದು ಭರವಸೆ ಕೊಟ್ಟರು. ಜನರು ಚದರಿದರು. ಆ ವೇಳೆ ಚದಕಾಶೀ ಮಂದಿರದೊಳಗಿದ್ದ ಅತಿಥಿಗಳನ್ನೆಲ್ಲಾ ಬಲವಾದ ಪೋಲೀಸು ಪಹರೆಯೊಂದಿಗೆ ಅವರವರ ಸ್ಥಳಕ್ಕೆ ಮುಟ್ಟಿಸಬೇಕಾಯಿತು. ಕರಾಚಿಯ ಕೆಲವೆಡೆ 24 ತಾಸುಗಳ 'ಕರ್ಫ್ಯೂ' ಜಾರಿಗೆ ಬಂತು. ಆದರೆ ಆ ಮೇಲೇನೂ ಗಲಭೆಯಿರಲಿಲ್ಲ. ಆ ಗಲಭೆಯು ವಿದ್ಯಮಾನವೇನು? ಪೋಲಿಸರು ಗುಂಡು ಹಾರಿಸುವುದು ಅಗತ್ಯವಿತ್ತೆ? ಶಾಂತಿ ಸ್ಥಾಪನೆಗಗತ್ಯವುಳ್ಳಷ್ಟೇ ಬಲಪ್ರಯೋಗವನ್ನು ಪೋಲಿಸರು ಮಾಡಿದ್ದರೆ? ಎಂಬುದನ್ನು ತನಿಖೆ ಮಾಡಿ ವರದಿಯೊಪ್ಪಿಸಬೇಕೆಂದು ಈಗ ಪಾಕಿಸ್ತಾನ್ ಸರಕಾರವು ಮಿ. ಜಸ್ಟೀಸ್ ಮೆಲ್ವಾನಿಯವರನ್ನು ನೇಮಿಸಿದೆ

ಇದಕ್ಕೇನು ಪ್ರಾಯಶ್ಚಿತ್ತ?

ಕರಾಚಿಯ ಘಟನೆಯು ಭಾರತ ಸರಕಾರಕ್ಕೆ ಕರ್ತವ್ಯ ಪ್ರೇರಣೆಕೊಡುವುದಕ್ಕಿಂತ ಹೆಚ್ಚಾಗಿ ಭಾರತೀಯ ಜನತೆಯ ಜಡ ಮನೋವೃತ್ತಿಯ ಮೇಲೆ ಬಿಸಿ ಗೆರೆಯಾಗಿ ಬಿದ್ದಿದೆ ಎನ್ನಬಹುದು. ತನ್ನ ಧ್ವಜಕ್ಕಾಗುವ ಅಪಮಾನವನ್ನು ಎಲ್ಲಕ್ಕಿಂತ ಹೆಚ್ಚಿನ ಆಘಾತವೆಂದು ಪ್ರತಿಯೊಂದು ಸ್ವತಂತ್ರ ರಾಷ್ಟ್ರವೂ ಗಣಿಸುತ್ತದೆ. ಎರಡೇ ವರುಷಗಳ ಮೊದಲು ಯಾವ ಭಾಗವು ಅಖಂಡ ಭಾರತದ ಅಂಗವಾಗಿದ್ದಿತೋ ಆ ಪಾಕಿಸ್ತಾನದಲ್ಲೇ ಮೊನ್ನೆ ಭಾರತರಾಷ್ಟ್ರಧ್ವಜಕ್ಕೆ ಸರಕಾರವು ಗಣಿಸತಕ್ಕ ಅಪಮಾನವಾಯಿತೇ, ಎಂಬುದು ಮೊದಲನೇ ಪ್ರಶ್ನೆ. ಯಾವುದೇ ರೀತಿಯ ಅಪಮಾನವಾದರೂ ಆಯಿತೇ ಎಂಬುದು ಎರಡನೇ ಪ್ರಶ್ನೆ. ಈ ರೀತಿ ಧ್ವಜದ ಅಪಮಾನದಲ್ಲೂ ಎರಡು ವರ್ಗವಿದೆ ಎಂಬ ಸೂಕ್ಷ್ಮ ವಿಚಾರವನ್ನು ಈ ಸಂದರ್ಭದಲ್ಲಿ ಗಮನಿಸತಕ್ಕದ್ದು. ಇಲ್ಲಿ ಮೊದಲನೆಯ ಪ್ರಶ್ನೆಗೆ "ಇಲ್ಲ" ಎಂಬ ಉತ್ತರವೂ ಎರಡನೆಯ ಪ್ರಶ್ನೆಗೆ "ಹೌದು" ಎಂಬ ಉತ್ತರವೂ ದೊರೆಯುತ್ತಿದೆ. ಒಂದು ರಾಷ್ಟ್ರದಲ್ಲಿರುವ ವಿದೇಶದ ರಾಯಭಾರಿ ಕಚೇರಿಯ ಕಾರ್ಯ ಮತ್ತು ಕ್ಷೇತ್ರಗಳ ಮೇಲಿನ ಸರ್ವಾಧಿಕಾರವೂ ಆ ಕಚೇರಿಯದು ಮತ್ತು ಆ ಕಚೇರಿ ಯಾವ ರಾಷ್ಟ್ರದ್ದೋ ಆ ರಾಷ್ಟ್ರದ್ದೇ ಹೊರತು ಕಚೇರಿ ಯಾವ ರಾಷ್ಟ್ರದ ನೆಲದಲ್ಲಿದೆಯೋ ಆ ರಾಷ್ಟ್ರದ್ದಲ್ಲ. ಇದು ಅಂತರ್ರಾಷ್ಟ್ರೀಯ ನಿಯಮ. ಆದ್ದರಿಂದಲೇ ಮೊನ್ನೆ ಅಗೋಸ್ತು 15ರಲ್ಲಿ ಲಂಡನ್, ವಾಷಿಂಗ್ಟನ್ ಮತ್ತಿತರ ಪರದೇಶಗಳ ರಾಜಧಾನಿಗಳಲ್ಲಿರುವ ಭಾರತ ಕಚೇರಿಗಳಲ್ಲಿ ಭಾರತ ಧ್ವಜವೇರಿಸಲ್ಪಟ್ಟಂತೆ ಪಾಕಿಸ್ತಾನದ ರಾಜಧಾನಿ ಕರಾಚಿಯಲ್ಲಿರುವ ಭಾರತ ಕಚೇರಿಯಲ್ಲಿಯೂ ಧ್ವಜವೇರಿಸಲ್ಪಟ್ಟಿದ್ದಿತು. ಭಾರತೀಯರು ತಮ್ಮ ಹಕ್ಕಿನ ನೆಲೆಯಲ್ಲಿ ತಮ್ಮ ಧ್ವಜವನ್ನು ಏರಿಸಿಕೊಂಡರೆಂದಿಷ್ಟೇ ಇದರ ಅರ್ಥ. ಹೊರತು ಪಾಕಿಸ್ತಾನದೊಳಗಡೆ ಭಾರತೀಯರು ತಮ್ಮ ಧ್ವಜವನ್ನು ಊರಿಬಿಟ್ಟರೆಂಬ ತಾತ್ಪರ್ಯವಲ್ಲ. ಕರಾಚಿಯಲ್ಲಿ ಭಾರತ ಧ್ವಜವೇರಿದ್ದಲ್ಲಿಗೆ ಪಾಕಿಸ್ತಾನಿಗಳು ನುಗ್ಗಿ ಬಂದುದು, ಭಾರತದೊಳಗಡೆಯಲ್ಲಿ ಏರಿದ್ದ ರಾಷ್ಟ್ರಧ್ವಜವನ್ನು ಕಿತ್ತೊಗೆಯುವೆವೆಂದು ಅತಿಕ್ರಮ ಪ್ರವೇಶ ಮಾಡಿದರೆಷ್ಟು ಅಪರಾಧವೋ ಅಷ್ಟೇ ಅಪರಾಧ. ಸಂಗತಿ ಜ್ಞಾನವಿದ್ದವರಾರೂ ಇಂತಹ ಅಪರಾಧ ಮಾಡಲು ಹೋಗುವಂತಿಲ್ಲ. ನಿದರ್ಶನಕ್ಕಾಗಿ ಲಂಡನಿನಲ್ಲಿರುವ ಭಾರತ ರಾಯಭಾರಿ ಕಚೇರಿಯನ್ನೇ ತೆಗೆದುಕೊಳ್ಳೋಣ. ಅಲ್ಲಿಯ ಜನತೆಯು 'ವಂಶರಿಯುತಿದ್ದರೆ, ಎಷ್ಟೋ ವರುಷಗಳಿಂದ ತಮ್ಮ ಅಧೀನ ರಾಷ್ಟ್ರವಾಗಿದ್ದ ಭಾರತವು ಸ್ವತಂತ್ರವಾಗಿ ಈಗ ತಮ್ಮ ನಡುವಿನಲ್ಲೇ ಸ್ವತಂತ್ರ ಭಾರತದ ಧ್ವಜವು ಹಾರಾಡುವುದು ಅವರಿಗೆ ಅಸಹ್ಯವಾಗುತಿತ್ತು; ಅವರು ಗೊಂದಲವೇಳಬೇಕಿತ್ತು. ಆದರಲ್ಲಿಯ ಜನತೆ ಬುದ್ಧಿ ಬಲಿತವರು; ಅಲ್ಲಿಯ ಮುತ್ಸದ್ದಿಗಳು ಭಾರತ ರಾಷ್ಟ್ರಧ್ವಜಕ್ಕೆ ತಲೆಬಾಗುವಷ್ಟು ತುಲನಾತ್ಮಕ ಬುದ್ಧಿಯುಳ್ಳವರು. ಅಷ್ಟೇಕೆ? ಯಾವ ಪಾಕಿಸ್ತಾನದ ಜನತೆಯಲ್ಲಿ ಭಾರತ ರಾಷ್ಟ್ರಧ್ವಜದ ದೃಶ್ಯವು ಮೈಯುರಿಯನ್ನು ನಿರ್ಮಿಸಿತೋ ಆ ಪಾಕಿಸ್ತಾನದ ಧ್ವಜವು ನವದಿಲ್ಲಿಯಲ್ಲಿರುವ ಪಾಕಿಸ್ತಾನ್ ಹೈಕಮಿಶನರರ ಕಚೇರಿಯಲ್ಲಿ ಕಳೆದ ಹಲವು ತಿಂಗಳುಗಳಿಂದ ಹಾರಾಡುತ್ತಲೇ ಇದೆ. ಅಂತಹ ಹಾರಾಟವನ್ನು ಸಹಿಸಿಕೊಂಡ ಭಾರತೀಯರು "ಬುದ್ಧಿಯುಳ್ಳವರು" ಎಂದಾಯಿತೇ ಹೊರತು ದುರ್ಬಲರೆಂದಾಗಲಿಲ್ಲ. ಪಾಕಿಸ್ತಾನೀ ಮುಸ್ಲಿಮರಿಗೆ ಭಾರತೀಯರು ಹಕ್ಕು ಪ್ರಕಾರ ಏರಿಸಿದ್ದ ಭಾರತೀಯ ಧ್ವಜದ ನೋಟ ಅಸಹ್ಯವಾಯಿತೆಂಬುದು ಅವರ ಮನೋದೌರ್ಬಲ್ಯ ಮತ್ತು ಅಜ್ಞಾನವನ್ನು ಸೂಚಿಸುತ್ತದಲ್ಲದೆ ಬೇರೇನನ್ನೂ ಸೂಚಿಸುತ್ತಿಲ್ಲ. ಇಂತಹ ಸಂದರ್ಭಗಳಲ್ಲಿ ಹಕ್ಕು ಪ್ರಕಾರ ಹಾರಾಡುವ ವಿದೇಶೀ ಧ್ವಜಕ್ಕೆ ಅಪಮಾನವಾಗದಂತೆ ನೋಡುವ ಜವಾಬ್ದಾರಿಯು ಸ್ಥಳೀಯ ಸರಕಾರದ್ದು. ಪಾಕಿಸ್ತಾನೀ ಜನತೆ, ಪಾಕಿಸ್ತಾನೀ ಸೈನಿಕರು, ಪಾಕಿಸ್ತಾನೀ ಮಂತ್ರಿಗಳು ಎಂದು ವಿಂಗಡಿಸಿ ನೋಡುವ ಕೆಲಸ ಈ ಮಟ್ಟಿಗೆ ಭಾರತ ಸರಕಾರಕ್ಕಿಲ್ಲ. ಪಾಕಿಸ್ತಾನಿಗಳಿಂದ ತಮಗೆ ಅಪಮಾನವಾಯಿತೆಂದೊಡನೆ ಅದಕ್ಕಾಗಿ ಪಾಕಿಸ್ತಾನ್ ಸರಕಾರವನ್ನು ಹೊಣೆ ಮಾಡುವದು ಭಾರತ ಸರಕಾರದ ಕರ್ತವ್ಯ. ಆದರಿಲ್ಲಿ ಪಾಕಿಸ್ತಾನ್ ಸರಕಾರವು ಕರ್ತವ್ಯ ಭ್ರಷ್ಟವಾಗಿಲ್ಲ. ಅದು ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡು ಕರಾಚಿ ದುರಂತವನ್ನು ತಪ್ಪಿಸಿ ಹಾಕಿದೆ. ತನ್ನ ಒಳಗಡೆಯಲ್ಲಿ ಹಕ್ಕು ಪ್ರಕಾರ ಹಾರಾಡುವ ನೆರೆಯ ರಾಷ್ಟ್ರ ಧ್ವಜದ ಕುರಿತು ತನ್ನ ಪಾಲಿನ ಕರ್ತವ್ಯವನ್ನು ಸಂದರ್ಭೋಚಿತವಾಗಿ ಮಾಡಿದಂತಿದೆ. ಆದ್ದರಿಂದ ಕರಾಚೀ ಘಟನೆಗಾಗಿ ಪಾಕಿಸ್ತಾನ್ ಸರಕಾರವನ್ನು ಕಟ್ಟುಗ್ರ ಅಪರಾಧಿಯಾಗಿ ಭಾರತ ಸರಕಾರವು ಗಣಿಸದಂತಾಗಿದೆ. ಸ್ವತಃ ಇಲ್ಲಿಯ ಸರಕಾರವು ಕಾರ್ಯಕ್ಕೆ ಕೊಳ್ಳಲಾಗುವ ಅಪಮಾನ ಅಥವಾ ಅಪರಾಧವಾವುದೂ ಕರಾಚಿಯಲ್ಲಿ ಭಾರತಕ್ಕಾಗಿಲ್ಲವೆಂದು, ಈ ದಿನ ಇವೆರಡು ರಾಷ್ಟ್ರಗಳ ಸರಕಾರಗಳೊಳಗಿರುವ ಸಂಬಂಧವನ್ನಾಧರಿಸಿ ಕಟ್ಟಿಕೊಳ್ಳಬಹುದು.

ವಿಚಾರಣೀಯ ಅಂಶ.

ಆದರಿಲ್ಲಿ ಒಂದು ವಿಷಯವನ್ನು ಮರೆಯಲಾಗುವದಿಲ್ಲ. ಪಾಕಿಸ್ತಾನದೊಡನೆ ಕಲಹಕ್ಕೊಂದು ಕಾರಣ ಹುಡುಕುತ್ತಿರುವ ರಾಷ್ಟ್ರ ಭಾರತವಾಗಿದ್ದರೆ, ಕರಾಚಿಯ ದುರಂತವನ್ನು ಪಾಕಿಸ್ತಾನವು ತನಗೆ ಮಾಡಿದ ಅಪಮಾನವೆಂದೇ ವಾದಿಸಿ, ಅದು ಕ್ಷಮೆಯಾಚಿಸತಕ್ಕದ್ದೆಂದು ಹಠಹಿಡಿಯಬಹುದಿದ್ದಿತು. ಪಾಕಿಸ್ತಾನದಲ್ಲಿರುವ ತಮ್ಮ ಹಕ್ಕಿನ ಕಟ್ಟಡದ ಮೇಲೆ ತಮ್ಮ ಧ್ವಜವನ್ನೇರಿಸಿಕೊಳ್ಳುವಾಗ ಭಾರತೀಯರು ಅದರ ಜತೆಯಲ್ಲಿ ಪಾಕಿಸ್ತಾನದ ಧ್ವಜವನ್ನೇರಿಸಿಕೊಳ್ಳಬೇಕೆಂದಿಲ್ಲ; ಮನಸ್ಸಿದ್ದರೆ ಎರಡನ್ನೂ ಜತೆಯಲ್ಲಿಡಬಹುದು, ಇಲ್ಲವೇ ಪರಕೀಯ ಧ್ವಜವನ್ನು ಬಿಡಬಹುದು. ಆದರೆ ಮೊನ್ನೆ ಕರಾಚಿಯಲ್ಲಿ ಈ ಘಟನೆಗೆ ಸಂಬಂಧಪಟ್ಟ ಭಾರತ ಕಚೇರಿಯವರಿಗೆ ಆ ಸ್ವಾತಂತ್ರ್ಯವಿರಲಿಲ್ಲ. ಪಾಕಿಸ್ತಾನ್ ಧ್ವಜವನ್ನೂ ಏರಿಸಿಕೊಳ್ಳಲೇ ಬೇಕೆಂದು ಅವರನ್ನು ಬಲಾತ್ಕರಿಸಲಾಯಿತು. ಕೇವಲ ತಂಟೆ ನಿವಾರಿಸುವ ಉದ್ದೇಶದಿಂದಾದರೂ ಪಾಕಿಸ್ತಾನ್ ಪೋಲೀಸರೂ ಆ ಕೆಲಸ ಮಾಡಿಸಿದರೆಂದು ತಿಳಿದುಬಂದಿದೆ. ಗಲಭೆಯು ಹತೋಟಿ ತಪ್ಪಿ ಬೆಳೆದಾಗ ಭಾರತ ಧ್ವಜವನ್ನಿಳಿಸಿ ಬಿಟ್ಟದ್ದರೆಂದೂ ಒಂದು ವಾರ್ತೆಯಿದೆ. ಸಂಗತಿ ಹೇಗಿದ್ದರೂ, ಆ ಘಟನೆಯನ್ನು ಸವಿವರವಾಗಿ ವಿಂಗಡಿಸಿ ನೋಡುವದಕ್ಕಿಂತ ಅದರ ನಮೂನೆಯ ಮೇಲಿಂದ ತೀರ್ಮಾನಿಸಿಕೊಳ್ಳುವುದೇ ಮುಖ್ಯವಾದುದು. ಆ ಪುಂಡಾಟವು ಸ್ವತಃ ಪಾಕಿಸ್ತಾನ್ ಸರಕಾರದ್ದೆಂತೂ ಅಲ್ಲ; ಅದೀ ಘಟನೆಯನ್ನು ನಿರೀಕ್ಷಿಸಿರಲಿಲ್ಲ. ಮಾತ್ರವಲ್ಲ, ಹಾಗಾಗಬಾರದಿತ್ತೆಂಬುದೇ ತನ್ನ ಧೋರಣೆಯೆಂಬುದನ್ನು ಅದು ಕಾರ್ಯತಃ ಅಲ್ಪ ಸ್ಪಷ್ಟಪಡಿಸಿದೆ. ತನಗೆ ಸಮ್ಮತಿಯಿಲ್ಲದ ಅನಿರೀಕ್ಷಿತ ಅತ್ಯಾಚಾರವೊಂದು ತನ್ನವರಿಂದ ನಡೆಯುವಾಗ ಒಂದು ಸರಕಾರವೇನನ್ನು ಮಾಡಬೇಕೋ ಅದನ್ನು ಪಾಕಿಸ್ತಾನ್ ಸರಕಾರವು ಶಕ್ಯವಿದ್ದಷ್ಟು ಮಾಡಿದಂತೆ ತೋರಿಬಂದಿದೆ. ತನ್ನ ಧ್ವಜಕ್ಕೆ ಅಪಮಾನವಾಗುವ ಸಂದರ್ಭದಲ್ಲಿ ಅದರ ರಕ್ಷಣೆಗೆ ಸ್ವತಃ ಭಾರತ ಸರಕಾರವಿದ್ದಲ್ಲಿ ಯಾವ ಕಾರ್ಯ ಕೈಕೊಳ್ಳುತಿತ್ತೋ ಆ ಕಾರ್ಯವನ್ನೇ ತನ್ನ ಮರ್ಜಿಗನುಸಾರ

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 298/49. O. S. 178/45

ಪದ್ಮನಾಭ ಶ್ಯಾನಭಾಗ - ವಾದಿ.

ಅಂಣಪ್ಪ ಶೇರೆಗಾರ (ಪೌತಿ) ಸಹಾ ಪ್ರತಿವಾದಿರು.

2. ವೆಂಕಟ್ರಮಣ ಶೇರಿಗಾರ, ಅಂಣಪ್ಪ ಶೇರೆಗಾರನ ಮಗ, ಯಡ್ತರೆ ಗ್ರಾಮ.

ಅರ್ಜಿದಾರನು ಜಾಹೀರು ಮಾಡಿಕೊಳ್ಳುವದೇನೆಂದ್ರೆ,

ಮೇಲ್ಕಂಡ ಡಿಕ್ರಿಯು ಸಮಾಧಾನಾರ್ಥವಾಗಿ ನಡ್ಸಿದ ಅಮ್ಲುಜಾರಿಯು ಅರ್ಜಿರೆ ತನ್ನ ಬಗ್ಗೆ 2-9-49ಕ್ಕೆ ಯುಮೋಕಾಗಿಯದೆ. ಸದ್ರಿ ಅಮ್ಲುಜಾರಿ ಯಾಕೆ ನಡಿಸಕೂಡದು ಎಂಬ ಸಬಬು ತೋರಿಸಲಿಕ್ಕೆ ನೀವು ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿದೆ.

G. Sanjiva Rao
Pleader for Petitioner

Kundapoor
Date 13-8-49

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ವಾಗಿ ಕರಾಚಿಯಲ್ಲಿ ಭಾರತ ಧ್ವಜದ ರಕ್ಷಣೆಗಾಗಿ ಪಾಕಿಸ್ತಾನ್ ಸರಕಾರವು ಮಾಡಿದಂತಿದೆ ಒಂದು ತಪ್ಪು ತನ್ನಿಂದಾಗಿ ಹೋದಲ್ಲಿಯೇ ಅದನ್ನು ಸಾಧ್ಯವಿದ್ದಷ್ಟು ತಿದ್ದಿಕೊಳ್ಳುವ ಪ್ರಯತ್ನವನ್ನು ಪಾಕಿಸ್ತಾನ ಮಾಡಿದೆ ಎಂಬುದೇನೋ ನಿಜ; ಆದರೆ ನಡೆಯಬಾರದುದು ನಡೆದುದೂ ನಿಜವಷ್ಟೆ? ಅದನ್ನು ತಿದ್ದಿಕೊಳ್ಳುವ ತನ್ನ ಕರ್ತವ್ಯದೊಂದು ಅಂಶವಾಗಿ ಪಾಕಿಸ್ತಾನ್ ಸರಕಾರವು ಭಾರತ ಸರಕಾರಕ್ಕೆ ಸಂತಾಪ ಸೂಚಿಸಬೇಕಾದುದು ಅಗತ್ಯ; ಅದು ರಾಷ್ಟ್ರೀಯ ಸಭ್ಯತೆಯ, ನಾಗರಿಕತೆಯ ಲಕ್ಷಣ. ಪಾಕಿಸ್ತಾನವೇಕೆ ಹಾಗೆ ಮಾಡಿಲ್ಲ?

"ನಮ್ಮ ಧ್ವಜಕ್ಕಾಗಲೀ ಅಭಿಮಾನಕ್ಕಾಗಲೀ ಧಕ್ಕೆ ಕೊಡುವಷ್ಟು ಕರಾಚಿ ಗೊಂದಲ ಬೆಳೆದಿಲ್ಲ; ಪಾಕಿಸ್ತಾನದ ಜನತೆಯ ಭ್ರಾಂತಿ ಮತ್ತು ಪಾಕಿಸ್ತಾನ್ ಸರಕಾರದ ಕರ್ತವ್ಯ ಬುದ್ಧಿ ಅಲ್ಲಿ ಘರ್ಷಿಸಿಕೊಂಡವು ಹೊರತು ಬೇರೇನಿಲ್ಲ" ಎಂದು ನಾವು ಸಮಾಧಾನಪಡಲಿದ್ದಿಯಿಲ್ಲವೆನೋ ನಿಜ. ಇಲ್ಲಿ ನಾವದಲೇ ಪ್ರಸ್ತಾಪಿಸಿರುವಂತೆ ಕರಾಚೀ ದುರಂತದಲ್ಲಿ ಪಾಕಿಸ್ತಾನ್ ಜನರ ಅಜ್ಞಾನ ಮತ್ತು ಅಂಧ ಮನೋವೃತ್ತಿಯಲ್ಲದೆ ಬೇರಾವ ದುರ್ಗುಣವೂ ಪ್ರದರ್ಶಿತವಾಗಿಲ್ಲ. ಆದರೆ ಆ ಮನೋವೃತ್ತಿಯೆಂತಹದೆಂಬುದನ್ನು ಸರಿಯಾಗಿ ಮನವರಿಕೆ ಮಾಡಿಕೊಳ್ಳಬೇಕಾದುದು ಅಗತ್ಯ. ಅಂತಹ ಸಂಕುಚಿತ ದುರ್ಭಾವನೆಯೊಂದಿಗೇನೇ ಭಾರತವು ವ್ಯವಹಾರ ಹೂಡಬೇಕಾದ ಸಂದರ್ಭಗಳಿವೆ. ಮಿ. ಲಿಯಾಖತ್ ಅಲೀಖಾನರು ಕಟ್ಟಿಕೊಂಡಿರುವ ಸರಕಾರದ ಮನೋಧರ್ಮ ಹೇಗಿದ್ದರೂ ಲಿಯಾಖತರು ಪ್ರತಿನಿಧಿಸಿರುವ ಜನತೆಯ ಮನೋಗತಿ ಭಾರತದ ಹಕ್ಕನ್ನು ಗೌರವಿಸುವಂತಹದಲ್ಲವೆಂಬುದು ಕರಾಚಿ ದುರಂತದಿಂದ ಸ್ಪಷ್ಟವಾಗಿದೆ. ರಾಷ್ಟ್ರದ ವಿಭಜನೆಯೇ ಗುರಿಯಾಗಿದ್ದ ಮುಸ್ಲಿಂಲೀಗ್

Notice.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. P. No. 38/1949.

ಅಕ್ಕಮ್ಮ ಸೆಡ್ತಿ. ಎಲ್ಲಪ್ಪ ಸೆಟ್ರ ವಿಧವೆ, ಉಡ್ಪಿ ತಾಲ್ಲೂಕು ಮಲ್ಲಾರು ಗ್ರಾಮದಲ್ಲಿರುವವರು. ಅರ್ಜಿದಾರಳು.

ಅರ್ಜಿದಾರಳ ಗಂಡ ತಾ 18-2-1948ರಲ್ಲಿ ಮಲ್ಲಾರು ಗ್ರಾಮದಲ್ಲಿ ಮೃತಪಟ್ಟ ಎಲ್ಲಪ್ಪ ಸೆಟ್ರೀಗೆ – ಉಡ್ಪಿ ತಾಲ್ಲೂಕು ಮಜೂರು ಗ್ರಾಮದ ಪಂಜಿತ್ತೂರಲ್ಲಿರುವ ಗಿರಿಯಮ್ಮ ಸೆಡ್ತೀರ ಮಗಳು ಅಚ್ಚ ಸೆಡ್ತಿ–ಯವಳ ಮಗ ವಾಸು ಸೆಟ್ಟಿ ಕೂಡಾ 2 ಜನರು ರೂಪಾಯಿ 100-0-0ಕ್ಕೆ ತಾ 9-5-47ರಲ್ಲಿ ಬರಕೊಟ್ಟಿರುವ ಡಿಮಾಂಡ್ ನೋಟಿನ ಬಾಬ್ತು ಅಸಲು ಬಡ್ಡಿ ವ್ಯವಹಾರವನ್ನು ವಸೂಲು ಪಡೆಯುವರೆ– ಸಡ್ರಿ ಎಲ್ಲಪ್ಪ ಸೆಟ್ಟಿಯು ತಾ 24-8-1944ರಲ್ಲಿ ವಿ. ಸಿ. ಬರೆದಿಟ್ಟ ವೀಲು ಪ್ರಕಾರ ಅರ್ಜಿದಾರಳೇ ಹಕ್ಕುದಾರಳೆಂತಲೂ–ಆ ಕುರಿತು ಅರ್ಜಿದಾರಳ ಹೆಸರಿಗೆ ಸಕ್ಸೆಶ್ಯನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಕೇಳಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ 7-9-1949ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಹೇಳುವವರು ಸದ್ರಿ ತಾ.7-9-1949ನೇ ಬುಧವಾರ ದಿವಸ ಬೆಳಗ್ಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಕರಾರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

P. V. Acharya.
Vakil for Petitioner

ಉಡ್ಪಿ
ತಾ 14—8—49.

ಮನೋವೃತ್ತಿಯು ಆ ಗುರಿ ಸಿದ್ಧಿಸಿದ ಮೇಲಾದರೂ ಬದಲಾಗಬೇಕಿತ್ತು. ಹೊಂದವೆ ಪಾಕಿಸ್ತಾನದಲ್ಲಿ ಪ್ರಬಲಾಕಾರ ಧರಿಸಿದೆ ಎಂಬುದೀಗ ಖಚಿತವಾಗಿದೆ. ಒಂದು ಗುರಿ ಮುಟ್ಟಿದ ಮೇಲೂ ಈ ಭೇದ ಭಾವನೆ, ದ್ವೇಷ ಬುದ್ಧಿ ಉಳಿದುಕೊಂಡಿರುವುದು ಇನ್ನೇನನ್ನು ಸಾಧಿಸಬೇಕಾದು? ಯಾವ ದ್ವೇಷ ಭಾವನೆಯ ಕಾರಣಕ್ಕಾಗಿ ರಾಷ್ಟ್ರ ವಿಭಜನೆಯಾಯಿತೋ ಆ ಭಾವನೆಯು ಅನಂತರವೂ ಉಳಿದುಕೊಂಡಿದೆಯಾದರೆ ಅದನ್ನೂ ಶಮನಿಸುವುದು ಅನಿವಾರ್ಯವಾಗದೆ? ನೆರೆಯ ರಾಷ್ಟ್ರದ ಜನತೆಗೆ ಇಂತಹ ಮಂಕು ಬುದ್ಧಿಯ ದ್ವೇಷ ಭಾವನೆಯಿರುವಾಗ, ಆ ನೆರೆಯ ರಾಷ್ಟ್ರದ ಸರಕಾರವೂ ಈ ಮಂಕು ಬುದ್ಧಿಯ ಜನತೆಯ ಪ್ರತಿನಿಧಿಯೇ ಆಗಿರುವಾಗ, ಭಾರತವು ಈ ನೆರೆ ರಾಷ್ಟ್ರದ ಸಂಬಂಧ ಇಟ್ಟುಕೊಳ್ಳಬೇಕಾಗಿ ಬರುವ ಸಂದರ್ಭಗಳಲ್ಲೆಲ್ಲಾ ಆ ಮಂಕು ಬುದ್ಧಿಯೊಡನೆಯೇ ವ್ಯವಹರಿಸಬೇಕಾಗಿ ಬರಲಾರದೆ? ಶುದ್ಧ ಮನಸ್ಸಿನಿಂದ, ಭರವಸೆಯಿಂದ ಭಾರತವು ಅಂತಹ ವ್ಯವಹಾರ ನಡೆಸುವೆನೆಂದರಾದೀತೆ? ಅಂಜಿಕೆ, ಅಪನಂಬಿಕೆಗಳಿಂದಲೇ ನೋಡಬೇಕಾದೀತು; ಸದಾ ಕಾಲ ಸಂದಿಗ್ಧತೆಯೇ ಉಳಿದೀತು. ದರ್ಬಾರ್ ಪ್ರಭಾವ ಕಾಲದ ಹೈದರಾಬಾದಿನೊಡನಿಟ್ಟುಕೊಂಡ ಸಂಬಂಧದಂತಹ ಸಂಬಂಧವೇ ಆದೀತು. ಹಾಗಾದ ಮೇಲೆ ಕೊನೆಯ ಪರಿಣಾಮ ಕೂಡಾ ಹಾಗೆಯೇ ಆಗುವದು ಅನಿವಾರ್ಯ! ಆದ್ದರಿಂದ ಒಂದು ಸಂಗತಿ ಸ್ಪಷ್ಟವಿದೆ:- ಪಾಕಿಸ್ತಾನದ ಬುದ್ಧಿ ಬದಲಾಗದಿದ್ದರೆ ಭಾರತಕ್ಕೆ ನೆಮ್ಮದಿಯಿಲ್ಲ. ಆ ಬುದ್ಧಿ ಬದಲಾವಣೆಗೆಂದು ಒಂದು ತುಂಡು ಭೂದಾನವನ್ನೇ ಮಾಡಿದ್ದ ಭಾರತೀಯರ ತ್ಯಾಗವು ಪೂರ್ಣ ನಿರರ್ಥಕವಾಗಿರುವಾಗ, ಇನ್ನಂತಹ ರಿಯಾಯಿತಿಯೆಂಬುದಿರಲೇ ಕೂಡದು. ಈಗ ಎರಡೇ ಹಾದಿಯುಳಿದಿದೆ. ಒಂದೋ ಪಾಕಿಸ್ತಾನವು ಹೃದಯ ಪರಿವರ್ತನೆಗೊಳ್ಳಬೇಕು; ಇಲ್ಲವಾದರೆ ಆ ಹೃದಯದಲ್ಲಿ ಈಗ ತುಂಬಿರುವ ದುರ್ಭಾವನೆ, ದುರಹಂಕಾರಗಳನ್ನು ಸದೆ ಬಡಿದು ಅವುಗಳ ಸ್ಥಾನದಲ್ಲಿ ಒತ್ತಾಯಪೂರ್ವಕ ನಾಗರಿಕತೆ, ವಿನಯಶೀಲತೆಯನ್ನು ತುಂಬಿಸುವ ಕೆಲಸ ಭಾರತದಿಂದಾಗಬೇಕು; ಇಷ್ಟೆ!

ಸ್ವತಂತ್ರ ಅಧಿಕಾರ ಬಂದ ಮೇಲೆ ಎಲ್ಲರಲ್ಲೂ– ಮುಖ್ಯವಾಗಿ ಕಾಂಗ್ರೆಸಿಗರಲ್ಲಿ–ಅಧಿಕಾರ ದಾಹ, ಸ್ಥಾನಮಾನಾಭಿಲಾಷೆ ಹಬ್ಬಿ ಹೋಗಿದೆ ಎಂಬ ಅಪವಾದ ಕೇಳಿಬರುತ್ತಿದೆ. ಅಂತಹ ಸ್ಥಾನ ಸ್ಪರ್ಧೆಗಳಲ್ಲಿ ಪರಾಭವಗೊಂಡವರು ನಿರಾಶೆಯಿಂದ ಈ ರೀತಿ ಪ್ರಚಾರಮಾಡುತ್ತಿರುವ ನಿದರ್ಶನಗಳು ಪ್ರತ್ಯೇಕವಿವೆ, ಎಂಬುದೇನೋ ನಿಜ; ಆದರೆ ವಸ್ತುಸ್ಥಿತಿ ಕೂಡಾ ನಿಜಕ್ಕೂ ಹೀಗಿದೆ. ಯಾವ ಕಾರಣದಿಂದಲೇ ಇರಲಿ, ಅಧಿಕಾರ ಸ್ಥಾನಗಳಿಗಾಗಿ ಅಭಿಲಾಷೆ ಪಡಲಾರದ ನಿರಾಸಕ್ತರಿಗೆ ಎಲ್ಲೆಲ್ಲೂ ಮುಂದಟ್ಟುಗುತ್ತಿರುವ ವಿಷಯವಿದು. ಇಂತಹ ಸ್ಪರ್ಧೆಗಳ ದೆಸೆಯಿಂದ ದ್ವೇಷಾಸೂಯೆ, ಅತೃಪ್ತಿ ನಿರಾಶೆಗಳು ಹಬ್ಬಿಕೊಳ್ಳುವದು ಸಹಜ. ಇಂದಿನ ವಾತಾವರಣವು ಇಷ್ಟೊಂದು ಕದಡಿ ಹೋಗಲು ಇದೂ ಒಂದು ಮುಖ್ಯ ಕಾರಣ.

ಕಾಂಗ್ರೆಸಿಗರ ಸೇವಾ ಬುದ್ಧಿ

ಎಲ್ಲೆಲ್ಲೂ ಮೇಲಾಟ!

ಮದ್ರಾಸ್, ಪಂಜಾಬು, ಬಂಗಾಳದಂತಹ ಪ್ರಾಂತ್ಯಗಳಲ್ಲಿ ಈ ಮೇಲಾಟಬುದ್ಧಿಯಿಂದಾಗಿಯೇ ಮಂತ್ರಿ ಮಂಡಲ ಬದಲಾವಣೆಗಳು ಕೆಲವು ಬಾರಿ ನಡೆದುಹೋದುವು. ಅದಕ್ಕಿಂತ ಕೆಳಗಿನ ಪ್ರತಿಯೊಂದು ಅಂತಸ್ತಿನಲ್ಲೂ ಇಂತಹ ಸ್ಪರ್ಧೆಗಳನ್ನು ಕಣ್ತುಂಬ ಕಾಣಬಹುದು; ಸ್ವಕಾರ್ಯ ಸಾಧನೆಗಾಗಿ ಸ್ಪರ್ಧೆ, ಸ್ಥಾನಕ್ಕಾಗಿ ಮೇಲಾಟ, ಮಾನಕ್ಕಾಗಿ ಪಂದ್ಯ ಎಲ್ಲೆಲ್ಲೂ! ನಿದರ್ಶನಗಳು ಬೇಕಾಗಿದ್ದರೆ ಭಾರತದ ಯಾವ ಕಡೆಯವರೂ ಪತ್ರಿಕೆಗಳನ್ನೇ ಕಾಣಬೇಕೆಂದಿಲ್ಲ; ಸ್ಥಳೀಯ ವಿದ್ಯಮಾನಗಳ ಕಡೆಗೆ ದೃಷ್ಟಿ ಹೊರಳಿಸಿದರೆ ಸಾಕು– ಪ್ರತಿಯೊಡೆಯಲ್ಲೂ ಇಂತಹ ಸ್ವಾರ್ಥಪೂರಿತ ಸ್ಪರ್ಧೆಯು ಒಂದೆರಡು ಮಾದರಿಗಳಾದರೂ ದೊರೆಯದೆ ಹೋಗುವಂತಿಲ್ಲ. ಮೊನ್ನೆ ಸ್ವರಾಜ್ಯ ವರ್ಧಂತಿ ದಿನ ಧ್ವಜಾರೋಹಣ ಮಾಡುವಾಗ ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಅಧಿಕಾರಿಗಳಿಬ್ಬರೊಳಗೆ ನಡೆದ ಪೈಪೋಟಿಯ ವಾರ್ತೆ ಕೇಳಿದವರು, 'ಪರಿಸ್ಥಿತಿ ಇಲ್ಲಿವರೆಗೂ ಬಂತೇ!' ಎನ್ನದೆ ನಿರ್ವಾಹವಿಲ್ಲ ರಾಷ್ಟ್ರಧ್ವಜವನ್ನು ಆರೋಹಿಸಿಕೊಳ್ಳುವ ಪವಿತ್ರ ಸನ್ನಿವೇಶವದು. ಅದನ್ನು ಆರೋಹಣ ಮಾಡತಕ್ಕ ಅಧಿಕಾರಿ ನಾನು, ತಾನು ಎಂದು ತಾಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷನೊಳಗೆ ಅಲ್ಲಿಯೇ–ಧ್ವಜದ ಮೇಲಿನ ಪವಿತ್ರ ಭಾವನೆ ಕಟ್ಟಿಕೊಂಡು ಕೂಡಿದ ಜನರ ಇದಿರಲ್ಲಿಯೇ– ಮೇಲಾಟ! ಕರಾಚಿಯಲ್ಲಿ ಆ ಧ್ವಜವನ್ನಿಳಿಸಬೇಕೆಂದು ಗಲಭೆಯಬ್ಬಿಸಿದ ಆ ಪುಂಡರ ಆಚರಣೆಗಿಂತ ಹುಬ್ಬಳ್ಳಿಯಲ್ಲಿ ಆ ಧ್ವಜವನ್ನೇರಿಸಬೇಕೆಂದು ಗಲಿಬಿಲಿ ನಡೆಸಿದ ಈ ಪುಢಾರಿಗಳ ವರ್ತನೆ ಉಚ್ಚ ತರಗತಿಯದೆ? ಅದರಲ್ಲೂ, ತಮ್ಮ ರಾಷ್ಟ್ರದ ಅಭಿಮಾನದ ಹೆಸರಿನಿಂದ, ಅಂತಹ ದ್ವೇಷಭಾವನೆ ಪ್ರದರ್ಶಿಸಿದ ಕರಾಚಿಯ ಜನರಿಂದ ಬಿದ್ದ ಮಾದರಿಯು ಉತ್ತಮವೇ, ಧ್ವಜದ ಗೌರವ ಪಾಲನೆಯ ಹೊಣೆ ಹೊತ್ತವರಿಂದಲೇ ಈ ಧ್ವಜದಡಿಯಲ್ಲಿ ತೋರಿಬಂತೆಂದರೆ ಧ್ವಜಮರ್ಯಾದೆಯ ರಕ್ಷಣೆ ಹೇಗಾಗಬೇಕು? ಪರಕೀಯ ವೈರಿಗಿಂತಲೂ ಒಳಡೆಯಿರುವ ಅಹಿತ ಚಿಂತನೆ ವಿಶೇಷ ಅಪಾಯಕರವೆಂಬ ಗಾದೆಯನ್ನು 'ರಾಷ್ಟ್ರಧ್ವಜದ ಗೌರವ ರಕ್ಷಣೆ'ಯ ಮಟ್ಟಿಗೂ ನಾವು ನೆನಪಿಟ್ಟುಕೊಳ್ಳಬೇಕಾಗಿ ಬಂದಿರುವ ಈ ಸ್ಥಿತಿಯು ನಿಜಕ್ಕೂ ಅತ್ಯಂತ ಶೋಚನೀಯ. ಇಂತಹ ವಾತಾವರಣ ನಮ್ಮ ನಡುವೆ ನಿರ್ಮಾಣಗೊಂಡಿತಲ್ಲಾ ಎಂದು ಲಜ್ಜಿಸಿ, ಕಣ್ಣು ತೆರೆಯಬೇಕಾಗಿದೆ.

ಇದಕ್ಕೆ ಕಾರಣವೇನು?

ಸ್ಥಿತಿ ಪರಿವರ್ತನೆಯೇ ಇಂತಹ ಕೊಳಕು ವಾತಾವರಣ ನಿರ್ಮಾಣಕ್ಕೆ ಮೂಲ ಕಾರಣ. ಹಿಂದಿನ ಮತ್ತು ಇಂದಿನ ಕಾಲವನ್ನು ತುಲನೆ ಮಾಡಿ ನೋಡುವಾಗ, ಏಕಾದಶಿಯ ಉಪವಾಸ ಮತ್ತು ದ್ವಾದಶಿಯ ಔತಣದ ನೆನಪಾಗುತ್ತಿದೆ. ಗಾಂಧಿಜೀಯ ನಾಯಕತ್ವದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತಿದ್ದಾಗ, ಆ ಸಮರದ ಯೋಧರೆಲ್ಲರೂ ನಿಸ್ವಾರ್ಥ ಸೇವಾಬುದ್ಧಿಯವರಿರಬೇಕೆಂಬ ನಿಯಮವಿದ್ದಿತು; ಅವರು ಪ್ರತಿಫಲವನ್ನಪೇಕ್ಷಿಸಬಾರದು–ಸ್ಥಾನಮಾನಾಕಾಂಕ್ಷಿಗಳಿರ ಕೂಡದು—ತಮಗಾಗಿ ಏನನ್ನೂ ಬಯಸಬಾರದು— ಮಾಡುವದೆಲ್ಲವನ್ನೂ ಕೇವಲ ಜನತೆಗಾಗಿ, ಮಾತೃಭೂಮಿಯ ಧರ್ಮಾರ್ಥ ಸೇವೆಯಾಗಿ ಸಲ್ಲಿಸಬೇಕು, ಎಂಬ ನಿರ್ಬಂಧವೇ ಇದ್ದಿತು. ಇಂತಹ ನಿಸ್ವಾರ್ಥ ಕಾರ್ಯಮಾಡಿ ಜೈಲು ಸೇರುವುದು, ಹೊಡೆತ ತಿನ್ನುವುದು, ಮಹಾ ಗೌರವವೆಂದು ಗಣಿಸಲಾಗಿದ್ದಿತು. ಜೈಲು ಸಂಭಾವನೆ ಪಡೆದವನಿಗೆ ಬೇರಾವ ಸ್ಥಾನ ಅಥವಾ ಹುದ್ದೆಗೇರಿದವನಿಗಿಂತ ಹೆಚ್ಚಿನ ಗೌರವವು ಆದೊಂದು ಕ್ಷೇತ್ರದಲ್ಲಿ ದೊರಕುತಿತ್ತು. ಪರಕೀಯಾಳ್ವಿಕೆಯಿರುವಾಗ, ಆ ಆಡಳಿತೆಯೊಳಗಿನ ಸ್ಥಾನಮಾನವಾವುದೇ ಇದರೂ ಅಪಮಾನಕರವೆಂಬ ತೀರ್ಮಾನ ಜಾರಿಯಲ್ಲಿದ್ದಿತು. ಇಲ್ಲಿ, ನಾವು ತಿಳಿದಿರಬೇಕಾದ ಅಂಶವಿದೆ. ಆ 'ಸ್ಥಾನಮಾನಾಭಿಲಾಷೆಯಿರದ ಸ್ವಾರ್ಥರಹಿತ ರಾಷ್ಟ್ರ ಯೋಧ'ರು ಕೂಡಾ

ಮಂಗಳೂರು-ಪ್ರಬುದ್ಧ ಬಂದರವಾಗಿ

1. ಮರ್ಮಗೋವಾ ಮತ್ತು ಕೊಚ್ಚಿ ಬಂದರುಗಳ ನಡು ಮಧ್ಯಂತರದಲ್ಲಿ ಮಂಗಳೂರು ಬಂದರು ನೆಲೆಸಿರುತ್ತದೆ.
2. ಈ ಮೂರು ಬಂದರುಗಳಲ್ಲಿ ಮಂಗಳೂರಿನ ಜನಸಂಖ್ಯೆಯೇ ಹೆಚ್ಚಿನದಾಗಿರುತ್ತದೆ.
3. ಮರ್ಮಗೋವೆಯ ದಕ್ಷಿಣದಲ್ಲಿಯೂ, ಕೊಚ್ಚಿಯ ಉತ್ತರದಲ್ಲಿಯೂ ಇರುವ ಎಲ್ಲಾ ಬಂದರುಗಳಿಗಿಂತಲೂ ಮಂಗಳೂರಿಗೆ ನಾಡಿನ ಇತರ ಭಾಗಗಳೊಡನೆ ಉತ್ತಮ ವ್ಯವಹಾರ ಸೌಕರ್ಯಗಳಿವೆ.
4. ಮೈಸೂರು ಸಂಸ್ಥಾನಕ್ಕೆ ಮಂಗಳೂರೇ ನೈಸರ್ಗಿಕ ಸಮುದ್ರಮುಖವಾಗಬಲ್ಲುದು
5. ಮಂಗಳೂರು ವ್ಯಾಪಾರ ಉದ್ಯಮ ಮತ್ತು ಸಂಸ್ಕೃತಿಗಳಲ್ಲಿ ಅತಿಶಯವಾದ ಪ್ರಗತಿಯನ್ನು ಹೊಂದಿದೆ.

ಎಲ್ಲಾ ದೃಷ್ಟಿಕೋನಗಳಿಂದ ಪರ್ಯಾಲೋಚಿಸಿದರ ಮಂಗಳೂರೇ ಪ್ರಬುದ್ಧ ಬಂದರವಾಗಲು ಯೋಗ್ಯವೆಂದು ನಮಗನಿಸುತ್ತದೆ.

ಹಿಂದುಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ ಸದಾ ಸೇವೆ ಗೈಯುತ್ತಿರುವ,

ಕೆನರಾ ಬ್ಯಾಂಕ್, ಲಿಮಿಟೆಡ್.

ಶ್ರೀ ಇವರಿಂದ ಪ್ರಕಟಿಸಲ್ಪಟ್ಟಿತು.

CANARA BANK, LIMITED

Estd: 1906

ಅಂತಹ ನಿಸ್ವಾರ್ಥ ಸೇವೆಯ ಪ್ರತಿಫಲವಾಗಿ ಗೌರವಾದರಗಳನ್ನು ಪಡೆಯುತಿದ್ದರೆಂಬುದನ್ನೂ, ಅವುಗಳ ಸಂಪಾದನೆಗಾಗಿಯೇ 'ನಿಸ್ವಾರ್ಥಸೇವೆ' ಸಲ್ಲಿಸುತಿದ್ದರೆಂಬುದನ್ನೂ ಲಕ್ಷ್ಯದಲ್ಲಿಡಬೇಕು. ಮಾನವ ಸಹಜವಾದ 'ತನ್ನತನ' ಅಥವಾ ಮಹತ್ವಾಕಾಂಕ್ಷೆ, ಇಲ್ಲವೇ ಪ್ರತಿಫಲಾಪೇಕ್ಷೆಯು ಉಜ್ಜಿಹೋಗುವುದು ಅಸಾಧ್ಯವಾದ್ದರಿಂದ ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ ಅದು ಈ ರೂಪದಿಂದಿದ್ದಿತು. ಸರಿ; ಸ್ವಾತಂತ್ರ್ಯ ದೊರೆಯಿತು; ಸ್ವರಾಜ್ಯ ಸರಕಾರದ ಸ್ಥಾನಮಾನಗಳಾವುವೂ ಪಾಪದಾಯಿಯಲ್ಲವೆಂದಾಯಿತು; ಅದು ಘನತೆ, ಗೌರವ ತುಂಬಿ ಬಂದು ತೋರಿತು. ಅವುಗಳನ್ನು ಸೇರಿಕೊಳ್ಳುವುದು ಗೌರವಪೂರ್ಣ ಸತ್ಕಾರ್ಯವಾಯಿತು. ಎಲ್ಲರೂ ಈಗ ಆ ಸಾಹಸಕ್ಕೆ ಮುಂದಾಗಿದ್ದಾರೆ. ಈ ಹರುಷಿನಲ್ಲಿ ಸ್ವಾಭಾವಿಕವಾಗಿ ತಿಳಿದಿರಬೇಕು. ಕಾಂಗ್ರೆಸೇತರರೂ ಇಂತಹ ವರ್ತನೆಯವರಲ್ಲವೇ, ಎಂಬ ಪ್ರಶ್ನೆಗೆ ಇಲ್ಲಿ ಎಡೆಯಿಲ್ಲ. ಮೊದಲನೆಯದಾಗಿ ಇದು 'ಕಾಂಗ್ರೆಸ್ ರಾಜ್ಯ' ವನ್ನಿಸಿದೆ, ಇಲ್ಲಿ ಕಾಂಗ್ರೆಸೇತರರು ಸ್ಥಾನಮಾನಗಳ ಸಂಪಾದನೆಗಾಗಿ ಸ್ಪರ್ಧಿಸುವುದು ಕ್ಷಮ್ಯವಾಗುತ್ತದೆ. ಎರಡನೆಯದಾಗಿ ಅದು ಅವರಪದ್ಧತಿ. ಇಂತಹ ಸ್ಪರ್ಧೆಯು ಅಪಮಾನಕರವೆಂದು ಕಾಂಗ್ರೆಸೇತರರು ಎಂದೂ ಭಾವಿಸಿದ್ದಿಲ್ಲ. ಆದರೆ ಕಾಂಗ್ರೆಸಿಗರು ಹಾಗಲ್ಲ; ಅವರು ಈ ಮೊದಲು ನಿಸ್ವಾರ್ಥ ರಾಷ್ಟ್ರಸೇವೆಯಾಗಿ ಹೊರತು ಬೇರಾವುದಕ್ಕೂ ಏನನ್ನೂ ಮಾಡಬಾರದೆಂಬ ನಿಯಮವಿಟ್ಟುಕೊಂಡವರು; ಅಥವಾ 'ರಾಷ್ಟ್ರ ಸೇವಕ'ರೆಂಬ ಗೌರವಾರ್ಹ ಸ್ಥಾನವನ್ನಲ್ಲದೆ ಬೇರಾವುದನ್ನೂ ಬಯಸದವರು. ಶಂಕೆ ಬಾಡಳಿತೆಯಲ್ಲಿ ಬಯಸದಿದ್ದ ಸ್ಥಾನಮಾನಗಳನ್ನು ಸ್ವಾಡಳಿತೆಯ ಕಾಲ

ಪುನಃ ಮೂಡಿ ಬರಲಾರದೆ?

ಕತೆಯಿಸುತಿದ್ದರೆ ನಿಜಕ್ಕೂ ಆಕ್ಷೇಪಿಸಲೆಡೆಯಿಲ್ಲ. ಇರುವ ಸ್ಥಾನಮಾನಗಳಿಗೂ ಮಹತ್ವವುಗಳನ್ನು ಹೊಂದಬೇಕಾದರೆ ಇರಬೇಕಾದ ಯೋಗ್ಯತೆಗಳಿಗೂ ಗಂಟು ಹಾಕುತಿದ್ದರೆ ವಿವಾದಗವಕಾಶವಿರುತ್ತಿರಲಿಲ್ಲ. ಸ್ವತಂತ್ರ ಸರಕಾರ ಅಥವಾ ರಾಷ್ಟ್ರದ ಯಾವ ಸ್ಥಾನಮಾನವೇ ಇರಲಿ, ಅದು ಹೀಗಿರಬೇಕೆಂಬ ಒಂದು ಆಕಾರ ನಿರೂಪವಿದ್ದೇ ಇದೆ ತಾನೆ? ಸ್ವತಂತ್ರ ಸರಕಾರದ ಸ್ಥಾನ, ಹುದ್ದೆಗಳ ನಮೂನೆಯೂ ಆ ಸ್ವಾತಂತ್ರ್ಯಕ್ಕನುಗುಣವಾಗಿಯೇ ಇದ್ದೀತ; ಇರಲೇಬೇಕು. ಅಂತಹ ಸ್ಥಾನಗಳಿಗೆ ಹೇಳಿಸಿದ ಗುಣಲಕ್ಷಣಗಳು ಮಾಜೀ ಸ್ವಾತಂತ್ರ್ಯ ಯೋಧರಲ್ಲೇ ಹೆಚ್ಚಿಗಿವೆಯೆಂದಾದರೆ ಅಂಥವರೇ ನಿರಾತಂಕವಾಗಿ ಆ ಸ್ಥಾನಗಳನ್ನೇರಬೇಕು. ಇಲ್ಲವೆಂದಾದರೆ ಸ್ವಾತಂತ್ರ್ಯ ಸಾಧನೆಗಾಗಿ ಆ ಕಾಲದಲ್ಲಿ ಹೋರಾಡಿದವರೆಂಬ ಒಂದೇ ಯೋಗ್ಯತೆಯ ಮೇಲಿಂದ ಸ್ವತಂತ್ರ ರಾಷ್ಟ್ರದ ಸ್ಥಾನಮಾನಗಳು ಅವರ ಪಾಲಿಗೆ ಹೋಗಬಾರದು. ಅದೇ ಕಾರಣಕ್ಕಾಗಿ ಅವರು ಮೇಲಾಡಲಿಕ್ಕೂ ಕೂಡದು. ಇನ್ನು ಸ್ವತಃ ಆ ಮಾಜೀ ಸೋಲ್ಜರರು ತಮ್ಮೊಳಗೇನೇ ಮೇಲಾಡಿಕೊಳ್ಳುತ್ತಾರಾದರೆ, ಅದರಲ್ಲೂ ಆ ಮೇಲಾಟವು ನೀತಿ ನಿಯಮಗಳ ಎಲ್ಲೆ ಮೀರಿ ನಡೆಯುತ್ತದಾದರೆ, ಅಂಥವರು "ತಗಿದು ಹಾಕಲ್ಪಡತಕ್ಕವರು" ಹೊರತು ಬೇರಲ್ಲ. ಆದರೆ ಈ ಸೂತ್ರವೀಗ ಕಡೆಗಣಿಸಲ್ಪಡುತ್ತಿದೆ. ನಿನ್ನೆ ಈ ಸ್ವಾತಂತ್ರ್ಯಕ್ಕಾಗಿ ನಿಸ್ವಾರ್ಥ ಸೇವೆ ಮಾಡಿದವರು ತಾವು—ಅದರಲ್ಲೂ ಅವನಿಗಿಂತ ಹೆಚ್ಚಿಗೆ ಮಾಡಿದವನು ನಾನು—ಎನ್ನುತ್ತಾ ಈ ದಿನ ಅದರ ಫಲ ತಂತಮ್ಮ ಹಕ್ಕಿನದೆಂದು ಕೈಯೊಡ್ಡುವವರೇ ಕಂಡು ಬರುತಿದ್ದಾರೆ; ಏಕಾದಶೀ ವ್ರತ ಮಾಡಿದವರು ದ್ವಾದಶಿಯ ಊಟಣಕ್ಕಿದ್ದಿದ್ದಾರೆ!

ಮುಂದೆ ಹೇಗೆ?

ಇಂತಹ ಸ್ಥಾನಮಾನಾಭಿಲಾಷೆಗಳ ಪ್ರದರ್ಶನದಿಂದ ಕಾಂಗ್ರೆಸಿಗರು ಸ್ವತಃ ತಮ್ಮನ್ನೇ ಅಲ್ಲದೆ ಬೇರಾರನ್ನೂ ಯಾವುದನ್ನೂ ಸೋಲಿಸುತ್ತಿಲ್ಲವೆಂಬುದನ್ನು ಪ್ರದಲ್ಲಿ ಅಪೇಕ್ಷಿಸುವುದು ಅಪರಾಧವಲ್ಲ. ಆದರೆ ಕೇವಲ ಸೇವಾಬುದ್ಧಿಯಿಂಬೇಕಾದುದು ಎಂದೆಂದಿಗೂ ಆಗತ್ಯವೇ. 'ಸ್ವಾರ್ಥರಹಿತ ಸೇವೆಯು ಆ ಕಾಲದಲ್ಲಿ ಬೇಕಾಗಿತ್ತು— ಈಗ ನಮ್ಮ ರಾಜ್ಯದಲ್ಲಿ ನಾವು ಸ್ವಾರ್ಥ ಸಾಧನೆ ಮಾಡಿಕೊಳ್ಳಬಹುದು' ಎಂದು ಉತ್ತಮರಾರೂ ಹೇಳಲಾರರು. ಕಾಂಗ್ರೆಸಿಗರು ಉತ್ತಮರೆನ್ನಿಸಿದವರು; ಆದ್ದರಿಂದ ಅವರು ಆ ಕಾಲದ ಸೇವಾಬುದ್ಧಿಯಿಂದಲೇ ಈಗಲೂ ಕೆಲಸ ಮಾಡಬೇಕು; ಅಂತಹ ಸೇವೆಯನ್ನು ಇನ್ನೂ ಮಾಡಬೇಕೆಂಬುದಕ್ಕಾಗಿ ಮಾತ್ರವೇ ಯಾವುದೇ ಸ್ಥಾನವನ್ನು ಅಪೇಕ್ಷಿಸಬೇಕು. ಬದಲಿಗೆ ತಾವು ಹಿಂದೆ ಸಲ್ಲಿಸಿದ್ದ ಸೇವೆಗೆ ಪ್ರತಿಫಲವಾಗಿ ಇಂದಾವುದನ್ನೂ ಕೇಳುವಂತಿರಬಾರದು. ಆ ಕಾಲದಲ್ಲಿ ಅವರಿಗೆ ಕೀರ್ತಿ ಬಂದಿದ್ದುದು ಇದರಿಂದಲೇ; ಈಗ ಆ ಗೌರವ ಉಳಿಯಬೇಕಾದರೆ, ಮತ್ತಿನ್ನು ಮುಂದಕ್ಕೂ ಜನತೆಯು ಅವರನ್ನೇ ಬಯಸಬೇಕಾದರೆ ಅಂದಿನ ಸೇವಾಬುದ್ಧಿಯೇ ಇಂದೂ ಅವರಲ್ಲಿ ತೋರಿಬರಬೇಕು. ಹಾಗಾಗದೆ ಹೋದರೆ ಕಾಂಗ್ರೆಸಿಗರು ಭವಿಷ್ಯ ಕಳೆದುಕೊಳ್ಳುವದಂತೂ ಸತ್ಯ. ಸ್ವಾತಂತ್ರ್ಯ ಹೋರಾಟ ಕಾಲದ ಕಾಂಗ್ರೆ

ಕಾಶ್ಮೀರದ ಶಾಂತಿ ಸಮ್ಮೇಲನ ನಡೆಯದಂತಾಯಿತು!

ಕಾಶ್ಮೀರ ವಿವಾದದ ಸಂಧಾನ ತೀರ್ಮಾನದ ವಿಚಾರ ವಿನಿಮಯಕ್ಕಾಗಿ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳ ಜತೆ ಸಮ್ಮೇಳನವೊಂದನ್ನು ಕಾಶ್ಮೀರ ಕಮಿಶನಿನವರು ಇದೇ ತಾ. 22ಕ್ಕೆ ನವದಿಲ್ಲಿಯಲ್ಲಿ ಕರೆದಿದ್ದರು. ಆದರೆ ಆ ಸಮ್ಮೇಳನವು ಚರ್ಚಾಸತಕ್ಕ ವಿಷಯಗಳ ಕುರಿತೇ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೊಳಗೆ ಕಟ್ಟುಗ್ರಭಿನ್ನಾಭಿಪ್ರಾಯಗಳು ತೋರಿ ಬಂದುದರಿಂದ ಈ ಸಮ್ಮೇಳನ ನಡೆಸಿ ಪ್ರಯೋಜನವಿಲ್ಲವೆಂದು ಅದನ್ನು ಕರೆದ ಕಾಶ್ಮೀರ ಕಮಿಶನಿನವರು ನಿಶ್ಚಿತ ದಿನಕ್ಕೆ ಮೊದಲೇ ಸಮ್ಮೇಳನವನ್ನು ರದ್ದು ಪಡಿಸಿಕೊಂಡಿದ್ದಾರೆ. ಪಾಕಿಸ್ತಾನ್ ಹಸ್ತಕ 'ಅಜಾದ್ ಕಾಶ್ಮೀರ' ಸೇನಾದಳಗಳನ್ನು ಬರ್ಖಾಸ್ತುಪಡಿಸುವ ವಿಷಯವನ್ನು ವಿಚಾರಿಸಬೇಕೆಂಬ ಭಾರತ ಸರಕಾರದ ಸೂಚನೆಗೆ, ಅದು ಸಾಧ್ಯವೇ ಇಲ್ಲವೆಂದು ಪಾಕಿಸ್ತಾನ್ ಸರಕಾರದ ನಕಾರ ಬಂದುದರಿಂದ ಪರಸ್ಪರ ಮಾತುಕತೆಯ ಆಧಾರ ತಪ್ಪಿ ಹೋಯಿತು. ಮುಂದೇನು, ಎಂಬ ಆತುರದಾಯೀ ಪ್ರಶ್ನೆಯುಳಿದಿದೆ. ಸಂಯುಕ್ತ ರಾಷ್ಟ್ರ ಕೂಟದ ಭದ್ರತಾ ಕೌನ್ಸಿಲಿನಿಂದ ನೇಮಕಗೊಂಡು, ದೀರ್ಘಾವಧಿಯಿಂದ ಕಾಶ್ಮೀರ ಪ್ರಶ್ನೆಯನ್ನು ಮೈಗೆ ಹಚ್ಚಿಕೊಂಡು ಒದ್ದಾಡುತ್ತಿರುವ ಕಾಶ್ಮೀರ ಕಮಿಶನಿನ ಈ ವರೆಗಿನ ಕೆಲಸಗಳೆಲ್ಲವೂ ಮರಳಿನ ಮನೆಯಂತೆ ಒಮ್ಮೆ ಕುಸಿದುಬಿತ್ತು. ತಾವು ಕೈಕೊಂಡ ಸಂಧಾನ ಸಾಧನೆಯ ಪ್ರಯತ್ನದಲ್ಲಿ ವಿಫಲರಾದೆವೆಂದು ಇನ್ನೀ ಕಮಿಶನಿನವರು ಭದ್ರತಾ ಕೌನ್ಸಿಲಿಗೆ ವರದಿಮಾಡಿ "ಖಂಡಹಾದಿಗೆ ಸುಂಕವಿಲ್ಲ"ವೆಂದು ಮರಳುವರೆ? ಅಥವಾ "ಮರಳಿ ಯತ್ನವ ಮಾಡು" ನೀತಿಯನ್ನನುಸರಿಸಿ, ಬೇರೆ ಸೂಚನೆಗಳನ್ನು ಮುಂದಿಟ್ಟು ಪುನಃ ಸಂಧಾನ ಪ್ರಯತ್ನ ನಡಿಸುವರೆ? ಎಂಬ ಪ್ರಶ್ನೆಯಿದ್ದಿದೆ ಮರಳಿ ಪ್ರಯತ್ನಿಸಲಾಗುವ ಹಾದಿ ಈ ಕಮಿಶನಿನ ಮುಂದೆ ಈಗ ಉಳಿದಿಲ್ಲ. ಯಾವ ಅಂಶವನ್ನೂ ಬಾಕಿ ಬಿಡದೆ ತಿರುಗಿ ತಿರುಗಿ, ಬಹುವಿಧದ ಶಾಂತಿ ಶೋಧಗಳನ್ನು ನಡೆಸಿ ಮುಗಿಸಿ ಆಗಿದೆ. ತಮ್ಮಿಂದಾಗುವದಿಲ್ಲವೆಂದು ಹೇಳಿಬಿಡುವುದೊಂದೇ ಈಗ ಕಾಶ್ಮೀರ ಕಮಿಶನಿನ ಮುಂದಿರುವ ಹಾದಿಯೆಂದು ತೋರುತ್ತಿದೆ. ಹಾಗಾದರೆ ಈ ಕಮಿಶನಿಗೆ, ಅಥವಾ ಲೋಕ ಸಂಘದ ಭದ್ರತಾ ಕೌನ್ಸಿಲಿಗೆ ಈ ವಿವಾದದ ಮಧ್ಯಸ್ಥಿಕೆ ಸಂಬಂಧ ಹೊರತು ಕಾಶ್ಮೀರದ ಸಂಬಂಧವೇನೂ ಇಲ್ಲ ಆದ್ದರಿಂದ ತೀರ್ಮಾನಿಸಲಾಗದ ವಿವಾದದ ಗೊಡವೆಯನ್ನು ಅನಿವಾರ್ಯವಾಗಿ ಅವು ಬಿಟ್ಟುಬಿಡಬೇಕಾಗಿಬರಬಹುದು. ಹಾಗೆ ಮಾಡುವುದು ತಮ್ಮ ಘನತೆಗೆ ಕುಂದೆಂದು ತೋರಿದರೆ, ಬಿಡಲಿಲ್ಲವೆಂಬ ನಟನೆ ಮಾಡುತ್ತಾ ಇನ್ನೂ ಸಮಯ ದೂಡುತ್ತಾ ಹೋಗಬಹುದು, ಆದರೆ ಪ್ರತ್ಯಕ್ಷ ಕಾಶ್ಮೀರದ ಸಂಬಂಧವಿರುವ ಭಾರತವೇನು ಮಾಡಬೇಕು? ಪಾಕಿಸ್ತಾನವೇನು ಮಾಡಬೇಕು? ಇವುಗಳೆರಡು ಮುಂದೇನು ಮಾಡಿಕೊಳ್ಳುವವು? ಎಂಬ ಪ್ರಶ್ನೆಗಳೇಳುತ್ತವೆ. ಕಾಶ್ಮೀರ ವಿವಾದವನ್ನು ಬಲ ಪ್ರಯೋಗದಿಂದಲೇ ತೀರ್ಮಾನಿಸಿಕೊಳ್ಳಬೇಕಾಗಿ ಬಂದೀತೆ?

(೭ನೇ ಪುಟ ನೋಡಿರಿ)

ಸಿಗರ ಸೇವಾ ಬುದ್ಧಿ ಮಾನ್ಯವಾದುದೆಂದು ಜನತೆಯೊಪ್ಪಿಗೆ ಕೊಟ್ಟಿದೆ; ಆ ಸೇವಾ ಬುದ್ಧಿ ಸ್ವತಃ ಇಂದು ಅಮಾನ್ಯವೆಂಬಂತೆ ಕಾಂಗ್ರೆಸಿಗರೇ ವಿರುದ್ಧ ವರ್ತಿಸುತ್ತಾರಾದರೆ, ಮತ್ತೆ ಜನತೆ ಮಾತ್ರ ಇವರಹಿಂದಿನ ಸೇವೆಯನ್ನೇ ಇಂದೂ ಮನ್ನಿಸುತ್ತಾ ಕುಳಿತುಕೊಳ್ಳಬೇಕ? ಯಾರಾದರೇನು, ಯಾವ ಕಾಲವಾದರೇನು—ಆಯಾ ಕಾಲಕ್ಕನುಗುಣವಾದ ಕಾರ್ಯ ಮಾಡಬಲ್ಲವರೇ ಎಲ್ಲರಿಗೂ ಬೇಕಾದವರು. "ಗತ ಕಾಲದ ಆಗು ಹೋಗುಗಳನ್ನು ಮರೆತು ಬಿಟ್ಟು, ಭವಿಷ್ಯದತ್ತ ನೋಡೋಣ" ಎಂಬ ಮಾತು ಕಾಂಗ್ರೆಸಿಗರ ವರ್ತನೆಯೊಂದರ ಮಟ್ಟಿಗೆ ಲಗಾವಾಗಬಾರದು ಎಂದರೆ ಕೇಳುವವರಾರು?

ನೀವು ಅಳಿಯಸಂತಾನಿಗರೋ?

ಹಾಗಿದ್ದರೆ ಈಗತಾನೆ ಪಾಸಾದ

ಮದ್ರಾಸು

ಅಳಿಯಸಂತಾನ ಕಾನೂನು

ಇದನ್ನು ಓದಲೇಬೇಕು

ಇದರ ಮಾಹಿತಿಯನ್ನು ಪಡೆಯಲೇಬೇಕು

ಇಂಗ್ಲಿಷ್ ಪ್ರತಿಗಳೂ ಕನ್ನಡ ಪ್ರತಿಗಳೂ ದೊರೆಯುತ್ತವೆ.

ಕ್ರಯ **0—8—0**. (ಟಪ್ಪಾಲು ಖರ್ಚು ಪ್ರತ್ಯೇಕ)

0 9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು.

ಸಿಗುವ ಸ್ಥಳ:—

ನವಯುಗ ಪ್ರೆಸ್, ಉಡುಪಿ

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ರಿಜಿಸ್ಟರ್ಡ್

ಅಸ್ತಮಕ್ಕೆ ಹೆಸರಾಂತ ಔಷಧ

ತಾ 7-9-49ರಲ್ಲಿ ಒಂದು ಡೋಸ್ ಔಷಧ ಸೇವನೆಯಿಂದ ಎಂತಹ ಅಸ್ತಮವೂ ಗುಣಹೊಂದುವುದು.

ಪತ್ರವ್ಯವಹಾರ ಹಿಂದಿ ಯಾ ಇಂಗ್ಲಿಷಿನಲ್ಲಿ

Mahatma Shiri Janki

Seva Ashram

P. O. Chitrakot (Banda)

THE
Canara Banking Corporation Ltd.
(Incorporated in India)
Estd: 1906
HEAD OFFICE: UDIPI, S. I.

Capital Authorised .... Rs. 25,00,000.
Capital Issued & Subscribed .... Rs. 20,00,000.
Capital Paid Up .... Rs. 19,99,800.
Reserves .... Rs. 8,91,000.

Banking business of every description transacted.

ಗುರುವಾರ, ಉಡುಪಿ, ೨೫-೮-೪೯

ಹೀಗೇಕೆ?

ಸ್ವಾತಂತ್ರ್ಯ ವರ್ಧಂತ್ಯುತ್ಸವದ ಸಂಬಂಧದ ದಿನಗಳಲ್ಲಿ, ಸಂದರ್ಭೋಚಿತವಾಗಿ ನಡೆದ ಸ್ಥಿತಿವಿಮರ್ಶೆಗಳೂ ಕೆಲವು ಘಟನೆಗಳೂ ಭಾರತೀಯರಲ್ಲಿ ನವ ಜಾಗ್ರತಿಯನ್ನು ನಿರ್ಮಿಸಲು ಬದ್ಧವಿವೆ. ಕಳೆದೆರಡು ವರುಷಗಳ ಸ್ವರಾಜ್ಯಾಡಳಿತೆಯ ಗುಣದೋಷಗಳು, ಆದರ ವರ್ಧಂತ್ಯುತ್ಸವ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಎಲ್ಲೆಡೆಗಳಲ್ಲೂ ಪರಿಶೀಲಿಸಲ್ಪಟ್ಟುವು. ಎಂತಹ ಪರಿಸ್ಥಿತಿಯನ್ನೇ ನಿರ್ಮಿಸಿದರೂ ಸ್ವಾತಂತ್ರ್ಯವೆಂಬುದು ಜೀವಮಾತ್ರಂಗೆ ಬೇಕೇಬೇಕಾಗಿರುವ ವಿಷಯ. ಅಂತಹ ಸ್ವಾತಂತ್ರ್ಯ ದೊರೆತ ಸುದಿನವನ್ನು ಹಬ್ಬವಾಗಿ ಆಚರಿಸುವಾಗ ನಿತ್ಯವೂ ಇರದಂತಹ ವಿಶೇಷ ಸಂಭ್ರಮಗಳನ್ನು ಪ್ರದರ್ಶಿಸುವಂತೆಯೇ, ಆ ಸ್ಮಾರಕ ಸನ್ನಿವೇಶದಲ್ಲಿ ಸ್ವಾತಂತ್ರ್ಯದ ಸಿಹಿ ಫಲಗಳನ್ನೇ ಹೆಚ್ಚಾಗಿ ಸ್ಮರಿಸಬೇಕಾದುದೂ ಸ್ವಾಭಾವಿಕ. ಆದರೂ ಕಳೆದೆರಡೇ ವರುಷಗಳಲ್ಲಿ ನಮ್ಮೀ ಸ್ವಾತಂತ್ರ್ಯವು ಏರಬೇಕಾದ ಮಜಲೇರಿಲ್ಲವೆಂಬುದನ್ನು ಹೊಣೆಹೊತ್ತ ನಾಯಕರಿಂದಾರಂಭಿಸಿ ಸರ್ವರೂ ಈ ಸಂದರ್ಭದಲ್ಲಿ ಕೂಡಾ ಜ್ಞಾಪಿಸಿಕೊಳ್ಳದೆ ಬಿಟ್ಟಿಲ್ಲ. ಈ ಜ್ಞಾಪಕವೂ ಆ ದಿನದ ಮಿಕ್ಕ ಪ್ರದರ್ಶನಗಳಲ್ಲೊಂದಾಗಿ ಕಳೆದು ಹೋದರೆ ಮಾತ್ರ ಇನ್ನೊಂದು ದುರ್ದೈವ ನಮ್ಮ ಬೆನ್ನು ಹಿಡಿದಿದೆ ಎನ್ನಬೇಕಾಗುವದು. ಆ ದುರ್ದೈವವೇ ಜನಸಾಮಾನ್ಯರ ಅರಿವಿಕ್ಕದ ಬುದ್ಧಿ ಮತ್ತು ಆಲಸ್ಯತನ. ಸ್ವಾಧಿಕಾರ ದೊರೆತು ಈ ವರೆಗಾದುದು ಎರಡೇ ವರುಷ; ಈ ಎರಡು ವರುಷಗಳಲ್ಲಾದ ಕೆಲಸ ತೀರಾ ಅತೃಪ್ತಿಕರವೆಂದು ತುಲನಾತ್ಮಕ ಬುದ್ಧಿಯುಳ್ಳವರಾರೂ ಹೇಳಲಾರರು. ಜನತೆಗೆ ಶುಭ್ರ ಹಾಗೂ ಭದ್ರ ಭವಿಷ್ಯವನ್ನು ಪೇಕ್ಷಿಸುವವರನ್ನು ನಿರಾಶೆಗೊಳಿಸುವಂತಹದಾವುದೂ ಕಳೆದೆರಡು ವರುಷಗಳ ಆಗುಹೋಗುಗಳಲ್ಲಿಲ್ಲ. 'ಅಷ್ಟೊಂದು ಸಮಾಧಾನಕರವಲ್ಲ' ಎನ್ನಲಾಗುವ ಅಂಶಗಳೆರಡೇ— ಒಂದು ಆರ್ಥಿಕ ಸಾಮಾಜಿಕ ಸುಧಾರಣೆಯ ಕಡೆಗಿನ ಸರಕಾರದ ನೋಟ; ಮತ್ತೊಂದು ಸಾಮಾನ್ಯ ಜನರ ಚಿತ್ತವೃತ್ತಿ. ಇವೆರಡು ಲೋಪಗಳನ್ನಾದರೂ ಮಹಾಸಾಗತಿಯ ಮಟ್ಟಿಗೆ ಮಾತ್ರ ಎತ್ತಿ ತೋರಿಸಬೇಕಾದೆಯಲ್ಲದ, ಸದ್ಯಸ್ಥಿತಿಯು ಕರಾಳವಾಗಿ ಇಲ್ಲ. ಅತ್ಯವಸರದಲ್ಲಾಗಬೇಕಾಗಿದ್ದ ಅತಿಕಿಚ್ಚಿನ ಕೆಲಸಗಳು ನೈಮಿತ್ತಿಕ ಬಿದ್ದಿದ್ದ ಈ ಅಲ್ಪಾವಧಿಯಲ್ಲೇ ರಾಷ್ಟ್ರದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಬದಲಾಯಿಸಿ ಬಿಡಬೇಕಿದ್ದಿತೆಂದು ಯಾರೂ ಹೇಳಲಾರರು; ಅಂತಹ ಪ್ರಗತಿಪರ ಸುಧಾರಣೆಯ ಬೆಳೆ ಸಕಾಲದಲ್ಲೇ ಕೊಯಿಲಿಗೆ ಬರಲಿ—ಅವಸರಿಸಿ ಕೆಡಿಸಬೇಕೆಂದಿಲ್ಲ. ಆದರೆ ಆ ಬೆಳೆಯನ್ನು ಬೆಳೆಯುಸುವ ಸಾಗುವಳಿಯ ಸಿದ್ಧತೆಯಾದರೂ ಈ ದಿನ ತೋರಿಬರಬೇಕಿತ್ತಲ್ಲವೆ? ಪ್ರಗತಿಶೀಲ ಮಾರ್ಪಾಟಿನ ಧೋರಣೆಯನ್ನು ಸರಕಾರ ವಿಟ್ಟುಕೊಂಡಿದೆ, ಎಂಬುದೀಗ ಕಂಡುಬರಬೇಕಿದ್ದಿತು. ಬದಲಿಗೆ ಪ್ರಚಲಿತ ಆರ್ಥಿಕ ಸಾಮಾಜಿಕ ಸ್ಥಿತಿಯನ್ನೇ ಸದ್ಯ ದೃಢವಾಗಿ ಊರ್ಜಿತದಲ್ಲಿರಿಸುವ ಧೋರಣೆ ಕಂಡುಬರುತ್ತಿರುವದನ್ನೇ ದೋಷವೆಂದು ಇಲ್ಲಿ ಪ್ರಸ್ತಾಪಿಸಬೇಕಾಯಿತು. ಅಂತೆಯೇ ದೀರ್ಘಾವಧಿ ಪರದಾಸ್ಯದಲ್ಲಿದ್ದು, ಅಂತಹ ಗುಲಾಮಗಿರಿಯಲ್ಲಿ ಸ್ವಾಭಾವಿಕವಾದ ಅಜ್ಞಾನ, ಆತಂಕಗಳಲ್ಲೇ ಸಿಕ್ಕಿ ಒದ್ದಾಡಿಕೊಂಡಿದ್ದ ಜನಸಾಮಾನ್ಯರು ಎರಡೇ ವರುಷಗಳೊಳಗೆ ಸ್ವಾಧಿಕಾರದ ಹೊಣೆಗಾರಿಕೆಗಳನ್ನೆಲ್ಲಾ ಕಲಿತುಕೊಂಡು ಪ್ರಬುದ್ಧರಾಗಬೇಕಿದ್ದಿತೆಂದು ಯಾರೂ ಹೇಳಲಾರರು; ಆದರೆ ಅವರು ಅದನ್ನು ಯೋಗ್ಯ ರೀತಿಯಿಂದ ಕಲಿಯುತ್ತಿರುವ ದೃಶ್ಯವಾದರೂ ಕಣ್ಣಿಗೆ ಈ ದಿನ ಬೀಳಬೇಕಿತ್ತು. ಅಂತಹದೇನೂ ಗೋಚರಿಸದೆ, ಅಜ್ಞಾನ ಮತ್ತು ಆಲಸಿಗತನದಲ್ಲಿರುವ ಬದಿಯಿಂದ ವಿಲಕ್ಷಣ ಸಖವನ್ನೇ ಸಾರ್ವಜನಿಕರೀಗಲೂ ಸವಿಯುತ್ತಿರುವುದು ಕಾಣುತ್ತಿದೆ. ಇದೇ ನಾವಂದ ಎರಡನೇ ದೋಷ. ಈ ದೋಷ ನಿವಾರಣೆಗೊಂಡಲ್ಲಿ, ಮೊದಲನೇ ಲೋಪ ನಿವಾರಣೆಗಾಗಿ ಪ್ರತ್ಯೇಕ ಶ್ರಮಪಡುವ ಅಗತ್ಯವಿಲ್ಲ. ಜನತೆಯು ಜಾಗ್ರತಿಗೊಂಡು ತಮ್ಮ ಕರ್ತವ್ಯವನ್ನರಿತುಕೊಂಡರೆ, ಇಂದಿನ ಆಡಳಿತೆಯಿಂದಾಗದ ಆರ್ಥಿಕ ಸಾಮಾಜಿಕ ಸುಧಾರಣೆಗಳು ಮುಂದಿನ ಜನತಾ ರಾಜ್ಯಭಾರದಲ್ಲಾದಾವೆಂಬ ಭರವಸೆ ಪಡಬಹುದು. ಆದ್ದರಿಂದ ಜನತೆಯ ಜಡ ಮನೋವೃತ್ತಿಯು ನಿವಾರಣೆಯಾಗಬೇಕಾದುದೊಂದೇ ಈಗ ಅತ್ಯಗತ್ಯವಾದ ಹಾಗೂ ಅತಿ ಪ್ರಮುಖ ವಿಷಯ. ದುರ್ದೈವವಶಾತ್ ಅಂತಹ ಜನಜಾಗ್ರತೀ ಕಾರ್ಯವೀಗ ಯಾರಿಂದಲೂ ಸಮಾಧಾನಕರ ರೀತಿಯಿಂದ ನಡೆಯುತ್ತಿಲ್ಲ. ಸ್ವರಾಜ್ಯ ಸ್ಥಾಪನಾಂದೋಲನ, ಜಾತೀಯ ಗೊಂದಲ, ಹೈದರಾಬಾದ್ ಬಿಕ್ಕಟ್ಟಿನಂತಹ ವಿಶೇಷ ಸನ್ನಿವೇಶನಗಳೆದ್ದಾಗಲೆಲ್ಲಾ ಅವು, ಸಾರ್ವಜನಿಕರ ಅಖಂಡ ಲಕ್ಷ್ಯವನ್ನು ತಮ್ಮೆಡೆಗೆಳೆದುಕೊಳ್ಳುತಿದ್ದುವು. ಈ ತಾತ್ಕಾಲಿಕಾಕರ್ಷಣೆಗಳು ಮುಗಿದು ಹೋದ ಬೆನ್ನಲ್ಲೇ ಜನತೆಯ ಸ್ವಭಾವಬದ್ಧ ಅಲ್ಪಾಭಿಲಾಷೆ, ಸಂಕುಚಿತ ಸ್ವಾರ್ಥಸಕ್ತಿ ಪುನಃ ಮರಳಿ ತೋರುವಂತಾಯಿತು. ಇವುಗಳ ಪುನರುತ್ಥಾನಕ್ಕೆ ಎಡೆದೊರೆಯದಂತೆ, ಸಾರ್ವಜನಿಕರ ಹೆಗಲ ಮೇಲೆ ಬಿದ್ದಿರುವ ಆಕರ್ಷಣೀಯ ಹೊಣೆಗಾರಿಕೆಯ ಪರಿಚಯವನ್ನು ಮಾಡಿಕೊಡುವ—ಬುದ್ಧಿಪಕ್ವತೆಯನ್ನು ನಿರ್ಮಿಸುವ— ಯೋಗ್ಯತೆಯನ್ನು ತುಂಬಿಸುವ— ಪ್ರಚಾರ ಮತ್ತು ಸಂಘಟನಾ ಕಾರ್ಯಗಳೀಗ ಜನತೆಯ ನಡುವೆ ನಡೆಯಬೇಕಿದ್ದಿತು. ಅಂತಹದಾವುದೂ ನಡೆದಿಲ್ಲ. ಕಾಂಗ್ರೆಸಿಗರೀಗ ತಾವು ಶಿಕ್ಷಿಸರಕ್ಷಿಯ ಕರ್ತರೆಂಬಂತಿದ್ದಾರೆ ಹೊರತು ಜನತಾ ಶಿಕ್ಷಕರಾಗಿಲ್ಲ; ತಮ್ಮ ಗುರಿಸಾಧನೆಗಾಗಿ ಈ ಕಾಲದಲ್ಲಿ ಕೇವಲ ಜನತಾರಂಗವನ್ನೇ ಆರಿಸಿಕೊಳ್ಳಬೇಕಾಗಿದ್ದ ಸಮತವಾದಿಗಳಂಥವರು ಕೂಡಾ ಕಾಂಗ್ರೆಸಿಗರಿರು ಬೀಳುವಮೊಂದನ್ನಲ್ಲದೆ, ಬೇರೇನನ್ನೂ ಮಾಡುತ್ತಿಲ್ಲ. ಹೀಗಾಗಿ ಈ ದಿನ ಆಗಬೇಕಾಗಿದ್ದ ಮುಖ್ಯ ಕೆಲಸ ಬಾಕಿಬಿದ್ದಿದೆ. ಇದು ಶೋಚನೀಯವಲ್ಲದೆ ಮತ್ತೇನು? ಅಧಿಕಾರಲಾಲಸೆ, ಹುಸಿರೇಂಕಾರ, ಕೃತಕ ಪ್ರದರ್ಶನ, ದ್ವೇಷಾಸೂಯೆಗಳಲ್ಲದೆ ನಿಜವಾದ ಜನಹಿತಾಕಾಂಕ್ಷೆಯಿರುವ ಯಾವ ಪಕ್ಷವಾದರೂ ಈ ಸಂದರ್ಭದಲ್ಲಿ ಸಾರ್ವಜನಿಕ ಸಂಘಟನೆಗಾಗಿ, ಜನಮತವನ್ನೊಲಿಸಿಕೊಳ್ಳುವುದಕ್ಕಾಗಿ ಜನತಾರಂಗವನ್ನೇ ತನ್ನ ಕಾರ್ಯಕ್ಷೇತ್ರವಾಗಿ ಮಾಡಿಕೊಳ್ಳದೆ ಬಿಡುತ್ತಿತ್ತೆ?—ಎಂದು ಮತ್ತೊಮ್ಮೆ ಕೇಳಬೇಕಾಗಿದೆ.

ವಿಶೇಷ ವಾರ್ತೆ-

ಆಂಧ್ರದ ಸರ್ವಮಾನ್ಯ ಹಿರಿಯ ಪ್ರಮುಖ, ಮಹಾತ್ಮಾಜೀಯ ನಿಷ್ಠಾವಂತ ಅನುಯಾಯಿ ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರು ಇದೇ ತಾ. 15ರಲ್ಲಿ-ದ್ವಿತೀಯ ಸ್ವರಾಜ್ಯ ವರ್ಧಂತಿದಿನ-ತನ್ನ 83 ನೇ ಪರಿಪಕ್ವ ವಯಸ್ಸಿನಲ್ಲಿ ಗುಂಟೂರಿನಲ್ಲಿ ಮರಣಗೊಂಡರು. ಕೀರ್ತಿ ಲಾಲಸೆಕೂಡಾ ಇಲ್ಲದ ನಿಸ್ವಾರ್ಥಬುದ್ಧಿಯಿಂದ ಮೂವತ್ತು ವರುಷಗಳಿಗೂ ಮಿಕ್ಕಿ ಅವಿಶ್ರಾಂತ ರಾಷ್ಟ್ರಸೇವೆ ಸಲ್ಲಿಸಿದ್ದ ಯೋಧರವರು, ದೇಶ ಸೇವೆಗಾಗಿಯೇ ವಕಾಲತ್ ಬಿಟ್ಟು ಗಾಂಧಿಜೀ ನೇತೃತ್ವದ ಪ್ರತಿ ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿ, ಹಲವು ಬಾರಿ ಕಾರಾಗೃಹ ಸೇರಿದವರು. ಸ್ಥಾನಮಾನಾಭಿಲಾಷೆಯಿಲ್ಲದೆ, ಕಾರ್ಯದತ್ತ ಹೊರತು, ಬೇರಾವ ಕಡೆಗೂ ಅವಾ ದೃಷ್ಟಿ ಬೀರದೆ ಜನಸೇವೆಯೊಂದರಲ್ಲೇ ತಲ್ಲೀನಗೊಂಡಿದ್ದು, ಶುಭದಿನದಲ್ಲಿ ಮುಕ್ತಾಯಗೊಂಡ ಅವರ ಜೀವನವು ಕಾಂಗ್ರೆಸ್ ಕೆಲಸಗಾರರಿಗೆ ಆದರ್ಶವಾಗುವಂತಹದು.

೦೦ ೦೦ ೦೦

ರಝಾಕಾರ್‌ನಾಯಕ ಕಾಸಿಮ್ ರಜ್ವಿ, ಮುನಿವರ್ ಖಾನ್, ಮೋಹ್‌ಸಿನ್ ರಾಝೂ-ಈ ಮೂವರ ಮೇಲೆ, ಉರ್ದು ಪತ್ರಿಕೆ 'ಇಮ್ರೋಝ್'ನ ಸಂಪಾದಕರಾಗಿದ್ದ ಶೋಯಿಬುಲ್ಲಾ ಖಾನರನ್ನು ಕೊಲೆ ಮಾಡಿದ ಆರೋಪದ ಮೊಕದ್ದಮೆಯು ಮಿ. ಜೆ. ಎ. ಪಿಂಟೋರವರ ಅಧ್ಯಕ್ಷತೆಯಲ್ಲಿ ನಿರ್ಮಾಣಗೊಂಡ ಸ್ಪೆಶ್ಯಲ್ ನ್ಯಾಯಾಧೀಶ ಮಂಡಲಿಯಿದಿರಲ್ಲಿ ಸಿಕಂದರಾಬಾದಿನಲ್ಲೀಗ ನಡೆಯುತ್ತಿದೆ. ಕೊಲೆಯಲ್ಲಿ ಭಾಗಿಯಾದವನೆಂದು ಹೇಳಲ್ಪಟ್ಟಿರುವ ಅಸೀರ್, ಎಂಬವನು ಮಾಫಿ ಸಾಕ್ಷಿಯಾಗಿ ಹೇಳಿಕೆಯಿತ್ತಿದ್ದಾನೆ. ಪಾಕಿಸ್ತಾನದಲ್ಲಿರುವ ರಜ್ವಿಯ ಪತ್ನಿಯು ನೇಮಿಸಿದ್ದ ಲಂಡನಿನ ಇಬ್ಬರು ಬ್ಯಾರಿಸ್ಟರಿಗೆ ಅವರಿಗೆ ಉರ್ದು ಬರುವದಿಲ್ಲವೆಂಬ ಕಾರಣದಿಂದ ಹೈದರಾಬಾದ್ ಶಾಸನಕ್ಕನುಸರಿಸಿ, ಅವರಿಗೆ ರಜ್ವೀಪರ ವಕಾಲತಿಗೆ ಪರವಾನಗಿ ದೊರೆಯಲಿಲ್ಲ. ಈ ಲಂಡನ್ ವಕೀಲರಲ್ಲೊಬ್ಬನಾದ ಮಿ. ರೋಬರ್ಟ್ಸ್‌ರು ಕೇಳಿಕೊಂಡಂತೆ ಮದ್ರಾಸಿನ ವಕೀಲ ಶ್ರೀ ಕೋಟ ವೆಂಕಟ ಸುಬ್ಬರಾಯರು ರಜ್ವಿಯ ಪರ ವಕಾಲತ್ ವಹಿಸಲು ಕೋರ್ಟಿಗೆ ಹಾಜರಾದಾಗ ತನಗವರು ಅಗತ್ಯವಿಲ್ಲವೆಂದು ರಜ್ವಿಯೇ ನಿರಾಕರಿಸಿದ.

೦೦ ೦೦ ೦೦

ರಾಜ ಕವಿಗಳಾಗಿ ಮದ್ರಾಸ್ ಸರಕಾರವು ನೇಮಿಸಿಕೊಂಡಿರುವ ಕನ್ನಡದ ಹಿರಿಯ, ಘನ ವಿದ್ವಾಂಸ ಶ್ರೀ ಮಂಜೇಶ್ವರ ಗೋವಿಂದ ಪೈ, ತಮಿಳಿನ ಕವಿ ನಮಕ್ಕಲ್ ಗೋವಿಂದ ಪಿಳ್ಳೆ, ತೆಲುಗಿನ ಶತಾವಧಾನಿ ಕಲಾಪ್ರಪೂರ್ಣ ಶ್ರೀ ಚೆಲ್ಲಪಿಲ್ಲ ವೆಂಕಟ ಶಾಸ್ತ್ರಿ, ಮಲೆಯಾಳದ ಮಹಾ ಕವಿ ವಲ್ಲತ್ತೋಲ್ ನಾರಾಯಣ ಮೆನನ್, ಸಂಸ್ಕೃತದ ಮಹಾ ಮಹೋಪಾಧ್ಯಾಯ ಶ್ರೀ ಕೆ. ಯಸ್. ಕೃಷ್ಣಮೂರ್ತಿ ಶಾಸ್ತ್ರಿಗಳ್- ಇವರಿಗೆ ರಾಜಕವಿ ಪದ ಚಿಹ್ನೆಗಳನ್ನೊಪ್ಪಿಸುವ ದರ್ಬಾರನ್ನು ಮದ್ರಾಸ್ ಗವರ್ನರು ಇದೇ ತಾ. 14ರಲ್ಲಿ ಮದ್ರಾಸಿನ ರಾಜಾಜೀ ಭವನದಲ್ಲಿ ಜರಗಿಸಿದರು. ಪ್ರತಿಯೊಬ್ಬ ಆಸ್ಥಾನ ಕವಿಗೂ ಸರಕಾರದ ಪದಕವೊಂದು, ಒಂದು ಮೆಡಲು, ಒಂದು ಶಾಲು ಅರ್ಪಿಸಲ್ಪಟ್ಟಿತು. ಮುಂದಿನ ಐದು ವರುಷಗಳವರೆಗೆ ಪ್ರತಿಯೊಬ್ಬನಿಗೆ ರೂ. 1000 ದಂತೆ ಗೌರವ ಸೂಚಕ ವಾರ್ಷಿಕ ವೇತನವಿದೆ. ದರ್ಬಾರಿನಲ್ಲಿ ಕವಿಗಳೆಲ್ಲರೂ ತಂತಮ್ಮ ವಿದ್ವತ್ಪ್ರದರ್ಶನ ಮಾಡಿದರು. ಕನ್ನಡಕವಿ ಶ್ರೀ ಮಂಜೇಶ್ವರ ಗೋವಿಂದ ಪೈಗಳು ತನ್ನ ಕನ್ನಡ ಕವನ ಕೃತಿಯೊಂದನ್ನೋದಿ ಇಂಗ್ಲಿಷಿನಲ್ಲಿ ಅದರ ಅರ್ಥವಿವರಣೆ ಮಾಡಿದರು.

ನವಯುಗದ—

29ನೇ ವರ್ಷವು ಈ ಸಂಚಿಕೆಯೊಡನೆ ಪೂರ್ಣಗೊಂಡ, ಬರುವ ವಾರದ ಸಂಚಿಕೆಯೊಂದಿಗೆ 30ನೇ ವರುಷ ಆರಂಭಿಸುವದು. ಕನ್ನಡ ಪತ್ರಿಕಾರಂಗದಲ್ಲಿ 'ನವಯುಗ'ವು ನಡೆದುಬಂದ ಹಾದಿಯ ಉದ್ದ, ಆ ಹಾದಿಯಲ್ಲಿದ್ದ ತಡ ತೊಡಕು, ಪ್ರೇರಣೆ ಪ್ರೋತ್ಸಾಹ, ಸುಖದುಃಖ-ಎಲ್ಲವೂ ಗಣನೀಯವಾದವುಗಳೇ. ನಮಗೆ ಎಲ್ಲಾ ವಿಧದಿಂದ ನೆರವಾದ ಎಲ್ಲರಿಗೂ ಈ ಸಂದರ್ಭದಲ್ಲಿ ಧನ್ಯವಾದಗಳನ್ನರ್ಪಿಸುತ್ತೇವೆ; ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ನಿರೀಕ್ಷಿಸುತ್ತೇವೆ.

ಚಂದಾ ಹಣ ಬಾಕಿಯಿರುವವರು ಬೇಗನೇ ಕಳುಹಿಸಿಕೊಡಬೇಕೆಂದು ಸಂದರ್ಭೋಚಿತ ವಿಜ್ಞಾಪನೆ.

ಕಾಶ್ಮೀರದ ಶಾಂತಿ ಸಮ್ಮೇಲನ ನಡೆಯದಂತಾಯಿತು

(೫ನೇ ಪುಟದಿಂದ ಮುಂದುವರಿದುದು)

ಮೊದಲಿನ ನಿರ್ಣಯ

ರಾಜಿಯು ಸಾಧ್ಯವಾಗದಂತಹ ಆಕ್ಷೇಪ ಬಂದುದಾರಿಂದ, ಎಂಬುದನ್ನಿಲ್ಲಿ ನೋಡಲಿಕ್ಕಿದೆ. ಕಳೆದ ವರುಷದಾದಿ ಭಾಗದಲ್ಲೇ ಕಾಶ್ಮೀರ ವಿವಾದದ ತೀರ್ಮಾನಕ್ಕಾಗಿ ಭದ್ರತಾ ಕೌನ್ಸಿಲಿನಿಂದ ನೇಮಕಗೊಂಡಿದ್ದ ಕಾಶ್ಮೀರ ಕಮಿಶನು ತಾ. 13-8-1948ರಲ್ಲಿ ಸಂಧಾನ ಪ್ರಯತ್ನದ ಅಸ್ತಿವಾರವಾಗಬಲ್ಲ ಮೂಲಸೂತ್ರಗಳುಳ್ಳ ಒಂದು ನಿರ್ಣಯವನ್ನು ಮಾಡಿಕೊಂಡಿದ್ದಿತು. ಈ ನಿರ್ಣಯವನ್ನು ಪ್ರಥಮತಃ ಭಾರತವಾಗಲೀ ಪಾಕಿಸ್ತಾನವಾಗಲೀ ಒಪ್ಪಿಕೊಳ್ಳಲಿಲ್ಲ; ಆ ಮೇಲೆ ಕಮಿಶನಿನವರು ಇಕ್ಕಡೆಯವರಿಗೂ ಪ್ರತ್ಯಪ್ರತ್ಯೇಕವಾಗಿ ಅದರ ಅರ್ಥವಿವರಣೆ ಮಾಡಿ ಸಮಾಧಾನಪಡಿಸಿ, ಎರಡೂ ಕಡೆಯವರ ಸಮ್ಮತಿ ಪಡೆದರು. ಜಮ್ಮು ಮತ್ತು ಕಾಶ್ಮೀರದ ಒಳಗಿನ ಶಾಂತಿ, ವ್ಯವಸ್ಥಾಪಾಲನೆಗಗತ್ಯವುಳ್ಳಷ್ಟು ಸೇನೆಗಳನ್ನು ಮಾತ್ರ ಭಾರತ ಸರಕಾರವು ಅಲ್ಲಿಟ್ಟುಕೊಂಡು, ಭಾರತ ಮತ್ತು ಪಾಕಿಸ್ತಾನಗಳ ಎಲ್ಲಾ ಸೈನ್ಯಗಳನ್ನೂ ಜಮ್ಮು ಮತ್ತು ಕಾಶ್ಮೀರ ಕ್ಷೇತ್ರಗಳಿಂದ ಹಿಂದೆಗೆಯತಕ್ಕದ್ದು- ಅತ್ಯಂತ ವಿರಳ ಜನಸಂಖ್ಯೆಯಿರುವ ಸಂಸ್ಥಾನದ ಉತ್ತರಗಡೆಯ ಕ್ಷೇತ್ರಗಳ ಆಡಳಿತೆ ಮತ್ತು ರಕ್ಷಣೆಯ ವ್ಯವಸ್ಥೆ ಮಾಡಬೇಕು- ಆ ಮೊದಲೇ ಧಾಳಿಗಾರರ ಹಸ್ತಗತವಾಗಿರುವ ಭಾಗಗಳಲ್ಲಿ ಪಾಕಿಸ್ತಾನದ ಹಸ್ತಕ 'ಆಝಾದ್ ಸರಕಾರ'ದ ಆಡಳಿತೆ ಸ್ಥಾಪಿಸಬೇಕು- ಜಮ್ಮು ಕಾಶ್ಮೀರಗಳಲ್ಲಿರುವ "ಆಝಾದ್ ಕಾಶ್ಮೀರ್" ನಾಮಾಂಕಿತ ಸೈನ್ಯಗಳನ್ನು ಬರ್ಖಾಸ್ತುಗೊಳಿಸಬೇಕು, ಎಂಬುದೇ ಆ ನಿರ್ಣಯದ ತಿರುಳು. ಕಾಶ್ಮೀರ ಕಮಿಶನಿನಿಂದ, ಭಾರತ ಸರಕಾರವು ಕೇಳಿದ್ದ ಸ್ಪಷ್ಟೀಕರಣಕ್ಕುತ್ತರವಾಗಿ 'ಆಝಾದ್ ಕಾಶ್ಮೀರ್ ಸೇನೆ'ಯು ವಿಸರ್ಜನೆ ಹೊಂದುವಂತಹದೆಂದು ಕಮಿಶನಿನವರು ಸ್ಪಷ್ಟವಾಗಿ ಒಪ್ಪಿಕೊಂಡಿದ್ದರು. ಈ ನಿರ್ಣಯವನ್ನಾಧರಿಸಿ, ಒಂದು ಖಚಿತ ತೀರ್ಮಾನ ಮಾಡಿಕೊಂಡು, ಆ ಮೇಲೆ ಕಾಶ್ಮೀರವು ಯಾವ ಕಡೆಗೆ ಸೇರಬೇಕೆಂಬ ಜನಮತ ಸಂಗ್ರಹದ ವ್ಯವಸ್ಥೆಗಿಳಿಯಬೇಕೆಂದು ಕಾಶ್ಮೀರ ಕಮಿಶನಿನವರು ಆಗೋಸ್ಟು 22ಕ್ಕೆ ನವಡಿಲ್ಲಿಯಲ್ಲಿ ಭಾರತ-ಪಾಕಿಸ್ತಾನ ಸಮ್ಮೇಳನವನ್ನು ಎರಡೂ ಕಡೆಯವರನ್ನು ವಿಚಾರಿಸಿ ತಿಳಿದುಕೊಂಡೇ ಕರೆದಿದ್ದರು. ಆದರೆ ಆ ಸಮ್ಮೇಳನದ ಮುಂದಿಡಬೇಕಾದ ಕಾರ್ಯಕ್ರಮದ ಕುರಿತು ಅಭಿಮತ ಕೇಳುವಾಗ ಇವೆರಡು ಸರಕಾರಗಳ ಅಭಿಪ್ರಾಯಗಳೊಳಗೆ ಪೂರ್ವ ಪಶ್ಚಿಮದಷ್ಟು ಅಂತರವಿದೆಯೆಂಬುದು ತಿಳಿದುಬಂತು. ಇನ್ನು ಮಾತಾಡಿ ಫಲವಿಲ್ಲವೆಂದು ಸಮ್ಮೇಳನದ ಪ್ರಸ್ತಾಪ ನಿಂತು ಹೋಯಿತು.

ತಪ್ಪು ಯಾರದು?

ಪಾಕಿಸ್ತಾನದ ಅಂಬೋಣ— 'ಆಝಾದ್ ಕಾಶ್ಮೀರ್ ಸೈನ್ಯ'ವು ಪಾಕಿಸ್ಥಾನ ಸೈನ್ಯದ ಒಂದು ಅಂಗ. ಆದ್ದರಿಂದ ಅದನ್ನು ವಿಸರ್ಜಿಸಿಕೊಳ್ಳುವ ಪ್ರಸ್ತಾಪವೇ ಚರ್ಚೆಗೆ ಬರಕೂಡದು. ಅಂತೆಯೇ ಕಮಿಶನಿನ ಆಗೋಸ್ತು ನಿರ್ಣಯಾನುಸಾರವಾಗಿ ಕಾಶ್ಮೀರದ ಉತ್ತರಗಡೆಯಲ್ಲಿದ್ದು ಧಾಳಿಗಾರರ ಕೈಗಿನ್ನೂ ಸೇರದಿರುವ ಬಾಲ್ಟಿಸ್ತಾನ್, ಲಡಕ್ ಮತ್ತು ಗಿಲ್ಗಿಟಿನ ಕೆಲವು ಭಾಗಗಳ ಆಡಳಿತೆ ಹಾಗೂ ರಕ್ಷಣಾ ಜವಾಬ್ದಾರಿಯನ್ನು ಕಾಶ್ಮೀರ ಸರಕಾರಕ್ಕೊಪ್ಪಿಸಬೇಕಿದ್ದಿತು. ಈ ನಿವಾಸಾಸಾಧ್ಯ ಸ್ಥಳಗಳ ಮೇಲೆ ಪಾಕಿಸ್ತಾನಿಗಳು ಆಗಾಗ ಧಾಳಿ ನಡಿಸುತಿದ್ದರು ಹೊರತು ಅಲ್ಲಿ ತಳವೂರಿಲ್ಲ; ಆದರೂ ಅಲ್ಲಿಯ ಮೇಲ್ವಿಚಾರಣೆಯನ್ನು ಕಾಶ್ಮೀರ ಸರಕಾರದ ವಶಕ್ಕೊಪ್ಪಿಸಬೇಕೆಂಬ ಭಾರತ ಸರಕಾರದ ಸೂಚನೆಗೆ ಪಾಕಿಸ್ತಾನ್ ಸರಕಾರವು ನಕಾರ ಸೂಚಿಸಿತು. ಹೀಗಾಗಿ ಕಾಶ್ಮೀರ ಸಂಬಂಧದ ಶಾಂತಿ ಸೂತ್ರಗಳು ಮುರಿದು ಹೋದುವು.

ಪಾಕಿಸ್ತಾನವು ಈ ಸಂಬಂಧವಾಗಿ ಅಂದಿನಿಂದೀವರೆಗೂ ಹೇಗೆ ಸಂದರ್ಭಾನುಸಾರ ಬಣ್ಣ ಬದಲಾಯಿಸುತ್ತಾ ಬಂದಿದೆ ಎಂಬುದು ಕುಚೋದ್ಯಕರ ವಿಷಯ. ಕಾಶ್ಮೀರದ ಪ್ರಶ್ನೆಯು ಭದ್ರತಾ ಕೌನ್ಸಿಲಿನಲ್ಲಿ ಪ್ರಥಮತಃ ಮುಂದೆ ಬಂದಾಗ ಪಾಕಿಸ್ತಾನದ ಪ್ರತಿನಿಧಿ ಸರ್. ಝಫರುಲ್ಲಾಖಾನರು, ಆ ಬಂಡುಗಾರ ಆಝಾದ್ ಕಾಶ್ಮೀರ್ ಸೈನಿಕರಿಗೂ ಪಾಕಿಸ್ತಾನಕ್ಕೂ ಸಂಬಂಧವೇ ಇಲ್ಲವೆಂದು ವಾದಿಸಿದ್ದರು. ಕಮಿಶನು ಕಾಶ್ಮೀರಕ್ಕೆ ಬಂದು ಎಲ್ಲವನ್ನೂ ಪ್ರತ್ಯಕ್ಷ ಪರಿಶೀಲನೆ ನಡೆಸಿದಾಗ ಈ ಆಝಾದ್ ಕಾಶ್ಮೀರ್ ಸೈನಿಕರು ಪಾಕಿಸ್ತಾನ್ ಸೇನಾನಿಗಳ ಹಾಗೂ ಸೇನಾತಜ್ಞರ ನಿರ್ದೇಶಾಧೀನರಿದ್ದಾರೆ, ಎಂಬುದು ತಿಳಿದು ಬಂತು; ಕೊನೆಗೆ ಪಾಕಿಸ್ತಾನದ ಕ್ರಮಬದ್ಧ ಸೈನ್ಯಗಳೇ ಅಲ್ಲಿವೆಯೆಂಬುದು ಗೋಚರಕ್ಕೆ ಬಂತು. ಪರಿಶೀಲನಾಮೂಲವಾದ ಆಗೋಸ್ತು ನಿರ್ಣಯವನ್ನು ಕಳೆದ ವರುಷ ಮಾಡುವಾಗ ಕಾಶ್ಮೀರದ ಮೇಲಿನ ಧಾಳಿಗಾರರ ಬಲವೆಷ್ಟೆಂಬ ಅಂದಾಜೇ ಅವರಿಗೆ ಸಿಕ್ಕಿರಲಿಲ್ಲ. 5 ದಳ ಸೇನೆಗಳಿರಬೇಕೆಂದು ಅಂದಾಜು ಮಾಡಲಾಗಿತ್ತು. ಸೂಕ್ಷ್ಮ ಪರಿಶೀಲನೆಯ ನಂತರ ಕೊನೆಗೀಗ ಅಲ್ಲಿ 32 ದಳಗಳಿಗೂ ಮಿಕ್ಕಿ ಧಾಳಿಗಾರ ಸೇನೆಗಳಿವೆ, ಎಂದು ತಿಳಿದು ಬಂದಿದೆ. ಆಝಾದ್ ಕಾಶ್ಮೀರ ಸೈನ್ಯಕ್ಕೂ ತಮಗೂ ಯಾವ ಸಂಬಂಧವೂ ಇಲ್ಲವೆಂದು ಆರಂಭದಲ್ಲಂದಿದ್ದ ಪಾಕಿಸ್ತಾನವೀಗ ಅದು ತನ್ನ ಸೇನಾಂಗವೆನ್ನುತ್ತಿದೆ; ಕಾಶ್ಮೀರದ ಕುರಿತು ಅಂದಿನಿಂದೀವರೆಗೂ ವಂಚನೆಯನ್ನೇ ಅದು ನಡೆಸುತ್ತಾ ಬಂದಿದೆ; ಆ ಮೂಲಕ ಕಾಶ್ಮೀರ ಸಂಧಾನವನ್ನು ಅಸಾಧ್ಯಗೊಳಿಸಿದೆ. ಈಗ ಪುನಃ ಪ್ರಶ್ನೆ- ಮುಂದೇನು?

ಉಡುಪಿ.

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಕನ್ನಡ ಸಂಘದ ಪ್ರಥಮ ಸಭೆಯು ಶ್ರೀ. ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ತಾ 18ರಲ್ಲಿ ಜರಗಿ ಶ್ರೀ ಪಿ. ನಾರಾಯಣ ಅಯ್ಯಂಗಾರರಿಂದ 'ಜೈಮಿನಿ ಭಾರತದಲ್ಲಿರುವ ಹಾಸ್ಯ'ದ ಕುರಿತಾಗಿ ಉಪನ್ಯಾಸ, ಸಭಿಕರ ಭಾಷಣಗಳಾದುವು. ಕನ್ನಡ ರಾಜಕವಿ ಶ್ರೀ ಮಂಜೇಶ್ವರ ಗೋವಿಂದ ಪೈಗಳನ್ನು ಅಭಿನಂದಿಸುವ, ದೇ.ಭ. ಕೊಂಡವೆಂಕಟಪ್ಪಯ್ಯನವರ ನಿಧನಕ್ಕಾಗಿ ದುಃಖ ಸೂಚಿಸುವ ನಿರ್ಣಯಗಳಾದುವು. ತಾ 23ರಲ್ಲಿ ಸೇರಿದ ಕನ್ನಡ ಸಂಘದ ಸಭೆಯಲ್ಲಿ ಶ್ರೀ ಕೋಟ ಶಿವರಾಮ ಕಾರಂತರು 'ವ್ಯಕ್ತಿ ಮತ್ತು ಸಮಾಜ' ಎಂಬ ಕುರಿತು ಮನನೀಯ ಭಾಷಣವಿತ್ತರು.

ಕಲ್ಯಾಣಪುರದಲ್ಲಿ—ಸಂಸ್ಕೃತ ಮಹಾಪಾಠಶಾಲೆಯ ಪ್ರಿನ್ಸಿಪಾಲರಾಗಿದ್ದ ಶ್ರೀ ಎಮ್. ರಾಮಚಂದ್ರರಾವ್, ಎಂ. ಎ., ಇವರನ್ನು ಬೀಳ್ಕೊಡುವ ಸಭೆಯು ತಾ 23ರಲ್ಲಿ ಶ್ರೀ ಅದಮಾರು ಮಠದ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿ, ಜನಪ್ರಿಯ ಪ್ರಿನ್ಸಿಪಾಲರಿಗೆ ಮಾನಪತ್ರ ಸಮರ್ಪಣೆ ಮತ್ತು ಹೃದಯ ಸ್ಪರ್ಶಿ ವಿದಾಯ ಮಾತುಗಳಾದುವು.

ದ. ಕನ್ನಡ

ಹಿರಿಯಡ್ಕ:—ತಾ 17ರಲ್ಲಿ ಆರ್ಯಸಮಾಜ ಮಂದಿರದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯುತ್ಸವವು ಡಾ। ಬಿ. ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಭಾಷಣ ಇತ್ಯಾದಿ ಕಾರ್ಯಕ್ರಮಗಳಿಂದ ಜರಗಿತು.

ಪಣಂಬೂರು—ಇಲ್ಲಿಯ ಬೋರ್ಡ್ ಮುಸ್ಲಿಂ ಶಾಲಾ ಮುಖ್ಯೋಪಾಧ್ಯಾಯ ಮಿ. ಪಿ. ಮಾಪರ್ ಸಾಹೇಬರು ವರ್ಗವಾಗಿ ಹೋಗುವ ನಿಮಿತ್ತ ಅವರನ್ನು ಗೌರವಿಸುವರೆ ಈಚೆಗೆ ಒಂದು ಸತ್ಕಾರಕೂಟ ಜರಗಿತು.

ಫಲಿಮಾರು:—ಸ್ಥಳೀಯ ಬೋರ್ಡ್ ಶಾಲೆಯ ಏಳುವರುಷ ಪ್ರಾಯದ ವಿದ್ಯಾರ್ಥಿಯೊಬ್ಬನು ಇದೇ ತಾ 3ರಲ್ಲಿ ನೆರೆಯ ದಿನ ಶಾಲೆಯಿಂದ ಮನೆಗೆ ಹೋಗುವಾಗ ನಂದಿಕೂರು ತೋಡಿಗೆ ಹಾಕಿದ ಮರದ ಸೇತುವೆಯಿಂದ ಬಿದ್ದು ಆತನ ಶವವು ಎರಡು ದಿವಸಗಳ ನಂತರ ದೊರೆಯಿತೆಂದೂ ಇಂತಹ ಗಂಡಾಂತರಗಳಿಗೆ ಕಾರಣವಾದ ತೋಡುಗಳ ಸೇತುವೆಯನ್ನು ದುರಸ್ತಿ ಮಾಡಿ ಜನತೆಗೆ ಸೌಕರ್ಯವನ್ನುಂಟು ಮಾಡುವುದು ಪಂಚಾಯತ ಬೋರ್ಡಿನ ಆದ್ಯ ಕರ್ತವ್ಯವೆಂದೂ ಓರ್ವ ಬಾತ್ಮಿದಾರರು ಬರೆಯುತ್ತಾರೆ.

ಬಳ್ಳಾರಿ—ತಾ 11-8-49ರಲ್ಲಿ ಮದ್ರಾಸ್ ಪ್ರಧಾನ ಮಂತ್ರಿ ಕುಮಾರಸ್ವಾಮಿರಾಜಾ ಹಾಗೂ ರೆವಿನ್ಯೂ ಮಂತ್ರಿಗಳಾದ ಸೀತಾರಾಮರೆಡ್ಡಿ ಇವರು ಪುರಪ್ರಮುಖರೊಂದಿಗೆ ತಾರಾನಾಥ ಆಯುರ್ವೇದ ವಿದ್ಯಾಪೀಠಕ್ಕೆ ಸಂದರ್ಶನವಿತ್ತರು. ಮಂತ್ರಿಗಳು ಕಾಲೇಜ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಗೌರವ ರಕ್ಷೆ(Gaurd of Honour) ಸ್ವೀಕರಿಸಿದ ನಂತರ, ವಿದ್ಯಾಪೀಠದ ಫಾರ್ಮಸಿಯನ್ನೂ, ಔಷಧಿ ಸಂಗ್ರಹಾಲಯವನ್ನೂ ನೋಡಿ, ಮುಂದೆ ವಿವಿಧ ವನಸ್ಪತಿಗಳ ಚಿಕ್ಕ ತೋಟವನ್ನು ನಿರೀಕ್ಷಿಸಿದರು. ವಿದ್ಯಾರ್ಥಿ ಭವನ, ಅಧ್ಯಾಪಕರ ಪರ್ಣಕುಟೀರ, ಚಿಕಿತ್ಸಾಲಯಗಳನ್ನು ನೋಡಿ, ಆಯುರ್ವೇದಕ್ಕೆ ಉಚ್ಚ ಅಂತಸ್ತು ಶೀಘ್ರವಾಗಿಯೇ ದೊರಕಲಿ ಎಂದು ಹಾರಯಿಸಿದರು. ವಿದ್ಯಾರ್ಥಿಗಳ ವಿವಿಧ ವರ್ಗ (Classes)ಗಳನ್ನು ಪರೀಕ್ಷಿಸಿ, ಬೋಧಪ್ರ ಕಮಿಟಿಯಲ್ಲಿ ಉತ್ತಮವಾದ ಸಿಂಥಟಿಕ್ ಸಿಸ್ಟಮ್ (Synthetic System) ತತ್ವಗಳ ಮೇಲೆಯೇ ಈ ವಿದ್ಯಾಪೀಠವು ಪಾಠಕ್ರಮವನ್ನಿಟ್ಟುಕೊಂಡ ಸಂಗತಿಯನ್ನು ಪ್ರಶಂಸಿಸಿ, ಜನಸೇವೆ ಮಾಡಿ, ಧನಮಾನಗಳಿಸಿ, ಸ್ವತಂತ್ರೋಪಜೀವನವನ್ನು ಕಲಿಸಿಕೊಡುವ ಈ ವಿದ್ಯಾಪೀಠವು ಯಶಸ್ವಿಯಾಗುವುದೆಂದು ಪ್ರೋತ್ಸಾಹ ಕೊಟ್ಟು ಧನ್ಯವಾದಗಳನ್ನು ಸ್ವೀಕರಿಸಿ, ಮುಂದಕ್ಕೆ ಪ್ರಯಾಣಿಸಿದರು.

ಮೂಲ್ಕಿ '**ಯೂನಿಯನ್ ಕ್ಲಬ್ಬಿ'ನ ಹೊಸ ಧೋರಣೆಗೆ ಮೂಲಕಾರಣ**'ವೆಂಬ ತಲೆಬರಹದಿಂದ ಮೂಲಿಕಾಪುರದ ಓದುಗಾರರೊಬ್ಬರು ತಾ 11-8-49ರ ನವಯುಗದಲ್ಲಿ ಪ್ರಕಟವಾದ 'ಮೂಲ್ಕಿಯ ವಸಂತನ ಪ್ರಲಾಪ'ಕ್ಕೆ ಸಕಾರಣಗಳೇನೂ ಇಲ್ಲವೆಂಬ ಅರ್ಥವುಳ್ಳ ಲೇಖನವೊಂದನ್ನು ಉತ್ತರ ರೂಪದಲ್ಲಿ ಕಳುಹಿಸಿರುತ್ತಾರೆ.

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No. 164/1949

ಸಂಜೀವ ಸೆಟ್ಟಿ–ಶೀನಪ್ಪ ಸೆಟ್ಟಿ ಅಳಿಯ– ಪಾಂಗಾಳ ಗ್ರಾಮ —ವಾದಿ

ಶೇಷಿ ಮರಕಾಲ್ತಿ–ತುಂಗು ಮರಕಾಲ್ತಿ ಮಗಳು–ಉಪ್ಪೂರು ಗ್ರಾಮ–ಪ್ರತಿವಾದಿಯು

ಇವರೊಳಗೆ

ತಿಂಮಪ್ಪ ಸೆಟ್ಟಿ ಭುಜಂಗ ಹೆಗ್ಡೆರ ಮೇಲೆ ಪಡೆದ ಈ ಕೋರ್ಟು O. S. No.301/43ನೇ ಡಿಕ್ರಿ ಮೇಲೆ ದಾಖಲು ಮಾಡಿದ R. E. P. 400/46ನೇ ಅಮಲಜ್ಯಾರಿಯಲ್ಲಿ ತಾ. 23-12-47ರಲ್ಲು ನಡದ ಹರಾಜಿನಲ್ಲಿ ಗಾರ್ನಿಶಿಯಾದ ಪ್ರತಿವಾದಿಯಿಂದ ಸದ್ರಿ ಭುಜಂಗ ಹೆಗ್ಡೆರಿಗೆ ವ್ಯಯ ಸಂವತ್ಸರಕ್ಕೆ ಸಲತಕ್ಕ ಗೇಣಿಯ ವಸೂಲಿ ಹಕ್ಕನ್ನು ವಾದಿಯು ಯೇಲಂನಲ್ಲಿ ಪಡೆದ ಮೇರೆಗೆ ಪ್ರತಿವಾದಿಯಿಂದ ಬಹಾಗೇಣಿ ವ ಬಡ್ಡಿ ಕೂಡಾ ರೂ. 45-0-0ನ್ನು ಕೇಳಿ ದಾಖಲು ಮಾಡಿದ ಮೇಲಿನ ದಾವೆಯು ನೋಟೀಸಿನ ಬಗ್ಗೆ ತಾ 29-8-49ಕ್ಕೆ ಇಟ್ಟಿದೆ. ಸದರಿ ದಿವಸ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗುವರೇ ತಪ್ಪಿದರೆ ನಿಂಮ ಗೈರು ಹಾಜ್ರಿಯಿಂದ ಸದ್ರಿ ದಾವೆಯನ್ನು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(Sd) **Gratian C. Rego**,
Vakil for Plaintiff.

ಉಡುಪಿ
ತಾ. 23-8-49

25—8—49 ರಿಂದ

ನಡೆಯುವ ಚಿತ್ರ-

ಬಹು ಬೇಟಿಯಾ

ಯುನ್, ಆರ್, ದೇಸಾಯಿ ಪ್ರೊಡಕ್ಶನ್.
ನಿರ್ಮಲಾ, ಕರನ್ ದಿವಾನ್, ಯಾಕೋಬ್,

ತಾರೀಕು 27 8—49ರಿಂದ
ಆಲ್ ಇಂಡಿಯಾ ಪಿಕ್ಚರ್ಸ್, ಅವರ.
ಶಾಸ್ತ್ರಿ, ಸುಲೋಚನ ಚಟರ್ಜಿ, ಮಾಧುರಿ, ಜಯಂತ್, ಮತ್ತು
ಸುಶೀಲ್ ಕುಮಾರ್ ಇವರು ನಟಿಸಿದ

ಡೋಲಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತ್ರಿವೇಣಿ ಭೂತಿ

ಹಿಸ್ಟೀರಿಯಾ, ಅಪಸ್ಮಾರ, ಮೊಲನಾಗರುಗಳಿಗೆ ರಾಮಬಾಣ. ಇದನ್ನು ಸೇವನೆಮಾಡಿದ ಕೂಡಲೆ ಒಂದೂ ಕಾಲು ಇಂಚು ಉದ್ದದ ಜೀವವಿಲ್ಲದ ಕಪ್ಪು ಹುಳವೊಂದು ಮೂಗಿನ ಸಿಂಬಳದೊಂದಿಗೆ ಹೊರಗೆ ಬರುವುದು. ಆಗತಾನೆ ಕಾಯಿಲೆಯಿಂದ ನರಳುವವನಿಗೆ ಪರಮಾಶ್ಚರ್ಯವಾಗುವುದು. ಇಂಗ್ಲಿಷ್ ಅಥವಾ ಹಿಂದಿಯಲ್ಲೇ ಪತ್ರವ್ಯವಹಾರಮಾಡಿರಿ.

Mahatma Audhut Baba
Dandat Bar.
P. O. Chitrakot (U. P)

ಸ್ವಾತಂತ್ರ್ಯ ವಿಜಯೋತ್ಸವ ನವಮಾರಂಭ

ಮಂಗಳೂರಲ್ಲಿ—ಕೇಂದ್ರ ಮೈದಾನಿನಲ್ಲಿ ಧ್ವಜವಂದನೆಯು ಕಲೆಕ್ಟರರ ಸಮಕ್ಷಮದಲ್ಲಿ ಜರಗಿತು. ಗವರ್ನಮೆಂಟ್ ಕಾಲೇಜಿನಲ್ಲಿ ಜಿಲ್ಲಾ ಕಲೆಕ್ಟರರ ಹಸ್ತದಿಂದ ಒಂದು ಕ್ಯಾಂಟಿನ್ ತೆರೆಯಲ್ಪಟ್ಟಿತು. ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಶಿವರಾಮ ಕಾರಂತರು ಧ್ವಜಾರೋಹಣ ಮಾಡಿದರು. ಸಾರ್ವಜನಿಕ ಸಭೆಯು ಡಾ। ಯು ಪಿ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ ಪೈ, ಸೆರೀಲ್ ಸಿಬಸ್ಟಿಯನ್, ವಿಶ್ವನಾಥರಾವ್, ಎಸ್ ಎಸ್. ಕಿಲ್ಲೆ ಮೊದಲಾದವರ ಭಾಷಣಗಳಾಗಿ ರಾಷ್ಟ್ರಗೀತೆಯೊಂದಿಗೆ ಸಭೆ ಮುಗಿಯಿತು.

ಉಡುಪಿಯಲ್ಲಿ—ಬೆಳಗ್ಗೆ ಪ್ರಭಾತಭೇರಿ, ಗಾಂಧಿ ಮೈದಾನದಲ್ಲಿ ಶ್ರೀ ಎಚ್. ಸುಂದರ ರಾಯರಿಂದ ಧ್ವಜಾರೋಹಣ, ವಕೀಲ್ ಶ್ರೀ ಎಮ್. ವಿಠಲ ಕಾಮತರ ನೇತೃತ್ವದಲ್ಲಿ ಬೀಡಿನಗುಡ್ಡೆ ಬಳಿಯ ಮುನಿಸಿಪಲ್ ಜಾಗದಲ್ಲಿ ಸಸಿನೆಡುವ ಕಾರ್ಯಕ್ರಮಗಳಾದುವು. ಡಿ। ಮು। ಕೋರ್ಟಿನಲ್ಲಿ ಡಿ। ಮುನ್ಸಿಫ್ ಶ್ರೀ ಕುಲಾಸೋರವರು ಶ್ರೀ ಎಮ್. ನರಸಿಂಹ ವಿಠಲ ಕಾಮತರು ಉಚಿತವಾಗಿ ಕೊಟ್ಟ, ಮಹಾತ್ಮಾಜೀಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಸಂಜೆ ಸಾರ್ವಜನಿಕ ಸಭೆಯು ಬೋರ್ಡು ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಡಿ। ಮುನ್ಸಿಫ್ ಶ್ರೀ ಕುಲಾಸೋರವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಡಾ। ಸುಂದರರಾಮ ಪೈ, ಟಿ ಅನಂತ ಪೈ, ಬಾಳ್ಕಟ್ಟ ಪೇಟೆ ಕೃಷ್ಣಯ್ಯ ಹೆಗ್ಡೆ ಮೊದಲಾದವರ ಸಮಯೋಚಿತ ಭಾಷಣಗಳಾದುವು. ಬಳಿಕ ಶಾಲಾ ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರ ವಿವಿಧ ವಿನೋದಾವಳಿಗಳಾದುವು

ಕಟಾವ್ಯಂದದಲ್ಲೂ ಶ್ರೀ ಯಸ್ ಯು ಎಲ್. ಯಸ್ ಬಟ್ಟರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ಸಭೆ ಜರಗಿತು.

ಕಟಪಾಡಿಯಲ್ಲಿ—ಸ್ವಾತಂತ್ರ್ಯದಿನಾಚರಣ ಹಾಗೂ ಸಸಿಸಪ್ತಾಹ ದಿನವು ಧ್ವಜವಂದನೆ, ಮೆರವಣಿಗೆ, ಶ್ರೀ ಪಿ. ವೆಂಕಟ್ರಾಯ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆ, ಭಾಷಣಗಳಿಂದ ಸಾಂಗವಾಗಿ ಜರಗಿತು

ಏಣಗುಡ್ಡೆಯಲ್ಲಿ—ಶ್ರೀ ದುರ್ಗಾಪರಮೇಶ್ವರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಗೂ ಗ್ರಾಮಸ್ಥರ ಕೂಡುವಿಕೆಯಿಂದ ಏಣಗುಡ್ಡೆ ಪಟೇಲ್ ಜಗನ್ನಾಥ ಹೆಗ್ಡೆರ ನೇತೃತ್ವದಲ್ಲಿ ಧ್ವಜವಂದನೆ, ಸಸಿ ಮೆರವಣಿಗೆ, ಶ್ರೀ ಪಿ. ಸಾಮೋದರ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು.

ದ. ಕ. ಜಿಲ್ಲಾ ಬೋರ್ಡು ಚುನಾವಣೆ

ಉಡುಪಿ ತಾಲೂಕಿನಿಂದ ನಾಮಪತ್ರಗಳು. ಉಡುಪಿ ತಹಸಿಲ್ದಾರ್ ರಿಟರ್ನಿಂಗ್ ಆಫೀಸರರ ಮುಂದೆ ಈ ಕೆಳಗಿನವರು ನಾಮಪತ್ರಗಳನ್ನು ಹಾಕಿರುತ್ತಾರೆ.

ಕಟ್ಪಾಡಿ ಸರ್ಕಲ್:- ಡಾ। ಶೇಷರಾವ್ [ಕಾಂಗ್ರೆಸ್] ಶ್ರೀಗಳಾದ ಮುದ್ದು ಸುವರ್ಣ; ಪಿ. ಉಪೇಂದ್ರ ನಾಯಕ್.

ಉಪ್ಪೂರಲ್ಲಿ— ಸ್ವಾತಂತ್ರ್ಯೋತ್ಸವವು ಶ್ರೀ ಯು. ಕೆ. ಗೋವಿಂದ ಸೆಟ್ಟರ ಆಡಳಿತದೊಳಗಿನ ಶಾಲೆಗಳ ಅಧ್ಯಾಪಕ, ವಿದ್ಯಾರ್ಥಿ ಹಾಗೂ ಊರವರ ಕೂಡುವಿಕೆಯಿಂದ ಸಾಂಗವಾಗಿ ಜರಗಿತು. ಸಸಿ ಸಪ್ತಾಹ ದಿನಾಚರಣೆಯು ರೂರಲ್ ವೆಲ್‌ಫೇರ್ ಆಫೀಸರ್ ಶ್ರೀ ಇ. ಕಣ್ಣನ್ ನಾಯರ್ ಅವರ ಅಧ್ಯಕ್ಷತೆಯಲ್ಲೂ ಸಾರ್ವಜನಿಕ ಸಭೆಯು ಶ್ರೀ ರಾಮಚಂದ್ರ ಕುಕ್ಕಿಲ್ಲಾಯರವರ ಅಧ್ಯಕ್ಷತೆಯಲ್ಲೂ ಜರಗಿತು.

ಕಟ್ಪಾಡಿ ಸರ್ಕಲ್- (ಕ್ರಿಶ್ಚಿಯನ್ ರಿಜರ್ವ್) ಎಮ್. ಜಿ. ನಜರೆತ್. [ಕಾಂಗ್ರೆಸ್-ಅವಿರೋಧ]

ಕೋಟಿಸರ್ಕಲ್:- ವಕೀಲ್ ಶ್ರೀ ಪರಮೇಶ್ವರಯ್ಯ [ಕಾಂಗ್ರೆಸ್. ಅವಿರೋಧ]

ಕಾಪುಸರ್ಕಲ್:- ಶ್ರೀ ಬೆಳ್ಳೆ ಬಾಲಕೃಷ್ಣ ಶೆಟ್ಟಿ ಎಡ್ವಕೇಟ್ [ಕಾಂಗ್ರೆಸ್] ಮತ್ತು ಶ್ರೀ. ಕೆ ಕೃಷ್ಣಮೂರ್ತಿ.

ಬ್ರಹ್ಮಾವರ ಸರ್ಕಲ್- ಶ್ರೀ ಇವರ್ಡಿ ಆನಂದಸೆಟ್ಟಿ ವಕೀಲ್ [ಕಾಂಗ್ರೆಸ್] ಮತ್ತು ಶ್ರೀ. ಬಿ. ಜಗಜ್ಜೀವನದಾಸ ಸೆಟ್ಟಿ.

ಹಿರಿಯಡ್ಕ ಸರ್ಕಲ್:- ಡಾ। ಕೆ. ಕೆ. ಹೆಗ್ಡೆ [ಕಾಂಗ್ರೆಸ್] ಮತ್ತು ಶ್ರೀ ಯು. ಭಾಸ್ಕರ ಸೆಟ್ಟಿ.

ಕೊಡವೂರು ಸರ್ಕಲ್:- ಡಾ। ಪಿ ಜಿ ಆಚಾರ್, ಶ್ರೀಗಳಾದ ಸಿದ್ದು ಪೂಜಾರಿ, ಯೋಬು ಅಮ್ಮಣ್ಣ, ಪಿ. ಉಪೇಂದ್ರ ನಾಯಕ್, ಶ್ರೀನಿವಾಸನ್.

ಕೊಡವೂರು ಸರ್ಕಲ್:- [ಲೇಡಿ ರಿಜರ್ವ್] ಶ್ರೀಮತಿ ಗಿರಿಜ ಹೆಗ್ಗಡ್ತಿ. [ಕಾಂಗ್ರೆಸ್-ಅವಿರೋಧ]

ಕುಂದಾಪುರ ತಾಲೂಕು

ಬೈಂದೂರು ಸರ್ಕಲ್:- ಶ್ರೀ. ಎಡ್ತರೆ ಮಂಜಯ್ಯ ಶೆಟ್ಟಿ, ಎಡ್ವಕೇಟ್ [ಕಾಂಗ್ರೆಸ್. ಅವಿರೋಧ]

ವಂಡ್ಸೆ ಸರ್ಕಲ್: ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ಟಿ, ಎಡ್ವಕೇಟ್ [ಕಾಂಗ್ರೆಸ್. ಅವಿರೋಧ]

ಬಸ್ರೂರು ಸರ್ಕಲ್- ಶ್ರೀ. ಬಿ ಮಂಜಯ್ಯ ಹೆಗ್ಡೆ, ಎಡ್ವಕೇಟ್, [ಕಾಂಗ್ರೆಸ್-ಅವಿರೋಧ]

ಕುಂದಾಪುರ ಸರ್ಕಲ್: ಶ್ರೀ ಕೆ. ಸರ್ವೋತ್ತಮ ಪೈ [ಕಾಂಗ್ರೆಸ್] ಮಿ. ಇನಾಸ್ ಲೂವಿಸ್.

ಮಹಿಳಾ ಸ್ಥಾನಕ್ಕೆ- ಶ್ರೀಮತಿ ಪ್ರಫುಲ್ಲಾ ಆರ್ ಹೆಗ್ಡೆ, [ಕಾಂಗ್ರೆಸ್-ಅವಿರೋಧ]

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves head-ache etc

REGD TRADE MARK

Manufactured by:-

Swadeshi Oushadhi Bhandara (Regd)

KUNJAL P. O. Brahmavar, S. K.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao Kunjoor,
Manager.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ; ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ ನಂ. ೩ ಕೊಡಿಯಾಲಬೈಲು, ದ ಕ

ಪ್ರಾಕ್ಟೀಸ್ನರು. ಡಾ। ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಶಯ್ಯಾಗೃಹದ ಫೋಟೋಗಳು

(ಅಪ್ರಾಯಸ್ಥರಿಗೆ ವಿಕ್ರಯಿಸಲಾಗಲಿಕ್ಕಿಲ್ಲ)

ಶಯ್ಯಾಗೃಹದ ದೃಶ್ಯ, ಸೌಂದರ್ಯಾದಿಗಳನ್ನು ನೋಡಲಪೇಕ್ಷಿಸುವಿರಾದರೆ ಇಂದೇ ಆರ್ಡರು ಕೊಡಿರಿ 50 ಫೋಟೋಗಳ ಸೆಟ್ಟಿನ ಬೆಲೆ ರೂಪಾಯಿ 6/- ಮಾತ್ರ

ಪತ್ರವ್ಯವಹಾರ ಇಂಗ್ಲಿಷಿನಲ್ಲೆ

V P Store [N U.]

Post Box 51, Meerut, U P

1950ನೇ ವರುಷದ ಎಂಟನೆ ತರಗತಿಯ ಪಬ್ಲಿಕ್ ಪರೀಕ್ಷೆಯ

ಕನ್ನಡ ಪಾಠಪುಸ್ತಕದ ಟಿಪ್ಪಣಿಯು

ಹಿಂದಿನ ವರ್ಷಗಳಂತೆ ಉಪಯುಕ್ತ ವಿಷಯಗಳಿಂದ ಕೂಡಿ ಅಚ್ಚಾಗುತ್ತಲಿದ್ದ ಈ ತಿಂಗಳೊಳಗೆ ಪ್ರಕಟವಾಗುವುದು

ಅಪೇಕ್ಷಕರು ತಮಗೆ ಬೇಕಾದ ಪ್ರತಿಗಳಿಗೆ ಈ ಕೆಳಗಣ ವಿಳಾಸಗಳಿಗೆ ಬರೆಯುಕೊಳ್ಳುವುದು

1 ಡಿ. ವಿ ಹೊಳ್ಳ, ಪಿಡಬ್ಲ್ಯುಸ್, ಕುಂದಾಪುರ.
2 ಎಲ್ ಎನ್ ಪ್ರೆಸ್, ಕುಂದಾಪುರ.
3 ಸ್ಕೂಲ್ ಬುಕ್ ಕಂಪನಿ, ಮಂಗಳೂರು

Approved firm by the Govt. of Mysore
Certificated by the Agent of the Govt. of Cylone & Indian.

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸಿನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿದೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ ಈ ಚಿತ್ರಗಳನ್ನು ನೀವು ನೋಡದಿದ್ದರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ. 2-8-0, ದೊಡ್ಡ ಸೆಟ್‌ಗೆ (ವಿಶಿಷ್ಟಪೋಸ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ ಕೂಡಲೇ ಓರ್ಡರು ಕೊಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
(N.W.U.)
Lothian Road, Delhi

ಮದ್ರಾಸು ಸರಕಾರದ ಆಹಾರ ಮತ್ತು ಮೀನುಗಾರಿಕೆಯ ಮಂತ್ರಿಗಳಾದ ಶ್ರೀ ಜೆ. ಎಲ್. ಪಿ. ರೋಚ್ ವಿಕ್ಟೋರಿಯಾರವರು ಫಿಶರಿ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಶ್ರೀ ಪೀಟರ್ ದೇವದಾಸ್ ಮತ್ತು ಆಹಾರ ವಿಚಾರತಜ್ಞ ಡಾ। ಬಿ. ಜಿ ಕೃಷ್ಣನ್‌ರವರೊಂದಿಗೆ ಇದೇ ತಾ ೧೯ರಲ್ಲು ಬೆಳಗ್ಗೆ ಮಂಗಳೂರಿಗೆ ಬಂದರು. ಅವರನ್ನು ಜಿಲ್ಲಾ ಕಲೆಕ್ಟರ್, ಜಿಲ್ಲಾ ಪೋಲೀಸ್ ಅಧಿಕಾರಿಗಳು ಮತ್ತು ಇತರ ನಾಗರಿಕರು ರೈಲ್ವೆ ಸ್ಟೇಶನಿನಲ್ಲಿ ಸ್ವಾಗತಿಸಿದರು.

ಅಲ್ಲಿಂದ ಮಂತ್ರಿಗಳು ಸೈಂಟ್ ಎಲೋಶಿಯಸ್ ಕಾಲೇಜಿಗೆ ಬಂದಾಗ ಕಾಲೇಜು ಸ್ಕೌಟುಗಳು ಗೌರವ ರಕ್ಷಣೆಯಿತ್ತು ಸ್ವಾಗತಿಸಿದರು. ರೆ। ಫಾ। ಜೆ. ಸಿಕೇರರು ಮಂತ್ರಿಗಳ ಪರಿಚಯ ಮಾಡಿಕೊಟ್ಟ ಬಳಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಎಲೋಶಿಯಸ್ ಕಾಲೇಜು ಶಿಕ್ಷಣ ಪ್ರಪಂಚದಲ್ಲಿ ಮಾಡಿದ ಸೇವೆಯನ್ನು ಪ್ರಶಂಸಿಸುತ್ತಾ 33 ವರುಷಗಳ ಹಿಂದೆ ತಾನು ಈ ಕಾಲೇಜಿನ ವಿದ್ಯಾರ್ಥಿಯಾಗಿದ್ದುದನ್ನು ಸ್ಮರಿಸಿಕೊಂಡರು. ಆಹಾರ ಸಮಸ್ಯೆಯ ಕುರಿತು ಮಾತನಾಡುತ್ತ ವಿದ್ಯಾರ್ಥಿಗಳೂ ಹೇಗೆ ಸಹಕರಿಸಬೇಕೆಂಬುದನ್ನು ಸೂಚಿಸಿದರು. ಕಾಲೇಜು ಸಂಘದ ಅಧ್ಯಕ್ಷ ಶ್ರೀ. ವಿ. ಸಿ. ವಿಶ್ವನಾಥನ್ ಧನ್ಯವಾದಗಳನ್ನರ್ಪಿಸಿದರು.

ಬಳಿಕ ಮಂತ್ರಿಗಳು ತಮ್ಮ ಪರಿವಾರದೊಂದಿಗೆ ಮಂಗಳೂರು ಜ್ಞಾನೋದಯ ಫಿಶರಿ ಶಾಲೆಯನ್ನು ಸಂದರ್ಶಿಸಿದಾಗ ಜ್ಞಾನೋದಯ ಸಮಾಜದ ಅಧ್ಯಕ್ಷ ಶ್ರೀ ಎಮ್. ಕೆ. ಬಸಪ್ಪ ಮೊದಲಾದವರು ಸ್ವಾಗತವಿತ್ತರು. ವಿದ್ಯಾರ್ಥಿಗಳ ಕೈಗಾರಿಕೆ, ಕೆಲಸಗಳ ಚಟುವಟಿಕೆಗಳನ್ನು ನೋಡಿ ಮಂತ್ರಿಗಳು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

NOTICE

In the Court of the District Munsif of Kasargod.

O P. No. 148/1949.

Laxmi Amma & others- Petitioners.

To all whome it may concern:-

Whereas the petitioners have applied for the grant of a succession certificate empowering the 1st petitioner to collect Rs. 761-4-0 due under Policy No. 11584 on the life of her now deceased husband B. Parameshwara Kayarthaya in the New Guardian of India Life Insurance Co., Ltd., Madras 1, all persons intending to oppose the same should appear at 11 A. M. on 30-8-1949 before the above court failing which the succession certificate wil be granted as prayed for-

Sd/ **M A. Krishna Rao.**
Advocate for Petitioners.
Kasaragod, 12-8-1949.

ದ. ಕ. ಜಿಲ್ಲೆಯಲ್ಲಿ ಆಹಾರ ಮಂತ್ರಿಗಳ ಕಾರ್ಯಕಲಾಪ

ಅಪರಾಹ್ನ ಸಂಸ್ಥೆಗಳಿಗೆ ಭೇಟಿಯಿತ್ತು ಆಹಾರ ಸಮಿತಿಯ ಸಭೆಯಲ್ಲಿ ಭಾಗವಹಿಸಿದ ನಂತರ ಕಲೆಕ್ಟರರ ಆಫೀಸಿನಲ್ಲಿ ಮಹಾತ್ಮಾಜೀಯವರ ಛಾಯಾಚಿತ್ರ ಅನಾವರಣ ಮಾಡಿದರು. ಶ್ರೀ ಎಲ್. ಸಿ. ಪಾಯಿಸರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮಂತ್ರಿಗಳು ಸಂಜೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರನ್ನೂ ಇತರ ಮಹನೀಯರನ್ನೂ ಕಂಡು ವಿಚಾರ ವಿನಿಮಯ ಮಾಡಿದರು. ಇಂದಿನ ಆಹಾರ ಪರಿಸ್ಥಿತಿಯಲ್ಲಿ ಸರಕಾರದಿಂದ ನಮಗೆ ಎಂತಹ ಸಹಾಯಬೇಕು, ಸರಕಾರದ ಧೋರಣೆಯು ಈ ಜಿಲ್ಲೆಗೆ ಹೇಗಿರಬೇಕೆಂಬ ವಿಚಾರದಲ್ಲಿ ಶ್ರೀಗಳಾದ ಡಿ. ಮೋಹನರಾವ್, ಎಸ್ ನರಸಪ್ಪಯ್ಯ, ಜಿ. ಕೆ. ಗೋವಿಂದಭಟ್, ಕೆ. ಜಿ. ಜಿನರಾಜ ಹೆಗ್ಡೆ ಮೊದಲಾದವರು ಮಾತಾಡಿದರು. ಮಂತ್ರಿಗಳು ಉತ್ತರವೀಯುತ್ತ ಕೇಂದ್ರ ಸರಕಾರದ ಹಾಗೂ ಪ್ರಾಂತಿಕ ಸರಕಾರದ ಸದ್ಯದ ಧೋರಣೆಯನ್ನು ಹೇಳಿ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ನಮ್ಮ ಸರಕಾರವು ಕೈಕೊಂಡ ಕಾರ್ಯವನ್ನು ಹೇಳಿದರು. ಈ ಸಂದರ್ಭದಲ್ಲಿ ಅಧಿಕಾರಿಗಳು ರೈತರಿಗೆ ಪೀಡೆ ಕೊಡಬಾರದಾಗಿ ಸರಕಾರವು ಈಗಾಗಲೇ ಆಜ್ಞೆ ಹೊರಡಿಸಿರುವುದೆಂದೂ ಈ ಜಿಲ್ಲೆಗೆ ಅವಲಕ್ಕಿಗಾಗಿ ಭತ್ತವನ್ನು ಪ್ರತ್ಯೇಕಿಸಿರುವುದೆಂದೂ ಸೂಚಿಸಿದರು. ಶ್ರೀ ಕೆ. ಕೆ. ಸೆಟ್ಟರು ಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸುತ್ತಾ ಅಧಿಕಾರಿ ವರ್ಗದ ಮನೋವೃತ್ತಿ ಇನ್ನೂ ಬದಲಾಗಿಲ್ಲವೆಂದೂ ಅದು ಬದಲಾಗದೆ ಸಾರ್ವಜನಿಕರ ಸಹಕಾರ ಕೋರುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಹೇಳಿದರು.

ಗವರ್ನಮೆಂಟ್ ಕಾಲೇಜಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಂತ್ರಿಗಳು ಸಹಿಸಿದುದ ಸಪ್ತವಿಧ ತತ್ವವನ್ನು ವಿವರಿಸಿ ಜನಜಾಗೃತಿಯನ್ನುಂಟುಮಾಡಿದರು. ಮಂತ್ರಿಗಳು ಅಲ್ಲಿಂದ ಹೊರಟು ತಾಲೂಕು ಕಚೇರಿ ಮತ್ತು ಜಿಲ್ಲಾ ಬೋರ್ಡು ಕಚೇರಿಗಳಲ್ಲಿ ಸಸಿಗಳನ್ನು ನೆಟ್ಟರು.

ಅಲ್ಲಿಂದ ಮಂತ್ರಿಗಳು ತಮ್ಮ ಪರಿವಾರದೊಡನೆ ಬೋಳಾರದಲ್ಲಿರುವ ಸ್ತ್ರೀ ಅಭಿವೃದ್ಧಿ ಕೇಂದ್ರವನ್ನು ಸಂದರ್ಶಿಸಿದರು. ಶ್ರೀಮತಿ ಆರ್. ಶಾಂಭವಿ ಪೂಂಜರು ಮಂತ್ರಿಗಳನ್ನು ಸ್ವಾಗತಿಸಿದರು. ನಂತರ ಮಂತ್ರಿಗಳು ಕೆನರಾ ಕ್ಲಬ್ಬಿಗೆ ಹೋಗಿ ಮಂಗಳೂರಿನ ರೋಟರಿ ಕ್ಲಬ್ಬನ್ನು ಉದ್ಘಾಟಿಸಿದರು. ಮರುದಿನ ಬೆಳಗ್ಗೆ ಮೂಡಬಿದ್ರೆ, ಕಾರ್ಕಳಕ್ಕಾಗಿ ಉಡುಪಿಗೆ ಹೋದರು.

ಉಡುಪಿಯಲ್ಲಿ

ಮಾನ್ಯ ಮಂತ್ರಿಗಳು ತಾ 20ರಲ್ಲು ಪೂರ್ವಾಹ್ನ ತಮ್ಮ ಪರಿವಾರದೊಡನೆ ಮಣಿಪಾಲದ ಕೈಗಾರಿಕೆ ತರಬೇತಿ ಕೇಂದ್ರವನ್ನು ಸಂದರ್ಶಿಸಿ ಉಡುಪಿಗೆ ಆಗಮಿಸಿದರು. ಮಧ್ಯಾಹ್ನ ಕೆಲವರಿಗೆ ಭೇಟಿಯಿತ್ತು ಬೋರ್ಡು ಹೈಸ್ಕೂಲಿನ ಪ್ರಿನ್ಸಿಪಲ್ಸ್ ಹಾಲಿನಲ್ಲಿ ಸಿದ್ಧಗೊಳಿಸಿದ ಘನತರ ಭೋಜನ ಕೂಟದಲ್ಲಿ ಭಾಗವಹಿಸಿದರು. ಭೋಜನಾನಂತರ ತುಸು ವಿಶ್ರಮಿಸಿ ಮಲ್ಪೆಗೆ ಹೋಗಿ ಅಲ್ಲಿಯ ಫಿಶರಿ ಶಾಲೆ, ಮೀನು ಒಣಗಿಸುವ ಅಂಗಣಗಳೇ ಮೊದಲಾದುವನ್ನು ಸಂದರ್ಶಿಸಿ ಅಲ್ಲಿಯವರು ಅರ್ಪಿಸಿದ ಮನವಿಗಳನ್ನು ಸ್ವೀಕರಿಸಿದರು. ಫಿಶರಿ ಶಾಲೆಯನ್ನು ಹೈಸ್ಕೂಲಾಗಿ ಮಾಡುವ ಭರವಸೆಯನ್ನು ಮಂತ್ರಿಗಳು ಕೊಟ್ಟರೆಂದೂ ಇತರ ಶಾಲಾಶಾಲೆಗಳ ನಿವಾರಣೋಪಾಯಗಳನ್ನು ಹೇಳಿದರೆಂದೂ ತಿಳಿದು ಬರುತ್ತದೆ.

ಬಳಿಕ ಮಂತ್ರಿಗಳು ಉಡುಪಿ ತಾಲೂಕು ಕಚೇರಿಗೆ ಆಗಮಿಸಿದಾಗ ತಹಶಿಲ್ದಾರ್ ಶ್ರೀ ಸಿ. ಸೀತಾರಾಮಸೆಟ್ಟರೇ ಮೊದಲಾದವರು ಸ್ವಾಗತವಿತ್ತರು. ತಾಲೂಕು ಆಹಾರ ಸಮಿತಿಯ ಸಭೆಯಲ್ಲಿ ಭಾಗವಹಿಸಿ ಮಂತ್ರಿಗಳು ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವ, ಅಕ್ಕಿ ಭತ್ತ ಸಂಗ್ರಹ ನಿತರಣಾಧಿಕಾರಿಗಳಿಂದ ರೈತರಿಗೆ ಏನೊಂದೂ ಪೀಡೆಯುಂಟಾಗದಂತೆ ತಕ್ಕ ಆಜ್ಞೆ ಕೊಡಲಾಗಿದೆ ಎನ್ನುವ, ಆಹಾರ ಉತ್ಪಾದಕರು ಆದಷ್ಟು ಹೆಚ್ಚಿಗೆ ಧಾನ್ಯಗಳನ್ನು ಬೆಳೆಸಬೇಕೆಂಬ ವಿಸಂತಿಸುವ ಮುಂತಾದ ವಿಷಯಗಳನ್ನೆತ್ತಿ ಮಾತನಾಡಿದರು. ನಂತರ ತಾಲೂಕು ಕಚೇರಿ ವಠಾರದಲ್ಲಿ ಕೆಲವು ಸಸಿಗಳನ್ನು ನೆಟ್ಟರು.

ಅಲ್ಲಿಂದ ಹೊರಟ ಮಂತ್ರಿಗಳು ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಬಂದು ನಗರಸಭೆಯ ಚಹಾ ಸತ್ಕಾರವನ್ನು ಸ್ವೀಕರಿಸಿದರು. ಮುನಿಸಿಪಲ್ ವೈಸ್ ಚೆಯರ್‌ಮೆನ್ ಶ್ರೀ ಎ. ಬಿ. ಕೃಷ್ಣರಾಜರು ನಗರ ನಿವಾಸಿಗಳ ಪರವಾಗಿ ಮಾನಪತ್ರವನ್ನರ್ಪಿಸಿದರು. ಮಂತ್ರಿಗಳು ಉತ್ತರವೀಯುತ್ತಾ ಸದ್ಯದ ಆಹಾರ ಪ್ರಶ್ನೆಯ ಕುರಿತು ಕೆಲವು ಮಾತುಗಳನ್ನಾಡಿದರು. ಸ್ಥಾನಿಕ ಸಂಸ್ಥೆಗಳು ನಗರ ಸ್ವಚ್ಛವರ್ತಲ್ಯದ ಕಡೆಗೆ ಹೆಚ್ಚಿನ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕಾಗಿದೆ ಎಂದು ಸಲಹೆಯನ್ನಿತ್ತರು. ಮಲಗೊಬ್ಬರದ ಕುರಿತು ಮಾತನಾಡುತ್ತಾ ಉಡುಪಿ ನಗರ ಸಭೆಯು ತನ್ನ ಭಾಗದಲ್ಲಿ ಅದನ್ನು ಉಪಯೋಗಿಸಿ ಅದರ ಪ್ರಯೋಜನಗಳನ್ನು ಇತರರಿಗೆ ಕಾರ್ಯರೂಪದಲ್ಲಿ ತೋರಿಸಬೇಕೆಂದು ವಿನಂತಿಸಿದರು. ಶ್ರೀ ಟಿ. ಆರ್. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಬಳಿಕ ಮಂತ್ರಿಗಳು ತಮ್ಮ ಪರಿವಾರದೊಂದಿಗೆ ಶ್ರೀ ರಾಮಕೃಷ್ಣ ಥಿಯೇಟರಿಗೆ ಆಗಮಿಸಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದರು. ವಕೀಲ್ ಶ್ರೀ ಕೆ. ಜೆ. ಬಲ್ಲಾಳರು ಸಭಾಧ್ಯಕ್ಷತೆ ವಹಿಸಿದ್ದರು. ಸರ್ಕಲ್ ಕಾಂಗ್ರೆಸ್ ಕಮಿಟಿಯ ಪರವಾಗಿ ಅದರ ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯರು ಮಂತ್ರಿಗಳಿಗೆ ಮಾನಪತ್ರವನ್ನರ್ಪಿಸಿದರು. ಮಂತ್ರಿಗಳು ಉತ್ತರವೀಯುತ್ತಾ ಆಹಾರ ಅಭಾವವನ್ನು ಹೋಗಲಾಡಿಸಲು ಸರ್ವರೂ ಸರಕಾರದೊಡನೆ ಸಹಕರಿಸಬೇಕೆಂದು ಸೂಚಿಸಿದರು. ಇದರ ಸಲುವಾಗಿಯೇ ಮರಗಿಡಗಳನ್ನು ನೆಡುವ ಸಪ್ತಾಹವನ್ನು ಆಚರಿಸಬೇಕಾಗಿ ಸರಕಾರದ ಕಾರ್ಯಕ್ರಮವಿದ್ದು ಆ ಭಾಗದಲ್ಲಿ ಉಡುಪಿ ತಾಲೂಕಿನಲ್ಲಿ ಒಂದು ಲಕ್ಷಕ್ಕೂ ಮಿಕ್ಕಿ ಮರಗಿಡಗಳು ಈ ವಾರ ನೆಡಲ್ಪಟ್ಟಿವೆ ಎಂಬುದನ್ನು ಕೇಳಿ ತನಗೆ ಸಂತೋಷವಾಗಿದೆ ಎಂದು ಹೇಳಿದರು. ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಹಲವು ಮನನೀಯ ಸೂಚನೆಗಳನ್ನಿತ್ತರು. ಹಾಜರಿದ್ದ ಜಿಲ್ಲಾ ಕಲೆಕ್ಟರರು ಈ ಕುರಿತು ಕೆಲವು ಮಾತುಗಳನ್ನಾಡಿದರು. 'ಜನಗಣಮನ' ಗೀತೆಯೊಂದಿಗೆ ಸಭಾಂತ್ಯವಾಯಿತು.

ಮಂತ್ರಿಗಳ ಕಾರ್ಯಕ್ರಮಗಳನ್ನು ಅನುಸರಿಸಿಕೊಂಡು ಹೋಗಲು ಪತ್ರಿಕಾನಿಧಿಗಳಿಗೆ ಜಿಲ್ಲಾಧಿಕಾರಿಗಳ ಕಡೆಯಿಂದಾಗಲೀ ಕಾಂಗ್ರೆಸ್ ಕಮಿಟಿ ಕಡೆಯಿಂದಾಗಲೀ ಯಾವ ಸಂಚಾರ ಸೌಕರ್ಯದ ಏರ್ಪಾಡಿರಲಿಲ್ಲ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜದಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಮುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಖಾತ್ರಿಯಾದ ಉತ್ತಮ ತರದ

ಕಸಿ ಗಿಡಗಳ ನಿಮ್ಮ ಪೂರೈಕೆಗಾಗಿ ನಮ್ಮನ್ನು ವಿಚಾರಿಸಿರಿ

ಮಾವು, ಚಿಕ್ಕು, ದಾಳಿಂಬ, ಪೇರಳೆ, ಅಂಜೂರ, ಕಿತ್ತಳೆ, ಲಿಂಬೆ ಮುಂತಾದ ಫಲ ಗಿಡಗಳೂ,

ಗುಲಾಬಿ, ಸಂಪಿಗೆ, ಮಲ್ಲಿಗೆ ಮುಂತಾದ ಹೂವಿನ ಗಿಡಗಳೂ ಸದಾ ಸಿದ್ಧವಾಗಿವೆ.

ಫಲವೃಕ್ಷಗಳ ತೋಟದ ಏರ್ಪಾಡಿನ ಕಂಟ್ರಾಕ್ಟನ್ನೂ ಗ್ಯಾರಂಟಿ ಸಹಿತ ವಹಿಸಿಕೊಳ್ಳುವೆವು.

ಎಸ್. ಬಿ. ಎಸ್. ನರ್ಸರಿ ಗಾರ್ಡನ್ಸ್,

ಪ್ರೊ. ಎಸ್. ವಿ ಸೋನ್ಸ್. ಪೋಸ್ಟ್. ಉಚ್ಚಿಲ, ದ. ಕ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ತಪ್ಪಿದ ಋತುಸ್ರಾವವಾಗುವ ಸಮಯಕ್ಕೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ, ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ]

Mrs D. DEVEE, F. DS (N. J.)

Tollygunge CALCUTTA

ಪ್ರತಿನಿಧಿ: ಶಹಾ ಕಂಪೆನಿ, ಮಂಗಳೂರು

DR. OSBORNE'S

Famous

REMEDY-REJUVENATOR

"SUPER D'SELIPHOSE" with atomised GOLD. Now available in India. A boon to a happy & suffering humanity. Contains Vitamins, A. B. C. D.- Valuable literature on REJUVENATION & brilliant appreciative letters from Doctors & gentlemen sent free on request. Apply early or ask your chemist Price Rs. 6/- only. (Full course) Distributors

R. A. SIMONS Esqr.,-M. C.
UDIPI, SOUTH KANARA.

ದ. ಕ. ಜಿಲ್ಲೆಯಲ್ಲಿ ಎಲ್ಲೆಲ್ಲೂ ಸ್ವಾತಂತ್ರ್ಯ ದಿನಾಚರಣಾ ಸಮಾರಂಭಗಳು

ಅಜೆಕಾರಿನಲ್ಲಿ.. ಶ್ರೀ. ಕೆ. ಕೆ. ನಾಲಾಯ್ರ ಆತಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಡಾ। ಯು. ಕೃಷ್ಣನವರ ಅಧ್ಯಕ್ಷತೆಯಲ್ಲಿ ಸಸಿ ನೆಡುವ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಮಟಪಾಡಿಯಲ್ಲಿ.. ಶ್ರೀನಿಕೇತನ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ ಭಾಷಣ, ಬಡ ಜನರಿಗೆ ಊಟೋಪಚಾರಾದಿ ಕಾರ್ಯಕ್ರಮಗಳಿಂದ ಜರಗಿತು.

ಮಂಗಳೂರು ಪಡವಿನಲ್ಲಿ.. ಸೆಂಟ್ರಲ್ ಮುಸ್ಲಿಂ ಎಲಿಮೆಂಟರಿ ಶಾಲೆಯಲ್ಲಿ ಜನಾಬ್ ಹಮ್ಮಬ್ಬ ಮಲಾರ್‌ರವರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಭಾಷಣ ವಿನೋದಾವಳಿಗಳಿಂದ ಜರಗಿತು.

ಸಾಸ್ತಾನದಲ್ಲಿ.. ಆಸುಪಾಸಿನ ಏಳು ಶಾಲೆಗಳ ಕೂಡುವಿಕೆಯಿಂದ ಧ್ವಜವಂದನೆ, ತಿಂಡಿ ಸಂಚೋಣ, ಶ್ರೀ. ಬಿ. ರಾಮಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು.

ಪೆರ್ಡೂರಿನಲ್ಲಿ.ಶ್ರೀ. ಎ.ಕೃಷ್ಣಯ್ಯ ಹೆಗ್ಡೆಯವರಿಂದ ರಾಷ್ಟ್ರ ಧ್ವಜಾರೋಹಣ, ಶ್ರೀ. ಎಚ್. ಪಿರಿಯಣ್ಣ ಸೆಟ್ರ ನೇತೃತ್ವದಲ್ಲಿ ನೂತನ ಕಟ್ಟಡ ಪ್ರವೇಶೋತ್ಸವ, ತಾಲೂಕು ಸಪ್ಲೈ ಆಫೀಸರ್ ಶ್ರೀ. ಮಾರ್ಟಿನ್‌ರವರ ಮುಂದಾಳುತ್ವದಲ್ಲಿ ಸಸಿ ನೆಡುವ ಕಾರ್ಯಕ್ರಮಾದಿಗಳಿಂದ ಜರಗಿತು.

ಮೈಪಾಡಿಯಲ್ಲಿ—ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಟಿ. ಕೃಷ್ಣನವರ ಅಧ್ಯಕ್ಷತೆಯಲ್ಲೂ, ಬೋರ್ಡ್ ಮುಸ್ಲಿಂ ಶಾಲೆಯಲ್ಲಿ ಪಟ್ಲ ಮಹೀದಿಯ ಮುಸ್ರಿಯವರ ನೇತೃತ್ವದಲ್ಲೂ ವಿವಿಧ ಕಾರ್ಯಕ್ರಮಗಳಾದುವು.

ಬೈಲೂರಲ್ಲಿ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಧ್ವಜಾರೋಹಣ, ಮೆರವಣಿಗೆ, ಶ್ರೀ ಜೆ. ನಾರಾಯಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು. ಮಾರುವಿನ ಕಾರ್ಕಳ ತಾಲೂಕು ತಹಶಿಲ್ದಾರರ ನಾಯಕತ್ವದಲ್ಲಿ ಸಸಿದಿನಾಚರಣೆ ಜರಗಿತು.

ಕಲ್ಯಾಣಪುರದಲ್ಲಿ—ಶ್ರೀ.ಕೆ. ಜಯರಾಮ ಪಡಿಯಾರರ ಕಾರ್ಯದರ್ಶಿತ್ವದಲ್ಲಿ ಬೆಳಿಗ್ಗೆ ಪ್ರಭಾತಭೇರಿ, ಶ್ರೀ ಮಂಜುನಾಥಯ್ಯನವರಿಂದ ಧ್ವಜಾರೋಹಣ, ಶಾಲಾ ಮಕ್ಕಳಿಗೆ ತಿಂಡಿ ತಿನಸು ಹಂಚೋಣ, ಸಂಜೆ ಶ್ರೀ ಎಮ್. ವಿ. ಹೆಗ್ಡೇರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಾದಿ ಕಾರ್ಯಕ್ರಮಗಳು ಸಾಂಗವಾಗಿ ಜರಗಿದವು.

ನದೂರಲ್ಲಿ—ಬೆಳಿಗ್ಗೆ ಧ್ವಜವಂದನೆ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಮೆರವಣಿಗೆ, ಬಡಜನರಿಗೆ ಗಂಜಿಯೂಟ, ಸಂಜೆ ಸಭೆ, ಭಾಷಣ, ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ ಕಾರ್ಯಕ್ರಮಗಳಾದುವು.

ಪಾದೂರಲ್ಲಿ—ಶ್ರೀ ಎಲ್. ಅಮ್ಮಣ್ಣನವರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಮೆರವಣಿಗೆ, ಸಭೆ, ಭಾಷಣ, ಸಸಿ ನೆಡುವುದು ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಮುಂಡ್ಕೂರಲ್ಲಿ—ಸಂಕಲ ಕರಿಯ ಎಯಿಡೆಡ್ ಶಾಲೆಯಲ್ಲಿ ಧ್ವಜಾರೋಹಣ, ಮೆರವಣಿಗೆ, ಶ್ರೀ ಲಕ್ಷ್ಮಣ ಕಾಮತರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು.

ಬನ್ನಾಡಿಯಲ್ಲಿ—ಶ್ರೀ ಪರಮಹಂಸ ಪ್ರೌಢ ಪ್ರಾಥಮಿಕ ಶಾಲೆಯಲ್ಲಿ ಪ್ರಭಾತಭೇರಿ, ಧ್ವಜಾರೋಹಣ, ಶ್ರೀ ಎ. ಶೀನಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀ ಬಿ. ಸುಬ್ಬಣ್ಣ ಹೆಗ್ಡೆಯವರ ಕಾಲೋಚಿತ ಭಾಷಣ ಇತ್ಯಾದಿ ಕಾರ್ಯಕ್ರಮಗಳಿಂದ ಜರಗಿತು.

ಮಂಜನಾಡಿಯಲ್ಲಿ—ಬೋರ್ಡ್ ಶಾಲೆಯಲ್ಲಿ ಧ್ವಜಾರೋಹಣ, ಅಪರಾಹ್ನ ವಾರೆ ಮೊಯಿದಿನ್ ಬ್ಯಾರಿಗಳ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ, ಭಾಷಣಗಳಾದುವು.

ಮರ್ಣೆಯಲ್ಲಿ—ಧ್ವಜವಂದನೆ, ಮಕ್ಕಳಿಗೆ ತಿಂಡಿಹಂಚೋಣ, ಮೆರವಣಿಗೆ, ಶ್ರೀ ಕೆ. ವಿಟ್ಠಲ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಭೆ ಭಾಷಣಗಳಾದುವು.

ಹೆಜಮಾಡಿ ಕೋಡಿಯಲ್ಲಿ—ಸರಕಾರಿ ಫಿಶರಿಸ್ ಶಾಲೆಯಲ್ಲಿ ಪ್ರಾತಃಕಾಲ ಧ್ವಜವಂದನೆ, ಮೆರವಣಿಗೆ, ಸಸಿನೆಡೋಣ, ತಿಂಡಿ ಹಂಚೋಣ, ಸಭೆ, ಭಾಷಣಗಳಾದುವು.

ಸಾಂತೂರು ಮುದರಂಗಡಿಯಲ್ಲಿ—ಮಿಶನ್ ಶಾಲಾ ಹುಡುಗರ, ಉಪಾಧ್ಯಾಯರ, ಗ್ರಾಮಸ್ಥರ ಕೂಡುವಿಕೆಯಿಂದ ಬೆಳಿಗ್ಗೆ ಧ್ವಜಾರೋಹಣ, ನಂತರ ಡಾ। ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಾದುವು.

ಅದಮಾರಿನಲ್ಲಿ—ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಸಿ. ರಾಮಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಸಭೆ, ಭಾಷಣಗಳಿಂದ ಜರಗಿತು.

ಕಾಸರಗೋಡಿನಲ್ಲಿ—ಧ್ವಜಾರೋಹಣ, ಸಸಿನೆಡುವುದು, ಶ್ರೀ ಎಮ್. ಉಮೇಶರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಾದುವು.

ಕುಂಬಳೆಯಲ್ಲಿ—ಧ್ವಜಾರೋಹಣ, ಮೆರವಣಿಗೆ, ಮಕ್ಕಳಿಗೆ ತಿಂಡಿ ಹಂಚೋಣ ಇತ್ಯಾದಿ ಕಾರ್ಯಕ್ರಮಗಳಿಂದ ಜರಗಿತು.

ಪರ್ಕಳದಲ್ಲಿ—ಬೆಳಿಗ್ಗೆ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರಿಂದ ಧ್ವಜಾರೋಹಣ ಮತ್ತು ಧ್ವಜವಂದನೆ, ಮಧ್ಯಾಹ್ನ ಶಾಲಾ ಮಕ್ಕಳಿಗೆ ತಿಂಡಿವಿತರಣೆ, ಸಂಜೆ, ಶ್ರೀ ಬಿ. ಸದಾಶಿವ ಹೆಗ್ಡೇರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಹಾಗೂ ಶ್ರೀಗಳಾದ ಎಚ್. ಎನ್. ಆರ್. ಅಯ್ಯಂಗಾರ್, ವೈದ್ಯ ಭವಾನಿಶಂಕರ ಹೆಗ್ಡೆ, ಅಪ್ಪುಕುಟ್ಟಿ ಮೊದಲಾದವರ ಭಾಷಣಗಳಾದುವು. ನಂತರ 'ಸುಭಾಸ್ ಕೋಲ' ದೇಖಾವೆಯು ಹಾವಂಜೆ ಮಂಜು ಮತ್ತು ಶಾಲು ಸಹೋದರರಿಂದ ಹಾವಭಾವಯುಕ್ತವಾಗಿ ಚುರುಕಾಗಿ ಪ್ರದರ್ಶಿಸಲ್ಪಟ್ಟಿತು. ಈ ಸಹೋದರ ಬಂಧುಗಳ ಕಲಾಕೌಶಲ್ಯಕ್ಕಾಗಿ ಶ್ರೀ ಬಿ. ಚಂದ್ರಶೇಖರ ಹೆಗ್ಡೆಯವರು ಮೆಚ್ಚಿ ಕೊಟ್ಟ ಪದಕವನ್ನು ಶ್ರೀ ಎಮ್. ವಿ. ಹೆಗ್ಡೆಯವರಿಂದ ಕೊಡಿಸಲಾಯಿತು. ಶ್ರೀ. ಆನಂದ ಹೆಗ್ಡೆಯವರು ಸಹಕರಿಸಿದ ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು. ತಾ. 17ರಲ್ಲೂ ಸಸಿನೆಡುವ ಸಮಾರಂಭವೂ ಯಶಸ್ವಿಯಾಗಿ ಜರಗಿತು.

ಕುಂದಾಪುರದಲ್ಲಿ—ಬೆಳಿಗ್ಗೆ ವಕೀಲ್ ಶ್ರೀ ವೆಂಕಪ್ಪ ಸೆಟ್ಟರಿಂದ ಧ್ವಜಾರೋಹಣ, ತತ್ಸಂಬಂಧ ಸಬ್ ಕಲೆಕ್ಟರ್ ಶ್ರೀ ಚಾರ್ಲ್ಸ್ ಜೋನ್ ಅವರ ಭಾಷಣ, ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚೋಣ, ಸಸಿನೆಡೋಣ, ಸಂಜೆ ಗಾಂಧಿ ಮೈದಾನದಲ್ಲಿ ಶ್ರೀ ಎ. ವಿ. ಯುನ್. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಹಾಗೂ ಶ್ರೀಗಳಾದ ಎಮ್. ಎಮ್. ಹೆಗ್ಡೆ ಮತ್ತು ಎಸ್. ಎಸ್. ಪರಮೇಶ್ವರಯ್ಯನವರ ಕಾಲೋಚಿತ ಭಾಷಣ, ಧನ್ಯವಾದಾರ್ಪಣೆ, ಧ್ವಜ ಅವರೋಹಣ, ರಾತ್ರಿ 'ಕವಿ ಕುಲತಿಲಕ' ನಾಟಕ ಪ್ರದರ್ಶನಾದಿ ಕಾರ್ಯಕ್ರಮಗಳು ಜರಗಿದವು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ವ.ಶಾ.ರ್ಕ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ: ಕೆ. ಎಸ್. ರಾವ್ ರೋಡು, ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ: "ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 551/48. In O. S. 4/1939

ಶಿರೂರು ಗಣಪಯ್ಯ...ವಾದಿ; ಅಮ್ಲುಜಾರಿ ಅರ್ಜಿದಾರ

ಮತ್ತು

ಮಾಡ್ತಿಸ ದಾಲ್ಮೇರಿ ಕೂಡಾ-ಪ್ರತಿವಾದಿರು; ಎದ್ರಿರು.

1. ಮಾಡ್ತಿಸ ದಾಲ್ಮೇರಿ, 3. ಜೋನಿಫಾಸ ದಾಲ್ಮೇರಿ, ಜುವಾಂ ದಾಲ್ಮೇರಿ ಮಕ್ಕಳು

5. ಕ್ಯಾರಿನ್ ಗ್ರೆಸಿಯಸ್, ಸೋದಿನ ಬಾಯಿ ಮಗ, 6.ಅಲ್ವಾರ ದಾಲ್ಮೇರಿ, ಮರಿಯಾ ಅ ದಾಲ್ಮೇರಿ ಮಗ, ಕುಂದಾಪುರತಾಲೂಕು ಸೇನಾಪುರ ಗ್ರಾಮದಲ್ಲಿರುವವರು.

ಸದ್ರಿ ಅಮ್ಲುಜಾರಿಯಲ್ಲಿ ಅರ್ಜಿದಾರರು ಎದ್ರಿರ ಬಾಬ್ತು ಸ್ಥಿರ ಆಸ್ತಿ ಲೈಲಾಮು ಬಗ್ಗೆ ಹಾಜ್ರಪಡಿಸಿದ ಯಿಸ್ತಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೂ ಸದ್ರಿ ಲೈಲಾಮು ಕಾಲದಲ್ಲಿ ಪಾರು ತೆರಿಯಲಿಕ್ಕೂ ಏ ಹಾಗೆ ಪಾರಿಗೆಸಿತ್ತಿ ಆ ಹಣಗಳನ್ನು ಡಿಕ್ರಿ ಹಣಗಳಲ್ಲಿ ಮಜ್ರಾ ಮಾಡಿಸಬೇಕಾಗಿಯೂ ಕೊಟ್ಟ R. E. A. 372/49ನ್ನು ಅರ್ಜಿ ಸಹಾ ತಾ. 6-9-49ಕ್ಕೆ ಆಪ್ಹೈರ ತನ್ನಿಗೆ ಯಿಟ್ಟಿದೆ. ಆ ಕುರಿತು ಆಕ್ಷೇಪಗಳಿದ್ದರೆ ಸದ್ರಿ ದಿವ್ಸ ಹಗಲು 10ಘಂಟೆಗೆ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಜಾಹೀರಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಮುಂದಿನ ತನ್ಕಿಯು ನಡೆಯುವುದೆಂತ ಈ ಮೂಲಕ ತಿಳಿಸೋಣಾಗುತ್ತದೆ.

G. Sanjiva Rao.

Pleader for DH Petr's.

ಕುಂದಾಪುರ,
16-8-1949.

Notice.

ಉಡುಪಿ ಡಿ. ಮು. ಕೋರ್ಟಿನಲ್ಲಿ.

R. E. P. No 114/49 in O. S. No. 337/1944.

ಮಹಾಬಲ ಸೆಟ್ಟಿ ... ... ಅರ್ಜಿದಾರ

ಮತ್ತು

(1) ಚಂದಯ್ಯ ಹೆಗ್ಗಡೆ ...
(2) ಕೊರಪಳು ಹೆಗ್ಗಡ್ತಿ ... } ಯೆದ್ರಿರು.

ಯಿವರೊಳಗೆ

1ನೇ ಯೆದ್ರಿ:-ಚಂದಯ್ಯ ಹೆಗ್ಗಡೆ, ಕೊಲ್ಲು ಹೆಗ್ಗಡ್ತಿಯರ ಮಗ. ಉಡುಪಿ ತಾಲ್ಲೂಕು ಕುಕ್ಕೆಹಳ್ಳಿ ಗ್ರಾಮದಲ್ಲಿ ಯಿರುವವ...1ನೇ ಯೆದ್ರಿ.

ಸದ್ರಿ 1ನೇ ಯೆದ್ರಿಗೆ ಯೀ ಮೂಲಕ ತಿಳಿಯಪಡಿಸುವದೇನೆಂದ್ರೆ.

ಮೇಲ್ಕಂಡ ಡಿಕ್ರಿ ಅಮ್ಲುಜಾರಿಯಲ್ಲಿ ಯೆದ್ರಿಯರ ಕುಟುಂಬದ ಹಕ್ಕಿನ ಸ್ಥಿರಾಸ್ತಿ ಜಪ್ತಿಮಾಡಿ ಯೇಲಂಗೆ ಅಪೇಕ್ಷಿಸಿ ದಾಖಲು ಮಾಡಿದ ಸದ್ರಿ ಅರ್ಜಿಯಲ್ಲಿ 1ನೇ ಯೆದ್ರಿಗೆ ಆಗತಕ್ಕ ಯಿಸ್ತಿಹಾರು ನೋಟೀಸು ಬಗ್ಗೆ ತಾರೀಕು 30-8-1949ಕ್ಕೆ ತನ್ಕಿ ಬಗ್ಗೆ ಯಿಡೋಣಾಗಿಯದೆ. ಈ ಕುರಿತು ಆಕ್ಷೇಪ ಹೇಳುವಂತಾದ್ದು ಯಿದ್ರೆ ಯಿದೇ ದಿವಸ ಸದ್ರಿ 1ನೇ ಎದ್ರಿಯು ಸ್ವತಹಾ ವ ವಕೀಲರ ಮುಖಾಂತರ ಮೇಲ್ಕಂಡ ಕೋರ್ಟಿನಲ್ಲಿ 11 ಗಂಟೆಗೆ ಹಾಜರಾಗಿ ಜ್ಞಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಆತನ ಗೈರು ಹಾಜ್ರಿಯಿಂದ ಸದ್ರಿ ಅರ್ಜಿ ಮುಂದರಿಸಲಾದೀತು ಯೆಂಬ ಸಂಗ್ತಿ ಯೀ ಮೂಲಕ 1ನೇ ಯೆದ್ರಿಗೆ ತಿಳಿಸೋಣಾಗಿಯದೆ.

K. J. Ballal

Vakil for Petitioner

Udipi
Date 10-8-49.

ಮಲೆನಾಡಿನಲ್ಲಿ ಆಹಾರದ ಬೆಳವಣಿಗೆ

ಲೇ:—ಶ್ರೀ. ಶಿವರಾಮ ಕಾರಂತರು

ಶ್ರೀಯುತ ಕೋಟ ಶಿವರಾಮ ಕಾರಂತರನ್ನು ಅರಿಯದ, ಅವರ ಲೇಖನಗಳನ್ನು ಕಥೆ ಕಾದಂಬರಿ ನಾಟಕಗಳನ್ನು ಓದದ ಕನ್ನಡಿಗನಿಲ್ಲ.

ಮಲೆನಾಡಿನಲ್ಲೇ ಇದ್ದು ಅಲ್ಲಿನ ಸ್ಥಿತಿಗತಿಗಳನ್ನು ಅರಿತುಕೊಂಡು ಹೆಚ್ಚು ಆಹಾರ ಉತ್ಪಾದನೆಗಾಗಿ ಮಲೆನಾಡನ್ನು ಹೇಗೆ ಉಪಯೋಗಿಸಿಕೊಳ್ಳಬಹುದೆಂದು ಅವರು ಮನನೀಯವಾಗಿ ಈ ಲೇಖನದಲ್ಲಿ ವಿವರಿಸಿದ್ದಾರೆ.

ಭಾರತ ಖಂಡದಲ್ಲಿ ಆಹಾರದ ಅಭಾವ ಹೆಚ್ಚಿ, ದಿನೇ ದಿನೇ ಜನರು ಕಷ್ಟಕ್ಕೊಳಗಾಗುವುದನ್ನು ಕಾಣುತ್ತಲಿದ್ದೇವೆ. ಮುಂದಣ ಎರಡು ವರ್ಷಗಳೊಳಗಾಗಿ ನಾಡಿಗೆ ಪರದೇಶದಿಂದ ಆಮದಾಗುವ ಆಹಾರವನ್ನು ನಿಲ್ಲಿಸಬೇಕೆಂದು, ಹೀಗೆಯೇ ಹಣಕೊಟ್ಟು ಪರರಿಂದ ಆಹಾರಕೊಳ್ಳುವ ಪರಿಸ್ಥಿತಿಯಲ್ಲಿ ನಾವಿಲ್ಲವೆಂದು ಸರಕಾರ ಸಾರಿದೆ. ಈ ಎರಡು ವರ್ಷಗಳೊಳಗಾಗಿ ನಮ್ಮ ದೇಶದಲ್ಲಿ ಕಡಿಮೆ ಬೀಳುವ ಆಹಾರವನ್ನು ನಾವು ಉತ್ಪನ್ನ ಮಾಡಲು ಸಾಧ್ಯವೇ ಎಂಬುದು ಮುಖ್ಯವಾದೊಂದು ಪ್ರಶ್ನೆ. ಒಮ್ಮೆ ಅದು ತೀರ ಸಾಧ್ಯವಲ್ಲದೆ ಹೋದರೂ, ಅದು ಎಷ್ಟು ಸಾಧ್ಯ ಎಂಬುದು ಎರಡನೆಯ ವಿಷಯ. ಅನಂತರ ಮಲೆನಾಡಿನ ನಿವಾಸಿಗಳಾದ ನಾವೆಲ್ಲ ವಹಿಸಬೇಕಾದ ಪಾತ್ರವಾವುದುಎಂಬುದು ಮೂರನೆಯ ವಿಷಯ. ಇವುಗಳನ್ನು ಚರ್ಚಿಸುವುದೇ ಈ ಲೇಖನದ ಉದ್ದೇಶ.

ನಮ್ಮ ದೇಶದಲ್ಲಿ ಕಡಿಮೆ ಬೀಳುತ್ತಿರುವ ಆಹಾರ ಶೇಕಡಾ ೭ ರಷ್ಟು ಎಂದು ಎಣಿಕೆ ಹಾಕಿದ್ದಾರೆ. ದೇಶ ದೊಡ್ಡದಾದ್ದರಿಂದ, ಈ ಆಹಾರ ಸಾಕಷ್ಟು ದೊಡ್ಡ ಪ್ರಮಾಣದ್ದೇ ಆಗುತ್ತದೆ. ಅದನ್ನು ಉತ್ಪನ್ನ ಮಾಡುವುದಕ್ಕೆ ಈಗಿನ ಬೇಸಾಯದ ರೀತಿಯಾಗಲೀ ಸಾಗು ಮಾಡುತ್ತಿರುವ ಜಮೀನಾಗಲೀ ಸಾಕಾಗದೆಂಬುದು ನಿರ್ವಿವಾದ. ನಮ್ಮ ರೈತರ ಸಾಗುವಳಿಯ ರೀತಿಯನ್ನು ನೋಡುವಾಗ ನಮ್ಮ ಜನ ಆಧುನಿಕ ಕೃಷಿಯನ್ನು ಕೈಕೊಳ್ಳಲು ಶಕ್ತರೆನಿಸುತ್ತಲಿಲ್ಲ. ಅವರು ಅಂತಹ ತಿಳುವಳಿಕೆ ಇದ್ದವರೂ ಅಲ್ಲ, ಅದಕ್ಕೆ ಬೇಕಾದ ಅನುಕೂಲತೆಯುಳ್ಳವರೂ ಅಲ್ಲ. ಪರಂಪರೆಯ ಕ್ರಮವೇ ಅವರ ಕೃಷಿಯ ವಿಧಾನವಾಗಿದೆ, ಅಲ್ಲದೆ ಎರಡು ವರುಷಗಳ ಅವಧಿಯಲ್ಲಿ ಅವರು ನವೀನ ಮಾರ್ಗ ಅನುಸರಿಸುತ್ತಾರೆಂದೆನ್ನುವುದು ಅನುಮಾನದ ವಿಷಯ. ನಮಗೆ ಈ ವಿಷಯದ ಪ್ರಯತ್ನದಲ್ಲಿ ಪ್ರತ್ಯಕ್ಷ ಫಲ ಕಾಣಬೇಕೆನ್ನಿಸಿದರೆ, ಈ ತನಕ ಸಾಗು ಮಾಡದ ಭೂಮಿಯಲ್ಲಿ ಸಾಗು ಮಾಡಬೇಕಾದದ್ದು ಮುಖ್ಯವಾದ ದಾರಿಯಾಗಿದೆ. ಯು. ಪಿ. ಮೊದಲಾದ ಕಡೆಗಳಲ್ಲಿ ಸಾವಿರಾರು ಎಕ್ರೆಯ ಜಮೀನುಗಳನ್ನು ಸಾಗು ಮಾಡುತ್ತಿದ್ದಾರೆಂದೂ, ಅದಕ್ಕೆ ಆಧುನಿಕ ಟ್ರೇಕ್ಟರುಗಳನ್ನು ಉಪಯೋಗಿಸುತ್ತಿದ್ದಾರೆಂದೂ, ಕೇಳಿದ್ದೇವೆ. ಈ ವಿಧಾನ ದೊಡ್ಡ ಜಮೀನುದಾರರಿಗೂ, ಧಾರಾಳ ಹಣದ ಅನುಕೂಲತೆಯುಳ್ಳವರಿಗೂ ಆಗಬಹುದೇ ಹೊರತು, ವರಮಾನ ಕಡಿಮೆಯಿರುವ ನಮ್ಮೂರಿನ ಕೃಷಿಕರಿಂದ ಸಾಧ್ಯವಲ್ಲ. ಯಾಂತ್ರಿಕ ಕೃಷಿಗೆ ನೂರಾರು ಎಕ್ರೆ ಒಮ್ಮಟ್ಟಾದ ನೆಲ ದೊರೆತರೆ ಸಾಧ್ಯ. ಹಾಗೆ ಜಮೀನು ದೊರೆತು ಸಾಹಸ, ಜನಬಲ, ಧನಬಲಗಳಿಂದ ನಡೆಯಬೇಕಾದ ಕೆಲಸವದು. ನಮಗೆ ಕಡಿಮೆಯಾಗುವ ಆಹಾರ ಪದಸವನ್ನು ಬೆಳೆಯಲು—ಈ ವಿಧಾನದಲ್ಲಿ, ಮಳೆಯೊಂದೇ ಸಹಾಯನಾಗಬೇಕು. ನಮ್ಮ ದೇಶದ ಒಟ್ಟು ಜನಸಂಖ್ಯೆ ೩೫ ೦೦೦,೦೦೦ ಇಷ್ಟು. ಸಾಗು ಆಗುತ್ತಿರುವ ಜಮೀನು ೨೦೩,೦೦೦,೦೦೦,೦೦೦ ಎಕ್ರೆ. ಇನ್ನೂ ಕಡಿಮೆ ಬೀಳುವ ಆಹಾರ ಒದಗಿಸಲು ನಾವು ಶೇಕಡಾ ಏಳರಷ್ಟು ಹೆಚ್ಚಿಗೆ ಜಮೀನು ಉಳುಮೆಗೆ ತರಬೇಕೆಂದರೆ ೧೪,೦೦೦,೦೦೦,೦೦೦ ಎಕ್ರೆ ಹೊಸ ಭೂಮಿ ಕೃಷಿಗೆ ಬರಬೇಕು ಎಂದಂತಾಯಿತು. ನಮ್ಮಲ್ಲಿ ಅದಕ್ಕೂ ಮಿಕ್ಕಿ ಜಮೀನೂ ಇದೆ. ಎರಡು ವರ್ಷಗಳ ಅವಧಿಯಲ್ಲಿ ಇದು ಸಾಧ್ಯವೇ—ಎಂದರೆ ಏಕೋ ಅನುಮಾನ ಉಂಟಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ನೀರಾವರಿ ಯೋಜನೆಗಳನ್ನು ಮಾಡಿ, ಇಷ್ಟೆಲ್ಲ ಜಮೀನು ಸಾಗು ಮಾಡುವುದಕ್ಕೆ ಸಾಧ್ಯವಾದರೂ, ಈಗಿನ ನೀರಾವರಿ ಯೋಜನೆಗಳು ಕೃತಿಗೆ ಬಂದು, ನೀರು ಕಾಲುವೆಗಳಲ್ಲಿ ಹರಿದು, ಒಡ್ಡು ಕಟ್ಟಿ, ಮುಗಿಯುವುದಕ್ಕೇನೇ ಹತ್ತು ವರ್ಷ ಕಾಲಬೇಕು. ಅನಂತರ ಜಮೀನು ಪಳಗುವುದಕ್ಕೆ ಇನ್ನೂ ಮೂರು ವರ್ಷ ಕಾಲಬೇಕು. ಅಷ್ಟೆಲ್ಲ ಮಾಡಿದರೂ ಈ ಕೊರತೆ ನಿವಾರಣೆಯಾದೀತು ಎನ್ನುವುದು ಕಷ್ಟ. ನಿರಾಶೆಯಿಂದ ಆ ಕೆಲಸ ಬಿಡಬೇಕು ಎಂದು ಹೇಳುವ ಮಾತಲ್ಲ ಇದು. ಆದರೆ ಕೆಲಸದ ಮಹತ್ವ ಎಷ್ಟೆಂದು ತಿಳಿಯ ಹೇಳುವ ಮಾತಿದು. ನಮ್ಮ ದೇಶದಲ್ಲಿ ಪ್ರತಿ ವರ್ಷ ಬೆಳೆಯುತ್ತಿರುವ ಜನಸಂಖ್ಯೆ ಐದು ಮಿಲಿಯದಷ್ಟು. ಹತ್ತು ವರ್ಷಗಳಲ್ಲಿ ಇನ್ನು ೪೦–೫೦ ಮಿಲಿಯ ಜನಸಂಖ್ಯೆ ಹೆಚ್ಚುವ ಭರವಸೆಯಿದೆ. ಅಂದರೆ ಈಸೇಕಡಾ ೭ರಷ್ಟು ಕೊರತೆ ನಿವಾರಣೆಯಾಗುವುದರೊಳಗಾಗಿ, ಸೇಕಡಾ ೧೨॥ ಯಷ್ಟು ಜನಸಂಖ್ಯೆ ಏರಿ ಆಹಾರದ ಅಭಾವವು ಮುಂದುವರಿಯುತ್ತಲೇ ಹೋಗುವಂಥ ಸ್ಥಿತಿ ನಮ್ಮದು. ಅದು ಕಡಿಮೆಯಾಗುವ ಭರವಸೆ ಇಲ್ಲ. ಆದುದರಿಂದ ಬರಿಯ ಸುಂದರ ಸ್ವಪ್ನಗಳನ್ನೋ ಆಸೆಗಳನ್ನೋ ನಾವು ಕಾಳ ಆಹಾರದ ಪ್ರಶ್ನೆಯನ್ನಿದಿರಿಸಿದರೆ, ನಿರಾಶೆಯಾಗುವ ಪ್ರಮೇಯವೇ ಹೆಚ್ಚು.

ವಿಷಯದ ವಿಸ್ತಾರ ಇಷ್ಟಿದೆ ಎಂದು ತಿಳಿದ ಮೇಲೆ, ಪ್ರತಿ ಪ್ರಾಂತಿಕ ಸರಕಾರಗಳೂ ಜನರೂ, ತಂತಮ್ಮ ಕಾರ್ಯಭಾಗ ಮಾಡದೆ ಹೋದರೆ—ಇನ್ನೂ ಹೆಚ್ಚಿನ ಕಷ್ಟದ ಸ್ಥಿತಿ ಬಂದೀತು. ಅದಕ್ಕೆ ನಾವು ಸಿದ್ಧರಾಗಬೇಕಾದೀತು. ದಕ್ಷಿಣದ ನಿವಾಸಿಗಳಾದ ನಾವು ಅನ್ನವನ್ನಾಶ್ರಯಿಸಿ ಬದುಕುವವರು. ಇತರ ಧಾನ್ಯಗಳಿಗಿಂತ ಅಕ್ಕಿಯ ಕೊರತೆ ಹೆಚ್ಚಾಗಿದೆ. ದಕ್ಷಿಣದಲ್ಲಿ ಮೊದಮೊದಲು ರಾಗಿ, ಜೋಳ ಉಪಯೋಗಿಸುತ್ತಿದ್ದ ಜನರೂ ತಮ್ಮ ಸಂಪತ್ತಿನ ಮಟ್ಟ ಹೆಚ್ಚಾದಂತೆ, ಅಕ್ಕಿಯನ್ನು ಉಪಯೋಗಿಸಲು ಕಲಿತಿದ್ದಾರೆ ಅದು ಸಿರಿವಂತಿಕೆಯ ಲಕ್ಷಣ ಎಂದು ತಿಳಿದಿದ್ದಾರೆ. ಇತ್ತ ಅಕ್ಕಿ ಬೆಳೆಯುವ ಭೂಮಿಯನ್ನು ಇತರ ವ್ಯವಸಾಯಗಳಿಗಾಗಿಯೂ ಬಳಸುತ್ತಿದ್ದಾರೆ, ಇದರಿಂದಲೂ ನಮ್ಮ ದುಃಖ ಹೆಚ್ಚಿದೆ. 'ಅಕ್ಕಿಯನ್ನು ಬಿಟ್ಟು ಬಿಡಿ; ಬದಲು ಗೆಣಸು ಉಪಯೋಗಿಸಿ' ಎನ್ನುವ ಪ್ರಚಾರವನ್ನೂ ನಾವು ಕೊಳ್ಳುತ್ತಿದ್ದೇವೆ. ಇದು ಎಷ್ಟರ ಮಟ್ಟಿಗೆ ಸಾಧ್ಯ ಎಂದೆನ್ನಲಾರೆವು ಕಾರಣ, ಆಹಾರಾಭ್ಯಾಸ ಜನಕ್ಕೆ ಒಂದೆರಡು ದಿನಗಳಿಂದ ಅಂಟಿಬಂದ ಚಾಳಿಯಲ್ಲ. ಬರಗಾಲದಲ್ಲಿ ಮನುಷ್ಯ ತರಗೆಲೆ ತಿಂದು ಬದುಕಿದ್ದೂ ಉಂಟು—ನಿಜ ಆದರೆ ನಿತ್ಯಜೀವನದಲ್ಲಿ ಜನರು ತಮ್ಮ ಆಹಾರವನ್ನು ಯಾರ ಅಪ್ಪಣೆಯಂತೆಯೂ ಬದಲಿಸುವುದಿಲ್ಲ ಒಂದೊಂದು ಆಹಾರಕ್ಕೆ ರೂಢಿಯಾದಂಥ ಹೊಟ್ಟೆ, ಇನ್ನೊಂದು ಆಹಾರ ಎಷ್ಟೇ ಒಳಿತಾದರೂ ಅದಕ್ಕೆ ಸುಲಭದಲ್ಲಿ ಪಳಗುವುದಿಲ್ಲ. ಬಾಯಿರುಚಿಯ ಪ್ರಶ್ನೆಯೂ ಇದರಲ್ಲಿ ಸೇರಿದೆ. ಶರೀರದ ಅಭ್ಯಾಸದ ಪ್ರಶ್ನೆಯೂ ಇಲ್ಲಿ ಸೇರಿದೆ. ಧಾರಾಳವಾಗಿ ಮೀನು ಸಿಗುವ ಕರಾವಳಿಯ ಜನ, ಎಸ್ಕಿಮೋ ಜನಗಳಂತೆ ಬರಿಯ ಮೀನನ್ನೇ ತಿಂದು ಬದುಕಬಹುದಲ್ಲ ಎನ್ನಬಹುದು; ಜನ ಅಂಥ ಬದಲಾವಣೆಗೊಪ್ಪುವುದಿಲ್ಲ. ಅವರ ಶರೀರವು ಅದನ್ನೊಪ್ಪುವದಿಲ್ಲ. ರೇಶನ್ ವಿತರಣೆ ಬಂದುದರಿಂದ, ದಿನಕ್ಕೊಂದು ಬಗೆಯ ಅಕ್ಕಿ ಕಾಳು ತಿಂದು, ಉದರ ಸಂಬಂಧವಾದ ರೋಗಗಳು ಸಾರ್ವಜನಿಕರಲ್ಲಿ ಬೆಳೆದಿವೆ. ಇದರಿಂದ ಜನರಲ್ಲಿ ಅರಕ್ತಿ ಹೆಚ್ಚುತ್ತಿರುವುದನ್ನು ಕಾಣುತ್ತಲಿದ್ದೇವೆ. ಒಮ್ಮೆಗೇ ಆಗುವ ರುಚಿಯಿಲ್ಲದ ಟಾಪಿಯೋಕ ಆಹಾರದ ಮುಖ್ಯ ಅಂಶವಾಗಿ ಒಗ್ಗುವುದು ಕಷ್ಟವಿದೆ. ಗೆಣಸನ್ನು ಟಾಪಿಯೋಕಕ್ಕಿಂತ ಸುಲಭವಾಗಿ ಬೆಳೆಯಿಸಬಹುದು ನಿಜ, ಆದರೆ ಅದನ್ನೇ ಆಹಾರವಾಗಿ ಬಳಸಿದಲ್ಲಿ ಅ ವಾಯುಕಾರಕ ಆಹಾರ, ಜೀರ್ಣ ಸಂಬಂಧವಾದ ಕಾಯಿಲೆಗಳಿಗೆ ಎಡೆಕೊಟ್ಟೀತು. ಅವು ಆಹಾರದ ತೀರ ಸ್ವಲ್ಪ ಅಂಶವಾಗಬಹುದಷ್ಟೆ. ಅವೇ ಮುಖ್ಯ ಆಹಾರವಾಗುವುದು ಕಠಿಣ. ಆದುದರಿಂದ 'ಕಾಳುಕಡಿಗಳ ಬದಲು ಗೆಡ್ಡೆಗೆಣಸು ತಿನ್ನಿರಿ' ಎನ್ನುವ ಕೂಗು ದೀರ್ಘಕಾಲದ ಆಹಾರ ಪ್ರಶ್ನೆಯನ್ನು ಎದುರಿಸಬಲ್ಲ ಸೂಚನೆಯೆಂದು ನನಗನಿಸುವುದಿಲ್ಲ. ಯಾವ ಆಹಾರವೇ ಆಗಲಿ, ನಾಲಗೆಗೂ, ಶರೀರಕ್ಕೂ ಒಗ್ಗಬೇಕು. ದೀರ್ಘಕಾಲದ ಅಭ್ಯಾಸಕ್ಕೆ ಅದು ದೊರೆತು—ನಮ್ಮ ಜೀರ್ಣಶಕ್ತಿಗೂ ಅದು ಸರಿಹೋಗಬೇಕು.

ಮಲೆನಾಡಿನವರಾದ ನಾವು ಈ ಪ್ರಶ್ನೆಯನ್ನು ನಮ್ಮ ದೃಷ್ಟಿಯಿಂದ ಪರಿಶೀಲಿಸಿದರೆ—ಸ್ಥಿತಿ ಅಷ್ಟೊಂದು ನಿರಾಶಾದಾಯಕವಾಗಿಲ್ಲ. ಸರಿಯಾದ ಪ್ರಯತ್ನದಿಂದ ನಮ್ಮಲ್ಲಿ ಹೆಚ್ಚಿನ ಆಹಾರ ನಾವು ಬೆಳೆಯಿಸಿಕೊಳ್ಳಬಹುದು. ಪಶ್ಚಿಮ ಘಟ್ಟದ ಪೂರ್ವ ಪಶ್ಚಿಮ ಮಗ್ಗುಲುಗಳಲ್ಲಿ, ಒಂದು ಕಾಲದಲ್ಲಿ ಉತ್ತು ಸಾಗುವಳಿಯಾಗಿ ಈಗ ಹಾಳು ಬಿದ್ದಿರುವ, ಲಕ್ಷೋಪಲಕ್ಷ ಎಕ್ರೆ ಜಮೀನನ್ನು ಕಾಣುತ್ತಲಿದ್ದೇವೆ. ಉತ್ತ ಆ ಜಮೀನನ್ನು ಜನ ಬಿಟ್ಟು ಹೋಗುತ್ತಲಿದ್ದಾರೆ. ಅದಕ್ಕೆ ಕಾರಣವೇನೆಂದು ತಿಳಿಯದೆ ಹೋದರೆ—ಆ ಜಮೀನು ತಿರುಗಿ ಪ್ರಯೋಜನಕ್ಕೆ ಬರುವಂತಿಲ್ಲ. ಮಲೆನಾಡುಗಳಲ್ಲಿ ಮಳೆಗೆ ಕೊರತೆ ಇಲ್ಲ. ಮುಂಡುಗೋಡ, ಎಲ್ಲಾಪುರ್ ಮೊದಲಾದ ಕಡೆಗಳಲ್ಲೂ, ಘಟ್ಟದಿಂದ ಹದಿನಾರು ಹದಿನೇಳು ಮೈಲು ಅಂತರದಲ್ಲಿರುವ ಮಲೆನಾಡ ಸೆರಗುಗಳಲ್ಲೂ ವಿಶಾಲವಾದ ಪಡುಭೂಮಿಯನ್ನು ಕಾಣಬಹುದು. ಇಲ್ಲಿನ ಕೃಷಿಗೆ ತೊಂದರೆ ಎಂದರೆ ಜನರ ಅಭಾವ. ಇಲ್ಲಿ ಕೆಲಸಕ್ಕೆ ಆಳುಗಳು ಸಿಗುವುದಿಲ್ಲ. ಕರಾವಳಿಯ ಜನರು ಅಲ್ಲಿ ಕೆಲಸಕ್ಕೆ ಹೋಗಬೇಕು. ಹಾಗೆ ಹೋಗುವವರೆಲ್ಲ ಕೈತುಂಬ ಹಣ ಸಿಗುವ ಕಾಫಿ, ಏಲಕ್ಕಿ ತೋಟಗಳಿಗೆ ಹೋಗುತ್ತಾರೆ. ಬತ್ತದ ಬೇಸಾಯ ಆ ಸಂಬಳವನ್ನು ಕೊಡಲಾರದು. ಮಲೆನಾಡಿನಲ್ಲಿ ಬೆಳೆಯಬಹುದಾದ ಭಾಗಿಯಿಂದಲೂ ಆ ಉತ್ಪನ್ನ ಸಿಗಲಾರದು. ಅದನ್ನು ಊರಿನ ಜನವೇ ಕೃಷಿ ಮಾಡಬೇಕು. ಇಲ್ಲವೆ ಅದನ್ನು ತಮ್ಮ ಊರಾಗಿ ಮಾಡಿಕೊಂಡು ಅಲ್ಲಿನ ಕೃಷಿಯನ್ನು ತಮ್ಮ ಮುಖ್ಯ ವೃತ್ತಿಯಾಗಿ ಮಾಡಿಕೊಳ್ಳುವ ಜನರ ವಸಾಹತುಗಳುಂಟಾಗಬೇಕು. ಅಲ್ಲಿಗೆ ಜನ ಹೋಗಿ ವಾಸಿಸಲು ಯಾಕೆ ಹಿಂಜರಿಯುತ್ತಾರೆ ಎಂಬುದನ್ನು ನಾವು ಮೊದಲು ತಿಳಿಯಬೇಕು. ಈ ಸ್ಥಳಗಳು ಆರೋಗ್ಯಕ್ಕೆ ಅನುಕೂಲವಾಗಿಲ್ಲ. ಸದಾ ಮಲೇರಿಯದ ಪೀಡೆಯಿಂದ ತುಂಬಿರುವ ಪ್ರಾಂತ್ಯಗಳು. ಅಲ್ಲಿಗೆ ಹೋದ ಆಳುಗಳು ಎಂಟೇ ದಿನಗಳಲ್ಲಿ ಜ್ವರಗಟ್ಟ ಸಂಪಾದಿಸಿ ಊರಿಗೆ ಬರುತ್ತಾರೆ. ನಾಲ್ಕು ದಿನದ ಅನ್ನಕ್ಕೆ, ಜೀವವನ್ನೇ ಬಲಿಕೊಡುವ ಧೈರ್ಯ ಯಾರಿಗೆ ಬಂದೀತು? ಹಿಂದೆ ಸಾಗುವಳಿಯಾದ ಭೂಮಿಗಳು ಈಗ ಹಾಳು ಬೀಳುವುದಕ್ಕೂ ಅದೇ ಕಾರಣವಾಗಿದೆ ಹಿಂದಿನ ಕಂಪೆನಿ ಸರಕಾರ ವಹಿಸಿದ ಅರಣ್ಯ ಹೆಚ್ಚಿಸುವ ಧೋರಣೆಯಿಂದಾಗಿ—ಕಾಡುಗಳು, ಜತೆಗೆ ಮಲೇರಿಯಾ ಬೆಳೆದು, ಹೆಚ್ಚಿನ ಜನ ಬದುಕುವುದಕ್ಕೆ ಅಡಚಣೆಯಾಗಿ ಬಂದಿದೆ. ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡದ ಸಿರೂರು, ಗೋಳಿತಟ್ಟು, ಶೇಡಿಮನೆ ಮೊದಲಾದುವೆಲ್ಲ—ಇದಕ್ಕೆ ಉದಾಹರಣೆಗಳಾಗಿವೆ.

ಜನನಿವಾಸಕ್ಕೆ ಈ ಪ್ರಾಂತ್ಯಗಳು ಅನುಕೂಲವಾಗಬೇಕಾದರೆ, ಇಲ್ಲಿ ಮಲೇರಿಯಾ ತಡೆಗಟ್ಟುವ ವಿಶಾಲ ಪ್ರಯತ್ನ ಮೊದಲಿಗೆ ಆಗಬೇಕು. ಅನಾವಶ್ಯಕವಾದ ಎಷ್ಟೋ ಕಾಡುಗಳನ್ನು ಸವರಿ ಹಾಕಬೇಕು. ಬಂಜರು ಭೂಮಿಗಳಲ್ಲಿ ನೀರು ಇಂಗಿ ಹೋಗುವುದಕ್ಕೆ ಕಾಲುವೆ ಕಡಿಯಬೇಕು. ಡಿಡಿಟಿಯ ಪ್ರಯೋಗದಿಂದ ಸೊಳ್ಳೆಗಳನ್ನು ನಾಶಮಾಡಬೇಕು. ಇದು ವ್ಯಕ್ತಿ ಪ್ರಯತ್ನವನ್ನು ಮೀರಿದ ಕೆಲಸ ಸರಕಾರ ಹೆಚ್ಚು ಆಹಾರ ಬೆಳೆಸಿರಿ ಎಂಬ ಕೂಗಿನ ಬದಲು, ಈ ಕೆಲಸ ಮಾಡುವುದಕ್ಕೆ ಸಿದ್ಧವಾಗಬೇಕು ಇಂಥ ಪ್ರದೇಶಗಳಲ್ಲಿ ಮನುಷ್ಯ ಮಲೇರಿಯದ ಬಾಧೆಯಿಲ್ಲದೆ ಸುಖವಾಗಿ ಬದುಕಿರಬಲ್ಲ ಎಂದು ತೋರಿಸಿದರೆ, ಜನ ಕಿಕ್ಕಿರಿದಿರುವ ಕರಾವಳಿಯ ಅಧಿಕ ಸಂಖ್ಯಾಕರು ಅಲ್ಲಿಗೆ ಹೋಗಿ ನೆಲೆಸುವುದಕ್ಕೆ ಇಷ್ಟಪಟ್ಟಾರು.

ಅಂಥಲ್ಲಿ ಜನ ಹೋಗಿ ಗುಡಿಸಲು ಕಟ್ಟಿಕೊಳ್ಳುವುದು ಬಹು ಸುಲಭದ ಕೆಲಸ. ಗುಡಿಸಲಿಗೆ ಬೇಕಾದುದೆಲ್ಲ ಅಲ್ಲಿ ಅಗ್ಗದಲ್ಲಿ ಸಿಗುತ್ತದೆ. ಮುಂದೆ ಬೇಕಾದುದು—ಕೃಷಿಯ ತಯಾರಿ. ಮಲೆನಾಡಿನಲ್ಲಿ ಕೃಷಿಗಿರತಕ್ಕ ಎರಡು ದೊಡ್ಡ ಕೊರತೆಗಳೆಂದರೆ—ಒಳ್ಳೆಯ ಜಾನುವಾರುಗಳು ಮತ್ತು ಕಾಡು ಮೃಗಗಳ ಹಾವಳಿ. ರೈತ ಸಾಹಸಪಟ್ಟು ಬೆಳೆಸಿದುದು ಅವನ ಕೈಗೆ ಬರುವುದು ಶಕ್ಯವಿಲ್ಲ. ಸಣ್ಣ ಪುಟ್ಟ ಹೊಲಗದ್ದೆಗಳನ್ನು ಮಾಡಿಕೊಂಡರೆ ಸುತ್ತಲಿನ ಗಿಳಿ, ಗುಬ್ಬಚ್ಚಿ, ಕಪಿಗಳು ಬಂದು ತಿಂದು ಹೋಗುತ್ತವೆ. ಈ ಹಾನಿ ಅಷ್ಟು ಹೆಚ್ಚು ಕಾಣದೆ ಹೋಗಬೇಕಾದರೆ, ಜಮೀನಿನ ಕ್ಷೇತ್ರ ವಿಸ್ತಾರವಾಗಿರಬೇಕು. ವಿಶಾಲವಾದ ಬಯಲು ಹೊಲಗದ್ದೆಗಳಲ್ಲಿ ಹಾನಿ ಹಂಚಿ ಹೋಗಬೇಕು. ಗಿಳಿ, ಗುಬ್ಬಿ, ಕೋತಿಗಳ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI, S. Kanara

ನ್ನು ನಾಶಮಾಡಿಯೇ ಪೈರು ಬೆಳೆಯುತ್ತೇನೆ ಎನ್ನುವುದು ಕಷ್ಟದ ಕೆಲಸ.

ಇದಲ್ಲದೆ ಪಟ್ಟಣದ ತಾಪತ್ರಯವೆಂದರೆ-ವನ್ಯಮೃಗಗಳ ಹಾವಳಿ. ಬೆಳೆ ಬಿತ್ತಿದಂದಿನಿಂದ ಅದು ಕೈಗೆ ಬರುವ ತನಕ ಹಿಂಡು ಹಿಂಡಾಗಿ ಅಲೆಯುವ ಕಾಡುಹಂದಿ, ಕಡವೆ, ಕಾಟಿ ಮೊದಲಾದುವುಗಳಿಂದ ಈ ಬೆಳೆಯ ರಕ್ಷಣೆ ಆಗಬೇಕು. ಸಾಮಾನ್ಯ ರೈತನು ಮಾಡಬಹುದಾದ ಮುಳ್ಳು ಬೇಲಿಗಳು ಇಂಥ ಮೃಗಗಳಿಗೆ ಈಡಲ್ಲ. ಎತ್ತರವಾದ ದರೆ, ಆಳವಾದ ಕಂದಕ ಇವುಗಳಿಂದಲೇ ಹೊಲಗದ್ದೆಗಳು ಭದ್ರವಾಗಬೇಕು. ಸಣ್ಣ ಸಣ್ಣ ಹೊಲಗಳಿಗೆ ಈ ರೀತಿಯ ರಕ್ಷಣೆಯನ್ನು ಬಡರೈತ ಕೊಡಲಾರ. ವಿಶಾಲವಾದ ಬಯಲುಗಳಲ್ಲಿ ಸಾಮೂಹಿಕವಾದ ಪ್ರಯತ್ನದಿಂದ ಬಲವಾದ ಮುಳ್ಳುಬೇಲಿ, ಕಂದಕ ಹಾಕಿಸದ ಮಲೆನಾಡನ್ನು ಉತ್ತೇ ಫಲವಿಲ್ಲ. ಅದರೂ ಇಂಥ ಜಮೀನುಗಳಿಂದ ಕನಿಷ್ಠ ಅರ್ಧಮೈಲು ದೂರ ನಿರತಕ್ಕ ಸರಕಾರಿ ಕಾಡುಗಳನ್ನು ಕಡಿದು ನೆಲಸಮ ಮಾಡದೆ ಹೋದರೆ, ವರ್ಷಂಪ್ರತಿ ಹುಟ್ಟುವ ಕುರುಚಲುಗಳನ್ನು ಆಗಾಗ ಸವರದೆ ಹೋದರೆ, ಮಲೆನಾಡಿನ ಅಧಿಕ ಮಳೆಯಿಂದ ತಿಂಗಳಲ್ಲೇ ಕಾಡುಬೆಳೆದು ಕಾಡು ಮೃಗಗಳಿಗೆ ಆವಾಸವಾಗುತ್ತದೆ. ಇದು ವ್ಯಕ್ತಿ ಪ್ರಯತ್ನವನ್ನು ಮೀರಿದ್ದು. ಮೊತ್ತಮೊದಲು ಸರಕಾರವೇ ಮುಂದೆ ಬಂದು ಸಹಾಯವಾಗಬೇಕಾದ್ದು.

ಘಟ್ಟದ ಕೆಳಗೆ ಹರಿಯುವ ಹಲವಾರು ನದಿಗಳಿವೆ. ಬಹು ದೂರದ ತನಕ ಈ ನದಿಗಳ ದಡೆಯಲ್ಲಿ ಸಮತಟ್ಟಾದ ಸಾಗುವಳಿಯ ಜಮೀನನ್ನು ಕಾಣುತ್ತಿದ್ದೇವೆ. ಈಗ ಅಲ್ಲಿರುವುದು ಕಾಡೇ. ಆ ಕಾಡುಗಳ ನಿವಾರಣೆಯೂ ಆಗಬೇಕು. ನದಿಯ ನೀರನ್ನು ಬಳಸಿ, ವರ್ಷಕ್ಕೆ ಎರಡು, ಮೂರು ಬೆಳೆಗಳನ್ನು ಎತ್ತುವ ಸೌಕರ್ಯ ನಮ್ಮ ಜಿಲ್ಲೆಯ ಅನೇಕ ಕಡೆಗಳಲ್ಲಿದೆ. ಅಲ್ಲಲ್ಲಿ-೨೦೦ರಿಂದ ೧೦೦೦ ಎಕ್ರೆಯ ತನಕ ಸಮತಟ್ಟಾದ ನೆಲ ಇದೆ. ಒಬ್ಬೊಬ್ಬನಿಗೆ ಇದನ್ನು ಎಕ್ರೆ ನಾಲ್ಕು ಎಕ್ರೆಗಳಂತೆ ಹಂಚಿಕೊಟ್ಟು ಉಪಯೋಗವಿಲ್ಲ. ನೀರಾವರಿಗೆ ಬೇಕಾಗುವ ಪಂಪು ಮತ್ತು ಶಕ್ತಿ ಬೇಕು. ವಿದ್ಯುತ್ತಿದ್ದರೆ ಅದನ್ನು ಸಣ್ಣ ಪ್ರಮಾಣದಲ್ಲಿ ಹಂಚಬಹುದು. ಸಾಮಾನ್ಯ ರೈತ ಕೊಂಡು ನಡೆಯಿಸಬಹುದು. ಆದರೆ ವಿದ್ಯುಚ್ಛಕ್ತಿ-ವಿಷಯದಲ್ಲಿ ನಮ್ಮ ನಾಡಿನ ಸರಕಾರ ದಕ್ಷಿಣ ಕನ್ನಡ ಜಿಲ್ಲೆಯಂಥ ಪ್ರಾಂತ್ಯವನ್ನು ಇನ್ನೂ ಕಡೆಗಣಿಸುತ್ತಿದೆ. ಜೋಗು ಜಲಪಾತದಿಂದ ವಿದ್ಯುತ್ತನ್ನು ತರಿಸಿ ಹಂಚಿದಲ್ಲಿ ಒಂದೆರಡು ವರ್ಷಗಳಲ್ಲಿ-ಸಾವಿರಾರು ಎಕ್ರೆ ಜಮೀನುಗಳು ನೀರಾವರಿಗೆ ಸಿಗಬಹುದಿತ್ತು. ಅದಿಲ್ಲದಲ್ಲಿ ಜನ ಎಂಜಿನು, ಪಂಪುಗಳನ್ನು ಹಾಕಿಕೊಳ್ಳಬೇಕು. ನೀರು ಸುಮಾರು ಇಪ್ಪತ್ತೈದು ಅಡಿ ಆಳದಲ್ಲಿ ಅಥವಾ ಅದಕ್ಕೂ ಮೇಲೆ ಸಿಕ್ಕುವಂಥ ನದಿಗಳು ನಮ್ಮವು. ಹೀಗಾಗಿ ಅದು ಕಷ್ಟದ ಕೆಲಸವಲ್ಲ. ಆ ನೀರನ್ನೆತ್ತುವುದಕ್ಕೆ ಎಂಜಿನು ಪಂಪುಗಳು ಬೇಕು. ಇದಕ್ಕಾಗಿಯೇ ೪,೦೦೦-೫೦೦೦ ರೂಪಾಯಿಗಳನ್ನು ತೆರಬೇಕಾಗುತ್ತದೆ. ಹಾಗೆ ತೆರಬಲ್ಲ ವ್ಯಕ್ತಿ ೧೦೦ರಿಂದ ೨೫ ಎಕ್ರೆ ಸಾಗುವಳಿ ಮಾಡಬಹುದು. ಇಲ್ಲೂ [illegible] ಸಾಹಸದ ಕೆಲಸವಿದೆ. ಆದರೆ ತೀರ ಮಲೆನಾಡಿನಷ್ಟು ಕಷ್ಟದ್ದಲ್ಲ. ಆದರೆ ಪಂಪು ಮನೆ, ಜಾನುವಾರು-ಎಂದು ಎಂಟುಹತ್ತು ಸಾವಿರ ರೂಪಾಯಿಗಳನ್ನು ವ್ಯಯಿಸಿ, ಸಾಹಸ ಮಾಡಬಲ್ಲ ವ್ಯಕ್ತಿಗಳ ಸಂಖ್ಯೆ ಎಷ್ಟೆಂಬುದನ್ನು ನಾವು ವಿವೇಚಿಸಬೇಕು. ಅಂಥ ಜಮೀನುಗಳುಳ್ಳ ಶ್ರೀಮಂತರಿದ್ದಾರೆ. ಅವರಿಂದಲೇ ಈ ಕೆಲಸ ಮಾಡಿಸಬಹುದು. ಅವರು ತಮ್ಮ ಪಡ ಜಮೀನನ್ನು ಇಂತಿಷ್ಟು ವರ್ಷದೊಳಗಾಗಿ ಸಾಗುವಳಿಗೆ ತರದೆ ಹೋದರೆ, ಅದನ್ನು ಸರಕಾರ ಕಿತ್ತುಕೊಳ್ಳುತ್ತದೆ ಎಂದು ಎಚ್ಚರಿಕೆ ಹುಟ್ಟಿಸಬಹುದು. ವ್ಯಕ್ತಿ ಸಾಹಸದಿಂದ ಮುಂದೆ ಬರುವವರಿಗೆ, ಅವರು ಹಾಕುವ ಹಣದ ಅರನಾಸಿಯಷ್ಟಾದರೂ ಉಚಿತ ಸಹಾಯ ಕೊಡಲು ಸರಕಾರ ಮುಂದುವರಿಯಬೇಕು. ಅರೆನಾಸಿಯಷ್ಟಾದರೆ ಉಚಿತವಾಗಿಯೂ, ಸಂಪೂರ್ಣವಾದರೆ ಅಲ್ಪ ಬಡ್ಡಿಯ ನಿಡುವಾಯಿದೆ ಸಾಲವನ್ನೂ ಒದಗಿಸಿಕೊಡಬೇಕು. ಹೊಸ ಜಮೀನು ಕೃಷಿಗೆ ತಂದರೆ ಅದು ತನ್ನದಾಗುತ್ತದೆ ಎಂಬ ಭರವಸೆಯನ್ನು ಮೊದಲಿಗೆ ಕೊಡಬೇಕು.

ಸಹಕಾರಿ ಕೃಷಿ-ಎಂದು ನಮ್ಮ ಜನ ಆಡಿಕೊಳ್ಳುವುದುಂಟು. ಆಡುವ ಜನ ಉಪದೇಶಿಗಳಾಗಿಯೇ ಇದ್ದಾರೆ. ಅವರ ಪ್ರಚಾರ ಅನ್ಯರು ಕೇಳುವ ಸ್ಥಿತಿಯಲ್ಲಿಲ್ಲ. ನಮ್ಮ ಗ್ರಾಮದಲ್ಲಿ ಹತ್ತು ಜನ ಒಟ್ಟಿಗೆ ಸೇರಿ ಸಾರ್ವಜನಿಕ ಸಂಪತ್ತನ್ನು ಕಲ್ಪಿಸಿಕೊಳ್ಳುವ ಸೌಹಾರ್ದ ಹೊರಟು ಹೋಗಿದೆ. ಅದು ಬರಬಹುದಾದ ದಿನ ಇನ್ನೂ ದೂರ. ಇಂದು ಇಂಥ ಪ್ರಯೋಗಗಳೆಲ್ಲ ಜನರಿಂದ ಒಂಟಿಯಾಗಿಯೇ ಆಗಬೇಕಾಗಿದೆ. ಅಥವಾ ಸರಕಾರದ [illegible]ದಲೇ ನಡೆಯಬೇಕಾಗಿದೆ. ಆದರೆ ಸರಕಾರಿ ನೌಕರರಲ್ಲಿ ಸಂಬಳದ ಪ್ರೀತಿಯಿಂದ ಓಡಾಡುವವರ ಸಂಖ್ಯೆಯೇ ಹೆಚ್ಚು. ಅವರು ಮಾಡಬಹುದಾದ ಕೃಷಿ, ರೂಪಾಯಿ ವ್ಯಯಿಸಿ ನಾಲ್ಕಾಣೆ ಕಾಳು ತೆಗೆಯುವ ಪ್ರಯತ್ನದಲ್ಲಿ ಮುಗಿಯಬಹುದು. ಬದಲು ಹನ್ನೆರಡಾಣೆ ವ್ಯಯಿಸಿ ಹದಿನಾರಾಣೆ ತೆಗೆಯಬಹುದು ಎಂಬ ವಿಶ್ವಾಸ ಸರಕಾರಕ್ಕೆ ಇದ್ದರೆ ಆಗ ಜನಕ್ಕೆ ಇಂಥ ಆದರ್ಶ ಹಾಕಿಕೊಡಬಹುದಾಗಿದೆ.

ಇದೇ ಸಂದರ್ಭದಲ್ಲಿ ಸರಕಾರ ಹೊಸದಾಗಿ ಯೋಜಿಸುತ್ತಿರುವ ಕೃಷಿ ಸುಧಾರಣೆಯ ಕಾನೂನನ್ನು ಕುರಿತು ವಿಚಾರಿಸುವುದೊಳಿತು. ಹೆಚ್ಚಿನ ಕೃಷಿಯಾಗಬೇಕೆಂಬುದೇ ಅವರ ಉದ್ದೇಶ. ಆದರೆ ಕೃಷಿ ಮಾಡುವ ರೈತನ ಶಕ್ತಿಯು ಯಾನದಿಂದ ಉತ್ತಮವಾಗಿ ಕೃಷಿ ಮಾಡಿದ್ದಾನೆಯೋ ಎಂದು ಅರಿಯಬೇಕಾಗಿದೆ. ಅವನಲ್ಲಿ ಶಕ್ತಿ ಸಾಲದೆ ಹೋದರೆ ಬೇಕಾದ ನೆರವು ಕೊಡಲಾರದ ಸರಕಾರ ಈ ಸವನದಿಂದ ರೈತನ ಜಮೀನು ಅಪಹರಿಸುವ ಕಾಯಿದೆ ಆಗುವ ಭೀತಿ ಹೆಚ್ಚು. ಉತ್ತಮ ಕೃಷಿ ಯಾವುದೆಂದು ನಿರ್ಧರಿಸುವವರಾರು? ಜ್ಞಾನುಭಾಗರೇ, ಮುಸಗಾರರೇ, ತಹಸಿಲ್ದಾರರೇ ಅಥವಾ ಇನ್ನೊಂದು ಅಂಥದೇ ನೌಕರ ವರ್ಗವೇ? ಹಾಗಿದ್ದರೆ ಅದು ಜನರನ್ನು ಬೆದರಿಸಿ ಲಂಚ ತಿಂದು ತೇಗುವ ಒಂದು ಸಂಸ್ಥೆಯಾದೀತು. ಜಮೀನನ್ನು ಪಡ ಬಿಟ್ಟಲ್ಲಿ ಮಾತ್ರ ಅದನ್ನು ಕಸಿದುಕೊಳ್ಳುತ್ತೇವೆ ಎಂಬ ಬೆದರಿಕೆಗಿಂತ ಹೆಚ್ಚಿನ ಕಾಯಿದೆ ಮಾಡಿದರೆ ಅದರಿಂದ ಜನಕ್ಕೆ ಉಪಕಾರಕ್ಕಿಂತ ಅಪಕಾರವೇ ಅದೀತೆಂದು ನನಗೆ ಅನಿಸುತ್ತದೆ.

ಮಲೆನಾಡಿನ ಮುಖ್ಯ ಕೊರತೆ, ಜಾನುವಾರು ಎಂದೆವು. ನಮ್ಮ ದೇಶದ ಜಾನುವಾರುಗಳಿಗೆ ಪುಷ್ಟಿಕರವಾದ ಮೇವು ಇಲ್ಲ. ನೆಲದಲ್ಲಿನ ಲವಣಗಳು ಅತಿ ವೃಷ್ಟಿಯಿಂದ ತೊಳೆದು ಹೋಗಿ ಹುಲ್ಲು, ನೆಲ್ಲುಗಳೆರಡೂ ಸತ್ವಶೂನ್ಯವಾಗಿವೆ. ಜಾನುವಾರುಗಳ ಆಹಾರದ ಸಮಸ್ಯೆ ಬಗೆಹರಿಯದೆ, ಇಲ್ಲಿನ ದನಗಳು ಸುಧಾರಿಸುವಂತಿಲ್ಲ. ವರ್ಷಂಪ್ರತಿ ಹೊಸ ಎತ್ತು ಕೋಣಗಳನ್ನು ಕೊಳ್ಳುವುದೇ ನಮ್ಮ ರೈತನ ಗೋಳಾಗಿದೆ. ಇಂದು ಹಿಂಡಿ, ಪೌಷ್ಟಿಕ ಪದಾರ್ಥಗಳ ಬೆಲೆ ಅವನ ಕೈಮೀರಿದ ಸಂಗತಿಯಾಗಿದೆ. ಹಿಂಡಿ ಅಗ್ಗವಾಗಿರುವಾಗಲೇ ಅದನ್ನು ಹಾಕಿ ಸಾಕಲಾಗದ ರೈತ ಈಗ ಅದನ್ನು ಹಾಕುತ್ತಾನೆಯೇ-ಜಾನುವಾರುಗಳ ಪೀಳಿಗೆ ಉತ್ತಮಗೊಳಿಸುವ ಪ್ರಯತ್ನವು ದೊಡ್ಡ ಪ್ರಮಾಣದಲ್ಲಿ ಸರಕಾರದಿಂದ ನಡೆಯಬೇಕಾಗುತ್ತದೆ. ಇದರಲ್ಲಿ ಲಾಭಕ್ಕಿಂತ ನಷ್ಟ ಹೆಚ್ಚು. ಕೊಯಂಬುತ್ತೂರಿನ ಪಾಳೆಯಪಟ್ಟಿ ಜಮೀನುದಾರರಂತಹ ವ್ಯಕ್ತಿಗಳು, ದೇಶಕ್ಕೆ ಒಬ್ಬೊಬ್ಬ ಸಿಗಬಹುದು. ಮಲೆನಾಡಿನಲ್ಲಿ ಅಂಥವರು ಯಾರೂ ಸಿಗಲಾರರು. ಜಾನುವಾರುಗಳ ಪೀಳಿಗೆ ದಿನ ಎರಡು ದಿನಗಳಲ್ಲಿ ಉತ್ತಮವಾಗಲಾರದು, ದೀರ್ಘಕಾಲ ಪರಿಶ್ರಮದ ಕೆಲಸವದು. ಇಂದು ಕೃತಕ ಪ್ರಯೋಗಗಳಿಂದಾಗಿ, ಇದಕ್ಕೆ ಬೇಕಾಗುವ ಬೀಜದ ಹೋರಿಗಳ ಸಂಖ್ಯೆ ಕಡಿಮೆಯಾಗಿದ್ದರೂ ದೊಡ್ಡ ಪ್ರಮಾಣದಲ್ಲಿ ಜಾನುವಾರುಗಳನ್ನು ಬೆಳೆಯಿಸಬಹುದು. ಆದರೆ ನಮ್ಮ ಸರಕಾರ ಮೂರು ವರ್ಷಗಳಿಂದ, ಉಪ್ಪಿನಂಗಡಿಯಲ್ಲಿ ತೆರೆಯುತ್ತೇನೆಂದ ಪಶುವರ್ಧನ ಕೇಂದ್ರ ಇನ್ನೂ ಕಾಗದದ ಯೋಜನೆಯಾಗಿ ಉಳಿದಿದೆ. ಸಭಾಸೆಗಳಾದುವು; ಕಟ್ಟಡದ ಮಂಜೂರಾತಿಯಾಯಿತು-ಆದರೆ ಕೆಲಸವೇನೂ ನಡೆದಿಲ್ಲ. ಹೀಗಿರುತ್ತ ಬಹುಲ ಪ್ರೇರಕರಾದ ಸರಕಾರಕ್ಕೆ ಈ ವಿಷಯದಲ್ಲಿರುವ ಉತ್ಸಾಹ ಮಾತಿಗಿಂತ ಮುಂದೆ ಹೋಗದಿರುವಾಗ, ಜನವನ್ನು ದೂರಿ ಫಲವೇನು?

ಕೊನೆಯದಾಗಿ ಸರಕಾರ ಉತ್ತಮ ಕೃಷಿಯ ವಿಚಾರ ಮಾತನಾಡುತ್ತಲೇ ಇದೆ. ಎಷ್ಟು ಹೊಸ ನೇಗಿಲು, ಹೊಸ ಗೊಬ್ಬರಗಳ ಪುರಾಣ ಹೇಳಿದರೂ, ಹಳ್ಳಿಯ ರೈತ ಅದನ್ನು ಕೇಳುವ ಕಿವಿಯುಳ್ಳವನಾಗಿಲ್ಲ, ಆ ವಿದ್ಯೆ ಅವನಿಗಿಲ್ಲ. ಅವನ್ನು ಕೊಳ್ಳುವ ಶಕ್ತಿಯೂ ಆಗಿಲ್ಲ. ಆ ಸಂಪತ್ತು ಅವನಿಗಿಲ್ಲ. ಅಲ್ಲಲ್ಲಿ "ಉತ್ತಮ ಕೃಷಿ ಮಾಡಿರಿ" ಎಂದು ಗೋಡೆಗೆ ಪೋಸ್ಟರ್ ಅಂಟಿಸಿ, ಈ ಕೆಲಸ ಮಾಡುತ್ತವೆ ಎಂದೆನ್ನುವ ಸರಕಾರಿ ಇಲಾಖೆಗಳಿಗೆ ನಮ್ಮ ದೇಶದ ರೈತರ ಸ್ವಭಾವವೇ ತಿಳಿದಿಲ್ಲ ಎಂದು ತೋರುತ್ತದೆ. ಉತ್ತಮ ಕೃಷಿ ಆಗಲು, ಮಾದರಿ ಕೃಷಿಕ ಕ್ಷೇತ್ರಗಳು ಇನ್ನೂ ತಾಲೂಕಿಗೆ ಒಂದರಂತೆ ಇಲ್ಲದೆ ಇರುವಾಗ, ರೈತ ಕಲಿಯುವುದೇನು? ಅದನ್ನು ಹೇಳಿಕೊಡುವ ಜನ ಎಷ್ಟು ಮಂದಿ ಇದ್ದಾರೆ? ಜಿಲ್ಲೆಗೆ ಮೂವರೋ, ನಾಲ್ವರೋ ಡೆಮೊನ್‌ಸ್ಟ್ರೇಟರುಗಳು ಮಾತ್ರ ಇರುವಲ್ಲಿ ಏನಾದೀತು? ಈ ವಿಚಾರದ ಮುಂದಿನ ಏರ್ಪಾಟು ಇನ್ನೂ ನಿರಾಶೆಯದಾಗಿದೆ. ಕೊಯಮುತ್ತೂರಿನಲ್ಲಿ ಕೃಷಿ ವಿದ್ಯಾರ್ಥಿಗಳ ಸಂಖ್ಯೆಯನ್ನು ೧೦೦ರಿಂದ ೬೦ಕ್ಕೆ ಇಳಿಸಿದ್ದಾರೆ. ಆಹಾರ ಬೆಳೆಯಿಸುವವರ ನೋಟವೇ ಇದು? ಅಲ್ಲಿ ಪ್ರವೇಶ ಬಯಸುವ ಅರ್ಜಿ ಮಂದಿಯೂ ಎಂಥವರು? ಮೂರು ವರ್ಷ ಕಲಿತು, ತಿಂಗಳಿಗೆ ೧೫೦ ರೂಪಾಯಿ ಸಂಬಳ ಇದಿರು ಕಾಯುವ ನೌಕರಿ ಪ್ರೀತಿಯವರು. ಸ್ವಂತ ಜಮೀನಿದ್ದು ಈ ೧೫೦ ರೂಪಾಯಿಗಳಿಗಾಗಿ ಬಾಯ್ಬಿಟ್ಟು ತಿರುಗಾಡುವ ಡೆಮೊನ್‌ಸ್ಟ್ರೇಟರುಗಳನ್ನು ನಾನು ನೋಡಿದ್ದೇನೆ. ಇಂಥವರಿಂದ ಊರಿನ ಹೊಲ ಉತ್ತಮವಾದೀತೆ ಎಂದು ಬಯಸಬೇಕೇ? ಸರಕಾರ ಅವರನ್ನು ಸ್ವಂತ ಜಮೀನಿಗೆ ಕಳುಹಿಸಬೇಕೇ ಹೊರತು ನೌಕರಿ ಆಸೆಯಿಂದ ಕಾಲೇಜಿನ ಮುಖ ನೋಡುವ ವ್ಯಕ್ತಿಗಳಿಗೆ ಪ್ರೋತ್ಸಾಹ ಕೊಡದಿರುವುದು ಅವಶ್ಯ.

ಜನರು ಸುಧಾರಿತ ಕೃಷಿಯನ್ನು ಅಭ್ಯಾಸಿಸಲು ಅಲ್ಲಲ್ಲಿ ಆದರ್ಶ ಕೃಷಿಕ ಕೇಂದ್ರಗಳಾಗಬೇಕು. ಅವನ್ನು ಕಂಡು, ಅಲ್ಲಿನ ಲಾಭನಷ್ಟ ಪರಿಶೀಲಿಸಿ ಜನಕ್ಕೆ ಆಕರ್ಷಣೆ ಬರಬೇಕು. ಅದರಲ್ಲೂ ವಿದ್ಯಾವಂತರಾದವರು ಕೃಷಿಯನ್ನು ಇತರ ಉದ್ಯೋಗಗಳಷ್ಟೇ ಲಾಭದಾಯಕವಾಗಿ ಮಾಡಲು ಬಂದೀತು, ಎಂಬ ವಿಶ್ವಾಸವುಳ್ಳವರಾಗಬೇಕು. ಇಂದು ಶಾಲೆಯ ಮೆಟ್ಟಲು ತುಳಿದವರು ಕೃಷಿಗೆ ವಿಮುಖರಾಗಿ ಕುಳಿತಿದ್ದಾರೆ. ಇನ್ನು ನಿರಕ್ಷರಕುಕ್ಷಿಗಳಿಂದ ನಾವು ಸುಧಾರಿತ ಕೃಷಿ ಬಯಸಬೇಕು.

ಸರಕಾರ ಇನ್ನೂ ಒಂದು ಕೆಲಸ ಮಾಡಬಹುದು. ಇದು ದೇಶಕ್ಕೊದಗಿದ ಸಂಕಟದ ಪ್ರಶ್ನೆ. ನಮ್ಮ ಹೈಸ್ಕೂಲಿಂದ ಹೊರಬೀಳುವ ತರುಣರು ಸರಕಾರಿ ಕೆಲಸಗಳಿಗೆ ಅರ್ಹರಾಗುವ ಮೊದಲು ಅವರಿಗೆ ಒಂದೆರಡು ವರ್ಷ ಕಡ್ಡಾಯವಾದ ಸಾರ್ವಜನಿಕ ಸೇವೆ ವಿಧಿಸಬಹುದು. ಆ ಕಾಲದಲ್ಲಿ ಅವರ ವೆಚ್ಚಕ್ಕಷ್ಟು ವೇತನ ಕೊಟ್ಟು, ಅವರಿಂದ ಮಾದರಿ ಕೃಷಿ, ಇಲ್ಲವೆ ಸಹಕಾರಿ ಕೃಷಿ ಕ್ಷೇತ್ರಗಳನ್ನು ನಡೆಯಿಸಬಹುದು. ಅದು ಲಾಭಕಾರಕವಾಗಿ ಕಂಡರೆ ಅವರೆಷ್ಟೋ ಮಂದಿ ಕೃಷಿಯನ್ನು ಉದ್ಯೋಗವಾಗಿ ಆರಿಸಿಯಾರು. ಅಂಥವರಿಗೆ ಸರಕಾರ ಬೆಂಬಲ ಕೊಡಬಹುದು.

ಇಂಥ ಯಾವ ಕೆಲಸವೂ ಫಲಕ್ಕೆ ಬರಲು ೧೦ ವರ್ಷಗಳಾದರೂ ಬೇಕು. ಪ್ರಯೋಗ, ವ್ಯವಸ್ಥೆ, ಪೂರ್ಣ ಯೋಜನೆಗಳಿಂದ ಕೂಡಿದ ಏರ್ಪಾಟುಗಳೇ ಆಗಬೇಕು. ಅವುಗಳ ಲಕ್ಷಣವೊಂದೂ ಕಾಣದೆ ಇರುವಾಗ-೧೯೫೧ರೊಳಗೆ ಆಹಾರ ಪೂರ್ಣತೆ ಪಡೆಯುತ್ತೇವೆ, ಅನ್ನುವ ಮಾತಿನಲ್ಲಿ ವಿಶ್ವಾಸ ತಾಳುವುದೆಂತು?

(ನವಭಾರತ ವಿಶೇಷಾಂಕದಿಂದ)

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಳ್ಳಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ ಬಾಗಲಕೋಟೆ ಧಾರವಾಡ ವಿಜಾಪುರ—
ಜಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಬಿ ಎಲ್ ಕಮ್ಮಟಾ ಕೆಮಿಸ್ಟ್ರ, ಹಾವೇರಿ ಬ್ಯಾಡಗಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.